Regd. No. M. 3618

LICENCE No. 31
Licensed for Post without Prepayment

Estd 1921 ಸ್ಥಾಪನೆ

5-7-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ
ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೪೩

NAVAYUGA WEEKLY

Post Box No. 22 UDIPI.

Vol. 31
No 43

ಏಶಿಯದ ಈಶಾನ್ಯ ಮೂಲೆಯಲ್ಲಿ ಚಾಚಿಕೊಂಡು ಇರುವ ಮಂಚೂರಿಯಾ ಇಂದು ಜಗತ್ತಿನ ಮಹಾಶಕ್ತಿಗಳ ಕಣ್ಣು ಸೆಳೆವ ಆಕರ್ಷಕ ಭೂಮಿಯಾಗಿದೆ. ಕೊರಿಯಾ ಕದನದ ಕಾರಣದಿಂದ ಮಂಚೂರಿಯಾದ ಜನತೆಗೆ ದಿಗಿಲು ಹಾರುವ ಪ್ರಸಂಗ ಬಂದಿದೆ. ಕಳೆದ ಅಕ್ಟೋಬರದ ದಿನಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೈನ್ಯ ಕಡೆ ಮಂಚೂರಿಯಾದ ಗಡಿಯಿಂದ ಕೇವಲ ೪೫ ಮೈಲು ದೂರ ಉಳಿದಿತ್ತು. ಅಂದು ತೊಡಗಿದ ವಿಮಾನ ಧಾಳಿಯಿಂದ, ಬಾಂಬಿನ ಸುರಿಮಳೆಯಿಂದ ಮಂಚೂರಿಯಾದ ನೆಲ ಇನ್ನೂ ಪೂರ್ಣ ಮುಕ್ತಿ ಪಡೆದಿಲ್ಲ. ಈ ನಾಶದ ಭಯದಿಂದಲೇ ದಕ್ಷಿಣ ಮಂಚೂರಿಯಾದ ಭಾರಿ ಕಾರಖಾನೆಗಳ ಯಂತ್ರಸಾಮಗ್ರಿಯನ್ನು ವಾಯುವ್ಯ ಚೀನಾದ ಕಡೆ ಸಾಗಿಸುವ ಯತ್ನಗಳೂ ನಡೆದುವು. ಅಮೇರಿಕೆಯ ವೈಮಾನಿಕ ಪಡೆಗಳು ಆ ನಡದಾಂಗ, ಪೇನಶೀಪ್ಯೂ ಶೀಹಟೋ ಮುಂತಾದ ರೈಲ್ವೆ ಹಾಗೂ ಉದ್ಯೋಗ ಕೇಂದ್ರಗಳ ಮೇಲೆ ಭಾರಿ ಬಾಂಬು ಧಾಳಿ ನಡೆಸಿದುವು. ಜನರು ನಗರಗಳನ್ನು ತ್ಯಜಿಸಿ, ಯುದ್ಧ ಭಯ ಕಡಿಮೆಯಿರುವ ಕಡೆ ವಲಸೆಹೋದರು. ಕೊರಿಯ ಕದನ ರಂಗದ ಭೂತಪೂರ್ವ ದಂಡನಾಯಕ ಜನರಲ್ ಮೇಕಾರ್ಥರರು ಹದ್ದುಗಣ್ಣು ಮಂಚೂರಿಯಾದ ನೆಲದ ಮೇಲೆಯೇ ಬಲವಾಗಿ ಬೀರಿತ್ತು. ಆದನ್ನು ಆಕ್ರಮಿಸಿ ಕಮ್ಯೂನಿಸ್ಟರ ಬೌತು ಮುರಿಯಬೇಕೆಂಬ ಅವರ ಅಪೇಕ್ಷೆಗೆ, ಈಗಾದ ಸ್ಥಾನಚ್ಯುತಿಯಿಂದ ತೀರ ಭಂಗ ಬಂದಿದೆ.

ಚೀನಾದ ಕಮ್ಯೂನಿಸಂ (ಅಥವಾ ಸಾಮ್ಯವಾದ) ಜನಿಸಿದುದೂ ಬೆಳೆದುದೂ ಇಲ್ಲಿಯೇ ಸರಿ. ಚಿಯಾಂಗ ಕೈಶೇಕರ ಕೈಯಿಂದ ದೂರಾಗಿ, ಕೆಂಜಣ್ಣು ಬಳೆದು ಚೀನಾ ಮರೆಯಲು ಮಂಚೂರಿಯಾದ ವಾತಾವರಣವೇ ಪ್ರೋತ್ಸಾಹಕವಾಗಿತ್ತು. ಚೀನಾದ ಗೃಹಯುದ್ಧದ ಗಲಾಟೆಯಲ್ಲಿ ಮಂಚೂರಿಯಾದ ನಡು ಬಯಲಿನಿಂದಲೇ ತೊಡಗುತ್ತಿತ್ತು. ಜನಕ್ರಾಂತಿಯ ಕಹಳೆ ಮೊಳಗಿದುದಾದರೂ ಪ್ರಥಮತಃ ಇಲ್ಲಿಯೇ. ೧೯೩೧ರಿಂದ ಆಗೋಸ್ಟು ೧೯೪೫ರ ತನಕ ಜಪಾನಿನ ಆಳಿಕೆಗೆ ಒಳಪಟ್ಟು ಮಂಚೂರಿಯಾ ಇತ್ತು. ಜಪಾನೀಯರೇ ಮಂಚೂರಿಯಾದ ನಿಸರ್ಗದತ್ತ ಸಂಪತ್ತನ್ನು ಸದ್ವಿನಿಯೋಗಿಸಿ, ನಾಡಿನ ಸಮೃದ್ಧಿ ಬೆಳೆಸಿ, ಔದ್ಯೋಗಿಕ ಮುನ್ನಡೆಗೆ ಅಡಿಪಾಯ ಹಾಕಿದವರು. ಕೃಷಿಯ ಉನ್ನತಿಯ ಮಟ್ಟಿಗೆ ಜಪಾನೀಯರಿಂದ ಅಧಿಕ ಸಹಾಯ-ಪ್ರೋತ್ಸಾಹ ದೊರೆಯಲಿಲ್ಲವೆನ್ನೋಣ; ಭೂವ್ಯವಸಾಯೋತ್ಪತ್ತಿಯನ್ನು ಜಪಾನಿಗೆ ರಫ್ತುಮಾಡುವ ಪರಿಪಾಟವಷ್ಟೇ ಉಳಿಯಿತು. ಆದರೂ, ಕಲ್ಲಿದ್ದಲು ಕಬ್ಬಿಣ, ಮತ್ತಿತರ ಖನಿಜ ಪದಾರ್ಥಗಳ ಅನೇಕ ಗಣಿಗಳನ್ನು ತೋಡಿದರು; ಕಾರಖಾನೆಗಳನ್ನು ತೆರೆದರು. ರೈಲುಮಾರ್ಗದ ಮೇಲೆ ರಶಿಯಾ ಎಂದೋ ಕಣ್ಣಿಟ್ಟಿದ್ದಿತ್ತು. ಎಂತಲೇ ಯಾಲ್ಟಾದ ಸಭೆಯಲ್ಲಿ ಬ್ರಿಟನಿನ ವಿನ್‌ಸ್ಟನ್ ಚರ್ಚಿಲ್ ಮತ್ತು ಅಮೇರಿಕೆಯ ಪ್ರೆಸಿಡೆಂಟ ರೂಜವೆಲ್ಟರಿಂದ ಮಂಚೂರಿಯಾದಲ್ಲಿ ಕಾಲೂರಲು ಸ್ಟಾಲಿನರು ಸಂದರ್ಭ ಕಲ್ಪಿಸಿಕೊಂಡರು! ಒಂದು ರೀತಿಯಲ್ಲಿ ಮಂಚೂರಿಯಾ ಚೀನಾದ್ದೇ ತುಂಡೂ ಆಗಿದ್ದುದರಿಂದ, ಚೀನದೊಡನೆ ರಶಿಯಾ ಒಪ್ಪಂದವಾಡಿಕೊಂಡಿತು. ಈ ಸಂಧಿಪತ್ರಕ್ಕೆ ಅನುಸಾರವಾಗಿ, ಡೇರನ ಮತ್ತು ಆರ್ಥರ ಬಂದರುಗಳ ಮೇಲೆ ಹಾಗೂ ಪ್ರಾಮುಖ್ಯ ರೈಲು ಮಾರ್ಗಗಳ ಮೇಲೆ ಅರ್ಧ ಅಧಿಕಾರ ರಶಿಯಾಕ್ಕೂ ದೊರೆಯಿತು. ಎಪ್ರಿಲು ೧೯೪೬ರಲ್ಲಿ ಸೋವಿಯೆಟ ರಶಿಯಾ ಮಂಚೂರಿಯಾದಿಂದ ಹಿಂದೆ ಸರಿಯಿತಾದರೂ ಕೋಮಿನಟಾಂಗ ಸರಕಾರಕ್ಕೆ ಅಲ್ಲಿ ನೆಲೆಯೂರುವುದು ಅಸಾಧ್ಯವಾಗಿ ಹೋಯಿತು. ಕಮ್ಯೂನಿಸ್ಟರ ಪ್ರಭಾವ ಅಸಾಮಾನ್ಯವಿದ್ದುದರಿಂದ ಮಂಚೂರಿಯಾದ ಮೇಲೆ ಅವರದೇ ಕೈಮೇಲಾಯಿತು; ಹೊರತು ಚಿಯಾಂಗ ಕೈಶೇಕರ ಆಟ ನಡೆಯಲಿಲ್ಲ. ಅರ್ಧ ಕೋಟಿ ಸಂಖ್ಯೆಯ ಮಹಾಸೈನ್ಯವು ಮಂಚೂರಿಯಾದ ಮೇಲೆ ದಂಡೆತ್ತಿ ಬಂದು ನಷ್ಟಗೊಂಡಿತು. ಈ ಕೋಮಿನಟಾಂಗದ ಸೈನ್ಯದಲ್ಲಿ ಅನೇಕರಿಗಾದ ಶಿಕ್ಷಣ ಪಡೆದ ಯೋಧರೂ ಆಧುನಿಕ ಬಗೆಯ ಶಸ್ತ್ರಾಸ್ತ್ರ ಸಲಕರಣೆಗಳೂ, ಟಾಂಕು ಹಾಗೂ ವಿಮಾನಗಳೂ ಇದ್ದುವು. ೧೯೪೮ರ ಒಂದೇ ವರ್ಷದಲ್ಲಿ ಕೋಮಿನಟಾಂಗದ ಎರಡು ಲಕ್ಷ ಎಂಭತ್ತು ಸಾವಿರ ಯೋಧರು ಮಂಚೂರಿಯಾದಲ್ಲಿ ಘಾಸಿಗೊಂಡರು. ಜನರುನ ಕೋಮಿನಟಾಂಗ ಪ್ರಭುತ್ವದ ವಿರುದ್ಧ ಉರಿದೆದ್ದು, ಕಮ್ಯೂನಿಸಂ ಕಡೆ ಒಲಿಯಿತು. ಕಮ್ಯೂನಿಸ್ಟರು ಅಕ್ಟೋಬರ ೧೯೪೮ರಲ್ಲಿ ಚೀನಚಾಂಗದ ಆಹಾರ ಭಂಡಾರವನ್ನು ಕೈವಶಪಡಿಸಿಕೊಂಡರು. ಮುಕಡನ ಕ್ಷೇತ್ರದಲ್ಲಿ ಚಿಯಾಂಗ ಕೈಶೇಕರ ಸೇನಾಪತಿ ಕಮ್ಯೂನಿಸ್ಟರಿಗೆ ತಲೆಬಗ್ಗಿಸಿ ಶರಣು ಬಂದನು. ಹೀಗಾಗಿ ಕೋಮಿನಟಾಂಗದ ಸೇನೆಗೆ ತುಂಬಿ ಬಾರದ ಹಾನಿಯೂ ನಷ್ಟವೂ ಸಂಭವಿಸಿತು. ನೂತನ ಚೀನೀ ಸರಕಾರದ ಕೇಂದ್ರವಾಗಿ ಮಂಚೂರಿಯಾ ಮಾರ್ಪಟ್ಟಿತು. ಜನತಾ ಸೇನೆ ರೂಪುಗೊಂಡಿತು. ಹಾಗೆಯೇ ಕೋಮಿನಟಾಂಗ ಸೈನ್ಯವನ್ನು ಹಿಂದೂಡುತ್ತಾ ಬಂದು, ಕೊನೆಗೆ ಸಮಸ್ತ ಚೀನಾದ ಮೇಲೆ ಕಮ್ಯೂನಿಸ್ಟ ಪ್ರಭುತ್ವ ಸ್ಥಾಪಿತವಾಯಿತು.

ಮಂಚೂರಿಯಾದ ಚಟುವಟಿಕೆಗಳು

ಹಾಕಿಸಿದರು; ಉದ್ದಿಮೆ ಬೆಳೆಸಿದರು. ಇವನ್ನು ಮರೆಯುವಂತಿಲ್ಲ. ಆನಶಾನ ಮತ್ತು ಪೆನಚಿಸಿಹೂಗಳ ಕಲ್ಲಿದ್ದಲು, ಕಬ್ಬಿಣ ಮತ್ತು ವಿದ್ಯುತ್ತುಗಳಿಂದಾಗಿ ಮಂಚೂರಿಯಾದ ಉದ್ದಿಮೆ ತುಂಬಾ ಪುಷ್ಟಿಯಾಗಿ ಬೆಳೆಯಿತು. ಮಂಚೂರಿಯಾದಿಂದ ಜಪಾನೀಯರು ಕಾಲುಕಿತ್ತ ಬಳಿಕ, ಈ ಉದ್ಯೋಗ ಶಾಲೆಗಳು ಸೋವಿಯೆಟ್ ರಶಿಯಾ ಹಾಗೂ ಕಮ್ಯೂನಿಸ್ಟರ ಕೈಗೆ ಬಂದುವು.

ಸಸ್ಯಶಾಲಿನಿಯೂ ಧನಧಾನ್ಯ ಸಮೃದ್ಧಿಯಿಂದ ಕೂಡಿದುದೂ ಆದ ನಾಡು ಮಂಚೂರಿಯಾ. ತನ್ನ ಈ ನೆರೆನಾಡಿನ

ತುಂಬ ಖನಿಜ ಪದಾರ್ಥಗಳೂ ಹುಲುಸಾದ ಬೆಳೆಬರುವ ಫಲವತ್ತಾದ ಭೂಮಿಯೂ ಮಂಚೂರಿಯಾದ ಸೌಭಾಗ್ಯ, ಅನೇಕ ಬಗೆಯ ವ್ಯವಸಾಯಕ್ಕೆ ಇಲ್ಲಿಯ ಮಣ್ಣು ಅನುಕೂಲವಾಗಿದೆ. ಮಂಚೂರಿಯಾದ ರೈತರು ಒಟ್ಟು ೧,೪೦,೦೦,೦೦೦ ಎಕ್ರೆ ಭೂಮಿ ವ್ಯವಸಾಯಮಾಡುವರು. ಅಲ್ಲದೆ ಇನ್ನೂ ಇಷ್ಟೇ ಪ್ರಮಾಣದ ಭೂಮಿಯನ್ನು ವ್ಯವಸಾಯಕ್ಕೆ ಬಳಸಲು ಆನುಗೊಳಿಸುವುದು ನಡೆದಿದೆ. ಅಲ್ಲಿಯ ಕಮ್ಯೂನಿಸ್ಟ ಸರಕಾರವು ಜುಲೈ ೧೯೪೮ರಷ್ಟು ಹಿಂದಿನಿಂದಲೇ ಜಮೀನುದಾರಿ ಪದ್ಧತಿಯ ನಿರ್ಮೂಲನ ಮಾಡಿ, ಬೇಸಾಯಗಾರರಿಗೇ ಜಮೀನು ಹಂಚುವ ಏರ್ಪಾಡು ನಡೆಸಿಕೊಂಡು ಬಂದಿದೆ. ಈ ಆ ಪೂರ್ವ ಯೋಜನೆಗನುಸಾರ ೧೯೪೯ರವರೆಗೆ ಸುಮಾರು ೬,೨೦೦,೦೦೦ ಎಕ್ರೆ ಭೂಮಿಯನ್ನು ಹಂಚಲಾಗಿದೆ. ಎಂದರೆ ಪ್ರತಿಯೊಬ್ಬ ರೈತನಿಗೂ ೧.೧೬ ಎಕ್ರೆ ಸ್ವಂತ ಭೂಮಿ ಇದರಿಂದ ದೊರೆತಿದೆ. ಕೇವಲ ಭೂಮಿ ಮಾತ್ರವಲ್ಲ—ವ್ಯವಸಾಯದ,

ಸತ್ತವ್ರು ಮಾತೆತ್ತೋದಿಲ್ಲ ಖರೆ,—

ಆದ್ರೆ ಅವ್ರ ಹೆಂಡ್ತಿ ಮಕ್ಳು?

"ಯಜಮಾನ್ರು ಇನ್‌ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತು ಉಳಿದವ್ರ ಸಂಕಷ್ಟ ತಿಳ್ಸುತ್ತೆ.

ಪ್ರತೀ ಗೃಹಸ್ಥ್ನೂ ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ.

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫

The Canara Mutual Assurance Co, Ltd.
H. O. UDIPI (SOUTH INDIA) ESTD: 1935.

ಕೋಳಿ, ದನಕರು, ಬಟ್ಟೆಬರೆ, ಭಂಡವಲು ಇವುಗಳನ್ನೂ ಸರಿಯಾಗಿ ಪಾಲುಮಾಡಿ ಹಂಚಿದ್ದಾರೆ. ರೈತರ ಏಳಿಗೆಯ ಬಯಕೆಯಿಂದ ಅಗತ್ಯದ ವ್ಯವಸಾಯ ಕೆಲಸಗಳಿಗೆ ಸರಕಾರವೇ ಹಣವನ್ನು ಸಾಲವಾಗಿ ಕೊಡುತ್ತದೆ. ರೈಲ್ವೆಗಳ ರಾಷ್ಟ್ರೀಕರಣವೂ ನಡೆದಿದ್ದು ಸರಕಾರದ ಕಡೆಯಿಂದ ತೋಟಗಳು, ಹೊಲಗಳು ಮುಂತಾದವು ಅತ್ಯಧಿಕ ಪ್ರಮಾಣದಲ್ಲಿ ರೂಪುಗೊಳ್ಳುತ್ತಿವೆ. ರಶಿಯಾ-ಚೀನಾಗಳ ನಡುವೆ ಫೆಬ್ರುವರಿ ೧೯೫೦ರಲ್ಲಿ ನಡೆದೊಂದು ವ್ಯಾಪಾರೀ ಒಡಂಬಡಿಕೆಯ ಒಕ್ಕಣೆಯಂತೆ ಮಂಚೂರಿಯಾ ಧಾನ್ಯ ಹಾಗೂ ಅನ್ನಾಹಾರಕಗಳನ್ನು ರಶಿಯಾಕ್ಕೆ ಪೂರೈಸಬೇಕು. ಅದಕ್ಕೆ ಬದಲಾಗಿ ರಶಿಯಾವು ಸಿದ್ಧವಸ್ತುಗಳನ್ನು ಯಂತ್ರಸಾಮಾಗ್ರಿಗಳನ್ನೂ ಕೊಡುವುದು. ಇದೇ ಒಪ್ಪಂದದನುಸಾರ, ಆರ್ಥರ್ ಬಂದರಿನಿಂದ ರಶಿಯಾವು ತನ್ನ ಸೈನ್ಯಗಳನ್ನು ಹಿಂದೆ ತೆಗೆದುಕೊಳ್ಳುವುದು; ಅಲ್ಲದೆ ೧೯೫೨ರ ಒಳಗಾಗಿಯೇ ರೈಲುಗಳ ಮೇಲಿನ ತನ್ನ ಸಮಸ್ತ ಅಧಿಕಾರವನ್ನೂ ಬಿಟ್ಟುಗೊಡುವುದು.

ಲೋಕದ ಕೃಷಿಪ್ರಧಾನಗಳಲ್ಲಿ ಮಂಚೂರಿಯಾಕ್ಕೆ ಹಿರಿ ಪ್ರಾಶಸ್ತ್ಯವಿದೆ. ಅಲ್ಲಿ ಮುಖ್ಯತಃ ಗೋಧಿ ಅಕ್ಕಿ, ಸಣ್ಣ ಜೋಳ, ಹತ್ತಿ; ಮಾಲಂಗಿ ಮತ್ತು ತಂಬಾಕು ಬೆಳೆಯುತ್ತವೆ. ಅಲ್ಲದೆ ಉಣ್ಣೆಗೆ ಹೆಸರಾದ ಸೋಯಾ ಕಾಳು ಇಲ್ಲಿ ವಿಪುಲವಾಗಿದೆ. ಈ ಪಟ್ಟಿಗೆ ಪ್ರಪಂಚದ ಇಡೀ ಉತ್ಪತ್ತಿಯಲ್ಲಿ ಮಂಚೂರಿಯಾದ ಪಾಲು ಮುಕ್ಕಾಲಂಶ; ಪ್ರತಿವರ್ಷ ಒಂದೂವರೆ ಲಕ್ಷ ಟನ್ ಸೋಯಾ ಕಾಳನ್ನು ವಿದೇಶಿಗಳಿಗೆ ರಫ್ತುಮಾಡಿ ೧೩೩ ಕೋಟಿ ರೂಪಾಯಿ ಸಂಪಾದಿಸುತ್ತಿದೆ. ಅಂತರ್ ರಾಷ್ಟ್ರೀಯ ಯೋಗ್ಯವೆ ಮಂಚೂರಿಯಾಕ್ಕೆ ಬಂದುದಾದರೂ ಇದೇ ಕಾರಣದಿಂದ. ಇನ್ನು ವಿಶಾಲವಾದ ಕಾಡುಗಳು ಹುಲ್ಲುತುಂಬಿದ ಮೈದಾನಗಳು ಇವೆ. ಇಲ್ಲಿ ಜಾನುವಾರುಗಳನ್ನು ಸಾಕಿ, ಅವುಗಳ ಚರ್ಮವನ್ನು ನಿರ್ಯಾತ ಮಾಡುತ್ತಾರೆ. ಖನಿಜ ಪದಾರ್ಥಗಳ ಉತ್ಪತ್ತಿಯೂ ಹೇರಳವಾಗಿದೆ. ವರ್ಷ ವರ್ಷವೂ ಮೂವತ್ತು ಕೋಟಿ ಟನ್ನು ಕಲ್ಲಿದ್ದಲು ಅಗೆಯುವರು. ಇನ್ನೂ ೨೩,೦೦,೦೦,೦೦,೦೦೦ಟನ್ನು ಕಲ್ಲಿದ್ದಲು ಅಗೆದುತೆಗೆಯಬಹುದೆಂದು ಅಂದಾಜು ಇದೆ! ಅಯಾ ಓಟಂಗದಲ್ಲಿ ತುಂಬ ಮೆಂಗನೀಸ್ಸೂ ದೊರೆಯುತ್ತದೆ. ಉಕ್ಕಿನ ನಗರ ಅನೆಸಾನ ಎರಡು ಕೋಟಿ ಟನ್ನು ಉಕ್ಕನ್ನು ಉತ್ಪಾದಿಸುತ್ತದೆ. ಮಾಕನವಲ್ಲಿರುವ ಕಲ್ಲಿದ್ದಲು ಗಣಿ ವಿಶ್ವದಲ್ಲೇ ಅಗಾಧ ಮಾದರಿ—ಅದರ ಗಾತ್ರ ನಾಲ್ಕು ಮೈಲು ಉದ್ದ, ಮುಕ್ಕಾಲು ಮೈಲು ಅಗಲ ಮತ್ತು ಐನೂರು ಅಡಿ ಆಳ; ಜಾಪಾನೀಯರ ಕುಶಲ ಕೈವಾಡದಿಂದಾಗಿ ಅಗ್ಗದ ಜಲವಿದ್ಯುತ್ತು ಸಿಗುವಂತಾಗಿವೆ. ಇಡೀ ಮಂಚೂರಿಯಾದಲ್ಲಿ ೩೦,೦೦,೦೦೦ ಕಿಲೋವಾಟ್ ವಿದ್ಯುತ್ತು ಉದ್ಪಾದಿತವಾಗುವುದು ಚೀನಾಕ್ಕಿಂತಲೂ ಮಂಚೂರಿಯಾ ಮೊದಲಿಂದಲೂ ವ್ಯಾಪಾರಕ್ಕೆ ಹೆಸರಾದ ನಾಡು. ಅಲ್ಲಿಯ ಹುಲುತಾವೋ, ಯಿನಕ-ವೋ, ಡೇರನ, ಆನಟುಂಗ ಮುಂತಾದ ಬಂದರುಗಳಿಗೆ ಜಗತ್ತಿನ ನಾನಾ ಮೂಲೆಯೊಡನೆಯೂ ವ್ಯಾಪಾರೀ ಸಂಬಂಧವಿದೆ. ಡೇರನ ಬಂದರವೊಂದೇ ವರ್ಷಂಪ್ರತಿ ೧,೦೦,೦೦,೦೦೦ ಟನ್ನು ಸರಕನ್ನು ವಿದೇಶಗಳಿಗೆ ನಿರ್ಯಾತ ಮಾಡುವುದು. ಎಲ್ಲ ರೇವು ಪಟ್ಟಣಗಳನ್ನು ರೈಲು ಮಾರ್ಗಗಳ ಜೋಡಣೆಯಿಂದ ದೇಶದ ಪ್ರತಿಯೊಂದೂ ಮೂಲೆಗೆ ಹತ್ತಿರವಾಗಿ ತಂದಿದ್ದಾರೆ. ಈ ರೈಲು ಮಾರ್ಗಗಳ ಒಟ್ಟು ಉದ್ದವೇ ಹತ್ತುಸಾವಿರ ಮೈಲಿಗೆ ಮೀರಿ ಇದೆ.

ಮಂಚೂರಿಯಾದ ನಿವಾಸಿಗಳಲ್ಲಿ ರಾಷ್ಟ್ರೀಯತೆಯ ಭಾವನೆ ಆಳವಾಗಿ ಬೇರೂರಿದೆ. ಅವರು ದೃಢಕಾಯರೂ ಸಂತೋಷಚಿತ್ತರೂ ದೇಶಪ್ರೇಮಿಗಳೂ ಆಗಿದ್ದಾರೆ. ಮೈಮುರಿದು ದುಡಿದು ಉಣ್ಣುವುದರಲ್ಲಿ ಅವರಿಗೆ ಆನಂದವೆನಿಸುವುದು. ಹೆಂಗಸು ಮಕ್ಕಳೂ ಆಲಸಿಯಾಗಿ ಕುಳಿತಿರಲಾರರು. ಸೈನಿಕನಾಗುವುದೆಂ ಹೆಮ್ಮೆಯ ಸಂಗತಿಯೇ ಆಗಿಬಿಟ್ಟಿದೆ, ಮಂಚೂರಿಯಾದ ನಿವಾಸಿಗೆ! ಕಮ್ಯೂನಿಸ್ಟ್ ಪ್ರಭಾವಕ್ಕೆ ಬಿದ್ದು ನೂತನ ಜನಸೇನೆಯಲ್ಲಿ ಅವರು ಭರ್ತಿಯಾಗುತ್ತಾರೆ. ಹೊರಗಿನವರ ಕಣ್ಣಿಗೆ ಕಾಣ ವಂತೆ, ಸೋವಿಯಟ್ ರಶಿಯಾ ಮಂಚೂರಿಯಾದ ಜನರ ಆಂತರಿಕ ಜೀವನದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂಬುದಾಗಿ ಹಾರ್ಬಿನ ನಗರದ ಜನತಾ ಸಭೆಯ ಅಧ್ಯಕ್ಷ ಆನಕುವ್ಹೊ ಚೇನರು ಹೇಳುತ್ತಾರೆ. ಮಂಚೂರಿಯಾದ ಜನತೆಗೆ ಕಮ್ಯೂನಿಸ್ಟ ಸರಕಾರವು ಶ್ರೇ[illegible]ಕಾರಿಯಾಗಿದೆ; ಈ ಸರಕಾರ ಮಂಚೂರಿಯಾದ ಜನಹಿತಕ್ಕೆ ಧಕ್ಕೆ ತರುವುದಿಲ್ಲ ಬದಲು ದೇಶದ ಸರ್ವತೋಮುಖ ಉತ್ಕರ್ಷಕ್ಕೆ ನೆರವಿತ್ತು ಸಹಕರಿಸುವುದು—ಎಂದಲ್ಲ ಧೈರ್ಯದ ಮಾತು ಕೇಳಿಬರುತ್ತಿದೆ. ಸದಾ ಯುದ್ಧದ ಕೋಲಾಹಲದಿಂದ ಜರ್ಜರಿತವಾದ ಜನತೆಗೆ ಶಾಂತಿಯ ಉಸಿರೆಳೆಯಲು ತುಸುವಾದರೂ ಅವಕಾಶ ದೊರೆತರೆ, ಅದೇ ಪರ್ವತ ಪ್ರಾಯವೆನಿಸುವುದು ತಾನೆ!

—ಕಾರ್ತಿಕೇಯ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎ[illegible] ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡಿ[illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷ[illegible]



REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತ[illegible]

ಅಮೃತಾಂಜನ ಲಿಮಿಟೆಡ್

ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ
ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು
ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ—ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!
ಈ ಹೊಸ ಮದ್ದಿನಿಂದ ನಿಮಗೆ ಅಪ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,	ಎಂ. ಮೆಂಡೋನ್ಸ,
2nd Floor, Ruby Mansion;	ಎರಡನೆ ಮಾಳಿಗೆ, ರುಬಿ ಮೆನ್ಸನ್
Parsee Bazar Street, Fort,-	ಪಾರ್ಸಿಬಝಾರ್ ಸ್ಟ್ರೀಟ್, ಫೋರ್ಟ್,
Bombay.	ಬೊಂಬಾಯಿ

ಅವರು ಹೇಳಿದ್ದೇನು?

ಮದ್ರಾಸದಲ್ಲಿ ನಡೆದ ವೀವರ್ಸ್‌ದವರ 73 ದಿನಗಳ ಸತ್ಯಾಗ್ರಹದ ಕುರಿತು ಕೇಂದ್ರ ಸರಕಾರದ ಉದ್ದಿಮೆ ಹಾಗೂ ವಾಣಿಜ್ಯ ಮಂತ್ರಿಗಳಾದ ಶ್ರೀ ಹರೇಕೃಷ್ಣ ಮಹತಾಬರು ಕೊಟ್ಟಿರುವ ಪರಿಹಾರಮಾರ್ಗಗಳು ಕೇವಲ ಹಾರಿಕೆಯದ್ದಾಗಿರುತ್ತದೆ. ಹೀಗೇಕಾಯಿತೆನ್ನುವದರಲ್ಲಿ ಶ್ರೀ ಮಾನ್ಯ ಮಂತ್ರಿಗಳ ಸ್ಪಷ್ಟೀಕರಣ ಯಥಾರ್ಥವನ್ನು ಹೇಳುವದಿಲ್ಲ. ಹಿಂದೊಮ್ಮೆ ಬಟ್ಟೆಯ ಕುರಿತು ಮಾತಾಡುವಾಗ ಮಾನ್ಯ ಮಂತ್ರಿಗಳು ಬಟ್ಟೆಯ ಬರ ಬರಲಿಕ್ಕಿಲ್ಲ—ಬಟ್ಟೆಯ ವಿಚಾರದಲ್ಲಿ ಹೊರಗಿಂದ ತರಿಸುವದನ್ನು ಆದಷ್ಟು ಕಡಿಮೆ ಮಾಡಿ ನಮ್ಮ ದೇಶದ ನೂಲಿಗೆ ಹೆಚ್ಚಿನ ಪ್ರಾಧಾನ್ಯ ಕೊಟ್ಟು ಸ್ವಾವಲಂಬೀ ಧೋರಣೆಯನ್ನು ಅನುಸರಿಸಲಾಗುವದೆಂದು ಹೇಳಿದ್ದರು. ಮುನ್ನೋಟವಿಲ್ಲದ ಈ ಧೋರಣೆಯಿಂದಲೇ ಈ ಪರಿಸ್ಥಿತಿಯು ಉದ್ಭೂತವಾಯಿತು. ಯಾವ ಲೆಕ್ಕಾಚಾರಗಳೂ ನೂಲಿನ ಬಗ್ಗೆ ಕೊಡುವ ಉದಾಹರಣೆಗೆ ಯೋಗ್ಯವಾದುವುಗಳಲ್ಲ. ನಮ್ಮ ಬಟ್ಟೆಗೆ ಸಾಕಾಗುವಷ್ಟು ನೂಲು ನಮ್ಮಲ್ಲಿ ಉತ್ಪನ್ನವಾಗುವದಿಲ್ಲವೇನೋ ಸಹಜ. ನಮ್ಮಲ್ಲಿ ತಿಂಗಳ ನೂಲಿನ ಉತ್ಪಾದನೆಯು 50 ಸಾವಿರ ಗಂಟು ಇರುವದು. ನಮಗೆ ಅವಶ್ಯ ಬೇಕಾಗುವಂತಹ 80 ಸಾವಿರದ ವರೆಗೆ ಹೆಚ್ಚಿಸುವ ಪ್ರಯತ್ನವನ್ನು ಸರಕಾರ ಮಾಡಿರುವದಾದರೂ ಅದು ಮೂರು ನಾಲ್ಕು ತಿಂಗಳಿಗೆ ತೀರ ಅಸಾಧ್ಯವೇ ಆಗಿರುತ್ತದೆ. ಆ ತನಕ ಬಟ್ಟೆಯ ಸ್ಥಿತಿ ಹೆಚ್ಚಿನ ಮಟ್ಟಿಗೆ ಸುಧಾರಿಸುವುದು ಅಸಂಭವ. ನಮ್ಮಲ್ಲುತ್ಪನ್ನವಾಗುವ ಸ್ಥಳೀಯ ಬಳಕೆಗಾರರಿಗೆ ಕೊಡುವುದರಿಂದ ಅವರ ಅವಶ್ಯಕತೆಗಳನ್ನು ಪೂರೈಸುವದು ಮಾತ್ರವಲ್ಲದೆ ಯೋಗ್ಯ ಉದ್ಯೋಗವನ್ನು ಒದಗಿಸಿದಂತಾಗುವುದು. ಸರಕಾರವು ಸ್ವಾವಲಂಬನ ಧೋರಣವನ್ನು ಕೈಗೊಳ್ಳುವ ಮೊದಲು ಅದು ಕೈಗೂಡಲು ಎಷ್ಟು ಕಾಲಾವಕಾಶ ಬೇಕು? ಆ ವರೆಗೆ ತಾವು ಹೊರಗಿನಿಂದ ಎಷ್ಟು ಆಮದು ಮಾಡಿಕೊಳ್ಳಬಹುದೆನ್ನುವದನ್ನು ಚಿಂತಿಸಬೇಕಿತ್ತು. ಆ ರೀತಿಯ ಮುನ್ನೋಟವಿಲ್ಲದುದರ ದುಷ್ಪರಿಣಾಮವೇ ದೇಶದ 15 ಮಿಲಿಯ ನೂಲಿನ ಕೆಲಸಗಾರರ ಉದ್ಯಮಕ್ಕೆ ಧಕ್ಕೆ ತಂದಿದೆ. ನೂಲಿನ ಸರಬರಾಯಿ ವಿಚಾರದಲ್ಲಿ ಹಲವು ಮಗ್ಗಗಳ ಮಾಲಿಕರು ಸ್ವಾರ್ಥ ಸಾಧಿಸಿರುವರೆಂಬುವದೂ—ನೂಲಿನ ದುರುಪಯೋಗಗೊಳಿಸಿರುವರೆಂಬುದೂ ಗಮನಾರ್ಹವಾದ ಸಂಗತಿ. ಮಂತ್ರಿಗಳು ಈ ಮಾತನ್ನು ಎತ್ತಿ ಹೇಳಿರುವುದು ಯೋಗ್ಯವೇ ಆಗಿರುತ್ತದೆ.

ಇಂತಹ ಸಂದಿಗ್ಧ ಕಾಲದಲ್ಲಿ ಅಮೇರಿಕೆಯು 170000 ಅರಳೆಗಂಟನ್ನು ಕೊಡದೆ ಹೋಗಿರುತ್ತಿದ್ದರೆ ಬಟ್ಟೆಯ ಪ್ರಶ್ನೆ—ಇಲ್ಲವೇ ವೀವರ್ಸ್‌ದವರ ಸಮಸ್ಯೆ ಇನ್ನೂ ಕಠಿಣವಾಗುತ್ತಿತ್ತು. ಶ್ರೀ ಮಹತಾಬರು ಅಜಾಗ್ರತೆಯನ್ನು ಅರಿಯ ಬಲ್ಲ ಸೌಜನ್ಯವುಳ್ಳಂತಹ ವ್ಯಕ್ತಿ. ಇದನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸುವ ವಿಚಾರಶೀಲಗುಣ ಅವರಲ್ಲಿದೆ. ಅಂತಲೇ ಮುಂದೆ ಮಂತ್ರಿಗಳ ಈ ಬಗೆಯ ಅಜಾಗ್ರತೆಯಾಗದಂತೆ ನೋಡಿಕೊಂಡಾರೆನ್ನುವದರಲ್ಲಿ ನಮಗೇನೂ ಅನುಮಾನವಿಲ್ಲ.

ದಿವಾಕರರ ಸಮರ್ಥನೆ

ತಿದ್ದುಪಡಿಯಾದ 19(2) ಘಟನೆಯ ತತ್ವಕ್ಕನುಗುಣವಾಗಿ ಪತ್ರಿಕಾ ಸ್ವಾತಂತ್ರ್ಯ—ವಿಚಾರ ಸ್ವಾತಂತ್ರ್ಯಗಳ ಕುರಿತು ಅ.ಭಾ. ಪತ್ರಿಕಾ ಪರಿಷತ್ತು ತೀವ್ರವಾಗಿ ಪ್ರತಿಭಟಿಸಿರುತ್ತದೆ. 19(2)ನೆಯ ತಿದ್ದುಪಡಿಯನ್ನು ಸರಕಾರ ಹಿಂತೆಗೆದುಕೊಳ್ಳದಿದ್ದರೆ ಸರಕಾರದೊಡನೆ ಅಸಹಕಾರ ಪ್ರದರ್ಶಿಸುವದು ಅನಿವಾರ್ಯವೆನ್ನುತ್ತ ಪರಿಷತ್ತು ಮುಂದ ವರಿದಿದೆ. ದೇಶ ಸ್ವತಂತ್ರವಾದ ಮೇಲೆ ಸರಕಾರಕ್ಕೆ ಬಂದ ಗಂಭೀರ ಪರಿಸ್ಥಿತಿಯಲ್ಲಿ ಭಾರತದ ಪತ್ರಿಕೆಗಳು ಅನೇಕ ರೀತಿಯ ಸಹಕಾರ ಬೆಂಬಲಗಳನ್ನು ನೀಡಿದ್ದವು. ಒಳ್ಳೆಯ ಗೌರವಾದರಗಳನ್ನು ಪ್ರದರ್ಶಿಸುತ್ತಿದ್ದವು. ಅವುಗಳ ಕಾರ್ಯದಕ್ಷತೆ ಅತ್ಯಂತ ಮರ್ಯಾದಾಪೂರ್ಣವಾಗಿದ್ದವು. ಸರಕಾರದ ಹಲವಾರು ಗುಣದೋಷಗಳನ್ನು ವಿಧಾಯಕವಾದ ವಿಮರ್ಶೆ ಟೀಕೆಗಳ ಮೂಲಕ ಯೋಗ್ಯವಾದ ಸಲಹೆಗಳನ್ನು ನೀಡುತ್ತಿದ್ದವು. ಈ ನಾಲ್ಕು ವರ್ಷದ ಪತ್ರಿಕೆಗಳ ಸೇವೆ ಸ್ವತಂತ್ರ ಭಾರತಕ್ಕೆ ಗೌರವವನ್ನು ತರುವಂತಹುಗಳೇ ಆಗಿದ್ದವೆಂದರೆ ತಪ್ಪಾಗದು. ಆದರೂ ಅನಿರೀಕ್ಷಿತವಾಗಿ ಪತ್ರಿಕೆಗಳ ವಿಚಾರ ಸ್ವಾತಂತ್ರ್ಯವನ್ನು ಅಪಹರಿಸಲಾಗಿದೆ. ಭಾರತದ ಪ್ರಧಾನ ಮಂತ್ರಿಯವರೇ ಸ್ವಾತಂತ್ರ್ಯಾಪಹರಣದ ಸೂಚನೆಯನ್ನು ಮುಂದೆ ತಂದದ್ದರಿಂದ ಪತ್ರಿಕಾಲೋಕಕ್ಕೆ ಅಚ್ಚರಿ ಮಾತ್ರವಲ್ಲ- ವಿಷಾದವೂ ಆಗಿದೆ. ಈ ಗೊತ್ತುವಳಿಯನ್ನು ಸಾರ್ವತ್ರಿಕವಾಗಿ ವಿರೋಧಿಸಿದರೂ—ಪತ್ರಿಕೆಗಳು ತಮ್ಮ ಹೃದಯ ನಿವೇದನೆಯನ್ನು ಮಾಡಿಕೊಂಡರೂ—ಮಹಾಮಂತ್ರಿಗಳು ಔದಾರ್ಯವನ್ನು ತೋರಲಿಲ್ಲ. ಪಾರ್ಲಿಮೆಂಟಿನ ಸದಸ್ಯರು ಮೊದಲಿಗೆ ವಿರೋಧಿಸಿದರೂ ಮತದಾನ ಮಾಡುವಾಗ ಇಷ್ಟವಿದ್ದೋ ಇಲ್ಲದೆಯೋ ಗೊತ್ತುವಳಿಗೆ ಜೀವದಾನ ಮಾಡಿದರು. ಮಹಾಮಂತ್ರಿಗಳು ಘನಘನವಾದ ಭರವಸೆಯನ್ನು ಕೊಟ್ಟಿರುವದಾದರೂ ಅವೆಲ್ಲ ಖಾಸಗೀ ಭರವಸೆಗಳೇ ಆಗಿದ್ದವೇ ಹೊರತು ಕಾಯಿದೆ ರೂಪದಿಂದ ರಕ್ಷಣೆ ಕೊಡುವಂತಹುಗಳಾಗಿರಲಿಲ್ಲ. ತದನಂತರ ಉದ್ಭೂತವಾದ ಅಸಮಾಧಾನದ ಪ್ರತೀಕವೇ ಮುಂಬಯಿಯ ಪತ್ರಿಕಾ ಪರಿಷತ್ತಿನ ಅಸಹಕಾರ ಗೊತ್ತುವಳಿ. ಪರಿಷತ್ತಿನ ಅಧ್ಯಕ್ಷ ಲಾಲಾ ದೇಶಬಂಧು ಗುಪ್ತರು ಪರಿಷತ್ತಿಗೆ ಈ ಗೊತ್ತುವಳಿಯ ಮೇಲಾಗಿರುವ ಅಸಮಾಧಾನವನ್ನು ಸರಕಾರದ ತೀರ ಅನುಚಿತವಾದ ಧೋರಣೆಯನ್ನು ವ್ಯಕ್ತಪಡಿಸಿರುವರು. ಅ.ಭಾ.ಪ.ಸಂ. ಪರಿಷತ್ತಿನ ಗೊತ್ತುವಳಿಯನ್ನೆತ್ತಿಕೊಂಡು ಆಕಾಶವಾಣಿ ಮತ್ತು ಸುದ್ದಿ ಖಾತೆಯ ಮಂತ್ರಿಗಳಾದ ಮಾನ್ಯ ದಿವಾಕರರು ಅದು ಸರಿಯಾದ ಮಾರ್ಗದರ್ಶನವಲ್ಲವೆಂದು ಗೊತ್ತುವಳಿಯ ಕುರಿತು ಆಡಿದ್ದಾರೆ. ದಿವಾಕರರು ಸರಕಾರ ಕೈಗೊಂಡಿರುವ ಧೋರಣೆಯನ್ನು ಸಮರ್ಥಿಸುವಲ್ಲಿ ಪತ್ರಿಕೆಗಳ ರಕ್ಷಣೆಗೆ ಅಲ್ಲಿ ಎಡೆಯಿದೆಯೆಂದು ಹೇಳಿದುದರಲ್ಲಿ ಯಥಾರ್ಥವೇನೂ ಇರುವುದಿಲ್ಲ. ಮಹಾಮಂತ್ರಿಗಳ ಖಾಸಗೀ ಭರವಸೆಯಂತೆಯೇ ಇದೂ ಕೂಡ ಸಾಹಿತಿಕವೂ, ತಾತ್ವಿಕಪೂರ್ಣವೂ ಆದ ಒಂದು ಉಪದೇಶ ಅಷ್ಟೆ! ಪತ್ರಿಕೆಗಳಿರುವ ಭೀತಿ ಕಾಲ್ಪನಿಕವೆಂದಿದ್ದಾರೆ ಮಾನ್ಯ ದಿವಾಕರರು. ಆದರೆ ಮಾನ್ಯ ದಿವಾಕರರೂ, ಜವಾಹರಲಾಲರೂ ಪತ್ರಿಕೆಗಳ ಕುರಿತು ಕೊಟ್ಟಿರುವ ಭರವಸೆಗಳು ಕಲ್ಪನಾತೀತವಾದುದು. ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ತಿದ್ದುಪಡಿಯಾದ ಘಟನೆಯಂತೆ ಆಚರಣೆಯಲ್ಲಿ ಬರುವಾಗ ಈ ಉಭಯತರ ಭರವಸೆಗಳು ಕಾಲ್ಪನಿಕ ಮಾತ್ರವಲ್ಲ; ಕಟ್ಟುಕತೆಯಂತೆ ಭಾಸವಾಗದಿರದು. ಮಾನ್ಯ ದಿವಾಕರರು ಪತ್ರಿಕಾ ವ್ಯವಸಾಯದಲ್ಲಿ ವಿಶೇಷಾತ್ಮ— ಅನುಭವವುಳ್ಳವರು. ಅ. ಭಾ. ಪ. ಸಂ. ಪರಿಷತ್ತು ತಳೆದ ಧೋರಣೆಯಲ್ಲಿ ದೋಷವನ್ನು ಕಾಣುವುದೂ—. ಪತ್ರಿಕಾ ಸ್ವಾತಂತ್ರ್ಯವನ್ನು ಕಾಯಿದೆ ರೂಪದಲ್ಲಿ ಅಪಹರಿಸಲೆತ್ನಿಸುವ ಗೊತ್ತುವಳಿಯಲ್ಲಿ ಪತ್ರಿಕೆಗಳಿಗೆ ರಕ್ಷಣೆಯಿದೆಯೆಂಬ ವೇದಾಂತ ಹೇಳುವ ವಿಚಾರ ನಮಗೆ ಅಚ್ಚರಿಯನ್ನುಂಟುಮಾಡಿದೆ. ತಿದ್ದುಪಡಿಯಾದ ಈ ಘಟನೆಯಿಂದ ಬರಬಹುದಾದ ಅನಿಷ್ಟ ಪರಂಪರೆಗಳು ಮಾನ್ಯ ದಿವಾಕರರ ದೃಷ್ಟಿಯಲ್ಲಿ ಕಾಲ್ಪನಿಕವಾದರೂ ಕೋರ್ಟುಗಳಲ್ಲಿ ಯಥಾರ್ಥವಾಗುತ್ತದೆನ್ನುವದರಲ್ಲಿ ಅ. ಭಾ. ಪ. ಸಂ. ಪರಿಷತ್ತಿಗೆ ಯಾವ ಅನುಮಾನವೂ ಇರುವುದಿಲ್ಲ. ಶ್ರೀ ದಿವಾಕರರ ಸಮರ್ಥನೆ ವಸ್ತುಸ್ಥಿತಿಯ ವಿಪರ್ಯಾಸವನ್ನುಂಟು ಮಾಡಿದೆಯೆಂದು ಹೇಳುವ ಪ್ರಸಂಗ ಬಂದದ್ದಕ್ಕೆ ವಿಷಾದಿಸಬೇಕಾಗಿದೆ.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬಹುಕಾಲ ಬಾಳುವ ಶಕ್ತಿಯುಳ್ಳದ್ದಾಗಿದೆ

'ಎಸ್ಟ್ರೆಲಾ' ಬ್ಯಾಟರಿಗಳು ನಿಮಗೆ ಬೇಕಾದ ಪ್ರಕಾಶಮಾನವಾದ ಬೆಳಕನ್ನು ಕೊಡುವುದಲ್ಲದೆ ಇವು ತುಕ್ಕು ಹಿಡಿಯದೆ ಹೊಸದಾಗಿಯೇ ಇದ್ದು ಬಹುಕಾಲ ಬಾಳಿಕೆ ಬರುತ್ತವೆ.

ಎಸ್ಟ್ರೆಲಾ ಬ್ಯಾಟರಿಗಳು

ESTRELA REGD TRADE MARK

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್, ಬೊಂಬಾಯಿ ೧೯.

ಶಾಖೆಗಳು:

ಕಲ್ಕತ್ತಾ, ದೆಹ್ಲಿ, ಮದ್ರಾಸು, ಕಾನ್‌ಪೂರ್, ನಾಗಪೂರ್.

★ ಕೊರಿಯದಲ್ಲಿ ಯುದ್ಧ ಮುಕ್ತಾಯ? ★

ಕೊರಿಯ ಯುದ್ಧ ಪರಿಸಮಾಪ್ತಿಗೊಳಿಸುವ ರಶಿಯದ ಸೂಚನೆಗೆ ಮನ್ನಣೆ ದೊರಕಿದ್ದು ಈಗ ಅದು ಕಾರ್ಯರೂಪದಲ್ಲಿ ಬರುವುದನ್ನು ಕಾಣುತ್ತಲಿದ್ದೇವೆ. ಒಂದೆರಡು ದಿನಗಳೊಳಗಾಗಿಯೇ ಕೊರಿಯದ ಯುದ್ಧ ಮುಕ್ತಾಯಗೊಳ್ಳಬಹುದೆಂದು ರಾಜಕೀಯ ವರ್ಗಗಳ ನಂಬುಗೆ. ಕೊರಿಯದಲ್ಲಿ ಸಂ. ರಾ. ಸಂಘದ ಮುಖ್ಯ ಸೇನಾಧಿಪತಿಗಳಾದ ಜನರಲ್ ರಿಡವೆಯವರಿಗೆ ಕಮ್ಯೂನಿಸ್ಟ ಚೀನದೊಡನೆ ಯುದ್ಧ ಪರಿಸಮಾಪ್ತಿಗೊಳಿಸುವ ಮಾತುಕತೆ ನಡೆಸಲು ಅಧಿಕಾರಕೊಡಲಾಗಿದೆ. ರಣರಂಗದಲ್ಲಾಗುವ ಒಪ್ಪಂದದನ್ವಯ ಯಾವ ಕರಾರು ಸಿದ್ಧಗೊಳ್ಳುವದೋ ಅದನ್ನು ವಾಶಿಂಗಟನ್‌ದಲ್ಲಿ ಮನ್ನಿಸಲಾಗುವದೆಂದು ತಿಳಿದುಬರುತ್ತದೆ. ಡೋಲಾಯಮಾನ ಸ್ಥಿತಿಯಲ್ಲಿದ್ದ ಕೊರಿಯ ಪ್ರಕರಣವು ಈ ಬಾರಿಯ ಸಂಧಾನದಿಂದ ಬಗೆಹರಿಯುವ ಶುಭ ಚಿಹ್ನೆ ಕಂಡುಬರುತ್ತಲಿದೆ.

ಪರ್ಶಿಯದಲ್ಲೇನು?

ಪರ್ಶಿಯದ ಎಣ್ಣೆಯ ತಂಟೆಯು ದಿನದಿಂದ ದಿನಕ್ಕೆ ಬಿಗಿಯಾಗುತ್ತಿದೆಯೇ ಹೊರತು ಪರಸ್ಪರರೊಳಗೆ ಸಂಧಾನವಾಗುವ ಲಕ್ಷಣಗಳು ಕಂಡುಬರುತ್ತಿಲ್ಲ. ರಾಷ್ಟ್ರೀಕರಣವಾದ ಕಂಪೆನಿಯೊಡನೆ ಬ್ರಿಟಿಷ್ ತಜ್ಞರು ಕೆಲಸಮಾಡಲು ಒಪ್ಪದೆ ಇರುವದರಿಂದ ಎಣ್ಣೇ ಶುದ್ಧೀಕರಣ ವಿಭಾಗವೇ ನಿಂತುಹೋಗಿದೆ. ಎಣ್ಣೆಯ ಉತ್ಪಾದನಾ ಕಾರ್ಯ ನಿಂತಿದುದರ ಫಲವಾಗಿ ಪರ್ಶಿಯ ಸರಕಾರಕ್ಕೆ ತುಂಬ ಹಾನಿಯಿರುತ್ತದೆ. ಎಣ್ಣೆಯ ಲಾಭ ನಿಲ್ಲುವದು ಮಾತ್ರವಲ್ಲದೆ 80000 ಕೆಲಸಗಾರರಿಗೆ ಸಂಬಳವನ್ನು ಸರಕಾರ ಕೊಡಬೇಕಾಗಿದೆ. ತೆಹರಾನದಲ್ಲಿಯ ಬ್ರಿಟಿಷ್ ಕೆಲಸಗಾರರ ಹೆಂಗಸು ಮಕ್ಕಳನ್ನೆಲ್ಲ ಈಗಾಗಲೇ ಇಂಗ್ಲಾಂಡಿಗೆ ಸಾಗಿಸಲಾಗಿದೆ. ಬ್ರಿಟಿಶ ಯುದ್ಧ ಹಡಗವೊಂದನ್ನು ಇರಾಕದ ಗಡಿಯಲ್ಲಿ ಕಾದಿರಿಸಲಾಗಿದೆ. ಅಂತರರಾಷ್ಟ್ರೀಯ ಕೋರ್ಟಿನಲ್ಲಿ ಬ್ರಿಟಿಶರ ಪರವಾಗಿ ವಾದಿಸಲಿರುವ ವಕೀಲರು ತೆಹರಾನಿಗೆ ಬಂದಿರುವರು. ಸಂಧಾನದಲ್ಲಿ ಬಗೆಹರಿಯದೆ ಹೋದರೆ ಬ್ರಿಟಿಶರು ಯು. ಎನ್. ಓಕ್ಕೆ ಈ ದೂರನ್ನು ಒಯ್ಯಬಹುದು.

ಥಾಯಲಾಂಡ ಮುಖ್ಯ ಮಂತ್ರಿಯ ಅಪಹರಣ

ಥಾಯಲಾಂಡ ಮುಖ್ಯ ಮಂತ್ರಿ, ಫೀಲ್ಡ್ ಮಾರ್ಶಲ ಫಿಬುಲ್‌ಸೊಂಗ್ರಾಮರನ್ನು ಅವರು ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಿದ್ದಾಗ ಅಲ್ಲಿಯ ನೌಕಾಪಡೆಯ ಸಶಸ್ತ್ರ ಗುಂಪೊಂದು ಗುಂಡಿನ ಬೆದರಿಕೆ ಹಾಕಿ ಅವರನ್ನು ಬಂಧಿಸಿತು. ಈ ಸಮಾರಂಭದಲ್ಲಿ ಅನೇಕ ದೇಶ ವಿದೇಶ ಪ್ರತಿನಿಧಿಗಳು ಉಪಸ್ಥಿತರಿದ್ದು ಅವರಿಗೆ ಈ ಘಟನೆ ಮಹದಾಶ್ಚರ್ಯವನ್ನುಂಟುಮಾಡಿತು. ಅಮೇರಿಕದಿಂದ ಥಾಯಲಾಂಡಕ್ಕೆ ಇಗತಾನೆ ಬಂದಿರುವ ನೌಕೆಯಲ್ಲಿ ಮಂತ್ರಿಗಳನ್ನು ಪಿಸ್ತೂಲಿನ ಬೆದರಿಕೆ ಹಾಕಿ ಕೊಂಡೊಯ್ಯಲಾಯಿತೆಂದು ತಿಳಿದುಬರುತ್ತದೆ. ಮುಖ್ಯ ಮಂತ್ರಿಗಳನ್ನು ಒಂದುದಿನದೊಳಗಾಗಿ ಬಿಟ್ಟುಕೊಡದಿದ್ದರೆ ಅವರನ್ನಡಗಿಸಿಟ್ಟಿರುವ ಪ್ರದೇಶದ ಮೇಲೆ ಬಾಂಬುಧಾಳಿ ಮಾಡಲಾಗುವದೆಂದು ವಿಮಾನ ಪಡೆ ಎಚ್ಚರಿಸಿದೆ. ಈಗಾಗಲೇ ನೌಕಾಪಡೆಯ ಮೇಲೆ ಇತರ ಸಂಶಯಿತ ಪ್ರದೇಶದ ಮೇಲೂ ಬಾಂಬುಧಾಳಿ ನಡೆದಿದ್ದು ವಿಶೇಷ ಹಾನಿಯಾಗಿರುತ್ತದೆ. ಬ್ಯಾಂಗಕಾಕದಲ್ಲಿ ತಂಗುವ ಹಾಗೂ ಹಾದುಹೋಗುವ ವಿದೇಶೀಯ ವಿಮಾನಗಳಾವುವೂ ಅಲ್ಲಿಗೆ ಬರಕೂಡದೆಂದು ಆಜ್ಞಾಪಿಸಲಾಗಿದೆ.

ಈಗಲೀಗ ಬಂದ ವಾರ್ತೆಯಂತೆ ಮುಖ್ಯ ಮಂತ್ರಿಯವರು ಸುರಕ್ಷಿತವಾಗಿರುವರೆಂದೂ ತಿರುಗಿ ಅಧಿಕಾರ ವಹಿಸಿಕೊಳ್ಳುವರೆಂದೂ ತಿಳಿದುಬರುತ್ತದೆ.

ಭಾರತ ತುರ್ಕಸ್ಥಾನ

ಭಾರತ ಮತ್ತು ತುರ್ಕಸ್ಥಾನದೊಳಗೆ ಸಾಂಸ್ಕೃತಿಕ ಒಪ್ಪಂದವಾಗಿದ್ದು ಈ ಒಪ್ಪಂದಕ್ಕೆ ಭಾರತದ ವಿದ್ಯಾಸಚಿವ ಮೌಲಾನಾ ಆಜಾದರು ಅಂಕಾರಾದಲ್ಲಿ ಅಂಕಿತವನ್ನು ಹಾಕಿದರು.

ಡಾ। ಗ್ರಾಹ್ಯಾಮರ ಆಗಮನ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರಾಹ್ಯಾಮರು ಕರಾಚಿಗೆ ಬಂದಿದ್ದು ಪಾಕಿಸ್ತಾನ ಪ್ರಧಾನ ಮಂತ್ರಿ ಲಿಯಾಖತ್ ಅಲೀಖಾನರೊಡನೆ ಕಾಶ್ಮೀರದ ವಿಚಾರವಾಗಿ ಮಾತುಕತೆ ನಡೆಸಿದರು. ಹಾಗೆಯೇ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫ್ರುಲ್ಲಾಖಾನರೊಡನೆ ಮಾತುಕತೆ ನಡೆಸಿದರು. ಶ್ರೀನಗರಕ್ಕೆ ಆಗಮಿಸಿ ಶ್ರೀ ಜವಾಹರಲಾಲರೊಡನೆಯೂ ಮಾತುಕತೆ ನಡೆಸಲಿರುವರು.

ಪಾಕ್–ಭಾರತ ಸೈನಿಕರ ಘರ್ಷಣೆ

ಕಾಶ್ಮೀರ ಪಾಕಿಸ್ತಾನ ಗಡಿಯಲ್ಲಿ ನಡೆದ ಘರ್ಷಣೆಯಿಂದಾಗಿ ಭಾರತದ 5 ಸೈನಿಕರು ಮಡಿದಿರುವರು. ಪಾಕಿಸ್ತಾನದ ಹಲವು ಸೈನಿಕರಿಗೆ ಸಾವು ನೋವಾಗಿದೆ. ಉಭಯತರೂ ಈ ವಿಚಾರವನ್ನು ಸಂ. ರಾ ಸಂಘದ ನಿರೀಕ್ಷಕರ ಸಮಕ್ಷಮದಲ್ಲಿ ವಿಚಾರ ವಿನಿಮಯಗಳ ಮೂಲಕ ಪರಿಹರಿಸಿಕೊಂಡರೆಂದು ತಿಳಿದುಬರುತ್ತದೆ.

ಮಹಾತ್ಮಾ ಗಾಂಧೀಜಿಯವರ ಜೀವನ ಚರಿತ್ರೆ

ಮಹಾತ್ಮಾ ಗಾಂಧಿಯವರ ಪರಿಪೂರ್ಣ ಜೀವನ ಚರಿತ್ರೆಯನ್ನು ಪ್ರಕಟಿಸುವ ಮಹದುದ್ದೇಶವನ್ನು ಸರಕಾರ ಇಟ್ಟುಕೊಂಡಿದ್ದು ಎರಡು ಸಂಪುಟಗಳ ಪೂರ್ವಯೋಜನೆ ಈಗಾಗಲೇ ರೂಪಿತವಾಗಿರುತ್ತದೆ. ಗಾಂಧೀಜಿಯ ಹುಟ್ಟಿನಿಂದ ಹಿಡಿದು ಸಾಯುವ ವರೆಗಿನ ಜೀವನ ಚಿತ್ರಗಳು ಈ ಪುಸ್ತಕದಲ್ಲಿ ಬರಲಿವೆ 600ಚಿತ್ರಗಳಿವೆ. ಈ ಚಿತ್ರಗಳು ದೇಶವಿದೇಶಗಳಿಂದ ಸಂಗ್ರಹಿಸಲ್ಪಟ್ಟಿದ್ದು, ಹಲವು ಈ ತನಕ ಪ್ರಕಟಗೊಳ್ಳದವುಗಳೂ ಇರುತ್ತವೆ. ಈ ಕಾರ್ಯ ಪೂರ್ತಿಗೊಳ್ಳಬೇಕಾದರೆ ಮೂರು ಲಕ್ಷ ರುಪಾಯಿ ಸರಕಾರಕ್ಕೆ ವೆಚ್ಚವಾಗಬಹುದೆಂದು ತಿಳಿಯುತ್ತದೆ.

ಭಾರತದ ಭಾರೀ ಯೋಜನೆಗಳು

ಒಕ್ಕಲತನ, ಸಾರಿಗೆ ಮತ್ತು ಸಂಪರ್ಕ ವಿದ್ಯುತ್ತು ಮುಂತಾದ ಅಭಿವೃದ್ಧಿಗೋಸ್ಕರ ಭಾರತವು 1840 ಕೋಟಿ ರೂಗಳನ್ನು ವೆಚ್ಚಮಾಡಲಿರುವುದು. ಕೊಲೊಂಬೋ ಯೋಜನೆಯಂತೆ ಕೆನಡಾ ಮತ್ತು ಆಸ್ಟ್ರೇಲಿಯಗಳು ಮೊದಲ ವರ್ಷದಲ್ಲಿ 5½ ಮತ್ತು 5ಕೋಟಿ ಸಹಾಯನೀಡಲು ಒಪ್ಪಿರುತ್ತವೆ. ಇತರ ರಾಷ್ಟ್ರಗಳ ಸಹಾಯದ ನಿರೀಕ್ಷೆಯೂ ಇರುತ್ತದೆ. ಪ್ರತಿವರ್ಷ 307ಕೋಟಿ ರೂಗಳನ್ನು ಯೋಜನೆಯ ಸಲುವಾಗಿ ವೆಚ್ಚಮಾಡಲಾಗುವದು. ಉಳಿದ ಹಣಕ್ಕಾಗಿ ಕರಭಾರ, ಸರಕಾರೀ ವೆಚ್ಚದಲ್ಲಿ ಮಿತವ್ಯಯ, ಸಾರ್ವಜನಿಕರಿಂದ ಸಾಲ, ಮುಂತಾದ ಕಾರ್ಯಕ್ರಮಗಳನ್ನು ಭಾರತ ಸರಕಾರ ಕೈಗೊಳ್ಳಲಿದೆ.

ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ 148 ಕೋಟಿ ರೂಗಳ ವೆಚ್ಚ

ಪಾಕಿಸ್ತಾನದಿಂದ ಬಂದಿರುವ 20ಲಕ್ಷ ನಿರಾಶ್ರಿತರ ಜೀವನವ್ಯವಸ್ಥೆಯನ್ನು ಪೂರೈಸುವುದಕ್ಕಾಗಿ 1952ರವರೆಗೆ 148ಕೋಟಿ ರೂ. ವ್ಯಯಮಾಡಿದೆಂದು ತಿಳಿಯುತ್ತದೆ. ವಸತಿ—ಉದ್ಯೋಗ—ವಿದ್ಯೆ–ವಿಧವೆ ಹಾಗೂ ಅನಾಥ ಹೆಂಗಸರಿಗೆ ವರ್ಷಾಶನ ಮುಂತಾದ ಸಹಕಾರವನ್ನು ನೀಡಲಾಗಿದೆ

ಮದ್ರಾಸಕ್ಕೆ ವಿದೇಶಗಳಿಂದ ಆಹಾರ

ವಿದೇಶಗಳಲ್ಲಿರುವ ಹಿಂದೀಯರಿಂದಲೂ, ಸಂ. ರಾ. ಸಂಘದ ಅಂತರ ರಾಷ್ಟ್ರೀಯ ಮಕ್ಕಳ ಅಪತ್ತ ನಿಧಿಯಿಂದಲೂ ಅಮೇರಿಕೆಯ ಖಾಸಗೀ ಸಂಸ್ಥೆಗಳಿಂದಲೂ ದಾನರೂಪವಾಗಿ ಬಂದಿರುವ 400ಟನ್ ಅಕ್ಕಿ, 596000 ಪೌಂಡು ಹಾಲಿನ ಪುಡಿ, 40ಆಹಾರ ಪುಡಿಕೆಗಳು ಮದ್ರಾಸಕ್ಕೆ ಬಂದಿವೆಯೆಂದು ಮದ್ರಾಸದ ಆಹಾರ ಮಂತ್ರಿ ತಿಳಿಸಿರುವರು.

ವನಮಹೋತ್ಸವ ವಣಮಹೋತ್ಸವವಾಗದಿರಲಿ.

ಜುಲೈ ತಿಂಗಳ ಮೊದಲವಾರದಲ್ಲಿ ಆರಂಭಿಸಲಾದ ಸಾಪ್ತಾಹಿಕ ವನಮಹೋತ್ಸವದ ಅವಶ್ಯಕತೆಯ ಕುರಿತು ಮದ್ರಾಸಿನ ಮುಖ್ಯಮಂತ್ರಿ ಕುಮಾರ ಸ್ವಾಮಿ ರಾಜಾರವರು "ಮರಗಳು ಉತ್ತಮವಾದ ಹವೆಗೂ, ಮಳೆಗೂ, ಗೊಬ್ಬರ ನಿರ್ಮಾಣಕ್ಕೂ, ಕಟ್ಟಿಗೆಗೂ, ಇನ್ನಿತರ ಉಪಯೋಗಕ್ಕೂ ಅವಶ್ಯವಾಗಿರುತ್ತವೆ. ದೇಶಾದ್ಯಂತ ಆಚರಿಸುವ ಈ ಸಮಾರಂಭದಲ್ಲಿ ಎಲ್ಲರೂ ಉತ್ಸಾಹ ಸಹಕಾರಗಳನ್ನು ತೋರಬೇಕು. ಗಿಡವನ್ನು ನೆಡುವದಕ್ಕಿಂತಲೂ ಅದನ್ನು ಮರವನ್ನಾಗಿ ಬೆಳೆಸುವುದೇ ಬಹು ಮುಖ್ಯವಾದ ಕೆಲಸ. ಸರಿಯಾದ ರಕ್ಷಣೆ ಮತ್ತು ನಿಗಾ ತೆಗೆದುಕೊಳ್ಳದೆ ಅವು ಅರ್ಧದಲ್ಲೇ ಸಾಯುವ ಸಂದರ್ಭ ಉಂಟು. ಅಂತಹ ಜಾಗ್ರತೆಯನ್ನು ಮಾಡದೆ ಅದನ್ನು ಬೆಳೆಸಿ ಮರವನ್ನಾಗಿ ಮಾಡುವುದೇ ಎಲ್ಲರ ಮಹೋದ್ದೇಶವಾಗಿರಬೇಕು" ಎಂದಿರುವರು.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ, ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—6—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಯಕ್ಷಗಾನ ಪ್ರಿಯರಿಗೆ ಉತ್ತಮ ಸಾಹಿತ್ಯ!

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಸಾಹಸ ಭೀಮ ವಿಜಯ
(ಗದಾಯುದ್ಧ)

ಎಂಬ ಯಕ್ಷಗಾನ ಪ್ರಸಂಗವು ಇದೀಗ ಪ್ರಕಟವಾಗಿದೆ!
ಯಕ್ಷಗಾನ ಪ್ರಿಯರಿಗೆ ಸುಸಂಧಿ!

ಬೆಲೆ: 0—8—0 ಟಪ್ಪಾಲು ಖರ್ಚು ಪ್ರತ್ಯೇಕ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—
(1) ಅಂತರಂಗ ಕಾರ್ಯಾಲಯ, ಉಡುಪಿ.
(2) ನವಭಾರತ ಬುಕ್ ಡಿಪ್ಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ, ೫-೭-'೫೧

ಗ್ರಾಹ್ಯಾಮರ ಯತ್ನ ಫಲಿಸೀತೇ?

ಕೊರಿಯದ ಯುದ್ಧ ಮುಕ್ತಾಯದ ಶುಭ ಚಿಹ್ನೆ ಕಾಣುತ್ತಿರುವಾಗಲೇ ಪರ್ಶಿಯಾ ಮತ್ತು ಕಾಶ್ಮೀರದ ಪ್ರಕರಣಗಳು ಯುದ್ಧಾಹ್ವಾನವನ್ನು ನೀಡುವ ಗಂಭೀರ ಪ್ರಕರಣಗಳನ್ನು ನೋಡುತ್ತಲಿದ್ದೇವೆ. ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಗ್ರಾಹ್ಯಾಮರು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವ ಸದಿಚ್ಛೆಯನ್ನಿಟ್ಟು ಬಂದಿರುವರಾದರೂ ಅವರ ಕಾರ್ಯಕ್ಕೆ ಯಶಸ್ಸಿಗುವ ಸಂಭವ ಕಂಡುಬರುವುದಿಲ್ಲ. ಸದಾ ಬೊಬ್ಬೆಹಾಕುವ ಯುದ್ಧಪ್ರೇರಕ ಬೆದರಿಕೆಯನ್ನು ಹಾಕುವ ಪಾಕಿಸ್ತಾನಿಗಳು, "ಗ್ರಾಹ್ಯಾಮರು ಇತ್ಯರ್ಥಮಾಡಲು ಅಸಮರ್ಥರಾದರೆ ಯುದ್ಧದಿಂದಲೇ ಕಾಶ್ಮೀರವನ್ನು ಆಕ್ರಮಿಸುವೆವು" ಎನ್ನುತ್ತಾರೆ. ಪಾಕಿಸ್ತಾನದ ಪ್ರಮುಖ ಪತ್ರಿಕೆಗಳು ಹೋರಾಟದಿಂದ ಮಾತ್ರ ಕಾಶ್ಮೀರ ಸಮಸ್ಯೆ ಬಗೆಹರಿದೀತೆಂಬ ಯುದ್ಧ ಪ್ರಚೋದಕ ಮಾತುಗಳನ್ನೇ ಆಡಿವೆ. ಜಮ್ಮು ಕಾಶ್ಮೀರಗಳ ಗಡಿ ಪ್ರದೇಶದಲ್ಲಿ ಪಾಕಿಸ್ತಾನೀ ಸೈನಿಕರು ಹಿಂದೀ ಸೈನಿಕರ ಜೀವಾಪಹರಣ ಮಾಡಿದ ದಾಖಲೆಗಳಿಂದ ಸಂ. ರಾ. ಸಂಘದ ಯುದ್ಧವಿರಾಮ ನಿಯಮೋಲ್ಲಂಘನೆ ಮಾಡಿದಂತಾಗಿದೆಂದೇ ತಿಳಿಯಬೇಕು. ಯುದ್ಧ ವಿರಾಮ ಪ್ರದೇಶವನ್ನು ದಾಟಿ ಭಾರತದೊಳಗಿನ ದನ ಕರುಗಳನ್ನು ಅಪಹರಿಸುವುದೂ ಸ್ತ್ರೀಯರನ್ನು ಮಾನಭಂಗಪಡಿಸುವುದೂ ಸಂಪತ್ತನ್ನು ಸೂರೆಗೊಳ್ಳುವುದೂ ನಡೆದಿದೆ. ಈ ರೀತಿಯ ಬೆದರಿಕೆ ಕುಂಡಾಟಿಕೆಯ ಮೂಲಕ ತಾವು ಗೆದ್ದೇವೆಂಬ ದುರ್ಬುದ್ಧಿ ಪಾಕಿಸ್ತಾನಿಗಳಲ್ಲುದ್ಭವಿಸಿದ್ದಂತೆ ಕಂಡು ಬರುತ್ತದೆ. ಈ ಪ್ರಕರಣ ಗಂಭೀರವೆಂದೇ ತಿಳಿಯಲಾಗಿದೆ. ಕೇಂದ್ರ ಸರಕಾರದ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರರು ಪಾಕಿಸ್ತಾನದ ಈ ಕೃತಿಯನ್ನು ತೀವ್ರವಾಗಿ ಖಂಡಿಸಿ ಇದೇ ರೀತಿಯ ಧೋರಣೆ ಮುಂದುವರಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು ಸಕಾಲಿಕವಾಗಿ ಸೂಚಿಸಿದುದು ಯೋಗ್ಯವೇ ಆಗಿದೆ. ಭಾರತ ಸರಕಾರದ ಮುಖ್ಯಸೇನಾಪತಿಗಳಾದ ಜನರಲ್ ಕಾರ್ಯಪ್ಪನವರು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಪಾಕಿಸ್ತಾನೀ ತಂಟೆಗಳತ್ತ ವಿಚಾರಿಸಲು ಕಾಶ್ಮೀರಕ್ಕೆ ಹೋದಿದ್ದು ಪಾಕಿಸ್ತಾನೀ ಸೈನಿಕರ ಉದ್ಧಟತನವನ್ನು ಖಂಡಿಸಿ ಕಾಶ್ಮೀರಿಗಳ ಸಂರಕ್ಷಣೆಯನ್ನು ಮಾಡುವಲ್ಲಿ ಭಾರತ ಸೈನಿಕರು ಸಮರ್ಥರಾಗಿರುವರೆಂದು ಅಭಯವನ್ನು ನೀಡಿರುವರು.

ಇಂತಹ ಕಲುಷಿತ ವಾತಾವರಣದ ನಡುವೆ ಗ್ರಾಹ್ಯಾಮರು ಕಾಶ್ಮೀರೀ ತಂಟೆಯ ಪರಿಶೀಲಕರಾಗಿ ಬಂದಿರುವರು. ಅವರ ಕಾರ್ಯದಲ್ಲಿ ಭಾರತವು ಸಂಪೂರ್ಣ ಸಹಕಾರ ಧೋರಣೆಯನ್ನು ವಹಿಸಿದ್ದರಿಂದ ಪಾಕಿಸ್ತಾನದ ಅಭಿಪ್ರಾಯವೊಂದನ್ನೇ ಲಕ್ಷಿಸಿ, ಏಕಪಕ್ಷೀಯವಾಗಿ ತೀರ್ಮಾನಿಸವದಾದರೂ ಹೇಗೆ? ಸಂ. ರಾ. ಸಂಘದ ಗೊತ್ತುವಳಿಯನ್ನು ಭಾರತವು ಸಂಪೂರ್ಣವಾಗಿ ತಿರಸ್ಕರಿಸಿದ ಮೇಲೆ ಸಂ. ರಾ. ಸಂಘವೇ ನೂತನ ಪರಿಹಾರ ಮಾರ್ಗವನ್ನು ಸೂಚಿಸದೆ ಪಾಕಿಸ್ತಾನದ ಒಲವಿನಂತೆ ತನ್ನ ಒಣಹಟವಿಯನ್ನೇ ಮುಂದೆಮಾಡಿದೆ. ಮೂರುವರ್ಷಗಳಿಂದ ಸಂ. ರಾ. ಸಂಘದಲ್ಲಿ ಕಾಶ್ಮೀರ ಸಮಸ್ಯೆಯ ಕುರಿತು ವಿವಾದ ನಡೆದುದರಲ್ಲಿ ಪಾಕಿಸ್ತಾನದ ಅಧಿಕಾರ ಪ್ರಾಪ್ತಿ ಹೆಚ್ಚುತ್ತ ಬಂದಿರುವದಕ್ಕೆ ಸಂ ರಾ ಸಂಘವೇ ಕಾರಣವಾಗಿದೆ. ಸಂಧಾನದಿಂದ ಆಗಬಹುದಾದ ಈ ಜಗಳವನ್ನು ಸಮರದಲ್ಲೇ ಮುಕ್ತಾಯಗೊಳ್ಳಬೇಕೆಂಬ ಕುತೂಹಲ ಸಂಘಕ್ಕಿರಬಹುದೇ ಎನುವಷ್ಟು ಆಭಾಸವಾಗಿ ತೋರುತ್ತಲಿದೆ. ನೆಹ್ರೂರವರು ಹೇಳುವಂತೆ ಈ ಮಧ್ಯಸ್ಥಗಾರರಲ್ಲದೆ ಪಾಕಿಸ್ತಾನ ಭಾರತಗಳೇ ಪರಿಹರಿಸಿಕೊಳ್ಳುವ ಪಕ್ಷದಲ್ಲಿ ಈ ವರೆಗೆ ತೀರ್ಮಾನವಾಗುತ್ತಿತ್ತು. ಆದರೆ ಆಂಗ್ಲೋ ಅಮೇರಿಕಾನರ ಕೈಯಲ್ಲಿ ಸಮಸ್ಯೆ ಇನ್ನಷ್ಟು ಜಟಿಲವಾಗಿ ಉಭಯ ರಾಷ್ಟ್ರಗಳೊಳಗಿನ ಮೈತ್ರಿ ದಿನದಿಂದ ದಿನಕ್ಕೆ ಕೆಡುತ್ತ ಬಂದಿದೆ. ಪರಸ್ಪರರೊಳಗೆ ತಪ್ಪು ಗ್ರಹಿಕೆ ಹುಟ್ಟುವದಕ್ಕೂ—ಯುದ್ಧ ಹೇತುವಾದ ಕಾರಣಗಳು ಮೂಡುವದಕ್ಕೂ ಬೇಕಾದ ಕುಟಿಲ ನೀತಿಯನ್ನು ಅವರೇ ಪ್ರಚೋದಿಸಿದರೆಂದರೆ ತಪ್ಪಾಗದು. ಈಗಲಂತೂ ಪಾಕಿಸ್ತಾನದ ಒಲವಿಗೆ ಸರಿಯಾದ ಧೋರಣೆಯನ್ನು ಅವರು ವಹಿಸಿದಂತಿದೆ. ಭಾರತದ ಅಸಹಕಾರವನ್ನು ಲಕ್ಷಿಸದೆ ಸ್ವಬುದ್ಧಿಯಿಂದ ಏಕಪಕ್ಷೀಯವಾಗಿ ನ್ಯಾಯದಾನ ಮಾಡುವೆವೆಂದು ಹೇಳುವ ಆಂಗ್ಲೋ ಅಮೇರಿಕಾನರ ಈ ವಾದ ಅರ್ಥಶೂನ್ಯ ಮಾಡುದು ಮಾತ್ರವಲ್ಲ ಅಸ್ವಾಭಾವಿಕವಾದುದು ಕೂಡಾ ಆಗಿರುತ್ತದೆ. ಭಾರತವು ಈ ಕುಟಿಲ ರಾಜಕೀಯ ನೀತಿಗೆ ತಲೆಬಾಗದೆ ನೇರ ಹಾಗೂ ಸ್ಪಷ್ಟವಾದ ಮಾತಿನಿಂದ ಪಾಕಿಸ್ತಾನ ಹಾಗೂ ಆಂಗ್ಲೋ ಅಮೇರಿಕಾನರ ಪಕ್ಷಪಾತ ಬುದ್ಧಿಯನ್ನೇ ಅಧಿಕವಾಗುಳ್ಳ ಸಂ. ರಾ. ಸಂಘಕ್ಕೆ ಉತ್ತರಿಸಿದ್ದು ಕಾಶ್ಮೀರ ಸಮಸ್ಯೆಯಲ್ಲಿ ತನಗಿರುವ ದೃಢತೆಯ ದ್ಯೋತಕವೇ ಆಗಿದೆ.

ಈಗಿನ ವಿದ್ಯಮಾನವನ್ನು ನೋಡುವಾಗ ಗ್ರಾಹ್ಯಾಮರ ಈ ಸಂಧಾನ ಮಾತುಕತೆ ಕೇವಲ ನಾಟಕೀಯ ವಾದೀತೇ ವಿನಹ ಫಲಕಾರಿಯಾಗಲಿಕ್ಕಿಲ್ಲವೆಂದು ತೋರುತ್ತದೆ. ಶಾಂತಿ-ಸಮಾಧಾನದ ಮಾತುಗಳು ಪಾಕಿಸ್ತಾನಿಗಳ ಮಟ್ಟಿಗೆ ವ್ಯರ್ಥವೇ. ಸಂ. ಭಾರತದ ಮುಖ್ಯ ಪ್ರಧಾನಿಗಳು ತುಂಬ ಬೌದ್ಧಿಕವಾತನ್ನು ಹೇಳಿದರೂ, ಪಾಕಿಸ್ತಾನಿಗಳು ಅದನ್ನು ಅಪಾರ್ಥ ಮಾಡಿಕೊಂಡರು. ಪಾಕಿಸ್ತಾನಿಗಳಿಗೆ ಇಂದು ಬೇಕಾಗಿರುವದು ಸಂ. ರಾ. ಸಂಘದ ಆದೇಶದಂತೆ ಕಾಶ್ಮೀರದ ಪಾಲು ತನಗೆ ಬೇಕು—ಅದು ಸಾಧ್ಯವಾಗದೆ ಹೋದರೆ ಯುದ್ಧದಿಂದಲೇ ಅದು ತಮ್ಮದಾಗಬೇಕು. ಕಾಶ್ಮೀರಿಗಳ ಮನೋಗತ ಅವರಿಗೆ ಬೇಡಾಗಿದೆ. ಹೇಗಾದರೂ ಕಾಶ್ಮೀರ ತಮ್ಮ

'ಕಾಂಗ್ರೆಸ್ಸಿಗರೇ ಕಮ್ಯೂನಿಸ್ಟರ ನಿರ್ಮಾಪಕರು'

ಪ್ರಜಾ ಪಾರ್ಟಿಯ ಅಧ್ಯಕ್ಷರಾದ ಶ್ರೀ ಜೆ. ಬಿ. ಕೃಪಲಾನಿಯವರು ತನ್ನ ಪಾರ್ಟಿಯು ಮುಂಬರುವ ಚುನಾವಣೆಯಲ್ಲಿ ಭಾಗವಹಿಸುವ ಕುರಿತು ಮಾತನಾಡುವಾಗ "ಕಾಂಗ್ರೆಸ್ಸು ಕಮ್ಯೂನಿಸ್ಟರ ನಿರ್ಮಾಣ ಕಾರ್ಯಕ್ಕೆ ಅನುಕೂಲವಾದ ಪರಿಸ್ಥಿತಿಯನ್ನು ಒದಗಿಸಿಕೊಡುತ್ತಲಿದೆಯೆಂದು" ಹೇಳಿದರು.

ಆಚಾರ್ಯರು: ಕಾಂಗ್ರೆಸು ಬ್ರಿಟಿಶರ ಆಡಳಿತ ತತ್ವವನ್ನೇ ಅವಲಂಬಿಸಿರುತ್ತದೆ. ಗಾಂಧೀಜೀಯ ವಿಧಾಯಕ ಕಾರ್ಯಕ್ರಮಗಳನ್ನು ಆಚರಣೆಗೆ ತರುವದಕ್ಕೆ ತೀರ ಅಸಮರ್ಥರಾಗಿರುವದು. ದೇಶದಲ್ಲಿಯ ಲಂಚ-ಕಳ್ಳಸಂತೆ ಅವ್ಯಾಪಾರವನ್ನು ತಡೆಹಿಡಿಯಲು ಅವರಿಂದ ಆಗದಿದೆ ಪ್ರತಿಯೊಬ್ಬ ಅಧಿಕಾರಿಯೂ ಪ್ರಾಮಾಣಿಕತನದಿಂದ ವರ್ತಿಸಿ ಜನತೆಯನ್ನು ವಂಚಿಸಿದವರಿಗೆ ಕಠಿಣ ಶಿಕ್ಷೆಯನ್ನು ವಿಧಿಸುತ್ತಿದ್ದರೆ ಇಷ್ಟು ಅರಾಜಕತೆಯಾಗುತ್ತಿರಲಿಲ್ಲ. ಆದರೆ ಈ ಅವ್ಯಾಪಾರವನ್ನು ತಡೆಯುವದು ಕಾಂಗ್ರೆಸ್ಸಿಗರಿಂದಾಗಲಿಲ್ಲ. ಸರಕಾರದ ರಾಜ್ಯಾಡಳಿತ ಧೋರಣೆಯಿಂದ ಕಮ್ಯೂನಿಸ್ಟರ ನಿರ್ಮಾಣವಾಗುವದು ಅನಿವಾರ್ಯವಾಗಿದೆ. ಬಡತನ, ದಾರಿದ್ರ್ಯ ಮಾತ್ರವಲ್ಲ ಗೊತ್ತುಗುರಿಯಿಲ್ಲದ ಆಡಳಿತ ಕ್ರಮದಿಂದಲೇ ಕಮ್ಯೂನಿಸ್ಟರು ಹೆಚ್ಚುತ್ತಾರೆ. ಕಾಂಗ್ರೆಸ್ ಸರಕಾರದ ಈಗಿನ ಆಡಳಿತ ಕ್ರಮವು ಕಮ್ಯೂನಿಸ್ಟರ ನಿರ್ಮಾಣಕಾರ್ಯಕ್ಕೆ ಅತ್ಯಂತ ಸಹಕಾರಿಯಾಗಿದೆ. ಭಾರತದೇಶಕ್ಕೆ ಅನುಗುಣವಾದ ರಾಜಕೀಯ ಮನೋಧರ್ಮವನ್ನು ಮರೆತು ಸ್ವಾತಂತ್ರ್ಯದ ನಿಜವಾದ ಫಲವನ್ನು ಜನತೆಯಿಂದ ಅಪಹರಣ ಮಾಡಲಾಗಿದೆ. ಅಂತಲೇ ಸರಕಾರದಲ್ಲಿ ಬದಲಾವಣೆ ಅವಶ್ಯವೆನ್ನುತ್ತೇನೆ. ಕಾಂಗ್ರೆಸ್ಸಿನಲ್ಲಿದ್ದುಕೊಂಡು ಅದರ ಶುದ್ಧೀಕರಣ ಮಾಡಬಹುದೆಂದು ಇತರರು ಹೇಳಿದ್ದನ್ನು ನಾನು ಮೊದಲಿಗೆ ಒಪ್ಪಿದೆನಾದರೂ ಕೊನೆಯ ವರೆಗೂ ಅದನ್ನು ನನ್ನಿಂದ ಸಾಧಿಸಲಾಗದೆ ಇಂದು ನೂತನ ಪಕ್ಷವೊಂದನ್ನು ರಚಿಸಬೇಕಾಯಿತು. ನನ್ನ ಪಾರ್ಟಿಯು ಸೋಶಲಿಸ್ಟ ಪಾರ್ಟಿಯೊಡನೆ ಸೇರಿಕೊಂಡು ಕೆಲಸಮಾಡುವ ನಿರ್ಧಾರ ಮಾಡಿರುವುದಿಲ್ಲ. ಎಷ್ಟು ಸ್ಥಾನಗಳಿಗಾಗಿ ಪ್ರಜಾ ಪಾರ್ಟಿಯು ಸ್ಪರ್ಧಿಸಬಹುದೆಂಬುದನ್ನು ಈಗ ಹೇಳಲಾರೆ. ಈ ಚುನಾವಣೆಯೆಂಬುದು ದೇಶದ 'ಜಡ್ಜ್‌ಮೆಂಟ್ ಡೇ'ಯಾಗಿರುವುದರಿಂದ ಜನತೆ ಹೆಚ್ಚಿನ ಹೊಣೆಯನ್ನು ವಹಿಸಬೇಕಾಗುವದು

ಆಚಾರ್ಯ ಕೃಪಲಾನಿಯವರು ಈಚೆಗೆ ಹೆಚ್ಚಾಗಿ ಕಾಂಗ್ರೆಸ್ಸನ್ನು ಟೀಕಿಸುವದನ್ನೇ ತನ್ನ ಉದ್ದೇಶವಾಗಿಟ್ಟುಕೊಂಡಿದ್ದರೂ ಹಲವುವೇಳೆ ವಿಚಾರಾತ್ಮಕವಾದ ಅಂಶವನ್ನು ಜನತೆಯ ಮುಂದಿಡುವದನ್ನು ನಾವು ಲಕ್ಷ್ಯಪೂರ್ವಕವಾಗಿ ನೋಡಬೇಕಾಗಿದೆ. ಭಾರತದಲ್ಲಿಯ ಕಮ್ಯೂನಿಸ್ಟರನ್ನು ರಷ್ಯಾದ ಕಮ್ಯೂನಿಸ್ಟರಿಗೆ ಹೋಲಿಸುವಂತಿಲ್ಲ. ಆದರೆ ಅಲ್ಲಿದ್ದಾದರೂ ಕಮ್ಯೂನಿಸ್ಟರ ನಿರ್ಮಾಣಕ್ಕೆ ಇಲ್ಲಿನ ಪರಿಸ್ಥಿತಿಯೇ ಕಾರಣವೆಂಬುದನ್ನು ನಾವು ಒಪ್ಪಬೇಕಾಗಿದೆ. ಇಲ್ಲಿಯ ಕಮ್ಯೂನಿಸಮಕ್ಕೆ ಅನ್ನ, ಬಟ್ಟೆ, ಉದ್ಯೋಗದ ಅಭಾವವೇ ಮುಖ್ಯ ಕಾರಣವಾಗಿದೆ. ದೀನರೇ ಹೆಚ್ಚಾಗಿರುವ ನಮ್ಮ ದೇಶದಲ್ಲಿ ಈ ಅಭಾವ ಸರ್ವತ್ರ ತಲೆದೋರುವುದು ಸ್ವಾಭಾವಿಕ. ಜನ ಅವಿದ್ಯಾವಂತರಾಗಿದ್ದು ಪರಿಸ್ಥಿತಿಯನ್ನು ಅಭ್ಯಾಸಿಸುವ ತಿಳುವಳಿಕೆ ಇಲ್ಲದೆಯಿರುವುದೂ ಒಂದು ಕಾರಣವಾದರೆ ಆಚಾರ್ಯರೆಂದಂತೆ ಸಾಮಾನ್ಯ ಜನತೆಯ ಆಶೆ ಆಕಾಂಕ್ಷೆಗಳು ಈಗಿನ ಸರಕಾರೀ ಜನರಿಂದ ಮಣ್ಣುಮುಕ್ಕುತ್ತಲಿರುವುದೂ ಇನ್ನೊಂದು ಕಾರಣ. ಎಲ್ಲಿ ಹೆಚ್ಚಿನ ಪ್ರಚಾರಕಾರ್ಯ ಜರಗಬೇಕೋ ಅಲ್ಲಿ ಆಗಲಿಲ್ಲ. ಎಲ್ಲಿ ಸರಕಾರದ ನಿಜವಾದ ಧೋರಣೆ- ಸಂಕಲ್ಪಗಳನ್ನು ತಿಳಿಹೇಳಬೇಕೋ ಅಲ್ಲಿ ಬ್ರಿಟಿಷರ ಕಾಲದ ನಿರಂಕುಶ ಆಡಳಿತಕ್ರಮ ಸಾಗುತ್ತಲಿವೆ. ಹಳ್ಳಿಯ ಸುಧಾರಣೆ—ಹಿಂದುಳಿದವರ ಸುಧಾರಣೆ ಇವೆಲ್ಲ ರಾಜಕೀಯ ಹರಟೆ ಚರ್ಚೆಗಳೇ ಆಗಿವೆಯಲ್ಲದೆ ಕಾರ್ಯರೂಪದಲ್ಲಿ ಸಾಕಷ್ಟು ಬಂದಿರುವದಿಲ್ಲ ಸರಕಾರದ ಮುಖ್ಯ ಮುಖ್ಯವಾದ ಉದ್ದೇಶಗಳು ಬಡಜನರ ಹಿತದ ಸಲುವಾಗಿಯೇ ಇರುವದಾದರೂ ಹಲವು ಅಧಿಕಾರಿಗಳ ಕರ್ತವ್ಯ ಲೋಪದಿಂದ ಅದರ ಲಾಭ ಅವರಿಗಾಗುತ್ತಿಲ್ಲ. ಅಧಿಕಾರಿಗಳಲ್ಲಿ ಸೇವಾಕಾಂಕ್ಷೆ-ರಾಷ್ಟ್ರೀಯ ಭಾವನೆ ಇರದೆ ಹಿಂದಿನ ಹಳೆಯ ಧೋರಣೆಯೇ ಪ್ರತ್ಯಕ್ಷವಾಗಿ ಉಳಿದುಕೊಂಡಿದೆ ದುತ್ತುಳ್ಳವರು ಹಳ್ಳಿಯಿಂದ ದಿಲ್ಲಿಯ ವರೆಗೆ ತಮ್ಮ ವರ್ಚಸ್ಸನ್ನು ಬೀರಬಹುದನ್ನುವ ಕಲ್ಪನೆ ಈಗಲೂ ಇದೆ. ಈ ಬಗೆಯ ಸ್ವಾರ್ಥದ ಕೈವಾಡ ಮುಂದರಿಯುವದ ಅಶ್ವಾಭಿಮಾನವನ್ನು ಕಾಣುವೆವು. ಇದುವೆ ಕಮ್ಯೂನಿಸಮದ ಮೂಲ ಹಾಗೂ ಕಮ್ಯೂನಿಸ್ಟರ ನಿರ್ಮಾಪಕತೆಯ ತಂತ್ರ!

ಬಗಲಿಗೆ ಬೇಕಾದೇತೆಂಬ ಮತೋದ್ದೇಶವೆಂದಾದ ಮೇಲೆ ಮಾತು—ವಿಚಾರ ವಿಚಾರ— ಇವೆಲ್ಲ ತೋರಿಕೆಯ ಮಟ್ಟಿಗಷ್ಟೇ! ಅಂದಮೇಲೆ ಯುದ್ಧ ಅನಿವಾರ್ಯವೆಂದು ಹೇಗೆ ಹೇಳೋಣ? ಪಾಕಿಸ್ತಾನ ತನ್ನ ಹಟಮಾರಿತನವನ್ನು ಬಿಡದೆ ಹೋದರೆ ಯುದ್ಧವಲ್ಲದೆ ಅನ್ಯಗತಿಯಿಲ್ಲ. ಗ್ರಾಹ್ಯಾಮರ ಈ ವಿಚಾರವಿನಿಮಯ ವ್ಯರ್ಥಮಾತ್ರವಲ್ಲ; ಕೇವಲ ಕಾಲಹರಣ ಕೂಡಾ ಹೌದು.

ಮಂಗಳೂರು

ಸ್ಪಡಿ ಸರ್ಕಲ್:—ಕಳೆದ ತಾ 24ರಲ್ಲು ಕರ್ನಾಟಕ ಕಮರ್ಶಿಯಲ್ ಕೊರ್ಪರೇಶನಿನ ಆಫೀಸಿನಲ್ಲಿ ಜುನಾವಣಾ ಕ್ರಿಯಾ ಸಮಿತಿಯ ಸಭೆಯು ಶ್ರೀ ಜೆ. ಬಿ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಜರಗಿ ಕಮಿಟಿಯು ಕಡೆಯಿಂದ ಮುಂದಿನ ಚುನಾವಣೆಗಳ ವಿಷಯವಾಗಿ ಆದಷ್ಟು ಪ್ರಚಾರ ಕಾರ್ಯಗಳನ್ನು ನಡೆಸಬೇಕೆಂದೂ ಮಂಗಳೂರು ಸ್ಪಡಿಸರ್ಕಲೊಂದನ್ನು ತೆರೆಯಬೇಕೆಂದೂ ನಿರ್ಣಯಿಸಲಾಯಿತು.

ಮುನಿಸಿಪಲ್ ಕೆಲಸಗಾರರ ಸಂಘದ ಮಹಾಸಭೆಯು:— ಕಳೆದ ತಾ 27ರಲ್ಲು ಶ್ರೀ ಬಿ. ವಿ. ಕಕ್ಕಿಲಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲಸಗಾರರಿಗಿರುವ ತೊಂದರೆಗಳನ್ನೆಲ್ಲಾ ನಗರ ಸಭೆಯ ಮುಂದಿಡುವ ತೀರ್ಮಾನವಾಯಿತು. ಬಳಿಕ ಹೊಸ ವರ್ಷದ ಚುನಾವಣೆ ನಡೆಯಿತು.

ಹಂಚಿನ ಮಜೂರ ಸಂಘದ ಪ್ರತಿನಿಧಿಗಳ ಸಭೆಯು:—ಕಳೆದ ತಾ 26ರಂದು ಟ್ರೇಡ್‌ಯೂನಿಯನ್ ಆಫೀಸಿನಲ್ಲಿ ಶ್ರೀ ಎ. ಕೃಷ್ಣ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವೊಂದು ವಿಷಯಗಳನ್ನು ಚರ್ಚಿಸಲಾಯಿತು.

ದ. ಕ. ಒಟೊಮೊಬ್ಯಾಲ್ ಮೋಟಾರ್ ಕೆಲಸಗಾರರ ಸಂಘದ ಸಭೆಯು:—ಕಳೆದ ತಾ 24ರಲ್ಲು ಶ್ರೀ ಗಣೇಶ ಬಿ. ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೋಟಾರ್ ಕೆಲಸಗಾರರಿಗೆ ಸಂಬಂಧಿಸಿದ ಹಲವೊಂದು ಸಮಸ್ಯೆಗಳ ಕುರಿತು ಚರ್ಚೆಯಾಗಿ ಸಂಘವನ್ನು ಪುನರ್ ಸಂಘಟಿಸುವ ನಿರ್ಣಯವಾಯಿತು ಆ ಬಗ್ಗೆ ಹನ್ನೊಂದು ಮಂದಿಯಿರುವ ಒಂದು ಸಂಘಟನಾ ಸಮಿತಿಯ ರಚನೆಯೂ ಆಯಿತು.

ಸತ್ಕಾರ ಸಮಾರಂಭ:—ಮಂಗಳೂರಿನ ಹಿಂದಿ ಮಜ್ಲಿಸ್ ಸಂಸ್ಥೆಯು ಕಳೆದ ಹಿಂದಿ ವಿಶಾರದ ಪರೀಕ್ಷೆಯಲ್ಲಿ ಪಾಸಾದವರನ್ನು ಸತ್ಕರಿಸುವ ಸಮಾರಂಭವೊಂದನ್ನು ಕಳೆದ ತಾ 24ರಲ್ಲು ಡಾ। ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಸಮಾರಂಭದಲ್ಲಿ ಶ್ರೀ ಎ. ಆರ್. ನಾವಡರು ಮಂಗಳೂರಿನ ಹಿಂದಿ ಪ್ರಚಾರದ ವಿದ್ಯಾಲಯದ ಕಾರ್ಯಕಲಾಪಗಳನ್ನು ತಿಳಿಸಿದರು. ಶ್ರೀಗಳಾದ ಜಿ. ಕೆ. ಗೋವಿಂದ ಭಟ್, ಎಮ್ ಮಾಧವ ರಾವ್ ಕೆ. ಎಲ್. ಎನ್. ರಾವ್ ಮೊದಲಾದವರು ಉತ್ತೀರ್ಣರಾದವರನ್ನು ಅಭಿನಂದಿಸುತ್ತ ವಿದ್ಯಾಲಯದ ಕೆಲಸಗಳನ್ನು ಹೊಗಳಿದರು.

ಭಾಷಣ:—ಕಳೆದ ತಾರೀಕು 27ರಲ್ಲು ಬೆಸೆಂಟ್ ಬಾಲಿಕಾ ಪಾಠ ಶಾಲೆಯ ವಿದ್ಯಾರ್ಥಿನಿಯರ ಸಭೆಯಲ್ಲಿ ಡೆಲ್ಲಿಯ ಲೇಡಿ ಅರ್ವಿನ್ ಕಾಲೇಜಿನ ಪ್ರಾಧ್ಯಾಪಿಕೆ ಶ್ರೀಮತಿ ಸುಶೀಲಾ ಅತ್ರಿವಂ, ಅವರು ಇಂಗ್ಲೆಂಡಿನಲ್ಲಿ ಶಿಕ್ಷಣದ ವಿಚಾರವಾಗಿ ಮಾತನಾಡಿದರು.

ಹಣದ ದುರುಪಯೋಗ:—ಮಂಗಳೂರು ಮುನಿಸಿಪಲ್ ಆಫೀಸಿನಲ್ಲಿ, ಇಬ್ಬರು ಕೆಲಸಗಾರರು, ಮುನಿಸಿಪಾಲಿಟಿಯ ಹಣವನ್ನು ದುರುಪಯೋಗ ಗೊಳಿಸಿರುವರೆಂಬ ಆಪಾದನೆಯಲ್ಲಿ ವಿಚಾರಣೆಯನ್ನು ಎದುರಿಸುತ್ತಿರುವರಾಗಿ ವಾರ್ತೆ.

ಜಿಲ್ಲಾ ಬೋರ್ಡ್ ವಿಶೇಷ ಸಭೆಯೊಂದು ಇದೇ ತಾ. 14ನೇ ಶನಿವಾರ ಪೂರ್ವಾಹ್ನ 10-50ಕ್ಕೆ ರಸ್ತೆ ಕಾಮಗಾರಿ ಸ್ಥಾಯಿ ಸಮಿತಿಗೆ (Standing Committee for works and Communications) ಓರ್ವ ಸದಸ್ಯರನ್ನು ದಿ। ಕೆ. ಸದಾಶಿವ ಸೆಟ್ರ ಸ್ಥಾನಕ್ಕೆ ಆರಿಸುವ ಬಗ್ಗೆ ಜರಗಲಿದೆ.

'ಶಾಂತಿಗಾಗಿ ಸಮ್ಮೇಳ'-ಎಂಬೀ ವಿಷಯದ ಮೇಲೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಚ್. ವಿ. ಕಾಮತರು ಇದೇ ತಾ. 1ರಂದು ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಭವನದಲ್ಲಿ ಭಾಷಣಮಾಡಿದರು.

'ಪ್ರವಾಸದ ಅನುಭವಗಳು'-ಎಂಬ ವಿಷಯದ ಮೇಲೆ ಈಚೆಗೆ ತಮ್ಮ ವಿದೇಶ ಪ್ರವಾಸವನ್ನು ಮುಗಿಸಿಕೊಂಡು ಬಂದ ಶ್ರೀ ಕೆ. ಆರ್. ಕಾರಂತರು ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಸಭಾ ಭವನದಲ್ಲಿ ಇದೇ ತಾ. 2ರಂದು ಭಾಷಣಮಾಡಿದರು.

ಮಾಯಾಲಾಂದ್ರ ಪ್ರದರ್ಶನ—ಕಾಶ್ಮೀರದಲ್ಲಿರುವ ಅಮರನಾಥಕ್ಷೇತ್ರದ ಸ್ಥಳಮಹಾತ್ಮೆಯ ವಿಷಯದಲ್ಲಿ ಶ್ರೀ ಅಮರನಾಥ ಎಮ್. ವಿಶ್ವೇಶ್ವರ ಶರ್ಮ, ಅವರು ತಾ. 1ರಂದು ಸಂಜೆ ಸ್ಥಳೀಯ ಶರವು ಗಣಪತಿ ದೇವಸ್ಥಾನದಲ್ಲಿ ಮಾಯಾಲಾಂದ್ರ ಪ್ರದರ್ಶನವಿತ್ತರು.

ಆರೋಪಣೆ, ವಿಚಾರಣೆ:—ರಾಜಕೀಯ ಸಂತ್ರಸ್ತರಿಗೆ ಭೂದಾನ ಮಾಡುವ ಸಂಬಂಧವಾಗಿ, ಉಡುಪಿಯಲ್ಲಿ ಕಳೆದ ಆಗೋಸ್ತು ತಿಂಗಳ ವರೆಗೆ ತಹಶಿಲ್ದಾರರಾಗಿದ್ದ ಶ್ರೀ ಪಿ. ಸೀತಾರಾಮ ಸೆಟ್ಟರು ಸುಮಾರು 35 ಮಂದಿ ರಾಜಕೀಯ ಸಂತ್ರಸ್ತರ ಮನವಿ ಮೇರೆಗೆ ಅಪಾದನೆಗೊಳಗಾಗಿದ್ದು ಅವರ ವಿಚಾರಣೆಯು, ಸ್ಪೆಶಲ್ ಟ್ರಿಬ್ಯೂನಲಿನ ಮುಂದೆ, ಕಳೆದ ತಾ 25ರಲ್ಲಿ ಮಂಗಳೂರು, ಪಿ. ಡಬ್ಲ್ಯು. ಡಿ. ಪ್ರಯಾಣಿಕರ ಬಂಗ್ಲೆಯಲ್ಲಿ ಆರಂಭವಾಗಿದೆ ನಿವೃತ್ತ ಡಿ। ಮತ್ತು ಸೆಶನ್ಸ್ ಜಡ್ಜ ಶ್ರೀ ಎಮ್. ರಾಮಚಂದ್ರ ರಾವ್, ಎಮ್. ಎ. ಅವರು ಟ್ರಿಬ್ಯೂನಲಿನ ಚೆಯರ್ಮೇನರಾಗಿರುವರು. ಅಪಾದಿತರ ಪರವಾಗಿ ಶ್ರೀ ಎಸ್. ಎಸ್. ಸುವರ್ಣರೂ ಶ್ರೀ ಬಿ. ಗಂಗಾಧರ ದಾಸರು ವಕಾಲತ್ತು ವಹಿಸಿದ್ದಾರೆ.

ಶ್ರೀ ಎಸ್. ಎನ್. ಹೊಳ್ಳರು: ಪೋಲೀಸರಿಂದ ತಪ್ಪಿಸಿಕೊಂಡು ತಲೆಮರೆಸಿ ಕೊಂಡಿದ್ದರೆಂಬ ಆರೋಪದ ವಿಚಾರಣೆಯು ಕಳೆದ ತಾ 30ರಂದು ಮಂಗಳೂರಿನ I ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಪಿಂಟೋರವರ ಮುಂದೆ ಆರಂಭವಾಗಿದೆ.

ಉಡುಪಿ

ಕಾಲೇಜು ಕಟ್ಟಡ ಪ್ರವೇಶೋತ್ಸವ—ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಪೇಟೆಯಿಂದ ಅರ್ಧಮೈಲು ಪೂರ್ವಕ್ಕಿರುವ ವಿಶಾಲವಾದ ಸಗ್ರಿಗುಡ್ಡೆಯಲ್ಲಿ ಕಟ್ಟಿಸಲಾದ ಭವ್ಯ ಕಟ್ಟಡದ ಧಾರ್ಮಿಕ ಪ್ರವೇಶ ಸಮಾರಂಭವು ಕಳೆದ ತಾ.27ರಂದು ಸಂಜೆ ಯಶಸ್ವಿಯಾಗಿ ಜರಗಿತು. ತನ್ನಂಬದ ಶ್ರೀಕೃಷ್ಣ ದೇವಸ್ಥಾನದಲ್ಲಿ ಪ್ರಾರ್ಥನೆಯಾದ ಮೇಲೆ ಅಷ್ಟಮಠಗಳ ಶ್ರೀಪಾದಂಗಳವರನ್ನು ವಿಜೃಂಭಣೆಯ ಮೆರವಣಿಗೆಯಿಂದ ಕಾಲೇಜು ಕಟ್ಟಡಕ್ಕೆ ಕರೆತರಲಾಯಿತು. ಅಲ್ಲಿ ಸೇರಿದ ಮಹಾಜನ ಸಭೆಯಲ್ಲಿ ಕಾಲೇಜು ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರ ರಾಯರು ಸರ್ವರಿಗೂ ಸುಸ್ವಾಗತವನ್ನು ಬಯಸಿ ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಓದಿದರು. ಕಾಲೇಜು ಟ್ರಸ್ಟಿಯವರಾಗಿ ಡಾ। ಎಸ್. ಆರ್. ಪೈಗಳು ಸ್ವಾಗತ ಭಾಷಣ ಮಾಡಿದರು. ಶೀರೂರು, ಪುತ್ತಿಗೆ, ಪೇಜಾವರ, ಅಧಮಾರು, ಸೋದೆ, ಪಾಜರಿದ್ದ ಸ್ವಾಮಿಗಳವರೂ ಕಾಲೇಜಿಗೆ ಶ್ರೇಯ ಪ್ರಾರ್ಥನೆಮಾಡಿ ಆಶೀರ್ವದಿಸಿದರು. ಟ್ರಸ್ಟಿನವರ ಮುಖ್ಯತಃ ಡಾ। ಮಾಧವ ಪೈಗಳ ಸಾಹಸವನ್ನು ಕೊಂಡಾಡಿದರು. ದಿ। ಬಿ। ಶ್ರೀ ಎಚ್. ನರಸಿಂಹ, ಶ್ರೀ ಕೌಲಗಿ ಶೇಷಾಚಾರ್ಯ, ಪ್ರಿನ್ಸಿಪಾಲ್ ಟಿ। ಯು। ಆರ್. ಆಚಾರ್ಯ, ಶ್ರೀ ಟಿ. ಅನಂತ ಪೈಗಳವರು ಸಮಯೋಚಿತ ಮಾತುಗಳನ್ನಾಡಿದರು. ಡಾ। ಟಿ. ಮಾಧವ ಪೈಗಳು ಧನ್ಯವಾದಗಳನ್ನರ್ಪಿಸುತ್ತಾ ಶ್ರೀ ಶೀರೂರು ಮಠದ ಸ್ವಾಮಿಗಳವರು ಐದುನೂರು ರೂಪಾಯಿಗಳನ್ನೂ ಉದ್ಯಾವರ ಶ್ರೀ ಸವಿಯ ಸಾಹುಕಾರರು ಹೆಚ್ಚಿಗೆ ಒಂದು ಸಾವಿರ ರೂಪಾಯಿಗಳನ್ನೂ ಈಗಾಗಲೇ ಕೊಟ್ಟಿರುವರಾಗಿ ತಿಳಿಸಿದರು. ಶ್ರೀ ಅಧಮಾರು ಮಠದ ಮತ್ತು ಶ್ರೀ ಪುತ್ತಿಗೆ ಮಠದ ಚಿಕ್ಕಸ್ವಾಮಿಗಳವರಿಬ್ಬರು ಕಾಲೇಜು ಕಟ್ಟಡ ನಿಧಿಗೆ ದಿನಾ ಒಂದು ರೂಪಾಯಿ ಯಂತೆ ಜೀವಾವಧಿ ಸಹಾಯ ಧನವೀಯುವುದಾಗಿ ಹೇಳಿದರು. ಶ್ರೀ ಪೇಜಾವರ ಮಠದ ಸ್ವಾಮಿಗಳವರು, ಈ ಕಾಲೇಜಿನಲ್ಲಿ ಸ್ನಾತಕ ತರಗತಿಯಲ್ಲಿ ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಸರಕಾರೀ ಪರೀಕ್ಷೆಯಲ್ಲಿ ಜಾಸ್ತಿ ಮಾರ್ಕುಗಳನ್ನು ಪಡೆಯುವ ವಿದ್ಯಾರ್ಥಿಗೆ ವರ್ಷಂಪ್ರತಿಯೂ ಅರುವತ್ತು ರೂಪಾಯಿಗಳ ಬಹುಮಾನ ಕೊಡುವೆನಾಗಿ ಸೂಚಿಸಿದರು. ಸಿಹಿಲಡ್ಡು ಹಂಚೋಣದೊಂದಿಗೆ ಸಭಾಕಾರ್ಯ ಕೊನೆಗೊಂಡಿತು.

ಮುನಿಸಿಪಲ್ ಕಾನ್ಸಿಲು ಸಭೆಯು ಕಳೆದ ತಾ 30ರಂದು ಶ್ರೀ. ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಶ್ನೋತ್ತರಗಳು ಸಾಧಾರಣ ಎರಡು ಗಂಟೆಯ ಕಾಲ ನಡೆದ ನಂತರ ಸರಕಾರಿ ಅರ್ಜಿಗಳು ರಿಕಾರ್ಡ್ ಮಾಡಲಾದುವು. ಮುನಿಸಿಪಲ್ ಗ್ಯಾಟ್ರಿಂ ಕಟ್ಟಡದಲ್ಲಿಯ ಎರಡು ಕೋಣೆಗಳನ್ನೂ ಅನಾಥ ಬಾಲ ಬಾಲಕಿಯರಿಗೆ ಧರ್ಮಾರ್ಥ ಹಾಲು ವಿತರಣೆ ಮಾಡುವ ಕೇಂದ್ರಕ್ಕಾಗಿ ಉಪಯೋಗಿಸ ಬಹುದೆಂದಾಯಿತು. ಸ್ಥಳೀಯ ಫಯರ್ ಆಫೀಸಿನಲ್ಲಿ 'ಎಂಬುಲೆನ್ಸ್' ಒಂದನ್ನು ಇರಿಸುವಂತೆ ಇನ್ಸ್‌ಪೆಕ್ಟರ್ ಜನರಲ್ ಓಫ್ ಪೊಲೀಸ್ ಮದ್ರಾಸು, ಅವರನ್ನು ವಿನಂತಿಸಬೇಕೆನುವ ಶ್ರೀ. ಎ. ಮಂಜುನಾಥರಾಯರ ನಿರ್ಣಯಕ್ಕೆ ಮನ್ನಣೆ ದೊರೆಯಿತು.

ವನಮಹೋತ್ಸವ—ದೇಶದ ಎಲ್ಲೆಡೆಗಳಲ್ಲೂ ವನಮಹೋತ್ಸವ ನಡೆಯುವಂತೆ ಉಡುಪಿಯಲ್ಲೂ ಇದೇ ತಾ 1ರಂದು ಸಂಜೆ ವನಮಹೋತ್ಸವ ಪ್ರಾರಂಭವಾಯಿತು. ಶಾಲಾ ಮಕ್ಕಳು ಬೋರ್ಡ್ ಹೈಸ್ಕೂಲ್ ಹೆಡ್‌ಮಾಸ್ಟರ್‌ರವರ ಹಾಡಿನಿಂದ ಹೊರಟು ಆಸ್ಪತ್ರೆ, ಕೋರ್ಟುಗಳಿಗಾಗಿ ತಾಲೂಕು ಕಚೇರಿಗೆ ಇತರ ಮಹನೀಯರೊಂದಿಗೆ ಬಂದರು. ಅಲ್ಲಿ ಶ್ರೀ ಟಿ. ಅನಂತ ಪೈಗಳವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀಗಳಾದ ಶ್ರೀನಿವಾಸ ರಾವ್, ಶ್ರೀ ಕೌಲಗಿ ಶೇಷಾಚಾರ್ ಮೊದಲಾದವರು ಸಸಿನೆಡುವುದರ ಪೂರ್ವಾಪರ ವಿಚಾರಗಳನ್ನೆತ್ತಿ ಮಾತನಾಡಿದರು. ಸರ್ವರೂ ಅವರವರ ಮನೆ ಹಿತ್ತಲುಗಳಲ್ಲಿ ಉತ್ಪತ್ತಿ ದಾಯಕ ಸಸಿಗಳನ್ನು ನೆಡಬೇಕೆಂದು ಅಧ್ಯಕ್ಷರು ಹೇಳಿದರು. ತಹಶಿಲ್ದಾರ್ ಶ್ರೀ ವೆಂಕಪ್ಪನವರು ಧನ್ಯವಾದಗಳನ್ನರ್ಪಿಸಿದರು. ತಾಲೂಕು ಕಚೇರಿಯಲ್ಲಿ ಕೆಲವು ಗಿಡಗಳನ್ನು ನೆಡಲಾಯಿತು. ಬೋರ್ಡ್ ಹೈಸ್ಕೂಲು ಕ್ರಿಶ್ಚಿಯನ್ ಹೈಸ್ಕೂಲು, ಸೈಂಟ್‌ಸಿಸಿಲೀಸ್ ಹೈಸ್ಕೂಲು, ಎಮ್. ಜಿ. ಎಮ್. ಕಾಲೇಜುಗಳಲ್ಲೂ ವನಮಹೋತ್ಸವ ಕಾರ್ಯಕ್ರಮಗಳು ಆಚರಿಸಲ್ಪಟ್ಟವು.

ಮಳೆ:—ಕಳೆದವಾರ ಬಿಸಿಲು ಕಾದಿದ್ದರೂ ಈ ವಾರದಲ್ಲಿ ಮಳೆ ಬರುತ್ತಲಿದೆ.

ಕುಂದಾಪುರ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O. P. 53/51

ಅರ್ಜಿದಾರಳು—ಬಿ. ಎಸ್. ರಾಜೀವಿಬಾಯಿ. ಜಿ. ವೆಂಕಟ್ರಮಣ ಶೇರಿಗಾರರ ವಿಧವೆ, ನಾರಾಯಣಯ್ಯನವರ ಮಗಳು. ಕುಂದಾಪುರ ಕಸಬಾಗ್ರಾಮ.

ಎದ್ರಿ—ಶೇಷಯ್ಯ ಶೇರಿಗಾರ. ಉಗ್ರಾಣಿ ತಿಂಮಪ್ಪ ಶೇರಿಗಾರರ ಮಗ. ಕುಂದಾಪುರ ತಾಲ್ಲೂಕು ಗುಜ್ಜಾಡಿ ಗ್ರಾಮದ ಬೆಣ್ಣೆಗೆರೆಯಲ್ಲಿ ರುವವ.

ಈ ಮೂಲಕ ಎಲ್ಲರಿಗೂ ತಿಳಿಯ ಪಡಿಸುವದೇನೆಂದ್ರೆ

ಅರ್ಜಿದಾರಳ ಗಂಡ ವ ಎದ್ರಿಯ ಮಗ, ಜಿ. ವೆಂಕಟ್ರಮಣ ಶೇರಿಗಾರರು ಮೃತಪಟ್ಟು ಅವರ ಟಾಟಾ ದಿ ಬೊಂಬೈ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಇದರ ಪೋಲಿಸಿ ನಂಬ್ರ 101433/1944ನೇ ಸೋಲಿಸಿ ಪ್ರಕಾರ ಬರತಕ್ಕ ರೂ. 973-4-0 ಮತ್ತು ದಿಲ್ಲಿ ಸ್ವೈಕಲು ಎಂಪೋರಿಯಂ ಎಂಡ್ ಕೋ, ಬೊಂಬಾಯಿ, ಈ ಕಂಪೆನಿಯಿಂದ ಬರತಕ್ಕ ರೂಪಾಯಿ 400-0-0 ಕೂಡ ರೂ 1373-4-0 ನ್ನು ಪಡಕೊಳ್ಳುವರೆ ತಾನು ಹಕ್ಕುದಾರಳೆಂತಲೂ, ಆ ಕುರಿತು ತನ್ನ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕೆಂತಲೂ, ಸದ್ರಿ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಕು 24-7-1951ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆ ಬಗ್ಗೆ ಇರೋದಾಗಿಯದೆ. ಆ ಕುರಿತು ಯಾರಾದರೂ ಆಕ್ಷೇಪ ಹೇಳುವವರು ಇದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಗೈರು ಹಾಜರಿಯಿಂದ ಸದ್ರಿ ಅರ್ಜಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ತಿಳುಹಿಸಿಯದೆ.

M. M Hegde,
Advocate for Petitioners

ಕುಂದಾಪುರ, ತಾ. 1-7-51

ತಾ. 8-7-51ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ತಾವು ನಿರೀಕ್ಷಿಸುತ್ತಿದ್ದ

ಬ್ಲಡ್ ಎಂಡ್ ಸೇಂಡ್

(20ನೆಯ ಸೆಂಚುರಿಯವರ ವರ್ಣಚಿತ್ರ)

ಟೈರನ್ ಪವರ್ ಮತ್ತು ರಿಟಾ ಹೇವರ್ತ್.

ತಾ. 8-7-51 ಸಂಜೆ ಗಂಟೆ 6ರಿಂದ

ಪಾರಸ್

ಕಾಮಿನಿ ಕೌಶಲ್ಯ, ಮಧುಬಾಲ, ಸಪ್ರು, ರೆಹಮಾನ್, ಗೋಪ್, ಕೆ. ಎನ್. ಸಿಂಗ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ವಾಚಕರ ಹೃದಯವನ್ನು ಸೂರೆಗೊಳ್ಳುವ, ರಾಷ್ಟ್ರಕವಿ ಗೋವಿಂದ ಪೈಗಳವರ ಮುನ್ನುಡಿಯೊಡನೆ ಪ್ರಕಟವಾದ

ಹೃದಯವೀಣೆ

ಕವಿತಾ ಸಂಗ್ರಹದ ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ ಪ್ರತಿಗೆ I-0-0; ರೂ. I-4-0 ರ ಸ್ಟಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸಲಾಗುವದು. ತರುಣಕವಿಯ ಪ್ರಥಮ ಪ್ರಯತ್ನದ ಪ್ರತಿಫಲವಾಗಿ ಹೊರಟಿರುವ ಈ ಕವಿತಾಸಂಗ್ರಹದ ಮಾಧುರ್ಯವನ್ನು ಕನ್ನಡ ಕಾವ್ಯಪ್ರಿಯರು ಪಡೆಯಲು ಮರೆಯಬಾರದು.

ಪತ್ತೆ: ಎ. ರಾಮಣ್ಣ ಸೆಟ್ಟಿ, ಧರ್ಮಸ್ಥಳ, ದ. ಕ.

ವನ ಮಹೋತ್ಸವ

ತಾ. 1—7—1951 ರಿಂದ
37—7—51ರ ವರೆಗೆ

ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಭಾರತ ಸರಕಾರವು ಮರಗಳನ್ನು ನೆಟ್ಟು ಬೆಳೆಸುವುದರ ಆವಶ್ಯಕತೆಯನ್ನು ರಾಷ್ಟ್ರ ಸರಕಾರಗಳಿಗೆ ಈ ಮೊದಲೇ ಅನೇಕ ಬಾರಿ ತಿಳಿಸಿಯದೆ. ದೇಶದ ಸಾಮಾನ್ಯ ಆರ್ಥಿಕ ಜೀವನದಲ್ಲಿ ಮರಗಳ ಮಹತ್ವವನ್ನು ಎಷ್ಟು ವರ್ಣಿಸಿದರೂ ಸಾಲದು. ನಮ್ಮ ಗುಡ್ಡ ಬೆಟ್ಟಗಳಲ್ಲಿ ಸಾಗುವಳಿ ಮಾಡುವ ಸಮತಟ್ಟು ಭೂಮಿಗಳಲ್ಲಿ ಗಿಡ ಮರಗಳನ್ನೆಲ್ಲಾ ಕಡಿದು ತೆಗೆದುದರ ಪರಿಣಾಮವಾಗಿ ವಿಶೇಷ ಹಾನಿಯನ್ನುಂಟು ಮಾಡುವ ನೆರೆಗಳೂ, ಫಲವತ್ತಾದ ಮಣ್ಣು ಕೊರೆದು ಹೋಗುವುದೂ, ಕ್ರಮೇಣವಾಗಿ ಮಳೆಯು ಕಡಿಮೆಯಾಗುತ್ತಾ ಹೋಗುವುದೂ, ಸಾಮಾನ್ಯ ಹವಾಮಾನವೇ ಕೆಟ್ಟು ಹೋಗುವುದೂ ಮೊದಲಾದ ಅನಿಷ್ಟ ಫಲಗಳು ಪ್ರಾಪ್ತಿಯಾಗುತ್ತವೆ. ರೈತರು ಕಟ್ಟಿಗೆಯ ಅಭಾವದಿಂದ ಒಲೆ ಉರಿಸಲು, ಗೊಬ್ಬರಕ್ಕೆ ಉಪಯೋಗಿಸಬೇಕಾದ ಸೆಗಣಿಯನ್ನು ಬೆರಣಿಮಾಡಿ ಉರಿಸುವ ಪರಿಸ್ಥಿತಿ ಈಗಾಗಲೇ ಬಂದಿರುತ್ತದೆ. ಮುಂದೆ ಆಗುವ ಈ ಸಸ್ಯವರ್ಗದ ಆಚ್ಛಾದನದ ಸ್ವಚ್ಛಂದವಾದ ವಿನಾಶವನ್ನು ತಡೆಗಟ್ಟುವುದಕ್ಕಾಗಿ ಸಾಮಾನ್ಯ ಜನತೆಯ ಮನಸ್ಸಿನಲ್ಲಿ ಮರಗಳ ಮಹತ್ವದ ಕುರಿತು ಜಾಗ್ರತಿಯನ್ನುಂಟು ಮಾಡುವುದೂ ಅವರು ಹೆಚ್ಚು ಮರಗಳನ್ನು ನೆಡಲು ಮತ್ತು ಅವನ್ನು ರಕ್ಷಿಸಲು ಅವರಲ್ಲಿ ಉತ್ಸಾಹ ಹುಟ್ಟಿಸುವುದು ಹಾಗೂ ಭೂಮಿ ಸಂಪತ್ತನ್ನು ಹೆಚ್ಚಿಸುವ ಪ್ರಕೃತಿಯ ದಾನಗಳಿಗಾಗಿ ತಕ್ಕ ಕೃತಜ್ಞಭಾವದಿಂದ ಈ ಕಾರ್ಯ ಸಾಧಿಸುವಂತೆ ಪ್ರೇರೇಪಿಸುವುದೂ ಆವಶ್ಯಕವಿರುತ್ತದೆ.

ಸ್ವಾತಂತ್ರ್ಯದಿನದ ಸಮಾರಂಭದ ಉತ್ಸಾಹವನ್ನು ಉಪಯೋಗಿಸಿಕೊಂಡು ಈ ಮೊದಲು 1948, 1949ರಲ್ಲಿ ಆಗೋಸ್ತು 15ರ ದ ಮೊದಲ್ಗೊಂಡು ಸಸಿ ನೆಡುವ ಸಪ್ತಾಹಗಳನ್ನು ಇಲ್ಲಿ ಆಚರಿಸಲಾಗಿತ್ತು. ಆದರೆ ಹೀಗೆ ಆಗೋಸ್ತು ಮಧ್ಯದಲ್ಲಿ ಸಸಿ ನೆಡುವುದರಿಂದ ಇವುಗಳಿಗೆ ಜುಲಾಯಿಯಿಂದಲೇ ಆರಂಭವಾಗುವ ಮಳೆಗಾಲದಲ್ಲಿಯ ಆರ್ಧಮಳೆಯ ಪ್ರಯೋಜನ ಸಿಕ್ಕದೆ ಹೋಗುತ್ತದೆಂಬುದರಿಂದ ಭಾರತ ಸರಕಾರದವರು 1950ರಿಂದ ಮೊದಲ್ಗೊಂಡು ಈ ರಾಷ್ಟ್ರೀಯ ಸಸಿ ನೆಡುವ ಸಪ್ತಾಹವನ್ನು ಜುಲೈ ತಿಂಗಳ ಪ್ರಥಮ ಪಕ್ಷದಲ್ಲಿ ಪ್ರತಿವರ್ಷವೂ ರಾಷ್ಟ್ರೀಯ ಸಮಾರಂಭವಾಗಿ ಆಚರಿಸಲ್ಪಡಬೇಕೆಂದೂ ಇದನ್ನು "ವನಮಹೋತ್ಸವ"ವೆಂದು ಕರೆಯಬೇಕೆಂದೂ ನಿರ್ಣಯಿಸಿದೆ.

ಈ ವನಮಹೋತ್ಸವವನ್ನು ಈ ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತಲೂ ಯೋಗ್ಯರೀತಿಯಿಂದ ನೆರವೇರಿಸುವುದಕ್ಕಾಗಿ ಜಿಲ್ಲಾ ಕಲೆಕ್ಟರರು ಕೂಡಿಸಿದ ಮಹಾಜನರ ಸಭೆಯೊಂದರಲ್ಲಿ ಅವರ ಅಧ್ಯಕ್ಷತೆಯಲ್ಲಿ ಈ ಜಿಲ್ಲೆಗೆ ಒಂದು ಕೇಂದ್ರ ವನಮಹೋತ್ಸವ ಆಚರಣಾ ಸಮಿತಿಯೊಂದು ಏರ್ಪಡಿಸಲ್ಪಟ್ಟಿರುತ್ತದೆ. ಇದೇ ರೀತಿ ಪ್ರತಿಯೊಂದು ರೆವಿನ್ಯೂ ಡಿವಿಜನಿನಲ್ಲಿಯೂ ತಾಲೂಕುಗಳಲ್ಲಿಯೂ ಗ್ರಾಮಗಳಲ್ಲಿಯೂ ಆಯಾ ಪ್ರದೇಶಗಳಿಗಾಗಿ ಸಮಿತಿಗಳನ್ನು ವ್ಯವಸ್ಥೆಗೊಳಿಸಲಾಗುತ್ತದೆ. ರಾಷ್ಟ್ರೀಯ ಮಹತ್ವವುಳ್ಳ ಈ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಸರಕಾರಿ ನೌಕರರೂ ಕಾಂಗ್ರೆಸು ಕಮಿಟಿಗಳ ಹಾಗೂ ಇತರ ಸಾರ್ವಜನಿಕ ಕೆಲಸಗಾರರೂ, ಮಹಾಜನರೂ ಪೂರ್ಣ ಉತ್ಸಾಹದಿಂದ ಸಹಕರಿಸುವರಾಗಿ ನಿರೀಕ್ಷಿಸಲಾಗಿದೆ.

ಭಾರತ ಸರಕಾರದವರು ಈ ವರ್ಷದ ಈ ಸಮಾರಂಭದಲ್ಲಿ ದೇಶದಲ್ಲಿ 3ಕೋಟಿ ಸಸಿಗಳನ್ನೂ ಮದ್ರಾಸು ಪ್ರಾಂತ್ಯದಲ್ಲಿ 50ಲಕ್ಷ ಸಸಿಗಳನ್ನೂ ನೆಡುವ ಏರ್ಪಾಡು ಆಗಬೇಕೆಂದು ಆದಕ್ಕಾಗಿ ಪ್ರತೀ ಗ್ರಾಮದಲ್ಲಿ ಕನಿಷ್ಠ ಪಕ್ಷಕ್ಕೆ50ಲಕ್ಷ ಸಸಿಗಳನ್ನಾದರೂ ನೆಡಬೇಕೆಂದೂ ನಿರ್ಧರಿಸಿದ್ದಾರೆ.

ಅಧ್ಯಕ್ಷ,
ದ. ಕ ಜಿಲ್ಲಾ ವನಮಹೋತ್ಸವ
ಸಮಾರಂಭ ಆಚಾರ ಸಮಿತಿ.

ಮಂಗಳೂರು ತಾ. 22-6-51

ಕುಂಬಳೆ-ಪುತ್ತೂರು ಆರ್. ಡಿ. ಒ. ಶ್ರೀ ದಿ ಎನ್. ಹೆಗ್ಡೆಯವರು ತಾ. ೨೪ರಂದು ಮುಜುಮಂಕರೆ ನೀರಾವರಿ ಟಾಂಕನ್ನು ಪರಿಶೋಧಿಸಿದ್ದಲ್ಲದೆ, ಅಂದು ನಾಯ್ಕಾಪಿನಲ್ಲಿ ತೆರೆದ ರಿಲೀಫ್ ರೇಶನ್ ಅಂಗಡಿಯನ್ನು ಸಹ ಸಂದರ್ಶಿಸಿರುವರು.

ತಾ. ೨೪ರಂದು ಸೂರಂಬೈಲಿನಲ್ಲಿ ನಾರಾಯಣ ಮಂಗಲದ ಮಹಿಳೋದ್ಧಾರ ಕೇಂದ್ರದ ಶಾಖೆಯೊಂದನ್ನು ಕೊಯ್ಯೂರು ರೂರಲ್ ವೆಲ್ಫೇರ್ ಗ್ರಾಮ ಸೇವಕರಾದ ಶ್ರೀ ಲಿಯೋ ಡೇಸರು ಉದ್ಘಾಟಿಸಿರುವರು. ಎಡನಾಡ್ ಪಟೇಲ್ ಶ್ರೀ. ಕೆ. ಸುಬ್ರಾಯ ಭಟ್ ಕೊಯ್ಯೂರು ಗ್ರಾಮ ಸೇವಾಸಂಘದ ಕಾರ್ಯದರ್ಶಿ ಶ್ರೀ ದಿ. ರಾಮ ಭಟ್ ಕೂಡಾ ಈ ಕೇಂದ್ರದಿಂದ ಸಿಕ್ಕುವ ಫಲವನ್ನು ಎತ್ತಿ ಮಾತನಾಡಿದರು. ಓರ್ಗನೈಸರ್ ಶ್ರೀಮತಿ ಲೀಲಾಬಾಯಿ ವಂದನಾರ್ಪಣೆ ಮಾಡಿದರು.

ಎರಡು ವಾರಗಳಿಂದೀಚೆಗೆ ಮಳೆ ಇಲ್ಲದೆ ಬೇಸಾಯ ಕಸುಬಿನವರಿಗೆ ತುಂಬಾ ಕೆಡುಕುಂಟಾಗಿದೆ.

ಪಡುಕೋನೆ—ಕೆಮ್ಮಣ್ಣು ಎಯ್ಡೆಡ್ ಹಾಯರ್ ಎಲಿಮೆಂಟರಿ ಶಾಲೆಯ VIIIನೇ ತರಗತಿಯಲ್ಲಿದ್ದ 20 ವಿದ್ಯಾರ್ಥಿಗಳಲ್ಲಿ ಎಲ್ಲರನ್ನೂ E. S. L. C. ಪರೀಕ್ಷೆಗೆ ಕಳುಹಿಸಿದ್ದಲ್ಲಿ ಅವರೆಲ್ಲರೂ ತೇರ್ಗಡೆ ಹೊಂದಿರುವರೆಂಬುದು ಶಾಲಾ ಶಿಕ್ಷಣದ ಯೋಗ್ಯತೆಯ ನಿದರ್ಶನವಾಗಿರುತ್ತದೆ.

ಶಿರ್ವ—ಮಿತ್ರ ಮಂಡಳಿಯ ವಾರ್ಷಿಕ ಸಭೆಯು ಇತ್ತೀಚೆಗೆ ಮಂಚಕಲ್‌ನಲ್ಲಿ ಶ್ರೀ ಎಸ್. ಕೂತ್ರನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪಡುಬಿದ್ರೆ—ತಾ. 21-6-51ರಲ್ಲಿ ಪುರುಷ್ಕರ ಶಿಕ್ಷಣ ತರಬೇತು ಶಾಲಾ ವಿದ್ಯಾರ್ಥಿ ವಸತಿ ಗೃಹದ ಸಮಾರಂಭವು ಮುಖ್ಯೋಪಾಧ್ಯಾಯ ಬಿ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ, ಅಧ್ಯಕ್ಷರ ಭಾಷಣ, ವಿನೋದಾವಳಿಗಳಿದ್ದುವು.

ಕಡಂದಲೆ—ಬೋ ಹಾ. ಎ. ಶಾಲಾ ಎಂಟನೇ ದರ್ಜೆಯ E. S. L. C. ಪರೀಕ್ಷೆಗೆ ನಿಂತ 13 ಮಂದಿ ವಿದ್ಯಾರ್ಥಿಗಳೂ ಸಂಪೂರ್ಣ ತೇರ್ಗಡೆ ಹೊಂದಿರುವರು.

ಮಲ್ಪೆ— ತಾ.21ರಲ್ಲಿ ಸಾರ್ವಜನಿಕ ಸಾಮಾನ್ಯ ಸಭೆಯೊಂದು ಸ್ಥಳೀಯ ಗ್ರಾಮ ಕೋರ್ಟಿನಲ್ಲಿ ಡೆ| ತಹಶಿಲ್ದಾರರಾದ ಶ್ರೀ. ಎ. ಎಸ್. ಡಿಸೋಜರವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರದ ಆದೇಶದ ಮೇರೆಗೆ ಈ ಸಲವೂ ವನಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು, ಶ್ರೀಮತಿ ಸಾರಾ, ದಿ. ಎ; ದಿ. ಟಿ; ಡಾ। ಬಲ್ಲಾಳ್, ಶ್ರೀ. ರಾಮ ಭಟ್, ಶ್ರೀ ಶಂಬು ಸೆಟ್ಟಿ ಶ್ರೀ. ವೆಂಕಟ್ರಾವ್ ಮತ್ತು ಜನಾಬ್ ಆಮೀರ್ ಸಾಹೇಬರವರೊಡಗೂಡಿದ ಕಾರ್ಯನಿರ್ವಾಹಕ ಸಮಿತಿಯೊಂದನ್ನು ರಚಿಸಲಾಯಿತು.

ಪ್ರಕಟಣೆ

ಕಾಪು ಸೀಮೆಯ ಶ್ರೀ ಹೊಸ ಮಾರಿಗುಡಿಯ ಆಡಳಿತ ಟ್ರಸ್ಟೀಸ್ ಬೋರ್ಡಿನವರು ಈ ಮೂಲಕ ಸಮಸ್ತ ಭಕ್ತ ಮಹಾಜನರಿಗೆಲ್ಲಾ ತಿಳಿಯಪಡಿಸುವುದೇನೆಂದರೆ: ಸದ್ರಿ ಸ್ಥಾಪನೆಯಲ್ಲಿ ಪೂರ್ವದ ಮೂಲು ಪ್ರಕಾರ ನಡೆಸಿಕೊಂಡುಬಂದ ಪ್ರಾಣಿ ಬಲಿಯನ್ನು ಮದ್ರಾಸು ಎಂಡೋಮೆಂಟ್ ಬೋರ್ಡಿನವರ ನಂಬ್ರ 21/51ನೇ ಸರ್ಕಲಾರು ಮೇರೆಗೆ ತಾರೀಕು 1-6-51 ರಿಂದ ನಿಲ್ಲಿಸಲಾಗಿದೆ.

ಕೆ. ಸದಾಶಿವ ಹೆಗ್ಡೆ, ಮೆನೇಜರ್.
ಕಾಪು ಮುಣ್ಣ ಸೆಟ್ಟಿ, ಪ್ರೆಸಿಡೆಂಟ್.

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮಕರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ

ನವಯುಗ ಪ್ರೆಸ್, ಉಡುಪಿ.

Before the Rent Controller, Coondapur Division

H. R. C. P 39/51

S. M. Jothadi —Petitioner
and
K. Subbann Bhatta & 2 others — Respondents

To
2nd Respdt Sri kantha Pai Son of Ramakrishna Pai, residing in Udipi Municipal Door no. 11-3-112. 3rd Respdt. P. Ramanath Nayak son of P. Nagappa Nayak, residing in Udipi Municipal Door No. 11-3-113.

Please take notice that the aforesaid petition filed against you and the aforesaid 1st Respondent for eviction of all you under section 7 of Madras Act XXV of 1949 stands posted for your appearence on 10-7-51 at 11 A. M. in Udipi Camp, and if you fail to appear before the said Court on the said date, you will be declared exparte, and the petition decided exparte.

(By order of the court)

K Vittal Nayak
Vakil for petitioner.
UDIPI, 1-7-51

IN THE SERVICE OF THE COUNTRY
1925 — 1950



Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

BALLBEARING
—THE LIFEBLOOD OF THE INDUSTRY'

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —'CHEAPTRADE'

A. RAMSON AND CO.
68 MISTRI BUILDING BALARAM St. BOMBAY 7

Approved from by the Govt of M...
Certificated by the Agent of the G...
Ceylon & Indian,

ಸ್ವೀಕಾರ-ವಿಮರ್ಶೆ

೧ ಮುಯ್ಯಿಗೆ ಮುಯ್ಯಿ

ಲೇಖಕರು:- ಶ್ರೀ. ಅ. ನ. ಕೃಷ್ಣರಾಯರು. ಪ್ರಕಾಶಕರು:- ಆನಂದ ಬ್ರದರ್ಸ್ ಬೆಂಗಳೂರು ೨. ಬೆಲೆ ರೂ ೨-೮-೦

ನವನಾಗರೀಕತೆಯಲ್ಲಿ ಮುನ್ನಡೆದ ನಮಗೆಲ್ಲ 'ಮುಯ್ಯಿಗೆ ಮುಯ್ಯಿ'ದ ಕತೆಯು ಅಸ್ವಾಭಾವಿಕ ಎನಿಸಬಹುದು. ಜೀವನಕ್ಕೆ ಹೊಂದದ ಕತೆ ಎಂದು ತೋರಬಹುದು. ಕಾಳಾಚಾರಿಯಂತಹ ಮಾಂತ್ರಿಕರು ಊರನ್ನೇ ನಡುಗಿಸಿ ಬಿಡುವಾಗ ಉಳಿದವರು ಅದಕ್ಕೆ ಬೆದರುವಷ್ಟು ಪಶುಗಳಾಗಿದ್ದರೇ? ಎಂದು ತೋರಬಹುದು. ಸ್ವಜಾತೀಯ ಹೆಣ್ಣು ಮಕ್ಕಳು ಮೈನೆರೆತ ಕೂಡಲೇ ಕಾಳಾಚಾರಿಗೆ ಅರ್ಪಿಸಬೇಕು. ಹೀಗೆ ಅರ್ಪಿಸುವಲ್ಲಿ ಹೆಣ್ಣು ಮಕ್ಕಳು ಬಾಳಿನ ಮೊದಲಲ್ಲೇ ಮೃತ್ಯುಮುಖವನ್ನು ಕಾಣುತ್ತವೆ. ಹೆತ್ತವರು ಕರುಳುಹಿಸುಕಿಕೊಂಡು ಸಾಯುವತನಕ ಗೋಳಾಡುವದಕ್ಕಿಂತ ಮಿಗಿಲಾದ ಪೌರುಷತ್ವವನ್ನು ತೋರಿಸುವುದಿಲ್ಲ. ಇಡಿಯ ಊರೇ ಕಾಳಾಚಾರಿಯ ಮಾಂತ್ರಿಕ ಶಕ್ತಿಗೆ ಬೆದರಿಹೋಗಿತ್ತು. ಎದಿರಾಡುವುದೆಂದರೆ ಮೃತ್ಯುವಿನೊಡನೆ ಮಲ್ಲಯುದ್ಧಕ್ಕೆ ನಿಂತಂತೆಯೆ! ಈರೀತಿಯ ವಾಮಾಚಾರ ನಡೆಯುತ್ತಿರುವಾಗ ಊರಿನವರ ಸಾಂಘಿಕ ಶಕ್ತಿ ಇಷ್ಟರಲ್ಲೂ ಆಗದೇ ಹೋಯಿತೇ? ಎಂದು ತೋರುವುದು ಸ್ವಾಭಾವಿಕ, ಬಹಳ ಹಳೆಯ ಕಾಲದ್ದೆನ್ನೋಣವೇ? ಅಲ್ಲಿಯೂ ಸರಕಾರೀ ಜನ ಊರಿನ ಅನಾಚಾರದ ಬಗೆಗೆ ವಿಚಾರಣೆಗೆ ಬರುತ್ತಾರೆ. ಆದರೆ ಯಾರೂ ಈದುರಂತ ಚಿತ್ರವನ್ನು ಸರಕಾರಕ್ಕೆ ಹೇಳುವುದಿಲ್ಲ. ಇದು ಒಂದು ರೀತಿಯ ಸಮಸ್ಯೆಯೆ-ಆಗಿರುತ್ತದೆ.

ಅಂತೂ ನಮ್ಮದೇಶ ಒಂದು ಕಾಲದಲ್ಲಿ ಇಂತಹ ಮಾಂತ್ರಿಕ ವರ್ಚಸ್ಸಿಗೆ ಬೆದರುತ್ತಿತ್ತು! ಈಗಲೂ ಹಲವು ಕಡೆ ಈರೀತಿಯ ವಾಮಾಚಾರ ನಡೆಯುವದನ್ನು ಕೇಳುತ್ತಲಿದ್ದೇವೆ. ಕಾಳಾಚಾರಿಯು ವಾಮಮಾರ್ಗದಿಂದ ಕ್ರೂರ ರಕ್ಕಸನಾಗಿದ್ದರೂ ಅದೇ ವಿದ್ಯೆಯ ಪ್ರಭಾವದಿಂದ ಸಾಂಬಲೋಕಕಲ್ಯಾಣವನ್ನು ಸಾಧಿಸಿದ ಸುಂದರ ಚಿತ್ರವನ್ನು ಇಲ್ಲಿ ಕಾಣಬಹುದಾಗಿದೆ. ಸಾಂಬ ತಂದೆಯ ಶಾಸ್ತ್ರಿಗಳ ಜೀವನದನೆಳಲಲ್ಲಿ ಬೆಳೆದು ಕೊನೆಗೆ ಲೋಕಹಿತಚಿಂತನೆಯಲ್ಲೇ ತನ್ನ ಬಾಳನ್ನು ಸವೆಯಿಸಿ ಸನ್ಯಾಸಿಯಾಗುತ್ತಾನೆ. ಮನೆತನದ ಹಿರಿಯ ಸಂಸ್ಕೃತಿ ಆತನ ಮೂಲಕ ಬೆಳಕಿಗೆ ಬರುತ್ತದೆ. ನಮ್ಮಲ್ಲಿಯ ಅಥರ್ವಣ ವಿದ್ಯೆ ಅರ್ಥಾತ್ ಮಾಂತ್ರಿಕ ವಿದ್ಯೆಗಳು ದುಷ್ಟಕಾರ್ಯಕ್ಕೆ ಮಾತ್ರ ಇರದೆ; ಒಳ್ಳಿತನ್ನೂ ಅವುಗಳಿಂದ ಸಾಧಿಸಬಹುದೆಂಬುದನ್ನು ಸಾಂಬ ತನ್ನ ವಿದ್ಯೆಯಿಂದ ಸಿದ್ಧಗೊಳಿಸಿದ್ದಾನೆ.

ಇಡಿಯ ಕಾದಂಬರಿಯಲ್ಲಿ ಶ್ರೀ ಶಾಸ್ತ್ರಿಗಳವರ ಸಂಸಾರ ಚಿತ್ರಣ ಅತ್ಯಂತ ಮನೋಹರವಾದುದು. ಮನೆತನದ ಕಟ್ಟನ್ನು ಪಾಲಿಸಿಕೊಂಡು, ಸಾತ್ವಿಕ ಜೀವನ ನಡೆಸುವಲ್ಲಿ ಶ್ರೀ ಶಾಸ್ತ್ರಿಗಳು ಕಾಳಾಚಾರಿಯ ಅನಾಚಾರಕ್ಕೆ ಕಣ್ಣುಮುಚ್ಚುತ್ತಾರೆಯೇ ಹೊರತು ಸಿಟ್ಟಾಗುವುದಿಲ್ಲ. ಸ್ವತಃ ತನ್ನ ತೊಟ್ಟಿಗೆಗೆ ಬೆಂಕಿಬಿದ್ದಾಗಲೂ ಸಹ 'ದೇವರ ಚಿತ್ತ'ವೆಂದು ಸುಮ್ಮನಾಗುವ ಶಾಂತಚಿತ್ತರವರು. ಮನಸ್ಸಿಗೆ ವೇದನೆಯಾದಾಗ-ಅನಾಚಾರಗಳು ಊರ ಜನರ ಜೀವ ಹಿಂಡುವಾಗ- ಶಾಸ್ತ್ರಿಗಳು ಮೂಕರಾಗಿ ಮರುಗುತ್ತಾರೆ. "ಹೀಗೆಲ್ಲ ಏಕಾಗುತ್ತದೆ-ದೇವರಿಗೂ ಇದು ಲೀಲೆಯಾಗಿ ತೋರುತ್ತದೆಯೆ?" ಎಂದು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಇಷ್ಟನ್ನೇ ಹೇಳಿ ಮೂಕರಾದಾಗ ಊರವರು ಶಾಸ್ತ್ರಿಗಳು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲವೆನ್ನುವವರೂ ಉಂಟು. ಯಥಾರ್ಥವಾಗಿ ಶಾಸ್ತ್ರಿಗಳ ಹೃದಯ ಊರಿನ ದುರಂತಕ್ಕೆ ಕೊರಗಿದಷ್ಟು ಮತ್ತಾರ ಮನಸ್ಸೂ ಕರಗದು. ಜಾತಿಯ ಕುರಿತು ಶಾಸ್ತ್ರಿಗಳ ಮನಸ್ಸು ಎಷ್ಟು ವಿಶಾಲವೆಂಬುದನ್ನು ಶಾಸ್ತ್ರಿಗಳ ಈ ಮಾತಿನಲ್ಲಿ ಕಾಣಬಹುದು "......ರಂಗೇಗೌಡ ಪುಟ್ಟೇಗೌಡ ನನ್ನ ಮನೆ ಮಕ್ಕಳಿದ್ದ ಹಾಗೆ. ಒಂದು ಸಂಪ್ರದಾಯಕ್ಕೆ ಕಟ್ಟಾಗಿ ಅವರ ಜೊತೆ ಕುಳಿತು ಊಟಮಾಡಲು ಸಾಧ್ಯವಿಲ್ಲವಲ್ಲಾ ಎಂದು ಪರಿತಾಪ ಪಟ್ಟಿದ್ದೇನೆ. .... ಧರ್ಮವಿರುದ್ಧ ವಲ್ಲ-ಸಂಪ್ರದಾಯ ವಿರುದ್ಧ. ನಾವು ಪೂಜಿಸುವ ರಾಮಕೃಷ್ಣ, ಉಪನಿಷತ್ತಿನ ಅನೇಕ ಋಷಿಗಳು ಬ್ರಾಹ್ಮಣರಲ್ಲವೆಂಬುದನ್ನು ಮರೆಯಬಾರದು..... ಜಾತಿ ವಿಶ್ವಾಸಕ್ಕೆ ಭಂಗತಂದಿಲ್ಲ"

ಮುಯ್ಯಿಕ್ಕೆ ಮುಯ್ಯಿದ ಕಥಾವಸ್ತುವಿನಲ್ಲಿ ಕುತೂಹಲವನ್ನು ಕೆರಳಿಸುವ ಸುಂದರ ಸನ್ನಿವೇಶಗಳಿವೆ. ಸಾಂಬ, ಶಾಸ್ತ್ರಿ, ಸೀತಾ, ರಂಗೇಗೌಡ' ಪುಟ್ಟೇಗೌಡ ಇವರೆಲ್ಲ ಬದುಕಿದ ನಾಲ್ಕು ದಿನಗಳಲ್ಲಿ ಪರೋಪಕಾರ ಮಾಡಿ ಪುಣ್ಯ ಕಟ್ಟಿಕೊಂಡ ಮಹಾ ಜೀವಿಗಳು. ಶಾಸ್ತ್ರಿಗಳ ಪಾತ್ರಸೃಷ್ಟಿ ಮುಯ್ಯಿಕ್ಕೆ ಮುಯ್ಯಿದ ವಿಶೇಷ ವೈಶಿಷ್ಟವೆನ್ನಬೇಕು. ಮುನ್ನುಡಿಯಲ್ಲಿ ಅ. ನ. ಕೃಷ್ಣರಾಯರು ತಾನು ಪೂಜಿಸಿದ್ದು ಬ್ರಾಹ್ಮಣನನ್ನಲ್ಲ-ಬ್ರಾಹ್ಮಣ್ಯವನ್ನು ಎಂದಿದ್ದಾರೆ. ಇಂದು ದೇಶದಲ್ಲಿ ಬ್ರಾಹ್ಮಣಾ ಬ್ರಾಹ್ಮಣ ಪ್ರಶ್ನೆ ಎಂತಹ ವಿರಾಟ್ ರೂಪವನ್ನು ತಾಳಿದೆಯೆಂಬುದು ಎಲ್ಲರಿಗೂ ಗೊತ್ತಿದೆ. ಬ್ರಾಹ್ಮಣನು ತನ್ನ ಗಾಂಭೀರ್ಯವನ್ನು ಬಿಟ್ಟು ನಡೆದುದರಿಂದಲೇ-ಸ್ವಾರ್ಥ ದೃಷ್ಟಿಯಿಂದ ಪತಿತನಾದುದರಿಂದಲೇ-ಈ ಪಾಡಾಯಿತು. ಬ್ರಾಹ್ಮಣನ ಧರ್ಮಕರ್ಮ ಲೋಪದಿಂದ ಪತಿತನಾದನೇ ಹೊರತು ಹುಟ್ಟೀ ಆತನ ತಪ್ಪಾಗಲಾರದು. ಶಾಸ್ತ್ರಿಗಳ ಸಾತ್ವಿಕ ಜೀವನದಲ್ಲಿ ಅಸತ್ಯ ತೋರುತ್ತದೆ. ಮುಯ್ಯಿಕ್ಕೆ ಮುಯ್ಯಿ ಉತ್ತಮ ಕಾದಂಬರಿ, ಕಥಾವಸ್ತುವಿನಲ್ಲಿ ನಾವೀನ್ಯತೆಯಿದೆ. ಉಳಿದ ಕಾದಂಬರಿಗಳಲ್ಲಿ ಕಂಡುಬರುವ ಅ. ನ. ಕೃಷ್ಣರಾಯರ ಶೈಲಿಯ ಗಾಂಭೀರ್ಯವನ್ನು ಇಲ್ಲಿಯೂ ಕಾಣಬಹುದಾಗಿದೆ.

೨ ತೋರಣ

(ಕಥಾಸಂಗ್ರಹ) ಸಂಪಾದಕರು ಶ್ರೀ ಟಿ. ಮಹಾಬಲೇಶ್ವರ ಭಟ್. ಪ್ರಕಾಶಕರು: ಜಲಂಧರ ಪ್ರಕಟಣಾಲಯ: ಚಾಮರಾಜಪೇಟೆ, ಸಾಗರ ಬೆಲೆ ರೂ ೨-೦-೦

ಹನ್ನೆರಡು ಕತೆಗಳಿಂದ ಕೂಡಿದ ಈ ಕಥಾಸಂಗ್ರಹದಲ್ಲಿ ಓದಲೇ ಬೇಕಾದ ಒಂದು ಕಥೆ (ಮಕ್ಕಳ ತಾಯಿ) ಯೂ ಓದ ಬಹುದಾದ ಇನ್ನೆರಡು (ಮಾಯದ ನೆನಪು-ಪಾಪೀ ಪುಣ್ಯ) ಕತೆಗಳೂ, ತೀರ ಅಸ್ವಾಭಾವಿಕ ಹಾಗು ಬಾಲಿಶವಾದ ಒಂಬತ್ತು ಕತೆಗಳೂ ಇರುತ್ತವೆ. ಪ್ರಗತಿ ಶೀಲವೆಂದು ಮುದ್ರೆಯೊತ್ತಿಕೊಂಡು ಬಂದಿರುವ ತೋರಣದಲ್ಲಿ ಹೊರಗೆಲ್ಲ ಶೃಂಗಾರ ಒಳಗೆ ... ಏನೆಂದು ಓದುಗರೇ ನಿಶ್ಚಯಿಸುತ್ತಾರೆ. ಶ್ರೀ ಅ. ನ. ಕೃಷ್ಣರಾಯರಿಂದ ಹೊಗಳಲಾದ 'ಕಂದ' ಕತೆ ಅವರದ್ದೆಂದು ನಂಬಲು ಬಾರದಷ್ಟು ಅಪೂರ್ಣ ಅಸಹಜ ಕತೆಯಾಗಿರುತ್ತದೆ. ಶ್ರೀ ರಾ. ವೆಂ. ಶ್ರೀನಿವಾಸರೂ ಶ್ರೀ ಸಾವಿತ್ರಮ್ಮನವರೂ ಕಥಾಸಂಗ್ರಹಕ್ಕೆ ಜೀವದಾನ ಮಾಡಿರುವರು.

—ಎಸ್ಸೆಲ್.

ಹಕ್ಕೀ ನೋಟ

೧ ಮಂಜೂಷಾ (ಸಂಸ್ಕೃತ ಮಾಸಪತ್ರಿಕೆ) ಸಂಪುಟ ೫ ಸಂಚಿಕೆ ೮. ವಿಶೇಷ ಸಂಚಿಕೆ ಸಂಪಾದಕರು: ಶ್ರೀ ಕ್ಷಿತೀಶಚಂದ್ರ ಚಟ್ಟೋಪಾಧ್ಯಾಯ. ಪ್ರಕಾಶಕರು: ಶ್ರೀ ಜ್ಯೋತಿಷ್ ಚಂದ್ರ ಚಟರ್ಜಿ ಬಿ. ಎ. ಮಂಜೂಷಾ ಕಾರ್ಯಾಲಯ 81 ಶ್ಯಾಮಬಜಾರ್ ಸ್ಟ್ರೀಟ್, ಕಲ್ಕತ್ತಾ. ವಾರ್ಷಿಕ ಚಂದಾ ರೂ 6-0-0

ಧಾರ್ಮಿಕ, ತಾತ್ವಿಕ ಮತ್ತು ವಿಚಾರಾತ್ಮಕ ಬರಹಗಳಿಂದ ಕೂಡಿದ ಈ ಸಂಚಿಕೆಯು ಅತ್ಯಮೂಲ್ಯವೂ ಸಂಗ್ರಾಹ್ಯವೂ ಆಗಿರುತ್ತದೆ.

ಕುರುಕಾಲು ಗ್ರಾಮದ ಸಾರ್ವಜನಿಕ ಸಂಸ್ಥೆಗಳ ಸಂಕ್ಷಿಪ್ತ ವರದಿ

ಕುರುಕಾಲು ಗ್ರಾಮಸ್ಥ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರ ಮುಂದಾಳ್ತನದಲ್ಲಿ ಸಹಕಾರ ಸಂಘ, ಗ್ರಾಮಾಭಿವೃದ್ಧಿ ಸಂಘ, ಪಂಚಾಯತ ಬೋರ್ಡುಗಳನ್ನು ನಡೆಸಿ ಕೊಂಡು ಬಂದು ಗ್ರಾಮಭ್ಯುದಯವನ್ನು ಮಾಡಿರುವ ವಿಚಾರ ಅಭಿನಂದನೀಯವಾಗಿದೆ. ಪ್ರಾಮಾಣಿಕತನದಿಂದ ಕಾರ್ಯಪ್ರವೃತ್ತರಾದರೆ ಎಂತಹ ಕಾರ್ಯವನ್ನೂ ಸಾಧಿಸಬಹುದೆನ್ನುವದಕ್ಕೆ ಕುರುಕಾಲು ಸಹಕಾರ ಸಂಘವು ನೂತನ ಕಟ್ಟಡವೊಂದರ ರಜತ ಮಹೋತ್ಸವವನ್ನಾಚರಿಸುವುದೇ ಸಾಕ್ಷಿಯಾಗಿದೆ. ಕುರುಕಾಲು ಗ್ರಾಮಸ್ಥರ ಈ ಹಳ್ಳಿ ಸುಧಾರಣೆಯ ಕಾರ್ಯವು ಇತರ ಹಳ್ಳಿಯವರಿಗೆ ಆದರ್ಶವಾಗಲಿ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕೆ. ಎಸ್ ರಾವ್ ರಸ್ತೆಯಲ್ಲಿದ್ದ ನಮ್ಮ ಈಗಿನ ಆಫೀಸು ಕಟ್ಟಡದಲ್ಲಿ ಸ್ಥಳ ಸಂಕೋಚವಾದ ಪ್ರಯುಕ್ತ ನಮ್ಮ ಮಂಗಳೂರು ಶಾಖಾ ಕಚೇರಿಯು ಇದೇ ತಾ. 18-6-51ನೇ ಸೋಮವಾರದಿಂದ ಹಂಪನಕಟ್ಟೆಯ ಕೆ. ಆರ್. ಕೆ. ಶೆಟ್ಟರ

ಡಯಮಂಡ್ ಬಿಲ್ಡಿಂಗ್ಸಿನ ವಿಶಾಲ ಸ್ಥಳಕ್ಕೆ

ಒಯ್ಯಲ್ಪಟ್ಟಿರುವುದು. ಸಂಬಂಧಪಟ್ಟ ಮಹಾಜನರು ಈ ಸ್ಥಳ ಬದಲಾವಣೆಯನ್ನು ಗಮನಿಸಬೇಕಾಗಿದೆ.

ಮಂಗಳೂರು 18-6-1951

ಜಿ ಆರ್. ವಾಲ್ಯ. ಬ್ರಾಂಚ್ ಮೆನೇಜರ್.

THE PANGAL NAYAK BANK LIMITED.

Head Office] (Incorporated in 1920.) [Udipi; S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

ಕಡಿಮೆ ಕ್ರಯದ ಉತ್ತಮ
✻ ಪುಸ್ತಕಗಳು ✻

ಬಿರುದಾವಳಿ	0	3	0
ಆ ಸುದ್ದಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಬೇದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಜಾಡಿಗೆಯ ಮನೆ ಮತ್ತು	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ಕವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಕವನಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟೆಮಾರಾ ಆಭಾಗಗಳು	2	0	0
ಮಾರ್ಪಾಟ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಜ್ಯೋತಿ	0	4	0
ಕತ್ತು ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0

ರೂ. 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ.

(2) ನವಭಾರತ ಬುಕ್‌ಡಿಪೋ, ಉಡುಪಿ.

ಪ್ರವಾಸಿಯ ಪತ್ರಗಳು ೮

ಕಳೆದ ತಿಂಗಳ ಹತ್ತನೆಯ ತಾರೀಕಿಗೆ ನಾನು ಲಂಡನ್ ನಗರವನ್ನು ಬಿಟ್ಟು, ಸುಮಾರು ಹದಿನೆಂಟು ದಿನಗಳ ಕಾಲ ಇಂಗ್ಲೆಂಡಿನ ಇತರ ಪಟ್ಟಣಗಳನ್ನು ಸಂದರ್ಶಿಸಿದೆ. ಅವುಗಳಲ್ಲಿ ಓಕ್ಸ್‌ಫರ್ಡ್ ಮತ್ತು ಕೇಂಬ್ರಿಜ್‌ಗಳು ಎರಡು. ಇಂಗ್ಲೆಂಡಿನ ವಿದ್ಯಾಭ್ಯಾಸಕ್ಕೆ ಈ ಎರಡು ಪಟ್ಟಣಗಳು ಎರಡು ಕಣ್ಣುಗಳಿದ್ದಂತೆ. ಇಂಗ್ಲೆಂಡಿನ ಇತಿಹಾಸದಲ್ಲಿ ಹೆಸರಾದಂತಹ ಎಷ್ಟೋ ಮಂದಿ ಇಲ್ಲಿನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದವರು. ಓಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಚರಿತ್ರೆ ಒಂದು ಸಾವಿರ ವರ್ಷಗಳ ಕತೆ. ಅಷ್ಟೊಂದು ಪೂರ್ವದಲ್ಲಿ ಒಂದು ಕಾಲೇಜಿನಿಂದ ತೊಡಗಿದ ಈ ಸಂಸ್ಥೆಯು ಇಂದು 23 ಕಾಲೇಜುಗಳಿಂದ ಕೂಡಿದ ವಿಶ್ವವಿದ್ಯಾಲಯವಾಗಿದೆ. ಸಾವಿರಾರು ಜನರು ಇಲ್ಲಿ ಓದುತ್ತಿದ್ದಾರೆ. ಒಂದು ಚದರ ಮೈಲಿನೊಳಗೆ ಈ ಯಾವತ್ತೂ ಸಂಸ್ಥೆಗಳಿವೆ. ನಮ್ಮ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನಷ್ಟು ದೊಡ್ಡ ಕಟ್ಟಡಗಳೂ ಇಲ್ಲ. ಆದರೆ ಇವುಗಳ ಹಿರಿಮೆಯು ಕಟ್ಟಡಗಳಿಂದಲ್ಲ – ಚರಿತ್ರೆಯಿಂದ, ತಮ್ಮ ಖ್ಯಾತಿಯಿಂದ. ಇಲ್ಲಿ 1450ರಷ್ಟು ಪೂರ್ವದಲ್ಲಿ ಸ್ಥಾಪಿತವಾದ ಬೋಡ್‌ಲೀಯನ್ ಎಂಬ ಪುಸ್ತಕಾಲಯವಿದೆ. ಇಲ್ಲಿ ನೂರಾರು ಜನ ಸದ್ದುಮಾಡದೆ ಓದಿಕೊಂಡಿರುತ್ತಾರೆ. ಇಲ್ಲಿಯೇ ತೀರ ಸಮೀಪ ಕೆವೆಂಡಿಶ್ ಶೋಧನಾಲಯವಿದೆ. ನಮ್ಮ ಕಣ್ಣಿಗೆ ಕಾಣಿಸುವ ಒಂದು ಸ್ಪಷ್ಟವಾದ ಸಂಗತಿಯೆಂದರೆ–ಕಟ್ಟಡಗಳಿಗಾಗಿ ಹೆಚ್ಚಿನ ಹಣ ವ್ಯಯಿಸದೆ ಇರುವುದು. ಈ ಶೋಧನಾಲಯದಲ್ಲಿ ಎಷ್ಟೋ ಪ್ರಸಿದ್ಧ ಪ್ರಯೋಗಗಳು ನಡೆದಿವೆ. ಇಲ್ಲೇನೆ ನಮ್ಮ ನಾಡಿಗೆ ಪರಿಚಿತವಾದ ಓಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಇದೆ. ಅದರ ಹಲವು ಪ್ರಕಟಣೆಗಳನ್ನು ನಮ್ಮ ಹುಡುಗರು ಓದುತ್ತಾರಷ್ಟೆ.

ಈ ನಗರವನ್ನು ನೋಡಿಯಾದ ಬಳಿಕ, ಇಲ್ಲಿಂದ 80 ಮೈಲು ದೂರವಿರುವ ಬರ್ಮಿಂಗಹೇಮ್ ನಗರಕ್ಕೆ ಹೋಗಿ ಎರಡು ದಿನವಿದ್ದೆ. ಇಲ್ಲಿ ಉದ್ಯೋಗ ಪ್ರದರ್ಶನವೊಂದು ನಡೆಯುತ್ತಿತ್ತು. ಇಲ್ಲಿನ ಮುನ್ಸಿಪಾಲಿಟಿಯವರು ನನಗೆ ನಗರದ ಅನೇಕ ಸಂಸ್ಥೆಗಳನ್ನು ತೋರಿಸಿದರು. ಹೊರಗಿಂದ ಬಂದವರಿಗೆ ಇಲ್ಲಿನ ಮುನ್ಸಿಪಲ್ ಪ್ರಚಾರ ಶಾಖೆಯವರೂ, ಅವರ ನೌಕರರೂ, ಬೇಕಾದ ಅನುಭವಗಳನ್ನು ಒದಗಿಸಿ ಕೊಡುತ್ತಾರೆ; ಬೇಕಾದ ಸಹಾಯ ಮಾಡುತ್ತಾರೆ. ನಾನು ಅಲ್ಲಿರುವಾಗ ಮೆಂಚೆಸ್ಟರ್ ನಗರಕ್ಕೆ ಹೋಗುವ ಇಚ್ಛೆ ಪ್ರಕಟಿಸಿದ್ದರಿಂದ, ಈ ನೌಕರರು ತಂತಿ ಮೂಲಕ ಅಲ್ಲಿಯ ಅಧಿಕಾರಿಗಳಿಗೆ ಸುದ್ದಿ ತಿಳಿಸಿ, ತುಂಬ ಸಹಾಯ ಮಾಡಿದರು. ಹೀಗೆ ತಮ್ಮ ನಗರವನ್ನು ಇತರರ ಗಮನಕ್ಕೆ ತರುವುದು, ಜನತೆಗೆ ಸಹಾಯಮಾಡುವುದು, ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಇಷ್ಟೇನೆ–ನಾವು ಮುಂಚಿತವಾಗಿ ಅವರಿಗೆ ನಮ್ಮ ಆಗಮನ ತಿಳಿಸಬೇಕು. ನಾನು ಹೋದಾಗ ಜನರಿಗೆ ರಜಾಕಾಲವಾಗಿತ್ತು. ಹೀಗಾಗಿ ಅನೇಕ ಸಂಗತಿಗಳನ್ನು ನೋಡಲಾರದಾದೆ. ಇಲ್ಲಿ ಕಂಡೊಂದು ಮುಖ್ಯ ಸಂಗತಿಯೆಂದರೆ –ಮುನ್ಸಿಪಲ್ ಬೇಂಕು ವಿಶೇಷವಾದ ರೀತಿಯಲ್ಲಿ ಇದನ್ನು ನಡೆಸುತ್ತಿದ್ದಾರೆ. ಇದರ ಅಧಿಕಾರಿಗಳು ನನಗೆ ತಮ್ಮ ಕೆಲಸಗಳ ಮಾಹಿತಿಯನ್ನು ಮಾಡಿಕೊಟ್ಟರು. ಈ ನಗರದ ಜನರು ಹೆಚ್ಚಾಗಿ ಬಡವರೂ, ಮಧ್ಯಮ ತರಗತಿಯವರೇ, ಆಗಿದ್ದಾರೆ. ಅವರ ಕಲುಹಾಗಿಯೆ, ಬೇಂಕು ತೆರೆದದ್ದು. ರಖಮು ಠೇವು ಜಾತಿಗಳ ಮೇಲೆ ಸೇಕಡಾ ಎರಡು ಮುಕ್ಕಾಲರಷ್ಟು ಬಡ್ಡಿ ಕೊಡುತ್ತಾರೆ. ಆದರೆ ಹಣ ಇಟ್ಟವರು ತಾನೇನೇ ಹಣ ಪಡೆಯಬೇಕು. ಚೆಕ್ಕಿನ ವ್ಯವಹಾರವಿಲ್ಲ. ಜನಗಳು ತಮ್ಮ ತಮ್ಮ ಮನೆಯಲ್ಲಿನ ಬೆಲೆಬಾಳುವ ಆಭರಣಗಳನ್ನು ತಂದಿರಿಸುವುದಕ್ಕೂ ಇಲ್ಲಿ ವ್ಯವಸ್ಥೆಯಿದೆ. ಅದಕ್ಕಾಗಿ ೧೦,೦೦೦ ಕಣಗಳಿರುವ ಕಪಾಟುಗಳ ವ್ಯವಸ್ಥೆಯಿದೆ, ಅವುಗಳಲ್ಲಿ ಏಳುಸಾವಿರದಷ್ಟು ಈಗ ಬಳಕೆಯಲ್ಲಿದೆ. ಇವೆಲ್ಲಾ ನೆಲಮಾಳಿಗೆಯೊಂದರ ಉಕ್ಕಿನ ಮನೆಯಲ್ಲಿದ್ದು ಭದ್ರವಾದ ರಕ್ಷಣೆಯಿದೆ. ಇಲ್ಲಿ ಯಾರೂ ಏನನ್ನು ಇರಿಸಿದರೂ, ಅವರಿಗೆ ಮಾತ್ರವೇ ಗೊತ್ತಿರುತ್ತದೆ. ಬೇಂಕಿನವರಿಗೂ ಅದು ತಿಳಿದಿರುವುದಿಲ್ಲ.

ಬರ್ಮಿಂಗ್‌ಹೇಮ್ ಅನೇಕ ಉದ್ಯಮಗಳಿಗೆ ಹೆಸರಾದ ಊರು. ನನಗೆ ಸಮಯ ಸಂಕೋಚದಿಂದ ಅಲ್ಲಿನ ಕಾರ್ಖಾನೆಗಳನ್ನು ನೋಡಲು ಅನುಕೂಲವಾಗಲಿಲ್ಲ. ಈ ನಗರದಲ್ಲಿ ಆಸ್ಟಿನ್ ಮೋಟರು ಕಾರ್ಖಾನೆಯಿದೆ. ಲಂಡನ್ ನಗರದ ಬಳಿಯ ಫೋರ್ಡ್ ಕಾರ್ಖಾನೆಯನ್ನು ನಾನು ನೋಡಿಕೊಂಡು ಬಂದೆ.

ಬರ್ಮಿಂಗ್‌ಹೇಮ್ ಬಿಟ್ಟಮೇಲೆ ಅಲ್ಲಿಂದ ನೂರೈವತ್ತು ಮೈಲು ದೂರವಿರುವ ಲೀವರ್‌ಪೂಲ್ ಎಂಬ ಬಂದರಕ್ಕೆ ಬಂದು, ಕೆಲವು ತಾಸು ಇದ್ದು, ಅನಂತರ ರಾತ್ರಿ ಹಡಗಿನಲ್ಲಿ ಪಯಣವಾಗಿ ಐಯರ್ಲೆಂಡಿನ ರಾಜಧಾನಿಯಾದ ಡಬ್ಲಿನ್ ನಗರವನ್ನು ಮರುದಿನ ಸೇರಿದೆ. ಅಲ್ಲಿ ನಾಲ್ಕು ದಿನ ಕಾಲವಿದ್ದೆ. ಈ ಸಂಚಾರದ ಕಾಲದಲ್ಲಿ ನನ್ನ ಜತೆಗೆ ಸ್ಟೇಫರ್ಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ನನ್ನ ಹುಡುಗ ರಮಾನಂದನೂ ಇದ್ದ. ಇಲ್ಲಿ ಎಂಬತ್ತು ಮೈಲುದೂರ ಒಳನಾಡನ್ನು ಸಂಚರಿಸಿ ನೋಡಿ ಬಂದೆವು.

ಇಲ್ಲಿಗೆ ಪೂರ್ವದ ಭಾಷೆಯಾದ ಗೆಲಿಕ್ಕಿನಲ್ಲಿ 'ಐಯರ್' ಎಂದು ಹೆಸರು. ಅದೇ 'ಐಯರ್ಲೆಂಡ್' ಆಗಿದೆ. ಇಂಗ್ಲೆಂಡಿನಿಂದ ಈ ದ್ವೀಪ ನೂರು ಮೈಲು ದೂರದಲ್ಲಿದೆ. ಇದರ ವಿಸ್ತೀರ್ಣ ಮೂವತ್ತೆರಡು ಸಾವಿರ ಚದರಮೈಲು. ಅದನ್ನು ಮೂವತ್ತೆರಡು ಜಿಲ್ಲೆಗಳಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ–ಇಪ್ಪತ್ತಾರು ಜಿಲ್ಲೆಗಳಿಂದ ಕೂಡಿದಂಥ ಭಾಗ ಸ್ವತಂತ್ರ ಐಯರ್ಲೆಂಡ್, ಉಳಿದ ಆರು ಜಿಲ್ಲೆಗಳು ಬ್ರಿಟನಿನ ಅಧೀನವಾಗಿದೆ. ಐಯರ್ಲೆಂಡಿನಲ್ಲಿ ಬ್ರಿಟನಿಗಿಂತ ಚಳಿ ಜಾಸ್ತಿ.

ಐಯರ್ಲೆಂಡಿನ ಜನಸಂಖ್ಯೆ ೪,೩೫೦,೦೦೦. ಅವರಲ್ಲಿ ಬ್ರಿಟಿಷ್ ಭಾಗದಲ್ಲಿ ಒಂದು ಕಾಲು ಮಿಲಿಯ ಜನರಿದ್ದಾರೆ. ಐಯರ್ಲೆಂಡಿನ ಇಪ್ಪತ್ತಾರು ಜಿಲ್ಲೆಗಳಲ್ಲಿ ಎರಡೂ ಮುಕ್ಕಾಲು ಮಿಲಿಯದಷ್ಟು ಬಹು ಸಂಖ್ಯಾತರು ಕೆಥೊಲಿಕರು. ಐದನೆಯ ಶತಮಾನದ ಮುಂಚೆ, ಇಲ್ಲಿನ ಜನ ಗೇಲಿಕ್ ಭಾಷೆ ಆಡುತ್ತಿದ್ದರು. ಸ್ಕೋಟ್ಲೆಂಡಿನವರೂ, ಇವರೂ ಒಂದೇ ಜನಾಂಗವಾಗಿದ್ದರು. ಅನಂತರ ಕ್ರಿಶ್ಚನ್ ಮತ ಇಲ್ಲಿಗೆ ಬಂದು ಪ್ರಸಾರವಾಯಿತು. ಇವರ ಪ್ರಧಾನ ದೇವತೆ ಸೈಂಟ್ ಪೆಟ್ರಿಕ್. ಮತಪ್ರಚಾರಕ್ಕೆ ಬಂದ ಕ್ರಿಶ್ಚನರು ಆರನೆಯ ಶತಮಾನದಲ್ಲಿ ಡಬ್ಲಿನಿಗೆ ಅರುವತ್ತು ಮೈಲಿನ ದೂರದಲ್ಲಿರುವ ಗ್ಲೆಂಡ್‌ಲೋಕ್ ಎಂಬಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಅದು ಹನ್ನೊಂದನೆಯ ಶತಮಾನದ ತನಕವೂ ಕೆಥೊಲಿಕ್ ಸನ್ಯಾಸಿಗಳ ಕೇಂದ್ರವೂ, ಯುರೋಪಿಗೆ ಹೆಸರಾದ ವಿದ್ಯಾಸಂಸ್ಥೆಯೂ ಆಗಿತ್ತು. ಹನ್ನೊಂದನೆಯ ಶತಮಾನದ ಬಳಿಕ, ಬ್ರಿಟನ್ ಮತ್ತು ಈ ದೇಶಗಳೊಳಗೆ ಯುದ್ಧ ಸಂಭವಿಸಿ, ಈ ನಗರವು ಬೆಂಕಿಗೆ ಆಹುತಿಯಾಯಿತು. ಈ ಅವಶೇಷಗಳನ್ನು ನೋಡುವುದಕ್ಕೇನೆ, ಬಹುಮಂದಿ ಹೋಗಿ ಬರುತ್ತಾರೆ. ಅನಂತರ ಈ ದೇಶದ ಮೇಲೆ ಸ್ಕೆಂಡಿನೇವಿಯದ ಜನರೂ, ಡೇನರೂ, ನೊರ್ಮನರೂ ಆಗಾಗ ಧಾಳಿಮಾಡಿ ಇಲ್ಲಿನ ಜನರನ್ನು ಜಯಿಸಿದರು. 1177ರಿಂದ 1921ರ ತನಕ ಐಯರ್ಲೆಂಡ್ ಪರತಂತ್ರವಾಗಿತ್ತು. 700 ವರ್ಷಗಳ ಈ ದೀರ್ಘ ಅವಧಿಯಲ್ಲಿ ಐಯರ್ಲೆಂಡಿನ ನಿವಾಸಿಗಳು ಸ್ವಾತಂತ್ರ್ಯಕ್ಕಾಗಿ ಕಾಳಗ ಹೂಡುತ್ತಲೇ ಇದ್ದರು. ಅದುದರಿಂದಲೇ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಎದುರು ಹೋರಾಡಿದ ಭಾರತೀಯರೆಂದರೆ ಅವರಿಗೆ ತುಂಬಾ ಪ್ರೀತಿ. ಈ ಪುಟ್ಟ ಜನಾಂಗವು ಏಳು ಶತಮಾನಗಳ ಕಾಲ ನಡೆಸಿದ ಸ್ವಾತಂತ್ರ್ಯದ ಹೋರಾಟ ಬಹು ಸ್ಫೂರ್ತಿದಾಯಕವಾದ ಒಂದು ಕಥಾನಕ. ಬ್ರಿಟನಿನ ಪ್ರೊಟೆಸ್ಟೆಂಟ್ ಮತೀಯರು, ಶ್ರೀಮಂತರು ಅಲ್ಲಿಗೆ ಹೋಗಿ ಭೂಮಾಲಿಕರಾದರು. ಅವರ ಭಾಷೆಯು ಪೂರ್ವದಲ್ಲಿದ್ದ ಗೇಲಿಕ್ ಭಾಷೆಯನ್ನು ಓಡಿಸಿತು. ವೈರಿಗಳ ಕೆಳಗೆ ದವಡ ಎಷ್ಟೋ ಐರಿಷ್ ಪ್ರಜೆಗಳು ಅಮೇರಿಕಕ್ಕೆ ಹೋಗಿ, ಅಲ್ಲಿಂದ ತಮ್ಮ ಮಾತೃಭೂಮಿಯ ವಿಮೋಚನೆಗಾಗಿ ನೆರವನ್ನು ಕೊಟ್ಟರು. ಬ್ರಿಟನಿಗೆ ವಿರುದ್ಧವಾಗಿ ಸ್ಪೈನ್ ಮತ್ತು ಫ್ರಾನ್ಸ್ ದೇಶಗಳೊಡನೆ ಸೇರಿ ಹಲವಾರು ಕದನಗಳಲ್ಲಿ ಭಾಗಿಯಾದರು. ಅನಂತರ ತಮ್ಮ ಮಾತೃಭೂಮಿಯಲ್ಲಿಯೂ ಐರಿಷ್ ರೈತರು ಬ್ರಿಟಿಷ್ ಧನಿಗಳಿಗೆ ಗೇಣಿ ಕೊಡಲಾರದುದನ್ನು ಕೊಡದೆ ಹೋರಾಡಿದರು, ಧನಿಯಸ್ಥರನ್ನು ಸಹ ಅವರು ಕೊಯ್ಯಲು ನಿರಾಕರಿಸಿದರು. 1761ರಲ್ಲಿ ಬ್ರಿಟಿಷ್ ಸೈನಿಕರು ಬಂದು ಐಯರ್ಲೇಂಡಿನ ಬೆಳೆಯನ್ನು ಕೊಯ್ಯಬೇಕಾಯಿತು. ಇಲ್ಲಿದ್ದ ಜನಗಳ ಮನಸ್ಸಿನಲ್ಲಿ ಈ ಎಲ್ಲಾ ಕತೆಗಳು ಮರೆಯದೆ ಉಳಿದಿವೆ. 1937ರಲ್ಲಿ ಐರಿಷ್ ಪಾರ್ಲಿಮೆಂಟ್ ಬ್ರಿಟಿಷರ ಅಧೀನವಾಗಿರುವ ಆರು ಜಿಲ್ಲೆಗಳನ್ನು ತನ್ನ ಘಟನೆಯ ಒಳಗೇನೇ ಕೂಡಿಸಿಕೊಂಡಿತ್ತು. ಕಳೆದ ಮಹಾಯುದ್ಧದ ಕಾಲದಲ್ಲಿ ಬ್ರಿಟನಿಗೆ ಸಹಾಯಮಾಡದೆ ತಟಸ್ಥವಾಗಿ ಉಳಿಯಿತು. 1922 ರಿಂದ 32ರ ತನಕ ಕಾಸ್‌ಗ್ರೇವ್ ಎಂಬವರು ಇಲ್ಲಿನ ಪ್ರಧಾನಿಗಳಾಗಿದ್ದರು, ಅಲ್ಲಿಂದ ನಲ್ವತ್ತೆಂಟನೆಯ ಇಸವಿಯ ತನಕ ಸ್ವಾತಂತ್ರ್ಯವೀರ ಡಿ. ವೆಲೆರಾ ಎಂಬವರ ಪ್ರಧಾನ್ಯದಲ್ಲಿ ಸರಕಾರ ನಡೆಯಿತು. ಅನಂತರ ಕಾಸ್ಟೆಲೋ ಎಂಬವರ ಕೆಳಗೆ ಭಿನ್ನ ಪಂಗಡಗಳ ಮಿಶ್ರ ಸರಕಾರ ನಡೆಯುತ್ತಿತ್ತು. ನಾನು ಹೋಗುವ ಕಾಲದಲ್ಲಿ ಹೊಸ ಚುನಾವಣೆಗಳು ನಡೆಯುವ ಸಲುವಾಗಿ ಚಳವಳಿ ಸಾಗುತ್ತಿತ್ತು. ಈಗ ತಿರುಗಿ ಡಿ. ವೆಲೇರಾರವರ ಸರಕಾರವೇ ರಚನೆಗೊಂಡಿದೆ.

—ಕೆ. ಆರ್. ಕಾರಂತ

'ವಿಚಾರವಾಣಿ'

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3-; ಸ್ಪೆಶಲ್ ರೂ. 5-. ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI. S. Kanara.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ರಶೀದಿ ಪುಸ್ತಕಗಳು, ಎಕೌಂಟ್
ಪುಸ್ತಕಗಳು, ಮಗ್ಗಿ ಪುಸ್ತಕಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ತಾರೀಕು 5-7-51 ರಿಂದ **ವಾರದ ಭವಿಷ್ಯ** ತಾರೀಕು 11-7-51 ರವರೆಗೆ

ಮೇಷ—ಸುಸಮಯವು ಸನ್ನಿಹಿತವಾಗಿರುವದು, ನಿರುದ್ಯೋಗ ಸಮಸ್ಯೆ ಪೀಡಿತರೂ ಕೂಡ ಈ ಕಾಲದಲ್ಲಿ ಸದುದ್ಯಮ ಪ್ರವೃತ್ತರಾಗಿ ಸುಖದಿಂದ ಕಾಲಯಾಪನೆ ಮಾಡುವರು. ವಣಿಕ್ ಜನರಿಗೂ ಶ್ರಮಜೀವಿಗಳಿಗೂ ವಿದ್ಯೋಪಜೀವಿ ನೌಕರಿ ವರ್ಗದವರಿಗೂ ಕೂಡ ನಿರೀಕ್ಷೆಗಿಂತ ಅಧಿಕವಾದ ಫಲವು ಲಭಿಸಲಿದೆ. ಕೆಲವೊಮ್ಮೆ ಪ್ರವಾಸ ಮನೋರೋಗಗಳು ಕಂಡು ಬಂದರೂ ತಾ 10-11 ರಲ್ಲಿ ನಿಮ್ಮ ಬಯಕೆಯು ಸಫಲವಾಗುವದು.

ವೃಷಭ—ಚಿತ್ತಚಾಂಚಲ್ಯವು ಹೆಚ್ಚುವದು. ಆಪ್ತೇಷ್ಟರಲ್ಲೂ ಬಂಧುವರ್ಗದವರಲ್ಲೂ ಮನಸ್ತಾಪವುಂಟಾದೀತು, ಕೃತ್ರಿಮ ಮಿತ್ರರು ನಿಮ್ಮನ್ನು ಮೋಸದ ಬಲೆಯಲ್ಲಿ ಸಿಲುಕಿಸಲಿದ್ದಾರೆ. ರಾಜಕೀಯ ಅಧಿಕಾರಿಗಳಿಂದ ತೊಂದರೆ ಸಂಭವಿಸೀತು, ಚಿಕ್ಕೋಷ್ಟಗಳ ಆಧಿಕ್ಯದಿಂದ ಆರೋಗ್ಯಕ್ಕೂ ಧಕ್ಕೆಯಿದೆ. ಆದರೂ ನಿಮ್ಮ ಆರ್ಥಿಕ ಸಂಪತ್ತು ಉತ್ತಮವಾಗಿರುವುದರಿಂದ ವಾರಾದಿಯ 3 ದಿನಗಳನ್ನು ಸುಖದಿಂದ ಕಳೆವಿರಿ.

ಮಿಥುನ—ಹಿಂದಿಗಿಂತ ಸ್ವಲ್ಪ ಉತ್ತಮ ಸ್ಥಿತಿಗೆ ಬರುವಿರಿ, ಆದರೂ ಅನಿರೀಕ್ಷಿತನಾಗಿ ಪ್ರಾಪ್ತವಾಗತಕ್ಕ ಪ್ರವಾಸದಿಂದ ದೇಹಾಲಸ್ಯವೂ ಕೆಲವೊಮ್ಮೆ ಅಪಘಾತಗಳೂ ಉಂಟಾದಾವು, ಪತ್ನೀ ಪುತ್ರ ಮಿತ್ರಾದಿಗಳಿಂದ ವಿರಹ ಹೊಂದಿದ ನಿಮ್ಮ ಮನಸ್ಸಿಗೆ ಇಂದೀಗ ಕೊಂಚ ಸುಖಶಾಂತಿಯು ಲಭಿಸುವದು. ಗೃಹತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು. ತಾ 8.9. ಅನುಕೂಲ

ಕರ್ಕಟ—ಸುಖದುಃಖ ಲಾಭನಷ್ಟಗಳಿಂದ ಮಿಶ್ರಿತವಾದೀ ವಾರದಲ್ಲಿ ನಿಮ್ಮ ಆರ್ಥಿಕ ಸ್ಥಿತಿಯು ಮುಂಚಿಗಿಂತ ಸುಧಾರಿಸಲಿದೆ. ಪ್ರಬಲರಾದ ಶತ್ರುಗಳನ್ನೂ ಕೂಡ ಪರಾಭವ ಗೊಳಿಸುವಿರಿ. ಆದರೆ ಕೆಲವೊಮ್ಮೆ ವಾಕ್ಕಲಹವು ಗಂಟುಬೀಳುವದು. ಮಾತ್ರವಲ್ಲ ತಿರಸ್ಕಾರ ಅಪಮಾನಗಳಿಗೂ ಅವಕಾಶವುಂಟಾದೀತು. ಪಿತ್ತಾಧಿಕ್ಯ ನೇತ್ರಪೀಡೆ ಇವುಗಳಿಂದ ಪೀಡಿತರಾದೀರಿ. ತಾ 5. 6. 7 10. 11 ಉತ್ತಮಗಳು.

ಸಿಂಹ—ಧನಗತಶನೈಶ್ಚರನೂ ಅಷ್ಟಮಸ್ಥ ಬೃಹಸ್ಪತಿಯೂ ನಿಮ್ಮನ್ನು ಬಹುವಿಧದಿಂದ ಪೀಡಿಸುವರು. ನೀವೆಷ್ಟೇ ದುಡಿದರೂ ಕೈಯಲ್ಲಿ ಕಾಸೊಂದೂ ಉಳಿಯಲಾರದು. ಪ್ರಯಾಣನಿಮಿತ್ತವಾದ ಕಷ್ಟನಷ್ಟಾದಿಗಳಿಗೆ ಗುರಿಯಾಗುವಿರಿ, ನೌಕರಿವರ್ಗದವರಿಗೆ ಅಧಿಕಾರಿಗಳ ಭಯಹೆಚ್ಚಲಿದೆ. ಆದರೆ ಹಿಡಿದ ಕಾರ್ಯದಲ್ಲಿ ಹೆಚ್ಚಿನವು ಸಫಲಗಳೂ ಲಾಭದಾಯಿಗಳೂ ಆಗಲಿವೆ. ತಾ 8. 9. ಅತ್ಯುತ್ತಮ.

ಕನ್ಯಾ—ಈ ವಾರವು ನಿಮಗೆ ಬಹಳ ಅನುಕೂಲವಿರುವದು. ಪ್ರಬಲರಾದ ಗ್ರಹರ ಅನುಕೂಲವನ್ನು ಪಡೆದ ನಿಮಗೆ ಪ್ರತಿಯೊಂದು ಉದ್ಯಮ ವ್ಯಾಪಾರಿಗಳಲ್ಲಿ ವಿಜಯ ಶ್ರೇಯಸ್ಸೂ ಯಶಸ್ಸೂ ಲಾಭಗಳೂ ದೊರೆಯುವವು. ಬಂಧುಮಿತ್ರರ ಸಹಕಾರವು ಉತ್ತಮವಾಗಿರುವದು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ತಾ 8. 9 ಈ ದಿನಗಳಲ್ಲಿ ಕೊಂಚ ದೇಹಾಲಸ್ಯ ಕಾಣಿಸೀತು.

ತುಲಾ—ನಿಮ್ಮ ಮನೋರೋಗವು ದಿನದಿಂದ ದಿನಕ್ಕೆ ಹೆಚ್ಚಲಿದೆ. ಗುರುಹಿರಿಯರ ಆಗ್ರಹಕ್ಕೆ ಗುರಿಯಾದ ನಿಮಗೆ ಮೇಲಿಂದ ಮೇಲೆ ಶೋಕಪರಂಪರೆಗಳು ಪ್ರಾಪ್ತವಾಗುವವು. ರಾಜಕೀಯ ಕ್ಷೇತ್ರದಲ್ಲಿ ವ್ಯರ್ಥ ನಷ್ಟ ಕಷ್ಟಗಳುಂಟಾದಾವು. ಶ್ರಮ ಜೀವಿಗಳಿಗೆ ದಿನಯಾಪನೆಯು ಕಷ್ಟಕರವಾಗಲಿದೆ. ಆದರೂ ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟ ಅಪಾಯಗಳೊದಗವು

ವೃಶ್ಚಿಕ—ಈ ವಾರದಲ್ಲಿ ನಿಮಗೆ ವಿರೋಧಿಗಳ ಭಯವಧಿಕವಾಗುವದು, ಆದರಿಂದಾಗಿ ನಿಮ್ಮ ಧನಮಾನಗಳಿಗೆ ತುಂಬಾ ಹಾನಿಯಿದೆ. ಗೃಹತಾಪತ್ರಯ ನಿಮಿತ್ತ ಅರ್ಧಾಂಗಿಯ ಕೂಡೆ ಕಲಹವಾದೀತು. ಮಾತ್ರವಲ್ಲ. ಮಾತನಾಡಿದವರೊಡನೆ ಜಗಳವಾಗಲಿದೆ. ಕಜ್ಜಿ ಹುಣ್ಣು ಮೊದಲಾದ ಚರ್ಮವ್ಯಾಧಿಗಳು ಕಾಣಿಸಬಹುದು. ವಾರಾಂತ್ಯದ 4 ದಿನಗಳು ಕೊಂಚ ಸುಖದಾಯಿಯಾದಾವು.

ಧನು—ದುರ್ದೈವವು ಬಲವಾಗಿ ಪೀಡಿಸುತ್ತಲಿದೆ, ನಿಮ್ಮ ದುಡಿಮೆಗಿಂತ ದ್ವಿಗುಣ ಖರ್ಚುಗಳು ಪ್ರಾಪ್ತವಾಗುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಪೇಚಾಡುವಿರಿ. ಸಾಂಸಾರಿಕ ತಾಪತ್ರಯಗಳು ಹೆಚ್ಚುವದು, ಮನೆಯಾಕೆಯೊಡನೆ ನಿತ್ಯ ಕಲಹವಾಗುವವು. ಚಂಚಲವಾದ ನಿಮ್ಮ ಮನಸ್ಸು ಕುಮಾರ್ಗದರ್ಶಕತ್ತ ಸರಿದು ನಿಮ್ಮ ವಿದ್ಯಾಕೀರ್ತಿಗಳಿಗೆ ಹಾನಿಯುಂಟುಮಾಡಲಿದೆ ಆದರೂ ವಾರಾಂತ್ಯದ 2 ದಿನಗಳಲ್ಲಿ ಆಕಸ್ಮಿಕ ಧನಪ್ರಾಪ್ತಿ ಸುಖ ಇಷ್ಟ ಸಿದ್ಧಿ ಲಭಿಸೀತು

ಮಕರ—ಪರಿಸ್ಥಿತಿಯು ಕೊಂಚ ಹೀನಸ್ಥಿತಿಗೆ ಬರಲಿದೆ. ವಾತಸಂಬಂಧವಾಗಿ ವ್ಯಕ್ತಿಗಳ ಸಂದುಗೊಂದುಗಳಲ್ಲಿ ನೋವು ಕಾಣಿಸೀತು. ಸ್ಥಾನಚಲನೆಯು ಯೋಗವಿದೆ. ಕೆಲವೊಂದು ಕಾರ್ಯಗಳು ವಿಘ್ನಗಳಿಂದಾಗಿ ನಿಂತುಹೋಗಲಿವೆ. ಆದರೂ ನಿಮ್ಮ ಧೈರ್ಯ ಸಾಹಸಗಳಿಂದ ಮಹತ್ಕಾರ್ಯಗಳನ್ನನೇಕ ಸಾಧಿಸುವಿರಿ. ಗುರುಹಿರಿಯರಲ್ಲಿ ದೈವದೇವರುಗಳಲ್ಲಿ ಅನಾದರ ಹೆಚ್ಚುವದು. ವಾರಾದಿಯ 3 ದಿನಗಳು ಅನುಕೂಲವಿವೆ.

ಕುಂಭ—ಕಳೆದವಾರಕ್ಕಿಂತ ಈ ವಾರವು ನಿಮ್ಮ ಭಾಗಕ್ಕೆ ಉತ್ತಮವಿರುವದು. ಗೃಹತಾಪತ್ರಯಗಳನೇಕ ಪರಿಹಾರವಾಗಲಿವೆ. ಖಟ್ಲೆಗೆ ಸಾಕಷ್ಟು ಹಣವನ್ನು ಸ್ವಯಂ ಸಂಪಾದಿಸುವಿರಿ. ಉದ್ಯೋಗದಲ್ಲಿ ಉನ್ನತ ಸ್ಥಾನವನ್ನು ಹೊಂದುವಿರಿ. ಸ್ತ್ರೀಸಂಬಂಧವಾದ ಕಲಹ; ತನ್ನಿಮಿತ್ತವಾಗಿ ಅಪವಾದ ಅವಮಾನಗಳು ಪ್ರಾಪ್ತವಾಗುವ ಸಂಭವವಿದೆ. ವಾರಾದಿಯ 5 ದಿನಗಳು ಇಷ್ಟಪ್ರದಗಳು.

ಮೀನ—ಸಕಲ ಗ್ರಹರೂ ನಿಮ್ಮ ಮೇಲೆ ಮುನಿದಿರುವರೀವಾರದಲ್ಲಿ. ಆದಕಾರಣ ನಿಮಗೆ ಮುಂದೇನು ಮಾಡಬೇಕೆಂಬ ಬುದ್ಧಿಯೂ ತಕ್ಷಣಕ್ಕೆ ಹೊಳೆಯಲಾರದು. ಬಂಧುಮಿತ್ರರು ಕೈಬಿಡುವರು. ಶತ್ರುಗಳು ಪ್ರತೀಕಾರಸಕ್ತರಾಗಿರುವರು. ಸತ್ನೀಪುತ್ರರೂ ಕಲಹಪ್ರಿಯರಾಗುವರು. ಅಂದಮೇಲೆ ನಿಮಗೆ ಸಂಸಾರದಬಗ್ಗೇ ವಿರಕ್ತಿ ತೋರಬಹುದು. ಆದಗೂ ವಾರಾಂತ್ಯದ 4 ದಿನಗಳಲ್ಲಿ ಕೊಂಚ ಆರಾಮವಾಗುವ ಸಂಭವವಿದೆ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರಕ್ಕೆ ಹೋದಾಗ ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನರುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿನ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲೆ ೧ಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನಸ್ಖಲನ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 6—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾಪಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಕರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd.No. M. 3618

LICENCE No. 31
Licensed for Post without Prepayment

Estd. 1921 ಸ್ಥಾಪನೆ

12—7—1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ
ಸಾಧನ
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-12-0
6 ತಿಂಗಳಿಗೆ „ 3- 0-0
ಬಿಡಿಪ್ರತಿ „ 0- 2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೪೪

NAVAYUGA WEEKLY Post Box No. 22 UDIPI.

Vol 31
No. 44

ಯುದ್ಧಪ್ರೇರಕ ಸನ್ನಿವೇಶಗಳು

ಜಗತ್ತಿನಲ್ಲಿ ಮೂರನೆಯ ಮಹಾ ಯುದ್ಧದ ಭೀತಿ ಆವರಿಸಿದ್ದು ಎಲ್ಲಿ ತಲೆ ಯೆತ್ತಬಹುದೆಂಬುದು ಒಂದು ಸಮಸ್ಯೆ ಯಾಗಿದೆ. ದ್ವಿತೀಯ ಮಹಾಯುದ್ಧಕ್ಕೆ ಹಿಟ್ಲರ ಕಾರಣನಾದರೂ ಮೂರನೆಯ ಮಹಾಯುದ್ಧಕ್ಕೆ ಗೆದ್ದವರ ಠೇಂಕಾರ—ಅಹಂಬುದ್ಧಿ ಕಾರಣವಾಗಿರುತ್ತದೆ. ಎರಡನೆಯ ಮಹಾಯುದ್ಧದಲ್ಲಿ ಗೆದ್ದ ರಾಷ್ಟ್ರಗಳ ಶಕ್ತಿಯನ್ನು ಹೊಂದಿಕೊಂಡು ಈಗ ಅಗ್ನಿ ಪರೀಕ್ಷೆ ನಡೆಯುತ್ತಲಿದೆ. ಕೊರಿಯಾ ಯುದ್ಧವೇ ಮೂರನೇ ಮಹಾಯುದ್ಧದ ಪೀಠಿಕೆಯೆಂದು ಹೇಳಲಾಯಿತಾದರೂ ಈಗ ಶಾಂತಿ ಸಂಧಾನದ ಮಾತು ಮುಂದೆಬರುತ್ತಲಿದೆ. ನಾಳೆ ಯುದ್ಧ ಸಮಾಪ್ತಿಗೊಳ್ಳಲೂ ಬಹುದು. ಆದರೆ ಇಂತಹದೇ ಪ್ರಕರಣ ಬೇರೊಂದು ಕಡೆಯಲ್ಲಿ ತಲೆಯೆತ್ತಬಹುದೆಂಬ ಶಂಕೆ-ಆಂತರಿಕ ಭೀತಿ ಎಲ್ಲೆಲ್ಲೂ ಇದೆ. ಕೊರಿಯದ ರಣರಂಗದಲ್ಲಿ ಮುಖ್ಯ ಪಾತ್ರಧಾರಿಗಳು ಆಂಗ್ಲೋ ಅಮೇರಿಕಾನರು ಮತ್ತು ರಶಿಯವೇ ಆದಿಯಾಗುಳ್ಳ ಕಮ್ಯೂನಿಸ್ಟ ರಾಷ್ಟ್ರಗಳು! ಕೊರಿಯದಲ್ಲಿ ಯುದ್ಧ ಮುಗಿಸಬೇಕೆಂದು ಹಾರೈಸುವ ಮಹನೀಯರೇ ಪರ್ಶಿಯಾದಲ್ಲಿ ಯುದ್ಧಕ್ಕೆ ಕಾರಣವೇ ಭೂತವಾದ ಸನ್ನಿವೇಶಗಳನ್ನು ನಿರ್ಮಿಸುತ್ತಲಿದ್ದಾರೆ. ಲೋಕಕ್ಕೆ ಶಾಂತಿಯಾಗಲೆಂದು ಹಾರೈಸುವವರು ಯುದ್ಧ ಪ್ರೇರಕ ಪರಿಸ್ಥಿತಿಯನ್ನೇಕೆ ನಿರ್ಮಿಸಬೇಕು? ಪರ್ಶಿಯಾದಂತಹ ಚಿಕ್ಕ ರಾಷ್ಟ್ರಕೂಡಾ ಆಂಗ್ಲೋ ಅಮೇರಿಕಾನರ ಇದಿರಾಗಿ ಪ್ರತಿಭಟಿಸುವದೆಂದರೆ ಅದೇನು ಸಣ್ಣ ಮಾತಲ್ಲ! ಪರ್ಶಿಯದ ನಿರಾಕರಣೆ-ಖಂಡತುಂಡವಾದ ಉತ್ತರ-ಸ್ವೇಚ್ಛಾನುವೃತ್ತಿ ಇವನ್ನೆಲ್ಲ ನೋಡುವಾಗ ಸ್ವಯಂಪ್ರೇರಕ ಬುದ್ಧಿಯುಳ್ಳವೆಂದು ನಮಗೆ ಸ್ಪಷ್ಟವಾಗದೇ?

ಕಾಶ್ಮೀರದಲ್ಲಿ ಬೆಳೆದು ಬರುತ್ತಿರುವ ಅಸಹಕಾರ ಮನೋವೃತ್ತಿ ಜಾಗತಿಕ ಶಾಂತಿಗೆ ಗಂಡಾಂತರವನ್ನು ತರುವಂತಹದಾಗಿದೆ. ಕಾಶ್ಮೀರದಲ್ಲಿ ಕೂಡಾ ಮೂರನೆಯ ಮಹಾಯುದ್ಧದ ಕಿಡಿ ಹಾರೀತೆಂಬ ಭಾವನೆ ಹಲವರಲ್ಲಿ ಕಳವಳವನ್ನುಂಟುಮಾಡಿರುವುದು ಸ್ವಾಭಾವಿಕವೇ. ಇಲ್ಲಿ ಪಾಕಿಸ್ತಾನ ಹಿಂದೂಸ್ಥಾನಗಳಿಗೆ ಮಾತ್ರ ಕಾಶ್ಮೀರ ರಣಕ್ಷೇತ್ರವಾಗದು. ಆಂಗ್ಲೋ ಅಮೇರಿಕಾನರೂ—ಸಹಾಯದ ಸೋಗುಹಾಕಿಕೊಂಡು ನುಗ್ಗಿ ಬಂದಾರು, ರಶಿಯವೂ ತನಗೆ ಸುಲಭವಾದ ಮಾರ್ಗವಿರುವಾಗ ಸುಮ್ಮನಿರಲಾರದು. ಆಂಗ್ಲೋ ಅಮೇರಿಕಾನರು ಎಲ್ಲಿ ಕಾದಾಡುವರೋ-- ಅಲ್ಲಿ ರಶಿಯ ವಿದೆ, ಕಮ್ಯೂನಿಸ್ಟರಿದ್ದಾರೆ. ಪಾಕಿಸ್ತಾನ ಹಿಂದೂಸ್ಥಾನದೊಳಗೆ ಯುದ್ಧವೆಂದರೆ ದಕ್ಷಿಣಕೊರಿಯಾ — ಉತ್ತರಕೊರಿಯಾಗಳೊಳಗೆ ಯುದ್ಧವಾದ ಹಾಗೆಯೇ ಆಗುತ್ತದೆ. ಎರಡೂ ಕಡೆಯಲ್ಲಿ ಯುದ್ಧ ಹೇತುಗಳು ಒಂದೇ ಆಗಿರುತ್ತವೆ. ಕಾಶ್ಮೀರದ ಪ್ರಕರಣದಿಂದ ಪಾಕಿಸ್ತಾನ ಹಿಂದೂಸ್ಥಾನಕ್ಕಲ್ಲದೆ ಜಾಗತಿಕ ಶಾಂತಿಗೇ ಗಂಡಾಂತರವಿದೆಯೆಂದು ಹೇಳುವ ಹಲವು ರಾಜಕೀಯ ಧುರೀಣರ ವಾದದಲ್ಲಿ ಅರ್ಥವಿಲ್ಲದಿಲ್ಲ. ಉತ್ತರ ದಕ್ಷಿಣಕೊರಿಯದಲ್ಲಿ ಇತರ ರಾಷ್ಟ್ರಗಳು ಹೇಗೆ ಹಿಂದಿನಿಂದ ನಿಂತು ಯುದ್ಧವನ್ನು ನಡೆಸಿದವೋ-- ಅಂತೆಯೆ ಕಾಶ್ಮೀರದಲ್ಲಾಗಬಹುದು. ಹಾಗಾದರೆ ಕಾಶ್ಮೀರ ಕೂಡಾ ಮೂರನೆಯ ಮಹಾಯುದ್ಧಕ್ಕೆ ಹೇತುವಾಗಬಹುದಲ್ಲವೇ? ಇತ್ತಣಿಂದ ಅಮೇರಿಕಾ ಮತ್ತು ಬ್ರಿಟನುಗಳು ಬಂದರೆ ಅತ್ತಣಿಂದ ರಶಿಯ ನೇರಾಗಿ ಪ್ರವೇಶಿಸಬಹುದು. ಮತ್ತೆ ಹಿಂದೂಸ್ಥಾನಗಳ ಮಾತುಕತೆ ಮೇಲಾಗಿ ಪ್ರಬಲ ರಾಷ್ಟ್ರಗಳ ಅಗ್ನಿ ಪರೀಕ್ಷೆ ನಡಿಯುತ್ತದೆ. ಅರ್ಥಾತ್ ಮೂರನೆಯ ಮಹಾಯುದ್ಧವೇ!

ಪರ್ಶಿಯಾದ ಹಣೆಬರಹವೂ ಅಷ್ಟೆ! ಒಂದು ಕಡೆ ಪರ್ಶಿಯದ ಗಡಿಯಲ್ಲಿ ಬ್ರಿಟಿಶರ ಯುದ್ಧ ನೌಕೆಹಾಗೂ ಪಲಟಂಗಳು ತಂಗಿವೆ. ಇನ್ನೊಂದು ಕಡೆ ಪರ್ಶಿಯದ ಗಡಿಯಲ್ಲಿ ರಶಿಯದ ಸೇನೆಗಳು ಮಾರ್ಚ ಮಾಡುತ್ತಿವೆ. ಪರ್ಶಿಯ ಬ್ರಿಟನ್ನದ ಕುರಿತಾಗಿ ತಳೆದ ಧೋರಣೆಯನ್ನು ನೋಡುವಾಗ ಒಂದು ಕಾಳಗ ಅಲ್ಲಿ ಅನಿವಾರ್ಯವೆಂದು ತೋರುತ್ತದೆ. ಇಲ್ಲಿಕೂಡಾ ಪರ್ಶಿಯ ಆಂಗ್ಲೋ, ಅಮೇರಿಕಾನರ ಮತ್ತು ರಶಿಯದ ಶಕ್ತಿಪರೀಕ್ಷೆಯ ರಂಗವಾಗಬಹುದು. ಯುದ್ಧವಾದರೆ ಸುಖವಿಲ್ಲವೆನ್ನುವದನ್ನು ಎಲ್ಲರಾಷ್ಟ್ರಗಳು ಒಪ್ಪುತ್ತವೆ. ಪರಿಸ್ಥಿತಿಯ ಮೂಲಕ ಯುದ್ಧ ಅನಿವಾರ್ಯವಲ್ಲವೇ? ಎಂದೂ ಲೆಕ್ಕಹಾಕುತ್ತವೆ. ಶಾಂತಿಯನ್ನು ಬಯಸುವವರು ಸದಾ ಯುದ್ಧಭೀತಿಯ ಮಾತನ್ನು ಎತ್ತಕೂಡದು! ಒಂದು ತತ್ವದ ಮೇಲೆ ಇತರರ ಮೇಲೆ ಏರಿಹೋಗಬಾರದು. ಆದರೆ ಇತರರನ್ನು ಬೆದರಿಸಿಯೇ ತಾವು ಶ್ರೇಷ್ಠರು ಜಗತ್ತಿನ ಮಹಾಬುದ್ಧಿವಂತರೆಂದು ಸಾರಿಯೇ ಶಾಂತಿಯ ಪಾಠವನ್ನು ಹೇಳುತ್ತಾರೆ. ಉಭಯತರಲ್ಲೂ ಅಂತಃಕರಣ ಪೂರ್ವಕ ಸೌಹಾರ್ದಭಾವ ಉಂಟಾಗದೆ ಶಾಂತಿ ತಲೆದೋರೀತೇ?

"ಇಂದಿನ ಸೋಲು ನಾಳಿನ ಗೆಲವಿನ ಸೂಚನೆ" ಎನ್ನುವ ಮಾತಿನ ತತ್ವದಂತೆ "ಇಂದಿನ ಗೆಲವು ನಾಳಿನ ಸೋಲಿನ ಸೂಚನೆ" ಎಂದು ತಿರುಗು ಮುರುಗು ಆಗುವ ಲಕ್ಷಣ ತಲೆದೋರುತ್ತಲಿವೆ. ದ್ವಿತೀಯ ಮಹಾಯುದ್ಧದಲ್ಲಿ ಗೆದ್ದವರು ತಾವೆಂಬ ಅಹಂಬುದ್ಧಿ ಆಂಗ್ಲೋ ಅಮೇರಿಕಾನರಲ್ಲಿ ಬೆಳೆದುದೇ ಇದರ ಮೂಲ.

ಇಡಿಯ ಲೋಕಕ್ಕೆ ನ್ಯಾಯನೀತಿಗಳ ಪಾಠಗಳನ್ನು ಹೇಳಿ ಮಾರ್ಗದರ್ಶನ ಮಾಡಬಲ್ಲೆವೆಂಬ ತೋರಿಕೆ ಜನ್ಮಗಳೇ ಅತಿಶಯವಾದ-ವಿರೋಧ-ಯುದ್ಧಪ್ರೇರಕ ಪರಿಸ್ಥಿತಿಗಳನ್ನು ನಿರ್ಮಿಸುತ್ತಿವೆ. ಶ್ರೀಮದ್ಗಾಂಭೀರ್ಯವನ್ನು ಕಂಡು ತಲೆಬಾಗುವ ಕಾಲ ಕಳೆದು ಹೋಯಿತು. ಚರ್ಚಿಲ್-ಟ್ರೂಮನರಂತಹ ಜನ ಇನ್ನು ಬಹಳ ಕಾಲ ರಾಜಕೀಯ ರಂಗದಲ್ಲಿ ರಾರಾಜಿಸರು. ತಾವು-ತಮ್ಮವರು ಶ್ರೇಷ್ಠ—ಉಳಿದವರು ಕನಿಷ್ಠ ಎಂಬ ಭೇದೋಪಾಯದಿಂದ ರಾಷ್ಟ್ರವನ್ನು ಆಳಲು ಬರುವಂತಿಲ್ಲ. ಇಪ್ಪತ್ತನೆಯ ಶತಮಾನದಲ್ಲೂ ಸಾಮ್ರಾಜ್ಯ ಶಾಹಿಯ ಮಾನದಂಡದಿಂದ ಲೋಕದ ನ್ಯಾಯವನ್ನು ಅಳೆಯುವೆನೆಂದು ಹೇಳಲಾಗದು. ಒಬ್ಬರನ್ನೊಬ್ಬರು ಗೆಲ್ಲುವುದಕ್ಕಿಂತ ಸಹಕಾರವನ್ನಪೇಕ್ಷಿಸುವುದೂ ಒಬ್ಬರನ್ನೊಬ್ಬರು [illegible] ತಿಳಿದುಕೊಂಡು.!

ಈಗಿನ ಯುವಜನಾಂಗದ ಮನೋವೃತ್ತಿ ಸಾಮ್ರಾಜ್ಯ ಶಾಹೀವಾದವನ್ನು ಮೆಚ್ಚುತ್ತಿಲ್ಲ. ಹಲವು ಜನರು ರಾಜರ ಹೆಸರಲ್ಲಿ ಹಲವು ಕಟ್ಟು ಸಂಪ್ರದಾಯಗಳನ್ನು ಹಿಡಿದು ಸುಖಲಾಲಸರಾಗಿದ್ದುಕೊಂಡು ಬೇರೆಯವರನ್ನು ಬೆದರಿಸಕ್ಕೆ ತಪ್ಪುತ್ತಿ,

(೩ನೇ ಪುಟ ನೋಡಿ)

IN THE SERVICE OF THE COUNTRY

Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ—
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

"ಇಂದಿನ ದಿನ ಸುದಿನ"

ಲೇಖಕ:— ಏರ್ಯ ಲಕ್ಷ್ಮೀನಾರಾಯಣ ಆಳ್ವ.

ಕಾಲನ ಚೀಲದಲ್ಲಿ ಬಿದ್ದು ಕಣ್ಮರೆಯಾಗುತ್ತಿರುವ ನಿನ್ನೆಗಳು ನಮ್ಮ ಪಾಲಿಗೆ ಕಳೆದೇ ಹೋಗುತ್ತವೆ. ಆದರೆ ಆ ನಿನ್ನೆಗಳು ನಡೆದ ಹೆಜ್ಜೆಗಳು ಮಾತ್ರ ನಮ್ಮ ಜೀವನದ ಹಾದಿಯಲ್ಲಿ ಅಚ್ಚೊತ್ತಿ ಉಳಿದಿರುತ್ತವೆ. ಅಲ್ಲದೆ ಆಗ ಘಟಿಸಿದ ಕೆಲ ಘಟನೆಗಳ ಮಧುರ ನೆನಹುಗಳು—ಅಂದು ಅವು ಸುಖದ್ದಾಗಿರಲಿ ದುಃಖದ್ದಾಗಿರಲಿ ಇಂದು ಮಾತ್ರ ಮಧುರ ನೆನಹುಗಳೇ—ಕೂಡಾ ಚಿತ್ತದ ಭಿತ್ತಿಯಲ್ಲಿ ಅಚ್ಚೊತ್ತಿದಂತಿರುತ್ತವೆ. ಹೀಗೆ ಕಳೆದ ನಿನ್ನೆಗಳ ಬಗೆಗೆ ಇನಿತು ಸಿಹಿ ನೆನಹುಗಳಿದ್ದರೂ ಅವು ನಮ್ಮ ಬಾಳಿನ ಒಂದೊಂದೇ ತುಣುಕನ್ನು ತಿನ್ನುತ್ತಾ ಹೋಗಿವೆಯಲ್ಲಾ ಎಂಬ ನೋವು ಅವುಗಳೊಡನೆ ಇಲ್ಲದಿಲ್ಲ. ಮಾತ್ರವಲ್ಲ ಕೆಲಸಾರಿ ಆ ನೋವು ಇರುವ ಇಂದನ್ನೂ ಬರುವ ನಾಳೆಗಳನ್ನೂ ಕಹಿ ಮಾಡುವನಿತು ಬೆಳೆದಿರುತ್ತದೆ.

ಆದರೆ ಆ ನೋವನ್ನು ಅನಿತು ಬೆಳೆಯಬಿಡುವುದು ಅವಿವೇಕ. ನಮ್ಮ ಕೈಯಿಂದ ಜಾರಿಹೋದ ನಿನ್ನೆಗಳನ್ನು ನಮ್ಮ ಕೈಯಲ್ಲಿರುವ ಇಂದು ಮತ್ತು ಬರುವ ನಾಳೆಗಳ ಮೇಲೆ ತನ್ನ ಕರಿಛಾಯೆ ಬೀರುವನಿತು ಬೆಳೆಯ ಬಿಡುವುದು ನಮ್ಮ ದೌರ್ಬಲ್ಯ. ಹಾಗೆ ಬೆಳೆಯಬಿಡುವುದೆಂದರೆ ನಾವು ಮೃಗಗಳಿಗಿಂತಲೂ ಕಡಿಮೆ ಬುದ್ಧಿಯುವರು ಎಂಬುದನ್ನು ಪ್ರದರ್ಶಿಸಿದಂತೆ.

ನಿನ್ನೆಗಳ ಪಂಚಾಂಗದ ಮೇಲೆ ಇಂದಿನ ಸಾಧನದ ಮೂಲಕ ನಾಳೆಗಳ ಗೋಪುರ ಕಟ್ಟುವ ಕುಶಲ ಶಿಲ್ಪಿಗಳಾಗಬೇಕು ನಾವು. ಕಳೆದ ನಿನ್ನೆಗಳು ನಮ್ಮ ಮಂದಿರದ ಅಸ್ತಿವಾರ. ಆದುದರಿಂದಲೇ ಅವುಗಳನ್ನೆಂದೂ ಮರೆಯಬಾರದು.

ಕಳೆದ ನಿನ್ನೆಗಳ ಬಗೆಗೆ ನೋವು ಇರಬಾರದು ನಿಜ. ಆದರೆ ಅವುಗಳ ಕುರಿತಾಗಿ ಒಂದು ತೆರನ ಅತೃಪ್ತಿ ಬೇಕೇ ಬೇಕು. ನಿನ್ನೆಗಳ ಒಂದು ತೆರನ ಅತೃಪ್ತಿ ಇಲ್ಲದೆ ಹೋದರೆ ಇರುವ ಇಂದೂ ಬರುವ ನಾಳೆಗಳೂ ನಿನ್ನೆಯಲ್ಲೇ ಕಳೆದು ಹೋದಾವು! ಬಾಳು ಬರಡಾದೀತು. ನಾವು ಅಪ್ರಗತಿಶೀಲರಾದೇವು. ಆ ಅತೃಪ್ತಿಯೇ ಇರುವ ಇಂದನ್ನು ಹಿಂದಿಗಿಂತ ಸುಂದರವಾಗಿಸಿ ಬರುವ ನಾಳೆಗಳನ್ನು ಸುಂದರ ಕನಸುಗಳನ್ನಾಗಿಸ ಬಲ್ಲುದು. ಆದುದರಿಂದಲೇ ಬಲ್ಲವರು ಹೇಳಿದ್ದಾರೆ "ತೃಪ್ತಿಯೇ ಮರಣ ಅತೃಪ್ತಿಯೇ ಜೀವನ" ಎಂದು.

ಆದರೆ ಬರೇ ಅತೃಪ್ತಿಯಲ್ಲಿ ಅಪಾಯವಿದೆ. ಅದು ಮಾನವನನ್ನು ನಿರ್ವೀರ್ಯನನ್ನಾಗಿ ಮಾಡೀತು. ತನ್ನಿಂದ ಏನೂ ಸಾಗಲಾರದು ಎಂಬ ನಿರಾಶಾವಾದಿತನವನ್ನು ಆತನಲ್ಲಿ ಉಂಟುಮಾಡೀತು. ಅದಕ್ಕಾಗಿ ನಮ್ಮಲ್ಲಿ ಒಂದು ತೆರನ ತೃಪ್ತಿಯೂ ಬೇಕು. ಕಳೆದ ನಿನ್ನೆಗಳ ಬಗೆಗೆ ಹೀಗೆ ತೃಪ್ತಿ ಅತೃಪ್ತಿಗಳ ಸುಂದರ ಸಮ್ಮಿಲನ ಕ್ಷೇತ್ರವಾಗಬೇಕು ಮಾನವನ ಮನ. ಅವೆರಡೂ ಹಿತವಾಗಿ ಮಿತವಾಗಿ ಸೇರಿದ್ದರೆ ಮಾತ್ರ ಬಾಳು ಉನ್ನತಿಯೆಡೆಗೆ ನಡೆದೀತು. ತೃಪ್ತಿ, ತಾನು ಕೀಳನಲ್ಲ, ಅಬಲನಲ್ಲ, ಹಿಂದೆ ಬಿದ್ದಿಲ್ಲ ಎಂಬ ಸ್ಥಾಯೀ ಭಾವಗಳನ್ನು ಮಾನವನಲ್ಲಿ ಉಂಟುಮಾಡಬೇಕು. ಅತೃಪ್ತಿ ತಾನು ಉತ್ತಮನಾದುದು ಸಾಕಾಗದ, ತಾನು ಮುಂದರಿದುದು ಸಾಲದು ಎಂಬ ನೆನಪನ್ನು ಎಡೆಬಿಡದೆ ಎಚ್ಚರಿಸುತ್ತಿರಬೇಕು. ಹೀಗೆ ಒಂದೇ ಕ್ಷೇತ್ರದಲ್ಲಿ ಪರಸ್ಪರ ವಿರೋಧ ಗುಣಗಳು ಪರಸ್ಪರ ಪೂರಕಗಳಾಗಿ ಬಾಳ ಒಂದು ಜೀವವನ್ನು ದೇವರಾಗಿಸಲು ಹೆಣಗುವ ದೈವೀ ಪವಾಡವಾಗಬೇಕು ನಮ್ಮ ಬಾಳು! ಓ! ಎಂತಹ ಸುಂದರಕಲೆ ಮಾನವ ಜೀವನ! ಕೊರಡನ್ನು ಕೊನರಿಸುವುದಕ್ಕಿಂತಲೂ ಹೆಚ್ಚಿನ [illegible]ದಲ್ಲಿ ಚೇತನವನ್ನು ಅರಳಿಸುವ ಅಲೌಕಿಕ ಕಲೆ ಮಾನವಬಾಳು!

ಒಮ್ಮೊಮ್ಮೆ ಏಕಾಂತದಲ್ಲಿ ಕುಳಿತು ಕಳೆದ ನಿನ್ನೆಗಳ, ಇರುವ ಇಂದಿನ ಮತ್ತು ಬರುವ ನಾಳೆಗಳ ಕುರಿತಾಗಿ ಯೋಚಿಸಹತ್ತಿದರೆ ಯೋಚನೆಗಳ ಪ್ರವಾಹವು ಬಯಲುನಾಡಿನ ತೊರೆಯಂತೆ ಸರಾಗವಾಗಿ ಸಲಿಲವಾಗಿ ಹರಿಯುವುದಿಲ್ಲ. ಕಲ್ಲು ಕಣಿವೆಗಳೆಡೆಯಲ್ಲಿ ಒಡೆದು ಕಡೆದು ತಿರುಗಿ ಬರುವ ಬೆಟ್ಟಗಾಡಿನ ಹೊಳೆಯಂತಾಗುತ್ತದೆ ಮನಸ್ಸಿನ ಗತಿ. ಕಳೆದ ನಿನ್ನೆಗಳನ್ನು ಹಾಯ್ದು ಬರುವಾಗ ಮರವೆಯ ಮಬ್ಬಿನಲ್ಲಿ ತಡವರಿಸುತ್ತದೆ ಮನ ಮತ್ತು ಕಳೆದ ಒಂದೊಂದೇ ಘಟನೆಗಳನ್ನು ತೂಗಿ ತೂಗಿ ನೋಡುತ್ತದೆ ಅವು ಈಗತಾನೇ ಜರಗಿದವುಗಳೋ ಎಂಬಂತೆ. ಅಂತೆಯೇ ಬರುವ ನಾಳೆಗಳ ಬಗೆಗೆ ಕನಸು ಕಟ್ಟಿ; ಆಶೆ ಆದರ್ಶಗಳ ಪರ್ವತಗಳನ್ನೇ ಹೊತ್ತುಕೊಂಡು ಮುಗ್ಗರಿಸುತ್ತಾ ಮುಂಬರಿಯುತ್ತದೆ ಮನ. ಇವುಗಳ ನಡುವೆ ಇರುವ ಇಂದು ಮಾತ್ರ ಇದ್ದೂ ಇಲ್ಲದಂತೆನಿಸುತ್ತದೆ. ಕಳೆದ ಅನಂತ ನಿನ್ನೆಗಳೂ ಬರುವ ಅನಂತ ನಾಳೆಗಳೂ ಇರುವ ಚಿಕ್ಕ ಇಂದನ್ನು ಇದ್ದೂ ಇಲ್ಲದಂತೆ ಮಾಡಿವೆ! ಆ ಎರಡು ಅನಂತಗಳ ನಡುವೆ ಅವುಗಳನ್ನು ಬೇರ್ಪಡಿಸುವ ನೂಲಿನ ಎಳೆಗಿಂತಲೂ ಸೂಕ್ಷ್ಮಗಾತ್ರದ ಇಂದಿಗೆ ಅಸ್ತಿತ್ವವೇ ಇಲ್ಲವೇನೋ ಎಂಬಂತೆ ಭಾಸವಾಗುತ್ತದೆ. ಕ್ಷಣಬಿಟ್ಟು ಕ್ಷಣಕ್ಕೆ ಭೂತದ ತುತ್ತಿಗೆ ಆಹುತಿಯಾಗುತ್ತಿರುವ, ಕ್ಷಣಬಿಟ್ಟು ಮರುದಿನದ ಭವಿಷ್ಯತ್ತಿನ ಗರ್ಭದಲ್ಲಿರುವ ಈ ಇಂದಿನ ಅಸ್ತಿತ್ವವೇನು? ಅದರ ಆಯುಷ್ಪ್ರಮಾಣವೆಷ್ಟು? ನಮ್ಮ ಬಾಳಿನಲ್ಲಿ ಅದರ ಸ್ಥಾನವೇನು?

ನಮ್ಮ ಬಾಳಿನಲ್ಲಿರುವುದು ಇಂದು ಮಾತ್ರ! ಮತ್ತು ಅದು ಚಿರಾಯು! ಕಳೆದ ನಿನ್ನೆಗಳಂತೂ ನಮಗೆ ಇಂದುಗಳಾಗಿಯೇ ಬಂದು ನಾವು ಅಗಿದು ಬಿಸುಟ— ಅನುಭವಿಸಿ ತೊರೆದ—ಸಿಪ್ಪೆಗಳು. ಬರುವ ನಾಳೆಗಳಂತೂ ನಮ್ಮ ಪಾಲಿಗೆ ಇಂದುಗಳಾಗಿಯೇ ಬರಬೇಕು ತಾನೇ. ಆದುದರಿಂದಲೇ ನಮ್ಮ ಪಾಲಿಗೆ ನಿನ್ನೆ ನಾಳೆಗಳೆಲ್ಲ ಸುಳ್ಳು! ಇಂದು ಮಾತ್ರ ಸತ್ಯ!

ಹಾಗಾದರೆ ನಿನ್ನೆ ನಾಳೆಗಳಿಗೆ ನಮ್ಮ ಬಾಳಿನಲ್ಲಿ ಬೆಲೆಯೇ ಇಲ್ಲವೇನು? ಇದೆ. ನಿನ್ನೆಯ ತಪ್ಪೊಪ್ಪುಗಳು ಇಂದಿನ ಕೆಲಸ ಕಾರ್ಯಗಳಿಗೆ ಅನುಭವ ನೀಡುತ್ತವೆ. ನಾಳೆಯ ಆಶೆ ಆದರ್ಶಗಳು ಇಂದಿನ ಕೆಲಸ ಕಾರ್ಯಗಳಿಗೆ ಉತ್ಸಾಹ ಕೊಡುತ್ತವೆ. ಇದೇ ಕಳೆದ ನಿನ್ನೆಗಳ ಮತ್ತು ಬರುವ ನಾಳೆಗಳ ಕೆಲಸ. ನಮ್ಮ ಬಾಳಿನಲ್ಲಿ ಆ ಕೆಲಸಗಳನ್ನು ಅವುಗಳು ಪೂರೈಸುವ ರೀತಿಯಲ್ಲೇ ಅವುಗಳಿಗೆ ಬೆಲೆ. ಆದರೆ ನಿನ್ನೆಯ ಅಳಲುಗಳು ಮತ್ತು ನಾಳೆಯ ಅಳುಕುಗಳು ಇಂದಿನ ಹೋರಾಟವನ್ನು ಕುಂಠಿತಗೊಳಿಸಬಾರದು. ಆದಕ್ಕಾಗಿಯೇ ಇರಾನಿನ ಅಮರ ಕವಿ ಉಮರ್ ಖಯ್ಯಾಮ್ "Unborm to—morrow and dead yesterday, why fret about them if to—day be sweet!" (ನಿನ್ನೆ ಸತ್ತಿಹುದೀಗ ನಾಳೆ ಹುಟ್ಟದೆಯಿಹುದು. ಇಂದು ಸೊಗವಿರಲವನು ನೆನೆದಳುವುದೇಕೆ?) ಎಂದು ಕೇಳಿದ್ದಾನೆ. ನಿನ್ನೆಗಳಲ್ಲಿ ಮರವೆಯ ಮಬ್ಬು ಇದೆ. ಬರುವ ನಾಳೆಗಳಲ್ಲಿ ಕನಸಿನ ಕಲ್ಪನೆಗಳಿವೆ. ಆದುದರಿಂದಲೇ ನಿನ್ನೆ ನಾಳೆಗಳನ್ನು ನಮ್ಮ ಬಾಳಿನಲ್ಲಿ ಉಪಯೋಗಿಸಿಕೊಳ್ಳುವಾಗ ನಾವು ಅಕ್ಕಸಾಲಿಗರಾಗಬೇಕು. ಅವುಗಳನ್ನು ನಮ್ಮ ಇಂದಿನ ಹೋರಾಟದ ಮುಂದುವರಿಕೆಗೆ ಸಹಾಯಕವಾಗುವಂತೆ ಉಪಯೋಗಿಸುವುದರಲ್ಲೇ ಜೀವನ ಜಾಣ್ಮೆ ಇದೆ.

ಇಂದೇ ನಮ್ಮ ಬಾಳನ್ನು ರೂಪುಗೊಳಿಸುತ್ತದೆ. ಮತ್ತು ಇಂದೇ ನಮ್ಮ ನಿನ್ನೆ ನಾಳೆಗಳಿಗೆ ಬೆಲೆಕಟ್ಟುತ್ತದೆ. ಆದುದರಿಂದಲೇ ದಾಸರು ಹಾಡಿದ್ದಾರೆ "ಇಂದಿನ ದಿನ ಸುದಿನ" ಎಂದು!

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4¼ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD;,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಲ್ಲದ ಛಟ್ಟೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ —12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಮುನ್ನೋಟವಿಲ್ಲದ ಮುಂದಾಳ್ತನ

ಅಖಿಲ ಭಾರತ ರೈಲ್ವೆ ಕೆಲಸಗಾರರ ಮಹಾ ಮಂಡಳವು ಆಗಸ್ಟ್ 27ರಿಂದ ಸಾರ್ವತ್ರಿಕ ಮುಷ್ಕರವನ್ನು ಹೂಡುವ ನಿರ್ಧಾರವನ್ನು ಮಾಡಿದೆ. ರೈಲ್ವೆ ಕೆಲಸಗಾರರ ಈ ಅನುಚಿತ ಘೋಷಣೆಯನ್ನು ನಾವು ಈ ಹಿಂದೊಮ್ಮೆ ಬರೆದದ್ದುಂಟು. ಅಂತೆಯೆ ಸಾರ್ವಜನಿಕರಿಗೆ ತೊಂದರೆಯನ್ನೊಡ್ಡುವ ಈ ಕಾರ್ಯಕ್ಕೆ ಸಮಾಜವಾದೀ ಪಕ್ಷವು ಪ್ರೋತ್ಸಾಹ ನೀಡುವುದು ಜನತೆಯ ಹಿತದ ದೃಷ್ಟಿಯಿಂದ ಯೋಗ್ಯವಲ್ಲವೆಂದು ಹೇಳಿದ್ದೆವು. ಆದರೆ ಈಗ ರೈಲ್ವೆ ನೌಕರರು ಮುಷ್ಕರ ಹೂಡುವ ನಿರ್ಧಾರವನ್ನು ಮಾಡಿರುತ್ತಾರೆ.

ಭಾರತ ದೇಶದ ಜನಜೀವನ ಮಟ್ಟ ದಿನದಿಂದ ದಿನಕ್ಕೆ ಕೆಡುತ್ತ ಬರುತ್ತಲಿದೆ. ಆರ್ಥಿಕ-ಆಹಾರದ ಪೆಟ್ಟನ್ನು ಸರಕಾರ ಬಹು ಕಠಿಣ ರೀತಿಯಲ್ಲಿ ಎದುರಿಸಿದ್ದನ್ನು ನಾವು ಲಕ್ಷಿಸಬೇಕು. ಅತಿಪ್ರಸರಣವನ್ನು ನಿಯಂತ್ರಿಸಲಾಗಿದ್ದರೂ ರೈಲ್ವೆ ನೌಕರರಿಗೆ ರೂ. 5ರಂತೆ ತುಟ್ಟಿಭತ್ತೆ ಹೆಚ್ಚಿಸಲಾಗಿತ್ತು. ಇದರಿಂದಾಗಿ ಸರಕಾರಕ್ಕೆ ಕೋಟಿಗಟ್ಟಲೆ ವೆಚ್ಚ ಬರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ರೈಲ್ವೆ ಕೆಲಸಗಾರರ ಸಂಬಳವಾಗಲೀ, ತುಟ್ಟಿಭತ್ತೆಯಾಗಲೀ, ಇತರ ನೌಕರರಿಗಿಂತ ಅಸಾದಾಯಕವಾಗಿದೆ ಹಾಗೆ ಮಂತ್ರಿಗಳು ರೈಲ್ವೆ ನೌಕರರೊಡನೆ ಮನಬಿಚ್ಚಿ ಮಾತನಾಡಿ ರೈಲ್ವೆಯು ರಾಷ್ಟ್ರೀಕರಣದಿಂದ ಬರಬಹುದಾದ ಲಾಭದಲ್ಲಿ ಸದ್ಯ ಏರಿಸಲಾದ 5ರೂಪಾಯಿಗಿಂತ ಹೆಚ್ಚು ಕೊಡಲು ಶಕ್ಯವಿಲ್ಲವೆಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಮೊನ್ನೆ ನಮ್ಮ ದೇಶದ ಮಹಾಮಂತ್ರಿಯವರು ಇದು ಮುಷ್ಕರ ಹೂಡುವ ಸಮಯವಲ್ಲ ಜನತೆಯು ಸೇವೆಯಲ್ಲಿ ನಿರತರಾಗುವ ಈ ಸುಸಂದರ್ಭದ ಸಮಯ ರೈಲ್ವೆಯ ಜನರು ಅನುಚಿತ ಘೋಷಣೆಯನ್ನು ವಹಿಸಬಾರದು. ಅವರ ಕುರಿತಾಗಿ ಸರಕಾರ ಆದಷ್ಟು ಸಹಕಾರ ನೀಡುವದೆಂದು ಆಶ್ವಾಸವಿತ್ತಿದ್ದಾರೆ. ಮುಷ್ಕರವನ್ನು ಮುಕ್ತಾಯಗೊಳಿಸುವ ಮಹಾಮಂತ್ರಿಗಳ ಕಳಕಳಿಯ ಬೇಡಿಕೆಯನ್ನು ಲಕ್ಷಿಸದೆ ರೈಲ್ವೆ ಕೆಲಸಗಾರರು ಮುಷ್ಕರದಲ್ಲೇ ಮನಸ್ಸು ಹಾಕಿದ್ದು ಖೇದಾವಹ ಸಂಗತಿ!

ಈಚೆಗೆ ಕಾಂಗ್ರೆಸ್ಸಿಗೆ ಇದಿರಾಗಿ ಪ್ರತಿಕೂಲ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ ಇತರ ಪಕ್ಷಗಳು ಜನತೆಗೆ ದ್ರೋಹವನ್ನು ಬಗೆಯುತ್ತಿವೆ. ರೈಲ್ವೆ ಕೆಲಸಗಾರರ ಹಿತಚಿಂತನೆಯ ಕಾರಣವನ್ನು ಹಿಡಿದುಕೊಂಡು ಮಿಲಿಯಗಟ್ಟಲೆ ಸಾರ್ವಜನಿಕರಿಗೆ ವಿವಂಚನೆಯನ್ನು ಮಾಡಿದಂತಾಗಿದೆ. ಆಹಾರದ ಕೊರತೆ-ಬಿಕ್ಕಟ್ಟು ಇನ್ನೂ ಪರಿಹಾರವಾಗದೆ ಇರುವಾಗ-ಪರದೇಶದಿಂದ ಬರಬಹುದಾದ ಆಹಾರ ದೇಶದ ಮೂಲೆಮೂಲೆಗೆ ಹಂಚಬೇಕಾಗಿರುವಾಗ ರೈಲ್ವೆ ನೌಕರರು ನಿರಾಧಾರರಿಗೆ ಸಹಕಾರ ನೀಡುವ ಬದಲು ಅನುಚಿತ ಮಾರ್ಗವನ್ನು ಕೈಗೊಂಡಿದ್ದಾರೆ. ಸಮಾಜವಾದೀ ಧುರೀಣ ಜಯಪ್ರಕಾಶ ನಾರಾಯಣರು "ರೈಲ್ವೆ ಜನರ ಜೀವನಮಟ್ಟ ಸುಧಾರಿಸುವಂತಾದರೆ ಉಳಿದೆಲ್ಲ ಜನತೆಯ ಮೇಲೂ ಅದರ ಪರಿಣಾಮವಾಗಬಲ್ಲುದು" ಎಂದಿದ್ದಾರೆ. ಉಳಿದೆಲ್ಲ ಜನರ ಹಸಿವೆಯ ಪ್ರಶ್ನೆಯ ಮುಂದೆ ರೈಲ್ವೆ ಜನರು ಮುಷ್ಕರ ಹಟಮಾಡಿದರೆ ಅದು ಸ್ವಾರ್ಥವಾದೀತೆ ವಿನಹ ಅದು ಪರೋಪಕಾರವೆಂದೂ ಆಗದು. ಶ್ರೀ ಜವಾಹರಲಾಲರ ಕೇಳಿಕೆಯನ್ನು ಕಡೆಗಣಿಸಿ ಮುಷ್ಕರಕ್ಕೆ ಮುಂದೊಡಿದ ಜಯಪ್ರಕಾಶರು "ಇದರಲ್ಲಿ ಸಮಾಜವಾದಿಗಳ ಚುನಾವಣಾ ಲಾಭವೇನೂ ಇರುವುದಿಲ್ಲ" ಎಂದು ಹೇಳಿರುವರು. ಈ ಮಾತಿನ ಸತ್ಯಾಂಶವನ್ನು ಬೇಗನೇ ನಿಶ್ಚಯಿಸಬಲ್ಲುದು

ಸರಕಾರಕ್ಕೆ ವಿರುದ್ಧವಾದ ಭಂಡಾಯವೆಬ್ಬಿಸುವ ಘೋಷಣೆಯನ್ನು ಎಲ್ಲ ಪಕ್ಷಗಳ ಧುರೀಣರೂ ಆಡುತ್ತ ಬಂದಿದ್ದಾರೆ. ಕಾಂಗ್ರೆಸಿಗರೇ ಆಗಿದ್ದ-ಈಗ ಪ್ರಜಾಪಾರ್ಟಿಯ ಧುರೀಣರಾಗಿರುವ ಆಚಾರ್ಯ ಕೃಪಲಾನಿಯವರು "ಈ ಸರಕಾರದ ಉರುಳದೆ ಸುಧಾರಣೆ ಸಾಧ್ಯವಿಲ್ಲ ಇದು ಹಿಟ್ಲರಿಸಂ ಧೋರಣೆ" ಎಂದಿದ್ದಾರೆ. ಇತ್ತಣಿಂದ ಕಮ್ಯೂನಿಸ್ಟ ಪಕ್ಷವೂ ರೈಲ್ವೆ ಮುಷ್ಕರದಂತಹದಕ್ಕೆ ಗಾಳಿಹಾಕುತ್ತಲಿದೆ. ಈ ಎಲ್ಲವುಗಳ ಸದ್ಯದ ಉದ್ದೇಶವೆಂದರೆ ಕಾಂಗ್ರೆಸನ್ನು ಟೀಕಿಸುವದು – ಜನತೆಯನ್ನೂ ಕೆಲಸಗಾರರನ್ನೂ ಸರಕಾರದ ವಿರುದ್ಧ ಭಂಡಾಯ ಹೇಳುವಂತೆ ಪ್ರೇರೇಪಿಸುವದೂ, ರಾಷ್ಟ್ರದಲ್ಲಿ ಅರಾಜಕತೆಯನ್ನುಂಟು ಮಾಡುವದೂ ಆಗಿರುತ್ತದೆ. ದೇಶದ ಜನತೆಯು ನಿಜವಾದ ಹಿತಾಕಾಂಕ್ಷಿ-ಸೇವಾದೃಷ್ಟಿ ಅವರಲ್ಲಿರುವುದಿಲ್ಲವೆಂಬುದು ಈಗ ಆ ಪಕ್ಷಗಳು ತೊಡಗಿರುವ ಪ್ರಕರಣಗಳಿಂದಲೂ, ಪಕ್ಷಗಳ ಧುರೀಣರು ಆಡುತ್ತಿರುವ ಮಾತಿನಿಂದಲೂ ಅರ್ಥವಾಗುತ್ತದೆ. ಮುಂದಾಲೋಚನೆಯಿಲ್ಲದ ಈ ಮುಂದಾಳ್ತನದಿಂದ ಜನವಂಚಕರಾಗದೆ ಅಂತಃಕರಣ ಪೂರ್ವಕವಾಗಿ ಜನತೆಯ ಹಿತಚಿಂತನೆಯನ್ನಿಟ್ಟುಕೊಂಡವರಾರೆಂಬುದನ್ನು ಒರೆಗಲ್ಲಿಗೆ ಹಚ್ಚಿನೋಡಲಿ!

ಮದ್ರಾಸು ಪ್ರಾಂತದ ಭೂಸುಧಾರಣೆ

1950ನೇ ಇಸವಿಯಲ್ಲಿ ಮದ್ರಾಸು ಸರಕಾರ ನೇಮಿಸಿರುವ ಭೂಸುಧಾರಣಾ ಸಮಿತಿಯು ತನ್ನ ವರದಿಯನ್ನೀಗ ಒಪ್ಪಿಸಿರುತ್ತದೆ. ಒಂಭತ್ತು ಜನ ತಜ್ಞರಿಂದ ಕೂಡಿದ ಈ ಸಮಿತಿಯ ವರದಿಯು ಆಶಾದಾಯಕವಾಗಿರುತ್ತದೆ ಮುಖ್ಯವಾಗಿ ಹೊಲದಲ್ಲಿ ದುಡಿಯುವ ರೈತನಿಗೆ ವಿಶೇಷ ಸವಲತ್ತನ್ನು ಒದಗಿಸಿಕೊಡಲಾಗಿದೆ. ಸಮಿತಿಯ ಆದೇಶದಂತೆ ಹೊಲದೊಡೆಯನು 250ರೂ. ಕಂದಾಯ ಕೊಡುವಷ್ಟನ್ನೇ ಸ್ವಂತಕ್ಕಾಗಿ ಅಂದರೆ ಸಾಗುವಳಿ ಮಾಡುವದಕ್ಕೆ ಅರ್ಹನಾಗಿರುತ್ತಾನೆ. ರೈತನ ಪರಿಮಿತಿಯೂ ಅಷ್ಟೇ ಆಗಿರುತ್ತದೆ. 5ವರ್ಷದ ಕರಾರಿನ ಮೇಲೆ ಹೊಲದೊಡೆಯನು ತನ್ನ ಭೂಮಿಯನ್ನು ರೈತನ ಸ್ವಾಧೀನಕ್ಕೆ ಬಿಟ್ಟುಕೊಡಬೇಕು. ನೀರಾವರಿ ಸೌಕರ್ಯ-ಫಲವತ್ತಾದ ಹೊಲದ ಯೋಗ್ಯತೆ ಇದರಿಂದ ಬರಬಹುದಾದ ಲಾಭವನ್ನು ಹೊಂದಿಕೊಂಡು ರೈತನು ಒಡೆಯನಿಗೆ ಪಾಲು ಅಥವಾ ಗೇಣಿಯನ್ನು ನಿಶ್ಚಯಿಸಲಾಗಿದೆ. ಮೊದಲನೆ ತರಗತಿಯ ಹೊಲದಿಂದ ಬರಬಹುದಾದ ಲಾಭದಲ್ಲಿ ಒಡೆಯನಿಗೆ ನೂರರಲ್ಲಿ 45ಪಾಲು, ರೈತನಿಗೆ 55 ಪಾಲು. ಎರಡನೇ ತರಗತಿಯ ಹೊಲಗಳಲ್ಲಿ ಉತ್ಪನ್ನವಾಗುವದರಲ್ಲಿ ಒಡೆಯನಿಗೆ 40, ರೈತನಿಗೆ 60. ಈ ಪಾಲು ಹಂಚೋಣವು ಮೊದಲಾಗಿ ನಿರ್ದೇಶಿಸುವಂತೆ ನಡೆಯದೆ, ಬೆಳೆಯಲ್ಲಿ ಬರಬಹುದಾದ ಒಟ್ಟು ಬೆಳೆಯನ್ನೇ ಹೊಂದಿಕೊಂಡಿದೆ. ಬೆಳೆ ಅನಾವೃಷ್ಟಿ ನೆರೆಹಾವಳಿ-ಇವೇ ಮೊದಲಾದುವದರಿಂದ ಕೆಟ್ಟರೆ ಉತ್ಪನ್ನವಾದುದರ ಮೇಲೆಯೇ ಅದರ ಪಾಲು ಹಂಚೋಣವಾಗುತ್ತದೆ. ಹೊಲಕ್ಕೆ ಬೇಕಾಗಬಹುದಾದ ಗೊಬ್ಬರ, ಬೀಜ, ಕೂಲಿ, ಎತ್ತು ಮುಂತಾದವುಗಳನ್ನು ರೈತನೇ ನೋಡಿಕೊಳ್ಳಬೇಕು. ಕಂದಾಯ, ಇತರ ಫಂಡುಗಳ ವೆಚ್ಚವನ್ನು ಒಡೆಯನೇ ನೋಡಿಕೊಳ್ಳಬೇಕು. ಹೊಲದ ಸುಧಾರಣೆಯನ್ನು ಮಾಡುವಂತಹದು ಒಡೆಯನ ಕೆಲಸ. ಒಂದು ವೇಳೆ ಅದನ್ನು ಅವನು ಗಮನಿಸದೆ ಹೋದರೆ ರೈತನು ಅವನಿಗೆ ಬರಹ ಮೂಲಕ ತಿಳಿಸಿ ತಾನು ಸುಧಾರಣೆ ನಡೆಸಿ ಆತನಿಂದ ಹಣವನ್ನು ಪಡೆಯಬಹುದಾಗಿದೆ.

ಸರಕಾರದವರು ಬರಬಂದ ಪ್ರಯುಕ್ತ ಕಂದಾಯವನ್ನು ತಗ್ಗಿಸಿದರೂ-ಇನ್ನಿತರ ಕಾರಣಗಳ ಮೇಲೆ ಹೆಚ್ಚಿಸುವದರಿಂದಲೂ ಈ ದಾವಣಿಯೂ ಒಡೆಯನಿಗೆ

(೧ನೇ ಪುಟದಿಂದ ಮುಂದರಿಸಿದ್ದು)

ರುವುದು ನ್ಯಾಯವಾಗಲಾರದು. ರಶಿಯಾದವರ ಎಲ್ಲ ರಾಷ್ಟ್ರಗಳಲ್ಲೂ ಹಬ್ಬುತ್ತಿರುವ ಪಕ್ಕ ಸಾಮ್ರಾಜ್ಯ ಶಾಹಿಗಳ ಭೇದಭಾವ ನೀತಿಯೇ, ರಾಜಕೀಯ—ಆರ್ಥಿಕ ರಂಗದಲ್ಲಿ ತಾವೇ ಮೇಲಾಟ ನಡೆಸಬೇಕೆಂಬ ಇವರ ಹಂಬಲವು ಇತರ ರಾಷ್ಟ್ರಗಳು ಸಹಿಸುತ್ತಿಲ್ಲ ಕೊರಿಯಾ ಪರ್ಸಿಯಾ ಪ್ರಕರಣಗಳೇ ಜಗತ್ತಿನ ವಕ್ರದೃಷ್ಟಿ, ಆಂಗ್ಲೋ ಅಮೇರಿಕನರ ಮೇಲೆ ಬಿದ್ದಿರುವದನ್ನು ವ್ಯಕ್ತಪಡಿಸುತ್ತವೆ.

ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಈ ವಿಷಜ್ವಾಲೆ ಒಂದಲ್ಲ ಒಂದು ದಿನ ಸಿಡಿಯದೆ ಸಾಧ್ಯವಿಲ್ಲ ಹಾಗೆ ಸಿಡಿಯದಿದ್ದರೆ ಆಂಗ್ಲೋ ಅಮೇರಿಕನರ ಹೃದಯ ಪರಿವರ್ತನೆಯಾಗದು. ಸಂಧಾನದ ಮಾತು ನಡೆವಾಗಲೂ ಅಧ್ಯಕ್ಷ ಟ್ರೂಮನ್ "ರಶಿಯ ಕಮ್ಯೂನಿಸ್ಟ ಚೀನ ಈಗಲಾದರೂ ತಮ್ಮ ಹಟವನ್ನು ಬಿಟ್ಟು ಸಂಧಿಯಾಚಿಸಿದ್ದು ಅವರ ಹಿತಕ್ಕಾಗಿಯೇ" ಎಂದು ಕಣಕಿದ್ದಾರೆ. ಅಂತೆಯೇ ಅಟಂಬಾಂಬಿನ ಹೆಚ್ಚಳವನ್ನೂ ಅವರು ಬಯಸಿದ್ದಾರೆ. ಇಂತಹ ಕಪಟನೀತಿಯ ಮುಂದೆ ಮೂರನೆಯ ಯುದ್ಧವಾಗದೆನ್ನುವ ಮಾತು ಕನಸೇ ಸರಿ ಆಗಬಾರದೆನ್ನುವ ತತ್ವವನ್ನು ನಾವು ಹೇಳಿಯೇವು; ಹಾಗಾಗದಂತೆ ತಡೆಗಟ್ಟಬಲ್ಲ ಶಕ್ತಿಯಾಗಲೀ ಬೌದ್ಧಿಕೋಪಾಯವಾಗಲೀ ನಮ್ಮ ಕೈಯಲ್ಲಿಲ್ಲ.

ಸತ್ತವ್ರ ಮಾತೆತ್ರೋದಿಲ್ಲ ಖರೆ,—

ಆದ್ರೆ ಅವ್ರ ಹೆಂಡ್ತಿ ಮಕ್ಳು?

"ಯಜಮಾನ್ರು ಇನ್ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತ್ರ ಉಳಿದವ್ರ ಸಂಕಷ್ಟ ತಿಳಿಸ್ತೆ.

ಪ್ರತೀ ಗೃಹಸ್ಥ್ರು, ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ.

ದಿ ಕೆನರಾ ಮ್ಯೂಚುವಲ್

ಶ್ರೀ

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ   ಸ್ಥಾಪನೆ: ೧೯೩೫

The Canara Mutual Assurance Co, Ltd.

H. O. UDIPI (SOUTH INDIA)   ESTD: 1935.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಮಾತ್ರವಲ್ಲದೆ ರೈತನಿಗೂ ಅನ್ವಯಿಸುತ್ತದೆ. 5 ವರ್ಷದ ಕರಾರು ಮುಗಿದ ಮೇಲೂ ರೈತನು ಹೊಲದ ಕೆಲಸವನ್ನು ಬಯಸುವವನಾದ ಅವನಿಗೆ ತಿರುಗಿ ಕೊಡಬಹುದಾಗಿದೆ. ಕರಾರಿಗೆ ಒಪ್ಪಿ ನಿರ್ದಿಷ್ಟ ಸಮಯಕ್ಕಿಂತ ಒಂದು ತಿಂಗಳೊಳಗಾಗಿ ಗೇಣಿ ಇಲ್ಲವೆ ಪಾಲನ್ನು ಕೊಡಲು ತಪ್ಪಿದವೂ, ಭೂಮಿಯ ಆರೈಕೆಯನ್ನು ನೋಡದೆ ಅಲಕ್ಷಿಸಿ ಅದು ನಿಃಸತ್ವವಾಗುವ ಸಂದರ್ಭವಿದ್ದರೆ ಸ್ವಾಧೀನಪಡಿಸಿಕೊಳ್ಳುವ ಅರ್ಜಿಯನ್ನು ಒಡೆಯನು ಮಾಡಬಹುದಾಗಿದೆ. ಒಡೆಯ ರೈತರೊಳಗೆ ಬರಬಹುದಾದ ತಕರಾರುಗಳನ್ನು ವಿಚಾರಿಸಲು ಒಕ್ಕಲುತನ ನ್ಯಾಯಮಂಡಳವಿದೆ.

ಒಟ್ಟಿಗೆ ಈ ವರದಿಯನ್ನು ಅವಲೋಕಿಸಿದರೆ ರೈತನ ದುಡಿಮೆಗೆ ಯೋಗ್ಯವಾದ ಫಲ-ಹಕ್ಕುಬಾಧ್ಯತೆಗಳು ಕಂಡುಬರುತ್ತವೆ. ಆದರೆ ಈಎಲ್ಲಸುಧಾರಣೆಗೆ ರೈತ–ಮತ್ತು ಒಡೆಯರು ಪರಸ್ಪರ ತಮ್ಮೊಳಗೆ ವಿಶ್ವಾಸ. ತಳಹದಿಯ ಮೇಲೆ ವರ್ತಿಸುವದರಿಂದ ಮಾತ್ರ ಶಕ್ತಿ ಬಂದೀತು. ಹೊಲವನ್ನು ಸುಧಾರಣೆ ಮಾಡುವ ವಿಚಾರ-ಉತ್ಪನ್ನದ ಬೆಳೆಯಲ್ಲಿ ಪಾಲು ಹಂಚೋಣ ಇವೆಲ್ಲ ಅವರವರೊಳಗೆ ಮೈತ್ರಿ ಇಲ್ಲದೆ ಹೋದರೆ ಸುಸೂತ್ರವಾಗಿ ಜರಗದು ತಕರಾರು ಇದ್ದದ್ದೇ! ಮಲಬಾರದಲ್ಲೂ ದ.ಕನ್ನಡದ ಕೆಲಭಾಗದಲ್ಲೂ ಈ ಕಾಯಿದೆ ಅನ್ವಯಿಸುವುದಿಲ್ಲ. ಭೂಸುಧಾರಣಾ ಸಮಿತಿಯ ವರದಿಯು ನೂತನವೂ, ಪರಿಪೂರ್ಣವೂ ಆಗಿರುತ್ತದೆ. ಕಾರ್ಯರೂಪದಲ್ಲಿಳಿದರೆ ನಿಜವಾಗಿಯೂ ಭೂಸುಧಾರಣೆ ಆಗುವದರಲ್ಲಿ ಸಂದೇಹವಿಲ್ಲ.

ಸಾಮ್ಯವಾದೀ ಪಕ್ಷದ ಚುನಾವಣಾ ಘೋಷಣೆ

ಸಾಮ್ಯವಾದೀ ಪಕ್ಷ ಅಧಿಕಾರಕ್ಕೆ ಬಂದರೆ ತಾನು ಮಾಡಬಹುದಾದ ದೇಶ ಸುಧಾರಣಾ ಘೋಷಣೆಯನ್ನು ಈಗ ಪ್ರಕಟಿಸಿರುತ್ತದೆ. ಈ ಘೋಷಣೆಯಲ್ಲಿ ಮುಖ್ಯವಾಗಿ, ಜಮೀನ್ದಾರೀ ನಿರ್ಮೂಲನ, ಹೆಚ್ಚುಕಡಿಮೆ ಎಲ್ಲ ಉದ್ಯಮ.ಗಳ ರಾಷ್ಟ್ರೀಕರಣ-ಎಲ್ಲರಿಗೂ ಉದ್ಯೋಗ–ಮುಂತಾದ ಘನಘನವಾದ ಭರವಸೆಯನ್ನು ತೋರಿಸಲಾಗಿದೆ. ಇಲ್ಲಿಯೆ ಉತ್ಪಾದಿಸಲ್ಪಟ್ಟ ವಸ್ತುಗಳನ್ನು ನಿರ್ಯಾತಗೊಳಿಸದೆ ಇಲ್ಲಿಯೆ ಹಂಚುವದಾಗಿಯೂ ಸಾರಲಾಗಿದೆ. ಜೀವನಾವಶ್ಯಕವಾದ ಹಲವು ವಸ್ತುಗಳ ಮೇಲೆ ನಿಯಂತ್ರಣವನ್ನು ಹೇರಲಾಗುತ್ತದಂತೆ. ಜಮೀನ್ದಾರೀ ನಿರ್ಮೂಲನದಲ್ಲಿ ಹೊಲದೊಡೆಯನಿಗೆ ಪರಿಹಾರ ಧನವನ್ನು ಕೊಡುವದನ್ನು ಸಾಮ್ಯವಾದಿಗಳು ಒಪ್ಪುವುದಿಲ್ಲ. ಭಾಷಾವಾರು ಪ್ರಾಂತರಚನೆ, ಮುಂತಾದ ಆಶಾಗೋಪುರಗಳೂ ಇವೆ.

ಉದಾತ್ತವೂ, ಅತ್ಯಂತ ಉಪಯುಕ್ತವೂ ಆದ ಕಾಂಗ್ರೆಸ್ಸಿನ ಉದ್ದೇಶ್ಯಗಳಿಗಿಂತ ಭಿನ್ನವಾದ ಅಥವಾ ಅದಕ್ಕಿಂತ ಮಿಗಿಲಾದ ವಿಚಾರ ಈ ಘೋಷಣೆಯಲ್ಲಿರುವುದಿಲ್ಲ ನೀರಾವರಿ ಯೋಜನೆಯಂತಹ ಯೋಜನೆ- ಇನ್ನಿತರ ಮಹತ್ತರ ಯೋಜನೆಗಳೂ ಸರಕಾರದ್ದಿರುತ್ತದೆ. ಕೊಲಂಬೊ ಯೋಜನೆಯಂತೆ ಭಾರತ ಸರಕಾರವು ಕೈಗೊಳ್ಳುವ ಪಂಚವಾರ್ಷಿಕ ಯೋಜನೆಯು ಈಗಾಗಲೇ ಕಾರ್ಯರೂಪದಲ್ಲಿ ಕಂಡುಬರುವ ಲಕ್ಷಣ ತೋರುತ್ತಿವೆ. ಸಮಾಜವಾದಿಗಳು ಮಾಡಬೇಕಾದ ರಾಷ್ಟ್ರೀಕರಣ–ಹಾಗೂ ಇತರ ಯೋಜನೆಗಳು ಕಾರ್ಯರೂಪದಲ್ಲಿ ಕಾಂಗ್ರೆಸ್ ಸರಕಾರದ ದೃಷ್ಟಿಪಥದಲ್ಲಿದ್ದರೂ ಅದು ನೆರವೇರದೆ ಉಳಿಯಲು ಕಾರಣ ಅಸಡ್ಡೆ ಆಲಸಿಗತನವಲ್ಲ; ಆರ್ಥಿಕ ಕೊರತೆಯೇ ಆಗಿರುತ್ತದೆ. ಸಮಾಜವಾದಿಗಳ ಯೋಜನೆಗಳು ನೆನಸಾಗಬೇಕಾದರೆ ದುಡ್ಡೇನೂ ಆಕಾಶದಿಂದ ಬೀಳುವುದಿಲ್ಲ. ಭಾರತ ಸರಕಾರ ಕೈಗೊಂಡಿರುವ ಯೋಜನೆಗಳು 5 ವರ್ಷಗಳಲ್ಲಿ ಸಮಾಜವಾದಿಗಳ ಕಲ್ಪನಾರಾಜ್ಯದಲ್ಲಿರುವಂತಹ ಘೋಷಣೆಗಿಂತಲೂ ಫಲಪ್ರದವಾದಂತವುಗಳು. ಇದು ಕೇವಲ ಚುನಾವಣಾ ಘೋಷಣೆ ಹಾಗೂ ಪ್ರಚಾರ. ಇದರಿಂದ ಆಶೆಪಡುವದಾಗಲೀ ನಿರಾಶೆಗೊಳ್ಳುವದಾಗಲೀ ಏನೂ ಇರುವುದಿಲ್ಲ. 12000 ಸಾವಿರ ಶಬ್ದಗಳಿಂದ ಸುದೀರ್ಘವಾಗಿ ತಯಾರಿಸಲ್ಪಟ್ಟ ಘೋಷಣೆ ಮಾಮೂಲು ಶಂಖನಾದವೇ ಹೊರತು ಹೊಸತೇನೂ ಇಲ್ಲ!

ಲೋಕಾಂತ

ಕೊರಿಯ ಸಂಧಾನ

ಕೊರಿಯಾ ಯುದ್ಧ ಮುಕ್ತಾಯದ ಮಾತುಕತೆಗಳು 10ನೆ ತಾರೀಕಿನಿಂದ ಯುಕ್ತರಾಷ್ಟ್ರ ಸಂಘದ ಹಾಗೂ ಕಮ್ಯೂನಿಸ್ಟ ಸದಸ್ಯರಿಂದ ಕೆಸಾಂಗದಲ್ಲಿ ನಡೆಯುತ್ತಲಿವೆ. ಕಮ್ಯೂನಿಸ್ಟ ಚೀನದ ಪ್ರತಿನಿಧಿಗಳೊಡನೆ ಉತ್ತರ ಕೊರಿಯದ ಪ್ರತಿನಿಧಿಯೂ, ಯು. ರಾ. ಸಂಘದ ಪ್ರತಿನಿಧಿಗಳೊಡನೆ ದ. ಕೊರಿಯದ ಪ್ರತಿನಿಧಿಯೂ ಬಂದಿರುವರು. ಕೊರಿಯ ಯುದ್ಧ ಮುಕ್ತಾಯದ ಪರಿಹಾರಮಾರ್ಗವನ್ನು ಕಂಡು ಹಿಡಿಯಲು ಉಭಯ ಪಕ್ಷದವರೂ ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸುತ್ತಿದ್ದಾರೆಂದು ತಿಳಿದು ಬರುತ್ತದೆ.

ಯು. ರಾ. ಸಂಘಕ್ಕೆ ಪರ್ಶಿಯದ ದೂರು?

ಪರ್ಶಿಯದ ಎಣ್ಣೆ ತಂಟೆಯ ಕುರಿತು ಅಂತರರಾಷ್ಟ್ರೀಯ ನ್ಯಾಯಾಲಯವು ನೀಡಿರುವ ತೀರ್ಪಿನಿಂದ ಯಾವ ಪರಿಣಾಮವೂ ಆದಂತಿಲ್ಲ ಪರ್ಶಿಯವು ಅಂ. ನ್ಯಾಯಾಲಯಕ್ಕೆ ಅದನ್ನು ವಿಚಾರಿಸುವ ಹಕ್ಕಿರುವುದಿಲ್ಲ ಎಂದು ಸಾಧಿಸಿದ್ದಕ್ಕೆ ಅವಲಂಬಿಸಿ ಈಗಲೂ ಅದು ಕೊಟ್ಟ ತೀರ್ಪಿಗೆ ಮನ್ನಣೆಯನ್ನು ಕೊಟ್ಟಿರುವುದಿಲ್ಲ. ಸಂ. ರಾ. ಸಂಘಕ್ಕೆ ತನ್ನ ದೂರನ್ನು ಒಯ್ಯುವ ಉದ್ದೇಶದಿಂದ ಮುಸ್ಲಿಂ ರಾಷ್ಟ್ರಗಳ ಬಲವನ್ನು ಗಳಿಸುವ ಯತ್ನ ನಡೆಯುತ್ತಲಿದೆ. ಅಂತಯೆ ಇಸ್ರಯೇಲಕ್ಕೆ ಇತ್ತಿರುವ ಮನ್ನಣೆಯನ್ನು ಹಿಂದೆ ತೆಗೆದುಕೊಳ್ಳಲಾಗುತ್ತದಂತೆ. ಎಣ್ಣೆಯ ಗನಿಯಲ್ಲಿ ಉತ್ಪಾದನಾ ಕಾರ್ಯ ಕುಂಠಿತವಾಗಿದ್ದು ಇನ್ನು ಸ್ವಲ್ಪವೇ ಕಾಲದಲ್ಲಿ ಅದನ್ನು ಸಂಪೂರ್ಣವಾಗಿ ನಿಲ್ಲಿಸುವ ಪ್ರಸಂಗ ಬರುವದು. ಆದ ಎಣ್ಣೆಯು ನಿರ್ಯಾತವಾಗದಿರುವದರಿಂದ ಹೆಚ್ಚಿನ ಉತ್ಪಾದನೆ ಸಾಧ್ಯವಿಲ್ಲ. ಪರ್ಶಿಯದ ಹಟಮಾರಿತನದಿಂದಾಗಿ ಬ್ರಿಟನವೂ ಸಂ. ರಾ. ಸಂಘಕ್ಕೆ ತನ್ನ ದೂರನ್ನು ಒಯ್ಯುವದಾಗಿ ತಿಳಿಯುತ್ತದೆ.

ಕಾಶ್ಮೀರದಲ್ಲಿ ಡಾ। ಗ್ರಾಹ್ಯಾಮರು

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರಾಹ್ಯಾಮರು ದಿಲ್ಲಿಯಲ್ಲಿ ಜವಾಹರಲಾಲರೊಡನೆ ಕಾಶ್ಮೀರ ಸಮಸ್ಯೆಯ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಈಗ ಕಾಶ್ಮೀರಕ್ಕೆ ಬಂದಿದ್ದು ಅಲ್ಲಿಯ ಮುಖ್ಯ ಮಿಲಿಟರಿ ಅಧಿಕಾರಿಗಳೊಡನೆ ವಿಚಾರ ವಿನಿಮಯ ಮಾಡುತ್ತಲಿರುವರು. 1919 ಜನೆವರಿ ತಿಂಗಳಿಂದ ಪಾಕಿಸ್ತಾನಿಗಳು ಭಾರತದ ಗಡಿಯನ್ನು ದಾಟಿ ಮಾಡಿದ 529 ಧಾಳಿಗಳ ಪ್ರಕರಣವನ್ನು ಗ್ರಾಹ್ಯಾಮರಿಗೆ ತಿಳಿಸಲಾಯಿತು. ಹೆಚ್ಚು ಹೆಚ್ಚಿಗೆ ಪಾಕಿಸ್ತಾನ ಸೈನಿಕರು ಸಂ. ರಾ. ಸಂಘದ ಯುದ್ಧವಿರಾಮ ನಿಯಮೋಲ್ಲಂಘನೆ ಮಾಡುತ್ತಿರುವದನ್ನು ಅವರ ಗಮನಕ್ಕೆ ತರಲಾಗಿದೆ. ಡಾ। ಗ್ರಾಹ್ಯಾಮರು ತನ್ನ ಪರಿವಾರದ ಹಾಗೂ ಅಲ್ಲಿನ ಅಧಿಕಾರೀ ವರ್ಗಗಳೊಡನೆ ಕಾಶ್ಮೀರದ ಸಮಸ್ಯಾಕಾರಕ ಜಾಗಗಳನ್ನು ಪರಿಶೀಲಿಸುತ್ತಿರುವರು.

ತೆಹರಾನದಲ್ಲಿ ಮೌಲಾನಾ ಆಜಾದರಿಗೆ ಸ್ವಾಗತ

ಭಾರತ ಸರಕಾರದ ವಿದ್ಯಾಸಚಿವ ಆಜಾದರು ತೆಹರಾನಕ್ಕೆ ಬಂದಿದ್ದು ತೆಹರಾನದ ವಿದ್ಯಾಸಚಿವರೇ ಆದಿಯಾಗುಳ್ಳ ಉಚ್ಚ ಅಧಿಕಾರಿಗಳಿಂದ ಸ್ವಾಗತಿಸಲ್ಪಟ್ಟರು. ನಾಲ್ಕೈದು ದಿನಗಳಲ್ಲಿ ಅವರು ಅಲ್ಲಿಯೆ ನಿಂತು ಹಲವು ಸಮಾರಂಭಗಳಲ್ಲಿ ಭಾಗವಹಿಸಲಿರುವರು. ತೆಹರಾನ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ ಪದವಿಯನ್ನು ಅವರಿಗೆ ಸಮರ್ಪಿಸಲಿರುವದು.

ಬರ್ಮಾ-ಭಾರತ ಒಪ್ಪಂದ

ಬರ್ಮಾ-ಭಾರತಗಳೊಡನೆ ಐದು ವರ್ಷಗಳ ಸ್ನೇಹ ಒಪ್ಪಂದವಾಗಿರುತ್ತದೆ. ಉಭಯ ರಾಷ್ಟ್ರಗಳೊಳಗಣ ಸ್ನೇಹ ಸಂಬಂಧವನ್ನು ಬಲಗೊಳಿಸಿ ಉಭಯತರಲ್ಲೂ ಶಾಂತಿಗಳನ್ನು ಕಾಪಾಡಿಕೊಂಡಿರುವುದೇ ಈ ಒಪ್ಪಂದದ ಉದ್ದೇಶವಾಗಿರುವದೆಂದು ತಿಳಿಯುತ್ತದೆ ಬರ್ಮಾಕ್ಕೆ ಇದು ಎರಡನೆಯ, ಸ್ನೇಹಸಂಬಂಧ ಒಪ್ಪಂದವಾಗಿದೆ. ಮೊದಲನೆಯದಾಗಿ ಇಂಡೋನೇಶಿಯಾದೊಡನೆ ಅದು ಇದೇ ರೀತಿಯ ಒಪ್ಪಂದವನ್ನು ಮಾಡಿಕೊಂಡಿರುತ್ತದೆ.

ಭಾರತಕ್ಕೆ ಅಮೆರಿಕಾ ತಜ್ಞರ ನೆರವು

ಅಧ್ಯಕ್ಷ ಟ್ರೂಮನ್ನರ ಚತುರ್ಥಾಂಶ ಯೋಜನೆಯಂತೆ ಭಾರತಕ್ಕೆ ಒಂಬತ್ತು ಜನ ತಾಂತ್ರಿಕ ತಜ್ಞರ ನೆರವು ದೊರಕಲಿದ್ದು ಅವರಲ್ಲಿ ಎಂಟು ಜನರು ಈಗಾಗಲೇ ಬಂದಿರುವರು. ಭಾರತವು ಇನ್ನು ಏಳು ಜನ ತಜ್ಞರನ್ನು ಅಪೇಕ್ಷಿಸುತ್ತಲಿದೆ ಇದೇ ತತ್ವದಂತೆ ಭಾರತಕ್ಕೆ ಬೇರೆ ಬೇರೆ ತಾಂತ್ರಿಕ ಶಿಕ್ಷಣ ಪಡೆಯಲು 15 ಜನರನ್ನು ಅಮೆರಿಕೆಗೆ ಕಳುಹಿಸುವ ಸೌಕರ್ಯವಿರುತ್ತದೆ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಚುಚ್ಚಿಗೆ, ಧುಮ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹಳು ಕಡ್ಡಿ
ಮದ್ದು
ಸಹುಕಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

UNIVERSAL DRUG HOUSE LIMITED,
Coondapoor

NOTICE.

Is hereby given from a Director of the Company, Mr. N S Parameshwaraiah, that he intends to propose Mr. P. Gopalkrishna Rao, B.Sc., A. C. A. Chartered Accountant, Mangalore, as the Auditor of the Company at the ensuing General Body Meeting of the Company.

H. Subba Rao,
Managing Director.

Coondapoor,
21-6-1951.

ಅತ್ಯಂತ ಜನಪ್ರಿಯವಾದ

ನೇಶನಲ್
ಬ್ರಾಹ್ಮಿ ತೈಲ

ಕೇಶ ಮತ್ತು ಮೆದುಳಿಗೆ ಪೋಷಕ ಮತ್ತು ಶಕ್ತಿದಾಯಕವಾದುದು.

ಎಂ.ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಶನ್,
ಫೋರ್ಟ್, ಬೊಂಬಾಯಿ.



ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೨-೭-'೫೧

ನೆಹ್ರೂ ನಿವೇದನೆ

ನಾಲ್ಕು ವರ್ಷಗಳ ಆಡಳಿತ ಕಾಲದಲ್ಲಿ ಕಾಂಗ್ರೆಸ್ ಸಾಧಿಸಿದ ಪ್ರಗತಿಯನ್ನೂ ಪರಾಜಯ ಸಂದರ್ಭಗಳನ್ನೂ ನಾಳಿನ ದಿನಗಳಲ್ಲಿ ಅದು ಮಾಡಲಿರುವ ಘನವಾದ ಉದ್ದೇಶಗಳನ್ನೂ ಪ್ರಧಾನ ಮಂತ್ರಿ ಜವಾಹರಲಾಲ ನೆಹ್ರೂರವರು ಸವಿಸ್ತಾರವಾದ ಪ್ರಕಟನೆಯ ಮೂಲಕ ಸ್ಪಷ್ಟೀಕರಿಸಿದ್ದಾರೆ. ಕಳ್ಳಸಂತೆ, ಲಂಚಗುಳಿತನಗಳನ್ನು ನಿರ್ಮೂಲಗೊಳಿಸುವಲ್ಲಿ ಕಾಂಗ್ರೆಸು ಜಯಶೀಲವಾಗಿಲ್ಲವೆಂಬುದನ್ನು ನೆಹ್ರೂರವರು ಒಪ್ಪಿಕೊಂಡಿರುತ್ತಾರೆ. ವಸ್ತುಸ್ಥಿತಿಯ ಪರಿಜ್ಞಾನವಿಲ್ಲದೆ ಸರಕಾರದ ಮೇಲೆ ಆರೋಪ ಹೊರಿಸುವ ಕುರಿತು ನೆಹ್ರೂ ವಿಷಾದ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸಿನ ಆಡಳಿತ ಕಾಲದಲ್ಲಿ ಸಾವಿಸಲಾಗದೆ ಉಳಿದಿರುವ ಹಲವು ಸಮಸ್ಯೆಗಳಿಗೆ ಆರ್ಥಿಕ-ಅತಿಪ್ರಸರಣ-ಅನಿರೀಕ್ಷಿತ ಘಟನೆಗಳನ್ನು ಕಾರಣಕೊಡುವದಾದರೂ ಆಡಳಿತದಲ್ಲಿ ಕಂಡುಬರುವ ಲೋಪದೋಷಗಳ ಮೇಲೆ ವಿಮರ್ಶೆಮಾಡುವದಾದರೆ ಮೊದಲಿನ ಎರಡು ಕಾರಣಕ್ಕಿಂತ ಲಕ್ಷ ಕರ್ತವ್ಯ ನಿಷ್ಠೆಯ ಅಭಾವವೇ ಹೆಚ್ಚೆಂದು ತೋರುತ್ತದೆ. ಸ್ವಾತಂತ್ರ್ಯಸಿದ್ಧಿಯ ಕಾಲದಲ್ಲಿದ್ದ ಅಚಲವಾದ ಶ್ರದ್ಧೆಯಾಗಲೀ—ದೇಶಸೇವಾದೃಷ್ಟಿಯಾಗಲೀ, ನಿಃಸ್ವಾರ್ಥ ಮನೋವೃತ್ತಿಯಾಗಲೀ— ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ಸಿಗರಲ್ಲಿ ಕಂಡು ಬಾರದಿರುವುದೇ ಜನತೆಯ ಅತೃಪ್ತಿಗೆ ಮುಖ್ಯಕಾರಣವಾಗಿದೆ. ಕೇಂದ್ರ ಬಲಿಷ್ಠವಾಗಿದ್ದು ಪ್ರಾಂತೀಯ ಸರಕಾರಗಳು ಭಿನ್ನಧೋರಣೆ ತಳೆದರೂ ಪ್ರಾಂತೀಯ ಸರಕಾರ ಸಮರ್ಥವಾಗಿದ್ದು ಸಾಮಾನ್ಯ ನೌಕರರು ಪ್ರಾಮಾಣಿಕತನದಿಂದ ದುಡಿಯುವ ಜನತೆಗೆ ವಂಚನೆ ಮಾಡಿದರೂ ಆ ಪಾಪಕ್ಕೆ ಸರಕಾರವೇ ಹೊಣೆಯಾಗುತ್ತದೆ. ಕಾಂಗ್ರೆಸ್ಸಿನಲ್ಲಿಯ ಒಡಕಿಗೂ—ಬೇರೆ ಪಕ್ಷಗಳ ನಿರ್ಮಾಣಕ್ಕೂ ಮುಖ್ಯ ಕಾರಣಗಳೆಂದರೆ: 1. ಕಳ್ಳಸಂತೆ, ಲಂಚಗುಳಿತನ ಅವ್ಯಾಹತ ನಡೆದದ್ದು 2. ಸರಕಾರದ ಆದೇಶ ಇಲ್ಲವೆ ಯೋಜನೆಗಳು ಅಧಿಕಾರಿಗಳ ಕೈಯಲ್ಲಿ ಯಥಾಯೋಗ್ಯವಾಗಿ ಕಾರ್ಯರೂಪದಲ್ಲಿ ಬರದೆ ಉಳಿದಿರುವಂಥದ್ದು. 3. ಹಣದ ವರ್ಚಸ್ಸಿನಿಂದಲೋ ಇನ್ನಿತರ ವೈಯಕ್ತಿಕ ಬಲವಿನಿಂದಲೋ ಕೈವಾಡವನ್ನು ನಡೆಸಿ ಸ್ವಾರ್ಥವನ್ನು ಸಾಧಿಸಿರುವಂಥಾದ್ದು. 4. ಈ ಸರಕಾರ ದುಡ್ಡುಳ್ಳವರ ಹಿತಚಿಂತನೆ ನೋಡುವದಕ್ಕೆ ಮಾತ್ರವಿರುತ್ತದೆನ್ನುವ ಕಲ್ಪನೆ ಜನರಲ್ಲಿ ಮೂಡುವ ವರೆಗೆ ಸರಕಾರೀ ನೌಕರರು ಪ್ರಾಮಾಣಿಕತನದಿಂದ ದುಡಿಯದೆ ನಿಷ್ಕಾಳಜಿಯಾಗಿ ನಡೆದುಕೊಂಡದ್ದು. ಈ ನಾಲ್ಕು ಪ್ರಬಲ ಕಾರಣಗಳೆ ಕಾಂಗ್ರೆಸ್ಸಿನ ನಾಲ್ಕು ವರ್ಷದ ಜೀವನದಲ್ಲಿ ಕಾಂಗ್ರೆಸ್ಸಿನ ಧವಳ ಕೀರ್ತಿಗೆ ಕಳಂಕವನ್ನು ತರಲು ಕಾರಣವಾದವು. ಉಚ್ಚಾದರ್ಶವನ್ನಿಟ್ಟುಕೊಂಡು ದೇಶಸೇವೆಯಲ್ಲಿ ನಿರತರಾಗಿರುವ ಹಲವೇ ಕಾಂಗ್ರೆಸ್ಸಿಗರ ಉಜ್ವಲವಾದ ಪ್ರಯತ್ನಕ್ಕೆ ತೊಡಕಾಗಿವೆ ಈ ಬಗೆಯ ಕಲ್ಪನೆಗಳು ದೂರಾಗಬೇಕಾದರೆ ನೆಹ್ರೂರವರು ಹೇಳಿದ ಹಾಗೆ ಜನತೆಯು ಮುಂಬರುವ ಚುನಾವಣೆಯಲ್ಲಿ ತನ್ನ ನಿಜವಾದ ಪ್ರತಿನಿಧಿಯಾರೆಂಬುದನ್ನು ಚೆನ್ನಾಗಿ ವಿಮರ್ಶೆಮಾಡಿ ಮತದಾನ ಮಾಡುವಂತಹದೇ ಉತ್ತಮ ಪರಿಹಾರಮಾರ್ಗ. ಮಹತ್ವದ ಯೋಜನೆಗಳೂ, ಅನ್ನಬಟ್ಟೆಗಳ ಪ್ರಶ್ನೆಗಳೇ ಅಸಹಕಾರ ಧೋರಣೆಗೆ ಕಾರಣವಾಗಿರದೆ ಆಡಳಿತಸೂತ್ರ ಬದ್ಧವಾಗಿಲ್ಲವೆಂಬ ದೂರೇ ಮುಖ್ಯವಾಗಿದೆ. ಹಲವೇ ಮಂದಿ ಕಾಂಗ್ರೆಸ್ಸಿಗರಿಂದ ಇಲ್ಲವೆ ಅವಿರತವಾದ ಪ್ರಯತ್ನದಿಂದ ಈ ದೋಷವನ್ನು ಹೋಗಲಾಡಿಸಲು ಸಾಧ್ಯವಿಲ್ಲವೆಂಬುದಕ್ಕೆ ಈ ನಾಲ್ಕು ವರ್ಷಗಳ ಅನುಭವ ಯಥೇಷ್ಟ ಸಾಕು! ಸ್ವಾರ್ಥ ದೃಷ್ಟಿಯಿಂದ ಕಾಂಗ್ರೆಸನ್ನು ತ್ಯಜಿಸಿ ಬೇರೆ ಪಕ್ಷಪಂಗಡವನ್ನು ಹಲವರು ಕಟ್ಟಿಕೊಂಡರೆ ಗಾಂಧೀಜಿಯ ಮೂಲತತ್ವಕ್ಕೆ ಧಕ್ಕೆ ಬಂದಿರುವದನ್ನು ಲಕ್ಷಿಸಿಯೂ ಹಲವು ಕಾಂಗ್ರೆಸ್ಸಿಗರು ಕಾಂಗ್ರೆಸ್ಸನ್ನು ತ್ಯಜಿಸಿದ ದಾಖಲೆಗಳಿವೆ. ಅದನ್ನು ಲಕ್ಷಿಸಿಯೇ ನೆಹ್ರೂರವರು ಜನತೆಯ ಪ್ರಾತಿನಿಧ್ಯಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿರುತ್ತಾರೆ

ಈ ಎಲ್ಲ ದೋಷಗಳಮೇಲೆ ಕಾಂಗ್ರೆಸ್ಸನ್ನು ಬರಖಾಸ್ತುಗೊಳಿಸಿ ಇನ್ನೊಂದು ಪಕ್ಷ ಅಧಿಕಾರ ವಹಿಸಲಿ ಎಂದು ಹಲವರು ಆಡುತ್ತಿರುವದು ಮುನ್ನೋಟವಿಲ್ಲದ ಮುಂದಾಳ್ತನದ ದ್ಯೋತಕವಾಗಿರುತ್ತದೆ ಭಾರತ ವಿದೇಶಾಂಗ ನೀತಿ ಅಸಾಧಾರಣವಾದ ಮೈತ್ರಿಯನ್ನೂ ಕಾರ್ಯಸಿದ್ಧಿಯನ್ನೂ ಗಳಿಸಿದೆ. ಜಾಗತಿಕ ರಂಗದಲ್ಲಿ ಮಹತ್ವದ ಸ್ಥಾನಮಾನವನ್ನು ಗಳಿಸಿರುತ್ತದೆ. ದೇಶ ಇಬ್ಭಾಗವಾದಾಗ— ಕಾಶ್ಮೀರದಲ್ಲಿ ಪಾಕಿಸ್ತಾನ ಪ್ರತ್ಯಕ್ಷ ಹೋರಾಟ ನಡೆದಾಗ—ದೇಶದಲ್ಲಿ ಆಹಾರ ಬಟ್ಟೆಗಳ ಕೊರತೆಯಾದಾಗ—ಸರಕಾರ ವಿಶೇಷ ಮುತ್ಸದ್ದಿತನದಿಂದ ವರ್ತಿಸಿದ್ದರಿಂದಲೇ ದೇಶಕ್ಕೆ ಬಂದ ಸ್ವಾತಂತ್ರ್ಯ ಇನ್ನೂ ಉಳಿದುಕೊಂಡಿದೆ ಇಂತಹ ಗಂಭೀರ ಪರಿಸ್ಥಿತಿಗಳನ್ನು ಅಭ್ಯಸಿಸದೆ ಸರಕಾರವನ್ನು ಟೀಕಿಸುವದಾಗಲೀ— ಸರಕಾರ ಉರುಳಲೆಂದು ಬಯಸುವದಾಗಲೀ ಯಥಾರ್ಥವಾದ ವಿಚಾರಗಳಲ್ಲಿ ಅವರಿಗಿರುವ ಅಜ್ಞಾನದ ಪರಮಾವಧಿಯಾಗಿದೆ.

ಕಾಶ್ಮೀರ ಸಮಸ್ಯೆಯೊಂದನ್ನು ಬಿಟ್ಟರೆ ಉಳಿದೆಲ್ಲ ರಾಷ್ಟ್ರೋನ್ನತಿಯ ಇಲ್ಲವೆ ದೇಶದ ಜನಜೀವನ ಮಟ್ಟವನ್ನು ಉತ್ತಮವಾಗಿಸುವ ಮಹತ್ವದ ಯೋಜನೆಗಳು ಕಾರ್ಯರೂಪದಲ್ಲಿ ಬರುವ ಪೂರ್ವ ಸಿದ್ಧತೆಗಳಾಗಿವೆ. ಈ ವರೆಗೆ ಕಾಂಗ್ರೆಸು ಎದುರಿಸಿದ ಗಂಡಾಂತರ ಪರಿಸ್ಥಿತಿಗಳ ಫಲವಾಗಿ ಮುಂದೆ ಕ್ಷೇಮವಾದೀತೆಂದು ಹಲವರು ಆಶೆಕಟ್ಟಿಕೊಂಡಿದ್ದಾರೆ. ಕಾಂಗ್ರೆಸ್ಸಿಗೆ ಸರಿಯಾದ ಚಾಲನೆ ಸಿಕ್ಕಿದರೆ ಈ ಯೋಜನೆಗಳಿಂದ ಭಾರತವು ಮೂರು ನಾಲ್ಕು ವರ್ಷಗಳಲ್ಲಿಯೇ ಆಹಾರ ಬಟ್ಟೆ ಮುಂತಾದ ವಿಚಾರಗಳಲ್ಲಿ ಸ್ವಾವಲಂಬಿಯಾಗುವುದರಲ್ಲಿ ಸಂದೇಹವಿಲ್ಲ. ಕೊಲಂಬೋ ಯೋಜನೆಗಣುವಾಗಿ ಭಾರತವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆ ಭಾರತದ ಹಲವು ರೀತಿಯ ಸಮಸ್ಯೆಗಳನ್ನು ಪರಿಹರಿಸಬಹುದು.

ಇಂತಹ ಸಂದರ್ಭವನ್ನು ಸಾಧಿಸಿ ಹಲವು ಪಕ್ಷಗಳು ಅಧಿಕಾರ ಲಾಲಸೆಯಿಂದ ನಾನಾರೀತಿಯ ಭರವಸೆ-ಆಶೆ ಆಕಾಂಕ್ಷೆಗಳನ್ನು ತೋರಿಸಿ ಜನತೆಯನ್ನು ವಂಚಿಸುವ ಕಾರ್ಯಕ್ಕೆ ಇಳಿದಿರುತ್ತವೆ ಕಿಸಾನ ಮಜದೂರ ಪ್ರಜಾಪಾರ್ಟಿ ಮತ್ತು ಸಮಾಜವಾದಿಗಳ ಪಕ್ಷದ ಧ್ಯೇಯಧೋರಣೆಯು ಕಾಂಗ್ರೆಸ್ಸಿನ ಧ್ಯೇಯಕ್ಕಿಂತ ಬಹಳ ಮಟ್ಟಿಗೆ ಭಿನ್ನವಾಗಿರುವುದಿಲ್ಲ. ಸಮಾಜವಾದಿಗಳು ಅಧಿಕಾರವನ್ನು ತಾವು ವಹಿಸಿಕೊಂಡರೆ ಮಾತ್ರ ಅವು ಫಲಿಸಬಹುದೆಂದು ವಾದಿಸುತ್ತಿರುವರು. ಪ್ರಜಾಪಾರ್ಟಿಯ ಸಂಕಲ್ಪ ಅಷ್ಟು ದೃಢವಾಗಿರುವುದಿಲ್ಲ. ಕಾಂಗ್ರೆಸ್ಸಿನಿಂದ ಸಿಡಿದುಹೋದ ಕಾಂಗ್ರೆಸ್ಸಿಗರೇ ಹೆಚ್ಚಾಗುಳ್ಳ ಈ ಪಕ್ಷ ನಾಳೆ ಕಾಂಗ್ರೆಸ್ಸಿನಲ್ಲಿ ತೀವ್ರತರವಾದ ಬದಲಾವಣೆಯುಂಟಾಗುವದಾದರೆ ಕಾಂಗ್ರೆಸ್ಸಿಗೇ ತನ್ನ ಸಹಕಾರ ನೀಡಿದರೂ ನೀಡಬಹುದು! ಸಮಾಜವಾದಿಗಳು ಮಾತ್ರ ರೈಲ್ವೆ ಮುಷ್ಕರವೇ ಮೊದಲಾದ ವಿಘಾತುಕ ಕಾರ್ಯಗಳ ಮೂಲಕ ಸರಕಾರವನ್ನು ಪೇಚಿಗೆ ಸಿಕ್ಕಿಸಿ ಸ್ವಾರ್ಥಸಾಧಿಸುವ ಹಂಬಲವನ್ನಿಟ್ಟುಕೊಂಡ ಹಾಗೆ ತೋರುತ್ತಲಿದೆ.

ಶ್ರೀ ಜವಾಹರಲಾಲ ನೆಹ್ರೂರವರ ಹೃದಯಸ್ಪರ್ಶಿ ನಿವೇದನೆಯು ದೇಶದ ಶುಭಕಾಮನೆಯನ್ನಿಟ್ಟುಕೊಂಡು ಅದರ ಸಿದ್ಧಿಗಾಗಿ ಹೋರಾಡುವ ಸಂಕಲ್ಪ ಉಳ್ಳದ್ದಾಗಿದೆ. ಸತ್ಯಪ್ರಾಮಾಣಿಕತನ ಉಳ್ಳಂತಹ ವ್ಯಕ್ತಿ ಸದಾ ಯಥಾರ್ಥವಾದಿಯಾಗಿರುತ್ತಾನೆನ್ನುವದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಸುದೀರ್ಘ ಹೇಳಿಕೆ ಉತ್ತಮ ಉದಾಹರಣೆ! ಬೆಂಗಳೂರಿನಲ್ಲಿ ನಡೆಯುವ ಅ.ಭಾ. ಕಾಂಗ್ರೆಸ್ಸಿನದ ಅಧಿವೇಶನದ ಮುಂದಾಗಿ ಈ ಹೇಳಿಕೆ ಬಂದದ್ದರಿಂದ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿನ ಶುದ್ಧೀಕರಣಕ್ಕಾಗಿ ಸೂಕ್ತ ಪರಿಹಾರ ಮಾರ್ಗವನ್ನು ಹುಡುಕಬಹುದಾಗಿದೆ ಕಾಂಗ್ರೆಸ್ಸಿನ ಬಗೆಗೆ ಜನರಿಗಿರುವ ತಪ್ಪು ಕಲ್ಪನೆಗಳಿಗೆ ಸರಿಯಾದ ಭರವಸೆ ಹಾಗೂ ಮಾರ್ಗದರ್ಶನವನ್ನು ನೀಡಿದಂತಾಗಿದೆ. ದೇಶಕಲ್ಯಾಣವನ್ನು ಬಯಸುವ ಪ್ರತಿಯೊಬ್ಬ ಪ್ರಜೆಗೂ ಇದು ಮೆಚ್ಚಿಕೆಯಾದೀತೆಂದು ನಾವು ಭಾವಿಸುತ್ತೇವೆ.



Approved from by the Govt. of Mysore
Certificated by the Agent of the Govt of Ceylon & Indian.

ಮೈಸೂರಲ್ಲಿ ಪ್ರಧಾನ ಮಂತ್ರಿ ನೆಹ್ರೂ!

ಭಾರತದ ಮುಖ್ಯ ಮಂತ್ರಿ ಜವಾಹರಲಾಲ ನೆಹ್ರೂರವರು ಅ. ಭಾ. ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವದರ ಸಲುವಾಗಿ ಮೈಸೂರಿಗೆ ಆಗಮಿಸಿದರು. ಅವರ ಜೊತೆಗೆ ಮಗಳಾದ ಶ್ರೀಮತಿ ಇಂದಿರಾ ಗಾಂಧಿ, ಮಂತ್ರಿ ಸತ್ಯನಾರಾಯಣ ಸಿನ್ಹ, ಕಾರ್ಯದರ್ಶಿ ಮಥಾಯಿಯುವರೂ ಇದ್ದರು.

ನೆಹ್ರೂರವರು ಮೋಟಾರು ಕಾರಿನಲ್ಲಿ ಸಿಂಕು ತುಂಬಿದ ಜನಸ್ತೋಮದ ಸ್ವಾಗತವನ್ನು ಸ್ವೀಕರಿಸಿದರು. ಅವರು ಉಳಿದುಕೊಳ್ಳಬೇಕಾಗಿರುವ ಲಲಿತ ಮಹಾಲಿಗೆ ಐದು ಮೈಲು ದೂರವಿದ್ದು ಅಲ್ಲಿಯವರೆಗೂ ಜನ ನೆಹ್ರೂರವರ ದರ್ಶನಕ್ಕಾಗಿ ಕಾದಿದ್ದರು. ಲಲಿತ ಮಹಲಿನಲ್ಲಿ ರಾಜಪ್ರಮುಖರಿಂದ ಸ್ವಾಗತಿಸಲ್ಪಟ್ಟು ಮಹಾರಾಜರ ರಕ್ಷಾದಳದವರಿಂದ ಗೌರವರಕ್ಷೆಯನ್ನು ಸ್ವೀಕರಿಸಿದರು. ನೆಹ್ರೂರವರಿಗೆ ಮೈಸೂರು ಕಾಂಗ್ರೆಸ್ ಸಮಿತಿಯವರು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಜೊತೆಗೆ ಕುಮಾರಿಯಾದ ಶಶಿ ಪ್ರಭಾರವರ ನೃತ್ಯವೂ ಇತ್ತು!

ಬಳಿಕ ಮಹಾರಾಜರೊಂದಿಗೆ ಕೇಂದ್ರ ಆಹಾರ ಸಂಶೋಧನೆ ಸಂಸ್ಥೆಗೆ ಭೆಟ್ಟಿಕೊಟ್ಟರು. ಸಂಸ್ಥೆಯು ನಡೆಸುತ್ತಿರುವ ಹಲವು ಪ್ರಯೋಗಗಳನ್ನು ಪರಿಶೀಲಿಸಿದರು. ಆಹಾರ ಕೊರತೆಯನ್ನು ನೀಗಿಸಲು ಸಂಸ್ಥೆಯು ಶೋಧಪಡಿಸಿದ ವಿಚಾರವಾಗಿ ಕೇಳಲಾಗಿ ಕೃತಕ ಅಕ್ಕಿಯ ಶೋಧ ಯಶಸ್ವಿಯಾಗಿದೆಂದು ಹೇಳಿದರು.

ಕರ್ನಾಟಕ ಪ್ರಾಂತರಚನಾ ಸಮ್ಮೇಲನ

ಅಖಿಲ ಕರ್ನಾಟಕ ಪ್ರಾಂತರಚನಾ ಸಮ್ಮೇಲನವು ಬೆಂಗಳೂರು ಪುಟ್ಟಣ್ಣಶೆಟ್ಟರ ನಗರ ಭವನದಲ್ಲಿ ಶ್ರೀ ಟಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕಲಾವೆಂಕಟರಾಯರು ಸಮ್ಮೇಳನದ ಪ್ರಾರಂಭೋತ್ಸವವನ್ನು ಜರಗಿಸುವರು. ಈ ಸಮ್ಮೇಳನದಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹಿರೆ, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾಡರ್, ಕ. ಪ್ರಾಂ. ಕಾ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಭಾಗವಹಿಸಲಿದ್ದಾರೆ. ಮುಂಬಯಿಯ ಶ್ರೀ ಕೃಷ್ಣಕುಮಾರರ ನೇತೃತ್ವದಲ್ಲಿ ಕರ್ನಾಟಕ ಚಿತ್ರಪ್ರದರ್ಶನ ಜರಗಲಿದೆ.

ಭಾರತದ ಪಂಚ ವಾರ್ಷಿಕ ಯೋಜನೆ

ಭಾರತ ಸರಕಾರ, ಪಂಚವಾರ್ಷಿಕ ಯೋಜನೆಯನ್ನು ಪ್ರಕಟಿಗೊಳಿಸಿದೆ. ಈ ಪಂಚವಾರ್ಷಿಕ ಯೋಜನೆಯನ್ನು ಎರಡು ಹಂತಗಳಿಂದ ಕಾರ್ಯರೂಪದಲ್ಲಿ ತರುವದಾಗಿ ಪ್ರಕಟಣೆಯಲ್ಲಿ ಹೇಳಲಾಗಿದೆ. 1955-56ರೊಳಗಾಗಿ ಸಕಲ ವಸ್ತುಗಳ ಸೌಲಭ್ಯವನ್ನು ಒದಗಿಸುವದಕ್ಕಾಗಿ 1493 ಕೋಟಿ ರೂಪಾಯಿಯನ್ನು ವೆಚ್ಚಮಾಡಲಾಗುವುದು. ಅನಂತರ ೨ ವರ್ಷಗಳಲ್ಲಿ ಭರದಿಂದ ಯೋಜನೆಯನ್ನು ಪೂರ್ಣಗೊಳಿಸುವುದಕ್ಕಾಗಿ 300 ಕೋಟಿ ರೂ. ತೆಗೆದಿಡಲಾಗಿದೆಂದು ಹೇಳಲಾಗಿದೆ.

ಮಂಗಳೂರು

ವಿಚಾರ ಗೋಷ್ಠಿ-ಸ್ಥಳೀಯ ಥಿಯಾಸಾಫಿಕಲ್ ಸೊಸೈಟಿ ನೇತೃತ್ವದಲ್ಲಿ ಇದೇ ತಾ. 3ರಲ್ಲು ಭಕ್ತಿಯ ವಿಚಾರದಲ್ಲಿ ಒಂದು ಗೋಷ್ಠಿಯು ಜರಗಿತು. ರಾಷ್ಟ್ರಕವಿ ಶ್ರೀ ಎಮ್. ಗೋವಿಂದ ಪೈ, ಶ್ರೀಗಳಾದ ಎಚ್. ವಿ. ಕಾಮತ್, ಆರ್. ಕೆ. ಪ್ರಭು ಮೊದಲಾದವರು ಭಾಷಣವಿತ್ತರು. ಸಭಾಧ್ಯಕ್ಷತೆಯನ್ನು ವಹಿಸಿದ ಶ್ರೀ ವಿಮಲಾನಂದ ಸ್ವಾಮಿಜಿಯವರು ಪವಿತ್ರಪ್ರೇಮವೇ ಭಕ್ತಿಯೆಂದೂ ಅದು ಮನುಷ್ಯನಲ್ಲಿ ಮೊದಲಾಗಿ ದೇವನಲ್ಲಿ ಕೊನೆಗೊಳ್ಳುವುದೆಂದೂ, ನಾವಿಂದು ಧರ್ಮವನ್ನು ನೈತಿಕ ದೃಷ್ಟಿಯಿಂದ ಅನಿವಾರ್ಯವಾಗಿ ಅಭ್ಯಾಸಮಾಡಿ ಅನುಷ್ಠಾನಕ್ಕೆ ತರಬೇಕೆಂದೂ ಸಾರಿದರು. ಸೊಸೈಟಿ ಕಾರ್ಯದರ್ಶಿ ಶ್ರೀ ಬಿ. ಅನಂತರಾಯರು ಧನ್ಯವಾದವನ್ನರ್ಪಿಸಿದರು.

ಮಂಗಳೂರು ಪತ್ರಿಕೋದ್ಯೋಗಿ ಸಂಘದ-ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಇದೇ ತಾ. 4ರಲ್ಲು ಶ್ರೀ ಡಿ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನಲ್ಲಿ ಕೈಕೊಂಡ ನಿರ್ಣಯಗಳನ್ನು ಸಮರ್ಥಿಸಿ ಬೆಂಬಲವೀಯುವ ಗೊತ್ತುವಳಿಯಾಯಿತು.

ವಿದಾಯ ಸತ್ಕಾರ—ದ. ಕ. ವಣಿಕ ಸಂಘದ ಗೌರವ ಸದಸ್ಯರಾದ ಶ್ರೀ ಸಿ. ಜಿ. ಕಾಲ್ಸನ್ನರಿಗೆ ಇದೇ ತಾ. 3ರಲ್ಲು ವಿದಾಯಸತ್ಕಾರವೀಯುವ ಸಮಾರಂಭ ಜರಗಿತು. ಸಂಘದ ಅಧ್ಯಕ್ಷ ಎಫ್. ಎಕ್ಸ್. ಡಿ. ಪಿಂಟೊ, ಶ್ರೀಗಳಾದ ಕೆ. ಆರ್. ಕಾರಂತ, ಬಿ. ವೈಕುಂಠ ಬಾಳಿಗ, ದೇವಿದಾಸಗಿರಿಧರಲಾಲಚಂದ್ರಾನಾ, ಸಿ. ಆರ್. ಆರ್. ಪ್ರಭು ಮೊದಲಾದವರು ಮಾನ್ಯ ಅತಿಥಿಯ ಗುಣಗಾನಮಾಡಿ ಅವರಿಗೆ ಎಲ್ಲೆಲ್ಲೂ ಜಯಸಿಗಲೆಂದು ಹಾರೈಸಿದರು. ಇಷ್ಟು ಸ್ನೇಹ ಸೌಹಾರ್ದ ತೋರಿಸಿದ ವಣಿಕ ಬಂಧುಗಳನ್ನು ಶ್ರೀ ಕಾಲ್ಸನ್ನರು ಅಭಿನಂದಿಸಿದರು. ಶ್ರೀ ಎಮ್. ರಾಘವೇಂದ್ರ ಪೈಗಳ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ವಜ್ರೋತ್ಸವ—ಮಂಗಳೂರಿನ ಕೆನರಾ ಹೈಸ್ಕೂಲು ಸ್ಥಾಪಿತವಾಗಿ ಅರವತ್ತು ವರುಷಗಳಾದುವು. ಕಳೆದ ತಾ. 30ರಲ್ಲು ವಜ್ರೋತ್ಸವದ ಉದ್ಘಾಟನೆಯು ಶ್ರೀ ಕಾಶಿಮಠದ ಸುಧೀಂದ್ರ ಸ್ವಾಮಿಗಳವರ ಸಮಕ್ಷಮದಲ್ಲಿ ಜರಗಿತು. ಪ್ರಾರ್ಥನೆ ಸ್ವಾಗತ ಗೀತೆಗಳಾದ ನಂತರ ಶ್ರೀ ಬಿ. ವಾಮನ ಭಟ್ಟರು ಸಂಸ್ಕೃತದಲ್ಲೂ ಡಾ। ಎಮ್. ಕೇಶವ ಪೈಗಳು ಇಂಗ್ಲಿಷಿನಲ್ಲೂ ಸ್ವಾಗತ ಭಾಷಣವಿತ್ತರು. ಈ ಮಹೋತ್ಸವದ ನೆನಪಿಗಾಗಿ ಒಂದು ಬಡ ವಿದ್ಯಾರ್ಥಿ ನಿಧಿಯನ್ನು ಸ್ಥಾಪಿಸಲಾಯಿತು. ಈ ಬಗ್ಗೆ ಕೆಲವರು ತಮ್ಮ ಸಹಾಯ ಧನವನ್ನು ಸಭೆಯಲ್ಲೇ ತಿಳಿಸಿದರು. ಸಂಸ್ಕೃತದಲ್ಲಿ ಅತ್ಯಧಿಕ ಗುಣಪಡೆಯುವ ವಿದ್ಯಾರ್ಥಿಗೆ ಹತ್ತು ರೂಪಾಯಿಯನ್ನು ಪ್ರತಿವರ್ಷವೂ ಉಡುಗೊರೆ ಕೊಡುವಂತೆ ಸ್ವಾಮಿಗಳವರು ಧನ ಸಹಾಯ ನೀಡಿದರು. ಬೆಳಿಗ್ಗೆ ಶಾಲಾಮಕ್ಕಳಿಗೆ ಸಿಹಿತಿಂಡಿ ಹಂಚಲಾಗಿತ್ತು.

ವನಮಹೋತ್ಸವ:-ಇದೇ ತಾ 3ರಲ್ಲು ತಾಲೂಕು ಕಚೇರಿ ವಠಾರದಲ್ಲಿ ಜಿಲ್ಲಾ ಕಲೆಕ್ಟರರು, ಅಧಿಕಾರಿಗಳ ಮತ್ತು ಸಾರ್ವಜನಿಕರ ಸಮ್ಮುಖದಲ್ಲಿ ಮೂರು ಗಿಡಗಳನ್ನು ನೆಟ್ಟರು. ಅಲ್ಲಿಂದ ಕಲೆಕ್ಟರರ ಕಚೇರಿಗೆ ಮೆರವಣಿಗೆ ಹೊರಟು ಅಲ್ಲಿಯೂ ಸಸಿನೆಡಲಾಯಿತು. ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಹೊಸಜಡ್ಜರು:-ಜಿಲ್ಲಾ ಜಡ್ಜರಾಗಿದ್ದು ನಿವೃತ್ತಿ ಹೊಂದಿದ ಶ್ರೀ ಪಿ. ಕೃಷ್ಣಮೂಸಿ ಅವರ ಸ್ಥಳಕ್ಕೆ ಮದ್ರಾಸು ಹೈಕೋರ್ಟಿನ ರಿಜಿಸ್ತ್ರಾರರಾಗಿದ್ದ ಶ್ರೀ ಪಿ ಟಿ. ರಾಮನ್ ನಾಯರ್, ಐ. ಸಿ. ಎಸ್. ಅವರು ನೇಮಿಸಲ್ಪಟ್ಟದ್ದು ಕಳೆದ ತಾ. 29ರಲ್ಲು ಚಾರ್ಜು ವಹಿಸಿ ಕೊಂಡಿರುವರು.

ಶ್ರೀ ಎಸ್. ಎನ್. ಹೊಳ್ಳರ ವಿಚಾರಣೆಯು—ಇದೇ ತಾ. 12ರಲ್ಲು ಕಾಸರಗೋಡಿನಲ್ಲಿ ಜರಗುವುದು. ಕಳೆದ ತಾ. 30ರಲ್ಲಿ ಶ್ರೀ ಹೊಳ್ಳರನ್ನು ಎಡಿಷನಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾದ ಶ್ರೀ ಎಫ್. ಎಮ್. ಪಿಂಟೋರವರ ಮುಂದೆ ಹಾಜರುಪಡಿಸಲಾಗಿತ್ತು. ಜಾಮೀನು ನಿರಾಕರಿಸಲ್ಪಟ್ಟದ್ದರಿಂದ ರಿಮಾಂಡಿನಲ್ಲೇ ಇದ್ದಾರೆ. ಶ್ರೀಯುತರು ನಮ್ಮ ಜಿಲ್ಲೆಯಿಂದ ತಪ್ಪಿಸಿಕೊಂಡು ಹೋದವರು ಕೆಲಕಾಲ ಮೈಸೂರು, ಬೆಂಗಳೂರಲ್ಲೂ, ಬೆಳಗಾಂ, ಹುಬ್ಬಳ್ಳಿ, ಕೊಲ್ಹಾಪುರ್ ಕಡೆಗಳಲ್ಲೂ ಸಂಚರಿಸುತ್ತಿದ್ದು ಶ್ರೀಮತಿ ಕಾದಂಬರಿ ಎಂಬ ಹೈದರಾಬಾದಿನ ವಿಧವೆಯ ಪರಿಚಯವಾಗಿ ಅವರೊಂದಿಗೆ ವಿವಾಹವಾಗಿದೆಯೆಂದೂ, ಆಕೆಯಲ್ಲಿ ಒಂದು ಮಗು ಕೂಡಾ ಜನಿಸಿದೆಯೆಂದೂ ವದಂತಿಯಿದೆ. ಆಕೆ ತುಂಬಾ ಆಸ್ತಿವಂತಳಿದ್ದು ಆಕೆಯ ಮೊದಲ ಪತಿಯಿಂದ ಹುಟ್ಟಿದ ಮಗುವಿಗೆ ರೂಪಾಯಿ 30,000 ಉತ್ಪತ್ತಿಯುಳ್ಳ ಆಸ್ತಿ ಇದೆಯೆಂದೂ ತಿಳಿದುಬರುತ್ತದೆ.

ಉಡುಪಿ

ಜೋಗದ ಇಲೆಕ್ಟ್ರಿಸಿಟಿ—ದಕ್ಷಿಣ ಕನ್ನಡ ಜಿಲ್ಲೆಗೆ ಜೋಗದ ಇಲೆಕ್ಟ್ರಿಸಿಟಿಯನ್ನು ಒದಗಿಸುವ ಯೋಜನೆಯ ಒಡಂಬಡಿಕೆಯು ಮದ್ರಾಸು ಮತ್ತು ಮೈಸೂರು ಸರಕಾರಗಳೊಳಗೆ ಇನ್ನೂ ಆಗಿಲ್ಲವಾಗಿ ತಿಳಿದು ಬರುವುದರಿಂದ ಆ ಕುರಿತು ಸಂಬಂಧಪಟ್ಟ ಸರಕಾರಗಳ ಪ್ರತಿನಿಧಿಗಳು ಬೇಗನೆ ಕಾರ್ಯ ಪ್ರವರ್ತರಾಗಬೇಕೆಂದೂ ಈ ಭಾಗದಲ್ಲಿ ಕೇಂದ್ರ ಸರಕಾರವೂ ದೃಷ್ಟಿಯಿಡಬೇಕೆಂದೂ ವಿನಂತಿಸುವ ನಿರ್ಣಯವೊಂದು ಇದೇ ತಾ. 9ರಲ್ಲು ಸಂಜೆ ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಕೂಡಿದ ಉಡುಪಿ ಜನತೆಯ ಸಭೆಯಲ್ಲಿ ಸ್ವೀಕೃತವಾಯಿತು. ಮಾತ್ರವಲ್ಲದೆ ಜನತೆಯ ಪ್ರತಿನಿಧಿಯಾಗಿ ಶ್ರೀ ಟಿ ಅನಂತ ಪೈಗಳು ಸಂಬಂಧಪಟ್ಟವರನ್ನು ಕಂಡು ಜೋಗದ ಇಲೆಕ್ಟ್ರಿಸಿಟಿ ಯೋಜನೆಯು ಬೇಗನೆ ಯಶಸ್ವಿಯಾಗುವಂತೆ ಮಾಡಲು ಅವರಿಗೆ ಅಧಿಕಾರವೀಯಲಾಯಿತು.

ವನಮಹೋತ್ಸವದ ಮುಕ್ತಾಯ: ಇದೇ ತಾ. 1ರಲ್ಲು ಪ್ರಾರಂಭಿಸಲ್ಪಟ್ಟ ವನಮಹೋತ್ಸವವು ತಾ. 7ರಂದು ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಮುಕ್ತಾಯವಾಯಿತು. ಡೆಮೊನ್‌ಸ್ಟ್ರೇಟರ್ ಶ್ರೀ ಶ್ರೀನಿವಾಸ ರಾವ್, ಮು। ಕಮಿಷನರ್ ಶ್ರೀ ಎ. ಎಸ್. ಡಿ. ಸೋಜ ಮೊದಲಾದವರ ಭಾಷಣ, ಶಾಲಾ ಮಕ್ಕಳ ವಿವಿಧ ವಿನೋದಗಳು, ಶ್ರೀ ವಸಂತ ಕುಮಾರರ ನೃತ್ಯಪ್ರದರ್ಶನಗಳಿದ್ದುವು. ಅನಂತೇಶ್ವರ, ಚಂದ್ರೇಶ್ವರ ದೇವಸ್ಥಾನಗಳಲ್ಲೂ ಗಿಡ ನೆಡುವುದರೊಡನೆ ವನಮಹೋತ್ಸವವು ಆಡಳ್ತೆ ಮೊಕ್ತೇಸರ ವಕೀಲ್ ಶ್ರೀ ಪಿ. ವಿ. ಆಚಾರ್ಯರ ನೇತೃತ್ವದಲ್ಲಿ ನಡೆಯಿತು.

ತಾಲೂಕು ಪ್ರೊಹಿಬಿಶನ್ ಕಮಿಟಿ ಸಭೆಯು—ಇದೇ ತಾ. 9ರಲ್ಲು ತಾಲೂಕು ಕಚೇರಿಯಲ್ಲಿ ಡೆ। ಕಲೆಕ್ಟರ್ ಶ್ರೀ ಎಚ್. ನರಸಿಂಹ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಸಿಸ್ಟೆಂಟ್ ಪ್ರೊಹಿಬಿಶನ್ ಆಫೀಸರರು ಜೂನ್ ತಿಂಗಳ ವರದಿಯನ್ನೋದಿದರು. ಪ್ರೊಹಿಬಿಶನ್ ಶಾಖೆಯು ಏನು ಕೆಲಸ ಮಾಡುತ್ತಿದೆ, ಅದರ ಪರಿಣಾಮವೇನು, ಜನತೆಯು ಯಾವ ಸಹಕಾರವನ್ನೀಯಬೇಕು ಎಂಬಿತ್ಯಾದಿ ಪ್ರಚಾರ ಕಾರ್ಯವು ಹಳ್ಳಿಗಳಲ್ಲಿ ಆಗಬೇಕಾಗಿದೆ ಎಂದು ಅಧ್ಯಕ್ಷರು ಹೇಳಿದರು. ಬಳಿಕ ತಾಲೂಕು ಆಹಾರ ಸಮಿತಿ ಸಭೆ ಜರಗಿತು. ಮುಂದಿನ ತಿಂಗಳ ಎರಡೂ ಸಭೆಗಳನ್ನು ತಾ. 20-8-51ಕ್ಕೆ ಕುರ್ಕಾಲು ಗ್ರಾಮ ಸಂಘದ ಆಫೀಸಿನಲ್ಲಿ ಜರಗಿಸುವುದೆಂದಾಯಿತು.

ಮಣಿಪಾಲ—ಇದೇ ತಾ. 4ರಲ್ಲಿ ಇಲ್ಲಿ ವನಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಾಯಂಕಾಲ 4 ಘಂಟೆಗೆ ಊರ ಪ್ರಮುಖರು ಹೈಸ್ಕೂಲ್, ಮತ್ತು ಎಲಿಮೆಂಟರಿ ಶಾಲೆಯವರು ಕೂಡಿ ಹೈಸ್ಕೂಲಿನ ವಠಾರದಿಂದ ಮೆರವಣಿಗೆಯಾಗಿ ಹೊರಟು ವಸ್ತ್ರದ ಕಾರ್ಖಾನೆ, ಹಂಚಿನ ಕಾರ್ಖಾನೆ, ಪ್ರೆಸ್ ಮುಂತಾದವುಗಳ ಹತ್ತಿರ ಸಸಿಗಳನ್ನು ನೆಟ್ಟು ಹೈಸ್ಕೂಲಿಗೆ ಬಂದು ಸೇರಿದರು. ಹೈಸ್ಕೂಲಿನ ಸಭಾಭವನದಲ್ಲಿ ಉಡುಪಿಯ ಸಬ್ ರಿಜಿಸ್ಟ್ರಾರ್ ಕೆ. ನಾರಾಯಣರವರ ಅಧ್ಯಕ್ಷತೆಯಲ್ಲಿ ತತ್ಸಂಬಂಧ ಸಭೆ ಜರಗಿತು. ಶ್ರೀ ಟಿ. ರಮೇಶ ಪೈ, ಶ್ರೀ ಯು. ಪುಂಡಲೀಕ ಶೆಣೈ, ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರೂ ವನಮಹೋತ್ಸವದ ಕುರಿತು ಮಾತನಾಡಿದ ಬಳಿಕ ಅಧ್ಯಕ್ಷರು ಸಸಿನೆಡುವುದರ ಕುರಿತು ಮಾತನಾಡಿದರು. ಧನ್ಯವಾದಾರ್ಪಣೆ, ರಾಷ್ಟ್ರಗೀತೆಯೊಂದಿಗೆ ಅಂದಿನ ಸಭೆಯು ಕೊನೆಗೊಂಡಿತು.

ಕುರುಕಾಲು:- ಇಲ್ಲಿಯ ಗ್ರಾಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ತಾ. 7ರಲ್ಲು ವನಮಹೋತ್ಸವವು ಕಾಪು ರೆವಿನ್ಯು ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಕುರ್ಕಾಲು ಮತ್ತು ಕುಂಜಾರು, ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳು, ಅಧ್ಯಾಪಕರ ಮತ್ತು ಗ್ರಾಮಸ್ಥರ ಮೆರವಣಿಗೆಯಾದ ಬಳಿಕ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕುರ್ಕಾಲು ಗಣಪಯ್ಯ ಶೆಟ್ಟಿ, ಕೆ. ನಾರಾಯಣಾಚಾರ್ಯ, ಕೆ. ವಾಸು ಸೆಟ್ಟಿ ಮೊದಲಾದವರು ವನಮಹೋತ್ಸವದ ಕುರಿತು ಮಾತನಾಡುತ್ತಾ ಕುರ್ಕಾಲು, ಬೆಳ್ಳೆ, ಕಟ್ಟಿಂಗೇರಿ ಗ್ರಾಮಗಳ ಬಡವರ ಪ್ರಯೋಜನಾರ್ಥವಾಗಿ ರಿಲೀಫ್ ಅಂಗಡಿ ತೆರೆಯುವಿಕೆಯ ಆವಶ್ಯಕತೆಯನ್ನು ಸೂಚಿಸಿದರು. ಅಧ್ಯಕ್ಷರು ರಿಲೀಫ್ ಅಂಗಡಿ ತೆರೆಯುವಂತಾಗಲು ಕೈಲಾದ ಪ್ರಯತ್ನ ಮಾಡುತ್ತೇನಾಗಿ ಭರವಸೆಯಿತ್ತ ಬಳಿಕ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಉಡ್ಪಿ. ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 105/51

ವೆಂಕಟ್ರಾಯ ಹೆಬ್ಬಾರ-ನಾರಾಯಣ ಹೆಬ್ಬಾರರ ಮಗ, ಉಡ್ಪಿ ತಾಲೂಕು ಶಿರ್ವ ಗ್ರಾಮದ ಪುಡಿಕಂಬ್ಲದಲ್ಲಿರುವವ —ವಾದಿ

ಮತ್ತು

1. ನಾರಾಯಣ ಹೆಗ್ಡೆ 2. ಕೃಷ್ಣಯ್ಯ ಹೆಗ್ಡೆ 3. ಅನಂತರಾಮ ಹೆಗ್ಡೆ ಸುಬ್ಬಯ್ಯ ಹೆಗ್ಡೇರ ಮಕ್ಕಳು. ಉಡ್ಪಿ ತಾಲ್ಲೂ ಶಿರ್ವ ಗ್ರಾಮದ ಗಂಗೇಲದಲ್ಲಿರುವವರು.

—ಪ್ರತಿವಾದಿರು.

ಮೇಲ್ಕಂಡ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರು ತಾ. 21-3-48ರಲ್ಲು ರೂಪಾ 260/-ಕ್ಕೆ ಬರೆಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲುಬಡ್ಡಿ ಖೈವಜನ್ನು ಬರಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 17-7-51ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಹಗಲು ಗಂಟೆ 11ಕ್ಕೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟಿಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

K J. Ballal.
Vakil for Plaintiff.
Udipi, 9-7-51.

ಪ್ರಕಟಣೆ

ಕಾಪು ಸೀಮೆಯ ಶ್ರೀ ಹೊಸ ಮಾರಿಗುಡಿಯ ಆಡಳಿತ ಟ್ರಸ್ಟೀಸ್ ಬೋರ್ಡಿನವರು ಈ ಮೂಲಕ ಸಮಸ್ತ ಭಕ್ತ ಮಹಾಜನರಿಗೆಲ್ಲಾ ತಿಳಿಯಪಡಿಸುವುದೇನೆಂದರೆ: ಸದ್ರಿ ಸ್ಥಾಪನೆಯಲ್ಲಿ ಮಾಮೂಲು ಪ್ರಕಾರ ನಡೆದುಕೊಂಡು ಬಂದ ಪ್ರಾಣಿ ಬಲಿಯನ್ನು ಮಾನ್ಯ ಎಂಡೋಮೆಂಟ್ ಬೋರ್ಡಿನವರ ನಂಬ್ರ 21/51ನೇ ಸರ್ಕಲಾರು ಮೇರೆಗೆ ತಾರೀಕು 1-6-51ರಿಂದ ನಿಲ್ಲಿಸಲಾಗಿದೆ.

ಕಾಪು ಮುಡ್ಯ ಸೆಟ್ಟಿ, ಪ್ರೆಸಿಡೆಂಟ್.
ಕೆ. ಸದಾಶಿವ ಹೆಗ್ಡೆ, ಮೆನೇಜರ್.

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಶೀಘ್ರದಲ್ಲಿ ತಾವು ನೆನೆಪಿಟ್ಟುಕೊಂಡು ತಮ್ಮ ಡೈರಿಯಲ್ಲಿ ಬರೆದಿಡಬೇಕಾದ ಚಿತ್ರಗಳು.

ಬೇದರ್ದಿ, ವನಸುಂದರಿ, ಸಂಗ್ರಾಮ್,
ನಾಟಕ್, ಮೆಹಬೂಬ್, ದರ್ದ್ ಇತ್ಯಾದಿ

ತಾ. 14-7-51ನೇ ಶನಿವಾರ
ಮೆಟ್ರೊದನರ

ಬೋಡಿ ಎಂಡ್ ಸೋಲ್
BODY AND SOUL

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಮಗೆ ಬಂದ ಪತ್ರಗಳು

ಮಾನ್ಯ ಸಂಪಾದಕರೇ,

ಪೆರಡಾಲ ನವಜೀವನ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಮತ್ತು ಶ್ರೀ ಕೆ. ಕೃಷ್ಣರಾವ್ ಇವರಿಬ್ಬರನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿದ್ದ ಸಂಗತಿಯಲ್ಲಿ ಜಿಲ್ಲೆಯ ವಾರ್ತಾಪತ್ರಿಕೆಗಳಲ್ಲಿ ಬಂದ ವಾರ್ತೆಗಳು ಸತ್ಯ ಸಂಗತವಲ್ಲ. ಕೊನೆಗೆ ಗ ತಮ್ಮ ಪತ್ರಿಕೆಯ ತಾ. 28-6-1951ನೆಯ ಸಂಚಿಕೆಯಲ್ಲಿ ಪ್ರಕಟವಾದ ವಾರ್ತೆಗೆ ಪ್ರತ್ಯುತ್ತರವನ್ನು ಕೊಡುವುದು ಅನಿವಾರ್ಯವಾಗಿರುತ್ತದೆ.

ಶ್ರೀ ಕೆ. ಕಿಞ್ಞಣ್ಣ ರೈಗಳು ಮಾಡಿದ್ದ ಅಪೀಲಿನ ಕುರಿತು ಜಿಲ್ಲಾ ವಿದ್ಯಾಧಿಕಾರಿಗಳು ನಡಸಿದ ತನಿಖೆಯ ತನ್ನಿಮಿತ್ತ, ಅವರ ಸೂಚನೆಯ ಮೇರೆಗೆ, ತಾ. 15-2-1951ರಂದು ಡಾ। ಕೆ. ಕೇಶವ ಭಟ್ಟರ ಆಸ್ಪತ್ರೆಯಲ್ಲಿ ನಡೆದ ಘಟನೆಯಲ್ಲಿ ತಾನು ವಹಿಸಿದ ಭಾಗದ ಮಟ್ಟಿಗೆ ಶ್ರೀ ಕೆ. ಕಿಞ್ಞಣ್ಣ ರೈಗಳು ಬರಹ ಮೂಲಕ ತಾ. 13-6-1951ನೇ ದಿನ ಕ್ಷಮಾಯಾಚನೆಮಾಡಿ, ತನ್ನನ್ನು ಪುನಃ ಉದ್ಯೋಗಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡುದರಿಂದ, ಶಾಲಾ ಆಡಳಿತ ಸಮಿತಿಯವರು ಉದಾರ ಹೃದಯದಿಂದ ಅವರನ್ನು ಕ್ಷಮಿಸಿ ಪುನಃ ಉದ್ಯೋಗಕ್ಕೆ ಸೇರಿಸಿಕೊಂಡಿರುವರು.

ಶ್ರೀ ಕೆ. ಕೃಷ್ಣರಾಯರ ವಿಷಯದಲ್ಲಿ ಆಡಳಿತ ಸಮಿತಿಯವರು ಈ ಮೊದಲು ಮಾಡಿರುವ ತೀರ್ಮಾನವೇ ಈಗಲೂ ಊರ್ಜಿತವಾಗಿರುತ್ತದೆ. ಅವರು ಅಪೇಕ್ಷಿಸಿದ್ದರೂ ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವಂತಿರಲಿಲ್ಲ.

ಸತ್ಯ ಸಂಗತಿಗಳು ಹೀಗಿರುವಲ್ಲಿ "ವಿವಾದವು ರಾಜಿಯಿಂದ ತೀರ್ಮಾನವಾಯಿತೋ ಅಥವಾ ಈ ಉಪಾಧ್ಯಾಯರುಗಳ ಮೇಲಿನ "ಆರೋಪಗಳು ನಿಜವಾಗದೆ" ಉಳಿದುವೋ ಎಂಬುದನ್ನು ಮಹಾಜನರೆ ತೀರ್ಮಾನಿಸಲಿ.

ಸ್ವಾರ್ಥಸಾಧಕರು ಕೆಲವರು ಊರ ವಾರ್ತಾಪತ್ರಿಕೆಗಳನ್ನು ಸ್ವಪ್ರಯೋಜನಕ್ಕಾಗಿ ದುರುಪಯೋಗ ಪಡಿಸುತ್ತಿರುವುದು ವಿಷಾದಕರ.

P S. Shastri,
Correspondent

●

ವಾರಣಾಶಿ ಸುಬ್ರಾಯರ ಸ್ಮಾರಕ

ಪುತ್ತೂರು ತಾಲೂಕು ಬೆಳ್ಳಾರೆಯಲ್ಲಿ ಇತ್ತೀಚೆಗೆ ನೂತನವಾಗಿ ತೆರೆಯಲ್ಪಟ್ಟ ಹೈಸ್ಕೂಲ್ ಕಟ್ಟಡಕ್ಕಾಗಿ ರೂಪಾಯಿ 5000/ನ್ನು ದಿವಂಗತ ಶ್ರೀ ವಾರಣಾಶಿ ಸುಬ್ರಾಯರ ಸ್ಮಾರಕಕ್ಕಾಗಿ ಅವರ ಸಹೋದರ ವಾರಣಾಶಿ ಗಣಪಯ್ಯನವರು ದಾನಮಾಡಿರುತ್ತಾರೆ. ಈ ದಾನದ ನೆಲೆಯಿಂದ ಸದ್ರಿ ಹೈಸ್ಕೂಲಿನ ಪ್ರಾಮುಖ್ಯ ಮಂದಿರ ಒಂದು ವಾರಣಾಶಿ ಸುಬ್ರಾಯರ ಸ್ಮಾರಕ ಸದನವಾಗಿ ಅಮೃತ ಶಿಲೆಯ ಬೋರ್ಡಿನಿಂದ ಅಲಂಕರಿಸಲ್ಪಟ್ಟಿರುತ್ತದೆ.

ಶ್ರೀ ಸುಬ್ರಾಯರು ಕೋಟೆ ಶ್ರೀ ಸುಬ್ರಾಯ ದೇವಸ್ಥಾನದ ಜೀರ್ಣೋದ್ಧಾರದಲ್ಲಿ ಪ್ರಾಮುಖ್ಯ ಭಾಗವಹಿಸಿ ಕೆಲಸ ನಿರ್ವಹಿಸಿದುದಲ್ಲದೆ ಮಾನ್ಯ ಮೊಳಹಳ್ಳಿ ಶಿವರಾಯರ ಸಲಹೆ ಪ್ರೋತ್ಸಾಹಗಳನ್ನು ಪಡೆದು, ಕಾಂಗ್ರೆಸ್ ಚಳವಳ ಕಾಲದಲ್ಲಿಯೂ ಭಾಗವಹಿಸಿ ಸಾರ್ವಜನಿಕ ಕೆಲಸಗಳಲ್ಲಿಯೂ ದುಡಿದವರಾಗಿರುತ್ತಾರೆ. ಅವರ ಹುಟ್ಟೂರಾದ ಕಳಂಜ ಬಾಳಿಲದಲ್ಲಿ ಸ್ಥಾಪಿಸಲ್ಪಟ್ಟ ಸಹಕಾರಿ ಸಂಘ, ಪಂಚಾಯತು ಬೋರ್ಡ್, ಪಂಜ ಸೀಮಾ. ಹ. ಬಾ. ಉತ್ತಮ ಜೀವನ ಸಹಕಾರಿ ಸಂಘ, ವಗೈರೆ ಸಾರ್ವಜನಿಕ ಸಂಸ್ಥೆಗಳ ಪ್ರಧಾನಾಧ್ಯಕ್ಷರಾಗಿ ಜನತೆಯ ಪ್ರೀತ್ಯಾದರಗಳಿಗೆ ಪಾತ್ರರಾಗಿ ಹಲವು ಸಮಯ ಕೆಲಸ ನಿರ್ವಹಿಸಿದುದಲ್ಲದೆ ಬೆಳ್ಳಾರೆ ಸರ್ಕಲಿನಿಂದ ಚುನಾಯಿಸಲ್ಪಟ್ಟ ಪುತ್ತೂರು ತಾಲೂಕು ಬೋರ್ಡ್ ಮೆಂಬರರಾಗಿಯೂ ಇದ್ದರು.

ಊರಿನ ಹಲವಾರು ನ್ಯಾಯತೀರ್ಮಾನಗಳಲ್ಲಿಯೂ ಇವರು ಭಾಗವಹಿಸಿ ಜನಾದರಕ್ಕೆ ಪಾತ್ರರಾಗಿದ್ದರು.

ಈ ರೀತಿ ವಿವಿಧ ಚಟುವಟಿಕೆಗಳಿಂದ ಊರಿನ ಗಣನೀಯ ವ್ಯಕ್ತಿಗಳಾಗಿದ್ದ ಶ್ರೀ ಸುಬ್ರಾಯರು 1938ನೇ ಇಸವಿ ನವಂಬ್ರ ತಾರೀಖು 16ರಲ್ಲು ಕಣ್ಮರೆಯಾಗಿದ್ದರು. ಅವರ ಶಾಶ್ವತ ಸ್ಮರಣೆಗಾಗಿ ಅವರ ಸಹೋದರ ಶ್ರೀ ವಾರಣಾಶಿ ಗಣಪಯ್ಯನವರು ಭ್ರಾತೃ ಪ್ರೇಮದಿಂದ ಶಕ್ತಿ ಮೀರಿ ವಿದ್ಯಾಸಂಸ್ಥೆಗೆ ನೀಡಿದ ಈ ಉದಾರದಾನವು ಸ್ತುತ್ಯಾರ್ಹವಾಗಿರುತ್ತದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕುಂಬಳೆ— ತಾ. ೪ರಂದು ಕಾಸ್ರಗೋಡು ತಹಶಿಲ್ದಾರ್ ಶ್ರೀ ಕೂರ್ಗ ನಾರಾಯಣನ್ ಮತ್ತು ತಾಲೂಕು ಸಪ್ಲೈ ಆಫೀಸರ್, ಶ್ರೀ ಶಂಕರ ಮೆನೋನ್ ಕೂಡಾ ಬಾಡೂರು ರೇಶನ್ ಅಂಗಡಿ ಸಂದರ್ಶಿಸದ್ದಲ್ಲದೆ ಕೆಲವು ವರ್ಗದವರಿಂದ ಅಕ್ಕಿ ಭತ್ತವನ್ನು ಸ್ಟೋರಿಗೆ ಕೊಡಲು ಒಪ್ಪಿಗೆ ತೆಗೊಂಡಿರುವರು.

ವನಮಹೋತ್ಸವ ಸಂಬಂಧವಾಗಿ ತಾ. ೪ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂರವರು ಪೆರ್ಲಕ್ಕೆ ಬಂದಿರುವರು.

ಪೈವಳಿಕೆ — ಸ್ಥಳೀಯ ಪೈವಳಿಕೆ ಬೋ। ಹಾ। ಎ ಶಾಲೆಯಲ್ಲಿ ತಾ. 3-7-51ರಲ್ಲಿ ಕಯ್ಯಾರು ಇಗರ್ಜಿಯ ಗುರುಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಕುರಿಯ ಶಂಕರ ಭಟ್, ಶ್ರೀ ಬೀಡುಬೈಲು ಮಹಾಬಲ ಭಟ್; ಕೆ. ಆರ್. ಬಲ್ಲಾಳ್ ಮತ್ತು ಮುಖ್ಯೋಪಾಧ್ಯಾಯರು ವನಮಹೋತ್ಸವದ ಪ್ರಾಧಾನ್ಯತೆಯನ್ನು ವಿವರಿಸಿದರು. ತರುವಾಯ ಅಧ್ಯಕ್ಷರ ಭಾಷಣ, ಶ್ರಿ ಯಸ್. ಬಿ. ಶೆಟ್ರ ಧನ್ಯವಾದ ಸಮರ್ಪಣೆಯಾದ ಬಳಿಕ ಪಟೇಲ್ ಶ್ರೀ ಕೆ ಆರ್. ಬಲ್ಲಾಳರು ಶಾಲಾಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿದರು.

ಕಡೆಕಾರು:-ಶ್ರೀ ಮಹಾಗಣಪತಿ ಪ್ರಾಥಮಿಕ ಶಾಲೆಯಲ್ಲಿ ವನಮಹೋತ್ಸವವು, ಎಚ್. ಎಸ್. ಕುಡ್ವರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಬೋಜ ಪೂಜಾರಿ; ಶ್ರೀಮತಿ, ಮೋಹಿನಿ ಬಾಯಿ ಇವರು ಭಾಷಣ ಮಾಡಿದರು. ಪುರ ಮೆರವಣಿಗೆಯಾದ ನಂತರ ಕೆಲವು ಸಸಿಗಳನ್ನು ನೆಟ್ಟು, ಮಕ್ಕಳಿಗೆ ಸಿಹಿತಿಂಡಿಯನ್ನು ಸದ್ರಿ ಶಾಲಾ ಹಳೇ ವಿದ್ಯಾರ್ಥಿಗಳ ಲೆಕ್ಕದಲ್ಲಿ ಹಂಚಲಾಯಿತು. ಮುಖ್ಯೋಪಾಧ್ಯಾಯ ಶ್ರೀ। ಎಸ್. ಎ. ಭಂಡಾರಿಯವರು ಆಭಾರ ಸೂಚಿಸಿದರು.

ಘರಂಗಿಪೇಟೆ: ಇಲ್ಲಿನ ಶ್ರೀ. ರಾಮ ಹಾ। ಪ್ರಾ। ಶಾಲೆಯಲ್ಲಿ ತಾ. 5-7-51ರಲ್ಲು ವನಮಹೋತ್ಸವವು ಶ್ರೀ ಎ. ಸಿ. ಬಾಳ್ತಿಲ್ಲಾಯರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಮೆರವಣಿಗೆಯಾದ ಬಳಿಕ ಪ್ರಾರ್ಥನೆಯಾಗಿ ನೆರೆದವರಿಗೂ ಶಾಲಾ ಮಕ್ಕಳಿಗೂ ಸಿಹಿತಿಂಡಿ ಹಂಚಲಾಯಿತು.

ಬೈಂದೂರು—ಕಳೆದ ಒಂದು ವರ್ಷದಿಂದ ಬೈಂದೂರು ಫಿರ್ಕಾದ ನಿಳಜೇರ್, ಕಗ್ಗನೇರ್, ಮತ್ತು ಕಾಲ್ತೋಡು ಗ್ರಾಮದಲ್ಲಿ ಕೆಲವು ಜನ ಪುಂಡರು ಆಗಾಗ ಕೆಲವು ಆಕ್ರಮಗಳನ್ನು, ಅಂದರೆ ಹಾದಿಗೆ ಸಾಧಿ ತಲೆ ಹೋದವರಿಗೆ ಅಟ್ಟಿಕೊಂಡು ಬಂದು ಅವರ ಆಭರಣಗಳನ್ನು ದೋಚಿಕೊಳ್ಳುವುದು, ಕೊಳ್ಳೆಹೊಡೆಯುವುದು, ದರೋಡೆ ಮಾಡುವುದು ಹಾಗೂ ಕಳೆದ ಒಂದೆರಡು ತಿಂಗಳಿಂದೀಚೆಗೆ [illegible] ಸುಮಾರು ಸಲ ಕೆಲವು ಜನರು ದಾರಿಹೋಕರನ್ನು ಬೆನ್ನಟ್ಟಿಕೊಂಡು ಬಂದದ್ದು ಇವೆಲ್ಲಾ ಸಂಗ್ತಿಗಳನ್ನು ಸರಕಾರಕ್ಕೆ ಕೆಲವು ಜನರು ಆಗಾಗ್ಗೆ ತಿಳಿಸಿದ್ದರೂ, ಒಂದಕ್ಕೂ ಯಾವ ತರದ ಗಮನ ಕೊಡದೆ ಸುಮ್ಮನೆ ಇದ್ದುದು ತುಂಬಾ ಶೋಚನೀಯ ಸಂಗತಿ. ಇನ್ನಾದರೂ ಸಂಬಂಧ ಪಟ್ಟ ಡಿಪಾರ್ಟ್‌ಮೆಂಟಿನವರು ತಕ್ಕ ತನಿಖೆ ನಡೆಸಬೇಕಾಗಿ ಈ ಮೂಲಕ ಪ್ರಾರ್ಥಿಸುವ. (ಜನಸೇವಕ)

ದಕ್ಷಿಣ ಕನ್ನಡ ಜಿಲ್ಲೆಯ ಮತದಾರ ಕ್ಷೇತ್ರಗಳು

ಭಾರತದ ಪಾರ್ಲಿಮೆಂಟು ಮತ್ತು ಮದ್ರಾಸು ಶಾಸನ ಸಭೆಯ ಚುನಾವಣೆಯ ಬಗೆ ನಿರ್ಮಿಸಲ್ಪಟ್ಟಿರುವ ಮತದಾರ ಕ್ಷೇತ್ರಗಳ ವಿವರವು ಹೀಗಿದೆ:-

ಕುಂದಾಪುರ (ಸಾಮಾನ್ಯಸ್ಥಾನ ೧)
ಕುಂದಾಪುರ ಫಿರ್ಕಾದ ಮೊಳಹಳ್ಳಿ, ತಾಲಂಜೆ, ಮಾಲಾಡಿ, ಹಾಜಾಡಿ, ಅಮಾಸೆ ಬೈಲು, ಮುಂಬಳೆ, ಮುಂದಾಡಿ, ವೇದ್ಯಾಡಿ, ಮಲ್ಯಾಡಿ, ಹಾರ್ದಳ್ಳಿ, ಮಂಡಳ್ಳಿ, ಹಾಲಾಡಿ, ಹಕ್ಲಾಡಿ, ಕೆದಿ ಮನೆ, ಮಾದಂತಿ, ಹೊಸಕೊತ್ತೂರ, ಬಾಲ್ಯ, ಅಲ್ಪಾಡಿ ಹಳ್ಳಿಗಳನ್ನು ಬಿಟ್ಟು ಉಳಿದ ಇಡೀ ಕುಂದಾಪುರ ತಾಲೂಕು.

ಬ್ರಹ್ಮಾವರ-(ಸಾಮಾನ್ಯ ಸ್ಥಾನ ೧)
ಉಡುಪಿ ತಾಲೂಕಿನ ಕೋಟೆ ಮತ್ತು ಬ್ರಹ್ಮಾವರ ಫಿರ್ಕಾಗಳು ಅಲ್ಲದೆ ಕುಂದಾಪುರ ಮತದಾರ ಕ್ಷೇತ್ರಕ್ಕೆ ಸೇರದೆ ಉಳಿದಮೇಲೆ ಹೇಳಿದ ಹಳ್ಳಿಗಳು.

ಉಡುಪಿ- (ಸಾಮಾನ್ಯ ಸ್ಥಾನ ೧)
ಉಡುಪಿ ತಾಲೂಕಿನ ಉಡುಪಿ ಮತ್ತು ಕಾಪು ಫಿರ್ಕಾ.

ಕಾರ್ಕಳ - (ಸಾಮಾನ್ಯ ಸ್ಥಾನ ೧)
ಕಾರ್ಕಳತಾಲೂಕಿನ ಅಜೆಕಾರು, ಕಾರ್ಕಳ ಮೂಡಬಿದ್ರೆ ಫಿರ್ಕಾಗಳು.

ಪುತ್ತೂರು:(ಸಾಮಾನ್ಯ೨ಹರಿಜನ೧)
ಪುತ್ತೂರು ತಾಲೂಕು ಮತ್ತು ಕಾರ್ಕಳ ತಾಲೂಕಿನ ವೇಣೂರು

ಮೂಲ್ಕಿ:-(ಸಾಮಾನ್ಯ ಸ್ಥಾನ ೧)
ಮಂಗಳೂರು ತಾಲೂಕಿನ ಮೂಲ್ಕಿ, ಸುರತ್ಕಲ್, ಗುರುಪುರ ಫಿರ್ಕಾಗಳು.

ಮಂಗಳೂರು:(ಸಾಮಾನ್ಯ ಸ್ಥಾನ ೧)
ಮಂಗಳೂರು ತಾಲೂಕಿನ A ಮತ್ತು B. ಫಿರ್ಕಾಗಳು.

ಪಾಣೆ ಮಂಗಳೂರು-(ಸಾಮಾನ್ಯ ಸ್ಥಾನ ೧)
ಮಂಗಳೂರು ತಾಲೂಕಿನ ಬಂಟ್ವಾಳ ಮತ್ತು ಪಾಣೆ ಮಂಗಳೂರು, ಕಾಸರಗೋಡು ತಾಲೂಕಿನ ಮಂಜೇಶ್ವರ ಫಿರ್ಕಾಗಳು.

ಕಾಸರಗೋಡು(ಸಾಮಾನ್ಯಸ್ಥಾನ ೧)
ಕಾಸರಗೋಡು ತಾಲೂಕಿನ ಕುಂಬಳೆ ಮತ್ತು ಕಾಸರಗೋಡು ಫಿರ್ಕಾಗಳು.

ಹೊಸದುರ್ಗ - (ಸಾಮಾನ್ಯ ಸ್ಥಾನ ೧)
ಕಾಸರಗೋಡು ತಾಲೂಕಿನ ಹೊಸದುರ್ಗ ನೀಲೇಶ್ವರ ಫಿರ್ಕಾಗಳು.

ಋತುಸ್ರಾವ ನಿಂತಿತು

'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಸದಕಟ್ಟ ಋತುಸ್ರಾವವಾಗುವುದು. ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-1 ಸ್ಪೆಶ್ಯಲ್ ರೂ. 5-ಅಧಿಕಾಧಿಕ ಸ್ಪೆಶ್ಯಲ್ ರೂ. 8-[ಪಿ. ಓ ಹಸ್ತರಚಾಜ ಪ್ರತ್ಯೇಕ.]

MIS P. DEVEE, F. DS. (N. J.)
Tollygunge CALCUTTA.
ಸಬ್‌ಏಜೆಂಟರು ಪ್ರಭಾಕರಂಪನಿ, ಮಂಗಳೂರು

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕೆ. ಎಸ್ ರಾವ್ ರಸ್ತೆಯಲ್ಲಿದ್ದ ನಮ್ಮ ಈಗಿನ ಆಫೀಸು ಕಟ್ಟಡದಲ್ಲಿ ಸ್ಥಳ ಸಂಕೋಚವಾದ ಪ್ರಯುಕ್ತ ನಮ್ಮ ಮಂಗಳೂರು ಶಾಖಾ ಕಚೇರಿಯು ಇದೇ ತಾ. 18-6-51ನೇ ಸೋಮವಾರದಿಂದ ಹಂಪನಕಟ್ಟೆಯ ಕೆ. ಆರ್. ಕೆ. ಶೆಟ್ಟರ

ಡಯಮಂಡ್ ಬಿಲ್ಡಿಂಗ್ಸಿನ ವಿಶಾಲ ಸ್ಥಳಕ್ಕೆ

ಒಯ್ಯಲ್ಪಟ್ಟಿರುವುದು. ಸಂಬಂಧಪಟ್ಟ ಮಹಾಜನರು ಈ ಸ್ಥಳ ಬದಲಾವಣೆಯನ್ನು ಗಮನಿಸಬೇಕಾಗಿದೆ.

ಮಂಗಳೂರು
18-6-1951

ಜಿ ಆರ್. ಪಾಲ್ಯ
ಬ್ರಾಂಚ್ ಮೆನೇಜರ್.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

BALLBEARING
—THE LIFEBLOOD OF THE INDUSTRY

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —"CHEAPTRADE"

A. RAMSON AND CO.
68 MISTRI BUILDING BALARAM ST. BOMBAY 7

ಪ್ರವಾಸಿಯ ಪತ್ರಗಳು ೯

ಡಬ್ಲಿನ್ ನಗರವು ಅಯರ್‌ಲೆಂಡಿನ ಪೂರ್ವಭಾಗದ ಮಧ್ಯದಲ್ಲಿದೆ ಇದು ಲಿಫೀ (Liffey) ಎಂಬ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ನದಿಯ ಉತ್ತರ ಮತ್ತು ದಕ್ಷಿಣ ಭಾಗದಲ್ಲಿದ್ದು ನದಿಯು ಸಮುದ್ರಕ್ಕೆ ಸೇರುವಲ್ಲಿ ಅರ್ಧ ಚಂದ್ರಾಕಾರದ ಡಬ್ಲಿನ್ ಕೊಲ್ಲಿ ಇರುತ್ತದೆ ಜನಸಂಖ್ಯೆಯಿಂದ ತುಂಬಿದ್ದು ದೊಡ್ಡ ದೊಡ್ಡ ರಸ್ತೆ, ಕಟ್ಟಡಗಳಿಂದ ಕೂಡಿದ ಈ ಪಟ್ಟಣವು ನೋಡಲು ರಮ್ಯವಾಗಿದೆ ಜನರ ಭಾಷೆ ಇಂಗ್ಲಿಷ್, ರಸ್ತೆಗಳ ಹೆಸರುಗಳನ್ನು ಇಂಗ್ಲೀಷ್ ಮತ್ತು ಗೇಲಿಕ್ ಭಾಷೆಗಳಲ್ಲಿ ಬರೆಯಲಾಗಿದೆ ಪತ್ರಿಕೆಗಳು ಹೆಚ್ಚಾಗಿ ಇಂಗ್ಲಿಷ್ ಭಾಷೆಯವುಗಳಾಗಿದ್ದರೂ ಅಲ್ಲಲ್ಲಿ ಕೆಲವು ಗೇಲಿಕ್ ಭಾಷೆಯ ಬರವಣಿಗೆಗಳೂ ಇವೆ ಶಾಲೆಗಳಲ್ಲಿ ಗೇಲಿಕ್ ಭಾಷೆಯನ್ನು ಕಡ್ಡಾಯವಾಗಿ ಕಲಿಸುತ್ತಾರೆ.

ನಾವು ಆದಿತ್ಯವಾರ (ಮೇ 13) ಇಳಿದೊಡನೆಯೇ 'ಸೆಂಟ್ರಲ್' ಹೋಟೇಲಿಗೆ ಹೋಗಿ ಇಳಿದುಕೊಂಡೆವು ಇದು ಪಟ್ಟಣದ ಮಧ್ಯಭಾಗದಲ್ಲಿರುವ ಸುಮಾರು 100 ಕೋಣೆಗಳಿರುವ ದೊಡ್ಡ ಹೋಟೇಲು. ಇದರ ಸಂಪೂರ್ಣ ಆಡಳಿತೆ ಹೆಂಗಸರದ್ದೇ (ಈ ಕಾಗದವನ್ನು ನಾನು ಇಟೇಲಿಯ ಪ್ರಸಿದ್ಧ ಪಟ್ಟಣವಾದ ನೇಪಲ್ಸ್ ಎಂಬಲ್ಲಿಂದ ಜೂನ್ 13ರಲ್ಲಿ ಬರೆದುದು ಇನ್ನು ನನ್ನ ಪ್ರವಾಸವು ಮೂರು ದಿನ ಮಾತ್ರ ಬಾಕಿ ಇರುವುದರಿಂದಲೂ, ಯುರೋಪಿನ ಬೇರೆ ಬೇರೆ ದೇಶಗಳ ಹೋಟೇಲುಗಳು, ರೈಲ್ವೆಗಳು, ಹಡಗುಗಳ ವಿಚಾರ ಮಾಡಲಾದುವುಗಳನ್ನು ಬರೆಯಲಿಕ್ಕಿರುವುದರಿಂದಲೂ ಡಬ್ಲಿನಿನ ಈ ದೊಡ್ಡ ಹೋಟೇಲಿನ ವಿಷಯ ಈಗ ಬರೆಯುವುದಿಲ್ಲ)

ಇಲ್ಲಿಗೆ ಬಂದು ಸೇರಿದೊಡನೆಯೇ ಅಲ್ಲಿ ನಡೆಯುವ ಚುನಾವಣೆಯ ವಿಷಯ ದೈನಿಕ ಪತ್ರಿಕೆಗಳಲ್ಲಿ ಓದಿ ಅದೇ ದಿನ ಮಧ್ಯಾಹ್ನ ಸಮಯ ಒಂದು ಕಡೆಯಲ್ಲಿ ಚುನಾವಣೆಯ ಸಭೆ ಜರಗುವುದಾಗಿಯೂ, ಅಲ್ಲಿ ಡಿವೆಲೇರರ ಮಗ ವಿವಿಯನ್ ಡಿವೆಲೇರರು ಭಾಷಣ ಕೊಡುವುದಾಗಿಯೂಯೂ, ತಿಳಿದು ಅಲ್ಲಿಗೆ ಹೋದೆವು. ತಂದೆ ಈಮನ್ ಡಿ'ವೆಲೇರರು ಡಬ್ಲಿನಿನಿಂದ ಸುಮಾರು ೧೦೦ ಮೈಲು ದೂರ ಚುನಾವಣೆ ಸಭೆಗಳ ಸಂಬಂಧ ತಿರುಗಾಡುತ್ತಿದ್ದುದರಿಂದ ಅವರನ್ನು ನೋಡಿ ಮಾತನಾಡಬೇಕೆಂಬ ನನ್ನ ಆಕಾಂಕ್ಷೆ, ನಾನು ಅಲ್ಲಿ ಇದ್ದ ನಾಲ್ಕು ದಿನಗಳಲ್ಲೂ ಅವರು ಡಬ್ಲಿನಿಗೆ ಹಿಂತಿರುಗಿ ಬರದಿದ್ದ ಕಾರಣ, ನೆರವೇರಲಿಲ್ಲ ಚುನಾವಣೆಗೆ ಸಭೆಯಲ್ಲಿ ಅವರ ಮಗ, ಅಲ್ಲಿಯ ಅವರ ಪಕ್ಷದ ಕಾರ್ಯದರ್ಶಿ, ಇನ್ನೊಬ್ಬ ಉಮೇದ್ವಾರರು ಮೊದಲಾದವರು ಕಾಲುಗಂಟೆ ಮಾತನಾಡಿದರು. ಅವರೆಲ್ಲರೂ ನಮ್ಮ ದೇಶದ ಮೇಲೆ ಮುಖ್ಯವಾಗಿ ಮಹಾತ್ಮಾ ಗಾಂಧಿಯವರ ಮೇಲೆ ಆದರ ತೋರಿಸಿದ್ದಲ್ಲದೆ, ಆಯರ್‌ಲೆಂಡ್ ದೇಶವನ್ನು ತುಂಡುಮಾಡಿದ ವಿಷಯವನ್ನು ಎಂದೆಂದಿಗೂ ಜನರು ಒಪ್ಪಲಿಕ್ಕಿಲ್ಲವಾಗಿಯೂ, ಬ್ರಿಟಿಷರು ಮಾಡಿದ ಈ ಕೆಲಸಕ್ಕೆ ತಮಗೆ ಅತೃಪ್ತಿ ಇರುವುದಾಗಿಯೂ, ತಿಳಿಸಿದರು. ಸಭೆ ಸುಮಾರು ಎರಡು ಗಂಟೆಯ ವರೆಗೆ ರಸ್ತೆಯ ಬದಿಯಲ್ಲಿ ಧ್ವನಿವಾಹಕ ಇಟ್ಟು ನಡೆಯಿತು, ಭಾಷಣಗಳೆಲ್ಲವೂ ಇಂಗ್ಲಿಷಿನಲ್ಲೇ ಏಕೆಂದರೆ ಹಿಂದಿನ ಭಾಷೆ ಗೇಲಿಕ್ ಮರೆತುಹೋಗಿ ಈಗ ಎಲ್ಲರೂ ಇಂಗ್ಲಿಷನ್ನೇ ಮಾತನಾಡುವರು.

ಭಾಷಣಗಳು ವ್ಯಕ್ತಿಗಳ ವಿಚಾರವಾಗಿರಲಿಲ್ಲ ಭಾಷಣಕಾರರು, ಆಗ ಸರಕಾರವನ್ನು ನಡೆಸುತ್ತಿದ್ದ ಜೋನ್ ಕಾಸ್ಟೇಲರ ಪಕ್ಷ ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಹೇಳಿ, ಡಿವಲೇರರ ಪಕ್ಷ "ಫಿಯಾನ್ನಾ ಫೈಲ್" (Fiana Fail) ಬಹುಸಂಖ್ಯಾಕವಾಗಿ ಆರಿಸಿ ಬಂದರೆ ಮಾಡುವ ಕೆಲಸವನ್ನು ವಿವರಿಸಿದರು ಸಭೆಯಲ್ಲಿ ಏನೂ ಗಲಾಟೆಯಿಲ್ಲ. ರಸ್ತೆಯಲ್ಲೇ ಸಭೆ ಆಗುವಾಗ ಬದಿಯಲ್ಲಿ ಮೋಟಾರ್ ಕಾರ್ ಮೊದಲಾದ ವಾಹನಗಳು ಹೋಗುತ್ತಾ ಬರುತ್ತಾ ಇದ್ದುವು. ಒಟ್ಟು ಪೋಲೀಸಿನವ ಮಾತ್ರ ಅಲ್ಲಿದ್ದ ಕಳೆದ ತಿಂಗಳು 27ರಲ್ಲಿ ನಡೆದ ಚುನಾವಣೆಯಲ್ಲಿ ಡಿವೆಲೇರರ ಪಕ್ಷಗೆದ್ದು ಈಗ ಅವರೇ ಸರಕಾರವನ್ನು ವಹಿಸಿಕೊಂಡಿರುವುದಾಗಿ ಈಗ ತಿಳಿಯಿತು.

ಆ ದಿನ ಸಾಯಂಕಾಲ ಅಲ್ಲಿಯ ದೊಡ್ಡ ವಸ್ತು ಸಂಗ್ರಹಾಲಯವನ್ನು ನೋಡಿದೆವು ಅಲ್ಲಿ ಬಹು ಪುರಾತನದ "ಕೆಲ್ಟ" ಎಂಬ ಊರಿನ ನಾಗರಿಕತೆಯ ವಿಷಯಕವಾದ ಅನೇಕ ವಸ್ತುಗಳ ಪ್ರದರ್ಶನವಿತ್ತು- ಹಿಂದಿನ ಜನರು ಉಡುಪು, ಅವರು ಉಪಯೋಗಿಸಿದ ಚಿನ್ನಾಭರಣಗಳು, ಪಾತ್ರೆ ಮೊದಲಾದುವುಗಳು ಇನ್ನೊಂದು ದೊಡ್ಡ ಕೋಣೆಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಬೇಕಾದರೆ ನಡೆದ ಎಲ್ಲಾ ಪ್ರಯತ್ನಗಳ ಪ್ರದರ್ಶನದ ವಸ್ತುಗಳು-ಬಂದೂಕು, ಆಗಿನ ಪ್ರಸಿದ್ಧ ಪುರುಷರ ಕಾಗದಗಳು, ಕೆಲವರ ಪ್ರತಿಮೆಗಳು, ಹಾಗೆ 1916ರಲ್ಲಿ ಈ ಮುಂಚೆ ಪ್ರಸ್ತಾಪಿಸಿದ ದಂಗೆಯಲ್ಲಿ ಡಿವೆಲೇರರನ್ನು ಸೇನಾಧಿಪತಿಯಾಗಿ ನೇಮಿಸಿದಾಗ ಪೆನ್ಸಿಲಿನಲ್ಲಿ ಬರೆದ ಕಾಗದ ಮೊದಲಾದವುಗಳು ಇದ್ದುವು ಅವನ್ನು ನೋಡಿದರೆ ಆ ದೇಶದ ಯಾವ ಬಾಲಕನಿಗಾದರೂ ದೇಶಪ್ರೇಮವುಂಟಾಗದಿರದು ಇದೇ ರೀತಿಯ ಇನ್ನೂ ಅನೇಕ ಪ್ರದರ್ಶನ ವಸ್ತುಗಳು ಇದ್ದುವು ಅದರ ವಿವರ ಹೇಳಿದರೆ ಮುಗಿಯಲಾಗದು

ಮರುದಿನ ಸೋಮವಾರ 'ವ್ಹಿಟ್ ಸೋಮವಾರ' (Whit Monday) ಎಂಬ ರಜೆ. ಅಲ್ಲಿಯ ಬಹುದೊಡ್ಡ (Phoenix) ಉದ್ಯಾನವನ್ನು ಹೋಗಿ ನೋಡಿದೆವು, ಅದರ ವಿಸ್ತೀರ್ಣ 1800 ಎಕ್ರೆ. ಅನೇಕ ಕಡೆಗಳಲ್ಲಿ ಹೂವಿನ ತೋಟಗಳೂ, ಮೃಗ ಪಕ್ಷಿ ಮೊದಲಾದುವುಗಳಿರುವ ಮೃಗಾಲಯಗಳೂ ಇಲ್ಲಿ ಇರುವುದರಿಂದ ಸಾವಿರಗಟ್ಟಳೆ ಜನರು ದಿನನಿತ್ಯವೂ ಇಲ್ಲಿಗೆ ಬಂದು ಹೋಗುವರು ಆ ಬಗ್ಗೆ ಅಲ್ಲಿಗೆ ಬಂದು ಹೋಗುವ ಪ್ರತ್ಯೇಕ ಬಸ್ಸುಗಳೂ ಕೂಡ ಇವೆ ಡಬ್ಲಿನ್ ನಗರದಲ್ಲಿ ಮುಂಚೆ ಇದ್ದ ಟ್ರಾಮು ಲೈನ್ ತೆಗೆದು, ಈಗ ಎಲ್ಲೆಲ್ಲಿಯೂ ಬಸ್ಸುಗಳನ್ನೇ ಉಪಯೋಗಿಸುತ್ತಾರೆ ಈ ಉದ್ಯಾನದಲ್ಲಿ ಮೋಟರ್ ಕಾರಿನ ಪಂದ್ಯಾಟದ ದಾರಿ (Race Course) ಕೂಡ ಇದೆ ಆ ದಿನ ಮಳೆಯಿಲ್ಲದೆ ಸೂರ್ಯಪ್ರಕಾಶ ಸರಿಯಾಗಿ ಬಿದ್ದ ಕಾರಣ ಮತ್ತು ರಜಾದಿನವಾದುದರಿಂದ ಸಾವಿರಾರು ಗಂಡಸರೂ ಹೆಂಗಸರೂ ಮಕ್ಕಳೂ ಅಲ್ಲಿ ಬಂದಿದ್ದರು. ಅಲ್ಲಿಯ ಮೃಗಾಲಯವು ಲಂಡನಿನಷ್ಟು ದೊಡ್ಡದಲ್ಲವಾದರೂ ಅಲ್ಲಿ ಒಂದು ವಿಶೇಷವಿದೆ ಸ್ವಲ್ಪ ಹಣಕೊಟ್ಟು ಅಲ್ಲಿ ಇರುವ ಆನೆ, ಪುಟ್ಟ ಕುದುರೆ (ponies) ಗಳ ಮೇಲೆ ಮಕ್ಕಳು ಐದು ನಿಮಿಷಗಳ ವರೆಗೆ ಸವಾರಿಮಾಡಬಹುದು. ಅದು ಅಲ್ಲಿ ಬಹು ಜನಪ್ರಿಯವಾಗಿದೆ ಅಲ್ಲಿಯ ಆನೆಗೆ ಕೂಡ ಲಂಡನಿನಂತೆಯೇ ಚಳಿಯಿಂದ ಬಿಳಿ ಛಾಯೆ ಬಂದಿರುತ್ತದೆ ನಮ್ಮ ದೇಶದ ಎರಡು ಹುಲಿಗಳು- ಒಂದು ಗಂಡು, ಇನ್ನೊಂದು ಹೆಣ್ಣು- ಅಲ್ಲಿವೆ ಅವುಗಳಿಗೆ "ರಾಮ ಮತ್ತು "ಸೀತಾ" ಎಂದು ಹೆಸರು ಕೊಟ್ಟಿದ್ದಾರೆ. ಹಿಂದೂಸ್ಥಾನದಲ್ಲಿದ್ದ ಡಾ। ಮೂನಿ (Dr Mooney ಬಹುಶಃ ಐರಿಷ್ ಜನ) ಎಂಬವರು ಅವುಗಳನ್ನು ಧರ್ಮಾರ್ಥವಾಗಿ ಕೊಟ್ಟಿದ್ದಾರೆ, ಅರೇಳು ಸಾವಿರ ಮೈಲುಗಳ ದೂರವಿದ್ದು ಈ ಮೃಗಗಳನ್ನು ನೋಡುವಾಗ ನಮಗೆ ನಮ್ಮ ದೇಶ ಎಂಬ ಪ್ರೀತಿ ಬರುತ್ತದೆ.

ನನ್ನ ಡಬ್ಲಿನ್ ಪ್ರಯಾಣದ ಕುರಿತು ಲಂಡನಿನ ಇಂಡಿಯಾ ಆಫೀಸಿನವರು ಅಲ್ಲಿಯ ಸರಕಾರಿ ಮಂತ್ರಿಗಳಿಗೆ ಮುಂಚೆಯೇ ಬರೆದಿದ್ದರು, ಆದುದರಿಂದ ಅಲ್ಲಿಯ ಸರಕಾರದ ಕಾರ್ಯದರ್ಶಿಗಳು- ಅವರ ಹೆಸರು ಮೆಕ್‌ಡೊನಾಲ್ಡ್-ಬಹು ಆದರದಿಂದ ನಮಗೆ ಭೇಟಿಕೊಟ್ಟದ್ದಲ್ಲದೆ ಕೂಡಲೇ ಅಲ್ಲಿಯ ನ್ಯಾಯ ವಿಧಾಯಕ ಸಭೆಯ ಕಾರ್ಯದರ್ಶಿಗಳು-ಅಧ್ಯಕ್ಷರು (Speaker), ಸೆನೆಟ್, ಡಬ್ಲಿನ್ ಪಟ್ಟಣದ ಲಾರ್ಡ್ ಮೇಯರ್ (Lard Mayor), ಅಲ್ಲಿನ ವರಿಷ್ಠ ನ್ಯಾಯಾಲಯ (Supreme Court) ದ ಮುಖ್ಯ ಜಡ್ಜರು (Chief Justice) ಮತ್ತು ಮುಖ್ಯಮಂತ್ರಿ ಜೋನ್ ಕಾಸ್ಟೆಲ್ಲೊ ಇವರನ್ನೆಲ್ಲ ಬಾಕಿ ಉಳಿದ ಎರಡೇ ದಿನಗಳಲ್ಲಿ ಸಂದರ್ಶಿಸಲಿಕ್ಕೆ ನಮಗೆ ಏರ್ಪಾಡುಮಾಡಿಕೊಟ್ಟರು. ಅಯರ್ ರಿಪಬ್ಲಿಕ್ಕಿನ ಅಧ್ಯಕ್ಷರನ್ನು ಕೂಡ ನೋಡಲು ಏರ್ಪಾಡು ಮಾಡಲಿಕ್ಕೆ ಅವರು ಪ್ರಯತ್ನ ಪಟ್ಟರು. ಆದರೆ ಅವರು ರಜೆಯಲ್ಲಿ ಹೋದವರು ಹಿಂತಿರುಗಿ ಬಾರದ ಕಾರಣ ಆಗಲಿಲ್ಲ ಅಲ್ಲಿಯ ಸರಕಾರದ ಕುರಿತಾದ ಅನೇಕ ಪುಸ್ತಕಗಳನ್ನು ಕೂಡ ಧರ್ಮಾರ್ಥವಾಗಿ ನನಗೆ ಕೊಟ್ಟರು ಅಲ್ಲಿಯ ಶಾಸನ ಸಭೆಯ ಕಾರ್ಯದರ್ಶಿ ಓ ಕೊನ್ನೆಲ್ ಎಂಬವರು ಇವರು 1916ನೆಯ ಇಸವಿಯಲ್ಲಿ ಜನರಲ್ ಪೋಸ್ಟಾಫೀಸಿನಲ್ಲಿ ನಡೆದ, ಈ ಮೊದಲು ನಾನು ಪ್ರಸ್ತಾಪಿಸಿದ ದಂಗೆಯಲ್ಲಿದ್ದವರಾಗಿ ಅದರ ವಿಷಯ ಹೇಳಿದ್ದಲ್ಲದೆ ಅಲ್ಲಿಯ ಎಸಂಬ್ಲಿ ಹಾ

THE PANGAL NAYAK BANK LIMITED

Head Office] (Incorporated in 1920) [Udipi; S K

SEASON DEPOSITS are received and accepted on the following terms —

For three, four or five months deposits at 3% p. a

For six, seven or eight months deposits at 3½% p a

These are to be terminable by the 30th June 1951

Interest is payable along with the principal at maturity

Our THREE YEAR CASH CERTIFICATE bring to You a fair yeild For particulars please ask for copy of Rules

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ ..ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ಪಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ. ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿಖಾರ, ಕುಂಬಳಕಾಯಿ, ಒಗ್ಗರಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಖರ್ಚ ೮ ಆಣೆ

ಏಜೆಂಟರು.—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ.-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್ ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 119/1951

ಎಸ್. ಗೋವಿಂದನ್ ನಂಬ್ಯಾರ್ —ವಾದಿ

ಎದ್ರಿ

ಪುಟ್ಟತೋಡಿ ಕುಂಞ್ಞಮ್ಮ ಮಹಮ್ಮದ ಬ್ಯಾರಿ ಮಗ, ಫ್ಯಾಕ್ಟರಿಸ್ಟ್, ಕಾಸರಗೋಡು ಕಸಬಾ —ಪ್ರತಿವಾದಿ

ಇವರೊಳಗೆ

ಸದ್ರಿ ವ್ಯವಹರಣೆಯ ವಾದಿಯ ಕಡೆ ನೋಟೀಸು –

ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಬಾಕಿ ಬ್ಯಾಜು ರೂಪಾಯಿ 373 12-0ನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 26-7-1951ಕ್ಕೆ ಇಟ್ಟಿರುವುದರಿಂದ ಆ ದಿವ್ಸ ಸದ್ರಿ ಪ್ರತಿವಾದಿಯು ಹಾಜರಾಗದಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುವದೆ.

K D V B Ejman

Advocate for Plaintiff.

KASARAGOD, 4-7-1951

ಉಡ್ಪಿ ಡಿ ಮು ಕೋರ್ಟಿನಲ್ಲಿ

S. C No 95/1951

ಸಾಲ್ವದೋರ್ ಮಾಟೀಸ್ —ವಾದಿ

ಮತ್ತು

ಲೂಸಿ ಮಬ್ಬಾದೊ ವಾದಿಯ ಮಗಳು. C/o ಪಿ ಬಾರೋನ, ನಂಬ್ರ-4, ಪ್ರಿನ್ಸ್ ಓಫ್ ವೇಲ್ಸ್ ರೋಡ್, ಗೋರ್‍ಪುರಿ, ಪೂನ.

—ಪ್ರತಿವಾದಿ

ಈ ಮೂಲಕ ಪ್ರತಿವಾದಿಗೆ ತಿಳುಹಿಸುವದೇನೆಂದರೆ –

ತಿಂಗಳು 1ರ ರೂ 25/-ರಂತೆ ವಾದಿಗೆ ನೀವು ತೆರುವರೆ ಮಾಡಿದ ವಾಗ್ದಾನದ ಮೇರೆಗೆ, 1950ನೇ ಇಸ್ವಿ ಸಪ್ಟಂಬರ, ಅಕ್ಟೋಬರ, ನವಂಬ್ರ ವ ಡಿಸೆಂಬ್ರ ತಿಂಗಳುಗಳಿಗೆ ನಿಮ್ಮಿಂದ ಬರಬೇಕಾದ ಅವೇಜು ಕೇಳಿ ವಾದಿಯು ನಿಮ್ಮ ಮೇಲೆ ಮಾಡಿದ ವ್ಯಾಜ್ಯವು ತಾ. 27 7 1951ಕ್ಕೆ ಇಟ್ಟಿದೆ ಆ ದಿನ ಪೂರ್ವಾಹ್ನ 10ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಬ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಮು ಮೇರೆಗೆ)

U. B Krishna Rao,

ವಾದಿಕಡೆ ಎಡ್ವೋಕೇಟ್.

ಉಡುಪಿ, ತಾ 4-7-1951

ಲ್, ಲೈಬ್ರರಿ ಮೊದಲಾದವುಗಳನ್ನು ತೋರಿಸಿ, ಅದರ ಸಂಬಂಧವಾದ ಪುಸ್ತಕಗಳನ್ನು ಕೊಟ್ಟು ಅಧ್ಯಕ್ಷರ ಭೇಟಿ ಮಾಡಿಸಿದರು. ಅಧ್ಯಕ್ಷರ ಪ್ರಾಯ ಎಪ್ಪತ್ತಕ್ಕೆ ಮೀರಿದ್ದರೂ ಅವರ ಆರೋಗ್ಯ ಉತ್ತಮವಾಗಿದ್ದು ಚುನಾವಣೆಯ ನಂತರ ಕೂಡ ಅವರ ಕೆಲಸ ಮುಂದುವರಿದಿದೆ. ಇಲ್ಲಿಯ ಘಟನೆಯಲ್ಲಿ ಅಧ್ಯಕ್ಷರು ಅವರಾಗಿಯೇ ಬಿಡುವುದಾದರೆ ಚುನಾವಣೆಗೆ ಮೊದಲಾಗಿ ತಿಳಿಸಬೇಕು. ತಿಳಿಸದಿದ್ದರೆ ಚುನಾವಣೆ ಇಲ್ಲದೆ ಅವರ ಮೆಂಬರಿಕೆ ಮುಂದುವರಿಯುತ್ತದೆ. ಅಲ್ಲಿಯೇ ಸಮೀಪವಿರುವ ಸೆನೆಟ್ ಎಂದರೆ ನಮ್ಮಲ್ಲಿಯ ಕೌನ್ಸಿಲಿಗೆ ಸಮಾನವಾದ ಸಭೆ ಮರುದಿವಸ ನಡೆಯುವುದಾಗಿತ್ತು. ಆ ಸಭೆಯನ್ನು ಕೂಡಾ ನೋಡಿದೆ.

ಅಲ್ಲಿಯ ಕೋರ್ಟುಗಳು ಲೆಫಿ ನದಿಯ ದಂಡೆಯಲ್ಲಿ ಹೊಸತಾಗಿ ಕಟ್ಟಿದವುಗಳಿದ್ದು "ನಾಲ್ಕು ಕೋರ್ಟುಗಳು (Four Courts) ಎಂಬ ಹೆಸರು ಕಟ್ಟಡಕ್ಕಿದೆ. ಮಧ್ಯದಲ್ಲಿ ಉರುಟಾದ ದೊಡ್ಡ ಸಭಾಂಗಣವಿದ್ದು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕೋರ್ಟುಗಳ ಕಟ್ಟಡಗಳಿದ್ದ ಕಾರಣ ಈ ಹೆಸರು ಬಂದಿದೆ. ಸುಪ್ರೀಂ ಕೋರ್ಟಿನ ಮುಖ್ಯ ಜಡ್ಜರು ಮೆಕ್‌ಗ್ವಾಯರ್ ಎಂಬವರು. ಅವರಿಗೆ ಸುಮಾರು 62 ವರ್ಷ ಪ್ರಾಯ. ಹೋದಕೂಡಲೆ ನಮ್ಮನ್ನು ಅವರ ಕೋಣೆಯಲ್ಲಿ ಸ್ವಾಗತಿಸಿ, ಅಲ್ಲಿಯ ಕೋರ್ಟುಗಳ ಕ್ರಮ ವಿವರಿಸಿ, ಅವರು ಕುಳಿತುಕೊಳ್ಳುವ ಕೋರ್ಟಿಗೆ ಕರೆದುಕೊಂಡು ಹೋಗಿ ತೋರಿಸಿದರು. ಅನಂತರ ಅವರ ಕಾರ್ಯದರ್ಶಿಯನ್ನು ತನ್ನ ವಕೀಲ ಮಗನ ಭೇಟಿ ಮಾಡಿಸಲಿಕ್ಕೂ, ಹೈಕೋರ್ಟು ವಕೀಲರ ಕೋಣೆ ಮೊದಲಾದುವುಗಳನ್ನು ವಿವರವಾಗಿ ತೋರಿಸಲಿಕ್ಕೂ ನಮ್ಮೊಡನೆ ಕಳುಹಿಸಿದರು. ಎರಡು ಹೈಕೋರ್ಟು ಬೆಂಚುಗಳಲ್ಲಿಯೂ ಮೊಕದ್ದಮೆ ಅಪೀಲುಗಳ ನಂಬ್ರಗಳೇ. ಇಲ್ಲಿಯ ವಕೀಲರ ಕೋಣೆಯಲ್ಲಿ ಒಂದು ಹೊಸ ಕ್ರಮ—ಅದು ಬೇರೆಲ್ಲಿಯೂ ಇಲ್ಲ. ಅಲ್ಲಿ ಇದ್ದ ಅನೇಕ ಮಂದಿ ವಕೀಲರ ಪೈಕಿ ಮೇಲೆ ಹೇಳಿದ ಮುಖ್ಯ ಜಡ್ಜರ ಮಗ ಒಬ್ಬರು. ಅವರು ನನ್ನೊಡನೆ ಮಾತಾಡಿ ಈ ಹೊಸ ಕ್ರಮವನ್ನು ವಿವರಿಸಿದರು. ವಕಾಲತು ಕೊಡುವುದು, ಅನುಭವ ಕೊಡುವುದು, ವಕೀಲರನ್ನು ನಿಶ್ಚಯಿಸುವುದು ಎಲ್ಲ ಇಲ್ಲಿಯೇ. ಇಂಗ್ಲಾಂಡಿನಂತೆ (ಮುಂಬಾಯಿ, ಕಲ್ಕತ್ತಗಳಲ್ಲಿ ಕೂಡ ಹಾಗೆಯೇ) ವಕೀಲರು, ಸೊಲಿಸಿಟರರು ಎಂಬ ಎರಡು ಸಂಸ್ಥೆಗಳು ಅಲ್ಲಿವೆ. ವಕೀಲರು ಕೋರ್ಟಿನಲ್ಲಿ ನಂಬ್ರ ನಡೆಸುವುದು ಮಾತ್ರ. ಕೈಫೀತು ಉದಾಹರಣೆಗೆ ಬರೆಸುವುದು, ಸಾಕ್ಷಿಪತ್ರ ಹಾಕುವುದು, ರಿಕಾರ್ಡು ದಾಖಲು ಮಾಡುವುದು ಮೊದಲಾದ ಕೆಲಸ ಸೊಲಿಸಿಟರಿಗೆ ಸೇರಿದೆ. ಇಲ್ಲಿಯ ಹೊಸ ಕ್ರಮವೆಂದರೆ ವಕೀಲರು ತಮ್ಮ ಕೆಲಸಕ್ಕಾಗಿ ಪ್ರತ್ಯೇಕ ಆಫೀಸಿಂದು ಮಾಡುವುದಿಲ್ಲ. ಸೊಲಿಸಿಟರರು ನಂಬ್ರದ ಅನುಭವ ಕೊಡುವುದು ವಕೀಲರ ಕೋಣೆಯ ಜೊತೆಗಿನ ಒಂದು ಕೋಣೆಯಲ್ಲಿ. ಅನುಭವ ಕೊಡಲಿಕ್ಕೆ ಬಂದವರು ಅಲ್ಲಿ ಬಾಗಿಲಲ್ಲಿರುವ ಗುಮಾಸ್ತನ ಹತ್ತಿರ ನನಗೆ ಇಂಥ ವಕೀಲರು ಬೇಕು ಎಂದು ಹೇಳಿದ ಕೂಡಲೆ ಅವರ ಹೆಸರನ್ನು ಗಟ್ಟಿಯಾಗಿ ಆ ಕ್ಲಾರ್ಕನು ಕೂಗಿ ಕರೆಯುತ್ತಾನೆ. ಆಗ ಆ ವಕೀಲರು ಸೀದಾ ಬಾಗಿಲ ಹೊರಗೆ ಬಂದು ನಂಬ್ರದ ವಕಾಲತು ಅಂಗೀಕರಿಸುವುದು, ಅನುಭವ ಪಡೆಕೊಳ್ಳುವುದು—ಆ ಕೋಣೆಯೊಳಗೆ ಬೇರೆ ಯಾರೂ ಹೋಗಕೂಡದು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಡಬ್ಲಿನಿನಲ್ಲಿ ನಾನು ನೋಡಿದ ಇನ್ನೊಬ್ಬ ಪ್ರಮುಖವ್ಯಕ್ತಿ ಆಗಿನ ಮುಖ್ಯ ಮಂತ್ರಿಗಳಾದ ಜೋನ್ ಕೊಸ್ಟೆಲ್ಲೋ, ಅವರು ವಕೀಲ ವೃತ್ತಿಯಲ್ಲಿದ್ದರು. ಅವರ ಪಾರ್ಟಿ "ಫಿಯಾನ್ನಾ ಗೈಲ್" 1948ರ ಚುನಾವಣೆಯಲ್ಲಿ ಅನೇಕ ಪಕ್ಷಗಳ ಪೈಕಿ ಬಹುಮತ ಡಿವೆಲೇರರ ಪಕ್ಷಕ್ಕೆ ದೊರೆತಿದ್ದರೂ, ಬಾಕಿ ಉಳಿದ ಅನೇಕ ಪಕ್ಷಗಳು ಸೇರಿ ಒಂದು ಸರಕಾರ ನಡೆಸುವ ಪಕ್ಷ ಮಾಡಿದ ಕಾರಣ ಕೊಸ್ಟೆಲರು 1948ನೆ ಫೆಬ್ರವರಿಯಿಂದ ಪ್ರಧಾನರಾದರು. ಅವರ ಮುಖಂಡತ್ವಕ್ಕೆ ಸೇರಿದ ಅನೇಕ ಪಕ್ಷಗಳಲ್ಲಿ ಒಂದು ಅವರದೇ ಆದ ಫಿಯಾನ್ನಾ ಗೇಲ್, ಲೇಬರ್ ಪಾರ್ಟಿ, ಯಾ ಕೆಲಸಗಾರರ ಪಕ್ಷ, ಕ್ಲೇನ್ (Clan) ಪಾರ್ಟಿ, ರೈತ ಪಕ್ಷ ಮತ್ತು ಕೆಲವರು ಸ್ವತಂತ್ರರು ಎಲ್ಲರೂ ಸೇರಿ ಈ ಸಂಯುಕ್ತ ಪಕ್ಷವಾಗಿದೆ. ಅದರಲ್ಲಿ ಪ್ರತಿಯೊಂದು ಪಕ್ಷದ ಮುಂದಾಳಿಗೂ ಮಂತ್ರಿ ಕೆಲಸವಿದೆ. ಹೀಗಿದ್ದರೂ ಕೆಲಸ ಮುಂದುವರಿಯಲಿಕ್ಕೆ ಕಷ್ಟವಾಗಿ ಪುನಃ ಚುನಾವಣೆ ಕಳೆದ ತಿಂಗಳಲ್ಲಿ ಆದದ್ದು. ಡಬ್ಲಿನ್ ಪಟ್ಟಣದ ಲಾರ್ಡ್ ಮೇಯರರು ಅವರ ಪಾರ್ಟಿಯವರು. ಅವರು ಸುಮಾರು 42 ವರ್ಷ ಪ್ರಾಯದವರಾಗಿದ್ದು, ನಾನು ಅವರನ್ನು ಹೋಗಿ ನೋಡಿದಾಗ ಅವರಿಗೆ ತುಂಬಾ ಸಂತೋಷವಾಯಿತು.

ಡಬ್ಲಿನಿನಲ್ಲಿ ಮುನಿಸಿಪಾಲಿಟಿಯವರು ಒಂದು ಕಡೆ ಸುಮಾರು 300 ಹೊಸ ಮನೆಗಳನ್ನು ಕೆಲಸಗಾರರಿಗೆ ಕಟ್ಟಿಸಿದ್ದರು. ಅಲ್ಲಿಗೆ ಹೋಗಿ ಅವುಗಳನ್ನು ನೋಡಿದೆ. ಹೆಚ್ಚುಕಡಿಮೆ ಅವುಗಳು ಇಂಗ್ಲಾಂಡಿನಲ್ಲಿದ್ದ ಮನೆಗಳಿದ್ದಂತೆಯೇ ಇದ್ದುವು. ಬಾಡಿಗೆ ವಾರಕ್ಕೆ 12ರಿಂದ 27 ಶಿಲಿಂಗ್ ವರೇಗೆ. ಶಿಲಿಂಗ್ ಅಂದರೆ ಅಂದಾಜು 10 ಆಣೆ. ಆದರೆ ಅಲ್ಲಿಯ ಕೆಲಸಗಾರರು ಇಂಗ್ಲಂಡಿಗಿಂತ ಬಡವರಾಗಿ ನನಗೆ ಕಂಡಿತು.

ಒಂದು ದಿನವಿಡೀ ಡಬ್ಲಿನಿನಿಂದ ಸುಮಾರು 30-40 ಮೈಲು ದೂರವಿರುವ, ಮೇಲೆ ಪ್ರಸ್ತಾವಿಸಿದ ಗ್ಲೆಂಡ್ ಲೋಕ್ ಎಂಬ ಊರಿಗೆ ಬಸ್ಸಿನಲ್ಲಿ ಹೋದೆವು. ಹೋಗುವಾಗ ಡಬ್ಲಿನಿನ ಸರಹದ್ದಿನ ಊರುಗಳನ್ನು ಕಾಣಬಹುದು. ಸುಮಾರು 8-10 ಮೈಲು ದೂರದಲ್ಲಿ ಡಬ್ಲಿನ್ ಊರವರು ಸಮುದ್ರ ಸ್ನಾನಕ್ಕೆ ಬರುವ ಬ್ರೇ (Bray) ಎಂಬ ಪಟ್ಟಣವಿದೆ. ಡಬ್ಲಿನಿನಿಂದ ಅಲ್ಲಿ ವರೆಗೂ ಅನೇಕ ಸಣ್ಣ ಸಣ್ಣ ಉಪ್ಪರಿಗೆ ಇಲ್ಲದ ಮನೆಗಳು ಬಹು ಚಂದವಾಗಿ ಕಟ್ಟಿರುವುದನ್ನು ಕಾಣಬಹುದು. ರಸ್ತೆಯಿಂದ ಸುಮಾರು 30-40 ಫೀಟು ದೂರವಿದ್ದು, ಸುಮಾರು 40 ಫೀಟು ಉದ್ದ, 30 ಫೀಟು ಅಗಲವಿದ್ದು, ಬಹು ಚಲೋ ರೀತಿಯಲ್ಲಿ ಕಟ್ಟಲ್ಪಟ್ಟಿವೆ. ಇವೆಲ್ಲ ಬಹು ಕಡಿಮೆ ಖರ್ಚಿನಿಂದ ಕಟ್ಟಿದವುಗಳು. ಅನೇಕ ಊರುಗಳನ್ನು ನಾನು ನೋಡಿದರೂ ಅವುಗಳಷ್ಟು ಚಂದವಾದ ಮನೆಗಳನ್ನು ಬೇರೆಲ್ಲಿಯೂ ಕಂಡಿಲ್ಲ. ಅಲ್ಲಿಂದ ಮುಂದೆ ಹೋಗುವಾಗ ಹಳ್ಳಿ ಊರುಗಳ ದೃಶ್ಯ ಸಿಕ್ಕುತ್ತದೆ—ಗುಡ್ಡೆ, ಬೈಲು ಚೆನ್ನಾಗಿ ಬೆಳೆದ ಜಾನುವಾರುಗಳು, ಎಲ್ಲೆಲ್ಲಿಯೂ ತಿನ್ನಲಿಕ್ಕೆ ಬೇಕಾದಷ್ಟು ಹುಲ್ಲು, ಅಲ್ಲಲ್ಲಿ ಪೈನ್ (pine) ಎಂಬ ಹೆಸರು, ಕಪ್ಪು ಬಣ್ಣದ ಕಾಡುಗಳು, ಈ ಪ್ರದೇಶವನ್ನು ನಮ್ಮ ಕೊಡಗಿಗೆ ಹೋಲಿಸಬಹುದು. ಎಂಟು-ಹತ್ತು ಮೈಲು ದೂರದಲ್ಲಿ ಒಬ್ಬೊಬ್ಬ ಮುಂಚಿನ ದೊಡ್ಡ ಧನಿಗಳ (ಲೋರ್ಡ್ಸ್) ಮನೆಗಳಿವೆ. ಅವರು ಇಂಗ್ಲಿಷರಾಗಿದ್ದರು. ಅನೇಕರು ಈ ಹೊದಲು ಅಂದರೆ ಐರ್ಲೆಂಡಿಗೆ ಸ್ವರಾಜ್ಯ ಸಿಕ್ಕಿದ ಮೇಲೆ ಮನೆ ಖಾಲಿ ಬಿಟ್ಟು ಇಂಗ್ಲಂಡಿಗೆ ಹೋಗಿ ಜೀವಿಸುತ್ತಿದ್ದರು. ಆದರೆ ಈಗ ಇಂಗ್ಲೆಂಡಿನಲ್ಲಿ ಸಾಧಾರಣ ತೆರಿಗೆ, ಮರಣ ತೆರಿಗೆ ವಗೈರೆ ಬಹು ಹೆಚ್ಚಾದ ಕಾರಣ, ಅವರ ಮನೆಗಳನ್ನು ಹೆಚ್ಚು ಖರ್ಚಿನಿಂದ ಕಾಪಾಡುವುದಕ್ಕಿಂತ ಇಲ್ಲೇ ಬಂದಿರುವುದು ಉತ್ತಮವೆಂಬ ಕಾರಣದಿಂದ ಅನೇಕರು ಈಗ ಹಿಂತಿರುಗಿ ಬಂದು ಈ ಮನೆಗಳಲ್ಲಿರುತ್ತಾರಾಗಿ ತಿಳಿದು ಬಂತು. ಗ್ಲೆಂಡ್ ಲೋಕಿನ ಚರಿತ್ರೆ ಮುಂಚೆ ಹೇಳಿದ್ದೆ. ಅಲ್ಲಿ ನೀರಿನ ದೊಡ್ಡ ಸರೋವರಗಳು ಇದ್ದು, ದಿನ ನಿತ್ಯ ಬೇರೆ ದೇಶಗಳಿಂದ ಮತ್ತು ಡಬ್ಲಿನ್‌ನಿಂದ ಕೂಡ ನೂರಾರು ಮಂದಿ ಪ್ರವಾಸಿಗಳು ಬರುವರು. ಪ್ರವಾಸಿಗಳಿಗಾಗಿಯೇ ಅಲ್ಲಿ ದೊಡ್ಡ ಹೊಟೇಲುಗಳಿವೆ. ಹಿಂದೆ ಕಟ್ಟಿಸಿದ ಏಳು ಇಗರ್ಜಿಗಳಲ್ಲಿ ಕೆಲವು ಹಾಳಾಗಿವೆ. ಒಂದು ಹಾಗೆಯೇ ಇದೆ. ಅಲ್ಲಿ ಹಿಂದೆ ಸತ್ತವರ ಅನೇಕ ಗೋರಿಗಳಿದ್ದುವು. ಅವನ್ನು ನೋಡಿ ನಮ್ಮ ಜೊತೆಗೆ ತಿರುಗಿದ ನ್ಯೂಯಾರ್ಕಿನ ಒಬ್ಬ ಮಹಿಳೆಗೆ ಆಶ್ಚರ್ಯ. ಯಾಕೆಂದರೆ ಅವರಲ್ಲಿ ಸತ್ತವರ ಪ್ರಾಯ 70-80 ವರ್ಷಗಳಿಗೆ ಕಡಿಮೆ ಇರಲಿಲ್ಲ. ತಮ್ಮ ದೇಶದಲ್ಲಿ ಹೆಚ್ಚಿನವರು ಸಣ್ಣ ಪ್ರಾಯದಲ್ಲಿ 40-50ರ ಒಳಗೆ ಜೀವನ ಮುಗಿಸುವರೆಂದು ಅವಳೂ ಅವಳ ಗಂಡನೂ ನಮಗೆ ತಿಳಿಸಿದರು. ಇದು ಅಮೇರಿಕದ ಈಗಿನ ಜೀವನ ಕ್ರಮದಿಂದ. ಇಲ್ಲಿಯಾಗಲೀ ಅನಂತರ ನಾನು ಸ್ಕೊಟ್ಲೆಂಡಿನ ಎಬರ್ಡೀನ್ ಎಂಬಲ್ಲಿ ನೋಡಿದಾಗಲಾಗಲೀ ಜನರು ಬಹಳ ವರ್ಷ ಬದುಕಿರುವುದು ಕಾಣುತ್ತದೆ. ಈಗ ಬ್ರಿಟನಿನಲ್ಲಿ ಜನರ ಸರಾಸರಿ ಜೀವಮಾನವೇ ಜಾಸ್ತಿಯಾಗಿದೆ. ಮುಂದೆ ಒಂದೆರಡು ತಾಮ್ರದ ಗಣಿಗಳನ್ನೂ ನೋಡಿದೆವು. ಇನ್ನೊಂದು ಕಡೆ ಎರಡು ನದಿಗಳು ಕೂಡುವ ಎವೋಕ (Avoca) ಎಂಬ ಊರಲ್ಲಿ ಐರ್ಲೆಂಡಿನ ಪ್ರಸಿದ್ಧ ಕವಿ ಥೋಮಸ್ ಮೋರ್ ಎಂಬವನು 1807ರಲ್ಲಿ ಅಲ್ಲಿ ಒಂದು ಮರದ [illegible]ಲ್ಲಿ ಕೂತು ಬರೆದ ಪದ್ಯವನ್ನು ಕೆತ್ತಿಟ್ಟಿದ್ದಾರೆ. ಮರವು ಸತ್ತರೂ ಈ ಪದ್ಯವನ್ನು ಕಂಬದ ಹಾಗೆಯೇ ಇಟ್ಟಿದ್ದಾರೆ.

"Sweet Vale of Avoca!
How calm could I rest
In thy bosom of shade
with the friends I love best
Where the storms that we feel
In this cold world should cease
And our hearts like thy waters
Be mingled in peace."

ಡಬ್ಲಿನಿನಲ್ಲಿ ನಾಲ್ಕು ದಿನಗಳಿದ್ದು, ಅಲ್ಲಿಂದ ವಾಯು ವಿಮಾನದ ಮೂಲಕ ಸಮುದ್ರ ದಾಟಿ [illegible] ಲಿವರ್‌ಪೂಲ್ ಬಂದರಕ್ಕೆ ವಾಪಾಸು ಬಂದೆನು. ಬರುವಾಗ ಇಂಗ್ಲೆಂಡಿನ ಪಶ್ಚಿಮ ತೀರ ಆಕಾಶದಿಂದ ಅಂದವಾಗಿ ಕಾಣುತ್ತದೆ. ಹೋಗುವಾಗ ರಾತ್ರಿಯಲ್ಲಿ ಸುಮಾರು 9-10 ಗಂಟೆ ತಾಗಿದ ಪ್ರಯಾಣ ವಾಯು ವಿಮಾನದಲ್ಲಿ ಒಂದು ಗಂಟೆಯಲ್ಲಿ ಮುಗಿಯಿತು. ಅಲ್ಲಿಂದ ರೈಲಲ್ಲಿ ಕೂತು ಸುಮಾರು 40 ಮೈಲು ದೂರವಿರುವ ಮೆಂಚೆಸ್ಟರ್ ಎಂಬಲ್ಲಿಗೆ ಬಂದು ಅಲ್ಲಿ ಎರಡು ದಿನವಿದ್ದೆ. ಅಲ್ಲಿಂದ ಉತ್ತರಕ್ಕೆ ಸುಮಾರು 200 ಮೈಲು ದೂರವಿರುವ ಎಡಿನ್‌ಬರೋ ಎಂಬಲ್ಲಿಗೆ ಬಂದು ಎರಡು ದಿನ ಇದ್ದೆ. ಅಲ್ಲಿಂದ ಸುಮಾರು 100 ಮೈಲು ದೂರದ ವರೆಗೆ ಹೋಗಿ ಊರನ್ನು ನೋಡಿದ್ದಲ್ಲದೆ ಅಲ್ಲಿಂದ ಸ್ಟೀಮರ್ ಕಟ್ಟಲಿಕ್ಕೆ ಪ್ರಸಿದ್ಧವಾದ ಗ್ಲಾಸ್‌ಗೋ Glasgow ಎಂಬ ಊರಲ್ಲಿ ಕೂಡ ಸಂಚರಿಸಿದೆ. ಅವುಗಳ ವಿಚಾರ ಮುಂದಿನ ಪತ್ರದಲ್ಲಿ.

—ಕೆ. ಆರ್. ಕಾರಂತ

(ವಿಲಾಯತಿ)

ಕಡಿಮೆ ಕ್ರಯದ ಉತ್ತಮ
✻ ಪುಸ್ತಕಗಳು ✻

ದೀಪಾವಳಿ	0	3	0
ಆ ಸುದ್ದಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಆತ್ಮ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದ ದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತೀಯತೆಗೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ ಮತ್ತು	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ, ಭಾಗ ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ಶಿವರ ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
[illegible]	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟಿಗಳು	0	3	0
ತ್ರಿದಳ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಜಡಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಘಂಟಿಮಾಲಾ ೪ ಭಾಗಗಳು	2	0	0
ಮಾರ್ಪಾಟು	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಜ್ಯೋತಿ	0	4	0
ಕತ್ತಿ ಕೊಟ್ಟವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಕ್ಕಿನಪ್ಪ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0

ರೂ 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ.

(2) ನವಭಾರತ ಬುಕ್‌ಡಿಪೋ, ಉಡುಪಿ.

ವಾರದ ಭವಿಷ್ಯ

ತಾರೀಕು 12-7-51 ರಿಂದ — ತಾರೀಕು 18-7-51 ರವರೆಗೆ

ಮೇಷ—ಪ್ರತಿಯೊಂದು ಉದ್ಯಮದಲ್ಲೂ ವಿಜಯಿಗಳಾಗುವಿರಿ, ಬಂಧು ಮಿತ್ರರ ನೆರವೂ ಜನತೆಯ ಬೆಂಬಲವೂ ಉತ್ತಮವಾಗಿರುವುದರಿಂದ ನಿಮ್ಮ ಬಯಕೆಗಳು ಅನಾಯಾಸದಿಂದ ಈಡೇರುವುವು. ಶತ್ರುಜನರು ಪರಾಜಿತರಾಗುವರು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ದಿನಗಳು ಸುಖದಾಯಿಗಳಾಗಲಿವೆ. ಭಾಗ್ಯಪತಿಗಳು ವ್ಯಯದಲ್ಲಿ ನಿಂತಕಾರಣದುದಿಮೆಯ ಧನ ಉಳಿಯಲೊಲ್ಲದು. ವಾರಾದಿಯ 3 ದಿನಗಳು ಶ್ರೇಯಸ್ಕರಗಳಾಗಿವೆ.

ವೃಷಭ—ಸುಖಕಷ್ಟಗಳೂ ಲಾಭನಷ್ಟಗಳೂ ಸಮನಾಗಿ ಪರಿಣಮಿಸಬಹುದು ನಿಮಗೀವಾರದಲ್ಲಿ. ಕಷ್ಟ ಜೀವಿಗಳಿಗೆ ಶ್ರಮಕ್ಕೆತಕ್ಕ ಫಲ ದೊರಿಯದು. ಅದರೂ ವ್ಯಾಪಾರಿಗಳೂ ವಿದ್ಯೋಪಜೀವಿಗಳೂ ಪ್ರಯತ್ನಕ್ಕೆ ಅಧಿಕವಾದ ಫಲ ಭಾಗಿಗಳಾಗುವರು. ಆರೋಗ್ಯಕ್ಕೆ ಉಷ್ಣಪಿತ್ತಗಳ ದೋಷದಿಂದ ಹಾನಿಯಿದೆ. ತಂದೆ ಮಕ್ಕಳಲ್ಲೂ ಸ್ವಾಮಿ ಸೇವಕರಲ್ಲೂ ಸ್ವಲ್ಪ ಕಲಹವುಂಟಾದೀತು. ವಾರಾದಿಯ 5 ದಿನಗಳಲ್ಲಿ ನಿಮ್ಮ ಮನೋರಥವು ಬಹ್ವಂಶಸಫಲವಾಗುವದು.

ಮಿಥುನ— ದಿನದಿಂದ ದಿನಕ್ಕೆ ಬಿಕ್ಕಟ್ಟು ಹೆಚ್ಚುತ್ತಾ ಬರುವದು. ವಿರೋಧಿವರ್ಗದವರು ವಿಶೇಷತಃ ಉಪದ್ರವ ಕೊಡಲಿರುವರು. ಸುಹೃದ್ವರ್ಗದವರೂ ನಿಮ್ಮಿಂದ ದೂರ ಸರಿವರು. ದೇಹಾಲಸ್ಯ ಮನೋರೋಗ ಚಂಚಲ ಚಿತ್ತ ಇವುಗಳಿಂದಾಗಿ ನಿಮ್ಮ ಕಾರ್ಯಗಳೆಲ್ಲವೂ ವ್ಯರ್ಥ ಶ್ರಮಕಾರಿಗಳಾಗುವವು. ನೌಕರಿ ಜನರಿಗೂ ವ್ಯಾಪಾರೀವರ್ಗಕ್ಕೂ ಶ್ರಮಕ್ಕೆ ತಕ್ಕ ಫಲ ಲಭಿಸುವುದರಿಂದ ದಿನಯಾಪನೆಯು ಕಷ್ಟವಾಗಲಾರದು. ವಾರಾಂತ್ಯದ 4 ದಿನಗಳು ಸುಖಪ್ರದಗಳಿವೆ.

ಕರ್ಕಟ:—ಅನಿರೀಕ್ಷಿತ ಪ್ರವಾಸದಿಂದಾಗಿ ಶ್ರಮನಷ್ಟಗಳುಂಟಾಲಿವೆ. ನಿಷ್ಠುರಭಾಷಿಗಳಾಗಿ ವರ್ತಿಸಿ ಜನತೆಯೊಡನೆ ಕಲಹವಾಗುವ ಸಂಭವವಿದೆ, ಆದರೂ ನಿಮ್ಮ ಶಕ್ತಿಸಾಹಸಗಳೂ ಯುಕ್ತಿವಿವೇಕಗಳು ಶತ್ರುಜನರ ತಲೆದೂಗಿಸುವವು. ಆರ್ಥಿಕ ಭಾಗವು ಉತ್ತಮವಾಗುವದು ಗೃಹೋಪಕರಣಗಳು ಪರಿಪೂರ್ಣವಾಗಿರುವುದರಿಂದ ಗೃಹಸುಖವುಉತ್ತಮವಾಗಿದ್ದೀತು. ವಾರದ ಕೊನೆಯ 2 ದಿನಗಳಲ್ಲಿ ನಿಮ್ಮ ಮನೋರಥವು ಪೂರ್ಣವಾದೀತು.

ಸಿಂಹ:—ಹಿಡಿದ ಕಾರ್ಯದಲ್ಲಿ ವಿಜಯವು ಜನರಿಂದ ಗೌರವಾದರಗಳೂ ಬಹುಮುಖದಿಂದ ಧನಾಗಮವೂ ಆಗಲಿರುವದು. ಆದರೆ ಮಾರ್ಗಾಯಾಸದಿಂದಲೂ ದೇಹಾಲಸ್ಯದಿಂದಲೂ ಪೀಡಿತರಾದ ನಿಮ್ಮ ಕೈಯು ಬರಿದಾಗಲೂ ರಿಕ್ತವಾಗಿದ್ದೀತು. ಶತ್ರುವರ್ಗದವರ ಪೀಡೆಯೂ ಆಗಾಗ ಪ್ರಾಪ್ತನಾಗಲಿದೆ. ನಿಮ್ಮ ಉಗಭೋಗಗಳಿಗೆ ಏನೊಂದೂ ವಿಘ್ನ ವಿಪ್ಲವಗಳು ಪ್ರಾಪ್ತವಾಗಲಾರವು. ವಾರಾದಿಯ 3 ದಿನಗಳಲ್ಲಿ ಗೃಹಸುಖ ಧನ ವಸನಗಳ ಲಾಭವಿದೆ.

ಕನ್ಯಾ:—ಕಳೆದ ದಿನಗಳು ನಿಮಗೆ ತುಂಬಾ ಅನುಕೂಲಕಾರಿಗಳಾಗಿವೆ. ಎಂತಹ ಮಹಾಕಾರ್ಯವು ಕೂಡ ಅಲ್ಪಪರಿಶ್ರಮದಿಂದ ಸಾಧ್ಯವಾಗಲಿದೆ. ನಿಮ್ಮಣಿಕೆಗೂ ಅಧಿಕವಾದ ಫಲವು ಲಭಿಸುವದು. ಸಮಾಜದಲ್ಲೂ ರಾಜಕೀಯ ರಂಗದಲ್ಲೂ ಕೀರ್ತಿಶಾಲಿಗಳಾಗುವಿರಿ. ಆದರೂ ಜನ್ಮಸ್ಥನಾದ ಶನೈಶ್ಚರನು ಆತ್ಮೀಯರ ವಿರಹವಿಷಾಗ್ನಿಗಳ ಭಯವನ್ನುಂಟು ಮಾಡಲಿರುವನು. ತಾ 15, 16 ಇವು ಅತ್ಯುತ್ತಮವಿವೆ.

ತುಲಾ—ವಿಪಕ್ಷೀಯರು ನಿರ್ವೀರ್ಯರಾಗುವ ಕಾರಣ ನಿಮ್ಮ ಕಾರ್ಯ ಉದ್ಯಮಗಳು ನಿರ್ವಿಘ್ನದಿಂದ ಮುಂದರಿವವು. ಖರ್ಚಿಗೆ ತಕ್ಕದಾದ ಉತ್ಪತ್ತಿಯಿರದೋಣದಿಂದ ಆರ್ಥಿಕ ತಗಾದೆಗೆ ಗುರಿಯಾಗಲಾರಿರಿ. ಕಫದೋಷದಿಂದಾಗಿ ಆರೋಗ್ಯವು ಕೆಡಲಿದೆ. ಮನೋರೋಗವು ಹಿಂದಿಗಿಂತ ಪ್ರಬಲವಾದೀತು. ಆಕಸ್ಮಿಕ ಅನರ್ಥಗಳುದ್ಭವಿಸಲಿದೆ. ತಾ. 15-16 ಬಿಟ್ಟು ಉಳಿದ ದಿನಗಳಲ್ಲಿ ನಿಮ್ಮ ಬಯಕೆಗಳು ಈಡೇರಲಿರುವವು

ವೃಶ್ಚಿಕ—ಬಲೀಯರಾದ ಗುರು ಶನಿಗಳು ನಿಮಗೆ ಅನುಕೂಲರಾಗಿದ್ದರೂ ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿ ನಿಂತಿರುವುದರಿಂದ ಈ ವಾರದಲ್ಲಿ ಸ್ವಲ್ಪ ಕಷ್ಟಾನಿಷ್ಟಗಳು ಹೆಚ್ಚಲಿವೆ ಮತ್ತು ಶತ್ರುಜನರಿಂದಾಗಿ ಧನಮಾನಾದಿಗಳಿಗೆ ಹೆಚ್ಚಿನ ಹಾನಿಯುಂಟಾದೀತು. ಹಣದ ಲೇವಾದೇವಿ ನಿಮಿತ್ತ ಕೋರ್ಟು ಕಚೇರಿಗೆ ತಿರುಗುವ ಪ್ರಸಂಗವುಂಟಾಗಲಿದೆ. ಎಂತಹ ಮಿತಭಾಷಿಗೂ ಕೂಡಾ ವಾಗ್ವಾದ ಮಿತ್ರಕಲಹವಾದೀತು. ಆರೋಗ್ಯ ಮತ್ತು ಆರ್ಥಿಕ ಭಾಗಕ್ಕೆ ಹೆಚ್ಚಿನ ತೊಂದರೆ ಯುಂಟಾಗದು. ತಾ 15-16 ಅನುಕೂಲ.

ಧನು—ಮನಸ್ಸು ಬಹಳ ಚಂಚಲವಾಗುವದು. ಆರ್ಥಿಕ ಬಿಕ್ಕಟ್ಟಿನಿಂದ ಬಹಳ ಪೇಚಾಡುವಿರಿ. ಉದರಶೂಲೆ ಪಿತ್ತಪ್ರಕೋಪದಿಂದ ದೇಹಾಲಸ್ಯವೂ ಉಂಟಾದೀತು. ಸಾಂಸಾರಿಕ ತಾಪತ್ರಯವು ಅಧಿಕವಾಗುವಲ್ಲದೆ ಕೈಹಿಡಿದಾಕೆಯೊಡನೆ ನಿತ್ಯಕಲಹವಾದೀತು. ಆದರೂ ತಾ. 15-16 ರನ್ನುಳಿದು ಇತರ ದಿನಗಳಲ್ಲಿ ಕೊಂಚ ಆರ್ಥಿಕ ಸುಧಾರಣೆ ಮಿತ್ರಜನರ ಸಹಕಾರ ವ್ಯವಹಾರದಲ್ಲಿ ವಿಜಯವು ಲಭಿಸೀತು.

ಮಕರ:—ಶತ್ರುಜನರ ಪೀಡೆಯಿಂದ ಮುಕ್ತರಾಗುವಿರಿ. ಕೋರ್ಟು ವಗೈರೆಗಳಲ್ಲಿನ ಕಲಹಗಳು ಕೊನೆ ಹೊಂದುವವು. ಸ್ತ್ರೀಮೂಲಕವಾಗಿ ಧನಲಭಿಸುವ ಯೋಗವಿದೆ. ಆಕಸ್ಮಿಕ ವಿಘ್ನಗಳಿಂದ ಕೈಗೊಂಡ ಕಾರ್ಯಗಳಿಗೆ ಭಂಗವುಂಟಾಗುವದು. ಸ್ಥಾನಾಂತರ ಪ್ರಾಪ್ತಿಯ ಯೋಗವಿದೆ. ಪ್ರವಾಸವು ನಷ್ಟಕಷ್ಟಕಾರಿಯಾಗಿ ಪರಿಣಮಿಸುವದು. ವಿಜಾತೀಯರಿಂದ ಕಲಹವು ಅಪಿಷ್ಟವಯವೂ ಉಂಟಾಗಲಿದೆ ವಾರಾದಿಯ 5 ದಿನಗಳು ಕ್ಷೇಮಕರಗಳು.

ಕುಂಭ:—ಉದ್ಯೋಗದಲ್ಲಿ ಪ್ರಗತಿಯನ್ನು ಪಡುವಿರಿ. ಆರ್ಥಿಕ ಸಂಪತ್ತು ಉತ್ತಮಸ್ಥಿತಿಗೆ ಬರುವದು. ಅಧಿವ್ಯಾಧಿಗಳಿಂದ ಮುಕ್ತರಾಗುವಿರಿ. ಆದರೂ ಶತ್ರುಭಯ ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾದ ನಿಮಗೆ ಸ್ತ್ರೀಯರಿಂದ ಕಷ್ಟ ನಷ್ಟಕಸ್ಮಿಮಿತ್ತವಾಗಿ ಅಲುಮಂದಿಗಳೂ ಪ್ರಾಪ್ತವಾದಾವು ವಾರಾಂತ್ಯದ 4 ದಿನಗಳಲ್ಲಿ ಇಷ್ಟಸಿದ್ಧಿ. ಮಿತ್ರಸಮಾಗಮ. ಲಾಭಸಂತೋಷಗಳಿವೆ.

ಮೀನ— ಗೃಹವೃಂದವೇ ನಿಮ್ಮ ಮೇಲೆ ಮುನಿದಿರುವುದರಿಂದ ಈವಾರದಲ್ಲಿನ ನಿಮ್ಮ ಶ್ರಮವು ನೀರಲ್ಲಿ ಗೈದಹೋಮದಂತೆ ವಿಫಲವಾಗುವದು. ದುರ್ಜನರಿಂದಾಗಿ ಅನಿಷ್ಟ ಅಪಾಯಗಳು ಸಂದಭಿಸಲಿವೆ. ಮನೆಯವರಲ್ಲಿ ಪರಸ್ಪರ ಮನಸ್ತಾಪ ಕಲಹಗಳು ಅಧಿಕವಾಗುವವು. ಆರ್ಥಿಕಬಿಕ್ಕಟ್ಟು ಅಸಹನೀಯವಾದೀತು. ದೇಹಮನಸ್ಸುಗಳಿಗೆ ಸುಖಶಾಂತಿಯುಲ್ಲದ ನಿಮಗೀವಾರಂತ್ಯದ 2 ದಿನಗಳು ಕಿಂಚಿದನುಕೂಲವಿವೆ.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಪ್ಪಳ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 2-0-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹಲವು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹೆರವೇಪಲ್ಲಿ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಬೇರೆ.
ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಶಾಮರಾವ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾಪಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ;— ದಾವಣಗೇರಿ ಪ್ರೆಸ್ [illegible]

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವ್ವದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ವಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No M. 3618

LICENCE No. 31
Licensed to Post without Prepayment

Estd. 1921 ಸ್ಥಾಪನೆ

19–7–1951

Founder: Sri A. B. Shetty,
Minister for Agriculture & Veternary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ
ನವಯುಗ, ಉಡುಪಿ.

ವರ್ಷ ೩೧ ವಾರ ೪೫ | NAVAYUGA WEEKLY | Post Box No. 22 | UDIPI. | Vol 31 No 45

"ನೈತಿಕತೆಯೇ ಜೀವನದ ತಳಹದಿ" —ನೆಹರೂ.

ಭಾರತದ ಮಹಾಮಂತ್ರಿ ಜವಾಹರಲಾಲರು ಈ ವಾರದಲ್ಲಿ ದೇಶದ ಜನತೆಯ ದೃಷ್ಟಿಯನ್ನು ವಿಚಾರದೆಡೆಗೆ–ಕರ್ತವ್ಯದೆಡೆಗೆ ಎಳೆದಿರುತ್ತಾರೆ. ಬೆಂಗಳೂರಿನ ಕಾಂಗ್ರೆಸ್ ಅಧಿವೇಶನದಲ್ಲಿ ಹಲವು ಸಮಸ್ಯೆಗಳನ್ನು ತೊಡೆದುಹಾಕಿ ಸರಕಾರದ ಕಾರ್ಯಧೋರಣೆಯೇನೆಂಬುದು ಮಹಾಮಂತ್ರಿಗಳ ಮಾತಿನಿಂದ ಸ್ಪಷ್ಟವಾಗಿದೆ. ಅಧಿವೇಶನದಲ್ಲಿ ನೆಹರೂರವರ ವಾದವೇ ಗೆಲ್ಲುತ್ತಿದ್ದು–ಅವರ ಸೂಚನೆಗಳೇ ಮಾನ್ಯವಾಗುತ್ತಿದ್ದು–ಕಾರ್ಯಕಾರೀ ಸಮಿತಿಯು ಇದ್ದಕ್ಕಿದ್ದ ಹಾಗೆಯೇ ಒಪ್ಪಿಕೊಳ್ಳುತ್ತಲಿದೆ ನೆಹರೂರವರ ನಿಲುವೆಯ ಕುರಿತು ಹಲವರು ಟೀಕೆಮಾಡಿದ್ದುಂಟು ಆದರೆ ಇಡೀ ದೇಶ ಹಾಗೂ ವಿದೇಶ ಜನಾಂಗಕ್ಕೆ ನೆಹರೂರವರ ಮುಂದಾಳ್ತನದಲ್ಲಿ ಸತ್ಯ–ಸ್ವಾರ್ಥರಹಿತ ದೇಶಸೇವಾ ದೃಷ್ಟಿ ಇರುವದು ಕಂಡು ಬಂದುದರಿಂದಲೇ ಅವರ ವ್ಯಕ್ತಿತ್ವದ ಮೇಲೆ– ಅವರ ವಿಚಾರಗಳ ಮೇಲೆ – ಎಲ್ಲಿಲ್ಲದ ಆದರ–ಗೌರವಗಳ ಕಂಡುಬಂದಿವೆ. ಕಾಂಗ್ರೆಸ್ಸಿನಲ್ಲಿ ಒಟ್ಟಾದ ಒಡಕನ್ನು ಸಮಜಾಯಿಸುವಲ್ಲಿ ಬೆಂಗಳೂರ ಅಧಿವೇಶನ ಯಶಗಳಿಸೀತೆ? ಎಂದು ಹಲವರು ಯೋಚಿಸಿದ್ದರು. ಅಧಿವೇಶನ ಪರಿಹರಿಸಿದೆಯೆಂದು ನಾವು ಭಾವಿಸುವದಿಲ್ಲವಾದರೂ ಕಾಂಗ್ರೆಸ್ಸಿನ ಬಗ್ಗೆ ಜನತೆಗೆ ಒಂದು ರೀತಿಯ ವಿಶ್ವಾಸ ಹುಟ್ಟಿಸುವ ಕಾರ್ಯವನ್ನು ಬೆಂಗಳೂರ ಅಧಿವೇಶನ ಮಾಡಿದೆ.

ಕಾಂಗ್ರೆಸ್ಸಿನಲ್ಲಿರುವ ಕೊಳೆಯನ್ನು ತೆಗೆದುಹಾಕಿ ಅದನ್ನು ಭದ್ರಗೊಳಿಸಬೇಕೆಂಬ ಕುತೂಹಲ ಜನಕ್ಕೆ ಇದ್ದುದರಿಂದಲೇ ನೆಹರೂರವರೇ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿ ಮಾರ್ಗದರ್ಶನ ಮಾಡಲಿ' ಕೇಳಿಕೆ ಬೇಡಿಕೆಗಳು ಮುಂದೆ ಬಂದವು. ಅಂತಲೇ ಅಧಿವೇಶನದ ನಾನಾ ಸಮಸ್ಯೆಗಳಲ್ಲಿ ನೆಹರೂರವರೇ ಸ್ಪಷ್ಟೀಕರಣ ಮಾಡಿದ್ದರಿಂದ ಕಾಂಗ್ರೆಸ್ಸಿನ ಬಗ್ಗೆ ಗೌರವಗಳು ಹೆಚ್ಚಾಯಿತು. ನೆಹರೂರವರು "ಸಾರ್ವಜನಿಕ ಜೀವನಕ್ಕೆ ನೈತಿಕತೆಯೇ ತಳಹದಿ; ಇಲ್ಲದಿದ್ದರೆ ನಾವು ಪತಿತರಾಗುವದಲ್ಲದೆ ಎಂದೆಂದೂ ಪ್ರಗತಿಯನ್ನು ಹೊಂದಲಾರೆವು. ಕೆಲವು ವರ್ಷಗಳಿಂದ ಅನೇಕ ಕಾರಣಗಳಿಂದಾಗಿ ನಮ್ಮ ಸಾರ್ವಜನಿಕ ಜೀವನವು ಪತಿತವಾಗಿ ಅದಕ್ಕೆ ನೈತಿಕತೆ ಇಲ್ಲದಿರುವುದೇ. ಚಿಕ್ಕಚಿಕ್ಕ ವಿಷಯಗಳ ಮೇಲೆ ಸದಾ ಹಟ ಹಿಡಿಯುತ್ತಾ ಪ್ರಗತಿಪರವಾದ ಮಹತ್ವದ ವಿಚಾರವನ್ನು ಮರೆಯುತ್ತೇವೆ. ಚುನಾವಣೆಯಲ್ಲಿ ಗೆಲ್ಲುವದರಿಂದ ಯಾವ ಪಕ್ಷವೂ ಗೆದ್ದಂತಾಗಲಿಲ್ಲ. ಜನತೆಯ ಸದ್ಗುಣ–ಸೌಹಾರ್ದಗಳನ್ನು ಗೆಲ್ಲಬೇಕು. ಮಹಾತ್ಮರು ಸಾರಿದ ತತ್ವ ಇದನ್ನೇ ಹೇಳುತ್ತದೆ"ಎಂದು ಹೇಳಿದ್ದರು.

ಈ ಮಾತುಗಳು ಜೀವನದಲ್ಲಿ ಗೊತ್ತುಗುರಿಯಿಲ್ಲದೆ ಕಾಲ ಕಳೆಯುವದಕ್ಕೆ ರಾಜಕೀಯದ ಕುರಿತು ಹರಟೆ ಹೊಡೆಯುವ ನಮ್ಮ ಪಾಲಿಗೆ ಸಂಕೋಲವಾಗುತ್ತವೆ. ದಿನದಿಂದ ದಿನ ನಾವು ಪ್ರಗತಿಪಥದಲ್ಲಿ ಮುನ್ನಡೆಯುತ್ತೇವೆ– ವಿದ್ಯಾಬುದ್ಧಿ ನಮ್ಮಲ್ಲಿ ಒಳ್ಳೆಯ ಜ್ಞಾನವಿಕಸನ ಕಾರ್ಯವನ್ನು ಮಾಡಿ ನಮ್ಮ ಜನ ಸಧೃಢರಾಗುತ್ತಲಿದ್ದಾರೆಂದು ಭಾವಿಸುತ್ತೇವೆ. ವಸ್ತುತಃ ಹಾಗಿರುವುದಿಲ್ಲ. ಮಾನ್ಯ ಜವಾಹರಲಾಲರು ಹೇಳಿದ ಹಾಗೆ ನಮ್ಮ ಜೀವನವು ಪತಿತವಾಗುತ್ತ ಬಂದಿದೆ. ಶಾಲಾ ಕಾಲೇಜುಗಳೇ ವಿದ್ಯಾದಾನ ಮಾಡಿ ದೇಶದ ಮುಂದಿನ ಧುರೀಣರನ್ನು ನಿರ್ಮಿಸತಕ್ಕ ಮಹಾಸಂಸ್ಥೆಗಳು. ಆದರೆ ಇಂದು ಶಾಲಾಕಾಲೇಜುಗಳಲ್ಲಿ ಕಲಿಯತಕ್ಕ ವಿದ್ಯಾರ್ಥಿ ಅಧ್ಯಾಪಕರುಗಳಲ್ಲಿ ಅನ್ಯೋನ್ಯತಾ ಭಾವವಾಗಲೀ ಗೌರವಾದರಗಳಾಗಲೀ ಉಳಿದಿರುವದಿಲ್ಲ. ವಿದ್ಯಾರ್ಥಿಗಳಲ್ಲಿ ನೈತಿಕತೆಯು ಕಡಿಮೆಯಾಗುತ್ತ ಬಂದು ದೇಶದ ಮಹಾಸಮಸ್ಯೆಗಳ ಕಡೆ ಅವರ ಮನ ಕರಗುವುದಿಲ್ಲ. ವಿದ್ಯಾಭ್ಯಾಸದ ಕಾಲವನ್ನೆಲ್ಲ ವಿಲಾಸಮಯ ಜೀವನಕ್ಕೋ ಬೇಡಾದ ಕಡೆಗೂ ಹರಿಯಬಿಟ್ಟು ತಮ್ಮ ಹೊಣೆಗಾರಿಕೆಯನ್ನು ಮರೆತಿದ್ದಾರೆ. ವಿದ್ಯೆಯಿಂದ ತಿಳುವಳಿಕೆಯುಂಟಾಗಿ ನೈತಿಕತೆ ಬೆಳೆಯುತ್ತದೆಂದು ನಾವು ಕಲಿತವರನ್ನು ಉದಾಹರಿಸಲು ಸಾಧ್ಯವಿಲ್ಲ. ಕಲಿತವರ ಪಾಡೇ ಹೀಗಿರುವಾಗ ಕಲಿಯದ ನಿರಕ್ಷರಕುಕ್ಷಿಗಳ ಪಾಡು ಹೇಗಾಗಿರಬೇಡ? ನಾಯಿಕೊಡೆಗಳಂತೆ ತಲೆಯೆತ್ತ ಪಕ್ಷಗಳ ಹುಟ್ಟಿಗೆ ರಾಜಕೀಯ ಯಥಾರ್ಥಜ್ಞಾನವಿಲ್ಲದವರು ಬಾಯಿಬಲಕ್ಕೆ ಸೋತು ಅದಕ್ಕೆ ಸೇರಿಕೊಳ್ಳುವುದೇ ಕಾರಣವಾಗಿದೆ. ತಮ್ಮನ್ನು ತಾನೇ ತಿಳಿದುಕೊಳ್ಳದಷ್ಟು ಅಜ್ಞಾನ ನಮ್ಮಲ್ಲಿ ತುಂಬಿರುವದು ಮಾತ್ರವಲ್ಲದೆ ತಮಗೆ ಬೇಡಾದವರನ್ನು ಟೀಕಿಸಿ ವೇದಿಗೆ ಸಿಕ್ಕಿಸುವಲ್ಲಿ ತಮ್ಮ ಜ್ಞಾನ ಹಿರಿದೆಂದು ಜಂಭವನ್ನು ಪ್ರದರ್ಶಿಸುತ್ತೇವೆ. ನಮ್ಮ ದೇಶದ ಸ್ಥಿತಿಗತಿಯನ್ನರಿತುಕೊಳ್ಳದೆ– ನಾಳಿನ ಕಲ್ಪನೆಯಿಲ್ಲದೆ– ರಾಜಕೀಯವನ್ನು ಸಾಮಾನ್ಯರು ಸಂತೆಯ ಮಾತಿನ ಹಾಗೆ ಬಳಸಿಕೊಳ್ಳುವುದು ಅಜ್ಞಾನ ಮತ್ತು ಅನೈತಿಕತೆಯ ದ್ಯೋತಕವೇ ಆಗಿದೆ. ಇಂದು ನಮ್ಮ ಧುರೀಣರು ಹೊತ್ತಿರುವ ಕಾರ್ಯಭಾರವನ್ನರಿತು ಅವರು ಕೈಗೊಂಡಿರುವ ಘನವಾದ ಉದ್ದೇಶಗಳು ನಮ್ಮ ಹಿತಕ್ಕಾಗಿಯೇ ಇವೆಯೆಂಬುದನ್ನು ನಾವು ಅರಿತುಕೊಳ್ಳಬೇಕಾದರೂ ನೈತಿಕತೆಯ ಅನುಭವ ಬೇಕು. ಅದು ನಮ್ಮಲ್ಲಿ ಇಲ್ಲದೆ ಹೋದರೆ ಮಾನ್ಯ ನೆಹರೂರವರು ಹೇಳಿದ ಹಾಗೆ ಯಾವ ಪಕ್ಷ ಸಂಘಟಣೆಗಳೂ ದೇಶದ ಗಂಡಾಂತರವನ್ನು ಪರಿಹರಿಸಲು ಸಮರ್ಥವಾಗಲಾರವು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ನೈತಿಕಪುಷ್ಟಿಯೇ ರಾಷ್ಟ್ರೋನ್ನತಿಯ ಭದ್ರ ತಳಹದಿಯಾಗಿರುತ್ತದೆ.



ಜಾಪಾನು ಕಲಿಸುವ ಪಾಠ

ಗೃಹೋದ್ಯಮಗಳ ಉತ್ಥಾನದಿಂದಲೇ ಸಂಪದಭಿವೃದ್ಧಿ.

ಲೇಖಕರು—ಕಾರ್ತಿಕೇಯ

ಭಾರತ ಬಡದೇಶ-ಜನ ಸಮೃದ್ಧಿ, ಪ್ರಕೃತಿಯ ವರದಾನ ಇದ್ದರೂ ನಾವು ಬಡವರು; ಸೌಕರ್ಯವಿಹೀನ ಬದುಕು ನಮ್ಮದು. ಜನಜೀವನದ ಮಟ್ಟ ಏರಬೇಕು-ಎಂದು ಘೋಷಿಸುವ ನಾವು, ಸಂಪತ್ತನ್ನು ಸಂಪಾದಿಸುವ ಮಾರ್ಗ ಏನು ಎಂಬುದನ್ನು ತಿಳಿದಿಲ್ಲ. ಅಮೇರಿಕಾದ ಜನ ಮೋಟಾರು ಕಾರಿನಲ್ಲಿ ಸವಾರಿಮಾಡುವರು, ರಶಿಯಾದಲ್ಲಿ ಹೊಟ್ಟೆತುಂಬಾ ಅನ್ನ, ಮೈತುಂಬಾ ಬಟ್ಟೆ ಇದೆ, ಜಪಾನಿನ ಸಾಮಾನುಗಳು ಬಹಳ ಅಗ್ಗದಲ್ಲಿ ದೊರೆಯುತ್ತವೆ-ಹೀಗೆ ನುಡಿಯುತ್ತೇವೆ. ನಾವು ದುರದೃಷ್ಟರು, ನಾಯಿಬಾಳು ನಮ್ಮದು ಎಂದುಕೊಳ್ಳುತ್ತೇವೆ. ಯಾರೂ ಎಂದೂ ಅಲ್ಲಿಯ ಸಂಪತ್ತಿಗೆ, ಅಲ್ಲಿಯ ಸೌಕರ್ಯ ಸಾಧನಗಳಿಗೆ, ಅಲ್ಲಿಯ ಅಮಿತ ಉತ್ಪಾದನೆಯೇ ಕಾರಣ ಎಂಬುದನ್ನು ಯೋಚಿಸುವುದಿಲ್ಲ. ಜೀವನದ ಖರ್ಚು ಮಿತಿಮೀರಿ ಏರಿದ ಈ ದಿನಗಳಲ್ಲಿ ನಮ್ಮ ಶ್ರಮಜೀವಿಗಳು ಮಾಲೀಕರನ್ನು ಸಂಪು ಮುಷ್ಕರಗಳ ಗದೆ ಬೀಸಿ, ಹಣ್ಣು ಮಾಡಲು ನೋಡುತ್ತಾರೆ. ಮಾಲಿಕರು ತಮ್ಮ ಲಾಭಕ್ಕೇನೆ ಅಂಟಿ ಕುಳಿತು ಉತ್ಪಾದನೆಯ ಹೆಚ್ಚಳದ ಕಡೆಗೆ ನಿರ್ಲಕ್ಷ್ಯರಿರುತ್ತಾರೆ. ಯಾವ ದೇಶವೇ ಆಗಲೀ ಉತ್ಪಾದನೆ ಏರದೆ ಸಂಪತ್ತು ಬಾರದು. ದುಡಿಮೆ ಇಲ್ಲದೆ, ದುಡ್ಡು ಗಳಿಸಲಾರವು. ದುಡ್ಡು ಮಾತ್ರವೇ ಅಲ್ಲ—ಆಲಸ್ಯ ಇದ್ದರೆ ಅನ್ನ, ಬಟ್ಟೆ, ಚಿಕ್ಕ ಪುಟ್ಟ ನಿತ್ಯೋಪಯೋಗ ವಸ್ತುಗಳು ಯಾವುವೂ . ಸಮೃದ್ಧಿಯಿಂದ ಸಿಗಲಾರವು.

ಆಲಸ್ಯ ನಮ್ಮ ಜನರಲ್ಲಿ ಬೇರು ಬಿಟ್ಟಷ್ಟು ಆಳವಾಗಿ ಬೇರೆ ಲೋಕದ ಯಾವ ಜನಾಂಗವನ್ನೂ ಅಂಟಿ ಕೊಂಡಿರಲಿಕ್ಕಿಲ್ಲ. ಪರಿಶ್ರಮ ವಹಿಸಿ ಕೌಶಲ್ಯ ತೋರಿಸಿ, ಮೈಮುರಿದು ಹಗಲು ರಾತ್ರಿ ದುಡಿಯುವ ಉತ್ಸಾಹ, ಅಪೇಕ್ಷೆ ನಮ್ಮ ಜನಕ್ಕೆ ಇಲ್ಲ. ಕೆಲಸಗಾರರು ರಜೆಯ ದಿನವಿರಬೇಕು, ಕೆಲಸಮಾಡದೇನೆ ಕುಳಿತ ಸಮಯಕ್ಕೂ ಸಂಬಳ ಸಿಗಬೇಕು ಎಂದು ಸಾರುತ್ತಾರೆ. ಇವೆಲ್ಲ "......ಲೇ ಬೇಕು" ಜಾತಿಗೆ ಸೇರಿದ ಬೇಡಿಕೆಗಳು. ಆದರೆ ನಮ್ಮ ಎದುರಿರುವ ಬಡತನದ ಸಮಸ್ಯೆಗೆ, ಅನ್ನದ ಪ್ರಶ್ನೆಗೆ ಇಂಥ ವ್ಯರ್ಥ ಘೋಷಣೆ-ಪ್ರಚಾರಗಳಿಂದ ಕಾಸಿನ ಪ್ರಯೋಜನವೂ ಇಲ್ಲ. ಬದಲಿಗೆ ಸಾಮಾನ್ಯ ಜನರ ಮನೋವೃತ್ತಿಯಲ್ಲಿ ಜನಹಿತಸಂಬಂಧದ ಕುಂಠು ಸುಮ್ಮನೆ ಸಂಶಯ ಬೆಳೆಯುವುದು. ಸ್ನೇಹ ಬಂಧನ ಕಡಿದು, ದೂರಾಗುವುದು.

ಹಳ್ಳಿಗಳನ್ನು ತೊರೆದು, ನಗರಗಳನ್ನು ಪ್ರವೇಶಿಸುವುದು ಒಂದು "ಫ್ಯಾಶನ್ನು" ಆಗಿದೆ. ಹಳ್ಳಿಯ ಉದ್ಯೋಗಗಳಲ್ಲಿ ವರ್ಷವಿಡೀ ದುಡಿಯಲು ಅವಕಾಶವಿಲ್ಲ ಎಂದು ಅಂಥ ಜನ ದೂರುತ್ತಾರೆ. ನಗರದ ಕಾರಖಾನೆಗಳಲ್ಲಿ ಮಜೂರರಾಗಿ ಸೇರಿ ನಾಲ್ಕು ಕಾಸು ಗಳಿಸಿಯೇವು-ಎಂಬ ಆಶೆಯಿಂದ ಅವರು ಬರುತ್ತಾರೆ. ಆದರೆ ಪರಿಸ್ಥಿತಿ ಸುಧಾರಿಸುವುದು ಕನಸಿನ ಮಾತು.

ಇಂಥವೆಲ್ಲ ಅವ್ಯವಸ್ಥೆ ನಮ್ಮ ನಾಡಿನಲ್ಲಿ ತಾಂಡವವಾಡುತ್ತಿದೆ. ದ್ರುತಗತಿಯಿಂದ ಬೆಳೆಯುತ್ತಿರುವ ನಮ್ಮ ಜನಸಂಖ್ಯೆ ಅನ್ನಬಟ್ಟೆಗಳಂಥ ಮೂಲಭೂತ ಜೀವನಾವಶ್ಯಕ ಸಾಮಗ್ರಿಗಳ ಪೂರೈಕೆಗಾಗಿ ಇತರ ದೇಶಗಳ ಕಡೆ ಕಣ್ಣುಬಾಯಿ ಬಿಟ್ಟು ನೋಡುತ್ತಿದೆ. ಇಂಥಾ ಸಾಮಾನ್ಯ ಅಗತ್ಯಗಳನ್ನು ಪೂರೈಸಲಾರದ ನಮ್ಮ ಜನ ಇನ್ನೇನು ಸ್ವರ್ಗದ ಐರಾವತ ತಂದೀತು? ಮುನ್ಷಿ "ಮರನೆಟ್ಟು ಬೆಳೆಸಿರಿ" ಎಂದರೆ ಪುರೋಗಾಮಿಗಳು "ಹಸಿದ ಜನಕ್ಕೆ 'ವಣ' ಮಹೋತ್ಸವ ಬೇಡ- ಅನ್ನ ಬೇಕು" ಎಂದು ಡಂಗುರ ಸಾರುತ್ತಾರೆ. ಅನ್ನ ಕೊಡದ ಸರಕಾರ ಸಾಯಲಿ-ಎನ್ನುವ ವರೆಗೂ ಈ ವಾದ ಬೆಳೆದಿದೆ. ತೀರ ತಿಳಿದ ಜನರೇ; ಕುಹಕ ಮಾತಿನಲ್ಲಾದರೂ ಮುನ್ಷಿಯ ಹೇಳಿಕೆಯನ್ನು ಗೇಲಿ ಮಾಡುತ್ತಿದ್ದಾರೆ. 'ಮಳೆಯಾಗದೆ ಬೆಳೆ ಹೆಚ್ಚದು. ಮರವಿಲ್ಲದೆ ಮಳೆ ಬಾರದು" ಎಂಬ ಅವರ ನುಡಿಗೆ "ನೀರಿಲ್ಲದೆ ಮರ ಬೆಳೆಯದು, ಮಳೆಯಿಲ್ಲದೆ ನೀರಾಗದು, ಮರ ಬೆಳೆಯದೆ ಮಳೆ ಬಾರದು" ಎಂಬ ಹೊಸ ಚಕ್ರಭ್ರಮಣ ಕೋಟಿಯ ಪ್ರಶ್ನೆ ಹಾಕುತ್ತಾರೆ. ಆದರೆ, ಅದೇ ಮರಗಳನ್ನು ನಟ್ಟು ಬೆಳಸಿದುದರಿಂದ ರಶಿಯಾದಲ್ಲಿ ಉಕ್ರೈನಿನ ಫಲವತ್ತಾದ ಗೋಧಿಯ ನೆಲ ಉಸುಬಿನ ರಾಶಿಯಾಗುವ ಸಂಭವ ತಪ್ಪಿತು, ಜವುಗು ಪ್ರದೇಶದ ರೋಗಕಾಟ ತಪ್ಪಿ ಧಾನ್ಯ ಬೆಳೆಯುವ ಹಸನಾದ ನೆಲವಾಯಿತು. ಇದನ್ನು ಯಾರೂ ಗಮನಿಸುವುದಿಲ್ಲ. ಮೆಕ್ಸಿಕೋ ಆಖಾತದ ಕಡೆಯಿಂದ ರೊಯ್ಯೆಂದು ಬೀಸಿ ಬರುವ ಸುಂಟರಗಾಳಿಯ ಪ್ರಕೋಪದಿಂದ ಜನಾಂಗಕ್ಕೆ ಆಗುತ್ತಿದ್ದ ಅಪಾರ ಹಾನಿಯನ್ನು ಉಳಿಸಲು, ಅಮೇರಿಕಾದ ಸಂಯುಕ್ತ ರಾಜ್ಯ ಕರಾವಳಿಯಲ್ಲಿ ದಟ್ಟವಾದ ಅರಣ್ಯವನ್ನು ಬೆಳೆಸಬೇಕಾಯಿತು. ನಮ್ಮ ದೇಶದಲ್ಲೇ ಇಂದು ರಜಪುತಾನದ ಥರ್ ಮರುಭೂಮಿ ಗಂಗಾನದಿ ಬಯಲನ್ನು ಆಹುತಿ ತೆಗೆದುಕೊಳ್ಳುತ್ತಾ ಮುಂದೊತ್ತಿ ಬರುತ್ತಿದೆ. ಅದನ್ನು ತಡೆವ ಬಲ, ನಮ್ಮ ಮೂವತ್ತೈದು ಕೋಟಿ ಜನರಿಗೆ ಇಲ್ಲದೇ ಹೋದರೆ, ಯಾವ ದಾಮೋದರ ಕೊಳ್ಳದ ಯೋಜನೆಯಿಂದಲೂ ಪ್ರಯೋಜನವಿಲ್ಲ. ಜನ ಮೊದಲು ಮಾತಿನ ಮರ್ಮವನ್ನು ಸಂಪೂರ್ಣವಾಗಿ, ಒಳಹೊರಗುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ತಿಳಿದುಕೊಳ್ಳಬೇಕು-ಬಳಿಕ ಒಂದು ನಿರ್ಧಾರಕ್ಕೆ ಬರಬೇಕು.

ಕಾರ್ಯನಿರತರಾಗದೆ ಭಾರತದ ಜನ ಎಂದಿಗೂ ಏಳಿಗೆ ಹೊಂದಲಾರರು. ಕಾರ್ಯನಿರತರಾಗಲು ಬೇಕಾದ ಸಾಮಾನ್ಯ ಅನುಕೂಲತೆಗಳನ್ನು ನಾವು ಒಟ್ಟಾಗಿ ಮಾಡಿಕೊಳ್ಳಬೇಕು. ಇಂದು ಸುಮಾರು ಐದಾರು ಕೋಟಿಯಷ್ಟು ಅಲ್ಪ ಜನ ಬಲವಿರುವ ಜಪಾನು ಲೋಕ ವ್ಯಾಪಾರದಲ್ಲಿ ಯಶಸ್ವಿಯಾಗಿ ಸ್ಪರ್ಧಿಸಲು ಸಾಧ್ಯವಾಗಿದೆ. ಇದು ಏಕೆ ಹೇಗೆ?-ಅಲ್ಲಿಯ ಜನರ ಕಾರ್ಯದಕ್ಷತೆ, ಅವರ ದುಡಿಯುವ ಬುದ್ಧಿ, ಹಸ್ತಕೌಶಲ ಹಾಗೂ ರಾಷ್ಟ್ರಪ್ರೇಮ ಇಷ್ಟು ಮಹತ್ವ ಕೆಲಸವನ್ನು ಮಾಡಿವೆ. ಐವತ್ತು ವರ್ಷಗಳ ಹಿಂದೆ ಆ ಆಗ್ನೇಯ ಏಶಿಯದ ದ್ವೀಪ ಸಮುದಾಯ ನಮ್ಮಂತೆಯೇ ಕೃಷಿಪ್ರಧಾನ ದೇಶವಾಗಿತ್ತು. ಬ್ರಿಟಿಷರು ನಮ್ಮನ್ನು ಆಳಿದ ಇನ್ನೂರು ವರ್ಷಗಳಲ್ಲಿ, ಭಾರತದಲ್ಲಿ ಕೃಷಿ ಹೊರತು ಕೈಗಾರಿಕೆ ಏನೇನೂ ಬೆಳೆಯಲಾರದು—ಎಂದು ಜನರಿಗೆ ಕಲಿಸಿಹೋದರು. ಆದರೆ ಅಂಥದೇ ನಾಡು ಇಂದು ಜಪಾನಿನಲ್ಲಿ ಆದ ಪರಿವರ್ತನೆ ಜಗತ್ತಿನ ವ್ಯಾಪಾರೀ ವರ್ಗದಲ್ಲಿ ಆಶ್ಚರ್ಯ ಹುಟ್ಟಿಸಿದೆ. ಅಲ್ಲಿಯ ಜನ ಹೆಚ್ಚುಹೆಚ್ಚಾಗಿ ಉದ್ಯೋಗಶೀಲರಾಗಿದ್ದಾರೆ. ಒಂದು ಗಳಿಗೆಯನ್ನೂ ಅವರು ವಿರಾಮವೆಂದು ಕೈಕಟ್ಟಿ ಕುಳಿತರು ಉಪಯೋಗಿಸುವುದಿಲ್ಲ— "ಕರ್ಮ" (ಕೆಲಸ)ವೆಂದರೆ ಅವರಿಗೆ ಬಹಳ ಅಚ್ಚುಮೆಚ್ಚು. ಒಂದೊಂದು ಕುಟುಂಬ-ಅದರಲ್ಲಿರುವುದು ನಾಲ್ಕೈದೇ ಜನ, ತಂದೆ, ತಾಯಿ, ಮಗ, ಮಗಳು-ಒಂದೊಂದು ಪುಟ್ಟ ಕಾರಖಾನೆ ಎಂದರೂ ಸಲ್ಲುವುದು. ಅವರು ಚೆನ್ನಾಗಿ ಕೆಲಸಮಾಡಿ, ನೈಪುಣ್ಯದಿಂದ ಉಪಯೋಗಕರ ವಸ್ತುಗಳನ್ನು ವಿಪುಲವಾಗಿ ಸಿದ್ಧಪಡಿಸುತ್ತಾರೆ. ಶಾಲೆಗೆ ಹೋಗುವ ಮಕ್ಕಳು, ಮನೆಗೆ ಬಂದ ಬಳಿಕ ತಮ್ಮ ತಾಯಿತಂದೆಯರಿಗೆ ಅವರ ಉದ್ಯಮದಲ್ಲಿ ನೆರವಾಗುತ್ತಾರೆ. ಇಂಥ ಮನೆಗಳು ಪರಸ್ಪರ ಸೌಹಾರ್ದದಿಂದ ಪೂರಕವಾಗಿ ಕೆಲಸ ನಡೆಸುತ್ತವೆ. ಹಾಗಾಗಿ ಒಟ್ಟು ದೇಶದ ಹಿತಕ್ಕೆ ಕಲ್ಯಾಣಕ್ಕೆ ಧಕ್ಕೆಬರುವುದಿಲ್ಲ.

ಉದ್ಯಮ ಬೆಳೆಯದೆ ನಾಡಿನಲ್ಲಿ ಸಂಪತ್ತು ಹಿಗ್ಗದು. ಹಾಗೆ ಒಂದು ಉದ್ಯೋಗ ಮುಂದೆ ಬರಲು ಅದಕ್ಕೆ ಬಂಡವಲು ಬೇಕು, ನುರಿತ ಕೆಲಸಗಾರರು ಬೇಕು, ವಸ್ತುವಿನ ಸಿದ್ಧತೆಯಲ್ಲಿ ಉಪಯೋಗಿಸಬೇಕಾದ ತಂತ್ರ ಅಂದರೆ ಯಂತ್ರ ಸಲಕರಣೆಗಳ ನೆರವು ಬೇಕು, ಅಗ್ಗದಲ್ಲಿ ಶಕ್ತಿಯ ಪೂರೈಕೆ ಬೇಕು. ಜಪಾನಿನಲ್ಲಿ ಇಂಥದೆಲ್ಲ ಸಮಸ್ಯೆಗಳನ್ನು ಕಾಗದದ ಯೋಜನೆಗಳಲ್ಲಿ ವಿವರಿಸಿ ಬಿಡಿಸಲಿಲ್ಲ—ಬದಲಿಗೆ ಕೆಲಸಕ್ಕೆ ಕೈಹಾಕಿ, ಬಂದ ಎಡರ-ತೊಡರುಗಳನ್ನು ಇದಿರಿಸಿದರು- ಎಲ್ಲಿಯೂ ಸಿಗುವ ಜಲವಿದ್ಯುತ್ತು ಇಂದು ಹೇರಳವಾಗಿ ಅಲ್ಲಿ ಉಪಯೋಗಿಸಲ್ಪಡುತ್ತದೆ. ಎಣ್ಣೆ ಇಲ್ಲದೆ ಉರಿವ ಬತ್ತಿ (ವಿದ್ಯುದ್ದೀಪ) ಇಲ್ಲದ ಒಂದೂ ಗುಡಿಸಲು ಜಪಾನಿನಲ್ಲಿ ಕಾಣಸಿಗದು. ಅದೇ ವಿದ್ಯುತ್ತು ಕೈಗಾರಿಕೆ ನಡೆಸಲು ಬೇಕಾದ ಅಗ್ಗದ ಶಕ್ತಿಯೂ ಆಗಿದೆ. ಈ ಶಕ್ತಿಯೊಡನೆ ಜನರ ಮೇಧಾಶಕ್ತಿಯು ಕೂಡಿ, ಕೈಚಳಕದಿಂದ ಕೆಲಸ ಮಾಡಿದಾಗ ಉತ್ಪಾದನೆ ಭರದಿಂದ ಏರುತ್ತದೆ.

(ಬರುವ ವಾರದ ಸಂಚಿಕೆ ನೋಡಿರಿ)

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರಾಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಬೆಂಗಳೂರಿನ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ

ಬೆಂಗಳೂರಿನಲ್ಲಿ ನಡೆದ ಅ. ಭಾ. ಕಾಂಗ್ರೆಸ್ ಅಧಿವೇಶನವನ್ನು ದೇಶ ಹೆಚ್ಚಿನ ಆಶೆ ಆಕಾಂಕ್ಷೆಗಳಿಂದ ನಿರೀಕ್ಷಿಸುತ್ತಲಿದೆ. ಕಾಂಗ್ರೆಸ್ಸಿನ ಮುಂದಿರುವ ಮಹಾ ಸಮಸ್ಯೆಗಳು ಹೇಗೆ ಪರಿಹಾರವಾದಾವೆನ್ನುವದರಲ್ಲಿ ಕಾಂಗ್ರೆಸ್ಸಿಗರಿಗೂ– ಕಾಂಗ್ರೆಸ್ಸಿನಿಂದ ಹೊರಹೋಗಿ ನೂತನ ಪಕ್ಷ ಕಟ್ಟಿಕೊಂಡವರಿಗೂ–ಇತರ ರಾಜಕೀಯ ಪಕ್ಷಗಳಿಗೂ ಹೆಚ್ಚಿನ ಕುತೂಹಲವಿತ್ತು. ಆದರೆ ಬೆಂಗಳೂರಿನ ಅಧಿವೇಶನದ ಹಲವು ಮುಖ್ಯಾಂಶಗಳನ್ನು ಅವಲೋಕಿಸಿದರೆ ವಿಶೇಷ ಉತ್ಸಾಹವಾಗಲೀ ನಿರುತ್ಸಾಹವಾಗಲೀ ಆಗದು. ಈ ಮೊದಲೇ ಶ್ರೀ ಜವಾಹರಲಾಲ ನೆಹ್ರೂರವರು ಕಾಂಗ್ರೆಸ್ಸಿಗೆ ವರದಿಮಾಡಿದಂಶಗಳೇ ಕಾಂಗ್ರೆಸ್ಸಿನ ಚುನಾವಣಾಘೋಷಣ ಪತ್ರದ ಮುಖ್ಯಾಂಶಗಳಾಗಿರುತ್ತವೆ. ಕಾರ್ಯಕಾರಿ ಸಮಿತಿಯ ಹಲವು ಸದಸ್ಯರ ಒತ್ತಾಯದಿಂದಲೂ, ಬೆಂಗಳೂರಿನಲ್ಲಿಯ ಪ್ರತಿಷ್ಠಿತ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಪ್ರಾಂತೀಕರಣದ ಕಳಕಳಿಯ ಬೇಡಿಕೆಯಿಂದಲೂ ನೆಹ್ರೂರವರು ಭಾಷಾವಾರು ಪ್ರಾಂತರಚನೆಯ ಘೋಷಣೆಯನ್ನು ಅದರಲ್ಲಿ ಸೇರಿಸಬೇಕಾಯಿತು. ಉಳಿದೆಲ್ಲ ಅಂಶಗಳೆಂದರೆ ಭೂಸುಧಾರಣೆ ನದಿ ಕಂದರ ಯೋಜನೆಗಳನ್ನು ಅತಿ ಶೀಘ್ರದಲ್ಲಿ ಕಾರ್ಯರೂಪಕ್ಕೆ ತಂದು ಜನರಿಗೆ ಉದ್ಯೋಗವನ್ನು ಒದಗಿಸಿಕೊಡುವುದು–ಕೆಲಸಗಾರರಿಗೆ ವಸತಿ ಸೌಕರ್ಯಗಳನ್ನೊದಗಿಸಿ ಧನಿಕ ಕೆಲಸಗಾರರೊಳಗೆ ಸಹಕಾರ ಮೂಡುವಂತೆ ಪ್ರಯತ್ನಿಸುವದೂ, ಆರೋಗ್ಯ ಮತ್ತು ಶಿಕ್ಷಣದಲ್ಲಿ ಪೂರ್ವಪದ್ಧತಿಗಿಂತ ಮಿಗಿಲಾದ ಸುಧಾರಣೆಯನ್ನು ಮಾಡದೆ ಕಲೆಸಾಹಿತ್ಯ ಸಂಗೀತ ನಾಟಕಾದಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದು– ಹಿಂದುಳಿದವರ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಅಭಿವೃದ್ಧಿಯನ್ನು ಬಯಸುವದೂ– ಆರ್ಥಿಕ, ಗಡಿನಿರ್ಣಯಿಕ ವಿಚಾರದಲ್ಲಿ ಆಯಾಯ ಭಾಷಾ ಪ್ರಾಂತದವರು ತಕರಾರಿಲ್ಲದೆ ಒಂದು ನಿರ್ದಿಷ್ಟ ಧೋರಣೆಯಿಂದ ಮುಂದೆ ಬಂದರೆ ಭಾಷಾನುಗುಣ ಪ್ರಾಂತವನ್ನು ರಚಿಸುವದೂ –ತಯಾರಾಗುವ ಸರಕುಗಳ ಮೇಲೆ ನ್ಯಾಯವಾದ ಬೆಲೆಯನ್ನು ಹೊರಿಸುವದೂ– ಅವಶ್ಯಕಂಡ ವಸ್ತುಗಳ ಮೇಲೆ ಕಂಟ್ರೋಲನ್ನು ಸ್ಥಿರಗೊಳಿಸುವದೂ–ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಡುವದೂ ನೇಕಾರರಿಗೆ ನೂಲನ್ನು ಒದಗಿಸುವುದೂ ಒಕ್ಕಲತನಕ್ಕೆ ಹೆಚ್ಚಿನ ಸಹಾಯ ನೀಡಿ ಆಹಾರ ಬೆಳೆಸುವಂತೆ ಮಾಡಿ ಬಟ್ಟೆ ಮತ್ತು ಆಹಾರದಲ್ಲಿ ಸ್ವಾವಲಂಬಿಗಳಾಗುವಂತೆ ವಿದೇಶಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸುವದು- ಕಾಶ್ಮೀರದ ಬಗ್ಗೆ ತಳೆದ ಧೋರಣೆಯಲ್ಲಿ ಬದಲು ಮನಸ್ಸುಮಾಡದೆ ಕಾಶ್ಮೀರಿಗಳಿಗೆ ಕೊಟ್ಟ ವಚನದಂತೆ ನಡೆದುಕೊಳ್ಳುವುದೂ ಇವೇ ಮೊದಲಾದ ಅಂಶಗಳು ಈ ಘೋಷಣೆಯಲ್ಲಿರುತ್ತವೆ. ಇಂತಹ ಘನವಾದ ಉದ್ದೇಶಗಳು ನಾಲ್ಕುವರ್ಷದಿಂದಲೂ ಸರಕಾರದ ಮುಂದೆ ಇರುವಂಥವುಗಳಾಗಿವೆ. ಹಲವು ಉದ್ಯಮಗಳಿಗಾಗಿಯೂ ಯೋಜನೆಗಳಿಗಾಗಿಯೂ ಸರಕಾರ ಗೊತ್ತುಪಡಿಸಿದ ಯೋಜನಾ ಸಮಿತಿಗಳು ಎರಡುಮೂರು ವರ್ಷಗಳ ಕಾಲ ವ್ಯರ್ಥ ಅದಕ್ಕಾಗಿಯೇ ಕಾಲಹರಣಮಾಡಿವೆ. ತಿರುಗಿ ಅದೇ ಭರವಸೆಗಳು ಘೋಷಣೆಯಲ್ಲಿ ಬಂದಿವೆ. ಜನತೆ ಈಗ ನಿರೀಕ್ಷಿಸುತ್ತಿರುವದು ಸುಂದರವೂ ಆಶಾದಾಯಕವೂ ಆದ ಯೋಜನೆಗಳನ್ನಲ್ಲ. ಅದು ಕಾರ್ಯರೂಪದಲ್ಲಿ ಬಂದು ಜನತೆಯ ಜೀವನ ಮಟ್ಟ ಸುಧಾರಿಸುವದನ್ನು ಅವರು ಬಯಸುತ್ತಾರೆ. ಆಹಾರ ಬಟ್ಟೆಯ ಕುರಿತಾಗಿ ಸರಕಾರ ನೀಡುತ್ತಿದ್ದ ಆಶ್ವಾಸನೆಗಳೆಲ್ಲವೂ ವರ್ಷವರ್ಷಕ್ಕೆ ನಮ್ಮನ್ನು ಅದೇ ದುಃಸ್ಥಿತಿಗೆ ತಳ್ಳುತ್ತಿವೆ- ಆದುದರಿಂದ ಬೆಂಗಳೂರಿನ ಘೋಷಣೆಯೇ ಕೊನೆಯದಾಗಲೆಂತ ಜನ ಹಾರೈಸುವದು ಸ್ವಾಭಾವಿಕವಾಗಿದೆ. ಮುಂದೆ ಇದೇ ಹಾಡು ಇಲ್ಲವೆ ಪುನರುಕ್ತಿಯನ್ನು ಕೇಳದಂತಾಗಲಿ! ಮಾಡುತ್ತೇವೆ ಎನ್ನುವ ಮಾತು ಕೃತಿಯಲ್ಲಿ ಮೂಡಿ ಬರಲಿ!

ಭಾಷಾವಾರು ಪ್ರಾಂತರಚನೆ ಅವ್ಯವಹಾರ್ಯವೇ?

ಭಾಷಾವಾರು ಪ್ರಾಂತರಚನೆಯ ಘೋಷಣೆ ಮನಸ್ಸಿಲ್ಲದ ಮನಸ್ಸಿನಿಂದ ನೆಹ್ರೂರವರು ಒಪ್ಪಿರುತ್ತಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಆದರಲ್ಲಿ ಆಸ್ಥೆಯನ್ನು ತಾಳಿದ್ದು ಸದಸ್ಯರೆಲ್ಲರೂ ಪ್ರಾಂತರಚನೆಯ ವಚನವನ್ನು ಕಾಂಗ್ರೆಸ್ ಚುನಾವಣಾ ಘೋಷಣೆಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದ ವಿಚಾರ ನೆಹ್ರೂರವರಿಗೆ ಇಚ್ಛೆಯನ್ನೇ ಉಂಟುಮಾಡಿತು! ಅಖಿಲ ಕರ್ನಾಟಕ ಪ್ರಾಂತರಚನಾ ಸಮ್ಮೇಲನವೊಂದನ್ನು ಮೈಸೂರಿನ ಪ್ರಮುಖ ಕನ್ನಡಿಗರು ನಡೆಸಿ ಕಾಂಗ್ರೆಸ್ಸಿಗರ ಒಲವನ್ನು ಆ ಕಡೆಗೆ ಸೆಳೆಯುವದು ಮಾತ್ರವಲ್ಲದೆ ಮೈಸೂರೇತರ ಕನ್ನಡಿಗರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ.

ಮೈಸೂರನ್ನು ಬಿಟ್ಟು ಕರ್ನಾಟಕ ಪ್ರಾಂತ ಸಾಧ್ಯವಿಲ್ಲ. ಕರ್ನಾಟಕ ಪ್ರಾಂತ ರಚಿಸುವಲ್ಲಿ ಮೈಸೂರಿಗರೇ ತೊಡಕಾಗಿದ್ದಾರೆ. ಎನ್ನುವ ಒಂದು ಕಲ್ಪನೆ ಮೈಸೂರೇತರ ಕನ್ನಡಿಗರಲ್ಲಿ ನೆಲೆಸಿತ್ತು. ಸದ್ಯದ ಈ ಸಮ್ಮೇಲನ ಆ ತೊಡಕನ್ನು ನಿವಾರಿಸಿಯದೆ. ಕನ್ನಡದ ದೇಶ ಹಂಚಿಹಂಚಾಗಿ ಹೋಗಿದ್ದು ಬೇರೆ ಬೇರೆ ಪ್ರಾಂತಗಳ ಹಾಗೂ ಸಂಸ್ಥಾನಗಳಲ್ಲಿ ಉಳಿದುಹೋಗಿರುತ್ತದೆ. ಪ್ರತ್ಯೇಕ ಪ್ರಾಂತವಾಗುವಾಗ ಗಡಿನಿರ್ಣಯ ಸಮಸ್ಯೆ ಕಠಿಣವಾಗಬಹುದು. ಕರ್ನಾಟಕಕ್ಕೆ ಇಂತಹ ಗಡಿಸಮಸ್ಯೆ ಮಹಾರಾಷ್ಟ್ರ–ಕೇರಳ-ತೆಲುಗು–ತಮಿಳರ ಪ್ರದೇಶದಲ್ಲಿ ಇದೆ. ವಿವಾದಗ್ರಸ್ತವಾದ ಈ ವಿಚಾರ ವಿಕೋಪಕ್ಕೆ ಬರಬಹುದೆಂಬ ಒಂದು ಊಹೆಯೂ ಇತ್ತು. ಆದರೆ ಬೆಂಗಳೂರಿನ ಅ.ಕ.ಪ್ರಾಂ ಸಮ್ಮೇಲನದ ಉದ್ಘಾಟಕರಾಗಿದ್ದ ಕಾಂಗ್ರೆಸ್ ಕಾರ್ಯದರ್ಶಿ ಕಲಾ ವೆಂಕಟರಾಯರೂ, (ಆಂಧ್ರ) ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಬಿ.ಎಸ್.ಹಿರೇಯವರೂ ತಮ್ಮಿಂದ ಕರ್ನಾಟಕ ಪ್ರಾಂತರಚನೆಗೆ ಅಡ್ಡಿಯಾಗದೆಂದು ಸ್ಪಷ್ಟೀಕರಿಸಿದಾರೆ.

ಪ್ರಾಂತೀಯ ವಾದದ ಅವಶ್ಯಕತೆ ಇಂದು ನಿನ್ನೆಯದಲ್ಲ; ಒಂದು ಶತಮಾನದಿಂದಲೂ ಅದರ ಕುರಿತು ಚಳುವಳಿ ನಡೆದಿರುತ್ತದೆ. 1896ರಲ್ಲಿ ಬಿಹಾರದ ಮಹೇಶ ನಾರಾಯಣರಾಯರಿಂದ ಆರಂಭಿಸಿ 1903ರಲ್ಲಿ ಉತ್ಕಲದೇಶಿಯರು ಅದನ್ನು ಪುಷ್ಟೀಕರಿಸಿದರು. 1905ರಲ್ಲಿಯ ಬಂಗಾಳದ ವಿಭಜನೆ–1913ರಿಂದ ಆಂಧ್ರದಲ್ಲಿ 1915ರಿಂದ ಮಹಾರಾಷ್ಟ್ರದಲ್ಲಿ 1916ರಿಂದ ಕರ್ನಾಟಕದಲ್ಲಿ ಈ ಪ್ರಾಂತೀಯವಾದ ಬೆಳೆದು ಚಳುವಳಿ ನಡೆಯುತ್ತದೆ. ಮಾಂಟೆಗೋ–ಚೇಮ್ಸಫರ್ಡ್, ಸೈಮನ ಸಮಿತಿ– ನೆಹ್ರೂ ಸಮಿತಿ ಮೊದಲಾದವರು ಭಾಷಾವಾರು ಪ್ರಾಂತೀಕರಣವನ್ನು ಒಪ್ಪಿರುತ್ತಾರೆ. 1921ರಲ್ಲಿ ಬ್ರಿಟಿಷರು ಕೈಕೊಂಡ ಆಡಳಿತ ಕ್ರಮವನ್ನು ಕಾಂಗ್ರೆಸ್ ನಿರಾಕರಿಸಿದ್ದರೂ ಭಾಷೆಗಳ ಆಧಾರದಂತೆ ಭಾರತವನ್ನು ವಿಭಾಗಿಸಿದರು. ಮಹಾತ್ಮಾ ಗಾಂಧಿಯವರೂ, ಭಾಷಾನುಗುಣ ಪ್ರಾಂತ್ಯರಚನೆಯನ್ನು ಒಪ್ಪಿಕೊಂಡಿದ್ದರು. 1946ರಲ್ಲಿ ಸರದಾರ ಪಟೇಲರು ಕರ್ನಾಟಕ ಚಲ್ಲಾಪಿಲ್ಲಿಯಾಗಿ ಹಂಚಿಹೋಗಿದ್ದರ ಕುರಿತು ಬ್ರಿಟಿಷರ ಆಡಳಿತ ದೋಷವನ್ನು ಎತ್ತಿಹೇಳಿ ಸಾಂಸ್ಕೃತಿಕ ಆರ್ಥಿಕ ಅಭಿವೃದ್ಧಿಗೆ ಭಾಷಾನುಗುಣ ಪ್ರಾಂತರಚನೆಯೊಂದೇ ಉತ್ತಮ ಪರಿಹಾರವೆಂದಿರುವರು. ಎರಡು ವರ್ಷಗಳ ಕೆಳಗೆ ದಾರ್ ಸಮಿತಿಯವರು 700ಮಂದಿ ಸಾಕ್ಷಿಗಳ ವಿಚಾರಣೆ ತೆಗೆದುಕೊಂಡು ಸಾಮಾನ್ಯ ಆರು ತಿಂಗಳು ಅದೇ ಕಾರ್ಯದಲ್ಲಿ ಕಾಲಹರಣ ಮಾಡಿ ಕಾಂಗ್ರೆಸ್ಸಿನ ಹಿರಿಯರಾದ ನೆಹ್ರೂ, ಪಟೇಲ್, ಮುಂತಾದವರ ಮನೋಗತವನ್ನರಿತು ತಾವು ಪ್ರತ್ಯಕ್ಷ ಕಂಡ ಜನರ ಕಾತುರತೆಯನ್ನು ಕಡೆಗಣಿಸಿ ಕರ್ನಾಟಕ, ಕೇರಳ, ಮಹಾರಾಷ್ಟ್ರ ಆಂಧ್ರಪ್ರಾಂತ ಅನವಶ್ಯವೆಂದು ಬಿಟ್ಟರು. ಪಂತೋಜಿ ಮತ್ತು ಕೆ.ಪಿ.ಸಿ.ಸಿ.ಯ ಸದಸ್ಯರು ರಾಜೀನಾಮೆಯನ್ನಿತ್ತು, ಕ್ಷಣ ಧುರೀಣರು ತಿಡಿತಿಡಿಯಾಗಿ "ಬುದ್ಧಿಶೂನ್ಯವಾದ ವರ್ತನೆ" ಎಂದೂ ಹೇಳಿಬಿಟ್ಟರು. ನೆಹ್ರೂರವರ ಧೋರಣೆಯಲ್ಲಿ ಈಗಲೂ ಬದಲಾವಣೆಯಿಲ್ಲ. ಅಧಿವೇಶನ ಆರಂಭವಾದ ಮೇಲೆ ಮೂರುನಾಲ್ಕು ಸಂದರ್ಭಗಳಲ್ಲಿ ಭಾಷಾನುಗುಣ ಪ್ರಾಂತರಚನೆ ಅವ್ಯವಹಾರ್ಯವೆಂದಿದ್ದಾರೆ. "ಪ್ರಾಂತೀಯವಾದವೆಂಬುದು ಕ್ಷುದ್ರ ಭೇದಭಾವದಿಂದ ಕೂಡಿದೆ" "ಕಾಂಗ್ರೆಸ್ ಹಿಂದೆ ವಚನಕೊಟ್ಟಿದೆಯೆಂದು ಈಗ ಆ ಕತೆಯನ್ನು ಎತ್ತಿಹಿಡಿಯುವದರಲ್ಲಿ ಅರ್ಥವಿಲ್ಲ" ಎಂದು ಟೀಕಿಸಿದಾರೆ. ಆರ್ಥಿಕ ಸ್ಥಿತಿ ಚೆನ್ನಾಗಿದೆಂದು ಖಚಿತವಾದರೆ–ಗಡಿತಂಟೆಯನ್ನು ನೀವು ನೀವೇ ನಿಶ್ಚಯಿಸುವದಾದರೆ–ಪರಸ್ಪರರೊಳಗೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಬರುವಂತಿಲ್ಲವಾದರೆ ನನ್ನದೇನು ಅಡ್ಡಿಯಿಲ್ಲ" ಎಂದು ಹೇಳಿದ್ದು ಇತರ ಸದಸ್ಯರ ಬಲವಂತಕ್ಕಾಗಿಯೇ.

ಇದಕ್ಕಿಂತಲೂ ಮಹತ್ವದ ಪ್ರಶ್ನೆಗಳೂ–ಸಮಸ್ಯೆಗಳೂ ಸರಕಾರದ ಮುಂದೆ ಫಲಿಸದೆ ತರ್ಕದಲ್ಲಿಯೂ ಕಾಗದದಲ್ಲಿಯೇ

(ನಾಲ್ಕನೇ ಪುಟನೋಡಿರಿ)

ಸತ್ತವ್ರು ಮಾತೆತ್ತೋದಿಲ್ಲ ಖರೆ,—

ಆದ್ರೆ ಅವ್ರ ಹೆಂಡ್ತಿ ಮಕ್ಳು?

"ಯಜಮಾನ್ರು ಇನ್‌ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತು ಉಳಿದವ್ರ ಸಂಕಷ್ಟ ತಿಳ್ಸುತ್ತೆ.

ಪ್ರತೀ ಗೃಹಸ್ಥ್ರು, ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ.

ದಿ ಕೆನರಾ ಮ್ಯೂಚುವಲ್

ಶ್ರೀ

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫

The Canara Mutual Assurance Co., Ltd.

H. O. UDIPI (SOUTH INDIA) ESTD: 1935.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ಬಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಳಿಗೆ ರೂ. 3—8—0
ಸಣ್ಣ ಬಾಟ್ಳಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಪರ್ಶಿಯಾ ಎಣ್ಣೆ ತಂಟೆಯಲ್ಲಿ ಅಮೆರಿಕೆಯ ಮಧ್ಯಸ್ಥಿಕೆ?

ಪರ್ಶಿಯ ಎಣ್ಣೆಯ ತಂಟೆಯಲ್ಲಿ ಅಧ್ಯಕ್ಷ ಟ್ರೂಮನ್ನರು ಮಧ್ಯಸ್ಥಿಕೆ ವಹಿಸಿದ್ದು ಪರ್ಶಿಯದೊಡನೆ ಮಾತುಕತೆಗಾಗಿ ತನ್ನ ವಿದೇಶಾಂಗ ಖಾತೆಯ ಸಲಹೆಗಾರರಾದ ಹ್ಯಾರಿಮನ್ನರನ್ನು ಕಳಿಸಿರುತ್ತಾರೆ. ಹ್ಯಾರಿಮನ್ನರು ಪರ್ಶಿಯದ ಶಹಾ ಮತ್ತು ಮುಖ್ಯ ಮಂತ್ರಿ ಡಾ। ಮುಸಾದಿಕರಿಗೆ ಟ್ರುಮನರ ಖಾಸಗೀ ಪತ್ರಗಳನ್ನು ಮುಟ್ಟಿಸಿದರು. ತೆಹರಾನದಲ್ಲಿ ಹ್ಯಾರಿಮನ್ನರಿಗೆ ವಿರೋಧ ಮತಪ್ರದರ್ಶನವನ್ನು ಹಲವು ಕಮ್ಯೂನಿಸ್ಟರು ತೋರಿಸಿ ಗಲಭೆಮಾಡಿದ್ದನ್ನು ಪೋಲೀಸರು ಹತೋಟಿಗೆ ತಂದರು- 'ಈ ಎಣ್ಣೆ ಸಮಸ್ಯೆಯು ಇಂಗ್ಲಂಡ್ ಇರಾಣದ ಪ್ರಶ್ನೆ ಮಾತ್ರವಾಗಿಂದೆ ಭಾರತ ಪಾಕಿಸ್ತಾನಗಳಿಗೂ ಸಂಬಂಧಿಸಿದ್ದಾಗಿರುತ್ತದೆ. ನಾನು ಇಲ್ಲಿಯ ಧುರೀಣರೊಡನೆ ಚರ್ಚಿಸುವದರಿಂದ ಸಮಸ್ಯೆ ಬಗೆಹರಿಯಲು ಸಹಾಯವಾದೀತೆಂದು ನನಗೆ ಭರವಸೆಯಿದೆ" ಎಂದು ಹ್ಯಾರಿಮನ್ನರು ಸುದ್ದಿಗಾರರಿಗೆ ತಿಳಿಸಿದರು.

ಕೊರಿಯಾದಲ್ಲಿ ಸಂಧಾನ ಮಾತುಕತೆ

38ನೇ ಅಕ್ಷಾಂಶದ ಸಮೀಪದಲ್ಲಿರುವ ಕೆಸಾಂಗದಲ್ಲಿ ತಿರುಗಿ ಮಾತುಕತೆ ಆರಂಭವಾಗಿದೆ. ಸುದ್ದಿಗಾರರಿಗೆ ಪ್ರವೇಶವಿಲ್ಲದ ಸಂದರ್ಭದಲ್ಲಿ ಮಾತುಕತೆಗಳು ಮೂರು ದಿನ ಮಟ್ಟಿಗೆ ನಿಂತಿದ್ದುವು. ಈಗ ಸುದ್ದಿಗಾರರಿಗೆ ಪ್ರವೇಶವನ್ನು ಕೊಡಲಾಗಿದೆ. ಜನರಲ್ ರಿಜವೆಯವರು ಮಂಡನೆಗಳನ್ನು ಒಪ್ಪಿಕೊಂಡಿದ್ದು ಸಂ. ರಾ. ಸಂಘದ ಪ್ರತಿನಿಧಿಗಳೂ ಉ. ಕೋರಿಯದ ಮಿಲಿಟರಿ ಅಧಿಕಾರಿಗಳೂ ಚೀನೀ ಕಮ್ಯೂನಿಸ್ಟ ಅಧಿಕಾರಿಗಳೂ ಈ ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ.

ಜಪಾನ ಒಪ್ಪಂದ

ಅಮೆರಿಕಾ ಮತ್ತು ಬ್ರಿಟಿಶ ಸರಕಾರಗಳು ಪರಸ್ಪರ ವಿಚಾರ ವಿನಿಮಯದಿಂದ ಉಭಯತರಿಗೂ ಸಮಾಧಾನಕರವಾದ ಜಪಾನ ಶಾಂತಿ ಒಪ್ಪಂದವನ್ನು ಸಿದ್ಧಗೊಳಿಸಿದ್ದು, ಅದನ್ನು ಪ್ರಸಿದ್ಧಿಗೆ ಕೊಡಲಾಗಿದೆ. ಸಪ್ಟೆಂಬರ 4ನೇ ತಾರೀಕಿಗೆ ನಡೆಯುವ ಸಾನ್ ಫ್ರಾನ್ಸಿಸ್ಕೋ ಸಮ್ಮೇಳನದ ಮುಂದೆ ಈ ಕರಡಿನ ಕುರಿತು ಚರ್ಚೆ ನಡೆಯಲಿದೆ.

ಮೌ. ಅಜಾದರಿಗೆ ಗೌರವ ಡಿ ಲಿಟ್ ಪದವಿ

ಭಾರತ ಸರಕಾರದ ಶಿಕ್ಷಣಮಂತ್ರಿ ಮೌಲಾನಾ ಅಜಾದರಿಗೆ ತೆಹರಾನ ವಿಶ್ವವಿದ್ಯಾಲಯವು ಗೌರವ ಡಿ. ಲಿಟ್ ಪದವಿಯನ್ನು ದಯಪಾಲಿಸಿದೆ. "ಇವರು ಶ್ರೇಷ್ಠ ವಿದ್ವಾಂಸರು. ಇವರ ಆಗಮನದಿಂದ ಇರಾಣ ಭಾರತಗಳ ಮೈತ್ರಿಗಾಢವಾಗುವದರಲ್ಲಿ ಸಂದೇಹವಿಲ್ಲೆಂದು" ಇರಾಣದ ಮುಖ್ಯ ಅಧಿಕಾರಿಗಳು ಪ್ರಶಂಸೆ ಮಾಡಿರುವರು.

ಪಾಕ್-ಭಾರತ ಗಡಿಗಳಲ್ಲಿ ಸೈನ್ಯ!

ಪಾಕಿಸ್ತಾನದ ಗಡಿಯಲ್ಲಿ ಭಾರತದ ಸೈನಿಕರು ತಂಗಿರುವರೆಂದು ಲಿಯಾಖತರು ಸಂ. ರಾ. ಸಂಘಕ್ಕೂ ನೆಹ್ರೂ"ವರಿಗೂ ತಂತಿಬಿಟ್ಟಿರುವರು. ಅಂತೆಯೆ ಭಾರತದ ಗಡಿಯಲ್ಲೂ ಪಾಕ್ ಸೈನ್ಯಗಳ ಅಪಾರ ಸಂಗ್ರಹ ನಡೆದಿದೆಂದು ತಿಳಿದು ಬರುತ್ತದೆ.

ಪಾಕಿಸ್ತಾನದಲ್ಲಿ ಕಾಶ್ಮೀರೀ ಮುಸ್ಲಿಮರು

ಪಾಕಿಸ್ತಾನದ ಕೈಯಲ್ಲಿರುವ ಕಾಶ್ಮೀರದ 35000 ಮಕ್ಕಳೂ, 9000 ಗಂಡಸರೂ 14000 ಹೆಂಗಸರೂ ನರಕಯಾತನೆಗೆ ಗುರಿಯಾಗಿದ್ದು ತಿಂಗಳಿಗೆ ಸರಾಸರಿ 40-45 ಜನ ಸಾಯುತ್ತಿರುವರಾಗಿ ತಿಳಿದಿದೆ. ಮುಳಿಯರ ಮಾರಾಟವೂ ನಡೆಯುತ್ತಲಿದೆ. ಹಾಲು, ಚಾ, ಕಾಫಿ, ಅಕ್ಕಿಗಳಲ್ಲಿ ಕಡಿತವನ್ನುಂಟುಮಾಡಿ ಅವರ ಪರಿಸ್ಥಿತಿ ಇನ್ನಷ್ಟು ಕಠಿಣವಾಗುವಂತೆ ಮಾಡಲಾಗಿದೆ. ಇಂತಹ ದುರಂತಕ್ಕೆ ಭಾರತವೇ ಕಾರಣವೆಂದು ಅತಿಥಿಗಳಾಗಿ ಬಂದವರಿಗೆ ಆ ಜನರನ್ನು ತೋರಿಸಲಾಗುತ್ತಿದೆಯಂತೆ.

ರೈಲ್ವೆ ಮುಷ್ಕರವನ್ನು ಸರಕಾರ ಎದುರಿಸಲು ಸಿದ್ಧ!

ರೈಲ್ವೆ ಮಹಾ ಮಂಡಲದವರು ಆಗಸ್ಟ ತಿಂಗಳ 27ನೇ ತಾರೀಕಿಗೆ ಸರ್ವತ್ರ ಸಂಪು ಹೂಡಿ ರೈಲ್ವೆಯ ಒಂದು ಗಾಲಿಯೂ ಉರುಳಕೊಡದೆಂದು ನಿಶ್ಚಯಿಸಿದ್ದನ್ನು ಸರಕಾರ ಅರಿತುಕೊಂಡು ಸಂಪು ಹೂಡುವವರಿಗೆ, ಸಾಗಿಸುವವರಿಗೆ ಮತ್ತು ಈ ಅಕ್ರಮ ಸಂಪಿಗೆ ಪ್ರಚೋದನೆ ಕೊಡುವವರಿಗೆ ಹಣ ನೀಡುವವರಿಗೆ ಶಿಕ್ಷೆ ವಿಧಿಸುವ ಆಜ್ಞೆಯನ್ನು ಹೊರಡಿಸಿರುತ್ತದೆ. ರೈಲ್ವೆಯ ಮುಷ್ಕರದಿಂದ ಜನತೆಗೆ ಆಹಾರವೇ ನೊದಲಾದ ವಿಚಾರಗಳಲ್ಲಿ ವಿಶೇಷ ಹಾನಿಯೊದಗುವದರಿಂದ ಈ ಆಜ್ಞೆಯನ್ನು ಹೊರಡಿಸಲಾಗಿದೆ.

ಜಯಪ್ರಕಾಶರ ಉಪವಾಸ

ಸಮಾಜವಾದೀ ಮುಖಂಡರಾದ ಜಯಪ್ರಕಾಶ ನಾರಾಯಣರು ಅಂಚೆಖಾತೆಯ ಕೆಲಸಗಾರರಿಗೆ 1946ರ ಸಂಪಿನ ಅವಧಿಯ ಪಗಾರವನ್ನು ಕೊಡುವೆನೆಂದು ಸಂಪರ್ಕಖಾತೆಯ ಮಂತ್ರಿ ಕಿಡ್ವಾಯಿಯವರು ಕೊಟ್ಟ ವಚನವನ್ನು ಈ ತನಕವೂ ಪಾಲಿಸದೇ ಹೋದುದರಿಂದ ತನ್ನ ಪ್ರಯತ್ನದ ಅಯಶಸ್ವಿಯಾಯಿತೆಂದು ಅದಕ್ಕಾಗಿ ಮೂರು ವಾರಗಳ ತನಕ ಆತ್ಮಶುದ್ಧಿಯ ಉಪವಾಸ ಕೈಗೊಳ್ಳುವೆನೆಂದೂ ಹೇಳಿರುವರು.

ಸರಕಾರದ ನೂಲು ವಿತರಣ ಕ್ರಮ ದೋಷಪೂರ್ಣ.

ಮದ್ರಾಸ್ ವೀವರ್ಸ್ ಎಸೋಸಿಯೇಶನಿನ 13ನೇ ವಾರ್ಷಿಕಾಧಿವೇಶನದ ಅಧ್ಯಕ್ಷ ಸ್ಥಾನದಿಂದ ಶ್ರೀ ಟಿ. ಎನ್. ಕೆ. ಗೋವಿಂದರಾಜು ಚೆಟ್ಟಿಯಾರರು 'ಸರಕಾರದ ವಿತರಣವು ಏನೇನೂ ತೃಪ್ತಿಕರವಾಗಿರುವುದಿಲ್ಲ. ದಕ್ಷಿಣ ಭಾರತದಲ್ಲಿ 45000ದಿಂದ 50000 ಬೇಲು ಬಟ್ಟೆಗಳು ತಯಾರಾಗುತ್ತವೆ. ಈ ಪ್ರಾಂತಕ್ಕೆ ಬೇಕಾಗಿರುವದೆಂದರೆ 35000 ದಿಂದ 45000 ಬೇಲುಗಳು ಮಾತ್ರ. ಹೀಗಿದ್ದೂ ನಮ್ಮ ಕೊರತೆಗೆ ಕಾರಣವೆಂದರೆ ಅತಿಯಾಗಿ ಇಲ್ಲಿಂದ ಹೊರಗೆ ರಫ್ತಾಗುವುದೇ ಆಗಿರುತ್ತದೆ" ಎಂದಿರುತ್ತಾರೆ.

(ಮೂರನೇ ಪುಟದಿಂದ ಮುಂದುವರಿದುದು)

ಉಳಿದಿರುವಾಗ ದೂರದ ಪ್ರಶ್ನೆಯಾದ ಪ್ರಾಂತರಚನೆಯ ಘೋಷಣೆಯಂತೆ ಕಾರ್ಯಾಚರಣೆಯಲ್ಲಿ ಬಂದೀತೆಂದು ನಂಬುವದು ಸಾಧ್ಯವೇ? ಭಾಷಾವಾರು ಪ್ರಾಂತರಚನೆಯಲ್ಲಿ ಶ್ರದ್ಧಭಕ್ತಿಯುಳ್ಳವರು ಬರಿಯ ಘೋಷಣೆಯಿಂದಲೇ ಕಾರ್ಯ ಕೈಗೂಡೀತೆಂದು ಭಾವಿಸಬಾರದು. ಅದಕ್ಕಾಗಿ ಅವಿರತವಾದ ಪ್ರಯತ್ನ ನಡೆಸುತ್ತಲಿರಬೇಕು!

ಪ್ರಕಟಣೆ

ಕಾಪು ಸೀಮೆಯ ಶ್ರೀ ಹೊಸ ಮಾರಿಗುಡಿಯ ಆಡಳ್ತೆ ಟ್ರಸ್ಟೀಸ್ ಬೋರ್ಡಿನವರು ಈ ಮೂಲಕ ಸಮಸ್ತ ಭಕ್ತ ಮಹಾಜನರಿಗೆಲ್ಲಾ ತಿಳಿಯಪಡಿಸುವದೇನಂದರೆ: ಸದ್ರಿ ಸ್ಥಾಪನೆಯಲ್ಲಿ ಮಾಮೂಲು ಪ್ರಕಾರ ನಡ್ಸಿಕೊಂಡುಬಂದ ಪ್ರಾಣಿ ಬಲಿಯನ್ನು ಮಾನ್ಯ ಎಂಡೋಮೆಂಟ್ ಬೋರ್ಡಿನವರ ನಂಬ್ರ 21/51ನೇ ಸರ್ಕಿಲಾರು ಮೇರೆಗೆ ತಾರೀಕು 1-6-51 ರಿಂದ ನಿಲ್ಲಿಸಲಾಗಿದೆ.

ಕಾಪು ಮಣ್ಯ ಸೆಟ್ಟಿ, ಪ್ರೆಸಿಡೆಂಟ್.
ಕೆ. ಸದಾಶಿವ ಹೆಗ್ಡೆ, ಮೇನೇಜರ್.



Approved from by the Govt. of Mysore
Certificated by the Agent of the Govt of
Cylone & Indian

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಿಯ ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ಸ್ ಬೋರ್ಡಿನ ಅಧ್ಯಕ್ಷರು.

ಅತ್ಯಂತ ಜನಪ್ರಿಯವಾದ
ನೇಶನಲ್
ಬ್ರಾಹ್ಮಿ ತೈಲ
ಕೇಶ ಮತ್ತು ಮೆದುಳಿಗೆ
ಪೋಷಕ ಮತ್ತು
ಶಕ್ತಿದಾಯಕವಾದುದು.

ಎಂ. ಎಂ. ಪ್ರೊಡಕ್ಟ್ಸ ಕೋ;
ರುಬಿ ಮೇನ್ಶನ್,
ಫೋರ್ಟ್, ಬೊಂಬಾಯಿ.



ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5-12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೯-೭-'೫೧

ಸಕಾಲಿಕ ಎಚ್ಚರ!

ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತ್ ಅಲೀಖಾನರು ಈಚೆಗೆ ಭಾರತದ ವಿರುದ್ಧ ಅಸತ್ಯವಾದ ದೂರನ್ನು ಹೊರಿಸುತ್ತಿರುವದನ್ನು ಖಂಡಿಸಿ ಭಾರತದ ನಿಲುವೆಯನ್ನು ಸ್ಪಷ್ಟೀಕರಿಸಿ ಭಾರತದ ಪ್ರಧಾನ ಮಂತ್ರಿ ಜವಾಹರಲಾಲರು ಬೆಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಸಕಾಲಿಕವಾದ ಎಚ್ಚರವನ್ನು ಕೊಟ್ಟದ್ದು ಅತ್ಯಂತ ಯೋಗ್ಯವಾಗಿರುತ್ತದೆ. ಯುದ್ಧಪ್ರೇರಕ ಭಾಷಣ-ಪತ್ರಿಕಾಪ್ರಚಾರ-ವಿದೇಶದಲ್ಲಿ ಭಾರತದ ಕುರಿತು ಅಸತ್ಯ ಸುದ್ದಿಯನ್ನು ಅತಿರಂಜಿತವಾಗಿ ಪ್ರಚಾರ ಮಾಡುವದೂ ಸದ್ಯದ ಪಾಕಿಸ್ತಾನದ ಮುಖ್ಯ ಧೋರಣವಾಗಿದೆ. ಕಾಶ್ಮೀರದ ಬಗ್ಗೆ ಸಂ. ರಾ. ಸಂಘ ತಳೆದ ಧೋರಣೆಯನ್ನು ಭಾರತವು ಸಂಪೂರ್ಣ ಸ್ವೀಕರಿಸಿದ್ದರಿಂದ ಸದ್ಯ ಡಾ| ಗ್ರಾಹ್ಯಾಮರು ನಡೆಸುವ ಮಧ್ಯಸ್ಥಿಕೆಯು ಯಾವ ಪ್ರತಿಕ್ರಿಯೆಯನ್ನೂ ಮಾಡದೆಂಬುದು ಪಾಕಿಸ್ತಾನಿಗಳಿಗೆ ಚೆನ್ನಾಗಿ ಮನವರಿಕೆಯಾಗಿದೆ. ಅಂತಲೇ ಯುದ್ಧ ಬೆದರಿಕೆ-ದರೋಡೆ-ಅಪಪ್ರಚಾರ ಮುಂತಾದ ವಾಮಮಾರ್ಗಗಳಿಂದ ಕಾಶ್ಮೀರವನ್ನು ಕಸಿದುಕೊಳ್ಳಬಹುದೆನುವ ಕಲ್ಪನೆಯು ಮೇಲೆ ಪಾಕಿಸ್ತಾನ ದುಷ್ಟಶಕ್ತಿಗಳಿಗೆ ಚಾಲನೆ ಕೊಟ್ಟಿರುತ್ತದೆ.

ಸಾಂಸ್ಕೃತಿಕ-ತಾತ್ವಿಕ, ರಾಜಕೀಯ ನೀತಿಯನ್ನರಿಯದ ಪಾಕಿಸ್ತಾನಿಗಳಲ್ಲಿ ಸ್ನೇಹ ಸೌಹಾರ್ದವೆನುವ ಕಲ್ಪನೆಯಾದರೂ ಹೇಗೆ ಮೂಡೀತು? ಪಾಕಿಸ್ತಾನ ಭಾರತದ ವಿರುದ್ಧ ನಡೆಸಿದ ಕಾರಸ್ಥಾನವನ್ನು ಯಾವುದೇ ರಾಷ್ಟ್ರವಾದರೂ ಸಹಿಸುತ್ತಿರಲಿಲ್ಲ. ಭಾರತವು ಮೂರು ವರ್ಷಗಳಲ್ಲಿ ತೋರಿದ ಔದಾರ್ಯ ನಾಟಿಯಲ್ಲಿದ್ದು! ಪಾಕಿಸ್ತಾನವು, ಭಾರತವು ತೋರಿದ ಸಹಾನುಭೂತಿಪರಧೋರಣೆಯನ್ನು ದುರುಪಯೋಗಗೊಳಿಸಿತು. ಜಾತೀಯಸಂಕುಚಿತ ಮನೋಭಾವನೆ ಅಲ್ಲಿ ಬೇರುಬಿಟ್ಟಿದೆ. ಅಲ್ಪಸಂಖ್ಯಾಕರ ಮೇಲಾದ ಅನ್ಯಾಯ ಅಕ್ರಮಗಳಿಗೆ ಮಿತಿಯೇ ಇರಲಿಲ್ಲ. ಇದನ್ನು ಲಕ್ಷಿಸಿ ಉಭಯ ರಾಷ್ಟ್ರಗಳ ಪ್ರಧಾನಿಗಳು ಒಂದಾಗಿ ಒಪ್ಪಂದ ಮಾಡಿಕೊಂಡರು, ನೆಹ್ರೂ ಲಿಯಾಖತ್ ಒಪ್ಪಂದವನ್ನು ಎರಡೂ ರಾಷ್ಟ್ರಗಳು ಮರ್ಯಾದಿತಗೊಳಿಸಬೇಕೆಂದು ಸಾರಲಾಯಿತು. ಭಾರತಸರಕಾರ ಉಭಯ ರಾಷ್ಟ್ರಗಳೊಡನೆ ದ್ವೇಷಭಾವನೆಯನ್ನು ಹುಟ್ಟಿಸುವಂತಹ ಪ್ರಕರಣವನ್ನು ಯಾರೂ ಹುಟ್ಟಿಸತಕ್ಕದ್ದಲ್ಲವೆಂದು ಸಾರಿತು. ಪತ್ರಿಕೆಗಳಿಗೆ ಕಟ್ಟೆಚ್ಚರಿಕೆಯಾಯಿತು. ಆದರೆ ಪಾಕಿಸ್ತಾನದ ಪತ್ರಿಕೆಗಳು ಹಿಂದುಗಡೆಯಿಂದ ಅತಿರಂಜಿತವಾಗಿ ಭಾರತದ ವಿರುದ್ಧ ಪ್ರಚಾರ ನಡೆಸುತ್ತಲೇ ಇದ್ದವು!

ಕಾಶ್ಮೀರವನ್ನು ಹೇತುವನ್ನಾಗಿ ಇಟ್ಟುಕೊಂಡು ಪಾಕಿಸ್ತಾನವು ಯುದ್ಧ ಪ್ರಚೋದಕ ವರ್ತನನ್ನಿಡತ್ತಾ ಬಂದಿರುವದರಿಂದ ಇಂದು ಉಭಯ ರಾಷ್ಟ್ರಗಳಲ್ಲಿಯೂ ಭೀತಿ ತಲೆದೋರಿದೆ, ಪಾಕಿಸ್ತಾನದಿಂದ ಸಾವಿರಗಟ್ಟಲೆ ಜನರು ಗುಳೇ ಬರುತ್ತಲಿದ್ದಾರೆ. ಪಾಕಿಸ್ತಾನದಲ್ಲಿ 'ಹಿಂದೂಸ್ಥಾನ ಹಮಾರಾ'ದ ರಚನೆಯಾಯಿತು. ದಿಲ್ಲಿಯಲ್ಲಿ ತಮ್ಮ ಧ್ವಜಹಾರಾಡುವ ವರೆಗೆ ನಮಗೆ ಶಾಂತಿಯಿಲ್ಲವೆಂದು ಈ ಪಕ್ಷ ಘೋಷಿಸಿತು. ಭಾರತ ಈ ರೀತಿಯ ಪ್ರಚಾರವನ್ನು ನಿಷೇಧಿಸಿದರೂ ಲಿಯಾಖತರು ತುಟಿಯೆತ್ತಲಿಲ್ಲ. ಡಾ. ಗ್ರಾಹ್ಯಾಮರು ಕಾಶ್ಮೀರದ ಸಮಸ್ಯೆಯ ಪರಿಶೀಲನೆಗೆ ಬಂದಾಗ ಆಜಾದ ಕಾಶ್ಮೀರಕ್ಕೆ ಪ್ರತ್ಯಕ್ಷ ಯುದ್ಧ ಸಾಮಗ್ರಿಗಳನ್ನು ಕೊಟ್ಟು ಕಾದಾಡುವಂತೆ ಪ್ರೇರೇಪಿಸಲಾಯಿತು. ಪಾಕಿಸ್ತಾನದ ಜೇಹಾದ ಪಕ್ಷವಂತೂ ಪೂರ್ತಿ ಜಾತೀಯ ಸ್ವರೂಪದ್ದಿದ್ದು ಅಲ್ಪಸಂಖ್ಯಾಕರ ಜೀವಾಪಹರಣವೇ ಅದರ ಗುರಿಯಿದ್ದ ಹಾಗೆ ತೋರುತ್ತದೆ ಜಗತ್ತಿನ ಯಾವುದೇ ರಾಷ್ಟ್ರವು ಮಾನವೀಯತೆಯನ್ನು ಕಳೆದುಕೊಂಡ ಜೇಹಾದದಂತಹ ಜಾತೀಯ ಪಕ್ಷಕ್ಕೆ ಎಡೆಕೊಡಲಾರದ! ಆದರೆ ಪಾಕಿಸ್ತಾನ ಅಂತಹರ ಆದೇಶದಿಂದಲೇ ರಾಜಕೀಯ ಸೂತ್ರವನ್ನು ಹಿಡಿದಹಾಗಿದೆ. ಕಾಶ್ಮೀರದ ಗಡಿಯ ಪ್ರದೇಶದ ಭಾರತದ ಪ್ರದೇಶದೊಳಗೆ ಪಾಕ್ ಸೈನಿಕರು ನುಗ್ಗಿದ ಪ್ರಕರಣಗಳು ಹೆಚ್ಚುತ್ತಿದ್ದು ಮೊದಲು ಭಾರತ ಸರಕಾರವು ಲಿಯಾಖತರಗಮನವನ್ನು ಆ ಕಡೆಗೆಳೆದರೂ, ಭಾರತದ ಮುಖ್ಯ ಸೇನಾನಿ ವಿಚಾರವಿನಿಮಯದ ಮೂಲಕ ತೀರ್ಮಾನಿಸಿದರೂ, ಪಾಕಿಸ್ತಾನಿಗಳು ತಮ್ಮ ಕುಚೋದ್ಯವನ್ನು ಬಿಡಲಿಲ್ಲ. ಭಾರತದ ಗಡಿಯಲ್ಲಿ ಪಾಕಿಸ್ತಾನದ ಸೈನಿಕರು ಬೀಡು ಬಿಟ್ಟಾಗಲೇ ಭಾರತವು ಗಡಿರಕ್ಷಣೆಗೆ ತನ್ನ ಸೈನಿಕರನ್ನು ಸಂಘಟಿಸಿತು. "ಇದು ಪಾಕಿಸ್ತಾನದ ವಿರುದ್ಧ ಭಾರತ ಕೈಕೊಂಡಿರುವ ಯುದ್ಧ ಪ್ರೇರಿಕೆ" ಎಂದು ಲಿಯಾಖತರು ಬೊಬ್ಬಿಟ್ಟಿದ್ದಾರೆ. ಸಂ. ರಾ. ಸಂಘಕ್ಕೆ ದೂರು ಕೊಟ್ಟಿದ್ದಾರೆ.

ಪಾಕಿಸ್ತಾನದ ಈ ಹುಡುಗಾಟಿಕೆಗಳಿಗೆ ಕೊನೆಯ ಎಚ್ಚರಿಕೆನುವಂತೆ ಶ್ರೀ ಜವಾಹರಲಾಲರು ಭಾರತದ ನಿಲುವೆಯನ್ನು ಸ್ಪಷ್ಟೀಕರಿಸಿದ್ದು ನ್ಯಾಯವೇ ಆಗಿದೆ. ಒಂದು ಕಡೆ ಅವ್ಯಾಹತವಾಗಿ ಅಪಪ್ರಚಾರ ಇನ್ನೊಂದು ಕಡೆ ನಿರಪರಾಧಿಗಳ ಜೀವಾಪಹರಣ-ದೇಶದ ಮೇಲೆ ಏರಿ ಬರುವ ಯುದ್ಧ ಸನ್ನಾಹಗಳು-ನಡೆಯುತ್ತಿರುವಾಗ ಭಾರತ,ತತ್ವವನ್ನಾಡುತ್ತಾ ನೀತಿಹೇಳುತ್ತ ಕೂಡ್ರುವದು ಆತ್ಮಘಾತುಕವಾದೀತು ಕಳೆದ ವರ್ಷ ಭಾರತ ರಕ್ಷಣಾ ಖಾತೆ ಸೈನಿಕ ಸಂಖ್ಯೆಯನ್ನು ಕಡಿಮೆ ಮಾಡಿತು. ಪಾಕಿಸ್ತಾನವು ಸೈನ್ಯಸಂಖ್ಯೆ ಹೆಚ್ಚಿಸಿತು. ಸಂ. ರಾ. ಸಂಘದಿಂದ ಈ ಮೂರು ವರ್ಷಗಳ ವರೆಗೆ ಕಾಶ್ಮೀರದ ಬಗ್ಗೆ ಸರಿಯಾದ ನ್ಯಾಯವನ್ನು ಪಡೆಯುವದಾಗಲಿಲ್ಲ. ಸದ್ಯ ಬಂದೊದಗಿರುವ ಗಂಭೀರ ಪರಿಸ್ಥಿತಿಯನ್ನು ನೋಡುವಾಗ ಸಂ. ರಾ. ಸಂಘವೇ ಅಥವಾ ಆಂಗ್ಲೋ ಅಮೇರಿಕಾನರೇ ಪಾಕಿಸ್ತಾನದ ಅಸ್ತಿವಾರವನ್ನು ಕಾಶ್ಮೀರದಲ್ಲಿ ಸ್ಥಿರಗೊಳಿಸುತ್ತಾ ಯುದ್ಧ ಪ್ರೇರಕ ಸನ್ನಿವೇಶಗಳನ್ನು ಈ ಮೂರು ವರ್ಷಗಳಲ್ಲಿ ನಿರ್ಮಿಸಿದರೆಂದು ಭಾಸವಾಗುತ್ತದೆ. ಪಾಕಿಸ್ತಾನದ ತಂಬುಬೊಟ್ಟೆಗೆ ಅಲ್ಲಿನ ಬ್ರಿಟಿಷ ಮಿಲಿಟರಿ ಸಹಚರಾಧಿಕಾರಿಗಳೂ ಕಾರಣರೆಂದು ನೆಹರೂರವರು ಹೇಳಿದಂತ ಅಕ್ಷರಶಃ ನಿಜವಿರುತ್ತದೆ.

ಮುಂದೆಯಾದರೂ ಹಿಂದೆ ತಳೆದ ಸಾವಧಾನ ಧೋರಣೆ ಭಾರತಕ್ಕೆ ಸಲ್ಲದು! ಶಾಂತಿ-ಸಮಾಧಾನದ ಮಾತುಗಳು ಪಾಕಿಸ್ತಾನದ ಮಟ್ಟಿಗೆ ವ್ಯರ್ಥವೆಂಬುದು ಈ ನಾಲ್ಕು ವರ್ಷಗಳಲ್ಲಿ ಪಾಕಿಸ್ತಾನದ ಹೀನಕೃತಿಯಿಂದ ನಮಗೆ ಚೆನ್ನಾಗಿ ಮನವರಿಕೆಯಾಗಿದೆ. ಇನ್ನೂ ಆದರ್ಶದ ಬೆನ್ನು ಹತ್ತಿ ಆತ್ಮವಿನಾಶ ಕಾರ್ಯಕ್ಕೆ ಎಡೆಗೊಡುವದು ಶೋಭಿಸದು. ನಾವು ಯುದ್ಧಪ್ರಿಯರಲ್ಲವೆಂಬುದಕ್ಕೆ ನಮ್ಮ ಸಹನಶೀಲ ಮನೋವೃತ್ತಿಯೇ ಪುಷ್ಟಿಕೊಟ್ಟಿದೆ. ವೈರಿಯವರು ನಮ್ಮ ಮೇಲೆ ಏರಿಬಂದಾಗಲೂ ಅಹಿಂಸೆಯ ಮಂತ್ರ ಹೇಳುತ್ತಾ ಔದಾರ್ಯದ ಉರುಳಲ್ಲಿ ಸಿಕ್ಕಿ ಆತ್ಮಹತ್ಯೆಮಾಡಿಕೊಳ್ಳಬಾರದು. ನೈತಿಕ ಅಧಃಪತನಹೊಂದಿದವರ ಮುಂದೆ ಜೀವರಕ್ಷಣೆಯ ಕರ್ತವ್ಯವನ್ನು ಮಾಡುವದೂ, ಜಾಗ್ರತೆ ವಹಿಸುವದೂ ಸರಿಯಾದ ಮಾರ್ಗವೇ. ಅಂತಲೇ ಶ್ರೀ ಜವಾಹರಲಾಲರು "ಪಾಕಿಸ್ತಾನ ನಮ್ಮ ಮೇಲೆ ಧಾಳಿಮಾಡಿದರೆ ನಾವು ಅದನ್ನು ಪ್ರತಿಭಟಿಸಲು ಸಿದ್ಧರೇ" ಎಂದು ಹೇಳಿದ್ದು ನ್ಯಾಯವೂ ಸಕಾಲಿಕವೂ ಆಗಿರುತ್ತದೆನ್ನುತ್ತೇವೆ.

ಕಿದ್ವಾಯಿಯವರು ಕಾಂಗ್ರೆಸ್ ತ್ಯಜಿಸುವರೇ?

ಭಾರತ ಕೇಂದ್ರ ಸರಕಾರದ ಸಂಪರ್ಕ ಖಾತೆಯ ಮಂತ್ರಿ ಕಿದ್ವಾಯಿಯವರು ಕಾಂಗ್ರೆಸಿನಲ್ಲಿ ಉಳಿಯುವರೋ-ಕೃಪಲಾನಿಯವರ ಪ್ರಜಾಪಾರ್ಟಿಗೆ ಸೇರುವರೋ ಎನುವ ಶಂಕೆ ಮೂಡಿತ್ತು. ಬೆಂಗಳೂರಿನ ಅಧಿವೇಶನದ ಪ್ರತಿಕ್ರಿಯೆಯನ್ನು ಹೊಂದಿಕೊಂಡು ಇರುವ ಇಲ್ಲವೆ ಹೊರಗೆ ಬರುವ ನಿರ್ಧಾರವನ್ನು ಮಾಡಲಿರುವೆನೆಂದು ಕಿದ್ವಾಯಿಯವರು ಹೇಳಿದ್ದರು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಗುಪ್ತಸಭೆಯಲ್ಲಾದ ಗೊತ್ತುವಳಿಯಿಂದ ಕಿದ್ವಾಯಿಯವರಿಗೆ ತೃಪ್ತಿಯಾಗಲಿಲ್ಲವೆಂದು ತಿಳಿದುಬರುತ್ತದೆ. ಮದ್ರಾಸಿನಲ್ಲಿ ಕೇಳಲಾದ ಒಂದು ಪ್ರಶ್ನೆಗೆ ಜುಲೈ 22ಕ್ಕೆ ತನ್ನ ನಿಲುವೆಯನ್ನು ಸ್ಪಷ್ಟೀಕರಿಸುವೆನೆಂದಿರುವರು.

ಕರ್ನಾಟಕ ಪ್ರಾಂತದ ಅವಶ್ಯಕತೆಯ ಮನವಿ

ಕರ್ನಾಟಕ ಕಾಂಗ್ರೆಸ್ ಸಮಿತಿಯು ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತರಚನೆಯ ಬಗ್ಗೆ ತನ್ನ ಮನವಿಯನ್ನು ಶ್ರೀ ನೆಹ್ರೂರವರಿಗೆ ಒಪ್ಪಿಸಿತು. ಮುಂಬಯಿ, ಮದ್ರಾಸಗಳಲ್ಲಿಯ ಕನ್ನಡ ಜಿಲ್ಲೆಗಳನ್ನೂ ಮೈಸೂರು, ಮಡಿಕೇರಿಗಳನ್ನೂ ಸೇರಿಸಿ ಪ್ರಾಂತ ರಚಿಸಬೇಕೆಂದು ಹೇಳಲಾಗಿದೆ-ಹೈದರಾಬಾದದಲ್ಲಿಯ ಮೂರು ಜಿಲ್ಲೆಗಳ ಪ್ರಶ್ನೆಯನ್ನು ಇದರಲ್ಲಿ ಉಲ್ಲೇಖಿಸಿರುವುದಿಲ್ಲ. ಇದಕ್ಕೆ ಮಹಾರಾಷ್ಟ್ರ, ಮತ್ತಿತರ ಸಾರ್ವಜನಿಕ ಸಂಸ್ಥೆಗಳ ಬೆಂಬಲವಿದೆಯೆಂದೂ ಹೇಳಲಾಗಿದೆ. ಈ ಮನವಿಗೆ ಈಗಲೇ ಜಾಗ್ರತೆಯಾಗಿ ಮಹತ್ವ ಕೊಡದೆ ಹೋದರೆ ಮುಂಬರುವ ಚುನಾವಣೆಯಲ್ಲಿ ಸಂಪೂರ್ಣ ಸಹಕಾರ ದೊರೆಯುವ ಸಂಭವವಿಲ್ಲೆನುವದನ್ನು ಸ್ಪಷ್ಟೀಕರಿಸಲಾಗಿದೆ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್,

"Town Branch," UDIPI.

ನೋಟೀಸು.

ಈ ಕೆಳಗೆ ಹೆಸರು ತೋರುವವರು ಈ ಬೇಂಕಿನ ಉಡುಪಿ ಆಫೀಸಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡೆದ ಸಾಲಗಳ ಅಸಲು ಮತ್ತು ಅವುಗಳ ಮೇಲಣ ಬಡ್ಡಿಹಣ ಬೇಂಕಿಗೆ ವ್ಯಾಡೆಗೆ ವಸೂಲುಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಪ್ಪಾಲು ರಿಜಿಸ್ಟ್ರ ವಗೈರೆ ನೋಟೀಸುಗಳು "ಸದ್ರಿಯವರು ಮೃತಪಟ್ಟಿರುತ್ತಾರೆ" "ಊರಿನಲ್ಲಿ ಇಲ್ಲ" ಎಂಬ ಇತ್ಯಾದಿ ಶಬ್ದಗಳಿಂದ ಹಿಂತಿರುಗಿ ಬಂದಿರುವುದರಿಂದಲೂ ಸದ್ರಿ ಮೃತರ ವಾರಿಸುದಾರರು ಹಕ್ಕುಸ್ಥಾಪಿಸಿ ಕೋರ್ಟಿನಿಂದ ಸಕ್ಸೆಶನ್ ಸರ್ಟಿಫಿಕೇಟು ಪಡೆದು ಸದ್ರಿ ಸಾಲಗಳ ಅಸಲು ಹಣ ವ ಈ ವರೇಗಿನ ಬಡ್ಡಿ ಬೇಂಕಿಗೆ ಸಲ್ಲಿಸಿ ನಗಗಳನ್ನು ಈ ವರೇಗೂ ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸಬೇಕಾಗುವುದೇನೆಂದರೆ:-

ಸದ್ರಿ ಸಾಲಗಳ ಬಾಬ್ತು ಸಮಸ್ತ ಅಸಲು ಬಡ್ಡಿ ಖರ್ಚುಗಳು ನೋಟೀಸುಗಳ [illegible] 10-1-[illegible] ಒಳಗೆ ಬೇಂಕಿಗೆ ರುಜು ವಸೂಲುಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆಇಟ್ಟ ನಗಗಳನ್ನು ತಾ 2-8-1951ನೇ ಗುರುವಾರ ಯಾ ಅನಂತರ ಬೇಂಕಿಗೆ ಯುಕ್ತತೋರುವ ಇತರ ದಿವಸಗಳಲ್ಲಿ ಮಧ್ಯಾಹ್ನ 12ಗಂಟೆಗೆ ಪ್ರತ್ಯೇಕ ನೋಟೀಸು ಕೊಡದೇನೇ ಬೇಂಕಿನ "ಟೌನ್ ಬ್ರೇಂಚ್" ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಲಾದೀತು. ಏಲಂ ಅದೇದಿವ್ಸ ಪೂರ್ಣವಾಗದೆ ಇದ್ದರೆ ಅನಂತರ ಬೇಂಕಿಗೆ ಯುಕ್ತತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಮುಂದುವರಿಸಲಾದೀತು.

ಜಂಬ್ರಾ ನಂಬ್ರ	ಲೋನು ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಪಡೆಕೊಂಡ ಸಾಲ ರೂ.
1	220/31- 3-48	ಶ್ರೀ ಯು. ಶ್ರೀನಿವಾಸರಾವ್, ಪ್ರೊಪ್ರೈಟರ್, ಉದಿಯಾವರ ಕೆಫೆ, ಉಡುಪಿ.	125/-
2	619/13- 8-48	" do " do "	55/-
3	762/25- 9-48	" do " do "	15/-
4	962/15-12-48	" do " do "	150/-
5	380/ 2- 6-48	ಶ್ರೀ ಮನ್ನಪುರಕಾಲ, ಪಿಟ್ಟುಪುರಕಾಲರ ಅಳಿಯ, ಕೊಡವೂರು, ಮಲ್ಪೆ, ದ. ಕ.	40/-
6	455/23- 6-48	ಜನಾಬ್ ಅಮೀರ್ ಸಾಹೇಬ, ಉಸ್ಮಾನ್ ಸಾಹೇಬರ ಮಗ, ಮೂಡಬೆಟ್ಟು, ಕೊಡವೂರು ಗ್ರಾಮ, ಮಲ್ಪೆ, ದ. ಕ.	65/-
7	843/21-10-48	ಶ್ರೀ ಟಿ. ಗಣಪಯ್ಯ ಶೆಟ್ಟಿ, ವಕೀಲ್, ಉಡುಪಿ	1500/-

UDIPI,
16-7-1951

K. Vittal Nayak,
Agent

ಮಂಗಳೂರು

ಹಂಚಿನ ಕಾರ್ಖಾನೆಗಳಲ್ಲಿ— ಈಗ ಎರಡು ಆಚ್ಛಹೊಡೆದು ಹಂಚುಮಾಡುವ ವಿಚಾರದಲ್ಲಿ ವಿವಾದ ಹುಟ್ಟಿದ್ದರ ಪರಿಣಾಮವಾಗಿ ಬೋಳಾರದಲ್ಲಿ ಕೆಲವು ಹಂಚಿನ ಕಾರ್ಖಾನೆಗಳು ಕೆಲವು ದಿವಸ ಮುಚ್ಚಲ್ಪಟ್ಟವೆಂದೂ ಈ ಮಧ್ಯೆ ಒಪ್ಪಂದದ ಮಾತುಕಥೆಗಳು ನಡೆದು ಕಾರ್ಖಾನೆಗಳು ತೆರೆಯಲ್ಪಡುವಂತಾಗಿದೆಯೆಂದೂ ವರ್ತಮಾನವಿದೆ.

ಕೆಲಸಗಾರರಿಗೆ ಗಾಯ— ಮರೋಳಿಯಲ್ಲಿರುವ ಕೆನರಾ ವರ್ಕ್ಸ್ ಶೋಪಿನಲ್ಲಿ ಇದೇ ತಾ. 11ರಲ್ಲು ಕಟ್ಟಡದ ಕೆಲಸ ನಡೆಯುತ್ತಿದ್ದಾಗ ಕಬ್ಬಿಣದ ಕೋಲು ಮೇಲೇರಿಸುತ್ತಿರುವಾಗ ಕುಸಿದುಬಿದ್ದು ಎಳೆಂಟು ಜನರಿಗೆ ಗಾಯವಾಗಿದೆ. ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ವನಮಹೋತ್ಸವ— ಮಂಗಳೂರು ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ಇದೇ ತಾ. 5ರಲ್ಲು 'ವನಮಹೋತ್ಸವ' ದಿನಾಚರಣೆಯು ಜಿಲ್ಲಾ ಎಡ್ಯುಕೇಶನಲ್ ಆಫೀಸರ್ ಶ್ರೀ. ಟಿ. ರಾಘವನ್ ನಾಯರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ರೇಶನ್ ಅಂಗಡಿಗಳಲ್ಲಿ: ಥ್ಯಾಲೇಂಡಿನಿಂದ ಬಂದ ಅಕ್ಕಿ ವಿತರಣೆಯಾಗುತ್ತಿದೆ. ಇದರ ಕ್ರಯವು ಸೇರಿಗೆ 0-13-2 ತನಕವಿದೆ. ಅಕ್ಕಿಯ ಬೆಲೆ ಏರಿದ್ದರಿಂದ ಮಧ್ಯಮ ವರ್ಗದ ಬಡವರು ಹಾಗೂ ಕಾರ್ಖಾನೆಗಳಲ್ಲಿ ದುಡಿಯುವವರಿಗೆ ತುಂಬಾ ಕಷ್ಟವಾಗಿದೆ ಎಂದೂ, ಸರಕಾರವು ದ್ರವ್ಯ ಸಹಾಯನೀಡಿ ಏರಿದ ದರವನ್ನು ಇಳಿಸಬೇಕೆಂದು ಕೆನರಾ ವಾಣಿಜ್ಯ ಸಂಘದವರು ಮದ್ರಾಸಿನ ರೆವಿನ್ಯೂ ಬೋರ್ಡಿಗೂ, ಕೃಷಿಇಲಾಖೆಗೂ ಆಹಾರ ಶಾಖೆಯವರಿಗೂ ತಂತಿ ಕಳುಹಿಸಿದ್ದಾರೆ.

ಅಪಘಾತ: ಇದೇ ತಾ 10ರಲ್ಲು ವೆಬ್‌ಸ್ಟರ್ ಮಾರ್ಕೆಟಿನ ಬಳಿ ಒಂದು ಕಾರು ಹಾಯ್ದು, ಒಬ್ಬನು ಜಖಂ ಗೊಂಡನು. ಆತನನ್ನು ಕೂಡಲೇ ಆಸ್ಪತ್ರೆಗೊಯ್ಯಲಾಗಿದೆ. ಆತನು ಮುಸ್ಲಿಮನೆಂದು ಹೇಳಲಾಗಿದೆ.

ಋತುಸ್ರಾವ ನಿಂತಿತು

'ಕುಸುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ– ಬೆಲೆ; ರೂ. 3-) ಸ್ಪೆಶ್ಯಲ್ ರೂ. 5. ಅಧಿಕಾಧಿಕ ಸ್ಪೆಶ್ಯಲ್ ರೂ, 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಕಹಾಳಂಪನಿ, ಮಂಗಳೂರು

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಉಡುಪಿ

ಮುನಿಸಿಪಲ್ ಸಭೆಯು— ಇದೇ ತಾ. 14ರಲ್ಲು ಸಂಜೆ ಚೆಯರ್‌ಮೆನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ. ಎಂ. ಮಂಜುನಾಥ ರಾಯರ ಪ್ರಶ್ನಾವಳಿಗಳಿಗೆ ಉತ್ತರ ನೀಯಲಾಯಿತು. ನಂತರ ಸರಕಾರಿ ಹಕ್ಕುಗಳು ರಿಕಾರ್ಡುಮಾಡಲಾದವು. 1951ನೆ ಜಾನೆಸುಮಾರಿ ಲೆಕ್ಕದ ಪ್ರಕಾರ ಮುನಿಸಿಪಲ್ ಕ್ಷೇತ್ರದಲ್ಲಿಯ ಜನಸಂಖ್ಯೆಯು ಇಪ್ಪತ್ತು ಸಾವಿರಕ್ಕೂ ಮಿಕ್ಕಿರುವುದರಿಂದ ಕೌನ್ಸಿಲ್ ಮೆಂಬರರ ಸಂಖ್ಯೆ ಹದಿನಾರು ಇದ್ದುದನ್ನು ಇಪ್ಪತ್ತಕ್ಕೇರಿಸಲು ಸೂಚಿಸಲಾಯಿತು. ಅಜ್ಜರಕಾಡು ಮೈದಾನದ ಹೊಂಡಗಳನ್ನು ಮಣ್ಣಿನಿಂದ ತುಂಬಿಸುವರೆ ರುಪಾಯಿ 490/ ಅಂದಾಜು ಪಟ್ಟಿ ಸೇಕ್ಷನ್ ಮಾಡಲಾಯಿತು. ಮುನಿಸಿಪಾಲಿಟಿಯ ಹೊಲಸನ್ನು ಒಯ್ಯುವ ಮೋಟಾರ್‌ಲೋರಿ ಆಗಾಗ್ಗೆ ಹಾಳಾಗುತ್ತಿದ್ದು ಆಕಾಲದಲ್ಲಿ ತೋಟಿಗಳು ಬಾಲ್ದಿಯಲ್ಲಿ ಹೊಲಸನ್ನು ತುಂಬಿಸಿಕೊಂಡು ತಲೆಯಮೇಲೆ ಹೊತ್ತುಕೊಂಡು ಹೋಗಬೇಕಾಗುತ್ತಿದೆಯೆಂದೂ ಹಾಗೆ ಹೋರುವ ಕುರಿತು ಅತೃಪ್ತಿಯನ್ನು ಈಗಾಗಲೇ ಅವರು ವ್ಯಕ್ತಪಡಿಸಿರುವರೆಂದೂ ಹೆಲ್ತ್ ಆಫೀಸರರು ಸೂಚಿಸಿದರು. ಅಲ್ಲದೆ ಹೊಸ ಮೋಟಾರ್ ಲೋರಿಯನ್ನು ಕೊಂಡುಕೊಳ್ಳಬೇಕು ಇಲ್ಲವೆ ಹಿಂದೆ ಇದ್ದಂತೆ ಕೈಗಾಡಿಗಳನ್ನು ಉಪಯೋಗಿಸುವ ಕ್ರಮ ಜ್ಯಾರಿಗೆ ತರಬೇಕು ಎಂಬುದಾಗಿ ಹೇಳಿದರು. ಈ ವಿಚಾರವನ್ನು ಪರಿಶೀಲನೆ ಬಗ್ಗೆ ಕಮಿಶನರರಿಗೆ ಬಿಡಲಾಯಿತು.

ಉಡುಪಿ ಬಿಲ್ಡಿಂಗ್ ಸೊಸೈಟಿ ಪ್ರಾರಂಭ— ಸಭೆಯು ಇದೇ ತಾ. 14 ರಂದು ಸಂಜೆ ಮುಕುಂದ ನಿವಾಸದಲ್ಲಿ ಡಾ। ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆಡಳಿತೆ ಮಂಡಳಿಗೆ ಡಾ। ಎಸ್. ಆರ್ ಪೈ (ಅಧ್ಯಕ್ಷ) ಡಾ। ಟಿ. ಎಮ್. ಎ. ಪೈ (ಕಾರ್ಯದರ್ಶಿ) ಶ್ರೀ. ಕಾಳಪ್ಪ ಜತ್ತನ್ನ (ಜತೆಕಾರ್ಯದರ್ಶಿ) ಶ್ರೀಗಳಾದ ಕೆ. ಗುರುರಾಜರಾವ್ ಎಮ್. ವಾಮನ ಭಟ್, ಆರ್. ಪಿ ನಾರ್ಣಂಧೀಸ್, ಬಿ. ಕೆ. ಕೃಷ್ಣ ರಾವ್, ಉಪೇಂದ್ರ ಅನಂತ ಪೈ ಮತ್ತು ಪೈ ದೂಮಣ್ಣ ಹೆಗ್ಡೆರು ಆರಿಸಲ್ಪಟ್ಟರು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು:– ಇದೇ ತಾ 15ರಲ್ಲು ಶ್ರೀ ಬುಳ್ಳಟ್ಟಿ ಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಪೆರ್ಡೂರು, ಕಡೆಕಾರು ಸೆಂಟರುಗಳಲ್ಲಿ ರಿಲೀಫ್ ಅಂಗಡಿಗಳನ್ನು ತೆರೆಯ ಬೇಕೆಂದು, ರಾಜಕೀಯ ಸಂತ್ರಸ್ತರಿಗೆ ಬೇಗನೆ ಭೂಮಿ ದೊರೆಯುವಂತಾಗಬೇಕೆಂದು ಜಿಲ್ಲಾ ಕಲೆಕ್ಟರರನ್ನು ವಿನಂತಿಸುವ ನಿರ್ಣಯಗಳಾದುವು. ಜೋಗದ ವಿದ್ಯುತ್ ದ. ಕ. ಜಿಲ್ಲೆಗೆ ಬೇಗನೆ ಸರಬರಾಯಿ ಯಾಗುವಂತೆ ತಕ್ಕ ಕಾರ್ಯಕ್ರಮ ಕೈಗೊಳ್ಳುವಂತೆ ಮದ್ರಾಸ್ ಸರಕಾರವನ್ನು ಕೇಳಿಕೊಳ್ಳಲಾಯಿತು. ಇತ್ತೀಚೆಗೆ ಅಕ್ಕಿಯ ಕ್ರಯದಲ್ಲಿ ಜಾಸ್ತಿ ಮಾಡಲಾದುದನ್ನು ಸರಕಾರವೇ ವಹಿಸಿ ಕೊಳ್ಳುವಂತಾಗಬೇಕೆಂದು ಸಹ ಅಭಿಪ್ರಾಯ ಕೇಳಲಾಯಿತು.

ಕಲೆಕ್ಟರರಿಗೆ ಮನವಿ:– ಉಡುಪಿ ಶಹರಿನಲ್ಲಿ ಆಗುತ್ತಿರುವ ಆಡುಗಳ ಹಾವಳಿಯನ್ನು ನಿಲ್ಲಿಸುವರೆ ಕಟ್ಟಪ್ಪಣೆಯನ್ನು ಮಾಡಬೇಕಾಗಿ ಜಿಲ್ಲಾ ಕಲೆಕ್ಟರರಿಗೆ ಉಡುಪಿ ನಾಗರೀಕರು ಮನವಿಯೊಂದು ಇದೇ ತಾ 7ರಲ್ಲು ಕಳುಹಲಾಗಿದೆ. ಈ ಕುರಿತು ನಮಗೆ ಬಂದ ಪತ್ರದ ಸಾರಾಂಶವನ್ನು ಇನ್ನೊಂದೆಡೆ ಪ್ರತ್ಯೇಕ ಕೊಡಲಾಗಿದೆ. (ಸಂ। ನಾ।)

For Protection and Provision

Consult

The New Guardian of India Life Insurance Co., Ltd.
Head office: **MADRAS**
(Estd 1931)

A Policy in this Progressive Life Office is a good investment; its Agency is a valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

The Catholic Bank Ltd., Udipi.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಈಡಿನಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟಿಸು ಕೊಟ್ಟಲ್ಲಿ 1, 2, 5 ಮತ್ತು 6ನೇ ಆಸಾಮಿಗಳು ಆ ಎಡ್ರೆಸಿನಲ್ಲಿಲ್ಲವೆಂದು ಕೊಟ್ಟ ರಿಜಿಸ್ಟರ್ಡ್ ನೋಟೀಸು ವಾಪಾಸು ಬಂದುದರಿಂದಲೂ 3ಮತ್ತು 4ನೇ ಆಸಾಮಿಗಳು ರಿಜಿಸ್ಟರ್ಡ್ ನೋಟೀಸು ಪಡೆದು ಅವರವರ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದಲೂ ಸದರೀಯವರಿಗೆ ಯಾ ಸದರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದರೀಯವರು ಈಡಿಟ್ಟ ನಗಗಳನ್ನು ಇದೇ ಜುಲಾಯಿ ತಿಂಗಳ 25ನೇ ಬುಧವಾರದೊಳಗೆ ಬಿಡಿಸಿಕೊಳ್ಳದೆ ಇದ್ದಲ್ಲಿ ಇದೇ ತಿಂಗಳ ತಾರೀಕು 28ನೇ ಶನಿವಾರ ಗಂಟೆ 12-30ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

S. No	Date	J. L. No.	Name of the borrower	Principal Amount
1	5-5-49	24/1875	ಕೆ. ವೆಂಕಟರಾಯ, ಶ್ರೀನಿವಾಸ ರಾಯರ ಮಗ, ಕಿನ್ನಿಮೂಲ್ಕಿ, ಉಡುಪಿ ಪೋಸ್ಟು.	12-7-0
2	11-6-49	24/2153	ಜುವಾಬ್ ಡಿ. ಸೋಜ ಡೋಸಾರಿಯೋ ಡಿ.ಸೋಜರ ಮಗ, ಪೆರಂಪಳ್ಳಿ, ಕಲ್ಯಾಣಪುರ ಪೋಸ್ಟು.	58-9-0
3	13-6-49	24/2163	ಶೇಕ್ ಹಸನ್ ಸಾಹೇಬ, ಮಹಬೂಬ್‌ಸಾಹೇಬರ ಮಗ, ಕಿನ್ನಿಮೂಲ್ಕಿ, ಉಡುಪಿ ಪೋಸ್ಟು.	12-5-0
4	17-6-49	24/2194	ಪಿ. ಕೆ. ಶ್ರೀನಿವಾಸ ರಾವ್, ವೆಂಕಪ್ಪಯ್ಯರ ಮಗ, ಪೆರಂಪಳ್ಳಿ, ಕಲ್ಯಾಣಪುರ ಪೋಸ್ಟು.	35-6-0
5	7-9-50	26/2082	ಬಾಬು ಸೆಟ್ಟಿ, ಅಂತಯ್ಯ ಸೆಟ್ಟಿಯ ಅಳಿಯ, ಅಲೆವೂರು, ಉಡುಪಿ ಪೋಸ್ಟು.	100-9-0
6	5-1-51	27/23	ರಘುನಾಥ ರಾಮಚಂದ್ರ ಪೈ, ರಾಮಚಂದ್ರ ಪೈಯ ಮಗ, ಉಡುಪಿ ಪೋಸ್ಟು.	32-1-0

V. ANDRADE, Agent,
The Catholic Bank Limited, Udipi.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿ. ಗೆ ಧಾರಾಳ ಕಮಿಶನ್ ಇದೆ

ನವಯುಗ ಪ್ರೆಸ್, ಉಡುಪಿ.

THE NEW KARNATAKA PROVIDENT INSURANCE COMPANY LIMITED
H. O. UDIPI. S. K.

NOTICE

Is hereby given from a Share holder Mr. M. K. Suvarna, that he intends to propose Mr. P. M. Hegde, Chartered Accountant, Mangalore, as the Auditor of the Company at the ensuing General Body Meeting of the Campony

M. H. Shetty.
Manager.
Udipi Dated. 14-7-1951

ಪ್ರಕಟಣೆ

ನಾನು, ತಾ. 24-7-51ನೇ ಮಂಗಳವಾರ ಬೈಲೂರಿನಿಂದ ದಿಲ್ಲಿಗೆ ನನ್ನ ಮಿತ್ರರಾದ ಕೂರ್ಗಾಲು ಬಾಲಚಂದ್ರ ಸೆಟ್ಟರೊಡನೆ ಹೋಗುವುದಾಗಿ ನಿಶ್ಚಯಿಸಿರುತ್ತೇನೆ. ಅವಸರದಿಂದ ಹಿತ ಸಂಬಂಧಿಗಳಿಗೂ ಮಿತ್ರ ವೃಂದಕ್ಕೂ ತಿಳಿಸಲು ಸಮಯ ಸಂಕೋಚದಿಂದಾಗಿ ಕೊರತೆಯಾಗಿರುತ್ತದೆ, ಆ ಪ್ರಯುಕ್ತ ನನ್ನ ಮಿತ್ರ ವರ್ಗದವರಿಗೂ ಮತ್ತು ಹಿತ ಸಂಬಂಧಿಗಳಿಗೂ ಪತ್ರಿಕೆಯ ಮೂಲಕ ತಿಳಿಸಿರುತ್ತೇನೆ.

ಇಂತೀ
ಮುದ್ರಾಡಿ. ಯಂ. ಕೆ. ಬಾಬು ಹೆಗ್ಡೆ.
ತಾ. 17-7-51

ನಮಗೆ ಬಂದ ಪತ್ರ

ನವಜೀವನ ಹೈಸ್ಕೂಲ್ ಕರೆಸ್ಪಾಂಡೆಂಟರಿಗೆ ಉತ್ತರ

ಪೆರಡಾಲ ನವಜೀವನ ಹೈಸ್ಕೂಲಿನ ಕರೆಸ್ಪಾಂಡೆಂಟರು ಜಿಲ್ಲೆಯ ಅನೇಕ ಪತ್ರಿಕೆಗಳಲ್ಲಿ ಇತ್ತೀಚೆಗೆ ಪ್ರಕಟಿಸಿದ ಕೆಲವು ಅಭಿಪ್ರಾಯಗಳು ಸತ್ಯಕ್ಕೆ ಬಾಹಿರವಾದವುಗಳಾದ್ದರಿಂದ ಅವುಗಳ ಕುರಿತು ನಿಜಾಂಶವನ್ನು ಮಹಾ ಜನರ ಮುಂದಿಡದೆ ನಿರ್ವಾಹವಿಲ್ಲದಾಗಿದೆ.

ಶ್ರೀ ಕೆ. ಕೆ. ರೈಗಳು ಮತ್ತು ನಾನು ಡೈರೆಕ್ಟರರಿಗೆ ಮಾಡಿದ ಅಪೀಲಿನ ಕುರಿತು 6-6-51ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಮಾಡಿದ ವಿಚಾರಣೆಯಲ್ಲಿ ಮೆನೇಜ್ಮೆಂಟಿನವರು ನಮ್ಮ ಮೇಲೆ ಹೊರಿಸಿದ ಆರೋಪಗಳಲ್ಲಿ ಅಸಭ್ಯಾಚಾರ ಅಧ್ಯಾಪಕರಲ್ಲಿ ಒಡಕುಂಟುಮಾಡಿದ್ದು ಮೊದಲಾದಕ್ಕೆ ರುಜುವಾತಿಲ್ಲವೆಂದೂ 15-2-51ರ ಘಟನೆಯು ಶಾಲೆಗೆ ಸಂಬಂಧಪಟ್ಟದ್ದಲ್ಲವಾದ ಕಾರಣ ತಾವು ಕೂಲಂಕಷ ವಿಚಾರಣೆ ಅದರ ಕುರಿತು ಮಾಡುವುದಿಲ್ಲವೆಂದೂ ಡಿ. ಇ. ಒ. ರವರು ಸ್ಪಷ್ಟ ಹೇಳಿದರು. ವಿಚಾರಣೆ ಮುಗಿದ ಅನಂತರ ಶ್ರೀ ರೈಗಳನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಲು ಬರೆಯುವುದಾಗಿ ವ್ಯಕ್ತಪಡಿಸಿದರು. ಈ ನ್ನಮಟ್ಟಿಗೆ ಉದ್ಯೋಗಕ್ಕೆ ಸೇರುವ ಅಪೇಕ್ಷೆ ಸರ್ವಥಾ ನನಗಿಲ್ಲವೆಂದೂ ನನ್ನಮೇಲಿನ ತಪ್ಪು ಆರೋಪಗಳು ತೆಗೆದುಹಾಕಲ್ಪಡಲೇ ಬೇಕೆಂಬುದೇ ನನ್ನ ಪ್ರಾರ್ಥನೆಯೆಂದೂ ಅವರಲ್ಲಿಯೇ ನಿವೇದಿಸಿಕೊಂಡಿದ್ದೇನೆ. ತನಿಖೆ ಸಂಪೂರ್ಣ ಮುಗಿದು ಮರುದಿನ ಕುಂಬಳೆಗೆ ಆಗಮಿಸಿದ್ದ ವಿದ್ಯಾಧಿಕಾರಿಗಳು ಶ್ರೀ ರೈಗಳನ್ನು ನನ್ನನ್ನೂ ಶ್ರೀ ಎಸ್. ಮುಕುಂದರಾಯರನ್ನು ಅಲ್ಲಿನ ಬಂಗ್ಲೆಗೆ ಬರಹೇಳಿ, ತನಿಖೆಯ ಮೇರೆಗೆ ಶ್ರೀ ರೈಗಳನ್ನು ಉದ್ಯೋಗಕ್ಕೆ ಪುನಃ ಸೇರಿಸಿಕೊಳ್ಳುವರೆ ಡೈರೆಕ್ಟರರು ಆಜ್ಞೆಕೊಡುವುದು ನಿಶ್ಚಯವಾದರೂ ಅದರ ಪರಿಣಾಮವಾಗಿ ಮನಸ್ಸನ್ನೊಡೆದ ಕೆಲವು ಮೆನೇಜ್ಮೆಂಟಿನ ಸದಸ್ಯರು ರಾಜೀನಾಮೆ ಕೊಡಬಹುದಾದ್ದರಿಂದ ಸಂಸ್ಥೆ ನಡೆಸಲು ತಮಗೆ ಕಷ್ಟವಾದೀತೆಂದು ಆತಂಕತೆಯವರು ತಮ್ಮಲ್ಲಿ ಅರಿಕೆಮಾಡಿಕೊಂಡ ಕಾರಣ ಈ ವಿವಾದವು ರಾಜಿಯಿಂದ ತೀರ್ಮಾನವಾಗುವದು ಸಂಸ್ಥೆಯ ಹಿತದಲ್ಲಿ ಒಳ್ಳೆಯದೆಂದು ವಿದ್ಯಾಧಿಕಾರಿಗಳು ಹಿತೋಪದೇಶ ಮಾಡಿದಂತೆ ಗೌರವದ ರಾಜಿಗೆ ನಾವು ಸಮ್ಮತಿಸಿದೆವು. ಆ ಮೇಲೆ ವಿದ್ಯಾಧಿಕಾರಿಗಳಲ್ಲಿಗೆ ಕರೆಸ್ಪಾಂಡೆಂಟರೇ ಮೊದಲಾದವರು ಆಗಾಗ್ಗೆ ಬಂದು ಬಿನ್ನವಿಸಿಕೊಂಡ ಮೇರೆಗೆ ಶ್ರೀ ರೈಗಳು ಶ್ರೀ ಮುಕುಂದರಾಯರೊಡನೆ ಹೋಗಿ ವಿದ್ಯಾಧಿಕಾರಿಗಳನ್ನು ಸಂದರ್ಶಿಸಿ ಗೌರವದ ರಾಜಿಗಾಗಿ ವಿದ್ಯಾಧಿಕಾರಿಗಳ ಹಿತೋಪದೇಶದಂತೆ ತಾ. 13-6-51ರಲ್ಲಿ ಶ್ರೀ ರೈಗಳು 15-2-51ರ ಘಟನೆಯಲ್ಲಿ "ತನ್ನ ಕಾಲಿನಿಂದ ಮನಸ್ಸು ನೋಯಿಸುವ ಉದ್ದೇಶವಿರಲಿಲ್ಲ" ವೆಂಬ ಧ್ವನಿಯ ಪತ್ರವನ್ನು ಕೊಟ್ಟಿರುತ್ತಾರೆ. ಆ ಪತ್ರಕ್ಕೆ "ಕ್ಷಮಾಯಾಚನೆ" ಯೆಂದು ಕರೆದರೆಂದು ಅಪಾರ್ಥವಾಗಿದ್ದು ವಿಚಿತ್ರವಾಗಿದೆ. "ವಿಷಯ ಹೀಗಿರುವುದರಿಂದ ಆಡಳಿತ ಸಮಿತಿಯವರು ಉದಾರ ಹೃದಯದಿಂದ ಅವರನ್ನು ಕ್ಷಮಿಸಿ ಪುನಃ ಉದ್ಯೋಗಕ್ಕೆ ಸೇರಿಸಿಕೊಂಡಿರುವರೆಂಬುದರ ಬದಲು ನಿರುಪಾಯರಾಗಿ ರಾಜಿಗೆ ಒಪ್ಪಿದರೆಂಬುದು ಸಮಂಜಸ.

ನಾನು ಕಳೆದ ಎರಡುವರುಷಗಳಿಂದಲೂ ಶಾಲೆ ಬಿಡುತ್ತೇನೆಂದು ಶಾಲೆಯ ಅಧಿಕಾರಿಗಳೊಡನೆ ಹಲವುಬಾರಿ ತಿಳಿಸಿದ್ದು, ನನ್ನ ಅಪೀಲಿನಲ್ಲಿಯೂ ತನಿಖೆಯ ವೇಳೆಯೂ ಆ ವಿಷಯ ಸ್ಪಷ್ಟಪಡಿಸಿದ್ದೇನೆ. ನನ್ನ ಮೇಲಿನ ಮಿಥ್ಯಾರೋಪಗಳು ತನಿಖೆಯಲ್ಲಿ ಸಾಬೀತಾಗದೆ ಇರುವಾಗ ಈಗ ಕರೆಸ್ಪಾಂಡೆಂಟರು ನನ್ನ ವಿಷಯದಲ್ಲಿ "ಅಧಿಕಾರಿಯವರು ಮಾಡಿದ ತೀರ್ಮಾನವು ಆಗಲೂ ಉರ್ಜಿತವಾಗಿರುತ್ತದೆ"ಂತಲೂ ನಾನು "ಅಪೇಕ್ಷಿಸಿದ್ದರೂ ಪುನಃ ಉದ್ಯೋಗಕ್ಕೆ ಸೇರಿಸಿಕೊಳ್ಳುವಂತಿರಲಿಲ್ಲ"ವೆಂತಲೂ ಬರೆದುದು ಕೇವಲ ಹಾಸ್ಯಾಸ್ಪದ. ನಿಜಾಂಶ ಹೀಗಿರುವಲ್ಲಿ ಕರೆಸ್ಪಾಂಡೆಂಟರು, ವಿವಾದವು ರಾಜಿಯಿಂದ ತೀರ್ಮಾನವಾದದ್ದು ಅಲ್ಲವೋ? ಆರೋಪಗಳು ರುಜುವಾದದ್ದು ಇಲ್ಲವೋ? ಎಂಬ ಸಂಶಯಗಳಿಗೆ ಏನೂ ಎಡೆಯಿಲ್ಲದಂತೆ ಮಹಾಜನರ ಮುಂದೆ ಅವರೇ ಸ್ಪಷ್ಟಪಡಿಸಲಿ.

ಕೆ. ಕೃಷ್ಣರಾವ್,
ನಿವೃತ್ತ ಅಧ್ಯಾಪಕ,
ನವಜೀವನ ಹೈಸ್ಕೂಲ್, ಪೆರಡಾಲ

ಮಂಗಳೂರು, 9-7-51

ವನಮಹೋತ್ಸವವೂ ಆಡುಗಳ ಹಾವಳಿಯೂ

ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಆಹಾರ ಸಮಸ್ಯೆಯನ್ನು ಬಗೆಹರಿಸಲು ಆಹಾರ ಉತ್ಪಾದನಾ ಸಾಧನವಾದ 'ವನಮಹೋತ್ಸವ' ವನ್ನಾಚರಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿರುವವಷ್ಟೆ. ಈ ಯೋಜನೆಯು ಫಲದಾಯಕವಾಗಲೂ ಜನತೆಯೂ ಸಹಕರಿಸುತ್ತಿರುವುದು ನ್ಯಾಯಸಮ್ಮತವಾದುದೆ. ನಮ್ಮ ಉಡುಪಿ ಶಹರಿನಲ್ಲಿ ಕಾಯಿಪಲ್ಯ ಮೊದಲ್ಗೊಂಡು ಇನ್ನಿತರ ಸಸಿಗಿಡಗಳನ್ನು ಕಳೆದ ವರುಷ ನೆಡಲಾಗಿತ್ತು. ಈ ವರುಷವೂ ಕಳೆದ ವರುಷದ ಅಂಕಿಗೆ ಕಡಿಮೆಯಾಗದಷ್ಟು ಸಸಿಗಳು ನೆಡಲಾಗಿದೆ. ಆದರೇನು ಮಾಡುವುದು? ಉಡುಪಿಯಲ್ಲಿ ಆಡುಗಳ ಹಾವಳಿ ದಿನಂಪ್ರತಿ ಜಾಸ್ತಿಯಾಗುತ್ತಲಿದೆ. ಎಲ್ಲಿ ನೋಡಿದರಲ್ಲಿ ಆಡುಗಳು ಎಷ್ಟು ಎತ್ತರದ ಆವರಣವನ್ನಾದರೂ ನೆಗೆದು ಚಿಕ್ಕ ಪುಟ್ಟ ಸಸಿಗಳನ್ನು ಸ್ವಾಹಾ ಮಾಡಿಬಿಡುತ್ತಲಿವೆ. ಇದರಿಂದಾಗಿ ಕಳೆದ ವರುಷ ನೆಟ್ಟ ಗಿಡಗಳಲ್ಲಿ ಕೆಲವಂತೂ ಕೆಲವಾದರೂ ಉಳಿದು ಬದುಕಿದ್ದರೆ ವನಮಹೋತ್ಸವದ ಭಾಗ್ಯವೆನ್ನಬೇಕು. ಈ ಬಾರಿ ನೆಡಲಾದ ಗಿಡ ಸಸಿಗಳು ಸರಾಗವಾಗಿ ಬೆಳೆಯುವಂತೆ ಸರಕಾರವಾದರೂ ಆಡುಗಳ ಹಾವಳಿಗಾಗಿ ಏನಾದರೊಂದು ಕಟ್ಟಪ್ಪಣೆ ಜ್ಯಾರಿಮಾಡಿದರೆ ಬಿಟ್ಟ ಕ್ರಮ, ಪಟ್ಟಕಷ್ಟ, ಸಫಲವಾಗುತ್ತಿತ್ತು. ಆಡುಗಳ ಮಾಲಿಕರೂ 'ತಮ್ಮದು ಕೋಡಿಗಿಲೆ ಮರಿ, ಇತರರದು ಕಾಗೆಮರಿ' ಎಂಬ ಭಾವನೆಯನ್ನು ದೂರೀಕರಿಸಿ ತಮಗೆ ನಷ್ಟವಾದರೆ ಹೇಗೋ ಹಾಗೆನೇ ಇತರರಿಗೂ ಎಂದು ತಿಳಿದು ತಂತಮ್ಮ ಆಡುಗಳನ್ನು ಕಟ್ಟಿಬಿಟ್ಟು ತಿರುಗಾಡ ಬಿಡದಿದ್ದರೆ ಅವರಿಗೂ ಕೀರ್ತಿಯಿದೆ. ಊರಿಗೂ ಕ್ಷೇಮವಿದೆ.

ಓರ್ವನೊಂದ ನಾಗರಿಕ

ಉಡುಪಿ 14-7-51

ಮಣಿಪುರ—ತಾ 11-7-51ರಲ್ಲಿ ಗ್ರಾಮ ಸೇವಾಸಂಘದ ಕಟ್ಟಡ ಪ್ರವೇಶ ಮಹೋತ್ಸವವು ಶ್ರೀ ಅದಮಾರು ಮಠದ ಶ್ರೀ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಸಮ್ಮೋತ್ತಮಬಾಲಕನಿತ್ತ್ಯರಿಂದ ಧ್ವಜವಂದನೆಯಾಗಲು ಶ್ರೀ ಎಚ್. ವಿಠಲ ಸೆಟ್ಟರಿಂದ ಸ್ವಾಗತ ಭಾಷಣವಾಯಿತು. ಸಭಿಕರ ಭಾಷಣವಾದ ಮೇಲೆ ಅಧ್ಯಕ್ಷರು ವಿದ್ಯೆಯ ಮಹತ್ತಿಕೆಯನ್ನು ವಿವರಿಸಿ ವಿದ್ಯಾಭಿವೃದ್ಧಿಯ ಯೋಜನೆಯಲ್ಲಿ ಗ್ರಾಮಸ್ಥರ ಜವಾಬ್ದಾರಿಯನ್ನೂ ಗ್ರಾಮಸೇವಾಸಂಘದವರ ಸೇವೆಯನ್ನೂ ಶ್ಲಾಘಿಸಿ ಇನ್ನು ಮುಂದೆ ಹಾಯರ್ ಎಲಿಮೆಂಟರಿ ಆಗುವಂತೆ ಗ್ರಾಮಸ್ಥರು ಪ್ರಯತ್ನಿಸಬೇಕೆಂದು ಅದಕ್ಕೆ ತನ್ನ ಸಹಕಾರ ಸಹಾಯ ನೀಡುತ್ತೇನೆಂದೂ ಹೇಳಿದರು. ಗ್ರಾಮ ಸೇವಾಸಂಘದ ಅಧ್ಯಕ್ಷರಾದ ಶ್ರೀ ಎಸ್. ಆಗ್ನಾಜ ಬಲ್ಲಾಳರವರಿಂದ ಧನ್ಯವಾದ ಸಮರ್ಪಣೆ, ತಿಂಡಿ ಹಂಚುವಿಕೆ, ರಾಷ್ಟ್ರಗೀತೆಯೊಂದಿಗೆ ಸಭೆ ಮುಗಿಯಿತು.

ಕಾಸರಗೋಡಿನಲ್ಲಿರುವ ಬಳೆ ಮತ್ತು ಮಣಿಯ ಶಿಕ್ಷಣ ಕೇಂದ್ರದಲ್ಲಿ 18 ವರ್ಷಕ್ಕೆ ಮೇಲ್ಪಟ್ಟ ಮತ್ತು 23 ವರ್ಷ ಪ್ರಾಯ ಮೀರದ ತರುಣರನ್ನು ಒಂದು ವರ್ಷ ತರಬೇತಿಗೆ ತೆಗೆದು ಕೊಳ್ಳುತ್ತಾರೆ. ಆರಿಸಲ್ಪಟ್ಟವರಿಗೆ 25-0-0 ರೂಪಾಯಿ ವಿದ್ಯಾರ್ಥಿ ವೇತನವನ್ನು 11 ತಿಂಗಳು ಕೊಡುತ್ತಾರೆ. ಅರ್ಜಿ ಫಾರ್ಮು ಮತ್ತು ಹೆಚ್ಚಿನ ವಿಷಯಗಳಿಗೆ ಎರಡಾಣೆ ಅಂಚೆ ಚೀಟು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಬಹುದು" Superintendant, Government Glass Bangle & Bead Training Centre, KASARAGOD- (S. K. Dist.)

ಕುಂಬಳೆ—ಸಿರಿಯಾ ಆಣೆಕಟ್ಟಿನ ಕೆಲಸ ನಡೆಸುತ್ತಿದ್ದ ಅಸಿಸ್ಟಂಟ್ ಎಂಜಿನಿಯರ್ ಶ್ರೀ ಪಿ.ವಿ.ಭಟ್ಟರನ್ನು ಕರ್ನಾಟಕದ ಎಕ್ಸಿಕ್ಯೂಟಿವ್ ಎಂಜಿನಿಯರನ್ನಾಗಿ ವರ್ಗಾಯಿಸಿದ್ದರಿಂದ, ಅವರ ಸ್ಥಾನಕ್ಕೆ ಜನಾಬ್ ಯು. ಅಬ್ದುಲ್ ಗಫೂರ್ ಎಂಬವರು ನೇಮಿಸಲ್ಪಟ್ಟು ಚಾರ್ಜು ವಹಿಸಿರುವರು.

ಮಂಡೆಕೋಲು—ಗಾರ್ಡಿಯನ್ ಎಂಪಲ್ಸ್ ಹಾ. ಎ. ಶಾಲೆಯಲ್ಲಿ ತಾ 7-7-51 ರಂದು ವನಮಹೋತ್ಸವವು ಆಚರಿಸಲ್ಪಟ್ಟಿತು.

ಮೂಡಬಿದ್ರೆ—8-7-51ರಲ್ಲಿ "ಮಹಾತ್ಮಾಗಾಂಧಿ ಸೇವಾ ಸಮಾಜ"ವೆಂಬ ಸಂಘದ ಮಹಾ ಸಭೆಯು ಹರಿಜನ ವೆಲ್ಫೇರ್ ಶಾಲೆಯಲ್ಲಿ ಶ್ರೀಮಾನ್ ಬಿ. ಚಂದಪ್ಪ ಇಪ್ಪಾರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಡಿ. ಬಂಗೇರರು ಭಾಷಣಮಾಡಿದರು.

ಅದಮಾರು—ಇಲ್ಲಿಯ ವನಮಹೋತ್ಸವವು ಕಳೆದ ಗುರುವಾರ ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್ಪೆಕ್ಟರ್ ಓಫ್ ಸ್ಕೂಲ್ಸ್, ಶ್ರೀಯುತ ಎಂ. ಎಸ್. ಚೌಟರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರನ್ನು ಸ್ವಾಗತಿಸುತ್ತಾ ಇಲ್ಲಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಕಳೆದ ವರ್ಷ ಇಲ್ಲಿ ನೆಟ್ಟ ಸುಮಾರು ಇಪ್ಪತ್ತು ಮೂವತ್ತು ಸಸಿಗಳಲ್ಲಿ ಮೂರೋ ನಾಲ್ಕೊ ಬದುಕಿವೆಯೆಂದರು. ಹೀಗಾಗಿ ಈ ವರ್ಷ ಬಹಳ ಕಡಿಮೆ ನೆಟ್ಟು ಅವುಗಳನ್ನು ಪಾಲಿಸುವ ಕಡೆ ಹೆಚ್ಚು ಗಮನವೀಯಲಾಗುತ್ತದೆ ಎಂದರು. ಅಧ್ಯಕ್ಷರ ಭಾಷಣವಾದನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಮುಂಬಯಿ—ಲಲಿತಕಲಾ ಕರ್ನಾಟಕ ನಾಟಕ ಸಭೆಯವರು ಶಾಮಗಾಲ್ ದರ್ಶಕರ ರಾತ್ರಿ ಶಾಲೆಯ ಸಹಾಯಾರ್ಥವಾಗಿ ಎಚ್. ಎಲ್. ಎನ್. ಸಿಂಹರಿಂದ ಬರೆಯಲ್ಪಟ್ಟ "ಸಂಸಾರ ನೌಕೆ" ಎಂಬ ಸುಪ್ರಸಿದ್ಧ ಕನ್ನಡ ನಾಟಕವನ್ನು ತಾ. 21-7-51ನೇ ಶನಿವಾರ ರಾತ್ರಿ ಘಂಟೆ 8ಕ್ಕೆ ದಾಮೋದರ್ ಹಾಕರ್ಸಿ ಥಿಯೇಟರಿನಲ್ಲಿ ಅಭಿನಯಿಸುವರು.

ಉತ್ತರ ಮುಂಬಯಿ ಹೋಟೆಲ್ ಕಾರ್ಮಗಾರ ಯೂನಿಯನಿನ ಮಹಾಸಭೆಯು ಪರೇಲ್ ದಾಮೋದರ ಹಾಲಿನಲ್ಲಿ 26-7-51ನೇ ರಾತ್ರಿ 8ಗಂಟೆಗೆ ಜರಗಲಿದೆ.

In The High Court of Judicature At Madras

Ordinary Original civil Jurisdiction

O. P. No. 173 of 1951

In the matter of the Indian Companies Act 1913

AND

In the matter of the Agricultural & Industrial Bank Ltd., COONDAPOOR.

The Agricultural & Industrial Bank Ltd., Coondapoor. } Petitioner

Notice is hereby given that a petition under Section 12 of the Indian Companies Act, 1913, for confirmation of alteration of its Memorandum whereby its registered office is sought to be shifted from Madras State to Bombay State was presented by the petitioner on the 27th Day of April 1951 and the said petition is directed to be heard before the judge sitting in Chambers on the 13th day of August 1951. Any person desirous of supporting or opposing the making of an order as prayed in petition should appear at the time of hearing by himself or by his Advocate; and a copy of the petition will be furnished to any person requiring the same by the undersigned on payment of the regulated charge for the same.

1A, Dr. Thomas Road, T. Nagar, MADRAS-17 10—7—1951 } (Sd.) **A. Narayana Pai,** Advocate for Petitioner.

Note:- Any person who intends to appear on the hearing of the said petition must serve on or send by post to the abovenamed notice of his intention so to do. The notice must state the name and address of the person or if a firm the name and address of the firm and must be signed by the person or firm or his or their advocate and must be served or if posted must be sent by post so as to reach the abovenamed not later than 3 o'clock in the after-noon of 12-8-1951.

NOTICE

Sealed tenders are called for, by 31—7—'51 for the construction of a set of two rooms etc., in Kollur, at an estimated cost of Rs 1750/-

Plans and specifications may be had from the Executive Officer, of Sri Mukambika Temple, Kollur. S Kanara

---

ವಿವಿಧ ಪಾತ್ರೆಗಳು

ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಜಾತಿ ಗಳೂ ಸಾಮಾನುಗಳೂ ನಮ್ಮ ಅಂಗಡಿಯಲ್ಲಿ ಮಾರಾಟಕ್ಕಿರುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರು,
ರಥಬೀದಿ, ಉಡುಪಿ

ಸ್ವೀಕಾರ-ವಿಮರ್ಶೆ

೧ ತೂರಿಬಂದ ತಾರೆ.

ಲೇಖಕರು: ಶ್ರೀ ಶ್ರೀನಿವಾಸರಾವ್ ಕೊರಟಿ, ಪ್ರಕಾಶಕರು: ಆನಂದ ಬ್ರದರ್ಸ್, ಪಬ್ಲಿಷರ್ಸ್, ಬೆಂಗಳೂರು ೨. ಬೆಲೆ ರೂ. ೨-೦-೦.

ತೂರಿಬಂದ ತಾರೆ ಕಾಲೇಜು ಪ್ರಣಯದ ಒಂದು ಸುಂದರ ಕತೆ. ಮಹಾರಾಜ ಕಾಲೇಜ್‌ನಲ್ಲಿ ಕಲಿಯುತ್ತಿದ್ದಾಗ ಮೂರ್ತಿ ಒಂದು ಹೆಣ್ಣಿನ ರೂಪು, ನಡತೆಗಳನ್ನು ನೋಡಿಕೊಂಡು ಮೋಹಿತನಾದ. ಹೆಣ್ಣುಮಕ್ಕಳ ಸುದ್ದಿ ಆಡುವವರನ್ನು ಕಂಡರೆ ಸಿಡಿದೇಳುತ್ತಿದ್ದ ಮೂರ್ತಿ ಸ್ವತಹ ಒಂದು ಹೆಣ್ಣಿನ ಮೋಹಕ್ಕೆ ತುತ್ತಾದನೆಂದು ಅವನನೆಚ್ಚಿನ ಸ್ನೇಹಿತರಾದ ಶ್ರೀ ಕಾಂತನ್, ಬಾಸಾಡಿ ಎಣಿಸಿರಲಿಲ್ಲ. ದಿನದಿಂದ ದಿನಕ್ಕೆ ಆಕೆಯ ಬಗ್ಗೆ ವಿಶ್ವಾಸ ಬೆಳೆದ ಹಾಗೆ ಆಕೆಯ ವಿಚಾರ ತಿಳಿಯಲೊಲ್ಲೆಬೇಕೆಂಬ ಕುತೂಹಲ ಆತನಲ್ಲಿ ಸ್ವಾಭಾವಿಕವಾಗಿ ಮೂಡುತ್ತದೆ. ಕೊನೆಗೆ ಸ್ನೇಹಿತರ ಕೈಯಲ್ಲಿ ಆ ವಿಚಾರವನ್ನು ಹೇಳಬೇಕಾಯಿತು. ಸ್ನೇಹಿತರೂ ಅರಿತುಕೊಂಡರು. ಮೂರ್ತಿಯ ವ್ಯಕ್ತಿತ್ವದ ಮೇಲೆ ವಿಶೇಷ ಗೌರವಾದರಗಳಿದ್ದ ಕಾರಣ ಅವರಾರೂ ಅದನ್ನು ತಿರಸ್ಕರಿಸಲಿಲ್ಲ. ಆ ಹುಡುಗಿಯೂ ರೂಪ ವಿನಯ ಗುಣ ಸಂಪನ್ನೆಯಾಗಿದ್ದಳು ಕಾಲೇಜು ವಿದ್ಯಾರ್ಥಿಗಳೆಂದಮೇಲೆ ಅವಳ ಕುಲಗೋತ್ರವನ್ನು ಹಿಡಿಯದೆ ಬಿಡುತ್ತಾರೆಯೇ? ಪತ್ತೆಯೂ ಆಯಿತು. ಆದರೆ ಯಾರು ಮುಂದಾಗಿ ಆಕೆಯೊಡನೆ ಪ್ರಸ್ತಾಪಿಸುವದೆಂಬುದೇ ದೊಡ್ಡ ಸಮಸ್ಯೆಯಾಗುಳಿಯಿತು. ಕೊನೆಗೆ ಮೂರ್ತಿಯೆ ಆವಳಿಗೆ ಸುದೀರ್ಘವಾದ ಪತ್ರಬರೆದು ತನ್ನಿಚ್ಛೆಯನ್ನು ತಿಳಿಸುತ್ತಾನೆ. ಆಕೆ ಅದನ್ನು ಮನಸ್ಸಿಗೆ ಅಷ್ಟಾಗಿ ಹಚ್ಚಿಕೊಳ್ಳದೆ ನಿರ್ದಿಷ್ಟವಾದ ಉತ್ತರವನ್ನು ಕೊಡದೆ ಮೂರ್ತಿಯನ್ನು ತ್ರಿಶಂಕು ಸ್ವರ್ಗನನ್ನಾಗಿ ಮಾಡುವಳು. ಇವನ ಬಗ್ಗೆ ಆದರ-ವಿಶ್ವಾಸ-ಗೌರವಗಳು ಆಕೆಗೆ ಬೆಳೆದರೂ ಅದೇ ಚಿಂತನೆಯಲ್ಲಿ ಆಕೆ ಕಳೆಕೆಡಿಸಿಕೊಳ್ಳದೆ ನಿರ್ಲಿಪ್ತಳಾಗಿದ್ದಳು. ಮೂರ್ತಿಯ ಮನಸ್ಸಿಗೆ ಮಂಕು ಕವಿಯಿತು. ಸ್ನೇಹಿತರು ಬುದ್ಧಿಯ ನಾಲ್ಕು ಮಾತು ಹೇಳಿದರೂ ಅವನಿಗೆ ಇಷ್ಟವಾಗಿ ತೋರಲಿಲ್ಲ. ಕೊನೆಗೆ ಶ್ರೀಮತಿಯ ಮನವೊಲಿಸಲು ಪ್ರಯತ್ನಮಾಡಿ ವಿಫಲ ಮನೋರಥನಾದರೂ ಆಕೆ ನೀಡಿದ ಸಲಹೆ-ಸೌಮ್ಯರೀತಿಯ ನಿರಾಕರಣೆಯಿಂದ ಮನಸ್ಸು ಸ್ಥಿಮಿತಕ್ಕೆ ಬರುತ್ತದೆ. ಆಕೆ ಮದುವೆಯಾಗಲು ಒಪ್ಪದೆ ಹೋದರೂ ಬಾಳಿನ ಗೆಳತಿಯಾಗಿ ಇರುವ ಆಶೆಯನ್ನು ತೋರಿಸಿದ್ದರಲ್ಲಿ ಮೂರ್ತಿಯು ತೃಪ್ತನಾಗಿ ಊರಿಗೆ ತಿರುಗುತ್ತಾನೆ. ಕೊನೆಗೆ ಮೈಸೂರಿನಿಂದ ಅವನ ಸ್ನೇಹಿತರಾದ ಅನಂತ್‌ರವರು ಶ್ರೀಮತಿಯ ಹಿರಿಯರೊಡನೆ ಮಾತನಾಡಿ ಮದುವೆಗೆ ಒಪ್ಪಿಸಿರುವದಾಗಿಯೂ, ಅದಕ್ಕೆ ಮೂರ್ತಿಯ ಹಿರಿಯರ ಅಭಿಪ್ರಾಯ ತಿಳಿಸಬೇಕೆಂದೂ ಪತ್ರಬರೆಯುತ್ತಾರೆ. ಮೂರ್ತಿಯ ತಂದೆ ಅವನಿಗೆ ಸೋದರಿಕೆಯಲ್ಲಿ ಇನ್ನೊಂದು ಹೆಣ್ಣನ್ನು ನಿಶ್ಚಯಿಸಿರುತ್ತಾರೆ ಅದನ್ನು ಹೇಗಾದರೂ ತಪ್ಪಿಸಿಕೊಂಡು ಈ ಮದುವೆಯ ಪ್ರಸ್ತಾಪವನ್ನೆತ್ತಬೇಕೆಂದು ಮೂರ್ತಿ ಯೋಚಿಸುತ್ತಿರುವಲ್ಲಿಗೆ ಕತೆ ನಿಂತುಹೋಗುತ್ತದೆ.

'ತೂರಿಬಂದ ತಾರೆ'ಯಲ್ಲಿ ತಾತ್ವಿಕವಾದ ವಿಚಾರಗಳಾಗಲೀ, ವಿಶೇಷವೈಶಿಷ್ಟ್ಯವಾಗಲೀ ತೋರದೆ ಹೋದರೂ ಓದುವಾಗ ಹೃದಯ ಉಳ್ಳವರಿಗೆ ಯಾವುದೋ ಒಂದು ಬಗೆಯ ಸಹಾನುಭೂತಿ ಅನುಕಂಪ ಮೂರ್ತಿಯ ಬಗ್ಗೆ ಮೂಡುತ್ತದೆ. ಕಾಲೇಜು ವಿದ್ಯಾಭ್ಯಾಸ ಇಷ್ಟಕ್ಕೇ ಆಯಿತೇ? ಕಲಿತವರ ಬಾಳುವೆ ಒಂದು ಹೆಣ್ಣಿಗಾಗಿ ಕೊರಗಿ ಜೀವನವೆಷ್ಟು ವ್ಯರ್ಥವೆನ್ನುವಷ್ಟರ ಮಟ್ಟಿನ ದೌರ್ಬಲ್ಯಕ್ಕೆ ಇಳಿಯಿತೇ? ಪ್ರೇಮಕ್ಕಿಂತಲೂ ಮಿಗಿಲಾದ ಮಹತ್ತಾದ ಜೀವನೋದ್ದೇಶಗಳು ನಮ್ಮ ಜನದ ಬಾಳಿನಲ್ಲಿ ಮೂಡಲಾರವೇ? ಎನ್ನುವ ಹಲವಾರು ಪ್ರಶ್ನೆಗಳು ಮೂಡಬಹುದು. ಇಂತಹ ಪ್ರಶ್ನೆಗಳ ಪರಿಹಾರಕ್ಕೆ ತೂರಿಬಂದ ತಾರೆಯ ಒಟ್ಟುಕತೆಯು ಉತ್ತರವಲ್ಲ; ಅದರಲ್ಲಿ ಬಂದಿರುವ ಸುಂದರ ಸನ್ನಿವೇಶಗಳೇ ಅದಕ್ಕೆ ಉತ್ತರಗಳು. ಉತ್ತಮ ಅಭಿರುಚಿಯುಳ್ಳಂತಹ ಒಬ್ಬ ತರುಣ ತನ್ನ ಅಭಿರುಚಿಗೆ ಹೊಂದಿಕೆಯಾಗುವ ಗುಣ ವೈಶಿಷ್ಟ್ಯಗಳಿಂದ ಕೂಡಿದ ಕನ್ಯೆಯನ್ನು ಕೈಹಿಡಿದರೆ ತನ್ನ ಬಾಳು ನಂದನವಾದೀತು-ಸುಖದುಃಖಗಳಲ್ಲಿ ಸಮಪಾಲುಗೊಂಡು ಸಂಸಾರ ನಡೆಸಿಯೇವು ಎಂದು ಬಯಸಿದರೆ ತಪ್ಪೇನು? ಮನಸ್ಸಿಗೆ ಬಾರದವಳನ್ನು ಕೈಹಿಡಿದು ನೆರಮನೆಯವರ ಸರತಿ ಸಲ್ಲಾಪದಲ್ಲಿ ಉತ್ಸಾಹ ತಾಳುವ ತಿಪ್ಪರಿಗಿಂತ ಮೆಚ್ಚಿ ಮದುವೆಯಾಗುವವ ಒಳ್ಳೆತಲ್ಲವೇ? ಒಬ್ಬೊಬ್ಬರ ಬದುಕು ಒಂದೊಂದು ವಿಧ ಹಲವರು ಸಂಸಾರಕ್ಕಾಗಿಯೇ ಮದುವೆಯಾದರೆ ಇನ್ನು ಕೆಲವರು ಸಂಗಾತಿ ಜೀವನದಲ್ಲಿ ಉತ್ತಮವಾದ ಕಾರ್ಯವನ್ನೆಸಗಬಹುದು. ಮೂರ್ತಿ ಬರಹಗಾರ, ಸಾದಾಸರಳವ್ಯಕ್ತಿ. ಅವನಿಗೆ ಶ್ರೀಮತಿ ಮಡದಿಯಾಗಿ ಬಂದರೆ ಜೀವನದಲ್ಲಿ ಎಂತಹ ಜಟಿಲ ಸಮಸ್ಯೆ ಬಂದರೂ ನಾವೀರ್ವರೂ ಕೂಡಿ ಸಮನಾಲುಗೊಂಡೇವು ಎನುವ ಪ್ರೇಮದೊಂದಿಗೆ ಸಾಂಸ್ಕೃತಿಕ ಒಲವೂ ಇದೆ. ಸಮಾಜ ಇದನ್ನು ಎತ್ತಿತೋರಿಸುವುದನ್ನು ಅನೈತಿಕವೆಂದು ಹೇಳಿದರೂ ಇದು ಪ್ರಕೃತಿದತ್ತವಾದ ಗುಣವೆಂಬುದನ್ನು ಯಾರೂ ಅಲ್ಲಗಳೆಯಲಾರರು.

'ತೂರಿಬಂದ ತಾರೆ' ತೀರಾ ಕಾಲ್ಪನಿಕವಾಗಿರದೆ ಜೀವನದ ಅನುಭವವಾಗಿರುವದರಿಂದ ಸನ್ನಿವೇಶ ಸಂದರ್ಭಗಳು ಸಹಜತೆಯನ್ನು ಮುಟ್ಟಿವೆ. ಮೂರ್ತಿ ಪತ್ರದಲ್ಲಿ ಆತ್ಮನಿವೇದನೆ ಮಾಡಿಕೊಳ್ಳುವದೂ, ಮತ್ತೆ ಆಕೆ ಎಲ್ಲಿಯಾದರೂ ತನ್ನನ್ನು ಬಯಲಿಗೆಳೆದಾಳೋ ಎಂದು ಭೀತನಾಗುವುದೂ ಒಬ್ಬನಾಗಿರುವಾಗ ಹಲವು ರೀತಿಯ ಆಶಾಗೋಪುರಗಳನ್ನು ಕಟ್ಟಿದರೂ ನೇರಾಗಿ ಆಕೆಯೊಡನೆ ಸಂಭಾಷಣೆ ಮಾಡುವ ಸಂದರ್ಭದಲ್ಲಿ ಕೇವಲ ವ್ಯಾವಹಾರಿಕ ಮಾತನಾಡುವುದೂ, ಆಕೆ ಒಂದುರೀತಿಯ ಸಹಾನುಭೂತಿಯನ್ನು ವ್ಯಕ್ತಪಡಿಸಿದಾಗ ಅಮಿತಾನಂದವನ್ನು ಹೊಂದುವದೂ, ನಿರಾಕರಿಸಿದಾಗ ಜೀವನವೇ ಬರಿದೆನುವ ರೀತಿಯಲ್ಲಿ ವ್ಯಥೆಪಡುವದೂ, ಅಸ್ವಸ್ಥದ ಮೂಲಕ ಆಸ್ಪತ್ರೆಯಲ್ಲಿದ್ದಾಗ ಆಕೆಯೇ ಬಂದು ಶುಶ್ರೂಷೆ ವಹಿಸಿದರಾಗುತ್ತಿತ್ತೆಂದು ಹಳವಳಿಸುವುದೂ, ಆಕೆಯ ಕಾರಣವಾಗಿ ತನ್ನಲ್ಲಾಗುವ ಉದ್ವಿಗ್ನತೆಯನ್ನೂ—ಮನೋಲ್ಲಾಸವನ್ನೂ ಸ್ನೇಹಿತರೊಡನೆ ಹೇಳುವದೂ—ಈ ಎಲ್ಲ ಸನ್ನಿವೇಶಗಳು ಅತ್ಯಂತ ಸ್ವಾಭಾವಿಕವಾಗಿಯೂ ರಸವತ್ತಾಗಿಯೂ ಚಿತ್ರಿಸಲ್ಪಟ್ಟಿವೆ. ಪ್ರೇಮಸಂದೇಶವನ್ನು ಒಯ್ಯಬಲ್ಲ ಹಲವು ಜಡವಸ್ತುಗಳೂ ಇಲ್ಲಿ ಪ್ರಾಮುಖ್ಯತೆಯನ್ನು ಪಡೆದಿವೆ. ಮೂರ್ತಿ ಶ್ರೀಮತಿಯನ್ನು ಹೃದಯಪೂರ್ವಕವಾಗಿ ಪ್ರೀತಿಸಿದರೂ ಶ್ರೀಮತಿ ಮಾತಿನಿಂದಲಾದರೂ ನಾಲ್ಕು ಸಹಾನುಭೂತಿಯ ಮಾತನ್ನಾಡಲಾರದಷ್ಟು ಕಠಿಣೆಯಾದಳೇ? ಎಂದು ನಮಗೆ ನಡುನಡುವೆ ತೋರುತ್ತದೆ. ಆಕೆ ಮೆಚ್ಚಿದ್ದು ಆತ ಬರೆದ ಸಾಹಿತ್ಯವನ್ನು, ಅವನ ವಿಶಾಲಾಂತಃಕರಣವನ್ನು ಹೊರತು ಅವನ ರೂಪು ಸೌಂದರ್ಯವನ್ನಲ್ಲ. ಅವಳ ಒಲವು ಮಾತಿಗೆ ಬರದ ವಸ್ತುವಾಗಿದೆ ಎಂಬುದು ಅವಳ ಕೊನೆಯ ಮಾತಿನಲ್ಲಿ ವ್ಯಕ್ತವಾಗುತ್ತದೆ.

ಅನಂತ ತೂರಿಬಂದ ತಾರೆಯ ಒಬ್ಬ ಮಹಾಜೀವಿ. ಪ್ರೇಮದ ಬಗ್ಗೆ ಪೂಜ್ಯ ಕಲ್ಪನೆಯುಳ್ಳ ವ್ಯಕ್ತಿ. ಮೂರ್ತಿಗೆ ಮೊದಲಿಂದ ತುದಿಯವರೆಗೆ ಅವನು ನೀಡುವ ಉಪದೇಶ ತನ್ನ ಜೀವನ ಆಘಾತದ ಅನುಭವದಿಂದ ಬಂದದ್ದು. ಪ್ರೇಮ ಪವಿತ್ರವಾದರೆ ಮನುಷ್ಯನ ಅಳಿವು ಉಳಿವಿಗೆ ಅದೇ ಕಾರಣವಾಗುತ್ತದೆಂಬುದನ್ನು ಅವನು ಚೆನ್ನಾಗಿ ಅರಿತಿದ್ದಾರೆ. ತನ್ನ ಬದುಕಿನ ತಾರೆ ಬಾಳಿನ ಮೊದಲಲ್ಲೇ ತೀರಿಹೋದುದರಿಂದ ಆ ಮೇಲಿನ ಬದುಕು ಎಂತಹುದೆಂಬುದನ್ನು "ಉಷಾ ಸ್ವಪ್ನ"ದ ಸಾಲುಗಳು ಹೇಳುತ್ತವೆ.

ಕತೆ, ಸನ್ನಿವೇಶ, ಮಾತುಗಾರಿಕೆ, ನಮ್ಮ ಮನಸ್ಸನ್ನು ಕೊನೆತನಕ ಸೂಜಿಕಲ್ಲಿನಂತೆ ಆಕರ್ಷಿಸಿಕೊಂಡರೂ ಕೊನೆಯಲ್ಲಿ ಸಂಪೂರ್ಣ ಕೈಬಿಡುತ್ತವೆ. "ಮುಕ್ತಾಯವನ್ನು ಇನ್ನೊಂದು ಕತೆಗಾಗಿ ಉಳಿಸಿಕೊಂಡಿದ್ದೇನೆ"ದು ಲೇಖಕರು ಸೂಚಿಸಿರುವರಾದರೂ ತೂರಿಬಂದ ತಾರೆಯಂತಹ ಮಾನಸಿಕವಾದ ಕತೆಗಳನ್ನು ಹೀಗೆ ಮುಕ್ತಾಯಗೊಳಿಸಬಾರದು. ಮೂರ್ತಿಗಾದ ಮನೋವ್ಯಥೆಗಿಂತ ಮಿಗಿಲಾದ ದುಃಖ ಓದುಗರಿಗಾಗುವದರಲ್ಲಿ ಸಂದೇಹವಿಲ್ಲ. ನಟಸಾರ್ವಭೌಮ, ಮರಳಿಮಣ್ಣಿಗೆ, ಇಜ್ಜೋಡು, ಸಾವಿನ ಉಡಿಯಲ್ಲಿ, ಕಾನೂರು ಸುಬ್ಬಮ್ಮ ಹೆಗ್ಗಡ್ತಿ ಇವೆಲ್ಲ ಭಾಗಭಾಗವಾಗಿ ಬಂದರೂ ಆರೀತಿಯ ಕತೆಗಳಲ್ಲಿ ಅದು ತೊಡಕಾಗಲಿಲ್ಲ. ತೂರಿಬಂದ ತಾರೆಯಂತಹ ಕತೆಗೆ ಈ ಬಗೆಯ ಕೊನೆ ದೊಡ್ಡ ಕೊರತೆಯೇ ಸರಿ.

೨ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು ಮ್ಯಾಗಜಿನ್ ೧೯೫೧:

ಇದು ಎಂ. ಜಿ. ಎಂ. ಕಾಲೇಜಿನ ಪ್ರಥಮ ವಾರ್ಷಿಕ ಸಂಚಿಕೆ. ಮನರಂಜಕವೂ ವಿಚಾರಪೂರಿತವೂ ಆದ ಹಲವಾರು ಲೇಖನಗಳನ್ನೂ, ಚಿತ್ರಗಳನ್ನೂ ಒಳಗೊಂಡ ಈ ಸಂಚಿಕೆ ವಾಚಕರಿಗೊಂದು ರಸದೂಟವೇ ಸರಿ. ಅಲ್ಲದೆ ಕಾಲೇಜಿನ ಚಟುವಟಿಕೆಗಳ ಒಂದು ಉತ್ತಮ ಕೈಗನ್ನಡಿಯೂ ಕೂಡ. ಲೇಖನಗಳಲ್ಲಿ ವಿಪುಲವಾದ ವೈವಿಧ್ಯವಿದೆ, ಇತರ ಕಾಲೇಜು ಸಂಚಿಕೆಗಳಲ್ಲಿ ನಾವು ಕಾಣದ ನಾವೀನ್ಯವಿದೆ. ಬೇಸರಿಕೆ ಬಂದಾಗಲೂ ಇದನ್ನೋದಬಹುದು, ಬೇಸರಿಕೆ ಕಳೆದ ಬಳಿಕವೂ ಮನನ ಮಾಡಬಹುದು. ಗಂಭೀರವಾದ ಕವಿತೆಗಳ ಜತೆಯಲ್ಲೇ ಇರುವ ಅರ್ಥಗಂಭೀರ ಕವಿತೆಗಳೂ, ನಗುಬರೆಹಗಳೂ, ವಿಚಾರಪೂರ್ಣ ಲೇಖನಗಳೂ, ಸಣ್ಣಕತೆಗಳೂ, ಕಾಲೇಜು ಜೀವನದ ಕುಡಿನೋಟಗಳೂ, ಪುಸ್ತಕ ವಿಮರ್ಶಾವಿಭಾಗವೂ ಇಲ್ಲಿರುವುವು ಎನ್ನುವಾಗ ಸಂಚಿಕೆಯ ಕ್ಷೇತ್ರವಿಸ್ತಾರದ ಅರಿವು ನಿಮಗಾಗಬಹುದು. ೧೯೫೦ನೆಯ ವರ್ಷವು ಆಂಗ್ಲರ ನಿಸರ್ಗಕವಿ ವರ್ಡ್ಸ್‌ವರ್ತನ ಶತಮಾನೋತ್ಸವ ಕಾಲವಾದುದರಿಂದ ಆ ಸಂದರ್ಭದ ನೆನಪಿಗಾಗಿ ಪ್ರಿನ್ಸಿಪಾಲ ಸುಂದರರಾಯರೂ, ಶ್ರೀ. ಕೆ. ಎಸ್. ಉ ಮತರೂ ಮನನೀಯವೂ ವಿಮರ್ಶಾಪೂರ್ಣವೂ ಆದ ಎರಡು ಲೇಖನಗಳನ್ನು ಬರೆದಿದ್ದಾರೆ. ಸುಂದರರಾಯರು ಶೇಕ್ಸ್‌ಪಿಯರ್ ಸೃಷ್ಟಿಸಿದ ಆಯಾಗೋನ ವ್ಯಕ್ತಿತ್ವವನ್ನು ಪ್ರಕೃತ ಪ್ರಪಂಚದೊಡನೆ ಹೋಲಿಸಿ ಮಾಡಿರುವ ತುಲನೆ ಆಂಗ್ಲ ವಿಮರ್ಶಕರ ವಿಮರ್ಶಾಶೈಲಿಯೊಡನೆ ಸರಿದೂಗುತ್ತದೆ. "ನೆನಪು ಹೋಗುವುದರ ಆನಂದ ಅಯ್ಯೋ, ಈ ರೇಡಿಯೋಗಳೇ!' 'ಅಡಿಗೂ ಸಂಪಾದಕರು ಬರಾಯಿಸಿದರು' ಮುಂತಾದ ವಿನೋದ ಪ್ರಬಂಧಗಳು ಸಂಚಿಕೆಗೆ ಸಾಹಿತ್ಯರಂಗದಲ್ಲಿ ಶಾಶ್ವತ ಕೀರ್ತಿಯನ್ನು ದೊರಕಿಸಿ ಕೊಡುವಂಥವು. ಗಾಂಧೀಜಿ, ಮಹಾದೇವ ಭಾಯಿ ಮೊದಲಾದ ಮಹಾತ್ಮರ ಬಗ್ಗೆ ನಿಬಂಧಗಳೂ ಕವಿತೆಗಳೂ ಇವೆ. ಮದರಾಸಿನ ಆಡೆಯಾರಿನ ಸಾಧಕಜೀವಿಗಳಾದ ಡಾ। ಜೇಮ್ಸ್ ಕಸಿನ್ಸರ 'ಕಲೆ ಎಂದರೇನು?' ಎಂಬ ಬರೆಹವೂ, ಶ್ರೀಮತಿ ರುಕ್ಮಿಣೀದೇವಿಯವರ 'ಆತ್ಮದ ಅಭಿವ್ಯಕ್ತಿ, ಸೌಂದರ್ಯ' ಎಂಬುದೂ ಸ್ಫೂರ್ತಿಮಂತ ಲೇಖನಗಳಾಗಿವೆ. ಕಾಲೇಜಿನ ಇತಿಹಾಸ ವಿಭಾಗದವರು ಪ್ರಪಂಚದ ಆರ್ಥಿಕ ಹಾಗೂ ರಾಜಕೀಯ ವ್ಯಾಪಾರದ ವಿಶ್ಲೇಷಣೆಯನ್ನು ಕೈಗೊಂಡಿದ್ದಾರೆ. ಕನ್ನಡದಲ್ಲಿ ಇನ್ನೂ ಬರಹಗಳಿದ್ದರಾಗುತ್ತಿತ್ತು ಎನ್ನುವಾಗಲೇ ಕನ್ನಡವಿಭಾಗ ಮುಗಿದು ಬಿಡುತ್ತದೆ. ಅರ್ಥಾತ್ ಕನ್ನಡಕ್ಕಾಗಿ ಮೀಸಲಾದ ಪುಟ ತೀರಾ ಕಡಿಮೆಯಾಗಿದೆ! ಮುಂದೆ ಹೀಗಾಗದೆಂದು ಆಶಿಸುತ್ತೇವೆ. ಅತ್ಯಂತ ಆಕರ್ಷಕವೂ ಸುಲಕ್ಷಣವೂ ಆದ ಮಣಿಪಾಲ ಪವರ್ ಪ್ರೆಸ್ಸಿನವರ ಮುದ್ರಣ ಕಲೆಯನ್ನು ಇಲ್ಲಿ ನೆನೆಯದಿರಲಾರೆವು.

ಕಾಲೇಜು ಜೀವನದ ಉಪಯುಕ್ತ, ರಸಮಯ ಸಂದರ್ಭ ವಿಶೇಷಗಳನ್ನೂ, ಸನ್ನಿವೇಶವನ್ನೂ ಬಣ್ಣಿಸುವ ಲೇಖನಗಳೂ, ಹಲವಾರು ಪಡಿಯಚ್ಚುಗಳೂ ಸಂಚಿಕೆಯ ಅಂತಃಸೌಂದರ್ಯವನ್ನು ಹೆಚ್ಚಿಸಿವೆ. ಕಲಾವಿದ ಶಿಟ್ಟಿಯವರ ಮುಖಪೃಷ್ಠವೂ, ಒಳಗಡೆಯ ರೇಖಾಚಿತ್ರಗಳೂ ಸಂಚಿಕೆಗೆ ಕಳೆಯಿಟ್ಟಂತಾಗಿದೆ. ಹೀಗೆ ಕಲಾಮಯವೂ, ರಸಸ್ವಾದಿಯೂ, ಹಿತೋಪೂರ್ಣವೂ ಆದ ಎಂ. ಜಿ. ಎಂ. ಕಾಲೇಜಿನ ವಾರ್ಷಿಕ ಸಂಚಿಕೆಯು ತನ್ನ ಸಹೋದ್ಯೋಗಿಗಳಲ್ಲಿ ಹಲವರನ್ನು ಮೀರಿ ನಿಲ್ಲುವದರಲ್ಲಿ ನಮಗೆ ಸಂದೇಹವಿಲ್ಲ.

—ಎಸ್ಕೆಲ್.

In the Court of the District Munsiff of Kasaragod.

O. S No. 78/1951

Ashyamma minor by guardian Mariyumma } Plaintiff

AND

Abdulreahiman Beari son of Hasankunhi Beari residing at Kasaragod Kasba —Defendant

Please take notice that the Plaintiff has filed the above suit for recovery of maintenance against the defendant and the said suit is posted for appearance on 18-7-1951, failing which the defendant will be declared exparte.

(By order of the court)

K. Narayana Nayak
Advocate for Plaintiff

Kasaragod, 12-7-1951

ಕಡಿಮೆ ಕ್ರಯದ ಉತ್ತಮ

✻ ಪುಸ್ತಕಗಳು ✻

ಬಿರುದಾವಳಿ	0	3	0
ಆ ಸಾಧ್ವಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾಡಿಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತಿಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಕ್ರದ ಅಂಚೆಟಿಕೇಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	5	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಚೇವಿಗಳು	0	5	0
ಘಂಟಮಾಲಾ ೪ ಭಾಗಗಳು	2	0	0
ಮೂರ್ಜಾಟ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಕರ್ತವ್ಯ	0	4	0
ಕೈಲಾಸ	0	3	0
ಭ್ರಾಂತಿ	0	4	0
ಕತ್ತ ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0

ರೂ. 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ.
(2) ನವಭಾರತ ಬುಕ್‌ಡಿಪೋ, ಉಡುಪಿ.

ಭರತ ಚಕ್ರವರ್ತಿ

ಲೇಖಕರು: ಕೆ. ಎ ದೇವದಾಸ್, ಶಿರೋಮಣಿ, ಉಡುಪಿ

ನಮ್ಮ ಭರತ ಖಂಡವು ಯಾವ ಮಹಾತ್ಮನಾದ ಚಕ್ರವರ್ತಿಯ ಅಮರ ನಾಮದಿಂದ ಬೆಳಗುತ್ತಿದೆಯೋ ಅತನ ಗುಣಗಾನ ಮಾಡುವುದು ಭಾರತೀಯನಾದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಆ ಭರತ ಚಕ್ರವರ್ತಿಯು ದುಷ್ಯಂತ ಕುಮಾರನೆಂದು ಹಲವರ ಕಂಡು ಬಂದರೂ ಭಾಗವತಾದಿ ಗ್ರಂಥಗಳಲ್ಲಿ ಆ ಮಹಾತ್ಮನು ರಾಜಾ ಋಷಭ ದೇವನ ಕುಮಾರನೆಂದೇ ಹೇಳಲ್ಪಟ್ಟಿದೆ. 'ಋಷಭಾತ್ ಭರತಃ ಸ್ಮೃತಃ, ಭರತಾತ್ ಭಾರತಂ ವರ್ಷಂ' ಎಂದು ಅಗ್ನಿ ಪುರಾಣವೂ ಭಾಗವತವನ್ನೇ ಸಮರ್ಥಿಸಿದೆ.

ಸಪ್ತ ದ್ವೀಪಗಳು

ಸ್ವಾಯಂ ಭುವ ಮನುವಿಗೆ ಪ್ರಿಯ ವ್ರತ ಮಗನಿದ್ದನು. ಈ ಪ್ರಿಯ ವ್ರತನೆಂದರೆ ಶುಕ್ರಾಚಾರ್ಯರ ಮಗಳು; ದೇವಯಾನಿಯ ಅಜ್ಜ. ಪ್ರಿಯ ವ್ರತನು ಭೂಮಿಯನ್ನಾಳುತ್ತಾ ಕೊನೆಗೆ ತನ್ನ ಹಿರೇ ಪುತ್ರನಾದ ಆಗ್ನೀಧ್ರನಿಗೆ ರಾಜ್ಯವನ್ನೊಪ್ಪಿಸಿದನು. ಭೂಮಿಯನ್ನು ಸಪ್ತ ದ್ವೀಪಗಳಾಗಿ ವಿಭಾಗಿಸಿ ಆಳಿದ ಆಪ್ರಿಯ ವ್ರತನ ಕುಮಾರ-ಆಗ್ನೀಧ್ರನು ಜಂಬೂ ದ್ವೀಪದ ಮೊದಲನೆಯ ರಾಜನಾದನು. ಇತರ ಆರು ದ್ವೀಪಗಳನ್ನು ಆಗ್ನೀಧ್ರನ ಸೋದರರೂ ಆಳಿದರು.

ಅಜನಾಭವರ್ಷ

ನಮ್ಮ ಭರತ ವರ್ಷವು ಜಂಬೂದ್ವೀಪದ ಒಂಬತ್ತು ಭಾಗಗಳಲ್ಲಿ ಒಂದು. ಆಗ ಭರತ ವರ್ಷ ಎಂಬ ಹೆಸರಿರಲಿಲ್ಲ. "ಅಜನಾಭ" ಎಂದಾಗಿತ್ತು- ಭರತ ಖಂಡದ ಮೊದಲನೆಯ ಹೆಸರು. ಅದು ಹೇಗಾಯಿತೆಂದರೆ-ಜಂಬೂ ದ್ವೀಪದ ಪ್ರಥಮ ಚಕ್ರವರ್ತಿಯಾದ ಆಗ್ನೀಧ್ರ ರಾಜನಿಗೆ ಪೂರ್ವಚಿತ್ತಿಯೆಂಬ ತನ್ನ ಮಹಿಷಿಯಲ್ಲಿ ನಾಭಿ, ಕಿಂಪುರುಷ ಮೊದಲಾದ 9 ಮಂದಿ ಪುತ್ರರು ಜನಿಸಿದ್ದರು. ಆಗ್ನೀಧ್ರನು ಜಂಬೂದ್ವೀಪವನ್ನು ಏಕಚ್ಛತ್ರಾಧಿಪತಿಯಾಗಿ ಆಳುತ್ತಾ, ಕೊನೆಗೆ ಒಂಬತ್ತು ಖಂಡಗಳನ್ನಾಗಿ ವಿಭಾಗಿಸಿ, ತನ್ನ ಮಕ್ಕಳನ್ನು ಆಯಾ ಖಂಡಗಳ ಅಧಿಪತಿಯನ್ನಾಗಿ ನೇಮಿಸಿದನು. ಕೊನೆಗೆ ನಾಭಿ, ಕಿಂಪುರುಷ ಇಲಾವೃತಾದಿ ರಾಜರ ಹೆಸರಿಂದಲೇ ಜಂಬೂದ್ವೀಪದ 9 ಖಂಡಗಳೂ ಹೆಸರಿಸಲ್ಪಟ್ಟು, ಅವು ಅಂದಿನಿಂದ ಸ್ವತಂತ್ರ ರಾಷ್ಟ್ರಗಳಾದುವು. ಭರತ ಖಂಡವು ಈ ಒಂಬತ್ತು ಖಂಡಗಳಲ್ಲಿ ಪ್ರಾಮುಖ್ಯವಾದ ಖಂಡವಾದ್ದರಿಂದ ಒಂಬತ್ತು ರಾಜರಲ್ಲಿ ಜ್ಯೇಷ್ಠನಾದ ನಾಭಿರಾಜನು ಮೊದಲಾಗಿ ಆಳಿದನು. ತನ್ನ ಹೆಸರಿನ ಅಂಕಿತದಿಂದ ಈ ರಾಷ್ಟ್ರವು ಅಂದಿನಿಂದ 'ಅಜನಾಭ' ಖಂಡವೆಂದು ಸರ್ವ ಪ್ರಥಮವಾಗಿ ಪ್ರಸಿದ್ಧಿಹೊಂದಿತು

ಋಷಭ ದೇವ

ನಾಭಿ ರಾಜನ ತರುವಾಯ ಅತನ ಕುಮಾರನಾದ ಋಷಭನು ಪಟ್ಟಕ್ಕೆ ಬಂದನು. ಅತನು ಮಹಾತತ್ವಜ್ಞನೂ ಶಕ್ತನೂ ಆಗಿದ್ದುದರಿಂದ ಅತನನ್ನು ಭಗವದವತಾರವೆಂದೇ ಪ್ರಜೆಗಳು ನಂಬಿದ್ದರು. ಆ ಚಕ್ರವರ್ತಿಯ ಆಳ್ವಿಕೆಯು ಉತ್ತಮವಾಗಿದ್ದು, ನಮ್ಮ ಪ್ರಾಚೀನ 'ಅಜನಾಭ' ರಾಷ್ಟ್ರವು ಸಂಪತ್ಸಮೃದ್ಧವಾಗಿತ್ತು. ತ್ರಿವಿಷ್ಟಪೇಶ್ವರನಾದ ದೇವೇಂದ್ರ ಅಂದು ಈ ರಾಷ್ಟ್ರವನ್ನು ಆಕ್ರಮಿಸತೊಡಗಿದ್ದರೂ ಋಷಭ ಚಕ್ರವರ್ತಿಯ ಮುಂದೆ ಅದು ಸಾಗಲಿಲ್ಲ. ಪರಾಜಿತನಾದ ದೇವೇಂದ್ರನು ಋಷಭ ಚಕ್ರವರ್ತಿಯ ಮೈತ್ರಿಯನ್ನು ಬೆಳೆಸಿ, ತನ್ನ ಮಗಳಾದ ಜಯಂತೀ ದೇವಿಯನ್ನು ಪ್ರಾಣಿಗ್ರಹಣ ಮಾಡಿಸಿದನು. ಪ್ರಸಿದ್ಧ ಭರತ ಚಕ್ರವರ್ತಿಯೇ ಇವರ ಮಕ್ಕಳಲ್ಲಿ ಜ್ಯೇಷ್ಠನು.

ಭಾರತ ವರ್ಷ

ಋಷಭ ರಾಜನು ಈ ಅಜನಾಭದ ಅಧಿಕಾರವನ್ನು ಭರತನಿಗೊಪ್ಪಿಸಿ, ಮಕ್ಕಳಿಗೆಲ್ಲರಿಗೂ ತತ್ವೋಪದೇಶವನ್ನು ಮಾಡಿ, ತಾನು ಸರ್ವಸಂಗವನ್ನೂ ತ್ಯಜಿಸಿ ಅವಧೂತನಾದನು. ಇತ್ತ ಭರತ ಚಕ್ರವರ್ತಿಯು 'ಅಜನಾಭ' ದೇಶವನ್ನು ಆಳತೊಡಗಿದಂದಿನಿಂದ ರಾಷ್ಟ್ರದಲ್ಲಿ ಅನೇಕ ಬದಲಾವಣೆಗಳಾದವು. ರಾಷ್ಟ್ರ ಭರಣ ಸೌಕರ್ಯಕ್ಕಾಗಿ 9 ಪ್ರಾಂತಗಳನ್ನಾಗಿ ವಿಂಗಡಿಸಿದನು. ಇಲಾವರ್ತ, ಬ್ರಹ್ಮಾವರ್ತ, ಆರ್ಯಾವರ್ತ ಮೊದಲಾದ 8 ಮಂದಿ ಸೋದರರಿಗೆ ಆ ಪ್ರಾಂತಗಳ ಆಧಿಪತ್ಯವನ್ನೂ ಕೊಟ್ಟನು. ಇತರ ಅನೇಕ ಸೋದರರು ಈ 9 ಮಂದಿಯ ಅಧೀನದಲ್ಲಿ ಸಹಾಯಕರಾದರು. ಈ ಅಚ್ಚುಕಟ್ಟಾದ ವ್ಯವಸ್ಥೆಯಿಂದ ರಾಷ್ಟ್ರದ ಸಂಪತ್ತು ಹೆಚ್ಚಿತು. ವೈದಿಕ ವಿದ್ಯೆಯು ಬೆಳಗಿತು. ರಾಜನ ನಾಮದಿಂದಲೇ ಈ ಅಜನಾಭ ದೇಶವು ಭಾರತ ವರ್ಷವೆಂದು ಕರೆಯಲ್ಪಟ್ಟಿತು.

ಭರತ ವಂಶ

ಭರತ ಚಕ್ರವರ್ತಿಯ ಧರ್ಮಪತ್ನಿಯ ಹೆಸರು ಪಂಚಜನೀ ದೇವಿಯೆಂದು. ಅವರಿಗೆ ಸುಮತಿ ಮೊದಲಾದ ಐವರು ಮಕ್ಕಳಿದ್ದರು. ಭರತನ ತರುವಾಯ 24 ಮಂದಿ ರಾಜರು ಪುತ್ರ ಕ್ರಮದಿಂದ ಈ ಭರತ ಖಂಡವನ್ನು ಆಳಿದರು. ಅನಂತರ ರಾಜವಂಶವು ಬದಲಿಸಿತು. ಆದರೂ ಆ ಮಹಾತ್ಮನಾದ ಭರತ ಚಕ್ರವರ್ತಿಯಿಂದ ಬಂದ ಹೆಸರು ಇಂದಿಗೂ ಬೆಳಗುತ್ತಿದೆ. ಅತನು ರಾಜ್ಯಧಕ್ಷನು ಮಾತ್ರವಲ್ಲದೆ ತಂದೆಯಾದ ಋಷಭದೇವನಿಗಿಂತಲೂ ಮಿಗಿಲಾದ ಜ್ಞಾನಿಯಾಗಿದ್ದನು.

ಜಡಭರತ

ರಾಜ್ಯಸೂತ್ರವನ್ನು ಪುತ್ರನಾದ ಸುಮತಿ ರಾಜನಿಗೊಪ್ಪಿಸಿ ಭರತನು ಸನ್ಯಾಸವನ್ನು ಕೈಕೊಂಡನು. ಅತನು ಅರಮನೆಯಿಂದ ಹೊರಟು ನಡೆದುಬಿಟ್ಟನು. ಸಾಲಗ್ರಾಮ ಕ್ಷೇತ್ರದ ಚಕ್ರನದೀ ತೀರದಲ್ಲಿ ತಪೋನಿರತನಾದನು. ತಪೋಧನನಾದ ಈ ಭರತನ ಕುರಿತು ಒಂದು ಕತೆ ಹೀಗಿದೆ. ಆಗ ತಾನೇ ಜನಿಸಿದ ಜಿಂಕೆಮರಿಯು ಚಕ್ರನದಿಯಲ್ಲಿ ತೇಲಿ ಹೋಗುವುದನ್ನು ಕಂಡು ಪ್ರಾಣದಯಾಪರನಾದ ಭರತನು ಅದನ್ನು ಹಿಡಿದುತಂದು, ಆಶ್ರಮದಲ್ಲಿ ಉಪಚರಿಸಿ ಸಾಕುತ್ತಾ ಅದರ ಲಾಲನೆ ಪಾಲನೆಯಲ್ಲೇ ಕಾಲಕಳೆಯತೊಡಗಿದನು. ಒಮ್ಮೆ ಆ ಜಿಂಕೆಮರಿಯು ತಪ್ಪಿಸಿಬಿಟ್ಟಿತು. ಭರತನು ಅದರಿಂದ ಮನನೊಂದು ತನ್ನ ತಪಸ್ಸಿನ ಕಾರ್ಯವನ್ನು ತೊರೆದು ಹುಡುಕಿಯೂ ಸಿಗದೆ-ಅದೇ ಶೋಕದಿಂದ ಕಾಲವಾದನು. ಅಂತ್ಯಕಾಲದ ಭಾವನಾಬಲದಿಂದ ಅ ನು ಜಿಂಕೆಯಾಗಿ ಜನ್ಮ ಪಡೆಯಬೇಕಾಯಿತಂತೆ. ಹಿಂದಿನ ಜನ್ಮದ ಸಂಸ್ಕಾರ ಬಲದಿಂದ ತಾನು ತಪಸ್ವಿಯಾಗಿದ್ದೇನೆಂಬ ಅರಿವು ಆ ಜಿಂಕೆಯಲ್ಲಿ ಮಿಂಚಿತು. ತಪೋವಿಚಾರದಿಂದಲೇ ಅದು ವ್ಯಥೆಪಟ್ಟು ಒಂದು ದಿನ ಚಕ್ರನದಿಯಲ್ಲಿ ಬಿದ್ದು, ಪುನಃ ಏಳಲೇ ಇಲ್ಲ. ಕೊನೆಗೆ ಬ್ರಾಹ್ಮಣನಾಗಿ ಜನಿಸಿದನು, ಅವನೇ ಜಡಭರತನೆಂದು ಪ್ರಸಿದ್ಧನಾದ ಯೋಗೀಶ್ವರನು. ....

ಜನ್ಮಾನುಜನ್ಮದಿಂದ ಕತೆ ಹೀಗೆ ಮುಂದರಿದರೂ ಮೊದಲನೆಯ ಮನ್ವಂತರದ ಐದನೆಯ ಚಕ್ರವರ್ತಿ ಭರತನೇ ಸ್ವತಂತ್ರ ಭರತಖಂಡದ ಮೂರನೆಯ ರಾಜನೆಂದೂ, ಅತನು ಆರ್ಯಾವರ್ತ ಮೊದಲಾದ ತನ್ನ ಸೋದರರ ಹೆಸರಿನಿಂದ ರಾಷ್ಟ್ರವನ್ನು ವಿಭಾಗಿಸಿದರೂ ಏಕಚ್ಛತ್ರಾಧಿಪತಿಯಾಗಿ ಆಳಿದನೆಂದೂ, ಭರತಖಂಡವೆಂಬ ಹೆಸರಿಗೆ ಮುಂಚಿತ 'ಅಜನಾಭ' ಎಂಬ ಹೆಸರೂ ಈ ರಾಷ್ಟ್ರಕ್ಕೆ ಇತ್ತೆಂದೂ ತಿಳಿಯುತ್ತದೆ. ಅವನಷ್ಟು ಪ್ರಸಿದ್ಧನಾದ ಉತ್ತಮ ಚಕ್ರವರ್ತಿಯು ಆ ಮನ್ವಂತರದಲ್ಲಿ ಇರದಿದ್ದುದರಿಂದಲೇ ಅತನ ಹೆಸರು ಇಂದಿಗೂ-ಉಳಿದಿದೆ.

(ಮೂಲ-ಶ್ರೀ ಮದ್ಭಾಗವತ, ಸ್ಕಂಧ 5)

THE PANGAL NAYAK BANK LIMITED.

Head Office] (Incorporated in 1920.) [Udipi: S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ. ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಪುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ವಾರದ ಭವಿಷ್ಯ

ತಾರೀಕು 19–7–51 ರಿಂದ — ತಾರೀಕು 25–7–51 ರವರೆಗೆ

ಮೇಷ—ಪರಾಪೇಕ್ಷೆಯಿಲ್ಲದೆ ಸ್ವಯಂ ಯಾವ ಕಾರ್ಯವನ್ನೂ ಸಾಧಿಸುವ ಶಕ್ತಿ ನಿಮ್ಮಲ್ಲಿರುವದು. ನಿಮ್ಮ ಯತ್ನಕ್ಕೆ ತಕ್ಕುದಾದ ಫಲವೂ ಲಭಿಸುವದು. ನೀಚ ಜನರಿಂದಾಗಿ ಕೆಟ್ಟನ ಫಲವನ್ನು ಪಡೆವಿರಿ. ಆದರೂ ನಿಮ್ಮ ತನುಮನಗಳಿಗೆ ನೆಮ್ಮದಿಯಿಲ್ಲವು ಪ್ರವಾಸದಲ್ಲಿ ನಷ್ಟಕಷ್ಟ ಪರಂಪರೆಗಳು ಪ್ರಾಪ್ತವಾದಾವು. ತಾ. 23-24ನ್ನು ಬಿಟ್ಟು ಮಿಕ್ಕ ದಿನಗಳು ಇಷ್ಟಪ್ರದಗಳಾಗಿವೆ.

ವೃಷಭ—ಧನಗತನಾದ ಮಂಗಳನೂ ಪಂಚಮಸ್ಥಾನವನ್ನು ಹೊಂದಿದ ಶನೈಶ್ಚರನೂ ನಿಮ್ಮನ್ನು ವ್ಯರ್ಥ ಕಲಹ, ನಷ್ಟ, ಅಧಿಕಾರಿಗಳ ಪೀಡೆ, ದೇಹಾಲಸ್ಯಾದಿ ಅನಿಷ್ಟಗಳಿಗೆ ಗುರಿಮಾಡಲಿದ್ದರೂ ಇತರ ಎಲ್ಲಾ ಗ್ರಹರ ಬೆಂಬಲವು ನಿಮಗಿರುವುದರಿಂದ ನೀವೀ ವಿಚಾರದಲ್ಲಿ ಚೆದರಬೇಕಾಗಿಲ್ಲವು ಕ್ರಮಜೀವಿಗಳನ್ನು ಹೊರತಾಗಿ ಮಿಕ್ಕ ಜನವೃಂದಕ್ಕೆ ಈ ವಾರವು ಉತ್ತಮವಾಗಿರುವದು. ತಾ 21-22-23-24 ಈ ದಿನಗಳಲ್ಲಿ ಇಷ್ಟಪ್ರಾಪ್ತಿಯಿಂದಾಗಿ ತುಷ್ಟರಾಗುವಿರಿ.

ಮಿಥುನ—ಕಾಲ ಕಳೆದಂತೆ ಪರಿಸ್ಥಿತಿಯೂ ಕೂಡ ಕೆಡುತ್ತಾ ಬರುವದು. ನಿಮಗೆ ವಾಹನಾದಿಗಳಿಂದ ಪ್ರಯಾಣಗಳಲ್ಲಾಗಲೀ ವೃಕ್ಷಾರೋಹಣಾದಿಗಳಲ್ಲಾಗಲೀ ಆಕಸ್ಮಿಕ ಅಪಘಾತ ಉಂಟಾದೀತು, ಮತ್ತು ಮಿತ್ರಬಂಧುಗಳಲ್ಲಿ ಅವಿಶ್ವಾಸವುಟ್ಟಿ ಪರಸ್ಪರ ಮನಸ್ತಾಪಕ್ಕೆ ಎಡೆಯುಂಟಾಗಬಹುದು. ಆಯಕ್ಕಿಂತ ವ್ಯಯವು ದ್ವಿಗುಣವಾಗಿ ಪರಿಣಮಿಸೀತು.

ಕರ್ಕಟ— ಸದ್ಯ ನಿಮ್ಮ ದುರ್ದೈವವು ದೂರವಾಯಿತೆನ್ನಬಹುದು. ನಿಮ್ಮ ಬಯಕೆಯಂತೆ ಕಾರ್ಯಗಳು ನೆರವೇರುವುದು. ಕೈಯಲ್ಲಿ ನಾಲ್ಕು ಕಾಸೂ ಉಳಿದೀತು. ಮಿತ್ರರ ಬೆಂಬಲ ಸೇವಕ ವರ್ಗದವರ ಸಹಕಾರ ಬಂಧು ಜನರ ನೆರವುಗಳಿಂದ ಕೂಡಿದ ನಿಮಗೆ ಸರ್ವತ್ರ ಮಾನಾದರಗಳು ಲಭಿಸುವವು. ತಾ. 21-22-23-24ರಲ್ಲಿ ಸ್ತ್ರೀಜನರ ಅಗ್ರಹಕ್ಕೂ ಕಿಂಚಿದ್ದೇಹಾಲಸ್ಯಕ್ಕೂ ಗುರಿಯಾಗುವ ಸಂಭವವಿದೆ.

ಸಿಂಹ—ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲ ದೊರೆಯುವದಾದರೂ ಆಕಸ್ಮಿಕ ಪ್ರಾಪ್ತವಾಗತಕ್ಕ ಖರ್ಚು ವೆಚ್ಚಗಳು ಹಣದ ಅಡಚಣೆಯಲ್ಲಿ ನಿಮ್ಮನ್ನು ಸಿಲುಕಿಸುವವು. ಕೆಲವೊಮ್ಮೆ ವ್ಯರ್ಥ ನಿಷ್ಠುರಕ್ಕೆ ಗುರಿಯಾಗುವಿರಿ. ಗುರುಹಿರಿಯರ ಅಗ್ರಹಕ್ಕೆ ಪಾತ್ರರಾದ ನಿಮಗೆ ಅಧಿಕಾರಿಗಳೂ ಕೂಡಾ ಬೆನ್ನಾಗಿ ಪೀಡಿಸುವವು. ವ್ಯಾಪಾರದಲ್ಲಿ ಹೆಚ್ಚಿನ ಫಲ ಪ್ರಾಪ್ತಿಯಿದೆ. ವಾರಾದಿಯ 4 ದಿನಗಳು ಸುಖ ಲಾಭಕಾರಿಗಳಿರುವವು.

ಕನ್ಯಾ—ಧನ ಸುಖ ಭಾಗ್ಯಪತಿಗಳ ಅನುಗ್ರಹವು ನಿಮಗೆ ಉತ್ತಮವಿರುವುದರಿಂದ ಈ ವಾರದಲ್ಲಿ ನಿಮ್ಮ ಆದಾಯವು ಉತ್ತಮ ಸ್ಥಿತಿಯಲ್ಲಿದ್ದು ಅನೇಕ ಶತ್ರುಗಳೂ ಕೂಡ ದೂರೀಕೃತರಾಗುವವು. ಸಮಾಜದಲ್ಲಿ ಗೌರವವನ್ನು ಪಡೆವಿರಿ. ರಾಜಕೀಯ ಕ್ಷೇತ್ರದಲ್ಲೂ ವಿಜಯ ಲಾಭವಿದೆ. ತಾ 19.20-25ರಲ್ಲಿ ಆಹಾರ ದೋಷದಿಂದ ದೇಹಾಲಸ್ಯವೂ ಆಪ್ತೇಷ್ಟರ ವಿರಹವೂ ಇವುಗಳಿಂದ ಚಿಂತೆಗೀಡಾಗಲಿರುವಿರಿ.

ತುಲಾ—ಶತ್ರು ವರ್ಗದವರ ಪೀಡೆಯು ಹೆಚ್ಚಲಿದೆ. ಮಾತ್ರವಲ್ಲ ಮೇಲಿಂದ ಮೇಲೆ ಬರತಕ್ಕ ಶೋಕ ಪರಂಪರೆಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು. ದೇಹದಲ್ಲಿ ಕ್ಷೀಣತೆ ನಿಶ್ಶಕ್ತಿಗಳುಂಟಾಗುವುದರಿಂದ ನಿಮ್ಮ ಧೈರ್ಯ ಸಾಹಸಗಳು ಮಾಯವಾಗುವವು. ಆದರೂ ಖರ್ಚಿಗೆ ತಕ್ಕುದಾದ ಮಿಡಿಮೆಯಿರೋಣದರಿಂದ ಕಾಲಯಾಪನೆಯು ಕಷ್ಟವಾಗಲಾರದು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮ.

ವೃಶ್ಚಿಕ—ಸುರ್ಗುರುಗಳ ವಿಶೇಷ ದೃಷ್ಟಿಯು ನಿಮ್ಮ ಮೇಲಿರುವುದರಿಂದ ಪ್ರಬಲರಾದ ಶತ್ರುಗಳು ನಿಮ್ಮ ಮೇಲೆ ಪ್ರತೀಕಾರಾಸಕ್ತರಾದರೂ ಸುಬಲದಿಂದ ನೀವು ಪಾರಾಗುವಿರಿ. ಗೃಹ ಸುಖಕ್ಕಾವ ಕೊರತೆಯೂ ಉಂಟಾಗದು. ವ್ಯಾಪಾರೀ ವರ್ಗದವರಿಗೆ ಆಕಸ್ಮಿಕ ನಷ್ಟವಾಗಬಹುದು. ದೈಹಿಕ ಮಾನಸಿಕ ಶ್ರಮ ಜೀವಿಗಳಿಗೆ ಕಾಲವು ಅನುಕೂಲವೇ ಆಗಿರುವುದು. ತಾ 19-20 25 ಗೃಹಸುಖ ವಿಜಯ ಲಾಭಗಳಿವೆ

ಧನು—ಯಾವ ವಿಭಾಗದಲ್ಲಿ ನೋಡಿದರೂ ನಿಮಗೆ ಮುಂದಾಗಿ ನಿರಾಶೆಯೇ ಕಾಣಿಸುವದು. ಒಡಹುಟ್ಟಿದ ಸೋದರರಾಗಲಿ, ಕೈಹಿಡಿದ ಅರ್ಧಾಂಗಿಯಾಗಲಿ ಯಾ ಇತರ ಬಂಧು ವರ್ಗದವರಾಗಲಿ ನಿಮ್ಮ ಮೇಲೆ ಎರಡೆಣಿಸುವರಲ್ಲದೆ ವಿಪರೀತವಾಗಿ ವರ್ತಿಸುವರು. ಆರ್ಥಿಕ ತಗಾದೆಗೆ ಸಿಲುಕಿದ ನಿಮಗೆ ಮರ್ಯಾದೆಯನ್ನು ಕಾಪಾಡಿಕೊಳ್ಳುವದೇ ಕಷ್ಟವೆನ್ನಿಸೀತು. ತಾ 21.22ನ್ನು ಬಿಟ್ಟು ಉಳಿದ ದಿನಗಳು ಅನಿಷ್ಟಕಾರಿಗಳೇ–

ಮಕರ—ಸುಖ ಲಾಭಪತಿಯಾದ ಮಂಗಳನು ಅನುಕೂಲನಾಗಿದ್ದು ಪೂರ್ಣದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವ ಕಾರಣ ಎಂತಹ ವಿಪತ್ತುಗಳನ್ನೂ ಕೂಡ ಎದುರಿಸಿ ವಿಜಯಿಗಳಾಗುವಿರಿ. ಭೂನಿಮಿತ್ತವಾಗಿ ಪ್ರಾಪ್ತವಾದ ಕಲಹಗಳು ಅನುಕೂಲವಾಗಿ ಕೊನೆಗೊಂಡಾವು. ಯತ್ನಕ್ಕಿಂತ ಅಧಿಕವಾಗಿ ಫಲ ಪ್ರಾಪ್ತಿಯಿದ್ದ ಕಾರಣ ತಾ 19. 20. 23. 24 ಈ ದಿನಗಳನ್ನು ಸುಖದಿಂದ ಕಳೆವಿರಿ.

ಕುಂಭ—ಆಪ್ತೇಷ್ಟ ವರ್ಗದವರೇ ನಿಮ್ಮನ್ನು ವಂಚಿಸಲಿರುವರು ಗೃಹದಲ್ಲಿನ ಅವ್ಯವಸ್ಥೆಯಿಂದಾಗಿ ನಿತ್ಯಕಲಹ ಕಚ್ಚಾಟಗಳುದ್ಭವಿಸಲಿದೆ. ಸ್ತ್ರೀ ಸಂಬಂಧವಾದ ಕಲಹ ಅನಿಷ್ಟವಿರಹಗಳಿಂದ ಪೀಡಿತರಾದ ನಿಮಗೆ ಸ್ವಪ್ನದಲ್ಲೂ ನೆಮ್ಮದಿ ಲಭಿಸಲಾರದು. ಆದರೆ ನಿಮ್ಮ ಆರ್ಥಿಕಭಾಗವು ಉತ್ತಮವಿರುವುದರಿಂದ ಅನಿಷ್ಟಕರಗಳಿಂದಲೂ ಪಾರಾಗುವಿರಿ. ತಾ. 21. 22 25 ತುಂಬ ಅನುಕೂಲ.

ಮೀನ- ನಿರಾಶೆಯ ಜಲಧಿಯಲ್ಲಿ ಮುಳುಗೇಳುತ್ತಿದ್ದ ನಿಮಗೆ ಈ ವಾರದಲ್ಲಿ ಕೊಂಚ ಆಲಂಬನವು ದೊರೆತಂತಾಗುವದು. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಲಭಿಸುವದು. ಬಂಧುಜನರ ಕೃಪೆಗೆ ಪಾತ್ರರಾದ ನಿಮಗೆ ಸ್ಥಾನಮಾನಗಳ ಉದ್ಯೋಗದಲ್ಲಿ ಉನ್ನತ ಸ್ಥಾನವೂ ಲಭಿಸೀತು. ಆದರೆ ಕೃತ್ರಿಮ ಮಿತ್ರರ ಮಾಯಾಜಾಲಕ್ಕೆ ಸಿಲುಕಿ ಅನರ್ಥಕ್ಕೆ ಗುರಿಯಾದೀರಿ, ಜಾಗ್ರತೆ ತಾ 19 20. 23. 24 ತುಂಬ ಅನುಕೂಲ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧ

REGD

ಹಳದಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

"ಗೋಪಾಲ ಭೇಷಜಾಶ್ರಮು" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಬಹಳವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಧಿಕಾರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಜಾಸ್ತಿ ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— [illegible] ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್ ಎಲ್ [illegible] ಕೆಮಿಸ್ಟ, [illegible]

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No. M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ

26—7—1951

Founder: Sri A. B Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ.
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3- 0-0
ಬಿಡಿಪ್ರತಿ ,, 0- 2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧ | NAVAYUGA WEEKLY | Post Box No. 22 | UDIPI. | Vol 31
ವಾರ ೪೬ | | | | No. 46

ಭಾರತ ಪಾಕಿಸ್ತಾನಗಳೊಳಗೆ ವಾಗ್ಯುದ್ಧ!

ಶ್ರೀ ಜವಾಹರಲಾಲ್ ನೆಹ್ರೂ:

"ಪಾಕಿಸ್ತಾನದ ಸುರಕ್ಷಿತತೆ ಹಾಗೂ ಅಂತರರಾಷ್ಟ್ರೀಯ ಶಾಂತಿಗೆ ಗಂಡಾಂತರವನ್ನು ತರಬಲ್ಲ ಕೃತಿಯನ್ನು ಭಾರತವು ಮಾಡುತ್ತಿದೆಯೆಂಬ ನಿಮ್ಮ ಆರೋಪವು ನಿರಾಧಾರವಾದುದು. ಶಾಂತಿಯನ್ನು ಕಾಪಾಡುವದೂ ಯುದ್ಧ ನಿಷೇಧಿಸುವದೂ ನಮ್ಮ ಮುಖ್ಯ ಧ್ಯೇಯವಾಗಿದೆ. ಈ ಘನವಾದ ಉದ್ದೇಶವನ್ನವಲಂಬಿಸಿಕೊಂಡೇ ಸೈನ್ಯದ ಸಂಖ್ಯೆಯಲ್ಲಿ ಕಡಿತವನ್ನುಂಟುಮಾಡಿದೆವು. ಇದರಿಂದಲಾದರೂ ಪಾಕಿಸ್ತಾನದಲ್ಲಿ ಪರಿಣಾಮಕಾರಿಯಾದ ಬದಲಾವಣೆಯಾದೀತೆಂದು ನಾವು ಭಾವಿಸಿದ್ದೆವು. ಆದರೆ ಇಂದಿನ ಪರಿಸ್ಥಿತಿಯನ್ನು ಲಕ್ಷಿಸುವಾಗ—ಪಾಕಿಸ್ತಾನ ವಿಪುಲವಾದ ಸೈನಿಕರ ಸಂಖ್ಯೆಯನ್ನು ಬೆಳೆಸುವದನ್ನು ನೋಡುವಾಗ— ವಿರುದ್ಧವಾದುದನ್ನೇ ಅದು ಕೈಗೊಂಡಿತೆಂದು ಅರ್ಥವಾಗುತ್ತದೆ. ಜೇಹಾದ ಜಾತೀಯ ಸಂಸ್ಥೆಯೂ, ಪಾಕಿಸ್ತಾನ ಪತ್ರಿಕೆಗಳೂ ಮತ್ತು 'ಹೊಣೆಗಾರ" ಪಾಕಿಸ್ತಾನ ಅಧಿಕಾರಿಗಳೂ ಭಾರತದ ವಿರುದ್ಧ ಯುದ್ಧ ಪ್ರಚಾರ ಕಾರ್ಯ ನಡೆಸುತ್ತ ಬಂದಿದ್ದಾರೆ. ಈ ಗಂಭೀರ ಪರಿಸ್ಥಿತಿಯನ್ನು ತಮ್ಮ ಸರಕಾರದ ಗಮನಕ್ಕೆ ತಂದಿದ್ದರೂ ತಕ್ಕ ಪರಿಹಾರ ಮಾರ್ಗ ಕೈಗೊಳ್ಳಬಾಗಲಿಲ್ಲ. ಕಳೆದ ಆರು ವಾರಗಳಿಂದೀಚೆ ಕಾಶ್ಮೀರದಲ್ಲಿ ಅವ್ಯಾಹತವಾಗಿ ನಡೆದ ಆಕ್ರಮಣ ಕಾರ್ಯವನ್ನು ಸಂ. ರಾ. ಸಂಘಕ್ಕೆ ತಿಳಿಸಲಾಗಿದೆ. ಇದು ಗಂಭೀರ ಸ್ವರೂಪದ ಪ್ರಕರಣವೆಂದು ನನ್ನ ಸರಕಾರ ತಿಳಿದಿದೆ. ಯುದ್ಧಪ್ರೇರಕ ಪ್ರಚಾರ ಹಾಗೂ ಯುದ್ಧಸನ್ನಾಹ ಪಾಕಿಸ್ತಾನದಲ್ಲಿ ಅವ್ಯಾಹತವಾಗಿ ಸಾಗುತ್ತಿರುವದನ್ನು ಲಕ್ಷಿಸಿಯೂ ಭಾರತ ಸುಮ್ಮನಿರಲಾರದು. ಅಂತಲೆ ನಮ್ಮ ರಕ್ಷಣೆಯ ಬಗ್ಗೆ ನಾವು ಜಾಗ್ರತೆಯನ್ನು ವಹಿಸಿದ್ದೇವೆ. ನೀವು ತಂತಿಯಲ್ಲಿ ನಮೂದಿಸಿರುವ ಹಲವು ವಿಚಾರಗಳು ತೀರ ಅಸತ್ಯವಾಗಿವೆ. ಆದರೆ ಸಂರಕ್ಷಣೆಯ ಮುಂಜಾಗ್ರತೆಗಾಗಿ ನಮ್ಮ ಸೈನ್ಯಗಳು ಗಡಿಯಲ್ಲಿ ತಮ್ಮ ಚಲನವಲನಗಳನ್ನು ಸಾಗಿಸುತ್ತಿರುವದು ನಿಜ. ನಾನು ಈ ಹಿಂದೆ 'ಆಕ್ರಮಣವು ನಮ್ಮ ಉದ್ದೇಶವಾಗುವುದಿಲ್ಲ"ವೆಂದು ಹೇಳಿದ್ದನ್ನೇ ತಿರುಗಿ ಸ್ಪಷ್ಟೀಕರಿಸುತ್ತೇನೆ. ಆದರೆ ನಮ್ಮ ಮೇಲೆ ಇತರರು ಎರಗುವದನ್ನು ನಾವು ಎದುರಿಸಲು ಸಿದ್ಧರೇ. ಉಭಯ ರಾಷ್ಟ್ರಗಳೊಳಗೆ ಸ್ನೇಹ ಸಂವರ್ಧನೆಯಾಗಬೇಕೆಂದು ನೀವು ಹೇಳಿದ್ದೀರಿ. ನಮ್ಮ ಉದ್ದೇಶವೂ ತತ್ವವೂ ಅದೇ ಆಗಿರುತ್ತದೆ. ಆದರೆ ಪಾಕಿಸ್ತಾನದ ಜಾತೀಯ ದ್ವೇಷವೂ—ಪ್ರಚಾರ ವೈಖರಿಯೂ ಈ ಘನವಾದ ಉದ್ದೇಶವನ್ನು ಮಣ್ಣು ಮುಕ್ಕಿಸಿಯದೆ. ಕಾಶ್ಮೀರದ ಪ್ರಕರಣದಲ್ಲಿ ಪಾಕಿಸ್ತಾನ ಭಾರತಗಳೊಳಗಿರುವ ಮತಭೇದವನ್ನು ಬಗೆಹರಿಸಲು ನಾವು ಅನುಸರಿಸಿದ ಹಲವಾರು ಯತ್ನಗಳು ಪಾಕಿಸ್ತಾನದ ಹಟದಿಂದಾಗಿ ಸಫಲವಾಗಲಿಲ್ಲ! ಇನ್ನಾದರೂ ಶಾಂತಿಯುತ ಮಾರ್ಗದಿಂದ ಅದನ್ನು ಪರಿಹರಿಸಲು ನಾವು ಬಲವಾದ ಇಚ್ಛೆಯುಳ್ಳವರಾಗಿದ್ದೇವೆ.

ಜಾತೀಯ ಸಂಸ್ಥೆಯಾದ ಜೇಹಾದದ ತ್ವೇಷಕಾರಕ ಭಾರತದ ವಿರುದ್ಧ ಪ್ರಚಾರವನ್ನೂ—ಯುದ್ಧಪ್ರೇರಕ ಸನ್ನಿವೇಶಗಳನ್ನೂ ನಿಲ್ಲಿಸುವದೊಂದೇ ಉತ್ತಮ ಪರಿಹಾರಮಾರ್ಗವೆಂಬುದನ್ನು ಮುಖ್ಯವಾಗಿ ನಾನು ತಿಳಿಸುವವನಿದ್ದೇನೆ. ಉಭಯ ರಾಷ್ಟ್ರಗಳ ಸ್ನೇಹ ಸೌಹಾರ್ದ ಬೆಳೆಯಬೇಕಾದರೆ ಇದರ ಹೊರತು ಅನ್ಯ ಗತಿಯಿಲ್ಲ.

ಲಿಯಾಖತ್ ಅಲಿಖಾನ್:

ಜುಲೈ ತಿಂಗಳ 17ರ ತಮ್ಮ ತಂತಿ ಮುಖೇನ ಬಂದ ಉತ್ತರವನ್ನು ಓದಿ ನಾನು ತುಂಬ ನಿರಾಶೆಗೊಂಡೆ. ಪಾಕಿಸ್ತಾನದ ಗಡಿಯಲ್ಲಿ ಭಾರತ ಸೈನಿಕರನ್ನು ಕಲೆ ಹಾಕಿದ್ದನ್ನು ನೀವು ಒಪ್ಪಿರುವಿರಿ. ಅಂತರ ರಕ್ಷಣೆಯನ್ನು ಹೇತುವಾಗಿಟ್ಟುಕೊಂಡು ನೀವು ಕೊಟ್ಟ ಕಾರಣಗಳೂ ಅಪಾದನೆಗಳೂ ತೀರ ಅಸಂಬದ್ಧವಾಗಿದ್ದು ಪಾಕಿಸ್ತಾನದ ಸುರಕ್ಷಿತತೆಗೂ ಅಂತರರಾಷ್ಟ್ರೀಯ ಶಾಂತತೆಗೂ ಭಂಗತರುವಂತಹದಾಗಿದೆ. ದೇಶದಲ್ಲಿ ಶಾಂತಿಯನ್ನು ಕಾಯ್ದುಕೊಂಡು ಯುದ್ಧವನ್ನು ಸಂಪೂರ್ಣ ನಿಷೇಧಿಸುವದೇ ಭಾರತದ ಉದ್ದೇಶವೆಂದು ನೀವು ಆಗಾಗ ಹೇಳುತ್ತ ಬಂದಿರುವಿರಿ. ಆದರೆ ಜುನಾಗಢದ ಹೈದರಾಬಾದ ಮತ್ತು ಇತ್ತೀಚಿಗೆ ನೇಪಾಳದಲ್ಲಿ ಮಿಲಿಟರಿ ಪ್ರಯೋಗ ಮಾಡಿದ್ದನ್ನು ನೋಡುವಾಗ ನಿಮ್ಮ ಮಾತಿಗೂ ಕೃತಿಗೂ ತಾಳಮೇಳವಿದ್ದಂತೆ ತೋರುವುದಿಲ್ಲ. ಶಸ್ತ್ರಾಸ್ತ್ರಗಳ ಮೂಲಕ ಕಾಶ್ಮೀರ ಜನತೆಯ ಮೂಲಭೂತ ಹಕ್ಕನ್ನು ಅಪಹರಿಸಿ, ಪಾಕಿಸ್ತಾನದ ಗಡಿಯಲ್ಲಿ ಸೈನ್ಯವನ್ನು ಸಂಗ್ರಹಿಸಿ ಪಾಕಿಸ್ತಾನಕ್ಕೆ ಕೇಡುಬಯಸುವ ಧೋರಣೆಯನ್ನು ತಾಳಿದ ನಿಮ್ಮಲ್ಲಿ ಶಾಂತಿಯ ಇಚ್ಛೆ ಇದೆಯೆಂದು ಹೇಗೆ ನಂಬೋಣ? ಸೈನ್ಯದ ಸಂಖ್ಯೆಯನ್ನು ತಗ್ಗಿಸಲಾಗಿದೆಂದ ತಾವು ಹೇಳುತ್ತಿರುವಿರಿ. ವಸ್ತುಸ್ಥಿತಿಯನ್ನು ನೋಡಿದರೆ ಹಾಗಿರುವುದಿಲ್ಲ. ನಿಮ್ಮ ಮುಂಗಡ ಪತ್ರದಲ್ಲಿ (1918-49) 151 ಕೋಟಿ ರೂ. ಇದ್ದು ಈಗ 195 ಕೋಟಿಯಾಗಿರುವದು. ಸೈನಿಕ ಸಂಖ್ಯೆಯನ್ನು ತಗ್ಗಿಸಲಾಗಿದೆಂದು ಹೇಳಿರುವುದು ಕೇವಲ ಘೋಷಣೆಯಲ್ಲಿ ಮಾತ್ರ! ನೌಕಾದಳದ ವಿಮಾನ ದಳದ ಬಲವನ್ನು ಬಹಳವಾಗಿ ಹೆಚ್ಚಿಸಲಾಗಿದೆ. ಭಾರತದ ಗಡಿಯಲ್ಲಿ ಪಾಕಿಸ್ತಾನೀ ಸೈನಿಕರ ಸಂಗ್ರಹ ನಡೆದಿರುತ್ತದೆಂದು ನೀವು ಹೇಳಿರುವ ದೂರು ಸತ್ಯಕ್ಕೆ ದೂರವಾಗಿದೆ. ಇದನ್ನು ಯಾವ ನಿರೀಕ್ಷಕ ಪರಿಶೀಲನೆಗೂ ಒಪ್ಪಿಸಬಹುದು. ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆಗೆ ಅನ್ಯಾಯಿಕ ವಿಧೋರಣೆಯಿಂದ ಪಾಕಿಸ್ತಾನದಲ್ಲಿ ಅಸಮಾಧಾನ ಅಸಂತೃಪ್ತಿ ತಲೆದೋರಿದೆ. ಅದನ್ನೇ ಪಾಕಿಸ್ತಾನದ ಪತ್ರಿಕೆಗಳು ಎತ್ತಿತೋರಿಸಿವೆ. ನೀವು ಅವನ್ನು 'ಭಾರತದ ವಿರುದ್ಧ ಯುದ್ಧಪ್ರಚಾರ'ವೆಂದು ಅಪಾರ್ಥಮಾಡಿಕೊಂಡಿರುವಿರಿ. ಭಾರತದ ಪತ್ರಿಕೆಗಳೂ, ಧುರೀಣರೂ ಪಾಕಿಸ್ತಾನದ ವಿರುದ್ಧ ಯುದ್ಧಪ್ರಚಾರ ಕೈಗೊಂಡದ್ದನ್ನು ನೀವು ಬಚ್ಚಿಟ್ಟಿರಾಗಿದೆ. ಇದರಿಂದ 1950ರ ದಿಲ್ಲಿ ಒಪ್ಪಂದದ ಭಂಗವಾದಂತಾಗಲಿಲ್ಲವೇ?

ಇತ್ತೀಚಿಗೆ ಕಾಶ್ಮೀರದ ಗಡಿಯಲ್ಲಿ ಪಾಕಿಸ್ತಾನೀ ಸೈನಿಕರಿಂದ ಆಕ್ರಮಣ ಕಾರ್ಯ ನಡೆದಿದೆ ಎಂದ ಅಪಾದನೆ ತೋರಿಕೆಯದು ಮಾತ್ರವಲ್ಲದೆ ಸಂ. ರಾ. ಸಂಘ

[ನೇ ಪುಟ ನೋಡಿರಿ]

IN THE SERVICE OF THE COUNTRY

1925 1950



Bank your Savings with

THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ—

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಜಪಾನು ಕಲಿಸುವ ಪಾಠ

ಗೃಹೋದ್ಯಮಗಳ ಉತ್ಥಾನದಿಂದಲೇ ಸಂಪದಭಿವೃದ್ಧಿ.

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಸ್ತ್ರೀ-ಪುರುಷರಲ್ಲಿ ಭೇದಭಾವ ಇಲ್ಲದೆ ಅವರು ಒಟ್ಟಾಗಿ ದುಡಿಯುತ್ತಾರೆ. ಒಂದೊಂದು ಕುಟುಂಬ ಒಂದೊಂದು ಕೆಲಸದಲ್ಲಿ ಪಳಗಿರುತ್ತದೆ. ಒಂದು ಬೈಸಿಕಲ್ಲಿನ ಒಂದೊಂದು ಭಾಗವನ್ನು ಬೇರೆ ಬೇರೆ ಜನರು ತಯಾರಿಸುತ್ತಾರೆ. ಪೆಡಲು ಒಬ್ಬನು ಇನ್ನೊಬ್ಬ, ಕಡ್ಡಿ ಮಗುದೊಬ್ಬ, ಟಾಯರು ನಾಲ್ಕನೆಯವ ಹೀಗೆ- ಬೇರೆಯೇ ತಯಾರಾದ ಸಾಮಾನುಗಳನ್ನು ಜೋಡಿಸಿ; ಕೊನೆಗೆ ಒಂದು ಬೈಸಿಕಲ್ಲು ರೂಪುಗೊಳ್ಳುತ್ತದೆ. ಅವರಲ್ಲಿ ವೈಷಮ್ಯವಿಲ್ಲ; ಪ್ರೀತಿ ಇದೆ-ಸಹಕಾರ ಇದೆ. ದೊಡ್ಡ ಕಾರಖಾನೆಗಳು ಸೈಕಲಿನ ಮಾದರಿ ತಿಳಿಸಿದರೆ, ಇಂಥ ಸಣ್ಣ ಕಾರಖಾನೆಗಳು ಅಚ್ಚುಕಟ್ಟಿನಿಂದ ಕೆಲಸ ಸಾಗಿಸುತ್ತವೆ. ಒಂದೊಂದು ಮನೆಯೂ ಒಂದು ಯಂತ್ರಶಾಲೆ. ಇದೇ ಜಪಾನಿನ ಅಚ್ಚರಿ.

ಈ ಯಂತ್ರಗಳು ಲಕ್ಷಗಟ್ಟಲೆ ರೂಪಾಯಿ ಸುರಿದು ತಂದಂಥವಲ್ಲ. ಅಥವಾ ಸಾವಿರಾರು ರೂಪಾಯಿ ಬಂಡವಲು ಹಾಕಿ ಒಂದು ಕಾರ್ಖಾನೆ ನಡೆಯುವುದಿಲ್ಲ. ಎಲ್ಲವೂ ಹತ್ತಿಪ್ಪತ್ತು ಸಾವಿರ ರೂಪಾಯಿಗಳಿಗೆ ಒಳಗಿನವೇ. ಇಷ್ಟರಲ್ಲೇ ಹೊಲಿಯುವ ಸೂಜಿಯಿಂದ ಹಿಡಿದು ಉಕ್ಕಿನ ಒಡವೆಗಳವರೆಗೆ, ಬರೆಯುವ ಕಾಗದದಿಂದ ತೊಡಗಿ ಆಟದ ಸಾಮಾನುಗಳ ತನಕ ಪ್ರತಿಯೊಂದೂ ಬಗೆಯ ಸಿದ್ಧ ವಸ್ತುಗಳು ಆಗುತ್ತವೆ. ಜನರು ಯಾವುದೊಂದು ವಸ್ತುವನ್ನೂ ಅಪ್ರಯೋಜಕ ಎಂದು ದೂರ ಎಸೆಯುವುದಿಲ್ಲ. ಹರಿದ ಚಿಂದಿ ಬಟ್ಟೆಗಳಿಂದ, ಕಳೆದ ಯುದ್ಧದ ಅಭಾವವನ್ನು ಜಪಾನೀಯರು ಎದುರಿಸಿದರು. ತುಕ್ಕು ಹಿಡಿದ ಕಬ್ಬಿಣದಿಂದ ಚೂರಿ ತಯಾರಿಸಿದರು-ಒಬ್ಬ ವಿಧವೆಯೊಮ್ಮೆ ಭಾರತೀಯ ಪ್ರವಾಸಿಗೆ ನುಡಿದಳಂತೆ-"ನಾನು ತಯಾರಿಸಿದ ಈ ಎಲ್ಲ ಉಕ್ಕಿನ ಒಡವೆಗಳು, ನಿಮ್ಮ ದೇಶದ ಜನರು ಹತ್ತಿ ಮೂಟೆಗೆ ಸುತ್ತಿದ್ದ ಕಬ್ಬಿಣದ ಪಟ್ಟಿಯಿಂದ ಬಂದುವು ಇದನ್ನು ಕೇಳಿದರೆ ಸಾಲದೆ. ಆ ಜನರ ಉದ್ಯಮಶೀಲತೆಗೆ ಬೇರೇನು ಉದಾಹರಣೆ ಬೇಕು?

ನೂರರಲ್ಲಿ ನಾಲ್ವತ್ತು ಜನ ಜಪಾನೀಯರು ಒಬ್ಬೊಬ್ಬರಾಗಿ ಒಂದು ಉದ್ಯಮದಲ್ಲಿ ತೊಡಗಿದ್ದಾರೆ. ನಾಲ್ವೈದು ಮಂದಿ ಒಟ್ಟಾಗಿ ನಡೆಸುವ ಉದ್ಯಮಗಳು ನೂರಕ್ಕೆ ಐವತ್ತೈದು. ಇನ್ನುಳಿದ ಐದು ಶೇಕಡಾ ಜನಸಂಖ್ಯೆ ಐವತ್ತು-ನೂರು ಜನರು ಕೂಡಿ ದುಡಿಯುವ ಸಾಧಾರಣವಾದೊಂದು ಕಾರ್ಖಾನೆಯ ಅಂಗ. ನಮಗೆ ಒಬ್ಬನೇ ಒಂದು ಉದ್ಯಮದಲ್ಲಿ ಮಗ್ನನಾಗುವುದೆಂದರೆ ಹೇಗಪ್ಪಾ-ಎಂದು ಆಶ್ಚರ್ಯವಾದೀತು! ನಮ್ಮ ಪ್ರಕೃತಿಗೆ ಅದೂ ಸಹಜವೇ-ನಾವು ಒಬ್ಬರಾಗಿ ಏನೂ ಕೆಲಸ ಮಾಡಲಾರೆವು. ನಾಲ್ಕು ಮಂದಿ ಕೂಡಿದ ಗಪಾತಿನ ಮಲ್ಲರಾಗಿ ಬಿಡುತ್ತೇವೆ. ಹೊರತು ಕೈಕೆಲಸ ಮುನ್ನಡೆಯುವುದಿಲ್ಲ ಆದರೆ ಜಪಾನಿನ ಜನ ಹೀಗಿಲ್ಲ- ಹೆಂಡತಿ-ಗಂಡ ಕೂಡಿ ಸರಸಸಲ್ಲಾಪದಲ್ಲಿ ತೊಡಗಿದರೂ ಅವರ ಕೈಕೆಲಸ ಬಿಟ್ಟು ಸೋಮಾರಿಯಾಗಿರುವುದಿಲ್ಲ. ಪೈಪೋಟಿದು ದುಡಿಯುವುದರಲ್ಲಿ ಹಾಗೆ ಪರಿಶ್ರಮ ಮಾಡಿ ಉಣ್ಣುವುದರಲ್ಲೇ ಅವರಿಗೆ ಆನಂದ.

ಒಂದು ಪೆನ್ಸಿಲು ತಯಾರಾಗುವಾಗ ಅದು ಹಲವಾರು ಜನರ ಕೈ ತಿರುಗಿ ಬರುತ್ತದೆ. ಮೊದಲಿಗೆ ಅದಕ್ಕೆ ಹದವಾದ ಮರಬೇಕು. ಮುಂದೆ ಅದನ್ನು ಕಡಿದು ನಯಗೊಳಿಸಬೇಕು, ಸೀಸದ ಕಡ್ಡಿ ತುಂಬಬೇಕು. ಆಗ ಪೆನ್ಸಿಲಾಯಿತು, ಹಾಗಾದರೆ ಸಂತೆಗೆ ಅದನ್ನು ಒಂದೊಂದಾಗಿ ಮಾರಲು ತೆಗೆದುಕೊಂಡು ಹೋಗುವುದುಂಟೆ? ಅದನ್ನು ಡಜನುಗಳಲ್ಲಿ ವಿಂಗಡಿಸಿ ಕಟ್ಟಬೇಕು-ಇನ್ನು ಸೂಚೀ ಪತ್ರ ಸುತ್ತಬೇಕು ಇಂಥದನ್ನು ಕಾರಖಾನೆಗಳಲ್ಲಿ ಮಾಡುವುದಿಲ್ಲ. ಒಂದು ಮನೆಯವರು ಈ ಕೆಲಸ ಮಾಡಿ, ಪೆನ್ಸಿಲು ತಯಾರಿಯ ಕಾರಖಾನೆಗೆ ಮರಳಿಸುತ್ತಾರೆ. ಈ ಎಲ್ಲ ಕೆಲಸಕ್ಕೆ ಕಾರಖಾನೆಯ ಮಜೂರರೂ, ಗೃಹೋದ್ಯಮದಲ್ಲಿ ದುಡಿದವರೂ ಸೇರಿ, ೪೦ ಮಂದಿ ಇದ್ದರೆ-ಅವರು ಒಂದು ವರ್ಷದಲ್ಲಿ ಎಂಟೂವರೆ ಕೋಟಿ ಪೆನ್ಸಿಲು ಸಿದ್ಧಗೊಳಿಸಿ, ೪೦ ದೇಶಗಳಿಗೆ ರಫ್ತು ಮಾಡುತ್ತಾರೆ. ಈ ಮಾದರಿಯ ಕೈಚಳಕ, ಉದ್ಯೋಗ ಶೀಲತೆ ನಮ್ಮಲ್ಲಿ ಕಾಣಲು ದೊರೆತೀತೆ?

ಭಾರತವು ಜಪಾನಿಗೆ ಕೊಟ್ಟ ಸಂಪತ್ತುಗಳಲ್ಲಿ ಅಗ್ರಸ್ಥಾನ ಬುದ್ಧದೇವನ ಬೌದ್ಧಧರ್ಮಕ್ಕೆ ಸಂದರೆ, ದ್ವಿತೀಯ ಪಟ್ಟ ಬಿದಿರು ಮೊಳೆಗೆ. ಈ ಬಿದಿರು ಜಪಾನೀಯರಿಗೆ ನೂರೆಂಟು ಕೆಲಸಗಳಿಗೆ ಉಪಯೋಗಕರವೆಂದು ಸಿದ್ಧವಾಗಿದೆ. ನಮ್ಮಲ್ಲಿ ಬಿದಿರು ಬೆಳೆಗಳು ಸಾಕಷ್ಟು ಹುಲುಸಾಗಿದ್ದರೂ ಅವುಗಳ ಉಪಯೋಗ ಕೇವಲ ಕಾಗದ ತಯಾರಿಯಂಥ ಒಂದೆರಡು ಉದ್ಯಮಗಳಲ್ಲಿ ಆಗುತ್ತದೆ. ಆದರೆ ಜಪಾನೀಯರು ನಿಪುಣರು; ಬುದ್ಧಿವಂತರು. ಅವರು ಬಿದಿರಿನಿಂದ ೧,೪೦೦ ವಿವಿಧ ವಸ್ತುಗಳನ್ನು ತಯಾರಿಸುವರು. ಪೊರಕೆ ಮೀನು ಹಿಡಿವ ಗಾಳದಿಂದ ಹಿಡಿದು ಅತ್ಯಂತ ನಾಜೂಕಾದ ಕಿಟಕಿ ಪರದೆಗಳ ತನಕ, ಮೇಜು-ಕುರ್ಚಿಗಳಿಂದ ತೊಡಗಿ ಕಾಗದದ ಚೀಲ ಮುಂತಾದವುಗಳ ವರೆಗೆ ಈ ಉಪಯೋಗ ವಿಸ್ತರಿಸಿದೆ. ಈ ಬಿದಿರು ಗೋಪಾಲನ "ವೇಣು"ವಿಗೆ ಮಾತ್ರ ಹೇಳಿಸಿದುದು ಎಂದು ಭಾರತ ತಿಳಿದಂತಿದೆ. ನಮ್ಮಲ್ಲಿಯ ಬೀಳಲು-ಬೆತ್ತಗಳೂ, ಬಿದಿರೂ ಅಮೂಲ್ಯ ಸಂಪತ್ತು, ಅವುಗಳನ್ನು ಹುಲುಸಾಗಿ ಬೆಳೆಸಲೂ ಉಪಯೋಗಿಸಲೂ ನಾವು ಕಲಿಯಬೇಕು. ಜಪಾನೀಯರು ಒಂದು ನೂರು ಬಗೆಯ ಬಿದಿರು ಜಾತಿಗಳ ಕೃಷಿ ಮಾಡಿದ್ದಾರೆ.

ಜಪಾನಿನಲ್ಲಿ ಬೆಂಕಿ ಪೆಟ್ಟಿಗೆ, ಆಟದ ಸಾಮಾನುಗಳಿಂದ ಹಿಡಿದು ವಿವಿಧ ಯಂತ್ರೋಪಕರಣಗಳು, ಬಟ್ಟೆಬರೆಗಳು, ರುಚಿಯಾದ ಪೆಪ್ಪರ ಮಿಂಟುಗಳು-ಎಲ್ಲವೂ ತಯಾರಾಗುತ್ತವೆ. ಅಲ್ಲಿಯ ಜನ ಇಷ್ಟು ಕೈಗಾರಿಕೆಯಲ್ಲಿ ಮುಂದರಿಯಲು ಅವರಿಗೆ ನೀಡುವ ಶಿಕ್ಷಣ ಪ್ರಣಾಳಿಯ ವೈಶಿಷ್ಟ್ಯವೂ ಕಾರಣವಾಗಿದೆ. ಹದಿನಾಲ್ಕು ವರ್ಷದ ಹುಡುಗ ಸೈಕಲ್ಲು ಗಡಿಯಾರ ಇತ್ಯಾದಿಗಳ ರಚನೆಯನ್ನು ವಿವರಿಸಿ ಹೇಳಬಲ್ಲನು ಶಾಲೆಯಲ್ಲೂ, ಮನೆಯಲ್ಲೂ ಅವನು ಸದಾ ಉದ್ಯೋಗ ಪ್ರಿಯನಾಗಿರಲು ಅನುಕೂಲ ವಾತಾವರಣವಿದೆ, ಬಾಲ್ಯದಿಂದಲೇ ಮಕ್ಕಳಲ್ಲಿ "ಇದು ನನ್ನ ದುಡಿಮೆಯ ಫಲ" ಎಂಬ ಅಭಿಮಾನ ಮೂಡಲು ಅಲ್ಲಿ ಅವಕಾಶವಿದೆ. ಬಿದಿರು-ಚಿಪ್ಪುಗಳಿಂದ ಅಂಗಿಯ ಗುಂಡಿಗಳನ್ನು ತಯಾರಿಸಿ, ಪ್ಲಾಸ್ಟಿಕ್‌ನಿಂದ ತಲೆಬಾಚುವ ಹಣಿಗೆಗಳನ್ನು ತಯಾರಿಸಿ ಲಕ್ಷಗಟ್ಟಲೆ ಡಾಲರು ಸಂಪಾದಿಸುವ ಜಪಾನಿನ ಮುಂದಿನ ಪೀಳಿಗೆಯ ಶಿಕ್ಷಣ ಕಾರ್ಯದಲ್ಲಿ ಮಾದರಿ ಹೆಜ್ಜೆ ಇಟ್ಟಿದೆ.

ಗೃಹೋದ್ಯಮದ ದೈನಿಕ ವ್ಯವಹಾರದ ಕುರಿತು ಸೊಗಸಾದೊಂದು ಹೇಳಿಕೆ ಹೀಗಿದೆ—

"ಸುಂದರ ಪರ್ವತದ ಮೂಲೆಯ ಬಯಲಿನಲ್ಲಿ ಒಂದು ಊರು. ಅಲ್ಲಿ ಭತ್ತದ ಗದ್ದೆಯ ನಡುವೆ ಮರಗಳ ಗುಂಪಿನಲ್ಲಿ ಒಂದು ಮರದ ಮನೆ. ಇಲ್ಲಿ ವಿದ್ಯುತ್ತಿನಿಂದ ಆರು ಚರಖಗಳು ತಿರುಗುತ್ತಿವೆ ಇದೊಂದು ಕಾರಖಾನೆಯೂ ಹೌದು—ಅದರ ಒಡೆಯನು ಸ್ವತಃ ಮನೆಯ ಮಾಲಕ. ಅವನ ನೌಕರ ವರ್ಗದಲ್ಲಿರುವುದು ಅವನ ಪತ್ನಿ, ಮತ್ತೊಬ್ಬ ಹುಡುಗ. ಅವರು ಮುಂಜಾವಿನ ಆರು ಗಂಟೆಯಿಂದ ಕೆಲಸ ತೊಡಗುತ್ತಾರೆ. ಇಡೀ ದಿನದಲ್ಲಿ ಮೂರು ಸಲ ವಿರಾಮ ತೆಗೆದುಕೊಳ್ಳುತ್ತಾರೆ. ಎರಡು ಸಲ ೧೫ ನಿಮಿಷ ಕಾಲ ನಡುವೆ ಒಮ್ಮೆ ಅರ್ಧ ತಾಸು ಸಂಜೆ ಆರೂವರೆ ಗಂಟೆಗೆ ಚರಖ ನಿಲ್ಲಿಸಿದರೆ ರಾತ್ರಿ ಸಮಯ ಪತಿಯು ಮರುದಿನದ ಕೆಲಸ ಕಾರ್ಯಗಳ ಯೋಜನೆಯಲ್ಲಿ ಕಾಗದ ಪತ್ರಗಳ ಬರವಣಿಗೆಯಲ್ಲಿ ಮಗ್ನನಾಗುತ್ತಾನೆ. ಹೆಂಡತಿ ಅಡುಗೆ ಮಾಡುವಳು, ಎಲ್ಲರೂ ಉಂಡು ಮಲಗುವರು ತಿಂಗಳಿಗೆರಡು ದಿನ ರಜೆ ಇಟ್ಟುಕೊಂಡಿದ್ದಾರೆ."

ಕೈಗಾರಿಕೆ ಸುಂದರವಾಗಬೇಕಾದರೆ, ಗಿರಾಕಿಯ ಮನ ಆಕರ್ಷಿಸುವ ಯೋಗ್ಯತೆ ಅದಕ್ಕೆ ಬರಬೇಕಾದರೆ ಅದನ್ನು ಮಾಡುವ ಕೈಯಲ್ಲಿ ಚಾಲಾಕು ಬೇಕು; ಕಲಾತ್ಮಕ ದೃಷ್ಟಿ ವ್ಯಕ್ತಿಯಲ್ಲಿರಬೇಕು. ನಮ್ಮಲ್ಲಿ ವಿದ್ಯೆ, ಈ ವಿಷಯದಲ್ಲಿ ಹೆದರಿಕೆ ಹುಟ್ಟಿಸುತ್ತದೆ. ಪಾಠಕಲಿಸಲು ಯೋಗ್ಯರಾದ ಶಿಕ್ಷಕರಿದ್ದರೂ, ಕಲಿಯುವ ವಿದ್ಯಾರ್ಥಿ ಕೋಣನ ತಮ್ಮನಾದರೆ, ಶಿಕ್ಷಣದಿಂದ ಉಪಯೋಗ ಬಂದೀತೇ? ಶತಮಾನದಿಂದ ಆಲಸಿಗಳಾಗಿ, ಹಿತ್ತಾಳೆ ಕಿವಿಯವರಾಗಿ, ಸ್ವಂತ ಹಿತಾಹಿತಗಳನ್ನು ವಿವೇಚಿಸಿ ತಿಳಿಯುವ ಸಾಮರ್ಥ್ಯ ಕಳೆದುಕೊಂಡ ಜನರನ್ನು ಈ ಕಷ್ಟದ ಸಾಹಸದ ಉದ್ಯಮಕ್ಕೆ ತೊಡಗಿಸುವುದೂ ಒಂದು ಸಮಸ್ಯೆ- ಇನ್ನು ನಮ್ಮ ಸರಕಾರಕ್ಕಂತೂ ದರಿದ್ರ ನಾರಾಯಣನ ಪರಿಪಾಟಿ ತಪ್ಪಿದೆಂದಿಲ್ಲ. ಅದು ತಪ್ಪುವಂತೆಯೂ ಇಲ್ಲ. ಒಂದೆರಡು ವರ್ಷಗಳಲ್ಲಿ ಮಾಗಿಸಬಹುದಾದ ಒಂದು ಯೋಜನೆಯು ಕಂಡು ತಯಾರಾಗೇ ಐದು ವರ್ಷ ತೆಗೆದುಕೊಂಡರೆ ಕೆಲಸ ಪೂರೈಸುವಾಗ ಹದಿನೈದು ವರ್ಷವಾದರೂ ಕಳೆಯ ಬೇಕು—ಇಲ್ಲವಾದರೆ ಆ ಯೋಜನೆಯು ಕರಡು ಹರಿದಿಗೆ ದ್ರೋಹವಾದೀತು! ನಡುವೆ, ಏರಿದ ಬೆಲೆಯಿಂದಾಗಿ ಮೂಲದ ಅಂದಾಜು ಮೆಚ್ಚದ ಪ್ರಮಾಣ ಸರಕಾರಕ್ಕೆ ದಿಗಿಲು ಹುಟ್ಟಿಸಿದರೆ, ಕೆಲಸ ಅರ್ಧದಲ್ಲೇ ಕೈಬಿಟ್ಟಂತೆ! ಆದರೂ ಸರಕಾರೀ ಸಹಾಯದ ಅಪೇಕ್ಷೆ ಮಾಡದೇನೆ, ಜನರು ಜಪಾನಿನ ಮಾದರಿ ಗೃಹೋದ್ಯಮವನ್ನು ಅನುಸರಿಸಿಯಾರು ಎಂದು ತಿಳಿಯುವುದು ಮೂರ್ಖತನ.

—ಕಾರ್ತಿಕೇಯ

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

THE PANGAL NAYAK BANK LIMITED.

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

[೧ನೇ ಪುಟದಿಂದ ಮುಂದುವರಿಸಿದ್ದು]

ಕ್ಕೊಟ್ಟೂರು ಒಯ್ದುದ್ದೀರಿ. ಆದರೆ ಸಂ. ರಾ. ಸಂಘದ ಮುಖ್ಯ ಮಿಲಿಟರಿ ನಿರೀಕ್ಷಕರಾದ ಜನರಲ್ ನಿವ್ಮೋರವರು ಜುಲೈಯಲ್ಲಿ ಕೊಟ್ಟ ಹೇಳಿಕೆಯಲ್ಲಿ "ಆಕ್ರಮಣವು ಉಭಯತರಫಿನಿಂದಲೂ ನಡೆದಿದೆ" ಎಂದು ಹೇಳಿದ್ದರ ಕಡೆಗೆ ನಿಮ್ಮ ಗಮನವನ್ನು ಎಳೆಯ ಬಯಸುತ್ತೇನೆ.

ಮಾತು ಕತೆಗಳ ಮೂಲಕ ಇತ್ಯರ್ಥವಾಗದ ಈ ತಂಟೆಯನ್ನು ಪಂಚಾಯಿತಿಕೆಗೆ ಒಪ್ಪಿಸಬಹುದೆಂಬ ಪಾಕಿಸ್ತಾನದ ಇಚ್ಛೆಯನ್ನು ನೀವು ನಿರಾಕರಿಸುತ್ತಬಂದಿರುವಿರಿ. ನಿಮ್ಮ ಘಟನೆಯಲ್ಲಿ ಪಂಚಾಯಿತಿಕೆಗೊಪ್ಪಿಸಿ ಪರಿಹರಿಸಿಕೊಳ್ಳಬಹುದೆಂದು ಹೇಳಿದ್ದರೂ ಹಾಗೆ ಪಂಚಾಯಿತಿಕೆಗೊಪ್ಪಿಸುವದು ದೇಶದ ಗೌರವಕ್ಕೆ ಕುಂದೆಂದು ನೀವು ಭಾವಿಸಿದಂತಿದೆ. ಪಂಚಾಯಿತಿಕೆಗೊಪ್ಪಿಸುವದಕ್ಕೆ ನಾವು ಸಮ್ಮತಿಸುತ್ತ, ಬಂದಿರುವ ದಾಖಲೆಯೊಂದೇ ಸಾಲದೇ ಪಾಕಿಸ್ತಾನದ ಯುದ್ಧ ನಿಷೇಧ ಧೋರಣೆಗೆ? ಇಂತಹ ಸುಸಂಧಿಗಳನ್ನು ನಿರಾಕರಿಸುತ್ತ ನೀವು "ಯುದ್ಧ ನಿಷೇಧ ಘೋಷಣೆ" ಮಾಡುತ್ತಿರುವ ಪರಿಯೇ ನನಗರ್ಥವಾಗುವುದಿಲ್ಲ.

ಪಾಕಿಸ್ತಾನದ ಗಡಿಯಲ್ಲಿ ನಿಮ್ಮ ಸೈನ್ಯ ತಂಗಿದ್ದಕ್ಕೆ 'ಸಂರಕ್ಷಣೆ'ಯ ಕಾರಣ ಹೇಳಿರುವಿರಿ. ಆದರೆ ಸೈನಿಕರ ವಿಶೇಷ ಚಟುವಟಿಕೆ–ಚಲನ ವಲನದ ಗಾಂಭೀರ್ಯವನ್ನು ಲಕ್ಷಿಸುವಾಗ ಸಂರಕ್ಷಣೆಯೊಂದೇ ಮುಖ್ಯ ಕಾರಣವೆಂದು ಹೇಳ ಬರುವಂತಿಲ್ಲ. ಪಾಕಿಸ್ತಾನ ಮೊದಲು ಹೀಗೆ ಮಾಡಿದ್ದರೆ ನೀವು ಸೈನ್ಯ ಸಂಗ್ರಹಿಸಬಹುದಿತ್ತು. ಸೈನ್ಯವನ್ನು ಸಂಗ್ರಹಿಸಿ, ಈ ಬಗೆಯ ಬೆದರಿಕೆಯನ್ನು ಹಾಕಿದರೆ ಉಭಯ ರಾಷ್ಟ್ರಗಳಲ್ಲಿ ಮೈತ್ರಿ ಬೆಳೆಯುವ ಬಗೆ ಹೇಗೆ? ಅಂತಲೇ ನಿಮ್ಮ ಸೈನಿಕರನ್ನು ಹಿಂತೆಗೆದುಕೊಂಡು ಪಾಕಿಸ್ತಾನದ ಸುರಕ್ಷಿತತೆ ಹಾಗೂ ಜಗತ್ತಿನ ಶಾಂತಿಗೆ ಭಂಗ ಬರುವ ಗಂಭೀರ ಪರಿಸ್ಥಿತಿಯನ್ನು ತಪ್ಪಿಸಿರೆಂದು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ"

ಮುಸ್ಲಿಮ ರಾಷ್ಟ್ರಗಳಲ್ಲಿ ಅಶಾಂತಿ!

ಅಬ್ದುಲ್ಲಾರ ಅನಿರೀಕ್ಷಿತ ಕೊಲೆ

ಜಗತ್ತಿನ ಮುಖ್ಯ ಮುಸ್ಲಿಮ ರಾಷ್ಟ್ರಗಳಲ್ಲಿ ಕೊಲೆ, ಯುದ್ಧಪ್ರೇರಕ ಸನ್ನಿವೇಶಗಳೂ ಜಾತೀಯ ಜಗಳಗಳೂ ಕಂಡುಬರುತ್ತಿವೆ. ಕೊರಿಯಾ ಯುದ್ಧದ ಶಾಂತಿ ಸಂಧಾನದ ಮಾತುಕತೆ ಒಂದು ಮಟ್ಟಕ್ಕೆ ಬಂದು ಮುಟ್ಟುವಾಗಲೇ ಮುಸ್ಲಿಮ ರಾಷ್ಟ್ರಗಳಲ್ಲಿ ತಲೆದೋರಿರುವ ಅಸಂತೃಪ್ತಿ ಅನಾಚಾರಗಳು ಜಗತ್ತಿನ ಶಾಂತಿಗೆ ಗಂಡಾಂತರವನ್ನು ತರಬಲ್ಲವಂಥವುಗಳಾಗಿವೆ. ಕಳೆದ ವಾರ ಟ್ರಾನ್ಸ ಜೋರ್ಡಾನದ ಅರಸು ಅಬ್ದುಲ್ಲಾರನ್ನು ಹಳೇ ಜರೂಸಲೇಮದ ಎಲ್‌ಅಕ್ಸಾ ಮಸೀದಿಯಲ್ಲಿ ಪ್ರಾರ್ಥನೆಗೆ ಹೋದಾಗ ಗುಂಡಿಕ್ಕಿ ಕೊಲ್ಲಲಾಯಿತು. ಅರಸ ಅಬ್ದುಲ್ಲಾರವರ ಈ ಕೊಲೆಯ ಪ್ರಕರಣವು ಮುಸ್ಲಿಮ ರಾಷ್ಟ್ರಗಳಿಗೆ ವಿಶೇಷ ಸಮಸ್ಯೆಗಳನ್ನುಂಟುಮಾಡಿತು. ಅದರಲ್ಲೂ ಬ್ರಿಟಿಶರ ಬಲಗೈಯಂತಿದ್ದು ಅವರಿಗೆ ಹೆಚ್ಚಿನ ಬೆಂಬಲವನ್ನೂ ಪ್ರೋತ್ಸಾಹವನ್ನೂ ಕೊಡುವಲ್ಲಿ ಅಬ್ದುಲ್ಲಾರವರು ಹೆಚ್ಚಿನ ಒಲವನ್ನು ತೋರಿಸುತ್ತಿದ್ದರು! ಜಗತ್ತಿನಲ್ಲಿ ಮುಸ್ಲಿಮರನ್ನೆಲ್ಲ ಸಂಘಟಿಸಿ ಪ್ರಬಲ ಜನಾಂಗವನ್ನಾಗಿ ನಿರ್ಮಿಸಬೇಕೆಂದು ಅವರ ಇಚ್ಛೆಯಿತ್ತು. ಅಬ್ದುಲ್ಲಾ ಕೇವಲ ರಾಜಕೀಯ ಪ್ರೇಮಿ ಮಾತ್ರವಲ್ಲ; ಮುಸ್ಲಿಮ ಧರ್ಮದ ಮತ್ತು ಜನಾಂಗದ ನಿಷ್ಠಾವಂತ ವ್ಯಕ್ತಿ ಕೂಡಾ ಆಗಿದ್ದರು. 28 ವರ್ಷಗಳ ವರೆಗೆ ಜೋರ್ಡಾನನ್ನು ಆಳಿ ಮಧ್ಯಪೂರ್ವದಲ್ಲಿ ಅವರು ಅತ್ಯಂತ ಸಮರ್ಥ ಅರಸರೆಂದು ಹೆಸರಾಗಿದ್ದರು! ಮುಸ್ಲಿಮ ರಾಷ್ಟ್ರಗಳು ಅಬ್ದುಲ್ಲಾರ ಬಗ್ಗೆ ಪಶ್ಚಾತ್ತಾಪ ಪಡುವದಕ್ಕಿಂತಲೂ ಮಿಗಿಲಾಗಿ ಬ್ರಿಟನು ತನ್ನ ಬಲಗೈಯಂತಿದ್ದ ಮಿತ್ರನನ್ನೊಬ್ಬನನ್ನು ಕಳೆದುಕೊಂಡು ವಿಶೇಷ ಕಳವಳಕ್ಕೆ ಗುರಿಯಾಗಿದೆ.

ಪರ್ಶಿಯಾದಲ್ಲಿಯೂ ಶಾಂತಿಯಿಲ್ಲ!

ಪರ್ಶಿಯಾದಲ್ಲಿ ಅಧ್ಯಕ್ಷ ಟ್ರುಮನ್ನರ ರಾಯಭಾರಿಯಾದ ಹ್ಯಾರಿಮನ್ನರು ಬ್ರಿಟನ್ ಮತ್ತು ಪರ್ಶಿಯಗಳೊಳಗಿನ ವಿವಾದವನ್ನು ಬಗೆಹರಿಸಲಿಕ್ಕೆ ಮಧ್ಯಸ್ಥಿಕೆ ವಹಿಸಿಕೊಂಡಿದ್ದರೂ ಅದಿನ್ನೂ ಆಶಾದಾಯಕವಾದ ಸದ್ದಿಯನ್ನೇನೂ ತಂದಿರುವುದಿಲ್ಲ. ಬ್ರಿಟಿಶರೂ ಅಮೇರಿಕನರೂ ಇಲ್ಲಿಂದ ಕಾಲ್ತೆಗೆಯಬೇಕೆಂದು ಜನ ಪ್ರತಿಭಟಿಸಿ ಸಣ್ಣ ಹೋರಾಟವೇ ನಡೆಸಿದರು. ಇದರ ಫಲವಾಗಿ 42 ಜನ ಜೀವದಾನವನ್ನೂ ಮಾಡಿದರು! ಸ್ವದೇಶಪ್ರೇಮವೆಂದ ಇರಾಣಿಯರು ಹೆಸರಿಸುವದಾದರೂ ವಸ್ತುಸ್ಥಿತಿ ಹಾಗಿರುವುದಿಲ್ಲ. ಟೀನಾದೊಳಗೆ ಇದೇ ಬಗೆಯ ಚಳುವಳಿ ಕಮ್ಯೂನಿಸ್ಟರಿಂದ ನಡೆದು ಮತ್ತೆ ಉಗ್ರರೂಪವನ್ನು ತಾಳಿತು. ಅಂತೆಯೆ ಪರ್ಶಿಯದಲ್ಲಿ ನಡೆಯುತ್ತಿರುವ ಕಾರಸ್ತಾನದಲ್ಲಿ ಆಂಗ್ಲೋ-ಅಮೇರಿಕನರ ಮೇಲಿನ ದ್ವೇಷ ಪ್ರದರ್ಶನವೇ ಮಾತ್ರವಲ್ಲ! ರಶಿಯದ ಧೋರಣೆಯ ಕಮ್ಯೂನಿಸ್ಟ ಹಸ್ತಕ್ಷೇಪವೂ ಇದೆ. ಹ್ಯಾರಿಮನ್ನರು ತನ್ನ ಮಾತುಕತೆಯನ್ನು ಅರಸ, ಮುಖ್ಯಮಂತ್ರಿ, ಮತ್ತು ಇನ್ನಿತರ ಪ್ರಮುಖ ಧುರೀಣರೊಡನೆ ಅನ್ಯಾಹತವಾಗಿ ನಡೆಸಿರುವರಾದರೂ ಜನತೆಗೆ ಸಮ್ಮತವಾದ ಮಾರ್ಗದರ್ಶನವನ್ನೆಂದೂ ಮಾಡಲಾರರು! ಹೆಚ್ಚೇಕೆ ಡಾ. ಮುಸಾದಿಕರೇ ಜನತೆಯ ಇಚ್ಛೆಗೆ ವಿರುದ್ಧವಾಗಿ ವರ್ತಿಸಲಾರರು! ಜಗತ್ತಿನಲ್ಲೇ ದೊಡ್ಡದಾದ ಮತ್ತು ಅತ್ಯಂತ ಆವಶ್ಯಕವಾದ ಇರಾಣದ ಎಣ್ಣೆಯ ಉತ್ಪಾದನೆಯು ಕುಂಠಿತವಾಗಿದ್ದು ಇರಾಣದ ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುವಂತಹದಾಗಿದೆ. ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಈ ರಾಷ್ಟ್ರಕ್ಕೆ ಎಣ್ಣೆಯ ನಿರ್ಯಾತ ಕುಂಠಿತವಾಗಿರುವದು ಇನ್ನೊಂದು ಬಲವಾದ ಪೆಟ್ಟು ಮಾತ್ರವಲ್ಲದೆ ಅಂತರಿಕ ಶಾಂತಿಗೆ ಗಂಡಾಂತರಪ್ರಾಯವಾದದಾಗಿದೆ.

ಪಾಕಿಸ್ತಾನಿಗಳ ಪರಚಾಟ!

ಈಚೆಗೆ ಎರಡು ವಾರಗಳಿಂದ ಪರಚಾಟದ ಮೂಲಕ ಮಿಲಿಟರಿ ಗಸ್ತನ್ನು ನಡೆಸಿ ಭಾರತವನ್ನು ಕೆಣಕುವ ಕಾರ್ಯ ಪಾಕಿಸ್ತಾನದ ಕಡೆಯಿಂದ ನಡೆಯಿತು. ಈ ನಡುವೆ ಜೇಹಾದದ ಜಾತೀಯ ಪ್ರಚಾರವನ್ನೂ ಪಾಕಿಸ್ತಾನೀ ಧುರೀಣರ ಯುದ್ಧ ಕೆರಳುವ ತಿರುಬೊಬ್ಬೆಯನ್ನೂ ಭಾರತ ಸಾವಧಾನ ಧೋರಣೆಯಿಂದ ಕಂಡರೂ ಮಿಲಿಟರಿ ಗಸ್ತನ್ನು ನಡೆಸಿ ಬೆದರಿಕೆ ಹಾಕಿದ್ದನ್ನು ಲಕ್ಷಿಸಿ ಭಾರತವೂ ಗಡಿಯಲ್ಲಿ ಸೈನ್ಯವನ್ನು ಕಳಿಸಿತು! ಲಿಯಾಖತರಿಗೆ ಜೀವ ಹಾರಿತು. ಬೊಬ್ಬೆ ಪರಚಾಟ– ಆಕ್ರಮಣ ಧೋರಣೆ–ತಮ್ಮದೇ ವೈಶಿಷ್ಟ್ಯವಾಗಿದ್ದುದನ್ನು ಭಾರತ ಅನುಕರಿಸುವುದು ನಮ್ಮ ನಾಯಕರಿಗೆ ಸಹಿಸಲಾಗಲಿಲ್ಲ. ಕಾಶ್ಮೀರದಲ್ಲಿ ನಡೆಯುವ ಘಟನಾ ಸಮಿತಿಯ ಚುನಾವಣೆಯನ್ನು ಮುರಿಯಬೇಕೆಂಬ ಉದ್ದೇಶದಿಂದ ಕಾಶ್ಮೀರದಲ್ಲಿ ಆಕ್ರಮಣಕಾರ್ಯ ನಡೆಸಲಾಯಿತು. ಈ ಭಾರತ ಮುಂಜಾಗ್ರತೆಯನ್ನು ವಹಿಸಿದ್ದರಿಂದ ಅಲೀಖಾನರಿಗೆ ಕಳವಳ–ದಿಗಿಲು ಉಂಟಾಗಿದೆ. ನೆಹ್ರೂರವರಿಗೆ ತಂತಿ–ಸಂ. ರಾ. ಸಂಘಕ್ಕೆ ತಂತಿ–ಅಸ್ಟ್ರೇಲಿಯದ ಮುಖ್ಯಮಂತ್ರಿಯ ಮಧ್ಯಸ್ಥಿಕೆಯುಳ್ಳ–ಅಂದು ಬೆದರಿಕೆ ಹಾಕಿದವರಿನ್ನಿಂದು ಗಲಿಬಿಲಿಯ ಲಕ್ಷಣಗಾರುತ್ತಲಿವೆ. ಭಾರತದ ಪ್ರಧಾನಿ ತನ್ನ ಸ್ಪಷ್ಟೋಕ್ತಿಯ ಮೂಲಕ ಪಾಕಿಸ್ತಾನವನ್ನು ಎಚ್ಚರಿಸಿದ್ದು ಸೂಕ್ತವೇ ಆಗಿದೆ. ಜಗತ್ತಿನ ಇತರ ಮುಸ್ಲಿಮ ರಾಷ್ಟ್ರಗಳ ಸಹಾನುಭೂತಿ ತನ್ನೆಡೆಗೆ ಇರಬಹುದೆಂಬ ಆಶೆಯೂ ಲಿಯಾಖತರಿಗೆ ಇಂದು ಇರುವುದಿಲ್ಲ! ಅರಬಲೀಗಿನ ಜನರಲ್ ಸೆಕ್ರೆಟರಿಗಳಾದ ಅಜ್ಜಾಂಪಾಶಾರವರು "ಉತ್ತಮ ದರ್ಶನವನ್ನು ಇಟ್ಟುಕೊಂಡು, ನೆಹ್ರೂರಂತಹ ಶ್ರೇಷ್ಠ ನಾಯಕರ ಮುಂದಾಳುತನದಲ್ಲಿ ಆಡಳಿತ ನಡೆಸುವ "ಭಾರತ ಸರಕಾರಕ್ಕೆಂದೂ ಆಕ್ರಮಣಶೀಲ ಇಚ್ಛೆಯಿಲ್ಲ" ಎಂದಿರುತ್ತಾರೆ. ಕಾಶ್ಮೀರದ ಜನತೆಯೂ ಅಧಾರ್‌ಶ್‌ಮುಲ್ಕಿ ಮರೂ ಪಾಕಿಸ್ತಾನಿಗಳ ಧೋರಣೆಗೆ ವಿರುದ್ಧರಾಗಿದ್ದಾರೆ. ರಾಮಪುರದ ನವಾಬರಾದ ಸರ್. ಸಯ್ಯದ್ ರಾಜಾ ಅಲಿಖಾನರು ಅ. ಭಾ. ಶಿಯಾ ಮುಸ್ಲಿಂ ಸಮ್ಮೇಲನದ ಅಧ್ಯಕ್ಷಸ್ಥಾನದಿಂದ "ಪಾಕಿಸ್ತಾನದ ಗಡಿಯಲ್ಲಿ ಭಾರತವು ಸೈನಿಕರನ್ನು ಕಳಿಹಿಸಿತೆಂದು ಪಾಕಿಸ್ತಾನವು ಮೊಸಳೆ ಕಣ್ಣೀರನ್ನು ಸುರಿಸಿದ್ದಲ್ಲಿ ತಥ್ಯಾಂಶವಿಲ್ಲ. ನಮ್ಮ ಕಾಯ್ದೆ ಮಾಡಿದ ನಿಷ್ಪಕ್ಷಪಾತ ಮುಖಂಡರೂ, ನಮ್ಮ ನೆಚ್ಚಿನ ನಾಯಕರೂ ಆದ ಶ್ರೀ ನೆಹ್ರೂರವರೊಬ್ಬರೇ ನಮ್ಮ ರಕ್ಷಕರಾಗಿದ್ದಾರೆ. ಭಾರತವು ಜಾತ್ಯತೀತ ರಾಷ್ಟ್ರವಾಗಿದ್ದು ಶಾಂತಿ ಸಮತೆಗಳ ಆಗರವಾಗಿರುತ್ತದೆ. ಅಂತಲೆ ನಾವು ಈ ಶ್ರೇಷ್ಠನಾಯಕನ ನಿಲುಮೆಗೆ ಬೆಂಬಲಿಗರಾಗಿಯೂ, ಐಕ್ಯತೆಯಿಂದ ರಾಷ್ಟ್ರದಲ್ಲಿ ನಿಷ್ಠೆಯುಳ್ಳವರಾಗಿಯೂ ಇರಲು ಇಚ್ಛಿಸುತ್ತೇವೆ" ಎಂದು ಸ್ಪಷ್ಟೀಕರಿಸಿದ್ದಾರೆ. ಆದರೂ ಲಿಯಾಖತರು ತನ್ನ ತಿರುಬೊಬ್ಬೆ–ಅಪಪ್ರಚಾರವನ್ನು ನಿಲ್ಲಿಸಲಿಲ್ಲ. ವಿದೇಶಗಳಲ್ಲಿ ಭಾರತದ ವಿರುದ್ಧ ಕೈಗೊಂಡ ಅಪಪ್ರಚಾರ ಸಾಗುತ್ತಲೇ ಇದೆ. ಯಥಾರ್ಥವನ್ನು ಮರೆತು ಅಯಥಾರ್ಥವಾದ ಪೊಳ್ಳು ಬೆದರಿಕೆಯನ್ನು ಹಾಕಿದ್ದರಿಂದಲೇ ಪಾಕಿಸ್ತಾನದ ಒಳಗೂ ಹೊರಗೂ ಪಾಕಿಸ್ತಾನದ ಬಗ್ಗೆ ಸದ್ಭಾವನೆಗಳೂ, ಸಹಾನುಭೂತಿಗಳೂ ಕಂಡುಬರುತ್ತಿಲ್ಲ. ಪರಚಾಟ–ತಿರುಬೊಬ್ಬೆ–ಯುದ್ಧಬೆದರಿಕೆಗಳೇ ಪಾಕಿಸ್ತಾನದ ಮುಖ್ಯ ವೈಶಿಷ್ಟ್ಯವಾಗಿದೆ. ಪರಕೀಯರ ಆಶ್ರಯವನ್ನು ನಂಬಿ, ನೆರೆಯ ರಾಷ್ಟ್ರದೊಡನೆ ಸ್ನೇಹವನ್ನು ಕಡಿದುಕೊಳ್ಳಲೆಳಸಿದ್ದು ಆತ್ಮ ಘಾತುಕ ಕಾರ್ಯವೆಂದೇ ಹೇಳಬೇಕು.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಿಮು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ**

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.



ಬರ್ಮಾದಲ್ಲಿ ಎಣ್ಣೆಯ ಉತ್ಪಾದನೆ.

ಪರ್ಸಿಯದ ಎಣ್ಣೆ ಕಟ್ಟುಬಿದ್ದುದರ ಫಲವಾಗಿ ಬರ್ಮಾದ ಎಣ್ಣೆಯ ಗಣಿಗಳನ್ನು ಅಭಿವೃದ್ಧಿಗೊಳಿಸಲಾಗುವುದೆಂದು ತಿಳಿಯುತ್ತದೆ. ಬರ್ಮಾ ಆಯಿಲ್ ಕಂಪೆನಿಯು ಬ್ರಿಟಿಶರದ್ದಿದ್ದು ಅದರಲ್ಲಿ ಬರ್ಮಾ ಸರಕಾರಕ್ಕೆ ಮೂರರಲ್ಲಿ ಒಂದು ಪಾಲನ್ನು ಕೊಡಲು ಒಪ್ಪಿದ್ದು ಮಾತ್ರವಲ್ಲದೆ ಕೊಳ್ಳಲು 50ಲಕ್ಷ ಪೌಂಡುಗಳ ಸಾಲವನ್ನು ಕೊಡಲು ಬ್ರಿಟಿಶ ಸರಕಾರ ನಿರ್ಧರಿಸಿದೆ. ಬರ್ಮಾದ ಎಣ್ಣೆ ಉತ್ಪಾದನೆಯು ಹೆಚ್ಚಿದಂತೆ ಅದರ ಆರ್ಥಿಕಾಭಿವೃದ್ಧಿಯಾಗುವದು ಮಾತ್ರವಲ್ಲದೆ ಭಾರತವು ಬರ್ಮಾದಿಂದ ಅಕ್ಕಿ, ಎಣ್ಣೆಗಳೆರಡನ್ನೂ ತರಿಸಿಕೊಳ್ಳಬಹುದು.

ರೈಲ್ವೆ ಮುಷ್ಕರ ನಿಲ್ಲುವುದೆ?

ರೈಲ್ವೆ ಕೆಲಸಗಾರರ ಮಹಾಮಂಡಳದವರು ಅಗಸ್ಟ 27ಕ್ಕೆ ನಡಿಸಬೇಕಾಗಿ ನಿಶ್ಚಯಿಸಿದ ರೈಲ್ವೆ ಮುಷ್ಕರವನ್ನು ಮುಂದೂಡದಿದ್ದರೂ ಪ್ರಧಾನ ಮಂತ್ರಿಗಳು ಜಯಪ್ರಕಾಶ ನಾರಾಯಣರಿಗೆ ಬರೆದ ಪತ್ರದಂತೆ ಸಂಧಾನ ನಡೆಸಲು ಸಿದ್ಧವಿರುವದಾಗಿ ತಿಳಿಸಿದ್ದಾರೆ. ಸರಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿ ರೈಲ್ವೆ ಕೆಲಸಗಾರರ ಹಕ್ಕುಗಳನ್ನು ಕಸಿದುಕೊಂಡದ್ದಕ್ಕೆ ವಿಷಾದ ವ್ಯಕ್ತಪಡಿಸಲಾಗಿದೆ.

ಲಿಯಾಖತರ ಗರ್ವಭಂಗ!

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲೀಖಾನರು ನೆಹ್ರೂರವರಿಗೆ ಕಳಿಸಿದ ತಂತಿಯಲ್ಲಿ ನೇಪಾಳದಲ್ಲಿ ಭಾರತಸೈನಿಕರನ್ನು ಉಪಯೋಗಿಸಲಾಗಿದೆಂದು ಆಕ್ಷೇಪವೆತ್ತಿದ್ದನ್ನು ನೇಪಾಳದ ಅಧಿಕಾರಿಗಳೂ ಧುರೀಣರೂ ಖಂಡಿಸಿ ತಮ್ಮ ರಾಜಕೀಯ ಚದುರಂಗದಾಟದಲ್ಲಿ ನೇಪಾಳವನ್ನು ಸಿಕ್ಕಿಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಲಿಯಾಖತರು ಚೆನ್ನಾಗಿ ತಿಳಿದಿರಲೆಂದು ಎಚ್ಚರಿಸಿರುವರು.

In the Court of the District Munsiff of Coondapur.

R. E. P. No, 129 of 1951
in O. S. 296 of 1946.

Between:—
Venkatesha Udupa ..Petitioner
and
Akkamma Shedthi and others... Respondents.

To
Sri Puttayya Shetty nephew of Subbayya Shetty residing at Hardali Mandali Village, Coondapur Taluk. (2nd respondent)

Please take notice that the above execution in which the petitioner has brought the suit properties to sale stands posted to 6-8-1951, for settling the terms of the sale. Hence you are requested to appear before the above said court on 6-8-1951 at 11 A. M and urge your objections if any for draft sale papers filed into court, either in person or through a duly instructed pleader. Failing which you will be declared exparte and further steps will be ordered in your absence.

[By order of the court]

Sd. K. Ramappayya B.A.,B.L.,
Advocate for petitioner.
Coondapoor, 20-7-1951.

ಲೋಕಾಂತ

ಪಾಕಿಸ್ತಾನದಲ್ಲಿ ಮುಂಜಾಗ್ರತೆ!

ಪಾಕಿಸ್ತಾನದ ವಿದೇಶ ಮಂತ್ರಿ, ಅಂತರಿಕ ಮಂತ್ರಿ, ಗಡಿಪ್ರಾಂತ, ಮತ್ತು ಪಶ್ಚಿಮ ಪಂಜಾಬದ ಗವರ್ನರರು ಸಿಂಧ, ಪ. ಬಂಗಾಲ, ಮತ್ತು ಗಡಿಪ್ರಾಂತಗಳ ಮುಖ್ಯ ಮಂತ್ರಿಗಳೇ ಮೊದಲಾದ ಉಚ್ಚ ಅಧಿಕಾರಿಗಳ ಸಭೆಯೊಂದು ಕರಾಚಿಯಲ್ಲಿ ಸೇರಿ ಭಾರತ ಪಾಕಿಸ್ತಾನಗಡಿಯಲ್ಲಿ ಸೈನ್ಯವನ್ನು ಕಲೆಹಾಕಿದ್ದರ ಕುರಿತು ಗಂಭೀರ ಸಮಾಲೋಚನೆ ನಡೆಸಿತೆಂದು ತಿಳಿಯುತ್ತದೆ. ಲಾಹೋರದಲ್ಲಿ ವಿಮಾನ ಧಾಳಿಯಾದರೆ ಜನ ಮನೆಯ ಬೆಳಕನ್ನು ಆರಿಸಿ ಹೇಗೆವರ್ತಿಸಬೇಕೆನುವ ಪ್ರಯೋಗವು ನಡಯಿತು!

ಸರಕಾರದೊಡನೆ ಕಮ್ಯೂನಿಸ್ಟರ ಸಂಧಾನಯಾಚನೆ?

ಕಮ್ಯೂನಿಸ್ಟ ಧುರೀಣರಾದ ಶ್ರೀ. ಎ. ಕೆ. ಗೋಪಾಲನ್, ಜ್ಯೋತಿ, ಮುಜಫರ ಮಹಮ್ಮದ ಈ ಮೂವರು ಹೈದರಾಬಾದು ಗೃಹಮಂತ್ರಿಗಳೊಡನೆ ಸಂಧಾನದ ಮಾತುಕತೆ ನಡೆಸಿದರು. ಕಮ್ಯುನಿಸ್ಟ ಪಕ್ಷದ ಮೇಲಿನ ನಿರ್ಬಂಧ ತೆಗೆಯಬೇಕು, ಸ್ಥಾನ ಬದ್ಧತೆಯಲ್ಲಿರುವವರನ್ನು ಬಿಡುಗಡೆ ಮಾಡಬೇಕು, ತೆಲಂಗಣದಲ್ಲಿಯ ರೈತರ ಸಮಸ್ಯೆ ಪರಿಹಾರವಾಗಬೇಕೆಂಬ ಸೂಚನೆಗಳು ಮುಂದೆ ಬಂದಿವೆ. ಮುಂಬರುವ ಚುನಾವಣೆಯ ಕುರಿತು ವಿಮರ್ಶಿಸಲು ಮುಖ್ಯಮಂತ್ರಿ ಜವಾಹರಲಾಲರ ದರ್ಶನವನ್ನು ಕೋರಿರುವರಂತೆ!

ಕರ್ನಾಟಕ ಏಕೀಕರಣ ಪಕ್ಷದ ನಿರ್ಮಾಣ.

ಕರ್ನಾಟಕ ಏಕೀಕರಣ ಪಕ್ಷ ದಾವಣಗೆರಿಯಲ್ಲಿ ಸ್ಥಾಪಿತವಾಗಿದೆ. ಕರ್ನಾಟಕ ಏಕೀಕರಣವೇ ಮಹೋದ್ದೇಶವಾಗುಳ್ಳ ಈ ಪಕ್ಷ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲಿರುವುದು. ಚುನಾವಣಾ ಘೋಷಣಾಪತ್ರವನ್ನು ಸದ್ಯವೇ ಹೊರಡಿಸಲಿದೆ. ಮದ್ರಾಸಿನ ಮಾಜಿ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರೂ, ಶ್ರೀ ಜಿನರಾಜ ಹೆಗ್ಡೆಯವರೂ ಈ ಪಕ್ಷದಲ್ಲಿ ಮುಖ್ಯ ಪಾತ್ರಧಾರಿಗಳಿರುವರು.

ಕಿಡ್ವಾಯಿ ತಂಡನ್ನರಲ್ಲಿ ಮತಭೇದ

ಮಂತ್ರಿ ಶ್ರೀ ರಫಿ ಅಹಮ್ಮದ ಕಿಡ್ವಾಯಿಯವರೂ ಮತ್ತು ಮಂತ್ರಿ ಶ್ರೀ ಎ. ಪಿ ಜೈನರೂ ಕಾಂಗ್ರೆಸ್ಸಿಗೂ ಮಂತ್ರಿಪದಕ್ಕೂ ರಾಜಿನಾಮೆಯನ್ನು ಸಲ್ಲಿಸಿದ್ದು ಕೊನೆಗೆ ಪ್ರಧಾನಮಂತ್ರಿ ನೆಹ್ರೂರವರ ಆದೇಶದ ಮೇಲೆ ತಾವು ಮಂತ್ರಿಪದಕ್ಕಿತ್ತಿರುವ ರಾಜಿನಾಮೆಯನ್ನು ಹಿಂತೆಗೆದುಕೊಂಡಿರುವರಷ್ಟೆ! ಕಾಂಗ್ರೆಸ್ಸಿನ ಬಗ್ಗೆ ತಾವು ತಳೆದ ಧೋರಣೆಯನ್ನು ಸಮರ್ಥಿಸುವದಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷ ತಂಡನ್ನರ ವೈಯಕ್ತಿಕ ವಿಚಾರವನ್ನು ಕಾರಣವನ್ನಾಗಿ ಹೇಳಬೇಕಿಸಿದ್ದಾರೆ. ಶ್ರೀ ತಂಡನ್ನರು, ಕಿಡ್ವಾಯಿಯವರು ತನ್ನಮೇಲೆ ಮಿಥ್ಯಾರೋಪವನ್ನು ಹೊರಿಸಿರುತ್ತಾರೆ. ಹೀಗೆ ಕಾಂಗ್ರೆಸ್ ವಿರೋಧಿಗಳಿಗೆ ಅವಕಾಶಕೊಡುವದು ಯುಕ್ತವೋ ಹೇಗೆಂಬುದನ್ನು ಚಿಂತಿಸುವುದು ಅವಶ್ಯವೆಂದ ಹೇಳಿರುತ್ತಾರೆ.

ಕೊರತೆಯ ಪ್ರದೇಶಗಳಿಗೆ ಆಹಾರ

ಕೊರತೆಯ ಪ್ರದೇಶಗಳಿಗೆ ಕೇಂದ್ರ ಸರಕಾರದವರು 109300ಟನ್ನು ಆಹಾರ ಧಾನ್ಯಗಳನ್ನು ಕಳಿಸಿರುವರು. ಅದರಲ್ಲಿ ಮದ್ರಾಸಕ್ಕೆ 25,3000ಟನ್ನು ಮುಂಬಯಿ ಪ್ರಾಂತಕ್ಕೆ 22450 ಟನ್ನು ಬಿಹಾರಕ್ಕೆ 16450ಟನ್ನು ಪ. ಬಂಗಾಲಕ್ಕೆ 10,500ಟನ್ನು ಉಳಿದ ಪ್ರದೇಶಗಳಿಗೆ 24,600 ಟನ್ನು ಆಹಾರ ಧಾನ್ಯವನ್ನು ಕಳಿಸಲಾಗಿರುವದು.

ಮಾಲಕ ಕೆಲಸಗಾರರೊಳಗೆ ಐಕ್ಯ

ಮಾಲಕ ಕೆಲಸಗಾರರೊಳಗಿನ ತಂಟೆ ತಕರಾರನ್ನು ಅವರವರೇ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ತೀರ್ಮಾನಿಸಿಕೊಳ್ಳುವದರಲ್ಲೇ ಮುತ್ಸದ್ದಿತನವಿದೆಯೆಂದು ಕೇಂದ್ರ ಸರಕಾರದ ಕೂಲಿಗಾರ ಮಂತ್ರಿ ಜಗಜೀವನರಾಮರು ಮದ್ರಾಸಿನ ಸಿಮಸನ್ ಕಂಪೆನಿಯ ವಾರ್ಷಿಕಮಹೋತ್ಸವದಲ್ಲಿ ಹೇಳಿದರು.

ಕರ್ನಾಟಕ ಸಂಗೀತ ವಿದ್ಯಾಲಯ.

ಸದ್ಯವೇ ಏರ್ಪಡಿಸಲಿರುವ ಕರ್ನಾಟಕ ಸಂಗೀತ ವಿದ್ಯಾಲಯಕ್ಕೆ ತಗಲುವ ಒಟ್ಟು ಖರ್ಚಿನಲ್ಲಿ ಅರ್ಧಾಂಶವನ್ನು ಕೇಂದ್ರ ಸರಕಾರ ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳಲಾಯಿತು. ಉಳಿದ ವೆಚ್ಚವನ್ನು ಹೈದ್ರಾಬಾದ, ಮೈಸೂರು, ಮದ್ರಾಸ, ಮತ್ತು ತಿರುವಾಂಕೂರ ಕೊಚ್ಚಿನ ಪ್ರಾಂತಗಳು ವಹಿಸಿಕೊಳ್ಳುವವು. ಈ ವಿದ್ಯಾಲಯವನ್ನು ಮದ್ರಾಸದಲ್ಲಿಯೇ ಸ್ಥಾಪಿಸುವ ಹಂಚಿಕೆಯನ್ನು ಮದ್ರಾಸಿನ ಮಂತ್ರಿಗಳು ಹೂಡಿರುವರೆಂದು ತಿಳಿಯುತ್ತದೆ.

ಸಮಾಜವಾದೀ ಪಕ್ಷಕ್ಕೆ ತಿಲಾಂಜಲಿ!

ದಿಲ್ಲಿ ಸಮಾಜವಾದೀ ಪಕ್ಷದ 17ಮಂದಿ ಸದಸ್ಯರು ಶ್ರೀಮತಿ ಅರುಣ ಅಸಫ್ಅಲಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಸಮಾಜವಾದೀ ಪಕ್ಷಕ್ಕೆ ರಾಜೀನಾಮೆಯನ್ನಿತ್ತು ಎಡಪಕ್ಷವನ್ನು ನಿರ್ಮಿಸಿದರು. ಈ ಪಕ್ಷವು ಮುಂಬರುವ ಚುನಾವಣೆಯಲ್ಲಿ ಭಾಗವಹಿಸದೇ ಹೋದರೂ ಮಾರ್ಕ್ಸವಾದಿಪಕ್ಷದವರು ನಿಲ್ಲಿಸಿದ ಪ್ರತಿನಿಧಿಗಳಿಗೆ ಬೆಂಬಲನೀಡುವ ನಿರ್ಧಾರ ಮಾಡಿದೆ.

EXCELLENT RESULTS DISCLOSED IN THE 4TH VALUATION.

A Bonus of Rs 12/- and Rs. 9/- per thousand per year for Whole Life and Endowment Assurances respectively has been declared in the latest valuation of the Company conducted for a period of four years from 1947 to 1950. Interim bonus at the very rates has also been provided.

THE CANARA MUTUAL
ASSURANCE COMPANY LTD.
Head Office: UDIPI.
[Declared bonus for all the years since inception]

ಅತ್ಯಂತ ಜನಪ್ರಿಯವಾದ
ನೇಶನಲ್
ಬ್ರಾಹ್ಮಿ ತೈಲ
ಕೇಶ ಮತ್ತು ಮೆದುಳಿಗೆ
ಪೋಷಕ ಮತ್ತು
ಶಕ್ತಿದಾಯಕವಾದುದು.
ಎಂ. ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಶನ್,
ಫೋರ್ಟ, ಬೊಂಬಾಯಿ.

M. M. PRODUCTS CO.
RUBY MANSION FORT, BOMBAY

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು ಉಕ್ಕಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಸೊಡಿತ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD
ನೋವು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೬-೭-'೫೧

ಅನುಚಿತ ಆಗ್ರಹಗಳು!

ಕೇಂದ್ರ ಸರಕಾರದ ಸಂಪರ್ಕ ಮಂತ್ರಿ ರಫಿ ಅಹಮ್ಮದ ಕಿದ್ವಾಯಿ ಹಾಗೂ ಮಂತ್ರಿ ಎ. ಪಿ. ಜೈನರು ಕಾಂಗ್ರೆಸ್ಸಿಗೂ ಮಂತ್ರಿಪದಕ್ಕೂ ರಾಜಿನಾಮೆಯನ್ನಿತ್ತು ಹೊರಗೆ ಬಂದುದೂ, ಪ್ರಧಾನ ಮಂತ್ರಿ ಶ್ರೀ ನೆಹ್ರೂರವರ ಆದೇಶದ ಮೇಲೆ ಮಂತ್ರಿಪದವಿಯನ್ನು ತಿರುಗಿ ಸ್ವೀಕರಿಸಿದ್ದೂ ಈ ವಾರದ ಒಂದು ಸ್ವಾರಸ್ಯದ ಸಂಗತಿಯೆಂದೇ ಹೇಳಬೇಕು. ಕಿದ್ವಾಯಿಯವರಿಗೂ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ನರಿಗೂ ಉಂಟಾದ ಮತಭೇದದಿಂದಾಗಿ ಕಿದ್ವಾಯಿಯವರು ಕಾಂಗ್ರೆಸನ್ನು ತ್ಯಜಿಸುವ ನಿರ್ಧಾರವನ್ನು ಬಹಳ ಸಮಯದ ಹಿಂದೆಯೇ ಮಾಡಿದ್ದರು. ಬೆಂಗಳೂರಿನ ಅ. ಭಾ. ಕಾಂಗ್ರೆಸ್ ಅಧಿವೇಶನ ಸರಿಯಾದ ಮಾರ್ಗದರ್ಶನ ಮಾಡೀತೆಂದು ಎಲ್ಲರೂ ಭಾವಿಸಿದ್ದರು. ಶ್ರೀ ನೆಹ್ರೂರವರು ಕಾಂಗ್ರೆಸ್ಸಿನಲ್ಲಿ ಐಕ್ಯಮತ್ಯವನ್ನುಂಟುಮಾಡುವ ಬಗ್ಗೆ ಮಾಡಿದ ಯತ್ನವೆಲ್ಲ ನಿಷ್ಫಲವಾಯಿತು. ಕಿದ್ವಾಯಿಯವರ ಅತ್ಯಮೂಲ್ಯ ಸೇವೆಯನ್ನು ನೆನೆದುಕೊಂಡು ಕಿದ್ವಾಯಿಯವರ ಅವಶ್ಯಕತೆ ಸರಕಾರಕ್ಕೆ ಎಷ್ಟೆಂಬುದನ್ನು ಶ್ರೀ ನೆಹ್ರೂರವರು ಚೆನ್ನಾಗಿ ಬಲ್ಲರು. ಅಂತಲೇ ಒಬ್ಬ ಮಿತ್ರನಿಗಾಗಿ ನೆಹ್ರೂರವರು ತನ್ನ ಬಲವನ್ನು ಉಪಯೋಗಿಸಿದರು. ಆದರೆ ಬೆಂಗಳೂರಿನ ಅಧಿವೇಶನ ಕಿದ್ವಾಯಿಯವರ ಇಚ್ಛೆಯನ್ನು ಪೂರೈಸಲು ಸಮರ್ಥವಾಗಲಿಲ್ಲ! ಅಂತಲೇ ರಾಜಿನಾಮೆಯನ್ನಿತ್ತರು.

ಭಾರತವು ಹಲವು ಗಂಡಾಂತರದ ಸಮಸ್ಯೆಗಳನ್ನು ಎದುರಿಸಬೇಕಾಗಿರುವ ಸಂದರ್ಭದಲ್ಲಿಯೇ ಕಿದ್ವಾಯಿಯವರು ರಾಜಿನಾಮೆಯನ್ನಿತ್ತು ಹೊರಬೀಳಬಾರದಿತ್ತು! ಬಹುಕಾಲ ತಾನು ಕಾಂಗ್ರೆಸ್ಸಿನಲ್ಲಿದ್ದುಕೊಂಡು ದೇಶಸೇವೆಯಲ್ಲಿ ನಿರತವಾಗಿದ್ದು ವೈಯಕ್ತಿಕ ಕಾರಣಗಳನ್ನೇ ಹೇತುವನ್ನಾಗಿಟ್ಟುಕೊಂಡು ಕಾಂಗ್ರೆಸ್ಸನ್ನೂ ಮಂತ್ರಿಪದವನ್ನೂ ತ್ಯಜಿಸಿದಂತ ಅಷ್ಟೊಂದು ಸಮಂಜಸವಾಗಿ ತೋರುವುದಿಲ್ಲ. ಬಳಿಕ ಮುಖ್ಯಮಂತ್ರಿಯವರು ಸದ್ಯದಲ್ಲಿ ನಿಮ್ಮ ಸಹಕಾರ ಅವಶ್ಯವೆಂದಾಗ ಮಂತ್ರಿಪದಕ್ಕೆ ತಾನಿತ್ತ ರಾಜಿನಾಮೆಯನ್ನು ಹಿಂತೆಗೆದುಕೊಂಡರು. ಕಾಂಗ್ರೆಸಿನ ಬಗ್ಗೆ ಅವರಭಿಪ್ರಾಯ ಬದಲಾಗದೇ ಇರುವದರಿಂದ ರಾಜಿನಾಮೆ ಸ್ಥಿರವಾಗುಳಿಯಿತು. ಸದ್ಯ ಕಿದ್ವಾಯಿ ಮತ್ತು ಜೈನರು ಪಕ್ಷಾತೀತ ಮಂತ್ರಿಗಳು! ಶ್ರೀ ಕಿದ್ವಾಯಿಯವರು ತಾನು ರಾಜಿನಾಮೆಯನ್ನು ಹಿಂತೆಗೆದುಕೊಳ್ಳಲು ಕಾರಣ ಹೇಳುತ್ತಾ "ನನ್ನ ಸಹೋದ್ಯೋಗಿಗಳಾದ ಶ್ರೀ ನೆಹ್ರೂರವರಿಗೆ ನಿಷ್ಠಾವಂತನಾಗಿರುವದು ಮಂತ್ರಿಯಾದ ನನ್ನ ಕರ್ತವ್ಯ. ಅಂತರಾಷ್ಟ್ರೀಯ ಪರಿಸ್ಥಿತಿ ಮತ್ತು ದೇಶದ ಐಕ್ಯದ ದೃಷ್ಟಿಯಿಂದ ಶ್ರೀ ನೆಹ್ರೂರವರು ದೇಶವನ್ನು ಮುನ್ನಡೆಸುವದು ಆಗತ್ಯವಾಗಿದೆ. ಶ್ರೀ ನೆಹ್ರೂರವರ ವಿರುದ್ಧ ಮಾತನಾಡುವುದು ಅಥವಾ ಕೆಲಸ ಮಾಡುವವರು ದೇಶದ್ರೋಹಿಗಳು. ಭಾರತದ ಪ್ರಗತಿಗೆ ಆಗತ್ಯವಾಗಿರುವ ಶ್ರೀ ನೆಹರೂರವರಿಗೆ ಅನ್ಯಾಯ ಮಾಡುವ ತಪ್ಪನ್ನು ಯಾವ ರಾಜಕೀಯ ಪಕ್ಷವೂ ಮಾಡದೆಂದೂ ಆಶಿಸಿದ್ದೇನೆ" ಎಂದು ನೆಹ್ರೂರವರನ್ನು ಶ್ಲಾಘಿಸಿರುವರು. ನೆಹ್ರೂರವರು ಕಾಂಗ್ರೆಸ್ಸಿನ ನಿಷ್ಠಾವಂತ ನಾಯಕರಾಗಿದ್ದು ಕಾಂಗ್ರೆಸ್ಸಿನಿಂದಲೇ ಭಾರತದ ಪ್ರಗತಿಯನ್ನೂ ಹಿತಚಿಂತನೆಯನ್ನೂ ಸಾಧಿಸಲೆತ್ನಿಸುವ ಭರವಸೆ– ಧೃಢವಾದ ನಂಬುಗೆಯನ್ನೂ ಇಟ್ಟುಕೊಂಡಿರುವಾಗ ಶ್ರೀ ಕಿದ್ವಾಯಿಯವರು ಕಾಂಗ್ರೆಸ್ಸನ್ನೇಕೆ ತ್ಯಜಿಸಬೇಕು? ಕಾಂಗ್ರೆಸಿನಲ್ಲಿ ಲೋಪದೋಷಗಳಿವೆ ನಿಜ; ಕಾಂಗ್ರೆಸ್ಸನ್ನು ತ್ಯಜಿಸುವುದರಿಂದ ಆ ದೋಷಗಳು ಪರಿಹಾರವಾಗುತ್ತದಾದರೆ–ದೇಶಕ್ಕೆ ಅದರಿಂದ ಹಿತವಾಗುವದಾದರೆ ನೆಹ್ರೂರಂತಹ ನಿಸ್ವಾರ್ಥ ಮನೋವೃತ್ತಿಯ ಜನಪ್ರಿಯ ನಾಯಕರು ಕಾಂಗ್ರೆಸ್ಸನ್ನೆಂದೋ ತ್ಯಜಿಸಿ ಬಿಡುತ್ತಿದ್ದರು. ಅವರು ಇಂದು ಅವಲಂಬಿಸಿರುವದು ಕಾಂಗ್ರೆಸ್ಸಿನ ಉಚ್ಚ ತತ್ವವನ್ನೇ ಹೊರತು ವ್ಯಕ್ತಿಗತವಾದ ಲೋಪದೋಷಗಳನ್ನಲ್ಲ! ಕಿದ್ವಾಯಿಯವರ ರಾಜೀನಾಮೆಯ ಪ್ರಕರಣವೂ ಅದರ ಮೂಲ ಕಾರಣವೂ ಕಾಂಗ್ರೆಸದ ಅಧ್ಯಕ್ಷರಿಗೂ ಅವರಿಗೂ ಸಂಬಧಿಸಿದ್ದಾಗಿರುತ್ತದೆನ್ನುವದಕ್ಕೆ ಈಗ ಜನತೆಯ ಮುಂದೆ ಕಾಂಗ್ರೆಸ್ ಅಧ್ಯಕ್ಷರೂ ಹಾಗೂ ಕಿದ್ವಾಯಿಯವರ ವೈಯಕ್ತಿಕ ಮತಭೇದ ಉಳ್ಳಂತಹ ಹೇಳಿಕೆಗಳೇ ಸಾಕ್ಷಿಗಳಾಗಿರುತ್ತವೆ. ವೈಯಕ್ತಿಕ ಮತಭೇದ—ಸಂಕುಚಿತತೆ ದೇಶಸೇವೆಯಲ್ಲಿ ನಿರತನಾದವನಿಗೆ ಶೋಭಿಸುವುದಿಲ್ಲ!

ಮಂತ್ರಿಪದದಲ್ಲಿ ತಾನು ಕೆಲಸ ಮಾಡುತ್ತಿರುವದಾದರೂ ಮುಂದೆ ಕಾಂಗ್ರೆಸನ್ನು ಹೊರತು ಯಾವ ಪಕ್ಷವನ್ನು ಸೇರಿಕೊಳ್ಳಲು ನಾನು ಸ್ವತಂತ್ರನಿದ್ದೇನೆ. ಎಂದು ಕಿದ್ವಾಯಿಯವರು ನೆಹ್ರೂರವರಿಗೆ ತಿಳಿಸಿದ್ದಾರೆ. ಕಾಂಗ್ರೆಸ್ಸನ್ನು ತ್ಯಜಿಸಿ ಮಂತ್ರಿಯಾಗಿರುವುದು ಘಟನೆಗೆ ವಿರುದ್ಧವಲ್ಲದೆಹೋದರೂ ಸರಕಾರದಲ್ಲಿದ್ದುಕೊಂಡು ಕಾಂಗ್ರೆಸ್ಸನ್ನು ಟೀಕಿಸುವುದೂ–ಇನ್ನೊಂದು ಪಕ್ಷದ ಧೋರಣೆಯನ್ನು ಅತಿರಂಜಿತವಾಗಿ ವರ್ಣಿಸಿ ಜನಕ್ಕೆ ಮೆಚ್ಚಿಸುವದೂ ರಾಜಕೀಯ ದೃಷ್ಟಿಯಿಂದ ತಪ್ಪಲ್ಲವೇ? ಟಂಡನ್ನರ ಗ್ರಹಿಕೆಗಳು– ಆಗ್ರಹಗಳೂ ಅಸಂಬದ್ಧವೆಂದು ನಾವು ಒಪ್ಪಿದರೂ ಶ್ರೀ ಕಿದ್ವಾಯಿಯವರ ದ್ವಿಮುಖಿ ಧೋರಣೆ ಕಾಂಗ್ರೆಸ್ಸಿಗೆ–ಸರಕಾರಕ್ಕೆ ಶೋಭಿಸುವಂತಹದಲ್ಲವೆಂಬುದನ್ನು ಸ್ಪಷ್ಟ ಹೇಳಬೇಕಾಗಿದೆ. ನೆಹ್ರೂರವರ ನಾಯಕತ್ವದ ಮೇಲೆ ನಿಷ್ಠೆಯಿಟ್ಟು ಮೇಲೆ ಅವರ ಸರಕಾರದಲ್ಲಿಯೇ ಪರ್ಣನಿಷ್ಠೆ ಮಂತ್ರಿಯೊಬ್ಬರು ಅವರ ಪಕ್ಷವನ್ನೇ ಟೀಕಿಸುವದಾದರೆ–ಕಿದ್ವಾಯಿಯವರಿಗೂ ಅದರ ಮಾತಿಗೂ ಯಾವ ತಾಳ ಮೇಳವೂ ಇದ್ದಂತಿಲ್ಲ! ವಾದ ವೈಷಮ್ಯಗಳನ್ನು ಒತ್ತಟ್ಟಿಗಿಟ್ಟು ಸದ್ಯ ಐಕ್ಯಮತ್ಯದಿಂದ ಭಾರತ ಸರಕಾರದ ಮುಂದಿರುವ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾದುದು ಎಲ್ಲರ ಕರ್ತವ್ಯವಾಗಿದೆ. ಕಾಂಗ್ರೆಸ್ ಅಧ್ಯಕ್ಷರು ಅನುಚಿತವಾಗಿ ಆಗ್ರಹ-ಪಟ್ಟು ಪರಿಸ್ಥಿತಿಯನ್ನು ಕೆಣಕುವ ಹವ್ಯಾಸಕ್ಕೆ ಹೋಗಬಾರದು. ವ್ಯಕ್ತಿಯ ಸ್ವಾರ್ಥ—ಸ್ವಾಭಿಮಾನ ಸಾಧನೆಗೆ ಇದು ರಂಗವೂ ಅಲ್ಲ; ಕಾಲವೂ ಅಲ್ಲ! ಆ ಬಗೆಯ ಆಗ್ರಹ ತೊಡುವದನ್ನು ದೇಶದ ಹೊರೆಯನ್ನು ಹೊತ್ತ ಪ್ರಧಾನಮಂತ್ರಿಯ ಶ್ರೇಷ್ಠ ಮುಂದಾಳ್ತನದ ನಿಷ್ಠೆಯ ಕುರುಹಾಗಿಯಾದರೂ ಬಿಟ್ಟು ಕೊಡಬೇಕು. ಈ ಸಂದಿಗ್ಧ ಕಾಲದಲ್ಲಿ ಐಕ್ಯ ಆದರ್ಶಗಳಿಗಾಗಿ ಹೋರಾಡಬೇಕೇ ಹೊರತು ದುರಾಗ್ರಹಕ್ಕಲ್ಲ!

ಮಾರ್ಶಲ್ ಹೆನ್ರಿ ಪಿಟೇನರ ನಿಧನ.

ಫ್ರಾನ್ಸದ ವೀರಾಗ್ರಣಿಯೆಂದು ಖ್ಯಾತಿಗೊಂಡಿದ್ದ ಹೆನ್ರಿ ಫಿಲಿಪ್ ಪಿಟೇನರು ಮೂರು ನಾಲ್ಕು ತಿಂಗಳಿಂದ ಅಸ್ವಸ್ಥದಲ್ಲಿದ್ದು ಈಗ ಮಡಿದ ವಾರ್ತೆ ಬಂದಿರುತ್ತದೆ. ಮೊದಲನೆ ಜಾಗತಿಕ ಯುದ್ಧದಲ್ಲಿ ಅಪಾರ ಖ್ಯಾತಿ ಗಳಿಸಿ ಫ್ರೆಂಚ್ ಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು. 1945ರಲ್ಲಿ ವಿಶಿ ಸರಕಾರದ ಅಧಿಪತಿಗಳಿದ್ದಾಗ ದೇಶದ್ರೋಹಿಗಳೆಂದು ಪರಿಗಣಿಸಲ್ಪಟ್ಟು ದೇಹಾಂತ್ಯ ಶಿಕ್ಷೆಗೆ ಗುರಿಯಾದರು. ಅವರ ವಯೋಮಿತಿಯನ್ನು ಕಂಡು ಆ ಶಿಕ್ಷೆಯನ್ನು ರದ್ದುಗೊಳಿಸಿ ಜೀವಾವಧಿ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಗಿತ್ತು.

ಡಾ. ಗ್ರಾಹ್ಯಾಮ್-ನೆಹ್ರೂ ಭೆಟ್ಟಿ.

ಕಾಶ್ಮೀರದಲ್ಲಿ ಸಂ. ರಾ. ಸಂಘದ ಪ್ರತಿನಿಧಿಗಳಾಗಿರುವ ಡಾ! ಗ್ರಾಹ್ಯಾಮರು ಕರಾಚಿಯಲ್ಲಿ ಮಾತುಕತೆ ಮುಗಿಸಿಕೊಂಡು ಭಾರತ ಪ್ರಧಾನ ಮಂತ್ರಿ ಜವಾಹರಲಾಲರೊಡನೆ ಮಾತುಕತೆ ನಡೆಸಲು ದಿಲ್ಲಿಗೆ ಬಂದಿರುವರು. ಹಲವು ದಿನ ದಿಲ್ಲಿಯಲ್ಲಿದ್ದು ಶ್ರೀ ನೆಹ್ರೂ ಹಾಗೂ ಭಾರತ ಸರಕಾರದ ಇತರ ಅಧಿಕಾರಿಗಳೊಡನೆ ಮಾತುಕತೆ ನಡೆಸಲಿರುವರು.

ನಿರಾಶ್ರಿತರ ಅಂಗಡಿಗಳಿಗೆ ಬೆಂಕಿ!

ದಿಲ್ಲಿಯ ನಿರಾಶ್ರಿತರ 60 ಅಂಗಡಿಗಳು ಬೆಂಕಿಗೆ ಹುತಿಯಾದವೆಂದು ತಿಳಿದು ಬರುತ್ತದೆ. ಅಗ್ನಿಶಾಮಕ ಯಂತ್ರಗಳು ಎರಡು ತಾಸಿನ ವರೆಗೆ ಬೆಂಕಿಯನ್ನು ನಂದಿಸಲು ಯತ್ನ ನಡೆಸಿದವು. ಆದ ನಷ್ಟವೆಷ್ಟೆಂಬುದು ಅಧಿಕೃತವಾಗಿ ತಿಳಿಯದೆ ಹೋದರೂ ವಿಶೇಷ ನಷ್ಟವಾಗಿದೆಂದು ಹೇಳಲಾಗಿದೆ.

ಬರ್ಮಾ ಜಪಾನ ಶಾಂತಿ ಒಪ್ಪಂದವನ್ನು ನಿರಾಕರಿಸಿತು.

ಜಪಾನದ ಯುದ್ಧ ಕಾಲದಲ್ಲಿ ಬರ್ಮಕ್ಕೆ ಅಪಾರ ಹಾನಿಯಾಗಿದ್ದರಿಂದಲೂ ಅದರ ಪರಿಹಾರವನ್ನು ಜಪಾನವು ನೀಡದೆ ಇದ್ದುದರಿಂದಲೂ, ಮೂರು ವರ್ಷದ ಅವರ ಆಡಳಿತ ಕಾಲದಲ್ಲಿ ಬರ್ಮೀಯರ ಹಿಂಸೆ-ಕೊಲೆಗೆ [illegible] ಈ ಶಾಂತಿ ಕರಾರನ್ನು ತಾನು ಒಪ್ಪುವುದು ಶಕ್ಯವಿಲ್ಲವೆಂದು ಹೇಳಿದೆ.

ಕೊರಿಯಾ ಮಾತುಕತೆ ಬಗೆಹರಿಯಲಿಲ್ಲ?

ಕೆಸಾಂಗದಲ್ಲಿ ನಡೆಯುತ್ತಿರುವ ಯುದ್ಧ ಮುಕ್ತಾಯದ ಮಾತುಕತೆಗಳು ಯಾವುದೇ ನಿರ್ದಿಷ್ಟ ರೂಪಕ್ಕೆ ಬಂದು ಮುಟ್ಟಿರುವುದಿಲ್ಲ. ಕಮ್ಯೂನಿಸ್ಟರ ಮಾತುಕತೆಯ ಯಥಾರ್ಥವನ್ನು ಅವರ ಕೃತಿಯಿಂದಲೇ ಪರೀಕ್ಷಿಸಬೇಕೇ ಹೊರತು ಮಾತುಕತೆಯಿಂದಲ್ಲವೆಂದು ಜನರಲ್ ರಿಜವೆಯವರು ಹೇಳಿರುವರು. ಯುದ್ಧ ಸನ್ನಾಹವೂ–ಯುದ್ಧಪ್ರಗತಿಯೂ ಏಕಕಾಲದಲ್ಲಿ ನಡೆಯುತ್ತಿರುವಾಗ ಮಾತುಕತೆ ಯಶಸ್ವಿಯಾಗುವದೆನ್ನುವ ವಿಚಾರ ಸಂಶಯಾಸ್ಪದವಾಗುದೆಂದು ಜ. ರಿಜವೆಯವರ ಅಭಿಪ್ರಾಯವಿದೆ.

ರಶಿಯದ ಯುದ್ಧ ಹಂಚಿಕೆ

“ಜಗತ್ತನ್ನು ಕಮ್ಯೂನಿಸ್ಟರ ಅಧೀನದಲ್ಲಿರಿಸುವ ಬಲವಾದ ಇಚ್ಛೆ ರಶಿಯಕ್ಕಿದೆ. ಅಪಾರವಾದ ಸೈನ್ಯ ಸಂಗ್ರಹವನ್ನದು ಮಾಡುತ್ತಲಿದೆ. ಇದನ್ನು ತಿಳಿದೂ ನಾವು ಅದರ ಹೃದಯ ಪರಿವರ್ತನೆಯಾಗಿದೆಂದು ಭಾವಿಸುವದು ತಪ್ಪಾಗಿದೆ. ನಮ್ಮ ದೌರ್ಬಲ್ಯ ಅರ್ಥಾತ್ ನಮ್ಮಲ್ಲಿ ದೃಢ ನಿರ್ಧಾರ ಇಲ್ಲದೇ ಇರುವದೇ ನಮ್ಮ ವಿನಾಶಕ್ಕೆ ಕಾರಣ. ಆದುದರಿಂದ ನಾವು ನಮ್ಮ ಸಂರಕ್ಷಣಾ ಶಾಖೆಯನ್ನು ಭರದಿಂದ ಬಲಗೊಳಿಸಬೇಕು” ಎಂದು ಅಧ್ಯಕ್ಷ ಟ್ರೂಮನ್ನರೆಂದಿದ್ದಾರೆ.

ಮಾರಿಸನ್ನರ ಮಾತುಕತೆಗೆ ಯಶ?

ಪರ್ಶಿಯದ ಎಣ್ಣೆಯ ಪ್ರಕರಣದಲ್ಲಿ ಅಧ್ಯಕ್ಷ ಟ್ರೂಮನ್ನರ ರಾಯಭಾರಿಗಳಾದ ಮಾರಿಸನ್ನರು ಸಮಾಧಾನಕರವಾದ ತೀರ್ಮಾನಕ್ಕೆ ಬಂದುಮುಟ್ಟಿರುವರೆಂದು ತಿಳಿದುಬರುತ್ತದೆ. ಪರ್ಶಿಯವು ಬ್ರಿಟಿಶ ಮಂತ್ರಿಗಳೊಡನೆ ಮಾತು ಮುಂದುವರಿಸಲು ಒಪ್ಪಿರುವದು ಮಾರಿಸನ್ನರ ಮಾತುಕತೆಯ ಫಲಶ್ರುತಿ! ಇರಾಣದ ಮುಖ್ಯಮಂತ್ರಿ ಮೊಸಾದಿಕರು ಸ್ಟೋಕರ್ಡ್ ಕ್ರಿಪ್ಸರೇ ಆಗಬೇಕೆಂದು ಹೇಳುತ್ತಿರುವರಂತೆ. ಕ್ರಿಪ್ಸರು ಸ್ವಿಜರ್ಲೇಂಡ್‌ದಲ್ಲಿ ಅಸ್ವಸ್ಥದ ಬಗ್ಗೆ ಶುಶ್ರೂಷೆ ಪಡೆಯುತ್ತಿರುವ ಕಾರಣ ಅರ್ಥಿಕ ಮಂತ್ರಿ ಗೇಟ್ಸ್‌ಕೆಲ್ಲರಾಗಬಹುದೆಂದು ಹೇಳಿರುವರಂತೆ!

ಪೆಟ್ರೋಲಿನ ಕೊರತೆಯಾಗದು.

ಪರ್ಶಿಯದ ಎಣ್ಣೆಯ ಪ್ರಕರಣದಿಂದ ಪೆಟ್ರೋಲಿನ ಕೊರತೆಯಾಗಬಹುದೆಂದು ಭೀತಿ ಎಲ್ಲೆಡೆಗೂ ಹಬ್ಬಿದೆ. ಭಾರತವು ಸಾಕಷ್ಟು ಸಂಗ್ರಹಿಸಿದೆ. ಎರಡು ತಿಂಗಳ ಹಿಂದೆ ಇದ್ದಷ್ಟೇ ಈಗಲೂ ಸಂಗ್ರಹವಿದೆ. ಇನ್ನು ಮೂರು ತಿಂಗಳ ವರೆಗೆ ಕೊರತೆಯಾಗದಷ್ಟು ಸರಕಾರದ ಸಂಗ್ರಹದಲ್ಲಿದೆಯೆಂದು ಕೇಂದ್ರ ಸರಕಾರದ ಮಂತ್ರಿ ಗಾಡಗೀಳರು ತಿಳಿಸಿದರು.

ಬಸ್ಸು-ಪ್ರಯಾಣಿಕರೂ ನೀರುಪಾಲಾದರು!

ವಿಜಯವಾಡದಿಂದ 60 ಮೈಲು ದೂರದ ಪಾಲೇರು ಎಂಬ ಹೊಳೆಯಲ್ಲಿ 14 ಜನ ಪ್ರಯಾಣಿಕರುಳ್ಳ ಬಸ್ಸೊಂದು ಹೊಳೆಯನ್ನು ದಾಟುವಾಗ ನಡುವೆ ನಿಂತುಬಿಟ್ಟಿತು. ಬಸ್ಸು ಹಿಂದೆ ಅಥವಾ ಮುಂದೆ ಚಲಿಸದೆ ಇದ್ದುದರಿಂದ ಒಮ್ಮೆಯೇ ನೀರೇರಿ ಬಂದು ಬಸ್ಸು ಜನರೂ ನೀರುಪಾಲಾದರು. ಐವರನ್ನು ಮಹಾ ಪ್ರಯತ್ನದಿಂದ ಪಾರುಮಾಡಲಾಯಿತು. ಉಳಿದ 9 ಜನರೂ ಬಸ್ಸು ಕಾಣೆಯಾಗಿದೆ.

ಉಡುಪಿ

ಅಸಿಸ್ಟಾಂಟ್ ರೇಶನಿಂಗ್ ಆಫೀಸರರ ವಿನಂತಿ—ಭಾರತ ನಾಯಕ ಪಂಡಿತ ನೆಹರೂರವರ ಹಿತ ಸೂಚನೆಯನು. ಮನ್ನಿಸಿ ಎಷ್ಟೋ ಮಂದಿ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಲು ವಾರಕ್ಕೊಂದು ಊಟಬಿಟ್ಟು ಉಳಿಸಿದ ಆಹಾರ ಧಾನ್ಯಗಳನ್ನು ಶೇಖರಿಸಿ ಧರ್ಮಾರ್ಥ ಒಪ್ಪಿಸಿರುವ ನಿದರ್ಶನಗಳನೇಕ ಇವೆಯಷ್ಟೆ. ಆಂತೆಯೇ ಉಡುಪಿ ರೇಶನಿಂಗ್ ಕ್ಷೇತ್ರದಲ್ಲೂ ವಾರಕ್ಕೊಂದು ಊಟ ಬಿಟ್ಟು ಉಳಿಸಿದ ಆಹಾರವಸ್ತುಗಳನ್ನು ಧರ್ಮಾರ್ಥವಾಗಿ ರೇಶನಿಂಗ್ ಆಫೀಸಿಗೆ ಕೊಟ್ಟು ದೇಶದ ಆಹಾರ ಪರಿಸ್ಥಿತಿಯನ್ನು ಸಂಪಾದಿಸಲು ಸರಕಾರದೊಂದಿಗೆ ಸಹಕರಿಸಬೇಕಾಗಿ ವಿನಂತಿಸುತ್ತಾರೆ.

ಏರಿದ ಬೆಲೆ ತಗ್ಗಿಸಬೇಕಾಗಿದೆ—ಅಕ್ಕಿ, ಗೋಧಿಯ ಕ್ರಯವು ಈಗಾಗಲೇ ಏರಿದ್ದು ಬಡವರ ಮತ್ತು ಮಧ್ಯಮವರ್ಗದವರಿಗೆ ಪಡಕೊಳ್ಳಲು ಕಷ್ಟ ಸಾಧ್ಯವಾದುದರಿಂದ ಹಿಂದಿನ ದರದಲ್ಲೇ ವಿತರಣೆಯಾಗುವಂತಾಗಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ ನಿರ್ಣಯವು ಇದೇ ತಾ 22ರಲ್ಲಿ ರಥಬೀದಿಯಲ್ಲಿ ಕೂಲಿಕಾರ ಹಾಗೂ ಇತರ ಕೂಟುವಳಿಯಿಂದ ಸೇರಿದ ಸಭೆಯಲ್ಲಿ ಆಯಿತು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ದಾಸ ಸೇರಿಗಾರರು ವಹಿಸಿದ್ದು ಶ್ರೀ ಯು. ಶೀನ ನಾಯ್ಕರು ಭಾಷಣ ಮಾಡಿದರು.

ದ. ಕ. ಜಿಲ್ಲೆಗೆ ಜೋಗದ ವಿದ್ಯುತ್ ಪೂರೈಕೆಯ ಕುರಿತು ಉಡುಪಿ ನಾಗರೀಕರ ಪರವಾಗಿ ಬೆಂಗಳೂರಿಗೆ ತೆರಳಿದ್ದ ಶ್ರೀ ಟಿ. ಎ. ಪೈಗಳು ಇದೇ ತಾ 20ರಲ್ಲಿ ಕೂಡಿದ ನಾಗರೀಕರ ಸಭೆಯಲ್ಲಿ ತಾನು ಮಾಡಿದ ಕಾರ್ಯಗಳೇನೆಂಬುದನ್ನು ವಿವರಿಸುತ್ತ 1952ರೊಳಗೆ ವಿದ್ಯುತ್ ದೊರೆಯುವ ಸಂಭವವಿದೆಯಾಗಿ ಹೇಳಿದರು.

ಸುರತ್ಕಲ್—ಮುಕ್ಕ ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ವಾಚನಾಲಯವು ಈ ಮೊದಲು ನಡೆಯುತ್ತಿದ್ದ ಕೋಣೆಯಲ್ಲಿ ಸ್ಥಳ ಕಡಿಮೆಯಾದುದರಿಂದ ಸದ್ಯ ಸುರತ್ಕಲ್ ಮುಕ್ಕ ಅಗ್ರಹಾರ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡಕ್ಕೆ (ತಾ 15-7-51ರಂದು) ವರ್ಗಾಯಿಸಲಾಗಿದೆ.

ತೆಂಕನಿಡಿಯೂರು—ಕೊಟ್ಟಂ ಬೋರ್ಡ ಶಾಲೆಯಲ್ಲಿ ಈಚೆಗೆ ಸಸಿಸಪ್ತಾಹವೂ ಹೆಡ್‌ಮಾಸ್ತರರಾಗಿರುವ ದಿ| ಟಿ. ಗೋಪಾಲನವರ ವಾರ್ಷಿಕ ದಿನಾಚರಣೆಯೂ ಜರಗಿ ಸಂದರ್ಭೋಚಿತ ಭಾಷಣಗಳಾದುವು. ದಿವಂಗತರ ಚಿರಂಜೀವಿಗಳು ಮಕ್ಕಳಿಗೆ ಸಿಹಿತಿಂಡಿ ಹಂಚಿದರು. ಶಾಲೆಗಾಗಿ ಶ್ರೀ ಕೋದಂಡ ರಾಮ ಹೊಳ್ಳರು ಕಟ್ಟಿಸಿಕೊಡಲೊಪ್ಪಿದ ಕಟ್ಟಡದ ಕೆಲಸವು ಭರದಿಂದ ಸಾಗುತ್ತಿದೆ.

ಕಾರ್ಕಳ—ತಾ. 22ರಲ್ಲಿ ಎಸ್. ವಿ. ಟಿ. ಹೈಸ್ಕೂಲಿನಲ್ಲಿ ಹರಿಜನರ ಸಭೆಯೊಂದು ಶ್ರೀ. ಕೆ. ಕೆ. ಪಿ. ಪುದುವಾಳರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ. ಪಿ. ಡಿ. ಬಂಗೇರರ ಭಾಷಣವಾಗಿ ಕೆಲವು ಠರಾವುಗಳಾದುವು.

ಕುಂಬಳೆ—ತಾ. ೧೫ರಿಂದ ಕೊಡುತ್ತಿರುವ ಗೋಧಿಗೂ ಬೆಲೆ ಏರಿರುತ್ತದೆ. ಈ ವಾರದಲ್ಲಿ ಕೊಟ್ಟ ಅಕ್ಕಿಗೆ ೧೩ಆ ೩ಪೈಯಂತೆ ಬೆಲೆ ಕೊಡಬೇಕಾಗಿ ಬಂದಿರುತ್ತದೆ. ಈಗ ಬಂದಿರುವ ಕೊಯಮುತ್ತೂರು ಅಕ್ಕಿಗೆ ಎಂಟಾಣೆಯೇ ಕ್ರಯ ಇರಂದೀತೆಂದು ತಿಳಿದುಬರುತ್ತದೆ.

ಅಂಗಡಿಪಡಗರು, ಪುತ್ತಿಗೆ, ಮುಗುಮೈರೆ ಕುಡಾಲ್, ಮೇರ್ಕಳ ಗ್ರಾಮಸ್ಥರಿಗೂ ರಿಲೀಫ್ ರೇಶನ್ ಕೊಡಲು ಮಂಜೂರಾಗಿರುವುದಾಗಿ ತಿಳಿದುಬರುತ್ತದೆ.

ಮಾಯಿಪಾಡಿಯಲ್ಲಿ ಬುನಾದಿ ಶಿಕ್ಷಣದಲ್ಲಿ ಟ್ರೈನಿಂಗ್ ಕಲಿಯುತ್ತಿದ್ದವರು ತಾ. ೧೫ರಂದು ಬಿಡುಗಡೆಯಾಗಿರುವರು.

ಪಟ್ಲ ಗ್ರಾಮದಲ್ಲೂ ತಾ. ೧೫ರಂದು ರಿಲೀಫ್ ಅಂಗಡಿಯನ್ನು ತೆರೆಯಲಾಗಿದೆ.

ಮೊಗ್ರಾಲ್ ಜಮಾಹತ್ ಪಳ್ಳಿಯನ್ನು ಹೊಸತಾಗಿ ಕಟ್ಟಿಸಲು ಬೇಕಾದ ಕೆಲಸವನ್ನು ನಡೆಸಲು ಒಂದು ಸಮಿತಿಯನ್ನು ಅಲ್ಲಿನವರು ಆರಿಸಿರುವರು.

ಹೊಸ ಮಾದರಿಯ ಪಾಯಖಾನೆಗಳಿಗೆ ಬೇಕಾಗುವ ಸಿಮೆಂಟ್ ಕಾಂಕ್ರೀಟ್ ಫ್ಲಷ್-ಔಟ್ ಸೀಟುಗಳು ಪೈಪುಗಳು ಮತ್ತು ಬೆಂಡುಗಳು ದ. ಕ. ಜಿಲ್ಲಾ ಹೆಲ್ತ್ ಆಫೀಸರರಲ್ಲಿಯೂ, ಬಂಟ್ವಾಳ, ಪುತ್ತೂರು, ಕಾಸರಗೋಡು ಮತ್ತು ಹೊಸದುರ್ಗ ರೇಂಜುಗಳ ಹೆಲ್ತ್ ಇನ್ಸ್‌ಪೆಕ್ಟರರಲ್ಲೂ ಮಾರಾಟಕ್ಕೆ ತಯಾರಿವೆ ಎಂದೂ, ಫ್ಲಷ್-ಔಟ್ ಸೀಟು ಒಂದರ ರೂಪಾಯಿ 18-1-0, ಬೆಂಡಿಗೆ ರೂ. 1-12-0 ಪೈಪಿಗೆ ರೂ. 1-8-0 ಕ್ರಯವೆಂತಲೂ ಜಿಲ್ಲಾ ಹೆಲ್ತ್ ಆಫೀಸರರು ಪ್ರಕಟನೆ ಹೊರಡಿಸಿರುತ್ತಾರೆ.

ಪೈವಳಿಕೆ—ಸ್ಥಳೀಯ ಗ್ರಾಮ ಸೇವಾ ಸಂಘದ ವತಿಯಿಂದ ಇದೇ ತಾ 15ರಂದು ಬೆಳಿಗ್ಗೆ ಪ್ರತಿ ಆದಿತ್ಯವಾರ ಜರಗುವ ವಾರಸಂತೆಯ ಪ್ರಾರಂಭೋತ್ಸವವು ಚೆಲ್ಲದೆ ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀಯು. ವಾಸುದೇವ ಶಿಣಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆರ್ ಬಲ್ಲಾಳ ಮೊದಲಾದವರು ಹಳ್ಳಿಗಳಲ್ಲಿ ವಾರಸಂತೆಗಳ ಅವಶ್ಯಕತೆಯ ಕುರಿತು ಮಾತನಾಡಿದರು.

ಸಾಲಿಗ್ರಾಮ—ಇಲ್ಲಿಯ ಶ್ರೀ ವಾಣೀ ವಿಲಾಸಿನೀ ಸಂಸ್ಕೃತ ಪಾಠಶಾಲಾ ಕಮಿಟಿಯ ತೃತೀಯ ವಾರ್ಷಿಕ ಅಧಿವೇಶನವೂ ಶಾಲೆಯ ಮೂವತ್ತನೆ ವರ್ಧಂತ್ಯುತ್ಸವವೂ ಇದೇ ತಾ. 15ರಲ್ಲಿ ಶ್ರೀ ಎಸ್. ವೆಂಕಟರಾಜ, ಉಡುಪಿ, ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶಾಲಾ ಬಾಲಿಕೆಯರಿಂದ ಮಂಗಲಗೀತೆಯಾದ ಬಳಿಕ ಕಮಿಟಿ ಕಾರ್ಯದರ್ಶಿಗಳು ಸ್ವಾಗತ ಭಾಷಣಮಾಡಿ ವರದಿ ವಾಚನ ಮಾಡಿದರು. ಅಧ್ಯಕ್ಷರು ಸಂಸ್ಕೃತ ಭಾಷೆಯ ಪ್ರಾಚೀನತೆ, ಬೆಳವಣಿಗೆ ಮತ್ತು ಉಪಯುಕ್ತತೆಯ ಕುರಿತು ವಿಚಾರಪರ ಮಾತುಗಳನ್ನಾಡಿ ಸಂಸ್ಕೃತ ಅಭ್ಯಾಸದ ಅವಶ್ಯಕತೆಯನ್ನು ಒತ್ತಿಹೇಳಿದರು. ಶಾಲಾ ಬಾಲಕರು ಸಂಸ್ಕೃತ ಮೃಚ್ಛಕಟಿಕಾ ನಾಟಕದ ಒಂಭತ್ತನೆ ದೃಶ್ಯವನ್ನು ಅಭಿನಯಿಸಿದರು. ನಂತರ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪಾರಿತೋಷಕಗಳು ಹಂಚಲಾದುವು. ವಂದನಾರ್ಪಣೆ, ಪ್ರಸಾದ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ನೋಡಿದರೆ ಬಿಡದಿರುವ ಪುಸ್ತಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಶಲವ	0	7	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	4	0
ಪ್ರೇಮವಿಜಯ	1	0	0
ರಂಗಭೂಮಿ	0	12	0
ಸೇವಾಪಥ	0	8	0
ನಾರೀ ಹೃದಯ	1	0	0
ಭಾರತೀಯ ಕತೆಗಳು	1	4	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ನಗೆನೋಟಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶ ಗಂಗೆ	2	0	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜವಿಾನ್ದಾರ	1	12	0

ವಿಳಾಸ:

(1) ಕಿರಿಯರ ಪ್ರಪಂಚ, ಉಡುಪಿ.
(2) ನವಭಾರತ ಪುಸ್ತಕ ಭಂಡಾರ, ಉಡುಪಿ.



Approved from by the Govt, of Mysore Certificated by the Agent of the Govt of Cylone & Indian

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ

ಅನಾಥರಿಗಾಗಿ ಅಷ್ಟೈಶ್ವರ್ಯ ತ್ಯಾಗಮಾಡಿ ಯೋಗಿಗಳಾಗುವವರೂ ಲೋಕದಲ್ಲಿದ್ದಾರೆ–ಅನಾಥ ಮಕ್ಕಳ ಹೆಸರಿನಿಂದ ಅನಾಥಾಲಯವೆಂದು ಸಾಕಷ್ಟು ಅನುಕೂಲತೆ ಮಾಡಿಕೊಂಡು ಭೋಗಿಗಳಾಗುವವರೂ ಲೋಕದಲ್ಲಿದ್ದಾರೆ

ಇದರ ವಿಮರ್ಶೆಗಾಗಿ

ಎ. ಆರ್. ಕರ್ದಾರರ

ದರ್ದ್

ಸಂಗೀತ: ನೌಶದ್. ಪಾತ್ರವರ್ಗ: ಮುನವರ್ ಸುಲ್ತಾನ, ನುಸ್ರತ್, ಹುಸ್ನಬಾನು, ಸುರೈಯ್ಯ ಮೊದಲಾದವರು.

ತಾ 29-7-51ರಿಂದ

ಬೊಂಬೇ ಟಾಕೀಸಿನವರ

ಸಂಗ್ರಾಮ್

ನಳಿನಿ ಜಯವಂತ್ ಅಶೋಕಕುಮಾರ್

"ಬೇರೆ ಶಾಸ್ತ್ರಗಳನ್ನ ಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು–ದಿ| ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ —12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

'ಭಾಗ್ಯಲಕ್ಷ್ಮಿ'ಯನ್ನು ಆಶಿಸದವರಾರು ?

ಓದಿದರೆ ಉತ್ತಮ ಕಾದಂಬರಿ!
ಅಭಿನಯಿಸಿದರೆ ಚೆಲೋ ನಾಟಕ!
ಅದುವೇ 'ಅಂತರಂಗ'ದ
ಪ್ರಕಟಣೆ—

ಭಾಗ್ಯಲಕ್ಷ್ಮಿ

(ಶ್ರೀ ಬೆಳ್ತಂಗಡಿ ಲಕ್ಷ್ಮಣ ರಾವ್, ಪುತ್ತೂರು.)

ನವರಸಭರಿತವಾದ
ಪ್ರತಿಯೊಬ್ಬರೂ ಓದಲೇಬೇಕಾದ
ಸಾಮಾಜಿಕ ನಾಟಕ

ಪತ್ತೇದಾರಿ ಕಾದಂಬರಿಯಂತೆ ನಿಮ್ಮ ಮನವನ್ನು ಸೆಳೆದೊಯ್ಯುವ ಕಥಾಸನ್ನಿವೇಶ!

ಬೆಲೆ ಬರೀ ರೂ. 1 4 0

ಅಂತರಂಗ ಕಾರ್ಯಾಲಯ, ಉಡುಪಿ
ನವಭಾರತ ಬುಕ್ ಡಿಪೋ, ಉಡುಪಿ.

ಮಂಗಳೂರು

ರೇಡಿಯೋ ಭಾಷಣ:—ಅಡಿಕೆ ಉತ್ಪಾದನೆ ಎಂಬ ವಿಚಾರವಾಗಿ ದ. ಕ. ತೆಂಗಿನ ಕಾಯಿ ಮತ್ತು ಅಡಿಕೆ ಮಾರ್ಕೆಟ್ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ. ತೇಜಪ್ಪ ಶೆಟ್ಟಿ, B. Sc. Ag. D. I. H. ಇವರು, ಇದೇ ತಾ 27ರಂದು ಮದ್ರಾಸಿನ ರೇಡಿಯೋ ಕೇಂದ್ರ ದಿಂದ ಸಂಜೆ 7. 30ಕ್ಕೆ ಕನ್ನಡದಲ್ಲಿ ಭಾಷಣವೀಯುವರು. ಮುಂದೆ ತಾ 31-8-51 ಮತ್ತು 28-9-51ರಲ್ಲೂ ಅಡಿಕೆ ವ್ಯವಸಾಯದ ಕುರಿತು ಮತ್ತೆರಡು ಭಾಷಣಗಳನ್ನು ಮಾಡಲಿರುವರು.

ದ. ಕ. ಜಿಲ್ಲಾ ಶಾಲೆಗಳ ಕ್ರೀಡಾ ಸಮಿತಿ ಸಭೆಯು—ತಾ 15ರಲ್ಲಿ ಜರಗಿತು. ಹೊಸವರುಷಕ್ಕೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಟಿ. ರಾಘವನ್ ನಾಯರ್ (ಅಧ್ಯಕ್ಷ) ಶ್ರೀ ಎಸ್. ಎ. ಫರ್ಟಾಡೊ (ಉಪಾಧ್ಯಕ್ಷ), ಶ್ರೀ ಕೆ. ಆರ್. ನಾಯರ್ (ಕಾರ್ಯದರ್ಶಿ) ಶ್ರೀ ಕೆ. ಎ. ಹೊಳ್ಳ (ಉಪ ಕಾರ್ಯದರ್ಶಿ) ಇವರು ಅಧಿಕಾರಿ ವರ್ಗಕ್ಕೆ ಆರಿಸಲ್ಪಟ್ಟರು.

ದ. ಕ. ಜಿಲ್ಲಾ ಬೋರ್ಡ್ ಸಭೆಯು—ತಾ 18ರಲ್ಲಿ ಜರಗಿದಾಗ ಶ್ರೀ ಯು. ದೇಜು, ಅವರು ಮೂರು ವರ್ಷಗಳ ವರೆಗೆ ವಿದ್ಯಾಧಿಕಾರಿಯಾಗಬೇಕೆನ್ನುವ ನಿರ್ಣಯವಾಯಿತು. ಜಿಲ್ಲಾ ಬೋರ್ಡಿನ ನೌಕರರಿಗೆ ಕಿದ್ದ ಪಡೀ ಸಾದ ಮನೆ ಬಾಡಿಗೆ ಭತ್ತೆಯನ್ನು ಏಪ್ರಿಲ್ ತಿಂಗಳಾರಂಭದಿಂದ ಕೊಡುವುದೆಂದು ನಿರ್ಧಾರವಾಯಿತು. ರಾಮನಗರದ ಶ್ರೀಕೃಷ್ಣ ವಿದ್ಯಾಲಯಕ್ಕೂ ಉದ್ಯೋಗ ಶಾಲೆಗೂ ರೂಪಾಯಿ 100 ಮತ್ತು ರೂ 200 ಸಹಾಯ ಧನ ಮಂಜೂರಾಯಿತು. ಪೆರಿಯ, ಚೆನ್ನಾಡು, ಪಂಜ, ಸುಬ್ರಮಣ್ಯ ಬೋರ್ಡ್ ಶಾಲೆಗಳಲ್ಲಿ 8ನೆ ಮತ್ತು 7ನೆ ತರಗತಿ ತೆರೆಯಲು ಒಪ್ಪಿಗೆ ಕೊಡಲಾಯಿತು ಸುಬ್ರಮಣ್ಯ ಬೋರ್ಡ್ ಶಾಲೆಯ ಶಾಲಾ ಫೀಸು ಮಾಫಿ ಮಾಡಲು ರೂ 100 ಪ್ರತ್ಯೇಕಿಸಲಾಯಿತು. ಕಾಪು, ವಿಟ್ಲ, ಗಂಗೊಳ್ಳಿಗಳಲ್ಲಿರುವ ಡಿಸ್ಪೆನ್ಸರಿಗಳಲ್ಲಿರುವವರು ಸುತ್ತುಮುತ್ತಲಿನ ಗ್ರಾಮಾಂತರಗಳಲ್ಲಿ ಪ್ರಚಾರ ಮಾಡುವ ಬಗ್ಗೆ ರೂಪಾಯಿ 15 ಪ್ರಯಾಣ ಭತ್ತೆ ಕೊಡುವ ನಿರ್ಧಾರವಾಯಿತು. 50,000 ಕ್ಕೂ ಮಿಕ್ಕ ಜನರಿರುವ ನೀಲೇಶ್ವರದಲ್ಲೊಂದು ಆಸ್ಪತ್ರೆ ತೆರೆಯಬೇಕೆಂದೂ ಅದಕ್ಕಾಗಿ ಕಟ್ಟಡ ಸಾಮಗ್ರಿಗಳನ್ನು ಊರವರು ಒದಗಿಸಿಕೊಡುತ್ತಾರೆಂದೂ ಶ್ರೀ ಟಿ. ಸಿ. ರವಿವರ್ಮ ರಾಜರು ತಂದ ಠರಾವು ರೂಪಾಯಿ 5000/- ಕೇವಲ ಇಡಬೇಕೆಂಬ ಶರ್ತದೊಂದಿಗೆ ಮಾನ್ಯವಾಯಿತು.

ಮುನಿಸಿಪಲ್ ಸಭೆಯು—ತಾ 20 ರಂದು ಸೇರಿತು. ಶ್ರೀ ಬಿ. ಎಸ್. ಭಾಸ್ಕರರೈಗಳು ತಂದ ಎರಡು ನಿರ್ಣಯಗಳನ್ನು ಚರ್ಚಿಸಲಾಯಿತು. ಮೊದಲಿನ ಠರಾವಿನಲ್ಲಿ ಮದ್ರಾಸು ಸರಕಾರವು ಮಂಗಳೂರು ನಗರಕ್ಕೆ ನೀರೊದಗಿಸುವ ಯೋಜನೆಯನ್ನೂ, ಚರಂಡಿಗಳ ಯೋಜನೆಯನ್ನೂ, ಜಲ್ಲಿಗೆ ಬರಲಿರುವ ವಿದ್ಯುತ್ತಿನ ಯೋಜನೆಯನ್ನೂ ತಡೆದಿರಿಸಿದುದಕ್ಕಾಗಿ ಈ ಸಭೆಯು ವಿಷಾದ ಸೂಚಿಸುತ್ತದಲ್ಲದೆ, ಆ ಕೆಲಸಗಳನ್ನು ಪುನಃ ಕೈಕೊಳ್ಳದಿದ್ದರೆ ಈ ನಗರ ಸಭೆಯ ಸದಸ್ಯರೆಲ್ಲ ಆಗೋಸ್ತು 15ರಂದು ಸರಕಾರದ ವರ್ತನೆಯನ್ನು ನಿಷೇಧಿಸುವುದಕ್ಕಾಗಿ ರಾಜೀನಾಮೆ ಕೊಡಬೇಕೆಂದು ಸೂಚಿಸಲಾಯಿತು. ಈ ಕುರಿತು ಅಧ್ಯಕ್ಷರು ಸರಿಯಾದ ವಿವರಣೆ ಕೊಡುತ್ತ ಗುರುಪುರದ ನೀರಿನಲ್ಲಿ ಕಬ್ಬಿಣದ ಅಂಶ ಹೆಚ್ಚಿರುವುದರಿಂದ ಅದರ ಕೆಲಸ ನಿಲ್ಲಿಸಲ್ಪಟ್ಟಿರುವುದು ನಿಜವೆಂದೂ ಇದರ ಬದಲಿಗೆ ನೇತ್ರಾವತಿ ನದಿಯಿಂದ ಕುಂಬಳೆಯಿಂದಲ್ಲಿ ನೀರನ್ನು ಕೂಡಿಸಿ ಮಂಗಳೂರಿಗೆ ತರುವ ಹೊಸ ಯೋಜನೆಯ ಸರ್ವೇಕ್ಷಣೆ ಕೆಲಸವು ನಮಗೆ ಅನುಕೂಲವಾಗಿದೆ" ಎಂದೂ ತಿಳಿಸಿದರು. ಈ ವಿವರಣೆ ಮೇಲಿಂದ ಆ ಠರಾವನ್ನು ಬಾಕಿ ಮಾಡಲಾಯಿತು. ಈ ಜಿಲ್ಲೆಯಲ್ಲಿ ಈಗ ಪಡಿತರ ಅಂಗಡಿಗಳಲ್ಲಿ ಮಾರುವ ಅಕ್ಕಿಯ ಬೆಲೆಯು ಇಷ್ಟನ ಜನರಿಂದ ಕೊಂಡುಕೊಳ್ಳಲು ಅಸಾಧ್ಯವಾದಷ್ಟು ಹೆಚ್ಚಿಗೆಯಾಗಿರುವುದರಿಂದ ಸರಕಾರವು ಅದಕ್ಕೆ ಸಹಾಯ ನೀಡಿ ಬೆಲೆಯನ್ನು ಕೂಡಲೇ ಇಳಿಸಬೇಕೆಂದು ಹೇಳುವ ಶ್ರೀ ರೈಗಳ ಎರಡನೆ ಠರಾವು ಮಂಜೂರಾಯಿತು.

ಸಾರ್ವಜನಿಕ ಸಭೆ: ರೇಶನ್ ಅಕ್ಕಿಯ ಏರಿದ ಬೆಲೆಯನ್ನು ತಗ್ಗಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸುವುದಕ್ಕಾಗಿ ಸಾರ್ವಜನಿಕ ಸಭೆಯೊಂದು ತಾ. 15ರಲ್ಲಿ ಕೇಂದ್ರ ಮೈದಾನದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ಜರಗಿತು.

ಬುದ್ಧ ದಿನಾಚರಣೆಯು ಬೆಸೆಂಟ್ ಮಂದಿರದಲ್ಲಿ ಸ್ಥಳೀಯ ಥಿಯಾಸಾಫಿಕಲ್ ಸೊಸೈಟಿಯ ನೇತೃತ್ವದಲ್ಲಿ ತಾ. 18ರಂದು ಡಾ। ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವಿ. ಎಸ್. ಶರ್ಮ, ರಘುನಾಥ ಸುಬೇರ್, ಬಿ. ಅನಂತರಾಯರೇ ಮೊದಲಾದವರ ಭಾಷಣಗಳಾದುವು.

ಕಾರಂತರ ಕಾಂಗ್ರೆಸ್ ತ್ಯಜಿಸುವ ನಿರ್ಧಾರ—ಕಿಸಾನ್ ಮಜದೂರು ಪ್ರಜಾ ಪಕ್ಷದ ಸಂಘಟನೆಗಾಗಿ ಮಂಗಳೂರಿಗೆ ಬಂದಿದ್ದ ಕೇರಳದ ಕೇಳಪ್ಪನವರು ತಾ 9ರಂದು ಮಂಗಳೂರಿನ ಪ್ರಗತಿ ಮಂಡಳಿ ಮತ್ತು ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ ಕಾವೇರಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟುಬಿಡೆಂಬುದನ್ನೂ ಪ್ರಜಾಪಕ್ಷದ ಧ್ಯೇಯ ಧೋರಣೆ ಏನೆಂಬುದನ್ನೂ ತಿಳಿಸಿದರು. ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಕೆ. ಆರ್. ಕಾರಂತರು ಭಾಷಣ ಮಾಡುತ್ತ ಕಾಂಗ್ರೆಸ್ಸನ್ನು ಬಿಡುವುದೆಂದೇ ನನ್ನ ನಿರ್ಧಾರವಾಗಿದೆ. ಆದರೆ ಇನ್ನೂ ಕೆಲವರೊಂದಿಗೆ ವಿಚಾರ ವಿನಿಮಯ ಮಾಡಿ ನನ್ನ ಚುನಾವಣೆ ಕ್ಷೇತ್ರದಲ್ಲಿ ವಿಚಾರಿಸಿ ಸ್ವಲ್ಪ ಕಾಲದಲ್ಲೇ ಕಾಂಗ್ರೆಸ್ಸನ್ನು ತ್ಯಜಿಸಬೇಕೆಂದಿದ್ದೇನೆ. ಎಂದರು, ವಿದ್ಯಾರ್ಥಿ ಸಂಘದ ಶ್ರೀ ಎಂ. ಲಕ್ಷ್ಮೀನಾರಾಯಣ ಭಟ್ಟರು ವಂದಿಸಿದರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 177/1951

ಅಕ್ಕಮ್ಮ ಸೆಡ್ತಿ —ವಾದಿ

ಪ್ರತಿವಾದಿರು— ಗೋವಿಂದ ಸೆಟ್ಟಿ ಕೂಡಾ 5ನೇ ಪ್ರತಿವಾದಿ, ಮಹಾಬಲ ಸೆಟ್ಟಿ, 10ನೇ ಪ್ರತಿವಾದಿ, ಶಿವರಾಮ ಸೆಟ್ಟಿ

ಸೂರಮ್ಮ ಸೆಡ್ತಿ ಮಕ್ಕಳು

ಹಿರಿಯಾಣ ಗ್ರಾಮದ ಹೊಸಮನೆಯಲ್ಲಿರುವವರು,

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ದಾವಾ ಆಸ್ತಿಯ ಹಿಸೆ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯನ್ನು ತಾರೀಕು 6-8-1951ಕ್ಕೆ ತನ್ನಿಗೆ ಬಿಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿಯದೆ.

By Order of the Court

Y. Tejappa Shetty

Advocate for Plff.

Coondapoor 14-7-1951

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 212/1951

ವಾದಿ—ವೆಂಕಟಾಚಲ ಹೆಬ್ಬಾರ

—ಪ್ರತಿವಾದಿರು ಲಕ್ಷ್ಮೀನಾರಾಯಣ ಹೆಬ್ಬಾರ ಪ್ರತಿವಾದಿ. ಲಕ್ಷ್ಮೀನಾರಾಯಣ ಹೆಬ್ಬಾರ ಅಣ್ಣಪ್ಪ ಹೆಬ್ಬಾರರ ಮಗ. ಆಜ್ರಿಗ್ರಾಮ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ

ವಾದಿಗೆ ಬಹಾ ಆಸನಾರ್ಥದ ಬಗ್ಗೂ ವ, ನಷ್ಟದ ಬಗ್ಗೂ ವಾದಿ ಮಾಡಿದ ಮೇಲಿನ ದಾವೆಯನ್ನು ತಾರೀಕು 31-7-1951ಕ್ಕೆ ತನ್ನಿ ಬಿಟ್ಟಿದೆ. ಆ ಕುರಿತು ನಿಮ್ಮದ್ದೇನಾದೂ ಆಕ್ಷೇಪವಿದ್ದರೆ ಆದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿಯದೆ.

By Order of the Court

Y. Tejappa Shetty

Advocate for Plff.

Coondapoor 17-7-1951

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಕೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜವಾಬ್ದಾರಿ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ:

ದಿ. ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್,

ಹಂಪನಕಟ್ಟೆ, ಮಂಗಳೂರು, (ದ. ಕ)

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಎರಡು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ: 0—8—0

೨ ಭಾರತದ ಗುರುಕುಲ ಬೆಲೆ: 0—6—0

ಇದೀಗ ನವೀನ ರೀತಿಯಲ್ಲಿ ಪ್ರಕಟವಾಗಿದೆ!

ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—

(1) ಅಂತರಂಗ ಕಾರ್ಯಾಲಯ, ಉಡುಪಿ.
(2) ನವಭಾರತ ಬುಕ್ ಡಿಪ್ಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಯೂಲ ನಂಬ್ರ 241/1951

ಟಿ. ಶೀತಾರಾಮ ಸೋಮಯಾಜಿ —ವಾದಿ

ಮತ್ತು

ಕೃಷ್ಣ ಮೊಯ್ಲಿ—ಪ್ರತಿವಾದಿ

ಮುಂದುವರಿ

ಉಡುಪಿ ತಾಲೂಕು ಗುಂಡ್ಮಿ ಗ್ರಾಮದಲ್ಲಿರುವ ಶಿವರಾಮ ಮಯ್ಯರ ಮಗ ಪ್ರತಿವಾದಿ ಕೃಷ್ಣ ಮಯ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಪ್ರತಿವಾದಿಯು ವಾದಿಗೆ ತಾ. 15-4-48ರಲ್ಲಿ ರೂ. 45/-ಕ್ಕೆ ಬರೆಕೊಟ್ಟ ಡಿಮಾಂಡ ಪ್ರಾಮಿಸರಿ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 53-6-6ಕ್ಕೆ ವಾದಿಯು ಮಾಡಿದ ಸದ್ರಿ ವ್ಯಾಜ್ಯವು ಅಖೈರಿ ತನ್ಕಿ ಬಗ್ಗೆ ತಾ. 10-8-51ಕ್ಕೆ ಬಿಟ್ಟಿರುವದ್ರಿಂದ ಆ ಕುರಿತು ಉದಾಹರಣೆಯಿದ್ರೆ ಸದ್ರಿ ತಾರೀಕಿನ ದಿವ್ಸ ಹಗಲು 10 ಘಂಟೆಗೆ ಸದ್ರಿ ಕೋರ್ಟುಮುಂದೆ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ಉದಹರಿಸಲಿಕ್ಕೆ ತಪ್ಪಿದ ಸಂಗ್ತಿಯಲ್ಲಿ ಪ್ರತಿವಾದಿಯ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲಾದೀತೆಂದು ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗುತ್ತದೆ.

H. Ramanath Pai

Advocate for Plff.

Udipi S. Kanara

Dated 16-7-1951

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಯೂಲ ನಂಬ್ರ 251/1951

ದಿ. ಮಹಾರಾಷ್ಟ್ರ ಎಪೆಕ್ಸ್ ಬೇಂಕ್, ಲಿಮಿಟೆಡ್, ಉಡುಪಿ. —ವಾದಿ

ಮತ್ತು

ಮುಕುಂದ ಶಿವರಾವ್ ಕೂಡಾ —ಪ್ರತಿವಾದಿರು, 1ನೇ ಪ್ರತಿವಾದಿ—ಮುಕುಂದ ಶಿವರಾವ್—ಸದ್ ಪೋಸ್ಟ್ ಮಾಸ್ಟರ್—ಕಟಪಾಡಿಯಲ್ಲಿರುವವ—

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 16-9-50ರಲ್ಲಿ ರೂಪಾಯಿ 170-0-0ಕ್ಕೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪಾಯಿ 130-12-6ಕ್ಕೆ ವಾದಿಯು ಪ್ರತಿವಾದಿರಮೇಲೆ ಮಾಡಿದ ಸದರಿ ದಾವೆಯು ತಾರೀಕು 16-8-1951ಕ್ಕೆ ಪ್ರಥಮ ತನಿಖೆ ಬಗ್ಗೆ ಮುಂದೋಲಾಗಿರುತ್ತದೆ. ಆದಿವ್ಸ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗದಿದ್ದಲ್ಲಿ ಅವನ ಗೈರ್ ಹಾಜರಿಯಲ್ಲಿ ಸದರೀ ದಾವೆಯು ತೀರ್ಮಾನಿಸಲ್ಪಡುವದೆಂದು ಈ ಮೂಲಕ 1ನೇ ಪ್ರತಿವಾದಿಗೆ ತಿಳಿಯಪಡಿಸಲಾಗಿದೆ.

M. Damodhar Kamath

Advocate for Plff.

UDIPI Date 21-7-1951

ಪ್ರವಾಸಿಯ ಪತ್ರಗಳು ೧೦

ಮೇ ತಿಂಗಳ ತಾರೀಕು 17 ಮತ್ತು 18ರಲ್ಲಿ ನಾನು ಮೆಂಚೆಸ್ಟರ್ ಎಂಬ ಪಟ್ಟಣದಲ್ಲಿದ್ದೆ. ಅಲ್ಲಿಯೂ ವ್ಹಿಟ್ ರಜೆಯಾದ ಕಾರಣ ಕಾರ್ಖಾನೆಗಳು ಮುಚ್ಚಿದ್ದವು. ಮೆಂಚೆಸ್ಟರ್ ಬರ್ಮಿಂಗ್‌ಹೆಮ್‌ನಂತೆಯೇ ದೊಡ್ಡ ಕೈಗಾರಿಕೆಯ ಕೇಂದ್ರ. ಅಲ್ಲಿ ಮುಖ್ಯವಾದುವು ಹತ್ತಿ ಬಟ್ಟೆಗಳ ಕಾರ್ಖಾನೆಗಳು. ಇಲ್ಲಿರುವ ಸೆಂಟ್ರಲ್ ಗ್ರಂಥಾಲಯವು ನಾನು ನೋಡಿದ ಅನೇಕ ಗ್ರಂಥಾಲಯಗಳಲ್ಲಿ ಬಹು ವಿಶೇಷವಾದುದು. ಇದು 1934ರಲ್ಲಿ ಕಟ್ಟಿದ್ದು, ಅದರ ಕಟ್ಟಡವು ವೃತ್ತಾಕಾರವಾಗಿ ಪಟ್ಟಣದ ಮಧ್ಯಭಾಗದಲ್ಲಿದೆ. ಒಂದೇ ಕಟ್ಟಡದಲ್ಲಿ 4 ಪ್ರತ್ಯೇಕ ಪ್ರತ್ಯೇಕವಾದ ಗ್ರಂಥಾಲಯಗಳ ವಿಭಾಗಗಳಿವೆ. ರೆಫರೆನ್ಸ್ (Reference) ಪುಸ್ತಕಗಳ ವಿಭಾಗವು ಉಪ್ಪರಿಗೆಯ ಮಧ್ಯವಿದ್ದು ಅದರಲ್ಲಿ ಪ್ರತಿಯೊಂದು ವಿಷಯದಲ್ಲೂ ಅನೇಕ ಪುಸ್ತಕಗಳಿವೆ. ನಾನು ಹೋದಾಗ ಸುಮಾರು80 100 ಗಂಡಸರು ಹೆಂಗಸರು ಚಕಾರ ಶಬ್ದವಿಲ್ಲದೆ ಓದುತ್ತಿದ್ದರು. ಈ ವಿಭಾಗದಿಂದ ಯಾರೂ ಪುಸ್ತಕ ಹೊರಗೆ ತೆಗೆದುಕೊಂಡು ಹೋಗಬಾರದು. ಅನೇಕ ಸಲ ಗ್ರಂಥಾಲಯಗಳಲ್ಲಿ ಮನೆಗೆ ಪುಸ್ತಕ ತೆಗೆದುಕೊಂಡು ಹೋಗುವ ಅವಕಾಶವಿರುವ ಕಾರಣ ಬೇಕಾದ ಪುಸ್ತಕಗಳು ಅಲ್ಲಿ ಓದುವವರಿಗೆ ಸಿಗುವುದಿಲ್ಲ. ಆದರೆ ಇಲ್ಲಿ ಹಾಗಲ್ಲ. ಎಲ್ಲಾ ಪುಸ್ತಕಗಳು ಅಲ್ಲಿಯೇ ಯಾವಾಗಲೂ ಇರುವುದರಿಂದ ಹೆಚ್ಚಿನ ಸೌಕರ್ಯವಿದೆ. ಮನೆಗೆ ತೆಗೆದುಕೊಂಡು ಹೋಗಲು ಅವಕಾಶವಿರುವ ಪುಸ್ತಕಗಳು ಕಟ್ಟಡದ ಇನ್ನೊಂದು ಭಾಗದ ಗ್ರಂಥಾಲಯದಲ್ಲಿದೆ. ಅಲ್ಲಿಂದ ಆ ಊರಿನ ಯಾವ ಮನುಷ್ಯನೂ ಪುಸ್ತಕ ತೆಗೆದುಕೊಂಡು ಹೋಗಬಹುದು. ಅದಕ್ಕೆ ವಂತಿಗೆ ಇಲ್ಲ, ಡಿಪೋಸಿಟ್ ಕೂಡ ಇಲ್ಲ. ಮೂರನೆಯ ವಿಭಾಗವು ಕಟ್ಟಡದ ಇನ್ನೊಂದು ಕಡೆ ಇದು ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ ಗ್ರಂಥಾಲಯ. ಅದರಲ್ಲಿ ವರ್ತಕರಿಗೆ ಮತ್ತು ಕೈಗಾರಿಕೆಯವರಿಗೆ ಬೇಕಾಗಬಹುದಾದ, ಬೇರೆ ಬೇರೆ ದೇಶಗಳ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ ವಸ್ತುಗಳು ಎಲ್ಲೆಲ್ಲಿ ಸಿಕ್ಕುತ್ತವೆ ಎಂಬ ವಿಚಾರದ ಅನುಭವಗಳಿರುವ ಪುಸ್ತಕಗಳು ಸಿಗುವುವು. ನಾಲ್ಕನೆಯದು ಗಾಯನದ ವಿಷಯವಾದ ಗ್ರಂಥಾಲಯ.

ಈ ಕಟ್ಟಡದ ಸಮೀಪ ಒಂದು ಫರ್ಲಾಂಗಿನಲ್ಲಿ ಆಸ್ಟ್ರಿಯ ಆರ್ಟ್ ಗೆಲರಿಯು ಇದೆ. ಅಲ್ಲಿ ಹಿಂದಿನ ಕಾಲದಿಂದಲೂ ಸಂಗ್ರಹಿಸಿದ ನಾನಾ ತರದ ಚಿತ್ರಗಳಿವೆ ಈ ವರ್ಷ ಒಂದು ಹೊಸ ಪ್ರದರ್ಶನ ಕೂಡ ಅಲ್ಲಿ ನಡೆಯುತ್ತಿತ್ತು.

ಮರುದಿನ ಈ ಊರಲ್ಲಿ ಒಂದು ವಿಶೇಷವಾದ ಮೆರವಣಿಗೆ ನಡೆಯಿತು. ಈ ಪಟ್ಟಣದಲ್ಲಿ ಮತ್ತು ಸುತ್ತುಮುತ್ತಲಲ್ಲಿ ಅನೇಕ ಕೆಥೊಲಿಕರಿದ್ದಾರೆ. ಇಂಗ್ಲೆಂಡಿನಲ್ಲಿ ಹೆಚ್ಚಿನವರು ಪ್ರೊಟೆಸ್ಟೆಂಟರಾದರೂ ಈ ಪ್ರದೇಶದಲ್ಲಿ ಕೆಥೊಲಿಕರು ಅನೇಕರಿದ್ದಾರೆ ಆ ದಿನ ವ್ಹಿಟ್ ಶುಕ್ರವಾರವಾಗಿದ್ದು ಕೆಥೊಲಿಕರಿಗೆ ವಿಶೇಷ ಹಬ್ಬದ ದಿನವಾಗಿತ್ತು. ನಾನು ಇಳಿದುಕೊಂಡಿದ್ದ ಕ್ವೀನ್ಸ್ ಹೊಟೇಲಿನ ಎದುರು ಆ ಊರಿನ ಮುಖ್ಯ ಕೆಥೊಲಿಕ್ ಬಿಷೋಪ್‌ರಾದ ಸಿಲ್ವೆಸ್ಟರ್ ಬಿಷೋಪ್ ನಿಂತಿದ್ದು-ಬೆಳಗಿನ 9½ಗಂಟೆಯಿಂದ ಮಧ್ಯಾಹ್ನ 1 ಗಂಟೆ ವರೆಗೆ ಒಂದೊಂದಾಗಿ 23 ಮೆರವಣಿಗೆಗಳು ಅವರನ್ನು ವಂದಿಸುತ್ತ ದಾಟಿಹೋದವು. ಪ್ರತಿಯೊಂದು ಮೆರವಣಿಗೆಯೂ ಒಂದೊಂದು ಶಾಲೆ ಮತ್ತು ಪೆರಿಶಿಗೆ ಸಂಬಂಧಿಸಿದ್ದು ನೋಡಲು ಬಹಳ ಆನಂದವಾಗಿತ್ತು. ಮುಂದಿನಿಂದ ಪತಾಕೆ, ಅದರ ಹಿಂದಿನಿಂದ ಬೇಂಡ್, ಅನಂತರ ಆ ಹಬ್ಬಕ್ಕಾಗಿಯೇ ತಯಾರಿಸಿದ ಒಂದೇ ಬಗೆಯ ನಾನಾತರದ ಉಡುಪುಗಳನ್ನು ಧರಿಸಿದ ಶಾಲಾ ಮಕ್ಕಳು (ಹುಡುಗ ಹುಡುಗಿಯರು), ಅದರ ಹಿಂದೆ ಆ ಪೆರಿಶಿನ ಜನರು ಹೀಗೆ ಸುಮಾರು 10, 15 ಸಾವಿರ ಜನರ 23 ಮೆರವಣಿಗೆಗಳು ಒಂದರ ಹಿಂದೆ ಒಂದಾಗಿ ಬಂದು ಬಿಷೋಪರಿಗೆ ನಮಸ್ಕರಿಸಿ ಹೋದವು. ಮೆರವಣಿಗೆಯಲ್ಲಿ ಬೇರೆ ಬೇರೆ ಉಡುಪು ಹಾಕಿದ ಪೋಲ್ ಜನರು ಇಟೇಲಿಯವರು ಲಿತುವಾನಿಯರು ಮೊದಲಾದವರಿದ್ದರು. ಇವರಲ್ಲಿ ಅನೇಕರು ಇಲ್ಲಿಗೆ ಕಳೆದ ಯುದ್ಧ ಕಾಲದಲ್ಲಿ ನಿರಾಶ್ರಿತರಾಗಿ ಬಂದು ಈಗ ಇಲ್ಲಿಯೇ ವಾಸಿಸುತ್ತಿರುವವರು. ಈ ಒಂದು ಹಬ್ಬಕೋಸ್ಕರವಾಗಿ ಬರಿಯ ಉಡುಪಿಗೇ ಒಂದು ಮಗುವಿಗೆ ಕಡಿಮೆಯಲ್ಲಿ 120 ರೂಪಾಯಿಗಳಾದರೂ ಖರ್ಚಿಗೆ ಬೇಕೆಂತಲೂ ಆ ದಿನದಲ್ಲಿ ಒಂದು ಮಿಲಿಯ ಪವನಿಗೆ ಮಿಕ್ಕಿ ಖರ್ಚಾಗುವುದೆಂತಲೂ ನನ್ನ ಪಕ್ಕದಲ್ಲಿದ್ದ ಕೆಥೋಲಿಕ್ ಪಾದ್ರಿಗಳಿಂದ ತಿಳಿಯಿತು.

ಆ ದಿನ ಸಾಯಂಕಾಲ ಅಲ್ಲಿಂದ 5ಮೈಲು ದೂರವಿದ್ದ "ಬೆಲ್‌ವ್ಯೂ" ಎಂಬ ಆಟದ ಸ್ಥಳಕ್ಕೆ ಹೋಗಿದ್ದೆ. ಅದರಲ್ಲಿ ಬೇರೆ ಊರುಗಳಂತೆ ಮೃಗಾಲಯ, ಮೋಟಾರು ಓಟದ ಸ್ಥಳ, ಜನರು ಕುಳಿತುಕೊಂಡು ಓಡಾಡುವ ಇಲೆಕ್ಟ್ರಿಕ್ ಪೆಟ್ಟಿಗೆಗಳು, ಸಣ್ಣ ಕಾರುಗಳು, ಒಂದು ಸಣ್ಣ ರೈಲ್ವೆ ಮತ್ತು ಡಾನ್ಸ್ ಹಾಲ್ ಇರುತ್ತಿದ್ದು ಊರಿನ ನೂರಾರು ಜನರು ಅಲ್ಲಿಗೆ ವಿನೋದಕ್ಕಾಗಿ ಬಂದಿದ್ದರು, ಇವುಗಳಲ್ಲಿ ಅನೇಕ ವಿಷಯಗಳು ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿರುವವುಗಳೇ ಆದರೆ ನನಗೆ ಅಲ್ಲಿ ಕಂಡ ಒಂದು ಹೊಸ ಸಂಗತಿ ಮಾತ್ರ ಇಲ್ಲಿ ಹೇಳಿದರೆ ಸಾಕು. ದೊಡ್ಡ ಒಂದು ಕಟ್ಟಡದಲ್ಲಿದ್ದ ಕೆರೆಯಲ್ಲಿ ಸಮುದ್ರ ಸಿಂಹಗಳ (Sea Lions) ಆಟವಿತ್ತು. ಇವು ಕಪ್ಪು ಬಣ್ಣದ ಬಹು ನಯವಾದ ಮೈಯುಳ್ಳ ಮೃಗಗಳಾಗಿದ್ದು ಸುಮಾರು ನಾಲ್ಕು ಅಡಿ ಉದ್ದವಿದ್ದು ಒಂದು ಅಡಿ ದಪ್ಪವಾಗಿ ಬಹು ಸಾಧುವಾಗಿವೆ ಅಲ್ಲಿದ್ದ ಐದಾರು ಪ್ರಾಣಿಗಳಿಗೆ ಒಬ್ಬಳು ಹೆಂಗಸು ಕಸರತ್ತು ಕಲಿಸಿದ್ದು ಅವುಗಳು ಬಹಳ ಆಟಗಳನ್ನು ಮಾಡುತ್ತಿದ್ದವು-ಚೆಂಡುಗಳನ್ನು ಮೂಗಿನಿಂದ ಹಾರಿಸುವುದು, ಬಾಗ ಹೊಡೆಯುವುದೇ ಮೊದಲಾದ ಈ ಮೃಗಗಳ ಆಟಗಳನ್ನು ನೋಡಲು ಆಗಾಗ ಜನರು ಇಲ್ಲಿಗೆ ಬರುತ್ತಾರೆ, ಈ ಬಗ್ಗೆ ಟಿಕೇಟುಗಳನ್ನು ಕೊಂಡುಕೊಂಡು ಈ ಆಟಗಳನ್ನು ನೋಡಿ ಸಂತೋಷಪಡುತ್ತಾರೆ.

ಮರುದಿನ (ಮೇ ತಾ 19) ಬೆಳಗ್ಗೆ 9-30ಕ್ಕೆ ಮೆಂಚೆಸ್ಟರಿನಿಂದ ಹೊರಟು ರೈಲು ಮೂಲಕ ಉತ್ತರಕ್ಕೆ ಪ್ರಯಾಣಮಾಡಿ ಸುಮಾರು 250 ಮೈಲು ದೂರವಿರುವ ಸ್ಕಾಟ್‌ಲೆಂಡಿನ ಪ್ರಮುಖ ಪಟ್ಟಣವಾದ ಎಡಿನ್‌ಬರೋ ಎಂಬ ನಗರಕ್ಕೆ ಅಪರಾಹ್ನ 3-30ಕ್ಕೆ ತಲುಪಿದೆ, ದಾರಿಯಲ್ಲಿ ಅನೇಕ ಕಲ್ಲಿದ್ದಲು ತೆಗೆಯುವ ಮತ್ತು ಇಟ್ಟಿಗೆ ತೆಗೆಯುವ ಕಾರ್ಖಾನೆಗಳು ಕಾಣುತ್ತಿದ್ದುವು ಮುಂದೆಮುಂದೆ ಹೋದಂತೆ ಹೆಚ್ಚುಹೆಚ್ಚು ಗುಡ್ಡೆಗಳ ಹಾಗೂ ಕಪ್ಪು ಕಲ್ಲುಗಳ ಪ್ರದೇಶವು ಕಾಣುತ್ತಿತ್ತು.

ಮಧ್ಯ ದಾರಿಯಲ್ಲಿ ಲಿಶಲ್ ಎಂಬ ಹೊಳೆ ಇದ್ದು ಅದನ್ನು ದಾಟಿದ ಮೇಲೆ ಸ್ಕಾಟ್‌ಲೆಂಡು ಬರುತ್ತದೆ. ದಾರಿಯಲ್ಲಿ ಅಲ್ಲಲ್ಲಿ ಹಿಮಗಡ್ಡೆ ಇರುವ ಪರ್ವತ ಶಿಖರಗಳನ್ನೂ ನಾವು ಕಾಣಬಹುದು ಇಲ್ಲಿ ದಕ್ಷಿಣ ಇಂಗ್ಲೆಂಡಿಗಿಂತ ಚಳಿ ಹೆಚ್ಚಾದ ಕಾರಣ ಚಳಿಗಾಲದಲ್ಲಿ ಎಲೆ ಬಿದ್ದುಹೋದ ಮರಗಳ ಚಿಗುರು ಇನ್ನೂ ಹುಟ್ಟಲಿಲ್ಲ. ಗುಡ್ಡೆಗಳಲ್ಲಿ ಅಲ್ಲಲ್ಲಿ ಫ್ಯಾನು ಮತ್ತು ಸ್ಪ್ರೂಸ್ ಮರಗಳ ಕಾಡುಗಳನ್ನೂ ಕೆಲವು ಕಡೆ ಬಟಾಟೆ ನೆಡಲಿಕ್ಕೆ ಉತ್ತ ಗುಡ್ಡೆಗಳನ್ನೂ ಕಾಣಬಹುದು. ಕೆಲವು ಕಡೆ ರೈಲು ಮಾರ್ಗವು ತಗ್ಗಿನಲ್ಲಿದ್ದು ಎರಡೂ ಕಡೆಗಳಲ್ಲಿ ಎತ್ತರವಾದ ಗುಡ್ಡೆಗಳ ಸಾಲುಗಳು ಕಾಣುತ್ತಿದ್ದುವು, ರೈಲು ಕೂಡ ಅನೇಕ ಕಡೆಗಳಲ್ಲಿ ಈ ಗುಡ್ಡೆಗಳನ್ನು ಏರಿಯೇ ಹೋಗುವುದು. ಈ ಗುಡ್ಡೆಗಳಲ್ಲೂ ಸ್ವಲ್ಪ ಸ್ಥಳವನ್ನೂ ಹಾಗೆಯೇ ಖಾಲಿ ಬಿಟ್ಟಿಲ್ಲ. ಒಂದಲ್ಲ ಒಂದು ಕೃಷಿ ಅಥವಾ ಹುಲ್ಲು ಬೆಳೆಸುವ ಪ್ರದೇಶಗಳು ಕಂಡುಬರುತ್ತಿದ್ದುವು ಇಲ್ಲಿ ಹೆಚ್ಚಾಗಿ ಬಟಾಟೆ, ಬಾರ್ಲಿ ಮುಂತಾದುವುಗಳನ್ನೂ ಬೆಳೆಸುವರು.

ಎಡಿನ್‌ಬರೋ ಪಟ್ಟಣವು ಬಹು ಸ್ವಚ್ಛವಾದ ದೊಡ್ಡ ಪಟ್ಟಣ. ಅದು ಉತ್ತರ ಸಮುದ್ರದ (North sea) ಫೋರ್ಥ್ (Forth) ಎಂಬ ಒಂದು ಕೈಯ ಬದಿಯಲ್ಲಿ ಇರುವ ಬಂದರು. ಇಲ್ಲಿಯ ಮನೆಗಳು ಇಂಗ್ಲೆಂಡಿನ ಅನೇಕ ದೊಡ್ಡ ಪಟ್ಟಣಗಳ ಮನೆಗಳಿಗಿಂತಲೂ ಬಹು ಸ್ವಚ್ಛವಾಗಿ ಇರುವವು, ಮನೆಗಳೆಲ್ಲಾ ಹೆಚ್ಚಾಗಿ ಮೂರು ನಾಲ್ಕು ಉಪ್ಪರಿಗೆಗಳಾಗಿ ಕಟ್ಟಿದ್ದು, ಒಂದೊಂದು ಬ್ಲೋಕ್ (Block)ನಲ್ಲಿ ಐವತ್ತು-ನೂರು ಕುಟುಂಬಗಳಿರಬಹುದು. ಮನೆಗಳು ಹೆಚ್ಚಾಗಿ ಶಿಲೆಗಳಲ್ಲಿ ಕಟ್ಟಿದ್ದುವು. ಅಲ್ಲಿ ಒಂದು ಮೈದಾನಿನ ಇದಿರಿನಲ್ಲಿದ್ದ ಸುಮಾರು ನೂರು ಕೋಣೆಗಳಿಗೂ ಮಿಕ್ಕಿದ ಬ್ರಂಟ್ಸ್ ಫೀಲ್ಡ್ (Bruntsfield) ಎಂಬ ಹೊಟೇಲಿನಲ್ಲಿ ನಾನು ಇಳಿದುಕೊಂಡಿದ್ದೆ. ಈ ಹೊಟೇಲನ್ನು ನಡೆಯಿಸುವ [illegible] ಕೂಡ ಇಬ್ಬರು ಹೆಂಗಸರೇ. ಈ ಹೊಟೇಲಿನಲ್ಲಿ ಹತ್ತು ಹದಿನೈದು ಮಂದಿ ೬೦ ವರ್ಷ ಪ್ರಾಯ ಮಿಕ್ಕಿದ ಗಂಡಸರು ಮತ್ತು ಹೆಂಗಸರು ಅಲ್ಲಿಯೇ ಖಾಯಂ ಆಗಿ ವಾಸಿಸುತ್ತಿದ್ದರು.

ಈ ಪಟ್ಟಣದ ಸುಮಾರು ಮಧ್ಯ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಹಾದುಹೋಗುವ ಪ್ರಿನ್ಸಸ್ (Princes) ಸ್ಟ್ರೀಟ್ ಎಂಬ ದೊಡ್ಡ ರಸ್ತೆಯಿದೆ, ಅದರ ಪಶ್ಚಿಮಕ್ಕೆ ಹಳೇ ಪಟ್ಟಣವೂ ಪೂರ್ವಕ್ಕೆ ಹೊಸತಾಗಿ ನಗರ ನಿರ್ಮಾಣ ಕ್ರಮಕ್ಕೆ (Town Planning) ಸರಿಯಾಗಿ ಕಟ್ಟಿದ ಹೊಸ ಪಟ್ಟಣವೂ ಇದೆ. ಹೊಸ ಪಟ್ಟಣದ ಭಾಗದಲ್ಲಿ ಸಮಾನಾಂತರವಾಗಿರುವ (Parallel) ಅನೇಕ ರಸ್ತೆಗಳಿದ್ದು ಅವುಗಳ ಬದಿಯಲ್ಲಿ ಬಹು ದೊಡ್ಡದಾಗಿ ಕಟ್ಟಿದ ಅನೇಕ ಆಫೀಸುಗಳೂ ವ್ಯಾಪಾರದ ಅಂಗಡಿಗಳೂ ಇವೆ

ಮೇಲೆ ಹೇಳಿದ ರಸ್ತೆಯ ಬದಿಯಲ್ಲಿ ಅನೇಕ ಕಾದಂಬರಿಗಳನ್ನು ಬರೆದ ವಿದ್ವಾಸಾಹಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತರ, ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ



BALLBEARING
—THE LIFEBLOOD OF THE INDUSTRY!
Dealers in:
ROTARY OIL MILLS
FLOUR MILLS
BALL, ROLLER & THRUST BEARINGS
TELEGRAMS —'CHEAPTRADE'
A. RAMSON AND CO.
MISTRI BUILDING, BALARAM St., BOMBAY 7

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ವಿಶ್ರಾಂತಿ, ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

ಋತುಸ್ರಾವ ನಿಂತಿತು
'ಕುಮಾರಿ' ಔಷಧಿಗಳನ್ನು ಉಪಯೋಗಿಸಿದರೆ ಹವಕಟ್ಟಿ ಋತುಸ್ರಾವವಾಗುವುದು, ಹಠೋರ್ಟ್ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ನಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ—ಬೆಲೆ; ರೂ. 3; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಖರ್ಚು ಬೇರೆ.]
Mis P. DEVEE, F DS. (N. J.)
Tollygunge CALCUTTA
ಸ್ಥಾನಿಕ ಏಜಂಟರು ರಿಪಾಕಂಪೆನಿ, ಮಂಗಳೂರು

ಸರ್‌ವಾಲ್ಟರ್ ಸ್ಕಾಟ್‌ನ [Sir Walter Scott] ದೊಡ್ಡ ಬಿಳಿಗಲ್ಲಿನ ಶಿಲಾ ಪ್ರತಿಮೆಯಿದ್ದು ಅದರ ಮೇಲೆ ಸುಮಾರು 200 ಅಡಿ ಎತ್ತರದ ಸಪೂರವಾದ ಗೋಪುರವಿದೆ. ಅದರ ಒಳಗಿರುವ ನೂರಾರು ಕಲ್ಲುಮೆಟ್ಟಿಲುಗಳನ್ನು ಹತ್ತಿ ಅದರ ತುದಿಗೆ ಹೋದಾಗ ಸುಮಾರು ಮೂರನಾಲ್ಕು ಮೈಲು ದೂರದ ಸುತ್ತುಮುತ್ತಿನ ದೃಶ್ಯವು ಕಾಣುತ್ತದೆ. ಆದರೆ ಅದನ್ನು ಹತ್ತುವುದೆಂದರೆ ನಡುಪ್ರಾಯ ದಾಟಿದವರಿಗೆ ಕಷ್ಟವೇ ಸರಿ.

ಈ ಸ್ಮಾರಕದ ಸಮೀಪದಲ್ಲೇ ಮೇಲೆ ಹೇಳಿದ ಪ್ರಿನ್ಸೆಸ್ ರಸ್ತೆಗೆ ತಾಗಿ ದೊಡ್ಡದೊಂದು ಉದ್ಯಾನವಿರುತ್ತದೆ. ಅದರಲ್ಲಿ ಒಂದು ವಿಶೇಷವೆಂದರೆ ಒಂದೆಡೆ ನೆಲದ ಮೇಲೆ ಹೂವಿನ ಗಿಡಗಳಿಂದಲೇ ಮಾಡಲ್ಪಟ್ಟ ಅಂಕೆಗಳುಳ್ಳ ಒಂದು ಗಡಿಯಾರದ ಮುಖವಿದೆ. ಗಡಿಯಾರದ ಕೈಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತವೆ. ಗಂಟೆಗಳ ಬದಿಯಲ್ಲಿ ಒಂದು ಪಾರಿವಾಳದ ಗೂಡು. ಪ್ರತಿಗಂಟೆಗೂ ಆ ಗೂಡಿನಿಂದ ಕೃತಕ ಪಾರಿವಾಳವೊಂದು ಹೊರ ಬಂದು ಗಂಟೆಯನ್ನು ಕೂಗುವುದು. ಇದು ನೋಡಲು ಅಂದವಾಗಿತ್ತು.

ಈ ಪಟ್ಟಣದಲ್ಲಿ ಇನ್ನೂ ಅನೇಕ ಸಂಸ್ಥೆಗಳು ಮತ್ತು ಸ್ಥಳಗಳಿಗೆ ಹೋಗಿ ಸಂಚರಿಸಿದೆ. ಅವುಗಳಲ್ಲಿ ಕೆಲವು ಮುಖ್ಯವಿದ್ದವುಗಳನ್ನು ಮಾತ್ರ ಇಲ್ಲಿ ಬರೆಯುತ್ತೇನೆ. ಲಂಡನಿನಲ್ಲಿ ಹೇಗೆ ಇಂಗ್ಲೆಂಡಿಗೆ ಸೆಂಟ್ ಪಾಲ್ಸ್ ಕೆಥೆಡ್ರಲ್ (St. Pauls Cathedtral) ಮುಖ್ಯವೋ ಹಾಗೆಯೇ ಸ್ಕಾಟ್ಲೆಂಡಿಗೆ ಇಲ್ಲಿರುವ ಸೆಂಟ್ ಚೈಲ್ಡ್ಸ್ (St. Childs) ಇಗರ್ಜಿಯು ವಿಶೇಷವಾಗಿದೆ. ಅದು ಒಂದಾನೊಂದು ಕಾಲದಲ್ಲಿ ಕೆಥೋಲಿಕ್ ಮತೀಯರದಾಗಿದ್ದು ಅನಂತರ 1536ನೇ ಇಸವಿಯಲ್ಲಿ ಪ್ರೊಟೆಸ್ಟೆಂಟರ ಇಗರ್ಜಿಯಾಯಿತು. ಸ್ಕಾಟ್ಲೆಂಡಿಗೆ ಇಂಗ್ಲಿಷ್ ರಾಜ ಮತ್ತು ರಾಣಿ ಬಂದಾಗ ಅವರು ಕುಳಿತುಕೊಳ್ಳಲಿಕ್ಕೆ ಪ್ರತ್ಯೇಕ ಸಿಂಹಾಸನಗಳಿವೆ. ಇಲ್ಲಿ ಕೆಲವು ಬೇರೆಬೇರೆ ಬಣ್ಣದ ಗಾಜಿನ ಚಿತ್ರಗಳ ಕಿಟಿಕಿಗಳಿವೆ. ಇಂಥ ಕಿಟಿಕಿಗಳ ಕೆಲಸವು (Stained glass windows) ಕೈಯಲ್ಲಿ ಬರೆದ ಚಿತ್ರಗಳಂತೆಯೇ ಕಲಾಕೌಶಲವುಳ್ಳದು. ಯೂರೋಪಿನ ಅನೇಕ ಇಗರ್ಜಿಗಳಲ್ಲಿ ಇವುಗಳನ್ನು ನಾವು ಕಾಣಬಹುದು.

ಈ ಇಗರ್ಜಿಯನ್ನು ನಾನು ನೋಡುತ್ತಿರುವಾಗ ಹೊರಗೆ ರಸ್ತೆಯಲ್ಲಿ ಸೈನ್ಯದ ಒಂದು ಬ್ಯಾಗ್‌ಪೈಪ್ (bag pipe) ಬ್ಯಾಂಡು ಹೋಗುತ್ತಿತ್ತು. ಅದರಲ್ಲಿ ಇದ್ದವರೆಲ್ಲ ಸ್ಕಾಟ್ಲೆಂಡಿನವರಾಗಿದ್ದು ಮಧ್ಯದ ಇಬ್ಬರು ಮಾತ್ರ ನಮ್ಮ ದೇಶದ ಗೂರ್ಖಾ (Gurkhas) ಜನರಾಗಿದ್ದರು.

ಈ ಪಟ್ಟಣದ ಮಧ್ಯದಲ್ಲಿ ಸುಮಾರು 400 ಅಡಿ ಎತ್ತರದ ಒಂದು ಬಹುದೊಡ್ಡ ಬಂಡೆಕಲ್ಲು ಗುಡ್ಡೆ ಇದೆ. ಇದರಲ್ಲಿ ಮುಂಚಿನ ಸ್ಕಾಟ್ ಅರಸ ಕೋಟೆ ಇದ್ದು ಆ ಕೋಟೆಯಲ್ಲಿ ಅನೇಕ ಹಿಂದಿನ ಕಾಲದ ಕಟ್ಟಡಗಳಿವೆ. 700 ವರ್ಷಗಳಿಗೂ ಹಿಂದಿನ ಸೈಂಟ್ ಮಾರ್ಗರೆಟ್ಸ್ ಚೇಪಲ್ (St. Margaret's chapel) ಎಂಬ ಇಗರ್ಜಿ ಒಂದು 15ನೇ ಶತಮಾನದಲ್ಲಿ ಕಟ್ಟಿದ ಅರಮನೆ ಇನ್ನೊಂದು. ಅದರಲ್ಲಿ ರಾಣಿ ಮೇರಿ (Queen Mary) ಇರುತ್ತಿದ್ದ ಕೋಣೆಗಳು ಮುಖ್ಯ. ಆಗ ಅವರು ಉಪಯೋಗಿಸುತ್ತಿದ್ದ ಮಂಚ, ಕುರ್ಚಿ, ಮೇಜುಗಳು ಈಗಲೂ ಅಲ್ಲಿವೆ. ಅದಕ್ಕೆ ತಾಗಿ ಇರುವ ಏಳೆಂಟಡಿ ಉದ್ದದ ಒಂದು ಚಿಕ್ಕ ಕೋಣೆಯು ಆ ರಾಣಿ ಮೇರಿಯು ಜೇಮ್ಸ್ ಎಂಬ ಮಗನನ್ನು ಹೆತ್ತ ಕೋಣೆ. ಈ ಮಗುವೇ ಮುಂದೆ ಇಂಗ್ಲೆಂಡನ್ನು ಆಳಿದ ಮೊದಲನೆಯ ಜೇಮ್ಸ್. ಹಾಗೆ ಮೇರಿಯನ್ನು ಕೊಂದ ಮೇಲಿನ ಛಾಯಾಚಿತ್ರವೊಂದನ್ನು ಲಂಡನ್ನಿನಲ್ಲಿರುವ ಮೇಡಮ್ ಟುಸ್ಸಾಡ್ ಚಿತ್ರಾಲಯದಲ್ಲಿ ಕಾಣಬಹುದು. ಈ ಕಟ್ಟಡದಲ್ಲಿ ಸುತ್ತುಮುತ್ತಲೂ ಪ್ರಸಿದ್ಧ ಶಿಲ್ಪಕಾರ್ ರೋಬರ್ಟ್ ಲೋರಿಮರ್ ಚಿತ್ರಿಸಿದ ಒಂದನೇ ಮಹಾಯುದ್ಧದ ಸ್ಮಾರಕ (War Memorial) ಕಟ್ಟಡವಿದೆ. ಇದರಲ್ಲಿ ಯುದ್ಧದಲ್ಲಿ ಮರಣಹೊಂದಿದ ಅನೇಕ ಸೈನಿಕರ ಹೆಸರುಗಳನ್ನು ಕೆತ್ತಿದ್ದಾರೆ.

ಈ ಕೋಟೆಯಿಂದ, ಸುಮಾರು ಒಂದು ಮೈಲು ಉದ್ದವಾದ, ಹಳೇ ಪಟ್ಟಣದ ಮಧ್ಯದಲ್ಲಿರುವ ರಸ್ತೆಗೆ ಅರಸನ ಮೈಲು (Royal mile) ಎಂತ ಹೇಳುವರು. ಆ ಒಂದು ಮೈಲು ವಿಸ್ತೀರ್ಣದಲ್ಲಿ ಅನೇಕ ಪ್ರಸಿದ್ಧ ಪುರುಷರು ವಾಸಿಸುತ್ತಿದ್ದ ಮನೆಗಳನ್ನು ಮತ್ತು ಸಂಸ್ಥೆಗಳನ್ನು ಕಾಣಬಹುದು. ಪ್ರಸಿದ್ಧ ಸ್ಕಾಚ್ ಕವಿಯಾದ ರೋಬರ್ಟ್ ಬರ್ನ್ಸ್ (Robert Burns) ಎಂಬವನು ಇದ್ದ ಮನೆ, ಜೋನ್ ನೋಕ್ಸ್ ಎಂಬವನು ಇದ್ದ ಮನೆ, ಎಡಮ್‌ಸ್ಮಿತ್ (Adan Smith) ಎಂಬ ಅರ್ಥಶಾಸ್ತ್ರಜ್ಞನ ಗೋರಿ ಇವನ್ನೆಲ್ಲ ನೋಡಬಹುದು. ಎಡಿನ್‌ಬರೋ ವಿಶ್ವವಿದ್ಯಾಲಯವು ಕೂಡಾ ಇಲ್ಲೇ ಇದೆ. ಸ್ವಲ್ಪ ಮುಂದೆ ಹೋದರೆ ಮೇಲೆ ಪ್ರಸ್ತಾಪಿಸಿದ ರಾಣಿ ಮೇರಿ ಮತ್ತು ಮುಂಚಿನ ಸ್ಕಾಟ್ ಅರಸರು ಇದ್ದ ಹೋಲಿರೂಡ್ ಅರಮನೆ (Holyrood Palace) ಇರುತ್ತದೆ. ಅಲ್ಲಿ ಈಗಲೂ ಇಂಗ್ಲಿಷ್ ಅರಸರು ಹೋಗಿ ವರ್ಷಕ್ಕೊಮ್ಮೆ ವಾಸಿಸುವರು. ಆ ಅರಮನೆಯನ್ನು ತೋರಿಸುತ್ತಿರುವಾಗ ನಮ್ಮನ್ನು ತಿರುಗಾಡಿಸುತ್ತಿದ್ದ ಸ್ಕಾಟ್ ಮಾರ್ಗದರ್ಶಕನು (Guide) ಹೇಳಿದ ಕೆಳಗಿನ ವಾಕ್ಯದಿಂದ ಈಗಲೂ ಸ್ಕಾಚ್ ಜನರು ಇಂಗ್ಲಿಷ್ ರಾಜರ ಅಧೀನರಾದರೂ ತಮ್ಮ ಹಿಂದಿನ ಸ್ವಾತಂತ್ರ್ಯದ ವಿಚಾರವಾಗಿ ಹಂಬಲಿಸುವುದು ಸಿದ್ಧವಾಗುತ್ತದೆ. ಅವನು "ರಾಣಿ ಮೇರಿಯು ಬಹಳ ರೂಪವತಿಯಾಗಿದ್ದಳು. ಅವಳಿಗೆ ಪಟ್ಟದ ಹಕ್ಕು ಇತ್ತೆಂಬುದರ ನಿಮಿತ್ತವಾಗಿ ಆಕೆ ಸೋತುಹೋದಳು. ಅವಳು ಸತ್ತು ಈಗ 400 ವರ್ಷವಾದರೂ ಅವಳ ರಕ್ತ ಮತ್ತು ಕೀರ್ತಿಗಳು ಈಗಲೂ ಜೀವದಲ್ಲಿವೆ" ಎಂದನು. ಅವಳು 17 ವರ್ಷ ಇಂಗ್ಲೆಂಡಿನ ಸೆರೆಮನೆಯಲ್ಲಿದ್ದು ಅನಂತರ ಹಾನಿ ಹೊಂದಿದಳು. ಮರುದಿನ ನಾನು ಎಡಿನ್‌ಬರೋ ಬಿಟ್ಟು ಸುಮಾರು ದೂರಕ್ಕೆ ಬಸ್ಸಿನಲ್ಲಿ ಹೋಗಿ ಹಿಂತಿರುಗಿ ಬರುವಾಗ ಕೆಲವು ಕಡೆಗಳಲ್ಲಿ ಬಂಡೆಕಲ್ಲುಗಳ ಮೇಲೆ (Home Rule for Scotland) (ಸ್ಕಾಟ್ಲೆಂಡ್ ದೇಶಕ್ಕೆ ಸ್ವಾತಂತ್ರ್ಯ ಬೇಕು) ಎಂತ ಚಾಕಿನಲ್ಲಿ ಬರೆದಿತ್ತು. ನಾನು ಹೋದ ಕೆಲವು ದಿವಸಗಳ ಮುಂಚೆ ಹಿಂದಿನ ಸ್ಕಾಟ್ ರಾಜರ ಸಿಂಹಾಸನ ಕಲ್ಲನ್ನು "ವೆಸ್ಟ್ ಮಿನಿಸ್ಟರ್ ಎಬ್ಬೇ" ಎಂಬ ಇಗರ್ಜಿಯಿಂದ ಈ ಸ್ವಾತಂತ್ರ್ಯ ಚಳವಳಿಗೆ ಸೇರಿದ ಕೆಲವರು ಕದ್ದು ಸ್ಕಾಟ್ಲೆಂಡಿಗೆ ತಂದುಕೊಂಡು ಹೋಗಿದ್ದರು. ಈ ಚಳವಳಿಯು ಈಗಿನ ಪರಿಸ್ಥಿತಿಯಲ್ಲಿ ಬಹು ದೊಡ್ಡದೆಂತ ಹೇಳುವಷ್ಟು ಇಲ್ಲವಾದರೂ ಅದರಲ್ಲಿ ಕೆಲವು ಮಟ್ಟಿನ ಜೀವಕಳೆ ಇದ್ದು ಮುಂದೆ ಬೆಳೆಯುವಂತೆ ನನಗೆ ಕಂಡಿತು.

ಹೀಗೆ ಎಡಿನ್‌ಬರೋ ಪಟ್ಟಣವನ್ನು ತಿರುಗಾಡಿದ ಅನಂತರ ಅದೇ ದಿನ ಮಧ್ಯಾಹ್ನ ಅಲ್ಲಿಂದ 42 ಮೈಲು ಪಶ್ಚಿಮಕ್ಕಿರುವ ಗ್ಲಾಸ್‌ಗೋ ಎಂಬ ಪ್ರಸಿದ್ಧ ಪಟ್ಟಣಕ್ಕೆ ರೈಲಿನಲ್ಲಿ ಹೋದೆ. ರೈಲು ಒಂದು ಗಂಟೆಗೆ ಹೊರಟು ಮಧ್ಯೆ ಎಲ್ಲಿಯೂ ನಿಲ್ಲದೆ 2 ಗಂಟೆಗೆ ಸರಿಯಾಗಿ ಅಲ್ಲಿಗೆ ಮುಟ್ಟಿತು. ಹೋಗಿ ಬರುವ ಚಾರ್ಜು ಕೇವಲ ಐದು ಶಿಲಿಂಗ್ ಮತ್ತು ಚಿಲ್ಲರೆ; ಅಂದರೆ ಸುಮಾರು 3 ರೂಪಾಯಿ. ಅಲ್ಲಿ ಸಾಯಂಕಾಲ 6 ಗಂಟೆಯ ವರೆಗೆ ಇದ್ದು 4 ಗಂಟೆಗಳ ಕಾಲ ಪಟ್ಟಣದಲ್ಲಿ ತಿರುಗಾಡಿದೆ. ತಿರುಗಾಡಲಿಕ್ಕೆ ಅಲ್ಲಿ ಟ್ರಾಮು ಮತ್ತು ಬಸ್ಸುಗಳು ಇವೆ. ಈ ಪಟ್ಟಣವು ದೊಡ್ಡ ದೊಡ್ಡ ಹಡಗುಗಳನ್ನು ಕಟ್ಟುವ ಪ್ರಸಿದ್ಧ ಕೇಂದ್ರ. ಇದು ಕ್ಲೈಡ್ ಎಂಬ ನದಿಯ ಬದಿಯಲ್ಲಿ. ಅದರ ಬದಿಯಲ್ಲೆಲ್ಲಾ ದಕ್ಕೆಗಳೇ. ಟ್ರಾಮ್ ಮೂಲಕ ಸುಮಾರು 5 ಮೈಲು ಪ್ರಯಾಣಮಾಡಿ ಹೋಗಿ ಹಡಗು ಕಟ್ಟುವ ಸ್ಥಳಗಳನ್ನು ನೋಡಿದೆ. ಮತ್ತು ಅದೇ ನದಿಯಲ್ಲಿ ಹೊಸತರದ ಹೊಳೆ ದಾಟುವ ಜಂಗಲ್ ಕೂಡಾ ನೋಡಿದೆ. ಅಂಥಾ ಜಂಗಲ್ ಇಲ್ಲಿ ನಮ್ಮ ದೊಡ್ಡ ನದಿಗಳಿಗೆ ಇದ್ದರೆ ಜನರಿಗೆ ಹೆಚ್ಚು ಸೌಕರ್ಯವಾಗಬಹುದು. ಜಂಗಲ್ ಸಂಪೂರ್ಣ ಕಬ್ಬಿಣದಾಗಿದ್ದು ಹೊಳೆಗೆ ಮುಟ್ಟಿದ ಎರಡೂ ಬದಿ ರಸ್ತೆಗಳಷ್ಟೇ ಎತ್ತರವಿರುತ್ತದೆ. ಅದು ಹಿಂದೆ ಮುಂದೆ ಹೋಗುವುದು ಇಂಜಿನ್ ಮೂಲಕ. ಒಂದು ಬದಿಗೆ ಬಂದು ನಿಂತಾಗ ರಸ್ತೆಗೆ ತಾಗಿಸಿ ಅದನ್ನು ಹಗ್ಗದಿಂದ ಕಟ್ಟಿ ಕೂಡಲೆ ಅದರ ಮೇಲೆ ಕಾರು ಲೋರಿಗಳು ಬರುವವು. ಎದುರು ದಡಕ್ಕೆ ಬಂದು ಅವುಗಳನ್ನು ಖಾಲಿ ಮಾಡಿ ಅಲ್ಲಿ ಕಾದಿರುವ ಕಾರು, ಲೋರಿಗಳನ್ನು ಪುನಃ ಎದುರಿನ ದಡಕ್ಕೆ ಸಾಗಿಸುವುದು. ಕೇವಲ ಐದು-ಹತ್ತು ಮಿನುಟುಗಳಲ್ಲಿ ಹೀಗೆ ಒಂದು ದಡದಿಂದ ಇನ್ನೊಂದಕ್ಕೆ ಏಳು-ಎಂಟು ಲೋರಿ, ಕಾರು, ಜನಗಳನ್ನು ಬೇಗಬೇಗನೆ ಇದು ಸಾಗಿಸುವುದರಿಂದ ಜನರಿಗೆ ಬಹು ಸೌಕರ್ಯವಿದೆ. ಗ್ಲಾಸ್‌ಗೋದಲ್ಲಿ ಅನೇಕ ನಮ್ಮ ದೇಶದವರಿದ್ದಾರೆ. ಅವರಲ್ಲಿ ಒಬ್ಬನು ನನಗೆ ಟ್ರಾಮಿನಲ್ಲಿ ಸಿಕ್ಕಿ ಮಾತಾಡಿದನು. ಇಷ್ಟು ದೊಡ್ಡ ಊರಿನಲ್ಲಿ ನಾನು ತಿರುಗಾಡಿದ ನಾಲ್ಕು ಗಂಟೆ ಎಷ್ಟು ಮಾತ್ರಕ್ಕೂ ಸಾಲದು. ಆದರೆ ಹೆಚ್ಚು ಅವಕಾಶವಿಲ್ಲದಿದ್ದ ಕಾರಣ ಕಂಡದರಲ್ಲೇ ತೃಪ್ತಿಗೊಂಡು ಆರು ಗಂಟೆಯ ರೈಲಿನಲ್ಲಿ ಹೊರಟು ಎಡಿನ್‌ಬರೋ ಪಟ್ಟಣಕ್ಕೆ ಹಿಂತಿರುಗಿ ಬಂದೆ.

[ಬರುವ ವಾರದ ಸಂಚಿಕೆ ನೋಡಿರಿ.]

ಅಂದವಾದ ಮತ್ತು
ಅಚ್ಚುಕಟ್ಟಿನ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.



ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಚಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ. ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಕಡಿಮೆ ಕ್ರಯದ ಉತ್ತಮ

✻ ಪುಸ್ತಕಗಳು ✻

ಶಿವಾವಳಿ	0	3	0
ಆ ಸುದ್ದಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಬೇದಾರ	0	3	0
ಸುಕಾಂತ	0	3	0
ಬಂಧಮುಕ್ತಿ	0	4	0
ಜಾತಿಭೂತಕ್ಕೆ ಬಲಿ	0	3	0
ಜನನಿಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಲುಮಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೋದ್ಗಾರ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ಸೂಕ್ತಿಮುಕ್ತಗಳು ೧, ೨, ೩	0	12	0
ಕಾಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಧಾನ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟಿಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಪ್ರಾಕೃತಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಅಂಬೇಡ್ಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಥಾ	0	3	0
ಜಪಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಘಂಟಿಮಾರ ಆಖ್ಯಾನಗಳು	2	0	0
ಮಹಾಪಾಠ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೈತ್ರ	0	4	0
ಕತ್ತು ಕೊಯ್ಯುವವರಾರು	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿನಪ್ಪ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಧೀರ ವಿಜಯ	0	8	0

ರೂ 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ
(2) ನವಭಾರತ ಬುಕ್‌ಡಿಪೋ ಉಡುಪಿ

ತಾರೀಕು 26-7-51 ರಿಂದ

ವಾರದ ಭವಿಷ್ಯ

ತಾರೀಕು 1-8-51ರ ವರೆಗೆ

ಮೇಷ—ನಿಮ್ಮ ಅದೃಷ್ಟವು ಚೆನ್ನಾಗಿರುವುದು. ಆರ್ಥಿಕ ಸಂಪತ್ತು ಅತ್ಯುತ್ತಮ ಸ್ಥಿತಿಯನ್ನೈದಲಿದೆ. ಮಿತ್ರವರ್ಗದವರ ಸಹಾಯದಿಂದಾಗಿ ಶತ್ರು ವೃಂದವನ್ನು ಪರಾಭವಗೊಳಿಸುವಿರಿ. ಹೆಚ್ಚಿನ ನಿಮ್ಮ ಆದಾಯವನ್ನು ಸದ್ವಿನಿಯೋಗ ಮಾಡಿ ಜನತೆಯ ಕೀರ್ತಿಭಾಗಿಗಳಾಗುವಿರಿ. ಗೃಹಸುಖವು ಸ್ವಲ್ಪ ಕಡಿಮೆಯಾದರೂ ತಂದೆ ಮಕ್ಕಳೊಳಗಿನ ಗಂಡ ಹೆಂಡರೊಳಗಿನ ಮನೋನ್ನೈಕಮತ್ಯವು ಹೆಚ್ಚಲಿದೆ. ಸಂಕಟ ಪರ್ಯಟನದಿಂದಾಗಿ ಕೆಲ ಮನಗಳಿಗೆ ಸುಖಶಾಂತಿಯುಂಟಾದೀತು. ತಾ 28. 29 ಅಷ್ಟೊಂದು ಉತ್ತಮವಾಗಿಲ್ಲವು.

ವೃಷಭ—ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನ ಮಾಡುವಿರಿ. ವಿದ್ಯಾರ್ಥಿಗಳಿಗೂ ನೌಕರಿ ವರ್ಗದವರಿಗೂ ವ್ಯಾಪಾರೀ ಜನತೆಗೂ ನಿರೀಕ್ಷೆಗಿಂತ ಅಧಿಕವಾದ ಫಲಪ್ರಾಪ್ತಿಯಿದೆ. ಉಪಾಯದಿಂದ ಕಾರ್ಯಸಾಧನೆ ಯಾಗುವದು. ದೇಹಾರೋಗ್ಯದ ಮಟ್ಟಿಗೆ ಈವಾರವು ಅಷ್ಟೊಂದು ಉತ್ತಮವಿಲ್ಲ. ಶ್ರಮಜೀವಿಗಳಿಗೆ ಕಾಲವು ಅನುಕೂಲವಿಲ್ಲ. ಆದರೂ ತಾ 28. 29 ಸುಖಭೋಗಗಳನ್ನೀಯಲಿವೆ.

ಮಿಥುನ—ಗ್ರಹಸ್ಥಿತಿಯು ತೀರಾ ಪ್ರತಿಕೂಲವಿದೆ ಪ್ರತಿಕಕ್ಷಿಗಳ ಕೈವಾಡದಿಂದಾಗಿ ನಿಮ್ಮ ಹೆಚ್ಚಿನ ಕಾರ್ಯಗಳು ವಿಫಲಗಳಾಗುವವು. ಚಂಚಲವಾದ ಚಿತ್ತವು ನಿಮ್ಮ ಹಠತೋಟಿಗೆ ಸಿಲುಕದೆ ವ್ಯರ್ಥ ಖರ್ಚುಗಳಿಗೆ ನಿಮ್ಮನ್ನು ಗುರಿಮಾಡುವದು ಆಪ್ತೇಷ್ಟ ವರ್ಗದವರಲ್ಲಿ ಮನಸ್ತಾಪ ಕಲಹಗಳುದ್ಭವಿಸುವವು. ಆದರೂ ವ್ಯಾಪಾರಿ ನಟ, ವೈದ್ಯ, ಗಾಯಕ ವರ್ಗದವರಿಗೆ ಯತ್ನಕ್ಕೆ ತಕ್ಕ ಫಲಪ್ರಾಪ್ತಿಯಿದೆ ತಾ 28 29 ರಲ್ಲಿ ವ್ಯರ್ಥ ಖರ್ಚು ದೇಹಾಲಸ್ಯ ತೋರಬಹುದು.

ಕರ್ಕಟ—ಗ್ರಹಬಲವು ಉತ್ತಮವಾಗಿರುವುದು. ನಿಮ್ಮ ಹಠದಿಂದು ಕಾರ್ಯವೂ ಏನೊಂದೂ ನಿರ್ವಿಘ್ನವಾಗಿಲ್ಲದೆ ಆಯಾಸದಿಂದ ಕೊನೆಗೊಳ್ಳುವದು. ಹಿಂದಿನ ಸಾಲಶೂಲಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನಸಂಗ್ರಹಿಸಿ ಕೊಳ್ಳುವಿರಿ. ಸಮಾಜದಲ್ಲೂ ಒಳ್ಳೇ ಸ್ಥಾನಮಾನಲಭಿಸುವದು. ಆದರೆ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ವಿಜಯವು ದುರ್ಲಭವಾದೀತು. ತಾ 26 27. 28. 29 ಉತ್ಕೃಷ್ಟವು.

ಸಿಂಹ—ಭಾಗ್ಯಪತಿಯ ಅನುಗ್ರಹದಿಂದಾಗಿ ನಿಮಗೀವಾರದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಲಾರದು. ಹಲವಾರು ರೀತಿಯಿಂದ ಹಣವನ್ನು ಗಳಿಸುವಿರಿ ಆದರೂ ಆ ನುದಿನದ ಖರ್ಚಿಗಿಂತ ಅಧಿಕವಾಗಿ ಸಂಗ್ರಹಿಸಲಾರಿರಿ. ಆಕಸ್ಮಿಕ ಪ್ರಯಾಣದಿಂದಾಗಿ ನಷ್ಟ ದೇಹಾಲಸ್ಯಗಳುಂಟಾದಾವು ವ್ಯರ್ಥ ಜಗಳಗಳುದ್ಭವಿಸಲಿವೆ. ನಿಮ್ಮ ಸ್ವಂತ ಭೋಗಕ್ಕೆ ಯಾವ ಕೊರತೆಯೂ ಉಂಟಾಗದು. ವಾರಾಂತ್ಯದ 5 ದಿನಗಳಲ್ಲಿ ಸುಖ ಇಷ್ಟಪ್ರಾಪ್ತಿ ಸಂತೋಷಲಾಭಗಳಿವೆ.

ಕನ್ಯಾ—ಕಾಲವು ಅನುಕೂಲವಾಗಿರುವದು. ಜನ್ಮಗತ ಶನಿಯಿಂದಾಗಿ ಆಗಾಗ ದೇಹಪೀಡೆ ಪಿಷಾಗ್ನಿಗಳ ಭಯ, ಪ್ರಿಯ ಜನರ ವಿವಾದಾದಿಗಳುಂಟಾದಾವು ಆದರೆ ಬೇರೆ ಯಾವ ತೊಂದರೆಗಳೂ ನಿಮ್ಮನ್ನು ಬಾಧಿಸಲಾರವು ಪ್ರಯತ್ನಕ್ಕಿಂತ ಅಧಿಕವಾದ ಫಲಪ್ರಾಪ್ತಿ ಸ್ಥಾನಮಾನಗಳು ಗೃಹಸುಖ ಇತ್ಯಾದಿಗಳು ಉತ್ತಮವಾಗಿ ಲಭಿಸುವವು. ಕೋರ್ಟು ಕಛೇರಿಗಳಲ್ಲಿನ ಕಾರ್ಯಗಳು ಸಫಲವಾಗುವವು. ತಾ 30. 31 1 ಅತ್ಯುತ್ತಮವಿದೆ.

ತುಲಾ—ದೇಹಭಾಗ್ಯ ಲಾಭಪತಿಗಳು ಅನುಕೂಲ ಸ್ಥಾನಾಪನ್ನರಿರುವುದರಿಂದ ಈವಾರದಲ್ಲಿ ನೀವು ನಿರೋಗಿಗಳಾಗಿದ್ದು ಉತ್ತಮ ರೀತಿಯಲ್ಲಿ ಕಾರ್ಯಸಾಧಿಸುವಿರಿ. ಫಲವೂ ತೃಪ್ತಿಕರವಾಗಿ ಲಭಿಸುವದು. ಆದರೆ ಗುರುಹಿರಿಯರು ನಿಮ್ಮನ್ನು ವಕ್ರದೃಷ್ಟಿಯಿಂದ ನೋಡುವರು. ಏಳೂವರೆ ಶನಿಯು ಇಲ್ಲಸಲ್ಲದ ಕೋಟಲೆಗಳನ್ನು ತಂದೊಡ್ಡಿಸುವನು. ಶತ್ರು ಜನರು ನಾನಾರೀತಿ ಪೀಡಿಸಲಿರುವರು. ವಾರಾದಿಯ 2 ದಿನಗಳು ಇಷ್ಟಪ್ರದಗಳಿವೆ.

ವೃಶ್ಚಿಕ—ಲಾಭಸ್ಥಾನಗಳು ಸರಿಕೂಡದಲ್ಲಿ ನಿಲ್ಲುವವು ನಿಮಗೆ ವಾರದಲ್ಲಿ ನಿಮ್ಮ ಪ್ರಯತ್ನವು ಯಾವೊಂದು ತರದ ವಿಘ್ನಗಳಿಲ್ಲದೆ ನೆರವೇರುವದು. ಖರ್ಚಿನ ಸಲುವಾಗಿ ಚಿಂತಿಸಬೇಕಾಗಿಲ್ಲವು. ಆದರೆ ಶತ್ರು ಜನರು ವಿಶೇಷವಾಗಿ ಪೀಡಿಸುವರು. ತಪ್ಪಿಸಿ ನಿಮ್ಮ ಧನಮಾನಗಳಿಗೆ ಧಕ್ಕೆ ತರಲಿರುವರು. ಪರೋಕ್ಷದ ವಾಕ್ಕಲಹಕ್ಕೆ ಸಿಲುಕುವಿರಿ. ವಾರಾದಿಯ 4 ದಿನಗಳು ಅನುಕೂಲವಿರುವವು.

ಧನು—ನಿಮ್ಮ ಒಯಿಕೆಗಳೆಲ್ಲವೂ ಗಗನ ಕುಸುಮದಂತಾದಾವು. ಯಾವ ಕಾರ್ಯವೂ ನಿಮ್ಮಿಚ್ಛೆಯಂತೆ ಜರಗಲೊಲ್ಲದು. ಆರ್ಥಿಕ ದುರವಸ್ಥೆಗೆ ಗುರಿಯಾದ ನಿಮಗೆ ಮರ್ಯಾದೆಯಿಂದ ದಿನಗಳೆವುದು ಕಷ್ಟವಾದೀತು. ಗುರುಹಿರಿಯರಲ್ಲೂ ಬಂಧುವರ್ಗದವರಲ್ಲೂ ಮನಸ್ತಾಪ ಕಲಹಗಳು ಹೆಚ್ಚುವವು ಮನಸ್ಸಾದರೋ ಬಿರುಗಾಳಿಗೆ ಸಿಲುಕಿದ ಹುಲ್ಲೆಯಂತೆ ಸದಾ ಚಂಚಲವಾಗಿರುವುದು. ವಾರಾಂತ್ಯದ 5 ದಿನಗಳು ನೆಚ್ಚು ಹಾನಿಕರಗಳಾಗಲಾರವು.

ಮಕರ—ನಿಮ್ಮ ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ವ್ಯಯಿಸಬೇಕಾಗಿ ಬಂದೀತು. ಹೆಚ್ಚಿನ ಕಾರ್ಯಗಳು ವಿಫಲಗಳಾದಾವು. ಆದರೂ ಸಾಹಸಿಗಳಂತೆ ನೀವು ಅನವರತವೂ ಆಲಸ್ಯವಿಲ್ಲದೆ ದುಡಿವಿರಿ, ನಿಮ್ಮ ಪ್ರಯತ್ನಕ್ಕೆ ತಕ್ಕ ಫಲಪ್ರಾಪ್ತಿಯಿದೆ. ಶತ್ರುಜನರು ಪರಾಜಿತರಾಗುವರು. ಆಕಸ್ಮಿಕ ಧನಲಾಭದ ಯೋಗವಿದೆ. ಪ್ರಯಾಣಕ್ಕೀಕಾಲವು ಅನುಕೂಲವಿಲ್ಲ ತಾ 30- 31. 1 ಅನುಕೂಲವಿವೆ.

ಕುಂಭ—ಧನಲಾಭಪತಿಯು ಬಲತ್ತರವಾದುದೊಂದು ಅನುಗ್ರಹವು ನಿಮಗಿರುವುದರಿಂದ ನಿಮ್ಮ ದಿನಗಳು ಸುಖಮಯಗಳಾಗಲಿವೆ ಬಂಧು ಮಿತ್ರ ರ ನೆರವು ಗುರುಹಿರಿಯರ ಅನುಗ್ರಹ ಇವುಗಳಿಂದಾಗಿ ನೀವು ಹಿಡಿದ ಕಾರ್ಯವು ನಿರ್ವಿಘ್ನದಿಂದ ಕೊನೆ ಗೊಂಡಾವು. ಸಂಸಾರದಲ್ಲಿ ಅವ್ಯವಸ್ಥೆಯು ತಲೆದೋರಲಿದೆ. ಮಾತ್ರವಲ್ಲ ಸ್ತ್ರೀಯರಿಂದಾಗಿ ಅನಿಷ್ಟಗಳುಂಟಾದಾವು ವ್ಯಾಪಾರಗಳಿಗೆ ಆಕಸ್ಮಿಕ ನಷ್ಟದೊರಕಲಿದೆ. ತಾ-26-27 ವಿಜಯ, ಲಾಭಕಾರಿಗಳು

ಮೀನ—ನೀರಿನಲ್ಲಿ ಮಾಡಿದ ಹೋಮದಂತೆ ನಿಮ್ಮ ಪ್ರಯತ್ನವು ವ್ಯರ್ಥವಾಗುವದು. ಹಣದ ಬಿಕ್ಕಟ್ಟು ಅಧಿಕವಾಗುವುದರಿಂದ ಸುಖದಿಂದ ದಿನಗಳೆಯಲಾರಿರಿ. ಮಾತ್ರವಲ್ಲ ವಾತ ಕಫದೋಷದಿಂದಾಗಿ ಆರೋಗ್ಯವು ಕೆಡಲಿದೆ ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ನಿಮ್ಮ ಕಾರ್ಯಗಳಲ್ಲಿನ ಫಲವು ವಿಪರೀತವಾಗಿ ಫಲಿಸುವದು ವಿರೋಧಿ ಜೀವಿಗಳು ಕಷ್ಟದಿಂದ ದಿನಗಳೆವರು ತಾ-28-29ರಲ್ಲಿ ನಿಮ್ಮ ಕೆಲವು ಆಕಾಂಕ್ಷೆಗಳು ಫಲಿಸಲಿವೆ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುವು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹತ್ತಿ ದಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರವೆ ಸುಕ್ಕುಗಟ್ಟಿದವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉರುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ. ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿ, ಖಾರ, ಕೆಂಪುಕಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಟ್ಲಿ ಒಕ್ಕೆ ರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವಿಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾನಸ್ಥ ಸಿಟ್ಟಿಂಗ್ಲ ಧಾರವಾಡದ ಬಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ ಎಲ್ ಎಲ್ ಕಮಲಾಕ್ಷ, ಕೆನಸ್ಸ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No. M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ

2-8-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3- 0-0
ಬಿಡಿಪ್ರತಿ ,, 0- 2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧ ವಾರ ೪೭

NAVAYUGA WEEKLY

Post Box No. 22 UDIPI.

Vol. 31 No. 47

ಮಾತಿಗೂ ಕೃತಿಗೂ ನಡುವೆ-

ಜಗತ್ತಿನ ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳ ಮೇಲೆ ನಾವು ಚಿಂತಿಸುವದಾದರೆ ಮಾತಿಗೂ ಕೃತಿಗೂ ತಾಳಮೇಳವಿಲ್ಲದೆ ಜಗತ್ತು ಅವನತಿಯ ಮಾರ್ಗವನ್ನು ಹಿಡಿದಿರುವದು ಕಂಡುಬರುತ್ತದೆ. "ಪ್ರಗತಿಪಥದಲ್ಲಿ ನಾವು ಮುಂದುವರಿಯುತ್ತಿದ್ದೇವೆ" ಯೆಂದು ನಾವು ಹೆಮ್ಮೆಪಡುವದಾದರೂ ನಮ್ಮ ಪ್ರಗತಿ ಯಾವುದರಲ್ಲಿ? ದೇಶಕ್ಕೆ ಒಳ್ಳಿತು ಮಾಡುವದರಲ್ಲೋ— ಕೆಟ್ಟದು ಮಾಡುವದರಲ್ಲೋ— ಸ್ವಾರ್ಥದಲ್ಲೋ— ಪರಾರ್ಥದಲ್ಲೋ— ಎಂದು ಸಂಶಯ ಮೂಡುತ್ತದೆ. ಕಾಲ್ಪನಿಕವಾಗಿ ಈ ವಿಚಾರವನ್ನು ವಿಮರ್ಶಿಸದೆ ವಾಸ್ತವವಾಗಿ ನಮ್ಮ ಕಣ್ಣ ಮುಂದೆ ನಡೆಯುತ್ತಿರುವ ಮುಖ್ಯಮುಖ್ಯವಾದ ಘಟನೆಗಳನ್ನೇ ಎತ್ತಿಕೊಳ್ಳೋಣ. ಕೊರಿಯದಲ್ಲೇನಾಗುತ್ತಿದೆ? ಪರ್ಶಿಯದಲ್ಲೇನು ನಡೆಯುತ್ತಲಿದೆ? ಕಾಶ್ಮೀರದಲ್ಲೇನಾಗಲಿದೆ? ಭಾರತ ಪಾಕಿಸ್ಥಾನಗಳೊಳಗಿನ ಕಾರಸ್ಥಾನದ ಒಳಗುಟ್ಟೇನು?— ನಮ್ಮ ನಾಯಕರು ಶಾಂತಿಯನ್ನು ಬಯಸುತ್ತಾ ತುಳಿಯುತ್ತಿರುವ ಮಾರ್ಗವೆಂತಹದೆಂಬುದನ್ನು ಲಕ್ಷಿಸಿದರೆ ನಮಗೆ ಸಿಗುವ ಬೋಧೆಯೇನೆಂದರೆ: ಮಾತಿಗೂ ಕೃತಿಗೂ ಬರದ ಯಾವುದೋ ಒಂದು ಒಳಬಂಧ— ಕಪಟನೀತಿ—ಸ್ವಾರ್ಥದ ಆಕಾಂಕ್ಷೆಗಳೇ ಆಗಿರುತ್ತವೆ. ಎಂತಹ ರಾಜಕೀಯ ತಜ್ಞರೂ ಈ ಸಮಸ್ಯೆಯನ್ನು ಬಿಡಿಸಲಿಲ್ಲ; ಇಲ್ಲವೆ ಬಿಡಿಸುವಲ್ಲಿ ಸಮರ್ಥರಾಗಿಲ್ಲವೆನ್ನಬೇಕು! ಯಾವ ಚಾಣಕ್ಯನೂ ಬಿಗಿಯಾಗುತ್ತಿರುವ ಈ ಕಗ್ಗಂಟನ್ನು ಸಡಿಲಿಸಲು ಸಮರ್ಥನಾಗಿರುವದಿಲ್ಲ!

ಕೊರಿಯಾದಲ್ಲಿಯ ಸಂಧಾನದ ಮಾತು ಕತೆ ನಡೆಯುತ್ತಲಿದೆ. ಇತ್ತಂದದ ಯುದ್ಧದಲ್ಲಿ ಹೋರಾಟವೂ ನಡೆಯುತ್ತಲಿದೆ. ಸಂಧಾನ ಶಾಂತಿ ಎಂದು ಒಂದು ಕಡೆ ಘೋಷಣೆಯು ಕೇಳುತ್ತಲಿದಾರೆ. ಅಂತೆಯೆ ಅಧ್ಯಕ್ಷ ಟ್ರೂಮನ್ನರು ಯುದ್ಧ ಸರಂಜಾಮುಗಳನ್ನು ಹೆಚ್ಚಿಸುವದಕ್ಕೆ ಆರ್ಥಿಕ ಬೇಡಿಕೆಯನ್ನು ಮುಂದೆ ಮಾಡುತ್ತಲಿದ್ದಾರೆ. ರಶಿಯವನ್ನು-ಜಗತ್ತಿನ ಕಮ್ಯೂನಿಸಮ್ಮನ್ನು ನಿರ್ಮೂಲಗೊಳಿಸಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುತಲಿದ್ದಾರೆ. ಜಗತ್ತನ್ನೇ ಜಯಿಸುವ ಮಹತ್ವಾಕಾಂಕ್ಷೆ ಟ್ರೂಮನ್ನರಿಗಿದ್ದಂತೆ ಭಾಸವಾಗುತ್ತದೆ. ಕೆಸಾಂಗದಲ್ಲಿ ಕಮ್ಯೂನಿಸ್ಟರೊಡನೆ ಸಂಧಾನದ ಮಾತುಕತೆಯನ್ನಾರಂಭಿಸಲು ಜನರಲ್ ರಿಜವೆಯನ್ನು ಮುಂದೆ ಮಾಡಿದವರೂ ಟ್ರೂಮನ್ನರೇ. ಹಾಗಾದರೆ ಈ ಶಾಂತಿ ಮಾತುಕತೆಗೂ ಯುದ್ಧ ಸನ್ನಾಹಕ್ಕೂ ಏನರ್ಥ? ಶಾಂತಿ ಸಂಧಾನಗಳಿಂದ ಸೌಹಾರ್ದ ಮೂಡದೆಂದು ಕಮ್ಯೂನಿಸ್ಟರಿಗೂ—ಆಂಗ್ಲೋ ಅಮೇರಿಕಾನರಿಗೂ ಚೆನ್ನಾಗಿ ಮನವರಿಕೆಯಾಗದೆ ಅಂತಲೇ ಯುದ್ಧ ಅವ್ಯಾಹತವಾಗಿ ನಡೆಯುತ್ತಲೇ ಇದೆ! ಮಾತಿಗೂ ಕೃತಿಗೂ ನಡುವೆ ಇರುವ ಈ ದೋಷ ಪರಿಹಾರವಾಗದೆ, ಶಾಂತಿ ಮೂಡೀತೆಂದು ಭಾವಿಸುವದು ಮೂರ್ಖತನವೇ ಸರಿ!

ಕಾಶ್ಮೀರದ ಪ್ರಶ್ನೆಯನ್ನು ಹೇತುವನ್ನಾಗಿಟ್ಟುಕೊಂಡು ಯುದ್ಧಕ್ಕೆ ಕಾಲು ಕೆದರುವ ಪಾಕಿಸ್ಥಾನದ ಜಂಭದಕೋಳಿಗಳ ಒಳಗುಟ್ಟನ್ನಾದರೂ ಏನು ನೋಡೋಣ! ಆಂಗ್ಲೋ ಅಮೇರಿಕಾನರಿಗೂ ಕಮ್ಯೂನಿಸ್ಟರಿಗೂ ಇರುವ ದ್ವೇಷವು ಸಂಪೂರ್ಣ ತತ್ವ ಸಂಪ್ರದಾಯಗಳಿಗೆ ಸಂಬಂಧಿಸಿದ್ದಾದರೆ ಭಾರತ ಪಾಕಿಸ್ಥಾನಗಳೊಳಗಿರುವ ವೈಮನಸ್ಯ ಪೂರ್ಣ ಜಾತೀಯ ಸ್ವರೂಪದ್ದು. ಧಾರ್ಮಿಕ ಬಣ್ಣ ಬಳಿದುಕೊಂಡದ್ದು! ಸಾಮ್ರಾಜ್ಯಶಾಹಿತ್ವಕ್ಕೂ ಕಮ್ಯೂನಿಸಮ್ಮಕ್ಕೂ ಇರುವ ಮತಭೇದ- ಒಂದನ್ನು ಅಳಿದು ಮತ್ತೊಂದು ಉಳಿಯು ಸಂಶಾದರೂ ಕ್ಷೇಮವಾದೀತೆಂದು ಆಶಾವಾದಿಗಳಾಗಬಹುದೇನೋ! ಆದರೆ ಈ ಜಾತೀಯ ಸ್ವರೂಪದ ದ್ವೇಷವಳಿಯುವದು ಕಷ್ಟವೇ ಸರಿ! ಆರ್ಥಿಕದ ಮಟ್ಟಿಗೂ—ಭದ್ರತೆಯ ಮಟ್ಟಿಗೂ ಎರಡು ರಾಷ್ಟ್ರಗಳೂ ದುರ್ಬಲಗಳೇ! ಸ್ವಾತಂತ್ರ್ಯ ಸಿಕ್ಕ ನಾಲ್ಕು ವರ್ಷಗಳಲ್ಲಿ ಸೌಹಾರ್ದವನ್ನು ಬೆಳೆಸಿಕೊಂಡು ಬಾಳುವದಾದರೆ ಎರಡು ರಾಷ್ಟ್ರಗಳೂ ಸ್ವಾವಲಂಬಿಗಳಾಗಿ ಸುಖಸಂತೋಷಗಳಿಂದ ನಲಿದಾಡಬಹುದಾಗಿತ್ತು! ಪ್ರಕೃತಿದತ್ತವಾದ ಸಂಪತ್ತನ್ನು ಒಂದೇ ನೆಲದಲ್ಲಿ ಹುಟ್ಟಿದ ಜನ ಅನುಭವಿಸಬಹುದಾಗಿತ್ತು. ಆದರೆ ಈ ಜಾತೀಯ ಸಂಕುಚಿತ ಮನೋವೃತ್ತಿ ಮಾನವರನ್ನು ದಾನವರನ್ನಾಗಿಯೂ ಮಾಡುತ್ತದೆನ್ನುವದಕ್ಕೆ ಇಂದಿನ ನಮ್ಮೊಳಗಿನ ಸಂಘರ್ಷಗಳಿಗಿಂತ ಮಿಗಿಲಾದ ಉದಾಹರಣೆಗಳು ಬೇರೆ ಬೇಕೆ?

ಉಭಯ ರಾಷ್ಟ್ರದೊಳಗೆ ಶಾಂತಿ ಸೌಹಾರ್ದ ಮೂಡಲು ಮಹಾತ್ಮಾಗಾಂಧಿ ಮಾಡಿದ ಪ್ರಯತ್ನ ಸಾಮಾನ್ಯವೇ? ಭಾರತದ ಮುಖ್ಯ ಮಂತ್ರಿಯವರು ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಕೋರಿಸುವದು ಮಾತ್ರವಲ್ಲದೆ ಕೃತಿಯಲ್ಲಿ ಮಾಡಿ ತೋರಿಸಿ ಎಷ್ಟು ಜನರೊಡನೆ ಅವಿಶ್ವಾಸ ಕಟ್ಟಿಕೊಳ್ಳಲಿಲ್ಲ? ಉಭಯ ರಾಷ್ಟ್ರಗಳ ಮುಖ್ಯ ಮಂತ್ರಿಗಳಲ್ಲಾದ "ದಿಲ್ಲಿ ಒಪ್ಪಂದ" ಏನಾಯಿತು? ; ಇಂತಹ ಸುವರ್ಣ ಸಂಧಿಗಳೇ ಫಲಿಸದಿರುವಾಗ ಮುಂದಕ್ಕೆ ಇದಕ್ಕಿಂತಲೂ ಸುಸೂತ್ರವಾದ ಮಾರ್ಗವೊಂದು ಬೇರೆ ಇದ್ದೀತೆಂದು ಭಾವಿಸುವದು ಶುದ್ಧ ಹುಚ್ಚು ಕಲ್ಪನೆಯೇ ಸರಿ! ಜನಸಂಖ್ಯೆಯಲ್ಲೂ, ಸಂಪತ್ತಿನ ದೃಷ್ಟಿಯಿಂದಲೂ, ಭಾರತವು ಪಾಕಿಸ್ಥಾನಕ್ಕಿಂತಲೂ ಹಿರಿದಾಗಿದೆ. ಈಗ ಎದ್ದಿರುವ ಯುದ್ಧ ಬೆದರಿಕೆ—ಯುದ್ಧಾಕಾಂಕ್ಷೆಗಳ ಫಲವಾಗಿ ನಾಳೆ ಉಭಯ ರಾಷ್ಟ್ರಗಳೊಳಗೆ ಹೋರಾಟ ನಡೆದರೆ ಗೆಲ್ಲುವುದು ಭಾರತವೇ. ಯುದ್ಧವಾದರೆ ಇವರೀರ್ವರೇ ಸುಧಾರಿಸದೆ ಬೇರೆಯವರ ಸಹಾಯವನ್ನಪೇಕ್ಷಿಸದೆ ಇರಲಾರರು. ಪಾಕಿಸ್ಥಾನವು ಪ್ರತ್ಯಾಗಿ ಕಾಲು ಕೆದರುತ್ತಿರುವದನ್ನು ನೋಡಿದರೆ ಬೆಂಬಲಿಗರಾಗಿ ನಿಂತವರ ಅಭಯವಚನವೇ ಕಾರಣವಾಗಿದೆಯೆಂಬುದನ್ನು ನಾವು ಚೆನ್ನಾಗಿ ಅರಿತುಕೊಳ್ಳಬಹುದು!

ಪಾಕಿಸ್ಥಾನದ ಯುದ್ಧ [illegible] ಟೀಕೆಯು ದ್ವಿತೀಯ ಮಹಾ ಯುದ್ಧದ ನೆನಹನ್ನು ತಂದು ಕೊಡುವದಿಲ್ಲವೇ? [illegible] ಧಾಳಿಯಿಂದ ರಕ್ಷಿಸಿಕೊಳ್ಳುವ [illegible]—ಯುದ್ಧ ಕೇಂದ್ರ ರಾಷ್ಟ್ರಗಳನ್ನು ನಿರ್ಮಿಸಿ ರಕ್ತಗಳನ್ನು ಪ್ರತಿಭಟಿಸದ [illegible] ನಡೆದ ಕಾರ್ಯ [illegible] ಶಾಂತಿ ಬಯಸುವರ ಕೃತಿ [illegible] ಸಾಧ್ಯವೇ? ನಾವು ಭಾ

IN THE SERVICE OF THE COUNTRY
1925 1950



Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ-
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ದಳೀಯರು ನಾಳೆ ಪಾಕಿಸ್ತಾನ ಧಾಳಿಮಾಡಿದರೆ ನಾವು ಏನು ಮಾಡಬೇಕು? ಸರಕಾರ ಈಗ ಏನು ಮುಂಜಾಗ್ರತೆ ಕೈಗೊಂಡಿದೆ? ಎಂಬುದು ನಮಗೇನಾದರೂ ತಿಳಿದಿದೆಯೆ? ಗಡಿಯಲ್ಲಿ ಸಂರಕ್ಷಣೆಯ ಮಟ್ಟಿಗೆ ಸೈನ್ಯ ನಿಂತಿದೆ ಎಂಬುದಿಷ್ಟನ್ನೇ ನಾವರಿತಿದ್ದೇವೆ. ಪಾಕಿಸ್ತಾನದ ಪ್ರತಿಯೊಬ್ಬ ಪ್ರಜೆಗೂ ತಮ್ಮ ಹೊಣೆಯ ಅರಿವಾಗಿದೆ. ತಮ್ಮನು ''ಜಾತೀಯ ಪುಣ್ಯಯುದ್ಧ''ವೆನ್ನುವ ಕಲ್ಪನೆಯನ್ನು ''ಜಹಾದ್', ಬಹಳ ಕಾಲದಿಂದ ಪ್ರತಿಬಿಂಬಿಸಿಯದೆ. ಯುದ್ಧದ ಹೊರತು ನಮಗೆ ಶಾಂತಿಯಿಲ್ಲ ಎನುವ ಉದ್ವಿಗ್ನತೆ ಅವರಲ್ಲಿದೆ. ಇಂತಹ ಪೂರ್ವ ಸಿದ್ಧತೆಯಿಂದ ಪಾಕಿಸ್ತಾನ ಬೌದ್ಧಿಕರೋಪಾಯವನ್ನು ಸಾಧಿಸಿದೆಂದರ್ಥವಲ್ಲ; ಭಾರತದಷ್ಟು ವಿಶಾಲತೆಯನ್ನಾಗಲೀ—ಔದಾರ್ಯವನ್ನಾಗಲೀ ಅದು ತೋರಿಸಿಲ್ಲವೆಂಬುದೇ ಇಲ್ಲಿ ಮುಖ್ಯವಾದ ಅಂಶ! ಪಾಕಿಸ್ತಾನದ ಧೋರಣೆಯನ್ನೇ ಭಾರತವೂ ಅನುಸರಿಸುವದಾದರೆ ಇಲ್ಲಿನ ಅಲ್ಪ ಸಂಖ್ಯಾತರ ಪಾಡೇನಾದೀತು? ಎಂಬುದನ್ನು ಪಾಕಿಸ್ತಾನ ಚಿಂತಿಸಿಲ್ಲ. ''ಮಗಳು ವಿಧವೆಯಾದರೂ ಚಿಂತಿಲ್ಲ; ಅಳಿಯನ ಹೊಗೆ ನೋಡಿಯೇ ಬಿಡಬೇಕು'' ಎನುವಂತೆಯೇ ಆಯಿತು ಪಾಕಿಸ್ತಾನಿಗಳ ಧೋರಣೆ! ಇಂಗ್ಲಂಡದ ಸುಪ್ರಸಿದ್ಧ ಪತ್ರಿಕೆಯಾದ ಮ್ಯಾಂಚೆಸ್ಟರ್ ಗಾರ್ಡಿಯನವು ಭಾರತದ ತಾತ್ವಿಕವಾದ ನಿಲುವೆಯನ್ನು ಶ್ಲಾಘಿಸುತ್ತಾ ಭಾರತವು ಅಲ್ಪ ಸಂಖ್ಯಾತರನ್ನು ಪಾಕಿಸ್ತಾನಿಗಳಗಿಂತ ಚೆನ್ನಾಗಿ ನಡೆಸಿಕೊಂಡಿದೆ ಎಂದು ಹೇಳಿದೆ.

ಪರಿಸ್ಥಿತಿಯನ್ನು ಗಂಭೀರವಾಗುವಂತೆ ಮಾಡಿ ತಿರುಗಿ 'ಸಂಧಾನಕ್ಕೆ ಬನ್ನಿ' ಎಂದು ಶ್ರೀ ನೆಹ್ರೂರವರನ್ನು ಆಮಂತ್ರಿಸುತ್ತಾರೆ ಲಿಯಾಖತರು. ''ಎರಡು ರಾಷ್ಟ್ರಗಳೊಳಗೆ ಯುದ್ಧವಿಲ್ಲ'' ಎಂದು ಸಾರುವ ಧೋರಣೆಗೆ ಲಿಯಾಖತರು ಅಂದು ಒಪ್ಪಿರಲಿಲ್ಲ. ಇಂದು ಎರಡು ರಾಷ್ಟ್ರಗಳೊಳಗೆ ಯುದ್ಧವಿಲ್ಲವೆನ್ನುವ ಕುರಿತು ಭರವಸೆ ನೀಡಬೇಕೆಂದು ಬಯಸಿದಾರೆ. ಭಾರತದ ಗಡಿಗುಂಟ ಸೈನ್ಯವನ್ನು ಸಜ್ಜಾಗಿ ನಿಲ್ಲಿಸಿ—ಇತ್ತ ನಿಂದ ಯುದ್ಧಸನ್ನದ್ಧಗೊಳಿಸಿ ಅತ್ತ ಶಾಂತಿ—ಸೌಹಾರ್ದವೆಂದು ಹೇಳುವ ಮಾತು ಎಂತಹ ಆಭಾಸವಾದುದು? ಸಹಜ ಮೈತ್ರಿಯನ್ನು ಬಯಸುವವರಿಗೆ ಈ ನಾಲ್ಕು ವರ್ಷದ ಸಂಧಿಗಳು ವಿವೇಕವನ್ನು ತೋರಿಸದಿರುವಾಗ ಮುಂದೆ ಅದಕ್ಕಿಂತಲೂ ಉತ್ತಮ ಸಂದರ್ಭವಿದೆಯೆಂಬು ಹೇಗೆ ಭಾವಿಸೋಣ? ಭಾರತದ ಸಾಟಿಯಿಲ್ಲದ ಸಹನಶೀಲ ಧೋರಣೆಗೆ ಪಾಕಿಸ್ತಾನದ ಜಂಭದ ಕೋಳಿಗಳು ಕತ್ತಿಹಿಡಿದು ನಿಂತಿರುವಾಗ—ಭೀಕರ ಪ್ರಕರಣವನ್ನು ಹುಟ್ಟಿಸುತ್ತಿರುವಾಗ ನೀತಿಯು ಮಾತ್ರ? ಉಭಯ ರಾಷ್ಟ್ರಗಳೂ ''ತಮಗೆ ಯುದ್ಧಬೇಡ''ವೆಂದು ಹೇಳುತ್ತಾ ಸಮರ ಸನ್ನಾಹ ನಡೆಸುತ್ತಿರುವ ಈ ಔಚಿತ್ಯದ ಮೇಲೆ ನಮ್ಮ ವಿಚಾರ ಧಾರೆಯನ್ನು ಹರಿಸಿದರೆ ಮಾತಿಗೂ ಕೃತಿಗೂ ಬರದ ಕಾಣದ ಕೈಯೊಂದರ ಕೈವಾಡ ಬೇರೆಯೇ ಇದೆಯೆಂದು ನಮಗರ್ಥವಾಗದೆ?

ಆಸ್ಟ್ರೇಲಿಯಾದ ಉಣ್ಣೆ ವ್ಯವಸಾಯ

ಈ ವರ್ಷ ಉಣ್ಣೆಯ ಬೆಲೆ ಪರಮಾವಧಿಗೆ ಏರಿದೆಯಾಗಿ, ಹಿಂದಿನ ಕಾಲದ ಬೇಸಾಯಗಾರರು ಉಣ್ಣೆ ಮಾರುವ ಕಾಲ ವಿನಿಮಯ ಆಫೀಸಿನ ಹಿಂದೆ ಕಾದು ಕುಳಿತಿರುತಿದ್ದ ಕತೆ ಕೇಳಿ ಇಂದಿನ ಉಣ್ಣೆ ವ್ಯವಸಾಯಿಗಳು ನಸುನಗೆ ಬೀರುತ್ತಾರೆ. ೧೯೪೯ರಲ್ಲಿ ಒಂದು ರಾತಲು ಉಣ್ಣೆಗೆ ೪೮ ಪೆನ್ಸು ಬೆಲೆ ಬಂದರೆ ಅದೇ ಹೆಚ್ಚಾಗಿತ್ತು. ಆದರೆ ಈ ವರ್ಷವೋ, ಕಡಿಮೆ ಕಡಿಮೆ ಎಂದರೂ ಒಂದು ರಾತಲಿಗೆ ೮೦ ಪೆನ್ಸು ಸಿಗಲೇ ಬೇಕೆಂದು ಅಂದಾಜು. ಕೆಲವರು ಉಣ್ಣೆ ವ್ಯವಸಾಯಿಗಳಿಗೆ ಸಲಹೆ ಕೊಡುತಿದ್ದರು— ''ಸುಮ್ಮಗೆ ಏಕೆ ಆತೆಗಟ್ಟಿಕೊಳ್ಳುತ್ತೀರಿ? ೬೦ ಪೆನ್ಸಿಗೆ ಈಗಲೇ ಮಾರಬಾರದೆ? ಮುಂದೆ ಇಷ್ಟು ಸಿಗದೆ ಹೋದೀತು. ''ವ್ಯಾಪಾರ ಮುಗಿದ ಬಳಿಕ ಹೀಗೆ ಕಿವಿಯೂದಿದ ಜನರೇ ಬಂದು ಏನು ಹೇಳಿದರು ಗೊತ್ತೆ—''ಅಬ್ಬ ಒಂದು ರಾತಲಿಗೆ ೧೪೮ ಪೆನ್ಸು ಬಂತು!'' ಒಬ್ಬ ಗಿರಾಕಿ ೨೦೦ ಪೆನ್ಸು ಕೊಟ್ಟು ಒಂದು ರಾತಲು ಉಣ್ಣೆ ಕೊಳ್ಳುವ ಕಾಲ ಇದು. ಆಶ್ಚರ್ಯ!

ಆಸ್ಟ್ರೇಲಿಯಾದ ಉಣ್ಣೆ ವ್ಯವಸಾಯಗಾರರ ಅದೃಷ್ಟವೋ ಏನೋ, ಗ್ರೇಟ್ ಬ್ರಿಟನ್, ಫ್ರಾನ್ಸ್, ಸಂಯುಕ್ತ ರಾಜ್ಯ ಅಮೇರಿಕಾ, ಬೆಲ್ಜಿಯಂ, ಜಪಾನು, ಜರ್ಮನಿ, ಇಟೆಲಿ, ಸೋವಿಯಟ್ ರಶಿಯಾ ಮುಂತಾದ ಇನ್ನೂ ಹತ್ತು ಹಲವು ರಾಷ್ಟ್ರಗಳು ಈ ಆಸ್ಟ್ರೇಲಿಯನ್ ಉಣ್ಣೆಗಾಗಿ ತುರುಸಿನ ಸ್ಪರ್ಧೆಗೆ ಇಳಿದಿವೆ ಎಂದೂ ತಿಂದ ಬೆಲೆಯನ್ನು ಈಗ ತೆರಲು ಅವು ಸಿದ್ಧವಿವೆ.

ಇಲ್ಲಿಯ ಕುರಿಗಳಲ್ಲಿ ಹೆಚ್ಚಿನವು ಉತ್ತಮ ವರ್ಗದವೆಂದು ಪರಿಗಣಿತವಾಗಿರುವ ಮೆರಿನೋ ಜಾತಿಯವು. ವರ್ಷದ ಉಣ್ಣೆ ಉತ್ಪತ್ತಿಯಲ್ಲಿ ಕಾಲಂಶದಷ್ಟು ಬೇರೆ ಜಾತಿಯ ಕುರಿಗಳಿಂದ ಬರುತ್ತದೆ. ದಕ್ಷಿಣದ ಶೀತಪ್ರದೇಶಗಳಾದ ವಿಕ್ಟೋರಿಯಾ ಮತ್ತು ಟಾಸ್ಮಾನಿಯಾದಲ್ಲಿ ಈ ಸಾಧಾರಣದ ದರ್ಜೆಯ ಉಣ್ಣೆ ಉತ್ಪಾದಿತವಾಗುತ್ತದೆ. ಟಾಸ್ಮಾನಿಯಾದಲ್ಲಿ ಕಾಲಂಶಕ್ಕೂ ಕಡಿಮೆ ಮತ್ತು ವಿಕ್ಟೋರಿಯಾದಲ್ಲಿ ಸುಮಾರು ಅರ್ಧದಷ್ಟು ಮಾತ್ರ ಮೆರಿನೋ ಜಾತಿಯ ಉಣ್ಣೆ ಬೆಳೆಯುತ್ತದೆ. ಆಸ್ಟ್ರೇಲಿಯಾದ ಕುರಿಸಾಕಣೆಯಲ್ಲಿ ಶೇಕಡಾ ೩೦ರಷ್ಟು ಗೋದಿ ಹೊಲಗಳಲ್ಲಿ ನಡೆಯುತ್ತದೆ. ಈ ಮೆರಿನೋ ಜಾತಿಯ ಕುರಿಗಳು ಸ್ಪೆಯಿನು ದೇಶದ ಸಂತಾನಗಳೇ ಆಗಿವೆ. ಸ್ಪೆಯಿನು ದೇಶ ಶತಮಾನಗಳಿಂದಲೂ ಮೆರಿನೋ ಉಣ್ಣೆಗೆ ಹೆಸರಾಂತ ನಾಡು. ೧೭೯೭ರಲ್ಲಿ ಮೊದಲಾಗಿ ಸ್ಪೆಯಿನಿನಿಂದ ಮೆರಿನೋ ಕುರಿಗಳನ್ನು ಇಲ್ಲಿಗೆ ತರಿಸಿಕೊಂಡರು. ಸಾಕ್ಸನಿ, ಜರ್ಮನಿ, ಆಸ್ಟ್ರಿಯಾ, ಹಂಗರಿ, ಇಂಗ್ಲೆಂಡ ಹಾಗೂ ಫ್ರಾನ್ಸುಗಳಲ್ಲಿ ಈ ತಳಿಯನ್ನು ತುಂಬ ಉತ್ತಮಗೊಳಿಸಲಾಯಿತು. ೧೮೦೦ರಲ್ಲಿ ನ್ಯೂ ಸೌತ್‌ವೇಲ್ಸಿನ ಕ್ಯಾಪ್ಟನ್ ಜಾನ್ ಮೇಕಾರ್ಥರನು ಸ್ಪೆಯಿನಿನ ಮೆರಿನೋ ಹಾಗೂ ಇಂಡಿಯಾದ ಕುರಿಗಳ ನೆತ್ತರು ಬೆರಕೆಮಾಡಿ ಹೊಸ ತಳಿ ನಿರ್ಮಿಸಿದನು. ಇದರಿಂದ ಉಣ್ಣೆ ತಾಳಿಕೆಯದೂ ಸುಂದರವೂ ಆಗಿತ್ತು.

ಎಪ್ಪತ್ತು ವರ್ಷಗಳ ಒಳಗಾಗಿ ಮೂಲದ ೨೯ ಕುರಿಗಳ ಸಂಖ್ಯೆ ಬೆಳೆದು ೨೯,೦೦೦,೦೦೦ ವಾಯಿತು. ಇಂದು ಅವೇ ಕುರಿಗಳು ೧೦೮,೦೦೦,೦೦೦ದಷ್ಟು ಹೆಚ್ಚು ಸಂಖ್ಯೆಗೇರಿವೆ. ಈ ಕಾಲದಲ್ಲಿ ಪ್ರಪಂಚದ ಒಟ್ಟು ಉಣ್ಣೆ ಉತ್ಪಾದನೆಯಲ್ಲಿ ಕಾಲಂಶ, ಜಗತ್ತಿನಲ್ಲಿ ಆರನೇ ಒಂದಂಶ ಪ್ರಮಾಣದ ಕುರಿಗಳಿರುವ ಆಸ್ಟ್ರೇಲಿಯಾದಿಂದ ಬರುತ್ತದೆ.

ಕುರಿಸಾಕಣೆಯ ಸಮಸ್ಯೆಗಳಲ್ಲಿ ತೀರ ಹಿರಿದಾದುದು, ನೀರಿನ ಪೂರೈಕೆ. ಪಶ್ಚಿಮ ವಿಕ್ಟೋರಿಯಾ ಹಾಗೂ ಟಾಸ್ಮಾನಿಯಾಗಳಲ್ಲಿ ಮಳೆ ಸಾಕಷ್ಟು ಬರುತ್ತದೆ. ಆದರೆ ಉಳಿದ ದೂರದ ಒಳನಾಡುಗಳಲ್ಲಿ ಕುರಿಸಾಕಣೆಯ ಪ್ರಗತಿ ಅಥವಾ ಅವನತಿ ನೀರಿನ ಪೂರೈಕೆಯನ್ನೇ ಹೊಂದಿಕೊಂಡಿದೆ. ಉತ್ತರ ನ್ಯೂ ಸೌತ್ ವೇಲ್ಸು ಹಾಗೂ ಕ್ವೀನ್ಸ್‌ಲೇಂಡಿನಲ್ಲಿ ತೂತು ಬಾವಿಗಳಿಂದ ಧಾರಾಳ ಪ್ರಯೋಜನವನ್ನು ಪಡೆಯುತ್ತಾರೆ. ಈ ನೀರಿನಲ್ಲಿ ಖನಿಜ ಪದಾರ್ಥಗಳಿವೆಯಾದುದರಿಂದ, ಮನುಷ್ಯನ ಉಪಯೋಗಕ್ಕೆ ಇದು ಬರುವುದಿಲ್ಲವಾದರೂ, ಕುರಿಗಳ ಮಟ್ಟಿಗೆ ಇದು ಸಾಕು!

ಕೆಲವೇ ಸಾವಿರ ಕುರಿಗಳಿರಲಿ, ಅಥವಾ ಕ್ವೀನ್ಸ್‌ಲೇಂಡಿನ 'ನಾಂತೂ'ವಂತೆ ಲಕ್ಷಗಟ್ಟಳೆ ಕುರಿ ಇರಲಿ, ಉಣ್ಣೆ ಉತ್ಪಾದನೆಯ ಕ್ರಮವೆಲ್ಲ ಒಂದೇ. ಉಣ್ಣೆ ವ್ಯವಸಾಯವೆಂಬುದು ಪ್ರತಿದಿನದ, ತಿಂಗಳಿನ, ಇಡೀ ವರ್ಷದ ಉದ್ಯಮವೆಂದರೂ ಸರಿಯೆ. ಬೇಲಿಯ ನಡುವೆ ಹುಲ್ಲುಗಾವಲಿನಲ್ಲಿ ಕುರಿಗಳು ಮೇಯುವಾಗ ಕುದುರೆಯ ಮೇಲಿಂದ ಕಾವಲು ಮಾಡಿದಷ್ಟಕ್ಕೆ ಉಣ್ಣೆ ಕೈಗೆ ಬರುವುದಿಲ್ಲ. ಉಣ್ಣೆ ಉತ್ಪಾದನೆಯಲ್ಲಿ ಮುಖ್ಯತಃ ನಾಲ್ಕು ಹಂತಗಳಿವೆ—ಮೊದಲಾಗಿ ಕುರಿಗಳಿಗೆ ಅಭಿಷೇಕ ಮಾಡಿಸುವುದು ಅಥವಾ ನೀರಲ್ಲಿ ಅದ್ದುವುದು; ಅವುಗಳ ಸಂತಾನ ಬೆಳೆಯಬಿಡುವುದು; ಕುರಿಮರಿಗಳ ಆರೈಕೆ; ಹಾಗೂ ಕೊನೆಯದಾಗಿ ಉಣ್ಣೆ ಕತ್ತರಿಸಿ ವಿಕ್ರಯಿಸುವುದು. ಈ ಕೊನೆಯ ಕೆಲಸ ನಡೆಯುವ ಸಮಯವೇ ಸುಗ್ಗಿಯ ಕಾಲವೆನ್ನಲಡ್ಡಿಯಿಲ್ಲ.

ಉಣ್ಣೆಯನ್ನು ಕತ್ತರಿಸಿ ಸಂಗ್ರಹಿಸಿದ ನಾಲ್ಕಾರು ವಾರಗಳ ಬಳಿಕ ಕುರಿಮಂದೆಗೆ ಅಭಿಷೇಕ ಮಾಡುತ್ತಾರೆ. ಆರ್ಸೆನಿಕ್ ರಾಸಾಯನಿಕದ್ರವ್ಯ ಹಾಗೂ ಒಂದು ಬಗೆಯ ವಿಷಬೆರಸಿದ ನೀರಿನಲ್ಲಿ ಕುರಿಗಳನ್ನು ಅದ್ದುತ್ತಾರೆ. ಸಾಂಕ್ರಾಮಿಕ ರೋಗಗಳನ್ನು ಹಬ್ಬಬಹುದಾದ ಕ್ರಿಮಿ-ಕೀಟಗಳನ್ನು ನಾಶಪಡಿಸುವುದೇ ಈ ಮೋಕ್ಷಸ್ನಾನದ ಉದ್ದೇಶ. ಕುರಿಗಳ ಸಂಖ್ಯೆ ಬೆಳೆದಂತೆ, ಅವುಗಳನ್ನು ಆಶ್ರಯಿಸಿ ಮೈತುಂಬ ಬೆಳೆವ ಪರಪುಷ್ಟ ಕೀಟಾಣುಗಳ ಪ್ರಮಾಣವೂ ಬೆಳೆಯುವ ಭಯವಿದೆ. ಈ ಸ್ನಾನದ ವ್ಯವ

[೯ನೇ ಪುಟ ನೋಡಿ]

For Protection and Provision

Consult

The New Guardian of India Life Insurance Co., Ltd.

Head office: MADRAS

(Estd 1931)

A Policy in this Progressive Life Office is a good investment, its Agency is a valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಭಾರತ ಸಮರ ಸನ್ನದ್ಧವಾಗಬೇಕು!

ವಿದೇಶೀಯರ ಕುತಂತ್ರ—ನೆರೆರಾಷ್ಟ್ರಗಳ ಆಕ್ರಮಣ ದೃಷ್ಟಿಯಿಂದ ಪಾರಾಗುವದಕ್ಕೆ ಸಂರಕ್ಷಣಾ ಸನ್ನಾಹವೊಂದೇ ಪರಿಹಾರ ಮಾರ್ಗ!

ಭಾರತಕ್ಕೆ ಇಂದು ಬಂದೊದಗಿರುವ ಗಂಭೀರ ಪರಿಸ್ಥಿತಿಯನ್ನು ನಾವು ಅಲಕ್ಷ್ಯಭಾವದಿಂದ ನೋಡಲಾಗದು. ಪಾಕಿಸ್ತಾನ ಬೆದರಿಕೆ ಹಾಕುವವನ್ನು ನಾವು ನಾಲ್ಕು ವರ್ಷಗಳಿಂದ ಕೇಳಿ ಕೇವಲ ತಿರುಬೊಬ್ಬೆಯೆಂದು ಶ್ರೀಮದ್ಗಾಂಭೀರ್ಯವನ್ನು ತೋರಿಸುತ್ತ ಬಂದಿದ್ದೇವೆ. ಸದ್ಯದ ಪ್ರತಿಭಟನೆ ಒಂದು ನಿರ್ದಿಷ್ಟ ಗೊತ್ತುಗುರಿಯ ಮೂಲಕ ಹೊರಟಿದ್ದ ಭಾರತದಮೇಲೆ ಯುದ್ಧಹೂಡುವ ನಿರ್ಧಾರದಿಂದ ಕೂಡಿದ್ದಾಗಿರುತ್ತದೆ. ಇಂದು ಇಡಿಯ ಪಾಕಿಸ್ತಾನವನ್ನೇ ಹಿಂದುಸ್ತಾನದ ವಿರುದ್ಧ ಧರ್ಮಯುದ್ಧಹೂಡಿ ಸರ್ವನಾಶ ಮಾಡುವಂತೆ ಜಾತೀಯ ದ್ವೇಷವನ್ನು ಹುಟ್ಟಿಸಲಾಗುತ್ತಿದೆ. ಭಾರತದ ಗಡಿಯಲ್ಲಿ ಪಾಕಿಸ್ತಾನದ ಸೈನಿಕರು ಮುಖ್ಯ ರಾಜ್ಯವನ್ನು ನಿರ್ಮಿಸಿದ್ದು ಯುದ್ಧ ಆರಂಭವಾದೊಡನೆಯೆ ಅದನ್ನು ಹೇಗೆ ಪ್ರತಿಭಟಿಸಬಹುದೆನ್ನುವ ಕುರಿತು ಒಳ್ಳೆಯ ಆದೇಶವನ್ನು ಪಡೆದಿರುತ್ತಾರೆ. ಲಾಹೋರಿನಲ್ಲಿ ವಿಮಾನ ಧಾಳಿಯಿಂದ ರಕ್ಷಣೆಹೊಂದುವ ಪರೀಕ್ಷೆ ನಡೆಯಿತು. ಶಾಲಾ ಕಾಲೇಜುಗಳಲ್ಲಿ ಯುದ್ಧ ಶಿಕ್ಷಣದ ಕುರಿತು ಪ್ರಚಾರ ನಡೆಸಲಾಗುತ್ತಿದೆ. ಮಾತ್ರವಲ್ಲದೆ ಬಹುಸಂಖ್ಯೆಯಲ್ಲಿ ಸೈನ್ಯಭರ್ತಿ ಕಾರ್ಯ ನಡೆಯುತ್ತಿದೆ. ನಾಗರಿಕರಿಗೂ, ಶಾಲಾ ಮಕ್ಕಳಿಗೂ ಧಾಳಿಯಾದಾಗ ಹೇಗೆ ನಡೆದುಕೊಳ್ಳಬೇಕೆನ್ನುವ ಕುರಿತು ಮುಂಜಾಗ್ರತೆ ಕೊಡಲಾಗುತ್ತದೆ. ಪಾಕಿಸ್ತಾನದ ಹಿಂದಿನ ಗ್ರ್ಯಾಂಡಮುಫ್ತಿಯು ಪಾಕಿಸ್ತಾನದ ಕೈವಾರಿಯಾಗಿದ್ದುಕೊಂಡು ಇಡಿಯ ದೇಶದಲ್ಲೆಲ್ಲ ಧರ್ಮದ ಸೋಗು ಹಾಕಿ, ಜಾತೀಯ ದ್ವೇಷ ಹುಟ್ಟಿಸುತ್ತಲಿದ್ದಾನೆ. ಪಾಕಿಸ್ತಾನ ನ್ಯಾಶನಲ್ ಗಾರ್ಡ್ಸ್‌ದಲಗಳು ಪಾಕಿಸ್ತಾನ ಸೈನ್ಯದಲ್ಲಿ ಸೇರ್ಪಡೆಗೊಂಡಿದ್ದು ಅವರಿಗೆ ಸೈನ್ಯತರಬೇತಿಯ ಶಿಕ್ಷಣವನ್ನು ಕೊಡಲಾಗುತ್ತಿದೆ. ಪಾಕ್ ಪಂಜಾಬದ ಮುಸ್ಲಿಮರಿಗೆ ಪ್ರಾಂತದ ಎಲ್ಲ ಸಂಪತ್ತನ್ನು ಪ್ರಧಾನಿ ಲಿಯಾಖತರಿಗೆ ಒಪ್ಪಿಸುವದು ಮಾತ್ರವಲ್ಲದೆ, ಸಕಲ ಸ್ತ್ರೀಪುರುಷರು ಉಸಿರಿರುವ ತನಕ ಹೋರಾಡುವೆವೆಂದು ಘೋಷಿಸಿದೆ. ಪಾಕಿಸ್ತಾನವಲ್ಲಿ ಯುದ್ಧದಿಂದ ಸಂರಕ್ಷಿಸಿಕೊಳ್ಳುವ ಸರ್ವವಿಧದ ಸನ್ನಾಹ ನಡೆದಿದ್ದು ಪ್ರಥಮ ಚಿಕಿತ್ಸೆ-ಮುಂತಾದ ವಿಚಾರಗಳಿಗೆ ಈಗಾಗಲೇ 2000 ವಾರ್ಡನರನ್ನು ನೇಮಿಸಲಾಗಿದೆ. ದೇಶಾದ್ಯಂತ ವಿಭಾಗಗಳನ್ನು ಮಾಡಿ ಸುವ್ಯವಸ್ಥಿತ ರೀತಿಯ ಸಂಘಟನೆ ನಡೆದಿದೆ. ಆಹಾರ ಪೆಟ್ರೋಲಿನ ಸಂಗ್ರಹವನ್ನು ಪಾಕಿಸ್ತಾನ ಮಾಡಿದ್ದನ್ನು ಲಕ್ಷಿಸುವಾಗ ಈ ಯುದ್ಧ ಹಂಚಿಕೆಯನ್ನು ಬಹಳ ಕಾಲದಿಂದ ಪಾಕಿಸ್ತಾನ ಮಾಡಿದ್ದಿತೆಂದು ಸ್ಪಷ್ಟವಾಗುತ್ತದೆ.

ಮಿಲಿಟರಿ ತಜ್ಞರಲ್ಲಿ ಬ್ರಿಟಿಶರೇ ಮುಖ್ಯರಾಗಿದ್ದಾರೆ ಬ್ರಿಟಿಶ ಅಧಿಕಾರಿಗಳ. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಮಾರ್ಗದರ್ಶನ ಮಾಡುತ್ತಿದ್ದು ಭಾರತದ ಪ್ರತಿಭಟನೆಯನ್ನು ಎದುರಿಸುವ ಬಗೆಯನ್ನು ಹಿಂದಿನಿಂದ ನಿರ್ದೇಶಿಸುತ್ತಿರುವರು. ಬ್ರಿಟಿಶ ಅಧಿಕಾರಿಗಳೂ ಫೀಲ್ಡಮಾರ್ಶಲ ಅಚಿನ್‌ಸನ್‌ ಮತ್ತು ಗ್ರೇಸಿಯವರು ಈಚೆಗೆ ಮೂರು ನಾಲ್ಕು ತಿಂಗಳಿಂದ ಪಾಕಿಸ್ತಾನದ ಮಿಲಿಟರಿ ಸಂಘಟನೆಯಲ್ಲಿ ತಮ್ಮ ವರ್ಚಸ್ಸನ್ನು ಪ್ರಯೋಗಿಸುತ್ತಿರುವರು. ಅಚಿನಲೆಕ್ಕರು ಬ್ಯಾಂಕಿನ ಡೈರೆಕ್ಟರರು ಎಂದು ನೆವಹೇಳಿಕೊಂಡು ನಾಲ್ಕು ತಿಂಗಳಿಂದ ಪಾಕಿಸ್ತಾನದಲ್ಲಿದ್ದು ಪಾಕಿಸ್ತಾನದ ಮಿಲಿಟರಿಗಳ ಕೇಂದ್ರವನ್ನೂ-ಅಫ್ರಿಕ್ರಿಯನ್ನೂ-ಸ್ಟಾಫ ಕಾಲೇಜವನ್ನೂ ಸಂದರ್ಶಿಸುತ್ತಾ ಆಗಿಂದಾಗ್ಗೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಮಿಲಿಟರಿ ಸಲಹೆಯನ್ನು ನೀಡುತ್ತಿರುವರು.

ಪಾಕಿಸ್ತಾನದ ಮುಖ್ಯಮಂತ್ರಿ ಲಿಯಾಖತರು ಪ್ರಾಂತಿಕ ಮುಸ್ಲಿಂ ಲೀಗದವರು ಏರ್ಪಡಿಸಿರುವ ಸಂರಕ್ಷಣಾ ದಿನಾಚರಣೆಯ ಸಭೆಯಲ್ಲಿ ಮಾಡಿದ ಘೋಷಣೆಯಿಂದ ಪಾಕಿಸ್ತಾನಿಗಳು ಯುದ್ಧದಿಂದ ಹಿಂದುಸ್ತಾನವನ್ನು ಸ್ವಾಧೀನ ಮಾಡಿಕೊಳ್ಳದ ಹೊರತು ನಮಗೆ ಶಾಂತಿಯಿಲ್ಲ ಎನುವವರೆ ವರೆಗೆ ಮುಂದುವರಿದಿದ್ದಾರೆ. ಕಾಶ್ಮೀರ ಹಿಂದೂಸ್ತಾನವನ್ನು ವಶಪಡಿಸಿಕೊಳ್ಳಿರಿ' ಎಂದು ಬರೆದ ಪತಾಕೆಯಡಿಯಲ್ಲಿ ಪ್ರಚಂಡ ಮೆರವಣಿಗೆ ತೆಗೆಯಲಾಯಿತು. ಮುಖ್ಯಮಂತ್ರಿಗಳ ಈ ಘೋಷಣೆಯು ಸಮರಸನ್ನದ್ಧತೆಗೆ ಪ್ರಥಮಾಹ್ವಾನವೆಂಬಂತೆ ಭಾಸವಾಗುತ್ತದೆ!

ಕಮ್ಯೂನಿಸ್ಟರ ಕುತಂತ್ರ!

ಟಿಬೇಟದ ಭಾರತದ ಗಡಿಯಲ್ಲಿ ಕಮ್ಯೂನಿಸ್ಟರ ಚಲನವಲನ ನಡೆಯುತ್ತಿದೆಯೆಂದೂ ಭಾರತ ಗಡಿಯನ್ನು ದಾಟಿದ ದಾಖಲೆಗಳಿವೆಯೆಂದೂ ಉತ್ತರ ಸರಕಾರಕ್ಕೆ ವರದಿಯಾಗಿದೆ. ಇಂತಹ ಚಲನವಲನಕ್ಕೆ ಹೆಚ್ಚಿನ ಮಹತ್ವ ಕೊಡದೆ ಹೋದರೂ ಭಾರತದ ಸುತ್ತ ಕಮ್ಯೂನಿಸ್ಟರ ಹೊಂಚು ನಡೆಯುತ್ತಲಿದೆಯೆಂಬುದನ್ನು ನಾವು ಮರೆಯದಿರೋಣ.

ಹೈದರಾಬಾದದ ತೆಲಂಗಾಣ ಪ್ರದೇಶದಲ್ಲಿ ಕಮ್ಯೂನಿಸ್ಟರ ಹಾವಳಿ ಬಹಳ ಸಮಯದಿಂದ ನಡೆಯುತ್ತಲಿದ್ದು ಯಾವ ರೀತಿಯ ಹಿಡಿತಕ್ಕೆ ಬಂದಿರುವುದಿಲ್ಲ. ಕೊಲೆ ಸುಲಿಗೆ ದರೋಡೆ ನಡೆಯುತ್ತಲಿದೆ. ಮೊನ್ನೆ ಮೊನ್ನೆಯ ವರೆಗೆ ನಿಜಾಮ ಪದ್ಧತಿಯಲ್ಲಿರುವ ಕಮ್ಯೂನಿಸ್ಟ ಧುರೀಣರನ್ನು ಬಿಡುಗಡೆಮಾಡುವದರಿಂದ ತೆಲಂಗಾಣದ ಪರಿಸ್ಥಿತಿ ಶಾಂತವಾಗಬಹುದೆಂದು ಕರಾರುಗಳನ್ನು ಮುಂದೆ ಮಾಡಿದ ಕಮ್ಯೂನಿಸ್ಟ ಮುಖಂಡ ಶ್ರೀ. ಎ. ಕೆ. ಗೋಪಾಲನ್ನರೇ ಇಂದು ತೆಲಂಗಾಣದಲ್ಲಾಗುತ್ತಿರುವ ಆಕೃತ್ಯಗಳು ಕಮ್ಯೂನಿಸ್ಟರದಲ್ಲ ಎನ್ನುತ್ತಲಿದ್ದಾರೆ. ಆಯಾ ದೇಶದೊಳಗಿನ ಕಮ್ಯೂನಿಸ್ಟರ ಚಟುವಟಿಕೆಗಳೂ ಸುತ್ತುಮುತ್ತಲಿನ ಅವರ ಚಲನವಲನವೂ ಸಂಶಯಗ್ರಸ್ತವಾದುದಾಗಿದೆ!

ಪರಿಸ್ಥಿತಿ ಇಷ್ಟು ನಿಚ್ಚಳವಾಗಿರುವಾಗ- ಭಾರತವು ತನ್ನ ಆತ್ಮರಕ್ಷಣೆಯ ಬಗ್ಗೆ ಆಂತರಿಕ ಸುರಕ್ಷಿತೆಯ ಬಗ್ಗೆ ಗಂಭೀರವಾಗಿ ಆಲೋಚಿಸುವದು ಅಗತ್ಯವಾಗಿದೆ. ಅಹಿಂಸೆ-ಸಹನ ಶೀಲಗುಣ- ಸಾವಧಾನ ಧೋರಣ- ನಮ್ಮ ವೈಶಿಷ್ಟವೇನೋ ಹೌದು; ಆದರೆ ನಾಲ್ಕು ವರ್ಷಗಳ ಅನುಭವಗಳಲ್ಲಿ ಭಾರತ ತೋರಿದ ನೈತಿಕತೆಯು ದ್ಯೋತಕವಾಗಿ ನಾವು ಕಾಣುತ್ತಿರುವದಿಂದು ಪರರ ಆಕ್ರಮಣಶೀಲ ಮನೋವೃತ್ತಿಯನ್ನೆ! ಇದಕ್ಕಿಂತ ಮೇಲಿನ ದುರ್ದೈವವೇನಿದೆ? ಶಾಂತಿ ಸಮಾಧಾನಗಳು ವಾದದ ಮಟ್ಟಿಗಾದವೇ ತೋರುತ್ತ ಪರಿಸ್ಥಿತಿಯನ್ನು ಎದುರಿಸಬೇಕಾದರೆ ವಿಧಾಯಕ ಕಾರ್ಯ ಕೈಗೊಳ್ಳಲೇಬೇಕು!

ಆಹಾರ ಮಂತ್ರಿಗಳ ಆಶ್ವಾಸನ

ಕಳೆದಏಪ್ರಿಲ್ ತಿಂಗಳಲ್ಲಿ ನಮ್ಮ ಆಹಾರ ಪರಿಸ್ಥಿತಿ ಸುಧಾರಣೆಯಾಗಿದ್ದು ಮುಂದಕ್ಕೆ ಆಹಾರದ ವಿಚಾರದಲ್ಲಿ ಚಿಂತೆ [illegible]ಲೂ ನಿಕೃಷ್ಟ ಪರಿಸ್ಥಿತಿಗೆ ಮುಟ್ಟಲಾರೆವೆಂದು ನಮ್ಮ ಆಹಾರ ಮಂತ್ರಿಗಳ ಆಶ್ವಾಸನವಿತ್ತಿದ್ದರು. ಹಸಿದವರಿಗೆ ನೀಡಿದ ಈ ಭರವಸೆ ನಾಲ್ಕುತಿಂಗಳೊಳಗೆ ಅಂದಿಗಿಂತಲೂ ಕಠಿಣಾವಸ್ಥೆಗೆ ತಂದೊಡ್ಡೀತೆಂದು ಯಾರೂ ಎಣಿಸಿರಲಿಲ್ಲ. ಮಂತ್ರಿಗಳು ಆಶ್ವಾಸನೆ ನೀಡುವಾಗ 7ಔನ್ಸಿನಿಂದ 8ಔನ್ಸಿನವರೆಗೆ ನಮ್ಮ ಆಹಾರವನ್ನು ಹೆಚ್ಚಿಸಲಾಗಿತ್ತು. ಇಂದು 2 ಔನ್ಸುಗಳ ಕಡಿತವಾಗಿ ಕೇವಲ 6ಔನ್ಸ ಮಾತ್ರ ನಮ್ಮ ಪಾಲಿಗೆ ದೊರೆಯುವಂತಾಗಿದೆ. ಊರ ಅಕ್ಕಿಗಿಂತ ಇಮ್ಮಡಿಯಾಗಿ ಬೆಲೆಯನ್ನು ನಾವು ತೆರಬೇಕು. ಸಯಾಮ ಚೀನಗಳಿಂದ ಬಂದಿರುವ ಅಕ್ಕಿಗೆ ದುಬಾರಿಬೆಲೆಯಾದುದರಿಂದ ಸರಕಾರಕ್ಕೆ ಅಂದರೆ 60,000ಟನ್ ಅಕ್ಕಿಗೆ ಒಂದು ಕೋಟಿ ರೂಪಾಯಿ ನಷ್ಟಬರಬಹುದೆಂದು ಹೇಳಲಾಗುತ್ತಿದೆ. ಅಂತಲೇ ಅಕ್ಕಿಯ ಬೆಲೆಯೂ ಏರುವದು ಅನಿವಾರ್ಯವಾಯಿತು! ಇದರಿಂದ ಊರಿನ ಅಕ್ಕಿಯು ಬಡವನ ಹೊಟ್ಟೆಯ ಮೇಲೆ ಇನ್ನೊಂದು ಬಲವಾದ ಪೆಟ್ಟುಕೊಟ್ಟಂತಾಗಿದೆ. 'ಉತ್ತಮ ತರಹದ ಅಕ್ಕಿ'ಯೆಂದು ಪರಿಗಣಿಸಿ ನಮಗೆ ಕೊಡುವ ವಿದೇಶೀಯ ಅಕ್ಕಿಯು ನಮ್ಮ ಅಕ್ಕಿಗಿಂತ ಶುಚಿರುಚಿ ಎರಡರಲ್ಲೂ ನಿಕೃಷ್ಟವಾದುದು. ಆದರೆ ಬೆಲೆ ಅಧಿಕ. ಊರಿನ ಅಕ್ಕಿಯ ಮೇಲೂ, ಪರವೂರಿನ ಅಕ್ಕಿಯ ಮೇಲೂ ಮಾರಾಟದಲೆಯ ಮೇಲೆ ಧಾರಣೆಯೇರಿಸಿ ನಷ್ಟ ಭರ್ತಿಮಾಡಿಕೊಳ್ಳಲಾಗುವದ. ಈಗಿನ ಕಡಿತವೂ, ಈ ದುಬಾರಿ ಬೆಲೆಯೂ ಮದ್ರಾಸು ಸರಕಾರದ ಆಹಾರಧೋರಣೆಯ ಅಕ್ರಮತೆಯನ್ನು ವ್ಯಕ್ತಪಡಿಸುತ್ತದೆ. ಇತರ ವಸ್ತುಗಳಿಗೆ ಯುದ್ಧಪೂರ್ವದ ಹತ್ತುಪಟ್ಟು ಬೆಲೆಏರುವಾಗ ಅಕ್ಕಿಯ ಧಾರಣೆಯನ್ನು ಏರಿಸದೆ ಒಣಪ್ರತಿಷ್ಠೆಯನ್ನು ಅನುಸರಿಸಲಾಯಿತು!

ನಮ್ಮ ಜನ ಬೆವರು ಸುರಿಸಿ ಬೆಳೆಸಿದ ಅಕ್ಕಿಯನ್ನು ಅಲ್ಪಬೆಲೆಗೆ ವಿಕ್ರಯಿಸಿ ಪರದೇಶೀಯ ಸಾಮಾನ್ಯ ಅಕ್ಕಿಗೆ ಅಧಿಕ ಬೆಲೆಯನ್ನು ಕೊಟ್ಟುಉಣ್ಣಬೇಕಾಗಿದೆ. ನಾವು ಸ್ವಾವಲಂಬಿಗಳಾಗಬೇಕು-ಆಹಾರವನ್ನು ಹೆಚ್ಚಾಗಿ ಬೆಳೆಸಬೇಕು-ಎಂದು ತತ್ವಾಡುವ ನಮ್ಮ ಮಂತ್ರಿಗಳು ಸ್ವಾವಲಂಬಿಗಳಿಗೆ ಸ್ವದೇಶದ ಬೆಳವಣಿಗೆಗೆ ನೀಡುವ ಸರಿಯಾದ ಪ್ರೋತ್ಸಾಹ ಇದಾಗಿದೆಯೆಂದು ಭಾವಿಸುವರೇ?

ಆಹಾರದ ಬಿಕ್ಕಟ್ಟು ಇಡಿಯದೇಶಕ್ಕೆ ಬಂದಿದ್ದಾದರೂ ಮದ್ರಾಸಿನವರ ಪಾಡು ಉಳಿದವರಿಗಿಂತಲೂ ಕನಿಷ್ಟಾವಸ್ಥೆಗೆ ಬಂದಿರುತ್ತದೆ. ಮುಂಬರುವ ಎರಡು ಮೂರು ತಿಂಗಳಲ್ಲಿ ಬಡಜನ ಅಕ್ಕಿಯ ಕಡಿತದಿಂದಲೂ-ಅಧಿಕವಾದ ಬೆಲೆಯಿಂದಲೂ ಕರುಣಾಜನಕವಾದ ಬಾಳುವೆಯನ್ನು ಮಾಡುವ ದುರ್ಧರ ಪ್ರಸಂಗಬರಬಹುದು! ಆಗಸ್ಟ 12ರಿಂದ ಉಂಟಾಗುವ ಈ 2ಔನ್ಸಿನ ಕಡಿತದಿಂದ ನಮ್ಮ ಜನದ ಮಟ್ಟಿಗೆ ವಜ್ರಾಘಾತವಾದಂತಾಗಿದೆ! ನಾಲ್ಕು ತಿಂಗಳ ಹಿಂದೆ ನಮ್ಮ ಆಹಾರ ಮಂತ್ರಿಗಳು ನೀಡುತ್ತಿದ್ದ ಆಶ್ವಾಸನೆಯು ಹೀಗೆ ಅಂತರಗೋಳು ಪಾಲಾದೀತೆಂದು ನಾವು ಭಾವಿಸಿರಲಿಲ್ಲ!

ರಾಮತೀರ್ಥ ಬ್ರಾಹ್ಮಿ ತೈಲ



ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಅಬದಾನದ ಎಣ್ಣೆ ಕಂಪೆನಿಗೆ ಬಾಗಿಲು!

ಅಬದಾನದ ಆಂಗ್ಲೋ ಇರಾಣಿಯನ್ ಆಯಿಲ್ ಕಂಪೆನಿಯ ಶುದ್ಧೀಕರಣ ಕಾರಖಾನೆಗೆ ಮಂಗಳವಾರದಿಂದ ಬಾಗಿಲು ಹಾಕಲಾಯಿತು. ಜಗತ್ತಿನ ಅತಿ ದೊಡ್ಡ ಎಣ್ಣೆ ಉತ್ಪಾದನೆಯ ಎಣ್ಣೆ ಕಣಿ ಇದಾಗಿದ್ದು ದಿನ ಒಂದಕ್ಕೆ 15 ಮಿಲಿಯ ಗೆಲನ್ ಎಣ್ಣೆಯನ್ನು ಅದರಿಂದ ತೆಗೆಯಲಾಗುತ್ತಿತ್ತು! 1941ರಲ್ಲಿ ವಿದೇಶೀಯ ಸೈನ್ಯ ಪ್ರವೇಶಿಸಿದಾಗ ಇದನ್ನು ಮುಚ್ಚಲಾಗಿತ್ತು. ಬ್ರಿಟನಿನ 100 ಜನ ತಜ್ಞರನ್ನು ವಿಶೇಷ ರಜೆಯ ಮೇಲೆ ಕಳಿಸಲಾಗಿದೆ. ಎಣ್ಣೆ ಕಣಿಯ ಸುರಕ್ಷಿತತೆ ಬಗ್ಗೆ 100 ಜನ ತಜ್ಞರೂ ಇನ್ನಿತರ ಕಣಿಯ ಕೆಲಸಗಾರರು ಉಳಿಯುವರು.

ಹ್ಯಾರಿಮನ್ನ ಮಾತುಕತೆಯಲ್ಲಿ ಪ್ರಗತಿ!

ಅಧ್ಯಕ್ಷ ಟ್ರೂಮನ್ನರ ವಿಶೇಷ ರಾಯಭಾರಿಗಳಾದ ಹ್ಯಾರಿಮನ್ನರು ಇಂಗ್ಲೆಂಡದಲ್ಲಿ ಪರ್ಸಿಯ ಮಾತುಕತೆಯು ಯಶಸ್ವಿಗಾಗಿ ಪ್ರಯತ್ನ ನಡೆಸುತ್ತಲಿದ್ದಾರೆ ಬ್ರಿಟನದ ಪ್ರಧಾನ ಮಂತ್ರಿ ಕ್ಲಿಮೆಂಟ್ ಅಟ್ಲಿ-ಪರ್ಶಿಯಾದಲ್ಲಿ ಬ್ರಿಟಿಶ ರಾಯಭಾರಿಯಾದ ಸರ್. ಫ್ರಾನ್ಸಿಸ್ ಶೆಫರ್ಡ್, ವಿದೇಶ ಮಂತ್ರಿಗಳಾದ ಹರ್ಬರ್ಟ ಮಾರಿಸನ್, ಇವರುಗಳಿಂದ ಕೂಡಿದ ಸಭೆಯಲ್ಲಿ ಹ್ಯಾರಿಮನ್ನರು ಪರ್ಸಿಯದ ಕುರಿತಾಗಿ ಚರ್ಚೆ ನಡೆಸಿದ್ದು, ಮಾತುಕತೆ ಫಲದಾಯಕ ಹಾಗೂ ಉಪಯುಕ್ತವಾಗಿ ಪರಿಣಮಿಸಿದೆಂದು ತಿಳಿಯುತ್ತದೆ.

ಕೊರಿಯದಲ್ಲಿಯ ತೊಡಕು

ಕೊರಿಯದ ಮಾತುಕತೆಯಲ್ಲಿ ನೂತನ ಸಮಸ್ಯೆಗಳು ತಲೆಯೆತ್ತಿರುವದರಿಂದ ಮಾತುಕತೆಯಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದಿಲ್ಲ. ಯುದ್ಧ ವಿರಾಮ ಘೋಷಣೆಯ ಪ್ರಕಾರ ತಟಸ್ಥ ಪ್ರದೇಶದ ನಿರ್ಮಾಣದ ಕುರಿತು ಉಭಯ ಪಕ್ಷಗಳ ಅಭಿಪ್ರಾಯವೂ ವಿರುದ್ಧವಾಗಿವೆಯಂತೆ! 38ನೆಯ ಅಕ್ಷಾಂಶಕ್ಕೆ ಸಂಬಂಧಪಟ್ಟ ಒಪ್ಪುವ ಯುದ್ಧ ವಿರಾಮಕ್ಕೆ ದ. ಕೊರಿಯನ್ನರು ಸಮ್ಮತಿಸುವದಿಲ್ಲವಂತೆ. ಪೂರ್ವ ಮತ್ತು ಮಧ್ಯ ರಣರಂಗದಲ್ಲಿ ಉಭಯ ಪಕ್ಷಗಳಲ್ಲೂ ನಡೆದೇಯಿದೆ.

ಕಾಶ್ಮೀರದ ಪ್ರಶ್ನೆಯಲ್ಲಿ ಅನಿಶ್ಚಿತತೆ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರಾಹ್ಯಾಮರು ಭಾರತ ಪಾಕಿಸ್ತಾನಗಳೊಳಗೆ ಕಾಶ್ಮೀರದ ಬಗ್ಗೆ ಮಾತುಕತೆ ನಡೆಸಿದ್ದು ಮುಂದೆ ಕಾಶ್ಮೀರಕ್ಕೆ ತೆರಳಿ ಪರಿಸ್ಥಿತಿಯನ್ನು ಚೆನ್ನಾಗಿ ಅಭ್ಯಸಿಸಿ ಒಂದು ನಿರ್ಧಾರಕ್ಕೆ ಬರಬಹುದೆಂದು ತಿಳಿಯುತ್ತದೆ. ದಿಲ್ಲಿಯಲ್ಲಿ ಸುದ್ದಿಗಾರರ ಸಭೆಯಲ್ಲಿ ಮಾತನಾಡುವಾಗ ಈ ವರೆಗಿನ ಮಾತುಕತೆಯಲ್ಲಿ ಅವರಿಗಾದ ಅನುಭವವನ್ನು ಅವರು ವ್ಯಕ್ತ ಪಡಿಸಲಿಲ್ಲ! 'ನಾನಿನ್ನೂ ಆಶಾವಾದಿ" ಎಂದಿಷ್ಟೇ ಅವರ ಉತ್ತರವಾಗಿತ್ತು.

ಜಾಗತಿಕ ರಂಗದಲ್ಲಿ ಭಾರತದ ಪಾತ್ರ

ಜಾಗತಿಕ ಶಾಂತಿ ಭಾರತವನ್ನೇ ಹೊಂದಿಕೊಂಡಿದ್ದು, ಉಭಯ ರಾಷ್ಟ್ರಗಳಿಗೂ ಸಮಾನವಾಗಿ ಧ್ಯೇಯ, ಉದ್ದೇಶ ಮತ್ತು ಆದರ್ಶಗಳನ, ಜಾಗತಿಕ ಶಾಂತಿ ಹಾಗೂ ಇತರ ಸಮಸ್ಯೆಗಳಲ್ಲಿ ಭಾರತವನ್ನು ಕಡೆಗಣಿಸಲಾಗದೆಂದು ಭಾರತದಲ್ಲಿ ಬ್ರಿಟನದ ರಾಯಭಾರಿಯಾದ ಸರ್ ಆರ್ಚಬಾಲ್ಡ್ ನೈಯವರು ಈಸ್ಟ ಇಂಡಿಯಾ ಎಸೋಸಿಯೇಶನ್ನಿನ ವಾರ್ಷಿಕ ಸಭೆಯಲ್ಲಿ ಹೇಳಿದರು.

ರಶಿಯಾದಲ್ಲಿ ಬ್ರಿಟಿಶ ಶಾಂತಿದೂತರು!

ಬ್ರಿಟನಿನ ಏಳು ಜನ ಕ್ರಿಸ್ತೀ ಸಹೋದರ ಸಂಘದವರು ರಶಿಯದ ಉಪ ವಿದೇಶಾಂಗ ಮಂತ್ರಿ ಮಲಿಕರೊಡನೆ ಜಗತಿನ ಶಾಂತಿ ಸಾಧನೆಯ, ಮಾತುಕತೆಯ ಹಾಗೂ ರಶಿಯ ಪಾಶ್ಚಾತ್ಯ ರಾಷ್ಟ್ರಗಳೊಡನೆ ಇಟ್ಟುಕೊಳ್ಳಬೇಕಾದ ಸ್ನೇಹಸಂಬಂಧಗಳ ಕುರಿತಾದ ಆರು ಸೂಚನೆಗಳ ಕುರಿತು ಮಾಸ್ಕೋದಲ್ಲಿ ಮೂರುವರೆ ತಾಸು ಚರ್ಚೆ ನಡೆಸಿದರು.

ಸಿ. ಪಿ. ಯವರಿಗೆ ಅಮೆರಿಕೆಯ ಆಮಂತ್ರಣ-

ಅಮೆರಿಕನ್ ಏಶಿಯಾ ವ್ಯಾಸಂಗ ಗೋಷ್ಠಿಯಲ್ಲಿ ಅರ್ವಾಚೀನ ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಮಸ್ಯೆಗಳ ಕುರಿತು ಉಪನ್ಯಾಸವನ್ನೀಯಲು ಶ್ರೀ. ಸಿ. ಪಿ. ರಾಮಸ್ವಾಮಿಯವರನ್ನು ಆಮಂತ್ರಿಸಲಾಗಿದೆಯಂತೆ.

ರೈಲ್ವೆ ಮುಷ್ಕರಕ್ಕೆ ಬೆಂಬಲವಿಲ್ಲ!

ಅ. ಭಾ. ರೈಲ್ವೆ ಮಹಾ ಮಂಡಳದವರು ಆಗಸ್ಟ್ ತಿಂಗಳ 27ಕ್ಕೆ ನಡೆಯುವದೆಂದು ಗೊತ್ತು ಮಾಡಿರುವ ರೈಲ್ವೆ ಮುಷ್ಕರಕ್ಕೆ ವಿರೋಧಗಳು ಹೆಚ್ಚುತ್ತಿರುವ ದಾಖಲೆಗಳು ಕಂಡು ಬರುತ್ತಿವೆ. ಒರಿಸ್ಸಾದಲ್ಲಿ ನಡೆದ ಹಿಂದು ರಾಷ್ಟ್ರೀಯ ಮಜದೂರ ಸಂಘದ ಮಹಾಸಭೆಯು ರೈಲ್ವೆ ಕೆಲಸಗಾರರ ಮಹಾಮಂಡಳದ ಮುಷ್ಕರ ಧೋರಣೆಯನ್ನು ಖಂಡಿಸಿದೆ. ಮೂರು ಸಾವಿರ ಸದಸ್ಯರುಳ್ಳ ಓ. ಟಿ. ರೈಲ್ವೆ ಕೆಲಸಗಾರರ ಸಂಘವು ಬಹಿರಂಗಸಭೆ ನಡೆಸಿ ಅ. ಭಾ. ರೈಲ್ವೆ ಮಹಾ ಮಂಡಳ ಕೈಗೊಂಡ ರೈಲ್ವೆ ಮುಷ್ಕರಕ್ಕೆ ವಿರೋಧವಾದ ಗೊತ್ತುವಳಿಯನ್ನು ಸ್ವೀಕರಿಸಿ ಮುಷ್ಕರಕ್ಕೆ ತನ್ನ ಸಹಾನುಭೂತಿಯಿಲ್ಲವೆಂದು ಸಾರಿದೆ. ಭಾರತ ರಾಷ್ಟ್ರೀಯ ಮಜದೂರ ಸಂಘದ ಕಾರ್ಯದರ್ಶಿ ಶ್ರೀ. ಹರಿಹರನಾಥ ಶಾಸ್ತ್ರಿಯವರು "ಕೆಲಸಗಾರರ ಚಳುವಳಿಯಲ್ಲಿ ಈಚೆಗೆ ರಾಜಕಾರಣವು ಪ್ರವೇಶಿಸುವದು ಶೋಚನೀಯ! ರೈಲ್ವೆ ಸಂಪಿನ ವಿಚಾರವು ಕೇವಲ ರಾಜಕೀಯ ಕೂಗಾಗಿರುವದರಿಂದ ಅದಕ್ಕೆ ಕೆಲಸಗಾರರ ಬೆಂಬಲ ದೊರೆಯಲಾರದು. ಆದುದರಿಂದ ಮುಂಬರುವ ರೈಲ್ವೆ ಮುಷ್ಕರವು ಬೆಂಬಲ ಸಹಾನುಭೂತಿಗಳಿಲ್ಲದೆ ನಿಷ್ಫಲವಾಗುವದರಲ್ಲಿ ಸಂದೇಹವಿಲ್ಲ" ಎಂದಿರುತ್ತಾರೆ.

ಬ್ಯಾಂಕು ಕೆಲಸಗಾರರ ಮುಷ್ಕರ

ಅಖಿಲ ಭಾರತ ಬ್ಯಾಂಕು ಕೆಲಸಗಾರರ ಸಂಘವು ಬರುವ ಅಕ್ಟೋಬರ ಒಂದನೇ ತಾರೀಕಿನಿಂದ ಮುಷ್ಕರ ಹೂಡುವದೆಂದು ನಿಶ್ಚಯಿಸಿದೆ. ಭಾರತದ 60,000 ಬ್ಯಾಂಕು ಕೆಲಸಗಾರರಲ್ಲಿ 34,000 ಕೆಲಸಗಾರರು ಇದರ ಸದಸ್ಯರಿರುವರು. ಬ್ಯಾಂಕು ಕೆಲಸಗಾರರ ಬೇಡಿಕೆಗಳಲ್ಲಿ ಸಂಬಳ ಪ್ರಮಾಣ ಏರಿಸುವದು, ತುಟ್ಟಿಭತ್ತೆ, ಮನೆಬಾಡಿಗೆ, ವಿರಾಮವೇತನ, ಮಕ್ಕಳ ಭತ್ತೆ ಮುಂತಾದವುಗಳಿರುತ್ತವೆ.

EXCELLENT RESULTS DISCLOSED IN THE 4TH VALUATION.

A Bonus of Rs. 12/- and Rs. 9/- per thousand per year for Whole Life and Endowment Assurances respectively has been declared in the latest valuation of the Company conducted for a period of four years from 1947 to 1950. Interim bonus at the very rates has also been provided.

The Canara Mutual Assurance Company Ltd.

Head Office: UDIPI- S. India

[Declared bonus for all the years since inception]



BALLBEARING
—THE LIFEBLOOD OF THE INDUSTRY'

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —"CHEAPTRADE"

A. RAMSON AND CO.
6 MISTRI BUILDING BALARAM ST. BOMBAY

ಬಹುಕಾಲ ಬಾಳಿಕೆಬರುವಂತೆ ಅಸಾಧಾರಣವಾದ ಶಕ್ತಿ ಇದೆ.

ಎಸ್ಟ್ರೆಲಾ ಬ್ಯಾಟರಿಗಳು ದೀರ್ಘಕಾಲ ಬಾಳಿಕೆಬರುವವುಗಳೆಂದು ಪ್ರಸಿದ್ಧವಾಗಿವೆ. ತುಕ್ಕು ಹಿಡಿಯದಂತೆ ತಡೆಯುವುದು, ಪ್ರಕಾಶಮಾನವಾದ ಬೆಳಕು, ಇವೇ ಇವುಗಳ ವೈಶಿಷ್ಟ್ಯ.

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ

ESTRELA
REGD TRADE MARK

ಎಸ್ಟ್ರೆಲಾ ಬ್ಯಾಟರಿಗಳು

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್, ಬೊಂಬಾಯಿ ೧೯.
ಶಾಖೆಗಳು: ಕಲ್ಕತ್ತಾ, ದಿಲ್ಲಿ, ಮದ್ರಾಸು, ಕಾನಪೂರ, ನಾಗಪೂರ.

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨-೮-'೫೧

ಕಾಂಗ್ರೆಸೇತರರಿಗೆ ಪ್ರಾತಿನಿಧ್ಯ.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸೇತರರನ್ನೂ ಹುರಿಯಾಳುಗಳನ್ನಾಗಿ ನಿಲ್ಲಿಸಬಹುದೆಂದು ಅ. ಭಾ. ಕಾಂಗ್ರೆಸ್ ಸಮಿತಿಯು ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಆದೇಶವನ್ನಿತ್ತಿದೆ. ಹುರಿಯಾಳುಗಳು ಕಾಂಗ್ರೆಸೇತರರಾಗಿದ್ದು ಕಾಂಗ್ರೆಸ್ಸಿನ ಘೋಷಣಾ ಪತ್ರದಲ್ಲಿ ಹೇಳಲಾದಂಶಗಳನ್ನು ಒಪ್ಪುವ ಪಕ್ಷದಲ್ಲಿ ಅಂತಹರನ್ನು ಹುರಿಯಾಳುಗಳನ್ನಾಗಿ ನಿಲ್ಲಿಸಬಹುದೆಂದು ಹೇಳಲಾಗಿದೆ. ಕಾಂಗ್ರೆಸ್ ತಳೆದ ಧೋರಣೆಯು ಅತ್ಯಂತ ಮುತ್ಸದ್ದಿತನದ್ದಾಗಿದೆ. ಬಹಳ ಕಾಲದಿಂದ ಕಾಂಗ್ರೆಸ್ಸಿನ ಸದಸ್ಯನಾಗಿರುವ ಮಾತ್ರದಿಂದಾಗಲೀ, ಇತರ ವೈಯಕ್ತಿಕ ಬಲವಿನಿಂದಾಗಲೀ ಕಾಂಗ್ರೆಸ್ಸಿಗನಾಗಿದ್ದರೆ ಅಂತಹರನ್ನೇ ಕಾಂಗ್ರೆಸ್ಸಿನ ಪ್ರತಿನಿಧಿಯೆಂದು ಕಳಿಸುವದರಲ್ಲಿ ಯಾವ ಔಚಿತ್ಯವೂ ಇರುವದಿಲ್ಲ. ಜನತೆಯ ಹಾಗೂ ಪ್ರಾಂತದ ಅಭಿಪ್ರಾಯವನ್ನು ಪ್ರತಿನಿಧೀಕರಿಸುವ ಯೋಗ್ಯತೆ ಅವನಲ್ಲಿರಬೇಕು. ಉತ್ಸವದ ಮೂರ್ತಿಯಂತೆ ಕಾಂಗ್ರೆಸ್ಸಿನ ಬಿಲ್ಲೆಯನ್ನು ಹಚ್ಚಿ ಹುರಿಯಾಳನ್ನಾಗಿ ಆರಿಸುವ ಪದ್ಧತಿಯನ್ನು ಇನ್ನು ಬಿಟ್ಟುಕೊಡಬೇಕು. ದೇಶಹಿತಕ್ಕಾಗಿ ನಿಸ್ವಾರ್ಥ ಬುದ್ಧಿಯಿಂದ ದುಡಿಯುವ ಸದುದ್ದೇಶವುಳ್ಳ ಪ್ರತಿಭಾಶಾಲಿಗಳಿಗೆ ತಕ್ಕ ಪ್ರೋತ್ಸಾಹ ಕೊಡುವದರಿಂದ ರಾಜಕೀಯ ಸೂತ್ರಗಳು ಸುಸೂತ್ರವಾಗಿ ಜರಗಬಹುದು. ಬೆಂಗಳೂರಿನಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯ ಮಂತ್ರಿ ಶ್ರೀ ನೆಹ್ರೂರವರು "ಹೊಸ ಹುರುಪಿನ ತರುಣರು ಈ ಹೊರೆಯನ್ನು ಹೊರತಕ್ಕ ಜವಾಬುದಾರಿಯಿಂದ ಮುಂದೆ ಬರಬೇಕು" ಎಂದು ಅಪ್ಪಣೆಯಿತ್ತಿದ್ದರು. ಈಗ ಅ. ಭಾ. ಕಾಂಗ್ರೆಸ ಸಮಿತಿಯು ಆದೇಶದ ಮುಖ್ಯ ಉದ್ದೇಶವಾದರೂ ವ್ಯಕ್ತಿಯಲ್ಲಿರುವ ವಿಶಿಷ್ಟ ಯೋಗ್ಯತೆ, ಪ್ರಭಾವ, ತಾಂತ್ರಿಕ ಜ್ಞಾನ, ಇವುಗಳಿಂದ ದೇಶದ ಅಭ್ಯುದಯವಾಗಲು ಸಾಧ್ಯವಿದೆಯೆಂದ್ದರಿಂದ ಅಂತಹರೇ ಮುಂದೆ ಬರಬೇಕೆಂಬುದೇ ಆಗಿದೆ.

ನಮ್ಮಲ್ಲಿಯ ಬೇರೆ ಬೇರೆ ಪಕ್ಷಗಳು ಸ್ವಪಕ್ಷದ ಘೋಷಣೆಯನ್ನು ಹೊರಡಿಸಿವೆ. ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಹೋಲುವಂತಹಗಳೇ ಬಹಳವೆಂದರೆ ತಪ್ಪಾಗದು. ಇಂದು ನಮ್ಮ ಮುಂದಿರುವ ಹಲವಾರು ಸಮಸ್ಯೆಗಳು ಪರಿಹಾರವಾಗುವಲ್ಲಿ ಈ ಘೋಷಣೆಗಳೇನೂ ಸಹಕಾರಿಯಾಗಲಾರವು! ಈ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸಿನ ಮುಂದಿರುವ ಹಲವಾರು ಆದರ್ಶಗಳು ಕಾರ್ಯರೂಪದಲ್ಲಿ ಬರದೆ ಹಾಗೆ ಉಳಿದಿವೆ. ಆರ್ಥಿಕ ಮುಗ್ಗಟ್ಟಿನಿಂದಲೂ ಆಡಳಿತ ದೋಷದಿಂದಲೂ ಹೀಗಾಯಿತೆಂದು ಹೇಳುವದಾದರೂ ಬಹುಮಟ್ಟಿಗೆ ಅನುಭವಿಕ ರಾಜಕೀಯ ಮಾರ್ಗದರ್ಶಕರ ಕೊರತೆಯೂ ಕಾರಣವೆಂಬುದನ್ನು ನಾವು ಮರೆಯಬಾರದು. ಈ ದೋಷವನ್ನು ಕಾಂಗ್ರೆಸ್ ಮನಗಂಡೇ ಈ ರೀತಿಯ ಆದೇಶವನ್ನು ಮಾಡಿರಬಹುದು. ಪಕ್ಷಗಳ ಬಲವಿನಿಂದ ಆರಿಸಿಬರುವದು ಮಹತ್ವದ ಸಂಗತಿಯಲ್ಲ. ಅಂತಹ ಜಾಣರನ್ನು ಆರಿಸುವದೇ ಮುಖ್ಯವಾಗಿದೆ. ಆದುದರಿಂದ ಅನುಭವಿಕ ಹುರಿಯಾಳನ್ನು ಆರಿಸಿ ದೇಶದ ಅಭ್ಯುದಯ ಕಾರ್ಯದಲ್ಲಿ ಅವನಿಗೆ ನೆರವು ನೀಡಬೇಕು. ಪಕ್ಷಪಂಗಡಗಳ ಮೇಲಾಟದಿಂದಾಗಲೀ, ವೈಯಕ್ತಿಕ ಕಾರಣದಿಂದಾಗಲೀ ಕಾರ್ಯಾಚರಣೆಯ ಶಕ್ತಿಯಿಲ್ಲದ ಅನುಭವಶೂನ್ಯನಾದವನನ್ನು ಇಂತಹ ಗದ್ದುಗೆಗೆ ಯಾರೂ ಆರಿಸಲಾಗದು. ಯಾವುದೋ ಒಂದು ತತ್ವದ ಬೆನ್ನುಹತ್ತಿ ಪ್ರತಿನಿಧಿಗಳನ್ನಾಗಿ ಆರಿಸಿದ್ದರ ಕಹಿ ಅನುಭವವನ್ನು ಈ ನಾಲ್ಕು ವರ್ಷದಲ್ಲಿ ನಾವು ಪಡೆದಿದ್ದೇವೆ. ಮುಂದೆ ಆ ಬಗೆಯ ಅಚಾತುರ್ಯವಾಗದಂತೆ ನಾವು ಈಗಿಂದೀಗಲೇ ಜಾಗ್ರತೆ ವಹಿಸುವದು ನ್ಯಾಯವಾಗಿದೆ.

ಪ್ರದೇಶ ಕಾಂಗ್ರೆಸ ಸಮಿತಿಗಳು ಕೇಂದ್ರದ ಈ ಆದೇಶವನ್ನು ಅತ್ಯಂತ ಆಸ್ಥೆಯಿಂದ ಕಾರ್ಯಾಚರಣೆಯಲ್ಲಿ ತರಲೆಂದು ಆಶಿಸುವದು ಮಾತ್ರವಲ್ಲ ಪಣ್ತಾಯಿಸುತ್ತೇವೆ. ವೈಯಕ್ತಿಕವಾದ ಬಲವಿನಿಂದಲೋ-ವಶೀಲಿ ಚಾಣಾಕ್ಷ ತಂತ್ರದಿಂದಲೋ ಸ್ಥಾನವನ್ನು ಗಳಿಸುವ ಇರಾಧೆಯನ್ನಿಟ್ಟುಕೊಂಡವರಿಗೆ ಕಾಂಗ್ರೆಸ್ ಟಿಕೇಟು ಕೊಟ್ಟು ದೇಶಹಿತ ಕಾರ್ಯದ ಆ ಸ್ಥಾನದ ಯೋಗ್ಯತೆಯನ್ನು ಕಡೆಗಣಿಸಲಾಗದು. ಅಂತಃಕರಣಪೂರ್ವಕವಾಗಿ ಯಾರು ತನ್ನ ಕರ್ತೃತ್ವಶಾಲೀ ಗುಣದಿಂದಲೂ-ವಿಶಿಷ್ಟ ಅನುಭವದಿಂದಲೂ ದೇಶದ ಉಚ್ಛ್ರಾಯ ಸ್ಥಿತಿಯನ್ನು ಬಯಸುತ್ತಾನೋ ಅಂತಹನಿಗೇ ತಕ್ಕ ಪ್ರೋತ್ಸಾಹವನ್ನೀಯಲಿ. ಸದಾ ದೇಶೋನ್ನತಿಯ ವಿಶಾಲ ದೃಷ್ಟಿಯೇ ನಮ್ಮ ಗುರಿಯಾಗಿರಬೇಕು! ಅ. ಭಾ. ಕಾಂಗ್ರೆಸ್ ಸಮಿತಿಯ ಆದೇಶದ ಮೂಲ ಉದ್ದೇಶವೂ ಅದೇ ಆಗಿರುತ್ತದೆ. ಈ ಉದ್ದೇಶ ಅತ್ಯಂತ ಮಹತ್ವಪೂರ್ಣವಾಗಿದ್ದು ಕಾಂಗ್ರೆಸ್ ರಾಷ್ಟ್ರದ ಬಗ್ಗೆ ಯಾವ ರೀತಿಯ ತ್ಯಾಗಮನೋಭಾವವೂ ಸಿದ್ಧವಿದೆಯೆನ್ನುವದಕ್ಕೆ ಇದು ಉತ್ತಮ ಉದಾಹರಣೆ. ಅಂತಲೇ ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ಮುಷ್ಟಿಯೆತ್ತಿದವರೇ ಮಾತುಕತೆಗೆ ಮುಂದೆ ಬರಲಿ.

ಮುಷ್ಟಿಯೆತ್ತಿದವರೇ ಮಾತುಕತೆಗೆ ಮುಂದೆ ಬರಲಿ-

ಭಾರತ ಪಾಕಿಸ್ತಾನಗಳೊಳಗೆ ಈಚೆಗೆ ನಡೆಯುತ್ತಿರುವ ಉತ್ತರ ಪ್ರತ್ಯುತ್ತರಗಳಿಂದ ಪರಿಸ್ಥಿತಿ ಇನ್ನಷ್ಟು ವಿಷಮಕ್ಕೆ ಮುಟ್ಟಿಯದೇ ಹೊರತು ಸಮಾಧಾನಕರವಾಗಿರುವುದಿಲ್ಲ. ಪಾಕಿಸ್ತಾನ ಪ್ರಧಾನಿ ಲಿಯಾಖತರು ಹಲವು ಶರ್ತಗಳನ್ನು ಹಾಕಿ ನೆಹ್ರೂರವರನ್ನು ಕರಾಚಿಗೆ ಸ್ವಾಗತಿಸಿದ್ದರು. ಶ್ರೀ ನೆಹ್ರೂರವರು ಯಾವುದೇ ರೀತಿಯ ಕರಾರಿಲ್ಲದೆ ದಿಲ್ಲಿಗೆ ಬಂದು ಮಾತುಕತೆ ನಡೆಸಬೇಕೆಂದ ಆಹ್ವಾನಿಸಿರುವರು. ಶ್ರೀ ನೆಹ್ರೂರವರು ತನ್ನ ಉತ್ತರದಲ್ಲಿ "ಈಗ ನೀವು ನಮ್ಮ ಮೇಲೆ ಮುಷ್ಟಿಯನ್ನೆತ್ತಿ ನಿಂತಾಗ ನಾವು ನಮ್ಮ ಗಡಿಯನ್ನು ಅರಕ್ಷಿತವಾಗಿ ಬಿಟ್ಟು ಆಕ್ರಮಣಕ್ಕೆ ಅವಕಾಶಮಾಡಿಕೊಡಬೇಕೆಂದು ನೀವು ನಿಜವಾಗಿಯೂ ಭಾವಿಸುವಿರಾ?" ಎಂದು ಕೇಳಿದವರು.

ವರ್ಣದ್ವೇಷದ ವಿರುದ್ಧ ಚಳುವಳಿ

ದ. ಆಫ್ರಿಕೆಯ ವರ್ಣದ್ವೇಷದ ಕಾಯಿದೆಗಳ ವಿರುದ್ಧವಾಗಿ ಹೋರಾಡಲು ಆಫ್ರಿಕನರು, ಹಿಂದೀಯರು, ದ. ಆಫ್ರಿಕೆಯ ಮಿಶ್ರ ಜನಾಂಗದವರು ಒಂದು ಯೋಜನಾ ಮಂಡಳಿಯನ್ನು ನಿರ್ಮಿಸಲು ನಿರ್ಧರಿಸಿರುವರು. ಆಫ್ರಿಕನ್ ನ್ಯಾಶನಲ್ ಕಾಂಗ್ರೆಸಿನ ಕಾರ್ಯ ಸಮಿತಿ, ದ. ಆಫ್ರಿಕನ ಹಿಂದೀ ಕಾಂಗ್ರೆಸ ಸಮಿತಿ ಹಾಗೂ ಮಿಶ್ರ ಜನಾಂಗದವರ ಕ್ರಿಯಾ ಸಮಿತಿಯವರು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿರುವರು.

ಕಿಡ್ವಾಯಿಯವರು ಮಂತ್ರಿ ಪದವನ್ನು ತ್ಯಜಿಸುವರೆ?

ಶ್ರೀ ರಫಿ ಅಹಮ್ಮದ ಕಿಡ್ವಾಯಿಯವರು ಲಕ್ನೋದಲ್ಲಿಯ ಪ್ರಜಾಪಕ್ಷದ ಸಭೆಯ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ಬಂದವರು ಮುಖ್ಯಮಂತ್ರಿ ಜವಾಹರಲಾಲರನ್ನು ಭೆಟ್ಟಿಯಾಗಿ ತಮ್ಮನ್ನು ಮಂತ್ರಿಪದವಿಯಿಂದ ನಿವೃತ್ತಗೊಳಿಸಬೇಕೆಂದು ಒತ್ತಾಯಿಸಿರುವರೆಂದು ತಿಳಿಯುತ್ತದೆ. ಮುಖ್ಯಮಂತ್ರಿಗಳೊಡನೆ ಸುಮಾರು 90 ನಿಮಿಷಗಳ ತನಕ ಮಾತುಕತೆ ನಡೆಯಿತು. ಕಾಂಗ್ರೆಸ್ಸಿನಲ್ಲಿ ಕಿಡ್ವಾಯಿಯವರ ಕುರಿತು ಉದ್ಭವವಾದ ಸಮಸ್ಯೆ—ಹಾಗೂ ತನ್ನ ಪಕ್ಷದವರ ಅಭಿಪ್ರಾಯದಿಂದಲೂ ಕಿಡ್ವಾಯಿಯವರು ಮಂತ್ರಿಪದಕ್ಕೆ ರಾಜೀನಾಮೆ ಕಳುಗಿ ನೀಡುವ ಸಂಭವವಿದ್ದೆಂದು ತಿಳಿಯುತ್ತದೆ.

ಪ್ರಾಂತಗಳಿಗೆ 50 ಕೋಟಿ ರೂ. ಆಹಾರ ಸಹಾಯಧನ

ಭಾರತ ಸರಕಾರವು ಆಹಾರ ಸಹಾಯಧನವೆಂದು ಬೇರೆ ಬೇರೆ ಪ್ರಾಂತ್ಯಗಳಿಗೆ ಒಟ್ಟು 50 ಕೋಟಿ ರೂಪಾಯಿಯನ್ನು ನೀಡಿದೆಯೆಂದು ಕೇಂದ್ರದ ಆಹಾರ ಮಂತ್ರಿ ಶ್ರೀ. ಕೆ. ಎಂ. ಮುನ್ಶಿಯವರು ಹೇಳಿದರು.

ಭಾರತದ ಹಳ್ಳಿಗಳ ಆಕ್ರಮಣ ಸುದ್ದಿ ಸುಳ್ಳು

ಅಸಾಮು ಪ್ರಾಂತದಲ್ಲಿಯ ಭಾರತ ಪ್ರದೇಶದ ಹಲವು ಹಳ್ಳಿಗಳನ್ನು ಪಾಕಿಸ್ತಾನಿಗಳು ಆಕ್ರಮಿಸಿರುವರೆಂದೂ, ಬರಸಾಲ-ಕಲಕತ್ತೆ ಎಕ್ಸ್‌ಪ್ರೆಸ್ ಗಾಡಿಯ ಮೇಲೆ ಮುಸ್ಲಿಮರು ಹಲ್ಲೆಮಾಡಿ ಹಿಂದುಗಳಿಗೆ ಹಿಂಸೆಮಾಡಿದ್ದರೆನುವ ಸುದ್ದಿಯನ್ನು ಕಲ್ಕತ್ತದ ಪತ್ರಿಕೆಗಳು ಪ್ರಕಟಿಸಿದ್ದು ಪಾಕಿಸ್ತಾನ ಪೂರ್ವಬಂಗಾಳ ಸರಕಾರವು ಪೂರ್ತ ಸುಳ್ಳಿರುವದೆಂದು ಪ್ರಕಟನೆ ಹೊರಡಿಸಿದೆ.

500 ಮುಸ್ಲಿಂ ತರುಣರ ರಕ್ತಲಿಖಿತ ಪ್ರತಿಜ್ಞೆ?

ಪಾಕಿಸ್ತಾನದ ಮುಸ್ಲಿಂ ಲೀಗ ನ್ಯಾಶನಲ್ ಗಾರ್ಡಿನ 500 ಜನ ತರುಣರು ಪಾಕಿಸ್ತಾನದ ಸಂರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸುವೆವು ಎಂಬ ಪ್ರತಿಜ್ಞೆಗೆ ತಮ್ಮ ರಕ್ತದಿಂದ ಅಂಕಿತ ಹಾಕಿದರು.

ಮದ್ರಾಸದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿ

ಮದ್ರಾಸು ಪ್ರಾಂತ್ಯದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರವನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸುವದರ ಸಲುವಾಗಿ ಸಂಯೋಜನಾ ಸಮಿತಿಯೊಂದನ್ನು ರಚಿಸಲಾಯಿತು. ತಮಿಳನಾಡ್, ಆಂಧ್ರ, ಕರ್ನಾಟಕ, ಕೇರಳ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷರೂ ಇರುವ ಈ ಸಂಯುಕ್ತ ಸಭೆಗೆ ಮದ್ರಾಸದ ಮುಖ್ಯ ಮಂತ್ರಿ ಕುಮಾರಸ್ವಾಮಿರಾಜಾ, ಅರ್ಥಮಂತ್ರಿ ಬಿ. ಗೋಪಾಲ ರೆಡ್ಡಿ, ಒಕ್ಕಲತನದ ಮಂತ್ರಿ ಶ್ರೀ ಎ ಬಿ ಶೆಟ್ಟಿ, ಮತ್ತು ಪಾರ್ಲಿಮೆಂಟು ಸದಸ್ಯ ಶ್ರೀ ಶ್ರೀನಿವಾಸ ಮಲ್ಯರು ಬಂದಿದ್ದರು. ಸರಕಾರದ ವಿವಿಧ ಚಟುವಟಿಕೆಗಳನ್ನು ಸರಕಾರದ ವಿವಿಧ ಶಾಖೆಗಳಿಂದ ಸಂಗ್ರಹಿಸಿ ಪ್ರಕಟಿಸುವದೂ, ಚುನಾವಣಾ ಪ್ರಚಾರಕ್ಕಾಗಿ ನಿಧಿ ಸಂಗ್ರಹಿಸುವದೂ, ಅಲ್ಪಸಂಖ್ಯಾತರಿಗೆ ಸಾಕಷ್ಟು ಸ್ಥಳಗಳನ್ನು ಒದಗಿಸಿಕೊಡುವದೂ ಮುಂತಾದ ವಿಚಾರಗಳನ್ನು ಸಮಿತಿಯು ತನ್ನ ಗುರಿಯನ್ನಾಗಿಟ್ಟುಕೊಂಡಿದೆ.

ಪ್ರೇಮಮಾಡಿ ಮರೆಯಬೇಕು-

ಇಂದರೇನೇ ಜಗತ್ತಿನಲ್ಲಿ ನೀವು ಮೆರೆಯುತ್ತೀರಿ

ಇದರ ನಿದರ್ಶನ

ಕಮಲ್-ಕೆ-ಫೂಲ್

(ಫೇಮಸ್ ಚಿತ್ರ)

ದಿಗ್ದರ್ಶನ: ಕಾಶ್ಯಪ್. ಸಂಗೀತ: ಶ್ಯಾಮಸುಂದರ್.

ಪಾತ್ರವರ್ಗ: ಸುರೈಯ್ಯಾ, ಶಕುಂತಲಾ, ಅಮರ್‌ನಾಥ್, ಜೀವನ್, ಬದ್ರಿಪ್ರಸಾದ್, ಮೊದಲಾದವರು.

ತಾ. 3—8—51ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು: ಮೊಗಲ್ ರಾಣಿ, ಜಿದ್ದಿ, ದಾಸ್ತಾನ್ ಇತ್ಯಾದಿ.

ಉಡುಪಿ

ಉದ್ಘಾಟನಾ ಸಮಾರಂಭಗಳು

ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ಯೂನಿಯನ್ನಿನ ಉದ್ಘಾಟನೆಯನ್ನು ದಿನಾಂಕ 25ರಂದು ಸಂಜೆ ಡಾ| ಯು. ಪಿ. ಮಲ್ಯ, ಎಮ್. ಎಲ್. ಎ. ಅವರು ನೆರವೇರಿಸಿದರು. ಕಾಲೇಜು ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರ ರಾಯರು ಸ್ವಾಗತ ಭಾಷಣ ಮಾಡಿದರು. ಗುಣ, ನಡತೆ, ಶೀಲ ಇತ್ಯಾದಿಗಳ ಕುರಿತು ಡಾ| ಮಲ್ಯರು ಉದ್ಬೋಧಕ ಭಾಷಣವಿತ್ತರು. ಯೂನಿಯನ್ ಉಪಾಧ್ಯಕ್ಷ ಶ್ರೀ. ಕೆ. ಎಸ್. ಕಾಮತರು ಧನ್ಯವಾದಗಳನ್ನರ್ಪಿಸಿದರು.

ದಿನಾಂಕ 29ರಲ್ಲು ಸಂಜೆ ಅದೇ ಕಾಲೇಜಿನ ಹಾಸ್ಟೆಲನ್ನು ತೆರೆಯುವ ಸಮಾರಂಭವು ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಚ್. ಸುಂದರ ರಾಯರ ಸ್ವಾಗತ ಮಾತುಗಳಾದ ನಂತರ ಶ್ರೀ. ರಂಗನಾಥ ಪೂಂಜರು ಹಾಸ್ಟೆಲನ್ನು ಉದ್ಘಾಟಿಸುತ್ತಾ ಹಿಂದಿನ ಗುರುಕುಲ ಪದ್ಧತಿಯ ಅನುಸರಣೆಯ ಅವಶ್ಯಕತೆ, ಪ್ರತಿಯೊಂದು ಕಾಲೇಜಿಗೂ ಹಾಸ್ಟೆಲನ್ನು ಇರಗೊಡಿಸಬೇಕಾದ ಜರೂರಾತಿ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು. ಡಾ| ಟಿ. ಮಾಧವ ಪೈಗಳ್ ಹಾಸ್ಟೆಲು ಇತಿಹಾಸದ ಕುರಿತು ಮಾತನಾಡಿದ ನಂತರ ಶ್ರೀಗಳಾದ ಎಚ್. ಎಸ್ ಹುಸ್ಸೇನ್ ಸಾಹೇಬ್, ಎಮ್. ಎಲ್. ಎ, ಡಾ| ಎಸ್. ಆರ್. ಪೈ, ಎಮ್. ಎಸ್. ಮಾಧವ ರಾವ್, ಟಿ. ಎ. ಪೈಗಳವರು ಶಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ತನ್ನ ಮುಕ್ತಾಯ ಭಾಷಣದಲ್ಲಿ ಹಾಸ್ಟೆಲು ಜೀವನದಿಂದಾಗುವ ಪ್ರಯೋಜನಗಳೇನೆಂಬುದನ್ನು ವಿವರಿಸಿ ಇಲ್ಲಿಯ ವಿದ್ಯಾರ್ಥಿಗಳು ಸ್ವಾವಲಂಬನ ಮಾರ್ಗ-ದಲ್ಲಿ ಮುಂದರಿಯಬೇಕೆಂದು ಸೂಚಿಸಿದರು. ಶ್ರೀ. ಕು. ಶಿ. ಹರಿದಾಸ ಭಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ರೇಶನಿಂಗ್ ಸಲಹಾ ಸಮಿತಿ ಸಭೆಯು—ತಾ. 26 ರಲ್ಲು ಶ್ರೀ ಪಿ. ಗೋಪಾಲ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ವಾರಕ್ಕೊಂದು ಊಟ ಬಿಡುವ ಚಳವಳಿಯ ಕುರಿತು ಬಂದ ಸರಕಾರಿ ಸರ್ಕ್ಯುಲರನ್ನು ಓದಲಾಯಿತು. ಈ ಯೋಜನೆಯನ್ನು ಜನರಲ್ಲಿ ಪ್ರಚಾರ ಮಾಡಲು ಕಮಿಟಿ ಸದಸ್ಯರು ಮುಂದಾಗಬೇಕೆಂದು ನಿಶ್ಚಯಿಸಲಾಯಿತು. ವಾರದಲ್ಲಿ ಒಂದೂಟ ಬಿಟ್ಟ ಆಹಾರ ಧಾನ್ಯವನ್ನು ರೇಶನಿಂಗ್ ಆಫೀಸಿಗೆ ಧರ್ಮಾರ್ಥ ಕೊಡುವಂತೆ ಮಹಾ ಜನರನ್ನು ವಿನಂತಿಸಲಾಯಿತು.

ಮುನಿಸಿಪಲ್ ಅರ್ಜಂಟ್ ಮತ್ತು ಸ್ಪೆಶಲ್ ಸಭೆಗಳೆರಡು—ತಾ 28ರಲ್ಲು ಸಂಜೆ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದವು. ಮುನಿಸಿಪಾಲಿಟಿಯ ಸದಸ್ಯರ ಸಂಖ್ಯೆ ಇಪ್ಪತ್ತರಲ್ಲಿ ಎರಡನ್ನು ಹೆಂಗಸರಿಗಾಗಿ ಕಾದಿಟ್ಟು, ಮತ್ತು ಬೈಲೂರು ವಾರ್ಡುಗಳಲ್ಲಿರಿಸ ಬೇಕಾಗಿಯೂ, ಕುಂಜಿಬೆಟ್ಟು ವಾರ್ಡಿನ ಹರಿಜನ ಸೀಟನ್ನು ಬನ್ನಂಜೆ ವಾರ್ಡಿಗೆ ವರ್ಗಾಯಿಸಿ ಕುಂಜಿಬೆಟ್ಟು ವಾರ್ಡಿಗೆ ಎರಡು ಜನರಲ್ ಸೀಟುಗಳಿರುವುದೆಂದಾಯಿತು

ನಂತರ ಸಾಮಾನ್ಯ ಸಭೆ ಜರಗಿತು. ನೆಟರ್ಟಿ ಮತ್ತು ತಿರುಕ್ಷೀಮ ಚಿಂತನಾ ಕೇಂದ್ರವೊಂದನ್ನು ಕಲ್ಸಂಕದಲ್ಲಿ ತೆರೆಯಬೇಕೆಂಬುದಾಗಿ ಅಬಗ್ಗೆ ವೆಚ್ಚ ಮಂಜೂರು ಮಾಡಲಾಯಿತು. ಮುನಿಸಿಪಲ್ ಗಡಿಗಳ ತನಕದ ರಸ್ತೆಗಳಿಗೆ ಇಲೆಕ್ಟ್ರಿಕ್ ದೀಪಗಳನ್ನು ಹಾಕಬೇಕೆನ್ನುವ ನಿರ್ಣಯವು ಪಾಸಾಯಿತು. ಶ್ರೀ. ಕೆ. ಕೆ. ಪೈಗಳು ಉಡುಪಿ-ಕಾರ್ಕಳ ರಸ್ತೆಯ ಮುನಿಸಿಪಲ್ ಗಡಿ ತನಕದ ರಸ್ತೆಗೆ ಇಲೆಕ್ಟ್ರಿಕ್ ದೀಪಹಾಕಿಸಬೇಕಾಗಿ ನಿರ್ಣಯ ತಂದಿದ್ದರು. ಶ್ರೀ. ಎ. ಶಂಭು ಶೆಟ್ಟರು ತಿದ್ದುಪಡಿ ಸೂಚಿಸುತ್ತಾ ಮುನಿಸಿಪಲ್ ಕ್ಷೇತ್ರದ ಎಲ್ಲಾ ಗಡಿಗಳ ರಸ್ತೆಗಳಿಗೆ ಇಲೆಕ್ಟ್ರಿಕ್ ದೀಪಗಳಾಗಬೇಕೆಂದು ಹೇಳಿದರು. ಮೂಲನಿರ್ಣಯ ಹಾಗುತಿದ್ದುಪಡಿಗೆ ಒಪ್ಪಿಗೆ ಕೊಡುತ್ತಾ ಈ ವಿಷಯವನ್ನು ಬಜೆಟ್ ಕಮಿಟಿಗೆ ಬಿಡಬೇಕಾಗಿ ಶ್ರೀ. ಎ. ಮಂಜುನಾಥ ರಾಯರು ಸೂಚನೆಯಿತ್ತರು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ—ಇದೇ ತಾ. 6ನೇ ಸೋಮವಾರ ಮಧ್ಯಾಹ್ನ 3ಕ್ಕೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಎಲ್ಲಾ ಕಾಂಗ್ರೆಸ್ ಪಂಚಾಯ್ತ್ ದಾರರ, ಸರ್ಕಲ್ ಕಾ. ಕಮಿಟಿ ಮೆಂಬರರ ಜಿಲ್ಲಾ ಕಾಂಗ್ರೆಸ್ ಕಮಿಟಿ ಮೆಂಬರರ ಹಾಗೂ ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಜರಗುವುದು. ಅಬಗ್ಗೆ ನೋಟೀಸು ಸಕಾಲದಲ್ಲಿ ಸಿಕ್ಕದಿದ್ದರೂ ಇದೇ ಆಮಂತ್ರಣವೆಂದು ತಿಳಿದು ಎಲ್ಲರೂ ಬರಬೇಕಾಗಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಶ್ರೀ. ಕೆ. ನರಹರಿ ಕಾಮತರು ತಿಳಿಸಿರುತ್ತಾರೆ. ಮೇಲಿನ ಸಭೆಗೆ ಜಿಲ್ಲಾ ಕಾ. ಕ. ಅಧ್ಯಕ್ಷ, ಉಪಾಧ್ಯಕ್ಷ, ಸೆಕ್ರೆಟರಿ, ಮತ್ತು ಪಾರ್ಲಿಮೆಂಟರಿ ಚುನಾವಣಾ ಕಮಿಟಿಯ ಮೆಂಬರರೂ ಬರಲಿಕ್ಕಿರುವರು.

ಪಡುಬಿದ್ರೆ:—ಇಲ್ಲಿಯ ವಯಸ್ಕರ ಶಿಕ್ಷಣ ತರಬೇತಿ ವರ್ಗವು ತಾ 29ರಂದು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಎಚ್. ನರಸಿಂಹ ಆಚಾರ್ಯರಿಂದ ಉದ್ಘಾಟಿಸಲ್ಪಟ್ಟಿತು. ಮುಖ್ಯೋಪಾಧ್ಯಾಯ ಶ್ರೀ ಟಿ ಎಲ್. ರಾಯರು ವರ್ಗದ ಚಟುವಟಿಕೆಗಳ ಮಾಹಿತಿಯನ್ನಿತ್ತರು. ಅಧ್ಯಕ್ಷರು ಇಂತಹ ತರಬೇತಿ ವರ್ಗಗಳ ಅವಶ್ಯಕತೆ ಮತ್ತು ಜನ ಸಾಮಾನ್ಯರಿಗೂ ಓದು ಬರಹದ ಜ್ಞಾನದ ಅವಶ್ಯಕತೆಯ ಕುರಿತು ಮಾತನಾಡಿದರು.

ಶಿರ್ವ:—ಇಲ್ಲಿಯ ಪಂಚಾಯತ ಬೋರ್ಡಿನ ಸಭೆಯು ತಾ 27ರಲ್ಲು ಶ್ರೀ ಎಸ್. ಅಜ್ಜಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ಕಸ್ತೂರ್ಬಾ ಮೆಮೋರಿಯಲ್ ಮೆಟರ್ನಿಟಿ ವಾರ್ಡ್ ಕಮಿಟಿಗೆ ರೂಪಾಯಿ 75/- ಸಹಾಯಧನವೀಯಬೇಕೆನ್ನುವ ನಿರ್ಣಯವಾಯಿತು. ಶಿರ್ವ ಕುತ್ಯಾರು ಹೊಳೆಗೆ ಒಂದು ಕೋರ್ಸವೆ ಹಾಕುವರೆ ಡಿಸ್ಟ್ರಿಕ್ಟ್ ಬೋರ್ಡನ್ನು ಕೇಳಿಕೊಳ್ಳುವ, ಮದ್ರಾಸು ಗ್ರಾಮ ಪಂಚಾಯತ ಆಕ್ಟು 1950ರನ್ನು ಅನುಸರಿಸಿ ಮನೆತೆರಿಗೆ ಮತ್ತು ವಾಹನ ತೆರಿಗೆಯನ್ನು ಕೂಡಲೇ ಜ್ಯಾರಿಗೆ ತರಬೇಕೆನ್ನುವ-ಇತ್ಯಾದಿ ನಿರ್ಣಯಗಳಾದುವು.

ಕುಂಬಳೆ:—ಕಳೆದ ತಾ 2?ರಂದ, ಬೀಸಿದ ಬಿರುಗಾಳಿಯಿಂದಾಗಿ ಮೊಗ್ರಾಲ್ ಮೊದಲಾದ ಸ್ಥಳಗಳಲ್ಲಿ ಕೆಲವೆಡೆ ಮನೆಗಳಿಗೆ ನಷ್ಟವುಂಟಾಗಿದೆಯಲ್ಲದೆ ಅಡಿಕೆ, ತೆಂಗು ಮರಗಳು ಹೆಚ್ಚು ಸಂಖ್ಯೆಯಲ್ಲಿ ಬಿದ್ದುಹೋಗಿವೆ.

ತಾ 27ರಲ್ಲಿ ಮಧ್ಯಾಹ್ನ ಮಂಗಳೂರಿಗೆ ಹೋಗುತ್ತಿದ್ದ ಪೆಸೆಂಜರ್ ಗಾಡಿಯಡಿಗೆ ತಲೆಹಾಕಿಕೊಂಡು ಪ್ರಾಣತ್ಯಾಗ ಮಾಡಿಕೊಳ್ಳುವದೆಂದು ಉಳ್ಳಾಲದ ಶೇಕ್ ಅಬ್ದುಲ್ಲ ಎಂಬವನು ಮಲಗಿದ್ದುದನ್ನು ಡ್ರೈವರರು ನೋಡಿ ಗಾಡಿಯನ್ನು ನಿಲ್ಲಿಸಿ ಆತನನ್ನು ಸ್ಟೇಶನ್ ಮಾಸ್ತರರ ವಶಕೊಡಲಾಯಿತೆಂದೂ ಅವರು ಆತನನ್ನು ಮಂಗಳೂರು ಪೋಲೀಸ್ ಸ್ಟೇಶನಿಗೆ ಮೈಲು ಗಾಡಿಯಲ್ಲಿ ಕಳುಹಿಸಿದರೆಂದೂ ತಿಳಿದುಬರುತ್ತದೆ.

ಮೂಲ್ಕಿ ಸರ್ಕಲ್ ಕಾಂಗ್ರೆಸ್ ಕಮಿಟಿಯ—ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಮಂಡಲಿಯನ್ನು ಚುನಾಯಿಸುವರೆ ಸದ್ರಿ ಕಮಿಟಿಯ ಪ್ರಥಮ ಮಹಾಸಭೆಯು ಇದೇ ಬರುವ ಆಗೋಸ್ತು ತಿಂಗಳ ತಾ. 7ನೇ ಮಂಗಳವಾರ ಅಪರಾಹ್ನ ಗಂಟೆ 3ಕ್ಕೆ ಮೂಲ್ಕಿಯ ಬಿಲ್ಲವ ಸಮಾಜ ಸೇವಾ ಮಂದಿರದಲ್ಲಿ ಜರಗಲಿರುವುದು. ಈ ಸಭೆಗೆ ಮೂಲ್ಕಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸದಸ್ಯರೆಲ್ಲರೂ ತಪ್ಪದೆ ಬಂದು ಸಹಕರಿಸಬೇಕಾಗಿ ವಿನಂತಿ, ಎಂದು ಜಿಲ್ಲಾ ಕಾಂ. ಕ. ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಪ್ರಕಟಿಸುತ್ತಾರೆ.

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಂಚಾರ—ಡಾ| ಕೆ. ಯಸ್. ಆಳ್ವ, ಅಧ್ಯಕ್ಷ ಜಿಲ್ಲಾ ಕಾಂಗ್ರೆಸ್ ಕಮಿಟಿ, ಡಾ| ಯು. ಪಿ. ಮಲ್ಯ ಉಪಾಧ್ಯಕ್ಷ, ಶ್ರೀಗಳಾದ ಕೆ. ಕೆ. ಶೆಟ್ಟಿ, ಪ್ರಧಾನ ಕಾರ್ಯದರ್ಶಿ, ಜೊತೆಕಾರ್ಯದರ್ಶಿಗಳಾದ ಬಿ. ಆರ್. ಕರ್ಕೇರ ಮತ್ತು ಶ್ರೀ ಎಂ. ಡಿ. ಅಧಿಕಾರಿಯವರು ಮತ್ತು ಪ್ರಾಂತಿಕ ಚುನಾವಣಾ ಮಂಡಲದ ಸದಸ್ಯರಾದ ಶ್ರೀ ಯಸ್. ಯಸ್. ಕೊಲ್ಲಿಯವರು ಈ ಕೆಳಗಿನ ಸ್ಥಳಗಳಲ್ಲಿ ಸಂಚರಿಸಲ್ಲಿರುವರು. ಸರ್ವರೂ ಸಹಕರಿಸಬೇಕಾಗಿ ವಿನಂತಿ.

ತಾ. 4-8-51ನೇ ಶನಿವಾರ ಅಪರಾಹ್ನ ಗ. 3ಕ್ಕೆ ಮೂಡಬಿದ್ರೆ ಜಿಲ್ಲಾ ಬೋರ್ಡು ಬಂಗ್ಲೆಯಲ್ಲಿ ಕಾಂಗ್ರೆಸ ಕಾರ್ಯಕರ್ತರ ಮತ್ತು ಸರ್ಕಲ್ ಕಾ. ಕಮಿಟಿಯ ಸಭೆ, ಅದೇ ದಿನ ಸಾಯಂ. 6-30ಕ್ಕೆ ಕಾರ್ಕಳ ಸರ್ಕಲ್ ಕಾಂ. ಕಮಿಟಿ ಆಫೀಸನಲ್ಲಿ ಸಭೆ, ತಾ. 5-8-51ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ಕುಂದಾಪುರ ಜಿ. ಬೋ. ಬಂಗ್ಲೆಯಲ್ಲಿ ಸಭೆ. ತಾ. 6-8-51ನೇ ಸೋಮವಾರ ಪೂರ್ವಾಹ್ನ ಗಂ. 10ಕ್ಕೆ ಬ್ರಹ್ಮಾವರದ ಜಿ. ಬೋ ಬಂಗ್ಲೆಯಲ್ಲಿ ಸಭೆ, ಅದೇ ದಿನ ಅಪರಾಹ್ನ ಗಂ. 3ಕ್ಕೆ ಉಡುಪಿ ಕಾಂ. ಕಚೇರಿಯಲ್ಲಿ ಸಭೆ, ತಾ. 7-8-51ನೇ ಮಂಗಳವಾರ ಬೆಳಿಗ್ಗೆ ಗಂ. 9ಕ್ಕೆ ಕಟಪಾಡಿಯ ಭುವನೇಂದ್ರ ಪ್ರಿಂಟರ್ಸ್ ಲಿಮಿಟೆಡ್‌ನ ಕಟ್ಟಡದಲ್ಲಿ ಸಭೆ, ಅದೇ ದಿನ ಅಪರಾಹ್ನ ಗಂಟೆ 3ಕ್ಕೆ ಮೂಲ್ಕಿ ಬಿಲ್ಲವ ಸಮಾಜ ಸೇವಾ ಮಂದಿರದಲ್ಲಿ ಸಭೆ, ಎಂದು ಜಿಲ್ಲಾ ಕಾಂ. ಕಮಿಟಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 310/51

ವಾದಿ—ಮಂಜ

ಪ್ರತಿವಾದಿ—ನಾರಾಯಣ ಸೆಟ್ಟಿ, ವೆಂಕಪ್ಪ ಸೆಟ್ಟಿಯರ ಮಗ ಕುಂದಾಪುರ ತಾಲ್ಲೂಕು ಸಾಬ್ರಕಟ್ಟೆ ಗ್ರಾಮದ ಕುದ್ರುಕೋಡು ದೊಡ್ಡಮನೆ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುದ್ದು

ವಾದಿಗೆ ಪ್ರತಿವಾದಿಯು ಬರೆಕೊಟ್ಟ ಡಿಮಾಂಡು ನೋಟಿನ ಬಾಬ್ತು ರೂಪಾಯಿ 115-12-0ನ್ನು ಬರಮಾಡಿಕೊಳ್ಳುವರೇ ವಾದಿ ದಾಖಲ್ಲು ಮಾಡಿದ ಮೇಲಿನ ದಾವೆ ತಾರೀಕು 16-8-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದು.

Y. Manjaya. Shetty.
Advocate for Pltf.

ತಾ. 29-7-51 ಮೊಕ್ಕಾಂ ಕುಂದಾಪುರ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಉತ್ಸಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ನೋವು, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

IN THE COURT OF THE DT. MUNSIFF OF COONDAPOOR

O. P. 56/51

Minor Gnaneshwar son of Someshwar Vittal Rao by guardian mother Ratna Bai Someshwar, residing in Coondapur Kasba, Coondapur Taluq. —Petitioner

VERSUS

1 Sita Bai Shanker Rao Hemmady wife of S. V. Hemmady and daughter of Someshwar Vittal Rao residing in D/11 Model House, Proctor Road, Bombay 4.

2 Sumitra Sundar Rao Hattiangady wife of S. S. Hattiangady and daughter of Someshwar Vittal Rao, residing in 1/34 Vensimal Building, Forjet Hill road, Bombay 26.

3 Meera Vittal Rao Someshwar daughter of Someshwar Vittal Rao residing in D/11 Model House, Proctor road, Bombay 4.

4 Minor Radha } Daughters of Someshwar Vittal Rao by
5 Minor Muktha } guardian sister 3rd respondent Meera Vittal Rao, Someshwar residing in D/11 Model House, Proctor road, Bombay 4.

—Respondents.

To Respondents and all others concerned.

Please take notice that petitioner has applied to the above Court for the issue of a Succession Certificate with regard to the outstandings set forth in the petition due to his deceased father Someshwar Vittal Rao as his sole heir and that the said petition comes off for hearing before the said Court on 24-8-1951 at 11 O'clock. If any of you have any objection to be urged for the grant of the Certificate to the petitioner, you may do so either personally or by a Pleader before the said Court on the date fixed for hearing, failing which you will be declared exparte and the petion disposed off by the Court.

(By Order of the Court)

COONDAPUR } 23—7—1951. }

K. Soorappa Shetty,
Advocate for petitioner.

ಮಂಗಳೂರು

ನಗರದ ಹಸುಗೆ ಸಲಹೆ ಸಮಿತಿ ಸಭೆಯು— ಕಳೆದ ತಾ. 21ರಲ್ಲಿ ಸಂಜೆ ಡಿ. ಪೋಡನರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧಿಕ ಬೆಲೆಯಾಗುವ ಅಕ್ಕಿಯನ್ನು ಇಲ್ಲಿಗೆ ಕಳುಹಬಾರದು, ಮಂಗಳೂರನ್ನು ಕೈಗಾರಿಕೆಯ ಕೇಂದ್ರವೆಂದು ಪರಿಗಣಿಸಿ, ಇಲ್ಲಿ ಹೆಚ್ಚು ವಂತ ಮಾಡಬೇಕು ಜಿಲ್ಲೆಗೆ ಹೆಚ್ಚು ದಾ ಹೆಚ್ಚು ಕಳುಹಿಸಬೇಕು, ಯಾವ ಸ್ಥಳದ ಕ್ಷೇತ್ರದಲ್ಲಿಯೂ ಅಕ್ಕಿಯ ಪಡಿಯನ್ನು ಕಡಿಮೆ ಮಾಡಬಾರದು ಎಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಕರ್ನಾಟಕ ಏಕೀಕರಣ ಪಕ್ಷ ವನ್ನು-ದ. ಕ. ಜಿಲ್ಲೆಯಲ್ಲಿ ಶ್ರೀ ಗೋಳಿದ ಕೆ. ಡಿ. ಜಿನರಾಜ ಹೆಗ್ಡೆ ಮತ್ತು ಕೆ. ಆರ್. ಕಾರಂತರು ಸಂಘಟಿಸ ತೊಡಗಿದ್ದಾರೆಂದು ತಿಳಿದುಬರುತ್ತದೆ. ಈ ಪಕ್ಷದ ಘಟನಾವಳಿಯ ಕರಡಿನಲ್ಲಿ ಇಂದಿನ ಕರ್ನಾಟಕದ ಶೋಚನೀಯ ಸ್ಥಿತಿ, ಮಲೆನಾಡಿನ ಸಂಕಷ್ಟ, ವಿಕೇಂದ್ರೀಕರಣ, ಉಂಬಳಿಗರೂಳಿತನ, ಅವರ ನಿವಾರಣೆ, ಇಂದಿನ ಧಾರಣೆ, ತೆರಿಗೆ, ಕ್ಷೇಮಕಾರ್ಯಾಧಿಪತ್ಯ, ಭೂಪರೋಕ್ಷ, ಕೈಗಾರಿಕೆಗಳು, ಸಾಹಸದ ಸಮಸ್ಯೆಗಳು, ಪ್ರಾಕೃತ ಮನೆಗಳು, ಶಿಕ್ಷಣ ಮಗಳು ಮತ್ತು ಸರಕಾರ ಎಂಬ ಜನಜೀವನಕ್ಕೆ ಸಂಬಂಧಿಸಿದ ವಿಚಾರದಲ್ಲಿ ಪಕ್ಷದ ಸ್ಪೋರಣೆಯೋನೆಂಬುವನ್ನು ತಿಳಿಸಲಾಗಿದೆ.

ದ. ಕ. ಬಿಲ್ಲವರ ಮಹಾಜನ ಸಂಘದ ಮಹಾ ಸಭೆಯು—ಕಳೆದ ತಾ. 24ರಲ್ಲಿ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ವೈದ್ಯಗುರು ಶ್ರೀ ಎಮ್. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಿಲ್ಲವರ ಸಮಾಜವು ಕುಲಕಸುಬಾಗಿ ಬೆಳೆಸಿಕೊಂಡು ಬಂದಿರುವ ವೈದ್ಯ-ಜ್ಯೋತಿಷಗಳ ಕುರಿತು ಪ್ರಾಶಸ್ತ್ಯ ಅವರು ಸಂಘಟಿತರಾಗಬೇಕೆಂದು ಕೇಳಿಕೊಂಡರು.

ಪತ್ರಿಕಾ ಪರಿಷತ್ತು—ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜನ್ನಂ, ಅವರು ಕಳೆದ ತಾ. 27ರಲ್ಲಿ ನಡೆಸಿದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಅಗ್ನಿಯ ಅನಾಹುತದಿಂದ ಮನೆಮಾರು ಕಳಕೊಂಡವರಿಗೆ ಕಳೆದ ಜೂನ್ 29ರ ನಂತರ ರೂಪಾಯಿ 110/- ಧನ ಸಹಾಯ ನೀಡಲಾಗಿದೆ ಎಂದೂ, ಕಳೆದ ಜೂನ್ 15ರ ನಂತರ ಮಂಗಳೂರು ತಾಲೂಕು 9, ಪುತ್ತೂರು 33, ಕಾಸರಗೋಡು 61, ಕಾರ್ಕಳ 8, ಮತ್ತು ಉಡುಪಿ 3 ಹೀಗೆ ಒಟ್ಟು 114 ಕೋವಿ ಲ್ಯಾಸೆನ್ಸು ಕೊಡಲಾಗಿದೆ ಎಂದೂ, ಫಿರ್ಕಾ ತಾಲೂಕಿನ ಅಮಾಂಪುರಿ ಗ್ರಾಮದ ಗಣಪತಿ ಎಂಬವರಿಗೆ ಆ ಗ್ರಾಂಥದಲ್ಲಿ ಸಂಚರಿಸಿ ಹಾಳ್ ಮಾಡುವ ಆನೆಯನ್ನು ಕೊಲ್ಲಲು ಅನುಮತಿ ಕೊಡಲಾಗಿದೆಯೆಂದೂ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಳಿಯ ಸಭೆ ಯು ತಾ. 23ರಲ್ಲಿ ಡಾ। ಕೆ. ಎಸ್. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. 11ಮಂದಿ ಸದಸ್ಯರು ಹಾಜರಿದ್ದರು. ಜಿಲ್ಲೆಯ ಆಹಾರ ಪರಿಸ್ಥಿತಿ, ಲೆವಿ, ರಿಲೀಫ್ ಶೋಪ್ ಮತ್ತು ಅವುಗಳಿಂದ ಸಿಗುವ ಅಕ್ಕಿಯ ಬೆಲೆಯ ಕುರಿತು ಜನತೆಯ ಸಂಕಷ್ಟವನ್ನು ಕಲೆಕ್ಟರರಿಗೆ ತಿಳಿಸಿ ಅವರಿಂದ ಸ್ಪಷ್ಟೀಕರಣ ಪಡೆಯಲು ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಹಾರ ಉಪಸಮಿತಿಯು ಕೂಡಲೇ ಜಿಲ್ಲಾ ಕಲೆಕ್ಟರರನ್ನು ಕಂಡು ತಮ್ಮ ಮಾತುಕತೆಯ ಪರಿಣಾಮವನ್ನು ಜನರಿಗೆ ತಿಳಿಸಲು ಹೇಳಿಕೆ ಹೊರಡಿಸಬೇಕಾಗಿ ನಿರ್ಧರಿಸಲಾಯಿತು. ಕಾಂಗ್ರೆಸಿನ ಸದಸ್ಯರನ್ನು ಸೇರಿಸುವ ಬಗ್ಗೆ 15,000 ಫಾರ್ಮುಗಳನ್ನು ತರಿಸಬೇಕೆಂದು ನಿರ್ಧರಿಸಲಾಯಿತು. ಮದ್ರಾಸು ಸರಕಾರದಿಂದ ನೇಮಿಸಲ್ಪಟ್ಟ ಲೇಬರ್ ಟಿಬ್ಯುನಲ್ ಮತ್ತು ಟಿನ್ಸ್ ರಿಪೋರ್ಟ್ ಕಮಿಟಿಯ ವರದಿಯನ್ನು ಅದಷ್ಟು ಬೇಗನೆ ಪ್ರಕಟಿಸಲು ಈ ಕಳಗಿನ ಸಮಿತಿಯನ್ನು ನೇಮಿಸಲಾಯಿತು. ಶ್ರೀಗಳಾದ ಎಮ್. ಡಿ. ಅಧಿಕಾರಿ, ಡಾ। ಯು. ಪಿ. ಮಲ್ಯ, ಎಲ್. ಸಿ. ಪಾಯಸ್, ಮತ್ತು ಕೆ. ಕೆ. ಶೆಟ್ಟಿ. ಶ್ರೀ ಕೆ. ಕೆ. ಶೆಟ್ಟರು ಕಮಿಟಿಯ ಸಂಚಾಲಕರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು, ಸಂಚಾಲಕರಾದ ಜಿಲ್ಲಾ ಯುವಜನ ಸಮಿತಿಯನ್ನು ರಚಿಸಲಾಯಿತು.

ದ. ಕ. ಜಿಲ್ಲಾ ಸ್ಥಳೀಯ ಪುಸ್ತಕಾಲಯ ಸಮಿತಿಯ ಸಭೆಯು—ಊಟಿಗೆ ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ ಯು. ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ವಿದ್ಯಾಧಿಕಾರಿ ಹಾಗೂ ಸಮಿತಿಯ ಕಾರ್ಯದರ್ಶಿ ಶ್ರೀ ಟಿ. ರಾಘವನ್ ನಾಯರರು ಜಿಲ್ಲೆಯಲ್ಲಿ ಪುಸ್ತಕಾಲಯದ ಚಳವಳಿಯನ್ನು ಬೆಳೆಸುವ ವಿಷಯದಲ್ಲಿ ಸರಕಾರದ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಮಿತಿಯನ್ನು ಕೇಳಿಕೊಳ್ಳುವ ಸರಕಾರೀ ಹುಕುಮನ್ನು ಓದಿ ಹೇಳಿದರು. ಆ ಪ್ರಕಾರ ಒಂದು ಯೋಜನೆಯನ್ನು ತಯಾರಿಸಲಾಯಿತು. ಈ ಹೊಸ ಯೋಜನೆಯಂತೆ ಮಂಗಳೂರು ಮುನಿಸಿಪಲ್ ಲೈಬ್ರೆರಿಯನ್ನು ವಹಿಸಿಕೊಂಡು ಒಂದು ಕೇಂದ್ರ ಪುಸ್ತಕಾಲಯವನ್ನು ಸ್ಥಾಪಿಸುವುದು. ಉಡುಪಿಯ ಮುನಿಸಿಪಲ್ ಲೈಬ್ರೆರಿಯನ್ನು ವಹಿಸಿಕೊಂಡು ಒಂದು ಬ್ರಾಂಚ್ ಲೈಬ್ರೆರಿಯಾಗಿ ನಡೆಸುವುದು. ಕಾಸರಗೋಡು, ಪುತ್ತೂರು, ಕಾರ್ಕಳ, ಕುಂದಾಪುರ, ಶಿರ್ವ, ಬಂಟ್ವಾಳ ಮತ್ತು ಹೊಸದುರ್ಗ—ಇಲ್ಲಿ ಬ್ರಾಂಚ್ ಲೈಬ್ರೆರಿಗಳನ್ನು ಸ್ಥಾಪಿಸುವುದು. ಈ ವಾಚನಾಲಯಗಳಿಗೆ ಅಗತ್ಯವಾಗಿ ಬೇಕಾದ ಸಲಕರಣೆಗಳನ್ನು (ಪುಸ್ತಕಗಳನ್ನು ಒದಗಿಸುವ ಕೇಂದ್ರಗಳನ್ನು) ತೆರೆದು ಈ ಸ್ಥಳಗಳ ಸುತ್ತಮುತ್ತಲ ಹಳ್ಳಿಗಳಿಗೆ ಪುಸ್ತಕಗಳನ್ನು ಓದಲು ಒದಗಿಸಲಾಗುವುದು.

ಉದ್ಘಾಟನಾ ಸಮಾರಂಭ—ಮಂಗಳೂರಿನ ಸರಕಾರಿ ಟ್ರೈನಿಂಗ್ ಶಾಲೆಯ ಉದ್ಘಾಟನಾ ಸಮಾರಂಭವನ್ನು ತಾ. 24ರಲ್ಲಿ ಬಿ. ಟಿ. ಕಾಲೇಜು ಪ್ರಿನ್ಸಿಪಾಲ್ ಶ್ರೀ ರಘುನಾಥ ರಾಯರು ನೆರವೇರಿಸುತ್ತಾ ಶಾಲೆಯ ಉಪಯೋಗ, ಅದನ್ನು ಸರಿಯಾಗಿ ಉಪಯೋಗಿಸಲು ಮಾಡಬೇಕಾದ ಪ್ರಯತ್ನ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು. ಶಾಲೆಯ ಲೆಕ್ಚರರ್ ಶ್ರೀ ಪಿ. ಡಿ. ರಮಣನವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P 32/1951

1. ಯು. ವೆಂಕಟ್ರಾಯ ಸೇಟ್, 2 ಯು. ಶೀನಗಿರಿ ಸೇಟ್, ಯು. ಮಂಜುನಾಥ ಸೇಟರ ಮಗಂದಿರು. ಉಡುಪಿ ಕಸಬಾ —ಅರ್ಜಿದಾರರು

ಅರ್ಜಿದಾರರ ತಮ್ಮ ತಾ. 23-6-1951ರಲ್ಲಿ ಮೃತಪಟ್ಟ ಯು. ಕೃಷ್ಣ ಸೇಟರಿಗೆ ಉಡುಪಿಯಲ್ಲಿರುವ ದಿ. ಕರ್ನಾಟಕ ಬ್ಯಾಂಕಿನಿಂದಾ F. D. No. 230/50ನೇ ಡಿಪೋಸಿಟ್ ಮೊದಲು ಬಾಬ್ತು ಬರತಕ್ಕ ರುಪಾಯಿ 2587-8-0ನ್ನು ಪಡೆಯುವರೆ ತಾವು ಹಕ್ಕುದಾರರೆಂತಲೂ—ಆ ಬಗ್ಗೆ ತಮ್ಮ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಸಹಾ ಸದರಿ ಅರ್ಜಿದಾರರು ಬರಕೊಂಡ ಮೇಲ್ಕಂಡ ಅರ್ಜಿಯು ತಾರೀಖು 20-8-1951ಕ್ಕೆ ತನಿಖೆ ಬಗ್ಗೆ ಮುಂದೂಡಲ್ಪಟ್ಟಿರುವುದರಿಂದ, ಈ ಕುರಿತು ಯಾರಾದ್ರೂ ಆಕ್ಷೇಪಿಸುವವರು ಇದ್ದರೆ ಸಂಗ್ತಿಯಲ್ಲಿ ಅವರು ಸದರಿ ತಾರೀಕಿನ ದಿವ್ಸ ಬೆಳಗ್ಗೆ 11ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸೋಣಾಗಿಯದೆ.

M. Damodhar Kamath

Advocate for Petitioner

ಉಡುಪಿ, ತಾ. 27-7-51

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No 147/1951

ತೀಜಪ್ಪ ಶೆಟ್ಟಿ—ಜನರಲ್ ಏಜಂಟ—ಬಿ. ನಾರಾಯಣ ಹೆಗ್ಡೆ... —ವಾದಿ

ಮತ್ತು

ನಾಗಂದು ಶೆಡ್ತಿ ಕೂಡಾ— —ಪ್ರತಿವಾದಿರು

ಇವರೊಳಗೆ—

ಪ್ರತಿವಾದಿರು:-

[5] ಗಣಪಯ್ಯ ಶೆಟ್ಟಿ-[6] ರಾಮಣ್ಣ ಶೆಟ್ಟಿ-[7] ಜಲಜಾಕ್ಷಿ ಶೆಡ್ತಿ-ನಾಗಮ್ಮ ಶೆಡ್ತಿ ಮಕ್ಕಳು-[10] ಗಿರಿಜ ಶೆಡ್ತಿ- ಲಕ್ಷ್ಮಿ ಶೆಡ್ತಿ ಮಗಳು, ಉಡುಪಿ ತಾಲ್ಲೂಕು ಬೆಳ್ವಂಪಳ್ಳಿ ಗ್ರಾಮಸ್ಥರು......

ಯವರಿಗೆ— ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ಉಡುಪಿ ಡಿ. ಮು. ಕೋರ್ಟು O. S. No 412/1930ನೇ ರಾಜಿ ಡಿಕ್ರಿವಿಧಿ ಪ್ರಕಾರ ಪ್ರತಿವಾದಿರು ಕೆರಬೇಕಾದ ಯೋಗದ ತೀರ್ವೆ ನರಿಸ್ಸುಗಳನ್ನು ಕೆರದೆ ಇದ್ದ ಡ್ರಿಗ್ರಿದಾರ ವಾದಿಯು ಕಟಲು ಅಗತ್ಯಪಟ್ಟ ಸದ್ರಿ ಹಣಗಳನ್ನು re-imbursement ಆಗಿ ಪ್ರತಿವಾದಿರಿಂದ ಮತ್ತು ಅವರ ಸ್ವಾಧೀನವಿರುವ ಸ್ಥಿರಾಸ್ತಿಗಳ ಜವಾಬ್ದಾರಿಯಿಂದ ಸಹಾ ಬರಮಾಡಿ ಕೊಳ್ಳುವರೆ ವಾದಿಯು ಹಾಕಿದ ಮೇಲ್ಕಂಡ ದಾವೆಯು ತಾರೀಖು 9-8-1951ಕ್ಕೆ ಇಟ್ಟಿದೆ. ಆ ಕುರಿತು ಉಜ್ರುಹೇಳುವದಕ್ಕಿದ್ದರೆ ಸದ್ರಿ ದಿವ್ಸ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ದೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವದು.

K. Ramakrishna Rao

Vakil for plaintiff

Udipi- Dated 25-7-1951

ಬ್ಯಾಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ಕ್ಷಿಪ್ರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು

ಸಾಲಿಯನ್ಸ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್) ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಎರಡು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ: 0—8—0

೨ ಭಾರತದ ಗುರುಕುಲ ಬೆಲೆ: 0—6—0

ಇದೀಗ ನವೀನ ರೀತಿಯಲ್ಲಿ ಪ್ರಕಟವಾಗಿದೆ!

ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—

(1) ಅಂತರಂಗ ಕಾರ್ಯಾಲಯ, ಉಡುಪಿ
(2) ನವಭಾರತ ಬುಕ್ ಡಿಪ್ಪೋ, ಉಡುಪಿ
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ. ಮಂಗಳೂರು.

ಏಜನ್ಸಿ ಪಡೆಯಿರಿ!

ಮತ್ತು

ತುಂಬ ಕಮಿಶನ್ ಗಳಿಸಿರಿ!

ಸಹ್ಯಾದ್ರಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—ನಾಸಿಕ

ಇವರ ಮುಖ್ಯ ಅಥವಾ ಉಪವೃತ್ತಿಯಾಗಿ ಏಜನ್ಸಿ ಪಡೆಯಿರಿ. ಆಕರ್ಷಕ ಮತ್ತು ಉದಾರ ಶರ್ತಗಳು. ಮೇಲ್ದರ್ಜೆಯ ಜೀವವಿಮಾ ಸಂಸ್ಥೆಯಿದು.

G. G. Soundankar

Managing Director

The Sahyadri Insurance Co. Ltd Nasik

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಪಾರಿಯರ್,

ರಥಬೀದಿ, ಉಡುಪಿ

ಪ್ರವಾಸಿಯ ಪತ್ರಗಳು ೧೦

ಕಳೆದ ಸಂಚಿಕೆಯಿಂದ ಮುಂದರಿಸಿದ್ದು.

ಎಡಿನ್‌ಬರೋದಲ್ಲಿ ನಾನು ಇದ್ದ 2 ದಿನಗಳಲ್ಲೊಂದು ದಿನ ಬೆಳಿಗ್ಗೆ ಅಲ್ಲಿಂದ ಹೊರಟು ನನ್ನಂತೆಯೇ ಬೇರೆ ಅನೇಕ ಊರುಗಳಿಂದ ಬಂದಿದ್ದ ಪ್ರವಾಸಿಗಳ ಜತೆಯಲ್ಲಿ ಸುಮಾರು 200 ಮೈಲು ಹಳ್ಳಿ ಪ್ರದೇಶಗಳಲ್ಲಿ ಬಸ್ಸು ಮೂಲಕ ಸಂಚರಿಸಿದೆ, ಈ ಇಡೀ ದಿನದ ಪ್ರಯಾಣದ ಟಿಕೇಟಿಗೆ ರೂ. 10 ಮಾತ್ರ. ಅಲ್ಲಲ್ಲಿ ಒಳ್ಳೇ ಚಂದ ಹೋಟೇಲು ಮತ್ತು ರೆಸ್ಟೋರಾಂಟುಗಳಿದ್ದು ಪ್ರಯಾಣವು ಸುಖವಾಗಿ ಸಾಗಿತು. ಈ ದಿನದ ಪ್ರಯಾಣದಲ್ಲಿ ಕೆನಡಾ ದೇಶದ ಟೊರೆಂಟೊ ಎಂಬಲ್ಲಿನ ಒಬ್ಬ ವರ್ತಕ ದಂಪತಿಗಳು ಮತ್ತು ಸಂಯುಕ್ತ ರಾಷ್ಟ್ರದ (U. S. A.) ಫಿಲಡೆಲ್ಫಿಯ ಊರಿನ ಒಬ್ಬ ವಕೀಲರ ಪರಿಚಯವು ನನಗೆ ಆಯಿತು.

ಎಡಿನ್‌ಬರೋ ಬಿಟ್ಟು ಕೆಲವು ಮೈಲು ಉತ್ತರಕ್ಕೆ ಹೋಗುವಾಗ ಅನೇಕ ಸಣ್ಣ ಸಣ್ಣ ಸುಂದರವಾದ ಮನೆಗಳು ಕಾಣಲು ಸಿಕ್ಕಿದವು. ಪಟ್ಟಣದಿಂದ 5, 6 ಮೈಲು ದೂರದಲ್ಲಿ ಒಂದು ವಿಮಾನ ನಿಲ್ದಾಣವಿದೆ. ಸುಮಾರು 10, 12 ಮೈಲು ದೂರದಲ್ಲಿ ಲಿನ್‌ಲಿತ್‌ಗೊ (Linlithgow) ಎಂಬ ಒಂದು ಸಣ್ಣ ಪಟ್ಟಣವಿದೆ. ಈ ಪಟ್ಟಣದಿಂದಾಗಿಯೇ ನಮ್ಮ ದೇಶದಲ್ಲಿ ಮುಂಚೆ ಸುಮಾರು 1943ನೇ ಇಸವಿಯವರೆಗೆ 5-6 ವರ್ಷ ವೈಸರೋಯಿಗಳಾಗಿದ್ದ ಲಾರ್ಡ್ ಲಿನ್‌ಲಿತ್‌ಗೋ ಎಂಬವರು ಆ ಹೆಸರನ್ನು ಪಡೆದದ್ದು. ಇಲ್ಲಿ ರಸ್ತೆ ಸಮೀಪವೇ ಒಂದು ದೊಡ್ಡ, ಮೇಲೆ ಪ್ರಸ್ತಾಪಿಸಿದ ರಾಣಿ ಮೇರಿ ಇರುತ್ತಿದ್ದ ದುರ್ಗ (Castle) ಇದೆ. ನಮ್ಮ ಬಸ್ಸು ಹೋದ ತಾರುಹಾಕಿದ ರಸ್ತೆಯು ಸಾಧಾರಣ ಇಂಗ್ಲಿಷ್ ರಸ್ತೆಗಿಂತಲೂ ಹೆಚ್ಚಿನ ಅಗಲವಾಗಿದ್ದ ಕಾರಣ ಕೆಲವು ಕಡೆಗಳಲ್ಲಿ ಬಸ್ಸು ಗಂಟೆಗೆ 40-50 ಮೈಲು ವೇಗದಲ್ಲಿ ಹೋಗುತ್ತಿತ್ತು. ದಾರಿಯ ಬದಿಯಲ್ಲಿ ಇರುತ್ತಿದ್ದ ಹುಲ್ಲುಗಾವಲುಗಳಲ್ಲಿ ಅನೇಕ ಕಪ್ಪು ಬಣ್ಣದ ದನಗಳು ಮೇಯುತ್ತಿದ್ದವು. ಇಂಗ್ಲಾಂಡಿನಲ್ಲಿ, ಮುಖ್ಯವಾಗಿ ದಕ್ಷಿಣ ಇಂಗ್ಲಾಂಡಿನಲ್ಲಿ, ದನಗಳು ಹೆಚ್ಚಾಗಿ ಕೆಂಪು ಮತ್ತು ಕಂದು ಬಣ್ಣದವುಗಳಾಗಿರುವುವು. ಅಂತೆಯೇ ಇಲ್ಲಿ ಮೇಯುತ್ತಿರುವ ಕುರಿಗಳು ಕೂಡಾ ಇಂಗ್ಲಾಂಡಿಗಿಂತ ಹೆಚ್ಚಿನ ಕಪ್ಪು ಬಣ್ಣದವು. ಇಂಗ್ಲಾಂಡಿನಲ್ಲಿ ಹೆಚ್ಚಾಗಿ ಬಿಳಿ ಬಣ್ಣದ ಕುರಿಗಳು ಕಂಡುಬರುವುವು. ಅಲ್ಲಲ್ಲಿ 15-20 ಮನೆಗಳಿರುವ ಹಳ್ಳಿಗಳು ನಾವು ಹೋದ ರಸ್ತೆಗೆ ತಾಗಿ ಎರಡೂ ಬದಿಯಲ್ಲಿದ್ದವು. ಕೆಲವು ಕಡೆ ದಾರಿಯ ಸಮೀಪವೇ ಕಲ್ಲಿದ್ದಲು ಮತ್ತು ಕಬ್ಬಿಣದ ಕಾರ್ಖಾನೆಗಳಿದ್ದವು. ಮುಂದೆ ಸ್ವಲ್ಪ ದೂರ ಹೋದಾಗ ಬ್ರೊವರ್‌ಬ್ರಿಜ್ ಎಂಬ ಒಂದು ಹಳ್ಳಿ ಸಿಕ್ಕುತ್ತದೆ. ಅಲ್ಲಿ ಪೂರ್ವ ಕಾಲದಲ್ಲಿ ರೋಮನರು ಕಟ್ಟಿದ ಹಳೇ ಗೋಡೆಯಿದೆ. ಇದರ ಸಮೀಪವೇ 1314ನೇ ಇಸವಿಯಲ್ಲಿ ನಡೆದ ಬೆನೊಕ್‌ಬರ್ನ್ ಎಂಬ ಯುದ್ಧರಂಗ ಇರುತ್ತದೆ. ಇನ್ನು ಸ್ವಲ್ಪ ದೂರ ಹೋದ ಮೇಲೆ ಸ್ಟರ್ಲಿಂಗ್ (Stirling) ಎಂಬ ಒಂದು ಮಧ್ಯತರಗತಿಯ ಪಟ್ಟಣವು ಸಿಕ್ಕುತ್ತದೆ. ಸ್ಕೋಟ್‌ಲೆಂಡಿನಲ್ಲಿ ಹೆಚ್ಚು ಚಳಿ ಇದ್ದ ಕಾರಣ ಇಲ್ಲಿಯ ಹುಡುಗ, ಹುಡುಗಿಯರು ಇಂಗ್ಲಾಂಡಿಗಿಂತಲೂ ಕೆಂಪು ಕೆಂಪಾಗಿ ಕಾಣುವರು. ಗಾತ್ರದಲ್ಲೂ ಜನರು ದೊಡ್ಡ ಶರೀರದವರು. ಈ ಪಟ್ಟಣ ಬಿಟ್ಟು ಸ್ವಲ್ಪ ದೂರ ಹೋದೊಡನೆಯೇ ಉನ್ನತ ಪ್ರದೇಶವು ಆರಂಭವಾಗುತ್ತದೆ. ಈ ವರೆಗೆ ನಾವು ಬಂದ ಊರುಗಳಿಗೆ ಸ್ಕೊಟ್‌ಲೆಂಡಿನ ತಗ್ಗು ಭೂಮಿ (Lowlands) ಎಂದು ಕರೆಯುತ್ತಾರೆ. ಇನ್ನು ಮುಂದೆ ನಾವು ಹೋಗುವ ಪ್ರದೇಶಕ್ಕೆ ಉನ್ನತ ಭೂಮಿ (Higblands) ಎಂದು ಹೆಸರು. ಇವೆರಡಕ್ಕೂ ಮಧ್ಯೆ (Forth) ಎಂಬ ಹೆಸರಿನ ನದಿ ಇಲ್ಲಿ ಹರಿಯುತ್ತದೆ.

ಈ ಉನ್ನತ ಪ್ರದೇಶದಲ್ಲಿ ನಾವು ಮುಂದೆ ಮುಂದೆ ಹೋಗುತ್ತಿರುವಾಗ, ಅನೇಕ ಪೈನ್ ಮತ್ತು ಸ್ಪ್ರೂಸ್ ಮರಗಳ ದಟ್ಟವಾದ ಕಾಡುಗಳನ್ನು ಕಾಣಬಹುದು. ಮತ್ತು ಅಲ್ಲಲ್ಲಿ ಅನೇಕ ಎತ್ತರವಾದ ಗುಡ್ಡಗಳಿದ್ದು ಅವುಗಳ ಮಧ್ಯೆ ಸರೋವರಗಳಿವೆ, ಈ ಪ್ರದೇಶದಲ್ಲಿ ಹೆಚ್ಚಾಗಿ ಕುರಿ ಮತ್ತು ದನಗಳನ್ನು ಸಾಕುತ್ತಾರೆ. (Dairy farming). ಈ ಸರೋವರಗಳ ಪೈಕಿ ಒಂದು ಸರೋವರಕ್ಕೆ ಮಾತ್ರ ಲೇಕ್ ಎಂಬ ಹೆಸರಿದೆ. ಅದು ಲೇಕ್ ಓಫ್ ಮೆಂಟೆಸ್. ಸ್ಕೊಟ್‌ಲೇಂಡಿನ ಉಳಿದ ಎಲ್ಲಾ ಸರೋವರಗಳಿಗೆ ಲೊಕ್ (loch) ಎಂತ ಕರೆಯುತ್ತಾರೆ, ಇನ್ನು ಸ್ವಲ್ಪ ಮುಂದೆ ಹೋದಾಗ ಸ್ಕೊಟ್ ಚರಿತ್ರೆಯಲ್ಲಿ ಪ್ರಸಿದ್ಧ ಪುರುಷನಾದ ರೊಬ್‌ರೊಯ್ ಹುಟ್ಟಿದ ಗ್ರಾಮವು ನಮಗೆ ಸಿಕ್ಕುತ್ತದೆ. ಅದರ ಹೆಸರು ಎಬರ್‌ಫೊಯ್ಲ್ (Aberfoyle). ಅಲ್ಲಿಯೇ ಸ್ವಲ್ಪ ಮುಂದೆ ಬಹು ಎತ್ತರವಾದ ಪರ್ವತವಿದ್ದು ಅದರ ಬದಿಯಲ್ಲಿ ಅಮೇರಿಕದವರು "ರೊಬ್ ರೊಯ್" ಎಂಬ ಹೆಸರಿನ ಚಲನ ಚಿತ್ರವನ್ನು ಮಾಡಿರುವರು, ಆ ಪರ್ವತದ ಬುಡದಲ್ಲಿ ಇಲ್ಲಿಂದ ಸುಮಾರು 30ಮೈಲು ದೂರವಿರುವ ಗ್ಲಾಸ್‌ಗೋ ಪಟ್ಟಣದ ಶಾಲಾ ಮಕ್ಕಳು ರಜಾ ದಿನದಲ್ಲಿ ಇಲ್ಲಿಗೆ ಬಂದು ಉಳಕೊಳ್ಳುವ ಸಲುವಾಗಿ ಗ್ಲಾಸ್ಗೊ ಮ್ಯುನಿಸಿಪಾಲಿಟಿಯವರು ಕಟ್ಟಿದ ದೊಡ್ಡ ವಿಶ್ರಾಮ ಮಂದಿರವಿರುತ್ತದೆ. ಇನ್ನು ಸ್ವಲ್ಪ ಮುಂದೆ ಹೋದಾಗ ರಸ್ತೆಯ ಬದಿಯಲ್ಲಿ ಸ್ಲೇಟ್ ಗಣಿಗಳು ಸಿಕ್ಕುತ್ತವೆ ಈ ಪ್ರದೇಶದಲ್ಲಿ ಅಲ್ಲಲ್ಲಿ ನಮ್ಮೂರಿನಂತೆ ಸರಕಾರದಿಂದ ಬೆಳಸಿ ಕಾದಿಡಲ್ಪಟ್ಟ ರಿಸರ್ವ್ ಕಾಡುಗಳೂ ಇವೆ. ಲೋಕ್ ಟ್ರೊಂಕಿ, ಲೊಕ್ ಕಟ್ರೀನ್, ಮತ್ತು ಲೋಕ್ ಎಕ್ರೇ ಹೀಗೆ ಮೂರು ಸರೋವರಗಳು ನಮಗೆ ಕಾಣಸಿಕ್ಕುತ್ತವೆ, ಆ ಪೈಕಿ ಲೊಕ್ "ಕಟ್ರೀನ್" ಎಂಬುದು ಮೇಲೆ ಹೇಳಿದ ಗ್ಲಾಸ್‌ಗೋ ಪಟ್ಟಣಕ್ಕೆ ನೀರುಕೊಂಡುಹೋಗಲು ಕಾಪಿಟ್ಟ ಸರೋವರ. ಈ ಸರೋವರದಲ್ಲಿ ಈಜಲಿಕ್ಕಾಗಲೀ ಸ್ನಾನಕ್ಕಾಗಲೀ ಬಿಡುವುದಿಲ್ಲ. ನಾವು ನಾವು ಇಲ್ಲಿ ಹೋದಾಗ ಬಹು ಥಂಡಿಯಾಗಿದ್ದು ಸರಿಯಾಗಿ ಮಳೆಬೀಳುತ್ತಿತ್ತು. ಆದರೂ ಕೂಡ ಒಂದು ದೋಣಿಯಲ್ಲಿ ಇಬ್ಬರು ಹೆಂಗಸರು ಮೀನು ಹಿಡಿಯಲಿಕ್ಕೆ ಹೊರಟುಹೋದರು. ಮಧ್ಯಾಹ್ನ ಗ್ಲೆನ್‌ಓಗಲ್ (Glenogle) ಎಂಬ ಹಳ್ಳಿಯಲ್ಲಿ ನಿಂತು ನಾವೆಲ್ಲರೂ ಅಲ್ಲಿದ್ದ ಹೊಟೇಲಿನಲ್ಲಿ ಆಹಾರ ತೆಗೆದುಕೊಂಡು ಸುಮಾರು ಒಂದು ಗಂಟೆ ವಿಶ್ರಮಿಸಿದೆವು. ಅಪರಾಹ್ನ ಹೊರಟು ಇನ್ನೊಂದು ದಾರಿಯಲ್ಲಿ ವಾಪಾಸು ಹಿಂತಿರುಗಿ ಪ್ರಯಾಣಮಾಡಿದೆವು. ಹಾಗೆ ಬರುವಾಗ ಅನೇಕ ಮೈಲುಗಳ ದೂರ ಲೊಕ್ ಲೊಮಂಡ್ ಎಂಬ ಒಂದು ದೊಡ್ಡ ಸರೋವರದ ಬದಿಯಲ್ಲೇ ಬಂದೆವು. ಸರೋವರದ ಇನ್ನೊಂದು ಬದಿಯಲ್ಲಿ ರೈಲ್ವೆ ದಾರಿ ಇರುತ್ತದೆ. ಒಂದು ಕಡೆಯಲ್ಲಿ ಗುಡ್ಡೆಯ ಮೇಲಿರುವ ಒಂದು ಸರೋವರದಿಂದ ದೊಡ್ಡ ಕಬ್ಬಿಣದ ನಳಿಗೆಗಳ ಮೂಲಕ ನೀರು ಕೆಳಕ್ಕೆ ಹರಿದು ನಾವು ಪ್ರಯಾಣ ಮಾಡಿ ಬರುತ್ತಿದ್ದ ರಸ್ತೆಬದಿಯಲ್ಲಿ ಕಟ್ಟಿರುವ ದೊಡ್ಡ ವಿದ್ಯುಚ್ಛಕ್ತಿಯ ಕೇಂದ್ರಕ್ಕೆ ಬರುತ್ತದೆ. ಹೀಗೆ ಬರುವಾಗ ಈ ಗುಡ್ಡೆಗಳ ಬದಿಯ ಬಂಡೆಕಲ್ಲುಗಳಲ್ಲಿ 'ಸ್ಕೋಟ್‌ಲೇಂಡಿಗೆ ಸ್ವಾತಂತ್ರ್ಯ' ಎಂತ ಬರೆದುದು ಕಂಡಿತು. ಹೀಗೆಯೇ ಪ್ರಯಾಣ ಮಾಡುತ್ತಾ ಹಿಂತಿರುಗಿ ಬರುವಾಗ ಬೇರೆ ಬೇರೆ ಹಳ್ಳಿಗಳ ಮೂಲಕ ಹಾದು ಬರುವಾಗ ನಾನು ಪ್ರಥಮದಲ್ಲಿ ಹೇಳಿದ ಫೋರ್ತ್ ಎಂಬ ಸಮುದ್ರದ ನಾಲಿಗೆಯ (Firth of Forth) ಮೇಲಿನ ಪ್ರಸಿದ್ಧವಾದ ಕಬ್ಬಿಣದ ರೈಲ್ವೆ ಸಂಕವು (Forth Bridge) ಕಾಣಸಿಕ್ಕುತ್ತದೆ. ಇದು ಲೋಕದಲ್ಲಿ ಇರುವ ದೊಡ್ಡ ಸಂಕಗಳಲ್ಲಿ ಒಂದು ಮತ್ತು ಅಂಥ ಚಾಚು ಕೋಲ್(Cantilever) ಸೇತುವೆಗಳಲ್ಲಿ ಪ್ರಥಮವಾಗಿ 1890ರಲ್ಲಿ ಕಟ್ಟಿದ ಸಂಕವಾಗಿರುತ್ತದೆ, ಇದನ್ನು ಕಟ್ಟಲಿಕ್ಕೆ 7ವರ್ಷ ಬೇಕಾಗಿದೆ. ನೀರಿನಿಂದ ಈ ಸಂಕದ ಮೇಲಿರುವ ರೈಲ್ವೆ ಪಟ್ಟಿಗೆ 160ಅಡಿ ಎತ್ತರ. ಇದರ ಅಗಲ ಒಂದುವರೆ ಮೈಲು. ಇಷ್ಟು ಅಗಲವಿದ್ದರೂ ಮಧ್ಯ ಕೇವಲ ಅರ್ಧ ಚಂದ್ರಾಕಾರದ ಮೂರೇ ಕಮಾನುಗಳಲ್ಲಿ(arches) ಇದನ್ನು ಕಟ್ಟಿಸಿ. ಇದನ್ನು ಕಟ್ಟುವ ಸಮಯದಲ್ಲಿ ತಗಲಿದ ಖರ್ಚು 3½ಮಿಲಿಯ ಪವನು. ಈ ಸಂಕವು ಎಡಿನ್‌ಬರೋ ಪಟ್ಟಣದಿಂದ 5-6 ಮೈಲು ದೂರವಿರುತ್ತದೆ. ಕತ್ತಲಾಗುತ್ತ ಬರುವಾಗ ನಾವು ಪಟ್ಟಣವನ್ನು ಸೇರಿದೆವು.

ಮರುದಿನ (ಮೇ. 22) ಎಡಿನ್ ಬರೋದಿಂದ ಬೆಳಿಗ್ಗೆ 10ಗಂಟೆಗೆ ಹೊರಟು ಸಂಜೆ 5-45ಕ್ಕೆ ಫ್ಲಾಯಿಂಗ್ ಸ್ಕೊಟ್ಸ್ ಮೇನ್. (Flying Scot's man) ಎಂಬ ಬಹು ವೇಗದಲ್ಲಿ ಬರುವ ರೈಲಲ್ಲಿ ಲಂಡನ್ ಪಟ್ಟಣಕ್ಕೆ ಹಿಂತಿರುಗಿ ಪ್ರಯಾಣ ಬೆಳಸಿದೆನು. ಎಡಿನ್‌ಬರೋದಿಂದ ಲಂಡನಿಗೆ 398ಮೈಲು ದೂರ. ಅದನ್ನು ಬರೇ 8ಗಂಟೆಯಲಿ ಮುಗಿಸಬಹುದು. ಎಂದರೆ ಗಂಟೆ ಒಂದಕ್ಕೆ ಸರಾಸರಿ 50ಮೈಲು ವೇಗದಂತಾಯಿತು. ನಾನು ಮೆಂಚೆಸ್ಟರಿನಿಂದ ಎಡಿನ್ ಬರೋಕ್ಕೆ ಹೋದ ದಾರಿ ಇಂಗ್ಲಾಂಡಿನ ಪಶ್ಚಿಮ ತೀರಕ್ಕೆ ಸಮೀಪ. ಈಗ ಹಿಂತಿರುಗಿ ಲಂಡನಿಗೆ ಬರುವಾಗ, ಸುಮಾರು 100ಮೈಲು ವರೆಗೆ ಸ್ಕೊಟ್ ಲೆಂಡಿನ ಪೂರ್ವತೀರಕ್ಕೆ ಸಮೀಪಿಸಿ ನಂತರ ಇಂಗ್ಲಾಂಡಿನ ಪೂರ್ವ ಮಧ್ಯಭಾಗದಲ್ಲಿ ದಕ್ಷಿಣ ದಿಕ್ಕಿಗೆ ಬರುವ ರೈಲು ಮೂಲಕ ಬಂದದ್ದು. ರೈಲು ಬರುವಾಗ ಸುಮಾರು 1ಗಂಟೆ ವರೆಗೆ ವಿಶೇಷ ಮಂಜು (fog) ಇದ್ದು ಕೆಲವು ಕಡೆಗಳಲ್ಲಿ 50 ಮಾರು ದೂರ ಕೂಡ ಕಾಣುತ್ತಿರಲಿಲ್ಲ. ಕೆಲವು ಕಡೆಗಳಲ್ಲಿ ಭೂಮಿಯಲ್ಲಿ ಬೆಳೆದ 'ಕೆಬೆಜ್' ಬೆಳೆಯನ್ನು ಬೆಳೆಯನ್ನು ಕೃಷಿಕರು ಗಂಡಸರೂ ಹೆಂಗುಸರೂ ಕೂಡಿ ತೆಗೆಯುತ್ತಿದ್ದರು.

ಹೀಗೆ ಕೆಲವು ಕಾಲ ಪ್ರಯಾಣ ಮಾಡುವಾಗ ಅನೇಕ ಕಡೆಗಳಲ್ಲಿ ನಾನು ಬರುತ್ತಿದ್ದ ರೈಲುದಾರಿಯು ಪೂರ್ವದಿಕ್ಕಿಗೆ ಇದ್ದ ಸಮುದ್ರವು (North Sea) ಕೇವಲ 3-4 ಫರ್ಲಾಂಗ್ ದೂರ ಕಾಣುತ್ತಿತ್ತು. ಹೀಗೆಯೇ ಸ್ವಲ್ಪ ಸಮಯ ಪ್ರಯಾಣಮಾಡಿದ ಮೇಲೆ ಸ್ಕೊಟ್ಲೆಂಡಿಗೂ, ಇಂಗ್ಲೆಂಡಿಗೂ ಇಲ್ಲಿ ಗಡಿಯಾಗಿರುವ ಟ್ವೀಡ್ (Tweed) ಎಂಬ ನದಿಯು ಸಿಕ್ಕುತ್ತದೆ. ಇದನ್ನು ದಾಟಿ ಅನೇಕ ಪಟ್ಟಣಗಳ ಮಧ್ಯದಲ್ಲಿಯೇ ರೈಲುಬರುತ್ತದೆ. ಅವುಗಳಲ್ಲಿ ಮುಖ್ಯವಾದುದು ನ್ಯೂಕಾಸಲ್ (New Castle) ಎಂಬ ಪ್ರಸಿದ್ಧವಾದ ಕಲ್ಲಿದ್ದಲು ತೆಗೆಯುವ ಪಟ್ಟಣ. ಇದು ಟೈನ್ (Tyne) ಎಂಬ ನದಿಯ ಎರಡೂ ತೀರದಲ್ಲಿದೆ. ಆಂಗ್ಲಭಾಷೆಯಲ್ಲಿ (Carrying Coal to New Castle) ಎಂಬ ಗಾದೆ ಈ ಪಟ್ಟಣದಿಂದಾಗಿ ಬಂದುದು. ಇಲ್ಲಿ ಟೈನ್ ನದಿ ಕೇವಲ 50ಮಾರು ಅಗಲ ಮಾತ್ರ. ಆದರೂ ಈ ಪಟ್ಟಣವು ಬಹಳ ಪ್ರಸಿದ್ಧವಾದದ್ದು. ಇದನ್ನು ದಾಟಿ ಬರುವಾಗ ಡರ್‌ಹೆಮ್, ಯೊರ್ಕ್‌ಶೈರ್ ಮೊದಲಾದ ಅನೇಕ ಜಿಲ್ಲೆಗಳು (Counties) ಸಿಕ್ಕುವವು. ಈ ಯೋರ್ಕ್‌ಶೇರ್‌ನಲ್ಲಿ ದೂರ ದೂರ ಪರ್ವತಗಳಿದ್ದು ನಾವು ದಾಟಬರುವ ಭೂಮಿಯಲ್ಲಿ ಅನೇಕ ಮರಗಳು ಬೆಳೆದಿವೆ, ಅಲ್ಲಲ್ಲಿ ಕಬ್ಬಿಣದ ಟ್ರೆಕ್ಟರ್‌ಗಳ ಮೂಲಕ ಭೂಮಿ ಉಳುವುದನ್ನೂ ಕಾಣಬಹುದು. ಹೀಗೆಯೇ ಮುಂದರಿದಾಗ 5ಗಂಟೆಯ ಹೊತ್ತಿಗೆ ಸೇಂಡಿ (Sandy) ಸ್ಟೇಶನ್ ಎಂಬ ಒಂದು ರೈಲ್ವೆನಿಲ್ದಾಣವನ್ನು ದಾಟುತ್ತೇವೆ, ಅಲ್ಲಿ ಸಮೀಪದಲ್ಲೇ ಹಳದಿ ಬಣ್ಣದ ಹೊಯ್ಗೆಯ ಒಂದು ಗುಡ್ಡ ಇದೆ. ಸಂಜೆ ಗಂಟೆ 5-55ಕ್ಕೆ ನಾವು ಲಂಡನ್ ಪಟ್ಟಣವನ್ನು ಸೇರಿದೆವು ನಮ್ಮ ರೈಲು 10ಮಿನಿಟ ಆ ದಿನ ತಡವಾಗಿ ಬಂತು, ಎಡಿನ್ ಬರೋದಿಂದ ಹೊರಟ ಮೇಲೆ ಲಂಡನ್ ಸೇರುವ ಮೊದಲು ಈ ನಾನ್ನೂರು ಮೈಲುಗಳ ದೂರದಲ್ಲಿ ನಾವು ಬಂದ ರೈಲು ನ್ಯೂಕಾಸಲ್ ಮತ್ತು ಗ್ರೇಂಥಮ್ (Grantham) ಎಂಬ ಎರಡು ಕಡೆಗಳಲ್ಲಿ ಮಾತ್ರ ನಿಂತಿತ್ತು.

ಹೀಗೆ ಮೇ ತಾ. 10ಕ್ಕೆ ಲಂಡನಿನಿಂದ ಹೊರಟು ಒಕ್ಸ್‌ಫೋರ್ಡ್, ಬರ್ಮಿಂಗ್‌ಹೇಮ್, ಲಿವರ್‌ಪೂಲ್, ಡಬ್ಲಿನ್, ಮೆಂಚೆಸ್ಟರ್, ಎಡಿನ್‌ಬರೋ, ಗ್ಲಾಸ್‌ಗೋ ಪಟ್ಟಣಗಳನ್ನು ಹದಿಮೂರು ದಿವಸಗಳ ಪ್ರಯಾಣದಲ್ಲಿ ನೋಡಿ 22ನೇ ಸಾಯಂಕಾಲ ಹಿಂತಿರುಗಿ ಒಂದು ಲಂಡನ್ ಪಟ್ಟಣವನ್ನು ಸೇರಿದೆನು.

ಕೆ. ಆರ್. ಕಾರಂತ
(ವಿಟಾಗವಾಸ)

THE PANGAL NAYAK BANK LIMITED.

Head Office] (Incorporated in 1920.) [Udipi; S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಕಟ್ಟಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾಧಾರಣ ಕುಂದಿಗೆ ಮಾತ್ರ ಗುಣವಾಗದೇ ಇದ್ದಲ್ಲಿ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹಸ್ತದಾಖಲೆ ಪ್ರತ್ಯೇಕ.]

MRS D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು ಕಜಾಕಂಪೆನಿ, ಮಂಗಳೂರು



Approved from by the Govt. of Mysor Certificated by the Agent of the Govt of Cylone, & Indian

ಲಕ್ಷ್ಮಿ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

[೨ನೇ ಪುಟದಿಂದ ಮುಂದುವರಿದುದು]

ಸ್ಥೆ ಇಲ್ಲದಿರುತ್ತಿದ್ದರೆ ಕುರಿಮಂದೆಯನ್ನು ಸಾಕುವುದೇ ದುಸ್ತರ. ಒಂದು ಸಲ ಈ ಬಗೆಯ ಸ್ನಾನ ನಡೆದರೆ ಮುಂದೆ ಕೆಲಸಮಯ ಉಂಟಾಗಬಹುದಾದ ಉಣ್ಣಿ ಕಾಟದಿಂದ ಭಯವಿಲ್ಲ.

ನ್ಯೂ ಸೌತವೇಲ್ಸಿನ ಕುರಿಮಂದೆಗಳಿಗೆ ಫೆಬ್ರವರಿ ಅಥವಾ ಮಾರ್ಚಿಯ ಆರಂಭದಲ್ಲಿ ತಾಯಿಯ ಮೊಲೆ ಹಾಲನ್ನು ಬಿಡಿಸುತ್ತಾರೆ. ಅದೇ ಸಮಯ ಹೊಟ್ಟೆ ಹುಳದ ಪ್ರಕೋಪ ಉದ್ಭವಿಸದಂತೆ ಅವುಗಳಿಗೆ ಮದ್ದು ಕುಡಿಸುತ್ತಾರೆ. ಕುರಿಮರಿಗಳ ಗಂಟಲಿನಿಂದ ಔಷಧಿಯನ್ನು ಹೊಟ್ಟೆಗೆ ಇಳಿಸಲು ಒಂದು ವಿಶೇಷ ಮಾದರಿಯ ಪಂಪು ಬಳಕೆಯಲ್ಲಿದೆ. ಏಪ್ರಿಲಿನ ಕೊನೆಯ ದಿನಗಳಲ್ಲಿ ಹೆಣ್ಣು-ಗಂಡು ಕುರಿಗಳ ರತಿ ನಡೆಯುತ್ತದೆ. ಎಪ್ಪತ್ತು ಹೆಣ್ಣು ಕುರಿಗಳಿಗೆ ಒಂದು ಟಗರು (ಗಂಡು ಕುರಿ)ಯಂತೆ ಇವುಗಳ ಪ್ರಮಾಣವಿದೆ. ಆಗಸ್ಟು ತಿಂಗಳ ಸುಮಾರಿಗೆ ಕುರಿಮರಿಗಳ ಜನನವಾಗುತ್ತದೆ.

ಸಣ್ಣ ಉಣ್ಣೆ ಕೇಂದ್ರದಲ್ಲಿ ಈ ಕುರಿಮರಿಗಳ ಜನನ ಆರುವಾರಗಳಷ್ಟು ಕಾಲ ಜರಗುತ್ತಾ ಇರುತ್ತದೆ. ಅಲ್ಲಿಯ ಜನರಿಗೆ ಇದು ಹುರುಸೊತ್ತು ಕಡಿಮೆ ಇರುವ, ಕೆಲಸದ ತರಾತುರಿಯ ಸಮಯ. ಅವರು ದಿನವಿಡೀ ಮುಳ್ಳು ಬೇಲಿಯಿಂದಾವೃತವಾದ ಮೈದಾನಿನ ಸುತ್ತಲೂ ಬಿಟ್ಟೂ ಬಿಡದೆ ಸವಾರಿ ಮಾಡುತ್ತಾ, ಕುರಿಗಳ ಮೇಲೆ ಕಣ್ಣಿಟ್ಟಿರುತ್ತಾರೆ. ಕೆಲವು ಹೆಣ್ಣು ಕುರಿಗಳು ತಲೆ ಕೆಳಗೆ ಹಾಕಿಕೊಂಡು ಬಿದ್ದಿರುತ್ತವೆ. ಅವುಗಳನ್ನು ಚೇತನಾವಸ್ಥೆಗೆ ತರಲು ಸ್ವಲ್ಪ ಪ್ರಯತ್ನ ಪಡಬೇಕಾಗುತ್ತದೆ. ಕಾಗೆಗಳು ಹೊಸತಾಗಿ ಜನಿಸಿದ ಕುರಿಮರಿಗಳಿಗೆ ಒಂದು ದೊಡ್ಡ ಉಪದ್ರ. ಕಾಗೆಯ ಕೊಕ್ಕಿನ ಕುಟುಕು ತೀರ ಅಪಾಯಕಾರಿ. ಒಂದು ಗೀರು ಎಳೆದರೂ ಸಾಕು, ಕುರಿಮರಿಯು ನೆತ್ತರು ವಿಷಪೂರ್ಣವಾಗುವುದು ಸಾಮಾನ್ಯವಾಗಿ ಅವು ಕುರಿಮರಿಗಳ ಕಣ್ಣನ್ನು ಕಿತ್ತು ಕಬಳಿಸಿ ಬಿಡುತ್ತವೆ.

ಇವಲ್ಲದೆ ಇನ್ನು ಬೇರೆ ಕಂಟಕಗಳೂ ಈ ಕುರಿಮರಿಗಳಿಗೆ ಕಾದಿವೆ. ಕೇಂದ್ರದ ಜನರು ಇವನ್ನು ದೂರೀಕರಿಸಲು ಸತತ ಪ್ರಯತ್ನ ಮಾಡಬೇಕು. ನರಿಗಳು, ಗಿಡುಗ ಅಥವಾ ಹದ್ದುಗಳು ಸಂದರ್ಭಕಾಯುತ್ತಾ ಇರುತ್ತವೆ. ಮಳೆ-ಚಳಿ ಇಲ್ಲದ ಸುಂದರ ದಿವಸಗಳಲ್ಲಿ ಈ ಕಾವಲು ಕೆಲಸ ಬೇಸರ ತರಲಿಕ್ಕಿಲ್ಲ. ಆದರೆ ಉಳಿದ ದಿನಗಳಲ್ಲಿ ಇದು ಎಳ್ಳಷ್ಟೂ ಸಂತೋಷ ಕೊಡುವುದಿಲ್ಲ. ಕೇಂದ್ರ ದೊಡ್ಡದಾದರೆ ಪ್ರತಿಯೊಬ್ಬನಿಗೂ ನಾಲ್ಕಾರು ಮೈದಾನುಗಳ ಕಾವಲಿನ ಕೆಲಸ ವಹಿಸಿಕೊಡುತ್ತಾರೆ.

ನಿಪುಣ ಕೆಲಸಗಾರನಾದರೆ ದಿನಕ್ಕೆ ೧೫೦ ನಯ ಉಣ್ಣೆಯ ಕುರಿಗಳ ಮೈರೋಮ ಕತ್ತರಿಸಿಯಾನು. ಆದರೆ ಬೀಜ ಕಳೆದ ಸಣ್ಣದ ಮೈಯ ಟಗರುಗಳ ಸಂಖ್ಯೆ ಇಷ್ಟು ಮೇಲೆ ಬರಲಾರದು. ಅಷ್ಟೇಲಿಯಾದ ಜನ ತುಂಬ ಕೈಚಳಕವುಳ್ಳವರು. ಇವರು ವಾರದಲ್ಲಿ ಐದು ದಿನ ಒಟ್ಟಿಗೆ ೪೦ ತಾಸು ಕೆಲಸಮಾಡುತ್ತಾರೆ.

ಎಲ್ಲ ದೊಡ್ಡಿಗಳಲ್ಲೂ ಉಣ್ಣೆ ಕತ್ತರಿಸುವ ರೀತಿ ಕ್ರಮ ಒಂದೇ. ಕುರಿಗಳನ್ನೆಲ್ಲ ಒಂದಾಗಿ ಕೂಡಿಸಿ ಉಣ್ಣೆ ಕತ್ತರಿಸುವ ಸಮೀಪದ ಹುಲ್ಲು ಗಾವಲಿಗೆ ತರುತ್ತಾರೆ ಮಳೆ ಬರುವ ಹೆದರಿಕೆ ಇದ್ದರೆ ಅವುಗಳಿಗೆ ಕಬ್ಬಿಣದ ತಗಡು ಮಾಡಿನ ರಕ್ಷಣೆ ಕೊಡುತ್ತಾರೆ. ಏಕೆಂದರೆ, ಒದ್ದೆ ಮೈಯ ಕುರಿಗಳ ಉಣ್ಣೆ ಕತ್ತರಿಸಲು ಬರುವುದಿಲ್ಲ ಕುರಿಮರಿಗಳನ್ನೂ ಬೇರೆ, ಹೆಣ್ಣು ಕುರಿಗಳನ್ನೂ ಬೇರೆ, ಬೀಜದ ಟಗರುಗಳನ್ನೂ ಬೇರೆ, ಬೀಜ ಕಳೆದವುಗಳನ್ನೂ ಬೇರೆ— ಹೀಗೆ ವಿಂಗಡಿಸುತ್ತಾರೆ. ತಂತಮ್ಮ ಅಂಗಣದಿಂದ ಕುರಿಗಳನ್ನು ಉಣ್ಣೆ ಕತ್ತರಿಸುವ ಯಂತ್ರದ ಕೋಣೆಗೆ ಓಡಿಸುತ್ತಾರೆ. ಈ ಯಂತ್ರವು ವಿದ್ಯುಚ್ಛಕ್ತಿಯ ಬಲದಿಂದ ನಡೆಯುತಿದ್ದು ಅಮೂಲ್ಯವಾದ ಉಣ್ಣೆಯನ್ನು ಚಲೋದಾಗಿ ಕತ್ತರಿಸಿ ತೆಗೆಯುತ್ತದೆ.

ಕತ್ತರಿಸಿ ಮುಗಿದಾದ ಬಳಿಕ ಉಣ್ಣೆಯನ್ನು ಒಟ್ಟುಮಾಡಿ, ಉಣ್ಣೆಯ ಕೋಣೆಗೆ ಒಯ್ಯುತ್ತಾರೆ. ಇಲ್ಲಿ ಅದನ್ನೊಂದು ಉರುಳು ಮೇಜಿಗೆ ಕೊಟ್ಟು ಉಣ್ಣೆಯಲ್ಲಿ ಕಲೆ ಅಥವಾ ಬಿರುಸಾದ ಕೊನೆ ಏನಾದರೂ ಇದ್ದರೆ ತೆಗೆಯುತ್ತಾರೆ. ಇವನ್ನು ತುಂಡು ಆರಿಸುವ ಮೇಜಿಗೆ ರವಾನಿಸುವರು. ನಾಲ್ಕು ಎಳೆಯನ್ನೂ ಉಣ್ಣೆ ಆರಿಸುವ ಮೇಜಿನ ಮೂಲಕ ಯೋಗ್ಯತಾನುಗುಣವಾಗಿ ಸಂಗ್ರಹಿಸುತ್ತಾರೆ. ಉಣ್ಣೆಯ ಉದ್ದ, ನಯ ಹಾಗೂ ಬಾಳಿಕೆಯನ್ನು ಅನುಸರಿಸಿ ಅದರ ಗುಣ ನಿರ್ಣಯ ಮಾಡುವರು.

ವಿಕ್ರಯ ಕೇಂದ್ರಗಳ ಉಣ್ಣೆ ದೊಡ್ಡಿಗಳಿಗೆ ವರ್ಷಂಪ್ರತಿ 3,000,000 ದಿಂದ 4,000,000 ಚೀಲು ಉಣ್ಣೆ ಹೋಗುತ್ತದೆ. ಮುಖ್ಯವಾದ ವಿಕ್ರಯ ಕೇಂದ್ರಗಳು ಸಿಡ್ನಿ, ಮೆಲ್ಬೋರ್ನ್ ನ್ಯೂಕಾಸಲ್, ಗೀಲಾಂಗ, ಗ್ರಾಫ್ಟನ್ ಜನರ್, ಬ್ರಿಸ್ಬೇನ್ ಹಾಗೂ ಎಡಿಲೈಡುಗಳಾಗಿವೆ. ಲಾನ್‌ಸೆಸ್ಟನ್, ಹೋಬಾರ್ಟ್, ಅಲ್ಬರಿ, ಬಲಾರಟ, ಕೂಬಾಟರ ಇವು ಸಣ್ಣ ಕೇಂದ್ರಗಳು. ಸಪ್ಟೆಂಬರ-ಮಾರ್ಚ ಈ ಕಾಲವು ಉಣ್ಣೆ ವಿಕ್ರಯಕ್ಕೆ ಸುಪ್ರಸಿದ್ಧವಾಗಿದೆ.

ಉಣ್ಣೆಗೆ ದೊರಕಿದ ಹಣದಿಂದ ಕುರಿಗಳ ಒಡೆಯನು ಎಲ್ಲ ಖರ್ಚನ್ನು ತೆರಬೇಕು-ಕುರಿಯ ಬೆನ್ನಿನ ಉಣ್ಣೆ ವಿಕ್ರಯ ಕೇಂದ್ರಕ್ಕೆ ತಲುಪುವ ತನಕದ ಸಾಗಣೆ ವೆಚ್ಚ, ಕೂಡಿಡುವಾಗಿನ ಇನ್ಶೂರು ಹಣ, ಕೇಂದ್ರ ಸರಕಾರದ ಉಣ್ಣೆ ತೆರಿಗೆ, ಮಾರುವ ಏಜಂಟನಿಗೆ ಧಳ್ಳಳಿ, ಉಣ್ಣೆ ತೆಗೆದುಕೊಳ್ಳುವ, ತೂಗುವ, ಜಾತಿವಾರು ಪ್ರಕಾರ ಒಟ್ಟುಗಿಡುವ ಇತರ ಕೆಲಸದ ವೆಚ್ಚ ಮುಂತಾದ ಎಲ್ಲವನ್ನೂ ಕಳೆದು ಉಳಿದುದು ಅವನದು. ಉಣ್ಣೆ ಮಾರುವ ವರೆಗೂ ಅದರ ಒಡೆತನವನ್ನು ಮಾಲಿಕನೇ ಇಟ್ಟುಕೊಳ್ಳುತ್ತಾನೆ ಮಾರುವ ಏಜಂಟರು ಅವನ ಅನುಕೂಲಕ್ಕಾಗಿ ಕೆಲಸ ಮಾಡುವ ಕರ್ಮಚಾರಿಗಳು ಮಾತ್ರ.

ಉಣ್ಣೆಯ ಯೋಗ್ಯತೆ ಅದರ ಜಾತಿ, ದಪ್ಪ, ಗ್ರೀಸ ಮುಂತಾದ ಕಳೆಗಳನ್ನು ತಗಿದುಳಿವ ಪ್ರಮಾಣ ಇವನ್ನು ಹೊಂದಿಕೊಂಡಿದೆ. ಮಾರುವಾಗ ಉಣ್ಣೆಯ ತುಂಬ ದೊರಗಾಗಿ, ದಪ್ಪವಾಗಿ, ಗ್ರೀಸು ಮುಂತಾದ ಕಶ್ಮಲದಿಂದ ಕೂಡಿರುತ್ತದೆ. ಉಣ್ಣೆಯಿಂದ ಸಿದ್ಧವಸ್ತುಗಳನ್ನು ತಯಾರಿಸುವ ದೇಶಗಳಲ್ಲಿ ಈ ಯೋಗ್ಯತೆಗಳನ್ನು ಅಳೆಯಲಾಗುವುದಾದರೂ ಈಗೀಗ ಆಸ್ಟ್ರೇಲಿಯದಲ್ಲೇ ಈ ಕಾರ್ಯ ನಿರ್ವಹಿಸಬಲ್ಲ ಸಂಸ್ಥೆಗಳೂ ಹುಟ್ಟಿಕೊಂಡಿವೆ.

ಕುರಿ ಕೇಂದ್ರದ ಪ್ರಮುಖ ವ್ಯಕ್ತಿ ಎಂದರೆ ಅಲ್ಲಿಯ ವ್ಯವಸ್ಥಾಪಕ. ಅವನೇ ಅದರ ಒಡೆಯನಿರುವುದೂ ಉಂಟು. ಅವನ ಬಳಿಕ ಬರುವವನು ಮೇಲು ತನಿಖೆ ನಡೆಸುವ ಮೇಟಾಳು. ಭವಿಷ್ಯದಲ್ಲಿ ಒಂದಲ್ಲ ಒಂದು ದಿನ ತಾನೊಬ್ಬ ವ್ಯವಸ್ಥಾಪಕನಾಗುವೆನೆಂದು ಅವನಿಗೆ ಅಚಲ ನಂಬಿಗೆ ಇದೆ. ಇದರ ಹೊರತು ಕುರಿ ಸಾಕಣೆಯ ವಿಷಯದಲ್ಲಿ ಮಾಹಿತಿ ಪಡೆಯಲು ಉತ್ಸಾಹಗೊಂಡು ಬಂದ ಹಲವಾರು ಜನ ಇರುತ್ತಾರೆ. ಕುರಿ ಮಂದೆಯ ಎಲ್ಲ ಕೆಲಸ ಬೊಗಸೆಗಳೂ ಇತರ ಪಾಲಿಗೆ ಬರುತ್ತವೆ. ಈ ಕೆಲಸದ ಹೊರೆಯಲ್ಲಿ ತಲೆ ಬೇಸರ ಹಿಡಿಯುವಂಥವುಗಳೂ ಅವರ ಬೆನ್ನು ಬಿಡುವುದಿಲ್ಲ

ಇಷ್ಟು ಹೇಳಿದ ಮೇಲೆ, ಪ್ರಾಮಾಣಿಕವಾದ ಇನ್ನೊಂದು ಕೆಲಸಗಾರ ದಳವನ್ನು ಹೆಸರಿಸದಿರುವುದು ಉಚಿತವಲ್ಲ-ಇದು ನಾಯಿಗಳ ತಂಡ. ಪ್ರಮುಖವಾಗಿ ಕೆಲ್ಪೀಗೋತ್ರಕ್ಕೆ ಸೇರಿದ ಈ ಚುನಿತ ಮಹಾ ಮುನಿಗಳ ನೆರವು-ಆಶ್ರಯ ಇಲ್ಲದಿರುತ್ತಿದ್ದರೆ ಆಸ್ಟ್ರೇಲಿಯಾದ ಉಣ್ಣೆ ಉದ್ದಿಮೆ ಆಕಾಶ ಗೋಪುರವಾಗುತ್ತಿತ್ತು! ಮನುಷ್ಯನಿಂದ ಪಾರ್ತಲಾಗದ ಮಾತು ಸಾಹಸ ಕಾರ್ಯಗಳು ಈ ನಂಬಿಗೆಯ ನಾಯಿಗಳಿಂದ ನೆರವೇರುತ್ತವೆ.

—ಶಾಂತಿ ಕೇಯ

[ಜಾನ್ ಹಾಮಂಡರ ಲೇಖನದಿಂದ]

ಸಾದರ-ಸ್ವೀಕಾರ

ಪಕ್ಷಿಯ ನೋಟ

೧ **ಕನ್ನಡಿಗ**—(ನಿಜಾಂ ಕಾಲೇಜು ಕನ್ನಡ ಸಂಘದ ವಾರ್ಷಿಕ ಪತ್ರಿಕೆ) ಸಂಪಾದಕ: ಕುಮಾರ ಆರ್. ಇಂದಿರಾ. ಸಹ ಸಂಪಾದಿಕೆ: ಕುಮಾರಿ ಕೌಶಲ್ಯಾ ಜೋಷಿ ನಿಜಾಂ ಕಾಲೇಜ್ ಕನ್ನಡ ಸಂಘ, ಹೈದರಾಬಾದು—ದ.

ಹೈದರಾಬಾದ ನಿಜಾಂ ಕಾಲೇಜ ಕನ್ನಡ ಸಂಘದ ವಾರ್ಷಿಕ ಸಂಚಿಕೆಯಿದು. ಧೀಮಾಬಾಳ, ಜಾನಪ್ಪ, ಮಧುರ, ವಿಲಾಸ, ಕನ್ನಡಿಗ, ಈ ನಾಲ್ಕು ಬರಹಗಳು ಉತ್ತಮವಾಗಿವೆ. ಕನ್ನಡಿಗನಲ್ಲಿ ವಿಚಾರಾತ್ಮಕ ಬರಹಗಳಿಗೆ ಸಾಕಷ್ಟು ಎಡೆಕೊಟ್ಟಂತಿಲ್ಲ! ಈ ಕೊರತೆ ಮುಂದಕ್ಕೆ ದೂರವಾಗಲೆಂದು ಹಾರೈಸಿ ಕನ್ನಡಿಗರಿಗೆ ಶುಭವನ್ನು ಕೋರುತ್ತೇವೆ.

೨ **Dancess & The Kindred Arts**—ಸಂಪಾದಕರು: ಜಾಕರ್ಬ್ಸ್ 'The Palace' Country Hotel Compound, Near Juhu church, Juhu beach Bombay 23. ಬೆಲೆ ರೂ. 0-12-0

ಭರತನಾಟ್ಯ, ಕಥಕ್ಕಳಿ, ಫೋಲ್ಕ್ ಡೇನ್ಸ್, ಬಾಲ್‌ರೂಮ್ ಡೇನ್ಸ್ ಮುಂತಾದ ನೃತ್ಯಕಲೆಯ ಕುರಿತು ಇಂಗ್ಲಿಷಿನಲ್ಲಿ ವಿಸ್ತೃತಪೂರ್ಣ ಬರಹಗಳು ಇರುತ್ತವೆ. ಲೇಖನಕ್ಕೆ ಹೊಂದಿಕೆಯಾದ ಚಿತ್ರಗಳೂ ಇದ್ದು ಸಂಚಿಕೆಯು ಅತ್ಯಮೂಲ್ಯವೂ ಸಂಗ್ರಾಹ್ಯವೂ ಆಗಿದ್ದು ಕಲಾಭಿಮಾನಿಗಳ ವಿಶೇಷಾದರಕ್ಕೆ ಪಾತ್ರವಾದೀತೆಂದು ನಂಬುತ್ತೇವೆ.

೩ **ದೇವಾಡಿಗ ಸುಧಾರಕ ಸಂಘದ 26ನೇ ವಾರ್ಷಿಕ ವರದಿ 1950** ದೇವಾಡಿಗರ ಸುಧಾರಕ ಸಂಘ, 108 ಬೋರಾ ಬಜಾರ್ ರಸ್ತೆ, 5ನೇ ಮಾಳಿಗೆ, ಕೋಟೆ, ಮುಂಬಯಿ.

ದೇವಾಡಿಗರ ಸಮಾಜದ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸುವ ಮಹತ್ವದ ಉದ್ದೇಶವನ್ನಿಟ್ಟುಕೊಂಡ ಪ್ರಗತಿಶೀಲ 26ನೇ ವರ್ಷದ ವರದಿಯನ್ನು ಆಸ್ಥಾದರದಿಂದ ಸ್ವೀಕರಿಸಿದ್ದೇವೆ.

೪ **ಬಂಟರ ಯಾನೆ ನಾಡವರ ಸಂಘದ 23ನೇ ವರ್ಷದ ವಾರ್ಷಿಕ ವರದಿ**—ಬಂಟರ ಯಾನೆ ನಾಡವರ ಸಂಘ, 17 ಕುಮ್ಟಾಸ್ಟ್ರೀಟ್, ಮುಂಬಯಿ ೧.

ಈ ಸಂಘವು ತ್ರಿಭು ಕೆಲಸಗಾರರಿಗೆ ಫ್ರೀ ನೈಟ್ ಸ್ಕೂಲನ್ನು ತೆರೆದು ವಿದ್ಯಾದಾನ ಮಾಡುವದು ಮಾತ್ರವಲ್ಲದೆ ಇನ್ನಿತರ ಜ್ಞಾನವಿಕಾಸಕಾರ್ಯವನ್ನು ನಡೆಸುತ್ತಿರುವದು ಅಭಿನಂದನೀಯ ಸಂಗತಿ. ಸಂಘದ ವತಿಯಿಂದ ನಡೆಯುತ್ತಿರುವ ಈ ಶಾಲೆಯಲ್ಲಿ 550ಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ ಮಾತ್ರವಲ್ಲದೆ ಕನ್ನಡನಾಡಿನ ಸಕಲಜಾತಿಗಳವರಿಗೂ ಈ ಸೌಕರ್ಯವನ್ನೊದಗಿಸಿ ಕೊಡುವ ಸಂಘದ ವಿಶಾಲದೃಷ್ಟಿಯನ್ನು ನಾವು ಶ್ಲಾಘಿಸದಿರಲಾರೆವು.

ಉಡುಪಿಗೆ ಹೋಗಬೇಕೆ? ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S K.

ತಾರೀಕು 2-8-51 ರಿಂದ ವಾರದ ಭವಿಷ್ಯ ತಾರೀಕು 8-8-51ರ ವರೆಗೆ

ಮೇಷ—ಸಾಹಸ ಪರಾಕ್ರಮ ಸಾಧ್ಯಗಳಿಂದ ಮಹತ್ಕಾರ್ಯಗಳನ್ನು ಕೂಡಾ ನೀವು ಅನಾಯಾಸದಿಂದ ಸಾಧಿಸಲಿರುವಿರಿ. ನಿಮ್ಮ ಬಯಕೆಯಂತೆ ಫಲವು ಲಭಿಸಲಿದೆ. ನಿಮ್ಮ ಕರ್ಮಕುಶಲತೆಯನ್ನು ಕಂಡ ಶತ್ರುಪಕ್ಷದವರು ಅಲ್ಲಲ್ಲೆ ಮಾಯವಾಗುವರು. ಸಂಪದ್ಭಾಗವು ಉತ್ತಮವಾಗುವದು. ಕೋರ್ಟು ಕಚೇರಿಗಳಲ್ಲಿನ ಕಾರ್ಯಗಳು ನಿಮ್ಮಂತೆ ಕೊನೆಗೊಳ್ಳುವುವು. ಆದರೆ ಸಂಸಾರಿಕ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು. ವಾರಾಂತ್ಯದ 5 ದಿನಗಳೂ ಅನುಕೂಲವಿರುವವು.

ವೃಷಭ—ದೈವಬಲವು ಉತ್ತಮವಿರುವದರಿಂದ ಅನಾಯಾಸದಿಂದ ಕಾರ್ಯಸಾಧನೆಯಾಗುವದು. ಯಾವೊಂದೂ ತರದ ಚಿಂತೆಗವಕಾಶವಿಲ್ಲವು. ನಿಮ್ಮ ಆರ್ಥಿಕ ಸಂಪತ್ತು ಅತ್ಯುತ್ತಮ ಮಟ್ಟಕ್ಕೇರಲಿದೆ. ನಿರುದ್ಯೋಗಿಗಳೂ ಕೂಡ ಸಮುದ್ಯಮ ಪ್ರವೃತ್ತರಾಗಿ ನಿಶ್ಚಿಂತೆಯಿಂದ ಕಾಲಯಾಪನೆ ಮಾಡುವರು. ರಾಜಕೀಯ ಅಧಿಕಾರಿಗಳಿಂದ ಕೆಲವೊಮ್ಮೆ ಪೀಡೆಯುಂಟಾದೀತು. ಪುತ್ರಭೃತ್ಯಾದಿಗಳು ಮನಬಂದಂತೆ ವರ್ತಿಸಬಹುದು. ಆದರೂ ವಾರಾಂತ್ಯದ 3 ದಿನಗಳಲ್ಲಿ ಸುಖಸಂತಸಗಳನ್ನು ಪಡೆವಿರಿ.

ಮಿಥುನ—ನಿಮ್ಮ ಕಾರ್ಯಗಳು ಯಶಸ್ವಿಯಾದರೂ ಕರ್ಮಕ್ಕೆ ತಕ್ಕ ಫಲ ಲಭಿಸದು. ಶತ್ರುಜನರ ಪೀಡೆಯಿಂದಾಗಿ ಸದಾ ಚಿಂತಾಕುಲಿತರಾಗುವಿರಿ. ಆತ್ಮೀಯರ ವಂಚನೆ ಗೃಹಕೃತ್ಯದ ಅವ್ಯವಸ್ಥೆ ಅಧಿಕಾರವರ್ಗದವರ ಪೀಡೆ ಇತ್ಯಾದಿಗಳಿಂದ ಕಲುಷಿತವಾದ ನಿಮ್ಮ ಮನಸ್ಸಿಗೆ ನೆಮ್ಮದಿಯು ದುರ್ಲಭವಾದೀತು. ಆಕಸ್ಮಿಕ ಅಪಘಾತಗಳು ಪ್ರಾಪ್ತವಾಗಬಹುದು. ಮಿತ್ರಜನರಲ್ಲಿ ವೈಮನಸ್ಯವುಂಟಾದೀತು. ಸ್ತ್ರೀಪುತ್ರರ ವಿರಹ ತಾಪತ್ರಯಕ್ಕವಕಾಶವಿದೆ. ತಾ. 4. 5. ಹೆಚ್ಚಿನ ಅನಿಷ್ಟಕಾರಿಯಾಗದು.

ಕರ್ಕಟ—ಶುಭದಿನಗಳು ಸನ್ನಿಹಿತಗಳಾಗಿವೆ. ಆಳಾಗಿ ದುಡಿದರೆ ಅರಸನಾಗಿ ಉಣಬಹುದೆಂಬ ಲೋಕೋಕ್ತಿಯಂತೆ ದೈವವು ಅನುಕೂಲವಾಗಿರುವ ಈ ಕಾಲದಲ್ಲಿ ನಿರಲಸಿಗಳಾಗಿ ದುಡಿದರೆ ಮಹತ್ತಾದ ಫಲವು ತಾನಾಗಿ ಲಭಿಸುವದು. ಕೆಲವೊಮ್ಮೆ ಪಿತ್ತೋದ್ರೇಕದಿಂದಾಗಿ ನಿದ್ರಾಭಾವ, ದುಃಸ್ವಪ್ನ ಮೊದಲಾದುವುಗಳು ಕಾಣಿಸಬಹುದು. ನೇತ್ರಪೀಡೆಗೂ ಅವಕಾಶವಿದೆ. ತಾ. 2. 3. 6. 7. 8 ಅತ್ಯುತ್ತಮವಿವೆ.

ಸಿಂಹ—ಬೃಹಸ್ಪತಿಯು ಅಷ್ಟಮಗತನಾದ ಪ್ರಯುಕ್ತ ಸದಾ ನಿಮ್ಮನ್ನು ಶೋಕಾಕುಲಿತರನ್ನಾಗಿ ಮಾಡುವನು. ಮಾತ್ರವಲ್ಲ ಪ್ರವಾಸದಲ್ಲಿ ಕಷ್ಟನಷ್ಟಗಳೂ ವಿಶೇಷವಾದ ದೇಹಾಲಸ್ಯವು ಉಂಟಾಗಲಿದೆ. ಆದರೆ ಸುಭಾಗ್ಯಪತಿಯಾದ ಅಂಗಾರಕನ ಅನುಗ್ರಹವು ಉತ್ತಮವಾಗಿರುವದರಿಂದ ಜನರಿಂದ ಮಾನಮನ್ನಣೆಯೂ ನಾನಾವಿಧದಿಂದ ಧನಲಾಭವೂ ಸುಖವಿಜಯಾದಿಗಳೂ ಲಭಿಸುವವು. ಮಿತ್ರಜನರ ಬೆಂಬಲದಿಂದಾಗಿ ದಿನಯಾಪನೆಯು ಸುಗಮವಾದೀತು. ತಾ. 4. 5ರಲ್ಲಿ ಶುಭಲಾಭಗಳು ಲಭಿಸುವವು.

ಕನ್ಯಾ—ನಿಮ್ಮ ಅದೃಷ್ಟವು ತಕ್ಕ ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿದೆ. ವ್ಯಾಪಾರವ್ಯವಹಾರ ಉದ್ಯೋಗಗಳಲ್ಲಿ ಫಲಾಪ್ತಿಯು ಚೆನ್ನಾಗಿರುವದು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಸ್ಥಾನಮಾನಾದಿಗಳನ್ನು ಪಡೆವಿರಿ. ಖರ್ಚು ಬಹುಮುಖವಾಗಿದ್ದರೂ ಅದಕ್ಕೆ ತಕ್ಕ ಆಯವು ಇರುವದು. ಕೆಲವೊಮ್ಮೆ ಸ್ವಜನರಿಂದ ದೂರವಾಗುವ ಪ್ರಸಂಗವು ಬರಬಹುದು. ತಾ. 4 5. ಹೊರತು ಇತರದಿನಗಳು ಅನುಕೂಲಗಳಾಗಿವೆ.

ತುಲಾ—ವಿರೋಧಿಜನರ ಪೀಡೆಯು ಸದಾ ಹೆಚ್ಚುತ್ತಲಿರುವದು. ಮನೋರೋಗವು ಕೂಡ ದಿನದಿಂದ ದಿನಕ್ಕೆ ಅಧಿಕವಾದೀತು. ದೇಹದಲ್ಲಿ ನಿಶ್ಶಕ್ತಿ ಕ್ಷೀಣತೆಗಳುಂಟಾಗುವವು. ಹಲವಾರು ತೆರನಾದ ಖರ್ಚುಗಳು ಪ್ರಾಪ್ತವಾಗುವವಾದರೂ ನಿಮ್ಮ ಉದ್ಯೋಗದಲ್ಲಿ ಸಾಕಷ್ಟು ಫಲಾಪ್ತಿಯು ದೊರೆಯುವುದರಿಂದ ಕಾಲಯಾಪನೆಯು ಕಠಿಣವಾಗಲಾರದು. ಬಂಧುಮಿತ್ರರ ಸಹಕಾರದಿಂದಾಗಿ ಹಿಡಿದ ಕಾರ್ಯವನ್ನು ಕೊನೆಗೊಳಿಸುವಿರಿ. ವಾರಾಂತ್ಯದ 3 ದಿನಗಳು ಒಳ್ಳೆಯವಲ್ಲ.

ವೃಶ್ಚಿಕ—ವಿದ್ಯೋಪಜೀವಿಗಳಿಗೂ ಕಾಯಕಷ್ಟ ಜೀವಿಗಳಿಗೂ ಕಾಲವು ಅನುಕೂಲವಾಗಿರುವದು. ವೈದ್ಯರು ವ್ಯಾಪಾರಿಗಳು ಇವರಿಗೆ ಅನಿರೀಕ್ಷಿತ ನಷ್ಟವು ಪ್ರಾಪ್ತವಾದೀತು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವಿರಿ. ಸ್ತ್ರೀಧನಾಪ್ತಿಯ ಯೋಗವಿದೆ. ಮಾತನಾಡಿದವರೊಡನೆ ಜಗಳ ಶತ್ರುಗಳಿಂದ ವಿಶೇಷಹಾನಿ ದೇಹದಲ್ಲಿ ಶಸ್ತ್ರಗಾಯ ಮುಂತಾದ ರೋಗಗಳೂ ಕಾಣಿಸುವವು. ವಾರಾಂತ್ಯದ 5 ದಿನಗಳು ಹೆಚ್ಚು ಅನಿಷ್ಟಕಾರಿಗಳಲ್ಲ.

ಧನು—ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹಗಳೂ ಪ್ರತಿಕೂಲರಾಗಿರುವದರಿಂದ ಈ ವಾರವು ನಿಮಗೆ ಅತೀವ ದುಃಖದಾಯಕವಾಗಿ ಪರಿಣಮಿಸೀತು. ಹಣದ ಅಡಚಣೆಯಿಂದಾಗಿ ಖರ್ಚಿನಬಗ್ಗೆ ಹೆರವರಕೈಯ ಸಾಲಮಾಡುವ ಪ್ರಸಂಗಬರಲಿದೆ. ಆಪ್ತಬಾಂಧವರಿಂದ ಉಂಟಾದ ಮನೋವೈಷಮ್ಯದಿಂದ ಸದಾ ದುಃಖಿತರಾಗಿರುವಿರಿ. ಮನೆಯಲ್ಲೂ ಕೂಡ ಕೈಹಿಡಿದಾಕೆಯು ಶತ್ರುವಿನಂತೆ ವರ್ತಿಸುವಳು. ಮನಶ್ಚಾಂಚಲ್ಯದಿಂದಾಗಿ ವಿದ್ಯಾರ್ಥಿಗಳಿಗೆ ಹಾನಿತಗಲೀತು. ವಾರಾದಿಯ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಿವೆ.

ಮಕರ—ಸಾಧಿಸಿದರೆ ಸಬಳ ನುಂಗಬಹುದೆಂಬ ಗಾದೆಯಂತೆ ನೀವು ಯತ್ನಿಸಿದರೆ ಯಾವ ಕಾರ್ಯವನ್ನೂ ಸಾಧಿಸಲು ಶಕ್ತರಿರುವಿರಿ. ನಿಮ್ಮ ಪ್ರಯತ್ನವು ಕೂಡ ಫಲದಾಯಿಯಾಗುವುದು. ಮಕ್ಕಳಿಂದ ಧನ ಲಭಿಸುವದು ಮಾತ್ರವಲ್ಲ ಸ್ತ್ರೀಧನವೂ ಲಭಿಸುವಂತಿದೆ. ದೇಹದಲ್ಲಿ ಅವಯವಗಳ ಸಂದುಗೊಂದುಗಳಲ್ಲಿ ನೋವು ಸದಾ ಪರ್ಯಟನಾದಿಗಳಿಂದ ಪೀಡಿತರಾಗುವಿರಿ. ಧರ್ಮಕರ್ಮಗಳಲ್ಲಿ ಅನಾದರ ಹೆಚ್ಚೀತು. ವಾರಾದಿಯ 2 ದಿನಗಳು ಅನುಕೂಲವಾಗಿವೆ.

ಕುಂಭ—ನಿಮ್ಮ ಉದ್ಯಮದಲ್ಲಿ ಸಾಕಷ್ಟು ಫಲ ಲಭಿಸದಾದರೂ ನಿಮಗೆ ವ್ಯವಹಾರದಲ್ಲಿ ಹಣದ ಅಡಚಣೆಯುಂಟಾಗದು. ಶತ್ರುಜನರು ಪರಾಜಿತರಾಗುವರು. ದೇಹಾಲಸ್ಯದಿಂದ ಮುಕ್ತರಾಗುವಿರಿ. ಕೆಲವೊಮ್ಮೆ ವಿಜಾತಿಯವರೊಡನೆ ಕಲಹವಾದೀತು. ಆತ್ಮೀಯರ ವಿರಹದಿಂದಾಗಿ ದೀನರಂತೆ ವರ್ತಿಸುವಿರಿ. ಸ್ತ್ರೀನಿಮಿತ್ತವಾಗಿ ಶೋಕಕ್ಕೆ ಗುರಿಯಾಗುವಿರಿ. ಮಕ್ಕಳುಮರಿಗಳ ಅನಾರೋಗ್ಯದೆಸೆಯಿಂದ ಹೆಚ್ಚಿನ ಹಣವು ವೈದ್ಯರಪಾಲಾದೀತು. ವಾರಾದಿಯ 4 ದಿನಗಳು ವಾಂಛಿತಾರ್ಥಪ್ರದಗಳವು.

ಮೀನ—ದುರ್ದೈವವು ಬಲವತ್ತರವಾಗಿ ನಿಮ್ಮನ್ನು ಪೀಡಿಸುತ್ತಲಿದೆ. ಅನಿಷ್ಟ ಚಕ್ರಗಳು ಸುತ್ತಲಿಂದಲೂ ಬಂದು ನಿಮ್ಮನ್ನು ಸೇರುವವು. ಸದಾ ಪರ್ಯಟನದಲ್ಲೇ ಇರಬೇಕಾಗುವದು. ಶತ್ರುಗಳಪೀಡೆ ಶ್ಲೇಷ್ಮಜ್ವರಾದಿಗಳಿಂದ ಪೀಡಿತರಾಗುವಿರಿ. ಸಹವಾಸದೋಷದಿಂದ ನಷ್ಟಕಷ್ಟಗಳಿಗೆ ಗುರಿಯಾಗುವಿರಿ ಮಾತ್ರವಲ್ಲ ಅಪವಾದವು ಬರಲಿದೆ. ಸ್ತ್ರೀಜನರ ವಿರೋಧವು ಪ್ರಾಪ್ತವಾಗಲಿದೆ. ವಾರಾಂತ್ಯದ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸಲಾರವು.

ಗೊನೋರಿಯಾ ಶರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ತಿಳಿದಿದ್ದರೆ, ಉರುಶು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾಮೃತ** ಎಂಬ **ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಪ್ರತಿನಿಧಿ:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು. ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೆಡಿಕಲ್ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ... ಹಾವೇರಿ, ಬ್ಯಾಡಗಿ

EDITED, PRINTED & PUBLISHED BY L. H. SHETTY AT THE NAVAYUGA PRESS, UDIPI, S. INDIA

Regd. No. M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ

9-8-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೪೮

NAVAYUGA WEEKLY

Post Box No. 22 UDIPI.

Vol 3.
No. 48

ಮಾತು ಪ್ರತಿಮಾತು

"ವಾದೇ ವಾದೇ ಜಾಯತೇ ತತ್ತ್ವಬೋಧಃ" ಎನ್ನುವ ತತ್ತ್ವೋಕ್ತಿ ಸದ್ಯದ ರಾಜಕೀಯಕ್ಕೆ ಏನೇನೂ ಹೊಂದಿಕೆಯಾಗುವುದಿಲ್ಲ. ಬದಲಾಗಿ "ವಾದೇ ವಾದೇ ಜಾಯತೇ ತತ್ತ್ವಬಾಧಃ" ಎಂದರೆ ಚೆನ್ನಾಗಿ ಒಪ್ಪುತ್ತದೋ ಏನೋ! ಭಾರತ ಪಾಕಿಸ್ತಾನಗಳೊಳಗಿನ ದ್ವೇಷಭಾವನೆ ಉಭಯ ರಾಷ್ಟ್ರಗಳ ಮುಖ್ಯಮಂತ್ರಿಗಳ ಉತ್ತರಪ್ರತ್ಯುತ್ತರಗಳಿಂದ ಕಡಿಮೆಯಾಗಬಹುದೇನೋ ಎಂದು ಭಾವಿಸಿದ್ದೆವು. ಈಚೆಗೆ ಪ್ರಧಾನಿಗಳೀರ್ವರ ಹೇಳಿಕೆಗಳೂ ಮಾತು ಪ್ರತಿಮಾತುಗಳೂ ಎರಡೂ ರಾಷ್ಟ್ರಗಳಲ್ಲಿ ಬೆಳೆಯಬೇಕಾದ ಸೌಹಾರ್ದಮಯ ವಾತಾವರಣವನ್ನೇ ಕೆಡಿಸಿಬಿಟ್ಟಿವೆ. ಲಿಯಾಖತರು ನೆಹ್ರೂರವರನ್ನು ಮಾತುಕತೆಗೆ ಕರಾಚಿಗೆ ಬನ್ನಿರೆಂದು ಆಹ್ವಾನಿಸಿ ಅದರ ಬೆನ್ನಲ್ಲೇ ಕರಾರುಗಳನ್ನು ಹಾಕಿ ಸಂಧಾನಮಾರ್ಗವನ್ನೇ ಕೆಡಿಸಿಬಿಟ್ಟರು. ಗಡಿಯಲ್ಲಿಯ ಸೈನ್ಯವನ್ನು ಹಿಂದಕ್ಕೆ ತೆಗೆದು ಕೊಂಡನಂತರವೇ ಬರಬೇಕೆಂದೂ ಶರತ್ತು ಹಾಕಿದರು. ನೆಹ್ರೂರವರನ್ನು ಸಂಧಾನದ ಮಾತುಕತೆಗಾಗಿ ಸದ್ಭಾವನೆಯಿಟ್ಟು ಕಳುಹಿದ ಆಹ್ವಾನವಿದಲ್ಲವೆಂಬುದು ಖಚಿತವಾಗುತ್ತದೆ. ಭಾರತ ಸರಕಾರಕ್ಕೆ ಈ ಕುಟಿಲನೀತಿಯನ್ನು ತಿರಸ್ಕರಿಸಿ ವಸ್ತುಸ್ಥಿತಿಯ ಕಡೆಗೆ ಪಾಕಿಸ್ತಾನದ ಒಲವನ್ನೆಳೆಯುವುದು ಬೇಕಾಗಿದೆ. ಅಂತಲೆ ನೆಹ್ರೂರವರು ಲಿಯಾಖತರನ್ನು ದಿಲ್ಲಿಗೆ ಬನ್ನಿ ಮೊದಲು ಕರಾರು ಹಾಕಬೇಡಿರೆಂದರು. ಏಕೆಂದರೆ ಪಾಕಿಸ್ತಾನವು ಭಾರತದಮೇಲೆ ಹೊರಿಸಿರುವ ಆಪಾದನೆಗಳಿಗೂ—ಆಕ್ರಮಣಗಳ ಮೂಲೋದ್ದೇಶಕ್ಕೂ ಪಾಕಿಸ್ತಾನವೇ ಸೂತ್ರಧಾರಿಯಾಗಿದೆ. ಅವರೇ ನಿರ್ಮಿಸಿದ ತಂಟೆಯನ್ನು ಮರೆಮಾಚಿ, ತಮ್ಮ ವಾದವೇ ಮೇಲಾಗಬೇಕೆಂಬ ಹಟಮಾರಿತನದಿಂದ ಮುಂದೆಮಾಡಿದ ಆ ಕರಾರುಗಳನ್ನು ಭಾರತವು ಒಪ್ಪುವುದು ಶಕ್ಯವಿಲ್ಲವೆಂದು ಭಾರತ ಹೇಳಿದ್ದು ಸೂಕ್ತವೇ ಆಗಿದೆ. ಆದರೆ ಪಾಕಿಸ್ತಾನಕ್ಕೆ ಒಣಪ್ರತಿಷ್ಠೆ ಸ್ವಾಭಿಮಾನ- ವಿವೇಕ ಮಾಡುವದನ್ನು ಬಿಡಲಿಲ್ಲ. ಸಂಧಾನಕ್ಕಾಗಿ ದಿಲ್ಲಿಗೆ ಓಡುವುದು ಲಿಯಾಖತರಿಗೆ ಆತ್ಮಗೌರವಕ್ಕೆ ಕುಂದೆಂದು ಕಂಡಿರಬೇಕು. ಇಷ್ಟೇ ಅಲ್ಲ ನೆಹ್ರೂ ಈ ಕಲಹಕ್ಕೆ ಮೂಲಭೂತವಾದ ಕಾರಣಗಳನ್ನು ಸ್ಪಷ್ಟೀಕರಿಸಿದಾಗ ಅದು ಬಾಯಿ ಬಡಕತನವೆಂದು ಸಾಹೇಬರು ಹಾರಿಸಿಬಿಟ್ಟರು. ನೆಹ್ರೂ ಕಳಿಸಿದ ಆಹ್ವಾನವನ್ನು ಅಪಾರ್ಥಮಾಡಿಕೊಂಡು ಕಠಿಣವಾದ ಭಾಷೆಯಿಂದ ಪಾಕಿಸ್ತಾನಿಗಳ ಮಾಮೂಲು ಭಾಷೆಗಳಿಂದ ಅತಿರಂಜಿತವಾಗಿ ವರ್ಣಿಸಿ ಆತ್ಮನಿವೇದನೆಯನ್ನು ಮಾಡಿಕೊಂಡಿದ್ದಾರೆ ಲಿಯಾಖತರು.

ಒಂದು ರಾಷ್ಟ್ರದ ಮುಖ್ಯ ಮಂತ್ರಿಯಾಗಿರುವವನು ಈ ರೀತಿ ಅಸತ್ಯ ಪ್ರತಿಪಾದನೆ ಮಾಡುವುದನ್ನು ನೋಡುವಾಗ ಪಾಕಿಸ್ತಾನಿಗಳ ಅಮಾನುಷ ಕೃತಿ—ಯುದ್ಧ ಪ್ರಚೋದಕ ಕುತಂತ್ರ—ಇವೆಲ್ಲ ಆಶ್ಚರ್ಯವಲ್ಲ! ಲಿಯಾಖತರು ಭಾರತದ ನಿಲುವೆಯನ್ನು ಟೀಕಿಸುತ್ತ "ಕಾಶ್ಮೀರ ಭಾರತಕ್ಕೆ ಸೇರಲಪೇಕ್ಷಿಸುವುದಿಲ್ಲ. ಅಲ್ಲಿಯ ಹಿಂದೂ ರಾಜನ ಒಳಸಂಚಿನಿಂದ ತನ್ನ ಸೈನ್ಯವನ್ನು ಹೊಕ್ಕಿಸಿ ಬಲಪ್ರಯೋಗದಿಂದ ಅಲ್ಲಿಯ ಜನತೆಯ ಸ್ವಾತಂತ್ರ್ಯವನ್ನು ಅಪಹರಿಸಿದೆ. ಕಾಶ್ಮೀರವು ಭಾರತಗಾಡಿಯಲ್ಲಿ ಸೇರಿಲ್ಲ; ಅದು ಯಾವ ರಾಷ್ಟ್ರಕ್ಕೆ ಸೇರಬೇಕೆಂಬುದೇ ಇನ್ನೂ ನಿರ್ಧಾರವಾಗಿಲ್ಲ" ಎಂದು ಆಡಿದ ಮಾತು ನಿಜವಾಗಿಯೂ ವಸ್ತುಸ್ಥಿತಿಯ ವಿಪರ್ಯಾಸವನ್ನುಂಟು ಮಾಡಿದೆ. ಕಾಶ್ಮೀರದಲ್ಲಿ ದರೋಡೆಗಾರರ ಕಪಟವೇಷಧಾರಿಯಾಗಿ ಬಂದು ಕೊನೆಗೆ ಸಂ. ರಾ. ಸಂಘದೆದುರು ಅನಿವಾರ್ಯವಾಗಿ ತನ್ನ ಹೇಡಿತನವನ್ನು ಒಪ್ಪಿಕೊಂಡಿತು. ಆವರೆಗೆ ಪಾಕಿಸ್ತಾನದ ಕೈವೇ ಅದರಲ್ಲಿರಲಿಲ್ಲವೆನ್ನುವ ಬುಡವಿಲ್ಲದ ಒಡಾಯಿಯನ್ನು ಲಿಯಾಖತರೂ, ಜಾಫ್ರುಲ್ಲಾಖಾನರೂ ಬಿಟ್ಟಿದ್ದರು. ಕೊನೆಗೆ ಒಪ್ಪಿ ಈಗ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕೆನ್ನುವ ತನ್ನ ಸ್ವಪ್ರಾಣವನ್ನು ಲಿಯಾಖತರು ಎತ್ತಿದ್ದಾರೆ. ಅಂತೆಯೇ ದುಡುಕುತನ—ಪುಂಡಾಟಿಕೆಗಳ ಮೂಲಕ ತಮ್ಮ ಅಸ್ತಿವಾರವನ್ನು ಭದ್ರಗೊಳಿಸುತ್ತಲಿದ್ದಾರೆ. ಮೊನ್ನೆ ತನ್ನ ಭದ್ರ ಮುಷ್ಟಿಯನ್ನು ಹಿಡಿದು ಆರ್ಭಟಿಸಿದ ಲಿಯಾಖತರು ಈ ರೀತಿ ಯದ್ವಾತದ್ವಾ ನುಡಿಯುತ್ತಿರುವುದು ಆಚ್ಚರಿಯ ಸಂಗತಿಯೇನಲ್ಲ. ಭಾರತವು ಸೈನ್ಯವನ್ನು ಗಡಿಯಲ್ಲಿ ಸುಸಜ್ಜಿತವಾಗಿ ನಿಲ್ಲಿಸಿದೆಯೆಂದು ಅಪಸ್ವರದಿಂದ ಕಿರಚಾಡುವ ಖಾನ ಸಾಹೇಬರು ಪಾಕಿಸ್ತಾನದಲ್ಲಿ ಬ್ಲ್ಯಾಕ್ ಔಟ್, ಕರ್ಫ್ಯೂ ಕ್ರಮವನ್ನೂ ನ್ಯಾಶನಲ್ ಗಾರ್ಡ್ಸ್‌ದವರ ಸೈನ್ಯೀಕರಣವನ್ನೂ ಇತರ ಯುದ್ಧ ಸನ್ನದ್ಧ ಕಾರ್ಯಕ್ರಮವನ್ನೂ ಬಚ್ಚಿಟ್ಟಿದ್ದಾರೆ!

ಈ ಬಗೆಯ ಅಪ್ರಾಮಾಣಿಕತೆಗೂ ನೈತಿಕ ಬೆಲೆಯನ್ನು ಕೊಡುವ ಇಲ್ಲವೆ ಇದನ್ನು ರಾಜಕೀಯವೆಂದು ಹೆಸರಿಸಿ ಮನ್ನಿಸುವದು ಹೇಡಿತನ ಮಾತ್ರವಲ್ಲ; ಆತ್ಮಘಾತುಕತನವೂ ಹೌದು! ಸದ್ಯದ ಮಾತು ಪ್ರತಿಮಾತುಗಳಿಂದ ಯುದ್ಧ ಅನಿವಾರ್ಯವೆಂಬುದು ಸ್ಪಷ್ಟವಾಗಿದೆ. ಭಾರತವು ತಳೆದ ಸಾಂತ್ವನ ಧೋರಣೆಗೆ ಪಾಕಿಸ್ತಾನದ ಪ್ರತಿಕ್ರಿಯೆ ಏನೆಂಬುದು ನಮಗೆ ತಿಳಿದ ಮೇಲೆ ಇನ್ನು ಮಾತು ಬೆಳೆಸುವುದು ಲೋಕದ ಹಿತದೃಷ್ಟಿಯಿಂದ ಯೋಗ್ಯವಲ್ಲ! ವಾದ ಪ್ರತಿವಾದಗಳಿಂದ ಸಮಸ್ಯೆ ಪರಿಹಾರವಾಗಿ ನೂತನ ಮಾರ್ಗ— ನೀತಿ ಮಾರ್ಗದೊರಕೀತೆಂದು ನಾವು ಭಾವಿಸುವುದು ಸಹಜವೇ. ಆದರೆ ಇಂತಹವಾದ ಬೆಳೆಸುವಾಗ ಉಭಯತರಲ್ಲೂ ತತ್ವಚಿಂತನೆ ಕಾಣುತಿರಬೇಕು. ಯಥಾರ್ಥದ ಕಡೆಗೆ ಸಂಪೂರ್ಣ ಜ್ಞಾನವಿರಬೇಕು. ತಪ್ಪನ್ನು ಒಪ್ಪಿಕೊಳ್ಳುವ ತ್ಯಾಗಬುದ್ಧಿಯೂ—ಪರೋಪಕಾರ ಕೇಳುವ ಸಹನ ಶೀಲಗುಣವೂ ಇರಬೇಕು. ವಾದದ ಮೊದಲಲ್ಲಿ ಏನೇನೇ ಪ್ರಕಾರೇಣ ತನ್ನವಾದಗೆಲ್ಲಲೇ ಬೇಕೆಂಬ ಛಲವಿರಕೂಡದು. ತನ್ನ ಹುಡುಕಿಗೆ ಮೂರೇ ಕಾಲೆಂದು ವಾದಿಸುವವರಿಗೆ ನ್ಯಾಯ—ನೀತಿ ಕಲಿಸಿದ ಮಾತೇನು!

ಸದ್ಯದ ತೊಡಕು ಅಪರಿಹಾರ್ಯವಾಗಿ ಉಭಯರಾಷ್ಟ್ರಗಳ ಸುರಕ್ಷಿತತೆಗೆ—ಅಂತರ ರಾಷ್ಟ್ರ ಶಾಂತಿಗೆ ಗಂಡಾಂತರ ಪ್ರಾಪ್ತವಾಗಿದುವುದಕ್ಕೆ ಮೊದಲು ನಾವು ಹೇಳಿದ ಲೋಕದವರುಗಳೇ ಕಾರಣ! ತನ್ನವಾದಗೆಲ್ಲಬೇಕು—ನಮ್ಮ ನಿಲುವೆಯಿಂದ ಒಂದಿಂಚೂ ಕದಲಲಾರೆ ಎಂದು ಘೋಷಿಸುತ್ತ ಪಾಕಿಸ್ತಾನಿಗಳು ಮುಂದೆ ಓಡಿಸುವಾಗ—ಬದ್ಧ ಮುಷ್ಟಿಯನ್ನು ಎತ್ತಿ ಹಿಡಿದಿರುವಾಗ ಇನ್ನು ವಾದವೇಕೆ? ನೀತಿಯ ಮಾತೇಕೆ? ಆತ್ಮನಿವೇದನೆಯೇಕೆ? ಸತ್ಯಪ್ರತಿಪಾದನೆಯೇಕೆ? "ನಮ್ಮದಿನ್ನು ವಿಧ್ವಂಸಕ ಕಾರ್ಯಕ್ರಮ" ವೆಂದು ಲಿಯಾಖತರೇ ಬದ್ಧಮುಷ್ಟಿಯನ್ನು ಎತ್ತಿಹಿಡಿಯುವಾಗ ಮಾತನ್ನು ಮುಗಿಸಿ, ಮುಂದಿನ ಮಾರ್ಗವನ್ನು ಹುಡುಕುವುದು, ನಮ್ಮ ಪೌರುಷವಲ್ಲವೆ?

IN THE SERVICE OF THE COUNTRY
1925 1950



Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ-
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪಂಜರ ತೊರೆದು ಹಾರಿದಾಗ

ವರ್ಷವರ್ಷವೂ ಬೇಸಗೆ ಕಾಲ ಸಂಯುಕ್ತ ರಾಜ್ಯ ಅಮೇರಿಕೆಯ ಜನಸಮ್ಮರ್ದ ತುಂಬಿದ ನಗರಗಳಲ್ಲಿ ನೆಲಸಿರುವ ಅಷ್ಟು ಸೌಕರ್ಯವಿಲ್ಲದ ಮಕ್ಕಳು ಸಾವಿರಗಟ್ಟಲೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಶಿಬಿರ ಜೀವನಕ್ಕಾಗಿ ಪ್ರಯಾಣಿಸುತ್ತಾರೆ. ಈ ಜೀವನ ಸೌಕರ್ಯ ಖಾಸಗಿ ನಾಗರಿಕರ ಉದಾರ ಸಹಾಯದ ಫಲಶ್ರುತಿಯಾಗಿದೆ. ನಗರದ ಬೀದಿಗಳ ಗೊಂದಲ ಕಳೆದು, ಗ್ರಾಮ ಜೀವನದ ಸಂತೋಷವನ್ನು ಮಕ್ಕಳು ಹೆಚ್ಚುಹೆಚ್ಚಾಗಿ ಅಗತ್ಯ ಪಡೆಯಬೇಕೆಂಬುದು ಇಂಥ ಜನರ ನಂಬುಗೆ.

ಹೆಚ್ಚಿನ ಮಕ್ಕಳಿಗೆ ಹೀಗೆ ಶಿಬಿರ ಜೀವನಕ್ಕೆ ಹೋಗುವುದೆಂದರೆ ಮೊತ್ತಮೊದಲಬಾರಿ ಮನೆಬಿಡುವ ಅನುಭವ. ಪ್ರಯಾಣಿಸುವಾಗ ಬಸ್ಸು ಅಥವಾ ರೇಲುಗಾಡಿಯ ಕಿಡಿಕಿ ಎಡೆಯಿಂದ ಹಳ್ಳಿಯ ಸೆರಗು ಕಾಣಿಸಿಕೊಂಡಾಗ, ತಮ್ಮ ಬದುಕಿನಲ್ಲಿ ಮೊದಲಸಲ ಅವರು ಹೊಲಗದ್ದೆಗಳನ್ನು, ಕೆರೆತೊರೆಗಳನ್ನು, ಕಾಡುಹೂಗಳನ್ನು ಕಾಣುತ್ತಾರೆ. ಇವರಲ್ಲಿ ಹೆಚ್ಚಿನವರಿಗೆ, ಸುತ್ತುಮುತ್ತ ಮರಗಳ ತೋಪು, ಹುಲ್ಲಿನ ಹಾಸಿಗೆ, ಹೂಗಳ ತೋಟ ತುಂಬಿದ ಮನೆಗಳನ್ನು ಕಾಣುವುದೆಂದರೆ ಹಾಗೆಯೇ, ಮೃಗಾಲಯದ ಗೂಡಿನೊಳಗೆ ಹಾಯಾಗಿರುವ ಬದಲು ಹುಲ್ಲುಗಾವಲಿನಲ್ಲಿ ಸ್ವಚ್ಛಂದವಾಗಿ ಅಡ್ಡಾಡುವ ಜಾನುವಾರುಗಳೆಂದರೆ, ತುಂಬ ಅಚ್ಚರಿ. ಶಿಬಿರಮಾರ್ಗದಲ್ಲಿ ಈ ಮಕ್ಕಳು ಪರಸ್ಪರ ಪರಿಚಯ ಬೆಳೆಸುವರು. ಹಾಗೂ ಈ ಮೊದಲು ಗ್ರಾಮಜೀವನದ ಸವಿ ಕಂಡವರಿಂದ ಅತ್ಯದ್ಭುತವಾದ ಕತೆ ಕೇಳುವರು.

ಈ ಶಿಬಿರವು ಪರ್ವತದ ಮೇಲಿರಬಹುದು; ಸಮುದ್ರ ದಂಡೆಯಲ್ಲಿರಬಹುದು; ಅಥವಾ ಒಂದು ಸರೋವರ ಅಥವಾ ನದಿಯ ಸಮೀಪದ ಕಾಡು ಪ್ರದೇಶವಾದರೂ ಸರಿಯೇ. ಎಲ್ಲಿಯೇ ಶಿಬಿರ ತಳವೂರಲಿ, ತುಂಬ ಉತ್ತೇಜನ ಹಾಗೂ ಉತ್ಸಾಹ ದುಂಬುವ ದೃಶ್ಯಗಳನ್ನು ಅಲ್ಲಿಂದ ಕಾಣಬಹುದು. ನಗರದ ಮೊದ್ದು ಬದುಕಿಗಿಂತ ತೀರ ಭಿನ್ನವಾದ ಲವಲವಿಕೆಯ ಕುಣಿತ, ನೆಗೆತಗಳು ಸಾಹಸಕೃತ್ಯಗಳು ಎಳೆಯರನ್ನು ಹರ್ಷಗೊಳಿಸುವುವು.

ಸೌಕರ್ಯಹೀನ ಬದುಕು ಬಾಳಿದ ಈ ಮಕ್ಕಳಿಗೆ ತಾವು ಕಣ್ಣಿಂದ ಕಂಡಿರದಷ್ಟು ಉತ್ಕೃಷ್ಟವಾದ ಆಹಾರ ಪಾನೀಯ ಬೇಸಗೆಕಾಲದ ಶಿಬಿರ ಜೀವನದಲ್ಲಿ ದೊರೆಯುತ್ತದೆ. ಬಟ್ಟಬಯಲಿನಲ್ಲಿ ಪ್ರಜ್ವಲಿಸುವ ಶಿಬಿರಾಗ್ನಿಯ ಸುತ್ತಲೂ ಸಂಜೆ ಹೊತ್ತು ಅವರು ಕುಳಿತು ಹಾಡುವರು. ಈ ಬೆಂಕಿಯಾಟವು ಅವರು ಪ್ರಥಮಸಲ ಕಾಣುವ ಬಾಹ್ಯಜೀವನದ ಅಮೋಘದೃಶ್ಯವೆಂದರೂ ತಪ್ಪಲ್ಲ. ಎಷ್ಟೋ ಮಕ್ಕಳು ರೋಗದ ಹಾವಳಿ ಮುಂತಾದ ದುರದೃಷ್ಟ ಬೆಂಬತ್ತಿದ ಫಲವಾಗಿ ಮನೆಬಿಟ್ಟು ನಗರಗಳಿಗೆ ಬರುತ್ತಾರೆ; ಮತ್ತು ಅಲ್ಲಿ ತಮ್ಮ ವಯೋಮಾನಕ್ಕೂ ಮೀರಿದ ಗುರುತರ ಹೊಣೆಗಾರಿಕೆಗೆ ಹೆಗಲು ಕೊಡುತ್ತಾರೆ. ಅಂಥವರಿಗೆ ಉದ್ದವಾದ ಎಳೆಗರಿಕೆಯ ಹುಲ್ಲ ರಾಶಿಯ ಮೇಲೆ ಕಾಲುನೀಡಿ ಕುಳಿತು, ಶಿಬಿರಾಗ್ನಿಯ ಬೆಳಗುವ ಜ್ವಾಲೆಯನ್ನು ನೋಡುತಿದ್ದಂತೆ ಕತ್ತಲ ತಮ್ಮ ದೈನಂದಿನ ಕಷ್ಟಗಳನ್ನು ಮರೆಯಲು ಸಾಧ್ಯವಾಗುತ್ತದೆ. ಮೇಲೆ ಕಣ್ಣೆತ್ತಿದಾಗ ಅನಂತ ದೂರದ ತಾರೆಗಳು ತೀರ ಸಮೀಪದಲ್ಲಿ ಮಿನುಗಿದಂತೆ ಕಾಣುತ್ತವೆ. ಗಗನಬೊಂಬೆಗಳಂತೆ ಸಾಲುಸಾಲಾಗಿ ನಿಂತ ಮನೆಗಳ ನಡುವಿನಿಂದ ಕಾಣಬಹುದಾದ ನಗರದ ಆಕಾರದಲ್ಲಿ ಮೂರಡಿ ಅಗಲದ ನೀಲಿ ಪಟ್ಟಿಯ "ಟಾಕಿ"ಗೂ ಮಿಕ್ಕದ ಸೌಂದರ್ಯ ಕಾಣಲಾರವು.

ಶಿಬಿರದಲ್ಲಿ ನೆಲಸಿರುವಷ್ಟು ದಿನ ಮಕ್ಕಳು ತಮ್ಮ ಸಮವಯಸ್ಕರ ಜತೆ ಡೇರೆಯಲ್ಲೋ ತಾತ್ಕಾಲಿಕವಾಗಿ ರಚಿಸಿದ ಕೋಣೆಗಳಲ್ಲೋ ವಾಸಿಸುವರು. ರಾತ್ರಿಯ ಸಮಯ ನಗರದ ನಡುವಿನ ಸಾರಿಗೆಯ ಭೋರಾಟದ ಬದಲು ಅವರ ಕಿವಿಗಳಿಗೆ ಮಿಡಿತೆ, ಜೀರುಂಡೆಗಳ ಕಿರುಚಾಟ, ಕಪ್ಪೆಯ ಒದರಾಟ, ಗೂಬೆಯ ಗೂರಾಟ ಕೇಳಿ ಬರುತ್ತವೆ. ತಮ್ಮ ಸುತ್ತಲೂ ಇರುವ ಮರಗಿಡಗಳ ಎಡೆಯಿಂದ ಕಣ್ಣುಮುಚ್ಚಾಲೆಯಾಡುತ್ತಾ ತೂರಿಬರುವ ತಿಂಗಳು ಬೆಳಕಿನಲ್ಲಿ ಅವರು ಮಲಗಿ ನಿದ್ದೆ ಹೋಗುವರು. ಸೂರ್ಯನು ತನ್ನ ವರ್ಣರಾಜಿಗಳನ್ನು ದಶ ದಿಕ್ಕುಗಳಿಗೂ ಚೆಲ್ಲಿ ಮೇಲೇರಿಬರಲು ಸನ್ನದ್ಧನಾದಾಗ, ಹಕ್ಕಿಗಳ ಚಿಲಿಪಿಲಿರವದ ಮುಗ್ಧಗಾನಕ್ಕೆ ಎಚ್ಚತ್ತು ಬಿಡುವರು.

ಇಲ್ಲಿಯ ಕಾರ್ಯಕ್ರಮಗಳ ವೈಶಿಷ್ಟ್ಯದಲ್ಲಿ ಅಮೇರಿಕನ್ ಧ್ವಜವನ್ನು ಏರಿಸುವುದೂ ಒಂದು. ಧ್ವಜಸ್ತಂಭದ ಸುತ್ತಲೂ ಪ್ರತಿಯೊಬ್ಬನೂ ಸೇರುತ್ತಾನೆ. ಮತ್ತು ಧ್ವಜಕ್ಕೆ, ಅದು ಪ್ರತೀಕವಾಗಿ ನಿಂತಿರುವ ರಾಷ್ಟ್ರಕ್ಕೆ, ಶ್ರದ್ಧಾ ಭಕ್ತಿಯನ್ನು ಸೂಚಿಸುತ್ತಾನೆ. ಬೆಳಗಿನ ಉಪಹಾರದ ಬಳಿಕ ಒಂದು ಸಮಿತಿಯು ಸಭೆಸೇರುತ್ತದೆ. ನಾಯಕನು ಶಿಬಿರದ ಕ್ರಮ ನಿಯಮಗಳನ್ನು ಹೇಳಿ, ಅವನ್ನೇಕೆ ಪಾಲಿಸಬೇಕೆಂದು ವಿವರಿಸುತ್ತಾನೆ. ಮಕ್ಕಳೂ ಪ್ರಶ್ನೆಗಳನ್ನು ಕೇಳಿ, ಸಂಶಯ ಪರಿಹರಿಸಿಕೊಳ್ಳಬಹುದು; ತಮ್ಮ ಸ್ವಂತಾಭಿಪ್ರಾಯಗಳನ್ನು ಪ್ರಕಟಿಸಬಹುದು. ಹಾಗೆಯೇ ಉಳಿದವರ ಮಾತುಗಳನ್ನು ಸಾವಧಾನದಿಂದ ಕೇಳಲೂ ಕಲಿಯಬೇಕು. ಶಿಬಿರದ ಕೆಲವೊಂದು ಕೆಲಸಗಳನ್ನು ನೆರವೇರಿಸಲು ಪ್ರತಿದಿನ ಸಮಿತಿಗಳನ್ನು ರಚಿಸುವರು. ಈ ಎಳೆಯ ಹುಡುಗರಿಗೆ ಆಟದ ಸಲಕರಣೆಗಳ ಸಂರಕ್ಷಣಾ ಭಾರ ಹೊರುವುದೆಂದರೆ, ಅಥವಾ ಶಿಬಿರದ ಸುತ್ತುಮುತ್ತಲೂ ಸೊಳ್ಳೆಕೀಟಗಳು ಬೆಳೆಯದಂತೆ ಕ್ರಿಮಿನಾಶಕ ಚಿಮುಕಿಸುವುದೆಂದರೆ ಅತೀವ ಹೆಮ್ಮೆ. ಅಂಥ ಚಟುವಟಿಕೆಗಳು ಶಕ್ತಿಯ ಸದುಪಯೋಗದ ನೇರಾದ ಮಾರ್ಗಗಳಲ್ಲವೆ? ಈ ಸಮಿತಿಗಳಲ್ಲಿ ದೈನಂದಿನದ ಯೋಜನೆಗಳನ್ನು ಚರ್ಚಿಸಲಾಗುವುದು. ಮತ್ತು ಮಕ್ಕಳು ತಮಗೆ ಬೇಕಾದಂತೆ ಒಂದು ವಿಶಿಷ್ಟ ಯೋಜನೆಯನ್ನು ಆದಿನಕ್ಕಾಗಿ ಆರಿಸಬಹುದು.

ಒಬ್ಬ ವಿಶೇಷ ತರಬೇತಿಪಡೆದ ಸಲಹೆಗಾರನ ನೇತೃತ್ವದಲ್ಲಿ ಶಿಬಿರದ ಎಲ್ಲ ಕಾರ್ಯಕಲಾಪಗಳು ನಡೆಯುವುವು. ಶಿಬಿರದಲ್ಲಿ ದಿನಗಳೆಯುವಾಗ ಮಕ್ಕಳು ದಳಗಳಾಗಿ ವಿಂಗಡಿಸಿಕೊಂಡು ಪಂದ್ಯಾಟಗಳಲ್ಲಿ ತೊಡಗುವರು. ಬೇಸ್ ಬಾಲ್, ಟೆನಿಸ್ ಹಾಗೂ ಬಿಲ್ಲು ವಿದ್ಯೆಗಳು ತೀರ ಸಾಮಾನ್ಯ ಸ್ಪರ್ಧೆಗಳು. ಹಾಗೆಯೇ ಈಜಾಡುವುದು, ದೋಣಿನಡೆಸುವುದು, ಗಾಳ ಹಾಕಿ ಮೀನುಹಿಡಿಯುವುದು, ಡೇರೆ ಹೊಡೆಯುವುದು ಮುಂತಾದುವನ್ನು ಕಲಿಯಲೂ ಅವರಿಗೆ ಅವಕಾಶವಿದೆ. ಪೈರು ತುಂಬಿದ ಗದ್ದೆಗಳ ನಡುವೆ, ಹಾಗೂ ಸೊಂಪಾಗಿ ಬೆಳೆದ ಕಾಡುಗಳ ಮಧ್ಯದಲ್ಲಿ ಅವರು ತಿರುಗಾಟಕ್ಕೆ ಹೋಗುವರು. ಆಗ ಹೂಗಳ ಹೆಸರುಗಳು, ಹಕ್ಕಿಗಳ ಜಾತಿಗಳು, ಕಾಡುಪ್ರಾಣಿಗಳ ಮುಂತಾದವುಗಳ ಪರಿಚಯವನ್ನು ಚೆನ್ನಾಗಿ ಕೇಳಿ ತಿಳಿದುಕೊಳ್ಳುತ್ತಾರೆ. ನಡುನಡುವೆ ಕಾಡಿನಲ್ಲಿ ವಿಪುಲವಾಗಿ ಸಿಗುವ ಸವಿಯಾದ ನೇರಳೆ ಹಣ್ಣು ತಿಂದು ಬಾಯಿ ಚಪ್ಪರಿಸುತ್ತಾರೆ.

ಕಡಿಮೆ ಎಂದರೆ ಒಂದುಸಲವಾದರೂ ಈ ಮಕ್ಕಳು ತರಬೇತಿಹೊಂದಿದ ಸಲಹೆಗಾರರ ಸಂಗಡ ಒಂದು ರಾತ್ರಿ, ಇಡೀ ದೀರ್ಘ ಪ್ರವಾಸವನ್ನು ತೊಡಗುತ್ತಾರೆ. ಕಂಬಳಿ ಹೊದ್ದುಕೊಂಡು, ಒಂದು ಮರದ ಆಶ್ರಯದಡಿ ನೆಲದಲ್ಲಿ ಮಲಗುತ್ತಾರೆ. ಮುಂಜಾನೆ ತಮ್ಮ ಉಪಾಹಾರವನ್ನು ಶಿಬಿರಾಗ್ನಿಯ ಸಹಾಯದಿಂದ ಅಡುತ್ತಾರೆ. ಇಂಥ ಪ್ರವಾಸದಲ್ಲಿ ಮಕ್ಕಳು ಪ್ರಕೃತಿಯ ಆಶ್ಚರ್ಯಗಳಲ್ಲಿ ಬೇಕಷ್ಟನ್ನು ಕಂಡು ಬೆರಗಾಗುತ್ತಾರೆ. ನೇರಳೆ ಕಂಪಾದ ಹೂಗೊಂಡೆಯ ಮೇಲೆ ಝೇಂಗುಡುತ್ತಾ ಹಾರುವ ಹಳದಿ ಚಿಟ್ಟೆಗಳು, ನಾಲ್ಕು ಪುಟ್ಟ ಮೊಟ್ಟೆಗಳಿರುವ ಕಾಡುಗುಬ್ಬಿಯ ಗೂಡು ಅಥವಾ ಅಗಲ ತೆರೆದ ಕಣ್ಣುಗಳ ಮರಿಗೊಡನೆ ಬಂದು, ನದಿಯ ತಿರುವಿನಲ್ಲಿ ಒಮ್ಮೆಯೇ ಮಾಯವಾಗುವ ಹರಿಣ—ಇವೆಲ್ಲ ಆಗಿನ ನಿಸರ್ಗದತ್ತ ಚೆಲುನೋಟಗಳು.

ಹುಡುಗಿಯರು ವಿಶೇಷವಾಗಿ ಈ ಶಿಬಿರಗಳಲ್ಲಿ ಕಲಿಸುವ ಕಲೆ ಹಾಗೂ ಕೈಗಾರಿಕೆಯನ್ನು ಚುರುಕಿನಿಂದ ಕಲಿತುಕೊಳ್ಳುತ್ತಾರೆ. ಕೊಜೆಮಣ್ಣಿನಿಂದ ಬೋಗುಣಿ ತಯಾರಿಸುವುದು, ಹುಲ್ಲುಗಾರಿಕೆಯಿಂದ ಬುಟ್ಟಿ ಹೆಣೆಯುವುದು, ಉಣ್ಣೆಯಿಂದ ಸೊಂಟಪಟ್ಟಿ ಮಾಡುವುದು ಇತ್ಯಾದಿ ಎಲ್ಲದರಲ್ಲೂ ಅವರು ನಿಪುಣರಾಗುತ್ತಾರೆ. ತಾವು ನೋಡಿದ ವಸ್ತುಗಳ, ನೋಟಗಳ ಅಥವಾ ಗೆಳೆಯರ ಚಿತ್ರ ಬರೆಯುವರು, ಬಣ್ಣ ಕೊಡುವರು. ಹೀಗೆ ಸಿದ್ಧಪಡಿಸಿದ ವಸ್ತುಗಳನ್ನು ಮನೆಗೆ ಕೊಂಡು ಹೋಗಿ ಅಮ್ಮನಿಗೆ ತೋರಿಸಲು ಏನೇನೂ ಅಭ್ಯಂತರವಿಲ್ಲ.

ಮರಳಿ ನಗರಕ್ಕೆ ಹೊರಟಾಗ ಈ ಮಕ್ಕಳು ಆರೋಗ್ಯವಂತರೂ ಬಲಶಾಲಿಗಳೂ

For Protection and Provision

Consult

The New Guardian of India Life Insurance Co., Ltd.

Head office: **MADRAS**

(Estd 1934)

A Policy in this Progressive Life Office is a good investment; its Agency is a valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಏರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಭಾರತ ಸರಕಾರದ ಶ್ವೇತ ಪತ್ರ

ಪಾಕಿಸ್ತಾನ ಯುದ್ಧ ಪ್ರಚೋದನೆ ಖಂಡನೆ! ಕಿಡ್ವಾಯಿಯವರ ಅಂತರ್ಲಾಗ

ಪಾಕಿಸ್ತಾನ ಭಾರತ ಮುಖ್ಯಮಂತ್ರಿಗಳವರ ಪತ್ರವ್ಯವಹಾರದಿಂದ ಉಭಯ ರಾಷ್ಟ್ರಗಳೊಳಗೆ ಮೈತ್ರಿಯ ಚಿಹ್ನ ಮೂಡುವ ಬದಲಾಗಿ ತೀವ್ರ ಭಾವನೆಯುಂಟಾಗಿದೆ. ನೆಹ್ರೂರವರ ಪತ್ರಕ್ಕೆ ಲಿಯಾಕತ್ ಅಲೀಖಾನರು ಕೊಟ್ಟಿರುವ ಉತ್ತರವು ಸತ್ಯದ ವಿಪರ್ಯಾಸದಿಂದ ತುಂಬಿದ್ದು—ಕಠಿಣವಾದ ಭಾಷೆಯಿಂದ ಅತಿರಂಜಿತವಾಗಿರುವದರಿಂದ ದಿಲ್ಲಿಯ ರಾಜಕೀಯ ವರ್ಗಗಳಿಗೆ ಮುಂದೆ ಸಂಧಾನದ ಮಾತು ಶಕ್ಯವಿಲ್ಲವೆಂಬುದು ಮನವರಿಕೆಯಾಗಿದೆ. ಕಾಶ್ಮೀರವನ್ನು ವಾಮಮಾರ್ಗದಿಂದಲಾದರೂ ಅಪಹರಿಸಬೇಕೆಂಬ ಪಾಕಿಸ್ತಾನದ ಇಚ್ಛೆಗೆ ವಿರುದ್ಧವಾದ ಯಾವ ಮಾತುಕತೆಗೂ ಪಾಕಿಸ್ತಾನ ಸಿದ್ಧವಿಲ್ಲ! ಯುದ್ಧದಿಂದಲೇ ಅದನ್ನು ಪಡೆಯಬೇಕೆಂದು ಸನ್ನದ್ಧವಾಗುತ್ತಿರುವಾಗ ನೆಹ್ರೂರವರು ಲಿಯಾಕತರ ಆಹ್ವಾನವನ್ನು ಸ್ವೀಕರಿಸುವದಾಗಲೀ—ಸಂಧಾನದ ಬೇರೆ ಮಾರ್ಗವನ್ನು ಹುಡುಕುವದಾಗಲೀ ಸದ್ಯದ ಪರಿಸ್ಥಿತಿಗೆ ಸರಿಯಾದ ಪ್ರತಿಕ್ರಿಯೆಯಾದೀತೆಂದು ಭಾರತ ಸರಕಾರ ಭಾವಿಸುವದಿಲ್ಲ. ಪಾಕಿಸ್ತಾನದ ಪುಂಡಾಟಿಕೆಯನ್ನು ಎದುರಿಸಲು ಭಾರತ ಸರಕಾರ ಮುಂಜಾಗ್ರತೆ ವಹಿಸುವದೊಂದೇ ಉತ್ತಮ ಪರಿಹಾರ ಮಾರ್ಗವೆಂದು ತಿಳಿಯಲಾಗಿದೆ. ಅಂತೆಯೇ ದಿಲ್ಲಿಯಿಂದ ಶ್ವೇತಪತ್ರವನ್ನು ಹೊರಡಿಸಲಾಗಿದೆ.

ಪಾಕಿಸ್ತಾನವು ದೀರ್ಘಕಾಲದಿಂದ ಭಾರತದ ವಿರುದ್ಧ ಅಪಪ್ರಚಾರವನ್ನು ಮಾಡುತ್ತ ಗುಡ್ಡಗಾಡಿನ ಜನರನ್ನು ಭಾರತದ ಮೇಲೆ ಏರಿಹೋಗುವಂತೆ ಹುರಿದುಂಬಿಸತ್ತಾ ಭಾರತದ ವಿರುದ್ಧ ಕೈಗೊಂಡ ಹಲವು ಉದಾಹರಣೆಗಳನ್ನು ಉಲ್ಲೇಖಿಸಲಾಗಿದೆ. ಪಾಕಿಸ್ತಾನದ ಮುಖ್ಯ ಅಧಿಕಾರಿಗಳು ಸರಕಾರೀ ಭಾಷಣಗಳ ಮೂಲಕವೂ, ರೇಡಿಯೋಗಳ ಮೂಲಕವೂ, ಪತ್ರಿಕೆಗಳ ಮೂಲಕವೂ ಭಾರತ ವಿರುದ್ಧ ಯುದ್ಧ ಪ್ರಚೋದನಾಕಾರ್ಯ ನಡೆಸುತ್ತ ಬಂದಿರುವದನ್ನು ಉದಾಹರಿಸಲಾಗಿದೆ. ಕಾಶ್ಮೀರದ ಮೇಲೆ ಧಾಳಿಮಾಡಲು ಗುಡ್ಡಗಾಡು ಜನರಿಗೆ ಪಾಕಿಸ್ತಾನವು ಸಹಾಯ ನೀಡಿದ್ದೂ, ಹಾಗೂ ಪ್ರತ್ಯಕ್ಷ ಆ ಧಾಳಿಯಲ್ಲಿ ಭಾಗವಹಿಸಿದ್ದೂ ಅಂತರರಾಷ್ಟ್ರೀಯ ಕಾಯಿದೆಗೆ ವಿರುದ್ಧವೆಂದು ಡಿಕ್ಸನ್ನರ ವರದಿಯಲ್ಲಿ ಸ್ಪಷ್ಟೀಕರಿಸಿದ ಬಳಿಕವಂತೂ ಇದು ಅಧಿಕವಾಯಿತೆಂದೇ ಹೇಳಬೇಕು. ಗುಡ್ಡಗಾಡು ಜನರ ಭಾಷೆಯಾದ 'ಪುಷ್ಟು'ವಿನಲ್ಲಿ ನಾನಾರೀತಿಯ ಪ್ರಚಾರಸಾಹಿತ್ಯವನ್ನು ರೇಡಿಯೋದ ಮೂಲಕ ವಿವರಿಸಲಾಯಿತು. ಇಂಗ್ಲಿಷ್, ಹಾಗೂ ಉರ್ದು ಭಾಷೆಗಳ ಪತ್ರಿಕೆಗಳಲ್ಲಿ ಕ್ರಾಂತಿಕಾರಕ ಬರಹಗಳನ್ನು ಪ್ರಕಟಿಸಿಯೂ-ರಕ್ತಬಣ್ಣದಲ್ಲಿ ಕಾವ್ಯವನ್ನು ರಚಿಸಿಯೂ ಗುಡ್ಡಗಾಡು ಜನರ ಹಾಗೂ ಪಾಕಿಸ್ತಾನ ಮುಸ್ಲಿಮರಲ್ಲಿ ಭಾರತದ ವಿರುದ್ಧ ದ್ವೇಷಭಾವನೆ ಹುಟ್ಟಿಸಲಾಯಿತು ಈ ಬಗೆಯ ಪ್ರಚಾರಾಂಕ್ಕೆ ಇಂಗ್ಲಿಷದ 'ಡಾನ್' ಪತ್ರಿಕೆಯೂ ಉರ್ದುವಿನ 'ಜಮೀನ್ದಾರ' ಪತ್ರಿಕೆಯೂ ಮುಖ್ಯ ರಂಗವಾಗಿರುತ್ತವೆ. 'ಜಮೀನ್ದಾರ'ದಲ್ಲಿ ಪ್ರಕಟವಾದ ಮೌಲಾನಾ ಜಾಫರ ಅಲಿಖಾನರ "ಕಾಶ್ಮೀರ ಕಂದರ" ಎನುವ ಕವಿತೆಯಲ್ಲಿ "ಖಡ್ಗವನ್ನು ಹಿಡಿದು ಬಹಳ ಕಾಲದಿಂದಲೂ ನಮ್ಮ ರಾಜಧಾನಿಯಾಗಿದ್ದ ದಿಲ್ಲಿಯನ್ನು ಸ್ವಾಧೀನಪಡಿಸಿಕೊಳ್ಳೋಣ. ಎದ್ದೇಳಿರಿ ಖಡ್ಗಧಾರಿಗಳಾಗಿ ಮುನ್ನುಗ್ಗಿರಿ........" ಎಂದು ವರ್ಣಿಸಲಾಗಿದೆ. ಪಾಕಿಸ್ತಾನದ 'ಪುಷ್ಟು' ರೇಡಿಯೋ "ಕಾಶ್ಮೀರ ನಮ್ಮ ಮಾತೃಭೂಮಿ. ನಾವದನ್ನು ಬೇರೆಯವರ ಸ್ವಾಧೀನಕ್ಕೆ ಬಿಡಲಾರೆವು. ನಾವು ಈ ವರೆಗೆ ತೋರಿಸಿದ ಸಹನೆ ಸಾಕು. ನಾವು ನಮ್ಮ ಸರಕಾರವನ್ನು ನಮ್ಮ ಸೋದರರಾದ ಕಾಶ್ಮೀರಿ ಮುಸ್ಲಿಮರನ್ನು ಹಿಂದೂ ರಾಜನ ಆಡಳಿತದಿಂದ ಬಂಧಮುಕ್ತಮಾಡುವಂತೆ ಪ್ರಾರ್ಥಿಸುತ್ತೇವೆ" "ಬಲುಚಿಸ್ತಾನದ 400 ಜನ ಧುರೀಣರ ಘೋಷಣೆ: ಕಾಶ್ಮೀರ ಪ್ರಶ್ನೆಯು ಖಡ್ಗದಿಂದಲೇ ಬಗೆಹರಿಯಬೇಕಾಗಿದೆ. ಅಂತಲೇ 1000 ಕೆಚ್ಚೆದೆಯ ವೀರರು ಈಗ ಬಂಧಮುಕ್ತತೆಗಾಗಿ ಸಿದ್ಧರಿದ್ದೇವೆ" "ರಕ್ತತರ್ಪಣದಿಂದ ಕೊಳ್ಳದಿದ್ದ ಸಾಮ್ರಾಜ್ಯಕ್ಕೆ ಧಿಕ್ಕಾರವಿರಲಿ. ಕಾಶ್ಮೀರ ಇಲ್ಲವೆ ಮರಣ" "ನಾವು ಬಂದೂಕಿನ ಕುದುರೆಯ ಮೇಲೆ ಬೆರಳನ್ನಿಟ್ಟು ಬಹಳ ದಿನಗಳಿಂದಲೂ ಕಾಯುತ್ತಿದ್ದೇವೆ. ಇನ್ನು ಕಾಯುವದು ಸಾಧ್ಯವಿಲ್ಲ. ಕಾಶ್ಮೀರ ಸಮಸ್ಯೆಗೆ ಜೇಹಾದವೊಂದೇ ಮಾರ್ಗವೆಂಬುದನ್ನು ಆಜಾದ ಕಾಶ್ಮೀರ ಜನತೆಯು ಮುಚ್ಚುಮರೆ ಮಾಡಿಲ್ಲ" ಇದೇ ಬಗೆಯ ದ್ವೇಷಕಾರಕ ಪ್ರಚಾರ ಕಾರ್ಯಗಳನ್ನು ಪಾಕಿಸ್ತಾನ ಮಾಡಿದ್ದನ್ನು ಶ್ವೇತ ಪತ್ರದಲ್ಲಿ ಕಾಣಿಸಲಾಗಿದೆ, ಶಾಂತ ಮಾರ್ಗದಿಂದ ಬಗೆಹರಿದೀತೆಂದು ಭಾರತವು ಈ ವರೆಗೆ ನಿರೀಕ್ಷಿಸಿದ್ದು ವ್ಯರ್ಥವಾದುದನ್ನು ಲಕ್ಷಿಸಿಯೇ ಈ ಶ್ವೇತ ಪತ್ರ ಹೊರಡಿಸಲಾಗಿದೆ.

ಕಿಡ್ವಾಯಿಯವರ ಅಂತರ್ಲಾಗ!

ಈಚೆಗೆ ಕೆಲಸಮಯದಿಂದ ಸರಕಾರ ಮತ್ತು ಕಾಂಗ್ರೆಸ್ಸಿನೊಳಗೆ ಬಿಕ್ಕಟ್ಟನ್ನುಂಟುಮಾಡಿದ ರಫಿಅಹಮ್ಮದರ ಪ್ರಕರಣವು ಈಗ ಒಂದ ರೀತಿಯಲ್ಲಿ ಬಗೆಹರಿದಂತಾಯಿತು. ಹಾವು ಸಾಯಲೂ ಬಾರದು; ಕೋಲು ಮುರಿಯಲೂ ಬಾರದೆನುವಂತೆ ರಫಿ ಸಾಹೇಬರು ಕಾಂಗ್ರೆಸ್ಸಿನೊಳ್ಳಗಿದ್ದು ಕುತಂತ್ರ ನಡೆಸಿದರೆನ್ನಬೇಕು. ಪ್ರಜಾಪಕ್ಷದಲ್ಲಿ ರಫಿಯವರ ಕುರಿತು ಅವರಿಗಿರುವ ಒಲವನ್ನು ಹೊಂದಿಕೊಂಡು ಅವರ ಮಿತ್ರರು ಅವರನ್ನು ಬಹಳವಾಗಿ ಪತ್ರಾಯನಡಿಸಿದ್ದರ ಫಲವಾಗಿ ಕೊನೆಯದಾಗಿ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟರು. ಮೊದಲು ಮಂತ್ರಿಪದವಿಗೆ ರಾಜಿನಾಮೆಯನ್ನಿತ್ತು, ಮತ್ತೆ ಮುಖ್ಯಮಂತ್ರಿಯವರ ಕಳಕಳಿಯ ಬಿನ್ನಹದ ಮೇಲು ತೆಗೆದುಕೊಂಡರು. ಆದರೆ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಅವರು ಮಾಡಿದ ನಿಂದಾತ್ಮಕ ಹಾಗೂ ವೈಯಕ್ತಿಕ ಟೀಕೆಗಳು ಗೌಣ ತರುವಂಥಹಗಳಲ್ಲ! ಈ ರೀತಿ ಸ್ವೇಚ್ಛಾನುವೃತ್ತಿಯನ್ನ ಕಾಂಗ್ರೆಸ್ ಸರಕಾರದ ಒಬ್ಬ ಮಂತ್ರಿ ಮಾಡುವದು ಸರಿಯಾದೀತೆ? ಎನುವ ಗೊಂದಲ ಹುಟ್ಟಿತು. ಅಧ್ಯಕ್ಷ ಹಾಗೂ ಮುಖ್ಯಮಂತ್ರಿಗಳೊಳಗೆ ಮತಭೇದ ಹುಟ್ಟುವವರೆಗೆ ಬೆಳೆಯಿತು. ಅಷ್ಟೊಳಗೆ ಕಿಡ್ವಾಯಿಯವರು ಲಕ್ನೋಗೆ ಓಡಿ ಮಿತ್ರರೊಡನೆ ಸಮಾಲೋಚನೆ ನಡೆಸಿ ಮಂತ್ರಿಪದಕ್ಕೆ ತಿರುಗಿ ರಾಜಿನಾಮೆಯನ್ನು ಕೊಡುವ ನಿರ್ಧಾರವನ್ನೂ ಮಾಡಿದರು. ಕಾಂಗ್ರೆಸ್ಸಿನಲ್ಲಿಯೂ ಮಂತ್ರಿಮಂಡಳದಲ್ಲಿಯೂ ರಫಿಯವರ ಪಾತ್ರ ಗಣನೀಯವಾದುದು. ಮಂತ್ರಿಮಂಡಳದಲ್ಲಿ ರಫಿಯವರ ಮೇಲೆ ಜವಾಹರಲಾಲರಿಗೆ ತುಂಬ ವಿಶ್ವಾಸ ಇದೆಗಳಿರಲಿಕ್ಕೆ ಮುಖ್ಯ ಕಾರಣವೆಂದರೆ ಅವರ ಕರ್ತೃತ್ವ ಶಕ್ತಿಯೇ ಮುಖ್ಯವಾಗಿದೆ. ರಾಜಿನಾಮೆಯನಂತರ ರಫಿ ಸಾಹೇಬರು ಕಾಂಗ್ರೆಸ್ಸಿನ ಆಡಳಿತ ಕ್ರಮವನ್ನು ದೂಷಿಸಿಯೂ ಕಾಂಗ್ರೆಸ್ ಅಧ್ಯಕ್ಷರನ್ನು ವೈಯಕ್ತಿಕವಾಗಿ ಟೀಕಿಸಿಯೂ ಕೊಟ್ಟ ಹೇಳಿಕೆಯೂ ನಿಜವಾಗಿಯೂ ಗೌರವಾರ್ಹವಲ್ಲ. ಇಷ್ಟು ದೀರ್ಘ ಕಾಂಗ್ರೆಸಲ್ಲಿದ್ದುಕೊಂಡು ಆ ಮಹಾಸಂಸ್ಥೆಯ ಮೇಲೆ ವೈಯಕ್ತಿಕ ಭಿನ್ನಾಭಿಪ್ರಾಯವನ್ನಿಟ್ಟುಕೊಂಡು ಹಾಗೆ ದೂಷಿಸುವದು ಸರಿಯಲ್ಲ! ಸದ್ಯ ಭಾರತಕ್ಕೆ ಪ್ರಾಪ್ತವಾಗಿರುವ ಗಂಡಾಂತರ ಪರಿಸ್ಥಿತಿಯನ್ನು ಚೆನ್ನಾಗಿ ಅರಿತವರಾದ ರಫಿಯವರು ರಾಜಿನಾಮೆಯನಿತ್ತು ಹೊರಬರುವ ತೀರ ಅನುಚಿತ ಮಾರ್ಗವನ್ನು ಹಿಡಿಯಬಾರದಿತ್ತು. ನೆಹ್ರೂರವರ ವ್ಯಕ್ತಿತ್ವ-ಧೋರಣತ್ವದ ಮೇಲೆ ವಿಶೇಷ ಅವಲಂಬನವನ್ನು ವ್ಯಕ್ತಪಡಿಸಿರುವರು. ಈ ಸಂಕಟಕಾಲದಲ್ಲಿ ಅವರ ಆದೇಶವನ್ನು ಮನ್ನಿಸಿ ಪರಿಸ್ಥಿತಿಯನ್ನೆದುರಿಸುವಲ್ಲಿ ತಾತ್ವಿಕ ಭುಜಕ್ಕೆ ಭುಜಕೊಟ್ಟು ಸಹಕರಿಸುವದರಲ್ಲೇ ರಫಿ ಸಾಹೇಬರಿಗೆ ವಿಶೇಷ ಶ್ರೇ[illegible]. ಆದರೆ ಅವರು ಕೊನೆಗೂ ಬೇರದಾರಿಯೇ ಹಿಡಿದರು. ಇಂದಿನ ಕಾಲಕ್ಕೆ ರಫಿ ಸಾಹೇಬರಂತವರು ಕೇಂದ್ರದಲ್ಲಿ ನೆಹ್ರೂರವರೊಡನೆ ಸಹಕರಿಸಬೇಕಿತ್ತು; ಪರಿಸ್ಥಿತಿ ವಿರುದ್ಧವಾದುದಕ್ಕೆ ನಾವು ನಿಜವಾಗಿಯೂ ವಿಷಾದಿಸಬೇಕಾಗಿದೆ.

ಚಟುವಟಿಕೆ ಉಳ್ಳವರೂ ಆಗಿ ಬದುಕಿನ ರಸಾನುಭವ ಹೀರಿದ ಭಾಗ್ಯಶಾಲಿಗಳಾಗುತ್ತಾರೆ.

ತುಂಬ ಔದಾರ್ಯ ತೋರುವ ಹಲವಾರು ಸಂಸ್ಥೆಗಳ ಸಹಾಯದಿಂದಲೇ ಸೌಕರ್ಯವಿಹೀನ ಮಕ್ಕಳಿಗೆ ಇಂಥದೊಂದು ಅನುಕೂಲ ಕಲ್ಪಿಸಲು ಸಾಧ್ಯವಾಗಿದೆ. ಧಾರ್ಮಿಕ ಸಂಘಗಳು, ಸಾಮಾಜಿಕ ಸಂಸ್ಥೆಗಳು, ನಗರ ಸಭೆಗಳು, ವ್ಯಾಪಾರೀ ವರ್ಗಗಳು ಎಲ್ಲವೂ ಈ ಕೆಲಸದಲ್ಲಿ ನೆರವು ನೀಡುತ್ತವೆ. ಧರ್ಮಾರ್ಥ ಶಿಬಿರಗಳು ಹೊರತಾಗಿ, ವೆಚ್ಚದಲ್ಲಿ ಸ್ವಲ್ಪಾಂಶ ತೆರಬಲ್ಲವರಿಗಾಗಿ ವಿಧಿಸಲಾದ ಖಾಸಗಿ ಶಿಬಿರಗಳೂ ಹಲವಾರು ಇವೆ. ಬಾಯ್ ಮತ್ತು ಗರ್ಲ್ಸ್ ಸ್ಕೌಟ್, ಬಾಯ್ಸ್ ಮತ್ತು ಗರ್ಲ್ಸ್ ಕ್ಲಬ್ಬು, ಕಾರ್ಮಿಕರ ಸಂಘಗಳು, ಶಾಲೆಗಳು ಮುಂತಾದುವು ಈ ಮಾದರಿಯ ಶಿಬಿರಗಳನ್ನು ಏರ್ಪಡಿಸುತ್ತವೆ. ಇನ್ನು ಪೂರ್ಣ ಖರ್ಚು ವೆಚ್ಚವನ್ನು ತಾವೇ ಕೊಟ್ಟು, ಮಕ್ಕಳನ್ನು ಶಿಬಿರ ಜೀವನಕ್ಕಾಗಿ ಕಳಿಸುವ ತಾಯಿ ತಂದೆಯರಿಗಾಗಿ ವಿಶೇಷ ಶಿಬಿರಗಳೂ ಇಲ್ಲದಿಲ್ಲ. ಎಲ್ಲವೂ ಕೂಡಿ ಹತ್ತುಸಾವಿರ ಬೇಸಗೆಯ ಶಿಬಿರಗಳು ಸಂಯುಕ್ತ ರಾಜ್ಯ ಅಮೇರಿಕೆಯಲ್ಲಿ ವರ್ಷ ವರ್ಷವೂ ಕೂಡುತ್ತವೆ. ಅಲ್ಲಿಂದ ತಿರುಗಿ ಹೋಗುವಾಗ ಮಕ್ಕಳು ಮೇಧಾವಿಗಳೂ, ನಿರೋಗಿಗಳೂ, ಆಗಿ, ಉತ್ತಮ ನಾಗರಿಕತೆಯ ದೀಕ್ಷೆ ಪಡೆದಿರುತ್ತಾರೆ.

(ಮೇರಿಬಿಲಾರ್ಡರ ಲೇಖನದಿಂದ ಸಂಗ್ರಹಿತ)

—ಭಾರ್ಗವೇಯ.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

COURT NOTICE

In the Court of the Dt. Munsif of Hosdrug.

R. E. P. No. 470 of 1950
in
O. S. No. 857 of 1949.
Between

Cheriya Krishna— Petr.
and
Talappan Valappil Kannan etc.
—Respts.

Notice is hereby given to the 1st Respondent Talappan Valappil Kannan that the above Execution is posted to 3-9-1951 for the purpose of approving the terms of the Draft Sale Proclamation.

Hosdrug, 3-8-1951 } **C. V. Kamath**
Advocate for Petr.

ರೈಲ್ವೆಜನರ ಹಿತಚಿಂತನೆಗೆ ಲಕೋಟಿ ರೂ. ವೆಚ್ಚ!

ರೈಲ್ವೆ ಶಾಖೆಯ ಅಗತ್ಯ ಕೆಲಸಗಾರರಿಗೆ ಮನೆಗಳನ್ನು ಕಟ್ಟಿಸಿಕೊಡುವದೂ, ಆಸ್ಪತ್ರೆಗಳನ್ನು ತೆರೆಯುವದೂ ಹೊಸ ಉಪಹಾರಗೃಹಗಳನ್ನು ಸ್ಥಾಪಿಸುವದೂ ಇವೇ ಮಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಭಾ.ಸರಕಾರವು ಎಂಟುಕೋಟಿ ರೂಗಳನ್ನು ವಿನಿಯೋಗಿಸುವದು. 1951–'52ರಲ್ಲಿ ಈ ಯೋಜನೆ ಕಾರ್ಯಗತವಾಗುವದು. ಈ ಯೋಜನೆಯಿಂದ 10 ಲಕ್ಷ ಕೆಲಸಗಾರರಿಗೆ ಅತ್ಯಂತ ಪ್ರಯೋಜನವಾಗುವದು. ಮೂರುವರೆ ಕೋಟಿ ರೂ. ಮನೆಕಟ್ಟುವದಕ್ಕಾಗಿಯೇ ಉಪಯೋಗಿಸಲಾಗುವದಂತೆ. 2000 ಹಾಸಿಗೆಗಳುಳ್ಳ 60 ಆಸ್ಪತ್ರೆಗಳನ್ನೂ, 3000 ದವಾಖಾನೆಗಳನ್ನೂ ತೆರೆಯಲಾಗುವದು. ಸರಕಾರದ ಇತರ ಯಾವ ವಿಭಾಗದ ನೌಕರರಿಗೂ ಈ ಬಗೆಯ ಸೌಕರ್ಯ ಸೌಲಭ್ಯಗಳಿರುವದಿಲ್ಲವೆಂದು ಹೇಳಲಾಗುತ್ತದೆ.

ಪೂರ್ವ ಪಾಕಿಸ್ಥಾನದಲ್ಲಿ ವಿದೇಶೀ ಶಸ್ತ್ರಾಸ್ತ್ರಗಳ ಸಂಗ್ರಹ!

ಪೂರ್ವ ಪಾಕಿಸ್ಥಾನದ ಅತ್ಯಂತ ದೊಡ್ಡ ಬಂದರವಾದ ಚಿತ್ತಗಾಂಗದಲ್ಲಿ ವಿದೇಶಗಳಿಂದ ಬರಬಹುದಾದ ಶಸ್ತ್ರಾಸ್ತ್ರಗಳನ್ನು ಇಳಿಸುವುದಕ್ಕಾಗಿಯೂ, ಕೂಡಲೇ ಹಂಚುವದಕ್ಕಾಗಿಯೂ ವಿಶೇಷ ಏರ್ಪಾಟು ನಡೆದಿದೆ. ಕಾನಡಾ ಮತ್ತು ಇಟಲಿಗಳಿಂದ ಅಪರಿಮಿತವಾದ ಸಂಖ್ಯೆಗಳಲ್ಲಿ ಶಸ್ತ್ರಾಸ್ತ್ರಗಳು ಬರುತ್ತಿವೆಯೆಂದು ತಿಳಿದುಬರುತ್ತದೆ. ವಿಮಾನಧಾಳಿಯ ಮುಂಜಾಗ್ರತೆ, ಸೈನಿಕ ಭರ್ತಿಯ ಕಾರ್ಯ ಮಿಲಿಟರಿ ಮತ್ತು ಸೈನ್ಯ ಸಲಕರಣೆಗಳ ಮೂಲಕ ಭದ್ರತೆಯ ಕೇಂದ್ರ ಮುಂತಾದವುಗಳನ್ನು ಸಿದ್ಧಗೊಳಿಸಲಾಗಿದೆ.

ಸಕ್ಕರೆಯ ಉತ್ಪಾದನೆ ಹೆಚ್ಚಿದೆ

ಭಾರತದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಸಕ್ಕರೆ ಉತ್ಪಾದನೆ ಹೆಚ್ಚಿದ್ದು ಮುಂದೆ ಯಾವುದೇ ರೀತಿಯ ಸಕ್ಕರೆ ಕೊರತೆ ನಮಗೆ ಆಗದೆಂದು ಆಹಾರ ಮಂತ್ರಿ ಕೆ. ಎಂ ಮುನ್ಶಿಯವರು ಹೇಳಿದರು ಕಳೆದ ವರ್ಷದ ಉತ್ಪಾದನೆ 9 ಲಕ್ಷ ಟನ್ನಾಗಿದ್ದರೆ ಈ ವರ್ಷ 11 ಲಕ್ಷ 20 ಸಾವಿರ ಟನ್ನುಗಳಷ್ಟಾಗುವವು. ಈಗಿನ ರೇಶನ್ ಪದ್ಧತಿಯಂತೆ ಹಂಚಲು 10 ಲಕ್ಷ ಟನ್ ಸಾಕಾಗುವದು. ಸೀದಾಕ್ಕಿಂತ ಹೆಚ್ಚಿಗೆ ಉತ್ಪಾದಿಸಲ್ಪಟ್ಟ ಸಕ್ಕರೆಯನ್ನು ನೇರಾಗಿ ಕಂಪೆನಿಗಳೇ ವಿಕ್ರಯಿಸುವಂತೆ ಸರಕಾರ ಪರವಾನಿಗೆ ಇತ್ತಿದೆ.

ಬಟ್ಟೆಯ ಬೆಲೆ ತಗ್ಗುವುದು

ಹತ್ತಿಯ ಪೂರೈಕೆಯು ಹೆಚ್ಚಿರುವದರಿಂದ ದೇಶದಲ್ಲಿ ಬಟ್ಟೆಯ ಪೂರೈಕೆಯ ಪರಿಸ್ಥಿತಿಯು ಸುಧಾರಿಸಿರುವುದು. ಗಿರಣಿಗಳಲ್ಲಿಯ ಉತ್ಪಾದನಾ ನಿಯಂತ್ರಿಸಿದ್ದರಿಂದ ಜಿನುಗು ಮತ್ತು ಅತಿಜಿನುಗು ಬಟ್ಟೆಗೆ ಈಗಾಗಲೇ ನೂರಕ್ಕೆ 15ರಂತೆ ಬೆಲೆ ಕಡಿಮೆಯಾಗಿದೆ. ಬರುವ ಆಕ್ಟೋಬರದಿಂದ ಬಟ್ಟೆಯ ಬೆಲೆ ಇನ್ನೂ ಇಳಿಯುವದೆಂದು ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿ ಶ್ರೀ ಮೆಹತಾಬರು ಹೇಳಿದರು.

ಡಾ| ಖಾನ ಸಾಹೇಬರು

ಸ್ಥಾನ ಬದ್ಧತೆಯಲ್ಲಿರುವ ಗಡಿನಾಡು ಪ್ರಾಂತದ ಮಾಜೀ ಮುಖ್ಯಮಂತ್ರಿ ಡಾ| ಖಾನ್ ಸಾಹೇಬರು ಮುಂಬರುವ ಚುನಾವಣೆಯಲ್ಲಿ ಗಡಿನಾಡು ಪ್ರಾಂತದ ತಮ್ಮ ಮತದಾರ ಸಂಘದಿಂದ ನಿಲ್ಲುವರೆಂದು ತಿಳಿದುಬರುತ್ತದೆ.

ನೆಹ್ರೂರವರಿಂದ ಪ್ರಾಂತಗಳಿಗೆ ಸಹಾಯ

ಬಿಹಾರ ಮತ್ತು ಮದ್ರಾಸು ಪ್ರಾಂತಗಳಲ್ಲಿ ಆಹಾರವನ್ನು ದವಾರ್ಘ ಹಂಚುವದಕ್ಕಾಗಿ ಪರಿಹಾರ ನಿಧಿಯಿಂದ ಒಂದೂವರೆ ಲಕ್ಷರೂಪಾಯಿಗಳನ್ನು ಪ್ರಾಂತದ ಮುಖ್ಯಮಂತ್ರಿಗಳಿಗೆ ಕಳಿಸಿರುವರು. ಅದರಲ್ಲಿ ಮದ್ರಾಸಕ್ಕೆ 50,000 ರೂ. ಇರುತ್ತದೆ

ನಿರಾಶ್ರಿತರ ಸಂಖ್ಯೆ ಹೆಚ್ಚುತ್ತಿದೆ.

ಪಾಕಿಸ್ತಾನದಿಂದ ಭಯಭೀತರಾಗಿ ಭಾರತಕ್ಕೆ ಗುಳೇ ಬರುವ ನಿರಾಶ್ರಿತರ ಸಂಖ್ಯೆ ಹೆಚ್ಚುತ್ತಲಿದೆ. ಉತ್ತರ ಪ್ರದೇಶದಲ್ಲಿ ಈಗಾಗಲೇ 4 ಲಕ್ಷ 75 ಸಾವಿರ ನಿರಾಶ್ರಿತರು ಬಂದಿರುವದರಿಂದ ಇನ್ನೂ ಹೆಚ್ಚಿನ ನಿರಾಶ್ರಿತರಿಗೆ ಆಶ್ರಯಕೊಡುವದು ಸಾಧ್ಯವಾಗದೆಂದು ಉತ್ತರ ಪ್ರದೇಶ ಸರಕಾರವು ಭಾರತ ಸರಕಾರಕ್ಕೆ ತಿಳಿಸಿದೆ.

ಸಂಚಾರೀ ಅಂಚೆ ಕಚೇರಿ

ಮದ್ರಾಸದಲ್ಲಿ ಸಂಚಾರೀ ಅಂಚೆ ಕಚೇರಿ ಆರಂಭವಾಗಿದ್ದು ಭಾರತದಲ್ಲಿ ಸಂಚಾರೀ ಅಂಚೆ ಕಚೇರಿಗಳಲ್ಲಿ ಇದು ಮೂರನೆಯದಾಗಿದೆಂದು ತಿಳಿದುಬರುತ್ತದೆ.

ಅಂಚೆ ಕೆಲಸಗಾರರ ಸಂಪು ಸ್ವಾರ್ಥಪೂರ್ಣ!

ಹಿಂದಿನ ಸಂಪರ್ಕ ಶಾಖೆಯ ಮಂತ್ರಿಗಳಾದ ರಫಿ ಅಹಮ್ಮದ ಕಿಡ್ವಾಯಿಯವರು ಅಂಚೆ ಅಧಿಕಾರೀ ಮತ್ತು ಕೆಲಸಗಾರರಿಗೆ ಕೊಟ್ಟ ಬೀಳ್ಕೊಡುವ ಸಂದರ್ಭದಲ್ಲಿ "ದೇಶಕ್ಕೆ ಆಂತರಿಕ ಮತ್ತು ಬಾಹ್ಯ ಈ ಎರಡೂ ಸ್ವರೂಪದ ಗಂಡಾಂತರಗಳು ಬಂದಿವೆ. ಇಂತಹ ಸಂದರ್ಭದಲ್ಲಿ ಅಂಚೆ ಕೆಲಸಗಾರರು ಸಂಪು ಹೂಡಿದರೆ ಇತರರು ಅನುಭವಿಸುವುದಕ್ಕಿಂತ ಹೆಚ್ಚಿನ ಜೀವನ ಮಟ್ಟವನ್ನು ತಮಗೆ ಬಯಸಿ, ಸಂಪು ಹೂಡಿದ ಸ್ವಾರ್ಥದೋಷವು ಅವರ ಮೇಲೆ ಬರುವದು. ಸಾರ್ವಜನಿಕರು ಇದನ್ನು ಸಹಿಸಲಾರರು." ಎಂದಿರುವರು.

ಡಾ| ಗ್ರಾಹ್ಯಾಮರು ಕರಾಚಿಯಲ್ಲಿ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿಗಳಾಗಿರುವ ಡಾ| ಗ್ರಾಹ್ಯಾಮರು ಕಾಶ್ಮೀರದಲ್ಲಿಯ ಒಂದು ವಾರದ ವಾಸ್ತವ್ಯವನ್ನು ಮುಗಿಸಿ ಮೂರನೇ ಬಾರಿಯಾಗಿ ಕರಾಚಿಗೆ ಬಂದಿರುವರು. ಕಾಶ್ಮೀರದ ವಿಷಯದ ಕುರಿತಾಗಿ ಸುದ್ದಿಗಾರರು ಕೇಳಿದ ಯಾವ ಪ್ರಶ್ನೆಗೂ ಅವರು ಉತ್ತರ ಕೊಡಲಿಲ್ಲ.

ಸಾಮ್ಯವಾದೀ ಪಕ್ಷದ ಹುರಿಯಾಳುಗಳು

ಸಾಮ್ಯವಾದೀ ಪಕ್ಷ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಈಗಾಗಲೇ 250 ಹುರಿಯಾಳುಗಳನ್ನು ಆರಿಸಿದ್ದು ಕಲ್ಕತ್ತೆಯಲ್ಲಿ ಮತ್ತೆ ಕೂಡಲಿರುವ ಪಕ್ಷದ ಸಭೆಯಲ್ಲಿ ಇನ್ನೂ ಕೆಲವು ಹುರಿಯಾಳುಗಳನ್ನು ಆರಿಸಲಿದೆ. ಒಟ್ಟಿಗೆ 2000 ಸ್ಥಳಗಳಿಗೆ ಸಾಮ್ಯವಾದೀ ಪಕ್ಷವು ಸ್ಪರ್ಧಿಸುವದು.



ಋತುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ ಹದಿನಷ್ಟ ಋತುಸ್ರಾವವಾಗುವುದು, ಪಕೋಟಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ... ಬೆಲೆ; ರೂ. 3-; ಸ್ಪೆಶಲ್ ... ಅಧಿಕಾಧಿಕ ಸ್ಪೆಶಲ್ ರೂ. ೨-[... ಪನ್ನೆರಡಾಣೆ ಪ್ರತ್ಯೇಕ.]

MIS D. DEVEE, F DS (N J.)
Tollygunge CALCUTTA.
ಸ್ಟಾಕಿಸ್ಟರು ಶರಾಫ಼್ ಕಂಪನಿ, ಮಂಗಳೂರು

TARANATH AYURVEDA VIDYAPEETHA,
BELLARY
ತಾರಾನಾಥ ಆಯುರ್ವೇದ ವಿದ್ಯಾಪೀಠ,
ಬಳ್ಳಾರಿ.

ಮದರಾಸು ಸರಕಾರದವರು ಮೇಲಿನ ಸಂಸ್ಥೆಯನ್ನು ಬಿ ಕ್ಲಾಸ್ ರಿಜಿಸ್ಟರ್ಡ್ ಮೆಡಿಕಲ್ ಪ್ರೇಕ್ಟೀಶನರರ ಶಿಕ್ಷಣ ಕೇಂದ್ರವಾಗಿ ಮಂಜೂರು ಮಾಡಿರುತ್ತಾರೆ.

ಕನಿಷ್ಠ S. S. L. C ಓದಿದ ವಿದ್ಯಾರ್ಥಿಗಳು ಪ್ರವೇಶಾರ್ಹರು. ಹೊಸತಾಗಿ ಸೇರಬಿಚ್ಛಿಸುವ ವಿದ್ಯಾರ್ಥಿಗಳು ಪ್ರವೇಶ ಧನ ರೂ 5/- ಸಹಿತ 10-8-'51ರ ಒಳಗೆ ಪ್ರಿನ್ಸಿಪಾಲರಿಗೆ ಅರ್ಜಿಗಳನ್ನು ಕಳುಹಿಸತಕ್ಕದ್ದು.

ಶಿಕ್ಷಣಾವಧಿಯು ನಾಲ್ಕು ವರ್ಷ.

ಬಿ. ಕೆ. ಮಾರ್ಲ,
ಕಾರ್ಯದರ್ಶಿ.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ. 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೯-೮-'೫೧

ಮದ್ರಾಸ್ ಮುಖ್ಯ ಮಂತ್ರಿಗಳ ಬಾನುಲಿ ಭಾಷಣ

ಪ್ರಧಾನ ಮಂತ್ರಿ ಕುಮಾರಸ್ವಾಮಿ ರಾಜಾರವರು ಮದ್ರಾಸ ಬಾನುಲಿಯಲ್ಲಿ ಮಾತನಾಡುತ್ತಾ, ನಾಲ್ಕು ವರ್ಷಗಳಲ್ಲಿ ಮದ್ರಾಸು ಸರಕಾರ ಸಾಧಿಸಿದ ಹಲವಾರು ಪ್ರಾಂತೀಯ ಅಭಿವೃದ್ಧಿ ಹಾಗೂ ಸುಧಾರಣೆಗಳನ್ನು ವಿವರಿಸಿದರು. ವಿದ್ಯಾಭ್ಯಾಸ, ಆರೋಗ್ಯ, ಆಹಾರ ಸಮಸ್ಯೆ, ಹರಿಜನೋದ್ಧಾರ, ಮದ್ಯಪಾನ ನಿಷೇಧದಲ್ಲಿ ಅಪೂರ್ವ ಪ್ರಗತಿ; ನೀರಾವರೀ ಯೋಜನೆ ಮುಂತಾದ ವಿಚಾರಗಳನ್ನು ಮಂತ್ರಿಗಳು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಈ ಎಲ್ಲ ಸುಧಾರಣೆಗಳು ಕಾರ್ಯರೂಪದಲ್ಲಾದುದೆಷ್ಟು? ಆದರ್ಶರೂಪದಲ್ಲಾದುದೆಷ್ಟು? ಎಂಬುದನ್ನು ನಾವು ಇಲ್ಲಿ ಲಕ್ಷಿಸಬೇಕಾಗಿದೆ. "ವನಮಹೋತ್ಸವ–ಹೆಚ್ಚು ಆಹಾರ ಬೆಳೆಸಿರಿ" ಪ್ರಯೋಗವು ಮದ್ರಾಸ ಪ್ರಾಂತದಲ್ಲಿ ವೆಚ್ಚಮಾಡಿದಷ್ಟು ಯಶಸ್ವಿಯಾಗಲಿಲ್ಲ. ಮುಖ್ಯವಾಗಿ ಆಗಬೇಕಾದ ಕಡೆಯಲ್ಲಿ ಅಭಿವೃದ್ಧಿ ಕಾರ್ಯ ನಡೆದೇ ಇಲ್ಲ. ಪೇಟೆಪಟ್ಟಣಗಳಲ್ಲಿ ಪದ್ಧತಿಯಂತೆ ನಡೆಸುವ ಈ ಆಚರಣೆಯಿಂದ ಮೂಲೋದ್ದೇಶವು ಫಲಿಸಿದ ಲಕ್ಷಣ ಕಂಡು ಬರುವುದಿಲ್ಲ. ಮದ್ಯಪಾನ ನಿಷೇಧ ಕಾಯಿದೆಯ ಸಂಪೂರ್ಣ ಯಶಸ್ಸು ಮದ್ರಾಸಕ್ಕೆ ಸಲ್ಲಬೇಕಾದ್ದು ನ್ಯಾಯವೇ. ಆದರೆ ಕುಡಿಯುವವರ ಸಂಖ್ಯೆಯಾಗಲೀ ಗುಪ್ತ ಸರಾಯಿಯ ತಯಾರಿಕೆಯಾಗಲೀ ಇನ್ನೂ ಸರಕಾರದ ಹತೋಟಿಗೆ ಬಂದಿರುವುದಿಲ್ಲ. ಜನತೆಯ ಸಹಕಾರವಿಲ್ಲದೆ ಈ ಕಾಯಿದೆ ಔಪಚಾರಿಕವಾದೀತೆ ವಿನಹ ವಿಶೇಷ ಪ್ರಗತಿಯನ್ನು ಹೊಂದಲಾರದು.

ಅಣೆಕಟ್ಟುಗಳನ್ನು ಕಟ್ಟಿ ತನ್ಮೂಲಕ ನೀರಾವರೀ ಯೋಜನೆಯನ್ನು ಮಾಡಿ ಕೃಷಿಯ ಅಭಿವೃದ್ಧಿಯನ್ನುಂಟುಮಾಡುವ ಸರಕಾರದ ಯೋಜನೆ ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಪಂಚವಾರ್ಷಿಕ ಯೋಜನೆಯಂತೆ ಸುಮಾರು 7 ಕೋಟಿ ರೂ. ವೆಚ್ಚದ ಚಿಕ್ಕಪುಟ್ಟ ನೀರಾವರೀ ಯೋಜನೆಯು ಕಾರ್ಯರೂಪದಲ್ಲಿ ಬಂದಿದ್ದು 385 ಲಕ್ಷ ಅದಕ್ಕಾಗಿ ತೆಗೆದಿಡಲಾಗಿದೆ. ಇವೆಲ್ಲಕ್ಕಿಂತಲೂ ಅತ್ಯಂತ ಪ್ರಾಮುಖ್ಯವೂ ಇಡಿಯ ಪ್ರಾಂತದ ಆಹಾರ, ಉದ್ಯಮಗಳ ಅಭಿವೃದ್ಧಿಗೆ ಮೂಲಭೂತವೂ ಆದ ಗೋದಾವರೀ ಕೃಷ್ಣಾ, ಮತ್ತು ತುಂಗಭದ್ರಾ ಈ ಮೂರು ಅಣೆಕಟ್ಟುಗಳ ಕಾರ್ಯಯೋಜನೆಯು ಸರಕಾರದ ದೊಡ್ಡ ಸಾಹಸವೆಂದೇ ಹೇಳಬೇಕು. ಈ ಅಣೆಕಟ್ಟುಗಳಿಗೆ 24 ಕೋಟಿ ವೆಚ್ಚ ಬರಬಹುದಾಗಿದೆ. ಅವುಗಳ ಕಾರ್ಯಗಳು ದಿನದಿಂದ ದಿನಕ್ಕೆ ಪ್ರಗತಿ ಹೊಂದುತ್ತಲಿವೆ. ತುಂಗಭದ್ರಾ, ಕೃಷ್ಣಾ, ಗೋದಾವರಿಗಳ ನೀರಾವರೀ ಯೋಜನೆಯಿಂದ ಮೂರು ಲಕ್ಷ ಎಕ್ರೆ ಭೂಮಿ ಕೃಷಿಗಾಗುವ ಳಗಾಗಿ ಉಪಯೋಗಿಸಲ್ಪಡುವದ 35000 ಕಿಲ್ಲೋವಾಟ್ ವಿದ್ಯುಚ್ಛಕ್ತಿಯೂ ದೊರಕುತ್ತದೆ. ಈ ನೀರಾವರೀ ಕಾರ್ಯಕಲಾಪವು ಕೇವಲ ಯೋಜನೆಯಲ್ಲೇ ಉಳಿಯಗೊಳಿಸದೆ ಕಾರ್ಯರೂಪದಲ್ಲಿ ತಂದು ರಾಷ್ಟ್ರನಿರ್ಮಾಣದ ಆದರ್ಶವನ್ನು ತೋರಿಸಿಕೊಟ್ಟ ಮದ್ರಾಸು ಸರಕಾರ ಅಭಿನಂದನೀಯ.

ಹಾಗೆಯೇ ಜನರ ಆರೋಗ್ಯ ರಕ್ಷಣೆಗಾಗಿ ಹೆಚ್ಚಿನ ಮುತುವರ್ಜಿಯನ್ನು ಕೊಡಲಾಗಿದೆ. 1946ರಲ್ಲಿ ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ 54·49 ಲಕ್ಷ ವೆಚ್ಚಮಾಡಿದ್ದರೆ ಈಗಿನ ವೆಚ್ಚವು 111·5 ಲಕ್ಷಕ್ಕೂ ಮೀರಿದೆ. ವಿದ್ಯುತ್ ಶಕ್ತಿಯಿಂದ ಉತ್ಪಾದನಾ ಕಾರ್ಯವು ಹೆಚ್ಚಾಗಿ ದೇಶ ಇನ್ನಷ್ಟು ಸ್ವಾವಲಂಬಿಯಾಗಲು ಸಾಧ್ಯವಿದೆ. ಅಂತೆಯೇ ಮದ್ರಾಸು ಪ್ರಾಂತದ ಪಂಚ ವಾರ್ಷಿಕ ಯೋಜನೆಯಂತೆ 30 ಕೋಟಿ ರೂ. ಇದಕ್ಕಾಗಿ ವೆಚ್ಚಮಾಡಿ 18000 ಕಿಲ್ಲೋವಾಟ್ ವಿದ್ಯುಚ್ಛಕ್ತಿಯ ಸರಬರಾಯಿ ಮಾಡಲಿರುವುದು. ಈಗಾಗಲೇ ವಿದ್ಯುತ್ ಉತ್ಪಾದನಾ ಕಾರ್ಯವೂ, ಹಳ್ಳಿಗಳಿಗೆ ವಿದ್ಯುತ್ತಿನ ಸರಬರಾಯಿ ಕಾರ್ಯವೂ ಭರದಿಂದ ನಡೆದಿರುತ್ತದೆ. ಮದ್ರಾಸ ಪ್ರಾಂತದ 1700 ಹಳ್ಳಿಗಳಿಗೆ ಈ ವಿದ್ಯುತ್ತಿನ ಸೌಕರ್ಯಗಳು ಈಗ ಇರುತ್ತವೆ.

ಮೇಲಿನ ದಾಖಲೆಗಳೂ ಪ್ರಗತಿಪರ ಸುಧಾರಣೆಗಳೂ ಪ್ರಾಂತದ ದೃಷ್ಟಿಯಿಂದ ಉಲ್ಲೇಖಿಸಿದ್ದಾಗಿದೆ. ಮದ್ರಾಸ್ ಪ್ರಾಂತದವರೇ ಆದ ದ. ಕನ್ನಡದವರ ಪಾಲಿಗೆ ಯಾವ ರೀತಿಯ ಲಾಭ ಇದರಿಂದ ಲಭಿಸಿದೆ? ಎಂದು ನಾವಿಂದು ಚಿಂತಿಸುವುದು ಸ್ವಾಭಾವಿಕ. ಸ್ವಾತಂತ್ರ್ಯದ ಈ ನಾಲ್ಕು ವರ್ಷಗಳಲ್ಲಿ ನಾವು ಸಾಧಿಸಿದ್ದೇನು? ನಮ್ಮ ನಾಡಿನ ಅಭಿವೃದ್ಧಿ–ಸುಧಾರಣೆ ಆದದ್ದೇನು? ನಮ್ಮ ಜನಜೀವನದಲ್ಲಾದ ಬದಲಾವಣೆಯೇನ? ಎಂಬುದನ್ನು ನಾವು ಆಲೋಚಿಸಿದರೆ – ಪ್ರಾಂತದ ಪ್ರಗತಿಯೊಡನೆ ನಮ್ಮದನ್ನು ಹೋಲಿಸಿದರೆ ತೀರ ಕಡಿಮೆಯೆಂದೇ ಹೇಳಬೇಕಾಗಿದೆ.

ನೀರಾವರೀ ಯೋಜನೆಯಲ್ಲಾಗಲೀ ವಿದ್ಯುತ್ತಿನ ಉತ್ಪಾದನಾ ವಿಚಾರದಲ್ಲಾಗಲೀ ಆರೋಗ್ಯ ವಿಚಾರದಲ್ಲಾಗಲೀ ದ. ಕನ್ನಡದ ಕುರಿತು ಸಾಕಷ್ಟು ಆಸ್ಥೆ ವಹಿಸಿದಂತಿಲ್ಲ. ಮಂಗಳೂರಿನಂತಹ ಶಹರಿನಲ್ಲಿ ಆನೆಕಾಲು ರೋಗವೇ ಜನಜೀವನವನ್ನು ಹಾಳುಗೆಡಹುತ್ತಿರುವಾಗ– ಜಿಲ್ಲೆಯಲ್ಲಿ ಕ್ಷಯರೋಗಿಗಳ ಸಂಖ್ಯೆ ಪ್ರಾಂತದಲ್ಲಿಯೇ ಹೆಚ್ಚಾಗಿರುವಾಗ ಅದಕ್ಕೆ ಯಾವ ರೀತಿಯ ಪರಿಹಾರ ಮಾರ್ಗವನ್ನೂ ಈ ನಾಲ್ಕು ವರ್ಷಗಳಲ್ಲಿ ನಮಗೆ ಸಾಧಿಸಲಾಗಲಿಲ್ಲ! ಕ್ಷಯರೋಗಿಗಳು ಬೆಂಗಳೂರನ್ನೋ ಮದನಪಳ್ಳಿಯನ್ನೋ ಆಶ್ರಯಿಸಬೇಕು. ಸದ್ಯಕ್ಕೇ ತೆರೆಯಲಾಗುವ ಕೊಯಂಬತ್ತೂರಿನ ಆಸ್ಪತ್ರೆಗೆ ಓಡಬೇಕು. ಮಂಗಳೂರಿನ ಸೆನೆಟೋರಿಯಂ ಇನ್ನೂ ಮೀನ ಮೇಷ ಸ್ಥಿತಿಯಲ್ಲಿದೆ. ಮಂಗಳೂರಿನ ನಳ್ಳಿನೀರ ಸರಬರಾಯಿ ಯೋಜನೆ ಗುರುಪುರ ಹೊಳೆಯ ಕಟ್ಟಣದ ಹೇತುವಿನಿಂದಾಗಿ ಒಂದು ನಿರ್ದಿಷ್ಟ ರೂಪಕ್ಕೆ ಬರದೆ ಹಾಗೆಯೆ ಉಳಿದಿದೆ. ದ. ಕನ್ನಡಕ್ಕೆ ಜೋಗದ ವಿದ್ಯುಚ್ಛಕ್ತಿ ಬರುವದೆಂದು ಈ ತನಕ ಕಾದು ಒಮ್ಮೆಯೇ ಅದನ್ನು ನಿಲ್ಲಿಸುವ ಧೋರಣೆಯನ್ನು ಮದ್ರಾಸು ಸರಕಾರ ಮಾಡಿತು. ಹಲವರು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದಾಗ "ಆಲೋಚಿಸಲಾಗುವದೆಂದು" ಉತ್ತರ ಬಂತು. ಮದ್ರಾಸ ಪ್ರಾಂತದ ಯಾವ ಜಿಲ್ಲೆಯೂ ಇಷ್ಟು ಹಿಂದುಳಿದಿರಲಾರದೆಂದು ನಮಗನ್ನಿಸುತ್ತದೆ.

ಮುಂದೆ ಭಾಷಾನುಗುಣ ಪ್ರಾಂತರಚನೆಯ ತತ್ವದಂತೆ ಒಂದಲ್ಲ ಒಂದು ರೀತಿಯಿಂದ ಮದ್ರಾಸು ಪ್ರಾಂತದ ಸಂಪರ್ಕವನ್ನು ಕಡಿದುಕೊಂಡು ಬೇರಾಗಲಿದ್ದೇವೆ. ಆ ಸಂದರ್ಭದಲ್ಲಿ ನಮ್ಮ ಜಿಲ್ಲೆ ಜನಜೀವನದಲ್ಲಾಗಲೀ– ಕೃಷಿ ಕೈಗಾರಿಕೆಗಳೇ ಮೊದಲಾದ ಉದ್ಯಮಗಳಲ್ಲಾಗಲೀ ಯಾವುದೇ ರೀತಿಯ ಅಭಿವೃದ್ಧಿಯನ್ನು ಹೊಂದದೆ ಉಳಿಯಬೇಕಾಗುತ್ತದೆ. ಇದು ವ್ಯಕ್ತಿಯಿಂದ ದ. ಕನ್ನಡ ಅಲಕ್ಷಿಸಲ್ಪಟ್ಟಿದೆಯೆನ್ನುವ ಅಪವಾದ ಮದ್ರಾಸು ಸರಕಾರದ ಮೇಲೆ ಜನ ಹೊರಿಸುವದನ್ನು ನಾವು ಮುಂದಾಗಿ ಸೂಚಿಸುತ್ತೇನೆ. ಸರಕಾರ ಜಿಲ್ಲೆಯ ಪುನರುತ್ಥಾನಕ್ಕಾಗಿ ಕೈಗೊಂಡಿರುವ ಹಲವು ಯೋಜನೆಗಳನ್ನಾದರೂ ಶೀಘ್ರದಲ್ಲೇ ಕಾರ್ಯಾಚರಣೆಯಲ್ಲಿ ತಂದು ಆ ಅಪವಾದವನ್ನು ಹೋಗಲಾಡಿಸಬೇಕು. ಕೇಂದ್ರ ಸರಕಾರದ ಬಂದರ ಅಭಿವೃದ್ಧಿ ಯೋಜನೆಗೆ ಪ್ರಾಂತೀಯ ಸರಕಾರ ತೋರಿಸಿದ ಒಲವು ಏನೇನೂ ಸಾಲದೆಂಬುದು ನಮ್ಮ ಅಭಿಪ್ರಾಯ. ಏನೇ ಇದ್ದರೂ ದಕ್ಷಿಣ ಕನ್ನಡ ಪ್ರಾಂತೀಯ ಸರಕಾರಕ್ಕೆ ನೀಡಿದ ಸಹಕಾರದಲ್ಲಾಗಲೀ– ಪ್ರೋತ್ಸಾಹದಲ್ಲಾಗಲೀ ಕಡಿಮೆಯಾದುದಿಲ್ಲ! ಅಂತಲೇ ಜಿಲ್ಲೆಯ ಅಭಿವೃದ್ಧಿ ಪುನರುತ್ಥಾನದ ಕಡೆಗೆ ಮದ್ರಾಸು ಸರಕಾರದ ಗಮನವನ್ನು ಸೆಳೆದರೆ ಸ್ವಾರ್ಥದೋಷ ನಮ್ಮ ಮೇಲೆ ಬರಲಾರದೆಂದು ಭಾವಿಸುತ್ತೇನೆ.

ನೆರೆಯ ರಾಷ್ಟ್ರಗಳಲ್ಲಿ ಸ್ನೇಹ ಸಂವರ್ಧನೆಯೇ ನಮ್ಮ ಧೋರಣೆ

ಪಾರ್ಲಿಮೆಂಟನ್ನು ಉದ್ಘಾಟಿಸುತ್ತಾ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು: "ನೆರೆಯ ರಾಷ್ಟ್ರಗಳೊಡನೆ ಸ್ನೇಹ ಸೌಹಾರ್ದದಿಂದ ವರ್ತಿಸುವುದೇ ನಮ್ಮ ಧೋರಣೆಯಾಗಿದೆ. ಭಾರತ ಪಾಕಿಸ್ತಾನಗಳೊಳಗೆ ಗಂಭೀರ ಪರಿಸ್ಥಿತಿಯುಂಟಾಗುತ್ತಿರುವುದಕ್ಕೆ ವಿಷಾದಿಸಬೇಕಾಗಿದೆ. ಉಭಯರಾಷ್ಟ್ರಗಳೊಳಗೆ ಬಿಡಿಸಲಾಗದ ಹಲವು ಸಮಸ್ಯೆಗಳು ಇನ್ನೂ ಹಾಗೇ ಉಳಿದಿವೆ. ಇಂತಹ ಸಮಸ್ಯೆಗಳನ್ನು ಶಾಂತರೀತಿಯಿಂದ ಬಗೆಹರಿಸಿ ಪಾಕಿಸ್ತಾನದೊಡನೆ ಮೈತ್ರಿಯಿಂದಿರುವುದೇ ನಮಗೆ ಬೇಕಾಗಿದೆ. ಪಾಕಿಸ್ತಾನದಲ್ಲಿ ಭಾರತದ ವಿರುದ್ಧ ಯುದ್ಧಪ್ರಚಾರ–ಸಿದ್ಧತೆ ಬಹಿರಂಗವಾಗಿ ನಡೆಯುತ್ತಲಿದೆ. ಆಕಸ್ಮಿಕ ಬರಬಹುದಾದ ಗಂಡಾಂತರವನ್ನೆದುರಿಸುವದಕ್ಕೆ ಭಾರತ ಸ್ವರಕ್ಷಣೆಯನ್ನು ಮುಂದಾಗಿ ನೋಡಿಕೊಳ್ಳುವುದು ನ್ಯಾಯವೇ ಆಗಿದೆ. ಅಂತು ಯಾವುದೇ ಮುಂಜಾಗ್ರತೆಯನ್ನು ನಾವು ನೋಡಿಕೊಳ್ಳುವದಾದರೂ ಅದರ ಮೂಲೋದ್ದೇಶ ಶಾಂತಿಯನ್ನು ಕಾಪಾಡಿಕೊಂಡು ಯುದ್ಧವನ್ನು ನಿಷೇಧಿಸುವುದೇ ಆಗಿರುತ್ತದೆ" ಎಂದಿರುವರು.

ಕೊರಿಯದ ಮಾತುಕತೆಯಲ್ಲಿ ಪ್ರಗತಿಯಿಲ್ಲ!

ಕೊರಿಯ ತಟಸ್ಥ ಪ್ರದೇಶವಾದ ಕೆಸಾಂಗದಲ್ಲಿ ಸಶಸ್ತ್ರ ಚೀನೀ ಸೈನಿಕರು ಅನಿರೀಕ್ಷಿತವಾಗಿ ಸೇರಿದ್ದರಿಂದ ಯು. ರಾ. ಸಂಘದವರು ಮಾತುಕತೆಯನ್ನು ನಿಲ್ಲಿಸಿದರು. ಜ. ರಿಜವೆಯವರು ಚೀನಿಯರ ಈ ವಚನಭ್ರಷ್ಟತನಕ್ಕೆ ಸ್ಪಷ್ಟೀಕರಣ ಕೇಳಿರುವರು. ಕಮ್ಯೂನಿಸ್ಟರು ತಮ್ಮ ಸೈನ್ಯಸಂಖ್ಯೆಯನ್ನು ವರ್ಧಿಸುತ್ತಾ ಕಾಳಗವನ್ನು ಮುಂದುವರಿಸುವದು ಕಂಡುಬರುತ್ತದೆ. ಯು. ರಾ. ಸಂಘದವರು ಇದನ್ನೆಲ್ಲ ಅವಲೋಕಿಸಿದ ಮೇಲೆ ಸಂಧಾನದ ಮಾತುಕತೆಯಲ್ಲಿ ಯಶಸಿಗುವದು ಅಸಂಭವವೆಂದು ಭಾವಿಸಿದಂತಿದೆ.

ಪರ್ಶಿಯದಲ್ಲೇನು?

ಪರ್ಶಿಯದಲ್ಲಿ ಬ್ರಿಟಿಶ ಪ್ರತಿನಿಧಿಗಳೊಡನೆ ಮಾತುಕತೆ ನಡೆಸುವದರ ಸಲುವಾಗಿ ಡಾ। ಮುಸಾದಿಕರು ಪಾರ್ಲಿಮೆಂಟಿನ ಅಭಿಪ್ರಾಯವನ್ನು ಕೇಳಿದಾಗ ಮಜ್ಲಿಸ ಪಕ್ಷದ ಕೆಲವರು ಇದಕ್ಕೆ ವಿರೋಧ ಸೂಚಿಸಿದರೂ ಕೊನೆಗೆ ಮಾತುಕತೆಗೆ ಸಮ್ಮತಿಯನ್ನಿತ್ತರು. ಎಣ್ಣೆ ಕಂಪೆನಿಯ ಪರವಾಗಿ ಇಂಗ್ಲಂಡದ ಅರ್ಥ ಮಂತ್ರಿ ಮಾತುಕತೆಯಲ್ಲಿ ಭಾಗವಹಿಸುವರು.

ದೇಶರಕ್ಷಣೆಗೆ ಮುಂದೆಬಂದ ಪ್ರತಿಜ್ಞಾಬದ್ಧ ತರುಣ ತರುಣಿಯರು

ಕಲ್ಕತ್ತಾ ಹಿಂದೂ ಮಹಾಸಭೆಯ ಪ್ರಮುಖರಾದ ಅಶುತೋಷ ಲಾಹಿರಿಯವರು ಪಾಕಿಸ್ತಾನದ ಪ್ರತಿಭಟನೆಯನ್ನು ಎದುರಿಸುವುದಕ್ಕೂ ದೇಶಕ್ಕೆ ಬರಬಹುದಾದ ಗಂಡಾಂತರವನ್ನು ಎದುರಿಸುವುದಕ್ಕೂ 50,000 ಸ್ವಯಂ ಸೇವಕರು ಸರಕಾರದ ಸಹಾಯಕ್ಕೆ ಸದಾ ಸಿದ್ಧರಿರುವರೆಂದು ತಿಳಿಸಿರುವರು.

ರಕ್ತಲಿಖಿತ ಪ್ರತಿಜ್ಞೆ

'ದೇಶರಕ್ಷಣೆಗಾಗಿ ಯಾವಕ್ಷಣಕ್ಕೂ ನಾವು ಆತ್ಮಾರ್ಪಣೆ ಮಾಡಲು ಸಿದ್ಧರಿದ್ದೇವೆ–ಪಾಕಿಸ್ತಾನದ ಆಕ್ರಮಣವನ್ನು ಎದುರಿಸಲು ನಾವು ಸರಕಾರಕ್ಕೆ ಸಂಪೂರ್ಣ ಸಹಾಯ ನೀಡುತ್ತೇವೆ" ಎಂಬುದಾಗಿ ದಿಲ್ಲಿಯ 1000 ಜನ ಸ್ತ್ರೀಪುರುಷರು ತಮ್ಮ ರಕ್ತದಿಂದ ಅಂಕಿತವನ್ನು ಹಾಕಿ ಪ್ರತಿಜ್ಞೆಯನ್ನು ಕೊಟ್ಟರು. ಪ್ರಥಮತಃ ಅಂಕಿತ ಹಾಕಿದವರೆಂದರೆ ಹಿಂದೂ ಮಹಾಸಭೆಯ ಕಾರ್ಯದರ್ಶಿಯವರು.

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ಅಂತ್ಯಕ್ಕೆ ನವಯುಗದ 31ನೇ ವರ್ಷವು ಅಂತ್ಯವಾಗಿ ಸಪ್ಟಂಬರ ತಿಂಗಳಿಂದ 32ನೆ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರು ತಮ್ಮ ಚಂದಾಹಣವನ್ನು, ಬಾಕಿ ಇದ್ದವರು ಅದನ್ನು ಕೂಡಾ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

ಉಡುಪಿ

ಕುಷ್ಠರೋಗ ನಿವಾರಣಾ ಸಂಘ ಸ್ಥಾಪನೆ—ಉಡುಪಿ ತಾಲೂಕಿಗೊಂದು ಕುಷ್ಠರೋಗ ನಿವಾರಣಾ ಸಂಘವು ಇದೇ ತಾ. 3ರಲ್ಲು ಮುಕುಂದ ನಿವಾಸದಲ್ಲಿ ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಸ್ಥಾಪಿಸಲ್ಪಟ್ಟಿತು. ಕಾರ್ಯನಿರ್ವಾಹಕ ಸ್ಥಾನಗಳಿಗೆ ಡಾ। ಪಿ. ಜಿ. ಆಚಾರ್ಯರು ಅಧ್ಯಕ್ಷರಾಗಿಯೂ ಡಾ। ಕೆ. ಮೋಹನದಾಸ ಪೈ, ಡಾ। ಬಿ. ಬಾಲಕೃಷ್ಣ ಸೆಟ್ಟಿ ಮತ್ತು ಮುನಿಸಿಪಲ್ ಚೆಯರ್‌ಮೇನ್ ಶ್ರೀಯು ಎಸ್. ನಾಯ್ಕರು ಉಪಾಧ್ಯಕ್ಷರಾಗಿಯೂ ಡಾ। ಕೆ. ರಾಮಚಂದ್ರರಾವ್ ಮತ್ತು ಟಿ. ಎ. ಪೈಗಳು ಜತೆಕಾರ್ಯದರ್ಶಿಗಳಾಗಿಯೂ ಶ್ರೀ ಶ್ರೀಪತಿ ಆಚಾರ್ಯರು ಖಜಾನ್ಜಿಯರಾಗಿಯೂ ಆರಿಸಲ್ಪಟ್ಟರು. ಸಪ್ಟಂಬರ ತಿಂಗಳಲ್ಲಿ ಕುಷ್ಠರೋಗ ನಿವಾರಣಾ ಸಪ್ತಾಹವನ್ನು ಆಚರಿಸಬೇಕೆಂದಾಯಿತು.

Vijaya Construction & Commercial Corporation Ltd, KALLIANPUR.

NOTICE.

Application has been received by the above company for issuing to Sri Hirebettu Sadashiva Hegde, Hirebettu, Hiriadka Post, S. Kanara District a duplicate Share Certificate of 35 Shares in the company upon the statement that the original certificate no. 11 for 35 shares numbering from 350 to 384 has been lost. Notice is hereby given that if within two weeks from the date hereof no claim or representation is made in respect of the said original certificate to the Directors they will proceed to deal with the aforesaid application for duplicate share certificate.

B. Seetharam Hegde,
Managing Director for
Managing Agency.
Kallianpur. Dated 1-8-51

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 192/1951

ಓಬಯ್ಯ ಹೆಗ್ಡೆ —ವಾದಿ

ಮಹಾಬಲ ಸೆಟ್ಟಿ ನೀರೆ ಮೇಲ್ಮನೆ ನಾಗಪ್ಪ ಸೆಟ್ರ ಮಗ ಕಾರ್ಕಳ ತಾಲೂಕು ನೀರೆ ಗ್ರಾಮದಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದರೆ—

ಪ್ರತಿವಾದಿಯು ವಾದಿಗೆ ತಾರೀಖು 20-5-1948ರಲ್ಲು ಬರೆಕೊಟ್ಟ ರೂಪಾಯಿ 360-0-0ರ ಡಿಮಾಂಡು ಪ್ರಾಮಿಸರಿ ನೋಟಿನ ಪ್ರಕಾರ ಬಾಕಿ ಅಸಲು ಬಡ್ಡಿ ವ್ಯವಜು ಬರಮಾಡುವ ಬಗ್ಗೆ ಪ್ರತಿವಾದಿಯ ಮೇಲೆ ವಾದಿಯು ಮಾಡಿರುವ ಸದ್ರಿ ದಾವೆಯು ಅಕ್ಕರು ತಸ್ತಿ ಬಗ್ಗೆ ತಾ. 20-8-1951ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ನೀವು ಯೇನಾದರೂ ಆಕ್ಷೇಪ ಹೇಳುವುದಿದ್ದರೆ ಸದ್ರಿ ದಿನ ಹಗಲು 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ಸದ್ರಿ ದಾವೆಯು ವಾದಿಯ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

ಕಾರ್ಕಳ ತಾ. 4-8-51 | **K. M. Hegde,** ವಾದಿಯ ಪರ ವಕೀಲ್

ಉಡುಪಿ ಕಾಂಗ್ರೆಸ್ ಕಮಿಟಿ ಸಭೆಯು—ಇದೇ ತಾ. 6ರಲ್ಲು ಶ್ರೀ ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಯಂಸೇವಕ ದಳವನ್ನು ತಯಾರಿಸಬೇಕೆನ್ನುವ, ನೂಲುವ ಪ್ರಚಾರ ಕಾರ್ಯ ಕೈಕೊಳ್ಳಬೇಕೆನ್ನುವ, ರೇಶನಿಂಗ್ ಜ್ಯಾರಿಯಲ್ಲಿರುವ ಪ್ರದೇಶಗಳಲ್ಲಿ ಕೊಡುವಷ್ಟೆ ಅಂಶ ಅಕ್ಕಿ ಸೀಮಾ ಪದ್ಧತಿ ಮನ್ನಾಮಾಡಲ್ಪಟ್ಟ ಗ್ರಾಮಗಳಲ್ಲಿಯೂ ಸಿಗುವಂತಾಗಬೇಕೆನ್ನುವ, ಸ್ಥಳೀಯ ಫಯರ್ ಸರ್ವಿಸ್ ದಳಕ್ಕೆ ಎಂಬುಲೆನ್ಸ್ ಕಾರನ್ನು ಒದಗಿಸಿಕೊಡಬೇಕೆನ್ನುವ, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಯಶಸ್ವಿಯಾಗುವಂತೆ ಕಾಂಗ್ರೆಸ್ ಕೆಲಸಗಾರರೂ ಕಾಂಗ್ರೆಸ್ ಹಿತೈಷಿಗಳೂ ಪ್ರಚಾರಕಾರ್ಯನಡೆಸಬೇಕೆನ್ನುವ ನಿರ್ಣಯಗಳಾದುವು.

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು—ಡಾ। ಕೆ. ಎಸ್. ಆಳ್ವ, ಶ್ರೀಗಳಾದ ಕೆ. ಕೆ. ಸೆಟ್ಟಿ, ಬಿ. ಆರ್. ಕರ್ಕೇರ, ಎಮ್. ಡಿ. ಅಧಿಕಾರಿ ಮತ್ತು ಪ್ರಾಂತಿಕ ಚುನಾವಣಾ ಮಂಡಲದ ಸದಸ್ಯ ಶ್ರೀ ಎಸ್. ಎಸ್. ಕಿಲ್ಲೆಯವರು ಇದೇ ತಾ. 6ರಲ್ಲು ಉಡುಪಿಗೆ ಆಗಮಿಸಿ ಸ್ಥಳೀಯ ಕಾಂಗ್ರೆಸ್ ಕಮಿಟಿಯ ವತಿಯಿಂದ ಕರೆಯಲಾದ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಮತ್ತು ಕಾಂಗ್ರೆಸ್ ಹಿತೈಷಿಗಳ ಸಭೆಯಲ್ಲಿ ಭಾಗವಹಿಸಿದರು. ಶ್ರೀ ಎಸ್. ಎಸ್. ಕಿಲ್ಲೆಯವರು ತಾವು ಬಂದುದರ ಉದ್ದೇಶವೇನೆಂಬುದನ್ನು ವಿವರಿಸಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳೇ ಆರಿಸಿ ಬರುವಂತಾಗಬೇಕೆಂದರು. ಶ್ರೀ ಕೆ. ಕೆ. ಸೆಟ್ಟರು ಕಾಂಗ್ರೆಸಿನ ವಿರುದ್ಧ ಪಕ್ಷಗಳ ಚಟುವಟಿಕೆಗಳನ್ನು ವರ್ಣಿಸಿ ಮುಂದಿನ ಚುನಾವಣೆಯಲ್ಲಿ ಜಾತೀಯತಾ ಭಾವನೆ ಬರಕೂಡದೆಂದರು. ಡಾ। ಕೆ. ಎಸ್. ಆಳ್ವರು ನಮ್ಮ ಜಿಲ್ಲೆಗೆ ಮುಂದಿನ ಚುನಾವಣೆಯಲ್ಲಿರತಕ್ಕ ಸೀಟುಗಳು ಅವುಗಳ ಪೈಕಿ ಕಾದಿರತಕ್ಕ ಸ್ಥಾನಗಳು, ಬಾಕಿ ಉಳಿಯುವ ಸೀಟುಗಳ ಕುರಿತು ಪ್ರಸ್ತಾಪಿಸುತ್ತಾ ಒಂದೆರಡು ಸೀಟುಗಳಿಗೆ ಸ್ಥಳೀಯರನ್ನೇ ಆರಿಸಲು ಸಾಧ್ಯವಾಗದೆಂದು ಸೂಚಿಸಿದರು. ಸಭಿಕರ ಪೈಕಿ ಶ್ರೀಗಳಾದ ಶ್ರೀಪತಿ ಆಚಾರ್, ಎಂ. ವಿಠ್ಠಲ ಕಾಮತ್, ಬಿ. ಸಂಜೀವಪ್ಪ ಮೊದಲಾದವರು ತಮ್ಮ ಅಭಿಪ್ರಾಯಗಳನ್ನಿತ್ತು ಆಯಾಯ ಮತದಾರ ಕ್ಷೇತ್ರದವರನ್ನೇ ಕಾಂಗ್ರೆಸ್ ಹುರಿಯಾಳಾಗಿ ಆರಿಸಬೇಕೆಂದರು. ಶ್ರೀ ಎಮ್. ಡಿ. ಅಧಿಕಾರಿಗಳು ಸರ್ವರೂ ಕಾಂಗ್ರೆಸ್ಸನ್ನು ಬಲಪಡಿಸಲು ಮುಂದಾಗಬೇಕೆಂದರು. ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದ ನಂತರ ಸಭೆ ಚದರಿತು.

ಹರಿಕಥೆ—ಶ್ರೀ ಅದಮಾರು ಮಠದ ಸ್ವಾಮಿಗಳವರ ನೇತೃತ್ವದಲ್ಲಿ ತಾ. 5ರಲ್ಲು ಶ್ರೀ ಗೋವಿಂದ ದಾಸರು 'ಧ್ರುವಚರಿತ್ರೆ' ಹರಿಕಥಾ ಕಾಲಕ್ಷೇಪವನ್ನಿತ್ತರು. ತಾ. 12ರಲ್ಲು ಶ್ರೀ ಗುರುವೇದವ್ಯಾಸರಿಂದ ಹರಿಕಥಾ ನಡೆಯಲಿದೆ.

ಭಜನ ಸಪ್ತಾಹ ಪ್ರಾರಂಭ—ಸ್ಥಳೀಯ ಗೌಡ ಸಾರಸ್ವತ ಸಮಾಜದ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಇದೇ ತಾ. 7ರಲ್ಲು ಭಜನ ಸಪ್ತಾಹ ಪ್ರಾರಂಭವಾಗಿದೆ.

ಉಡುಪಿಗೊಂದು ಮೆಡಿಕಲ್ ಕಾಲೇಜನ್ನು—ಎಕೆಡಮಿ ಓಫ್ ಜನರಲ್ ಎಜ್ಯುಕೇಶನ್ ನೇತೃತ್ವದಲ್ಲಿ ತೆರೆಯುವ ಯೋಜನೆಯೊಂದನ್ನು ಎಕೆಡಮಿ ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈಗಳು ಇದೇ ತಾ. 3ರಲ್ಲು ಪೂರ್ವಾಹ್ನ ಮುಕುಂದ ನಿವಾಸದಲ್ಲಿ ಸೇರಿದ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ವಿವರಿಸುತ್ತಾ ಅದರ ರೂಪರೇಖೆಗಳ ಕುರಿತು ಭಾಷಣವಿತ್ತರು. ಪತ್ರಿಕೋದ್ಯೋಗಿಗಳು ಈ ಕುರಿತು ಜನಮತವನ್ನು ರೂಪುಗೊಳಿಸಲು ಸಹಕರಿಸಬೇಕೆಂದು ಕೇಳಿಕೊಂಡರು. ಈ ಯೋಜನೆಯು ವ್ಯವಹಾರ್ಯವಿದ್ದು ಅದು ಸಫಲವಾಗುವುದರಲ್ಲಿ ಸಂಶಯವಿಲ್ಲವೆಂದೂ ತಮ್ಮಿಂದಾದ ಕಾರ್ಯವನ್ನು ಮಾಡಲು ಸದಾ ಸಿದ್ಧರಿರುವುದಾಗಿ ಶ್ರೀಗಳಾದ ಕೆ. ಹೊನ್ನಯ್ಯ ಸೆಟ್ಟಿ, ಕೌಲಗಿ ಶೇಷಾಚಾರ್ ಎಚ್. ಸುಂದರರಾವ್, ಯು. ವ್ಯಾಸರಾವ್ ಮತ್ತು ಆರ್. ಎಸ್. ಶೆಣೈಯವರು ಹೇಳಿದರು. (ಈ ಯೋಜನೆಯ ಸವಿವರವನ್ನು ಹಿಂದಿನಿಂದ ಕೊಡಲಾಗುವುದು).

ಶ್ರೀ ಕೃಷ್ಣಾಪುರ ಮಠದ ಕಡೆಯಿಂದ—ಎಗ್ಜಿಕ್ಯೂಟಿವ್ ಆಫೀಸರ್ ಶ್ರೀ ಎ. ಕೃಷ್ಣಮೂರ್ತಿರಾವ್; ಬಿ. ಕಾಮ್, ಎಲ್. ಎಲ್. ಬಿ. ಅವರು ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ರೂಪಾಯಿ 2000/-, ಸಂಸ್ಕೃತ ಕಾಲೇಜಿಗೆ ರೂ. 4000/- ಸಹಾಯಧನವಾಗಿ ಕೊಟ್ಟಿರುವರೆಂದು ತಿಳಿದುಬರುತ್ತದೆ.

ಎಮ್. ಜಿ. ಎಮ್. ಕಾಲೇಜಿನ—ಭಾಷಾ ಸಂಘದ ಉದ್ಘಾಟನಾ ಸಮಾರಂಭವನ್ನು ಇದೇ ತಾ. 10ನೇ ಶುಕ್ರವಾರ ಸಂಜೆ 3-30ಕ್ಕೆ ಶ್ರೀ ಕೈಯಾರ ಕಿಞ್ಞಣ್ಣ ರೈಗಳವರು ನೆರವೇರಿಸಲಿರುವರು. ಸರ್ವರಿಗೂ ಸ್ವಾಗತವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಧರ್ಮಸ್ಥಳ — ಮಳೆದೆಸೆಯಿಂದ, ಜನರಿಗೆ ಇಲ್ಲಿಗೆ ಬರಲು ತೊಂದರೆಯಾಗುವ ಕಾರಣ ಡಾ। ಮೋದಿಯವರ ಕಣ್ಣು ಚಿಕಿತ್ಸೆ ಕಾರ್ಯಕ್ರಮವನ್ನು ಇದೇ ಬರುವ ಅಕ್ಟೋಬರ ತಿಂಗಳು 15ನೆ ತಾರೀಕಿಗೆ ಮುಂದರಿಸಲಾಗಿದೆ.

ಪೆರಂಪಳ್ಳಿ—ತಾ 31-7-51ರಲ್ಲು ಶ್ರೀ ಪಿ ಯಸ್. ರಾಮರಾಯರಲ್ಲಿ ಕಿನ್ನಿಮುಲ್ಕಿ ಹರಿದಾಸ ಶ್ರೀ ಪದ್ಮನಾಭಾಚಾರ್ಯರಿಂದ ಬಲಿಚಕ್ರವರ್ತಿಯೆಂಬ ಹರಿಕಥಾ ಕಾಲಕ್ಷೇಪವು ರಸವತ್ತಾಗಿ ಜರಗಿತು.

ವಾರಕ್ಕೊಂದು ಊಟ ಬಿಟ್ಟುಬಿಡುವ ಚಳವಳಿಗೆ ಬೆಂಬಲ ಕೊಡಿರಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ಕಳೆದ ಮೇ ತಿಂಗಳ ತಾ 1ರಲ್ಲು ಭಾರತದ ಆಹಾರ ಸಮಸ್ಯೆಯನ್ನು ಬಗೆ ಹರಿಸುವುದರಲ್ಲಿ ಭಾರತೀಯರು ವಾರದಲ್ಲಿ ಒಂದೂಟವನ್ನು ಮನ್ನಾಮಾಡಿ ಹಾಗೆ ಉಳಿತಾಯವಾದುದನ್ನು ಧರ್ಮಾರ್ಥ ಸರಕಾರಕ್ಕೆ ಒಪ್ಪಿಸಿ ಸಹಕರಿಸಬೇಕಾಗಿ ಜಾಹೀರು ವಿನಂತಿ ಮಾಡಿದ್ದ ಆದೇಶವನ್ನು ಸಾಧಿಸಲು ದ. ಕ. ಜಿಲ್ಲೆಯ ಮಹಾಜನರೂ ಮನಸ್ಸು ಮಾಡಬೇಕಾಗಿ ಜಿಲ್ಲಾ ಕಲೆಕ್ಟರ್ ಶ್ರೀ ಆರ್. ಎ. ರಾಜರತ್ನಂ, ಅವರು ಕೂಡಾ ಒಂದು ವಿನಂತಿ ಪತ್ರವನ್ನು ಹೊರಡಿಸಿರುವರು. ದ. ಕ. ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರಮುಖ ಕೇಂದ್ರಗಳಲ್ಲಿ ಧರ್ಮಾರ್ಥ ಆಹಾರ ಧಾನ್ಯಗಳನ್ನು ಸ್ವೀಕರಿಸುವ ವ್ಯವಸ್ಥೆ ಮಾಡಲಾಗಿದೆ, ನಿರ್ದಿಷ್ಟ ದಿನಗಳಲ್ಲಿ ಆಯಾಯ ತಾಲೂಕು ಸಪ್ಲೈ ಆಫೀಸರರು ಆಯಾಯ ಸೆಂಟರಿಗೆ ಬಂದು ಆಹಾರ ಧಾನ್ಯಗಳ ದಾನ ಸ್ವೀಕರಿಸುವರು. ಸೀಮಾಪದ್ಧತಿ ಜ್ಯಾರಿಯಿರುವಲ್ಲಿ ರೇಶನಿಂಗ್ ಆಫೀಸುಗಳಿಗೆ ತಲ್ಪಿಸಬಹುದು ಎಂಬುದೇ ಕಲೆಕ್ಟರರ ವಿನಂತಿಯ ಸಾರಾಂಶ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ.
0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೋಲೇಜು
ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಳಾಸ:—

ನವಭಾರತ ಪುಸ್ತಕ ಭಂಡಾರ



Approved from by the Govt. of Mysore Certificated by the Agent of the Govt of Cylone & Indian

---



ನಡಿಯುವ ಚಿತ್ರ

ಮೆಟ್ರೊ ಗೋಲ್ಡ್‌ವಿನ್ ನವರ
ಲಾಸ್ಸಿ ಕಮ್ ಹೋಮ್.
ವರ್ಣಚಿತ್ರ

ತಾ 11-8-51ರಿಂದ

ಬಾಂಬೇ ಟಾಕೀಸಿನವರ

ಜಿದ್ದಿ

ಕಾಮಿನಿ ಕೌಶಲ್, ದೇವ ಆನಂದ, ವೀರಾ, ಇಂದು, ಕುಲದೀಪ್, ನವಾಬ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು

ಭೀಷ್ಮ ಪ್ರತಿಜ್ಞಾ, **FOR EVER AMBER** ದಾಸ್ತಾನ್ ಇತ್ಯಾದಿ.

ಮಂಗಳೂರು

ನಗರ ಸಭೆಯಲ್ಲಿ ಲೇಖನದ ಖಂಡನೆ— ಕಳೆದ ತಾ 28ರಲ್ಲಿ ಮಂಗಳೂರು ನಗರ ಸಭೆಯು ಶ್ರೀ. ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಇತ್ತೀಚೆಗೆ 'ಜ್ಯೋತಿ' ಪತ್ರಿಕೆಯಲ್ಲಿ ಪ್ರಕಟವಾದ 'ನಾಕಂಡ ನಗರ ಸಭೆ' ಎಂಬ ಲೇಖನದ ಖಂಡನೆಯ ನಿರ್ಣಯ ಪಾಸಾಯಿತು. ಮಂಗಳೂರಿನ ನೀರಿನಸರಬರಾಯಿ ವಿಚಾರದಲ್ಲಿ ನೇತ್ರಾವತಿ ಯೋಜನೆಯನ್ನು ಸರಕಾರವು ಕೈಕೊಂಡು ಕೂಡಲೇ ಕೆಲಸವಾರಂಭಿಸಬೇಕೆಂಬ ನಿರ್ಣಯವೂ ಆಯಿತು.

ಹೊಟೆಲ್ ಮಜೂರ್ ಸಭೆಯ ವರ್ಷಾವಧಿ ಮಹಾಸಭೆಯು ಕಳೆದ ತಾ. 29ರಂದು ರಾತ್ರಿ ಶ್ರೀ ಬಿ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ವಿಠಲದಾಸರು ಮಹಾಸಭೆಯನ್ನು ಉದ್ಘಾಟಿಸುತ್ತಾ, ಕೆಲಸಗಾರರ ಸಂಘದ ಸ್ಥಾಪನೆಗಾಗಿ ಕೆಲಸಗಾರರು ಒಂದಾಗಿ ದುಡಿಯಬೇಕೆಂದರು. ಸಂದೇಶವಾಚನ, ಅಧಿಕಾರಿಗಳ ಚುನಾವಣೆ ಕೆಲವು ಠರಾವುಗಳಾಗಿ, ಶ್ರೀ ಶ್ರೀನಿವಾಸ ಸೆಟ್ಟರ ಭಾಷಣವಾಗಿ ಅಧ್ಯಕ್ಷರ ಸುಶ್ರಾವ್ಯ ಮಾತುಗಳೊಂದಿಗೆ ಮಹಾಸಭೆ ಕೊನೆಗೊಂಡಿತು.

ಉಡುಪಿ. ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 91/51.

ಶ್ರೀ. ಕೆ. ನಾರಾಯಣ ರಾವ್ —ವಾದಿ

ಮತ್ತು

ಅಕ್ಕಮ್ಮ ಸೆಟ್ಟಿ ಕೂಡಾ— ಪ್ರತಿವಾದಿಗಳು.

ಮೇಲ್ಕಂಡ ವ್ಯಾಜ್ಯದ 9ನೇ ಪ್ರತಿವಾದಿ ಅನಂತ ಸೆಟ್ಟಿ ಸೀನಿ ಸೆಡ್ತಿರ ಮಗ, 12ನೇ ಪ್ರತಿವಾದಿ ದೇವಯ ಸೆಟ್ಟಿ–ಚನ್ನಮ್ಮ ಸೆಡ್ತಿ ಮಗ–ಉಡುಪಿ ತಾಲೂಕು ಪಂದಾಡಿ ಗ್ರಾಮದಲ್ಲಿರುವವರು–ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ಕೂಡಾ ಪ್ರತಿವಾದಿಯಿಂದ ವಾದಿಯ ವಂಶಿಗೆ ಒಳಪಟ್ಟ ಪಂದಾಡಿ ತೆಂಕಮನೆ ಕೇಸನ್ನು ಹೆಗ್ಗಡ್ತಿ ಕುಟುಂಬಕ್ಕೆ ಕಳೆದ ಸರ್ವಜಿತು ಸಂವತ್ಸರದ ಆರಭ್ಯಾಗ್ಯಾತು ಕಳೆದ ವಿಕೃತಿ ಸಂವತ್ಸರದ ಅಂತ್ಯದ ವರೇಗೆ ಬರತಕ್ಕ ಗೇಣಿ ಬಾಕಿ ಬಗ್ಗೆ ಹೂಡಿದ ಮೇಲ್ಕಂಡ ವ್ಯಾಜ್ಯವನ್ನು ತಾ 21-8-51ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಣೆಗಳಿದ್ದರೆ ನೀವು ಆ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ–ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

K. J. Ballal.
Vakil for Plaintiff.
Camp: Udipi 1-8-1951.

ಎಸ್. ಎಸ್. ಮಿರಜ್‌ಕರರು ಭಾರತದ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬರೂ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಉಪಾಧ್ಯಕ್ಷರೂ ಆಗಿರುವ ಎಸ್. ಎಸ್. ಮಿರಜ್‌ಕರರು ತಾ. 28ರಂದು ಜರಗಿದ ಪತ್ರಿಕಾಪ್ರತಿನಿಧಿಗಳ ಕೂಟದಲ್ಲಿ ಅವರು ಭಾಷಣವಿತ್ತರು. ಅದೇ ದಿನ ಸಂಜೆ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ ಮುಂಬರುವ ಚುನಾವಣೆಯ ಮಹತ್ವವನ್ನು ವಿವರಿಸಿದರು.

ದ. ಕ. ಜಿಲ್ಲಾ ಸಹಕಾರಿ ಸಂಘಗಳ ಒಂದು ಸೌಹಾರ್ದಿಕ ಪರಿಷತ್ತು ತಾ. 29ರಲ್ಲಿ ಸಹಕಾರಿ ಅಭಿವೃದ್ಧಿ ಸಂಘದ ನೇತೃತ್ವದಲ್ಲಿ ಜರಗಿತು. ಶ್ರೀ. ಆರ್. ಕೆ. ಪ್ರಭುಗಳು ಸಭಾಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯಲ್ಲಿರುವ 60 ವಿವಿಧ ಸಹಕಾರಿ ಸಂಘಗಳ ಪರಿಚಯವನ್ನೂ ಆಯಾ ಸಂಘಗಳ ಪರಿಚಯವನ್ನೂ ಆಯಾ ಸಂಘಗಳ ಪ್ರತಿನಿಧಿಗಳು ತಿಳಿಸಿದರು. ಸಭೆಯಲ್ಲಿ ಪ್ರಾತಿನಿಧ್ಯವಿಲ್ಲದೆ ಗೈರುಹಾಜರಾದ ಸಂಘಗಳ ಪರಿಚಯವನ್ನು ಶ್ರೀ ಮೊಳಹಳ್ಳಿ ಶಿವರಾಯರು ತಿಳಿಸಿದರು. ನಂತರ ಧರ್ಮಸ್ಥಳನಡಾವಳಿಯ ಮತ್ತು ಉತ್ತರ ಹಿಂದೂಸ್ಥಾನದ ಕೆಲವು ನಗರಗಳ ಚಲಚ್ಚಿತ್ರ ತೋರಿಸಲಾಯಿತು.

ಗೀತಾ ತರಗತಿಯ ಉದ್ಘಾಟನೆ— ಮಂಗಳೂರ ಬೆಸೆಂಟ್ ಶಾಲೆಯಲ್ಲಿ ಡಾ। ಕೇಶವ ಪೈಗಳು ನಡೆಸುವ ಗೀತಾ ತರಗತಿಯ ಉದ್ಘಾಟನಾ ಸಭೆಯು ತಾ. 1ರಲ್ಲಿ ಶ್ರೀ ರಾಮಕೃಷ್ಣಮಠದ ಸ್ವಾಮಿ ವಿಮಲಾನಂದಜೀಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಕೇಶವ ಪೈ, ಶ್ರೀ ಪಡುಕೋಣೆ ರಮಾನಂದರಾವ್, ಕೆ. ಆರ್. ಆಚಾರ್, ಕೆ. ಪಿ. ಕಾಮತ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ— ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಯ ನಿರ್ಣಯದ ಮೇರೆಗೆ ಕಾಂಗ್ರೆಸ್ ಮುಖಂಡರು ತಾ. 31ರಲ್ಲಿ ಕಲೆಕ್ಟರರನ್ನು ಕಂಡು ಹೊಸ ಅಕ್ಕಿಯ ಬೆಲೆ ಅದರ ಪ್ರಮಾಣ ಮತ್ತು ಲೆವಿಯ ಕುರಿತು ಜನರ ಸಂಕಷ್ಟವನ್ನು ತಿಳಿಸಿದರು. ಇನ್ನೂ ಹೆಚ್ಚಿನ ರಿಲೀಫ್ ಅಂಗಡಿಗಳನ್ನು ತೆರೆದು ಅಕ್ಕಿಯ ಪ್ರಮಾಣವನ್ನು ಹೆಚ್ಚಿಸಬೇಕೆಂದು ಸೂಚಿಸಿದರು. ಹೊಸ ಅಕ್ಕಿಯ ಬೆಲೆಯನ್ನು ಒಮ್ಮೆಯೇ ಮುಬಾರಿ ಏರಿಸಿದ್ದರಿಂದ ಬಡಬಗ್ಗರಲ್ಲಿ ಎದ್ದಿರುವ ಬೊಬ್ಬೆಯನ್ನು ಕಲೆಕ್ಟರರ ಮನಗಾಣಿಸಿದರು. ಕಲೆಕ್ಟರರು ಜನತೆಯ ಸಂಕಷ್ಟದ ಕುರಿತು ತುಂಬಾ ಸಹಾನುಭೂತಿ ತೋರಿಸಿ ಆ ಕುರಿತು ತಮ್ಮ ಅಸಹಾಯಕತೆಯನ್ನು ತಿಳಿಸಿದರು.

ಸ್ಟೋರುಗಳನ್ನು ಆದಷ್ಟು ಹೆಚ್ಚಾಗಿ ತೆರೆದು ಅವುಗಳಲ್ಲಿ ಕೊಡಲ್ಪಡುವ ಅಕ್ಕಿಯ ಪ್ರಮಾಣವನ್ನು ಸ್ವಲ್ಪವಾದರೂ ಏರಿಸುವ ಪ್ರಯತ್ನವನ್ನು ತಾವು ಮಾಡುತ್ತಿರುವುದಾಗಿಯೂ ಆ ಕುರಿತು ಜನ ಪ್ರತಿನಿಧಿಗಳು ಸಹಕಾರವನ್ನು ಒತ್ತಾಯ ಪಡಿಸಬೇಕೆಂದೂ ಸೂಚಿಸಿದರು. ಅಕ್ಕಿಯ ಕಳ್ಳಸಂಗ್ರಹ ಮತ್ತು ವ್ಯಾಪಾರವನ್ನು ತಡೆಗಟ್ಟಲು ಮಾತ್ರ ಸರಕಾರವು ಪ್ರಯತ್ನ ಮಾಡುವುದೇ ಹೊರತು, ಲೆವಿಯನ್ನು ಇನ್ನು ಮುಂದೆ ವಸೂಲು ಮಾಡಲಾಗುವುದಿಲ್ಲವೆಂದೂ ಆ ಕುರಿತು ನಡೆದಿರುವ ಖಟ್ಲೆಗಳನ್ನೆಲ್ಲ ಹಿಂತೆಗೆದು ಕೊಳ್ಳಲಾಗುವುದೆಂದೂ ತಿಳಿಸಿದರು. ಮುಂದಿನ ಎನೆಲು ಬೆಳೆಯ ಧಾನ್ಯ ಸಂಗ್ರಹದ ಕ್ರಮವನ್ನು ವಿವರಿಸಿ ಹೇಳಿದರು. ಈ ಪ್ರಕಾರ ಒಂದು ಎಕ್ರೆ ಸಾಗುವಳಿದಾರರು ಸರಕಾರಕ್ಕೆ ಏನೂ ಕೊಡಬೇಕಾಗಿಲ್ಲ. ಎರಡು ಎಕ್ರೆ ಸಾಗುವಳಿಯವರು ಒಂದು ಮುಡಿ ಕೊಡತಕ್ಕದು. ಇದೇ ಪ್ರಮಾಣದಲ್ಲಿ ಹೆಚ್ಚೆಚ್ಚು ಸಾಗುವಳಿ ಇದ್ದಂತೆ ಸರಕಾರಕ್ಕೆ ಕೊಡುವ ಪ್ರಮಾಣವು ಹೆಚ್ಚಿಗೆಯಾಗುತ್ತದೆ. ಮಜಲಿಗೆ ಇದರ ಅರ್ಧದಷ್ಟು ಬೆಟ್ಟಿಗೆ ಕಾಲು ಭಾಗದಷ್ಟು ಕೊಡಬೇಕಾಗಿದೆ.

ಸ್ವಾತಂತ್ರ್ಯ ದಿನಾಚರಣೆಯಅಂಗವಾಗಿ ತಾ 15ರಂದು ಕೇಂದ್ರಮೈದಾನಿನಲ್ಲಿ ಬೆಳಗ್ಗೆ 8 ಗಂಟೆಗೆ ಜಿಲ್ಲಾ ಕಲೆಕ್ಟರರಿಂದ ಧ್ವಜಾರೋಹಣ ನಡೆಯಲಿದೆ. ಬಳಿಕ ರಿಸರ್ವ್ ಪೋಲೀಸಿನವರ ಕವಾಯತು ಇದೆ.

ಅಲೆವೂರು— ತಾ 15-8-51ನೇ ಬುಧವಾರ ರಾತ್ರಿ 9ಗಂಟೆಗೆ ಉಡುಪಿ ಯಕ್ಷಗಾನ ಕಲಾಮಂಡಳಿಯು ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕೂಟವೊಂದು ಸ್ಥಳೀಯ ಸಾಬೂಥಿಜಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಜರಗಲಿರುವುದೆಂದೂ ಸರ್ವರಿಗೂ ಸುಸ್ವಾಗತವಿದೆಯೆಂದೂ ಸಂಬಂಧ ಪಟ್ಟವರು ತಿಳಿಸುತ್ತಾರೆ.

ಕುಂಬಳೆ— ಹೆಚ್ಚು ಮಳೆ ಬೇಕಾದ ಈ ಕರ್ಕಟಕ ತಿಂಗಳಲ್ಲಿ ಬೇಕಾ ಮಳೆ ಇಲ್ಲವೆಂತಲೇ ಹೇಳಬೇಕು. ಬತ್ತದ ಬಯಲೆಲ್ಲಾ ಒಣಗಿರುತ್ತದೆ.

ಕಳೆದ ವಾರದಲ್ಲಿ ಇಲ್ಲಿಗೆ ಒಂದು ವಾಗನ್ ಜೋಳ, ಎರಡು ವಾಗನ್ ಅಕ್ಕಿ, ಎರಡು ವಾಗನ್ ಗೋಧಿ ಕೂಡಾ ಬಂದಿರುತ್ತದೆ. ಇಂದಿಗೆ ಅಂತ್ಯವಾಗುವ ಈ ವಾರದಲ್ಲಿ ಇಲ್ಲಿನ ರೇಶನ್ ಅಂಗಡಿಯಲ್ಲಿ 2ದಿವಸದ ಮಾತ್ರ ಜೋಳ ಹಂಚಿದ್ದಾಗಿರುತ್ತದೆ.

ಬರುವ ಬೆಳೆಯ ಭತ್ತವನ್ನು ತೆಗೆಯುವ ವಿಷಯದಲ್ಲಿ ತಾ. ೪ರಂದು ಅಸಿಸ್ಟೆಂಟ್ ತಾಲೂಕು ಸರಬರಾಯಿ ಆಫೀಸರರೂ, ಪೇಟೆ ರವಿನ್ಯೂ ಉದ್ಯೋಗಸ್ಥರೂ ಗ್ರಾಮೋದ್ಯೋಗಸ್ಥರೂ, ಕೂಡಿ ಆಲೋಚನೆ ಮಾಡಿರುವರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಜಾತಿಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನಿಮ್ಮ ಅಚ್ಚುಮೆಚ್ಚಿನ ಹೊತ್ತಿಗೆ!!

ಹಿಂದೀ-ಹಿಂದೀ-ಕನ್ನಡ ರತ್ನಕೋಶ

೧೨೦೮ ಪುಟಗಳು–೩೫೦೦೦ ಶಬ್ದ ಸಂಗ್ರಹ–೪ಲಕ್ಷ ಹಿಂದೀ ಹಾಗೂ ಕನ್ನಡ ಅರ್ಥವಿವರಣೆಗಳು
ಬೆಲೆ. ಕೇವಲ ೮—೧೨—೦ :: ಅಂಚೆ ವೆಚ್ಚ: ೦—೧೪—೦

ಹಿಂದೀ ಕಲಿಯುವವರಿಗೆ ಒಳ್ಳೇ ಸುಸಂಧಿ		ಹೆಣ್ಣುಮಕ್ಕಳಿಗೆ ಉಪಯುಕ್ತವಾದುವು	
ಹಿಂದೀ ಪಹಲೀ ಕಿತಾಬ ಶಬ್ದಾರ್ಥ	೦–೮–೦	ಸಂಗೀತಾಚಾರ್ಯ (ಹಾರ್ಮೋನಿಯಂ ಶಿಕ್ಷಕ)	೧–೪–೦
ಹಿಂದೀ ದೂಸರೀ ಕಿತಾಬ ಶಬ್ದಾರ್ಥ	೦ ೪ ೦	ಹೊಲಿಗೆಯ ಶಿಕ್ಷಣ (೨ ಭಾಗಗಳಲ್ಲಿ)	೨–೦–೦
ಹಿಂದೀ ತೀಸರೀ ಕಿತಾಬ ಶಬ್ದಾರ್ಥ	೦–೪–೦		
ಪ್ರಾಥಮಿಕ ಪರೀಕ್ಷಾ ಮಾರ್ಗದರ್ಶಿಕೆ	೦–೧೪–೦	ಸಾಮಾಜಿಕ ನಾಟಕಗಳು	
ಮಧ್ಯಮಾ ಪರೀಕ್ಷಾ ಮಾರ್ಗದರ್ಶಿಕೆ	[illegible]	ರಾಜದ್ರೋಹ	೧–೪–೦
ರಾಷ್ಟ್ರಭಾಷಾ ಪರೀಕ್ಷಾ ಮಾರ್ಗದರ್ಶಿಕೆ	೩–೪–೦	ಅಗ್ನಿಕುಂಡ	೧–೦–೦
(೪ ಪುಸ್ತಕಗಳ ಸೆಟ್ಟು)			

ಅಂಚೆ ವೆಚ್ಚ ಬೇರೆ

ಪ್ರಕಾಶಕರು : ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು.

ಅಲ್ಪ ವೆಚ್ಚ! ಅದ್ಭುತ ಗುಣ!

ಎಂ. ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಸನ್,
ಫೋರ್ಟ್, ಬೊಂಬಾಯಿ.

Navayuga Enterprise Ltd., Udipi.

NOTICE

Notice is hereby given that the Register of members and Share Transfer books of the Company will remain closed from the 10th August, 1951 to 30th August, 1951 (both days inclusive).

(By order of the Board)

Office of the Company,
Palukote, Udipi.
Date: 1-8-1951

K. H. Shetty.
Managing Director.

ಪ್ರವಾಸಿಯ ಪತ್ರಗಳು ೧೧

ನನ್ನ ಈ ಮೊದಲಿನ ಪತ್ರದಲ್ಲಿ ತಿಳಿದ ಮೇ 22ನೇ ಸಾಯಂಕಾಲ ಲಂಡನಿಗೆ ಹಿಂತಿರುಗಿ ಬರುವವರೆಗೆ ಬರೆದಿರುತ್ತೇನೆ. ಅನಂತರ ನಾಲ್ಕು ದಿವಸಗಳು ಅಲ್ಲಿದ್ದು ತಾ. 27ನೆ ದಿನ ಬೆಳಿಗ್ಗೆ ಪ್ಯಾರಿಸ್ಸಿಗೆ ಹೊರಟುಬಂದೆ. ಈ ನಾಲ್ಕು ದಿವಸಗಳಲ್ಲಿ ನೋಡಿದ ವಿಷಯಗಳನ್ನು ನನ್ನ ಮುಂದಿನ ಪತ್ರಗಳಲ್ಲಿ ಬರೆಯುವೆನು. ಯಾಕೆಂದರೆ ಒಂದು ಮುಖ್ಯ ವಿಷಯ ನಾನು ಈ ಮುಂಚೆ ಲಂಡನಿನಿಂದ ಇಲ್ಲಿಗೆ ಬರೆದ ಪತ್ರವು ಕಳೆದು ಹೋಗಿ ಆ ವಿಷಯವು ಈ ವರೆಗೆ ಪತ್ರಿಕೆಯಲ್ಲಿ ಬರಲೇ ಇಲ್ಲ, ಅದು ಪಾರ್ಲಿಮೆಂಟಿನ ವಿಷಯ. ಆದಕಾರಣ ಆ ವಿಷಯವನ್ನು ನಾನು ಈಗ ಪುನಃ ಬರೆಯಬೇಕಾಗಿದೆ. ಪಾರ್ಲಿಮೆಂಟ್ ಕಟ್ಟಡವು ಒಂದು ಬಹು ದೊಡ್ಡ ಕಟ್ಟಡ. ಅಂದಾಜು ಸುಮಾರು 300 ಗಜ ಉದ್ದ, 125 ಗಜ ಅಗಲವಿದ್ದು ಬಹು ರಮ್ಯವಾದ ಕಟ್ಟಡ. ಅದು ಥೇಮ್ಸ್ ನದಿಗೆ ತಾಗಿ ಇದ್ದು ದರಲ್ಲಿ ಅನೇಕ ಭಾಗಗಳು ಇವೆ. ಅದರ ಎರಡು ಕಡೆಗಳಲ್ಲಿ ಎರಡು ಗೋಪುರಗಳಿವೆ. ಅದರಲ್ಲಿಯೇ 'ಹೌಸ್ ಓಫ್ ಕೋಮನ್ಸ್' ಅಂದರೆ ಕೋಮನ್ನರ ನ್ಯಾಯವಿಧಾಯಕ ಸಭಾಂಗಣ ಇರುವುದು. ಇನ್ನೊಂದು ಕಡೆಯಲ್ಲಿ 'ಹೌಸ್ ಓಫ್ ಲೋರ್ಡ್ಸ್' ಅಥವಾ ಪ್ರಭುಗಳ ಸಭಾಂಗಣ. ಇದರಲ್ಲೇ ಇಂಗ್ಲಾಂಡಿನ ರಾಜರಾಣಿಯರು ಪಾರ್ಲಿಮೆಂಟ್ ತೆರಯಲಿಕ್ಕೆ ಬಂದಾಗ ಕೂತುಕೊಳ್ಳುವುದು. ಆಗ ಅಲ್ಲಿದ್ದ ಪ್ರಭುಗಳು ಮತ್ತು ಕೊಮನ್ಸಿನ ಸದಸ್ಯರು ಅಲ್ಲಿಗೆ ಬಂದು ಅರಸರ ಭಾಷಣವನ್ನು ಕೇಳುವುದು. ಅದಕ್ಕೆ ತಾಗಿ ಅರಸರು ಉಡುಪು ಹಾಕಿಕೊಳ್ಳುವ ಕೋಣೆ (King's Robing Room). ಇನ್ನೊಂದು ಕಡೆ ಮೆಂಬರರು ಕೂತುಕೊಳ್ಳಲಿಕ್ಕೆ ಮತ್ತು ಆಹಾರ ತೆಗೆದುಕೊಳ್ಳಲಿಕ್ಕೆ ಅನೇಕ ಕೋಣೆಗಳು. ಇನ್ನು 'ಹೌಸ್ ಓಫ್ ಲೋರ್ಡ್ಸ್' 'ಹೌಸ್ ಓಫ್ ಕೋಮನ್ಸ್' ಇವೆರಡಕ್ಕೂ ಸಂಬಂಧಪಟ್ಟ ಪುಸ್ತಕ ಭಂಡಾರಗಳು. ಒಂದು ಕಡೆಯಲ್ಲಿ ಪಾರ್ಲಿಮೆಂಟಿಗೆ ಸಂಬಂಧಪಟ್ಟ ರಿಕಾರ್ಡು ಇಡುವ ಕೋಣೆಗಳು. ಇನ್ನೊಂದು ಕಡೆ ಕೊಮನ್ಸ್ ಸಭೆಯ ಅಧ್ಯಕ್ಷರು (Speaker) ವಾಸಿಸುವ ಮನೆ. ಇದರಲ್ಲೇ ಲೋರ್ಡ್ ಚೆನ್ಸಲ್ಲರ ಆಫೀಸು. ಎರಡು ಕಡೆಯಲ್ಲಿದ್ದ ಗೋಪುರಗಳಲ್ಲಿ ಒಂದರ ತಲೆಯಲ್ಲಿ ಬಿಗ್ ಬೆನ್ (Big Ben) ಎಂಬ ಬಹುದೊಡ್ಡ ಗಡಿಯಾರ. ಈ ಗೋಪುರವು ನೆಲದಿಂದ 320 ಅಡಿ ಎತ್ತರವಿದೆ. ಈ ಗಡಿಯಾರ ಹೊಡೆಯುವ ಗಂಟೆಯನ್ನು ನಮ್ಮ ದೇಶದಲ್ಲಿ ರೇಡಿಯೋ ಮೂಲಕ ದಿನನಿತ್ಯವೂ ಕೇಳಬಹುದು. ಆ ಗಡಿಯಾರಕ್ಕೆ ಬಿಗ್ ಬೆನ್ ಅಂತ ಹೆಸರು ಬರಲು ಕಾರಣವೇನೆಂದರೆ, ಅದನ್ನು ಅಲ್ಲಿ ಹೊಸತಾಗಿ ಮಾಡಿಸಿಇಟ್ಟಾಗ ಆಗಿನ 'ಪಬ್ಲಿಕ್ ವರ್ಕ್ಸ್' ಮಂತ್ರಿ ಸರ್ ಬೆಂಜಮಿನ್ ಹೋಲ್ ಎಂಬವರ ಹೆಸರಿನಿಂದ ಅದಕ್ಕೆ ಬೆನ್ ಎಂಬ ಹೆಸರು ಬಂತು. ಅದನ್ನು 1859ನೆ ಮೇ 31ರಲ್ಲಿ ಇಟ್ಟದ್ದು. ಅದು ಎಷ್ಟು ದೊಡ್ಡದೆಂಬುದು ಈ ಕೆಳಗೆ ಕೊಡುವ ವರ್ಣನೆಯಿಂದ ತಿಳಿದೀತು. ಅದರ ಮುಖಗಳು (Dials) ಗೋಪುರದ ನಾಲ್ಕು ಕಡೆಗಳಲ್ಲಿದ್ದು 23 ಅಡಿ ಅಗಲದ (diameter) ವೃತ್ತಾಕಾರ. ಅದರ ಮಿನಿಟಿನ ಕೈಯು 14 ಅಡಿ ಉದ್ದವಿದ್ದು ತಾಮ್ರದಿಂದ ಮಾಡಿದ್ದಾಗಿ 224 ಪೌಂಡು ತೂಕ. ಗಂಟೆಯ ಕೈಯು 9 ಅಡಿ ಉದ್ದ ಇದ್ದು, ಅದರ ಮೂರರಷ್ಟು ತೂಕವಿದೆ.

ಈ ಪಾರ್ಲಿಮೆಂಟ್ ಕಟ್ಟಡಗಳು ಒಂದೇ ಕಾಲದಲ್ಲಿ ಕಟ್ಟಿದವುಗಳಲ್ಲ. ಅದರಲ್ಲಿ ಇರುವ 'ವೆಸ್ಟ್ ಮಿನಿಸ್ಟರ್ ಹೋಲ್' ಎಂಬ ಅಂಶವು ಬಹು ಹಿಂದಿನದಿದ್ದು, ಅಂದರೆ 14ನೆ ಶತಮಾನದ್ದು. ಅದರ ಉದ್ದ 240 ಅಡಿ, ಅಗಲ 68 ಅಡಿ, ಮತ್ತು ಎತ್ತರ 92 ಅಡಿ. ಅಷ್ಟು ಅಗಲವಾದ ಅದರ ಮಾಡು 'ವಿ' V ಆಕಾರದ್ದಾಗಿದ್ದು ಯಾವ ತರದ ಅಡ್ಡ ಕೋಲೆಗಳಿಲ್ಲದೆ ಕಟ್ಟಿದೆ. ಅದು ಹಿಂದಿನ ಕಾಲದಲ್ಲಿ ಭೋಜನಕ್ಕೆ ತಾಗಿದ್ದು ಅಲ್ಲಿ ಅರಸರ ದೊಡ್ಡ ಕೌನ್ಸಿಲ್ (Kings Great Council) ಕೂಡುತ್ತಿತ್ತು. ಈ ಕೌನ್ಸಿಲ್‌ನಿಂದಲೇ ನಂತರ ಕೋರ್ಟುಗಳು ಮತ್ತು ಪಾರ್ಲಿಮೆಂಟ್ ಉದ್ಭವಿಸಿದ್ದು. 17, 18, 19ನೆ ಶತಮಾನದ ಹೆಚ್ಚಿನ ಸಮಯ ಇಂಗ್ಲಾಂಡಿನ ಹೈಕೋರ್ಟು (Kings Bench) ಮತ್ತು ಲೋರ್ಡ್ ಚೆನ್ಸಲರ ಕೋರ್ಟು ಇಲ್ಲಿ ಸೇರುತ್ತಿದ್ದವು. ಇಲ್ಲಿಯೇ ಇಂಗ್ಲಾಂಡಿನ ಪಾರ್ಲಿಮೆಂಟು ಹುಟ್ಟಿದ್ದು. ಸೈಮನ್ ಡಿ ಮೊಂಟ್ ಪೋರ್ಟ್ ಎಂಬವರು ಅಧ್ಯಕ್ಷದಲ್ಲಿ ಕೂಡಿಸಿದ ಮೊದಲಿನ ಪಾರ್ಲಿಮೆಂಟ್ 20ನೇ ಜನವರಿ 1265ರಲ್ಲಿ ಇಲ್ಲಿಯೇ ಸೇರಿದ್ದು. ಆ ನಂತರ ಅನೇಕ ಬದಲಾವಣೆಗಳು ಆಗಿ ಪಾರ್ಲಿಮೆಂಟ್ ಈಗಿರುವ ಸ್ಥಿತಿಗೆ ಬಂದಿದೆ.

ಬ್ರಿಟಿಷ್ ಚರಿತ್ರೆಯಲ್ಲಿ ನಡೆದ ಅನೇಕ ಮುಖ್ಯ ರಾಜಕೀಯ ಅಪರಾಧ ತನಿಖೆಗಳು (State Trials) ಇಲ್ಲಿಯೇ ನಡೆಸಿದ್ದು. ಅಪೈಕಿ ಇಂಡಿಯಾ ದೇಶದ ಮೊದಲನೇ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ವಾರನ್ ಹೇಸ್ಟಿಂಗ್ಸ್ ಎಂಬವನ ಆಡಳಿತೆಯ ವಿಷಯವಾಗಿ ಪಾರ್ಲಿಮೆಂಟಿನವರು ನಡೆಸಿದ ತನಿಖೆಯು ಇಲ್ಲಿ 7 ವರ್ಷ ನಡೆದಿತ್ತು (1788-95). ಆ ಜಾಗದಲ್ಲಿ ಈಗಲೂ ಒಂದು ಸ್ಮಾರಕ ಕಲ್ಲು [Tablet] ಹುಗಿದಿದೆ. ಅನೇಕ ಕಾಲಗಳಲ್ಲಿ ದೊಡ್ಡ ರಾಜಕೀಯ ಮತ್ತು ಮತ ಸಂಬಂಧವಾದ ಆಚರಣೆಗಳು [ceremonies] ಮತ್ತು ರಾಜರಿಗೆ ಪಟ್ಟವಾದಾಗ ನಡೆದ ಔತಣಗಳು ಇಲ್ಲಿಯೇ ನಡೆದಿದ್ದು. 1653 ಮತ್ತು 1657ರಲ್ಲಿ ಒಲಿವರ್ ಕ್ರೋಮ್‌ವೆಲ್ ಎಂಬವನು ಇಲ್ಲಿಯೇ ಪಟ್ಟದ ಕುರ್ಚಿಯಲ್ಲಿ ಕೂತದ್ದು. ಮತ್ತು 4 ವರ್ಷದ ನಂತರ (1661) ನೆಲದಲ್ಲಿ ಹುಗಿದ ಅವನ ದೇಹವನ್ನು ತೆಗೆದು ಅವನ ತಲೆಯನ್ನು ಕಡಿದು ಒಂದು ಕೋಲಿನ ಮೇಲೆ ಏರಿಸಿ ಈ ಹೋಲಿನ ಮಾಡಿಗೆ ಇಟ್ಟಿದ್ದು. ಅದು ಅಲ್ಲಿ 1684ರ ವರೆಗೆ ಇತ್ತು, ಇದು ಬ್ರಿಟಿಷ್ ಚರಿತ್ರೆಯ ಒಂದು ವಿದ್ಯಮಾನ. 'ಟವರ್ ಓಫ್ ಲಂಡನ್' ಎಂಬ ಒಂದು ಕಡೆಯಲ್ಲಿ ನಾನು ನೋಡಿದ ಈ ರೀತಿಯ ಅನೇಕ ವಿದ್ಯಮಾನಗಳ ವಿಷಯ ಹಿಂದೆ ಬರೆಯುವೆನು.

ಈ ವೆಸ್ಟ್ ಮಿನಿಸ್ಟರ್ ಹೋಲಿಗೆ ತಾಗಿ ಸೇಂಟ್ ಸ್ಟೀಫನ್ಸ್ ಹೋಲ್ ಎಂಬ ಸಭಾಂಗಣವಿರುತ್ತದೆ. ಇದು ಒಂದು ಕಾಲದಲ್ಲಿ ಇಗರ್ಜಿ. ಇದು ಕೂಡ ಬಹಳ ಚಾರಿತ್ರಿಕವಾದ ಸ್ಥಳ. 1547ರಿಂದ 1834ರ ವರೆಗೆ ಇದರಲ್ಲಿಯೇ ಕೊಮನ್ಸ್ ಸಭೆಯವರು ಕೂತದ್ದು. ಇದನ್ನು ಸ್ಟೀಫನ್ ಎಂಬ ಅರಸನು 1141ನೇ ಇಸವಿಯಲ್ಲಿ ಕಟ್ಟಿದ್ದು. ಇದರ ಎರಡೂ ಬದಿಯಲ್ಲಿ ಮುಂಚಿನ ಕೊಮನ್ಸ್ ಸಭೆಯಲ್ಲಿ ಪ್ರಸಿದ್ಧರಾದ ಚತುರರ ದೊಡ್ಡ ಪ್ರತಿಮೆಗಳಿವೆ. ಕ್ಲರೆಂಡನ್, ಹೆಂಪ್ಡನ್, ವ್ಹೋಲ್‌ಪೋಲ್, ಚಿತೆಮ್, ಪಿಟ್, ಫೋಕ್ಸ್, ಸೋಮರ್ಸ್, ಸೆಲ್ಡನ್, ಮೇನ್ಸ್‌ಫೀಲ್ಡ್, ಬರ್ಕ್, ಗ್ರೆಟನ್ ಇವರೇ ಮೊದಲಾದವರದ್ದು. ಈ ಸಭಾಂಗಣವು ಈಗಿರುವ ಕೋಮನ್ಸ್ ಸಭೆಗೆ ಹೋಗುವ ದಾರಿಯಾಗಿದ್ದು ಅಲ್ಲಿ ನೂರಾರು ಜನರು ಕೋಮನ್ಸ್ ಸಭೆ ನಡೆಯುವಾಗ ಬೆಂಚುಗಳಲ್ಲಿ ಎರಡೂ ಕಡೆಯಲ್ಲಿ ಕೂತಿರುವರು. ಅಲ್ಲಿ ಕೂತು ತಮಗೆ ತಿಳಿದಿದ್ದ ಕೋಮನ್ಸ್ ಸದಸ್ಯರೊಡನೆ ಮಾತನಾಡುವ ಬಗ್ಗೆ ಅಥವಾ ಅವರ ಮೂಲಕ ಅಪ್ಪಣೆಪಡೆದು ಕೋಮನ್ಸ್ ಸಭಾಂಗಣದ ಒಳಗೆ ಹೋಗುವರು.

ಈ ಕೋಮನ್ಸ್ ಸಭಾಂಗಣವು ಇದಕ್ಕೆ ಸಮೀಪವಿರುತ್ತದೆ. ಮುಂಚೆ ಕಟ್ಟಿದ್ದ ಸಭಾಂಗಣದ ಮೇಲೆ ಕಳೆದ ಯುದ್ಧ ಕಾಲದಲ್ಲಿ ನಾಲ್ಕು ಸಾರಿ ಆಗಾಗ ಬೊಂಬುಗಳು ಬಿದ್ದು 1941ರಲ್ಲಿ ಸಂಪೂರ್ಣ ಬೆಂಕಿ ಬಿದ್ದು ಸುಟ್ಟು ಹೋಯಿತು. ಆ ನಂತರ ಅದೇ ಜಾಗದಲ್ಲಿ ಹೆಚ್ಚುಕಡಿಮೆ ಅಷ್ಟು ದೊಡ್ಡದಾಗಿ ಹೊಸ ಸಭಾಂಗಣವನ್ನು ಕಟ್ಟಿರುತ್ತದೆ. ಇದು ಕಳೆದ ವರ್ಷ ಜುಲೈಯಿಂದ ಉಪಯೋಗದಲ್ಲಿ ಇರುತ್ತದೆ. ಹೀಗೆ ಹೊಸತಾಗಿ ಕಟ್ಟಿದ ಕಟ್ಟಡದ ಖರ್ಚು 1¾ ಮಿಲಿಯ ಪವನುಗಳು. ಸಭಾಂಗಣವನ್ನು ಬಹು ಚಲೋದಾಗಿ ಕಟ್ಟಿರುತ್ತಾರೆ. ಅದರ ಉದ್ದ 68 ಅಡಿ, ಅಗಲ 45½ ಅಡಿ, ಮತ್ತು ಎತ್ತರ 46 ಅಡಿ. ಇದರಲ್ಲಿ ಪ್ರೇಕ್ಷಕರು ಕೂಡಿ 939 ಜನರು ಕೂತುಕೊಳ್ಳಬಹುದು, ಆ ಪೈಕಿ 437 ಮಾತ್ರ ಸದಸ್ಯರಿಗೆ. ಸದಸ್ಯರ ಜುಮಲಾ ಸಂಖ್ಯೆ 625 ಇರುವುದಾದರೂ, ಎಲ್ಲರೂ ಒಂದೇ ಸಮಯದಲ್ಲಿ ಕೂತುಕೊಳ್ಳುವುದಿಲ್ಲವಾದ್ದರಿಂದ ಸಾಧಾರಣವಾಗಿ ಇದ್ದ ಸ್ಥಳವು ಸಾಕಾಗುತ್ತದೆ. 329 ಪ್ರೇಕ್ಷಕರು 161 ಪತ್ರಿಕಾ ಪ್ರತಿನಿಧಿಗಳು ಮತ್ತು 15 ಸಭಾಂಗಣದ ಅಧಿಕಾರಸ್ಥರು ಕೂತುಕೊಳ್ಳಬಹುದು. ಇದರಿಂದ ಒಂದು ವಿಷಯ ನನಗೆ ತಿಳಿಯುವುದೇನೆಂದರೆ ನಮ್ಮ ಮದ್ರಾಸಿನ ಎಸೆಂಬ್ಲಿ ಸಭಾಂಗಣವೇ ಮುಂದಕ್ಕೂ ಕೂಡಾ ಸಾಕಾಗುತ್ತಿತ್ತು. ಈಗ 251 ಮೆಂಬರರು ಇರುವರು. ಇನ್ನು ಮುಂದೆ ಹೊಸ ಸಭೆಯಲ್ಲಿ 375 ಇರುವರು. ಆದರೂ ಯಾವಾಗಲೂ ಇಷ್ಟು ಸಂಖ್ಯೆ ಹಾಜರಿರುವುದಿಲ್ಲ. ಆದಕಾರಣ ಸ್ವಲ್ಪ ಖರ್ಚುಮಾಡಿ ಈ ಸಭಾಂಗಣವನ್ನೇ ದುರಸ್ತಿಪಡಿಸಿ ಮುಂದೆ ಉಪಯೋಗಿಸಬಹುದಿತ್ತು. ಅದನ್ನು ಬಿಟ್ಟು ಈಗಿರುವ ಸ್ಥಳದಿಂದ ಒಂದು ಮೈಲು ದೂರ ಇನ್ನೊಂದು ಕಡೆಯಲ್ಲಿ ಏಳು ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಹೊಸತಾಗಿ ಕಟ್ಟಡವು ತಯಾರಾಗುತ್ತಾ ಇದೆ. ಇದುಕೂಡ ತಾತ್ಕಾಲಿಕವಂತೆ. ಇನ್ನೊಂದು ಇದರಲ್ಲಿ ಚೋದ್ಯವೇನೆಂದರೆ, ಹೀಗೆ ಕಟ್ಟಡ ಶುರುಮಾಡುವ ಮುಂಚೆ ನ್ಯಾಯವಾಗಿ ಎಸೆಂಬ್ಲಿ ಸಭೆಯ ಮುಂದಿಟ್ಟು ಈ ವಿಷಯವನ್ನು ಚರ್ಚಿಸಿ ಮಂಜೂರು ಮಾಡಿಸುವ ಬದಲಾಗಿ ಕಟ್ಟಡ ಕಟ್ಟುವುದನ್ನು ಸೀದಾ ಕಂಟ್ರಾಕ್ಟಿಗೆ ಕೊಟ್ಟು ಕಟ್ಟಿಸಲಿಕ್ಕೆ ಶುರುಮಾಡಿ ಕೆಲವು ತಿಂಗಳ ನಂತರ ಮಾಡಿದ್ದನ್ನು ಕೊಂಗ್ರೆಸ್ ಪಕ್ಷದ ಶಿಸ್ತಿನ ಆಧಾರದ ಮೇಲೆ ಮಂಜೂರು ಮಾಡಿಸಿರುವರು. ಆದರೆ ನಮ್ಮ ದೇಶದ ಕೇಂದ್ರದಲ್ಲಾಗಲೀ ಪ್ರಾಂತಗಳಲ್ಲಾಗಲಿ ಈ ರೀತಿ ಕೋಟಿ ಕಟ್ಟಳೆ ಹಣ ಹಾಳಾಗುವಾಗ ಬರೇ 7 ಲಕ್ಷದ ಈ ಕಟ್ಟಡದ ವಿಷಯವು ಮಹತ್ವಾದ ವಿಷಯವಲ್ಲ.

ಈ ಕಾಮನ್ಸ್ ಸಭೆಯು ನಡೆಯುವಾಗ ನಾನು ಮೂರುದಿನಗಳಲ್ಲಿ ಹೋಗಿ ನೋಡಿದೆ. ಅದಕ್ಕೆ ಪ್ರವೇಶ ಸಿಕ್ಕುವುದು ಈ ವರ್ಷ ಬಹು ಕಷ್ಟವಿತ್ತು. ಯಾಕೆಂದರೆ ಬ್ರಿಟಿಷ್ ಕೈಗಾರಿಕೆ ಹಬ್ಬದ ಸಂಬಂಧ ಬಂದ ಸಾವಿರಾರು ಜನರು ಇದನ್ನು ಕೂಡಾ ನೋಡಲು ಅಪೇಕ್ಷಿಸುವರು. ಆದಕಾರಣ ಬಹುಪ್ರಯತ್ನದಿಂದ ಕಾಮನ್ ವೆಲ್ತ್ ಪಾರ್ಲಿಮೆಂಟರಿ ಸಂಘದ ಮೂಲಕ 3 ದಿನ ಪ್ರವೇಶ ಸಿಗಬೇಕಾದರೆ ಸ್ವಲ್ಪ ಕಷ್ಟವೇ ಆಯಿತು. ಇನ್ನೂ ಕೆಲವು ಸಾರಿ ನೋಡಬಹುದಿತ್ತು, ಆದರೆ ವಿಟ್ಸ್‌ಟ್ ರಜೆ ಸಂಬಂಧ ಸಭೆ ಮೇ ತಾ. 10ಕ್ಕೆ ಮುಗಿದು ಪುನಃ ಮೇ 29ಕ್ಕೆ ಸೇರಿತು. ನಾನು 27ಕ್ಕೆ ಲಂಡನಿನಿಂದ ಹೊರಟೆನು. ಈ ಮೂರು ದಿವಸಗಳಲ್ಲಿ ನಾನು ನೋಡಿದ ಮುಖ್ಯ ವಿಷಯವನ್ನು ಮುಂದೆ ತಿಳಿಸುವೆನು. ಕಾಮನ್ಸ್ ಸಭೆಯು ಸೋಮವಾರದಿಂದ ನಿತ್ಯವೂ ಗುರುವಾರದವರೆಗೆ ಮಧ್ಯಾಹ್ನ 2½ ಗಂಟೆಗೆ ಶುರು ಆಗಿ ರಾತ್ರಿ 10½ ಗಂಟೆ ವರೆಗೆ ಎಡೆಬಿಡದೆ ನಡೆಯುವುದು. ಕೆಲವು ಸಲ ಕೆಲಸ ಮುಗಿಯದಿದ್ದರೆ 12 ಗಂಟೆ ರಾತ್ರಿ, 2 ಗಂಟೆ, ಮರುದಿನ ಬೆಳಗ್ಗೆ ವರೆಗೂ ನಡೆಯುವುದು. ಶುಕ್ರವಾರ ಮಾತ್ರ ಬೆಳಿಗ್ಗೆ 11 ಘಂಟೆಗೆ ಸೇರಿ ಸಾಯಂಕಾಲ 4 ಗಂಟೆ ವರೆಗೆ, ಇದು ಏಕೆಂದರೆ ಸದಸ್ಯರು ಶನಿವಾರ ಆದಿತ್ಯವಾರ ರಜೆಗೆ ಬೇರೆ ಬೇರೆ ಊರುಗಳಿಗೆ ಹೋಗುವರು.

ಕಾಮನ್ಸ್ ಸಭೆಯನ್ನು ನಾನು 3 ದಿನಗಳಲ್ಲಿ ಹೋಗಿ ನೋಡಿದೆನು. ಪ್ರಥಮತಃ ಎಪ್ರಿಲ್ 24ರಲ್ಲಿ. ನಾನು ಲಂಡನ್ ಪಟ್ಟಣವನ್ನು ಎಪ್ರಿಲ್ 22ಕ್ಕೆ ಮುಟ್ಟಿದ್ದಾಗಿ ಈ ಮುಂಚೆ ಬರೆದಿದ್ದೆ. ಆ ದಿನವೇ ಇಂಗ್ಲಾಂಡಿನ ಆ

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ ಎ ಪಂಡಿತ್, B. SC, F. I. A
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಬಿಸಿ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಆರೋಗ್ಯ ಮಂತ್ರಿ ಎನ್ಯೂರಿನ್ ಬಿವಾನರು ಕೆಲಸಕ್ಕೆ ರಾಜಿನಾಮೆ ಕೊಟ್ಟು ಮರುದಿನ (ಸೋಮವಾರ ತಾರೀಕು 23) ರಾಜಿನಾಮೆಯನ್ನು ಕೊಟ್ಟ ಬಗ್ಗೆ ಹೇಳಿಕೆಯನ್ನು ಕಾಮನ್ಸ್ ಸಭೆಯಲ್ಲಿ ಕೊಡುವವರಿತ್ತು. ಆಗ ನನಗೆ ಹಾಜರಿರಬೇಕೆಂದು ಬಹಳ ಕುತೂಹಲವಿದ್ದರೂ ಅದು ಸಾಧ್ಯವಾಗಲಿಲ್ಲ. ಮರುದಿನ ತಾ. 24ಕ್ಕೆ ಸಾಯಂಕಾಲ 5ರಿಂದ 7ಗಂಟೆ ವರೆಗೆ ಹಾಜರಿದ್ದೆ. ಆ ದಿನ ಆರೋಗ್ಯದ ವಿಷಯವಾಗಿ ಹಣಕಾಸಿನ ಬಿಲಿನ ಚರ್ಚೆ ನಡೆಯಿತು. ಟೋರಿ ಪಕ್ಷದ ಅನೇಕ ಸದಸ್ಯರು ಭಾಷಣ ಮಾಡಿದರು. ಆ ಪಕ್ಷದ ಪೈಕಿ ಬ್ರಿಟಿಷ್ ಮೆಡ್ಡಿನ ಸಂಘದ ಅಧ್ಯಕ್ಷರಾದ ಡಾ। ಚಾರ್ಲ್ಸ್ ಹಿಲ್ ಎಂಬವರ ಭಾಷಣ ಬಹಳ ಚಲೋದಿತ್ತು. ಸ್ಕೊಟ್ಲೇಂಡಿನ ಒಬ್ಬ ಸ್ತ್ರೀ ಸದಸ್ಯಳು ಆ ಮಸೂದೆಯಿಂದ ಸ್ಕೊಟ್ಲೆಂಡಿನ ಕ್ಷಯರೋಗಿಗಳಿಗೆ ಆಗುವ ಉಪಕಾರದ ವಿಷಯವಾಗಿ ಮಾತನಾಡಿದಳು. ಬಿವಾನರ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದ ಮತ್ತು ಅವರೊಡನೆ ರಾಜಿನಾಮೆ ಕೊಟ್ಟಿದ್ದ ಗ್ರಿಫಿತ್ ಎಂಬವರು ಮತ್ತು ಇನ್ನಿಬ್ಬರು ಲೇಬರ್ ಪಕ್ಷದ ಸದಸ್ಯರು ಕೂಡ ಭಾಷಣಮಾಡಿದರು. ಅವರು ಸರ್ಕಾರದ ಧೋರಣೆಯನ್ನು ಖಂಡಿಸಿ ಮಾತನಾಡಿದರು. ಬಿವಾನರು ಮತ್ತು ಅವರ ಸಹಚಾರಿಗಳಾದ ಇನ್ನು 3, 4 ರಾಜಿನಾಮೆ ಕೊಟ್ಟ ಮಂತ್ರಿಗಳ ಧೋರಣೆ ಹೀಗೆನ್ನಬಹುದು. ಹೆಲ್ತ್ ಆಕ್ಟಿನಲ್ಲಿ ಈ ವರ್ಷದ ಮಾಡಿದ ದುರಸ್ತಿ ಏನೆಂದರೆ- ಈ ಮುಂಚೆ ದೇಶದ ಎಲ್ಲಾ ಜನರಿಗೂ ಅಂದರೆ ದೊಡ್ಡವರಿಗೂ, ಬಡವರಿಗೂ, ಯಾವ ತರಹ ಭೇದವಿಲ್ಲದೆ ಧರ್ಮಾರ್ಥವಾಗಿ ಮದ್ದು ಮತ್ತು ಬೇಕಾದ ಸಾಮಗ್ರಿಗಳ ಸರ್ಕಾರದಿಂದಲೇ ಸಿಕ್ಕುತಿತ್ತು. ಇಂತಹ ಬಿಲನ್ನು 3, 4 ವರ್ಷಗಳ ಹಿಂದೆ ಟೋರಿ ಪಕ್ಷದ ವಿರುದ್ಧ ಸಾಧನೆ ಇದ್ದಾಗ್ಯೂ ಈ ಬಿವಾನರೇ ಸಾಧಿಸಿ ಪಾರ್ಲಿಮೆಂಟಿನಿಂದ ಮಂಜೂರು ಮಾಡಿಸಿದ್ದು, ಆ ಕಾನೂನು ಮೇರೆಗೆ ಎಲ್ಲೆಲ್ಲಿಯೂ ಆಸ್ಪತ್ರೆ ಮದ್ದು ಮಾತ್ರವಲ್ಲ, ಕಣ್ಣಿನ ದೋಷಗಳಿದ್ದವರಿಗೆ ಧರ್ಮಾರ್ಥವಾಗಿ ಕನ್ನಡಕಗಳು, ಮತ್ತು ಹಲ್ಲು ಸರಿಯಿಲ್ಲದವರಿಗೆ ಕೃತಕ ಹಲ್ಲುಗಳನ್ನು ಕೂಡ ಸರ್ಕಾರದ ಖರ್ಚಿನಿಂದಲೇ ಪಡೆಕೊಂಡು ಸರ್ವರಿಗೂ ಧರ್ಮಾರ್ಥವಾಗಿ ಈ 3, 4 ವರ್ಷಗಳಿಂದ ಕೊಡುತ್ತಿದ್ದರು. ಇಂಥದನ್ನು ಬದಲುಮಾಡಿ ಈ ಕಣ್ಣಿನ ಮತ್ತು ಹಲ್ಲಿನ ಸಾಮಗ್ರಿಗಳನ್ನು ಅತೀ ಬಡವರಿಗೆ ಮಾತ್ರ ಧರ್ಮಾರ್ಥವಾಗಿದ್ದು, ಮೇಲಿನ ತರಗತಿಯವರಿಗೆ ಕ್ರಯಕ್ಕೆ ಮಾತ್ರ ಸಿಕ್ಕುವುದಾಗಿ ಬದಲಾವಣೆ ಮಾಡಬೇಕೆಂತ ಲೇಬರ್ ಸರ್ಕಾರದವರು ನಿಶ್ಚಯಿಸಿ ಈ ಬಿಲನ್ನು ತಂದದ್ದು. ಅದು ನ್ಯಾಯವಲ್ಲ, ಬಡವರಾಗಲೀ, ದೊಡ್ಡವರಾಗಲೀ, ಎಲ್ಲರಿಗೂ ಧರ್ಮಾರ್ಥವಾಗಿಯೇ ಸಿಕ್ಕಬೇಕು; ದೇಶದಲ್ಲಿ ದೊಡ್ಡವರು ಬಡವರೆಂಬ ಭೇದ ಇರಬಾರದೆಂಬುದೇ ಬಿವಾನರ ಮತ್ತು ಅವರೊಟ್ಟಿಗೆ ಅಭಿಪ್ರಾಯ ಪಟ್ಟ ಸುಮಾರು 30ಜನ ಲೇಬರ್ ಸದಸ್ಯರ ಸಾಧನೆ. ಅನಂತರ ಈ ತಿದ್ದುಪಡಿ ಬಹುಪಕ್ಷದಿಂದ ಮಂಜೂರಾದರೂ ಈಗಲೂ ಕೂಡ ಬಿವಾನ್ ಪಂಗಡದವರಿಗೂ, ಸರ್ಕಾರ ನಡೆಸುವ ಮುಖ್ಯ ಮಂತ್ರಿ ಎಟ್ಲೀ ಪಂಗಡದವರಿಗೂ, ಯಾವ ತರದ ರಾಜಿಯಾಗದೇ ಆ ಭೇದವೇ ಅನೇಕ ವಿಷಯಗಳಲ್ಲಿ ಬೆಳೆಯುತ್ತಾ ಇದೆ.

(ಬರುವ ಸಂಚಿಕೆ ನೋಡಿರಿ.)

ಕೆ. ಆರ್. ಕಾರಂತ

(ವಿಚಾರವಾಣಿ)

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ರಸನಿಮಿಷಗಳು

"ಭಾರತದ ಮುಖ್ಯ ಮಂತ್ರಿ ಜವಾಹರಲಾಲ ನೆಹ್ರೂರವರ ನಾಯಕತ್ವ ಒಪ್ಪಿಕೊಂಡವನ್ನು ಬಿಟ್ಟು ಅಹಾರಲಾಭವನ್ನು ಹೋಗಲಾಡಿಸಬೇಕೆಂಬ ಸೂಚನೆಯನ್ನು ಇಲ್ಲಿಯ ಹಲವು ಕಾಂಗ್ರೆಸ್ಸಿಗರು ಚೆನ್ನಾಗಿ ಪಾಲಿಸುತ್ತಿದ್ದಾರೆ"—ಸುದ್ದಿ.

—ಉಳಿತಾಯದ ಅಕ್ಕಿಯನ್ನು ಮುಂದಿಗೆ 40-50ರಂತೆ ಮಾರುತ್ತಿರುವರೆಂಬುದಕ್ಕೆ ಈ ವರೆಗೆ ಆಧಾರವೇನೂ ಸಿಕ್ಕಿಲ್ಲವಂತೆ.

oo oo

"ಈ ವರ್ಷ ಸಾಕಷ್ಟು ಮಳೆಯಿಲ್ಲದೆ ಬೆಳೆ ಕೆಟ್ಟು ಹೋಯಿತು"—ಕೊಲದೊಡೆಯರು.

—ಹಾಗಾದರೆ ಕಂಬೈಂಡ್ ಬಸ್ ಕಂಪನಿಯವರ ಬಸ್ಸಿನಲ್ಲಿ ನೀರೆಲ್ಲ ಒಳಗೆಬಿದ್ದು ಪ್ರಯಾಣಿಕರ ಮೈಯೆಲ್ಲ ಒದ್ದೆಯಾಗುತ್ತಿದೆ ಎನ್ನುವುದಕ್ಕೆ ಅರ್ಥವೇ ಇಲ್ಲ.!

oo oo

"ಪುರಾತನ ಕಾಲದಿಂದ ಕಾಪು ಮಾರಿಗುಡಿಯಲ್ಲಿ ನಡೆದು ಬರುತ್ತಿದ್ದ ಆಡು ಕುರಿ ಮೊದಲಾದ ಪ್ರಾಣಿವಧೆಗಳನ್ನು ಇನ್ನು ಮುಂದೆ ನಿಲ್ಲಿಸಲಾಗುವುದು" –ಅಧಿಕಾರಿಗಳ ಪ್ರಕಟಣೆ.

ಶ್ರೀ ಮುನ್ಶಿಯವರ ವನಮಹೋತ್ಸವದ ಸಾಫಲ್ಯದೋಷದ ಅವಾಪನೆ ಉಡುಪಿಯವರಿಂದ ಆಡುಗಳ ಮೇಲಿದ್ದರಿಂದ ಆಡುಗಳ ಮಟ್ಟಿಗೆ ಪರವಾನಿಗೆ ಸಿಗಬೇಕೆಂದು ಹಲವು ಭಕ್ತಾದಿಗಳು ಮೇಲಕ್ಕೆ ಕೇಳಲಿರುವರಂತೆ.

oo oo

"ಮದ್ಯಪಾನ ನಿಷೇಧಾಜ್ಞೆಯನ್ನು ಮದ್ರಾಸು ಸರಕಾರವು ಜ್ಯಾರಿಯಲ್ಲಿ ತಂದು ಅಪೂರ್ವ ಯಶಸ್ಸನ್ನು ಗಳಿಸಿದೆ."

—ಮಾಜಿ ಮಂತ್ರಿ ಸಂಜೀವ ರೆಡ್ಡಿ.

—ಮೇಲಿನ ದಿನ ಮದ್ರಾಸದ ಕಸ್ತೂರಿ ಬಿಲ್ಡಿಂಗಿನ ಹತ್ತಿರ ಸರಕಾರಿ ಬಸ್ಸಿಗೆ ಡಿಕ್ಕಿ ಹೊಡೆದು ಪುಡಿಯಾದ ಟಾಂಗಾದಲ್ಲಿ ಬಿಸ್ಕಿ–ಬೀರ್ ಮುಂತಾದ ಜಲಪಾನದ ಬಾಟ್ಲಿಗಳು ಇದ್ದುದನ್ನು ಮದ್ರಾಸದ ಹಿಂದೂಪತ್ರಿಕೆ ಸಚಿತ್ರವಾಗಿ ಪ್ರಕಟಿಸಿದ್ದು ನಿಜವಾಗಿಯೂ ಶೋಚನೀಯ ವಿಚಾರ!

oo oo

"ಪಾಕಿಸ್ತಾನದ ಮೂವತ್ತಮೂರು ದನಗಳು ಭಾರತದ ಗಡಿಯನ್ನು ಹಾನಾಗಿಯೇ ದಾಟಿಬಂದುವು" ಸರಕಾರೀ ಪ್ರಕಟಣೆ.

—ಸಂ. ರಾ. ಸಂಘದ ನಿರೀಕ್ಷಕರು ಈ ವಿಚಾರವನ್ನು ಯು. ಎನ್. ಪೋಕ್ಕೆ ಇನ್ನೂ ವರದಿ ಮಾಡಿಲ್ಲವಂತೆ!

oo oo

"ಹಲವು ತಿಂಗಳಿಂದ ಉಡುಪಿಯ ರಸ್ತೆಗಳಲ್ಲಾ ಕತ್ತಲಾಗಿದ್ದು ಕಳೆದ ಜೂನ್ ತಿಂಗಳ ಮಧ್ಯದಿಂದ ತಿರುಗಿ ಶೋಭಾಯಮಾನವಾಗಿದೆ"

ಉಡುಪೀವಾರ್ತೆ.

—ಬ್ಲಾಕ್ ಮಾರ್ಕೆಟು ಹೋಗಿ ಈಗ ಸೀದಾ ಮಾರ್ಕೆಟು ನಡೆಯುತ್ತದೆಂದಾಯಿತು.

oo oo

"ಬೆಲ್ಲದ ಧಾರಣೆ ತಿರುಗಿ ಹೆಚ್ಚುತ್ತಲಿದೆ......"

ಊರಿನಲ್ಲಿ ವಾರ್ತೆ.

—"ಗುಪ್ತ ಸರಾಯಿ ತಯಾರಿಕೆಯನ್ನು ಈ ತಿಂಗಳು ಹೆಚ್ಚಾಗಿ ಪತ್ತೆಹಚ್ಚಿದ್ದು ಪ್ರೊಹಿಬಿಶನಿನವರ ಕಾರ್ಯದಕ್ಷತೆಯನ್ನು ಸೂಚಿಸುತ್ತದೆ." ಪ್ರೊಹಿಬಿಶನ್ ಅಧಿಕಾರಿಗಳು!

oo oo

"ಗುರುಪುರ ಹೊಳೆಯ ನೀರಿನಲ್ಲಿ ಕಪ್ಪು ಉಸಕ್ಕು ಇದ್ದುದರಿಂದ ಸದ್ಯ ಅಲ್ಲಿನ ನೀರಸರಬರಾಯಿ ಯೋಜನೆಯನ್ನು ನಿಲ್ಲಿಸಬೇಕಾಯ್ತು."

ಸಂಬಂಧ ಪಟ್ಟವರು.

—ಪಾಪ! ಮಂಗಳೂರವರ ಪ್ರಯತ್ನವೆಲ್ಲ ಹೊಳೆಯಲ್ಲಿ ಮುಳುಗುತ್ತದಲ್ಲಾ! ಮುಖಾಬಂದರ ಆಗಲೆಂದು ಭಗೀರಥ ಪ್ರಯತ್ನ ಮಾಡಿದಾಗ ನೇತ್ರಾವತಿ ಹೊಳೆಯಲ್ಲಿ ಹೊಯಿಗೆಯೊಂದಾಯಿತು–ನಲ್ಲಿನೀರೆಂದು ಹಾರೈಸುತ್ತಿರುವಾಗ ಗುರುಪುರ ಹೊಳೆಯಲ್ಲಿ ಕಪ್ಪು ಉಸೆಂದಾಯಿತು. ಮಂಗಳೂರವರ ದುರದೃಷ್ಟಕ್ಕೆ ಮದ್ರಾಸಿನವರಾದರೂ ಏನು ಮಾಡಿಯಾರು ಪಾಪ!

oo oo

"ಬಡಜನರ ಶೋಷಣೆಯನ್ನು ಮಾಡುವ ಸರಕಾರಕ್ಕೆ ಧಿಕ್ಕಾರ. ಕಾಂಗ್ರೆಸ್ಸಿಗರು ಮೂರ್ಖರು!"

—ಪಾರ್ಟಿಯವರ ಬೆಂಕಿ ಭಾಷಣ.

ಹೌದು, ಕಾಂಗ್ರೆಸ್ಸಿಗರು ಮೂರ್ಖರೆಂಬುದನ್ನು ನಾವು ಬಲ್ಲೆವು; ಆದರೆ ಹಾಗೆ ಹೇಳುವವರು ಶತಮೂರ್ಖರೆಂಬುವನ್ನೂ ನಾವು ಬಲ್ಲೆವು!

oo oo

ಪಾಕಿಸ್ತಾನ ನ್ಯಾಶನಲ್ ಗಾರ್ಡ್ಸಿನ 500 ಮಂದಿ ಜನರು ಪಾಕಿಸ್ತಾನ ಸುಂಕ್ಷಿತತೆಗಾಗಿ ಜೀವದಾನ ಮಾಡಲು ಸಿದ್ಧರಿದ್ದೇವೆಂದು ರಕ್ತಲಿಖಿತ ಬರೆದು ಶಪಥ ಹಾಕಿದರು"

—ಪತ್ರಿಕಾ ಪ್ರಕಟಣೆ

—ಅಹಾರದನ್ನು ಕೊಟ್ಟು, ಜೀವದಾನ ಮಾಡಿರೆಂದು ಇಲ್ಲಿಯ ಶರಣಾರ್ಥಿಗಳು ಕೇಳಲಿದ್ದಾರಂತೆ.

oo oo

"ಎರಡನೇ ಜಾಗತಿಕ ಯುದ್ಧಕಾಲದಲ್ಲಿ ಇಂಗ್ಲೆಂಡದ ಬ್ರಿಸ್ಟಲ್ ಬಂದರದ ರಾಷಿಯೊಳ್ಲಿಸಿದ 500 ಕಿಲೋಗ್ರಾಮು ಬಾಂಬೊಂದು ಇಲ್ಲಿ ಕೆಳದಲ್ಲಿಯ ಪದಾರ್ಥಗಳನ್ನು ತೆಗೆಯುವ ಕಾಲದಲ್ಲಿ ಅಕಸ್ಮಾತ್ತಾಗಿ ದೊರಕಿತು"

ಪಿ. ಟಿ. ಐ. ರಾ ಸುದ್ದಿ.

—ನಮ್ಮೂರಿನ ಬಾದರಗಡದ ಮುಳಲು ಪ್ರದೇಶವನ್ನು ಸಾವಿರಾರೂ ನಾಗರಿಕರೂ ಹೀಗೆ ಶೋಧಿಸಿದಾಗ ಬಾಟ್ಲಿಗಳೂ ಸಿಗುತ್ತಿವೆಯಂತೆ. ಇದು ಯಾವಾಗ ಎಸೆದದ್ದೆಂಬುದು ಈ ವರೆಗೂ ಪತ್ತೆಯಾಗಿಲ್ಲ.

—ಪಿಸ್ಸೆಲ್.

THE DANGAL NAYAK BANK LIMITED.

Head Office] (Incorporated in 1920.) [Udipi: S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask fo[illegible] copy of Rules

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಕ್ಯದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಮುಲ್ಕಿ ಬೇಂಕ್,

ಲಿಮಿಟೆಡ್, ಮುಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ದಾಹುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಚ್ಚು ಮತ್ತು ನವೆಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ವಾರದ ಭವಿಷ್ಯ

ತಾರೀಕು 9-8-51 ರಿಂದ — ತಾರೀಕು 15-8-51 ರವರೆಗೆ

ಮೇಷ—ಈ ವಾರದಲ್ಲಿ ನಿಮ್ಮ ವ್ಯಾಪಾರ ವಹಿವಾಟುಗಳಿಗೂ ಉದ್ಯೋಗಕ್ಕೂ ಹೆಚ್ಚಿನ ಹಾನಿ ಸಂಭವಿಸಲಿದೆ. ಪ್ರಯತ್ನಕ್ಕೆ ತಕ್ಕ ಫಲ ದೊರೆಯದು ದುರ್ಜನರ ಒಡನಾಟದಿಂದಾಗಿ ನಷ್ಟಕಷ್ಟಗಳಿಗೂ ಅಪವಾದಕ್ಕೂ ಗುರಿಯಾಗುವಿರಿ. ಗೃಹ ಸುಖಕ್ಕಾವ ಕೊರತೆಯುಲ್ಲದಿದ್ದರೂ ಮನೆಯಲ್ಲಿ ಅವ್ಯವಸ್ಥೆಯು ಹೆಚ್ಚಿ ಪರಸ್ಪರ ಮನಸ್ತಾಪ ಕಲಹಗಳು ಕಾಣಿಸಲಿವೆ. ತಾ. 9, 10, 15 ಈ ದಿನಗಳಲ್ಲಿ ಬಂಧುಮಿತ್ರರ ನೆರವಿನಿಂದಾಗಿ ಧನ ಲಾಭ ಸುಖ ಇಷ್ಟಪ್ರಾಪ್ತಿಗಳಾದಾವು.

ವೃಷಭ—ಕಾಲವು ಅತೀವ ಅನುಕೂಲವಿರುವುದು, ಯಾವ ಉದ್ಯಮವನ್ನು ಕೈಗೊಂಡರೂ ನೀವು ಯಶಸ್ವಿಗಳಾಗುವುದಲ್ಲದೆ ಹೆಚ್ಚಿನ ಕೀರ್ತಿಲಾಭಗಳನ್ನೂ ಪಡೆಯುವಿರಿ. ಸಾಮಾಜಿಕ ಕಾರ್ಯಗಳಲ್ಲೂ ರಾಜಕೀಯ ಕ್ಷೇತ್ರಗಳಲ್ಲೂ ಒಳ್ಳೆಯ ಸ್ಥಾನಮಾನಗಳು ಲಭಿಸುವವು. ಸುಖಮಯವಾದ ಸಂಸಾರದಲ್ಲಿ ಕೆಲವೊಮ್ಮೆ ಅಜ್ಞಾತಶತ್ರುವಿನಿಂದಾಗಿ ಕಲಹಕ್ಕವಕಾಶವುಂಟಾದೀತು. ವಾರಾದಿಯ 4 ದಿನಗಳಲ್ಲಿ ಸುಖಲಾಭ ಸ್ಥಾನಮಾನ ವಿಜಯಗಳಂ ಪಡೆವಿರಿ.

ಮಿಥುನ—ದೈವವು ಬಹಳ ದುರ್ಬಲವಾಗಿರುವದು. ನೀವು ಕೈಗೊಂಡ ಕಾರ್ಯಗಳು ಕೊನೆಗೊಂಡರೂ ನಿರೀಕ್ಷಿಸಿದ ಫಲವು ಲಭಿಸದು. ವ್ಯರ್ಥಶ್ರಮವು ಹೆಚ್ಚಲಿದೆ. ಪಿತ್ತೋಷ್ಣ ವಿಕಾರದಿಂದ ದೇಹಾಲಸ್ಯ ಅಧಿಕಾರಿ ಜನರ ಪೀಡೆ ಮಿತ್ರವರ್ಗದವರಲ್ಲಿ ಮನಸ್ತಾಪ ಶತ್ರುವರ್ಗದವರ ಉಪಟಳ ಆರ್ಥಿಕ ಬಿಕ್ಕಟ್ಟು ಮನಶ್ಚಾಂಚಲ್ಯ ಇತ್ಯಾದ್ಯನಿಷ್ಟ ಪರಂಪರೆಗಳು ಕಾಣಿಸಿಕೊಳ್ಳಲಿವೆ. ಆದರೂ ತಾ. 12, 13, 14, 15 ಈ ದಿನಗಳಲ್ಲಿ ಬಂಧುಗಳ ನೆರವಿನಿಂದಾಗಿ ಕಿಂಚಿತ್ಸುಖಲಾಭಗಳ ಪ್ರಾಪ್ತಿಯಿದೆ.

ಕರ್ಕಾಟಕ—ದೇಹಾರೋಗ್ಯದ ಮಟ್ಟಿಗೆ ನೀವೀವಾರದಲ್ಲಿ ಸ್ವಲ್ಪ ಜಾಗ್ರತೆ ವಹಿಸಬೇಕಾಗುವದು. ಕಾರಣ ಆಹಾರದೋಷದಿಂದಾಗಿ ಉದರಶೂಲೆ ಪ್ರಯಾಣದಲ್ಲಿ ಅನಿರೀಕ್ಷಿತ ಅಪಘಡಗಳು ಪ್ರಾಪ್ತವಾಗಬಹುದು. ನಿಮ್ಮ ಪ್ರತಿಯೊಂದು ಕಾರ್ಯಗಳೂ ಇಚ್ಛೆಯಂತೆ ಕೊನೆಗೊಂಡುವುದರಲ್ಲಿ ಸಂದೇಹವಿಲ್ಲ. ಸಂಸಾರಸುಖ ಆರ್ಥಿಕಸಂಪತ್ತು ಸಮಾಜದಲ್ಲಿ ಗೌರವಾದಿಗಳು ಲಭಿಸುವವು. ವಿರೋಧಿಗಳು ನಿಮ್ಮನ್ನು ಕಣ್ಣೆತ್ತಿ ಸಹಾ ನೋಡಲೊಲ್ಲರು. ವಾರಾಂತ್ಯದ 3 ದಿನಗಳು ಅತ್ಯನುಕೂಲಗಳಿವೆ.

ಸಿಂಹ—ವಿಪತ್ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ ನಿಮ್ಮ ಬಯಕೆಗಳು ಗಗನ ಗೋಪುರಗಳಾದಾವು. ಮಾತ್ರವಲ್ಲ ಹಿಡಿದ ಕಾರ್ಯವನ್ನು ಕೂಡ ಮಧ್ಯದಲ್ಲೇ ಕೈಬಿಡಬೇಕಾಗಿ ಬರುವದು. ವ್ಯರ್ಥಾಪತ್ಕಲಹಕ್ಕೆ ಗುರಿಯಾಗುವಿರಿ. ಹಿಂದೆ ಪುರಸ್ಕಾರವನ್ನು ಪಡೆಯುತ್ತಿದ್ದ ಕಡೆಗಳಲ್ಲಿ ಇಂದು ತಿರಸ್ಕಾರವನ್ನು ಹೊಂದಬೇಕಾದೀತು. ತಾ. 9, 10, 15 ಬಿಟ್ಟುಳಿದ ದಿನಗಳು ದುರ್ದಿನಗಳಾಗಿವೆ.

ಕನ್ಯಾ—ನಿಮ್ಮ ಮನೋರಥಗಳು ಸಫಲಗಳಾಗಲಿವೆ. ಯಾವ ಉದ್ಯಮವನ್ನು ಕೈಗೊಂಡರೂ ಸದ್ಯದ ದಿನಗಳಲ್ಲಿ ನಿಮಗೆ ಪ್ರಯತ್ನಕ್ಕಿಂತ ಅಧಿಕವಾದ ಲಾಭವಾಗುವದು. ಗುರುಹಿರಿಯರ ಅನುಗ್ರಹವು ಅಪ್ತೇಷ್ಟರ ಬೆಂಬಲವೂ ಉತ್ತಮವಿದ್ದಿರುವುದರಿಂದ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಒಳ್ಳೇ ಹೆಸರನ್ನು ಪಡೆವಿರಿ. ತಾ. 11-12 ಅತ್ಯುತ್ತಮ.

ತುಲಾ—ಹಿಂದುಮುಂದಿನ ಯೋಚನೆ ಮಾಡದೆ ಕಾರ್ಯರಂಗದಲ್ಲಿ ಧುಮುಕುವಿರಿ. ಆದರೂ ನಿಮ್ಮ ಪ್ರಯತ್ನವು ವಿಫಲವಾಗಲಾರದು. ಆರ್ಥಿಕ ಸಂಪತ್ತು ಹಿಂದಿಗಿಂತ ಉತ್ತಮ ಸ್ಥಿತಿಗೆ ಬರಲಿದೆ. ದೇಹಾರೋಗ್ಯವು ಸಾಕಷ್ಟು ಉತ್ತಮವಾಗಿದ್ದರೂ ಮನೋರೋಗವು ಮಾತ್ರ ದಿನದಿಂದ ದಿನಕ್ಕೆ ವೃದ್ಧಿ ಹೊಂದಲಿದೆ ವ್ಯಾಪಾರವ್ಯವಹಾರಾದಿಗಳಲ್ಲಿ ಉತ್ತಮ ಫಲ ಪ್ರಾಪ್ತಿಯಿದೆ. ತಾ. 9, 10, 13, 14 ಅನುಕೂಲ.

ವೃಶ್ಚಿಕ—ಮಾತು ಬಲ್ಲವನಿಗೆ ಜಗಳವಿಲ್ಲವೆಂದು ಲೋಕೋಕ್ತಿಯಿದ್ದರೂ ಈ ವಾರದಲ್ಲಿ ನಿಮಗದು ಪಾಠಿಯೊಂದು ಕಂಡೀತು. ಕಾರಣ ಸಾಪೇಕ್ಷ ನಿಪುಣರಿರಲಿ ಯಾ ಮಿತಭಾಷಿಗಳಿರಲಿ ಈ ವಾರದಲ್ಲಿ ಜನರೊಡನೆ ಕಲಹವಾಗದಿರದು. ತನ್ನಿಮಿತ್ತ ಅವಮಾನವನ್ನು ಪಡೆವಿರಿ. ಹಣದ ವ್ಯವಹಾರ ಸಂಬಂಧವಾಗಿ ಕೋರ್ಟು ಕಚೇರಿಗಳಿಗೆ ತಿರುಗುವ ಸಂಭವವಿದೆ. ಗೃಹೋಪಕರಣಗಳಿಗೇನೂ ಕೊರತೆಯಿರದ ಕಾರಣ ಸುಲಭದಿಂದ ಕಾಲಯಾಪನೆ ಯಾಗುವದು. ತಾ. 11, 12, 15 ಈ ದಿನಗಳಲ್ಲಿ ಭೋಗವಿಜಯ ಲಾಭಗಳು ಲಭಿಸುವವು.

ಧನು—ಮೇಲಿಂದ ಮೇಲೆ ಬರತಕ್ಕ ತಾಪತ್ರಯಗಳಿಂದಾಗಿ ಇತಿಕರ್ತವ್ಯತಾಮೂಢರಾಗಿ ಸುಮ್ಮನೆ ಕುಳಿತುಕೊಳ್ಳುವ ಪ್ರಸಂಗಗಳು ಹಲವಾರು ಬಾರಿ ಪ್ರಾಪ್ತವಾಗುವವು. ಒಂದೆಡೆಗೆ ಗೃಹತಾಪತ್ರಯಗಳು ಇನ್ನೊಂದೆಡೆ ವಿರೋಧಿ ವರ್ಗದವರ ಪೀಡೆ ಮತ್ತೊಂದೆಡೆ ಆರ್ಥಿಕ ಸಮಸ್ಯೆ ಇವುಗಳಿಂದಾಗಿ ಸತತ ಶೋಕಾಕುಲಿತರಾಗುವಿರಿ. ಆದರೂ ತಾ. 9, 10, 13, 14 ಈ ದಿನಗಳಲ್ಲಿ ಆಪ್ತ ಬಂಧುಮಿತ್ರರ ಬೆಂಬಲಹೊಂದಿ ಹಲವಾರು ತಾಪತ್ರಯಗಳಿಂದ ಮುಕ್ತರಾಗುವಿರಿ.

ಮಕರ—ತಾನೊಂದು ಬಗೆದರೆ ದೈವವೊಂದಣಿಸಿತೆಂಬಂತೆ ನಿಮ್ಮ ನಿರೀಕ್ಷೆಗೆ ವಿಪರೀತವಾದ ಫಲವು ಪ್ರಾಪ್ತವಾಗುವದು ನೀವು ಕೈಗೊಂಡ ಉದ್ಯಮಗಳಲ್ಲಿ. ಉದರರೋಗದಿಂದಾಗಿ ದೇಹಾಲಸ್ಯವು ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಪರಸ್ಪರ ಮತಭೇದಗಳೂ ಹುಟ್ಟುವವು. ಆದರೆ ಅನಿರೀಕ್ಷಿತವಾಗಿ ಧನಾಪ್ತಿಯಾಗುವ ಯೋಗವಿದೆ. ತತ್ರಾಪಿ ಸ್ತ್ರೀಯಿಂದ ಧನಲಭಿಸುವ ಸಂಭವವಿದೆ. ತಾ. 13, 14 ಬಿಟ್ಟು ಇತರ ದಿನಗಳು ಸಾಕಷ್ಟು ಉತ್ತಮವಾಗಿರುವವು.

ಕುಂಭ—ಸುಖದುಃಖಗಳಿಂದ ಸಮ್ಮಿಶ್ರವಾಗಿರುವುದು ನಿಮಗೀವಾರವು. ಧನಲಾಭ ಪತಿಯ ಅನುಗ್ರಹದಿಂದಾಗಿ ನಿಮ್ಮ ಪ್ರತಿಯೊಂದು ಕಾರ್ಯಗಳೂ ಉತ್ತಮವಾದ ಫಲವನ್ನೀಯುವವು. ರಾಜಕೀಯ ಕಾರ್ಯಗಳಲ್ಲಿ ವಿಜಯವು ಕಟ್ಟಿಟ್ಟ ಗಂಟನಂತಿರುವದು. ಆರೋಗ್ಯವು ಸುಧಾರಿಸುವದು. ಆದರೆ ಪಿತಾತಿಯವರೊಡನೆ ಕಲಹ ಸ್ತ್ರೀವರ್ಗದಿಂದ ಅನಿಷ್ಟಗಳು ಸಂಭವಿಸುವ ಯೋಗವಿದೆ. ತಾ. 9, 10, 15 ಒಳ್ಳೆಯುವಲ್ಲ.

ಮೀನ—ಬಹುಮುಖವಾದ ನಿಮ್ಮ ಖರ್ಚುಗಳಿಗೆ ನಿಮಗೆ ಸಿಗುವ ಆದಾಯವು ಸಮುದ್ರಕ್ಕೆ ಇಂಗು ಕದಡಿದಂತೆಯೇ ಸರಿ. ಗುರುಹಿರಿಯರ ಅಗ್ರಹಕ್ಕೆ ತುತ್ತಾದ ನಿಮಗೆ ಸಂಸಾರದಲ್ಲಿನ ಅನಾರೋಗ್ಯ ಸ್ಥಾನಚಲನೆ ಶತ್ರುಗಳ ಉಪದ್ರವ ಹಣದ ಬಿಕ್ಕಟ್ಟು ಇತ್ಯಾದಿ ಅನೇಕ ಅನಿಷ್ಟಗಳು ಪ್ರಾಪ್ತವಾಗಲಿವೆ. ನೌಕರಿಜನರಿಗೆ ಮಾತ್ರ ಪ್ರಮೋಶನುಗುಣವಾದ ಫಲಸಿಗುವದು. ವಾರಾದಿಯ 4 ದಿನಗಳಲ್ಲಿ ಕಿಂಚಿದನಿಷ್ಟಗಳೇ ಅಧಿಕವಾದಾವು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಬ್ಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಸೆರಗು ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ಶಿವಬಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು **ನವಬೇವಾತು** ಎಂಬ ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುತ್ತದೆ.

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವೀಕರ್ತರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೇವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜೆಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಜಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಸ್ ಕಮಲಾಪುರ, ಶಿಮೊಗ್ಗ, ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. U. SHETTY AT THE NAVAYUGA PRESS, UDIPI, S. INDIA.

Regd.No. M. 3618
LICENCE No. 31
Licensed to Post without Prepayment
Estd 1921 ಸ್ಥಾಪನೆ
16-8-1951
Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧ | NAVAYUGA WEEKLY Post Box No. 22 UDIPI. | Vol. 31
ವಾರ ೪೯ | | No. 49

ಆಗಸ್ಟ್ 15

ಆಗಸ್ಟ್ 15ನೆಯ ದಿನ ಭಾರತದ ಜನಾಂಗಕ್ಕೆ ಬಹು ಮುಖ್ಯ ಹಾಗೂ ಚಾರಿತ್ರಿಕ ದಿನ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಮಹತ್ವದ ದಿನವದು. ಆಗಸ್ಟ್ ತಿಂಗಳೆಂದರೆ ಪ್ರತಿಯೊಬ್ಬ ಭಾರತೀಯನಲ್ಲೂ ಆತ್ಮಾಭಿಮಾನ–ದೇಶಾಭಿಮಾನ ಉಕ್ಕುತ್ತಿತ್ತು! ದೇಶಕ್ಕಾಗಿ ಹೋರಾಡಬೇಕೆಂಬ ಹುಮ್ಮಸ್ಸು ಪ್ರತಿಯೊಬ್ಬ ಕಟ್ಟೆದೆಯ ವೀರನಲ್ಲೂ ಧುಮುಧುಮಿಕುತ್ತಿತ್ತು!

ಸ್ವಾತಂತ್ರ್ಯ ಪಡೆದ ನಾಲ್ಕು ವರ್ಷಗಳಲ್ಲಿ ನಾಲ್ಕನೆಯದಾಗಿ ಆಗಸ್ಟ 15 ಬರುತ್ತಲಿದೆ. ನಾಲ್ಕು ವರ್ಷದ ಹಿಂದಿನ ಆಗಸ್ಟ್ 15ನ್ನೂ ಈಗಿನ ಆಗಸ್ಟ್ 15ದನ್ನೂ ನಾವು ನ್ಯಾಯನೀತಿಗಳ ಮಾನದಂಡದಿಂದ ಅಳೆದರೆ ಮುಂದಿನ ಕಾಲಕ್ಕೆ ಆಗಸ್ಟ್ 15ನ್ನು ಜನ ಮರೆಯುತ್ತಾರೇನೋ ಎನಿಸುತ್ತದೆ.

ಈ ದಿನಾಚರಣೆಯನ್ನು ಪವಿತ್ರ ಭಾವನೆಯಿಂದ ಆಚರಿಸಿದವರೇ ಇಂದು ಅಸೂಯೆ ಪಡುತ್ತಲಿದ್ದಾರೆ. ಅರ್ಧ ಶತಮಾನದಿಂದ ತ್ಯಾಗ–ಹೋರಾಟ–ಬಲಿದಾನಗಳಿಂದ ಮಹತ್ವವನ್ನು ಪಡೆದ ಈ ದಿನವನ್ನು ನಾಲ್ಕೇ ವರ್ಷದಲ್ಲಿ ಮರೆಯುವ ಅನಾದರದಿಂದ ಕಾಣುತ್ತಿರುವಂತೆ ಆಗಿದೆ. ಅದೇಕೆ ಹೀಗಾಯಿತು? ತಪ್ಪೆಲ್ಲಿದೆ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ ಈ ತೀವ್ರತರವಾದ ಬದಲಾವಣೆಯ ಅರ್ಥವಾಗದಿರದು! ಒಂದು ವ್ಯಕ್ತಿಯ ಆದೇಶ–ಶ್ರೇಷ್ಠ ಆದರ್ಶಗಳ ಮೂಲಕ ಐಕ್ಯಮತ್ಯದಿಂದ ಗುರಿಯನ್ನು ಮುಟ್ಟಿದೆವು. ಆದರೆ ಆತನನ್ನು ಕಳೆದುಕೊಂಡ ಈ ನಾಲ್ಕು ವರ್ಷಗಳಲ್ಲಿ ಆದರ್ಶಗಳೆಲ್ಲ ಆತನ ಹಿಂದೆಯೇ ಹೊರಟು ಹೋದವೋ ಎಂದ ಭಾವಿಸುವಂತೆ ನಾವದನ್ನು ಮರೆತಿದ್ದೇವೆ. ಅಂತಲೇ ನಮ್ಮ ರಾಜಕೀಯ–ಸಾಮಾಜಿಕ–ಆರ್ಥಿಕ ರಂಗಗಳು ಗೊತ್ತು ಗುರಿಯಿಲ್ಲದ ಬಿಸಿಲ್ಗುದುರೆಯಂತೆ ಅಸ್ಥಿರವಾಗಿದೆ.

ಆದರ್ಶ–ಧ್ಯೇಯಗಳೆಲ್ಲ ವಾದದ ವಸ್ತುಗಳು; ಬದುಕಿನಲ್ಲಿ ಅವು ಹಾಸುಹೊಕ್ಕಾದರೇನೇ ರಾಜಕೀಯ ಸಾಮಾಜಿಕೀಯ ರಂಗಗಳು ಸುಧಾರಣೆಗೊಂಡಾವು! ನಾವಿಂದು ತಪ್ಪು ಹೆಜ್ಜೆ ಹಾಕುತ್ತಲಿದ್ದೇವೆ. ನಮ್ಮ ಮಾತುಕೃತಿಗಳಲ್ಲಿ ಒಂದಕ್ಕೊಂದು ತಾಳಮೇಳವಿಲ್ಲದೆ ಹಲವು ತರದ ತೊಡಕು ಸಮಸ್ಯೆಗಳನ್ನು ಎದುರಿಸಬೇಕಾಗಿದೆ! ಕಳೆದ ಪ್ರತಿಯೊಂದು ವರ್ಷದಲ್ಲೂ ಮುಂದಿನ ವರ್ಷದ ಕುರಿತಾಗಿ ಉಜ್ವಲ ಭವಿಷ್ಯವನ್ನು ಕಟ್ಟಿಕೊಂಡಿದ್ದೆವು ಅಂತೆಯೇ ನಡೆದುಕೊಳ್ಳುವದಾಗಿ ಪ್ರತಿಜ್ಞೆಯನ್ನೂ ತೊಟ್ಟಿದ್ದೆವು. ಆದರೆ ವರ್ಷದಿಂದ ವರ್ಷಕ್ಕೆ ನಮ್ಮ ಬಿಕ್ಕಟ್ಟು ಇನ್ನಷ್ಟು ಹೆಚ್ಚಾಗುತ್ತ ಬರುತ್ತಲಿದೆ. ನಮ್ಮ ಪ್ರತಿಜ್ಞೆಯನ್ನು ಪಾಲಿಸಲಾಗದ ದುರ್ದೈವಿಗಳು ನಾವಾಗಿದ್ದೇವೆ.

ಅಂದು ಕಾಂಗ್ರೆಸ್ಸಿನ ಬಗ್ಗೆ ಜನತೆಗೆ ಇದ್ದ ಆದರ, ಪೂಜ್ಯಭಾವನೆ, ಇಂದು ಇರುವುದಿಲ್ಲ. ಇಂದು ಲಕ್ಷ ಲಕ್ಷ ಜನ ಕಾಂಗ್ರೆಸ್ಸನ್ನು ತ್ಯಜಿಸಿಹೊರಬರುತ್ತಲಿದ್ದಾರೆ. ಕಾಂಗ್ರೆಸ್ಸದಲ್ಲಿ ಎಂತು ಬೇರೆಯವರ ರಾಜಕೀಯ ನೀತಿಯನ್ನು ಖಂಡಿಸಿದವರು ಇಂದು ಅದೇ ಕಾರ್ಯವನ್ನು ಮಾಡುತ್ತಲಿದ್ದಾರೆ. ಆದರೆ ಅದು ಇತರರನ್ನು ಕುರಿತ ಟೀಕೆಯಲ್ಲ; ಕಾಂಗ್ರೆಸ್ಸಿನ ಕುರಿತಾದದ್ದೇ. ಅಂದಿನ ಮಿತ್ರರೇ ಇಂದಿನ ಶತ್ರುಗಳು. ಅಂದಿನ ಆಪ್ತರೇ ಇಂದಿನ ಆತ್ಮಘಾತುಕರು. ನಾಲ್ಕು ವರ್ಷದ ಕೆಳಗೆ ಇದ್ದ ಐಕ್ಯಮತ್ಯವನ್ನಾಗಲೀ, ಏಕಾಂತಃಕರಣವನ್ನಾಗಲೀ, ಸದ್ಭಾವನೆಗಳನ್ನಾಗಲೀ ನಾವಿಂದು ಕಾಣುವದು ಶಕ್ಯವಿಲ್ಲ.

ಪಾಕಿಸ್ತಾನ ಕೊಟ್ಟು ಬಿಡುವದರಿಂದ ಜಾತೀಯ ದ್ವೇಷ ಕಡಿಮೆಯಾದೀತೆಂದು ನಾವು ಭಾವಿಸಿದೆವು. ಆ ಮೇಲೆ ನಡೆದ ಸೋದರ ಹತ್ಯಾಕಾಂಡವನ್ನು ನೆನೆದು ಕರುಳು ಹಿಸುಕಿದಂತಾದರೂ ಮುಂದೆ ಶಾಂತಿ ಮೂಡೀತೆಂದು ಯೋಚಿಸಿದ್ದು ಯೋಚಿಸಿದ್ದೇ ಇಂದು ಪಾಕಿಸ್ತಾನ ಮಾತ್ರವಲ್ಲ; ಹಿಂದುಸ್ತಾನವೇ ನಮ್ಮದೆಂದು ರಂಪಾಟ ನಡೆದಿದೆ. ಸತ್ಯ, ನೀತಿ, ಪ್ರಾಮಾಣಿಕತನ, ಈಗಿನ ಕಾಲಕ್ಕೆ ಕೇಳಬಾರದಲ್ಲವೆಂಬ ವಾಡಿಕೆಯ ಮಾತು ತೀರ ತಪ್ಪಲ್ಲ! ಖಡ್ಗ ಹಿರಿದು ಭದ್ರಮುಷ್ಟಿಯನ್ನು ಜಡಿದು ನಿಂತಿದ್ದಾರೆ ಪಾಕಿಸ್ತಾನಿಗಳು ನಮ್ಮೆದುರಿನಲ್ಲಿ! ಆಹಾರ ಬಟ್ಟೆಗಳ ಹಾಹಾಕಾರ ವರ್ಷವರ್ಷದಿಂದ ವೃದ್ಧಿಯಾಗುತ್ತಲಿದೆ. ಕಾಂಗ್ರೆಸ್ಸಿಗರು ಗಂಭೀರ ಪರಿಸ್ಥಿತಿಗಳನ್ನು ಮುತ್ಸದ್ದಿತನದಿಂದ ಎದುರಿಸಬೇಕಾದ ಈ ಕಾಲದಲ್ಲೇ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಕಟ್ಟಿಕೊಂಡು ಬೇರೆ ಬೇರೆ ಪಕ್ಷ ಕಟ್ಟುತ್ತಲಿದ್ದಾರೆ. ಇಷ್ಟೇ ಮಾತ್ರವಲ್ಲ; ಕಾಂಗ್ರೆಸ್ಸಿನಂತಹ ಮಹಾ ಸಂಸ್ಥೆಯನ್ನು ಟೀಕಿಸಿ ಸ್ವಾರ್ಥವನ್ನು ಸಾಧಿಸುವ ಹಂಚಿಕೆಯನ್ನು ಮಾಡುವುದು ನಿಜವಾಗಿಯೂ ದುರ್ದೈವದ ಸಂಗತಿಯೆಂದೇ ಹೇಳಬೇಕು!

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಗ್ನಿಪರೀಕ್ಷೆ ನಡೆಯಲಿದೆ. ಕಳೆದ ನಾಲ್ಕು ವರ್ಷಗಳಲ್ಲಿ ನಾವು ಮಾಡಿದ ದುರಿತದ ಫಲವನ್ನುಣ್ಣಲಿದ್ದೇವೆ. ಸಂದರ್ಭ ಸಾಧಿಸಿ ಇತರ ಪಕ್ಷಗಳು ಕಾಂಗ್ರೆಸ್ಸಿನ ಮೇಲೆ ಟೀಕೆಗಳ ಸುರಿಮಳೆಗರೆಯುತ್ತಿದ್ದಾವೆ. ನಾಲ್ಕು ವರ್ಷದ ನಮ್ಮ ಕೃತಿಗಳು ಎಷ್ಟೇ ಮಹತ್ವದ್ದಾದರೂ–[illegible] ಜನತೆಯ ಒಲವನ್ನು ಗಳಿಸಿಕೊಳ್ಳುವದಕ್ಕೆ ಅವಾವುವೂ ನಮಗೆ ಸಹಕಾರಿಯಾಗಿಲ್ಲ.

ಈ ಶುಭ ಸನ್ನಿವೇಶದಲ್ಲಿ ಮಾಮೂಲಿನಂತೆ, ಮುಂದಕ್ಕೆ ಒಳ್ಳೆಯದಾಗಲೀ ಎಂದು ಹಾರೈಸುವಷ್ಟರಲ್ಲೇ ನಮ್ಮ ಕರ್ತವ್ಯವನ್ನಾಗಿ ಇಟ್ಟುಕೊಳ್ಳಲಾರದು. ಹಿಂದಿನ ಕಹಿ ಅನುಭವವನ್ನು ನೆನೆದುಕೊಂಡು ಮುಂದಿನ ದಿನಗಳಿಗಾಗಿ ಜಾಗ್ರತೆಯನ್ನು ವಹಿಸಬೇಕು. ಮಾತ್ರವಲ್ಲ; 'ಧ್ಯೇಯಕ್ಕಾಗಿ ನಾವು ಹೋರಾಟ ನಡೆಸುವೆವು.' ಎನುವ ದೃಢ ಪ್ರತಿಜ್ಞೆಯನ್ನು ತೊಡಬೇಕು. ಹೊರಗಿನಿಂದ ಬರಬಹುದಾದ ಆಪತ್ತು ವಿಪತ್ತುಗಳಿಗೂ–ಗಂಡಾಂತರಗಳಿಗೂ– ಅವಮಾನಗಳಿಗೂ– ರಾಷ್ಟ್ರೀಯ ಕ್ಷತಿಗೂ ಇದೊಂದೇ ಸಿದ್ಧಿಯ ಮಂತ್ರ! ಬಾಪೂಜಿ ಹೇಳಿದ್ದು ಅದನ್ನೇ. ಕರ್ತವ್ಯಶೀಲರಾದವರಿಗೆ ಇದಕ್ಕಿಂತ ಯೋಗ್ಯವೂ ಸಮರ್ಪಕವೂ ಆದ ಮಾರ್ಗ ಬೇರಿಲ್ಲ. 1951ರ ಆಗಸ್ಟ 15 ಇದನ್ನು ಕಲಿಸುವಂತಾದರೂ ನಮ್ಮಲ್ಲಿ ಹುಟ್ಟಿಸಲಿ!

ಲೇಖಾಂಕ ೧

ಪ್ರಜಾಸತ್ತೆ

ಬರೆದವರು:
ಸಿ. ಎಚ್. ಶೆಟ್ಟಿ, ಬಿ.ಎ

ಪ್ರಜಾಸತ್ತೆಯೆಂಬುದೊಂದು ಆಧುನಿಕ ಕಾಲದ ವಾಗಾಡಂಬರದ ಶಬ್ದವಾಗಿದೆ. ಸಮುದ್ರದ ತೆರೆಯ ಘರ್ಜನೆಯಂತೆ ಲೋಕದಲ್ಲೆಲ್ಲಾ ಗುಡು ಗುಡುಸಿ ಮೊಳಗುವದು. ಅದರ ಹೆಸರೆತ್ತಿದೊಡನೆ ಜನರು ಹರುಷೋನ್ಮತ್ತರಾಗಿ ಕೈ ಚಪ್ಪಾಳೆ ಹೊಡೆಯುವರು. ಅನೇಕ ಕಡೆಗಳಲ್ಲಿ ಇದು ಜನರ ಆಶೆ ಮತ್ತು ನಿರಾಶೆಗೆ ಕಾರಣವಾಗಿರುವದು. ಇದರ ತತ್ವವನ್ನು ಎಲ್ಲರೂ ಕೊಂಡಾಡುವರು. ಗರ್ವಿಸುವರು ಮತ್ತು ಪೂಜಿಸುವರು. ಆದರೆ ಇದರ ಅನುಭವವು ಬಹುತೇಕ ಜನರಿಗೆ ಕಹಿಯಾಗಿರುವುದು. ಜನರ ಬೆಂಬಲವಿದ್ದು ಪ್ರಜಾಸತ್ತೆಯ ಸರಕಾರಗಳು ಮಾಡಿದುದನ್ನೆಲ್ಲಾ ದೂರುವದು ಮತ್ತು ದೂಷಿಸುವದಾದರೂ ಯಾವ ಸಮಸ್ಯೆ ಮತ್ತು ಪ್ರಶ್ನೆಯನ್ನು ಬಗೆಹರಿಸಲು ಪ್ರಜಾಸತ್ತೆಯ ಸರಕಾರವೇ ಬೇಕೆನ್ನುವರು. ಇದರಿಂದ ನಮಗೆ ಹೀಗನ್ನಿಸುತ್ತದೆ. ಒಂದೋ ಪ್ರಜಾಸತ್ತೆಯೆಂಬ ಶಬ್ದಕ್ಕೆ ಅರ್ಥವೇ ಇಲ್ಲ ಹಾಗಲ್ಲದಿದ್ದರೆ ಅದು ತುಂಬಾ ಅರ್ಥಗರ್ಭಿತವಾದ ಶಬ್ದವಾದ್ದರಿಂದ ಯಾವ ಅರ್ಥವನ್ನೂ ಕಟ್ಟಲು ಬರುವುದಿಲ್ಲ. ಇದೇ ರೀತಿಯಲ್ಲಿ ನಾವು ಅನೇಕ ಶಬ್ದಗಳನ್ನು ಅರ್ಥಮಾಡದೆ ರೂಢಿಯಲ್ಲಿ ಉಪಯೋಗಿಸುವೆವು. ಎಲ್ಲರೂ ಸ್ವಾತಂತ್ರ್ಯಪ್ರಿಯರು ಆದರೆ ಸ್ವಾತಂತ್ರ್ಯವೆಂದರೇನು? ಯಾವ ತರದ ಸ್ವಾತಂತ್ರ್ಯ? ಈ ವಿಚಾರಗಳನ್ನು ನಾವು ಮಾಡುವದಿಲ್ಲ. ಬೊಲ್ಸೆವಿಜಮು, ಕೊಮ್ಯುನಿಜಮು ಸಮತಾವಾದವೆಂದೊಡನೆ ಕೆಲವರು ಕಿವಿ ನೆಟ್ಟಗೆಮಾಡಿ ಉತ್ಸಾಹಿಗಳಾಗುವರು. ಇನ್ನು ಕೆಲವರು ಬೈಗಳ ಸುರಿಮಳೆಗರೆಯುವರು. ನಾವು ಅಭಿಪ್ರಾಯಭೇದದಿಂದ ಶಬ್ದಗಳಿಗೆ ಬೇರೆ ಬೇರೆ ಅರ್ಥ ಕಟ್ಟುವೆವು. ಕೆಲವು ಸಮಯ ಶಬ್ದದ ಬಗ್ಗಾಗಿ ಜನರು ತರ್ಕಿಸುವರೇ ಹೊರತು ನಿಜವಾದ ಸೊತ್ತಿಗಾಗಿ ಅಲ್ಲ. ಹೇಗೆ ವ್ಯಕ್ತಿಗಳ ಬಗ್ಗಾಗಿ ಸ್ಥಾಪಿತವಾದ ಸರಕಾರಗಳು ಕೆಲವೆಡೆ ವ್ಯಕ್ತಿಗಳನ್ನೇ ಗ್ರಹಣ ಮುಚ್ಚಿದಂತೆ ನುಂಗಿ ಬಿಡುವುದೋ ಹಾಗೆಯೆ ಗಹನ ತತ್ವಗಳ ಬಗ್ಗೆ ಶಬ್ದಗಳನ್ನೂ ಘೋಷಣೆಗಳನ್ನೂ ಹೊರಡಿಸುವದಾದರೂ ಅಂಥಾ ಶಬ್ದಗಳು ಯಾವ ತತ್ವಕ್ಕನ್ನಯಿಸುತ್ತವೆಂಬುದನ್ನು ಮರೆತು ಬಿಡುವೆವು. ಪ್ರಜಾಸತ್ತೆಯೆಂಬ ಶಬ್ದವು ಅಂಥಾದ್ದೇ ಒಂದಾಗಿದೆ. ಇದರ ಗುಣಲಕ್ಷಣಗಳೇನೆಂಬುದನ್ನು ನಾವು ಸ್ವಲ್ಪ ವಿಚಾರಿಸಬೇಕಾಗಿದೆ.

ಯಾವ ಸರಕಾರದ ಕಾರ್ಯಭಾರವು ಸಮಾನದ ಅಧಿಕಾರದಲ್ಲಿರುವುದೋ ಅದಕ್ಕೆ ಪ್ರಜಾಪ್ರಭುತ್ವವೆಂದು ಕರೆಯುವರು ಪ್ರಾಚೀನ ಕಾಲದ ಗ್ರೀಕರ ಪ್ರಾಬಲ್ಯದ ಸಮಯ ಪ್ರಜಾಸತ್ತೆಯೆಂದರೆ ಬಡವರ ಅಥವಾ ಸಾಮೂಹಿಕ ಜನರ ಆಡಳಿತೆಯಾಗಿರುವದು. ಆಧುನಿಕ ಕಾಲದಲ್ಲಿ ಪ್ರಜಾಸತ್ತೆಗಳ ಮುಖಾಂತ್ರ ಅಧಿಕಾರ ನಡೆಸುವದಾಗಿದೆ. ಪ್ರಜಾಸತ್ತೆಯ ಎಲ್ಲಾ ಮುಖ್ಯ ವಿಚಾರಗಳಲ್ಲಿ ಜನಾಭಿಪ್ರಾಯವೇ ಪ್ರಾಮುಖ್ಯವಾಗಿರುವುದು.

ಪ್ರಜಾಸತ್ತೆ ಹೇಗೆ ಉದ್ಭವಿಸಿತು.

ಪ್ರಜಾಮತ ಸರಕಾರವು ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿ ಉದ್ಭವಕ್ಕೆ ಬಂದು ವಿಸ್ತರಣ ಹೊಂದಿರುವದನ್ನು ನಾವು ಇತಿಹಾಸದಲ್ಲಿ ಓದಿತಿಳಿದಿರುವೆವು. ಆದಿಯಲ್ಲಿ ಪ್ರಥಮ ಸರಕಾರವೇ ಚಕ್ರಾಧಿಪತ್ಯ. ಇವರ ದುಷ್ಕೃತ್ಯ ಮತ್ತು ದುರಾಚಾರದ ದೆಸೆಯಿಂದ ದೊಡ್ಡ ಕುಟುಂಬಗಳ ಹಿರೇ ಮನುಷ್ಯರ ಅಧಿಕಾರ ಬಂತು. ಅವರ ಅಹಂಕಾರ, ಸೊಕ್ಕು. ಮತ್ತು ಪೀಡಣೆಯನ್ನು ಸಹಿಸಲಾರದೆ ಅವರನ್ನು ಅಧಿಕಾರ ಚ್ಯುತರನ್ನಾಗಿ ಮಾಡಿ ಸ್ಥಿತಿವಂತರಾದ ಪೌರಜನರು ರಾಜ್ಯಾಡಳಿತೆಯನ್ನು ವೈಶಿಕೊಂಡರು. ಕೆಲವು ಪಟ್ಟಣಗಳಲ್ಲಿ ಸ್ವತಂತ್ರರಾದ ಎಲ್ಲಾ ಜನರಿಗೆ ಆಡಳಿತೆಯಲ್ಲಿ ಅಧಿಕಾರ ವಿರುವುದು. ಶ್ರೀಮಂತರು ಜನರನ್ನು ಹೀರಿ ಹಿಂಡಿದ ಕಾರಣ ಅವರ ಉಪಟಳದಿಂದ ಬಿಡುಗಡೆ ಹೊಂದುವರೆ ಪ್ರಜಾಸತ್ತೆಯು ತಲೆ ಎತ್ತಿರುವದಾಗಿದೆ ಹೊರತು ಬುಡದಲ್ಲಿ ಯಾವ ತತ್ವಗಳನ್ನಾಧರಿಸಿ ಹುಟ್ಟಿದುದಲ್ಲ. ಗ್ರೀಸ್ ಮತ್ತು ರೋಮಿನಲ್ಲಿ ಶ್ರೀಮಂತರ ಪೀಡಣೆಯೇ ಕಾರಣ ಈ ದೇಶದ ವೈಭವದ ಸಮಯ ಸಿಸಿರೋ, ಡೆಮೋಸ್ತೆನೀಸ್ ಮೊದಲಾದ ಮುತ್ಸದ್ದಿಗಳು ಜನರ ಬೆಂಬಲ ಪಡೆಯುವರೇ ಅವರ ಗುಣ ನಡತೆ ಮತ್ತು ಯೋಗ್ಯತೆಗಳ ಕುರಿತು ಹೊಗಳಿ ಪ್ರಶಂಸಿಸಿರುವರು ಶಿವಾಯಿ ತತ್ವಗಳ ಬಗ್ಗೆಗಿ ಚರ್ಚಿಸಿದ್ದಾಗಲೀ ಭೋದಪರ ಬಾಷಣ ಮಾಡಿದ್ದಾಗಲೀ ಕಂಡು ಬರಲಿಲ್ಲ. ರೋಮು ಮತ್ತು ಗ್ರೀಸ್ ದೇಶಗಳು ಉರುಳಿ ಬಿದ್ದೊಡನೆಯೇ ಜನಮತ ಸರಕಾರವು ಮುಸುಕಿನಿಂದ ಮಬ್ಬಾಯಿತು.

ಜೇಮ್ಸ್ ಬ್ರೈಸ್ ಎಂಬ ದೊಡ್ಡ ಬರಹಗಾರರು ತಮ್ಮ "ಆಧುನಿಕ ಪ್ರಜಾಸತ್ತೆ" (Modern Democracy) ಎಂಬ ಗ್ರಂಥದಲ್ಲಿ ಆಧುನಿಕ ಪ್ರಜಾಸತ್ತೆಯು ಮುಖ್ಯವಾಗಿ ನಾಲ್ಕು ಕಾರಣಗಳಿಂದ ವಿಸ್ತರಣ ಹೊಂದಿದೆ ಎಂದು ಹೇಳಿರುವರು. ಒಂದನೆಯದು ಮತಸಂಭಂದವಾಗಿರುವುದು. ಎಲ್ಲರೂ ಒಂದೇ ಜಾತಿ, ಮತ, ಮತ್ತು ಪಂಥಕ್ಕೆ ಸೇರಿದವರು, ಎಲ್ಲರಿಗೂ ಒಬ್ಬನೇ ದೇವರು, ಸರ್ವರೂ ಸಹೋದರರಂತೆ ಸಂಮಾನರೆಂಬ ಭಾವನೆಯಿಂದಾಗಿದೆ. ಮತದ ಪ್ರಭಾವವು ಮಾನವರ ಆತ್ಮದಿಂದ ಹುಟ್ಟುವ ನೈತಿಕ ಬಲಹೊಂದಿರುವದರಿಂದ ಸರಕಾರದ ಮೇಲೆ ಪರಿಣಾಮ ಕಾರಿಯಾಗುವ ಎಲ್ಲಾ ಪಕ್ಷಗಿಂತಲೂ ಅದ್ಭುತ ಶಕ್ತಿಯಾಗಿರುವದು. ಇಂಗ್ಲೆಂಡಿನಲ್ಲಿ ಪ್ರಥಮ ಪ್ರಜಾಸತ್ತೆಯನ್ನು ಸಾರಿದುದೇ ಮತಾನುಸಾರವಾಗಿ ಅಲ್ಲಿಂದ ಪ್ಯೂರಿಟಾನರು ಅಮೇರಿಕಕ್ಕೆ ಕೊಂಡುಹೋದರು. ಅಮೇರಿಕದಲ್ಲಿ ಇದರ ಜೊತೆಗೆ ತತ್ವಗಳು ಬೆಳೆಯಾದವು. ಅಮೇರಿಕದಿಂದ ಪುನಃ ಸಾಗರವನ್ನು ದಾಟಿ ಫ್ರಾನ್ಸಿಗಾಗಿ ಹೋದವು. ಫ್ರೆಂಚ್ ದೇಶದಲ್ಲಿರುವ ಮಹಾ ವಿಜ್ಞಾನಿಗಳಾದರು ರೂಸ್ಸೋ, ಇರಾಸ ಮಸ್ ಮತ್ತು ವಾಲ್ಟೈಯರ್ ಮೊದಲಾದವರಿಂದ ಈ ತತ್ವಗಳು ರೂಪು ರೇಖೆಗಳನ್ನು ಹೊಂದಿ ಬೆಳೆದವು. ಎರಡನೇಯದಾಗಿ ಚಕ್ರವರ್ತಿಗಳ ಮತ್ತು ಶ್ರೀಮಂತರ ದಬ್ಬಾಳಿಕೆಯನ್ನು ನಿಲ್ಲಿಸುವುದಕ್ಕಾಗಿ ತಕ್ಕ ಸುಧಾರಣೆಯನ್ನು ತರುವುದೇ ಇದಕ್ಕೆ ಮೂಲಕಾರಣವಾಗಿರುವುದು. ಪ್ರಜಾಸತ್ತೆಯಲ್ಲಿ ಪ್ರಸಿದ್ಧಿ ಪಡೆದ ಸ್ವಿಜರ್ ಲೇಂಡಿನಲ್ಲಿ ಹೇಪ್ಸ್ ಬರ್ಗ್ ಮನೆತನದವರ ಅಧರ್ಮದ ಆಳ್ವಿಕೆಯೇ ಕಾರಣವಾಗಿದೆ ಹೊರ್ತು ಯಾವ ತತ್ವಗಳ ಆಧಾರದ ಮೇಲೆ ಬಂದದ್ದಲ್ಲ. ಮೂರನೇಯದಾಗಿ ಸಾಮಾಜಿಕ ಮತ್ತು ರಾಜಕೀಯ ಕಾರಣಗಳು ಕೆಲವೆಡೆ ಬಲವಾಗಿವೆ ವರ್ಗ ಭೇದ, ವರ್ಣ ಭೇದ ಮತ್ತು ಪರರ ಆಳ್ವಿಕೆಯಲ್ಲಿ ಅತೃಪ್ತಿಯುಂಟಾಗಿ ಪ್ರಜಾಸತ್ತೆಯು ಮುಂದುವರಿಯುವರೇ ಕಾರಣಗಳಾಗಿವೆ, ಇನ್ನು ನಾಲ್ಕನೇಯದಾಗಿ ಗಹನ ತತ್ವಗಳೇ (Abstract theories) ಕಾರಣಗಳಾಗಿರುವವು. ಈ ತತ್ವಗಳ ಪ್ರಕಾರ ಎಲ್ಲರೂ ಸ್ವತಂತ್ರರು ಸರಿಸಮಾನ ಹಕ್ಕಿರುವವರು. ಪ್ರತಿಯೊಬ್ಬನಿಗೂ ಸ್ವತಂತ್ರನಾಗಿ ಜೀವಿಸಿ ಸುಖಸಂಪತ್ತನ್ನು ಪಡೆಯುವರೆ ಅರ್ಹತೆ ಇದೆ. ಇವೇ ಕೆಲವು ಮಾನವರ ಮೂಲಭೂತ ಹಕ್ಕಿದ್ದರಿಂದ ಇವು ಪರಾಧೀನ ಮಾಡತಕ್ಕವುಗಳಲ್ಲವೆಂಬ ಭಾವನೆಯಿಂದಾಗಿದೆ. ಪ್ರಜಾಸತ್ತೆಯು ಪ್ರಥಮ ತಲೆದೋರುವಾಗ ಯಾವ ತತ್ವಗಳನ್ನು ಹೊಂದಿರುವುದಿಲ್ಲವಾದರೂ ಅವರ ವಿಸ್ತರಣ ವಸ್ತುಸ್ಥಿತತೆಗೆ ಗಹನ ತತ್ವಗಳೇ ಕಾರಣವಾಗಿರುವವು ಪರಾಧೀನವಾಗದ ಮೂಲಭೂತ ಹಕ್ಕುಗಳು ಮಾನವರಿಗಿದೆ ಎಂದು ಫ್ರೆಂಚರು ಮತ್ತು ಅಮೇರಿಕದವರಿಂದ ಹೊಗಳಲ್ಪಟ್ಟವು ಸಾಧಾರಣ ಮಟ್ಟಿಗೆ ಒಂದು ರೀತಿಯ ಧರ್ಮಪ್ರಚಾರಕರ ತತ್ವದ ಗ್ರಂಥವಾಗಿ (Dogma of an apostle's creed) ಕಾಣಿಸಿಕೊಂಡವು. ಇವುಗಳಲ್ಲಿ ಕೆಲವು ಪ್ರಯೋಗಸಿದ್ಧವಲ್ಲದ ತತ್ವಗಳೂ (Apriori theory) ಇವೆ. ಪ್ರಾಕೃತಿಕ ಹಕ್ಕು (Natural Rights) ಎಂಬುದು ತೋರಿಕೆಗೆ ಸರಿಯಾಗಿ ಕಂಡರೂ ರುಜು ಪಡಿಸುವದು ಕಷ್ಟ. ಆದಾಗ್ಯೂ ಪ್ರಜಾಸತ್ತೆಯ ಪ್ರಚಾರಕ್ಕೆ ಮತ್ತು ಬೆಳವಣಿಗೆಗೆ ಅವುಗಳು ಸಹಾ ಫಲಕಾರಿಯಾಗಿರುವವು. ಈ ವಿಷಯವನ್ನು ಸರಿಯಾಗಿ ತಿಳಿಯಬೇಕಾದರೆ ಸ್ವಾತಂತ್ರ್ಯ, ಸಮಾನತೆ, ಮತ್ತು ಹಕ್ಕು ಇವೇ ಮೊದಲಾದ ಶಬ್ದಗಳ ಅರ್ಥವನ್ನು ಪರಿಶೀಲಿಸುವಲ್ಲಿ ಸಮಾಧಾನವಾದೀತು.

(ಮುಂದುವರಿಯುವುದು)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಖು ರೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಯದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ
ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು,

TEL. 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಸ್ಟಾಲಿನರ ಅಟೋಮಿಕ್ ಕೇಂದ್ರಗಳು

ಲೇಖಕರು: ವೈ. ಮಹಾಲಿಂಗ ಭಟ್.

ಇನ್ನೊಂದು ಜಾಗತಿಕ ಯುದ್ಧವು ಪ್ರಾರಂಭವಾದಲ್ಲಿ ಅಣು ಗುಂಡಿಗೆ ಪ್ರಾಧಾನ್ಯತೆಯು ದೊರಕುವುದು ನಿಶ್ಚಿತ. ಜಗತ್ತಿನ ಇಂದಿನ ಪ್ರಬಲ ರಾಷ್ಟ್ರಗಳಾದ ರಷ್ಯಾ-ಅಮೇರಿಕಗಳ, ಅಣುಶಕ್ತಿಯ ಅಭ್ಯುದಯಕ್ಕಾಗಿ ಅನವರತವೂ ಶ್ರಮಿಸುತ್ತಿವೆ. ಅಂತಹ ಯುದ್ಧ ಸಂಭವಿಸಿದಲ್ಲಿ ಮಾನವ ಸಮಾಜ ಹೇಳಹೆಸರಿಲ್ಲದಂತಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ರಷ್ಯವು ಇಂದು ಒಂದೆಡೆಯಲ್ಲಿ ವಿಶ್ವಶಾಂತಿಯ ಸೋಗಿನಿಂದ ತನ್ನ ವಾದವನ್ನು ಪರೋಕ್ಷವಾಗಿ ಜಗತ್ತಿನಲ್ಲಿ ಬಿತ್ತರಿಸುತ್ತಿದೆ. ಇನ್ನೊಂದೆಡೆ ತನ್ನ ದೇಶದಲ್ಲಿ ಒಂದೇ ಸಮನೆ ಸಮರ ಸಿದ್ಧತೆಯನ್ನೂ ಮಾಡುತ್ತಿದೆ. ಸ್ಟಾಕ್‌ಹೋಮ್ ಶಾಂತಿ ಪ್ರಾರ್ಥನಾ ಚಳುವಳಿಯು ಕಮ್ಯೂನಿಸಮ್ಮಿನೆಡೆಗೆ ಜನರನ್ನು ಸೆಳೆಯುವ ಒಂದು ಸಾಧನವಾಗಿದೆಯಲ್ಲದೆ ಬೇರೆಯಲ್ಲ. ಮೇಲಿಂದ ಮೇಲೆ ನೋಡುವಾಗ ಅವರ ಉದ್ದೇಶಗಳೇನೋ ಬಹಳ ಘನವಾಗಿ ಕಾಣುತ್ತವೆ. ಆದರೆ ಆಳವಾಗಿ ಪರಿಶೀಲಿಸಿ ನೋಡಿದರೆ ಅದು ಸೋವಿಯಟ್ಟಿನ ಒಂದು ಚಾಣಕ್ಯತಂತ್ರವೆಂಬುದರಲ್ಲಿ ಸಂಶಯವಿಲ್ಲ.

ರಷ್ಯದ ಪ್ರಾಮುಖ್ಯ ಅಣುಶಕ್ತಿಯ ಕೇಂದ್ರಗಳು ಬೈಕಲ್ ಸರೋವರದ ಸುತ್ತುಮುತ್ತಲಿವೆ. ಈ ಸರೋವರದ ವಿಸ್ತೀರ್ಣವು ಸುಮಾರು ಡೆನ್ಮಾರ್ಕ ದೇಶದಷ್ಟು ವಿಸ್ತಾರವಾಗಿದೆ. ಇದು ಯಾವಾಗಲೂ ಹಿಮದಿಂದ ಆಚ್ಛಾದಿತವಾಗಿರುವ ಕಾರಣ ನಿಸರ್ಗವು ಅಷ್ಟೊಂದು ಪ್ರೇಕ್ಷಣೀಯವಾಗಿಲ್ಲ. ಆದರೂ ಇಲ್ಲಿಯ ಸನ್ನಿವೇಶವು ಅಣುಶಕ್ತಿಯಂಥ ಗುಪ್ತ ಅಸ್ತ್ರವನ್ನು ಯೋಗ್ಯ ರೀತಿಯಿಂದ ಕಾಪಾಡುವುದಕ್ಕೆ ಬಹಳ ಅಚ್ಚುಕಟ್ಟಾಗಿದೆ.

ಅಮೇರಿಕದ ಅಣುಶಕ್ತಿಯ ಕೇಂದ್ರದ ಅಲಾಸ್ಕಾದಿಂದ ಬೈಕಲ್ ಸರೋವರ ಪ್ರದೇಶಕ್ಕೆ ಸುಮಾರು ೩೦೦೦ ಮೈಲುಗಳಾಗಬಹುದು. ರಷ್ಯವು ತನ್ನ ಅಣುಗುಂಡಿನ ಸತ್ವಪರೀಕ್ಷೆಯನ್ನು ಇದೇ ಸರೋವರದ ದ್ವೀಪವೊಂದರಲ್ಲಿ ನಡೆಯಿಸಿತೆಂದು ಹೇಳಲಾಗಿದೆ. ಈ ಸರೋವರ ಸಮೀಪದ ಹಾರ್‌ವೆಲ್ ಮತ್ತು ಓಕ್ ಪರ್ವತಶ್ರೇಣಿಗಳ ಮಧ್ಯದಲ್ಲಿ ಸುಮಾರು ೧೭ ಅಣುಶಕ್ತಿ ಸಂವರ್ಧಕ ಕೇಂದ್ರಗಳು ಇವೆ. ಎಂದು ಅಟೋಮಿಕ್ ಶಾಸ್ತ್ರಜ್ಞರು ಊಹಿಸಿದ್ದಾರೆ. ಇವುಗಳ ನೇರ ಉತ್ತರಕ್ಕೆ ಸೋವಿಯಟ್ಟಿನ ಏಷ್ಯಾ ಕೇಂದ್ರವಾದ ಇರ್ಕುಟ್ಸ್ಕ (Irkutsk) ಇದೆ. ಇದರ ಸುತ್ತಲೂ ಎತ್ತರವಾದ ಪರ್ವತ ದಿನ್ನೆಗಳಿರುವ ಕಾರಣ ಯಾವುದೊಂದು ಅಪಾಯವು ತಗಲದಂತಾಗಿದೆ. ಹೀಗಾದ್ದರಿಂದ ಈ ಪ್ರದೇಶವು ಸೋವಿಯಟ್ ರಷ್ಯದ ಅಟೋಮಿಕ್ ಕಣಜವಾಗಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಅಮೇರಿಕನರ ಅಟೋಮಿಕ್ ತಯಾರಿಯಂತೆ ರಷ್ಯದವರದ್ದೂ ದಿನೇ, ದಿನೇ ಪುರೋಗಾಮಿಯಾಗುತ್ತಿದೆ. ೧೯೪೯ನೇ ಆಗೋಸ್ಟು ತಿಂಗಳಲ್ಲಿ ಸೋವಿಯಟ್ಟಿನ ಉಚ್ಚ ವಿಜ್ಞಾನಿಗಳು ಮತ್ತು ಅರ್ಥಶಾಸ್ತ್ರ ನಿಪುಣರ ಸಮ್ಮೇಳನವೊಂದು ಇರ್ಕುಟ್ಸ್ಕನಲ್ಲಿ ಜರಗಿತು. ಮುಂದೆ ಪ್ರಾಪಂಚಿಕ ಬೇಕಾದ ವಿಜ್ಞಾನ ಸೂತ್ರಗಳನ್ನು ಈ ಸಭೆಯಲ್ಲಿ ಚರ್ಚಿಸಲಾಯಿತು. ಸುಮಾರು ೪೦೦ ಅನ್ವೇಷಣಾ ಸಮಿತಿಗಳನ್ನು ನೇಮಿಸಲಾಯಿತು.

ಈಗ ರಷ್ಯದಲ್ಲಿ ವಿಜ್ಞಾನ ಶಾಸ್ತ್ರ ಒಂದು ಕ್ರಮವಾದ ಜ್ಞಾನಶಾಖೆಯಾಗಿ ಬೆಳೆಯಲಾರಂಭಿಸಿದೆ. ಅಲ್ಲಿಯ ಇಂದಿನ ಜನಜೀವನದಲ್ಲಿ ವಿಜ್ಞಾನಕ್ಕೆ ಒಂದು ಪ್ರಾಮುಖ್ಯ ಸ್ಥಾನವಿದೆ, ತಮ್ಮ ಔದ್ಯೋಗಿಕ ಪ್ರಗತಿಗಾಗಿ ಹಾಗೂ ತನ್ನ ಉದ್ದೇಶ ಸಫಲತೆಗಾಗಿ ಅವರು ಇಂದು ವಿಜ್ಞಾನದ ಬಲವನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಇರ್ಕುಟ್ಸ್ಕ ಅನ್ವೇಷಣಾ ಯೋಜನೆಯಂತೆ ಮನುಷ್ಯ ಸಂಚಾರವೇ ಇಲ್ಲದ ಬೈಕಲ್ ಸರೋವರ ಪ್ರದೇಶಕ್ಕೆ ಹಲವಾರು ಮಾರ್ಗಗಳನ್ನು ಕಡಿಸಲಾಗಿದೆ. ಸಾರ್ವಜನಿಕರಿಗೆ ಅವುಗಳಲ್ಲಿ ಪ್ರವೇಶವಿಲ್ಲ. ಶೀಘ್ರಗತಿಯ "ಅಂಗಾರ" ನದಿಗೆ ಒಂದು ಆಣೆಕಟ್ಟನ್ನು ಹಾಕಿ ವಿದ್ಯುತ್ ಕಾರ್ಖಾನೆಯೊಂದನ್ನು ಇತ್ತೀಚೆಗೆ ಸ್ಥಾಪಿಸಲಾಗಿದೆ. ಇಲ್ಲಿಂದ ಹದಿನೇಳು ಅಟೋಮಿಕ್ ಕೇಂದ್ರಗಳಿಗೆ ವಿದ್ಯುತ್ತಿನ ಸರಬರಾಯಿ ಮಾಡುತ್ತಾರೆ. ಇದಲ್ಲದೆ ಇರ್ಕುಟ್ಸ್ಕಗೂ ವಿದ್ಯುತ್ತು ಹಾಕಲಾಗಿದೆ. ಇದರಿಂದಾಗಿ ಅದು ಈಗ ಒಂದು ದೊಡ್ಡ ಕೈಗಾರಿಕಾ ಕೇಂದ್ರವಾಗಿದೆ. ಟ್ರ್ಯಾಕ್ಟರ್, ಮೋಟಾರ್‌ಕಾರುಗಳು ಮುಂತಾದಂಥ ಯಂತ್ರಸಾಮಾಗ್ರಿಗಳು ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ತಯಾರಾಗುತ್ತಿವೆ. ಜನಸಂಖ್ಯೆಯಲ್ಲಿ ವಿರಳವಾದ ಇರ್ಕುಟ್ಸ್ಕ ಈ ರೀತಿಯ ಔದ್ಯೋಗಿಕ ಕಾರಣದಿಂದಾಗಿ ಒಮ್ಮೆಲೇ ಜನನಿಬಿಡವಾಯಿತು. ಈಗ ಅಲ್ಲಿಯ ಜನಸಂಖ್ಯೆಯು ಸುಮಾರು ೧,೦೦೦೦,೦೦ ಅದು ಸೈಬೀರಿಯದ ರಕ್ಷಣೆಯ ಮುಖ್ಯ ಕೇಂದ್ರವೂ ಆಗಿದೆ ಅಟೋಮಿಕ್ ಬಲದಲ್ಲಿ ಅಮೇರಿಕಗಿಂತಲೂ ಒಂದು ಮಡಿ ಮಿಗಿಲಾಗಿದೆ. ೧೯೩೮ರ ಸುಮಾರಿಗೆ ಬರೇ ಚರ್ಮ ಮತ್ತು ಕಟ್ಟಿಗೆಯ ವ್ಯಾಪಾರ ಸ್ಥಳವಾಗಿದ್ದ ಇರ್ಕುಟ್ಸ್ಕನ್ನ ಇಷ್ಟೊಂದು ಅದ್ಭುತ ಕೈಗಾರಿಕಾ ಕೇಂದ್ರವನ್ನಾಗಿ ಮಾಡಿದ ಸೋವಿಯಟ್ ವಿಜ್ಞಾನಿಗಳ ಅಮಾನುಷ ಕೃತ್ಯಕ್ಕೆ ತಲೆಬಾಗಲೇ ಬೇಕು. ಹಾಗಾದರೆ ಜಗತ್ತಿನಲ್ಲಿ ಮಾನವಶಕ್ತಿಗೆ ಇದಿರಾವ ಇನ್ನೊಂದು ಶಕ್ತಿ ಇದೆಯೇ?

ಅಲ್ಲಿಯ ಶ್ರಮಜೀವಿಗಳಿಗೆ, ಕೇಂದ್ರಗಳ ಸಮೀಪದಲ್ಲೇ ಅಲ್ಲಿಯ ಸರಕಾರವು ಬೇಕಾದ ವಸತಿಗೃಹ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದೆ. ಅವರಲ್ಲಿ ಹುರುಪನ್ನುಂಟುಮಾಡುವುದಕ್ಕೆ ಅಲ್ಲಲ್ಲಿ ವಿನೋದಗೃಹಗಳನ್ನು ನಿರ್ಮಿಸಲಾಗಿದೆ. ಕೆಲಸಬಿಟ್ಟ ಕೂಡಲೇ ಅವರು ಈ ಮಂದಿರಗಳಲ್ಲಿ ಸಮಯವನ್ನು ಕಳೆಯುತ್ತಾರೆ.

ಹಾಗಾದರೆ ಈ ೧೭ ಅಟೋಮಿಕ್ ಕೇಂದ್ರಗಳಲ್ಲಿ ಅಣುಗುಂಡು ಎಷ್ಟು ತಯಾರಾಗಬಹುದು, ಎಂದು ಅಮೇರಿಕನ್ ರಾಜಕಿಗಳು ಪ್ರಾರಂಭದಲ್ಲಿ ಚಿಂತಾಗ್ರಸ್ತರಾದರು. ಇವರ ಪತ್ತೆಹಚ್ಚಲು ಭದ್ರತಾ ಸಂಸ್ಥೆಯು ಹಲವಾರು ಗುಪ್ತಸೂತ್ರಗಳನ್ನು ಕೈಗೊಂಡಿತು. ಈ ಕೆಲಸದಲ್ಲಿ ತಕ್ಕಮಟ್ಟಿಗೆ ತಾವು ಜಯಶೀಲರಾಗಿದ್ದೇವೆಂದು ಅವರು ಇತ್ತೀಚೆಗೆ ಹೇಳುತ್ತಿದ್ದಾರೆ. ದೇವದಾರು ಹಲಗೆಯ ಆವರಣದಿಂದ ಕೂಡಿ ಭದ್ರತೆಗೆ ಎತ್ತರವಾದ ಗೋಪುರಗಳಿಂದ ಶೋಭಿಸುತ್ತಿರುವ ಒಂದೇ ಒಂದು ಕೇಂದ್ರವು ಅಮೇರಿಕದವರ ಊಹಾಪೋಹೆಗಳನ್ನು ನಿಶ್ಚಿತಪಡಿಸಿದೆ, ಇದರ ಸುತ್ತಲೂ ಸುಸಜ್ಜಿತವಾದ ಸೈನ್ಯವೊಂದು ಅಹೋರಾತ್ರಿ ಪಹರೆ ಮಾಡುತ್ತಿದೆಯಂತೆ.

ಅಣುಗುಂಡನ್ನು ವಿಧ್ವಂಸಕಕ್ಕೆ ಮಾತ್ರ ಉಪಯೋಗಿಸದೆ ರಚನಾತ್ಮಕಕ್ಕೂ ಬಳಸಬಹುದೆಂದು ರಷ್ಯವು ಹೇಳುತ್ತಿದೆ. ಅವರು ಎಷ್ಟೋ ಪರ್ವತಗಳನ್ನು ಭೇದಿಸಿ ಕೃಷಿಗನುಕೂಲವಾದ ಪ್ರದೇಶಗಳನ್ನಾಗಿ ಮಾಡಿದ್ದಾರೆಂದು ಅವರ ಅನುಯಾಯಿಗಳು ಬೊಬ್ಬಿರಿಯುತ್ತಾರೆ. ಇದರಲ್ಲಿ ಎಷ್ಟು ಸತ್ಯಾಸತ್ಯಗಳಿವೆಯೆಂದು ಅವರಿಗೇ ಗೊತ್ತು. ಅಂತೂ ರಷ್ಯವು ಒಂದು ಬಲಶಾಲಿ ರಾಷ್ಟ್ರವಾಗಿದೆ. ಆದ್ದರಿಂದಲೇ ಜಗತ್ತಿನ ಎಲ್ಲೆಡೆಗಳಲ್ಲೂ ಅವರ ಅನುಯಾಯಿಗಳ ಚೇಲಾಟ, ಹಾವಳಿಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಪ್ರತಿಯೊಂದು ದೇಶದ ಕಮ್ಯೂನಿಸ್ಟ ಮುಖಂಡರೂ ಸ್ಫೂರ್ತಿಗಾಗಿ ಅವರ "ಮಕ್ಕ"ವಾದ ರಷ್ಯಾವನ್ನೇ ನೋಡಿ ಸಂಚಾರಮಾಡಿ ಬರುತ್ತಿದ್ದಾರೆ.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ ಎ. ಪಂಡಿತ್, B SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯು ಎಲ್ಲ ವ್ಯವಹಾರಗಳು ಹೀಗೆ ಚಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾಕಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು. ಚೇಳವಿಷಮುಂತಾದವು, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮತ್ತು ನಮ್ಮಲ್ಲಿ ಸಿಕ್ಕುತ್ತವೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಲಕೆಲ್ಲ ಋತುಸ್ರಾವವಾಗುವುದು, ಸಕಾಲಕ್ಕೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3.; ಸ್ಪೆಶಲ್ ರೂ. 5. ಅಧಿಕಾಧಿಕ ಸ್ಪೆಶಲ್ ನಂ, 8-[ವಿ. ಪಿ. ಹಸ್ತಾಂತರ ಪ್ರತ್ಯೇಕ.]

Mrs D. DEVEE, F DS. (N. J.)
Tollygunge CALCUTTA.
ಸ್ವಾತಿಕೃಪ ಔಷಧಾಲಯ, ಮಂಗಳೂರು

ಭಾರತೀಯರಿಗೆ ಅಗಸ್ಟ್ 1951ರ ಮಹಾಪ್ರಶ್ನೆ:

ಅ.ಭಾ. ಕಾಂಗ್ರೆಸ್ಸಿಗೆ ಹಿಂದೆಂದೂ ಉಂಟಾಗದ ಗಂಡಾಂತರ ಇಂದು ಉದ್ಭವಿಸಿದೆ. ಕಾಂಗ್ರೆಸ್ ಅರ್ಧ ಶತಮಾನದಿಂದ ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಲು ಹೋರಾಟ ನಡೆಸಿರಬಹುದು–ಬಳಿಕ ಅಧಿಕಾರಕ್ಕೆ ಬಂದ ಮೇಲೆ ಇನ್ನೂ ಹಲವು ಬಿಕ್ಕಟ್ಟಿನ ವಿಚಾರಗಳಲ್ಲಿ ಸೋತಿರಲೂ ಬಹುದು. ಇವೆಲ್ಲ ತನಗಿದಿರಾಗಿ ಬರುವ ವಿರುದ್ಧ ವಾತಾವರಣದ ಮೇಲೆ ನಡೆಸಿದ ಹೋರಾಟವೇ ಆಗಿತ್ತು. ಇಂತಹ ಸಂದರ್ಭದಲ್ಲಿ ಕಷ್ಟನಿಷ್ಠೂರಗಳು ಬಂದಿದ್ದರೂ ಕಾಂಗ್ರೆಸ್ಸಿನೊಳಗಿನ ಐಕ್ಯ ಕೆಟ್ಟಿರಲಿಲ್ಲ. ಇಂದು ಹಾಗಲ್ಲ; ಕಾಂಗ್ರೆಸ್ಸು ತನ್ನ ಆತ್ಮರಕ್ಷಣೆಗಾಗಿ ಜಾಗ್ರತೆಯನ್ನು ವಹಿಸಬೇಕಾಗುವ ಗಂಭೀರ ಸ್ವರೂಪದ ಬಿರುಗಾಳಿ ಕಾಂಗ್ರೆಸ್ಸಿನಲ್ಲಿದ್ದಿದೆ. ಈಚೆಗೆ ಆರು ತಿಂಗಳಿನಿಂದ ಕಾಂಗ್ರೆಸ್ಸಿನಲ್ಲಾಗುತ್ತಿರುವ ತೀವ್ರ ತರದ ಬದಲಾವಣೆಯನ್ನು ಲಕ್ಷಿಸಿದರೆ ನಮಗದು ವೇದ್ಯವಾಗದಿರದು! ತಮ್ಮ ಆಯುಷ್ಯಕಾಲವನ್ನು ಕಾಂಗ್ರೆಸ್ಸಿನಂತಹ ಮಹಾ ಸಂಸ್ಥೆಯನ್ನು ನಿರ್ಮಿಸುವದಕ್ಕಾಗಿ ವ್ಯಯಿಸಿದವರು ಇಂದು ಕಾಂಗ್ರೆಸ್ಸನ್ನು ತ್ಯಜಿಸಿ ಬೇರಾಗಿದ್ದಾರೆ. ಹೀಗೆ ಕಾಂಗ್ರೆಸನ್ನು ತ್ಯಜಿಸುತ್ತಿರುವ ಸಾವಿರ ಸಾವಿರ ಜನವನ್ನೂ ಸ್ವಾರ್ಥದ ದೃಷ್ಟಿಯಿಂದ ಬೇರಾದವರೆಂದು ಟೀಕಿಸುವಂತಿಲ್ಲ. ಕಾಂಗ್ರೆಸಿನೊಳಗಿರುವ ಕೊಳಕನ್ನು–ತತ್ವದವಿಪರ್ಯಾಸವನ್ನೂ ಕಂಡು ಅಸೂಯೆಗೊಂಡವರೇ ಬಹುಮಂದಿಯೆಂದರೆ ಒಪ್ಪಬಹುದೇನೋ. ಆಡಳಿತದಲ್ಲಿ ಲೋಪದೋಷವಿರುವದನ್ನು ಕಾಂಗ್ರೆಸ್ಸು ಲಕ್ಷ್ಯಕ್ಕೆ ತಂದುಕೊಳ್ಳದೆ ಅದನ್ನು ಉಗ್ರೋಪಾಯದಿಂದ ಪ್ರತಿಬಂಧಿಸಬೇಕೆಂಬ ಕೃಪಲಾನಿಯವರಂತಹ [ವಾ]ದಕ್ಕೆ ಕಾಂಗ್ರೆಸಿನಲ್ಲಿ ಸಾಕಷ್ಟು ಬೆಂಬಲ ಸಿಗಲಿಲ್ಲ! ರಫಿ ಅಹಮ್ಮದ ಕಿಡ್ವಾಯಿಯಂತಹ ಪ್ರತಿಭಾಶಾಲಿಯಂತಹ ಮಂತ್ರಿಯೋರ್ವನನ್ನು ನೆಹ್ರೂರವರು ವೈಯಕ್ತಿಕವಾಗಿ ತನ್ನ ಬಲವನ್ನುಪಯೋಗಿಸಿ ಉಳಿಸಿಕೊಂಡದ್ದರ ಫಲವೇನಾಯಿತೆಂಬುದನ್ನು ನಾವಿಂದು ನೋಡುತ್ತಲಿದ್ದೇವೆ.

ಈಗ ಉದ್ಭೂತವಾಗಿರುವ ಈ ಗೊಂದಲಕ್ಕೆ ಕಾಂಗ್ರೆಸ್ ಸಂಸ್ಥೆ ಹೇತುವೇ ಅಥವಾ ಅದರಲ್ಲಿಯ ವ್ಯಕ್ತಿಗತವಾದ ದೋಷಗಳು ಹೇತುವೇ ಎಂಬುದನ್ನು ಅವಲೋಕಿಸಬೇಕು. ಸಂಸ್ಥೆಯೇ ಹೇತುವೆಂದು ಹೇಳುವದು ತಾತ್ವಿಕ ಹಾಗೂ ಭಾವನಾ ಪರವಶತೆಯ ಮಾತು. ವಸ್ತುಸ್ಥಿತಿ ಹಾಗಿರುವುದಿಲ್ಲ. ವ್ಯಕ್ತಿಯ ಜನಪ್ರಿಯತವಲ್ಲದ ಛಲ ಹಟವನ್ನು ಸಂಸ್ಥೆಯ ಮೂಲಕ ಸಾಧಿಸಲೆತ್ನಿಸಿದ್ದೇ ಇಲ್ಲಿಯ ದೊಡ್ಡ ತಪ್ಪು! ಕಾಂಗ್ರೆಸ್ಸಿನ ತತ್ವದ ಬಾಲ ಹಿಡಿದು ಅಂಧಾನುಕರಣೆ ನಡೆಸಿದ್ದರಿಂದಲೋ– ಜಾತೀಯತಾ ಪ್ರಶ್ನೆ— ನಿಷ್ಕುರಾದಿಗಳು ಬರಬಹುದೆಂಬ ಕಲ್ಪನೆಯಿಂದಲೋ ಇಂತಹ ತಪ್ಪನ್ನು ತಿದ್ದುವ ಸಾಹಸಕ್ಕೆ ಇಲ್ಲವೆ ಎತ್ತಿ ತೋರಿಸುವದಕ್ಕೆ ಯಾರೂ ಹೋಗಿರಲಿಲ್ಲ. ಪ್ರಧಾನಿ ನೆಹ್ರೂರವರಾದರೂ, ಕಾಂಗ್ರೆಸ್ ಕಾರ್ಯ ಸಮಿತಿಗೂ ಕೇಂದ್ರ ಪಾರ್ಲಿಮೆಂಟರೀ ಬೋರ್ಡಿನ ಸದಸ್ಯತ್ವಕ್ಕೂ ರಾಜೀನಾಮೆಯನ್ನೀಯುವುದರಿಂದ ಆ ತಪ್ಪು ಪರಿಹಾರವಾದೀತೆಂದು ಭಾವಿಸಿದಾರೆ. ಇದು ನೆಹ್ರೂರವರಿಗೆ ಅನಿವಾರ್ಯವಾದರೂ ಕಾಂಗ್ರೆಸ್ಸಿನ ಮಟ್ಟಿಗೆ ಭಾರತದ ಮಟ್ಟಿಗೆ ಅವ್ಯವಹಾರ್ಯವೂ ಅತ್ಯಂತ ಗಂಡಾಂತರಪ್ರಾಯವಾದುದೂ ಆಗಿರುತ್ತದೆ.

ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ನರ ವೈಯಕ್ತಿಕವಾದ ಮತಭೇದದಿಂದಲೂ, ಹಟಮಾರಿತನದಿಂದಲೂ ಈ ಬಗೆಯ ಕಲುಷಿತ ವಾತಾವರಣವುಂಟಾಗಿದೆನ್ನುವದು ಆರು ತಿಂಗಳಿಂದ ಚೆನ್ನಾಗಿ ಮನವರಿಕೆಯಾಗಿದೆ. ಕಿಸಾನ ಮಜದೂರ ಪ್ರಜಾಪಾರ್ಟಿಯ ನಿರ್ಮಾಣಕ್ಕೆ ಟಂಡನರ ಕುತಂತ್ರವೇ ಕಾರಣ. ಶ್ರೀ ಕೃಪಲಾನಿ ಮತ್ತು ಅವರ ಅನುಯಾಯಿಗಳೊಡನೆಯೂ ಕಾಂಗ್ರೆಸ್ ಅಧ್ಯಕ್ಷರೊಡನೆಯೂ ನೆಹ್ರೂರವರು ಸಂಧಾನದ ಮಾತುಕತೆಯನ್ನು ನಡೆಸಿದರು. ಐಕ್ಯಮತ್ಯಕ್ಕಾಗಿ ನೆಹ್ರೂ ಮಾಡಿದ ಪ್ರಯತ್ನ ಸಣ್ಣದೇನೂ ಅಲ್ಲ. ಆದರೆ ಕೃಪಲಾನಿ ನೆಹ್ರೂರವರ ಮೇಲೆ ತನಗಿರುವ ಗಾಢವಾದ ವಿಶ್ವಾಸಕ್ಕೆ ಅರ್ಹತೆಯನ್ನು ತೋರಿಸುವದಕ್ಕೆ ಅಧ್ಯಕ್ಷ ಟಂಡನರ ಆದೇಶವಿಡಲಿಲ್ಲ. ಪ್ರಜಾಪಾರ್ಟಿಯ ಜನನದಿಂದಾಗಿ ಕಾಂಗ್ರೆಸ್ಸಿನ ಶಕ್ತಿ ಸ್ವಲ್ಪ ಮಟ್ಟಿಗೆ ಕುಂದಿತು. ಕಾಂಗ್ರೆಸ್ಸಿನ ಮೇಲೆ ತಪ್ಪು ದೋಷಗಳನ್ನು ಹೊರಿಸುವವನೂ ಅದರಲ್ಲಿ ಅಸೂಯೆ ಪಟ್ಟವರನ್ನು ಬೇಡಾದ ಮಾರ್ಗಕ್ಕೆ ಹಚ್ಚುವದಕ್ಕೆ ಈ ಸಂದರ್ಭವನ್ನು ಬಳಸಿಕೊಂಡರು. ಹಿರಿಯ ಕಾಂಗ್ರೆಸ್ಸಿಗರೂ ಕಾಂಗ್ರೆಸ್ಸನ್ನು ತ್ಯಜಿಸುವುದನ್ನು ನೋಡಿ ಎಲ್ಲರೂ ತಿಳಿದೋ–ತಿಳಿಯದೆಯೋ–ಅದೇ ಮಾರ್ಗವನ್ನನುಸರಿಸಿದರು. ಈ ಬಗೆಯ ಅನುಚಿತ ಕಾರ್ಯ ಅವ್ಯಾಹತವಾಗಿ ನಡೆಯುತ್ತಿರುವದರಿಂದ ಕಾಂಗ್ರೆಸ್ಸು ಕಳವಳಕ್ಕೊಳಗಾಗಿ ಬೆಂಗಳೂರಿನ ಅಧಿವೇಶನದಲ್ಲಿ ಸಿಡಿದು ಹೋದವರನ್ನು ತಿರುಗಿ ಕಾಂಗ್ರೆಸು ಸೇರಿಕೊಳ್ಳುವಂತೆ ಬಿನ್ನವಿಸಿಕೊಳ್ಳಬೇಕೆಂತಲೂ, ಮುಂದಕ್ಕೆ ಇಂತಹ ಪ್ರಸಂಗವಾಗದಂತೆ ಐಕ್ಯಸಾಧನೆ ನಡೆಸಬೇಕೆಂತಲೂ ಘೋಷಿಸಿತು. ಅದೇ ಗುರಿಯನಿಟ್ಟುಕೊಂಡು ಕಾರ್ಯಕಾರಿ ಸಮಿತಿ ಸುದೀರ್ಘ ಚರ್ಚೆನಡೆಸಿತು. ಡೋಲಾಯಮಾನಸ್ಥಿತಿಯಲ್ಲಿದ್ದ ರಫಿಯ.ವರ ನಿಲುಮೆ ಇನ್ನಷ್ಟು ಅಸ್ಥಿರವಾಯಿತು. ಅಂತಲೇ ಅವರು ರಾಜನಾಮೆಯನ್ನಿತ್ತರು. ನೆಹ್ರೂರವರು ದೇಶದಿದಿರಿರುವ ಗಂಡಾಂತರ ವಿಚಾರಗಳನ್ನು ರಫಿಯ.ವರ ಗಮನಕ್ಕೆ ತಂದು ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡಾಗ ನೆಹ್ರೂರವರಿಗೂ–ಅವರಿಗೂ ನಿಕಟವರ್ತಿ ಆತ್ಮೀಯತೆಯ ದ್ಯೋತಕವಾಗಿ ರಫೀ ಮಂತ್ರಿಪದಕ್ಕಿತ್ತ ರಾಜೀನಾಮೆ ಹಿಂದಕ್ಕೆ ತೆಗೆದುಕೊಂಡರು. ಕಾಂಗ್ರೆಸ್‌ಗಿತ್ತ ರಾಜೀನಾಮೆ ಹಾಗೆಯೆ ಉಳಿಯಿತು. ಅದೇ ಕಾಲಕ್ಕೆ ಕಾಂಗ್ರೆಸ್ ಅಧ್ಯಕ್ಷರ ವೈಯಕ್ತಿಕ ವಿಚಾರದ ಟೀಕೆಯ ಫಲವಾಗಿ ಟಂಡನ್ನರು ರಫಿಯವರನ್ನು ಮಂತ್ರಿಯನ್ನಾಗಿ ತೆಗೆದುಕೊಂಡದ್ದು ಕಾಂಗ್ರೆಸ್ ತತ್ವದ ದೃಷ್ಟಿಯಿಂದ ಸರಿಯಲ್ಲವೆಂದೂ ಅದಕ್ಕೆ ಸರಿಯಾದ ಸ್ಪಷ್ಟೀಕರಣ ಕೊಡಬೇಕೆಂದೂ ಆದೇಶವನ್ನಿತ್ತರು. ನೆಹ್ರೂ ಆದರ್ಶ–ತತ್ವಗಳಿಗೆ ಮನ್ನಣೆ ಕೊಡಲೇಬೇಕಾಯಿತು. ಅಂತಲೇ ರಫಿಯವರ ಕೇಳಿಕೆಯನ್ನು ಖಂಡಿಸಿದರು. ನೆಹ್ರೂರವರು ಉಭಯ ಸಂಕಟಕ್ಕೆ ಬಿದ್ದಿರವದನ್ನು ಲಕ್ಷಿಸಿ ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಸುಧಾರಣೆಯನ್ನು ಮಾಡುವದು ನೆಹ್ರೂರವರಿಗೂ ಶಕ್ಯವಿಲ್ಲವೆಂಬುದನ್ನರಿತುಕೊಂಡು ರಫಿ ತಿರುಗಿ ರಾಜಿಯನ್ನಿತ್ತರು! ನೆಹ್ರೂರವರಿಗೆ ರಫಿಯೆಂದರೆ ತುಂಬಾ ವಿಶ್ವಾಸ; ಅವರ ಕಾರ್ಯದಕ್ಷತೆಯು ಪರಿಪೂರ್ಣತೆಯು ಮೆಚ್ಚುಗೆಯಿತ್ತು. ಇಂತಹ ಮಿತ್ರನನ್ನು ಮಂತ್ರಿಪದದಲ್ಲಿ ಉಳಿಸಿಕೊಳ್ಳಲಾಗದುದಕ್ಕೆ ಅವರಿಗೂ ವಿಷಾದವಾಗಿರಬೇಕು!

ಬೆಂಗಳೂರಿನ ಅಧಿವೇಶನದಲ್ಲೇ ಟಂಡನರ ವಿರುದ್ಧವಾದ ಅಭಿಪ್ರಾಯಗಳೂ–ವೈಯಕ್ತಿಕ ಛಲಕ್ಕೆ ವ್ಯತಿರಿಕ್ತ ಸೂಚನೆಗಳೂ ಬಂದಿದ್ದವು.. ಈ ಸಂಕಟ ಕಾಲದಲ್ಲಿ ನೆಹ್ರೂರವರೇ ಕಾಂಗ್ರೆಸ್ಸಿನ ಸಾರಥಿತ್ವವನ್ನುವಹಿಸಬೇಕೆಂಬ ಬಹುಮತ್ವದ ಸೂಚನೆಯೂ ಮುಂದೆ ಬಂದಿತ್ತು. ನೆಹ್ರೂರವರ ಧುರೀಣತ್ವದ ಅವಶ್ಯಕತೆ ಮಾತ್ರವಲ್ಲದೆ ಟಂಡನ್ನರು ಹೊರಬೀಳಬೇಕೆಂಬುದೇ ಇದರ ಮತಿತಾರ್ಥವಾಗಿತ್ತು!

ಕಾಂಗ್ರೆಸ್ ಅಧ್ಯಕ್ಷರಿಗೂ ಕಾರ್ಯಕಾರೀ ಸಮಿತಿಗೂ ಸರಿಯಾದ ತಾಳಮೇಳವಿಲ್ಲವೆಂಬುದಾಗಿ ತಿಳಿಯುತ್ತದೆ ಇಂತಹ ಬಿಕ್ಕಟ್ಟಿನ ಕಾಲದಲ್ಲಿ ವಿಶಾಲಧೋರಣೆ–ಸೌಹಾರ್ದಭಾವದಿಂದ ವರ್ತಿಸುವ ವ್ಯಕ್ತಿತ್ವ ಅವಶ್ಯವಿದೆ.

ಅಧ್ಯಕ್ಷ ಟಂಡನ್ನರು ಸಧ್ಯದ ವಾತಾವರಣಕ್ಕೆ ಬಗ್ಗದ ಒಂದು ಛಲವನ್ನು ಹಿಡಿದು ನಡೆಯುತ್ತಲಿದ್ದಾರೆಂದು ನಾವು ಊಹಿಸಬಹುದಾಗಿದೆ. ಕಾಂಗ್ರೆಸ್ಸಿನ ಮೂಲಭೂತ ತತ್ವಕ್ಕೆ ಹೊಂದಿಕೆಯಾಗದ ಒಂದು ರೀತಿಯ ಜಾತೀಯತಾಭಾವ–ಪಕ್ಷಪಾತತನಕ್ಕೆ ಆಸ್ಪದವಿದ್ದುದೇ ವಿರಸಕ್ಕೆ ಕಾರಣವಾಯಿತೆಂದು ಹಲವರು ಹೇಳುತ್ತಾರೆ. ಏನೇ ಇರಲಿ; ನಾವಿಂದು ವ್ಯಕ್ತಿ ಪೂಜೆ ಮಾಡುವವರಲ್ಲ. ದೇಶದ ಶುಭಕಾಮನೆಯನ್ನು ಬಯಸುವವರನ್ನು ಆರಾಧಿಸುವವರಾಗಬೇಕು. ದಿಲ್ಲಿಯಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮುಂದೆ ನೆಹ್ರೂರವರ ರಾಜೀನಾಮೆಯ ಪ್ರಶ್ನೆ ಬಂದಿದೆ. ಅದನ್ನಷ್ಟೇ ಒಪ್ಪಿಕೊಂಡು ತನ್ನ ಕಾರ್ಯವನ್ನು ಮುಂದೆ ಸಾಗಿಸುವ ದುಡುಕಿನ ಕಾರ್ಯವನ್ನೆಂದೂ ಸಮಿತಿ ಮಾಡಲಾರದು!

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ
ಎರಡು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ: 0—8—0

೨ ಭಾರತದ ಗುರುಕುಲ ಬೆಲೆ: 0—6—0

ಇದೀಗ ನವೀನ ರೀತಿಯಲ್ಲಿ ಪ್ರಕಟವಾಗಿದೆ!
ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—
(1) ಅಂತರಂಗ ಕಾರ್ಯಾಲಯ, ಉಡುಪಿ
(2) ನವಭಾರತ ಬುಕ್ ಡಿಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು.

ಅಲ್ಪ ವೆಚ್ಚ! ಅದ್ಭುತ ಗುಣ!

ಎಂ.ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಶನ್,
ಫೋರ್ಟ್, ಬೊಂಬಾಯಿ.



ನೆಹ್ರೂ ಬೇಕೋ?- ಕಾಂಗ್ರೆಸ್ ಬೇಕೋ?

ಕಾಂಗ್ರೆಸ್ಸಿಗರ ಐಕ್ಯ ಸಾಧನೆಗಾಗಿ ಬಹಳವಾಗಿ ಯತ್ನ ನಡೆಸುತ್ತಿರುವ ಡಾ। ಬಿ. ಸಿ. ರಾಯರೂ ದಿಲ್ಲಿಯ ಮಾತುಕತೆಯಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕಾರೀ ಸಮಿತಿಯು ಇಟ್ಟುಕೊಂಡಿರುವ ಸೂಚನೆಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರಿಂದ ಹಿಡಿದು ಕಾರ್ಯಸಮಿತಿಯವರೂ ರಾಜಿನಾಮೆಯನ್ನಿತ್ತು ಕಾಂಗ್ರೆಸ್ಸನ್ನು ನೆಹ್ರೂರವರಿಗೆ ಒಪ್ಪಿಸಿ ಅವರಿಗೆ ಬೇಕಾದವರನ್ನು ಸದಸ್ಯರನ್ನಾಗಿ ಆರಿಸಿಕೊಳ್ಳುವ ಸಂದರ್ಭವನ್ನೊದಗಿಸಬೇಕೆಂಬ ಸೂಚನೆಯು ಅತ್ಯಂತ ಮಹತ್ವದ್ದಾಗಿರುತ್ತದೆ. ನೆಹ್ರೂ ಕಡೆಗೆ ಜನತೆಯ ಒಲವು ಸಂಪೂರ್ಣವಿದೆ. ಭಾರತದ ಆಕೋತ್ತರಗಳೂ ಅವರ ನಿಲುಮೆಯನ್ನೂ— ಧುರೀಣತ್ವವನ್ನೂ ಹೊಂದಿಕೊಂಡಿದೆ. ಪಾರ್ಲಿಮೆಂಟೂ, ದೇಶದ ಇತರ ಮಹಾನುಭಾವರೂ ಅವರ ಪ್ರತಿಭಾಪೂರ್ಣ ವ್ಯಕ್ತಿತ್ವವನ್ನು ಗೌರವಾದರಗಳ ಮೂಲಕ ಶ್ಲಾಘಿಸುತ್ತಿರುವಾಗ ಕಾಂಗ್ರೆಸ್ಸಿನ ಸಾರಥಿತ್ವವನ್ನು ಅವರಿಗೇನೇ ಬಿಟ್ಟುಕೊಡುವದು ಮಹತ್ವದ್ದಾಗಿರುತ್ತದೆ. ದೇಶಕ್ಕೆ ಬಂದಿರುವ ಸಂಕಟಕಾಲದಲ್ಲಿ ಜನತೆಯನ್ನೇ ನೇರಾಗಿ ನಿಮಗೆ "ಕಾಂಗ್ರೆಸ್ ಬೇಕೋ? ನೆಹ್ರೂ ಬೇಕೋ?" ಎಂದು ಕೇಳಿದರೆ ಜನ "ಕಾಂಗ್ರೆಸ್ ಹೋದರೆ ಹೋಗಲಿ; ನೆಹ್ರೂ ನಮ್ಮ ನಾಯಕನಾಗಲಿ!" ಎಂದಾರು. ಆದುದರಿಂದ ನೆಹ್ರೂರವರಿಗೆ ಆ ಪಟ್ಟ ಕಟ್ಟುವದರಿಂದ ಆಗ ಕಾಂಗ್ರೆಸ್ಸಿಗೆ ನೂತನ ಚೈತನ್ಯ ಒದಗಬಹುದು! ನೆಹ್ರೂ ಸಾರಥಿತ್ವವನ್ನು ವಹಿಸುವದರಿಂದ ಕಾಂಗ್ರೆಸ್ ಸಂಸಾರ ಶಕಟ ಸರಾಗವಾಗಿ—ತಡೆಯಿಲ್ಲದೆ ಸರಾಗ ಚಲಿಸಬಹುದು!

ಟಾಯಿಮ್ಸ್ ಪತ್ರಿಕೆಯ ಅಧಿಕಪ್ರಸಂಗತನ

ಸದಾ ಪಾಕಿಸ್ತಾನದ ಆದರ್ಶವನ್ನೇ ಎತ್ತಿಹಿಡಿಯುವ ಇಂಗ್ಲಂಡದ 'ಟಾಯಿಮ್ಸ್' ಪತ್ರಿಕೆಯು ಎರಡೂ ರಾಷ್ಟ್ರಗಳ ತಪ್ಪನ್ನು ತಿದ್ದಿ, ನ್ಯಾಯ ತೀರ್ಪು ಕೊಡುವ ಮಹಾ ಅಧಿಕಪ್ರಸಂಗತನಕ್ಕೆ ಕೈಹಾಕಿದೆ. ಆಂಗ್ಲೋ ಅಮೇರಿಕನರ ಎಲ್ಲ ಪತ್ರಿಕೆಗಳೂ ಪಾಕಿಸ್ತಾನದ ಕಾಂಟ ಪಂಚಾಟಗಳನ್ನು ಅತಿರಂಜಿತವಾಗಿ ಪ್ರಕಟಿಸಿ ತಾವು ಮಹಾ ಬುದ್ಧಿವಂತರೆಂದು ಸ್ವಪ್ರದರ್ಶನ ಮಾಡಿಕೊಂಡದ್ದನ್ನು ನಾವು ಬಹಳ ಸಮಯದಿಂದ ನೋಡುತ್ತಲಿದ್ದೇವೆ. 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಹೊರತ ಮತ್ತೆಲ್ಲ ಪತ್ರಿಕೆಗಳಿಗೂ ಏಕಪಕ್ಷೀಯ ರೋಗ ಬಡಿದಿದೆ. "ಸದ್ಯ ಭಾರತ ಪಾಕಿಸ್ತಾನಗಳ ಮುಖ್ಯ ಮಂತ್ರಿಗಳೀರ್ವರ ಪತ್ರವ್ಯವಹಾರದಿಂದ ಉಭಯ ರಾಷ್ಟ್ರಗಳಲ್ಲಿ ಶಾಂತಿಸಂಧಾನದ ಮೂಲಕ ದ್ವೇಷ ಕಡಿಮೆಯಾಗುವದರ ಬದಲು ದ್ವೇಷ ಹೆಚ್ಚುತ್ತಲೇ ಇದೆ. ಇಬ್ಬರ ಮಾತೂ ಕಠಿಣವಾಗುತ್ತಲಿದೆ. ಯುದ್ಧ ಬೇಡವೆಂದು ಉಭಯ ಪ್ರಧಾನರು ಹೇಳುತ್ತಿರುವರಾದರೂ ಅದಕ್ಕೆ ತಕ್ಕುದಾದ ಪರಿಹಾರ್ಯ ಮಾರ್ಗವನ್ನು ಅವರು ಹುಡುಕುತ್ತಿಲ್ಲ. ಗಡಿಯಲ್ಲಿ ಸೈನ್ಯಸಂಗ್ರಹ ಭರದಿಂದ ನಡೆದಿದ್ದು ಯಾವ ಹೊತ್ತಿಗೆ ಯುದ್ಧದ ಕಿಡಿ ಹಾರೀತೆಂದು ಊಹಿಸಲು ಬಾರದು. ಯುದ್ಧವಾದರೆ ಪಾಕಿಸ್ತಾನದಲ್ಲಿಯ ಹಿಂದೂಗಳು ಹಿಂದುಸ್ಥಾನಕ್ಕೂ ಹಿಂದುಸ್ಥಾನದ ಮುಸಲ್ಮಾನರು ಹೆಚ್ಚುಹೆಚ್ಚಾಗಿ ಪಾಕಿಸ್ತಾನಕ್ಕೂ ಗುಳೇ ಹೋಗುವರು. ಇಂತಹ ಯುದ್ಧಪ್ರಸಂಗವನ್ನು ನಿಲ್ಲಿಸುವ ಸದಿಚ್ಛೆಯಿಂದ ಆಗಾಹೂನರ: "ಕೆಲವರ್ಷಗಳ ವರೆಗೆ ಭಾರತ ಮತ್ತು ಪಾಕಿಸ್ತಾನ ಗಡಿಗಳ ಬಗ್ಗೆ ಆಶ್ವಾಸನವಿತ್ತು ಅಕ್ರಮಣಗಾರರನ್ನು ಎದುರಿಸಲು ಅಮೇರಿಕ, ಬ್ರಿಟನ್ ಮತ್ತು ಇತರ ಕಾಮನ್‌ವೆಲ್ತ ರಾಷ್ಟ್ರಗಳ ಒಪ್ಪಂದವನ್ನು ಮಾಡಿಕೊಳ್ಳಬಹುದೆಂದ." ಸೂಚಿಸಿದ್ದನ್ನು ಉಭಯ ರಾಷ್ಟ್ರಗಳೂ ಅನುಸರಿಸಬಹುದಾಗಿದೆ. ಪರಸ್ಪರರಲ್ಲಿ ಅಪನಂಬಗೆಯಿಂದ ಸೈನ್ಯ ಹಿಂತೆಗೆದುಕೊಳ್ಳುವದು ಅಸಾಧ್ಯವಾದರೆ ಸಂ. ರಾ. ಸಂಘದ ಮಿಲಿಟರಿ ನಿರೀಕ್ಷಕರನ್ನು ನಿಲ್ಲಿಸಬಹುದು" ಇದು ಟಾಯಿಮ್ಸದ ಆದೇಶವಾಗಿರುತ್ತದೆ. ಪಾಕಿಸ್ತಾನಿಗಳು ಜೇಹಾದದ ಮೂಲಕ ಅವ್ಯಾಹತವಾಗಿ ನಡೆಸಿದ ಯುದ್ಧಪ್ರಚೋದಕ ಸನ್ನಿವೇಶವನ್ನು ಎತ್ತಲಿಲ್ಲ. ಮೊದಲಾಗಿ ಗಡಿಯನ್ನು ಆಕ್ರಮಿಸಿಯೂ ಗಡಿಯಲ್ಲಿ ಸೈನ್ಯದ ಭರ್ತಿಯನ್ನು ನಡೆಸಿಯೂ ಬಡಾಯಿ ಕೊಚ್ಚಿಕೊಂಡ ಪಾಕಿಸ್ತಾನದ ಕುರಿತು ಟಾಯಿಮ್ಸ ಏನೂ ನುಡಿದಿಲ್ಲ. ಪಾಕಿಸ್ತಾನದೊಳಗಿನ ಬ್ರಿಟಿಶ ಅಧಿಕಾರಿಗಳ ಕಾರಸ್ಥಾನದ ಮಾತು ಮರೆಯಾಗಿದೆ. ಟಾಯಿಮ್ಸದ ಮುಖ್ಯ ಉದ್ದೇಶ ಹಿಂದೂಸ್ಥಾನ ಪಾಕಿಸ್ತಾನಗಳೊಳಗೆ ದ್ವೇಷವನ್ನು ಹೆಚ್ಚಿಸಿ ಯುದ್ಧ ಕೆರಳುವಂತೆ ಮಾಡಿ, ತನ್ಮೂಲಕ ಆಂಗ್ಲೋ ಅಮೆರಿಕನರ ಅಸ್ತಿತ್ವವನ್ನು ಅಲ್ಲಿ ಭದ್ರಗೊಳಿಸಬೇಕೆಂಬುದೇ! ಈ ಮನೋಗತ ಆಂಗ್ಲೋ ಅಮೆರಿಕನರಿಗಿರುವದನ್ನು ನಾವು ಹಿಂದಿನಿಂದಲೂ ಲಕ್ಷಿಸುತ್ತ ಬಂದಿದ್ದೇವೆ. ಹಿಂದಿನ ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿಯಾದ ಓವೆನ್ ಡಿಕ್ಸನ್ನರೊ, ಕಾಮನ್‌ವೆಲ್ತ ಮುಖ್ಯ ಮಂತ್ರಿಗಳ ಸಭೆಯ ಮಾತುಕತೆಯಲ್ಲೂ ಉಭಯ ರಾಷ್ಟ್ರಗಳ ಗಡಿಪ್ರದೇಶದಲ್ಲಿ ಶಾಂತಿ ಸುರಕ್ಷಿತತೆಯ ಬಗ್ಗೆ ಆಂಗ್ಲೋ ಅಮೆರಿಕನರ ಸೈನ್ಯವನ್ನಿರಿಸಬೇಕೆಂಬ ಸೂಚನೆ ಯಥಾರ್ಥವಾಗಿಯೂ ವಿಚಾರಕವಾಗಿಯೂ ಮುಂದೆ ಬಂದಿತ್ತು! ಸದ್ಯ ಟಾಯಿಮ್ಸ್ ಕೈಗೊಂಡಿರುವ ಅಸತ್ಯಪ್ರತಿಪಾದನೆಯ ಮೂಲೋದ್ದೇಶವೂ ಅದೇ. ಇಸ್ಮಾಯಿಲ್ ಮುಸ್ಲಿಮರ ದೇವಾಂಶ ಸಂಭೂತನೆಂದು ಹೇಳಿ ಧನವನ್ನು ವಿಲಾಸಮಯ ಜೀವನಕ್ಕಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿನಿಯೋಗಿಸುವ ಆಗಾಖಾನರ ಸೂಚನೆಯನ್ನಾಗಲೀ— ಸ್ವಾರ್ಥದ ದೃಷ್ಟಿಯಿಂದ ಏಕಪಕ್ಷೀಯವಾಗಿ ವಾದಿಸಿ ಮಾರ್ಗದರ್ಶನ ಮಾಡುವ ಟಾಯಿಮ್ಸದ ಅಧಿಕಪ್ರಸಂಗಿತನವನ್ನಾಗಲೀ ಭಾರತ ಮನ್ನಿಸಿ ಆತ್ಮಘಾತುಕ ಕಾರ್ಯವನ್ನೆಂದೂ ಮಾಡಿಕೊಳ್ಳುವಂತಿಲ್ಲ!

ರೈಲ್ವೆ ಮುಷ್ಕರ ಮುಂದೂಡಲ್ಪಟ್ಟಿತು

ಸೋಶಲಿಸ್ಟ ಪಕ್ಷದ ಧುರೀಣರಾದ ಜಯಪ್ರಕಾಶರ ನೇತೃತ್ವದಲ್ಲಿ ರೈಲ್ವೆ ಕೆಲಸಗಾರರ ಮಹಾಮಂಡಳವು ಆಗಸ್ಟ 27ಕ್ಕೆ ಸಾರ್ವತ್ರಿಕವಾದ ಸಂಪನ್ನು ಹೂಡುವದಾಗಿ ನಿಶ್ಚಯಿಸಿತಷ್ಟೆ! ಆದರೆ ಮೊನ್ನೆ ಮುಂಬಯಿಯಲ್ಲಿ ಕೊನೆಯ ನಿರ್ಣಯವನ್ನು ನಿರ್ಧರಿಸುವಾಗ ಎರಡು ತಿಂಗಳು ಸಂಪನ್ನು ಮುಂದೂಡಬೇಕೆಂದು ಕೆಲಸಗಾರರ ಸಭೆಯು ನಿಶ್ಚಯಿಸಿತು. ಈ ನಿರ್ಣಯ ಭಾರತ ಸರಕಾರ ಹಾಗೂ ಸಾರ್ವಜನಿಕರ ವಿಶ್ವಾಸಾದರಗಳಿಗೆ ಪಾತ್ರವಾದದೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ; ಆದರೆ ಇಷ್ಟು ಶೀಘ್ರದಲ್ಲಿ ರೈಲ್ವೆ ಕೆಲಸಗಾರರಲ್ಲೂ ಮುಷ್ಕರದ ಸೂಂದಗಳಲ್ಲೂ ಮುಷ್ಕರವನ್ನು ಬಿಟ್ಟುಕೊಡುವ ಹೃದಯ ಪರಿವರ್ತನೆಯಾಗಿರುವದರಲ್ಲಿ ನಾವಿಂದು ಔದಾರ್ಯವನ್ನು ಕಲ್ಪಿಸುವದು ಸಾಧ್ಯವಿಲ್ಲ. ಆಹಾರದಭಾವ—ಪಾಕಿಸ್ತಾನದ ಯುದ್ಧಭೀತಿ ಈ ಹಿಂದೆಯೇ ಇತ್ತು. ದೇಶದಲ್ಲಿ ಆಹಾರದ ಬಿಕ್ಕಟ್ಟು ಹೆಚ್ಚುತ್ತಿರುವಾಗ—ಬರಗಾಲದ ಭೀತಿ ತಲೆದೋರುತ್ತಿರುವಾಗ—ರೈಲ್ವೆ ಸಂಪನ್ನು ಹೂಡಿ ಪರಿಸ್ಥಿತಿಯನ್ನು ಇನ್ನಷ್ಟು ಕಠಿಣವಾಗಿಸಬಾರದೆಂದು ಸರಕಾರವೂ ಸಾರ್ವಜನಿಕರು ಸೂಚಿಸಿದ್ದರು. ...ಜಯಪ್ರಕಾಶ ನಾರಾಯಣರು "ಮುಷ್ಕರದಿಂದ ಆಹಾರ ಸರಬರಾಯಿಗೆ ಧಕ್ಕೆಯಾಗುವದಿದ್ದರೂ—ಜನತೆಗೆ ತೊಂದರೆಯಾಗುವದಿದ್ದರೂ ಆ ಪಾಪಕ್ಕೆ ಸರಕಾರವೇ ಹೊಣೆ" ಎಂದು ನಿರ್ದಾಕ್ಷಿಣ್ಯವಾಗಿ ನುಡಿದು "ಆ. 27ರ ದಿನದ ನಿರ್ದಿಷ್ಟ ಸಮಯದಿಂದ ಒಂದು ಚಕ್ರವೂ ಚಲಿಸಕೂಡದು" ಎಂದು ಎಚ್ಚರಿಸಿದ್ದರು. ಸರಕಾರವನ್ನು ಪೇಚಿನಲ್ಲಿ ಸಿಕ್ಕಿಸಿ ಸ್ವಾರ್ಥ ಸಾಧಿಸಬೇಕೆಂಬ ಈ ಉದ್ದೇಶವು ಜನತೆಯ ವಿಶ್ವಾಸವನ್ನು ಪೂರ್ತ ಕಳೆದುಕೊಳ್ಳುವದೆಂದು ನಿಶ್ಚಯವಾದಾಗ "ಆಹಾರವನ್ನು ಸಕಾಲದಲ್ಲಿ ಮುಟ್ಟಿಸುವದರಲ್ಲಿ ನಾವು ಸಹಕರಿಸುವೆವು. ಪಾಕಿಸ್ತಾನದೊಡನೆ ಯುದ್ಧವಾದರೆ ನಾವು ಬಿಟ್ಟುಕೊಡಲಾರೆವು" ಎನುವ ಭರವಸೆಯನ್ನು ಮುಂದೆ ಮಾಡಿದರು. ಸರಕಾರವು ತೋರಿಸಿದ ಸುಗ್ರೀವಾಜ್ಞೆಯೂ, ಸಾರ್ವಜನಿಕರ ಅಭಿಪ್ರಾಯವೂ ಕೆಲಸಗಾರರಲ್ಲಿಯ ಅತಿ ಮನಸ್ಸಿನ ಧೋರಣೆಯೂ ಸಂಪಿಗೆ ಪೂರ್ಣ ಅನುಕೂಲವಾಗಿಲ್ಲದಿರುವದನ್ನು ಲಕ್ಷಿಸಿ ನಾವು ಸಾಯಲೂ ಬಾರದು ಕೋಲು ಮುರಿಯಲೂ ಬಾರದೆನುವ ಧೋರಣೆಯನ್ನು ವಹಿಸಿದ ಹಾಗೆ ತೋರುತ್ತದೆ.

ರೈಲ್ವೆಯ ಮುಷ್ಕರ ಅಕಾಲಿಕವೂ, ತೀರ ಅನುಚಿತವೂ ಆಗಿರುತ್ತದೆಂದು ರೈಲ್ವೆ ಮಂತ್ರಿಯೂ, ಪ್ರಧಾನಿ ನೆಹ್ರೂರವರೂ ಎಚ್ಚರಿಸಿದ್ದರು. ಅಷ್ಟಲ್ಲದೆ ರೈಲ್ವೆ ಕೆಲಸಗಾರರ ನ್ಯಾಯವಾದ ಬೇಡಿಕೆಯನ್ನು ಲಕ್ಷಪೂರ್ವಕವಾಗಿ ನೋಡಲಾಗುವದೆಂದು ಆಶ್ವಾಸನೆಯನ್ನು ಕೊಟ್ಟಿರುವರು. ಈ ಆಶ್ವಾಸನೆ ರೈಲ್ವೆ ಕೆಲಸಗಾರರ ಹಿತಚಿಂತನೆಯನ್ನು ಮನಮುಟ್ಟಿ ಚಿಂತಿಸುವದಾಗಿರುತ್ತದೆ. ಆದರೆ ಮುಖ್ಯ ಮಂತ್ರಿಗಳು ಜಯಪ್ರಕಾಶರ ಮನವೊಲಿಸುವ ರೀತಿಯಲ್ಲಿ ಆಗಿಂದಾಗ್ಗೆ ಪತ್ರ ಬರೆದು ಒತ್ತಾಯ ನಡೆಸಿದ್ದರಿಂದ ರೈಲ್ವೆ ಕೆಲಸಗಾರರೂ ಆ ಕುರಿತು ಔದಾರ್ಯವನ್ನು ತೋರಿಸಿದರೆಂದು ಹೇಳುವಲ್ಲಿ ಅರ್ಥವಿಲ್ಲ! ಇಂದಿನ ಮುಂದೂಡುವಿಕೆ ಒಂದು ದೃಷ್ಟಿಯಲ್ಲಿ ಅನಿವಾರ್ಯವೆಂಬುದು ಮುಂದಕ್ಕೆ ಚೆನ್ನಾಗಿ ಮನವರಿಕೆಯಾಗಿದೆ. ಮಹಾಮಂತ್ರಿ ನೆಹ್ರೂರವರು ಈ ಮೊದಲು ಮಾಡಿಕೊಂಡ ಕಳಕಳಿಯ ಬಿನ್ನಹವನ್ನು "ಸಂಕಟ ಬಣ್ಣನೆಯ ಮಾತುಗಳಿಂದ ಮುಖ್ಯ ಮಂತ್ರಿಗಳು ತರ್ಕಿಸಬಾರದು; ಇಚ್ಛೆಯಿದ್ದರೆ ವಿಧಾಯಕ ಕಾರ್ಯಕ್ರಮಗಳೊಂದಿಗೆ ಮಾತುಕತೆಗೆ ಮುಂದೆ ಬರಲಿ" ಎಂದಿದ್ದವರು ಜಯಪ್ರಕಾಶರೇ.

ಇದರ ಒಳಗುಟ್ಟನ್ನು ಬಯಲಿಗೆಳೆದು ಯಾರ ತಪ್ಪನ್ನು ಎತ್ತಿ ಹೇಳಬೇಕಾದುದು ನಮಗೆ ಬೇಕಾಗಿಲ್ಲ. ವಸ್ತುಸ್ಥಿತಿಯ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸುವುದೇ ಮುಖ್ಯ! ಇಷ್ಟವಿದ್ದಾಗಲೀ—ಅನಿವಾರ್ಯವಾಗಿಯಾಗಲೀ—ಸದ್ಯದ ಪರಿಸ್ಥಿತಿಯಲ್ಲಿ ಮುಷ್ಕರ ಹೂಡುವದನ್ನು ಬಿಟ್ಟುಕೊಟ್ಟು ಎರಡು ತಿಂಗಳ ತನಕ ಮುಂದೂಡಿದ್ದು ದೇಶದ ದೃಷ್ಟಿಯಿಂದಲೂ ಯೋಗ್ಯವಾಗಿದೆ. ದೇಶಕ್ಕೆ ಗಂಡಾಂತರವನ್ನೊದುರಿಸುವಲ್ಲಿ ಪ್ರತಿಯೊಬ್ಬರೂ ತಮ್ಮ ಸಂಕಷ್ಟಗಳನ್ನು ಒಗ್ಗಟ್ಟಿನ ಆತ್ಮಸತ್ವದಿಂದ ದುಡಿಯುವದು ಅವಶ್ಯಕವಾಗಿದೆ. ಆ ದೃಷ್ಟಿಯಿಂದ ಸದ್ಯದ ಈ ಧೋರಣೆ ಸ್ವಾಗತಾರ್ಹ! ಅಂತಲೇ ರೈಲ್ವೆ ಕೆಲಸಗಾರರೂ ಸೋಶಲಿಸ್ಟ ಧುರೀಣ ಜಯಪ್ರಕಾಶರೂ ಸಾರ್ವಜನಿಕ ಹಾಗೂ ಸರಕಾರದ ಅಭಿನಂದನೆಗೆ ಪಾತ್ರರಾಗಿದ್ದಾರೆ. ಕೊನೆಯ ಕ್ಷಣದಲ್ಲಿ ಒಳ್ಳೆಯ ಮುತ್ಸದ್ದಿತನವನ್ನು ವಹಿಸಿದ ಕೆಲಸಗಾರರ ನ್ಯಾಯವಾದ ಬೇಡಿಕೆಗಳು ಸಂಧಾನದಿಂದ ಬಗೆಹರಿಯಲೆಂದು ಹಾರೈಸುತ್ತೇವೆ.

NOTICE

Payments such as annual subscription, advertisement and Court Notice publication charges may be credited to 'NAVAYUG' account at the Canara Industrial & Banking Syndicate Ltd., Udipi or its Branches at par.

Manager

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೬-೮-'೫೧

ಈ ಹಾಳು ಪದ್ಧತಿ ನಿಲ್ಲಲಿ!

ಮುಂಬರುವ ಚುನಾವಣೆಯ ಹುರಿಯಾಳುಗಳ ಹೆಸರನ್ನು ಕೊಡುವ ನಿರ್ದಿಷ್ಟ ಸಮಯವನ್ನು ಕೇಂದ್ರ ಚುನಾವಣಾ ಸಮಿತಿಯು ಈಗ ಗೊತ್ತುಮಾಡಿದೆ. ಅಂತೆಯೆ ಅಕ್ಟೋಬರ 5ನೆಯ ತಾರೀಕಿನೊಳಗಾಗಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳು ಹುರಿಯಾಳುಗಳ ಬಗ್ಗೆ ಶಿಫಾರಸು ಪತ್ರಗಳನ್ನು ಏ. ಐ. ಸಿ. ಸಿಗೆ ಮುಟ್ಟಿಸಬೇಕಾಗಿದೆ. ಮುಂಬರುವ ಮಹಾ ಚುನಾವಣೆಯ ಗದ್ದಲಕ್ಕೇನೇ ಹೆಚ್ಚಿನ ಪ್ರಾಧಾನ್ಯ-ಮಹತ್ವವನ್ನು ಜನತೆ ಕಲ್ಪಿಸಿಕೊಂಡಿದೆ. ಆದರೆ ಅದಕ್ಕಿಂತಲೂ ಮಹತ್ವವಾದುದು ಹುರಿಯಾಳುಗಳ ಆಯಿಕೆಯೆಂಬುದನ್ನು ಹೆಚ್ಚಿನ ಜನರು ಅರಿತಂತಿಲ್ಲ. ನಾವು ಕಳಿಸಿಕೊಡುವ ಪ್ರತಿನಿಧಿಗಳು ಪಕ್ಷದ ಆರಾಧ್ಯ ದೇವತೆಗಳಾದರೂ, ಒಂದು ಸಂಗಡದ ಉತ್ಸವ ಮೂರ್ತಿಯಾದರೂ ದೇಶದ ಹಿತದ ದೃಷ್ಟಿಯಿಂದ ಅಂತಹ ಹುರಿಯಾಳ್ತನ ವ್ಯರ್ಥವೇ ಸರಿ! ಕಾಂಗ್ರೆಸು ಹಿಂದುಳಿದವರ ಉದ್ಧಾರದ ದೃಷ್ಟಿಯಿಂದಲೂ, ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆ ದೃಷ್ಟಿಯಿಂದಲೂ ಪ್ರಾತಿನಿಧ್ಯವನ್ನು ಕಾಯ್ದಿಡುವ ಒಂದು ಹಾಳು ಸಂಪ್ರದಾಯವನ್ನು ಮಾಡಿಯದೆ. ಇದರ ಮೂಲೋದ್ದೇಶವು ಸ್ವಾರ್ಥ-ಸಂಕುಚಿತತೆಯಿಂದ ಕೂಡಿಲ್ಲವಾದರೂ ಕೇವಲ ಪಕ್ಷ ಸಂಗಡಗಳ ಪ್ರತಿನಿಧಿಯಾಗಿ ತೀರ ಅನನುಭವಿಕನೊಬ್ಬನು ಆಡಳಿತವನ್ನು ನಡೆಸುವ ಹಕ್ಕನ್ನು ಕಡ್ಡಾಯವಾಗಿ ಪಡೆಯಬೇಕೆಂದು ಒತ್ತಾಯಿಸುವದು ನ್ಯಾಯವಲ್ಲ. ಇಂದು ಕಾಯ್ದಿಡುವ ಪದ್ಧತಿ ಕಾಂಗ್ರೆಸ್ಸಿನ ಮೂಲೋದ್ದೇಶವನ್ನೇ ಹೊಂದಿಕೊಂಡಿರದೆ ಜಾತೀಯತೆ ಸಂಕುಚಿತತೆಗೆಡೆಮಾಡಿ ಕೊಟ್ಟಿದೆ. ಹಿಂದುಳಿದವರ ಏಳಿಗೆಗಾಗಿ ನಾವಿದನ್ನು ಸಹಿಸಿದರೂ ಅಪರೋಕ್ಷವಾಗಿ ಜಾತೀವಾರಾಗಿ ಕಾಂಗ್ರೆಸ್ಸಿಗರೇ ಸ್ಥಾನವನ್ನು ಹಂಚುವ ದುಷ್ಟಪದ್ಧತಿಯನ್ನಿಟ್ಟುಕೊಂಡಿದ್ದಾರೆ. ಈ ಪದ್ಧತಿಯು ಕಾಂಗ್ರೆಸ್ಸಿನ ಘಟನೆಯಲ್ಲಿರದೆ ಪ್ರಾಂತಿಕ-ಪ್ರಾದೇಶಿಕದವರು ಮಾಡಿಕೊಂಡ ಇನ್ನೊಂದು ದುರಂತವೆನ್ನಬೇಕು. ಈ ಹಾಳು ಪದ್ಧತಿಯಿಂದ ಸಹಜವಾದ ಯೋಗ್ಯ-ಪ್ರತಿಭೆಯುಳ್ಳ ವ್ಯಕ್ತಿಗೆ ರಾಜಕೀಯದಲ್ಲಿಂದು ಸ್ಥಾನವಿಲ್ಲವಾಗಿದೆ- ಮಾತ್ರವಲ್ಲ ಅಂತಹ ಉಚ್ಚ ಪದವಿಯ ಮಹತ್ವವನ್ನರಿಯದೆ ಉತ್ಸವದ ಮೂರ್ತಿಯಂತೆ ಹಲವು ವ್ಯಕ್ತಿಗಳನ್ನು ಆರಿಸುವ ಹಂಚಿಕೆಗೆ ಎಡೆ ಮಾಡಿಕೊಟ್ಟಂತಾಗಿದೆ.

ಹುರಿಯಾಳ್ಗಳು ವಿದ್ಯಾವಂತರೂ ಲೋಕಾನುಭವ- ರಾಷ್ಟ್ರೋನ್ನತಿಯ ಆದರ್ಶ ವಿಧಾಯಕ ಕಾರ್ಯಕ್ರಮ ಸಂಚಯ ಉಳ್ಳವರೂ-ವಿಶೇಷ ವ್ಯಕ್ತಿ ವೈಶಿಷ್ಟ್ಯ ಉಳ್ಳವರೂ ಆಗಿರಬೇಕು. ನಮ್ಮಲ್ಲಿಯ ಬೇರೆ ಬೇರೆ ಪಕ್ಷಗಳಲ್ಲಿ ಇಂತಹ ವ್ಯಕ್ತಿಗಳು ಸಿಗುವದು ದುರ್ಲಭ. ಹೆಸರಿಗೆ ತಕ್ಕ ಒಂದು ವ್ಯಕ್ತಿಯನ್ನು ನಿಲ್ಲಿಸಿ ಮತವನ್ನು ಗಳಿಸುವದರಲ್ಲಿಯೇ ತಮ್ಮ ವರ್ಚಸ್ಸನ್ನು ಪಯೋಗಿಸುವದನ್ನು ಕಾಣುತ್ತಲಿದ್ದೇನೆ. ಅಂತೂ ತಮ್ಮ ಪಕ್ಷ ಗೆಲ್ಲಬೇಕು, ಸರಕಾರದಲ್ಲಿ ಪ್ರಾತಿನಿಧ್ಯ ಗಳಿಸಬೇಕು ಎಂಬ ಹಂಬಲವೇ ಮುಖ್ಯವಾಗಿದೆ. ಅಲ್ಲದೆ ಪಕ್ಷಗಳು ಸಾವಿರಾರು ಸ್ಥಾನಗಳಿಗೆ ಹುರಿಯಾಳುಗಳನ್ನು ಆರಿಸುವಾಗ ಇಂತಹ ಪ್ರತಿಭಾಶಾಲಿಗಳನ್ನೇ ಆರಿಸುವದು ಶಕ್ಯವಿಲ್ಲ. ಮಾತ್ರವಲ್ಲದೆ ಪಕ್ಷದ ಧ್ಯೇಯ ಧೋರಣೆಯನ್ನು ಪಾಲಿಸುವವರೂ ಸಿಗುವಂತಿಲ್ಲ. ಆದುದರಿಂದ ಹುರಿಯಾಳುಗಳ ಆಯ್ಕೆಯು ಮೂಲೋದ್ದೇಶಕ್ಕೆ ಹೊಂದಿಕೆಯಾಗುವಂತಿಲ್ಲ.

ಕಾಂಗ್ರೆಸ್ ಪ್ರಾದೇಶಿಕ ಸಮಿತಿಯವರು ಹುರಿಯಾಳುಗಳನ್ನು ಆರಿಸುವ ಉದ್ದೇಶದಿಂದಲೂ, ಚುನಾವಣಾ ದೃಷ್ಟಿಯಿಂದಲೂ ಪ್ರಚಾರ ಹಾಗೂ ಪ್ರವಾಸ ಕೈಗೊಂಡಿರುತ್ತಾರೆ. ಈ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಇದ್ದ ಸ್ವಾಗತ-ಆದರಭಾವ ಇಂದು ಸ್ವಲ್ಪವೂ ಇಲ್ಲದೆ ಕಾರ್ಯಕರ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವದೇ ಕಷ್ಟವಾಗಿದೆ ಹಲವು ಗಡೆಯಲ್ಲಿ! ಈ ದೋಷ ಕಾಂಗ್ರೆಸಿಗರಲ್ಲಿ ಅಶಿಸ್ತು ಆಡಳಿತ ಲೋಪದೋಷದಿಂದಲೇ ಉಂಟಾಯಿತೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಜನತೆಯೂ ಅದರಲ್ಲಿ ಸಮಭಾಗಿಯೆಂದು ಹೇಳದೆ ವಿಧಿಯಿಲ್ಲ. ಶಿಸ್ತು-ಸಂಘಟನೆ-ಸಂಸ್ಕೃತಿಯನ್ನು ವಿವೇಕದಿಂದ ವಿಕಾರವಿಲ್ಲದ ಮನಸ್ಸಿನಿಂದ ವಿಮರ್ಶೆ ಮಾಡುವ ಸಹನಶೀಲಗುಣ ಅವರಲ್ಲಿರಬೇಕು. ತಾವೂ ಕಾಂಗ್ರೆಸ್ಸಿಗರೆಂದು ಧುರೀಣರನ್ನಾಗಲೀ- ಸಂಸ್ಥೆಯನ್ನಾಗಲೀ—ಸರಕಾರವನ್ನಾಗಲೀ ಟೀಕಿಸಿ ಅನಾಗರಿಕ ರೀತಿಯಲ್ಲಿ ನಡೆದುಕೊಳ್ಳುವುದು ಯೋಗ್ಯವಲ್ಲ!

ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕರ್ತರೂ ತಾವು ಈ ಹಿಂದೆ ಮಾಡಿದ ಅಚಾತುರ್ಯಕ್ಕೆ ಈಗ ನಿಜವಾಗಿಯೂ ಪಶ್ಚಾತ್ತಾಪ ಪಡಬೇಕಾಗಿದೆ. ಪೇರಲ್ಲ ಪಕ್ಷಗಳಿಗಿಂತ ಕಾಂಗ್ರೆಸ್ ಜನಪ್ರೀತವೂ—ಹೆಚ್ಚು ಪ್ರಾತಿನಿಧ್ಯ ಉಳ್ಳದ್ದೂ ಆಗಿರುವಾಗ ಕಾಂಗ್ರೆಸ್ಸಿಗರ ಹೊಣೆಯು ಹೆಚ್ಚಿನದೆಂಬುದನ್ನು ಅವರು ತಿಳಿಯಬೇಕಿತ್ತು. ಕಾಂಗ್ರೆಸ್ಸಿನ ಪ್ರತಿನಿಧಿಯನ್ನಾಗಿ ಆರಿಸುವ ಗಹನವು ಸಂದರ್ಭದಲ್ಲಿ ಸ್ಥಳೀಯವಲ್ಲಿ ವ್ಯಕ್ತಿವೈಶಿಷ್ಟ್ಯ-ಯೋಗ್ಯತೆಗಳಿದ್ದರೂ ದೂರದವನೊಬ್ಬನನ್ನು ಸ್ಥಳೀಯರ ಅಭಿಪ್ರಾಯಕ್ಕೆ ವಿರೋಧವಾಗಿ ನಿಲ್ಲಿಸಿ ಕೊನೆಗೆ ಪರಾಜಿತರಾದುದುಂಟು! ಕಾಂಗ್ರೆಸ್ಸಿನ ಉಚ್ಚ ಆದರ್ಶಗಳಿಗೆ ವಿರುದ್ಧವಾದ ನಡತೆಯುಳ್ಳವನನ್ನು ಕಾಂಗ್ರೆಸ್ ಪ್ರತಿನಿಧಿಯನ್ನಾಗಿ ಆರಿಸಿ ಜನತೆಯ ವಿರೋಧಕ್ಕೆ ಗುರಿಯಾದ ದಾಖಲೆಗಳೂ ಇವೆ. ಈ ಹಾಳು ಪದ್ಧತಿಯೇ—ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕರ್ತರ ಅಸಂಬದ್ಧ ಧೋರಣೆಯೇ-ಕಾಂಗ್ರೆಸ್ಸಿನ ವರ್ಚಸ್ಸನ್ನು ಕುಗ್ಗಿಸಿದೆ. ಅದು ನೆಟ್ಟ ಜಾತೀಯ ವಿಷವೃಕ್ಷ ಇಂದು ಫಲ ಬಿಡುತ್ತಿದೆ!

ಈ ಬಾರಿಯ ಆಯಿಕೆ ಆ ರೀತಿಯ ಒಳಸಂಚಿಗೆ ಇಲ್ಲವೆ ಸ್ವಾರ್ಥಕ್ಕೆ ಗುರಿಯಾಗಬಾರದು. ಕಾಂಗ್ರೆಸು ಈ ಬಾರಿ ಕಾಂಗ್ರೆಸ್ಸೇತರರಿಗೂ ಪ್ರಾತಿನಿಧ್ಯವನ್ನು ನೀಡಬೇಕೆಂದು ಆದೇಶವನ್ನಿತ್ತುದರ ಉದ್ದೇಶವನ್ನು ಪ್ರಾದೇಶಿಕರು ಚೆನ್ನಾಗಿ ಅರಿತುಕೊಳ್ಳಬೇಕು. ಲೋಕಾನುಭವ ತಾಂತ್ರಿಕ ಜ್ಞಾನ- ಕರ್ತವ್ಯಶೀಲೀ ಗುಣವುಳ್ಳ ವ್ಯಕ್ತಿಗಳನ್ನೇ ಹುರಿಯಾಳುಗಳನ್ನಾಗಿ ಆರಿಸಬೇಕೆಂಬುದು ಕಾಂಗ್ರೆಸ್ಸಿನ ಉದ್ದೇಶ. ಇಂತಹ ಔದಾರ್ಯವನ್ನು ಭಾರತದ ಯಾವ ಪಕ್ಷವೂ ತೋರದಂತಿಲ್ಲ. ಇದನ್ನು ಲಕ್ಷಿಸಿಯಾದರೂ ಪ್ರಾದೇಶಿಕರು ಹಿಂದೆ ತಳೆದ ಅಸಮಗ್ರ ಧೋರಣೆಯನ್ನು ಬಿಟ್ಟುಕೊಡಬೇಕು. ಸ್ಥಳೀಯರಲ್ಲಿ ಪ್ರತಿಭಾಸಂಪನ್ನ ವ್ಯಕ್ತಿಗಳಿದ್ದರೂ ಬೇರೆಯವರನ್ನು ಶಿಫಾರಸು ಮಾಡುವದು ತಮ್ಮ ಹಕ್ಕೆಂದು ವಾದಿಸುವದು ದುಡುಕುತನವಾದೀತು. ಪ್ರಾದೇಶಿಕರೇ ತೀರ್ಮಾನಕರಲ್ಲವಾದರೂ ಅವರ ಕಾರ್ಯದಲ್ಲಿ ಪ್ರಾಮಾಣಿಕತನವಿರಲೆಂದು ನಾವು ಆಶಿಸಿದರೆ ತಪ್ಪಾಗದು! ಈ ಧೋರಣೆ ಪ್ರಾದೇಶಿಕ ಕಾಂಗ್ರೆಸಿನವರಿಗನ್ವಯಿಸಿದಂತೆ ಸ್ಥಳೀಯರಿಗೂ ಅನ್ವಯಿಸುತ್ತದೆ. 'ನಮ್ಮವನೇ' ಆಗಬೇಕೆಂದು ಮುಂದೆ ಬೀಳುವ ಛಲ ಹಿಡಿಯಬಾರದು. ಇದು ದೇಶಾಭ್ಯುದಯದ ಪ್ರಶ್ನೆಯಾದ ಪ್ರಯುಕ್ತ ಸ್ವಾರ್ಥ-ಸ್ವಜಾತೀ ಪ್ರೇಮ-ಸಂಕುಚಿತ ಮನೋವೃತ್ತಿಯನ್ನು ತ್ಯಜಿಸಬೇಕು. ರಾಷ್ಟ್ರೋನ್ನತಿಯನ್ನು ಕಡೆಗಣಿಸಿ ಈ ಬಗೆಯ ದುಷ್ಟ ಪದ್ಧತಿಗೆ ಕೈಹಾಕುವದೆಂದರೆ ಆತ್ಮಘಾತುಕ ಮಾಡಿದಂತೆಯೆ ದೇಶಕ್ಕೆ ಕೇಡು ಬಗೆದಂತೆಯೆ!

ಯಾರೇ ಆರಿಸಿ ಬರಲಿ, ಅವರು ಯಾವ ಪಕ್ಷದವರೇ ಆಗಿರಲಿ, ಪ್ರತಿನಿಧಿಯಾಗಿರುವ ವ್ಯಕ್ತಿಯು ಶೀಲ-ಗುಣನಡತೆ ವೈಶಿಷ್ಟ್ಯಗಳು ಮೇಳೈಸಿದಂತಿದ್ದು ಅವರ ಬೌದ್ಧಿಕ ಯೋಜನೆಗಳು ರಾಷ್ಟ್ರೋನ್ನತಿಗೆ ಸಹಾಯಕವಾಗಲೆಂದು ಹಾರೈಸುವದೇ ನಮ್ಮ ವಾದ. ಕಾಂಗ್ರೆಸ್ ಸಂಸ್ಥೆಯು ಮಹದುದ್ದೇಶವೂ ಅದೇ ಆಗಿದೆಯೆಂಬುದನ್ನು ನಾವೆಲ್ಲರೂ ಮರೆಯದಿರೋಣ.

ಸಂಧಾನದ ಮಾತುಕತೆಗಳು ವಿಫಲವಾಗುತ್ತಿವೆ.

ಕೇಸಾಂಗದಲ್ಲಿ ಸಂ. ರಾ. ಸಂಘ ಹಾಗೂ ಕಮ್ಯೂನಿಸ್ಟ ಪ್ರತಿನಿಧಿಗಳೊಡನೆ ನಡೆಯುತ್ತಿರುವ ಮಾತುಕತೆಗಳು ವಿಫಲಗೊಳ್ಳುವ ಲಕ್ಷಣ ಕಂಡು ಬರುತ್ತಿವೆ. ಕಮ್ಯೂನಿಸ್ಟರು ತಟಸ್ಥ ಪ್ರದೇಶದಲ್ಲಿ ಶಿಸ್ತನ್ನು ಪಾಲಿಸದೆ ಇದ್ದುದರಿಂದಲೂ ತಟಸ್ಥ ಪ್ರದೇಶದ ಕುರಿತಾಗಿಯೂ ಒಮ್ಮತದ ನಿರ್ಣಯಕ್ಕೆ ಧಕ್ಕೆ ಬಂದಿರುವುದಾಗಿ ತಿಳಿಯುತ್ತದೆ. ಮಾತುಕತೆಯೂ ಸರಾಗವಾಗಿ ನಡೆಯದೆ ಮನಸ್ಸಿಲ್ಲದ ಮನಸ್ಸಿನಿಂದ ಸಾಗುತ್ತಲಿರುವದರಿಂದ ಈ ಮಾತುಕತೆಯಿಂದ ಪ್ರಗತಿಯಾದೀತೆನ್ನುವದರಲ್ಲಿ ಸಂ. ರಾ. ಪ್ರತಿನಿಧಿಗಳಿಗೆ ಭರವಸೆ ಇಲ್ಲವಂತೆ!

ಎಣ್ಣೆ ತಂಟೆ ಬಗೆಹರಿಯಲಿಲ್ಲ!

ಬ್ರಿಟಿಶರೊಡನೆ ಪರ್ಶಿಯಾದಲ್ಲಿ ನಡೆಯುತ್ತಿರುವ ಎಣ್ಣೆ ತಂಟೆಯ ಮಾತುಕತೆಯೂ ಮೊದಲಿಗೆ ಆಶಾದಾಯಕವಾಗಿ ಕಂಡು ಬಂದರೂ ಸದ್ಯ ಬ್ರಿಟನದ ಸದುದ್ದೇಶದಲ್ಲಿ ಪರ್ಶಿಯ ಪ್ರಬಲವಾದ ಅವನಂಬಿಗೆಯನ್ನು ವ್ಯಕ್ತಪಡಿಸಿದೆ. ಹುಸೇನ ಮಕ್ಕಿಯವರೂ, ಮಜಲೀಸ್ ಪಕ್ಷದವರೂ ಬ್ರಿಟಿಷರಿಗೆ ಹೆಚ್ಚಿನ ಔದಾರ್ಯವನ್ನು ತೋರಿಸುವದಿಲ್ಲವೆಂದು ತಿಳಿಯಬರ್ತದೆ. ಮುಖ್ಯಮಂತ್ರಿ ಮುಸಾದಿಕರು ಬ್ರಿಟಿಶರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡುವದಾದರೂ ಅಲ್ಲಿನ ಜನ ಬಂಡಾಯವೇಳಬಹುದು. ಅಂತೂ ಯಾವುದೇ ರೀತಿಯ ಕೊನೆಯ ನಿರ್ಧಾರಕ್ಕೆ ಬರದೆ ಮಾತುಕತೆ ಸಾಗುತ್ತಲಿದೆ.

ಪಾಕಿಸ್ತಾನದ ಶ್ವೇತಪತ್ರ

ಪಾಕಿಸ್ತಾನವು ಹಿಂದೂಸ್ಥಾನ ಸಂಬಂಧದಲ್ಲಿ ಶ್ವೇತಪತ್ರವನ್ನು ಹೊರಡಿಸಲಿದ್ದು ಅದರಲ್ಲಿ ಭಾರತದ ಮುಖ್ಯ ಧುರೀಣರೂ, ಪತ್ರಿಕೆಗಳೂ, ಇತರ ಪಕ್ಷಸಂಗಡಗಳೂ ಪಾಕಿಸ್ತಾನದ ವಿರುದ್ಧ ಯುದ್ಧ ಪ್ರಚೋದನೆಯನ್ನುಂಟುಮಾಡುವ ಕ್ರಾಂತಿಕಾರಕ ಮಾತನ್ನಾಡಿದ್ದನ್ನು ಉಲ್ಲೇಖಿಸಲಾಗಿದೆಯಂತೆ. ನೆಹ್ರೂ ಲಿಯಾಖತ್ ಅಲೀಖಾನ ಪತ್ರವ್ಯವಹಾರದ ಮಥಿತಾರ್ಥ ಹಾಗೂ ಪಾಕಿಸ್ತಾನದ ಸುರಕ್ಷಿತತೆಗೆ ಹಿಂದೂಸ್ಥಾನದಿಂದುಂಟಾದ ಗಂಡಾಂತರವನ್ನೂ ಬಣ್ಣಿಸಲಾಗಿರುವದಂತೆ.

ಡಾ। ಗ್ರ್ಯಾಹ್ಯಾಮರು ದಿಲ್ಲಿಯಲ್ಲಿ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರ್ಯಾಹ್ಯಾಮರು ಕರಾಚಿಯಿಂದ ದಿಲ್ಲಿಗೆ ಬಂದಿರುತ್ತಾರೆ. ಕಾಶ್ಮೀರ ಮಾತುಕತೆ ಬಗ್ಗೆ ನೆಹ್ರೂ, ಡಾ। ಪ್ರಸಾದ ಮೊದಲಾದವರ ಭೇಟಿಯನ್ನು ಶೀಘ್ರದಲ್ಲೇ ತೆಗೆದುಕೊಳ್ಳಲಿರುವರು. ಸುದ್ದಿಗಾರರು ಕೇಳಿದ ಪ್ರಶ್ನೆಗೆ "ನಾನು ಕೆಲವು ದಿನ ಇಲ್ಲಿ ಇರಲು ಬಂದಿದ್ದೇನೆ" ಎಂದಷ್ಟೇ ಹೇಳಿದರು.

ಕಾಂಗ್ರೆಸ್ಸು 4104 ಸ್ಥಳಗಳಿಗೆ ಹುರಿಯಾಳುಗಳನ್ನು ನಿಲ್ಲಿಸುವದು.

ಕಾಂಗ್ರೆಸ ಕೇಂದ್ರ ಚುನಾವಣಾ ಸಭೆಯು ಕಾಂಗ್ರೆಸ್ ಹುರಿಯಾಳುಗಳ ಆಯ್ಕೆಯ ದಿನಗಳನ್ನು ಗೊತ್ತುಮಾಡಿತು ಗೊತ್ತುವಳಿಯು ಹೀಗಿದೆ: ಹುರಿಯಾಳ್ಗಳ ಅರ್ಜಿ ಹಾಗೂ ಸೂಚನೆಗಳು ಸಪ್ಟೆಂಬರ 5ರೊಳಗಾಗಿ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳಿಗೆ ತಲುಪಬೇಕು. ಪ್ರಾಂ. ಕಾಂ. ಸಮಿತಿಗಳು ಏ. ಐ. ಸಿ. ಸಿ.ಗೆ ತಮ್ಮ ಅಭಿಪ್ರಾಯವನ್ನು ಕೊಡುವ ಕೊನೆಯ ದಿನ ಅಕ್ಟೋಬರ 5. ಆಕ್ಷೇಪ-ಅಪೀಲುಗಳನ್ನು ಕೇಂದ್ರ ಚುನಾವಣಾ ಮಂಡಲಕ್ಕೆ ಸಲ್ಲಿಸಬೇಕಾದ ಕೊನೆಯ ದಿನ ಅಕ್ಟೋಬರ 15. ಕೇಂದ್ರ ಚುನಾವಣಾ ಮಂಡಲದಿಂದ ಕಾಂಗ್ರೆಸ್ ಹುರಿಯಾಳುಗಳ ಕೊನೆಯ ಆಯ್ಕೆಯ ದಿನ ನವಂಬರ 5. ಚುನಾವಣಾ ಪ್ರಚಾರ ಸಾಹಿತ್ಯ, ಪ್ರಕಟಣೆ ಕೈಗೊಳ್ಳಲು ಪ್ರತಿಷ್ಠಿತ ಜನರನ್ನು ಆರಿಸಬೇಕೆಂದು ನಿರ್ಧರಿಸಿತು.

ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದಕ್ಷಿಣ ಹಿಂದೂಸ್ಥಾನದಲ್ಲಿ ಭಾಷಾವಾರು ಪ್ರಾಂತರಚನೆಯ ಬಗ್ಗೆ ಸಾಮಾನ್ಯ ಒಮ್ಮತವಾಗಿರುವದರಿಂದ ಸರಕಾರವು ಭಾಷಾವಾರು ಪ್ರಾಂತರಚನೆಯ ಬೇಡಿಕೆಯನ್ನು ಪೂರೈಸಲು ತಕ್ಕ ಕ್ರಮಗಳನ್ನು ಕೈಕೊಳ್ಳಬೇಕೆಂದೂ, ಅದಷ್ಟು ಬೇಗ ಗಡಿಕಲಹ ತೀರ್ಮಾನವನ್ನು ನೇಮಿಸಬೇಕೆಂದೂ ಗೊತ್ತುವಳಿಯೊಂದನ್ನು ಪಾಸು ಮಾಡಿದೆ.

ಉಡುಪಿ

ದ. ಕ. ಜಿಲ್ಲಾ ಹರಿಜನ ವೆಲ್‍ಫೇರ್ ಕಮಿಟಿ ಸಭೆಯು— ಈ ಬಾರಿ ಉಡುಪಿ ತಾಲೂಕು ಕಚೇರಿಯಲ್ಲಿ ತಾ 10ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪುತ್ತೂರು ಮತ್ತು ಚೆರ್ವತ್ತೂರು ಹರಿಜನ ವಿದ್ಯಾರ್ಥಿ ಭವನ ಸಮಿತಿಗಳಿಗೆ ಸದಸ್ಯರನ್ನು ನಾಮಕರಣ ಮಾಡಲಾಯಿತು. ಹೊಸದುರ್ಗ ಹರಿಜನ ವೆಲ್‍ಫೇರ್ ಶಾಲೆಯನ್ನು ಬೋರ್ಡು ಶಾಲೆಯೊಂದಿಗೆ ಕೂಡಿಸಬೇಕೆಂದಾಗಿ ಹರಿಜನ ವಿದ್ಯಾರ್ಥಿಗಳಿಗೆ ದೊರೆಯುವ ಸೌಕರ್ಯಗಳು ಅಲ್ಲಿಯೂ ದೊರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳ ಅವಗಾಹನೆಗೆ ತರಲಾಯಿತು. ಸಪ್ಟಂಬರ ತಾ. 30ನ್ನು ಹರಿಜನ ಧ್ವಜ ದಿನವೆಂದಾಚರಿಸಬೇಕೆನ್ನುವ, ಕಾಸರಗೋಡಿನಲ್ಲಿ ಮೂರು, ಉಡುಪಿಯಲ್ಲೊಂದು ಹೊಸ ಶಾಲೆಗಳನ್ನು ತೆರೆಯಬೇಕೆನ್ನುವ, ಐದು ಶಾಲೆಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಏರಿದುದರಿಂದ ಜಾಸ್ತಿ ಉಪಾಧ್ಯಾಯರನ್ನು ನೇಮಿಸಬೇಕೆನ್ನುವ ನಿರ್ಧಾರವಾಯಿತು. ಜಿಲ್ಲೆಯ ಹದಿನಾರು ಹರಿಜನ ಕ್ಷೇತ್ರಗಳಲ್ಲಿ ಹೊಸ ಬಾವಿ ತೋಡುವರೆ ಅಂದಾಜು ಪಟ್ಟಿ ಸೆಂಕ್ಷನ್ ಮಾಡಲಾಯಿತು. ಮುಂದಿನ ಸಭೆಯನ್ನು ನವಂಬರ ತಿಂಗಳಲ್ಲಿ ಕಾರ್ಕಳದಲ್ಲಿ ಕರೆಯುವುದೆಂದಾಯಿತು.

ಮುನಿಸಿಪಲ್ ಕೌನ್ಸಿಲು ಮೀಟಿಂಗು— ತಾ. 11ರಲ್ಲು ಚೆಯರ್‍ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಎ. ಮಂಜುನಾಥ ರಾಯರ ಸವಾಲುಗಳಿಗೆ ಉತ್ತರವೀಯಲಾಯಿತು. ಸವಾಲುಗಳು ವಿಶೇಷತಃ ಉಪಾಧ್ಯಾಯ ಉಪಾಧ್ಯಾಯಿನಿಯರ ನೇಮಕ ಮತ್ತು ಸಿಮೆಂಟಿನ ಉಪಯೋಗ ಕುರಿತು ಆಗಿದ್ದುವು. ಸ್ವಾತಂತ್ರ್ಯ ದಿನಾಚರಣೆ ವೆಚ್ಚಕ್ಕಾಗಿ ರೂಪಾಯಿ 50/- ಮಂಜೂರು ಮಾಡಲಾಯಿತು. ಮುನಿಸಿಪಲ್ ರಸ್ತೆಗಳಲ್ಲಿ ಓಡಾಡುವ ವಾಹನಗಳ ಟಾನೆಸುಮಾರಿ ತೆಗೆಯಲು ನಿಬಂಧಿ ಪಟ್ಟಿ ಮಂಜೂರು ಮಾಡಲಾಯಿತು. ಉಡುಪಿಯಿಂದ ಕೆಮ್ಮಣ್ಣು ವರೆಗೆ ಹನುಮಾನ್ ಬಸ್ ಕಂಪೆನಿಯವರು ಬಸ್ ಸೌಕರ್ಯವನ್ನು ಜನರಿಗೆ ಒದಗಿಸುವುದರಲ್ಲಿ ಕೌನ್ಸಿಲಿನ ಆಕ್ಷೇಪವಿಲ್ಲವೆಂದಾಯಿತು. ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಮೂರು ತಿಂಗಳ ಮಟ್ಟಿಗೆ ಮೂವತ್ತಾರು ರೂಪಾಯಿ ಖರ್ಚು ಮಾಡಬಹುದೆಂದಾಯಿತು. ಅಜ್ಜರಕಾಡು ಮೈದಾನದ ಹೊಂಡಗಳನ್ನು ಮುಚ್ಚುವರೆ ಪುನಹ ರೂಪಾಯಿ 250- ಖರ್ಚು ಸೆಂಕ್ಷನ್ ಮಾಡಲಾಯಿತು.

ಭಜನ ಮಂಗಲ— ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಳೆದವಾರ ಪ್ರಾರಂಭವಾದ ಭಜನ ಸಪ್ತಾಹಕ್ಕೆ ಇದೇ ತಾ. 14ರಲ್ಲು ಮಂಗಲಾಚರಣೆ ನಡೆಯಿತು.

ಎಮ್ ಜಿ ಎಮ್. ಕಾಲೇಜಿನ ಭಾಷಾ ಸಂಘದ— ಅಭಿನವಾರಂಭವು ಇದೇ ತಾ. 10ರಲ್ಲು ಶ್ರೀ ಕಯ್ಯಾರ ಕಿಂಞಣ್ಣ ರೈಗಳಿಂದ ನೆರವೇರಿಸಲ್ಪಟ್ಟಿತು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಕಾಲೇಜು ಲೆಕ್ಚರರ್ ಶ್ರೀ ನಾರಾಯಣ ಅಯ್ಯಂಗಾರರು ಶ್ರೀ ರೈಗಳ ಪರಿಚಯಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಎಮ್. ಜಿ. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಅದೇ ಕಾಲೇಜಿನ ವಿಜ್ಞಾನ ಶಾಸ್ತ್ರ ಚರ್ಚಾ ಸಂಘದ ಉದ್ಘಾಟನೆಯನ್ನು ತಾ. 13ರಲ್ಲು ಮಂಗಳೂರು ಬಿ. ಟಿ. ಕಾಲೇಜು ಪ್ರಿನ್ಸಿಪಾಲ್ ಶ್ರೀ ಪಿ. ರಮಾನಂದರಾಯರು ನೆರವೇರಿಸಿದರು.

ವಾರ್ಷಿಕೋತ್ಸವ — ಉಡುಪಿಯ ಕಲಾವೃಂದದ ವಾರ್ಷಿಕೋತ್ಸವವು ಸಂಸ್ಕೃತ ಕಾಲೇಜಿನ ನೂತನ ಕಟ್ಟಡದಲ್ಲಿ ಇದೇ ತಾ. 11 ಮತ್ತು 12ರಲ್ಲು ಮಂಗಳೂರಿನ ಶ್ರೀ ಪರಮೇಶ್ವರ ಮಯ್ಯ ಮತ್ತು ಬೆಂಗಳೂರಿನ ಶ್ರೀ ನಂ. ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿತು. ಶ್ರೀ ಟಿ. ಎ. ಪೈಗಳ ಉತ್ಸವದ ಉದ್ಘಾಟನೆಯನ್ನು ಮಾಡಿದರು. ಕಾರ್ಯದರ್ಶಿಯವರಿಂದ ವರದಿವಾಚನ, ಶ್ರೀ ಎ. ಎಸ್. ಶ್ರೀರಮಣ ಆಚಾರ್ಯರಿಂದ ಕಾವ್ಯವಾಚನ, ಶ್ರೀಗಳಾದ ಕೆ. ಎಲ್. ಕಾರಂತ ಮತ್ತು ಕು. ಶಿ. ಹರಿದಾಸ ಭಟ್ಟರ ಉಪನ್ಯಾಸ ಕಾರ್ಯಕ್ರಮಗಳಾದುವು. ನಂತರ ಅಧ್ಯಕ್ಷ ಭಾಷಣ, ವಿನೋದಾವಳಿ, ಧನ್ಯವಾದಾರ್ಪಣೆಯೊಂದಿಗೆ ಪ್ರಥಮದಿನದ ಉತ್ಸವ ಕೊನೆಗೊಂಡಿತು. ಎರಡನೆ ದಿವಸ ಸೇರಿದ ಸಭೆಯಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರು ಕಲಾವೃಂದದ ಶ್ರೇಯಃ ಪ್ರಾರ್ಥನೆ ಮಾಡಿದರು. ಶ್ರೀ ಶ್ರೀನಿವಾಸರಾಯರಿಂದ ಕವಿತಾ ವಾಚನವಾದ ನಂತರ ಡಾ। ಕೆ. ಎಲ್. ಐತಾಳರಿಂದ ಏರ್ಪಡಿಸಲ್ಪಟ್ಟ ವೆಂಕಟರಮಣ ಆಚಾರ್ಯರ ಸ್ಮಾರಕ ಭಾಷಣ ಸ್ಪರ್ಧೆ, ಲೇಖನ ಸ್ಪರ್ಧೆಗಳಲ್ಲಿ ಒಂದನೆ, ಎರಡನೆ ಸ್ಥಾನವನ್ನು ಗಳಿಸಿದವರಿಗೆ ಅಧ್ಯಕ್ಷರು ಬಹುಮಾನ ಹಂಚಿದರು. ನಂತರ ಮಂಗಳೂರಿನ ಶ್ರೀ ಎಮ್. ಆನಂದರಾಯರು ಲಕ್ಷ್ಮೀಶ ಕವಿಯ ಕೆಲವು ಕವಿತೆಗಳನ್ನೋದಿ ಸಾಹಿತ್ಯವಾಹಿನಿಯ ಚಲನವಲನಗಳನ್ನು ವಿವರಿಸಿ ಉಪನ್ಯಾಸವಿತ್ತರು. ಅಧ್ಯಕ್ಷರು ಕನ್ನಡ ಸಾಹಿತ್ಯದ ಮಾರ್ಗವನ್ನು ಶೋಧಿಸಿ ಕೆಲವು ಮಾತುಗಳನ್ನಾಡಿದರು. ಕಾರ್ಯದರ್ಶಿಯವರಾದ ಶ್ರೀ ಕೆ. ಹರಿದಾಸ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದ ನಂತರ ಸಭೆಯು ಕೊನೆಗೊಂಡಿತು. ರಾತ್ರಿ ಶ್ರೀ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಕಲಾವೃಂದದ ಯುವಕರು ಮೇವಾಡಪತನವೆಂಬ ನಾಟಕವನ್ನು ಅಭಿನಯಿಸಿದರು.

ಸ್ಥಳೀಯ ಸರಕಾರಿ ಅಧ್ಯಾಪಕ ತರಬೇತಿ ಶಾಲೆಯ ಜೂನಿಯರ್ ತರಗತಿಯ ಪ್ರಥಮ ಯಕ್ಷಗಾನ ಸಭೆಯು ತಾ. 8ರಲ್ಲು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೃಷ್ಣ ಸಂಧಾನ ನಡೆಯಿತು. ಸಭಿಕರ ಮಾತುಗಳಾದನಂತರ ಅಧ್ಯಕ್ಷರು ಯಕ್ಷಗಾನ ಕಲೆಯ ಮಹತ್ವವನ್ನು ವಿವರಿಸಿದರು. ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಹರಿಜನ ಕಮಿಟಿ ಸ್ಥಾಪನೆ— ಹರಿಜನ ಕಮಿಟಿ ಸ್ಥಾಪನೆಗಾಗಿ ತಾ 10ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಡಾ। ಪಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಈ ಕೆಳಗಿನ ಸಮಿತಿಯನ್ನೊಂದು ರಚಿಸಬೇಕೆಂದಾಯಿತು. ಶ್ರೀ ಟಿ. ಎ. ಪೈ [ಅಧ್ಯಕ್ಷ], ಡಾ। ಕೆ. ಎಲ್ ಐತಾಳ ಮತ್ತು ಶ್ರೀ ಬಿ ಕರುಣಾಕರ ಹೆಗ್ಡೆ [ಉಪಾಧ್ಯಕ್ಷರು], ಶ್ರೀ ನರಹರಿ ಕಾಮತ್ [ಕಾರ್ಯದರ್ಶಿ], ಶ್ರೀಗಳಾದ ಡಾ। ಪಿ ಆರ್. ನಾಯಕ್, ಎಮ್. ವಾಮನ ಭಟ್, ಎಮ್. ಆರ್ ಕಾರ್ನಾಡ್, ಕೆ. ಹೊನ್ನಯ್ಯ ಸೆಟ್ಟಿ, ಯು. ರಾಮಚಂದ್ರ [ಇತರ ಸದಸ್ಯರು]. ಈ ಸಂದರ್ಭದಲ್ಲಿ ಹಾಜರಿದ್ದ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿ ಎನ್. ಎಸ್. ಕಿಲ್ಲೆಯವರು ಸಂಘಸ್ಥಾಪನೆ ಆವಶ್ಯಕತೆ ಮತ್ತು ನಿಧಿ ಸಂಗ್ರಹದ ಕುರಿತು ಸೂಚನೆಗಳನ್ನಿತ್ತರು.

ಉಡುಪಿಯಲ್ಲಿ ಮೆಡಿಕಲ್ ಕಾಲೇಜಿನ ಯೋಜನೆ — ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು ತೆರೆದು ನಡೆಸುತ್ತಿರುವ ಏಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಎಂಬ ವಿದ್ಯಾಸಂಸ್ಥೆಯು ಉಡುಪಿಯಲ್ಲಿ ಮೆಡಿಕಲ್ ಕಾಲೇಜೊಂದನ್ನು ಅನುಕೂಲವಾದರೆ ಇದೇ ಅಕ್ಟೋಬರದಲ್ಲಿ ಪ್ರಾರಂಭಿಸುವ ಪೂರ್ವತಯಾರಿಯಲ್ಲಿರುವುದು. ಸರಕಾರವು ಮಂಜೂರು ಮಾಡಲಿ, ಮಾಡದಿರಲಿ ವರ್ಷಕ್ಕೆ ರೂ. 750-0-0ರಂತೆ ಕಾಲೇಜು ಫೀಯನ್ನು ಅರ್ಜಿಯೊಡನೆ ಕೊಡತಕ್ಕ 100 ವಿದ್ಯಾರ್ಥಿಗಳಾದರೂ ಮುಂದೆಬಂದೊಡನೆ ಕಾಲೇಜು ಸ್ಥಾಪಿಸಲ್ಪಡುವುದು. ವ್ಯಾಸಂಗದ ಅವಧಿ 5½ ವರ್ಷ. ಮದ್ರಾಸು ಮೆಡಿಕಲ್ ಕಾಲೇಜಿನ ಸಿಲೆಬಸ್ಸು ಅನುಸರಿಸಲ್ಪಡುವುದು. ಸ್ಥಳೀಯ ಅನುಭವಿಕ ಗ್ರ್ಯಾಜುವೇಟ್ ಡಾಕ್ಟರುಗಳೂ ಇತರ ತಜ್ಞರೂ, ಲೆಕ್ಚರರು ಶಿಕ್ಷಣ ಮಟ್ಟವನ್ನು ಮದ್ರಾಸು ಮೆಡಿಕಲ್ ಕಾಲೇಜಿನಂತೆಯೇ ಇರಿಸಿಕೊಳ್ಳಲಾಗುವುದು. ಕಾಲಕ್ರಮದಲ್ಲಿ ಜನತೆಯೊಡನೆ ಯಾವ ಧನಸಹಾಯವನ್ನು ಯಾಚಿಸದೆ ಬರಿಯ ಕಾಲೇಜ್ ಫೀಯ ಸಂಗ್ರಹದಿಂದಲೇ ಸ್ವತಂತ್ರ ಕಟ್ಟಡ, ಸಲಕರಣೆ, ಆಸ್ಪತ್ರೆಗಳನ್ನು ಒದಗಿಸಿಕೊಳ್ಳಲಾಗುವುದು. ಶಿಕ್ಷಣಾರ್ಥಿಗಳ ಕನಿಷ್ಟ ಯೋಗ್ಯತೆ ಇಂಟರ್‌ಮೀಡಿಯೇಟ್. ಈಗ ಇರುವ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶವು ದೊರೆಯದಿರುವಾಗ, ಸರಕಾರವು ಹೊಸ ಕಾಲೇಜುಗಳನ್ನು ಈಗಿನ ಪರಿಸ್ಥಿತಿಯಲ್ಲಿ ತೆರೆಯಲು ಅಸಮರ್ಥವಿರುವಾಗ ರಾಷ್ಟ್ರಕ್ಕೆ ವೈದ್ಯಕೀಯ ಜನರ ಆವಶ್ಯಕತೆಯಿರುವಾಗ ಏಕೆಡೆಮಿಯು ಇಂಥ ಖಾಸಗಿ ಸಾಹಸೋದ್ಯಮಗಳು ಜನಾಕರ್ಷಣೀಯವಾಗಿ ಯಶಸ್ವಿಯಾಗುವುದರಲ್ಲಿಯೂ, ಕಾಲಕ್ರಮದಲ್ಲಿ ಸರಕಾರವು ಅದನ್ನು ಅಂಗೀಕರಿಸುವುದರಲ್ಲಿಯೂ ಅನುಮಾನಕ್ಕೆ ಆಸ್ಪದವಿಲ್ಲ. ಪ್ರವೇಶ ಬಯಸುವವರು ರೂ. 750—0—0ರೊಂದಿಗೆ ತಮ್ಮ ಅರ್ಜಿಗಳನ್ನು ಡಾ। ಟಿ. ಮಾಧವ ಪೈ. ರಿಜಿಸ್ಟ್ರಾರ್ ಏಕೆಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ ಉಡುಪಿ ಇವರಿಗೆ ಕಳುಹಿಸಬಹುದು. ಏಕೆಡೆಮಿಯವರು ರಾಷ್ಟ್ರದ ಆವಶ್ಯಕತೆಯ ಕಡೆಗೆ ದೃಷ್ಟಿಯಿಟ್ಟು ಶೀಘ್ರದಲ್ಲೇ ಮೆಡಿಕಲ್ ಕಾಲೇಜನ್ನು ತೆರೆಯುವರೆಂದು ನಂಬಲಾಗಿದೆ. ಈಗಾಗಲೇ ಕೆಲವು ಅರ್ಜಿಗಳು ಬಂದಿವೆ ಎಂಬುದರಿಂದ ಶಿಕ್ಷಣಾರ್ಥಿಗಳ ಒಲವು ಈ ಕಡೆಗೆ ಇದೆಯೆಂಬುದು ಒಡೆದು ಕಾಣುವುದು.

ಮಹಾಸಭೆ—ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿಯ ಮಹಾಸಭೆಯು ತಾ 9ರಲ್ಲು ಚೆಯರ್‍ಮೆನ್ ಶ್ರೀ ಬಿ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ರಿಟಯರಿಂಗ್ ಡೈರೆಕ್ಟರರಾದ ಡಾ। ಪಿ. ಆರ್ ನಾಯಕ್, ಎಡ್ವಕೇಟ್ ಬಿ. ಬಿ. ಸೆಟ್ಟಿ, ಎಡ್ವಕೇಟ್ ಯು. ಎಸ್. ಕೊಲ್ಲೆಬೈಲ್ ಇವರು ತಿರುಗಿ ಚುನಾಯಿಸಲ್ಪಟ್ಟರು. ಸಭಾಂತ್ಯದಲ್ಲಿ ಡೈರೆಕ್ಟರರಲ್ಲೊಬ್ಬರಾದ ಶ್ರೀ ಕೆ. ಹೊನ್ನಯ್ಯ ಸೆಟ್ಟರು ಈ ಸಂಸ್ಥೆಯು ಹತ್ತು ವರ್ಷಗಳ ಮೊದಲೇ ಶ್ರೀ ಕೆ. ಶಿವರಾರಿಂದ ಸ್ಥಾಪನೆಯಾಗಿದ್ದರೂ ಅದು ವಿಮಾ ವ್ಯವಹಾರಕ್ಕೆ ತೊಡಗುವಂತಾದುದು 1948ರ ಅಂತ್ಯದಲ್ಲಿ ಮಾತ್ರ. ಇದಕ್ಕೆ ಕಾರಣರಾದ ಹೊಸ ಡೈರೆಕ್ಟರರ ಮತ್ತು ಮಹಾಜನರ ಸಹಕಾರವನ್ನು ಸ್ಮರಿಸಿ ಜನತೆಯ ಪ್ರೋತ್ಸಾಹವನ್ನು ಕೋರಿ ಧನ್ಯವಾದಗಳನ್ನು ಅರ್ಪಿಸಿದರು.

ಹೊಸ ಪಕ್ಷ ಪತ್ರಿಕೆಗಳು:- ಶ್ರೀ ಎಂ. ವಿ. ಹೆಗ್ಡೆಯವರ ಸಂಪಾದಕತ್ವದಲ್ಲಿ 'ಜನಯುಗ' ಪತ್ರಿಕೆಯು ಕಟಪಾಡಿಯಿಂದಲೂ, ಶ್ರೀ ಯಸ್. ಗೋಪಾಲ ಸಾಲಿನ್ಸ್ ಸಂಪಾದಕತ್ವದಲ್ಲಿ "ದಲಿತಬಂಧು" ಪತ್ರಿಕೆಯು ಮಂಗಳೂರಿನಿಂದಲೂ ಈ ತಿಂಗಳಿಂದ ಹೊರಡಲಾರಂಭಿಸಿವೆ.

ಕುಂಕಾರ್ಲು: ಕುಂಕಾರ್ಲು ಗ್ರಾಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಉಡುಪಿ ತಾಲೂಕ ಆಹಾರ ಉತ್ಪಾದನಾ ಸಮಿತಿ ಮತ್ತು ಪಾನ ನಿರೋಧ ಸಲಹಾ ಸಮಿತಿ ಸಭೆಗಳೂ ಮಹಜನೀಯರ ಭಾಷಣಗಳೂ, ಆಹಾರ ಉತ್ಪಾದನೆ ಮತ್ತು ಪಾನನಿರೋಧ ವಿಷಯಗಳಲ್ಲಿ ಜನಮನರಂಜನ ವಿನೋದಾವಳಿಗಳೂ ಕುಂದಾಪುರ ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹ, ಅವರ ಅಧ್ಯಕ್ಷತೆಯಲ್ಲಿ ಇದೇ ತಾ. 20ನೇ ಸೋಮವಾರ ಮಧ್ಯಾಹ್ನ 2 ಗಂಟೆಯಿಂದ 6 30ರ ತನಕ ಕುಂಜಾರುಗಿರಿ ಕ್ಷೇತ್ರದಲ್ಲಿ ಜರಗಲಿರುವುದರಿಂದ ಈ ಸಮಾರಂಭಕ್ಕೆ ಸರ್ವರೂ ದಯಮಾಡಿ ಬರಬೇಕಾಗಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀ। ಕುಂಕಾರ್ಲು ಗಣಪಯ್ಯ ಸೆಟ್ಟರ ವಿನಂತಿಯಿದೆ.

ಪ್ರಕಟಣೆ

ಉಡ್ಪಿ ಕಸಬೆಯಲ್ಲಿರುವ ಬಿ. ಅನಂತ ಕೃಷ್ಣಾಚಾರ್ಯರ ಮಗ ಬಿ. ಶ್ರೀನಿವಾಸಾಚಾರ್ಯನು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:

ನಾನು ಈ ದಿನ ಬೆಳಗ್ಗೆ ಮನೆಯಿಂದ ಚರ್ಚ್‍ರೋಡಿನಲ್ಲಿರುವ ನನ್ನ ಅಂಗಡಿಗೆ ಬರುವಾಗ ನನ್ನ ಬಾಬ್ತು ಮೂಲಗೇಣಿ ಚೀಟು-ರಶೀದಿ-ವಗೈರೆ ರಿಕಾರ್ಡುಯಿರುವ ಒಂದು ಕವರು ಬಿದ್ದುಹೋಗಿಯದೆ. ಸಿಕ್ಕಿದವರು ನನಗೆ ತಂದುಕೊಟ್ಟಲ್ಲಿ ಯೋಗ್ಯ ಬಹುಮಾನ ಕೊಡುತ್ತೇನೆ.

B. S Achar,
Sri Mangala Cloth Store,
Church Road, Udipi
ಉಡ್ಪಿ, 13-8-51

Tender Notice

Sealed tenders are invited on or before 10-9-1951 at 5 P. M. by the under signed for reducting the foot bridge at Uliargoli as per instructions contained in the estimate of the Divisional Engineer, High ways, South Kanara, Mangalore in his D-dis 18052/ B 2/48 dated 8-11-49 Further details can be had from the President.

(Sd) Ramachandraya President,
Uliargoli Panchayat Board.
P. O. KAUP, 16-8-51

ಸ್ವಾತಂತ್ರ್ಯ ದಿನದ ಸವಿನೆನಪಿಗಾಗಿ ಅತ್ಯುತ್ತಮ ಚಿತ್ರಪ್ರದರ್ಶಿಸುವುದೇ ನಮ್ಮ ಪ್ರತಿಜ್ಞೆ.

ಅ ದ ಕ್ಕಾ ಗಿ

ಭೀಷ್ಮ ಪ್ರತಿಜ್ಞೆ

(ನಾಗಿರ್‌ಸ್ ಆರ್ಟ್ ಕನ್‌ಸರ್ನ್)

ನಾಗಿರ್‌ಸ್, ಸಾಹುಮೋಡಕ್, ಮಿಸ್ರಾ, ಕುಮಾರ್ ಮೊದಲಾದವರು,
ತಾ. 15-8-51ರಿಂದ

ಶ್ರೀ- ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಬರುವ ಚಿತ್ರಗಳು
ದಾಸ್ತಾನ್ ನರಸಿಂಹ ಅವತಾರ್ ಇತ್ಯಾದಿ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 105, 1951

[illegible] ಬ್ಯಾರಿ —ವಾದಿ

ಅಬ್ದುಲ್ಲ ಖಾದರ ಬ್ಯಾರಿ —ಪ್ರತಿವಾದಿ

ಪ್ರತಿವಾದಿ-ಅಬ್ದುಲ್ಲ ಖಾದರ ಬ್ಯಾರಿ [illegible] ಕಾಸರಗೋಡು [illegible] ವಾಸಿಸುತ್ತಿರುವವ.

ಪ್ರತಿವಾದಿಯಿಂದ ಬರಬೇಕಾದ ಬಾಕಿಗೆ [illegible] ವಾದಿಯು ದಾಖಲು ಮಾಡಿದ ಸಿವಿಲ್ ವ್ಯವಹಾರ ತಾರೀಖು 29-8-1951ಕ್ಕೆ ಪ್ರತಿವಾದಿಯು ಹಾಜರಾತಿ ಬಗ್ಗೆ ಮುಂದೂಡಿದ [illegible] ಈ ಮೂಲಕ ತಿಳಿಸಲಾಗಿದೆ.

ಕಾಸರಗೋಡು. | Sd/- P Ahmad,
8-8-1951 | Advocate for Plff-

ಕಡಿಮೆ ಕ್ರಯದ ಉತ್ತಮ

❊ ಪುಸ್ತಕಗಳು ❊

ಬಿರುದಾವಳಿ	0	3	0
ಆ ಸಂಧ್ಯೆ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದ ದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೋತ್ಸವ	0	4	0
ವಿವಿಧ ವಿಷಯ ಕೋಶ ಭಾಗ ೧, ೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಳಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ಸೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ॥ ಹರ್ಡೀಕರ್	0	5	0
ಕೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಜಗದ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಘಂಟೆಮಾರಾ ಳಭಾಗಗಳು	2	0	0
ಮಾರ್ವಾಟಿ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೌತಿ	0	4	0
ಕಶ್ಸು ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0

ರೂ. 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಆರತರಂಗ ಕಾರ್ಯಾಲಯ, ಉಡುಪಿ.
(2) ನವಭಾರತ ಬುಕ್ ಡಿಪೋ, ಉಡುಪಿ.

ಮಂಗಳೂರು

ಋಷಿ ರವೀಂದ್ರನಾಥ ಠಾಕೂರರ ಪುಣ್ಯ ದಿನಾಚರಣೆಯು ತಾ. 8ರಲ್ಲು ವಿದ್ಯಾರ್ಥಿ ಸಂಘ ಮತ್ತು ಜನಪದ ಕಲಾ ಮಂಡಳಿಯ ವತಿಯಿಂದ ಜರಗಿತು. ಶ್ರೀ. ಜಿ. ಕೆ. ಭಟ್ಟರು ಸಭಾಧ್ಯಕ್ಷತೆ ವಹಿಸಿದ್ದು ಶ್ರೀ. ಪಿ. ಕೆ. ನಾರಾಯಣನವರು ಶ್ರೀ ರವೀಂದ್ರರ ಜೀವನ ಆದರ್ಶಗಳನ್ನೆತ್ತಿ ಮಾತನಾಡಿದರು.

ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲೂ ಶ್ರೀ ರವೀಂದ್ರರ ಪುಣ್ಯದಿನವು ತಾ. 9ರಲ್ಲು ಗಣಪತಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಚ್. ಪಾಂಡುರಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ ವಿದ್ಯಾರ್ಥಿ ಸಂಘದ ಕಾರ್ಯ ಸಮಿತಿ ಸಭೆಯು ತಾ 5ರಂದು ಸಂಘದ ಅಧ್ಯಕ್ಷ ಶ್ರೀ ಕರುಣಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಆರ್ಥಿಕ ವಿಚಾರ, ಸಂಘಟನೆ, ಕಾರ್ಯಕ್ರಮಗಳ ವಿಚಾರದಲ್ಲಿ ಚರ್ಚೆಯಾಯಿತು ಉಡುಪಿ ಸಂಸ್ಕೃತ ಕಾಲೇಜಿನ ಸ್ನಾತಕರ ಪರ್ಯ ಚಳವಳಿಯ ವರದಿಯನ್ನು ಶ್ರೀ ಎಮ್. ಜಿ. ಹೆಗ್ಡೆಯವರು ಕೊಟ್ಟರು. ಈ ವಿಚಾರದಲ್ಲಿ ಸಂಘವು ತೀರ್ಮಾನವನ್ನು ಬಾಕಿಯಿಟ್ಟಿತು. ಕನ್ನಡ ಪಠ್ಯ ಪುಸ್ತಕಗಳ ವಿಚಾರದಲ್ಲಿ ಸರಕಾರಕ್ಕೊಂದು ಮನವಿ ಕಳುಹಿಸುವುದೆಂದೂ, ಮುಂಬರುವ ಚುನಾವಣೆಯ ಕುರಿತು ವಿದ್ಯಾರ್ಥಿ ಸಂಘವು ಪ್ರಚಾರ ಮಾಡಬೇಕೆಂದೂ, ವಿದ್ಯಾರ್ಥಿಗಳು ವೈಯಕ್ತಿಕವಾಗಿ ರಾಜಕೀಯದಲ್ಲಿ ಭಾಗವಹಿಸಬಹುದೇ ಎಂಬ ವಿಚಾರವನ್ನು ಅಧಿಕಾರಿಗಳಿಂದ ತಿಳಿದುಕೊಳ್ಳಬೇಕೆಂದೂ ನಿರ್ಣಯವಾಯಿತು.

ಕರ್ನಾಟಕ ಏಕೀಕರಣ ಪಕ್ಷದ ಸಭೆಯು — ತಾ 9ರಲ್ಲು ಸಂಜೆ ಎಂಗಳೂರು ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ದ. ಕ. ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆರ್. ಕಾರಂತರು ಕರ್ನಾಟಕ ಏಕೀಕರಣ ಪಕ್ಷದ ಚುನಾವಣೆ ಪಂಪತ್ರವನ್ನು ವಿವರಿಸುತ್ತ, ಈ ಪಕ್ಷದ ರಚನೆ ಹೇಗಾಯಿತೆಂದು ತಿಳಿಸಿದರು. ಬಾಪೂಜಿಯವರು ಕಾಂಗ್ರೆಸಿನ ನಾಯಕರಾದೊಡನೆ ದೇಶವನ್ನು ಭಾಷಾವಾರು ಪ್ರಾಂತಗಳ ತಳಹದಿಯಲ್ಲಿ ವಿಭಜಿಸಿ, ಸ್ವಾತಂತ್ರ್ಯ ಚಳುವಳಿಯನ್ನಾರಂಭಿಸಿದರು. ಆ ಮೂಲಕವೇ ಕಾಂಗ್ರೆಸಿನ ಶಕ್ತಿ ಬೆಳೆದು ಅದು ಜನತೆಯ ನಾಡಿಗಳಲ್ಲಿ ಹರಿಯತೊಡಗಿತು. ಅಂದಿನಿಂದ -30 ವರುಷಗಳಿಂದ- ಒಪ್ಪಿಕೊಂಡ ಆಶ್ವಾಸನೆ ಕೊಡುತ್ತ ಬಂದ ತತ್ವವನ್ನೂ, ಕರ್ನಾಟಕ ಏಕೀಕರಣವನ್ನೂ ಇಂದು ಕಾಂಗ್ರೆಸು ಬದಿಗೊತ್ತುವುದಲ್ಲದೆ ಮುಂದಾಗದಂತೆಯೂ ನೋಡುತ್ತಿದೆ. ಆದುದರಿಂದ ಈ ಪಕ್ಷವನ್ನು ರಚಿಸಿ, ಆ ಮೂಲಕ ಕನ್ನಡಿಗರ ಹಕ್ಕಿಗಾಗಿ ಹೋರಾಡಬೇಕಾಗಿದೆ' ಎಂದರು. ನಂತರ ಗಾಂಧೀಜಿ ನೆಹರು ಕಮಿಟಿ, ಸೈಮನ್ ಕಮಿಶನ್, ವಾರ್ಧಾದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಿ ಮಾಡಿದ ನಿರ್ಣಯ, 1945-46ರ ಚುನಾವಣಾ ಪತ್ರದಲ್ಲಿ ಕಾಂಗ್ರೆಸ್ ಕೊಟ್ಟ ಹೇಳಿಕೆ, ಪಟೇಲರ ಸಮರ್ಥನೆ, ಶ್ರೀಗಳಾದ ಆರ್. ಆರ್. ದಿವಾಕರ ಮತ್ತು ನಿಜಲಿಂಗಪ್ಪನವರ ಮಾತುಗಳು-ಇವುಗಳನ್ನೆಲ್ಲಾ ವಿವರಿಸುತ್ತ 'ಈ ಬಗೆಯಲ್ಲಿ ಭಾಷಾವಾರು ಪ್ರಾಂತವನ್ನು ಸಮರ್ಥಿಸಿದವರು, ಕರ್ನಾಟಕಕ್ಕೆ ಪ್ರಾಂತಕೊಡುತ್ತೇವೆ ಎಂದವರು ಇಂದು ಅಲ್ಲಗಳೆಯುತ್ತಿದ್ದಾರೆ. ಆದುದರಿಂದ ನಮ್ಮ ಮಾನದ ಪ್ರಶ್ನೆಯಿದು! ಅನ್ನದ ಪ್ರಶ್ನೆಯಿದು' ಎಂದು ತಿಳಿಸಿದರು. ವಿದ್ಯಾರ್ಥಿಗಳು ಕೆಲವರು ಅವರ ಭಾಷಣದ ಕುರಿತಾಗಿ, ಪಕ್ಷದ ಕುರಿತಾಗಿ ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರು. ಭೂಮಿಯ ಒಡೆತನವನ್ನು ರೈತನಿಗೆ ವಹಿಸಿಕೊಡುವಾಗ ಜಮೀನ್ದಾರನಿಗೆ ಪ್ರತಿಫಲ ಕೊಡುವುದು ತಪ್ಪು ಧೋರಣೆ ಎಂದರು, ಖಾನನಿರೋಧದ ಕುರಿತಾದ ಪ್ರಶ್ನೆಗೆ ಜವಾಬು ಕೊಡುತ್ತಾ, ಇದರಿಂದ ಹಳ್ಳಿಯಲ್ಲಿ ನಿಜವಾಗಿ ಪ್ರಯೋಜನವಾಗಿದೆ ಎಂದೂ, ಸರಿಯಾದ ನಿಯಂತ್ರಣವಿಲ್ಲದ್ದರಿಂದ ಪೇಟೆಗಳಲ್ಲಿ ಮಾತ್ರ ಕಳ್ಳಾಟಿಕೆಯಾಗುತ್ತಿದೆ ಎಂದೂ ತಿಳಿಸಿದರು.

ಸಭಾಧ್ಯಕ್ಷ ಶ್ರೀ ಜಿನರಾಜ ಹೆಗ್ಡೆಯವರು ಮಾತನಾಡುತ್ತಾ, ಕನ್ನಡಿಗರ ಕೇಳಿಕೆಯನ್ನು ಕಾಂಗ್ರೆಸ್ಸಿನವರು ಯಾವೆಲ್ಲ ಬಗೆಯಿಂದ ಒತ್ತಿ ಹಿಡಿದರೆಂದು ತಿಳಿಸಿದರು. ಘಟನಾ ಸಮಿತಿಯಲ್ಲಿರುವ 20-25 ಮಂದಿ ಕನ್ನಡ ಪ್ರತಿನಿಧಿಗಳು ಕಾಲುಹಿಡಿದು ಬೇಡಿಕೊಂಡರೂ ಘಟನೆಯಲ್ಲಿ ಈ ವಿಚಾರ ಸೇರಿಸಲು ಹಿಂತೆಗೆದರೆಂದು ತಿಳಿಸಿದರಲ್ಲದೆ ಕರ್ನಾಟಕ ಏಕೀಕರಣವು ಕಾಂಗ್ರೆಸಿನಿಂದ ಆದೀತೆಂಬುದರಲ್ಲಿ ತನಗೆ ಕನಸಿನಲ್ಲೂ ಭರವಸೆಯಿಲ್ಲವೆಂದರು. ವಿದ್ಯಾರ್ಥಿ ಸಂಘದ ಶ್ರೀ ಯು. ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರ ಶಾಂತಿ ಸಮಿತಿಯ ನೇತೃತ್ವದಲ್ಲಿ ತಾ. 6ರಲ್ಲು ಶ್ರೀ. ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಸಿದ್ಧೇಶ್ವರಾನಂದಜೀಯವರು ಭಾಷಣಮಾಡುತ್ತಾ, ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಏನು ಮಾಡಬೇಕೆಂಬುದನ್ನು ವಿವರಿಸಿದರು. ಯುದ್ಧದಿಂದ ಯುದ್ಧವು ಕೊನೆಗೊಳ್ಳದೆಂಬುದನ್ನು ಮನಗಂಡು, ಶಾಂತಿಯು ಮನುಷ್ಯನ ರಕ್ತಗತವಾಗುವಂತೆ ಬಾಲ್ಯದಿಂದಲೇ ಅವರಿಗೆ ಶಿಕ್ಷಣ ನೀಡಬೇಕು, ಬರೇ ಶಾಂತಿ ಮನವಿಗೆ ಸಹಿ ಮಾಡುವುದರಿಂದ ಪ್ರಯೋಜನವಿಲ್ಲ. ಈ ವರೆಗೆ ಜಗತ್ತಿನಲ್ಲಿ ಶಾಂತಿಗಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಾದ ಪ್ರಯತ್ನವನ್ನೂ ಅವು ಯುದ್ಧದಲ್ಲಿ ಕೊನೆಗೊಂಡುದುದನ್ನೂ ತಿಳಿಸಿದರು. ಭಾರತದಲ್ಲಿ ಶಾಂತಿ ಮಂತ್ರವೇ ಪರಮ ಧರ್ಮವಾಗಿ ಬೆಳೆದು ಬಂದುದನ್ನು ತಿಳಿಸುತ್ತ ನಮ್ಮ ಋಷಿಗಳಿಂದ ತೊಡಗಿ ಗಾಂಧೀಜಿಯವರೆಗೆ ನಮ್ಮವರು ಶಾಂತಿಗಾಗಿ ಹೆಣಗಿದ ವಿಚಾರವನ್ನು ತಿಳಿಸಿದರು. ಇಂದು ಜಗತ್ತಿನ ಒಂದು ರಾಷ್ಟ್ರವಾಗಿ, ಒಂದು ದೇಶವಾಗಿ ಶಾಂತಿಗನುಕೂಲ ವಾತಾವರಣ ಇರುವುದು ಭಾರತದಲ್ಲಿ ಮಾತ್ರವೆಂದೂ ಭಾರತದ ಮಾರ್ಗದರ್ಶನದಿಂದಲೇ ಚಿರಶಾಂತಿ ಸಾಧ್ಯವೆಂದೂ ತಿಳಿಸಿದರು. ಶಾಂತಿ ಸಮಿತಿಯ ಅಧ್ಯಕ್ಷ ಡಾ॥ ಎಮ್. ಎಸ್. ಶಾಸ್ತ್ರಿಯವರು ಶಾಂತಿ ಚಳವಳಿಯ ವಿಚಾರ ಹೇಳಿ ಸ್ವಾಮೀಜಿಯವರ ಪರಿಚಯವನ್ನು ಸಭಾರಂಭದಲ್ಲಿ ಮಾಡಿದರು. ಶ್ರೀ ಕೆ. ಸದಾಶಿವನವರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಕಾರಂತರ ರಾಜೀನಾಮೆ — ಮದ್ರಾಸು ಸರಕಾರದ ಮಾಜಿ ಭೂಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರು ಇತ್ತೀಚೆಗೆ ಕರ್ನಾಟಕ ಏಕೀಕರಣ ಪಕ್ಷವೆಂಬ ಹೊಸ ಪಕ್ಷವೊಂದನ್ನು ಹಾವೇರಿಯಲ್ಲಿ ಸ್ಥಾಪಿಸಲು ಕಾರಣರಾಗಿದ್ದು, ಇದೇ ತಾ. 6ರಲ್ಲು ತನ್ನ ಕಾಂಗ್ರೆಸ್ ಸದಸ್ಯತ್ವಕ್ಕೂ, ಡಿ.ಸಿ.ಸಿ ಮತ್ತು ಕೆ. ಪಿ. ಸಿ. ಸಿ. ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟಿರುವರೆಂದು ತಿಳಿದಿದೆ. ತನ್ನ ರಾಜೀನಾಮೆ ಪತ್ರವನ್ನು ಸುಮಾರು 16 ಪುಟಗಳುಳ್ಳ ಒಂದು ವಿವರಣೆ ಸಹಿತ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ ಟಂಡನ್, ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಡಾ॥ ಕೆ ನಾಗಪ್ಪ ಆಳ್ವರಿಗೂ ಕಳುಹಿಸಿರುವರಾಗಿ ತಿಳಿದು ಬಂದಿದೆ.

ಕಾಸರಗೋಡು — ಸೋಶಲಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಕಾಸರಗೋಡು ತಾಲೂಕಿನ ಕುಂಭಾಂಗಾಡ್ ಮತ್ತಿತರ ಕಡೆಗಳ ಹಳ್ಳಿಗ. ಜಾಥಾ ಒಂದು ಜಿಲ್ಲಾ ಕಲೆಕ್ಟರನ್ನು ಭೇಟಿಯಾಗಿ ಮನವಿಯೊಂದನ್ನು ಒಪ್ಪಿಸಿತು. ಹೊಸದುರ್ಗ ಸಬ್ ತಾಲೂಕಿನ ರೇಶನ್ ಸ್ಟೋರುಗಳಲ್ಲಿ ಮ ಡಿಪೋಗಳಲ್ಲಿ ಅಕ್ಕಿಯಿಲ್ಲದೆ ಎರಡು ದಿನಗಳ ಅಕ್ಕಿಯನ್ನು ಮಾತ್ರ ಹಂಚಲಾಗಿದೆ. ಕಾಸರಗೋಡು ತಾಲೂಕು ಆಹಾರಕೊರತೆಯ ಪ್ರದೇಶವೆಂದು ಸರಕಾರವೇ ಒಪ್ಪಿರುವುದರಿಂದ ಹೊಸದುರ್ಗ ಸಬ್ ತಾಲೂಕಿನಂತೆ ಇಡೀ ಕಾಸರಗೋಡು ತಾಲೂಕಿನಲ್ಲಿ ಹಸುಗೆ ಪದ್ಧತಿಯನ್ನು ತರುವುದು ಅಗತ್ಯವೆಂದು ಸೂಚಿಸಲಾಗಿತ್ತು.



Vpproved from by the Govt. of Mysore Certificated by the Agent of the Govt of Cylone & Indian

ಸ್ವಾತಂತ್ರ್ಯ ಬಂದಿಹುದು

ಸ್ವಾತಂತ್ರ್ಯ ಬಂದಿಹುದು, ಸ್ವಾತಂತ್ರ್ಯ ಬಂದಿಹುದು,
ಪಾರತಂತ್ರ್ಯದ ಬಂಧ ಕಳಚಿ ಕಡಿದಿಹುದು
ಎನ್ನುತಿಹ ಜನರುಲಿವು, ಡಿಗ್ದೆಸೆಯ ತುಂಬಿಹುದು,
ಜನವು ರಕ್ಷಿಸುವ ಬಂಡಿಗೊಂದ ಸ ಲಿಯುವುದು —

ಯುಗಯುಗದ ಘೋರ ತಪ, ಫಲವೆಲ್ಲವೊಟ್ಟೈಸಿ
ಪಡೆದ ಸ್ವಾತಂತ್ರ್ಯಫಲ ಬಡವರಿಗೆ ಇಲ್ಲ.
ಬಡವನಾತ್ಮ ಜ್ಯೋತಿಯಡಗಿ ಗೋರಿಯದಾಯ್ತು
ಬಂಡವಲಿಗನ ಮಹಡಿಯಡರ ಮೇಲಾಯ್ತು

ಬಿಡುವಿಲ್ಲ ದುಡಿವವಗೆ ಕೂಳಿಲ್ಲ ಹಸಿದವನ
ಮಡದಿ ಮಕ್ಕಳಿಗೆ ಹಾಲ್ಬೆಣ್ಣೆ ಗತಿಯಿಲ್ಲ
ಗುಡಿಯೊಳಗೆ ಇರುತಿರುವ ಕಲ್ಲು ದೇವರಿಗುಂಟು,
ಹಣ್ಣು, ಹಾಲ್, ನೈವೇದ್ಯ ಕ್ಷೀರಪರಮಾನ್ನ—
ಬಡವರಾ ಗೋರಿಯಾಗಿದ ಸ್ನೇಹದೊಡವೆರೆದ
ಪೇಶುದ್ಧ ಸುಮನಸರು ಇಳೆಯೊಳ್ಬೆಳುತಲಿ.
ಯುಗಯುಗದ ತಪದ ಫಲ 'ಸ್ವಾತಂತ್ರ್ಯ' ದೀವಿಗೆಯು
ತ್ಯಾಗಬೆಣ್ಣೆಯ ಸುರಿದು ಜಗವ ಬೆಳಗಿಸಲಿ—

— ಕೆ: ಯಂ. ಶ್ಯಾಮ, ಬೀಳ.

ಜಿಲ್ಲಾ ಕಾಂಗ್ರೆಸ್ ಕಾರ್ಯ-ಕರ್ತರ ಸಂಚಾರ

ಅಕಸ್ಮಿಕವಾಗಿ ಒದಗಿದ ತೊಂದರೆಯಿಂದಾಗಿ ಡಾ। ಯು. ಪಿ. ಮಲ್ಯರಿಗೆ ಈ ಸಂಚಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಡಾ। ಕೆ. ಯಸ್. ಆಳ್ವ, ಕೆ. ಕೆ. ಶೆಟ್ಟಿ, ಬಿ. ಆರ್. ಕರ್ಕೇರ ಮತ್ತು ಎಸ್. ಎಸ್. ಕಿಲ್ಲೆಯವರು ತಾ ೪—೮—'೫೧ನೇ ಸಾಯಂಕಾಲ ಘಂಟೆ ೪-೩೦ಕ್ಕೆ ಪುತ್ತೂರಿಗೆ ಹೋಗಿ, ಅಲ್ಲಿಯ ಹುಡುಗಿಯರ ಶಾಲಾ ಕಟ್ಟಡದಲ್ಲಿ ಸೇರಿದ್ದ ಕಾಂಗ್ರೆಸ್ ಕೆಲಸಗಾರರೊಡನೆ, ಕಾಂಗ್ರೆಸಿನ ಸಂಘಟನೆ, ಚುನಾವಣಾ ಕಮಿಟಿಯ ರಚನೆ, ಆಹಾರ ಪರಿಸ್ಥಿತಿಯೇ ಮೊದಲಾದ ಪ್ರಶ್ನೆಗಳ ಕುರಿತು ಅಭಿಪ್ರಾಯವಿನಿಮಯ ಮಾಡಿದರು. ಆ ಮೇಲೆ ಸಂಜೆ ಗಂಟೆ ೬-೩೦ಕ್ಕೆ ಕಾರ್ಕಳಕ್ಕೆ ಹೋಗಿ ಎಸ್. ವಿ. ಟಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾ। ಆಳ್ವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಎಮ್. ಎಸ್. ಅಧಿಕಾರಿ ಶ್ರೀ। ನರಸಿಂಹ ಪ್ರಭು ಮೊದಲಾದವರು ಕಾಂಗ್ರೆಸ್ಸನ್ನು ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಟೀಕಿಸಿದುದಕ್ಕೆ ಶ್ರೀಗಳಾದ ಮುಕುಂದ ಪ್ರಭು, ವೆಂಕಟೇಶಪ್ರಭು, ಎಸ್. ಎಸ್. ಕಿಲ್ಲೆ, ಎಮ್. ಬಿ. ಅಧಿಕಾರಿ ಮತ್ತು ಅಧ್ಯಕ್ಷರು ಸಮರ್ಪಕ ಉತ್ತರವಿತ್ತರು. ಶ್ರೀ। ನೀಲಕಂಠ ಶೆಣೈಯವರೂ ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸಿ ಮಾತಾಡಿದರು.

ತಾ. ೫ನೇ ಬೆಳಿಗ್ಗೆ ಮೇಲಿನ ಕಾರ್ಯಕರ್ತರು ಶ್ರೀ। ಎಮ್. ಬಿ. ಅಧಿಕಾರಿಗಳೊಂದಿಗೆ ಕುಂದಾಪುರಕ್ಕೆ ಹೋಗಿ ಅಲ್ಲಿಯ ಕಾಂಗ್ರೆಸ್ ಕೆಲಸಗಾರರೊಡನೆ ವಿಚಾರವಿನಿಮಯ ಮಾಡಿದರು. ರಾತ್ರಿ ಲಕ್ಷ್ಮೀನಾರಾಯಣ ಥಿಯೇಟರಿನಲ್ಲಿ ನಡೆದ ಶ್ರೀ। ಕಲ್ಲಾಡಿ ಕೊರಗ ಶೆಟ್ರಿ ಕುಂದಾಪು ಮೇಳದವರ ಬ್ರಹ್ಮಕಪಾಲ ಯಕ್ಷಗಾನ ಆಟಪ್ರದರ್ಶನದ ಸಂದರ್ಭದಲ್ಲಿ ಶ್ರೀ। ಕಿಲ್ಲೆಯವರು ಮುಂದಿನ ಚುನಾವಣೆಯ ಮಹತ್ವದ ಕುರಿತು ಮಾತಾಡಿದರು.

ತಾ. ೬ನೇ ಪೂರ್ವಾಹ್ನ ಬ್ರಹ್ಮಾವರ ಬಂಗ್ಲೆಯಲ್ಲಿ ಡಾ। ಆಳ್ವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆ ನಡೆದಾಗ ಶ್ರೀ। ಎಮ್. ಬಿ. ಅಧಿಕಾರಿ, ಕೆ. ಕೆ. ಶೆಟ್ಟಿ ಮತ್ತು ಎಸ್. ಎಸ್. ಕಿಲ್ಲೆಯವರು ಇಂದಿನ ದೇಶದ ಪರಿಸ್ಥಿತಿ, ಜನತೆಯ ಹೊಣೆ ಮತ್ತು ಮುಂದಿನ ಚುನಾವಣೆಯ ಕುರಿತು ಮಾತಾಡಿದರು. ಸರಕಾರವು ಈ ನಾಲ್ಕು ವರ್ಷಗಳಲ್ಲಿ ನೆರವೇರಿಸಿದ ಕಾರ್ಯವನ್ನು ಅಧ್ಯಕ್ಷರು ಸಂಕ್ಷೇಪವಾಗಿ ತಿಳಿಸಿದರು.

ಸಂಜೆ ಉಡುಪಿಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಸಭೆ ಜರಗಿದ ಮೇಲೆ (ಸಭೆಯ ವಿವರ ಕಳೆದ ಸಂಚಿಕೆಯಲ್ಲಿ ಬಂದಿದೆ) ಕಾರ್ಯಕರ್ತರೆಲ್ಲರೂ ಎಮ್. ಜಿ. ಎಮ್. ಕಾಲೇಜನ್ನು ಡಾಕ್ಟರ್ ಸುಂದರರಾಮ ಪೈ ಮತ್ತು ಶ್ರೀ। ಟಿ. ಎ. ಪೈಗಳೊಂದಿಗೆ ಸಂದರ್ಶಿಸಿ ಪರಿಶೀಲಿಸಿದರು.

ತಾ. ೭ನೇ ಬೆಳಿಗ್ಗೆ ಕಟಪಾಡಿಯ ವೆಂಕಟ್ರಮಣ ಹೈಸ್ಕೂಲಿನಲ್ಲಿ ಸಭೆ ನಡೆದಾಗ ಶ್ರೀ। ಎಮ್. ಬಿ. ಅಧಿಕಾರಿಗಳು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಆ ಮೇಲೆ ಡಾಕ್ಟರ್ ಕಿಣಿ, ಕೆ. ಗಣಪಯ ಶೆಟ್ರೇ ಮೊದಲಾದವರು ಮಾತಾಡಿದರು. ಶ್ರೀಗಳಾದ ಕೆ. ಕೆ. ಶೆಟ್ಟಿ, ಎಸ್. ಎಸ್. ಕಿಲ್ಲೆ ಮತ್ತು ಡಾಕ್ಟರ್ ಆಳ್ವರು ಕಾಂಗ್ರೆಸ್ ಆಡಳಿತದ ಗುಣ ದೋಷ, ಮುಂದಿನ ಚುನಾವಣೆಯ ಮಹತ್ವ ಮತ್ತು ಜನತೆಯ ಕರ್ತವ್ಯದ ಕುರಿತು ಭಾಷಣವಿತ್ತರು.

ಸಂಜೆ ೩ ಘಂಟೆಗೆ ಮೂಲ್ಕಿ ಬಿಲ್ಲವ ಸಮಾಜ ಮಂದಿರದಲ್ಲಿ ಡಾಕ್ಟರ್ ಆಳ್ವರ ಅಧ್ಯಕ್ಷತೆಯಲ್ಲಿ ಮೂಲ್ಕಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆ ನಡೆದು, ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಮಂಡಲಿಯ ರಚನೆಯಾಯಿತು. ಅಧ್ಯಕ್ಷ: ಶ್ರೀ. ಎಮ್. ಮಹಾಬಲ ಶೆಣೈ, ಉಪಾಧ್ಯಕ್ಷ: ಡಾ। ಸಿ. ಸಿ. ಸುವರ್ಣ ಮತ್ತು ಡಾ। ಎಸ್. ಚಂದ್ರ, ಕಾರ್ಯದರ್ಶಿಗಳು: ಬಿ. ರಾಜೀವ ಭಂಡಾರಿ ಮತ್ತು ಕೆ. ದೂಮಣ್ಣ ಶೆಟ್ಟಿ, ಶ್ರೀ। ಬಿ. ರಾಜೀವ ಭಂಡಾರಿಗರೇ ಕೋಶಾಧಿಕಾರಿಗಳು. ಕಾರ್ಯಕಾರಿ ಸದಸ್ಯರು: ಶ್ರೀಗಳಾದ ಸುಂದರ ಶೆಟ್ಟಿ, ಎಸ್. ತುಕಾರಾಮ ಸುವರ್ಣ, ಕೆ ಚೆನ್ನಯ ಪೂಜಾರಿ, ಕೆ ವೆಂಕಪ್ಪ, ಸಿ. ಎಚ್. ತಿಮ್ಮಪ್ಪ, ಲಕ್ಷ್ಮಣ, ಸಂಜೀವ ನಾಯ್ಕ್, ಕೆ. ಉಗ್ಗಪ್ಪ, ಬಿ. ಸುಬ್ಬಯ ಹೆಗ್ಡೆ ಮತ್ತು ಡಿ. ಸಾಂತು ಶೆಟ್ಟಿ.

ಚುನಾವಣೆಯಾದ ಮೇಲೆ ಶ್ರೀಗಳಾದ ಡಾಕ್ಟರ್ ಆಳ್ವರು, ಎಮ್. ಬಿ. ಅಧಿಕಾರಿ, ಬಿ ಆರ್. ಕರ್ಕೇರ, ಕೆ ಕೆ. ಶೆಟ್ಟಿ ಮತ್ತು ಎಸ್. ಎಸ್. ಕಿಲ್ಲೆಯವರು ಕಾಂಗ್ರೆಸ್ ಸರಕಾರವು ಮಾಡಿದ ಕೆಲಸ, ಜನತೆಯ ಕರ್ತವ್ಯ, ಮುಂದಿನ ಚುನಾವಣೆಯ ಮಹತ್ವದ ಕುರಿತು ಮಾತಾಡಿದರು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P 34/51

1 ರಾಜಗೋಪಾಲ ಭಟ್ಟ, 2 ಅನಂತರಾಮ ಭಟ್ಟ, 3 ಜಾನಕಿ ಅಮ್ಮ -ಕೃಷ್ಣ ಭಟ್ರ ಮಕ್ಕಳು

4 ಕೃಷ್ಣವೇಣಿ ಅಮ್ಮ-ಕೃಷ್ಣ ಭಟ್ರ ವಿಧವೆ,

5 ರುಕ್ಮಿಣಿ, 6 ಶಾರದಾ, 7 ಲಲಿತಾ, -ಕೃಷ್ಣಭಟ್ರ ಪ್ರಾಯಸ್ಥ ಮಕ್ಕಳು ಬಗ್ಗೆ ಕ್ರೀಯುಬಂತರಕಳು ತಾಯಿ 4ನೇ ಅರ್ಜಿದಾರಳು-ಕೃಷ್ಣವೇಣಿ ಅಮ್ಮ

8 ಕೇಶವ ಭಟ್ಟ, 9 ಅಣ್ಣಯ್ಯ ಭಟ್ಟ, 10 ನಾಗವೇಣಿ ಅಮ್ಮ -ಅನಂತ ಭಟ್ರ ಮಕ್ಕಳು.

1—2ನೇಯವರು Bharath Cafe, Thimmancherla Post, Guntakal Junction, M. S. M. Railway ಎಂಬಲ್ಲಿಯೂ 3ನೇಯವಳು ಆವಳಗಂಡ M.P. ತಂತ್ರಿ ಎಂಬವರ ಪಟ್ಟಿಗೆ C/o Tile works Elelanka Post, Bangalore. ಎಂಬಲ್ಲಿಯೂ, 4ರಿಂದ 9ನೇ ವರೇಗಿನವರು ಉಡುಪಿ ತಾಲೂಕು ಎಲ್ಲೂರು ಗ್ರಾಮದ ಕುಂಜೂರಲ್ಲಿಯೂ, 10ನೇಯವಳು ಸದ್ರಿ ಎಲ್ಲೂರು ಗ್ರಾಮದ ಸಾಣಂತಿ ಎಂಬಲ್ಲಿ ಅವಳ ಗಂಡ ವಿಶ್ವನಾಥ ಉಡ್ಪರ ಒಟ್ಟಿನಲ್ಲಿಯೂ ಇರುತ್ತಾರೆ —ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೂ ತಿಳಿಸುವದೇನೆಂದರೆ:-

ಮೃತ ಪಟ್ಟ ಕೃಷ್ಣ ಭಟ್ರಿಗೆ Bombay Life Assurance Co., Limited, Bombay ಕಂಪೆನಿಯಿಂದ Life Policy No 35738 (Paidup) ರ ಮೇರೆಗೆ ಬರತಕ್ಕದ್ದಾಗುವ ರೂಪಾಯಿ 258-4-0ನ್ನು ವಸೂಲು ಮಾಡುವರೆ 4ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ಅರ್ಜಿದಾಖಲು ಮಾಡಿರುವದರಿಂದ ಆ ಕುರಿತು ಯಾರದಾದ್ರೂ ಆಕ್ಷೇಪಣೆಯಿರುವದಾದ್ರೆ ಸದ್ರಿ ಕೋರ್ಟಿನಲ್ಲಿ ಇದೇ ಬರುವ 29-8-51ನೇ ದಿನ ಹಗಲು ಘಂಟೆ 10ಕ್ಕೆ ಹಾಜರಾಗಿ ಕೋರ್ಟಿಗೆ ಮನವಿ ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

P. Ramachandra Rao,
Pleader for Petitioners.
KARKALA 9-8-1951

ಪಿಕಾರ್ಭಿವೃದ್ಧಿ ಕಾರ್ಯ—1951

ಇಸವಿ ಜುಲೈ ತಿಂಗಳಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ:-

3 ಫಿರ್ಕಾಗಳಲ್ಲಿಯೂ 1,73670 ಸಸಿಗಳು ನೆಡಲ್ಪಟ್ಟವು. (2) ಬಾಲ್ ಗ್ರೇಡರ್ ಸಹಾಯದಿಂದ 2½ ಎಕ್ರೆ ಜಾಗೆಯು ಸಮತಟ್ಟು ಮಾಡಲ್ಪಟ್ಟಿತ್ತು. (3) ಮೂಲ್ಕಿ ಫಿರ್ಕದಲ್ಲಿ ಒಂದು ಮಾರ್ಗದ ಕೆಲಸವು ಮುಗಿಸಲ್ಪಟ್ಟಿತ್ತು. (4) ಕುಂಟಳಿಯಲ್ಲಿ ಎರಡು ಫಲ್ಲಾಂಗು ಮತ್ತು ಮಂಜೇಶ್ವರದಲ್ಲಿ 2 ಫಲ್ಲಾಂಗು ಮಾರ್ಗದ ಕೆಲಸಗಳು ಪೂರೈಸಲ್ಪಟ್ಟಿತ್ತು. ಎರಡು ಕೇಂದ್ರಗಳಲ್ಲಿ ಹರಿಜನ ದಿನಾಚರಣೆಯು ಆಚರಿಸಲ್ಪಟ್ಟಿತ್ತು. ಮಂಗಲಾಡಿಯಲ್ಲಿ ಹರಿಜನ ಶಾಲೆಯ ವಿದ್ಯಾರ್ಥಿಗಳಿಗೆ ರೂ. 250/- ರ ಬಟ್ಟೆಗಳನ್ನು ಹಂಚಲಾಯಿತು. ಈ ಪೈಕಿ ರೂ. 100-0-0 ಮಂಜೇಶ್ವರದ ದೇವಸ್ಥಾನದವರು ದಮಾರ್ಥ ಕೊಟ್ಟಿರುತ್ತಾರೆ. 3 ರಾತ್ಲು ಉತ್ತಮ ಜಾತಿಯ ಹತ್ತಿಯ ಬೀಜಗಳನ್ನು ಪ್ರಯೋಗಾರ್ಥವಾಗಿ ನೆಡಲು ಕೊಟ್ಟದ್ದು ಮಾತ್ರವಲ್ಲ ಕಸಬು ದಾರರಿಗೆ ಪಶ್ಯಾಟಗಳನ್ನು ಒದಗಿಸಲಾಗಿದೆ.

ಹೆಗ್ಗುಂಜೆ!—ಮಾನ್ಯ ಸರಕಾರದಿಂದ ಇಲ್ಲಿಯ ಬಿ. ಬಿ. ಶಾಲೆಯಲ್ಲಿ VIನೇ ದರ್ಜೆ ತೆರೆಯಲು ಅನುಮತಿ ದೊರೆತಿರುವುದರಿಂದ ತಾ. 4-8-51ರಲ್ಲಿ ಶ್ರೀ ಮಂದಾರು ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಹಾಯರ್ ಎಲಿಮೆಂಟರಿ ಶಾಲಾ ಉದ್ಘಾಟನಾ ಸಮಾರಂಭವು ಗ್ರಾಮಸ್ಥರ ಪ್ರೋತ್ಸಾಹದಿಂದ ಜರಗಿತು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವೃವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರಿ, ಗವರ್ನ್ ವ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೇರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬೆಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ಬಸಪ್ಪ ಸಿದ್ಧಲಿಂಗಪ್ಪ ಧಾರವಾಡದವರ ರಿಜಾಪೂರ ಸಂಜುದೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಶಮಲಾ ,ಶೆಟ್ಟಿ, ಹಾವೇರಿ, ಬ್ಯಾಡಗಿ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಹಿತ್ತಾಳಿ, ತಾಮ್ರ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

ಪ್ರಾಯಸ್ಥರು (1) ನವೀನ ಚಂದ್ರ (2) ಮಧುಸೂಧನ್ ಇತರ ಇವರ ಗಾರ್ಡಿಯನ್ ನೇಮಕದ ಬಾಬಿನಲ್ಲಿ—

ವಾಸ್ತ್ಮಯಿ ಹೆಗ್ಗಡ್ತಿ, ರವಿರಾಜ ಹೆಗ್ಡೆರ ವಿಧವೆ, ಉಡುಪಿ ತಾಲೂಕು ಕೋಣ್ಣೆ ಗ್ರಾಮದ ನಿಟ್ಟೂರ ತೋಟನ್ನೆ ಎಂಬಲ್ಲಿರುವವಳು - ಅರ್ಜಿದಾರಳು.

ಮತ್ತು

ವಾದಿರಾಜ ಹೆಗ್ಡೆ, ಕೋಣ್ಣೆ ಶ್ರೀನಿವಾಸ ಹೆಗ್ಡೆರ ಮಗ, B.A.L.T., ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲ್ ಮಾಸ್ತರ, ಉಡುಪಿ ತಾಲ್ಲೂಕ ಕಲ್ಯಾಣಪುರ ಎಂಬಲ್ಲಿರುವವ—

ಪ್ರತಿವಾದಿ.

ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ:-

ಮೇಲ್ಕಾಣಿಸಿದ ಪ್ರಾಯಸ್ಥರ ಗಾರ್ಡಿಯನ್ ಶಿಪ್ ಬಾಬಿನಲ್ಲಿ ಸದ್ರಿಯವರ ತಾಯಿಯವರಾದ ಅರ್ಜಿದಾರಳು ತನ್ನನ್ನು ಗಾರ್ಡಿಯನ್ನಾಗಿ ನೇಮಿಸಬೇಕಾಗಿ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 6-9-1951ಕ್ಕೆ ತನಿಖೆಗೆ ಇಟ್ಟಿರುವುದರಿಂದ ಸದ್ರಿ ಗಾರ್ಡಿಯನ್ ನೇಮಕದ ವಿಷಯದಲ್ಲಿ ಆಕ್ಷೇಪ ಹೇಳತಕ್ಕವರು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಗಳನ್ನು ದಾಖಲು ಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸಲಾಗಿಯದೆ.

(By order)
B. B. Shetty,
Advocate for Pltf.
ಮಂಗಳೂರು, ತಾ. 6 8-1951.

ಮತದಾನ

ಲೇಖಕ: "ವಿಚಾರಿ"

ಇನ್ನು ಸ್ವಲ್ಪವೇ ದಿನಗಳಲ್ಲಿ ಮೇಲಿನ ಹೊಸ ರಿನ ಮತದಾನ ನಡೆಯತಕ್ಕದ್ದಿದೆ. ಅಂದರೆ ಹಿಂದೆ ನಡೆದು ಹೋದ ಮತದಾನ ಪದ್ಧತಿಯೇ ಬೇರೆ. ಸಾಧಾರಣವಾಗಿ ಕಂದಾಯ ತೆರತಕ್ಕವರಿಗೆ ಮಾತ್ರ ಮತದಾನ VOTING ಮಾಡುವ ಅಧಿಕಾರವಿತ್ತು. ಆದರೆ ಈಗ ನಡೆಯತಕ್ಕದ್ದು ವಯಸ್ಕ ಮತದಾನ ಪದ್ಧತಿ. ಪ್ರಾಪ್ತ ವಯಸ್ಕರಾದ ಗಂಡಸರಾಗಲೀ ಹೆಂಗಸರಾಗಲೀ ಮತದಾನ ಮಾಡುವ ಹಕ್ಕು ಉಳ್ಳವರಿರುತ್ತಾರೆ. ಎಂಬುದನ್ನು ಪ್ರಾಪ್ತವಯಸ್ಸಿನವರೆಲ್ಲರೂ ಗಮನಿಸತಕ್ಕದ್ದು.

ಈ ಕುರಿತು ಆಗಲೇ ಆಯಾಯ ಪಾರ್ಟಿಯವರು ತಮ್ಮ ಪಾರ್ಟಿಯವರಿಗೇನೇ ಮತದಾನ ಮಾಡಬೇಕಾಗಿ ಪ್ರಚಾರ ಕಾರ್ಯಕ್ಕೆ ಪ್ರಾರಂಭಿಸಿರುತ್ತಾರೆ. ಈ ಚುನಾವಣಾ ಪ್ರಚಾರವು ಅಂತಿಮ ಘಟ್ಟದಲ್ಲಿ ಸಾಮ, ದಾನ, ದಂಡ, ಭೇದಗಳೆಂಬ ಚತುರೋಪಾಯಗಳಿಂದ ಮತದಾರರನ್ನು ತಮ್ಮ ಬಳಿಗೆ ಹಾಕಿಕೊಳ್ಳುವರೆ ಪ್ರಯತ್ನಿಸಬಹುದು. ಅಂದರೆ ಇದರಲ್ಲಿ ಎರಡನೇಯದಾದ ದಾನ ಪದ್ಧತಿ. ತಾವು ಚುನಾವಣೆಯಲ್ಲಿ ಜಯಶೀಲರಾದರೆ ನಿಮಗೆ ಅನೇಕ ತರದ ಸವಲತ್ತುಗಳನ್ನು ಒದಗಿಸಿಕೊಡುತ್ತೇನೆ ಎಂಬ ಭರವಸೆಯನ್ನು ಹೇಳಬಹುದು. ಮತದಾರರು ಸವಿಮಾತುಗಳಿಗೆ ಮರುಳಾಗದೆ ನ್ಯಾಯವಾದ ರೀತಿಯಿಂದ ಪ್ರಜೆಗಳ ಹಿತವನ್ನು ಲಕ್ಷಿಸತಕ್ಕ ವ್ಯಕ್ತಿಗಳು ಯಾರು? ಎಂಬುದನ್ನು ಸರಿಯಾಗಿ ತಿಳಿದುಕೊಂಡೇ ಮತದಾನ ಮಾಡತಕ್ಕದು. ಪ್ರಚಾರದ ಸೋಗಿಗೆ ಮರುಳಾಗಿ ತಮ್ಮ ಹಕ್ಕು ಬಾಧ್ಯತೆಯನ್ನು ಪೋಲುಮಾಡಿಕೊಳ್ಳಬಾರದು.

ಪಾಶ್ಚಾತ್ಯ ದೇಶಗಳಲ್ಲಿ ಈ ಮತದಾನ ಪದ್ಧತಿಯು ಸುಗಮವಾಗಿ ನಡೆದು ದೇಶದ ಅಭ್ಯುದಯಕ್ಕೆ ಕಾರಣರಾದ ವ್ಯಕ್ತಿಗಳೇ ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಕಾರಣ ಆ ದೇಶಗಳಲ್ಲಿ ನೂರಕ್ಕೆ ತೊಂಭತ್ತೊಂಭತ್ತು ಮಂದಿ ವಿದ್ಯಾವಂತರಿರುತ್ತಾರೆ. ಅವರಿಗೆ ಮತದಾನ ಎಂದರೇನು? ಮತದ VOTE ನ ಬೆಲೆಯೇನು? ಎಂಬುದು ಸರಿಯಾಗಿ ತಿಳಿದಿರುತ್ತದೆ... ಅಂತೆಯೇ ಅವರು ತಮ್ಮ ಕುಂದು ಕೊರತೆಗಳನ್ನು ಪರಿಹರಿಸಲು ಸಹಾಯ ಮಾಡತಕ್ಕ ಪ್ರತಿಭಾಶಾಲಿ ವ್ಯಕ್ತಿಗಳಿಗೇ ತಮ್ಮ ಮತದಾನವನ್ನು ಮಾಡುತ್ತಾರೆ. ಚತುರೋಪಾಯಗಳಿಗೆ ಬಲಿಯಾಗಿ ತಮ್ಮ ಮತದಾನವನ್ನು ಪೋಲು ಮಾಡುವುದಿಲ್ಲ.

ಆದರೆ ನಮ್ಮ ಹಿಂದುಸ್ಥಾನದಲ್ಲಿ ನೂರಕ್ಕೆ ತೊಂಭತ್ತು ಜನರು ಅವಿದ್ಯಾವಂತರಿರುತ್ತಾರೆ. ಇವರಿಗೆ ಮತದಾನವೆಂದರೇನು? VOTEನ ಕಿಮ್ಮತು ಏನು ಎಂಬುನ್ನು ಗೊತ್ತಿರುವುದಿಲ್ಲ. ಚುನಾವಣೆಗೆ ನಿಲ್ಲತಕ್ಕವರು ಈ ತೆರದಲ್ಲಿರುವ ನಿರಕ್ಷರ ಕುಕ್ಷಿಗಳಿಂದ ಸುಲಭವಾಗಿ ಚತುರೋಪಾಯಗಳನ್ನು ಪ್ರಯೋಗಿಸಿ ತಮ್ಮ ಬಲೆಗೆ ಹಾಕಿಕೊಳ್ಳಬಹುದು. ಜನರು ತಮ್ಮಲ್ಲಿರುವ ವಿದ್ಯಾವಂತರ ಮೂಲಕವಾದರೂ ಸರಿಯಾಗಿ ಮತದಾನದ ವಿಚಾರ ತಿಳಿದು ಮತದಾನ ಮಾಡತಕ್ಕದ್ದು. ಇದನ್ನು ಬಿಟ್ಟು ಸೋಗಿಗೆ ಮರುಳಾಗಿ ಅಗ್ನಿ ಭಕ್ಷರುಗಳಿಗೆ ತಮ್ಮ ಮತದಾನವನ್ನು ಮಾಡಿದರೆ ತಮ್ಮ ಆತ್ಮಹತ್ಯೆಯನ್ನೆ ಮಾಡಿಕೊಂಡಂತಾದೀತು. ಇದಕ್ಕೆ ಸಂಶಯವಿಲ್ಲ.

ಈ ಸಲದ ಬೃಹತ್ ಚುನಾವಣೆಯಲ್ಲಿ ಜಯಶೀಲರಾದವರಿಂದ ಮಂತ್ರಿಮಂಡಲ ರಚನೆ ಆಗತಕ್ಕದ್ದಿದೆ. ಅವರಿಂದಲೇ ನಮ್ಮೆಲ್ಲರ ಉಳಿವು ಯಾ ಅಳಿವು ನಿರ್ಣಯಿಸಲ್ಪಡುತ್ತದೆ!

ಆದ್ದರಿಂದ ಮತದಾರರೆಲ್ಲರೂ ಈ ವಿಚಾರವನ್ನು ಬಲ್ಲವರಿಂದ ತಿಳಿದು ಬಹುಜನರ ಪರವಾಗಿ ಸರಕಾರದಲ್ಲಿ ಹೋರಾಡಿ ನ್ಯಾಯ ದೊರಕುವಂತೆ ಮಾಡುವ ನಿರಾಡಂಭರ ವ್ಯಕ್ತಿಗಳಿಗೇನೇ ತಮ್ಮ ಮತದಾನವನ್ನು ಮಾಡತಕ್ಕದ್ದು. ಅಂತೆಯೇ ಅಕ್ಷರಸ್ಥರು. ವಿದ್ಯಾವಂತರಾದ ಮತದಾರರು ಈ ವಿಚಾರವನ್ನು ನೋ ತಿಳಿಯದ ನಿರಕ್ಷರ ಕುಕ್ಷಿಗಳಿಗೆ ಇದರ ವಿಚಾರವನ್ನು ಅವರಿಗೆ ಸರಿಯಾಗಿ ತಿಳಿಯಪಡಿಸಿ ತಮ್ಮ ದೇಶದ ಏಳಿಗೆಗೆ ಪ್ರತಿಒಬ್ಬನೂ ಶ್ರಮಿಸಬೇಕಾದದ್ದು, ಪವಿತ್ರ ಕರ್ತವ್ಯವಿರುತ್ತದೆ. ಇದನ್ನು ಬಿಟ್ಟು ಹಾದಂಣನೆಂಬವರಿಗೆ ದಾಕ್ಷಿಣ್ಯಕ್ಕೆ ಒಳಗಾಗಿ ಕುರಿಗಳಂತೆ ವರ್ತಿಸಿದರೆ ಮುಂದೆ ಸ್ವಾರ್ಥಪರ ಮುಂದಾಳುಗಳ ಕೈಗೆ ರಾಜ್ಯಾಡಳಿತವು ಬಂದರೆ, ಪ್ರತಿಒಬ್ಬ ಮಧ್ಯಮ ಕೆಳಗಿನ ಮತ್ತು ಸಾಮಾನ್ಯ ಸ್ಥಿತಿಗತಿಯ ಜನರು ಪಡಲಾರದ ಕಷ್ಟಪಡಬೇಕಾದೀತು, ಎಂಬುದನ್ನು ಗಮನದಲ್ಲಿಡತಕ್ಕದ್ದು.

ಜಯಹಿಂದ್......!

ರಸನಿಮಿಷಗಳು

"ಭಾರತ ಪಾಕಿಸ್ತಾನಗಳೊಳಗೆ ಭಯಂಕರವಾದ ಯುದ್ಧ ನಡೆಯಲಿದೆ"

—ಇಂಗ್ಲೆಂಡದ ಪತ್ರಿಕೆ.

—ಭಾರತ ಪಾಕಿಸ್ತಾನಗಳೊಳಗೆ ಭಯಂಕರ ವಾದಯುದ್ಧ ನಡೆಯುತ್ತಲಿದೆ.

—ನಮ್ಮ ಕಂಪಾಜಿಟರುಗಳು.

oo oo

"ಸದ್ಯ ಕಾಂಗ್ರೆಸ್ ಮಂತ್ರಿಗಳು ಕೈಗೊಳ್ಳುತ್ತಿರುವ ಸಂಚಾರಗಳು ದೇಶದ ಹಿತಚಿಂತನೆಯ ಬಗ್ಗೆ ಗಿರದೆ ಮುಂಬರುವ ಚುನಾವಣೆಯ ಪ್ರಚಾರದೃಷ್ಟಿಯೇ ಮುಖ್ಯವಾಗಿದೆ" —ವಿರೋಧಿ ಪಕ್ಷದವರು.

—ಶುದ್ಧ ಸುಳ್ಳು! "ಮಂತ್ರಿಗಳು ಖಾಸಗೀ ಸಂಚಾರಕ್ಕೆಗೊಂಡರೆ ಚಿತ್ರಸಿಗಲಾರದೆಂ"ದು ಕಾಯಿದೆಯಾದಂದಿನಿಂದ ಈ ಕಾಯಿದೆ ಬದ್ಧ ಕಾರ್ಯಕ್ರಮಗಳನ್ನು ಹೆಚ್ಚಿಸುತ್ತ ಬಂದಿದ್ದಾರೆ. ಇದರಲ್ಲಿ ಚುನಾವಣೆ ಅಥವಾ ಪಕ್ಷ ಬರ್ತಿ ವಿಚಾರವಿದೆಯೆಂಬ ಅಪವಾದವನ್ನು ನಾವವರ ಮೇಲೆ ಹೊರಿಸಲಾರೆವು.

oo oo

"ಪಾಕಿಸ್ತಾನ ಎತ್ತಿದ ಭದ್ರ ಮುಷ್ಟಿಗೆ ವಿರುದ್ಧವಾಗಿ ನಮ್ಮದು ಅಶೋಕಚಕ್ರ!"

—ಭಾರತದ ಪ್ರಧಾನಿ ನೆಹ್ರೂ.

—ಗುಲ್ಲುಹೋಗಿ ಗುದ್ದಿಗಾರಂಭವಾಗುವಾಗ ಅದು ಸುದರ್ಶನಚಕ್ರವಾದೀತೇನೋ!

oo oo

"ಕಾಂಗ್ರೆಸ್ಸಿನಲ್ಲಿ ವಿಜಾತಿ-ಸ್ವಜಾತಿ ಎಂಬ ಜಾತೀಯತೆಯನ್ನು ಕಲ್ಪಿಸಬಾರದು"

—ಕಾಂಗ್ರೆಸ್ ಕಾರ್ಯಕರ್ತರಿಬ್ಬರು.

—ಹೌದು! ಆದಕ್ಕೆಂತಲೆ ವಿದೇಶೀ-ಪಿಚಾತೀಯತೆಯ ವಿಚಾರಗಳನ್ನು ಹಿಂದಿನಿಂದಲೂ ನಿಷೇಧಿಸುತ್ತ ಬಂದಿರುವದು!

oo oo

"ಪೋಲೋ ಪಂದ್ಯಾಟದಲ್ಲಿ ಗೆದ್ದ ನ್ಯಾಲೇಸರಿಗೆ ಕುಮಾರಿ ರಾಜಕುಮಾರಿ ಮಾರ್ಗರೆಟಳು ಟ್ರೋಫಿಯನ್ನರ್ಪಿಸಿದ್ದು ಮಾತ್ರವಲ್ಲದೆ ಪೋಲೋ ಚತುರರಾದ ನ್ಯಾಲೇಸರನ್ನೇ ಮದುವೆಯಾಗುವವಳಿದ್ದಾಳೆ"

—ರೆನಾಲ್ಡ್ಸ್ ನ್ಯೂಜ್.

—ಪೋಲೋ ಮಾಡಿಕೊಂಡು ಹೋಗುವವರಿಗೊಂದು ಉತ್ತಮಾದರ್ಶವಿದು! ಪೋಲೋವಾಲರಿಗೆ ನಾವು ಇಂಗ್ಲಂಡಿನಲ್ಲಾದರೂ ಹುಟ್ಟುತ್ತಿದ್ದರೆ... ಎಂದು ಪಶ್ಚಾತ್ತಾಪವಾಗಿರಲೂ ಬಹುದು!

oo oo

"ಆಲ್ ಇಂಡಿಯಾ ರೇಡಿಯೋವನ್ನು (A. I. R) 'ಆಕಾಶವಾಣಿ'ಯೆಂದು ಹೆಸರಿಸಲಾಗುವದು"

—ಸರಕಾರೀ ಪ್ರಕಟಣೆ.

—ನ್ಯಾಯವೇ; ನಾಲ್ಕು ವರ್ಷಗಳಿಂದ ಆಕಾಶ ಗೋಪುರವನ್ನೇನೋ ಕಟ್ಟಿದ್ದೇವೆ. ಇನ್ನು ಆಕಾಶವಾಣಿಯನ್ನೂ ಕೇಳುವಂತಾಯ್ತಲ್ಲಾ!

oo oo

"ಮಹಾತ್ಮಾಗಾಂಧೀಜಿಯವರು ನಮ್ಮನ್ನಗಲಿ ಹೋಗಿರುವುದಾದರೂ ಅವರ ದಿವ್ಯ ಶಕ್ತಿ ನಮ್ಮ ಹತ್ತಿರದಲ್ಲೇ ಇದ್ದು ನಮಗೆ ಮಾರ್ಗದರ್ಶನ ಮಾಡುತ್ತಲಿದೆ. ಅವರು ನಮ್ಮ ಸಂಗಡಲೇ ಇದ್ದಾರೆ"—ಮಂತ್ರಿಗಳ ಭಾಷಣ.

—ಫೋಟೋಗಳಲ್ಲೂ, ಕ್ಯಾಲಂಡರುಗಳಲ್ಲೂ, ವ್ಯಾಪಾರೀ ಸಂಕೇತವಸ್ತುಗಳಲ್ಲೂ ಈಗಲೂ ಹೇಗೆ ರಾರಾಜಿಸುತ್ತಾರೆ!

oo oo

"ಸಾರ್ವಜನಿಕರಿಗೆ ಉಪಯೋಗವಾಗುವಂತೆ ದಿಲ್ಲಿಯಲ್ಲೆರಡು ಸಂಚಾರೀ ಉಪಹಾರ ವಾಹನವನ್ನು ಮಹಿಳೆಯರು ಆರಂಭಿಸಿದ್ದಾರೆ" —ದಿಲ್ಲಿಯ ಸುದ್ದಿ.

—ಇದರಲ್ಲೇನು ಮಹಾ? ಉಡುಪಿಯಲ್ಲಿ ಈ ಬಗೆಯ ಸಂಚಾರೀ ಪಾನೀಯ ಕ್ರಮ ಎಂದೋ ಆರಂಭವಾಗಿದೆ. ಈಗಲೂ ಕಾರುಗಳಲ್ಲಿ ಸೋಡಾ ಬಾಟ್ಲಿ...ಮುಂತಾದ ಪಾನೀಯಗಳು ಸಂಚಾರೀ ಕ್ರಮದಿಂದಲೇ ಸರಾಗವಾಗಿ ನಡೆಯುತ್ತಲಿವೆ.

oo oo

"ನಿಜವಾಗಿಯೂ ಕಾಂಗ್ರೆಸ್ ಸರಕಾರವಲ್ಲದಿರುತಿದ್ದರೆ ನಾವಿಂದು ಇಷ್ಟರಮಟ್ಟಿನ ಜೀವನವನ್ನಾದರೂ ನಡೆಸಲು ಸಾಧ್ಯವಿರುತ್ತಿರಲಿಲ್ಲ. ಇಂತಹ ಮಹಾಸಂಸ್ಥೆಯಿಂದಲೇ ದೇಶಕ್ಕೆ ಕಲ್ಯಾಣವೆಂಬುದನ್ನು ನಾನು ಕಂಠೋಕ್ತವಾಗಿ ಹೇಳುತ್ತೇನೆ"

—ಭಾವಾವೇಶ ಭಾಷಣ!

—ದೇಶದಲ್ಲಿ ಒಬ್ಬಿಬ್ಬರಾದರೂ ಒಳ್ಳೆಯವರಿದ್ದಾರಲ್ಲಾ!

oo oo

"ಕೊಂಗ್ರೆಸು...ಕೊಂಗ್ರೆಸ್ಸು...ಕೊಂಗ್ರೆಸ್ಸಿಗರು ಇದನ್ನು ಸಾಧಿಸಿದ್ದಾರೆ...ಇದು ಹೀಗಾದುದರಿಂದಲೇ ಇಂದು ನಾವು...ಇದಾಗಿದ್ದೇವೆ. ಎಲ್ಲರೂ ಇದನ್ನು ಸ್ವಲ್ಪ......ಇದು ಮಾಡಿಕೊಳ್ಳಬೇಕು......"

—ಆಗಸ್ಟ್ 15ರ ಅಮೂಲ್ಯ ಭಾಷಣ.

—ಇದು ನಿಜವಾಗಿಯೂ ಅರ್ಥಗರ್ಭಿತ ಭಾಷಣ.

—ಎಸ್ಸೆಲ್

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ.

O. S. No. 59/1951

ಅಕ್ಕಮ್ಮ ಶೆಡ್ತಿ ಕೂಡಾ. —ವಾದಿರು

ಮತ್ತು

ಶೇಷಯ ಹೆಗ್ಗಡ್ತಿ ಕೂಡಾ. —ಪ್ರತಿವಾದಿರು

ಪತ್ರಿ ವ್ಯಾಜ್ಯದ. 8ನೇ ಪ್ರತಿವಾದಿ ಶಂಕರ ಹೆಗ್ಡೆ, ಶೇಷಯ ಹೆಗ್ಗಡ್ತಿರ ಮಗ, ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ ಎಂಬಲ್ಲಿರುವವ,

15ನೇ ಪ್ರತಿವಾದಿ ರಘುನಾಥ ಹೆಗ್ಡೆ M. A. L. T; ಟೀಚರ್, 16ನೇ ಪ್ರತಿವಾದಿ H. T. ಆನಂದ ಹೆಗ್ಡೆ, ಇನ್ಶ್ಯೂರೆನ್ಸ್ ಏಜಂಟ್, -ಪದ್ದಕ್ಕ ಹೆಗ್ಗಡ್ತಿರ ಮಕ್ಕಳು. ಉಡ್ಪಿ ತಾಲ್ಲೂಕು ಪರ್ಕಳ ಸವಿನಾಶ ಮಹಲು ಎಂಬಲ್ಲಿರುವವರು,

ಇವರಿಗೆ

ಈ ಮಾಲಿಕ ತಿಳಿಸುವುದೇನೆಂದರೆ:

ಮೇಲೆ ಹೆಸರು ಕಾಣಿಸಿದ ವಾದಿರು ನಿಮ್ಮ ಇಡೀ ಕುಟುಂಬದ ಸ್ಥಿರಾಸ್ತಿ ವಿಭಾಗ ವಗೈರೆ ನಿವೃತ್ತಿಗಳನ್ನು ಅಪೇಕ್ಷಿಸಿ ದಾಖಲು ಮಾಡಿದ ಪಡಿ, ನಾವೆಯು ಈ ಕೋರ್ಟಿನಲ್ಲಿ ತಾರೀಕು 8-9-1951ಕ್ಕೆ ಪಸ್ಕಿಗೆ ಬಿಟ್ಟಿರುವದರಿಂದ ನೀವು ಸದ್ರಿ ತಾರೀಕಿನಲ್ಲು ಪೂರ್ವಾಹ್ನ 11 ಘಂಟೆಗೆ ಖುದ್ದಿನಿಂದಾಗಲೀ ವಕೀಲದ್ವಾರವಾಗಲೀ ತಪ್ಪದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹಾಜರಿಪಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮನ್ನು ಎಕ್ಸಪಾರ್ಟಿಯಾಗಿರಿಸಿ ವಾದಿರ ದಾವೆ ತೀರ್ಮಾನಿಸಲಾದೀತೆಂತ ತಿಳಿದಿರುವದು.

B. B. Shetty

Advocate for Pleffs.

ಮಂಗಳೂರು ತಾ. 6-8-1951

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವಿತಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು, (ದ. ಕ.)

ಪ್ರವಾಸಿಯ ಪತ್ರಗಳು ೧೧

(ಕಳೆದ ಸಂಚಿಕೆಯಿಂದ ಮುಂದರಿದುದು)

ಎರಡನೇ ಸಾರಿ ಮೇ 1ಕ್ಕೆ ಸಾಯಂಕಾಲ 7½ಗಂಟೆಯಿಂದ ರಾತ್ರಿ 10½ಗಂಟೆಯ ವರೆಗೆ ಕಾಮನ್ಸ್ ಸಭೆಯ ಚರ್ಚೆಯನ್ನು ಕೇಳಿದೆ. ಆ ದಿವಸದ ಚರ್ಚೆಯು ಇನ್ನೂ ಹೆಚ್ಚಿನ ಕುತೂಹಲವಾಗಿತ್ತು. ಯುದ್ಧ ತಯಾರಿಕೆ ಬಗ್ಗೆ ಬೇಕಾದಷ್ಟು ಕೆಲಸವನ್ನು ಸರಕಾರವು ಕೈಕೊಳ್ಳಲಿಲ್ಲ ಎಂತ ಟೋರಿ ಪಕ್ಷದವರು ತಂದ ಠರಾವು. ಆ ದಿನ ಈ ಠರಾವನ್ನು ಬಹುಮತದಿಂದ ಮಂಜೂರು ಮಾಡಿಸಿ ಲೇಬರ್ ಸರಕಾರವನ್ನು ಅಪಜಯಿಸಬೇಕೆಂಬುದೇ ಈ ಟೋರಿ ಪಕ್ಷದವರ ಸ್ಪಷ್ಟ ಉದ್ದೇಶ. ಚರ್ಚೆಯು ಶುರುವಾಗುವಾಗ ಟೋರಿ ಪಕ್ಷದ ಬೆಂಚುಗಳಲ್ಲಿ ಸುಮಾರು 30 ಸದಸ್ಯರಿದ್ದರು, ಲೇಬರ್ ಪಕ್ಷದ ಬೆಂಚುಗಳಲ್ಲಿ ಕೇವಲ 15, 20 ಜನರಿದ್ದರು. ಅನಂತರ ಎಡೆಬಿಡದೆ ಎರಡೂ ಪಕ್ಷದವರಿಗೆ ಈ ಠರಾವಿನ ಮೇಲೆ ವಾದ ಪ್ರತಿವಾದಗಳು ನಡೆದು ಅನೇಕ ಭಾಷಣಗಳಾಗುವಾಗ ಮೆಲ್ಲಮೆಲ್ಲನೇ ಟೋರಿ ಪಕ್ಷದ ಸದಸ್ಯರು ನೂರಾರು ಮಂದಿ ಬಂದು ಸ್ಥಳಗಳು ತುಂಬಿದವು. ಆದರೆ ಲೇಬರ್ ಬೆಂಚುಗಳಲ್ಲಿ ಅನೇಕರು ಬಂದರೂ ಟೋರಿ ಪಕ್ಷದವರಷ್ಟು ಸಂಖ್ಯೆಯು ಅಲ್ಲಿ ಕಾಣಲಿಲ್ಲ. ನಾನು ಯಾವ ಪಕ್ಷಕ್ಕೆ ಸೇರಿದವನಲ್ಲವಾದರೂ ಚರ್ಚೆಯು ಮುಂದೊತ್ತುವಾಗ, ಲೇಬರ್ ಪಕ್ಷದ ಮೇಲೆ ಸಹೋದರ ಭಾವವು ತನ್ನಂತೆಯೇ ನನ್ನಲ್ಲಿ ಹುಟ್ಟಿ ಲೇಬರ್ ಸರಕಾರವು ಸೋತು ಹೋಗುತ್ತದಲ್ಲಾ ಎಂಬ ಒಂದು ಚಿಂತೆ ನನ್ನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಹಾಗೆ ರಾತ್ರಿ 10½ ಗಂಟೆಗೆ ಸರಿಯಾಗಿ ಓಟ್ಸ್ ತೆಗೆಯಲಾಯಿತು. ಆದರೆ ಮದರಾಸಿನ ಸಭೆಯಂತೆ ಮೆಂಬರರು ಅವರವರ ಸ್ಥಾನದಲ್ಲಿ ಎದ್ದು ನಿಂತುಕೊಂಡು ಓಟು ತೆಗೆಯುವ ಕ್ರಮವು ಇಲ್ಲಿ ಅಲ್ಲ. ಓಟು ತೆಗೆಯುವಾಗ ವಿರುದ್ಧ ಅಭಿಪ್ರಾಯದ ಸದಸ್ಯರು ಸಭಾಂಗಣದ ಎಡಬಲಕ್ಕಿರುವ ಉದ್ದವಾದ 2 ಕೋಣೆಗಳಿಗೆ ಹೋಗಿ (lobbies) ಅಲ್ಲಿ ತಮ್ಮ ತಮ್ಮ ಮತಗಳನ್ನು ಕೊಡುವಂಥದ್ದು. ಠರಾವಿಗೆ ಅನುಮತವಿದ್ದವರು ಒಂದು ಕೋಣೆಗೆ ಅದಕ್ಕೆ ವಿರೋಧವಿರುವವರು ಇನ್ನೊಂದು ಕೋಣೆಗೆ ಹಾಗೆ ಮತ ತೆಗೆದು, ಸಭಾಂಗಣಕ್ಕೆ ಪುನಃ ಎಲ್ಲರೂ ಬಂದು ಸಿಕ್ಕಿದ ಓಟಿನ ಫಲವನ್ನು ತಿಳಿಸಿದರು. ನನ್ನ ಈಗಿನ ನೆನಪಿನ ಮಟ್ಟಿಗೆ 192 ಓಟು ಟೋರಿ ಪಕ್ಷದವರಿಗೂ, 205 ಓಟು ಲೇಬರ್ ಪಕ್ಷದವರಿಗೂ ಸಿಕ್ಕಿ ಸರಕಾರವೇ ಗೆದ್ದಿತು. ಆಗ ನನಗೂ ಕೂಡ ಸಂತೋಷವಾಯಿತು. ಮೊದಲೆ ಸಭೆಯಲ್ಲಿದ್ದ ಅನೇಕ ಲೇಬರ್ ಪಕ್ಷದ ಮೆಂಬರರು ಓಟು ತೆಗೆಯುವ ಗಂಟೆ ಹೊಡೆದ ಕೂಡಲೇ ಓಟು ತೆಗೆಯುವ ಕೋಣೆಗೆ ಬಂದು ಓಟು ಕೊಟ್ಟದ್ದೇ ಈ ವ್ಯತ್ಯಾಸಕ್ಕೆ ಕಾರಣ. ಇದು ಮುಗಿದ ನಂತರ ಅನೇಕ ಮೆಂಬರರು ತಮ್ಮ ತಮ್ಮ ಮನೆಗೆ ಹೊರಟು ಹೋದರು. ಆದರೆ ಸಭೆಯು ಇನ್ನೂ ½ ಗಂಟೆ ನಡೆಯಿತು. ದೇಶದಲ್ಲಿ ಜನರು ಕಾಡಾಚೆಟ್ಟ ಮರಗಳನ್ನು ಕಡಿಯುವುದರಿಂದ ಕಾಡುಗಳು ಕಡಿಮೆಯಾಗಿ ಊರು ಹಾಳಾಗುತ್ತದೆ, ಸರಕಾರದವರು ಇದನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕೆಂತ ಟೋರಿ ಪಕ್ಷದ ಒಬ್ಬ ಸದಸ್ಯನು ತಂದ ಠರಾವು ಚರ್ಚಿಸಲಾಯಿತು.

ನಮ್ಮ ದೇಶದಲ್ಲಿ ಕೂಡ, ಆಗಾಗ ನ್ಯಾಯ ಸಭೆಗಳಲ್ಲಿ ಇಂಥಾ ಚರ್ಚೆ ನಡೆಯುವುದು. ಈ ಠರಾವಿಗೆ ನಮ್ಮ ಮಂತ್ರಿಗಳಂತೇ ಕಾಮನ್ಸ್ ಸಭೆಯಲ್ಲಿ ಕೂಡಾ ಅರಣ್ಯ ಖಾತೆಗೆ ಸಂಬಂಧಪಟ್ಟ ಪಾರ್ಲಿಮೆಂಟರಿ ಕಾರ್ಯದರ್ಶಿಯು, ಜನರು ಹಾಗೆ ಮಾಡುವುದು ನಿಜವೆಂತಲೂ, ಅದನ್ನು ನಿಲ್ಲಿಸುವರೆ ಸರಕಾರವು ಸಾಧ್ಯವಿದ್ದಷ್ಟು ಕೆಲಸವನ್ನು ಮಾಡುತ್ತದೆ ಎಂತಲೂ ಆಶ್ವಾಸನೆಯನ್ನು ಕೊಟ್ಟು, ನಮ್ಮ ಮಂತ್ರಿಗಳಂತೆಯೇ ಮಾಮೂಲು ಭಾಷಣವನ್ನು ಮಾಡಿದನು. ಹೀಗೆ ರಾತ್ರಿ 10-45 ಗಂಟೆಗೆ ಸಭೆಯು ಮುಕ್ತಾಯವಾಯಿತು. ಹಾಗೆ ಸಭೆ ಮುಗಿದು ಮನೆಗೆ ಹೋಗುವಾಗ ಸಭಾ ನೌಕರರು ಈ ಕೆಳಗಿನಂತೆ ಕೂಗುವರು:—"ಮನೆಗೆ ಹೋಗುವವರು ಯಾರು? ಮನೆಗೆ ಹೋಗುವವರು ಯಾರು? ನಾಳೆಗೆ ಎಂದಿನಂತೆ ಸಮಯ!" ಎಂದು. ಇದು ಬ್ರಿಟಿಷ್ ಜನರ ಒಂದು ಗುಣ ತೋರಿಸುತ್ತದೆ. ನೂರಾರು ವರ್ಷಗಳ ಹಿಂದೆ ಲಂಡನ್ ಪಟ್ಟಣದಲ್ಲಿ ಕಳ್ಳರ ಹೆದರಿಕೆ ಜಾಸ್ತಿ ಇತ್ತು. ಆಗ ಮಧ್ಯರಾತ್ರಿಯಲ್ಲಿ ಕಾಮನ್ಸ್ ಸಭಾಸದಸ್ಯರು ಮನೆಗೆ ಹೋಗುವಾಗ ಆ ಭಯಕ್ಕೆ ಗುಂಪು ಗುಂಪಾಗಿ ಹೋಗುತ್ತಿದ್ದರು. ಆದರೆ ಈಗ ಅಂಥಾ ಭಯ ಎಷ್ಟಾದರೂ ಇಲ್ಲವಾದರೂ ಇವತ್ತು ಕೂಡಾ ಆ ಕರೆಯನ್ನೇ ಹೇಳುತ್ತಾರೆ. ಇದೇ ರೀತಿ ಇನ್ನೂ ಅನೇಕ ವಿಷಯಗಳಲ್ಲಿ ಕೂಡಾ ಅವರು ಪುರಾತನದ ನಡಾವಳಿಗಳನ್ನು ಸುಲಭದಲ್ಲಿ ಬಿಡದೆ ಬಿಗಿಯಾಗಿ ಹಿಡಿದಿರುವರು. ನಾವು ಹಾಗಲ್ಲ, ವರ್ಷ ವರ್ಷ ಬದಲಿಸುತ್ತೇವೆ. ಒಂದೊಂದು ಆಕ್ಟಿಗೆ ವರ್ಷ ವರ್ಷವೂ ತಿದ್ದುಪಡಿ ಮಾಡುತ್ತೇವೆ. ಅದೇಕೆ? ಘಟನೆಯಲ್ಲಿ ಕೂಡಾ ತಿಂಗಳು ತಿಂಗಳು ಬದಲಾವಣೆ. ನಿನ್ನೆ ನಟ್ಟ ಗಿಡ ಇವತ್ತು ಕಿತ್ತು ಬೇರೆ ನೆಡುವುದು ಇದರಿಂದ ಬೇರೂರುವುದು ಎಲ್ಲಿ?

ಮೂರನೇ ಸಲ ಮೇ 3ನೇ ತಾರೀಕಿಗೆ ಸಭೆಗೆ ಹೋದೆ. ಅಂದು ಸಭೆ ಶುರು ಆಗುವ ಗಂಟೆ 2-30ರಿಂದ 5 ಗಂಟೆ ವರೆಗೆ ಸಭೆಯು ಸೇರಿದಾಗ ಎಲ್ಲರೂ ಎದ್ದು ನಿಂತು ದೇವರ ಪ್ರಾರ್ಥನೆಯನ್ನು ಮಾಡಿದರು. ಅದರ ತಾತ್ಪರ್ಯ ಹೀಗೆ:—"ಸರ್ವಶಕ್ತಿಯುಳ್ಳ ದೇವರೇ, ನಿನ್ನ ಕೆಲಸಗಾರರಾದ ನಾವು ನಿನ್ನ ಹೆಸರಿನಲ್ಲಿ ಇಲ್ಲಿ ನಮ್ಮ ಕೆಲಸವನ್ನು ಮಾಡುವೆವು. ನಿನ್ನ ಹೆದರಿಕೆಯು ನಮ್ಮ ಹೃದಯದಲ್ಲಿ ಯಾವಾಗಲೂ ಇದ್ದು ನಮ್ಮ ನಮ್ಮ ಸ್ವಾರ್ಥ, ದ್ವೇಷ ವಗೈರೆ ಕೆಟ್ಟ ವ್ಯಸನಗಳನ್ನು ಮರೆತು ಬಿಟ್ಟು ನಿನ್ನ ಹೆಸರಿನಲ್ಲಿ ನ್ಯಾಯಕ್ಕೂ ಧರ್ಮಕ್ಕೂ ಸರಿಯಾಗಿ ಮತ್ತು ಸರ್ವ ಜನರ ಹಿತಕ್ಕಾಗಿ ನಾವು ಈ ಸಭೆಯಲ್ಲಿ ಕೆಲಸಮಾಡುವಂತೆ ಹರಸು." ಪ್ರಾರ್ಥನೆಯಾದ ಬಳಿಕ ಸವಾಲು ಉತ್ತರ ಒಂದು ಗಂಟೆ ಸಮಯ ನಡೆಯುವುದು. ಅಧ್ಯಕ್ಷರು (Speaker) ಯಾರ ಹೆಸರಿನಲ್ಲಿ ಸವಾಲು ಇದೆಯೋ ಅವರ ಹೆಸರನ್ನು ಗಟ್ಟಿಯಾಗಿ ಕರೆಯುವರು. ಆಗ ಆ ಸದಸ್ಯನು ಎದ್ದು ನಿಂತು ಸವಾಲಿನ ನಂಬ್ರವನ್ನು ಉಚ್ಚರಿಸಿ ಹೇಳುವನು. ಆಗ ಸಂಬಂಧಪಟ್ಟ ಮಂತ್ರಿಯೂ ಬರೆದು ತಂದ ಉತ್ತರವನ್ನು ಓದುವನು. ನಂತರ ಸಾಧಾರಣವಾಗಿ ಒಂದೊಂದು ಸವಾಲಿನ ಮೇಲೆ 2, 3 ಉಪಸವಾಲುಗಳನ್ನು ಸದಸ್ಯರು ಕೇಳುವರು, ಹಾಗೆ ಕೇಳಿದೊಡನೆಯೇ ನಂತರದ ಸವಾಲು ಬರುತ್ತದೆ. ಹೀಗೆ ಒಂದರ ಮೇಲೊಂದು ಸವಾಲುಗಳು ಬಹು ಶೀಘ್ರವಾಗಿ ನಡೆದು ಅಲ್ಲಿ ನಾನು ಹಾಜರಿದ್ದ ದಿನದಲ್ಲಿ, ಆ ದಿವಸ ಸಲುವಾಗಿ ಛಾಪಿಸಿದ 81 ಸವಾಲುಗಳಲ್ಲಿ 65 ಸವಾಲುಗಳು ಮುಗಿದವು. ನಮ್ಮ ಮದ್ರಾಸಿನ ಸಭೆಗೂ, ಅಲ್ಲಿ ನಡೆದುದಕ್ಕೂ ನನಗೆ ಕಂಡ ಭೇದವೇನೆಂದರೆ ಇಲ್ಲಿ ಇಡೀ ಗಂಟೆಗೆ 10, 15 ಸವಾಲುಗಳು ನಡೆಯುವುದು. ಕಷ್ಟ. ಒಂದೊಂದು ಸವಾಲು ಕೆಲವು ಕಾಲ 10 ಮಿನಿಟುವರೆಗೂ ನಡೆಯುವುದುಂಟು. ಸದಸ್ಯರು ಮುಖಬಂದುದನ್ನು ಕೇಳುವುದು. ಮಂತ್ರಿಗಳು ಅದಕ್ಕೆ ಸಮರ್ಪಕ ಉತ್ತರವನ್ನು ಕೊಡದೆ ಕೆಲವು ಸಮಯ ತಮಾಷೆಯಾಗಿ ಯಾ ಹಾಸ್ಯಾಸ್ಪದವಾದ ಉತ್ತರಗಳನ್ನೂ ಕೊಡುವುದು. ಅದಕ್ಕೆ ಎಲ್ಲರೂ ನಗುವುದು. ಅಲ್ಲಿ ಪ್ರತಿಯೊಬ್ಬ ಮಂತ್ರಿಯೂ ವಿಷಯವನ್ನು ಚೆನ್ನಾಗಿ ತಿಳಿದು ಸಮರ್ಪಕವಾದ ಉತ್ತರವನ್ನೇ ಕೊಡುತ್ತಿದ್ದನು.

ಆ ದಿನ ಸವಾಲಿನ ಒಂದು ಗಂಟೆ ಮುಗಿದ ನಂತರ ಒಂದು ವಿಶೇಷವಾದ (Special) ಸವಾಲನ್ನು ಟೋರಿ ಪಕ್ಷದ ಉಪಮುಖಂಡರಾದ ಆಂತೊನಿ ಈಡನ್‌ರವರು ಕೇಳಿದರು. ಅದು ಚೀನಾ ದೇಶಕ್ಕೆ ಅದರ ಸಮೀಪದಲ್ಲಿರುವ ಬ್ರಿಟಿಷ್ ದ್ವೀಪವಾದ ಹೊಂಕೊಂಗ್ ಮುಖಾಂತರ ಅನೇಕ ಯುದ್ಧ ಸಾಮಗ್ರಿಗಳು ಹೋಗುವ ವಿಷಯ. ಆ ಸಂಬಂಧ ಟೋರಿ ಪಕ್ಷದ ಮುಖಂಡರಾದ ಚರ್ಚಿಲ್ಲರು ಕೂಡ ಕೆಲವು ಸವಾಲು ಕೇಳಿದರು. ಚರ್ಚಿಲ್ಲರ ಭಾಷಣವನ್ನು ಕೇಳಬೇಕೆಂತ ನನಗೆ ಬಹಳ ಕುತೂಹಲವಿದ್ದರೂ ನಾನು ಹೋದ ಈ 3 ದಿನಗಳಲ್ಲೂ ಅವರು ಹಾಜರಿದ್ದರೂ, ದೊಡ್ಡದೇನೂ ಭಾಷಣ ಮಾಡಲಿಲ್ಲ. ಇದೇ ಕೆಲವು ಮಾತುಗಳನ್ನಾಡಿದ್ದು, ಈ ಸವಾಲುಗಳಿಗೆ ಸರಕಾರದ ಕಡೆಯಾಗಿ ಮುಖ್ಯ ಮಂತ್ರಿ ಎಟ್ಲಿಯವರೇ ಹಾಜರಿದ್ದು ಕೆಲವು ಉತ್ತರಗಳನ್ನು ಕೊಟ್ಟರು. ಅವರು ಆ ಮೊದಲೆ ಕೆಲವು ಕಾಲ ಅಸ್ವಸ್ಥದಲ್ಲಿದ್ದು, ಬಹು ನಿಶ್ಶಕ್ತಿಯಾಗಿದ್ದರು. ನೋಡಲಿಕ್ಕೆ ಬಹು ಶಾಂತಸ್ವರೂಪದವರಾಗಿ, ಬಹಳ ಯೋಗ್ಯ ಮನುಷ್ಯರಾಗಿ ನನಗೆ ಕಂಡುಬಂತು. ಇವರು ಪಾರ್ಲಿಮೆಂಟ್ ಎಂಬ ಆಕಾಶಕ್ಕೆ ಚಂದ್ರನಂತಿದ್ದರೆ, ಚರ್ಚಿಲ್ಲರು ಸೂರ್ಯನಂತೆ ಎಂತ ಹೇಳಬಹುದು. ಅವರು ಸಭಾಂಗಣಕ್ಕೆ ಒಳಗೆ ಬರುವಾಗಲೂ ಹೋಗುವಾಗಲೂ ಟೋರಿ ಪಕ್ಷದವರು ಅವರಿಗೆ ಹೆಚ್ಚಿನ ಮನ್ನಣೆಯನ್ನು ಕೊಡುತ್ತಿದ್ದರು.

ಆ ನಂತರ ಲೇಬರ್ ಮಂತ್ರಿಗಳು ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ಸೈನಿಕರ ಮನೆ, ಇನ್ಶೂರೆನ್ಸ್ ಮೊದಲಾದ ವಿಷಯವಾಗಿ ಒಂದು ಬಿಲನ್ನು ತಂದಿದ್ದರು. ಅವರು ಬಿಲಿನ ಅಂಗಗಳನ್ನು ಸರಿಯಾಗಿ ವಿವರಿಸಿದ್ದಲ್ಲದೆ, ಒಂದು ದೀರ್ಘವಾದ ಭಾಷಣವನ್ನು ಮಾಡಿದರು. ಎದುರು ಪಕ್ಷದವರು ಮಧ್ಯದಲ್ಲಿ ಸವಾಲು ಕೇಳಿದಾಗ ಆ ವಿಷಯವು ತನಗೆ ಸಂಬಂಧಪಟ್ಟದ್ದು, ತನಗೆ ಸಾಕಷ್ಟು ಅನುಭವವಿಲ್ಲವೆಂತಲೂ ನಂತರ ಬಿಲು ಕಮಿಟಿಗೆ ಹೋದಾಗ ಸರಕಾರ ಪರವಾಗಿ ಎಟೊರ್ನಿ ಜನರಲ್ ಆ ವಿಷಯ ಸರಿಯಾದ ಅನುಭವವನ್ನು ಕೊಡುವುದಾಗಿ ಹೇಳಿಕೊಂಡರು. ಅವರ ಭಾಷಣವಾದ ಮೇಲೆ ಅವರು ಆಗತಾನೆ ಹೊಸ ಮಂತ್ರಿಗಳಾಗಿ ಪ್ರಥಮ ಭಾಷಣ ಮಾಡಿದ ಕಾರಣ ಅವರಿಗೆ ಟೋರಿ ಪಕ್ಷದವರು ಸಹಾನುಭೂತಿಯನ್ನು ಕೊಟ್ಟರು. ಈ ಮೂರು ದಿನಗಳಲ್ಲಿ ಕಾಮನ್ಸ್ ಸಭೆಯನ್ನು ಕಂಡು ನನ್ನ ಅನುಭವದಲ್ಲಿ ಕಂಡ ಮುಖ್ಯ ಅಂಶಗಳು ಯಾವುವೆಂದರೆ:—

(1) ಈ ಮುಂಚೆ ಕೋರ್ಟುಗಳ ವಿಷಯ ನಾನು ಬರೆದಂತೆ ಈ ಸಭೆಯಲ್ಲಿ ಕೂಡಾ ನಿಶ್ಶಬ್ದ, ಸದಸ್ಯರಾಗಲೀ ಪ್ರೇಕ್ಷಕರಾಗಲೀ ಅಲ್ಲಿಲ್ಲಿ ಮಾತಾಡುವುದೇ ಇಲ್ಲ. ನಮ್ಮ ಸಭೆಗಳಲ್ಲಿ ಹಾಗಲ್ಲ, ಎಲ್ಲೆಲ್ಲಿಯೂ ಗಲಭೆ. ಆಗಾಗ ಅಧ್ಯಕ್ಷರು ಎದ್ದು ನಿಂತು ಇಂಥಾ ಗುಲ್ಲನ್ನು ಗಟ್ಟಿಯಾಗಿ ಕೂಗಿ ನಿಲ್ಲಿಸುವುದು. ಇಂಥಾ ನಿಶ್ಶಬ್ದತೆಯು ಬ್ರಿಟಿಷರ ಎಲ್ಲಾ ಆಫೀಸು ಕಚೇರಿಗಳಲ್ಲಿ ಕಾಣಬರುವುದು. ಇಲ್ಲಿ ಸ್ವಲ್ಪವಾದರೂ ಸಮಯವನ್ನೂ ಸುಮ್ಮನೆ ಹಾಳಾಗದೇ ದೇಶದ ಕೆಲಸವು ಮುಂದೆ ಹೋಗುತ್ತದೆ.

(2) ಅಧ್ಯಕ್ಷರು (Speaker) ಅಂದರೆ ಬಹು ಗಂಭೀರವಾಗಿದ್ದು ಆಗಾಗ ಮಾತಾಡುವುದೇ ಇಲ್ಲ.

(3) ಭಾಷಣಗಳನ್ನೆಲ್ಲಾ ಹೆಚ್ಚಾಗಿ ಸದಸ್ಯರು ಮುಂಚೆಯೇ ತಯಾರಿಸಿ ಬರೆದುಕೊಂಡು ಬಂದಿರುವರು, ಅದನ್ನು ಓದುವುದಿಲ್ಲವಾದರೂ ಆಗಾಗ ಅದರ ಮೇಲೆ ಕಣ್ಣು ಹಾಯಿಸುವುದು. ನಮ್ಮಲ್ಲಿ ಹಾಗೆ ತಯಾರಿಸುವುದು ಬಹಳ ಕಡಿಮೆ. ಹೆಚ್ಚಾಗಿ ಎದ್ದು ನಿಂತ ಮೇಲೆ ಏನು ಮನಸ್ಸಿಗೆ ಬರುತ್ತದೋ ಅ

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

THE PANGAL NAYAK BANK LIMITED.

Head Office] (Incorporated in 1920.) [Udipi: S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, [illegible], ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ದನ್ನು ಹೇಳುವುದು—ಅವರು ಹಾಗಲ್ಲ, ವಿಷಯವನ್ನು ಚೆನ್ನಾಗಿ ತಿಳಿದು, ಅವರ ಪ್ರತಿ ಒಂದು ಭಾಷಣವೂ ವಿಚಾರಪೂರ್ವಕವಾದದ್ದು.

ಕಾಮನ್ಸ್ ಸಭೆಯನ್ನು ಹೀಗೆ ಮೂರು ಸಾರಿ ನೋಡಿದ ಮೇಲೆಯೇ 8ನೇ ತಾರೀಕಿಗೆ ಪ್ರಭುಗಳ ಸಭೆ (House of Lords) ನೋಡಿದೆ. ಅಲ್ಲಿ ಆ ದಿನ ಮಧ್ಯಾಹ್ನ 3-30 ಗಂಟೆಯಿಂದ 5-40 ಗಂಟೆಯ ವರೆಗೆ ಅವರ ಚರ್ಚೆ ಕೇಳಿದೆ. ಅವರು ಯಾವಾಗಲೂ ಉಪಯೋಗಿಸುವ ಸಭಾಂಗಣವು ಈಗ ದುರಸ್ತಿಯಲ್ಲಿದ್ದು, ಈಗ ಅವರು ಮುಂಚೆ ನಾನು ಪ್ರಸ್ತಾಪಿಸಿದ ಅರಸರ ದುಸ್ತಿನ ಕೋಣೆಯಲ್ಲಿ ಸೇರುವರು. ಇದೂ ದೊಡ್ಡ ಕೋಣೆಯೇ. ಇಲ್ಲಿಯ ಕ್ರಮಗಳೇ ಬೇರೆ. ಕಾಮನ್ ಸಭೆಯಂತೆ ಪಕ್ಷ ಪಕ್ಷಗಳ ವಾಗ್ವಾದಗಳು ಕಡಿಮೆ. ಹೆಚ್ಚಾಗಿ ಸಭೆಯವರು ಕಾಮನ್ಸ್ ರುಜು ಮಾಡಿದ ಬಿಲ್ಲುಗಳು ಇಲ್ಲಿಗೆ ಪುನಃ ವಿಮರ್ಶೆಗೆ ಬರುವುವು. ನಾನು ಹೋದಾಗ ಒಂದು ಬಾಡಿಗೆ ನಿಯಂತ್ರಣದ ಬಿಲಿನ ಮೇಲೆ (Rent Control Bill) ಚರ್ಚೆ. ಆ ಬಿಲಿಗೆ 3, 4 ಪ್ರವೀಣ ಟೋರಿ ಪಕ್ಷದ ಸದಸ್ಯರು ಅನೇಕ ತಿದ್ದುಪಡಿಗಳನ್ನು ತಂದಿದ್ದರು, ಅವರೆಲ್ಲಾ ಕಾನೂನು ಚೆನ್ನಾಗಿ ತಿಳಿದವರು. ಲೋರ್ಡ್ ಸ್ಯಾಮನ್ (ಮುಂಚೆ ಬ್ರಿಟಿಷ್ ಸರಕಾರದಲ್ಲಿ ಇಂಡ್ಯಾ ಸೆಕ್ರೆಟರಿ ಆದವರು) ಲೋರ್ಡ್ ನೊಮರ್ಹಾಮ್, ಲೋರ್ಡ್ ಲೂವೆಲಿನ್, ಲೋರ್ಡ್ ಬಕ್ ಮಾಸ್ಟರ್—ಇವರ ತಿದ್ದುಪಡಿಗಳು (ಇವರ ಹೆಸರುಗಳನ್ನು ನಾವು 'ಪ್ರಿವಿ ಕೌನ್ಸಿಲ್' ಮತ್ತು 'ಹೌಸ್ ಆಫ್ ಲೋರ್ಡ್ಸ್' ತೀರ್ಪುಗಳ ಓದುವೆವು.) ಬಿಲ್ಲುಗಳಲ್ಲಿರುವ ತಪ್ಪುಗಳನ್ನು ಸರಿಪಡಿಸುವಂತವುಗಳು. ಭಾಷಣಗಳೆಲ್ಲಾ ಚಿಕ್ಕವು ಮರುದಿನ ಪತ್ರಿಕೆಯಲ್ಲಿ ಪ್ರಕಟತೆಗೆ ಬರುವ ಭಾಷಣಗಳಲ್ಲ. ಅವುಗಳಲ್ಲಿ ಕೆಲವು ತಿದ್ದುಪಡಿಗಳನ್ನು ಸರಕಾರದ ಪರವಾಗಿ ಲೋರ್ಡ್ ಚೆನ್ಸಲರ್ ಜೊವಿತ್ರು ಅಂಗೀಕರಿಸಿದರು, ಕೆಲವು ಸಾಧ್ಯವಿಲ್ಲವೆಂದರು, ಕೆಲವನ್ನು—"ಬಿಲ್ಲು ಕಮಿಟಿಗೆ ಹೋಗಲಿ. ಅಲ್ಲಿ ಆಲೋಚಿಸುವಾ" ಎಂದರು. ಒಂದಕ್ಕೆ ಉತ್ತರ ಕೊಡುವಾಗ ಸರಕಾರೀ ಕಡೆಯಿಂದ ನೌಕರರು ಬರೆಕೊಟ್ಟದ್ದನ್ನು ಓದಿ ತಿದ್ದುಪಡಿಗೆ ವಿರೋಧಿಸಿದರು. ಆಗ ಲೋರ್ಡ್ ಲೂವೆಲಿನರು ಹೀಗೆಂದು ಉತ್ತರ ಕೊಟ್ಟರು: ನೀವು ಯಾರು ಬರೆದುದನ್ನು ಓದಿದಿರಿ? ಅಷ್ಟು ಅಟವ್ಟ ನಾನು ಎಲ್ಲಿಯೂ ಕೇಳಲಿಲ್ಲ! ಎಲ್ಲರೂ ನಕ್ಕರು. ಈ ಸಭೆಯಲ್ಲೂ ಕೂಡಾ ನಿಶ್ಚಬ್ದದ ಕೆಲಸ. ಅನೇಕ ಬುದ್ಧಿವಂತರಿರುವ ಸಭೆ. ಬಹುದೊಡ್ಡ ಕಾಮನ್ಸ್ ಸಭೆಯಲ್ಲಿ ಅನೇಕ ತಪ್ಪುಗಳು ಸೇರಿ ಪಕ್ಷಪಾತ ಪಕ್ಷವೆಂಬ ಬಿರುಸಿನಲ್ಲಿ ಆವಸರದಲ್ಲಿ ಅನೇಕ ಬಿಲ್ಲುಗಳು ಪಾಸಾಗುವುವು ಆದರೆ ಇಲ್ಲಿ ಅವುಗಳನ್ನು ಶಾಂತತೆಯಿಂದ ಪುರುಸೊತ್ತಿನಲ್ಲಿ ಕೂಲಂಕುಷವಾಗಿ ಆಲೋಚಿಸಿ ಸರಿಪಡಿಸುವರು. ದೇಶದ ಹಿತಕ್ಕೆ ವಿಚಾರಪೂರ್ವಕವಾದ ಕೆಲಸ ಎಡೆಬಿಡದೆ ಇಲ್ಲಿ ಕೂಡಾ ನಡೆಯುವುದು ಇಲ್ಲಿಗೆ 'ಪಾರ್ಲಿಮೆಂಟ್'ನ ಕಥೆ ಮುಕ್ತಾಯವಾಯಿತು. ಬರುವ ಪತ್ರದಲ್ಲಿ ಬ್ರಿಟಿಷ್ ಕೈಗಾರಿಕೆ ಹಬ್ಬಿದ ವಿಷಯ.

('ವಿಚಾರವಾಣಿ') ಕೆ. ಆರ್. ಕಾರಂತ

ಅವಶ್ಯವುಳ್ಳ ಎಲ್ಲಾ ಮಾಹಿತಿ ಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ.

ತಾರೀಕು 16-8-51 ರಿಂದ	# ವಾರದ ಭವಿಷ್ಯ	ತಾರೀಕು 22-8-51 ರವರೆಗೆ

ಮೇಷ—ಚಿಕ್ಕೀಯರ ವಿರಸದಿಂದ ಲೂ, ರಕ್ತಪೀಡೆ, ಸಾಂಸಾರಿಕ ತಾಪತ್ರಯ ಸತತಪರ್ಯಟನಾದಿಗಳಿಂದ ನಿಮ್ಮ ಆರೋಗ್ಯವು ಕೆಡುವುದಲ್ಲದೆ ಹೆಚ್ಚಿನ ಹಣದ ತಗಾದೆಗೆ ಗುರಿಯಾಗುವಿರಿ, ಪ್ರಬಲವಾದ ಮನೋರೋಗವು ಪೀಡಿಸುವದು. ಆದರೂ ಕಾಯಕಷ್ಟಜೀವಿಗಳಾದ ಭೃತ್ಯವರ್ಗಕ್ಕೂ ವ್ಯಾಪಾರಿಗಳಿಗೂ ಶ್ರಮಕ್ಕುಚಿತವಾದ ಫಲಪ್ರಾಪ್ತಿಯಿದೆ. ತಾ. 16-17-18-22 ಈ ದಿನಗಳಲ್ಲಿ ಮಿತ್ರಸಮಾಗಮ, ಭೋಗಲಾಭಾದಿಗಳುಂಟಾಗುವವು.

ವೃಷಭ—ಕಳೆದ ದಿನಗಳಷ್ಟು ಸುಖಮಯವಾಗದಿಂದಿನ ವಾರವು ಆದರೂ ನಿಮ್ಮ ಕಾರ್ಯಕಲಾಪಗಳಿಗೆ ಏನೊಂದುತರದ ವಿಘ್ನಕಂಟಕಗಳುಂಟಾಗಲಾರವು. ಆರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಪರರ ಸಹಾಯವನ್ನು ಬಯಸದೆ ಮುಂದರಿಯುತಕ್ಕ ನಿಮ್ಮ ಆತ್ಮಶಕ್ತಿಯನ್ನು ನೋಡಿ ವೈರಿಪಕ್ಷದವರೂ ಬೆರಳನ್ನು ಮೂಗಿಗೇರಿಸುವರು, ಕೆಲವೊಂದು ಗೃಹತಾಪತ್ರಯಗಳು ನಿಮ್ಮನ್ನು ಪೀಡಿಸುವವಾದರೂ ತಾ. 17ರಿಂದ 21ರ ವರೆಗಿನ ದಿನಗಳು ಸಂತಸದಾಯಿಗಳಿವೆ.

ಮಿಥುನ—ನಿಮ್ಮ ವ್ಯವಹಾರದಲ್ಲಿ ಕೊಂಚ ಸುಧಾರಣೆ ಯಾಗುವದು. ಖರ್ಚಿಗೆ ಬೇಕಾದಷ್ಟು ಹಣವನ್ನು ದುಡಿಯುವಿರಿ. ಆಪ್ತೀಯರ ವಿರಹ ರಾಜಾಧಿಕಾರಿಗಳ ಪೀಡೆ ತ್ರಿದೋಷಜನಕ ದೇಹಾಲಸ್ಯ ಇವುಗಳು ಆಗಾಗ ಪೀಡಿಸುವವು. ಮನಸ್ಸು ಕೂಡ ಕುಮಾರ್ಗದತ್ತ ನಿಮ್ಮನ್ನು ಸೆಳೆದೀತು. ಆದರೂ ಸಜ್ಜನರ ಸಹವಾಸ ಸನ್ಮಿತ್ರರ ಬೆಂಬಲದಿಂದಾಗಿ ವಾರಾದಿಯ 4 ದಿನಗಳನ್ನು ಸುಖವಾಗಿ ಕಳೆವಿರಿ.

ಕರ್ಕಾಟ—ಯುಕ್ತಿ, ಶಕ್ತಿ ಇವೆರಡರಲ್ಲೂ ಅದ್ವಿತೀಯರಿರುವಿರಿ, ಅತಏವ ನಿಮ್ಮ ಸಂಕಲ್ಪಗಳೂ ಅನಾಯಾಸದಿಂದ ಅಲ್ಪಾವಕಾಶದಲ್ಲೇ ಕಾರ್ಯರೂಪವನ್ನು ಹೊಂದುವವು. ಅರ್ಥಿಕ ಸಂಪತ್ತು ಸನ್ಮಿತ್ರರ ಬೆಂಬಲ ಬಂಧುಜನರ ಸಹಕಾರಗಳಿಂದ ಕೂಡಿದ ನಿಮಗೆ ದಿನಕಳೆದುದೇ ತಿಳಿಯಲೊಲ್ಲದು. ಪ್ರವಾಸಿಗಳಿಗೂ ಪ್ರಯಾಣಿಕರಿಗೂ ಕೂಡ ಈ ವಾರವು ಅಷ್ಟೊಂದು ಪ್ರಶಸ್ತವಲ್ಲ ತಾ. 16 22 ಈ 2 ದಿನಗಳು ಅತ್ಯುತ್ತಮವಿವೆ

ಸಿಂಹ—ಜನ್ಮಾಷ್ಟ ಮ-ದ್ವಾದಶಗಳಲ್ಲಿ ರತಕ್ಕ ರವಿ ಗುರು ಕುಜರು ಧನನಾಶ ಪ್ರವಾಸ ದೇಹಾಲಸ್ಯ ಅನಪೇಕ್ಷಿತ ಅನಘಟನಾದಿ ವಿಪತ್ತುಗಳನ್ನು ಕೊಡಲಿರುವರು. ಮತ್ತು ಧನಸ್ಥಾನಗತಶನೈಶ್ಚರನೂ ಕೂಡ ನಿಮ್ಮನ್ನು ಸದಾ ರಿಕ್ತಹಸ್ತರನ್ನಾಗಿ ಮಾಡುತ್ತಿರುವನು. ಆದ ಕಾರಣ ನೀವೀಭಾಗಗಳಲ್ಲಿ ಬಹಳೇ ಜಾಗರೂಕರಾಗಿರತಕ್ಕದ್ದು. ನಟಗಾಯಕರಿಗೂ ವಣಿಗ್ ವರ್ಗಕ್ಕೂ ಈ ವಾರವು ಸಾಮಾನ್ಯ ಉತ್ತಮವಾಗಿರುವುದು. ತಾ. 16-17-18 ಈ ದಿನಗಳಲ್ಲಿ ಲಾಭ ಸುಖವಿಜಯಗಳಿವೆ.

ಕನ್ಯಾ—ಈ ವಾರವು ಕಳೆದ ದಿನಗಳಲ್ಲಿ ಉತ್ತಮವಾಗಿ ಫಲಿಸದು ನಿಮಗೆ. ನಿಮ್ಮ ಅಯುಕ್ತತಕ್ಕುದಾದ ವ್ಯಯಗಳು ಪ್ರಾಪ್ತವಾಗುವವು. ಬಂಧು ಮಿತ್ರರ ವಿಯೋಗ ದುಃಖವುಂಟಾದೀತು. ಶತ್ರುಜನರು ಇಲ್ಲ ಸಲ್ಲದ ಕೀಟಲೆಗಳನ್ನು ಮಾಡುವರು, ಆದರೂ ಪರಾಕ್ರಮಿಗಳಾದ ನೀವು ಅವಾವುವನ್ನೂ ಲೆಕ್ಕಿಸದೆ ಕರ್ತವ್ಯ ಪಥದಲ್ಲಿ ಮುಂದರಿವಿರಿ. ನಿಮ್ಮ ಬಯಕೆಯು ಬಹುತೇಕ ಸಫಲವಾಗಲಿದೆ. ತಾ 17-18-19-20-21 ಅನುಕೂಲವಾದ ದಿನಗಳು.

ತುಲಾ—ನಿಮ್ಮ ಲಾಭ ಸ್ಥಾನದಲ್ಲಿ ಗ್ರಹತ್ರಯರ ಸಮಾಗಮವಾಗಿರುವುದು. ಸಪ್ತಮ ಗುರುವು ನಿಮಗೆ ಪ್ರತಿಕೂಲನಾಗಿದ್ದರೂ ಕೈಗೊಂಡ ಕಾರ್ಯಗಳಲ್ಲಿ ವಿಶೇಷತಃ ಪ್ರಗತಿಯನ್ನೇ ಹೊಂದುವಿರಿ. ಸಂಪದ್ಭಾಗವು ಉತ್ತಮವಾಗಿರುವದು. ಆದರೆ ಆಗಾಗ ಸಂಭವಿಸುವ ವಿಪತ್ಪರಂಪರೆಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು ನೌಕರಿ ಜನರಿಗೂ ವೈದ್ಯ ವ್ಯಾಪಾರಿಗಳಿಗೂ ಕಾಲವು ಉತ್ತಮವಿದೆ. ತಾ. 19, 20, 21, 22 ಈ ದಿನಗಳಲ್ಲಿ ನಿಮ್ಮ ಹೆಚ್ಚಿನ ಸಂಕಲ್ಪಗಳು ಸಿದ್ಧಿಸುವವು.

ವೃಶ್ಚಿಕ—ಕಾಲವು ಅನುಕೂಲ ಸ್ಥಿತಿಗೆ ಬಂದಿದೆ. ಈ ವಾರದಲ್ಲಿ ನೀವು ಕೆಲವೊಂದು ಮಹತ್ಕಾರ್ಯಗಳನ್ನು ಸಾಧಿಸಲಿರುವಿರಿ. ನಿಮ್ಮ ಆದಾಯವು ಹಿಂದಿನ ಸಾಲಕೊಲಗಳಿಂದ ನಿಮ್ಮನ್ನು ಮುಕ್ತರನ್ನಾಗಿ ಮಾಡುವದು ಗೃಹೋಪಕರಣಗಳಲ್ಲಿ ನೂತನತೆಯಿರದು. ಗೃಹಸ್ಥರು ಪುತ್ರ ಸಂತಾನವನ್ನು ಪಡೆವ ಯೋಗವುಳ್ಳವರಾಗುವರು. ವಾಕ್ಕಲಹವು ಅನಿವಾರ್ಯವಾಗಿರುವುದರಿಂದ ಮಿತಭಾಷಿಗಳಾದಷ್ಟು ಒಳ್ಳಿತು. ತಾ. 16, 22 ಸುಖಲಾಭ ವಿಜಯಗಳನ್ನು ಕೊಡುವವು.

ಧನು—ನಿಮ್ಮ ದುರ್ದಿನಗಳಿನ್ನೂ ಮುಗಿದಿಲ್ಲವು. ಅತಏವ ಕಷ್ಟಪರಂಪರೆಗಳಲ್ಲೇ ಇನ್ನೂ ತೊಳಲಾಡುವಿರಿ. ನಿಮ್ಮಿಂದ ಬಹುತೇಕ ಉಪಕೃತರಾದ ಬಂಧುಗಳು ಇಂದೀಗ ತಮ್ಮ ಕೃತಘ್ನತೆಯನ್ನು ವ್ಯಕ್ತಪಡಿಸುತ್ತಿರುವರು. ಶತ್ರು ಜನರಂತೂ ಪ್ರತೀಕಾರಾಸಕ್ತರಾಗಿ ವಿಶೇಷತಃ ನಿಮ್ಮ ಧನಮಾನಾದಿಗಳಿಗೆ ಧಕ್ಕೆ ತರಲಿರುವರು. ಅದಕ್ಕನುಗುಣವಾಗಿ ನಿಮ್ಮ ಮನಸ್ಸೂ ಕೂಡ ಹೆದರಿದ ಹುಲ್ಲೆಯಂತೆ ಅತೀವ ಚಂಚಲವಾಗಿರುವುದು. ತಾ. 17, 18, ಈ ದಿನಗಳಲ್ಲಿ ಹೆಚ್ಚಿನ ವಿಪತ್ತುಂಟಾಗದು.

ಮಕರ—ಕಫಪಿತ್ತ ದೋಷದಿಂದಾಗಿ ಆರೋಗ್ಯವು ಕೆಡುವುದು. ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಂತು ಹೋಗುವವು, ಸ್ಥಾನಚ್ಯುತಿಯ ಸಂಭವವೂ ಇದೆ. ಸಾಂಸಾರಿಕ ತಾಪತ್ರಯಗಳೂ ಕೂಡ ದಿನದಿಂದ ದಿನಕ್ಕೆ ಹೆಚ್ಚುವುವು. ಆದರೂ ತೃಪ್ತಿ ಏನೆಂದರೆ ನಿಮ್ಮ ಖರ್ಚಿನ ಮಟ್ಟಿಗೆ ಹಣದ ದಾರಿದ್ರ್ಯಪಡಬೇಕಾಗಿಲ್ಲ. ದುಡಿಮೆಯೇ ಸಾಕಾಗುವದು. ತಾ. 16, 19, 20, 21 ಈ ದಿನಗಳು ಇತರ ದಿನಗಳಿಗಿಂತ ಉತ್ತಮ.

ಕುಂಭ—ಕಳೆದ ದಿನದಷ್ಟು ಸುಖಮಯವಾಗದೀ ವಾರವು ನಿಮಗೆ. ಆದಾಯವು ಸ್ವಲ್ಪ ಕಡಿಮೆ ನಿಲ್ಲುವದು, ಹೆಚ್ಚಾಗಿ ಪ್ರವಾಸದಲ್ಲೇ ಕಾಲ ಕಳೆಯಬೇಕಾಗುವದು. ದೇಹಾರೋಗ್ಯವೂ ಕೆಡಲಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು. ಅಧಿಕಾರಿ ಜನರಿಗೂ ಲೇಖಕ ವರ್ಗಕ್ಕೂ ತರುಣ ಜನತೆಗೂ ಈ ವಾರವು ತುಂಬಾ ಆಶಾದಾಯಿಯಾಗಿದೆ. ತಾ 17, 18, 22 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ವಿಜಯ, ಲಾಭ ಸ್ಥಾನಮಾನಗಳೂ ಲಭಿಸುವವು.

ಮೀನ—ನಿಮ್ಮ ದೈನಂದಿನ ಪರಿಸ್ಥಿತಿಯಲ್ಲಿ ಕೊಂಚ ಬದಲಾವಣೆಯಾಗಲಿದೆ ಈ ವಾರದಲ್ಲಿ. ರೋಗಗಳಿಂದಲೂ ಶತ್ರುಪೀಡೆಯಿಂದಲೂ ಬಹುಮಟ್ಟಿಗೆ ಮುಕ್ತರಾಗುವಿರಿ. ಜನರ ಗೌರವಾದರವನ್ನು ಸಂಪಾದಿಸುವಿರಿ. ನೌಕರಿ ಜನರು ತಮ್ಮ ಕೃತಿಯಿಂದಾಗಿ ಉನ್ನತಿಯನ್ನು ಹೊಂದಲು ಸಮರ್ಥರಾಗುವರು. ಮಕ್ಕಳ ಅನಾರೋಗ್ಯದಿಂದಾಗಿ ಸ್ವಲ್ಪ ಖರ್ಚು ಹೆಚ್ಚಬಹುದು. ಹೆಚ್ಚಿನ ಸಮಯವನ್ನು ತಿರುಗಾಟದಲ್ಲೇ ಕಳೆಯಬೇಕಾದೀತು. ಅಂತೂ ಖರ್ಚಿಗೆ ಸಾಕಷ್ಟು ದುಡಿಮೆಯಿದೆ. ತಾ. 16, 19, 20, 21 ಈ ದಿನಗಳು ಸುಖಸಂತೋಷದಾಯಿಗಳಿವೆ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯುವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆಂಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖಾರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ

23-8-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ „ 3-0-0
ಬಿಡಿಪ್ರತಿ „ 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧ | NAVAYUGA WEEKLY | Post Box No. 22 | UDIPI. | Vol. 31
ವಾರ ೫೦ | | | | No. 50

ನಾಲ್ಕು ವರ್ಷಗಳಿಂದ ವೃದ್ಧಿಯಾಗುತ್ತಿರುವ ಜಾತೀಯತೆ!

ಸ್ವಾತಂತ್ರ್ಯ ಸಿಕ್ಕ ನಾಲ್ಕು ವರ್ಷಗಳಿಂದ ಕಾಂಗ್ರೆಸ್ಸು ಮೂಲ ತತ್ವವನ್ನನುಸರಿಸಿಕೊಂಡು ರಾಜ್ಯಭಾರ ನಡೆಸಿತೆಂದು ನಾವು ಖಾತ್ರಿಯಾಗಿ ಒಪ್ಪಬೇಕಾಗಿದೆ. ಹಲವು ಕಾಂಗ್ರೆಸ್ಸಿಗರು ನಾಲ್ಕು ವರ್ಷ ಉಚ್ಚಾದರ್ಶಗಳನ್ನು ಮರೆತು ಸ್ವೇಚ್ಛಾಚಾರದಿಂದ ವರ್ತಿಸುತ್ತಿದ್ದಾರೆಂದೂ, ಕಾಂಗ್ರೆಸು ಮಹಾತ್ಮಾ ಗಾಂಧೀಜಿ ಹಾಕಿಕೊಟ್ಟ ಮಾರ್ಗವನ್ನು ತ್ಯಜಿಸಿ ವಿರುದ್ಧ ಧೋರಣೆಯನ್ನು ವಹಿಸುತ್ತಿದೆಯೆಂದೂ ಟೀಕಿಸುವವರುಂಟು! ಈ ಆರೋಪವನ್ನು ನಾವು ಪೂರ್ತಿ ಅಲ್ಲಗಳೆಯುವಂತಿಲ್ಲ. ಹಾಗೆಯೆ ಮೂಲತತ್ವಕ್ಕನುಗುಣವಾಗಿ ಕಾರ್ಯಸಾಧಿಸಿದ್ದನ್ನು ಮರೆಯಲಾರೆವು. ಯಶಸ್ವಿಯಾದುದು ಕಡಿಮೆಯೆಂದಾದರೂ ಸಿದ್ಧಿಯ ಕುರಿತು ಯತ್ನನಡೆಸಿದ್ದೇವೆಯೆಂದಾದರೂ ಅಭಿಮಾನ ಪಡಬಹುದಷ್ಟೆ!

ಮದ್ಯಪಾನ ನಿಷೇಧ, ಹರಿಜನೋದ್ಧಾರ, ಮುಂತಾದ ಕಾರ್ಯಗಳನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದಕೂಡಲೇ ನಿಧಾನವಾಗಿಯಾದರೂ ಕೈಗೊಂಡಿತು. ಮದ್ಯಪಾನ ನಿಷೇಧ ಕಾಯಿದೆಯಿಂದ ಸರಕಾರ ಅನೇಕ ಆರ್ಥಿಕ ತೊಡಕುಗಳನ್ನು ಎದುರಿಸಬೇಕಾಯಿತು. ಗಾಂಧೀಜಿ ಹೇಳಿದ ಆದರ್ಶವನ್ನು ಕಾರ್ಯರೂಪದಲ್ಲಿ ತರಬೇಕೆಂಬುದೇ ಸರಕಾರದ ಉದ್ದೇಶ. ಸರಕಾರ ಕೈಗೊಂಡ ನಿಷೇಧ ಕ್ರಮದಿಂದ ಮದ್ಯಪಾನ ನಿಷೇಧ ಯಶಸ್ವಿಯಾಗಲಿಲ್ಲವೆಂಬುದು ಸತ್ಯವಾದ ಅಂಶವೇ. ಜನ ಸುಸಂಸ್ಕೃತರಾಗಿ ತಮ್ಮನ್ನು ತಾವೇ ಆಳಿಕೊಳ್ಳುವ ಹೊಣೆಗಾರಿಕೆಯುಳ್ಳವರಾಗುವರೆಗೆ ಮದ್ಯಪಾನ ನಿಷೇಧ ಸಂಪೂರ್ಣ ಯಶಸ್ವಿಯಾಗದು! ಆದರೆ ಈಗಿಂದಲೇ ಕುಡಿತವನ್ನು ಪ್ರತಿಬಂಧಿಸುವದರಿಂದ ಮುಂದಿನ ಜನಾಂಗದಲ್ಲಿ ಇದರ ಉಜ್ವಲ ಪರಿಣಾಮವನ್ನು ಕಾಣುತ್ತೇವೆ. ಸದ್ಯ ಅಲ್ಪಯಶ ದೊರಕಿದ್ದನ್ನು ಕಂಡುಕೊಂಡು ಆದರ್ಶ ಸಾಧನೆಯಲ್ಲಿ ಇಷ್ಟಾದರೂ ಸುಧಾರಿಸಿದೆವಲ್ಲಾ ಎಂದು ಹೆಮ್ಮೆಪಡಬಹುದು. ಅಂತೆಯೆ ಹರಿಜನೋದ್ಧಾರದ ತತ್ವಕೂಡಾ. ಹರಿಜನೋದ್ಧಾರಕ್ಕಾಗಿ ಸರಕಾರವು ನೀಡುವ ಸಹಕಾರದಿಂದ ಕಾಂಗ್ರೆಸ್ಸಿನ ಮೂಲತತ್ವಕ್ಕೆ ಪಾಲನೆಕೊಟ್ಟಂತಾಗಿದೆ. ಕೃಷಿಕ ಆರ್ಥಿಕಾಭಿವೃದ್ಧಿ ಕಾರ್ಯವನ್ನು ಕಾಂಗ್ರೆಸ್ಸು ಚೆನ್ನಾಗಿ ಸಾಧಿಸಿದೆ!

ಆದರ್ಶವನ್ನು ಸಾಧಿಸಿದ್ದು ಅಲ್ಪವೆನಬಹುದು; ಸಾಕಷ್ಟು ಪ್ರಗತಿಯಿಲ್ಲ ಎನಬಹುದು. ಆದರೆ ಅಂತಹ ಕಾರ್ಯವನ್ನು ಕೈಗೊಂಡದ್ದರಿಂದ ಕೆಡುಕಾಯಿತು – ಮೂಲ ತತ್ವಕ್ಕೆ ಭಂಗಬಂದಿತೆಂದು ಹೇಳುವಂತಿಲ್ಲ. ಕಾಂಗ್ರೆಸ್ ಆಳಿದ ಈ ನಾಲ್ಕು ವರ್ಷಗಳಲ್ಲಿ ನಮ್ಮ ಪಾಲಿಗೆ ಸೋಲನ್ನು ತಂದ 'ಜಾತೀಯತೆ' ಮಾತ್ರ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತ ಬಂದಿದೆ. ಗಾಂಧೀಜಿ ಇರುವ ಕಾಲದಲ್ಲಿ ಹರಿಜನರು ನಾವು ಮುಟ್ಟಲಾಗದ ಕೀಳ್ಮಟ್ಟದ ಜನ ನಮ್ಮ ಸಮಾಜದಲ್ಲಿ ಬೆರೆಯತಕ್ಕವರಲ್ಲವೆನ್ನುವ ಈ ಸಂಕುಚಿತತೆಯ ಜಾತೀಯತೆ ಮಾತ್ರವಿತ್ತು! ಮತ್ತೆ ಜಾತೀಯತೆಯೆಂದರೆ ಹಿಂದೂ ಸಮಾಜದಿಂದ ಹೊರತಾದ ಮುಸಲ್ಮಾನರು –ಕ್ರಿಸ್ತಿಯಾನರೂ ಎಂಬ ಜಾತೀಯತೆ ಮಾತ್ರವಿತ್ತು. ಆದರೆ ಗಾಂಧೀಜೀ ಇದನ್ನು ಹೋಗಲಾಡಿಸಿ ನಾವೆಲ್ಲ ವಿಶ್ವಕುಟುಂಬಿಗಳೆಂದು ತೋರಿಸುವುದಕ್ಕೆ ಬಾಳಿನುದ್ದಕ್ಕೂ ಹೋರಾಟ ನಡೆಸಿದರು; ತನ್ನ ದೇಹವನ್ನೇ ಆ ತತ್ವಕ್ಕೆ ಬಲಿಯಾಗಿ ಕೊಟ್ಟು ಜಗತ್ತಿಗೇ ಆದರ್ಶ ಪುರುಷರಾದರು!

ಹರಿಜನರನ್ನು ನಾವು ಗಾಂಧೀಜೀ ಬಯಸಿದಂತೆ ನೇರಾಗಿ ಸಂಪರ್ಕ ಬೆಳೆಸುವಷ್ಟು ಔದಾರ್ಯವನ್ನು ತೋರಿಸದೇ ಹೋದರೂ ಅವರೊಡನೆ ಕಲೆತು ಬೆರೆಯುವ ಹಾಗಿನ ಮಟ್ಟಕ್ಕೆ ತರಲು ಯತ್ನ ನಡೆಸುತ್ತಿದ್ದೇವೆ. ಹಿಂದೂ ಮುಸಲ್ಮಾನರೆಂಬ ಈ ಜಾತೀಯತೆಯೂ ಭಾರತದಲ್ಲಿಂದು ಕಡಿಮೆಯಾಗಿದೆ. ದೇಶ ವಿಭಜನೆಯಾದ ಬಳಿಕವಂತೂ ಹಿಂದೂಸ್ಥಾನದೊಳಗೆ ಹಿಂದೂ ಮುಸಲ್ಮಾನರೊಳಗಿನ ಐಕ್ಯ ವೃದ್ಧಿಯಾಗುತ್ತಲಿದೆ. ಹಿಂದೂಸ್ಥಾನದ ಮುಸಲ್ಮಾನರೂ ಭಾರತ ಸರಕಾರಕ್ಕೆ ವಿಧೇಯರಾಗಿದ್ದುಕೊಂಡು ಹಿಂದೂ ಜನರೊಡನೆ ಸ್ನೇಹ ಸೌಹಾರ್ದಭಾವವುಳ್ಳವರಾಗಿಯೇ ಇದ್ದಾರೆ. ನಮ್ಮಲ್ಲಿಯ ಹಲವು ಧಾರ್ಮಿಕ ಸಂಸ್ಥೆಗಳು ಬೇಕೆಂತಲೇ ಕಲುಷಿತ ವಾತಾವರಣವನ್ನು ನಿರ್ಮಿಸುತ್ತಿರುವದನ್ನು ಬಿಟ್ಟರೆ ಇನ್ನಾವ ಜಾತೀಯತೆಯ ದ್ವೇಷವು ನಮ್ಮಲ್ಲಿರದು. ಪಾಕಿಸ್ತಾನದೊಳಗಿನ ಉದ್ವಿಗ್ನತೆಯಿಂದ ಇಲ್ಲಿಯ ಮುಸಲ್ಮಾನರು ಪಾಕಿಸ್ತಾನಕ್ಕೆ ಸಹಕಾರಿಗಳಾದಾರೆಂಬುದು ಹುಚ್ಚುಕಲ್ಪನೆ. ಪಾಕಿಸ್ತಾನಿಗಳ ಜಾತೀಯ ಇಲ್ಲವೆ ಜೇಹಾದದಂತಹ ಧರ್ಮಯುದ್ಧದಿಂದ ಆತ್ಮನಾಶವೇ ಹೊರತು ರಾಷ್ಟ್ರೋನ್ನತಿಯಾಗದೆಂದು ಭಾರತದ ಮುಸ್ಲಿಮರು ಅರಿತಿದ್ದಾರೆ. ಇಲ್ಲಿನ ಅಲ್ಪಸಂಖ್ಯಾಕ ಮುಸಲ್ಮಾನರನ್ನು ಭಾರತ ಸರಕಾರ ನಡೆಸಿಕೊಂಡರೀತಿಯನ್ನು ಪಾಶ್ಚಾತ್ಯ ರಾಷ್ಟ್ರಗಳು ಶ್ಲಾಘಿಸಿದಂತೆಯೆ ಭಾರತದ ಮುಸಲ್ಮಾನರೂ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಜಾತೀಯತೆಯಿಂದಲೂ ನಮಗೆ ಕೇಡಾಗಲಿಲ್ಲ!

ರಾಜಕೀಯದಲ್ಲಿ ಧುಮುಕಬೇಕೆನ್ನುವ ಕಾರಣದಲ್ಲಿ ಹೆಚ್ಚಿನಸ್ಥಾನಮಾನಗಳು ಬೇಕು, ಎಂಬ ಉದ್ದೇಶದಿಂದ ಜಾತೀವಾದಗಳು ನಿರ್ಮಾಣಗೊಳ್ಳುತ್ತಲಿವೆ. ಜಾತೀವಾರಾಗಿ ಸ್ಥಾನವನ್ನು ಹಂಚುವದೂ ಇಲ್ಲವೆ ಅಧಿಕಾರವನ್ನು ಕೊಡುವದು ಕಾಂಗ್ರೆಸ್ಸಿನ ಮೂಲತತ್ವವಲ್ಲದೆ ಹೋದರೂ ಅನಿವಾರ್ಯವಾಗಿ ಜಾತೀವಾರಾಗಿ ಸ್ಥಾನವನ್ನು ಹಂಚುವ ಇಲ್ಲವೆ ಅಧಿಕಾರವನ್ನು ಕೊಡುವದು ಒಂದು ಸಂಪ್ರದಾಯವಾಗಿ ಬಂದಿದೆ. ಇದರ ಉದ್ದೇಶವಾದರೂ ಯಾವ ಪಕ್ಷ ಪಂಗಡಕ್ಕೂ ಭೇದ-ಮಂತ್ರಣೆಗಳಾಗದಿರಬೇಕೆಂಬುದೇ ಆಗಿರುತ್ತದೆ. ಆದರೆ ಇಂದು ಅದು ಬೇರೆ ರೂಪದಲ್ಲಿ ಕಾಣಿಸಿಕೊಂಡಿದೆ. ಚುನಾವಣೆಯು ಹತ್ತಿರ ಹತ್ತಿರ ಬರುವಾಗ ನಾಯಿಕೊಡೆಗಳಂತೆ ಪಕ್ಷಗಳು ತಲೆಯೆತ್ತುತ್ತಿರುವದಕ್ಕೆ ಈ ಜಾತೀಯತಾ ಭಾವನೆಯೇ ಕಾರಣ. ತಮ್ಮ ಜಾತಿಯವರು ಆರಿಸಿಬಂದರೆ ತಮ್ಮ ಜನತೆಯ ಉದ್ಧಾರವಾಗಬಹುದು – ಏಳಿಗೆಯಾಗಬಹುದು ಎನುವ ಕಲ್ಪನೆಯೆ ಮುಖ್ಯವಾಗಿದೆ. ಇಂತಹ ಜಾತೀಯವಾದಿಗಳಿಗೆ ಸ್ಪರ್ಧಾ ಸಾಧನೆಯ ಮುಂದೆ ನೇರದ ಕಲ್ಯಾಣದ

೨ನೇ ಪುಟ ನೋಡಿರಿ.

IN THE SERVICE OF THE COUNTRY



Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ–
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ವಾತಂತ್ರ್ಯ ಮತ್ತು ಸಮಾನತೆ
Liberty and Equality

ಸ್ವಾತಂತ್ರ್ಯ ಮತ್ತು ಸಮಾನತೆಗಳೆಂಬವುಗಳು ನಾಲ್ಕು ವಿಧಗಳಿರುವವು ಎಂದು ಜೇಮ್ಸ್ ಬ್ರೈಸ್ ಎಂಬವರು ತಮ್ಮ "ಆಧುನಿಕ ಪ್ರಜಾಸತ್ತೆ" ಎಂಬ ಅಧಿಕೃತ ಗ್ರಂಥದಲ್ಲಿ ಹೇಳಿರುವರು. ತನ್ನ ಜೀವ ಮತ್ತು ಆಸ್ತಿಯ ಅನುಭೋಗದಲ್ಲಿ ಯಾವ ಆತಂಕವಿಲ್ಲದಿರುವುದಕ್ಕೆ ನಾಗರಿಕ ಸ್ವಾತಂತ್ರ್ಯವೆನ್ನುವರು (Civil liberty) ತನ್ನ ಮತಾನುಭವವನ್ನು ಹೊರಪಡಿಸುವರೆ ಮತ್ತು ಆಚರಿಸುವರೆ ಅಡ್ಡಿ ಇಲ್ಲದಿರುವುದೇ ಮತ ಸ್ವಾತಂತ್ರ್ಯ (Religious liberty) ನಾಗರಿಕನಿಗೆ ತನ್ನ ಸಮಾಜದ ಸರಕಾರದಲ್ಲಿ ಭಾಗವಹಿಸಲು ಹಕ್ಕಿರುವುದೇ ರಾಜಕೀಯ ಸ್ವಾತಂತ್ರ್ಯ (Political liberty) ಸಮಾಜಕ್ಕೆ ಬಾಧಕವಿಲ್ಲದ ಬಾಬಿನಲ್ಲಿ ಹಕ್ಕುಗಳಿಗೆ ತಡೆ ಹಾಕುವದು ಅನಾವಶ್ಯಕವಾದ್ದರಿಂದ ಅಂಥಾ ಆತಂಕವಿಲ್ಲದ ಹಕ್ಕುಗಳಿರುವುದೇ ವ್ಯಕ್ತಿಯ ಸ್ವತಂತ್ರ್ಯ (Individual liberty) ರಾಜಕೀಯ ಸ್ವಾತಂತ್ರ್ಯವಿಲ್ಲದ ನಾಗರಿಕ ಸ್ವಾತಂತ್ರ್ಯವಿರಬಹುದು. ಯಾವ ರೀತಿಯ ಸರಕಾರವಾದರೂ ನಾಗರಿಕರ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಿ ಕಾಪಾಡಬಹುದು. ವ್ಯಕ್ತಿಯು ಸ್ವಾತಂತ್ರ್ಯವಿಲ್ಲದೆ ಬಾಳುವದು ಕಷ್ಟ. ಪ್ರಾಣಿಗಳಿಗೆ ಗಾಳಿಯಲ್ಲಿ ಸೇರಿರುವ ಆಮ್ಲಜನಕ ವಾಯು ಹೇಗೆ ಅಗತ್ಯವೋ ಅಂತೆಯೇ ರಾಜಕೀಯದಲ್ಲಿ ವ್ಯಕ್ತಿಯ ಸ್ವಾತಂತ್ರ್ಯವಾಗಿರುವದು. ಸಮಾನತೆಯಲ್ಲಿಯೂ ನಾಲ್ಕು ವಿಧಗಳಿವೆ. ನಾಗರಿಕ ಸಮಾನತೆ ಎಂದರೆ ಒಂದೇ ತರದತಿಯ ಜನರೆಲ್ಲರೂ ಸರಿಸಮಾನರಾಗಿರುವುದು ರಾಜಕೀಯ ಸಮಾನತೆಯಲ್ಲಿ ನಾಗರಿಕರೆಲ್ಲರಿಗೂ ಸರಕಾರದಲ್ಲಿ ಭಾಗವಹಿಸಲು ಮತ್ತು ಸ್ಥಾನಮಾನ ಪಡೆಯುವರೆ ಸಮಾನ ಹಕ್ಕಿರುವದಾಗಿದೆ. ಸಾಮಾಜಿಕ ಸಮಾನತೆ ಎಂದರೆ ವರ್ಗ ತರಗತಿ ಜಾತಿವರ್ಣ ಮತ್ತು ಹುಟ್ಟು ಇವುಗಳ ಭೇದಗಳಿಲ್ಲದಿರುವುದಾಗಿದೆ. ಇನ್ನು ನಾಲ್ಕನೇಯದಾಗಿ ಪ್ರಾಕೃತಿಕ ಸಮಾನತೆ. ಇದರ ಪ್ರಕಾರ ಎಲ್ಲರೂ ಲೋಕದಲ್ಲಿ ದಿಗಂಬರರಾಗಿ ಪಂಚೇಂದ್ರಿಯಗಳುಳ್ಳವರಾಗಿ ಒಂದೇನಮೂನೆಯ ಅವಯವಗಳುಳ್ಳವರಾಗಿ ಲೋಕದಲ್ಲಿರುವ ಪ್ರತಿಯೊಂದು ಸೊತ್ತಿಗೂ ಸಮಾನ ಹಕ್ಕುಳ್ಳವರಾಗಿ ಹುಟ್ಟುವರೆಂಬರ್ಥವು. ಹುಟ್ಟುವಾಗ ಎಲ್ಲರೂ ಸರಿಸಮಾನ ಹಕ್ಕುಗಳನ್ನು ಪಡೆದು ಬರುವರೆಂಬುದೇ ಆಗಿದೆ. ಈವಾದ ಪ್ರಕಾರ ಊಚು ನೀಚು ಎಂಬುದು ಕಲ್ಪನೆಯದ್ದಾಗಿದೆ ಹೊರತು ಸ್ವಾಭಾವಿಕವಲ್ಲ. ಅಮೇರಿಕ ಡಿಕ್ಲೇರೇಶನ್ನಿನಲ್ಲಿ ಎಲ್ಲರೂ ಸ್ವಾತಂತ್ರ್ಯರಾಗಿ ಹುಟ್ಟಿರುವರೆಂದಿರುವರು ಯೇಸು ಕ್ರಿಸ್ತನ ಧರ್ಮಪ್ರಕಾರ ಯಹೂದ್ಯರು, ಗ್ರೀಕರು,ನಾಗರಿಕರು ಅರ್ಧ ನಾಗರಿಕರು ದೊಡ್ಡವರು ಬಡವರು ಸ್ವತಂತ್ರರು ಗುಲಾಮರು ಎಂಬ ಭೇದಗಳಿಲ್ಲ. ಪ್ರಾಕೃತಿಕ ಸಮಾನತೆಯ ಕುರಿತು ನಾವು ಸ್ವಲ್ಪ ಆಲೋಚಿಸಬೇಕಾಗಿದೆ. ಎಲ್ಲರೂ ಸರಿಸಮಾನರಾಗಿ ಕಂಡರೂ ಗುಣನಡತೆಯಲ್ಲಿ ಭೇದಗಳಿವೆ ಎಂಬುದು ಅನುಭವ ಸಿದ್ಧವಾಗಿದೆ. ಕೆಲವರು ಕಷ್ಟ [illegible] ಆಶನದಾಂಡಿಗರು

ಲೇಖಾಂಕ ೧.

ಪ್ರಜಾಸತ್ತೆ

ಬರೆದವರು:
ಸಿ. ಎಚ್. ಶೆಟ್ಟಿ, ಬಿ.ಎ.

[ಕಳೆದ ಸಂಚಿಕೆಯಿಂದ ಮುಂದರಿದುದು.]

ಕೆಲವರು ಬುದ್ಧಿವಂತರು ಕೆಲವರು ಮೂಢರು, ಕೆಲವರು ಸಾಹಸಿಗಳು ಕೆಲವರು ಉದಾಸೀನರು ಕೆಲವರು ಸಜ್ಜನರು ಕೆಲವರು ಕೋಪಿಷ್ಠರು ಕೆಲವರು ದಯಾಳುಗಳು ಕೆಲವರು ಕಠಿಣ ಮರ್ಜಿನವರು ಕೆಲವರು ಪ್ರಾಯ ಬಂದಮೇಲೆ ದೇಶಸೇವೆ ಮಾಡುವರು ಕೆಲವರು ಭೂಭಾರಕರಾಗಿರುವರು. ಆದ್ದರಿಂದ ಹುಟ್ಟು ಸಮಾನತೆ ಎಂಬುದು ಸಮಾನತೆಗೆ ಸುಸಂಧಿ,ಮತ್ತು ಯೋಗ ಮಾತ್ರ ಎಂಬರ್ಥವಲ್ಲದೆ ಎಲ್ಲಾ ವಿಧದಲ್ಲಿಯೂ ಸಮಾನರೆಂಬರ್ಥವಲ್ಲ. ಎಲ್ಲರೂ ಸಮಾನರೆಂದರೆ ಸಮಾನರಾಗಿ ಮತಕೊಡುವ ಹಕ್ಕಿರುವುದಾಗಿದೆ. ಯಾವನೊಬ್ಬನಿಗೂ ಯಾವ ಕಾರಣದಿಂದಲೂ ಒಂದಕ್ಕಿಂತ ಹೆಚ್ಚಿಗೆ ಓಟುಕೊಡುವರೆ ಹಕ್ಕಿಲ್ಲ. ಸ್ಥಾನಮಾನಗಳಿಗೆ ಎಲ್ಲರಿಗೂ ಯೋಗವಿದೆಎಂಬರ್ಥವೇ ಹೊರತು ಯೋಗ್ಯತೆಯಲ್ಲಿ ಸಮಾನರೆಂತಲ್ಲ. ಗ್ರೀಕರು ಬಡವರಿಗೆ ದೇವರುಕೊಟ್ಟ ಕಷ್ಟಗಳ ಬಗ್ಗೆ ಬಹಳ ಕನಿಕರ ಪಟ್ಟವರು. ಕೆಲವರು ಶ್ರೀಮಂತಿಕೆಯಿಂದ ಸಾಕಲ್ಪಡುವವರಾದ್ದರಿಂದ ಬಡವರಿಗೆ ಈ ಅನುಕೂಲತೆ ಇಲ್ಲದ ಕಾರಣ ಪ್ರಾಕೃತಿಕ ಸಮಾನತೆಗೆ ರಾಜಕೀಯ ಸಮಾನತೆಯು ಅಗತ್ಯವೆಂದಿರುವರು. ಈ ವಿನಹಾ ಯಾರು ಯೋಗ್ಯರು ಬುದ್ಧಿ ಸೂಕ್ಷ್ಮತೆಯಿಂದ ಕರ್ತವ್ಯ ನಿರತರಾಗಿ ಓಟು ಕೊಡುವರೆಂಬುದನ್ನು ಕಂಡು ಹಿಡಿಯಲು ಕಷ್ಟವಾದ್ದರಿಂದ ಎಲ್ಲರಿಗೂ ಸರಿಸಮಾನ ಹಕ್ಕಿರಬೇಕೆಂದಿರುವರು. ದೇಶದ ಆಡಳಿತೆಯ ಅಧಿಕಾರವು ಜನರ ಸ್ವಾಧೀನ ಬಂದಾಗ ಅಧಿಕಾರವು ಎಲ್ಲನಾಗರಿಕರಿಗೂ ಸರಿಸಮಾನರಾಗಿ ಹಂಚಿ ಹೋಗಿದೆ ಎಂಬರ್ಥವಾಗಿದೆ. ಪ್ರಾಕೃತಿಕ ಸಮಾನತೆ ಮತ್ತು ರಾಜಕೀಯ ಸಮಾನತೆ ಒಟ್ಟುಕೂಡಿ ಸಾಮಾಜಿಕ ಸಮಾನತೆಯು ಬೆಳೆಯುವಂತೆ ಸಹಾಯವಾಗುವವು.. ಸ್ವಾತಂತ್ರ್ಯಕ್ಕಿಂತ ಜನರು ಹೆಚ್ಚಾಗಿ ಸಮಾನತೆಯನ್ನೇ ಆಶಿಸುವರು.

ಹಕ್ಕು ಮತ್ತು ಕರ್ತವ್ಯ.
Rights and Duties

ಹಕ್ಕಿನ ಕುರಿತು ಆಲೋಚಿಸುವಾಗ ಕರ್ತವ್ಯ ಅಥವಾ ಬೇರೆಯವರ ಹಕ್ಕಿನ ಬಗ್ಗೆ ನಮಗಿರುವ ಜವಾಬ್ದಾರಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಏಕೆಂದರೆ ಅವುಗಳು ಪರಸ್ಪರ ಸಂಬಂಧ ಪಟ್ಟವುಗಳು. ಲೋಮ ವಿಲೋಮ, ಸುಖ ದುಃಖ ಹುಟ್ಟು ಸಾವು ಹೀಗೆ ಒಂದಕ್ಕೊಂದು ದ್ವಂದ್ವವಾಗಿರುವ ಅನ್ಯೋನ್ಯ ಶಬ್ದಗಳು ಲೋಕದಲ್ಲಿ ವಾಡಿಕೆಯಾಗಿ ಎಷ್ಟೋ ಇವೆ. ಆಧುನಿಕ ಕಾಲದಲ್ಲಿ ಹೆಚ್ಚಾಗಿ ಜನರು ಹಕ್ಕುಗಳ ಕಡೆಗೆ ಹೆಚ್ಚು ಗಮನ ಕೊಟ್ಟು ಕರ್ತವ್ಯವನ್ನು ಮರೆತು ಬೇಜವಾಬ್ದಾರೀ ಹಕ್ಕುಗಳನ್ನು ಅನುಭವಿಸುವರು. ಇದರಿಂದ ಪ್ರಜಾಸತ್ತೆಯ ಬುಡಕ್ಕೆ ಕೊಡಲಿ ಪೆಟ್ಟಂತಾಗಿದೆ. ನಮ್ಮ ಮನೆ, ತೋಟ, ಮತ್ತು ಹೊಲಗಳನ್ನೂ ಸ್ವೇಚ್ಛೆಯಿಂದ ಅನುಭವಿಸುವಾಗ ಇನ್ನೊಬ್ಬನಿಗೆ ಬಾಧಕವಿಲ್ಲದ ರೀತಿಯಲ್ಲಿ ಅನುಭವಿಸಬೇಕು. ನಾವು ಸುಖಸಂಪತ್ತು ಗಳಿಸುವಾಗ ಇನ್ನೊಬ್ಬನನ್ನು ದುಃಖ ಮತ್ತು ಕಷ್ಟ ನಷ್ಟಕ್ಕೀಡುಮಾಡಬಾರದೆಂಬುದನ್ನು ನೆನಪಿಗೆ ತರುವುದಿಲ್ಲ. ನಮಗೆ ಸ್ವಾತಂತ್ರ್ಯವಿರುವುದಾದರೂ ಕಳವು ಖೂನಿ, ಕೊಲೆ ಮಾಡಬಾರದೇಕೆಂದರೆ ಇನ್ನೊಬ್ಬರ ಹಕ್ಕಿಗೆ ಅಡ್ಡಬಂದಂತಾಗುತ್ತದೆ. ನಮಗೆ ಕೊಲ್ಲುವ ಸ್ವಾತಂತ್ರ್ಯವಿದ್ದರೆ ಇನ್ನೊಬ್ಬನಿಗೆ ಬದುಕುವ ಹಕ್ಕಿದೆ. ನಮಗೆ ಕುಡುಕರಾಗಲು ಹಕ್ಕಿದ್ದರೆ ನೆರೆಹೊರೆಯವರಿಗೆ ಉಪದ್ರಕಾರಕರಾಗಬಾರದು ಮನೆಯ ಹೆಂಡತಿಗೆ ದುಃಖ ಕೊಡಬಾರದು. ಕರ್ತವ್ಯವು ಹಕ್ಕಿನಷ್ಟೇ ಬಲವಾದದ್ದು. ಯಾರು ಕರ್ತವ್ಯನಿರತರೋ ಅವರೇ ಹಕ್ಕುಗಳನ್ನು ಕಾಪಾಡಿಕೊಳ್ಳಬಲ್ಲರು. ಕರ್ತವ್ಯದ ಕಡೆಗೆ ಹೆಚ್ಚು ದೃಷ್ಟಿ ಇಡುವದು ಒಳ್ಳೇದೆಂತ ಹಲವರ ಅಭಿಪ್ರಾಯ. ಕರ್ತವ್ಯವೆಂಬುದು ಇನ್ನೊಬ್ಬನ ಹಕ್ಕಿಗೆ ಮಾನ್ಯತೆ ಕೊಡುವುದಾಗಿದೆ.

ಎಷ್ಟೋ ಸಲ ಪ್ರಾಕೃತಿಕ ಹಕ್ಕನ್ನು ಜನರು ಕೊಂಡಾಡಿದರು. ಜನರು ಹುಟ್ಟುವಾಗಲೇ ಕೆಲವು ಹಕ್ಕುಗಳುಳ್ಳವರಾಗಿರುವರು ಎಂಬ ಅರ್ಥ ಇದರಿಂದಾಗುತ್ತದೆ. ಈ ಹಕ್ಕಿನಲ್ಲಿ ಸತ್ಯಾಂಶ ಕಾಣುವುದಿಲ್ಲ. ಶಿಶುವು ಜನನಕ್ಕೆ ಬರುವಾಗ ಹಕ್ಕೆಂದರೇನೆಂಬ ಅರ್ಥವೇ ಅದಕ್ಕಿಲ್ಲ. ಮತ್ತು ಆ ಹಕ್ಕುಗಳನ್ನು ಕಾಪಾಡಿಕೊಳ್ಳುವ ರೀತಿಯೂ ಗೊತ್ತಿಲ್ಲ. ಅದರ ಹಕ್ಕನ್ನು ಬೇರೆಯವರು ಕಾಪಾಡಬೇಕಾಗುತ್ತದೆ. ಅಲ್ಲದೆ ಆ ಶಿಶುವು ತನ್ನ ಹಕ್ಕಿನ ಅಧಿಕಾರವನ್ನು ನಡೆಸುವದಾದರೆ ಏನೆಲ್ಲಾ ಅನಾಹುತ ನಡೆದೀತೆಂದು ತಿಳಿಯಲಸಾಧ್ಯ. ಆದ್ದರಿಂದ ಪ್ರತಿಯೊಬ್ಬರಿಗೂ ಹಕ್ಕನ್ನು ಪಡೆಯುವರೆ ಅರ್ಹತೆಯಿದೆ ಹೊರತು ಬಲರಾಮನು ಹಲಾಯುಧ ಪಡೆದು ಹುಟ್ಟಿದಂತೆ ಹಕ್ಕಿನ ಮೂಟೆಯೊಂದನ್ನು ಹೊತ್ತುಕೊಂಡು ಜನನಕ್ಕೆ ಬರಲಿಲ್ಲ. ನಮಗಿರುವ ಹಕ್ಕೆಂಬುದು ಹಕ್ಕು ಪಡೆಯುವರೆ ಇರುವ ಹಕ್ಕಾಗಿದೆ.

ಪ್ರಜಾಸತ್ತೆಯೂ ವಿದ್ಯೆಯೂ

ಆಧುನಿಕ ಪ್ರಜಾಸತ್ತೆಯ ತತ್ವವು ಎರಡು ಕಂಭಗಳ ಆಧಾರದ ಮೇಲೆ ನಿಂತಿರುವದು. ಮತದಾರರಲ್ಲಿ ತಮಗಿರುವ ಮತಕೊಡುವ ಹಕ್ಕನ್ನುಪಯೋಗಿಸುವ ಮನಸ್ಸೊಂದು ಮತ್ತದನ್ನು ವಿದ್ಯಾಜ್ಞಾನದಿಂದ ಯಾವ ರೀತಿಯಲ್ಲಿ ಸರಿಯಾಗಿ ಉಪಯೋಗಿಸುವರೆಂಬುದು ಇನ್ನೊಂದು. ಪ್ರಜಾಸತ್ತೆಯು ಮುಂದುವರಿದ ರಾಷ್ಟ್ರಗಳಲ್ಲಿ ಸಹಾ ಕೆಲವು ಸಲ ಮತದಾರರು ಚುನಾವಣೆಯ ಸಮಯ ತಮ್ಮ ಸ್ವಂತ ಕಾಪಟ್ಯಗಳ ದೆಸೆಯಿಂದಲೋ ಅಥವಾ ಮತದ ಹಕ್ಕು ಜವಾಬ್ದಾರಿಕೆಯನ್ನು ಅರಿಯದೆಯೋ ಅಥವಾ ಮರವೆಯಾಗಿಯೋ ಚುನಾವಣಾರಂಗಕ್ಕೆ ಹೋಗದೆ ಉದಾಸೀನರಾಗಿರುವರು. ಇಂಥಾ ಬೇಜವಾಬ್ದಾರೀ ಪ್ರದರ್ಶನವು ನಮ್ಮ ಅನುಭವಕ್ಕೆ ಈಗಲೂ ಬರುತ್ತಿದೆ. ವಿದ್ಯಾವಂತರ ಸಂಖ್ಯೆಯು ಜಾಸ್ತಿಯಾದ ಹಾಗೆ ಜನರು ತಮ್ಮನ್ನು ಹಕ್ಕನ್ನೂ ಜಾಗರೂಕರಾಗಿ ಉಪಯೋಗಿಸುವರು. ಸರ್ವಸಾಮಾನ್ಯ ಜನರಲ್ಲಿ ಓದುಬರಹ ಲೆಕ್ಕವೆಂಬುದೇ ವಿದ್ಯೆ ಎಂದು ಭಾವಿಸಿದ್ದರು. ಬರೇ ಅಕ್ಷರಾಭ್ಯಾಸದಿಂದ ಜನರ ಮನಸ್ಸು ಬುದ್ಧಿ ವಿಕಾಸಗೊಳ್ಳುವದೆಂಬುದು ಸುಳ್ಳು. ಎಷ್ಟೋ ಸಲ ಅವಿದ್ಯಾವಂತರಾದ ಮುದುಕ ಮತದಾರರು ವಿದ್ಯಾವಂತರಾದ ತಮ್ಮ ಮಕ್ಕಳು ಮೊಮ್ಮಕ್ಕಳಿಗಿಂತ ಉತ್ತಮ ರೀತಿಯಲ್ಲಿ ಮತಕೊಟ್ಟದ್ದನ್ನು ನಾವು ಪ್ರತ್ಯಕ್ಷ ಕಂಡಿರುವೆವು, ಕೆಲವು ಸಲ ಸಾಮಾನ್ಯ ಜನರು ತಮ್ಮ ಅಂತಃಸ್ಫೂರ್ತಿಯಿಂದ ಕೊಟ್ಟ ಅಭಿಪ್ರಾಯವು ವಿದ್ಯಾವಂತರ ತರ್ಕಗಳಿಗೆ ಸರಿಹೋಲಿವೆ. ಹಲವು ಬಾರಿ ಸಾಮಾನ್ಯ ಜನರು ಸ್ವಾಭಾವಿಕವಾಗಿ ತೋರಿಸಿದ ಬುದ್ಧಿಕೌಶಲವನ್ನು ವಿದ್ಯಾವಂತರು ತೋರಿಸಲಿಲ್ಲ. ಪ್ರಾಚೀನ ಕಾಲದ ಎಥೇನಿಯ (Athenians) ಜನರು ಸಾರ್ವಜನಿಕ ಪ್ರಶ್ನೆಗಳನ್ನು ಸಾರ್ವಜನಿಕ ಸಭೆಯಲ್ಲಿ ಚರ್ಚಿಸಿ ನ್ಯಾಯಸಮ್ಮತವಾದ ತೀರ್ಮಾನಕ್ಕೆ ಬರುತ್ತಿದ್ದರು. ಆಧುನಿಕ ಕಾಲದ ಮತದಾರರು ತಮ್ಮ ಸ್ವಂತ ತಾಪತ್ರಯ ಉದ್ಯೋಗಗಳಲ್ಲಿ ಮಗ್ನರಾಗಿರುವದರಿಂದಲೂ ಮತ್ತು ರಾಷ್ಟ್ರಗಳು ದೊಡ್ಡದಾದುದರಿಂದಲೂ ಸರಕಾರದ ನಿತ್ಯಕಟ್ಟಳೆ ವ್ಯವಹಾರದಲ್ಲಿ ಕೈಹಾಕಲು ಜನರಿಗೆ ಅಸಾಧ್ಯವಾದ್ದರಿಂದ ಪತ್ರಿಕೆಗಳು ಮತ್ತು ಪಕ್ಷಗಳು ಸೂಚಿಸಿದಂತೆ ನಡೆಯುವರು. ಜನರಲ್ಲಿ ಬುದ್ಧಿಸೂಕ್ಷ್ಮತೆ ಆಲೋಚನೆ ಮತ್ತು ವಿಮರ್ಶೆಯನ್ನು ಹುಟ್ಟಿಸುವುದು ವಿದ್ಯೆಯಾಗಿರುವದು. ನಾಗರಿಕನಾಗಬೇಕಾದ ಗುಣಲಕ್ಷಣಗಳಲ್ಲಿ ತಿಳುವಳಿಕೆ ಎಂಬುದು ಒಂದು ಗುಣ ಮಾತ್ರವಾಗಿದೆ. ಸತ್ಯ ಮತ್ತು ಸಾರ್ವಜನಿಕ ಭಾವನೆ ಎಂಬವುಗಳು ಇದಕ್ಕಿಂತಲೂ ಹೆಚ್ಚಿನ ಅಗತ್ಯವಾದವುಗಳಾಗಿವೆ. ಓದು ಬರಹವೆಂದು ತಿಳುವಳಿಕೆಯ ಬಗ್ಗೆ ಒಂದು ದಾರಿ ಮಾತ್ರವಾಗಿದೆ. ಅಕ್ಷರಾಭ್ಯಾಸವೇ ನಿಜವಾದ ವಿದ್ಯೆಯೆಂದು ಭಾವಿಸುವದು ತಪ್ಪು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಶುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು,ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ಮೊಡವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಎಲ್ಲಾ ಕಡೆ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

1ನೇ ಪುಟದಿಂದ ಮುಂದರಿಸಿದ್ದು.

ಮಾತು ಬಹಳ ಚಿಕ್ಕದಾಗಿ ತೋರುತ್ತದೆ! ಹಿಂದುಳಿದವರ ಉದ್ಧಾರವಾಗಬೇಕು, ಅವರನ್ನು ಮುಂದೆ ತರಬೇಕೆನ್ನುವ ವಾದ ನ್ಯಾಯವಾದುದಾದರೂ ಆ ಜಾತಿಯವರನ್ನು ಅಧಿಕಾರದಲ್ಲಿ ಕೂಡ್ರಿಸುವದರಿಂದಲೇ ಆ ಜನದ ಏಳಿಗೆಯಾದೀತೆನ್ನುವದು ಶುದ್ಧ ತಪ್ಪು ಕಲ್ಪನೆ! ರಾಷ್ಟ್ರೋನ್ನತಿಗೆ ಮುಖ್ಯವಾದ ಪ್ರತಿಭೆ-ವ್ಯಕ್ತಿವೈಶಿಷ್ಟ್ಯ ಉಳ್ಳವನು ಯಾವ ಜಾತಿಯವನಾದರೇನು? ಜಾತೀಯ ಮೋಹದಿಂದ—ಹಾಳು ಸಂಪ್ರದಾಯದಿಂದ ತೀರ ಅನನುಭವಿಕನನ್ನು ಆರಿಸುವುದರಲ್ಲಿ ಅರ್ಥವಿಲ್ಲ. ಮಾತ್ರವಲ್ಲ ಇದರಿಂದ ದೇಶಕ್ಕೆ ಕೇಡು ಬಗೆದಂತೆಯೆ!

ಈ ನಾಲ್ಕು ವರ್ಷಗಳಲ್ಲಿ ನಾವು ಕಲಿತದ್ದೆಂದರೆ ಜಾತಿ-ಜಾತಿಗೆ ಇದಿರುನಿಲ್ಲಿಸುವುದನ್ನೇ! "ನಾವು ಹಿಂದುಳಿದವರು-ನಮ್ಮನ್ನು ಪ್ರತಿನಿಧೀಕರಿಸುವವರಿಲ್ಲ. ಅದಕ್ಕೆ ನಮ್ಮ ಜಾತಿಗೊಬ್ಬ ಮಂತ್ರಿ ಬೇಕೆಂದು" ಈ ರೀತಿಯ ಘೋಷಣೆಯನ್ನು ಹೊರಡಿಸುವ ಪಕ್ಷಗಳ ಮನೋಭೂಮಿಕೆಯಲ್ಲಿ ತಾವು ಕಳಿಸುವ ಉತ್ಸವದ ಮೂರ್ತಿಯಿಂದ ಆ ಕಾರ್ಯ ಆದೀತೇ? ಎನುವ ಕಲ್ಪನೆ ಕೂಡಾ ಇರುವುದಿಲ್ಲ. ಪಕ್ಷಗಳಿಗೂ ಇದೇ ರೀತಿಯ ವ್ಯಾಧಿ ತಗಲಿದೆ, ಜಾತಿಯ ಬಲವಿನಿಂದ ಸ್ಥಾನವನ್ನು ಗಳಿಸುವ ಸಲುವಾಗಿ ಎಷ್ಟೋ ಜನರು ತಮ್ಮ ಮನಸ್ಸಾಕ್ಷಿಗೆ ವಿರೋಧವಾದ ಪಕ್ಷವನ್ನು ಸೇರಿದ್ದುಂಟು! ಕಾಂಗ್ರೆಸ್ಸಿನಂತಹ ಶ್ರೇಷ್ಠ ಸಂಸ್ಥೆಯಲ್ಲೂ ಜಾತೀಯ ಭೂತ ಸೇರಿಬಿಟ್ಟಿದೆಯೆಂದಮೇಲೆ ನಮ್ಮ ರಾಜಕೀಯ ಸುಧಾರಣೆಯಾದೀತೆಂದು ಭಾವಿಸುವದಾದರೂ ಹೇಗೋ!

ಹಿಂದುಳಿದವರಿಗೂ ಅಲ್ಪಸಂಖ್ಯಾತರಿಗೂ ಅನ್ಯಾಯವಾಗದಂತೆ ಜಾಗ್ರತೆ ವಹಿಸುವದು ಆಡಳಿತವನ್ನು ವಹಿಸುವ ಪಕ್ಷದ ಮುಖ್ಯ ಕರ್ತವ್ಯ! ಜಾತೀಯತೆಯ ಮೂಲಕ ನಮ್ಮ ಪ್ರತಿನಿಧಿಗಳೆಂದು ಕಳಿಸಿದವರು ಪ್ರಾಂತದಲ್ಲಿಯೋ ಕೇಂದ್ರದಲ್ಲಿಯೋ ಪೂರ್ವ ಪಶ್ಚಿಮವೆಂಬಂತೆ ವರ್ತಿಸುವದನ್ನು ನಾವೀಗಲೂ ನೋಡುತ್ತಲಿದ್ದೇವೆ. ಮುಂದಾದರೂ ಹೇಗಾದೀತೆಂದು ನಾವೀಗಲೇ ಊಹಿಸಬಹುದ. ನಾಲ್ಕು ವರ್ಷಗಳಿಂದ ನಾವು ರಾಜಕೀಯ ಕಾಯಿದೆಗಳ ಮೂಲಕವೂ, ವೈಯಕ್ತಿಕವಾಗಿಯೂ, ಒಳಸಂಚಿನ ಮೂಲಕವೂ ನಡಸಿದ ಕಾರಸ್ಥಾನದಿಂದ ಈ ಜಾತೀಯತೆ ವೃದ್ಧಿಯಾಗುತ್ತಾ, ರಾಜಕೀಯರಂಗದಲ್ಲೂ ತನಗೆ ಸ್ಥಾನಬೇಕೆನುವ ಸ್ವಾರ್ಥಕ್ಕಾಗಿ ಹೋರಾಟ ನಡೆಸಿದೆ. ಸ್ವಾರ್ಥ ಸ್ವಾಭಿಮಾನ ಸಂಕುಚಿತತೆಗಳೇ ಈ ಹೋರಾಟದ ಮುಖ್ಯ ತತ್ವಗಳು. ವಿಚಾರಶೀಲ ಗುಣ ಉಳ್ಳಂತಹ ಅನುಭವೀ ವ್ಯಕ್ತಿಗಳ ಅತ್ಯುಕ್ತ ಯೋಜನೆಗಳು ಇಂದಿನ ಜಾತೀಯತೆಯಿಂದ ಮಣ್ಣುಮುಕ್ಕಿವೆ. ನಿರಕ್ಷರ ಕುಕ್ಷಿಗಳೇ ಹೆಚ್ಚಾಗುತ್ತ ಈ ಮತದಾನ ಪದ್ಧತಿಯಲ್ಲಿ ಈ ಜಾತೀಯ ಬಾಯಿಬಡುಕರ ಡಂಗುರಕ್ಕೆ ಮೊದಲ ಸ್ಥಾನ ಸಿಕ್ಕಿದರೆ ಆಶ್ಚರ್ಯಪಡುವಂತಿಲ್ಲ.

ನಮ್ಮ ರಾಜಕೀಯವನ್ನು ಈ ಬಗೆಯ ಅರಾಜಕತೆಗೆ ಇಳಿಸುವ ಕಾರ್ಯವನ್ನು ಜಾತೀಯತೆ ಮಾಡುತ್ತಿದೆ. ಈ ಗಂಡಾಂತರವನ್ನು ತಪ್ಪಿಸಿ ದೇಶದ ಆಡಳಿತವನ್ನು ವಿಚಾರವಂತರ—ತಿಳುವಳಿಕೆಯುಳ್ಳವರ ಕೈಯಲ್ಲಿ ಕೊಡುವದು ಮತದಾರರ ಮುಖ್ಯ ಕರ್ತವ್ಯವಾಗಿದೆಯೆಂಬುದನ್ನು ನಾವು ಮರೆಯಬಾರದು!

ಜನಮತ

ಕನ್ನಡಿಗರಿಗೆ ಬೇಕಾದುದೇನು?

ಕರ್ನಾಟಕ ಏಕೀಕರಣ ಪಕ್ಷಕ್ಕೆ ಬೆಂಬಲಕೊಡುವ ಮೊದಲು ಕನ್ನಡಿಗರು ದಯಮಾಡಿ ಆಗ್ರಹರಹಿತ ವಿವೇಕ ಬುದ್ಧಿಯಿಂದ ಸಾರ ಸಾರ ವಿಚಾರ ಮಾಡಿಕೊಳ್ಳಲಿ.

ರಾಜೀನಾಮೆ ನಿರ್ಣಯ

೩-೧೨-'೪೯ರಲ್ಲಿ ಗದಗಿನಲ್ಲಿ ಸೇರಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮಹಾಸಭೆಯು, ಕರ್ನಾಟಕ ಪ್ರಾಂತರಚನೆಯ ಕುರಿತು ಕಾಂಗ್ರೆಸ್ ವರಿಷ್ಠರು ತಳೆದ ಧೋರಣೆಯಿಂದ ತೀವ್ರ ಜಿಗುಪ್ಸೆಗೊಂಡು, ಪ್ರತ್ಯಕ್ಷ ಹೋರಾಟದ ಪೂರ್ವತಯಾರಿಯಾಗಿ ಪ್ರಾಂತ ಮತ್ತು ಕೇಂದ್ರದ ಕರ್ನಾಟಕದ ಶಾಸನ ಸದಸ್ಯರೆಲ್ಲರೂ ರಾಜೀನಾಮೆ ಕೊಡಬೇಕೆಂದು ಕರೆಯಿತ್ತಿತು. ಇಂತಹ ಉಗ್ರ ನಿರ್ಣಯ ಮಾಡಲು, ಈಗ ಕಾಂಗ್ರೆಸಿನ ಪ್ರತಿಯಾಗಿ ಏಕೀಕರಣ ಪಕ್ಷಹೂಡಲು ಮುಂದಾಗಿರುವ ಶ್ರೀ ಕೆ. ಆರ್. ಕಾರಂತ್ ಮತ್ತು ಜನಾಬ ಹೆಗ್ಡೆಯವರು ಬಹುಮಟ್ಟಿಗೆ ಕಾರಣರೆಂಬುದು ಅಭಿನಂದನೀಯ. ಈ ನಿರ್ಣಯದಿಂದಾಗಿ ಇಡೀ ಕರ್ನಾಟಕದಲ್ಲೊಮ್ಮೆ ನವಚೈತನ್ಯ ಉಕ್ಕೇರಿ ಹರಿಯಿತು.

ಈ ರಾಜೀನಾಮೆಯ ನಿರ್ಣಯವನ್ನು ಹೇಗಾದರೂ ಮೂಲೆಗೊತ್ತಬೇಕೆಂದಿದ್ದ ಕೆಲವರ ನೆರವು ಪಡೆದೋ ಏನೋ ಕಾಂಗ್ರೆಸ್ ವರಿಷ್ಠರು ತಾ. ೩೧-೧೨-'೪೯ರಲ್ಲಿ ಸದ್ರಿ ನಿರ್ಣಯವನ್ನು ನಿಷೇಧಿಸಿ, ಕನ್ನಡ ಜನತೆಯ ಮುಖಭಂಗ ಮಾಡಿದರು. ಅಂದು ದಿವಂಗತ ಸರ್ದಾರ್ ಪಟೇಲರೇ ಮೊದಲಾದವರು ವಹಿಸಿದ ಉಗ್ರ ಧೋರಣೆಯನ್ನು ಅಷ್ಟೇ ಉಗ್ರತೆಯಿಂದ ಶ್ರೀ ನಿಜಲಿಂಗಪ್ಪನವರು ಪ್ರತಿಭಟಿಸುತ್ತಿದ್ದರೆ, ಕರ್ನಾಟಕದಲ್ಲಿ ಕಾಂಗ್ರೆಸ ಒಡೆದು ಪುಡಿ ಪುಡಿಯಾಗುತ್ತಿತ್ತು. ಕ್ರಮಬದ್ಧ ಕಾಂಗ್ರೆಸ್ ಕಮಿಟಿಗಳ ಸ್ಥಳದಲ್ಲಿ 'ಎಡ್‌ಹೋಕ್' ಕಮಿಟಿಗಳು ಸ್ಥಾಪಿಸಲ್ಪಟ್ಟು, ಎಂತಹ ಪರಿಸ್ಥಿತಿಯಲ್ಲಿಯೂ ಅಧಿಕಾರಕ್ಕೆ ಅಂಟಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲವೇ ಮಂದಿ ಕಾಂಗ್ರೆಸಿನ ಹೆಸರಿನಲ್ಲಿ ಅಧಿಕಾರ ನಡೆಯುವಂತಾಗುತ್ತಿತ್ತು.

ಶ್ರೀ ನಿಜಲಿಂಗಪ್ಪನವರ ಸೌಮ್ಯ ಧೋರಣೆ

ಸ್ವಭಾವತಃ ಸೌಮ್ಯ ಮೂರ್ತಿಯಾದ ಶ್ರೀ ನಿಜಲಿಂಗಪ್ಪನವರು ಭಯಂಕರ ಅಗ್ನಿಪರೀಕ್ಷೆಗೊಳಗಾಗಿ, ಕಟ್ಟಕಡೆಗೆ ಕಾಂಗ್ರೆಸಿನೊಳಗಿದ್ದುಕೊಂಡೇ ಕರ್ನಾಟಕ ಪ್ರಾಂತರಚನೆಗಾಗಿ ಹೋರಾಡುವ ನಿರ್ಧಾರ ಮಾಡಿದರು. ಯಾಕೆಂದರೆ ಕಾಂಗ್ರೆಸ್ಸೆಂಬುದು ಹಿಂದೀ ಜನತಾ ಸಂಸ್ಥೆ. ಅದಕ್ಕಾಗಿ ಎಲ್ಲಾ ಕಾಂಗ್ರೆಸಿಗರೂ ಶಕ್ತ್ಯಾನುಸಾರ ತ್ಯಾಗ ಮತ್ತು ಸೇವೆ ಸಲ್ಲಿಸಿರುವರು. ಕಾವಲಿ ಬಿಸಿಯೆಂದು ದುಡುಕಿ ಒಲೆಗೆ ಹಾರಿಬಿಡುವುದರಿಂದ ನ್ಯಾಯಪಟ್ಟು ಕೊಳ್ಳಬಹುದೇ ಹೊರತು ಉದ್ದೇಶಸಿದ್ಧಿಯಾಗುವುದಿಲ್ಲ. ಆದುದರಿಂದ ಒಂದೊಮ್ಮೆಗೆ ಎಷ್ಟೊಂದು ಅಪಮಾನ ಸಹಿಸಬೇಕಾಗಿ ಬಂದರೂ ಎಂತಹ ನಿರಾಶೆಗೊಳಗಾದರೂ ಕ್ರಮಶಃ ಸತತ ಪ್ರಯತ್ನ ಮಾಡಿ, ಕಾಂಗ್ರೆಸ್ ಮುಖಂಡರ ಮನಸ್ಸನ್ನು ಬದಲಾಯಿಸಿ, ಪ್ರಾಂತ ನಿರ್ಮಾಣವನ್ನು ಸಾಧಿಸಬಹುದೆಂಬ, ಅದು ದುರ್ಬಲವೆಂದು ತೋರಿದರೂ ಯಾವದೃಷ್ಟಿಯ ಧೋರಣೆಯನ್ನು ನಮ್ಮ ಪ್ರಾಂತಾಧ್ಯಕ್ಷರು ವಹಿಸಿ ಆ ತನ್ನ ಮನೋನಿರ್ಧಾರ ಮತ್ತು ಸ್ವಭಾವಕ್ಕನುಗುಣವಾಗಿ ಇಂದೀಗ ಎರಡು ವರುಷಗಳಿಂದ ಕರ್ನಾಟಕ ಪ್ರಾಂತ ರಚನೆಗಾಗಿ ಅವಿರತ ಪ್ರಯತ್ನಿಸುತ್ತಾ ಬಂದಿರುತ್ತಾರೆ. ಕೆಲವಮ್ಮೆಗೆ ಅವರ ಪ್ರಯತ್ನಕ್ಕೆ ತಕ್ಕ ಫಲವೂ ದೊರೆಯುತ್ತದೆ. ಬೆಂಗಳೂರಲ್ಲಿ ಪ್ರಾಂತರಚನಾ ಪ್ರಶ್ನೆಯ ಕುರಿತು ತೀವ್ರ ಚರ್ಚೆ ನಡೆದು ಕಟ್ಟಕಡೆಗೆ ಪಂಡಿತ ನೆಹರೂಗಳೇ ಅದನ್ನೊಪ್ಪಬೇಕಾಯಿತಲ್ಲದೆ, ಇಂದೀಗ ಆ ಬಗ್ಗೆ ಗಡಿ ನಿರ್ಣಯ ಸಮಿತಿಯನ್ನು ನೇಮಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿರುತ್ತಾರೆ.

ಶ್ರೀ ಕಾರಂತರು ಮತ್ತು ಶ್ರೀ ಹೆಗ್ಡೆಯವರು ಸುಮ್ಮನಿದ್ದುದೇಕೆ?

ತಾ. ೧೦-೬-೫೦ರಲ್ಲಿ ಸೇರಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕೌನ್ಸಿಲಿನ ಸಭೆಯು ಕಾಂಗ್ರೆಸ್ ವರಿಷ್ಠರಿಗೆ ವಿನೀತೋಪದೇಶ ಮಾಡಿ, ಕಾಂಗ್ರೆಸಿನ ಅಧೀನವಿದ್ದು ಎಷ್ಟೊಂದು ಸ್ವತಂತ್ರ ಹಾಗೂ ಸ್ವಾಭಿಮಾನದ ನಿರ್ಣಯ ಮಾಡಬಹುದೋ ಅದನ್ನು ಮಾಡಿತು. ಆ ಮೇಲೆ ತಾ. ೯-೭-೫೦ರಲ್ಲಿ ಹಾವೇರಿಯಲ್ಲಿ ಜರಗಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ, ಶ್ರೀ ಸಿದ್ದಪ್ಪ ಹೊಸಮನಿಯವರ ಹಿರಿತನದ ಸಮಾಶ್ರಯದಲ್ಲಿ ಮತ್ತು ಶ್ರೀಗಳಾದ ಕಾರಂತ ಮತ್ತು ಹೆಗ್ಡೆಯವರೇ ಮೊದಲಾದ ಉಗ್ರಗಾಮಿಗಳ ಸಹಪದೆಯ ನೆರವಿನಿಂದ, ಗದಗಿನ ಕೆ. ಪಿ. ಸಿ. ಸಿ. ಕೌನ್ಸಿಲಿನ ನಿರ್ಣಯವನ್ನು ಸಮರ್ಥಿಸುವ, ಅದಕ್ಕೆ ಕಾಂಗ್ರೆಸ್ ವರಿಷ್ಠರು ಒಪ್ಪದಿರುವುದನ್ನು ಖಂಡಿಸುವ, ರಾಜಕೋಟೆಯವರನ್ನು ಅಭಿನಂದಿಸುವ, ಪ್ರಕೃತ ಸದ್ರಿ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವ, ಮುಂಬರುವ ಚುನಾವಣೆಯ ಮೊದಲೇ ಪ್ರಾಂತರಚನೆಯ ವ್ಯವಸ್ಥೆಯಾಗಬೇಕು: ಇಲ್ಲವಾದರೆ ಆ ವಿಷಯವನ್ನೇ ಪ್ರಧಾನವಾಗಿರಿಸಿ ಮುಂದಿನ ಚುನಾವಣೆ ನಡೆಯಬೇಕೆಂಬರ್ಥದ ಠರಾವು ಸರ್ವಸಮ್ಮತಿಯಿಂದ ಮಂಜೂರಾಯಿತು.

ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಡೆಬಿಡದ ಯತ್ನ

ಹಾವೇರಿಯ ನಿರ್ಣಯಕ್ಕನುಗುಣವಾಗಿ ಕರ್ನಾಟಕ ಪ್ರಾಂತ ಸಾಧಿಸಲು ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೂ, ಶ್ರೀ ನಿಜಲಿಂಗಪ್ಪನವರೂ ತಮ್ಮಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲ ತ್ರಿಕರಣಪೂರ್ವಕವಾಗಿ ನಡೆಸುತ್ತಾ ಬಂದಿರುವರು. ಇದರಿಂದಾಗಿ ಅವರು ಸರ್ದಾರ್ ವಲ್ಲಭಾಯಿ ಪಟೇಲರ ವಿರೋಧ ಗಳಿಸಿಕೊಂಡಿದ್ದರು. ಇಂದೀಗ ಪಂಡಿತ ನೆಹರೂರವರ ಅವಕೃಪೆಗೊಳಗಾಗಿರುವರು. ಕಾಂಗ್ರೆಸ್ಸಿನೊಳಗಿಂದು ಭಾಷಾವಾರು ಪ್ರಾಂತ ರಚನಾ ಆಂದೋಲನದ ಚಾಲಕರೇ ನಮ್ಮ ಪ್ರಾಂತಾಧ್ಯಕ್ಷರಾಗಿರುವರೆಂದರೆ ಅತಿಶಯೋಕ್ತಿಯಾಗಲಾರದು. ಅವರ ನಿರಂತರವಾದ ಪ್ರಯತ್ನದಿಂದಾಗಿ ಭಾಷಾವಾರು ಪ್ರಾಂತವೆಂದರೇನೇ ಕೆಂಡದಂತೆ ಕುದಿಯುತ್ತಿದ್ದ ಪಂಡಿತ ನೆಹರೂಗಳೂ ಅದನ್ನು ಈ ಸಲದ ಚುನಾವಣಾ ಘೋಷಣೆಯಲ್ಲಿ ಸೇರಿಸ

(೯ನೇ ಪುಟ ನೋಡಿರಿ.)

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ಎ. ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ವರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪



ನೆಹ್ರೂ ತಂಡನ್ನರೊಳಗೆ ನಡೆದುದೇನು?

ಭಾರತದ ಮುಖ್ಯ ಮಂತ್ರಿ ನೆಹ್ರೂರವರ ರಾಜೀನಾಮೆಯ ಪ್ರಕರಣವು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ಪರಿಹರಿಸಲಾಗದೆ ಎ. ಐ. ಸಿ. ಸಿ. ಯನ್ನೇ ಕರೆಯುವ ಪ್ರಸಂಗ ಬಂದದ್ದಕ್ಕೆ ನಿಜವಾಗಿಯೂ ವಿಷಾದಿಸಬೇಕಾಗಿದೆ. ನೆಹ್ರೂ ತಂಡನ್ನರನ್ನೇ ಮಾತುಕತೆಗೆ ಬಿಡಬೇಕೆಂಬ ಸಮಿತಿಯ ಪ್ರಯತ್ನವು ಅವರೊಳಗೆ ನಡೆಸಿದ ಮಾತುಕತೆಗಳಿಂದ ಫಲಕಾರಿಯಾಗಲಿಲ್ಲ. ಅಧ್ಯಕ್ಷ ತಂಡನ್ನರು ಕಾರ್ಯಕಾರೀ ಸಮಿತಿಯ ಪುನರ್ಘಟನೆಯನ್ನು ಒಪ್ಪಲು ಸಿದ್ಧರಿಲ್ಲ. ತಂಡನ್ನರೂ ಅವರು ಸಹಕಾರ್ಯಕರ್ತರೂ ನೆಹ್ರೂರವರ ಸೂಚನೆಗಳನ್ನು ಘಟನಾತ್ಮಕವಾದ ತೊಡಕನ್ನು ಮುಂದೆ ಮಾಡಿ ವಿಫಲಗೊಳಿಸುವ ಹಟ ಹಿಡಿದದ್ದರಿಂದ ನೆಹ್ರೂರವರು ಸಮಿತಿಯೊಡನೆ ಕಾರ್ಯ ನಡೆಸುವದು ಕಷ್ಟಸಾಧ್ಯವಾಗಿದೆ. ಕಾಂಗ್ರೆಸ್ಸಿನಲ್ಲಿರುವ ಬಿಕ್ಕಟ್ಟನ್ನು ಹೋಗಲಾಡಿಸಿ ಐಕ್ಯ ಸಾಧನೆಗಾಗಿ ಶ್ರೀ ತಂಡನ್ನರು ತಾಂತ್ರಿಕವಾಗಿ ಹೇಳುವಂತಹ ಸೂಚನೆಗಳಿಂದ ಬಿಕ್ಕಟ್ಟು ಅಪರಿಹಾರ್ಯವಾಗಿರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಕೊಂಚ ವಿಶಾಲ ಧೋರಣೆಯನ್ನು ವಹಿಸಬೇಕೆನ್ನುವದು ನೆಹ್ರೂರವರ ವಾದ. ತಂಡನ್ನರೂ ಅವರ ಅನುಯಾಯಿಗಳೂ ಅದಕ್ಕೆ ಸಿದ್ಧರಿಲ್ಲ. ತೀವ್ರವಾದ ಮತಭೇದವಿರುವ ಅಂಶಗಳಾವುವೆಂಬುದು ಬೆಳಕಿಗೆ ಬರದೆ ಹೋದರೂ ಪಾಕಿಸ್ತಾನ ಸಂಬಂಧ, ಪಂಚವಾರ್ಷಿಕ ಯೋಜನೆ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಹಾಗೂ ಪ್ರಾಂತಿಕ ಸರಕಾರದಲ್ಲಿಯ ಮತಭೇದ ಮುಂತಾದ ವಿಚಾರಗಳಲ್ಲಿ ನೆಹ್ರೂ ತಳೆದ ತಾತ್ವಿಕವಾದ ಧೋರಣೆಗೆ ತಂಡನ್ನರು ಘಟನಾತ್ಮಕವಾಗಿ ವಿರುದ್ಧ ಭಾವನೆಯನ್ನು ತಾಳಿದ್ದಾರೆ. ಈ ಸಂದರ್ಭದಲ್ಲಿ ನೆಹ್ರೂ ಕಾರ್ಯಸಮಿತಿಯಲ್ಲುಳಿಯುವುದು ಶಕ್ಯವಿಲ್ಲ. ನೆಹ್ರೂರವರನ್ನು ಬಿಟ್ಟು ತಂಡನ್ನರ ಆದೇಶದಂತೆ ಕಾಂಗ್ರೆಸು ಉಳಿಯಲಾರದು. ಅಲ್ಲದೆ ತಂಡನ್ನರ ಜಾತೀಯತೆಯ ಸಂಕುಚಿತ ಭಾವನೆ ನೆಹ್ರೂರವರ ವಿಶಾಲ ಧೋರಣೆಯ ಕಾರ್ಯಕ್ರಮಕ್ಕೆ ವಿಘಾತುಕವಾಗಿದೆ. ಪಾಕಿಸ್ತಾನ ಧೋರಣೆಯಲ್ಲಿ ಭಾರತ ತಳೆಯುತ್ತಿರುವ ಸಾವಧಾನ ಧೋರಣೆಗೆ ತಂಡನ ಪಕ್ಷದವರು ಅನುಕೂಲರಾಗಿಲ್ಲವೆಂಬುದು ವಿದಿತ ವಿಚಾರವೇ. ಪಾಕಿಸ್ತಾನದ ತಿರುಬೊಬ್ಬೆಗೆ ಸರಿಯಾಗಿ ಭಾರತವು ಪ್ರತಿಭಟನೆ ಕೈಗೊಂಡರೆ ಭಾರತವು ಈ ವರೆಗೆ ತಾನು ಜಾಗತಿಕ ರಂಗದಲ್ಲಿ ಗಳಿಸಿಕೊಂಡು ಬಂದ ಸಾಂಸ್ಕೃತಿಕ ನೈತಿಕ ಮಹತ್ವಿಕೆಯನ್ನು ಸಂಪೂರ್ಣ ಕಳೆದುಕೊಳ್ಳುತ್ತದೆ. ಅಷ್ಟು ಮಾತ್ರವೇ ಅಲ್ಲ; ಕಾಂಗ್ರೆಸ್ಸಿನ ಮೂಲಭೂತ ತತ್ವಕ್ಕೇನೇ ಧಕ್ಕೆ ಬರುವ ಸಂಭವವಿದೆ. ಅರ್ಧ ಶತಮಾನದಿಂದ ನಡೆದುಕೊಂಡು ಬಂದ ಒಂದು ವಿಶಿಷ್ಟ ಸಂಪ್ರದಾಯವನ್ನೇ ಮರೆಯಬೇಕಾಗುತ್ತದೆ. ನೆಹ್ರೂರವರು ಆ ವಿಶಿಷ್ಟ ಸಂಪ್ರದಾಯಕ್ಕೆ ಅಂಟಿಕೊಂಡಿರುವವರು. ಸಂಕುಚಿತ ಜಾತೀಯತೆಗೆ ಅವರು ತಲೆಬಾಗುವಂತಿಲ್ಲ. ಅಂತಲೇ ತಂಡನ್ನರೂ ಅವರ ಅನುಯಾಯಿಗಳೂ ಕಾಂಗ್ರೆಸಿನೊಳಗೆ ಐಕ್ಯ ಸಾಧಿಸುವಲ್ಲಿ ನೆಹ್ರೂರವರಿಗೆ ಅನುಕೂಲರಾಗುವುದು ಶಕ್ಯವಿಲ್ಲ. ರಫಿ ಅಹಮ್ಮದ ಕಿದ್ವಾಯಿಯವರ ರಾಜೀನಾಮೆಯ ಪ್ರಕರಣದಲ್ಲಿ ನೆಹ್ರೂರವರಿಗೆ ತಂಡನ್ನರು ತಳೆದ ಧೋರಣೆಯಿಂದ ವಿಷಾದವಾಗಿದೆ. ರಫಿಯವರನ್ನು ತಿರುಗಿ ಮಂತ್ರಿಪದಕ್ಕೆ ತೆಗೆದುಕೊಂಡದ್ದರ ವಿಚಾರದಲ್ಲಿ ತಂಡನ್ನರು ಸ್ಪಷ್ಟೀಕರಣ ಕೇಳಿದ್ದು ಘಟನಾ ರೀತಿಯಲ್ಲಿ ಸರಿ. ಆದರೆ ಕಾಂಗ್ರೆಸ್ಸಿನಲ್ಲಿ ಐಕ್ಯ ಸಾಧಿಸಿ ಸದ್ಯದ ಪರಿಸ್ಥಿತಿಯನ್ನು ಎದುರಿಸುವ ನೆಹ್ರೂರವರ ವಿಶಾಲ ಧೋರಣೆಗೆ ವಿರುದ್ಧವಾದುದು! ಅಂತೆಯೇ ನೆಹ್ರೂರವರು ರಫಿಯವರು ಅಧ್ಯಕ್ಷರ ಪರವಾಗಿ ಕೈಗೊಂಡ ಟೀಕೆಯನ್ನು ಪ್ರತ್ಯಕ್ಷವಾಗಿ ಪ್ರತಿಭಟಿಸಬೇಕಾಯಿತು! ಕೃಪಲಾನಿ ಹಾಗೂ ಅವರ ಮಿತ್ರರು ಕಾಂಗ್ರೆಸ್ಸನ್ನು ತ್ಯಜಿಸುವದಕ್ಕೆ ತಂಡನ್ನರ ಇದೇ ಬಗೆಯ ಧೋರಣೆ ಕಾರಣವಾಯಿತು. ಕೃಪಲಾನಿ ರಫಿಯವರು ಈ ಕಾರ್ಯಕಾರೀ ಸಮಿತಿಯೊಂದಿಗೆ ನೆಹ್ರೂರವರು ಯಾವ ಸಂಧಾರಣೆಯ ಮಾರ್ಗವನ್ನೂ ಹುಡುಕಲಾರರು–ಅದು ಶಕ್ಯವೂ ಇಲ್ಲ ಎಂದದ್ದು ಸ್ಪಷ್ಟವೇ ಆಗಿದೆ.

ನೆಹ್ರೂರವರೇ ಕಾಂಗ್ರೆಸ್ಸಿನ ಸಾರಥ್ಯವನ್ನು ವಹಿಸಿಕೊಳ್ಳಬೇಕೆಂದು ದೇಶ ಬಯಸುತ್ತಿದೆ. ಅದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯವೂ, ದೇಶದಲ್ಲಿ ಶಾಂತಿ ಸಮಾಧಾನಗಳೂ ಉಂಟಾಗಬಹುದು. ತಂಡನ್ನರ ಹಟಮಾರಿತನದಿಂದ ನೆಹ್ರೂರವರ ಉತ್ಕೃಷ್ಟ ಕಾರ್ಯಗಳಿಗೆ ಸಹಜವಾಗಿಯೂ ಧಕ್ಕೆಯಾಗುತ್ತದೆ. ತಂಡನ್ನರು ಕರ್ನಾಟಕ ಸಂಚಾರ ಕೈಗೊಳ್ಳುವ ಮೊದಲು ಮುಂಬಯಿಯಲ್ಲಿ, "ನಾನು ಕೆಲವೊಂದು ತತ್ವಗಳನ್ನು ನಿಷ್ಠುರವಾಗಿ ಅನುಸರಿಸುತ್ತಿದ್ದೇನೆ ನನಗೆ ಕರ್ತವ್ಯವೇ ಪ್ರಾಧಾನ, ಸ್ವಧರ್ಮ ಪರಿಪಾಲನೆ ಮುಖ್ಯ" ಎಂದು ಹೇಳಿರುವದನ್ನು ಲಕ್ಷಿಸಿದರೆ ಅವರಲ್ಲಿಯೂ ನೆಹ್ರೂರಲ್ಲಿಯೂ ಉಂಟಾಗಿರುವ ಮತಭೇದಗಳು ಅಪರಿಹಾರ್ಯನೆಂದು ಸ್ಪಷ್ಟವಾಗದೇ?

ಸಪ್ಟಂಬರ 7–8ಕ್ಕೆ ನಾಗಪುರದಲ್ಲಿ ನಡೆಯಲಿರುವ ಎ. ಐ. ಸಿ. ಸಿ ಅಧಿವೇಶನವು ಈ ಮಹತ್ವದ ವಿಚಾರವನ್ನು ಹೇಗೆ ನಿರ್ಣಯಿಸುವದೋ ಕುತೂಹಲದಿಂದ ನೋಡಬೇಕಾಗಿದೆ. ತಂಡನ್ನರೂ ಸಮಿತಿಯ ಸದಸ್ಯರೂ ರಾಜೀನಾಮೆಯನ್ನಿತ್ತು ನೆಹ್ರೂರವರಿಗೇನೇ ಆ ಪಟ್ಟವನ್ನು ಕಟ್ಟಿ ಅವರಿಗೆ ಬೇಕಾದವರನ್ನು ಆರಿಸಿಕೊಳ್ಳುವಂತೆ ಮಾಡಿಕೊಡುವದು ಯೋಗ್ಯವೇ ಆಗಿದೆ. ನೆಹ್ರೂರವರು ತಂಡನ್ನರು ರಾಜಿಯನ್ನಿತ್ತರೆ ತಾನು ಕಾಂಗ್ರೆಸ್ಸಿನ ಅಧ್ಯಕ್ಷನಾಗಲಾರೆನೆನ್ನುತ್ತಾರೆ. ಕಾರ್ಯಕಾರೀ ಸಮಿತಿಯಲ್ಲಿ ಪುನರ್ಘಟನೆಯೂ, ತಂಡನ್ನರ ಧೋರಣೆಯಲ್ಲಿ ಬದಲಾವಣೆಯೂ ಅವರಿಗೆ ಬೇಕಾಗಿದೆ. ನೆಹ್ರೂ ಅಧಿಕಾರವನ್ನು ವಹಿಸಿಕೊಳ್ಳುವದಾದರೆ ನಾವು ರಾಜಿಯನ್ನೀಯಲು ಸಿದ್ಧರಿದ್ದೇವೆ; ಆದರೆ ಪುನರ್ಘಟನೆ ಶಕ್ಯವಿಲ್ಲವೆಂದು ತಂಡನ್ ಸ್ಪಷ್ಟೀಕರಿಸಿರುವರು. ಆದುದರಿಂದ ಎ. ಐ. ಸಿ. ಸಿ.ಗೆ ಇರುವ ಮುಖ್ಯ ದಾರಿಗಳೆರಡು: ಒಂದೋ ನೆಹ್ರೂರವರ ರಾಜಿನಾಮೆಯನ್ನು ಸ್ವೀಕರಿಸಿ ತಂಡನ್ನರ ಆದೇಶದಂತೆ ನಡೆಯುವುದು. ಇನ್ನೊಂದು, ತಂಡನ್ನರನ್ನೂ ಅವರ ಅನುಯಾಯಿಗಳನ್ನು ರಾಜಿಯೀಯುವಂತೆ ಕೇಳಿಕೊಂಡು ನೆಹ್ರೂರವರು ಕಾಂಗ್ರೆಸ್ಸಿನ ಸಾರಥ್ಯವನ್ನು ವಹಿಸಿಕೊಳ್ಳುವಂತೆ ನೆಹ್ರೂರವರ ಮನವೊಲಿಸುವುದು. ತಂಡನ್ನರು ತನ್ನ ಧೋರಣೆಯನ್ನು ಸ್ವಲ್ಪವೂ ಬದಲಾಯಿಸದೆ ಕಡ್ಡಾಯವಾಗಿ ಅದು ಆಚರಣೆಯಲ್ಲಿ ಬಂದೇ ತೀರಬೇಕೆಂದು ಆಶಿಸಿದ್ದರಿಂದ ಉಭಯತರಲ್ಲೂ ಒಮ್ಮತವಾದೀತೆಂದು ಭಾವಿಸುವುದು ಕಷ್ಟವೇ. ದೇಶದಲ್ಲುಂಟಾಗಿರುವ ಕಲುಷಿತ ವಾತಾವರಣವನ್ನು ತಿಳಿಯಾಗಿಸುವದಕ್ಕೆ ನೆಹ್ರೂರವರೊಬ್ಬರೇ ಸಮರ್ಥರೆಂಬುದು ಲೋಕಕ್ಕೆ ತಿಳಿದಿದೆ. ಅಂದ ಮೇಲೆ ನಾಗಪುರದ ಅ. ಭಾ. ಕಾಂಗ್ರೆಸ್ ಅಧಿವೇಶನ ಅದೇ ಮಾರ್ಗವನ್ನನುಸರಿಸೀತೆಂದು ನಾವು ಊಹಿಸಬಹುದೇ?

WANTED

Applications are invited from gentlemen of influence and integrity for posts of Inspectors and Organisers on salary and commission basis.

Contact:

Crescent Insurance Co., Ltd.,
Hampankatta, Mangalore.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು,

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂರನೇ ಮಹಾಯುದ್ಧದ ಪೂರ್ವ ಪೀಠಿಕೆ

ಕಿಸಾಂಗದ ಕಾಲಹರಣ

ಜಾಗತಿಕರಂಗದಲ್ಲಿ ಶಾಂತಿ ಸಮಾಧಾನಗಳು ತಲೆದೋರುತ್ತವೆಂದು ಸದ್ಯದ ರಾಜಕೀಯದಲ್ಲುಂಟಾಗಿರುವ ಗಂಭೀರ ಪರಿಸ್ಥಿತಿಯನ್ನರಿತಮೇಲೂ ನಾವು ಊಹಿಸುವದು ಮೂರ್ಖತನದ್ದಿದೆ. “Peace only after the war” ಎನುವ ಚರ್ಚಿಲ ಪ್ರಮಾಣವಾಕ್ಯ ನೂರಕ್ಕೆ ನೂರು ಪಾಲು ಸತ್ಯ. ಈ ತತ್ವದಂತೆ ಮೂರನೇ ಮಹಾಯುದ್ಧ ಅನಿವಾರ್ಯ! ಆಂಗ್ಲೋ ಅಮೆರಿಕಾನರು ನಡೆಸುತ್ತಿರುವ ಬಂಡವಳಶಾಹೀ ಧೋರಣೆಯಿಂದ ಶಾಂತ ಪರಿಸ್ಥಿತಿಯುಂಟಾಗಲು ಶಕ್ಯವಿಲ್ಲ.

ದೇಶದಲ್ಲುಂಟಾಗಿರುವ ಪ್ರಕ್ಷುಬ್ಧ ವಾತಾವರಣಕ್ಕೆ ಕಮ್ಯೂನಿಸ್ಟರೇ ಮುಖ್ಯಕಾರಣೀಭೂತರೆಂದು ವಾದಿಸುವ ಈ ಸಾಮ್ರಾಜ್ಯವಾದಿಗಳ ವಾದದಲ್ಲಿ ಸ್ವಲ್ಪವೂ ಹುರುಳಿರುವುದಿಲ್ಲ. ಪರ್ಶಿಯಾ, ಕಿಸಾಂಗಗಳ ಮಾತುಕತೆಗಳು ಇಷ್ಟು ದೀರ್ಘವಾಗಿ ನಡೆದರೂ ಯಾವುದೇ ಬಗೆಯ ತೀರ್ಮಾನಕ್ಕೆ ಬರದೇ ಹೋದುದು ಮೂರನೇ ಮಹಾಯುದ್ಧ ಅನಿವಾರ್ಯವೆಂದು ಖಚಿತಪಡಿಸುವದರ ದ್ಯೋತಕವಾಗಿದೆ. ಕಿಸಾಂಗದಲ್ಲಿ ಕಮ್ಯೂನಿಸ್ಟ ಮತ್ತು ಸಂ. ರಾ. ಸಂಘದವರೊಡನೆ ನಡೆಯುತ್ತಿರುವ ಮಾತುಕತೆಗಳು ಆಶಾದಾಯಕವಿಲ್ಲ. ಈವರೆಗೆ ಹದಿನಾರು ಬಾರಿ ಈ ಮಾತುಕತೆ ಜರಗಿತಾದರೂ ಉಭಯತರೊಳಗೆ ಮತಭೇದ ಹೆಚ್ಚಿತೇ ವಿನಹ ಪರಿಹಾರವಾಗಲಿಲ್ಲ. ತಟಸ್ಥ ಪ್ರದೇಶಗಳನ್ನು ಆಕ್ರಮಿಸಿ ನಿಯಮವನ್ನು ಭಂಗಿಸಿದರೆಂದು ಕಮ್ಯೂನಿಸ್ಟರ ಮೇಲೆ ಅಪವಾದ ಹೊರಿಸಲಾಯಿತು. ಒಮ್ಮೆ ಮಾತುಕತೆಯೂ ನಿಂತುಹೋಯಿತು. ಪ್ರಮಾದವಶಾತ್ ನಡೆದ ಅನ್ಯಾಯಕ್ಕೆ ಕಮ್ಯೂನಿಸ್ಟರು ವಿಷಾದ ಪ್ರದರ್ಶಿಸಿ ಕ್ಷಮೆಯನ್ನು ಯಾಚಿಸಿದರು. ಆದರೆ ಈಗ ಸಂ. ರಾ. ದಳಗಳು ತಟಸ್ಥ ಪ್ರದೇಶವನ್ನು ನುಗ್ಗಿ ಕಮ್ಯೂನಿಸ್ಟರನ್ನು ಗುಂಡಿಕ್ಕಿ ಕೊಂದ ದಾಖಲೆಗಳು ಬಂದಿದ್ದು ತಿರುಗಿ ಪ್ರಕ್ಷುಬ್ಧ ವಾತಾವರಣ ತಲೆಯೆತ್ತಿದೆಯೆಂದು ತಿಳಿಯುತ್ತದೆ. ಮನಸ್ಸಿಲ್ಲದ ಮನಸ್ಸಿನಿಂದ ಮಾತುಕತೆಯೇನೋ ಇನ್ನೂ ನಡೆದಿದೆ. ಆಂಗ್ಲೋ ಅಮೇರಿಕಾನರೂ ಯುದ್ಧ ಸರಂಜಾಮುಗಳನ್ನು ಭರದಿಂದ ಸಾಗಿಸಿದ್ದು, ಇತರ ರಾಷ್ಟ್ರಗಳ ಬಲವನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವ ತಂತ್ರ ಹೂಡಿದ್ದು ಕಂಡುಬರುತ್ತದೆ. ಕಿಸಾಂಗದಲ್ಲಿ ನಡೆಯುತ್ತಿರುವ ಮಾತುಕತೆಗಳು ಯುದ್ಧ ಸನ್ನಾಹ ನಿಮಿತ್ತ ಕೈಗೊಂಡಿರುವ ಔಪಚಾರಿಕ ಮಾತುಕತೆಗಳೇ ಹೊರತು ವಿಧಾಯಕವಾಗಿ ಕಾರ್ಯರೂಪದಲ್ಲಿ ಬರುವಂಥವುಗಳಲ್ಲ! ಅದು ಶಕ್ಯವೂ ಇಲ್ಲ!

ರಿಚಾರ್ಡ್‌ಸ್ಟೋಕರ ಕೊಡುಗೆ

ಇತ್ತಣಿಂದ ಪರ್ಶಿಯದ ಎಣ್ಣೆ ತಂಟೆಯ ಮಾತುಕತೆಗಳು ಬಗೆಹರಿಯುವ ಲಕ್ಷಣ ಕಂಡುಬರುವುದಿಲ್ಲ. ಅಧ್ಯಕ್ಷ ಟ್ರೂಮನ್ನರ ವಿಶೇಷ ರಾಯಭಾರಿಯಾದ ಹ್ಯಾರಿಮನ್ನರೂ ಬ್ರಿಟಿಶ ಪ್ರತಿನಿಧಿ ರಿಚಾರ್ಡ್ ಸ್ಟೋಕ್‌ರವರು ಮತ್ತಿಮತ್ತೆ ಮಾತುಕತೆಯನ್ನು ಪರ್ಶಿಯದೊಡನೆ ಮುಂದುವರಿಸಿದರೂ ಉಭಯತರಿಗೂ ಒಪ್ಪುವಂತಹ ಒಂದು ನಿರ್ಣಯವನ್ನು ಸಾಧಿಸುವದು ಅವರಿಂದಾಗಲಿಲ್ಲ. ಕೊನೆಯ ನಿರ್ಣಯವೆಂದು ಸ್ಟೋಕ್‌ರವರು ಪರ್ಶಿಯ ಸರಕಾರಕ್ಕೆ ಕೊಟ್ಟ ಸೂಚನೆಯನ್ನೂ ಪರ್ಶಿಯಾ ನಿರಾಕರಿಸಿದೆ. “ಈ ಕೊಡುಗೆಗಿಂತ ಮಿಗಿಲಾದುದೇನೂ ನಮ್ಮಲ್ಲಿಲ್ಲ. ಇದನ್ನು ಪರ್ಶಿಯ ಒಪ್ಪುವದರಲ್ಲೂ ಬಿಡುವದರಲ್ಲೇ ಕೊನೆಯ ನಿರ್ಧಾರವಿದೆ. ಇದರಲ್ಲಿ ಬದಲಾವಣೆಯಿಲ್ಲ. ಇದು ವಿಫಲಗೊಂಡರೆ ಬ್ರಿಟನು ತನಗೆ ಇಚ್ಛೆ ತೋರಿದ ಬೇರೆ ಮಾರ್ಗವನ್ನೇ ಹಿಡಿಯಬೇಕಾದೀತು” ಎಂದು ಸ್ಟೋಕರು ಸ್ಪಷ್ಟವಾಗಿ ನುಡಿದಿರುವರು. ಪರ್ಶಿಯದ ಅಧಿಕಾರಿಗಳು “ಬ್ರಿಟಿಶರು ತಮ್ಮ ಬಂಡವಲಶಾಹೀ ಧೋರಣೆಯನ್ನು ಸ್ವಲ್ಪವೂ ಬದಲಿಸದೇ ಇರುವದರಿಂದ ಆರ್ಥಿಕ ಬಿಕ್ಕಟ್ಟಿನಿಂದ ಜರ್ಜರಿತವಾದ ಪರ್ಶಿಯಕ್ಕೆ ಈ ಕೊಡುಗೆ ಗ್ರಾಹ್ಯವಾಗಿರುವದಿಲ್ಲ” ಎಂದು ಉತ್ತರಿಸಿದ್ದಾರೆ. ಅಂದಮೇಲೆ ‘ತೆಹರಾನದ ಎಣ್ಣೆ ತಂಟೆಯೂ ಬಲಪ್ರಯೋಗದಿಂದ ಮುಕ್ತಾಯವಾಗಬೇಕೆಂದಾಗುವುದಿಲ್ಲವೇ?

ಶಾಂತಿಯೋ ಸಮರ ಸಿದ್ಧತೆಯೋ?

ಜಪಾನದ ಶಾಂತಿ ಒಪ್ಪಂದದ ನೋಂಗಿನಲ್ಲಿ ಜಪಾನನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಅವಶ್ಯ ಬಿದ್ದಾಗ ಬೇರೆಯವರ ಮೇಲೆ [illegible] ನಡೆಸುವದಕ್ಕೂ, ಸೈನ್ಯವನ್ನು ನಿಲ್ಲಿಸುವದಕ್ಕೂ ಮುಖ್ಯ ರಾಜ್ಯವನ್ನು ನಿರ್ಮಿಸುವ ಹಂಚಿಕೆಯನ್ನು ಅಮೇರಿಕ ಹೂಡಿದೆ. ಜಪಾನಕ್ಕೆ ಸಾರ್ವಭೌಮಾಧಿಕಾರವನ್ನು ಕೊಡುವ ಕರಡು ಬೇರೆ ಬೇರೆ ರಾಷ್ಟ್ರಗಳ ಅನುಮತಿಗಾಗಿ ಬಂದಿರುತ್ತದೆ. ಭಾರತವು ಕರಡಿನ ಮೇಲೆ ತಾನಿತ್ತ ಅಭಿಪ್ರಾಯವನ್ನು ಕಡೆಗಣಿಸಲಾಗಿದೆ, ರಶಿಯದ ತಿದ್ದುಪಡಿಯನ್ನೂ ನಿರಾಕರಿಸಲಾಗಿದೆ. ಭಾರತವು ಫಾರ್ಮೋಸಾವನ್ನು ಚೀನಕ್ಕೆ ಬಿಟ್ಟುಕೊಡಬೇಕೆಂದೂ, ಬೋನಿನ್ ಹಾಗೂ ರ್ಯೂಕ್ಯೂ ದ್ವೀಪಗಳನ್ನು ವಿಶ್ವಸ್ಥ ಆಡಳಿತಕ್ಕೆ ಒಪ್ಪಿಸದೆ ಜಪಾನಕ್ಕೆ ಬಿಟ್ಟುಕೊಡಬೇಕೆಂದೂ, ಅಮೇರಿಕೆಯು ತನ್ನ ಸೈನ್ಯವನ್ನಿಡುವ ಬಗ್ಗೆ ಒಪ್ಪಂದದ ಕಲಮು ಇರಬಾರದೆಂದೂ ಸೂಚಿಸಿದೆ. ಈ ಸೂಚನೆ ಆಂಗ್ಲೋ ಅಮೇರಿಕಾನರಿಗೆ ಪಥ್ಯವಾಗಲಿಲ್ಲ! ಏಕೆಂದರೆ ಜಪಾನಕ್ಕೆ ನಿಜವಾದ ಸಾರ್ವಭೌಮತ್ವವನ್ನು ಕೊಡುವ ಮೂಲತತ್ವ ಇದರಲ್ಲಡಗಿದೆ. ಇದರಿಂದ ಆಂಗ್ಲೋ ಅಮೇರಿಕಾನರ ಅಧಿಕಾರವನ್ನು ಅಲ್ಲಿ ಸ್ಥಿರಗೊಳಿಸಲಾಗುವುದಿಲ್ಲ. ಮಾತ್ರವಲ್ಲದೆ ತೃತೀಯ ಮಹಾಯುದ್ಧದ ಸಮಯದಲ್ಲಿ ಜಪಾನು ತಮ್ಮ ಬಲವಿಗನುಗುಣವಾಗಿ ನಡೆದೀತೆಂಬ ಭರವಸೆಯೂ ಅವಕ್ಕಿಲ್ಲ. ಅಂತಲೇ ಭಾರತದ ಸೂಚನೆಯನ್ನು ನಿರಾಕರಿಸಲಾಗಿದೆ. ಸಾನ್ ಫ್ರಾಂಸಿಸ್ಕೋ ಸಮ್ಮೇಲನದಲ್ಲಿ ಈ ಕರಡಿಗೆ ಸಂಪೂರ್ಣ ಜೀವದಾನ ದೊರಲಿದೆ. ಅರ್ಥಾತ್ ಜಪಾನ್ ಪುನರ್‌ಶಸ್ತ್ರೀಕರಣಹೊಂದುತ್ತದೆ. ಇದರ ಸದುಪಯೋಗ ಜಪಾನದ ಸ್ವರಕ್ಷಣೆ ಸುರಕ್ಷಿತತೆಗೆಂದೇ ನಾವು ಭಾವಿಸುವಂತಿಲ್ಲ; ಆಂಗ್ಲೋ ಅಮೇರಿಕಾನರ ಸ್ವಾರ್ಥವೂ ಉಂಟು!

ಪರಕೀಯ ಪ್ರೇರಿತ ಪರಚಾಟ

ಪಾಕಿಸ್ತಾನದೊಳಗಿನ ಆಕ್ರೋಶ ಘಟಾಟೋಪಗಳಿಗೆ ಮೂಲಭೂತವಾದ ಶಕ್ತಿ ಆಂಗ್ಲೋ ಅಮೇರಿಕಾನರ ಕುಯುಕ್ತಿಯೇ ಆಗಿರುತ್ತದೆ. ಮೂರು ವರ್ಷಗಳಿಂದಲೂ ಕಾಶ್ಮೀರ ಪ್ರಶ್ನೆಯು ನ್ಯಾಯದಾನದ ನೆವದಿಂದ ಪಾಕಿಸ್ತಾನ [illegible] ಸ್ಥಾನದ ವಿರುದ್ಧ ಯುದ್ಧ ಹೂಡುವ ಕಾರಸ್ಥಾನವನ್ನು ನಡೆಸಲಾಗುತ್ತಿದೆ. ವಿದೇಶಗಳಲ್ಲೆಲ್ಲಾ ಭಾರತದ ವಿರುದ್ಧ ಅಪಪ್ರಚಾರ ಕೈಗೊಂಡು ಕಾಶ್ಮೀರ ಪಾಕಿಸ್ತಾನಿಗಳನ್ನು ಆಕ್ರಮಿಸುವ ಧೋರಣೆಯನ್ನು ಭಾರತವೇ ಮಾಡುತ್ತಿದೆಯೆನ್ನುವ ಚಾರಿತ್ರಿಕ ಹಿನ್ನೆಲೆಯೂ ನಡೆಯುತ್ತಲಿದೆ. ಪಾಕಿಸ್ತಾನವು ಜೇಹಾದದ ಘೋಷಣೆ ಈಚೆಗೆ ಕೈಗೊಂಡಿರುವ ಯುದ್ಧ ಪ್ರಚೋದನಾಕಾರ್ಯವು ಬ್ರಿಟಿಷರು ಒಳಗಿಂದೊಳಗೆ ನಡೆಸಿದ ಮಿಲಿಟರಿ ಸಲಹೆ ಭರವಸೆಗಳ ಮೂಲಕವೇ ನಡೆದಿದೆ. ಸಂ. ರಾ. ಸಂಘದಲ್ಲಿಯೂ ಪಾಕಿಸ್ತಾನಕ್ಕೆ ಪಕ್ಷಾನುಭೂತಿಪರ ಸಹಕಾರ ನೀಡುವಲ್ಲಿ ಆಂಗ್ಲೋ ಅಮೇರಿಕಾನರು ಬಹಳವಾಗಿ ಯತ್ನ ನಡೆಸಿದ್ದಾರೆ. ಬ್ರಿಟಿಶ ತಜ್ಞ ಮಿಲಿಟರಿ ಅಧಿಕಾರಿಗಳು ನಾನಾ ಕಾರಣಗಳಿಂದ ಸುಸಜ್ಜಿತವಾದ ಸೈನ್ಯ ತರಬೇತಿಯಲ್ಲಿ ತೊಡಗಿದ್ದು ಆ ವಿಚಾರ ಇಷ್ಟರಲ್ಲೇ ಭಾರತ ಮತ್ತು ಇಂಗ್ಲಂಡದ ಪಾರ್ಲಿಮೆಂಟುಗಳಲ್ಲಿ ಚರ್ಚೆಗೆ ಬಂದಿದೆ. ಹೈದರಾಬಾದದ ಹಿಂದಿನ ಮುಖ್ಯಮಂತ್ರಿ ಮೀರ ಲಾಯಕಅಲಿ ಪಾಕಿಸ್ತಾನದ ಕಡೆಯಿಂದ ವಿದೇಶಗಳಲ್ಲಿ ಶಸ್ತ್ರಾಯುಧಗಳನ್ನು ಕೊಂಡುಕೊಳ್ಳುವದಕ್ಕೆ ಸಹಾಯ ಗಳಿಸಿದ್ದಾರೆ. ಅಲ್ಲಿ ಅವರಿಗೆ ಸರಿಯಾದ ಆದೇಶ ಕೊಡುವವರು ಆಂಗ್ಲೋ ಅಮೇರಿಕಾನರೇ. ಇತ್ತೀಚೆಗೆ ಬ್ರಿಟನಿನಿಂದ ಕೆಲವು ಸುಶಿಕ್ಷಿತ ವೈಮಾನಿಕರು ಪಾಕಿಸ್ತಾನಕ್ಕೆ ಬಂದಿರುವರು. ಜೇನ್. ಐಚಿನ್‌ಲೆಕ್ಕರು ಮಿಲಿಟರಿಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದು ಅಲ್ಲದೆ ತನ್ನ ಮೇಲಿರುವ ಅಪವಾದವನ್ನು ಮರೆಸಿಕೊಳ್ಳುವದಕ್ಕೋ ಎಂಬಂತೆ ಜಪಾನ ಕಾರಖಾನೆಯನ್ನು ಪಾಕಿಸ್ತಾನದಲ್ಲಿ ತೆರೆಯುವ ಹಂಚಿಕೆ ಹೂಡಿದ್ದಾರೆ. ತೃತೀಯ ಮಹಾಯುದ್ಧವಾದರೆ ಪಾಕಿಸ್ತಾನವು ರಶಿಯದ ವಿರುದ್ಧ ಹೋರಾಟ ನಡೆಸಲು ಮುಖ್ಯ ಸೈನ್ಯರಾಜ್ಯವಾಗಬಹುದೆನುವ ದೃಷ್ಟಿಯನ್ನು ಆಂಗ್ಲೋ ಅಮೇರಿಕಾನರು ಇಟ್ಟುಕೊಂಡೇ ತಮ್ಮ ಬಲವನ್ನು ಆ ಕಡೆಗೆ ಹರಿಸುತ್ತಿದ್ದಾರೆ.

ಆಂಗ್ಲೋ ಅಮೇರಿಕಾನರ ವಿಶೇಷ ಮತ್ಸರಕ್ಕೆ ಈ ಮೂರು ನಾಲ್ಕು ರಾಜಕಾರಣದಲ್ಲಿ ಮೂರನೇ ಮಹಾಯುದ್ಧದ ಪೂರ್ವ ಪೀಠಿಕೆ ಕಂಡು ಬರುವುದಿಲ್ಲವೇ? ಲೋಕದ ಶಾಂತಿಯ ಹೆಸರಲ್ಲಿ ಜಗತ್ತಿನ ಸಾರ್ವಭೌಮತ್ವವನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಮುಂದಾಲೋಚನೆ ಅವರಲ್ಲಿ ಬಲವಾಗಿದೆಯೆಂದು ಅವರು ನಡೆಸಿರುವ ಕಾರಸ್ಥಾನಗಳಿಂದ ನಾವು ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ.

The Commercial Corporation of India Ltd, Udipi

Chief Agents for

The Canara Mutual Assurance Company Ltd.

Applications are invited for the post of an Inspector for South Kanara from young men of ability and character. Previous experience of insurance fieldwork will be favourably considered, but is not essential. The Company is prepared to give suitable training to the selected candidate at its head office at Udipi. Decent allowances are paid during the training period. For further particulars please enquire:

T. R. U. Pai,
Managing Director

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು
ಅಲ್ಪ ವೆಚ್ಚ! ಅದ್ಭುತ ಗುಣ!

ಎಂ. ಎಂ. ಪ್ರೊಡಕ್ಟ್ಸ ಕೋ;
ರುಬಿ ಮೇನ್ಶನ್,
ಫೋರ್ಟ್, ಬೊಂಬಾಯಿ.



ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0
ಗುರುವಾರ ಉಡುಪಿ, ೨೩-೮-'೫೧

ಪಾಕ್ ಧೋರಣೆಯಿಂದ ಮುಸ್ಲಿಮರಿಗೆ ಗಂಡಾಂತರ

ಜೇಹಾದದ ಮೂಲಕ ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಹೂಡುವ ಉದ್ದೇಶವನ್ನು ತೋರಿಸಿದ್ದು, ಭಾರತದ ಮುಸ್ಲಿಮಬಾಂಧವರು ಅದಕ್ಕಾಗಿ ವಿಶೇಷ ಕಳವಳವನ್ನು ವ್ಯಕ್ತಪಡಿಸಿರುತ್ತಾರೆ. ಪಾಕ್ ಮುಖ್ಯ ಮಂತ್ರಿ ಲಿಯಾಖತರು, ಜೇಹಾದದ ಮೂಲಕ ಪಾಕಿಸ್ತಾನವನ್ನು ಧಾರ್ಮಿಕ ರಾಷ್ಟ್ರವನ್ನಾಗಿ ರಚಿಸುವ ಹಲವು ತಲೆತಿರುಕರ ವಾದಕ್ಕೆ ಮನಸೋತದ್ದು ವಿಷಾದದ ಸಂಗತಿ. ವಿದೇಶೀಯರ ಪ್ರಚೋದನೆಯಿಂದಲೂ – ಜಾತೀಯ ಮನೋವೃತ್ತಿಯ ಮುಸಲ್ಮಾನರ ಧಾರ್ಮಿಕ ಹೋರಾಟದಿಂದಲೂ ಪಾಕಿಸ್ತಾನವು ಮುಸಲ್ಮಾನ ಧರ್ಮ ಹಾಗೂ ಜನಾಂಗಕ್ಕೆ ವಿಘಾತುಕ ಕಾರ್ಯವನ್ನು ಮಾಡಿಯದೆ. ಭಾರತ ಪಾಕಿಸ್ತಾನಗಳೊಳಗೆ ಯುದ್ಧ ಸಂಭವಿಸಿದರೆ ಭಾರತದಲ್ಲಿಯ ಮುಸಲ್ಮಾನರ ಗತಿಯೇನಾದೀತೆಂದು ಅದು ಲಕ್ಷಿಸಿಲ್ಲ. ಅಷ್ಟು ಮಾತ್ರವಲ್ಲದೆ ಕಾಶ್ಮೀರದಲ್ಲಿ ಮುಸಲ್ಮಾನ ಸ್ತ್ರೀಪುರುಷರ ಜೀವಾಪಹರಣ ಕಾರ್ಯವನ್ನು ಪಾಕಿಸ್ತಾನದ ಮುಸಲ್ಮಾನರು ನಡೆಸಿರುವರು. 1947ರಲ್ಲಿ ಪಾಕಿಸ್ತಾನೀ ಸೈನಿಕರು ಕಾಶ್ಮೀರವನ್ನು ನುಂಗುವ ಯತ್ನದಲ್ಲಿ ಕಾಶ್ಮೀರಿಗಳ ಮೇಲೆ ಅಮಾನುಷ ರೀತಿಯಲ್ಲಿ ನಡೆದುಕೊಂಡದ್ದನ್ನು ಕಾಶ್ಮೀರಿಗಳು ಮರೆಯುವಂತಿಲ್ಲ. ಕಾಶ್ಮೀರವು ಬಹುಸಂಖ್ಯಾಕ ಮುಸಲ್ಮಾನರುಳ್ಳ ದೇಶವೆಂಬ ಒಂದೇ ತತ್ವದ ಮೇಲೆ ಅದು ಪಾಕಿಸ್ತಾನದ್ದಾಗಬೇಕೆಂದು ಚಂಡಿತನ ಹಿಡಿಯುವುದು ಸರಿಯಲ್ಲ. ಅಲ್ಲಿಯ ಜನತೆಯ ಮನೋಭಾವವನ್ನರಿತು ಕಾಶ್ಮೀರವು ಯಾವ ರಾಷ್ಟ್ರವನ್ನು ಸೇರಬಯಸುತ್ತದೋ ಅದಕ್ಕೆ ಸ್ವೇಚ್ಛೆಯಿಂತೆ ಸೇರಿಕೊಳ್ಳಲು ಭಾರತವು ಒಪ್ಪಿರುತ್ತದೆ. 40 ಲಕ್ಷ ಮುಸಲ್ಮಾನರು ತಮಗೆ ಪಾಕಿಸ್ತಾನವಾಗಬೇಕೆಂದು ಬಯಸಿದರೆ ಭಾರತ ಸರಕಾರಕ್ಕೆ ಒಂದರೆಕ್ಷಣ ನಿಲ್ಲಲೂ ಅಲ್ಲಿ ಸಾಧ್ಯವಿಲ್ಲ. ಬಹುಸಂಖ್ಯಾಕರಾದ 40 ಲಕ್ಷ ಮುಸಲ್ಮಾನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಭಾರತವು ಬಲಪ್ರಯೋಗದ ಮೂಲಕ ಕಾಶ್ಮೀರವನ್ನು ಆಕ್ರಮಿಸಲು ಸಾಧ್ಯವೇ ಇಲ್ಲ. ಮುಖ್ಯವಾಗಿ ಕಾಶ್ಮೀರಿಗಳಿಗೆ ಪಾಕಿಸ್ತಾನ ಬೇಡಾಗಿದೆ. ಅಂತಲೇ ಅವರು ಘಟನಾ ಸಮಿತಿಯನ್ನು ನಿರ್ಮಿಸಿ ತಮ್ಮ ಭವಿತವ್ಯದ ಕುರಿತು ಯೋಚಿಸುವ ನಿರ್ಧಾರ ಮಾಡಿದ್ದಾರೆ.

ಸಂ. ರಾ. ಸಂಘದ ಕಾಶ್ಮೀರೀ ಪ್ರತಿನಿಧಿ ಡಾ। ಗ್ರಾಹಮ್ಮವರು ದಿಲ್ಲಿ, ಕಾಶ್ಮೀರ, ಕರಾಚಿಗಳಿಗೆ ಹಾರಾಡಿದ್ದಾರೆ. ಇನ್ನು ಒಂದೆರಡು ತಿಂಗಳೊಳಗಾಗಿ ತಮ್ಮ ವರದಿಯನ್ನವರು ಕೊಡುವವರಿದ್ದಾರೆ. ಆ ವರದಿಯೂ ಪಾಕಿಸ್ತಾನಿಗಳಿಗನುಕೂಲವಾಗಿದ್ದರೆ ಭಾರತ ಒಪ್ಪುವುದಿಲ್ಲ. ವಿರುದ್ಧವಾದರಂತೂ ಹೋರಾಟವಿದ್ದೇಯದೆ. ಕಾಶ್ಮೀರದಲ್ಲಿಯ ಘಟನಾಸಮಿತಿಯೂ ಆ ಸಮಯಕ್ಕೆ ಸರಿಯಾಗಿ ರೂಪುಗೊಳ್ಳಲಿದೆ. ಇಂತಹ ಸಂದರ್ಭವನ್ನು ಸಾಧಿಸಿಯೇ ಪುಂಡಾಟಿಕೆಯ ಮೂಲಕ ಅದನ್ನು ಹಾಳುಗೆಡಹಬೇಕೆಂದು ಪಾಕಿಸ್ತಾನದ ಇಚ್ಛೆಯಾಗಿದೆ. ಈಗ ಪಾಕಿಸ್ತಾನದೊಳಗೆ ನಡೆದಿರುವ ಯುದ್ಧ ಸನ್ನಾಹಗಳೂ, ಮುಂಜಾಗ್ರತೆಗಳೂ ಕೇವಲ ರಂಪಾಟ–ಡಂಗುರಗಳೆಂದು ಹೇಳಲು ಬರುವಂತಿಲ್ಲ. ಜೇಹಾದದಂತಹ ಜಾತೀಯ ಸಂಸ್ಥೆಯ ಮೂಲಕ ಯುದ್ಧದಿಂದ ತಮ್ಮ ಕಾರ್ಯ ಕೈಗೂಡಿತೆಂದು ಭಾವಿಸಿದ್ದು ಹುಚ್ಚುತನವೇ ಸರಿ! ಖಡ್ಗದಿಂದಲೇ ಮುಸಲ್ಮಾನ ಧರ್ಮದ ಉತ್ಕೃಷ್ಟ ರಾಷ್ಟ್ರವನ್ನು ಕಟ್ಟುತ್ತೇವೆನ್ನುವುದು ಪಾಕಿಸ್ತಾನಿಗಳಿದ್ದರೆ ಅದು ಭ್ರಾಮಕವಾದ ಕಲ್ಪನೆ. ಈ ಬಗೆಯ ವಾಮಮಾರ್ಗದಿಂದ ಪಾಕಿಸ್ತಾನದ ಮೂಲೋದ್ದೇಶ ಕೈಗೂಡುವದೆಂತಿರಲಿ; ಮುಸಲ್ಮಾನರ ಅಸ್ತಿತ್ವಕ್ಕೆ ಇದರಿಂದ ಗಂಡಾಂತರವಿದೆಯೆನ್ನುವದನ್ನು ಮರೆಯಬಾರದು! ಹುಚ್ಚುಚ್ಚಾಗಿ ವರ್ತಿಸಿ, ನೆರೆಯ ರಾಷ್ಟ್ರ ಹಾಗೂ ಬಂಧುಗಳೊಡನೆ ಕತ್ತಿಕಾಳಗಕ್ಕೆ ನಿಲ್ಲುವ ಈ ಸಾಹಸ ಮಾಡಿದ್ದಕ್ಕೆ ನಿಜವಾಗಿಯೂ ವಿಷಾದಪಡಬೇಕಾಗಿದೆ.

ಇದನ್ನು ಲಕ್ಷಿಸಿ ಭಾರತದ ನಾಗರಿಕರಾದ ಮುಸ್ಲಿಮರು ಪಾಕಿಸ್ತಾನದ ಅನುಚಿತ ಧೋರಣೆಯನ್ನು ಖಂಡಿಸುತ್ತ ಬಂದಿದ್ದಾರೆ. ಕಾಶ್ಮೀರಾಕ್ರಮಣದ ದುರುದ್ದೇಶದಿಂದ ಭಾರತದೊಳಗಿನ 4 ಕೋಟಿ ಜನರ ಹಿತರಕ್ಷಣೆಯನ್ನು ಪಾಕಿಸ್ತಾನವು ಪೂರ್ತ ಮರೆತಿದ್ದು ಅವರಿಗೆ ಗಂಡಾಂತರವನ್ನು ತರಬಲ್ಲ ವಾತಾವರಣವನ್ನು ನಿರ್ಮಿಸುತ್ತಲಿದೆಯೆಂದು ಭಾರತದ ಪ್ರಮುಖ ಮುಸಲ್ಮಾನರು ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿಗೆ ತಮ್ಮ ಸುದೀರ್ಘ ಮನವಿಯೊಂದನ್ನು ಒಪ್ಪಿಸಿದ್ದಾರೆ. ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ। ಝಾಕೀರ ಹುಸೇನ, ಸುಲ್ತಾನ ಅಹಮ್ಮದ, ಛತ್ತಾರಿ ನವಾಬರೇ ಮೊದಲಾದ ಪ್ರಮುಖ ಮುಸ್ಲಿಮ ಧುರೀಣರು ಈ ಮನವಿಗೆ ಅಂಕಿತ ಹಾಕಿರುವರು. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು ಈ ಮನವಿಯನ್ನು ಅಪಾರ್ಥಮಾಡಿಕೊಂಡು "ಭಾರತದೊಳಗಿರುವ ನಮ್ಮ ಬಂಧುಗಳ ದುಃಖವನ್ನು ನಾವು ಆಳವಾಗಿ ಚಿಂತಿಸುತ್ತಲಿದ್ದೇವೆ. ಅವರ ಮೇಲೆ ನಮಗೆ ಹೃದಯಂಗಮವಾದ ಸಹಾನುಭೂತಿಯಿದೆ" ಎಂದು ಅಣಕಮಾಡಿರುವರು. ಜಾಫ್ರುಲ್ಲಾಖಾನರ ದೃಷ್ಟಿಯಲ್ಲಿ ಭಾರತದ ಮುಸಲ್ಮಾನರಿಗೆ ಭಾರತದೊಳಗೆ ಜೀವಿಸುವದೇ ದುಸ್ತರವಾಗಿದೆ ಎಂಬ ಭ್ರಾಂತಿ ತೋರುತ್ತದೆ. ಈ ಮನವಿಯ ಉದ್ದೇಶ ಹಾಗಿಲ್ಲ. "ಭಾರತದೊಳಗೆ ಮುಸಲ್ಮಾನರಿಗೆ ನಾಗರಿಕ ಜೀವನದ ಸಕಲ ಸೌಲಭ್ಯಗಳೂ ಇರುತ್ತವೆ. ಹಿಂದುಗಳೂ ಸಹೋದರ ಭಾವದಿಂದ ವರ್ತಿಸುತ್ತಿದ್ದು ಯಾವುದೇ ರೀತಿಯ ತೊಡಕುತೊಂದರೆಗಳಿಲ್ಲದೆ ಸಮಾನ ಜೀವನನಡೆಸುವಂತಾಗಿದೆ ಪಾಕಿಸ್ತಾನಿಗಳು ಅಲ್ಪಸಂಖ್ಯಾಕರನ್ನು ಪೈಶಾಚಿಕವೃತ್ತಿಯಿಂದ ನಡೆಸಿಕೊಂಡು ತೊಂದರೆಕೊಡುವಂತಾದರೆ ಇಲ್ಲಿಯಹಿಂದೂಬಾಂಧವರೊಡನೆ ಕಟ್ಟಿಕೊಂಡಿರುವ ಬಾಂಧವ್ಯಕ್ಕೆ ಧಕ್ಕೆ ಬರುವದು ಮಾತ್ರವಲ್ಲದೆ ಇಲ್ಲಿಯ ಮುಸಲ್ಮಾನರ ವಿಷಯ ಸದ್ಭಾವನೆಯನ್ನು ಇಡಲು ಸಾಧ್ಯವಿರುವದೇ?" ಎಂಬುದೇ ಇದರ ಮತಿತಾರ್ಥವಾಗಿದೆ. ಪಾಕಿಸ್ತಾನದ ಸ್ವಾರ್ಥ ಸಂಕುಚಿತತೆ ಹಾಗೂ ಜಾತೀಯತೆಯ ಮನೋವೃತ್ತಿಗೆ ಕಾಶ್ಮೀರ ಹಾಗೂ ಭಾರತದ ಮುಸಲ್ಮಾನರನ್ನು ಆಹುತಿಗೊಳ್ಳುವುದು ಸರಿಯಾಗಲಾರದು! ಪಾಕಿಸ್ತಾನಿಗಳ ಕಲ್ಪನೆ ಅಭಿಪ್ರಾಯಗಳು ಕಾಶ್ಮೀರದ 40 ಲಕ್ಷ ಮುಸಲ್ಮಾನರ ಇಲ್ಲವೆ ಭಾರತದ 4 ಕೋಟಿ ಜನರ ಅಭಿಪ್ರಾಯವೆಂದೂ ಆಗದು. ಅಂತಲೇ ಪಾಕಿಸ್ತಾನದ ಈ ಧೋರಣೆ ಅವ್ಯವಹಾರ್ಯ–ತೀರ ಅನುಚಿತವೆಂದು ಭಾರತ ಮುಸಲ್ಮಾನರು ಮನವಿಯ ಮೂಲಕ ವ್ಯಕ್ತಪಡಿಸಿದ್ದು ಯೋಗ್ಯವೇ ಆಗಿದೆ.

ಭಾರತ ಸರಕಾರವು ಹಿಂದಿನಿಂದಲೂ ಶಾಂತಿಸೌಹಾರ್ದಮಯವಾದ ವಿಶಾಲ ರಾಜಕೀಯ ಧೋರಣೆಯನ್ನನುಸರಿಸಿಕೊಂಡು ಬಂದಿದೆ. ಚಾರಿತ್ರಿಕ ಹಿನ್ನೆಲೆಯೂ ಈ ಬಗೆಯ ವಿಶ್ವಕುಟುಂಬಿ ಮನೋವೃತ್ತಿಯನ್ನು ಸಾರುತ್ತದೆ. ಮಹಾತ್ಮಾ ಗಾಂಧಿ, ನೆಹ್ರೂರವರೇ ಮೊದಲಾದವರ ಜಾತ್ಯತೀತ ಧೋರಣೆಯ ಫಲವಾಗಿ ಭಾರತವು ಜಾಗತಿಕರಂಗದಲ್ಲಿ ನೈತಿಕವಾಗಿಯೂ ರಾಜಕೀಯವಾಗಿಯೂ ಉನ್ನತ ಸ್ಥಾನವನ್ನು ಪಡೆದಿದೆ. ಜಾತೀಯ ಭಾವನೆಯುಳ್ಳ ಹಲವರು ಸರಕಾರದ ಸಾವಧಾನ ಧೋರಣೆಯನ್ನು ಟೀಕಿಸುವದಾದರೂ ಉಜ್ವಲವಾದ ಪರಂಪರೆಯಿಂದ ಸಾಗಿ ಬಂದ ಸತ್ಯ ಅಹಿಂಸೆ-ಸಮತೆಗಳನ್ನು ಅದು ಬಿಟ್ಟುಕೊಡದು. ಅಂತಲೇ 4 ಕೋಟಿ ಮುಸಲ್ಮಾನರು ಭಾರತ ಸರಕಾರಕ್ಕೆ ಅತ್ಯಂತ ನಿಷ್ಠೆಯನ್ನು ವ್ಯಕ್ತಪಡಿಸಿದ್ದು ಮಾತ್ರವಲ್ಲದೆ ನೆಹ್ರೂ ಸರಕಾರಕ್ಕೆ ಸಂಪೂರ್ಣ ತ್ಯಾಗ ಮಾಡಲು ಸಿದ್ಧರಿರುವ ಭರವಸೆಯನ್ನು ನೀಡಿರುವುದು ನಮ್ಮ ನಮ್ಮೊಳಗಿರುವ ಪರಸ್ಪರ ಮೈತ್ರಿಯ ದ್ಯೋತಕವಾಗಿದೆ. ಈ ಬಗೆಯ ಮೈತ್ರಿಯನ್ನು ಕೆಡಿಸಿ, ಮುಸಲ್ಮಾನರ ರಾಷ್ಟ್ರವನ್ನು ಕಟ್ಟುತ್ತೇವೆಂದು ಪಾಕಿಸ್ತಾನಿಗಳು ಭ್ರಮಿಸಿದರೆ ಅದಕ್ಕಿಂತ ಮಿಗಿಲಾದ ಪ್ರಮಾದ ಹಾಗೂ ದುರ್ದೈವ ಬೇರಿರಲಾರದು!

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ಅಂತ್ಯಕ್ಕೆ ನವಯುಗದ 31ನೇ ವರ್ಷವು ಅಂತ್ಯವಾಗಿ ಸಪ್ಟಂಬರ ತಿಂಗಳಿಂದ 32ನೆ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರು ತಂತಮ್ಮ ಚಂದಾಹಣವನ್ನೂ, ಬಾಕಿಯುಳ್ಳವರು ಅದನ್ನು ಕೂಡಾ ಅದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

ಮಂಗಳೂರು

ಭಗಿನೀ ಸಮಾಜದ ಮಹಾ ಸಭೆ ಯು ತಾ. 11ರಲ್ಲು ಸಮಾಜದ ಉಪಾಧ್ಯಕ್ಷೆ ಶ್ರೀಮತಿ ಮುಕ್ತಾಬಾಯಿ ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ವರದಿಯನ್ನೋದಿದ ನಂತರ ಶ್ರೀಮತಿ ರಮಾಬಾಯಿ ವಿ. ಪೈಯವರು ಲೆಖ್ಖಪತ್ರಗಳನ್ನೊಪ್ಪಿಸಿದರು. ಈಗ ಕೇಂದ್ರ ಸರಕಾರದ ಮುಂದಿರುವ ಹಿಂದೂಕೋಡ್ ಮಸೂದೆಯನ್ನು ಸ್ವಾಗತಿಸುವ ನಿರ್ಣಯವಾದ ಬಳಿಕ ಚಾಲ್ತಿ ವರುಷದ ಚುನಾವಣೆ ನಡೆಯಿತು. ಶ್ರೀಮತಿ ರಾಜಲಕ್ಷ್ಮಿ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀಮತಿಯರಾದ ಮುಕ್ತಾಬಾಯಿ ಪಂಡಿತ ಮತ್ತು ಲೀಲಾಬಾಯಿಯವರು ಉಪಾಧ್ಯಕ್ಷೆಯರಾಗಿಯೂ ಶ್ರೀಮತಿಯರು ಶಾರದಾ ಕೆಳವಾರ್ ಮತ್ತು ಕಲ್ಯಾಣಿ ಡಿ. ಶೆಟ್ಟಿಯವರು ಜತೆಕಾರ್ಯದರ್ಶಿಗಳಾಗಿಯೂ ಶ್ರೀಮತಿಯರು ವಿಮಲಾ ಗಣೇಶ ಮತ್ತು ರುಕ್ಮಾ ಪಂಡಿತರು ಶಿಶುವಿಹಾರದ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಅಲ್ಲದೆ ಕಾರ್ಯ ಸಮಿತಿಗೆ 17ಮಂದಿಯ ಚುನಾವಣೆಯೂ ನಡೆಯಿತು.

ವಾರ್ಷಿಕೋತ್ಸವ–ಭಗಿನೀ ಸಮಾ ಜದ ವಾರ್ಷಿಕೋತ್ಸವವು ತಾ. 12ರಲ್ಲು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ನಂತರ ಕಾರ್ಯದರ್ಶಿಗಳು ಸಮಾಜದ ವರದಿಯನ್ನೊಪ್ಪಿಸಿದರು. ಬಳಿಕ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ಶ್ರೀಮತಿ ಕೆ. ಪಾರ್ವತಿಬಾಯಿ ಮೊದಲಾದವರು ಸಾಲೋಚಿತ ಮಾತುಗಳನ್ನಾಡಿದರು. ನಂತರ ವಿನೋದ ಕಾಲಕ್ಷೇಪಗಳಾದುವು.

ಸ್ವಾತಂತ್ರ್ಯ ದಿನಾಚರಣೆ—ಮಂಗ ಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ. 15ರಂದು ಸಂಭ್ರಮದಿಂದ ಜರಗಿತು. ಆ ದಿನ ಬೆಳಗ್ಗೆ ಶಾಲಾ ಕಾಲೇಜುಗಳಲ್ಲಿ ಧ್ವಜವಂದನೆಗಳು ನಡೆದು ಮಕ್ಕಳಿಗೆ ತಿಂಡಿ ಹಂಚಲಾಯಿತು. ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರು ಧ್ವಜಾರೋಹಣ ನಡೆಸಿ ಗೌರವ ವಂದನೆಯನ್ನು ಸ್ವೀಕರಿಸಿದರು. ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜ

In the District Court of South Kanara.

C. M. A. 24/1950

Between

Syed Kadir Saheb— Appellant.
Tereza Bai & others— Respondents.

To

1st Respt. Tereza Bai, widow of Balthru Vrigas, Machina Village, Puttur Taluq.

The above named appellant has filed the above appeal against the Order of the District Munsiff of Puttur in R. E. A. 630/49 dated 31-3-1950 and that the said appeal is posted to 8th September 1951 at 11 A. M. in the above Court.

You may appeal either in person or by Pleader and contest the same on the said date, failing which, the same will be heard and decided in your absence.

(Sd.) K. Balakrishna Rao,
Advocate for Appt.
Mangalore, 13-8-'51.

ರಗಿತು. ಶ್ರೀಗಳಾದ ಎಲ್. ಸಿ. ಪಾಯಿಸ್, ಕೆ. ಕೆ. ಶೆಟ್ಟಿ, ಎಸ್. ಎಸ್. ಕಿಣಿ, ಶಂಕರ ನಾರಾಯಣ ಭಟ್ಟ, ಎಸ್. ಆರ್. ನಾಇಕ ಮೊದಲಾದವರು ಕಾಂಗ್ರೆಸ್ ಸರಕಾರವು ಈ ತನಕ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ, ಮುಂಬರುವ ಚುನಾವಣೆಯು ಕಾಲದಲ್ಲಿ ಹೊಸಪಕ್ಷಗಳು ಹುಟ್ಟುತ್ತಿರುವಾಗ, ನಮಗೆ ಸ್ವಾತಂತ್ರ್ಯ ತಂದ ಕಾಂಗ್ರೆಸನ್ನು ಮರೆಯಬಾರದೆಂದರು.

ಜಿಲ್ಲಾ ಬೋರ್ಡು ಆಫೀಸಿನಲ್ಲಿ ಧ್ವಜವಂದನೆಯಾದ ನಂತರ ಬೋರ್ಡಿನ ನೌಕರರಿಗೆಲ್ಲಾ ರೂ. 56% ಬೆಲೆಯ ಯೂನಿಫಾರಮ್ ಉಡುಪುಗಳನ್ನು ಧರ್ಮಾರ್ಥಕೊಡಲಾಯಿತು.

ವರದಿ ಸ್ವೀಕಾರ — ಮಂಗಳೂರು ನಗರ ಸಭೆಯ 1950–51ನೆ ವರ್ಷದ ಆಡಳಿತ ವರದಿಯು ಕಮಿಶನರ್ ಶ್ರೀ ಎಮ್. ಸಂಜೀವ ಶೆಣೈಯವರಿಂದ ತಯಾರಿಸಲ್ಪಟ್ಟು ಅದು ನಗರ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು.

ಜಿಲ್ಲಾ ಪದ್ಮಶಾಲಿ ಸಮಾಜ ಸೇವಾ ಸಂಘದ-ವಿದ್ಯಾನಿಧಿಯಿಂದ ಎಂದಿನಂತೆ ಸಮಾಜದ ಬಡವಿದ್ಯಾರ್ಥಿಗಳಿಗೆ ಸಹಾಯಕೊಡಲಾಗುವುದೆಂದೂ ಆ ಬಗ್ಗೆ ತಾರೀಕು 31-8-51ರ ತನಕ ಅರ್ಜಿ ಸ್ವೀಕರಿಸಲಾಗುವುದೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಾ 24-8-51ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಗೋಕುಲಾಷ್ಟಮಿಯ ಸಲುವಾಗಿ ಸ್ಪೆಶಲ್.

ಪರಮಾತ್ಮನ ಪರಮಭಕ್ತಿ ಭಕ್ತಪ್ರಹ್ಲಾದನ ಪುಣ್ಯಕಥೆ

ನರಸಿಂಹ ಅವತಾರ್

(ಮಿನರ್ವಾ ಚಿತ್ರ)

ಶೋಭನಾ ಸಮರ್ಥ, ಮಹಿಪಾಲ್.

ತಾ 26-8-51ನೇ ಆದಿತ್ಯವಾರ

20th ಸೆಂಚುರಿಯವರ ವರ್ಣಚಿತ್ರ

ಫೋರ್ ಎವರ್ ಎಂಬರ್.

FOR EVER AMBER.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 258/1951

ದಿ ಜಯಕರ್ನಾಟಕ ಬ್ಯಾಂಕಿಂಗ್ ಎಂಡ್ ಟ್ರೇಡಿಂಗ್ ಕಂಪೆನಿ ಲಿಮಿಟೆಡ್ ಕಲ್ಯಾಣಪುರ ಇದರ ಮೆನೇಜಿಂಗ್ ಡೈರೆಕ್ಟರ ಕೆ. ನರಸಿಂಹ ಪಡಿಯಾರ. —ವಾದಿ.

ಮತ್ತು

1 ಮುಕುಂದ ಪೈ, ಮುಲ್ಕಿ ವೆಂಕಟ್ರಮಣ ಪೈ ಮಗ. 2. ಯನ್. ಪುಂಡಲೀಕ ಶೆಣೈ, ವಾಸುದೇವ ಶೆಣೈ ಮಗ, ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ. — ಪ್ರತಿವಾದಿರು.

ವಾದಿಗೆ ಪ್ರತಿವಾದಿರು ತಾ. 6 9-1950 ರಲ್ಲಿ ಬರಕೊಟ್ಟ ಪ್ರೊಮಿಸರಿ ನೋಟಿನ ಅಸಲು ರೂ. 90-0-0 ಬಡ್ಡಿ ರೂ. 4 0-0, ಎಚ್ಚರಿ ನೋಟೀಸಿನ ಖರ್ಚು ರೂ. 1-0-0 ಕೂಡಾ ರೂ. 95-0-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾರೀಕು 31 8-1951ಕ್ಕೆ ಪ್ರತಿವಾದಿರ ಉದಾಹರಣೆ ಬಗ್ಗೆ ಇಟ್ಟಿದೆ. ಪ್ರತಿವಾದಿರಿಗೆ ಆಕ್ಷೇಪಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯಾಜ್ಯಕ್ಕೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Aithal,
Vakil for Plaintiff.

ಉಡುಪಿ, 21-8-1951

ಶ್ರೀ ಪಿ ಎಸ್ ಕುದ್ವರಿಗೆ ಸತ್ಕಾರ- ವಿದೇಶ ಪ್ರವಾಸವನ್ನು ಮುಗಿಸಿ ಬಂದಿರುವ 'ನವಭಾರತ' ಸಂಪಾದಕರಾದ ಶ್ರೀ ಪಿ.ಎಸ್. ಕುದ್ವರನ್ನು, ಮಂಗಳೂರು ಪತ್ರಿಕೋದ್ಯಮಿಗಳು ತಮ್ಮ ಕಚೇರಿಗೆ ತಾ 18ರಲ್ಲಿ ಸಂಜೆ ಆಹ್ವಾನಿಸಿ, ಸತ್ಕರಿಸಿದರು. ಶ್ರೀ ಕುದ್ವರು ಯುರೋಪ್, ಯುನೈಟೆಡ್ ಕಿಂಗ್ಡಮ್ ಮತ್ತು ಅಮೇರಿಕ ದೇಶಗಳಲ್ಲಿನ ತಮ್ಮ ಪ್ರವಾಸದ ಅನುಭವಗಳನ್ನು ಎತ್ತಿ ಭಾಷಣವಿತ್ತರು.

ಉಡುಪಿ

ಸ್ವಾತಂತ್ರ್ಯ ದಿನಾಚರಣೆ – ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ15ರಂದು ಸಾಂಗವಾಗಿ ಆಚರಿಸಲಾಯಿತು. ಅಂದು ಬೆಳಿಗ್ಗೆ ಗಾಂಧಿ ವ್ಯಾಯಾಮದಲ್ಲಿ ಶ್ರೀಮತಿ ಪ್ರೇಮಲತಾ ಪೈಗಳಿಂದ ರಾಷ್ಟ್ರಧ್ವಜಾರೋಹಣವಾದ ನಂತರ ಕಾಂಗ್ರೆಸ್ ಕಚೇರಿಯಲ್ಲಿ ಸೂತ್ರಯಜ್ಞ ಕಾರ್ಯಕ್ರಮ ನಡೆಯಿತು. ಸಂಜೆ ಬೋರ್ಡ್ ಹ್ಯಾಸ್ಕೂಲಿನ ಪೀಲ್ಡ್ಸ ಹಾಲಿನಲ್ಲಿ ಡಾ। ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಟಿ.ಎ.ಪೈ, ಯು. ಕೃಷ್ಣರಾವ್ ಮತ್ತು ಬಾರ್ಕೂರ್ ದೇವು ಕೃಷ್ಣಯ್ಯ ಹೆಗ್ಡೆಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ನಂತರ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸುದೀರ್ಘ ವಿನೋದ ಕಾಲಕ್ಷೇಪಗಳಾದುವು. ಜತೆಯಲ್ಲಿ ಶ್ರೀ ವಸಂತ ಕುಮಾರರ ನೃತ್ಯಪ್ರದರ್ಶನವೂ ನಡೆಯಿತು: ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಬೆಳಿಗ್ಗೆ ಧ್ವಜ ವಂದನೆ, ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ, ಡಾ। ಟಿ. ಮಾಧವ ಪೈ ಮೊದಲಾದವರ ಭಾಷಣ. ಸಂಜೆ ವಿದ್ಯಾರ್ಥಿಗಳಿಂದ 'ಕಾಶಿಯಾತ್ರೆ' ನಾಟಕಾಭಿನಯ ಜರಗಿತು.

ಹಾಲು ಒದಗಿಸುವ ಸಹಕಾರಿ ಸಂಘದ ಮಹಾಸಭೆಯು ತಾ 15ರಂದು ಡಾ। ಟಿ. ಮಾಧವ ಪೈಗಳು ಅಧ್ಯಕ್ಷರಾಗಿ, ಶ್ರೀ ಎ ಲಕ್ಷ್ಮೀನಾರಾಯಣರಾಯರು ಉಪಾಧ್ಯಕ್ಷರಾಗಿ, ಎಮ್. ವಾಮನ ಭಟ್ಟರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಕಾರ್ಯಸಮಿತಿಗೆ ನಾಲ್ಕು ಮಂದಿಯ ಚುನಾವಣೆಯು ನಡೆಯಿತು.

ಏಕೀಕರಣ ಪಕ್ಷದ ಸಭೆಯ ಧ್ಯೇಯ ಗಳೇನು—ಏಕೀಕರಣ ಪಕ್ಷದ ಮುಂದಾಳುಗಳಾದ ಶ್ರೀಯುತರಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಕೆ. ಆರ್. ಕಾರಂತರು ತಾ 17ರಲ್ಲಿ ಕಲ್ಯಾಣಪುರದ ಕಾರ್ಯಾಲಯದಲ್ಲಿ ಜರಗಿದ ಸಭೆಯಲ್ಲಿ ವಿವರಿಸಿದರು. ಶ್ರೀ ಬಿ. ವಾಸುದೇವರಾಯರು ಅಧ್ಯಕ್ಷತೆ ವಹಿಸಿದ್ದರು.

ಕಾಲೇಜು ವರ್ಧಂತಿ—ಸ್ಥಳೀಯ ಸಂಸ್ಕೃತ ಕಾಲೇಜಿನ ವರ್ಧಂತಿ ಸಮಾರಂಭವು ತಾ 19ರಲ್ಲಿ ಸಂಜೆ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರಪೌಳಿಯಲ್ಲಿ ಪರ್ಯಾಯ ಶ್ರೀ ಕಾಣಿಯೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಕಾಲಿಗಿ ಶೇಷಾಚಾರ್ಯರವರು ವರದಿಯನ್ನೋದಿದ ನಂತರ ಶ್ರೀ ಸ್ವಾಮಿಗಳವರು ಬಹುಮಾನ ವಿತರಣೆ ಮಾಡಿದರು. ಅಲ್ಲದೆ ತಮ್ಮ ಲೆಕ್ಕದಿಂದಲೇ ವಿದ್ಯಾರ್ಥಿ ಪಂಡಿತರಿಗೆಲ್ಲಾ ಒಂದೊಂದು ಜತೆ ವಸ್ತ್ರದ ದಾನವನ್ನಿತ್ತರು.

ದೈವಿಕ ಜೀವನದ ಅನುಭವ, ವಿದ್ಯಾ ಪ್ರಚಾರ, ಯಾತ್ರೆಗಳ ಕುರಿತು ಶ್ರೀ ಎಮ್. ಎಸ್. ಶರ್ಮ ಎಂಬವರು ಮಂಗಳೂರಿನಲ್ಲಿ ತಮ್ಮ ಪ್ರಚಾರ ಕಾರ್ಯವನ್ನು ಮುಗಿಸಿ ಇದೀಗ ಉಡುಪಿಗೆ ಬಂದಿರುತ್ತಾರೆ. ಅವರು ಇಲ್ಲಿಯ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಲಿರುವರು.

ವಿದಾಯ ಸತ್ಕಾರ—ಜೋಗ್ ವಿದ್ಯುಚ್ಛಕ್ತಿ ಯೋಜನೆಯ ಸರ್ವೆ ಬಗ್ಗೆ ನೇಮಿಸಲ್ಪಟ್ಟಿದ್ದ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೀ ಪಾರ್ಥ ಸಾರಥಿಯವರಾಗಿ ವರ್ಗವಾದುದರಿಂದ ಡಾ। ಟಿ. ಮಾಧವ ಪೈಗಳು ತಾ. 18ರಲ್ಲಿ ವಿದಾಯಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಎಚ್. ಸುಂದರ ರಾವ್, ಕಾಲಿಗಿ ಶೇಷಾಚಾರ್, ಎಂ. ವಿಠ್ಠಲ ಕಾಮತ್, ಡಾ। ಟಿ. ಎಂ. ಎ. ಪೈಗಳು ಶ್ರೀ ಪಾರ್ಥ ಸಾರಥಿಗಳ ಗುಣಕಥನ ಮಾಡಿದರು. ಎಸಿಸ್ಟೆಂಟ್ ಇಂಜಿನೀಯರ್ ಶ್ರೀ ಲಕ್ಷ್ಮಣ ಶೆಟ್ಟಿಯು ಇವರ ಚಾರ್ಜನ್ನು ವಹಿಸಿಕೊಂಡಿರುವರು.

ಚಿನ್ನದ ಪಾಲಕಿ—ಶ್ರೀ ಕೃಷ್ಣಾಪುರ ಮಠದ ವೃಂದಾವನಸ್ಥ ಶ್ರೀ ವಿದ್ಯಾಪೂರ್ಣತೀರ್ಥ ಸ್ವಾಮಿಗಳವರು ಇವರ ನಿರ್ಯಾಣಾನಂತರ ಶಿಷ್ಯವೃಂದದ ಸಹಾಯದಿಂದ ಮಾಡಿಸಿದ ಚಿನ್ನದ ಪಾಲಕಿಯನ್ನು ಸದ್ರಿ ಮಠದ ಶ್ರೀ ವಿದ್ಯಾಲಕ್ಷ್ಮೀತೀರ್ಥ ಶ್ರೀ ಪಾದಂಗಳವರು ಎಂಡೋಮೆಂಟ್ ಬೋರ್ಡಿನ ಕೆಲವೊಂದು ಶರತ್ತುಗಳಿಗೊಳಪಟ್ಟು ಇದೇ ತಾ. 19ರಂದು ಬೆಳಿಗ್ಗೆ ಪರ್ಯಾಯ ಶ್ರೀ ಕಾಣಿಯೂರು ಸ್ವಾಮಿಗಳವರ ವಶಕ್ಕೆ ಒಪ್ಪಿಸಿದರು. ಈ ಸಮಾರಂಭದಲ್ಲಿ ಎಂಡೋಮೆಂಟ್ ಬೋರ್ಡಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಸಿ. ಎಸ್. ಮಾಧವ ರಾವ್, ಶ್ರೀ ಕೃಷ್ಣಮಠದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ. ಗುಂಡುರಾಜ ರಾವ್, ವಕೀಲ್ ಶ್ರೀ ಪಿ. ವಿ. ಆಚಾರ್ಯರು ಹಾಜರಿದ್ದರು.

ಹೂವಿನ ಪೂಜೆ—ಶ್ರೀ ಮದನಂತೇಶ್ವರ-ಚಂದ್ರೇಶ್ವರ ದೇವಸ್ಥಾನಗಳಲ್ಲಿ ಕಾಲಂ ಪ್ರತಿ ಜರಗುವ ಜಾತ್ರೆ, ಮಲ್ಲಿಗೆ ಹೂವಿನ ಪೂಜೆಯು ತಾ. ೧೦ರಂದು ಸಂಜೆ ದೇವಸ್ಥಾನ ಆಡಳ್ತೆ ಟ್ರಸ್ಟಿ ವಕೀಲ್ ಶ್ರೀ ಪಿ. ವಿ. ಆಚಾರ್ಯರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಶ್ರೀ ಧರ್ಮಸ್ಥಳ ಎಕ್ಸ್‌ಬಸ್ ಸರ್ವಿಸು ಶ್ರೀ ಕೆ. ಗೋಪಾಲ ಶೆಟ್ಟರ ಶ್ರೀ ಪಾಂಡುರಂಗ ಮೋಟಾರ್ ಬಸ್ ಸರ್ವಿಸು ಉಡುಪಿಯಿಂದ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಇದೀಗ ತಾ. 15ರಿಂದ ಪ್ರಾರಂಭವಾಗಿದೆ. ಯಾತ್ರಾರ್ಥಿಗಳಿಗೆ ಅನುಕೂಲವಾದಂತಾಯಿತು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್—ಇದರ ಮಹಾಸಭೆಯು ತಾ 18ರಲ್ಲಿ ಚೆಯರ್‌ಮೆನ್ ಶ್ರೀ ಕೆ. ವಿ. ಬಲ್ಲಾಳರ ಗೈರು ಹಾಜರಿಯಲ್ಲಿ ಶ್ರೀ ಬಾರ್ಕೂರು ದೇವು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಲೆಕ್ಕಪತ್ರಗಳ ಸ್ವೀಕಾರ, ನಿವೃತ್ತರಾಗಬೇಕಿದ್ದ ಡೈರೆಕ್ಟರ್ ಶ್ರೀ ಬಿ. ಕೆ. ಹೆಗ್ಡೆಯವರ ಪುನರಾಯ್ಕೆ, ಆಡಿಟರ್ ಶ್ರೀ ಸಿ. ಎಮ್. ಹೆಗ್ಡೆಯವರ ನೇಮಕವಾಗಿ ಮೆನೇಜಿಂಗ್ ಡೈರೆಕ್ಟರ ಶ್ರೀ ಕೆ. ಎಚ್. ಶೆಟ್ಟರ ಧನ್ಯವಾದಾರ್ಪಣೆ, ಉಪಹಾರದೊಂದಿಗೆ ಸಭಾಂತ್ಯವಾಯಿತು

ಪ್ರಕಟಣೆ

ಕಾಪು ಉಳಿಯಾರಗೋಳಿ ಮೂಡುಮನೆ ಕೊರಗ ಸೆಟ್ರಲ್ಲಿ ತಾ. 6-8-1951ರಲ್ಲಿ ಕಳವಾದ ಆಭರಣಗಳ ವಿಚಾರದಲ್ಲಿ ಊರ ಮಹನೀಯರು ಯಾರಾದರೂ ಮುಂದೆ ಬಂದು ಪೋಲೀಸರಿಗೆ ಆದಷ್ಟು ಆದರ ಸುಳುಹುಗಳನ್ನು ಕೊಡಬೇಕಾಗಿ ವಿನಂತಿ. ಹಾಗೆ ಯಾವತ್ತೂ ವಿಚಾರವನ್ನು ನನ್ನ ಮನೆಗೇನೇ ಬಂದು ಅವರು ತಿಳಿದ ರೀತಿಯಲ್ಲಿ ತಿಳಿಸುವುದಿದ್ದರೆ ಅವರನ್ನು ವಿಶೇಷವಾಗಿ ಸ್ವಾಗತಿಸಲಾಗುವುದು ಮತ್ತು ಯಾವತ್ತೂ ವಿಚಾರವನ್ನು ಗುಪ್ತವಕ್ಷಿತರಾಗುವುದಲ್ಲದೆ ಯೋಗ್ಯ ಬಹುಮಾನವನ್ನು ಕೊಡಲಾಗುವುದು.

ಯಕ್ಕ ಸೆಟ್ಟಿ ರುಜು.

ಕಾಪು, ತಾ. 22-8-1951

THE UNITED KARNATAK INSURANCE COMPANY LTD., DHARWAR.

WANTED

A Branch Manager for our Udipi Branch. Persons having previous experience and who can guarantee business only need apply to:—

N. S. Kini,
Director-Secretary.

Dharwar, 18-8-51

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 41-/51

ವಾದಿ— ನಾರಾಯಣ ಸೆಟ್ಟಿ.

ಪ್ರತಿವಾದಿರು—1. ತಿಮ್ಮಪ್ಪ ಸೆಟ್ಟಿ, 2. ಅಂಣಪ್ಪ ಸೆಟ್ಟಿ, ಸಾಹುಕಾರ ಮನೆ ಸುಬ್ಬಿ ಸೆಟ್ಟೀರ ಮಕ್ಕಳು, ಕುಂದಾಪುರ ತಾಲ್ಲೂಕು ಕನ್ಯಾನ ಗ್ರಾಮದ ತೋಟದ ಮನೆ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದು:

ವಾದಿಗೆ ಪ್ರತಿವಾದಿರು ಬರಕೊಟ್ಟ ಪ್ರಾಮಿಸರಿ ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಖರ್ಚು ಕೂಡಾ ರೂಪಾಯಿ 76-1-6ನ್ನು ಬಂಮಾಡಿಕೊಳ್ಳುವದಕ್ಕೆ ವಾದಿದಾಖಲು ಮಾಡಿದ ಮೋಕದ್ದಮೆ ತಾ. 10-9-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉಜ್ರುವಾದನೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Pltf

ತಾ. 12-8-51, ಮೊಕ್ಕಾಂ: ಕುಂದಾಪುರ.

Sri Ramakrishna Theatre Limited, Udipi, S. K.

22nd Aug., 1951

NOTICE

is hereby given that the Register of Members and transfer books of the Company will remain closed from Sunday the 9th to Sunday the 23rd September, 1951, both days inclusive.

A. Janardhan Alse,
Managing Director.

NOTICE

Payments such as annual subscription, advertisement and Court Notice publication charges may be credited to 'NAVAYUGA' account at the Canara Industrial & Banking Syndicate Ltd., Udipi or its Branches a/c. par.

Manager

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೩-೮-'೫೧

ಪಾಕ್ ಧೋರಣೆಯಿಂದ ಮುಸ್ಲಿಮರಿಗೆ ಗಂಡಾಂತರ

ಜೇಹಾದದ ಮೂಲಕ ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಹೂಡುವ ಉದ್ಧಟತನವನ್ನು ತೋರಿಸಿದ್ದು, ಭಾರತದ ಮುಸ್ಲಿಮಬಾಂಧವರು ಅದಕ್ಕಾಗಿ ವಿಶೇಷ ಕಳವಳವನ್ನುವ್ಯಕ್ತಪಡಿಸುತ್ತಾರೆ. ಪಾಕ್ ಮುಖ್ಯ ಮಂತ್ರಿ ಲಿಯಾಖತರು, ಜೇಹಾದದ ಮೂಲಕ ಪಾಕಿಸ್ತಾನವನ್ನು ಧಾರ್ಮಿಕ ರಾಷ್ಟ್ರವನ್ನಾಗಿ ರಚಿಸುವ ಹಲವು ತಲೆತಿರುಕರ ವಾದಕ್ಕೆ ಮನಸೋತದ್ದು ವಿಷಾದದ ಸಂಗತಿ. ವಿದೇಶೀಯರ ಪ್ರಚೋದನೆಯಿಂದಲೂ – ಜಾತೀಯ ಮನೋವೃತ್ತಿಯ ಮುಸಲ್ಮಾನರ ಧಾರ್ಮಿಕ ಹೋರಾಟದಿಂದಲೂ ಪಾಕಿಸ್ತಾನವು ಮುಸಲ್ಮಾನ ಧರ್ಮ ಹಾಗೂ ಜನಾಂಗಕ್ಕೆ ವಿಘಾತುಕ ಕಾರ್ಯವನ್ನು ಮಾಡಿಯದೆ. ಭಾರತ ಪಾಕಿಸ್ತಾನಗಳೊಳಗೆ ಯುದ್ಧ ಸಂಭವಿಸಿದರೆ ಭಾರತದಲ್ಲಿಯ ಮುಸಲ್ಮಾನರ ಗತಿಯೇನಾದೀತೆಂದು ಅದು ಲಕ್ಷಿಸಿಲ್ಲ. ಅಷ್ಟು ಮಾತ್ರವಲ್ಲದೆ ಕಾಶ್ಮೀರದಲ್ಲಿ ಮುಸಲ್ಮಾನ ಸ್ತ್ರೀಪುರುಷರ ಜೀವಾಪಹರಣ ಕಾರ್ಯವನ್ನು ಪಾಕಿಸ್ತಾನದ ಮುಸಲ್ಮಾನರು ನಡೆಸಿರುವರು. 1947ರಲ್ಲಿ ಪಾಕಿಸ್ತಾನೀ ಸೈನಿಕರು ಕಾಶ್ಮೀರವನ್ನು ನುಂಗುವ ಯತ್ನದಲ್ಲಿ ಕಾಶ್ಮೀರಿಗಳ ಮೇಲೆ ಅಮಾನುಷ ರೀತಿಯಲ್ಲಿ ನಡೆದುಕೊಂಡದ್ದನ್ನು ಕಾಶ್ಮೀರಿಗಳು ಮರೆಯುವಂತಿಲ್ಲ. ಕಾಶ್ಮೀರವು ಬಹುಸಂಖ್ಯಾಕ ಮುಸಲ್ಮಾನರುಳ್ಳ ದೇಶವೆಂಬ ಒಂದೇ ತತ್ವದ ಮೇಲೆ ಅದು ಪಾಕಿಸ್ತಾನದ್ದಾಗಬೇಕೆಂದು ಚಂಡಿತನ ಹಿಡಿಯುವುದು ಸರಿಯಲ್ಲ. ಅಲ್ಲಿಯ ಜನತೆಯ ಮನೋಭಾವವನ್ನರಿತು ಕಾಶ್ಮೀರವು ಯಾವ ರಾಷ್ಟ್ರವನ್ನು ಸೇರಬಯಸುತ್ತದೋ ಅದಕ್ಕೆ ಸ್ವೇಚ್ಛೆಯಿಂತೆ ಸೇರಿಕೊಳ್ಳಲು ಭಾರತವು ಒಪ್ಪಿರುತ್ತದೆ. 40 ಲಕ್ಷ ಮುಸಲ್ಮಾನರು ತಮಗೆ ಪಾಕಿಸ್ತಾನವಾಗಬೇಕೆಂದು ಬಯಸಿದರೆ ಭಾರತ ಸರಕಾರಕ್ಕೆ ಒಂದರೆಕ್ಷಣ ನಿಲ್ಲಲೂ ಅಲ್ಲಿ ಸಾಧ್ಯವಿಲ್ಲ. ಬಹುಸಂಖ್ಯಾಕರಾದ 40 ಲಕ್ಷ ಮುಸಲ್ಮಾನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಭಾರತವು ಬಲಪ್ರಯೋಗದ ಮೂಲಕ ಕಾಶ್ಮೀರವನ್ನು ಆಕ್ರಮಿಸಲು ಸಾಧ್ಯವೇ ಇಲ್ಲ. ಮುಖ್ಯವಾಗಿ ಕಾಶ್ಮೀರಿಗಳಿಗೆ ಪಾಕಿಸ್ತಾನ ಬೇಡಾಗಿದೆ. ಅಂತಲೇ ಅವರು ಘಟನಾ ಸಮಿತಿಯನ್ನು ನಿರ್ಮಿಸಿ ತಮ್ಮ ಭವಿತವ್ಯದ ಕುರಿತು ಯೋಚಿಸುವ ನಿರ್ಧಾರ ಮಾಡಿದ್ದಾರೆ.

ಸಂ. ರಾ. ಸಂಘದ ಕಾಶ್ಮೀರೀ ಪ್ರತಿನಿಧಿ ಡಾ। ಗ್ರಾಹ್ಯಾಮರು ದಿಲ್ಲಿ, ಕಾಶ್ಮೀರ, ಕರಾಚಿಗಳಿಗೆ ಹಾರಾಡಿದ್ದಾರೆ. ಇನ್ನು ಒಂದೆರಡು ತಿಂಗಳೊಳಗಾಗಿ ತಮ್ಮ ವರದಿಯನ್ನವರು ಕೊಡುವವರಿದ್ದಾರೆ. ಆ ವರದಿಯೂ ಪಾಕಿಸ್ತಾನಿಗಳಿಗನುಕೂಲವಾಗಿದ್ದರೆ ಭಾರತ ಒಪ್ಪುವುದಿಲ್ಲ. ವಿರುದ್ಧವಾದರಂತೂ ಹೋರಾಟವಿದ್ದೇಯಿದೆ. ಕಾಶ್ಮೀರದಲ್ಲಿಯ ' ಘಟನಾಸಮಿತಿಯೂ ಆ ಸಮಯಕ್ಕೆ ಸರಿಯಾಗಿ ರೂಪುಗೊಳ್ಳಲಿದೆ. ಇಂತಹ ಸಂದರ್ಭವನ್ನು ಸಾಧಿಸಿಯೇ ಪುಂಡಾಟಿಕೆಯ ಮೂಲಕ ಅದನ್ನು ಹಾಳುಗೆಡಹಬೇಕೆಂದು ಪಾಕಿಸ್ತಾನದ ಇಚ್ಛೆಯಾಗಿದೆ. ಈಗ ಪಾಕಿಸ್ತಾನದೊಳಗೆ ನಡೆದಿರುವ ಯುದ್ಧ ಸನ್ನಾಹಗಳೂ, ಮುಂಜಾಗ್ರತೆಗಳೂ ಕೇವಲ ರಂಪಾಟ–ಡಂಗುರಗಳೆಂದು ಹೇಳಲು ಬರುವಂತಿಲ್ಲ. ಜೇಹಾದದಂತಹ ಜಾತೀಯ ಸಂಸ್ಥೆಯ ಮೂಲಕ ಯುದ್ಧದಿಂದ ತಮ್ಮ ಕಾರ್ಯ ಕೈಗೂಡಿತೆಂದು ಭಾವಿಸಿದ್ದ ಹುಚ್ಚುತನವೇ ಸರಿ! . ಖಡ್ಗದಿಂದಲೇ ಮುಸಲ್ಮಾನ ಧರ್ಮದ ಉತ್ಕೃಷ್ಟ ರಾಷ್ಟ್ರವನ್ನು ಕಟ್ಟುತ್ತೇವೆನ್ನುವದು ಪಾಕಿಸ್ತಾನಿಗಳಿದ್ದರೆ ಅದು ಭ್ರಾಮಕವಾದ ಕಲ್ಪನೆ. ಈ ಬಗೆಯ ವಾಮಮಾರ್ಗದಿಂದ ಪಾಕಿಸ್ತಾನದ ಮೂಲೋದ್ದೇಶ ಕೈಗೂಡುವದಂತಿರಲಿ; ಮುಸಲ್ಮಾನರ ಅಸ್ತಿತ್ವಕ್ಕೆ ಇದರಿಂದ ಗಂಡಾಂತರವಿದೆಯೆನ್ನುವದನ್ನು ಮರೆಯಬಾರದು! ಹುಚ್ಚುಚ್ಚಾಗಿ ವರ್ತಿಸಿ, ನೆರೆಯ ರಾಷ್ಟ್ರ ಹಾಗೂ ಬಂಧುಗಳೊಡನೆ ಶತ್ರುಕಾರ್ಯಕ್ಕೆ ನಿಲ್ಲುವ ಈ ಸಾಹಸ ಮಾಡಿದ್ದಕ್ಕೆ ನಿಜವಾಗಿಯೂ ವಿಷಾದಪಡಬೇಕಾಗಿದೆ.

ಇದನ್ನು ಲಕ್ಷಿಸಿ ಭಾರತದ ನಾಗರಿಕರಾದ ಮುಸ್ಲಿಮರು ಪಾಕಿಸ್ತಾನದ ಅನುಚಿತ ಧೋರಣೆಯನ್ನು ಖಂಡಿಸುತ್ತ ಬಂದಿದ್ದಾರೆ. ಕಾಶ್ಮೀರಾಕ್ರಮಣದ ದುರುದ್ದೇಶದಿಂದ ಭಾರತದೊಳಗಿನ 4 ಕೋಟಿ ಜನರ ಹಿತರಕ್ಷಣೆಯನ್ನು ಪಾಕಿಸ್ತಾನವು ಪೂರ್ತ ಮರೆತಿದ್ದು ಅವರಿಗೆ ಗಂಡಾಂತರವನ್ನು ತರಬಲ್ಲ ವಾತಾವರಣವನ್ನು ನಿರ್ಮಿಸುತ್ತಲಿದೆಯೆಂದು ಭಾರತದ ಪ್ರಮುಖ ಮುಸಲ್ಮಾನರು ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿಗೆ ತಮ್ಮ ಸುದೀರ್ಘ ಮನವಿಯೊಂದನ್ನು ಒಪ್ಪಿಸಿದ್ದಾರೆ. ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ। ಝಾಕೀರ ಹುಸೇನ, ಸುಲ್ತಾನ ಅಹಮ್ಮದ, ಛತ್ತಾರಿ ನವಾಬರೇ ಮೊದಲಾದ ಪ್ರಮುಖ ಮುಸ್ಲಿಮ ಧುರೀಣರು ಈ ಮನವಿಗೆ ಅಂಕಿತ ಹಾಕಿರುವರು. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು ಈ ಮನವಿಯನ್ನು ಅಪಾರ್ಥಮಾಡಿಕೊಂಡು "ಭಾರತದೊಳಗಿರುವ ನಮ್ಮ ಬಂಧುಗಳ ದುಃಖವನ್ನು ನಾವು ಆಳವಾಗಿ ಚಿಂತಿಸುತ್ತಲಿದ್ದೇವೆ. ಅವರ ಮೇಲೆ ನಮಗೆ ಹೃದಯಂಗಮವಾದ ಸಹಾನುಭೂತಿಯಿದೆ" ಎಂದು ಆಣತಿಮಾಡಿರುವರು. ಜಾಫ್ರುಲ್ಲಾಖಾನರ ದೃಷ್ಟಿಯಲ್ಲಿ ಭಾರತದ ಮುಸಲ್ಮಾನರಿಗೆ ಭಾರತದೊಳಗೆ ಜೀವಿಸುವದೇ ದುಸ್ತರವಾಗಿದೆ ಎಂಬ ಭ್ರಾಂತಿ ತೋರುತ್ತದೆ. ಈ ಮನವಿಯ ಉದ್ದೇಶ ಹಾಗಿಲ್ಲ. "ಭಾರತದೊಳಗೆ ಮುಸಲ್ಮಾನರಿಗೆ ನಾಗರಿಕ ಜೀವನದ ಸಕಲ ಸೌಲಭ್ಯಗಳೂ ಇರುತ್ತವೆ. ಹಿಂದುಗಳೂ ಸಹೋದರ ಭಾವದಿಂದ ವರ್ತಿಸುತ್ತಿದ್ದು ಯಾವುದೇ ರೀತಿಯ ತೊಡಕು–ತೊಂದರೆಗಳಿಲ್ಲದೆ ಸಮಾನ ಜೀವನನಡೆಸುವಂತಾಗಿದೆ ಪಾಕಿಸ್ತಾನಿಗಳು ಅಲ್ಪಸಂಖ್ಯಾಕರನ್ನು ಪೈಶಾಚಿಕವೃತ್ತಿಯಿಂದ ನಡೆಸಿಕೊಂಡು ತೊಂದರೆಕೊಡುವಂತಾದರೆ ಇಲ್ಲಿಯಹಿಂದೂಬಾಂಧವರೊಡನೆ ಕಟ್ಟಿಕೊಂಡಿರುವ ಬಾಂಧವ್ಯಕ್ಕೆ ಧಕ್ಕೆ ಬರುವದು ಮಾತ್ರವಲ್ಲದೆ ಇಲ್ಲಿಯ ಮುಸಲ್ಮಾನರ ವಿಷಯ ಸದ್ಭಾವನೆಯನ್ನು ಇಡಲು ಸಾಧ್ಯವಿರುವದೇ?" ಎಂಬುದೇ ಇದರ ಮತಿತಾರ್ಥವಾಗಿದೆ. ಪಾಕಿಸ್ತಾನದ ಸ್ವಾರ್ಥ ಸಂಕುಚಿತತೆ ಹಾಗೂ ಜಾತೀಯತೆಯ ಮನೋವೃತ್ತಿಗೆ ಕಾಶ್ಮೀರ ಹಾಗೂ ಭಾರತದ ಮುಸಲ್ಮಾನರನ್ನು ಆಹುತಿಗೊಳ್ಳುವುದು ಸರಿಯಾಗಲಾರದು! ಪಾಕಿಸ್ತಾನಿಗಳ ಕಲ್ಪನೆ ಅಭಿಪ್ರಾಯಗಳು ಕಾಶ್ಮೀರದ 40 ಲಕ್ಷ ಮುಸಲ್ಮಾನರ ಇಲ್ಲವೆ ಭಾರತದ|4ಕೋಟಿ ಜನರ ಅಭಿಪ್ರಾಯವೆಂದೂ ಆಗದು. ಅಂತಲೇ ಪಾಕಿಸ್ತಾನದ ಈ ಧೋರಣೆ ಅವ್ಯವಹಾರ್ಯ–ತೀರ ಅನುಚಿತವೆಂದು ಭಾರತ ಮುಸಲ್ಮಾನರು ಮನವಿಯ ಮೂಲಕ ವ್ಯಕ್ತಪಡಿಸಿದ್ದು ಯೋಗ್ಯವೇ ಆಗಿದೆ.

ಭಾರತ ಸರಕಾರವು ಹಿಂದಿನಿಂದಲೂ ಶಾಂತಿಸೌಹಾರ್ದಮಯವಾದ ವಿಶಾಲ ರಾಜಕೀಯ ಧೋರಣೆಯನ್ನನುಸರಿಸಿಕೊಂಡುಬಂದಿದೆ. ಚಾರಿತ್ರಿಕ ಹಿನ್ನೆಲೆಯೂ ಈ ಬಗೆಯ ವಿಶ್ವಕುಟುಂಬಿ ಮನೋವೃತ್ತಿಯನ್ನು ಸಾರುತ್ತದೆ. ಮಹಾತ್ಮಾ ಗಾಂಧಿ, ನೆಹರೂರವರೇ ಮೊದಲಾದವರ ಜಾತ್ಯತೀತ ಧೋರಣೆಯ ಫಲವಾಗಿ ಭಾರತವು ಜಾಗತಿಕರಂಗದಲ್ಲಿ ನೈತಿಕವಾಗಿಯೂ ರಾಜಕೀಯವಾಗಿಯೂ ಉನ್ನತ ಸ್ಥಾನವನ್ನು ಪಡೆದಿದೆ. ಜಾತೀಯ ಭಾವನೆಯುಳ್ಳ ಹಲವರು ಸರಕಾರದ ಸಾವಧಾನ ಧೋರಣೆಯನ್ನು ಟೀಕಿಸುವದಾದರೂ ಉಜ್ವಲವಾದ ಪರಂಪರೆಯಿಂದ ಸಾಗಿ ಬಂದ ಸತ್ಯ ಅಹಿಂಸೆ-ಸಮತೆಗಳನ್ನು ಅದು ಬಿಟ್ಟುಕೊಡದು. ಅಂತಲೇ 4 ಕೋಟಿ ಮುಸಲ್ಮಾನರು ಭಾರತ ಸರಕಾರಕ್ಕೆ ಅತ್ಯಂತ ನಿಷ್ಠೆಯನ್ನು ವ್ಯಕ್ತಪಡಿಸಿದ್ದು ಮಾತ್ರವಲ್ಲದೆ ನೆಹರೂ ಸರಕಾರಕ್ಕೆ ಸಂಪೂರ್ಣ ತ್ಯಾಗ ಮಾಡಲು ಸಿದ್ಧರಿರುವ ಭರವಸೆಯನ್ನು ನೀಡಿರುವುದು ನಮ್ಮನಮ್ಮೊಳಗಿರುವ ಪರಸ್ಪರ ಮೈತ್ರಿಯ ದ್ಯೋತಕವಾಗಿದೆ. ಈ ಬಗೆಯ ಮೈತ್ರಿಯನ್ನು ಕೆಡಿಸಿ, ಮುಸಲ್ಮಾನರ ರಾಷ್ಟ್ರವನ್ನು ಕಟ್ಟುತ್ತೇವೆಂದು ಪಾಕಿಸ್ತಾನಿಗಳು ಭ್ರಮಿಸಿದರೆ ಅದಕ್ಕಿಂತ ಮಿಗಿಲಾದ ಪ್ರಮಾದ ಹಾಗೂ ದುರ್ದೈವ ಬೇರಿರಲಾರದು!

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ಅಂತ್ಯಕ್ಕೆ ನವಯುಗದ 31ನೇ ವರ್ಷವು ಅಂತ್ಯವಾಗಿ ಸಪ್ಟಂಬರ ತಿಂಗಳಿಂದ 32ನೆ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರು ತಂತಮ್ಮ ಚಂದಾಹಣವನ್ನೂ, ಬಾಕಿಯುಳ್ಳವರು ಅದನ್ನು ಕೂಡಾ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

ಮಂಗಳೂರು

ಭಗಿನೀ ಸಮಾಜದ ಮಹಾ ಸಭೆಯು ತಾ. 11ರಲ್ಲು ಸಮಾಜದ ಉಪಾಧ್ಯಕ್ಷೆ ಶ್ರೀಮತಿ ಮುಕ್ತಾಬಾಯಿ ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ವಂದಿಯನ್ನೋದಿದ ನಂತರ ಶ್ರೀಮತಿ ರಮಾಬಾಯಿ ವಿ. ಪೈಯವರು ಲೆಖ್ಖಪತ್ರಗಳನ್ನೊಪ್ಪಿಸಿದರು. ಈಗ ಕೇಂದ್ರ ಸರಕಾರದ ಮುಂದಿರುವ ಹಿಂದೂಕೋಡ್ ಮಸೂದೆಯನ್ನು ಸ್ವಾಗತಿಸುವ ನಿರ್ಣಯವಾದ ಬಳಿಕ ಬಾಲ್ತಿ ವರುಷದ ಚುನಾವಣೆ ನಡೆಯಿತು. ಶ್ರೀಮತಿ ರಾಜಲಕ್ಷ್ಮಿ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀಮತಿಯರಾದ ಮುಕ್ತಾಬಾಯಿ ಪಂಡಿತ ಮತ್ತು ಲೀಲಾಬಾಯಿಯವರು ಉಪಾಧ್ಯಕ್ಷೆಯರಾಗಿಯೂ ಶ್ರೀಮತಿಯರು ಶಾರದಾ ಕಳವಾರ್ ಮತ್ತು ಕಲ್ಯಾಣಿ ಡಿ. ಸೆಟ್ಟಿಯವರು ಜತೆಕಾರ್ಯದರ್ಶಿಗಳಾಗಿಯೂ ಶ್ರೀಮತಿಯರು ವಿಮಲಾ ಗಣೇಶ ಮತ್ತು ರುಕ್ಮಾ ಪಂಡಿತರು ಶಿಶುವಿಹಾರದ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಅಲ್ಲದೆ ಕಾರ್ಯ ಸಮಿತಿಗೆ 17ಮಂದಿಯ ಚುನಾವಣೆಯೂ ನಡೆಯಿತು.

ವಾರ್ಷಿಕೋತ್ಸವ-ಭಗಿನೀ ಸಮಾಜದ ವಾರ್ಷಿಕೋತ್ಸವವು ತಾ. 12ರಲ್ಲು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ನಂತರ ಕಾರ್ಯದರ್ಶಿಗಳು ಸಮಾಜದ ವರದಿಯನ್ನೊಪ್ಪಿಸಿದರು. ಬಳಿಕ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ಶ್ರೀಮತಿ ಕೆ. ಪಾರ್ವತಿಬಾಯಿ ಮೊದಲಾದವರು ಸಂಗೀತ ಕಾಲೋಚಿತ ಮಾತುಗಳನ್ನಾಡಿದರು. ನಂತರ ವಿನೋದ ಕಾಲಕ್ಷೇಪಗಳಾದುವು.

ಸ್ವಾತಂತ್ರ್ಯ ದಿನಾಚರಣೆ—ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ. 15ರಂದು ಸಂಭ್ರಮದಿಂದ ಜರಗಿತು. ಆ ದಿನ ಬೆಳಿಗ್ಗೆ ಶಾಲಾ ಕಾಲೇಜುಗಳಲ್ಲಿ ಧ್ವಜವಂದನೆಗಳು ನಡೆದು ಮಕ್ಕಳಿಗೆ ತಿಂಡಿಹಂಚಲಾಯಿತು. ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರು ಧ್ವಜಾರೋಹಣ ನಡೆಸಿ ಸೈನ್ಯ ವಂದನೆಯನ್ನು ಸ್ವೀಕರಿಸಿದರು. ಸಂಜೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜ

In the District Court of South Kanara.

C. M. A. 24/1950

Between

Syed Kadir Saheb— Appellant.
Tereza Bai & others—
Respondents.

To

1st Respt. Tereza Bai, widow of Balthru Vrigas, Machina Village, Puttur Taluq.

The above named appellant has filed the above appeal against the Order of the District Munsiff of Puttur in R. E. A. 630/49 dated 31-3-1950 and that the said appeal is posted to 8th September 1951 at 11 A. M. in the above Court.

You may appeal either in person or by Pleader and contest the same on the said date, failing which, the same will be heard and decided in your absence.

(Sd.) K. Balakrishna Rao.
Advocate for Appt.
Mangalore, 13-8-'51.

ರಗಿತು, ಶ್ರೀಗಳಾದ ಎಲ್. ಸಿ. ಪಾಯಸ್, ಕೆ. ಕೆ. ಶೆಟ್ಟಿ, ಎನ್. ಎಸ್. ಕಿಲ್ಲೆ, ಶಂಕರ ನಾರಾಯಣ ಭಟ್ಟ, ಎಸ್. ಆರ್. ನಾಯಕ ಮೊದಲಾದವರು ಕಾಂಗ್ರೆಸ್ ಸರಕಾರವು ಈ ತನಕ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಮುಂಬರುವ ಚುನಾವಣೆಯ ಕಾಲದಲ್ಲಿ ಹೊಸಪಕ್ಷಗಳು ಹುಟ್ಟಬೇಕಾದಾಗ, ನಮಗೆ ಸ್ವಾತಂತ್ರ್ಯ ತಂದ ಕಾಂಗ್ರೆಸನ್ನು ಮರೆಯಬಾರದೆಂದರು.

ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಧ್ವಜವಂದನೆಯಾದ ನಂತರ ಬೋರ್ಡಿನ ನೌಕರರಿಗೆಲ್ಲಾ ರೂ. 56% ಬೆಲೆಯ ಯೂನಿಫಾರ್ಮ್ ಉಡುಪುಗಳನ್ನು ಧರ್ಮಾರ್ಥಕೊಡಲಾಯಿತು.

ವರದಿ ಸ್ವೀಕಾರ — ಮಂಗಳೂರು ನಗರ ಸಭೆಯು 1950-51ನೆ ವರ್ಷದ ಆಡಳಿತ ವರದಿಯು ಕಮಿಶನರ್ ಶ್ರೀ ಎಮ್. ಸಂಜೀವ ಶೆಣೈಯವರಿಂದ ತಯಾರಿಸಲ್ಪಟ್ಟು ಅದು ನಗರ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು.

ಜಿಲ್ಲಾ ಪದ್ಮಶಾಲಿ ಸಮಾಜ ಸೇವಾ ಸಂಘದ-ವಿದ್ಯಾನಿಧಿಯಿಂದ ಎಂದಿನಂತೆ ಸಮಾಜದ ಬಡವಿದ್ಯಾರ್ಥಿಗಳಿಗೆ ಸಹಾಯ ಕೊಡಲಾಗುವುದೆಂದೂ ಆ ಬಗ್ಗೆ ತಾರೀಕು 31-8-51ರ ತನಕ ಅರ್ಜಿ ಸ್ವೀಕರಿಸಲಾಗುವುದೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಾ 24-8-51ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಗೋಕುಲಾಷ್ಟಮಿಯ ಕಲಾವಾಗಿ ಸ್ಪೆಶಲ್.

ಪರಮಾತ್ಮನ ಪರಮಭಕ್ತ ಭಕ್ತಪ್ರಹ್ಲಾದನ ಪುಣ್ಯಕಥೆ

ನರಸಿಂಹ ಅವತಾರ್

(ಮಿನರ್ವಾ ಚಿತ್ರ)

ಶೋಭನಾ ಸಮರ್ಥ, ಮಹಿಪಾಲ್

ತಾ 26-8-51ನೇ ಆದಿತ್ಯವಾರ

20th ಸೆಂಚುರಿಯವರ ವರ್ಣಚಿತ್ರ

ಫೊರ್ ಎವರ್ ಎಂಬರ್.

FOR EVER AMBER.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 253/1951

ದಿ ಜಯಕರ್ನಾಟಕ ಬ್ಯಾಂಕಿಂಗ್ ಎಂಡ್ ಟ್ರೇಡಿಂಗ್ ಕಂಪನಿ ಲಿಮಿಟೆಡ್ ಕಲ್ಯಾಣಪುರ ಇದರ ಮೆನೇಜಿಂಗ್ ಡೈರೆಕ್ಟರ ಕೆ. ನರಸಿಂಹ ಪಡಿಯಾರ. — ವಾದಿ.

ಮತ್ತು

1 ಮುಕುಂದ ಪೈ, ಮಲ್ಪೆ ಪೆಂಕಟ್ರಮಣ ಪೈ ಮಗ, 2. ಯನ್. ಪುಂಡಲೀಕ ಶೆಣೈ, ವಾಸುದೇವ ಶೆಣೈ ಮಗ, ಮೂಡುತೋನ್ಸೆ ಗ್ರಾಮ, ಕಲ್ಯಾಣಪುರ. — ಪ್ರತಿವಾದಿಗಳು.

ವಾದಿಗೆ ಪ್ರತಿವಾದಿಯು ತಾ. 6-9-1950 ರಲ್ಲಿ ಬರೆಕೊಟ್ಟ ಪ್ರಾಮಿಸರಿ ನೋಟಿನ ಅಸಲು ರೂ. 90-0-0 ಬಡ್ಡಿ ರೂ. 4-0-0, ನೋಟೀಸಿನ ಖರ್ಚು ರೂ. 1-0-0 ಕೂಡಾ ರೂ. 95-0-0ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾರೀಕು 31 8-1951ಕ್ಕೆ ಪ್ರತಿವಾದಿಯ ಉದಾಹರಣೆ ಬಗ್ಗೆ ಇಟ್ಟಿದೆ. ಪ್ರತಿವಾದಿಗೆ ಆಕ್ಷೇಪಣೆಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಖರವಾಗ್ಯ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Aithal,
Vakil for Plaintiff.

ಉಡುಪಿ, 21-8-1951

ಶ್ರೀ ವಿ ಎಸ್ ಕುಡ್ವರಿಗೆ ಸತ್ಕಾರ— ವಿದೇಶ ಪ್ರವಾಸವನ್ನು ಮುಗಿಸಿ ಬಂದಿರುವ 'ನವಭಾರತ' ಸಂಪಾದಕರಾದ ಶ್ರೀ ವಿ.ಎಸ್. ಕುಡ್ವರನ್ನು, ಮಂಗಳೂರು ಪತ್ರಿಕೋದ್ಯಮಿಗಳು ತಮ್ಮ ಕಚೇರಿಗೆ ತಾ 18ರಲ್ಲು ಸಂಜೆ ಆಹ್ವಾನಿಸಿ, ಸತ್ಕರಿಸಿದರು. ಶ್ರೀ ಕುಡ್ವರು ಯುರೋಫ್, ಯುನೈಟೆಡ್ ಕಿಂಗ್ಡಮ್ ಮತ್ತು ಅಮೇರಿಕ ದೇಶಗಳಲ್ಲಿನ ತಮ್ಮ ಪ್ರವಾಸದ ಅನುಭವಗಳನ್ನು ಎತ್ತಿ ಭಾಷಣವಿತ್ತರು.

ಉಡುಪಿ

ಸ್ವಾತಂತ್ರ್ಯ ದಿನಾಚರಣೆ – ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ15 ರಂದು ಸಾಂಗವಾಗಿ ಆಚರಿಸಲಾಯಿತು. ಅಂದು ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ಶ್ರೀಮತಿ ಪ್ರೇಮಾಅನಂತ ಪೈಗಳಿಂದ ರಾಷ್ಟ್ರಧ್ವಜಾರೋಹಣವಾದ ನಂತರ ಕಾಂಗ್ರೆಸ್ ಕಚೇರಿಯಲ್ಲಿ ಸೂತ್ರಯಜ್ಞ ಕಾರ್ಯಕ್ರಮ ನಡೆಯಿತು. ಸಂಜೆ ಬೋರ್ಡ್ ಹೈಸ್ಕೂಲಿನ ಪೀಪಲ್ಸ್ ಹಾಲಿನಲ್ಲಿ ಡಾ। ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಟಿ.ಎ.ಪೈ, ಯು. ಕೃಷ್ಣರಾವ್ ಮತ್ತು ಬಾಳ್ಕಟ್ಟ ದೀಡು ಕೃಷ್ಣಯ್ಯ ಹೆಗ್ಡೆಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ನಂತರ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸುದೀರ್ಘ ವಿನೋದ ಕಾಲಕ್ಷೇಪಗಳಾದುವು. ಜತೆಯಲ್ಲಿ ಶ್ರೀ ವಸಂತ ಕುಮಾರರ ನೃತ್ಯಪ್ರದರ್ಶನವೂ ನಡೆಯಿತು: ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಬೆಳಿಗ್ಗೆ ಧ್ವಜ ವಂದನೆ, ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ, ಡಾ। ಟಿ. ಮಾಧವ ಪೈ ಮೊದಲಾದವರ ಭಾಷಣ, ಸಂಜೆ ವಿದ್ಯಾರ್ಥಿಗಳಿಂದ 'ಕಾಶಿಯಾತ್ರೆ' ನಾಟಕಾಭಿನಯ ಜರಗಿತು.

ಹಾಲು ಒದಗಿಸುವ ಸಹಕಾರಿ ಸಂಘದ ಮಹಾ ಸಭೆಯು ತಾ 15ರಂದು ಡಾ। ಟಿ. ಮಾಧವ ಪೈಗಳು ಅಧ್ಯಕ್ಷರಾಗಿ, ಶ್ರೀ ಎ. ಲಕ್ಷ್ಮೀನಾರಾಯಣರಾಯರು ಉಪಾಧ್ಯಕ್ಷರಾಗಿ, ಎಮ್. ವಾಮನ ಭಟ್ಟರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಕಾರ್ಯಸಮಿತಿಗೆ ನಾಲ್ಕು ಮಂದಿಯ ಚುನಾವಣೆಯು ನಡೆಯಿತು.

ಏಕೀಕರಣ ಪಕ್ಷದ ಸಭೆಯು ಧ್ಯೇಯ ಗಳೇನು—ಎಂಬುದನ್ನು ಪಕ್ಷದ ಮುಂದಾಳುಗಳಾದ ಶ್ರೀಯುತರಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಕೆ. ಆರ್. ಕಾರಂತರು ತಾ 17ರಲ್ಲು ಕಲಾವೃಂದದ ಕಾರ್ಯಾಲಯದಲ್ಲಿ ಜರಗಿದ ಸಭೆಯಲ್ಲಿ ವಿವರಿಸಿದರು. ಶ್ರೀ ಬಿ. ವಾಸುದೇವರಾಯರು ಅಧ್ಯಕ್ಷತೆ ವಹಿಸಿದ್ದರು.

ಕಾಲೇಜು ವರ್ಧಂತಿ—ಸ್ಥಳೀಯ ಸಂಸ್ಕೃತ ಕಾಲೇಜಿನ ವರ್ಧಂತಿ ಸಮಾರಂಭವು ತಾ 19ರಲ್ಲು ಸಂಜೆ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರಪಾಳಿಯಲ್ಲಿ ಪರ್ಯಾಯ ಶ್ರೀ ಕಾಣೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಕಾಲಿಗಿ ಶೇಷಾಚಾರ್ಯರವರು ವರದಿಯನ್ನೋದಿದ ನಂತರ ಶ್ರೀ ಪುತ್ತಿಗೆ ಸ್ವಾಮಿಗಳವರು ಬಹುಮಾನ ವಿತರಣೆ ಮಾಡಿದರು. ಅಲ್ಲದೆ ತಮ್ಮ ಲೆಕ್ಕದಿಂದಲೇ ವಿದ್ಯಾರ್ಥಿ ಪಂಡಿತರಿಗೆಲ್ಲಾ ಒಂದೊಂದು ಜತೆ ವಸ್ತ್ರದಾನ ಮಾಡಿದರು.

ದೈವಿಕ ಜೀವನದ ಅನುಭವ, ವಿದ್ಯಾಪ್ರಚಾರ, ಯಾತ್ರೆಗಳ ಕುರಿತು ಶ್ರೀ ಎಮ್. ಎಸ್. ಶರ್ಮ ಎಂಬವರು ಮಂಗಳೂರಿನಲ್ಲಿ ತಮ್ಮ ಪ್ರಚಾರ ಕಾರ್ಯವನ್ನು ಮುಗಿಸಿ ಇದೀಗ ಉಡುಪಿಗೆ ಬಂದಿರುತ್ತಾರೆ. ಅವರು ಇಲ್ಲಿಯ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಲಿರುವರು.

ವಿದಾಯ ಸತ್ಕಾರ—ಜೋಗ್ ವಿದ್ಯುಚ್ಛಕ್ತಿ ಯೋಜನೆಯ ಸರ್ವೆ ಬಗ್ಗೆ ನೇಮಿಸಲ್ಪಟ್ಟಿದ್ದ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೀ ಪಾರ್ಥ ಸಾರಥಿಯವರಾಗಿ ವರ್ಗವಾದುದರಿಂದ ಡಾ। ಟಿ. ಮಾಧವ ಪೈಗಳು ತಾ. 18 ರಲ್ಲಿ ವಿಧಾಯಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಎಚ್. ಸುಂದರ ರಾವ್, ಕಾಲಿಗಿ ಶೇಷಾಚಾರ್, ಎಂ. ವಿಠ್ಠಲ ಕಾಮತ್, ಡಾ। ಟಿ. ಎಂ. ಎ. ಪೈಗಳು ಶ್ರೀ ಪಾರ್ಥ ಸಾರಥಿಗಳ ಗುಣಕಥನ ಮಾಡಿದರು. ಎಸಿಸ್ಟೆಂಟ್ ಇಂಜನೀಯರ್ ಶ್ರೀ ಲಕ್ಷ್ಮಣ ಶೇಟರು ಇವರ ಚಾರ್ಜನ್ನು ವಹಿಸಿಕೊಂಡಿರುವರು.

ಚಿನ್ನದ ಪಾಲಕಿ—ಶ್ರೀ ಕೃಷ್ಣಾಪುರ ಮಠದ ವೃಂದಾವನಸ್ಥ ಶ್ರೀ ವಿದ್ಯಾಪ್ರಜ್ಞತೀರ್ಥ ಸ್ವಾಮಿಗಳವರು ಇವರ ಮಠಾಧಿಪತಿಗಳ ಭಾಗವೂ ಶಿಷ್ಯವೃಂದದ ಸಹಾಯದಿಂದ ಮಾಡಿದ ಚಿನ್ನದ ಪಾಲಕಿಯನ್ನು ಸದ್ರಿ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀ ಪಾದಂಗಳವರು ಎಂಡೋಮೆಂಟ್ ಬೋರ್ಡಿನ ಕೆಲವು ಷರತ್ತುಗಳಿಗೊಳಪಟ್ಟು ಇದೇ ತಾ. 19ರಂದು ಬೆಳಿಗ್ಗೆ ಪರ್ಯಾಯ ಶ್ರೀ ಕಾಣೂರು ಸ್ವಾಮಿಗಳವರ ವಶಕ್ಕೆ ಒಪ್ಪಿಸಿದರು. ಈ ಸಮಾರಂಭದಲ್ಲಿ ಎಂಡೋಮೆಂಟ್ ಬೋರ್ಡಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ. ಎಸ್. ಮಾಧವ ರಾವ್, ಶ್ರೀ ಕೃಷ್ಣಮಠದ ಎಗ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ. ಗುಂಡುರಾಜ ರಾವ್, ವಕೀಲ್ ಶ್ರೀ ಪಿ. ವಿ. ಆಚಾರ್ಯರು ಹಾಜರಿದ್ದರು.

ಹೂವಿನ ಪೂಜೆ—ಶ್ರೀ ಮದನಂತೇಶ್ವರ-ಚಂದ್ರೇಶ್ವರ ದೇವಸ್ಥಾನಗಳಲ್ಲಿ ಕಾಲರ ಪ್ರತಿ ಜರಗುವ ಪಾಚಿ, ಸಿಲ್ಲಿಗೆ ಹೂವಿನ ಪೂಜೆಯು ತಾ. ೩ರಂದು ಸಂಜೆ ದೇವಸ್ಥಾನ ಆಡಳ್ತ ಟ್ರಸ್ಟಿ ವಕೀಲ್ ಶ್ರೀ ಪಿ. ವಿ. ಆಚಾರ್ಯರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಶ್ರೀ ಧರ್ಮಸ್ಥಳಕ್ಕೆ ಬಸ್ ಸರ್ವಿಸು: ಶ್ರೀ ಕೆ. ಗೋಪಾಲ ಸೆಟ್ಟರ ಶ್ರೀ ಮಂಜುನಾಥ ಮೋಟಾರ್ ಬಸ್ ಸರ್ವಿಸು ಉಡುಪಿಯಿಂದ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಇದೀಗ ತಾ. 15ರಿಂದ ಪ್ರಾರಂಭವಾಗಿದೆ. ಯಾತ್ರಾರ್ಥಿಗಳಿಗೆ ಅನುಕೂಲವಾದಂತಾಯಿತು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್—ಇದರ ಮಹಾಸಭೆಯು ತಾ. 18ರಲ್ಲು ಚೆಯರ್‌ಮೆನ್ ಶ್ರೀ ಕೆ. ಜೆ. ಬಲ್ಲಾಳರ ಗೈರು ಹಾಜರಿಯಲ್ಲಿ ಶ್ರೀ ಬಾಳ್ಕಟ್ಟ ದೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಲೆಖ್ಖಪತ್ರಗಳ ಸ್ವೀಕಾರ, ನಿವೃತ್ತರಾಗಬೇಕಿದ್ದ ಡೈರೆಕ್ಟರ್ ಶ್ರೀ ಬಿ. ಕೆ. ಹೆಗ್ಡೆಯವರ ಪುನರಾಯ್ಕೆ, ಆಡಿಟರ್ ಶ್ರೀ ಪಿ. ಎಮ್. ಹೆಗ್ಡೆರ ನೇಮಕಗಳಾಗಿ ಮೆನೇಜಿಂಗ್ ಡೈರೆಕ್ಟರ ಶ್ರೀ ಕೆ. ಎಚ್. ಶೆಟ್ಟಿರ ಧನ್ಯವಾದಾರ್ಪಣೆ, ಉಪಾಹಾರದೊಂದಿಗೆ ಸಭಾಂತ್ಯವಾಯಿತು

ಪ್ರಕಟಣೆ

ಕಾಪು ಉಳಿಯಾರಗೋಳಿ ಮೂಡುಮನೆ ಕೊರಗ ಸೆಟ್ರಲ್ಲಿ ತಾ. 6-8-1951ರಲ್ಲು ಕಳವಾದ ಆಭರಣಗಳ ವಿಚಾರದಲ್ಲಿ ಊರ ಮಹನೀಯರು ಯಾರಾದರೂ ಮುಂದೆ ಬಂದು ಪೋಲೀಸರಿಗೆ ಆದಷ್ಟು ಆದರ ಸುಳಿವುಗಳನ್ನು ಕೊಡಬೇಕಾಗಿ ವಿನಂತಿ. ಹಾಗೆ ಯಾವನ್ನಾ ವಿಚಾರವನ್ನು ನನ್ನ ಮನೆಗೇನೇ ಬಂದು ಅವರು ತಿಳಿದ ರೀತಿಯಲ್ಲಿ ತಿಳಿಸುತ್ತಿದ್ದರೆ ಅವರನ್ನು ವಿಶೇಷವಾಗಿ ಸ್ಮಾನಿತಿಸಲಾಗುವುದು. ಮತ್ತು ಯಾವತ್ತೂ ವಿಚಾರವನ್ನು ಗುಪ್ತದಲ್ಲಿಡಲಾಗುವುದಲ್ಲದೆ ಯೋಗ್ಯ ಬಹುಮಾನವನ್ನು ಕೊಡಲಾಗುವುದು.

ರುಕ್ಕ ಸೆಟ್ಟಿ ರುಜು.

ಕಾಪು, ತಾ. 22-8-1951

THE UNITED KARNATAK INSURANCE COMPANY LTD., DHARWAR.

WANTED

A Branch Manager for our Udipi Branch. Persons having previous experience and who can guarantee business only need apply to:—

N. S Kini,
Director-Secretary.

Dharwar, 18-8-51

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C. 41-/51

ವಾದಿ– ನಾರಾಯಣ ಸೆಟ್ಟಿ,

ಪ್ರತಿವಾದಿಗಳು—1. ತಿಮ್ಮಪ್ಪ ಸೆಟ್ಟಿ, 2. ಬಂಟಪ್ಪ ಸೆಟ್ಟಿ, ಸಾದೇವಿ ಮನೆ ಸುಬ್ಬಿ ಸೆಟ್ಟಿಯ ಮಕ್ಕಳು, ಕುಂದಾಪುರ ತಾಲ್ಲೂಕು ಕಸ್ಬಾ ಗ್ರಾಮದ ತೋಟದ ಮನೆ.

ಪ್ರತಿವಾದಿಗೆ ತಿಳಿಯಪಡಿಸುವುದು:

ವಾದಿಗೆ ಪ್ರತಿವಾದಿಯು ಬರೆಕೊಟ್ಟ ಪ್ರಾಮಿಸರಿ ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಖರ್ಚು ಕೂಡಾ ರೂಪಾಯಿ 76-1-6ನ್ನು ಬರಮಾಡಿಕೊಳ್ಳುವರೇ ವಾದ ಮಾಡಿದ ಮೇಲಿನ ದಾವೆ ತಾ. 10-9-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Pltf

ತಾ. 12-8-51, ಮೊಕ್ಕಾಂ: ಕುಂದಾಪುರ.

Sri Ramakrishna Theatre Limited, Udipi, S. K.

22nd Aug., 1951

NOTICE

is hereby given that the Register of Members and transfer books of the Company will remain closed from Sunday the 9th to Sunday the 23rd September, 1951, both days inclusive.

A. Janardhan Alse,
Managing Director.

NOTICE

Payments such as annual subscription, advertisement and Court Notice publication charges may be credited to 'NAVAYUGA' account at the Canara Industrial & Banking Syndicate Ltd., Udipi or its Branches at par.

Manager

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೩-೮-'೫೧

ಪಾಕ್ ಧೋರಣೆಯಿಂದ ಮುಸ್ಲಿಮರಿಗೆ ಗಂಡಾಂತರ

ಜೇಹಾದದ ಮೂಲಕ ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಹೂಡುವ ಉದ್ಘಟಕನವನ್ನು ತೋರಿಸಿದ್ದು, ಭಾರತದ ಮುಸ್ಲಿಮಬಾಂಧವರು ಅದಕ್ಕಾಗಿ ವಿಶೇಷ ಕಳವಳವನ್ನು ವ್ಯಕ್ತಪಡಿಸಿರುತ್ತಾರೆ. ಪಾಕ್ ಮುಖ್ಯ ಮಂತ್ರಿ ಲಿಯಾಖತರು, ಜೇಹಾದದ ಮೂಲಕ ಪಾಕಿಸ್ತಾನವನ್ನು ಧಾರ್ಮಿಕ ರಾಷ್ಟ್ರವನ್ನಾಗಿ ರಚಿಸುವ ಹಲವು ತಲೆತಿರುಕರ ವಾದಕ್ಕೆ ಮನಸೋತದ್ದು ವಿಷಾದದ ಸಂಗತಿ. ವಿದೇಶೀಯರ ಪ್ರಚೋದನೆಯಿಂದಲೂ – ಜಾತೀಯ ಮನೋವೃತ್ತಿಯು ಮುಸಲ್ಮಾನರ ಧಾರ್ಮಿಕ ಹೋರಾಟದಿಂದಲೂ ಪಾಕಿಸ್ತಾನವು ಮುಸಲ್ಮಾನ ಧರ್ಮ ಹಾಗೂ ಜನಾಂಗಕ್ಕೆ ವಿಘಾತುಕ ಕಾರ್ಯವನ್ನು ಮಾಡಿಯದೆ. ಭಾರತ ಪಾಕಿಸ್ತಾನಗಳೊಳಗೆ ಯುದ್ಧ ಸಂಭವಿಸಿದರೆ ಭಾರತದಲ್ಲಿಯ ಮುಸಲ್ಮಾನರ ಗತಿಯೇನಾದೀತೆಂದು ಅದು ಲಕ್ಷಿಸಿಲ್ಲ. ಅಷ್ಟು ಮಾತ್ರವಲ್ಲದೆ ಕಾಶ್ಮೀರದಲ್ಲಿ ಮುಸಲ್ಮಾನ ಸ್ತ್ರೀಪುರುಷರ ಜೀವಾಪಹರಣ ಕಾರ್ಯವನ್ನು ಪಾಕಿಸ್ತಾನದ ಮುಸಲ್ಮಾನರು ನಡೆಸಿರುವರು. 1947ರಲ್ಲಿ ಪಾಕಿಸ್ತಾನೀ ಸೈನಿಕರು ಕಾಶ್ಮೀರವನ್ನು ನುಂಗುವ ಯತ್ನದಲ್ಲಿ ಕಾಶ್ಮೀರಿಗಳ ಮೇಲೆ ಅಮಾನುಷ ರೀತಿಯಲ್ಲಿ ನಡೆದುಕೊಂಡದ್ದನ್ನು ಕಾಶ್ಮೀರಿಗಳು ಮರೆಯುವಂತಿಲ್ಲ. ಕಾಶ್ಮೀರವು ಬಹುಸಂಖ್ಯಾಕ ಮುಸಲ್ಮಾನರುಳ್ಳ ದೇಶವೆಂಬ ಒಂದೇ ತತ್ವದ ಮೇಲೆ ಅದು ಪಾಕಿಸ್ತಾನದ್ದಾಗಬೇಕೆಂದು ಚಂಡಿತನ ಹಿಡಿಯುವುದು ಸರಿಯಲ್ಲ. ಅಲ್ಲಿಯ ಜನತೆಯ ಮನೋಭಾವವನ್ನರಿತು ಕಾಶ್ಮೀರವು ಯಾವ ರಾಷ್ಟ್ರವನ್ನು ಸೇರಬಯಸುತ್ತದೋ ಅದಕ್ಕೆ ಸ್ವೇಚ್ಛೆಯಂತೆ ಸೇರಿಕೊಳ್ಳಲು ಭಾರತವು ಒಪ್ಪಿರುತ್ತದೆ. 40 ಲಕ್ಷ ಮುಸಲ್ಮಾನರು ತಮಗೆ ಪಾಕಿಸ್ತಾನವಾಗಬೇಕೆಂದು ಬಯಸಿದರೆ ಭಾರತ ಸರಕಾರಕ್ಕೆ ಒಂದರೆಕ್ಷಣ ನಿಲ್ಲಲೂ ಅಲ್ಲಿ ಸಾಧ್ಯವಿಲ್ಲ. ಬಹುಸಂಖ್ಯಾಕರಾದ 40 ಲಕ್ಷ ಮುಸಲ್ಮಾನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಭಾರತವು ಬಲಪ್ರಯೋಗದ ಮೂಲಕ ಕಾಶ್ಮೀರವನ್ನು ಆಕ್ರಮಿಸಲು ಸಾಧ್ಯವೇ ಇಲ್ಲ. ಮುಖ್ಯವಾಗಿ ಕಾಶ್ಮೀರಿಗಳಿಗೆ ಪಾಕಿಸ್ತಾನ ಬೇಡಾಗಿದೆ. ಅಂತಲೇ ಅವರು ಘಟನಾ ಸಮಿತಿಯನ್ನು ನಿರ್ಮಿಸಿ ತಮ್ಮ ಭವಿಷ್ಯದ ಕುರಿತು ಯೋಚಿಸುವ ನಿರ್ಧಾರ ಮಾಡಿದ್ದಾರೆ.

ಸಂ. ರಾ. ಸಂಘದ ಕಾಶ್ಮೀರೀ ಪ್ರತಿನಿಧಿ ಡಾ। ಗ್ರಾಹ್ಯಾಮರು ದಿಲ್ಲಿ, ಕಾಶ್ಮೀರ, ಕರಾಚಿಗಳಿಗೆ ಹಾರಾಡಿದ್ದಾರೆ. ಇನ್ನು ಒಂದೆರಡು ತಿಂಗಳೊಳಗಾಗಿ ತಮ್ಮ ವರದಿಯನ್ನವರು ಕೊಡುವವರಿದ್ದಾರೆ. ಆ ವರದಿಯೂ ಪಾಕಿಸ್ತಾನಿಗಳಿಗನುಕೂಲವಾಗಿದ್ದರೆ ಭಾರತ ಒಪ್ಪುವುದಿಲ್ಲ. ವಿರುದ್ಧವಾದರಂತೂ ಹೋರಾಟವಿದ್ದೇಯಿದೆ. ಕಾಶ್ಮೀರದಲ್ಲಿಯ 'ಘಟನಾ ಸಮಿತಿಯೂ ಆ ಸಮಯಕ್ಕೆ ಸರಿಯಾಗಿ ರೂಪುಗೊಳ್ಳಲಿದೆ. ಇಂತಹ ಸಂದರ್ಭವನ್ನು ಸಾಧಿಸಿಯೇ ಪುಂಡಾಟಿಕೆಯ ಮೂಲಕ ಅದನ್ನು ಹಾಳುಗೆಡಹಬೇಕೆಂದು ಪಾಕಿಸ್ತಾನದ ಇಚ್ಛೆಯಾಗಿದೆ. ಈಗ ಪಾಕಿಸ್ತಾನದೊಳಗೆ ನಡೆದಿರುವ ಯುದ್ಧ ಸನ್ನಾಹಗಳೂ, ಮುಂಜಾಗ್ರತೆಗಳೂ ಕೇವಲ ರಂಪಾಟ-ಡಂಗುರಗಳೆಂದು ಹೇಳಲು ಬರುವಂತಿಲ್ಲ. ಜೇಹಾದದಂತಹ ಜಾತೀಯ ಸಂಸ್ಥೆಯ ಮೂಲಕ ಯುದ್ಧದಿಂದ ತಮ್ಮ ಕಾರ್ಯ ಕೈಗೂಡಿತೆಂದು ಭಾವಿಸಿದ್ದು ಹುಚ್ಚುತನವೇ ಸರಿ! ಖಡ್ಗದಿಂದಲೇ ಮುಸಲ್ಮಾನ ಧರ್ಮದ ಉತ್ಕೃಷ್ಟ ರಾಷ್ಟ್ರವನ್ನು ಕಟ್ಟುತ್ತೇವೆನ್ನುವದು ಪಾಕಿಸ್ತಾನಿಗಳಿದ್ದರೆ ಅದು ಭ್ರಾಮಕವಾದ ಕಲ್ಪನೆ. ಈ ಬಗೆಯ ವಾಮಮಾರ್ಗದಿಂದ ಪಾಕಿಸ್ತಾನದ ಮೂಲೋದ್ದೇಶ ಕೈಗೂಡುವದಂತಿರಲಿ; ಮುಸಲ್ಮಾನರ ಅಸ್ತಿತ್ವಕ್ಕೆ ಇದರಿಂದ ಗಂಡಾಂತರವಿದೆಯೆನ್ನುವದನ್ನು ಮರೆಯಬಾರದು! ಹುಚ್ಚುಚ್ಚಾಗಿ ವರ್ತಿಸಿ, ನೆರೆಯ ರಾಷ್ಟ್ರ ಹಾಗೂ ಬಂಧುಗಳೊಡನೆ ಶತ್ರುತ್ವಗಳಿಗೆ ನಿಲ್ಲುವ ಈ ಸಾಹಸ ಮಾಡಿದ್ದಕ್ಕೆ ನಿಜವಾಗಿಯೂ ವಿಷಾದಪಡಬೇಕಾಗಿದೆ.

ಇದನ್ನು ಲಕ್ಷಿಸಿ ಭಾರತದ ನಾಗರಿಕರಾದ ಮುಸ್ಲಿಮರು ಪಾಕಿಸ್ತಾನದ ಅನುಚಿತ ಧೋರಣೆಯನ್ನು ಖಂಡಿಸುತ್ತ ಬಂದಿದ್ದಾರೆ. ಕಾಶ್ಮೀರಾಕ್ರಮಣದ ದುರುದ್ದೇಶದಿಂದ ಭಾರತದೊಳಗಿನ 4 ಕೋಟಿ ಜನರ ಹಿತರಕ್ಷಣೆಯನ್ನು ಪಾಕಿಸ್ತಾನವು ಪೂರ್ತ ಮರೆತದ್ದು ಅವರಿಗೆ ಗಂಡಾಂತರವನ್ನು ತರಬಲ್ಲ ವಾತಾವರಣವನ್ನು ನಿರ್ಮಿಸುತ್ತಲಿದೆಯೆಂದು ಭಾರತದ ಪ್ರಮುಖ ಮುಸಲ್ಮಾನರು ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿಗೆ ತಮ್ಮ ಸುದೀರ್ಘ ಮನವಿಯೊಂದನ್ನು ಒಪ್ಪಿಸಿದ್ದಾರೆ. ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ। ಝಾಕೀರ ಹುಸೇನ, ಸುಲ್ತಾನ ಅಹಮ್ಮದ, ಛತ್ತಾರಿ ನವಾಬರೇ ಮೊದಲಾದ ಪ್ರಮುಖ ಮುಸ್ಲಿಮ ಧುರೀಣರು ಈ ಮನವಿಗೆ ಅಂಕಿತ ಹಾಕಿರುವರು. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು ಈ ಮನವಿಯನ್ನು ಅಪಾರ್ಥಮಾಡಿಕೊಂಡು "ಭಾರತದೊಳಗಿರುವ ನಮ್ಮ ಬಂಧುಗಳ ದುಃಖವನ್ನು ನಾವು ಆಳವಾಗಿ ಚಿಂತಿಸುತ್ತಲಿದ್ದೇವೆ. ಅವರ ಮೇಲೆ ನಮಗೆ ಹೃದಯಂಗಮವಾದ ಸಹಾನುಭೂತಿಯಿದೆ" ಎಂದು ಅಣಕವಾಡಿರುವರು. ಜಾಫ್ರುಲ್ಲಾಖಾನರ ದೃಷ್ಟಿಯಲ್ಲಿ ಭಾರತದ ಮುಸಲ್ಮಾನರಿಗೆ ಭಾರತದೊಳಗೆ ಜೀವಿಸುವದೇ ದುಸ್ತರವಾಗಿದೆ ಎಂಬ ಭ್ರಾಂತಿ ತೋರುತ್ತದೆ. ಈ ಮನವಿಯ ಉದ್ದೇಶ ಹಾಗಿಲ್ಲ. "ಭಾರತದೊಳಗೆ ಮುಸಲ್ಮಾನರಿಗೆ ನಾಗರಿಕ ಜೀವನದ ಸಕಲ ಸೌಲಭ್ಯಗಳೂ ಇರುತ್ತವೆ. ಹಿಂದುಗಳೂ ಸಹೋದರ ಭಾವದಿಂದ ವರ್ತಿಸುತ್ತಿದ್ದು ಯಾವುದೇ ರೀತಿಯ ತೊಡಕು-ತೊಂದರೆಗಳಿಲ್ಲದೆ ಸಮಾನ ಜೀವನನಡೆಸುವಂತಾಗಿದೆ ಪಾಕಿಸ್ತಾನಿಗಳು ಅಲ್ಪಸಂಖ್ಯಾಕರನ್ನು ಪೈಶಾಚಿಕವೃತ್ತಿಯಿಂದ ನಡೆಸಿಕೊಂಡು ತೊಂದರೆಕೊಡುವಂತಾದರೆ ಇಲ್ಲಿಯ ಹಿಂದೂ ಬಾಂಧವರೊಡನೆ ಇಟ್ಟುಕೊಂಡಿರುವ ಬಾಂಧವ್ಯಕ್ಕೆ ಧಕ್ಕೆ ಬರುವದು ಮಾತ್ರವಲ್ಲದೆ ಇಲ್ಲಿಯ ಮುಸಲ್ಮಾನರ ವಿಷಯ ಸದ್ಭಾವನೆಯನ್ನು ಇಡಲು ಸಾಧ್ಯವಿರುವದೇ?" ಎಂಬುದೇ ಇದರ ಮತಿತಾರ್ಥವಾಗಿದೆ. ಪಾಕಿಸ್ತಾನದ ಸ್ವಾರ್ಥ ಸಂಕುಚಿತತೆ ಹಾಗೂ ಜಾತೀಯತೆಯ ಮನೋವೃತ್ತಿಗೆ ಕಾಶ್ಮೀರ ಹಾಗೂ ಭಾರತದ ಮುಸಲ್ಮಾನರನ್ನು ಆಹುತಿಗೊಳ್ಳುವುದು ಸರಿಯಾಗಲಾರದು! ಪಾಕಿಸ್ತಾನಿಗಳ ಕಲ್ಪನೆ ಅಭಿಪ್ರಾಯಗಳು ಕಾಶ್ಮೀರದ 40 ಲಕ್ಷ ಮುಸಲ್ಮಾನರ ಇಲ್ಲವೆ ಭಾರತದ 4 ಕೋಟಿ ಜನರ ಅಭಿಪ್ರಾಯವೆಂದೂ ಆಗದು. ಅಂತಲೇ ಪಾಕಿಸ್ತಾನದ ಈ ಧೋರಣೆ ಅವ್ಯವಹಾರ್ಯ-ತೀರ ಅನುಚಿತವೆಂದು ಭಾರತ ಮುಸಲ್ಮಾನರು ಮನವಿಯ ಮೂಲಕ ವ್ಯಕ್ತಪಡಿಸಿದ್ದು ಯೋಗ್ಯವೇ ಆಗಿದೆ.

ಭಾರತ ಸರಕಾರವು ಹಿಂದಿನಿಂದಲೂ ಶಾಂತಿಸೌಹಾರ್ದಮಯವಾದ ವಿಶಾಲ ರಾಜಕೀಯ ಧೋರಣೆಯನ್ನನುಸರಿಸಿಕೊಂಡು ಬಂದಿದೆ. ಚಾರಿತ್ರಿಕ ಹಿನ್ನೆಲೆಯೂ ಈ ಬಗೆಯ ವಿಶ್ವಕುಟುಂಬಿ ಮನೋವೃತ್ತಿಯನ್ನು ಸಾರುತ್ತವೆ. ಮಹಾತ್ಮಾ ಗಾಂಧಿ, ನೆಹ್ರೂರವರೇ ಮೊದಲಾದವರ ಜಾತ್ಯತೀತ ಧೋರಣೆಯ ಫಲವಾಗಿ ಭಾರತವು ಜಾಗತಿಕರಂಗದಲ್ಲಿ ನೈತಿಕವಾಗಿಯೂ ರಾಜಕೀಯವಾಗಿಯೂ ಉನ್ನತ ಸ್ಥಾನವನ್ನು ಪಡೆದಿದೆ. ಮತೀಯ ಭಾವನೆಯುಳ್ಳ ಹಲವರು ಸರಕಾರದ ಸಾವಧಾನ ಧೋರಣೆಯನ್ನು ಟೀಕಿಸುವದಾದರೂ ಉಜ್ವಲವಾದ ಪರಂಪರೆಯಿಂದ ಸಾಗಿ ಬಂದ ಸತ್ಯ ಅಹಿಂಸೆ-ಸಮತೆಗಳನ್ನು ಅದು ಬಿಟ್ಟುಕೊಡದು. ಅಂತಲೇ 4 ಕೋಟಿ ಮುಸಲ್ಮಾನರು ಭಾರತ ಸರಕಾರಕ್ಕೆ ಅತ್ಯಂತ ನಿಷ್ಠೆಯನ್ನು ವ್ಯಕ್ತಪಡಿಸಿದ್ದು ಮಾತ್ರವಲ್ಲದೆ ನೆಹ್ರೂ ಸರಕಾರಕ್ಕೆ ಸಂಪೂರ್ಣ ತ್ಯಾಗ ಮಾಡಲು ಸಿದ್ಧರಿರುವ ಭರವಸೆಯನ್ನು ನೀಡಿರುವುದು ನಮ್ಮ ನಮ್ಮೊಳಗಿರುವ ಪರಸ್ಪರ ಮೈತ್ರಿಯ ದ್ಯೋತಕವಾಗಿದೆ. ಈ ಬಗೆಯ ಮೈತ್ರಿಯನ್ನು ಕೆಡಿಸಿ, ಮುಸಲ್ಮಾನರ ರಾಷ್ಟ್ರವನ್ನು ಕಟ್ಟುತ್ತೇವೆಂದು ಪಾಕಿಸ್ತಾನಿಗಳು ಭ್ರಮಿಸಿದರೆ ಅದಕ್ಕಿಂತ ಮಿಗಿಲಾದ ಪ್ರಮಾದ ಹಾಗೂ ದುರ್ದೈವ ಬೇರಿರಲಾರದು!

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ಅಂಕಕ್ಕೆ ನವಯುಗದ 31ನೇ ವರ್ಷವು ಅಂತ್ಯವಾಗಿ ಸಪ್ಟಂಬರ ತಿಂಗಳಿಂದ 32ನೆ ಹೊಸ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರು ತಂತಮ್ಮ ಚಂದಾಹಣವನ್ನೂ, ಬಾಕಿಯಿದ್ದವರು ಅದನ್ನು ಕೂಡಾ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

ಮಂಗಳೂರು

ಭಗಿನೀ ಸಮಾಜದ ಮಹಾ ಸಭೆಯು ತಾ. 11ರಲ್ಲು ಸಮಾಜದ ಉಪಾಧ್ಯಕ್ಷೆ ಶ್ರೀಮತಿ ಮುಕ್ತಾಬಾಯಿ ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ವರದಿಯನ್ನೋದಿದ ನಂತರ ಶ್ರೀಮತಿ ರಮಾಬಾಯಿ ವಿ. ಪೈಯವರು ಲೆಕ್ಕಪತ್ರಗಳನ್ನೊಪ್ಪಿಸಿದರು. ಈಗ ಕೇಂದ್ರ ಸರಕಾರದ ಮುಂದಿರುವ ಹಿಂದೂಕೋಡ್ ಮಸೂದೆಯನ್ನು ಸ್ವಾಗತಿಸುವ ನಿರ್ಣಯವಾದ ಬಳಿಕ ಚಾಲ್ತಿ ವರುಷದ ಚುನಾವಣೆ ನಡೆಯಿತು. ಶ್ರೀಮತಿ ರಾಜಲಕ್ಷ್ಮಿ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀಮತಿಯರಾದ ಮುಕ್ತಬಾಯಿ ಪಂಡಿತ ಮತ್ತು ಲೀಲಾಬಾಯಿಯವರು ಉಪಾಧ್ಯಕ್ಷೆಯರಾಗಿಯೂ ಶ್ರೀಮತಿಯರು ಶಾರದಾ ತಳವಾರ್ ಮತ್ತು ಕಲ್ಯಾಣಿ ಡಿ. ಶೆಟ್ಟಿಯವರು ಜತೆಕಾರ್ಯದರ್ಶಿಗಳಾಗಿಯೂ ಶ್ರೀಮತಿಯರು ವಿಮಲಾ ಗಣೇಶ ಮತ್ತು ರುಕ್ಮಾ ಪಂಡಿತರು ಶಿಶುವಿಹಾರದ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಅಲ್ಲದೆ ಕಾರ್ಯ ಸಮಿತಿಗೆ 17ಮಂದಿಯ ಚುನಾವಣೆಯೂ ನಡೆಯಿತು.

ವಾರ್ಷಿಕೋತ್ಸವ–ಭಗಿನೀ ಸಮಾಜದ ವಾರ್ಷಿಕೋತ್ಸವವು ತಾ. 12ರಲ್ಲು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ನಂತರ ಕಾರ್ಯದರ್ಶಿಗಳು ಸಮಾಜದ ವರದಿಯನ್ನೊಪ್ಪಿಸಿದರು. ಬಳಿಕ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ಶ್ರೀಮತಿ ಕೆ. ಪಾರ್ವತಿಬಾಯಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ನಂತರ ವಿನೋದ ಕಾಲಕ್ಷೇಪಗಳಾದುವು.

ಸ್ವಾತಂತ್ರ್ಯ ದಿನಾಚರಣೆ—ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ. 15ರಂದು ಸಂಭ್ರಮದಿಂದ ಜರಗಿತು. ಆ ದಿನ ಬೆಳಗ್ಗೆ ಶಾಲಾ ಕಾಲೇಜುಗಳಲ್ಲಿ ಧ್ವಜವಂದನೆಗಳು ನಡೆದು ಮಕ್ಕಳಿಗೆ ತಿಂಡಿ ಹಂಚಲಾಯಿತು. ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರು ಧ್ವಜಾರೋಹಣ ನಡೆಸಿ ಗೌರವ ವಂದನೆಯನ್ನು ಸ್ವೀಕರಿಸಿದರು. ಸಂಜೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜ

In the District Court of
South Kanara.

C. M. A. 24/1950

Between

Syed Kadir Saheb— Appellant.
Tereza Bai & others—
Respondents.

To

1st Respt. Tereza Bai, widow of Balthru Vrigas, Machina Village, Puttur Taluq.

The above named appellant has filed the above appeal against the Order of the District Munsiff of Puttur in R. E. A. 630/49 dated 31-3-1950 and that the said appeal is posted to 8th September 1951 at 11 A. M. in the above Court.

You may appeal either in person or by Pleader and contest the same on the said date, failing which, the same will be heard and decided in your absence.

(Sd.) K. Balakrishna Rao.
Advocate for Appt.
Mangalore, 13-8-'51.

ರಗಿತು. ಶ್ರೀಗಳಾದ ಎಲ್. ಸಿ. ಪಾಯಿಸ್, ಕೆ. ಕೆ. ಶೆಟ್ಟಿ, ಎಸ್. ಎಸ್. ಶಿಲ್ಲಿ, ಶಂಕರ ನಾರಾಯಣ ಭಟ್ಟ, ಎಸ್. ಆರ್. ನಾವಡ ಮೊದಲಾದವರು ಕಾಂಗ್ರೆಸ್ ಸರಕಾರವು ಈ ತನಕ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಮುಂಬರುವ ಚುನಾವಣೆಯ ಕಾಲದಲ್ಲಿ ಹೊಸಪಕ್ಷಗಳು ಮಾತಬೇಡುವಾಗ, ನಮಗೆ ಸ್ವಾತಂತ್ರ್ಯ ತಂದ ಕಾಂಗ್ರೆಸನ್ನು ಮರೆಯಬಾರದೆಂದರು.

ಜಿಲ್ಲಾ ಬೋರ್ಡು ಆಫೀಸಿನಲ್ಲಿ ಧ್ವಜವಂದನೆಯಾದ ನಂತರ ಬೋರ್ಡಿನ ನೌಕರರಿಗೆಲ್ಲಾ ರೂ. 56% ಬೆಲೆಯ ಯೂನಿಫಾರ್ಮು ಉಡುಪುಗಳನ್ನು ಧರ್ಮಾರ್ಥ ಕೊಡಲಾಯಿತು.

ವರದಿ ಸ್ವೀಕಾರ — ಮಂಗಳೂರು ನಗರ ಸಭೆಯು 1950-51ನೆ ವರ್ಷದ ಆಡಳಿತ ವರದಿಯು ಕಮಿಶನರ್ ಶ್ರೀ ಎಮ್. ಸಂಜೀವ ತಳವಾರರಿಂದ ತಯಾರಿಸಲ್ಪಟ್ಟು ಅದು ನಗರ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು.

ಜಿಲ್ಲಾ ಪದ್ಮಶಾಲಿ ಸಮಾಜ ಸೇವಾ ಸಂಘದ-ವಿದ್ಯಾನಿಧಿಯಿಂದ ಎಂದಿನಂತೆ ಸಮಾಜದ ಬಡವಿದ್ಯಾರ್ಥಿಗಳಿಗೆ ಸಹಾಯ ಕೊಡಲಾಗುವುದೆಂದೂ ಆ ಬಗ್ಗೆ ತಾರೀಖು 31-8-51ರ ತನಕ ಅರ್ಜಿ ಸ್ವೀಕರಿಸಲಾಗುವುದೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಾ 24-8-51ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಗೋಕುಲಾಷ್ಟಮಿಯ ಶುಭ ವಾಗಿ ಸ್ಪೆಶಲ್.

ಪರಮಾತ್ಮನ ಪರಮಭಕ್ತ

ಭಕ್ತಪ್ರಹ್ಲಾದನ ಪುಣ್ಯಕಥೆ

ನರಸಿಂಹ ಅವತಾರ್

(ಮಿನರ್ವಾ ಚಿತ್ರ)

ಶೋಭನಾ ಸಮರ್ಥ, ಮಹಿಪಾಲ್.

ತಾ 26-8-51ನೇ ಆದಿತ್ಯವಾರ

20th ಸೆಂಚುರಿಯವರ ವರ್ಣಚಿತ್ರ

ಫೊರ್ ಎವರ್ ಎಂಬರ್.

FOR EVER AMBER.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 253/1951

ದಿ ಜಯಕರ್ನಾಟಕ ಬ್ಯಾಂಕಿಂಗ್ ಎಂಡ್ ಟ್ರೇಡಿಂಗ್ ಕಂಪೆನಿ ಲಿಮಿಟೆಡ್ ಕಲ್ಯಾಣಪುರ ಇದರ ಮೆನೇಜಿಂಗ್ ಡೈರೆಕ್ಟರ ಕೆ. ನರಸಿಂಹ ಪದಿಯಾರ. —ವಾದಿ.

ಮತ್ತು

1 ಮುಕುಂದ ಪೈ, ಮುಲ್ಕಿ ವೆಂಕಟ್ರಮಣ ಪೈ ಮಗ, 2. ಯುಸ್. ಪುಂಡಲೀಕ ಶೆಣೈ, ವಾಸುದೇವ ಶೆಣೈ ಮಗ, ಮೂಡುತೋನ್ಸೆ, ಗ್ರಾಮದ ಕಲ್ಯಾಣಪುರ. — ಪ್ರತಿವಾದಿಗಳು.

ವಾದಿಗೆ ಪ್ರತಿವಾದಿಗಳು ತಾ. 6-9-1950 ರಲ್ಲಿ ಬರಕೊಟ್ಟ ಪ್ರೊಮಿಸರಿ ನೋಟಿನ ಅಸಲ್ಲು ರೂ. 90-0-0 ಬಡ್ಡಿ ರೂ. 4 0-0, ನೋಟೀಸಿನ ಖರ್ಚು ರೂ. 1-0-0 ಕೂಡಾ ರೂ. 95-0-0ಕ್ಕೆ ವಾದಿಯು ಪ್ರತಿವಾದಿಗಳ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾರೀಖು 31 8-1951ಕ್ಕೆ ಪ್ರತಿವಾದಿಗಳ ಉದಾಹರಣೆ ಬಗ್ಗೆ ಇಟ್ಟಿದೆ. ಪ್ರತಿವಾದಿಗಳಿಗೆ ಆಕ್ಷೇಪಣೆಯುಳ್ಳದಾದರೆ ಸದರಿ ತಾರೀಖಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹಾಜರಾಗಿ ವ್ಯಾಜ್ಯ ನಡೆಸಿ ಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Aithal,

Vakil for Plaintiff.

ಉಡ್ಪಿ, 21-8-1951

ಶ್ರೀ ವಿ ಎಸ್ ಕುದ್ವರಿಗೆ ಸತ್ಕಾರ- ವಿದೇಶ ಪ್ರವಾಸವನ್ನು ಮುಗಿಸಿ ಬಂದಿರುವ 'ನವಭಾರತ' ಸಂಪಾದಕರಾದ ಶ್ರೀ ವಿ. ಎಸ್. ಕುದ್ವರನ್ನು, ಮಂಗಳೂರು ಪತ್ರಿಕೋದ್ಯಮಿಗಳು ತಮ್ಮ ಕಚೇರಿಗೆ ತಾ 18ರಲ್ಲು ಸಂಜೆ ಆಹ್ವಾನಿಸಿ, ಸತ್ಕರಿಸಿದರು. ಶ್ರೀ ಕುದ್ವರು ಯುರೋಪ್, ಯುನೈಟೆಡ್ ಕಿಂಗ್ಡಮ ಮತ್ತು ಅಮೇರಿಕ ದೇಶಗಳಲ್ಲಿನ ತಮ್ಮ ಪ್ರವಾಸದ ಅನುಭವಗಳನ್ನು ಎತ್ತಿ ಭಾಷಣಮಿತ್ತರು.

ಉಡುಪಿ

ಸ್ವಾತಂತ್ರ್ಯ ದಿನಾಚರಣೆ – ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ15 ರಂದು ಸಾಂಗವಾಗಿ ಆಚರಿಸಲಾಯಿತು. ಅಂದು ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ಶ್ರೀಮತಿ ಪ್ರೇಮ ಅನಂತ ಪೈಗಳಿಂದ ರಾಷ್ಟ್ರಧ್ವಜಾರೋಹಣವಾದ ನಂತರ ಕಾಂಗ್ರೆಸ್ ಕಚೇರಿಯಲ್ಲಿ ಸೂತ್ರಯಜ್ಞ ಕಾರ್ಯಕ್ರಮ ನಡೆಯಿತು. ಸಂಜೆ ಬೋರ್ಡ್ ಹೈಸ್ಕೂಲಿನ ಸೀಪಬ್ಸ್ ಹಾಲಿನಲ್ಲಿ ಡಾ। ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಟಿ. ಎ. ಪೈ, ಯು. ಕೃಷ್ಣರಾವ್ ಮತ್ತು ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ನಂತರ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸುದೀರ್ಘ ವಿನೋದ ಕಾಲಕ್ಷೇಪಗಳಾದುವು. ಜತೆಯಲ್ಲಿ ಶ್ರೀ ವಸಂತ ಕುಮಾರರ ನೃತ್ಯಪ್ರದರ್ಶನವೂ ನಡೆಯಿತು: ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಬೆಳಿಗ್ಗೆ ಧ್ವಜ ವಂದನೆ, ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ, ಡಾ। ಟಿ. ಮಾಧವ ಪೈ ಮೊದಲಾದವರ ಭಾಷಣ, ಸಂಜೆ ವಿದ್ಯಾರ್ಥಿಗಳಿಂದ 'ಕಾಶಿಯಾತ್ರೆ' ನಾಟಕಾಭಿನಯ ಜರಗಿತು.

ಹಾಲು ಒದಗಿಸುವ ಸಹಕಾರಿ ಸಂಘದ ಮಹಾ ಸಭೆಯು ತಾ 15ರಂದು ಡಾ। ಟಿ. ಮಾಧವ ಪೈಗಳು ಅಧ್ಯಕ್ಷರಾಗಿ, ಶ್ರೀ ಎ. ಲಕ್ಷ್ಮೀನಾರಾಯಣರಾಯರು ಉಪಾಧ್ಯಕ್ಷರಾಗಿ, ಎಮ್. ವಾಮನ ಭಟ್ಟರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಕಾರ್ಯ ಸಮಿತಿಗೆ ನಾಲ್ಕು ಮಂದಿಯ ಚುನಾವಣೆಯು ನಡೆಯಿತು.

ಏಕೀಕರಣ ಪಕ್ಷದ ಸಭೆಯ ಧ್ಯೇಯ ಗಳೇನು—ಎಂಬುದನ್ನು ಪಕ್ಷದ ಮುಂದಾಳುಗಳಾದ ಶ್ರೀಯುತರಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಕೆ. ಆರ್. ಕಾರಂತರು ತಾ 17ರಲ್ಲು ಕಲ್ಯಾಣ್ಪುರದ ಕಾರ್ಯಾಲಯದಲ್ಲಿ ಜರಗಿದ ಸಭೆಯಲ್ಲಿ ವಿವರಿಸಿದರು. ಶ್ರೀ ಬಿ. ವಾಸುದೇವರಾಯರು ಅಧ್ಯಕ್ಷತೆ ವಹಿಸಿದ್ದರು.

ಕಾಲೇಜು ವರ್ಧಂತಿ—ಸ್ಥಳೀಯ ಸಂಸ್ಕೃತ ಕಾಲೇಜಿನ ವರ್ಧಂತಿ ಸಮಾರಂಭವು ತಾ 19ರಲ್ಲು ಸಂಜೆ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರಪೌಳಿಯಲ್ಲಿ ಪರ್ಯಾಯ ಶ್ರೀ ಕಾಣೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಕಾಲಗಿ ಶೇಷಾಚಾರ್ಯರವರು ವರದಿಯನ್ನೋದಿದ ನಂತರ ಶ್ರೀ ಪುತ್ತಿಗೆ ಸ್ವಾಮಿಗಳವರು ಬಹುಮಾನ ವಿತರಣೆ ಮಾಡಿದರು, ಅಲ್ಲದೆ ತಮ್ಮ ಲೇಖ್ಯದಿಂದಲೇ ವಿದ್ಯಾರ್ಥಿ ಪಂಡಿತರಿಗೆಲ್ಲಾ ಒಂದೊಂದು ಜತೆ ವೈರಾಸ ದಾನವಾಡಿದರು.

ದೈವಿಕ ಜೀವನದ ಅನುಭವ, ವಿದ್ಯಾ ಪ್ರಚಾರ, ಯಾತ್ರೆಗಳ ಕುರಿತು ಶ್ರೀ ಎಮ್. ಎಸ್. ಶರ್ಮ ಎಂಬವರು ಮಂಗಳೂರಿನಲ್ಲಿ ತಮ್ಮ ಪ್ರಚಾರ ಕಾರ್ಯವನ್ನು ಮುಗಿಸಿ ಇದೀಗ ಉಡುಪಿಗೆ ಬಂದಿರುತ್ತಾರೆ. ಅವರು ಇಲ್ಲಿಯ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಲಿರುವರು.

ವಿದಾಯ ಸತ್ಕಾರ—ಜೋಗ್ ವಿದ್ಯುಚ್ಛಕ್ತಿ ಯೋಜನೆಯ ಸರ್ವೆ ಬಗ್ಗೆ ನೇಮಿಸಲ್ಪಟ್ಟಿದ್ದ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೀ ಪಾರ್ಥ ಸಾರಥಿಯವರಾಗಿ ವರ್ಗವಾದುದರಿಂದ ಡಾ। ಟಿ. ಮಾಧವ ಪೈಗಳು ತಾ. 18 ರಲ್ಲಿ ವಿದಾಯಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಎಚ್. ಸುಂದರ ರಾವ್, ಕಾಲಗಿ ಶೇಷಾಚಾರ್, ಎಂ. ವಿಠ್ಠಲ ಕಾಮತ್, ಡಾ। ಟಿ. ಎಂ. ಎ. ಪೈಗಳು ಶ್ರೀ ಪಾರ್ಥ ಸಾರಥಿಗಳ ಗುಣಕಥನ ಮಾಡಿದರು. ಎಸಿಸ್ಟೆಂಟ್ ಇಂಜನೀಯರ್ ಶ್ರೀ ಲಕ್ಷ್ಮಣ ಶೆಟ್ಟರು ಇವರ ಚಾರ್ಜನ್ನು ವಹಿಸಿಕೊಂಡಿರುವರು.

ಚಿನ್ನದ ಪಾಲಕಿ—ಶ್ರೀ ಕೃಷ್ಣಾಪುರ ಮಠದ ಪ್ರಯಾಣವಸ್ಥ ಶ್ರೀ ವಿದ್ಯಾಪೂರ್ಣ ತೀರ್ಥ ಸ್ವಾಮಿಗಳವರು ಇವರ ಮಠಾಧಿಪತಿಗಳ ಹಾಗೂ ಶಿಷ್ಯವೃಂದದ ಸಹಾಯದಿಂದ ಮಾಡಿಸಿದ ಚಿನ್ನದ ಪಾಲಕಿಯನ್ನು ಸದ್ರಿ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀ ಪಾದಂಗಳವರು ಎಂಡೋಮೆಂಟ್ ಬೋರ್ಡಿನ ಕೆಲವೊಂದು ಶರತ್ತುಗಳಿಗೊಳಪಟ್ಟು ಇದೇ ತಾ. 19ರಂದು ಬೆಳಿಗ್ಗೆ ಪರ್ಯಾಯ ಶ್ರೀ ಕಾಣೂರು ಸ್ವಾಮಿಗಳವರ ವಶಕ್ಕೆ ಒಪ್ಪಿಸಿದರು. ಈ ಸಮಯದಲ್ಲಿ ಎಂಡೋಮೆಂಟ್ ಬೋರ್ಡಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ. ಎಸ್. ಮಾಧವ ರಾವ್, ಶ್ರೀ ಕೃಷ್ಣಮಠದ ಎಗ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ. ಗುಂಡುರಾಜ ರಾವ್, ವಕೀಲ್ ಶ್ರೀ ಪಿ. ವಿ. ಆಚಾರ್ಯರು ಹಾಜರಿದ್ದರು.

ಹೂವಿನ ಪೂಜೆ—ಶ್ರೀ ಮದನಂತೇಶ್ವರ-ಚಂದ್ರೇಶ್ವರ ದೇವಸ್ಥಾನಗಳಲ್ಲಿ ಕಾಲಂಪ್ರತಿ ಜರಗುವ ಪೂಜೆ, ಮಲ್ಲಿಗೆ ಹೂವಿನ ಪೂಜೆಯು ತಾ. ೩೦ರಂದು ಸಂಜೆ ದೇವಸ್ಥಾನ ಆಡಳ್ತೆ ಟ್ರಸ್ಟಿ ವಕೀಲ್ ಶ್ರೀ ಪಿ. ವಿ. ಆಚಾರ್ಯರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಶ್ರೀ ಧರ್ಮಸ್ಥಳ ಕ್ಷೇತ್ರ ಬಸ್ ಸರ್ವಿಸು ಶ್ರೀ ಕೆ. ಗೋಪಾಲ ಸೆಟ್ಟರ ಶ್ರೀ ಮಂಜುನಾಥ ಮೋಟಾರ್ ಬಸ್ ಸರ್ವಿಸು ಉಡುಪಿಯಿಂದ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಇದೀಗ ತಾ. 15ರಿಂದ ಪ್ರಾರಂಭವಾಗಿದೆ. ಯಾತ್ರಾರ್ಥಿಗಳಿಗೆ ಅನುಕೂಲವಾದಂತಾಯಿತು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್—ಇದರ ಮ ಹಾಸಭೆಯು ತಾ. 18ರಲ್ಲು ಚೆಯರ್‌ಮೆನ್ ಶ್ರೀ ಕೆ. ಜಿ. ಬಲ್ಲಾಳರ ಗೈರ ಹಾಜರಿಯಲ್ಲಿ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಲೆಖ್ಖಪತ್ರಗಳ ಸ್ವೀಕಾರ, ನಿವೃತ್ತರಾಗಬೇಕಿದ್ದ ಡೈರೆಕ್ಟರ್ ಶ್ರೀ ಬಿ. ಕೆ. ಹೆಗ್ಡೆಯವರ ಪುನರಾಯ್ಕೆ ಆಯ್ಕೆ, ಆಡಿಟರ್ ಶ್ರೀ ಪಿ. ಎಮ್. ಹೆಗ್ಡೆರ ನೇಮಕವಾಗಿ ಮೆನೇಜಿಂಗ್ ಡೈರೆಕ್ಟರ ಶ್ರೀ ಕೆ. ಎಚ್. ಶೆಟ್ಟರ ಧನ್ಯವಾದಾರ್ಪಣೆ, ಉಪಾಹಾರದೊಂದಿಗೆ ಸಭಾಂತ್ಯವಾಯಿತು

ಪ್ರಕಟಣೆ

ಕಾಪು ಉಳಿಯಾರಗೋಳಿ ಮೂಡುಮನೆ ಕೊರಗ ಸೆಟ್ರಲ್ಲಿ ತಾ. 6-8-1951ರಲ್ಲು ಕಳವಾದ ಆಭರಣಗಳ ವಿಚಾರದಲ್ಲಿ ಊರ ಮಹನೀಯರು ಯಾರಾದರೂ ಮುಂದೆ ಬಂದು ಪೋಲೀಸರಿಗೆ ಆದಷ್ಟು ಆದರ ಸುಳಿಹುಗಳನ್ನು ಕೊಡಬೇಕಾಗಿ ವಿನಂತಿ. ಹಾಗೆ ಯಾವತ್ತೂ ವಿಚಾರವನ್ನು ನನ್ನ ಮನೆಗೇನೇ ಬಂದು ಅವರು ತಿಳಿದ ರೀತಿಯಲ್ಲಿ ತಿಳಿಸುವುದಿದ್ದರೆ ಅವರನ್ನು ವಿಶೇಷವಾಗಿ ಸ್ವಾಗತಿಸಲಾಗುವುದು. ಮತ್ತು ಯಾವತ್ತೂ ವಿಚಾರವನ್ನು ಗುಪ್ತವಿಡಲಾಗುವುದಲ್ಲದೆ ಯೋಗ್ಯ ಬಹುಮಾನವನ್ನು ಕೊಡಲಾಗುವುದು,

ರುಕ್ಮ ಸೆಟ್ಟಿ ರುಚಾ.

ಕಾಪು, ತಾ. 22-8-1951

THE UNITED KARNATAK INSURANCE COMPANY LTD, DHARWAR

WANTED

A Branch Manager for our Udipi Branch. Persons having proven experience and who can guarantee business only need apply to:—

N. S Kini,

Director-Secretary.

Dharwar. 18-8-51

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 41/51

ವಾದಿ— ನಾರಾಯಣ ಸೆಟ್ಟಿ.

ಪ್ರತಿವಾದಿಗಳು—1. ತಿಮ್ಮಪ್ಪ ಸೆಟ್ಟಿ, 2. ಅಂಣಪ್ಪ ಸೆಟ್ಟಿ, ಸಾದೇವಿ ಮನೆ ಸುಬ್ಬ ಸೆಟ್ಟಿಯರ ಮಕ್ಕಳು, ಕುಂದಾಪುರ ತಾಲ್ಲೂಕು ಕಸ್ಬಾ ಗ್ರಾಮದ ತೋಟದ ಮನೆ,

ಸದ್ರಿ ಪ್ರತಿವಾದಿಗೆ ತಿಳಿಯಪಡಿಸ್ವುದು:

ವಾದಿಗೆ ಪ್ರತಿವಾದಿಗಳು ಬರೆಕೊಟ್ಟ ಡಿಮಾಂಡು ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಖರ್ಚು ಕೂಡಾ ರೂಪಾಯಿ 76-1-6ನ್ನು ಬರಮಾಡಿಕೊಳ್ಳುವರೇ ವಾದಿ ದಾಖಲ್ಲು ಮಾಡಿದ ಮೋಕದ್ದಮೆ ತಾ. 10-9-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,

Advocate for Plff

ತಾ. 12-8-51, ಮೊಕ್ಕಾಂ: ಕುಂದಾಪುರ.

Sri Ramakrishna Theatre Limited, Udipi, S. K.

22nd Aug, 1951

NOTICE

is hereby given that the Register of Members and transfer books of the Company will remain closed from Sunday the 9th to Sunday the 23rd September, 1951, both days inclusive.

A. Janardhan Alse,

Managing Director.

NOTICE

Payments such as annual subscription, advertisement and Court Notice publication charges may be credited to 'NAVAYUGA' account at the Canara Industrial & Banking Syndicate Ltd., Udipi or its Branches at par.

Manager

ಮೂಡಬಿದ್ರೆ—ಇಲ್ಲಿಯ ಮಹಾತ್ಮ ಗಾಂಧಿ ಸೇವಾ-ಸಮಾಜದ ಮಹಾಸಭೆಯು ಇದೇ ತಾ. 2ರಲ್ಲು ಸ್ಥಳೀಯ ಹರಿಜನ ವೆಲ್‌ಫೇರ್ ಶಾಲೆಯಲ್ಲಿ ಜಿಲ್ಲಾ ಹರಿಜನ ವೆಲ್‌ಫೇರ್ ಆಫೀಸರ್ ಶ್ರೀ ಕೆ. ದೇವೇಂದ್ರನವರ ಅಧ್ಯಕ್ಷತೆಯಲ್ಲಿ ಜರಗಿ, ಡಾ| ಎಚ್. ಸುಬ್ಬಯ್ಯ, ಶ್ರೀಗಳಾದ ಕೆ. ಎನ್. ಶ್ಯಾನುಭಾಗ, ಕೆ. ಚೆನ್ನಪ್ಪ ಮೊದಲಾದವರ ಭಾಷಣಗಳಾದುವು.

ಅಲೆವೂರು—ಇದೇ ತಾ. 15ರಂದು ರಾತ್ರಿ ಸ್ಥಳೀಯ ಸುಬೋಧಿನಿ ಹಾ| ಎ| ಶಾಲೆಯಲ್ಲಿ ಉಡುಪಿ ಯಕ್ಷಗಾನ ಮಂಡಳಿಯವರು 'ರಾಜಸೂಯ ಯಾಗ ಮತ್ತು ಕರ್ಣಾರ್ಜುನ ಕಾಳಗ' ಎಂಬ ಎರಡು ಯಕ್ಷಗಾನ ಪ್ರಸಂಗಗಳನ್ನು ಪ್ರದರ್ಶಿಸಿದರು.

ಪಾಣೆಮಂಗಳೂರು: ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ದಿನಾಂಕ 15ರಂದು ಪಾಣೆಮಂಗಳೂರು ಪಂಚಾಯತ ಬೋರ್ಡಿನ ನೂತನ ಕಟ್ಟಡ ಪ್ರವೇಶೋತ್ಸವವನ್ನು ನೆರವೇರಿಸಿದರು. ಪಂಚಾಯತುಗಳ ಕಾರ್ಯಗಳಾವುವು, ಪಂಚಾಯತ ಅಕ್ಟಿನಲ್ಲಿರುವ ಗುಣದೋಷಗಳಾವುವು, ಪಂಚಾಯತರ ಜವಾಬ್ದಾರಿಯೇನು, ಜನಪ್ರಿಯ ಪಂಚಾಯತ ರಾಜ್ಯ ಕಟ್ಟಲು ಅವಶ್ಯವಿರುವ ಸೌಕರ್ಯಗಳಿಗಾಗಿ ಚಳವಳಿಸಬೇಕಾದ ಜರೂರತು—ಇತ್ಯಾದಿ ವಿಷಯಗಳನ್ನೆತ್ತಿ ಶ್ರೀ ಹೆಗ್ಡೆಯವರು ಮಾತನಾಡಿದರು.

ಶಿರ್ವ— ತಾ. 10ರಲ್ಲು ಶ್ರೀ ಕೆ.ಎಲ್. ಶರ್ಮರ ಅಧ್ಯಕ್ಷತೆಯಲ್ಲಿ 'ಧರ್ಮಸಭೆಯು' ನಡೆದು ಶ್ರೀ ರವೀಂದ್ರ ಹೆಗ್ಡೆಯರಿಂದ ಭಾಷಣಾದಿ ಕಾರ್ಯಕ್ರಮಗಳಾದುವು.

ಉದ್ಯಾವರ— ಬಿಲ್ಲವ ಮಹಾಜನ ಸಂಘದ ಮಹಾಸಭೆಯು 12-8-51ರಲ್ಲು ಸಂಘದ ಅಧ್ಯಕ್ಷ ಯು. ಎ. ಮೋನಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ, ಕಾರ್ಯನಿರ್ವಾಹಕ ಸಮಿತಿ ರಚಿಸಲ್ಪಟ್ಟು ಶ್ರೀಗಳಾದ ಯು. ಎಸ್. ಗಿರಿಯಪ್ಪ, ಬಿ. ಅಣ್ಣಯ್ಯ ಮಾಸ್ಟರ್ (ಗೌ| ಕಾರ್ಯದರ್ಶಿ) ಮತ್ತು ಯು. ಮಂಜಪ್ಪ ಮಾಸ್ತರ್ (ಕೋಶಾಧಿಕಾರಿ)ಗಳಾಗಿ ಚುನಾಯಿಸಲ್ಪಟ್ಟರು. ಬಳಿಕ ಸಮಾಜದ ಸುಧಾರಣೆಗಾಗಿ ಕೆಲವು ನಿರ್ಣಯಗಳಾದುವು.

ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ

ಬೆಳ್ಪ್ಯಾರು— ಬೋರ್ಡ್ ಬುನಾದಿ ಎಲಿಮೆಂಟರಿ ಶಾಲೆಯಲ್ಲಿ ಪ್ರಭಾತಭೇರಿ, ಶ್ರೀ ಎಮ್. ಶಂಕರನಾರಾಯಣ ಕಡಂಬಳಿತ್ತಾಯರಿಂದ ಧ್ವಜಾರೋಹಣ, ಸಭೆ, ಭಾಷಣಾದಿಗಳಿದ್ದುವು.

ಮಣಿಪಾಲ—ಬೆಳಗ್ಗೆ ಶ್ರೀಮತಿ ಪಾರ್ವತಿ ಬಾಯಿಯವರಿಂದ ಧ್ವಜಾರೋಹಣ-ಧ್ವಜವಂದನೆ, ನಂತರ ಹೈಸ್ಕೂಲ್ ಭವನದಲ್ಲಿ ಶ್ರೀ ಟಿ. ಉಪೇಂದ್ರ ಪೈಗಳ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ಸುರತ್ಕಲ್—ಅಗ್ಗಿದಕರಿ ಹಾ| ಎಲಿಮೆಂಟರಿ ಶಾಲೆ ಮತ್ತು ಮುಳ್ಳಗಂಗಯ್ಯ ಸ್ಮಾರಕ ರಾತ್ರಿ ಶಾಲೆಗಳ ಒಡನಾಟದಿಂದ ಧ್ವಜಾರೋಹಣ, ಧ್ವಜವಂದನೆ, ಭಜನೆ, ಭಾಷಣ, ಮಕ್ಕಳಿಗೆ ತಿಂಡಿಹಂಚೋಣ.

ಬ್ರಹ್ಮಾವರ—ಸರ್ಕಲ್ ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ಪ್ರಭಾತಭೇರಿ, ಶ್ರೀ ಅಂತಯ್ಯ ಸೆಟ್ಟರಿಂದ ಧ್ವಜಾರೋಹಣ ಸಂಜೆ ಪುರನಿವಾಸಿಗಳ ಮೆರವಣಿಗೆ, ಶ್ರೀ ಬಿ. ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ.

ನಡೂರು — ಬೆಳಗ್ಗೆ ಧ್ವಜವಂದನೆ ದೇವಸ್ಥಾನದಲ್ಲಿ ಪೂಜೆ, ಶ್ರೀ ಪಿ. ಎನ್. ಸೆಟ್ಟರಿಂದ ಮಕ್ಕಳಿಗೆ ತಿಂಡಿ ಹಂಚೋಣ, ಬಡವರಿಗೆ ಗಂಜಿಯೂಟ ಸಂಜೆ ಶ್ರೀ ಎಸ್. ಶೇಷಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ.

ಕುಂದಾಪುರ—ಪ್ರಾತಃಕಾಲ ಶ್ರೀ ಎಪ್ಪರೆ ಮಂಜಯ್ಯ ಶೆಟ್ಟರಿಂದ ಧ್ವಜಾರೋಹಣ, ಶ್ರೀ ಎಚ್. ಎಮ್. ಹೆಗ್ಡೆರಿಂದ ಧ್ವಜಮುಹೂರ್ತೆಯು ಭಾಷಣ, ವಿದ್ಯಾರ್ಥಿಗಳ ಸ್ಕೌಟರ್ ಮೆರವಣಿಗೆ, ಸಂಜೆ ಪುರಜನರ ಪೇಟೆಮೆರವಣಿಗೆ, ಗಾಂಧಿ ಮೈದಾನದಲ್ಲಿ ಶ್ರೀ ಕೆ. ಮಂಜುನಾಥ ಪೈಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ಎಮ್. ಎಮ್. ಹೆಗ್ಡೆ, ಸುಬ್ರಾಯ ಉರಾಳ್ ಮೊದಲಾದವರ ಭಾಷಣ.

ತಿಮ್ಮಣ್ಣಕುದುರು— ಕೋಸ್ಟ್ ರೋಶನಿ ಸೊಸೈಟಿ ನೇತೃತ್ವದಲ್ಲಿ ಡಾ| ಟಿ. ಮಹಮ್ಮದ್ ಇಸ್ಮಾಯಿಲ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ.

ಬಳ್ಕುಂಜೆ—ಸ್ಥಳೀಯ ಗ್ರಾಮ ಸೇವಾ ಸಂಘದ ಮತ್ತು ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ಪ್ರಭಾತಭೇರಿ ಮೆರವಣಿಗೆ, ರೆ| ಫಾ| ವಿಲಿಯಮ್, ಅವರಿಂದ ಧ್ವಜಾರೋಹಣ, ಮುಂಡ್ಕೂರು ಗ್ರಾಮಸೇವಕ ಶ್ರೀ ಕೆ. ಶೀನಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಡಾ| ಬಿ. ಎಸ್. ಶರ್ಮ ಮೊದಲಾದವರ ಭಾಷಣ.

ಕೊಕ್ಕರ್ಲು—ಶ್ರೀ ಗಣಪತಿ ಎಲಿಮೆಂಟರಿ ಶಾಲೆಯಲ್ಲಿ ಪಟೇಲ್ ಶ್ರೀ ಚಂದಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ.

ಹಿರಿಯಡ್ಕ—ಬೆಳಗ್ಗೆ ಪ್ರಭಾತಭೇರಿ ಧ್ವಜಾರೋಹಣ, ಅಪರಾಹ್ನ ಶ್ರೀ ಟಿ. ರಮಾನಾಥ ಪೈಗಳ ಅಧ್ಯಕ್ಷತೆಯಲ್ಲಿ ಸಭೆ,ಭಾಷಣ.

ಕಾರ್ಕಳ—ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ಪ್ರಭಾತಭೇರಿ, ಧ್ವಜವಂದನೆ, ಸಂಜೆ ಶ್ರೀ ಎಮ್.ಡಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಜನಾಬ್ | ಎಚ್. ಎಸ್. ಹುಸ್ಸೇನ್, ಶ್ರೀಗಳಾದ ಬಿ. ಶ್ಯಾಮರಾಯ ಶೆಟ್ಟಿ, ಕೆ. ಶ್ರೀನಿವಾಸ ಶೆಣೈ, ಶ್ರೀಮತಿ ಸುಶೀಲಾ ಜಿ. ರಾವ್ ಮೊದಲಾದವರ ಭಾಷಣ.

ಬೈಂದೂರು—ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಹೈಸ್ಕೂಲ್ ಪಟಾರದಲ್ಲಿ ಬೆಳಗ್ಗೆ ಶ್ರೀ ಕೆ. ಎಸ್. ನಾವಡರಿಂದ ಧ್ವಜಾರೋಹಣ, ಸಂಜೆ ಶ್ರೀ ವೈ. |ಮಂಜಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ-ಶ್ರೀಗಳಾದ ಸಿ. ಎಚ್ ಸೆಟ್ಟಿ, ಬಿ. ಕೆ. ಕರ್ಕಡ, ರೆ| ಫಾ| ಫರ್ನಾಂಡೋ, ಖಾದಿರ್ ಸಾಹೇಬ್ ಮೊದಲಾದವರ ಭಾಷಣ.

ಬೊಬ್ಬೆಕೇರಿ—ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ನರಸಿಂಹ ಭಟ್ಟರಿಂದ ಧ್ವಜಾರೋಹಣ, ಶ್ರೀ ಪಿ. ವಿ. ಪತ್ತಪ್ಪೈಗಳ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ.

ಕುಂಬಳೆ — ರೂರಲ್ ವೆಲ್‌ಫೇರ್ ಆಫೀಸು, ಪಂಚಾಯತ ಬೋರ್ಡ್ ಆಫೀಸು, ರೈಲ್ವೆಸ್ಟೇಶನ್ ಮೊದಲಾದ ಸಂಸ್ಥೆಗಳಲ್ಲಿ ರಾಷ್ಟ್ರಧ್ವಜಾರೋಹಣ, ಸಭೆ, ಭಾಷಣ.

ಕುಂಬ್ಳಾಜೆ— ಬೋರ್ಡ್ ಬುನಾದಿ ಶಾಲೆಯಲ್ಲಿ ಶ್ರೀ ಕೆ. ವಿಠಲರಾಮಚಂದ್ರ ಭಕ್ತರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ.

ಮುಂಬಯಿ

ಮೊಗವೀರ ವ್ಯವಸ್ಥಾಪಕ ಮಂಡಳಿಯು— ನಾಲ್ವತ್ತೆಂಟನೆ ವರ್ಧಂತ್ಯುತ್ಸವವು ಮತ್ತು 'ಮೊಗವೀರ ಫ್ರೀನ್ಯಾಟ್‌ಹೈಸ್ಕೂಲಿನ' ಪಾರಿತೋಷಕವಿತರಣವು ಇದೇ ತಾ. 12ರಲ್ಲು ಶೇಟ್ ಚಮನ್‌ಲಾಲ್ ಬಾಬಾಲಾಲ್ ಪಾರಿಖ್, ಅವರ ಅಧ್ಯಕ್ಷತೆಯಲ್ಲಿ, ಸರ್‌ಕವಾಸ್ಜಿ ಜಹಾಂಗೀರ್ ಸಭಾಸದನದಲ್ಲಿ ಯಶಸ್ವಿಯಾಗಿ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ. ಯು. ರಾಮರಾಯರು ಸ್ವಾಗತ ಭಾಷಣ ಮಾಡಿದನಂತರ ರಾಷ್ಟ್ರಗಣನೀಯ ಮುಖಂಡರೇ ಮೊದಲಾದವರಿಂದ ಬಂದಿದ್ದ ಶುಭ ಸಂದೇಶಗಳು ಓದಲಾದುವು. ಆ ಮೇಲೆ ಶ್ರೀಗಳಾದ ರಾಜಬಹದ್ದೂರಸಿಂಘ್, ಜೆ. ಎನ್. ಐಯರ್, ಕಾಲೋಚಿತ ಮಾತುಗಳನ್ನಾಡಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಡಳಿಯು ಕಳೆದ 48ವರ್ಷಗಳಿಂದ ಮಾಡುತ್ತ ಬಂದಿರುವ ಕಾರ್ಯ ಕಲಾಪಗಳನ್ನು ಕೊಂಡಾಡಿದರು. ಉತ್ತಮ ಕಾರ್ಯವು ಯಾವಾಗಲೂ ಚಿರಸ್ಥಾಯಿಯಾಗಿ ಬಾಳುವಂತೆಯೇ ಈ ಸಂಸ್ಥೆಯ ಹೆಸರು ಮುಂದಿನ ಇತಿಹಾಸದಲ್ಲಿ ಬರೆದಿಡಲು ಅರ್ಹತೆಯುಳ್ಳದಾಗಿದೆ. ಉತ್ತಮ ಕಾರ್ಯಕ್ಕೆ ಹಣವು ತಾನಾಗಿಯೇ ಹರಿದು ಬರುವುದೆಂದರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ 2ರಲ್ಲಿ ಕಲಿತು ಹೋದ ವಿದ್ಯಾರ್ಥಿಗಳು ತಮ್ಮ ಸ್ವತಂತ್ರಜೀವನದ ಸಂಪಾದನೆಯಲ್ಲಿ ಸ್ವಲ್ಪಂಶವನ್ನಾದರೂ ಈ ಮಂಡಳಿಯಭಿವೃದ್ಧಿಗಾಗಿ ಮೀಸಲಿರುವುದು ಯುಕ್ತವೆಂದು ಹಿತಸೂಚನೆಗಳನ್ನಿತ್ತರು. ಶ್ರೀ ಶೇಷಪ್ಪ ಪಡುಬಿದ್ರೆಯವರು ಧನ್ಯವಾದಗಳನ್ನರ್ಪಿಸಿದ ನಂತರ ನೃತ್ಯ ಸಂಗೀತ ಮೊದಲಾದ ವಿನೋದ ಕಾಲಕ್ಷೇಪಗಳಿಂದ ಸಮಾರಂಭವು ಕೊನೆಗೊಂಡಿತು.

ಮುಂಬಾಯಿ: ಇಲ್ಲಿಯ ರಾಜಾಪುರ ಸಾರಸ್ವತ ಸಂಘದ ವಾರ್ಷಿಕ ಸಭೆಯು ತಾ. 1-8-51ರಲ್ಲು ಶ್ರೀ ಸಿಲಾರು ರಾಮ ರಾಯ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಲೆಕ್ಕ ಪರಿಶೋಧನೆಯ ನಂತರ ಕೆಲವು ಬಡಯೋಗ್ಯ ವಿದ್ಯಾರ್ಥಿಗಳಿಗೆ ವೇತನವು ಮಂಜೂರಾಯಿತು. ಅನೇಕ ಸದಸ್ಯರು ಮತ್ತು ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

ಮದ್ರಾಸು: 15-8-51ರಲ್ಲಿ ಸರ್. ಯಂ. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಿನಲ್ಲಿ ಮಾನ್ಯ ಮಂತ್ರಿ ಎ. ಬಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಆಚರಿಸಲ್ಪಟ್ಟಿತು ಶ್ರೀಯುತರುಗಳಾದ; ಎ. ಕೃಷ್ಣ ರಾವ್, ಯಂ. ಬಾಬು ಶೆಟ್ಟಿ, ಇಜಾರಿ ಶಿರ್ನಪ್ಪ (ಸೆಕ್ರೆಟರಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಬಳ್ಳಾರಿ) ಮುಂತಾದವರು ಸ್ವಾತಂತ್ರ್ಯದ ಮಹತ್ವದ ಕುರಿತು ಭಾಷಣ ಮಾಡಿದರು. ಶ್ರೀ ಯಸ್. ವೆಂಕಟ ರಾವ್ ಮತ್ತು ಶ್ರೀ. ಎ. ಕೃಷ್ಣರಾವ್ ಇವರು ಸ್ವಾತಂತ್ರ್ಯ ಗೀತಗಳನ್ನು ಜೆ. ಗೊರೇದಿಯೊ ಸರ್ವಿಸ್‌ನವರ ಧ್ವನಿವರ್ಧಕ ಯಂತ್ರ ಸಹಕಾರದೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ಅಧ್ಯಕ್ಷರು; ಸ್ವಾತಂತ್ರ್ಯ ದೊರಕಿದ ಮೇಲೆ ರಾಷ್ಟ್ರೀಯ ಸರಕಾರವು ನಮ್ಮ ದೇಶದ ಏಳ್ಗೆಗಾಗಿ ಕೈಕೊಂಡ ಕಾರ್ಯಕ್ರಮದ ವಿಚಾರವಾಗಿಯೂ, ಸ್ವತಂತ್ರ ಭಾರತ ಪ್ರಜೆಗಳ ಕರ್ತವ್ಯದ ಕುರಿತಾಗಿಯೂ ಅರ್ಥಗರ್ಭಿತವಾಗಿ ಮಾತನಾಡಿದರು. ಶ್ರೀ. ಯಂ. ಯಂ. ಭಟ್‌ರವರು ಧನ್ಯವಾದಾರ್ಪಣೆ ಮಾಡಿದ ನಂತರ ಮಂಗಳ ಗೀತೆಯೊಡನೆ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C 478/51

ವಾದಿ—ವಾಸುದೇವ ಕಲ್ಕೂರ

ಪ್ರತಿವಾದಿ—ಪುಟ್ಟ ಪೂಜಾರಿ

ಪ್ರತಿವಾದಿ-ಪುಟ್ಟ ಪೂಜಾರಿ, ಹಳೇಪೈಕ ರುಕ್ಕ ಜಂಗ್ಲಿನಮಗ ಉಡ್ಪಿ ತಾಲ್ಲೂಕು ಹಗೆಹಳ್ಳಿ ಗ್ರಾಮದಲ್ಲಿರುವವ.

ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ:-

ವಾದಿಯು ನಿನ್ನಮೇಲೆ ಗೇಣಿಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲುಮಾಡಿದ್ದಾನೆ. ಸದ್ರಿವಾದೆಯು ತಾರೀಖು 6-9-51ಕ್ಕೆ ತನಿಖೆಗೆ ಯಮೋಕಾಗಿಯದೆ, ಆ ಕುರಿತು ನಿನ್ನ ಉದಾಹರಣೆಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಹಾಗೆ ಸದ್ರಿ ತಾರೀಕಿನ ದಿವಸ ಹಾಜರು ಆಗದೆ ಇದ್ದಲ್ಲಿ ನಿನ್ನ ಗೈರುಹಾಜರಿಯಲ್ಲಿ ವ್ಯಾಜ್ಯವು ಫೈಸಲು ಮಾಡಲಾಗುವದೆಂತ ನೀನು ತಿಳಿಯತಕ್ಕದ್ದು.

M. Ananthaya,
Advocate for Plaintiff.
ಕುಂದಾಪುರ ತಾ. 15-8-51

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ
ಮೂರು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ: 0—8—0

೨ ಭಾರತದ ಗುರುಕುಲ ಬೆಲೆ: 0—6—0

೩ ಲತ್ತಪಗಡೆ ಬೆಲೆ: 0—6—0

ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—

(2) ನವಭಾರತ ಬುಕ್ ಡಿಪ್ಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

೩ನೇ ಪುಟದಿಂದ ಮುಂದರಿಸಿದ್ದು

ಲೂಪ್ಪ ಅವರ ಸ್ಪಷ್ಟೀಕರಣವನ್ನು ಕೂಡಾ ಬೆಂಗಳೂರಿನ ಎ. ಐ. ಸಿ. ಸಿ. ಯ ಭಾಷಣದಲ್ಲಿ ಮಾಡಬೇಕಾಯಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಚುನಾವಣೆಯ ಪೂರ್ವದಲ್ಲೇ ಭಾಷಾವಾರು ಪ್ರಾಂತ ರಚನೆಯ ಪೂರ್ವ ತಯಾರಿಯ ಕಾರ್ಯಕೈಕೊಂಡು ಚುನಾವಣೆ ಮುಗಿದ ಒಂದೆರಡು ವರ್ಷಗಳಲ್ಲೇ ಪ್ರಾಂತಗಳು ರಚಿತವಾಗುವಂತೆ ಸರ್ವ ಪ್ರಯತ್ನವನ್ನು ಶ್ರೀ ನಿಜಲಿಂಗಪ್ಪನವರೂ ಕೆ. ಪಿ. ಸಿ. ಸಿ. ಯವರೂ ಮಾಡಲಿದ್ದಾರೆ. ಕರ್ನಾಟಕ ಪ್ರಾಂತ ರಚನೆಯನ್ನು ಚುನಾವಣೆಯ ಮುಖ್ಯ ವಿಷಯವನ್ನಾಗಿ ತೆಕ್ಕೊಂಡು ಚುನಾವಣೆ ಮುಗಿದು ಒಂದೆರಡು ವರ್ಷಗಳಲ್ಲಿಯೂ ಪ್ರಾಂತ ರಚನೆಯಾಗದಿದ್ದಲ್ಲಿ ಕೆ. ಪಿ. ಸಿ. ಸಿ. ಯವರೇ ಹಿಂದು ಮುಂದು ನೋಡದೆ ಪ್ರತ್ಯಕ್ಷ ಹೋರಾಟ ನಡಿಸಲೇಬೇಕಾಗುವದೆಂದೂ, ಅದಕ್ಕೆ ಈಗಿನ ಕೆ. ಪಿ. ಸಿ. ಸಿ. ಯ ಹೆಚ್ಚಿನ ಕಾರ್ಯಕರ್ತರು ಸಿದ್ಧರೇ ಇರುವರೆಂದೂ, ಹೇಳಬಹುದಾಗಿದೆ, ಆದರೆ ದೇಶದ ಪ್ರಕೃತದ ಗಂಭೀರ ಪರಿಸ್ಥಿತಿಯಲ್ಲಿ ಒಂದು ಬಿಕ್ಕಟ್ಟಿನ ಹಿಂದೆ ಇನ್ನೊಂದು ಬೆನ್ನಟ್ಟಿ ಬರುತ್ತಿರುವಾಗ ಪ್ರಾಂತರಚನಾ ಪ್ರಶ್ನೆಯೊಂದನ್ನೇ ಎತ್ತಿಹಿಡಿದು ಬಿಕ್ಕಟ್ಟನ್ನುಂಟುಮಾಡುವಷ್ಟು ದುಡುಕಲು ಮಾತ್ರ ಕೆ. ಪಿ. ಸಿ. ಸಿ. ಯವರು ಸಿದ್ಧರಿರಲಾರರು.

ಹೆಗ್ಡೆ ಕಾರಂತರು ಪ್ರತ್ಯಕ್ಷ ಹೋರಾಟ ಆರಂಭಿಸಬಾರದಿತ್ತೇಕೆ?

ಶ್ರೀಗಳಾದ ಜಿನರಾಜ ಹೆಗ್ಡೆ ಮತ್ತು ಕಾರಂತರು ಶ್ರೀ ನಿಜಲಿಂಗಪ್ಪರಂತಹ ಮನೋವೃತ್ತಿಯವರಲ್ಲ. ಧೀರೋದಾತ್ತ ವ್ಯಕ್ತಿತ್ವವುಳ್ಳವರು. ಕಾಂಗ್ರೆಸ್ ಪರಿಷ್ಕರೇ ಏಕೆ, ಕಾಂಗ್ರೆಸಿನ ಮೇಲೆ ಕೂಡಾ ವಿಶ್ವಾಸವಿಲ್ಲದವರು. ಅದರಿಂದೇನಾದರೂ ಒಳ್ಳೇದು ಸಾಧ್ಯವೇ ಇಲ್ಲೆಂಬ ಮನೋನಿರ್ಧಾರವಿರುವವರು. ಮತ್ತು ಅದರ ಮೇಲೆ ಸದಾ ಸರ್ವದಾ ಟೀಕೆಗಳ ಮಳೆ ಸುರಿಸುವ ಸೇವೆಯನ್ನದಕ್ಕೆ ಸಲ್ಲಿಸುತ್ತಾ ಬಂದವರು. ಕೆ. ಪಿ. ಸಿ. ಸಿ. ಯ ಮತು ಶ್ರೀ ನಿಜಲಿಂಗಪ್ಪನವರ ಕರ್ತೃತ್ವ ಮತ್ತೆ ನಾಯಕತ್ವದ ಕುರಿತು ಒಂದಿಷ್ಟೂ ವಿಶ್ವಾಸವಿರುವವರಲ್ಲ. ಅಂದ ಮೇಲೆ ಈ ಮಹಾನುಭಾವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ, ಕೆ. ಪಿ. ಸಿ. ಸಿ. ಮತ್ತು ನಿಜಲಿಂಗಪ್ಪನವರ ಕಡೆಗೇನೇ ಸದಾ ಕಣ್ಣು ತೆರೆದು ಕತ್ತು ನೀಡಿಕೊಂಡಿದ್ದು, ಅವರನ್ನು ಸಿಕ್ಕಾಬಟ್ಟೆ ಟೀಕಿಸಿ ಅವಹೇಳನಕ್ಕೆ ತರುವ ವಿಷಯಕ ಗಸ್ತುಗಾರಿಕೆಯಲ್ಲಿಯೇ ಪೌರುಷ ತೋರಿಸಲು ಮುಂದಾಗುವ ಬದಲಿಗೆ, ಗದಗಿನ ರಾಜಿನಾಮೆಯ ನಿರ್ಣಯದಿಂದುಂಟಾದ ಬಿಸಿ ಬಿಸಿ ವಾತಾವರಣದ ಸದುಪಯೋಗ ಪಡೆದು ಇಡೀ ಕರ್ನಾಟಕಕ್ಕೆಲ್ಲ ಪ್ರತ್ಯಕ್ಷ ಹೋರಾಟದ ಕರೆಕೊಟ್ಟು ನಡೆಸುವ ಸಾಹಸವನ್ನೇಕೆ ಮಾಡಲಿಲ್ಲ? ಕೆ. ಪಿ. ಸಿ. ಸಿ. ಯ ಗದಗಿನ ರಾಜಿನಾಮೆಯ ನಿರ್ಣಯದ ಕುರಿತು ಕಾಂಗ್ರೆಸ್ ವರಿಷ್ಠರು ವಹಿಸಿದ ಧೋರಣೆಯನ್ನು ನಿಷೇಧಿಸಿ; ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇಡೀ ಜಿಲ್ಲೆಯಲ್ಲೆಲ್ಲ ಸಭೆನಡಿಸಿ ಶ್ರೀ ಗಳಾದ ಕಾರಂತ್ ಹೆಗ್ಡೆಯವರೊಂದಿಗೆ ಸಂಚರಿಸಿ ಭಾಷಣಗಳನ್ನಿತ್ತು ಅವರಿಗೆ ನೆರವಾಗಿದ್ದೆನು. ಕರ್ನಾಟಕ ಏಕೀಕರಣ ಚಳವಳವು ಮಂಗಳೂರು ಬಿಟ್ಟು ಇಡೀ ಜಿಲ್ಲೆಯಲ್ಲೆಲ್ಲ ವ್ಯಾಪಿಸಿದುದು ಇದೇ ಪ್ರಥಮ ಸಲವೆಂದರೂ ತಪ್ಪಾಗಲಾರದು.

ಶ್ರೀ ಸಿದ್ದಪ್ಪ ಹೊಸಮನಿಯವರ ಅಂತರ್ಲಾಗ!

ಜ್ಯೋತಿ ಪತ್ರಿಕೆಯಲ್ಲಿ "ಕರ್ನಾಟಕ ದಿಗಂತದಲ್ಲಿ ಮೂಡಿಸಿರುವ ನವತಾರೆ" ಎಂಬ ಲೇಖನ ಪ್ರಬಂಧವನ್ನು ಶ್ರೀ ಥೇಲ್ಕರರು ಬರೆದಿದ್ದರು. ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ ಅಧ್ಯಕ್ಷ ಶ್ರೀ ತಂಬಾಕದವರ ಮನೆಯಲ್ಲಿ ಶ್ರೀ ಸಿದ್ದಪ್ಪ ಹೊಸಮನಿಯವರನ್ನವರು ಭೆಟ್ಟಿಯಾಗಿ ಅವರನ್ನು ಪ್ರಶ್ನಿಸಿ ದೊರೆತ ಉತ್ತರಗಳನ್ನು ಈ ಲೇಖನ ರೂಪದಲ್ಲಿ ಶ್ರೀ ಥೇಲ್ಕರರು ಬಹಳ ಗತ್ತುಗಾರಿಕೆಯಿಂದ ಬರೆದಿದ್ದರು.

ತಾನು ಚುನಾವಣೆಯಲ್ಲಿ ಹೋರಾಡಲು ಪಕ್ಷಾತೀತ ಪರಿಷತ್ತು ಕರೆಯುವದಲ್ಲ, ಚುನಾವಣೆಯಲ್ಲಿ ನಿಂತು, ಒಂದು ವೇಳೆ ಬೊಂಬಾಯಿಯಲ್ಲಿ ಕೆಲವು, ಮದ್ರಾಸಿನಲ್ಲಿ ಕೆಲವು ಸೀಟುಗೆದ್ದರೂ ಪ್ರಾಂತರಚನೆಯ ಬಗ್ಗೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ. ಅದರಿಂದ ಯಾವ ಪ್ರಯೋಜನವೂ ದೊರೆವದಾಗಿಲ್ಲ. ತಾನು ಹಿಂದೆ ಸತ್ಯಾಗ್ರಹ ಹೂಡಿ ಅನುಭವವಿರುವವನು, ಇನ್ನೊಮ್ಮೆ ಕರ್ನಾಟಕ ಪ್ರಾಂತರಚನೆಗಾಗಿ ಸತ್ಯಾಗ್ರಹ ನಡಿಸಿ ಸೆರೆಮನೆ ಸೇರಲು ಕಾತೊರೆಯುತ್ತಿದ್ದೇನೆ. ಸತ್ಯಾಗ್ರಹ ಹೂಡುವುದೊಂದೇ ದಾರಿ ಈಗ ಉಳಿದಿರುವುದು. ಅದಕ್ಕಾಗಿಯೇ ತಾನು ಪಕ್ಷಾತೀತ ಪರಿಷತ್ತು ಕರೆದಿರುವುದೆಂಬುದೇ ಶ್ರೀ ಹೊಸಮನಿಯವರ ಆಗಿನ ನಿಶ್ಚಿತಾಭಿಪ್ರಾಯವಿದ್ದಿತು.

ನಾವೆಲ್ಲ ನಿರೀಕ್ಷಿಸಿದಂತೆ ಹಾವೇರಿ ಪರಿಷತ್ತಿನಲ್ಲಿ ಹೊರಟುದು ಚುನಾವಣೆಯ ವೇಷ. ಶ್ರೀ ಹೆಗ್ಡೆಯವರ ನೇತೃತ್ವದಲ್ಲಿ ಅದಕ್ಕಿಂತ ಹೆಚ್ಚಿನದೇನನ್ನೂ ನಾನು ನಿರೀಕ್ಷಿಸಲಿಲ್ಲ. ಯಾಕೆಂದರೆ ಯಾವ ಪ್ರತ್ಯಕ್ಷ ಹೋರಾಟದಲ್ಲಿ ಭಾಗವಹಿಸಿದವರೂ ಅಲ್ಲ; ವಹಿಸುವ ಮನೋವೃತ್ತಿಯವರೂ ಅಲ್ಲ. ಆದರೆ ಹಿಂದೆ ಸತ್ಯಾಗ್ರಹ ಸಮರದಲ್ಲಿ ಭಾಗವಹಿಸಿದ್ದು, ಮುಂದೆ ಅದನ್ನೇ ಹೂಡುವನೆಂದು ಮುಂದಾಗಿ ಘೋಷಿಸಿದ್ದ ಶ್ರೀ ಸಿದ್ದಪ್ಪ ಹೊಸಮನಿಯವರು ಈ ಅಂತರ್ಲಾಗ ಹೊಡೆದ ಅಸಮಂಜಸತೆಯನ್ನೇಕೆ ಮಾಡಿದರು ತಿಳಿಯದು.

ಶ್ರೀ ಕಾರಂತರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಮಟ್ಟಿನ ಜನಬೆಂಬಲವಿರಬಹುದು. ಅವರ ಕುರಿತು ಹಲವರಿಗೆ ಸಹಾನುಭೂತಿಯಿರಬಹುದು. ಆದರೆ ಅವರ ಏಕೀಕರಣ ಪಕ್ಷಕ್ಕೆ ಮಂಗಳೂರು ಜಿಲ್ಲೆಯಲ್ಲಿ ಜನಸಾಮಾನ್ಯರ ಬೆಂಬಲ ದೊರೆಯಲು ಸಾಧ್ಯವೇ ಇಲ್ಲ. ಅವರ ಚುನಾವಣಾ ಘೋಷಣಾ ಪತ್ರವು ಅನುಕೂಲಕ್ಕಿಂತ ಪ್ರತಿಕೂಲಾಭಿಪ್ರಾಯವನ್ನೇ ಹೆಚ್ಚಿಸಿಂತಿದೆ. ಆದುದರಿಂದ ಉತ್ತರ ಕನ್ನಡದವರಾದರೂ ಏಕೀಕರಣ ಪಕ್ಷಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಸಾಮಾನ್ಯರ ಹೆಚ್ಚಿನ ಬೆಂಬಲ ದೊರೆಯುವುದೆಂಬ ಭ್ರಾಂತಿ ಕಟ್ಟಿಕೊಂಡಿದ್ದರೆ ಅದನ್ನು ಆದಷ್ಟು ಬೇಗ ಬಿಟ್ಟುಬಿಡುವುದೊಳ್ಳೇದೆಂದು ನನ್ನ ನಮ್ರ ಸೂಚನೆ.

ಕೆ. ಕೆ. ಶೆಟ್ಟಿ.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

ಮೈನರರು (1) ನವೀನ ಚಂದ್ರ (2) ಮಧುಸೂಧನ್ ಇತರ ಇವರ ಗಾರ್ಡಿಯನ್ ನೇಮಕದ ಬಾಬಿನಲ್ಲಿ-

O. P. No. 87/51

ದಾಕ್ಷಾಯಿಣಿ ಹೆಗ್ಗಡ್ತಿ, ರವಿರಾಜ ಹೆಗ್ಡೆರ ವಿಧವೆ, ಉಡುಪಿ ತಾಲೂಕು ತೋನ್ಸೆ ಗ್ರಾಮದ ನಿಚ್ಚಾರ ತೋನ್ಸೆ ಎಂಬಲ್ಲಿರುವವರು

—ಅರ್ಜಿದಾರರು

ಮತ್ತು

ವಾದಿರಾಜ ಹೆಗ್ಡೆ, ತೋನ್ಸೆ ಶ್ರೀನಿವಾಸ ಹೆಗ್ಡೆರ ಮಗ, B.A.L.T., ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲ್ ಮಾಸ್ತರ, ಉಡುಪಿ ತಾಲ್ಲೂಕು ಕಲ್ಯಾಣಪುರ ಎಂಬಲ್ಲಿರುವವ

—ರೆಸ್ಪಾಂಡೆಂಟ.

ಈ ಮೂಲಕ ಸರ್ವರಿಗೂ ತಿಳಿಸುವುದೇನಂದ್ರೆ:-

ಮೇಲ್ಕಾಣಿಸಿದ ಮೈನರರ ಗಾರ್ಡಿಯನ್ ಶಿಪ್ ಬಾಬಿನಲ್ಲಿ ಸದ್ರಿಯವರ ತಾಯಿಯಾದ ಅರ್ಜಿದಾರಳು ತನ್ನನ್ನು ಗಾರ್ಡಿಯನ್‌ಗೆ ಮೊಕರ್ರರು ಮಾಡಬೇಕಾಗಿ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲುಮಾಡಿದ ಸದ್ರಿ ಅರ್ಜಿಯು ತಾರೀಕು 6-9-1951ಕ್ಕೆ ತನಿಗೆ ಇಟ್ಟಿರುವುದರಿಂದ ಸದ್ರಿ ಗಾರ್ಡಿಯನ್ ನೇಮಕದ ವಿಷಯದಲ್ಲಿ ಆಕ್ಷೇಪ ಹೇಳತಕ್ಕವರು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಗಳನ್ನು ದಾಖಲು ಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸಲಾಗಿಯದೆ.

(By order)

B. B. Shetty,
Advocate for Pltf.
ಮಂಗಳೂರು, ತಾ. 6-8-1951

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಅಕ್ಕಯ್ಯ ಶೆಡ್ತಿ ಕೂಡಾ —ವಾದಿರು

ಮತ್ತು

ಶೇಷಮ್ಮ ಹೆಗ್ಗಡ್ತಿ ಕೂಡಾ—ಪ್ರತಿವಾದಿರು.

ಸದ್ರಿ ವ್ಯಾಜ್ಯದ 8ನೇ ಪ್ರತಿವಾದಿ ಶಂಕರ ಹೆಗ್ಡೆ, ಶೇಷಮ್ಮ ಹೆಗ್ಗಡ್ತಿಯ ಮಗ, ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ ಎಂಬಲ್ಲಿರುವವ,

15ನೇ ಪ್ರತಿವಾದಿ ರಘುನಾಥ ಹೆಗ್ಡೆ M. A. L. T; ಟೀಚರ್, 16ನೇ ಪ್ರತಿವಾದಿ H. T. ಆನಂದ ಹೆಗ್ಡೆ, ಇನ್ಸ್ಯೂರೆನ್ಸ್ ಏಜಂಟ್, ಪದ್ಮಕ್ಕ ಹೆಗ್ಗಡ್ತಿಯ ಮಕ್ಕಳು.

ಉಡುಪಿ ತಾಲ್ಲೂಕು ಹರ್ಕಳ ನಡುಮ ಮಣಿಪಾಲ ಎಂಬಲ್ಲಿರುವವರು.

ಇವರಿಗೆ

ಈ ಮೂಲಕ ತಿಳಿಸುವುದೇನಂದರೆ:

ಮೇಲೆ ಹೆಸರು ಕಾಣಿಸಿದ ವಾದಿರು ನಿಮ್ಮ ಇಡೀ ಕುಟುಂಬದ ಸ್ಥಿರಾಸ್ತಿ ವಿಭಾಗ ವಗೈರೆ ನಿವೃತ್ತಿಗಳನ್ನು ಅಪೇಕ್ಷಿಸಿ ದಾಖಲುಮಾಡಿದ ಸದ್ರಿ ದಾವೆಯು ಈ ಕೋರ್ಟಿನಲ್ಲಿ ತಾರೀಕು 8-9-1951ಕ್ಕೆ ತನಿಗೆ ಇಟ್ಟಿರುವುದರಿಂದ ಸದ್ರಿ ತಾರೀಕಿನಂದು ಪೂರ್ವಾಹ್ನ 11 ಘಂಟೆಗೆ ಮುದ್ದಿನಿಂದಾಗಲಿ; ವಕೀಲದ್ವಾರವಾಗಲೀ ತಪ್ಪದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹಾಜರಪಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟೆಯಾಗಿರಿಸಿ ವಾದಿರ ದಾವೆ ತೀರ್ಮಾನಿಸಲಾಗುವದೆಂತ ತಿಳಿಯುವದು.

B. B. Shetty,
Advocate for Pleffs.
ಮಂಗಳೂರು, ತಾ. 6 8-1951

For Protection and Provision

Consult

The New Guardian of India Life Insurance Co., Ltd.
Head office: **MADRAS**
(Estd 1934)

A Policy in this Progressive Life Office is a good investment; its Agency is a valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MANGALORE, S. K.

THE PANGAL NAYAK BANK LIMITED.
Head Office] [Incorporated in 1920.] [Udipi; S K
SEASON DEPOSITS are received and accepted on the following terms:—
For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild; For particulars please ask for copy of Rules





Approved from by the Govt. of Mysore Certificated by the Agent of the Govt. of Cylone. & Indian

ಸ್ವೀಕಾರ-ವಿಮರ್ಶೆ

೧ ಪುರುಷಾವತಾರ (ಕಾದಂಬರಿ)

ಲೇಖಕರ: ಶ್ರೀ ತ. ರಾ. ಸು. ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು 2. ಬೆಲೆ ರೂ: ೧-೧೫-೦

ಬೀಡಿ ತಿನ್ನುವವರ ಜೀವನವನ್ನು ಚಿತ್ರಿಸುವದರ ಮೂಲಕ ಉಳಿದವರಿಗೆ ಜ್ಞಾನೋದಯವಾಗಲೆಂದು ಶ್ರೀ ತ. ರಾ. ಸು. ಈ ಕಾದಂಬರಿ ಬರೆದಿದ್ದಾರೆ. ಇಂತಹ ಕೀಳ್ಮಟ್ಟದ ಅಥವಾ 'ಬೇವಾರಿ' ಜನರ ಕುರಿತು ಯಾರೂ ದೃಷ್ಟಿಹರಿಸದೇ ಇರುವ ಪ್ರಯುಕ್ತ ತಾನು ಅದನ್ನು ಅರಿಸಿಕೊಂಡಿರುವೆನೆಂದೂ ಇದರಿಂದ 'ಪುರುಷಾವತಾರ' ಕಾದಂಬರಿಗಳ ಸಾಲುಗಳಲ್ಲಿ ನಾವೀನ್ಯತೆಯನ್ನು ಪಡೆಯಬಹುದೆಂದೂ ಮುನ್ನುಡಿಯಲ್ಲಿ ಲೇಖಕರು ಬಯಸಿದಂತಿದೆ. ನೂರಅರುವತ್ತೇಳು ಪುಟದಷ್ಟು ವಿಸ್ತಾರ ಉಳ್ಳಂತಹ ಈ ಕಾದಂಬರಿಯಲ್ಲಿ ತ. ರಾ. ಸು. ತನ್ನ ಮೂಲೋದ್ದೇಶವನ್ನು ಸಾಧಿಸದೆ ವಿರುದ್ಧ ಭಾವನೆಯನ್ನೇ ಹುಟ್ಟಿಸಿದರೇನೋ ಎಂದು ಭಾಸವಾಗುತ್ತದೆ. ಅವರು ರಚಿಸಿದ ಕಾದಂಬರಿಗಳಲ್ಲಿ ಅಸ್ವಾಭಾವಿಕ—ಅಸಹಜ ಮತ್ತು ನಿಃಸತ್ವ ಕಾದಂಬರಿಯೆಂದರೆ ಪುರುಷಾವತಾರ.

ಹೋಟೆಲಿನ ಹಿಂಬಾಗದಲ್ಲಿ ಎಂಜಲೆಲೆಯ ಅನ್ನವನ್ನು ತಿಂದು ಜೀವಿಸುವ ನಾಲ್ಕಾರು ಹುಡುಗರ ಜೀವನದ ಬಗ್ಗೆ ಜನ ಕನಿಕರ ಇಲ್ಲವೆ ಅನುತಾಪ ಪಡುವ ಬದಲು ಜಿಗುಪ್ಸೆ ಅಸೂಯೆ ಪಡುವಂತಾಗಿದೆ. ಬೀಡಿ ಸೇದುವುದೂ, ಉಗುಳಿ ನುಡಿಯುವುದೂ, ಹೊಡೆಯುವುದೂ, ಅಮಾನುಷರೀತಿಯಲ್ಲಿ ನಡೆದುಕೊಳ್ಳುವುದೂ ಈ ಮಕ್ಕಳ ವೈಶಿಷ್ಟ್ಯ! ಈ ಮಕ್ಕಳನ್ನು ಪಶುಗಳಂತೆ ಜನಶಾಣಾಕ್ಷದ್ವಾರೆನ್ನುವ ದಕ್ಕೆಹಲವಾರು ಸನ್ನಿವೇಶಗಳನ್ನು ಕಲ್ಪಿಸಲಾಗಿದೆ. ಪ್ರತಿಯೊಂದು ಸನ್ನಿವೇಶಗಳಲ್ಲೂ ಮಕ್ಕಳು ಉಳಿದವರನ್ನು ಮನುಷ್ಯರೆಂದು ತಿಳಿದದ್ದು ಬಹಳ ಕಡಿಮೆ. ಇಡಿಯ ಪ್ರಪಂಚದ ಜನವೆಲ್ಲ ಶತ್ರುಗಳು ದ್ರೋಹಿಗಳು—ವಂಚಕರೆಂಬರೆಂಬ ಕಲ್ಪನೆಯೇ ಅವುಗಳ ತಲೆಯಲ್ಲಿ! ದುಡಿದು ತಿನ್ನಬೇಕಾದ ಬುದ್ಧಿ ಬೆಳವಣಿಗೆಯುಳ್ಳ ಕಾಲದಲ್ಲಿ ಬೀಡಿ ತಿನ್ನುವುದು ತಪ್ಪು ಹುಟ್ಟು ಕರ್ತವ್ಯ ಹಾಗೂ ಜನ್ಮಸಿದ್ಧ ಹಕ್ಕೆಂದು ಆ ಮಕ್ಕಳು ಭಾವಿಸಿರುತ್ತವೆ ದಿನವಿಡೀ ದುಡಿದೂ ಅರೆಹೊಟ್ಟೆಯಲ್ಲಿರುವ ಸಾವಿರಾರು ಸಂಸಾರಗಳು ನಮ್ಮಲ್ಲಿವೆ. ವಿಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆಯಲ್ಲಿ ನಿಕೃಷ್ಟ ಜೀವನ ನಡೆಸುವವರೆಂದರೆ ಮಧ್ಯಮ ವರ್ಗದ ಜನ. ದುಡ್ಡುಳ್ಳವರೂ ದೊಡ್ಡವರಾಗುತ್ತಾರೆ. ಕೂಲಿಗಾರರೂ ಕಾಲಕ್ಕನುಗುಣವಾಗಿ ಸಂಬಳವನ್ನು ಪಡೆಯುತ್ತಾರೆ, ಆದರೆ ಮಧ್ಯಮ ವರ್ಗದ ಜನಜೀವನಶೋಚನೀಯವಾಗಿರುತ್ತದೆ. ಇಂತಹ ವೇಳೆ ಬೇಡಿಯೋ ಕಾಡಿಯೋ ನಾವು ತಿನ್ನುತ್ತೇವೆ—ಅದಕ್ಕೆ ಅಡ್ಡಿ ಬರಬಾರದೆಂದರೆ ಅಂತಹ ಒಂದು ಪಂಗಡ ರೂಪಗೊಳ್ಳುವುದಕ್ಕೆ ನಾವಾಗಿಯೇ ಪ್ರೋತ್ಸಾಹವಿತ್ತಂತಾಗುವುದಿಲ್ಲವೇ? ಕುರುಡರೂ ಕಿವುಡರೂ ಅಂಗಊನರೂ ಆಗಿದ್ದರೆ ಅಮಾತುಬೇರೆ. ಆದರೆ ಬೆಳೆದು ದುಡಿಯಬೇಕಾದ ಈ ಜೀವಿಗಳು ಸೋಮಾರಿಗಳಾಗಿ ಜೀವನ ನಡೆಸಬೇಕೆಂದು ಬಯಸುವದಾಗಲೀ, ಅಂತಹರಿಗೆ ಕೆಲಸವೇ ನಮ್ಮಲ್ಲಿ ದೊರಕಲಾರದೆಂದೂ ವಾದಿಸುವದಾಗಲೀ ವಸ್ತುಸ್ಥಿತಿಗೆ ವಿರೋಧವಾದಮಾತು. ನಮ್ಮ ದೇಶ ಸೋಮಾರಿತನಕ್ಕೆ ತವರು, ಅತ್ಯಂತ ಸುಧಾರಿತ ರಾಷ್ಟ್ರಗಳ ಅಭ್ಯುದಯಕ್ಕೆ—ಜನತೆಯ ಜೀವನೋತ್ಕರ್ಷತೆಗೆ—ಅಲ್ಲಿಯ ಜನರ ಕಷ್ಟಸಾಮಗಾರಿಕೆಯೇ ಮುಖ್ಯ ಕಾರಣ. ಇಂಗ್ಲಂಡ ಅಮೇರಿಕಾ ಮುಂತಾದ ದೇಶಗಳಲ್ಲಿ ವಾರದಲ್ಲಿ 5 ದಿನ ಅವಿಶ್ರಾಂತವಾಗಿ ದುಡಿಯುತ್ತಾರೆ, ಎರಡು ದಿನ ವಿಶ್ರಾಂತಿಗಾಗಿ ಬಳಸಿಕೊಳ್ಳುತ್ತಾರೆ. ನಮ್ಮ ದೇಶದ ಜನರಲ್ಲಿ ಪ್ರಾಮಾಣಿಕತನದಿಂದ ದುಡಿಯುವ ಉತ್ಸಾಹ—ಛಲವಿಲ್ಲ. ಎರಡುದಿನವಮಾತ್ರ ದುಡಿದು ಉಳಿದ ಐದು ದಿನಗಳನ್ನು ಮೋಜಿಗಾಗಿಯೋ ಹಾಳು ಹರಟೆಗಾಗಿಯೋ ವ್ಯರ್ಥ ಮಾಡುತ್ತಿರುವದನ್ನು ನಾವು ಲಕ್ಷಿಸಿದರೆ ನಮ್ಮ ದೇಶದ ಬಡತನಕ್ಕೆ ಮೂಲಕಾರಣ ಯಾವುದೆಂದು ಚೆನ್ನಾಗಿ ಮನದಟ್ಟಿಕೆಯಾಗದಿರದು. ಹೀಗಿರುವಾಗ ಎಂಜಲೆಲೆಯನ್ನು ತಿನ್ನುತ್ತ ಕಾಲಕಳೆಯುವ ಬದಲು ಉದ್ಯೋಗವನ್ನು ಕೈಗೊಳ್ಳಬಾರದೇಕೆ? ಎನ್ನುವದಕ್ಕೆ ಇಲ್ಲಿ ಬರುವ ಹಲವು ಉದಾಹರಣೆಗಳು "ನಮ್ಮಂಥೋರು ಸುಳ್ಳುಹೇಳ್ದೆ ಈ ಪ್ರಪಂಚದಾಗೆ ಜೀವನ ಮಾಡೋಕೆ ಆಗಾಕಿಲ್ಲ, ಕಣ್ಲಾ. ತಿರುಪೆಯೋರಿಗೆ ಸುಳ್ಳೇ ಮನೆದೇವರು. ಆಟಕ್ಕೆ ಕಳ್ಳ ಬೈರೂಪ ಕಟ್ಟಿದೋರ್ನೆ, ನಾಯ್ತ್ನ ಇದ್ದಾಯ್ತಾರೂ ಒಂದ್ಹುತ್ತು ಅನ್ನಕೊಡಾಕಿಲ್ಲ ಈ ಚಂಡಾಲ ಪ್ರಪಂಚದಲ್ಲಿ" ತಾಯಿಗೆ ಸವಾನಳಾದವಳು ಎಳೆಯ ಹುಡುಗನ ಮೇಲೆ ಆಚ್ಯೋತ್ತುವ ಬೀರುವ ಆದರ್ಶಗಳಿವು! ಅವಳೇ ಒಂದು ಮನೆಯಲ್ಲಿ ಕೆಲಸದಲ್ಲಿದ್ದಾಗ ಮನೆಯಾತ ಕೈಮಾಡ ಬಂದದ್ದರಿಂದ ಆಕೆ ಕೆಲಸಮಾಡುವದನ್ನೇ ಬಿಟ್ಟು ಬಿಟ್ಟು ಬೇಡುವದರಿಂದಲೇ ತನ್ನ ಮಾನವನ್ನುಳಿಸಿಕೊಳ್ಳುವ ಸಾಹಸಮಾಡುತ್ತಾಳೆ. ಕೆಲಸಕ್ಕಾಗಿ ಉಳಿಸಿಕೊಳ್ಳುವ ಒಳ್ಳೆಯ ಜನರೇ ಈ ದೇಶದಲ್ಲಿ ಇಲ್ಲದೆ ಹೋದದ್ದು ದುರ್ದೈವ. ಆದರೆ ಇಂತಹ ಹೆಣ್ಣು ಹೆಂಗಸು ಮನೆಬಿಟ್ಟು ಹಾದಿ ಬೀದಿಯಲ್ಲಿ ಬೇಡುತ್ತಾ ತಾನು ಮಾನವನ್ನು ಉಳಿಸಿಕೊಂಡೇನು ಎಂತ ಭಾವಿಸಿದ್ದರಲ್ಲಿ ಯಾವ ತಥ್ಯವ ಡಗಿದೆಯೋ ಅರ್ಥವೇ ಆಗುವುದಿಲ್ಲ! "ಚಾಕ್ರಿ ಮಾಡೋದು ನಮ್ಮಾತಿ ಜನದ ಹಣೇಲಿ ಬರೆದಿಲ್ಲ ಕಣ್ಲಾ. ನಾವು ಬೇಡಿತಿನ್ನಲು ಹುಟ್ಟಿದವರು" ಎಂದೂ ಎಳೆಯನಾದ ಕಣ್ಣನಿಗೆ ಆಕೆ ನೀಡಿದ ಪರಮಮಂತ್ರವಿದು!

ಕಣ್ಣ ಸದಾ ಬೆಂಕಿಯಾಗಿ ಇರುವ ಹುಡುಗ, ಎಲ್ಲಿ ನೋಡಿದರೂ ಅವನಮೇಲೆ ಜನರೇಗಿ ಬರುವ ಸನ್ನಿವೇಶಗಳೇ. ಅವನನ್ನು ಉದ್ರೇಕಗೊಳಿಸುವ ನೂರಾರು ಸನ್ನಿವೇಶಗಳಲ್ಲಿ ಅವನು ಬೆಂಕಿಯಾಗುತ್ತಾನೆ, ಸರ್ಪವಾಗುತ್ತಾನೆ-ಏನೇನೆಲ್ಲ ಆಗುತ್ತಾನೆ. ಜೊತೆಗೆ ಅಲ್ಲಿಗೆ ಮುನಿಸ್ವಾಮಿ-ಕಂದಸ್ವಾಮಿ-ಪಳನಿ-ಇವರೆಲ್ಲ ತುಂಡುಪುಂಡರು, ಇವರೆಲ್ಲ ಒಬ್ಬ ಸಾಬಿಯಮೇಲೆ ರೇಗಿ ಅವನ ಮೂಳೆ ಮುರಿಯುವ ಸನ್ನಿವೇಶ ರೌಡಿಮಾಡುವವರಿಗೆ ಉತ್ತಮ ಆದರ್ಶವೆಂದೇ ಹೇಳಬೇಕು. "ಛೂ.. ಮಗ ..ಛಾಂಚೋದ್ ನಿನ್ತಿತಿ ಮಾಡ್ಬುಡ್ತಿನಿ ಒದೀತೀಯಾ ಲೌಡೀ ಮಗನೇ! ಸಾಯಬಡ್ಡಿ ಮಗ್ನೇ" ಈ ಬಗೆಯ ಮಾತುಗಳಿರಿಯೂ ಈ ಬೇಡುವ ಮಕ್ಕಳಿಂದಲೇ ಆಗುತ್ತದೆ. ಬೇಡುವದು ಕಾಡುವದು ಇವರ ಜನ್ಮಸಿದ್ಧ ಹಕ್ಕಾದರೆ ಹೊಡೆಯುವದೂ ಬಡಿಯುವದೂ ಉಸ್ತಾಂಗಿರಿ ತೋರಿಸುವುದು ಇವರ ಇನ್ನೊಂದು ವೈಶಿಷ್ಟ್ಯವೆನ್ನಬೇಕು! ಕಣ್ಣ ಹೋದಲ್ಲೆಲ್ಲ ರಂಪಾಟನಡೆಸದೆ ಹಿಂತಿರುಗವುದಿಲ್ಲ. ಮನೆಯವರೊಡನೆ ಮಾತ್ರವಲ್ಲದೆ ಕಟ್ಟಬಂದ ನಾಯಿಯನ್ನು ಸಾಯಹೊಡೆಯುವ ಭೀಕರ ಸಂದರ್ಭಗಳೂ ಇವೆ. ಇಡಿಯ ಕಾದಂಬರಿಯಲ್ಲಿ ಕಣ್ಣನಪಾಲಿಗೆ ಲೋಕವೇ ಮುನಿದೇಳುತ್ತದೆ, ಇದನ್ನು ಲೇಖಕರು ಅನಿವಾರ್ಯವೆಂದೇ ಹೇಳುತ್ತಾರೆ. ಅನುಚಿತವೂ ಅಸ್ವಾಭಾವಿಕವೂ ಆದ ಈ ವ್ಯಕ್ತಿಜೀವಿಗಳ ಮೇಲೆ ನಾವು ದಯೆ—ಅನುಕಂಪನೆಯನ್ನು ತೋರುವ ಹೃದ್ರಾವಕ ಸನ್ನಿವೇಶವನ್ನು ತ. ರಾ. ಸು ನೀಡದೆ ಅವರು ತೋರುವ ರೌದ್ರ ಭಯಾನಕ ಕೃತಿಗಳಿಗೆ ಜನದ ಅನಾದರವೇ ಕಾರಣವೆನ್ನುವ ಸಾಹಸ ಮಾಡಿದ್ದಾರೆ. ನಾಲ್ಕು ಹುಡುಗರನ್ನು ಕಟ್ಟಿಕೊಂಡು ಈರೀತಿಯ ವಾಮಮಾರ್ಗವನ್ನು ತುಳಿಯುವುದಕ್ಕಿಂತ ಕಣ್ಣನಿಗೆ ರಾಗಿಯುಕ್ತವಾಗಿ ಹಾಡಿ ಬೇಡುವ ಉದ್ಯೋಗವನ್ನಾದರೂ ನೀಡಬಾರದಿತ್ತೆ? ಸೋಮಾರಿತನದಿಂದಲೇ ಇಂತಹ ಮಕ್ಕಳು ಮನುಷ್ಯತ್ವವನ್ನು ಪಡೆಯಬೇಕೆಂದರೆ ಹೇಗಾದೀತು?

ಕರ್ನಾಟಕದ ಉತ್ತಮ ಬರಹಗಾರರಾದ ತಾ. ರಾ. ಸು.ರವರು 'ಪುರುಷಾವತಾರ'ವನ್ನು ಒಂದು ಘನವಾದ ಉದ್ದೇಶದಿಂದ ಬರೆದುದಲ್ಲವೆಂದು ತೋರುತ್ತದೆ. ಕಾದಂಬರಿ ರಚಿಸಬೇಕೆಂಬ ಒಂದೇ ಅವಲಂಬನೆಯಿಂದ ಬರೆದಂತೆ ಕಾಣುತ್ತದೆ "ಮುಂಚಾವಿನಿಂದ ಮುಂಜಾವಿ"ನಲ್ಲಿ ಹೋಟೆಲಿನ ಹಿಂಬದಿಯಲ್ಲಿ ಮಕ್ಕಳು ಎಂಜಲೆಲೆಗಾಗಿ ಕಾದು ನಾಯಿ ಬಾಳು ಸಾಗಿಸುವದನ್ನು ಲೇಖಕನು ಚಿತ್ರಿಸದೆ ಆ ಪಡಕ್ಷ್ನ ಸನ್ನಿವೇಶ ನಮ್ಮ ಮನಸನ್ನು ಕಲುಕಿಸಿದಷ್ಟು—ವಿಚಾರದ ಕಡೆಗೆ ಹರಿಸಿದಷ್ಟು 167 ಪುಟದ ಈ ಕಾದಂಬರಿಯ ನಮ್ಮ ಮನಸನ್ನು ಕೆರಳಿಸುವುದಿಲ್ಲ. ಈ ಸೋಮಾರಿಗಳ ಕೃತ್ಯಕ್ಕೆ ಅಸೂಯೆ-ಜಿಗುಪ್ಸೆ ಪಡುವಂತೆ ಆಗಿದೆ, ಸನ್ನಿವೇಶಗಳೂ ಚರ್ವಿತಚರ್ವಣಗಳೇ! ಮಾತುಗಾರಿಕೆ ಕೇವಲ ವರದಿಯನ್ನು ಒಪ್ಪಿಸುವಂತಿವೆ. ಬದುಕಿರುವ ನಾಲ್ಕು ದಿನಗಳಲ್ಲಿ ಕರ್ತವ್ಯಶೀಲರಾಗಿ ಮಾನವೀಯ ಸಹಜ ಸ್ನೇಹದಿಂದ ಇರಲು ಕಲಿಯುವ ವ್ಯಕ್ತಿತ್ವವನ್ನು ನಾವು ಅರಿಸಬೇಕೇ ಹೊರತು, ಅಸ್ವಾಭಾವಿಕವೂ ಅನಪೇಕ್ಷಿತವೂ ಆದ ಮಾರ್ಗದಲ್ಲಿ ನಡೆದುಕೊಂಡು ಜನತೆ ಶಿರ್ದ ಯಾವಾಗಿದೆ-ಸುಖಲೋಲುಪತೆಯಲ್ಲಿ ಮಗ್ನವಾಗಿದೆಯೆಂದು ದೂಷಿಸುವದು ಸರಿಯಲ್ಲ. ತ.ರಾ.ಸು.ಮುನ್ನುಡಿಯಲ್ಲಿ ಸಮಾಜ ಕಂಟಕರಾಗುವದಕ್ಕೆ ಪಂಕ್ತಿಗಳೇ ಕಾರಣವೆಂಬುದನ್ನು ಸೂಚ್ಯವಾಗಿ ಹೇಳಿರುತ್ತಾರೆ. ಆದರೆ ಅವರು ಸೃಷ್ಟಿಸಿದ ಕಣ್ಣನ ಪಾತ್ರವಕ್ಕೆ ಪೋಷಕವಾಗಿಲ್ಲ. ಕೃತ್ರಿಮತೆಯಿಂದ ಕೂಡಿದೆ. ಅಂತಲೆ "ಪುರುಷಾವತಾರ" ಸಮಾಜಕಂಟಕ ಮನೋವೃತ್ತಿಯುಳ್ಳವರಿಗೆ ಸೂಚ್ಯವಾಗಿ ಉತ್ತಮ ಸನ್ನಿವೇಶಗಳನ್ನು ಒದಗಿಸಿಕೊಡುವಂತಹ ವಸ್ತುವಾಗಿರಲೆಂದು ಹಾರೈಸುತ್ತೇವೆ.

—ಎಸ್ಸೆಲ್.

ಹಕ್ಕಿಯ ನೋಟ

೧ ಸ್ವಾಮಿ ಶ್ರದ್ಧಾನಂದ ಸೇವಾಶ್ರಮ,—ಸಸ್ಸಿಹಿತ್ಲು ಮಂಗಳೂರು 1951ರ ವಾರ್ಷಿಕ ವರದಿ.

ನಿರ್ಗತಿಕರಾದ ಗಂಡು ಮತ್ತು ಹೆಣ್ಣುಮಕ್ಕಳಿಗೆ ಊಟ, ವಸತಿ, ವಿದ್ಯಾದಾನ ಮಾಡುವುದೇ ಈ ಆಶ್ರಮದ ಗುರಿ. ಜಾತ್ಯತೀತವಾದ ಈ ಕಾರ್ಯವು ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿರುವುದು ಆಶ್ರಮದ ಕರ್ತವ್ಯ ನಿಷ್ಠೆಯನ್ನು ವ್ಯಕ್ತಪಡಿಸುತ್ತದೆ.

೨ ಮೊಗವೀರ ವ್ಯವಸ್ಥಾಪಕ ಮಂಡಳಿ—ನಾನಾಬಾಯಿ ಲೇನ್ ಫೋರ್ಟ್ ಬಾಂಬೆ. 48ನೇ ವರ್ಷದ ವರದಿ.

47 ವರ್ಷಗಳಿಂದ ಕಲೆ, ಸಾಹಿತ್ಯ, ವಿದ್ಯಾದಾನ, ಸಾಂಸ್ಕೃತಿಕ ಕಾರ್ಯ ಇವೇ ಮೊದಲಾದ ಅತ್ಯುಪಯುಕ್ತ ಕಾರ್ಯಗಳ ಮೂಲಕ ಮೊಗವೀರ ವ್ಯವಸ್ಥಾಪಕ ಮಂಡಳಿಯು ಲೋಕಸೇವೆಯಲ್ಲಿ ನಿರತವಾಗಿದೆ. ವಿಧಾಯಕವಾದ ಕಾರ್ಯಕ್ರಮಗಳಿಂದ ಜನತೆಯ ಪ್ರೀತಿ ವಿಶ್ವಾಸ ನಂಬುಗೆಗೆ ಪಾತ್ರವಾಗಿದ್ದುದರಿಂದ ವ್ಯವಸ್ಥಾಪಕ ಮಂಡಳಿಯು ಭದ್ರವಾದ ಆರ್ಥಿಕ ತಳಹದಿಯ ಮೇಲೆ ನಿಂತಿದೆ. ಅಂತಲೇ ಮೊಗವೀರ ವ್ಯವಸ್ಥಾಪಕ ಮಂಡಳಿಯ ಉಜ್ವಲವಾದ ಸೇವೆಯ ಬಗ್ಗೆ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿ ಪ್ರಗತಿದಾಯಕವಾದ ಈ ವರದಿಯನ್ನು ಆತ್ಮಾದರದಿಂದ ಸ್ವೀಕರಿಸುತ್ತೇವೆ.

೩ ಶ್ರೀ ವಾಣೀ ವಿಲಾಸಿನೀ ಸಂಸ್ಕೃತ ಪಾಠಶಾಲಾ ಸಾಲಿಗ್ರಾಮ ದ. ಕ. ಮೂರನೇ ವರ್ಷದ ವರದಿ

ಘನವಾದ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಡೆಸುತ್ತಿರುವ ಈ ಸಂಸ್ಥೆಯ ವರದಿಯು ಆದರಣೀಯವಾಗಿದೆ.

ಕುಂದಾಪುರದ ಮುನ್ಸೀಫ್ ಕೋರ್ಟಿನಲ್ಲಿ

O. S. 513/1949

ವಾದಿ— ಮುತ್ತಕ್ಕ ಸೆಟ್ಟಿ,

ಪ್ರತಿವಾದಿ— ಸಂಕಯ್ಯ ಸೆಟ್ಟಿ. ಕೂಡಾ 27 ಚಂದಯ್ಯ ಸೆಟ್ಟಿ, ಲಚ್ಚಮ್ಮ ಸೆಡ್ತಿ ಮಗ 82 ಕೃಷ್ಣಪ್ಪ ಸೆಟ್ಟಿ. ಬಾಗಿ ಸೆಡ್ತಿ ಮಗ, ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಾ ಬೋಗ್ಯಾದಿ ಅವಧಿನ ರಿಡಮ್ಷನ್ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯು ತಾರೀಖು 31-8-1951ಕ್ಕೆ ತನ್ನಿಗೆಯಿಟ್ಟದೆ ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಅದಿನ ಬೆಳಿಗ್ಗೆ ಹಗಲು 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ವ್ಯಾಜ್ಯವನ್ನು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿದೆ.

By order of the court.

Y. Tejappa Shetty.
Advocate for Plaintiff
Coondapoor, 15-8-1951.

In the Court of the District Munsiff of Udipi.

S. C. Suit No. 149/1951

Between

International Commercial Corporation Ltd., Udipi by its Secretary C. Radhakrishna Rao —Plaintiff.

and

K. Devadas Pai —Defendant.

To K. Devadas Pai, Son of Vittappa Pai, Forest Contractor carrying on business and residing at Sagar - Shimoga of Mysore State, the defendant.

Where as the plaintiff has instituted the above suit against you for recovery of Rs. 228-5-0 and interest from date of plaint and costs of suit, you are hereby informed to appear in the above Court in person or by a pleader on 14-9-1951 at 11 A. M. and in default of your appearance on the day and hour before mentioned, the suit will be heard and determined in your absence.

(By order of the Court)

K. Varadaraya Pai,
Advocate for Plaintiff
UDIPI, Dated 14-9-1951.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿ ಯೂಚಿಲ್ಲರೆಯಾಗಿಯೂದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ

ಬೆಳಗಿರುವ ಭಾರತದ ಪ್ರಚಂಡ ಚುನಾವಣೆಯು ರಾಷ್ಟ್ರದ ಹೊಸ ಘಟನೆಯನ್ನನುಸರಿಸಿದ್ದು, ಭಾರತದ ಪ್ರತಿಯೊಬ್ಬ ಮಹಿಳೆ ಮತ್ತು ಮಹನೀಯರು ಅದರಲ್ಲಿ ಭಾಗವಹಿಸಲಿರುವರಾದರೂ ಪ್ರೌಢ ವಿದ್ಯಾಭ್ಯಾಸವನ್ನು ಹೊಂದದ ಮತ್ತು ರಾಜಕೀಯ ವಿಷಯಗಳಲ್ಲಿ ಕುತೂಹಲವಿಲ್ಲದ ಅನೇಕರು ರಾಷ್ಟ್ರದ ಘಟನೆಯು ಹೇಗೆ ರಚಿಸಲ್ಪಟ್ಟಿದೆ, ಅದರಲ್ಲಿ ರಾಜಕೀಯ ಕ್ರಮಗಳು ಯಾವ ರೀತಿಯಿಂದ ನಡೆದು ಬರುತ್ತದೆ, ವ್ಯಕ್ತಿ ಸ್ವಾತಂತ್ರ್ಯವು ಎಷ್ಟರ ಮಟ್ಟಿಗೆ ಇದೆ, ಸರಕಾರವೆಂಬ ಜನರಿಂದ ನಿರ್ಮಿಸಿದ ಯಂತ್ರವು ಯಾವ ರೀತಿಯಿಂದ ನಡೆಯತಕ್ಕದ್ದು, ಜನರಿಗೂ ಸರಕಾರಕ್ಕೂ ಯಾವ ರೀತಿಯ ಸಂಬಂಧವಿರುತ್ತದೆ, ಚುನಾವಣೆಯಲ್ಲಿ ನಿಪುಣ ಜನಸೇವಾಸಕ್ತ ಮತ್ತು ನಾಲ್‌ಚಾತುರ್ಯವುಳ್ಳ ಸಾಮರ್ಥ್ಯ ವ್ಯಕ್ತಿಗಳನ್ನು ಜನಪ್ರತಿನಿಧಿಯಾಗಿ ಕಳುಹಿಸುವ ಆವಶ್ಯಕತೆಯೇನಿರುತ್ತದೆಂಬುದನ್ನು ಇನ್ನೂ ಅರಿತಿರಲಾರರು. ಪ್ರಜಾಪ್ರಭುತ್ವದಲ್ಲಿ ಮೇಲ್ಮೆಯನ್ನು ಹೊಂದಿರುವ ಪಾಶ್ಚಾತ್ಯ ದೇಶಗಳಲ್ಲಿ, ಅದರಲ್ಲಿಯೂ ಇಂಗ್ಲಂಡಿನಲ್ಲಿ ಚುನಾವಣೆಯು ಸಮೀಪಿಸುತ್ತಲೇ ನಿಲ್ಲತಕ್ಕ ವ್ಯಕ್ತಿಗಳು ಯಾರು? ಅವರ ಅರ್ಹತೆಯೇನು? ಜನಪ್ರತಿನಿಧಿಯಾಗಿ ಹೋಗಲು ಅವರಲ್ಲಿ ಸಾಮರ್ಥ್ಯವೇನಿದೆ? ಅವನಿಗಿಂತಲೂ ಉತ್ತಮ ವ್ಯಕ್ತಿಯನ್ನು ಶಾರದಾಂತರದಿಂದ ಬಿಟ್ಟಿರುತ್ತದೋ ಎಂಬುದನ್ನು ಜನತೆಯು ತಿಳಿದುಕೊಳ್ಳಲು ತುಂಬಾ ಪ್ರಯತ್ನಪಡುತ್ತದೆ. ಪಾರ್ಟಿಯವರು ತಮ್ಮ ಉಮೇದ್ವಾರಿಯನ್ನು ಆರಿಸುವಾಗ ಇದೇ

ಬಂದಿರುವ ರಾಷ್ಟ್ರದ ನೂತನ ಘಟನೆ.

ಬಿ. ಬಿ. ಶೆಟ್ಟಿ, ಎಡ್ವಕೇಟ್, ಲೈಟ್‌ಹೌಸ್ ಹಿಲ್, ಮಂಗಳೂರು.

ರೀತಿಯಲ್ಲಿ ಮತಪಡೆಕೊಳ್ಳುತ್ತಾರೆ. ಚುನಾವಣೆಯ ಸಮಯದಲ್ಲಿ ಅಪರಾದೇವಾಲಯಗಳಲ್ಲಿ (special prayers) ವಿಶೇಷ ಪ್ರಾರ್ಥನೆಗಳನ್ನು ನಡೆಸಿ ದೇವರೇ ಭೇದ ಭಾವನೆಯಿಲ್ಲದೆ ನಮಗೆ ಉತ್ತಮ ವ್ಯಕ್ತಿಯನ್ನು ಆರಿಸುವರೇ ಸಹಾಯವನ್ನು ನೀಡು ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಆದುದರಿಂದಲೇ ಪಾಶ್ಚಾತ್ಯ ಪ್ರಜಾಪ್ರಭುತ್ವವು ಹಿರಿಮೆಯನ್ನು ಹೊಂದಿರುತ್ತದೆ. ಅದರಲ್ಲಿ ನಮ್ಮವ, ನಮ್ಮ ಪ್ರಾಂತದವ ಎಂಬ ಇಲ್ಲಿಯ ರೀತಿಯ ಭೇದ ಭಾವನೆಯು ಬರುವುದಿಲ್ಲ. ಅಂತಹ ಭೇದ ಭಾವನೆಯು ಉತ್ತಮ ವ್ಯಕ್ತಿಯನ್ನು ಆರಿಸುವರೇ ತುಂಬಾ ತೊಡಕನ್ನು ತಂದೊದ್ದುತ್ತದೆ. ನಮ್ಮಲ್ಲಿಯ ಸಂಕುಚಿತ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಅದರಲ್ಲಿಯೂ ಅವಿದ್ಯೆಯಿಂದಲೂ, ಅಂಧಾಕಾರದಿಂದಲೂ ಕವಿದಿದ್ದ ಭಾರತದ ಇಂದಿನ 18 ವರುಷಕ್ಕೆ ಮೇಲ್ಪಟ್ಟಿರುವ ಪ್ರತಿಯೊಂದು ವ್ಯಕ್ತಿಗೂ ಇರುವ ಮತದಾನದ ಶಕ್ತಿಯಿಂದ ದೇಶದ ಸ್ಥಿತಿಯು ಗಂಡಾಂತರಕ್ಕೂ ಇಳಿದುಬಿಡಬಹುದು.

ಆಕ್ಷಿಯ ಕೋಟೆಯಲ್ಲಿರುವ ಬಡಬಗ್ಗರನೇಕರು, ಉಮೇದ್ವಾರಿಗಳಿಗೂ ಧಾರಾಳ ಅಕ್ಕಿ ಸಾಮಗ್ರಿಗಳನ್ನು ನಾವು ಅರಿಸಿ ಬಂದರೆ ತರುವೆವು ಎಂದು ವಾಗ್ದಾನ ಮಾಡಲು ತುಂಬಾ ಅನುಕೂಲ ಮಾಡುವುದೂ ಸುಲಭ. ಅಂತೆಯೇ ಆಮಲು ಪದಾರ್ಥ ಬಂದರಾಗ ಬಹುದೆಂದಿದ್ದ ಜನರೂ ತುಂಬ. ಅವಕ್ಕೆ ಗುಣಪಾದ ವಾಗ್ದಾನವೂ ಬರಬಹುದು. ಕಂಟ್ರೋಲ್‌ಗಳ ರಾವಳಿ, ನಷ್ಟದ ಕೊರತೆ, ಇನ್ನಿತರ ಅನೇಕ ತೊಂದರೆಗಳನ್ನು ನಿವಾರಿಸುವೆವೆಂದು ಬೇರೆ ಬೇರೆ ವ್ಯಕ್ತಿ ಪಂಗಡಗಳು ಹೇಳಲು ಸಾಧ್ಯ. ಈ ವಾಗ್ದಾನವು ಎಷ್ಟರ ಮಟ್ಟಿಗೆ ಸಾಧ್ಯ, ಯಾರಿಂದ ಸಾಧ್ಯ ಯಾ ಅಸಾಧ್ಯ ಎಂಬುದನ್ನು ಜನತೆಯು ತಿಳಿಯತಕ್ಕದ್ದು ಅವಶ್ಯವಿರುತ್ತದೆ. ಇದನ್ನು ತಿಳಿಯದ ಸ್ಥಿತಿಯಲ್ಲಿ ಜನತೆಯಿದೆ. ಇದು ದೇಶದ ಇಂದಿನ ದೌರ್ಭಾಗ್ಯ. ಯಾವಾಗ ಜನತೆಯು ತನ್ನ ಜವಾಬ್ದಾರಿಯನ್ನು ಅರಿಯುತ್ತದೋ, ರಾಷ್ಟ್ರ ನಿರ್ಮಾಣದ ಅರಿವನ್ನೂ, ಮಾರ್ಗವನ್ನೂ ತಿಳಿದು ಸಜ್ಜುಗೊಟ್ಟದ ಸರಕಾರ ನಿರ್ಮಾಣಕ್ಕೆ ತನ್ನ ಪ್ರಯತ್ನವನ್ನೂ ಸಹಕಾರವನ್ನೂ ಕೊಡುತ್ತದೋ ಅಂದು ದೇಶದ ಏಳಿಗೆಯು ಆರಂಭವಾಗುತ್ತದೆ. ಈ ಉದ್ದೇಶಕ್ಕೆ ತುಸು ಸಹಕಾರಿಯಾಗಬೇಕೆಂಬ ಉದ್ದೇಶದಿಂದ ನೂತನ ರಾಷ್ಟ್ರ ಘಟನೆಯು ಕನ್ನಡ ಜನತೆಗೆ ಮುಂದಿಟ್ಟಾಗುವಂತೆ, ಮುಂದಕ್ಕೆ ಇದರ ಒಂದು ಕೆಲವು ಪ್ರಕರಣಗಳನ್ನು ಭಾಷಾಂತರಿಸಿ ಕೊಡಬೇಕೆಂದಿದೆ. ಈ ಘಟನೆಯನ್ನು ಇತರ ಯಾವತ್ತೂ ರಾಷ್ಟ್ರಗಳ ಘಟನೆಗಳನ್ನೂ ಆಳವಾಗಿ ಪರಿಶೋಧಿಸಿ, ನಮ್ಮಲ್ಲಿಯ ರಾಜಕೀಯ ನಿಪುಣರು ಅವುಗಳ ಕುಂದು ಕೊರತೆಯನ್ನು ಬಿಟ್ಟು ಉತ್ತಮ ಅಂಶಗಳನ್ನು ಮಾತ್ರ ಎತ್ತಿ ನಮ್ಮ ದೇಶದ ಸ್ಥಿತಿಗನುಸರಿಸಿ ಮಾಡಿದ್ದಾಗಿರುತ್ತದೆ.

ಘಟನೆಯ ರಚನೆಯು ಅತೀ ಕಠಿಣ ರೀತಿಯಲ್ಲಿರುತ್ತದೆ. ಇದರಲ್ಲಿ ಪ್ರತಿಕ್ಷಣದಲ್ಲಿ ಕಾಣುವ ಕೊರತೆಯೆಂದರೆ ರಾಷ್ಟ್ರದ ಇಂದಿನ ಸ್ಥಿತಿಯನ್ನೂ ಲಕ್ಷ್ಯಕ್ಕೆ ತಕ್ಕಷ್ಟು ಪ್ರಸರಿಸುವ ತನಕ ಮತದಾನದ ಬೆಲೆ ತಿಳಿಯದ ಜನರಿಗೂ ಕೇವಲ ಪ್ರಾಯವನ್ನನುಸರಿಸಿ ಮತದಾನದ ಹಕ್ಕನ್ನು ಕೊಟ್ಟಿದ್ದು, ಒಂದು ವೇಳೆ ಹಾಗೆ ಕೊಟ್ಟರೂ ನಿಲ್ಲತಕ್ಕ ವ್ಯಕ್ತಿಗಳಿಗಾದರೂ ವಿದ್ಯಾ (qualification) ಮಟ್ಟ ಅಥವಾ ಶಕ್ತಿ ಪ್ರದರ್ಶನ ಯಾವುದೇ ಒಂದು ಮಟ್ಟವನ್ನಾದರೂ ಇಡಬಹುದಿತ್ತು. ಇದೊಂದು ನಮ್ಮ ಘಟನೆಯ ಉದಾರತೆಯ ದೆಸೆಯಿಂದ ಒಂದು ಇಂದಿನ ಘನವಾದ ಕೊರತೆ. ಒಮ್ಮೆಯೂ, ಪಾಶ್ಚಾತ್ಯ ರಾಷ್ಟ್ರಗಳ ಮಟ್ಟಕ್ಕೆ ಏರುವ ಆವಸರದ ಹೆಜ್ಜೆ. ಇದರಿಂದ ದೇಶದ ಸ್ಥಿತಿಗೆ ಎಲ್ಲಿ ಕೊರತೆ ಬಂದೀತೋ ಎಂಬ ಬಲವಾದ ಒಂದು ಸಂದೇಹ ಯಾರಲ್ಲಿಯೂ ಬರತಕ್ಕದ್ದು. ಆದರೂ ಜನತೆಯು ಘಟನೆಯನ್ನು ಆದಷ್ಟು ಚೆನ್ನಾಗಿ ತಿಳಿದು ಅದನ್ನು ಉತ್ತಮ ಪ್ರಯೋಜನಕ್ಕೆ ತಾರಲಿ. ಈ ಘಟನೆಯು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತ್ರವಿದ್ದು, ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಚರ್ಚೆ ರೀತಿಯಲ್ಲಿ ಬರೆಯಲು ಸಾಧ್ಯವೆಂದು ನಿರ್ಮಾಣಕರ್ತರೇ ಒಪ್ಪುತ್ತಾರೆ. ಇತರರಿಗೆ ತಿಳಿಯದಂತಿರುತ್ತದೆ. ದೇಶಸೇವೆಯಲ್ಲಿ ಆಸಕ್ತಿಯುಳ್ಳವರೆಲ್ಲಾ ಇದನ್ನು ಭಗವದ್ಗೀತೆಯಂತೆ ಪಠಣಮಾಡಿ ತಮ್ಮ ಆಚಾರ ವಿಚಾರಗಳು ಅದರ ಉದ್ದೇಶಗಳಿಗೆ ವಿರೋಧವಾಗದಂತೆ ನೋಡಿಕೊಳ್ಳುವುದು ಅತೀ ಆವಶ್ಯಕವಿದೆ.

ಘಟನೆಯ ಪೀಠಿಕೆ

ಪ್ರಮಾಣ

ಭಾರತೀಯರಾದ ನಾವೆಲ್ಲರೂ ಒಂದೂ ಸ್ಥಾನವನ್ನು ಪ್ರಜಾಪ್ರಭುತ್ವ ರಿಪಬ್ಲಿಕ್ ಆಗಿ ನಿರ್ಮಾಣಿಸಬೇಕೆಂಬ ನಿಶ್ಚಯ ಪನ್ನು ಮಾಡಿ ಭಾರತದ ಪ್ರತಿಬ್ಬ ವ್ಯಕ್ತಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಮತ್ತು ನೀತಿಯನ್ನು ಕೊಡುವ ಭದ್ರತೆಯನ್ನೂ, ಭಾವನೆ, ನುಡಿ, ನಂಬಿಕೆ, ಆರಾಧನೆ ಇವುಗಳಿಗೆ ಬೇಕಾದ ಸರ್ವ ಸ್ವಾತಂತ್ರ್ಯವನ್ನೂ, ವ್ಯಕ್ತಿಗಳ ಏರಿಳಿತ ಬೆಳವಣಿಗೆಯ ಅನುಕೂಲತೆ ಮತ್ತು ಸಂದರ್ಭಗಳನ್ನೂ ಮತ್ತು ಸಹೋದರ ಸಹೋದರ ಬಂಧುತ್ವವನ್ನೂ ವ್ಯಕ್ತಿಯ, ರಾಷ್ಟ್ರದ ಗೌರವಕ್ಕೆ ಕೊರತೆಬಾರದಂತೆ ಬೆಳೆಸುವ ಭರವಸೆಯನ್ನೂ ಕೊಟ್ಟು ಈ ನಮ್ಮ ಘಟನಾ ಸಭೆಯಲ್ಲಿ ಈ ಮುಖಾಂತರ ನಮಗೆ ನಾವೇ ಈ ಘಟನೆಯನ್ನು ಕೊಟ್ಟುಕೊಂಡು ನಮ್ಮಿಂದ ನಾವೇ ಸ್ವೀಕರಿಸಿ ಶಾಸನ ಮಾಡಿಕೊಂಡಿರುತ್ತೇವೆ.

(ಮುಂದುವರಿಯುವುದು)

ನೋಡಿದರೆ ಬಿಡದಿರುವ ಪುಸ್ತಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಟಕಕತೆಗಳು	0	4	0
ಕುಶಲವ	0	7	0
ಶಾನ್ತಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ಪಥ	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	4	0
ಪ್ರೇಮವಿಜಯ	1	0	0
ರಂಗಭೂಮಿ	0	12	0
ಸೇವಾಪಥ	0	8	0
ನಾರೀ ಹೃದಯ	1	0	0
ಭಾರತೀಯ ಕತೆಗಳು	1	4	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ನಗೆನೋಟಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಶ್ವವಿನ ವರಾಹಾವತಾರಗಳು	0	12	0
ಆಕಾಶ ಗಂಗೆ	2	0	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಗನ್ನಾಥ	1	12	0

ವಿಳಾಸ:

(1) ಕಿರಿಯರ ಪ್ರಪಂಚ, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಮುಳು ಜಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೋಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕಾಂಟಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂದಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಕುಂದಾಪುರ ಡಿ ಮು. ಕೋರ್ಟಿನ ೨

[illegible] 213/51

ವಾದಿ— ವೆಂಕಟಯ್ಯ ಶೆಟ್ಟಿ

ಪ್ರತಿವಾದಿರು— ಕೃಷ್ಣಯ್ಯ ಶೆಟ್ಟಿ ಕೂಡಾ.

ಉಪ್ಪಿನಕುದ್ರು ಶಿರೂರು ಗ್ರಾಮದ ಮೊಳೆಬಾಗಿಲ್ಲರುವ ಮೃತ ಅಂತಮ್ಮ ಶೆಟ್ಟಿ ಮಕ್ಕಳು 15ನೇ ಪ್ರತಿವಾದಿ ಶಿವ್ವಮ್ಮ ಶೆಟ್ಟಿ, ಕೂಡಾ 16ನೇ ಪ್ರತಿವಾದಿ ಬೀರಮ್ಮ ಶೆಟ್ಟಿ ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿ ಪ್ರತಿವಾದಿರ ಮೇಲೆ ತಾ. 23-6-1904ರ ರೂಪಾಯಿ 300ರ ಡಿ. ನೋ. ಜೋಗ್ಯಾದಿ ಆದವಿನ ಕುರಿತಾಗಿ ಒಗ್ಗೆ ಜಾರಿಗಿಸಿದ ಮೇಲಣ ದಾವೆ ತಾ. 31 8 51ಕ್ಕೆ ತಪ್ಪಿ ಬಗ್ಗೆ ಇಡೋಣವಾಗಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಹ್ಯಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ದಾವೆ ತೀರ್ಮಾನ ಮಾಡಲಾದೀತೆಂಬ ಸಂಗತಿ ನಿಮಗೆ ಈ ಮೂಲಕ ತಿಳಿಸಿರುತ್ತದೆ.

(By order of the court)

A N Rao.

Advocate for Plaintiff

Coondapoor, 10 8-51.

ವಾರದ ಭವಿಷ್ಯ

ತಾರೀಕು 23-8-51 ರಿಂದ — ತಾರೀಕು 29-8-51 ರವರೆಗೆ

ಮೇಷ—ಉತ್ಪತ್ತಿಯು ದ್ವಿಗುಣವಾಗಿ ವ್ಯಯವಾಗುವುದರಿಂದ ಹಣದ ಬಿಕ್ಕಟ್ಟು ಅಧಿಕವಾಗುವದು. ಅನಿರೀಕ್ಷಿತ ಪ್ರವಾಸಗಳೊದಗಿ ನಾನಾ ತರದ ಕಷ್ಟನಷ್ಟಗಳಿಗೀಡು ಮಾಡಲಿದೆ. ತನ್ನವರುಗಳಿಗೆ ಎಳ್ಳಷ್ಟೂ ಸುಖಶಾಂತಿಯಿರದು. ದುರ್ಜನರ ಮೈತ್ರಿಯಿಂದಾಗಿ ಅನಿಷ್ಟ ಅಪವಾದಗಳಿಗೀಡಾಗುವಿರಿ. ಗಂಡಹೆಂಡಿರೊಳು ತಂದೆಮಕ್ಕಳೊಳು ಕಲಹವಾಗುವ ಸಂಭವವಿದೆ. ಆದರೂ ಸನ್ಮಿತ್ರರ ಸಹಾಯವು ಚೆನ್ನಾಗಿರುವುದರಿಂದ ತಾ. 23, 27, 28, ಈ ದಿನಗಳಲ್ಲಿ ಸಂತೋಷ ಲಾಭ ಗೃಹಸುಖಗಳು ಲಭಿಸುವವು.

ವೃಷಭ—ನಿಮ್ಮ ಉದ್ಯಮಗಳು ನಿರ್ವಿಘ್ನದಿಂದ ನೆರವೇರುವವು. ಜನತೆಯ ಬೆಂಬಲವೂ ಬಂಧುಮಿತ್ರರ ಸಹಕಾರವೂ ಉತ್ತಮವಾಗಿರುವುದರಿಂದ ಸರ್ವತ್ರ ವಿಜಯಸ್ಥಾನಮಾನಗಳನ್ನು ಪಡೆವಿರಿ. ನಿಮ್ಮ ಸಂಪದ್ವಿಭಾಗವು ವಿಶೇಷತಃ ಸುಧಾರಿಸುವದು. ಕೆಲವೊಮ್ಮೆ ಬೇಕಾದ ಭೋಗಭಾಗ್ಯಗಳಿದ್ದರೂ ಕೈಯಲ್ಲಿದ್ದ ತುತ್ತು ಬಾಯಿಗೆ ಬರಲಿಲ್ಲವೆನ್ನುವ ಪರಿಸ್ಥಿತಿಯುಂಟಾದೀತು. ತಾ. 24, 25, 29, ಈ ದಿನಗಳಲ್ಲಿ ಸುಖಭೋಗ ಲಾಭವಿಜಯಗಳಿವೆ.

ಮಿಥುನ—ಉದ್ಯೋಗಹೀನರಾಗಿದ್ದವರೂ ಕೂಡ ಈ ದಿನಗಳಲ್ಲಿ ಏನಾದರೊಂದು ಸದುದ್ಯಮದಲ್ಲಿ ಪ್ರವೃತ್ತರಾಗುವರು. ವಿರೋಧಿಗಳ ಪೀಡೆಯೂ ಬಹು ಮಟ್ಟಿಗೆ ಕಡಿಮೆಯಾಗಲಿದೆ. ಆದರೆ ಪಿತ್ತೋಷ್ಣ ವಿಕಾರದಿಂದಾಗಿ ದೇಹಾಲಸ್ಯ ಸುಹೃಜ್ಜನರ ವಿಯೋಗ ಧನನಾಶ ಚಂಚಲ ಸ್ವಭಾವ ಇತ್ಯಾದಿ ಅನಿಷ್ಟ ಪರಂಪರೆಗಳು ಮೇಲಿಂದ ಮೇಲೆ ಪೀಡಿಸುವುದರಿಂದ ನಿಮ್ಮ ಭಾಗಕ್ಕೆ ಸುಖವುದುರ್ಲಭವೆಂದರೆ ತಪ್ಪಾಗದು. ಸಾಂಸಾರಿಕ ತಾಪತ್ರಯಗಳೂ ಕೂಡ ಅಧಿಕವಾಗುವವು ತಾ. 23, 27, 28 ಈ ದಿನಗಳು ಇತರ ದಿನಗಳಿಗಿಂತ ಲೇಸು.

ಕರ್ಕಟ—ಸರ್ವೋತ್ಸಾಹಿಗಳಾದ ನಿಮಗೆ ಪ್ರತಿಯೊಂದು ಕಾರ್ಯದಲ್ಲೂ ವಿಜಯವೇ ಲಭಿಸೀತು. ಪಶುಕ್ಷೇತ್ರಾದಿ ಸಕಲ ಗೃಹಪರಿವಾರವೂ ಪರಿಪೂರ್ಣವಾಗಿ ನಿರಾಮಯವಾಗಿರುವುದರಿಂದ ದಿನಗಳು ಸುಖಮಯವಾಗಿ ಪರಿಣಮಿಸಲಿವೆ. ಗೃಹಸುಖವು ಉತ್ತಮವಾಗಿರುವುದು. ನಿರೀಕ್ಷೆಗಿಂತ ಅಧಿಕವಾದ ಫಲಾಪ್ತಿಯು ಪ್ರತಿಯೊಂದು ಕಾರ್ಯದಲ್ಲೂ ಕಾಣಿಸುವದು. ತಾ. 27, 28, ಈ ಎರಡು ದಿನಗಳನ್ನುಳಿದು ಇತರ ದಿನಗಳು ಸುಖಕಾರಿಗಳಿವೆ

ಸಿಂಹ—ಆಕಸ್ಮಿಕವಾಗಿ ಸಂಭವಿಸತಕ್ಕ ಪ್ರವಾಸಾದಿಗಳಿಂದ ಕಷ್ಟನಷ್ಟಗಳು ಹೆಚ್ಚುವವಲ್ಲದೆ ದೇಹವಾರೋಗ್ಯವೂ ಕೆಡಲಿದೆ. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಬರಿಗೈಯವರಾಗುವಿರಿ, ಉತ್ಸಾಹ ಧೈರ್ಯಗಳು ಕಾಣಾಗಿ ಕುಗ್ಗುವವು. ಸ್ತ್ರೀಜನರಿಂದಾಗಿ ಅನಿಷ್ಟಗಳುಂಟಾಗುವವು ಕೆಲವೊಮ್ಮೆ ಬರೀ ಮಾತು ಮಾತಿನಿಂದಾಗಿ ಕಲಹವೆದ್ದು ಅದರಿಂದ ಧನಮಾನಗಳಿಗೆ ಹಾನಿಯೊದಗುವ ಸಂಭವವಿದೆ. ವಾರದ ಅದ್ಯಂತ ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಾಗಲಾರವು.

ಕನ್ಯಾ—ನಾನಾ ರೀತಿಯಿಂದ ಹಣವು ನಿಮ್ಮ ಕೈಸೇರಲಿದೆ. ಜನರಿಂದ ಮಾನಮನ್ನಣೆಯನ್ನು ಪಡೆವಿರಿ. ಕೈಗೊಂಡ ಪ್ರತಿಯೊಂದು ಕಾರ್ಯಗಳಲ್ಲೂ ವಿಜಯವುಂಟಾಗುವದು. ಸಾಂಸಾರಿಕ ತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು ಅತ್ಮೀಯರ ವಿರಹ ಪ್ರವಾಸ ಆಹಾರದೋಷದಿಂದುಂಟಾದ ದೇಹಾಲಸ್ಯಗಳಿಂದ ತನುಮನಗಳಿಗೆ ನೆಮ್ಮದಿಯಿರಲಾರದು, ಕೆಲವೊಮ್ಮೆ ಅನಿರೀಕ್ಷಿತ ಕಲಹಗಳುದ್ಭವವಾಗುವವು, ವಾರಾದಿಯ 3ದಿನಗಳು ಅಷ್ಟೊಂದು ಉತ್ತಮಗಳಲ್ಲ

ತುಲಾ—ಶತ್ರುಗಳ ಪೀಡೆಯಿಂದಾಗಿ ಹಲಕೆಲವು ಕಾರ್ಯಗಳು ಅರ್ಧದಲ್ಲೇ ನಿಂತುಹೋಗುವವು ಒಂದಲ್ಲಒಂದು ತೆರನಾದ ಅನರ್ಥಗಳು ಆಗಾಗ ಪ್ರಾಪ್ತವಾಗಿ ಮನಸ್ಸಿಗೆ ನೋವನ್ನುಂಟು ಮಾಡುವವು. ಆದರೂ ನಿಮ್ಮ ಅದಾಯದ ಭಾಗವು ಉತ್ತಮವಾಗಿರುವುದರಿಂದ ಖರ್ಚಿಗಾಗಿ ಪರರನ್ನಾಶ್ರಯಿಸಬೇಕಾಗಿಲ್ಲ. ರಾಜಕೀಯ ಕ್ಷೇತ್ರದಲ್ಲಿ ನಿಮ್ಮ ಸಂಕಲ್ಪವು ಸಫಲವಾಗುವದು ಗುರುಹಿರಿಯರ ಅಗ್ರಹಕ್ಕೆ ತುತ್ತಾದ ನಿಮಗೆ ವಾರಾಂತ್ಯದ 4ದಿನಗಳು ಅನಿಷ್ಟಕಾರಿಗಳಾಗುವವು

ವೃಶ್ಚಿಕ—ಶುಭವೇಳೆಯು ಸನ್ನಿಹಿತವಾಗಿರುವುದು. ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ಯಶಸ್ವಿಯಾಗಿ ಫಲಿಸುವದು. ಹಿಂದೆ ಮಾಡಿದ ಸಾಲಾದಿಗಳಿಂದ ಮುಕ್ತರಾಗಿ ಕೈಯಲ್ಲಿ ನಾಲ್ಕು ಕಾಸನ್ನೂ ಅಪವ್ವನವಾಗಿರಿಸುವಿರಿ. ಧಾತುವಿನ ದೌರ್ಬಲ್ಯದಿಂದಾಗಿ ಅಶಕ್ತಿ ದೇಹಕ್ಷೀಣತೆ ಮುಂತಾದ ದೋಷಗಳು ಕಾಣಿಸಿಕೊಳ್ಳುವವು. ಗೃಹಪರಿವಾರವು ಅಸಾಮಯವಾಗಿರುವುದು ತಾ. 23, 24, 25 ಈ ದಿನಗಳಲ್ಲಿ ಸಂಕಲ್ಪಗಳು ಫಲಿಸುವವು

ಧನು—ನಿಮ್ಮ ಅದೃಷ್ಟವು ವಿಶೇಷವಾಗಿ ಕೆಟ್ಟಿರುವುದು. ಅದಕಾರಣ ಯಾವ ಕೆಲಸಕ್ಕೆ ಕೈಯಿಕ್ಕಲಿ ಅದು ವ್ಯರ್ಥಪರಿಶ್ರಮವನ್ನಷ್ಟೇ ಕೊಟ್ಟೀತಲ್ಲದೆ ಫಲಿಸಲಾರದು. ಮಧುವಿಲ್ಲದ ಕುಸುಮವನ್ನು ಮಧುಕರಗಳೂ ದೂರೀಕರಿಸುವಂತೆ ನಿಮ್ಮ ಬಂಧು ಮಿತ್ರ ಆಪ್ತವರ್ಗದವರೂ ನಿಮ್ಮ ಸಮೀಪ ಬರಲೊಲ್ಲರು. ಆರ್ಥಿಕ ಬಿಕ್ಕಟ್ಟು, ಕಫದೋಷದಿಂದುಂಟಾದ ಅನಾರೋಗ್ಯ ಅತಿವ್ಯಯ ಇತ್ಯಾದಿಗಳಿಂದ ಪೀಡಿತರಾದ ನಿಮಗೆ ತಾ. 23,29 ಅತೀವ ಅನಿಷ್ಟಕಾರಿಯಾಗಿ ಪರಿಣಮಿಸುವದು.

ಮಕರ—ದಿನದಿಂದ ದಿನಕ್ಕೆ ನಿಮ್ಮಲ್ಲಿನ ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚಿ ಪರಸ್ಪರ ಮನಸ್ತಾಪಗಳಿಂದಾಗಿ ಮನೆಯವರಲ್ಲೆಲ್ಲಾ ಬಿಕ್ಕಟ್ಟುಂಟಾಗುವದು. ಹೆಚ್ಚೇಕೆ ಅರ್ಧಾಂಗಿಯೂ ಕೂಡ ನಿಮ್ಮೊಡನೆ ಕಲಹಕ್ಕಿಳಿವಳೆಂದರೆ ಇತರರ ಪಾಡೇನು? ಧರ್ಮಕರ್ಮಗಳಲ್ಲಂತೂ ತಿರಸ್ಕಾರ ಬುದ್ಧಿ ಹೆಚ್ಚುವದು. ದೇಹದಾರೋಗ್ಯವೂ ಕೂಡ ಕೆಡುವದು. ಆದರೆ ನಿಮ್ಮ ಅನುದಿನದ ಖರ್ಚಿಗಾಗಿ ನೀವು ಚಿಂತಿಸಬೇಕಾಗಿಲ್ಲ ಸ್ವಯಂದುಡಿಮೆ ಹಣವೇ ಸಾಕಾಗುವದು. ವಾರಾಂತ್ಯದ 3ದಿನಗಳು ಅನುಕೂಲವಿವೆ.

ಕುಂಭ—ಹಿಂದಿಗಿಂತ ಇಂದಿನ ಪರಿಸ್ಥಿತಿ ಸ್ವಲ್ಪ ಕಠಿಣವಾದೀತು. ಆರ್ಥಿಕ ಭಾಗದಲ್ಲೇನೂ ಕೊರತೆ ಕಾಣಿಸದಿದ್ದರೂ ಸಾಂಸಾರಿಕ ತಾಪತ್ರಯಗಳಧಿಕವಾಗಲಿವೆ, ಅಪ್ರೀತ್ಯರ ವಿರಹದಿಂದ ದುಃಖವಧಿಕವಾದೀತು. ಸ್ತ್ರೀನಿಮಿತ್ತವಾಗಿ ಉಂಟಾದ ಕಲಹದಿಂದ ಧನವ್ಯಯ ಅನಿಷ್ಟ ಅಪವಾದಾದಿಗಳಿಗೆ ಸಿಲುಕುವಿರಿ. ಅಪರೂ ಶತ್ರುಜನರು ಮುಂಗುಸಿಯನ್ನು ಕಂಡ ಸರ್ಪದಂತೆ ತಲೆತಗ್ಗಿಸಲಿರುವರು. ತಾ. 23, 29 ಈ ಎರಡು ದಿನಗಳಲ್ಲಿ ನಿಮ್ಮ ಬಯಕೆಯು ಸಫಲವಾಗುವದು.

ಮೀನ—ಆರ್ಥಿಕ ಬಿಕ್ಕಟ್ಟು ದೇಹಾಲಸ್ಯ ಶತ್ರುಪೀಡೆ ಇತ್ಯಾದಿಗಳಿಂದ ಪೀಡಿತರಾದ ನಿಮಗೆ ಸಂಸಾರದಲ್ಲಿ ಹೆಂಡಿರು ಮಕ್ಕಳ ಸಂಬಂಧವಾಗಿ ನಷ್ಟ ಕಷ್ಟಗಳು ಹೆಚ್ಚಾಗುವವು, ವಿಶೇಷತಃ ಮಕ್ಕಳಿಂದಾಗಿ ಚಿಂತೆ ಹೆಚ್ಚುವದು. ವ್ಯಾಪಾರಗಳಿಗೆ ಅನಿರೀಕ್ಷಿತ ನಷ್ಟವಾಗುವದು, ಹೆಚ್ಚಿನ ಸಮಯವನ್ನು ದೇಶಾಟನದಲ್ಲೇ ಕಳೆಯಬೇಕಾಗುವದು. ಸ್ತ್ರೀಯರಕೂಡ ಕಲಹವಾಗುವ ಯೋಗವಿದೆ, ನಿಮ್ಮಲ್ಲಿನ ಧೈರ್ಯಶಕ್ತಿಯು ಅತೀವ ಕಡಿಮೆಯಾಗಲಿದೆ, ತಾ. 24, 25, 26 ಈ ದಿನಗಳಲ್ಲಿ ಕಾರ್ಯದಲ್ಲಿ ವಿಜಯ, ಧನಲಾಭ ಸುಖ ಮಿತ್ರಸಮಾಗಮವಾಗಲಿದೆ,

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಲಕ್ಷ್ಮಿ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹಳದಿ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ಕೊಡೆ ಸಂದಿಸಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಪಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಕಾಲಿರಾರು ಮುಂದಿಗೆ ಖಾತ್ರಿ ಗುಣವಾಗಿದೆ- ಬೆಲೆ, ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ, 8- [ವಿ, ಪಿ ಹನ್ನೆರಡಾಣೆ ಪ್ರತ್ಯೇಕ.]

MIS D. DEVEE, F DS (N. J.)
Tollygunge CALCUTTA,
ಸ್ಟಾಕಿಸ್ಟರು ಪಹಾಕಂಪೆನಿ, ಮಂಗಳೂರು

ಮುಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗ ಗ್ರಸ್ತ ಹಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀರೋಗ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಋತುಕಾಲದಲ್ಲಿ ಸೇವಿಸಬೇಕು.

ಪಥ್ಯ:—ಹಡವೀಪಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಪಾಲ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಎಂ. ಸಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd.No. M. 3618

LICENCE No. 31
Licensed to Post without Prepayment

Estd. 1921 ಸ್ಥಾಪನೆ

30-8-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8 0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-12-0
6 ತಿಂಗಳಿಗೆ „ 3- 0 0
ಬಿಡಿಪ್ರತಿ „ 0- 2 0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೫೧

NAVAYUGA WEEKLY Post Box No. 22 UDIPI.

Vol 31
No. 51

ಆದರ್ಶಗಳೇಕೆ ಬದುಕುವುದಿಲ್ಲ?

ನಮ್ಮಲ್ಲಿಂದು ಉಂಟಾಗಿರುವ ಮತಭೇದ– ವಿರುದ್ಧಾಭಿಪ್ರಾಯಗಳಿಗೆ ಮುಖ್ಯ ಕಾರಣಗಳಾವುವು? ಎಂದು ವಿಮರ್ಶಿಸಿದರೆ ನಾವು ಅನುಸರಿಸುತ್ತಿರುವ ಆದರ್ಶ ಇಲ್ಲವೆ ಧ್ಯೇಯ ಧೋರಣೆಗಳು ಏಕಮುಖವಾಗಿಲ್ಲವೆಂದು ಸ್ಪಷ್ಟವಾಗುತ್ತದೆ. ಅಪರಿಮಿತವಾದ ಜನ ಸಂಖ್ಯೆಯುಳ್ಳ ದೇಶದಲ್ಲಿ ಅಸಂಖ್ಯಾತವಾದ ಪಕ್ಷಗಳೂ ವಾದಗಳೂ ಹುಟ್ಟುತ್ತಿರುವುದು ನಮ್ಮ ದುರ್ದೈವ. ಇದು ರಾಷ್ಟ್ರದ ಉನ್ನತಿಗೆ ಎಷ್ಟರ್ಮಟ್ಟಿಗೆ ಸಹಕಾರಿಯಾಗಲಾರವು! ಆಳುವ ಸರಕಾರಕ್ಕೆ ವಿರೋಧ ಪಕ್ಷವೊಂದು ಬೇಕೆಂಬುದು ಸರಿಯೇ! ಅಂತಹ ಪಕ್ಷಗಳು ಸರಕಾರವನ್ನು ಉರುಳಿಸುವ ದುರುದ್ದೇಶದಿಂದ ಅರಾಜಕೀಯವಾದ ಮಾರ್ಗವನ್ನನುಸರಿಸುತ್ತಿರುವ ಧೋರಣೆಯಿಂದ ಯಾವ ಪ್ರಗತಿಯೂ ಆಗದು. ದೇಶದ ಕಠಿಣಸಮಸ್ಯೆ ಅದರಿಂದ ಬಗೆಹರಿವಂತಿಲ್ಲ! ರಾಷ್ಟ್ರೋನ್ನತಿಗೆ ಪ್ರಜೆಗಳ ಸಹಕಾರ–ಸಹಾನುಭೂತಿಪರ ಧೋರಣೆ ಅತ್ಯಾವಶ್ಯಕ. ಪ್ರಜೆಗಳ ದೃಷ್ಟಿಕೋನಗಳು ಆಳುವ ಸರಕಾರಕ್ಕೆ ವಿರುದ್ಧ ಮನೋವೃತ್ತಿಯುಳ್ಳವಂಥವಾದರೆ ಸರಕಾರಕ್ಕೆ ತೊಡಕು ತೊಂದರೆಗಳು ತಪ್ಪದು! ಮಾತ್ರವಲ್ಲ; ಅಂತಹ ಸರಕಾರ ಹೆಚ್ಚು ಕಾಲ ಬಾಳಲಾರದು!

ಕಾಂಗ್ರೆಸ್ ನಮ್ಮನ್ನಾಳುತ್ತಿದೆ. ಚುನಾವಣೆ ಕಾಲ ಹತ್ತಿರ ಹತ್ತಿರ ಬರುತ್ತಿರುವಾಗ ಕಾಂಗ್ರೆಸ್ಸು ಭದ್ರಗೊಳ್ಳಬೇಕಷ್ಟೆ. ಆದರೆ ಇಂದಿನ ಸ್ಥಿತಿ ನಿಜವಾಗಿಯೂ ಶೋಚನೀಯವಾಗಿದೆ. ಮತಭೇದ–ಬಿಕ್ಕಟ್ಟುಗಳಿಂದ ಪಕ್ಷವನ್ನು ತ್ಯಜಿಸಿ ಹೊರಬರುವವರೂ ಹೆಚ್ಚಾಗಿದ್ದಾರೆ. ಹೊರಗೆ ಬಂದವರಲ್ಲೂ ಐಕ್ಯತೆಯಿಲ್ಲ ತಲೆಗೊಂದು ಪಕ್ಷಗಳೂ ತಲೆಯೆತ್ತಿವೆ. ಈ ಬಗೆಯ ಧೋರಣೆಯಿಂದ ರಾಜಕೀಯ ಧೋರಣೆ ಬದಲಾದೀತೆಂದು ಪಕ್ಷಗಳ ವಾದವಿದೆ. ಅಲ್ಲಿ ಇಲ್ಲಿ ತಮ್ಮ ಬಲವನ್ನು ಉಪಯೋಗಿಸಿ ಹಲವು ಮತಗಳ ಮೂಲಕ ಇಂತಹ ಪಕ್ಷಗಳು ನಾಳೆ ಸಾಧಿಸುವುದಾದರೂ ಏನನ್ನು? ಎಂಬುದನ್ನು ವಿಚಾರವಂತ ಜನ ಆಲೋಚಿಸ ಬೇಕು. ಒಂದು ನಿರ್ದಿಷ್ಟ ಉದ್ದೇಶವಿಲ್ಲವೆಯೂ, ಅಳಬಲ್ಲ ಸರ್ವತೋಮುಖವಾದ ರಾಜಕೀಯಾನುಭವವಿಲ್ಲದೆಯೂ ಅಧಿಕಾರ ವಹಿಸುವದಾದರೂ ಹೇಗೆ? ದೇಶದಲ್ಲಿ ಗಾಂಧಿಯವರು ಬಿತ್ತಿದ ಹಾಗೆಯೇ ನಾಳೆ ಆರಿಸಿ ಬಂದ ಮೇಲೆ ಶಾಸನ ಸಭೆಗಳಲ್ಲೋ–ಪಾರ್ಲಿಮೆಂಟಿನಲ್ಲೋ–ಗುಲ್ಲುಗದ್ದಲಗಳ ಹೆಚ್ಚಾದೀತೇ ವಿನಹ ಯಾವ ಕಾರ್ಯಭಾರವೂ ಸಾಗುವಂತಿಲ್ಲ. ಏಕೆಂದರೆ ಪಕ್ಷಗಳ ಮನಸ್ಸಿನಲ್ಲಿ ದೇಶದ ಮುಂದಿರುವ ಗಂಭೀರ ಪರಿಸ್ಥಿತಿಯನ್ನು ಬಗೆಹರಿಸುವ ಮಹತ್ವಕ್ಕಿಂತ ಆಳುವವರ ಅಸಮರ್ಥತೆಯನ್ನು ಎತ್ತಿ ತೋರಿಸಬೇಕೆಂಬ ಇಚ್ಛೆಯೇ ಪ್ರಬಲವಾಗಿರುತ್ತದೆ. ಈ ಬಗೆಯ ಸ್ವಾರ್ಥ–ಸಂಕುಚಿತತೆಯಿಂದ ರಾಷ್ಟ್ರದಲ್ಲಿ ಶಾಂತಿ ನೆಲೆಸೀತೆಂದಾಗಲೀ–ನಮ್ಮ ಮುಂದಿರುವ ತೊಡಕು ತೊಂದರೆಗಳು ದೂರವಾದವೆಂದಾಗಲೀ–ಭಾವಿಸುವುದಾದರೂ ಹೇಗೆ?

ಈ ಎಲ್ಲಕ್ಕೂ ಮೂಲದೋಷವೆಂದರೆ ಆದರ್ಶಗಳನ್ನು ಪಾಲಿಸುವ ಧೃಢತೆ–ಸಹನೆ ನಮ್ಮ ಜನದಲ್ಲಿಲ್ಲದಿರುವುದೇ! ಗಾಂಧೀಜೀಯ ಕಾಲದಲ್ಲಿ ಕಾಂಗ್ರೆಸ್ ಉಚ್ಚಾದರ್ಶಗಳ ತಳಹದಿಯ ಮೂಲಕ ನಮ್ಮ ದೇಶದ ಪ್ರಬಲ ಸಂಸ್ಥೆಯಾಗಿತ್ತು. ಇಂದೂ ಕೂಡಾ ಕಾಂಗ್ರೆಸ್ಸೇ ಮುಖ್ಯ ಸಂಸ್ಥೆಯಾಗಿರುವದರೂ ಜನತೆಯ ಬಲವು ಸಹಕಾರಗಳು ಹಿಂದಿನಷ್ಟಿಲ್ಲ. ಇದರ ಮುಖ್ಯ ಕಾರಣ ಕಾಂಗ್ರೆಸ್ಸಿನ ಮೂಲ ತತ್ವಗಳಿಗೆ ಲೋಪದೋಷ ಬಂದಿರುವುದೇ ಆಗಿರುತ್ತದೆ. ನಾಲ್ಕು ವರ್ಷಗಳಿಂದ ತಿಳಿದೋ–ತಿಳಿಯದೆಯೋ ನಡೆದು ಬಂದ ಈ ಪ್ರಮಾದವು ಕಾಂಗ್ರೆಸ್ ಅಧ್ಯಕ್ಷ–ಕಾಂಗ್ರೆಸ್ ಸರಕಾರದ ಮುಖ್ಯ ಮಂತ್ರಿಗಳೊಳಗೇನೇ ಮತಭೇದವನ್ನು ಹುಟ್ಟಿಸಿದುದಲ್ಲದೆ ಇಬ್ಬರು ನಾಯಕರಲ್ಲಿ ತತ್ವವನ್ನು ಪಾಲಿಸಲಾಗದ ದೌರ್ಬಲ್ಯವಿದೆಯೆನ್ನುವದು ನಮ್ಮ ಉದ್ದೇಶವಲ್ಲ. ಸಂಘಗಳಲ್ಲಿ, ಇಲ್ಲವೆ ಕಾಂಗ್ರೆಸ್ಸಿಗರಲ್ಲಿ ಮೂಲೋದ್ದೇಶವನ್ನು ಮರೆತು ಪ್ರತ್ಯೇಕ ಪ್ರತ್ಯೇಕ ವಾತಾವರಣಕ್ಕೆ ಹೊಂದಿಕೆಯಾಗಿ ರಾಜಕೀಯ ದೃಷ್ಟಿಕೋನವನ್ನು ಬದಲಿಸಬೇಕೆಂದು ಒಂದು ಪಕ್ಷ ವಾದಿಸಿದರೆ, ಕಾಂಗ್ರೆಸ್ಸಿನ ಹಿಂದಿನ ತತ್ವವನ್ನನುಸರಿಸಿಕೊಂಡೇ ನಾವು ರಾಜ್ಯವನ್ನಾಳಬೇಕೆಂದು ಇನ್ನೊಂದು ಪಕ್ಷ ಅಪೇಕ್ಷಿಸುತ್ತದೆ. ಬೇರೆ ಬೇರೆ ಪಕ್ಷಗಳು ಕಾಂಗ್ರೆಸ್ಸನ್ನು ದುರ್ಬಲಗೊಳಿಸಲು ಹವಣಿಸುತ್ತಿರುವಾಗಲೇ ಕಾಂಗ್ರೆಸ್ಸಿನೊಳಗೆ ಈ ಬಗೆಯ ಮತಭೇದ ಹುಟ್ಟಿದೆ. ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಭೂತ ಧ್ಯೇಯ ಧೋರಣೆಗಳನ್ನು ಅನುಸರಿಸುವುದು ಪ್ರಜೆಗಳಿಗೂ ಕಾಂಗ್ರೆಸ್ಸಿಗರಿಗೂ ಇಂದು ಬೇಡಾಗಿದೆ.

ಎಲ್ಲ ಸಂಘಗಳ ಹೆಸರುಗಳೂ ಅಷ್ಟೆ! ನಾಯಕರಲ್ಲಿ ಒಂದು ಧ್ಯೇಯ ಧೋರಣೆಯಾದರೆ ಪಕ್ಷ ಹೊಂದಿಕೊಂಡ ಜನರ ಅಭಿಪ್ರಾಯಗಳೂ ಧ್ಯೇಯ ಧೋರಣೆಗಳೂ ಬೇರೆಬೇರೆಯಾಗಿವೆ. ಯಾವುದೇ ಪಕ್ಷ [illegible] ಉಳಿಯಬೇಕಾದರೂ ಆ ಸಂಘಕ್ಕೆ ಸೇರಿದ ಜನರಲ್ಲಿ ಅದರ ಆದರ್ಶವನ್ನು ಪಾಲಿಸುವ ಐಕ್ಯತೆ ಅವಶ್ಯವಾಗಿ ಬೇಕು. ದ

ಳನೇ ಪುಟ ನೋಡಿ.

ACADEMY OF GENERAL EDUCATION,
MANIPAL, S. Kanara.

The Academy proposes to start a **Medical College at Udipi** and applications for admission therein are invited from students who have passed the Intermediate Examination of any recognised University. Preference will be given to students who have taken science subjects for optionals. The classes will begin in the first week of October, 1951 if the College is sanctioned by the supreme Governing Body of the Academy which meets on the 15th of September, 1951.

Applications in proper form (obtainable from the Registrar of the Academy) should reach the Registrar on or before 15th September, 1951, together with the first year's fee of Rs. 750/-, admission fee of Rs 5/- and registration fee of Rs. 3/- which includes cost of the Prospectus and application form. The course will extend to 5½ years and the College will prepare students for the degree examination of any University in India or out-side. Failing to get affiliation the Academy itself will confer Diploma. In case, the college is not to start work, as proposed, the tuition fee of Rs. 750/- only will be refunded.

Dr. T. M. A. Pai, M. B. & B. S.,
Registrar.



ಲೇಖನಾಂಕ ೨

ಪ್ರಜಾಸತ್ತೆ

ಸಿ. ಎಚ್. ಶೆಟ್ಟಿ, ಬಿ.ಎ

ಪ್ರಜಾಸತ್ತೆಯೂ ಪತ್ರಿಕೆಗಳೂ

ದೊಡ್ಡ ರಾಷ್ಟ್ರಗಳಲ್ಲಿ ಪ್ರಜಾಸತ್ತೆಯು ಪ್ರಚಾರಕ್ಕೆ ಬರುವಂತೆ ಅನುಕೂಲವಾದ ಶಕ್ತಿಗಳ ಪೈಕಿ ಪತ್ರಿಕೆಗಳು ಬಲವಾದದ್ದಾಗಿವೆ. ಪ್ರಾಚೀನ ಕಾಲದಲ್ಲಿ ವರ್ತಮಾನವನ್ನು ವ್ಯಕ್ತಿಗಳೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುತ್ತಿದ್ದರು. ಇವರು ಹೆಚ್ಚಾಗಿ ಕಾಫಿ ಮತ್ತು ಊಟದ ಹೋಟೆಲ್ಲುಗಳಲ್ಲಿ, ವಿಶ್ರಾಂತಿ ಭವನದಲ್ಲಿ, ಸಂತೆ, ಮದುವೆ, ದೇವಸ್ಥಾನದಲ್ಲಿ ನಡೆಯುವ ಹಬ್ಬ ಮತ್ತು ಬಾಜಾರಿನಲ್ಲಿ ಜನರ ಗುಂಪಿರುವ ಕಡೆಯಲ್ಲಿ ವರ್ತಮಾನವನ್ನು ಹಬ್ಬಿಸುವರು. ಇದರಲ್ಲಿ ಗಾಳಿವರ್ತಮಾನಗಳಿಗೆ ಸಹಾ ಎಡೆಇದೆ. ಪ್ರಾಚೀನದ ಗ್ರೀಕರ ಕಾಲದಲ್ಲಿ ಜನರು ಒಟ್ಟುಕೂಡಿದ ಸ್ತೋಮದಲ್ಲಿ ಒಬ್ಬ ಮುಖ್ಯಸ್ಥನು ಮಾತನಾಡುವದಾದರೆ ಆತನ ಸ್ವರವು ಎಲ್ಲಿವರೆಗೆ ಕೇಳಿಸುವದೊ ಅಷ್ಟರಮಟ್ಟಿನ ಜನರುಳ್ಳ ಸಣ್ಣ ಪುಟ್ಟರಾಜ್ಯಗಳನ್ನು ಸ್ಥಾಪಿಸುತ್ತಿದ್ದರು. ಅಂಥವರಿಗೆ ಪತ್ರಿಕೆಗಳ ಗೊಡವೆಯೇ ಬೇಡವಿತ್ತು. ದೊಡ್ಡ ರಾಷ್ಟ್ರಗಳಲ್ಲಿ ಗುಪ್ತಚಾರರನ್ನು ಸರಕಾರಗಳು ಉಪಯೋಗಿಸುತ್ತಿದ್ದವು. ಆಧುನಿಕ ವಿದ್ಯುಚ್ಛಕ್ತಿ, ಆಕಾಶವಾಣಿ ಮತ್ತು ತಂತಿ, ಟಪ್ಪಾಲು, ರೈಲು ಬಂಡಿಗಳು ಛಾಪಾಯಂತ್ರಗಳ ದೆಸೆಯಿಂದ ಲೋಕದ ಸಂದು ಮೂಲೆಗಳಲ್ಲಿ ನಡೆಯುವ ಸಂಗತಿಗಳನ್ನು ವಿಚಾರಿಸಲೂಬಹುದು ಮತ್ತು ಅಲ್ಲಿಗೆ ಇತರ ಕಡೆಯ ವಿಚಾರಗಳನ್ನು ತಿಳಿಸಲೂಬಹುದು. ಲೋಕದ ವ್ಯವಹಾರದ ಅನುಭವವನ್ನು ಪತ್ರಿಕೆಗಳಿಂದಲೇ ಮಾಡುವೆವು. ಪತ್ರಿಕೆಗಳ ಸ್ವಾತಂತ್ರ್ಯವೆಂಬುದು ಪ್ರಜಾಸತ್ತೆಯ ಕರಾರು ಅಥವಾ ಒಡಂಬಡಿಕೆಯ ಪೆಟ್ಟಿಗೆ (Ark of the Covenant) ಯಂತಿರುವದು.

ಚಕ್ರವರ್ತಿಗಳು ಮತ್ತು ಶ್ರೀಮಂತ ಪ್ರಭುಗಳೊಡನೆ ಹೋರಾಡಿ ಜನರು ಸ್ವಾತಂತ್ರ್ಯವನ್ನು ಪಡೆಯುವರೆ ಪತ್ರಿಕೆಗಳೇ ಬೆಂಬಲವಾಗಿದ್ದವು. ಪತ್ರಿಕೆಗಳು ಸರಕಾರದ ಭ್ರಷ್ಟತೆ, ಅಶುದ್ಧತೆ, ಲಂಚಗೂಳಿತನ ಮತ್ತು ಜುಲುಮುಗಳನ್ನು ಬಯಲಿಗೆಳೆದು ಸತ್ಯಸಂಗತಿಯನ್ನು ಹೊರಹಾಕುವವು. ಜನರಿಗೆ ಸರಿಯಾದ ಅನುಭವವನ್ನು ಕೊಟ್ಟು ಜನಮತವನ್ನು ಸಂಗ್ರಹಿಸಿ ಕೇಂದ್ರೀಕರಿಸುವವು. ಪತ್ರಿಕೆಗಳಿಗೆ ಆತಂಕವಿಲ್ಲದ ಪ್ರಸಿದ್ಧಿ ಎಂಬುದು ಸ್ವತಂತ್ರ ಸರಕಾರದ ಜೀವಾಳವಾಗಿರುವದು. ಸರಕಾರಗಳು ತಮ್ಮ ಸರ್ವ ಕಾರ್ಯಕ್ರಮಗಳ ಕುರಿತು ಪತ್ರಿಕೆಗಳಲ್ಲಿ ಪ್ರಚಾರಮಾಡಿ ಜನಾಭಿಪ್ರಾಯವನ್ನು ತಿಳಿದುಕೊಳ್ಳುವರು. ಪತ್ರಿಕೆಗಳೆಲ್ಲ ವಿರೋಧಾಭಿಪ್ರಾಯ ಸೂಚಿಸಿದಲ್ಲಿ ತಾವು ಕೈಕೊಳ್ಳಬೇಕೆಂದಿರುವ ಕಾರ್ಯವನ್ನು ಸರಕಾರವು ಅಲ್ಲೇ ನಿಲ್ಲಿಸಿಬಿಡುವದು.

ಸ್ಫೋಟಕ ದ್ರವ್ಯಗಳಾದ ಸಿಡಿಮದ್ದನ್ನು ಭೂಮಿಯನ್ನೂ ಅಗೆಯುವರೆ ಮತ್ತು ಸುರಂಗ ಕೊರೆಯುವರೆ ಅಥವಾ ಜನಪಟ್ಟಣ ಮತ್ತು ಮನೆಗಳ ನಾಶದ ಬಗ್ಗೆ ಹೇಗೆ ಉಪಯೋಗಿಸಬಹುದೋ ಹಾಗೆಯೇ ಪತ್ರಿಕೆಗಳು ಜನರಿಗೆ ನಿಜವಾದ ಅನುಭವ ಕೊಟ್ಟು ಸರಿದಾರಿಹಿಡಿಯುವಂತೆ ಮಾಡಿ, ರಾಜ್ಯದಲ್ಲಿ ಶಾಂತಿ ನೆಮ್ಮದಿ ನೆಲಸುವಂತೆ ಮಾಡಲೂಬಹುದು. ! ಕೆಟ್ಟ ಕಾರ್ಯಕ್ಕೆ ಜನರ ಮನಸ್ಸನ್ನು ಒಯ್ದು ಅರಸರು ಮತ್ತು ರಾಜಕಾರಣಿಗಳ ಕೊಲೆ ಮತ್ತು ರಾಷ್ಟ್ರದಲ್ಲಿ ಕ್ರಾಂತಿಯನ್ನೆಬ್ಬಿಸಲು ಹುರಿದುಂಬಿಸಲು ಉತ್ತೇಜನಕವಾಗಲೂಬಹುದು. ಕೆಲವು ರಾಷ್ಟ್ರಗಳಲ್ಲಿ ಸರಕಾರಗಳು ಪತ್ರಿಕೆಗಳಿಗೆ ಧನಸಹಾಯ್ಯವು ಮತ್ತಿತರ ಸವಲತ್ತು ಕೊಟ್ಟು ತಮ್ಮ ಅಂಕೆಯಲ್ಲಿರಿಸಿಕೊಳ್ಳುವವು. ಇದರಿಂದ ಬಾವಿಯಲ್ಲಿ ನೀರೇಳು ಬುಗ್ಗೆಯಲ್ಲಿ ವಿಷ ಹಾಕಿದಂತೆ ಸತ್ಯದ ಬುಡಕ್ಕೆ ಕೊಡಲಿ ಇಟ್ಟಂತೆಯೇ ಸರಿ. ಜರ್ಮನಿಯಲ್ಲಿ ಬಿಸ್ಮಾರ್ಕನ "ಹಾವಿನ ಪತ್ರಿಕೆಗಳು" (Reptile Prese)ಎಂಬುದೊಂದು ಲೋಕದಲ್ಲಿ ಮಿಂಚುವ ಉದಾಹರಣೆಯಾಗಿರುವುದು. ರಾಜಕೀಯ ವಿಚಾರದಲ್ಲಿ ಅನುಭವ ಕೊಡುವರೆ ಪತ್ರಿಕೆಗಳ ಸಲಹೆ ಆವಶ್ಯವಾದರೂ ಅವುಗಳು ಕೊಡುವ ಸೂಚನೆಗಳು ಅವುಗಳ ಯಜಮಾನರ ಅಥವಾ ಸಂಪಾದಕರದ್ದೇ ಆಗಿರುವವು. ಪ್ರತಿವ್ಯಕ್ತಿಯೂ ಅವರವರ ಹಿತಾಹಿತವಿದ್ದೇ ಇರುವುದರಿಂದ ಪಕ್ಷಪಾತವೆಂಬುದಿರುವುದು ಅಪರೂಪ. ರಾಜಕಾರಣಿಗಳು ಒಂದೆರಡು ಅಥವಾ ಹಲವು ಪತ್ರಿಕೆಗಳ ಸಹಾಯದಿಂದ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವರು. ಕೆಲವು ಸಮಯ ಒಬ್ಬ ಶ್ರೀಮಂತನು ಹಲವು ಪತ್ರಿಕೆಗಳನ್ನು ತನ್ನ ಆಧೀನಮಾಡಿಕೊಂಡು ಅವುಗಳಿಂದ ತನಗೆ ಬಂದ ಸಾಮರ್ಥ್ಯದಿಂದ ರಾಜಕಾರಣಿಗಳನ್ನು ಮತ್ತು ಸರಕಾರಗಳನ್ನು ಉರುಳಿಸುವ ಸಾಹಸ ಮಾಡುವದೂ ಉಂಟು. ಇಂಥಾ ಪತ್ರಿಕೆಗಳ ತಳ್ಳಿಗೆ ಹೋಗಲು ಸರಕಾರಗಳು ಹಿಂಜರಿಯುವವು. ರಾಜಕಾರಣಿಗಳು ಹಿಂದು ಮುಂದೆ ನೋಡಿ ಆಲೋಚಿಸಿಕೊಳ್ಳುವವು. ಇಂಥಾ ಪತ್ರಿಕೆಗಳ ಸಹಾಯವನ್ನು ಅವರು ಆಗಾಗ ಅಪೇಕ್ಷಿಸುವರು. ಜನಮತ ಸರಕಾರಗಳ ಮೇಲೆ ಪತ್ರಿಕೆಗಳ ಪ್ರಭಾವವು ಬಹಳವಾಗಿದೆ. ರಾಜಕೀಯ ವಿಚಾರದಲ್ಲಿ ಮತದಾರರು ಪತ್ರಿಕೆಗಳಿಂದ ತಮ್ಮ ಅನುಭವವನ್ನು ಪಡೆಯುವರು.

ಜನಸಂಖ್ಯೆಯು ಜಾಸ್ತಿಯಾಗಿ ವಿದ್ಯೆಯು ಪಸರಿಸಿದಂತೆ ಓದುಬರಹ ತಿಳಿದವರು ಜಾಸ್ತಿಯಾಗಿ ಜನರ ವಹಿವಾಟು, ವ್ಯವಹಾರ ಉದ್ಯೋಗಗಳು ಹೆಚ್ಚಿದಂತೆ, ಕಲೆಸಂಸ್ಕೃತಿ ಮತ್ತು ನಾಗರಿಕತೆ ಮುಂದುವರಿದ ಹಾಗೆ ಜನರಿಗೆ ನಾನಾ ತರದ ವಿಷಯಗಳ ವರ್ತಮಾನವು ಬೇಕಾಯಿತು. ಆದುವರೆಗೆ ಬರೇ ರಾಜಕೀಯ ವಿಚಾರವನ್ನು ಪ್ರಕಟಿಸುವ ಪತ್ರಿಕೆಗಳು ಜನರಿಗೆ ಬೇಕಾಗುವ ವರ್ತಮಾನಗಳನ್ನು ಕೊಡಲಾರಂಭಿಸಿದವು. ಓದುಗರನ್ನು ಹೆಚ್ಚಿಸುವುದಕ್ಕಾಗಿ ಜನರ ಮನಸ್ಸನ್ನು ಒಲಿಸಲು ಪ್ರಯತ್ನಿಸಲು ತೊಡಗಿದವು. ಪತ್ರಿಕೆಗಳೊಂದು ಉತ್ಪನ್ನದ ಉದ್ದಿಮೆಯಾಗಿ ಮಾರ್ಪಡಲ್ಪಟ್ಟವು. ಪತ್ರಿಕೆಗಳು ಆತುರುವಾಯ ವ್ಯಾಪಾರ ದೃಷ್ಟಿಯಿಂದ ನಡೆಸಲ್ಪಡುವವಾದವು. ಈ ದೃಷ್ಟಿಯಿಂದ ತಮಗೆ ಲಾಭವಾಗುವ ಸಂದರ್ಭ ಬಂದರೆ ಸಂಪಾದಕನು ಎಷ್ಟೇ ತಿಳಿದವನಾದರೂ ಪತ್ರಿಕೆಯ ಒಡೆಯನು ಆತನನ್ನು ಮೂಲೆಗೊತ್ತಿ ಮುಂದೆ ಬರುವನು. ಹೆಚ್ಚು ಧನಸಹಾಯ ಯಾವ ಕಡೆಯಿಂದ ದೊರೆಯುವದೋ ಆ ಕಡೆಗೆ ಹೆಚ್ಚು ಗಮನ ಕೊಡಲುದ್ಯುಕ್ತರಾದವು. ತಮ್ಮ ಹಿತವಂತರ ಬಗ್ಗಾಗಿ ವೈರವಿಲ್ಲದೇನೇ ಕೆಲವು ಸಂಘ ಸಂಸ್ಥೆ ಮತ್ತು ವ್ಯಕ್ತಿಗಳ ಮೇಲೆ ವಿಷಕಾರಿ ಮುಂದುಬೀಳುವವು. ಕೆಲವು ಸಂಘಸಂಸ್ಥೆ ಮತ್ತು ವ್ಯಕ್ತಿಗಳ ಮೇಲಣ ಪ್ರೇಮದಿಂದ ಅವರ ತಪ್ಪುಗಳನ್ನು ತಡೆಗಣಿಸಿ ಎತ್ತಿಹಿಡಿಯುವವು. ಹಲವು ಪತ್ರಿಕೆಗಳಲ್ಲಿ ಇಂಥಾ ಹಿತ ಮತ್ತು ಅಹಿತವಂತರ ಪಟ್ಟಿಯೇ ಪತ್ರಿಕೆಗಳ ಕೆಲಸಗಾರರ ಸ್ವಾಧೀನ ಯಾವಾಗಲೂ ನೆನಪಿನ ಬಗ್ಗೆ ಇದ್ದೇ ಇದೆ. ಎಂತ ಎಡ್ವರ್ಡ್ ಅಲ್ಸವರ್ತ್ ರೋಸ್ ಹೇಳಿರುವರು. ಪತ್ರಿಕೆಗಳು ಕೆಲವು ವರ್ತಮಾನಗಳನ್ನು ಇತರರಿಗಿಂತ ತಾವಾಗಿ ಮುಂಚಿತವಾಗಿ ಪ್ರಕಟಿಸಬೇಕೆಂತ ಸ್ಪರ್ಧಿಸುವವು. ವಿಶೇಷ ಸಂಗತಿಗಳಲ್ಲಿ ಹೆಚ್ಚು ಹಣವನ್ನು ವ್ಯಯಿಸುವವು, ಮತ್ತು ಇಂಥಾ ವರ್ತಮಾನವನ್ನು ಮೊದಲಾಗಿ ಪಡೆಯುವರೆ ಯಾವ ಕೆಲಸಕ್ಕೂ ಹೇಸದೆ ಮಾಡುವವು

ಪತ್ರಿಕೆಗಳ ಅಧಿಕಾರವು ಬೇಜವಾಬ್ದಾರಿಯಾದರದ ತಮ್ಮ ಪತ್ರಿಕೆಯ ಪ್ರಸರಣೆ ಕಡಿಮೆಯಾಗುವದು ಮತ್ತು ಓದುಗರು ಕಡಿಮೆಯಾಗುವರು ಎಂಬ ಭೀತಿಯು ಇದ್ದೇ ಇದೆ. ಅಂತರ್ ರಾಷ್ಟ್ರೀಯ ಪ್ರೀತಿ ಮತ್ತು ವಿಶ್ವಾಸಕ್ಕೆ ಪತ್ರಿಕೆಗಳು ಯಾವಾಗಲೂ ದೊಡ್ಡ ತಡೆಯಾಗಿವೆ. ಕೆಲವು ಸಮಯ ಗಾಳಿವರ್ತಮಾನಗಳಿಗೆ ಬೆಲೆಕೊಟ್ಟು ನಿಜವಾದ ಘಟನೆಯೆಂದು ಒತ್ತಿಹೇಳುವವು. ಕೆಲವು ಸಲ ಸತ್ಯವನ್ನಡಗಿಸುವವು. ಚಿಕ್ಕ ಸಂಗತಿಯನ್ನು ದೊಡ್ಡದಾಗಿ ತೋರಿಸುವವು. ದೊಡ್ಡದನ್ನು ಸಣ್ಣದಾಗಿ ತೋರಿಸುವವು. ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲೆಲ್ಲಾ ಪಕ್ಷಗಳ ಪತ್ರಿಕೆಗಳಿರುವವು. ಸಂಪಾದಕನು ತನಗೆ ಹಿತವಿರುವ ಪಕ್ಷಗಳ ಕಡೆಗೆ ಹೊಗಳಿಕೆ ಹಾಕಿ ಎಕಿ ಎದುರು ಕಡೆಗೆ ದೂಷಿಸುವನು. ಪಕ್ಷಗಳ ಪರವಾಗಿ ಇತರರನ್ನು ಬೈಯ್ಯುವದು ಹೀಯ್ಯಾಳಿಸುವದು ಸಹಾ ರೂಢಿಯಲ್ಲಿದೆ. ಸರಕಾರದ ವಿರುದ್ಧಪಕ್ಷದ ಪತ್ರಗಳು ಯಾವಾಗಲೂ ಸರಕಾರವನ್ನು ಟೀಕಿಸುವವು ಮತ್ತು ಜನರನ್ನು ಭ್ರಾಂತರನ್ನಾಗಿ ಕೆರಳಿಸುವವು. ಪತ್ರಿಕೆಗಳಲ್ಲಿ ಕೆಲವು ಲಕ್ಷಣಗಳಿವೆ. ಅವು ಲಾಭಕೊಡುವ ಒಂದು ಉದ್ಯೋಗವಾಗಿವೆ. ಅವುಗಳು ಸ್ಥಳವನ್ನೂ ಮತ್ತು ವರ್ತಮಾನವನ್ನೂ ಮಾರಾಟಮಾಡುತ್ತವೆ. ಅವುಗಳು ಮಾರ್ಗದರ್ಶಕ, ಉಪದೇಶಕ ಮತ್ತು ಬುದ್ಧಿಹೇಳುವ ಕೆಲಸವನ್ನು ವಹಿಸಿರುವವು. ವರ್ತಮಾನ ಕಾಲದ ವಿಚಾರವನ್ನು ಹೇಳುವದಲ್ಲದೆ ಭೂತಕಾಲದ ಅನುಭವದಿಂದ ಭವಿಷತ್ತಿನಲ್ಲಿ ಏನೇನೆಲ್ಲಾ ಆಗಲಿಕ್ಕಿದೆಯೆಂದು ಮುನ್ನುಡಿಯುವವು. ಜನರಿಗೆ ಅಹಿತವಾದ ವಿಷಯದಲ್ಲಿ ವಿರೋಧ ಸೂಚಿಸಲು ಅವು ಹಿಂಜರಿಯುವದಿಲ್ಲ. ಸಾಮಾಜಿಕ ವಿಷಯದಲ್ಲಿ ಸಾರ್ವಜನಿಕರ ಹಿತವನ್ನೇ ಸಾಧಿಸುವೆವೆಂದು ನಟಿಸುವವು. ಬೇರಾವ ವಿಷಯಗಳು ಹೇಗೇ ಇರಲಿ ನಿಸ್ವಾರ್ಥಿಗಳಾಗಿ ಜನಹಿತ ಸಾಧಿಸುವದೊಂದೇ ದೃಷ್ಟಿಯೆಂಬುದು ನಂಬಲಾಸ್ಪದವಲ್ಲ.

ಸಭೆಗಳಲ್ಲಿ ಮಾತಾಡುವ ವಾಗ್ಮಿಯು ಕೇಳುವವರಿಗೆ ಹೇಗೋ ಹಾಗೆಯೇ ಪತ್ರಿಕೆಗಳು ಓದುಗರಿಗೆ ವಾಗ್ಮಿಯಂಥಾಗಿರುವವು. ಆದುದರಿಂದಲೇ ಪತ್ರಿಕೆಗಳು ನಮ್ಮ ಕಣ್ಣು, ಕಿವಿ ಮತ್ತು ಮನಸ್ಸೆಂದು ಕೆಲವರು ಹೇಳುವರು. ವಾಗ್ಮಿಗಿರುವ ವೈಯಕ್ತಿಕರಮಣೀಯತೆಯೂ ಆಕರ್ಷಿಸುವ ಉತ್ಸಾಹಕತೆಯೂ ಪ್ರೇರೇಪಿಸಿ ಚೈತನ್ಯ ತುಂಬುವ ಮೋಡಿಯೂ ಮೊದಲಾದ ವೈಯುಕ್ತಿಕ ಲಕ್ಷಣಗಳು ಇವುಗಳಿಗಿಲ್ಲ. ವಾಗ್ಮಿಯು ಒಂದು ಸಲ ಒಂದೇ ಸಭೆಗೆ ಮಾತನಾಡಬಹುದು. ಪತ್ರಿಕೆಗಳು ಹಲವು ಸಭೆಗಳಿಗೆ ಒಂದೇಸಲ ಮಾತಾಡಬಹುದು. ಆದರೆ ಈಗಿನ ಕಾಲದ ಆಕಾಶವಾಣಿಯ ಮೂಲಕ ವಾಗ್ಮಿಯು ಹಲವು ಸಭೆಗಳಿಗೆ ಒಂದೇ ಸಲ ಮಾತನಾಡುವ ಸುಯೋಗವು ಬಂದದೆ. ಆದರೂ ವಾಗ್ಮಿಗಿಂತ ಪತ್ರಿಕೆಗಳೇ ಪ್ರಜಾಮತ ಸರಕಾರದ ಬೆಳವಣಿಗೆಗೆ ಕಾರಣವಾಗಿರುವವು. ಆದುದರಿಂದಲೇ ನೆಪೋಲಿಯನ್ನನು ತಾನು 100000 ಕಠಾರಿಗಳಿಗಾದರೂ (Bayonets) ಹೆದರೆನು, ಮೂರು ಪತ್ರಿಕೆಗಳೆಂದರೆ ಭಯವಾಗುತ್ತದೆಂದಿರುವನು

TEL. 40392

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರಾಸ್ ಲೇನ್, ಬೊಂಬಾಯಿ 12.

(ಟೆಲಿಫೋನ್. 40592)

ಜನಮತ

ಕನ್ನಡಿಗರಿಗೆ ಬೇಕಾದುದು ಕನ್ನಡ ಪ್ರಾಂತ

ಕೆ. ಕೆ. ಶೆಟ್ಟರ ಉಪದೇಶವಾಣಿಯಲ್ಲ.

18-8-51ನೇ 'ಸರ್ವೋದಯ' ಮತ್ತು ಕಳೆದ 'ನವಯುಗ'ದಲ್ಲಿ ಒಂದಕ್ಕೊಂದು ಸಂಬಂಧವಿಲ್ಲದ ಮತ್ತು ಸತ್ಯದಿಂದ ದೂರವಾದ ಒಂದು ದೀರ್ಘ ಲೇಖನದಲ್ಲಿ ಕರ್ನಾಟಕ ಏಕೀಕರಣ ಪಕ್ಷವನ್ನೂ ನನ್ನನ್ನೂ ಶ್ರೀ ಶಾಂತಕರನ್ನೂ ಶ್ರೀ ಹೊಸಮನಿಯವರನ್ನೂ ಉದ್ದೇಶಿಸಿ ನಾವು ಜನತೆಯ ನಂಬಿಗೆಗೆ ಅನರ್ಹರು ಎಂಬುದಾಗಿ ತೋರಿಸುವ ಸಾಧನೆ ಶ್ರೀ ಶೆಟ್ಟರು ಮಾಡಿದ್ದಾರೆ. ದಕ್ಷಿಣಕನ್ನಡ ಕಾಂಗ್ರೆಸು ಕಮಿಟಿಯ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿರುವ ಶ್ರೀ ಶೆಟ್ಟರಿಂದ ಹೊರಟ ಈ ಲೇಖನವು ಅವರಿಗೂ ಆ ಕಾಂಗ್ರೆಸು ಪಕ್ಷಕ್ಕೂ ನನ್ನ ದೃಷ್ಟಿಯಲ್ಲಿ ಯೋಗ್ಯವಾದುದಲ್ಲ. ಚುನಾವಣೆ ಬಂತೆಂದು ಸತ್ಯವನ್ನು ಬದಿಗೊತ್ತುವ ಪ್ರಯತ್ನ ಮಾಡಬಾರದು.

ಶ್ರೀ ಶೆಟ್ಟರು ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಒಂದು ಮಹಾಸಭೆ ಸೇರಿತ್ತೆಂದೂ, ಅದರಲ್ಲಿ ನಾನೂ ಶ್ರೀ ಶಾಂತಕರೂ ಭಾಗವಹಿಸಿ "ಪ್ರತ್ಯಕ್ಷ ಹೋರಾಟದ ಪೂರ್ವತಯಾರಿಯಾಗಿ" ಶಾಸನ ಸಭೆಯ ಸದಸ್ಯರೆಲ್ಲರೂ "ರಾಜಿನಾಮೆ ಕೊಡಬೇಕೆಂದು ಕರೆಯಿತ್ತಿತ್ತು" ಎಂಬುದಾಗಿಯೂ ಬರೆದಿರುವುದು ತೀರಾ ಅಸತ್ಯ. ನಾನು ಗದಗಿನ ಯಾವ ಸಭೆಯಲ್ಲಿಯೂ ಭಾಗವಹಿಸಲಿಲ್ಲ. "ಪ್ರತ್ಯಕ್ಷ ಹೋರಾಟದ ಪೂರ್ವತಯಾರಿಯಾಗಿ" ನಾನು ಕೇಳಿದ ಮಟ್ಟಿಗೆ ಕೆ. ಪಿ. ಸಿ. ಸಿ.ಯು ಅಂಥಾ ಯಾವ ಠರಾವನ್ನೂ ಮಾಡಿದ್ದಿಲ್ಲ. ಕೆ. ಪಿ. ಸಿ. ಸಿ.ಯ ಸದಸ್ಯರಾದ ಶ್ರೀ ಶೆಟ್ಟರು ಯಾವ ಉದ್ದೇಶದಿಂದ ಈ ರೀತಿ ಕಲ್ಪಿಸಿಕೊಂಡಿರುವರೋ ತಿಳಿಯದು.

ಹುಬ್ಬಳ್ಳಿಯಲ್ಲಿ ಕೆ. ಪಿ. ಸಿ. ಸಿ. ಯ ಕಾರ್ಯಕಾರಿ ಮಂಡಳಿಯು ಕರ್ನಾಟಕ ಪ್ರಾಂತ ನಿರ್ಮಾಣವನ್ನು ಬದಿಗೊತ್ತಿದ್ದರಿಂದ ಶಾಸನಸಭೆಗಳ ಸದಸ್ಯರು ಕನ್ನಡಿಗರ ಪ್ರತಿನಿಧಿಗಳೆಂದು ಇರಲು ಅಸಾಧ್ಯವಾದ್ದರಿಂದ ಆ ಸ್ಥಾನಗಳಿಗೆ ರಾಜಿನಾಮೆ ಕೊಡಲಿಕ್ಕೆ ಪರವಾನಿಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನಿಂದ ಕೇಳಬೇಕಾಗಿ ಒಮ್ಮತದ ಠರಾವು ಮಾಡಿತ್ತು. ಬಹುಶಃ ಶ್ರೀ ಶೆಟ್ಟರು ಈ ಠರಾವನ್ನು ಉದ್ದೇಶಿಸಿ ಬರೆದಿರಲೂ ಬಹುದು. ಆದರೆ ಅವರು ಅದಕ್ಕೆ ಇಲ್ಲದ ಬಣ್ಣ ಹಚ್ಚಬೇಕಾಗಿಲ್ಲ.

"ರಾಜಿನಾಮೆಯ ನಿರ್ಣಯವನ್ನು ಹೇಗಾದರೂ ಮೂಲೆಗೊತ್ತಬೇಕೆಂದಿದ್ದ ಕೆಲವರ" ಹೆಸರುಗಳನ್ನು ಶ್ರೀ ಶೆಟ್ಟರು ಪ್ರಕಟಿಸಿದ್ದರೆ ಜನರಿಗೆ ಈ ಸಂದರ್ಭದಲ್ಲಿ ಇವರ ಪರಿಚಯ ನಮ್ಮೆಲ್ಲರ ಪರಿಚಯದೊಂದಿಗೇ ಆಗುತ್ತಿತ್ತು, ಮತ್ತು ಅಂಥವರು ಮುಂದೆ ಚುನಾವಣೆಗೆ ನಿಂತಾಗ ಮತದಾರರಿಗೆ ಸಹಾಯ ಮಾಡಿದಂತಾಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀ ಶೆಟ್ಟರು ನಮ್ಮೊಡನೆ ಕೂಡಿ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಆಂದೋಲನ ನಡೆಸಿದಾಗ ಅವರ ಹೆಸರು ಪ್ರಕಟಿಸಿದ್ದರೂ, ಈಗ ಪ್ರಕಟಿಸಲು ಅವರು ತಯಾರಿಲ್ಲವೆಂಬುದರ ಕಾರಣ ಸ್ಪಷ್ಟ ಇಂದು ಶ್ರೀ ಶೆಟ್ಟರು ಅವರೊಡನೆ ಸೇರಿದ್ದಾರೆ.

"ಎಂಥಹ ಪರಿಸ್ಥಿತಿಯಲ್ಲಿಯೂ ಅಧಿಕಾರಕ್ಕೆ ಅಂಟಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲವೇ ಮಂದಿ ಕಾಂಗ್ರೆಸಿನ ಹೆಸರಿನಲ್ಲಿ ಅಧಿಕಾರ ನಡೆಸುವಂಥಾದ್ದನ್ನು ದೂರೀಕರಿಸುವದೇ ಉಗ್ರ ಧೋರಣೆ ಕೆ. ಪಿ. ಸಿ. ಸಿ. ವಹಿಸಲಿಲ್ಲ" ವೆಂಬುದು ಶ್ರೀ ಶೆಟ್ಟರ ವಾದ. ಅದರ ಬದಲಿಗೆ 'ಈಗ ಇದ್ದವರಿಂದ ಅಧಿಕಾರ ಎಂಥಹ ಪರಿಸ್ಥಿತಿಯಲ್ಲಿಯೂ ಹೋಗಬಾರದಾಗಿ ಕೆ. ಪಿ. ಸಿ. ಸಿ. ಯು ಮಂದ ಧೋರಣೆ ವಹಿಸಿದೆ ಎಂದರೆ' ಸಮಂಜಸವಾಗುತ್ತಿತ್ತು. ಸಂಯುಕ್ತ ಕರ್ನಾಟಕದಲ್ಲಿ ಕಾಂಗ್ರೆಸಿನ ಪ್ರತಿನಿಧಿ ಸಂಸ್ಥೆಯಾದ ಕೆ. ಪಿ. ಸಿ. ಸಿ. ಯನ್ನು ಎರಡು, ಮೂರು ಹೋಳಾಗಿ ಕಾಂಗ್ರೆಸು ವರಿಷ್ಠರು ಕತ್ತರಿಸಿದಾಗ, ಕೆ. ಪಿ. ಸಿ. ಸಿ.ಯ ಅಸ್ತಿತ್ವಕ್ಕೆನೇ ಕೊಡಲಿ ಇಟ್ಟಾಗ ಅದಕ್ಕೆ ವ್ಯತಿರಿಕ್ತ ಉಗ್ರ ಠರಾವು ಮಾಡಿಯೂ, ಮುಖಭಂಗವಾದರೂ ಸುಮ್ಮನಿದ್ದ ಕೆ. ಪಿ. ಸಿ. ಸಿ.ಯಿಂದ ಹೆಚ್ಚಿನ ಉಗ್ರ ಧೋರಣೆ ಸಾಧ್ಯವಿಲ್ಲವೆಂಬುದು ಕನ್ನಡಿಗರೆಲ್ಲರಿಗೂ ಗೊತ್ತಿರುವ ವಿಷಯ. ಇನ್ನು ಕೆ. ಪಿ. ಸಿ. ಸಿ.ಯು "ಹೆಚ್ಚಿನ ಕಾರ್ಯಕರ್ತರ." "ಚುನಾವಣೆ ಮುಗಿದು ಒಂದೆರಡು ವರ್ಷಗಳಲ್ಲಿಯೂ ಪ್ರಾಂತರಚನೆಯಾಗದಿದ್ದಲ್ಲಿ ಹಿಂದೆ ಮುಂದೆ ನೋಡದೆ ಪ್ರತ್ಯಕ್ಷ ಹೋರಾಟ ನಡೆಸಬೇಕಾಗುವುದೆಂಬ ಮನೋವೃತ್ತಿ" ಯುಳ್ಳವರಾಗಿದ್ದಾರೆಂಬ ಭರವಸೆ ಶ್ರೀ ಶೆಟ್ಟರಿಂದ ಈಗ ಅಗತ್ಯವಿಲ್ಲ. "ದೇಶದ ಗಂಭೀರ ಪರಿಸ್ಥಿತಿಯಲ್ಲಿ ಒಂದು ಬಿಕ್ಕಟ್ಟಿನ ಹಿಂದೆ ಇನ್ನೊಂದು ಬಿಕ್ಕಟ್ಟು ಬರುವಾಗ ಪ್ರಾಂತರಚನಾ ಪ್ರಶ್ನೆಯೊಂದನ್ನೇ ಎತ್ತಿ ಹಿಡಿದು ಬಿಕ್ಕಟ್ಟನ್ನುಂಟುಮಾಡುವಷ್ಟು ದುಡುಕಲು ಮಾತ್ರ ಕೆ ಪಿ ಸಿ, ಸಿ.ಯವರು ಸಿದ್ಧರಿಲ್ಲ"ರಂತೆ! ಹಿಂದೆ ಅದೇ ಕೆ. ಪಿ. ಸಿ. ಸಿ. ಯು ಹಾವೇರಿಯಲ್ಲಿ (9-2-50ರಲ್ಲಿ) ಚುನಾವಣೆ ಬರುವುದರೊಳಗೆ ಪ್ರಾಂತ ನಿರ್ಮಾಣವಾಗದಿದ್ದಲ್ಲಿ ಈ ವಿಷಯವನ್ನೇ (ಪ್ರಾಂತನಿರ್ಮಾಣ) ಪ್ರಧಾನವಾಗಿರಿಸಿ ಚುನಾವಣೆ ನಡೆಯಬೇಕೆಂಬರ್ಥದ ಠರಾವು ಸರ್ವಸಮ್ಮತಿಯಿಂದ ಮಂಜೂರು ಮಾಡಿರುವುದಾಗಿ ಶ್ರೀ ಶೆಟ್ಟರ ಹೇಳಿಕೆ. ಇದೇ ಅರ್ಥದ ಠರಾವು ಅದೇ ಹಾವೇರಿಯಲ್ಲಿಯೇ 27-2-51ರಲ್ಲಿ ಕರ್ನಾಟಕ ಪಕ್ಷಾತೀತ ಪರಿಷತ್ತು ಮಂಜೂರು ಮಾಡಿದ್ದು, ಅನಂತರ ಆ ಠರಾವನ್ನು ಕಾರ್ಯರೂಪಕ್ಕೆ ಇಳಿಸಿದಾಗ ಕರ್ನಾಟಕ ಏಕೀಕರಣ ಪಕ್ಷ ನಿರ್ಮಾಣವಾದದ್ದು. ಪಕ್ಷಾತೀತ ಪರಿಷತ್ತು ಕೆ. ಪಿ. ಸಿ. ಸಿ.ಯು 1950ರಲ್ಲಿ ತೋರಿಸಿದ ದಾರಿ ಹಿಡಿದರೆ ಅದರ ಸದಸ್ಯರಾದ ಶ್ರೀ ಶೆಟ್ಟರಿಗೆ ಏತಕ್ಕೆ ಹೊಟ್ಟೆಉರಿ ಎಂದು ತಿಳಿಯುತ್ತದಿಲ್ಲ. ಕೆ. ಪಿ. ಸಿ. ಸಿ. ಯು ತಾವು ಹಾಕಿಕೊಂಡ ದಾರಿ ತಾವೇ ಬಿಟ್ಟುಬಿಟ್ಟರೆ, ಬಾಕಿಯವರೂ ಆ ದಾರಿಯಲ್ಲಿ ನಡೆಯಬಾರದಾಗಿ ಹೇಳುವುದು ಯಾವ ನ್ಯಾಯ? ಶೆಟ್ಟರು ಇಷ್ಟುದೀರ್ಘ ಲೇಖನ ಬರೆಯುವಾಗ ಕೆ. ಪಿ. ಸಿ. ಸಿ. ಯು 1949ರ ಆಗಸ್ಟಿನಿಂದ ಈವರೆಗೆ ಕರ್ನಾಟಕ ಪ್ರಾಂತ ನಿರ್ಮಾಣದ ವಿಷಯದಲ್ಲಿ ಮಂಜೂರುಮಾಡಿದ ಠರಾವುಗಳನ್ನು ಜನತೆಯ ಮುಂದಿಟ್ಟಿದ್ದರೆ ಕೆ. ಪಿ. ಸಿ. ಸಿ. ಯ ಸದಸ್ಯರ ಈಗಿನ ಮನೋವೃತ್ತಿಗೂ ಆ ಠರಾವುಗಳ ಉದ್ದೇಶಗಳಿಗೂ ಇರುವ ಅಂತರವನ್ನು ಜನತೆಯೇ ನಿಶ್ಚಯಿಸಲು ಅನುಕೂಲವಾಗುತ್ತಿತ್ತು. ಈ ಠರಾವುಗಳನ್ನು ಮಾತ್ರ ಉತ್ತಮ, ಆದರೆ ಸದಸ್ಯರ ನಡೆವಳಿಕೆಗಳು ತದ್ವಿರುದ್ಧವೆಂಬುದು ಎಲ್ಲರಿಗೂ ತಿಳಿದ ವಿಷಯ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಠರಾವುಗಳೂ, ವರಿಷ್ಠರ ನಡೆವಳಿಕೆಗಳೂ ಯಾವ ರೀತಿ ಒಂದಕ್ಕೊಂದು ವಿರುದ್ಧವಿರುವುದೋ ಅದೇರೀತಿ ಕೆ. ಪಿ. ಸಿ. ಸಿ.ಯ ಠರಾವುಗಳೂ ಮತ್ತು ಅದರ ಸದಸ್ಯರ ನಡೆವಳಿಕೆಗಳೂ. ಮರದ ಗುಣ ಅದರ ತುಂಡಿನಲ್ಲಿಯೂ ಕಾಣುವುದು. ಮೂವತ್ತು ವರ್ಷಗಳಿಂದಲೂ ಕರ್ನಾಟಕ ಪ್ರಾಂತ ನಿರ್ಮಾಣದ ತತ್ವವನ್ನು ಒಪ್ಪಿಕೊಂಡು ಆಗಾಗ ಸ್ಪಷ್ಟ ಠರಾವುಗಳಿಂದ ಪುಷ್ಟೀಕರಿಸಿ, ಕನ್ನಡಿಗರಿಗೆ ಆಗಾಗ ಭರವಸೆ ಇತ್ತು, ಚುನಾವಣಾ ಘೋಷಣೆಗಳಲ್ಲಿ ಆಗಾಗ ಸಾರಿ, ದಾರ್ ಸಮಿತಿಯ ಮೂಲಕವೂ, ಜವಾಹರಲಾಲ, ಪಟ್ಟಾಭಿ, ಸರ್ದಾರ್ ರಿಪೋರ್ಟುಗಳ ಮೂಲಕವೂ ಕನ್ನಡಿಗರನ್ನು ವಂಚಿಸಿ, ಕನ್ನಡಿಗರ ಹೃದಯ ಕಮಲದಂತಿರುವ ಮೈಸೂರನ್ನು ಬೇರ್ಪಡಿಸಿ, ಕರ್ನಾಟಕದ ಶಿರಸ್ಸಿನಂತಿರುವ ಹೈದರಾಬಾದಿನ ಮತ್ತು ಉತ್ತರ ಕರ್ನಾಟಕದ ಭಾಗಗಳನ್ನು ವಿಭಾಗಿಸಿದ ಕಾಂಗ್ರೆಸ್ ವರಿಷ್ಠರ ಧೋರಣೆಗೂ, ಬ್ರಿಟಿಷ್ ಸಾಮ್ರಾಜ್ಯವಾದಿಗಳ ಧೋರಣೆಗೂ ಕನ್ನಡಿಗರ ಮಟ್ಟಿಗೆ ಯಾವ ಭೇದವೂ ಕಾಣುವುದಿಲ್ಲ.

ಕರ್ನಾಟಕ ಪ್ರಾಂತ ಸಾಧಿಸುವುದು ಕೆ. ಪಿ. ಸಿ. ಸಿ. ಯ ಕಾದಿಟ್ಟ ಸೊತ್ತಲ್ಲ. ಈ ವರೆಗೆ ಕಾಂಗ್ರೆಸ್ ವರಿಷ್ಠರ ಭರವಸೆಗಳನ್ನು ಅನುಭವಿಸಿದ ಕನ್ನಡಿಗರಿಗೆ ಶ್ರೀ ಶೆಟ್ಟರ ಭರವಸೆಗಳ ಪರೀಕ್ಷೆಮಾಡಬೇಕಾಗಿಲ್ಲ.

ಕೆ. ಪಿ. ಸಿ. ಸಿ ಯು ಕಳೆದ ಮೇ ತಿಂಗಳ [illegible]ಲ್ಲಿ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಗಡಿ ಸಮಿತಿಯನ್ನು ಬರುವ ಚುನಾವಣೆಯೊಳಗೆ ನೇಮಿಸಬೇಕೆಂದು ಬೇಡಿದರೂ ಬೆಂಗಳೂರಲ್ಲಿ ಆ ವೇಳೆ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಈ ವಿಚಾರವನ್ನು ಎತ್ತಿಕೊಳ್ಳದೆ, ಹಾವೇರಿಯ ಪಕ್ಷಾತೀತ ಪರಿಷತ್ತಿನ ನಿರ್ಣಯಕ್ಕೆ ಮಹತ್ವ ಬಂದೀತೆಂಬ ಬೆದರಿಕೆ ಹುಟ್ಟಿಸಿದ ನಂತರ ಚುನಾವಣಾ ಘೋಷಣೆಯಲ್ಲಿ ತುಂಡುಪಂಕ್ತಿ ಸೇರಿಸಲಾಯಿತೆಂದು ಎಲ್ಲರಿಗೂ ಗೊತ್ತಿದೆ. ಆ ತುಂಡುಪಂಕ್ತಿಯಲ್ಲಿ ಪ್ರಾಂತ ನಿರ್ಮಾಣವನ್ನು ಮುಂದೂಡುವ ನೆವನಗಳ ರೂಪರೇಷೆಗಳು ಕಾಣುವಂಥಾದ್ದು ಶ್ರೀ ಶೆಟ್ಟರು ಬಚ್ಚಿಟ್ಟರೂ ನಾವು ಮೊದಲೇ ಕಂಡಿದ್ದೇವೆ. ಆದ್ದರಿಂದಲೇ ಒಡನೆಯೇ ಕರ್ನಾಟಕ ಏಕೀಕರಣ ಪಕ್ಷ ನಿರ್ಮಾಣ ಮಾಡಿದ್ದು. ಇದನ್ನು ಒಡೆಯುವುದಕ್ಕೋಸ್ಕರ ನಾಲ್ಕು ವರ್ಷಗಳಿಂದ ಹೆಚ್ಚಾಗಿ ಸ್ವತಂ-

[illegible]

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಪಂಡಿತ್, B. SC, F. I. A

(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ. ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಕಾಂಗ್ರೆಸ್ಸಿನಲ್ಲಿದ್ದಿರುವ ಸುಂಟರ ಗಾಳಿ

ಬಹಳ ಕಾಲದಿಂದ ಕಾಂಗ್ರೆಸ್ಸಿನೊಳಗಿದ್ದ ಮತಭೇದದ ಮೂಲಕಾರಣಗಳು ಈಗ ಬೆಳಕಿಗೆ ಬರಹತ್ತಿವೆ. ಕಳೆದ ವಾರದಲ್ಲಿ ನೆಹ್ರೂರವರ ರಾಜಿನಾಮೆಯ ನಿಮಿತ್ತ ಕೊಟ್ಟ ಹೇಳಿಕೆಯೂ, ಪಾರ್ಲಿಮೆಂಟು ಕಾಂಗ್ರೆಸ್ಸಿಗರು ನೆಹ್ರೂರವರ ಧುರೀಣತ್ವಕ್ಕೆ ತಮ್ಮ ಸಹಾನುಭೂತಿ ವ್ಯಕ್ತಪಡಿಸುವ ಧೋರಣೆಯೂ ಕಾಂಗ್ರೆಸ್ಸಿನೊಳಗಿನ ಇಬ್ಬಣಗಳನ್ನು ಸ್ಪಷ್ಟೀಕರಿಸುತ್ತದೆ. ಕಾಂಗ್ರೆಸ್ ಅಧ್ಯಕ್ಷ ಟಂಡನ್ನರು ಕರ್ನಾಟಕ ಪ್ರವಾಸ ಕೈಗೊಳ್ಳುವಾಗಲೇ ದಿಲ್ಲಿಯಲ್ಲಿ ಗುಲ್ಲೆಬ್ಬಿತು. ಇಂದಿನ ಪರಿಸ್ಥಿತಿಯಲ್ಲಿ ನೆಹ್ರೂರವರೊಬ್ಬರೇ ಕಾಂಗ್ರೆಸ್ಸಿನಲ್ಲಿ ಐಕ್ಯವನ್ನು ಸಾಧಿಸಬಲ್ಲರೆಂದು ನಾವು ಕಳೆದ ಬಾರಿ ಸೂಚಿಸಿದ್ದೆವು. ಅಂತಲೇ ಕಾಂಗ್ರೆಸ್ ಕಾರ್ಯಕರ್ತರು ಅವರ ಮುಂದಾಳ್ತನಕ್ಕೆ ಸರ್ವಾನುಮತದ ಸ್ವಾಗತವನ್ನಿತ್ತಿರುವರು. ಟಂಡನ್ನರೂ ಅವರ ಅನುಯಾಯಿಗಳೂ ನೆಹ್ರೂರವರ ಧೋರಣೆಗೆ ಸಂಪೂರ್ಣ ಪ್ರತಿಕೂಲರಾಗಿದ್ದರೆನ್ನುವದಕ್ಕೆ ಈಚೆಗೆ ಕಾಂಗ್ರೆಸ್ಸಿನಲ್ಲಿ ಉದ್ಭೂತವಾದ ನೂತನ ಸಮಸ್ಯೆಗಳೇ ಸಾಕ್ಷಿ ಕೊಡುತ್ತವೆ.

ಉತ್ತರ ಪ್ರದೇಶದ ಮಾಜೀ ರಕ್ಷಣಾ ಖಾತೆಯ ಮಂತ್ರಿ ಶ್ರೀ ಮಿಶ್ರರವರು ನೆಹ್ರೂರವರ ನಿರಂಕುಶಪ್ರಭುತ್ವದ ಧೋರಣೆಯನ್ನು ಖಂಡಿಸಿ ಒಂದು ಹೇಳಿಕೆಯನ್ನಿತ್ತಿರುತ್ತಾರೆ. ಕಾಂಗ್ರೆಸ್ಸಿನ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿ ವರ್ತಿಸಿ ಒಬ್ಬ ವ್ಯಕ್ತಿಗೆ ಸರ್ವಾಧಿಕಾರವನ್ನು ವಹಿಸಿಕೊಡುವದೂ, ಆತನಿಗೆ ವ್ಯಕ್ತಿ ಪೂಜೆ ಸಲಿಸುವದೂ ಕಾಂಗ್ರೆಸ್ಸಿನ ಗೌರವಕ್ಕೆ ಕುಂದು ಮಾತ್ರವಲ್ಲದೆ ಇದಕ್ಕಿಂತ ಮಿಗಿಲಾದ ಅನೈತಿಕ ಕಾರ್ಯ ಬೇರಿಲ್ಲವೆಂದು ಆರೋಪವೆತ್ತಿದ್ದಾರೆ. ಇಂತಹ ಕಾರ್ಯಕ್ಕೆ ಮುಖ್ಯ ಮಂತ್ರಿಗಳಾದ ನೆಹ್ರೂರವರೇ ಪ್ರತ್ಯಕ್ಷವಾಗಿ ತನ್ನ ಸಮ್ಮತಿಯನ್ನಿತ್ತದ್ದು ಸೋಜಿಗದ ಸಂಗತಿಯೆಂದೂ ಹೇಳಿರುವರು. ನೆಹ್ರೂರವರ ವ್ಯಕ್ತಿತ್ವ ಹಾಗೂ ಧೋರಣೆಯ ಮೇಲೆ ಈ ಬಗೆಯ ಖಂಡತುಂಡ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮಿಶ್ರರ ಕಾರ್ಯಸಾಹಸದ್ದೇ ಸರಿ! ಜಾತೀಯ ಸಂಕುಚಿತ ಮನೋವೃತ್ತಿಯವರ ಆದೇಶದಂತೆ ರಾಜಕೀಯ ಸೂತ್ರವನ್ನು ತಿದ್ದುವದರಿಂದ ಜಾಗತಿಕರಂಗದಲ್ಲಿ ಭಾರತವು ತನ್ನ ನೈತಿಕತೆಯನ್ನು ಕಳೆದುಕೊಂಡು ಆತ್ಮಘಾತುಕ ಕಾರ್ಯವನ್ನು ಮಾಡಿಕೊಂಡಂತಾಗುವದನ್ನು ಮಿಶ್ರರು ಮರೆತಿದ್ದಾರೆ. ಅಷ್ಟು ಮಾತ್ರವಲ್ಲದೆ ಜವಾಹರಲಾಲ ನೆಹ್ರೂ ಹಾಗೂ ದಿ| ಸರದಾರ ವಲ್ಲಭಾಯಿ ಪಟೇಲರವರೊಳಗೆ ಭಿನ್ನಾಭಿಪ್ರಾಯಗಳಿದ್ದು ಪಟೇಲರು ಟಂಡನ್ನರ ವ್ಯಕ್ತಿವೈಶಿಷ್ಟ್ಯತೆಯನ್ನು ಎತ್ತಿಹಿಡಿದಿದ್ದರೆಂದೂ ನೆಹ್ರೂರವರೀಗ ಕಾಂಗ್ರೆಸ್ಸಿನ ಅಧ್ಯಕ್ಷನ ಆದೇಶವನ್ನು ಕಡೆಗಣಿಸಿ ಸರ್ವಾಧಿಕಾರಿತ್ವದ ಪ್ರದರ್ಶನವನ್ನು ತೋರಿಸುತ್ತಿದ್ದಾರೆಂದು ಟೀಕೆ ಮಾಡಿರುತ್ತಾರೆ. ನೆಹ್ರೂರವರು ಸೂಚ್ಯವಾಗಿ ಪಟೇಲರಿಗೂ ತನಗೂ ಇದ್ದ ಸಂಬಂಧವನ್ನು ತನ್ನ ಹೇಳಿಕೆಯಲ್ಲಿ ವ್ಯಕ್ತಪಡಿಸಿರುವರು. ಶ್ರೀ ಡಿ. ಪಿ. ಮಿಶ್ರರವರು ನೆಹ್ರೂ ಹಾಗೂ ಅವರ ಅನುಯಾಯಿಗಳು ಟಂಡನ್ನರ ಮೇಲೆ ಆದೇ ವೈರವನ್ನು ಸಾಧಿಸುತ್ತಿರುವದರಿಂದ ತಾನು ಹೊರಗೆ ಬಂದು ಜನರನ್ನು ಸಂಘಟಿಸಿ ಇಂತಹ ಅಕ್ರಮಗಳನ್ನು ತಡೆಯಲು ಯತ್ನಿಸುತ್ತೇನೆಂದಿರುವರು. ನೆಹ್ರೂರವರ ಬಗ್ಗೆ ಇಷ್ಟು ಕಟ್ಟುಗ್ರ ನೀತಿಯನ್ನು ತಾಳಿದವರಾರೂ ಇಲ್ಲ. ಅಂತೆಯೇ ತಿರುಗಿ ಸಪ್ಟೆಂಬರದಲ್ಲಿ ದಿಲ್ಲಿಯಲ್ಲಿ ಜರಗಲಿರುವ ಎ. ಐ. ಸಿ. ಸಿ.ಯಲ್ಲೇನು ನಡೆಯುತ್ತದೆಂಬುದು ಕುತೂಹಲದಾಯೀ ವಿಚಾರ. ಟಂಡನ್ನರು ನೆಹ್ರೂರವರು ರಾಜೀನಾಮೆಯನ್ನು ಹಿಂದೆ ತೆಗೆದುಕೊಳ್ಳುವಂತೆ ಕಾರ್ಯಕಾರೀ ಸಮಿತಿಯ ಮೂಲಕ ಕೇಳಿಕೊಳ್ಳಬಹುದು. ನೆಹ್ರೂ ಕಾರ್ಯಸಮಿತಿಯ ಪುನರ್ಘಟನೆಯ ಹೊರತು ಹಿಂದಕ್ಕೆ ತೆಗೆದುಕೊಳ್ಳುವದಿಲ್ಲ. ಟಂಡನ್ನರು ಪುನರ್ಘಟನೆಗೆ ಒಪ್ಪದ ಕಾರಣ ಅಲ್ಲಿ ಬಿಕ್ಕಟ್ಟು ತಲೆದೋರುವದು ಅನಿವಾರ್ಯ!

ಎ. ಐ. ಸಿ. ಸಿ. ಕೂಡುವಲ್ಲಿ ನೆಹ್ರೂರವರ 'ಐಕ್ಯ' ಸಾಧನೆಗೆ ನೂರಕ್ಕೆ 60ರಷ್ಟು ಬಹುಮತ ಸಿಗುವದೆಂದು ಈಗಲೇ ಗೊತ್ತಾಗಿದೆ. ಆದುದರಿಂದ ನೆಹ್ರೂ ಟಂಡನ್ನರೊಳಗೆ ಇರುವ ಈ ಜಗಳ ಮುಂದೆ ಹೇಗಾದೀತೆಂದು ನಾವು ಈಗಲೇ ಊಹಿಸುವದು ಅಶಕ್ಯವಾದರೂ ಟಂಡನ್ನರೇ ರಾಜಿಯಿತ್ತು ಹೊರಗೆ ಬರುವ ಸಂಭವವೇ ಹೆಚ್ಚೆಂದು ತೋರುತ್ತದೆ. ನೆಹ್ರೂರವರು ಅಧ್ಯಕ್ಷಪದವನ್ನು ವಹಿಸುವದಾದರೆ ತಾನು ರಾಜಿಯನ್ನೀಯಲು ಸದಾ ಸಿದ್ಧನೆಂದು ಟಂಡನ್ನರು ತನ್ನ ಸಂಚಾರೀ ಭಾಷಣದಲ್ಲಿ ವ್ಯಕ್ತಪಡಿಸಿರುವರು!

ಈ ಒಡಕು ಮುಖ್ಯತಃ ಇಬ್ಬರು ನಾಯಕರ ನಡುವೆ ಉಂಟಾಗಿದೆ. ಇಬ್ಬರೂ ಛಲವಾದಿಗಳು. ಈ ಪ್ರಕರಣದಿಂದ ನೆಹ್ರೂರವರಿಗೆ ಪಟ್ಟ ಕಟ್ಟುವದರಿಂದ ಒಂದು ಬಗೆಯ ಐಕ್ಯತೆ ಕಾಂಗ್ರೆಸ್ಸಿನಲ್ಲಿ ಕಂಡು ಬರಬಹುದು! ಕಾಂಗ್ರೆಸ್ಸಿನಿಂದ ಹೊರಹೋದ ಹಲವು ನೆಹ್ರೂ ಮಿತ್ರರು ತಿರುಗಿ ಒಳ ಬರಬಹುದು. ಆದರೆ ಟಂಡನ್ ಪಂಗಡದವರು ತಮಗಾಗಬಹುದಾದ ಮುಖಭಂಗದ ಮೇಲೆ ಬೇರೆ ದಾರಿಯನ್ನು ಹಿಡಿಯಬಹುದೆಂದು ಮಿಶ್ರರವರ ಹೇಳಿಕೆಯಿಂದ ಸಮರ್ಥವಾಗುವದು. ಮಾತ್ರವಲ್ಲ ಟಂಡನ ಮತ್ತು ಅವರ ಅನುಯಾಯಿಗಳಲ್ಲಿ ಕಾಂಗ್ರೆಸ್ಸಿನ ಸೌಮ್ಯ ರೀತಿಯ ತತ್ವಕ್ಕೆ ವಿರುದ್ಧ ಮನೋವೃತ್ತಿ ಬೆಳೆದಿರುವ ಪ್ರಯುಕ್ತ ಅವರು ಕ್ರಾಂತಿಯ ಮಾರ್ಗವನ್ನು ಅನುಸರಿಸಬಹುದೇನೋ ಎಂದು ಭಾಸವಾಗುತ್ತದೆ. ಏಕೆಂದರೆ ಮಿಶ್ರರವರು ಪ್ರಾಂತೀಯ ಮುಖ್ಯ ಮಂತ್ರಿಯವರೊಡನೆ ತನ್ನ ವಿವೇಚನೆಗಾಗಿ ಬರೆದ ಪತ್ರದಲ್ಲಿ ಆ ಅಭಿಪ್ರಾಯವನ್ನು ಸೂಚ್ಯವಾಗಿ ಹೇಳಿದಂತಿದೆ.

ನೆಹ್ರೂರವರು ತನ್ನ ರಾಜಿನಾಮೆಯ ಕಾರಣಗಳನ್ನು ಸ್ಪಷ್ಟವಾಗಿ ಹೇಳದೆಹೋದರೂ ವಿದೇಶಾಂಗ ನೀತಿಯ ಮೇಲೆ ಟಂಡನ ಮತ್ತು ಅವರ ಅನುಯಾಯಿಗಳಿಗೂ, ನೆಹ್ರೂರವರಿಗೂ ತೀವ್ರ ಮತಭೇದವುಂಟಾಗಿದೆಂದು ಸ್ಪಷ್ಟವಾಗುತ್ತದೆ. ಇಬ್ಬರು ಧುರೀಣರಲ್ಲಿ ಯಾರಾದರೊಬ್ಬನನ್ನು ಉಳಿಸಿಕೊಳ್ಳಬೇಕೇ ಹೊರತು ಇಬ್ಬರನ್ನೂ ಕಾಂಗ್ರೆಸು ಉಳಿಸಿಕೊಳ್ಳಲಾಗದೆಂದು ವಿದಿತ ವಿಚಾರವೇ. ನೆಹ್ರೂ ಎಷ್ಟು ಛಲವಾದಿಯೋ-ಟಂಡನ್ ಅಷ್ಟೇ ಹಟವುಳ್ಳವರು! ಇಬ್ಬರೂ ತಮ್ಮ ತಮ್ಮ ವಾದವನ್ನು ಬದಲಿಸದೆ ಇರುವವರಾದ್ದರಿಂದ ಇಬ್ಬರೊಳಗೆ ಐಕ್ಯ ಶಕ್ಯವಿಲ್ಲ! ಎ. ಐ. ಸಿ. ಸಿ. 387 ಸದಸ್ಯರಲ್ಲಿ 200 ಮಂದಿ ಸದಸ್ಯರು : ನೆಹ್ರೂರವರನ್ನೇ ಕಾಂಗ್ರೆಸ್ ಗಾದಿಗೇರಿಸಬಹುದು. ಅರ್ಥಾತ್ ಸರ್ವಾಧಿಕಾರವನ್ನು ಅವರಿಗೆ ವಹಿಸಿಕೊಡಬಹುದು! ಕೊನೆಗಾದರೂ ಆಗುವುದು ಅಷ್ಟೇನೇ!

ನೆಹ್ರೂರವರ ಧುರೀಣತ್ವಕ್ಕೆ ಸಂಪೂರ್ಣ ಬೆಂಬಲ ಸಹಕಾರ ಜನತೆಯಿಂದ ದೊರಕುವದೆನ್ನುವದರಲ್ಲಿ ಸಂದೇಹವಿಲ್ಲ. ದೇಶದ ಗಂಭೀರ ಪರಿಸ್ಥಿತಿಯನ್ನರಿತುಕೊಂಡು ನಾವು ನೆಹ್ರೂರವರ ಕೈಯಲ್ಲಿ ಸರ್ವಾಧಿಕಾರಿತ್ವವನ್ನು ವಹಿಸಿಕೊಡುವುದು ಸುಯೋಗ್ಯವೇ ಆಗಿದೆ. ಇದರಿಂದ ಸಹಜವಾದ ಪ್ರಜಾಪ್ರಭುತ್ವ ಭಾರತಕ್ಕೆ [illegible]ಡಿದಂತಾಗಿಲ್ಲವೆಂದರೂ, ಸರ್ವಾಧಿಕಾರತ್ವವನ್ನು ನಾವಾಗಿಯೇ ಒಪ್ಪಿಸಿಕೊಟ್ಟಂತಾಯಿತಾದರೂ ನೆಹ್ರೂರವರಿಗೆ ಅಧಿಕಾರವನ್ನು ಕೊಡುವುದರಿಂದ ದೇಶಕ್ಕೆ ಅದರಿಂದ ಯಾವ ಬಗೆಯ ಕೇಡೂ ಆಗದೆ ಕ್ಷೇಮವೇ ಆದೀತೆನ್ನುವದರಲ್ಲಿ ಸಂದೇಹವಿಲ್ಲ. ಜಾತೀಯತೆ—ಸ್ವಾರ್ಥಸಂಕುಚಿತತೆಗಳಿಂದ ರಾಜಕೀಯ ಸುಧಾರಣೆ ಮಾಡುತ್ತೇವೆನ್ನುವದು ಸ್ವಪ್ನದ ಮಾತೇ ಸರಿ! ಅರ್ಧ ಶತಮಾನದಿಂದ ಕಾಂಗ್ರೆಸ್ ಆಚರಿಸುತ್ತ ಬಂದಿರುವ ಮೂಲತತ್ವಕ್ಕೆ ಅದು ಕುಠಾರಪ್ರಾಯವಾದೀತು! ಅಂತಲೇ ನೆಹ್ರೂರವರೇ ನಮ್ಮ ನೆಚ್ಚಿನ ಧುರೀಣರಾಗಲೆಂದು ಜನ ಬಯಸಿ ಆಹ್ವಾನವನ್ನೀಯುತ್ತಲಿದೆ!

೧ನೇ ಪುಟದಿಂದ ಮುಂದರಿಸಿದ್ದು

ದೈವದಿಂದ ನಮ್ಮ ದೇಶದ ಪಕ್ಷಪಂಗಡಗಳಲ್ಲಿ ನಾಯಕರಿಗೂ ಪಕ್ಷದವರಿಗೂ ಈ ಬಗೆಯ ಸಂಬಂಧ ಇರುವುದಿಲ್ಲ. ಇಗ್ಲೆಂಡಿನಂತಹ ಸುಧಾರಿತ ರಾಷ್ಟ್ರದಲ್ಲೂ ಕೂಡಾ ಬೇರೆ ಬೇರೆ ಪಕ್ಷಗಳಿವೆ. ಅಲ್ಲಿನ ಆಡಳಿತ ಲೇಬರ ಪಕ್ಷದೊಡನಿರುವದಾದರೂ ಟೋರಿ ಪಕ್ಷವೂ ಇನ್ನೊಂದು ಪ್ರಬಲವಾದ ಪಕ್ಷವಾಗಿದೆ. ಅಲ್ಲಿಯೂ ಮತಭೇದ ಹುಟ್ಟುವುದುಂಟು! ಕೂಲಿಕಾರ ಪಕ್ಷಕ್ಕೆ ಪರಾಜಯವಾದುದುಂಟು! ಆದರೆ ಅಂತಹ ಹೋರಾಟಗಳಲ್ಲಿ ಪಕ್ಷಗಳು ತಮ್ಮ ಆದರ್ಶ ತತ್ವಗಳನ್ನು ಮರೆಯುವುದಿಲ್ಲ. ತಮ್ಮ ತತ್ವವನ್ನು ಪರಿಪೂರ್ಣವಾಗಿ ಸಮರ್ಥಿಸುವ ಏಕಾಭಿಪ್ರಾಯ ಅಲ್ಲಿದೆ. ಇಂತಹ ಒಂದು ಪಕ್ಷ ಇರುವದರಿಂದ ಆಳುವ ಪಕ್ಷಕ್ಕೂ ದೇಶಕ್ಕೂ ಕ್ಷೇಮ. ನಾಳೆ ಕೂಲಿಗಾರ ಪಕ್ಷ ಹೋಗಿ ಕನ್ಸರ್ವೇಟಿವ್ ಪಕ್ಷ ಬಂದರೆ ಅವರೇನೂ ರಾಷ್ಟ್ರವನ್ನಾಳಲು ಹಿಂಜರಿಯುವುದಿಲ್ಲ. ನಮ್ಮಲ್ಲಿಯ ಪಕ್ಷಗಳಾದರೋ ಹಾಗಲ್ಲ! ಕಾಂಗ್ರೆಸ್ಸನ್ನು ಹೊರತು ಯಾವ ಪಕ್ಷಕ್ಕೆ ಆಡಳಿತ ವಹಿಸಿಕೊಟ್ಟರೂ ಆಳುವ ಸಾಮರ್ಥ್ಯ ಅವಕ್ಕಿಲ್ಲ. ಕಾರಣ ಅದರ ತತ್ವಾದರ್ಶಗಳನ್ನು ಪಾಲಿಸುವ ದೃಢತೆ-ಛಲ ಪಕ್ಷಾನುಯಾಯಿಗಳಲ್ಲಿರುವುದಿಲ್ಲ. ಅಂತಲೇ ನಮ್ಮಲ್ಲಿಯ ಪಕ್ಷಗಳು ಅತ್ಯಂತ ದುರ್ಬಲಗಳಾಗಿದ್ದು ಜನತೆಗೆ ಸರಿಯಾದ ಮಾರ್ಗದರ್ಶನ ಮಾಡಲಸಮರ್ಥವಾಗಿವೆ. ಪಕ್ಷಸಂಘಗಳು ಬದುಕಬೇಕಾದರೆ ಜನ ಹೆಚ್ಚುಹೆಚ್ಚಾಗಿ ಬೆಂಬಲ ಕೊಡುವದು ಮಾತ್ರವಲ್ಲದೆ ಆ ಸಂಘದ ಧ್ಯೇಯಧೋರಣೆಯನ್ನು ಚೆನ್ನಾಗಿ ಅಭ್ಯಸಿಸಿ ಆ ಕುರಿತು ಭಿನ್ನಾಭಿಪ್ರಾಯವಿಲ್ಲದೆ ಐಕ್ಯಮತ್ಯದಿಂದ ಅದನ್ನು ಸಾಧಿಸುವವರಾಗಬೇಕು. ಅಂದರೇನೇ ಪಕ್ಷ ಬದುಕುತ್ತದೆ. ಜನತೆಯ ಪ್ರೀತ್ಯಾದರಗಳಿಗೆ ಪಾತ್ರವಾಗಿ ತನ್ನ ಕಾರ್ಯ ನಿರ್ವಹಣೆಗಾಗಿ ಅವರ ಬೆಂಬಲ ಸಹಕಾರವನ್ನು ಗಳಿಸಲು ಸಮರ್ಥವಾಗುತ್ತದೆ!

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ**

ಹಣವನ್ನು ಹಾಕಿರಿ

THE VIJAYA BANK; LTD:;

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕಕ್ಕೆ ಪ್ರಾಶಸ್ತ್ಯವಿಲ್ಲ?

ಕಳೆದ ವಾರ ಹುಬ್ಬಳ್ಳಿಯಲ್ಲಿ ನಡೆದ ಕೆ. ಪಿ. ಸಿ. ಸಿ. ಸಭೆಯಲ್ಲಿ ಮಹತ್ವದ ನಿರ್ಣಯವನ್ನು ಕೈಗೊಳ್ಳಲಾಯಿತು. ಪ್ರಾಂತೀಕರಣ ವಿಚಾರದಲ್ಲಿ ಕಾಂಗ್ರೆಸ್ ಸರಕಾರವು ಸಾವಧಾನ ಧೋರಣವನ್ನು ತಾಳಿದುದರ ಫಲವಾಗಿ ಬೇರೆ ಬೇರೆ ಪಕ್ಷಗಳು ತಲೆಯೆತ್ತಿ ಅದರ ದುರ್ಲಾಭವನ್ನು ಪಡೆಯುತ್ತಿರುವದರಿಂದ ಮುಂಬರುವ ಚುನಾವಣೆಯಲ್ಲಿ ನೂತನ ತೊಡಕುಗಳು ಉದ್ಭೂತವಾಗುವ ಪ್ರಯುಕ್ತ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೆ. ಪಿ. ಸಿ. ಸಿ. ಕಾಂಗ್ರೆಸ್ ವರಿಷ್ಠರಿಗೆ ತಿಳಿಸಿದೆ. ಕೆ. ಪಿ. ಸಿ. ಸಿ. ಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕಕ್ಕೆ ಪ್ರಾಶಸ್ತ್ಯವನ್ನು ಕೊಡಲಾಗಿಲ್ಲವೆಂದೂ ದಕ್ಷಿಣ ಕನ್ನಡ ಜಿಲ್ಲೆಯನ್ನಂತೂ ಪೂರ್ತ ಮರೆತಂತಿದೆಯೆಂದೂ ಹೇಳಿರುವರು. ಕರ್ನಾಟಕದ ಅಭಿವೃದ್ಧಿಗೆ ಸಹಾಯಕವಾಗುವ ಯೋಜನೆಗಳಿಗೆ ಅದರಲ್ಲಿ ಪ್ರಾಶಸ್ತ್ಯ ದೊರಕುವಂತೆ ಪ್ರಯತ್ನಿಸಬೇಕೆಂದೂ ಅವರು ಹೇಳಿದರು. ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಗಡಿನಿರ್ಣಯ ಸಮಿತಿಯ ನೇಮಕವೇ ಮೊದಲಾದ ಪ್ರಾಸ್ತವಿಕ ಕ್ರಮಗಳನ್ನು ಭಾರತ ಸರಕಾರವು ಕೂಡಲೇ ಕೈಗೊಳ್ಳಬೇಕೆಂದು ಪ್ರತಿಪಾದಿಸುವ ಗೊತ್ತುವಳಿಯನ್ನು ಕೆ. ಪಿ. ಸಿ. ಸಿ. ಯು ಸ್ವೀಕರಿಸಿದೆ. ಕೊನೆಗಾದರೂ ಕೆ. ಪಿ. ಸಿ. ಸಿ. ಯು ಜಾಗ್ರತೆಯಾಗಿ ಕನ್ನಡ ಪ್ರಾಂತರಚನೆಯ ಬಗ್ಗೆ ಆಸ್ಥೆ ವಹಿಸಿದ್ದಕ್ಕಾಗಿ ಅಭಿನಂದಿಸಬೇಕಾಗಿದೆ.

ಭಾಷಾವಾರು ಧುರೀಣರ ಸಮ್ಮೇಳನ

ಭಾಷಾವಾರು ಪ್ರಾಂತರಚನೆಗೆ ಗಡಿನಿರ್ಣಯ— ಆರ್ಥಿಕ ಪರಿಸ್ಥಿತಿ ಮುಂತಾದ ವಿಚಾರಗಳಲ್ಲಿ ಒಮ್ಮತವಾದಲ್ಲಿ ಕೂಡಲೇ ಪ್ರಾಂತರಚನಾ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಸಮಿತಿ ಕೇಂದ್ರ ಸರಕಾರಕ್ಕೆ ನಿರ್ದೇಶಿಸಿದೆ. ಅಂತೆಯೇ ಆ ಬಗೆಯ ಸಮಸ್ಯಾತ್ಮಕ ವಿಚಾರಗಳಲ್ಲಿ ಒಂದು ಒಪ್ಪಂದವನ್ನು ಮಾಡಿಕೊಳ್ಳುವದಕ್ಕೋಸ್ಕರ ದ. ಭಾರತ ಭಾಷಾವಾರು ಧುರೀಣರ ಸಮ್ಮೇಳನವನ್ನು ಸಪ್ಟೆಂಬರ ಅಥವಾ ಅಕ್ಟೋಬರದಲ್ಲಿ ನಡೆಸುವದಾಗಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕಲಾ ವೆಂಕಟರಾಯರು ತಿಳಿಸಿರುವರು. ಆಂಧ್ರ ಕರ್ನಾಟಕ ಕೇರಳ, ಮಹಾರಾಷ್ಟ್ರ ಮುಂತಾದ ಪ್ರದೇಶಗಳ ಗಡಿಗಳ ವಿವಾದಾಸ್ಪದವಾದ ವಿಚಾರಗಳನ್ನು ಆರ್ಥಿಕ ವಿಚಾರಗಳನ್ನೂ ಆ ಸಮ್ಮೇಳನ ಎತ್ತಿಕೊಂಡು ತಮ್ಮೊಳಗೆ ಸರ್ವ ರೀತಿಯ ಸಮ್ಮತಿ ಹಾಗೂ ಸಾಮರ್ಥ್ಯವಿದೆಯೆಂಬುದನ್ನು ನೆಹರೂರವರಿಗೆ ಚೆನ್ನಾಗಿ ಮುಂದಟ್ಟು ಮಾಡಬಹುದಾಗಿದೆ. ಈ ಭಾಷಾವಾರು ಪ್ರಶ್ನೆ ಬಂದಾಗಲೆಲ್ಲ ಅವರು ವಿಘ್ನವನ್ನು ತಂದೊಡ್ಡುತ್ತಿರುವ ವಿಚಾರ ಎಲ್ಲರಿಗೂ ತಿಳಿದಿದೆ. ಅಂತೂ ಚುನಾವಣೆಯ ಪೂರ್ವಭಾವಿಯಾಗಿ ಎಲ್ಲ ಪ್ರಾಂತವಾದಿಗಳೂ ಸುಸೂತ್ರವಾದ ಕಾರ್ಯ ಕೈಗೊಳ್ಳುವದು ಅತ್ಯಂತ ಯೋಗ್ಯವೇ ಆಗಿದೆ.

ತಂಡನ್ನರ ಸಂಚಾರೀ ಭಾಷಣಗಳು!

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ ತಂಡನ್ನರು ಕರ್ನಾಟಕ ಸಂಚಾರ ಕೈಕೊಂಡು ಈಗ ಹಿಂತಿರುಗಿದ್ದಾರೆ. ಕಾಂಗ್ರೆಸ್ ಅಧ್ಯಕ್ಷನಿಗೆ ಸಲ್ಲಬೇಕಾದ ಸ್ವಾಗತ ಗೌರವಗಳು ತಂಡನ್ನರಿಗೂ ದೊರಕದೇ ಇಲ್ಲ. ಸಂಚಾರ ಕಾಲದಲ್ಲಿಯ ಅವರ ಭಾಷಣ ಕೇಳಿದವರಿಗೆ ತಂಡನ್ನರ ನಿಜವಾದ ಮನೋಗತವೇನೆಂಬುದು ವ್ಯಕ್ತವಾಗದಿರದು. ಮುಖ್ಯವಾಗಿ ಅವರ ಭಾಷಣಗಳ ಉದ್ದೇಶಗಳೆರಡು. ಒಂದು ಕರ್ನಾಟಕದ ಜನತೆಯ ಜೀವಾಳ ಪ್ರಶ್ನೆಯಾದ ಕರ್ನಾಟಕ ಪ್ರಾಂತರಚನೆಯ ಅನವಶ್ಯಕತೆ. ಇನ್ನೊಂದು ಪಾಕಿಸ್ತಾನವು ಯುದ್ಧ ಹೂಡಿದರೆ ನಾವು ಧೀರೋದಾತ್ತರಾಗಿ ಎದುರಿಸಲು ಸನ್ನದ್ಧರಾಗಿರಬೇಕೆಂಬುದೇ ಆಗಿರುತ್ತದೆ. ಭಾಷಾವಾರು ಪ್ರಾಂತರಚನೆಯ ತತ್ವದಂತೆ ಕರ್ನಾಟಕ ಪ್ರಾಂತ ಆತ್ಯವಶ್ಯವಾಗಿ ರಚನೆಗೊಳ್ಳಬೇಕೆಂದು ಅವರೆ ವಾದವಿದೆ. ತಂಡನ್ನರು ಜನರ ಮನೋಗತವನ್ನರಿತವರಾದ್ದರಿಂದ ಅದನ್ನು ಬಹಳವಾಗಿ ಪುಷ್ಟೀಕರಿಸಿ ಮಾತನಾಡಿದ್ದಾರೆ. ಪಾಕಿಸ್ತಾನದ ವಿಚಾರವಾಗಿ ನಾವು ಜಾಗ್ರತರಾಗಿರಬೇಕೆನ್ನುವ ವಾದ ತಪ್ಪೇನೂ ಅಲ್ಲ. ಆದರೆ ತಂಡನ್ನರು ಇಡಿಯ ಸಂಚಾರೀ ಭಾಷಣದಲ್ಲೆಲ್ಲ ಅದೇ ಎರಡು ಮೂಲ ತತ್ವವನ್ನು ಎತ್ತಿ ಹೇಳುವದಕ್ಕಿಂತ ಕಾಂಗ್ರೆಸ್ಸಿನ ಉಚ್ಚಾದರ್ಶಗಳನ್ನು ಜನತೆ ಚೆನ್ನಾಗಿ ಪರಿಪಾಲಿಸುವಂತೆ ನಿರ್ದೇಶಿಸಬಹುದಿತ್ತು. ಮಾತ್ರವಲ್ಲದೆ ಪಾಕಿಸ್ತಾನದ ಕುರಿತು ಅಷ್ಟು ನಿಷ್ಠುರವಾಗಿ ಪ್ರಚಾರ ಕೈಗೊಳ್ಳುವ ಕಾರ್ಯ ಉಳಿದ ರಾಜಕೀಯ ಧುರೀಣರಿಗಿಂತಲೂ ಹೆಚ್ಚಾಗಿದೆಯೋ ಎಂದು ತೋರುತ್ತದೆ ಪಾಕಿಸ್ತಾನದ ಆಸಮಂಜಸ ಧೋರಣೆಗೆ ಈ ಎಚ್ಚರಿಕೆ ಸಕಾಲಿಕವಾದರೂ ಕಾಂಗ್ರೆಸ್ಸಿನ ಅಧ್ಯಕ್ಷರೇ ಇಂತಹ ಕ್ರಾಂತಿಕಾರಕ ಭಾಷಣಗಳನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳಬಾರದಿತ್ತೆಂದು ನಮಗನ್ನಿಸುತ್ತದೆ. ಪ್ರಾಂತೀಯ ವಿಚಾರವಾಗಿ ಆಧಾರ್ ಭಾಷಾವಾರು ಪ್ರಾಂತೀಕರಣ ವಿಷಯದ ಮೇಲೆ ಅವರು ಕೊಟ್ಟಿರುವ ಭರವಸೆಗಳೂ ಆಶ್ವಾಸನೆಗಳೂ ಕರ್ನಾಟಕದ ಜನತೆಯ ಒಲವನ್ನು ಗಳಿಸಿಕೊಳ್ಳಲು ಹೂಡಿದ ಒಂದು ಗಾರುಡಿ ಮಂತ್ರವೇ ಸರಿ! ಇವೆಲ್ಲ ಚುನಾವಣಾ ತಂತ್ರವೆಂದು ಬೇರೆ ಹೇಳಬೇಕಾಗಿಲ್ಲ!

ಮದ್ರಾಸು ಸರಕಾರದ ನೂತನ ಕರಗಳು

ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪದಲ್ಲಿ ತರುವದರ ಸಲುವಾಗಿ ಸುಮಾರು 137 ಕೋಟಿ ರೂ. ವೆಚ್ಚ ಬರಬಹುದಾಗಿದೆ. ಅಂತಲೇ ಹೊಸ ರೀತಿಯ ಕರಗಳನ್ನು ಹೇರುವದು ಅನಿವಾರ್ಯ. ಈ ಕರಗಳು ಮೂರು ವಿಧಾನಗಳಲ್ಲಿ ಜನತೆಯ ಮೇಲೆ ಬರಲಿವೆ. (೧) ಈಗ ಬೆಳೆಸಲಾಗುತ್ತಿರುವ ಹಣದ ಬೆಳೆಗಳ (ಕಮ್ಮರ್ಶಿಯಲ್ ಕ್ರಾಪ್ಸ್) ಮೇಲೆ. (೨) ನೀರಾವರಿ ಯೋಜನೆಯ ಲಾಭ ಪಡೆಯುವ ಭೂಮಿಗಳ ಮೇಲೆ. (೩) 150ಕ್ಕೂ ಮಿಕ್ಕಿ ಕಂದಾಯ ಕೊಡುವವರ ಮೇಲೆ. ಹೀಗೆ ಹೊಸ ಕರವನ್ನು ವಿಭಾಗಿಸಲಾಗಿರುತ್ತದೆ. ಆರ್ಥಿಕ ಮುಗ್ಗಟ್ಟಿನಿಂದ ಜೀವನ ನಿರ್ವಹಣವೇ ಕಷ್ಟವಾದ ಜನರಿಗೆ ಈ ಕರಭಾರಗಳು ಹೊರಲಾರದ ಭಾರವೇ ಸರಿ. ಅದಲ್ಲದೆ ಮೊದಲನೆಯ ಕರವು ಕೃಷಿ ಕೈಗಾರಿಕೆಗಳಲ್ಲಿ ಉತ್ಸಾಹವನ್ನು ಕುಂದಿದಂತೆ ವಿಶೇಷ ನಿರುತ್ಸಾಹವನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ. 'ಆಹಾರವನ್ನು ಹೆಚ್ಚಾಗಿ ಬೆಳೆಯಿರಿ' 'ಕೃಷಿ ಮಾಡಿರಿ' ಎನ್ನುವ ಸರಕಾರದ ಪ್ರಚಾರ ವೈಖರಿಗೆ ಈ ಕರವು ತೀರ ವಿರುದ್ಧವಾಗಿದೆ. ಅದಲ್ಲದೆ ಮಾವಿನಹಣ್ಣು, ಕಬ್ಬು, ತೆಂಗಿನಕಾಯಿ, ಯಾಲಕ್ಕಿ, ಕಾಫಿ, ಅರಸಿನ ಮುಂತಾದ ಬೆಳೆಗಳ ಮೇಲೆ ಹೇರುವ ಕರದಿಂದ ವಿಶೇಷವಾಗಿ ಬಡವರಿಗೆ ಅನ್ಯಾಯ ಮಾಡಿದಂತಾಗಿದೆ. ಮಹತ್ವದ ಯೋಜನೆಯ ಪೂರ್ತಿಕೆಗೆ ಇದು ಅನಿವಾರ್ಯವೆಂದು ಶ್ರೀ ರೆಡ್ಡಿಯವರು ವಾದಿಸುವದಾದರೂ ಜನತೆಯ ಆರ್ಥಿಕ ಮುಗ್ಗಟ್ಟು— ಅಸ್ಥಿರವಾದ ಜೀವನದ ಕಡೆಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಬೇಕಿತ್ತೆಂದು ನಮಗನ್ನಿಸುತ್ತದೆ. ಅದಲ್ಲದೆ ದಕ್ಷಿಣ ಕನ್ನಡಿಗರಾದ ನಮ್ಮ ಪಾಲಿಗೆ ಕರ ತೆರುವುದಕ್ಕಿಂತ ಹೆಚ್ಚಿನ ಪ್ರಾಪ್ತಿಯೇನೂ ಈ ಯೋಜನೆಯಲ್ಲಿ ಕಂಡುಬರುವುದಿಲ್ಲ! ನೀರಾವರೀ ಯೋಜನೆ–ಗ್ರಾಮಯೋಜನೆ–ಕೈಗಾರಿಕಾಭಿವೃದ್ಧಿ ಆಗಬೇಕಾದ ಕಾರ್ಯವೇನೋ ಸಹಜ. ಆದರೆ ಇದರ ಕಾರ್ಯದಕ್ಷ ಪಾಲ್ಗೊಳ್ಳುವ ಜನತೆಯ ಮೇಲೆ ಸಮಾನತಾ ದೃಷ್ಟಿಯಿಂದೆಂದು ನಾವು ಸೂಚ್ಯವಾಗಿ ಹೇಳಿದರೆ ತಪ್ಪಾಗದು ತಾನೇ!

THE UNITED KARNATAK INSURANCE COMPANY LTD., DHARWAR.

The applications for loans on first mortgages of Building properties are invited with full particulars of the loan required, the approximate value of the Buildings, the rent receivable and tax payable etc ,

For Particulars apply to:-

N. S. Kini,
Director-Secretary.

Dharwar, 18-8-51

IN THE SERVICE OF THE COUNTRY



Bank your Savings with

THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ–

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. no. 320/1951

ನರಸಿಂಹ ಹೆಬ್ಬಾರ — ವಾದಿ

ಮತ್ತು

ದೇವಾಡಿಗ ಸೋಮಾ ಕೂಡಾ — ಪ್ರತಿವಾದಿಗಳು

5 ಐದು ಹೆಂಗಸು } 2ನೇ ಗಂಡ ಹೆಸ್ಸಿನ
6 ಅಕ್ಕಮ್ಮ } ಮಕ್ಕಳು.

ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವವರು. ಪ್ರತಿವಾದಿಯು ವಾದಿಯ ಜಾಬ್ತು ನೀರುವಾರಿಯನ್ನು ಕಟ್ಟಿದ ಬಾಬಿನಲ್ಲಿ ಮತ್ತು ಕಲ್ಲಕಾಭವನ್ನು ಕೆತ್ತಿದಾಗಿದ ಬಾಬಿನಲ್ಲಿ, ಮತ್ತು ಅಕ್ರಮ ಮಾಡಿ ಸ್ವಾಧೀನ ಮಾಡಿಕೊಂಡ ಬಾಬಿನಲ್ಲಿ ಸಹ. ಅಗತ್ಯವುಳ್ಳ ನಿವೃತ್ತಿಗಳನ್ನು ಕೇಳಿ ಹಾಕಲ್ಪಟ್ಟದ್ದರ ಮೇಲೆ ಹಾಕಿದ ದಾವೆಯು ತಾರೀಖು 10-9-51ಕ್ಕೆ ತನ್ನಿಗೆ ಮುಂದೂಡಲಾಗಿರುವದರಿಂದ ಆ ದಿವಸ ನಂ 5 6ನೇ ಪ್ರತಿವಾದಿಗಳು ಹಾಜರಾಗಲಿಕ್ಕೆ ತಪ್ಪಿದ್ದ್ರೆ ಅವರ ಪರೋಕ್ಷದಲ್ಲಿ ಮುಂದಿನ ತನ್ನಿಯು ನಡೆಯುವುದೆಂದು ಈ ಮೂಲಕ ತಿಳಿಸಲಾಗುತ್ತದೆ

Y. Sanjiva Rao, B. A. B. L.
Vakil for Plaintiff

ಕುಂದಾಪುರ, 23-8-1951

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0
ಗುರುವಾರ ಉಡುಪಿ, ೩೦-೮-'೫೧

ಸ್ವವಿಚಾರ

ಇದು ಮೂವತ್ತೊಂದನೆಯ ವರ್ಷದ ಕೊನೆಯ ಸಂಚಿಕೆ. ಕರ್ನಾಟಕ ಪತ್ರಿಕಾ ಪ್ರಪಂಚದಲ್ಲಿ ಇಷ್ಟು ದೀರ್ಘ ಕಾಲದ ಆಯುಷ್ಯಾಲವಿರುವದು ಕೆಲವೇ ಪತ್ರಿಕೆಗಳಿಗೆಂದರೆ ಒಪ್ಪಬಹುದೇನೊ! 'ಜಾತಸ್ಯ ಮರಣಂ ಧ್ರುವಂ' ಹುಟ್ಟಿದವನಿಗೆ ಮರಣ ನಿಶ್ಚಿತವೆಂಬಂತೆ ಕನ್ನಡ ಪತ್ರಿಕೆಗಳ ಸ್ಥಿತಿಗತಿ ಇರುವಾಗ ನವಯುಗ ತನ್ನ 31ನೆಯ ವರ್ಷವನ್ನು ತೀರಿಸಿ 32ನೆಯ ವರ್ಷಕ್ಕೆ ಪದಾರ್ಪಣ ಮಾಡುತ್ತಲಿದೆ. ಈ ವಿಚಾರ ನಮಗೂ ಕನ್ನಡಿಗರಿಗೂ ಹೆಮ್ಮೆಯ ವಿಚಾರವೆಂದು ನಾವು ನಂಬಿದ್ದೇವೆ.

ಸ್ವಾತಂತ್ರ್ಯ ಹೋರಾಟದ ಕಾಲದಿಂದ ಸ್ವಾತಂತ್ರ್ಯ ಸಿದ್ಧಿಯ ವರೆಗೆ ನವಯುಗ ದೇಶದ ಬಗ್ಗೆ ತನ್ನ ಅಮೂಲ್ಯವಾದ ಸೇವೆ ಸಲ್ಲಿಸಿಯದೆ. ಒಂದು ತತ್ವವನ್ನು ಇಲ್ಲವೆ ಆದರ್ಶವನ್ನು ಕೊನೆಯ ತನಕ ಅವಲಂಬಿಸುವದು ಸಾಹಸದ ಮಾತೇ ಸರಿ. ಕಾಂಗ್ರೆಸ್ಸಿನ ಉಚ್ಚಾದರ್ಶಗಳನ್ನು ಎತ್ತಿ ಹಿಡಿಯುವುದರ ಮೂಲಕ ಅದರಲ್ಲಿರುವ ಲೋಪದೋಷವನ್ನು ನಿರ್ದಾಕ್ಷಿಣ್ಯವಾಗಿ— ನಿಷ್ಪಕ್ಷವಾಗಿ ಟೀಕಿಸುವದಕ್ಕೆ ನಾವು ಹಿಂಜರಿಯುದಿಲ್ಲ. ಗಾಳಿ ಬಂದತ್ತ ತೂರಿಕೊಳ್ಳುವ ಅಸ್ಥಿರತೆಯ ಧೋರಣೆಯನ್ನೂ ನಾವು ವಹಿಸಿಲ್ಲ. ಕೀಳ್ಮಟ್ಟದ ಮನರಂಜನೆಯ ಬರಹಗಳಿಂದ ತಾತ್ಕಾಲಿಕವಾಗಿ ಹೆಸ್ಸರಿಯುವಂತೆ ಮಾಡುವ ಉದ್ದೇಶವೂ ನಮ್ಮದಲ್ಲ. ವೈಯಕ್ತಿಕ ಟೀಕೆ— ಖಾಸಗೀ ವಿಚಾರಗಳ ಮೇಲೆ ನಾವು ಸ್ವಾರ್ಥ ಸಾಧಿಸುವ ದುಃಸ್ಸಾಹವನ್ನು ಕೈಗೊಂಡುದೂ ಇಲ್ಲ. ಜನತೆಗೆ ಉತ್ತಮ ವಿಚಾರಗಳನ್ನು ಒದವಿಸಿ ಜ್ಞಾನವಿಕಸನ ಕಾರ್ಯವನ್ನುಂಟು ಮಾಡುವದೇ ನಮ್ಮ ಮೂಲೋದ್ದೇಶ. ಅಂತೆಯೇ ರಾಜಕೀಯ ವಿಚಾರಗಳಲ್ಲಿ ಸರಿಯಾದ ಮಾರ್ಗದರ್ಶನ ಮಾಡುವದು ಇನ್ನೊಂದು ಪ್ರಬಲ ಉದ್ದೇಶವೆಂಬುದನ್ನು ಒತ್ತಿಹೇಳಬೇಕಾಗಿದೆ.

ನಾವು ಸಾಗಿಬಂದ ದಿನಗಳಲ್ಲಿ ಧ್ಯೇಯ ಧೋರಣೆಯನ್ನು ಪಾಲಿಸುತ್ತ ಪ್ರಗತಿಪಥದಲ್ಲಿ ಮುನ್ನಡೆಯುತ್ತ ಬಂದಿದ್ದೇವೆ ಎಂಬ ಆತ್ಮಾಭಿಮಾನವೊಂದನ್ನು ಬಿಟ್ಟರೆ ಉಳಿದ ವಿಚಾರದಲ್ಲಿ ನಮ್ಮ ದುಡಿಮೆಗೆ ತಕ್ಕ ಪ್ರಾಪ್ತಿ ಇಷ್ಟೇಯೇ? ಎನುವ ಪ್ರಶ್ನೆ ನಮ್ಮಲ್ಲಿ ಆಗಾಗ ಮೂಡದೆಯಿಲ್ಲ. ಕರ್ತವ್ಯನಿಷ್ಠರು ಸುಖದುಃಖವನ್ನು ಸಮನಾಗಿ ಕಾಣಬೇಕಾದುದು ಸಹಜವೇ. "ಇದರಲ್ಲಿ ತಮ್ಮ ಪಾಲಿನ ಕರ್ತವ್ಯವೂ ಇದೆ" ಎಂದು ಜನತೆಯು ಮನಗೊಂಡು ಸಹಕರಿಸುವಂತಾದರೆ ನಮ್ಮ ಪಾಲಿನ ಭಾರ ತುಸು ಕಡಿಮೆಯಾದಿತೋ ಏನೊ!

ವಿಷಯ ವೈವಿಧ್ಯತೆಗಳಿಂದಲೂ— ಇನ್ನಿತರ ನೂತನ ವಾತಾವರಣಗಳಿಂದಲೂ 'ನವಯುಗ'ವನ್ನು ಇನ್ನಷ್ಟು ಸುಂದರವಾಗಿಸಬೇಕೆಂಬ ನಮ್ಮ ಬಯಕೆ ಇನ್ನೂ ಕಲ್ಪನೆಯಲ್ಲೇ ಉಳಿದಿದೆ. ಕಳೆದ ವರ್ಷ ನಾವಿತ್ತ ಭರವಸೆಯನ್ನು ಪೂರೈಸದೇ ಹೋದರೂ ಅನಿರೀಕ್ಷಿತವಾಗಿ ಕಾಗದದ ಬೆಲೆ— ತುಟ್ಟಿ ಹೆಚ್ಚಾದುದರಿಂದ ವಾಚಕರೂ ನಮ್ಮ ಹಿತಚಿಂತಕರೂ ಅದನ್ನು ಮನ್ನಿಸಿಯಾರೆಂಬ ಭರವಸೆ ನಮಗಿದೆ. 32ನೆಯ ನೆಯ ವರ್ಷದಲ್ಲಿ ನಮ್ಮ ಕೈಲಾದ ಸುಧಾರಣೆಯನ್ನು ಮಾಡುವ ಭರವಸೆಯನ್ನು ತಿರುಗೊಮ್ಮೆ ವ್ಯಕ್ತಪಡಿಸುತ್ತೇವೆ.

ಕೊನೆಯದಾಗಿ ಪತ್ರಿಕೆಯ ಜೀವಾಳವಾದ ವಿಚಾರಪೂರ್ಣ ಲೇಖನವನ್ನಿತ್ತು, ನವಯುಗದ ಅಂತಃಸತ್ವವನ್ನು ಬೆಳಗಿಸಿದ ಲೇಖಕ ವರ್ಗಕ್ಕೂ, ಜಾಹೀರಾತುದಾರರಿಗೂ, ಚಂದಾದಾರರಿಗೂ ನಮ್ಮ ಹೃತ್ಪೂರ್ವಕ ಅಭಿವಂದನೆಗಳನ್ನು ಸಲಿಸದಿರಲಾರೆವು. ಮೂವತ್ತೊಂದು ವರ್ಷದ ನಮ್ಮ ಧ್ಯೇಯ ಸಾಧನೆಯಲ್ಲಿ— ಸುಖದುಃಖಗಳಲ್ಲಿ— ಸಹಭಾಗಿಗಳಾಗಿ ಬಂದ ಸನ್ಮಿತ್ರರು ಈ ಆತ್ಮೀಯತೆ ಚಿರಕಾಲ ಉಳಿಯಲೆಂದು ಆಶಿಸುತ್ತೇವೆ.

ಉಡುಪಿಯಲ್ಲಿ
ಮೆಡಿಕಲ್ ಕಾಲೇಜ್

ಎಕಡಮಿ ಆಫ್ ಜನರಲ್ ಎಜ್ಯುಕೇಶನ್ ಮಣಿಪಾಲದವರು ಈಗಾಗಲೇ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಜೋಡಿಸಲ್ಪಟ್ಟ ದ್ವಿತೀಯ ಶ್ರೇಣಿಯ ಕಾಲೇಜೊಂದನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿರುವುದು ಅಭಿಮಾನ ಹಾಗೂ ಹೆಮ್ಮೆಯ ಸಂಗತಿ! ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಂತಹ ಆದರ್ಶ ನಿರ್ಮಾಣ ಕಾರ್ಯವನ್ನು ಕುತೂಹಲಪೂರ್ಣವಾಗಿ ನೋಡುತ್ತಿರುವಾಗಲೇ ಈ ಮೂರು ವರ್ಷ ಕಾಲಾವಧಿಯಲ್ಲೇ ಉಡುಪಿಯಲ್ಲಿ ಮೆಡಿಕಲ್ ಕಾಲೇಜೊಂದನ್ನು ತೆರೆಯುವ ಸಂತೋಷದ ಸುದ್ದಿಯನ್ನು ಕೇಳುತ್ತಲಿದ್ದೇವೆ. ಮಹಾತ್ಮಾ ಗಾಂಧೀ ಕಾಲೇಜಿನ ಸುಂದರ ಕಟ್ಟಡಕ್ಕೆ ಎಕಡಮಿಯವರು ಪಟ್ಟ ಸಾಹಸ ಅಪೂರ್ವವಾದುದು. ಅಚಲಶ್ರದ್ಧೆ—ಕರ್ತವ್ಯದೃಷ್ಟಿಯುಳ್ಳ ಧ್ಯೇಯವಾದಿಗಳಿಗೆ ತಮ್ಮ ಮುಂದಿನ ಕಾರ್ಯವೆಲ್ಲ ಲೀಲಾಜಾಲವಾಗಿ ಕೈಗೂಡುವದೆನ್ನುವದಕ್ಕೆ ಎಂ. ಜಿ. ಎಂ ಕಾಲೇಜ್ ಉತ್ತಮ ಉದಾಹರಣೆ!

ಮೆಡಿಕಲ್ ಕಾಲೇಜಿನ ಪ್ರಶ್ನೆ ಅದಕ್ಕಿಂತಲೂ ಮಹತ್ವದ್ದು., ಲಕ್ಷ ಲಕ್ಷ ವೆಚ್ಚಮಾಡಿ ನಿರ್ಮಾಣ ಮಾಡಬೇಕಾದ ಕಾರ್ಯವಿದು. ಲೆಬೋರ್ಟರಿ—ಆಸ್ಪತ್ರೆ—ತಜ್ಞ ಡಾಕ್ಟರರೂ ಬೇಕು. ಇಡಿಯ ಮದ್ರಾಸು ಪ್ರಾಂತದಲ್ಲಿ ಇರುವ ಮೆಡಿಕಲ್ ಕಾಲೇಜಿನಂತೆಯೇ ಉಡುಪಿಯ ಕಾಲೇಜೂ ಸರಿಸಮಾನವೆಂಬಂತೆ ನಿಲ್ಲಬೇಕಾಗುತ್ತದೆ. ಮೈಸೂರಿನಂತಹ ರಾಜಧಾನಿಯಲ್ಲೂ ಇದ—ಇಲ್ಲವೆ ಈ ವರೆಗೆ ಅವರಿಂದಾಗದ ಮಹತ್ವದ ಕಾರ್ಯವನ್ನು ಉಡುಪಿಯಲ್ಲಿ ಎಕಡಮಿಯವರು ನಡೆಸುವ ಪೂರ್ವಸಿದ್ಧತೆ ಮಾಡಿರುತ್ತಾರೆ. ಈ ವಿಚಾರ ನಿಜವಾಗಿಯೂ ಎಲ್ಲರನ್ನೂ ಬೆರಗುಗೊಳಿಸುವಂತಹದೇ!

ಇದೇ ಅಕ್ಟೋಬರಲ್ಲಿ ಆರಂಭವಾಗುವ ಈ ಕಾಲೇಜಿನ ಪಾಠಪಟ್ಟಿಕ್ರಮವು ಮದ್ರಾಸ ಮೆಡಿಕಲ್ ಕಾಲೇಜಿನ (M. B. B. S.) ಕ್ರಮದಂತೆಯೇ ಸಾಗುತ್ತದೆ. 5½ ವರ್ಷದ ವಿದ್ಯಾಭ್ಯಾಸಕ್ರಮ ಪ್ರತಿವತ್ಸರವೂ ನಿಗದಿಯಾಗಿಯೇ ಇರುತ್ತದೆ ವಾರ್ಷಿಕ ಫೀಯೆಂದು ರೂ 750ನ್ನು 100 ವಿದ್ಯಾರ್ಥಿಗಳಿಂದ ವಸೂಲು ಮಾಡಿ ಈಗ ಕಾಲೇಜನ್ನು ಆರಂಭಿಸುವ ನಿರೀಕ್ಷೆಯಿದೆ ಅರ್ಥಾತ್ ಈಗಲೇ ಸರಕಾರದ ಅನುಮತಿಯನ್ನು ಕಾಯದೆ ಸ್ವಾರ್ಜಿತದಿಂದ ಕಾಲೇಜು ನಡೆಸುವದು ಎಕಡೆಮಿಯವರ ಮೂಲೋದ್ದೇಶವಾಗಿದೆ. ವರ್ಷವರ್ಷಕ್ಕೆ ಕೂಡಿಬರುವ ಹಣದಿಂದ ಕಾಲೇಜಿಗೆ ಬೇಕಾಗುವ ಲೆಬೋರ್ಟರಿ, ಕಟ್ಟಡವನ್ನು ಪೂರೈಸುವ ನಿರೀಕ್ಷೆಯಿದೆ. ಮೂರು ನಾಲ್ಕು ವರ್ಷಗಳ ಈ ಶ್ರಮದ ಫಲವಾಗಿ ಕಾಲೇಜು ನೂತನ ಡಾಕ್ಟರುಗಳನ್ನು ಸಿದ್ಧಗೊಳಿಸಲು ಸಮರ್ಥವಾಗಬಹುದು. ಮದ್ರಾಸ ಯುನಿವರ್ಸಿಟಿಯ ಎಂ. ಬಿ ಬಿ. ಎಸ್. ನಷ್ಟೇ ಅರ್ಹತೆಯುಳ್ಳದಾಗಬಹುದಾಗಿದೆ ಆದರೆ ಇದನ್ನು ಮನ್ನಿಸುವ ಇಲ್ಲವೆ ವಿಶ್ವವಿದ್ಯಾಲಯಕ್ಕೆ ಜೋಡಿಸುವ ನಿರ್ಧಾರವನ್ನು ಅದು ಒಪ್ಪಿಕೊಳ್ಳುವ ಭರವಸೆಯೊಂದೇ ಎಕಡಮಿಯವರ ಕಾರ್ಯಕ್ರಮದ ಮೂಲ ತಳಹದಿಯಾಗಿದೆ. ಒಂದು ವೇಳೆ ಒಪ್ಪದೆ ಹೋದರೆ ಶಸ್ತ್ರಕ್ರಿಯೆಯೇ ಪ್ರಧಾನವುಳ್ಳ ಈ ಡಿಗ್ರಿಯು ಜಾತೆಯ ದೃಷ್ಟಿಯಿಂದ ಎಷ್ಟರ ಮಟ್ಟಿನ ಪ್ರಾಶಸ್ತ್ಯ ಪಡೆದೀತೆನ್ನುವದರಲ್ಲಿ ಎಲ್ಲರಿಗೂ ಕುತೂಹಲವಿರುವದು ಸ್ವಭಾವಿಕವೇ .

ವಿಪುಲವಾಗಿ ಬೆಳೆಯುತ್ತಿರುವ ಜನಕ್ಕೆ ಸರಿಯಾದ ವೈದ್ಯಕೀಯ ರಕ್ಷಣೆಯಿಲ್ಲದ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವದು ನಮ್ಮದು ದುರ್ದೈವವೆಂದೇ ಹೇಳಬೇಕು. ಇದಕ್ಕೆ ಸರಿಯಾಗಿ ಮೆಡಿಕಲ್ ಕಾಲೇಜುಗಳ ನಿರ್ಮಾಣಗೊಂಡುದಿಲ್ಲ ಇರುವ ಕಾಲೇಜಿನಲ್ಲೂ ಸಾಕಷ್ಟು ಸ್ಥಾನಗಳಿಲ್ಲ. ಪ್ರವೇಶಕೊಡುವ ವಿಚಾರದಲ್ಲಂತೂ ಸರಕಾರದ ಧೋರಣೆ ಪ್ರಜಾಪ್ರಭುತ್ವದ ಮಾದರಿಗೆ ತೀರಾ ವಿರುದ್ಧವಾದುದು! ಅಂದಮೇಲೆ ನಮ್ಮ ಜನದ ಆರೋಗ್ಯ ರಕ್ಷಣೆಯಾಗುವದೆಂದರೂ ಎಂತು? 'ಎಲ್ಲ ಕೆಲಸಕ್ಕೂ ಸರಕಾರದ ಮುಖ ಕಾಣಬಾರದೆಂದು' ನಮ್ಮ ನಾಯಕರು ಹೇಳುತ್ತಿರುವ ಮಾತನ್ನು ನಾವು ಲಕ್ಷ್ಯಕ್ಕೆ ತೆಗೆದುಕೊಂಡರೆ ಎಕಡಮಿಯವರ ಕಾರ್ಯ ನೀತಿ ಮತ್ತು ಸ್ತುತ್ಯವೆಂದು ತೋರುತ್ತದೆ. ಎಲ್ಲ ದೃಷ್ಟಿಯಿಂದಲೂ ಅಲಕ್ಷಿಸಲ್ಪಟ್ಟ ದ. ಕನ್ನಡದ ಹಿತಚಿಂತನೆಯನ್ನು ನಮ್ಮ ನಮ್ಮವರೇ ಚಿಂತಿಸಬೇಕಾಗಿದೆ. ಹಲವಾರು ಉದ್ಯಮಗಳು ಈಗ ತಲೆಯೆತ್ತಿ ನಿಂತಿರುವುದೂ ದ. ಕನ್ನಡದ ಕೀರ್ತಿಯನ್ನು ಬೆಳಗುತ್ತಿರುವದೂ ನಮ್ಮವರ ಸಾಹಸದ ಫಲದಿಂದಲೇ. ಡಾ। ಟಿ. ಮಾಧವ ಪೈಗಳು ಅಂತಹ ಸಾಹಸೋದ್ಯಮಿಗಳಲ್ಲೊಬ್ಬರು. ಸದ್ದಿಲ್ಲದೆ ಗುಮುಟ್ಟುವ ಕರ್ತೃತ್ವಶಾಲೀ ಶಕ್ತಿ ಅವರ ಹುಟ್ಟುಗುಣವೆಂದೇ ಹೇಳಬೇಕು. ಎಕಡಮಿಯ ಸೂತ್ರಧಾರಿಗಳಾಗಿದ್ದುಕೊಂಡು ಅವರು ಉಡುಪಿಯ ಪುರೋಭಿವೃದ್ಧಿಯನ್ನು ಸಾಧಿಸಿದ್ದಾರೆ. ಅವರು ರೂಪಿಸುತ್ತ ಬಂದಿರುವ ಮೆಡಿಕಲ್ ಕಾಲೇಜು ಸರಕಾರದ ಅನುಮತಿಯಿಲ್ಲದೆ ಆರಂಭವಾಗುವದಾದರೂ ಮುಂದೆ ಆ ಕಾರ್ಯಕ್ಕೆ ಸರಕಾರ ಒಪ್ಪಿಗೆ ಕೊಟ್ಟೇ ಕೊಡುತ್ತದೆನ್ನುವದಕ್ಕೆ ಅನುಮಾನವಿಲ್ಲ. ಡಾ। ಪೈಗಳು ಕೈಗೊಂಡ ಪ್ರತಿಯೊಂದು ಕಾರ್ಯವೂ ಯಶಸ್ವಿಯಾಗಿ ಸಹಕಾರಿಗಳಾದಂತೆ ಮೆಡಿಕಲ್ ಕಾಲೇಜೂ ಆಗಲೆಂದು ಹಾರೈಸುತ್ತೇವೆ.

ಮಂಗಳೂರು

ಸ್ವಾಮಿ ಶ್ರದ್ಧಾನಂದ ಸೇವಾಶ್ರಮದಲ್ಲಿ— ೧೫-೮ರಂದು ಸ್ವತಂತ್ರ್ಯ ದಿನಾಚರಣೆ ನಿಮಿತ್ತ ಡಾ। ಕೇಶವ ಪೈಗಳು ಪೂರ್ವಾಹ್ನ ರಾಷ್ಟ್ರಧ್ವಜಾರೋಹಣ ನಡೆಸಿದರು. ಆಶ್ರಮದ ಬಾಲಕರು ವೇದ ಮಂತ್ರಗಳನ್ನು ಪಠಿಸಿ ಪ್ರಾರ್ಥನೆ ಮಾಡಿದ ನಂತರ ಹೃಷೀಕೇಶದಿಂದ ಬಂದಿರುವ ಸ್ವಾಮಿ ಸಿದ್ಧನಾಥಜೀಯವರು 'ಸುಖಪ್ರಾಪ್ತಿ ಮತ್ತು ದುಃಖದ ನಿವೃತ್ತಿ' ಕುರಿತು ಉಪನ್ಯಾಸವಿತ್ತರು. ಶ್ರೀ ವೈಕುಂಠ ಬಾಳಿಗರಿಂದ ಬಾಲಕರಿಗೆ ತಿಂಡಿಪಂಚೋಣವೂ ಸ್ವಾಮಿ ಸಿದ್ಧನಾಥಜೀಯವರಿಂದ ಭೋಜನವೂ ಕೊಡಲಾಯಿತು. ಶ್ರೀ ಜಯಂತಿಲಾಲರು ರೂ 51/-ನ್ನು ದಾನವಿತ್ತರು. ಮರುದಿವಸ ಶ್ರೀ ರಮಣಲಾಲ್ ಕೋಠಾರಿಯವರು ಬಾಲಕರಿಗೆ ಅನ್ನದಾನ ಮಾಡಿದರು.

ವಾಕ್ಸ್ಪರ್ಧೆಯ ಬಹುಮಾನ— ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಮಂಗಳೂರು ಕೇಂದ್ರದಿಂದ ವ್ಯವಸ್ಥಾಪಿಸಲ್ಪಟ್ಟ ವಾಕ್ಸ್ಪರ್ಧೆಯಲ್ಲಿ ಈ ಬಾರಿಯೂ ಮಂಗಳೂರಿನ ರಜಾರಿಯೋ ಹ್ಯಾಸ್ಕೂಲಿನ ವಿದ್ಯಾರ್ಥಿ ಲಕ್ಷ್ಮೀನಾರಾಯಣಗೆ ಕನ್ನಡದಲ್ಲಿ ಪ್ರಥಮ ಬಹುಮಾನವೂ ಹಿಂದಿಯಲ್ಲಿ ದ್ವಿತೀಯ ಬಹುಮಾನವೂ ದೊರೆತಿದೆ.

ಶ್ರೀ ಕೃಷ್ಣ ಜನ್ಮಾಷ್ಟಮಿ—ಸಮಾರಂಭವು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರಗಿತು. ಶಾಲಾ ಕನ್ನಡ ಪಂಡಿತರ ಸ್ವಾಗತ ಭಾಷಣವಾದ ನಂತರ ವಿದ್ಯಾರ್ಥಿನಿಯರು ದೇವರ ನಾಮಗಳನ್ನು ಹಾಡಿದರು ಚಿಕ್ಕಮಕ್ಕಳು ಕುಮ್ಮಿಯಾಟವಾಡಿದರು. ಸಭಾಧ್ಯಕ್ಷರು 'ಭಕ್ತಿಯ ಮೂಲಕ ಉತ್ತಮ ಜೀವನವೆಸಗುವುದು ಸುಲಭವಾದುದು. ಶ್ರೀ ಕೃಷ್ಣನ ಜೀವನವು ನಮಗೆಲ್ಲರಿಗೆ ಆನುಕರಣೀಯವಾಗಿದೆ' ಎಂದರು.

ರಂಗಭೂಮಿ ಉದ್ಘಾಟನೆ— ಕೊಂಕಣ ನಾಟಕ ಸಭೆಯವರ 'ಜೋನ್‌ಬೋಸ್ಕೊ' ರಂಗ ಭೂಮಿಯ ಉದ್ಘಾಟನೆಯನ್ನು ೨೨.



9ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ ಆರ್. ರಾಜರತ್ನಂ, ಅವರು ನೆರವೇರಿಸಿದರು. ಸ್ವಾಗತ ಭಾಷಣವಾದ ನಂತರ ಲ್ಯಾಟ್ ರೆವರೆಂಡ್ ಮೋಜರ್ ಜೆ ಎಲ್ ಡಿ ಸೋಜರು ಕೊಂಕಣಿ ನಾಟಕ ಸಭೆಯವರ ಸಾಹಸ ಕಾರ್ಯವನ್ನು ಹರಸಿದರು. ಆ ಮೇಲೆ ಅಧ್ಯಕ್ಷರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕೊಂಕಣಿ ನಾಟಕ ಸಭೆಯವರ ನಾಟಕಾದಿಗಳಿಂದ ಸಮಾಜಕ್ಕೆ ಬಹಳವೂ ಮನೋರಂಜನೆಯೂ ದೊರೆಯುವಂತಾಗಿ ಸಭೆಯು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದರು. ವಿನೋದ ಕಾಲಕ್ಷೇಪ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಾಗಿ ಅರ್ಜಿ ಹಾಕುವವರಿಗೆ ಸೂಚನೆಗಳು.

೧. ತಾ. ೫-೯-೫೧ನೇ ಬುಧವಾರ ಸಂಜೆ ೬ ಗಂಟೆಯೊಳಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಆಫೀಸು ಕೇಶವಾಪುರ, ಹುಬ್ಬಳ್ಳಿ, ಈ ವಿಳಾಸಕ್ಕೆ ಮುಟ್ಟುವಂತೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಅರ್ಜಿಗಳನ್ನು ಕಳುಹಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಗಳು ಸ್ವೀಕರಿಸಲ್ಪಡಲಾರವು. ಅರ್ಜಿ ಫಾರ್ಮ್‌ಗಳನ್ನು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಿಂದ ಅಥವಾ ಹಂಪನ ಕಟ್ಟೆಯ ಕೆನರಾ ಛಾಪಖಾನೆಯಿಂದ ಪಡಕೊಳ್ಳಬಹುದು.

೩. ಪ್ರಾಂತಿಕ ಎಸೆಂಬ್ಲಿಗೆ ಉಮೇದ್ವಾರರಾಗಿ ಅರ್ಜಿ ಕಳುಹಿಸುವವರು ಪ್ರವೇಶ ಹಾಸಲಾಗಿ ರೂ. ೧೦೦ನ್ನೂ ಪಾರ್ಲಿಮೆಂಟಿಗೆ ಉಮೇದ್ವಾರರಾಗಿ ಅರ್ಜಿ ಹಾಕುವವರು ರೂ. ೨೫೦ನ್ನೂ ಮನಿಯಾರ್ಡರ್ ಮೂಲಕ ಕಳುಹಿಸತಕ್ಕದ್ದು. ಇದುವೊರತು ಚುನಾವಣಾ ಪ್ರಚಾರವೇ ಮೊದಲಾದ ಕೆಲಸಕ್ಕಾಗಿ, ಪ್ರಾಂತಿಕ ಎಸೆಂಬ್ಲಿಗೆ ಅರ್ಜಿಹಾಕುವವರು ರೂ. ೫೦೦ ಡಿಪಾಜಿಟ್ ಆಗಿ ಕಳುಹಿಸ ತಕ್ಕದ್ದು. ಆರಿಸಲ್ಪಡದಿದ್ದಲ್ಲಿ ಈ ಡಿಪಾಜಿಟ್ ಹಣವು ಹಿಂದೆ ಸಿಗುವುದು. ಆದರೆ ಪ್ರವೇಶ ಹಣವು ಯಾವ ಸಂದರ್ಭದಲ್ಲೂ ಹಿಂದೆ ಸಿಗಲಾರದು. ಒಂದು ವೇಳೆ ಆರಿಸಲ್ಪಡದ ಉಮೇದ್ವಾರರು ಕಾಂಗ್ರೆಸ್ ಉಮೇದ್ವಾರಿಯ ವಿರುದ್ಧವಾಗಿ ನಿಂತಲ್ಲಿ ಯಾ ಕೆಲಸ ಮಾಡಿದಲ್ಲಿ ಡಿಪಾಜಿಟ್ ಹಣ ಸಹಾ ಹಿಂದೆ ಸಿಗಲಾರದು.

೪. ಒಂದಕ್ಕಿಂತ ಹೆಚ್ಚು ಮತದಾರ ಸಂಘಗಳಿಗೆ ಅರ್ಜಿ ಹಾಕುವವರು ಒಂದು ಪ್ರವೇಶ ಹಾಸಲು ಮತ್ತು ಡಿಪಾಜಿಟನ್ನು ಕಟ್ಟಿದರೆ ಸಾಕು. ಪ್ರಾಂತಿಕ ಎಸೆಂಬ್ಲಿ ಹಾಗೂ ಪಾರ್ಲಿಮೆಂಟಿಗೆ ಉಮೇದ್ವಾರರಾಗಿ ಅರ್ಜಿ ಹಾಕಲಿಚ್ಛಿಸುವವರು ಎರಡೂ ಮತದಾರ ಸಂಘಗಳ ನಿಶ್ಚಿತ ಪ್ರವೇಶ ಹಾಸಲು ಮತ್ತು ಡಿಪಾಜಿಟನ್ನು ಕೊಡತಕ್ಕದ್ದು. ಇದರಲ್ಲಿ ಹೆಚ್ಚಿನ ಪ್ರಮಾಣದ ಐವೇಜನ್ನು ಇಟ್ಟುಕೊಂಡು ಉಳಿದುದನ್ನು ಹಿಂದಕ್ಕೆ ಕೊಡಲಾಗುವುದು.

೫. ಅರ್ಜಿಯ ಮೂರು ಪ್ರತಿಗಳನ್ನು ಪ್ರದೇಶ ಕಾಂಗ್ರೆಸ್ ಕಮಿಟಿಗೆ ಕಳುಹಿಸತಕ್ಕದ್ದು. ಇವರಲ್ಲಿ ಕನಿಷ್ಠಪಕ್ಷ ಒಂದು ಪ್ರತಿಯಾದರೂ ಇಂಗ್ಲಿಷ್‌ನಲ್ಲಿ ಬೇಕು.

೬. ಯಾವನೇ ಒಬ್ಬ ಕಾಂಗ್ರೆಸ್ ಸದಸ್ಯನು ತನ್ನ ಇಚ್ಛೆಪ್ರಕಾರ ನಿರ್ದಿಷ್ಟಪಡಿಸಿದ ಮತದಾರ ಸಂಘದಲ್ಲಿ ಕಾಂಗ್ರೆಸ್ ಉಮೇದ್ವಾರನಾಗುವಂಥ ಇನ್ನೊಬ್ಬ ಕಾಂಗ್ರೆಸ್ ಸದಸ್ಯನ ಹೆಸರನ್ನು ಪ್ರವೇಶ ಕಮಿಟಿಗೆ ಸೂಚಿಸಬಹುದು. ಇಂಥವನು ಆರಿಸಲ್ಪಟ್ಟರೆ ಕಾಂಗ್ರೆಸ್ ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಬೇಕಾಗುವುದು.

(ಸಹಿ) ಕೆ. ಕೆ. ಶೆಟ್ಟಿ,
ಪ್ರಧಾನಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ಉಡುಪಿ

ಉಡುಪಿಯಲ್ಲಿ ಶ್ರೀ ವಿ. ಎಸ್. ಕುಡ್ವರಿಗೆ ಸತ್ಕಾರ

ಸಿಂಡಿಕೇಟಿನಲ್ಲಿ: ಪರದೇಶದ ಪ್ರವಾಸವನ್ನು ಮುಗಿಸಿಕೊಂಡು ಈಗತಾನೆ ಮರಳಿ ಬಂದಿರುವ ಸಿ. ಪಿ. ಸಿ. ಯ ಮೆನೇಜಿಂಗ್ ಡೈರೆಕ್ಟರ್ ಹಾಗೂ 'ನವಭಾರತ'ದ ಸಂಪಾದಕ ಶ್ರೀ ವಿ. ಎಸ್. ಕುಡ್ವರವರಿಗೆ ತಾ. 23ರಲ್ಲು ಮಧ್ಯಾಹ್ನ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ ಡಿನ್ನರ್ ಪಾರ್ಟಿ ಕೊಟ್ಟು ಸತ್ಕರಿಸಲಾಯಿತು. ಕೊನೆಯಲ್ಲಿ ಡಾ। ಟಿ. ಮಾಧವ ಪೈಗಳು ಶ್ರೀ ಕುಡ್ವರ ವ್ಯಕ್ತಿತ್ವ, ಉದ್ಯೋಗ ಪ್ರಿಯತೆಗಳನ್ನು ಕೊಂಡಾಡಿ ಇವರ ವಿದೇಶ ಸಂಚಾರದ ಲಾಭ ನಮ್ಮ ನಾಡಿಗೆ ಆಗುವಂತಾಗಲೆಂದರು. ಶ್ರೀ. ಕುಡ್ವರು ತಮ್ಮ ಪ್ರವಾಸದ ಕೆಲವೊಂದು ಅನುಭವ, ಅಭಿಪ್ರಾಯಗಳನ್ನು ವಿವರಿಸಿದರು, ಶ್ರೀ ಟಿ. ಎ. ಪೈಗಳು ಧನ್ಯವಾದವನ್ನರ್ಪಿಸಿದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ ಆರ್ಟ್ಸ್ ಎಸೋಸಿಯೇಶನ್ ಕರೆಯಲಾದ ಸಮಾರಂಭವನ್ನು ಶ್ರೀ ಕುಡ್ವರವರು ನೆರವೇರಿಸಿದರು. ಪ್ರಿನ್ಸಿಪಾಲ್ ಸುಂದರ ರಾಯರು ಅಧ್ಯಕ್ಷತೆ ವಹಿಸಿದ್ದು, ಶ್ರೀ ಭಾಸ್ಕರ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಪತ್ರಿಕೋದ್ಯೋಗಿ ಸಂಘದ ಪರವಾಗಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಅಂದು ಸಂಜೆ ಶ್ರೀ ಕುಡ್ವರಿಗೆ ಉಪಾಹಾರ ಸತ್ಕಾರವಿತ್ತು ಗೌರವಿಸಲಾಯಿತು. ಪತ್ರಿಕೋದ್ಯೋಗಿಗಳ ಪರವಾಗಿ ಶ್ರೀ ಎ. ಪದ್ಮನಯ್ಯ ಶೆಟ್ಟರು ಸ್ವಾಗತವಿತ್ತು ಅತಿಥಿಯ ಪರಿಚಯವ ಮಾಡಿದರು. ಶ್ರೀ ಕುಡ್ವರು ಆಧಾರ ಸಹಿತ ಹಿಂದೂಸ್ಥಾನ ಮತ್ತು ವಿದೇಶ ಪತ್ರಿಕೆಗಳ ತುಲನೆ ಮತ್ತು ಪತ್ರಿಕೋದ್ಯೋಗಿಗಳ ಜವಾಬ್ದಾರಿ ಮತ್ತು ಮಹತ್ವದ ಕುರಿತು ಭಾಷಣವಿತ್ತರು. ನಂತರ ಡಾ। ಮಾಧವ ಪೈ, ಶ್ರೀ ಕಾಲಿಗಿ ಶೇಷಾಚಾರ್ಯರು ಸಂದರ್ಭೋಚಿತ ಮಾತುಗಳನ್ನಾಡಿದರು.

ಹನುಮಾನ್ ಮೋಟಾರ್ ಕಂಪೆನಿಯಲ್ಲಿ ಕಂಪೆನಿಯ ಪರವಾಗಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಮುನಿಸಿಪಲ್ ಬಂಗ್ಲೆಯಲ್ಲಿ ಶ್ರೀ ಕುಡ್ವರಿಗೆ ಸತ್ಕಾರ ಕೂಟವನ್ನೇರ್ಪಡಿಸಿ ಸನ್ಮಾನಿಸಿದರು. ಶ್ರೀ ನಾಯ್ಕರು ಸ್ವಾಗತಿಸಿದ ಮೇಲೆ ಶ್ರೀ ಕುಡ್ವರು ಉತ್ತರವಿತ್ತರು. ಡಾ। ಮಾಧವ ಪೈಗಳು ಜಿಲ್ಲೆಯ ಬಸ್ ಸಾರಿಗೆ ಸುಧಾರಣೆ ಕುರಿತು ಕೆಲವೊಂದು ಸೂಚನೆಗಳನ್ನಿತ್ತರು.

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ. 27ರಲ್ಲು ಚೆಯರ್‌ಮೆನ್ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ರಮೇಶ ಪೈಗಳಿತ್ತ ಡಾ। ರಾಜೇಂದ್ರ ಪ್ರಸಾದರ ಛಾಯಚಿತ್ರವನ್ನು ಸ್ವೀಕರಿಸುವ, ಮಯ್ಯರ ಶಿಕ್ಷಣ ದಾಖಲೆಗಳನ್ನು ಇನ್ನೂ ಹೆಚ್ಚಿಗೆ ತೆರೆಯಲು ಅಸಾಧ್ಯವೆಂದು ಸರಕಾರಕ್ಕೆ ತಿಳಿಸುವ, ಪರ್ಯಾಯ ವಸ್ತುಪ್ರದರ್ಶನ ಸಮಿತಿಯವರ ಪರ ಒಂದು ತಿಂಗಳ ಅವಧಿಗೆ ಮುನಿಸಿಪಲ್ ಪ್ರಯಾಣಿಕರ ಬಂಗ್ಲೆ ಮತ್ತು ಅದರ ಕಂಪೌಂಡನ್ನು ಕಲೆಕ್ಟರರ ಅನುಮತಿಗೊಳಪಟ್ಟು ಕೊಡಬಹುದೆನ್ನುವ ಇತ್ಯಾದಿ ನಿರ್ಣಯಗಳಾದುವು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 34/1951

1] ಭಾಸ್ಕರ, 2] ಸುಶೀಲ, 3] ಸದಾಶಿವ 4] ಪದ್ಮನಾಭ ಇವರು ಸಂಜೀವಿ ಶೆಡ್ತಿರವ್ಯಾನರ ಮಕ್ಕಳು. ಕ್ಷೇಮಚಿಂತಕ-ತಂದೆ-ಶೀನಪ್ಪ ಹೆಗ್ಡೆ ಶೇಷ, ಹೆಗ್ಡೆರ ಅಳಿಯ
ಉಡ್ಪಿ ತಾಲೂಕು ಶಿರ್ವಗ್ರಾಮದ ಗಂಗೆಲ
—ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದ್ರೆ:-

ಅರ್ಜಿದಾರರ ತಾಯಿ ತಾ. 23 7-1950 ರಲ್ಲು ಮೃತಪಟ್ಟ ಸಂಜೀವಿ ಶೆಡ್ತಿರ ಸ್ವಂತ ಹಕ್ಕಿನ ಬಾಬ್ತು ಉಡ್ಪಿ ಡಿ। ಮು। ಕೋರ್ಟ್ S. C. 294/51ನೇ ದಾವಾ ಪ್ರಕಾರದ ಹಣಗಳನ್ನೂ ದಿ. ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್ ಉಡುಪಿಯ ಶಿರ್ವ ಬ್ರಾಂಚಿನಲ್ಲಿ S. B. ನಂಬ್ರ 358/1946ನೇಗೆ ಡಿಪೋಜಿಟು ಇರುವ ಹಣಗಳನ್ನು ವಸೂಲು ಪಡಿಯುವರೆ ಅರ್ಜಿದಾರರ ಹೆಸರಲ್ಲಿ ವಾರೀಸುಹಕ್ಕು ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 7-9-1951ಕ್ಕೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಸದ್ರಿ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioners.
Udipi. Dated 24 8-1951

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C 482/1951

ವಾದಿ— ಮೂಣೆ ಪೂಜಾರಿ
ಪ್ರತಿವಾದಿ— ಗೋವಿಂದ ಸೆಟ್ಟಿ.

ಪ್ರತಿವಾದಿ. ಗೋವಿಂದ ಸೆಟ್ಟಿ- ದೊಡ್ಡ ಮೇಲಬೆಟ್ಟು ನಾಗಮ್ಮ ಶೆಡ್ತಿರವರ ಕುಂದಾಪುರ ತಾಲ್ಲೂ ನಂಬ್ರ 70ನೇ ಅಂಪಾರು ಗ್ರಾಮದ ಪ್ಯಾಸ ಕಟ್ಟೆನಲ್ಲಿರುವವರು ಇವರಿಗೆ-

ವಾದಿಯಿಂದ ತಾರೀಕು 11-7-48ರಲ್ಲು ಪ್ರತಿವಾದಿಯು ಪಡೆದ ಸಾಲ ರೂ 100-0-0 ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಹಣ ಬಡ್ಡಿ ಬರಮಾಡಿ ಕೊಳ್ಳುವರೇ ವಾದಿಯು ಸದ್ರಿ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 6-9-1951ನೇ ದಿವಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ.

K Raghunatha Shenai
Pleader for Plaintiff
Coondapoor 23-8-1951

ದೇಶೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ!

ಮನೆ, ಬಿಲ್ಡಿಂಗುಗಳಿಗೆ ಉಪಯೋಗಿಸುವ ಎಲ್ಲಾ ತರದ ಸಿಮೆಂಟು ಮತ್ತು ಕಾಂಕ್ರೀಟು ಸಾಮಾಗ್ರಿಗಳು, ಮಾರ್ಬಲ್, ಮೊಸಾಯಿಕ್ ಮೊದಲಾದ ಕಲ್ಲುಗಳು ಮತ್ತು ನೆಲಕ್ಕೆ ಹಾಸುವ ವಿವಿಧ ನಮೂನೆಯ, ಬಣ್ಣಗಳ ಇಟ್ಟಿಗೆಗಳು ಮತ್ತು ಹೊಟೇಲುಗಳ ಮೇಜಗಳಿಗೆ ಬೇಕಾಗುವ ಮುಚ್ಚಳಗಳು ನಿಯಮಿತ ದರದಲ್ಲಿ ಯಾವಾಗಲೂ ನಮ್ಮಲ್ಲಿ ಸಿಗುತ್ತವೆ.

ಒಮ್ಮೆ ಸಂದರ್ಶಿಸಿ ಮಾಹಿತಿಯನ್ನು ಪಡೆಯಿರಿ:

ಕೆನರಾ ಟೈಲ್ಸ್ ಎಂಡ್ ಮಾರ್ಬಲ್ ಇಂಡಸ್ಟ್ರಿಯಲ್ ವರ್ಕ್ಸ್
ಮೈನ್ ರೋಡ್, ಮುಲ್ಕಿ, ದ. ಕ

ಏಲಂ ನೋಟೀಸು

ಉಡುಪಿ ಶ್ರೀ ಅದಮಾರು ಮಠದ ಕಾಳೀಯ ಮರ್ದನ ಶ್ರೀ ಕೃಷ್ಣದೇವರ ಖಾತೆಗೆ ಸಪ್ಪಿದ ಬಾಬ್ತು ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿರುವ ಕರ್ಮಾರು ವರ್ಗ್ಯ ಕಟ್ಟಿಗೆ ಜಾತಿಯ ಮರಮಟ್ಟುಗಳನ್ನು ಇದೇ ಬರುವ ತಾ. 9-9-51ನೆ ರವಿವಾರ ದಿನ ಸಾಯಂಕಾಲ ಘಂಟೆ. 3-ಕ್ಕೆ ಉಡುಪಿ ಶ್ರೀ ಅದಮಾರು ಮಠದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸೋಣಾಗುತ್ತದೆ. ಉಮೇದ್ವಾರರು ಸದ್ರಿ ಸಮಯ ಬರಬೇಕಾಗಿ ಅಪೇಕ್ಷಿಸುತ್ತೇವೆ. ಮಾಹಿತಿಗೆ ಕೆಳಗಿನ ವಿಳಾಸಕ್ಕೆ ವಿಚಾರಿಸಬಹುದು.

ಸ್ಥಳದ ವಿವರ

1) ಶಿವಳ್ಳಿ ಕಸಬಾ ಗ್ರಾಮದ ಪಟ್ಟಾ ನಂಬ್ರ 101ನೆ ಶ್ರೀ ಕಾಳೀಯ ಮರ್ದನ ಶ್ರೀ ಕೃಷ್ಣದೇವರ ಖಾತೆಗೆ ಸಪ್ಪಿದ ಬಾಬ್ತು.

ಸ. ನಂ.	ಸ. ಡಿ. ನಂಬ್ರ	ತಿಸಂ	ವಿಸ್ತೀರ್ಣ
298	3	ಪುಂಜಪೈಕಿ ಬೆಮಾರು	3-75
306	2	ಪುಂಜಪೈಕಿ ಬೆಮಾರು	1-50
381	1	ಪುಂಜ-ಇಡೀ	1-05
		ಜುಮ್ಲಾ	6-30

2) ಉಪ್ಪೂರು ಗ್ರಾಮದ ಪಟ್ಟಾ ನಂಬ್ರ 129ನೆ ಶ್ರೀ ಕಾಳೀಯಮರ್ದನ ಶ್ರೀ ಕೃಷ್ಣದೇವರ ಖಾತೆಗೆ ಸಪ್ಪಿದ ಬಾಬ್ತು

ಸ. ನಂ.	ಸ. ಡಿ. ನಂಬ್ರ	ತಿಸಂ	ವಿಸ್ತೀರ್ಣ
155	1	ಪುಂಜ-ಇಡೀ	9-78
201	—	ಪುಂಜ-ಇಡೀ	3-29
222	2	ಪುಂಜಪೈಕಿ ಬೆಮಾರು	1-25
		ಜುಮ್ಲಾ	14-3[illegible]

P. Shripathi Rao, Agent,
Shri Adamar Mutt, Udipi.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. No. 1[illegible]9/1950

ಸೂಹಿ ಕುಟ್ಟಿ ಹಾಜಿ, —ವಾದಿ
ಮತ್ತು
ಅಪ್ಪುಯಾನೆ ಸುಂದರಾ ಕೂಡಾ
—ಪ್ರತಿವಾದಿಯು

5ನೇ ಪ್ರತಿವಾದಿ ವೆಂಕಟ್ರಮಣ. ಮಾಲಿಂಗ ಸೇರ್ವೆಗಾರರ ಮಗ, ಕಾಸರಗೋಡು ತಾಲೂಕು ಅಡೂರು [illegible]ನೇ ಗ್ರಾಮದ ನಿಲುಗೂಡು ಎಂಬಲ್ಲಿರುವವನಾ,

ವಾದಿಯು ಪ್ರತಿವಾದಿರ ಮೇಲೆ ಹಾಕಿದ್ದ [illegible] ವಾಕ್ಯ ಪಾಡಿದ ಈ ವ್ಯಾಜ್ಯದ 5ನೇ ಪ್ರತಿವಾದಿಯು ಹಾಜರಾತಿ ಬಗ್ಗೆ ತಾ. 5-9-1951ರಲ್ಲು [illegible] ಎಕ್ಸ್‌ಪಾರ್ಟಿ ಮಾಡಿ ಡಿಕ್ರಿ ಆಗುವ ಸಂಗ್ತಿ [illegible] ಈ ಮೂಲಕ ಪ್ರಕಟಪಡಿಸೋಣಾಗಿಯದೆ

K Ganesh Rao.
ವಾದಿಯ ವಕೀಲ.
ಕುಂದಾಪುರ ತಾ 28 8-51.

ಪೆರ್ಡೂರು—ತಾ. 15ರಂದು ಸ್ವಾತಂತ್ರ್ಯ ದಿನಾಚರಣೆಯು ಸ್ಥಳೀಯ ಬಿ. ಇ. ಎಮ್. ಶಾಲೆಯಲ್ಲಿಯೂ ಎ. ಪಿ. ಟಿ. ಶಾಲೆಯಲ್ಲೂ ಧ್ವಜವಂದನೆಗಳಿಂದ ಪ್ರಾರಂಭವಾಗಿ ಬಾಲಬಾಲಕಿಯರ ಮೆರವಣಿಗೆ ಶ್ರೀ ಎಂ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಿಂದ ಕೊನೆಗೊಂಡಿತು. ತಾ. 16 ಮತ್ತು 17ರಲ್ಲು ಕಲಾವೃಂದ ತಳಿಯವರು 'ಅಲಖ್‌ನಿರಂಜನ್' ಎಂಬ ನಾಟಕವನ್ನು ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮಂಡಳಿಯ ಸಹಾಯಾರ್ಥವಾಗಿ ಅಭಿನಯಿಸಿದರು.

ಮುಡಂತ್ಯಾರು- ಇಲ್ಲಿಯ ಗಾರ್ಡಿಯನ್ ಎಂಜಲ್ಸ್ ಹಾ। ಪ್ರಾ। ಶಾಲೆಯಲ್ಲಿ ಸ್ವಾತಂತ್ರ್ಯ ದಿನೋತ್ಸವವು ಶ್ರೀ ಕೆ. ಪಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಮಕ್ಕಳಿಗೆ ತಿಂಡಿ ಹಂಚೋಣ, ಸಭೆ ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು.

ಹಿರಿಯಡ್ಕ— ಸ್ಥಳೀಯ ಆರ್ಯ ಸಮಾಜದ ವತಿಯಿಂದ ಬೋರ್ಡ್ ಹಾ। ಪ್ರಾ। ಶಾಲಾ ವಠಾರದಲ್ಲಿ ಇದೇ ತಾ. 24ರಂದು ಸಂಜೆ ಶ್ರೀ ಕೃಷ್ಣ ಜಯಂತಿ ಸಮಾರಂಭವು ಉಡುಪಿ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಹಲವರ ಕಾಲೋಚಿತ ಮಾತುಗಳಾದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದೂದೇಶವು ಶ್ರೀ ಕೃಷ್ಣನಂತಹ ಹಲವಾರು ಮಹಾತ್ಮರಿಗೆ ಜನ್ಮನಿತ್ತಿದೆ ಎಂದು ಹೇಳಿ ಅವರ ಉದಾತ್ತ ಧ್ಯೇಯಗಳನ್ನು ಅನುದಿನದಲ್ಲಿ ಪಾಲಿಸಲು ಯತ್ನಿಸಬೇಕೆಂದರು.

ಪಡುಬಿದ್ರೆ—ಇಲ್ಲಿಯ ಸರಕಾರಿ ವಯಸ್ಕರ ಶಿಕ್ಷಣ ತರಬೇತಿ ಶಾಲೆಯ ಆಶ್ರಯದಲ್ಲಿ ಇದೇ ತಾ. 18ರಂದು ವಯಸ್ಕರ ಶಿಕ್ಷಣೋಪಕರಣಗಳ ಪ್ರದರ್ಶನವು ಬೋರ್ಡ್ ಹಾ। ಪ್ರಾ। ಶಾಲಾ ವಠಾರದಲ್ಲಿ ಜರಗಿತು. ವಿದ್ಯಾರ್ಥಿ ಅಧ್ಯಾಪಕರು ತಯಾರಿಸಿದ ಸ್ಥಳೀಯ ಅಭಿರುಚಿಯ ಚಿತ್ರಗಳು, ಓದುವ ಹಾಳೆಗಳು, ಪ್ರಚಾರ ಪತ್ರಿಕೆಗಳು ಮೊದಲಾದುವನ್ನು ಪ್ರದರ್ಶನದಲ್ಲಿ ಇಡಲಾಗಿತ್ತು.

ಕಾಸರಗೋಡು ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 391/50

ಕೆ. ಅಮು —ವಾದಿ

ಮತ್ತು

ಶ್ರೀ ಲಕ್ಷ್ಮೀ ಮಿಲ್ಸ ಲಿಮಿಟೆಡ್ ಕಾಸರಗೋಡು ಇದರ ಜನರಲ್ ಮೇನೇಜರರು I. ಕೆ. ಗಣಪತಿ ನಾಯ್ಕ, 2. ಕೆ. ಲಕ್ಷ್ಮಣ ನಾಯ್ಕ—ಸಸ್ಪೆಂಡ್ ಪ್ರತಿವಾದಿರು.

3 ಲಿಕ್ವಿಡೇಟರಾಗಿರುವ ಶ್ರೀ ಪಿ. ನಾರಾಯಣ ರಾವ್, ವಿಠಲರಾಯರ ಮಗ, ಕಾವೇರಿ ಪೇಪರ್ ಮಿಲ್ಸ್ & ಫೋರೆಸ್ಟ್ ಇಂಡಸ್ಟ್ರೀಸ್ ಲಿಮಿಟೆಡ್ ಪ್ರೆಸರ್ ಪೇಟ್ ಮೈಸೂರು.

4 ಶ್ರೀ C. ಮೂರ್ತಿ ರಾವ್, C. ವಾಮನ ರಾಯರ ಮಗ, ಜಮೀನುದಾರ ಶಿವಮೊಗ್ಗಾ ಜಿಲ್ಲಾ ನಗರಯಾಬಲ್ಲಿರುವವರು.

5 ಶ್ರೀ M. ಲಕ್ಷ್ಮಣ ಭಟ್ಟ M. ವೈಕುಂಠ ಭಟ್ಟರ ಮಗ, ಮಂಜೇಶ್ವರ

6 M. ಅನಂತ ಭಟ್ಟ ವೈಕುಂಠ ಭಟ್ಟರ ಮಗ ಮಂಜೇಶ್ವರ.

—ಪ್ರತಿವಾದಿರು.

ವಾದಿಗೆ ಪ್ರತಿವಾದಿಯಿಂದ ಬರಬೇಕಾದ ಸಂಬಳದ ಬಾಬ್ತು ವಗೈರೆ ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 15-9-1951ಕ್ಕೆ ಇಟ್ಟಿರುವುದರಿಂದ ಆ ದಿವಸ 3ರಿಂದ 6ನೇ ಪ್ರತಿವಾದಿರು ಹಾಜರಾಗದಿದ್ದರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸುವದಾಗುತ್ತದೆ.

Sd/ E. R. Othena Menon, B.A.B.L.
Vakil for pltf.

ಕಾಸರಗೋಡು 22-8-51

ಕಾರ್ಕಳ—ಇಲ್ಲಿಯ ಮಹಾತ್ಮಾ ಸೇವಾ ಸಮಾಜದವರು ಏರ್ಪಡಿಸಿದ ತಾಲೂಕು ಹರಿಜನ ಜನರ ಮತ್ತೂ ಇತರರ ಸಂಯುಕ್ತ ಕೂಟದ ಸಭೆಯು ತಾ. 15ರಂದು ಜನಾಬ್ ಎಚ್. ಎಸ್. ಹುಸೈನ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹರಿಜನರ ಜೀವನ ಮಟ್ಟವನ್ನೂ ಸುಧಾರಿಸುವರೆ ಬೇಕಾಗುವ ಸೌಕರ್ಯಗಳನ್ನೂ ಸರಕಾರವು ಒದಗಿಸಿಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಪಂಜ—ಇಲ್ಲಿ ಹೊಸತಾಗಿ ತೆರೆಯಲ್ಪಟ್ಟ ಬೋರ್ಡ್ ಹೈಸ್ಕೂಲು ಮತ್ತೂ ಬೋರ್ಡ್ ಹಾ।ಪ್ರಾ। ಶಾಲೆಗಳ ಕೂಡುವಿಕೆಯಿಂದ ತಾ. 15ರಂದು ಸ್ವಾತಂತ್ರ್ಯ ದಿನಾಚರಣೆಯು ಧ್ವಜವಂದನೆ, ಮೆರವಣಿಗೆ, ಹರಿಕೀರ್ತನೆ, ಮಕ್ಕಳಿಗೆ ತಿಂಡಿಹಂಚೋಣ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಕುರುಕಾಲು—ಉಡುಪಿ ತಾಲೂಕು ಆಹಾರ ಉತ್ಪಾದನಾ ಮತ್ತು ಪಾನನಿರೋಧ ಸಮಿತಿಯ ಸಭೆಗಳು ಗ್ರಾಮಕೇಂದ್ರಗಳಲ್ಲಿ ಜರಗಬೇಕಾಗಿ ಹಿಂದಿನ ಸಭೆಯಲ್ಲಿ ನಿರ್ಣಯವಾದ ಮೇರೆಗೆ, ಕುರುಕಾಲು ಗ್ರಾಮಾಭಿವೃದ್ಧಿ ಸಂಘದ ವತಿಯಿಂದ, ಸ್ಥಳೀಯ ಸಹಕಾರಿ ಸಂಘದ ಭವ್ಯ ಕಟ್ಟಡದಲ್ಲಿ, ಕುಂದಾಪುರ ಡಿವಿಜನಲ್ ಆಫೀಸರರ ನೇತೃತ್ವದಲ್ಲಿ, ತಾ. 20-8-51ರಲ್ಲು ವಿವಿಧ ಕಾರ್ಯಕ್ರಮಗಳೊಂದಿಗೆ ಯಶಸ್ವಿಯಾಗಿ ಜರಗಿದವು. ಆರಂಭದಲ್ಲಿ ದಿವಾನ್ ಅಧ್ಯಕ್ಷರು, ತಾಲೂಕು ತಹಶಿಲ್ದಾರರು ಮೊದಲಾದ ಹಲವು ಇಲಾಖಾ ಅಧಿಕಾರಿಗಳೊಂದಿಗೂ, ಶ್ರೀ ಪಾಂಗಾಳ ಗೋಪಾಲ ನಾಯಕ್ ವಗೈರೆ ಸಮಿತಿಯ ಸದಸ್ಯರೊಂದಿಗೂ, ಶ್ರೀ. ಕುರುಕಾಲು ಗಣಪಯ್ಯ ಶೆಟ್ಟರು ಕಲ್ಲುಗುಡ್ಡೆಗಳನ್ನು ರೂಪಾಂತರಿಸಿ ಫಲವತ್ತಾಗಿ ಮಾಡಿರುವ ಕೃಷಿಕ್ಷೇತ್ರವನ್ನೂ, ಮಧ್ವಾಚಾರ್ಯರ ಪುರಾಣ ಪ್ರಸಿದ್ಧವಾದ ಕುರುಹುಗಳನ್ನೂ ಸಂದರ್ಶಿಸಿ ಆನಂದಪಟ್ಟರು. ಸಭೆಗೆ ಸುತ್ತಮುತ್ತಲಿನ ನಾಲ್ಕಾರು ಗ್ರಾಮಗಳ ಗ್ರಾಮ ಉದ್ಯೋಗಸ್ಥರೂ, ಸುಮಾರು ಸಾವಿರದ ವರೆಗೆ ಜನರೂ, ನೆರೆದಿದ್ದರು. ದಿವಾನ್ ಅಧ್ಯಕ್ಷರು ಪಾನನಿರೋಧ-ವ-ಆಹಾರ ಅಭಿವೃದ್ಧಿಯ ವಿಷಯಗಳಲ್ಲಿ ಜನತೆಯು ನಡೆಸತಕ್ಕ ಸಹಕಾರ ಮತ್ತು ಪ್ರಯತ್ನಗಳನ್ನು, ಹಲವು ಉದಾಹರಣೆಗಳೊಂದಿಗೆ ಹೃದಯಂಗಮವಾಗಿ ವಿವರಿಸಿ ಭಾಷಣವಿತ್ತರು. ಅಬಳಿಕ, ಕುಂಜಾರುಗಿರಿ ಹಾ. ಪ್ರಾ. ಶಾಲಾ ವಿದ್ಯಾರ್ಥಿಗಳಿಂದ ಮನೋಹರವಾಗಿ ಪ್ರದರ್ಶಿಸಲ್ಪಟ್ಟ, ಆಹಾರ ಹೆಚ್ಚಳದ ಕುರಿತು ಲಾವಣಿ, 'ಮದ್ಯರಾಕ್ಷಸ ಸಂಹಾರ' ಪ್ರಹಸನ, ಮತ್ತು 'ಶ್ಯಾಮಾಸುರವಧೆ' ಎಂಬ ಯಕ್ಷಗಾನ ಬಯಲಾಟ-ಇತ್ಯಾದಿ ನವೀನ ವಿನೋದಾವಳಿಗಳಾಗಿ, ಶ್ರೀ. ಕುರುಕಾಲು ಗಣಪಯ್ಯ ಶೆಟ್ಟರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮುಂಬಯಿ ಬಂಟರ ಯಾನೆ ನಾಡವರ ಸಂಘದ-23ನೇ ವಾರ್ಷಿಕ ಮಹಾ ಸಭೆಯು, ಶ್ರೀ ಮದನ ಸೆಟ್ರವರ ಅಧ್ಯಕ್ಷತೆಯಲ್ಲಿ ತಾ 29-7-51ರಲ್ಲಿ ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನಲ್ಲಿ ಜರಗಿತು.

ಗತವರ್ಷದ ವರದಿಯನ್ನು ಓದಿ, ಸರ್ವಾನುಮತದಂತೆ ಮಂಜೂರಾದುದಲ್ಲದೆ ಹೊಸ ವರ್ಷದ ಕಾರ್ಯಕಾರೀ ಸಮಿತಿಯು ಈ ಕೆಳಗೆ ಕಾಣಿಸಿದಂತೆ ನೇಮಿಸಲಾಗಿ, ಸಂಘದ ಏಳಿಗೆಯ ಪರವಾಗಿ, ಅಧ್ಯಕ್ಷರ ಹಿತ ಭಾಷಣಗಳಿಂದ ಸಭೆಯು ಮುಕ್ತಾಯವಾಯಿತು. ಶ್ರೀಗಳಾದ ಬಸ್ರೂರು ಜಗನ್ನಾಥ ಸೆಟ್ಟಿ (ಅಧ್ಯಕ್ಷ) ಬೈಂದೂರು ಗೋವಿಂದ ಸೆಟ್ಟಿ, (ಉಪಾಧ್ಯಕ್ಷ) ಕೋಡು ಚಂದ್ರಶೇಖರ ಹೆಗ್ಡೆ (ಗೌರವ ಕಾರ್ಯದರ್ಶಿ) ಕೆ. ಕರುಣಾಕರ ಸೆಟ್ಟಿ (ಜತೆಕಾರ್ಯದರ್ಶಿ) ಡಾಕ್ಟರ್ ಪಡುಬಿದ್ರೆ ಜಗನ್ನಾಥ ಸೆಟ್ಟಿ (ಕೋಶಾಧಿಕಾರಿ) ಶ್ರೀಯುತ ಸೂಡ ಸುಂದರ ಸೆಟ್ಟಿ (ಉಪಕೋಶಾಧಿಕಾರಿ)

ಸಂರಕ್ಷಣೆ ಹಾಗೂ ಸಂಚಯಕ್ಕೆ
ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು. ಮದ್ರಾಸು. [1934
ವಿಚಾರಿಸಿರಿ
ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.
ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ, ದಯಮಾಡಿ ಈ ವಿಳಾಸಕ್ಕೆ ಬರೆಯಿರಿ,
ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು, (ದ. ಕ.)

ಉಬ್ಬಸಕ್ಕೆ
ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು.
ಅಲ್ಪ ವೆಚ್ಚ! ಅದ್ಭುತ ಗುಣ!
ಎಂ.ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಶನ್,
ಫೋರ್ಟ್, ಬೊಂಬಾಯಿ.



ಸೌರ ಋಗುಪಾಕರ್ಮ ಕಾಲವಿಮರ್ಶೆ

ಧಾರ್ಮಿಕರೇ!

ಈಗಿನ, ಖರ ಸಂವತ್ಸರದ ಕೆಲವು ಪಂಚಾಂಗಗಳಲ್ಲಿ ಸೌರ (ಋಗುಪಾಕರ್ಮವು ಭಾದ್ರಪದ ಶುದ್ಧ ಪಂಚಮಿಯು [ತಾ. 6-9 51] ಹಾಗೂ [13-9-51ನೆ] ತ್ರಯೋದಶಿ ಎಂತ ತೋರುತ್ತದೆ. ಇವುಗಳಲ್ಲಿ ಪ್ರಮಾಣಾನುಸಾರ ಗ್ರಾಹ್ಯವಾದದಿನ ಶುದ್ಧ ಪಂಚಮಿಯೇ. ಪ್ರಮಾಣ ಶ್ಲೋಕ:- ಭಗವಾನ್ ಶೌನಕ:— "ಅಥಾತಃ ಶ್ರಾವಣೇ ಮಾಸಿ...... । ಪಂಚಮ್ಯಾಂ ಹಸ್ತಸಂಯುತೇ । ದಿವಸೇ ವಿದಧೀತ...... । ಸೂತ್ರಂ—" ಅಥಾತೋಧ್ಯಾಯೋಪಾಕರಣಂ... ಪಂಚಮ್ಯಾಂ ಹಸ್ತೇನವಾ । ಕುರ್ಯಾದೇವಂ ತದ್ಬಾಹ್ವೃಚಕಂ । ಇತ್ಯಾದಿ ಪ್ರಮಾಣಗಳಿಂದ ಉಪಾಕರ್ಮಕ್ಕೆ ಶ್ರಾವಣ, ಭಾದ್ರಪದ ಈ ಎರಡು ತಿಂಗಳ ಶ್ರವಣ, ನಕ್ಷತ್ರ, ಪಂಚಮೀ ತಿಥಿ, ಹಸ್ತಾ ನಕ್ಷತ್ರ, ಈ ಮೂರು ದಿನಗಳು ಅತ್ಯಂತ ಪ್ರಶಸ್ತಗಳಾಗಿ ತೋರುತ್ತವೆ. ಉಕ್ತಪ್ರಮಾಣಾನುಸಾರವಾಗಿ ಪಂಚಮಿಗೆ ಹಸ್ತಾನಕ್ಷತ್ರದ ಯೋಗ ಬೇಕೆನ್ನುವುದು ಶೌನಕಾಚಾರ್ಯರಿಗೆ ವಿವಕ್ಷಿತಾರ್ಥವಲ್ಲವೆಂದು ಸ್ಪಷ್ಟವಾಗುತ್ತದೆ. ಇದಕ್ಕೆ "ಕೇವಲ ಪಂಚಮ್ಯಾಂವಾ" ಎಂಬ ಹೇಮಾದ್ರಿ, ಮತ್ತು ನಿರ್ಣಯಕಾರರ ವಚನಗಳೂ ಸಂವಾದಕ ಪ್ರಮಾಣಗಳಾಗಿವೆ. ಇನ್ನು ಶೌನಕಾಚಾರ್ಯರಿಗೆ ಸಮ್ಮತವಾದ ಶ್ರವಣ ನಕ್ಷತ್ರವು ಭಾದ್ರಪದ ಶುದ್ಧ ತ್ರಯೋದಶಿ [ತಾ. 13-9-51] ಯಲ್ಲಿ 11ಘಳಿಗೆ ಮಾತ್ರಯಿರುವುದರಿಂದ, ಆ ದಿನವು ಉಪಾಕರ್ಮಕ್ಕೆ ವಿಹಿತವಲ್ಲ. ಆಧಾರ ಶ್ಲೋಕ:— ಉದಯೇ ಸಂಗವಸ್ಪರ್ಶೇ... ಸಂಗವಾತ್ಪರತೋಯದಿ... ಕರ್ಮಪರ್ಯಾಪ್ತ್ಯಸಮಯಿಕೇ ಕಾಲಾಂತರೇವಾನುಷ್ಠಾನಂ, ನಕುರ್ಯಾದ್ಬಾಟನ್ನಿಷಿದ್ಧೇ । ಇತ್ಯಾದಿ ಪ್ರಮಾಣಗಳಿಂದ ಶ್ರವಣ ನಕ್ಷತ್ರವು ಸೂರ್ಯೋದಯವನ್ನಾರಂಭಿಸಿ ಸಂಗವಕಾಲದವರೆಗೆ ಇದ್ದರೆ ಮಾತ್ರ ಆದಿನದಲ್ಲಿ ಉಪಾಕರ್ಮವನ್ನು ಆಚರಿಸಬೇಕು. ಆದುದರಿಂದ ತಾ. 13-9-51ನೆ ದಿನವು ಉಪಾಕರ್ಮಕ್ಕೆ ತ್ಯಾಜ್ಯವು. ಇನ್ನುಳಿದ ಹಸ್ತಾನಕ್ಷತ್ರದಲ್ಲಿ ಆಗಬಹುದೆಂದರೆ "ಹಸ್ತೋಪಿಸಾಮಗಾನಾಂತು......" ಎಂದು ಸಾಮಶಾಖೆಯವರಿಗೆ ಹಸ್ತಾನಕ್ಷತ್ರದ ದಿನವನ್ನು ವಿಶಿಷ್ಟ ಹೇಳಿರುವುದರಿಂದ, ಸೌರರಿಗೆ 'ಪಂಚಮ್ಯಾಂ' ಎಂದು ಶೌನಕಾಚಾರ್ಯರಿಗೆ ವಿವಕ್ಷಿತವಾದ ಪಂಚಮೀತಿಥಿಯನ್ನು ಬಿಟ್ಟು ಹಸ್ತಾನಕ್ಷತ್ರದ ಯೋಗವಿರುವ ಭಾದ್ರಪದ ಶುದ್ಧ ತದಿಗೆಯೇ [4-9-51] ಉಪಾಕರ್ಮವನ್ನಾಚರಿಸಬೇಕೆಂಬ ವಾದಕ್ಕೆ ಪ್ರಮಾಣದ ಬಲವಿಲ್ಲ. ವಿಹಿತವಲ್ಲದ ದಿನಗಳಲ್ಲಿ ಉಪಾಕರ್ಮವನ್ನು ಆಚರಿಸುವುದಕ್ಕಿಂತ ಕಳೆದ ಆಗೋಸ್ತು ತಾರೀಕು 16ರಲ್ಲಿ ಋಕ್ ಶಾಖೆಯವರ ಒಟ್ಟಿಗೇನೇ ನಡೆಯಿಸಬಹುದಿತ್ತಷ್ಟೆ? ಆದುದರಿಂದ ಉಕ್ತ ಪ್ರಮಾಣಾನುಸಾರವಾಗಿ ಉಡುಪಿ ಪರ್ಯಾಯ ಪಂಚಾಂಗದಲ್ಲಿ ಬರೆದಂತೆ ಭಾದ್ರಪದ ಶುದ್ಧ ಪಂಚಮಿ ದಿನವೇ [ತಾ. 6 9-51] ಉಪಾಕರ್ಮಕ್ಕೆ ಯೋಗ್ಯವೆಂದು ನನ್ನ ಅಭಿಪ್ರಾಯ.

ಕಿನ್ನಿಮೂಲ್ಕಿ ಅನಂತಪದ್ಮನಾಭ ಭಟ್ಟ
ವೇದಾಂತ ಶಿರೋಮಣಿ.

ಬೇಕಾಗಿದ್ದಾರೆ

ಪಡುಬಿದ್ರೆಯಲ್ಲಿರುವ ಶ್ರೀ ಬ್ರಹ್ಮ ವಿದ್ಯಾ ಪ್ರಬೋಧಿನೀ ಸಂಸ್ಕೃತ ಶಾಲೆಯಲ್ಲಿ-- ಅಧ್ಯಾಪಕ ಕೆಲಸಕ್ಕೆ ಸೆಕೆಂಡರಿ ಗ್ರೇಡ್ ಟ್ರೈಯಿಂಗ್ ಪಾಸಾದ ನುರಿತ ಕನ್ನಡ ಬಲ್ಲ ಉಪಾಧ್ಯಾಯ.ರೊಬ್ಬರು ಬೇಕಾಗಿದ್ದಾರೆ. ಉಮೇದ್ವಾರರು ಕೆಳಗಿನ ವಿಳಾಸಕ್ಕೆ ತಮ್ಮ ಸರ್ಟಿಫಿಕೇಟುಗಳೊಂದಿಗೆ ಶೀಘ್ರದಲ್ಲಿ ಬರೆದುಕೊಳ್ಳುವುದು.

ಪಿ. ಶ್ರೀಪತಿ ರಾವ್,
ಏಜಂಟ್, ಶ್ರೀ ಅದಮಾರು ಮಠ, ಉಡುಪಿ.

೩ನೇ ಪುಟದಿಂದ ಮುಂದರಿಸಿದ್ದು

ತ್ರ್ಯ ದೊರಕಿದಂದಿನಿಂದಲೂ, ಘಟನೆ ನಿರ್ಮಾಣವಾಗುವಾಗಲೂ ನಾವು ತಲೆ ಚಪ್ಪಿಕೊಂಡರೂ ಸ್ಮೃತಿಪಥಕ್ಕೆ ಬಾರದೆ ಇದ್ದ ಕರ್ನಾಟಕ ಪ್ರಾಂತ ನಿರ್ಮಾಣ ಪ್ರಶ್ನೆಯು ಒಡನೆಯೇ ಬೆಳಕಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆ ಬಂತು ಈ ಠರಾವಿನ ಮೇಲೆ ಶ್ರೀ। ಶೆಟ್ಟರ ಟೀಕೆ ಅಗತ್ಯವಿಲ್ಲ. ಇದರಲ್ಲಿಯೂ ನವನವ ರೂಪರೇಖೆಗಳನ್ನು ಸರಕಾರಕ್ಕೆ ಕೇಳಿಸಲಾಗಿದೆ. "ಜನತೆಯ ಸಮ್ಮತಿ ಇರುವುದೆಂದೆಂದು ಸರಕಾರಕ್ಕೆ ಮನವರಿಕೆಯಾದರೆ ಆದಷ್ಟು ಬೇಗನೆ ಗಡಿ ಸಮಿತಿಗಳನ್ನು ನೇಮಿಸಬೇಕೆಂದು ವರ್ಕಿಂಗ್ ಕಮಿಟಿಯ ಅಭಿಪ್ರಾಯ (opinion) ತಿಳಿಸಲಾಗಿತ್ತು. ಈ ಅಭಿಪ್ರಾಯದಿಂದ ಕನ್ನಡಿಗರನ್ನು ವಂಚಿಸಲು ಸಾಧ್ಯವಿಲ್ಲ. ಈ ಠರಾವಿನ ಕಾಲದಲ್ಲಿ ಮುಖ್ಯ ಮಂತ್ರಿಯವರು ವರ್ಕಿಂಗ್ ಕಮಿಟಿಯನ್ನು ಬಿಟ್ಟದ್ದರೆಂಬುದು ಗಮನಿಸತಕ್ಕ ವಿಷಯ. ಇವರು ಭಾಷಾವಾರು ಪ್ರಾಂತವೆಂದರೇನೇ ಕೆಂಡದಂತೆ ಉರಿದೇಳುತ್ತಿರುವರೆಂಬುದನ್ನು ಶ್ರೀ ಶೆಟ್ಟರು ಒಪ್ಪುವಾಗ ಇವರ ಈ ಕೆಂಡದ ಉರಿ ಶಾಂತವಾಗದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಇವರ ಜೆ. ವಿ. ಪಿ. ರಿಪೋರ್ಟಿನಲ್ಲಿ "ಸಂಬಂಧಪಟ್ಟವರು ಪ್ರಾಂತ ನಿರ್ಮಾಣಕ್ಕೋಸ್ಕರ ಬಲವಾದ ಚಳುವಳಿ ನಡೆಸಿದರೆ ನಾವು ಒಪ್ಪಲೇಬೇಕಾಗಬಹುದೆಂಬ' ಧ್ವನಿ ವಾಚಕಗಳು ಕಾಣುವುವು. ಈ ರಿಪೋರ್ಟನ್ನು ಏನೂ ಬದಲಾವಣೆಗಳಿಲ್ಲದೆ ವರ್ಕಿಂಗ್ ಕಮಿಟಿಯು ಸ್ವೀಕರಿಸಿತ್ತು. ಭಾಷಾವಾರು ಪ್ರಾಂತಕ್ಕೋಸ್ಕರ ಆಂದೋಲನ ನಡೆಸುವುದಗತ್ಯವಿಲ್ಲ. ಇನ್ನು ಮುಂದೆ ನಿಲ್ಲಿಸಬೇಕು. ಹೊಸ ಘಟನೆ ತಯಾರಿಸುವಾಗ ಆ ಕಾಲದಲ್ಲಿ ಖಂಡಿತವಾಗಿಯೂ ಕರ್ನಾಟಕಾದಿ ಪ್ರಾಂತಗಳು ನಿರ್ಮಾಣವಾಗುವುವೆಂದು 1938 ರಲ್ಲಿ ಇದೇ ವರ್ಕಿಂಗ್ ಕಮಿಟಿಯು ಭರವಸೆಯಿತ್ತು ನಂತರ ಗಾಳಿಗೆ ತೂರಿಸಿದ್ದು ಇದೇ ವರ್ಕಿಂಗ್ ಕಮಿಟಿ. ಅಲ್ಲದಸಲ್ಲದ ನೆವನಗಳಿಂದ ಘಟನೆಯಲ್ಲಿ ಈ ಪ್ರಾಂತಗಳ ಹೆಸರು ಕೂಡ ಬಾರದಂತೆ ತಂತ್ರ ಹೂಡಿದವರೆಲ್ಲರೂ ಇವತ್ತೂ ಕೇಂದ್ರ ಸರಕಾರದಲ್ಲಿಯೂ ಇದ್ದಾರೆ; ಪಾರ್ಲಿಮೆಂಟಿನಲ್ಲಿಯೂ ಇದ್ದಾರೆ. "ಮೂಲೆಗೊತ್ತಬೇಕೆಂದು ನೆರವು" ಕೊಡುವವರು ಇವತ್ತೂ ಅದೇ ಪಾರ್ಲಿಮೆಂಟಿನಲ್ಲಿದ್ದಾರೆಂಬುದು ಶ್ರೀ ಶೆಟ್ಟರು ಅಲ್ಲಗಳೆಯಲಾರರು. ಇಂಥಾ ವಾತಾವರಣದಲ್ಲಿ, ಈ ಸನ್ನಿವೇಶದಲ್ಲಿ ಕರ್ನಾಟಕ ಏಕೀಕರಣ ಪಕ್ಷ ಹುಟ್ಟಿರುವುದು ಒಂದು ಚುನಾವಣಾ ಮೋಸವೆಂತ ಶ್ರೀ। ಶೆಟ್ಟರಿಗೆ ಕಂಡರೆ ಅವರ ದೃಷ್ಟಿದೋಷವೆಂತ ಹೇಳಬೇಕಾಗಿದೆ.

ನಾನೂ ಶ್ರೀ। ಕಾರಂತರೂ ಪ್ರತ್ಯಕ್ಷ ಹೋರಾಟ ಆರಂಭಿಸಬಾರದಿತ್ತೇಕೆ ಎಂದು ಶ್ರೀ। ಶೆಟ್ಟರು ಪ್ರಶ್ನಿಸುತ್ತಾರೆ. ಆದರೆ ಸಮಯ ಚುನಾವಣೆಯ ನಂತರವಿದೆ ಎಂದು ನಾನು ಹಾವೇರಿಯಲ್ಲಿಯೇ ತಿಳಿಸಿದ್ದೇನೆ. ಅವರಲ್ಲಿ ಇವರಲ್ಲಿ ವಿಶ್ವಾಸ ನಮಗಿಲ್ಲವೆಂದು ಶ್ರೀ। ಶೆಟ್ಟರು ವ್ಯಕ್ತಪಡಿಸುವ ಅಗತ್ಯವಿಲ್ಲ. ಕರ್ನಾಟಕ ಪ್ರಾಂತ ನಿರ್ಮಾಣ ಕಾರ್ಯದಲ್ಲಿ ಅಡಿದಂಕೆ ನಡೆಯದಿರುವವರಲ್ಲಿ ವಿಶ್ವಾಸ ನಮಗೆ ಖಂಡಿತವಾಗಿಯೂ ಇಲ್ಲ. ಯಾರ ಮೇಲೆಯೂ ವ್ಯಕ್ತಿದ್ವೇಷದಿಂದ ಈ ಪಕ್ಷ ಕಟ್ಟಿಕೊಂಡಿದ್ದೇವೆಂದು ಯಾರೂ ತಿಳಿಯಬಾರದು. ಎಷ್ಟೇ ದೊಡ್ಡ ವ್ಯಕ್ತಿ ಇದ್ದರೂ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ವಿರೋಧ ಮಾಡಿದರೆ ಅವನು ಕನ್ನಡಿಗರ ವೈರಿಯೆಂದೇ ಭಾವಿಸಬೇಕಾಗಿದೆ. ವ್ಯಕ್ತಿಗಳ ಬಾಲ ಹಿಡಿದು ತತ್ವ ನಾಶವಾಗಬಾರದು.

ಶ್ರೀ ಹೊಸಮನಿಯವರು ಪ್ರತ್ಯಕ್ಷ ಹೋರಾಟ (ಸತ್ಯಾಗ್ರಹ) ನಡೆಸಬೇಕೆಂದು ವಾದಿಸಿದ್ದು ನಿಜ. ಆದರೆ ಪಕ್ಷಾತೀತ ಪರಿಷತ್ತು ಅದಕ್ಕೆ ಒಪ್ಪದೆ ಬೇರೆ ದಾರಿ ತೋರಿಸಿ ಅದರ ಕಾರ್ಯಭಾರವನ್ನು ಶ್ರೀ ಹೊಸಮನಿಯವರಿಗೆ ಒಪ್ಪಿಸಿದರೆ, ಆ ಕಾರ್ಯವನ್ನು ಶ್ರೀ ಹೊಸಮನಿಯವರು ಶ್ರದ್ಧಾಪೂರ್ವಕ ನಿರ್ವಹಿಸುತ್ತಿದ್ದರೆ, ಕೆ. ಪಿ. ಸಿ. ಸಿ. ಯ ಅನೇಕ ಠರಾವುಗಳ ವ್ಯತಿರಿಕ್ತ ನಡೆಯುತ್ತಿರುವ ಅದರ ಸದಸ್ಯರಾದ ಶ್ರೀ ಶೆಟ್ಟರಿಗೆ ಶ್ರೀ ಹೊಸಮನಿಯವರು 'ಅಂತರ್ಭಾಗ ಹೊಡೆದರೆಂದು ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಇದೇ ಐನ್‌ಸ್ಟೈನ್ ಹೇಳಿದ್ದು: ಒಬ್ಬನು ಸಹಜವಾಗಿ ಅಂತರ್ಭಾಗ ಹೊಡೆಯುವಾಗ ತನ್ನ ಮನಸ್ಸಿನಲ್ಲಿ ತಾನು ನೇರವಾಗಿಯೇ ಇದ್ದೇನೆಂದು ಭಾವಿಸಿದರೆ ಸುತ್ತುಮುತ್ತಲಿನವರು ಅಂತರ್ಭಾಗ ಹೊಡೆದಂತೆ ಅವನಿಗೆ ಕಾಣುತ್ತದೆಂದು.

ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದರೇ ಆರಿಸಿಬಂದವರಿಗೆ ಸ್ಥಾನವೆಂದಿಲ್ಲವಲ್ಲ. ಪ್ರಜಾಸತ್ತಾತ್ಮಕ ರಾಷ್ಟ್ರಗಳು ಯಾವ ರೀತಿಯಲ್ಲಿ ಏನೂ ಗೊಂದಲವಿಲ್ಲದೆ ಶಾಂತ ರೀತಿಯಿಂದ ಚುನಾವಣೆ ನಡಿಸುತ್ತಾವೆಂಬುದು ನಮ್ಮ ಮಿತ್ರರು ಸ್ವಲ್ಪ ನೋಡಿದರೆ ಅವರು ಕೆಂಡದಂಥಾ ಉರಿ, ಮತ್ತು ನಂಜುವಾತುಗಳಿಗೆ ಎಡೆಸಿಗಲಿಕ್ಕಿಲ್ಲ. ಕರ್ನಾಟಕ ಪ್ರಾಂತ ನಿರ್ಮಾಣ ಶ್ರೀ ಶೆಟ್ಟರಿಗೂ ಪ್ರಿಯವಾದ್ದು, ಬೇರೆ ಬೇರೆ ಪಂಗಡದವರು ಬೇರೆ ಬೇರೆ ರೀತಿಯಿಂದ ಸಾಧಿಸಿದರೆ ಯಾವ ತಪ್ಪೂ ಇಲ್ಲ. ಕಾಂಗ್ರೆಸು ಬಿಟ್ಟವರಿಗೆ ಗತಿಯೇ ಇಲ್ಲವೆಂದು ವಾದಿಸುವುದರಲ್ಲಿ ಅರ್ಥವಿಲ್ಲ. ಅಥವಾ ಕಾಂಗ್ರೆಸ್ಸ್ ಬಿಟ್ಟ ಕೂಡಲೇ ವ್ಯಕ್ತಿಯ ಮಹತ್ವ ಕಮ್ಮಿಯಾಗುವುದೂ ಇಲ್ಲ, ಬಿಟ್ಟ ಕೂಡಲೆ ಜಾಸ್ತಿಯಾಗಲೂ ಕಾರಣವಿಲ್ಲ. ಕಾಂಗ್ರೆಸ್ಸು ಯಾವಾಗಲೂ ಒಂದು ಪಕ್ಷ, ಇವತ್ತೂ ಒಂದು ಪಕ್ಷ. ದೇಶವು ಕಾಂಗ್ರೆಸಿನ ಸೊತ್ತಲ್ಲ, ಜನತೆಯದು. ಸರಕಾರ ಕಾಂಗ್ರೆಸಿನದಲ್ಲ—ಜನತೆಯದು, ಜನತೆಗೋಸ್ಕರ. ನಿರ್ವಿವಾದ ತತ್ವಗಳನ್ನು ಶ್ರೀ ಶೆಟ್ಟರ ಕಾಂಗ್ರೆಸ್ಸಿನ ಉಗ್ರವಾದಿಗಳು ತಿಳಿದುಕೊಂಡರೆ ನಾಡಿಗೆ ಉಪಕಾರವಾದೀತು.

—ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ

ಬಂದಿರುವ ರಾಷ್ಟ್ರದ ನೂತನ ಘಟನೆ

ಬಿ. ಬಿ. ಶೆಟ್ಟಿ, ಎಡ್ವಕೇಟ್, ಮಂಗಳೂರು.

[ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು]

ಮೊದಲನೆಯ ಭಾಗ

ಯೂನಿಯನ್ ಮತ್ತು ಅದರ ಪ್ರಾಂತಗಳು

1. ಯೂನಿಯನ್ ಅಥವಾ ರಾಷ್ಟ್ರದ ಹೆಸರು ಮತ್ತು ಪ್ರಾಂತ್ಯಗಳು

1) ಹಿಂದೂಸ್ತಾನ ಅಂದರೆ ಭರತ ಖಂಡವು ಅನೇಕ ಸ್ಟೇಟುಗಳನ್ನು ಒಳಗೊಂಡ ಒಂದು ಯೂನಿಯನ್ ಆಗಿರತಕ್ಕದ್ದು. (ಅಂದರೆ ಸ್ಟೇಟ್ ಅಥವಾ ಒಳರಾಜ್ಯಗಳಿಂದ ರಚಿಸಲ್ಪಟ್ಟ ಒಂದು ರಾಷ್ಟ್ರವಾಗಬೇಕೆಂಬ ತಾತ್ಪರ್ಯ)

2) ಆ ಯೂನಿಯನಿನ ಸ್ಟೇಟುಗಳೂ ಮತ್ತು ಅವುಗಳ ಪ್ರಾಂತ್ಯಗಳು ಈ ಘಟನೆಯ ಮೊದಲನೇ ಶೆಡ್ಯೂಲಿನ A, B ಮತ್ತು C ವಿಭಾಗದಲ್ಲಿ ಹೇಳಿದ ಸ್ಟೇಟ್‌ಗಳು ಮತ್ತು ಪ್ರಾಂತ್ಯಗಳಿರಬೇಕು.

3) ಹಿಂದೂಸ್ತಾನದ ಪ್ರಾಂತ್ಯವು ಅಥವಾ ಪ್ರಾಂತ್ಯದ ಮೇರೆಗಳು ಈ ಕೆಳಗಿನ ಪ್ರಾಂತ್ಯಗಳನ್ನೂ ಅವುಗಳ ಮೇರೆಗಳನ್ನೂ ಒಳಗೊಂಡಿರತಕ್ಕದ್ದು.

a) ಆಯಾಯ ಸ್ಟೇಟುಗಳ ಪ್ರಾಂತ್ಯಗಳು ಮತ್ತು ಅವುಗಳ ಮೇರೆಗಳು.

b) ಮೊದಲನೆಯ ಶೆಡ್ಯೂಲಿನ ಪಾರ್ಟ್ "D" ಭಾಗದಲ್ಲಿ ಹೇಳಲ್ಪಟ್ಟ ಪ್ರಾಂತ್ಯಗಳು ಮತ್ತು ಅವುಗಳ ಮೇರೆಗಳು.

c) ಮುಂದಕ್ಕೆ ಹಿಂದೂಸ್ಥಾನವು ಗಳಿಸಬಹುದಾದ ಇತರ ಪ್ರಾಂತ್ಯಗಳು

2. ಹೊಸ ಪ್ರಾಂತ್ಯಗಳ ಸೇರಿಸುವಿಕೆ ಅಥವಾ ನಿರ್ಮಿಸುವ ರೀತಿ:

ಪಾರ್ಲಿಮೆಂಟು ಕಾನೂನು ಮೂಲಕ ಉಚಿತ ತೋರುವ ಶರ್ತುಗಳಿಗೊಳಪಟ್ಟು ಹೊಸಪ್ರಾಂತ್ಯಗಳನ್ನು ಸೇರಿಸಿ ಅಥವಾ ರಚಿಸಿಕೊಳ್ಳಬಹುದು.

3. ಹೊಸ ಪ್ರಾಂತ್ಯಗಳ ರಚನೆ ಅಥವಾ ಈಗ ಇರತಕ್ಕ ಪ್ರಾಂತ್ಯಗಳ ವಿಸ್ತಾರ, ಮೇರೆ ಅಥವಾ ಹೆಸರುಗಳ ಬದಲಾವಣಾ ಕ್ರಮ:—

ಪಾರ್ಲಿಮೆಂಟು ತಕ್ಕ ಕಾನೂನನ್ನು ಮಾಡಿ:—

a) ಯಾವುದೇ ಒಂದು ಪ್ರಾಂತ್ಯದ (ಸ್ಟೇಟಿನ) ಭಾಗವನ್ನು ತೆಗೆದು ಹೊಸ ಸ್ಟೇಟನ್ನು ರಚಿಸಬಹುದು; ಅಂತೆಯೇ ಕೆಲವು ಸ್ಟೇಟುಗಳನ್ನು ಕೂಡಿಸಿ, ಅಥವಾ ಅವುಗಳ ಅಂಶವನ್ನು ಕೂಡಿಸಿ, ಅಥವಾ ಒಂದು ಸ್ಟೇಟಿಗೆ ಇನ್ನೊಂದು ಸ್ಟೇಟಿನ ಅಂಶವನ್ನು ಕೂಡಿಸಿ ಹೊಸ ಸ್ಟೇಟುಗಳ ಸ್ಥಾಪನೆ ಮಾಡಬಹುದು.

b) ಒಂದು ಸ್ಟೇಟಿನ ವಿಸ್ತಾರವನ್ನು ಜಾಸ್ತಿಗೊಳಿಸಬಹುದು.

c) ಒಂದು ಸ್ಟೇಟಿನ ವಿಸ್ತಾರವನ್ನು ಕಡಿಮೆ ಮಾಡಬಹುದು.

d) ಒಂದು ಸ್ಟೇಟಿನ ಮೇರೆಗಳ ಬದಲಾವಣೆ ಮಾಡಬಹುದು. ಮತ್ತು

e) ಒಂದು ಸ್ಟೇಟಿನ ಹೆಸರನ್ನು ಬದಲಾಯಿಸಬಹುದು.

ಆದರೆ ಆ ಬಗ್ಗೆ ಪ್ರೆಸಿಡೆಂಟರು ಶಿಫಾರಸು ಮಾಡದೆ ಆ ಸಂಬಂಧದ ಯಾವುದೇ ಬಿಲ್ಲನ್ನಾದರೂ ಪಾರ್ಲಿಮೆಂಟಿನ ಯಾವುದೇ ಹೌಸಿನಲ್ಲಿಯೂ ತರಕೂಡದು. ಮತ್ತು ಅಂತಹ ಬಿಲ್ಲಿನಲ್ಲಿರುವ ಯಾವುದೇ ಸಲಹೆಯು ಮೊದಲನೆ ಶೆಡ್ಯೂಲಿನ ಪಾರ್ಟ್ A ಮತ್ತು ಪಾರ್ಟ್ B ನಲ್ಲಿ ಹೇಳಿದ ಸ್ಟೇಟುಗಳ ಮೇರೆಗಳಿಗೆ ಸಂಬಂಧಿಸಿದ್ದರೆ, ಅಥವಾ ಸದ್ರಿ ಸ್ಟೇಟುಗಳ ಹೆಸರು ಯಾ ಹೆಸರುಗಳಿಗೆ ಸಂಬಂಧ ಪಟ್ಟದ್ದರೆ, ಅಂತಹ ಸ್ಟೇಟುಗಳ ಅಥವಾ ಪ್ರತಿಯೊಂದು ಸ್ಟೇಟುಗಳ ಲೆಜಿಸ್ಲೇಟಿವುಗಳ, ಅಂತಹ ಬಿಲನ್ನು ತರಬಹುದೆಂಬ ಕುರಿತು, ಮತ್ತು ಅದಕ್ಕೆ ಸಂಬಂಧಪಟ್ಟ ಯಾವತ್ತು ಪ್ರಕರಣಗಳ ಬಗ್ಗಿನ ಅಭಿಪ್ರಾಯವನ್ನು ಪ್ರೆಸಿಡೆಂಟರು ಮೊದಲೇ ಕೇಳಿಕೊಳ್ಳತಕ್ಕದ್ದು.

4. ಮೇಲೆ ಹೇಳಿದ 2 ಮತ್ತು 3ನೇ ಆರ್ಟಿಕಲ್ಸ್ ಪ್ರಕಾರ ಮಾಡತಕ್ಕ ಕಾನೂನುಗಳು ಒಂದು ಮತ್ತು ನಾಲ್ಕನೇ ಶೆಡ್ಯೂಲಿನ ತಿದ್ದುಪಡಿ ಮತ್ತು ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಮಾಡತಕ್ಕದ್ದಿರಬೇಕು.

(i) ಮೇಲೆ ಹೇಳಿದ 2 ಮತ್ತು 3ನೇ ಆರ್ಟಿಕಲ್ಸ್‌ನಲ್ಲಿ ಸೂಚಿಸಲ್ಪಟ್ಟ ಕಾನೂನುಗಳು ಒಂದು ಮತ್ತು ನಾಲ್ಕನೇ [illegible] ತಹ ಕಾನೂನುಗಳನ್ನು ನಿರ್ವಹಿಸಿಕೊಡುವ ರೀತಿ ಬೇಕಾದ ತಿದ್ದುಪಡಿಯ ಅನುಕೂಲತೆಯನ್ನು ಕಲ್ಪಿಸಿ ಕೊಡತಕ್ಕದ್ದು. ಅಲ್ಲದೆ ಪಾರ್ಲಿಮೆಂಟಿಗೆ ಅಗತ್ಯವೆಂದು ತೋರುವ ಇತರ ಅದಕ್ಕೆ ಸರಿಹೋಗುವ ಕಾನೂನನ್ನು ಮಾಡಬಹುದು. (ಅಂತಹ ಕಾನೂನು ಅದರಿಂದ ಬಾಧಿಸಲ್ಪಡಬಹುದಾದ ಪಾರ್ಲಿಮೆಂಟು ಮತ್ತು ಲೆಜಿಸ್ಲೇಚರ್‌ಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಅವಲಂಬಿಸಿಯೂ ಇರಬಹುದು.)

(ii) ಆದರೆ ಅಂತಹ ಯಾವುದೇ ಒಂದು ಕಾನೂನು 368ನೇ ಆರ್ಟಿಕಲ್ಲಿನ ಪ್ರಕಾರದ ಘಟನೆಯ ತಿದ್ದುಪಡಿಯೆಂದೆಣಿಸಲಾಗದು.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುಕಡಿತಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಜೂಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ತಿಂಡಿ, ಸ್ನಾನ, ಊಟ, ಉಪಹಾರ, ನೈರ್ಮಲ್ಯ, ಶಯನ ಇವೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಊಟ ಬ್ರಾಹ್ಮಣ ಅಡಿಗೆ, ತಿಂಡಿತಿನಿಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

NOTICE

Payments such as annual subscription, advertisement and Court Notice publication charges may be credited to 'NAVAYUGA' account at the Canara Industrial & Banking Syndicate Ltd., Udipi or its Branches at par.

Manager.

ಪೆರ್ಡೂರು—
ಸಂಸ್ಥಾ ದಿನಾಚರಣೆಯ
ಎವರ್. ಶಾಲೆಯಲ್ಲಿ
ಯಲ್ಲಿಯ ಧ್ವಜವಂದನೆ
ಗಿ ಬಾಲಬಾಲಿಕೆಯರ
ಕೃಷ್ಣಯ್ಯ ಹೆಗ್ಗಡೆಯವ
ರ್ಜನಿಕ ಸಭೆ, ಭಾಷ
ಡಿತು. ತಾ. 16 ವಾರ
ಡಳಿಯವರು ಆಟ
ಟೆಗಳನ್ನು ಶ್ರೀ ಎ. ಆ
ಅಧ್ಯಕ್ಷತೆಯಲ್ಲಿ ಮಂ
ನಾಗಿ ಅಧಿವೇಶನ

ಮುಡಂಪ್ಕಾರು
ನ್ ಎಂಜಲ್ಸ್ ಹಾ
ಸ್ಸ ದಿನೋತ್ಸವವು
ಅಧ್ಯಕ್ಷತೆಯಲ್ಲಿ ಧ್ವ
ತಂದಿ ಸಂಚಲನ,
ರ್ಯಕ್ರಮಗಳಿಂದ ಜ

ಹಿರಿಯಡ್ಕ—
ಮಹಾಜನ ಸಭೆಯಿಂದ
ಶಾಲಾ ವಠಾರದಲ್ಲಿ
ಸಂಜೆ ಶ್ರೀ ಕೃಷ್ಣ ಜ
ಉಡುಪಿ ಸಿಂಡಿಕೇಟ್
ಮೆನೇಜರ್ ಶ್ರೀ ಟಿ.
ಯಲ್ಲಿ ಜರಗಿತು.
ಮಹಾತ್ಮರಾದ ನಂತ
ಭಾಷಣದಲ್ಲಿ ಹಿಂದೂ
ಕಣ ಹಲವಾರು ಮಂ
ಎಂದು ಹೇಳಿ ಆತನ
ನ್ನು ಅನುಸರಿಸ್ಬೇಕು
ಕಿಂದರು.

ಪಡುಬಿದ್ರೆ—
ಯಸ್ಮರ ಶಿಕ್ಷಣ ಸರಿ
ದಲ್ಲಿ ಇದೇ ತಾ. 18ರ
ಜೋಲಕರಣಗಳ ಪ್ರ
ಹಾ. ಎ. ಶಾಲಾ ವಟ
ದ್ಯಾರ್ಥಿ ಅಧ್ಯಾಪಕರ
ಯ ಅಧಿರುಚಿಯು ತ
ಗಳನ್ನು, ಪ್ರಚಾರ ಪತ್ರ
ನ್ನು ಪ್ರದರ್ಶನದಲ್ಲಿ

ಕಾಸರಗೋಡು
ಮುಸ್ಲಿಘ್
O. S. N.
ಕ. ಅವರು

ಶ್ರೀ ಲಕ್ಷ್ಮೀ
ಗೋಡು ಇದರ ಜ
I. ಕೆ. ಗಣಪತಿ ನ್ಯಾ
ನ್ಯಾಸಾ—ಸಪ್ತಮಿಂಕಿ
3 ಲೋಕಾಸೇನ
ಯಣ ರಾವ್, ವಿಠ್ಠ
ರ ಪೇಪರ್ ಮಿಲ್ಸ್ &
ಲಿಮಿಟೆಡ್ ಸ್ಪಿನ್ನರ್
4 ಶ್ರೀ C. ಮಂ
ನ ರಾಮರ ಮಗ
ನ್ನಾ ಜಿಲ್ಲಾ ನಗರ
5 ಶ್ರೀ M. ಆ
ರ ಭಕ್ತರ ಮಗ ಪ
6 M. ಅನಂತ
ಮಗ ಮಂಜೇಶ್ವರ.

ವಾದಿಗೆ ಪ್ರತಿವಾ
ಬಳಿದ ಆವಜ ವ
ಪಲಿ ವಾದಿಯು ದಾ
ನ್ಯಾಯಕ್ಕೆ ತಾ. 15-
ದ್ದಿಂದ ಆ ದಿವಸ 3ರ
ಹಾಜರಾಗದಿದ್ದರೆ
ರ್ಯಾಸಲಾಗುವದ
ತಿಳಿಸುವದಾಗುತ್ತದೆ
S I, E. R. Othe
ಕಾಸರಗೋಡು 22

ಪ್ರವಾಸಿಯ ಪತ್ರಗಳು ೧೧

ಬ್ರಿಟಿಷ್ ಕೈಗಾರಿಕೆ ಹಬ್ಬ

ಕಳೆದ ಮೇ ತಿಂಗಳ 26ನೇ ದಿನ ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 4 ಗಂಟೆಯ ವರೆಗೆ ನನ್ನ ಮಿತ್ರ ಶ್ರೀ ರಮಾನಂದ ಮತ್ತು ನಾನು ಲಂಡನಿನಲ್ಲಿ ಉಳಕೊಂಡಿದ್ದ ಬಿಡಾರದಲ್ಲಿದ್ದ ನನ್ನ ಸಹವಾಸಿಯಾಗಿದ್ದ ಶ್ರೀ ಪೋಕಿಯವರು ಬ್ರಿಟಿಷ್ ಕೈಗಾರಿಕೆ ಪ್ರದರ್ಶನವನ್ನು ನೋಡಿದೆವು. ಮುಂಚೆ ನಾನು ವಿವರಿಸಿದ ಪಾರ್ಲಿಮೆಂಟ್ ಕಟ್ಟಡಕ್ಕೆ ತಾಗಿರುವ ಥೇಮ್ಸ್ ನದಿಯ ದಕ್ಷಿಣ ತೀರದಲ್ಲಿ ಈ ಪ್ರದರ್ಶನಕ್ಕೋಸ್ಕರವೇ ಅನೇಕ ಕಟ್ಟಡಗಳನ್ನು ಕಳೆದ 4 ವರುಷಗಳಿಂದ ಕಟ್ಟಿ ತಯಾರಾಗಿದ್ದು, ಅದನ್ನು ಮೇ ತಿಂಗಳ ತಾ 3ಕ್ಕೆ ಬ್ರಿಟಿಷ್ ರಾಜ ಮತ್ತು ರಾಣಿಯರು ದೊಡ್ಡ ಒಂದು ಮೆರವಣಿಗೆಯಲ್ಲಿ ಹೋಗಿ ಸೆಂಟ್ ಪಾಲ್ಸ್ ಇಗರ್ಜಿಯಲ್ಲಿ ಪ್ರಾರ್ಥನೆ ಮಾಡಿ ಅನಂತರ ಈ ಪ್ರದರ್ಶನವನ್ನು ತೆರೆದದ್ದು. ಪ್ರಥಮತಃ ಆ ಮೆರವಣಿಗೆಯನ್ನು ವಿವರಿಸಿ ನಂತರ ಪ್ರದರ್ಶನದ ವಿಚಾರವನ್ನು ಬರೆಯುವೆನು.

ಈ ಮೆರವಣಿಗೆಯು ರಾಜರ ಅರಮನೆಯಿಂದ ಹೊರಟು ಪಟ್ಟಣದ ಮುಖ್ಯ ರಸ್ತೆಯಾದ ಸ್ಟ್ರೇಂಡ್ (strand) ಮತ್ತು ಅದಕ್ಕೆ ತಾಗಿರುವ ಫ್ಲೀಟ್ ಸ್ಟ್ರೀಟ್ (Fleet street) ಹಾಗೆ ಸುಮಾರು 2 ಮೈಲು ದೂರ ಹೋಗಿ ಆ ಫ್ಲೀಟ್ ಸ್ಟ್ರೀಟ್‌ನ ತುದಿಯಲ್ಲಿರುವ ಸೆಂಟ್ ಪಾಲ್ಸ್ ಇಗರ್ಜಿಗೆ ಹೋದದ್ದು. ಫ್ಲೀಟ್ ಸ್ಟ್ರೀಟ್ ಅಂದರೆ ಲಂಡನಿನ ಮುಖ್ಯ ಎಲ್ಲಾ ಪತ್ರಿಕೆಗಳ ಆಫೀಸುಗಳಿರುವ ಪ್ರಸಿದ್ಧ ರಸ್ತೆ. ನಾನೇ ಸ್ವಂತವಾಗಿ ಮೆರವಣಿಗೆಗೆ ಹೋಗುವುದು ಸಂಶಯವಾಗಿತ್ತು. ಯಾಕೆಂದರೆ ಜನರ ಹೆಚ್ಚಿನ ಗಲಾಟೆ ಇರುವಲ್ಲಿ ಹೋಗುವುದು ಕಷ್ಟ. ಆದರೆ ಕೆಲಸದ ನಿಮಿತ್ತ ನನಗೆ ಸುಲಭವಾಗಿ ಇತರರು ಮಾಡಿ ಕೊಟ್ಟರು. ವಾಚಕರಿಗೆ ಈ ಮುಂಚೆ ನಾನು ಹೈಕೋರ್ಟಿನ್ನು ಕೆಲವು ಸಮಯ ಸಂಚರಿಸಿ ನೋಡಿದ ವಿಷಯ ಬರೆದಿದ್ದೆ. ಹಾಗೆ ನೋಡಿದ ಗಣಗಳ ಪೈಕಿ ಮುಂಚಿನ ದಿನ ಅಂದರೆ ಮೇ ತಾ. 2ಕ್ಕೆ ನನಗೆ ನನ್ನ ಬಿಡಾರಕ್ಕೆ ಒಂದು ಜರೂರಿ ಕಾಗದವನ್ನು ಆ ಕೋರ್ಟಿನ ಕಾರಕೂನರ ವ್ಯವಸ್ಥೆ ಮಾಡಿದ್ದ ಲಾರ್ಡ್ ಚೆನ್ಸಲರ ಕಾರ್ಯದರ್ಶಿಯರು ಬರೆದರು. ಅದರಲ್ಲಿ ಏನಿತ್ತೆಂದರೆ "ನಾಳೆ ಬೆಳಗ್ಗೆ 9½ ಗಂಟೆಗೆ ರಾಜ ಮತ್ತು ರಾಣಿಯವರ ಮೆರವಣಿಗೆಯು ಹೈಕೋರ್ಟಿನ ಎದುರು ಹೋಗುವುದು. ಅದನ್ನು ನೀವು ನೋಡುವ ಬಗ್ಗೆ ಅಲ್ಲಿಯ ಅಧಿಕಾರಿಗಳಿಗೆ ನಾನು ತಿಳಿಸಿರುತ್ತೇನೆ. ಸ್ವಲ್ಪ ಮುಂಚಿತವಾಗಿಯೇ ನೀವು ಅಲ್ಲಿಗೆ ಹೋಗಿರಿ." ಹಾಗೆ ನಾನು ಅಲ್ಲಿಗೆ ಹೋದಾಗ ಹೈಕೋರ್ಟಿನ ಎದುರು ರಸ್ತೆ ಬದಿಯಲ್ಲಿ ಸಾಲು ಸಾಲಾಗಿ ಕುರ್ಚಿಯಿಟ್ಟು ಅನೇಕ ಪ್ರಾಮುಖ್ಯ ಗಂಡಸರಿಗೆ, ಹೆಂಗಸರಿಗೆ ಕುಳಿತುಕೊಳ್ಳಲಿಕ್ಕೆ ಏರ್ಪಾಡು ಮಾಡಿದ್ದರು, ಅದರಲ್ಲಿ ಎದುರು ಸಾಲಿನಲ್ಲಿ ಒಂದು ಕುರ್ಚಿ ನನಗೂ ಸಿಕ್ಕಿತು. ಹಾಗೆ ಅಲ್ಲಿ ಕುಳಿತು, ಬಹಳ ಮೆರವಣಿಗೆಯನ್ನು ಸುಲಭದಲ್ಲಿ ನೋಡಲಿಕ್ಕೆ ಸಾಧ್ಯವಾಯಿತು ಅಲ್ಲಿ ರಸ್ತೆ ಸುಮಾರು ಸುಮಾರು ಅಡಿ ಅಗಲಕ್ಕಿಂತ ಮಿಕ್ಕಿರಲಿಲ್ಲ ರಸ್ತೆಯ 2 ಬದಿಯ ಕಾಲದಾರಿಯಲ್ಲಿ (foot path) ಊರಿನ ಅನೇಕ ಸಾಮಾನ್ಯ ಜನರು, ಗಂಡಸರು, ಹೆಂಗಸರು, ಮಕ್ಕಳು, ಮೆರವಣಿಗೆ ನೋಡಲು ನಿಂತಿದ್ದರು. ಪೋಲೀಸರು ಅಲ್ಲಲ್ಲಿ ಬದಿಯಲ್ಲಿ ಒಟ್ಟೊಟ್ಟಿಗಾಗಿ ನಿಂತಿದ್ದರು. ನಿಂತ ಜನರಲ್ಲಿ ಒಬ್ಬರನ್ನೊಬ್ಬರು ನೂಕುವುದಾಗಲೀ, ಗೌಜಿ ಮಾಡಿ ಬೊಬ್ಬೆ ಹಾಕುವುದಾಗಲೀ ಇರಲಿಲ್ಲ ರಾಜರಾಣಿಯರು ಬರುವ 10 ನಿಮಿಷದವರೆಗೂ, ರಸ್ತೆಯಲ್ಲಿ ಬಾಡಿಗೆ ಕಾರುಗಳು ಮತ್ತು ಸ್ವಂತ ಕಾರುಗಳು ಹೋಗಿ ಬರುತ್ತಿದ್ದವು. ಇದು ಯಾಕೆ ನಾನು ಹೇಳುತ್ತೇನೆಂದರೆ ನಮ್ಮ ದೇಶದಲ್ಲಿ ಸ್ವರಾಜ್ಯ ಸಿಕ್ಕ ನಮ್ಮವರೇ ಮಂತ್ರಿಗಳಾದರೂ ಇವತ್ತು ಕೂಡಾ ಇನ್ನೂ ಬ್ರಿಟಿಷರ ಆಡಳಿತೆಯಲ್ಲಿ ನಡೆದ ಕ್ರಮವೇ ನಡೆಯುತ್ತಿದೆ. ಕಳೆದ ಜುಲೈ ತಾ 15ರಲ್ಲಿ ಬೆಂಗಳೂರಲ್ಲಿ ನಾನು ಹಾಜರಿದ್ದೆ. ಆಗ ನಮ್ಮ ದೇಶದ ಮುಖ್ಯ ಮಂತ್ರಿ ಶ್ರೀ ನೆಹರುಗಳು ಬೆಂಗಳೂರಿಂದ 2 ಗಂಟೆಗೆ ಸಂಜೆಯಾಗಿ ಮೈಸೂರಿಗೆ ಕಾರು ಮೂಲಕ ಹೋಗುವುದಿತ್ತು ಹೊರಡುವುದು 2 ಗಂಟೆಗಾದರೂ 2-45ರ ತನಕ ಆ ರಸ್ತೆಯಲ್ಲಿ ಜನರು ತಿರುಗುವುದನ್ನು ೩ ಗಂಟೆ ಸಮಯ ಬಂದುವಾಹನಗಳಿಗಿತ್ತು. 80 ಮೈಲು ಉದ್ದದ ಈ ರಸ್ತೆಯಲ್ಲಿ ೩ ಗಂಟೆ ಸಕಲ ವಾಹನ ಸಂಚಾರವನ್ನು ಸಂಪೂರ್ಣ ನಿಲ್ಲಿಸುವುದರಿಂದ ಜನರಿಗೆ ಎಷ್ಟು ಅಡಚಣೆ ಎಂಬುದನ್ನು ವಾಚಕರೇ ತಿಳಿಯಬಹುದು. ಇದಕ್ಕೂ ಬ್ರಿಟಿಷ್ ವೈಸರಾಯರ ಕಾಲಕ್ಕೂ ಏನೂ ಭೇದವಿಲ್ಲ. ಆದರೆ ಲಂಡನಿನಲ್ಲಿ ಹಾಗಿಲ್ಲ. ರಾಜರು ಬರುವ ಕೇವಲ 10 ನಿಮಿಷದ ವರೆಗೆ ಕೂಡ ಸಾಮಾನ್ಯ ಜನರು ಹೋಗಿ ಬರುವ ವಾಹನ ಸಂಚಾರವಿತ್ತು. ಆದು ಹಾಗಿರಲಿ, ಮೆರವಣಿಗೆಯು ಬರುವ ಮುಂಚೆ ಪರದೇಶದ ರಾಯಭಾರಿಗಳು ಅವರವರ ಕಾರಲ್ಲಿ ಬರುತ್ತಿದ್ದರು.ಹಾಗೆ ನಮ್ಮ ದೇಶದ ರಾಯಭಾರಿ ಶ್ರೀ ಕೃಷ್ಣಮೆನನರೂ ಕೂಡಾ ಬಂದರು ವಿನ್ಸ್ಟನ್ ಚರ್ಚಿಲರು ಅವರ ಕಾರಲ್ಲಿ ಬರುವಾಗ ಜನರು ಅವರಿಗೆ ಜಯಘೋಷವನ್ನು (cheers,ಕೊಟ್ಟರು ಅನಂತರ ಅಲ್ಲಿಗೆ ಲಂಡನ್ ಪಟ್ಟಣದ ಲೋರ್ಡ್ ಮೇಯರ್ ಮತ್ತು ಅವರೊಟ್ಟಿಗೆ 12 ಜನ ಕೌನ್ಸಿಲರು, ಕೆಲವರು ಕೆಂಪು ಬಣ್ಣದ ಗೌನುಗಳನ್ನು, ಕೆಲವರು ಕಪ್ಪು ಗೌನುಗಳನ್ನು ಹಾಕಿಕೊಂಡು ನಮ್ಮ ಎದುರು ರಾಜರಾಣಿಯರನ್ನು ಸ್ವಾಗತ ಮಾಡಿಕೊಳ್ಳುವ ಬಗ್ಗೆ ನಿಂತರು. ಅವರ ಹಿಂದೆ ಹೈಕೋರ್ಟಿನ ಮುಖ್ಯ ಜಡ್ಜರಾದ ಲೋರ್ಡ್ ಗೋಡಾರ್ಡ್ ಎಂಬವರು ನಿಂತಿದ್ದರು ನಂತರ ಸ.ಮಾರು 30, 40, ಒಂದೇ ರೀತಿಯ ಕಪ್ಪು ಕುದುರೆಗಳ ಮೇಲೆ ಸವಾರರ ಸಂಗಡವು, ಬಂದು ಮೆಲ್ಲಮೆಲ್ಲನೆ ಮುಂದರಿಯಿತು ಅವರ ಹಿಂದೆ ರಾಜರಾಣಿಯರು ಹಿಂದಿನ ಆಸನದಲ್ಲಿ, ಎದುರು ಅವರ ಮಗಳು ಪ್ರಿನ್ಸೆಸ್ ಎಲಿಜಬೆತ್, ಕುಂತಿದ್ದ ನಾಲ್ಕು ಚಕ್ರದ ಕುದುರೆ ಬಂಡಿಯು ಬಂದು ನಮ್ಮೆದುರು ನಿಂತಿತು. ಆಗ ಹಾಜರಿದ್ದ ಲೋರ್ಡ್ ಮೇಯರರವರ ಸಂಗಡದವರು ಅವರಿಗೆ ವಂದಿಸಿ ಹೊರಟುಹೋದರು. ರಾಜರಾಣಿಯವರ ಬಂಡಿಯು ನಮ್ಮ ಎದುರು 2 ನಿಮಿಷ ಸಮಯ ನಿಂತಿದ್ದು ಅವರು ಎರಡೂ ಬದಿಯ ಜನರನ್ನು ವಂದಿಸಿದರು. ಜನರು ಅವರಿಗೆ ಜಯಘೋಷವನ್ನು ಕೊಟ್ಟು ತುಂಬಾ ಹರ್ಷಿಸಿದರು. ಬ್ರಿಟಿಷ್ ಜನರಲ್ಲಿ ಅರಸರ ಕಡೆಗೆ ನಿಜವಾದ ಪ್ರೇಮವಿದ್ದಂತೆ ನನಗೆ ಕಂಡು ಬಂತು. ಆ ನಂತರ ಅವರು ಮುಂದೆ ಹೊರಟುಹೋದರು. ಅವರ ಹಿಂದೆ ಪುನಃ ಕಪ್ಪು ಕುದುರೆ ಸವಾರರು ಬಂದರು ನಂತರ ನಾವೆಲ್ಲರೂ ಹೊರಟು ಬಂದೆವು. ಹಾಗೆ ರಾಜರು ಅಲ್ಲಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಸೆಂಟ್ ಪಾಲ್ಸ್ ಇಗರ್ಜಿಗೆ ಹೋಗಿ ಅಲ್ಲಿ ಪ್ರದರ್ಶನವು ಜಯಪ್ರದವಾಗಬೇಕೆಂತ ದೇವರಿಗೆ ಪ್ರಾರ್ಥನೆ ಮಾಡಿ ಹಿಂತಿರುಗಿದರು. ಮತ್ತು ಅಲ್ಲಿಂದ ಪ್ರದರ್ಶನದ ಸ್ಥಳಕ್ಕೆ ಬಂದು ಆ ಪ್ರಸಂಗದ ವಿಚಾರ ಅವುಗಳನ್ನು ಕಾ ಪ್ರದರ್ಶನವನ್ನು ತೆರೆದ ಭಾಷಣ ಮಾಡಿದರು. ದುರ್ಬೀನು (Telescopes), ರೇಡಿಯೋ ಟೆಲಿ ಈ ಕೆಳಗಿನ ನಾಕ್ಕು ಬಹಳ ಅರ್ಥಗಂಭೀರ. ಹಗೆಯೇ ಜೀವಲೋಕದ ವಿವಾದದ್ದು "ಹಿಂದಿನ ವಿಕ್ಟೋರಿಯಾ ಆರ (Living world)- ಹಿಂದೆ ಇರುತ್ತಿದ್ದ ಕಾಲದ ಜೀವನದ ಭದ್ರತೆಗೂ ಈಗ, ಈಗ ನಡೆದಿರುವ ಯುಗಗಳನ್ನು ಮನುಷ್ಯ ಕಾಲದ ಸಂಶಯಕ್ಕೂ ಇರುವ ವ್ಯತ್ಯಾಸ ತೋರಿಸಿಯದೆ. ಪ್ರಸಿದ್ಧ ಪುರುಷನು ಎಲ್ಲರಿಗೂ ತಿಳಿದ ವಿಷಯ ಚಾರ್ಲ್ಸ್ ಡಾರ್ವಿನನು ಕಂಡು ಹಿಡಿದ ತತ್ವಯು (Peace) ನೆಟ್ಟು ಕಾಲ ಉಳಿಯ (Theory) ವಿಚಾರ ಇದರಲ್ಲಿ ಚಿತ್ರಗಳಲ್ಲಿ. ನಮ್ಮ ಹಿಂದಿನ ಉಂಟುಮಾಡಿರುವ ಮನುಷ್ಯನು ಮೃಗಗಳಿಂದ ಹೇಗೆ ಹುಟ್ಟಿದ ಸಂಪತ್ತು ಬೆಳೆ ಮತ್ತು ಕೊಲೆಯುತ್ತನ್ನನಾದನು ಎಂಬುದನ್ನು ಬಹು ಇಲ್ಲಿ ದುರ್ನಯವಾದವು. ಕಳೆದ ಎರಡೂವಾಗಿ ತೋರಿಸಿರುವರು ಹಾಗೆಯೇ ಮಹಾಯುದ್ಧಗಳ ಮೂಲಕ ನಮ್ಮಲ್ಲಿ ಮನುಷ್ಯನ ಮೆದುಳು ಹೇಗೆ ಕೆಲಸ ಮಾಡುತ್ತಿದೆ ಜೀವ ಮತ್ತು ಸಂಪತ್ತು ನಾಶವೆಂಬುದನ್ನು ಸಹ ವಿದ್ಯುದ್ದೀಪಗಳ ದಿಂದ ತೋರಿಸಿದ್ದಾರೆ. ಅದೇ ರೀತಿ ಈ

ಈಗ ಪ್ರದರ್ಶನದಲ್ಲಿ ನಾವು ಕಂಡ ಈ ಕಾಲದ ಸಂಶೋಧನ (Research) ಯ 5 ಗಂಟೆ ನೋಡಿದ ಸಂಗತಿಗಳನ್ನೂ—ಅಲ್ಲಿಯೇ ಭೂಲೋಕದ ಪ್ರಕೃತಿ ಸಂಕ್ಷೇಪವಾಗಿ ಬರೆಯುತ್ತೇನೆ. ಶಾಸ್ತ್ರ ತೋರಿಸಿರುವ ರಸಾಯನ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ Chemistry) ಮತ್ತು ಭೌತವಿಜ್ಞಾನಗಳು ಯುವನು ಅಲ್ಲಿದ್ದ ಎಲ್ಲಾ ಕಟ್ಟಡಗಳ Physics) ಹೇಗೆ ಹುಟ್ಟಿ ಬೆಳೆವುವು ಎಂಬ ಪ್ರಾಮುಖ್ಯವಾದ ಕಟ್ಟಡವೆಂದರೆ ವಸ್ತು ವಿಚಾರ ಹಾಗೆಯೇ ಜೀವವಿಜ್ಞಾನ ಗೋಪುರದ ಕಟ್ಟಡ (Dome of Discovery) ಲೋಹ-ವಿಜ್ಞಾನ (Metall-Biology) ಇದು ಸಿಮೆಂಟಿನದೇ ಕಟ್ಟಿ) ವಿಚಾರಗಳು ಸಾಧಿ ಸಂಬಂಧವಾದ ಬಹುದೊಡ್ಡ ಉರುಟಾದ ಕಟ್ಟಡ, ಅಣು ಭೌತವಿಜ್ಞಾನ (Neuclear physics) ಟಿನಿಂದಲೇ ಮಾಡಿದ ಅದರ ಮಾಡಿನ ಅಪ್ರುಕ್ತ ಅಪರೂಪವಾದ ವಾಯುಗಳು [Rare ರ ಕೊಡೆಯಂತೆ ಉರುಟು ಒಳಗೆ gases].

ಸಿಮೆಂಟಿನ ಕಾಲುಗಳಿದ್ದ 3 ಅಂತಸ್ತು. ಹೀಗೆ ಈ ಕಟ್ಟಡದಲ್ಲಿರುವ ವಿಷಯಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಬ್ರಿಟಿಷರು ನೋಡಿ ಅನಂತರ ಅದರ ಸಹಾಯದಿಂದ ಮಾಡಿದ ಅನೇಕ ವಿಷಯಗಳನ್ನೊಂದು ದೊಡ್ಡ ಕಟ್ಟಡದಲ್ಲಿ ಶಕ್ತಿ ಪ್ರದರ್ಶನ ರೂಪವಾಗಿ ತೋರಿಸಿದ್ದಾರೆ Power] ವಿಷಯವಾಗಿ ಇರುವ ಅನೇಕ ದರಲ್ಲಿ ಈ ಕೆಳಗಿನ ಮುಖ್ಯ ವಿಷಯಗಳದ ಯಂತ್ರಗಳನ್ನು ಕಂಡೆವು. ಕಲ್ಲಿದ್ದಲು ಬ್ರಿಟಿಷರು ಹಿಂದಿನ ಕಾಲದಿಂದ ಕಂಡುಹಿಡಿದ ಯಂತ್ರಗಳು, ವಿದ್ಯುತ್ ಮಾಡುವ ಇದ ವಿಷಯಗಳನ್ನು ತೋರಿಸುವ ಯಂತ್ರ, ಮಗ್ಗಗಳ ಯಂತ್ರ ಎಗ್ಗಿರೆ ಶಕ್ತಿ ನೆಲ-(Land) ಇದರಲ್ಲಿ ಬೇರೆ ಬೇರೆ ದೂರಕ ನಡೆಯುವ ಹಲವು ತರದ ಕಾಗೆಗೆ ಹೋಗಿ ಮಾಡಿದ ಕೆಲಸಗಳು, ನಾನಿಗಳ ಯಂತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಭೂಮಿಯನ್ನು ಸರ್ವೆ ಮಾಡಿದ್ದು, ಹೊಲೆದು, ಇನ್ನೊಂದು ಕಡೆ ಸಮುದ್ರದಲ್ಲಿ ನಿಯಂತ್ರಣ [Control] ಕೃಷಿಯಲ್ಲಿ ಉಪಯೋಗಿಸುವ ಹಡಗುಗಳ ವಿಚಾರ, ಅವುಗಳ ಇದ ಕೆಲಸ, ಕೃಷಿಗೆ ತಾಗುವ ರೋಗವನ್ನು ಕಟ್ಟುವ ಕ್ರಮ, ನಡೆಸುವ ಕ್ರಮ, ಆ [Pest] ನಿವಾರಣ, ಸೆಕೆ ದೇಶಗಳಲ್ಲಿ ರೋಗಗಳ ಬೇರೆ ಬೇರೆ ವಿಭಾಗಗಳು ಯಾವ ರೀತಿ ರೋಗನಿವಾರಣೆಗಳ ಮದ್ದು ಕಂಡುಹಿಡಿದ್ದೀರೆಂಬುದು ಇನ್ನೊಂದು ದೊಡ್ಡ [Tropical medicine], ಸಂಚಾರದಲ್ಲಿ ಸಾಗಣೆಯ ವಾಹನ ಯೋ ಮೂಲಕ ಬೇರೆ ದೇಶಗಳಿಗೆ ನ [Transport] ವಿಷಯವಾಗಿ ಬ್ರಿಟಿಷರು ಮುವ ಕ್ರಮ ಭೂಮಿ [Earth] ಇದೆಯಾದಿನ ಅನೇಕ ತರದ ವಾಹನಗಳು, ರೈಲ್ವೆ ಎಕ್ಸ್‌ಪ್ರೆಸ್, ಆಟೋ, ಎಂಜಿನ್ ವಾಹನಗಳನ್ನು ಬಹಳ ಕಾಲದಿಂದ ಬ್ರಿಟಿಷ ಕಂಡು ಹಿಡಿದದ್ದು ಹೀಗೆ. ಸಮುದ್ರ—ಉ ತಯಾರು ಮಾಡುವುದರಲ್ಲಿ ಹುಟ್ಟಿರುವ ಅಲ್ಲಿ ಹಿಂದಿನ ಕಾಲದಲ್ಲಿ ಬ್ರಿಟಿಷರ ನಮಗೆ ತಿಳಿದ ವಿಷಯ, ಹಾಗೆ ಅವರು ಪ್ರಸಿದ್ಧ ಪುರುಷರಾದ ಜೇಮ್ಸ್ ವಾಟ್ ತಯಾರು ಮಾಡಿದ ಸಮುದ್ರಕ್ಕೆ ಗಂಡು ಹಿಡಿದ ವಿಷಯಗಳು, ಸಂಚಾರ ಮಾಡಿದ ಒಂದು ಹೊಸ ರೈಲ್ವೆ ಪ್ರದಲ್ಲಿ ಹಡಗುಗಳಲ್ಲಿ ತಿರುಗಾಡುವಂತೆ ಅಲ್ಲಿ ಇಟ್ಟಿದ್ದರು. ಹಾಗೆಯೆ ಅಂದ ತಯಾರಿಸಿದ ನಕ್ಷೆಗಳು (Charts), ಈ ವಾಹನ ಕಂಪೆನಿಯು ಹೊಸ ನಮೂನೆ ದೃಷ್ಟಿಯಲ್ಲಿ ಮಾಡಿದ ಸಂಶೋಧನೆ Research ಉಂಟುಮಾಡಿಕೊಳ್ಳುವ ಗಾಡಿ, ಸಾಮಾನ್ಯ ವಿಮಾನ ಸಮುದ್ರಗಳಲ್ಲಿರುವ ಬೇರೆ ಬೇರೆ ಜೀವಾನ ಮತ್ತು ಜೆಟ್ ವಿಮಾನ (jet plane) ಹುಗಳ ಮತ್ತು ನಿಡಮೂಲೆಗಳ ವಿಂಗಡನೆಗಳನ್ನು ಬಿಡಿಸಿಟ್ಟು ಅವುಗಳು ಹೇಳುವ ಹವಾ-ಇದರಲ್ಲಿ ಹವೆ (Weather) ಕೆಲಸ ಮಾಡುತ್ತವೆಂಬುದನ್ನು ತಿಳಿಯುವ ಕುರಿತು ನೆಲದಿಂದ 250 ಮೈಲು ಎತ್ತರ, ಅದೇ ರೀತಿಯಲ್ಲಿ ಬ್ರಿಟನ್ ದೇಶಕ್ಕಿರುವ ಹವೆ ಪ್ರದೇಶದ ವಿವರಗಳು ತಯಾರಾಗಿರುವ ಬೇರೆಬೇರೆ ತರದ ಮೋಡ (Weather-zone) ಹಾಗೆಯೇ ವಿಶ್ವದ ಜಗಗಳು ಅಲ್ಲಿ ಚಲಿಸುವ ಇರುವ (Universe) ರುವ ಗ್ರಹ ನಕ್ಷತ್ರಗಳಿರುವ ಕ್ರಮಗಳು ಅದೇ ರೀತಿ (Telecommunications, Televisions, Broadcasting, Radio Signalling) ಗೈರೆ ವಾಹನಗಳಲ್ಲಿ ಉಪಯೋಗದಲ್ಲಿರುವ ಅತ್ಯಂತ ಈಚಿಗಿನ ವಿಚಾರಗಳು

THE PANGAL NAYAK BANK LIMITED.

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild. For particulars please ask for copy of Rules

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಮೂರು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ 0—6—0

೨ ಭಾರತದ ಗುರುಕುಲ ಬೆಲೆ: 0—6—0

೩ ಉತ್ತರಪಗಡೆ ಬೆಲೆ: 0—6—0

ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—

(2) ನವಭಾರತ ಬುಕ್ ಡಿಪೋ, ಉಡುಪಿ.

(3) ನವಯುಗ ಪ್ರೆಸ್, ಉಡುಪಿ.

(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕಟ್ಟುವಿಕೆ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಮೂಲ್ಕಿ ಬ್ಯಾಂಕ್

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 2 ಇನ್ನೊಂದು ಕಡೆಯಲ್ಲಿ ಬ್ರಿಟನಿನ ಪೂರ್ವ ವರುಷಗಳಿಂದ ಊರ ಜನರ ಕಾಲದಲ್ಲಿ ಜನರು ಯಾವರೀತಿಯಲ್ಲಿ ಜೀವಕ್ಕಾಗಿ ಡಿಪೋಸಿಟ್ ಹಣಕ್ಕೆ ಗ್ಗಿದ್ದರು, ಅನರು ಹಾಕಿಕೊಳ್ಳುತ್ತಿದ್ದ ವಸ್ತ್ರ ಯವಾದ ಬಡ್ಡಿಯಿಂದಲೂ, ಸ್ವ ಮಾಡುತ್ತಿದ್ದ ಬೇಸಾಯದ ಹಣಕ್ಕೆ ಅತೀ ಕಡಿಮೆ ದ್ದರು ಏನು ಎಂಬುದನ್ನು 8 ಸ. ಬಡ್ಡಿಯಿಂದಲೂ ಜನಹಿತಸಾಧಿಂ ವರ್ಷಗಳ ಹಿಂದಿನಿಂದ ಬೇರೆಬೇರೆ ಕಾಯನ್ನು ಮಾಡುತ್ತಿರುವುದು ಗಳ ಜನರ ವರ್ತನೆಗಳನ್ನು ಚಿತ್ರ ಮತ್ತು ಕೃತಿಗಳ ಮೂಲಕ ತೋರಿಸಿದ್ದಾರೆ. ಅದೇ

The Moolky Bank Ltd

Moolky, S. K

ವ ಸುಮಾರು 8ಸಾವಿರ ವರ್ಷದ ಹಿಂದೆ ಬಾರೋಟನ ಒಂದು ಅಂತರವೇ ಅಗಿದ್ದು

ಸಮಯದಲ್ಲಿ ಉತ್ತರ ಸಮುದ್ರ ಮತ್ತು ಇಂಗ್ಲಿಷ್ ಸಮುದ್ರ (Channel) ಬಂದು ಸೇರಿದ ಕಾರಣ ದೇಶವು ಪ್ರತ್ಯೇಕ ಒಂದು ದ್ವೀಪವಾಯಿತು. ಅನಂತರ ಕೆಲವು ಸಾವಿರ ವರ್ಷಗಳ ಪರ್ಯಂತರ ಕೇವಲ ಬೇಟೆ ಮತ್ತು ಮೀನು ಹಿಡಿದು ಜೀವಿಸುವ ಜನರು ಇಲ್ಲಿ ಇರುತ್ತಿದ್ದರು. ಅನಂತರ ಫ್ರಾನ್ಸ್ ದೇಶದ ಭಾಗದ ಕೆಲ್ಟ್ (Celt) ಜನರು ಇಂಗ್ಲಂಡಿಗೆ ಹೋಗಿ ಅಲ್ಲಿ ಜೀವಿಸಿ ಕೃಷಿವಗೈರೆ ಮಾಡತೊಡಗಿದರು. ನಂತರ ಈ ಜನರನ್ನು ರೋಮನರು ಕ್ರಿಸ್ತಶಕ 43ರಲ್ಲಿ ಜಯಿಸಿ ಸುಮಾರು ನಾನ್ನೂರು ವರ್ಷ ಆಳಿದರು. ಇದೇ ಬ್ರಿಟಿಷ್ ಜನರಿಗೆ ನಾಗರಿಕತೆಯ ಪ್ರಥಮ ಸಂದರ್ಶನ. ಈ ಮುಂಚೆ ಸ್ಕಾಟ್ಲೆಂಡಿನ ವಿಚಾರ ನಾನು ಬರೆದಾಗ ಅಲ್ಲಿ ಅವರು ಕಟ್ಟಿದ ಗೋಡೆ (Roman wall) ವಿಷಯ ಬರೆದುದು ವಾಚಕರಿಗೆ ನೆನಪಿರಬಹುದು. ಅನಂತರ ಯುರೋಪಿನ ಉತ್ತರ ಪಾರ್ಶ್ವದಿಂದ ಎಂಗ್ಲೋಸೆಕ್ಸನ್ ಜನರು ಸಮುದ್ರಮೂಲಕ ಇಲ್ಲಿ ಕೊಳ್ಳೆಹೊಡೆಯಲು ಬಂದು ನಂತರ ಇಲ್ಲಿಯೇ ಜೀವಿಸಿ ಕೃಷಿಮಾಡತೊಡಗಿದರು. ಅನಂತರ ಬ್ರಿಟನ್ನಿಗೆ ಕ್ರೈಸ್ತಮತವು ಬಂತು. ಆದರಮೇಲೆ ಯುರೋಪಿನ ಇನ್ನೂ ಉತ್ತರದ(Norse)ನೋರ್ಸ್ ಮತ್ತು ಡೇನ್ಸ್(Dance)ಜನರು ಹಾಗೆಯೇ ಕೊಳ್ಳೆ ಮಾಡಲು ಬಂದರು. ಅದರ ಮೇಲೆ ನೋರ್ಮನರ ದಂಡಬಂತು. ಬಂದವರೆಲ್ಲ ಊರಿನಲ್ಲಿದ್ದ ಜನರೊಡನೆ ಸೇರಿ ಜೀವಿಸಿ ಹಲವು ರಕ್ತವು ಸೇರಿದ ಈಗಿನ ಬ್ರಿಟಿಷ್ ಜನಾಂಗವಾದರು. ಇದನ್ನೆಲ್ಲ ಚಿತ್ರ ಮತ್ತು ಆಕೃತಿ ರೂಪವಾಗಿ ತೋರಿಸಿದ್ದಾರೆ.

ಇನ್ನೊಂದು ಕಡೆಯಲ್ಲಿ ಬ್ರಿಟನಿನ ಭೂಮಿಯ ವಿಚಾರವಾಗಿ ಚಿತ್ರಿಸಿರುವರು. ಅಲ್ಲಿ ಬ್ರಿಟಿಷ್ ದೇಶವು ಮುಂಚೆ ಅಂದರೆ ಮಿಲಿಯ ವರ್ಷಗಳ ಹಿಂದೆ ಹೇಗೆ ಇತ್ತು. ಅದರ ನಂತರ ಹೇಗೆ ಬದಲಾಯಿಸುತ್ತಾ ಬಂತು. ಉದಾಹರಣೆಗಾಗಿ 50ಮಿಲಿಯ ವರ್ಷಗಳ ಹಿಂದೆ ಸ್ಕಾಟ್ಲೆಂಡಿನ ದ್ವೀಪ ಪ್ರದೇಶಗಳು ಜ್ವಾಲಾಮುಖಿಗಳಾಗಿ ಉರಿಯುತ್ತಿದ್ದುವು. ಈಗ ಬರ್ಮಿಂಗ್‌ಹೆಮ್ ಇರುವ ಪ್ರದೇಶದಲ್ಲಿ ಕೇವಲ ಮರಳು ಭೂಮಿ (Desert) ಆಗಿತ್ತು. ಅದಕ್ಕೂ ಹಿಂದೆ ಬ್ರಿಟನಿನಲ್ಲಿ ನಮ್ಮೂರಿನಂತೆ ಸೆಕೆಯೂರಿನ ಕಾಡು(Tropical forests) ಬೆಳೆಯುತ್ತಿತ್ತು. ಅನಂತರ ಅನೇಕ ಪರಿವರ್ತನಗಳು ಕಳೆದು ಸುಮಾರು 20ಸಾವಿರ ವರ್ಷಗಳ ಹಿಂದೆ ಹವೆಯು ಬದಲಾಯಿಸಿ ಅತ್ಯಂತ ಶೀತ ಪ್ರದೇಶವಾಗಿ ನೀರ್ಗಲ್ಲಿನ [Glaciers] ನದಿಗಳು ಕೂಡಾ ಹರಿದುವು. ಅನಂತರ ಶೀತವು ಕಡಿಮೆಯಾಗಿ ಈಗಿರುವ ಸ್ಥಿತಿಗೆ ಮೆಲ್ಲಮೆಲ್ಲನೆ ಬಂತು. ಇವೆಲ್ಲವನ್ನೂ ಆಕೃತಿ ಮತ್ತು ಚಿತ್ರರೂಪವಾಗಿ ತೋರಿಸಿದ್ದಾರೆ.

ಇನ್ನೊಂದು ಕಡೆಯಲ್ಲಿ ಬ್ರಿಟನಿನಲ್ಲಿ ಜೀವಿಸುವ ಮುಖ್ಯ ಎಲ್ಲಾ ತರದ ಗಿಡ, ಮರಗಳು, ಹುಲ್ಲುಗಳು ಮತ್ತು ಮೃಗಗಳು ಪಕ್ಷಿಗಳನ್ನು ತೋರಿಸಿದ್ದಾರೆ. ಹಾಗೆ ಮೃಗಗಳನ್ನು ತೋರಿಸುವಲ್ಲಿ ಬಹಳ ಉತ್ಕೃಷ್ಟವಾದ ಹೆಚ್ಚು ಹಾಲಿನ ದನಗಳು, ಮಾಂಸಕ್ಕೋಸ್ಕರ ಬೆಳೆಸುವ ಎತ್ತುಗಳು, ಸಣ್ಣ ಮತ್ತು ದೊಡ್ಡತರದ ಕುದುರೆಗಳನ್ನು ಅಲ್ಲಿ ಇಟ್ಟು ಕಾಣಿಸಿರುವರು. ದನಗಳಿಂದ ವಿದ್ಯುಚ್ಛಕ್ತಿ ಮೂಲಕ ಹಾಲು ತೆಗೆಯುವ ಕ್ರಮ, ಹಾಲನ್ನು ಯಂತ್ರ ಮೂಲಕ ಬಾಟ್ಲಿಗಳಲ್ಲಿ ತುಂಬಿಸಿ ಪಟ್ಟಣಗಳಿಗೆ ಕಳುಹಿಸುವ ರೀತಿ, ಹಾಲಿನಿಂದ ಬೆಣ್ಣೆ ಮತ್ತು ಗಿಣ್ಣು [Cheese] ಮಾಡುವ ಕ್ರಮ ಕೂಡಾ ಕಾಣಿಸಿ ಇತ್ತಾರೆ. ಬೇರೆ ಬೇರೆ ತರದ ಕೋಳಿಗಳನ್ನು ಸಾಕುವ ಕ್ರಮ, ಅವುಗಳು ಇಡುವ ಮೊಟ್ಟೆಗಳನ್ನು ಬೆಳೆಸುವ ಕ್ರಮ. ಭೂಮಿಯನ್ನು ಕೃಷಿಮಾಡುವ ಬಗ್ಗೆ ಇರುವ ಯಂತ್ರಗಳು [Tractors] ಮತ್ತು ಹಳ್ಳಿಯಲ್ಲಿ ಈಗ ನಡೆಯುವ ಗುಡಿ ಕೈಗಾರಿಕೆಯ ಕಮ್ಮಾರ ಸಾಲೆ [Smithy] ಇಲ್ಲಿ ಹಳ್ಳಿಯಿಂದ ಬಂದ ಕೆಲಸಗಾರರು ಕೆಲಸಮಾಡಿ ತೋರಿಸುವರು.

ಮೇಲೆ ನಾವು ನೋಡಿದ ಕೆಲವು ಮುಖ್ಯ ವಿಚಾರದ ವಿಷಯಗಳನ್ನು ಮಾತ್ರ ಬರೆದಿರುತ್ತೇನೆ. ಇಷ್ಟು ನೋಡುವುದರಲ್ಲೆ 5 ತಾಸು ಸಮಯ ಕಳೆದು, ತಿರುಗಿ ತಿರುಗಿ ನಮಗೆ ಕಾಲು ನೋವು ಹಿಡಿದು ನೋಡುವುದನ್ನು ಕೈದುಮಾಡಿ ಹೊರಟುಹೋದೆವು. ಇನ್ನೂ ನೋಡಲಿಕ್ಕೆ ನಾವು ನೋಡಿದಷ್ಟೇ ವಿಷಯಗಳು ಪ್ರದರ್ಶನದ ಇನ್ನೊಂದು ಭಾಗದಲ್ಲಿದ್ದುವು. ಆದರೆ ಅದನ್ನು ನೋಡಲಿಕ್ಕೆ ನನ್ನಿಂದ ಸಾಧ್ಯವಾಗಲಿಲ್ಲ. ಯಾಕೆಂದರೆ ಮರುದಿನ ಲಂಡನ್ ಪಟ್ಟಣವನ್ನು ಬಿಟ್ಟು ಪ್ಯಾರಿಸ್ಸಿಗೆ ಹೋಗುವ ವ್ಯವಸ್ಥೆ ಮಾಡಿದ್ದೆನು. ಬರುವ ವಾರ ನಾನು ಮೇ ತಾ. 24ರಲ್ಲಿ ಅಂದರೆ ಪ್ರದರ್ಶನ ನೋಡುವ 2 ದಿನಕ್ಕೆ ಮುಂಚೆ ನೋಡಿ, ಅಲ್ಲಿಂದ 12ಮೈಲು ದೂರದ ಡೆಗನ್‌ಹೆಮ್ [Degenham] ಎಂಬ ಊರಲ್ಲಿರುವ ಫೋರ್ಡ್ ಕಂಪೆನಿಯ ಮೋಟಾರ್ ಕಾರಿನ ಕಾರ್ಖಾನೆ ಮತ್ತು ಇತರ ವಿಷಯ ಬರೆಯುವೆನು.

ಕೆ. ಆರ್. ಕಾರಂತ,

(ವಿಚಾರವಾಣಿ)

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಳಿಕಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಶ ದಿವಸ ಬೆಳಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಕಡಿಮೆ ಕ್ರಯದ ಉತ್ತಮ

❋ ಪುಸ್ತಕಗಳು ❋

ಪದಮಾವಳಿ	0	3	0
ಆ ಸುದ್ದಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಆತ್ಮ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸಾಬದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ಸಿಲುಮಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ–ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಪ್ರಾಚೀನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	[illegible]	[illegible]	
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಹವಗಳ ಸಾಗಂಟಿ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಫಂಟಿಮಾರಾ ೪ಭಾಗಗಳು	2	0	0
ಮಾರ್ಗಟ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚಾತಿ	0	4	0
ಕತ್ತು ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0

ರೂ. 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ.

(2) ನವಭಾರತ ಬುಕ್‌ಡಿಪೋ ಉಡುಪಿ.

ವಾರದ ಭವಿಷ್ಯ

ತಾರೀಕು ೩೦-8-51 ರಿಂದ — ತಾರೀಕು 5-9-51ರ ವರೆಗೆ

ಮೇಷ— ಈ ವಾರದಲ್ಲಿ ನಿಮ್ಮ ದೈವವು ಅಷ್ಟೊಂದು ಉತ್ತಮವಾಗಿರದಿದ್ದರೂ ಆತ್ಮಶಕ್ತಿಯಿಂದಾಗಿ ಹಲವಾರು ನಿಮ್ಮ ಬಯಕೆಗಳು ನೆರವೇರಲಿವೆ. ಮಿತ್ರ ಜನರ ಬೆಂಬಲವೂ ಬಂಧುಗಳ ನೆರವೂ ಸಾಕಷ್ಟಿರುವುದರಿಂದ ಬರತಕ್ಕ ವಿಘ್ನಗಳನ್ನೆದುರಿಸಿ ಕಾರ್ಯ ಸಾಧಿಸಿ ಕೃತಕೃತ್ಯರಾಗುವಿರಿ. ಆರ್ಥಿಕ ಸಂಪತ್ತಿಗೂ ಕೊರತೆಯುಂಟಾಗದು. ಆದರೆ ಸತತ ಪರ್ಯಟನದಿಂದಾಗಿ ತನುಮನಗಳಿಗೆ ಸುಖಶಾಂತಿಯಿರದು. ಕೆಲವೊಂದು ಕ್ಷುಲ್ಲಕ ಕಾರಣಗಳಿಂದಾಗಿ ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಕಾಣಿಸೀತು. ಕೃತಘ್ನರ ಮಾಯಾಜಾಲಕ್ಕೆ ಸಿಲುಕಿ ಸಂಕಟಪಡಬೇಕಾಗುವದು. ವಾರಾಂತ್ಯದ 3 ದಿನಗಳು ಅನುಕೂಲವಾಗಿವೆ.

ವೃಷಭ— ಕಾಲವು ಅತ್ಯುತ್ತಮವಿರುವದು. ಯಾವ ಕಾರ್ಯವನ್ನು ಕೈಗೊಂಡರೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಿಸುವುದು. ಸಮಾಜದಲ್ಲಿ ಸ್ಥಾನಮಾನಾದಿಗಳನ್ನು ಪಡೆವಿರಿ. ನೀಚ ಜನರಿಂದ ಹುಟ್ಟುವ ಧನಾಗಮವಾಗುವದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಸುಖದಿಂದ ಕಾಲ ಕಳೆವುದು. ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿಗಳಿಗೂ ದಿನಗಳು ಸುಗಮಗಳಾಗಲಿವೆ. ಕೆಲವೊಮ್ಮೆ ಸ್ವಾಮಿ ಸೇವಕರಲ್ಲೂ ತಂದೆ ಮಕ್ಕಳಲ್ಲೂ ಮನಸ್ತಾಪವುಂಟಾಗಬಹುದು. ತಾ. 30, 31, 5 ಈ ದಿನಗಳಲ್ಲಿ ಸುಖವಿಜಯ ಸ್ಥಾನಮಾನಗಳ ಲಾಭಗಳುಂಟಾಗಲಿವೆ.

ಮಿಥುನ— ನಿಮ್ಮ ಶಕ್ತಿ ಮೀರಿ ದುಡಿಯುವಿರಿ. ಆದರೆ ಫಲಪ್ರಾಪ್ತಿಯು ಸಾಕಷ್ಟು ದೊರೆಯಲಾರದು. ರಾಜಕೀಯ ಅಧಿಕಾರಿಗಳಿಂದ ಅಗಾಗ್ಯ ತೊಂದರೆಗಳುಂಟಾಗುವವು. ಪಿತ್ತ ಮತ್ತು ಉಷ್ಣಗಳ ಆಧಿಕ್ಯದಿಂದ ದೇಹದ ಆರೋಗ್ಯವು ಕೆಡಲಿದೆ. ಹಣದ ದಿಕ್ಕಟ್ಟಿಗೆ ಸಿಲುಕಿ ಪೇಚಾಡಲಿರುವಿರಿ. ಅಪ್ರೇಷ್ಟರ ವಿರಹದಿಂದ ಮನಸ್ಸಿಗೆ ಹೆಚ್ಚಿನ ವ್ಯಥೆಯುಂಟಾದೀತು. ಸೆದರಿದ ಹುಲ್ಲಿಯಂತಿರುವ ಮನಸ್ಸು ಸದಾ ಕುಮಾರ್ಗದ ಕಡೆಗೆ ನಿಮ್ಮನ್ನು ಸೆಳೆಯಲಿದೆ. ಆದರೂ ವ್ಯೆಕ್ಯ ವ್ಯಾಪಾರಾದ್ಯುದ್ಯಮಗಳಲ್ಲಿ ನಿಮ್ಮ ಬಯಕೆಯು ಸಫಲವಾಗುವದು. ತಾ 1, 2 ಈ ದಿನಗಳಲ್ಲಿ ಕಾರ್ಯದಲ್ಲಿ ವಿಜಯವೂ, ಗೃಹಸುಖ ಸ್ಥಾನಮಾನಗಳು ಲಭಿಸುವವು.

ಕರ್ಕಟ:— ವಿರೋಧಿ ವರ್ಗದವರು ಪ್ರತಿಕ್ರಿಯೆಗೆ ಸಮಯ ಸಾಧಿಸುತ್ತಿರುವರು. ಕೆಲವೊಮ್ಮೆ ಆಪ್ತೇಷ್ಟ ಜನರಲ್ಲಿಯೂ ಅವಿಶ್ವಾಸವು ಕಂಡು ಬರಬಹುದು. ಆದರೆ ಸದ್ಯದ ಗ್ರಹಸ್ಥಿತಿಯು ಉತ್ತಮವಿರುವುದರಿಂದ ನಿಮಗಾವ ತರನಾದ ಭಯವೂ ಇರಲಾರದು. ರಾಜಕೀಯವೊಂದನ್ನುಳಿದು ಇತರ ಕ್ಷೇತ್ರಗಳಲ್ಲಿ ನಿಮ್ಮ ಅಭೀಷ್ಟವು ಏನೊಂದೂ ತೊಡಕು ತೊಂದರೆಗಳಿಲ್ಲದೆ ನೆರವೇರುವದು. ಗೃಹೋಪಕರಣಗಳು ಪರಿಪೂರ್ಣವಾಗಿರುವುದರಿಂದಲೂ ಆರ್ಥಿಕ ಸಂಪತ್ತು ಉತ್ತಮವಿರುವುದರಿಂದಲೂ ದಿನಗಳು ಸುಖದಾಯಗಳಾಗುವವು. ತಾ 30, 31, 3, 4 ಅತೀವ ಪ್ರಶಸ್ತಗಳಿವೆ.

ಸಿಂಹ:— ಶುಕ್ರಾಚಾರ್ಯರನ್ನುಳಿದು ಇತರ ಎಲ್ಲಾ ಗ್ರಹರೂ ದುಃಸ್ಥಾನಗತರಾಗಿರುವ ಕಾರಣ ಈ ವಾರದಲ್ಲಿ ನೀವು ಅನೇಕ ತರದ ಕಷ್ಟನಷ್ಟಗಳನ್ನು ಎದುರಿಸಬೇಕಾದ ಪ್ರಸಂಗಗಳು ಹಲವಾರು ಬರಲಿವೆ. ಬಂದದ್ದೆಲ್ಲ ಬರಲಿ ಗೋವಿಂದನ ದಯೆವೊಂದಿರಲಿ ಎಂಬ ವಾಕ್ಯವನ್ನು ನೆನೆದು ಕಾರ್ಯರಂಗದಲ್ಲಿ ಮುಂದಡಿಯಿಡಿರಿ. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆಯೂ ಉಂಟಾಗದು. ಸುತ್ತಲಿಂದಲೂ ಶತ್ರುವರ್ಗದವರು ಹೆಚ್ಚುತ್ತಿರುವರು. ಎಷ್ಟೇ ಹಣ ಬಂದರೂ ದಿನಾಂತ್ಯದಲ್ಲಿ ಬರಿಗೈಯಾಗುವಿರಿ ತಾ. 1, 2, 5 ಇದ್ದದರಲ್ಲಿ ಉತ್ತಮ.

ಕನ್ಯಾ:— ಉದ್ಯಮಕ್ಕಿಂತ ಅಧಿಕವಾದ ಫಲವು ಲಭಿಸುವದು. ನಿಮ್ಮ ಆರ್ಥಿಕ ಬಿಕ್ಕಟ್ಟು ತಾನಾಗಿ ಮಾಯವಾಗಲಿದೆ. ಜನರ ವಿಶೇಷ ಆದರಗಳಿಗೆ ಪಾತ್ರರಾಗುವಿರಿ. ಮನದಲ್ಲಿನ ಚಿಂತಾದುಃಖಗಳು ದೂರ ತೊಲಗುವವು. ಯಾವ ವಸ್ತುವೇ ಇರಲಿ ಸಮಯಕ್ಕೆ ಲಭಿಸುವದು. ಆರೋಗ್ಯದ ಬಗ್ಗೆ ಕೊಂಚ ಜಾಗ್ರತೆ ವಹಿಸಿರಿ. ಹೆಚ್ಚಿನ ಸಮಯವನ್ನು ದುರ್ಗಾನಿತ್ಯಸಮರಣದಲ್ಲಿ ಕಳೆಯಬೇಕಾಗುವದು. ಶ್ರಮಜೀವಿಗಳಿಗೆ ಕೊಂಚ ತೊಂದರೆ ಹೆಚ್ಚಲಿದೆ. ತಾ. 30, 31, 3, 4 ಅನುಕೂಲ.

ತುಲಾ— ರವಿಬುಧ ಶುಕ್ರರು ಲಾಭಸ್ಥಾನಕ್ಕೆ ಬಂದಿರುವರು. ಅದಕಾರಣ ನಿಮ್ಮ ಕೃತಿಗಿಂತ ಫಲವೇ ಅಧಿಕವಾಗಿ ಲಭಿಸುವುದರಲ್ಲಿ ಸಂದೇಹವಿಲ್ಲವು ಕೆಲವೊಂದು ಮನೋರೋಗವು ನಿಮ್ಮನ್ನು ಸದಾ ಬಾಧಿಸುತ್ತಿದ್ದರೂ ದೇಹಾರೋಗ್ಯಕ್ಕೆ ಹಾನಿಯುಂಟಾಗದು. ಮಿತ್ರರೂ ಬಂಧುಗಳೂ ಇವರ ನೆರವಿನಿಂದ ಕೂಡಿದ ನಿಮಗೆ ಸಕಲ ಕಾರ್ಯಗಳಲ್ಲೂ ವಿಜಯವು ಲಭಿಸುವದು. ರಾಜಕೀಯ ಕ್ಷೇತ್ರದಲ್ಲಿ ಯಶ ಸಂಪಾದಿಸುವಿರಿ. ಸೇವಕ ಜನಗೂ ಶ್ರಮಜೀವಿಗಳಿಗೂ ಈವಾರವು ಅಷ್ಟೊಂದು ಉತ್ತಮವಾಗಿಲ್ಲವು. ತಾ 3, 4 ಉಳಿದು ಇತರ ದಿನಗಳು ಅನುಕೂಲವಾಗಿವೆ.

ವೃಶ್ಚಿಕ— ನಿಮ್ಮ ಅದೃಷ್ಟವೀಗ ಅತ್ಯುತ್ತಮ ಸ್ಥಿತಿಗೆ ಬಂದಿದೆ. ಆಧಿವ್ಯಾಧಿಗಳಿಂದ ಮುಕ್ತರಾದ ನಿಮಗೆ ಎಂತಹ ಮಹತ್ಕಾರ್ಯವಾದರೂ ತೃಣಸಮನಾಗಿ ಕಾಣಿಸಬಹುದು. ಯಾವ ಉದ್ಯೋಗವನ್ನೇ ಮಾಡಲಿ ಅದರಲ್ಲಿ ಕೈಬಳ್ಳಿಯ ಕೀರ್ತಿಲಾಭಗಳನ್ನು ಗಳಿಸುವಿರಿ. ಜನರ ಸಹಕಾರವು ಉತ್ತಮವಿರುವುದರಿಂದ ಸರ್ವತ್ರ ಸ್ಥಾನಮಾನಗಳು ಲಭಿಸುವವು. ಯಾವೊಂದು ತರದ ಚಿಂತೆಯೂ ನಿಮ್ಮನ್ನು ಪೀಡಿಸದಿದ್ದರೂ ಬರೇ ಮಾತಿನಿಂದುಂಟಾಗತಕ್ಕ ಕಲಹವು ನಿಮ್ಮನ್ನು ಸದಾ ಪೀಡಿಸಲಿದೆ. ತಾ. 30, 31, 5 ಈ ದಿನಗಳಲ್ಲಿ ವ್ಯವಹಾರದಲ್ಲಿ ಬಲು ಜಾಗರೂಕರಾಗಿರಿ. ಕಲಹವು ಅನಿವಾರ್ಯವಿದೆ.

ಧನು— ಮೇಲಿಂದ ಮೇಲೆ ಬರತಕ್ಕ ಕಷ್ಟಪರಂಪರೆಗಳನ್ನು ಎದುರಿಸಲು ನಿಮ್ಮಿಂದ ಶಕ್ತಿ ಸಾಲದು. ಕೈಯಲ್ಲಿನ ಹಣವು ಬರಿದಾಗುವುದರಿಂದಲೂ ಸಾಕಷ್ಟು ಉತ್ಪತ್ತಿ ಇಲ್ಲದಿರೋಣದರಿಂದಲೂ ದಿನಯಾಪನೆಯು ಬಹಳ ಕಷ್ಟಕ್ಕೆ ಬರಲಿದೆ. ಸಾಂಸಾರಿಕ ತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗಲಿವೆ. ಬಂಧುಗಳು ಆಪ್ತರೂ ದೂರದೂರ ಸರಿವರು. ಶತ್ರು ಜನರ ಕಾಟವು ಅಸಹನೀಯವಿರುವದು. ಹೆಚ್ಚೇಕೆ ನಿಮ್ಮ ತನುಮನಗಳಿಗೆ ಸ್ವಪ್ನದಲ್ಲೂ ಸುಖವು ದುರ್ಲಭವೆಂದರೆ ತಪ್ಪಾಗದು. ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮ.

ಮಕರ:— ಹಿಂದಿನಂತೆಯೇ ಇಂದಿನ ದಿನಗಳೂ ಉತ್ತಮವಾಗಿಲ್ಲವು. ಯಾವ ಕಾರ್ಯವನ್ನೂ ಕೊನೆತನಕ ಪೂರೈಸುವೆನೆಂಬ ಧೈರ್ಯ ನಿಮ್ಮಲ್ಲಿರದು. ಇದ್ದಲ್ಲೇ ಇರಲೂ ಅವಕಾಶ ದೊರೆಯದು. ನೇತ್ರೋದರ ರೋಗಗಳ ಪೀಡೆಗೆ ಸಿಲುಕಲಿರುವಿರಿ. ಮನೆಯಾಕೆಯೊಡನೆ ಅನುದಿನವೂ ಜಗಳ ತಪ್ಪದು. ವ್ಯಾಪಾರಿಗಳಿಗೂ ನೌಕರಿಜನರಿಗೂ ಶ್ರಮಕ್ಕೆ ತಕ್ಕ ಫಲ ಲಭಿಸೀತು. ಅನಿರೀಕ್ಷಿತವಾಗಿ ಧನ ಲಭಿಸುವ ಯೋಗವಿದೆ. ತಾ. 30, 31, 5 ಈ ದಿನಗಳಲ್ಲಿ ಸ್ತ್ರೀಧನ ಪ್ರಾಪ್ತಿ ಇಷ್ಟಸಿದ್ಧಿ ಸುಖ ಲಭಿಸೀತು.

ಕುಂಭ:— ಕರ್ಮಲಾಭ ಧನಪತಿಗಳ ಅನುಗ್ರಹವು ನಿಮಗೆ ಉತ್ತಮವಾಗಿರುವುದರಿಂದ ಯಾವ ಕಾರ್ಯವನ್ನೂ ಕೂಡ ನೀವು ಬೇರವರ ಆಶ್ರಯವಿಲ್ಲದೆ ಸಾಧಿಸುವಿರಿ. ಎಂತಹ ವಿಪತ್ತುಗಳನ್ನು ಕೂಡಾ ಎದುರಿಸಿ ಕೃತಕೃತ್ಯರಾಗುವಿರಿ. ನಿಮ್ಮ ಇಚ್ಛೆಯಂತೆ ಫಲವು ಕೈಸೇರುವದು. ಆದರೆ ಗೃಹಕೃತ್ಯದಲ್ಲಿ ಒಂದಿನಿತೂ ಸುಖವಿರಲಾರದು. ತಂದೆಮಕ್ಕಳೊಳೂ ಗಂಡಹೆಂಡಿರೊಳೂ ಐಕ್ಯವಿರದು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವುಂಟಾದೀತು. ಬಂಧುಜನರೊಡನೆ ಕಲಹವಾಗುವದು. ವಾರಾದಿಯ 4 ದಿನಗಳು ಅನುಕೂಲವಿರುವುದರಿಂದ ಎಲ್ಲಾ ಕಾರ್ಯಗಳಿಗೂ ಉತ್ತಮ.

ಮೀನ:— ಸಂಸಾರದಲ್ಲಿನ ಅನಾರೋಗ್ಯದಿಂದ ಬಹಳ ಕಷ್ಟಕ್ಕೆ ಗುರಿಯಾಗುವಿರಿ. ದುಡಿಮೆಯ ಬಹ್ವಂಶವು ವೈದ್ಯರ ಬೊಕ್ಕಸವನ್ನು ಸೇರಲಿರುವದು. ಕಫದೋಷದಿಂದಾಗಿ ನಿಮ್ಮ ಆರೋಗ್ಯವು ಕೆಡಲಿದೆ. ಶತ್ರುಜನರ ಕೀಟಲೆಗಳು ಮೇಲಿಂದ ಮೇಲೆ ಬರುತ್ತಿರುವವು ಆರ್ಥಿಕ ಬಿಕ್ಕಟ್ಟು ದಿನಗಳೆದಂತೆ ಹೆಚ್ಚುತ್ತಾ ಹೋಗುವದು. ಜನರ ತಿರಸ್ಕಾರ ಅವಮಾನಾದಿಗಳಿಗೆ ಗುರಿಯಗಬೇಕಾದೀತು. ಆದರೂ ತಾ. 1, 2, 3, 4 ರಲ್ಲಿ ಸ್ವಲ್ಪ ದೈವ ಬಲದಿಂದಾಗಿ ನಿಮ್ಮ ಇಷ್ಟಾರ್ಥವು ಸಫಲವಾದೀತು.

ಋತುಸ್ರಾವ ನಿಂತಿತು

'ಉಮಾರ್' ಬಿಲ್ಲೆಗಳನು ಉಪಯೋಗಿಸಿದರೆ ಹಟತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾಧಾರಣ ಮುಂದಿಗೆ ಶಾಸ್ತ್ರಿ ಗುಣವಾಗಿದೆ– ದಲ್; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ, ಯಾ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಶೂಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಪಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಧಾರವಾಡ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಜಪಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೆರೆ ದಾವಣಗೆರೆ:— ದಾವಣಗೆರೆ ಪ್ರೆಸ್ ಆರ್ ಎಲ್ ಶೆಟ್ಟಿ, ತಿರುಪ್ಪ, ಪಾಟೀಲ ಬ್ಯಾಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

ವಾರದ ಭವಿಷ್ಯ

ತಾರೀಕು 20-8-51 ರಿಂದ — ತಾರೀಕು 5-9-51 ರ ವರೆಗೆ

ಮೇಷ— ಈ ವಾರದಲ್ಲಿ ನಿಮ್ಮ ದೈವವು ಅಷ್ಟೊಂದು ಉತ್ತಮವಾಗಿರದಿದ್ದರೂ ಆತ್ಮಶಕ್ತಿಯಿಂದಾಗಿ ಹಲವಾರು ನಿಮ್ಮ ಬಯಕೆಗಳು ನೆರವೇರಲಿವೆ. ಮಿತ್ರ ಜನರ ಬೆಂಬಲವೂ ಬಂಧುಗಳ ನೆರವೂ ಸಾಕಷ್ಟಿರುವುದರಿಂದ ಬಹಳಷ್ಟು ವಿಘ್ನಗಳನ್ನೆದುರಿಸಿ ಕಾರ್ಯ ಸಾಧಿಸಿ ಕೃತಕೃತ್ಯರಾಗುವಿರಿ. ಆರ್ಥಿಕ ಸಂಪತ್ತಿಗೂ ಕೊರತೆಯುಂಟಾಗದು. ಆದರೆ ಸತತ ಪರ್ಯಟನದಿಂದಾಗಿ ತನುಮನಗಳಿಗೆ ಸುಖಶಾಂತಿಯಿರದು. ಕೆಲವೊಂದು ಕ್ಷುಲ್ಲಕ ಕಾರಣಗಳಿಂದಾಗಿ ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಕಾಣಿಸೀತು. ಕೃತಘ್ನರ ಮಾಯಾಜಾಲಕ್ಕೆ ಸಿಲುಕಿ ಸಂಕಟಪಡಬೇಕಾಗುವದು. ವಾರಾಂತ್ಯದ 3 ದಿನಗಳು ಅನುಕೂಲವಾಗಿವೆ.

ವೃಷಭ—ಕಾಲವು ಅತ್ಯುತ್ತಮವಿರುವದು. ಯಾವ ಕಾರ್ಯವನ್ನು ಕೈಗೊಂಡರೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವುದು. ಸಮಾಜದಲ್ಲಿ ಸ್ಥಾನಮಾನಾದಿಗಳನ್ನು ಪಡೆವಿರಿ. ನೀಚ ಜನರಿಂದ ಹೆಚ್ಚಿನ ಧನಾಗಮವಾಗುವದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಸುಖದಿಂದ ಕಾಲ ಕಳೆವುದು. ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿಗಳಿಗೂ ದಿನಗಳು ಸುಗಮಗಳಾಗಲಿವೆ. ಕೆಲವೊಮ್ಮೆ ಸ್ವಾಮಿ ಸೇವಕರಲ್ಲೂ ತಂದೆ ಮಕ್ಕಳಲ್ಲೂ ಮನಸ್ತಾಪವುಂಟಾಗಬಹುದು. ತಾ. 30, 31, 5 ಈ ದಿನಗಳಲ್ಲಿ ಸುಖವಿಜಯ ಸ್ಥಾನಮಾನಗಳ ಲಾಭಗಳುಂಟಾಗಲಿವೆ.

ಮಿಥುನ—ನಿಮ್ಮ ಶಕ್ತಿ ಮೀರಿ ದುಡಿಯುವಿರಿ. ಆದರೆ ಫಲಪ್ರಾಪ್ತಿಯು ಸಾಕಷ್ಟು ದೊರೆಯಲಾರದು. ರಾಜಕೀಯ ಅಧಿಕಾರಿಗಳಿಂದ ಅನಗತ್ಯ ತೊಂದರೆಗಳುಂಟಾಗುವವು. ಪಿತ್ತ ಮತ್ತು ಉಷ್ಣಗಳ ಆಧಿಕ್ಯದಿಂದ ದೇಹದ ಆರೋಗ್ಯವು ಕೆಡಲಿದೆ. ಹಣದ ಬಿಕ್ಕಟ್ಟಿಗೆ ಸಿಲುಕಿ ಪೇಚಾಡಲಿರುವಿರಿ. ಆಪ್ತೇಷ್ಟರ ವಿರಹದಿಂದ ಮನಸ್ಸಿಗೆ ಹೆಚ್ಚಿನ ವ್ಯಥೆಯುಂಟಾದೀತು. ಹೆದರಿದ ಹುಲ್ಲೆಯಂತಿರುವ ಮನಸ್ಸು ಸದಾ ಕುಮಾರ್ಗದ ಕಡೆಗೆ ನಿಮ್ಮನ್ನು ಸೆಳೆಯಲಿದೆ. ಆದರೂ ವೈಶ್ಯ ವ್ಯಾಪಾರೋದ್ಯಮಗಳಲ್ಲಿ ನಿಮ್ಮ ಬಯಕೆಯು ಸಫಲವಾಗುವದು. ತಾ 1, 2 ಈ ದಿನಗಳಲ್ಲಿ ಕಾರ್ಯದಲ್ಲಿ ವಿಜಯವೂ, ಗೃಹಸುಖ ಸ್ಥಾನಮಾನಗಳು ಲಭಿಸುವವು.

ಕರ್ಕಟಕ:—ವಿರೋಧಿ ವರ್ಗದವರು ಪ್ರತಿಕ್ರಿಯೆಗೆ ಸಮಯ ಸಾಧಿಸುತ್ತಿರುವರು. ಕೆಲವೊಮ್ಮೆ ಆಪ್ತೇಷ್ಟ ಜನರಲ್ಲಿಯೂ ಅವಿಶ್ವಾಸವು ಕಂಡು ಬರಬಹುದು. ಆದರೆ ಸದ್ಯದ ಗ್ರಹಸ್ಥಿತಿಯು ಉತ್ತಮವಿರುವುದರಿಂದ ನಿಮಗಾವ ತೆರನಾದ ಭಯವೂ ಇರಲಾರದು. ರಾಜಕೀಯವೊಂದನ್ನುಳಿದು ಇತರ ಕ್ಷೇತ್ರಗಳಲ್ಲಿ ನಿಮ್ಮ ಅಭೀಷ್ಟವು ಏನೊಂದೂ ತೊಡಕು ತೊಂದರೆಗಳಿಲ್ಲದೆ ನೆರವೇರುವದು. ಗೃಹೋಪಕರಣಗಳು ಪರಿಪೂರ್ಣವಾಗಿರುವುದರಿಂದಲೂ ಆರ್ಥಿಕ ಸಂಪತ್ತು ಉತ್ತಮವಿರುವುದರಿಂದಲೂ ದಿನಗಳು ಸುಖದಾಯಕಗಳಾಗುವವು. ತಾ 30, 31, 3, 4 ಅತೀವ ಪ್ರಶಸ್ತಗಳಿವೆ

ಸಿಂಹ:—ಶುಕ್ರಾಚಾರ್ಯರನ್ನುಳಿದು ಇತರ ಎಲ್ಲಾ ಗ್ರಹರೂ ದುಃಸ್ಥಾನಗತರಾಗಿರುವ ಕಾರಣ ಈ ವಾರದಲ್ಲಿ ನೀವು ಅನೇಕ ತೆರದ ಕಷ್ಟನಷ್ಟಗಳನ್ನು ಎದುರಿಸಬೇಕಾದ ಪ್ರಸಂಗಗಳು ಹಲವಾರು ಬರಲಿವೆ. ಬಂದದ್ದೆಲ್ಲ ಬರಲಿ ಗೋವಿಂದನ ದಯೆವೊಂದಿರಲಿ ಎಂಬ ವಾಕ್ಯವನ್ನು ನೆನೆದು ಕಾರ್ಯರಂಗದಲ್ಲಿ ಮುಂದುವರಿಯಿರಿ. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆಯೂ ಉಂಟಾಗದು. ಸುತ್ತಲಿಂದಲೂ ಶತ್ರುವರ್ಗದವರು ಹೆಚ್ಚುತ್ತಿರುವರು. ಎಷ್ಟೇ ಹಣ ಬಂದರೂ ದಿನಾಂತ್ಯದಲ್ಲಿ ಬರಿಗೈಯಾಗುವಿರಿ. ತಾ. 1, 2, 5 ಇದ್ದುದರಲ್ಲಿ ಉತ್ತಮ.

ಕನ್ಯಾ:—ಉದ್ಯಮಕ್ಕಿಂತ ಅಧಿಕವಾದ ಫಲವು ಲಭಿಸುವದು. ನಿಮ್ಮ ಆರ್ಥಿಕ ಬಿಕ್ಕಟ್ಟು ತಾನಾಗಿ ಮಾಯವಾಗಲಿದೆ. ಜನರ ವಿಶೇಷ ಆದರಗಳಿಗೆ ಪಾತ್ರರಾಗುವಿರಿ. ಮನಸ್ಸಿನ ಚಿಂತಾದುಃಖಗಳು ದೂರ ತೊಲಗುವವು. ಯಾವ ವಸ್ತುವೇ ಇರಲಿ ಸಮಯಕ್ಕೆ ಲಭಿಸುವದು. ಆರೋಗ್ಯದ ಬಗ್ಗೆ ಕೊಂಚ ಜಾಗ್ರತೆ ವಹಿಸಿರಿ. ಹೆಚ್ಚಿನ ಸಮಯವನ್ನು ದುರ್ಗಾಸ್ತುತಿಶ್ರವಣದಲ್ಲಿ ಕಳೆಯಬೇಕಾಗುವದು. ಶ್ರಮಜೀವಿಗಳಿಗೆ ಕೊಂಚ ತೊಂದರೆ ಹೆಚ್ಚಲಿದೆ. ತಾ. 30, 31, 3, 4 ಅನುಕೂಲ.

ತುಲಾ—ರವಿಬುಧ ಶುಕ್ರರು ಲಾಭಸ್ಥಾನಕ್ಕೆ ಬಂದಿರುವರು. ಆದಕಾರಣ ನಿಮ್ಮ ಕೃತಿಗಿಂತ ಫಲವೇ ಅಧಿಕವಾಗಿ ಲಭಿಸುವುದರಲ್ಲಿ ಸಂದೇಹವಿಲ್ಲವು. ಕೆಲವೊಂದು ಮನೋರೋಗವು ನಿಮ್ಮನ್ನು ಸದಾ ಬಾಧಿಸುತ್ತಿದ್ದರೂ ದೇಹಾರೋಗ್ಯಕ್ಕೆ ಹಾನಿಯುಂಟಾಗದು. ಮಿತ್ರರೂ ಬಂಧುಗಳೂ ಇವರ ನೆರವಿನಿಂದ ಕೂಡಿದ ನಿಮಗೆ ಸಕಲ ಕಾರ್ಯಗಳಲ್ಲೂ ವಿಜಯವು ಲಭಿಸುವದು. ರಾಜಕೀಯ ಕ್ಷೇತ್ರದಲ್ಲಿ ಯಶ ಸಂಪಾದಿಸುವಿರಿ. ಸೇವಕ ಜನಗೂ ಶ್ರಮಜೀವಿಗಳಿಗೂ ಈ ವಾರವು ಅಷ್ಟೊಂದು ಉತ್ತಮವಾಗಿಲ್ಲವು, ತಾ. 3, 4 ಉಳಿದು ಇತರ ದಿನಗಳು ಅನುಕೂಲವಾಗಿವೆ.

ವೃಶ್ಚಿಕ—ನಿಮ್ಮ ಅದೃಷ್ಟವೀಗ ಅತ್ಯುತ್ತಮ ಸ್ಥಿತಿಗೆ ಬಂದಿದೆ. ಆಧಿವ್ಯಾಧಿಗಳಿಂದ ಮುಕ್ತರಾದ ನಿಮಗೆ ಎಂತಹ ಮಹತ್ಕಾರ್ಯವಾದರೂ ತೃಣಸಮನಾಗಿ ಕಾಣಿಸಬಹುದು. ಯಾವ ಉದ್ಯೋಗವನ್ನೇ ಮಾಡಲಿ ಅದರಲ್ಲಿ ಕೈಬಳ್ಳಿಯ ಕೀರ್ತಿಲಾಭಗಳನ್ನು ಗಳಿಸುವಿರಿ. ಜನರ ಸಹಕಾರವು ಉತ್ತಮವಿರುವುದರಿಂದ ಸರ್ವತ್ರ ಸ್ಥಾನಮಾನಗಳು ಲಭಿಸುವವು. ಯಾವೊಂದು ತರದ ಚಿಂತೆಯೂ ನಿಮ್ಮನ್ನು ಪೀಡಿಸದಿದ್ದರೂ ಬರೇ ಮಾತಿನಿಂದುಂಟಾಗತಕ್ಕ ಕಲಹವು ನಿಮ್ಮನ್ನು ಸದಾ ಪೀಡಿಸಲಿದೆ. ತಾ. 30, 31, 5 ಈ ದಿನಗಳಲ್ಲಿ ವ್ಯವಹಾರದಲ್ಲಿ ಬಲು ಜಾಗರೂಕರಾಗಿರಿ, ಕಲಹವು ಅನಿವಾರ್ಯವಿದೆ

ಧನು—ಮೇಲಿಂದ ಮೇಲೆ ಬರತಕ್ಕ ಕಷ್ಟಪರಂಪರೆಗಳನ್ನು ಎದುರಿಸಲು ನಿಮ್ಮಿಂದ ಶಕ್ತಿ ಸಾಲದು. ಕೈಯಲ್ಲಿನ ಹಣವು ಬರಿದಾಗುವುದರಿಂದಲೂ ಸಾಕಷ್ಟು ಉತ್ಪತ್ತಿ ಇಲ್ಲದಿರುವದರಿಂದಲೂ ದಿನಯಾಪನೆಯು ಬಹಳ ಕಷ್ಟಕ್ಕೆ ಬರಲಿದೆ ಸಾಂಸಾರಿಕ ತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗಲಿವೆ. ಬಂಧುಗಳು ಆಪ್ತರೂ ದೂರ ದೂರ ಸರಿವರು. ಶತ್ರು ಜನರ ಕಾಟವು ಅಸಹನೀಯವಿರುವದು. ಹೆಚ್ಚೇಕೆ ನಿಮ್ಮ ತನುಮನಗಳಿಗೆ ಸ್ವಪ್ನದಲ್ಲೂ ಸುಖವು ದುರ್ಲಭವೆಂದರೆ ತಪ್ಪಾಗದು. ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮ.

ಮಕರ:—ಹಿಂದಿನಂತೆಯೇ ಇಂದಿನ ದಿನಗಳೂ ಉತ್ತಮವಾಗಿಲ್ಲವು. ಯಾವ ಕಾರ್ಯವನ್ನೂ ಕೊನೆತನಕ ಪೂರೈಸುವೆನೆಂಬ ಭರವಸೆ ನಿಮ್ಮಲ್ಲಿರದು. ಇದ್ದಲ್ಲೇ ಇರಲೂ ಅವಕಾಶ ದೊರೆಯದು. ನೇತ್ರೋದರ ರೋಗಗಳ ಪೀಡೆಗೆ ಸಿಲುಕಲಿರುವಿರಿ. ಮನೆಯಾಕೆಯೊಡನೆ ಅನುದಿನವೂ ಜಗಳ ತಪ್ಪದು. ವ್ಯಾಪಾರಿಗಳಿಗೂ ನೌಕರಿಜನರಿಗೂ ಶ್ರಮಕ್ಕೆ ತಕ್ಕ ಫಲ ಲಭಿಸೀತು. ಅನಿರೀಕ್ಷಿತವಾಗಿ ಧನ ಲಭಿಸುವ ಯೋಗವಿದೆ. ತಾ. 30, 31, 5 ಈ ದಿನಗಳಲ್ಲಿ ಸ್ತ್ರೀಧನ ಪ್ರಾಪ್ತಿ ಇಷ್ಟಸಿದ್ಧಿ ಸುಖ ಲಭಿಸೀತು.

ಕುಂಭ:—ಕರ್ಮಲಾಭ ಧನಪತಿಗಳ ಅನುಗ್ರಹವು ನಿಮಗೆ ಉತ್ತಮವಾಗಿರುವುದರಿಂದ ಯಾವ ಕಾರ್ಯವನ್ನೂ ಕೂಡ ನೀವು ಹೆರವರ ಆಶ್ರಯವಿಲ್ಲದೆ ಸಾಧಿಸುವಿರಿ. ಎಂತಹ ವಿಪತ್ತುಗಳನ್ನು ಕೂಡಾ ಎದುರಿಸಿ ಕೃತಕೃತ್ಯರಾಗುವಿರಿ. ನಿಮ್ಮ ಇಚ್ಛೆಯಂತೆ ಫಲವು ಕೈಸೇರುವದು. ಆದರೆ ಗೃಹಕೃತ್ಯದಲ್ಲಿ ಒಂದಿನಿತೂ ಸುಖವಿರಲಾರದು. ತಂದೆ ಮಕ್ಕಳೊಳಗೂ ಗಂಡಹೆಂಡಿರೊಳಗೂ ಐಕ್ಯವಿರದು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವುಂಟಾದೀತು. ಬಂಧುಜನರೊಡನೆ ಕಲಹವಾಗುವದು. ವಾರಾದಿಯ 4 ದಿನಗಳು ಅನುಕೂಲವಿರುವುದರಿಂದ ಎಲ್ಲಾ ಕಾರ್ಯಗಳಿಗೂ ಉತ್ತಮ.

ಮೀನ.—ಸಂಸಾರದಲ್ಲಿನ ಅನಾರೋಗ್ಯದಿಂದ ಬಹಳ ಕಷ್ಟಕ್ಕೆ ಗುರಿಯಾಗುವಿರಿ, ದುಡಿಮೆಯ ಬಹ್ವಂಶವು ವೈದ್ಯರ ಬೊಕ್ಕಸವನ್ನು ಸೇರಲಿರುವದು. ಕಫದೋಷದಿಂದಾಗಿ ನಿಮ್ಮ ಆರೋಗ್ಯವು ಕೆಡಲಿದೆ. ಶತ್ರು ಜನರ ಕೀಟಲೆಗಳು ಮೇಲಿಂದ ಮೇಲೆ ಬರುತ್ತಿರುವವು. ಆರ್ಥಿಕ ಬಿಕ್ಕಟ್ಟು ದಿನಗಳೆದಂತೆ ಹೆಚ್ಚುತ್ತಾ ಹೋಗುವದು. ಜನರ ತಿರಸ್ಕಾರ ಅವಮಾನಾದಿಗಳಿಗೆ ಗುರಿಯಾಗಬೇಕಾದೀತು, ಆದರೂ ತಾ. 1, 2, 3, 4 ರಲ್ಲಿ ಸ್ವಲ್ಪ ದೈವ ಬಲದಿಂದಾಗಿ ನಿಮ್ಮ ಇಷ್ಟಾರ್ಥವು ಸಫಲವಾದೀತು

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುತ್ತದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತರ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಿ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೇದಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವನಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾಮಣ್ಣ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ– ಬಸಪ್ಪ, ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜು ಮೇಶ್ವರ ಮೆಡಿಕಲ್ ದಾವಣಗೆರೆ ದಾವಣಗೆರೆ:—ದಾವಣಗೆರೆ ಸ್ಟೋರ್ಸ್ ಆರ್ ಎಲ್ ಕೆಮೆಲಪಾಟ, ಕೆಮಿಸ್ಟ, ಶಾನೇಶ್ವ ಬ್ಯಾಡಗಿ

ನವಯುಗ

1951 — 19೬೭

ನವಯುಗ

1961 — 1962ರ

ನವಯುಗ

195೯ — 19೬೨

ನವಯುಗ

		Page No
1)	From 6-9-1951	16
2)	13-9-1951	12
3)	20-9-1951	10
4)	27-9-1951	10
5)	4-10-1951	12
6)	11-10-1951	10
7)	18-10-1951	10
8)	25-10-1951	10
9)	8-11-1951	12
10)	15-11-1951	12
11)	22-11-1951	12
12)	29-11-1951	12
13)	6-12-1951	10
14)	13-12-1951	12
15)	20-12-1951	12
16)	27-12-1951	12
		194

Regd No. M 3618

LICENCE No. 31
Licensed to Post without prepayment

6-9-1951

Founder: Sri A. B Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನ ವ ಯು ಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೧

NAVAYUGA WEEKLY

Post Box No. 22 UDIPI.

Vol. 31
No. 1

ಉಡುಪಿಯಲ್ಲಿ ನವಯುಗಾರಂಭೋತ್ಸವ ನಡೆದಾಗ ಶುಭವನ್ನು ಹಾರೈಸಿದ ಮಹನೀಯರು.

" ...ನವಯುಗ, ಯಾವ ಭೀತಿ ಕಟ್ಟುಗಳಿಗೂ ಒಳಗಾಗದೆ ತನ್ನ ಕರ್ತವ್ಯವನ್ನು ನೆರವೇರಿಸಿ ಸಾರ್ವಜನಿಕ ಪತ್ರಿಕೆಯಾಗಿ ದೀರ್ಘಕಾಲ ಬಾಳಬೇಕೆಯಂದಿ ..."

ನವಯುಗ ಪತ್ರಿಕೆಯ ಜನ್ಮದಾತರೂ,
ವಿಶೇಷಾಭಿಮಾನಿಗಳೂ ಉಜ್ವಲ ದೇಶಾ
ಭಿಮಾನಿಗಳೂ ಸದ ಮದ್ರಾಸದ
ಕೃಷಿ ಮಂತ್ರಿಗಳೂ ಆದ
ಶ್ರೀ ಎ ಬಿ ಶೆಟ್ಟರು.

"All Good wishes to the
Navayuga
in its new Career"

ಶ್ರೀ ಜವಾಹರಲಾಲ ನೆಹ್ರೂ
ಪ್ರಧಾನ ಮಂತ್ರಿ.

ನವಯುಗ ಪ್ರೆಸ್ಸಿನ ಮಾಲಿ ಹಾಲಿಕೂ
ನವಯುಗ ಎಂಟರ್‌ಪ್ರೈಸಸ ಚಿಯರ್
ಮೇನರೂ, ಕೆ ಎಚ್ ಶೆಟ್ಟರ ಆಡಳಿತ
ಕಾಲದಲ್ಲಿ ನವಯುಗದ ಸರ್ವತೋಮುಖ
ಯಶಸ್ಸನ್ನು ಬಯಸುತ್ತಿರುವ
ಉಡುಪಿಯ ಜನಪ್ರಿಯ ವಕೀಲ
ಶ್ರೀ ಕೆ ಜಗನ್ನಾಥ ಬಲ್ಲಾಳರು



" ಯಾವ ಕಡೆಯ ಒತ್ತಾಯ ಅನುಗ್ರಹಗಳಿಗೂ ಒಳಗಾಗದ ನಿಸ್ಪಕ್ಷಪಾತ ಬುದ್ಧಿಯು ಪತ್ರಿಕಾ ಕರ್ತರುಗಳ ಜೀವನದ ಆದಿಗಲ್ಲಾಗಬೇಕು."

ನವಯುಗದ ಉದ್ಘಾಟನಾ ಭಾಷಣದಲ್ಲಿ
ಮಂಗಳೂರು ಮುನ್ಸಿಪಲ್
ಚಿಯರ್‌ಮೆನರಾಗಿದ್ದ
ದಿ| ಡಾ| ವಿಠ್ಠಲ ಶೆಟ್ಟರು.

" ನವಯುಗವು ಇಷ್ಟರವರೆಗೆ ಕರ್ನಾಟಕದ ಉನ್ನತಿ ಮತ್ತು ಅಭಿವೃದ್ಧಿಗಾಗಿ ಹೆಚ್ಚಿನ ಕೆಲಸಮಾಡಿರುತ್ತದೆ. ಇನ್ನು ಮುಂದೆಯೂ ಅದು ದಿನೇ ದಿನೇ ಹೆಚ್ಚು ಹೆಚ್ಚು ಬಲಗೊಂಡು ಬೆಳೆದು ತನ್ನ ಕೀರ್ತಿ ಮತ್ತು ಪ್ರಭಾವವನ್ನು ಹೆಚ್ಚಿಸುತ್ತಾ ನಡೆಯಲೆಂದೇ ನನ್ನ ಪ್ರೇಮಪೂರ್ವಕ ಹಾರೈಕೆ."

ನವಯುಗದ ಮೇಲಿನ ವಿಶೇಷಾಭಿಮಾನಿ
ಗಳೂ ಕನ್ನಡಾಭಿಮಾನಿಗಳೂ ಆದ
ಶ್ರೀ ಡಾ| ಯು. ರಾಮರಾಯರು

ಯೋಗ್ಯ ರೀತಿಯಲ್ಲಿ ನಡೆಸಲ್ಪಡುವ ವಾರ್ತಾ ಪತ್ರಿಕೆಗೆ ಪ್ರಾಮುಖ್ಯ ಮತ್ತು ಉಪಯೋಗಗಳಿವೆ ...

ನವಯುಗವನ್ನು ಪ್ರಥಮವಾಗಿ ಓದುಗರಿಗೆ ಅರ್ಪಿಸಿ ಆಗಿನಿಂದ ಈ ವರೆಗೆ
ತನ್ನ ಸಹಕಾರ ಸಹಾನುಭೂತಿಯನ್ನು
ವ್ಯಕ್ತಪಡಿಸುತ್ತಾ ಬಂದಿರುವ
ಡಾ| ಟಿ ಮಾಧವ ಪೈಗಳವರು

17)	3-1-1952	—	10
18)	10-1-1952	—	10
19)	17-1-1952	—	10
20)	24-1-1952	—	22 ನವಯುಗ ಪ್ರಜಾಪ್ರಭುತ್ವ ಸಂಚಿಕೆ.
21)	31-1-1952	—	10
22)	7-2-1952	—	10
23)	14-2-1952	—	10
24)	21-2-1952	—	12
25)	28-2-1952	—	12
26)	6-3-1952	—	10
27)	13-3-1952	—	10
28)	20-3-1952	—	12
29)	27-3-1952	—	12
30)	3-4-1952	—	10
31)	10-4-1952	—	12
32)	17-4-1952	—	12
33)	24-4-1952	—	12
			196

Regd No M 3618

LICENCE No. 31
Licensed to Post without Prepayment

6-9-1951

Founder Sri A. B Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನ ವ ಯು ಗ
ಉಡುಪಿ, ದ ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩
ವಾರ ೧

NAVAYUGA WEEKLY Post Box No. 22 UDIPI.

Vol. 3 No. 1

ಉಡುಪಿಯಲ್ಲಿ ನವಯುಗಾರಂಭೋತ್ಸವ ನಡೆದಾಗ ಶುಭವನ್ನು ಹಾರೈಸಿದ ಮಹನೀಯರು.

"...ನವಯುಗ ಯಾವ ಭೀತಿ ಆಟಾಟೋಪಗಳಿಗೂ ಒಳಗಾಗದೆ ತನ್ನ ಕರ್ತವ್ಯವನ್ನು ನೆರವೇರಿಸಿ ಸಾರ್ವಜನಿಕ ಪತ್ರಿಕೆಯಾಗಿ ದೀರ್ಘಕಾಲ ಬಾಳಿಬೆಳೆಯಲಿ...."

ನವಯುಗ ಪತ್ರಿಕೆಯ ಜನ್ಮದಾತರೂ, ವಿಶೇಷಾಭಿಮಾನಿಗಳೂ ಉಜ್ವಲ ದೇಶಾಭಿಮಾನಿಗಳೂ ಸದ ಮದ್ರಾಸದ ಕೃಷಿ ಮಂತ್ರಿಗಳೂ ಆದ

ಶ್ರೀ ಎ ಬಿ ಶೆಟ್ಟರು

"All Good wishes to the Navayuga in its new Career"

ಶ್ರೀ ಜವಾಹರಲಾಲ ನೆಹರೂ,
ಪ್ರಧಾನ ಮಂತ್ರಿ.

ನವಯುಗ ಪ್ರೆಸ್ಸಿನ ಮೂಲ ಪುರುಷರೂ ನವಯುಗ ಎಂಟರ್‌ಪ್ರೈಸಿನ ಚೆಯರ್‌ಮೇನರೂ, ಕೆ ಎಚ್ ಶೆಟ್ಟರ ಆಡಳಿತ ಕಾಲದಲ್ಲಿ ನವಯುಗದ ಸರ್ವತೋಮುಖ ಯಶಸ್ಸನ್ನು ಬಯಸುತ್ತಿರುವ ಉಡುಪಿಯ ಜನಪ್ರಿಯ ವಕೀಲ

ಶ್ರೀ ಕೆ ಜಗನ್ನಾಥ ಬಲ್ಲಾಳರು



" [illegible]"

ನವಯುಗದ ಉದ್ಘಾಟನಾ ಭಾಷಣದಲ್ಲಿ ಮಂಗಳೂರು ಮುನ್ಸಿಪಲ್ ಚೆಯರ್‌ಮೆನರಾಗಿದ್ದ

ದಿ। ಡಾ। ವಿಠ್ಠಲ ಶೆಟ್ಟರು.

" [illegible] ನನ್ನ ಪ್ರೇಮಪೂರ್ವಕ ಹಾರೈಕೆ"

ನವಯುಗದ ಮೇಲಿನ ವಿಶೇಷಾಭಿಮಾನಿಗಳೂ ಕನ್ನಡಾಭಿಮಾನಿಗಳೂ ಆದ

ಶ್ರೀ ಡಾ। ಯು. ರಾಮರಾಯರು

[illegible]

ನವಯುಗವನ್ನು ಪ್ರಧಮವಾಗಿ [illegible] ಆಹ್ವಾನಿಸಿ ಆಗಿನಿಂದ ಈ ವರೆಗೆ ತನ್ನ [illegible] ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ ಬಂದಿರುವ

ಡಾ। ಟಿ. ಮಾಧವ ಪೈಗಳವರು

34)	1- 5- 1952 —	12
35)	8- 5- 1952 —	12
36)	15- 5- 1952 —	12
37)	22- 5- 1952 —	12
38)	29- 5- 1952 —	12
39)	5- 6- 1952 —	12
40)	12- 6- 1952 —	12
41)	19- 6- 1952 —	12
42)	26- 6- 1952 —	12
43)	3- 7- 1952 —	12
44)	10- 7- 1952 —	12
45)	17- 7- 1952 —	12
46)	24- 7- 1952 —	12
47)	31- 7- 1952 —	12
48)	7- 8- 1952 —	12
49)	14- 8- 1952 —	20
50)	21- 8- 1952 —	12
51)	28- 8- 1952 —	12
		224

TAal 51 weeks

ಸ್ವಾತಂತ್ರ್ಯದ ಹೋರಾಟದ ದಿಂಚರಿ

I	194
II	196
III	224
	614

Regd.No M. 3618

LICENCE No. 31
Licensed to Post without Prepayment

6-9-1951

Founder Sri A. B Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನ ವ ಯು ಗ
ಉಡುಪಿ, ದ ಕ

ವಾರ್ಷಿಕ ಚಂದಾ
ರೂ. 5-12-0
೬ ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೧

NAVAYUGA WEEKLY Post Box No. 22 UDIPI.

Vol. 31
No. 1

ಉಡುಪಿಯಲ್ಲಿ ನವಯುಗಾರಂಭೋತ್ಸವ ನಡೆದಾಗ ಶುಭವನ್ನು ಹಾರೈಸಿದ ಮಹನೀಯರು.

“. . .ನವಯುಗ ಯಾವ ಭೀತಿ ಆಮಿಷಗಳಿಗೂ ಒಳಗಾಗದೆ ತನ್ನ ಕರ್ತವ್ಯವನ್ನು ನೆರವೇರಿಸಿ ಸಾರ್ವಜನಿಕ ಪತ್ರಿಕೆಯಾಗಿ ದೀರ್ಘಕಾಲ ಬಾಳಿಬೆಳೆಯಲಿ . .”

ನವಯುಗ ಪತ್ರಿಕೆಯ ಜನ್ಮದಾತರೂ, ವಿಶೇಷಾಭಿಮಾನಿಗಳೂ ಉಜ್ವಲ ದೇಶಾಭಿಮಾನಿಗಳೂ ಸದ ಮದ್ರಾಸ ಕೃಷಿ ಮಂತ್ರಿಗಳೂ ಆದ

ಶ್ರೀ ಎ ಬಿ ಶೆಟ್ಟರು.

“All Good wishes to the Navayuga in its new Career”

ಶ್ರೀ ಜವಾಹರಲಾಲ ನೆಹ್ರೂ
ಪ್ರಧಾನ ಮಂತ್ರಿ.

ನವಯುಗ ಪ್ರೆಸ್ಸಿನ ಮೂಲ ಪುರುಷರೂ ನವಯುಗ ಎಂಟರ್‌ಪ್ರೈಸಿನ ಚೆಯರ್‌ಮೇನರೂ, ಕೆ. ಎಚ್ ಶೆಟ್ಟರ ಆಡಳಿತ ಕಾಲದಲ್ಲಿ ನವಯುಗದ ಸರ್ವತೋಮುಖ ಯಶಸ್ಸನ್ನು ಬಯಸುತ್ತಿರುವ ಉಡುಪಿಯ ಜನಪ್ರಿಯ ವಕೀಲ

ಶ್ರೀ ಕೆ. ಜಗನ್ನಾಥ ಬಲ್ಲಾಳರು

“. . ಯಾವ ಪಕ್ಷದ ಆಗ್ರಹ ಅನುಗ್ರಹಗಳಿಗೂ ಒಳಗಾಗದ ಸ್ವಪ್ರಜ್ಞಾತ ಬುದ್ಧಿಯು ಪತ್ರಿಕಾ ಕರ್ತರುಗಳ ಜೀವನದ ಅಡಿಗಲ್ಲಾಗಬೇಕು”

ನವಯುಗದ ಉದ್ಘಾಟನಾ ಭಾಷಣದಲ್ಲಿ ಮಂಗಳೂರು ಮುನ್ಸಿಪಲ್ ಚೆಯರ್‌ಮೆನರಾಗಿದ್ದ

ದಿ| ಡಾ| ವಿಠ್ಠಲ ಶೆಟ್ಟರು.



“ ನವಯುಗವು ಇಷ್ಟರವರೆಗೆ ಕರ್ನಾಟಕದ ಉನ್ನತಿ ಮತ್ತು ಅಭಿವೃದ್ಧಿಗಾಗಿ ಹೆಚ್ಚಿನ ಕೆಲಸಮಾಡಿರುತ್ತದೆ. ಇನ್ನು ಮುಂದೆಯೂ ಅದು ದಿನೇ ದಿನೇ ಹೆಚ್ಚು ಹೆಚ್ಚು ಬಲಗೊಂಡು ಬೆಳೆದು ತನ್ನ ಕೀರ್ತಿ ಮತ್ತು ಪ್ರಭಾವವನ್ನು ಹೆಚ್ಚಿಸುತ್ತಾ ನಡೆಯಲೆಂದೇ ನನ್ನ ಪ್ರೇಮಪೂರ್ವಕ ಹಾರೈಕೆ”

ನವಯುಗದ ಮೇಲಿನ ವಿಶೇಷಾಭಿಮಾನಿಗಳೂ ಕನ್ನಡಾಭಿಮಾನಿಗಳೂ ಆದ

ಶ್ರೀ ಡಾ| ಯು. ರಾಮರಾಯರು

ಯೋಗ್ಯ ರೀತಿಯಲ್ಲಿ ನಡೆಸಲ್ಪಡುವ ವಾರ್ತಾ ಪತ್ರಿಕೆಗೆ ಸ್ವಾತಂತ್ರ್ಯ ಮತ್ತು ಉಪಯೋಗಕರ ಜೀವನವಿರುತ್ತದೆ

ನವಯುಗವನ್ನು ಪ್ರಥಮವಾಗಿ ಉಡುಪಿಗೆ ಆಹ್ವಾನಿಸಿ ಆಗಿನಿಂದ ಈ ವರೆಗೆ ತನ್ನ ಸಹಕಾರ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ ಬಂದಿರುವ

ಡಾ| ಟಿ ಮಾಧವ ಪೈಗಳವರು

ನವಯುಗದ ಹುಟ್ಟು ಮತ್ತು

ಸಣ್ಣ ಕತೆ, ಕವಿತೆ-ಮುಂತಾದ ಉತ್ಕೃಷ್ಟ ಸಾಹಿತ್ಯಗಳ ಮೂಲಕ ದ. ಕನ್ನಡದ ಕೀರ್ತಿಯನ್ನು ಹೊರನಾಡಿಗೂ ಹಬ್ಬಿಸಿದ
ದಿ| ಪಂಜೆ ಮಂಗೇಶರಾಯರು.

1942ರ ವರೆಗೆ ನವಯುಗದ ಸಂಪಾದಕರಾಗಿದ್ದು ಅದರ ಕೀರ್ತಿಗೆ ಕಾರಣೀಭೂತರಾದ ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ
ಶ್ರೀ ಕೆ. ಕೆ. ಶೆಟ್ಟರು.

ದ. ಕನ್ನಡದಲ್ಲಿ ಪತ್ರಿಕೋದ್ಯಮ, ಮೋಟಾರು ಸಾರಿಗೆ, ಇನ್ಶೂರೆನ್ಸ್ ಮುಂತಾದ ಉದ್ಯಮಗಳ ಮೂಲಪುರುಷರಾದ—
ಶ್ರೀ ಬಿ. ವಿಠ್ಠಲರಾಯರು

“... ಮಂಗಳೂರಿನ ನವಯುಗ ತಿರುಗಿಯೂ ಉಡುಪಿಯನ್ನು ಪಡೆದಿರುವುದು ಅವರನ್ನು ತ್ಯಾಗಶೀಲರಾಗಿ ನಡೆಸಿಕೊಂಡು ಬರುವುದು ಉಡುಪಿಯ ಜನರ ಪವಿತ್ರ ಕರ್ತವ್ಯ” ಬ್ಯಾಂಕ್ ಆಫ್ ಇನ್ಶೂರೆನ್ಸ್ ಕಂಪೆನಿಯ ಮುಖ್ಯಾಧಿಕಾರಿಗಳಾದ—
ಶ್ರೀ ಕೊಡ್ಚಿಕಾರ್ ಪದ್ಮನಾಭ ಪೈಗಳು

1921ನೆಯ ಇಸವಿಯಲ್ಲಿ ಶ್ರೀ ಎ. ಬಿ. ಶೆಟ್ಟರು ನವಯುಗವನ್ನು ಮಂಗಳೂರಿನಿಂದ ಹೊರಡಿಸಿದರು. ದೇಶದಲ್ಲಿಯ ಅಜ್ಞಾನ ಅಂಧಶ್ರದ್ಧೆ-ಅನಾಗರಿಕತೆಗಳನ್ನು ಹೋಗಲಾಡಿಸಿ ಜನಜಾಗ್ರತಿಯನ್ನುಂಟುಮಾಡುವ ಉದ್ದೇಶದಿಂದಲೇ ನವಯುಗ ಜನ್ಮತಾಳಿತು. ಅಂದಿನಿಂದ ಇಂದಿಗೆ ಮೂವತ್ತು ವರ್ಷ ಕಳೆದರೂ ಪತ್ರಿಕೆಯು ತನ್ನ ಕಾಲ ಮೇಲೆ ತಾನು ನಿಲ್ಲುವ ಆರ್ಥಿಕ ಭದ್ರತೆಗೆ ಬಂದು ಮುಟ್ಟಿಲ್ಲವೆಂದ ಮೇಲೆ ಮೂವತ್ತು ವರ್ಷದ ಕೆಳಗಿನ ಕನ್ನಡ ಪತ್ರಿಕೆಗಳ ಸ್ಥಿತಿಗತಿ-ಹುಟ್ಟು ಜೀವನ ಹೇಗಿದ್ದಿತೆಂದು ನಾವು ಊಹಿಸಬಹುದಾಗಿದೆ. ಪರಕೀಯರ ದಬ್ಬಾಳಿಕೆಯ ಕಾಲವದು. ಉತ್ತಮ ವಿಚಾರ-ಹಾಗೂ ಎಚ್ಚರಿಕೆಗಳಿಂದ ಜನಜಾಗ್ರತಿಯನ್ನುಂಟುಮಾಡುವದು ರಾಜಕೀಯ ವಿರೋಧವೇ ಆಗುತ್ತಿತ್ತು! ಇಂತಹ ಸಂದಿಗ್ಧ ಸಮಯದಲ್ಲೇ ಶ್ರೀ ಶೆಟ್ಟರು ಎದೆಗುಂದದೆ ಕನ್ನಡ ಜನಾಂಗದಲ್ಲಿ ಒಂದು ಬಗೆಯ ಕ್ರಾಂತಿಯನ್ನೆಬ್ಬಿಸಿದರು. ದ. ಕನ್ನಡದಲ್ಲಿ ವಯೋಮಾನದಿಂದ ನೋಡುವಾಗ ನವಯುಗವು ಎರಡನೆಯದಾಗಿ ಪರಿಗಣಿಸಲ್ಪಟ್ಟಿದೆ. ನಿರ್ಭೀತವಾದ ಟೀಕೆ ಟಿಪ್ಪಣಿಗಳೂ-ವಿಚಾರ ವೈಖರಿಯೂ ನವಯುಗಕ್ಕೊಂದು ವಿಶೇಷ ಸ್ಥಾನವನ್ನು ಹಿಂದೆಯೇ ಗಳಿಸಿಕೊಟ್ಟಿದೆ. 15 ವರ್ಷದ ತಮ್ಮ ಆಡಳಿತ ಕಾಲದಲ್ಲಿ ಶ್ರೀ ಎ. ಬಿ. ಶೆಟ್ಟರು ನವಯುಗಕ್ಕಾಗಿ ವ್ಯಯಿಸಿದ ಹತ್ತಾರು ಸಹಸ್ರ ರುಪಾಯಿಗಳು ವ್ಯವಹಾರಿಕ ದೃಷ್ಟಿಯಿಂದಲೂ, ಲಾಭದ ದೃಷ್ಟಿಯಿಂದಲೂ ಅಲ್ಲ; ಅದು ಕೇವಲ ಸೇವಾದೃಷ್ಟಿಯಿಂದ! ಜನತೆಯ ಸಹಕಾರವನ್ನೇ ನಂಬಿ ಕೂತಿದ್ದರೆ 'ನವಯುಗ' ಇಷ್ಟು ಕಾಲ ಬದುಕುತ್ತಿರಲಿಲ್ಲ. ದೇಶಸೇವಾ ದೃಷ್ಟಿ-ರಾಷ್ಟ್ರೀಯ ಮನೋವೃತ್ತಿಗಳೇ ಇದರ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾದುದರಿಂದ ಒಬ್ಬನ ಆಸ್ತಿಕೆಯಂದಲೇ ಅದು ಜನತಾಸೇವೆಯನ್ನು ಮಾಡಿತು. ಆಗ ಶ್ರೀ ಎ. ಬಿ. ಶೆಟ್ಟರೊಡನೆ ಶ್ರೀ ಕೆ. ಕೆ. ಶೆಟ್ಟರು ಮಾತ್ರವಲ್ಲದೆ ಶ್ರೀ ಕಡಂಗೋಡ್ಲು ಶಂಕರ ಭಟ್ಟರೂ ಶ್ರೀ ಎಂ. ಎನ್. ಕಾಮತರೂ ಸಹಕರಿಸುತ್ತಿದ್ದರು!

1932ರಲ್ಲಿ ಶ್ರೀ ಎ. ಬಿ. ಶೆಟ್ಟರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದರು. ಅದೇ ಕಾಲದಲ್ಲಿ ತಾನು ಇನ್ನಿತರ ಮಹತ್ವದ ರಾಜಕಾರಣದಲ್ಲಿ ಭಾಗವಹಿಸಬೇಕಾದ ಪ್ರಸಂಗ ಬಂದುದರಿಂದ ನವಯುಗದ ಸಂಪಾದಕತ್ವವನ್ನು ಉಪಸಂಪಾದಕರಾದ ಶ್ರೀ ಕೆ. ಕೆ. ಶೆಟ್ಟರಿಗೆ ಬಿಟ್ಟುಕೊಟ್ಟರು. 1936ರಲ್ಲಿ ಸರ್ವಜವಾಬ್ದಾರಿಯನ್ನು ಶ್ರೀ ಕೆ. ಕೆ. ಶೆಟ್ಟರಿಗೆ ವಹಿಸಿಕೊಟ್ಟುದರಿಂದ ಅವರು ತನ್ನ ಹುಟ್ಟೂರಾದ ಉಡುಪಿಗೆ ನವಯುಗವನ್ನು ತರುವ ಸಾಹಸಮಾಡಿದರು. ದ. ಕನ್ನಡದಲ್ಲಿ ರಾಜಕೀಯರಂಗದಲ್ಲೂ ಧಾರ್ಮಿಕ ವಿಚಾರದಲ್ಲೂ ಮಹತ್ವಿಕೆಯುಳ್ಳ ಉಡುಪಿಯಲ್ಲಿ ನವಯುಗ ಆರಂಭವಾಗುವದಕ್ಕೆ ಉಡುಪಿಯ ಫಲಿಮಾರು ಮಠಾಧೀಶ ಶ್ರೀಮದ್ವಿಭೂ ಮಾನ್ಯ ತೀರ್ಥರೂ, ಡಾ| ಟಿ. ಮಾಧವ ಪೈಗಳೂ, ಶ್ರೀ ಕೆ. ಜೆ. ಬಲ್ಲಾಳರೂ ಶ್ರೀ ಯುಸ್. ಯು. ಪಣಿಯಾಡಿಗಳೂ, ಕೆ. ಎಚ್. ಶೆಟ್ಟರೂ ಇನ್ನಿತರ ಮಹನೀಯರ ಒಲವೂ ಆಕಾಂಕ್ಷೆಯೂ ಕಾರಣವಾಗಿತ್ತು. ಅಂತಲೇ 1936 ಲ್ಲಿ ನವಯುಗವು ಮಂಗಳೂರು ಮುನಿಸಿಪಲ್ ಚೆಯರ್‌ಮೆನರಾಗಿದ್ದ ಡಾ| ಕೆ. ವಿಠ್ಠಲ ಶೆಟ್ಟಿ ದಿವ್ಯ ಹಸ್ತದಿಂದ ಉದ್ಘಾಟಿಸಲ್ಪಟ್ಟು ಶ್ರೀಮದ್ರಜತಪೀಠದಿಂದ ಪ್ರಕಾಶಗೊಂಡಿತು! ಈ ಶುಭ ಸಮಾರಂಭಕ್ಕೆ ಶ್ರೀ ಜವಾಹರಲಾಲ ನೆಹ್ರು, ಶ್ರೀ ಕೆ. ಎಫ್. ನರಿಮನ್, ಶ್ರೀ ಎಸ್. ಎ. ಬ್ರಿಲ್ವಿ, ಶ್ರೀ ಮಣಿಬೆನ್ ಕಾರಾ, ಶ್ರೀಮತಿ ಕಮಲಾದೇವಿ, ಶ್ರೀ ಯೂಸೂಫ್ ಮೆಹರಾಲಿ, ಶ್ರೀ ಎನ್. ಎಸ್. ಹರಡೀಕರ್, ಡಾ| ಯು. ರಾಮರಾವ್, ಶ್ರೀ ಗೋವಿಂದ ಪೈ, ಶ್ರೀ ರಂಗನಾಥ ದಿವಾಕರ, ಶ್ರೀ ವಿ. ಕೃ. ಗೋಕಾಕ್, ಶ್ರೀ ಬಿ. ಎಂ., ಶ್ರೀ ಕಂಠಯ್ಯ, ಶ್ರೀ ಎ. ಬಿ. ಶೆಟ್ಟರೇ ಮೊದಲಾದ ಮಹನೀಯರು ತಮ್ಮ ಸಂದೇಶವನ್ನು ಕಳಿಸಿದ್ದರು!

ಸ್ಥಾನಾಂತರ ಹೊಂದಿದ ಬಳಿಕ ನವಯುಗದಲ್ಲಿ ನಾವೀನ್ಯತೆ ಕಂಡದ್ದು ಮಾತ್ರವಲ್ಲದೆ ತನ್ನ ನಿರ್ಭೀತವಾದ ವಿಚಾರಧಾರೆಯಿಂದ ದಿನದಿಂದ ದಿನಕ್ಕೆ ಅದು ಹೆಚ್ಚೆಚ್ಚು ಜನಾದರಣೀಯವಾಗುತ್ತ ಬಂತು. ಪೇಟೆಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ನವಯುಗವು ಸ್ವಾತಂತ್ರ್ಯಾಂದೋಲನದ ಮಹಾಕ್ರಾಂತಿಯನ್ನೆಬ್ಬಿಸಿತು. ತನ್ನ ಧ್ಯೇಯಕ್ಕನುಗುಣವಾಗಿ ವಿಚಾರ ಸ್ವಾತಂತ್ರ್ಯವನ್ನು ಬೇರೊಬ್ಬರ ಕಡಿವಾಣಕ್ಕೆ ಒಳಪಡಿಸದೆ ಸ್ವೇಚ್ಛೆಯಂತೆ ಇರಬೇಕೆಂದು ನವಯುಗದ ಪ್ರಬಲವಾದ ಇಚ್ಛೆಗೆ 1940ಕ್ಕೆ ಒಂದು ಮೂರ್ತ ಸ್ವರೂಪ ಬರುವಂತಾಯಿತು. ಈ ನಾಲ್ಕು ವರ್ಷಗಳಲ್ಲಿ ಶ್ರೀ ಯುಸ್. ಯು. ಪಣಿಯಾಡಿಯವರ ತುಳುನಾಡ್ ಛಾಪಖಾನೆಯಲ್ಲಿ ಪ್ರಕಟಗೊಂಡು ಕೊನೆಗೆ ಸ್ವತಂತ್ರ ಪ್ರೆಸ್ಸೊಂದರ ಆವಶ್ಯಕತೆಯನ್ನು ಆಡಳಿತ ವರ್ಗವು ಕಂಡುಕೊಂಡಿತು. ಶ್ರೀ ಕೆ. ಜೆ. ಬಲ್ಲಾಳರ ಹಾಗೂ ಶ್ರೀ ಕೆ. ಹೊನ್ನಯ ಶೆಟ್ಟರ ಸಾಹಸದ ಫಲವಾಗಿ 1940ಕ್ಕೆ ಸ್ವತಂತ್ರ ಪ್ರೆಸ್ಸೊಂದು ರೂಪುಗೊಳ್ಳುವಂತಾಯಿತು. ಇದಕ್ಕೆ "ನವಯುಗ ಪ್ರೆಸ್" ಎಂತಲೇ ಹೆಸರಿಸಲಾಯಿತು. ನವಯುಗದ ಜನ್ಮದಾತೃಗಳಾದ ಶ್ರೀ ಎ. ಬಿ. ಶೆಟ್ಟರ ಹಸ್ತದಿಂದಲೇ ಇದರ ಉದ್ಘಾಟನಾ ಸಮಾರಂಭವು ನಡೆಯಿತು!

ಇದಾದ ಎರಡು ವರ್ಷಗಳಲ್ಲಿ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ಟರು ದೇಶದಲ್ಲುಂಟಾದ ಸ್ವಾತಂತ್ರ್ಯಾಂದೋಲನದಲ್ಲಿ ಧುಮುಕಿದ ಪ್ರಯುಕ್ತ ಸೆರಮನೆಯನ್ನು ಸೇರುವ ಪ್ರಸಂಗ ಬಂದೊದಗಿತು. ಆಗ 1939ರಲ್ಲೇ 'ನವಯುಗ'ದ ಸರ್ವಸ್ವಾಮಿತ್ವವನ್ನು ವಹಿಸಿದ್ದ ಶ್ರೀ ಕೆ. ಹೊನ್ನಯ್ಯ ಶೆಟ್ಟರೇ ಸಂಚಾಲಕ ಸಂಪಾದಕರಾಗಬೇಕಾಗಿ ಬಂತು. ಈ ಸಂದರ್ಭದಲ್ಲೇ ಶ್ರೀ ಎಂ. ವಿ. ಹೆಗ್ಡೆಯವರು ಸಹಸಂಪಾದಕರಾಗಿ ನವಯುಗದ ಅಂತಃಸತ್ವವನ್ನು ಬೆಳಗಿಸಿ ನವಯುಗದ ಕೀರ್ತಿಯನ್ನು ಇನ್ನಷ್ಟು ವರ್ಧಿಸಿದರೆಂದು ಹೇಳಬೇಕು.

ಈ ನಡುವೆ ನವಯುಗವು ಹೆಚ್ಚು ಹೆಚ್ಚು ಜನಾದರಣೆಗೆ-ವಿಶ್ವಾಸಕ್ಕೆ-ಪಾತ್ರವಾದುದರ ಫಲವಾಗಿಯೋ ಏನೋ! ಎಂಟೊಂಭತ್ತು ವಿಶೇಷ ಸಂಚಿಕೆಗಳು ಹೊರಬಿದ್ದಿತು. ಈ ವಿಶೇಷ ಸಂಚಿಕೆಯಲ್ಲಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಲೇಖಕರೂ ಸಹಕರಿಸಿದ್ದರು. ಇಪ್ಪತ್ತೈದು ವರ್ಷ ತುಂಬುತ್ತಿರುವಾಗಲೇ ಬೆಳ್ಳಿಯ ಹಬ್ಬವನ್ನು ಆಚರಿಸಬೇಕೆಂದು ನಾವು ಎಷ್ಟೇ ಯತ್ನ ಮಾಡಿದರೂ ಯುದ್ಧದ ದೆಸೆಯಿಂದಾಗಿ ನಮ್ಮ ಆ ನೆನಸಾಗದೆ ಕನಸ್ಸಿನ ಮಂದಿಗೆಯಾಗಿಯೇ ಉಳಿದುಹೋಯಿತು. ನವಯುಗವನ್ನು ಇತರ ವೈವಿಧ್ಯತೆಗಳ ಮೂಲಕ ಸರ್ವಾಂಗ ಸುಂದರವನ್ನಾಗಿ ಮಾಡಬೇಕೆಂಬ ಕಲ್ಪನೆ ನಮ್ಮಲ್ಲಿ ಆಗಿಂದಾಗ್ಗೆ ಮೂಡದೆ ಇಲ್ಲ! ಯುದ್ಧದ ದೆಸೆಯಿಂದಾಗಿ ಉಂಟಾದ ಆತಂಕವು ಕಡಿಮೆಯಾದೀತೆಂದು ನಾವು ಭಾವಿಸಿಯೂ ಇದ್ದೆವು. ಆದರೆ ವರ್ಷವರ್ಷಕ್ಕೆ ಕಾಗದ ಇನ್ನಿತರ ಸಾಮಾಗ್ರಿಗಳ ಬೆಲೆ ಇಮ್ಮಡಿ ಮುಮ್ಮಡಿಯಾಗುತ್ತಲಿರುವಾಗ ನಮ್ಮ ಇಚ್ಛೆ ಕೈಗೂಡುವುದಾದರೂ ಎಂತು? ಇಂತಹ ಕಠಿಣ ಪ್ರಸಂಗದಲ್ಲೇ ಶ್ರೀ ಹೊನ್ನಯ್ಯ ಶೆಟ್ಟರು ಅನಾರೋಗ್ಯಕ್ಕೆ ತುತ್ತಾಗಿ ಸುಮಾರು ಆರೇಳು ತಿಂಗಳ ಕಾಲ ಉಡುಪಿಯನ್ನು ಬಿಡಬೇಕಾದ ಪ್ರಸಂಗವೂ ಬಂದಿತು. ಇದು ನಿಜವಾಗಿಯೂ ನವಯುಗದ ಅಗ್ನಿಪರೀಕ್ಷೆಯ ಕಾಲವೆಂದೇ ಹೇಳಬೇಕು!

ಕಲೆ ಸಾಹಿತ್ಯಗಳಿಗೆ ಹೇಳಿಸಿದ ಕಾಲವಿದಲ್ಲವೆಂಬುದು ನಮಗೆ ಚೆನ್ನಾಗಿ ಮನವರಿಕೆಯಾಗಿದೆ. ಆದರಲ್ಲೂ ಕರ್ನಾಟಕ ಪತ್ರಿಕೆಗಳ ಜೀವನ-ಮಟ್ಟ-ಆದರ್ಶ ಬಹಳ ನಿಕೃಷ್ಟದ್ದಾಗಿರುತ್ತವೆ. ಓದುಗರ ಸಂಖ್ಯೆಯೂ ಹೆಚ್ಚಿದೆ—ಕನ್ನಡದ ಮೇಲಿನ ಅಭಿಮಾನವೂ ಬಹಳ ಮಟ್ಟಿಗೆ ಉಂಟಾಗಿದೆ—ಕನ್ನಡ ಪ್ರಾಂತೀಕರಣದ ಆವಶ್ಯಕತೆಯ ಕಳಕಳಿಯು ಕೇಳಿ ಬರುತ್ತಲಿದೆ—ಆದರೆ ಜನತೆಯ ಅಭಿರುಚಿ ಉತ್ತಮವಾದ ವಿಚಾರದ ಕಡೆಗೆ ಸಾಕಷ್ಟು ಹರಿವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ! ಮೂವತ್ತು ವರ್ಷಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿಯೂ- ಒಂದು ಧ್ಯೇಯವನ್ನು ಎತ್ತಿ ಹಿಡಿಯುವದಕ್ಕಾಗಿಯೂ-ಜ್ಞಾನ ಸಂಸ್ಕೃತಿ ಮುಂತಾದವುಗಳ ಅಭಿವೃದ್ಧಿಗಾಗಿಯೂ- ನವಯುಗ ಮಾಡಿದ ತ್ಯಾಗ ಹೋರಾಟಕ್ಕೆ ಜನ ನೀಡಿದ ಸಹಕಾರವಿದುವೆಯೇ? ಎನ್ನುವ ನಿರಾಶೆಯ ಪ್ರಶ್ನೆ ನಮ್ಮನ್ನು ಆಗಾಗ ಕಾಡದೆಯಿಲ್ಲ! ಸಾಗಿಬಂದ ದಿನಗಳನ್ನು ತಿರುಗಿ ನೋಡಿದರೆ ಕರ್ತವ್ಯದೃಷ್ಟಿಯಿಂದ — ಸಾರ್ವಜನಿಕ ಸೇವಾದೃಷ್ಟಿಯಿಂದ — ನಮ್ಮ ಬೆನ್ನು ಚಪ್ಪರಿಸಿಕೊಂಡು ಅಭಿಮಾನಪಟ್ಟುಕೊಳ್ಳಬೇಕೆ ಹೊರತು ಸಂಪೂರ್ಣ ತೃಪ್ತಿಯಿಂದಲ್ಲ!

ಹಲವು ರೀತಿಯ ಕಷ್ಟ ಪರಂಪರೆಗಳ

೩೦ ವರ್ಷದ ತುಂಬು ಜೀವನ!

ನ್ನು ದಾಟುತ್ತ ಬಂದಿವೆ. ಆಗಲೇ ಹಲವು ರೀತಿಯ ಬದಲಾವಣೆಗಳಾದುವು ಸುಮಾರು ಹತ್ತು ವರ್ಷಗಳಿಂದ ಸಹಸಂಪಾದಕರಾಗಿ ಕೆಲಸಮಾಡಿದ ಶ್ರೀ. ಎಂ. ವಿ ಹೆಗ್ಡೆಯವರು ಸ್ವತಂತ್ರ ಪತ್ರಿಕೆಯೊಂದನ್ನು ಬೇರೆಯಾಗಿ ಹೊರಡಿಸುವ ಇರಾದೆಯಿಂದ ನವಯುಗವನ್ನು ಬಿಟ್ಟುಹೋದರು. ಅಂತೆಯೇ ಜನಯುಗ ಪತ್ರಿಕೆಯ ಸಂಪಾದನಾ ಕಾರ್ಯ ಕೈಗೊಂಡಿದ್ದಾರೆ. ರಾಜಕೀಯ — ವ್ಯಂಗ್ಯ ಲೇಖನಗಳ ಮೂಲಕ ಕನ್ನಾಡಿನಲ್ಲಿ ಸುಪ್ರಸಿದ್ಧರಾದ ಶ್ರೀ ಹೆಗ್ಡೆಯವರು ನವಯುಗದ ಸರ್ವತೋಮುಖ ಯಶಸ್ಸಿಗೆ ಕಾರಣವಾದುದನ್ನು ನಾವಿಲ್ಲಿ ಸ್ಮರಿಸುವದವಶ್ಯವಾಗಿದೆ. ಶ್ರೀ. ಹೆಗ್ಡೆಯವರ ನಂತರ ಉದೀಯಮಾನ ತರುಣ ಬರಹಗಾರರಾದ ಶ್ರೀ ಎಸ್. ಎಲ್. ನಾರಾಯಣ ಭಟ್ಟರು (ಎಸ್ಸೆಲ್) ಸಹಸಂಪಾದಕರಾಗಿ ಕೆಲಸ ಮಾಡುತ್ತಲಿದ್ದಾರೆ.

ನವಯುಗದ ಅಂತಸ್ತು-ಧ್ಯೇಯ-ಧೋರಣೆಗೆ ಸರಿಯಾಗಿ ತಮ್ಮ ಅಮೂಲ್ಯ ಬರಹಗಳನ್ನಿತ್ತು ಸಹಕರಿಸಿದ ಲೇಖಕ ಬಳಗವನ್ನು ತುಂಬಿದೆದೆಯಿಂದ ನಾವಿಲ್ಲಿ ಸ್ಮರಿಸದಿರಲಾರೆವು. ಮೂವತ್ತು ವರ್ಷಗಳಲ್ಲಿ ನವಯುಗ ಸಲ್ಲಿಸಿದ ಸೇವೆಯಲ್ಲಿ ಅವರೂ ಪಾಲುಗಾರರಾಗಿದ್ದಾರೆ. ಅಂತಹ ಎಲ್ಲ ಬರಹಗಾರರನ್ನು ನಾವಿಲ್ಲಿ ಸ್ಮರಿಸುವದು ಸಾಧ್ಯವಿಲ್ಲವಾದರೂ ಹಲವರ ಹೆಸರನ್ನು ನಾವಿಲ್ಲಿ ನೆನೆಸಬೇಕಾಗಿದೆ. ಅಂತಹರಲ್ಲಿ ಶ್ರೀಗಳಾದ ಕೆ. ವಿ. ಪುಟ್ಟಪ್ಪ, ಪಂಜೆ ಮಂಗೇಶರಾವ್, ಪಂಜೇಶ್ವರ ಗೋವಿಂದ ಪೈ, ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು, ಅ. ನ. ಕೃಷ್ಣರಾವ್, ಆರ್. ವಿ. ಜಾಗೀರದಾರ್, ಶಿವರಾಮ ಕಾರಂತ, ಎಂ. ಎನ್. ಕಾಮತ್ ದಿ| ಪಂಡಿತ ತಾರಾನಾಥ, ಎನ್. ಕೆ. ಕುಲಕರ್ಣಿ. ಕಡಂಗೋಡ್ಲು ಶಂಕರ ಭಟ್ಟ, ಸಾಲಿ ರಾಮಚಂದ್ರ ರಾವ್, ದಿ| ಕೊರಡ್ಕಲ್ ಶ್ರೀನಿವಾಸರಾವ್, ಶ್ರೀಮತಿ ಲೀಲಾಬಾಯಿ ಕಾಮತ್, ಶ್ರೀಮತಿ ಸರಸ್ವತೀಬಾಯಿ ರಾಜವಾಡೆ, ಶ್ರೀ ಹನುಮಂತ ರಾವ್ ಮಂಜೇಶ್ವರ, ಕೆ. ವಿಠಲ ಶೆಣೈ, ಶ್ರೀ ಪಿ. ವಿ. ಉಪಾಧ್ಯಾಯ, ಸಿಂಪಿಲಿಂಗಣ್ಣ, ಎಸ್ ವೆಂಕಟರಾಜ, ಕಯ್ಯಾರ ಕಿಞ್ಞಣ್ಣ ರೈ, ಬನ್ನಂಜೆ ರಾಮಾಚಾರ್, ಕೃಷ್ಣಮೂರ್ತಿ ಪುರಾಣಿಕ, ಬಿ ರಾಮಕೃಷ್ಣಾಚಾರ್ಯ, ಬೆನಗಲ್ ರಾಮರಾವ್, ಬೆಟಗೇರಿ ಕೃಷ್ಣ ಶರ್ಮ, ಕು ಶಿ ಹರಿದಾಸ ಭಟ್ಟ, ಸಿ ಶೀನ ಸಟ್ಟಿ. ದಿ| ಕೆ.ವಿ.ಬಾಳಿ, ಕಾರ್ತಿಕೇಯ, ಸಿ ಎಚ್. ಸೆಟ್ಟಿ, ಬಿ ಶ್ಯಾಮರಾಯ ಶೆಟ್ಟಿ, ಮ ಜಾ ಬ. ಬಿ, ಶೆಟ್ಟಿ, ಎನ್. ಎಸ್. ಕಿಲ್ಲೆ, ಮೊದಲಾದ ಹಿರಿಯ-ಕಿರಿಯ ಸಾಹಿತಿಗಳು ಮುಖ್ಯರಾಗಿದ್ದಾರೆ. ಉತ್ತಮ ಅಭಿರುಚಿಯನ್ನು ಹುಟ್ಟಿಸುವ ವಿಚಾರಪೂರ್ಣ ಬರಹಗಳೇ ಪತ್ರಿಕೆಯ ವೈಶಿಷ್ಟ್ಯ! ಆದ್ದರಿಂತಲೇ ಅದಕ್ಕೆ ಕಾರಣೀಭೂತರಾದವರನ್ನು ಇಲ್ಲಿ ಅತ್ಯಂತ ಆತ್ಮೀಯತೆಯಿಂದಲೂ ಅಭಿಮಾನದಿಂದಲೂ ಅಭಿವಂದಿಸುತ್ತೇವೆ.

ಪತ್ರಿಕೆಯ ಅಂತಸ್ತಿಗೆ ವಿದ್ವತ್ಪೂರ್ಣ ಬರಹಗಳು ಮುಖ್ಯವಾದ ಹಾಗೆ ಆರ್ಥಿಕವ ಬಿಗ್ಗಟ್ಟಿನಿಂದ ಪಾರಾಗಿಕೊಳ್ಳುವದಕ್ಕೆ ಜಾಹೀರಾತುಗಳು ಅಷ್ಟೇ ಪ್ರಾಮುಖ್ಯವಾಗಿವೆ. ನವಯುಗ ಆರಂಭದಿಂದ ಈ ತನಕವೂ ಹಲವು ಸಂಸ್ಥೆಗಳು ಜಾಹೀರಾತುಗಳನ್ನಿತ್ತಿವೆ. ಬೇರೆ ಬೇರೆ ಸಂಸ್ಥೆಗಳ ಒಡೆಯರೂ ನಮ್ಮೊಡನೆ ಸಹಕರಿಸಿದ್ದಾರೆ. ಇದರಲ್ಲಿ ವ್ಯಾವಹಾರಿಕ ದೃಷ್ಟಿಯೋ, ಅಲ್ಲದೆ ವಿಶ್ವಾಸಾಭಿಮಾನಗಳದೃಷ್ಟಿಯೂ ಇದೆಯೆಂಬುದನ್ನು ನಾವು ಹೇಳಲು ಸಂತೋಷಪಡುತ್ತೇವೆ. ಈ ಬಗೆಯ ಪರಸ್ಪರ ಸಹಕಾರ ಧೋರಣೆ ಇನ್ನಷ್ಟು ಬೆಳೆಯಲೆಂದು ಹೃತ್ಪೂರ್ವಕ ಹಾರೈಸುತ್ತೇವೆ.

ಮೊದಲಿನಿಂದಲೂ ನಾವು ಒಂದು ಸಂಪ್ರದಾಯವನ್ನು ಅನುಸರಿಸುತ್ತಿದ್ದೇವೆ. ಆರ್ಥಿಕ ಮುಗ್ಗಟ್ಟಿನ ಎಂತಹ ಕಠಿಣ ಸಂದರ್ಭ ಬಂದರೂ ಸಹಾಯಧನವೆಂದು ನಾವು ಯಾರಿಂದಲೂ ಯಾಚಿಸಲಿಲ್ಲ. ಚಂದಾದಾರರೇ ನಮ್ಮ ಮುಖ್ಯ ಹಿತಾಕಾಂಕ್ಷಿಗಳೆಂದು ನಮ್ಮ ನಂಬಿಕೆ. ಅಂತಲೇ ಹಿಂದಿನಿಂದಲೂ ಸಹಸ್ರಾರು ಚಂದಾದಾರರು ಸಹಕರಿಸುತ್ತ ಬಂದಿರುವದೂ ಹೊಸತಾಗಿ ಚಂದಾದಾರರಾಗಿ ಬಳಗಕ್ಕೆ ಸೇರುತ್ತಿರುವುದು–ನವಯುಗದ ಬಗೆಗೆ ಅವರಿಗಿರುವ ಉಜ್ವಲಾಭಿಮಾನದ ದ್ಯೋತಕವೆಂದು ನಂಬಿದ್ದೇವೆ. ಈ ಬಾಂಧವ್ಯವು ಇನ್ನೂ ಇನ್ನೂ ವೃದ್ಧಿಗೊಂಡು ಬಳಗ ದೊಡ್ಡದಾಗಲೆಂದೂ ನಾವು ಪ್ರಾರ್ಥಿಸುತ್ತೇವೆ.

ಸಂಸ್ಥೆಯ ಪುರೋಭಿವೃದ್ಧಿಗೆ ಅದರಲ್ಲಿಯ ಕಾರ್ಯಕರ್ತ ಕರ್ತವ್ಯನಿಷ್ಠೆ– ಅಚಲವಾದ ಶ್ರದ್ಧೆ–ಐಕ್ಯಮತ್ಯ– ಪ್ರಾಮಾಣಿಕತನ ಮುಖ್ಯವಾಗಿದೆ. ಸಂಸ್ಥೆಯ ಮುಖ್ಯರಾದವರಿಂದ ಹಿಡಿದು ಕೆಲಸಗಾರರ ವರೆಗೂ ಈ ತತ್ವವಿದ್ದರೇನೇ ಸಂಸ್ಥೆ ಉಚ್ಛ್ರಾಯ ಸ್ಥಿತಿಯನ್ನು ಹೊಂದೀತು. ಶ್ರೀಗಳಾದ ಕೆ. ಜಗನ್ನಾಥ ಬಲ್ಲಾಳರೂ, ಡಾ| ಪಿ. ರಾಘವೇಂದ್ರ ನಾಯ್ಕರೂ, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರೂ, ಕೆ ವೆಂಕಟ್ರಮಣ ಭಟ್ಟರೂ, ಎ. ಜೆ. ಆಲ್ಸೆಯವರೂ, ಕೆ. ಸಂಜೀವ ಸೆಟ್ಟರೂ, ಯು. ಸೀತಾರಾಮ ಭಟ್ಟರೂ, ಪಿ ಜನಾರ್ದನ ನಾಯ್ಕರೂ, ಪಿ ಯಂ. ಹೆಗ್ಡೆರೂ, ವಿ ಕೆ. ಶೆಟ್ಟರೂ, ದಿ| ಟಿ. ಗಣಪಯ್ಯ ಶೆಟ್ಟರೂ, ಕೆ ಜೆ. ಶೆಟ್ಟರೂ, ಟಿ. ಎನ್. ಕೇಳು ನಂಬಿಯಾರರೂ ಬಿ. ಸಚ್ಚಿದಾನಂದ ಹೆಗ್ಡೆರೂ, ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಆತ್ಮೀಯತೆಯಿಂದ ನೆರವಾದ ಮಹನೀಯರು. ಇಂತಹರನ್ನು ಇಲ್ಲಿ ನೆನಸುವುದು ಅಪ್ರಸ್ತುತವಾಗಲಾರದು. ನವಯುಗದ ವಿಚಾರದಲ್ಲಿ ಆತ್ಮೀಯಭಾವದಿಂದ ಅದರ ಕೆಲಸದಲ್ಲಿ ಅತ್ಯುತ್ಸಾಹ–ಮಹತ್ವನ್ನು ವಹಿಸುತ್ತಿರುವ ಕೆಲಸಗಾರ ಬಂಧುಗಳ ಉಪಕಾರಸ್ಮೃತಿಯನ್ನು ನಾವೆಂದೂ ಮರೆಯುವಂತಿಲ್ಲ!

ನಾವು ಅನುಸರಿಸುತ್ತಿರುವ ಧೋರಣೆ ಶುದ್ಧ ರಾಜಕೀಯವಾದುದು. ರಾಜಕೀಯ ಪತ್ರಿಕೆಗಳಿಗೂ ಒಂದು ರೀತಿಯ ನಿಕಟ ಸಂಬಂಧ ಹಿಂದಿನಿಂದಲೂ ಬೆಳೆದು ಬಂದಿರುವದರಿಂದಲೇ ಜನಜಾಗೃತಿಯುಂಟಾಗಿ ದೇಶದ ಸ್ವಾತಂತ್ರ್ಯ ಸುಲಭಸಾಧ್ಯವಾಯಿತು ಸ್ವಾತಂತ್ರ್ಯ ಹೋರಾಟದಲ್ಲಿ ಭಾರತದ ಪತ್ರಿಕೆಗಳು ದೇಶಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿವೆ ಆಗಿನ ಧೋರಣೆ ಪೂರ್ತ ಉಜ್ವಲ ರಾಷ್ಟ್ರೀಯತೆಯಿಂದ ಕೂಡಿದ್ದಾಗಿತ್ತು!

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಹೊಸತಾದ ಪತ್ರಿಕೆಗಳು ಹುಟ್ಟಿವವು ಆದರೆ ಅವೆಲ್ಲ ಸ್ವಪಕ್ಷ–ಆತ್ಮಪ್ರಶಂಸೆ–ವ್ಯಕ್ತಿಪೂಜೆಗಳಿಗಾಗಿಯೇ ಜನ್ಮ ತಾಳಿದಂತಿವೆ. ಕರ್ನಾಟಕದಲ್ಲಿಯೂ ಹಲವು ಪತ್ರಿಕೆಗಳು ಈ ಧೋರಣೆಯನ್ನನುಸರಿಸುತ್ತಿರುವದು ಶೋಚನೀಯ ಸಂಗತಿ! ಸ್ವಾತಂತ್ರ್ಯಪ್ರಾಪ್ತಿಗೆ ಪತ್ರಿಕೆಗಳು ಹೇಗೆ ಪ್ರಬಲಾಸ್ತ್ರಗಳಾದವೋ–ಹಾಗೆ ಸ್ವಾತಂತ್ರ್ಯರಕ್ಷಣಾಕಾರ್ಯದಲ್ಲಿ ನಿರತವಾಗುವುದು ಅವುಗಳ ಮುಖ್ಯ ಕರ್ತವ್ಯವಾಗಬೇಕಿತ್ತು. ಕನ್ನಡ ಜನದಲ್ಲಿ ಇಂದು ಪ್ರಾಂತೀಕರಣದ ಬಗ್ಗೆ ಆತ್ಮಾಭಿಮಾನ ಉಂಟಾಗಿರುವುದು ಶುಭ ಚಿಹ್ನೆ. ವಿದ್ಯಾಪ್ರಸಾರ ಹೆಚ್ಚು ಹೆಚ್ಚಾಗಿ ನಡೆಯುತ್ತಲಿದ್ದು ವಯಸ್ಕರ ಶಿಕ್ಷಣ ಕ್ರಮದಿಂದ ಅನಕ್ಷರಸ್ಥರೂ ವಿದ್ಯಾವಂತರಾಗಿ ರಾಜಕೀಯ ಸಾಹಿತ್ಯ ವಿಚಾರಗಳಲ್ಲಿ ಆಸಕ್ತಿ ವಹಿಸುತ್ತಲಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ಯಥಾರ್ಥ ರಾಜಕೀಯ ವಿಚಾರಗಳ ಕುರಿತು ಸರಿಯಾದ ಮಾರ್ಗದರ್ಶನ ಮಾಡುವದು ಪತ್ರಿಕೆಗಳ ಆದ್ಯ ಕರ್ತವ್ಯವಾಗಿದೆ. ಈ ಮಾನದಂಡದಿಂದ ಇಂದಿನ ಕನ್ನಡ ಪತ್ರಿಕೆಗಳನ್ನು ಅಳೆದರೆ ಕನ್ನಡ ಪತ್ರಿಕೆಗಳು ಅವನತಿಯ ಮಾರ್ಗವನ್ನು ಹಿಡಿಯುತ್ತಲಿವೆಯೇ ಎಂದು ಭಾಸವಾಗುವದು. ಹಿಂದಿನ ಕಾಲದ ಪತ್ರಿಕೆಗಳಲ್ಲಿ– ಶ್ರೇಷ್ಠ ಸಂಸ್ಕೃತಿ–ನೈತಿಕವಾದ ಧೋರಣೆಯನ್ನು ಕಾಣಬಹುದು! ಪತ್ರಿಕಾಕರ್ತರ ಹೊಣೆ ಮಹತ್ವದ್ದೆಂಬುದನ್ನು ನಾವು ಅವಶ್ಯವಾಗಿ ಅರಿತುಕೊಳ್ಳಬೇಕಾಗಿದೆ. ಪತ್ರಿಕೆಯು ಜನರ ತಿಳುವಳಿಕೆ–ಸಾಂಸ್ಕೃತಿಕ ಪುನರುತ್ಥಾನ– ರಾಜಕೀಯಾನುಭವ ಮುಂತಾದ ವಿಚಾರಗಳಿಂದ ಸಾರ್ವಜನಿಕ ಸೇವೆಯನ್ನು ಕೈಗೊಳ್ಳಬೇಕಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಪತ್ರಿಕೆಗಳು ದೇಶಸೇವೆಯಲ್ಲಿ ನಿರತವಾದುದಗಿಂತಲೂ ಹೆಚ್ಚಿನ ಕಾರ್ಯವನ್ನಿಂದು ಕೈಗೊಳ್ಳಬೇಕಾಗಿದೆ. ದೇಶದ ಮುಂದಿರುವ ಮಹಾ ಸಮಸ್ಯೆಗಳ ಕುರಿತು ಜನ ದಾರಿ ತಪ್ಪದಂತೆ ಸರಿಯಾದ ಮಾರ್ಗದರ್ಶನ ಮಾಡುವದಕ್ಕೆ ಪತ್ರಿಕೆಗಳು ಉತ್ತಮ ಸಾಧನ. ಆಗ್ರಹ–ಅನುಗ್ರಹ–ಅಗ್ರಪೂಜೆಗಳಿಗೆ ಬಲಿ ಬೀಳದೆ ಯಥಾರ್ಥತೆಯ ವಿಚಾರವನ್ನು ಪ್ರತಿಪಾದನೆ ಮಾಡುವದರಲ್ಲಿ ಹಿಂಜರಿಯಬಾರದು!

ಸರಕಾರವಿರಲಿ, ಶ್ರೀಮಂತನಿರಲಿ, ಬಡವರೇ ಇರಲಿ ಲೋಪದೋಷ ಅನ್ಯಾಯಗಳನ್ನು ಎತ್ತಿಹೇಳುವಲ್ಲಿ ನಿಷ್ಪಕ್ಷಪಾತದ ಧೋರಣೆಯನ್ನು ವಹಿಸಿ ನ್ಯಾಯದಾನ ಮಾಡುವದು ಪತ್ರಿಕೆಗಳ ಕರ್ತವ್ಯ!

(ಕವರ ಪುಟ ನೋಡಿರಿ)

ಕರ್ನಾಟಕದ ಸುಪ್ರಸಿದ್ಧ ಕಾದಂಬರಿಕಾರರೂ, ಉದ್ದಾಮ ಸಾಹಿತಿಗಳೂ, ನವಯುಗದ ಲೇಖಕಬಂಧುಗಳೂ ಆದ

ಶ್ರೀ ಶಿವರಾಮ ಕಾರಂತರು

ಹಲವು ಸಂಸ್ಥೆಗಳ ಮೂಲ ಪುರುಷರಾಗಿದ್ದುಕೊಂಡು, ಸದ್ದಿಲ್ಲದ ಕಾರ್ಯವನ್ನು ಸಾಧಿಸುವ ಆದರ್ಶಪ್ರಿಯ ವ್ಯಕ್ತಿ ನವಯುಗದ ಆತ್ಮೀಯರು

ಶ್ರೀ ಯು. ಪಿ. ಪೈಗಳು

«ಹಿಂದಿನ ದೇಶದ ರಾಜಕೀಯ ವಿಷಯಗಳಲ್ಲಿ ಮಹತ್ವದ ವಿವೇಕಪರವಾದ ತನ್ನ ಟೀಕೆ ಟಿಪ್ಪಣಿ ವಿಮರ್ಶೆಗಳಿಂದಲೂ [illegible] ಯುಕ್ತವಾದ ವಾರ್ತಾ ಸೇವೆಯಿಂದಲೂ ಜನತೆಗೆ ಬೇಕಾಗಿರುವ ಆಹಾರವನ್ನು ಒದಗಿಸಿ, ಅವರ ಕೃತಜ್ಞತೆಯನ್ನು ನವಯುಗ ಪಡೆದಿದೆ. ಬರುತ್ತಿರುವ [illegible] ಸಂತಸಗೊಂಡಿದ್ದೇನೆ»

ಸರ್. ಮಿರ್ಜಾ ಇಸ್ಮಾಯಿಲ್

ಮಾಜೀ ಮೈಸೂರು ದಿವಾನರು

ನಾವೇಕೆ ಬಡವರು?

'ನಾವೇಕೆ ಬಡವರು?' ಎನ್ನುವ ಪ್ರಶ್ನೆ ನಮಗೆಲ್ಲ ಒಂದು ಸಮಸ್ಯೆಯಾಗಿದೆ. ಜನಸಂಖ್ಯೆ ಹೆಚ್ಚಾಯಿತೆಂಬುದೂ ಒಂದು ವಾದ. ಹೆಚ್ಚಾದ ಜನ ಉದ್ಯೋಗದಲ್ಲಿ ನಿರತರಾಗದೆ ಕೂತುಣ್ಣುವ ಮನಸ್ಸು ಮಾಡಿದ್ದರಿಂದಲೇ ಹೀಗಾಯಿತೆನ್ನುವದು ಸರಿಯಾದ 'ಉತ್ತರವಾದೀತೋ ಏನೋ! ಜನ ರಾಜಕೀಯ ಹಾಗೂ ಸರಕಾರದ ದೋಷ ಹುಡುಕುತ್ತಾರೆಯೆ ಹೊರತು ತಮ್ಮ ತಮ್ಮ ಕರ್ತವ್ಯಗಳ ಮೇಲೆ ದೃಷ್ಟಿ ಹರಿಸುವುದಿಲ್ಲ. ದಿನದಿನಕ್ಕೆ ಉಂಟಾಗುತ್ತಿರುವ ಬದಲಾವಣೆಯೊಂದಿಗೆ ಓಬೀರಾಯನ ಕಟ್ಟು ಸಂಪ್ರದಾಯಗಳಲ್ಲಿ ಸುಧಾರಣೆಯನ್ನು ಅವರು ಇಚ್ಛಿಸುವುದಿಲ್ಲ. ಅವರು ಕಲಿತಿರುವುದು: 'ಸರಕಾರ ನಮಗೆ ಅನ್ನ ಬಟ್ಟೆ ಕೊಡುವುದಿಲ್ಲ—ಇದಕ್ಕಿಂತ ಬ್ರಿಟಿಶರೇ ವಾಸಿ" ಎಂಬುದನ್ನು ಮಾತ್ರ!

ವಿಪುಲವಾದ ಜನಸಂಖ್ಯೆ ಕಾರಣವಿದ್ದರೆ ಆ ಜನಕ್ಕೆ ಸರಿಯಾದ ಉದ್ಯೋಗವನ್ನು ಒದವಿಸಿ ಕೊಡುವದರಿಂದಲೂ, ಪ್ರಾಯಭರಿತರಾದ ಗಂಡು ಹೆಣ್ಣು ಸಮನಾಗಿ ಜೀವನಕ್ಕಾಗಿ ದುಡಿಯುವದರಿಂದಲೂ, ಪ್ರತಿಯೊಬ್ಬರೂ ಕರ್ತವ್ಯಪರರಾಗಿರುವುದರಿಂದಲೂ ಈ ಬಡತನವನ್ನು ನೀಗಿಸಬಹುದಾಗಿದೆ. ಬ್ರಿಟಿಶರ ಕಾಲದಲ್ಲಿಯ ಜನಸಂಖ್ಯೆಗೂ ಈಗಿನ ಜನಸಂಖ್ಯೆಗೂ ತೀರ ಅಭ್ಯಂತರವಿದೆ. ಸಾಗುವಳಿ ಹಾಗೂ ಕೃಷಿಯ ಉದ್ಯಮದಲ್ಲಾಗಲೀ—ಕೈಗಾರಿಕೋದ್ಯಮದಲ್ಲಾಗಲೀ, ಆಗಬೇಕಾದಷ್ಟು ಸುಧಾರಣೆ ಇಲ್ಲದೆ ಪ್ರಗತಿ ಆಗಿರುವುದಿಲ್ಲ. ಹೆಚ್ಚಾದ ಜನ ಹಿಂದಿನದರಲ್ಲೇ ಜೀವಿಸಲು ಬಯಸುತ್ತೇವೆಂದರೆ ಅದು ಎಲ್ಲರಿಗೂ ಉದ್ಯೋಗ ಅನ್ನ ಬಟ್ಟೆಯನ್ನು ನೀಡೀತೆ?

ಕಳೆದ ದ್ವಿತೀಯ ಮಹಾಯುದ್ಧದಲ್ಲಿ ಇಂಗ್ಲಂಡು ವಿನಾಶಹೊಂದಿ ಜನಜೀವನ ಅತ್ಯಂತ ನಿಕೃಷ್ಟಾವಸ್ಥೆಯನ್ನು ಹೊಂದಿತ್ತು. ಆದರೆ ಈಗ ಕೇವಲ ನಾಲ್ಕಾರು ವರ್ಷಗಳೊಳಗಾಗಿ ಮತ್ತೆ ಅಂದಿನಂತೆಯೆ ಚೇತರಿಸಿಕೊಂಡಿದೆ. ಇದು ಅಲ್ಲಿಯ ಜನದ ರಾಷ್ಟ್ರೀಯ ಮನೋವೃತ್ತಿ—ಕಾರ್ಯಕುಶಲತೆಯನ್ನು ವ್ಯಕ್ತಗೊಳಿಸುತ್ತದೆ.

'ನಾವು ಸ್ವಾವಲಂಬಿಗಳಾಗಬೇಕು' ಎಂದು ನಮ್ಮ ಧುರೀಣರು ನಾಲ್ಕು ವರ್ಷಗಳಿಂದ ಹೇಳುತ್ತಲಿದ್ದಾರೆ. ದೇಶೀಯ ಕೈಗಾರಿಕೆ—ಉದ್ಯಮಗಳಿಗೆ ಪ್ರೋತ್ಸಾಹ ನೀಡಬೇಕು, ಪರದೇಶೀಯ ವಸ್ತುಗಳನ್ನು ಆದಷ್ಟು ಬಹಿಷ್ಕರಿಸಬೇಕು—ಎಂದು ಉಪದೇಶ ಮಾಡಿದ್ದು ಮಾಡಿದ್ದೇ. ಆದರೆ ದೇಶೀಯ ಉದ್ಯಮಕ್ಕೆ ಪ್ರೋತ್ಸಾಹವಾಗಲೀ ಅಭಿವೃದ್ಧಿಯಾಗಲೀ ಸಾಕಷ್ಟಿಲ್ಲದೆ ಜನರಿಂದ ವಿದೇಶೀಯ ವಿಲಾಸ ವಸ್ತುಗಳ ಬೇಡಿಕೆ ಹೆಚ್ಚಾಗಿದೆಂದೇ ಹೇಳಬೇಕು. ಆಮದು ಮಾಡುವದು ಕಡಿಮೆಯಾಗಿ ರಫ್ತು ಮಾಡುವದು ಹೆಚ್ಚಾದರೆ ನಮ್ಮ ದೇಶದ ಆರ್ಥಿಕಾಭಿವೃದ್ಧಿಯಾಗಿ ನಾವು ಸ್ವಾವಲಂಬಿಗಳಾಗಬಹುದು. ಆದರೆ ನಮ್ಮಿಂದ ರಫ್ತಾಗುವ ಮುಖ್ಯ ವಸ್ತುವೆಂದರೆ ನಾರು, ಕಾಫಿ, ಚಹಾ, ಇಂಥದೇ ಅಗ್ಗದ ಸರಕುಗಳು. ಆದರೆ ಹೊರಗಿನಿಂದ ತರಿಸುವ ಯಂತ್ರ ಸಾಮಗ್ರಿಗಳೋ—ವಿಲಾಸ ವಸ್ತುಗಳೋ—ಇವೆಲ್ಲ ಅಧಿಕವಾದ ಬೆಲೆಯುಳ್ಳಂತಹವುಗಳು! ದೇಶೀಯ ವಸ್ತುವಿಗೆ ಪ್ರೋತ್ಸಾಹ ಕೊಡಬೇಕೆಂದು ನಮ್ಮ ಧುರೀಣರು ಹೇಳುತ್ತಿರುವದಾದರೂ—ಸ್ವಾವಲಂಬನಕ್ಕೆ ಪ್ರಥಮೋಪಾಯವೆಂದಾದರೂ ಜನ ಬಯಸುತ್ತಿರುವುದು ದುಬಾರಿ ಬೆಲೆಯ ವಿದೇಶೀಯ ವಸ್ತುಗಳನ್ನೇ! ಜೀವನಾವಶ್ಯಕವಲ್ಲದ ವಿಲಾಸವಸ್ತುಗಳನ್ನು ಬಹಿಷ್ಕರಿಸುವ ಸಂಯಮವಿಲ್ಲದೆ ರಾಷ್ಟ್ರೀಯ ಮನೋವೃತ್ತಿ ನಮ್ಮಲ್ಲಿನ್ನು ಮೂಡದು! ಕೃಷಿಯೇ ಪ್ರಧಾನವಾಗುಳ್ಳ ನಮ್ಮ ದೇಶವು ಉಣಲು ಅನ್ನವಿಲ್ಲದೆ ವಿದೇಶಗಳಿಂದ ತರಿಸಿಕೊಳ್ಳುವ ದುರದೃಷ್ಟಕ್ಕೆ ಬಲಿಬಿದ್ದಿದೆ. ನೀರಾವರಿ ಯೋಜನೆಗೂ ಕೃಷಿಯ ಉದ್ಯಮಕ್ಕೂ ಅತ್ಯಂತ ಯೋಗ್ಯವಾದ ಭೂಮಿ ನಮ್ಮದಾದರೂ, ವಿಪುಲ ಜನಸಂಖ್ಯೆಯಿರುವದಾದರೂ ನಮ್ಮ ಸ್ಥಿತಿ ಪರಾವಲಂಬನೆಯೇ. ಅಂದಮೇಲೆ ಕರ್ತವ್ಯ ಪರಾಙ್ಮುಖತೆಯೇ ಬಡತನಕ್ಕೆ ಕಾರಣವೆಂದರೆ ತಪ್ಪಾಗದು ತಾನೆ!

ಎಲ್ಲರಿಗೂ ವಿದ್ಯೆಯನ್ನೀಯಬೇಕೆಂದೂ ನಿರಕ್ಷರಕುಕ್ಷಿಗಳನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂದೂ ಸರಕಾರ ಹೇರಳ ಹಣ ವ್ಯಯಿಸುತ್ತಲಿದೆ. ಕಲಿತವರ ಬಾಳಿನ ದಾರಿಯೇನೆಂಬುದನ್ನು ಸರಕಾರವೂ ತೋರಿಸಲಿಲ್ಲ. ಅಂತಲೇ ತರುಣರಿಂದು ನಿರುದ್ಯೋಗಿಗಳಾಗಿ ಅಂಡಲೆಯುವ ದುರ್ಧರವಾದ ಪ್ರಸಂಗ ಬಂದಿದೆ. ಹಳೆಯ ಸಂಪ್ರದಾಯಕ್ಕೆ ಗಂಟುಬಿದ್ದೋ—ಅಥವಾ ಇನ್ನಾವ ಕಾರಣದಿಂದಲೋ ಸ್ತ್ರೀಯರಿಗೆ ನಾವು ಸರಿಯಾದ ಸ್ವಾತಂತ್ರ್ಯ ಹಾಗೂ ಮಾನ್ಯತೆ ಕೊಟ್ಟದಿಲ್ಲ. ಮದುವೆಯಾಗುವ ತನಕ ಕಲಿಯುವದೂ ಮದುವೆಯಾದ ನಂತರ ಮನೆಯಲ್ಲಿ ಕೂತು ತಿನ್ನುವುದಷ್ಟೇ ಅವರ ಕರ್ತವ್ಯವೆಂದು ನಾವು ಭಾವಿಸಿದಂತಿದೆ. ಮದುವೆಯಾದಮೇಲೆ ಅವರು ಯೋಗ್ಯವಾದ ಉದ್ಯೋಗದಲ್ಲಿ ನಿರತರಾದರೆ ಸ್ತ್ರೀತ್ವಕ್ಕೆ ಇಲ್ಲವೆ ನಮ್ಮ ಸಂಸ್ಕೃತಿಗೆ ಧಕ್ಕೆಬರುವದೆಂಬ ಅಂಧಶ್ರದ್ಧೆಯನ್ನು ನಾವಿನ್ನೂ ಬಿಟ್ಟಿಲ್ಲ. ಹಿಂದೂದೇಶದ ಮಹಿಳೆಯರಷ್ಟು ಹಿಂದುಳಿದವರು ಬೇರಾವ ರಾಷ್ಟ್ರದಲ್ಲಿಯೂ ಇರಲಾರರು. ಒಂದು ಸಂಸಾರದಲ್ಲಿ ಹೆಂಗಸರ ಸಂಖ್ಯೆ ಹೆಚ್ಚಾದರೆ ಮನೆಯ ಯಜಮಾನ ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು ಸಂಸಾರದ ಭಾರವನ್ನು ತಗ್ಗಿಸಿಕೊಳ್ಳಲಿಚ್ಛೆಪಡದೆ ತಾನೇ ಸಾಲವೋ ಮೂಲವೋ ಮಾಡಿ ಒಬ್ಬನೇ ದುಡಿದು ಸಂಸಾರ ಸಾಗಿಸುತ್ತಾನೆ. ಇದೂ ಒಂದು ಸುಸಂಸ್ಕೃತಿಯ ಲಕ್ಷಣವೇ? ಕಲಿತ ಮಹಿಳೆಯರನ್ನು ನಾವು ನಡೆಸಿಕೊಂಡ ಅನಾಗರೀಕ ರೀತಿಯು ರಾಷ್ಟ್ರೋನ್ನತಿಯ ಕಾರ್ಯದಲ್ಲಿ ಅವರು ಮುಂದುವರಿಯುವದಕ್ಕೆ ಸ್ವಲ್ಪವೂ ಸಹಕಾರಿಯಾಗಿಲ್ಲ! ಶ್ರೀ ಜವಾಹರಲಾಲರು ಸ್ತ್ರೀಯರಿಗೆ ಗಂಡಸರಷ್ಟೇ ಸಮಾನಾಧಿಕಾರವನ್ನು ಕೊಟ್ಟು ಅವರನ್ನು ಮುಂದೆ ತರಬೇಕೆಂದು ನೊನ್ನೆ ಮೊನ್ನೆ ಹೇಳಿರುವದಾದರೂ ಉಡುಪಿಯ ಮಹಾತ್ಮಾ ಗಾಂಧೀ ಕಾಲೇಜಿನಲ್ಲಿ ಮಹಿಳೆಯರಿಗೆ ಕಲಿಯಲಿಕ್ಕಿರುವ ಅಭ್ಯಂತರಕ್ಕೆ ಇಂದು ಮದ್ರಾಸ ಹಾಯಕೋರ್ಟಿಗೇನೇ ಹತ್ತಬೇಕಾಗಿದೆ. ಅಂದಮೇಲೆ ನಮ್ಮ ಅಸ್ಥಿರತೆಯನ್ನು ಹೋಗಲಾಡಿಸುವದಕ್ಕೂ—ಬಡತನವನ್ನು ನೀಗಿಸುವದಕ್ಕೂ, ನಾವೂ ಸರಕಾರವೂ ಹೇಗೆ ಕಾರಣರಾಗುತ್ತಿದ್ದೇವೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಲ್ಲವೇ?

ಕೃಷಿ ಕೈಗಾರಿಕೆ ಇನ್ನಿತರ ಉದ್ಯಮಗಳನ್ನು ಕೈಗೊಂಡು ಏಕಕಾಲದಲ್ಲಿ ಸರಕಾರ ಎಲ್ಲರಿಗೂ ಉದ್ಯೋಗವನ್ನು ಒದವಿಸಿ ಕೊಡಲು ಸಾಧ್ಯವಿಲ್ಲವೆಂಬುದು ಸಹಜವೇ. ಆದರೆ ಹಲವು ಸಂದರ್ಭಗಳಲ್ಲಿ ಜನರೇ ಇಂತಹ ಉದ್ಯಮಗಳನ್ನೋ—ಲೋಕಹಿತ ಕಾರ್ಯವನ್ನೋ ಕೈಗೊಳ್ಳುವದಾದರೆ ಬ್ರಿಟಿಶರ ಕಾಲದ ಆಡಳಿತ ಕ್ರಮದಂತೆ ತನ್ನ ಹತೋಟಿಯಿಲ್ಲದೆ ಇಲ್ಲವೆ ಅನುಮತಿಯಿಲ್ಲದೆ ಅಂತಹದನ್ನು ಕೈಗೊಳ್ಳುವವರಿಗೆ ಸರಕಾರ ತಡೆಹಾಕುತ್ತದೆ. ಆರ್ಥಿಕ ಮುಗ್ಗಟ್ಟಿನ ಕಾರಣ ಹೇಳಿ ಇಂದು ಎಷ್ಟೋ ಕಾರ್ಯಗಳು ಮೂಲೆಪಾಲಾಗುತ್ತಿರುವದನ್ನು ಕಾಣುತ್ತೇವೆ. ಜನರೇ ಮುಂದೆ ಬಂದು ಅದನ್ನು ಕೈಗೊಂಡರೆ ಆತ್ಮಾಭಿಮಾನಕ್ಕೆ ಕುಂದೆಂಬಂತೆ ಸರಕಾರ ರೇಗಾಡುವದು. ಉದಾಹರಣೆಗೆ ನಮ್ಮ ಪ್ರಾಂತದಲ್ಲಿ ಡಾಕ್ಟರುಗಳ ಕೊರತೆ ಅತಿಯಾಗಿರುವಾಗ ಉಡುಪಿಯಲ್ಲಿ ಮೆಡಿಕಲ್ ಕಾಲೇಜನ್ನು ತೆರೆಯುವ ಯತ್ನ ನಡೆಯಿತು. ಮೊದಲಾಗಿ ಸರಕಾರಕ್ಕೆ ಪೀಡೆಕೊಡದೆ ಸಕಲ ಸನ್ನಾಹಗಳನ್ನು ಒದವಿಸಿ ಮತ್ತೆ ಸರಕಾರದ ಪರವಾನಿಗೆ ಪಡೆಯಬಹುದೆಂಬ ಇಚ್ಛೆ ಕಾರ್ಯಕರ್ತರಲ್ಲಿತ್ತು. "ಡಾಕ್ಟರುಗಳಿಲ್ಲ, ಇಂಜನಿಯರರಿಲ್ಲ" ಎಂಬ ಕೂಗು ಬಹಳ ಕಾಲದಿಂದ ಕೇಳಿಬರುತ್ತಲಿದೆ. ಮೆಡಿಕಲ್ ಕಾಲೇಜ್ ಈಚೆಗೆ ನಿರ್ಮಾಣಗೊಳ್ಳುವದರಿಂದ ಆ ಡಾಕ್ಟರುಗಳು ಪೇಟೆಯಲ್ಲಿ ರೋಗಿಷ್ಠರ ಸುಖಕಷ್ಟವನ್ನು ಪರಿಹರಿಸುವದಲ್ಲದೆ ಹಳ್ಳಿಗಳಿಗೆ ಹೋಗಿ ಅಲ್ಲಿ ವೈದ್ಯಕೀಯ ವೃತ್ತಿಯನ್ನು ಕೈಗೊಂಡು ಜನತಾ ಸೇವೆಯನ್ನು ಕೈಗೊಳ್ಳಬಹುದು. ಗಾಂಧೀಜೀ ಹೇಳಿದ್ದು ಇದನ್ನೇ! ಆದರೆ ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿಗಳು ಉದ್ದೇಶಪೂರ್ವಕವಾಗಿಯೋ ಎಂಬಂತೆ ವಿಶ್ವವಿದ್ಯಾಲಯದ ಅನುಮತಿಯಿಲ್ಲದೆ ಹೊರಟಂಥ ಕಾಲೇಜುಗಳ ಕುರಿತು ನಿರಾಶೆಯನ್ನು ಹುಟ್ಟಿಸುವಂತಹ ಮಾತನ್ನಾಡಿರುತ್ತಾರೆ. ತನ್ನ ಅಸಮರ್ಥತೆಯ ಮುಂದೆ ಬೇರೊಬ್ಬನ ಉತ್ಸಾಹಕ್ಕೂ ಕೊಡಲಿಯೇಟು. ಇಷ್ಟಂತೆಯೇ ಆಯಿತು!

ಇಂಥಹ ಅನುಭವಗಳಿಂದ ನಾವು ನಮ್ಮ ತಪ್ಪನ್ನು ತಿದ್ದಿಕೊಳ್ಳಲೆತ್ನಿಸಬೇಕು. ನಮ್ಮ ಬಡತನ ಪರಾಡಳಿತದಿಂದ ಬಂದದ್ದೂ ಅಲ್ಲ; ಪ್ರಕೃತಿಯ ವಿಕೋಪದಿಂದ ಉಂಟಾದುದು ಅಲ್ಲ; ಇದಕ್ಕೆ ನಮ್ಮ ನ್ಯೂಗಳತನ ಹಾಗೂ ಅಸಮಂಜಸವಾದ ರಾಜಕೀಯ ಧೋರಣೆ ಕಾರಣಗಳಾಗಿರುತ್ತವೆ. ಜನಜೀವನದಲ್ಲೂ— ರಾಜಕೀಯದಲ್ಲೂ ನಮಗೆ ಹೊಂದಿಕೆಯಾಗದಂತಹ ಹಲವು ಅಂಧಶ್ರದ್ಧೆಗಳು ತುಂಬಿವೆ. ಇದರ ನಿರ್ಮೂಲನದ ಹೊರತು ನಮ್ಮ ಬಡತನ ದೂರವಾಗದು. ತೀವ್ರತರವಾದ ಬದಲಾವಣೆಯಾಗದ ಹೊರತು ದೇಶದ ಮುಂದಿರುವ ಸಮಸ್ಯೆ ಬಗೆಹರಿಯುವಂತಿಲ್ಲ! ಈ ಸಮಸ್ಯೆಯನ್ನು ಇನ್ನಷ್ಟು ಬಿಗಿಯಾಗಿಸುವವರೂ, ಪರಿಹರಿಸುವವರೂ, ನಾವೇ ಆಗಿದ್ದ ಕಾರಣ ಬೇರೆಯವರನ್ನು ಬೆಟ್ಟಿಟ್ಟು ದೂರುವಂತಿಲ್ಲ. ಮೇಲಿನ ಸಮಸ್ಯೆಗಳು ಪರಿಹಾರವಾಗದೆ ನಮಗೆ ಏನಿದ್ದರೂ, ನಾವು ಬಡವರೇ!



ಪ್ರಜಾಸತ್ತೆ ಲೇಖನಾಂಕ ೨

ಪ್ರಜಾಸತ್ತೆಯೂ ಪತ್ರಿಕೆಗಳೂ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಪಕ್ಷಗಳ ಮತ್ತು ಪತ್ರಿಕೆಗಳ ವಿಷಯ ಕಳೆದ ಸಂಚಿಕೆಯಲ್ಲಿ ಬರೆದಿರುವದಾದರೂ ಸ್ಥಳ ಸಂಕೋಚದಿಂದ ಪೂರ್ಣ ವಿವರಿಸಲು ಸಾಧ್ಯವಾಗಲಿಲ್ಲ. ಅವುಗಳ ಕುರಿತು ಬೇರೆ ಬೇರೆಯಾಗಿ ಬರೆಯುವದಾದರೆ ಒಂದೊಂದು ಪುಸ್ತಕವನ್ನೇ ಬರೆಯುವ ಸ್ಥಿತಿಯಾದರೂ ಇಲ್ಲಿ ಒಂದೆರಡು ಮುಖ್ಯ ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿ ಪ್ರಜಾಸತ್ತೆಯ ರೂಪುರೇಖೆಗಳನ್ನು ಸ್ವಲ್ಪ ಪರೀಕ್ಷಿಸಬೇಕಾಗಿದೆ. ಪತ್ರಿಕೆಗಳು ವ್ಯಾಪಾರ ದೃಷ್ಟಿಯಿಂದ ಲಾಭದ ಆಶೆಗಾಗಿ ಕೆಲಸ ಮಾಡುವದಾದ್ದರಿಂದ ಭಂಡವಾಳಗಾರರು ನಾಲ್ಕು ವಿಧಗಳಿಂದ ಪತ್ರಿಕೆಗಳನ್ನು ತಮ್ಮ ವಶ ಮಾಡಿಕೊಂಡಿರುವರೆಂತ ಅಮೇರಿಕದ ದೊಡ್ಡ ಬರಹಗಾರರಾದ ಉಪ್ಟನ್ ಸಿಂಕ್ಲೇರರು ತಮ್ಮ 'ಬ್ರಾಸ್ ಚೆಕ್' ಎಂಬ ಪುಸ್ತಕದಲ್ಲಿ ಬರೆದಿರುವರು. ಒಂದನೆಯದಾಗಿ ಪತ್ರಿಕೆಗಳ ಒಡೆತನ. ಎರಡನೇಯದು ಪತ್ರಿಕೆಗಳ ಯಜಮಾನನ ಮೇಲೆ ಒಡೆತನ. ಮೂರನೇಯದು ಜಾಹೀರಾತು ಮತ್ತು ಪ್ರಕಟನೆಯ ಮೂಲಕ ಧನಸಹಾಯ. ನಾಲ್ಕನೆಯದು ಸೀದಾ ಲಂಚ ಕೊಡುವದು. ಈ ರೀತಿಯಲ್ಲಿ ಪತ್ರಿಕೆಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡಿರುವವು.

ಪತ್ರಿಕೆಗಳಲ್ಲಿ ಇತ್ತೀಚೆಗೆ ಇನ್ನೊಂದು ದೋಷವು ಕಂಡುಬಂದದೆ. ಇವುಗಳಲ್ಲಿ ಕೆಲವು ಕೀಳು ಮಟ್ಟದ ಪತ್ರಿಕೆಗಳೂ (Scurrilous journals) ಕೆಲವು ಹಳದಿ ಬಣ್ಣದ ಪತ್ರಿಕೆಗಳೂ (Yellow press) ಎಂದು ಕರೆಯಲ್ಪಟ್ಟಿರುವವು. ಇವುಗಳು ಕೆಲವು ವ್ಯಕ್ತಿಗಳ, ಸಂಘ ಮತ್ತು ಸಂಸ್ಥೆಗಳನ್ನೇ ಗುರಿಯಿಟ್ಟು ದುರ್ವಾಚ್ಯ ಮತ್ತು ವಿಷಭರಿತವಾದ ಟೀಕೆಯನ್ನು ಯಾವಾಗಲೂ ಮಾಡುವವು. ಇವರ ಕಸಬೇ ದೂರುವದು ಮತ್ತು ನಿಂದೆಮಾಡುವದಾಗಿದೆ. ಒಳ್ಳೇದು ಕೆಟ್ಟದರ ವಿಮರ್ಶೆಯೇ ಇವರಿಗಿಲ್ಲ ಇಡೀ ದೇಶದ ಅಭಿಪ್ರಾಯವನ್ನೇ ಬದಲಾಯಿಸಿ ತಮಗನುಕೂಲವಾಗುವಂತೆ ಮಾಡುವದೇ ಇವರ ಸಾಧನೆ. ಇವರ ಸ್ವಂತ ಆಲೋಚನೆ ಮತ್ತು ಅಭಿಪ್ರಾಯವನ್ನು ಜನರ ಮುಂದೆ ಇಡುವುದಿಲ್ಲವಾದರೂ ತಮ್ಮ ಪತ್ರಿಕೆಗಳಲ್ಲಿ ಕೆಲವು ಸಂಗತಿಗಳನ್ನು ಮುಚ್ಚಿಟ್ಟು ಕೆಲವು ಸಂಗತಿಗಳನ್ನು ದೊಡ್ಡ ದೊಡ್ಡ ಶಿರೋನಾಮೆಯಲ್ಲಿ ಬರೆದು ನಾನಾ ವಿಧದಿಂದ ಹೇಳಿದ್ದನ್ನೇ ಒತ್ತಿ ಒತ್ತಿ ಹೇಳಿ ಜನರ ಮನಸ್ಸನ್ನು ಸೂರೆಗೊಳ್ಳುವರು. ನಾಗನ ದರ್ಶನದಲ್ಲಿ ಪಾತ್ರಿಯ ಮುಂದೆ ನಗಾರಿ ಮತ್ತು ಕಂಚಿಯ ದಕ್ಕೆಯ ಶಬ್ದವು ಕೇಳಿದೊಡನೆ ಆವೇಶ ಬರುವದೋ ಹಾಗೆಯೇ ಜನರು ಇವರಿಗೆ ಮರುಳಾಗುವರು. ಜನರ ಕಿವಿಗೆ ಇಂಪಾಗುವಂಥಾ ಮತ್ತು ಮನಸ್ಸಿಗೆ ಥಟ್ಟನೆ ಮೆಚ್ಚುಗೆಗೆ ಬರುವಂಥಾ ವಾರ್ತೆ ಮತ್ತು ಸೂಚನೆಗಳನ್ನೇ ಆರಿಸಿ ಪ್ರಕಟಿಸುವವು. ಆರಂಭದಲ್ಲುಂಟಾಗುವ ಅಭಿಪ್ರಾಯವು ಹೆಚ್ಚಾಗಿ ತಪ್ಪಾಗಿರುವದು ಪುನರಾಲೋಚನೆಯಿಂದ ಅಭಿಪ್ರಾಯವು ಸರಿಬರುವುದು. ಲೋಕದ ಜನರು (ಇಮಿಟೇಶನ್) ಕೃತಕ ಸೊತ್ತುಗಳಿಗೆ ಬೆಲೆ ಕೊಡುವಂತೆ ಇಂಥಾ ತಾತ್ಕಾಲಿಕ ಭಾವನೆಗಳಿಗೆ ಪ್ರಾಮುಖ್ಯತೆ ಕೊಡುವ ಪತ್ರಿಕೆಗಳನ್ನೇ ಜನರು ಪ್ರೋತ್ಸಾಹಿಸುವರು. ಹೀಗೆ ಸವೆದ ನಾಣ್ಯಗಳು ಚಲಾವಣೆಯಲ್ಲಿ ಸಾಕಾದಷ್ಟು ಇರುವದಾದರೆ ಒಳ್ಳೇ ನಾಣ್ಯಗಳನ್ನು ಚಲಾವಣೆಯಿಂದ ಹೊರಗೆ ಮಾಡುವವೋ ಅಂತೆಯೇ ಜನರ ಮೆಚ್ಚುಗೆಗೆ ಅಲ್ಪದವಾದ ರಾಗಭೇದ, ದ್ವೇಷ ಮತ್ತು ವೈಷಮ್ಯ ವಗೈರೆ ಹುಟ್ಟಿಸುವ ಪತ್ರಿಕೆಗಳಿಗೆ ಸರ್ವಸಾಮಾನ್ಯ ಜನರಲ್ಲಿ ಪ್ರೋತ್ಸಾಹ ದೊರೆಯುವದು. ನಮ್ಮ ಹಿರಿಯರು ಸ್ವಾತಂತ್ರ್ಯದ ಬಗ್ಗೆ ಹೋರಾಡುವಾಗ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಮೊದಲನೇ ಸ್ಥಾನಕೊಟ್ಟಿರುವರು. ಆದರೆ ಈಗ ಕೀಳ್ಮಟ್ಟದ ಮತ್ತು ಹಳದಿ ವರ್ಣದ ಪತ್ರಿಕೆಗಳು ಅದನ್ನು ದುರುಪಯೋಗ ಮಾಡುತ್ತಿರುವವು.

ಪ್ರಜಾಸತ್ತೆಯ ವೃದ್ಧಿ ಮತ್ತು ಶುದ್ಧತೆಯು ಪತ್ರಿಕೆಗಳಿಂದ ಮತ್ತು ಪಕ್ಷಗಳಿಂದ ಆಗಬೇಕಾಗಿದೆ. ಈಗ ನಡೆಯುವದನ್ನು ಪರೀಕ್ಷಿಸುವದಾದರೆ ಅವುಗಳೇ ಪ್ರಜಾಸತ್ತೆಯ ಬೆಳವಣಿಗೆಗೆ ತಡೆಯೋ ಎಂಬ ಸಂಶಯವು ನಮ್ಮಲ್ಲಿ ಮೂಡಿಬರುತದೆ. ಪ್ರಜಾಮತ ಸರಕಾರ ನಡೆಯುವರೆ ಇದಿರು ಪಕ್ಷ ಸಹಾ ಬೇಕು ಈ ಪಕ್ಷವು ಯಾವಾಗಲೂ ಸರಕಾರದ ಎದೆಗೆ ಗದಾಪ್ರಹಾರ ಮಾಡುವರೆ ಸಿದ್ಧವಿರುವದರಿಂದ ಬಹುಪಕ್ಷದವರು ಯಾವಾಗಲೂ ಡಾಮೋಕ್ಲಿಸ್ ಎಂಬವರ ಖಡ್ಗವು ತಮ್ಮ ತಲೆಯ ಮೇಲೆ ತೂಗಾಡುತ್ತಾ ಇದೆ ಎಂಬ ಭೀತಿಯನ್ನು ಕನಸು ನೆನಸಿನಲ್ಲೂ ಇಟ್ಟು ಕಾರ್ಯ ವೆಸಗುವರು. ಇದರಿಂದ ಆಗಳಿಕೆ ಶುದ್ಧೀಕರಣ ಹೊಂದುವದರಲ್ಲಿ ಅನುಮಾನವಿಲ್ಲ. ಒಂದೇ ಪಕ್ಷದ ಸರಕಾರ ಒಳ್ಳೇದಲ್ಲ ಹೀಗಾದುದರಿಂದಲೇ ಹಿಟ್ಲರ್ ಮುಸೋಲಿನಿಗಳು ಹುಟ್ಟಿದರು.. ಆದರೆ ಅನೇಕ ಪಂಗಡ, ತಂಡ, ಪಕ್ಷಗಳಿರುವದು ಮತ್ತಷ್ಟು ಕೆಟ್ಟದ್ದು. ಈ ಕಾರಣದಿಂದಲೆ ಫ್ರಾನ್ಸುದೇಶದಲ್ಲಿ ಯಾವ ಕಾಲದಲ್ಲಿ ಬಾಳುಪೂರಿ ನಿಂತ ಸರಕಾರವೇ ಇಲ್ಲ. ಪಕ್ಷಗಳು ನಮಗೆ ಬೇಕಾಗಿವೆಯಾದರೂ ನಮ್ಮ ಶ್ರೇಯಸ್ಸಿಗಾಗಿ ಅವುಗಳನ್ನುಂಟುಮಾಡಿದಾದರೂ ನಾವೀಗ ಅವುಗಳೊಳಗಾಗಿರುವೆವು. ಪಕ್ಷಗಳು ತಮ್ಮ ಶಿಸ್ತು, ವ್ಯವಸ್ಥಿತ ಪದ್ಧತಿ ಯಂತ್ರ ತಂತ್ರ ಕುತಂತ್ರಗಳಿಂದ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿರುವವು. ಪಕ್ಷಗಳು ಸೂಚಿಸಿದಂತೆ ನಾವು ನಡಕೊಳ್ಳುವೆವು.

ಸಾಮಾನ್ಯ ಜನರು ಯಾವದಾದರೊಂದು ಪ್ರಶ್ನೆಗೆ ಉತ್ತರವಾಗಿ ಹೌದು ಅಥವಾ ಅಲ್ಲವೆಂತ ಮಾತ್ರವೇ ಹೇಳುವವರಾದ್ದರಿಂದ ಪೂರ್ಣ ವಿಮರ್ಶೆಯನ್ನು ಪಕ್ಷಗಳೇ ಮಾಡಿ ಅಭಿಪ್ರಾಯ ಸೂಚಿಸುವದಾಗಿದೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಹಲವು ಪಂಗಡಗಳು ತಲೆಎತ್ತಿವೆ. ಇವುಗಳನ್ನು ಪಕ್ಷಗಳೆಂದು ಕರೆಯುವದು ಶುದ್ಧ ತಪ್ಪು ಇವುಗಳು ಯಾವ ತತ್ವ ಅಥವಾ ಮತಭೇದಗಳನ್ನು ಹೊಂದಿ ಜನನಕ್ಕೆ ಬರಲಿಲ್ಲ. ವೈಯಕ್ತಿಕ ಕಾರಣಗಳಿಂದ ಅಸಂತುಷ್ಟ ಮಹನ್ನಿದ್ಧಿಗಳು ದೊಡ್ಡಗಳಿಂದ ಹೊರಗೆ ಹೋಗಿ ತಮ್ಮದೇ ಆದ ಪಕ್ಷವನ್ನು ರಚಿಸಿರುವರು. ಇವುಗಳಿಗೆ ವಯಸ್ಸಿನ ಮಾನ್ಯತೆಯೂ ಇಲ್ಲ ಮುಂದಿನ ಅಭಿವೃದ್ಧಿ ಅನುಮಾನಕರ. ಪ್ರತಿ ವ್ಯಕ್ತಿಯೂ ಪಕ್ಷಗಳನ್ನು ಕಟ್ಟಿದರೆ ಹಿಂಬಾಲಿಸುವ ಸದಸ್ಯರು ಸಿಕ್ಕುವದು ಕಷ್ಟ. ಪ್ರತಿಯೋರ್ವ ಸವಾರನೂ ತಾನೇ ಸೇನಾಪತಿಯೆಂಬಂತೆ ವರ್ತಿಸಿದರೆ ಸೈನ್ಯವನ್ನು ಅಂಕೆಯಲ್ಲಿರಿಸುವದು ಕಷ್ಟ. ಈ ತಂಡಗಳಿಗೆ ತತ್ವದ ಬೆಂಬಲವಿಲ್ಲವಾದರೂ ಒಂದು ನಿರ್ಧಾರದ ಬೆಂಬಲ ಚೆನ್ನಾಗಿದೆ. ಕಾಂಗ್ರೆಸ್ಸು ಸರಕಾರವನ್ನು ದೂರಿ ಅದನ್ನು ತೊಲಗಿಸಬೇಕೆಂಬುದರಲ್ಲಿ ಏಕಸ್ವರದಿಂದ ಮಾತಾಡುವರು. ಎಲ್ಲರೂ ಒಟ್ಟುಗೂಡಿ ನಮಗಲ್ಲದ ಕಣ್ಣು ಹೊಟ್ಟಿಹೋದರೇನು ಕಿತ್ತುಹೋದರೇನೆನ್ನುವರು. ಚುನಾವಣೆ ಮುಗಿದೊಡನೆಯೇ ಈ ಒತೆಲ್ಲೋ (Othello) ಗಳವರಿಗೆ ನಾಟಕದ ಮುಂದಿನ ಅಂಕಗಳಲ್ಲಿ ಯಾವ ಪಾತ್ರಗಳೂ ಕಾಣುವದಿಲ್ಲ.

—ಶ್ರೀ ಸಿ. ಎಚ್. ಶೆಟ್ಟಿ, ಬಿ. ಎ.

TEL: 40592

WATSONS AERATED WATERS

14 Perel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK; LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು,

NOTICE

Payments such as annual subscription, advertisement and Court Noticepublicationcharges may be credited to 'NAVAYUGA account at the Canara Industrial & Banking Syndicate Ltd., Udipi or its Branches at par.

Manager.

In the Court of the District Munsiff of Coo[illegible]

O. S. 326/1951

Gopalkrishna Bhandary— Plaintiff.

vs

Ramanna Hegde— Defendent.

To

Ramanna Hegde, nephew of Subbaya Hegde resident in Melmane of Ampar village, Coondapur Taluk– S. K.

Whereas the plaintiff has instituted the above suit against you for recovery of the moneys due on the foot of the demand promissory note executed by you in favour of Srinivas Bhandary the late father of the plaintiff, you are summoned to appear in this court in person or by pleader on 15-9-1951 at 11 A. M. failing which the suit will proceed exparte.

(By order of the Court)

S. N Acharya, B.A.LL.B.,
Advocate.

Coondapur, 28-8-'51.

ಜಾಪಾನ ಸಾರ್ವಭೌಮತ್ವದ ಒಳಗುಟ್ಟೇನು?

ಯುದ್ಧಾನಂತರದ ಆರನೇ ವರ್ಷದ ಸಂತಸ ಆದರೊಡನೆ ಯುದ್ಧ ಸಾರಿದ್ದ ಬಳ ರಾಷ್ಟ್ರಗಳು ಶಾಂತಿ ಒಪ್ಪಂದದ ಪೂರ್ವಸಿದ್ಧತೆಯನ್ನು ನಡೆಸುತ್ತಿವೆ. ಈ ಶಾಂತಿ ಒಡಂಬಡಿಕೆಯ ಕರಡನ್ನು ಆಂಗ್ಲೋ ಅಮೆರಿಕನರು ಸಿದ್ಧಗೊಳಿಸಿದರು. ಕರಡಿನ ಕೆಲವಂಶವನ್ನು ಇಂಗ್ಲಂಡ ಒಪ್ಪದ ಪ್ರಯುಕ್ತ ತಿರುಗೊಮ್ಮೆ ತಿದ್ದುಪಡಿಯೊಂದಿಗೆ ಅಮೆರಿಕೆ ಮುಂದೆ ಮಾಡಿದ್ದನ್ನು ಇಂಗ್ಲಂಡ ಒಪ್ಪಿತು. ಆ ಕರಡನ್ನು ಉಳಿದ ರಾಷ್ಟ್ರಗಳ ಗಮನಕ್ಕೆ ತರಲಾಯಿತು. ಆದರೆ ಭಾರತ, ಬ್ರಹ್ಮದೇಶ, ಇಂಡೋನೇಶಿಯಾ ಫಿಲಿಪಾಯಿನ್ಸ್ ಮುಂತಾದ ರಾಷ್ಟ್ರಗಳು ಆ ಕರಡಿಗೆ ಅಂಕಿತ ಹಾಕುವದಕ್ಕೆ ನಿರಾಕರಿಸಿದವು. ಸಪ್ಟೆಂಬರ ದಿನಾಂಕ ೪ ರಂದು ಕೂಡುವ ಸಾನ್ ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಭಾಗವಹಿಸಿ ಈ ಕರಾರಿಗೆ ಸಹಿ ಹಾಕುವದಕ್ಕೆ ಭಾರತವು ನಿರಾಕರಿಸಿದೆ. ಭಾರತದ ನಿಲುಮೆಯ ಕುರಿತು ಶ್ರೀ ಜವಾಹರ ನೆಹ್ರೂರವರು ಪಾರ್ಲಿಮೆಂಟಿನಲ್ಲಿ ಸುದೀರ್ಘ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಭಾರತದ ಅಭಿಪ್ರಾಯಕ್ಕೆ ವಿರುದ್ಧವಾದ ಮುಖ್ಯಾಂಶಗಳನ್ನು ತಿದ್ದುಪಡಿ ಇಲ್ಲವೆ ಬದಲಾವಣೆ ಮಾಡಬೇಕೆಂದು ಭಾರತವು ಕೇಳಿದ್ದನ್ನು ಅಮೆರಿಕೆಯು ಈ ಮೊದಲೇ ನಿರಾಕರಿಸಿದೆ. ಭಾರತವು ಸ್ಪಷ್ಟೀಕರಣ ಬಯಸಿದ ವಿಚಾರಗಳಾವುವೆಂದರೆ (1) ಫೋರ್ಮೋಸವನ್ನು ಚೀನಕ್ಕೆ ಬಿಟ್ಟುಕೊಡಬೇಕು. (2) ಜಪಾನದ್ದೇ ಆದ ರ್‍ಯುಕ್ಯೂ ಮತ್ತು ಬೋನಿನ ಪ್ರದೇಶಗಳನ್ನು ವಿಶ್ವಸ್ತಮಂಡಳಕ್ಕೆ ಒಪ್ಪಿಸುವ ಬದಲಾಗಿ ಜಪಾನಕ್ಕೆ ಬಿಟ್ಟುಕೊಡಬೇಕು. (3) ಕ್ಯುರಾಯಿಲ ಮತ್ತು ದಕ್ಷಿಣ ಸಖಾಲೀನವನ್ನು ರಶಿಯದ ಒಡೆತನಕ್ಕೆ ಬಿಟ್ಟುಕೊಡಬೇಕು (4) ಆಕ್ರಮವಾಗಿ ನೆಲೆನಿಂತ ಅಮೆರಿಕೆಯ ಸೈನ್ಯಗಳು ಹಿಂದೆ ಹೋಗಬೇಕು. ಇವೇ ಮುಖ್ಯವಾದವುಗಳು. ಇದನ್ನು ಅಮೆರಿಕಾ ನಿರಾಕರಿಸಿದೆ. ಭಾರತದ ನಿರಾಕರಣೆಯ ಧೋರಣೆಯಿಂದ ಆಂಗ್ಲೋ ಅಮೆರಿಕನರಿಗೆ ಅತೀವ ವಿಷಾದವಾಗಿದೆ. ಕಮ್ಯೂನಿಸಮ್ಮದ ಮೇಲೆ ಯುದ್ಧ ಹೂಡಬೇಕೆಂದು ಅವರು ಹೂಡಿದ ಕುತಂತ್ರಕ್ಕೆ ವಜ್ರಾಘಾತವಾದಂತಾಗಿದೆ. ಅಂತಲೇ ಭಾರತದ ನಿಲುಮೆಯ ಕುರಿತು ಇಂಗ್ಲಂಡ ಅಮೆರಿಕೆಯ ಪತ್ರಿಕೆಗಳಲ್ಲಿ ಬಲವಾದ ಟೀಕೆಗಳು ಬರುತ್ತಿವೆ. ಅಮೆರಿಕೆಯ ರಿಪಬ್ಲಿಕನ್ ಪಕ್ಷದವರು ಕಮ್ಯೂನಿಸ್ಟ ವಿರೋಧಿ ರಾಷ್ಟ್ರಗಳಿಗೆ ಆರ್ಥಿಕ ಹಾಗೂ ಮಿಲಿಟರಿ ರೀತಿಯಲ್ಲಿ 850 ಕೋಟಿ ಡಾಲರುಗಳ ಸಹಾಯ ನೀಡಬೇಕೆಂಬ ಯೋಜನೆಯನ್ವಯ ಭಾರತಕ್ಕೆ ದೊರೆಯಬಹುದಾದ 6 ಕೋಟಿ 50 ಲಕ್ಷ ಡಾಲರುಗಳನ್ನು ಕೊಡಬಾರದೆಂದು ಹೇಳುತ್ತಿರುವರು. ಮಾತ್ರವಲ್ಲದೆ ಪ್ರಮುಖ ಪತ್ರಿಕೆಗಳು ಭಾರತದ ವಿರುದ್ಧ ಪ್ರಚಾರ ಕೈಗೊಂಡಿವೆ!

ಭಾರತ ಸ್ಪಷ್ಟೋಕ್ತಿಯನ್ನು ಸಿರಿಯ, ಮುಂತಾದ ರಾಷ್ಟ್ರಗಳು ಶ್ಲಾಘಿಸಿವೆ! ಪೇಕಿಂಗ್ ರೇಡಿಯೋ ಭಾರತ ನಿಲುಮೆಯನ್ನು ಸ್ವಾಗತಿಸಿದ್ದು, ಭಾರತ ಬ್ರಹ್ಮದೇಶಗಳ ನಿರಾಕರಣೆಯಿಂದ ಏಶಿಯದ ಪ್ರಬಲ ರಾಷ್ಟ್ರಗಳ ವಿರೋಧವನ್ನು ವ್ಯಕ್ತಪಡಿಸಿದಂತಾಯಿತು ಎಂದಿದೆ.

ಆಂಗ್ಲೋ ಅಮೇರಿಕನರ ಕುಟಿಲ ನೀತಿಗೆ ಭಾರತವು ವಿರೋಧ ಸೂಚಿಸಿದ್ದು ಮಾತ್ರವಲ್ಲದೆ, ಭಾರತ ಆಕ್ಷೇಪವೆತ್ತಿದ ಅಂಶಗಳು ಲೋಕದ ಇತರ ರಾಷ್ಟ್ರಗಳ ದೃಷ್ಟಿಯು ಆ ಕಡೆಗೆ ಹರಿಯುವಂತೆ ಮಾಡಿದ್ದರಿಂದ ಅವರ ಮೂಲೋದ್ದೇಶಕ್ಕೆ ಧಕ್ಕೆಯಾದಂತಾಗಿದೆ. ಜಾಪಾನಿನಲ್ಲಿ ಅಮೆರಿಕೆಯು ತನ್ನ ಸೈನ್ಯವನ್ನು ಹಾಗೆಯೆ ಉಳಿಸಿಕೊಂಡು ಅದಕ್ಕೆ ಸಾರ್ವಭೌಮತ್ವ ನೀಡುವ ಔಚಿತ್ಯವಾದರೂ ಏನು? ರ್‍ಯುಕೋ ಮತ್ತು ಬೋನಿನ ವಿಚಾರವೂ ಹೀಗಿಲ್ಲವಂತೆ! ಈ ರೀತಿಯ ಅಸಮಂಜಸವಾದ ಧೋರಣೆಯ ಮೂಲಕ ಶಾಂತಿಒಪ್ಪಂದ ಮಾಡಿಕೊಳ್ಳುವದರಿಂದ ಜಾಪಾನಕ್ಕೆ ನಿಜವಾದ ಸ್ವಾತಂತ್ರ್ಯವೂ ಸಿಕ್ಕುವುದಿಲ್ಲ—ಜಾಗತಿಕ ರಂಗದಲ್ಲಿ ಶಾಂತಿಯ ಬದಲಾಗಿ ಪ್ರಕ್ಷುಬ್ಧ ವಾತಾವರಣವೇ ಹುಟ್ಟೀತು! ರಶಿಯ ಹಾಗೂ ಚೀನವನ್ನು ಬೇಕೆಂತಲೇ ಇಲ್ಲಿ ಕಡೆಗಣಿಸಿದಂತಾಗಿದೆ. ಜಪಾನದ ನೆರೆಯ ರಾಷ್ಟ್ರವಾದ ಚೀನಕ್ಕೆ ಇದರಲ್ಲಿ ಪ್ರಾತಿನಿಧ್ಯವೇ ಇಲ್ಲ. ರಶಿಯಕ್ಕೆ ಕೊಡಮಾಡಿದ ಕ್ಯುರಾಯಿಲ ಮತ್ತು ಸಖಾಲೀನ ಪ್ರದೇಶಗಳು ಅದು ಶಾಂತಿ ಒಪ್ಪಂದಕ್ಕೆ ಸಹಿಹಾಕುವ ನಿರ್ಣಯದ ಮೇಲೆಯೇ ಹೊಂದಿಕೊಂಡಿದೆಯಂತೆ!

ಸಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಬೇರೆ ಬೇರೆ ರಾಷ್ಟ್ರಗಳು ಆಂಗ್ಲೋ ಅಮೇರಿಕನರ ಕುತರ್ಕಕ್ಕೆ ಬಲಿಬಿದ್ದು ಶಾಂತಿ ಒಪ್ಪಂದಕ್ಕೆ ಸಹಿಹಾಕುವಂತಾದರೆ ಅದರಿಂದ ಕಮ್ಯೂನಿಸ್ಟ ರಾಷ್ಟ್ರಗಳಿಂದ ಪ್ರಬಲವಾದ ವಿರೋಧವನ್ನು ಕಟ್ಟಿಕೊಳ್ಳಬೇಕಾದ ಪ್ರಸಂಗ ಬರುವುದು ಮಾತ್ರವಲ್ಲದೆ, ಜಾಗತಿಕ ರಂಗದಲ್ಲಿ ಶಾಂತಿಯೆಂದೂ ನೆಲಸುವಂತಿಲ್ಲ. ಆರ್ಥಿಕ ಸಹಾಯದ ಮೋಹಜಾಲದಿಂದ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಸಾರ್ವಭೌಮಾಧಿಕಾರತ್ವವನ್ನು ಬಯಸುವ ಈ ಅಮೆರಿಕೆಯ ಕಾರಸ್ಥಾನ ನಿಜವಾಗಿಯೂ ಖೇದಾವಹ ಸಂಗತಿ! ಸ್ವಾತಂತ್ರ್ಯದ ಹೆಸರಿನಲ್ಲಿ ಜಾಪಾನದಲ್ಲಿ ಅಮೆರಿಕೆಯು ತನ್ನ ಅಧಿಕಾರವನ್ನು ಇನ್ನಷ್ಟು ಭದ್ರಗೊಳಿಸಿದಂತಾಗುತ್ತದೆ. ಸಂಪತ್ಸಮೃದ್ಧವಾದ ಅಮೆರಿಕೆಯು ಲೋಕಕಲ್ಯಾಣಕ್ಕೆಂದು ತೋರುತ್ತಿರುವ ಸಹಕಾರದಕ್ಕೆ ಇತರ ರಾಷ್ಟ್ರಗಳನ್ನು ತನ್ನ ನಿರಂಕುಶ ಪ್ರಭುತ್ವದೊಳಗೆ ಕಬಳಿಸುವುದಕ್ಕಾಗಿಯೇ ಮುಂದೆ ಬಂದಿದೆ. ಭಾರತವು ಇಂತಹ ಗುಲಾಮತನಕ್ಕೆ ಬಲಿಬೀಳದೆ ಶಾಂತಿ ಒಪ್ಪಂದದಲ್ಲಿರುವ ಲೋಪದೋಷಗಳನ್ನು ನಿರ್ಭೀತಿಯಿಂದ ಖಂಡಿಸಿ ತನ್ನ ನಿಲುವೆಯನ್ನು ಸ್ಪಷ್ಟೀಕರಿಸಿದ್ದು ಆತ್ಮಗೌರವದ ದ್ಯೋತಕವಾಗಿದೆ. ಆಹಾರ-ಆರ್ಥಿಕವಿಚಾರಗಳಲ್ಲಿ ಭಾರತವು ಅಮೆರಿಕೆಯನ್ನು ಅವಲಂಬಿಸಬೇಕಾದ ಪ್ರಸಂಗಗಳಿರುವಾಗ ಈ ಕಟ್ಟುನಿಟ್ಟಿನ ಧೋರಣೆಯು ಬೌದ್ಧಿಕವಾದುದಲ್ಲವೆಂದು ವಿದೇಶಾಂಗ ನೀತಿಯನ್ನು ಟೀಕಿಸುವವರೂ ಉಂಟು! ಸುಸಂಸ್ಕೃತವಾದ ದೇಶಕ್ಕೆ ಆತ್ಮಗೌರವವನ್ನು ಉಳಿಸಿಕೊಳ್ಳುವದರಲ್ಲೇ ತನ್ನ ಪೌರುಷತ್ವವಿರುತ್ತದೆ. ಅದು ಸ್ವಾಭಾವಿಕವೂ ಹೌದು. ಅಂತಲೇ ಭಾರತವು ಜಪಾನ ಒಪ್ಪಂದ ವಿಚಾರದಲ್ಲಿ ತಾಳಿದ ಧೋರಣೆಯನ್ನು ಅತ್ಯಂತ ಧೀರೋದಾತ್ತವಾದುದೆನ್ನುತ್ತೇವೆ.

ಪಾಕಿಸ್ತಾನಿಗಳ ಪಟಾಟೋಪ ನಿಂತಿತೇ?

ಪಾಕಿಸ್ತಾನದ ಪ್ರಧಾನಿ ಬದ್ಧಮುಷ್ಟಿಯನ್ನು ಹಿಡಿದು ಯುದ್ಧಾಹ್ವಾನ ನೀಡಿ ರಂಪ ಟವಬ್ಬಿಸಿದರೂ ಸದ್ಯ ಅಂತಹ ಗುಲ್ಲೇನೂ ಕೇಳಿಬರುತ್ತಿಲ್ಲ. ಪಾಕಿಸ್ತಾನವು ಧುಮಧುಮಗುಂಪಾಗಿ ಮಾಡಿದ ಪ್ರಚಾರಗಳು ಪಂಚಮಾಂಗಿಗಳ ಪಂಕ್ತಿಯ ಪ್ರೇರಿತವೆಂದು ಈ ಮೊದಲೇ ಹೇಳಿದ್ದೆವು. ನೆಹ್ರೂ-ಲಿಯಾಖತ್ ಪತ್ರಪ್ರಬಂಧದಲ್ಲೇ ನೋಡಿ ಒಂದು ರೀತಿಯ ಕಾವಿತ್ತು! ಶಸ್ತ್ರಬಲದಿಂದ ಕಾಶ್ಮೀರವನ್ನು ನುಂಗಬೇಕೆಂಬ ದುರುದ್ದೇಶದಿಂದ ಪಾಕಿಸ್ತಾನದ ಜನತೆಯನ್ನು ರೊಚ್ಚಿಗೆಬ್ಬಿಸಿಯೂ-ಶಕ್ತ್ಯನುಸಾರ ಯುದ್ಧ ಸನ್ನಾಹ ನಡೆಸಿಯೂ ಇಂದು ಮುಖಭಂಗಮಾಡಿಕೊಳ್ಳುವ ಪ್ರಸಂಗ ಬಂದಿದೆ. ಕಾಶ್ಮೀರದಲ್ಲಿ ಸದ್ಯವೇ ರಚನೆಗೊಳ್ಳಬಹುದಾದ ಘಟನಾ ಸಮಿತಿಯನ್ನು ಹಾಳುಗೆಡಹಿ-ಗ್ರಹಾಮರು ಇಲ್ಲಿರುವಾಗಲೇ ತನ್ನ ಕಾರ್ಯ ಸಾಧಿಸಬೇಕೆಂದು ಪಾಕಿಸ್ತಾನ ಬಯಸಿತ್ತು. ಅಂತೆಯೇ ಗಡ್ಡಗಾಡ ಜನರನ್ನು ಹುರಿದುಂಬಿಸಿತ್ತು. ಪಾಕಿಸ್ತಾನವು ಒಳಗಿಂದೂ ಆರ್ಥಿಕ ದುಸ್ಥಿತಿಯಿಂದ ಮುಗ್ಗರಿಸುತ್ತಿದ್ದರೂ ವಿದೇಶಗಳಲ್ಲಿ ಭಾರತದ ವಿರುದ್ಧ ಪ್ರಚಾರ ಕೈಗೊಳ್ಳುವದರ ಸಲುವಾಗಿ ಹೇರಳ ಹಣವನ್ನು ವಿನಿಯೋಗಿಸಿದೆ. ಮುಸಲ್ಮಾನ ರಾಷ್ಟ್ರಗಳಲ್ಲೂ ತನ್ನ ಒಲವನ್ನು ಬೀರುವ ಸಾಹಸಮಾಡಿತ್ತು; ಆದರೆ ಎಲ್ಲಿಯೂ ಪಾಕಿಸ್ತಾನದ ಜಾತೀಯ ಯುದ್ಧಕ್ಕೆ ಬೆಂಬಲ ಸಿಗಲಿಲ್ಲ. ಅಫಘಾನಿಸ್ತಾನ, ಇರಾಣ, ಮುಂತಾದ ಮುಸ್ಲಿಮ ರಾಷ್ಟ್ರಗಳು ಭಾರತದ ಜಾತ್ಯಾತೀತ ಧೋರಣೆಯನ್ನು ಶ್ಲಾಘಿಸಿ ನೆಹ್ರೂರವರ ಮುಂದಾಳ್ತನಕ್ಕೆ ಸಂಪೂರ್ಣ ಸಹಕಾರ ನೀಡತಕ್ಕದ್ದೆಂದು ಹೇಳಿರುವವು.

ಅರಬ ರಾಷ್ಟ್ರಗಳ ಮನಒಲಿಸಲು ಕಳೆದ ನಾಲ್ಕು ವರ್ಷಗಳಿಂದ ನಡೆಸಿದ ಪ್ರಚಾರಕ್ಕಾಗಿ ಪಾಕಿಸ್ತಾನವು ಒಂದು ಕೋಟಿ ರೂ. ವ್ಯಯಿಸಿದೆ. ಆದರೆ ಅವೆಲ್ಲ ವ್ಯರ್ಥವಾಗಿದೆ. ಭಾರತದೊಳಗಿನ ೪ ಲಕ್ಷ ಮು

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು.

ಅಲ್ಪ ವೆಚ್ಚ! ಅದ್ಭುತ ಗುಣ!

ಎಂ.ಎಂ. ಪ್ರೊಡಕ್ಟ್ಸ ಕೊ;
ರುಬಿ ಮೇನ್ಸನ್,
ಫೋರ್ಟ, ಬೊಂಬಾಯಿ.



THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ.. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಸಲ್ಮಾನರನ್ನು ಜಾತೀಯತೆಗೆಳೆಯಲು ನಡೆಸಿದ ಯಾವ ಪ್ರಯತ್ನವೂ ಫಲಿಸಲಿಲ್ಲ ಮಾತ್ರವಲ್ಲ ಇಲ್ಲಿಯ 14ಜನ ಪ್ರಮುಖ ಮುಸಲ್ಮಾನ ಧುರೀಣರು ಪಾಕಿಸ್ತಾನ ಕೈಗೊಂಡ ದುಷ್ಟ ರಾಜನೀತಿಯ ಪದ್ಧತಿಯನ್ನು ಖಂಡಿಸಿ, ತಮ್ಮ ನಿಲುವೆಯನ್ನು ಸ್ಪಷ್ಟೀಕರಿಸಿ ಡಾ| ಗ್ರಾಹ್ಯಾಮರಿಗೆ ಒಪ್ಪಿಸಿದ ಮನವಿಯು ಅತ್ಯಂತ ಮಹತ್ವದ್ದಾಗಿರುತ್ತದೆ. ಬಳಿಕ ಲಖನೌದಲ್ಲಿ ರಾಷ್ಟ್ರಪತಿಯವರ ನವಾಬರ ಅಧ್ಯಕ್ಷತೆಯಲ್ಲಿ ಜರಗಿದ ಅ.ಭಾ. ಶಿಯಾ ಪರಿಷತ್ತು ಹಲವು ಮಹತ್ವದ ಗೊತ್ತುವಳಿಯನ್ನು ಸ್ವೀಕರಿಸಿದ್ದು ಜಾತ್ಯತೀತ ಪ್ರಜಾಸತ್ತೆಗೂ–ನೆಹ್ರೂರವರ ಧುರೀಣತ್ವಕ್ಕೂ ತಮ್ಮ ಸಂಪೂರ್ಣ ಬೆಂಬಲವಿದೆಯೆಂದೂ ರಾಷ್ಟ್ರದ–ಕಾಶ್ಮೀರದ ಶಿಯಾ ಜನರು ಇದನ್ನು ಸಂಪೂರ್ಣ ಗೌರವಿಸಬೇಕೆಂದು ಕೇಳಿಕೊಂಡಿದೆ..

ಇದರಿಂದಾಗಿ ಪಾಕಿಸ್ತಾನದ ಜೇಹಾದದ ಕೂಗು ಹೆಚ್ಚಾಗಿ ಕೇಳುತ್ತಿಲ್ಲ. ಕಣ್ಣು ಮುಚ್ಚಿ ವಿಚಾರಗಳನ್ನೆತ್ತಿಕೊಂಡು ತಿರುಚಿಬಿಟ್ಟು ಹಾಕುವದನ್ನು ಬಿಟ್ಟರೆ ಇನ್ನಾವ ಪ್ರಕರಣವೂ ಅಲ್ಲಿ ನಡೆದಿರುವುದಿಲ್ಲ. ಮುಂದೆ ಅವರು ಯುದ್ಧ ಹೂಡುವದಾಗಲೀ–ಹೋರಾಟದ ನಡೆಸುವದಾಗಲೀ ಸ್ವಸಾಮರ್ಥ್ಯದಿಂದಲ್ಲವೆಂಬುದನ್ನು ನಾವು ಊಹಿಸಬಹುದಾಗಿದೆ. ಕಾಶ್ಮೀರವನ್ನು ಹೇತುವಾಗಿಟ್ಟುಕೊಂಡು ಭಾರತದೊಡನೆ ಯುದ್ಧ ಹೂಡಿದರೆ ತನಗೆ ಯಶಸ್ಸೊದಗಲಿಕ್ಕಿಲ್ಲವೆಂಬುದು ಪಾಕಿಸ್ತಾನಕ್ಕೆ ಚೆನ್ನಾಗಿ ಮನವರಿಕೆಯಾಗಿದೆ. ಅಂತಲೇ ಸದ್ಯ ಆಂಗ್ಲೋ ಅಮೇರಿಕಾನರ ಬೆನ್ನು ಹತ್ತಿರುವರೆಂದು ತೋರುತ್ತದೆ. ಜಾಪಾನದ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವದಕ್ಕೆ ಒಪ್ಪಿದ್ದೂ ಜಾಫ್ರುಲ್ಲಾಖಾನರು ತರಾತುರಿಯಿಂದ ಪಯಣ ಬೆಳೆಸಿದ್ದೂ ಅದರ ಮೂಲ ಗುಟ್ಟಾಗಿರುತ್ತದೆ.

ಪತ್ರಿಕಾ ಮಸೂದೆ

ರಾಜ್ಯಘಟನೆಯ ಪ್ರಥಮ ತಿದ್ದುಪಡಿಯ ಕಾಲಕ್ಕೆ 1931ನೇ ಇಸ್ವಿಯ ಪತ್ರಿಕೆಯ ಕಾಯಿದೆಗಳನ್ನು ಬದಲಿಸಿ ಹೊಸ ರಾಜ್ಯಘಟನೆಗೊಪ್ಪುವ ನೂತನ ಕಾಯಿದೆಗಳನ್ನು ಮಾಡುವ ಭರವಸೆಯನ್ನು ಸರಕಾರ ಕೊಟ್ಟಿತ್ತು. ಅಂತೆಯೇ ಗೃಹಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ಹೊಸ ಪತ್ರಿಕಾ ಕಾಯಿದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿರುತ್ತಾರೆ. ಹಿಂದೆ ಪ್ರಾಂತಿಕ ಹಾಗೂ ಕೇಂದ್ರಗಳೂ ತಮ್ಮ ಅನುಕೂಲತೆಗಾಗಿ ಮಾಡಿಕೊಂಡ ಹಲವಾರು ಕಾನೂನುಗಳನ್ನು ರದ್ದುಗೊಳಿಸಲಾಗಿದೆ. ಈ ನೂತನ ಕಾಯಿದೆಯನ್ನು ಸರಕಾರವು ಮುದ್ರಕರನ್ನೂ, ಪತ್ರಿಕಾಕರ್ತರನ್ನೂ, ಪ್ರಕಾಶಕರನ್ನೂ ಒಂದು ರೀತಿಯ ಬಂಧನಕ್ಕೊಳಪಡಿಸಿದೆ. ಹಿಂದಿನ ಕಾಯಿದೆಗಳನ್ನು ರದ್ದುಗೊಳಿಸಿರುವದಾದರೂ ಹೊಸತಾಗಿ ಬಂದವುಗಳೇನೂ ಹೆಚ್ಚಿನ ಸ್ವಾತಂತ್ರ್ಯವನ್ನು ಅವರಿಗೆ ನೀಡಿದಂತಿಲ್ಲ. ವಾಕ್ ಸ್ವಾತಂತ್ರ್ಯದ ಮೇಲಿನ ಕಟ್ಟೋಟಿಯನ್ನು ಸಡಿಲಿಸಿದೆಯಾದರೂ ಪ್ರಕಟನೆಯ ಮೇಲೆ ಆ ಬರಹಗಳನ್ನು ವಾಕ್ ಸ್ವಾತಂತ್ರ್ಯದ ದುರುಪಯೋಗದ ಹೊರೆಯನ್ನು ಹೊರಿಸಿಯೋ–ಅಶ್ಲೀಲ ಅರಾಜಕೀಯದ ಕಾರಣ ಹೇಳಿಯೋ ಪತ್ರಿಕಾ ಇಲ್ಲವೆ ಪ್ರಕಟನೆಯ ಮೇಲೆ ಜಾಮೀನು ಕೇಳಲೂ ಬಹುದು; ಮುದ್ರಣಕಾರರ ಜಪ್ತಿ ಮಾತ್ರವಲ್ಲದೆ 2000 ರೂ. ವರೆಗಿನ ನಷ್ಟಕ್ಕೆ ಗುರಿಪಡಿಸಬಹುದು. ಆಕ್ಷೇಪಕಾರಕ ಪ್ರಕಟನೆಗಳೆಂದರೆ 1) ಕೇಂದ್ರ ಹಾಗೂ ಪ್ರಾಂತಿಕ ಹಾಗೂ ಸರಕಾರಗಳನ್ನು ಉರುಳಿಸುವ ಇಲ್ಲವೆ ದುರ್ಬಲಗೊಳಿಸುವ ಕಾರ್ಯಕ್ಕೆ ಪ್ರಚೋದಿಸುವದು. 2) ಹಿಂಸಾತ್ಮಕ ಮಾರ್ಗಗಳಿಂದ ಅರಾಜಕತೆಗೆ ಪ್ರೋತ್ಸಾಹ ನೀಡುವುದು (3) ಸೈನಿಕರ ಹಾಗೂ ಪೋಲೀಸರಲ್ಲಿ ಸರಕಾರದ ವಿರುದ್ಧ ಮತಭೇದ ಹುಟ್ಟಿಸುವಂತೆ ಮಾಡುವದು (4) ಸರಕಾರದ ಅಧಿಕಾರಿಗಳ ಹಾಗೂ ಕೆಲಸಗಾರರನ್ನು ತಮ್ಮ ತಮ್ಮ ಕಾರ್ಯಗಳಲ್ಲಿ ಪ್ರಾಮಾಣಿಕತನವನ್ನು ವ್ಯಕ್ತಪಡಿಸದಂತೆ ಹುರಿದುಂಬಿಸುವದು. 5) ಬೇರೆ ಬೇರೆ ಪಂಗಡದ ಜನರಲ್ಲಿ ಜಾತೀಯ ದ್ವೇಷವನ್ನು ಹುಟ್ಟಿಸಿ ಗೊಂದಲವನ್ನುಂಟು ಮಾಡುವುದು. 6) ಅಶ್ಲೀಲ ಹಾಗೂ ಅಪಾಯ್ಯ ಪ್ರಕಟಣೆಗಳನ್ನು ಪ್ರಕಟಿಸುವದು ಇಂಥದೇ ಮುಖ್ಯ ವಿಚಾರಗಳಿಗೆ ಪ್ರತಿಬಂಧವನ್ನು ಹಾಕಲಾಗಿದೆ. ಪತ್ರಿಕೆಗಳ ಮೇಲೆ ವಿಚಾರಣೆ ಮಾಡುವದನ್ನು ಮುಂದಕ್ಕೆ ಜಿಲ್ಲಾಧಿಕಾರಿಗಳೇ ನೋಡಿಕೊಳ್ಳುವರು. ಇಂತಹ ಸಂದಿಗ್ಧ ವಿಚಾರಗಳಲ್ಲಿ ಪ್ರಕಟಣೆಗಾರರೂ ಮತ್ತು ಮುದ್ರಕರೂ ಹೈಕೋರ್ಟಿನ ವರೆಗೂ ವಾದಿಸಬಹುದಾಗಿದೆ.

ದೇಶದ ಹಾಗೆ ಹಿಂದೆ ಪ್ರಾಂತಿಕ ಸರಕಾರಗಳು ಕಾಯಿದೆ ಕಾನೂನುಗಳನ್ನು ಸಿದ್ಧಗೊಳಿಸಿ ಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದವು. ಬೇರೆ ಬೇರೆ ಬಗೆಯ ಕಾಯಿದೆಗಳಿಂದ ಪತ್ರಿಕೆಗಳು ಉಸಿರೆತ್ತಲು ಸಾಧ್ಯವಿಲ್ಲ. ಈ ನೂತನ ಕಾಯಿದೆಯಲ್ಲಿ ಆ ಹಳೆಯ ಸಂಪ್ರದಾಯಗಳು ನಿರ್ನಾಮಗೊಂಡುದು ಸಂತೋಷದ ವಿಚಾರ! ವಿಚಾರಣಾಧಿಕಾರವನ್ನು ಜಿಲ್ಲಾಧಿಕಾರಿಗೆ ಬಿಟ್ಟುಕೊಟ್ಟದ್ದು ಗೌರವಾರ್ಹ ಸಂಗತಿ. ಉದಾತ್ತ ಧ್ಯೇಯಯುಕ್ತವಾದ ಪತ್ರಿಕೆಗಳ ವಿಚಾರ ಸ್ವಾತಂತ್ರ್ಯಕ್ಕೆ ಇದರಿಂದ ವಿಶೇಷ ಗಂಡಾಂತರ ಬರಲಾರದು! ಅಶ್ಲೀಲ ಮನೋವೃತ್ತಿಯ ಕೀಳ್ಮಟ್ಟದ ಬರಹಗಳ ಮೂಲಕ ಪತ್ರಿಕಾರಂಗಕ್ಕೆ ಕಳಂಕತರುವ ಹಲವು ಬೇಜವಾಬ್ದಾರಿ ಪತ್ರಿಕೆಗಳು ನಮ್ಮಲ್ಲಿ ತಲೆಯೆತ್ತಿವೆಯೆಂದು ವ್ಯಥೆಯಿಂದ ಹೇಳಬೇಕಾಗಿದೆ. ಯಾವುದೇ ಗೊತ್ತು ಗುರಿಯಿಲ್ಲದ–ವಿಚಾರ ವೈವಿಧ್ಯತೆಯಿಲ್ಲದೆ ಸಾರ್ವಜನಿಕರಲ್ಲಿ ಮತಭೇದವನ್ನು ಹುಟ್ಟಿಸುವಂತಹದನ್ನೇ ತಮ್ಮ ಕರ್ತವ್ಯವೆಂದು ತಿಳಿದಹಾಗಿದೆ. ಜಾತೀಯ ಮನೋವೃತ್ತಿಯಿಂದ ಜನತೆಯಲ್ಲಿ ಕಲುಷಿತ ವಾತಾವರಣವನ್ನು ನಿರ್ಮಿಸುವ ಪತ್ರಿಕೆಗಳೂ ಇವೆ. ಸರಕಾರದ ಈ ನೂತನ ಮಸೂದೆಯಿಂದ ಆತಂಕವುಂಟಾಗಲಾರದೆಂಬುದು ಸತ್ಯ. ಈ ಮಸೂದೆ ಪಾರ್ಲಿಮೆಂಟಿನ ಮುಂದೆ ಬಂದಿದೆ. ಮುಂದೆ ಅದು ಪಾಸಾಗಿ ಸಾರ್ವಜನಿಕ ಸೇವೆಯಲ್ಲಿ ನಿರತವಾದ ಉತ್ತಮ ಪತ್ರಿಕೆಗಳಿಗೆ ನಿಜವಾದ ಸ್ವಾತಂತ್ರ್ಯವನ್ನು ಕೊಟ್ಟು–ದೇಶದ ಶಾಂತಿ ಸುವ್ಯವಸ್ಥೆಗೂ–ನೈತಿಕತೆಗೂ ಗಂಡಾಂತರ ಪ್ರಾಯವಾದ ಪತ್ರಿಕೆಗಳನ್ನು ಕಾಯಿದೆ ಮೂಲಕ ತಡೆಹಾಕುವಂತಾದರೆ ಪತ್ರಿಕೆಗಳ ಮಟ್ಟ ಸ್ಥಾನಮಾನ ಹೆಚ್ಚಾದೀತೇನೋ!

ರಾಜಾಜಿಯ ಕುತರ್ಕ

ಪ್ರಚಲಿತ ರಾಜಕೀಯ ವಿಚಾರಗಳ ಮೇಲೆ ಕುತರ್ಕವಾದವದರಲ್ಲಿ ರಾಜಾಜಿ ಬಹಳ ನಿಪುಣರು. 'ಸಿ' ವಿಭಾಗದ ರಾಜ್ಯಗಳ ಲೀನೀಕರಣದ ಚರ್ಚೆ ನಡೆದಾಗ ಶ್ರೀ ಬಿ. ಎನ್. ಮುಳಗಳ್ಳಿಮಠರು ಬಹಳ ಕಾಲದಿಂದ ಕಾಂಗ್ರೆಸು ಭಾಷಾವಾರು ಪ್ರಾಂತರಚನೆಯ ತತ್ವವನ್ನು ಒಪ್ಪಿಕೊಂಡಿದ್ದು ದ. ಭಾರತದಲ್ಲಿ ಆ ಬಗ್ಗೆ ವಿಶೇಷ ಚಳವಳಿ ನಡೆದಿದೆ. ಬೆಂಗಳೂರ ಎ. ಐ. ಸಿ. ಸಿ. ಅಧಿವೇಶನದಲ್ಲೂ, ದಿಲ್ಲಿಯ ರಾಷ್ಟ್ರೀಯ ಕಾರ್ಯಕಾರೀ ಸಮಿತಿಯಲ್ಲೂ ಅದನ್ನು ಕಾಂಗ್ರೆಸ್ ಒಪ್ಪಿಕೊಂಡಿರುತ್ತದೆ. ಗಡಿಪ್ರಶ್ನೆ–ಆರ್ಥಿಕ ಪರಿಸ್ಥಿತಿ ಇವೆಲ್ಲ ತೃಪ್ತಿಕರವೆಂದು ಸರಕಾರಕ್ಕೆ ಕಂಡುಬಂದರೆ ಭಾಷಾವಾರು ಪ್ರಾಂತರಚನೆ ಸಾಧ್ಯವಾಗಬಹುದೆಂದು ಶ್ರೀ ಜವಾಹರಲಾಲರು ಒಪ್ಪಿರುವರು. ಆದರೆ ಶ್ರೀ ರಾಜಗೋಪಾಲಾಚಾರ್ಯರು ಅದಕ್ಕೆ ವಿರುದ್ಧ ಮಾತನಾಡಿರುವರು. ಈ ಅಂಶವನ್ನು ಮುಳಗಳ್ಳಿಯವರು ಆರೋಪಿಸಿದಾಗ ರಾಜಗೋಪಾಲಾಚಾರ್ಯರು "ಭಾಷಾವಾರು ಹಕ್ಕು ಒಂದು ಸಂಗತಿ, ಭಾಷಾವಾರು ಭ್ರಾಂತಿ ಇನ್ನೊಂದು ಸಂಗತಿ"ಯೆಂದು ವಿಸಂಗತವಾಗಿ ನುಡಿದಿದ್ದಾರೆ. ತನ್ನ ಅಚಾತುರ್ಯವನ್ನು ಹಾರಿಕೆಯ ಮಾತುಗಳಿಂದ ಮರೆಮಾಚಲು ಯತ್ನಿಸಿದ್ದು ಸೋಜಿಗದ ಸಂಗತಿ. ಈ ಹಿಂದೆ ಆಂಧ್ರಪ್ರಾಂತದ ಚಳವಳಿ ನಡೆದಾಗ ರಾಜಾಜಿ ತಮಿಳು ಪ್ರಾಂತದ ಅಸ್ತಿತ್ವದ ಬಗ್ಗೆ ಆಸ್ಥೆ ವಹಿಸಿದ್ದುಂಟು. ಮಾತ್ರವಲ್ಲ ಸಾಗೆ ಆಂಧ್ರ ಪ್ರಾಂತದ ರಚನೆಯಾಗುವ ಸಂದರ್ಭದಲ್ಲಿ ತಮಿಳು ನಾಡಿನ ಬಗ್ಗೆ ರಾಜಾಜಿ ಮುಂದೆ ಬರದೆ ಇರಲು ಸಾಧ್ಯವೇ ಇಲ್ಲ. ಸದ್ಯ ನೆಹ್ರೂರವರು ಅದಕ್ಕೆ ಪ್ರತಿಕೂಲರಾಗಿರುವದರಿಂದಲೂ ಹಲವು ರೀತಿಯ ಬಿಕ್ಕಟ್ಟು ಇರುವದರಿಂದಲೂ ಕೂಡಲೇ ಪ್ರಾಂತೀಕರಣವಾಗಲು ಸಾಧ್ಯವಿಲ್ಲವೆಂಬುದನ್ನು ಅಂತೇ ಅವರು ಹಾಗೆ ನುಡಿದಿದ್ದಾರೆ. ಭಾಷಾವಾರು ಪ್ರಾಂತರಚನೆಯು ಸದ್ಯ ಅಸಾಧ್ಯವೆಂದು ನಮ್ಮ ಧುರೀಣರು ಹೇಳುತ್ತಿರುವದು ಮಾತ್ರವಲ್ಲದೆ, ಜೊತೆಗೆ "ಅದು ಕೇವಲ ಭ್ರಾಂತಿ ಅವ್ಯವಹಾರ್ಯ"ವೆಂದು ಟೀಕಿಸುವದು ಗೌರವಾರ್ಹ ಸಂಗತಿಯಲ್ಲ! ರಾಜಾಜಿ ಮಾತನಾಡುತ್ತ "ನಮಗೆ ಅಧಿಕಾರವಿದೆಯೆಂದು ನಾವೇನಾದರೂ ಸಿಕ್ಕ ಸಿಕ್ಕಂತೆ ಹೇಳಬಹುದೇ?" ಎಂದು ಪ್ರಶ್ನಿಸುತ್ತಾರೆ. ಭಾಷಾವಾರು ಪ್ರಾಂತರಚನೆಯ ವಿಚಾರದಲ್ಲಿ ನ್ಯಾಯಬದ್ಧವಾದ ಚಳವಳಿ–ಪ್ರಯತ್ನ ನಡೆದಾಗ ಅಧಿಕಾರದಲ್ಲಿ ನಿಂತು 'ಅವ್ಯವಹಾರ್ಯ ಭ್ರಾಂತಿ'ಎಂದು ಅಣಕಿಸುವುದಾಗಲೀ– ತರ್ಕಬೆಳೆಸುವದಾಗಲೀ ಅಂತಹ ಪ್ರಾಂತವಾದಿಗಳ ಸಂಶಯಕ್ಕೆ ಎಡೆಮಾಡಿಕೊಟ್ಟಂತಾಗುವುದಿಲ್ಲವೇ? ಭಾಷಾನುಗುಣ ಪ್ರಾಂತರಚನೆಯ ತತ್ವಕ್ಕೆ ಮನ್ನಣೆಯಿತ್ತ ಪ್ರದೇಶದ ಜನರನ್ನು ಧುರೀಣರು ಅನವಶ್ಯಕವಾಗಿ ಕೆಣಕಿ ಕೊಡುವದರ ಮೂಲಕವೂ–ಬದ್ಧತೆಯನ್ನು ತೋರ್ಪಡಿಸುವದರ ಮೂಲಕವೂ ರಾಜಕೀಯ ವಾತಾವರಣವನ್ನು ಕೆಡಿಸಬೇಕೆ? ಈ ಬಗೆಯ ಅನುಚಿತವಾದ ಮಾತುಗಳಿಂದ ಭಾಷಾವಾರು ಪ್ರಾಂತೀಯ ಭಾವನೆಯು ವಿಶೇಷ ತೀವ್ರತೆಯನ್ನು ಪಡೆಯಲು ಆಸ್ಪದವಾಗುವುದಿಲ್ಲವೇ?

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ ಎ. ಪಂಡಿತ್, B SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಅವಧಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.



ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೩-೯-'೫೧

ದಿಲ್ಲಿಯಲ್ಲಾಗಬೇಕಾದುದೇನು?

ಈ ವಾರದಲ್ಲಿ ದಿಲ್ಲಿಯಲ್ಲಿ ಕೂಡಲಿರುವ ಎ. ಐ. ಸಿ. ಸಿ. ಸಭೆಯು ಅತ್ಯಂತ ಮಹತ್ವದ್ದಾಗಿರುತ್ತದೆ. ನೆಹ್ರೂ ತಂಡನ್ನರೊಳಗುಂಟಾಗಿರುವ ಮತಭೇದವನ್ನು ಹೋಗಲಾಡಿಸಿ ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನು ಸಾಧಿಸುವ ಯತ್ನ ಬಹಳವಾಗಿ ನಡೆದರೂ ಎಲ್ಲವೂ ವಿಫಲಗೊಂಡುದಾಗಿ ತಿಳಿದುಬರುತ್ತದೆ.

ಈವಾರಾಂತ್ಯದಲ್ಲಿ ದಿಲ್ಲಿಯಲ್ಲಿ ಕೂಡಲಿರುವ ಎ. ಐ. ಸಿ. ಸಿ. ಯನ್ನು ಕುತೂಹಲಪೂರ್ಣವಾಗಿ ಜನ ನಿರೀಕ್ಷಿಸುತ್ತಲಿದೆ.

ತಂಡನ್ನರ ಪಂಗಡದವರ ಧೋರಣೆ ಅಪ್ರಾಗತಿಕವಿದ್ದು ಸದ್ಯದ ಕಲುಷಿತ ವಾತಾವರಣವನ್ನು ತಿಳಿಯಾಗಿಸುವದಕ್ಕೆ ಅನುಕೂಲವಾಗಿರುವದಿಲ್ಲ. ನೆಹ್ರೂರವರು ಸರ್ವಾಧಿಕಾರತ್ವವನ್ನಪೇಕ್ಷಿಸಿ ಕಾಂಗ್ರೆಸ ಘಟನೆಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾರೆಂದೂ ನೆಹ್ರೂರವರ ಧೋರಣೆಯನ್ನವಲಂಬಿಸುವದರಿಂದ ಹಲವು ಗಂಡಾಂತರಗಳನ್ನು ದೇಶ ಎದುರಿಸಬೇಕಾಗಬಹುದೆಂದೂ ಡಿ. ಪಿ. ಮಿಶ್ರರು ಆರೋಪಿಸಿದ್ದಾರೆ. ಮಿಶ್ರರ ಟೀಕೆಗೆ ತಂಡನ ಪಂಗಡದವರ ತಾತ್ವಿಕವಾದ ಒಪ್ಪಿಗೆಯೂ ಇದೆಯೆಂದೂ ತಿಳಿಯುತ್ತದೆ. ಕಾಂಗ್ರೆಸ್ಸದಲ್ಲಿ ಪಂಗಡವನ್ನು ಬಲಪಡಿಸಿ ನೆಹ್ರೂರವರನ್ನು ಪದಚ್ಯುತರನ್ನಾಗಿ ಮಾಡಬೇಕೆಂಬ ಇಚ್ಛೆಯನ್ನು ತಂಡನ್ ಪಂಗಡ ಪ್ರದರ್ಶಿಸಿದ್ದುಂಟು! ಈ ಬಗೆಯ ಅನುಚಿತ ಮಾರ್ಗವನ್ನು ಹಿಡಿದಿರುವದರಿಂದ ಕಾಂಗ್ರೆಸದಲ್ಲಿ ಐಕ್ಯಮತ್ಯ ಉಂಟಾಗುವದು ಶಕ್ಯವಿಲ್ಲ.

ನೆಹ್ರೂರವರು ಅಧ್ಯಕ್ಷ ಪದವನ್ನು ವಹಿಸಿಕೊಳ್ಳುವದಾದರೆ ನಾನು ರಾಜೀನಾಮೆಯನ್ನೀಯುತ್ತೇನೆಂದು ತಂಡನ್ನರು ಆಗಾಗ ಹೇಳುವ ಮಾತು ಕೇವಲ ಔಪಚಾರಿಕವೆಂದು ತಿಳಿಯುತ್ತದೆ. ಕಾಂಗ್ರೆಸ್ ಕಾರ್ಯಕಾರಿಣಿಯ ಪುನರ್ಘಟನೆಯಿಂದ ಸುಲಭಸಾಧ್ಯವಾದ ಮಾರ್ಗವನ್ನು ಬಿಟ್ಟು ತಂಡನ್ನರು ಬೇರೆ ಪರಿಹಾರ ಮಾರ್ಗವನ್ನು ಹೇಳುತ್ತಿರುವುದು ಶುದ್ಧ ಮನಸ್ಸಿನ ಸ್ಥಿತಿಯಲ್ಲ! ಸಾಮೂಹಿಕವಾಗಿ ಪ್ರತೀಕಾರ ಹೂಡುವ ತಂತ್ರ ಹಿಂದಿನಿಂದ ನಡೆಸುತ್ತಿರುವದೂ ಇನ್ನೊಂದು ದುಃಖದಾಯಕ ಸಂಗತಿ!

ಮೇಲಿನ ವಿದ್ಯಮಾನಗಳನ್ನು ಪರಿಶೀಲಿಸುವಾಗ ತಂಡನ್ನರೂ ಅವರ ಅನುಯಾಯಿಗಳೂ ಐಕ್ಯಸಾಧನೆಯಲ್ಲಿ ಯಥಾರ್ಥವಾದಿಗಳಲ್ಲವೆಂದು ಸ್ಪಷ್ಟವಾಗುತ್ತದೆ. ಮಹಾ ಚುನಾವಣೆಯು ಹತ್ತಿರ ಬರತ್ತಿರುವಾಗಲೇ ಈ ಬಿಕ್ಕಟ್ಟು ಬಂದೊದಗಿದೆ. ಕಾಂಗ್ರೆಸು ಇಂದು ಹಿಂದಿನ ಉಜ್ವಲ ಪರಂಪರೆಯಿಂದ ಮುಂಬರುವ ಚುನಾವಣೆಯಲ್ಲಿ ಗೆಲ್ಲುವದಕ್ಕಿಂತ ವ್ಯಕ್ತಿಪ್ರಧಾನ ವೈಶಿಷ್ಟ್ಯಗಳಿಂದ ಯಶಗಳಿಸುವ ಸಂಭವವೇ ಹೆಚ್ಚಾಗಿದೆ. ಸ್ವಾತಂತ್ರ್ಯ ಬಂದ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸು ಅಸದೃಶವಾದ ಸಾಹಸದಿಂದ ಅಧಿಕಾರ ನಡೆಸಿತೇನೋ ಸಹಜ! ಆದರೆ ಜನತೆಯ ವಿಶ್ವಾಸವನ್ನು ಗಳಿಸುವ ಬದಲಾಗಿ ಹಿಂದಿನ ಪೂಜ್ಯ ಭಾವನೆಯನ್ನು ಕಳೆದುಕೊಂಡಿದೆ. ಲೋಕಪದೋಷ ಕಾಂಗ್ರೆಸ್ಸಿನಲ್ಲಿದೆಯೆಂಬುದನ್ನು ಒಪ್ಪೋಣ; ಜನತೆಯ ಹೊಣೆ ಅದಕ್ಕಿಂತಲೂ ಮಹತ್ವದ್ದೆಂದು ನಾವಿಲ್ಲಿ ಎಚ್ಚರಿಸಬೇಕಾಗಿದೆ! ಅಂತಲೇ ಕಾಂಗ್ರೆಸ್ಸಿನ ಆದರ್ಶವನ್ನು ಉಪದೇಶ ಮಾಡುವದೊಂದೇ ಸದ್ಯದ ಅಸಹಕಾರ ಮನೋವೃತ್ತಿಗೆ ಸರಿಯಾದ ಪ್ರತಿಕ್ರಿಯೆಯಾಗಲಾರದು. ಪ್ರಭಾವೀ ವ್ಯಕ್ತಿಗಳ ಮಾರ್ಗದರ್ಶನವೊಂದೇ ಇದಕ್ಕೆ ತಕ್ಕ ಪರಿಹಾರ ಮಾರ್ಗ.

ನೆಹ್ರೂರವರ ಮುಂದಾಳ್ತನವನ್ನು ದೇಶದ ಜನ ಆದರಿಸುತ್ತಾರೆ. ಹೆಚ್ಚು ಕಡಿಮೆ ಎಲ್ಲ ಪಕ್ಷಪಂಗಡದವರೂ ನೆಹ್ರೂರವರೇ ಮುಂದಾಳುಗಳಾಗಲೆಂದು ಗೌರವ ಪ್ರದರ್ಶಿಸಿದ್ದಾರೆ. ಜಾತ್ಯತೀತ ಪ್ರಜಾಸತ್ತೆಯ ಮುಖ್ಯ ನಾಯಕತ್ವದ ಹೊಣೆ ಅವರಮೇಲೆ ಬಿದ್ದಿದೆ. ಕಾಂಗ್ರೆಸು ಹಾಗೂ ಸರಕಾರದ ಧೋರಣೆ ಏಕಮುಖವಾಗಬೇಕಾದರೆ ನೆಹ್ರೂರವರಿಗೆ ಕಾಂಗ್ರೆಸ ಅಧ್ಯಕ್ಷಪದ ಒಪ್ಪಿಸಿಕೊಡುವದು ಅತ್ಯಂತ ಯೋಗ್ಯವಾಗಿದೆ. ತಂಡನ್ನರ ನಿಲುಮೆಯನ್ನು ಶ್ಲಾಘಿಸುವವರೂ ಉಂಟು! ಆ ಶ್ಲಾಘನೆ ಒಂದು ತತ್ವಾರಾಧಕರಿಂದ ಬಂದುದಾಗಿರುತ್ತದೆ. ಸಂಕುಚಿತತೆ ಹಾಗೂ ಬೇಧೋಪಾಯಗಳನ್ನು ಧಿಕ್ಕರಿಸುವ ಛಲದಿಂದ ಅರ್ಧ ಶತಮಾನದಿಂದ ಹೋರಾಟ ನಡೆಸಿ ಪಡೆದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸುವಂತಾದೀತು.

ದೇಶವಿದೇಶಗಳಲ್ಲಿ ನೆಹ್ರೂರವರ ನಿಲುಮೆಗಳಿಗೆ ವಿಶೇಷ ಗೌರವ ಮನ್ನಣೆ ದೊರೆಯುತ್ತಲಿರುವಾಗ–ಜನದ ಒಲವು ಅವರ ಶ್ರೇಷ್ಠವ್ಯಕ್ತಿತ್ವದ ಕಡೆಗೆ ಇರುವಾಗ, ಅದಕ್ಕೆ ವಿರುದ್ಧವಾದ ಧೋರಣೆಯನ್ನು ವಹಿಸುವದು ಯೋಗ್ಯವಾಗಲಾರದು. ಮಾತ್ರವಲ್ಲ ಇದರಿಂದ ಕಾಂಗ್ರೆಸು ಅವನತಿಗಿಳಿಯಬಹುದಾಗಿದೆ.

ನೆಹ್ರೂರವರಿಂದಲೇ ಕಾಂಗ್ರೆಸು ಬದುಕಬೇಕಾಗಿದೆ. ನೆಹ್ರೂರವರನ್ನು ಹೊರತು ಕಾಂಗ್ರೆಸ್ ಬಹಳ ಕಾಲ ಬಾಳಲಾರದು. ಸದ್ಯದ ಗಂಡಾಂತರವನ್ನು ಪರಿಹರಿಸುವದಕ್ಕೆ ನೆಹ್ರೂರವರ ಕೈಯಲ್ಲಿ ಕಾಂಗ್ರೆಸ್ಸಿನ ಅಧಿಕಾರ ಬಿಟ್ಟುಕೊಡುವುದೊಂದೇ ಉತ್ತಮ ಪರಿಹಾರ ಮಾರ್ಗ!

ಅಂತಲೇ ದಿಲ್ಲಿಯಲ್ಲಿ ಕೂಡಲಿರುವ ಎ. ಐ.ಸಿ.ಸಿ. ಅತ್ಯಂತ ಮಹತ್ವದ ಹೊಣೆಗಾರಿಕೆಯಿಂದಲೂ ಮುತ್ಸದ್ದಿತನದಿಂದಲೂ ವರ್ತಿಸಿ ಸರಿಯಾದ ಕಾರ್ಯ ಕೈಗೊಳ್ಳಬೇಕಾಗಿದೆ. ಐಕ್ಯಸಾಧನೆಯನ್ನು ಹೇತುವಾಗಿಟ್ಟುಕೊಂಡು ಈ ವರೆಗೆ ಉಭಯ ಪಕ್ಷಗಳ ಧುರೀಣರೂ ಹೇಳಿಕೆ-ಸ್ಪಷ್ಟೀಕರಣವೆಂದು ಕಾಲಹರಣ ಮಾಡಿದ್ದು ಮಾತ್ರವಲ್ಲದೆ ಜನತೆಯಲ್ಲಿ ಒಂದು ಬಗೆಯ ತಪ್ಪುತಿಳುವಳಿಕೆ ಗೊಂದಲಮಯ ವಾತಾವರಣ ಹುಟ್ಟುವದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದುದರಿಂದ ಇನ್ನು ದಿಲ್ಲಿಯಲ್ಲಾಗಬೇಕಾದುದು ಐಕ್ಯಸಾಧನೆಯ ಯತ್ನವೂ ಅಲ್ಲ; ಸಂಧಾನವೂ ಅಲ್ಲ! ನೆಹ್ರೂರವರಿಗೆ ಕಾಂಗ್ರೆಸ್ಸಿನಿಂದ ಇರುವ ತೊಡಕನ್ನು ಬಗೆಹರಿಸಿ ಅವರ ಅಧಿಕಾರಕ್ಕೆ ಮುಕ್ತದ್ವಾರವನ್ನೊದಗಿಸಿಕೊಡುವದೊಂದೇ! ದಿಲ್ಲಿಯ ಎ.ಐ.ಸಿ.ಸಿ. ಅಷ್ಟನ್ನು ಮಾಡಲಿ!

ಲೋಕಾಂತ

ಅ. ಭಾ. ರೈಲ್ವೆ ಕೆಲಸಗಾರರ ಮಾತುಕತೆ

ಅ. ಭಾ. ರೈಲ್ವೆ ಕೆಲಸಗಾರರ ಮಹಾಮಂಡಳದ ಅಧ್ಯಕ್ಷ ಶ್ರೀ ಜಯಪ್ರಕಾಶ ನಾರಾಯಣರೂ ಎಸ್. ಗುರುಪಾದಸ್ವಾಮಿಯವರೂ ರೈಲ್ವೆ ಖಾತೆಯ ಮಂತ್ರಿ ಗೋಪಾಲ ಸ್ವಾಮಿ ಅಯ್ಯಂಗಾರ ಹಾಗೂ ಕೆ. ಸಂತಾನಂರವರೇ ಮೊದಲಾದವರು ರೈಲ್ವೆ ಕೆಲಸಗಾರ ಬೇಡಿಕೆಗಳ ಕುರಿತು ಚರ್ಚೆ ನಡೆಸಿದರು. ಜರಗಿದ ಮಾತುಕತೆಗಳು ಪ್ರಗತಿದಾಯಕವಿದ್ದು ವಿಶೇಷ ತೀರ್ಮಾನಕ್ಕೆ ಇನ್ನೊಮ್ಮೆ ಮಾತುಕತೆ ನಡೆಯಲಿದೆಯೆಂದು ತಿಳಿದುಬರುತ್ತದೆ.

ದಿವಾಕರ ಕರಮರಕರ ಕರ್ನಾಟಕ ಸಂಚಾರ

ಸುದ್ದಿ ಆಕಾಶವಾಣಿ ಮಂತ್ರಿ ರಂಗನಾಥ ದಿವಾಕರ ಮತ್ತು ಮಂತ್ರಿ ದ. ಪ. ಕರಮರಕರ ಪಾರ್ಲಿಮೆಂಟು ಸ್ಥಳಗಳಿಗೆ ಸ್ಪರ್ಧಿಸುವರಾಗಿ ತಿಳಿಯುತ್ತದೆ. ಕರ್ನಾಟಕ ಚುನಾವಣೆಯ ಪ್ರಚಾರಕಾರ್ಯದಲ್ಲೂ ತಾವು ಸಹಕರಿಸುವದಾಗಿ ಕಾಂಗ್ರೆಸ ಸಮಿತಿಗೆ ತಿಳಿಸಿರುವರಂತೆ.

ದಾಮೋದರ ಕಂದರದ ಬಹುಮುಖ ಲಾಭಗಳು.

1955–56ರಲ್ಲಿ ಪರಿಪೂರ್ಣ ಹೊಂದುವ ದಾಮೋದರ ಕಂದರದಿಂದ ಎರಡು ಲಕ್ಷ ಟನ್ ಅಕ್ಕಿ ಉತ್ಪಾದನೆಯೂ 20 ಕೋಟಿ ರೂ.ಗಳಿಗಿಂತಲೂ ಅಧಿಕವಾಗಿ ಹಿಂಗಾರಿ ಬೆಳೆಯೂ 2½ ಕೋಟಿ ಲಾಭವನ್ನು ತರುವ 95 ಕೋಟಿ ಕಿಲ್ಲೋವಾಟ್ ವಿದ್ಯುಚ್ಛಕ್ತಿಯೂ ಇದರಿಂದ ಲಭಿಸುವದೆಂದು ತಿಳಿಯುತ್ತದೆ. ಈ ಕಂದರ ಪರಿಪೂರ್ಣಗೊಳ್ಳಬೇಕಾದರೆ 76 ಕೋಟಿ ರೂ. ವೆಚ್ಚ ಬರುವದು.

ಚುನಾವಣಾ ಪ್ರಚಾರಕ್ಕೆ ಸರಕಾರೀ ವೆಚ್ಚ

ಮುಂಬರುವ ಚುನಾವಣೆಯಲ್ಲಿ ಪ್ರಚಾರ ಪ್ರವಾಸ ಕೈಗೊಳ್ಳುವ ಬಗ್ಗೆ ಮಂತ್ರಿಗಳು ಸರಕಾರದ ಹಣ ಉಪಯೋಗಿಸಿಕೊಳ್ಳಬಾರದೆಂದು ಮದ್ರಾಸದ ಎಂ. ಎಲ್. ಎ.ಗಳು ಆಕ್ಷೇಪವೆತ್ತಿದ್ದಕ್ಕೆ ಮುಂದೆ ಚುನಾವಣಾ ಕಮಿಶನರೇ ಅದನ್ನು ತೀರ್ಮಾನಿಸುವರೆಂದು ಮಂತ್ರಿ ಗೋಪಾಲ ರೆಡ್ಡಿಯವರು ಉತ್ತರಿಸಿದರು.

ಕಾಂಗ್ರೆಸ್ ಹುರಿಯಾಳ್ತನದ ಅರ್ಜಿಯ ಕೊನೆಯ ದಿನ 15ಕ್ಕೆ ಮುಂದರಿಯಿತು.

ರಾಜ್ಯ ಶಾಸನ ಸಭೆ ಹಾಗೂ ಪಾರ್ಲಿಮೆಂಟಿಗೆ ಕಾಂಗ್ರೆಸ್ಸಿನಿಂದ ಹುರಿಯಾಳುಗಳಾಗಿ ನಿಲ್ಲಲು ಅರ್ಜಿ ಕೊಡುವ ಕೊನೆಯ ತಾರೀಕು ಸಪ್ಟೆಂಬರ 5ರಿಂದ 15ರ ವರೆಗೆ ಬೆಳೆಸಲಾಗಿದೆಯೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯ ಕಾರ್ಯದರ್ಶಿಯವರು ಪ್ರಕಟನೆ ಹೊರಡಿಸಿರುತ್ತಾರೆ.

ಯೋಜನೆ ಕೈಗೂಡಿದರೆ-ಆಹಾರ

ಮದ್ರಾಸದ ಹಲವು ಪ್ರದೇಶಗಳಲ್ಲಿ ಅಕ್ಕಿಯ ಕೊರತೆಯಿಂದ ಜನತೆಯು ಕಂಗೆಡುವ ಪರಿಸ್ಥಿತಿ ಬಂದಿದೆಯೆಂದು ಟೀಕಿಸಿದ್ದಕ್ಕೆ ಆಹಾರ ಮಂತ್ರಿ ರೋಜೆ ವಿಕ್ಟೋರಿಯಾರವರು ಅದಕ್ಕೆ ತಮ್ಮ ಆಡಳಿತ ದೋಷ ಕಾರಣವಲ್ಲೆಂದೂ ಸದ್ಯದ ಕೊರತೆಯು ಪರಿಣಾಮದಿಂದುಂಟಾಯಿತೆಂದೂ ನಮ್ಮ ಯೋಜನೆಯಂತೆ ಆಹಾರ ದೊರಕಿದರೆ ಈ ಕೊರತೆಯನ್ನು ಹೋಗಲಾಡಿಸಬಹುದೆಂದೂ ಹೇಳಿದರು.

ಭಾರತದಲ್ಲಿ ಅಂತರರಾಷ್ಟ್ರೀಯ ಚಲಚಿತ್ರ ಮಹೋತ್ಸವ

ಡಿಸೆಂಬರ ತಿಂಗಳಲ್ಲಿ ಅಂತರಾಷ್ಟ್ರೀಯ ಚಲಚಿತ್ರ ಮಹೋತ್ಸವವು ಭಾರತದಲ್ಲಿ ಜರಗಿಸುವದೆಂದು ಗೊತ್ತಾಗಿದೆ. ಮುಂಬಯಿ, ಮದ್ರಾಸ, ದಿಲ್ಲಿ ಮತ್ತು ಕಲಕತ್ತೆಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ನಡೆಯಲಿದ್ದು ಸುಮಾರು 25ಕ್ಕಿಂತ ಹೆಚ್ಚು ರಾಷ್ಟ್ರಗಳು ಇದರಲ್ಲಿ ಭಾಗವಹಿಸಲಿರುವವೆಂದು ತಿಳಿಯುತ್ತದೆ. ಜಗತ್ತಿನ ಶ್ರೇಷ್ಠ ನಟನಟಿಯರೂ ನಿರ್ದೇಶಕರೂ, ಉತ್ಪಾದಕರೂ ಇದರಲ್ಲಿ ಭಾಗವಹಿಸಲಿರುವರು. ಏಶಿಯದಲ್ಲೇ ಇದು ಮಾದರಿಯ ಮಹೋತ್ಸವವಾಗಿದ್ದು ಬೇರೆ ಬೇರೆ ರಾಷ್ಟ್ರಗಳ ಸಂಸ್ಕೃತಿ ಮತ್ತು ಅಭಿವೃದ್ಧಿಗಳನ್ನು ನಿರ್ದೇಶಿಸುವ ಚಿತ್ರಪ್ರದರ್ಶನಗಳು ಪ್ರದರ್ಶಿಸಲಿವೆ. ಭಾರತ ಸರಕಾರದ ಚಲಚಿತ್ರ ವಿಭಾಗದವರು ಈ ಸಮಾರಂಭವನ್ನೇರ್ಪಡಿಸುವರು.

ಹಿಂದೂ ಧರ್ಮ ಶಾಸ್ತ್ರ ಕ್ರೋಢೀಕರಣ ಮಸೂದೆ.

ಹಿಂದೂ ಧರ್ಮಶಾಸ್ತ್ರ ಕ್ರೋಢೀಕರಣ ಮಸೂದೆಯನ್ನು ಸಪ್ಟೆಂಬರ 10ಕ್ಕೆ ಚರ್ಚೆಗೆ ತೆಗೆದುಕೊಂಡು, ಕೂಲಂಕಷ ವಿಚಾರಮಾಡಿ ಸಂಪೂರ್ಣ ಪಾಸು ಮಾಡಿಕೊಳ್ಳಲಾಗುವದೆಂದು ಶ್ರೀ ಜವಾಹರಲಾಲರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಬಂಗಾಲ ಧುರೀಣರ ಭಿನ್ನಹ

ಶ್ರೀ ನೆಹ್ರೂರವರ ಧುರೀಣತ್ವ ಹಾಗೂ ಮಾರ್ಗದರ್ಶನವಿಲ್ಲದಿದ್ದರೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರಗಳಲ್ಲಿ ಕಾಂಗ್ರೆಸು ಹಿಂದುಳಿಯುವದು ಮಾತ್ರವಲ್ಲದೆ ಭಾವೀ ಚುನಾವಣೆಯ ಮೇಲೆಯೂ ಅನಿಷ್ಟ ಪರಿಣಾಮವಾಗುವುದರಿಂದಲೂ ತವಗೆ ಸರಿಕಂಡ ರೀತಿಯಲ್ಲಿ ಕಾಂಗ್ರೆಸ್ಸನ್ನು ಬಲಪಡಿಸುವ ಅಧಿಕಾರವನ್ನು ನೆಹ್ರೂರವರಿಗೆ ಬಿಟ್ಟುಕೊಡಬೇಕೆಂದು ಬಂಗಾಲದ 25 ಪ್ರತಿಷ್ಠ ಕಾಂಗ್ರೆಸ್ಸಿಗರು ಎ. ಐ. ಸಿ. ಸಿಗೆ ಭಿನ್ನವಿಸಿಕೊಂಡಿದ್ದಾರೆ.

ಮೊದಲು ಪ್ರಕಟವಾದಂತೆ ನವಯುಗದ 31ನೇ ವರ್ಷ ಕೊನೆಗೊಂಡುದಲ್ಲ; ಈ ತಿಂಗಳಿಂದ 31ನೇ ವರ್ಷಾರಂಭವಾದುದು.



Approved from by the Govt. of Mysore Certificated by the Agent of the Govt of Cylone, & Indian

ಕೆನರಾ ಕೋರ್ಪರೇಶನ್ ಬ್ಯಾಂಕಿನ ಚೆಯರ್ಮೆನರೂ ಉಡುಪಿಯ ಜನಪ್ರಿಯಡಾಕ್ಟರರೂ ನವಯುಗದ ವಿಶೇಷಾಭಿಮಾನಿಗಳೂ ಆದ **ಶ್ರೀ ಡಾ| ಸುಂದರರಾವ ಪೈಗಳವರು**

೪ನೇ ಪುಟದಿಂದ ಮುಂದರಿಸಿದ್ದು

ಭಾರತದ ಪತ್ರಿಕೆಗಳ ಮಾಲಿಕೆಯಲ್ಲಿ ಕನ್ನಡ ಪತ್ರಿಕೆಗಳ ಸ್ಥಾನಮಾನ–ಅಷ್ಟೊಂದು ಪ್ರಭಾವಿಯಾಗಿರುವುದಿಲ್ಲ! ಹೊಸತಾಗಿ ಜನ್ಮ ತಾಳಿರುವ ಪತ್ರಿಕೆಗಳೂ ಜಾಗೃತ ಜನದ ದೃಷ್ಟಿಯಲ್ಲಿ ಆಶಾದಾಯಿಯಾಗಿಲ್ಲ. ಭಾರತ ರಾಜಕೀಯ ಮಾತ್ರವಲ್ಲದೆ ಕನ್ನಡಿಗರ ಜೀವಾಳ ಪ್ರಶ್ನೆಯಾದ ಕನ್ನಡ ಏಕೀಕರಣದ ಚಳುವಳಿ ಉದ್ಭವಿಸಿರುವ ಈ ಕಾಲದಲ್ಲಿ ಕನ್ನಡ ಪತ್ರಿಕೆಗಳು ಸುಸಂಘಟಿತವಾಗಬೇಕು! ಜನರಲ್ಲಿ ಪ್ರಾಂತಾಭಿಮಾನ–ರಾಷ್ಟ್ರೀಯ ಮನೋವೃತ್ತಿಯನ್ನು ಬೆಳೆಸಬೇಕಾದರೆ ಪತ್ರಿಕಾಕರ್ತರು ಹೆಚ್ಚಿನ ಬುದ್ಧಿಮತ್ತೆಯನ್ನು ಉಪಯೋಗಿಸಬೇಕೆಂಬುದನ್ನು ಮರೆಯಲಾಗದು!

ಪತ್ರಿಕೆಯನ್ನು ಹೊರಡಿಸಿಯೇ ಬಿಡಬೇಕೆಂಬ ಒಂದೇ ಛಲದಿಂದ ಪತ್ರಿಕೆಗಳು ಹುಟ್ಟುತ್ತಿವೆ, ಅಂತೆಯೇ ಸಾಯುತ್ತಿವೆ. ಈ ಛಲದೊಂದಿಗೆ ಜನತೆಗೆ ಉತ್ತಮ ವಿಚಾರಗಳನ್ನೊದಗಿಸಿಕೊಡಬೇಕೆಂಬ ಶ್ರೇಷ್ಠ ಆರಾಧನೆಯೂ ಇರಲಿ! ಅಂತರಾಷ್ಟ್ರೀಯ- ದೇಶೀಯ ಸಾಮಾಜಿಕ ವಿಚಾರಗಳ ಪರಿಪೂರ್ಣ ಅನುಭವವುಳ್ಳವ್ಯಕ್ತಿಗಳ ಕೈಯಲ್ಲಿಪತ್ರಿಕೆಯು ಸಿಗುವದರಿಂದ ದೇಶಕ್ಕೆ ಎಷ್ಟೋ ಹಿತವಿದೆ. ಈ ವಿಶಿಷ್ಟ ಅನುಭವ–ಆಳವಾದ ಅಭ್ಯಾಸ ಬಲವಿಲ್ಲದೆ ಹೋದರೆ ಪತ್ರಿಕೆಗಳು ಜನತೆಯನ್ನು ಆಕರ್ಷಿಸಿಕೊಳ್ಳಲಾರವು! 'ಹುಟ್ಟು ಸಾವು' ಸಮನಾಗಿ ನಡೆದಿರುವದಕ್ಕೆ ಇದುವೆ ಕಾರಣವೆಂಬುದನ್ನು ನಾವು ಮರೆಯದಿರೋಣ!

ಈ ಎಲ್ಲಾ ಆದರ್ಶಗಳನ್ನು ಹೇಳುವಾಗ ನಮ್ಮ ಹೊಣೆಗಾರಿಕೆಯನ್ನು ನಾವರಿಯದಿಲ್ಲ. ನವಯುಗವು ರಾಜಕೀಯ ದೃಷ್ಟಿಯನ್ನೇ ತನ್ನ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಬಂದಿದೆ. ನಿಷ್ಪಕ್ಷವಾದ ಟೀಕೆ–ಟಿಪ್ಪಣಿಗಳಿಂದಲೂ, ವಿಚಾರ ಪ್ರತಿಪಾದನೆಯಿಂದಲೂ ಹಲವು ತರದ ಕಷ್ಟನಿಷ್ಠುರಗಳಿಗೆ ಗುರಿಯಾಗಬೇಕಾಯಿತು! ರಾಜಕೀಯ ಹಾಗೂ ವಿಚಾರಾತ್ಮಕ ಬರಹಗಳೊಂದಿಗೆ ಮನರಂಜನೆಯ ಸಾಹಿತ್ಯವನ್ನು ಕೊಡಬೇಕೆಂದು ಹಲವು ಮಿತ್ರರು ಆಗಿಂದಾಗ್ಗೆ ಸೂಚಿಸುತ್ತ ಬಂದಿದ್ದಾರೆ. ಹೊಸ ವರ್ಷಾರಂಭದಿಂದ ಹಲವು ಬಗೆಯ ನಾವೀನ್ಯತೆಯ ನವ್ಯ–ಹೊಸ ಸುಧಾರಣೆಯನ್ನು ಕೈಗೊಳ್ಳುವ ಭರವಸೆಯನ್ನು ನಾವು ಈ ಸಂದರ್ಭದಲ್ಲಿ ಕೊಡುವವರಿದ್ದೇವೆ.

“ ...ಲೋಕದ ಪ್ರಗತಿಯ ರಚನೆಯಲ್ಲಿ ಪತ್ರಿಕೆಯು ಅಮೂಲ್ಯವಿದೆ ಭಾರತಕ್ಕೆ ಈಗ ನವಯುಗವು ಆಕಾಂಕ್ಷಿಸುವಂತಹ ತೀವ್ರಗಾಮೀ ಪತ್ರಿಕೆಯ ಆವಶ್ಯಕತೆಯು ಬಹಳವಾಗಿದೆ .”

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ

ಬದುಕಿನಲ್ಲಿ ಆದರ್ಶ ಮುಖ್ಯವಾದರೂ ಅದನ್ನು ಕಟ್ಟಿಕೊಂಡು ಬದುಕುವುದು ಬಹಳ ಕಷ್ಟಸಾಧ್ಯವೇ ಸರಿ ಈ ಮಾತು ನವಯುಗಕ್ಕೂ ಅನ್ವಯಿಸುತ್ತದೆ. ಆದರ್ಶ ಸಾಧನೆಗಾಗಿ ಮೂವತ್ತು ವರ್ಷ ಉಗ್ರ ತಪಸ್ಸನ್ನಾಚರಿಸಿದೆವು. ಬದುಕುವವನಿಗೆ ಆಶೆಯೇ ಬೆಳಕು ಅಂತೆಯೆ ನಮ್ಮ ತಪಸ್ಸಿನ ಫಲವಾಗಿ ಮುಂದೆ ನವಯುಗಕ್ಕೆ ಉಜ್ವಲವಾದ ಭವಿಷ್ಯವಿದೆಯೆಂದು ನಂಬಿದ್ದೇವೆ. ನಮ್ಮ ಸದಿಚ್ಛೆಯಲ್ಲಿ ಜನತೆಯೂ ದನಿಗೂಡಿಸುವಂತಾದರೆ ಅದುವೆ ನಮ್ಮ ಭಾಗ್ಯವೆನ್ನುತ್ತೇವೆ.

ಉಡುಪಿ

ಸಿಂಡಿಕೇಟ್ ಬೇಂಕಿನ ವಿದ್ಯಾರ್ಥಿವೇತನ—ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಎಫ್. ಎ. ತರಗತಿಯ ಪ್ರಥಮ ಕ್ಲಾಸಿನಲ್ಲಿ ಕಲಿಯುವ ವಿದ್ಯಾರ್ಥಿ ಶ್ರೀ ಕೆ. ರಂಗ ವಿಠಲ ಭಟ್ಟರಿಗೆ ಶ್ರೀ ಕೃಷ್ಣರಾವ್ ಹಳದೀಪುರ್–ಇವರ ಸ್ಮಾರಕಾರ್ಥವಾಗಿ ಸಿಂಡಿಕೇಟ್ ಬೇಂಕಿನವರು ಕೊಟ್ಟ ರೂಪಾಯಿ 150/–ರ ವಿದ್ಯಾರ್ಥಿ ವೇತನ ಕೊಡುವ ಸಮಾರಂಭವು ಕಳೆದ ತಾ. 31ರಂದು ಜರಗಿತು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸ್ವಾಗತಭಾಷಣವಿತ್ತ ನಂತರ ಡಾ| ಟಿ ಮಾಧವ ಪೈಗಳು ಕೀರ್ತಿಶೇಷ ಹಳದೀಪುರ್ ಅವರ ಗುಣಗಾನ ಮಾಡಿದರು. ಸಭಾಧ್ಯಕ್ಷತೆ ವಹಿಸಿದ ರೆ| ಫಾ| ಅಲೆಕ್ಸಾಂಡರ್ ಪಿಂಟೋ ಅವರು ವಿದ್ಯಾರ್ಥಿವೇತನ ವಿವರಣೆ ಮಾಡಿದರು ನಂತರ 'ಜೀವನದ ಸಾರ್ಥಕತೆ' ಎಂಬೀ ವಿಷಯದಲ್ಲಿ ವಿಚಾರಪರ ಭಾಷಣವಿತ್ತರು. ಆರ್ಟ್ಸ್ ಎಸೋಸಿಯೇಶನಿನ ಉಪಾಧ್ಯಕ್ಷ ಶ್ರೀ ಕೆ. ಬಿ. ರಾಮಕೃಷ್ಣರಾಯರೂ ಕಾರ್ಯದರ್ಶಿ ಶ್ರೀ ಬಿ. ಭಾಸ್ಕರ ಸೆಟ್ಟರೂ ಪ್ರತ್ಯ ಪ್ರತ್ಯೇಕ ಧನ್ಯವಾದಗಳನ್ನರ್ಪಿಸಿದರು.

ಭಾಷಣ—ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ತಾ. 3ರಲ್ಲು ಶ್ರೀ ಕೆ. ಶಿವರಾಮ ಕಾರಂತರು ಪ್ರಕೃತಿ ದರ್ಶನದ ಕುರಿತು ಭಾಷಣವಿತ್ತರು. ಹೆಡ್ಮಾಸ್ತರ್ ಶ್ರೀ ಕೆ. ಎಸ್. ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಗುರುರಾಜ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು ತಾ. 1ರಲ್ಲು ತಾಲೂಕು ಕಚೇರಿಯಲ್ಲಿ ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ನೂರು ಎಕ್ರೆಗಳಿಗಿಂತಲೂ ಜಾಸ್ತಿ ಒಮ್ಮುಖದ ಸ್ಥಳಗಳನ್ನು ವಿಭಾಗಿಸಿ ಮಾಜಿ ಸೈನಿಕರಿಗೆ ಕೊಡುವಂತೆ ರಿಯಾಯತಿ ದೊರೆಯಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ಮಾಜಿ ಸೈನಿಕರಿಗೆ ಭೂದಾನವನ್ನು ಬೇಗನೆ ಮಾಡಲು ಓವರ್ ಸ್ಪೆಶಲ್ ರೆವಿನ್ಯೂ ಇನ್ಸ್ಪೆಕ್ಟರರನ್ನು ನೇಮಿಸಬೇಕಾಗಿ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು. ಶ್ರೀ ಡಬ್ಲ್ಯು. ಎ. ಸುಬೇದಾರ ಸೂಚನೆಯಂತೆ ಮೂವತ್ತೈದು ವರುಷದೊಳಗಿನ ಮಾಜಿ ಸಿಪಾಯಿಗಳು ಪುನಹ ಸೇನೆಗೆ ಸೇರಲು ಕಮಿಟಿ ಸದಸ್ಯರು ಪ್ರಚಾರಕಾರ್ಯ ಕೈಕೊಳ್ಳಬೇಕೆಂದಾಯಿತು. ಕಾರ್ಯದರ್ಶಿ ಶ್ರೀ ಎಲ್. ಶೇಷಗಿರಿ ಶೇಟರು ಧನ್ಯವಾದಗಳನ್ನರ್ಪಿಸಿದರು

ತೆರಿಗೆದಾರರ ಸಭೆ—ಸೆಂಟ್ರಲ್ ವಾರ್ಡಿನ ಟೌನ್ಪ್ಲಾನಿಂಗ್ ಯೋಜನೆಗೊಳಗಾದ ತೆರಿಗೆದಾರರ ಸಭೆಯು ತಾ. 2ರಲ್ಲು ಡಾ| ಎನ್. ಕೆ ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕ್ಷೇತ್ರದ ಆಸ್ತಿಗಳ ಮೌಲ್ಯವನ್ನು ಬಾಲ್ತಿ ವರುಷದಲ್ಲಿ ಕಮಿಶನರು ನಿಶ್ಚಯಿಸಿದುದು ಜಾಸ್ತಿಯಾಗಿರುವುದೆಂದೂ ಇದರಿಂದ 'ಬೆಟರ್ಮೆಂಟ್ ಟೇಕ್ಸ್' ದರವು ಕೂಡಾ ಜಾಸ್ತಿಯಾಗುವುದೆಂದೂ ಸಭೆಯು ಅಭಿಪ್ರಾಯಪಟ್ಟಿತು. ಇಲ್ಲಿನ ಕಳೆದ ವರುಷ ಮುನಿಸಿಪಲ್ ಕೌನ್ಸಿಲಿನವರು ನಿರ್ಧರಿಸಿದ ದರಕ್ಕಿಂತ ಈ ಬಾರಿ ಜಾಸ್ತಿಯಾಗಿರುವದರಿಂದಾಗಿ ಕಮಿಶನರರೂ ಅವಗಾಹನೆಗೆ ತರಬೇಕೆಂದಾಯಿತು.

ಶ್ರೀ ಕೃಷ್ಣ ಜಯಂತಿ ಉಪನ್ಯಾಸಗಳು—ಕಳೆದವಾರ ಶ್ರೀ ಕೃಷ್ಣ ಜಯಂತಿಯಂದು ಉಡುಪಿಯ ಸನಾತನ ಧರ್ಮ ಪ್ರಕಾಶಿನೀ ಸಭೆಯು ನೇತೃತ್ವದಲ್ಲಿ ಶ್ರೀ ಅಧಮಾರು ಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕಾಣಿಯೂರು ಮಠದ ಪಟ್ಟ ಪೀಠಾಂಕಿತ ಶ್ರೀ ಪಾದಂಗಳವರು, ಶ್ರೀಗಳನವಿ. ಕಪ್ಪಣ್ಣಾಚಾರ್ಯ, ಬಿ. ಶ್ರೀನಿವಾಸ ಭಟ್, ಹಂಡೆ ಶ್ರೀಪಾದ ದಾಸರು ಶ್ರೀ ಕೃಷ್ಣನ ಉದಾತ್ತ ಧ್ಯೇಯಗಳನ್ನೆತ್ತಿ ಉಪನ್ಯಾಸವಿತ್ತರು.

ಮಳೆಯಿಲ್ಲ - ಈಚೆಗೆ ಹಿಂದಿನ ವಾರಗಳಿಂದ ಮಳೆಯಿಲ್ಲ ಬೆಟ್ಟುಗದ್ದೆಗಳಲ್ಲಿ ನೀರಿನ ಪಸೆ ಕಡಿಮೆಯಾಯಿತು. ಮಳೆಯ ಅಭಾವದಿಂದಾಗಿ ಸುಗ್ಗಿ ಬೆಳೆಯ ನೇಜಿಗೆ ಜೇಡಿ ಹಾಕಲು ತುಂಬಾ ತೊಂದರೆಯಾಗಿದೆ ಬೇಸಾಯಗಾರರ ಪರಿಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ.

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಸಾಮಾನ್ಯ ಜನರಿಗೂ ಜೀವವಿಮೆ ಮಾಡಲು ಅನುಕೂಲವಾದ ದಕ್ಷಿಣ ಕನ್ನಡದ ಏಕಮಾತ್ರ ಪ್ರೊವಿಡೆಂಟ್ ವಿಮಾಸಂಸ್ಥೆ—

ದಿ ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ.

ವಿಮಾಆರ್ಜಿಗಳಿಗೂ ಏಜನ್ಸಿ ನಿಯಮಗಳಿಗೂ ಬರೆಯಿರಿ.

The New Karnataka Provident Insurance Co. Ltd. Udipi

For Protection and Provision

Consult

The New Guardian of India Life Insurance Co., Ltd.

Head office: **MADRAS**

(Estd 1934)

A Policy in this Progressive Life Office is a good investment, its Agency is a valuable business connection.

Applications for representation are invited from influential persons.

Please apply to

The Branch Manager,
Diamond Building, Hampankatta,
MANGALORE, S. K.

ನಡಿಯುವ ಚಿತ್ರ

ಭಜನೆ ಮಾಡುವ ಭಕ್ತವೃಂದವೆಲ್ಲಾ ಭಗವಂತನ ಮಹಿಮೆ ತಿಳಿಯಬೇಕು. ಆತನ ಕಥೆಕೇಳಬೇಕು

ಅದಕ್ಕಾಗಿ:–

ಭಕ್ತ ಪುಂಡಲೀಕ (ಹಿಂದೀ)

ಸುಶೀಲ್ ಕುಮಾರ್, ಪ್ರೇಮಲತಾ, ಸೊಫಿಯಾ. ಮೊದಲಾದವರು

ಬರುವ ಚಿತ್ರ

ಕಿದಾರ ಶರ್ಮರ ಚಿತ್ರ ಪ್ರಪಂಚಕ್ಕೆ ಕಿರೀಟ ಪ್ರಾಯವಾದ

“ಚಿತ್ರಲೇಖ”

ನಂದ್ರೇಕರ್, ಮೆಹತಬ್, ಮೊಹಿನಾ ದೇಸಾಯಿ ಮೊದಲಾದವರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆ

ಪ್ರಾಮುಖ್ಯ ನಿರ್ಣಯಗಳ ಕುರಿತು ಚರ್ಚೆ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾ ಸಭೆಯು ಇದೇ ೨೬-೮-೫೧ರಲ್ಲು ಡಾ॥ ಕೆ. ಎಸ್. ಆಳ್ವರ ಅಧ್ಯಕ್ಷತೆಯಲ್ಲಿ ನಡೆಯಿತು. ೪೧ ಮಂದಿ ಸದಸ್ಯರು ಹಾಜರಿದ್ದರು.

ಕಾರ್ಯದರ್ಶಿಯವರು ತಾ. ೬-೧-೫೦ರಿಂದ ತಾ. ೨೬-೮-೫೧ರ ವರೆಗಿನ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿಟ್ಟರು. ಆಹಾರದ ಬಿಕ್ಕಟ್ಟನ್ನು ನಿವಾರಿಸಲು ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಮಾಡಿದ ಕೆಲಸ, ಹೆಚ್ಚಿಗೆ ಧವಸಧಾನ್ಯ ಜಿಲ್ಲೆಗೆ ಬರುವಂತೆ ನಡೆಸಿದ ಪ್ರಯತ್ನ, ರಾಜಕೀಯ ಸಂತ್ರಸ್ತರಿಗೆ ಭೂದಾನವೀಯುವ ಸರಕಾರದ ಯೋಜನೆಯ ದೋಷಗಳು, ಚಾಲಗೇಣಿ ಒಕ್ಕಲುಗಳನ್ನು ಭೂಮಾಲಕರು ಮನಸೋಇಚ್ಛೆ ಒಕ್ಕಲೆಬ್ಬಿಸದಂತೆ ಸ್ತಂಭನ ಮಸೂದೆಯನ್ನಾದರೂ ತರುವ ಕುರಿತು ಸರಕಾರದ ಅನುದಾರ ಧೋರಣೆ, ಕಾಂಗ್ರೆಸ್ ಪಕ್ಷವು ಬಲವಾಗಿ ಬೆಳೆದು ಜನಹಿತ ಸಾಧಿಸಬೇಕಾದರೆ ಅದರ ಕೆಲಸಗಾರರೊಳಗಿರಬೇಕಾದ ಏಕ ಧ್ಯೇಯನಿಷ್ಠೆ, ಶಿಸ್ತು ಮತ್ತು ಒಕ್ಕಟ್ಟಿನ ಅವಶ್ಯಕತೆ, ಮುಂದಿನ ಮಹಾ ಚುನಾವಣೆಯಲ್ಲಿ ಜಯ ಹೊಂದಬೇಕಾದರೆ ಪ್ರತಿಯೊಬ್ಬ ಕಾಂಗ್ರೆಸಿಗನೂ ಪಕ್ಷನಿಷ್ಠೆಯಿಂದ ಎಡೆಬಿಡದೆ ದುಡಿಯುವ ಕರ್ತವ್ಯದ ಮತ್ತು ಗೌರವ ವೇತನವಿತ್ತು ಸಮರ್ಥ ಕೆಲಸಗಾರರನ್ನು ನೇಮಿಸುವ ಆವಶ್ಯಕತೆಯ ಕುರಿತಲ್ಲ ಆ ವರದಿಯಲ್ಲಿ ನಮೂದಿಸಲಾಗಿತ್ತು.

ವರದಿಯು ಸರ್ವಸಮ್ಮತಿಯಿಂದ ಅಂಗೀಕಾರ ಮಾಡಲ್ಪಟ್ಟ ಮೇಲೆ ಶ್ರೀಯುತ ಎಂ. ಎಸ್. ಅಧಿಕಾರಿಗಳು ಕೇಳಿದ ಕೆಲವು ಪ್ರಶ್ನೆಗಳಿಗೆ ಕಾರ್ಯದರ್ಶಿಗಳು ಉತ್ತರವಿತ್ತರು. ಲೆಕ್ಕಪತ್ರಗಳನ್ನು ಪುನಃ ಪರಿಶೋಧನೆ ನಡೆಸುವ ಬಗ್ಗೆ ಎಂ. ಎಸ್. ಅಧಿಕಾರಿಗಳು ಸೂಚಿಸಿ, ಶ್ರೀ ಬಿ. ವೈಕುಂಠ ಬಾಳಿಗರು ಅನುಮೋದಿಸಿ, ಶ್ರೀ ಟಿ. ಯಂ. ಹೆಗ್ಡೆಯವರನ್ನು ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲಾಯಿತು.

ಹೊಸ ವರ್ಷದ ಕಾಂಗ್ರೆಸ್ ಸದಸ್ಯರನ್ನು ಸೇರಿಸುವಲ್ಲಿ ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯವರ ಕ್ಷೇತ್ರದಲ್ಲಿ ಸದ್ರಿಯವರ ಮೂಲಕ ಯಾ ಅವರಿಂದ ಪುಸ್ತಕ ಪಡೆದು ಸಾಧ್ಯವಾದ ಮಟ್ಟಿಗೆ ಸೇರಿಸಬೇಕೆಂದು ನಿರ್ಣಯಿಸಲಾಯಿತು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳು ಜಯಶೀಲರಾಗಿ ಆರಿಸಿ ಬರುವಂತೆ ಪ್ರಚಾರ, ಹಣಸಂಗ್ರಹ, ಸಂಘಟನೆಯೇ ಮೊದಲಾದ ಯಾವತ್ತು ಕೆಲಸಗಳನ್ನು ಮಾಡಲು ಕಾಂಗ್ರೆಸಿಗರ ಮತ್ತು ಕಾಂಗ್ರೆಸಿನ ಮೇಲೆ ಸಹಾನುಭೂತಿಯುಳ್ಳ ಇತರರ ಚುನಾವಣಾ ಸಮಿತಿಯನ್ನು ರಚಿಸಬೇಕೆಂದು ಕಾರ್ಯಕಾರಿ ಮಂಡಲಿಯವರು ಮಾಡಿದ ನಿರ್ಣಯವನ್ನು ಅಧ್ಯಕ್ಷರು ಸಭೆಯ ಮುಂದಿಟ್ಟು ಸದ್ರಿ ಸಮಿತಿಯ ಹೆಸರುಗಳನ್ನೋದಿ ಹೇಳಿದರು. ಸದ್ರಿ ಸಮಿತಿಗೆ, ಕಾಂಗ್ರೆಸ್ ಹುರಿಯಾಳುಗಳನ್ನು ಆರಿಸುವ ವಿಷಯದಲ್ಲಿ ಕೂಡ ಅಧಿಕಾರವಿರಬೇಕೆಂಬ ಶ್ರೀ ಎಂ. ಎಸ್. ಅಧಿಕಾರಿಗಳ ಸೂಚನೆಯ ಕುರಿತು ದೀರ್ಘ ಚರ್ಚೆ ನಡೆಯಿತು. ಅಧ್ಯಕ್ಷರು ಶ್ರೀ ಬಿ. ವೈಕುಂಠ ಬಾಳಿಗರು ಶ್ರೀ ಎನ್. ಎಸ್. ಕಿಲ್ಲೆಯವರು ಮತ್ತು ಶ್ರೀ ಕೆ. ಕೆ. ಶೆಟ್ಟರು ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿನವರು ಕಾಂಗ್ರೆಸ್ ಹುರಿಯಾಳುಗಳ ಕುರಿತು ಜನಾಭಿಮತ ಪಡೆಯುವ ಕ್ರಮವನ್ನು ಇಷ್ಟರಲ್ಲೇ ನಿರ್ಧರಿಸುವುದರಿಂದ ಮತ್ತು ಹುರಿಯಾಳುಗಳನ್ನು ಆರಿಸುವ ವಿಷಯದಲ್ಲಿ ಪಕ್ಷದ ಮೇರೆಗೆ ಅಭಿಪ್ರಾಯವೀಯುವ ಅಧಿಕಾರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರಿಗೇನೇ ಇಲ್ಲದಿರುವಾಗ ಅದನ್ನು ಚುನಾವಣಾ ಸಮಿತಿಗೆ ಕೊಡಲು ಸಾಧ್ಯವಿಲ್ಲವೆಂಬುದನ್ನು ವಿವರಿಸಿದರು. ಶ್ರೀಗಳಾದ ಬಿ. ದ ಶೆಟ್ಟಿ, ಎಂ. ಎಂ. ಹೆಗ್ಡೆ, ಕೆ. ವೇಣುಗೋಪಾಲ ನಾಯಕ್, ಮೊದಲಾದವರು ಅಭಿಪ್ರಾಯವಿತ್ತ ಮೇಲೆ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿನ ದ. ಕ. ಜಿಲ್ಲೆಯ ಪ್ರತಿನಿಧಿಯು ಈ ಚುನಾವಣಾ ಸಮಿತಿಯ ಮತ್ತು ಪ್ರತಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಭಿಪ್ರಾಯವನ್ನು ಸಾಧ್ಯವಾದಷ್ಟು ಪಡೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು. ಚುನಾವಣಾ ಸಮಿತಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಎಲ್ಲಾ ಸದಸ್ಯರು ಇರಬೇಕೆಂದು ನಿರ್ಧರಿಸಲಾಯಿತು. ಅಗತ್ಯದೃಷ್ಟಿ ಸದ್ರಿ ಸಮಿತಿಗೆ ಇನ್ನೂ ಹೆಚ್ಚಿನ ಸದಸ್ಯರನ್ನು ಸೇರಿಸುವ ಅಧಿಕಾರವನ್ನು ಜಿ. ಕಾಂ. ಕಮಿಟಿಯ ಅಧ್ಯಕ್ಷರಿಗೆ ಮತ್ತು ಕಾರ್ಯದರ್ಶಿಯವರಿಗೆ ಕೊಡಲಾಯಿತು.

ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಹಣದ ತೀವ್ರ ಕೊರತೆಯುಂಟಾಗಿ ಯಾವುದೊಂದು ಕೆಲಸ ಮಾಡಲಿಕ್ಕಾದರೂ ತೊಂದರೆಯಾಗಿರುವುದರಿಂದ ಕಾಂಗ್ರೆಸ್ ಕಮಿಟಿಯ ಸದಸ್ಯರೆಲ್ಲರೂ ಕಡಿಮೆಯೆಂದರೆ ನೂರು ರೂಪಾಯಿಯಂತೆ ಸಂಗ್ರಹಮಾಡಿ ಬರುವ ಸಪ್ಟಂಬರ ತಿಂಗಳ ಅಂತ್ಯದೊಳಗೆ ಕಳುಹಿಸಬೇಕೆಂದೂ ಅವರಿಗೆ ಮೊದಲಾಗಿ ತಾತ್ಕಾಲಿಕ ರಶೀದಿ ಕೊಟ್ಟು ಹಣ ಬಂದಮೇಲೆ ಕಾಯಂ ರಶೀದಿ ಕೊಡಬೇಕೆಂದೂ ನಿಶ್ಚಯಿಸಲಾಯಿತು.

ಜಿಲ್ಲೆಯಲ್ಲಿ ಮುಂದಿನ ಬೆಳೆಯನ್ನು ಸಂಗ್ರಹಿಸಲು ಸರಕಾರಕ್ಕೆ ಜಿಲ್ಲಾ ಕಲೆಕ್ಟರರು ಶಿಫಾರಸು ಮಾಡಿರುವ ಲೆವಿಯ ಕ್ರಮದ ಕುರಿತು ತೀವ್ರ ಚರ್ಚೆ ನಡೆಯಿತು. ಸುಗ್ಗಿ ಬೆಳೆಯ ಲೆವಿಯ ಕ್ರಮದಿಂದಾಗಿ ಜನತೆಗಾಗಿರುವ ಅನ್ಯಾಯ ಮತ್ತು ಸಂಕಷ್ಟವನ್ನು ಶ್ರೀಗಳಾದ ಕೆ ಜತ್ತಪ್ಪ ರೈ, ಬಿ. ದೇವಪ್ಪಾಳ್ವ, ಬಿ. ದೇವಪ್ಪ ಶೆಟ್ರೇ ಮೊದಲಾದವರು ವಿವರಿಸಿದರು. ಲೆವಿಯನ್ನು ನಿಶ್ಚಯಿಸುವಾಗ ಜನಸಂಖ್ಯೆಯನ್ನು ಪರಿಗಣಿಸಿಕೊಳ್ಳದಿದ್ದರೆ ಅನ್ಯಾಯವಾದೀತೆಂದು ಶ್ರೀ ಯನ್. ಯಸ್. ಕಿಲ್ಲೆಯವರೇ ಮೊದಲಾದವರು ಸೂಚಿಸಿದರು. ಜಿಲ್ಲಾ ಕಲೆಕ್ಟರರು ಸೂಚಿಸಿರುವ ಲೆವಿಯ ಕ್ರಮದಿಂದ ಕೃಷಿಕರಿಗೆ ಹೆಚ್ಚೇನೂ ತೊಂದರೆಯಾಗಲಾರದೆಂದು ಶ್ರೀ ಕೆ. ಕೆ. ಶೆಟ್ರು ಅಭಿಪ್ರಾಯಪಟ್ಟರು. ಲೆವಿಯ ಸಂಬಂಧವಾಗಿ ಕೆಲಮಂದಿ ಗ್ರಾಮ ಉದ್ಯೋಗಸ್ಥರು ಮಾಡುವ ಅನ್ಯಾಯಗಳ ಸೂಚನೆ ಬಂದಾಗ, ಅಂಥವರ ಹೆಸರುಗಳನ್ನು ಧೈರ್ಯದಿಂದ ತಿಳಿಸಿ ರುಜುವಾತು ಕೊಟ್ಟಲ್ಲಿ ಜಿಲ್ಲಾ ಕಲೆಕ್ಟರರು ಅವರಿಗೆ ತಕ್ಕ ಶಿಕ್ಷೆಕೊಡಲು ತಯಾರಿರುವರೆಂದು ಅಧ್ಯಕ್ಷರು ಹೇಳಿದರು. ಚರ್ಚೆ ಮುಗಿದ ಮೇಲೆ ಶ್ರೀ ಕೆ. ಜತ್ತಪ್ಪ ರೈಗಳು ತಂದ ಈ ಕೆಳಗಿನ ಠರಾವುಗಳು ಸರ್ವಸಮ್ಮತಿಯಿಂದ ಮಂಜೂರಾದುವು

೧ "ಆಹಾರದ ಮಟ್ಟಿಗೆ ನಮ್ಮ ಜಿಲ್ಲೆಯು ಕೊರತೆಯದೆಂಬುದು ನಿಸ್ಸಂದೇಹವಿರುವುದರಿಂದ ಅದನ್ನು ಇತರ ಕೊರತೆ ಜಿಲ್ಲೆಗಳಂತೆಯೇ ಪರಿಗಣಿಸಬೇಕಾಗಿ ಈ ಸಭೆಯು ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ" ೨ "ಜಿಲ್ಲೆಯ ಲೆವಿಕ್ರಮದಿಂದ ಕೃಷಿಕರಿಗೆ ತೊಂದ್ರೆಯೂ ಸಂಕಷ್ಟವಾಗದಂತೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ ತಕ್ಕ ವ್ಯವಸ್ಥೆ ಮಾಡುವರೆ ಈ ಕೆಳಗಿನ ಉಪಸಮಿತಿಯನ್ನು ನೇಮಿಸಲಾಯಿತು. ಉಪಸಮಿತಿ:—ಅಧ್ಯಕ್ಷ, ಕಾರ್ಯದರ್ಶಿ, ಶ್ರೀ॥ ವೇಣುಗೋಪಾಲ ನಾಯಕ್, ಶ್ರೀ. ಜತ್ತಪ್ಪ ರೈ ಮತ್ತು ಶ್ರೀ ಬಿ. ಬಿ. ಶೆಟ್ರಿ' ಅನುಮೋದಕರು ಶ್ರೀ ಬಿ. ಆರ್. ಕರ್ಕೇರರು

೩ "ಮದ್ರಾಸ್ ಸರಕಾರವು ದ. ಕ. ಜಿಲ್ಲೆಯಲ್ಲಿ ಬಾವಿ ತೋಡುವರೆ ಸಹಾಯಧನವೀಯುವ ಯೋಜನೆಯನ್ನು ಮನ್ನಾ ಮಾಡಿರುವುದರಿಂದ ಸದ್ರಿ ಹಣವನ್ನು ಈ ಜಿಲ್ಲೆಯಲ್ಲಿ ಅತ್ಯಾವಶ್ಯಕವಾದ ಪಂಪುಗಳ ಸಹಾಯಕ ಯೋಜನೆ ಮತ್ತು ಕಟ್ಟ ಕಟ್ಟುವ ಯೋಜನೆಗೆ ಉಪಯೋಗಿಸಬೇಕಾಗಿ ಕೇಳಿಕೊಳ್ಳುತ್ತದೆ.'

೪ 'ಗ್ರಾಮಾಂತರಗಳಲ್ಲಿ ತೆರೆಯಲ್ಪಟ್ಟಿರುವ ರಿಲೀಫ್ ಅಂಗಡಿಗಳಲ್ಲಿ ಕಡಿಮೆ ಪಕ್ಷ ೩ ಔನ್ಸ್ ಅಕ್ಕಿಯನ್ನು ಕೊಡಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತದೆ.' (ಅನುಮೋದಕರು ಶ್ರೀ ವೇಣುಗೋಪಾಲ ನಾಯಕರು)

ಶ್ರೀ ಕೆ ಕೆ. ಶೆಟ್ರು ಸೂಚಿಸಿ ಮತ್ತು ಶ್ರೀ ಕೆ ನರಹರಿ ಕಾಮತರು ಅನುಮೋದಿಸಿ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮಂಜೂರಾದುವು: ೧ 'ಇನ್ನೂ ೨ ವರ್ಷದ ಅವಧಿ ಮುಂದುವರಿಸುವ ಬಗ್ಗೆ ಈಗ ಮದ್ರಾಸ್ ಎಸೆಂಬ್ಲಿಯ ಮುಂದೆ ಬಂದಿರುವ ಒಕ್ಕಲು ಮತ್ತು ರೈತರಕ್ಷಣಾ ಮಸೂದೆಯನ್ನು ಮಲಬಾರಿನಂತೆ ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸಬೇಕೆಂದು ಈ ಸಭೆಯು ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ." ೨. "ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಸಂತ್ರಸ್ತರಿಗೆ ಭೂದಾನವೀಯುವ ಸರಕಾರದ ಯೋಜನೆಯ ಅವ್ಯವಸ್ಥೆಯಿಂದಾಗಿ ಸದ್ರಿ ಸಂತ್ರಸ್ತರಲ್ಲಿ ತೀವ್ರ ಅತೃಪ್ತಿ ಮತ್ತು ಜಿಗುಪ್ಸೆಯುಂಟಾಗಿರುವುದರಿಂದ ಸದ್ರಿ ಭೂದಾನವು ನಿರಾತಂಕವಾಗಿ ಮತ್ತು ಗೌರವಪೂರ್ವಕವಾಗಿ ಕೊಡಲ್ಪಡುವಂತೆ, ರೆವಿನ್ಯೂ ಡಿವಿಜನಲ್ ಅಫೀಸರರ ಗ್ರೇಡಿನ ಒಬ್ಬ ಸ್ಪೆಶಲ್ ಅಫೀಸರರನ್ನು ಕೆಲತಿಂಗಳ ಮಟ್ಟಿಗಾದರೂ ಕೂಡಲೆ ಸರಕಾರವು ನೇಮಿಸಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ.'

ಕಾಂಗ್ರೆಸ್ ಅಧ್ಯಕ್ಷ ಶ್ರೀ॥ ಟಂಡನ್‌ರಿಗೂ ಪ್ರಧಾನ ಮಂತ್ರಿ ಪಂಡಿತ ನೆಹರುಗಳಿಗೂ ಉಂಟಾಗಿರುವ ಮತಭೇದದ ಕುರಿತು ವಿಷಾದ ಸೂಚಿಸಿ, ಪಂಡಿತ ನೆಹರುಗಳ ಧೋರಣೆ ಮತ್ತು ನಾಯಕತ್ವಕ್ಕೆ ಸಂಪೂರ್ಣ ಬೆಂಬಲವೀಯುವ ಠರಾವನ್ನು ಶ್ರೀ॥ ಯಂ. ಯಸ್. ಅಧಿಕಾರಿಗಳು ತಂದು, ಶ್ರೀ॥ ಎಂ. ಎಂ. ಹೆಗ್ಡೆಯವರು ಅನುಮೋದಿಸಿದರು. ಈ ಕುರಿತು ಚರ್ಚೆಯಾಗಿ ಆ ಮೇಲೆ ಸರ್ವಸಮ್ಮತಿಯಿಂದ ಈ ಕೆಳಗಿನ ಠರಾವನ್ನು ಶ್ರೀ॥ ಯಂ. ಯಂ. ಹೆಗ್ಡೆಯವರು ಸೂಚಿಸಿ, ಜನಾಬ್ ಮುಕ್ತೂರ್ ಸಾಹೇಬರು ಅನುಮೋದಿಸಿ, ಮಂಜೂರಾಯಿತು.

ಠರಾವು:– "ಪಂಡಿತ್ ನೆಹರುಗಳು ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ಪಾರ್ಲಿಮೆಂಟರಿ ಬೋರ್ಡಿಗೂ ರಾಜಿನಾಮೆ ಕೊಟ್ಟ ಕುರಿತು ಈ ಮಹಾಸಭೆಯು ತುಂಬಾ ಕಳವಳಪಡುತ್ತದೆ ಮುಂಬರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮಹಾಸಭೆಯು, ಕಾಂಗ್ರೆಸ್ ಅಧ್ಯಕ್ಷ ಶ್ರೀ॥ ಟಂಡನ್ ಮತ್ತು ಪ್ರಧಾನ ಮಂತ್ರಿ ಪಂಡಿತ ನೆಹರುಗಳೊಳಗಿನ ಮತಭೇದವನ್ನು ನಿವಾರಿಸಿ ಕಾಂಗ್ರೆಸಿನೊಳಗೆ ಇನ್ನಷ್ಟು ಐಕ್ಯಬೆಳೆಸುವಂತೆ ಪ್ರಯತ್ನಿಸಬೇಕಾಗಿ ಸದ್ರಿ ಕಮಿಟಿಯು ಸದಸ್ಯರನ್ನೆಲ್ಲಾ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತದೆ"

ಸಭಾಂತ್ಯದಲ್ಲಿ ಅಧ್ಯಕ್ಷರು ಎಲ್ಲಾ ಕಾಂಗ್ರೆಸಿಗರು, ವಿಶೇಷವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರು ಉತ್ಸಾಹದಿಂದ ಕೆಲಸಮಾಡಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸಿನ ಹುರಿಯಾಳುಗಳು ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಜಯಶೀಲರಾಗಿ ಆರಿಸಿ ಬರುವಂತೆ ನೆರವಾಗಬೇಕಾಗಿ ಕೇಳಿಕೊಂಡರು.

ಕೆ. ಕೆ. ಶೆಟ್ಟಿ
ಪ್ರಧಾನಕಾರ್ಯದರ್ಶಿ.
ಮಂಗಳೂರು, 23 8-51

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
S. C. 510/51
ಕರಿಯ—ವಾದಿ
ಮಂಜಯ್ಯ ಶೆಟ್ಟಿ—ಪ್ರತಿವಾದಿ

ಸದ್ರಿ ವಾದಿಯು ಜಾಹೀರು ಮಾಡಿಕೊಳ್ಳುವದೇನೆಂದ್ರೆ

ಪ್ರತಿವಾದಿ ಮಂಜಯ್ಯ ಶೆಟ್ಟಿ - ನಾಗಪ್ಪ ಶೆಟ್ರ ಅಳಿಯ ಸೇನಾಪುರ ಗ್ರಾಮದ ಗುಡ್ಡಮ್ಮ ಡಿ. ಹಾಲಿ ಜಡ್ಕಲ್ ಗ್ರಾಮದ ಕಾಸ್ತಿ.

ವಾದಿಗೆ ಪ್ರತಿವಾದಿಯು ಬರೆಸಿಕೊಟ್ಟ ಡಿಮಾಂಡ ನೋಟಿನ ಅಸಲು ಬಡ್ಡಿ ರೂಪಾಯಿ 107-9-0 ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ತಾ. 21-9-51ಕ್ಕೆ ಆಖೈರಿ ಕಸ್ಸಿಗೆ ಯಿಡಲಾಗಿರುವದೆ. ಆ ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟುಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಯೋಗ್ಯವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

G Sanjiva Rao,
Vakil
ಕುಂದಾಪುರ ತಾ. 27-8-51

For energetic and active living,
for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart
AYURVEDIC PHARMACY
Baba kali Kamali-Wala RISHIKESH.

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ
ಮಗ್ಗಿ ಪುಸ್ತಕಗಳು
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.
ಬೆಲೆ: 0—1—0
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.
ನವಯುಗ ಪ್ರೆಸ್, ಉಡುಪಿ.

ಪ್ರೇಮವೇ ವಿಜಯದ ಸೂತ್ರ!

ಲೇಖಕರು: ಶ್ರೀ ಅನ್ನದಾನೀಶ್ವರ ವಿರಕ್ತ ಮಠ.

ಲಗ್ನವಾಗುವುದಕ್ಕಿಂತ ಪೂರ್ವದಲ್ಲಿ ತರುಣ-ತರುಣಿಯರು ತಾವು ಪರಸ್ಪರ ಆಜೀವ ಪ್ರೀತಿಸುತ್ತೇವೆಂದು ಪಣ ತೊಡುವರು. ಲಗ್ನ ಮಂತ್ರಗಳೂ ಸಹ ತರುಣ-ತರುಣಿಯರಿಂದ ಪ್ರೇಮದ ವಚನವನ್ನೇ ತೆಗೆದುಕೊಳ್ಳುತ್ತವೆ. ಆದರೆ! ಸಂಸ್ಕೃತದಲ್ಲಿದ್ದ ಲಗ್ನ ಮಂತ್ರಗಳ ಅರ್ಥ ಕನ್ನಡಿಗರಿಗೆ ಹೇಗೆ ತಿಳಿಯಬೇಕು? ಭಾವ ಹೃದಯಗಳಿಗೆ ಹೇಗೆ ತಾಗಬೇಕು? ಭಾವ ಹೊಳೆಯದ ಮೇಲೆ ಕೃತಿ ಎಲ್ಲಿಂದ ಬರಬೇಕು? ಪ್ರೇಮಪ್ರತಿಜ್ಞೆಯಂತೆ ನಡೆಯಲಿಕ್ಕೆ ದೃಢ ಸಂಕಲ್ಪ ಮಾಡಿದರೇನೇ ದಾಂಪತ್ಯ ಜೀವನದಲ್ಲಿ ಸೌಹಾರ್ದ ಭಾವ ಶಾಂತಿಗಳು ನೆಲಸುವದು ಸಾಧ್ಯವಾಗುವುದು. ಇಲ್ಲದಿದ್ದರೆ ಇಲ್ಲ. ಧನವಿಲ್ಲದ ವ್ಯಾಪಾರಿಯು ದಿವಾಳಿ ತೆಗೆಯುತ್ತಾನೆಂದು ಅನ್ನುತ್ತೇವೆ, ಪ್ರೇಮವಿಲ್ಲದ ತರುಣ-ತರುಣಿಯರು ಪ್ರೇಮ ದಿವಾಳಿ ತೆಗೆಯುತ್ತಾರೆ. ಪ್ರೇಮವಿಲ್ಲದ ನಡತೆಯು ಬಡತನದ, ಅಂಧವಿಲ್ಲದ ದೀಪಾವಳಿಯಂತೆ ಕೃತ್ರಿಮವಾದುದೇ ಸರಿ. ಧನದ ಅಭಾವದ ದಿವಾಳಿಗಿಂತಲೂ ಪ್ರೇಮರಹಿತ ಹೃದಯದ ದಿವಾಳಿಯು ಅತ್ಯಂತ ಶೋಚನೀಯವಾದುದೇ ಸರಿ. ಎಲ್ಲಿಯ ವರೆಗೆ ಪ್ರೇಮವನ್ನು ಸಂವರ್ಧಿಸುವದು ಪರಸ್ಪರ ಉದಾತ್ತ ನೈತಿಕ ಕರ್ತವ್ಯವೆಂದು ದಂಪತಿಗಳು ಭಾವಿಸುವದಿಲ್ಲವೋ ಅಲ್ಲಿಯ ವರೆಗೆ ಸುಖದ ಎಲ್ಲ ಸಾಧನಗಳೂ ದೀಪವಿಲ್ಲದ ಮನೆಯಂತೆಯೇ ಸರಿ.

ನನ್ನ ಹೆಂಡತಿಯು ನನ್ನನ್ನು ಪ್ರೀತಿಸುವದಿಲ್ಲವೆಂದು ಗಂಡನು ಹೇಳುವದಾಗಲೀ, ನನ್ನ ಗಂಡನು ನನ್ನನ್ನು ಪ್ರೀತಿಸುವದಿಲ್ಲವೆಂದು ಹೆಂಡತಿಯು ಹೇಳುವದಾಗಲೀ ಯೋಗ್ಯವಲ್ಲ. ಮಹಾತ್ಮಾ ಗಾಂಧಿ, ಭಗವಾನ್ ಬುದ್ಧರ ತತ್ವದ ಪ್ರಕಾರ ಪ್ರೀತಿಸದವರನ್ನು ಪ್ರೀತಿಸುವದು ನಮ್ಮ ಕರ್ತವ್ಯವೆಂದು ನಾವು ತಿಳಿಯಲಿಕ್ಕೆ ಬೇಕು. ಹಾಗೆ ಮಾಡಿದರೆ ಉತ್ತಮ ಪರಿಣಾಮವನ್ನು ನಾವು ಸ್ವಲ್ಪ ಕಾಲದ ಮೇಲೆ ನೋಡಬಹುದು. ಉತ್ತಮ ಬೀಜ ಬಿತ್ತಿದರೆ, ಉತ್ತಮ ಪರಿಸ್ಥಿತಿ ದೊರೆತರೆ, ಉತ್ತಮ ಬೆಳೆ ಬರುವಂತೆ, ಉತ್ತಮ ಪ್ರೇಮವನ್ನು ಹೃದಯ ಭೂಮಿಯಲ್ಲಿ ಬಿತ್ತಿ, ಉತ್ತಮ ಪ್ರೀತಿಯ ಸನ್ನಿವೇಶವನ್ನು ಮನೆಯಲ್ಲಿ, ಸಮಾಜದಲ್ಲಿ, ನೆಲೆಗೊಳಿಸಿದರೆ, ಉತ್ತಮ ಸುಖವೆಂಬ ಫಲ ಪ್ರಾಪ್ತವಾಗಲೇಬೇಕು. ಪ್ರೇಮದಿಂದ ಪ್ರೇಮ ಬೆಳೆಯುವದೇ ವಿನಹ ದ್ವೇಷದಿಂದ ಎಂದೂ ಬೆಳೆಯಲಾರದು. ಪ್ರೇಮವು ಬೆಳವಣಿಗೆಯ ನಿಯಮ.

ನನ್ನ ಉದ್ಯೋಗದಲ್ಲಿ ನನಗೆ ವೇಳೆಯೇ ಸಿಗುವದಿಲ್ಲವೆಂದೂ, ಹೆಂಡತಿಯನ್ನು ಪ್ರೀತಿಸುವದಾಗಲೀ, ಅವಳೊಡನೆ ಸರಸಸಲ್ಲಾಪಗಳಲ್ಲಿ ಕಾಲ ಕಳೆಯುವದಾಗಲೀ ನನಗೆ ಶಕ್ಯವಿಲ್ಲವೆಂದೂ ಅನೇಕರು ಹೇಳುವದುಂಟು. ಇದು ತರವಲ್ಲ. ನನ್ನ ಮನೆ ಕೆಲಸದಲ್ಲಿ, ಮಕ್ಕಳ ಲಾಲನಪಾಲನದಲ್ಲಿ ನನಗೆ ವೇಳೆ ಸಿಗುವದಿಲ್ಲವೆಂದೂ, ಗಂಡನನ್ನು ರಮಿಸಲಿಕ್ಕಾಗಲೀ ಅವರೊಡನೆ ವಿನೋದದಿಂದ ಕಾಲ ಕಳೆಯುವದಾಗಲೀ ಸಾಧ್ಯವಿಲ್ಲವೆಂದೂ ಹೆಂಡತಿಯು ಹೇಳಬಹುದು. ಹೀಗೆ ಪರಸ್ಪರರು ತಮ್ಮ ತಮ್ಮ ಅಡಚಣಿಗಳನ್ನೇ ಮುಂದುವರಿಸಿದರೆ ಪ್ರೇಮದ ವಾಯುಮಂಡಲವು ಹೇಗೆ ನಿರ್ಮಾಣವಾದೀತು? ವಾತಾವರಣವಿಲ್ಲದಿದ್ದರೆ ಏನೂ ಮಾಡಿದರೂ ಎಲ್ಲವೂ ವಿರಸವಾಗಿಯೇ ಪರಿಣಮಿಸಿ ಸಂಸಾರವು ದುಃಖಮಯವಾಗುವದರಲ್ಲಿ ಬಹವನಾದರೆ ಅವನು ಸಂದೇಹವಿಲ್ಲ.

ದೇಹಕ್ಕೆ ಅನ್ನವಿದ್ದಂತೆಯೇ ಹೃದಯಕ್ಕೆ ಪ್ರೇಮವಿರುತ್ತದೆ. ದೇಹದ ಬೆಳವಣಿಗೆಯಂತೆಯೇ ಹೃದಯದ ವಿಕಾಸವೂ ಆಗತಕ್ಕದೆಂಬ ತಿಳುವಳಿಕೆ ಬೇಕು. ದೇಹ, ಬುದ್ಧಿಗಳು ಬೆಳೆದು ಹೃದಯ ಸಂಕುಚಿತವಾದರೆ ಅಂಥ ಕುಟುಂಬದಿಂದ ದೇಶ ಸೇವೆಯಾಗಲೀ ಸಾಧ್ಯವಾಗಬಹುದೇ? ಹೆಂಡತಿಯನ್ನು ಧಿಕ್ಕರಿಸಿ ಉದ್ವೇಗ ಬೆಳೆಸುವದು ಹೇಯವಾಗಿರುವಂತೆಯೇ, ಉದ್ಯೋಗವನ್ನು ತಿರಸ್ಕರಿಸಿ ಹೆಂಡತಿಯ ಮುಂದೆ ಮೋಹದಿಂದ ಕಾದಿರುವದೂ ತಿರಸ್ಕರಣೀಯವಾಗಿದೆ. ದುಡ್ಡಿನಿಂದ ಶ್ರೀಮಂತನಾಗಿ ಪ್ರೇಮದಲ್ಲಿ ಬಡವನಾದರೆ ಅವನು ನಿಜವಾದ ಶ್ರೀಮಂತನಲ್ಲ.

ಉದ್ಯೋಗದ ಚಿಂತೆ, ಸಂತಾಪಗಳನ್ನು ಮನೆಗೆ ಬಂದಾಗ ಸಹ ತಲೆಯಲ್ಲಿ ತುಂಬಿಕೊಂಡು ಭಾರವಾದ ಹೃದಯವನ್ನು ತಲ್ಲಣಗೊಳಿಸಿದರೆ ಹೆಂಡತಿಯನ್ನು ಪ್ರೀತಿಸುವದು ಅಸಾಧ್ಯವಾಗುವದು. ಆದ ಕಾರಣ ಮನೆಯ ಹೊರಗೆ ಎಲ್ಲ ಚಿಂತೆ ಸಂತಾಪಗಳನ್ನು ಬಿಟ್ಟು ಹಗುರಾದ ಹೃದಯದಿಂದ ಮನೆಗೆ ಬರಬೇಕು. ವ್ಯವಹಾರದಲ್ಲಿಯ ಸಿಟ್ಟನ್ನು ತಂದು ಹೆಂಡರು ಮಕ್ಕಳ ಮೇಲೆ ಹಾಕಿದರೆ ಅವರೇನು ಮಾಡಬೇಕು?

ಪ್ರೇಮದಿಂದ ಮನೆಯಲ್ಲಿ ಸೌಹಾರ್ದ ಸಂಸ್ಕೃತಿಯು ಬೆಳೆಯುತ್ತಾ ಬರುತ್ತದೆ. ಅಂಥ ಮಧುರ ಸಂಸ್ಕೃತಿಯಲ್ಲಿ ಬೆಳೆಯುವ ಮಕ್ಕಳು ಸಹ ಸುಸಂಸ್ಕೃತರಾಗುತ್ತಾರೆ.

ಪ್ರೇಮದ ಸಂಸ್ಕೃತಿಯು ಬೆಳೆದು ಬರಬೇಕಾದರೆ ದಿನಾಲು ಸಸಿಗಳನ್ನು ಬೆಳೆಸುವದಕ್ಕೆ ತೆಗೆದುಕೊಳ್ಳುವ ಜಾಗ್ರತೆಯನ್ನು ತೆಗೆದುಕೊಳ್ಳಬೇಕಾಗುವದು. ಸಸಿಗಳು ಕೆಳಗೆ ಬೇರಿಳಿದು ಮೇಲೆ ಬೆಳೆಯುವಂತೆ ಸಂಸ್ಕೃತಿಯು ಹೃದಯಾಂತರಾಳದಿಂದ ಸ್ಫೂರ್ತಿ ಪೋಷಣೆ ಹೊಂದಿ ಹೊರಗೆ ಪ್ರಕಾಶವಾಗಿ ನಲಿಯುತ್ತದೆ. ದಿನಾಲು ಸಾಯಂಕಾಲ ಉದ್ಯೋಗಸ್ಥ ಮನುಷ್ಯನು ಉದ್ಯೋಗ ಬಿಟ್ಟು ಮನೆಗೆ ಬಂದು ಹೆಂಡರು ಮಕ್ಕಳೊಡನೆ ತಪ್ಪದೇ ಪ್ರೇಮದ ವಿನೋದ ವಿಹಾರಗಳಲ್ಲಾಗಲೀ, ಸರಸ ಸಲ್ಲಾಪ ಸತ್ಕಥಾಲಾಪಗಳಲ್ಲಾಗಲೀ, ಆರಾಮ ಆಮೋದಗಳಲ್ಲಾಗಲೀ ಕಾಲ ಕಳೆಯಲೇ ಬೇಕು. ಹೆಂಡತಿಯಾದರೋ ವಿನೋದದ ಪೂರ್ವತಯಾರಿ ಮಾಡಲಿಕ್ಕೇ ಬೇಕು. ಗಂಡನ ಬರವನ್ನು ಹಾರೈಸುತ್ತ ಬಂದೊಡನೆ ಪ್ರೀತಿಯಿಂದ ಸ್ವಾಗತ ಗೈಯುತ್ತ ಫಲಾಹಾರದ ತಿನಸುಗಳನ್ನು ಕೊಡುತ್ತ ಮಕ್ಕಳೊಡನೆ ಆತನು ಆನಂದದಿಂದ ಕಾಲ ಕಳೆಯುವಂತೆ ಸನ್ನಿವೇಶವನ್ನು ರಚಿಸಿ, ಸಂಗೀತ ಕಲಾ ಕೌಶಲ್ಯದ ಬಳಕೆಯಿಂದ ಹೃದಯದ ಕವಾಟ ತೆರೆಯುತ್ತ ದಿನಾಲು ಸಾಗಿದರೆ ಅಂಥ ಮನೆಯಲ್ಲಿ ಪ್ರೇಮ ಸಂಸ್ಕೃತಿಯು ನಲಿದಾಡುವುದರಲ್ಲಿ ಸಂದೇಹವೇ ಇಲ್ಲ. ತಿಂಡಿ ತಿನಸುಗಳನ್ನಾಗಲೀ, ಅನ್ನ ಆಹಾರಗಳನ್ನಾಗಲೀ ಚೊಕ್ಕವಾಗಿ ಸಿದ್ಧಪಡಿಸಲಿಕ್ಕೆ ಕಲಿಯದೇ, ಕೇವಲ ಪಿಯಾನೊ ಬಾರಿಸುವದಾಗಲೀ, ಹಾಡುವದಾಗಲೀ ಗಂಡನನ್ನು ಸಮಾಧಾನಗೊಳಿಸಲಾರದು. ಉತ್ತಮ ಹೆಂಡತಿಯು ಉತ್ತಮ ಪಾಕವಾಡಲಿಕ್ಕೆ ಅರಿತವಳಾಗಿರಲಿಕ್ಕೆ ಬೇಕು. ಕಲಾವಿದನು ಸೃಷ್ಟಿಯ ಸರಳ ವಸ್ತುಗಳಿಂದ ಸೊಬಗನ್ನುಂಟು ಮಾಡುವಂತೆ ಹೆಂಡತಿಯು ತನ್ನ ಮನೆಯಲ್ಲಿ ಕಲಾಶೀಲೆಯು ಎನಿಸುವಂತೆ ಅಚ್ಚುಕಟ್ಟುತನ, ಶಿಸ್ತು, ಸ್ವಚ್ಛತೆ, ನೈಪುಣ್ಯ, ಸೂಕ್ಷ್ಮತೆಗಳನ್ನು ಗೃಹ ವ್ಯವಸ್ಥೆಯಲ್ಲಿ ತೋರಿಸಲಿಕ್ಕೇ ಬೇಕು. ಮಾತಿನ ಸಾಗಿಸುವ ಪದ್ಧತಿಯಾಗಲೀ ಮನೆಯನ್ನು ಇಡುವ ವ್ಯವಸ್ಥೆಯಾಗಲೀ, ಹೆಂಡತಿಗೆ ಗೊತ್ತಿರದಿದ್ದರೆ ಪ್ರೇಮದ ಸಂಸ್ಕೃತಿಯು ಸಂವರ್ಧಿಸಲಿಕ್ಕೆ ತಕ್ಕ ಪರಿಸ್ಥಿತಿ ಉಂಟಾಗಲಾರದು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾದರೂ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಚಾಚುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡಿತ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು. ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೇ ದಪ್ಪಕ್ಷರಗಳಲ್ಲಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ—ಉಡುಪಿ, ಇಲ್ಲಿಯೂ ದೊರೆಯುತ್ತವೆ.

ವಿವಿಧ ಪಾತ್ರೆಗಳು



ಉತ್ತಮ ವಿಧದ ಬೆಳ್ಳಿ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಸ್ಟೋರ್ಸ್,

ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸುಗಳನು ಉಪಯೋಗಿಸಿದರೆ ಸಹಜವಾಗಿ ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಜನರಿಗೆ ಖಾತ್ರಿ ಗುಣವಾಗಿದೆ— ಬೆಲೆ ರೂ. 3-; ಸ್ಪೆಶಲ್ ರೂ. 5. ಅಧಿಕಾಧಿಕ ಸ್ಪೆಶಲ್ ರೂ. 8 [ವಿ. ಪಿ. ಹಣ ಪ್ರತ್ಯೇಕ.]

Mis D. DEVEE, P. 93 (N. J.)

Tollygunge CALCUTTA

ಸ್ತ್ರೀಯರು ಮಾತ್ರವೇ ಕಾಗದ ಬರೆಯಿರಿ...

ಕಡಿಮೆ ಕ್ರಯದ ಉತ್ತಮ

❋ ಪುಸ್ತಕಗಳು ❋

ಬಿರುವಾಳಿ	0	3	0
ಆ ಸುದ್ದಿ	0	3	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	5	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಆತ್ಮ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸಾಬದಾರಿ	0	3	0
ಸುಕಾಂತ	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ಫಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕಾಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವದ ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆ ಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಕವನಗಳ ಸಂಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಪಂಚಿಮಾರಾ ೪ ಭಾಗಗಳು	2	0	0
ಮಾರ್ಪಟ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೌತಿ	0	4	0
ಕತ್ತು ಕೊಯ್ದುವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದದ ಕತೆಗಳು	0	12	0
ಸಾಹಸ ಧೀಮ ವಿಜಯ	0	8	0
ಭಾರತದ ಗುರುಕುಲ	0	6	0

ರೂ. 20/ಕ್ಕೆ ಎಲ್ಲಾ ಪುಸ್ತಕಗಳನ್ನೂ ಕೊಡಲಾಗುವುದು.

(1) ಅಂತರಂಗ ಕಾರ್ಯಾಲಯ, ಉಡುಪಿ.
(2) ನವಭಾರತ ಬುಕ್‌ಡಿಪೋ, ಉಡುಪಿ.

ಸ್ವೀಕಾರ-ವಿಮರ್ಶೆ

೧ ಬ್ರಹ್ಮಚರ್ಯವೇ ಜೀವನ

ಲೇಖಕರು: ಶ್ರೀ ಶಿವಾನಂದ ಸ್ವಾಮಿ ವರೂಡ. ಅನುವಾದಕರು: ಶ್ರೀ ಈಶ್ವರ ಸಣಕಲ್ಲ-ಬಳವಿ. ಪ್ರಕಾಶಕರು: ಬಾಲ ಚಂದ್ರ ವೆಂಕಟೇಶ ಘಾಟೆಗರ ನವಮಾಲ ಪುಸ್ತಕಾಲಯ, ಧಾರವಾಡ. ಬೆಲೆ: ರೂ. ೩—೦—೦

ಸ್ವಾಮಿ ಶಿವಾನಂದರು ಬ್ರಹ್ಮಚರ್ಯದ ಮಹತ್ವದ ಕುರಿತಾಗಿ ಬರೆದ ಗ್ರಂಥದ ಕನ್ನಡಾನುವಾದವನ್ನು ಶ್ರೀ ಈಶ್ವರ ಸಣಕಲ್ಲರವರು ಕನ್ನಡ ಗ್ರಂಥದ ಅಮೂಲ್ಯ ಉದಾಹರಣೆಗಳೊಂದಿಗೆ ಕನ್ನಡ ಜನಕ್ಕೆ ನೀಡಿರುತ್ತಾರೆ. ವಿಷಯ ನಿರೂಪಣೆಯೂ, ಶೈಲಿಯೂ ಅತ್ಯಂತ ಹೃದಯಂಗಮವಾಗಿದ್ದು ತರುಣರೂ ವಿವಾಹಿತರೂ ಓದಿ ಮನನ ಮಾಡಿಕೊಳ್ಳಬಹುದಾದ ಅತ್ಯಮೂಲ್ಯ ಕೃತಿಯಾಗಿದೆ. ದೇಶದ ವಿಭೂತಿ ಪುರುಷರ ಜೀವನಾದರ್ಶಗಳ ಆದೇಶಗಳನ್ನೂ-ಪ್ರಾಶ್ಚಾತ್ಯ ವಿಚಾರಗಳನ್ನೂ ಎತ್ತಿಕೊಂಡು ಬರೆಯಲಾಗಿದೆ.

ಪ್ರಗತಿಪಥದಲ್ಲಿ ಮುನ್ನಡೆಯುತ್ತ ಅತ್ಯಂತ ಸುಧಾರಕರೆಂದು ಹೆಮ್ಮೆಪಡುವ ನಾವು ನಮ್ಮ ಜನಜೀವನದಲ್ಲಿ ಗುತ್ತಿರುವ ಆಕಾಲಿಕ ಮರಣ-ದುರ್ಬಲ ಮನೋವೃತ್ತಿ-ಶೌರ್ಯಪರಾಕ್ರಮಗಳ ಕುರಿತು ಅನಾಸಕ್ತಿ-ಮುಂತಾದ ವಿಚಾರಗಳನ್ನು ನಾವು ಗಮನಿಸಿಲ್ಲ. ಧೀರೋದಾತ್ತ ಪುರುಷರನ್ನೂ, ಋಷಿಪುಂಗವರನ್ನೂ, ವೀರ ಪರಾಕ್ರಮಿಗಳನ್ನೂ ಪಡೆದ ನಮ್ಮ ದೇಶದ ಶ್ರೇಷ್ಠ ಸಾಂಸ್ಕೃತಿಕ ಹಿನ್ನೆಲೆಯನ್ನು ನಾವಿಂದು ಸಂಪೂರ್ಣ ಮರೆತಿದ್ದೇವೆ. ದೇಶಕ್ಕಾಗಿ ಹೋರಾಟ ನಡೆಸಿದ ಮಹಾನುಭಾವರ ಕೆಚ್ಚಾಗಲೀ-ವಿಶಿಷ್ಟ ಅನುಭವಗಳಾಗಲೀ ಈಗಿನ ಜನತೆಯಲ್ಲಿ ಬೇಕಷ್ಟು ಇರುವುದಿಲ್ಲ ಹೆಚ್ಚೇಕೆ ನೆಡೆ-ನುಡಿ- ನೀತಿ ವಿಚಾರಗಳಲ್ಲಿ ಹಿಂದುಳಿದಂತೆ ಆಯುಷ್ಯಾಲವೂ ಬಹಳ ಕಿರಿದಾಗಿದೆ. ಇವಕ್ಕೆಲ್ಲ ಮುಖ್ಯ ಕಾರಣವೆಂದರೆ 'ಬ್ರಹ್ಮಚರ್ಯ' ಜೀವನದ ಮಹತ್ವಿಕೆಯನ್ನು ನಾವು ಕಡೆಗಣಿಸಿದ್ದುದೇ ಆಗಿರುತ್ತದೆ.

ದೇಹ ಸಾಧ್ಯವಾಗಿದ್ದರೇನೆ ನಮ್ಮ ಪ್ರತಿಯೊಂದು ಚಟುವಟಿಕೆಯಲ್ಲೂ ಉತ್ಸಾಹ ಜಮ್ಮ ಸ್ಸು ಹುಟ್ಟುವುದು ಉತ್ತಮವಾದ ವಿಚಾರಗಳ ಕಡೆಗೆ ನಮ್ಮ ದೃಷ್ಟಿ ಹರಿಯಬೇಕಾದರೂ ಮನೋದಾರ್ಢ್ಯತೆ ಬೇಕು. ಚಂಚಲ ಚಿತ್ತ ವೃತ್ತಿಯವರಿಗೆ ಉದಾತ್ತ ವಿಚಾರ— ಆಚಾರವೆಂದರೆ ಪರ್ವತ ಸ್ವಪ್ನವೇ ಸರಿ!

ವಿದೇಶೀಯರ ಶಿಸ್ತು-ಇನ್ನಿತರ ಅತ್ಯಮೂಲ್ಯ ಅನುಭವಗಳ ಅನುಕರಣೆ ಮಾಡದೆ ಹೋದರೂ ಬೇಡವಾದ ವಿಲಾಸ ಜೀವನಕ್ಕೆ ಸುಲಭವಾಗಿ ಅಂಟಿಕೊಳ್ಳುತ್ತೇವೆ. ಕಾಫಿ, ಚಾ, ಧೂಮ್ರಪಾನ ದೇಶದ ಹವಾಮಾನಕ್ಕೆ ಒಗ್ಗದ ದುಶ್ಚಟನೇ ಸರಿ! ಈ ಚಟಗಳಿಂದ ಮಾನಸಿಕವಾಗಿ ಕೆಟ್ಟ ಪರಿಣಾಮವಾಗಬಲ್ಲುದು!

ನಮ್ಮ ದೇಶದ ಹಿಂದಿನ ಗುರುಕುಲ ವಿದ್ಯಾಭ್ಯಾಸ ಕ್ರಮದಿಂದ ವಿದ್ಯೆಯೊಂದಿಗೆ ಬ್ರಹ್ಮಚರ್ಯವು ಕಡ್ಡಾಯವಾಗಿ ಪರಿಪಾಲಿಸಲ್ಪಡುತ್ತಿತ್ತು! ಈಗ ವಿದ್ಯಾಭ್ಯಾಸ ಕ್ರಮ ಬ್ರಹ್ಮಚರ್ಯಕ್ಕೆ ಪೋಷಕವಾಗಿಲ್ಲ. ವಿಲಾಸಮಯ ಜೀವನ-ಮೋಹಕ ವಿಚಾರಗಳ ಕಡೆಗೇ ಅವರ ದೃಷ್ಟಿ ಹರಿಯುವ ಸಂಭವ ಹೆಚ್ಚು! ಬ್ರಹ್ಮಚರ್ಯದ ಮಹತ್ವವನ್ನರಿಯದೆ ಹೋದರೆ ಜೀವನದಲ್ಲಿ ಮತ್ತೆ ನಿರಾಶೆ ಪಡಬೇಕಾಗುವ ಪ್ರಸಂಗ ಬರುವದು ಸ್ವಾಭಾವಿಕ!

ವಿವಾಹಿತರೂ ಸಂಯಮ ಮನೋವೃತ್ತಿಯಿಂದ ವರ್ತಿಸುವುದು ಒಂದು ರೀತಿಯ ಬ್ರಹ್ಮಚರ್ಯ ಪರಿಪಾಲನೆಯೇ,ಗಾಂಧೀಜೀ-ಅ ಆದರ್ಶವನ್ನು ಎತ್ತಿ ತೋರಿಸಿರುವರು. ಅಖಂಡ ಬ್ರಹ್ಮಚಾರಿಗಳಾಗಿ ದೇಶದ ಕೀರ್ತಿಯನ್ನು ಬೆಳಗಿದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮುಂತಾದ ಮಹಾನ್ ವ್ಯಕ್ತಿಗಳ ಜೀವನ ಆದರ್ಶವಾಗಿದೆ.

ಈ ಎಲ್ಲ ಮೂಲ ತತ್ವಗಳನ್ನು ಲೇಖಕರು ಚೆನ್ನಾಗಿ ಚಿತ್ರಿಸಿದ್ದಾರೆ ಬ್ರಹ್ಮಚರ್ಯಕ್ಕೆ ಆಹಾರ-ವಿಹಾರವೂ ಮುಖ್ಯವಾಗಿರುತ್ತದೆ. ಹಿತಮಿತವಾದ ವ್ಯಾಯಾಮ ದೇಹ ಮನಸ್ಸುಗಳೆರಡರ ಮೇಲೂ ಒಳ್ಳೆಯ ಪರಿಣಾಮವನ್ನು ಮಾಡಬಲ್ಲುದು. ಪುಸ್ತಕದ ಕೊನೆಯಲ್ಲಿ ಉಪಯುಕ್ತವಾದ ಆಸನಗಳನ್ನು ಸೂರ್ಯನಮಸ್ಕಾರ ವಿಧಾನವನ್ನೂ ಸಚಿತ್ರವಾಗಿ ಕೊಟ್ಟುದುದರಿಂದ ಅಭ್ಯಾಸಿಗಳಿಗೆ ಇನ್ನಷ್ಟು ಉಪಕಾರ ಮಾಡಿದಂತಾಗಿದೆ.

ಅತ್ಯಂತ ಅಮೂಲ್ಯವೂ ವಿಷಯಗರ್ಭಿತವೂ ಆದ ಈ ಕೃತಿಯನ್ನು ತರುಣರೂ ವಿವಾಹಿತರೂ ವಯೋವೃದ್ಧರೂ ಕೊಂಡು ಓದುವಂತಾದರೆ ಪುಸ್ತಕದೊಳಗಿನ ಅಂತಃಸತ್ವವು ಅವರ ಮನಸ್ಸಿನಮೇಲೆ ಒಳ್ಳೆಯ ಪರಿಣಾಮವನ್ನು ಮಾಡುವದರಲ್ಲಿ ಸಂದೇಹವಿಲ್ಲ. ಲೇಖಕರು ತಾತ್ವಿಕ ವಿಚಾರಗಳ ಮೂಲಕ ನಿತ್ಯ ಸುಖಿಗಳೂ, ದೀರ್ಘಜೀವಿಗಳೂ, ಶರೀರ, ಜ್ಞಾನ, ನೀತಿ ಮತ್ತು ಆತ್ಮ ಬಲವಂತರೂ ಆಗುವ ಸನ್ಮಾರ್ಗ ದರ್ಶನ ಮಾಡಿರುತ್ತಾರೆ. ಈ ಬಗೆಯ ವಿಷಯಾತ್ಮಕ ಗ್ರಂಥವನ್ನು ಕನ್ನಡದ ಜನಕ್ಕೆ ಒದವಿಸಿಕೊಟ್ಟ ಅನುವಾದಕ ಮತ್ತು ಪ್ರಕಾಶಕರು ಅಭಿನಂದನಾರ್ಹರು.

೨. ಕರಿಯ ಕಂಬಳಿ.

ಲೇಖಕರು: ಶ್ರೀ ಜಿ. ಪಿ. ರಾಜರತ್ನಂ- ಪ್ರಕಾಶಕರು: ಆನಂದ್ ಬ್ರದರ್ಸ್ ಬೆಂಗಳೂರ.-೨ ಬೆಲೆ ರೂ. ೧—೧೨—೦

ಹದಿಮೂರು ಚಿಕ್ಕದೊಡ್ಡ ಕತೆಗಳುಳ್ಳ ಈ ಸಂಗ್ರಹದಲ್ಲಿ ನಾಲ್ಕೈದು ಉತ್ತಮ ಕತೆಗಳೂ ಇವೆ. ಹಲವು ಕತೆಗಳೂ ತೀರ ಸಪ್ಪೆಯಾಗಿದ್ದು ಯಾವುದೇ ಬಗೆಯ ನೀತಿ ಬೋಧೆಯನ್ನಾಗಲೀ—ಮನರಂಜನೆಯನ್ನಾಗಲೀ ಮಾಡುತ್ತಿಲ್ಲ. 'ಮಗೂ, ಅನಿಷ್ಟಕ್ಕೆ ಶನೀಶ್ವರ ಗುರಿ, ೨೪-೨-೩೦, ಕುಷಿಸಂಕಟ' ಕಷ್ಟಾದದ್ದು ಬೆಳುವುದದ್ದು' ಸರ್ವಸಾಮಾನ್ಯ ಉತ್ತಮ ಕತೆಗಳಸಾಲಲ್ಲಿನಿಲ್ಲುವಂತಹಗಳು. ಲೇಖಕರು ಮಾನಸಿಕ ಹಾಗೂ ತಾತ್ವಿಕ ವಿಚಾರಗಳನ್ನು ಈ ಕತೆಯಲ್ಲಿ ತುಂಬಿದಾರೆ."೨೪.೨.೩೦" ಈ ಕತೆಯ ರಚನೆ ಮಾತುಗಾರಿಕೆ ಅತ್ಯಂತ ಮಾರ್ಮಿಕವಾಗಿದ್ದು ಕುತೂಹಲವನ್ನು ಕೆರಳುತ್ತದೆ. ಆದರ ಕೊನೆಗೆ ಅಷ್ಟೊಂದು ಸಮರ್ಪಕವಾಗಿಲ್ಲ. 'ಕುಷಿಸಂಕಟ' ಕಥಾಸನ್ನಿವೇಶ ಚೆನ್ನಾಗಿದ್ದು, ರೂಪವಂತ ಕನ್ಯೆ ಮಾನವಂತೆಯಾಗಿ, ಸಾಧ್ವೀಮಣಿಯಾಗಿ ಜೀವನ ನಡೆಸುವದು ಕಷ್ಟವೆಂಬುದನ್ನು ಲೇಖಕರು ಚಿತ್ರಿಸಿದಾರೆ, ಕೊನೆಗೆ ಕುಷಿಸಂಕಟ ದುರ್ಮಾರ್ಗದಲ್ಲಿ ನವೆದು ನಾಶದೇವಿಯಾಗುವ ಸಂದರ್ಭ ಅಷ್ಟು ಸಮಂಜಸವಾಗಿ ತೋರುವುದಿಲ್ಲ ಉಳಿದ ಕತೆಗಳು ಒಂದಲ್ಲ ಒಂದು ರೀತಿಯ ಕೃತ್ರಿಮತೆ-ಕರಿಣವಾದ ಸಮಸ್ಯೆಗಳಿಂದ ಕೂಡಿದ್ದು ವಾಚಕರ ಮನಸ್ಸನ್ನು ಅಷ್ಟಾಗಿ ಸೆಳೆಯುವುದಿಲ್ಲ. ಶ್ರೀ ರಾಜರತ್ನಂರವರು ಸರಳವೂ,ವಾಸ್ತವಿಕವೂ ಆದ ಕಥನಶೈಲಿಯ ಮೆರುಗನ್ನು ಕೊಟ್ಟಿರುವದರಿಂದ 'ಕರಿಯ ಕಂಬಳಿ' ಒಮ್ಮೆ ಓದುವಷ್ಟು ಗ್ರಾಹ್ಯವಾಗಿದೆಯೆನ್ನಬಹುದು.

—ಎಸ್ಸೆಲ್

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಹುಉಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಕೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಚಾರ್ಜ ಅಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮಾರ್ಕೆ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 514/1951

ವಾದಿ— ದತ್ತಾತ್ರಯ ಪ್ರಭು.

ಪ್ರತಿವಾದಿರು—ವೆಂಕಪ್ಪ ಶೆಟ್ಟಿ ಕೂಡಾ.

ಪ್ರತಿವಾದಿರು: 1. ವೆಂಕಪ್ಪ ಶೆಟ್ಟಿ, ಸುಬ್ಬಿ ಶೆಟ್ಟಿರ ಮಗಳು. 2. ಮಂಜಯ್ಯ ಶೆಟ್ಟಿ, 3. ಮುತ್ತಕ್ಕ ಶೆಟ್ಟಿ, ವೆಂಕಪ್ಪ ಶೆಟ್ಟಿರ ಮಕ್ಕಳು.

ಕುಂದಾಪುರ ತಾಲ್ಲೂಕು,ಹೊಸೂರು ಗ್ರಾಮದಲ್ಲಿರುವವರು P. O. Kollur.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನಂದರೆ,

ವಾದಿಗೆ ತಾ. 15-9-1946ರಲ್ಲು 1, 2ನೇ ಪ್ರತಿವಾದಿರು ಬರೆಸಿಕೊಟ್ಟ ರೂಪ್ಯಾ 100-0-0ರ ದಿವಾಂದ ನೋಟಿನ ಹಣಗಳ ಬಗ್ಗೂ ಮತ್ತು 2ನೇ ಪ್ರತಿವಾದಿಯು ವಾದಿಯಿಂದ ರೂ. 125-0-0ನ್ನು ಸಾಲವಾಗಿ ಪಡೆದು ಆ ಕುರಿತು ತಾರೀಕು 15-12 1950ರಲ್ಲು ಬರೆಸಿಕೊಟ್ಟ ದಿವಾಂದ ನೋಟಿನ ಹಣಗಳ ಬಗ್ಗೂ ಕೂಡಾ ವಾದಿಯು ಮೇಲ್ಕಂಡ ದಾವೆ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾ. 21-9 1951ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು. ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunatha Shenai

Pleader for Pltf.

Coondapoor, 27-8-1951

"ಬ್ರಿಟಿಷರು ತಮ್ಮ ಆಳ್ವಿಕೆಯ ಕಾಲದಲ್ಲಿ ನಮ್ಮನ್ನು ಪಶುಗಳೋ ಬಾದಿಯಾಗಿಟ್ಟಿದ್ದರು"
—ಪಂಡಿತರೊಬ್ಬರ ಭಾಷಣ

—ಸದ್ಯ ನಮಗೆ ಕಾಂಗ್ರೆಸ್ಸಿಗರು ಕುದುರೆ ತಿನ್ನುವ ಆಹಾರವನ್ನೇನೋ ಒದಗಿಸುತ್ತಾರೆ. ಮುಂದೇನಾಗುತ್ತೋ ನೋಡಬೇಕು.

oo oo

"ಉಡುಪಿಯ ಹಾಲು ಒದಗಿಸುವ ಸಹಕಾರಿ ಸಂಘದ ಚುನಾವಣೆ ನಡೆಯಿತು"
ಸಂಬಂಧಪಟ್ಟವರು

—ನೀರು ಸರಬರಾಯಿ ಮಾಡುವವರ ಚುನಾವಣೆ ಶೀಘ್ರದಲ್ಲೇ ನಡೆಯಲಿದೆಯಂತೆ.

oo oo

"ಮುನ್ಷಿಯವರು ಮಂತ್ರಿಯಾದಂದಿನಿಂದ ಲೂ ಅಕ್ಕಿಯನ್ನು ಉಪಯೋಗಿಸುವುದಿಲ್ಲ"
ಪಾರ್ಲಿಮೆಂಟ್ ಸುದ್ದಿ

—ಹಾಗಾದರೆ ಅನ್ನವಿಲ್ಲದೆ ಜನ ಸಾಯುತ್ತಾರೆನ್ನುವುದು ಶುದ್ಧ ಸುಳ್ಳೇ ಸರಿ!

oo oo

"ಕರ್ತವ್ಯದಂತೆ ದುಡಿದರೆ ಅಧಿಕಾರ ಕಾಲ ಸೆಯನ್ನುತ್ತಾರೆ, ಬಂದ ಕೂಡಲೆ ಕರ್ತವ್ಯಭ್ರಷ್ಟರೆನ್ನುತ್ತಾರೆ"
ಏಕೀಕರಣ ಪಕ್ಷವಾದಿಗಳು.

—ಅವರೇ ಕಣಾ ಕನ್ನಡದ ಕಲಿಗಳ್!

oo oo

"ಕಾಂಗ್ರೆಸ್ಸಿಗಿಂತ ಬ್ರಿಟಿಷರೇ ವಾಸಿ"
ವಿರೋಧಿ ಪಕ್ಷದವರು

ರಸನಿಮಿಷಗಳು

—ಜೈಲಿನಲ್ಲಿಯೂ ಹೊಟ್ಟೆಗೆ ಅನ್ನ—ದುಡಿಯಲಿಕ್ಕೆ ಕೆಲಸ—ಇವೆಲ್ಲ ದೇಶದಲ್ಲಿಲ್ಲವಂತೆ!

oo oo

"ಕಾಂಗ್ರೆಸ್ ಅಧ್ಯಕ್ಷರು ದಕ್ಷಿಣ ಕನ್ನಡವನ್ನು ಸಂದರ್ಶಿಸುವದಿಲ್ಲ"
ಕಾಂಗ್ರೆಸಿಗರು

—ಗೋಳವಾಲಕರರು ಎರಡೆರಡು ಸಲ ಬಂದಿದ್ದು ಇದಕ್ಕೆ ಕಾರಣವೆಂದು ಹಲವರು ವಾದಿಸುವುದರಲ್ಲೇನೂ ಸತ್ಯಾಂಶವಿಲ್ಲವಂತೆ

oo oo

"ಆಂಧ್ರಪ್ರಾಂತ ಶೀಘ್ರ ರಚನೆಗಾಗಿ ಅನ್ನ ಸತ್ಯಾಗ್ರಹ ಹೂಡಿರುವ ಶೀತಾರಾಮ ಸ್ವಾಮಿಗೆ ಪ್ರಧಾನಿ ನೆಹರೂ, ರಾಮಸ್ವಾಮಿ ರಾಜಾ, ರಾಜೇಂದ್ರಪ್ರಸಾದ ಮುಂತಾದವರಿಂದ ಉಪವಾಸವನ್ನು ನಿಲ್ಲಿಸಬೇಕೆಂದು ಪತ್ರಬಂದಿದೆ"
ಪತ್ರಿಕಾವರದಿ.

—ತನ್ನ ಕಾರ್ಯದಲ್ಲಿ ಸಹ ಭಾಗಿಯಾಗಿರುವ ಸ್ವಾಮಿಗೆ ಕೃತಜ್ಞತಾಪೂರ್ವಕ ಪತ್ರವೊಂದನ್ನು ಶ್ರೀ ಮುನ್ಷಿ ಬರೆಯಬಹುದೆಂದು ರಾಜಕೀಯ ವರ್ಗಗಳು ಬಲವಾಗಿ ನಿರೀಕ್ಷಿಸುತ್ತಿವೆಯಂತೆ.

oo oo

"ಅಕ್ಕಿ ತಿನ್ನುವ ಜನರು ಧಾನ್ಯೇತರ ಪದಾರ್ಥಗಳನ್ನೂ ಸೇವಿಸಬೇಕು"
—ಮಂತ್ರಿ ಮುನ್ಷಿ.

—ನಮಗೆ ರೇಶನ್ ಶಾಪಿನಲ್ಲಿ ಸಿಗುವ ಅಕ್ಕಿಯಲ್ಲಿ ಕಲ್ಲು, ಮಣ್ಣು, ಭತ್ತ, ಸಿಪ್ಪೆ ಮುಂತಾದ ಅಕ್ಕೀತರ ಪದಾರ್ಥಗಳೆಯೊಂದು ಕಲೆಕ್ಟರರಿಗೋ—ಇನ್ನಿತರರಿಗೋ ಮಾಡುವವರು ಇನ್ನಾದರೂ ಮಂತ್ರಿಗಳ ಮಾತನ್ನು ಪಾಲಿಸಬೇಕು!

oo oo

"ಜಗದ್ವಿಖ್ಯಾತ ಚಲಚಿತ್ರ ನಿರ್ಮಾಪಕನಾದ ಪಾಸ್ಕಲನು ಗಾಂಧೀಜಿಯ ಜೀವನ ಚರಿತ್ರೆಯನ್ನು ಚಿತ್ರಿಸಲಿದ್ದು ವಿಖ್ಯಾತನಟ ಪಾಲ್‌ಮುನಿಯೂ ಗಾಂಧೀಜಿಯ ಪಾತ್ರವನ್ನು ವಹಿಸಲಿರುವನು."
ಅಧಿಕೃತವಾರ್ತೆ.

"ಗೋಡ್ಸೆಯಂತಹ ಮಹಾಪುರುಷನ ಪಾತ್ರವನ್ನು ತಮ್ಮ ಸಂಘದ ಹೊರತಾದ ವಿದೇಶೀಯನೂ ವಹಿಸುವುದನ್ನು ನಾವು ಸಹಿಸಲಾರೆವು" ಎಂದು ಇಲ್ಲಿಯ ಆರ್. ಎಸ್. ಎಸ್. ಧುರೀಣರು ಇಷ್ಟರಲ್ಲೇ ಪ್ರತಿಭಟನೆ ಸಲ್ಲಿಸುವವರಿದ್ದಾರಂತೆ.

oo oo

"ಕಾಂಗ್ರೆಸ್ ಬಿಟ್ಟು ಹೊರಬಂದು ಕೆಲಸ ಮಾಡೆಂದು ನನಗೆ ಗಾಂಧೀಜಿ ಅಂದೇ ಅದೇಶವಿತ್ತಿದ್ದರು."
ಅಚಾರ್ಯ ಕೃಪಲಾನಿ.

—ಹೌದು; ಘಂಡನ್ನರಿಗೂ ಸರದಾರ ಪಟೇಲರು ಏನೋ ಹೇಳಿದುವಂತೆ. ಅದೆಂದು ಬಹಳ ಖಾಸಗೀ ವಿಚಾರ!

oo oo

"ಪಟ್ಟಣ ಕಡಿಮೆ ಮಾಡಲು ಕೇವಲ ಒಂದು ತಿಂಗಳ ಶಿಕ್ಷೆಯುಳ್ಳ 2000 ಕೈದಿಗಳನ್ನು ಮದ್ರಾಸದ ಬೇರೆ ಬೇರೆ ಸೆರೆಮನೆಗಳಿಂದ ಬಿಡುಗಡೆ ಮಾಡಲಾಗಿದೆ."
ಸರಕಾರೀ ಪ್ರಕಟಣೆ.

—ಸಹಜವೇ; ಬೇರೆ ಬೇರೆ ಪಕ್ಷಗಳು ಮುಂಬರುವ ಚುನಾವಣೆಗೆ ಪೂರ್ವಸಿದ್ಧತೆ ನಡೆಸುತ್ತಿರುವ ಈ ಕಾಲಕ್ಕೆ ಇನ್ನೂ ಪಟ್ಟಣ ಹೆಚ್ಚಾಗಬಹುದೆಂದು ಸರಕಾರದ ಮುಂದಾಲೋಚನೆಯಿರಬಹುದೇ?

oo oo

"ಪಾರ್ಲಿಮೆಂಟಿನಲ್ಲಿ ಮುರಿದು ಬಿದ್ದ ಮಸೂದೆಯು ಹಲ್ಲಿಂತೆ! ....."

oo oo

"ಚುನಾವಣೆ ಮುಗಿಯುವ ವರೆಗೆ ನಮ್ಮಲ್ಲಿಯ ಹಲವು ಪತ್ರಿಕೆಗಳು ತಮ್ಮತಮ್ಮೊಳಗೆ ಪ್ರಬಂಧ ಸ್ಪರ್ಧೆಗಳನ್ನು ನಡೆಸುತ್ತವಂತೆ..."

oo oo

—ನೆಹರೂ ಟಂಡನ್ನರ ಬಿಕ್ಕಟ್ಟಿನ ಕುರಿತು ಶ್ರೀ ದೇವರೇ ಪ್ರತ್ಯಕ್ಷನಾಗಿ "ಪ್ರಧಾನ ಮಂತ್ರಿಗಳೇ ಅಧ್ಯಕ್ಷರಾಗಬೇಕು" ಎಂದು ಆಜ್ಞೆ ಕೊಡಿಸಿದರೂ ಅವರು ಒಪ್ಪಲಿಲ್ಲವಂತೆ!

oo oo

"ಹೊಟ್ಟೆಗೆ ಅನ್ನ—ಉಡಲಿಕ್ಕೆ ಬಟ್ಟೆ ಕೊಡದ ಈ ಸರಕಾರ ರಾಮರಾಜ್ಯವನ್ನು ಹೇಗೆ ಸ್ಥಾಪಿಸೀತು?"
ಆಚಾರ್ಯ ಕೃಪಾಲನಿ

—ಮಂತ್ರಿ ಮುನ್ಷಿಯವರು ಲಕ್ಷಗಟ್ಟಲೆ ಮರಗಳನ್ನು ವಿದೇಶಕ್ಕೆ ರವಾನಿಸುತ್ತಿರುವಾಗ ರಾಮರಾಜ್ಯ ಹೇಗಾಗುತ್ತದೋ ಎಂದು ನಮಗೂ ಅನುಮಾನ ಹುಟ್ಟಿದೆ!

oo oo

"ಮಕ್ಕಳ ಲಾಲನೆ ಪಾಲನೆ ಶಿಕ್ಷಣಗಳಲ್ಲಿ ಯುರೋಪು ಅಮೆರಿಕಗಳಿಗಿಂತ ಇಂಗ್ಲೆಂಡು ಮುಂದುವರಿದಿದೆ"
ಇಂಗ್ಲೆಂಡ ಯಾತ್ರಿಕರೊಬ್ಬರು.

—ಮಂತ್ರಿಗಳ ಲಾಲನೆ ಪಾಲನೆಯಲ್ಲಿ ಇಂಡಿಯ ಬಹಳ ಮುಂದುವರಿದಿದೆಯಲ್ಲವೆ? ಎಂದ ಪ್ರಶ್ನೆಗೆ ಅವರು ಉತ್ತರಿಸಲು ನಿರಾಕರಿಸಿದರಂತೆ!

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಳಿಗೆ ರೂ. 3—8—0
ಸಣ್ಣ ಬಾಟ್ಳಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ
ಮೂರು ಹೊಸ ಯಕ್ಷಗಾನ ಪ್ರಸಂಗಗಳು!

೧ ಸಾಹಸ ಭೀಮ ವಿಜಯ (ಗದಾಯುದ್ಧ) ಬೆಲೆ: 0—6—0
೨ ಭಾರತದ ಗುರುಕುಲ ಬೆಲೆ: 0—6—0
೩ ಲಕ್ಷ್ಮಪಗಡೆ ಬೆಲೆ: 0—6—0

ಯಕ್ಷಗಾನಪ್ರಿಯರಿಗೆ ಸುಸಂಧಿ!

ಟಪ್ಪಾಲು ಖರ್ಚು ಪ್ರತ್ಯೇಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—
(2) ನವಭಾರತ ಬುಕ್ ಡಿಪ್ಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.
S. C 136/51.

ಸುಬ್ಬರಾವ್ —ವಾದಿ
ಮತ್ತು
ರಾಮಕ್ಕ, ಬಾಲುಯಾನೆ ಗುಡ್ಡಪ್ಪ ರೈ ಹೆಂಡ್ತಿ ಪುತ್ತೂರು ತಾಲ್ಲೂಕು ಬಳ್ಪಗ್ರಾಮ.
—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ,

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಮಾಡಿದ ಸದ್ರಿ S C 136/51ನೇ ವ್ಯಾಜ್ಯವು ನಿಮ್ಮ ಹಾಜ್ರಾತಿ ಬಗ್ಗೆ ತಾ. 20-9-51ಕ್ಕೆ ಇಟ್ಟಿಯದೆ. ಸದ್ರಿ ತಾರೀಕು 20-9-51ಕ್ಕೆ ಬೆಳಿಗ್ಗೆ 11 ಘಂಟೆಗೆ ನೀವು ಖುದ್ದು ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಕ್ರಮಪ್ರಕಾರ ವ್ಯವಹರಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮನ್ನು ಶಿವ್ಯಾಮಾಡಿ ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜರಿನಲ್ಲಿ ಡಿಕ್ರಿ ಆಗುವುದೆಂತ ಈ ಮೂಲಕ ತಿಳಿಸೋಣಾಗಿಯದೆ.

K N. Mallya.
Vakil for Peff.

ಪುತ್ತೂರು 27-8-51

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
S. C. No. 233/1949
R. E. P 416/1951

ಮುಂಮ್ಮಂಞ ಯಾನೆ ಮಹಮ್ಮದ ಬ್ಯಾರಿ
—ಅರ್ಜಿದಾರ
ಮತ್ತು
ಮೊಯಿದಿಂ ಕುಂಞ-ಅಸ್ಸನಾಲಿ ಮುಮದ ಬ್ಯಾರಿಗೆ ಬಿ। ಪಾತುಮ್ಮನಲ್ಲಿ ಹುಟ್ಟಿದ ಮಗ, ಕಾಸರಗೋಡು ತಾಲೂಕು ಕಳಂಗರೆ ಗ್ರಾಮದಲ್ಲಿರುವವ
—ರೆಸ್‌ಪೊಂಡೆಂಟ

ಮೇಲ್ಕಂಡ ಅಮಲ್ ಪ್ಯಾಂಟ್ಸ್ ರೆಸ್‌ಪೊಂಡೆಂಟಿನ ಸ್ಥಿರಾಸ್ತಿಯು ಜಪ್ತಿಗಾಗಿ ತಾರೀಕು 17-9-1951ಕ್ಕೆ ಜಪ್ತಿ ಕಾಯಂ ಬಗ್ಗೆ ಇಟ್ಟಿರುವದೆಂಬ ಸಂಗ್ತಿ ಯಾ ಮೂಲಕ ರೆಸ್‌ಪೊಂಡೆಂಟಗೆ ತಿಳಿಸೋಣಾಗಿಯದೆ.

Sd/- **P. Ahmad,**
Advocate for Petitioner.

ಕಾಸರಗೋಡು, 28-8-51

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

Notice
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
F C. ನಂಬ್ರ 65/45
S. C. E. P. 161/50

ಮೂಸೆ ಬ್ಯಾರಿ ವಾದಿ—ಅಬ್ದುಲ್ಲ ಬ್ಯಾರಿ
ಅರ್ಜಿದಾರ
ಮತ್ತು
ದೊಡ್ಡಪ್ಪ ಬಂಟ ಮಗನ ಬಂಟರ ಅಳಿಯ ನ ಮೇಯುಳ್ಳ ಜೆಂಗ್ಲಿನ ಮಗ ಕಾಸರಗೋಡು ತಾಲೂಕು ಕಂಬಾರ ಗ್ರಾಮದಲ್ಲಿರುವ —ಪ್ರತಿವಾದಿ

ಸದ್ರಿಪ್ರತಿವಾದಿಗೆ
ಮೇಲ್ಕಂಡ ಡಿಕ್ರಿ ಪ್ರಕಾರ ವಾದಿ ಅಬ್ದುಲ್ಲ ಬ್ಯಾರಿ ಅರ್ಜಿದಾರಗೆ ಬರತಕ್ಕ ಹಣಗಳ ಕುರಿತು ಆತನು ದಾಖಲು ಮಾಡಿರುವ ಮೇಲ್ಕಂಡ ಅಮಲ್ದ್ಯಾರಿಯು ಇದೇ ಬರುವ ಸಪ್ಟಂಬರ ತಿಂಗಳ ತಾರೀಕು 10ನೇ ಸೋಮವಾರ ದಿವ್ಸ ಕಲ್ಪಿಗೆ ಇಟ್ಟಿರುವ್ಪದರಿಂದ ಸದ್ರಿ ವ್ಯಾಧಿಗೆ ಪ್ರತಿವಾದಿಯು ಹಾಜ್ರು ಆಗುವರೆ ತಪ್ಪಿದಲ್ಲಿ ಆತನ ಗೈರು ಹಾಜ್ರಿಯಲ್ಲಿ ಸದ್ರಿ ಅಮಲ್ದ್ಯಾರಿಯನ್ನು ಮುಂದಿನ ತನ್ನ ಬಗ್ಗೆ ಮುಂದರಿಸೋಣ ಬೇಕು.

M. K. Abdul Khader
Advocate for Peff

ಕಾಸರಗೋಡು 28 8-51

ಮಂಗಳೂರು

ಶಿಲಾನ್ಯಾಸ ಡಾ। ಎಮ್. ವಿ. ಶಾಸ್ತ್ರಿ ಸ್ಮಾರಕ ವೈದ್ಯಕೀಯ ಭಂಡಾರದ ಉದ್ಘಾಟನೆಯನ್ನು ಶ್ರೀ ಬಿ. ವೈಕುಂಠ ಬಾಳಿಗರು ನೆರವೇರಿಸಿದರು. ಡಾ। ಎಮ್. ಎಸ್. ಎ. ಶರ್ಮ, ಡಾ। ಎಮ್. ಆರ್. ಭಟ್, ಡಾ। ಬಿ. ಆರ್. ಹರಿದಾಸ ಇವರು ದಿವಂಗತ ಶಾಸ್ತ್ರಿಗಳ ಗುಣಕಥನ ಮಾಡಿದರು. ಸ್ಮಾರಕ ಸಮಿತಿ ಕಾರ್ಯದರ್ಶಿ ಶ್ರೀ ಕೆ. ವಿ. ಜೋಶಿಯವರೂ ಅಧ್ಯಕ್ಷ ಡಾ। ಪಿ. ಎಸ್. ಭಟ್ಟರೂ ಸ್ಮಾರಕ ಸಮಿತಿಯ ಕಾರ್ಯಕಲಾಪಗಳ ಕುರಿತು ಮಾತನಾಡಿದರು.

ಕೃಷಿ ಮಂತ್ರಿಗಳ ಪತ್ರಿಕಾ ಪರಿಷತ್ತು—ಮದ್ರಾಸು ಸರಕಾರದ ಕೃಷಿ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ಕಳೆದ ತಾ. 31ರಂದು ಕಂಕನಾಡಿಯ ಭತ್ತ ಸಂಶೋಧನಾ ಕೇಂದ್ರದಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆ ಜರಗಿಸಿದರು. ಈ ಕಾಲಕ್ಕೆ ಜಿಲ್ಲಾ ಕಲೆಕ್ಟರ್ ಮೊದಲಾದವರೂ ಹಾಜರಿದ್ದರು. ಮಾನ್ಯ ಮಂತ್ರಿಗಳು ಬಂದೊಡನೆ ಕೇಂದ್ರದ ಅಧಿಕಾರಿಗಳು ಶ್ರೀ ಬಿ. ಹನುಮಂತರಾಯರು ಅವರನ್ನು ಇದಿರ್ಗೊಂಡು ಸ್ವಾಗತಿಸಿದರು. ಸಭಾರಂಭದಲ್ಲಿ ಶ್ರೀ ರಾಯರು ಈ ಸಂಶೋಧನಾ ಕೇಂದ್ರದ ಪರಿಚಯ ಮಾಡಿಕೊಟ್ಟರು.

ಕೇಂದ್ರವು ಜಿಲ್ಲೆಯ ಕೃಷಿ ವಿಚಾರವಾಗಿ ಸಂಶೋಧನೆ ನಡೆಸಲಿಕ್ಕಾಗಿಯೇ 1945ರಲ್ಲಿ ಸ್ಥಾಪಿತವಾಯಿತು. ಅಗ್ಗ 25.1 ಎಕ್ರೆ ಜಮೀನಿದ್ದ ಕೇಂದ್ರಕ್ಕೀಗ 48.44 ಎಕ್ರೆ ಜಮೀನಿದೆ. ಈ ಐದು ವರ್ಷಗಳಲ್ಲಿ ಇಲ್ಲಿ ಭತ್ತದ ಸಂಶೋಧನೆಯು ನಡೆದು ಈ ಕೇಂದ್ರದಲ್ಲೇ 3 ಜಾತಿಯ ಬೀಜಗಳನ್ನು ತಯಾರಿಸಿರುವರು. ಇವುಗಳಲ್ಲಿ ಒಂದು ಜಾತಿಯ ಬೀಜವು ಮಾರಾಟಕ್ಕೆ ಸಿದ್ಧವಾಗಿದೆ. ಅಲ್ಲದೆ ಹತ್ತಿ ಮತ್ತು ಗೆಣಸುಗಳಲ್ಲೂ ಸಂಶೋಧನೆ ನಡೆದಿದ್ದು ಸೀ ಐಲ್ಯಾಂಡ್ ಹತ್ತಿಯನ್ನು ಕೆಂಗಿನ ಮರಗಳ ಸಾಲುಗಳ ಮಧ್ಯೆ ಬೆಳೆಯಿಸಬಹುದೆಂಬುದು ಇವರ ಅಭಿಪ್ರಾಯ. ಇದಲ್ಲದೆ ತರಕಾರಿಗಳನ್ನು ಬೆಳೆಯಿಸಿ ಅವುಗಳ ಬೀಜವನ್ನು ಕೊಡುತ್ತಿದ್ದಾರೆ. ಬೆಳೆಗೆ ಗೊಬ್ಬರ ಮುಖ್ಯ. ಆ ವಿಭಾಗದಲ್ಲಿ ಹಸುರು ಗೊಬ್ಬರಕ್ಕಾಗಿ ಎರಡು ಮೂರು ರೀತಿಯ ಗಿಡಗಳನ್ನಿಲ್ಲಿ ಬೆಳೆಯಿಸಲಾಗಿದೆ. ಒಂದು ಜಾತಿಯ ಗಿಡವನ್ನು ಗದ್ದೆಯ ಪುಣಿಯ ಮೇಲೆ ಬೆಳೆಯಿಸಬಹುದು. ಇದು ಕಡಿದಂತೆ ಚಿಗುರುವ ಜಾತಿ. ಇನ್ನೊಂದು ಜಾತಿಯ ಗಿಡವನ್ನು ಪುಣಿಯ ಬದಿಯಲ್ಲಿ ಗದ್ದೆಯಲ್ಲೇ ನೇಜಿಯೊಂದಿಗೆ ನೆಡಬೇಕು. ಬೆಳೆ ಕೊಯ್ಯುವಾಗ ಈ ಗಿಡವನ್ನು ಕಡಿದು ಗದ್ದೆಗೆ ಹಾಕಬೇಕು. ಇವೆರಡರಿಂದಲೂ ಉತ್ತಮ ಫಲ ದೊರೆತಿದೆ. ಇದಲ್ಲದೆ ಹಟ್ಟಿಗೊಬ್ಬರ, ಬೂದಿ ಇವುಗಳೂ ಉತ್ತಮ ಫಲ ಕೊಟ್ಟಿವೆ. ಕ್ಷಾರಗಳಿಗಿಂತಲೂ ನಮಗೆ ಇವುಗಳೇ ಯೋಗ್ಯ. ಕ್ಷಾರದ ಉಪಯೋಗದಿಂದಲೂ ಬೆಳೆಯು ಹೆಚ್ಚಿಗೆ ಬಂದಿದೆಯೆಂದು ಮುಂತಾಗಿ ತಿಳಿಸಿದರು. ಬಳಿಕ ಮಂತ್ರಿಗಳು ಮಾತನಾಡುತ್ತಾ, ಪ್ರಾಂತ್ಯದಲ್ಲೀಗ ಇಂತಹ 36 ಕೇಂದ್ರಗಳಿವೆ ಎಂದರು. ಉತ್ತಮ ಬೀಜ, ಉತ್ತಮ ಗೊಬ್ಬರ, ಯಂತ್ರೋಪಕರಣಗಳಿಂದ ಅಧಿಕ ಫಸಲು ಬರುವಂತಾಗುತ್ತದೆ. ನಮ್ಮ ರೈತರು ಈ ಹೊಸ ರೀತಿಯಲ್ಲಿ ಕೃಷಿ ಮಾಡುವಂತೆ ಪತ್ರಿಕೆಯವರು ಪ್ರಚಾರ ಮಾಡಬೇಕೆಂದರು. ಶ್ರೀ ಎಚ್. ನಾರಾಯಣ ರಾಯರು ಗೋವುಗಳಿಗಾಗಿ ಹುಲ್ಲು ಬೆಳೆಯಿಸುವ, ಬೆಟ್ಟುಗಳಿಗೆ ನೀರೊದಗಿಸುವ ವಿಚಾರಕ್ಕೆ ಮಂತ್ರಿಗಳ ಗಮನ ಸೆಳೆದರು. ಈ ಕೇಂದ್ರದಲ್ಲಿ ಮಣ್ಣಿನ ಪರೀಕ್ಷೆ ಮಾಡುವ ಶಾಖೆಯೊಂದನ್ನು ತೆರೆಯಬೇಕೆಂದರು.

ಸ್ನಾತಕರಿಗೆ ಸತ್ಕಾರ:— ಮಂಗಳೂರು ಸರಕಾರಿ ಕಾಲೇಜಿನ ಬಿ. ಎ. ತರಗತಿಯಲ್ಲಿ ತೇರ್ಗಡೆಯಾದ ಸ್ನಾತಕರನ್ನು ಬೀಳ್ಕೊಡುವ ಸತ್ಕಾರ ಕೂಟವು ಕಳೆದ ತಾ. 28ರಂದು ಜರಗಿತು. ಕಾಲೇಜು ಸಂಘದ ಅಧ್ಯಕ್ಷ ಶ್ರೀ ಕರುಣಾಕರ ರಾಯರು ಸ್ವಾಗತ ಭಾಷಣ ಮಾಡಿದನಂತರ ಪ್ರಿನ್ಸಿಪಾಲ್ ಜನಾಬ್ ಹಾಶೀಮ ಸಾಹೇಬರು ಪರಿಚಯ ಭಾಷಣ ವಿತ್ತರು. ನಂತರ ಶ್ರೀ ಎಮ್. ಎಸ್. ಏಕಾಂಬರರಾಯರು ಮಾತನಾಡುತ್ತಾ, ನಮ್ಮ ಯುವಕರು ಬೆಳೆಯಿಸಿದ ಜ್ಞಾನವೆಂತ ಹುದೆಂಬುದನ್ನು ತಿಳಿಸಿ, ಪದವೀಧರರನ್ನು ಅಭಿನಂದಿಸಿದರು. ಕುಮಾರಿ ವಿಮಲಾ ನಾಯಕರು ಸ್ನಾತಕಪರವಾಗಿ ಭಾಷಣವಿತ್ತ ಮೇಲೆ ವಂದನೆ, ವಿನೋದಗಳಾದುವು.

ಬೆಸೆಂಟ್ ಬಾಲಿಕಾ ಪಾಠಶಾಲೆಯ ಸಾಹಿತ್ಯ ಮತ್ತು ಕಲೆಗಳ ಚಟುವಟಿಕೆಗಳನ್ನು ಮಾಡುವ ಸಾಹಿತ್ಯ ಕಲಾಮಂಟಪದ ಉದ್ಘಾಟನೆಯು ಕಳೆದ ತಾ. 30ರಂದು ಸಂಜೆ ಶ್ರೀ ಭುಜಂಗರಾಯರ ಅಧ್ಯಕ್ಷತೆಯಲ್ಲಿ ಶ್ರೀ ಬಿ ವೈಕುಂಠ ಬಾಳಿಗರಿಂದ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ರಾಧಾಬಾಯಿ ಎಲ್ ರಾಯರು ಸ್ವಾಗತ ಭಾಷಣ ಮಾಡಿದರು. ಹಲವರ ಮಾತುಗಳಾದನಂತರ ಕಾರ್ಯದರ್ಶಿ ಕೆ. ಶೀಲಾ ಅಭಿನಂದಿಸಿದರು.

'ಜನಮತ' ಸಾಪ್ತಾಹಿಕ—ಪತ್ರಿಕೆಯ ಪ್ರಾರಂಭೋತ್ಸವವು ತಾ. 31ರಂದು ಶ್ರೀ ಸಂಜೀವ ಪಿ. ಕುಡ್ವರ ಅಧ್ಯಕ್ಷತೆಯಲ್ಲಿ 'ಜನಮತ' ಕಾರ್ಯಾಲಯದಲ್ಲಿ ಜರಗಿತು. ಸಂಪಾದಕ ಶ್ರೀ ಕುಚೇರು ಮಂಜುನಾಥ ನಾಯ್ಕರು ಪತ್ರಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಅಪೀಲ್‌ನಲ್ಲಿ ಬಿಡುಗಡೆ—ಶ್ರೀ ಕೆ. ಆರ್. ಸಂಜೀವ ರಾವ್, ಲೇಂಡ್‌ವಾರ್ಡ್ ಮತ್ತು ವ್ಯಾಪಾರಿಗಳು ಕುಂಬಳೆ ಕೋಟೆ, ಕುಂದಾಪುರ ತಾಲೂಕು ಇವರಿಗೆ ಪಿನಲ್ ಕೋಡಿನ 420ನೆ ಕಲಂ ಪ್ರಕಾರ ಮೋಸದ ಆರೋಪದ ಮೇಲೆ ಆದ ದಂಡನೆಯು ಅಪೀಲಿನಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಪಿ. ಟಿ. ರಾಮನ್ ನಾಯರ್ ಅವರಿಂದ ರದ್ದುಗೊಳಿಸಲ್ಪಟ್ಟಿದೆಯಾಗಿ ತಿಳಿಯುತ್ತೇವೆ.

ಜೂನ್ ತಾ. 14ರ ನವಯುಗದಲ್ಲಿ ಪ್ರಕಟವಾದ ಮಂಗಳೂರು ವಾರ್ತೆಯಲ್ಲಿ ಈ ಮಹನೀಯರ ಕುರಿತು ಆಕ್ಷೇಪಕರವಾದ ಶಬ್ದಗಳು ಇದ್ದುದಕ್ಕೆ ವಿಷಾದ ಪಡುತ್ತೇವಲ್ಲದೆ, ಶ್ರೀಯುತರನ್ನು ಅಗೌರವಿಸುವ ಉದ್ದೇಶವು ನಮಗೆ ಖಂಡಿತ ಇರಲಿಲ್ಲವೆಂದು ಸೂಚಿಸಬಯಸುತ್ತೇವೆ.

ಶಿಕಾರಿಗಳಿಗೆ ಸುಸಂಧಿ—ಕಾರ್ಕಳ ತಾಲೂಕಿನ ಸೀತಾನದಿ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಆರೇಳು ಜನರನ್ನು ಕೊಂದಿಕ್ಕಿದ ನರಭಕ್ಷಕ ಹುಲಿಯನ್ನು ಹಿಡಿ, ಕುಚ್ಚೂರು, ನಡ್ಪಾಲ್ ಮೊದಲಾದ ಹಳ್ಳಿ ಪ್ರದೇಶಗಳಲ್ಲಿ ಇದೇ ತಾ. 10ರಿಂದ 14ರ ವರೆಗೆ ಶಿಕಾರಿ ಮಾಡುವರೆ ಅನುಮತಿ ಕೊಡಲಾಗಿದೆ ಎಂದು ಕಾರ್ಕಳ ತಹಶಿಲ್ದಾರರು ತಿಳಿಸುತ್ತಾರೆ.

ಬೊಂಬಾಯಿ—ಟಗ್ಗಾಡಿ ಹೋಬಳಿ ಮೊಗವೀರ ಮಹಾಜನ ಸಂಘ, ಬೊಂಬಾಯಿ. ಇದರ ಹತ್ತನೆ ವರ್ಷ ವರ್ಧಂತ್ಯುತ್ಸವವು ಕಳೆದ ತಾ. 26ರಲ್ಲು ಕೋಟೆಯೊಳಗಣ ಅಪೆಲ್ಲೋ ಬೀದಿಯ ಡಾ। ಎಸ್. ಎಮ್. ಮೆಮೋರಿಯಲ್ ಹಾಲಿನಲ್ಲಿ ಶ್ರೀ ಶೇರ್ ಗೋವರ್ಧನ ದಾಸ್, ಬಿ. ಮೊರಾರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ನಟಲಾಲ್ ಡಿ. ಪಾರಿಖ್, ಎಮ್. ಕೆ. ಅಮೀನ್, ಗೋಪಾಲ ಕೋಟ್ಯಾನ್, ಜಿ. ಟಿ. ಸುವರ್ಣ, ಕೆ. ಟಿ. ಕರ್ಕೇರ ಮೊದಲಾದವರು ಸಂಘದ ಕಾರ್ಯ ಕಲಾಪಗಳನ್ನು ಕೊಂಡಾಡಿ, ಮೊಗವೀರ ಸಮಾಜದ ಪುರೋಭಿವೃದ್ಧಿಯ ಕುರಿತು ಭಾಷಣವಿತ್ತರು.

The Canara Mutual Assurance Company Limited

ನೋಟೀಸು

ಟಿ. ವ್ಯಾಸರಾಯ ಆಚಾರ್ಯ ಪಟೇಲ್, ತೋನ್ಸೆ ಈಸ್ಟ್ ವಿಲೇಜ್, ಕಲ್ಯಾಣಪುರ (ದಕ್ಷಿಣ ಕನ್ನಡ) ಇವರು ಮೇಲ್ಕಾಣಿಸಿದ ಕಂಪೆನಿಯಲ್ಲಿ ಇಳಿಸಿದ ಐದು ಜೀವವಿಮಾ ಪಾಲಿಸಿಗಳು ನಂಬ್ರ 15179, 15866, 18866, 18705 ಮತ್ತು 19058 ಕಳೆದು ಹೋದ ಬಗ್ಗೆ ನೋಟೀಸು ಕೊಡಲಾಗಿದ್ದು ಒಂದು ತಿಂಗಳೊಳಗಾಗಿ ನಮ್ಮ ಕಡೆಗೆ ತಕರಾರು ಬಾರದಿದ್ದಲ್ಲಿ ಡುಪ್ಲಿಕೇಟು ಪಾಲಿಸಿಗಳನ್ನು ಕೊಡಲಾಗುವುದು.

T. R. A. Pai.
Managing Director.
Udipi 29-8-1951.

ಉಡುಪಿ ಡಿ. ಮು. ಕೋರ್ಟಿನಲ್ಲಿ
ಸ್ಮಾಲ ನಂಬ್ರ 414/51

ಕೊರಗ ಮರಕಾಲ್ತಿ ಕೂಡ 2ಜನರು —ವಾದಿರು

ಮತ್ತು

ಕಲ್ಯಾಣ ಹೆಗ್ಗಡ್ತಿ ಕೂಡ 2ಜನರು —ಪ್ರತಿವಾದಿರು

1ನೇ ಪ್ರತಿವಾದಿ ಕಲ್ಯಾಣ ಹೆಗ್ಗಡ್ತಿ- ಅಂಜಾರು ಕೃಷ್ಣಮ್ಮಹೆಗ್ಗಡ್ತಿಯ ಮಗಳು ಉಡುಪಿ ತಾಲ್ಲೂಕು ಅಂಜಾರು ಗ್ರಾಮದಲ್ಲಿರುವವರು:—

ಉಡುಪಿ ತಾಲ್ಲೂಕು ಪಡುತೋನ್ಸೆ ಗ್ರಾಮದಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿರುವ ನಂಬ್ರ 433ನೇ ಪಟ್ಟಾ ಬಾಬ್ತು 1950ರಲ್ಲು ಮತ್ತು 1951ರಲ್ಲು ವಾದಿರು ಸರಕಾರಕ್ಕೆ ಕೊಟ್ಟ ಕಿಸ್ತೆಯನ್ನು 1ನೇ ಪ್ರತಿವಾದಿಯಿಂದ ಕೂಡ ಕೇಳಿ ತಂದ ವಾದಿರ ಮೇಲ್ಕಂಡ ದಾವೆಯು ತಾ 28-9-51ಕ್ಕೆ ಅಪ್ಪೆರು ತನಿಕೆಗೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಗಳು ಇದ್ದರೆ, ಸದ್ರಿ ಕೋರ್ಟು ಮುಂದೆ ಸದ್ರಿ ತಾ. 28-9-51ರಲ್ಲು ಹಗಲು ಘಂಟೆ 10-45ಕ್ಕೆ ಹಾಜರಾಗಿ ಪ್ರತಿಹೇಳಿಕೆ ಮಾಡಿಕೊಳ್ಳಬೇಕಾಗಿಯೂ, ಇಲ್ಲವಾದರೆ ನಿಮ್ಮನ್ನು ಗೈರ್ಹಾಜರಿ ಮಾಡಿ, ದಾವೆಯು ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು.

(By order of the court)

K. Vittal Nayak.

UDIPI, 1-9-51

In The High Court Of Judicature At Madras

Ordinary Original Civil Jurisdiction
O. P. No. 210 of 1951

In the matter of the Banking Companies Act
AND
In the Matter of the Agricultural & Industrial Bank Ltd., Coondapoor

The Agricultural & Industrial Bank Ltd, ... Petitioner

NOTICE is hereby given that a petition under Sec. 37 of the Banking Companies Act 1949 for stay of commencement or continuance of any proceedings against the petitioner was presented by the petitioner on 22nd day of August 1951 and that the same is directed to be heard before the Judge sitting in Chambers on 24th september 1951. Any person desirous of supporting or opposing the making of an order as prayed in the petition should appeal at the time of hearing by himself or by his Advocate; and a copy of the petition will be furnished to any person requiring the same by the undersigned on payment of the regulated charges for the same.

Interim stay has been granted by order dated 23-8-1951

1-A, Thomas Road,
T. Nagar, Madras 17
31-8-51

A. NARAYANA PAI
Advocate for Petitioner

NOTE:- Any person who intends to appear on the hearing of the said petition must serve or send by post to the above named notice of his intention so to do. The notice must state the name and address of the person or if a firm the name and address of the firm and must be signed by the person or firm or his or their advocate and must be served or if posted must be sent by post so as to reach the above named not later than 3 o' clock in the afternoon of 23-9-51

THE PANGAL NAYAK BANK LIMITED.

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಉಡುಪಿ ಡಿ. ಮು. ಕೋರ್ಟಿನಲ್ಲಿ.
ಸ್ಮಾಲ್ ಕೋಸ್‌ವ್ಯಾಜ್ಯ 297/1951.

ಕಲ್ಸಂಕ ನಾಗೇಶ ಪೈ —ವಾದಿ

ಮತ್ತು

ಕೆ. ಮಾಧವ ಭಟ್ಟ —ಪ್ರತಿವಾದಿ

ಇವರೊಳಗೆ.

ಕೆ. ಮಾಧವ ಭಟ್ಟ, ಕಟಪಾಡಿ ಮತ್ರ್ಯ ಭಟ್ಟರ ಮಗ C/o ಕೆ. ವಾಮನ ಭಟ್ಟ, ಮೆನೆಜರ್, ದಿ ಹನುಮಾನ್ ಟ್ರಾನ್ಸಪೋರ್ಟ್ ಕಂಪೆನಿ ಲಿಮಿಟೆಡ್, ಸಿರ್ಸಿ, ಉತ್ತರ ಕನ್ನಡ —ಪ್ರತಿವಾದಿ,

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯು ವಾದಿಯ ಅಂಗಡಿಯಲ್ಲಿ ತಾ. 2 7-1949ರ ಲಾಗಾಯ್ತು ತಾ 9-11-1950ರ ವರೆಗೆ ನಡೆಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಅಸ್ಸಲು ರೂ 73-11-3, ಒಟ್ಟು ಪತ್ತು ರಿಜಿಸ್ಟ್ರರ್ ನೋಟೀಸಿನ ಖರ್ಚು ಬರೆಮಾಡಿಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಅಖೈರು ತನಿಖೆಗೆ ತಾ 28-9 1951ಕ್ಕೆ ಇಡಲಾಗಿಯದೆ. ಆ ಕುರಿತು ಪ್ರತಿವಾದಿಯು ಉದಾಹರಣೆ ಇದ್ದಲ್ಲಿ ಸದ್ರಿ ತನಖಿ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಪ್ರತಿಹೇಳಿ ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ವ್ಯಾಜ್ಯವು ಪ್ರತಿವಾದಿಯ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿಯದೆ

K. Varadaraya Pai.
Advocate for Plaintiff.
ಉಡುಪಿ. ತಾ. 2 9-1951.

ವಾರದ ಭವಿಷ್ಯ

ತಾರೀಕು 6-9-51 ರಿಂದ — ತಾರೀಕು 12-9-51 ರವರೆಗೆ

ಮೇಷ—ಬಂಧುವರ್ಗದವರ ಜೊತೆ ಮಿತ್ರಜನರ ಸಹಾಯವೂ ಉತ್ತಮವಾಗಿರುವುದರಿಂದ ನೀವೀವಾರದಲ್ಲಿ ಕೈಕೊಂಡ ಹಲವಾರು ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಖರ್ಚಿಗೆ ಬೇಕಾದಷ್ಟು ಹಣಸಂಪಾದನೆಯೂ ಆಗುವದು. ಆರೋಗ್ಯವು ತೃಪ್ತಿಕರವಾಗಿದ್ದರೂ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ದುರ್ಜನರ ಸಹವಾಸದಿಂದಾಗಿ ಧನಮಾನಗಳಿಗೆ ಧಕ್ಕೆ ತಗಲುವ ಸಂಭವವಿದೆ. ವಾರದ ಅಂತ್ಯದ ದಿನಗಳು ವಿಜಯ ಲಾಭ ಸಂತಸಪ್ರದಾಯಿಗಳಾಗಿವೆ.

ವೃಷಭ—ಸುಸಮಯವು ಸನ್ನಿಹಿತವಾಗಿರುವುದು. ಪರರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಸ್ವಯಮೇವ ಕಾರ್ಯರಂಗದಲ್ಲಿ ಮುನ್ನುಗ್ಗಿ ಜಯಶ್ರೀಯನ್ನು ಪಡೆಯಲು ಸಮರ್ಥರಿರುವಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಧನಪ್ರಾಪ್ತಿಯಾಗಲಿದೆ. ಕಷ್ಟಸಾಧ್ಯವಾದ ಕಾರ್ಯವೂ ನಿಮ್ಮ ಭಾಗಕ್ಕೆ ತೃಣಪ್ರಾಯವೆನಿಸುವದು. ಸಮಾಜದಲ್ಲೂ ರಾಜಕೀಯ ಕ್ಷೇತ್ರದಲ್ಲೂ ಸ್ಥಾನಮಾನಗಳು ಲಭಿಸುವವು. ಕೈಕೆಳಗಿನ ಜನರು ಕೆಲವೊಮ್ಮೆ ಆಜ್ಞೋಲ್ಲಂಘನ ಮಾಡುವುದರಿಂದ ಮನಸ್ಸಿಗೆ ಪಶ್ಚಾತ್ತಾಪ ವುಂಟಾದೀತು. ವಾರಾದಿಯ 3 ದಿನಗಳು ಅತ್ಯುತ್ತಮವಿವೆ.

ಮಿಥುನ—ಶಕ್ತಿಮೀರಿ ದುಡಿಯುವಿರಿ. ಆದರೆ ಪ್ರಯತ್ನಕ್ಕೆ ತಕ್ಕಫಲ ಲಭಿಸಲೊಲ್ಲದು. ಉತ್ಪತ್ತಿಯು ಅಲ್ಪವಾಗಿದ್ದು ಖರ್ಚು ಅತಿಯಾಗುವುದರಿಂದ ಸದಾ ಹಣದ ಬಿಕ್ಕಟ್ಟು ತಪ್ಪಲೊಲ್ಲದು. ವಿದ್ಯೋಪಜೀವಿಗಳಿಗೂ ನೌಕರ ವರ್ಗದವರಿಗೂ ವಿದ್ಯಾರ್ಥಿವಿದ್ಯಾರ್ಥಿನಿಯರಿಗೂ ಕಾಲವು ಪ್ರತಿಕೂಲವಾಗಿರುವದು. ಚಂಚಲ ಮನಸ್ಕರಾದ ನಿಮ್ಮ ಆರೋಗ್ಯವೂ ಸಿತ್ತೋದ್ರೇಕದಿಂದಾಗಿ ಕೆಡಲಿದೆ. ತಾ. 7 ರಿಂದ 10ರ ವರೆಗಿನ ದಿನಗಳಲ್ಲಿ ಕಾರ್ಯದಲ್ಲಿ ವಿಜಯ ಸಾಕಷ್ಟು ಧನಲಾಭ ಸುಖಸಂತೋಷಗಳು ಲಭಿಸುವವು

ಕರ್ಕಾಟಕ—ದೈವವು ಅನುಕೂಲವಾಗಿರುವ ಈ ಕಾಲದಲ್ಲಿ ನೀವು ಅದಿದ್ದೇವನಾಶು ಮಾಡಿದ್ದೇ ಕಾಯ್ದ ಸಿಗುವದು. ಇಂತಹ ಸುಸಮಯದಲ್ಲಿ ಉದಾಸೀನರಾಗಿ ಕಾಲಕಳೆಯದೆ ಸತ್ಕಾರ್ಯ ಪ್ರವೃತ್ತರಾಗಿ ಇಷ್ಟಾರ್ಥವನ್ನು ಪಡೆಯಿರಿ ಕೇವಲ ಅದೃಷ್ಟವೊಂದೇ ಫಲಕಾರಿಯಾಗದು. ಜೊತೆಯಲ್ಲಿ ಪುರುಷಯತ್ನವು ಸೇರಬೇಕಾಗಿದೆ ನಿಮ್ಮ ಸಕಲ ಬಯಕೆಗಳೂ ನೆರವೇರುವವು ವಾಹನಗಳಲ್ಲಿನ ಪ್ರಯಾಣಗಳನ್ನು ಕಡಿಮೆಮಾಡಿರಿ ಅಪಘಾತಗಳು ಸಂಭವಿಸುವ ಯೋಗವಿದೆ ವಾರಾಂತ್ಯದ 4ದಿನಗಳು ಅತ್ಯುತ್ತಮವಿವೆ.

ಸಿಂಹ—ಶುಕ್ರನನ್ನು ಹೊರತಲ್ಲಾ ಗ್ರಹರೂ ಪ್ರತಿಕೂಲಸ್ಥಾನದಲ್ಲಿರುವ ಕಾರಣ ನಿಮ್ಮ ಆಶಾಕಾಂಕ್ಷೆಗಳು ಗಗನಕುಸುಮದಂತೆ ಆಗಲಿವೆ ಮಾಡಿದ ಪ್ರಯತ್ನಗಳು ನೀರಲ್ಲಿಮಾಡಿದ ಹೋಮದಂತೆ ವ್ಯರ್ಥವಾಗುವವು. ಕಷ್ಟನಷ್ಟಗಳು ಅಸಹನೀಯವಾಗುವವು. ಶತ್ರುಜನರ ಪೀಡೆಯು ಸದಾ ಬಾಧಿಸುತ್ತಿರುವುದು ಆಕಸ್ಮಿಕ ಪ್ರವಾಸದಿಂದಾಗಿ ಕಷ್ಟನಷ್ಟ ದೇಹಾಲಸ್ಯಾದಿಗಳು ತಲೆದೋರುವವು ಸ್ತ್ರೀ ಜನರ ಕೋಪಾಗ್ನಿಗೆ ಸಿಲುಕಲಿರುವಿರಿ. ವಾರದ ಅಂತ್ಯದ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲ.

ಕನ್ಯಾ—ಸುಖದುಃಖ ಲಾಭನಷ್ಟಗಳು ಸರಿಸಮಾನವಾಗಿ ಫಲಿಸುವವು ನಿಮಗೀವಾರದಲ್ಲಿ. ವಾಕ್ಚಾತುರ್ಯದಿಂದ ಜನರನ್ನು ವಶೀಕರಿಸುವ ಶಕ್ತಿಯುಳ್ಳ ನೀವು ಜನಾದರಕ್ಕೆ ಪಾತ್ರರಾಗುವಿರಿ ಹಲವಾರು ತೀರಾದ ಉದ್ಯಮದಿಂದ ಧನಗಳಿಸುವಿರಿ, ಹೆಚ್ಚಿನ ಕಾರ್ಯಗಳಲ್ಲಿ ವಿಜಯವೂ ಲಾಭವೂ ಲಭಿಸುವದು. ವಿಷಾಗ್ನಿಗಳ ಭಯಕ್ಕವಕಾಶವಿದೆ. ಸ್ವಜನರ ವಿಯೋಗದಿಂದಾಗಿ ಕಿಂಚಿದ್ದುಃಖ ಸಂಭವಿಸೀತು. ತಾ. 7, 8 ಈ ದಿನಗಳಲ್ಲಿ ಸ್ತ್ರೀಸುಖ ವಿಜಯ ಲಾಭಗಳಿವೆ.

ತುಲಾ—ದೇಹಾರೋಗ್ಯದ ಕಡೆಗೆ ಹೆಚ್ಚಿನ ಲಕ್ಷ್ಯವಹಿಸಿರಿ. ಕಫವಾತ ದೋಷದಿಂದಾಗಿ ಆರೋಗ್ಯಕ್ಕೆ ಹಾನಿಯಿದೆ. ಮೇಲಿನವರ ಶನಿಯಿಂದಾಗಿ ಅನರ್ಥಪರಂಪರೆಗಳ ಪ್ರಸ್ತಾಪಗಳಿದ್ದರೂ ಲಾಭಸ್ಥ ಗ್ರಹತ್ರಯದಿಂದಾಗಿ ಅನಿಷ್ಟಗಳಿಂದ ಮುಕ್ತರಾಗುವಿರಿ ನಿಮ್ಮ ಉತ್ಪನ್ನಕ್ಕಿಂತ ಅಧಿಕವಾದ ಫಲಪ್ರಾಪ್ತಿಯಿದೆ ಪ್ರಮಾದವಿಗಳಿಗೆ ದಿನಚರಿಯು ಸ್ವಲ್ಪ ಕಷ್ಟವಾಗುವದು ಸಾಂಸಾರಿಕ ತಾಪತ್ರಯಗಳು ಕ್ರಮವಾಗಿ ಶಾಂತವಾಗುವವು. ತಾ 6, 9, 10 ಈ ದಿನಗಳಲ್ಲಿ ನಿಮ್ಮ ಅಭೀಷ್ಟವು ಕೈಗೂಡುವುದು

ವೃಶ್ಚಿಕ—ನೀಚನಾದ ಅಂಗಾರಕನ ಕಾಟದಿಂದಾಗಿ ದೇಹದಲ್ಲಿ ಸದಾ ಆಲಸ್ಯ ನಿಶ್ಶಕ್ತಿ ವ್ಯಸನಾದಿಗಳು ತಪ್ಪಲಾರವು ಆದರೋ ಇತರ ಗ್ರಹರ ಬಲಾಧಿಕ್ಯ ದೆಸೆಯಿಂದಾಗಿ ನಿಮ್ಮ ಇತರ ಕಾರ್ಯಕಲಾಪಗಳು ಸುಗಮವಾಗಿ ನೆರವೇರುವವು ಗ್ರಹಕೃತ್ಯದಲ್ಲಿನ ಪಶುಭೃತ್ಯಾದಿ ಪರಿವಾರಗಳು ಸುಖದಿಂದಿರುವವು ಕೆಲವೊಮ್ಮೆ ಮಂಗೋಲದ ದೆಸೆಯಿಂದಾಗಿ ವಾಕ್ಕಲಹಗಳಿಗೆ ಸಿಲುಕಲಿರುವಿರಿ. ಪರಸ್ತ್ರೀ ಧನ ಲಭಿಸುವ ಯೋಗವಿದೆ. ತಾ 7, 8, 12 ಅನುಕೂಲ

ಧನು—ಇಂದಿನ ಪರಿಸ್ಥಿತಿಯು ತಂಬಾ ಕಠಿಣವಾಗಿರುವುದು ಆಪ್ತೇಷ್ಟರೂ ಬಂಧುಗಳೂ ನಿಮ್ಮನ್ನು ಕಡೆಗಣ್ಣಿನಿಂದಲೇ ನೋಡುವರು ತಕ್ಕಾಪಿ ಅಷ್ಟಮಸ್ಥ ನೀಚ ಅಂಗಾರಕನು ಶತ್ರುಜನರ ಪೀಡೆಯನ್ನು ಧನಮಾನಗಳಿಗೆ ಹಾನಿಯನ್ನೂ ಮತ್ತು ದೇಹದಲ್ಲಿ ಕಜ್ಜಿ ಹುಣ್ಣು ಗಾಯ ಮಗ್ಗೆಗಳನ್ನೂ ಮಾಡಿಸಲಿರುವನು ಯಾವ ಉದ್ಯೋಗವನ್ನು ಕೈಗೊಂಡರೂ ನಷ್ಟವೇ ಅಧಿಕವಾಗುವದು ಹಣದ ಬಿಕ್ಕಟ್ಟಿನಿಂದಾಗಿ ದಿನಗಳೇಳುವುದೇ ಕಷ್ಟಸಾಧ್ಯವಾಗಲಿದೆ. ಆದರೂ ತಾ. 6, 9, 10 ಈ ದಿನಗಳಲ್ಲಿ ಕಿಂಚಿಲ್ಲಾಭ ಸುಖಭೋಗಗಳು ಲಭಿಸುವವು

ಮಕರ—ವಾತ ಪ್ರಕೋಪದಿಂದಾಗಿ ಸಂದುಗೊಂದುಗಳಲ್ಲಿ ನೋವು ಕಾಣಿಸಲಿದೆ. ನಿಂತಲ್ಲಿ ನಿಲ್ಲಲು ಅವಕಾಶ ದೊರೆಯದು. ಕೈಗೊಂಡ ಕಾರ್ಯಗಳಿಗೆ ವಿಘ್ನಗಳೇ ಹೆಚ್ಚು ಮಧ್ಯದಲ್ಲೇ ಕೈಬಿಡಬೇಕಾದ ಪ್ರಸಂಗವು ಬರಲಿದೆ ಗೃಹಕೃತ್ಯದಲ್ಲಿ ಅವ್ಯವಸ್ಥೆಯುಂಟಾಗುವದು ಗಂಡಹೆಂಡಿರೊಳು ಮತಭೇದ ಹುಟ್ಟಿ ನಿತ್ಯಜಗಳವಾದೀತು ಆಕಸ್ಮಿಕ ಪ್ರವಾಸ ಅನಿರೀಕ್ಷಿತ ಖರ್ಚುಗಳು ಸಂಭವಿಸುವವು ಆದರೂ ಹಣದ ತಗಾದೆಯುಂಟಾಗದು ವ್ಯಾಪಾರ ನೌಕರಿ ಮುಂತಾದವುಗಳಲ್ಲಿ ಸಾಕಷ್ಟು ಧನ ಲಭಿಸಲಿದೆ. ತಾ 6, 7, 8, 12 ಈ ದಿನಗಳಲ್ಲಿ ನಿಮ್ಮ ಯತ್ನವು ಸಫಲವಾಗುವದು

ಕುಂಭ:—"ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀ" ಎಂಬ ಗಾದೆಯಂತೆ ಉದ್ಯೋಗಿಯಾದ ನಿಮಗೆ ಹಣವು ತಾನಾಗಿ ಲಭಿಸುವದು ಅಂತೆಯೇ ನಿಮಗೆ ಈ ವಾರದಲ್ಲಿ ಉದ್ಯಮದಿಂದ ಅಧಿಕವಾಗಿ ಧನಾಗಮವಾಗುವದು. ಹಣದ ತಾಪತ್ರಯವಿಲ್ಲ ಆದರೆ ದೇಹಾಲಸ್ಯ ಪರ್ಯಟನ ಸ್ತ್ರೀಜನರಿಂದಾಗಿ ಕಲಹ ಅನಿಷ್ಟ ಅಪಮಾನ ಸ್ತ್ರೀಪುತ್ರರ ರೋಗಾದಿಗಳುಂಟಾಗಲಿವೆ. ಶ್ರಮಜೀವಿಗಳಿಗೂ ವ್ಯಾಪಾರಿಗಳಿಗೂ ದಿನ ಯಾಪನೆಯು ಕೊಂಚ ಕಷ್ಟಸಾಧ್ಯವಾದೀತು. ತಾ. 7, 8, 9, 10 ಅನುಕೂಲ.

ಮೀನ—ಸಾಹಸಿಗಳಾದ ನಿಮ್ಮ ಧೈರ್ಯವು ಅದೇಕೋ ಮಾಯವಾಗುವದು ಶತ್ರುಜನರು ಪ್ರತೀಕಾರಾಸಕ್ತರಾಗುವರು. ಮನೆಯಲ್ಲಿ ಮಕ್ಕಳು ಮರಿಗಳ ಅನಾರೋಗ್ಯದಿಂದ ಹೆಚ್ಚಿನ ಹಣವನ್ನು ವೈದ್ಯರಿಗೆ ತೆರಬೇಕಾಗುವದು. ಸ್ತ್ರೀಯರಿಂದ ವಿರೋಧವುಂಟಾಗಲಿದೆ ಸ್ಥಾನಚ್ಯುತಿಗೆ ಅವಕಾಶವಿದೆ. ಹೆಚ್ಚಿನ ಕಾಲವನ್ನು ಮಾರ್ಗದಲ್ಲಿ ಕಳೆಯಬೇಕಾಗುವ ಪ್ರಸಂಗ ಬರಲಿದೆ ಆದರೆ ದೂರದಸ್ಥರಿಂದಾಗಿ ಮಧ್ಯಾರ್ಧದಿಂದ ದಿನಗಳೆಷ್ಟು ಕಷ್ಟಸಾಧ್ಯವೆನಿಸುವದು. ತಾ. 9, 10, 11, 12 ಈ ದಿನಗಳು ಇತರ ದಿನಗಳಿಗಿಂತ ಉತ್ತಮವೆನಿಸುವವು

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತರಿಗೆ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿರಗು, ಪ್ರದರರೋಗ, ಹೊಟ್ಟೆಶುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹಿರವೀವಲ್ಲಿ ಬರಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು.—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು.—ಹುಬ್ಬಳ್ಳಿ ಭಾಮರಾ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ವಾಸಪ್ಪ ಸಿದ್ಧಲಿಂಗಪ್ಪ ಭಾರದಾಪಳರ ರಿಜಾಪುರ ನಂಜುಂಡೇಶ್ವರ ಮಾರ್ಕೆಟ ದಾವಣಗೇರಿ ದಾವಣಗೇರಿ — ದಾವಣಗೇರಿ ಪ್ರೆಸ್ ಆರ್ ಎಲ್ ಕಮೀಶನ ಕಮಿಟಿ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಎಲ್ ಐ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ಪಿ. ಕೆ ಶಿವರಾಮರಾವ್, ಕುಂದಾಪ್ಪು, ಉಡುಪಿ.

ಬಹುಕಾಲ ಬಾಳುವ ಶಕ್ತಿಯುಳ್ಳದ್ದಾಗಿದೆ

'ಎಸ್ಟ್ರೆಲಾ' ಬ್ಯಾಟರಿಗಳು ನಿಮಗೆ ಬೇಕಾದ ಪ್ರಕಾಶಮಾನವಾದ ಬೆಳಕನ್ನು ಕೊಡುವುದಲ್ಲದೆ ಇವು ತುಕ್ಕು ಹಿಡಿಯದೆ ಹೊಸದಾಗಿಯೇ ಇದ್ದು ಬಹುಕಾಲ ಬಾಳಿಕೆ ಬರುತ್ತವೆ.

ಎಸ್ಟ್ರೆಲಾ ಬ್ಯಾಟರಿಗಳು

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್, ಬೊಂಬಾಯಿ ೧೯.

ಶಾಖೆಗಳು:

ಕಲ್ಕತ್ತಾ, ದೆಹಲಿ, ಮದ್ರಾಸು, ಕಾನ್‌ಪೂರ್, ನಾಗಪೂರ್.



ಬೇರೆ ಬೇರೆ ವಿಮಾ ಕಂಪೆನಿಗಳ ಬ್ರಾಂಚ್ ಮೆನೇಜರರಾಗಿದ್ದು ನವಯುಗಕ್ಕೆ ಸಹಕಾರ ನೀಡುತ್ತಿರುವ
ಶ್ರೀ. ಎಂ. ಸುಂದರರಾಮ ಶೆಟ್ಟರು

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ನದರ ಜನರಲ್ ಮೆನೇಜರರೂ ಉಡುಪಿಯ ಸರ್ವಜನಪ್ರಿಯ ತರುಣರೂ ನವಯುಗದ ಆಪ್ತೀಯರೂ ಆದ
ಶ್ರೀ. ಟಿ. ಎ. ಪೈಗಳು

ನವಯುಗವು ಉಡುಪಿಗೆ ಬಂದಂದಿನಿಂದಲೂ ಅಭಿಮಾನಪೂರ್ವಕ ಸಹಕಾರವನ್ನು ನೀಡುತ್ತಿರುವ
ಶ್ರೀ ಬಿ. ಸಚ್ಚಿದಾನಂದ ಹೆಗ್ಡೇರು.
ಈಗ ಪೃಥ್ವೀ ಇನ್ಸೂರೆನ್ಸ್ ಕಂಪೆನಿಯ ಬ್ರಾಂಚ್ ಸೆಕ್ರೆಟರಿಗಳಾಗಿದ್ದಾರೆ.

ನವಯುಗ ಪ್ರೆಸ್ಸಿಗೆ ಭವ್ಯ ಕಟ್ಟಡವನ್ನಿತ್ತು, ಇತರ ಸಲಹೆ ಸಹಕಾರವನ್ನು ನೀಡುತ್ತಿರುವ ಕೃಷ್ಣಾಪುರ ಮಠದ
ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು.

ಲೇಖನ ಮತ್ತು ಇನ್ನಿತರ ಸಹಕಾರಗಳ ಮೂಲಕ ನವಯುಗದ ಬಗ್ಗೆ ಸದಾ ಸಹಕರಿಸುತ್ತಿದ್ದ
ದಿ| ಕೊರಡ್ಕಲ್ ಶ್ರೀನಿವಾಸ ರಾಯರು.

ನವಯುಗದ ಧ್ಯೇಯಧೋರಣೆಗೊಪ್ಪುವ ವಿಚಾರವಂತ ಹಾಗೂ ಕ್ರಾಂತಿಕಾರಕ ಲೇಖನಗಳನ್ನಿತ್ತು ಬಹಳ ಕಾಲ ಸಹಕರಿಸಿದ
ದಿ| ಪಂಡಿತ ತಾರಾನಾಥರು

ನವಯುಗದ ಹಿತಚಿಂತಕ ಹಾಗೂ ಕಾರ್ಕಳ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ
ಶ್ರೀ ಶ್ಯಾಮರಾಯ ಸೆಟ್ಟರು

ದ. ಕನ್ನಡದ ಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ನವಯುಗದ ಶುಭಾಕಾಂಕ್ಷಿಗಳೂ ಆದ
ಶ್ರೀ ಕೆ. ಕೃಷ್ಣರಾಯರು



ನವಯುಗವನ್ನು ಉಡುಪಿಗೆ ಬರುವಂತೆ ಅಪ್ಪಣೆ ನಿತ್ತು ಮಹತ್ವದ ಕೊಡುಗೆ ತನಕವೂ 'ನವಯುಗ'ಕ್ಕೆ ಪ್ರಕಾಶನಗ ಆಶೀರ್ವಾದವನ್ನಿತ್ತು ಅನುಗ್ರಹಿಸಿದ ವೃಂದಾವನಸ್ಥ ಫಲಿಮಾರು ಮಠದ
ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd. No. M. 3618

13-9-1951

LICENCE No. 31
Licensed to Post without Prepayment

31ನೆ ವರ್ಷಾರಂಭ

Founder: Sri A. B. Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ. ಎ. ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನ ವ ಯು ಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೨

NAVAYUGA WEEKLY Post Box No. 22 UDIPI.

Vol 31
No. 2

ನಮ್ಮ ಹುರಿಯಾಳುಗಳು

ಹುರಿಯಾಳುಗಳ ಆಯ್ಕೆಯ ಕೆಲಸ ಭರದಿಂದ ನಡೆಯುತ್ತಲಿದೆ. ಜನತಾ ರಾಜ್ಯದಲ್ಲಿ ಜನತೆ ಇಚ್ಛಿಸಿದ ಪ್ರತಿನಿಧಿಗಳು ಆರಿಸಿಬರಬೇಕಾದುದು ಸಹಜವೇ. ಆದರೆ ಇಂದು ನಡೆಯುತ್ತಿರುವ ಹುರಿಯಾಳುಗಳ ಆಯ್ಕೆಯ ನಿಯಮವನ್ನು ನೋಡಿದರೆ ಕೊಂಚ ಮತಾಭಿಪ್ರಾಯಕ್ಕೆ ವಿರುದ್ಧವಾದ ಹಾಗೆ ತೋರುತ್ತದೆ. ಇದು ಜನತೆಯ ತಪ್ಪೋ—ಕಾಂಗ್ರೆಸ್ ಕಾರ್ಯಕರ್ತರ ತಪ್ಪೋ ಎಂದು ನಿಷ್ಕರ್ಷಿಸಿ ಹೇಳಲು ಬರುವಂತಿಲ್ಲವಾದರೂ ಕಾಂಗ್ರೆಸ್ ಕಾರ್ಯಕರ್ತರ ಆದೇಶ ಪ್ರಗತಿದಾಯಕವಾಗಿಲ್ಲವೇನೋ ಎನಿಸುತ್ತದೆ!

ಕಾಂಗ್ರೆಸ್ಸಿನ ಉಚ್ಚಾದರ್ಶಗಳನ್ನು ಪಾಲಿಸಿದವರಿಂದಲೂ ಸ್ವಾತಂತ್ರ್ಯಾಂದೋಲನದಲ್ಲಿ ಜೈಲುವಾಸ ಅನುಭವಿಸಿದುದರಿಂದಲೂ—ಅತನಿಗೆ ಹುರಿಯಾಳ್ತನದ ಯೋಗ್ಯತೆ ಉಂಟೆಂದು ಅಂತಹನಿಗೆ ಪ್ರಥಮವಾಗಿ ಪ್ರಾಶಸ್ತ್ಯವನ್ನು ಕೊಡಬೇಕೆಂದೂ ಒಂದು ತಾತ್ವಿಕವಾದ ನಿಯಮವಿದೆ. ಇಷ್ಟರಿಂದಲೇ ಅವನು ಪರಿಪೂರ್ಣನೆಂದು ಸಾರುವುದೂ ಅತನನ್ನು ಎತ್ತಿಹಿಡಿಯುವದೂ ಇಂದು ಕಾಂಗ್ರೆಸ್ಸಿನಲ್ಲಿ ನಡೆದಿದೆ. ಈ ವಾದವನ್ನು ಇದ್ದಕ್ಕಿದ್ದಂತೆಯೆ ಒಪ್ಪುವಂತಹ ಸತ್ಯಪ್ರಾಮಾಣಿಕತನ ಉಳ್ಳಂತ ಕಾಲವಿದಲ್ಲ. ಆಗಿನ ಕಾಲದಲ್ಲಿ ಕಾಂಗ್ರೆಸ್ಸಿನ ಬಗ್ಗೆ ಅತನು ತ್ಯಾಗ ಹೋರಾಟಗಳ ಮೂಲಕ ಸಹಾಯವನ್ನಾಡಿದ್ದರೆ- ಕಾಂಗ್ರೆಸ್ಸಿನ ತತ್ವಗಳ ಬಗ್ಗೆ ನಿಷ್ಠೆಯಿದ್ದರೆ ಇಂದು ಅದೇ ಮನೋವೃತ್ತಿ ಅತನಲ್ಲಿದೆಯೇ? ಎಂಬುದನ್ನು ನಾವು ಮುಖ್ಯವಾಗಿ ಲಕ್ಷಿಸಬೇಕು. ಸ್ವಾತಂತ್ರ್ಯ ಸಿಕ್ಕ ಬಾಲ್ಯ ವರ್ಷಗಳಲ್ಲಿ ಜನತೆಗೆ ಕೇಡು ಬಯಸಿಯೂ—ದೇಶದಲ್ಲಿ ಅವ್ಯಾಪಾರ ನಡೆಸಿಯೂ ಕಾಂಗ್ರೆಸ್ಸಿನ ಹೆಸರಿಗೆ ಕಳಂಕ ತಂದವರೂ ಹಿಂದೆ ನಡೆಸಿದ ಹೋರಾಟದ ಹೇತುವಿನಿಂದ ಜನತೆಯ ಪ್ರತಿನಿಧಿಗಳಾಗಲರ್ಹರಾದಾರೇ? ರಾಜಕೀಯ ಸಂಸ್ಥೆಗೆ ಪ್ರಥಮ ಪ್ರಾಶಸ್ತ್ಯ ಕೊಡುವದೇಕೆ? ಹಿಂದೆ ಅವರು ಕಾಂಗ್ರೆಸ್ಸಿನ ಬಗ್ಗೆ ಅದರ ತತ್ವಾಚರಣೆಯ ಬಗ್ಗೆ—ಪ್ರಾಣಾರ್ಪಣೆ ಮಾಡಲೂ ಸಿದ್ಧರಿದ್ದರು. ಇಂದಿಗೂ ಅದೇ ರಾಜಕೀಯ ದೃಷ್ಟಿ—ದೇಶಸೇವಾ ಸದ್ಬುದ್ಧಿ ಅವರಲ್ಲಿದ್ದೀತು. ಕಾಂಗ್ರೆಸ್ಸಿನ ತತ್ವಾಚರಣೆಗೆ ಭಂಗಬರದು—ಎನುವ ಒಂದೇ ಅಭಿಪ್ರಾಯದಿಂದ ಕಾಂಗ್ರೆಸು ಅವರನ್ನು ಆರಿಸುವಲ್ಲಿ ಪ್ರಾಶಸ್ತ್ಯ ಕೊಡುವ ನಿಯಮವನ್ನಿಟ್ಟುಕೊಂಡಿದೆ. ಅದೇ ಮೂಲತತ್ವವನ್ನಿಟ್ಟುಕೊಂಡು ಪ್ರಾಶಸ್ತ್ಯ ಕೊಡುವುದು ತಪ್ಪಾಗಲಾರದು! ತತ್ವಚರ್ಚೆ ಮಾಡಬೇಕಾದುದು ಹಿಂದಿನದನ್ನು ಮಾತ್ರವಲ್ಲ; ಇಂದಿನದನ್ನೂ ಕೂಡಾ ಎಂಬುದೇ ನಮ್ಮ ವಾದ!

ಸ್ವಾತಂತ್ರ್ಯ ಸಿಕ್ಕ ಮೇಲೆ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿದ ದಾಖಲೆಗಳು ಸಾಕಷ್ಟಿವೆ. ಈ ನಾಲ್ಕು ವರ್ಷಗಳಲ್ಲಿ ಬೇರೆಯವರನ್ನು ತುಳಿದು ನಡೆದ ಸಂದರ್ಭಗಳು ಬಹಳ ಕಡಿಮೆ. ತುಳಿದು ನಡೆಯುವ ಸಾಹಸವಾದರೂ ಉಂಟು! ಈಗ ಚುನಾವಣೆಯ ಹತ್ತಿರ ಬರುವಾಗ ತರುಣದಲ್ಲಿ ತಾನು ಕಂಬನಿ ಸುರಿದು ಜೈಲಿಗೆ ಹೋಗಿದ್ದೆನೆಂದೂ 42ರಲ್ಲಿ ಭಯಂಕರ ಹೋರಾಟ ನಡೆಸಿದವನೆಂದೂ—ಇದ್ದ ಅಧಿಕಾರವನ್ನು ಕಾಂಗ್ರೆಸ್ಸಿಗಾಗಿ ತ್ಯಜಿಸಿ ಹೊರಬಂದವನೆಂದೂ ಹೇಳುವದು ಸೂಕ್ತವಲ್ಲ! ಜನ ಅಂದಿಗಿಂತ ಇಂದು ಪ್ರಗತಿ ಹೊಂದಿದ್ದಾರೆ. ಸ್ವಾತಂತ್ರ್ಯದಿಂದ ಏನಿಲ್ಲೆಂದರೂ ರಾಜಕೀಯದಲ್ಲಿ ಒಂದು ಬಗೆಯ ಕುತೂಹಲ ಹುಟ್ಟಿಸಿಯದೆ. ಯಾರು ಪ್ರಾಮಾಣಿಕರು—ಯಾರು ಅಪ್ರಾಮಾಣಿಕರು, ಯಾರು ನಿಜವಾದ ರಾಷ್ಟ್ರಪ್ರೇಮಿಗಳೆಂದು ಊಹಿಸುವಷ್ಟು ಶಕ್ತರಾಗಿದ್ದಾರೆ. ಅಂದಮೇಲೆ ಹಿಂದಿನ ಬಿರುದುಬಾವಲಿಗಳನ್ನು ಹಚ್ಚಿ ಸದ್ಯದ ಹುರಿಯಾಳ್ತನದ ಅರ್ಹತೆಯನ್ನು ಕಾಂಗ್ರೆಸ್ ಕಲ್ಪಿಸಿ ಕೊಡುವದಾದರೆ ಅದರಿಂದ ಕಾಂಗ್ರೆಸ್ಸಿಗೂ ನಾಡಿಗೂ ಕೂಡಿಯೇ ಕೇಡಾಗಬಹುದಲ್ಲವೇ?

ತನ್ನ ವ್ಯಕ್ತಿವೈಶಿಷ್ಟ್ಯತೆಯಿಂದ--ರಾಷ್ಟ್ರೋನ್ನತಿಯ - ಉಚ್ಚ ಧ್ಯೇಯದಿಂದ. ಜನಾನುರಾಗವನ್ನು ಪಡೆದ ಶ್ರೇಷ್ಠ ಹುರಿಯಾಳು ಒಬ್ಬನಿರುವದಾದರೆ ಅಂತವನನ್ನೇಕೆ--ಕಾಂಗ್ರೆಸ್ ಶಿಫಾರಸು ಮಾಡಕೂಡದು? ಜನತೆ ಪ್ರತಿನಿಧೀಕರಿಸುವ ಶ್ರೇಷ್ಠ ವ್ಯಕ್ತಿತ್ವ ಉಳ್ಳಂತಹರನ್ನು ಕಡೆಗಣಿಸಿ ಓಬೀರಾಯನ ತತ್ವವನ್ನವಲಂಬಿಸುವದರಿಂದ ರಾಜಕೀಯ ವಾತಾವರಣ ಇನ್ನಷ್ಟು ಕೆಡುವದೆನ್ನುವದರಲ್ಲಿ ಸಂದೇಹವಿಲ್ಲ!

ಜಾತಿಗೊಂದು ಸ್ಥಾನ-ಪಕ್ಷಕ್ಕೊಂದು ಸ್ಥಾನವೆಂದು ಅನುಸರಿಸುತ್ತ ಬಂದಿರುವ ದುಷ್ಪದ್ಧತಿಯನ್ನು ಇನ್ನಾದರೂ ನಿಗ್ರಹಿಸುವಂತಾಗಬೇಕು. ಈ ಬಗೆಯ ಹಂಚೋಣದ ಕ್ರಮದಿಂದ ಎರಡು ರೀತಿಯ ಗಂಡಾಂತರವಿದೆ. ಒಂದು ತೀರ ಅನನುಭವಿ ಸಂಗಡಕ್ಕೂ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ವಿಶಿಷ್ಟಯೋಗ್ಯತೆಯುಳ್ಳಂತಹ ಹುರಿಯಾಳುಗಳು ಒಂದೇ ಪಂಥದವರಾದರೆ ಜಾತಿಯು ತಪ್ಪನಮೂಡುತ್ತದೆ. ಆದುದರಿಂದ ತಕ್ಕವಿದ್ದಷ್ಟು ಮಟ್ಟಿಗೆ ಈ ಎರಡೂ ಪದ್ಧತಿಗಳಿಂದ ಕಾಂಗ್ರೆಸು ಮುಕ್ತಗೊಳ್ಳುವದೊಳ್ಳಿತು!

ಹುರಿಯಾಳುವಾಗುವವರಲ್ಲಿ ಆರಿಸಿ ಬರಬೇಕೆಂಬ ಸಾಹಸ ಪ್ರಯತ್ನಗಳಿದ್ದ ಹಾಗೆಯೆ ಆರಿಸಿಬಂದ ಮೇಲೆ ತಾವು ಮಾಡಬೇಕಾದ ಮುಖ್ಯ ಕಾರ್ಯಗಳ ಮಹತ್ವದ ಹೊಣೆಗಾರಿಕೆಯ ಅರಿವೂ ಅವರಿಗಿರಬೇಕು. ದೇಶದ ಸಮಸ್ಯೆಯನ್ನು ಬಗೆಹರಿಸುವ ಬ್ಬಿಯೂ—ತನ್ನನ್ನು ಆರಿಸಿದ ಜನತೆಯ ಪರವಾಗಿಯೂ ತಾನು ಮಾಡಬೇಕಾದ ಕರ್ತವ್ಯದ ಕಡೆಗೂ ಅವನ [illegible]ಕು. ರಾಜಕೀಯ-ಆರ್ಥಿಕ-ಔದ್ಯೋಗಿಕ ವಿಚಾರಗಳಲ್ಲಿ ಅನುಭವವಿರಬೇಕು. ಬೌದ್ಧಿಕೋಪಾಯಗಳಿಂದಲೂ - ಇತರ ವೈಜ್ಞಾನಿಕ ವಿಚಾರಗಳಿಂದಲೂ ದೇಶದ ಕಲ್ಯಾಣವನ್ನು ಹೇಗೆ ಮಾಡಬಹುದೆಂಬ ಪದ್ಧತಿಯೂ ಅವರಲ್ಲಿರಬೇಕು. ಚಾರಿತ್ರ್ಯ ಹಿನ್ನೆಲೆ — ಬಾಗೋಲಿ ಕಾನುಭವವಿಲ್ಲದವರು ಮಾಡುವದಾದರೂ ಏನು? ಸದ್ಯ ಆರಿಸಿಬರಬೇಕಾದವರಲ್ಲಿ ಅಗುಣವಿದೆಯೇ? ಹುರಿಯಾಳ್ತನಕ್ಕೆ ಶಿಫಾರಸು ಮಾಡುವವರು ಈ ಮಹತ್ವಿಕೆಯನ್ನು ಲಕ್ಷ್ಯಕ್ಕೆ ತಂದುಕೊಂಡಿದ್ದಾರೆಯೇ? ಎಲ್ಲ ಪ್ರತಿನಿಧಿಗಳೂ ಸರ್ವಗುಣ ಸಂಪನ್ನರಾಗಿರಲು ಸಾಧ್ಯವಿಲ್ಲೆಂದಾದರೂ ಅಂತಹ ಗುಣಗಳುಳ್ಳವರನ್ನು ಶ್ರೀಮಂತಿಕೆ-ಇತರ ಬಲವನ್ನು ಎಣಿಸಿದ ಕೇವಲ ವ್ಯಕ್ತಿವೈಶಿಷ್ಟ್ಯದ ಮೇಲೆ ಹುರಿಯಾಳುವನ್ನಾಗಿ ಆರಿಸುವ ದಿವ್ಯ ಧೈರ್ಯವನ್ನು ಕಾಂಗ್ರೆಸ್ಸಿಗರು ತೋರಿಸಬಾರದೆ?

ಹುರಿಯಾಳುಗಳನ್ನು ಆರಿಸುವದಕ್ಕೆ ಇನ್ನೂ ಸ್ವಲ್ಪಕಾಲ ಉಳಿದಿದೆ. ಅಷ್ಟರೊಳಗೆ ಕಾಂಗ್ರೆಸ್ಸಿನ ಕಾರ್ಯಕರ್ತರು ಮೇಲಿನ ವಿಚಾರಗಳನ್ನು ನೆನಪಿಸಿಕೊಂಡು ಆತ್ಮಸಾಕ್ಷಿಗೆ ಸರಿಯಾಗಿ ನಡೆದು ಕೊಳ್ಳುವಂತಾಗಲಿ!

A. B. SHETTY, M.L.A.
MINISTER FOR AGRICULTURE

FORT ST. GEORGE
MADRAS
3rd Sept. 1951

My dear Sri Shetty,

I have received your letter. Since I shall not be able to go over to Udipi for the function you propose to have in regard to NAVAYUGA completing 30 years of its existence, I have to content myself by sending my best wishes for the continued success of the journal in its work in future.

With best wishes,

Yours sincerely,
A. B. Shetty.

ಎ. ಬಿ. ಶೆಟ್ಟಿ, ಎಮ್.ಎಲ್.ಎ.
ಕೃಷಿ ಇಲಾಖೆಯ ಮಂತ್ರಿಗಳು

ಫೋರ್ಟ ಸೈಂಟ್ ಜೋರ್ಜ,
ಮದರಾಸು.
3-9-1951.

ಪ್ರಿಯ ಶೆಟ್ಟರೇ,

ತಮ್ಮ ಪತ್ರ ಕೈ ಸೇರಿತು. 'ನವಯುಗ'ದ 31ನೆಯ ವಾರ್ಷಿಕ ಪ್ರಾರಂಭೋತ್ಸವದ ಬಗ್ಗೆ ತಮ್ಮಲ್ಲಿಗೆ ಬರಲು ಅನಾನುಕೂಲವಾದುದರಿಂದ 'ನವಯುಗ'ವು ತನ್ನ ಭವಿಷ್ಯ ಜೀವನದಲ್ಲಿ ಉತ್ತರೋತ್ತರ ಯಶಸ್ವಿಯಾಗಿ ಜಯಶಾಲಿಯಾಗಲೆಂಬ ಹಾರೈಕೆಯಿಂದಲೇ ನಾನು ತೃಪ್ತಿಪಡಬೇಕಾಗಿದೆ.

ತಮಗೆ ಶುಭವನ್ನು ಕೋರುವ,

ಎ. ಬಿ. ಶೆಟ್ಟಿ.

ಪ್ರಜಾಸತ್ತೆ ಲೇಖನಾಂಕ ೨

ಪ್ರಜಾಸತ್ತೆಯೂ ಪಕ್ಷಗಳೂ

[ಕಳೆದ ಸಂಚಿಕೆಯಿಂದ ಮುಂದರಿದುದು]

ಸ್ಥಳೀಯ ಸರಕಾರ (Local Govt)

ಜನತಾ ಸರಕಾರದ ಬುಡವೇ ಸಣ್ಣ ಸ್ಥಳಗಳಲ್ಲಿ ಹಳ್ಳಿಗಳಲ್ಲಿ ಚಿಕ್ಕಪಟ್ಟಣಗಳಲ್ಲಾಗಿದೆ. ಸಮಾಜಗಳೇ ಪ್ರಜಾಪ್ರಭುತ್ವದ ಚಿಕ್ಕ ಬುಗ್ಗೆಗಳು. ರಾಷ್ಟ್ರದ ವ್ಯವಹಾರದಲ್ಲಿ ನಾಗರೀಕರಿಗೆ ಸಾರ್ವಜನಿಕ ಜ್ಞಾನ ಅನುರಾಗ, ವಿವೇಕ, ಸ್ನೇಹ ಮತ್ತು ಸಂಘಪ್ರಿಯತೆಯನ್ನುಂಟುಮಾಡಿ ಎಲ್ಲರೂ ಸಹಕರಿಸಿ ನಡೆಯುವಂತೆ ಮಾಡುವುದೇ ಸ್ಥಳೀಯ ಸರಕಾರಗಳಾಗಿವೆ. ಪ್ರಜಾಮತ ಸರಕಾರವು ಪ್ರಥಮ ತಲೆದೋರಿರುವದು ಸಣ್ಣ ಸಮಾಜಗಳಲ್ಲಾಗಿದೆ. ರಾಜಕೀಯ ತತ್ವಜ್ಞರು ತಮ್ಮ ತತ್ವಗಳಿಗೆ ಆಧಾರವನ್ನು ಕಂಡುಹಿಡಿದುದು ಜನಮತವು ಸರಕಾರದ ಮೇಲೆ ಪರಿಣಾಮಕಾರಿಯಾಗಿ ಕಂಡುಬಂದುದು ಮತ್ತು ಪ್ರಜಾಸತ್ತೆ ಕಾರ್ಯಕ್ರಮವನ್ನು ಜನರು ಕಲಿತದ್ದು ಸಣ್ಣ ಸಮಾಜಗಳಲ್ಲೇ ಆಗಿದೆ. ಪ್ರಜೆಗಳು ಜವಾಬ್ದಾರಿಕೆಯನ್ನು ಹೊರುವಂತೆ ಮಾಡುವುದೇ ಸ್ಥಳೀಯ ಸರಕಾರದ ಗುರಿಯಾಗಿದೆ. ಎಲ್ಲಿ ಸ್ಥಳೀಯ ಸರಕಾರಗಳು ಉತ್ತಮ ರೀತಿಯಲ್ಲಿರುವುದೋ ಅಲ್ಲಿ ಕೇಂದ್ರ ಸರಕಾರಕ್ಕೆ ಮುಂದಾಳುಗಳನ್ನು ಕಳಿಸುತ್ತದೆ. ಸ್ಥಳೀಯ ಸರಕಾರಗಳು ಸಾಮಾನ್ಯ ಜನರಿಂದ ಬುದ್ಧಿಸಾಮರ್ಥ್ಯವುಳ್ಳ ಮುಂದಾಳುಗಳನ್ನು ತರಬೇತಿ ಮಾಡುವ ಗರುಡಿಯಾಲಯವಾಗಿರುವದು.

ಅಮೇರಿಕ ಮತ್ತು ಸ್ವಿಜರ್‌ಲೇಂಡು ಈ ಎರಡು ದೇಶಗಳಲ್ಲಿ ಪ್ರಜಾಪ್ರಭುತ್ವವು ಬಹಳ ಮುಂದುವರಿಯುವರೆ ಅಲ್ಲಿ ಸ್ಥಳೀಯ ಸರಕಾರಗಳ ಬೆಳವಣಿಗೆಯೇ ಇದಕ್ಕೆ ಕಾರಣವೆಂದು ಹಲವರ ಅಭಿಪ್ರಾಯವಾಗಿದೆ. ಪ್ರಜಾಪ್ರತಿನಿಧಿ ಸರಕಾರವಿರುವ ಫ್ರಾನ್ಸ್ ಮತ್ತು ಬ್ರಿಟನ್ ಮೊದಲಾದ ದೇಶಗಳಲ್ಲಿ ರಾಷ್ಟ್ರೀಯ ಸರಕಾರದ ಕಾರ್ಯಗಳ ಒತ್ತಡವನ್ನು ಮತ್ತು ಪ್ರಯಾಸವನ್ನು ಸಡಲಿಸಿ ಕಡಮೆ ಮಾಡುವದು ಅತಿ ಅಗತ್ಯ. ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕೇಂದ್ರ ಸರಕಾರ ನೋಡಿಕೊಂಡು ಸ್ಥಳೀಯ ವಿಷಯಗಳನ್ನು ಸ್ಥಳೀಯ ಸಂಸ್ಥೆ ಅಥವಾ ಸರಕಾರಗಳಿಗೆ ಬಿಟ್ಟುಕೊಡುವದು ಉತ್ತಮ. ಇಡೀ ರಾಷ್ಟ್ರಕ್ಕೆ ಒಂದೇ ರೀತಿ ಅಥವಾ ಸಮಾನತೆ ಇರಬೇಕೆಂದಲ್ಲವಾದ ಬಾಬುಗಳಲ್ಲಿ ಆಯಾಯ ಸ್ಥಳಗಳಿಗೆ ಬೇಕಾದಂತೆ ನೋಡಿಕೊಳ್ಳುವರೆ ಅವರವರಿಗೇ ಬಿಡುವದು ಉತ್ತಮ. ಹೀಗಾದಲ್ಲಿ ರಾಷ್ಟ್ರದ ಪ್ರತಿನಿಧಿಗಳು ರಾಷ್ಟ್ರ ಸರಕಾರದ ಕಡೆಗೆ ಹೆಚ್ಚು ಗಮನ ಕೊಡುವರೆ ಅವಕಾಶವಾಗುತ್ತದೆ. ಸ್ಥಳೀಯ ವಿಚಾರದಲ್ಲಿ ಹುಟ್ಟಿದ ಅತೃಪ್ತಿ ಮತ್ತು ಬಿಕ್ಕಟ್ಟು ರಾಷ್ಟ್ರಕ್ಕೆ ಹಬ್ಬದೆ ಅಲ್ಲೇ ಸಂಧಾನಿಸಲ್ಪಡುವದು. ಇದು ಎಲ್ಲಾ ಬಗೆಯ ಸ್ಥಳೀಯ ಸರಕಾರ ಮತ್ತು ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಅಮೇರಿಕದ ಸಂಯುಕ್ತ ರಾಷ್ಟ್ರ ಸರಕಾರವು ಹಲವಿಷಯಗಳನ್ನು ಸ್ಥಳೀಯ ಸರಕಾರಕ್ಕೆ ಬಿಟ್ಟುಕೊಟ್ಟಿರುವದು.

ದೇಶದ ರಾಜಕೀಯ ರಂಗದಲ್ಲಿ ವಿರೋಧಗಳಿದ್ದರೂ ಸ್ಥಳೀಯ ಸರಕಾರದಲ್ಲಿ ಒಮ್ಮತದಿಂದ ಸಹಕರಿಸುವರು. ಕೇಂದ್ರ ಸರಕಾರದ ಕಾರ್ಯಭಾಗವು ಜಾಸ್ತಿ ಆದರೆ ಹೆಚ್ಚೆಚ್ಚು ಜನರನ್ನು ಕೆಲಸಕ್ಕೆ ನೇಮಿಸಬೇಕಾಗುತ್ತದೆ. ತಮಗೆ ಬೇಕಾದವರನ್ನು ನೇಮಿಸುವರೆ ಎಡೆಯುಂಟಾಗುತ್ತದೆ. ಎಲ್ಲಿ ಕೇಂದ್ರ ಸರಕಾರವು ಹೆಚ್ಚು ಅಧಿಕಾರ ನಡೆಸುವದೋ ಅಲ್ಲಿ ನೌಕರರ ಕಾಟ ಮತ್ತು ದರ್ಪವು ಜಾಸ್ತಿಯಾಗುವದು ಮತ್ತು ಜನರು ಸರಕಾರಕ್ಕೆ ತಾತ್ಸಾರ ತೋರಿಸುವರು, ಪಕ್ಷಗಳು ಮುಂದೆ ಬರುವವು. ಪಕ್ಷಗಳು ಸ್ಥಳೀಯ ಪ್ರಯೋಜನಕ್ಕಾಗಿ ರಾಷ್ಟ್ರದ ಉತ್ಪತ್ತಿಯಲ್ಲಿ ಹೆಚ್ಚು ಹಣವನ್ನು ತಮಗೆ ಬೇಕಾದಲ್ಲಿ ಉಪಯೋಗಿಸುವಂತೆ ಮಾಡುವವು. ಜನರೂ ನೌಕರರೂ ಬೇರಾಗುವರು. ಸ್ಥಳೀಯ ಸರಕಾರಗಳು ಜನರ ಮನಸ್ಸನ್ನು ಒಲಿಸಿ ಸ್ಥಳೀಯ ಸಂಸ್ಥೆಯನ್ನು ವೃದ್ಧಿ ಮಾಡುವವು. ಅವುಗಳು ತಮ್ಮದೇ ಆದ ವಾತಾವರಣ, ಪದ್ಧತಿ, ಸಾಂಪ್ರದಾಯಗಳನ್ನುಂಟು ಮಾಡುವವು. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪಕ್ಷಗಳು ಕೈ ಹಾಕುವುದರ ಕುರಿತು ಭಿನ್ನಾಭಿಪ್ರಾಯಗಳಿವೆ. ಸ್ಥಳೀಯ ಚುನಾವಣೆಯನ್ನು ರಾಷ್ಟ್ರದ ರಾಜಕೀಯ ಧೋರಣೆಗಳ ಆಧಾರದ ಮೇಲೆ ನಡೆಸಲು ಕೆಲವು ತೊಂದರೆಗಳುಂಟಾಗುವವು. ಉಮೇದ್ವಾರರ ಯೋಗ್ಯತೆ ಮತ್ತು ಚುನಾಯಿತರಾದ ಮೇಲೆ ಅವರು ಸ್ಥಳೀಯ ವಿಚಾರದಲ್ಲಿ ಹೇಗೆ ನಡೆಯಬೇಕೆಂಬುದರ ವಿಚಾರವನ್ನೇ ಮರೆತು ರಾಷ್ಟ್ರದ ರಾಜಕೀಯ ಪಕ್ಷಗಳ ಧೋರಣೆಯನ್ನೇ ತಲೆಗೆ ಸುತ್ತಿಕೊಳ್ಳುವರು. ಚುನಾಯಿತರಾದ ಮೇಲೆ ಪಕ್ಷಗಳಂತೆ ವರ್ತಿಸಿ ತಮ್ಮ ಕಡೆಯವರಿಗೇನೇ ಪ್ರಸಾದರೂಪವಾಗಿ ಹಂಚುವರು. ಆದಾಗ್ಯೂ ಪಕ್ಷಗಳು ಸ್ಥಳೀಯ ಸಂಸ್ಥೆಯಲ್ಲಿ ಕೈ ಹಾಕುವದನ್ನು ಕೆಲವು ಮುಖ್ಯಸ್ಥರು ಸಮರ್ಥಿಸುತ್ತಾರೆ. ಇದರಿಂದ ಬುದ್ಧಿ ಸಾಮರ್ಥ್ಯ, ಧಕ್ಷತೆ ಮತ್ತು ಪ್ರತಿಭೆಯ ವ್ಯಕ್ತಿಗಳು ಮುಂದೆ ಬರುವರೆಂದು ಅಭಿಪ್ರಾಯಪಡುವರು. ರಾಷ್ಟ್ರದ ರಾಜಕೀಯ ವಿಚಾರದಲ್ಲಿ ಕೈಹಾಕಲು ಎಡೆಯಾದೀತೆಂಬ ನಂಬಿಕೆಯಿಂದಲೂ ಪಕ್ಷಗಳ ಮೇಲಣ ವಿಶ್ವಾಸದಿಂದಲೂ ಜನರು ತನ್ನ ಸ್ವಲ್ಪ ಸಮಯವನ್ನಾದರೂ ಇದಕ್ಕಾಗಿ ವ್ಯಯಿಸುವರು. ಇದರಿಂದ ತಮಗೇನೂ ಪ್ರಯೋಜನವಿಲ್ಲವೆಂದಾದ್ರೆ ಜನರು ಹೆಚ್ಚು ಶ್ರಮಪಡಲಾರರು. ಸಮಾಜದಿಂದ ಸಿಕ್ಕುವ ಬರೇ ಮನ್ನಣೆ ಮರ್ಯಾದೆಗಳಿಗಾಗಿ ದುಡಿಯುವವರು ವಿರಳ. ಆದುದರಿಂದಲೇ ಅಮೇರಿಕದಲ್ಲಿ ಹೆಚ್ಚು ಪ್ರಮುಖರು ಸ್ಥಳೀಯ ಸಂಸ್ಥೆಗಳಿಂದ ಮುಂದೆ ಬಂದಿರುವರು. ಇದರಲ್ಲಿ ಸತ್ಯಾಂಶ ಕೆಲವು ಮಟ್ಟಿಗೆ ಇರುವದಾದ್ರೂ ಪಾತ್ರಾಪಾತ್ರ ನೋಡುವಾಗ ಸ್ಥಳೀಯ ಸಂಸ್ಥೆಗಳು ತಮಗಲ್ಲದ ವಿಚಾರಗಳಲ್ಲಿ ತಲೆ ಹಾಕುವದು ಅಷ್ಟೊಂದು ಒಳ್ಳೇದಲ್ಲ. ಮುನ್ಸಿಪಲ್ ಸರಕಾರವು ಎಷ್ಟರ ಮಟ್ಟಿಗೆ ಪಕ್ಷಗಳ ವಾತ್ಸಲ್ಯವನ್ನು ದೂರವಿಡುವದೋ ಅಷ್ಟರ ಮಟ್ಟಿಗೆ ಸ್ಥಳೀಯ ಸರಕಾರವು ಶುದ್ಧೀಕರಣ ಹೊಂದುವದು ಪಕ್ಷಗಳು ಎಷ್ಟರ ಮಟ್ಟಿಗೆ ಮುನ್ಸಿಪಲ್ ಆಡಳಿತೆಯಲ್ಲಿ ಕೈಹಾಕುವದಿಲ್ಲವೋ ಅಷ್ಟರ ಮಟ್ಟಿಗೆ ಪಕ್ಷಗಳು ಉನ್ನತ ಮಟ್ಟಕ್ಕೇರಿ ಸಾರ್ವಜನಿಕ ಸೇವೆಯಲ್ಲಿ ನಿರತವಾಗುವವೆಂದು ಸಿನೇಟರ್ ಪೆನ್‌ರೋಸ್ ಎಂಬವರು ಹೇಳಿರುವರು.

ಪ್ರಜಾ ಸತ್ತೆಯೂ ಪಕ್ಷಗಳೂ

ರಾಜಕೀಯ ಪಕ್ಷಗಳು ಪ್ರಜಾಮತ ಸರಕಾರಕ್ಕಿಂತ ಹಳೇದಾಗಿದೆ. ಮಾನವರಲ್ಲಿ ಎಂದು ಮತಭೇದಗಳುಂಟಾಗಿರುವವೋ ಅಂದಿನಿಂದ ಪಕ್ಷಗಳು ಹುಟ್ಟಿರುವವು. ಪ್ರಥಮಥ ಮಾನವರು ಒತ್ತಲೆಯಾಗಿ ತಿರುಗುವದು ಸರಿಯಲ್ಲವೆಂತ ಯಾವನು ಹೇಳಿದನೋ ಆಗಲೇ ಮತಭೇದ ಉಂಟಾಗಿದೆ. ಮಾನವರು ಪ್ರಾಚೀನ ಕಾಲದಲ್ಲಿ ಇತರ ಮೃಗಗಳಂತೆ ಹಿಂಡುಗಳಾಗಿ ಜೀವಿಸುತ್ತಿದ್ದರು ಆಗ ಆಹಾರ ಒದಗಿಸುವ ಬಗ್ಗೆಗಿ ಹಿಂಡುಹಿಂಡುಗಳೊಳಗೆ ಜಗಳವಾದ್ದುಂಟು. ಅದೇ ಸ್ವಭಾವವು ಮುಂದೆ ಬಂದದ್ದಾಗಿದೆ. ಆ ಕಾಲದಲ್ಲಿ ಸಹಾ ಪಕ್ಷದ ವ್ಯಕ್ತಿಗಳು ಮುಖ್ಯಸ್ಥನಿಗೆ ವಿಧೇಯರಾಗಿದ್ದರು. ಪಕ್ಷಗಳು ಅನಾದಿಯಿಂದಲೂ ಜಾತಿ ಮತ್ತು ಮತ ಭೇದಗಳಿಂದುಂಟಾಗಿರುವವು. ಯಾವದಾದರೊಂದು ಸಂಪತ್ತಿಗಿರುವ ರಾಜಭಕ್ತಿಯಿಂದಾಗಲೀ ಒಬ್ಬ ಮುಖ್ಯಸ್ಥ ಅಥವಾ ಪ್ರಮುಖನ ಮೇಲಿರುವ ಪ್ರೀತಿ ಮತ್ತು ವಿಶ್ವಾಸದಿಂದಾಗಲೀ ಪಕ್ಷಗಳು ಹುಟ್ಟಿವೆವು. ಆಧುನಿಕ ಪ್ರಜಾ ಪ್ರತಿನಿಧಿ ಸರಕಾರವಿರುವಲ್ಲಿ ಯಾವದಾದರೊಂದು ರಾಜಕೀಯ ತತ್ವ ಅಥವಾ ಧೋರಣೆಯ ಕುರಿತು ಕೆಲವರು ಒಂದು ಕಡೆ ಕೆಲವರು ಇನ್ನೊಂದು ಕಡೆ ಸೇರಿ ಮತಭೇದಗಳುಂಟಾಗುವವು. ಈಗಿನ ಕಾಲದಲ್ಲಿ ತತ್ವಗಳ ಮತ್ತು ವಿಚಾರಗಳ ಆಚರಣೆ ಬಗ್ಗಾಗಿ ಹುಟ್ಟುವವೆಂದೇ ಹೇಳಬೇಕು. ಲೋಕದಲ್ಲಿ ಆಗಾಗಾಗುವ ಬದಲಾವಣೆಗಳಿಗನುಸರಿಸಿ ಪಕ್ಷಗಳಿರಬೇಕು.

ಪ್ರಜಾಮತ ಸರಕಾರವನ್ನು ಪಕ್ಷಗಳಿಲ್ಲದೆ ನಡೆಸುವದೇ ಕಷ್ಟವಾಗಿದೆ. ನಮ್ಮ ರಾಜ್ಯಾಂಗದ ಒಂದಂಶ ಮುರಿದುಬಿದ್ದರೂ ರಾಜ್ಯಘಟನೆಯ ಕೆಲವು ಭಾಗ ಅಳಿಸಿಹೋದರೂ ಪೂರೈಸಬಹುದು. ರಾಜಕೀಯ ಪಕ್ಷಗಳಿಲ್ಲದೆ ಪ್ರಜಾಮತ ಸರಕಾರ ದಿನದೂಡುವದು ಕಷ್ಟವೆಂತ ಅಮೇರಿಕದ ಇತಿಹಾಸ ಬರಹಗಾರರೊಬ್ಬರು ಹೇಳಿರುವರು. ಒಂದು ರೈಲುಬೋರ್ಡನ್ನು ಏನೂ ತಿಳುವಳಿಕೆಯಿಲ್ಲದ ಪ್ರಯಾಣಿಕರ ಮತಕ್ಕೆ ಅನುಸಾರವಾಗಿ ನಡಸುವದೂ ಹಡಗವನ್ನು ಪ್ರಯಾಣಿಕರ ಮತದಂತೆ ನಡಸುವದೂ ಪಕ್ಷಗಳಿಲ್ಲದೆ ಸರಕಾರದ ಕಾರ್ಯಭಾರ ವಹಿಸುವದೂ ಸರಿಸಮಾನವೆಂದು ಜೇಮ್ಸ್ ಬ್ರೈಸ್ ಎಂಬವರು ಹೇಳಿರುವರು.

[ಮುಂದಿನ ಸಂಚಿಕೆ ನೋಡಿರಿ]

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸ್ಥಿರಮು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ನೆಹ್ರೂರವರಿಗೆ ಕಾಂಗ್ರೆಸ್ ಅಧ್ಯಕ್ಷ ಪದವಿ

ದಿಲ್ಲಿಯ ಎ. ಐ. ಸಿ. ಸಿ.ಯಲ್ಲಿ ಜನತೆ ಏನನ್ನು ನಿರೀಕ್ಷಿಸಿತ್ತೋ—ದೇಶಕ್ಕೆ ಯಾವುದರಿಂದ ಹಿತವಾಗಬೇಕಾಗಿತ್ತೋ ಅದಿಂದು ಯಶಸ್ವಿಯಾಗಿ ನಡೆದಿದೆಯೆಂದು ಹೇಳುವದಕ್ಕೆ ಅಭಿಮಾನವೆನಿಸುತ್ತದೆ. ಅತ್ಯಂತ ಮಹತ್ವದ ಕಾಲದಲ್ಲೇ ಈ ಬಗೆಯ ಬದಲಾವಣೆಯಾದದ್ದು ಕಾಂಗ್ರೆಸ್ಸಿನ ಪುರೋಭಿವೃದ್ಧಿಯ ಶುಭಚಿಹ್ನವೆಂದೇ ಹೇಳಬೇಕು. ಈಚೆಗೆ ಹಲವು ಸಮಯದಿಂದ ನೆಹ್ರೂ ಟಂಡನ್ನರಲ್ಲುಂಟಾದ ಮತಭೇದದಿಂದಾಗಿ ಕಾಂಗ್ರೆಸ್ಸು ಸಂಪೂರ್ಣ ನಾಶಹೊಂದಬಹುದೆಂದು ಹಲವರ ನಂಬಿಕೆಯಾಗಿತ್ತು. ಇಂದಿನ ಪರಿಣಾಮವು ವಿರುದ್ಧವಾಗಿದ್ದರೆ, ಆ ಮಾತು ಯಥಾರ್ಥವೇ ಆಗುತಿತ್ತು! ನೆಹ್ರೂರವರು ಕಾಂಗ್ರೆಸ್ಸಿನ ಅಧ್ಯಕ್ಷ ಪದವನ್ನು ವಹಿಸಿಕೊಂಡದ್ದರಿಂದ ಕಾಂಗ್ರೆಸ್ಸಿಗೊಂದು ನೂತನ ಶಕ್ತಿ ಬಂದಂತಾಯಿತು. ಮಾತ್ರವಲ್ಲದೆ ಸರಕಾರ ಹಾಗೂ ಕಾಂಗ್ರೆಸ್ಸಿನೊಳಗಿನ ಆದೇಶ ಏಕಮುಖವಾಗಿದ್ದು ಆಡಳಿತದಲ್ಲಿ ಒಂದು ಬಗೆಯ ಶಿಸ್ತು – ಸುಧಾರಣೆಗಳೂ ಐಕ್ಯತೆಯೂ ಕಂಡುಬರುವವು. ಶ್ರೀ ಬಿ. ಎನ್. ರಾಯ್, ಶ್ರೀ ಪಂತರೇ ಮೊದಲಾದವರು ನೆಹ್ರೂ ಟಂಡನ್ನರೊಳಗೆ ಐಕ್ಯವನ್ನು ಸಾಧಿಸಲೆತ್ನಿಸಿದ್ದೂ—ಹಲವು ಸೂಚನೆಗಳನ್ನು ಮುಂದೆ ಮಾಡಿದ್ದೂ ಇಬ್ಬರ ಛಲದಿಂದ ವಿಫಲಗೊಂಡಿತು! ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಲ್ಲಿ ಪುನರ್ಘಟನೆಯಾಗಬೇಕೆಂಬುದಕ್ಕೆ ಟಂಡನ್ ಮೊದಲಿಂದ ಕೊನೆಯ ವರೆಗೂ ವಿರುದ್ಧವಾಗಿದ್ದರು. ಮಾತ್ರವಲ್ಲದೆ ಅಂಥಹ ಕಾರ್ಯಕರ್ತರ ಮೇಲೆ ಕರ್ತವ್ಯ ಪರಾಙ್ಮುಖತೆಯ ದೋಷಾರೋಪ ಮಾಡುವದು ಸರಿಯಲ್ಲವೆಂದು ಅವರು ಹೇಳಿರುವರು. ಕೊನೆಯಕ್ಷಣದಲ್ಲಿ ಅವರ ಮಿತ್ರರೇ ಅವರನು ಕೈಬಿಟ್ಟರು.

ಹೇಗಿದ್ದರೂ ಟಂಡನ್ ಎಷ್ಟೇ ಹಟವಾದಿಯಾಗಿದ್ದರೂ ನೆಹ್ರೂರವರ ವಿರುದ್ಧ ತನ್ನ ನಿಲುಮೆ ಅಸ್ಥಿರವಾದುದೆಂಬುದನ್ನು ಅವರು ಚೆನ್ನಾಗಿ ಅರಿತವರಿದ್ದಾರೆ. ನೆಹ್ರೂ ವಿಚಾರಪ್ರಣಾಲಿಯ ಮೇಲೆ ಅವರು ವಿರುದ್ಧಾಭಿಪ್ರಾಯವನ್ನು ವ್ಯಕ್ತಪಡಿಸಿದವರು. ಜನಪ್ರಿಯ ನಾಯಕರಾಗಿದ್ದು ಅವರ ರಾಜೀನಾಮೆಯು ಸ್ವೀಕಾರ ಪ್ರಶ್ನೆಯು ಕಾಂಗ್ರೆಸ್ಸಿಗೆ ಮಾರಕವಾಗಿದೆ. ಅಂತಹ ಮಾನನೀಯ ಪುರುಷರು ಕಾಂಗ್ರೆಸ್ಸಿಗೂ ದೇಶಕ್ಕೂ ಇಂದು ಅವಶ್ಯ ಬೇಕಾಗಿದ್ದಾರೆ. ಅಂತಲೇ ನಾನು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸುತ್ತಿದ್ದೇನೆಂದು ತನ್ನ ರಾಜೀನಾಮೆಯನ್ನು ಸಲ್ಲಿಸಿದರು. ನೆಹ್ರೂರವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಆರಿಸಲಾಯಿತು!

ಹತ್ತು ವರ್ಷಗಳ ಹಿಂದೆ ಸುಭಾಷಚಂದ್ರ ಬೋಸರು ಅಧ್ಯಕ್ಷರಾದಾಗ ಇಂಥದೇ ಒಂದು ಘರ್ಷಣೆ ಕಾಂಗ್ರೆಸ್ಸಿನಲ್ಲಿ ನಡೆದಿತ್ತು! ಸದ್ಯದ ಘಟನೆ ತುಂಬ ಸುವ್ಯಸ್ಥಿತ ರೀತಿಯಲ್ಲಿ ಕೊನೆಗೊಂಡದ್ದು ಟಂಡನ್ ಪಂಗಡದವರ ಔದಾರ್ಯ ಇಲ್ಲವೆ ಹೃದಯ ಪರಿವರ್ತನೆಯಿಂದಲ್ಲ ಅಸಹಾಯಕ-ಸ್ಥಿತಿಯೋ ಹೀಗೆ ಮಾಡಿಸಿತೆಂಬುದನ್ನು ನಾವು ಮರೆಯಬಾರದು! ಮಾತ್ರವಲ್ಲ ಇಂತಹ ಗುಂಪಿನ ಮನೋವೃತ್ತಿ ದೇಶದಲ್ಲೆಲ್ಲ ಬೆಳೆದಿದ್ದು ಆರ್ಥಿಕ ಸಾಮೂಹಿಕವಾದ ಬೆಂಬಲ ಹಿಂದಿನಿಂದ ಇರುವದರಿಂದ ಇಂದೊಂದು ಸಬ್‌ಮೆರಿನ ಹಾಗೆ ಕೆಲಸಮಾಡುತ್ತಲೇ ಇರಬಹುದಾಗಿದೆ!

ಶ್ರೀ ಡಿ. ಪಿ. ಮಿಶ್ರರೂ, ಶ್ರೀ ಎಚ್. ವಿ. ಕಾಮತರೂ ನೆಹ್ರೂರವರ ನಿಲುಮೆಯನ್ನು ಬಲವಾಗಿ ಖಂಡಿಸಿರುವದಾಗಿ ತಿಳಿಯುತ್ತದೆ "ವ್ಯಕ್ತಿಯು ಎಷ್ಟು ದೊಡ್ಡವನೇ ಇರಲಿ, ಘಟನೆಗೆ ವಿರುದ್ಧವಾಗಿ, ಸಂಸ್ಥೆಯ ಬೆಂಬಲ ತೆಗೆದುಕೊಳ್ಳದೆ ತನ್ನಿಚ್ಛೆಯನ್ನು ಬಲಾತ್ಕಾರವಾಗಿ ಹೇರುವದು ಘಟನೆಯನ್ನು ಅವಮಾನಿಸಿದಂತೆಯೇ." ಎಂದು ಕಾಮತರು ಉದ್ಗರಿಸಿದ್ದು ಔದ್ಧತ್ಯದ ಲಕ್ಷಣವೆಂದೇ ಹೇಳಬೇಕು. ಇಲ್ಲಿ ವ್ಯಕ್ತಿಯ ಸ್ವಾರ್ಥ–ಸಂಕುಚಿತತೆಗಳೇ ಇರುವದಿಲ್ಲ. ವಿಶಾಲ ದೃಷ್ಟಿಯನ್ನಿಟ್ಟುಕೊಂಡಿರುವ ನೆಹ್ರೂರಂತಹರ ಮೇಲೂ ಆ ರೀತಿಯ ದೋಷಾರೋಪಣೆ ಮಾಡುವದು ಎಷ್ಟು ಮಾತ್ರಕ್ಕೂ ಯೋಗ್ಯವಾಗಲಾರದು. ಎ. ಐ. ಸಿ. ಸಿಯ ಸಂದರ್ಭೋಚಿತವೂ ಸಕಾಲಿಕವೂ ಆದ ಈ ನಿರ್ಣಯವು ದೇಶದ ಕಲ್ಯಾಣಕ್ಕೆ ಅತ್ಯಂತ ಸಹಕಾರಿಯಾಗಿದೆಂದೇ ಹೇಳಬೇಕು!

ಆಂಧ್ರ ಪ್ರಾಂತದ ಆಗ್ರಹ

ಆಂಧ್ರ ಪ್ರಾಂತ ಶೀಘ್ರ ರಚನೆಗೊಳ್ಳಬೇಕೆಂದು ಸ್ವಾಮಿ ಸೀತಾರಾಮರು ಕೈಗೊಂಡಿರುವ ಉಪವಾಸದ ಪ್ರತಿಫಲವಾಗಿ ಕಾಂಗ್ರೆಸ ಧುರೀಣರಲ್ಲಿ ತಳಮಳವುಂಟಾಗಿದೆ. ಸ್ವಾಮಿ ಸೀತಾರಾಮರ ಈ ಪ್ರಯೋಗದ ಲಾಭವನ್ನು ಮದ್ರಾಸದ ಶಾಸನಸಭಾ ಸದಸ್ಯರು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. 25 ಜನರು ಸೂಕ್ತಮಾರ್ಗ ಕೈಗೊಳ್ಳಬೇಕೆಂದು ನೆಹ್ರೂರವರಿಗೆ ತಂತಿಕಳಿಸಿದ್ದು ಮಾತ್ರವಲ್ಲದೆ ಹಲವು ಸದಸ್ಯರು ಅವರನ್ನು ಭೇಟಿಯಾಗಿ ಪರಿಸ್ಥಿತಿಯನ್ನು ನಿವೇದಿಸುವದರ ಸಲುವಾಗಿ ದಿಲ್ಲಿಯವರೆಗೆ ಪಯಣಬೆಳಸಿರುವರು. ಶ್ರೀಗಳಾದ ಪಟ್ಟಾಭಿ ಸೀತಾರಾಮಯ್ಯ, ಕಳಾ ವೆಂಕಟರಾವ್, ಶ್ರೀಮತಿ ದುರ್ಗಾಬಾಯಿಯವರು ಒಂದು ಮನವಿಯನ್ನು ಶ್ರೀ ನೆಹ್ರೂರವರಿಗೆ ಇಷ್ಟರಲ್ಲೇ ಒಪ್ಪಿಸಲಿರುವದಾಗಿ ತಿಳಿಯುತ್ತದೆ. ಪಾರ್ಲಿಮೆಂಟಿನಲ್ಲಿಯ ಕೆಲ ಆಂಧ್ರ ಸದಸ್ಯರು ರಾಜಾಜಿ ನೆಹ್ರೂರವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಕಾಯುದೆ ಪಾಸುಮಾಡಿ ಕೂಡಲೇ ಆಂಧ್ರಪ್ರಾಂತರಚನೆ ಕೈಗೊಳ್ಳಬೇಕೆಂದೂ ವಿವರಗಳನ್ನು ನಿರ್ಧರಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದೂ ಆಂಧ್ರ ಪ್ರಾಂತದ ರಾಜಧಾನಿಯ ಬಗ್ಗೆ ನಿರ್ಣಯ ಕೈಗೊಳ್ಳುವವರೆಗೆ ಮದ್ರಾಸನಗರದ ಒಂದು ಭಾಗದಲ್ಲಿಯೆ ಅದನ್ನು ಸ್ಥಾಪಿಸಬಹುದೆಂದೂ ಸ್ವಾಮಿ ಸೀತಾರಾಮರ ಅಭಿಪ್ರಾಯವಿದೆ. ಇದಕ್ಕೆ ಪರಿಹಾರ ರೂಪವಾಗಿ ಮುಂದಕ್ಕೆ ಅನುಕೂಲ ಪರಿಸ್ಥಿತಿಯೊದಗಿದಾಗ ಪ್ರಾಂತರಚನೆ ಕೈಗೊಳ್ಳಲಾಗುವದೆಂದೂ ಸದ್ಯ ಉಪವಾಸವನ್ನು ಹಿಂತೆಗೆದುಕೊಳ್ಳಬೇಕೆಂದೂ ಶ್ರೀ ರಾಜೇಂದ್ರ ಪ್ರಸಾದರೂ ಶ್ರೀ ನೆಹ್ರೂರವರು ಬರೆದ ಪತ್ರಕ್ಕೆ ಶ್ರೀ ಸೀತಾರಾಮರು ಮಾನ್ಯತೆಕೊಡದೆ ಉಪವಾಸ ಮುಂದುವರಿಸಿದ್ದಾರೆ. ಶ್ರೀಗಳಾದ ಪಟ್ಟಾಭಿ ಸೀತಾರಾಮಯ್ಯ, ಕಳಾವೆಂಕಟರಾವ್, ಅನಂತಶಯನಂ ಅಯ್ಯಂಗಾರ್, ಮತ್ತು ಶ್ರೀ ತಿರುಮಲರಾಯರು ನೆಹ್ರೂರವರನ್ನು ಕಂಡು ಮಾತನಾಡಿದ್ದರ ಫಲವಾಗಿ ಮದ್ರಾಸ ನಗರದ ಹಕ್ಕನ್ನು ಬಿಟ್ಟುಕೊಟ್ಟರೆ ವಿವಾದಾಸ್ಪದವಿಷಯಗಳ ಬಗ್ಗೆ ಕಕ್ಷಿ ಹಾಗೂ ಸಮಿತಿಯು ಒಮ್ಮತಕ್ಕೆ ಬಂದರೆ ಪ್ರಾಂತರಚನೆ ಸಾಧ್ಯವೆಂದೂ ಇದರ ಹೊರತು ಉಪವಾಸವೊಂದನ್ನೇ ಪ್ರತಿಯಾಸ್ತ್ರವನ್ನಾಗಿ ಹೂಡುವದರಿಂದ ಪ್ರಾಂತರಚನೆ ಕೈಗೂಡದೆಂದೂ ನೆಹ್ರೂರವರು ಸ್ಪಷ್ಟೀಕರಿಸಿದ್ದಾರೆಂದು ತಿಳಿಯುತ್ತದೆ. ಕಳೆದ 23 ದಿನಗಳಿಂದ ಆಂಧ್ರಪ್ರಾಂತದಬಗ್ಗೆ ಉಪವಾಸದಮೂಲಕ ಆಗ್ರಹ ತೊಟ್ಟ ಸ್ವಾಮಿ ಸೀತಾರಾಮರ ಹಾಗೂ ಅವರ ಅನುಯಾಯಿಗಳವರಲ್ಲಿ ಹಲವರ ದೈಹಿಕ ಶಕ್ತಿ ಕುಗ್ಗಿ ಚಿಂತಾಜನಕ ಸ್ಥಿತಿಯಲ್ಲಿರುವರು. ನೆಹ್ರೂರವರ ಬಿನ್ನಹವು ಆಂಧ್ರಪ್ರಾಂತರಚನೆಗೆ ಅನುಕೂಲವಾಗಿದೆಂದೂ ಉಪವಾಸವನ್ನು ಹಿಂತೆಗೆದು ಕೊಳ್ಳಬೇಕೆಂದೂ ಶಿಷ್ಯಮಂಡಳಿಯು ಸ್ವಾಮಿಯವರನ್ನು ಕೇಳಿಕೊಂಡಿದೆಯಂತೆ!

ಅಂತು ಕೊನೆಗಾದರೂ ಕಾಂಗ್ರೆಸ್ ವರಿಷ್ಠರಿಗೆ ಸೀತಾರಾಮರಿಂದ ಜ್ಞಾನೋದಯವಾದುದಕ್ಕೆ ಅಭಿಮಾನ ಪಡಬೇಕು. ಕೆ. ಪಿ. ಸಿ. ಸಿಯ ಸದಸ್ಯರು ರಾಜಿಯ ಏತ್ತಕಾಲಕ್ಕೆ ನಿದಾನಿತ್ವಾಗಿ "ಜೀವ್ಯವಸಾಯ–ಆಸಕ್ತ ಮನೋವೃತ್ತಿ ... ಆಡಿದ ವಚನಗಳನ್ನು ಕನ್ನಡಿಗರು ಈ ಸಂದರ್ಭದಲ್ಲಿ ನೆನಸಿಕೊಳ್ಳಬೇಕಾಗಿದೆ! ಅಂದು ಕನ್ನಡಿಗರ ಮೇಲೆ ಉರಿಗಾರಿದ ಮಹನೀಯರು ಇಂದು ಸೀತಾರಾಮರಿಗೆ ಪತ್ರಬರೆದು ಮನವೊಲಿಸಿಕೊಳ್ಳಲೆತ್ನಿಸುವದನ್ನೂ—ಕಾರ್ಯಪ್ರವೃತ್ತರಾದುದನ್ನೂ ಆಂಧ್ರರ ಬಗ್ಗೆ ಕಾಂಗ್ರೆಸ್ಸಮಿತಿಯೂ ಪಾರ್ಲಿಮೆಂಟಿನ ಪ್ರಾಂತೀಯ ಸದಸ್ಯರೂ ಅಧಿಕಾರಿಗಳೂ ಹೇಗೆ ಅಸ್ಥಿರಪಡಿಸುತ್ತಿದಾರೆಂದು ವಿವೇಕ ಪೂರ್ಣವಾಗಿ ಲಕ್ಷಿಸಬೇಕು! ಇದರಿಂದ ನಮ್ಮ ಪ್ರತಿನಿಧಿಗಳಲ್ಲಿ ಪ್ರಾಂತಾಭಿಮಾನದ ಕೆಚ್ಚು ಉತ್ಸಾಹದೂ ಮೂಡಬಹುದೆಂದು ನಿರೀಕ್ಷಿಸಬಹುದೇ?

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯು ಎಲ್ಲ ವ್ಯವಹಾರಗಳು ಹೀಗೆ ಚಿರೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಯಾಂಪಲ್ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

NOTICE

Payments such as annual subscription, advertisement and Court Notice publication charges may be credited to 'NAVAYUGA' account at the Canara Industrial & Banking Syndicate Ltd., Udipi or its Branches at par.

Manager.

ಮೈಸೂರು ರಾಜಪ್ರಮುಖರ ಕರ್ನಾಟಕ ಸಂಚಾರ

ಮೈಸೂರ ರಾಜಪ್ರಮುಖರು ಹುಬ್ಬಳ್ಳಿ, ಧಾರವಾಡ, ಮತ್ತು ಉತ್ತರ ಕರ್ನಾಟಕ ಸಂಚಾರ ಕಾರ್ಯಕ್ರಮವಿಟ್ಟುಕೊಂಡಿರುವ ಸುದ್ದಿಯನ್ನು ಕೇಳುತ್ತಲಿದ್ದೇವೆ. ಕನ್ನಡ ಜನತೆಯಲ್ಲಿ ಜಾಗೃತಿಯನ್ನು ಹುಟ್ಟಿಸತಕ್ಕ—ಅರ್ಥಾತ್ ಕರ್ನಾಟಕ ಏಕೀಕರಣದ ಬಗ್ಗೆ ಅವರ ದೃಷ್ಟಿಯನ್ನು ಎಳೆಯತಕ್ಕ ಕಾರ್ಯ ಅಷ್ಟಾಗಿ ನಡೆದಿರುವುದಿಲ್ಲ! ಅದರಲ್ಲೂ ಏಕೀಕರಣ ಪ್ರಶ್ನೆಗೆ ಮೈಸೂರವರು ಅಡ್ಡಗಾಲು ಹಾಕುತ್ತಿದ್ದಾರೆಂಬ ಆರೋಪವೂ ಇದೆ. ಇತ್ತಣಿಂದ ದ. ಕನ್ನಡದವರೂ ಅತ್ತಣಿಂದ ಉತ್ತರ ಕನ್ನಡದವರೂ ಮೈಸೂರವರ ಕುರಿತು ಭಿನ್ನಾಭಿಪ್ರಾಯವನ್ನು ತಾಳುವಂತಾಗಿದೆ. ಸದ್ಯ ಭಾಷಾವಾರು ಪ್ರಾಂತರಚನೆಯ ಕೂಗು ಅಲ್ಲಿ ಇಲ್ಲಿ ಕೇಳುತ್ತಿದ್ದು, ಕಾಂಗ್ರೆಸ್‌ವಂತರು ಎಂದಿಗಿಂತ ಹೆಚ್ಚಿನ ಆತುರತೆಯನ್ನು ತೋರಿಸುತ್ತಿರುವಾಗ ಕರ್ನಾಟಕದ ಜನರು ತಮ್ಮತಮ್ಮೊಳಗೆ ಐಕ್ಯ—ಸಂಘಟನೆಯನ್ನು ಸಾಧಿಸುವದು ಅತ್ಯಂತಾವಶ್ಯಕತೆಯದ್ದಾಗಿರುತ್ತದೆ. ರಾಜಕೀಯ—ಆರ್ಥಿಕ—ಔದ್ಯೋಗಿಕ ವಿಚಾರಗಳಲ್ಲಿ ಕರ್ನಾಟಕವು ಸಂಪೂರ್ಣ ಅಲಕ್ಷಿಸಲ್ಪಟ್ಟಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರಕಾರವು ಕರ್ನಾಟಕಕ್ಕೆ ಕೊಟ್ಟ ಪ್ರಾಶಸ್ತ್ಯದ ಕುರಿತು ಕೆ. ಪಿ. ಸಿ. ಸಿ. ತನ್ನ ಅಸಂತೃಪ್ತಿಯನ್ನು ಸೂಚಿಸಿದೆ. ಇಂತಹ ನೂರಾರು ಸಮಸ್ಯೆಗಳ ಕುರಿತು ನಾವಿಂದು ದೂರು ಕೊಡುತ್ತ ಕೂಡ್ರುವದು ಶಕ್ಯವಿಲ್ಲ. ಇವಕ್ಕೆಲ್ಲ ಕರ್ನಾಟಕಪ್ರಾಂತ ನಿರ್ಮಾಣವೊಂದೇ ಮುಕ್ತಿದ್ವಾರ. ಅದರಲ್ಲೂ ಉತ್ತರ ಕರ್ನಾಟಕದವರನ್ನು ಸಂಪೂರ್ಣ ಅನಾಥಗೊಳಿಸಲಾಗಿದೆ. ಮೈಸೂರು ಉತ್ತರ ಕರ್ನಾಟಕದ ನೆರೆಯ ಪ್ರಾಂತವೆಂಬಂತಿದ್ದು ಮುಂದೆ ಪ್ರಾಂತರಚನೆಯ ಕಾಲಕ್ಕೆ ಮೈಸೂರಿನಿಂದ ಅದು ಅಭಿವೃದ್ಧಿ ಹೊಂದಬೇಕಾಗಿದೆ. ಸದ್ಯ ಮೈಸೂರ ರಾಜಪ್ರಮುಖರು ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವನ್ನು ಪೂರೈಸಿ ಉ. ಕರ್ನಾಟಕ ಸಂಚಾರ ಕೈಗೊಳ್ಳುವದರಿಂದ ಹರಿಹಂಚಾಗಿರುವ ಕನ್ನಡಿಗರಲ್ಲಿ ಒಂದು ಒಗೆಯ ಪ್ರಾಂತಾಭಿಮಾನದ ಆಕಾಂಕ್ಷೆ ಹುಟ್ಟೀತೆಂದೂ ಸಮಗ್ರಕರ್ನಾಟಕದ ಐಕ್ಯಸಾಧನೆ ಇದರಿಂದಾದೀತೆಂದೂ ನಾವು ಊಹಿಸುತ್ತೇವೆ. ಅಂತಲೇ ಮೈಸೂರು ರಾಜಪ್ರಮುಖರ ಪ್ರಗತಿಪರ ಧೋರಣೆಯನ್ನು ನಿರೀಕ್ಷಿಸಬೇಕಾಗಿದೆ.

ಕಾಮತರ ಕಾನೂನು

ಸದಾ ಪಾರ್ಲಿಮೆಂಟಿನಲ್ಲಿ ಉದ್ಬೋಧಪೂರ್ಣವಾದ ಪ್ರಶ್ನೆಯನ್ನು ಹಾಕುವದರಲ್ಲಿ ಶ್ರೀ ಎಚ್. ವಿ. ಕಾಮತರು ಹೆಸರಾದವರು. ಅಪರೂಪವಾಗಿ ಒಂದೆರಡು ಬೌದ್ಧಿಕ ಪ್ರಶ್ನೆಗಳನ್ನು ಹಾಕುವದೂ ಉಂಟು! ಆದರೆ ಹೆಚ್ಚಾಗಿ ಕೀಟಲೆಯನ್ನುಂಟುಮಾಡುವ ಪ್ರಶ್ನೆಗಳನ್ನು ಹಾಕುವದು ಕಾಮತರ ವೈಶಿಷ್ಟ್ಯ! ಅದರಲ್ಲೂ ನೆಹರೂರವರ ಮುಂಗೋಪವನ್ನು ಕೆಣಕುವದೆಂದರೆ ಕಾಮತರಿಗೆ ಇನ್ನಷ್ಟು ಸಂತೋಷ! ನೆಹರೂ ತಂಡನ ಬಿಕ್ಕಟ್ಟಿನಲ್ಲಿ ನೆಹರೂ ತಳೆದ ಧೋರಣೆಯನ್ನು ಪ್ರತ್ಯಕ್ಷವಾಗಿ ಟೀಕಿಸಿದವರಲ್ಲಿ ಶ್ರೀ ಡಿ. ಪಿ. ಮಿಶ್ರ ಮತ್ತು ಶ್ರೀ ಕಾಮತರು. ನೆಹರೂ ಘಟನೆಯನ್ನುಲ್ಲಂಘಿಸಿ ನಿರಂಕುಶ ಪ್ರಭುತ್ವಕ್ಕೆ ಆಹ್ವಾನ ಕೊಟ್ಟಿರುತ್ತಾರೆಂದು ಅವರು ಹೊರಡಿಸಿದ ಪ್ರಕಟಣೆಯಲ್ಲಿ ಹೇಳಿರುತ್ತಾರೆ. ಅಂತೆಯೆ ಪಾರ್ಲಿಮೆಂಟಿನಲ್ಲಿ ಡಾ॥ ದೇಶಮುಖರು ತರಬೇಕು ಹಾಗೂ ಉದ್ಯೋಗವೆನುವ ಮಸೂದೆಯನ್ನು ಮುಂದೆ ತಂದಾಗ ಅದು ತಡೆಹಿಡಿಯತಕ್ಕದ್ದೆಂದು ರಾಷ್ಟ್ರಾಧ್ಯಕ್ಷರು ಉಪಾಧ್ಯಕ್ಷರಿಗೆ ಪತ್ರ ಕಳಿಸಿದ್ದರು. ಇಂತಹ ಮಸೂದೆಗಳ ಪತ್ತೆ ಹಿಡಿಯುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗಿರುವುದಿಲ್ಲವೆಂದು ದೇಶಮುಖರು ವಾದಿಸಿದರು. ಹೀಗೆಲ್ಲ ನಡೆದರೆ ಮುಂದೆ ಯಾವುದೇ ಮಸೂದೆಗಳನ್ನು ಜೀವಂತಗೊಳಿಸುವದು ಕಷ್ಟಕ್ಕೆ ಬರುತ್ತದೆಂದೂ ಆದುದರಿಂದ ಇದನ್ನು ಪಾರ್ಲಿಮೆಂಟು ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಕಾಮತರು ವಾದಿಸಿದರು. ಉಪಾಧ್ಯಕ್ಷರು ಈ ಮಸೂದೆ ಆರ್ಥಿಕ ವೆಚ್ಚವನ್ನೊಳಗೊಂಡಿರುವ ಪ್ರಯುಕ್ತ ಇದನ್ನು ಅಧ್ಯಕ್ಷರು ಸಮ್ಮತಿಸುವದು ಮುಖ್ಯವಾಗಿದೆ. ಸರಕಾರದೊಡನೆ ಹಣವಿಲ್ಲದೆ ಇರುವ ಸಂದರ್ಭದಲ್ಲಿ ಇಂತಹ ಮಸೂದೆಗಳನ್ನು ತಡೆಹಿಡಿಯುವಲ್ಲಿ ರಾಷ್ಟ್ರಾಧ್ಯಕ್ಷರು ಸರ್ವಸ್ವತಂತ್ರರಾಗಿದ್ದಾರೆಂದು ಘಟನೆಯ ಕಲಮುಗಳನ್ನು ಉಪಾಧ್ಯಕ್ಷರು ಎತ್ತಿ ಹೇಳಿದರು. ಆದರೂ ಕಾಮತರು ತಮ್ಮ ವಾದವನ್ನು ನಿಲ್ಲಿಸಲಿಲ್ಲ ಮಾತ್ರವಲ್ಲ ಅಪ್ರಾಸಂಗಿಕವಾದ ಹಟಪ್ರದರ್ಶನ ಮಾಡಿದರು. ಶಿಸ್ತನ್ನು ಭಂಗಿಸುವ ಲಕ್ಷಣ ತೋರಿದ್ದರಿಂದ ಅಧ್ಯಕ್ಷರು ಈ ದಿನದ ಮಟ್ಟಿಗೆ ಸಭೆಯಿಂದ ಹೊರಟಿದ್ದು ಹೋಗಬಹುದೆಂದರು. "ಅದಕ್ಕೆ ಕಾಮತರು "ಈ ರೀತಿ ನಡೆದಲ್ಲಿ ನಾನು ಹೊರಗುಳಿಯುವುದೇ ವಾಸಿ ಅದಕ್ಕೆ ನಾನು ಸಿದ್ಧನೇ" ಎಂದರು ಅಧ್ಯಕ್ಷರು "ಸದಸ್ಯರು ಗಂಭೀರ ವರ್ತನೆಯನ್ನು ಬಿಟ್ಟು ನಡೆದುದಾದರೆ ಇದಕ್ಕಿಂತಲೂ ಹೆಚ್ಚಿನ ಉಗ್ರಕ್ರಮ ಕೈಗೊಳ್ಳಬೇಕಾಗುತ್ತದೆಂದಾಗ ಶ್ರೀ ಕಾಮತರು "ಒಳ್ಳೇದು ನಾನು ಹೋಗುತ್ತೇನೆ"ಂದು ಕಾಗದ ಪತ್ರಗಳ ಗಂಟುಮೂಟೆಗಳೊಂದಿಗೆ ಸಭಾಭವನವನ್ನು ಬಿಟ್ಟರು. ಇಂತಹ ಪ್ರಸಂಗ ಕಾಮತರಿಗೆ ಹೊಸತೇನೂ ಅಲ್ಲ!

ಡಾ॥ ಗ್ರಾಹ್ಯಾಮರು ಗಂಟುಕಟ್ಟಿದರು

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ॥ ಗ್ರಾಹ್ಯಾಮರು ಸುಮಾರು ಎರಡು ಮಾಸಗಳನ್ನು ಭಾರತ-ಪಾಕಿಸ್ತಾನ-ಕಾಶ್ಮೀರಗಳಲ್ಲಿ ಸಂಚರಿಸಿ ಕಾಶ್ಮೀರ ಸಮಸ್ಯೆಯ ಕುರಿತು ಒಂದು ತೀರ್ಮಾನಕ್ಕೆ ಬರುವವರಿದ್ದಾರೆ. ಕೊನೆಯದಾಗಿ ಶ್ರೀ ನೆಹ್ರೂರವರೊಡನೆ ಮಾತುಕತೆನಡೆಸಿ ಸದ್ಯ ಕರಾಚಿಗೆ ಹೋಗಿರುವರು. ಪಾಕಿಸ್ತಾನ ಸರಕಾರದೊಡನೆ ಕೊನೆಯ ವಿಚಾರ ವಿನಿಮಯ ಮುಗಿಸಿಕೊಂಡು ಜನೇವಾಕ್ಕೆ ತೆರಳುವವರಿದ್ದಾರೆ. ಕಾಶ್ಮೀರ ಸಮಸ್ಯೆಯ ಬಗ್ಗೆ ಮೂರು ತಿಂಗಳೊಳಗಾಗಿ ತನ್ನ ವರದಿಯನ್ನು ಯು. ರಾ. ಸಂಘಕ್ಕೆ ಒಪ್ಪಿಸಬೇಕಾಗಿರುವದರಿಂದ ಆ ವರದಿಯನ್ನು ಜನೇವಾದಲ್ಲಿಯೇ ಸಿದ್ಧಗೊಳಿಸಲಿರುವರಾಗಿ ತಿಳಿಯುತ್ತದೆ.

ಡಾ॥ ಗ್ರಾಹ್ಯಾಮರು ತನ್ನ ಕಾರ್ಯವನ್ನು ಅತ್ಯಂತ ನಿಷ್ಠೆ ಹಾಗೂ ಮುತ್ಸದ್ದಿತನದಿಂದ ನಿರ್ವಹಿಸಿದ್ದರೆನ್ನಲಾಗಿದೆ. ಪಾಕಿಸ್ತಾನದ ಧೋರಣೆ ಹಾಗೂ ಕಾಶ್ಮೀರಾಕ್ರಮಣೆಯ ಪೂರ್ವಸಿದ್ಧತೆಯನ್ನು ಅವರು ರುವಾಗಲೇ ಪಾ. ಸರಕಾರ ನಡೆಸಿದ್ದನ್ನು ಅವರು ಚೆನ್ನಾಗಿ ಲಕ್ಷಿಸಿದ್ದಾರೆ. ಉಭಯ ರಾಷ್ಟ್ರಗಳೊಡನೆ ವಿಚಾರ ವಿನಿಮಯ ನಡೆಸುತ್ತಿರುವಾಗಲೂ ಗ್ರಾಹ್ಯಾಮರು ಯಾವುದೇ ಸ್ವಂತಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಿಲ್ಲ. ಮಾತ್ರವಲ್ಲ ಪತ್ರಿಕಾಕರ್ತರು ಮುತ್ತಿಗೆ ಹಾಕಿದಲ್ಲೆಲ್ಲ ಅತ್ಯಂತ ಜಾಣತನದಿಂದ ತಪ್ಪಿಸಿಕೊಂಡಿದ್ದಾರೆ. ತನ್ನ ಕಾರ್ಯವನ್ನು ನಿರ್ಭಯಿಸಿಕೊಂಡು ಹೋಗುವದರಲ್ಲಿ ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸಿದ್ದು ಕಂಡುಬರುತ್ತದೆ. ಆದರೂ ಗ್ರಾಹ್ಯಾಮರು ಏನು ವರದಿ ಮಾಡಬಹುದು? ಯಾರಪರವಾಗಿ ಹೆಚ್ಚು ಒಲವನ್ನು ಪ್ರಕಟಪಡಿಸೀತು? ಎನ್ನುವ ವಿಚಾರದಲ್ಲಿ ಕುತೂಹಲ ಹುಟ್ಟುವದು ಸ್ವಾಭಾವಿಕ! ಗ್ರಾಹ್ಯಾಮರು ಅತ್ಯಂತ ಬುದ್ಧಿಶಾಲಿಗಳಾಗಿದ್ದ ಹಾಗೆ ಶಾಂತಿಪ್ರಿಯರೂ ಸತ್ಯಭಾಷಿಗಳೂ ಆಗಿರುವರು. ಆದುದರಿಂದ ಅವರ ವರದಿಯು ಬಹಳಮಟ್ಟಿಗೆ ಯಥಾರ್ಥ ಪ್ರತಿಪಾದನೆಯುಳ್ಳದ್ದಾದೀತೆಂದು ನಾವು ಊಹಿಸಬಹುದು.

ಕಾಶ್ಮೀರವನ್ನು ಅಲ್ಲಿಯ ಜನತೆಯ ಅಭಿಪ್ರಾಯದಂತೆ ಸಾರ್ವತ್ರಿಕ ಮತಗಣನೆಯ ಮೂಲಕ ನಿರ್ಣಯಿಸತಕ್ಕದ್ದೆನ್ನುವ ತತ್ವಕ್ಕೆ ಉಭಯ ರಾಷ್ಟ್ರಗಳೂ ಒಪ್ಪಿವೆ. ಆದರೆ ನಿಃಸೈನ್ಯೀಕರಣದ ಪ್ರಶ್ನೆಯಲ್ಲಿ ಉಂಟಾಗಿರುವ ಮತಭೇದ ಯಥಾಸ್ಥಿತಿಯಲ್ಲಿದೆ. ಕಾಶ್ಮೀರ ಸರಕಾರದ ಆಹ್ವಾನದ ಮೇಲೆಯೆ ಭಾರತವು ಕಾಶ್ಮೀರದಲ್ಲಿ ಕೈ ಹಾಕಿತು. ಅಂತೆಯೆ ಅದರ ಸಂರಕ್ಷಕತೆಯ ಬಗ್ಗೆ ಸ್ವಲ್ಪ ಸೈನ್ಯವನ್ನು ಅಲ್ಲಿ ಉಳಿಸುವದು ನ್ಯಾಯವೂ ಆಗಿದೆ. ಆದರೆ ಪಾಕಿಸ್ತಾನವು ಭಾರತದ ಎಲ್ಲ ಸೈನಿಕರೂ ಹೊರಬೀಳಬೇಕೆಂದು ಹಟಹಿಡಿದಿದೆ. ಮಾತ್ರವಲ್ಲ ತಾನು ಆಕ್ರಮಣಮಾಡಿದ ಸ್ಥಳವನ್ನು ಬಿಟ್ಟುಕೊಡುವದಕ್ಕೂ, ಸೈನ್ಯವನ್ನು ಹಿಂದೆ ತೆಗೆದುಕೊಳ್ಳುವದಕ್ಕೂ ಅದು ಸಿದ್ಧವಿಲ್ಲ. ಅಂದಮೇಲೆ ಕಾಶ್ಮೀರ ಸಮಸ್ಯೆಯನ್ನು ಹೇಗೆ ಬಗೆಹರಿಸತಕ್ಕದ್ದೆಂಬುದು ಅಪರಿಹಾರ್ಯ ಸಮಸ್ಯೆಯಾಗಿದೆ. ಉಭಯ ರಾಷ್ಟ್ರಗಳಿಗೆ ಸಮ್ಮತವಾಗುವ ನೂತನ ಪರಿಹಾರ ಮಾರ್ಗವನ್ನು ಇನ್ನೂ ಹುಡುಕುವದೇ ಬಹುಮುಖ್ಯ ಕಾರ್ಯ. ಅಥವಾ ಉಭಯತರಲ್ಲೊಬ್ಬರ ಹಟವನ್ನು ಬಲಿಸಿಕೊಳ್ಳಬೇಕು. ಡಾ॥ ಗ್ರಾಹ್ಯಾಮರು ಹೊರಡಿಸುವ ವರದಿ ಈ ಎಲ್ಲ ಸಮಸ್ಯೆಗಳನ್ನು ಹೇಗೆ ಎದುರಿಸುತ್ತದೆಂಬುದನ್ನು ನಾವು ಕುತೂಹಲಿಗಳಾಗಿ ನಿರೀಕ್ಷಿಸುವದಕ್ಕಿಂತ ಸದ್ಯ ಬೇರೇನೂ ಹೇಳತಕ್ಕದ್ದಿಲ್ಲ.

ಮಂಜಯ್ಯ ಹೆಗ್ಡೆ, ಬಿ.ಎ.ಬಿ.ಎಲ್. — ಮಂಗಳೂರು, ದ. ಕ.
ಅಧ್ಯಕ್ಷ, ದ. ಕ. ಜಿಲ್ಲಾ ಬೋರ್ಡ್. — 4-9-1951

ಶ್ರೀಯುತ ಹೊನ್ನಯ್ಯ ಶೆಟ್ಟರೇ,

ತಮ್ಮ ಆಮಂತ್ರಣ ಕೈ ಸೇರಿತು. ಉಡುಪಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಶ್ರೀ. ಟಿ. ವಿ. ಪಿ. ಸಿ. ಕೊಲಾಸೊರವರ ಅಧ್ಯಕ್ಷತೆಯಲ್ಲಿ ತಾವು ನವಯುಗ ವಾರ ಪತ್ರಿಕೆಯ 31ನೆಯ ವಾರ್ಷಿಕ ಪ್ರಾರಂಭೋತ್ಸವ ಸಮಾರಂಭವನ್ನು ಆಚರಿಸಲಿದ್ದೀರೆಂದು ಕೇಳಿ ತುಂಬ ಆನಂದವಾಗುತ್ತದೆ.

ನಿಜಕ್ಕೂ ಕಳೆದ 30 ವರ್ಷಗಳಿಂದ ಬಿಡದೆ ವಾರವಾರವೂ ವಿವಿಧಪ್ರಕಾರ ಯಾವ ನವ ಹುರುಪು ಹುಮ್ಮಸ್ಸುಗಳಿಂದ ಜನತೆಗೆ ಸೇವೆ ಸಲ್ಲಿಸಿದೊಂದೇ ಸಾಕು, 'ನವಯುಗ'ಕ್ಕೆ ಅಭಿಮಾನಾಸ್ಪದವಾದ ಬೇರೆ ಸಂಗತಿ ಬೇಡ. ಸಮಾಜಕ್ಷೇತ್ರದಲ್ಲಿ ಹಾಗೂ ಗ್ರಾಮಾಂತರ ನಿವಾಸಿಗಳ ಸಾಮಾಜಿಕ ಅಭಿವೃದ್ಧಿಯ ವಿಚಾರದಲ್ಲಿ 'ನವಯುಗ'ವು ಇದುವರೆಗೆ ವಹಿಸಿರುವ ಪಾತ್ರ ವಿಶಿಷ್ಟವಾದುದು, ಅಭಿನಂದನೀಯವಾದುದು. ಅದು ಗ್ರಾಮಸ್ಥರಲ್ಲಿ ಜನಜಾಗ್ರತಿಯನ್ನು ಹುಟ್ಟಿಸಿ ಅರ್ಥಯ ಸೇವೆ ಸಲ್ಲಿಸಿದೆಯೆಂಬುದರಲ್ಲಿ ಸಂದೇಹವೇ ಇಲ್ಲ. ಪತ್ರಿಕೋದ್ಯಮದ ಉನ್ನತ ಮಟ್ಟವನ್ನು ಕಾಯ್ದು, ಉತ್ತಮ ಸಂಪ್ರದಾಯಗಳನ್ನು ಉಳಿಸಿಕೊಳ್ಳಲೆಳಸುವ ತಮ್ಮ ಸಂಪಾದಕ, ವ್ಯವಸ್ಥಾಪಕರುಗಳ ಪ್ರಯತ್ನ ಸ್ತುತ್ಯಾರ್ಹವಾದುದೇ ಸರಿ. 'ನವಯುಗ'ವು ಇದೇ ರೀತಿ ಇನ್ನೂ ಹಲವು ವರ್ಷ ಬದುಕಿ ನಾಡಿಗೆ ಸೇವೆ ಸಲ್ಲಿಸುವಂತಾಗಲೆಂದು ಹಾರೈಸುತ್ತೇನೆ. ತಮ್ಮಲ್ಲಿಗೆ ಬಂದು ಉತ್ಸವದಲ್ಲಿ ಸ್ವತಃ ಭಾಗವಹಿಸಲು ಅಸಾಧ್ಯವಾದುದಕ್ಕೆ ವಿಷಾದಿಸುತ್ತೇನೆ.

ಬಿ. ಎನ್. ಹೆಗ್ಡೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚುಗಳಿಂದ ಮಾಡಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಲೋಕಾಂತ

ಕೊರಿಯಾದ ವಾತುಕತೆ

ಕೊರಿಯ ಯುದ್ಧಮುಕ್ತಾಯದ ಮಾತುಕತೆಗಳನ್ನು ಪುನಃ ಆರಂಭಿಸಲು ಕೆಸಾಂಗ್‌ದ ಹೊರತು ಬೇರೊಂದು ಸ್ಥಳವನ್ನು ಸೂಚಿಸಿರೆಂದು ಜನರಲ್ ರಿಜವೆಯವರು ಕಮ್ಯೂನಿಸ್ಟರಿಗೆ ತಿಳಿಸಿರುವದಾದರೂ ಕಮ್ಯೂನಿಸ್ಟರು ಅವರ ಕೇಳಿಕೆಗೆ ಈ ವರೆಗೂ ಉತ್ತರಿಸಿರುವುದಿಲ್ಲ. ಕಮ್ಯೂನಿಸ್ಟರು ಯುದ್ಧಾಸಕ್ತ ಕಾರ್ಯದಲ್ಲಿ ವಿಶೇಷ ಮುನ್ನರಾಗಿರ ವ ದಾಖಲೆಗಳು ಕಂಡುಬರುತ್ತಿವೆ.

ಪರ್ಶಿಯಾದ ಪ್ರಶ್ನೆ ಅಪರಿಹಾರ್ಯವೇ?

ಬ್ರಿಟನ ಮತ್ತು ಪರ್ಶಿಯಗಳೊಳಗಿನ ಎಣ್ಣೆ ತಂಟೆಯ ಮಾತುಕತೆಗಳು ಸಂಪೂರ್ಣ ವಿಫಲಗೊಂಡಿದ್ದು ಪರ್ಶಿಯವು ಬ್ರಿಟನನ್ನು ಹೊರತೇ ಎಣ್ಣೆ ಕಂಪೆನಿಯನ್ನು ನಡೆಸುವ ಪೂರ್ವ ಸಿದ್ಧತೆ ನಡೆಸುತ್ತಲಿದೆ. ಇರಾಣವು ಪಾಕಿಸ್ಥಾನ ಎಣ್ಣೆ ಕ್ಷೇತ್ರಗಳ ಕಾರ್ಯ ನಿರ್ವಹಿಸಿಕೊಂಡು ಹೋಗಲು ಹಾಗೂ ಅಬದಾನ ಶುದ್ಧೀಕರಣ ಕಾರಖಾನೆಯನ್ನು ಪುನಃ ಪ್ರಾರಂಭಿಸಿ ಎಣ್ಣೆಯನ್ನು ಮಾರಲು ನಿರ್ಣಯಿಸಿದೆ. ಅಬದಾನದಿಂದ ಬ್ರಿಟಿಷರನ್ನು ಹೊರಹಾಕುವ ಡಾ| ಮುಸಾದಿಕರ ಸೂಚನೆ ಕೂಡಲೇ ಕಾರ್ಯರೂಪದಲ್ಲಿ ಬರಬಹುದಾಗಿ ತಿಳಿಯುತ್ತದೆ. ಬ್ರಿಟನ್ನು ಕೈಕೊಳ್ಳಬಹುದಾದ ಕ್ರಮಕ್ಕೆ ಪ್ರತಿಯಾಗಿ ಇರಾಣವು ಅದಕ್ಕೂ ಹೆಚ್ಚಿನ ಉಗ್ರಕ್ರಮ ಕೈಕೊಳ್ಳುವದೆಂದು ರಾಷ್ಟ್ರೀಕರಣಮಂಡಳದ ವಕ್ತಾರರು ತಿಳಿಸಿರುವರು.

ಯುದ್ಧದ ಪೂರ್ವಸಿದ್ಧತೆ

ಸೋವಿಯಟ್ ಸರಕಾರದ ವಿದೇಶಾಂಗ ಉಪಮಂತ್ರಿ ಎಂ. ಗ್ರೋಮಿಕೋರವರು ಜಪಾನ ಶಾಂತಿ ಒಪ್ಪಂದದ ಕುರಿತು "ಇದು ಶಾಂತಿ ಕರಾರಾಗಿರದೆ ಯುದ್ಧದ ಪೂರ್ವಸಿದ್ಧತೆಯನ್ನು ಸಿದ್ಧಗೊಳಿಸುವ ಕರಾರಾಗಿರುತ್ತದೆ." ಎಂದು ಟೀಕೆ ಮಾಡಿರುತ್ತಾರೆ.

ಅಫಘಾನಿಸ್ತಾನ ಭಾರತ ಮೈತ್ರಿ

ಅಫಘಾನಿಸ್ತಾನದ ಮುಖ್ಯ ಮಂತ್ರಿ ಶಾ ಮಹಮ್ಮದ ಖಾನರು "ಅಫಘಾನ ಹಾಗೂ ಭಾರತಗಳೊಳಗಿನ ಮೈತ್ರಿ ಅತ್ಯಂತ ಗಾಢವಾಗಿದ್ದು ಉಭಯ ರಾಷ್ಟ್ರಗಳೊಳಗಿನ ಶಾಂತಿ ಸುರಕ್ಷಿತತೆಗಳಿಗೆ ಸಹಾಯಕವಾಗಬಲ್ಲುದೆಂದು ನಂಬಿದ್ದೇನೆ. ಭಾರತದ ಪ್ರಭಾವಶಾಲೀ ಧುರೀಣರನ್ನೂ ಅವರಲ್ಲೂ ಜಗತ್ತಿನ ಸುಪ್ರಸಿದ್ಧ ಪುರುಷರಲ್ಲೊಬ್ಬರಾದ ಶ್ರೀ ಜವಾಹರಲಾಲ ನೆಹ್ರೂರವರನ್ನು ಕಾಣುವ ಇಚ್ಛೆ ಬಹಳ ಕಾಲದಿಂದ ನನ್ನಲ್ಲಿತ್ತು. ಅದಿಂದು ಈಡೇರಿತು ಮಾತ್ರವಲ್ಲದೆ ಈ ಸವಿ ನೆನಹನ್ನು ನಾನೆಂದೂ ಮರೆಯಲಾರೆ" ಎಂದು ಹೇಳಿದರು.

ಪಾಕಿಸ್ತಾನದ ನಿರಾಧಾರ ಆರೋಪ

ರಾತ್ರವಾಣಿ ಎಂಬ ಪಾಕಿಸ್ತಾನ ದಿನಪತ್ರಿಕೆಯು ಭಾರತದ ಬಿಹಾರ ಉತ್ತರ ಪ್ರದೇಶದಲ್ಲಿ ಕಳೆದ ಕೆಲವು ತಿಂಗಳಿಂದ 4000 ಮುಸಲ್ಮಾನರನ್ನು ಹಿಂದುಗಳನ್ನಾಗಿ ಮತಾಂತರಗೊಳಿಸಲಾಗಿದೆಂದು ಬರೆದಿರುತ್ತದೆ. ಈ ಸುದ್ದಿಯು ನಿರಾಧಾರವಾಗಿದ್ದು ಜಾತೀಯ ದ್ವೇಷವನ್ನು ಹುಟ್ಟಿಸುವದಕ್ಕೆ ಸಲುವಾಗಿರುತ್ತದೆ. ಇಂತಹ ಒಂದೇ ಒಂದು ದಾಖಲೆ ಅಲ್ಲಿ ನಡೆದಿಲ್ಲವೆಂದು ಪ್ರಾಂತೀಯ ಸರಕಾರ ಪ್ರತಿಭಟಿಸಿಯದೆ.

ಕಾಂಗ್ರೆಸ್ ಹೊಸ ಕಾರ್ಯಸಮಿತಿ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರಲಾಲರ ಅಪೇಕ್ಷೆಯಂತೆ ಕಾಂಗ್ರೆಸ್ಸಿನ ವಿಶೇಷ ಬಹಿರಂಗ ಅಧಿವೇಶನವು ಅಕ್ಟೋಬರ ೧೮ ಹಾಗೂ ೧೯ರಂದು ದಿಲ್ಲಿಯಲ್ಲಿ ನೆರವೇರುವುದು. ನೂತನ ಕಾರ್ಯ ಸಮಿತಿಯ ಸದಸ್ಯರ ಹೆಸರುಗಳನ್ನು ಮುಂದಿನ ವಾರದಲ್ಲಿ ಬಹಿರಂಗಪಡಿಸಲಾಗುವದಾಗಿ ತಿಳಿಯುತ್ತದೆ.

ವನಸ್ಪತಿ ತುಪ್ಪಕ್ಕೆ ಬಹಿಷ್ಕಾರ ಪ್ರಶ್ನೆ

ವನಸ್ಪತಿ ತುಪ್ಪದ ಬಹಿಷ್ಕಾರ ಹಾಕುವ ಪಂ| ಭಾರ್ಗವರ ಮಸೂದೆಯು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಿದ್ದು ಭಾರ್ಗವರು, ಮಸೂದೆಯನ್ನು ಪಾಸು ಮಾಡುವ ಕುರಿತು, ಸರಕಾರವು ತಾಳಿದ ಅನುಚಿತ ಧೋರಣೆಗೆ ವಿಷಾದವನ್ನು ವ್ಯಕ್ತಪಡಿಸಿದರು. ಸರಕಾರವು ತನಗೆ ಇಷ್ಟವಾಗಲೀ ಅನಿಷ್ಟವಾಗಲೀ ಕೊನೆಯ ನಿರ್ಣಯವನ್ನು ಸ್ಪಷ್ಟವಾಗಿ ಹೇಳಿಬಿಡಬೇಕೆಂದು ಒತ್ತಾಯಪಡಿಸಿದರು.

ಯುದ್ಧಪ್ರಚೋದಕ ಸುದ್ದಿ ಬೇಡ

ಭಾರತ ಪಾಕಿಸ್ತಾನಗಳೊಳಗೆ ಯುದ್ಧ ಅನಿವಾರ್ಯವೆಂದು ಭಾರತದ ಹಲವು ಪತ್ರಿಕೆಗಳೂ ಧುರೀಣರೂ ಯುದ್ಧಪ್ರಚೋದಕ ಕಾರ್ಯ ಕೈಗೊಂಡ ಹಲವು ದಾಖಲೆಗಳನ್ನು ಖಂಡಿಸಿ ಭಾರತ ಪಾಕಿಸ್ತಾನಗಳೊಳಗೆ ಯುದ್ಧವಾಗುವ ಸಂಭವವಿಲ್ಲೆಂದೂ ಯುದ್ಧವಾಗುವದಾದರೆ ಭಾರತ ಸಸಜ್ಜಿತವಾಗಿದೆಂದೂ ಶ್ರೀ ಜವಾಹರಲಾಲ ನೆಹ್ರೂರವರು ದಿಲ್ಲಿಯ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಚುನಾವಣಾ ದಿನಗಳು

ಸಾರ್ವತ್ರಿಕ ಚುನಾವಣೆಯು ಮತದಾನ ದಿನಗಳು ಜನವರಿ ತಿಂಗಳೊಳಗಾಗಿ ಪೂರೈಸಲಿದ್ದು ಮತದಾನ ನಡೆಯಲಿರುವ 26 ಪ್ರಾಂತ್ಯಗಳ ಪೈಕಿ 18 ಪ್ರಾಂತಗಳು ತಮ್ಮ ಪ್ರಾಂತಗಳಲ್ಲಿ ನಡೆಯಬಹುದಾದ ದಿನಗಳನ್ನು ತಿಳಿಸಿರುತ್ತವೆ ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ತಿರುವಾಂಕೂರು, ಕೊಚ್ಚಿ, ಮೊದಲಾದ ಪ್ರಾಂತಗಳಲ್ಲಿ ಅಕ್ಟೋಬರ ತಿಂಗಳು ಮೊದಲಾಗಿ ನಡೆಯಲಿದೆ. ಜನವರಿ ತಿಂಗಳಲ್ಲಿ: ಮದ್ರಾಸ, ಮುಂಬಯಿ, ಅಸ್ಸಾಮು, ಸೌರಾಷ್ಟ್ರ, ಮಧ್ಯಭಾರತ, ಮುಂತಾದೆಡೆಗಳಲ್ಲಿ ನಡೆಯಲಿದೆ. ಮದ್ರಾಸದಲ್ಲಿ 20ರಿಂದ 25ರ ವರೆಗೆ ನಡೆಯಲಿದೆಯೆಂದು ತಿಳಿದು ಬರುತ್ತದೆ

ತ್ರಿಪುರಾ ಗಡಿಯಲ್ಲಿ ಪಾಕ್ ಸೈನ್ಯ!

ತ್ರಿಪುರಾ ಗಡಿಯಲ್ಲಿ ಪಾಕಿಸ್ತಾನ ಸರಕಾರವು ಅನ್ಸಾರ ಹಾಗೂ ಪಾಕಿಸ್ಥಾನ ಸೈನಿಕರನ್ನು ಮತ್ತು ಪೋಲೀಸರನ್ನು ಹೇರಳವಾಗಿ ಇಳಿಸಿಹಾಕಿದ್ದು ಹಲವು ಕಡೆ ದರೋಡೆ ನಡೆದ ದಾಖಲೆಗಳೂ ಬಂದಿವೆಯೆಂದು ಸಂಸ್ಥಾನ ಶಾಖಾ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರರು ಪಾರ್ಲಿಮೆಂಟಿನಲ್ಲಿ ಹೇಳಿದರು

ಮದ್ರಾಸದಲ್ಲಿ ಅಕ್ಕಿಯ ಕೊರತೆ

ಮದ್ರಾಸ ಪ್ರಾಂತದ ಅಕ್ಕಿಯ ಕೊರತೆ ದಿನದಿಂದ ದಿನಕ್ಕೆ ಕಠಿಣವಾಗುತ್ತಿದ್ದು ಸಪ್ಟೆಂಬರ ತಿಂಗಳಲ್ಲಿ ಅತ್ಯಂತ ಕೊರತೆಯಾಗುವದೆಂದೂ ಪ್ರತಿ ತಿಂಗಳ ಪ್ರಮಾಣವಾದ 30000 ಟನ್ ಅಕ್ಕಿಯನ್ನು ಕೂಡಲೇ ಪೂರೈಸದಿದ್ದರೆ ಪಂಕ್ತಿ ಇನ್ನಷ್ಟು ಕಠಿಣವಾಗವದೆಂದೂ ಮದ್ರಾಸ ಸರಕಾರ ಕೇಂದ್ರಕ್ಕೆ ತಂತಿ ಕಳಿಸಿದೆ

ಭಾರತಕ್ಕೆ ಕಾನಡಾದಿಂದ
5 ಕೋಟಿ ರೂ. ಸಹಾಯ

ಕೊಲಂಬೋ ಯೋಜನೆಯಂತೆ ಕಾನಡಾವು ಭಾರತಕ್ಕೆ ಯೋಜನೆಯ ಮೊದಲನೆಯ ವರ್ಷದಲ್ಲಿ 5 ಕೋಟಿ ರೂ.ಗಳ ಸಹಾಯ ನೀಡುವದಾಗಿ ತಿಳಿಸಿರುತ್ತದೆ.

ಬ್ರಿಟಿಷರೀರ್ವರ ಕೊಲೆ

ಬ್ರಿಟಿಶ ನಿವೃತ್ತ ಸಿ. ಐ. ಡಿ ಗಳಾದ ಎಫ್. ಎಟ. ಕ್ಲಾರ್ಕ ಮತ್ತು ಮುಂಬಯಿ ಪೋರ್ಟ ಟ್ರಸ್ಟಿನ ನಿವೃತ್ತ ಅಕೌಂಟಂಟರಾದ ಒಲಿವರ ಜಾಯ್ಸರನ್ನು ಮುಂಬಯಿಯ ಸ್ವಗೃಹದಲ್ಲಿ ಕೊಲೆಗೈಯ್ಯಲಾಗಿದೆ. ತಿಜೋರಿಯನ್ನು ಒಡೆದದ್ದು ಕಂಡು ಬಂದದ್ದರಿಂದ ಕಳ್ಳರ ತಂಡದಿಂದಲೇ ಈ ಕೃತ್ಯ ನಡೆದಿರಬಹುದೆಂದು ತಪಾಸಣೆ ನಡೆಯುತ್ತಲಿದೆ.

ಏಶಿಯಾ ಯುವಕ ಪರಿಷತ್ತು

ಸಂಯುಕ್ತ ರಾಷ್ಟ್ರ ಸಂಘದ ಶಾಂತಿಕ ಸಹಾಯದ ಮಂಡಲವು ಏಶಿಯಾ ಯುವಕ ಪರಿಷತ್ತನ್ನು ಇದೇ ಬರುವ ನವಂಬರ ಒಂದನೇ ತಾರೀಕಿನಿಂದ ನಡೆಸುವದಾಗಿ ತಿಳಿಯುತ್ತದೆ ಭಾರತದ ಸರಕಾರದ ಸೂಚನೆಯ ಮೇರೆಗೆ ಈ ಪರಿಷತ್ತನ್ನು ಕರೆಯಲಾಗಿದೆ. ಆಗ್ನೇಯ ಏಶಿಯದ ಎಲ್ಲ ರಾಷ್ಟ್ರಗಳೂ ಇದರಲ್ಲಿ ಭಾಗವಹಿಸುವವು. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ.

ಮುಂಬಯಿ ಸರಕಾರದ
ಅಧಿಕಾರಿಗಳ ಕೊಲೆ

ಮುಂಬಯಿ ಸರಕಾರದ ಸ್ಥಾನಿಕ ಸ್ವರಾಜ್ಯ ಹಾಗೂ ಆರೋಗ್ಯ ಖಾತೆಯ ಅಸಿಸ್ಟಂಟ್ ಸೆಕ್ರೆಟರಿಗಳಾದ ಶ್ರೀ. ಜಿ. ಎಸ್. ಸಾವಂತರು, ಇತರ ನೌಕರರು ಊಟಕ್ಕೆ ಹೋದ ಮಧ್ಯಾಹ್ನದ ಹೊತ್ತಿಗೆ ರಿವಾಲ್ವರಿನಿಂದ ಇರಿಯಲ್ಪಟ್ಟರು. ಅದನ್ನು ತಡೆಯಲಿಕ್ಕೆ ಬಂದ ಇನ್ನೊಬ್ಬ ಅಧಿಕಾರಿಯೂ ಇರಿಯಲ್ಪಟ್ಟು ಆಸ್ಪತ್ರೆಯಲ್ಲಿ ಚಿಂತಾಜನಕ ಸ್ಥಿತಿಯಲ್ಲಿರುವರು. ಶ್ರೀ ಸಾವಂತರು ಸ್ಥಳದಲ್ಲೇ ಮೃತಪಟ್ಟಿರುವರು. ಕೊಲೆಗಡುಕನು ಮಹಮ್ಮದ ಇಸ್ಮಾಯಿಲನೆಂಬುವನಿದ್ದು ವೈಯಕ್ತಿಕ ದ್ವೇಷವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಆತನನ್ನು ಇತರ ಕೆಲಸಗಾರರು ಹಿಡಿದು ಪೋಲೀಸರ ವಶಕ್ಕೆ ಕೊಟ್ಟಿರುತ್ತಾರೆ.

ಅಮೆರಿಕೆಯ ಗೋದಿ

ಭಾರತಕ್ಕೆ ಸಾಲರೂಪದಲ್ಲಿ ಕೊಡಮಾಡಿದ ಆಹಾರ ಧಾನ್ಯದ ಪೈಕಿ ಸುಮಾರು 2½ ಲಕ್ಷ ಟನ್ ಗೋದಿಯನ್ನು ಹೇರಿಕೊಂಡ 25 ಹಡಗಗಳು ಭಾರತಕ್ಕೆ ಹೊರಡಲಿವೆಯೆಂದು ಅಮೆರಿಕೆಯವರು ಹೇಳಿದರು. ಇದರಂತೆಯೇ ಅಕ್ಟೋಬರದಲ್ಲಿಯೂ ಗೋದಿ ಹೇರಿಕೊಂಡು ಹೆಚ್ಚು ಹಡಗಗಳು ಭಾರತಕ್ಕೆ ಬರಲಿವೆ.

IN THE SERVICE OF THE COUNTRY
1925 1950

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ—

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ ೧೩-೯-'೫೧

ಜಪಾನ ಶಾಂತಿ ಒಪ್ಪಂದ

ಸಾನ್ ಫ್ರಾನ್ಸಿಸ್ಕೋದ ಸಮ್ಮೇಳನ, ಕಳೆದ ವಾರದ ಒಂದು ಮಹತ್ವದ ಘಟನೆಯಾಗಿದೆ. ಆಂಗ್ಲೋ ಅಮೇರಿಕಾನರು ಸಿದ್ಧಗೊಳಿಸಿದಂತಹ ಈ ಕರಾರಿಗೆ ಜಪಾನು ಕೂಡ 49 ರಾಷ್ಟ್ರಗಳು ಸಹಿಹಾಕಿದವು. ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲೊಂದಾದ ರಶಿಯಾ ಇದಕ್ಕೆ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿಯದೆ. ಕಮ್ಯೂನಿಸ್ಟ ಚೀನವನ್ನಂತೂ ಮೊದಲೇ ಕಡೆಗಣಿಸಲಾಗಿದೆ. ಪೋಲಂಡ ಮತ್ತು ಜೆಕೋಸ್ಲೋವಿಯಾಗಳು ಅಂಕಿತ ಹಾಕಲು ನಿರಾಕರಿಸಿದವು. ಭಾರತ ಮತ್ತು ಬ್ರಹ್ಮದೇಶ ಪರಿಷತ್ತಿನಲ್ಲಿ ಭಾಗವಹಿಸಿರುವುದಿಲ್ಲ.

ಕಮ್ಯೂನಿಸ್ಟ ರಾಷ್ಟ್ರಗಳ ಮೇಲೆ ಯುದ್ಧ ಸಾರುವಲ್ಲಿ ಜಗತ್ತಿನ ಬೆಂಬಲ, ಸಹಕಾರಗಳನ್ನು ಆಂಗ್ಲೋ ಅಮೇರಿಕಾನರು ಹಲವು ರೀತಿಯ ಒಡಂಬಡಿಕೆಯ ಮೇಲೆ ಪಡೆಯುತ್ತಿರುವದನ್ನು ನಾವು ಲಕ್ಷಿಸುತ್ತಲಿದ್ದೇವೆ. ಈ ಒಪ್ಪಂದಕ್ಕೆ ಸಹಿಹಾಕಿದ ಪ್ರತಿಯೊಂದು ರಾಷ್ಟ್ರಗಳೂ ಆರ್ಥಿಕ-ಸುರಕ್ಷಿತತೆ-ಮುಂತಾದ ಮುಗ್ಗಟ್ಟಿನಿಂದ ಕೂಡಿದ್ದು ಅಮೇರಿಕಾನರ ಕೃಪಾಛತ್ರದಡಿಯಲ್ಲಿ ಆಶ್ರಯವನ್ನು ಪಡೆಯುವಂಥವುಗಳಾಗಿವೆ. ಕೊರಿಯದ ಪ್ರಕರಣದಲ್ಲಿ ಆಂಗ್ಲೋ ಅಮೇರಿಕಾನರ ಬಲೆಗೆ ಬಿದ್ದ ರಾಷ್ಟ್ರಗಳು ಕೊನೆಯ ಕ್ಷಣದಲ್ಲಿ ಅವರನ್ನು ಸಂಪೂರ್ಣ ಕೈಬಿಟ್ಟವೆಂದೇ ಹೇಳಬೇಕು. ಕೇಸಾಂಗದ ಯುದ್ಧ ಮುಕ್ತಾಯದ ಮಾತುಕತೆಗಳು ವಿಫಲಗೊಂಡಿದ್ದು ಆಂಗ್ಲೋ ಅಮೇರಿಕಾನರು ಯುದ್ಧಸನ್ನಾಹ ಮಾಡುವ ವೇಳೆ ವ್ಯರ್ಥ ಕಾಲಹರಣ ಮಾಡುತ್ತಲಿದ್ದಾರೆಂಬುದು ಕಮ್ಯೂನಿಸ್ಟರಿಗೆ ಚೆನ್ನಾಗಿ ಮನವರಿಕೆಯಾಗಿದೆ. ಇತ್ತಣಿಂದ ಜಪಾನದೊಡನೆ ಶಾಂತಿ ಒಪ್ಪಂದ ಮಾಡಿದ್ದು ಜಾಪಾನಕ್ಕೆ ನ್ಯಾಯವಾದ ಸ್ವಾತಂತ್ರ್ಯವನ್ನು ಕೊಡುವ ಸದುದ್ದೇಶದಿಂದಲ್ಲ; ಜಪಾನದಲ್ಲಿ ಅಮೇರಿಕೆಯ ಯುದ್ಧ ರಾಜ್ಯವನ್ನು ನಿರ್ಮಿಸಿ ಜಪಾನವನ್ನು ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳಬೇಕೆಂಬ ದುರುದ್ದೇಶದಿಂದಲೇ ಇದನ್ನು ಸಿದ್ಧಗೊಳಿಸಲಾಗಿದೆ.

ರಶಿಯ ಬ್ರಿಟನ್ ಚೀನ ಮತ್ತು ಅಮೇರಿಕೆಗಳ ಪಾಟ್ಸ್‌ಡಾಂ ಹಾಗೂ ಯಾಲ್ಟ ಒಪ್ಪಂದಕ್ಕೆ ಇದು ತೀರಾ ವಿರುದ್ಧವಾಗಿದೆ. ಜಪಾನವು ಪುನಃ ಸೈನ್ಯಶಕ್ತಿ ಹೆಚ್ಚಿಸದಂತೆ ಏರ್ಪಾಡು ಮಾಡಬೇಕೆಂದು ಆ ಘೋಷಣೆಯಲ್ಲಿ ಸ್ಪಷ್ಟೀಕರಿಸಲಾಗಿದೆ. ಆದರೆ ಇಂದಿನ ಒಪ್ಪಂದ ಅದನ್ನು ಪೂರ್ತಿ ಅಲಕ್ಷಿಸಿದೆ. ಈಗ ಸಿದ್ಧಗೊಳಿಸಲಾದ ಶಾಂತಿ ಒಪ್ಪಂದದಿಂದ ಜಪಾನಕ್ಕೆ ಅದಕ್ಕಿಂತ ಹೆಚ್ಚಿನ ನ್ಯಾಯದಾನವಾಗಿದ್ದರೆ ಹಿಂದಿನ ಘೋಷಣೆ ವ್ಯರ್ಥಗೊಳ್ಳುವದರಿಂದ ಬಾಧಕವೇನೂ ಇರುವುದಿಲ್ಲ. ಪ್ರಜಾಪ್ರಭುತ್ವದ ಹಕ್ಕುಗಳನ್ನು ಕೊಡದೆ ದೇಶದಲ್ಲಿ ಸುರಕ್ಷಿತತೆ-ಆಕ್ರಮಣ ಭೀತಿಯ ಕಾರಣದಿಂದ ವಿದೇಶೀಯವಾದ ಅಮೇರಿಕೆಯ ಸೈನ್ಯವಿಟ್ಟುಕೊಳ್ಳುವದರಿಂದ ಆ ದೇಶಕ್ಕೆ ಯಾವ ಸ್ವಾತಂತ್ರ್ಯ ಸಿಕ್ಕಂತಾಯಿತು? ಜಪಾನದ್ದೇ ಆದ ರ್‍ಯೂಕ್ಯೂ ಮತ್ತು ಬೋನಿನ್ ದ್ವೀಪಗಳನ್ನು ಜಾಪಾನಕ್ಕೆ ಬಿಟ್ಟುಕೊಡುವ ಔದಾರ್ಯವನ್ನು ಅಮೇರಿಕೆಯು ತೋರಿಸಿರುವುದಿಲ್ಲ. ಬದಲಾಗಿ ತನ್ನ ಸೈನ್ಯ ರಾಜ್ಯವನ್ನು ನಿರ್ಮಿಸಲು ಇಚ್ಛಿಸಿದೆ. ಫೋರ್ಮೋಸಾವನ್ನು ಚೀನಕ್ಕೆ ತಿರುಗಿ ಒಪ್ಪಿಸಿಕೊಡಬೇಕೆಂದು ಇಟಲಿ ಒಪ್ಪಂದದಲ್ಲಿ ಹೇಳಲಾಗಿದ್ದರೂ ಫೋರ್ಮೋಸಾವನ್ನು ಹಾಗೆಯೇ ಉಳಿಸಲಾಗಿದೆ. ರಶಿಯಕ್ಕೆ ಸಂಬಂಧಿಸಿದ ಕುರಾಯಿಲ ಮತ್ತು ಸಖಲಿನಗಳ ಕುರಿತು ಯಾವ ನಿರ್ಧಾರವನ್ನು ಕೈಗೊಳ್ಳಲಾಗಲಿಲ್ಲ. ಇದರಿಂದ ರಶಿಯವೇ ಮೊದಲಾದ ಕಮ್ಯುನಿಸ್ಟ ರಾಷ್ಟ್ರಗಳನ್ನು ಬೇಕೆಂತಲೇ ಕೆರಳಿಸಿದಂತಾಗದೆ?

ಭಾರತವು ಒಪ್ಪಂದದಲ್ಲಿಯ ಹಲವು ಲೋಪದೋಷಗಳನ್ನು ಎತ್ತಿ ಹೇಳಿರುತ್ತದೆ. ಅಮೇರಿಕೆಯ ಸೈನಿಕರನ್ನು ಜಪಾನದಲ್ಲಿ ಉಳಿಸಿಕೊಳ್ಳಬಾರದು. ಫೋರ್ಮೋಸಾವನ್ನು ಚೀನಕ್ಕೆ ಬಿಟ್ಟುಕೊಡಬೇಕು. ಜಪಾನದ್ದೇ ಆದ ರ್‍ಯೂಕ್ಯೂ ಮತ್ತು ಬೋನಿನ್‌ಗಳನ್ನು ಅವಕ್ಕೆ ಬಿಟ್ಟುಕೊಡಬೇಕೆಂಬ ಅಂಶವನ್ನು ಭಾರತವು ಉಲ್ಲೇಖಿಸಿತ್ತು. ರಶಿಯವೂ ಕೂಡಾ ಅದೇ ಆರೋಪವನ್ನು ಎತ್ತಿದೆ.

ಇಷ್ಟವಿದ್ದೂ—ಇಲ್ಲದೆಯೂ ಅಂಕಿತವನ್ನಿತ್ತ ಪ್ರತಿಯೊಂದು ರಾಷ್ಟ್ರಗಳು 'ಇದು ಪರಿಪೂರ್ಣವಲ್ಲವಾದರೂ....' ಎನ್ನುವ ಉದ್ಗಾರವನ್ನು ತೆಗೆದಿವೆ. ಭಾರತವು ಇವರಲ್ಲಿ ಭಾಗವಹಿಸದೆ ತಟಸ್ಥವಾಗುಳಿದದ್ದರಿಂದ ಹೆಚ್ಚಿನ ರಾಷ್ಟ್ರಗಳಿಗೆ ಅಸಮಾಧಾನ-ವಿಷಾದವುಂಟಾಗಿದೆ. ಮಾತ್ರವಲ್ಲ ಒಪ್ಪಂದದಲ್ಲಿಯ ಲೋಪದೋಷಗಳ ಮೇಲೆ ವಿಶೇಷವಾಗಿ ಅವುಗಳ ಲಕ್ಷ್ಯ ಬಿದ್ದಿದೆ. ಸಮ್ಮೇಳನವನ್ನು ಉದ್ಘಾಟಿಸುತ್ತಾ ಅಧ್ಯಕ್ಷ ಟ್ರುಮನ್ನರು: ಜಗತ್ತನ್ನಾವರಿಸಿರುವ ತ್ವೇಷ ಭಾವನೆಯನ್ನು ತಿಳಿಯಾಗಿಸುವದಕ್ಕೆ ಪ್ರಾಮಾಣಿಕವಾಗಿ ಯಾರು ದುಡಿಯುತ್ತಾರೆಂಬುದು ಈಗ ಅರ್ಥವಾಗುತ್ತದೆ. ಯುದ್ಧಾತುರರನ್ನು ಈ ಪರಿಷತ್ತು ಬಯಲಿಗೆಳೆಯುತ್ತದೆ ಎಂದಿರುವರು. ಈ ಒಪ್ಪಂದ ನಿರ್ಮಾತೃಗಳೂ ಅಮೇರಿಕೆಯ ಶಿಷ್ಟಮಂಡಳದ ಸದಸ್ಯರೂ ಆದ ಜಾನ್ ಫಾಸ್ಟರ್ ಡಲೆಸರು: ಈ ಒಪ್ಪಂದವು ಅತ್ಯಂತ ನ್ಯಾಯಸಮ್ಮತವಾಗಿದ್ದು ಇದರಲ್ಲಿ ಭಾರತ ಭಾಗವಹಿಸದೇ ಇದ್ದುದು ವಿಷಾದದ ಸಂಗತಿ ಎಂದಿರುವರು. ಪಾಕಿಸ್ತಾನ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು "ಭಾರತ, ಬ್ರಹ್ಮದೇಶ ಮತ್ತು ಚೀನ ಮುಂತಾದ ರಾಷ್ಟ್ರಗಳು ಈ ಒಪ್ಪಂದಕ್ಕೆ ಬಾರದ್ದರಿಂದ ಈ ಒಪ್ಪಂದದ ಪರಿಣಾಮದಿಂದ ಮನಸ್ಸು ಸ್ವಲ್ಪ ಬೇರೆ ಕಡೆಗೆ ಹೊರಳಬಹುದು" ಎಂದು ಹೇಳಿದ್ದು ಗಮನಾರ್ಹವಾದ ಸಂಗತಿ!

ಆರು ವರ್ಷಗಳಿಂದ ಶರಣಾಗತಿಯನ್ನು ಹೊಂದಿದ್ದ ಜಾಪಾನಕ್ಕೆ ಆಂಗ್ಲೋ ಅಮೇರಿಕಾನರು ಅಲ್ಲಿನ ಜನತೆಗೆ ಶಾಂತಿ ಸ್ವಾತಂತ್ರ್ಯ ಭದ್ರತೆಗಳನ್ನು ನಿಜವಾಗಿ ಕೊಡುತ್ತಿರುವರೋ ಹೇಗೆಂಬುದನ್ನು ನಾವು ವಿಮರ್ಶಿಸಬೇಕು. ಯುದ್ಧಾತುರರನ್ನು ಪರಿಷತ್ತು ಬಯಲಿಗೆಳೆಯುತ್ತದೆಂದು ಅಣಕವಾಡಿದ ಟ್ರೂಮನ್ನರೂ ಜಪಾನದ ಕುರಿತು "ಜಪಾನವು ಪೂರ್ಣ ಶುದ್ಧೀಕರಣವಾಗಿದೆಂದರ್ಥವಲ್ಲ. ಅಮೇರಿಕೆಯ ಪರ್ಲ ಬಂದರ ಮೊದಲಾದ ಅನಾಹುತಗಳನ್ನು ಮರೆತಿಲ್ಲ. ಇಲ್ಲಿ ನೆರೆದ ರಾಷ್ಟ್ರಗಳು ಸುಲಭದಲ್ಲಿ ಮರೆಯಲಾರದಂಥ ಅನೇಕ ಘಟನೆಗಳಿವೆ" ಎಂದು ಹೇಳಿದ್ದು ಹೃದಯ ಪರಿವರ್ತನೆಯ ದ್ಯೋತಕವೇ? ಅಂತೆಯೆ ಬ್ರಿಟನದ ಪ್ರತಿನಿಧಿ "....ಜಪಾನದ ಕ್ರೂರಕರ್ಮಗಳನ್ನು ಮರೆತಿದ್ದೇವೆಂದು ತಿಳಿಯಲಾಗದು. ಜಪಾನಿ ಆಕ್ರಮಣದ ಅನುಭವವಿದ್ದ ಮಲಯಾ, ಮತ್ತು ಹಾಂಕಾಂಗದ ಜನರು ಜಪಾನಿಗಳ ಪಾಶವೀ ವೃತ್ತಿಯನ್ನು ಮರೆತಿರುವುದಿಲ್ಲ" ಎಂದಿರುವರು. "ದ್ವಿತೀಯ ಜಾಗತಿಕ ಯುದ್ಧದಲ್ಲಿ ಆಸ್ಟ್ರೇಲಿಯಾದ ಸಾವಿರಾರು ತರುಣರು ಪ್ಯಾಸಿಫಿಕ ದ್ವೀಪಗಳಲ್ಲಿ ಪ್ರಾಣಾರ್ಪಣೆ ಮಾಡಿದ್ದನ್ನು ಆಸ್ಟ್ರೇಲಿಯ ಹೆಮ್ಮೆಯಿಂದ ನೆನೆಸುತ್ತದೆ. ಆ ನೆನಪು ಇನ್ನೂ ನೆನಪಿನಲ್ಲಿ ಉಕ್ಕುತ್ತಿದ್ದರೂ ನಮ್ಮ ವೈರಿಯೊಡನೆ ಸಂಧಾನ ಮಾಡಿಕೊಳ್ಳಬೇಕೆಂಬ ಆಶೆಯಿಂದ ನಾವು ಇಲ್ಲಿಗೆ ಬಂದಿದ್ದೇವೆ" ಎಂಬುದಾಗಿ ಆಸ್ಟ್ರೇಲಿಯದ ಪ್ರತಿನಿಧಿ ಹೇಳಿದನು. ಈ ಎಲ್ಲ ಮನೋಗತಗಳೂ ಅಭಿಪ್ರಾಯಗಳೂ ಶಾಂತಿ ಬಯಸುವವರ ನಿಜವಾದ ಧರ್ಮವೆಂದು ಹೇಳಲು ಸಾಧ್ಯವೇ? ನೈತಿಕ ಹಾಗೂ ಮಾನಸಿಕ ವಿಚಾರಗಳಲ್ಲಿ ಬಾಂಧವ್ಯದ ಧೃಢ ವಿಶ್ವಾಸವಿಲ್ಲದವರು ಅರೆಮನಸ್ಸಿನಿಂದ ಸಹಿಹಾಕಿದ ಈ ಒಪ್ಪಂದ ಆಕಾಶಗೋಪುರವಲ್ಲದೆ ಬೇರೇನು?

ಕೊನೆಗಾದರೂ ಜಾಪಾನವು ಅಮೇರಿಕಾದ ಸ್ವಾರ್ಥ ಹಂಚಿಕೆಯ ಬಲೆಯಲ್ಲಿ ಸಿಕ್ಕಿಕೊಂಡಿತು. ಒಪ್ಪಂದದನ್ವಯ ಜಪಾನದ ಸುತ್ತಮುತ್ತ ಭೂದಲ, ನೌಕಾದಲ ಹಾಗೂ ವಿಮಾನದಲಗಳನ್ನು ಇಡುವದಕ್ಕೂ, ಆಕ್ರಮಣವನ್ನು ವಿರೋಧಿಸಲು ಅಮೇರಿಕೆಯ ತಾಣಗಳನ್ನು ಉಪಯೋಗಿಸುವದಕ್ಕೂ, ಸರ್ವಸ್ವಾಮಿತ್ವವನ್ನು ಅಮೇರಿಕೆಗೆ ಬಿಟ್ಟುಕೊಡಲಾಗಿದೆ. ಹೆಚ್ಚಿನ ಕರಾರುಗಳನ್ವಯ ಜಪಾನು ಅಮೇರಿಕೆಯನ್ನು ಕೇಳದೆ ಸ್ವೇಚ್ಛಾನುವೃತ್ತಿಯಂತೆ ಸ್ವಾತಂತ್ರ್ಯವನ್ನು ಉಪಯೋಗಿಸಲು ಬರುವಂತಿಲ್ಲ.

ಈ ಬಗೆಯ ಕರಾರನ್ನು ಹೇರಿ 'ಶಾಂತಿ ಒಪ್ಪಂದ' ಎಂದು ಹೇಳುವುದರಲ್ಲಿ ಯಾವೊಂದು ಬಗೆಯ ತಥ್ಯಾಂಶವೂ ಇರುವುದಿಲ್ಲ. ರಶಿಯದ ಪ್ರತಿನಿಧಿ ಗ್ರೋಮಿಕೋರವರು ಇದನ್ನು "ಇನ್ನೊಂದು ಯುದ್ಧ ಪೂರ್ವಪೀಠಿಕೆ" ಎಂದು ಉಸುರಿದ್ದು ಯಥಾರ್ಥವೇ ಆಗಿರುತ್ತದೆ. ಕಮ್ಯೂನಿಸಮದ ನಿರ್ಮೂಲನದ ಮೂಲಕ ಜಗತ್ತಿನಲ್ಲಿ ತಮ್ಮ ಪ್ರಭುತ್ವವನ್ನು ಹೇರ ಬಯಸುವ ಆಂಗ್ಲೋ ಅಮೇರಿಕಾನರ ಈ ಕೃತಿಯು ಲೋಕದ ಶಾಂತಿಯ ದೃಷ್ಟಿಯಿಂದ ಅತ್ಯಂತ ಗಂಡಾಂತರದ್ದಿದೆ. ತಿಳಿದೂ ತಿಳಿದೂ ಮಾಡಿದ ಈ ಮಹಾಪರಾಧದಲ್ಲಿ ಭಾರತವು ಭಾಗವಹಿಸದೆ ಆತ್ಮಗೌರವವನ್ನು ಉಳಿಸಿಕೊಂಡದ್ದು ನಿಜವಾಗಿಯೂ ಅಭಿಮಾನಾರ್ಹ ಸಂಗತಿ!

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ. 8ರಂದು ಸಂಜೆ ವೈಸ ಚೆಯರ್‌ಮೆನ್ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಮಂಜುನಾಥರಾಯರ ಪ್ರಶ್ನೋತ್ತರಗಳಾದನಂತರ ನಗರಸಭೆಯ ಗತವರುಷದ ಆಡಳಿತ ವರದಿ ಸ್ವೀಕರಿಸಲಾಯಿತು. ವರದಿಯಲ್ಲಿ ಮುನಿಸಿಪಾಲಿಟಿಯ ಹಣಕಾಸುಗಳ ಪರಿಸ್ಥಿತಿಯು ಹಿಂದಿನಂತೆ ಅತೃಪ್ತಿಕರವಾಗಿತ್ತೆಂದು ಹೇಳಿದುದರ ನಿಷೇಧ ಸೂಚಕ ನಿರ್ಣಯವಾಯಿತು. 1948-49ರ ವರದಿಯಲ್ಲಿ ಹಣಕಾಸುಗಳ ಪರಿಸ್ಥಿತಿ ತೃಪ್ತಿಕರವಿತ್ತೆಂದು ಹೇಳಲಾಗಿತ್ತಲ್ಲದೆ ಜಿಲ್ಲಾ ಕಲೆಕ್ಟರರೂ ಅದೇ ಅಭಿಪ್ರಾಯವನ್ನು ಕೊಟ್ಟಿದ್ದರು. ಶ್ರೀ ಟಿ. ರಮೇಶ ಪೈಗಳು ಎಲಿಮೆಂಟರಿ ಶಾಲೆಗಳಲ್ಲಿ ದೊರೆಯುವ ಶಿಕ್ಷಣದ ಕುರಿತೂ ಶ್ರೀ ಕೆ ಕೆ. ಪೈಗಳು ಬಸ್‌ಸ್ಟೇಂಡಿನ ಮೂತ್ರ ಹೊಂಡ, ಸಿಟಿ ಬಸ್‌ಸ್ಟೇಂಡ್ ಮೊದಲಾದ ವಿಷಯಗಳಲ್ಲೂ ಇರುವ ದೋಷಗಳನ್ನೆತ್ತಿ ಸೂಚಿಸಿ ಅವುಗಳು ಚಾಲ್ತಿ ವರುಷದಲ್ಲಿ ಸರಿಪಡಿಸುವಂತಾಗಬೇಕೆಂದರು.

ಎಮ್. ಆರ್. ಟಿ. ಸಂಘ—'ಮಧುರವಾಣಿ, ರವಿ ಮತ್ತು ತಾರಾಮಂಡಳ' ಎಂಬ ಮೂರು ಸಂಸ್ಥೆಗಳು ಸಮ್ಮಿಲನವಾಗಿ ಎಮ್. ಆರ್. ಟಿ. ಸಂಘವೆಂದು ನಾಮಕರಣಗೊಂಡು ಅದರ ಕಾರ್ಯಾಲಯ ಪ್ರವೇಶೋತ್ಸವವು ಕಳೆದ ತಾ. 26ರಲ್ಲು ಶ್ರೀ ಬನ್ನಂಜೆ ರಾಮಾಚಾರ್ಯರಿಂದ ನೆರವೇರಿಸಲ್ಪಟ್ಟಿತು. ತತ್ಸಂಬಂಧ ಸಂಘದ ವಿಶೇಷ ಸಭೆಯೊಂದು ಇದೇ ತಾ. 2ರಲ್ಲು ಸಂಜೆ ಶ್ರೀ ಕೆ. ವಾದಿರಾಜ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾವ್ಯವಾಚನ, ನಾಟಕಾಭಿನಯ, ನರ್ತನ ಮೊದಲಾದ ಕಾರ್ಯಕ್ರಮಗಳಾದುವು.

ಗ್ರಂಥಕ್ಕೆ ಬಹುಮಾನ—ಶ್ರೀ ಕು. ಶಿ. ಹರಿದಾಸ ಭಟ್ಟರು ಬರೆದ 'ಅರ್ಥಶಾಸ್ತ್ರದ ಕೈಪಿಡಿ' ಎಂಬ ಮೌಲಿಕ ಗ್ರಂಥಕ್ಕೆ ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನವರು

ಮೊಳಹಳ್ಳಿ ಶಿವರಾವ್.

ಮಂಗಳೂರು,
1-9-'51.

ಮಾನನೀಯರೇ,

ಉಡುಪಿಯಲ್ಲಿ ಇದೇ 5ನೆಯ ದಿನಾಂಕ ತಾವು ಆಚರಿಸಲಿರುವ 'ನವಯುಗ'ದ 31ನೆಯ ವಾರ್ಷಿಕ ಪ್ರಾರಂಭೋತ್ಸವದ ಬಗ್ಗೆ ಆಮಂತ್ರಣವಿತ್ತುದಕ್ಕಾಗಿ ತಮಗೆ ಉಪಕೃತನಿದ್ದೇನೆ. ತಮ್ಮ ಉತ್ಸವದಲ್ಲಿ ಭಾಗವಹಿಸಲಾಗದುದಕ್ಕಾಗಿ ವಿಷಾದಪಡುತ್ತೇನೆ. ನಮ್ಮ ಪ್ರಖ್ಯಾತ ಧುರೀಣರು ಸ್ಥಾಪಿಸಿದಂದಿನಿಂದ ಈವರೆಗೂ ನವಯುಗವು ಸಾರ್ವಜನಿಕ ಸೇವೆಗೆ ಹೆಸರಾಗಿದೆ. ಅಂತಹ ಪತ್ರಿಕೆಯು ಇದೇ ರೀತಿ ಸೇವೆಯನ್ನು ಸಲ್ಲಿಸುತ್ತ ಮುಂಬರಿಯುವಂತೆ ಶ್ರೀ ದೇವರು ಅನುಗ್ರಹಿಸಲೆಂದು ಹೃತ್ಪೂರ್ವಕ ಹಾರೈಸುತ್ತೇನೆ, ಅಲ್ಲದೆ ಉತ್ಸವದ ಸಂದರ್ಭದಲ್ಲಿ ನನ್ನ ಅಭಿನಂದನೆಗಳನ್ನು ಕಳುಹಿಸಲು ಸಂತೋಷಪಡುತ್ತೇನೆ.

ಎಂ ಶಿವರಾವ್.

ರೂಪಾಯಿ 750/-ರ ಬಹುಮಾನವನ್ನೂ ದಯಪಾಲಿಸಿದ್ದಾರೆ. ಈ ಅರ್ಥಶಾಸ್ತ್ರದ ಕೃತಿಯು ಕನ್ನಡದಲ್ಲಿ ಅರ್ಥಶಾಸ್ತ್ರದ ಮೂಲತತ್ವಗಳನ್ನು ವಿವರಿಸುವ ಮೊತ್ತಮೊದಲನೆಯ ಶಾಸ್ತ್ರೀಯ ನಿಬಂಧವೆಂದೂ, ಹಸ್ತಪ್ರತಿಯಲ್ಲಿರುವ ಈ ಗ್ರಂಥವು ಕನ್ನಡಿಗರ ಸಹಕಾರದಿಂದ ಇನ್ನು ಮೂರು ತಿಂಗಳುಗಳಲ್ಲಿ ಅಚ್ಚಾಗಿ ಬೆಳಕು ಕಾಣುವುದೆಂದೂ ಶ್ರೀ ಭಟ್ಟರು ತಿಳಿಸುತ್ತಾರೆ.

ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ- ಇದರ ಸುಪ್ರೀಮ್ ಗವರ್ನಿಂಗ್ ಬೋರ್ಡಿನ ಸಭೆಯು ಇದೇ ತಾ. 15ರಲ್ಲು ಉಡುಪಿಯ ಮುಕುಂದ ನಿವಾಸದಲ್ಲಿ ಸಂಜೆ 4-30ಕ್ಕೆ ಜರಗಿ ಉಡುಪಿಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನಾ ಯೋಜನೆಯ ಕುರಿತು ವಿಚಾರವಿನಿಮಯ ನಡೆಯಲಿರುವುದು.

ಮದ್ರಾಸು ಹೈಕೋರ್ಟಿಗೆ ಅರ್ಜಿ ಮದ್ರಾಸು ವಿಶ್ವವಿದ್ಯಾಲಯದ ಅಜ್ಞೆಯಂತೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಇಂಟರ್‌ಮೀಡಿಯಟ್ ತರಗತಿಗೆ ಹೆಣ್ಮಕ್ಕಳಿಗೆ ಪ್ರವೇಶ ದೊರೆಯದಿದ್ದುದರಿಂದ ಕುಮಾರಿ ಶಾಂತಾಬಾಯಿ ಎಂಬಾಕೆಯು ಇದೀಗ ಮದ್ರಾಸು ಹೈಕೋರ್ಟಿನಲ್ಲಿ ಇದು ರಾಜ್ಯ ಘಟನೆಗೆ ವಿರುದ್ಧವೆಂದು ತನ್ನ ಹಕ್ಕು ಬಾಧ್ಯತೆಗಾಗಿ ಅರ್ಜಿಮಾಡಿರುವಳು. ಅರ್ಜಿಯು ಹೈಕೋರ್ಟು ನ್ಯಾಯಾಧೀಶರಿಂದ ಸ್ವೀಕರಿಸಲ್ಪಟ್ಟಿದೆ.

ಜೋಗಿನಿಂದ ವಿದ್ಯುತ್ ಪೂರೈಕೆ- ಜೋಗದ ವಿದ್ಯುತ್ ಪೂರೈಕೆ ಪ್ರಶ್ನೆಯು ಅಲ್ಲಿಯೆ ನಿಂತುಹೋಗುವ ಸಂದರ್ಭ ಬಂದಾಗ ಶ್ರೀ ಟಿ. ಎ. ಪೈಗಳು ಬೆಂಗಳೂರಿನ ಏ.ಐ.ಸಿ.ಸಿ ಅಧಿವೇಶನ ಕಾಲದಲ್ಲಿ ಮದ್ರಾಸದ ಹಾಗೂ ಮೈಸೂರ ಮಂತ್ರಿಗಳೊಡನೆ ಜೋಗದ ವಿದ್ಯುತ್ ಪೂರೈಕೆಯ ಬಗ್ಗೆ ಸಮಾಲೋಚನೆ ನಡೆಸಿದ್ದರ ಫಲವಾಗಿ ಮದ್ರಾಸು ಸರಕಾರವು ಮೈಸೂರ ಸರಕಾರದೊಡನೆ ಜೋಗಿನಿಂದ ದಕ್ಷಿಣಕನ್ನಡಕ್ಕೆ ವಿದ್ಯುತ್ತನ್ನು ಪೂರೈಸುವ ಬಗ್ಗೆ ಕೈಕೊಳ್ಳಲಿದ್ದ ಒಪ್ಪಂದದ ಕರಾರಿಗೆ ಈಗಾಗಲೇ ಎರಡೂ ಸರಕಾರಗಳೊಳಗೆ ಒಪ್ಪಂದವಾಗಿ ಕರಾರುಗಳಿಗೆ ಸಹಿಯಾಗಿದೆಯೆಂದೂ ಕೆಲಸವನ್ನು ಕೂಡಲೇ ಕೈಕೊಳ್ಳುವ ಬಗ್ಗೆ ಟೆಂಡರುಗಳನ್ನು ಕರೆಯಲಾಗಿದೆ ಎಂದೂ ತಿಳಿದುಬರುತ್ತದೆ.

ಡಾ। ಪೈಗಳ ಸ್ಪಷ್ಟೀಕರಣ- ಕೊಯಮುತ್ತೂರಲ್ಲಿ ಈಚೆಗೆ ಮದ್ರಾಸು ವಿಶ್ವವಿದ್ಯಾಲಯದ ವೈಸ್ ಚಾನ್ಸಲರು ಭಾಷಣ ಮಾಡುತ್ತಾ ಔದ್ಯೋಗಿಕ ಕಾಲೇಜುಗಳನ್ನು ಕೆಲವು ಖಾಸಗಿ ಸಂಸ್ಥೆಗಳು ಏನೊಂದು ಅಧಿಕೃತ ಮನ್ನಣೆಯಿಲ್ಲದೆ ಪ್ರಾರಂಭಿಸಿರುವುದೆಂದೂ, ಅದರಿಂದ ಅನರ್ಥಗಳುಂಟಾಗಬಹುದೆಂದೂ ಈ ವಿಚಾರದಲ್ಲಿ ಸರಕಾರವು ಗಮನಕೊಡಬೇಕಾಗಬಹುದೆಂದೂ ಹೇಳಿದ್ದರಷ್ಟೆ. ಈ ಕುರಿತು ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈಗಳು ಹೇಳಿಕೆಯೊಂದನ್ನಿತ್ತಿರುವರು. ಔದ್ಯೋಗಿಕ ಕಾಲೇಜುಗಳನ್ನು ಸ್ಥಾಪಿಸಲು ಮುಂದಾದ ಖಾಸಗಿ ಸಂಸ್ಥೆಗಳು ಬೇಜವಾಬ್ದಾರಿಯಾಗಿದ್ದರೆ ಮಾತ್ರ ಗಂಡಾಂತರವಾಗುವ ಸಂಭವವಿದೆ. ಆದರೆ ಎಕೆಡೆಮಿಯು ಖಾಸಗಿ ಸಂಸ್ಥೆಯಲ್ಲ. ಮಹಾತ್ಮಾಗಾಂಧಿ ಸ್ಮಾರಕ ಕಾಲೇಜನ್ನೂ ಈ ಸಂಸ್ಥೆಯು ಮೂಲಕವೇ ಸ್ಥಾಪಿಸಿ ಮದ್ರಾಸ್ ಯೂನಿವರ್ಸಿಟಿಯ ಮನ್ನಣೆ ಪಡೆದಿದೆ. ಪ್ರಕೃತ ಮೆಡಿಕಲ್ ಕಾಲೇಜಿಗೆ ಮನ್ನಣೆ ದೊರೆಯದಿದ್ದರೂ ಜವಾಬ್ದಾರಿಯಿಂದ ಯೋಗ್ಯ ರೀತಿಯಲ್ಲಿ ಅದನ್ನು ನಡೆಸಿಕೊಂಡು ಬರಲು ಎಕೆಡೆಮಿ ಸಮರ್ಥವಿದೆ. ಇಲ್ಲಿ ಕೊಡೋಣಾಗುವ ಶಿಕ್ಷಣವು ಮನ್ನಣೆ ಹೊಂದಿದ್ದ ಮೆಡಿಕಲ್ ಕಾಲೇಜುಗಳ ಮಟ್ಟದಲ್ಲಿದ್ದು ಯಾವದೇ ಯೋಗ್ಯತೆಯಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಹಿಂದೆ ಬೀಳಲಾರರು ಎಂಬಿತ್ಯಾದಿ ವಿಚಾರಗಳು ಹೇಳಿಕೆಯಲ್ಲಿವೆ.

'ನವಯುಗ'ದ 31ನೇ ಹುಟ್ಟು ಹಬ್ಬ

ಕಳೆದ 30 ವರ್ಷಗಳಿಂದ ಕರ್ನಾಟಕದ ಪತ್ರಿಕಾ ಪ್ರಪಂಚಕ್ಕೆ-ಮೇಲಾಗಿ ಕನ್ನಡ ನಾಡಿಗೆ ಅವಿರತ ಸೇವೆಯನ್ನು ಸಲ್ಲಿಸುತ್ತ ಬಂದಿರುವ ಜನಪ್ರಿಯ ವಾರಪತ್ರಿಕೆಯಾದ 'ನವಯುಗ'ದ 31ನೆಯ ವಾರ್ಷಿಕ ಪ್ರಾರಂಭೋತ್ಸವವು ಇದೇ ತಾ. 5-9-51ನೆಯ ವಿನಾಯಕ ಚತುರ್ಥಿಯ ದಿನ, 'ನವಯುಗ' ಕಾರ್ಯಾಲಯದಲ್ಲಿ, ಉಡುಪಿಯ ಜನಪ್ರಿಯ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ. ಟಿ. ಎ. ಡಿ. ಸಿ. ಕೊಲಾಸೋರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಸಂಚಾಲಕ ಸಂಪಾದಕರು ಸ್ವಾಗತ ಭಾಷಣಮಾಡುತ್ತಾ, ಸಮಾರಂಭದ ಉದ್ದೇಶ ಔಚಿತ್ಯಗಳನ್ನು ನಿವೇದಿಸಿದರು. 'ನವಯುಗ'ವು ಕಳೆದ 1921ರಂದು ಪ್ರಕೃತ ಕೃಷಿ ಇಲಾಖಾ ಮಂತ್ರಿಗಳಾದ ಮಾನ್ಯ ಶ್ರೀ. ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾಗಿ ಅಲ್ಲಿ 15 ವರ್ಷ ಕಾಲ ಯಶಸ್ವಿಯಾಗಿ ಪ್ರಕಟವಾಗುತ್ತಿದ್ದು ಉಡುಪಿಗೆ ವರ್ಗಾಯಿಸಲ್ಪಟ್ಟು ಇಂದಿಗೆ ಮತ್ತೆ 15 ವರ್ಷಗಳಾದುವೆಂತಲೂ ಈಯೊಂದು ಸಂತೋಷದ ಸಂದರ್ಭದಲ್ಲಿ ಜನತೆಯು 'ನವಯುಗ'ಕ್ಕಿತ್ತ ಸಹಕಾರ ಸಹಾನುಭೂತಿಗಳ ಬಗ್ಗೆ ಅವರ ಉಪಕಾರವನ್ನು ಸ್ಮರಿಸುವುದಕ್ಕಾಗಿ ಈ ಸಮಾರಂಭವು ನೆರವೇರಿಸಲ್ಪಟ್ಟಿದೆಯೆಂತಲೂ ಹೇಳಿದರು. ಶ್ರೀ ಕು. ಶಿ. ಹರಿದಾಸ ಭಟ್ ಬಿ. ಎ. (ಆನರ್ಸ್) ಅವರು ಮಾನ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟಿ, ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ರಾಷ್ಟ್ರಕವಿ ಮಂಜೇಶ್ವರ ಶ್ರೀ ಗೋವಿಂದ ಪೈ ಮೊದಲಾದವರಿಂದ ಬಂದ ಸಂದೇಶ ಶುಭಾಶಯಗಳನ್ನು ಓದಿದರು.

ಅನಂತರ ಸಭಿಕರ ಪರವಾಗಿ ಶ್ರೀ ಕೆ ಜಗನ್ನಾಥ ಬಲ್ಲಾಳರು ಮಾತನಾಡುತ್ತಾ ಹಿಂದೂದೇಶದಲ್ಲಿ-ಮುಖ್ಯವಾಗಿ ಕರ್ನಾಟಕದಲ್ಲಿ- ಪತ್ರಿಕೋದ್ಯಮದ ಚರಿತ್ರೆಯನ್ನು ವಿವರಿಸಿ ಪತ್ರಿಕೆಗಳ ಮೇಲೆ ಸ್ವಾತಂತ್ರ್ಯ ಸಿಗುವ ಮೊದಲು ಮತ್ತು ಈಗ ಇರುವ ವಿಶೇಷ ಹೊಣೆಯನ್ನು ಹೇಳಿದರು. ಅಲ್ಲದೆ ಕೇವಲ ನಿಸ್ವಾರ್ಥ ಸೇವೆಯ ದೃಷ್ಟಿಯಿಂದ ಶ್ರೀ ಎ ಬಿ. ಸೆಟ್ಟರು ಸ್ಥಾಪಿಸಿದ ಈ 'ನವಯುಗ'ವು ಜನಸೇವೆಯ ಆದರ್ಶವನ್ನು ಮುಂದಿಟ್ಟುಕೊಂಡು ಏಕರೀತಿಯಾಗಿ 30 ವರ್ಷ ದುಡಿದುದು ಹೆಮ್ಮೆಯ ವಿಷಯವೆಂದೂ ಆ ಬಗೆ ಶ್ರೀ ಹೊನ್ನಯ್ಯ ಶೆಟ್ಟರ ಪರಿಶ್ರಮ ಸ್ತುತ್ಯವೆಂದೂ ನವಯುಗವು ಬೇಗನೆ 'ಟ್ರೈವೀಕ್ಲಿ'ಯಾಗಿ (ವಾರಕ್ಕೆ ಎರಡಾವರ್ತಿ ಹೊರಡುವ ಪತ್ರಿಕೆ) ಅನಂತರ ದಿನಪತ್ರಿಕೆಯಾಗಲೆಂದೂ ಹೇಳಿದರು ಅನಂತರ ಶ್ರೀ ಪಿ. ಶ್ರೀಪತಿ ಆಚಾರ್ಯರು 'ನವಯುಗ'ದಿಂದ ಜನತೆಗಾಗಿರುವ ಪ್ರಯೋಜನಗಳನ್ನು ವಿವರಿಸಿದುದಲ್ಲದೆ ಸದ್ಯದಲ್ಲಿ ಬರಲಿರುವ ಚುನಾವಣೆಯ ಮಹತ್ವವನ್ನೂ, ಜನತೆಯನ್ನು ಉಚಿತ ರೀತಿಯಲ್ಲಿ ಆ ಬಗ್ಗೆ ಸಿದ್ಧಪಡಿಸುವರೆ ಪತ್ರಿಕೆಗಳ ಮೇಲಿರುವ ವಿಶೇಷ ಜವಾಬ್ದಾರಿಯನ್ನೂ ಕುರಿತು ಎಚ್ಚರಿಕೆಯ ಮಾತುಗಳನ್ನಾಡಿದರು.

ಡಾ। ಟಿ. ಮಾಧವ ಪೈಗಳು- ಪತ್ರಿಕೆಗಳೆಂದರೆ ಜನತೆಯ ಶಿಕ್ಷಕರು; ಜನಜಾಗೃತಿಯನ್ನುಂಟುಮಾಡಿ, ಜನರ ರೀತಿನೀತಿಗಳನ್ನು ತಿದ್ದಿ, ಜನಾಭಿಪ್ರಾಯವನ್ನು ರೂಪಿಸುವುದು ಅವುಗಳ ಪ್ರಧಾನ ಕರ್ತವ್ಯ. ಈ ದೃಷ್ಟಿಯಲ್ಲಿ 'ನವಯುಗ'ವು ಉನ್ನತವಾದ ಮಟ್ಟವನ್ನು ಕಾಯ್ದುಕೊಂಡು ಬಂದಿದೆ. ಆ ಬಗ್ಗೆ ಶ್ರೀ ಸೆಟ್ಟರು ಅಭಿನಂದನೀಯರು ಎಂದು ನುಡಿದರು.

ಅನಂತರ ಕಾರ್ಕಳ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಬಿ. ರಾಮರಾಯ ಸೆಟ್ಟರು ಮಾತನಾಡುತ್ತಾ ಕಾರ್ಯಕರ್ತರಲ್ಲಿರಬೇಕಾದ ನಿಸ್ವಾರ್ಥ ಸೇವಾ ಬುದ್ಧಿ, ಕಾರ್ಯದಾಕ್ಷ್ಯ, ವಿನಯ ಶೀಲತೆ ಮುಂತಾದ ಸದ್ಗುಣಗಳನ್ನು ಕೊಂಡಾಡಿ ಕನ್ನಡೇ ಅದ ಸುರಸ ಶೈಲಿಯಲ್ಲಿ ನವಯುಗದ ಆಡಳಿತ ಮಂಡಲವನ್ನು ಶ್ಲಾಘಿಸಿದರು. ಡಾ। ಸುಂದರರಾಮ ಪೈಯವರು ತನಗೆ ನವಯುಗದ ಮೇಲೆ ಅದರ ಉಚ್ಚ ಧ್ಯೇಯಗಳಿಗಾಗಿ ತುಂಬ ಅಭಿಮಾನವಿದೆಯೆಂದೂ ಅದು ಮುಂದೆಯೂ ಯಶಸ್ವಿಯಾಗಲೆಂದೂ ಹರಸಿದರು. ಡಾಕ್ಟರ್ ಕೋ'ಸ್ಕಲ್ ವೆಂಕಟ್ರಾಯರು ಕನ್ನಡ ಪತ್ರಿಕಾ ಪ್ರಪಂಚದಲ್ಲಿ 30 ವರ್ಷಗಳ ಜೀವನವು ಸಾಮಾನ್ಯವಲ್ಲ. ಅಷ್ಟೊಂದು ಮಜಲನ್ನು ದಾಟಿದ ಬಗ್ಗೆ 'ನವಯುಗ'ವು ನಿಜಕ್ಕೂ ಅಭಿನಂದನೀಯವಿದೆಯೆಂದರು.

ಕೊನೆಯದಾಗಿ ಅಧ್ಯಕ್ಷರು ಭಾಷಣಕರ್ತರ ಅಭಿಪ್ರಾಯಗಳನ್ನು ಎತ್ತಿಹಿಡಿದುದಲ್ಲದೆ ತಾನು ಹೆಚ್ಚುಕಡಿಮೆ ದ. ಕನ್ನಡದ ಎಲ್ಲಾ ಕನ್ನಡ ಪತ್ರಿಕೆಗಳನ್ನು ಓದುತ್ತಿರುವೆನೆಂತಲೂ, ನಮ್ಮ ಪತ್ರಿಕೆಗಳ ಸಾಮಾನ್ಯ ಮಟ್ಟವು ಚೆನ್ನಾಗಿ ತೃಪ್ತಿಕರವಿದೆಯೆಂತಲೂ ಹೇಳಿದರು. ಕೆಲವೊಂದು ಪತ್ರಿಕೆಗಳು ಕೆಲವೊಮ್ಮೆ ಪಾಕ್ಷಿಕ ಧೋರಣೆಯನ್ನು ವಹಿಸುವುದು, ವ್ಯಕ್ತಿದ್ವೇಷಸಾಧನೆ ಅಶ್ಲೀಲತೆ ಮುಂತಾದ ದೋಷಗಳಿಗೆ ಎಡೆಕೊಡುತ್ತಿವೆಯಾದರೂ ನವಯುಗವು ರಾಷ್ಟ್ರೀಯತೆಯ ಉಚ್ಚ ಆದರ್ಶದ ಕಡೆಗೆ ಮುನ್ನಡೆಯುತ್ತಿರುವುದು ಸ್ತುತ್ಯಾರ್ಹವೆಂದು ಹೇಳಿ ಅದರ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು. ಅನಂತರ ನವಯುಗದ ಯಶಸ್ವೀ ಜೀವನಕ್ಕೆ ನೆರವಾದ ಹಾಗೂ ಅಂದಿನ ಸಮಾರಂಭಕ್ಕೆ ಸಹಕಾರವಿತ್ತ ಎಲ್ಲ ಮಹನೀಯರಿಗೆ ಧನ್ಯವಾದರ್ಪಣೆಯಾಗಿ ಮಂಗಳ ಗೀತೆಯೊಂದಿಗೆ ಸಮಾರಂಭವು ಕೊನೆಗೊಂಡಿತು. ಆಮಂತ್ರಿತರಿಗೆಲ್ಲ ಚಹಾ ಸತ್ಕಾರದ ಏರ್ಪಾಡೂ ಇತ್ತು.

—ಆಮಂತ್ರಿತ

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೇ ದಟ್ಟಿಯಾಗಿ ಎದ್ದು ಕಾಣುವುವು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ ಉಡುಪಿ.

ಸ್ಥಾಪಕರು:
ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ. ಎಲ್. ಟಿ.

ಸಂಪಾದಕರು:
ಕೆ.ಆರ್.ಶಣೈ ಮತ್ತು ಕೆ.ಎಚ್.ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ.

ವಾರ್ಷಿಕ ಚಂದಾ ರೂ. 3-0-0

ಮೆನೇಜರ್,
ಬಾಲಚಂದ್ರ, ಉಡುಪಿ.

ನೋಡಿದರೆ ಬಿಡದಿರುವ ಪುಸ್ತಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಟಕಕತೆಗಳು	0	4	0
ಕುಶಲವ	0	7	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	4	0
ಪ್ರೇಮವಿಜಯ	1	0	0
ರಂಗಭೂಮಿ	0	12	0
ಸೇವಾಪಥ	0	8	0
ನಾರೀ ಹೃದಯ	1	0	0
ಭಾರತೀಯ ಕತೆಗಳು	1	4	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ನಗೆನೋಟಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶ ಗಂಗೆ	2	0	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0

ವಿಳಾಸ:
(1) ಕಿರಿಯರ ಪ್ರಪಂಚ, ಉಡುಪಿ.
(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಗಿರಣಿ ಬಟ್ಟೆ ಮತ್ತು ನೂಲು ವ್ಯಾಪಾರದ ಲೈಸನ್ಸು—ಅವಧಿಯು ಈ ತಿಂಗಳಾಂತ್ಯಕ್ಕೆ ಮುಗಿಯುವುದರಿಂದ ಸಂಬಂಧಪಟ್ಟ ವ್ಯಾಪಾರಿಗಳು ಮುಂದಿನ ಅರ್ಧವರುಷದ ಬಗ್ಗೆ ಲೈಸೆನ್ಸು ಊರ್ಜಿತಗೊಳಿಸುವ ಅರ್ಜಿಗಳನ್ನು ತಾ 30-9-51 ರೊಳಗಾಗಿ ಜಿಲ್ಲಾ ಕಲೆಕ್ಟರರಿಗೆ ಕಳುಹಿಸಿ ಕೊಡಬೇಕಾಗಿದೆ. ಅಲ್ಲದೆ ಕ್ರಮಪ್ರಕಾರ ಲೈಸೆನ್ಸು ಫೀಸನ್ನು ಕಟ್ಟಬೇಕು ಮತ್ತು ಇನ್ಕಮ್ ಟೇಕ್ಸ್ ತಪಾಸಣ ಸರ್ಟಿಫಿಕೇಟನ್ನು ಅರ್ಜಿಯೊಂದಿಗೆ ಲಗ್ತೀಕರಿಸಬೇಕಾಗಿದೆ.

ಜಿಲ್ಲಾ ಬೋರ್ಡು ಸಭೆಯು ತಾ. 15-9-51ನೇ ಶನಿವಾರ ಬೆಳಿಗ್ಗೆ 11ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗಲಿದೆ. 1950-51ರ ಆಡಳಿತ ವರದಿಯು ಈ ಸಭೆಯಲ್ಲಿ ಚರ್ಚಿಸಲ್ಪಡುವುದು.

ಯುದ್ಧ ವಿರೋಧ ದಿನವನ್ನು— ಇದೇ ತಾ 3ರಲ್ಲಿ ಮಂಗಳೂರಿನ ಶಾಂತಿಸಮಿತಿಯು ಶ್ರೀ ಜೆ. ಬಿ. ಡಿ' ಸೋಜರ ಅಧ್ಯಕ್ಷತೆಯಲ್ಲಿ ಆಚರಿಸಿತು. ಶಾಂತಿಸಮಿತಿಯ ಅಧ್ಯಕ್ಷರು ಶಾಂತಿ ಸಮರದ ಚರಿತ್ರೆಯನ್ನು ಹೇಳಿ ಜಾಗತಿಕ ಯುದ್ಧಾರಂಭವಾದ ಸಪ್ಟೆಂಬರ 3ನೇ ದಿನವನ್ನು ಯುದ್ಧವಿರೋಧ ದಿನವಾಗಿ ಆಚರಿಸುವುದಾಗಿದೆ ಎಂದರು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಎಸ್. ಜೆ. ಸಾಜನ್ನ ಶ್ರೀನಿವಾಸ ಉಪಾಧ್ಯ ಮೊದಲಾದವರು ಸಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಸದಾಶಿವನವರು ಧನ್ಯವಾದಗಳನ್ನರ್ಪಿಸಿದರು.

ದ ಕ ಹಿಂದುಳಿದ ವರ್ಗಗಳ ಸಂಘದ ಸಭೆಯು ತಾ. 3ರಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಕೆ ರಾಮನವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸಿಗೆ ಬೆಂಬಲವೀಯಬೇಕೆನ್ನುವ, ಈ ಸಂಘಕ್ಕೆ ಕನಿಷ್ಠಪಕ್ಷ ಎರಡು ಸ್ಥಾನಗಳನ್ನೀಯಬೇಕೆಂದು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು.

ರೇಶನ್ ರದ್ಧತಿ— ಈಚೆಗೆ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಜರಗಿದ ಜಿಲ್ಲಾ ಆಹಾರೋತ್ಪಾದನಾ ಸಭೆಯಲ್ಲಿ, ಜಿಲ್ಲೆಯಾದ್ಯಂತ ರೇಶನ್ ಪದ್ಧತಿ ಹಾಗೂ ಬಿವಿ ಮತ್ತಿತರ ರೀತಿಯ ಧಾನ್ಯ ಎತ್ತುವಳಿಯನ್ನು ರದ್ದುಗೊಳಿಸುವ ಕುರಿತು ಮದ್ರಾಸು ಸರಕಾರವು ಯೋಚಿಸುತ್ತಿದೆ ಎಂದು ಕಲೆಕ್ಟರರು ತಿಳಿಸಿದರು. ಇದು ಕಾರ್ಯಕಾರಿಯಾಗುವುದಾದರೆ ಬರುವ ಅಕ್ಟೋಬರದಿಂದಲೇ ಜಾರಿಗೆ ಬರುವುದು. ಹೊಸದುರ್ಗ ಸಬ್ ತಾಲೂಕನ್ನು ಈ ಕ್ರಮದಿಂದ ಹೊರತುಪಡಿಸಬಹುದು.

ಬಾಡಿಗೆದಾರರ ಸಂಘ— ಇದೇ ತಾ. 2ರಲ್ಲಿ ಮಂಗಳೂರು ನಗರದ ಬಾಡಿಗೆದಾರರ ಸಭೆಯು ಫೆಲಿಕ್ಸ್ ಪೈ ಬಜಾರಿನಲ್ಲಿ ಶ್ರೀ ಇವರ್ಣಾಡಿ ಆನಂದ ಸೆಟ್ಟಿ, ಎಡ್ವೊಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬಾಡಿಗೆದಾರರ ಕಷ್ಟ, ಸಂಕಷ್ಟಗಳ ಮತ್ತು ರೆಂಟ್ ಕಂಟ್ರೋಲ್ ಆಕ್ಟಿನಿಂದ ಬಾಡಿಗೆದಾರರಿಗೆ ದೊರಕಬಹುದಾದ ಪ್ರಯೋಜನಗಳ ಕುರಿತು ಶ್ರೀಗಳಾದ ಎಸ್. ಎಸ್. ಸೆಟ್ಟಿ, ರಾಮರಾಯ ಪೈ, ಡಾ। ಸಂಜೀವನಾಥ ಮೊದಲಾದವರು ಮಾತನಾಡಿದರು. ವರ್ಷವರ್ಷ ಬಾಡಿಗೆ ಹೆಚ್ಚದಂತೆ, ಅಂಗಡಿ, ಮನೆ, ಕಟ್ಟೋಣಗಳಿಗೆ ಆವಶ್ಯಬೇಕಾದ ರಿಪೇರಿಗಳನ್ನು ಮಾಡುವಂತೆ ವಸತಿ ಸೌಕರ್ಯಗಳನ್ನು ಹೆಚ್ಚಿಸುವುದು ಮುಂತಾದ ಯಾವತ್ತೂ ಕಾರ್ಯಕ್ರಮಗಳನ್ನು ಕೈಕೊಳ್ಳಲು ಬಾಡಿಗೆದಾರರ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಣಯವಾಗಿ ಕಾರ್ಯಕಾರೀ ಸಮಿತಿಯ ರಚನೆಯಾಯಿತು.

ಸೋಶಲಿಸ್ಟ್ ಧುರೀಣರ ಆಗಮನ:— ಭಾರತ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಮಧುಲಿಮೆ ಮತ್ತು ಶ್ರೀ ಪ್ರತಾಪಪ್ಪಾ ಇವರು ತಾ 4ರಂದು ಮಂಗಳೂರಿಗೆ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಸ್ವಾಗತವೀಯಲಾಯಿತು.

ಅಪರಾಹ್ನ ಪತ್ರಿಕಾ ಪ್ರತಿನಿಧಿಗಳ ಕೂಟವು ಜರಗಿದಾಗ ಶ್ರೀ ಮಧುಲಿಮೆಯವರು ಕಾಂಗ್ರೆಸ್ಸು ಮತ್ತು ಕಮ್ಯೂನಿಸ್ಟ್ ಪಕ್ಷಗಳ ಧೋರಣೆ ಮತ್ತು ಕಾರ್ಯಕ್ರಮಗಳನ್ನು ತಮ್ಮ ದೃಷ್ಟಿಯಂತೆ ವಿಮರ್ಶಿಸಿದರು. ಕಮ್ಯೂನಿಸ್ಟ ಪಕ್ಷವು ಪರಕೀಯ ಶಕ್ತಿಯ ಅದೊಂದು ಪಂಚಮ ದಳವೆಂದರು. ಮುಂದುವರಿಸುತ್ತ ಸಮಾಜ ಪಕ್ಷದ ಚುನಾವಣೆ ಘೋಷಣೆಯನ್ನು ವಿವರಿಸಿದರು. ಸಂಜೆ ಡಾ। ಸಂಜೀವನಾಥ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೇಂದ್ರ ಮೈದಾನಿನಲ್ಲಿ ಜರಗಿತು. ಶ್ರೀ ಮಧುಲಿಮೆಯವರು ತಮ್ಮ ಭಾಷಣದಲ್ಲಿ ದೇಶದಲ್ಲಿನ ತೀವ್ರವಾದ ಬಡತನವನ್ನು ಹೋಗಲಾಡಿಸಲು ಸಮಾಜವಾದವೇ ಯೋಗ್ಯವೆಂಬುದನ್ನು ವಿವರಿಸಿದರು. ಶ್ರೀ ಪ್ರತಾಪಪ್ಪಾರವರೂ ಮಾತನಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

1940ನೆ ಜಾನುವಾರು ರೋಗಗಳ ಕಾಯಿದೆ ದ. ಕ ಜಿಲ್ಲೆಗೂ ಅನ್ವಯ:— ದಕ್ಷಿಣ ಕನ್ನಡ ಜಿಲ್ಲೆಯೊಳಗಣ ಎಲ್ಲಾ ಒಂಟೆಗಳು, ಕೋಣಗಳು, ಎತ್ತುಗಳು, ಹೋರಿಗಳು, ದನಗಳು, ಕರುಗಳು, ಕುರಿ ಆಡುಗಳು, ಅವುಗಳ ಮರಿಗಳು, ಹಂದಿಗಳು, ಚಿಂಕೆಗಳು, ಇವುಗಳಿಗೆ ಕಡ್ಡಾಯವಾಗಿ 'ಇನೋಕ್ಯುಲೇಶನ್' ಮಾಡಿಸಬೇಕು. ಈ ಕಾಯಿದೆಯು ಈ ಪ್ರಕಟಣೆಯು ಮದ್ರಾಸು ಫೋರ್ಟು ಸ್ಯೆಂಟ್ ಜೋರ್ಜ ಗಝೆಟಿನಲ್ಲಿ ಪ್ರಕಟವಾದಂದಿನಿಂದ ಬರುವ 1952ನೆ ಮಾರ್ಚ ತಾ. 31ರ ವರೆಗೆ ಜ್ಯಾರಿಯಲ್ಲಿರುತ್ತದೆ. ಈ ಕಾಯಿದೆಯು ಈ ಜಿಲ್ಲೆಗೂ ಅಗತ್ಯವೆಂದು ಕಂಡುಬಂದುದರಿಂದ ಮಾನ್ಯ ಮದ್ರಾಸು ಗವರ್ನರರು ಇದನ್ನು ದಕ್ಷಿಣಕನ್ನಡ ಜಿಲ್ಲೆಗೂ ಅನ್ವಯಿಸುವಂತೆ ವಿಧಿಸಿರುವರು.

ನಿಧನ— ಮಂಗಳೂರಿನ ಹಿರಿಯ ವ್ಯಾಪಾರಿಗಳಲ್ಲೊಬ್ಬರೂ ಅನೇಕ ವರುಷ ನಗರ ಸಭಾ ಸದಸ್ಯರಾಗಿ ದುಡಿದವರೂ ಆಗಿದ್ದು ವೃದ್ಧಾಪ್ಯದ ದೆಸೆಯಿಂದ ತಮ್ಮ ಚಟುವಟಿಕೆಗಳಿಂದ ನಿವೃತ್ತರಾಗಿದ್ದ ಶ್ರೀ ಕುಡುಪಿ ರಘುನಾಥ ಕ್ಯಾನುಭಾಗರು ಕಳೆದ ತಾ. 31ರಲ್ಲಿ ತಮ್ಮ 75ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಸಾರ್ವಜನಿಕ ಗಣೇಶೋತ್ಸವ— ಶ್ರೀ ಬಜರಂಗ ವ್ಯಾಯಾಮ ಶಾಲೆಯ ಆಶ್ರಯದಲ್ಲಿ ನಡೆಯುವ ಸಾರ್ವಜನಿಕ ಗಣೇಶೋತ್ಸವವು ನಿರ್ದಿಷ್ಟ ಕಾರ್ಯಕ್ರಮಗಳಿಗನುಸಾರವಾಗಿ ಯಶಸ್ವಿಯಾಗಿ ನಡೆಯಿತು.

ಮಡಿಕೇರಿ

ಕಳೆದ ತಾ 29ರಂದು ಸ್ಥಳೀಯ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನೆಯನ್ನು ಶ್ರೀ ಎನ್. ಎಸ್. ಕಿಲ್ಲೆಯವರು ನೆರವೇರಿಸಿದರು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಕುಶಾಲಪ್ಪನವರು ಅಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕಿಲ್ಲೆಯವರು 'ಭಾರತದ ವೀರರು' ಎಂಬ ವಿಷಯವನ್ನೆತ್ತಿ ಮಾತನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಪೂವಯ್ಯನವರು ದನ್ಯವಾದಗಳನ್ನರ್ಪಿಸಿದರು.

ಮುಂಬಾಯಿ

ಲಲಿತಕಲಾ ಕರ್ನಾಟಕ ನಾಟಕ ಸಭಾ:— ಇತ್ತೀಚೆಗೆ ದ. ಕ. ಜಿಲ್ಲೆಯಲ್ಲಿರುವ ದಶಾವತಾರದ ಯಕ್ಷಗಾನ ಮಂಡಳಿಯವರನ್ನು ಬಿಲ್ಲವರ ಎಸೋಸಿಯೇಶನ್‌ರವರು ಮುಂಬಯಿಗೆ ಆಮಂತ್ರಿಸಿ, ಕೆಲವು ಆಟಗಳನ್ನು ಮಾಡಿಸಿದರಲ್ಲದೆ, ತಾ 16-8-51ರಲ್ಲಿ ಮೇಲೆ ಕಾಣಿಸಿದ ನಾಟಕ ಸಭೆಯವರು ಯಕ್ಷಗಾನ ಮಂಡಳಿಯಲ್ಲಿದ್ದ ಶ್ರೀಗಳಾದ ಮ್ಯಂಬಪ್ಪ, ರೈ, ಯಂ ಶಿವಣ್ಣ, ರಾಮಯ್ಯ ರೈ, ಬೋಳಾರ, ನಾರಾಯಣ. ಶೆಟ್ಟಿ, ಕೆ. ಪುರುಷೋತಮ, ಭಟ್ರು, ಕೆ. ಕಣ್ಣ, ಯಂ. ಸಂಜೀವ ಶೆಟ್ಟಿ. ಯಂ. ನಾರಾಯಣ, (ಹಾಸ್ಯಗಾರರು) ಇವರನ್ನು ಆಮಂತ್ರಿಸಿ, ಬಿಲ್ಲವರ ಎಸೋಸಿಯೇಶನಿನ ಅಧ್ಯಕ್ಷರಾದ ಶ್ರೀ. ವೈ. ಜಿ. ಬಂಗೇರರ ಅಧ್ಯಕ್ಷತೆಯಲ್ಲಿ, ನಾಟಕ ಕಲೆಯ ವಿಷಯವಾಗಿಯೂ, ದಶಾವತಾರದ ಕಲೆಯ ವಿಷಯವಾಗಿಯೂ, ಹಲವು ಮಹನೀಯರು ಭಾಷಣ ಮಾಡಿದ ನಂತರ ಪುಷ್ಪಹಾರದೊಂದಿಗೆ ಸತ್ಕಾರಕೂಟವು ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮನಂಬ್ರ 345/1950
R. I. A. 1004/1951

ಹ್ಯಾಂಸು ಮ್ಯೊರಿ —ವಾದಿ,
ಮತ್ತು
ಕಲ್ಯಾಣಿ ಹೆಂಗಸು ಕೂಡಾ —ಪ್ರತಿವಾದಿರು.

2ನೇ ಪ್ರತಿವಾದಿ ಉಡುಪಿ ಕಸಬಾ ಅಜ್ಜರಕಾಡಿನಲ್ಲಿರುವ ಕುಂಜೂರು ವ್ಯಾಸರಾಯರ ಮಗ ಕೆ. ರಾಮಚಂದ್ರಾಯರಿಗೆ—

ನಿಮ್ಮ ತಂದೆಗೆ 1ನೇ ಪ್ರತಿವಾದಿಯು ತಾರೀಕು 6-4-1937ರಲ್ಲಿ ರಿಜಿಸ್ಟ್ರಿಸಿ ಬರಕೊಟ್ಟ ಮೂಲಗೇಣಿ ಎಮ್ಮಸುಡಿ ಪ್ರಕಾರ ಬರತಕ್ಕ ಗೇಣಿ ಬಾಕಿಗೂ, ಹುಟ್ಟುವಳಿಗೂ, ಆಸ್ತಿ ಸ್ವಾಧೀನತೆ ವಗೈರೆಗೆ ವಾದಿಯು ಮಾಡಿದ ಮೊಕದ್ದಮೆಯ ವ್ಯಾಜ್ಯವು ನಿಮ್ಮ ಉದಾಹರಣೆಯ ಬಗ್ಗೆ ತಾರೀಕು 19-9-1951ಕ್ಕೆ ಇಟ್ಟಿದೆ. ಆಕ್ಷೇಪಣೆಯುಳ್ಳವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಕರೆಪಾಗ್ಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿಯದೆ.

A. Laxminarayana Aithal,
Vakil.

ಉಡುಪಿ, ತಾ. 11-9-1951

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ
ಹಲವಾರು ಔಷಧಗಳಿಂದ
ಗುಣವಾಗದ ಉಬ್ಬಸವೂ
ಖಾತ್ರಿ ಗುಣವಾಗುವುದು
ಅಲ್ಪ ವೆಚ್ಚ! ಅದ್ಭುತ ಗುಣ!

ಎಂ. ಎಂ. ಪ್ರೊಡಕ್ಟ್ಸ ಕೋ;
ರುಬಿ ಮೇನ್ಸನ್,
ಫೋರ್ಟ, ಬೊಂಬಾಯಿ



ತಾ. 13—9—51ರಿಂದ

ಶಾನ್

ರೆಹಮಾನ್, ಮತ್ತು ಸುರೈಯಾ

ಬರುವ ಚಿತ್ರ
ಕಿದಾರ ಶರ್ಮರ ಚಿತ್ರ ಪ್ರಪಂಚಕ್ಕೆ ಕಿರೀಟ ಪ್ರಾಯವಾದ
"ಚಿತ್ರಲೇಖ"
ಚಂದ್ರೆಕರ್, ಮೆಹತಬ್, ಮೋನಿಕಾ ದೇಸಾಯಿ ಮೊದಲಾದವರು

ನಿರೀಕ್ಷಿಸಿರಿ: 20th ಸೆಂಚುರಿಯವರ
ಬ್ಲೇಕ್ ಸ್ವಾನ್ (ವರ್ಣಚಿತ್ರ)
ಟೈರನ್ ಪವರ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

WANTED

Agents for the sale of our new design fountain pens on Rs. 300/-To Rs 500/- P. M. salary or commission basis. For samples and free terms apply:

LAWRANCE BROTHERS (N W U.)
Nagdevi BOMBAY 3

ಸಾಮಾನ್ಯ ಜನರಿಗೂ ಜೀವವಿಮೆ
ಮಾಡಲು ಅನುಕೂಲವಾದ
ದಕ್ಷಿಣ ಕನ್ನಡದ ಏಕಮಾತ್ರ
ಪ್ರೊವಿಡೆಂಟ್ ವಿಮಾಸಂಸ್ಥೆ—
ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶ್ಯೂರೆನ್ಸ್
ಕಂಪೆನಿ ಲಿಮಿಟೆಡ್ ಉಡುಪಿ
ವಿಮಾ ಅರ್ಜಿಗಳಿಗೂ ಏಜನ್ಸಿ
ನಿಯಮಗಳಿಗೂ ಬರೆಯಿರಿ.
The NeW Karnataka Provident
Insurance Co., Ltd, Udipi

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಮಂಚಿಕಾಡಿ—ಇಲ್ಲಿಯ ಶ್ರೀ ಇಕೇತನ ಶಾಲೆಯಲ್ಲಿ ಇದೇ ತಾ. 1ರಲ್ಲು ಸಂಜೆ ವಯಸ್ಕರ ಶಿಕ್ಷಣ ಮಂದಿರದ ಪ್ರವೇಶೋತ್ಸವವು ಉಡುಪಿ ಉತ್ತರ ಶ್ರೇಣಿಯ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ರಾಮಚಂದ್ರ ಕಲ್ಕೂರರು ನೆರೆದಿದ್ದ ಹಲವಾರು ನಿರಕ್ಷರಸ್ಥ ವಯಸ್ಕರಿಗೆ ಯೋಗ್ಯರೀತಿಯ ಶಿಕ್ಷಣ ಕ್ರಮದಿಂದ ಅಕ್ಷರಗಳ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು ಈ ಮಹತ್ತರವಾದ ಕೆಲಸಕ್ಕೆ ಸರ್ವರೂ ಸಹಾಯ ಮಾಡಬೇಕೆಂದೂ ಅಪೇಕ್ಷಿಸಿದರು.

ಮೂಡಬಿದ್ರೆ—ಕಳೆದ ತಾ. 30ರಲ್ಲು ಸ್ಥಳೀಯ ಹರಿಜನ ವೆಲ್‌ಫೇರ್ ಶಾಲಾವಠಾರದಲ್ಲಿ ಹರಿಜನ ದಿನಾಚರಣೆಯು ಕಾರ್ಕಳ ತಾಲೂಕು ಸಬ್ಸಿ ಆಫೀಸರ್ ಶ್ರೀ ಎಲ್. ಉತ್ತಟ್ಟೆರವರ ಅಧ್ಯಕ್ಷತೆಯಲ್ಲಿ ಜರಗಿತು. ಸಾರ್ವಜನಿಕರ ವತಿಗೆಯಾಗಿ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಮೂಡಬಿದ್ರೆ ಕೇಂದ್ರದ ಶಾಲೆಗಳ ಮಕ್ಕಳ ಕೂಡುವಿಕೆಯಿಂದ ವಿನೋದಾವಳಿಗಳಾದುವು. ಡಾ। ರಾಮಣ್ಣ ಸೆಟ್ಟಿ, ಶ್ರೀಗಳಾದ ರಾಮರಾವ್, ಮಾದ್ದಣ್ಣ ಆಳ್ವ, ರಾಮಚಂದ್ರ ಆಳ್ವ, ನಾರಾಯಣ ಹೆಗ್ಡೆ, ಕೆ. ಚೆನ್ನಪ್ಪ ಮೊದಲಾದವರು ಶಾಲೋಚಿತ ಮಾತುಗಳನ್ನಾಡಿದರು. ಅಂದು ರಾತ್ರಿ ಕಾಪು ಶ್ರೀ ನೀಲಕಂಠೇಶ್ವರ ಸೇವಾ ಸಮಾಜ ಮತ್ತು ಮಲ್ಪೆ ಶ್ರೀ ಚೆನ್ನಬಸವೇಶ್ವರ ಸೇವಾ ಸಂಘದ ಸಂಯುಕ್ತ ಕೂಡುವಿಕೆಯಿಂದ ಭಜನೆ ನಡೆಯಿತು.

ಶಿರ್ವ—ಕಳೆದ ತಾ. 31ರಲ್ಲು ಡಾ। ಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ 'ಧರ್ಮ ಸಭೆ'ಯು ಸೌಮ್ಯರೀತಿಯಿಂದ ಜರಗಿತು. ಶ್ರೀ ರವೀಂದ್ರರವರಿಂದ ಶಿವಸ್ತೋತ್ರವಾಗಿ ಶ್ರೀ ಕೆ. ಎಲ್. ಶರ್ಮರಿಂದ ಗೀತಾ ಪ್ರವಚನ ನಡೆದ ನಂತರ ಅಧ್ಯಕ್ಷರು 'ಗೀತೆಯ ಸಂದೇಶ'ದ ಕುರಿತು ಭಾಷಣವಿತ್ತರು.

ಕುಂಬಳೆ—ಕುಂಬಳೆ ಫಿರ್ಕಾ ಗಡಿ ಕೈಗಾರಿಕೆ ಫಡರೇಶನಿನ ಮೊದಲನೇ ಮೂರು ವರುಷದ ಡೈರೆಕ್ಟರುಗಳಾಗಿ ಶ್ರೀಗಳಾದ ಐ. ಸಿ. ಭಂಡಾರಿ, ಕೆ ಕಣ್ಣಪ್ಪ, ಕ ನಾರಾಯಣಾಚಾರಿ, ಎಚ್. ರಘುರಾಮ ಆಳ್ವ, ಕೆ. ನಾರಾಯಣ ಭಟ್, ಕೆ. ಕೆ ಭಟ್ಟರನ್ನು ಮದ್ರಾಸಿನ ಕೋಪರೇಟಿವ್ ಸೊಸೈಟಿಯ ರಿಜಿಸ್ಟ್ರಾರರು ನೊಮಿನೇಶನ್ ಮಾಡಿರುತ್ತಾರೆ.

ಪಡುಬಿದ್ರೆ-ದ. ಕ ಜಿಲ್ಲಾ ರೂರಲ್ ವೆಲ್‌ಫೇರ್ ಕಮಿಟಿ ಸಭೆಯು—ಕಳೆದ ತಾ 29ರಲ್ಲು ಪಡುಬಿದ್ರೆ ಬೋರ್ಡು ಹಾ. ಎ. ಶಾಲೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆಯಾಯ ಇಲಾಖಾ ಆಫೀಸರುಗಳ ವರದಿವಾಚನಗಳಾದನಂತರ ಕಟೀಲಿನಲ್ಲಿರುವ ಹೋಟೆಲುಗಳು ಅನಾರೋಗ್ಯಕರ ಸ್ಥಿತಿಯಲ್ಲಿರುವುದಾಗಿ ಕೆಲವು ಗ್ರಾಮಸ್ಥರ ಹೇಳಿಕೆಯನ್ನು ಪರಿಶೀಲಿಸಲಾಯಿತು. ಜಿಲ್ಲಾ ಹೆಲ್ತ್ ಆಫೀಸರರು ಈ ವಿಚಾರದಲ್ಲಿ ಗಮನ ಕೊಡಬೇಕೆಂದಾಯಿತು. ಹಳೆಯಂಗಡಿ ರಸ್ತೆ ಬದಿಯಲ್ಲಿ ವಿಮಾನ ಸಾರ್ಟನಾಸುವ ಹಾವಳಿಯನ್ನು ತಡೆಗಟ್ಟುವರೆ ಯೋಗ್ಯ ಸ್ಥಳ ಸ್ವಾಂದನ್ನು ಚುನಾಯಿಸಿ ಅಲ್ಲಿ ವಿಹಾನುಮಾರ್ಕೆಟು ಕಟ್ಟುವ ಯೋಜನೆಯಾಯಿತು. ಹಾವಂಜೆಯ ಕುಲಾಲರ ಸಂಘವನ್ನು ಸ್ಥಳೀಯ ಜನರೇ ಈ ತಸಕ ಸಾಧ್ಯವಾ ಒಂದು ಸಾವಿರ ರೂಪಾಯಿ ಖರ್ಚು ಮಾಡಿ ಪ್ರಾರಂಭಿಸಿದ್ದು ಅದನ್ನು ಪಂಚಾಯತ ಬೋರ್ಡಿನವರು ಪೂರ್ತಿಗೊಳಿಸಬೇಕೆಂಬ ವಿಷಯವನ್ನು ಪರಿಶೀಲಿಸಲಾಯಿತು. ಗ್ರಾಮಸ್ಥರೇ ಈ ಕಾರ್ಯವನ್ನು ಪೂರ್ತಿಗೊಳಿಸಲು ಮುಂದಾಗಬೇಕೆಂದೂ ರೂಪಾಯಿ 500/-ರನ್ನು ಗ್ರಾಂಟು ರೂಪದಲ್ಲಿ ಕೊಡಲಾಗುವುದೆಂದೂ ಅಧ್ಯಕ್ಷರು ಹೇಳಿದರು. ವಯಸ್ಕರ ಶಿಕ್ಷಣ ಕೇಂದ್ರಗಳು ಜಾಸ್ತಿ ಸಂಖ್ಯೆಯಲ್ಲಿ ತೆರೆಯಲ್ಪಡಬೇಕೆಂದು ನಿರ್ಧರಿಸಲಾಯಿತು. ಇನ್ನು ಕೆಲವು ವಿಷಯಗಳು ತೀರ್ಮಾನವಾಗಿ ಮುಂದಿನ ಸಭೆಯನ್ನು ಇದೇ ತಿಂಗಳ ತಾ 26ರಂದು ನೀಲೇಶ್ವರ ಶಾಲೆಯಲ್ಲಿ ಜರಗಿಸಬೇಕೆಂದಾಯಿತು.

ಫಲಿಮಾರು— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟ್ರಿ ಶಾಲೆಯಿಂದ ವರ್ಗವಾಗಿ ಹೋಗಲಿಕ್ಕಿರುವ ಸಹಾಯಕ ಅಧ್ಯಾಪಕ ಶ್ರೀ ಶಿರ್ವ ದುಗ್ಗಪ್ಪ ಹೆಗ್ಡೆಯನ್ನು ಬೀಳ್ಕೊಳ್ಳುವ ಸಮಾರಂಭವು 3-9-51ರಲ್ಲಿ ಶ್ರೀ ಕೆ. ವೆಂಕಟ್ರಾಯ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು

ಉಚ್ಚಿಲ—1-9-51ರಿಂದ ಸಪ್ರಿ ಬಡಾ ಮತ್ತು ತೆಂಕ ಗ್ರಾಮಗಳಲ್ಲಿ ಕಡ್ಡಾಯ ಶಿಕ್ಷಣವು ಜಾರಿಗೆ ಬಂದಿದೆ. ಉಚ್ಚಿಲ ಸರಸ್ವತೀ ಮಂದಿರ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕಡ್ಡಾಯ ಶಿಕ್ಷಣದ ಕುರಿತು ಪ್ರಚಾರಮಾಡಿದರು.

ಮೂಲ್ಕಿ ಭಾವಚಿತ್ರ ಅನಾವರಣ ಸಮಾರಂಭ—ಸ್ಥಳೀಯ 'ಮೂಲ್ಕಿ ಬೇಂಕಿ'ನ ಸ್ಥಾಪಕರಾದ ದಿವಂಗತ ಶ್ರೀ ಎಮ್ ಆರ್. ಪೂಂಜರ ಭಾವಚಿತ್ರ ಅನಾವರಣ ಸಮಾರಂಭವು ಸಪ್ರಿ ಬೇಂಕಿನ ಆಡಳಿತ ಮಂಡಳಿಯ ಕಡೆಯಿಂದ ಇದೇ ತಾ 5ರಲ್ಲು ಸಂಜೆ ಯೂನಿಯನ್ ಕ್ಲಬ್ಬಿನ ಪಠಾರದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು ಸಭಾಧ್ಯಕ್ಷತೆ ವಹಿಸಿದ್ದರು

ಮೌನ ಪ್ರಾರ್ಥನೆಯಾದ ನಂತರ ಸಭೆಗೆ ಶುಭವನ್ನು ಕೋರುವ ಸಂದೇಶಗಳನ್ನು ಓದಲಾಯಿತು ಡಾ। ಬಿ ಕೆ. ಗಿರಿಯಪ್ಪ, ಡಾ। ಯು. ಪಿ ಮಲ್ಯ, ಎಮ್. ಎಲ್. ಎ; ಡಾ। ಎಸ್ ಚಂದಾ, ಶ್ರೀ ಸುಂಕ್ಕರ್ ಸಾಬ್ಬರಾವ್, ಜನಾಬ್ ಎಮ್ ಎಸ್ ಬಪ್ಪನಾಡು ಮೊದಲಾದವರು, ದಿವಂಗತರು ತನ್ನ ಕಾರ್ಯಕ್ಷೇತ್ರಗಳಲ್ಲಿ ದೇಶಭಕ್ತನಾಗಿ ಮಹಾತ್ಮಾಜೀಯವರ ರಚನಾತ್ಮಕ ಕಾರ್ಯದೃಷ್ಟಿಯಿಂದ ನಿಸ್ವಾರ್ಥಸೇವೆಯನ್ನು ಸಲ್ಲಿಸಿದ ಕುರಿತು ಅವರ ಗುಣಗಾನ ಮಾಡಿದರು. ಅಧ್ಯಕ್ಷರ ಭಾಷಣ, ಕಿಂಚಿತ್ ಉಪಹಾರಗಳಾಗಿ ಸಭೆಯು ಕೊನೆಗೊಂಡಿತು.

ಉದ್ಯಾವರ:—ಶ್ರೀ ಯು. ಸದಿಯ ಸಾಹುಕಾರರು ಪಸಂಶ್ರುತಿ ಶ್ರೀ ಗಣೇಶ ಚತುರ್ಥಿ ಹಬ್ಬದ ನಿಮಿತ್ತ ಅಕ್ಕಿ ದಾನ ಕೊಡುವಂತೆ, ಈ ವರ್ಷವೂ ಕಳೆದ ತಾ 4-9-51ರಲ್ಲು ಉದ್ಯಾವರ ಗ್ರಾಮದ ಎರಡೂ ರೇಶನ್ ಅಂಗಡಿಗಳಿಗೆ ಸಮ್ಮಂಧಪಟ್ಟ ಎಲ್ಲಾ ಕಾರ್ಡುದಾರರಿಗೆ ಎರಡು ದಿವಸಗಳ ರೇಶನ್ ಅಕ್ಕಿಯನ್ನು ಧರ್ಮಾರ್ಥವಾಗಿ ಕೊಡಿಸಿರುವರು ಶ್ರೀಯುತರಿಗೆ ಪರಮಾತ್ಮನು ಆಯುರಾರೋಗ್ಯವನ್ನು ಉಂಟುಮಾಡಲಿ.

ಹೆಬ್ರಿ:—ಇಲ್ಲಿಯ ಬೋ। ಹಾ। ಶಾಲೆಯಲ್ಲಿ ಇದೇ ತಾ. 3, ಮತ್ತು 4ರಲ್ಲಿ ಊರ ಮಹನೀಯರ ನೇತೃತ್ವದಲ್ಲಿ ●। ಮಲ್ಪೆ ರಾಮದಾಸ ನಾಮಾಂಗ ಹರಿದಾಸರಿಂದ ಹರಿಕಥೆಯು ಯಶಸ್ವಿಯಾಗಿ ನಡೆಯಿತು.

ವಿಟ್ಲದಲ್ಲಿ ಮಾನ್ಯಮಂತ್ರಿ ಎ. ಬಿ. ಸೆಟ್ಟಿರು—ಇಲ್ಲಿ ಸ್ಥಾಪಿಸಲಿರುವ ಅಡಿಕೆ ಸಂಶೋಧನಾ ಕ್ಷೇತ್ರದ ಸ್ಥಳವಾದ ವಿಟ್ಲ ಅರಸರ ಅಡಿಕೆತೋಟವನ್ನು ತಾ. 1ರಲ್ಲು ಪೂರ್ವಾಹ್ನ ಜಿಲ್ಲಾ ಕೃಷಿ ಅಧಿಕಾರಿ ಶ್ರೀ ರಾಮಣ್ಣ ರೈ, ಡಾ। ಅಡಪ್ಪ, ಡಾ। ಬಾಲಕೃಷ್ಣ ಸೆಟ್ಟಿ, ಅಡಿಕೆ ಕಮಿಟಿ ಮೆಂಬರ್ ಶ್ರೀ ಎಮ್. ಎನ್. ಚೌಟ ಮೊದಲಾದವರೊಡನೆ ಸಂದರ್ಶಿಸಿದರು. ಮಾನ್ಯಮಂತ್ರಿಗಳು ವಿಟ್ಲಕ್ಕೆ ಬರ್ತ್ತಲೇ ಶ್ರೀಗಳಾದ ಎ. ಜಿ. ತಿರುಮಲೇಶ್ವರ ಭಟ್, ಕೆ. ವೆಂಕಪ್ಪಯ್ಯ, ಪುತ್ತೂರು ತಾಲೂಕು ತಹಶಿಲ್ದಾರರು, ರೆವೆನ್ಯೂ ಸ್ಪೆಕ್ಟರು, ಸ್ವಾಗತಿಸಿ ಅರಮನೆ ತೋಟಕ್ಕೆ ಕರೆದೊಯ್ದು ಮುಂದೆ ಸ್ಥಾಪಿಸಲಾಗುವ ಅಡಿಕೆ ಸಂಶೋಧನಾ ಕ್ಷೇತ್ರದ ಸ್ಥಳದಲ್ಲಿರುವ ರೋಗಗಳಿದ ಅಡಿಕೆ ಮರಗಳು, ಮುರಿಯುತ್ತಿರುವ ಅಡಿಕೆ ಮರಗಳು ಇತ್ಯಾದಿಗಳನ್ನು ಮಂತ್ರಿಗಳಿಗೆ ತೋರಿಸಿದರು. ತೋಟದ ವಿಸ್ತೀರ್ಣ, ಅಡಿಕೆ ಮರಗಳ ಪ್ರಾಯ ಇತ್ಯಾದಿ. ಮಾಹಿತಿಯನ್ನು ಜಿಲ್ಲಾ ಕೃಷಿ ಅಧಿಕಾರಿಗಳು ವಿವರವಾಗಿ ತಿಳಿಸಿದರು. ನಂತರ ಎಲ್ಲರೂ ತೋಟದ ಮಾಲಕರಾದ ವಿಟ್ಲ ಅರಸರ ಅರಮನೆಗೆ ಮಾನ್ಯಮಂತ್ರಿಗಳೊಡನೆ ತೆರಳಿದಾಗ ಅರಸರಾದ ಶ್ರೀ ರವಿವರ್ಮಕೃಷ್ಣರಾಜರು ಉಪಹಾರದಿಂದ ಸತ್ಕರಿಸಿದರು. "ಈ ಅಡಿಕೆ ಸಂಶೋಧನ ಕೇಂದ್ರದ ಕೆಲಸವು ತೋಟವು ಸರಕಾರದ ಸ್ವಾಧೀನ ಬಂದೊಡನೆಯೇ ಅಂದರೆ ಈ ವರ್ಷದ ಅಂತ್ಯದೊಳಗಾಗಿಯೇ ಶುರುವಾಗುವುದು" ಎಂದು ಸಭಿಕರೊಬ್ಬರ ಪ್ರಶ್ನೆಗೆ ಮಂತ್ರಿಗಳು ಉತ್ತರವಿತ್ತರು. ಅಲ್ಲಿಂದ ಮಂತ್ರಿಗಳು ಹೊರಟು ನೂತನವಾಗಿ ಸ್ಥಾಪಿಸಿದ ವಿಟ್ಲ ಹೈಸ್ಕೂಲಿಗೆ ತೆರಳಿ ಅಲ್ಲಿಯ ಕೆಲಸವನ್ನು ನೋಡಿ ಹರ್ಷಚಿತ್ತರಾಗಿ ಕೊಲ್ಲ ಜಾನುವಾರು ಕ್ಷೇತ್ರದತ್ತ ತೆರಳಿದರು.

ಮುತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಪ್ಪ ಮುಟುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಜಾಸ್ತಿ ಗುಣವಾಗಿದೆ... ಬೆಲೆ; ರೂ. 3-। ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

MIS D. DEVEE, P. DB. (N. J.)
Tollygunge CALCUTTA
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು





Approved from by the Govt. of Mysore
Certificated by the Agent of the Govt. of Cylone & Indian

ಉಡುಪಿಗೆ ಹೋಗಬೇಕು! ಅವರಿ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಬಿಸ್ಸು ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ಸ್ ಓಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ಪಡೆಯಲ್ಕೆ ಬೇಕಾದಾಗ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೇನೇಜರ್;
ಡಾಯಮಂಡ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು, (ದ. ಕ.)

ನಮ್ಮ ಜಿಲ್ಲೆಯ ಕಾಂಗ್ರೆಸು ಅಧಿಕಾರಿಗಳನ್ನು ಈಗಾಗಲೇ ಆರಿಸಿ ಆಗಿದೆ. ಜನಮತದ ಮೇರೆಗೆ ಆರಿಸಿ ಬರಲಿಕ್ಕಿಲ್ಲ. ಕೆಲವೇ ಮಂದಿ ಇದರ ಸೂತ್ರಚಾಲಕರಾಗಿರುತ್ತಾರೆ. ಪ್ರತಿನಿಧಿ ಸಂಸ್ಥೆಗಳ ಅಭಿಪ್ರಾಯಗಳು ಏನೂ ಪ್ರಯೋಜನ ಬರಲಿಕ್ಕಿಲ್ಲ ಎಂಬುದಾಗಿ ತುಂಬಾ ಅಪಪ್ರಚಾರವು ಇತ್ತೀಚೆಗೆ ನಡೆಯುತ್ತಿದೆ ಕೆಲವರು ಇದನ್ನು ವಿನೋದಕ್ಕಾಗಿಯೂ, ಇನ್ನು ಕೆಲವರು ಕಾಂಗ್ರೆಸ್ಸಿನ ಮೇಲಣ ಆಗ್ರಹದಿಂದಲೂ, ಮತ್ತೆ ಕೆಲವರು ಕಾಂಗ್ರೆಸಿನ ಅಥವಾ ಅದಕ್ಕೆ ಅಂಟಿಕೊಂಡ ಕೆಲವು ವ್ಯಕ್ತಿಗಳ ಮೇಲಣ ಸಂದೇಹದಿಂದಲೂ, ಇನ್ನು ಕೆಲವರು ಬೀದಿ ಬೀದಿಗಳಲ್ಲಿ ಕಾಂಗ್ರೆಸು ಸಂಸ್ಥೆಯಲ್ಲಿ ಯಾರೇ ಇರಲಿ ಅಧಿಕಾರ ಕಲ್ಪಿಸುವ ಸಂದರ್ಭದಲ್ಲಿ ತಾವೇ ಪ್ರಧಾನ ವ್ಯಕ್ತಿಗಳು ಎಂದು ಬಹಿರಂಗವಾಗಿ ಅಡಿತಿರುಗುವುದರಿಂದಲೂ, ಈ ಅಪಪ್ರಚಾರವು ಬಂದಿರುತ್ತದೆ ಈ ಅಭಿಪ್ರಾಯಗಳನ್ನು ಹೇಡುವರೇ ಬಿಡುವುದು ಕಾಂಗ್ರೆಸಿನಲ್ಲಿ ಜನತೆಗೆ ಇರುವ ಅಭಿಮಾನವನ್ನೂ ವಿಶ್ವಾಸವನ್ನೂ ಮತ್ತೂ ಕ್ಷೀಣಗೊಳಿಸಿದಂತಾಗುತ್ತದೆ. ಇಂತಹ ಅಭಿಪ್ರಾಯಗಳಿಗೆ ಇತ್ತೀಚೆಗೆ ಅಲ್ಲಲ್ಲಿ ಕಾಂಗ್ರೆಸಿನ ಕೆಲವರು ಕೂಡಿ ಮಾಡಿದ ಖಾಸಗಿ ಮೀಟಿಂಗುಗಳೇ ಕಾರಣವೆಂದೂ ತಿಳಿದುಬರುತ್ತದೆ. ವಿಚಾರಿಸಿ ತಿಳಿದಲ್ಲಿ ಇಂತಹ ಮೀಟಿಂಗುಗಳು ಯಾವ ನಿಶ್ಚಿತ ಅಭಿಪ್ರಾಯಕ್ಕೂ ಬಂದಿಲ್ಲವಾಗಿ ತಿಳಿಯುತ್ತದೆ. ಅಲ್ಲದೆ ಅಂತಹ ನಿಶ್ಚಿತ ಖಾಸಗೀ ಅಭಿಪ್ರಾಯಗಳಿಂದ ಇಂದಿನ ವಾತಾವರಣದಲ್ಲಿ ಏನೂ ಲಾಭವು ದೊರೆಕಲಾರದು. ಅದ್ದರಿಂದ ಮಹಾಜನರು ವಿಶ್ವಾಸಪೂರ್ವಕವಾಗಿ ಕಾಂಗ್ರೆಸಿಗೆ ತಮ್ಮ ಅರ್ಜಿಗಳನ್ನು ಹಾಕಲಿ. ಅಂತೆಯೇ ಕಾಂಗ್ರೆಸಿನಲ್ಲಿ ಸಂಬಂಧಪಟ್ಟ ವ್ಯಕ್ತಿಗಳು, ಭೇದಭಾವನೆ ಇಲ್ಲದೆ, ವಾತಾವರಣವನ್ನು ಅದಷ್ಟು ಆಳವಾಗಿ ಶೋಧಿಸಿ, ಯಾವ ರೀತಿಯ ಸ್ವಾರ್ಥ, ದಾಕ್ಷಿಣ್ಯ ಅಥವಾ ಸಂಕುಚಿತ ಭಾವನೆಗೂ ಒಳಗಾಗದೆ ಘನವಾದ, ಶಕ್ತಿಶಾಲಿಗಳಾದ ಹುರಿಯಾಳುಗಳನ್ನು ಜನತೆಯ ಮುಂದಕ್ಕೆ, ಸಮರ್ಥ ವ್ಯಕ್ತಿಗಳಿಗೇನೇ ನಾವು ಮತದಾನ ಮಾಡಿದ್ದೇವೆ ಎಂಬ ತೃಪ್ತಿಯು ಜನತೆಗೆ ಬರುವಂತೆ, ಇರಿಸಲಿ ಎಂದು ನನ್ನ ಹೃತ್ಪೂರ್ವಕ ಮನವಿ.

ಉತ್ತಮ ಹುರಿಯಾಳುಗಳಲ್ಲಿ ಘನವಾದ ನಡತೆ, ಶಕ್ತಿಪ್ರದರ್ಶನ ಸಾಮರ್ಥ್ಯ ಜನಸೇವಾದೃಷ್ಟಿ ಅಗತ್ಯವಾಗಿಯೂ ತೋರಿಬರಬೇಕು. ಪ್ರತಿಯೊಬ್ಬನಿಗೂ ತನ್ನನ್ನು ಈ ಸಂದರ್ಭದಲ್ಲಿ ಚುನಾಯಿಸಿದರಾಗಬಹುದು ಎಂದು ಇರುವ ಆಶೆ ಬಹಳವಾದದ್ದು. ಅಂಧಕಾರ ಕವಿದಿದ್ದ ಹೆಚ್ಚಿನ ಮತದಾರರಿದ್ದು, ಉಮೇದ್ವಾರರಿಗೆ ಯಾವ ಅಂತರಾಯವನ್ನೂ ಒಡ್ಡದ ಈ ಸಮಯದಲ್ಲಿ, ಉತ್ತಮ ಉಮೇದ್ವಾರರನ್ನೇ ಕಳುಹಿಸಲಸಾಧ್ಯವಾಗಿದ್ದ ದೆಸೆಯಿಂದ ಈಗಿನ ದುರವಸ್ಥೆಯು ಬಂದೊದ್ದಿರುತ್ತಾ, ಮುಂಬರುವ ಉಮೇದ್ವಾರರು ತಮ್ಮ ತಮ್ಮ limitations ಅಥವಾ ಅಂತರಾಯಗಳನ್ನು ತಾವೇ ತಿಳಿದು, ತಾವು ನಿಲ್ಲಲು ಒಲಿಸುವುದು ಸರಿಯಲ್ಲ ಎಂಬುದನ್ನು ತಿಳಿಯುತ್ತಿದ್ದರೆ ಜನತೆಗೆ ಒಂದು ದೊಡ್ಡ ಸೇವೆ ಇತ್ತು. ಆದರೆ ಅಂತಹ ಉದಾರತೆ ನಮ್ಮಲ್ಲಿ ತೋರಿ ಬರುವ ಸಂದರ್ಭ ಬಹಳ ಕಡಿಮೆ ಅದ್ದರಿಂದ ಜನತೆ

ಚುನಾವಣಾ ಸಮಿತಿಗಳೂ ಮತದಾರರೂ ಪ್ರತಿನಿಧಿಗಳನ್ನು ಆರಿಸುವಲ್ಲಿ ಅಗತ್ಯವಾಗಿ ಗಮನಿಸತಕ್ಕ ವಿಷಯಗಳು

ಯೂ, ಚುನಾವಣಾ ಸಂಸ್ಥೆಗಳೂ, ಈ ಕೆಳಗಿನ ವಿಷಯಗಳನ್ನು ಗಮನಿಸಿಯೇ ತಮ್ಮ ತಮ್ಮ ಮತದಾನವನ್ನು ಮಾಡಬೇಕು.

1 ಈ ಉಮೇದ್ವಾರಿಯು ಕೇವಲ ಹೆಸರಿಗಾಗಿ ಅಥವಾ ಅಲಂಕಾರಕ್ಕಾಗಿ ಮಾತ್ರ ಹೋಗುವವನೋ ಅಥವಾ ಅತನ ಪ್ರತಿನಿಧಿತ್ವದಿಂದ ಜನತೆಗೆ ನಿಜವಾದ ಪ್ರಯೋಜನ ದೊರಕೀತೇ? ಆರಿಸುವ ಹುರಿಯಾಳು ತನಗೆ ದೊರಕುವ ಸ್ಥಾನವು ಒಂದು ಟ್ರಸ್ಟ್ ಅಥವಾ ಜನರ ವಿಶ್ವಾಸದ ಪವಿತ್ರವಾದ ಒಂದು ಪಾತ್ರವೆಂದು ಎಣಿಸುವನೋ, ಅಥವಾ ತನಗೆ ಮನಬಂದಂತೆ ವರ್ತಿಸಿ ತನಗೂ ತನ್ನವರಿಗೂ ಮಾತ್ರ ಪ್ರಯೋಜನಕಾರಿಯಾದ ಖಾಸಗಿ ಲಾಭಗಳನ್ನು ಮಾತ್ರ ಗಳಿಸಿ ಬರುವವನೋ?

3. ಹೋಗುವ ಉಮೇದ್ವಾರಿಯು ಕೇವಲ ಮಂತ್ರಿಗಳ ಮತ್ತು ಅಧಿಕಾರಿಗಳ ಸ್ನೇಹವನ್ನು ಸುಲಭದಲ್ಲಿ ಬೆಳೆಸುವದರಲ್ಲಿ ಮಾತ್ರ ತನ್ನ ಸ್ಥಾನವನ್ನು ಉಪಯೋಗಿಸುವವನಿದ್ದಲ್ಲಿ ಅವನಲ್ಲಿ ಇತರ ಸಾಮರ್ಥ್ಯಗಳಿದ್ದರೂ ಅತನು ಮಂತ್ರಿ ಮತ್ತು ಇತರ ಅಧಿಕಾರಿಗಳ ನಡತೆಯನ್ನೂ ಕೆಲಸಗಳನ್ನೂ ಟೀಕಿಸಿ ತಿದ್ದುಪಡಿ ಮಾಡಲು ದಾಕ್ಷಿಣ್ಯದಿಂದ ಸಾಧ್ಯವಿಲ್ಲದವನು ಎಂದು ತಿಳಿದಿರತಕ್ಕದ್ದು, ಅಚ್ಚುಮೆಚ್ಚಿನ ಸಂಬಂಧವನ್ನು ಬೆಳೆಸಿ ಖಾಸಗಿ ಕೆಲಸಗಳನ್ನು ಅವರಿಂದ ಮಾಡಿಸಲು ತೊಡಗಿದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಅವರ ವರ್ತನೆಯನ್ನು ಎಸೆಂಬ್ಲಿಯಲ್ಲಿಯೂ ಬಹಿರಂಗದಲ್ಲಿಯೂ ಹೇಗೆ ಟೀಕಿಸಬಹುದು?

4. ಹೋಗುವ ಉಮೇದ್ವಾರಿಯು ನಿರ್ದಾಕ್ಷಿಣ್ಯದಿಂದ ಜನತೆಗೆ ಹಿತಕಾರಿಯಾದ ಅಭಿಪ್ರಾಯಗಳನ್ನು ಕೊಡಬಲ್ಲನೋ ಎಂದು ಗಮನಿಸಬೇಕು

5. ಹೋಗುವ ಉಮೇದ್ವಾರಿಗೆ ಪಾರ್ಲಿಮೆಂಟರೀ ಕ್ರಮಗಳು ಗೊತ್ತಿವೆಯೇ ಅದರಲ್ಲಿ ಏನು ತರಬೇತಿ ಇರುತ್ತದೆ. ಇನ್ನು ಹದಿಮೂರು ವರುಷಗಳ ತನಕ ನಮ್ಮ ಲೆಜಿಸ್ಲೇಚರ್ಸ್ ಮತ್ತು ಪಾರ್ಲಿಮೆಂಟಿನಲ್ಲಿಯು ಎಲ್ಲಾ ಮೆಂಬರರಿಗೂ ತಿಳಿಯುವ ಭಾಷೆಯೂ ಸಾಮಾನ್ಯವಾಗಿ ಮಾತನಾಡುವ ಭಾಷೆಯೂ ಇಂಗ್ಲೀಷ್ ಆಗಿದ್ದು, ಸಾಜೂಕಾಗಿ ಇಂಗ್ಲಿಷಿನಿಂದ ಭಾಷಣರೂಪದಲ್ಲಿ ನಿರ್ದಾಕ್ಷಿಣ್ಯತೆಯಿಂದ ತನ್ನ ಅಭಿಪ್ರಾಯವನ್ನು ಕೊಟ್ಟು, ಮತ್ತು ಹೋಗುವ ಸಂದರ್ಭದಲ್ಲಿ ಸರಕಾರದ ಹೆಜ್ಜೆಯನ್ನು ಸಮದಾರಿಗೆ ತರಲು ಶಕ್ತನೇ ಎಂದು ತಿಳಿಯತಕ್ಕದ್ದು.

6 ಹೋಗುವ ಉಮೇದ್ವಾರಿಯೇ ಮಂತ್ರಿ ಅಥವಾ ಮುಖ್ಯಮಂತ್ರಿಯೇ ಆಗಿಬಿಡಬಹುದು. ಯಾವ ಕಾನೂನಿನ ತೊಂದರೆಯೂ ಇಲ್ಲ. ಅಂತಹ ಸಂದರ್ಭದಲ್ಲಿ ಅವನಲ್ಲಿ ಸಾಕಷ್ಟು ಬುದ್ಧಿಮಂತಿಕೆಯಿಲ್ಲದೆ, ಅಥವಾ imferiority complex (ತಾನು ಕಮ್ಮಿಯವನೆಂಬ ತನ್ನದೇ ಭಾವನೆಯಿಂದ) ಈತನು ಕೇವಲ ಅಲಂಕಾರಮೂರ್ತಿಯಾಗಿದ್ದು ಅತನ ನಿಪುಣ ಕಾರ್ಯದರ್ಶಿ ಅಥವಾ ಕೆಳ ಅಧಿಕಾರಿಗಳ ಕೈಗೊಂಬೆಯಾಗುವನೋ ಎಂದು ವಿಚಾರಿಸತಕ್ಕದ್ದು.

7. ಜನತೆಯಿಂದ ಮೇಲ್ಮೆಯನ್ನೂ ಸ್ಥಾನವನ್ನೂ ಪಡೆದ ನಂತರ ಜನಹಿತವನ್ನವನು ಎಣಿಸದೆ ಖಾಸಗಿ ಲಾಭಪೀಡಿತನಾಗಿ "Kicking the leader by which he mount up" ಎಂಬ ನಾಣ್ಣುಡಿಗೆ ಸರಿಯಾಗಿ ವರ್ತಿಸುವನೇ ಅಥವಾ ಜನಾಭಿಪ್ರಾಯಕ್ಕೆ ದಿಕ್ಕಾರತೆಯನ್ನು ತೋರಿಸುವನೇ ಎಂಬುದನ್ನೂ ವಿಚಾರಿಸಬೇಕು.

8. ಹಿಂದಕ್ಕೆ ಅತನು ಉಮೇದ್ವಾರಿಯಾಗಿದ್ದರೆ ಅತನ ವರ್ತನೆಯೇನಿತ್ತು, ಏನು ಕೆಲಸಮಾಡಿರುತ್ತಾನೆ, ಬದಲಾವಣೆಯಾಗಬೇಕೋ ಎಂಬುದನ್ನು ವಿಚಾರಿಸತಕ್ಕದ್ದು.

9. ಅತನು ಪ್ರತಿ ಒಂದು ಮೀಟಿಂಗುಗಳಿಗೂ ಹೋಗಲು ಸಾಧ್ಯವಿದ್ದವನೋ? ಮತ್ತು ಹಾಗೆ ಹೋಗಿ ಅಲ್ಲಿ ಎಡೆಬಿಡದೆ ಇದ್ದು ನಡೆಯತಕ್ಕ ಕೆಲಸಗಳಲ್ಲಿ ಶ್ರದ್ಧೆಯನ್ನು ತೋರಿಸಿ, ತಯಾರಾಗುವ ಕಾನೂನುಗಳನ್ನು ಚೆನ್ನಾಗಿ ಕುಲನೆಮಾಡಿ ಜನಮತ ಪಡೆದು ತಿದ್ದುಪಡಿಗಳನ್ನು ಮಾಡಲು ಶಕ್ತನೋ ಎಂಬುದನ್ನು ತಿಳಿಯತಕ್ಕದ್ದು.

10. ಈ ಪ್ರಶ್ನೆಗಳು ಒಂದೊಂದಾಗಿ ಬರುವಾಗ, ಉಮೇದ್ವಾರಿ ನಮ್ಮವ ನಮ್ಮ ಊರಿನವ, ನಮ್ಮ ಪೈಕಿಯವನೆಂಬ ಭೇದಭಾವನೆಗಳು ನಮ್ಮಲ್ಲಿ ಬಂದರೆ ನಾವು ಉತ್ತಮ ಪ್ರತಿನಿಧಿಗಳನ್ನು ಪಡೆಯುವರೇ ಅನರ್ಹರು. ಹಿಂದುಸ್ಥಾನದವರು ನಾವು ಒಂದು ಎಂಬ ಭಾವನೆಗೆ ನ್ಯೂನತೆಯನ್ನುಂಟುಮಾಡಿದಂತಾಗುವುದು.

11- ಕೇವಲ ಶ್ರೀಮಂತಿಗೆಯನ್ನು, ಅಥವಾ ಸಂಬಂಧದ ಬಲಾಬಲ, ಅಥವಾ ಇತರ ಯಾವುದೇ ಬಲಾಬಲಗಳನ್ನು ಕಂಡು ಅಥವಾ ವಾತ್ಸಲ್ಯದಿಂದ ಉಮೇದ್ವಾರಿಯನ್ನು ಆರಿಸಿದರೆ, ನಮಗೆ ನಮ್ಮ ನೂತನ ರಾಜ್ಯಘಟನೆಯಿಂದ ದೊರೆತ ಲಾಭವನ್ನು ನಾವೇ ಕಳಕೊಂಡಂತಾಗುತ್ತದೆ.

ಜವಾಬ್ದಾರಿ ಜನತೆಯು, ಅಂತಹ ವ್ಯಕ್ತಿಗಳನ್ನೇ ಪ್ರತಿನಿಧಿಗಳನ್ನೇ ಆರಿಸಲಿ. ಅಂತವರಿಗೆ ಧನ ಅಥವಾ ಇತರ ಬಲಾಬಲಗಳು ಇಲ್ಲದಿದ್ದಲ್ಲಿ ಅದನ್ನು ಒದಗಿಸಿ ಕೊಡಲಿ. ಜನಬಲವೇ ಸರ್ವಬಲ. ಜನತೆಯು ತನ್ನ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದಿದ್ದಲ್ಲಿ ಅಂತಹ ಪ್ರಶ್ನೆಗಳು ಯಾತಕ್ಕೆ ಬರಬೇಕು. ಅಂತಹ ಸ್ಥಿತಿಯನ್ನು ಜನತೆಯು ತಯಾರಿಸಬೇಕು, ಅಂದು ಉತ್ತಮ ಸರಕಾರವು ಬಂದೀತು. ಜನರ ಕೊರತೆಯು ಅಂದು ನೀಗೀತು. ಇಲ್ಲದಿದ್ದಲ್ಲಿ ಉಪಕಾರದ ಬದಲು, ಉಪದ್ರವವಾದೀತು. ಪ್ರಾತಿನಿಧ್ಯವು ಮಹಾಜನರ ಮಹತ್ವಾದ ಸ್ವತ್ತು, ಅದನ್ನು ಕೆಲವೇ ಜನರು ಹಂಚಿಕೊಂಡರೆಂಬ ಮಾತು ಜನತೆಗೆ ಘನವಾದ ಕೊರತೆಯನ್ನು ತಂದೊಡ್ಡುವುದು ಪ್ರಾತಿನಿಧ್ಯದ ನಿಜವಾದ ಪ್ರಯೋಜನವನ್ನು ತರಲಾರದು. ಅಂತಹ ಮಾತು ಕಾಂಗ್ರೆಸಿಗೆ ಅಂಟಬಿಡಬಾರದು-ಅಂಟಬಿಡಲಿಕ್ಕೂ ಇಲ್ಲ.

ಬಿ. ಬಿ. ಶೆಟ್ಟಿ
ಎಡ್ವಕೇಟ್, ಮಂಗಳೂರು

ಕುರುಂದ್ವಾಡ್ ಮುನ್ಸಿಪಲ್ ಚುನಾವಣೆಯು ಇತ್ತೀಚೆಗೆ ನಡೆಯಿತ. ಸ್ವತಂತ್ರ ಪಕ್ಷದ 16 ಉಮೇದ್ವಾರರಲ್ಲಿ 12 ಮಂದಿಯೂ, ಸೇಠರ ಪಕ್ಷದ 17ರಲ್ಲಿ 4 ಮಂದಿಯೂ ಗೆದ್ದಿರುವರು ಸ್ತ್ರೀಯರ 2 ಸ್ಥಾನಗಳಿಗೆ 4 ಮಂದಿ ಉಮೇದ್ವಾರರಿದ್ದರು. ಇವರಲ್ಲಿ ಇಬ್ಬರು ಸ್ವತಂತ್ರ, ಉಳಿದಿಬ್ಬರು ಸೇಠರ ಪಕ್ಷದವರಾಗಿದ್ದರು. ಚುನಾವಣೆಯಲ್ಲಿ ಇಬ್ಬರೂ ಸ್ವತಂತ್ರ ಪಕ್ಷದವರೇ ಯಶಸ್ವಿಯಾಗಿರುವರು. ಈ ಇಬ್ಬರಲ್ಲಿ ಒಬ್ಬರು ನಮ್ಮ ಉಡುಪಿ ತಾಲೂಕಿನ ಪಾಂಗಾಳಗುಡ್ಡೆ ಕೊಟ್ಟರಿಮನೆ ಶ್ರೀ. ಜಿ. ಕೃಷ್ಣರಾವ್ ಇವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರು ಇವರು ಎಲ್ಲರಿಗಿಂತಲೂ ಹೆಚ್ಚು ವೋಟುಗಳನ್ನು ಪಡೆದು ಯಶಸ್ವಿಯಾಗಿರುವರೆಂಬುದು ಸಂತೋಷ ಹಾಗೂ ಅಭಿಮಾನದ ಸಂಗತಿಯಾಗಿದೆ.

For energetic and active living,
for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals Useful for men, women and Children alike. An ideal tonic for weak nerves and heart.
AYURVEDIC PHARMACY
Baba kali Kamali-Wala RISHIKESH

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷ

REGD
ಹುಳು ಕ...
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಪ್ರವಾಸಿಯ ಪತ್ರಗಳು ೧೨

ಫೋರ್ಡ್ ಕಾರ್ಖಾನೆ

ಲಂಡನ್ ನಗರದ ವೆಸ್ಟ್ ಮಿನಿಸ್ಟರ್ ಎಂಬಲ್ಲಿಂದ ಈ ಕಾರ್ಖಾನೆಯು 12 ಮೈಲು ದೂರ ಪೂರ್ವ ದಿಕ್ಕಿಗೆ ಇದೆ ಅಲ್ಲಿಗೆ ನೆಲದ ಕೆಳಗಿರುವ ರೈಲಿನಲ್ಲಿ ಹೋಗಬೇಕು. ಹಾಗೆ ಹೋಗುವಾಗ 19 ಸ್ಟೇಶನ್‌ಗಳು ಸಿಕ್ಕುತ್ತವೆ. ಮತ್ತು ಸ್ವಲ್ಪ ದೂರ ಹೋದ ಅನಂತರ ನೆಲದ ಮೇಲೆ ರೈಲು ಹೋಗುತ್ತದೆ. ನಾನು ಅಲ್ಲಿಗೆ ಹೋಗುವ ಮುಂಚೆ ಇಂಡಿಯಾ ಆಫೀಸಿನವರು ಕಾರ್ಖಾನೆಯ ಅಧಿಕಾರಿಗಳಿಗೆ ಟೆಲಿಫೋನ್ ಮೂಲಕ ಮುಂಚೆಯೇ ತಿಳಿಸಿ ಅನಂತರ ನಾನು ಹೋದದ್ದು. ಬೆಳಗ್ಗೆ 9-30ಕ್ಕೆ ಹೊರಟು ಡೆಗನ್‌ಹೇಮ್ (ಹಿತನೇ) ಎಂಬ ಸ್ಟೇಶನಿಗೆ 10-15 ಗಂಟೆಗೆ ಮುಟ್ಟಿದೆ. ಅಲ್ಲಿ ಪ್ರತಿ ಅರ್ಧ ಗಂಟೆಗೆ ಫೋರ್ಡ್ ಕಾರ್ಖಾನೆಯವರ ಮೋಟಾರ್ ಕಾರು ಬರುತ್ತದೆ. ಇದು ಅಲ್ಲಿಗೆ ಬಂದ ಜನರನ್ನು ಕಾರ್ಖಾನೆಗೆ ತೆಗೆದುಕೊಂಡು ಹೋಗುವುದಕ್ಕೂ ಕಾರ್ಖಾನೆಯಿಂದ ಬಂದ ಜನರನ್ನು ಬಿಡಲಿಕ್ಕೂ ಇದೆ. ಹಾಗೆ ಅದರಲ್ಲಿ ಕಾರ್ಖಾನೆಗೆ ತಲಪಿ ಅಲ್ಲಿ 3 ಗಂಟೆ ಸಮಯ ಅದರ ಬೇರೆ ಬೇರೆ ಸ್ಥಳಗಳನ್ನು ಸಂದರ್ಶಿಸಿ ನೋಡಿದೆ. ಹೋದ ಕೂಡಲೇ ನಮ್ಮ ಒಟ್ಟಿಗೆ ತಿರುಗಾಡಲಿಕ್ಕೆ ಕಾರ್ಖಾನೆಯ ಪರವಾಗಿ ಒಬ್ಬ ಸಂಚಾಲಕನನ್ನು ನನಗೆ ಎಲ್ಲವನ್ನೂ ತೋರಿಸಿ ಕೊಡಲಿಕ್ಕೆ ಕಳುಹಿಸಿದರು.

ಕಾರ್ಖಾನೆಯು ಇಡೀ ಯುರೋಪಿನಲ್ಲಿ ಮೊದಲನೆಯದಾಗಿದ್ದು 16 ಸಾವಿರ ಜನ ದಿನ ನಿತ್ಯವೂ ಅದರಲ್ಲಿ ಕೆಲಸ ಮಾಡುತ್ತಾರೆ ಥೇಮ್ಸ್ ನದಿಯ ಬಡಗು ದಡದಲ್ಲಿ 550 ಎಕ್ರೆ ಸ್ಥಳದಲ್ಲಿ ಈ ಕಾರ್ಖಾನೆ ಕಟ್ಟಲ್ಪಟ್ಟಿದೆ. ಇಷ್ಟು ಸ್ಥಳವೂ ಬರೇ ಕೆಸರು ತುಂಬಿದ ಸ್ಥಳವಾಗಿದ್ದು ಇಲ್ಲಿ ನದಿಯ ನೀರು ಕೆಲವು ಕಾಲ ನಿಲ್ಲುವುದಿತ್ತು. ಈಗ ಹೆಚ್ಚಿನ ಸ್ಥಳದಲ್ಲಿ ಮಣ್ಣು ತುಂಬಿಸಿ ಈ ಪೈಕಿ 80 ಎಕ್ರೆಯಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಬಾಕಿ ಸ್ಥಳದಲ್ಲಿ ರಸ್ತೆಗಳು, ರೈಲ್ವೆ, ಧಕ್ಕೆ ಮುಂತಾದವುಗಳು ಇವೆ. ಹೀಗೆ ಕಟ್ಟಡ ಕಟ್ಟುವಾಗ ಕೆಸರು ಸ್ಥಳವಾಗಿದ್ದು ದೊಡ್ಡ ಕಟ್ಟೋಣವು ಗಟ್ಟಿಯಾಗಿ ನಿಲ್ಲಲಿಕ್ಕಿಲ್ಲವೆಂದು ಕೆಸರಲ್ಲಿ ಸಿಮೆಂಟು ಕಂಬಗಳನ್ನು ಹುಗಿದು ಅದರ ಮೇಲೆ ಕಟ್ಟಡ ಕಟ್ಟಲ್ಪಟ್ಟಿದೆ. ಹಾಗೆ 22 ಸಾವಿರ ಕಂಬಗಳನ್ನು ಹುಗಿದಿದ್ದಾರೆ. ಪ್ರತಿಯೊಂದು 14 ಇಂಚು ಚಚ್ಚೌಕ. 45 ಅಡಿ ಆಳ ಕೆಸರಿದ್ದ ಕಾರಣ ಈ ಕಂಬಗಳು ಇದನ್ನು ಮಿಕ್ಕಿ ಉದ್ದವಿವೆ

ಪ್ರಥಮತಃ ನದಿಗೆ ತಾಗಿ ದೊಡ್ಡ ಧಕ್ಕೆ ಕಟ್ಟಿರುವರು ಕಾರ್ಖಾನೆಗೆ ಬೇಕಾಗುವ ಕಬ್ಬಿಣದ ಅದುರು (Ore), ಸುಣ್ಣ (Limestone), ಕಲ್ಲಿದ್ದಲು ಮುಂತಾದ ಎಲ್ಲಾ ಸಾಮಾನುಗಳು ಹಡಗುಗಳ ಮೂಲಕ ಇಲ್ಲಿಗೆ ಬರುವುವು, ಹಾಗೆಯೇ ಈ ಸಾಮಾನುಗಳಿಂದ ಕಬ್ಬಿಣ ಮತ್ತು ಉಕ್ಕು ಇಲ್ಲಿಯೇ ತಯಾರಿಸಿ ಸಂಪೂರ್ಣ ಕಾರು ಫೋರ್ಡ್‌ಸನ್ ಎಂಬ ಟ್ರೆಕ್ಟರ್ ತಯಾರುಮಾಡಿ ಈ ಧಕ್ಕೆಯಿಂದಲೇ ಯುರೋಪು ಮತ್ತು ಅನ್ಯ ಖಂಡಗಳಿಗೆ ಹಡಗು ಮೂಲಕ ಕಳುಹಿಸುವರು, ಸುಂಕ ಕೊಡುವ ಕಸ್ಟಮ್ಸ್ ಆಫೀಸು ಕೂಡಾ ಇದೆ ಎಂಟು ಸಾವಿರ ಟನ್ನಿನಷ್ಟು ಹಡಗುಗಳು ಇಲ್ಲಿ ಬಂದು ನಿಲ್ಲುತ್ತವೆ. ಹಾಗೆಯೇ ಬ್ರಿಟನಿನಿಂದ ನೆಲದ ಮೂಲಕ ಸಾಮಾನುಗಳು ಬರಲಿಕ್ಕೂ ಹೋಗಲಿಕ್ಕೂ ದೇಶದ ರೈಲಿಗೆ ಇಲ್ಲಿ ಕಂಪೆನಿಯವರೇ ಕಟ್ಟಿದ ರೈಲು ಪಟ್ಟಿ 23 ಮೈಲಷ್ಟು ಉದ್ದ ಇದೆ

ಹೀಗೆ ಧಕ್ಕೆ ಸಂದರ್ಶಿಸಿದ ಅನಂತರ ಕಾರ್ಖಾನೆಯ ವಿದ್ಯುಚ್ಛಕ್ತಿ ಉಂಟುಮಾಡುವ ಅಧಿಸ್ಥಾನ (Power House) ವನ್ನು ನೋಡಿದೆ ಇಲ್ಲಿ ಸಾವಿರ ಕಿಲೋವಾಟ್ಸ್ (Kilo watts) ವಿದ್ಯುಚ್ಛಕ್ತಿ ತಯಾರಾಗುವುದು. ಅಂದರೆ ಇದು ಬಹು ದೊಡ್ಡದು. ಕಾರ್ಖಾನೆಯು ಎಲ್ಲೆಲ್ಲೂ ಈ ಶಕ್ತಿಯಿಂದಲೇ ಕೆಲಸ ನಡೆದ ವಿದ್ಯುಚ್ಛಕ್ತಿ ಹೆಚ್ಚಾಗಿ ಹತ್ತಿರವಿರುವ ಬಾರ್ಕಿಂಗ್ ಎಂಬ ಪಟ್ಟಣಕ್ಕೆ ಕೂಡಾ ವಿದ್ಯುಚ್ಛಕ್ತಿಯನ್ನು ಈ ಕಂಪೆನಿಯಿಂದ ಕೊಡುತ್ತಿದ್ದಾರೆ.

ಅದರ ಒತ್ತಿಗೆ ಒಂದು ದೊಡ್ಡ ನೀರಿನ ಆವಿ (Steam) ತಯಾರಾಗುವ ಕಟ್ಟಡ. ಅಲ್ಲಿ ಯಂತ್ರಗಳ ಮೂಲಕ ಥೇಮ್ಸ್ ನದಿಯ ನೀರನ್ನು ಸೆಳೆದು ಅದನ್ನು ಆವಿಮಾಡಿ ಆ ಆವಿಯನ್ನು ಹೆಚ್ಚಿನ ವಾಯು ಭಾರದ ಒತ್ತಡದ ಮೂಲಕ (High pressure) ಸಮೀಪವಿರುವ ಕಲ್ಲಿದ್ದಲನ್ನು ಸುಟ್ಟು ಕಬ್ಬಿಣದ ಅದುರನ್ನು ಕರಗಿಸಿ ಉಕ್ಕನ್ನು ಮಾಡಲಿಕ್ಕೆ ಬೇಕಾದ "ಕೋಕ್" (Coke) ಎಂಬುದನ್ನು ತಯಾರು ಮಾಡಲಿಕ್ಕೆ ಉಪಯೋಗಿಸುವರು ಕಬ್ಬಿಣದ ಅದುರನ್ನು ಕರಗಿಸುವ ಬಗ್ಗೆ ದೊಡ್ಡ ಅಗ್ನಿಕುಂಡ (Blast Furnace) ಕೂಡಾ ಇಲ್ಲಿಯೇ ಇದೆ. ಇದರಲ್ಲಿ 24 ತಾಸಿನಲ್ಲಿ 650 ಟನ್ ಕಬ್ಬಿಣವನ್ನು ಕರಗಿಸುತ್ತಾರೆ ತಯಾರಾದ ಉಕ್ಕನ್ನು 2½ ಅಡಿ ಉದ್ದ 1½ ಅಡಿ ಅಗಲ ½ ಅಡಿ ದಪ್ಪದ ಇಟ್ಟಿಗೆಗಳನ್ನಾಗಿ ಮಾಡುವರು. ಅನಂತರ ಇಂಥಾ ಇಟ್ಟಿಗೆಗಳನ್ನು ಪುನಃ ಇನ್ನೊಂದು ಅಗ್ನಿಕುಂಡದಲ್ಲಿ ಕರಗಿಸಿ ಕುದಿಯುವ ನೀರು ಹೊಯ್ದಂತೆ ತಯಾರಾದ ಎರಕಗಳಿಗೆ (Moulds) ಹೊಯ್ಯುವರು. ಹಾಗೆ ಹೊಯ್ಯುವ ಪಾತ್ರೆಗಳು ದೊಡ್ಡ ಕವಳಿಗೆ ರೂಪದಲ್ಲಿದ್ದು, ಯಂತ್ರದಿಂದಲೇ ಅವುಗಳನ್ನು ತಿರುಗಿಸಿ ಕರಗಿದ ಕಬ್ಬಿಣವನ್ನು ಹೊಯ್ಯುವುದು ಹಾಗೆ ಹೊಯ್ಯುವ ಸ್ಥಳದಲ್ಲಿ ಒಂದು ದೊಡ್ಡ ಸರಪಳಿಯು ಉರುಟಾಗಿ ನೆಲದಿಂದ ಸುಮಾರು 3-4 ಅಡಿ ಎತ್ತರದಲ್ಲಿ ಚಕ್ರದಂತೆ ತಿರುಗುತ್ತದೆ. ಹಾಗೆ ತಿರುಗುವಾಗ ಅದರಿಂದ ನೇತಾಡುವ ಅನೇಕ ತರದ ಎರಕಗಳಿಗೆ ಕರಗಿದ ಕಬ್ಬಿಣವನ್ನು ಹೊಯ್ಯುವುದು. ಆ ಎರಕಗಳು ಮಣ್ಣು ಮತ್ತು ಲಿನ್ಸೀಡ್ ಎಣ್ಣೆ (Linseed oil) ಕೂಡಿಸಿ ಅಲ್ಲಿಯೇ ತಯಾರಾಗುವುದನ್ನು ಕಾಣಬಹುದು. ಎರಕಗಳು ಅನೇಕ ರೂಪದ್ದು ಕಾರಿನ ಅನೇಕ ತರದ ಭಾಗಗಳು. ಅಂದರೆ ಚಕ್ರ, ಇಂಜಿನ್ ವಗೈರೆ ಬೇರೆಬೇರೆ ತರದ ಸಾಮಾನುಗಳಿಗೆ ಸರಿಯಾದ ಎರಕಗಳು. ಹಾಗೆ ಕರಗಿದ ಕಬ್ಬಿಣ ಹೊಯ್ದೊಡನೆಯೇ ಸರಪಳಿ ತಿರುಗಿ ಒಂದು ಎರಕ ತುಂಬಿ ಹೊಯ್ಯುವಲ್ಲಿಗೆ ಇನ್ನೊಂದು ಎರಕ ಭರ್ತಿಯಾಗುತ್ತದೆ. ತುಂಬಿದ ಎರಕವನ್ನು ತಣಿಯುವುದಕ್ಕೆ ಬಿಡುತ್ತಾರೆ, ತಣಿದ ಮೇಲೆ ಆ ಭಾಗವನ್ನು ತೆಗೆದು ಅದಕ್ಕೆ ಬೇಕಾದ ಯಂತ್ರಕ್ಕೆ ಇಟ್ಟು ಸಫಾಯಿ ಮಾಡುತ್ತಾರೆ.

ನಂತರ ಕಾರಿನ ಯಾ ಟ್ರೇಕ್ಟರಿನ ಬೇರೆ ಬೇರೆ ವಿಭಾಗಗಳನ್ನು ಕೂಡಿಸುವರು. ಮುಂದಿನ ಚಕ್ರಗಳ ಬೇರೆಬೇರೆ ವಿಭಾಗಗಳನ್ನು ಒಂದು ಕಡೆ. ಹಿಂದಿನ ಚಕ್ರಗಳು ಅವುಗಳಿಗೆ ಸಂಧಿಸಿದ ವಿಭಾಗಗಳು ಇನ್ನೊಂದು ಕಡೆ. ಇವೆಲ್ಲಾ ಕೂಡಿಸುವ ಸಾಮಾನುಗಳು ಮುಂದುಮುಂದಕ್ಕೆ ರೈಲುಪಟ್ಟಿಯ ಮೇಲೆ ಮೆಲ್ಲನೆ ತಿರುಗುತ್ತಲೇ ಇರುವುವು. ಒಬ್ಬ ಕೆಲಸಗಾರನು ಒಂದೇ ತರದ ಕೆಲಸ ಮಾಡುವನು. ಅವನ ಕೆಲಸ ಮುಗಿದೊಡನೆಯೇ ಆ ಕೂಡಿಸಿದ್ದು ಮುಂದಕ್ಕೆ ಹೋಗಿ ಅಲ್ಲಿಂದ ಇನ್ನೊಬ್ಬನಿಂದ ಇನ್ನೊಂದು ಸಾಮಾನುಗಳು ಸಿಕ್ಕಿದ ನಂತರ ಎರಡು ಚಕ್ರಗಳ ಭಾಗಗಳನ್ನು ಒಂಟಾಗಿ ಜೋಡಿಸುವರು ಜೋಡಿಸಿದ ಸಾಮಾನುಗಳಿಗೆ ಬೇಕಾದ ರಂಗು (Paint) ಕೂಡಾ ಅಲ್ಲಿಯೇ ಹಾಕುವರು, ನಂತರ ಈ ಜೋಡಿಸಿದ್ದು ಮುಂದಕ್ಕೆ ಹೋದಾಗ ಅದರ ಮೇಲೆ ಬೇರೆ ಕಡೆಯಲ್ಲಿ (ಆ ಕಾರ್ಖಾನೆಯ ಹೊರಗೆ ಕಟ್ಟಿದ ಮೈ (body) ಯನ್ನು ಕೂತುಕೊಳ್ಳಿಸಿ ಗಟ್ಟಿ (rivet) ಮಾಡುವರು ನಂತರ ರಬ್ಬರ್ ಟಾಯರ್ ಮತ್ತು ಟ್ಯೂಬುಗಳನ್ನು ಹಾಕುವರು. ಬೇಕಾದ ಇಲೆಕ್ಟ್ರಿಕ್ ಸಂಗೆಗಳನ್ನು ಹಾಕಿ ಬಟನ್ ಇಟ್ಟು ಪೆಟ್ರೋಲ್ ಹಾಕಿ ಇಂಜನ್ ಕೆಲಸ ಮಾಡಿ ನೋಡುತ್ತಾರೆ. ಅಗ ಏನಾದರೂ ತಪ್ಪುಕಂಡರೆ "ನಿಲ್ಲಿಸಿ" ("Hold up") ಎಂತ ಕಾರ್ಡು ಹಾಕುವರು. ಸರಿಯೆಂತ ಆದರೆ "ಸರಿ" ("o k.") ಎಂತ ಕಾರ್ಡು ಹಾಕುವರು, ನಂತರ ಪಟ್ಟಿಯ ಮುಂದಕ್ಕೆ ಹೋಗಿ ಅಲ್ಲಿ ನಡೆಯುವ - ಚಕ್ರ (steering) ಸರಿ ಉಂಟೋ, ಬ್ರೇಕ್ ಸರಿಯೋ ಎಂತ ನೋಡಿ ಎಲ್ಲಾ ಸರಿ ಇದ್ದರೆ ಕಾರು ಸೀದಾ ಹೊರ ಹೋಗುವುದು, ಹೀಗೆ ದಿನ ಒಂದರಲ್ಲಿ 175 ಟ್ರೇಕ್ಟರುಗಳು, ವಿ-8 v-8 ಕೋನ್ಸಲ್ (Consul) ಝೆಫಾಯರ್ (Zephyr), ಪ್ರಿಫೆಕ್ಟ್ (Prefect) 4-5 ಬೇರೆ ಬೇರೆ ತರದ ಕಾರುಗಳು ಸುಮಾರು 400 ಅಂದರೆ ಒಟ್ಟು 600 ಕಾರು ಮತ್ತು ಟ್ರೇಕ್ಟರುಗಳು ದಿನ ನಿತ್ಯ ಇಲ್ಲಿ ತಯಾರಾಗುತ್ತವೆ.

ಕೋನ್ಸಲ್ ಮತ್ತು ಝೆಫಾಯರ್ ಈ ಎರಡೂ ಕಳೆದ ವರ್ಷದಿಂದ ಈಚೆಗೆ ತಯಾರಿಸಿದ ಹೊಸ ಮಾದರಿಯ ಕಾರುಗಳು ಅವುಗಳ ರೂಪ ಮಧ್ಯ ತರಗತಿಯವುಗಳಾಗಿ (ಅಂದರೆ ಬಹು ದೊಡ್ಡದೂ ಅಲ್ಲ. ಬಹು ಸಣ್ಣದೂ ಅಲ್ಲ) 4-5 ಜನ ಕೂತುಕೊಳ್ಳಬಹುದು, ನೋಡಲಿಕ್ಕೆ ಬಹು ಚಂದವಾದ ಕಾರುಗಳು. ಈ ನಮೂನೆ ಕಾರುಗಳಲ್ಲಿ ಇಷ್ಟು ಅಗ್ಗ ಮತ್ತು ಒಳ್ಳೆಯ ಕಾರು ಬೇರೆ ಯಾವುದೂ ಇಲ್ಲವೆಂದು ನನ್ನ ಅಭಿಪ್ರಾಯ. ಕೋನ್ಸಲ್ 14 ಅಶ್ವಶಕ್ತಿ (Horse Power) ಝೆಫಾಯರ್ 22 ಅಶ್ವ ಶಕ್ತಿ. ನಾನಲ್ಲಿದ್ದಾಗ ಕೋನ್ಸಲಿನ ಕ್ರಯ ಕಾರ್ಖಾನೆಯಲ್ಲಿ ಬರೇ 425 ಪವುಂಡು. ಅಂದರೆ ಅಂದಾಜು ರೂಪಾಯಿ 5700/- ಝೆಫಾಯರಿನ ಕ್ರಯ 487 ಪವನು. ಅಂದರೆ ಅಂದಾಜು ರೂಪಾಯಿ 6500- ಆದರೆ ನಮ್ಮ ದೇಶಕ್ಕೆ ಬರುವಾಗ ಸುಂಕ ಮತ್ತು ಸ್ಟೀಮರಿನ ಚಾರ್ಜು ಸೇರಿ ಕ್ರಯ ಇದಕ್ಕಿಂತಲೂ ಹೆಚ್ಚಾಗುತ್ತದೆ.

ಹೀಗೆ ಕಾರ್ಖಾನೆಯ ಅನೇಕ ಭಾಗಗಳನ್ನು ಸಂದರ್ಶಿಸಿ ಅಲ್ಲಿ ಕೆಲಸಗಾರರಿಗೋಸ್ಕರ ಇಟ್ಟ ಆಸ್ಪತ್ರೆ, ಎಕ್ಸ್-ರೇ (X-RAY), ಒಪರೇಶನ್ ಮಾಡುವ ಕೋಣೆ (Operation theare) ವಗೈರೆ ಸೌಕರ್ಯಗಳನ್ನು ಕೂಡಾ ನೋಡಿದೆ ನಾನು ಹೀಗೆ ಸಂಚಾರ ಮಾಡುವಾಗ ಕೆಲಸ ನಡೆಯುತ್ತಾ ಇದ್ದುದರಿಂದ ಕೆಲಸಗಾರರಿಗೆ ಕಂಪೆನಿ ಖರ್ಚಿನಿಂದಲೇ ಚಳೀ ಕಾಫಿ ಮತ್ತು ಚಾ ಕೂಡಾ ಹಂಚುತ್ತಿದ್ದರು, ಕೆಲಸಗಾರರು ಕೂಡಾ ಅತ್ತಿತ್ತ ನೋಡುವುದು, ಮಾತನಾಡಿ ಸಮಯ ಕಳೆಯುವುದು ಇರಲಿಲ್ಲ. ಬಹು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದರು

ಹೀಗೆ 3 ಗಂಟೆ ಕಾಲ ಕಾರ್ಖಾನೆಯನ್ನು ಸಂಪೂರ್ಣ ಸಂದರ್ಶಿಸಿ ಆ ಕಾರ್ಖಾನೆಯ ಕಾರಿನಲ್ಲೇ ರೈಲ್ವೇ ಸ್ಟೇಶನಿಗೆ ಬಂದು ಲಂಡನಿಗೆ ಮರಳಿ ಬಂದೆ.

ಕೆ. ಆರ್. ಕಾರಂತ.

(ವಿಚಾರವಾಣಿ)

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ರಕಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯುದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಯ ಬಿಡಬೇಕು.

ಬಾಟ್ಲಿ ಕಿಮ್ಮತ್ ೫ ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಗಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹಳದಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂಧಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ತಾರೀಕು 13-9-51 ರಿಂದ | ವಾರದ ಭವಿಷ್ಯ | ತಾರೀಕು 19-9-51 ರವರೆಗೆ

ವಾರದ ಭವಿಷ್ಯ

ಮೇಷ:-ನಿಮ್ಮ ಇಂದಿನ ಪರಿಸ್ಥಿತಿಯು ಬಹು ಮಟ್ಟಿಗೆ ಸುಧಾರಿಸಿರುವುದು. ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗದಿದ್ದರೂ ಋಣಬಾಧೆಯಿಂದ ಮುಕ್ತರಾಗುವಿರಿ. ಜನರ ಸಹಕಾರ ಬಂಧು ಮಿತ್ರರ ನೆರವು ಚೆನ್ನಾಗಿರುವುದರಿಂದ ಶತ್ರು ಜನರು ನಿಮ್ಮ ಸಮೀಪ ಬರಲೊಲ್ಲರು. ವಿದ್ಯಾರ್ಥಿಗಳಿಗೂ ಕಡುಗಜೀವಿ ಜನರಿಗೂ ಸದ್ಯದ ದಿನಗಳು ಪ್ರಶಸ್ತವಲ್ಲವಾದರೂ ಶ್ರಮಜೀವಿಗಳಿಗೂ ವ್ಯಾಪಾರೀ ಜನರಿಗೂ ನಿರೀಕ್ಷೆಗಿಂತ ಅಧಿಕಫಲ ಲಭಿಸಲಿದೆ. ಪ್ರಯಾಣಕ್ಕೀಕಾಲವು ಪ್ರಶಸ್ತವಲ್ಲವು. ತಾರೀಕು 16- 17. ಈ 2 ದಿನಗಳನ್ನು ಬಿಟ್ಟು ಉಳಿದ ದಿನಗಳು ಉತ್ತಮವಿವೆ.

ವೃಷಭ:-"ಉದ್ಯೋಗಂ ಪುರುಷಲಕ್ಷಣಂ" ಎಂಬ ಹಿರಿಯರ ವಚನವನ್ನು ಅಕ್ಷರಶಃ ಪಾಲಿಸಿರಿ. ನಿಮ್ಮ ಸಕಲ ಅಭೀಷ್ಟಗಳೂ ಯಾವೊಂದು ತೆರನಾದ ವಿಘ್ನವಿಡ್ವರಗಳಿಲ್ಲದೆ ಸುಖದಿಂದ ನೆರವೇರುವವು. ಮಾತ್ರವಲ್ಲ ಜನತೆಯಲ್ಲೂ ರಾಜಕೀಯ ಕ್ಷೇತ್ರದಲ್ಲೂ ಬಹುಮಾನಿತರಾಗುವಿರಿ. ಹಿಂದೆ ಮಾಡಿದ ಸಾಲಾದಿಗಳನ್ನೂ ಇಂದು ತೀರಿಸುವ ಯೋಗವಿದೆ. ಕೈಯಲ್ಲಿ ಸಾಕಷ್ಟು ಧನಸಂಗ್ರಹವೂ ಆಗಲಿರುವುದು. ವಾತ ಪಿತ್ತಗಳ ದೋಷದಿಂದಾಗಿ ದೇಹದಲ್ಲಿ ಸ್ವಲ್ಪ ಆಲಸ್ಯ ಕಲೆದೋರೀತು. ತಾ 14. 15 16. 17. ಈ 4 ದಿನಗಳಲ್ಲಿ ಮಹಾ ಸುಖ ಮಿತ್ರಸಮಾಗಮ ಇಷ್ಟಪ್ರಾಪ್ತಿಗಳಾಗಲಿವೆ.

ಮಿಥುನ:-ಇತ್ತೀಚೆಗೆ ನಮ್ಮ ದೈವವು ತೀರ ದುರ್ಬಲವಾಗಿರುವುದು. ಆದಕಾರಣ ನಿಮ್ಮ ಬಯಕೆಗಳೆಲ್ಲವೂ ಸಂಕಲ್ಪದಲ್ಲೇ ಉಳಿವವಲ್ಲದೆ ಕಾರ್ಯಕ್ಕೂ ಬರಲಾರವು. ಸ್ವಜನರ ವಿರಹವೂ ಆಪ್ತೇಷ್ಟರ ವಿಯೋಗವೂ ಉಂಟಾಗಲಿದೆ. ಸ್ಥಾನ ಧನಮಾನಗಳಿಗೆ ವಿಪಕ್ಷೀಯರಿಂದ ಧಕ್ಕೆತಗಲುವದು. ಗೃಹಕೃತ್ಯದಲ್ಲಿ ತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಮಾತ್ರವಲ್ಲದೆ ದೇಹದ ಆರೋಗ್ಯವು ಕೂಡ ಕೆಡುವದು ಆರ್ಥಿಕ ಬಿಕ್ಕಟ್ಟಿನಿಂದ ಹೆಚ್ಚಾಗಿ ಪೀಡಿತರಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಮಿತ್ರಜನರಿಂದ ಸಹಾಯ

ಕರ್ಕಟಕ:-ನಿಮ್ಮ ಜನ್ಮಸ್ಥ ಅಂಗಾರಕ ನೀರ್ಚನನ್ನಾಳಿದು ದಿಕ್ಕೆಲ್ಲಾ ಗ್ರಹರೂ ಸದ್ಯ ಅನುಗ್ರಹ ಸ್ಥಾನಾಸೀನರಿರುವುದರಿಂದ ಸದ್ಯ ನಿಮ್ಮ ಸಕಲ ದುಃಖಗಳೂ ನಿವೃತ್ತಿಯಾಗಿ ವಾಂಛಿತಾರ್ಥಗಳು ಅನಾಯಾಸದಿಂದ ಸಿದ್ಧಿಸಲಿವೆ. ಯಾವಭಾಗದಲ್ಲೂ ನಿಮಗೆ ಕೊರತೆಯೆಂಬುದು ಕಾಣಿಸದು. ಬಂಧು ಮಿತ್ರರು ಗೃಹಪರಿವಾರವೂ ಇವುಗಳಿಂದ ಕೂಡಿ ಸಂತಸದಿಂದ ಕಾಲಕಳೆವಿರಿ. ಪ್ರಯಾಣದಲ್ಲಿ ಅಪಘಾತಗಳು ಸಂಭವಿಸುವಯೋಗವಿರುವುದರಿಂದ ಸದ್ಯ ಕೈಬಿಡುವದೊಳ್ಳಿತು. ತಾ. 13. 18. 19. ಅತ್ಯನುಕೂಲ ದಿನಗಳು.

ಸಿಂಹ:-ಸದ್ಯದ ದಿನಗಳು ಬಹಳ ಬಿಕ್ಕಟ್ಟಿನವುಗಳಾಗಿ ಪರಿಣಮಿಸಲಿವೆ ಆದಾಯವು ಅತ್ಯಲ್ಪವಾಗಿದ್ದು ಸರ್ವತೋಮುಖದಿಂದ ಖರ್ಚುಗಳು ಬಂದು ಪೀಡಿಸುತ್ತಿರುವುದರಿಂದ ಹೆರವರ ಕೂಡೆ ಸಾಲಾದಿಗಳನ್ನು ಮಾಡದೆ ಗತ್ಯಂತರವಿರದು. ಈ ಹಿಂದೆ ನೀವೆಲ್ಲಿ ಮಾನಾದರಗಳನ್ನು ಪಡೆಯುತ್ತಿದ್ದಿರೋ ಅಂದಿಲ್ಲಿ ತಿರಸ್ಕಾರವನ್ನು ಹೊಂದುವ ಸಂಭವ ಬರಲಿದೆ. ವಾಕ್ಕಲಹವು ಅನಿವಾರ್ಯವೆನಿಸುವದು. ಅನಿರೀಕ್ಷಿತ ಪ್ರವಾಸದಿಂದಾಗಿ ಆರೋಗ್ಯವು ಪಿತ್ತಪ್ರಕೋಪದಿಂದ ಕೆಡಲಿದೆ ಆದರೂ ವಾರಾದಿಯ 3 ದಿನಗಳಲ್ಲಿ ಕೇವಲ ನಿಮ್ಮ ಮಟ್ಟಿಗೆ ಸುಖಭೋಗಗಳು ಲಭಿಸುವವು.

ಕನ್ಯಾ:-ನೀವಾವ ಕಾರ್ಯವನ್ನು ಕೈಗೊಂಡರೂ ಅದರಲ್ಲಿ ಯಶಸ್ವಿಗಳಾಗುವಿರಿ. ಸಮಾಜದವು ಮಾನಮನ್ನಣೆಗಳೂ ಲಭಿಸುವವು. ಮಾತ್ರವಲ್ಲ ರಾಜಕೀಯ ರಂಗದಲ್ಲೂ ನಿಮ್ಮ ಪಂಥಕ್ಕೇನೇ ವಿಜಯವು ಲಭಿಸಲಿದೆ. ದೈನಂದಿನದ ಖರ್ಚಿಗೆ ಸಾಕಾಗುವಷ್ಟು ಧನವನ್ನು ನೀವು ಸ್ವತಃ ದುಡಿಯುವುದರಿಂದ ದಿನಯೋಚನೆಯು ಕಷ್ಟವಾಗಲಾರದು. ಆಗಾಗ ಅಜೀರ್ಣ ಸಂಬಂಧವಾದ ರೋಗಗಳೂ ಆಪ್ತಜನರ ವಿಯೋಗವೂ ಉಂಟಾದೀತು. ತಾರೀಕು 14. 15. 16. 17. ಈ ದಿನಗಳಲ್ಲಿ ನಿಮ್ಮ ಬಯಕೆಗಳು ಅನಾಯಾಸದಿಂದ ನೆರವೇರುವವು.

ತುಲಾ:-ಪರಿಸ್ಥಿತಿಯು ದಿನೇ ದಿನೇ ಕೆಡುತ್ತಲಿದೆ, ವಿಪಕ್ಷೀಯರ ಕಾಟದಿಂದಾಗಿ ಹೆಚ್ಚಿನ ಕಾರ್ಯಗಳು ವಿಫಲಗಳಾಗುವವು. ಪ್ರಬಲವಾದ ಮನೋರೋಗವು ದೇಹದಲ್ಲಿ ನಿಶ್ಶಕ್ತಿ ಕ್ಷೀಣತೆಯನ್ನು ಹೆಚ್ಚಿಸಲಿದೆ, ಮೇಲಿಂದ ಮೇಲೆ ಶೋಕ ಅನರ್ಥಗಳು ಬರಲಿರುವವು. ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವದು. ಗುರುಹಿರಿಯರ ಆಗ್ರಹಕ್ಕೆ ಗುರಿಯಾದೀರಿ. ಆದರೂ ಮಿತ್ರವೃಂದದವರ ಬೆಂಬಲವು ಉತ್ತಮವಿರುವುದರಿಂದ ದಿನಯೋಚನೆಯು ಕಷ್ಟಸಾಧ್ಯವಾಗಲಾರದು. ವಾರಾಂತ್ಯದ 4 ದಿನಗಳಲ್ಲಿ ಧನಲಾಭ ಮನಶ್ಶಾಂತಿಗಳು ಲಭಿಸಲಿವೆ.

ವೃಶ್ಚಿಕ:-ಯಾರಹಂಗ, ದಾಕ್ಷಿಣ್ಯಗಳಿಗೆ ಸಿಲುಕದೆ ನಿಮ್ಮ ಕಾರ್ಯವನ್ನು ನೀವೇ ಸಾಧಿಸಲು ಸ್ವಯಂಶಕ್ತರಿರುವಿರಿ. ಎಲ್ಲರೂ ನಿಮ್ಮನ್ನು ಗೌರವ ಬುದ್ಧಿಯಿಂದ ಕಾಣುವರು. ಯಾವೊಂದೂ ತೊಡಕುಗಳಾಗಲೀ ತಾಪತ್ರಯಗಳಾಗಲೀ ಕಾಣಿಸಲೊಲ್ಲದು. ಸಂಸಾರದಲ್ಲಿ ಪಶುಭೃತ್ಯಾದಿ ಸಕಲ ಜನವೃಂದವೂ ಆನಾಮಯವಾಗಿರುವುದರಿಂದ ನಿಮ್ಮ ದೇಹ ಮನಸ್ಸುಗಳಿಗೆ ಸದಾ ಸುಖಶಾಂತಿ ಲಭಿಸುವದು, ಆದರೆ ವಾಕ್ಕಲಹವೊಂದು ಅನಿವಾರ್ಯವಿದೆ. ತಾ. 13. 18. 19 ಅನುಕೂಲ,

ಧನು:-ನಿಮ್ಮ ಮನಸ್ಸೆಂಬ ಕುದುರೆಗೆ ಬುದ್ಧಿಯೆಂಬ ಕಡಿವಾಣವನ್ನು ಬಲವಾಗಿ ಬಿಗಿಹಿಡಿಯಿರಿ. ಅದು ಸದಾ ಅಡ್ಡದಾರಿ ಹಿಡಿದು ನಿಮ್ಮನ್ನು ಜನಾಪವಾದ ಕಷ್ಟ ನಷ್ಟಗಳಿಗೆ ಗುರಿಮಾಡಲಿರುವುದು. ಬಂಧು ಜನರಿಂದ ಸದಾ ಚಿಂತೆ ತಪ್ಪಿದ್ದಲ್ಲವು. ಶತ್ರುಜನರ ಪೀಡೆಯು ಅಸಹನೀಯವಿರುವದು ನಿಮ್ಮ ಆರ್ಥಿಕ ಪರಿಸ್ಥಿತಿಯು ಮುಂಚೆಗಿಂತ ಉತ್ತಮವಾದರೂ ಖರ್ಚನ್ನು ಪೂರೈಸುವಷ್ಟು ಶಕ್ತವಾಗಿಲ್ಲವು. ತಾ. 14, 15 ಈ 2 ದಿನಗಳಲ್ಲಿ ನಿಮ್ಮ ಬಯಕೆಯು ಸಫಲವಾಗಲಿದೆ.

ಮಕರ—ಕಾಲವು ಪ್ರತಿಕೂಲಾವಸ್ಥೆಗೆ ಬಂದಿರುವುದು. ನಾನಾ ರೀತಿಯ ಕಷ್ಟನಷ್ಟಗಳು ನಿಮ್ಮನ್ನಾವರಿಸಲಿವೆ ಆಹಾರದೋಷದಿಂದಾಗಿ ದೇಹಾಲಸ್ಯವೂ ನೇತ್ರಪೀಡೆಯೂ ಕಾಣಿಸುವುದು. ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲಿ ಕೈಬಿಡುವ ಪ್ರಸಂಗ ಬರಲಿದೆ. ಪ್ರವಾಸದಲ್ಲಿ ಬಹಳ ಕಷ್ಟಾನಿಷ್ಟಗಳು ಸಂಭವಿಸುವವು. ಗೃಹದಲ್ಲಿ ನಿಕ್ಕಕಲಹ ನಾನಾ ತರದ ತಾಪತ್ರಯಗಳು ಉಂಟಾಗಲಿರುವವು. ಲೇವಾದೇವಿ ನಿಮಿತ್ತ ಕಲಹವಾಗಿ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಬಹುದು ತಾ. 13, 16, 17 ಇವೆಷ್ಟಂದು ಅನಿಷ್ಟಕಾರಿಯಾಗಿಲ್ಲವು.

ಕುಂಭ—ಧನಮಿತ್ರಮದತಿಗಳ ಬೆಂಬಲವು ಉತ್ತಮವಿರುವುದರಿಂದಾಗಿ ನಿಮಗೀ ವಾರದಲ್ಲಿ ಹಣದ ಅಭಾವವುಂಟಾಗದು ನೆರವಿನ ಆಶ್ರಯವಿಲ್ಲದೆ ಸ್ವಯಂ ಹಲವಾರು ಕಾರ್ಯಗಳನ್ನು ಸಾಧಿಸುವಿರಿ. ಬಂಧ ಮಿತ್ರರು ಹೆಚ್ಚಾಗಿ ನಿಮಗನುಕೂಲರಾಗಿಲ್ಲವಾದರೂ ಪ್ರತಿಕೂಲರಾಗುವದಿಲ್ಲವು. ಶತ್ರು ಜನರು ನಿಮ್ಮೆದಿರು ಬರಲಾರರು ವ್ಯಾಪಾರೀ ವರ್ಗದವರಿಗೆ ಆಕಸ್ಮಿಕ ನಷ್ಟ ಸಂಭವಿಸುವದು. ಸ್ತ್ರೀಜನರಿಂದ ಕಷ್ಟಾನಿಷ್ಟ ಅವಮಾನಗಳು ಸಂಭವಿಸುವ ಯೋಗವಿದೆ, ತಾ, 14, 15, 18, 19 ಅನುಕೂಲ.

ಮೀನ—ಗ್ರಹರೆಲ್ಲರೂ ಪ್ರತಿಕೂಲ ಸ್ಥಾನಗತರಿರುವರು. ದೈವಬಲವಿಲ್ಲದ ನೀವು ಕೇವಲ ಆತ್ಮಶಕ್ತಿಯಿಂದ ಯಾವ ಕಾರ್ಯವನ್ನು ಸಾಧಿಸಲು ಶಕ್ತರಾಗಲಾರಿರಿ. ವಿನಾಕಾರಣ ಜನರೊಡನೆ ಜಗಳವಾಗುವದು. ನಿಮ್ಮ ಧೈರ್ಯಸ್ಥೈರ್ಯಗಳು ಮಾಯವಾಗುವವು. ಜನರ ಅನಾದರಕ್ಕೆ ಗುರಿಯಾಗುವಿರಿ ಸಂಸಾರದಲ್ಲಿ ಅನಾರೋಗ್ಯವು ಸದಾ ನೆಲಸಿರುವುದು. ಆದರೂ ನೌಕರಿಜೀವಿಗಳಿಗೆ ಪ್ರಯತ್ನಕ್ಕೆ ತಕ್ಕ ಫಲಪ್ರಾಪ್ತಿಯಾದೀತು. ತಾ. 13, 16, 17 ರಲ್ಲಿ ಸುಖಭೋಗಗಳು ಲಭಿಸುವವು.

ಸಹ್ಯಾದ್ರಿ ಇನ್ಶ್ಯೂರೆನ್ಸ್ ಕಂಪೆನಿ ನಾಸಿಕ – ಈ ವಿಮಾಸಂಸ್ಥೆಯ ಪಾಲುದಾರರ ಮಹಾಸಭೆಯು ಕಳೆದ ತಾ 4 ರಲ್ಲಿ ಚೆಯರ್‌ಮೆನ್ ಡಾ। ಟಿ. ಎಚ್. ದೇಶಮುಖ್, ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ 1950 ನೇ ದಶಂಬರಕ್ಕೆ ಅಂತ್ಯವಾದ ವರುಷದ ಲೆಖ್ಖಪತ್ರಗಳು, ಮತ್ತು ಡ್ಯರೆಕ್ಟರರ ವರದಿ ಸ್ವೀಕರಿಸಲ್ಪಟ್ಟಿತು

ಅಧ್ಯಕ್ಷರು ತಿದ್ದುಪಡಿಗೊಳಗಾದ ಇನ್ಶ್ಯೂರೆನ್ಸ್ ಆಕ್ಟಿನ ಕುರಿತು ಮಾತನಾಡುತ್ತಾ ಸ್ಪೆಶಲ್ ಏಜಂಟರು ವರ್ಷಾವಧಿ ರೂ 50,000 ದ ಬಿಸಿನೆಸ್ ಮಾಡಲೇ ಬೇಕೆಂದಾದ ಕಾನೂನಿನ ಘಟನೆಯನ್ನು ಸೂಚಿಸಿದರು, ಅಲ್ಲದೆ ರನ್ನವು ಟೇಕ್ಸ್ ಮೆನೇಜರರ ಗೌರವ ಪ್ರೀತಿಫಲ ಇತ್ಯಾದಿ ವಿಷಯಗಳ ಕುರಿತು ಸಹಸ್ತಾಪಿಸಿದರು. ಇನ್ಶ್ಯೂರೆನ್ಸ್ ಪೇಟೆ ಪಟ್ಟಣಗಳಲ್ಲಿ ಪ್ರಚಾರವಾಗಿಲ್ಲ ಸಹ್ಯಾದ್ರಿ ಕಂಪನಿಯು ಈ ಭಾಗದಲ್ಲಿ ವಿಶೇಷಶ್ರಮ ವಹಿಸುತ್ತಿರುವುದರಿಂದ ಜನತೆಯು ಸಾಕಷ್ಟು ಪ್ರೋತ್ಸಾಹವನ್ನೀಯಬೇಕಾಗಿ ಸಹವಿನಂತಿಸಿದರು. ಇನ್ಶ್ಯೂರೆನ್ಸ್ ಆಕ್ಟಿಗನುಸಾರವಾಗಿ ಪಾಲು ಭಂಡವಳದ ಪುನರ್ವ್ಯವಸ್ಥೆ ಯೋಜನೆಯ ಅಂಗೀಕಾರ, ಡ್ಯರೆಕ್ಟರರ ಚುನಾವಣೆ, ಆಡಿಟರ ನೇಮಕಗಳಾಗಿ ಉಪಾಹಾರವಾದ ನಂತರ ಸಭೆಯು ಮುಗಿಯಿತು.

THE PANGAL NAYAK BANK LIMITED.

Head Office] (Incorporated in 1920.) [Udipi; S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಪಟ್ಟಣ ವಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ್ಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆಸರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. 2 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಷ್ಟ ಚಾರ್ಜು 12 ಆಣೆ.

ಮಾಲಿಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ...
ಚನಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ರಾಣಾಪುರ ನಂಜುಡೇಶ್ವರ ಮೆಡಿಕಲ್ ದಾವಣಗೇರಿ
ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ...

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

31ನೆ ವರ್ಷಾರಂಭ

20-9-1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-1-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩

NAVAYUGA WEEKLY Post Box No. 22 UDIPI.

Vol. 31
No. 3

ಹೊಣೆಹೊತ್ತವನಿಗೆ ನಿಂದೆಟೀಕೆಗಳು ಬರುವದು ಸ್ವಾಭಾವಿಕ. ವ್ಯಕ್ತಿಯ ಮೇಲೆ ಆಗುವ ಟೀಕೆಯನ್ನು ಪರಿಶೋಧಿಸಿ ಆತನ ಕುರಿತು ನಾವು ಅಭಿಪ್ರಾಯವನ್ನು ವ್ಯಕ್ತಪಡಿಸುವದು ಸರಿಯಲ್ಲ. ಕಾಲಸಂಸ್ಥಿತಿಗಳು ಇಂತಹ ಅಪವಾದಗಳಿಗೆ ಗಾಳಿ ಹಾಕಬಹುದು. ಎಲ್ಲರೂ ಅದನ್ನು ಹೌದೇನೋ ಎಂದು ಭಾವಿಸಬಹುದು. ನಿಂದೆಗೊಳಗಾದವನು ಮೌನವನ್ನು ಧರಿಸಿದರೆ ಆತ ದೋಷವನ್ನೊಪ್ಪಿಕೊಂಡಂತೆ ಎಂದು ಭಾವಿಸುತ್ತೇವೆ. ಇದಕ್ಕೆಲ್ಲ ತತ್ಕಾಲಿಕವಾಗಿ ನಮ್ಮ ಮನಸ್ಸಿನ ಮೇಲಾಗುವ ವಿಕಾರ ಪರವಶವಾದ ಭಾವನೆಗಳೇ ಮೂಲ ಕಾರಣ. ವಸ್ತುಸ್ಥಿತಿಯಾದರೂ ಹಾಗಿಲ್ಲ. ಬರಬಹುದಾದ ಟೀಕೆ ಟಿಪ್ಪಣಿಗಳನ್ನು ಸಾವಧಾನವಾಗಿ ತೆಗೆದುಕೊಂಡು ವಿಚಾರ ಮಾಡುವದು ಬುದ್ಧಿವಂತರ ಲಕ್ಷಣ! 'ಲೋಕೋಭಿನ್ನರುಚಿಃ' ಎಂಬಂತೆ ಜನರನ್ನು ಅಭಿರುಚಿ- ತಿಳುವಳಿಕೆ- ಸಂಸ್ಕೃತಿಯ ಮಾನದಂಡದಿಂದ ಬೇರೆಯವರನ್ನು ಅಳೆಯಲಿಕ್ಕಿಸುತ್ತಾರೆ. ಮುಂದಾಳು- ಇಲ್ಲವೆ ಹೊಣೆಗಾರನಿಗೆ ಅವರೆಲ್ಲರ ಅಭಿಪ್ರಾಯದಂತೆ ನಡೆಯುವದು ಶಕ್ಯವಿಲ್ಲ! 'ಎಲ್ಲರನ್ನು ಮೆಚ್ಚಿಸುವದು ಹುಚ್ಚುತನ'ವೆನ್ನುವದು ಸರಿಯಾದ ಮಾತೇ! ಟೀಕೆಗಳನ್ನು ಎದುರಿಸುವ ಸಾಮರ್ಥ್ಯ ಇರಬೇಕೆಂದು ಮಾತುಗಾರಿಕೆ-ಪ್ರತ್ಯುತ್ತರ-ಪ್ರತಿಭಟನೆಗಳಿಂದಲ್ಲ; ಅದು ಬೌದ್ಧಿಕವಾದ ಮಾರ್ಗವೂ ಅಲ್ಲ. ತನ್ನ ಧ್ಯೇಯ ಸಾಧನೆಗಾಗಿ ಆತ ಒಂದು ಮಾರ್ಗವನ್ನು ಅನುಸರಿಸುತ್ತಾನೆ. ಆ ಮಾರ್ಗಕ್ಕೆ ವಿರೋಧಗಳು ಬಂದಲ್ಲಿ ಅದರಲ್ಲಿ ಯಥಾರ್ಥವೇನಾದರೂ ಇದೆಯೋ? ಎಂದು ಲಕ್ಷಿಸುವದಷ್ಟೇ ಅವನ ಕಾರ್ಯ. ಧ್ಯೇಯದ ಕಡೆಗೆ ವಿಶಾಲ ದೃಷ್ಟಿಯನ್ನಿಟ್ಟುಕೊಳ್ಳುವದೂ, ಅದರಂತೆ ಕರ್ತವ್ಯನಿಷ್ಠನಾಗಿ ನಡೆಯುವುದೂ- ಹೀನಾಯವಾದ ಮಾತುಗಳಿಗೆ ಎದೆಗುಂದದೆ ಇರುವದೂ - ಪ್ರತಿಭಾಶಾಲಿಯ ಶ್ರೇಷ್ಠಗುಣ! ಈ ಬಗೆಯ ಸಹನಶೀಲ ಮನೋವೃತ್ತಿಯುಳ್ಳವನು ಮಾತ್ರ ಧುರೀಣನಾಗಲರ್ಹತೆಯುಳ್ಳವನು. ಅಪವಾದಗಳನ್ನು ನುಂಗಿಕೊಳ್ಳುವದು ಆತನ ಪರಾಜಯವಲ್ಲ; ಅದು ಆತನಲ್ಲಿರುವ ವಿಶಾಲ ಮನೋವೃತ್ತಿ-ವಿವೇಕಪರ ವಿಚಾರಗಳ ಹೆಗ್ಗುರುತೇ ಆಗಿದೆ. ಬಿರುಗಾಳಿಯಂತೆ ತತ್ಕಾಲಿಕವಾಗಿ ಉದ್ಭವಿಸುವ ವಿರೋಧ ಪ್ರದರ್ಶನಗಳಿಂದ ಜನತೆ ಮೋಸಹೋಗುತ್ತದೆಯೇ ಹೊರತು ವಿಚಾರದಿಂದಲ್ಲ! ಕೊನೆಗಾದರೂ ಇಂತಹ ವ್ಯಕ್ತಿತ್ವದ ಆವಶ್ಯಕತೆಯನ್ನು ನಾವು ಕಂಡುಕೊಳ್ಳುತ್ತೇವೆ.

ಟೀಕೆ ಮತ್ತು ಆದರ್ಶ

ನೆಹರು ಟಂಡನ್ನರೊಳಗೆ ಉಂಟಾದ ಮತಭೇದಗಳಿಂದ ಹಲವುಬಗೆಯ ಟೀಕೆ ಟಿಪ್ಪಣಿಗಳೂ ಬಿರುಸು ಬಾಣಗಳೂ ಹೊರಟವು. ಈ ಬಗೆಯ ತಪ್ಪುತಿಳುವಳಿಕೆಗಳು ಒಂದೇಪಕ್ಷದ ಎರಡು ಬಂಗಡಗಳಿಂದ ಆಗಿದೆ. ನೆಹರು ಟಂಡನ್ನರಿಬ್ಬರೂ ಕಾಂಗ್ರೆಸ್ಸಿಗರೇ. ಟಂಡನ್ ಜನಪ್ರೀತ ವ್ಯಕ್ತಿಯಲ್ಲವಾದರೂ ಧ್ಯೇಯವಾದಿಯೆಂಬುದಕ್ಕೆ ಸಂದೇಹವಿಲ್ಲ. ಸ್ಥಾನಾಪೇಕ್ಷೆಯಿಂದ ಸ್ವಾರ್ಥಸಾಧಿಸುವ ಮನೋವೃತ್ತಿಯವರಲ್ಲ! ಅಧ್ಯಕ್ಷನಾಗಿ ತಾನೇ ಇರಬೇಕಾಗಿದ್ದರೆ ಕಾಂಗ್ರೆಸ್ ಕಾರ್ಯಸಮಿತಿಯ ಪುನರ್ಘಟನೆಯನ್ನು ಅವರು ಒಪ್ಪಬಹುದಾಗಿತ್ತು. ಆದರೆ ಅವರ ಉದ್ದೇಶ ಸ್ಥಾನಾಕಾಂಕ್ಷೆ-ಇಲ್ಲವೆ ಸ್ಥಾನಾಕ್ರಮಣವಾಗಿರಲಿಲ್ಲ. "ನಾನು ಒಂದು ತತ್ವದಂತೆ ನಡೆದುಕೊಳ್ಳುತ್ತೇನೆ. ಅದಕ್ಕೆ ಪ್ರತಿಯಾದ ಸೂಚನೆಗೆ ನಾನು ಶರಣಾಗತನಾಗಿರಲಾರೆ" ಎಂದು ಅವರು ಹೇಳಿದ್ದರಲ್ಲಿ ಮೇಲಿನ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಜನ ಅವರ ಮಾರ್ಗವನ್ನನುಸರಿಸುತ್ತಿಲ್ಲವೆಂಬುದೂ ವಿದಿತವಿಚಾರವೇ. ನೆಹರೂರವರ ಮಹಾನ್ ವ್ಯಕ್ತಿತ್ವದ ಮೇಲೆ ಜನಕ್ಕಿರುವ ಗೌರವಾದರಗಳನ್ನು ಮೀರಿ ತಾನು ವರ್ತಿಸಲಾರೆನೆಂಬುದೂ—ರಾಷ್ಟ್ರವನ್ನಾಳುವ ಸಾಮರ್ಥ್ಯ ಅವರ ಕೈಯಲ್ಲಿರುವದರಿಂದ ಅವರಿಗೆ ಆ ಸ್ಥಾನವನ್ನು ಬಿಟ್ಟುಕೊಡುವದರಿಂದ ದೇಶಕ್ಕೆ ಕೇಡಾಗದೆಂಬುವದನ್ನೂ ಟಂಡನ್ನರು ಅರಿತಿದ್ದಾರೆ. ಅಂತಲೇ ತಾನು ರಾಜಿನಾಮೆಯನ್ನು ಸಲ್ಲಿಸಿ ಹೊರಗೆ ಬಂದರು!

ಕಾಂಗ್ರೆಸ್ಸಿನಲ್ಲಿ ನೆಹರೂರಂತಹ ಉಜ್ವಲ ರಾಷ್ಟ್ರಾಭಿಮಾನಿಗಳೂ—ಆದರ್ಶಪ್ರಿಯ ವ್ಯಕ್ತಿಗಳು ಬೇಕಿಲ್ಲವೆಂದರೆ ಒಪ್ಪಬಹುದೇನೋ! ಕಾಂಗ್ರೆಸ್ಸನ್ನು ತ್ಯಜಿಸಿ ಹೊರಬರುವವರ ಕುರಿತು "ಸ್ವಾರ್ಥಪರರು" "ಸ್ಥಾನಾಪೇಕ್ಷಿಗಳು" ಎಂದು ನಾವು ಟೀಕಿಸಿದ್ದುಂಟು. ಆದರೆ ನೆಹರೂರವರ ಮಟ್ಟಿಗೆ ಆ ಅಪವಾದ ಹೊರಿಸುವಂತಿಲ್ಲ. ಕಾರ್ಯಸಮಿತಿಗೂ ಚುನಾವಣೆ ಬೋರ್ಡಿಗೂ ರಾಜಿನಾಮೆಯನ್ನೀಯಬೇಕಾದರೆ ಕಾಂಗ್ರೆಸ್ಸಿನ ಮೂಲತತ್ವಕ್ಕೆ ವಿರೋಧವಾದ ಘಟನೆಗಳು ಅಲ್ಲಿ ನಡೆದಿವೆಯೆಂಬುದು ನಿರ್ವಿವಾದ. ಕಾಂಗ್ರೆಸ್ಸಿನ ಹಿರಿಯ ತತ್ವವನ್ನು ಹಿಡಿದುಕೊಂಡು ಬಂದಿದ್ದು ಅದಕ್ಕೆ ಧಕ್ಕೆ ಬರುವ ಸಂದರ್ಭದಲ್ಲಿ—ಮತ್ತು ಅಂತಹವನ್ನು ವೇಳೆಗಳಲ್ಲಿ ಧ್ಯೇಯವಾದಿಯಾದ ತಾನೂ ಅನಿವಾರ್ಯವಾಗಿ ಭಾಗವಹಿಸಬೇಕಾಗಿದ್ದುದರಿಂದ ಅದನ್ನು ತ್ಯಜಿಸಿಬಿಟ್ಟರು. ನೆಹರೂರವರನ್ನು ಹೊರತು ಕಾಂಗ್ರೆಸು ಬದುಕಲಾರದೆಂಬುದು ವಿದಿತವಿಚಾರವೇ. ಅಂತಲೇ ಕಾಂಗ್ರೆಸ್ ಹಾಗೂ ದೇಶದ ಹಿತದೃಷ್ಟಿಯಿಂದ ಅವರು ತಿರುಗಿ ಅಧ್ಯಕ್ಷಪದವನ್ನು ಸ್ವೀಕರಿಸಬೇಕಾಯಿತು. ಇದನ್ನು ನಿರಂಕುಶ ಪ್ರಭುತ್ವ—ಸರ್ವಾಧಿಕಾರ—ಟಂಡನ್ ರಾಜಕೀಯ ಕೊಲೆ—ಎಂದು ಹೇಳಲಾಗಿದೆ. ಟಂಡನ್ ಬಣದವರು ಹೆಚ್ಚಾಗಿ ಇಂತಹ ಆರೋಪವನ್ನು ಕೈಗೊಂಡಿದ್ದಾರೆ. ಡಿ. ಪಿ. ಮಿಶ್ರರ ಹೇಳಿಕೆಯಂತೂ ಉದ್ಧಟತನದ ಪರಮಾವಧಿಯಾಗಿದೆ. ಸಹಜವಾಗಿಯಾದರೂ ನೆಹರೂ ಸ್ಥಾನಮಾನಕ್ಕೆ ಹೋರಾಡಿದುದಲ್ಲ. ಧ್ಯೇಯಸಾಧನೆಗಾಗಿ—ಅದರ ರಕ್ಷಣೆಗಾಗಿಯೇ ಅವರು ಹೋರಾಡಿದ್ದು. ನಾಲ್ಕಾರು ವರ್ಷಗಳಿಂದ ಬಂದ ಒಂದು ತತ್ವವನ್ನು ಉಳಿಸಿಕೊಳ್ಳುವದು ನಿರಂಕುಶಪ್ರಭುತ್ವದ ಲಕ್ಷಣವಲ್ಲ—ಉಜ್ವಲ ರಾಷ್ಟ್ರಾಭಿಮಾನದ ದ್ಯೋತಕವಾಗಿದೆ. ಟಂಡನ್ ಹಾಗೂ ನೆಹರು ಇಬ್ಬರನ್ನೂ ಶ್ಲಾಘಿಸುವವರುಂಟು! ಆದರೆ ಆ ಶ್ಲಾಘನೆ—ಮೇಲಾಟಕ್ಕೆ ಹೆಚ್ಚಾಗಿ ಅವರವರ ತತ್ವಗಳನ್ನನುಸರಿಸಿದ ಮಾಗತದವರದ್ದಾಗಿದೆ. ಕಾಂಗ್ರೆಸ್ಸಿಗೆ ಒಗ್ಗದ ಒಂದು ತತ್ವವನ್ನು ಬಲಾತ್ಕಾರವಾಗಿ ಕಾಂಗ್ರೆಸ್ಸಿನ ಮೂಲಕ ಆಚರಣೆಗೆ ತಂದು ದೇಶಕ್ಕೆ ಇಷ್ಟವಲ್ಲದ ಅನಿಷ್ಟ ಪ್ರಕರಣವನ್ನು ತಂದೊಡ್ಡುವ ಟಂಡನ್ ಮಿತ್ರರ ಟೀಕೆಗಳಿಗೆ ನೆಹರೂರಂತಹ ಧ್ಯೇಯವಾದಿ ಕಿವಿಗೊಡಬೇಕಾಗಿಯೂ ಇಲ್ಲ. ಆ ವಾದ ಅವರ ಹಾಗೂ ಅವರ ಬಂಗಡಗಳ ಮಟ್ಟಿಗೆ; ದೇಶದ ಮಟ್ಟಿಗೆ ಅದು ಅಪಾಯಕಾರಿಯೇ!

IN THE SERVICE OF THE COUNTRY
1925 1950

Bank your Savings with
THE CANARA INDUSTRIAL & BANKING SYNDICATE LTD.

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ-
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ರಾಜಕೀಯ ಪಕ್ಷಗಳಲ್ಲಿ ಮೂರು ತರಗತಿಯ ಜನರಿರುವರೆಂತ ಬ್ರೈಸ್ ಎಂಬವರು ಮತ್ತು ಪೆಂಡೆಲ್‌ಟನ್ ಹೆರಿಂಗ್ ಎಂಬವರು ಕೂಡಾ ಹೇಳಿರುವರು. ಇವರಿಬ್ಬರ ಅನುಭವವನ್ನು ನೋಡಿದಲ್ಲಿ ಪಕ್ಷಗಳ ಸಂಘಟನೆಯ ಕುರಿತು ಮನದಟ್ಟಾಗುವದು. ಬ್ರೈಸ್ ಎಂಬವರು ಹೇಳಿದುದೇನೆಂದರೆ ಪ್ರತಿಯೊಂದು ಪಕ್ಷದಲ್ಲಿಯೂ ಮೂರು ತರಗತಿಯ ಜನರಿರುವರು. ಮುಖ್ಯ ರಾಜಕಾರಣಿಗಳು ಇವರು ತಮ್ಮ ನಶೀಬವನ್ನು ಪಕ್ಷಗಳಲ್ಲೇ ಲೀನವಮಾಡಿದ ಕಾರಣ ಅದರಿಂದ ಸ್ಥಾನಮಾನಗಳನ್ನು ಅಪೇಕ್ಷಿಸುವರು. ಇನ್ನೊಂದು ತರಗತಿಯವರು ಮಂದಗಾಮಿಗಳು. ಪಕ್ಷಗಳ ತತ್ವ ಧೋರಣೆ ಮತ್ತು ಗುರಿಗಳಲ್ಲಿ ವಿಶ್ವಾಸವಿಟ್ಟು ಮತಕೊಡುವವರು. ಮೂರನೇಯವರು ಬರೇ ಉತ್ಸಾಹಿಗಳು ಮತಾದಾರರೆಂದು ಹೇಳಿದರೂ ಹೇಳಬಹುದು. ಇವರು ಪಕ್ಷಗಳ ಜಯಾಪಜಯದ ಕಡೆಗೆ ಹೆಚ್ಚು ಗಮನ ಕೊಡುವವರಲ್ಲ—ಪಕ್ಷಗಳ ತತ್ವ ಮತ್ತು ಗುರಿಯ ಕಡೆಗೆ ಹೆಚ್ಚಾಗಿ ನೋಡುವವರು ಇವರು ಕೆಲವು ಸಮಯ ಕಠಿಣ ಧೋರಣೆ ವಹಿಸಿದರೆ ಮಂದಗಾಮಿಗಳು ಹಿಂದೆ ಜಾರುವರು. ಪೇಂಡೆಲ್‌ಟನ್ ಹೆರಿಂಗರೆಂಬವರು ಹೀಗೆಂದಿರುವರು. ಪಕ್ಷದ ಸಂಘಟನೆಯು ಮೂರು ವೃತಗಳಿಂದ ಆವರಿಸಲ್ಪಟ್ಟಿರುವದು. ಒಂದನೇಯದು ಪ್ರಮುಖರನ್ನು ಕೂಡಿ ಪಕ್ಷದ ಘಟನೆಯಲ್ಲಿ ಅಧಿಕಾರದಲ್ಲಿರುವದು. ಇದಕ್ಕೆ ಹೈಕಮಾಂಡ್ ಎನ್ನುವರು ಇವರನ್ನು ಹೊಂದಿ ಕೆಲಸಗಾರರಿರುವರು. ಇವರ ಜೀವನವನ್ನು ಪಕ್ಷದ ನೌಕರಿಯಲ್ಲಾಗಲೀ ಸಾರ್ವಜನಿಕ ನೌಕರಿಯಲ್ಲಾಗಲೀ ಕಳೆಯಬೇಕೆಂಬ ಆತುರತೆಯಿಂದಿರುವರು. ಇವರ ವೃತ್ತಿಯೇ ರಾಜಕೀಯವಾಗಿದೆ. ಇವರು ಪಕ್ಷಗಳ ಯಂತ್ರದಂತಿರುವರು (machine) ಈ ವಳಗಿನ ವೃತ್ತವನ್ನು ಆವರಿಸಿರುವ ಎರಡನೇಯದರಲ್ಲಿ ಹೆಚ್ಚು ಜನರಿರುವ ಗುಂಪು ಇರುವದು. ಇವರು ಸಾಂಪ್ರದಾಯಿಕವಾಗಿ ಮತ್ತು ರಾಗಭಾವದ ಭಕ್ತಿಯಿಂದ ಸೇರಿಕೊಂಡಿರುವರು. ಇವರು ಹೆಚ್ಚಾಗಿ ಪಕ್ಷಗಳ ತತ್ವ ಮತ್ತು ನಿಷ್ಠೆಯನ್ನು ನೋಡುವರೇ ಹೊರತು ಪಕ್ಷಗಳ ಕಾರ್ಯಕಲಾಪಗಳನ್ನು ನೋಡುವವರಲ್ಲಿ ಇವರು ಪಕ್ಷಗಳ ಧೋರಣೆ ವಗ್ಯೆರೆ ನೋಡಿ ಮತಕೊಡುವರು. ಇದಕ್ಕೂ ಹೊರಗೆ ಇನ್ನೊಂದು ವೃತ್ತವಿರುವುದು. ಇದರಲ್ಲಿ ಇನ್ನೂ ಹೆಚ್ಚು ಜನರಿರುವರು. ಇವರು ಕ್ರಮಬದ್ಧವಾಗಿ ಯಾವ ಪಕ್ಷಕ್ಕೂ ಸೇರಿರುವದಿಲ್ಲ. ಮಳೆಬಂದಂತೆ ಕೊಡೆ ಹಿಡಿಯುವವರೆಂದರೂ ಹೇಳಬಹುದು. ಸಮುದ್ರದಲ್ಲಿ ತೆರೆಯ ಚಲನವಲನ ನೋಡಿ ನಾವಿಕರು ನಾವೆಯ ಚಲನವನ್ನು ಹೇಗೆ ಸರಿಪಡಿಸುವರೋ ಹಾಗೆಯೇ ತಮಗೆ ಪ್ರಯೋಜನವಾದ ವಿಷಯಗಳು ಯಾವ ಪಕ್ಷದ ಕಾರ್ಯಕ್ರಮದಲ್ಲಿದೆಯೋ ಅಂಥಾ ಪಕ್ಷವನ್ನು ಆ ಕಾಲಕ್ಕೆ ಸೇರುವರು. ಇವರು ತೇಲಾಡುವ ಜನರು. ಇವರು ತಿಳುವಳಿಕೆ ಕಡಿಮೆಯಾಗಿ ಆಗಲೀ ಅಥವಾ ಸುಶಿಕ್ಷಿತವಲ್ಲದ ಗುರಿ ಇಲ್ಲದೆಯಾಗಲೀ ಅಥವಾ ಇವರಿಗೆ ಬೇಕಾದ ಲಾಭವು ಯಾವ ಪಕ್ಷದ ಧೋರಣೆಯಲ್ಲಿ ಕಾಣದಿರುವದರಿಂದಲಾಗಲೀ ಯಾವ ಪಕ್ಷಕ್ಕೂ ಕಟ್ಟುಬಿದ್ದಿರುವುದಿಲ್ಲ. ಇವರ ಬೆಂಬಲವನ್ನೇ ಎಲ್ಲಾ ಪಕ್ಷಗಳೂ ಅಪೇಕ್ಷಿಸುವವು.

ಪ್ರಜಾಸತ್ತೆ (ಕಳೆದ ಸಂಚಿಕೆಯಿಂದ ಮುಂದರಿದುದು) ಲೇಖಾಂಕ ೨

ಪ್ರಜಾಸತ್ತೆಯೂ ಪಕ್ಷಗಳೂ

ತತ್ವಧೋರಣೆ ಮೊದಲಾದ್ದಲ್ಲಿ ಇವರಿಗೆ ವಿಶ್ವಾಸವಿಲ್ಲ. ಇವರು ಕಾರ್ಯವನ್ನೇ ನೋಡುವವರು. ಪಕ್ಷಗಳು ಬಾಳುವದಾಗಲೀ ವೃದ್ಧಿಯಾಗುವದಾಗಲೀ ಸಹಾನುಭೂತಿ, ಅನುಕರಣೆ, ಸ್ಪರ್ಧೆ ಮತ್ತು ಜಗಳಗಂಟತನದಲ್ಲಾಗಿವೆ. ಆದ್ದರಿಂದಲೇ ಬ್ರೈಸ್ ಮತ್ತು ಪೆಂಡೆಲ್‌ಟನ್ ಹೆರ್ರಿಂಗ್ ಇಬ್ಬರೂ ಮೂರನೇ ತರಗತಿಯ ಜನರು ಪಕ್ಷಗಳಿಗೆ ಅಗತ್ಯವೆಂದಿರುವರು.

ಪ್ರಜಾಮತ ಸರಕಾರವೆಂತಲೂ ಜನಮತವನ್ನು ಹೊಂದಿರುವದು. ಜನಮತವನ್ನು ಒಟ್ಟುಗೂಡಿಸುವವರ ಪಕ್ಷಗಳು ಬೇಕು. ಈಗಿನ ಕಾಲದಲ್ಲಿ ವಿದ್ಯೆಯು ಪಸರಿಸಿದರೂ ಜನರಲ್ಲಿ ಜ್ಞಾನವಿಕಾಸಗೊಂಡರೂ ಜನರ ವ್ಯವಹಾರ ಜಾಸ್ತಿಆದ್ದರಿಂದಲೂ ಮತ್ತು ಸಮಾಜದ ಪರಿಮಾಟು ಸಹ ಹೆಚ್ಚಿರುವದರಿಂದ ಸಾರ್ವಜನಿಕ ವಿಚಾರಗಳಲ್ಲಿ ಪ್ರತಿಯೊಂದರಲ್ಲೂ ಅನುಭವಮಾಡಿಕೊಳ್ಳುವದು ಕಷ್ಟ. ಅಂಥಾ ತಿಳುವಳಿಕೆಯುಳ್ಳವರೂ ಕಡಮೆ. ಆದ್ದರಿಂದ ಪಕ್ಷಗಳು ಅತಿಅಗತ್ಯ. ಜನರೆಲ್ಲರೂ ಒಂದೇ ರೀತಿಯ ಮತಕೊಡುವದಿಲ್ಲ. ವೈಯಕ್ತಿಕ ಮತವನ್ನು ಒಂದುಗೂಡಿಸಿ ಮಧಿಸಿ ಜನಮತಮಾಡುವ ಪಕ್ಷಗಳೇ ಬೇಕು. ಸಣ್ಣ ಸಣ್ಣ ಹಳ್ಳಗಳ ನೀರು ಒಟ್ಟಾಗಿ ದೊಡ್ಡವಾದ ಎರಡು ಮೂರು ನದಿಗಳನ್ನು ಸೇರಿ ಸಾಗರಕ್ಕೆ ಹೇಗೆ ಹೋಗುವವೋ ಹಾಗೆಯೇ ವೈಯಕ್ತಿಕ ಅಭಿಪ್ರಾಯಗಳು 2–3 ಪಕ್ಷಗಳನ್ನು ಸೇರಿ ನ್ಯಾಯ ಸಭೆಗೆ ಹೋಗುವವು. ಅಲ್ಲಿ ಪ್ರಬಲವಾಗಿ ಬೆಳೆಬರುವಂಥಾಗ ವವು. ಹೀಗೆ ದೊಡ್ಡ ಪಕ್ಷಗಳನ್ನು ಸೇರುವವರು ಅದರ ಶಿಸ್ತಿಗೆ ಅನುಸರಿಸಿ ನಡೆಯಲು ಒಪ್ಪಿಗೆ ಇದ್ದೇ ಸೇರುವರು. ವಕೀಲರು ದಾಖಲೆಗಳನ್ನು ಶೋಧಿಸಿ ವಿಚಾರಣೆಯ ಕಾಲದಲ್ಲಿ ಬೇಕಾಗುವ ಅನುಭವವನ್ನು ಹೇಗೆ ಸಂಗ್ರಹಿಸುವರೋ ಹಾಗೆಯೇ ಪಕ್ಷಗಳು ಜನಾಭಿಪ್ರಾಯವನ್ನು ಸಂಗ್ರಹಿಸುವವು. ಪ್ರಜಾಮತ ಸರಕಾರವು ಜನಮತವನ್ನು ಹೊಂದಿರುವದೆಂದು ಒಪ್ಪಿಕೊಂಡವೇಲೆ ಜನಮತವು ಸಾಮೂಹಿಕ ಜನರ ಬೆಂಬಲವನ್ನು ಹೊಂದಿರುವದೇ ಹೊರತು ವೈಯುಕ್ತಿಕ ಶಕ್ತಿಯನ್ನಲ್ಲ. ಅಂಥಾ ವೈಯುಕ್ತಿಕ ಶಕ್ತಿಗಳನ್ನು ಕೇಂದ್ರೀಕರಿಸಿ ಸ್ಪಷ್ಟೀಕರಿಸುವರ ಪಕ್ಷಗಳು ಬೇಕೆಂತ ಅಮೇರಿಕದ ಹಿಂದಿನಕಾಲದ ಓರ್ವ ಅಧ್ಯಕ್ಷರಾದ ವುಡ್ರೋವಿಲ್ಸನ್ (Woodrow Willson) ಎಂಬವರು ಹೇಳಿರುವರು.

ಪ್ರಜಾಮತ ಸರಕಾರ ನಡೆಯುವದಿ ಪಕ್ಷಗಳು ಅಗತ್ಯ. ಒಂದೇ ಪಕ್ಷದ ಸರಕಾರವೆಂಬುದು ಪ್ರಜಾಸತ್ತೆಯ ನಕಾರವಾಗಿರುವದು. ಜರ್ಮನಿ ಮತ್ತು ಇಟೆಲಿಗಳು ಈ ಬಾಬಿನಲ್ಲಿ ಹೊಳೆಯುವ ಉದಾಹರಣೆಗಳಾಗಿರುವವು. ಇದರಿಂದ ನಿರಂಕುಶ ಪ್ರಭುತ್ವಕ್ಕೆಡೆ ಇದೆ. ಸಾರ್ವಜನಿಕ ವಿಚಾರವೆಲ್ಲಾ ಅಡ್ಡದಾರಿ ಹಿಡಿದು ಹೋಗುವವು. ಒಂದೇ ಪಕ್ಷದ ಸರಕಾರವಿರುವಲ್ಲಿ ಅದು ಜನರಿಂದ ಆರಿಸಲ್ಪಟ್ಟಿದ್ದಾದರೂ ಪ್ರಜಾಸತ್ತೆಯ ಸೋಗಿನಲ್ಲಿ ನಿರಂಕುಶ ಪ್ರಭುತ್ವವು ತನ್ನ ಆಟವಾಡುವುದು ಬರೇ ಚುನಾವಣೆಯಿಂದ ರೀತಿನೀತಿಗಳು ಬದಲಾಗದು. ಒಂದೇ ಪಕ್ಷವಿರುವಲ್ಲಿ ಬಹುಮತದವ ಜುಲುಮು ಎಂಬುದು ಬರೇ ಬಾಯಿ ಮಾ ತಲ್ಲ ನಿಜವಾಗಿ ಅಂಕುರದಂತೆ ಕೊರೆಯುವುದು. ಪ್ರಜಾಸತ್ತೆಯು ನೆಲೆಯಾಗಿ ವ ಜವಾಬ್ದಾರಿಕೆಗೆ ಕನಿಷ್ಠಕ್ಕೆ ಎರಡು ಪಕ್ಷಗಳಾದರೂ ಬೇಕು. ಅಧಿಕಾರ ಪಕ್ಷಕ್ಕೆ ತಮ್ಮನ್ನು ಹೊರಮಾಡಿ ಇನ್ನೊಂದು ಕಡೆಯವರು ಸರಕಾರ ವಹಿಸಲು ತಯಾರಿದ್ದಾರೆಂಬ ಹೆದರಿಕೆ ಯಾವಾಗಲೂ ಇರಬೇಕು. ಸರಕಾರ ಪಕ್ಷವು ಹೇಗೆ ಅ ತ್ಯವೋ ಅಷ್ಟೇ ವಿರೋಧ ಪಕ್ಷವೂ ಅ ತ್ಯ. ಮಹಾರಾಜರ ವಿರೋಧ ಪ (His Majesti Opposition) ಎಂಬುದೊಂದು ಬಿರುದಿಯಲ್ಲ ಅ ಸರಕಾರವೂ ಬೇಕು. ವಿರೋಧವೂ ಬೇಕು. ಎಂದು ಐವರ್ ಜನ್ನಿಂಗ್ಸರು (Ivor Jennings) ಹೇಳಿದರು. ಯಾವ ಸ ಕಾರವೂ ತಪ್ಪು ಮಾಡದೆ ಇರುವದು ಪರೂಪವಾದ್ದರಿಂದ ಟೀಕೆ ಮಾಡುವ ಪ್ರತಿಪಕ್ಷ ಬೇಕು. ಯಾರೂ ಒಬ್ಬಂ ಗಾಗಿ ವಿರೋಧ ನಡಿಸಲಾರರು. ಅನ ಅನೇಕ ಪಕ್ಷಗಳಿರುವದು ಮತ್ತಷ್ಟು ಕ ಟ್ಟದ್ದು. ಇದಕ್ಕೆ ದೃಷ್ಟಾಂತವು ಫ್ರಾನ್ಸ್ ದೇಶವಾಗಿರುವದು. ಕಳೆದ ಯುದ್ಧ ಆಗ್ಯಾತು ಇಷ್ಟರೊಳಗೆ ಹದಿನೈದು ಮಂತ್ರಿಮಂಡಲವಾಯಿತು. ಈಗ ಹದಿನಾ ರನೇದನ್ನು ರಚಿಸುವರೆ ಹೆಣಗಾಡುತ್ತಿರುವರು. ಇಲ್ಲಿ ಸರಕಾರವು ಯಾವಾಗಲೂ ಅಧೈರ್ಯ ಮತ್ತು ಅನಿಶ್ಚಿತ ಕಾಲ ಕ ಯಬೇಕಾದುದರಿಂದ ಸರಕಾರವು ಸದಾ ಕಾಲ ಶಕ್ತಿಹೀನವಾಗಿರುವದು. ಸಣ್ಣ ಸಣ್ಣ ಗುಂಪುಗಳು ಆಗಾಗ ಬೇರಾಗುವವು, ಕ್ರಿಮಿಕೀಟಾದಿಗಳ ಹಾಗೆ ಉಪದ್ರವಕಾರಕಗಳಾಗುವವು. ತಮಗೆ ಬೇಕಾದ ಪ್ರಯೋಜನಕ್ಕೆ ಸಿಕ್ಕಸಿಕ್ಕಿದ ಗುಂಪುಗಳೊಡನೆ ಬೆರಸಿ ಸರಕಾರ ನಡೆಸಲು ತಪ್ಪಕೊಡವವು. ಹಿತದಲ್ಲಿದ್ದು ಅಂತರಂಗದಲ್ಲಿ ಕೇಡು ಬಯಸುವವು. ಈ ತರಹವಿರುವಲ್ಲಿ ಸರಕಾರವು ಕ್ರಮಬದ್ಧವಾದ ಧೋರಣೆಯನ್ನು ವಹಿಸಲಾರರು. ಯಾವಾಗ ಸ್ಪಷ್ಟವಾದ ಬಹುಮತವಿಲ್ಲವೋ ಆಗ ಅನೇಕ ಪಕ್ಷದವರ ಸೈಕಿ ಕೆಲವರ ಕೂಡುವಿಕೆಯಿಂದ ಸರಕಾರ ಮಂಡಳ ರಚಿಸಬೇಕಾಗುತ್ತದೆ. ಕೂಡುವಿಕೆಯಿಂದ ನಡೆಯುವ ಸರಕಾರಕ್ಕೆ ಬೆಲೆಯಿಲ್ಲ. ಇದಕ್ಕೆ ಗತಕಾಲದ ಗೌರವಸ್ಥಾನವಿಲ್ಲ; ಮುಂದಿನ ವೃದ್ಧಿಯೂ ಇಲ್ಲ. ಇದೊಂದು ಹೊಸ ಕತ್ತೆಯ ಹಾಗಿರುವದು. ಪಕ್ಷಗಳು ಜನಮನ್ನಣೆಗೆ ಅರ್ಹತೆಗೆ ಪಾತ್ರರಾಗಬೇಕಾದರೆ ಗತಕಾಲದ ಚರಿತ್ರೆ ಬೇಕು. ನಾಯಿಕೊಡೆಯಂತೆ ಹುಟ್ಟಿ ಸಾಯುವ ಅಥವಾ ಸತ್ತು ಹುಟ್ಟುವ ಪಕ್ಷಗಳು ನೆಗಣೆಯಲ್ಲಿ ಸಾವಿರ ಹುಳಗಳದ್ದಂತೆಯೇ ಸರಿ. ಪ್ರತಿಯೋರ್ವ ಮನುಷ್ಯನು ಒಂದೊಂದು ಪಕ್ಷ ಕಟ್ಟಿದರೆ ಹಿಂಬಾಲಿಸುವವರ್ಯಾರು. ಈಗ ನಮ್ಮ ದೇಶದಲ್ಲಿ ಹಲವು ಪಕ್ಷಗಳು ತಲೆಯೆತ್ತಿವೆ. ಕೆಲವಕ್ಕೆ ಮುಂದಾಳುಗಳಿಲ್ಲ; ಕೆಲವಕ್ಕೆ ಹಿಂಬಾಲಕರೇ ಇಲ್ಲ. ಗತಕಾಲದ ಗೌರವವಾಗಲೀ ಚರಿತ್ರೆಯಾಗಲೀ ಮೊದಲೇ ಇಲ್ಲ.

—ಸಿ. ಎಚ್. ಶೆಟ್ಟಿ, ಬಿ.ಎ.

[ಬರುವ ಸಂಚಿಕೆ ನೋಡಿರಿ.]

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಿಯು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಷುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ದಿಲ್ಲಿಯ ಪ್ರಯತ್ನ ಹಳ್ಳಿಯಲ್ಲೂ ಆದೀತೇ?

ಧಾನ ಮಂತ್ರಿ ಶ್ರೀ. ಜವಾಹರಲಾ ಕಾಂಗ್ರೆಸ್ ಅಧ್ಯಕ್ಷರಾದಂದಿನಿಂದ ಸ್ಸಿನ ಶುದ್ಧೀಕರಣ—ಐಕ್ಯಸಾಧನೆ-ಟನೆಗಳಿಗಾಗಿ ಬಹಳ ಪ್ರಯತ್ನ ತ್ತಿರುವದಾಗಿ ತಿಳಿಯುತ್ತದೆ. ಮೊ ಯಿಂದ ಕಾಂಗ್ರೆಸ್ ತ್ಯಜಿಸಿದವರ ಕು ವಾಣಿಯು ಅತ್ಯಂತ ಹೃದಯಸ್ಪರ್ಶಿ ಯುತ್ತದೆ. ಭುಜಕ್ಕೆ ಭುಜ ಕೊಟ್ಟು ನೆ ರವರೊಡನೆ ದುಡಿದ ಸನ್ಮಿತ್ರರನ್ನು ಅ ಕಳಕೊಂಡ ಬಗ್ಗೆ ವಿಷಾದ ವ್ಯಕ್ತ ಆತ್ಮೀಯ ಮಿತ್ರರು ತಿರುಗಿ ಕಾಂಗ್ರೆ ಸೇರಬೇಕೆಂದೂ ಯಾವ ಕಾಂಗ್ರೆ ಶ್ರೇಷ್ಠ ಆದರ್ಶಗಳಿಂದ ದೊಡ್ಡವ ವೂ ಆ ಸಂಸ್ಥೆಯನ್ನು ಭದ್ರಗೊಳಿಸ ದೂ ತನ್ನ ವಾಣಿಯಲ್ಲಿ ಹೇ ವರು. ಬೆಂಗಳೂರ ಅಧಿವೇಶನದಲ್ಲಿ ಒಗಿಯ ಬಿನ್ನಹವನ್ನು ಕಾಂಗ್ರೆಸ್ ರಟಿಸಿದ್ದರೂ ಒಳಗಿನಿಂದ ಯಾವ ಸು ಣೆಯೂ ಆಗದೆ ಸೇರುವದು ಶಕ್ಯವಿ ಂದು ತಿಳಿದುದರಿಂದ ಯಾವ ಯೋಜನವೂ ಬರಲಿಲ್ಲ. ರೆ ಈಗಿನ ಸ್ಥಿತಿ ಬದಲಾಗಿದೆ. ಹ್ರೂರವರ ಕೈಯಲ್ಲಿ ಕಾಂಗ್ರೆಸ್ ಸಂಸ್ಥೆ ನೂತನ ಶಕ್ತಿಯ ಮೂಲಕ ಆದಕ್ಕೆ ಲನೆ ಕೊಡುವ ಯತ್ನ ನಡೆಸುತ್ತಿದ್ದಾ ಕಾಂಗ್ರೆಸ್ಸಿನಿಂದ ಹೊರಬಂದ ಹೆಚ್ಚಿ ವರು ಕಿಸಾನ ಮಜದೂರ ಪ್ರಜಾ ಪಾ ಯಲ್ಲಿರುವದರಿಂದ ಅವರು ಶ್ರೀ ನೆ ಹ್ರೂರವರ ಮನನಿಯ ಕುರಿತು [illegible] ವಹಿಸುವ ಸಂಭವವಿದೆ. ರಫಿ ಅಹ ದ ಕಿದ್ವಾಯಿ.ಯವರೂ ನೆಹ್ರೂ ಅ ನ ಸ್ವೀಕರಿಸಬಹುದೆಂಬ ವಾರ್ತೆ ಹ ದೆ ಪ್ರಜಾಪಾರ್ಟಿಯ ಅಧ್ಯಕ್ಷ ಆಚಾ ರ್ಯ ಕೃಪಲಾನಿಯವರು ಸದ್ಯ ಏನನ್ನೂ ಲದೆ ಹೋದರೂ ನೆಹ್ರೂರವರ ಈ ನ್ನಹವನ್ನು ಮದ್ರಾಸದಲ್ಲಿನ ಡೆಯಲಿರು ಪಕ್ಷದ ಸಭೆಯ ಮುಂದೆ ಇಟ್ಟು ಅದ ಪ್ರತಿಕ್ರಿಯೆ ಏನಾಗಬಹುದೆಂಬುದನ್ನು ಮುಂದಕ್ಕೆ ತಿಳಿಸಲಾಗುವದೆಂದು ಹೇಳಿರು ರು. ಈಚೆಗೆ ಕಾಂಗ್ರೆಸ್ಸಿನ ಕುರಿತು ಟೀ ಗಳ ಸುರಿಮಳೆಗರೆಯುತ್ತಿದ್ದ ಆಚಾ ರ್ಯರೂ ತಮ್ಮ ಧೋರಣೆಯಲ್ಲಿ ತುಸು ದಲಿಸಿದಂತಿದೆ. [illegible] ಪ್ರಜಾಪಕ್ಷ ಹಲವು ಸದಸ್ಯರು ನೆಹ್ರೂರವರ ಕಳ ಳಿಯ ಬಿನ್ನಹಕ್ಕೆ ತಮ್ಮ ಒಲವನ್ನು ತೋರಿಸಿದ್ದೇ ಇದಕ್ಕೆ ಕಾರಣವೆನ್ನ ಹುದು.

ಕಾಂಗ್ರೆಸ್ಸಿನ ಸಂಘಟನೆಗಾಗಿ ಮಹತ್ವ ಪರಿಣಾಮಕಾರೀ ಪರಿವರ್ತನೆಗಳಿಗಾಗಿ ನೆಹ್ರೂ ಈಚೆಗೆ ಕೊಟ್ಟಿರುವ ಸಲಹೆ ಅ ತ್ಯಮೂಲ್ಯಗಳಾಗಿವೆ ಮುಂಬರುವ ಚು ನಾವಣೆಯ ಕುರಿತು ಅವರು ಆಗಿಂದಾಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳೂ ಆದೇ ಶಗಳೂ ಕಾಂಗ್ರೆಸ್ಸಿನ ಬಗ್ಗೆ ಜನ ವಿಶ್ವಾಸ ಪಡುವದಕ್ಕೂ--ಮುಂಬರುವ ಚುನಾವ ಣೆಯಲ್ಲಿ ಹೆಚ್ಚಿನ ಲಾಭ ಪಡೆಯುವದ ಕ್ಕೂ ಸಹಕಾರಿಯಾಗಬಲ್ಲುದು ಚುನಾವ ಣೆಯಲ್ಲಿ ಯೋಗ್ಯರಾದವರನ್ನೇ ಆರಿಸಿರಿ- ಕಾಂಗ್ರೆಸ್ ಜಾತ್ಯತೀತ ಸಂಸ್ಥೆಯೆಂಬುದ ನ್ನು ತೋರಿಸಿಕೊಡಿರಿ--ಒಳಜಗಳ--ಪಕ್ಷ ಪಕ್ಷಗಳ ಹಟಪ್ರದರ್ಶನಗಳಿಂದ ಕಾಂ ಗ್ರೆಸ್ಸಿನಲ್ಲ ಬಿರುಕನ್ನು ಹುಟ್ಟಿಸಿ ಕಾಂಗ್ರೆ ಸ್ಸಿನ ಐಕ್ಯವನ್ನು ಕೆಡಿಸಬೇಡಿರಿ” ಎಂದು ಅವರು ಆದೇಶಿಸಿದ್ದಾರೆ ಸರ್ವಸಾಮಾನ್ಯ ಎಲ್ಲ ಪಕ್ಷಗಳೂ ನೆಹ್ರೂರವರ ನಿಲುಮೆ ಯನ್ನು ಶ್ಲಾಘಿಸುತ್ತವೆ. ಕಾಂಗ್ರೆಸ್ಸಿಂದ ಸಿಡಿದುಹೋದವರಿಗೂ ನೆಹ್ರೂರವರ ಬ ಗ್ಗೆ ವಿಶೇಷಾದರ ಗೌರವಗಳಿವೆ. ಅಂತ ಲೇ ಅವರ ಹೃದಯ ಸ್ಪರ್ಶಿ ಭಿನ್ನಹಕ್ಕೆ ಅನುಕೂಲಿಸಿಗೊಡಬಹುದು. ಸಂಸ್ಥೆಗಳನ್ನು ನಡೆಸುವವರಲ್ಲಿ ಪ್ರಾಮಾಣಿಕತನ--ಕರ್ತ ವ್ಯನಿಷ್ಠೆ--ಪಕ್ಷಾತೀತ ಧೋರಣೆಗಳಿರಬೇ ಕಾದದು ಅತ್ಯಾವಶ್ಯವೆಂಬುದನ್ನು ನೆ ಹ್ರೂ ಹೇಳಿರುವದನ್ನು ಊರಿನ ಕಾರ್ಯ ಕರ್ತರೂ ತಿಳಿಯುತ್ತಾರೋ ಹೇಗೆಂಬುದ ರಲ್ಲಿ ಬೇರೆಯವರಿಗೆ ಅನುಮಾನವಿದೆ ದಿ ಲ್ಲಿಯ ನೆಹ್ರೂರವರ ಕೇಳಿಕೆಯಂತೆ ಜಿಲ್ಲೆ ಯವರ ಮನತಿರುಗೀತೇ? ಹಳ್ಳಿಯವರ ಧೋರಣೆ ಬದಲಾದೀತೇ? ಎಂಬುದೂ ಸಂಶಯ ಗ್ರಸ್ತ ವಿಚಾರ!

ಕಾಂಗ್ರೆಸ್ಸು ಭದ್ರವಾದ ತಳಹದಿಯ ಮೇಲೆ ನಿಂತು ಮುಂದಿನ ಚುನಾವಣೆಯ ಲ್ಲಿ ಯಶಗಳಿಸಬೇಕಾದರೆ ನೆಹ್ರೂರವರ ಯತ್ನ ದಿಲ್ಲಿಯಿಂದ ಜಿಲ್ಲೆಗೂ ಜಿಲ್ಲೆಯಿಂ ದ ಹಳ್ಳಿಗೂ ವ್ಯಾಪಿಸಿಕೊಳ್ಳಬೇಕು. ಮಾ ತ್ರವಲ್ಲ ಕಾರ್ಯರೂಪದಲ್ಲಿ ಬರಬೇಕು. ಈ ಬದಲಾವಣೆ ಇಲ್ಲವೆ ಪರಿವರ್ತನೆ ಆಗ ದೆ ಹೋದರೆ ಐಕ್ಯ--ಸಂಘಟನೆಗಳ ಪ್ರ ಯತ್ನ ವ್ಯರ್ಥವೇ ಸರಿ.

ಅಮೇರಿಕೆಯ ಭಾರತ ರಾಯಭಾರಿ

ಭಾರತ ಅಮೇರಿಕಾಗಳೊಳಗಿನ ರಾಜ ಕೀಯ ಸಂಬಂಧಗಳು ಏಕಮುಖವಾಗಿರ ವೆ ಸ್ವಲ್ಪ ಭಿನ್ನಾಭಿಪ್ರಾಯಗಳು ತಲೆ ದೋರಿದಂತಿದೆ. ಈ ಹಿಂದಿನ ರಾಯಭಾರಿ ಹೆಂಡರ್ಸನ್ನರು ಉಭಯರಾಷ್ಟ್ರಗಳೊಳ ಗೆ ಪರಸ್ಪರ ಮೈತ್ರಿಯನ್ನು ಬೆಳೆಸುವದ ರಲ್ಲಿ ಅಷ್ಟೊಂದು ಯಶಸ್ವಿಯಾಗಲಿಲ್ಲ.'

ಕಮ್ಯೂನಿಸ್ಟ ಚೀನವನ್ನು ಆಕ್ರಮ ರಾಷ್ಟ್ರವೆಂದು ಸಾರುವಲ್ಲಿ ಭಾರತ ಆಂ ಗ್ಲೋ ಅಮೇರಿಕಾನರಿಗೆ ವಿರುದ್ಧವಾದ ಧೋರಣೆಯನ್ನು ತಾಳಿತು. ಜಪಾನು ಶಾಂತಿ ಒಪ್ಪಂದದಲ್ಲೂ ಭಾರತ ಭಾಗವ ಹಿಸದೆ ಒಪ್ಪಂದದಲ್ಲಿಯ ಹಲವು ಲೋಪ ದೋಷವನ್ನು ಎತ್ತಿ ಹೇಳಿದುದರ ಫಲ ವಾಗಿ ಎಲ್ಲ ರಾಷ್ಟ್ರಗಳ ದೃಷ್ಟಿಯೂ ಕೊಂಚ ಬೇರೆ ಕಡೆಗೆ ಹೊರಳಿದಂತಿದೆ. ಇರಾಣದ ಪ್ರಕರಣದಲ್ಲೂ ಭಾರತವು ಇ ರಾಣದ ಪರವಾಗಿ ಸಹಾನುಭೂತಿ ವ್ಯಕ್ತ ಪಡಿಸಿಯದೆ ಕಾಶ್ಮೀರದಲ್ಲಂತೂ ಆಂಗ್ಲೋ ಅಮೇರಿಕಾನರ ಸೂಚನೆಯನ್ನು ಸಂಪೂ ರ್ಣ ತಿರಸ್ಕರಿಸಲಾಗಿದ. ಈ ಪ್ರತಿಯೊಂ ದು ವಿಚಾರಗಳು ಭಾರತವು ತಾನು ಅನು ಸರಿಸುತ್ತಿರುವ ಒಂದು ವಿಶಿಷ್ಟ ಸಂಪ್ರದಾ ಯ ಹಾಗೂ ತತ್ವಗಳಿಗನುಗುಣವಾಗಿದೆ ಯೇ ಹೊರತು ಆಂಗ್ಲೋ ಅಮೇರಿಕಾನರ ಮೇಲೆ ದ್ವೇಷ ಕಟ್ಟಿಕೊಳ್ಳುವದಕ್ಕಲ್ಲ! ಮಾತ್ರವಲ್ಲ ಭಾರತದವಿದೇಶಾಂಗ ನೀತಿ ಯು ಜಾಗತಿಕ ರಂಗದಲ್ಲಿ ವಿಶೇಷ ಸ್ಥಾನ ಮಾನವನ್ನು ಪಡೆದಿದೆ. ನೆಹ್ರೂ ನಿಲು ಮೆಯನ್ನು ಕೊನೆಯ ಕ್ಷಣದಲ್ಲಾದರೂ ಮುಕ್ತಕಂಠದಿಂದ ಶ್ಲಾಘಿಸಲಾಗಿದೆ. ಆದ ರೂ ಅಮೇರಿಕಾನರಿಗೆ ಈ ಧೋರಣೆಯೂ ವಿಘಾತುಕವಾಗಿಯೇ ಪರಿಣಮಿಸಿದ್ದು ದು ರ್ದೈವವೆಂದೇ ಹೇಳಬೇಕು! ಅಮೇರಿಕೆ ಯು ಭಾರತಕ್ಕೆ ಸಲ್ಲಿಸಿದ ಸಹಾಯ ಅ ಅಪಾರವಾದುದು! ಆಹಾರ ಕೊಡುಗೆಗೆ ಸಿನೇಟ ಹಾಗೂ ರಿಪಬ್ಲಿಕನರ ಸಭೆಯಲ್ಲಿ ವಿರೋಧ ಪ್ರದರ್ಶನಗಳಾಗಿ ತಡೆಹಿಡಿ ಯುವುದಕ್ಕೆ ಈ ಧೋರಣೆಗಳೇ ಕಾರಣ ವಾದವು ಸಂಚನಾರ್ಥಿಕ ಯೋಜನೆಗೆ ಅ ಮೇರಿಕೆಯೂ ಭಾರತಕ್ಕೆ ಸಹಾಯ ಕೊಡ ಲಿದೆ. ಅಮೇರಿಕೆಯ ಯೋಜನೆಗೆ ಭಾರತವು ಹೆಜ್ಜೆ ಹೆಜ್ಜೆಗೆ ಅಡ್ಡಗಾಲಿ ಡುತ್ತಿರುವದಾದರೂ ಅಮೇರಿಕೆಯು ಭಾರತ ವನ್ನು ಮುಕ್ತಸ್ಥಿತನದಿಂದ ಒಲಿಸಿಕೊ

(ನಾಲ್ಕನೇ ಪುಟನೋಡಿರಿ)

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಹಿಡಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಣಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದಶ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ.-ಬಾಗಲಕೋಟಿ ಫಾರ್ಮಸಿ, ಧಾರವಾಡ.-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್ ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚು ತ್ತಿದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನು ಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ) ಮುಂಬಯಿ ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಿಂಕೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

Approved by the Govt of Mysore Certificated by the Agent of the Govt of Cylone & Indian

ಆಚಾರ್ಯ ವಿನೋಬಾ ಭಾವೆಯುರು ಮಧ್ಯಸ್ಥಿಕೆ ವಹಿಸಲಿ!

ಸ್ವಾಮಿ ಸೀತಾರಾಮರು ಆಂಧ್ರ ಪ್ರಾಂತರಚನೆಗಾಗಿ ಕೈಗೊಂಡ ಉಪವಾಸ ಕ್ರಮದ ಕುರಿತು ಪಾರ್ಲಿಮೆಂಟಿನಲ್ಲಿ ಪ್ರೊ. ರಂಗಾ ಹಾಗೂ ನೆಹ್ರೂರವರೊಳಗೆ ವಾಗ್ಯುದ್ಧವೇ ನಡೆಯಿತು. ಮಾನ್ಯ ವ್ಯಕ್ತಿಗಳು ಉಪವಾಸ ಕೈಗೊಂಡರೆಂದು ಇತಿಯ ಆಡಳಿತದಲ್ಲಿ ಬದಲಾವಣೆಯಾಗಬೇಕೆಂಬ ವಾದವನ್ನು ನಾನು ಒಪ್ಪಲಾರೆ ಎಂದಿದ್ದಾರೆ ನೆಹ್ರೂ. ಮಹಾತ್ಮಾ ಗಾಂಧಿಯವರು ಉಪವಾಸ ಕೈಗೊಂಡಾಗ ಬ್ರಿಟಿಷರು ಇದೇ ಧೋರಣೆಯನ್ನು ತೋರಿಸಿದ್ದು ನಮಗರ್ಥವಾಗುತ್ತದೆ. ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ಬ್ರಿಟಿಷರು ಒಪ್ಪಲಿಲ್ಲವಾದರೂ ಗಾಂಧೀಜಿಯವರ ಉಪವಾಸಕ್ಕೆ ಬೆಲೆ ಕೊಡುತ್ತಿದ್ದರು. ಕಾಂಗ್ರೆಸ್ಸೂ, ಜೆ. ವಿ. ಪಿ ಸಮಿತಿಯೂ ಒಪ್ಪಿದ ಭಾಷಾನುಗುಣ ಪ್ರಾಂತ ರಚನೆಯ ಕುರಿತು ಸರಕಾರ ಮೀನಮೇಷ ಹೇಳುತ್ತಿರುವುದು ಸರಿಯಲ್ಲ! ಆಂಧ್ರ ಪ್ರಾಂತದ ನಿರ್ಮಾಣಕ್ಕೆ ಮುಖ್ಯವಾಗಿರುವ ತೊಡಕೆಂದರೆ ಗಡಿ ಮತ್ತು ಮದ್ರಾಸ್ ರಾಜಧಾನಿಯ ಪ್ರಶ್ನೆ. ಗಡಿಯ ವಿಚಾರದಲ್ಲಿ ಕರ್ನಾಟಕ ತಮಿಳರಲ್ಲಿ ಸಮಾಧಾನಕರವಾದ ಒಪ್ಪಂದವಾಗಿದೆಂದು ತಿಳಿಯುತ್ತದೆ. ಮದ್ರಾಸವನ್ನು ಮಧ್ಯಸ್ಥಗಾರರಿಗೊಪ್ಪಿಸಿ ಸದ್ಯ ಆಂಧ್ರ ಪ್ರಾಂತ ರಚಿಸಬೇಕೆಂಬ ಸೀತಾರಾಮರ ವಾದ ನೆಹ್ರೂರವರ ಶಂಕೆಯನ್ನು ಹಿಂಗಿಸುತ್ತದೆ. ಭಾಷಾನುಗುಣ ಪ್ರಾಂತರಚನೆ ಅನಿವಾರ್ಯವೆಂದಾದ ಮೇಲೆ ಅದನ್ನು ಇನ್ನಷ್ಟು ವಿಷಮತೆಗೆ ಬಿಡುವದು ಯೋಗ್ಯವಲ್ಲ! ರಾಯಲಸೀಮಾ ಮತ್ತು ನೆಲ್ಲೂರವರು ಮದ್ರಾಸ ರಾಜಧಾನಿಯನ್ನು ಹೊರತ ಆಂಧ್ರ ಪ್ರಾಂತ ಬೇಡವೆಂದು ಪ್ರತಿಭಟಿಸಿದರೆ ಅಂತಹವಕ್ಕೆ ಮಹತ್ವ ಕೊಡದೆ ಸರಕಾರವೇ ಸರಿಯಾದ ಮಾರ್ಗದರ್ಶನ ಮಾಡುವದು ಸೂಕ್ತವಾದ ಮಾರ್ಗ. ಸರಕಾರ ಅದರಲ್ಲಿ ಯಥಾರ್ಥವಾಗಿ ಆಸ್ಥೆ ವಹಿಸುವದಾದರೆ ಅಷ್ಟೇನೂ ಮಹತ್ವದ ಸಂಗತಿಯಲ್ಲ!

ಈ ಸಂದರ್ಭದಲ್ಲಿ ಅತ್ಯುಚ್ಚ ಕಾಂಗ್ರೆಸ್ ಕಾರ್ಯಕರ್ತರಾದ ಆಚಾರ್ಯ ವಿನೋಬಾ ಭಾವೆಯವರು ಆಸ್ಥೆ ವಹಿಸಿ ಮುಂದೆ ಬಂದಿರುವದು ಸ್ವಾಗತಾರ್ಹ ವಿಚಾರ. ದ್ವಿಭಾಷಿಗಳು ಮಿಲನಗೊಳ್ಳುವುದು ಶಕ್ಯವಿಲ್ಲವೆನ್ನುವದನ್ನು ನಾನೊಪ್ಪದೇ ಹೋದರೂ ಭಾಷಾನುಗುಣ ಪ್ರಾಂತ ರಚನೆ ನ್ಯಾಯಬದ್ಧವಾದುದೆಂಬುದನ್ನೂ ನಾನು ಒಪ್ಪುತ್ತೇನೆ- ಎಂದಿರುವರು. ಅಲ್ಲದೆ ಈ ಕಾರ್ಯದಲ್ಲಿ ತಾನು ತನ್ನ ಕೈಲಾದ ಪ್ರಯತ್ನ ಮಾಡುವೆನೆಂದೂ ಹೇಳಿರುವರು. ಸೇವಾನಿಷ್ಠೆ-ಕಾರ್ಯತತ್ಪರತೆಯಲ್ಲಿ ಕಾಂಗ್ರೆಸ್ಸಿಗರಿಂದ ಮಾತ್ರವಲ್ಲ ಕಮ್ಯೂನಿಸ್ಟರಿಂದಲೂ ಪ್ರಶಸ್ತಿಯನ್ನು ಪಡೆದಿರುವ ವಿನೋಬಾ ಭಾವೆಯವರು ಈ ಸಂದರ್ಭದಲ್ಲಿ ಮುಂದಾಳ್ತನವನ್ನು ವಹಿಸಿ ಪ್ರಾಂತಾಭಿಮಾನಿಗಳ ಹಾಗೂ ಸರಕಾರದೊಡನೆ ಒಂದು ಒಡಂಬಡಿಕೆಯನ್ನು ಸಾಧಿಸುವಂತಾಗಲಿ! ಗಾಂಧೀಜೀ ಪರಮ ಶಿಷ್ಯರಾಗಿದ್ದು ಕಾಂಗ್ರೆಸ್ಸಿನ ಉಚ್ಚಾದರ್ಶಗಳನ್ನು ಅಕ್ಷರಶಃ ಪಾಲಿಸುವ ಆಚಾರ್ಯರ ಬಗ್ಗೆ ಎಲ್ಲ ಪ್ರಾಂತದ ಜನರೂ ತುಂಬ ಅಭಿಮಾನವುಳ್ಳವರಾಗಿದ್ದಾರೆ. ಅವರ ಮುಂದಾಳ್ತನದಿಂದ ಈ ಪ್ರಶ್ನೆ ಬಗೆಹರಿದು ಸ್ವಾಮಿ ಸೀತಾರಾಮರಂತಹ ಶ್ರೇಷ್ಠ ಕಾಂಗ್ರೆಸ್ಸಿಗರ ಜೀವ ಉಳಿಯುವಂತಾಗಲಿ!

ಮಂತ್ರಿ ರಾಜಾರ ಪ್ರಶಂಸೆ

ಮದ್ರಾಸದ ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರವರು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಾ ಪೋಲೀಸ್ ಇಲಾಖೆಯವರು ಕೈಗೊಂಡ ಪ್ರಯೋಗಗಳನ್ನು ಶ್ಲಾಘಿಸಿದರು. ಅವರು ಜನರ ಮೇಲೆ ಲಾಠೀ ಗುಂಡುಗಳನ್ನು ಪ್ರಯೋಗ ಮಾಡಿದ್ದನ್ನು ವಿಚಾರಣೆಗೆ ಗುರಿಪಡಿಸಲು ತಾನು ಸಿದ್ಧನಿಲ್ಲ-ಭಾರತ ಸರಕಾರದ ಧೋರಣೆ ಏನೇ ಇರಲಿ ಮದ್ರಾಸ್ ಸರಕಾರದ ಅಧಿಕಾರೀ ವರ್ಗಗಳ ಕಾರ್ಯದಕ್ಷತೆಯ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ- ಎಂಬುದಾಗಿ ಹೇಳಿರುವರು. ಆಚಾರ್ಯ ಕೃಪಲಾನಿಯವರ ಹಿಂದೆ ಗುಪ್ತ ಪೋಲಿಸರನ್ನು ಬಿಡುವ ಕುರಿತು ಪ್ರಶ್ನಿಸಲಾಗಿ ಅದಕ್ಕೆ "ಕೃಪಲಾನಿಯವರೇ ಇರಲಿ, ಅಥವಾ ಬೇರೆ ಯಾರೇ ಇರಲಿ ಅವರು ರಾಜದ್ರೋಹಾತ್ಮಕ ಭಾಷಣಮಾಡಿದಲ್ಲಿ ಅವರನ್ನು ಬಂಧಿಸಲಾಗುವುದು" ಎಂದರು. ಇದನ್ನು ಲಕ್ಷಿಸಿ ಆಚಾರ್ಯ ಕೃಪಲಾನಿಯವರು "ಮುಖ್ಯ ಮಂತ್ರಿಗಳಿಗೆ ಇತ್ತೀಚಿನ ಇತಿಹಾಸ ಗೊತ್ತಿಲ್ಲ. ಚುನಾವಣೆ ಪ್ರಚಾರ ಸಮಯದಲ್ಲಿ ವಿದೇಶೀಯ ಸರಕಾರವು ಕೂಡಾ 124 ಕಲಮನ್ನು ತಡೆಹಿಡಿಯಬೇಕಾಗುತ್ತಿತ್ತು. ಇತ್ತೀಚೆಗೆ ಹೊರಡಿಸಲ್ಪಟ್ಟಿರುವ ಅನೇಕ ವಿಶೇಷಾಜ್ಞೆಗಳ ಮೂಲಕ ಇಲ್ಲವೆ ಸ್ಥಾನಬದ್ಧತೆಯ ಕಾಯಿದೆಯ ಆಧಾರದಿಂದ ನನ್ನನ್ನು ಬಂಧಿಸುವದಾದರೆ ನಾನು ಮುಖ್ಯ ಮಂತ್ರಿಗಳಿಗೆ ಆಹ್ವಾನವನ್ನೀಯುತ್ತೇನೆ. ಎಂದು ಪ್ರತಿಭಟನೆಯನ್ನಿತ್ತಿರುವರು. ತನ್ನ ಆಡಳಿತೆಯ ಪ್ರಶಂಸೆಯಲ್ಲಿ ಪ್ರಜಾಪ್ರಭುತ್ವದಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಕಾರ್ಯಮಾಡುತ್ತಿರುವ ಪಕ್ಷಗಳಿಗಿಂತ ಹೆಚ್ಚಿನ ಅಧಿಕಾರವನ್ನು ಆಳುವ ಪಕ್ಷಕ್ಕೆ ಘಟನೆಯಲ್ಲಿ ನಮೂದಿಸಿಲ್ಲವೆಂಬುದನ್ನು ಮಂತ್ರಿ ರಾಜಾರವರು ಮರೆತಹಾಗಿದೆ. ಶ್ರೀ ಜವಾಹರಲಾಲರು ಚುನಾವಣಾ ಸಂಬಂಧವಾಗಿ ವಿಶಾಲ ಧೋರಣೆಯನ್ನು ವಹಿಸಬೇಕೆಂದೂ ಮುಕ್ತ ದ್ವಾರವಿರಬೇಕೆಂದೂ ಹೇಳಿರುವದಕ್ಕೆ ಇದು ತೀರಾ ವಿರುದ್ಧ ವರ್ತನೆಯಾಗಿದೆ. "ತಮ್ಮ ಅಧಿಕಾರ ಕ್ಷೇತ್ರ ಮತ್ತು ಮರ್ಯಾದೆಗಳನ್ನರಿಯದ ಜನರಿಗೆ ಕಾರಣಾಂತರದಿಂದ ಅಧಿಕಾರ ದೊರೆತಲ್ಲಿ ಅವರು ತಮಗೂ ಸಾರ್ವಜನಿಕರಿಗೂ ಗಂಡಾಂತರ ಪ್ರಾಯರಾಗುವರು" ಎನ್ನುವ ಕೃಪಲಾನಿಯವರ ಮಾತಿಗೆ ಆಸ್ಪದ ಕೊಟ್ಟಂತಾಗಿದೆ. ಯಥಾರ್ಥದ ಕಡೆಗೆ ರಾಜಾರವರಿಗಿರುವ ಅಜ್ಞಾನವನ್ನು ಆಚಾರ್ಯ ಕೃಪಲಾನಿಯವರು ಪ್ರತಿಭಟಿಸಿರುವುದು ಯೋಗ್ಯವೇ ಆಗಿದೆ.

[೩ನೇ ಪುಟದಿಂದ ಮುಂದುವರಿದುದು]

ಳ್ಳುವದಕ್ಕಾಗಿ ಪ್ರಯತ್ನಿಸುತ್ತಲಿದೆ. ಭಾರತದೊಡನೆ ಸ್ನೇಹ ಸಂಪಾದಿಸದೆ ಹೋದರೆ ಏಶಿಯಾದಲ್ಲಿ ಶಾಂತಿ ನೆಲೆಗೊಳ್ಳುವುದು ಅಸಂಭವವೆಂಬು ಅಮೇರಿಕಾನರಿಗೆ ಚೆನ್ನಾಗಿ ಮನವರಿಕೆಯಾಗಿದೆ. ಅಂತಲೇ ಚೆಸ್ಟರ್ ಬಾವುಲರನ್ನು ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗಿದೆ. ಬಾವುಲರು ಅಮೇರಿಕೆಯ ಸಾರ್ವಜನಿಕ ಪ್ರೀತ್ಯಾದರಕ್ಕೆ ಪಾತ್ರರಾದ ವ್ಯಕ್ತಿಗಳು. ಏಶ್ಯಾದ ರಾಷ್ಟ್ರಗಳೊಡನೆ ಅಮೇರಿಕೆಯ ಸಂಬಂಧ ಬೆಳೆಸುವದರಲ್ಲಿ ಬಾವುಲರು ಅಪೂರ್ವ ಯಶಸ್ಸನ್ನು ಗಳಿಸಬಹುದೆಂದೂ ಈ ಆಯ್ಕೆಯು ಸಮಯೋಚಿತ ಹಾಗೂ ಅತ್ಯಂತ ತೃಪ್ತಿದಾಯಕವಾಗಿದೆಂದೂ ಅಮೇರಿಕಾ ಹೆಚ್ಚಿನ ಪತ್ರಿಕೆಗಳ ನಾಗರಿಕರ ಅಭಿಪ್ರಾಯವಾಗಿದೆ. ಇಂಡಿಯಾ ಲೀಗದ ಮುಖ್ಯ ಧುರೀಣರಾದ ಶ್ರೀ ಜೆ. ಜೆ. ಸಿಂಗರು ಬಾವುಲರು ಭಾರತದ ನಿಜವಾದ ಮಿತ್ರರಾಗಿದ್ದು ಭಾರತದ ಸ್ವಾತಂತ್ರ್ಯ... ರಾಷ್ಟ್ರಾಭಿವೃದ್ಧಿ ಮುಂತಾದ ವಿಚಾರಗಳಲ್ಲಿ ಮೊದಲಿನಿಂದಲೂ ವಿಶೇಷಾಸಕ್ತಿ ಪ್ರದರ್ಶಿಸಿದವರಿದ್ದಾರೆ ಈ ರಾಯಭಾರಿತನ... ಉಭಯ ರಾಷ್ಟ್ರಗಳಲ್ಲಿ ವಿಶೇಷ ಪರಿಣಾಮಕಾರಿಯಾಗಬಲ್ಲದೆಂದು ಹೇಳಿರುವ... ಏಶಿಯಾದಲ್ಲಿ ಅಮೇರಿಕೆಯ ವರ್ಚಸ್ಸು ... ಷ್ಟಾಗಿ ಬೆಳೆದೆ ಇದ್ದುದರಿಂದ ಅದ... ಲ್ಲದೆ ಭಾರತದ ಮನಸ್ಸನ್ನು ಒಲಿಸಿಕೊಳ್ಳುವದರಿಂದ ತನ್ನ ಯೋಜನೆಗಳು ಫ...ಸಬಹುದೆಂದೇ ಚೆಸ್ಟರ್ ಬಾವುಲರನ್ನು ನೇಮಿಸಿದ್ದಾಗಿದೆ ರಾಜಕೀಯರಂಗದ... ವಿಖ್ಯಾತರಾದ ಚೆಸ್ಟರ್ ಬಾವುಲರು ... ನ್ನ ಕಾರ್ಯವನ್ನು ದಕ್ಷತೆಯಿಂದ ವಹಿ... ಅದರಿಂದ ಉಭಯ ರಾಷ್ಟ್ರಗಳ ಸ್ನೇಹ ವರ್ಧಿಸುವಂತಾಗಲಿ.

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್, ಉಡುಪಿ

The Popular Insurance Company Limited,

"POPULAR BUILDINGS" -- MANGALORE

Estd. 1929.

Post Box 34.
Telephone 217.
Tel: POPULAR".

Rs.1,20,00,000

Yes that is the sum the "POPULAR" has undertaken to pay thousands of its *satisfied* Policyholders

It is the provision made for their Old Age or for their Dependants. YOU too need this provision and the "POPULAR"- Your Own Company- is there to plan and take care of your future. Be a POPULAR POLICYHOLDER today.

We have attractive and remunerative appointments of Special and Ordinary agencies Full or part time, you can add to your income in taking to "POPULAR" Representation. Please call at the Office for further details

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ, ೨೦-೯-'೫೧

ವ್ಯರ್ಥಾಲಾಪ

ಪತ್ರಿಕಾ ಮಸೂದೆಯ ಕುರಿತು ಪಾರ್ಲಿಮೆಂಟಿನಲ್ಲಿ ಈಚೆಗೆ ಹಲವು ದಿನಗಳಿಂದ ವಾಗ್ಯುದ್ಧಗಳು ನಡೆಯುತ್ತಿವೆ. ಗೃಹ ಸಚಿವರಾದ ರಾಜಗೋಪಾಲಾಚಾರ್ಯರು ಮಂಡಿಸಿದ ಪತ್ರಿಕಾ ಮಸೂದೆಯ ಮೇಲಾಗುತ್ತಿರುವ ಟೀಕೆಟಿಪ್ಪಣಿಯನ್ನು ಲಕ್ಷಿಸಿದರೆ ಮಾನ್ಯ ಸದಸ್ಯರುಗಳಿಗೆ ವಾಸ್ತವಿಕ ಜಗತ್ತಿನ ಅರಿವಿಲ್ಲವೇನೋ ಎಂದು ಭಾಸವಾಗುತ್ತದೆ. ರಮಾನಾಥ ಗೋಯೆಂಕಾ, ದೇಶಬಂಧು ಗುಪ್ತಾ, ಪಂಡಿತ ಕುಂಜ್ರೂ ಡಾ. ಮುಖರ್ಜಿ ಮುಂತಾದ ಮಹನೀಯರು ಮಸೂದೆಯ ಕುರಿತಾಗಿ ಆರೋಪಿಸಲಾದ ಅಂಶಗಳನ್ನು ನಾವು ಚಿಂತಿಸಬೇಕಾಗಿದೆ.

ಇಂಗ್ಲೆಂಡ-ಅಮೇರಿಕಗಳಲ್ಲಿ ಪತ್ರಿಕೆಗಳಿರುವ ವಿಚಾರ ಸ್ವಾತಂತ್ರ್ಯವನ್ನು ಭಾರತದ ಪತ್ರಿಕೆಗಳಿಗೆ ಕೊಡಬೇಕೆಂದು ಕೇಳುವ ವಾದ ತರ್ಕ ಶುದ್ಧವಾದುದಲ್ಲ! ಜನರ ತಿಳುವಳಿಕೆ ಜ್ಞಾನದ ಮಟ್ಟವನ್ನು ನಾವು ಅರಿತುಕೊಳ್ಳಬೇಕಾಗಿದೆ. ಇಂಗ್ಲೆಂಡದಲ್ಲಿ ಹೆಚ್ಚಾಗಿ ಎಲ್ಲರೂ ವಿದ್ಯಾವಂತರೇ. ಪ್ರತಿಯೊಬ್ಬ ಕೆಲಸಗಾರರೂ ಪತ್ರಿಕೆಯನ್ನು ಕ್ರಯಕ್ಕೆ ಪಡೆದುಕೊಂಡು ರಾಜಕೀಯ ವಿಚಾರವನ್ನು ಅಭ್ಯಸಿಸುತ್ತಾರೆ. ರಾಜಕೀಯ ಹಾಗೂ ಆಡಳಿತದ ಕುರಿತು ಸರಿಯಾದ ಜ್ಞಾನವನ್ನು ಪತ್ರಿಕೆಗಳ ಮೂಲಕ ಪಡೆಯುತ್ತಾರೆ. ಹೆಚ್ಚುಕಡಿಮೆ ಅಲ್ಲಿನ ಎಲ್ಲ ಪತ್ರಿಕೆಗಳೂ ಜನತೆಯ ಅಭಿರುಚಿಯನ್ನು ಹೊಂದಿಕೊಂಡು ಉತ್ತಮವಾದ ವಿಚಾರಗಳನ್ನೇ ಒದಗಿಸುತ್ತವೆ. ಪತ್ರಿಕೆಗಳು ಸರಕಾರವನ್ನು ಬಲವಾಗಿ ಟೀಕಿಸುವವಾದರೂ ಅಂತಹ ಟೀಕೆಗಳು ಸಾರ್ವಜನಿಕರ ಹಿತರಕ್ಷಣೆ ಬಗ್ಗೆ ಇರುತ್ತವೆಯೇ ಹೊರತು ವೈಯಕ್ತಿಕವಾಗಿರುವುದಿಲ್ಲ! ಅವು ಎಂದೂ ಅಶ್ಲೀಲ ವಿಚಾರಗಳನ್ನು ಪ್ರಕಟಿಸುವುದಿಲ್ಲ. ಪತ್ರಿಕೆಗಳ ವಿಚಾರಸರಣಿ-ಸ್ಥಾನ-ಮಟ್ಟ ಉನ್ನತವಾಗಿರುವದರಿಂದ ಅವು ಪ್ರತಿಪಾದಿಸುವಂತಹ ವಿಚಾರಗಳೂ ಅಷ್ಟೇ ಗಂಭೀರವಾಗಿರುತ್ತವೆ. ಅಂತಲೇ ಸರಕಾರ ಕೂಡಾ ಅದಕ್ಕೆ ತುಂಬ ಮನ್ನಣೆಯನ್ನು ಕೊಡುತ್ತದೆ.

ಭಾರತದ ಪತ್ರಿಕೆಗಳ ಮಟ್ಟ ಹಾಗಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವಿಪುಲವಾದ ಜನಸಂಖ್ಯೆಯುಳ್ಳ ನಮ್ಮ ದೇಶದಲ್ಲಿ ಪತ್ರಿಕೆಯನ್ನು ಓದುವವರು ಬಹಳ ಕಡಿಮೆ. ಇದಕ್ಕೆ ನಿರಕ್ಷರತೆ, ಬಡತನ, ಸಾಮಾಜಿಕವುಗಳು ಕಾರಣವಾಗಿರಬಹುದು. ಇತರ ದೇಶಗಳ ಓದುಗರ ಸಂಖ್ಯೆಗೂ ನಮ್ಮ ದೇಶದ ಜನಸಂಖ್ಯೆಗೂ ಅಜಗಜಾಂತರ ವ್ಯತ್ಯಾಸವಿದೆ. ಇರುವ ಅಲ್ಪಸಂಖ್ಯಾಕ ಪತ್ರಿಕೆಗಳಲ್ಲೂ ಉಚ್ಚ ಮಟ್ಟದಲ್ಲಿರುವವುಗಳು ಬಹಳ ಅಲ್ಪವೆಂದೇ ಹೇಳಬೇಕು. ಅತ್ಯಂತ ಸಧಾರಿತ ರಾಷ್ಟ್ರವಾದ ಇಂಗ್ಲೆಂಡ ಅಮೇರಿಕೆಗಳಲ್ಲೂ ಮದ್ರಾಸಿನ ಹಿಂದುವಿಗೆ ಸರಿಯಾದ ಒಂದು ಪತ್ರಿಕೆಯಿಲ್ಲವೆಂಬುದನ್ನು ಇತ್ತೀಚೆಗೆ ಅಮೇರಿಕಾ ಇಂಗ್ಲೆಂಡಗಳನ್ನು ಸಂಚರಿಸಿದ ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳವರು ಹೇಳಿರುವ ಅಂಶ ಗಮನಾರ್ಹವಾದುದು! ಸ್ವಾತಂತ್ರ್ಯಪ್ರಾಪ್ತಿಗಾಗಿ ಸುಮಾರು ಅರ್ಧ ಶತಮಾನದಿಂದಲೂ ನಮ್ಮ ದೇಶದ ಪತ್ರಿಕೆಗಳು ದೇಶಸೇವಾ ಕಾರ್ಯದಲ್ಲಿ ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸಿವೆ. ಉತ್ಕೃಷ್ಟವಾದ ಈ ಸೇವೆಯನ್ನು ಸಾವಿರದು ಹೆಮ್ಮೆಯಿಂದ ಸ್ಮರಿಸಬೇಕಾಗಿದೆ!

ಪಾರ್ಲಿಮೆಂಟಿನ ಮುಂದೆ ರಾಜಾಜಿ ತಂದಿರುವ ಈ ಮಸೂದೆಯಲ್ಲಿ ಅಂತಹ ಪತ್ರಿಕೆಗಳಿಗೆ ಯಾವುದೇ ಬಾಧಕವುಂಟಾಗಿಲ್ಲ. ಸ್ವಾತಂತ್ರ್ಯ ಬಂದನಂತರ ನಮ್ಮಲ್ಲಿ ನಾಯಿಗೊಡೆಗಳಂತೆ ಹುಟ್ಟಿಕೊಂಡಿರುವ ಪತ್ರಿಕೆಗಳು ಪತ್ರಿಕೆಯ ಹೊಣೆಗಾರಿಕೆಯನ್ನು ಅರಿತುಕೊಳ್ಳದೆ ವೈಯಕ್ತಿಕ ಟೀಕೆ—ಜಾತೀಯ ದ್ವೇಷ ಭಾವನೆಗಳನ್ನು ಹುಟ್ಟಿಸುತ್ತಿರುವದು ಮಾತ್ರವಲ್ಲ ಅಶ್ಲೀಲ ಹಾಗೂ ಅವಾಚ್ಯ ವಿಚಾರಗಳನ್ನು ಪ್ರಕಟಿಸಿ ಜನತೆಯ ಅಭಿರುಚಿಯನ್ನು ಕೆಡಿಸುತ್ತಲಿವೆ. ನಮ್ಮ ಸರಕಾರ ಎಲ್ಲದರಲ್ಲೂ ಒಂದು ಕಾಯಿದೆ ಮಾಡಿಯದೆ, ಲೋಕಪರಿಜ್ಞಾನವಿಲ್ಲದವನು ಪತ್ರಿಕಾ ವ್ಯವಸಾಯಕ್ಕೆ ಕೈಹಾಕುವದನ್ನು ತಡೆಗಟ್ಟಲು ಯಾವ ಕ್ರಮವನ್ನು ಕೈಗೊಂಡಿರುವದಿಲ್ಲ. ಪತ್ರಿಕೆಯನ್ನು ತೊಂಡಿಸುವವನ ವಿಚಾರಾನುಭವಗಳನ್ನು ಅರಿತುಕೊಳ್ಳದೆ ಪತ್ರಿಕೆಯನ್ನು ಹೊಂಡಿಸಲು ಅನುಮತಿ ಕೊಡಲಾಗುತ್ತದೆ. ಒಂದೋ ಎಂದೋ ಸಂಚಿಕೆಗಳನ್ನು ಹೊರಡಿಸಿಯೋ—ತನಗಿರುವ ವಿಷಯ ಚಪಲತೆಯನ್ನು ತೀರಿಸಿಕೊಂಡೋ—ಮತ್ತೆ ಪತ್ರಿಕೆ ನಿಲ್ಲಿಸಿ ಬಿಡುವುದು ಸರ್ವಸಾಧಾರಣವೇ ಆಗಿದೆ. ಹೀಗೆ ಲೋಕಾನುಭವವಿಲ್ಲದವರ ಕೈಯಲ್ಲಿ ಪತ್ರಿಕೋದ್ಯಮವು ಕೆಡುತ್ತಲಿರುವುದನ್ನು ನಾವು ಗಂಭೀರವಾಗಿ ಲಕ್ಷಿಸಬೇಕು. ಈ ಬಗೆಯ ಅಶ್ಲೀಲ ಅವಾಚ್ಯ ವಿಚಾರಗಳ ಮೂಲಕ ಜನರ ಒಲವನ್ನು ಸಂಪಾದಿಸಲೆತ್ನಿಸುವದು ಸ್ವಾರ್ಥದ ದೃಷ್ಟಿಯಿಂದ ಸರಿಯಾದರೂ ನಾಗರೀಕತೆಯ ದೃಷ್ಟಿಯಿಂದ ಯೋಗ್ಯವಲ್ಲ!

ರಾಜಕೀಯದ ಕುರಿತು ಸರಿಯಾದ ಅನುಭವವಿಲ್ಲದ ಸಾರ್ವಜನಿಕರಲ್ಲಿ ಅಸತ್ಯವಿಚಾರಗಳನ್ನು ಅತಿರಂಜಿತವಾಗಿ ವರ್ಣಿಸಿ ಅರಾಜಕತೆಯನ್ನುಂಟುಮಾಡುವಂತಹ ಪತ್ರಿಕೆಗಳಿಂದ ದೇಶಕ್ಕೆ ಗಂಡಾಂತರವೇ ಹೊರತು ಕಲ್ಯಾಣವಿಲ್ಲ. ಇಂತಹ ಕ್ಷುದ್ರ ವಿಚಾರಗಳೂ—ವೈಯಕ್ತಿಕ ಟೀಕೆಗಳೂ ಪತ್ರಿಕೆಗಳಲ್ಲಿಬರುತ್ತಿದ್ದು ಜನತೆ ಜಿಗುಪ್ಸೆಗೊಂಡು "ಇದನ್ನು ಕೇಳುವವರಿಲ್ಲವೇ?"ಎಂದು ಪ್ರಶ್ನಿಸುವದುಂಟು! ಸಾಮಾನ್ಯ ಜನರು ಇಂತಹ ಕರಾರಪತ್ರಿಕೆಗಳನ್ನು ನಂಬಿ ಮೋಸಹೋಗುವ ಸಂಭವ ಹೆಚ್ಚು! ಜಾತೀಯ ದ್ವೇಷದ ಕುರಿತು ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಜಾತೀಯ ಪ್ರತಿನಿಧಿತ್ವವನ್ನು ವಹಿಸಿ ತಮಗಾಗದವರ ಮೇಲೆ ವಾಗ್ಬಾಣವನ್ನು ತೂರಿ ಜಾತೀಯ ದ್ವೇಷವನ್ನು ಹುಟ್ಟಿಸುವದೂ ಉಂಟು! "ಅವಾಚ್ಯ ಅಶ್ಲೀಲ" ವಿಚಾರಗಳ ಮೇಲೆ ಹತೋಟಿಯಿರಬೇಕೆಂಬುದು ನಿಜವಾಗಿಯೂ ಅತ್ಯಂತ ಯೋಗ್ಯ ಸೂಚನೆ! ನಮ್ಮ ಜನರಲ್ಲಿ ನಿರಕ್ಷರತೆಯ ಫಲವಾಗಿ ಉಂಟಾಗಿರುವ ಅಜ್ಞಾನ-ಅಸಹಜ ಪ್ರವೃತ್ತಿಗಳಿಂದ ಅವರನ್ನು ಸನ್ಮಾರ್ಗಕ್ಕೆ ಹಚ್ಚುವದರಲ್ಲಿ ಪತ್ರಿಕೆಯು ಮುಖ್ಯ ಸಾಧನವಾಗಿರುತ್ತದೆ. ಪತ್ರಿಕೆಗಳು ವಿದ್ವತ್ಪೂರ್ಣವಾದ ಬರಹ ಹಾಗೂ ವಿಚಾರಗಳಿಂದ ಜನತೆಯ ಜ್ಞಾನವಿಕಸನ ಕಾರ್ಯವನ್ನು ಅವಶ್ಯವಾಗಿ ಕೈಗೊಳ್ಳಬೇಕಾಗಿದೆ. ಸಾರ್ವಜನಿಕ ಸೇವೆಯಲ್ಲಿ ನಿರತವಾಗಬೇಕಾಗಿದೆ.ಆದುದರಿಂದ ಪತ್ರಿಕೆಗಳ ಮಟ್ಟವನ್ನು ಮರ್ಯಾದಿತಗೊಳಿಸುವದಕ್ಕೆ ಕಾಯಿದೆ ಮಾಡುವದೂ ಲೋಕದ ದೃಷ್ಟಿಯಿಂದ ನ್ಯಾಯವೇ ಆಗಿದೆ. ಪತ್ರಿಕೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಆಯಾಯ ಪ್ರಾಂತಗಳು ಇಟ್ಟುಕೊಂಡಿರುವ ನೂರಾರು ಕಾಯಿದೆಗಳನ್ನು ರದ್ದುಪಾಲು ಮಾಡಿ ನ್ಯಾಯವಾದ ಕಾಯಿದೆಗಳನ್ನು ಹೇರಲಾಗಿದೆ.ನಾವು ಸದಾ ವಾದವನ್ನು ಭಾವನಾಪರವಾಗಿ ತೆಗೆದುಕೊಳ್ಳಬಾರದು. ಯಥಾರ್ಥದ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಬೇಕು. ಸವ್ಯ ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಟ್ಟ ಮಸೂದೆಯು ಸೌಮ್ಯ ರೀತಿಯದಾಗಿದ್ದು ರಾಷ್ಟ್ರದ ಸೇವೆಯಲ್ಲಿ ನಿರತವಾಗಿರುವ ಯೋಗ್ಯ ಪತ್ರಿಕೆಗೆ ಅದರಿಂದ ಯಾವುದೇ ರೀತಿಯ ಬಾಧಕವಿರುವುದಿಲ್ಲ. ಅಶ್ಲೀಲ—ಅವಾಚ್ಯ—ಅವಾಸ್ತವವಿಚಾರಗಳ ಪತ್ರಿಕೆಗಳು ಅರಾಜಕತೆಯನ್ನುಂಟುಮಾಡಿ ದೇಶದ ಸುರಕ್ಷಿತತೆಗೆ ಗಂಡಾಂತರಪ್ರಾಯವಾಗುವ ಸಂದರ್ಭದಲ್ಲಿ ಅವನ್ನು ಹತೋಟಿಯಲ್ಲಿರಿಸುವುದು ಆಳುವ ಸರಕಾರದ ಆದ್ಯ ಕರ್ತವ್ಯ! ಬೇರೆ ದೇಶದಲ್ಲಿ ಈ ಬಗೆಯ ಕಾಯಿದೆಗಳು ಪತ್ರಿಕೆಗಳಿಗಿಲ್ಲವೆಂದು ವಾದಿಸುವಲ್ಲಿ ಅಲ್ಲಿಯ ಜನರು ಅಷ್ಟೇ ಸುಶಿಕ್ಷಿತರು ಹಾಗೂ ವಿದ್ಯಾವಂತರೆನ್ನುವದನ್ನು ನಾವು ಮರೆಯಬಾರದು! ಆದುದರಿಂದ ಸದ್ಯದ ಈ ಮಸೂದೆಯಿಂದ ಪತ್ರಿಕಾ ಲೋಕಕ್ಕೆ ಗಂಡಾಂತರವಿದೆಯೆಂದು ವ್ಯರ್ಥಾಲಾಪವನ್ನು ಹೂಡುವದರಲ್ಲಿ ಅರ್ಥವಿಲ್ಲ!

ಲೋಕಾಂತ

ಶ್ರೀ ಶ್ರೀನಿವಾಸ ಮಲ್ಯರಿಗೆ ಕಾರ್ಯದರ್ಶಿಪದ?

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನೂತನ ಕಾಂಗ್ರೆಸ್ ಕಾರ್ಯಸಮಿತಿಯ 15 ಜನ ಸದಸ್ಯರನ್ನು ನೇಮಿಸಿದರು. ಇನ್ನೈದು ಸ್ಥಾನಗಳನ್ನು ಹಾಗೆಯೆ ಕಾದಿಡಲಾಗಿದೆ. ಲಾಲಬಹದ್ದೂರ ಶಾಸ್ತ್ರಿ ಹಾಗು ಯು. ಶ್ರೀನಿವಾಸ ಮಲ್ಯರು ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕಗೊಂಡಿರುವರು. ಕರ್ನಾಟಕಕ್ಕೆ ಕಾರ್ಯದರ್ಶಿಯ ಪದ ಸಿಕ್ಕುತ್ತಿರುವದು ಇದು ಮೊದಲನೇ ಬಾರಿಯದೆಂದು ತಿಳಿಯುತ್ತದೆ.

ಶ್ರೀ ಗುಲಜರಿಲಾಲರಿಗೆ ಕೇಂದ್ರ ಮಂತ್ರಿಪದ.

ಭಾರತ ಸರಕಾರದ ಯೋಜನಾ ಆಯೋಗದ ಉಪಾಧ್ಯಕ್ಷ ಶ್ರೀ ಗುಲಜರಿ ನಂದಾರವರನ್ನು ಕೇಂದ್ರದ ಯೋಜನಾ ಮಂತ್ರಿಗಳೆಂದು ಸಾರಲಾಗಿದೆ.

ಡಾ. ರಾಜನ್ನರ ರಾಜಿನಾಮೆ

ಮದ್ರಾಸದ ಆರೋಗ್ಯ ಮಂತ್ರಿ ಡಾ| ರಾಜನ್ನರು ತನ್ನ 71ನೇ ವಯಸ್ಸಿನಲ್ಲಿ ಹೆಚ್ಚಿನ ಹೊಣೆಯನ್ನು ಹೊರುವದು ಆರೋಗ್ಯವಿಲ್ಲದಿರುವ ಪ್ರಯುಕ್ತ ಮಂತ್ರಿಪದಕ್ಕೆ ರಾಜೀನಾಮೆ ಸಲ್ಲಿಸಿರುವರು.

ಕಾಂಗ್ರೆಸದ ಟಿಕೇಟಿಗಾಗಿ ಮೇಲಾಟ

ಕರ್ನಾಟಕದ ಒಟ್ಟು 75 ಸ್ಥಳಗಳಿಗೆ 183 ಅರ್ಜಿಗಳು ಬಂದಿವೆಯೆಂದು ತಿಳಿಯುತ್ತದೆ. ಅವುಗಳಲ್ಲಿ 156 ಶಾಸನ ಸಭೆಗೂ 27 ಪಾರ್ಲಿಮೆಂಟು ಸದಸ್ಯತನಕ್ಕೂ ಬಂದಿವೆ. ದ. ಕನ್ನಡದ 11 ಸ್ಥಳಗಳಿಗೆ 38 ಅರ್ಜಿಗಳು ಬಂದಿವೆ. ಪಾರ್ಲಿಮೆಂಟಿಗೆ ಶ್ರೀ ಬೆನಗಲ್ ಶಿವರಾವ್ ಮತ್ತು ಯು. ಶ್ರೀನಿವಾಸ ಮಲ್ಯ ಅವರು ಅರ್ಜಿ ಸಲ್ಲಿಸಿರುತ್ತಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿ., ಉಡುಪಿ.

ನಡಿಯುವ ಚಿತ್ರ.

ತಮ್ಮೆಲ್ಲರ ನಲ್ಮೆಯ ನಟರೆಲ್ಲ ಒಂದುಗೂಡಿ ನಟಿಸಿದ

ನಿಶಾನಾ

ಅಶೋಕ್ ಕುಮಾರ್, ಮಧುಬಾಲ, ಗೀತಾಬಾಲಿ, ಶ್ಯಾಮ, ನವಾಬ್, ಯಾಕೂಬ್ ಮೊದಲಾದವರು

ತಾ. 21—9—51ರಿಂದ

ಮೈಸೂರು ಸಾಬು ನಟಿಸಿದ

ಇಂಗ್ಲಿಷ ವರ್ಣಚಿತ್ರದ ಹಿಂದಿ ಅನುವಾದ

ಬಗದಾದ್-ಕಾ-ಚೋರ್

ಕುಂದಾಪುರ. ಡಿ. ಮು. ಕೋರ್ಟಿನಲ್ಲಿ

O. S. 195/1950

ವಾದಿ— ಶಂಕರನಾರಾಯಣ ಮಯ್ಯ.
ಪ್ರತಿವಾದಿರು—ಬಾಲಚಂದ್ರರಾಯ ಕೂಡ.
2ನೆ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ,
2ನೆ ಪ್ರತಿವಾದಿಳು ರುಕ್ಮಬಾಯಿ ರಾಮರಾಯರ ವಿಧವೆ, ಬಜೂರು ಗ್ರಾಮಸ್ಥಳು.

ಮೇಲ್ಕಂಡ ದಾವೆಯು ಕೈಫಿಯತ್ತನ್ನು ವಾದಿಯು ದುರಸ್ತು ಪಡಿಸಿರುವದರಿಂದ ಆ ದುರಸ್ತು ಪಡಿಸಿದ ಸಂಬಂಧ ನಿಮ್ಮ ಉದಾಹರಣೆಯದ್ದರೆ ತಾರೀಖು 29-9-1951ನೆ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ಸದ್ರಿ ತಾರೀಕಿನ ದಿವಸ ನೀವು ಹಾಜರು ಆಗದೆಯಿದ್ದರೆ ನಿಮ್ಮ ಗೈರ ಹಾಜರಿಯಲ್ಲಿ ನ್ಯಾಯವು ತೈಸಲು ಮಾಡಲಾಗುವದೆಂತ ನೀವು ತಿಳಿಯತಕ್ಕದ್ದು.

B. Mahabala Holla.
Advocate for plff.
ಮೊಕ್ಕಾಂ ಕುಂದಾಪುರ, 17-9-51.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 219/50

ವಾದಿ—ಶಂಕರನಾರಾಯಣ ಮಯ್ಯ
ಪ್ರತಿವಾದಿ—ತಿಮ್ಮಪ್ಪ ಮಯ್ಯ ವಗೈರಾ.
2ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ:-

2ನೇ ಪ್ರತಿವಾದಿ ರಾಮಚಂದ್ರರಾಯ ಪಾಂಡುರಂಗರಾಯರ ಮಗ, ಬಜೂರು ಗ್ರಾಮಸ್ಥ,

ಮೇಲ್ಕಂಡ ದಾವೆಯ ಕೈಫಿಯತ್ತನ್ನು ವಾದಿಯು ದುರಸ್ತು ಪಡಿಸಿರುವದರಿಂದ ಆ ದುರಸ್ತು ಪಡಿಸಿದ ಸಂಬಂಧ ನಿಮ್ಮ ಉದಾಹರಣೆಯಿದ್ದರೆ ತಾರೀಖು 29-9-1951ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ಸದ್ರಿ ತಾರೀಕಿನ ದಿವಸ ನೀವು ಹಾಜರು ಆಗದೆ ಇದ್ದರೆ ನಿಮ್ಮ ಗೈರ ಹಾಜರಿಯಲ್ಲಿ ನ್ಯಾಯವು ತೈಸಲು ಮಾಡಲಾಗುವದೆಂತ ನೀವು ತಿಳಿಯತಕ್ಕದ್ದು.

B. Mahabala Hollu,
Advocate for plaintiff
ಕುಂದಾಪುರ ತಾ, 17-9-51

ಉಡುಪಿ

ಕರ್ನಾಟಕ ಸಂಘದ ಆಶ್ರಯದ-ವತಿಯಿಂದ ಈಚೆಗೆ ಕೆಲವು ವರುಷಗಳಿಂದ ನಡೆದು ಬರುತ್ತಿರುವ ಪಂಡಿತ ಮೊಳಹಳ್ಳಿ ನಾರಾಯಣಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆಯು ತಾ 7-10 51 ರಿಂದ ಜರಗಲಿರುವ ದಸರಾ ಸಾಹಿತ್ಯೋತ್ಸವದ ವೇಳೆ ನಡೆಯಲಿರುವುದು. ಅಲ್ಲದೆ ಸಾಹಿತ್ಯೋತ್ಸವದ ಅಂಗಗಳಾಗಿ ವಾಚನ ಸಾಹಿತ್ಯ ಕಾವ್ಯವಾಚನ ಲೇಖನ ಇತ್ಯಾದಿ ಸ್ಪರ್ಧೆಗಳೂ ನಡೆಯಲಿರುವವು. ಸ್ಪರ್ಧೆಗಳ ದಿನ ಹೊತ್ತು ಸ್ಥಳ ಮೊದಲಾದ ವಿವರಗಳನ್ನೂ ಕವ ಪ್ರಕಟಿಸಲಾಗುವುದು

ಮೆಡಿಕಲ್ ಕಾಲೇಜು ತೆರೆಯಲು ಒಪ್ಪಿಗೆ:-ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್ ಮಣಿಪಾಲ, ಇದರ ಸುಪ್ರೀಮ್ ಗವರ್ನಿಂಗ್ ಬೋಡಿ ಮೀಟಿಂಗು ಇದೇ ತಾ 15ರಲ್ಲು ಸಂಜೆ ಮುಕುಂದ ನಿವಾಸದಲ್ಲಿ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಕೆಡಮಿ ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈಗಳು ಕಾಲೇಜು ಯೋಜನೆಯ ವಿಚಾರದಲ್ಲಿ ತನ್ನ ಮುದ್ರಿತ ಭಾಷಣ ವನ್ನೋದಿದರು. ಡಾ। ಕೆ. ಎಲ್. ಐತಾಳ್, ಶ್ರೀಗಳಾದ ಯು. ಎ. ಪೈ ಮತ್ತು ಎ. ಜೆ. ಅಲ್ಸೆಯವರು ಕಾಲೇಜು ತೆರೆಯ ಬೇಕಾಗಿ ಡಾ। ಪೈಗಳ ಅಭಿಪ್ರಾಯವನ್ನು ಸಮರ್ಥಿಸಿ ಮಾತನಾಡಿದರು ಸರಕಾರದ ಮಂಜೂರಾತಿ ನಿರೀಕ್ಷಣೆಯನ್ನು ಮಾಡದೆ ಒಡನೆಯೇ ಕಾಲೇಜನ್ನು ಸ್ಥಾಪಿಸ ಬೇಕಾಗಿ ಬಹುಮತದ ನಿರ್ಧಾರವಾಯಿತು. ಆ ಮೆಡಿಕಲ್ ಕಾಲೇಜಿಗೆ ಕಸ್ತೂರಿ ಬಾ ಮೆಡಿಕಲ್ ಕಾಲೇಜು ಎಂದು ಹೆಸರಿಡಬೇಕಾಗಿಯೂ ಕಾಲೇಜು ಕಟ್ಟಡದ ಶಂಕುಸ್ಥಾಪನೆಗೆ ಡಾ। ರಾಜೇಂದ್ರ ಪ್ರಸಾದರನ್ನು ಕರೆಯಬೇಕಾಗಿಯೂ ನಿರ್ಣಯಗಳಾದುವು ಆದಷ್ಟು ಬೇಗನೆ ಸರಕಾರದ ಅಂಗೀಕಾರಕ್ಕಾಗಿ ಯತ್ನಗಳನ್ನು ಮಾಡಬೇಕೆಂದೂ ನಿರ್ಧಾರವಾಯಿತು.

ಕಾಲೇಜು ತೆರೆಯುವ ಸಿದ್ಧತೆಗಳನ್ನು ಮಾಡುವರೆ ಎಡ್ಮಿನಿಸ್ಟ್ರೇಟಿವ್ ಕಮಿಟಿಗೆ ಅಧಿಕಾರವೀಯಲಾಯಿತು

ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು—ತಾ 18 ರ್ರ ಶ್ರೀ ಬನ್ನಂಜೆ ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು ಶ್ರೀನಿವಾಸ ಮಲ್ಯರು ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದ ಬಗ್ಗೆ ಅವರನ್ನು ಅಭಿನಂದಿಸುವ ಮತ್ತು ಟಂಡನ್ ನೆಹರೂರವರು ರಾಜಿಯಾದ ಬಗ್ಗೆ ಸಂತೋಷ ಸೂಚಿಸುವ ನಿರ್ಣಯಗಳಾದುವು ಶ್ರೀ ಟಿ. ಎ ಪೈಗಳ ಉಮೇದ್ವಾರಿಕೆಯನ್ನು ಉಡುಪಿ ಮತದಾರ ಕ್ಷೇತ್ರದ ಪ್ರಮುಖರನೇಕರಿಂದ ಸಮರ್ಥಿಸಿಬಂದ ಅರ್ಜಿಗಳನ್ನು ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಕಳುಹಿಸಬೇಕೆಂದಾಯ್ತು.

ಕಾಂಗ್ರೆಸು ಹುರಿಯಾಳುಗಳು—ಮದ್ರಾಸ್ ಎಸೆಂಬ್ಲಿ ಸೀಟಿಗೆ ಉಡುಪಿ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಟಿಕೇಟಿಗಾಗಿ ಶ್ರೀಗಳಾದ ಉಪೇಂದ್ರ ಶ್ರೀನಿವಾಸ ನಾಯಕ್, ಟಿ. ಎ. ಪೈ ಮತ್ತು ಬಿ. ಪಿರಿಯಣ್ಣ ಹೆಗ್ಡೆಯವರು ಅರ್ಜಿಹಾಕಿರುತ್ತಾರೆ ಎಂದು ತಿಳಿದುಬರುತ್ತದೆ.

ಸೇಲ್ಸ್ ಟೇಕ್ಸ್ ಕಾನೂನಿನ ಶರ್ತಗಳೂ ಸಾಹುಕಾರರೂ—ಐಬಲ್ ಹಾರ್ಟ್ ಚೇಂಬರ್ ಒಫ್ ಕೊಮರ್ಸ್-ಇದರ ನೇತೃತ್ವದಲ್ಲಿ ದಿನಾಂಕ 11ರಂದು ಮಾಡಿದ ಸಾಹುಕಾರರ ಸಭೆಯಲ್ಲಿ ಶ್ರೀ ಎನ್. ಎಸ್ ಹರಿಹರ ಐಯರರು ಮಾತನಾಡುತ್ತಾ ಸಾಹುಕಾರರ ಬಂಧುಗಳು ಸೇಲ್ಸ್ ಟೇಕ್ಸ್ ಕಾನೂನಿನ ಶರ್ತಗಳನ್ನು ತಮ್ಮ ಕ್ಷೇಮಕ್ಕಾಗಿ ಚೆನ್ನಾಗಿ ಅಭ್ಯಾಸಮಾಡಬೇಕೆಂದು ಉಪದೇಶಿಸಿದರು. ಸಾಹುಕಾರರ ಲೆಖ್ಖಪುಸ್ತಕಗಳನ್ನು ಪರೀಕ್ಷಿಸುವ ಅಧಿಕಾರಿಗಳಿಗೆ, ಅವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲಿಕ್ಕಾಗಲೀ, ಇಲ್ಲವೆ ಸ್ಟೋಕುಮಿಂಟುಗಳಿಗಾಗಿ ಸಾಹುಕಾರರ ಅಂಗಡಿ ಪ್ರವೇಶಮಾಡಲಿಕ್ಕಾಗಲೀ ಸೇಲ್ಸ್ ಟೇಕ್ಸ್ ಅಫೀಸರರಿಗೆ ಅಕ್ಕರವಿಲ್ಲ ಅಧಿಕಾರ ಕೊಡಲಾಗಲಿಲ್ಲವೆಂದರು ಸಭಾಧ್ಯಕ್ಷತೆಯನ್ನು ವಹಿಸಿದ ಶ್ರೀ ಕೆ. ರಾಮಣ್ಣ ಮನ್ನಾರವರು ಶ್ರೀಯುತರ ಹಿತವಚನಗಳನ್ನು ಪುಷ್ಟೀಕರಿಸಿ ಮಾತನಾಡಿದರು

ಶ್ರೀ. ಟಿ ಎ. ಪೈಗಳು

ಮುಂಬರುವ ಮಹಾಚುನಾವಣೆಗೆ ಯೋಗ್ಯ ಹುರಿಯಾಳುಗಳನ್ನು ಆರಿಸುವ ಕುರಿತು ಭಾರತ ಪ್ರಧಾನಿ ನೆಹ್ರೂರವರು ಆಗಿಂದಾಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಸಾರ್ವಜನಿಕ ಸೇವಾದೃಷ್ಟಿ- ರಾಷ್ಟ್ರೋನ್ನತಿಯ ಬಗ್ಗೆ ಆತನ ಅನುಭವ ಅನುಭವ- ಮುಂತಾದ ಅರ್ಹತೆಯನ್ನು ನೆಹ್ರೂರವರು ಉಲ್ಲೇಖಿಸಿರುವುದು ಗಮನಾರ್ಹ ಸಂಗತಿ! ಮುಖ್ಯ ಮಂತ್ರಿಗಳ ಆದೇಶದಂತೆ ಹುರಿಯಾಳುಗಳನ್ನು ಆರಿಸುವುದರಲ್ಲಿ ಜನತೆ ಮುಕ್ತದೃಷ್ಟಿ ತನದಿಂದ ವರ್ತಿಸಬೇಕಾಗಿದೆ. ಉಡುಪಿಯ ಮತದಾನ ಪ್ರದೇಶಕ್ಕೆ ಕಾಂಗ್ರೆಸ್ ಹುರಿಯಾಳುಗಳಾಗಿ ನಿಲ್ಲುವ ಅಪೇಕ್ಷೆಯಿಂದ ಶ್ರೀ ಟಿ ಎ. ಪೈಗಳವರು ತನ್ನ ಅರ್ಜಿಯನ್ನು ಕೆ ಪಿ ಸಿ ಸಿ ಗೆ ಸಲ್ಲಿಸಿರುತ್ತಾರೆಂದು ಕೇಳಿ. ತ್ತೇವೆ ಸಾರ್ವಜನಿಕ ಸೇವಾ-ನಾನಾ ಚಟುವಟಿಕೆಗಳ ಮೂಲಕ ಜನಪ್ರಿಯರಾದ ಶ್ರೀ ಟಿ ಎ ಪೈಗಳ ಆಯ್ಕೆ ಅತ್ಯಂತ ಮಹತ್ವನಾದುದು ಮಾತ್ರವಲ್ಲದೆ ಜನತೆ ಹಾಗೂ ಕಾಂಗ್ರೆಸ್ಸಿನ ಸರಿಯಾದ ಇಚ್ಛೆಗಳನ್ನು ಕೈಗೂಡಿಸಬಲ್ಲ ಕಾರ್ಯದಕ್ಷತೆ ಅವರಲ್ಲಿದೆಯೆಂದು ಧಾರಾಳವಾಗಿ ಹೇಳಬಹುದು ನೈಸರ್ಗಿಕ ಗುಣದಿಂದ ಮಹಾ ಬಂದರವಾಗುವ ಯೋಗ್ಯತೆಯುಳ್ಳ ಮಲ್ಪೆಯ ಪ್ರಾಶಸ್ತ್ಯವನ್ನು ಗೋಚರಿಸಿಕೊಟ್ಟ ವರೆಂದರೆ ಶ್ರೀ ಪೈಗಳವರು ಅವರ ಮಾರ್ಗದ ಫಲಸ್ವರೂಪವಾಗಿ ತಜ್ಞರ ಅಭಿಪ್ರಾಯದಂತೆಯೂ ಮಲ್ಪೆಗೆ ಪ್ರಥಮ ಪ್ರಾಶಸ್ತ್ಯ ಸಿಗುವ ಲಕ್ಷಣ ಕಂಡುಬರುತ್ತಲಿದೆ. ಜೋಗದ ವಿದ್ಯುಚ್ಛಕ್ತಿಯ ಸಂಬಂಧಯು ವಿಚಾರದಲ್ಲಿ ಶ್ರೀ ಪೈಗಳು ವಿಶೇಷ ಆಸ್ಥೆವಹಿಸದೆ ಹೋಗಿದ್ದರೆ ಮದ್ರಾಸು ಮೈಸೂರು ಸರಕಾರಗಳೊಳಗಿನ ಕರಾರಿಗೆ ಇಷ್ಟು ಶೀಘ್ರ ಸಹಿ ಬೀಳುತ್ತಿತ್ತಿಲ್ಲವೇನೋ! ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ನಿರ್ಮಾಣದಲ್ಲಿ ಅವರು ವಹಿಸಿದ ಶ್ರಮ ಅಸದೃಶವಾದುದು! ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಇದರ ಜನರಲ್ ಮ್ಯಾನೇಜರಾಗಿ ಸಾಕಷ್ಟು ವ್ಯವಹಾರ ಜಾಣ ಪಡೆದಿದ್ದಾರೆ ಕಳೆದ ಬಾರಿ ಜರಗಿದ ಪೈರ್ಯಾಯ ವಸ್ತು ಪ್ರದರ್ಶನದ ಏರ್ಪಾಡಿಗೆ ಇವರ ಕೈವಾಡವೇ ಕಾರಣವಾಗಿತ್ತೆನ್ನಬಹುದು. ಸರ್ ಎಮ್. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಎ. ಐ. ಎಮ್. ಓ ಎಂಬ ಕೈಗಾರಿಕಾ ಸಂಸ್ಥೆಯ ಕೇಂದ್ರ ಸಮಿತಿಯ ಸದಸ್ಯರು, ಹರಿಜನ ಸೇವಕ ಸಂಘದ ಮತ್ತು ಆಲೆಪೂರು ಸೇವಾ ಸಮಿತಿಯ ಅಧ್ಯಕ್ಷರು- ಸಾಕಷ್ಟು ನಿರ್ಮಾಣ ಸಂಘದ ಕಾರ್ಯದರ್ಶಿಗಳೂ, ಇನ್ನಿತರ ಸಾರ್ವಜನಿಕ ಸಂಸ್ಥೆಗಳ ಸದಸ್ಯರೂ ಆಗಿರುವರು.

1942ರ ಚಳವಳದಲ್ಲಿ ಅರುಣ ಅಸಫ್ ಅಲಿ, ಅಚ್ಯುತ ಪಟವರ್ಧನ್ ಮೊದಲಾದವರೊಂದಿಗೆ ಶ್ರಮಿಸುತ್ತಿದ್ದರಲ್ಲದೆ ಇವರು ವಿದ್ಯಾಭ್ಯಾಸಂಗ ಮಾಡುತ್ತಿದ್ದ ಸಿಡೆನ್ ಹೊಮ್ ಕಾಲೇಜಿನ ವಿದ್ಯಾರ್ಥಿಗಳ ಮುಂದಾಳುಗಳೂ ಆಗಿದ್ದರು.

ಕಾಂಗ್ರೆಸಿನ ಎಲ್ಲ ಚಟುವಟಿಕೆಗಳಲ್ಲಿ ಸಹಕರಿಸುತ್ತ ಬಂದಿರುವ ಇವರು ಹೀಗೆ ತನ್ನ ನಾನಾ ಮುಖಚಟುವಟಿಕೆಗಳ ಮೂಲಕ ಉಡುಪಿಯ ನಾಗರಿಕರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಸಾಮಾಜಿಕ ಕಾರ್ಯ-ಚಟುವಟಿಕೆಗಳಲ್ಲಿ ವಿಶೇಷ ಉತ್ಸಾಹಿಗಳೆಂದೂ ಉಜ್ವಲ ದೃಷ್ಟಿಕೋನದವರೂ ಆಗಿದ್ದಾರೆ. ರಾಜಕೀಯ-ಸಾಮಾಜಿಕ-ಆರ್ಥಿಕ ವಿಚಾರಗಳಲ್ಲಿ ಆಳವಾದ ಅನುಭವವುಳ್ಳವರಾಗಿರುವರೆ ಶ್ರೀ ಪೈಗಳವರ ಪ್ರತಿನಿಧಿತ್ವದಿಂದ ನಮ್ಮ ಜಿಲ್ಲೆಗೆ ವಿಶೇಷತಃ ಉಡುಪಿಗೆ ಹೆಚ್ಚು ಲಾಭವಿದೆಯೆಂದು, ಇವರ ಪ್ರಾಮಾಣಿಕತನ ಯೋಗ್ಯತೆಗಳನ್ನು ತಿಳಿದ ಮತದಾರ ಕ್ಷೇತ್ರದ ಪತ್ರಿಕೆಗಳು, ಡಾಕ್ಟರರು, ವಕೀಲರು ಮುಂತಾದವರು ಪತ್ರಿಕೆಗಳಲ್ಲಿ ಸೂಚಿಸಿದ ಆಸ್ಥೆ ಮಹತ್ವದ ಹೇಳಿಕೆಗಳು ಇವರ ಉಮೇದ್ವಾರಿಕೆಯನ್ನು ಮಹತ್ವಪಡಿಸಿದ್ದಾರೆ ಶ್ರೀ ಪೈಗಳನ್ನು ನಾಡಿನ ಪ್ರತಿನಿಧಿಯನ್ನಾಗಿ ದ ಕಿಯ ಲು ಸಂಸದ್ಯ ಅವಘಡವಿರಲು ವಿಚಾರಿಸಿಲ್ಲ ಎಂಬಲ್ಲೇ ಸ್ಥಳೀಯ ಕಾಂಗ್ರೆಸ್ ಸಮಿತಿಯು ಶ್ರೀಯುತರ ಉಮೇದ್ವಾರಿಕೆಯನ್ನು ಸಮರ್ಥಿಸಿರುವುದಾಗಿ ತಿಳಿದುಬರುತ್ತದೆ.

ಕುಂದಾಪುರ ರೆಂಟ್ ಕಂಟ್ರೋಲರ ಕೋರ್ಟಿನಲ್ಲಿ

H.R.C.O.P. No. 54/1951

ಶೇಖ್ ಅಹ್ಮದ್ ಯಾನೆ ಹುಸೇನ್ ಸಹೇಬ —ಅರ್ಜಿದಾರ

ಮತ್ತು

ಯು. ಶಿವರಾವ್-ಉಡಿಯಾವರ ಶೀನ ನವರ ಮಗ-ಉಡ್ಪಿ ಕಸ್ಬಾ- ಮೂಡನಿಡಂಬೂರು ಗ್ರಾಮದ- ಉಡ್ಪಿ ಮುನ್ಸಿಪಾಲಿಟಿಯ ಸೆಂಟ್ರಲ್ ವಾರ್ಡಿನಲ್ಲಿರುವವನು. —ಎದುರು ಅವರೊಳಗೆ

ಎದ್ರಿಗೆ ಈ ಮೂಲಕ ತಿಳುಹಿಸುವದೇ ನೆಂದರೆ—

ಉಡ್ಪಿ ಕಸ್ಬಾ ಮೂಡನಿಡಂಬೂರು ಗ್ರಾಮದ ಸ. ನಂ. 111 8ರಲ್ಲಿ ವ ಹಾಡು ಪ.ಛ್ಛದಲ್ಲಿ ಇರುವ ಉಡ್ಪಿ ಮುನ್ಸಿಪಾಲಿಟಿ ಸಂಟ್ರ 10-4-27 ನೆ ಹಂಚುಹಾವಣೆಯ ಮನೆ ಜಾಪ-ಇದ್ದಲ್ಲಿರುವ ತೆಂಗಿನಮರಗಳು ವಗೈರೆಯನ್ನು ಎದ್ರಿಯು ಅರ್ಜಿದಾರನ ವಂಗೆ-ತಾಗಲೇ ಕಟ್ಟೆ ವಸ್ಥಳಾಗಿ ಅನುಭವಿಸಿಕೊಂಡು ಬರುತ್ತಲಿದ್ದು, 1951ನೆ ಇಸ್ವಿ ಎಪ್ರಿಲ್ ತಿಂಗಳ ಆದಿಯಿಂದ ಎದ್ರಿಯು ಬಾಡಿಗೆ ಬಾಕಿಮಾಡಿಕೊಂಡ ಸಬಬಿನಿಂದ ಸದ್ರಿ ಆಸ್ತಿಗಳ ಸ್ವಾಧೀನತೆ ಕೇಳಿ ಅರ್ಜಿದಾರನು ಎದ್ರಿಯ ಮೇಲೆ ಮಾಡಿದ ಅರ್ಜಿಯು ತಾ 13-10-1951ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಉಡ್ಪಿ ಹೊಕ್ಕಾಮಿನಲ್ಲಿ ಇಟ್ಟಿದೆ. ಆ ಬಾಬಿನಲ್ಲಿ ಎದ್ರಿಗೆ ನಿಮಗೆ ಏನಾದರೂ ಆಕ್ಷೇಪ ಇದ್ದರೆ ಸದ್ರಿ ದಿನ ಹಗಲು 10 ಗಂಟೆಗೆ ಸ್ವತಹಾ ಯಾ-ವಕೀಲರ ಮುಖಾಂತ್ರ ಹಾಜ್ರಾಗಿ ಜ್ವಾಬ ಕೊಡತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Court)

U. B. Krishna Rao
Advocate for the Pititioner
Udipi 18-9-1951.

ದಿ ವಿಜಯಾ ಬೇಂಕ್ ಲಿಮಿಟೆಡ್ ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಜಿಸ್ಟ್ರ ನೋಟೀಸು ಕೊಟ್ಟಾಗ್ಯೂ ಜಾಹೀರುಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಜಿಸ್ತ್ರ ನೋಟೀಸು ಕಾಣದಂತದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ಇದೇ ತಾರೀಕು 26 9 51ನೇ ಬುಧವಾರದೊಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ತಾರೀಕು 29-9-51ನೇ ಶನಿವಾರ ಮಧ್ಯಾಹ್ನ ಗಂಟೆ 2 ಕ್ಕೆ ಯಾ ಏಲಂಗೆ ಮುಕ್ತ ಕೊಡುವ ಇನ್ನಿತರ ದಿನಗಳಲ್ಲಿ ಗಾಬ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿ ಬಿ.

ಬೋನು ನಂಬ್ರ	ಋಟ್ಟವರ ಹೆಸರು ಮತ್ತು ವಿಳಾಸ
158/46 7	ಶ್ರೀ. ಜ ಬೊಗ್ಗು ಶೆಟ್ಟಿ, ತಮ್ಮಯ ಶೆಟ್ಟಿ ಮಗ, ಜಡ್ಡು ದೊಡ್ಡ ಮನೆ ಕುಕ್ಕುಂದೂರು ಪೋಸ್ಟು ಕುಕ್ಕುಂದೂರು
654/18.7	ಶ್ರೀ ಕೆ. ಧರ್ಮರಾಜ ಹೆಗ್ಡೆ, ಬ್ರಹ್ಮ ಸೂರಪ್ಪ ಹೆಗ್ಡೆರ ಮಗ, ಉಜ್ರೆ, ಪೋಸ್ಟು ಉಜ್ರೆ.
866/48 9	ಶ್ರೀ ಆಂಟೋನ್ ಡಿ ಸೋಜ, ಶಿವಾನ್ ಡಿ ಸೋಜರ ಮಗ ಎಲ್ಲಪ್ಪರು ಗ್ರಾಮ ಪೋಸ್ಟು ನಕ್ರೆ
231,49,50	ಶ್ರೀ. ಜ ಗೋವಿಂದ ಕಿಣಿ, ಚೆರಪ್ಪ ಕಿಣಿಯವರ ಮಗ, ಕಾರ್ಕಳ ಕಸಬೆ
252/50.	ಶ್ರೀ. ಕೆ ದಾಸ ಶೆಟ್ಟಿ, ಬಾಬಣ್ಣ ಶೆಟ್ಟಿ ಅಳಿಯ ಕುಂಡಿಪಿ ಮರ್ಣೆ ಗ್ರಾಮ, ಪೋಸ್ಟು ಅಜೆಕಾರು
166/50	ಶ್ರೀ. ಕೆ. ಕೃಷ್ಣಯ ಶೆಟ್ಟಿ ಶೀನ ಶೆಟ್ಟಿ ಅಳಿಯ ಕಲ್ಲಹಾಡಿ ಮನೆ, ಕಲ್ಯಾ ಗ್ರಾಮ, ಪೋಸ್ಟು ನಿಟ್ಟೆ.
1172/50	ಶ್ರೀ. ಕೆ. ಪಾಂಡುರಂಗ ನಾಯಕ್, ರಘುನಾಥ ನಾಯ್ಕರ ಮಗ, ಕಾರ್ಕಳ ಕಸಬೆ.
1173/50	—do— —do—

Office of the Bank, KARKALA 17-9-51.

K. Gopalkrishna Shetty
Agent,

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O S 193/50

ವಾದಿ ಶ್ರೀ. ಲಕ್ಷ್ಮೀನಾರಾಯಣ ಮಯ್ಯ

ಪ್ರತಿವಾದಿ—ಲಕ್ಷ್ಮೀನಾರಾಯಣ ಕೂಡಾ

3ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ

3ನೇ ಪ್ರತಿವಾದಿ ಗೋಪಾಲಯ್ಯ, ರಾಮಯ್ಯನವರ ಸುಬ್ರಾಯರ ಮೊಮ್ಮಗ ಬಿಜೂರು ಗ್ರಾಮಕ್ಕೆ

ಮೇಲ್ಕಂಡ ದಾವೆಯು ಕೈಪಿಯತನ್ನು ವಾದಿಯು ದಾಖಲ್ಪಡಿಸಿದುದರಿಂದ ಆ ದಾವೆಯು ಇಂದು ನಿಮ್ಮನ್ನು ಉಪಾಹನ ಯದ್ದುರ ತಾರೀಕು 29 9 51ನೆ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ಸದ್ರಿ ತಾರೀಕಿನ ದಿವಸ ನೀವು ಹಾಜರು ಆಗದಿದ್ದರೆ ನಿಮ್ಮ ಗೈರುಹಾಜರಿನಲ್ಲಿ ದಾವೆ ತೀರ್ಮಾನಿಸಲು ಮಾಡಲಾಗುವದೆಂದು ನಿಮಗೆ ತಿಳಿಸುತ್ತೇನೆ.

M Mahabala Holla,
Advocate for plaintiff
ಕುಂದಾಪುರ ತಾ. 17 9-51

ಮಂಗಳೂರು

ವೈದ್ಯರ ಮತ್ತು ಪತ್ರಿಕಾಪ್ರತಿನಿಧಿಗಳ ಸಂಯುಕ್ತ ಸಭೆಯಲ್ಲಿ ಮೆಡಿಕಲ್ ಕಾಲೇಜು ಕುರಿತು ವಿಚಾರವಿನಿಮಯ—ಉಡುಪಿಯಲ್ಲಿ ಮೆಡಿಕಲ್ ಕಾಲೇಜೊಂದನ್ನು ಮಣಿಪಾಲದ ಎಕಡೆಮಿ ಒಫ್ ಜನರಲ್ ಎಜ್ಯುಕೇಶನಿನವರು ತೆರೆಯಲಿರುವರೆಂಬ ವಿಚಾರವನ್ನು ಎಕಡೆಮಿ ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈಗಳವರು ಇದೇ ತಾ. 12ರಂದು ಮಂಗಳೂರಲ್ಲಿ ಜರಗಿದ ವೈದ್ಯರ ಮತ್ತು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು. ಜಿಲ್ಲಾ ಮೆಡಿಕಲ್ ಸಂಘದ ಅಧ್ಯಕ್ಷ ಡಾ। ಎಂ. ಎಫ್. ಕೊಯೆಲ್ಹೋರವರು ಸಭಾಧ್ಯಕ್ಷತೆ ವಹಿಸಿದ್ದರು.

ಸಭಾರಂಭದಲ್ಲಿ ಸಂಘದ ಕಾರ್ಯದರ್ಶಿ ಡಾ। ಎಚ್. ಉಮೇಶರಾಯರು ಡಾ। ಪೈಗಳ ಪರಿಚಯ ಮಾಡಿಕೊಟ್ಟರು. ಡಾ। ಪೈಗಳು ಮೊದಲು ಎಕಡೆಮಿಯವರು ಮಾಡಿದ ಕಾರ್ಯಕಲಾಪಗಳನ್ನು ತಿಳಿಸಿದರು. ಹುಕೇನ್ ಸಮಿತಿ ವರದಿ ಮತ್ತು ಜಿಲ್ಲೆಯ ಉತ್ತರಾರ್ಧದಲ್ಲಿ ಏಳು ಹ್ಯಾಸ್ಕೂಲುಗಳನ್ನು ಸ್ಥಾಪಿಸಲು ಮಾಡಿದ ಯತ್ನಗಳನ್ನು ವಿವರಿಸಿದರು. ನಂತರ ಅವರು ತಮ್ಮ ಭಾಷಣದಲ್ಲಿ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಸ್ಥಾಪನೆಯು ಎಕಡೆಮಿಯು ಅನಂತರ ಕೈಕೊಂಡ ಕಾರ್ಯವೆಂಬುದನ್ನು ತಿಳಿಸಿ, ಮುಂದೆ ಉಡುಪಿಯಲ್ಲೊಂದು ಮೆಡಿಕಲ್ ಕಾಲೇಜು ಅಗತ್ಯವಿದೆ ಎಂಬುದನ್ನೂ ವಿವರಿಸಿದರು. ಅದರ ಮೊದಲು ಅವರು ಮಾಡಿದ ಪ್ರಯಾಣವನ್ನು ಮತ್ತು ಅದರಿಂದಾಗಿ ಅವರು ಸಂಗ್ರಹಿಸಿದ ಅನುಭವಾದಿಗಳನ್ನು ತಿಳಿಸಿದರು. ಇಂದು ಜಿಲ್ಲೆಯಲ್ಲಿ ತರುಣರು ವೈದ್ಯಕೀಯಾಭ್ಯಾಸಕ್ಕೆ ಹಾತೊರೆದು ನಿರಾಶರಾಗುತ್ತಿದ್ದಾರೆ. ಅಂಥವರಿಗೊಂದು ಮಾರ್ಗ ತೋರಿಸಲು ಈ ಕಾಲೇಜು ಅಗತ್ಯವೆಂದೂ ಈಗಾಗಲೇ ನಾಲ್ಕುನೂರ ಹದಿನಾರು ಮಂದಿಯ ಪ್ರವೇಶದ ಅರ್ಜಿಗಳು ಬಂದಿವೆಯೆಂದೂ ಹೇಳಿದರು. ನಂತರ ಎಕೆಡೆಮಿ ಅಧ್ಯಕ್ಷ ಶ್ರೀ ಟಿ. ವೈಕುಂಠ ಬಾಳಿಗರು 'ಕಾಲೇಜು ಅಗತ್ಯವಿದೆ ಎಂಬುದು ನಿರ್ವಿವಾದ. ಈ ಕುರಿತು ಎಲ್ಲರೂ ಸಹಕರಿಸಿ ಕೆಲಸ ಮಾಡಬೇಕಾಗಿದೆ' ಎಂದರು.

ಡಾ। ಬಿ. ಬಿ. ಪ್ರಭು, ಡಾ। ಬಿ. ಆರ್. ಹೆಗ್ಡೆ, ಡಾ। ಕೆ. ಬಾಳಪ್ಪ ಶೆಟ್ಟಿ, ಡಾ। ಪಿ. ನಾರಾಯಣರಾವ್, ಶ್ರೀ ಎಸ್. ಜಿ. ಸಾಲಿನ್ಸ, ಡಾ। ಆರ್. ಪಿ. ಭಟ್ ಮೊದಲಾದವರು ತಮ್ಮ ಅಭಿಪ್ರಾಯಗಳನ್ನಿತ್ತು ಕೆಲ ಪ್ರಶ್ನೆಗಳನ್ನು ಕೇಳಿದರು. ಡಾ। ಪೈಗಳೂ ಕೊನೆಯಲ್ಲಿ ಪ್ರಶ್ನೆಗಳಿಗೆಲ್ಲ ತಮ್ಮ ಮುದ್ರಿತ ಭಾಷಣದಲ್ಲಿ ಉತ್ತರವಿದೆ ಎಂದು ತಿಳಿಸಿ, ಎಲ್ಲರ ಸಹಕಾರ ಸೌಹಾರ್ದಗಳನ್ನೂ ಯಾಚಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಅಗತ್ಯವಿದೆಯೆಂದೂ, ಆ ಕಾರ್ಯದಲ್ಲಿ ಮುಂದುವರಿಯಲು ಸಮರ್ಥರೂ ಇರುವಾಗ ಈ ಕಾರ್ಯವಾಗಲೇಬೇಕು. ಯಾವ ಕಾರ್ಯಮಾಡುವಾಗಲೂ ಮುಂದಿನ ತೊಡರುಗಳಿಗಾಗಿ ಮೌನವಾಗುವುದಿಲ್ಲ. ಸೇವಾಭಾವದಿಂದ ಮುಂದುವರಿದರೆ ಫಲವು ಸಿದ್ಧವೆಂದದ್ದಲ್ಲದೆ, ಪೈಗಳ ಕಾರ್ಯ ಫಲದಾಯಕವಾಗಿ ಕಾಲೇಜು ಆಗುವಂತೆ ಪ್ರಾರ್ಥಿಸೋಣವೆಂದರು. ಡಾ। ಬಿ. ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಪ್ರೊಕ್ಯೂರ್‌ಮೆಂಟ್ ಇದೆ—ದ. ಕ. ಜಿಲ್ಲೆಯಲ್ಲಿ ಹಸುಗೆಯ ಕ್ರಮವನ್ನು ತೆಗೆದುಹಾಕುವುದಿಲ್ಲವೆಂದೂ, ಪ್ರೊಕ್ಯೂರ್‌ಮೆಂಟಿಗೆ ಈಗಾಗಲೇ ಹುಕುಮು ಬಂದಿದೆಯೆಂದೂ ತಿಳಿದು ಬರುತ್ತದೆ.

ಶಿಶುವಿಹಾರ ಶಂಕುಸ್ಥಾಪನೆ—ಮಂಗಳೂರಿನ ಭಗಿನೀ ಸಮಾಜದವರ ಶಿಶುವಿಹಾರ ಮಂದಿರದ ಶಂಕುಸ್ಥಾಪನೆಯು ಇದೇ ತಾ. 14ರಂದು ಸಂಜೆ ಜಿಲ್ಲಾಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಹಸ್ತದಿಂದ ನೆರವೇರಿತು. ಶ್ರೀ ಎಲ್. ಸಿ. ಪಾಯಸರು ಮಹಿಳೆಯರ ಸಮಾಜಸೇವಾ ಕಾರ್ಯವನ್ನು ಶ್ಲಾಘಿಸಿ ಶಿಶುವಿಹಾರವನ್ನು ಹರಸಿದರು. ಅಧ್ಯಕ್ಷರು ದೇಶದ ಬಡವರ ಸ್ಥಿತಿಯು ತೀರಾ ಚಿಂತಾಜನಕವೆಂದೂ, ಅವರ ಮಧ್ಯದಲ್ಲಿದ್ದು ಸೇವಾಕಾರ್ಯವೆಸಗುವುದು ಅತಿ ಅಗತ್ಯವಾಗಿದೆಯೆಂದೂ ತಿಳಿಸಿದರು.

ಓಣಂ ಸಮಾರಂಭ—ಮಂಗಳೂರು ಗವರ್ನಮೆಂಟ್ ಕಾಲೇಜಿನ ಮಲೆಯಾಳಿ ಸಂಘದವರು ಇದೇ ತಾ 12ರಲ್ಲಿ ಓಣಂ ಹಬ್ಬವನ್ನು ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ ಪಿ. ಟಿ. ರಾಮನ್ ನಾಯರ್ ಅವರ ಅಧ್ಯಕ್ಷತೆಯಲ್ಲಿ ಆಚರಿಸಿದರು,

ದ. ಕ. ಶ್ರೀ ರಜಕ ಕುಲೋದ್ಧಾರಕ ಸಂಘದ—ನೇತೃತ್ವದಲ್ಲಿ ತಾ 9ರಲ್ಲು ಮಂಗಳೂರಿನ ಮಡಿಕಸಬಿನವರ ಸಭೆಯು ಶ್ರೀ ಪಿಜ್ಜಿ ರಾಮದಾಸರ ಅಧ್ಯಕ್ಷತೆಯಲ್ಲಿ ಜರಗಿ ಹಲವು ನಿರ್ಣಯಗಳಾದುವು

ಜೈಲಿಗೆ ರೇಡಿಯೋ—ಮಂಗಳೂರು ಸಬ್ ಜೈಲಿನಲ್ಲಿ ಕೈದಿಗಳ ಬಗ್ಗೆ (ರೂ. 800/- ಮೌಲ್ಯದ) ರೇಡಿಯೋ ಒಂದನ್ನು ಇರಿಸುವ ಸಮಾರಂಭವು ಈಚೆಗೆ ಜಿಲ್ಲಾ ಕಲೆಕ್ಟರ್ ಶ್ರೀ ಎ ಆರ್ ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಸಿಸ್ಟೆಂಟ್ ಜಿಲ್ಲಾ ಮೆಡಿಕಲ್ ಆಫೀಸರ್ ಡಾ। ಯು. ಮಾರುತಿರಾವ್, ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಸದಾನಂದ ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು. ಆಮಂತ್ರಿತರಿಗೆ ಚಹಾಸತ್ಕಾರವಿತ್ತು.

ಜಿಲ್ಲೆಯಲ್ಲಿ ಅಂಚೆ ಚೀಟುಗಳನ್ನು ಸಂಗ್ರಹಿಸುವ ಮತ್ತು ಫೊಟೊ ತೆಗೆಯುವ ಕುಶಲವೃತ್ತಿಯವರ ಒಂದು ಸಂಘ ಸ್ಥಾಪಿಸುವ ಬಗ್ಗೆ ತಾ 7-10-51ನೆ ಆದಿತ್ಯವಾರ ಸಂಜೆ 4ಗಂಟೆಗೆ ಕೊಡಿಯಾಲ ಬೈಲಲ್ಲಿರುವ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಕಟ್ಟಡದಲ್ಲಿ ಸಭೆ ಸೇರುವುದು.

ಆಗೋಸ್ತು ತಿಂಗಳ ಫಿರ್ಕಾಭಿವೃದ್ಧಿ ಕೆಲಸಗಳು—ಕುಂಬಳೆ ಫಿರ್ಕಾದಲ್ಲಿ 7ಫರ್ಲಾಂಗು ಮಂಜೇಶ್ವರ ಫಿರ್ಕಾದಲ್ಲಿ 1ಮೈಲು ಮತ್ತು ಮೂಲ್ಕಿಯಲ್ಲಿ 2ಫರ್ಲಾಂಗ್ ಮಾರ್ಗದ ಕೆಲಸವು ಈ ತಿಂಗಳಲ್ಲಿ ಆಗಿರುತ್ತದೆ. ಕುಂಬಳೆಯಲ್ಲಿ 12ಗುಡಿ ಕೈಗಾರಿಕೆಯನು ಉತ್ತಮ ಸೇರಿಸಲು ಬೇಕಾದ ಉತ್ತಮ ಜಾತಿಯ ಹತ್ಯಾರುಗಳನ್ನು ಒದಗಿಸಿ ಕೊಡಲಾಗಿದೆ. ಬೇಳಗ್ರಾಮದಲ್ಲಿ ಕೊರಗರಿಗೆ 14 ಮನೆಗಳನ್ನು ಕಟ್ಟಿಸುವ ಕೆಲಸವು ಮುಂದುವರಿಯುತ್ತಾ ಇದೆ. ಮೂಲ್ಕಿ ಫಿರ್ಕಾದಲ್ಲಿ 39 ಹರಿಜನ ಕುಟುಂಬಗಳಿಗೆ ಮನೆಕಟ್ಟಿಸಲು ಬೇಕಾದ ಸ್ಥಳವನ್ನು ದರ್ಖಾಸ್ತಿಗೆ ಕೊಟ್ಟಿರುತ್ತದೆ.

ಕುಂಬಳೆ—ಸಿರಿಯಾ ಅಣೆಕಟ್ಟು ಕೆಲಸದ ಉಂಗಡಿ ನೋಡಲು ಪಿ. ಡಬ್ಲ್ಯು. ಡಿ. ಸೆಕ್ಷನ್ ಆಫೀಸರ್ ಶ್ರೀ ಎಮ್. ಗೋವಿಂದ ಸೆಟ್ಟಿಯು ಪರಿಮಾರು ನೀರಾವರಿ ಕೆಲಸದ ಕೇಂದ್ರಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರ ಚಾರ್ಜನ್ನು ಶ್ರೀ ಡಿ. ಮುತ್ತು ರೈಗಳು ವಹಿಸಿರುವರು.

ನೋಟೀಸು

ಉಡುಪಿ ತಾಲೂಕು ನಡ್ಸಾಲು ಗ್ರಾಮದ ಕಂಗಿತ್ಲು ಎಂಬಲ್ಲಿರುವ ತಿಮ್ಮ ಪೂಜಾರಿಯ ಅಳಿಯ ಕಾಂತಪ್ಪ ಪೂಜಾರಿಯು ಸರ್ವಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಅಳಿಯಸಂತಾನ ಕಟ್ಟು ಆಚರಣೆಯ ನನ್ನ ಭಾಗದ ಕುಟುಂಬದಲ್ಲಿ ನನ್ನ ಅಣ್ಣ ಪೂವಪ್ಪ ಪೂಜಾರಿಯವರು ಅತ್ಯಂತ ಹಿರೇ ಮಂಬಂನಾಗಿದ್ದು ನನ್ನ ಭಾಗದ ಕುಟುಂಬದ ಮೆನೇಜರನಾಗಿರುತ್ತಾನೆ. ನನ್ನ ಭಾಗದ ಕುಟುಂಬಕ್ಕೆ ಸದ್ರಿ ನಡ್ಸಾಲು ಗ್ರಾಮದಲ್ಲಿ ಚಾಲಗೇಣಿ ಹಕ್ಕಿನ ಆಸ್ತಿ ಇರುತ್ತದೆ. ಸದ್ರಿ ಆಸ್ತಿಯು ಚಾಲಗೇಣಿ ಗೇಣಿ ಜಾತಾ ಹೆಚ್ಚು ಮುನಾಫೆ ಉಳ್ಳ ಆಸ್ತಿಯಾಗಿರುತ್ತದೆ. ಅದಲ್ಲದೆ ಸದ್ರಿ ಆಸ್ತಿಯ ಮುನಾಫೆಯಿಂದ ನನ್ನ ಅಳಿಯ ಚೆನ್ನಪ್ಪ ಪೂಜಾರಿಯ ಹೆಸರಲ್ಲಿ ಸುಮಾರು ರೂಪಾಯಿ 2500/-ಮೌಲ್ಯದ ಸೊತ್ತುಗಳುಳ್ಳ ಒಂದು ಜವಳಿ ಅಂಗಡಿ ಕೂಡಾ ಇಟ್ಟಿರುತ್ತೇವೆ, ನನ್ನ ಭಾಗದ ಕುಟುಂಬಕ್ಕೆ ಎಷ್ಟನ್ನಾದರೂ ಸಾಲಮಾಡುವ ಗರ್ಜ ಇರುವುದಿಲ್ಲ. ಇದ್ದದ್ದೂ ಇಲ್ಲ. ಇಮೇ ಕಳೆದ 2ವರ್ಷದ ಹಿಂದೆ ನನ್ನ ಅಣ್ಣ ಸದ್ರಿ ಪೂವಪ್ಪ ಪೂಜಾರಿಯವರು ಚಾಲಗೇಣಿ ಚೀಟು ಬರೆದು ಹಾಕುತ್ತಿದ್ದರು. ಕಳೆದ 2ವರ್ಷಗಳಿಂದ ನನ್ನ ಅಳಿಯ ಚೆನ್ನಪ್ಪ ಪೂಜಾರಿ ಸಹಾ ಸೇರಿ ಚಾಲಗೇಣಿ ಚೀಟು ಬರೆಕೊಟ್ಟಿರುತ್ತಾರೆ. ಸದ್ರಿ ಚೆನ್ನಪ್ಪ ಪೂಜಾರಿಯು ಒಳಸಂಚಿನಿಂದ ವ ದುರ್ಬೋಧನೆಯಿಂದ ಸದ್ರಿ ಪೂವಪ್ಪ ಪೂಜಾರಿಯು ಸದ್ರಿ ಕುಟುಂಬದ ದ್ರೋಹ ಚಿಂತನೆಯಿಂದ ನನ್ನ ಭಾಗದ ಕುಟುಂಬಕ್ಕೆ ಹಾನಿ ಮಾಡುವ ದುಷ್ಟ ಇರಾದೆಯಿಂದ ಸುಳ್ಳು ಸಾಲ ಕಲ್ಪಿಸುವ ವ ನನ್ನ ಭಾಗದ ಕುಟುಂಬದ ಸೊತ್ತುಗಳನ್ನು ಪರಾಧೀನ ಮಾಡುವ ಇರಾದೆಯಲ್ಲಿರುತ್ತಾನಾಗಿ ನನ್ನ ತಿಳುವಳಿಕೆಗೆ ಬಂದಿದೆ. ನನ್ನ ಕುಟುಂಬದ ಕಡೆಯಿಂದ ಯಾವದೊಂದು ದಾಕ್ಲೆ ಬರಕೊಡುವರೆಯೂ ಸದ್ರಿ ಪೂವಪ್ಪ ಪೂಜಾರಿಗಾಗಲೀ ಚೆನ್ನಪ್ಪ ಪೂಜಾರಿಗಾಗಲೀ ಹಕ್ಕಿಲ್ಲ. ಸದ್ರಿಯವರು ಬರೆಕೊಟ್ಟ ವ ಬರಕೊಡಲಿರುವ ಯಾವ ದಾಕ್ಲೆಯೂ ನನ್ನ ಭಾಗದ ಕುಟುಂಬದ ಮೇಲೆ ಬದ್ಧೀಕೃತವಾಗ ತಕ್ಕದ್ದಲ್ಲವೆಂಬ ಸಂಗ್ತಿ ಈ ಮೂಲಕ ಜಾಹೀರುಮಾಡಿಕೊಂಡಿದ್ದೇನೆ.

ಇತಿ ಮೂರುಗೆರೆ ವ ಎಡಕೈ ಮುದ್ರೆ

ಕಾಂತಪ್ಪ ಪೂಜಾರಿ ರುಜು

ನಡ್ಸಾಲು ಗ್ರಾಮ ತಾ 16-9-1951

The most powerful medicine
for ASTHMA
(Registered and Genuine)
CHITRAKOT
ASTHMA SPECIFIC.
Hundred years fame to cure the dreaded disease permanently only by one dose to be taken on Sharad-purnima (full moon) dated 14-10-51.
Apply at once in English
Kr. Badri Nath Singh,
SHUBH CHINTAK KARYALAYA,
CHITRAKOT, Distt. Banda,
U. P.


“ವಿಜಯ” ಕಬ್ಬಿನ ಗಾಣ
ಎರಡು ಎತ್ತುಗಳಿಂದ ಎಳೆಯಲ್ಪಡುವ,
ಉತ್ಕೃಷ್ಟ ತರಗತಿಯ ಯಂತ್ರ.
ಬೆಲೆ ರೂ. 465.
ನಿಮ್ಮ ಬಂದರ ಡಿಲೆವರಿ
The Vijay Engineering Co. Ltd.,
BOMBAY-10.


BALLBEARING
—THE LIFEBLOOD OF THE INDUSTRY'
Dealers in:
ROTARY OIL MILLS
FLOUR MILLS
BALL, ROLLER & THRUST BEARINGS
TELEGRAMS —"CHEAPTRADE"
A. RAMSON AND CO.
6 R. MISTRI BUILDING KALAKAMS BOMBAY 7

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ
ಕಾಳಿಕಮಾಲಿ
ಚವನ ಪ್ರಾಶವನ್ನೇ
ಸದಾ ಸರ್ವದಾ ಉಪಯೋಗಿಸಿರಿ.
ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಪೆಸರಾಂತ
ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ
ಬಲಹೀನ ಎದೆಗುಂಡಿಗೆಗೂ ಚೆಲೋ ಟಾನಿಕ್.
AYURVEDIC PHARMACY
Baba kali Kamali-Wala RISHIKESH

ಬಂದಿರುವ ರಾಷ್ಟ್ರದ ನೂತನ ಘಟನೆ

ಭಾಗ ೨ ಪೌರತೆ (Citizenship)

[ತಾ. 30-8-51ನೇ ಸಂಚಿಕೆಯಿಂದ ಮುಂದುವರಿದುದು)

5. ಘಟನೆಯ ಆರಂಭದಲ್ಲಿರತಕ್ಕ ಪೌರತೆ:– ಈ ಘಟನೆಯು ಪ್ರಾರಂಭದಲ್ಲಿ ಯಾವಾತನು ಹಿಂದೂಸ್ಥಾನದ ಪ್ರಾಂತ್ಯಗಳಲ್ಲಿ ಶಾಶ್ವತ ವಾಸ್ತವ್ಯ (Domicile) ಉಳ್ಳವನಿದ್ದು,

a) ಹಿಂದೂಸ್ಥಾನದಲ್ಲಿಯೇ ಜನಿಸಿರುತ್ತಾನೋ,

b) ಅಥವಾ ಅವನ ತಂದೆತಾಯಿಗಳಲ್ಲೊಬ್ಬರು ಹಿಂದೂಸ್ಥಾನದಲ್ಲಿ ಜನಿಸಿರುತ್ತಾರೋ

c) ಅಥವಾ ಯಾವಾತನು ಜನಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಈ ಘಟನೆಯು ಪ್ರಾರಂಭವಾಗುವ ಐದುವರುಷಗಳಿಂದೀಚೆಗಾದರೂ ನಿವಾಸಿಕನಾಗಿರುತ್ತಾನೋ, ಅಂತವನು ಪೌರನಾಗಿರುತ್ತಾನೆ.

6 ಪಾಕಿಸ್ಥಾನದಿಂದ ಹಿಂದೂಸ್ಥಾನಕ್ಕೆ ಸ್ಥಾನಾಂತರಪಟ್ಟ (migrated) ವ್ಯಕ್ತಿಗಳ ಪೌರತೆ–

ಈ ಕೆಳಗೆ ಹೇಳಿದ ಸಂದರ್ಭಗಳಲ್ಲಿ, ಈ ಘಟನೆಯು ಜ್ಯಾರಿಗೆ ಬರುವ ಪ್ರಾರಂಭದಲ್ಲಿ, ಮೇಲೆ ಹೇಳಿದ 5ನೇ ಆರ್ಟಿಕಲಿನಿಂದ ಯಾವರೀತಿಯಲ್ಲೂ ನಿರ್ಬಂಧಿಸಲ್ಪಡದೆ, ಈಗ ಪಾಕಿಸ್ಥಾನಕ್ಕೆ ಸಿಂಗಡಿಸಲ್ಪಟ್ಟಿರುವ ಪ್ರಾಂತ್ಯಗಳಿಂದ ಸ್ಥಾನಾಂತರಪಟ್ಟು, ಹಿಂದೂಸ್ಥಾನಕ್ಕೆ ಬಂದಿರುವವನು ಹಿಂದೂಸ್ಥಾನದ ಪೌರನೆಂದು ಪರಿಗಣಿಸಲ್ಪಡುತ್ತಾನೆ.

(ಸಂದರ್ಭಗಳು) a) ಅತನು ಯಾ ಅತನ ತಂದೆತಾಯಿಗಳಲ್ಲಿ ಯಾರಾದರೊಬ್ಬರು ಅಥವಾ ಅವನ ತಂದೆತಾಯಿಯ ತಂದೆತಾಯಿಗಳಲ್ಲೊಬ್ಬರು ಆರಂಭದಲ್ಲಿ 1935ನೇ ಯಿಸವಿಯಲ್ಲಿ ತಯಾರಿಸಿದ ಗವರ್ನಮೆಂಟ್ ಒಫ್ ಯಿಂಡಿಯಾ ಆಕ್ಟಿನಲ್ಲಿ ನಿರೂಪಿಸಿದ ಹಿಂದೂಸ್ಥಾನದಲ್ಲಿ ಜನಿಸಿದವರಿದ್ದರೆ,

b) (i) ಅಂತಹ ಮನುಷ್ಯನು 1948ನೇ ಯಿಸವಿ ಜುಲೈ ತಾ. 19ರೊಳಗೆ ಅರೀತಿ ಸ್ಥಾನಾಂತರಪಟ್ಟು, ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ವಾಸ್ತವಿಸಿಕೊಂಡು ಬರುತ್ತಿದ್ದರೆ ಹಾಗೆ ಅಂತಹ ವ್ಯಕ್ತಿಯು ಸ್ಥಳಾಂತರಪಡಿಸಿದ ಲಾಗಾಯತು ಅಥವಾ,

(ii) ಅಂತಹ ವ್ಯಕ್ತಿಯು ಅರೀತಿ 1948ನೇ ಯಿಸವಿಯ ಜುಲೈ ತಾ. 19ರ ನಂತರ ಸ್ಥಳಾಂತರ ಪಡಿಸಿದ್ದರೆ, ಆತನು ಹಿಂದೂಸ್ಥಾನದ ಪೌರನೆಂದು ಪರಿಗಣಿಸಬೇಕಾದರೆ, ಆ ಬಗ್ಗೆ ಹಿಂದೂಸ್ಥಾನ ಸರಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿಯಿಂದ ಸದ್ರಿ ಸರಕಾರವು ನಿಯಮಿಸಿದ ಫಾರ್ಮಿನಲ್ಲಿ ಕೊಟ್ಟ ಅರ್ಜಿಯ ಮೇರೆಗೆ ಈ ಘಟನೆಯು ಜ್ಯಾರಿಗೆ ಬರುವ ಮೊದಲು ಆ ವ್ಯಕ್ತಿಯು ಹಿಂದೂಸ್ಥಾನದ ಪೌರನೆಂದು ರಿಜಿಸ್ತ್ರಿ ಹೊಂದಿರಬೇಕು. ಅದರೆ ಯಾವಾತನು ಆ ರೀತಿ ಅರ್ಜಿಕೊಡುವ ಹಿಂದಕ್ಕೆ ಆರುತಿಂಗಳಲ್ಲಿಯಾದರೂ ಹಿಂದೂಸ್ಥಾನದಲ್ಲಿ ವಾಸ್ತವ್ಯವಿಲ್ಲದವನಾಗಿದ್ದಲ್ಲಿ, ಅರೀತಿ ಪೌರನೆಂದು ರಿಜಿಸ್ತ್ರಿ ಹೊಂದಲ್ಪಡತಕ್ಕದಲ್ಲ.

7 ಹಿಂದೂಸ್ಥಾನಕ್ಕೆ ಸ್ಥಾನಾಂತರಪಟ್ಟ ಕೆಲವರ ಪೌರತೆ:-

ಈಗ ಹಿಂದೂಸ್ಥಾನವಾಗಿರುವ ಪ್ರಾಂತ್ಯದಿಂದ 1947ನೇ ಯಿಸವಿಯ ಮಾರ್ಚ 1ನೇ ತಾರೀಕಿನ ನಂತರ ಈಗ ಪಾಕಿಸ್ಥಾನವಾಗಿರುವ ಪ್ರಾಂತ್ಯಕ್ಕೆ ಸ್ಥಾನಾಂತರ ಹೊಂದಿದ್ದರೆ, ಅತನು ಹಿಂದೂಸ್ಥಾನದ ಪೌರನೆನಿಸಲ್ಪಡುವುದಿಲ್ಲ. ಇದು ಮೇಲೆಹೇಳಿದ 5 ಮತ್ತು 6ನೇ ಆರ್ಟಿಕಲ್ಸಿನಿಂದ ನಿರ್ಬಂಧಿಸಲ್ಪಟ್ಟಿಲ್ಲ.

ಆದರೆ ಈ ಆರ್ಟಿಕಲ್ಲಿನಲ್ಲಿ ಹೇಳಿದ ಯಾವುದೊಂದು ವಿಷಯವೂ ಮೇಲೆ ಈ ಆರ್ಟಿಕಲ್ಲಿನಲ್ಲಿ ಹೇಳಿದ ಮೇರೆಗೆ ಪಾಕಿಸ್ಥಾನ ಪ್ರಾಂತ್ಯಕ್ಕೆ ಸ್ಥಾನಾಂತರ ಹೊಂದಿದ ನಂತರ ಕಾನೂನು ಪ್ರಕಾರ ಕೊಡುವ ಪರ್ಮಿಟು ವ ಅಧಿಕಾರ ಮೇರೆಗೆ ಪುನರ್‌ವಾಸ್ತವ್ಯಕ್ಕಾಗಿ ಹಿಂದೂಸ್ಥಾನಕ್ಕೆ ಬಂದಲ್ಲಿ ಅಂತವನಿಗೆ ಅನ್ವಯಿಸತಕ್ಕದ್ದಲ್ಲ. ಅಲ್ಲದೆ ಆರ್ಟಿಕಲ್ 6 [b]ರ ಬಗ್ಗೆ ಅಂತಹ ಪ್ರತಿಯೊಬ್ಬ ವ್ಯಕ್ತಿಯೂ 1948ನೇ ಜುಲೈ 19ರ ನಂತರ ಹಿಂದೂಸ್ಥಾನ ಪ್ರಾಂತ್ಯಕ್ಕೆ ಸ್ಥಾನಾಂತರ ಪಟ್ಟವನೆಂದು ಎಣಿಸಲ್ಪಡುತ್ತಾನೆ,

8 ಹಿಂದೂಸ್ಥಾನದ ಮೂಲನಿವಾಸಿಕನಾಗಿದ್ದು ಹಿಂದೂಸ್ಥಾನದ ಹೊರಗೆ ವಾಸಿಸಿ ಬರುವವರ ಪೌರತೆಯ ಹಕ್ಕು

5ನೇ ಆರ್ಟಿಕಲ್ಲಿನಲ್ಲಿ ಹೇಳಿದ ಯಾವುದೊಂದು ವಿಷಯದಿಂದಲೂ ನಿರ್ಬಂಧಿಸಲ್ಪಡದೆ 1935ನೇ ಯಿಸವಿಯ ಕಾಲದಲ್ಲಿ ತಯಾರಿಸಿದ ಗವರ್ನ್‌ಮೆಂಟ್ ಓಫ್ ಇಂಡಿಯಾ ಆಕ್ಟಿನಲ್ಲಿ ಹೇಳಲ್ಪಟ್ಟ ಯಾವಾತನು ಅಥವಾ ಅವನ ತಂದೆತಾಯಿಗಳು, ಅಥವಾ ತಂದೆತಾಯಿಗಳ ತಂದೆತಾಯಿಗಳು ಅಥವಾ ಅವರ ಪೈಕಿ ಯಾರೊಬ್ಬರಾದರೂ ಹಿಂದೂಸ್ಥಾನದಲ್ಲಿ ಜನಿಸಿದ್ದು ಆ ಪ್ರಕಾರ ಪರಿಗಣಿಸಿದ ಹಿಂದೂಸ್ಥಾನದಿಂದ ಹೊರದೇಶಗಳಲ್ಲಿ ಸಾಮಾನ್ಯವಾಗಿ ವಾಸ್ತವಿಸಿ ಬರುತ್ತಾನೋ ಅಂತವನು ಅಂತಾ ಹೊರದೇಶದಲ್ಲಿ ಹಿಂದೂಸ್ಥಾನದ ಬಗ್ಗೆ ಡಿಪ್ಲೊಮೇಟಿಕ್ ಅಥವಾ (Consular) ಕಾನ್ಸುಲರ್ ಪ್ರತಿನಿಧಿಯಾಗಿರುವವನಿಗೆ ಹಿಂದೂಸ್ಥಾನದ ಡೊಮಿನಿಯನ್ ಓಫ್ ಇಂಡಿಯಾ ಅಥವಾ ಗವರ್ನ್‌ಮೆಂಟ್ ಓಫ್ ಇಂಡಿಯಾದವರು ನಿಯಮಿಸಿದ ಫಾರ್ಮಿನಲ್ಲಿ ಅಥವಾ ರೀತಿಯಲ್ಲಿ ಅರ್ಜಿಮಾಡಿ ಅತನ ಹೆಸರು ರಿಜಿಸ್ತ್ರಿಮಾಡಲ್ಪಟ್ಟಿದ್ದರೆ, ಅಂತವನು ಆ ರೀತಿಯಲ್ಲಿ ರಿಜಿಸ್ತ್ರಿಯು ಈ ಘಟನೆಯು ಜ್ಯಾರಿಗೆ ಬರುವ ಮುಂಚಿತವಾಗಿಯೂ ನಂತರವೂ ಇರಬಹುದು.

9 ತಾವಾಗಿಯೇ ಅನ್ಯದೇಶದ ಪೌರತೆಯನ್ನು ಪಡೆದಿದ್ದವರು ಹಿಂದೂಸ್ಥಾನದ ಪೌರರೆನಿಸರು:–

ಯಾವಾತನು ತಾನಾಗಿಯೇ ಅನ್ಯದೇಶದ ಪೌರತೆಯನ್ನು ಪಡೆದಿದ್ದರೆ, ಅಂತವನು ಆರ್ಟಿಕಲ್ 5ರ ಮೇರೆಗಾಗಲೀ ಅಥವಾ ಆರ್ಟಿಕಲ್ 9ರ ಮತ್ತು 8ರ ಎಣಿಸುವಿಕೆಯ ಮೇರೆಗಾಗಲೀ, ಹಿಂದೂಸ್ಥಾನದ ಪೌರನೆನಿಸುವುದಿಲ್ಲ.

10 ಪೌರತೆಯ ಹಕ್ಕಿನ ನಿರಂತರತೆ:–

ಈ ಹಿಂದೆ ಹೇಳಲ್ಪಟ್ಟ ಆರ್ಟಿಕಲ್ಸ್ ಮೇರೆಗೆ ಯಾವಾತನೂ ಹಿಂದೂಸ್ಥಾನದ ಪೌರನೆನಿಸುತ್ತಾನೋ, ಮತ್ತು ಪೌರನಾಗುತ್ತಾನೋ ಅಂತವನು ಪಾರ್ಲಿಮೆಂಟು ಮಾಡಬಹುದಾದ ಕಾನೂನಿಗೊಳಪಟ್ಟು, ನಿರಂತರವಾಗಿ ಅಂತಹ ಪೌರನೆನಿಸಿಕೊಳ್ಳುತ್ತಾನೆ.

11 ಪಾರ್ಲಿಮೆಂಟಿಗೆ ಪೌರತೆಯ ಹಕ್ಕನ್ನು ಕಾನೂನು ಮೇರೆಗೆ ಬದ್ಧಪಡಿ ಮಾಡುವ ಅಧಿಕಾರ:–

ಈ ಮೇಲೆ ಈ ಭಾಗದಲ್ಲಿ ಹೇಳಲ್ಪಟ್ಟ ಯಾವುದೊಂದು ಶರ್ತದಿಂದಲೂ, ಪಾರ್ಲಿಮೆಂಟಿಗೆ ಪೌರತೆಯನ್ನು ಪಡೆಯುವರೇ ಅಥವಾ ಕಳಗೊಳ್ಳುವರೇ ಬೇಕಾಗುವ ಯಾವುದೊಂದು ನಿಬಂಧನೆಗಳನ್ನು ಮಾಡುವರೇ ಯಾ ಇರುವ ಅಧಿಕಾರಕ್ಕೆ ಅಂತರಾಯ ಬರಬಾರದು.

[ಮುಂದುವರಿಯುವುದು]

ಪಿ. ಸೂ. ಮುಂದಿನ ಭಾಗ ಮೂಲ ಹಕ್ಕುಗಳು (Fundamental rights) ಸರ್ವರೂ ಅತೀ ಅವಶ್ಯವಾಗಿ ತಿಳಿದು ಸದುಪಯೋಗಿಸತಕ್ಕ ವಿಷಯ. ಈ ನೂತನ ಹಕ್ಕು ಸ್ಥಾಪನೆಗಳಿಂದಲೇ ನಮ್ಮ ಅನೇಕ ಕಾಯ್ದೆಗಳೂ ಇದಕ್ಕೆ ಮೀರಿ ಅಥವಾ ವಿರೋಧವಿದ್ದದ್ದರಿಂದ, ಹೈಕೋರ್ಟುಗಳೇ, ಸುಪ್ರೀಮ್ ಕೋರ್ಟ್ ಅಂತಹ ಕಾಯ್ದೆಗಳು ನಮ್ಮ ಶಾಸನ ಸಭೆಯ ಅಧಿಕಾರಕ್ಕೆ ಮಿಕ್ಕಿದ್ದು (Ultra Vires Pre Legislatures) ಎಂದು ತೆಗೆದುಹಾಕಿರುತ್ತಾರೆ. ಕೆಳ ಕೋರ್ಟಿನಲ್ಲಿ ಈ ಆಕ್ಷೇಪವನ್ನ ಎತ್ತಿದರೆ ಹೈಕೋರ್ಟಿನವರಿಗೆ ಕಳುಹಿಸಲ್ಪಟ್ಟು ಅವರು ಅದರ ತೀರ್ಮಾನವನ್ನು ಕೊಡತಕ್ಕದ್ದಿರುತ್ತದೆ. ಚೆನ್ನಾಗಿ ಆ ಪರಿಚ್ಛೇದನವನ್ನು ಪಠನ ಮಾಡಿದಲ್ಲಿ ಅಳಿಯಸಂತಾನ ಕಾಯ್ದೆಯಲ್ಲಿ ಸ್ತ್ರೀಪುರುಷರೊಳಗಣ ಆಸ್ತಿಯ ಸ್ವಾತಂತ್ರ್ಯದ ಹಕ್ಕು ಸರಿಯಾದುದಲ್ಲ, ಏಕರೀತಿಯ ಏಕಹಕ್ಕಿನ ಪಾಲಿಗೆ ಅವರು ಕಾನೂನಿನ ದೃಷ್ಟಿಯಿಂದ ಸಮಾನ ಹಕ್ಕುದಾರರಾಗಿರುತ್ತಾರೆ. ಎಂದು ವಾದಿಸುವರೇ ತುಂಬಾ ಅವಕಾಶವಿರುತ್ತದೆ. ಅಂತೆಯೇ ಸ್ತ್ರೀಪುರುಷರೊಳಗಣ ಅನೇಕ ಭೇದವನ್ನುಂಟುಮಾಡುವ ಹಕ್ಕು ಸರಿಯಲ್ಲವೆಂದು ಇತರ ವಿಷಯಗಳಲ್ಲೂ ವಾದಿಸಲು ತುಂಬಾ ಅವಕಾಶವಿರುತ್ತದೆ.

B. B Shetty.

Advocate, 2-9 1951.

ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕೋಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತಪುಸ್ತಕಭಂಡಾರಉಡುಪಿ.

THE PANGAL NAYAK BANK LIMITED.

Head Office] (Incorporated in 1920.) [Udipi; S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಬರೇ ರೂ. 12ಕ್ಕೆ ಮಿತ ದಾಸ್ತಾನು



ನಮ್ಮ ವಾಚುಗಳು ಜನಪ್ರಿಯವಾಗುವ ಸಲುವಾಗಿ ನಾವು ನವ 17 ಜ್ಯುವೆಲಿನ ವಾಟರ್‌ಪ್ರೂಫ್ ರೋಲ್ಡ್ ಗೋಲ್ಡ್ ರಿಸ್ಟ್‌ವಾಚುಗಳನ್ನು ಕ್ರಯದ ದಾಸ್ತಾನು ಮುಗಿಯುವ ತನಕ ಬರೇ ರೂ 12ಕ್ಕೆ ವಿಕ್ರಯಿಸಲು ನಿರ್ಧರಿಸಿದ್ದೇವೆ.

U. W. CO. (N. D).
Post Box No. 6871 CULCUTTA-7.

ಉಬ್ಬಸಕ್ಕೆ

ಆಯುರ್ವೇದೀಯ ದಿವ್ಯೌಷಧ ಹಲವಾರು ಔಷಧಗಳಿಂದ ಗುಣವಾಗದ ಉಬ್ಬಸವೂ ಖಾತ್ರಿ ಗುಣವಾಗುವುದು.

ಅಲ್ಪ ವೆಚ್ಚ! ಅದ್ಭುತ ಗುಣ!

ಎಂ. ಎಂ. ಪ್ರೊಡಕ್ಟ್ಸ ಕೊ; ರುಬಿ ಮೇನ್ಸನ್, ಫೋರ್ಟ, ಬೊಂಬಾಯಿ.



For Protection and Provision

Consult

The New Guardian of India Life Insurance Co., Ltd.

Head office: MADRAS
(Estd 1934)

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಸಾದರ-ಸ್ವೀಕಾರ

೧ ಸ್ವಾತಂತ್ರ್ಯ ಕತೆ

ಅಥ ೯೬ ಕಾಂಗ್ರೆಸದ ಇತಿಹಾಸ: ಅನುವಾದಕರು ಸೌ. ಕಮಲಾದೇವಿ ಪಾಟೀಲ ಪ್ರಕಾಶಕರು: ಆಜಿತ ಪ್ರಕಾಶನ, ತಿಲಕ ಚೌಕ ಬೆಳಗಾಂವಿ. ಬೆಲೆ ರೂ:೦-೧೦-೦

ಭಾರತದೇಶದ ಬಂಧ ವಿಮೋಚನೆಗಾಗಿ ಜನತೆ ನಡೆಸಿದ ಹೋರಾಟದ ಸಹಜ ಕತೆಯು ಇದು. ಕಾಂಗ್ರೆಸಿನ ಹುಟ್ಟು-ಸ್ವಾತಂತ್ರ್ಯಂ ಗಳಿಸಿದ ದೇಶ ವಿಭಜನೆ-ಮುಂತಾದ ಪ್ರಮುಖ್ಯ ವಿಚಾರಗಳನ್ನೊಳಗೊಂಡ ಕಾಂಗ್ರೆಸಿನ ಇತಿಹಾಸವನ್ನು ಇಲ್ಲಿ ಬಣ್ಣಿಸಲಾಗಿದೆ ಇಂಥ ಮುಕ್ತತೆಗಾಗಿ ಮಾಡಿ ಮಡಿದವರ ಅಮರ ಜೀವನ ಚರಿತ್ರೆಯೆಂದರೂ ಸರಿಯೇ. ನೂರಾರು ಅರುವತ್ತೊಂದು ಪುಟಗಳುಳ್ಳ ಕಿರಿಯ ಹೊತ್ತಗೆಯಲ್ಲಿ ಕಾಂಗ್ರೇಸದ ಸಮಗ್ರ ಇತಿಹಾಸವನ್ನು ಚೆನ್ನಾಗಿ ವಿವರಿಸಲಾಗಿದೆ. ಸ್ವಾತಂತ್ರ್ಯ ಸಮರದ ಯಥಾರ್ಥ ಚಿತ್ರವನ್ನು ತೋರಿಸುವ ಕೈಪಿಡಿಯಾಗಿದೆ. ಇಂತಹ ಅಮೂಲ್ಯ ಕೃತಿಯನ್ನು ಆಚ್ಚುಕಟ್ಟಾಗಿ ಹೊರಡಿಸಿಕೊಟ್ಟ ಅನುವಾದಕರೂ ಪ್ರಕಾಶಕರೂ ಅಭಿನಂದನಾರ್ಹರು

೨ ಮಾತಿನಮಲ್ಲಿ

ಲೇಖಕರು: ಶ್ರೀ ಜಿ. ಪಿ. ರಾಜರತ್ನಂ ಅವರು. ಪ್ರಕಾಶಕರು: ಆನಂದ ಬ್ರದರ್ಸ್ ಪಬ್ಲಿಷರ್ಸ್ ಬೆಂಗಳೂರು. ೨. ಬೆಲೆ ರೂ. 1-12-0

'ಮಾತಿನಮಲ್ಲಿ' ಹೊಸಮಾದರಿಯ ಶೃಂಗಾರ ಕತೆ. ರತ್ನಾಕರನು ರಚಿಸಿದ ಭರತೇಶ ವೈಭವದ ಒಂದಂಶವನ್ನು ನೆನೆದುಕೊಂಡು ಶ್ರೀ ಜಿ. ಪಿ. ರಾಜರತ್ನಂ ರವರು 'ಮಾತಿನ ಮಲ್ಲಿ' ಯ ರಚನೆ ಕೈಗೊಂಡಿದ್ದಾರೆ. ಭರತ ರಾಜನ ಸೃಷ್ಟಿ ಅತ್ಯಂತ ಮನೋಹರವಾಗಿದೆ. ಆತನು ಯೋಗಿಯೋ-ಭೋಗಿಯೋ-ಎನುವಷ್ಟು ಕತೆ ಸಂಧಿಗ್ಧಾವಸ್ಥೆಯಲ್ಲಿ ನಮ್ಮನ್ನು ನಿಲ್ಲಿಸುತ್ತದೆ! ಕೃಷ್ಣನು ಗೋಪಿಕಾಸ್ತ್ರೀಯರೊಡನೆ ಲೀಲೆ ನಡೆಸಿದಹಾಗೆ ಭರತನೂ ಸ್ತ್ರೀಯರನಡುವೆ ಸ್ವರ್ಗೀಯಾನಂದವನ್ನು ಕಾಣುತ್ತಾನೆ. ಅಂತಃ ಪುರದ ಸ್ತ್ರೀಯರು ತುಂಬು ಜವ್ವನೆಯರು-ಸ್ಫುರದ್ರೂಪಿಗಳು-ವಿದ್ವನ್ಮಣಿಗಳು-ಸಂಗೀತ ನಾಟ್ಯ ಕುಶಲರು-ಕಲಾವಂತಿಕೆಯರು! ಭರತ ರಾಜನ ಹೆಣ್ಮಕ್ಕಳು ಕಾಮಿನಿಯರಾಗಿದ್ದಂತೆಯೇ ಕಲಾವಂತಿಕೆಯರೂ ಹೌದು. ಅಂಗಾಂಗ ಸೌಂದರ್ಯಗಳನ್ನೇ ಹಾವಭಾವಗಳನ್ನೊ ಸಂಗೀತವನ್ನೇ ನಾಟ್ಯವನ್ನೇ ನೋಡಿ ಭರತ ಆನಂದಿಸುವದರಲ್ಲಿ ಕಲಾದೃಷ್ಟಿಯೇ ಹೆಚ್ಚೆಂದು ತೋರುತ್ತದೆ. ಅವರನ್ನು ಭರತ ಮನವಾರೆ ಮೆಚ್ಚುವುದೂ-ಸುಂದರ ರಮಣಿಯರೂ ಕಾಮಾತುರರಾಗಿ ಆತನನ್ನು ಹಾರೈಸುವದೂ ಅಲ್ಲಲ್ಲಿ ಓದುಗರ ಕುತೂಹಲವನ್ನು ಸ್ವಾಭಾವಿಕವಾಗಿ ಕೆರಳಿಸುವವು! ಹಲವು ಸನ್ನಿವೇಶದಲ್ಲಿ ಭರತ ರಾಜನು ಮೋಹಪರವಶತೆಯಲ್ಲಿ ಕಾಲಕಳೆಯುತ್ತಾನಲ್ಲಾ ಎನುವ ಅನುಮಾನ ನಮ್ಮಲ್ಲಿ ಹುಟ್ಟುವಾಗಲೇ ಆತನು ಭೋಗ ಜೀವನದಿಂದ ಯೋಗ ಜೀವನಕ್ಕೆ ಕಾಲಿಡುತ್ತಾನೆ ಆತನೊಂದಿಗೆ ಕೂಡಿರಮಿಸಬೇಕೆಂದು ಹಾರೈಸುವ ರಮಣಿಯರೂ ಕೂಡಾ ಯೋಗಜೀವನದಲ್ಲಿ ಮಾನಸಿಕವಾಗಿ ತೃಪ್ತಿಗೊಳ್ಳುತ್ತಾರೆ. ಇದು ಕಾಲ್ಪನಿಕವಾದರೂ ಸುಂದರವಾಗಿದೆ. ಸರಳವೂ ಅತ್ಯಂತ ಸ್ನಿಗ್ಧವೂ ಆದ ಸಂಭಾಷಣೆಗಳೂ ಮಾತುಗಾರಿಕೆಗಳೂ ಕಾವ್ಯದ ಮೂಲೋದ್ದೇಶವನ್ನು ಅರ್ಥಾತ್ ಶೃಂಗಾರ ರಸವನ್ನು ಚೆನ್ನಾಗಿ ಪ್ರತಿಪಾದಿಸುತ್ತವೆ "ಮಾತಿನ ಮಲ್ಲಿ"ಯೊಂದು ರಸವತ್ತಾದ ಶೃಂಗಾರರಸಪೂರಿತವಾದ—ಕಲಾಪೂರ್ಣಕೃತಿ.

— ಎಸ್ಸೆಲ್

ಹಕ್ಕೀ ನೋಟ

೧ ಜನಮತ(ವಾರಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು! ಶ್ರೀ ಸುರೇಂದ್ರನಾಥ ನಾಯರ್ ಜನಮತ ಕಾರ್ಯಾಲಯ ಮಂಗಳೂರು 3. ಬಿಡಿಸಂಚಿಕೆ ಬೆಲೆ ಕಾಲಾಣೆ.

ಪತ್ರಿಕೆಗಳ ಹುಟ್ಟು ಸಾವಿಗೆ ಕಾರಣವಾದ ನಮ್ಮ ಜಿಲ್ಲೆಯು "ಜನಮತ"ದಂತಹ ಚಿಕ್ಕ ಮತ್ತು ಚೊಕ್ಕದಾದ ವಾರಪತ್ರಿಕೆಗೆ ಬಹುಕಾಲ ಬಾಳಿ ಜನಸೇವೆ ಕೈಗೊಳ್ಳುವಂತೆ ಪ್ರೋತ್ಸಾಹ ಕೊಡಲೆಂತ ಹೃತ್ಪೂರ್ವಕ ಹಾರೈಸುತ್ತೇವೆ.

೨ ಚರಖಾ(ಹಸ್ತಲಿಖಿತವಾರ್ಷಿಕ ಸಂಚಿಕೆ) 19೦1೦ ಸ್ವಾತಂತ್ರ್ಯ ಸಂಚಿಕೆ ಸಂಪಾದಕರು ಶ್ರೀ ಕೆ.ಎ.ದೇವದಾಸ ಶಿರೋಮ.ಜಿ ಚಿತ್ರಗಾರರು! ಶ್ರೀ ಸತ್ಯೇಂದ್ರ ಶೆಣೈ ಉಡುಪಿ.

'ಚರಖಾ' ಹಸ್ತಲಿಖಿತ ಪತ್ರಿಕೆಯಾದರೂ ವಿಚಾರಾತ್ಮಕ ಬರಹಗಳಿಂದ ಅತ್ಯಮೂಲ್ಯವಾಗಿರುತ್ತದೆ. ವಿಷಯವೈವಿಧ್ಯತೆಯೊಂದಿಗೆ ಓದುಗರ ಮೆಚ್ಚುಗೆಗೆ ಪಾತ್ರವಾದೀತೆಂದು ನಮಗನ್ನಿಸುತ್ತದೆ. ಚಿತ್ರಗಾರರ ಕಲಾನೈಪುಣ್ಯತೆಯು ಸಂಚಿಕೆಗೆ ಕಳೆಕೊಟ್ಟಿದೆ. ಸಂಪಾದಕರ ಈ ಕಾರ್ಯ ಅಭಿನಂದನಾರ್ಹವಾಗಿರುತ್ತದೆ.

೩. ಕನ್ನಡ ಸಹಕಾರಿ(ಮಾಸಪತ್ರಿಕೆ) ಸಂಪಾದಕರು: ಶ್ರೀಗಳಾದ ಆರ್. ಕೆ. ಪ್ರಭು ಎಸ್ ಮುಕುಂದ ರಾವ್, ಬಿ. ೦೨ ಮೌಲ್ಯ, ಪ್ರಕಾಶಕರು: ಎಂ ಎಸ್. ಏಕಾಂಬರಂ ೦. ವ್ ಕೊಡಿಯಾಲಬೈಲ್ ಮಂಗಳೂರು.

ದ ಕ ಜಿಲ್ಲೆಯ ಸೊಸೈಟಿಗಳ ಚಟುವಟಿಕೆಯೇ ಮೊದಲಾಗುಳ್ಳ ಗ್ರಾಮಾಭಿವೃದ್ಧಿ ವಿಷಯಕ ಬರಹಗಳಿಂದ ಕೂಡಿದ ಜುಲೈ ಮತ್ತು ಆಗೋಸ್ತು ಸಂಚಿಕೆಗಳನ್ನು ಆಹ್ಲಾದರದಿಂದ ಸ್ವೀಕರಿಸುತ್ತೇವೆ.

೪ ಕರ್ನಾಟಕ ಫ್ರೀನ್ಯಾಟ್ ಹ್ಯಾಸ್ಟೆಲ್ 27ನೇ ವಾರ್ಷಿಕ ವರದಿ-ಕರ್ನಾಟಕ ಫ್ರೀನ್ಯೈಟ್ ಹ್ಯಾಸ್ಟೆಲು ಮುಂಬಯಿ. ಇದರ 27ನೇ ವರ್ಷದ ಪ್ರಗತಿಪರವಾದ ವರದಿಯನ್ನವಲೋಕಿಸಿ ಅವರ ಕಾರ್ಯ ತತ್ಪರತೆಗಾಗಿ ಅಭಿನಂದಿಸುತ್ತೇವೆ.

೫ ಕಲಾವೃಂದ 7ನೆಯ ವರ್ಷದ ವರದಿ, ಕಲಾವೃಂದ, ಉಡುಪಿ.

ಅನೇಕ ವರ್ಷಗಳಿಂದ ವಿಧಾಯಕ ಕಾರ್ಯಕ್ರಮಗಳ ಮೂಲಕ ಬಹುಮುಖ ರನ್ನದ ಚಟುವಟಿಕೆಗಳನ್ನು ನಡೆಸುವ ವೃಂದದ ಕಾರ್ಯಕರ್ತರು ನಿಜವಾಗಿಯೂ ಅಭಿನಂದನಾರ್ಹರು.

HIGH COURT, ORIGINAL SIDE, MADRAS

O P No. 231 of 1951

In the matter of the Indian Companies Act

&

In the matter of the Kanara Timbers Ltd, Mangalore, South Kanara.

Ahammad Kunnil — Petitioner.

Notice is hereby given that a petition under section 162 of the Indian Companies Act, 1913, for winding up the above Company was presented by the petitioner on the 20th day of August 1951 and that the said petition is directed to be heard before the Judge sitting in Chambers on 18-10-1951 Any person desirous of supporting or opposing the making of an order as prayed in the petition should appear at the time of hearing by himself or by his advocate, and a copy of the petition will be furnished to any person requiring the same by the undersigned on payment of the regulated charges for the same.

12—9—1951.
20 Thambu Chetty Street,
MADRAS-1.

K. Vittal Rao,
Counsel for Petitioner

Note: Any person who intends to appear on the hearing of the said petition must serve on or send by post to the abovenamed notice of his intention so to do The notice must state the name and address of the person or if a firm, the name and address of the firm and must be signed by the person or firm or his or their advocate and must be served or if posted, must be sent by post so as to reach the abovenamed not later than 3 O'Clock in the afternoon of 17-10 1951

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪುಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ದಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಚ್ಚು ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, D SC, F. I. A.
(ಪಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ 12 ಮತ್ತು ರೂ 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI. S. Kanara.

ವಾರದ ಭವಿಷ್ಯ

ತಾರೀಕು 20-9-51 ರಿಂದ — ತಾರೀಕು 26-9-51 ರವರೆಗೆ

ಮೇಷ:—ಅನೇಕ ದಿನಗಳಿಂದ ಕಷ್ಟ ಪರಂಪರೆಗಳನ್ನನುಭವಿಸುತ್ತಿದ್ದ ನಿಮಗೆ ಈ ವಾರದಲ್ಲಿ ಸುಖವನ್ನ ಕಾಣುವ ಸುಯೋಗ ಒದಗಿದೆ. ಪತ್ನೀ ಪುತ್ರರೂ ಬಂಧುಮಿತ್ರರೂ ಅನುಕೂಲರಾಗಿರುವುದರಿಂದ ನಿಮ್ಮ ಪ್ರತಿಯೊಂದು ಕಾರ್ಯಗಳೂ ಅನಾಯಾಸದಿಂದ ಸಿದ್ಧಿಸಲಿವೆ. ನಿಮ್ಮ ನಿರೀಕ್ಷೆಗಿಂತ ಅಧಿಕವಾಗಿ ಧನಲಾಭವಾಗುವದು. ದೇಹ ಮನಸ್ಸುಗಳಿಗೆ ಸುಖನೆಮ್ಮದಿ ಲಭಿಸಲಿದೆ ಪ್ರಯಾಣಕ್ಕೀಕಾಲವು ಉಚಿತವಲ್ಲ. ಕುಜನರ ಕಪಟಜಾಲಕ್ಕೆ ಸಿಲುಕದಂತೆ ಜಾಗ್ರತರಾಗಿರಿ. ತಾ. 23,24, ಈ ದಿನಗಳು ಅತ್ಯುತ್ತಮಗಳಾಗಿವೆ

ವೃಷಭ:—ನಿರ್ಮಲವಾದ ಆಕಾಶದಲ್ಲಿ ಒಮ್ಮೆಗೇ ಕಾರ್ಮೋಡಗಳು ಕವಿದಂತೆ ಸುಖಮಯವಾದ ನಿಮ್ಮ ಜೀವನದಲ್ಲಿ ಅನೇಕ ದುಃಖಪರಂಪರೆಗಳು ಕಾಣಸಲಿವೆ. ಸಂಸಾರದಲ್ಲಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಕಲಹವಾಗುವದು, ಸೇವಕ ವರ್ಗದವರೂ ಕೂಡ ಪ್ರತಿಕೂಲರಾಗಿ ವರ್ತಿಸುವರು. ಆದರೂ ಸುರಾಸುರ ಗುರುಗಳ ಅನುಗ್ರಹವು ನಿಮಗಿರುವುದರಿಂದ ಈ ಹೆಚ್ಚಿನ ಅಪಾಯಗಳನ್ನು ಉಪಾಯದಿಂದ ಪಾರುಗಾಣುವಿರಿ. ಖರ್ಚಿಗೆ ತಕ್ಕ ಉತ್ಪತ್ತಿಯಿರುವುದರಿಂದ ದಿನಯಾಪನೆಯು ಕಷ್ಟವಾಗದು. ತಾ 20,21, 22, 25, 29, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಾಗಲಾರವು.

ಮಿಥುನ—ನಿಮ್ಮ ಜೀವನದಲ್ಲಿ ಬಹ್ವಂಶ ಸುಧಾರಣೆಯಾಗಿರುವುದು. ದೇಹಾಲಸ್ಯದಿಂದ ಮುಕ್ತರಾಗುವಿರಿ. ಗೃಹತಾಪತ್ರಯಗಳು ಕಡಿಮೆಯಾಗಿ ಸಂಸಾರ ಸುಖವನ್ನನುಭವಿಸುವಿರಿ. ಹಿಡಿದ ಕಾರ್ಯದಲ್ಲಿ ವಿಜಯವೂ ಧನಲಾಭವೂ ಅಧಿಕವಾಗಿ ಲಭಿಸಲಿದೆ. ದೇಹ ಸುಖಶಾಂತಿಯು ಉಚ್ಚನಾದಕಾರಣ ದೇಹ ಮನಸ್ಸುಗಳಿಗೆ ಸುಖಶಾಂತಿಯು ಉತ್ತಮವಾಗಿ ಲಭಿಸುವದು, ಚಂಚಲವಾದ ನಿಮ್ಮ ಮನಸ್ಸನ್ನು ದಿಗಿಲುಬಿಡಿಯಿರಿ. ತಾ. 23, 24ರಲ್ಲಿ ಸುಖಲಾಭ ಭೋಗವಿಜಯಗಳು ಲಭಿಸುವವು.

ಕರ್ಕಟ—ಕಾಲವು ಅನುಕೂಲವಾಗಿಗಿದೆ, ನಿರೋಗಿಗಳಾದ ನೀವು ಸಕಲ ಕಾರ್ಯಗಳಲ್ಲೂ ವಿಜಯಶ್ರೀಯನ್ನುಗಳಿಸುವಿರಿ ಜನತೆಯಲ್ಲಿ ಸ್ಥಾನಮಾನಾದರಗಳನ್ನು ಪಡೆವಿರಿ. ವ್ಯಾಪಾರದಲ್ಲಿ ಲಾಭವೂ ಉದ್ಯೋಗದಲ್ಲಿ ಅಭಿವೃದ್ಧಿಯೂ ವ್ಯವಹಾರದಲ್ಲಿ ವಿಜಯವೂ ಲಭಿಸಲಿದೆ. ಕೆಲವೊಮ್ಮೆ ಅಧಿಕಾರಿ ಜನರು ಸ್ವಾರ್ಥದ ಸಲುವಾಗಿ ನಿಮ್ಮನ್ನು ಪೀಡಿಸುವ ಸಂಭವವಿದೆ. ಜಾಗ್ರತರಾಗಿರಿ ಎಂತಹ ಪ್ರಬಲರಾದ ಶತ್ರುಗಳನ್ನೂ ಕೂಡ ಕ್ಷಣಾರ್ಧದಲ್ಲಿ ಪರಾಭವ ಗೊಳಿಸುವ ಶಕ್ತಿಯುತರಾಗುವಿರಿ, ತಾ. 23, 24 ಬಿಟ್ಟು ಉಳಿದ ದಿನಗಳಲ್ಲಿ ಹೆಚ್ಚಾದ ಸುಖಸೌಖ್ಯಗಳನ್ನನುಭವಿಸುವಿರಿ.

ಸಿಂಹ—ಧನಲಾಭಸೂಚಕನಾದ ಬುಧನು ಉಚ್ಚನಾಗಿ ಧನಸ್ಥಾನಕ್ಕೆ ಬಂದಿರುವುದರಿಂದ ಈ ವಾರದಲ್ಲಿ ನಿಮ್ಮ ಹಿಂದಿನ ಸಾಲಗಳೆಲ್ಲವೂ ತೀರುವದಲ್ಲದೆ ಕೈಯಲ್ಲಿ ಸಾಕಷ್ಟು ಧನವೂ ಸಂಗ್ರಹವಾಗುವದು. ವಾಹನಾದಿಗಳಲ್ಲಿನ ಪ್ರಯಾಣವು ಅಪಘಾತಕ್ಕೀಡು ಮಾಡೀತು. ಪ್ರವಾಸದಲ್ಲಿ ನಷ್ಟ ಕಷ್ಟಗಳು ಹೆಚ್ಚುವವು. ಮನೋರೋಗಾಧಿಕ್ಯದಿಂದಾಗಿ ನಿದ್ರಾಹಾರಗಳು ಸರಿಯಾಗಿಂದೆ ಆರೋಗ್ಯವೂ ಕೆಟ್ಟೀತು. ವಾರಾಂತ್ಯದ 2ದಿನಗಳಲ್ಲಿ ವ್ಯರ್ಥ ಖರ್ಚುದೇಹಾಲಸ್ಯ ಹೆಚ್ಚೀತು.

ಕನ್ಯಾ—ರಾತ್ರಿ ಹಗಲುಗಳಂತೆ ಈ ವಾರದಲ್ಲಿ ನಿಮಗೆ ಸುಖ ದುಃಖಗಳು ಮಿಶ್ರಫಲಕೊಡಲಿವೆ. ಬೃಹಸ್ಪತ್ಯಾಚಾರ್ಯರ ಪೂರ್ಣದೃಷ್ಟಿಯು ನಿಮ್ಮ ಮೇಲಿರುವುದರಿಂದ ಸಮಾಜದಲ್ಲಿ ಸ್ಥಾನಮಾನ, ಸಂಸಾರಸುಖ, ಧನಧಾನ್ಯಾದಿಗಳಲಾಭವೂ ಆಗಲಿದೆ. ಆದರೆ ಜನ್ಮಸ್ಥ ಶನಿ. ರವಿ, ಬುಧರು, ಆತ್ಮೀಯರ ವಿರಹ ಪ್ರವಾಸ, ಉದರಶೂಲೆ, ಇತ್ಯಾದ್ಯನಿಷ್ಟಗಳನ್ನುಂಟು ಮಾಡಲಿರುವರು. ಆಯವ್ಯಯಗಳು ಸಮತೂಕದಲ್ಲಿರುವುದರಿಂದ ಹಣದ ಅಡಚಣೆಯುಂಟಾಗದು. ಶ್ರಮಜೀವಿಗಳಿಗೆ ದಿನಯಾಪನೆಯು ಸ್ವಲ್ಪ ಕಷ್ಟಸಾಧ್ಯವಾದೀತು. ವಾರಾಂತ್ಯದ 4ದಿನಗಳು ಸರ್ವಾತ್ಮನಾ ಅನುಕೂಲಗಳಾಗಿವೆ.

ತುಲಾ: ಆದಾಯಕ್ಕಿಂತ ದ್ವಿಗುಣವ್ಯಯವಾಗಲಿದೆ, ವಿದ್ಯಾರ್ಥಿಗಳಿಗೂ ನೌಕರಿಜನರಿಗೂ ಪ್ರಯತ್ನಕ್ಕೆ ತಕ್ಕಫಲಕಾಣಿಸದು. ಆದರೂ ಹಲವಾರು ವಿಧದಿಂದ ಧನಸಂಪಾದಿಸುವಿರಿ ಗುರು.ಹಿರಿಯರ ಪ್ರಕೋಪಕ್ಕೊಳಗಾದರೂ ಸಮಾಜದಲ್ಲಿ ಒಳ್ಳೆ ಗೌರವಾದರಗಳು ಲಭಿಸುವವು ಸಾರ್ವಜನಿಕ ಕಾರ್ಯಗಳಲ್ಲಿ ಕೀರ್ತಿಶಾಲಿಗಳಾಗುವಿರಿ. ದೇಹ ಪ್ರಕೃತಿಯು ಕಫದೋಷದಿಂದಾಗಿ ಸ್ವಲ್ಪ ಕೆಡಲಿದೆ. ಅನೇಕ ಹೊಸ ಮಿತ್ರರ ಪರಿಚಯವಾದೀತು. ವಾರಾಂತ್ಯದ 2ದಿನಗಳಲ್ಲಿ ದೇಹ ಮನಸ್ಸುಗಳಿಗೆ ಸುಖ ಶಾಂತಿಯೂ ಇಷ್ಟಪ್ರಾಪ್ತಿಯೂ ಆಗಲಿದೆ.

ವೃಶ್ಚಿಕ—ನಿಮ್ಮ ರಾಶಿಗೆ ಗುರುವಿನ ಪೂರ್ಣದೃಷ್ಟಿಯೂ ಲಾಭದಲ್ಲಿ ಗ್ರಹತ್ರಯರೂ ಸೇರಿರುವುದರಿಂದ ನೀವೀವಾರದಲ್ಲಿ ಹಲವಾರು ಮಹತ್ಕಾರ್ಯಗಳನ್ನು ಸಾಧಿಸುವ ಶಕ್ತಿಯುಳ್ಳವರಾಗುವಿರಿ. ಮಾತ್ರವಲ್ಲ ಕೀರ್ತಿಭಾಗಿಗಳಾಗುವಿರಿ. ನಿಮ್ಮ ಆದಾಯವು ಅತ್ಯುತ್ತಮವಿರುವುದರಿಂದ ಸಂಪದ್ಭಾಗವು ವೃದ್ಧಿಹೊಂದಲಿದೆ ಸಂಸಾರಿಕ ಸುಖದಿಂದ ಕೂಡಿದ ನಿಮಗೆ ಕೆಲವೊಮ್ಮೆ ವೃಥಾವಾಕ್ಕಲಹವು ಸಂಭವಿಸುವ ಯೋಗವಿದೆ. ಆದಕಾರಣ ವಾರಾಂತ್ಯದ 4ದಿನಗಳಲ್ಲಿ ಮೌನಿಗಳಾಗಿದ್ದರೂ ಒಳ್ಳೆತು.

ಧನುಃ—ಕಷ್ಟಪರಂಪರೆಗಳಲ್ಲಿ ಸಿಲುಕಿ ಜೀವನದಲ್ಲೇ ಜಿಗುಪ್ಸೆಗೊಂಡ ನಿಮಗೆ ಈಗಲೀಗ ಸ್ವಲ್ಪಗ್ರಹಬಲವು ದೊರೆತಿರುವ ಕಾರಣ ಹೆಚ್ಚಿನ ಕಾರ್ಯಗಳಲ್ಲಿ ಫಲಪ್ರಾಪ್ತಿಯು ನಿರೀಕ್ಷೆಗಿಂತಅಧಿಕವಾಗಿ ಲಭಿಸಲಿದೆ. ಜನರ ಪ್ರೀತ್ಯಾದರಗಳಿಗೆ ಭಾಗಿಗಳಾಗುವಿರಿ. ಬಂಧುವರ್ಗವು ನಿಮ್ಮ ಮೇಲೆ ಮುನಿದರೂ ಪರಿಣಾಮವೇನೂ ಆಗುವಂತಿಲ್ಲವು ವಿರೋಧಿಗಳ ಆಟವು ನಿಮ್ಮ ಮುಂದೆ ಸಾಗದು. ಅಂತೂ ದುರ್ದಿನಗಳನ್ನನುಭವಿಸಿದ ನಿಮ್ಮಗೆ ಇನ್ನುಮುಂದೆ ಮಹಾಪವಿತ್ರ ದಿನಗಳಾಗಿ ಕಾಣಸಬಹುದು. ವಾರಾಂತ್ಯದ 2ದಿನಗಳು ಅಷ್ಟೊಂದು ಪ್ರಶಸ್ತವಿಲ್ಲವು.

ಮಕರ:—ಅಸ್ಪಷ್ಟತೆ ದ ಭಾಲವಾದಾಗ ಎರೆಹುಳವೂ ಸರ್ಪವಾಗಿ ಪರಿಣಮಿಸುವದು ಎಂಬ ಪ್ರಾಜ್ಞರ ಮಾತನ್ನು ನೀವೀವಾರದಲ್ಲಿ ಬಾರಿಬಾರಿಗೂ ನೆನಸುವ ಪ್ರಸಂಗ ಬರಲಿದೆ. ಶತ್ರು ಜನರು ಪ್ರತೀಕಾರಾಸಕ್ತರಾಗುವರು. ಅಪಾದನವೂ ಕೂಡವ್ಯಯವಾಗಿ ರಿಕ್ತಹಸ್ತರಾಗುವಿರಿ. ಧರ್ಮ ಕರ್ಮಗಳಲ್ಲಿ ಅನಾದರವೂ ದೈವದೇವರು ಗುರುಹಿರಿಯರಲ್ಲಿ ತಾತ್ಸಾರ ಭಾವನೆಯೂ ಹೆಚ್ಚಾಗಲಿದೆ. ಅನಿರೀಕ್ಷಿತವಾಗಿ ಪ್ರವಾಸವು ಗಂಟುಬೀಳುವದು. ವಾರಾಂತ್ಯದ 4ದಿನಗಳಲ್ಲಿ ಹೆಚ್ಚಿನ ಅನಿಷ್ಟವುಂಟಾಗದು.

ಕುಂಭ—ನಿಮ್ಮ ಸಂಸಾರದಲ್ಲಿ ಹಲವಾರು ದೋಷಗಳಿದ್ದು ಕಾಣಸಲಿವೆ. ಸ್ತ್ರೀಜನರಿಂದಾಗಿ ಕಲಹ ಕಷ್ಟ ನಷ್ಟ ಅಪವಾದಗಳು ತಪ್ಪಿದ್ದಲ್ಲವು. ಕತ್ತಾಳಿ, ಅರ್ಧಾಂಗಿಯು ಚಂಡಿಯಂತೆ ಪೀಡಿಸುವಳು. "ಒಲಿದರೆ ನಾರಿ ಮುನಿದರೆ ಮಾರಿ" ಎಂಬ ನಾಣ್ಣುಡಿಯು ನಿಮ್ಮ ಭಾಗಕ್ಕೆ ಅನುಭವಸಿದ್ಧವಾಗಿ ತೋರುವುದು ವಾತ ಪಿತ್ತದೋಷದಿಂದಾಗಿ ಆರೋಗ್ಯವೂ ಕೆಡಲಿರುವುದು. ಆದರೂ ಆರ್ಥಿಕ ಭಾಗದಲ್ಲಿ ನಿಮಗಾವ ತೊಂದರೆಯೂ ಉಂಟಾಗಲಾರದು. ವಾರಾಂತ್ಯದ 2ದಿನಗಳು ಅತ್ಯುತ್ತಮವಿವೆ.

ಮೀನ—ಈ ವಾರವು ನಿಮಗೆ ಸರ್ವಾತ್ಮನಾ ಅನಿಷ್ಟದಾಯಕವಾಗಿದ್ದರೂ ಪಿತ್ರಮಕಾರಕನಾದ ಕುಜನ ಅನುಗ್ರಹವೊಂದು ಬೆನ್ನಿಗಿರುವುದರಿಂದ ಬಂದದ್ದೆಲ್ಲಾ ಬರಲಿ ಎಂದು ಎದೆಯೊಡ್ಡಿ ನಿಲ್ಲುವ ಧೈರ್ಯಸ್ಥೈರ್ಯವು ನಿಮಗೆ ಬರಲಿದೆ ಆದರೂ ಅರ್ಥಕಡಿಕ್ಕಟ್ಟು ಆತ್ಮೀಯರ ವಂಚನೆ ಮನೆಯವರ ಮನಸ್ತಾಪಾದಿಗಳಿಂದ ನಿಮ್ಮ ಮನಕ್ಕೆ ಕ್ಷಣಕಾಲವೂ ನೆಮ್ಮದಿಸಿಗಲಾರದು. ವೃಥಾವಾಕ್ಕಲಹಕ್ಕೆ ಗುರಿಯಾಗುವಿರಿ ತಾ 20, 21, 22 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ಪರಿಣಮಿಸುವವು

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ್ ಚಾರ್ಜು ೧೨ ಆಣೆ

ಚಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬೆಟ-

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ಮೈಸೂರು. ಚಾನಪ್ಪ ಸಿದ್ದಲಿಂಗಪ್ಪ ಗ್ರಾಮವಾಡಕರ ಬಿಜಾಪೂರ ನಂಜುಂಡೇಶ್ವರ ಮೆಡಿಕಲ್ ದಾವಣಗೆರೆ. ದಾವಣಗೇರಿ:—ದಾವಣಗೇರಿ ಪ್ರೆಸ್ ಎರ್ ಎಲ್ ಕಮಲಬಾಯಿ ಲೆಮಿಸ, ಶಾನವಿ ಬ್ಯಾರಿಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕ ಪ್ರತಿನಿಧಿಗಳು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ

ಋತುಸ್ರಾವ ನಿರಂತರ

'ಕುಮಾರಿ' ದಿಲ್ಲಿಗಳನು ಉಪಯೋಗಿಸಿದರೆ ಹದಿನೆಸ್ಸು ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, ೮-[ಡಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MIS P DEVEE, F DS (N J.)
Tollygunge CALCUTTA
ಸ್ಥಾನಿಕರು ಶಹಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. U. SHETTY AT THE NAVAYUGA PRESS, UDIPI, S.INDIA

Regd.No M 3618

LICENCE No. 31
Licensed to Post without Prepayment

31ನೆ ವರ್ಷಾರಂಭ

27-9-1951

Founder: Sri A. B. Shetty,
Minister for Agriculture & Veterinary

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಕೃಷಿಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ 31
ವಾರ 4

NAVAYUGA WEEKLY Post Box No. 22 UDIPI.

Vol. 31 No. 4

ಕಾಲಬಂದಾಗ....!

ಮನುಷ್ಯನ ಯೋಗ್ಯತೆ ತಿಳಿಯುವದು ಅನುಕೂಲ ಪರಿಸ್ಥಿತಿಯಿರುವಾಗಲ್ಲ; ತನಗಿದಿರಾಗಿ ಬರುವ ನೂರಾರು ಪ್ರಾತಿಕೂಲ್ಯಗಳನ್ನು ಇದಿರಿಸುವಾಗ! ಬೇರೆಯವರಿಗೆ ಆದರ್ಶ-ಬುದ್ಧಿಮಾರ್ಗ ಹೇಳುವದು ಸುಲಭವೇನೋ ಹೌದು ಆದರೆ ತನ್ನ ಪಾಲಿಗೆ ಅದು ಅನುಕರಣೀಯವೆಂದು ತಿಳಿಯುವವರು ಕೆಲವೇ ಮಂದಿ! ಬ್ರಿಟಿಶರ ಆಡಳಿತವನ್ನು ಅನ್ಯಾಯವಾಗಿ ದೂರಿದೆವು; ಆಹಾರದಭಾವ, ಲಂಚಗುಳಿತನ-ಕಳ್ಳಸಂತೆಗಳನ್ನು ಟೀಕಿಸಿದೆವು. ಅಂತಹ ಟೀಕೆ ಮಾಡಿದವರಲ್ಲಿ ನಮ್ಮ ಪ್ರಧಾನ ಮಂತ್ರಿ ಜವಾಹರಲಾಲರೂ ಒಬ್ಬರು. ಇಂದು ಅವರ ಕೈಯಲ್ಲಿ ರಾಷ್ಟ್ರದ ಆಡಳಿತವಿದೆ. ಆದರ ನಿವಾರಣೆಗಾಗಿ ಅವರು ಕೈಗೊಂಡ ಕಾರ್ಯದಕ್ಷತೆಯನ್ನು ನಾವು ಶ್ಲಾಘಿಸುವದಾದರೂ ಅಂತಹ ದುಷ್ಟ ಶಕ್ತಿಗಳು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇರುವದನ್ನು ಗಮನಿಸಿದ್ದೀ! ಇದರ ಒಳಗುಟ್ಟು ಇಷ್ಟೆ! ಸ್ವಾತಂತ್ರ್ಯದ ಮುನ್ನ ಕಾಂಗ್ರೆಸ್ಸಿಗರ ಮನಸ್ಸು ದೇಶದ ಹಿತ ಹಾಗೂ ಅಭ್ಯುದಯದ ಕಡೆಗೇ ಇತ್ತು! ಅಧಿಕಾರ ಕೈಗೆ ಬಂದಮೇಲೆ ಆ ವಿಶಾಲದೃಷ್ಟಿ ಉಳಿಯಲಿಲ್ಲ. ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರು. ಅರ್ಥಾತ್ ಪಷ್ಟು ನಮ್ಮವರೇ ಅಧಿಕಾರದ ದುರುಪಯೋಗ ಪಡಿಸಿದರು. ಅಂತಲೇ ನೆಹರೂ ಸರಕಾರ ನಾವು ಎಣಿಸಿದಷ್ಟು ಸುಸೂತ್ರವಾಗಿ—ಯೋಗ್ಯರೀತಿಯಲ್ಲಿ ನಡೆಯಲಿಲ್ಲ! ಕಾಲ ಬಂದಾಗಲೆಲ್ಲ ಸ್ವಾರ್ಥ ಸಾಧಿಸುವ ಜನ ನಮ್ಮಲ್ಲಿ ಬಹಳವಾಗಿದ್ದರಿಂದಲೇ ನೆಹರೂ ಸ್ವತಃ ತನ್ನ ವಚನವನ್ನು ಪಾಲಿಸದಾಗಿದ್ದಾರೆ. ಕಾಲಬಂದಾಗ.... ಬಣ್ಣ ಬದಲಾಯಿಸುವ ಬುದ್ಧಿ ಕಾಂಗ್ರೆಸ್ಸಿಗರಲ್ಲುಂಟೆಂದೀತೆಂದು ನೆಹರೂರೆಂದು ಅರಿಯದೇನೆ "ನಾನು ಅಧಿಕಾರಿಯಾಗಿದ್ದರೆ ಕಳ್ಳಸಂತೆ ಮಾಡುವವರನ್ನು ಗಲ್ಲಿಗೇರಿಸುತ್ತಿದ್ದೆ" ಎಂದಿರಬೇಕು!

ಚುನಾವಣೆಕಾಲ ಹತ್ತಿರ ಹತ್ತಿರ ಬರುತ್ತಿರುವಾಗ ಪುಢಾರಿಗಳು ತಮ್ಮ ಕೈ ಮೇಲಾಗುವದಕ್ಕೆ ಹೇಗೆ ವರ್ತಿಸುತ್ತಿದ್ದಾರೆಂಬುದನ್ನು ನಾವು ಕುತೂಹಲದಿಂದ ಲಕ್ಷಿಸಬೇಕಾದ ಕಾಲವಿದೆ. ಕಾಂಗ್ರೆಸ್ಸೇತರ ಪಕ್ಷಗಳಿಗಿಂತಲೂ ಸ್ವಪಕ್ಷ ಪ್ರತಿಪಾದನೆಗಿಂತ ಪರಪಕ್ಷ ಖಂಡನೆಯೇ ಹೆಚ್ಚಾಗಿರುತ್ತದೆ! ಬೇರೆಯವರನ್ನು ನಿಂದಿಸಿಯೇ—ಯಥಾರ್ಥವನ್ನು ಮರೆಮಾಚಿ ಆಳುವ ಸರಕಾರವನ್ನು ಟೀಕಿಸಿಯೇ ಸ್ವಾರ್ಥ ಸಾಧಿಸಬೇಕೆಂಬ ಹಂಬಲ! ಇದನ್ನು ನಾವು ಚುನಾವಣಾ ಸ್ಟಂಟು ಎಂದರೂ ಎನಬಹುದೇನೊ! ಆದರೆ ಕಾಂಗ್ರೆಸ್ಸಿಗರಲ್ಲೇ ಹಲವು ರೀತಿಯ ಮೇಲಾಟಗಳು ನಡೆಯುತ್ತಿರುವದನ್ನು ನೋಡಬಹುದು. ನಾಲ್ಕು ವರ್ಷಗಳಿಂದ ಜನತೆಗೆ ಕೇಡುಬಯಸಿದವರೂ, ದೇಶದ ಹಿತವನ್ನು ಅಲಕ್ಷಿಸಿದವರೂ, ಸ್ವಾರ್ಥಗಂಭೀರ್ಯದಿಂದ ಜನತೆಯೊಡನೆ ಬೆರೆಯದವರೂ ಇಂದು ಅತ್ಯಂತ ಸೌಹಾರ್ದಭಾವ ದೇಶಸೇವಾ ದೃಷ್ಟಿಯನ್ನು ಬೀರುತ್ತಿದ್ದಾರೆ ಮಾತ್ರವಲ್ಲ; ಕಾಂಗ್ರೆಸ್ಸಿನ ಟಿಕೇಟಿಗಾಗಿ ಅಹರ್ನಿಶಿ ದುಡಿಯುತ್ತಲಿದ್ದಾರೆ. ಪುಢಾರಿಗಳು ವಸ್ತುತಃ ಜನಪ್ರಿಯರಾಗಿದ್ದರೆ ಈ ಬಗೆಯ ಚಾಣಕ್ಯತಂತ್ರವನ್ನು ಹುಡುಕಬೇಕಾಗಿಲ್ಲ. ತನ್ನ ಕರ್ತವ್ಯದಲ್ಲಿ ಅಪ್ರಾಮಾಣಿಕತನ-ಜನಹಿತ ಕಾರ್ಯಗಳ ಲೋಪದೋಷವಿದ್ದರೆ—ತನ್ನ ನಿಲುಮೆಯ ಬಗ್ಗೆ ಸಂಶಯ ಅನಿಶ್ಚಿತತೆ ಸಹಜವಾಗಿಯೂ ತಲೆದೋರುತ್ತದೆ. ಅಂತಲೇ ಚುನಾವಣಾ ಕಾಲದಲ್ಲಿ ಏನಕೇನ ಪ್ರಕಾರೇಣ ತನ್ನ ಕೈ ಮೇಲಾಗುವದಕ್ಕೆ ಯತ್ನಿಸುತ್ತಾನೆ ಕಾಂಗ್ರೆಸ್ಸಿನ ತತ್ವ ಆದರ್ಶಗಳು ಒತ್ತಟ್ಟಿಗೆ—ಇವನ ಕಾರ್ಯ ಒತ್ತಟ್ಟಿಗೆ ಆಗುವದುಂಟು! ಇಂತಹ ಸಂದರ್ಭದಲ್ಲಿ ತನ್ನ ದಿಗ್ವಿಜಯ ಪ್ರಕ್ರಿಯೆಯೊಂದೇ ಅವನ ತಲೆಯಲ್ಲಿ ಸುತ್ತುತ್ತದೆಯೇ ಹೊರತು ಯಥಾರ್ಥವಾದಮಾರ್ಗವಲ್ಲ!

ಕಾಂಗ್ರೆಸ್ಸಿನ ಟಿಕೇಟನ್ನು ಪಡೆದು ಜನತೆಯ ಪ್ರತಿನಿಧಿಯಾಗಿ ನಿಲ್ಲುವದಕ್ಕೆ ಹವಣಿಸುವದೇಕೆ? ಕಾಂಗ್ರೆಸು ಅಧಿಕಾರದಲ್ಲಿರುವ ಪಕ್ಷ—ಅದರಲ್ಲಿ ತಾನು ಮುಂದೆ ಬಂದರೆ ಮಂತ್ರಿಯಾಗಬಹುದೆಂಬ ದೂರದೃಷ್ಟಿಯೇ ಹೊರತು ತ್ಯಾಗ ಬುದ್ಧಿಯಲ್ಲ! ಕಾಂಗ್ರೆಸ್ಸಿಗಬೇಕೆಂದೇ ಇದ್ದರೆ—ಅಂತಹ ಪುಢಾರಿಗಳು ಸ್ವಾರ್ಥದಿಂದ ದೂರಾಗಿದ್ದರೆ—ಕಾಂಗ್ರೆಸ್ಸಿನ ಮೂಲತತ್ವಕ್ಕೆ ವಿರೋಧವಾದ ಮಾರ್ಗವನ್ನೇಕೆ ಹಿಡಿಯಬೇಕು? ಕಾಂಗ್ರೆಸು ಅಧಿಕಾರ—ಸ್ವಾರ್ಥ-ಸಂಕುಚಿತತೆಗಳಿಗಾಗಿರುವ ಸಂಸ್ಥೆಯಲ್ಲ! ಅರ್ಧಶತಮಾನದಿಂದ ಒಂದು ಉಚ್ಚ ಧ್ಯೇಯವನ್ನು ಆರಾಧಿಸುತ್ತ ಲೋಕದ ಹಿತಕ್ಕಾಗಿ ಬದ್ಧಕಂಕಣವಾದ ಸಂಸ್ಥೆ! ಇಲ್ಲಿ ಇರುವ ಸಂಸ್ಥೆಯ ಶುದ್ಧೀಕರಣ ಹಾಗೂ ಗೌರವವನ್ನು ಕಾಪಾಡಿಕೊಳ್ಳಬೇಕು. ವ್ಯಕ್ತಿಯ ವಿಜಯಕ್ಕಾಗಿ ತತ್ವವನ್ನು ಮರೆಯುವದು ಅನುಚಿತ ಮಾರ್ಗ!

ಕಾಂಗ್ರೆಸ್ಸಿನ ಒಂದು ಸ್ಥಾನಕ್ಕೆ ಮೂರೋ ನಾಲ್ಕೋ ಉಮೇದುವಾರರ ಅರ್ಜಿಗಳು ಬಂದಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ಮೇಲಾಟ ನಡೆಯುವದು ಸ್ವಾಭಾವಿಕ! ಇಂತಹ ಮೇಲಾಟಗಳಲ್ಲಿ ಒಬ್ಬ ಪುಢಾರಿ ಇನ್ನೊಬ್ಬ ಪುಢಾರಿಯನ್ನು ಹಿಂದೂಡುವದಕ್ಕೆ ಬಹಳ ಪ್ರಯತ್ನ ನಡೆಸುತ್ತಾನೆ ಆಗ ಘರ್ಷಣೆ ಹುಟ್ಟುತ್ತದೆ. ಸ್ಪರ್ಧೆ ಪ್ರತಿಸ್ಪರ್ಧೆಗಳಿಂದ ಸಂಸ್ಥೆಯ ಮೂಲತತ್ವಕ್ಕೆ ಅಪಚಾರ ತರುವ ಕಾರ್ಯ ನಡೆಯುತ್ತದೆ. ಈ ಎಲ್ಲ ದೋಷಗಳುದ್ಭವಿಸುವದು ಕಾಲಬಂದಾಗ....ಸ್ವಾರ್ಥಸಾಧಿಸುವ ಮನಸ್ಸುಮಾಡುವವರಿಂದಲೇ ಎಂಬುದನ್ನು ನಾವು ಮರೆಯಬಾರದು! ಸಚ್ಚಾರಿತ್ರ್ಯ—ಸದ್ಭಾವನೆಗಳದ್ದಲ್ಲಿ ಈಗೊಂದಲವೇಳದು! ಕಾಲಬಂದಹಾಗೆ ಕೋಲಕಟ್ಟುವದರ ದುಷ್ಪರಿಣಾಮವಿದು! ಚುನಾವಣೆಯ ಸ್ಪರ್ಧೆಯಕಾಲದಲ್ಲಿ ಪುಢಾರಿಗಳು ಸಂದರ್ಭಸಾಧಕರಾಗಿ ವರ್ತಿಸಿದರೂ ಜನತೆ ಜಾಗೃತೆಯಿಂದ ತಮ್ಮ ನಿಲುಮೆಯನ್ನು ಭದ್ರಗೊಳಿಸಿ ದೇಶದ ಕಲ್ಯಾಣವನ್ನು ಹಾರೈಸಬೇಕು!

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor There are various choices as regards period of deposit and monthly instalment and you can make your own choice. Our officers will be glad to give you full particulars

The Canara Industrial & Banking Syndicate Ltd.

Estd. 1925. H O UDIPI.

ಫ್ರಾನ್ಸ್, ಇಂಗ್ಲಾಂಡು ಮತ್ತು ಅಮೇರಿಕದಲ್ಲಿ ಪಕ್ಷಗಳು ವಿಪರೀತ ಸ್ಥಿತಿಗೆ ಮುಟ್ಟಿವೆ. ಇಲ್ಲಿ ಬಿರುದಾವಳಿಗಳು ಮತ್ತು ಬಹುಮಾನಗಳನ್ನು ದೇಶಸೇವೆ ಮಾಡಿದವರಿಗೆ ಮಾತ್ರ ಕಾಣಿಸುವುದರ ಬದಲಿಗೆ ಪಕ್ಷಗಳ ಹಿತಚಿಂತಕರಿಗೆ ಉಡುಗರೆಯಾಗಿ ಕೊಡುವರು. ಸ್ವಿಟ್ಜರ್‌ಲೇಂಡಿನಲ್ಲಿ ಇದನ್ನು ನಿಲ್ಲಿಸಿರುವರು. ಕೆನಡಾದಲ್ಲಿ ನಿಷೇಧಿಸಿರುವರು ಐರ್ಲೇಂಡು ಮತ್ತು ನಮ್ಮ ದೇಶದಲ್ಲಿ ಸಹಾ ರದ್ದುಗೊಳಿಸಿರುವರು. ಸಮಾಜಸೇವಕರಿಗೆ ಜನರ ಪ್ರೀತಿ ಮನ್ನಣೆ ಮರ್ಯಾದೆ ಮತ್ತು ಭಕ್ತಿ ಸ್ಮರಣೆಯೇ ನಿಜವಾದ ಗೌರವದ ಉಡುಗರೆಯಾಗಿರುವದು.

ಇಂಗ್ಲಾಂಡಿನಲ್ಲಿ ಪಕ್ಷದ ಧೋರಣೆಯನ್ನು ಪಾರ್ಲಿಮೆಂಟಿನ ಐದಾರು ಮುಖಂಡರು ನಿರ್ಣಯಿಸುವರು. ಅಮೇರಿಕದಲ್ಲಿ ರಾಷ್ಟ್ರ ಸಂಘವು (National Convention) ತಯಾರಿಸುವದು. ರಾಷ್ಟ್ರ ಸಂಘದ ಹೇಳಿಕೆ ಎಂಬುದು ದೇವತಾವಾಕ್ಯವೆಂಬ ಭಾವನೆಯು ಜನರಲ್ಲಿರುವದರಿಂದ ಅಗತ್ಯವಿದ್ದಾಗ ಆ ಮಡಿಯು ಮರವೆಯಾಗುವದುಂಟು. ಅಮೇರಿಕದವರು ಹೆಚ್ಚಾಗಿ ವ್ಯಕ್ತಿಗಳಿಗಿಂತ ಮಸೂದೆಗಳನ್ನೇ ಲಕ್ಷ್ಯದಲ್ಲಿಟ್ಟು ಕಾರ್ಯನಡೆಸುವರಾದರೂ ಪಕ್ಷಗಳು ತಮ್ಮ ಪ್ರಯತ್ನ ಮತ್ತು ನಿಧಿಯನ್ನು ಸ್ಥಾನಗಳಿಗೆ ವ್ಯಕ್ತಿಗಳನ್ನು ಆರಿಸುವುದರಲ್ಲಿ ವ್ಯಯಿಸುವರು. ಅಮೇರಿಕದವರು ಪಕ್ಷಗಳ ಮತವನ್ನನುಸರಿಸಿ ನಡೆಯುವರೆಂತ ತೋರಿಸಿಕೊಂಡರೂ ಪಕ್ಷಗಳೊಳಗಿನ ಸ್ವಲ್ಪ ಜನರಾದ ಶ್ರೀಮಂತರ ಇಚ್ಛೆಯಂತೆ ನಡೆಯುವರು. ನ್ಯಾಯಸಭೆ ಮತ್ತು ಸರಕಾರದ ಕಾರ್ಯಮಂಡಳ ಎರಡೂ ಒಂದೇ ಪಕ್ಷದವರ ಅಧೀನವಿದ್ದಾಗ ಇದು ಹೆಚ್ಚು.

ಪ್ರಜಾಮತ ಸರಕಾರವಿರುವಲ್ಲಿ ಪಕ್ಷಗಳಿಗೆ ಮುಖ್ಯವಾಗಿ ಮೂರು ಕರ್ತವ್ಯಗಳಿರುವವು. ತಮ್ಮ ಚರ್ಚೆ ಮತ್ತು ವಾಗ್ಯುದ್ಧದಿಂದ ಪಕ್ಷದ ತತ್ವ ಮತ್ತು ಧೋರಣೆಗಳನ್ನು ಪ್ರವರ್ಧಿಸುವುದು ಮತ್ತು ಚುನಾವಣೆಯಲ್ಲಿ ತಮ್ಮ ಪಕ್ಷವು ಗೆದ್ದು ಬರುವಂತೆ ಮಾಡುವದು. ಚುನಾವಣೆಗೆ ಯೋಗ್ಯರಾದ ಉಮೇದ್ವಾರರನ್ನು ಆರಿಸಿ ನಿಲ್ಲಿಸುವರು. ಇಂಗ್ಲಾಂಡಿನಲ್ಲಿ ಪಕ್ಷದ ಕೇಂದ್ರ ಕಚೇರಿಯಿಂದ ಅಂದರೆ ಪಕ್ಷದ ಮೆನೇಜರನು ಚಾತುರ್ಯದಿಂದ ಸ್ಥಳೀಯ ಶಾಖೆಗೆ ಯಾವನಾದರೊಬ್ಬನ ಹೆಸರನ್ನು ಸೂಚಿಸುವನು. ಉಮೇದ್ವಾರರನ್ನು ಆರಿಸಿ ತೆಗೆಯುವ ಕ್ರಮವಿಲ್ಲದಿರುವಲ್ಲಿ ಯಾರಿಗೆ ಯಾವ ಬಗ್ಗೆ ಮತ ಕೊಡುವದೆಂಬ ಅರಿವೇ ಮತದಾರರಿಗಾಗದು. ಕೆಲವು ಸಮಯ ಪಕ್ಷಗಳ ಮುಖ್ಯಸ್ಥರು ಅಥವಾ ಕೇಂದ್ರ ಅಧೀನದವರು ತಮಗೆ ಹಿತಕಂಡ ಪೇಟೆಪಟ್ಟಣದವರನ್ನು ದೇಶದ ಯಾವದಾದರೊಂದು ಮೂಲೆಯ ಕ್ಷೇತ್ರದ ಪರವಾಗಿ ನಿಲ್ಲಿಸಿ ಸ್ಥಳೀಯ ಉಮೇದ್ವಾರರ ಮನಸ್ಸಿಗೆ ಬೇಸರವುಂಟಾಗುವಂತೆ ವರ್ತಿಸುವುದೂ ಉಂಟು. ಸ್ಥಳೀಯ ಜನರಿಗೆ ತಮ್ಮನ್ನು ಲೆಕ್ಕಿಸಲಿಲ್ಲವೆಂಬ ಮನಸ್ತಾಪ ಉಂಟಾಗುವದು. ದೊಡ್ಡ ಕ್ಷೇತ್ರದಲ್ಲಿ ಮಾರ್ಗದರ್ಶಕರು ಬೇಕೇ ಬೇಕು. ಅಮೇರಿಕದಲ್ಲಿ ಪಕ್ಷಗಳಿಂದ ನೇಮಿಸಲ್ಪಟ್ಟ ವ್ಯಕ್ತಿಯು ಜನರ ಮೆಚ್ಚುಗೆಗೆ ಸಂಬಾದಿರುವಲ್ಲಿ ನಾಗರಿಕರ ಸಮಿತಿಯು ಬೇರೆ ಹೆಸ

ಪ್ರಜಾಸತ್ತೆ [ಕಳೆದ ಸಂಚಿಕೆಯಿಂದ ಮುಂದರಿದುದು] ಲೇಖನಾಂಕ ೨

ಪ್ರಜಾಸತ್ತೆಯೂ ಪಕ್ಷಗಳೂ

ರುಗಳನ್ನು ಸೂಚಿಸುವದು. ಅದನ್ನು ಊರ ಮಹನೀಯರು ಅನುಮೋದಿಸುವರು. ಪಕ್ಷಗಳು ಚುನಾವಣೆಯಲ್ಲಿ ಭಾಗವಹಿಸುವಲ್ಲಿ ಹಣದ ಅಭಾವವಿರುವ ಉಮೇದ್ವಾರನಿಗೆ ಧನಸಹಾಯ ಮಾಡುವವು. ಇದನ್ನು ದುರುಪಯೋಗ ಮಾಡುವರೆಡೆ ಇರುವದಾದರೂ ಹೀಗೆ ಸಹಾಯ ಮಾಡದಿರುವಲ್ಲಿ ಬರೀ ಹಣದ ಯೋಗ್ಯತೆಯಿಂದಲೇ ಯಾವನಾದರೊಬ್ಬ ಪ್ರತಿಪಕ್ಷದವನು ಚುನಾಯಿತನಾದಾನು ಮತ್ತು ಯೋಗ್ಯತೆಯಿದ್ದೂ ಹಣದ ಅಭಾವದಿಂದ ಒಬ್ಬನು ಸೋತುಹೋದಾನು. ಇನ್ನು ಮೂರನೇ ಕರ್ತವ್ಯವೇನೆಂದರೆ: ಪಕ್ಷಗಳು ತಮ್ಮ ಧ್ಯೇಯ ಮತ್ತು ಗುರಿಯನ್ನು ನ್ಯಾಯಸಭೆಯಲ್ಲಿ ಸಾಧಿಸುವರೇ ಪಕ್ಷಗಳ ಸದಸ್ಯರೆಲ್ಲರೂ ಒಮ್ಮತದಿಂದ ಒಕ್ಕಟ್ಟಿನಲ್ಲಿರುವಂತೆ ನೋಡಿಕೊಳ್ಳುವುದಾಗಿದೆ. ಇಂಗ್ಲಾಂಡಿನಲ್ಲಿರುವಂತೆ ಪಾರ್ಲಿಮೆಂಟರಿ ಸರಕಾರವಿರುವಲ್ಲಿ ನ್ಯಾಯಸಭೆಯ ಬಹುಪಕ್ಷದವರು ಕಾರ್ಯಕಾರೀ ಮಂಡಳವನ್ನು ರಚಿಸುವರು. ಇದೇ ಅಧಿಕಾರದ ಪಕ್ಷವೆನಿಸುವದು. ನ್ಯಾಯಸಭೆಯ ಮಿಕ್ಕುಳಿದ ಮೆಂಬರರು ವಿರೋಧಪಕ್ಷವೆನಿಸುವರು. ಅಮೇರಿಕದಲ್ಲಿ ಕಾರ್ಯಕಾರೀ ಮಂಡಳವು ನ್ಯಾಯಸಭೆಯ ಬಹುಪಕ್ಷವನ್ನು ಹೊಂದಿರುವದಿಲ್ಲವಾದರೂ ಪಕ್ಷಗಳ ಐಕ್ಯತೆಯು ವ್ಯವಸ್ಥೆಯು ಅವಶ್ಯವೆಂತ ಕಂಡುಬಂದದೆ. ಇದರಿಂದ ಪಕ್ಷಗಳ ಮುಂದಾಳುಗಳು ಪ್ರಖ್ಯಾತಹೊಂದಿ ಬೆಳಕಿಗೆ ಬಂದು ಪ್ರಯೋಜನ ಹೊಂದುವ ಸುಯೋಗವು ತುಂಬಾ ಇದೆ. ಪಕ್ಷಗಳಲ್ಲಿ ಐಕ್ಯತೆ ಮತ್ತು ಶಿಸ್ತು ಇಲ್ಲದಿದ್ದರೆ ವಿರೋಧ ಪಕ್ಷದವರು ಅಧಿಕಾರದ ಪಕ್ಷವನ್ನು ಹೊರತಳ್ಳಿ ತಮ್ಮ ಸ್ಥಾನಕ್ಕೆ ತಾವು ಬರುವರು. ಆದ್ದರಿಂದ ಪಕ್ಷಗಳ ಸದಸ್ಯರಿಗೆ ಅವರ ಕರ್ತವ್ಯದ ಕುರಿತು ಎಚ್ಚರಿಸುತ್ತಾ ಇರಬೇಕಾಗುತ್ತದೆ.

ಪಕ್ಷಗಳ ರೀತಿನೀತಿಗಳಲ್ಲಿ ನಾನಾ ತರದ ನ್ಯೂನತೆಗಳು ನಮಗೆ ಕಂಡುಬಂದಿವೆ. ಇವುಗಳ ಪೈಕಿ ಕೆಲವನ್ನು ಕಳೆದ ಬಾರಿ ನವಯುಗದ ಸಂಚಿಕೆಯಲ್ಲಿ ಬರೆದ ಎರಡು ಲೇಖನಗಳಲ್ಲಿ ಹೇಳಿರುವದರಿಂದ ಈಗ ಅವುಗಳ ಕುರಿತು ಬರೆದರೆ ಪುನರಾವರ್ತನೆ ಮಾಡಿದಂತೆಯೇ ಸರಿ. ಅಲ್ಲಿ ಹೇಳದ ವಿಷಯಗಳನ್ನು ಮಾತ್ರ ಇಲ್ಲಿ ಎತ್ತಿಣಿಸುವೆನು. ಪ್ರಜಾಮತ ಸರಕಾರದ ಕಾರ್ಯಕಲಾಪಗಳನ್ನು ಆಚರಣೆಯಲ್ಲಿ ಪ್ರತ್ಯಕ್ಷ ನೋಡಿದ ಅನುಭವವಿಲ್ಲದ ರಾಜಕೀಯ ತತ್ವಜ್ಞಾನಿಗಳು ಪಕ್ಷಗಳ ಸರಕಾರದ ಕುರಿತು ಸ್ವಲ್ಪ ಟೀಕಿಸುವರು. ಒಂದು ಪಕ್ಷದವರು ಸರಕಾರ ನಡೆಸುವದು, ಇನ್ನೊಂದು ಪಕ್ಷದವರು ವಿರೋಧ ಸೂಚಿಸುವದು, ಒಂದು ಪಕ್ಷದವರು ಮಸೂದೆ ಮತ್ತು ನಿಬಂಧನೆಗಳನ್ನು ಮುಂದೆ ತರುವದು ಇನ್ನೊಂದು ಕಡೆಯವರು ತಕರಾರು ತಂದು ತಿದ್ದುಪಡಿ ತರುವದು ಅಥವಾ ಕೆಲವಂಶವನ್ನು ತೆಗೆದುಹಾಕುವಂತೆ ಮಾಡುವದು, ಒಂದು ಕಡೆಯವರ ಸುಧಾರಣೆ ರಾವಿಗೆ ಇನ್ನೊಂದು ಕಡೆಯವರು ಅಡ್ಡಬರುವದು ಇದೆಲ್ಲಾ ಅರ್ಥವಿಲ್ಲವೆನ್ನುವರು. ಸಾರ್ವಜನಿಕ ವಿಷಯಗಳಲ್ಲಿ ಪಕ್ಷಪಾತ ಇರುವುದಿಲ್ಲವಾದರೂ ಇದು ಉಂಟುಮಾಡುತ್ತದೆನ್ನುವರು. ಬಹುಪಕ್ಷವೆಂಬುದು ಬರೆ ಬಹುಪಕ್ಷವಾಗಿದೆ. ಬಹುಪಕ್ಷದವರೊಳಗೆ ಬಹುಮತವಿದ್ದಂತೆ ತೀರ್ಮಾನವಾಗುವದೆಂಬಾದ ಮೇಲೆ ಇಡೀ ನ್ಯಾಯಸಭೆಯು ಬಹುಪಕ್ಷವೆಂತ ಹೇಳಲು ಹೆಚ್ಚು ಸಲ ಬರುವದಿಲ್ಲ. ಇನ್ನೊಂದು ಪಕ್ಷದಲ್ಲಿ ತಿಳಿದವರಿರುವದಾದರೂ ಅವರಿಂದ ಪ್ರಯೋಜನ ಪಡೆಯುವ ಬದಲಿಗೆ ಅವರನ್ನು ಹೊರಗೆ ತಳ್ಳುವದು ಸರಿಯಲ್ಲ. ವಿವಾದವಿಲ್ಲದಿದ್ದಲ್ಲಿ ಚರ್ಚೆಗಳಿಗಾಸ್ಪದ ಮಾಡುವರು. ಆದರೆ ಪಾರ್ಲಿಮೆಂಟಿನ ಪದ್ಧತಿ ಪ್ರಕಾರ ಇದು ಸರಿಯೆಂತ ಕಂಡುಬಂದದೆ. ವಿರೋಧಪಕ್ಷಗಳು ಒಂದಲ್ಲ ಒಂದು ದಿನ ತಾವು ಆಡಳಿತ ಗದ್ದುಗೆಯನ್ನು ಏರಬಹುದೆಂಬ ಆಶೆ ಮತ್ತು ನಂಬಿಕೆಯಿರುವದರಿಂದಲೇ ಹೀಗೆ ಮಾಡುವರು. ಪಟ್ಟಣದ ಹೊರಗೆ ಆಯುಧಪಾಣಿಗಳಾಗಿ ಶಕ್ತಿ ತೋರಿ ಯುದ್ಧ ಮಾಡುವದರ ಬದಲಿಗೆ ಪಟ್ಟಣದೊಳಗೆ ನ್ಯಾಯ-ಸಭೆಯನ್ನು ವಾಗ್ಯುದ್ಧದ ರಣಕಣವನ್ನಾಗಿ ಮಾಡಿಕೊಂಡು ಸೋತವರ್ಯಾರು ಗೆದ್ದವರ್ಯಾರು, ಅಧಿಕಾರದ ಹೊರಗಿರುವವರ್ಯಾರು ಒಳಗಿರುವವರ್ಯಾರು ಎಂತ (Ins and outs) ತಮ್ಮತಮ್ಮೊಳಗೆ ನಿರ್ಣಯ ಮಾಡಿಕೊಳ್ಳುವರು. ಈ ಜಗಳದೊಳಗೆ ಕೆಲವು ಸಮಯ ರಾಷ್ಟ್ರಹಿತದ ನೆನಪೇ ಆಗದಿರುವದುಂಟು. ಪಕ್ಷಗಳು ಕೆಲವು ಸಮಯ ಮನಸ್ಸಿಗೆ ವಿರೋಧವಾಗಿ ಹೋಗಬೇಕಾಗುತ್ತದೆ. ಪಕ್ಷಗಳು ರಾಷ್ಟ್ರವನ್ನು ಎರಡು ತುಂಡುಗಳಾಗಿ ಮಾಡುವವು. ಪಕ್ಷಭೂತದ ಆವೇಶದಿಂದ ರಾಷ್ಟ್ರದಲ್ಲಿ ದ್ವೇಷವು ಹುಟ್ಟುವದು. ಜನಮನಸ್ಸು ಕಲಕಿ ರಾಷ್ಟ್ರಭಕ್ತಿಯು ಹಾಳಾಗುವದು. ಪ್ರತಿನಿಧಿಗಳ ಸ್ವಾತಂತ್ರ್ಯಕ್ಕೆ ಧಕ್ಕೆತರುವವು. ಸದಸ್ಯನ ಸ್ವಂತ ಅಭಿಪ್ರಾಯ ಅಡಗಿಸುವಂತೆ ಮಾಡುವವು. ಅನೇಕ ಸಲ ಕಣ್ಣು ಮುಚ್ಚಿ ಮತ ಕೊಡಬೇಕಾಗುತ್ತದೆ. ಒಂದು ಕಡೆಯವರ ಮಸೂದೆಯನ್ನು ಇನ್ನೊಂದು ಕಡೆಯವರು ಅವಿಶ್ವಾಸ ಅಪನಂಬಿಗೆಯಿಂದ ನೋಡುವರು. ಜನರನ್ನು ಒಲಿಸುವ ಬಗ್ಗೆ ಮನೋರಂಜಕವಾದ ಯೋಜನೆಗಳನ್ನು ಜನರ ಮುಂದಿಡುವರು. ಇವುಗಳನ್ನು ಜನರ ಮೆಚ್ಚುಗೆಗೆ ಪಾತ್ರವಾಗುವರೆ ಇಡುವದು. ಶಿವಾಯ್ ದೇಶದ ಹಿತಕ್ಕಾಗಿ ಎಂದು ಭಾವಿಸಲು ಬರುವದಿಲ್ಲ. ಒಂದು ಕಡೆಯವರಿಗಿಂತ ಇನ್ನೊಂದು ಕಡೆಯವರು ಇದಕ್ಕೂ ಹೆಚ್ಚಿಗೆಯಾಗಿ ಸ್ಪರ್ಧಿಸುವರು. ರಾಷ್ಟ್ರಕ್ಕಿಂತ ಪಕ್ಷವೇ ಮೇಲೆಂಬ ಭಾವನೆ ತರುವವು. ಅವಿವೇಕಿಯಾದ ಮುಂದಾಳು ಇಂಥಾ ಸಂದರ್ಭವನ್ನು ದುರುಪಯೋಗ ಮಾಡುವನು. ಸ್ವಾರ್ಥಸಾಧನೆ ಮಾಡುವನು. ಪಕ್ಷಪಾತದಿಂದ ರೀತಿಯಲ್ಲಿ ನಿರಂಕುಶ ಪ್ರಭುತ್ವಕ್ಕೆ ಎಡೆಬಂದದೆ ಇನ್ನೊಂದು ಪಕ್ಷದ ಮೇಲಿನ ಹಟದಿಂದ ನಿರಂಕುಶ ಪ್ರಭುತ್ವಾ

[೮ನೇ ಪುಟ ನೋಡಿರಿ]

TEL. 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12

(ಟೆಲಿಫೋನ್. 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸ . . : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು

ಸಾಲಿಯನ್ ಸೇಕಡಾ 4¼ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್

ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಆಟ್ಲಿ-ಚುನಾವಣಾಘೋಷಣೆಯ ಒಳಗುಟ್ಟೇನು?

ದ್ವಿತೀಯ ಮಹಾಯುದ್ಧದ ನಂತರ ಬ್ರಿಟನದಲ್ಲಿ ಆಡಳಿತಕ್ಕೆ ಬಂದ ಕೂಲಿಕಾರ ಪಕ್ಷವು ಆರು ವರ್ಷಗಳಲ್ಲಿ ಉತ್ತಮ ರೀತಿಯಿಂದ ರಾಜ್ಯಭಾರ ನಡೆಸಿತು. ಕಳೆದ ಬಾರಿಯ ಚುನಾವಣೆಯಲ್ಲಿ ಕೂಲಿಗಾರ ಪಕ್ಷವು ಕೇವಲ ಆರೇಳ ಬಹುಮತಗಳಿಂದ ಗೆದ್ದುದಾಗಿದೆ. ವರ್ಷದೊಳಗಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸುವ ಘೋಷಣೆಯನ್ನು ಆಟ್ಲಿಯವರು ಹೊರಡಿಸಿರುತ್ತಾರೆ. ಈ ಮಹಾಚುನಾವಣೆಯು ಬರುವ ಅಕ್ಟೋಬರ 25ರಲ್ಲಿ ನಡೆಯಲಿದೆ. ಅಕಾಲಿಕವಾದ ಈ ಘೋಷಣೆಯು ಜಗತ್ತಿಗೇ ಆಶ್ಚರ್ಯವನ್ನುಂಟುಮಾಡುವ ಸಂಗತಿಯಾಗಿದೆ. ಐದು ವರ್ಷಗಳ ಅವಧಿಯು ಮುಗಿಯುವದರೊಳಗಾಗಿ-ಒಂದೇ ವರ್ಷದಲ್ಲಿ ಚುನಾವಣೆಯನ್ನು ಬಯಸಿದ್ದರ ಕುರಿತು ನಾನಾ ರೀತಿಯ ಊಹಾಪೋಹಗಳು-ಅಸಮಾಧಾನಗಳೂ ಕೇಳಿ ಬರುತ್ತಲಿವೆ. ಆಟ್ಲಿ ಸರಕಾರವು ಆರ್ಥಿಕ ಮುಗ್ಗಟ್ಟನ್ನು ಸಹಿಸಲಾರದೆ ಬೇರೆಯವರ ಹೆಗಲಮೇಲೆ ಭಾರಹಾಕಲು ಈ ರೀತಿಯ ತಂತ್ರವನ್ನು ಹೂಡಿದೆಯೆಂದೂ ಕೆಲವು ರಾಷ್ಟ್ರಗಳು ಹೇಳುತ್ತಿವೆ. ಅಲ್ಪ ಸಂಖ್ಯಾಕ ಬಹುಮತದಿಂದ ಕೂಲಿಗಾರ ಪಕ್ಷವು ಹಲವು ಬಾರಿ ಸೋಲನ್ನಪ್ಪಿ ಕೊಂಡದ್ದನ್ನು ನಾವು ಅರಿತಿದ್ದೇವೆ. ವಿರೋಧಿ ಪಕ್ಷದವರ ಕೈಮೇಲಾಗುತ್ತಿರುವದರಿಂದ ಆಟ್ಲಿ ಸರಕಾರ ಸುಸೂತ್ರವಾಗಿ ರಾಜ್ಯಭಾರ ನಡೆಸುವುದು ಕಷ್ಟವೆನಿಸಿದ್ದರಿಂದ ಚುನಾವಣೆಯ ನಡೆಸಿ ಮುಂದೆ ಬಹುಮತವನ್ನು ಪಡೆಯಬಹುದೆಂಬ ಆತ್ಮವಿಶ್ವಾಸವನ್ನು ಆಟ್ಲಿಯವರು ವ್ಯಕ್ತಪಡಿಸಿದ್ದಾರೆ.

ಅಮೇರಿಕೆಯು ಕಾಲಕ್ಕೆ ಸರಿಯಾಗಿ ಗೆಜ್ಜೆಕಟ್ಟಿ ಕುಣಿದದ್ದರ ಫಲವಾಗಿ ಬ್ರಿಟನು ಇಂದು ಆರ್ಥಿಕ-ಔದ್ಯೋಗಿಕ ರಂಗದಲ್ಲಿ ಅನಿಷ್ಟ ಪರಂಪರೆಗಳನ್ನು ಎದುರಿಸಬೇಕಾದ ಪ್ರಸಂಗ ಬಂದಿದೆ. ಕೂಲಿಕಾರ ಎಡಪಕ್ಷದ ಧುರೀಣರಾದ ಬೇವಾನರು "ಶಸ್ತ್ರಾಸ್ತ್ರಗಳಿಗೆ ಹಣವ್ಯಯ ಮಾಡಿ ಜನಹಿತದ ಕಡೆಗೆ ಲಕ್ಷ್ಯಕೊಡದಿದ್ದುದರ ದುಷ್ಪರಿಣಾಮದಿಂದ ಚುನಾವಣೆಗೆ ಆಹ್ವಾನ ಕೊಡಬೇಕಾಯಿತು" ಎಂದಿರುವರು. ದ್ವಿತೀಯ ಮಹಾಯುದ್ಧದ ಹಾನಿಯಿಂದ ಬ್ರಿಟನು ಚೇತರಿಸಿಕೊಳ್ಳುವಾಗಲೇ ಕೊರಿಯಾ ಯುದ್ಧದ ಪ್ರಕರಣದಲ್ಲಿ ಅಮೇರಿಕೆಯೊಡನೆ ಸಹಕರಿಸಿ ಅಪಾರ ಹಣವನ್ನು ವ್ಯರ್ಥ ಮಾಡಿತು. ಮಾತ್ರವಲ್ಲ ಅಮೇರಿಕಾ ಇಂಗ್ಲಂಡುಗಳ ಅಂತರಿಕ ವ್ಯವಹಾರದಲ್ಲಿ ಬಿರುಕು ಹುಟ್ಟಿದ ಲಕ್ಷಣಗಳೂ ಕಂಡುಬರುತ್ತಿವೆ. ಇಂತಹ ನೂರಾರು ಸಮಸ್ಯೆಗಳು ಬ್ರಿಟನದ ಮುಂದೆ ಇರುವದರಿಂದ ಸಾರ್ವತ್ರಿಕ ಚುನಾವಣೆಯನ್ನೇರ್ಪಡಿಸಿ ಜನತಾ ಅಭಿಪ್ರಾಯ-ಬಹುಮತಗಳೊಡನೆ ಕೂಲಿಗಾರ ಪಕ್ಷ ತನ್ನ ನಿಲುಮೆಯನ್ನು ಭದ್ರಪಡಿಸಿಕೊಳ್ಳಲೆತ್ನಿಸುವದು ಸ್ವಾಭಾವಿಕ. ಬ್ರಿಟನದ ಜನತೆ ಸಾಮ್ರಾಜ್ಯವಾದಿಗಳಾದ ಅಮೇರಿಕನರ ಕಡೆಗೆ ತನ್ನ ಒಲವನ್ನು ಬೀರುತ್ತದೋ-ಪ್ರಜಾಪ್ರಭುತ್ವದ ಕಡೆಗೆ ತನ್ನ ಒಲವನ್ನು ಹರಿಸುತ್ತದೋ ಎನುವದರ ಕುರಿತು ಒಳ್ಳೇ ಫಲಿತಾಂಶವನ್ನು ಹೊರಗೆಡಹಬಹುದಾಗಿದೆ! ಬ್ರಿಟನಿನ ಆಂತರಿಕ ವಿಚಾರಗಳೊಂದಿಗೆ ಆಂಗ್ಲೋ ಅಮೇರಿಕನ ಸಮ್ಮಂಧದ ಸತ್ವಪರೀಕ್ಷೆಯೂ ಆಗಲಿದೆ!

ವಿಶ್ವವಿದ್ಯಾಲಯಗಳ ಆದರ್ಶವೇನು?

ಅಮರಕವಿ ರವೀಂದ್ರನಾಥ ಠಾಕೂರರಿಂದ ಶಾಂತಿನಿಕೇತನದಲ್ಲಿ ಸ್ಥಾಪಿಸಲ್ಪಟ್ಟ ವಿಶ್ವಭಾರತಿಯು ವಿಶ್ವವಿದ್ಯಾಲಯವಾಗಿ ಮಾರ್ಪಟ್ಟ ಉದ್ಘಾಟನಾ ಶುಭ ಸಂದರ್ಭದಲ್ಲಿ ಮೌಲಾನಾ ಅಬ್ದುಲ್ ಕಲಂ ಅಜಾದರ: ವಿಶ್ವಭಾರತಿಯು ಗುರುದೇವರ ಮಾರ್ಗವನ್ನನುಸರಿಸಿ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟು ಮೇಲೂ ಜಗದ್ವಿಖ್ಯಾತವಾಗಲೆಂದು ಹೇಳಿರುವರು. "ವಿಶ್ವವಿದ್ಯಾಲಯದ ಶಿಕ್ಷಕರು ಇತರ ವಿಶ್ವವಿದ್ಯಾಲಯದ ಶಿಕ್ಷಕರ ವೇತನವನ್ನು ಗಣಿಸದೆ ಸೇವಾದೃಷ್ಟಿಯಿಂದ ರವೀಂದ್ರನಾಥ ಠಾಕೂರರ ಆದರ್ಶವನ್ನು ಕಾಪಾಡಿಕೊಳ್ಳಬೇಕು. ಹೊಸಕಟ್ಟಡ—ಆಧುನಿಕ ಸಲಕರಣೆಗಿಂತ ವಿಶ್ವಭಾರತಿಯ ಮೂಲಪರಂಪರೆ ಇಲ್ಲವೆ ತತ್ವಕ್ಕೆ ಹೆಚ್ಚು ಪ್ರಾಧಾನ್ಯ ಕೊಡಬೇಕು. ಇತರ ವಿಶ್ವವಿದ್ಯಾಲಯಗಳಿಗೆ ವಿಶ್ವಭಾರತಿಯು ಆದರ್ಶ ಕೇಂದ್ರವಾಗಲಿ!" ಎಂದೂ ಅಜಾದರು ಹೇಳಿರುವರು.

ವಿಶ್ವಭಾರತಿಯು ಅನೇಕ ವರ್ಷಗಳಿಂದ ಒಂದು ವಿಶಿಷ್ಟ ಪದ್ಧತಿಯಿಂದ ನಡೆದುಕೊಂಡು ಬರುತ್ತಿದ್ದ ಒಂದು ಆದರ್ಶ ವಿದ್ಯಾನಿಲಯವಾಗಿತ್ತು! ಕಾಯಿದೇ ಮೂಲಕ ನಡೆದು ಬರುತ್ತಿರುವ ವಿದ್ಯಾಸಂಸ್ಥೆಗಳಿಂದ ಹೊರಬಂದ ಪದವೀಧರರಿಗಿಂತ ಮಿಗಿಲಾದ ಪ್ರತಿಭಾಸಂಪನ್ನರನ್ನೂ, ಶ್ರೇಷ್ಠ ನಾಗರಿಕರನ್ನೂ ದೇಶಕ್ಕೆ ನೀಡಿದೆ! ಅದು ಖಾಸಗೀ ಸಂಸ್ಥೆಯಾದುದರಿಂದ ಆ ಸತ್ಸಂಪ್ರದಾಯ ಉಳಿಯುತ್ತಿನ್ನಬಹುದು. ಮೌ. ಅಜಾದರು ಹಿಂದಿನ ಉಜ್ವಲ ಪರಂಪರೆಯನ್ನು ಮರೆಯಬಾರದೆಂದೂ ಎಚ್ಚರಿಸಿದ್ದು ಸೂಕ್ತವೇ. ಇದೇ ಸಂದರ್ಭದಲ್ಲಿ "ಹೊಸಕಟ್ಟಡ- ಆಧುನಿಕ ಸಲಕರಣೆಯ ಮೋಹಬೇಡ" ಎಂದು ಹೇಳಿದಂಶವನ್ನು ನಾವು ಲಕ್ಷಿಸಬೇಕು. ದೇಶಸೇವಾ ದೃಷ್ಟಿಯಿಂದ ಉಡುಪಿಯಲ್ಲಿ ಮೆಡಿಕಲ್ ಕಾಲೇಜೊಂದನ್ನು ತೆರೆಯುವರೇ ಸಾರ್ವಜನಿಕ ಪ್ರತಿನಿಧಿಗಳು ಮುಂದೆಬಂದಾಗ ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿಗಳು ಕಾಯಿದೇಬದ್ಧ ಕಾನೂನನ್ನು ಎತ್ತಿಹಿಡಿದು ಎಚ್ಚರಕೊಟ್ಟಿದ್ದಾರೆ. ಸುಮಾರು ಹತ್ತಿಪ್ಪತ್ತು ಲಕ್ಷ ಸುರಿಸಿ ಹಿಂದಿನ ಸಂಪ್ರದಾಯವನ್ನು ಅನುಸರಿಸಬೇಕೆಂದು ಹೇಳುತ್ತಾರೆ. ಕೇಂದ್ರದ ವಿದ್ಯಾ ಸಚಿವರು ವಿಶ್ವಭಾರತಿಯ ಆದರ್ಶ ಇತರ ವಿಶ್ವವಿದ್ಯಾಲಯಗಳಿಗೂ ಆಗಲೆಂಬುದನ್ನೂ ಅರಮನೆಯಂತಹ ಕಟ್ಟಡವೇ ಮೊದಲಾದ ಮೋಹಕ್ಕೆ ಹಣ ವ್ಯರ್ಥ ಮಾಡಬಾರದೆಂದೂ ಔದಾರ್ಯ ತೋರಿಸಿದ್ದನ್ನು ನಮ್ಮ ಉಪಕುಲಪತಿಗಳು ಲಕ್ಷಿಸಬೇಕು!

ಕೆ. ಪಿ. ಸಿ. ಸಿ.ಯ ಮುಂದೆ ಆಂಧ್ರದ ಪ್ರಶ್ನೆ

ಅಕ್ಟೋಬರ 1ನೇ ತಾರೀಕಿನೊಳಗಾಗಿ ಆಂಧ್ರ ಪ್ರಾಂತರಚನೆಯಾಗಬೇಕೆಂಬ ಉದ್ದೇಶದಿಂದ ಸ್ವಾಮಿ ಸೀತಾರಾಮರು ಕೈಗೊಂಡ ಉಪವಾಸವನ್ನು 35ನೇ ದಿನದಲ್ಲಿ ಮುಗಿಸಿದರು. ಆಚಾರ್ಯ ವಿನೋಬಾ ಭಾವೆಯವರು ಪ್ರಧಾನ ಮಂತ್ರಿ ನೆಹ್ರು, ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರೊಡನೆ ವಿಚಾರವಿನಿಮಯಮಾಡಿ ಸ್ವಾಮಿ ಸೀತಾರಾಮರ ಉಪವಾಸವನ್ನು ಮುರಿಯಬೇಕೆಂದು ಪ್ರಾರ್ಥಿಸಿದರು. ಅಂತಲೇ ಸ್ವಾಮೀಜಿಯವರು ಉಪವಾಸವನ್ನು ಮುಕ್ತಾಯಗೊಳಿಸಿದ್ದು ಆಂಧ್ರ ಪ್ರಾಂತರಚನೆಯ ಬಗ್ಗೆ ಕರ್ನಾಟಕ, ತಮಿಳನಾಡ ಕಾಂಗ್ರೆಸಾಧ್ಯಕ್ಷರು ತಮ್ಮ ಪ್ರಾಂತದ ಜನರಿಂದ ಆಕ್ಷೇಪವಿಲ್ಲವೆಂಬುದರ ಬಗ್ಗೆ ವಿಚಾರಿಕ ಸಭೆಯನ್ನೆಂದು ಕರೆದಿರುವರೆಂದು ಕೇಳಿರುವರು. ಕೇಂದ್ರಸರಕಾರದಿಂದ ಆಂಧ್ರ ಪ್ರಾಂತರಚನೆಯ ಕುರಿತು ಶೀಘ್ರದಲ್ಲೇ ಪ್ರಕಟನೆ ಹೊರಡಲಿದೆ. ಕೆ.ಪಿ.ಸಿ.ಸಿ.ಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಮೈಸೂರ ಪ್ರಾಂತ ಸಂಚಾರ ಕೈಗೊಂಡಿದ್ದು, ಈ ತಿಂಗಳ 29-30ಕ್ಕೆ ಕೆ. ಪಿ. ಸಿ. ಸಿ.ಯನ್ನು ಕರೆಯಿಸಲಿರುವರೆಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಆಂಧ್ರಪ್ರಾಂತ ರಚನೆಯ ಕುರಿತು ತನ್ನ ಸೂಚನೆಗಳೇನೆನ್ನುವದನ್ನು ಚರ್ಚಿಸಲಾಗುವದು. ಮಾತ್ರವಲ್ಲ ಆಂಧ್ರ ಪ್ರಾಂತದೊಡನೆ ಕರ್ನಾಟಕ ಪ್ರಾಂತವೂ ನಿರ್ಮಾಣಗೊಳ್ಳಲೆಂದು ಕೆ. ಪಿ. ಸಿ. ಸಿ.ಯು ಭಾರತ ಸರಕಾರವನ್ನು ಒತ್ತಾಯಿಸಬಹುದು!

ದಕ್ಷಿಣ ಭಾರತದಲ್ಲಿ ತಲೆಯೆತ್ತಿರುವ ಈ ಪ್ರಶ್ನೆಯು ಇಡಿಯಾಗಿ ಬಿಡಿಸುವದರಿಂದಲೇ ಪರಿಹಾರವಾಗಬಹುದು. ಸ್ವಾಮಿ ಸೀತಾರಾಮರ ಈ ತಪಸ್ಸೇ ಪ್ರಯೋಗದ ಲಾಭ ಆಂಧ್ರದ ಮಟ್ಟಿಗಷ್ಟೇ ಆಗದೆ ಅವರ ನಿಲುಮೆಯನ್ನು ಭಕ್ತಿಪುರಸ್ಸರವಾಗಿ ಅನುಮೋದಿಸಿದ ಉಳಿದ ಕರ್ನಾಟಕ, ತಮಿಳ, ಮಹಾರಾಷ್ಟ್ರ, ಕೇರಳದವರಿಗೂ ಆಗಲೆಂದು ಹಾರೈಸಿದರೆ ತಪ್ಪಾಗದು! ಮದ್ರಾಸ್ ಸರಕಾರ ಕಳೆದ ಬಾರಿ ನೇಮಿಸಿದ ವಿಭಜನ ಸಮಿತಿಯು ಬಳ್ಳಾರಿಯಲ್ಲಿ ಪಕ್ಷಪಾತಮಾಡಿ ಕನ್ನಡಿಗರ ಮನ ನೋಯಿಸಿದೆ. ಈ ವಿಭಜನಾ ಸಮಿತಿಯಲ್ಲಿ ಓರ್ವ ಕನ್ನಡಿಗನನ್ನು ಆರಿಸಬೇಕಿತ್ತು; ಆದರೆ ಮದ್ರಾಸದ ಆಂಧ್ರಾಭಿಮಾನೀ ಮಂತ್ರಿಗಳು ಕನ್ನಡಿಗರ ಕೇಳಿಕೆಯನ್ನು ಸಂಪೂರ್ಣ ನಿರಾಕರಿಸಿದ್ದರು. ಈಗಲಾದರೂ ಆಂಧ್ರರು ಆ ಹಟವನ್ನು ಬಿಟ್ಟು ಕೊಡಲೇ ಬೇಕಾಗುತ್ತದೆ. ಮದ್ರಾಸದ ಪ್ರಶ್ನೆಯೂ ಕೂಡಾ ಜಟಿಲವಾಗುತ್ತಲಿದೆ. ಮದ್ರಾಸವು ನ್ಯಾಯವಾಗ್ಯತ ತಮಿಳರಿಗೆ ಸೇರತಕ್ಕದ್ದೆಂದು ಮದ್ರಾಸದ ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರು ಹೇಳಿರುವರು. ಸ್ವಾಮಿ ಸೀತಾರಾಮರು ಅದು ಆಂಧ್ರರದ್ದಲ್ಲವಾದರೆ ತಮಿಳರಿಗೂ ಆಗತಕ್ಕದ್ದಲ್ಲ ಎನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಕೊನೆಯ ಕ್ಷಣದಲ್ಲಿ ಈ ಪ್ರಶ್ನೆಯು ಸುಲಭವಾಗಿ ಬಗೆಹರಿದೀತೆಂದು ನಾವು ಊಹಿಸಲು ಬರುವಂತಿಲ್ಲ! ಈ ಎಲ್ಲ ಸಮಸ್ಯೆಗಳು ಪರಿಹಾರವಾಗಬೇಕಾದರೆ ಭಾಷಾವಾರು ಪ್ರಾಂತರಚನೆಯನ್ನು ಇಡಿಯಾಗಿಯೇ ಬಿಡಿಸಬೇಕು! ಆಂಧ್ರವನ್ನು ಪ್ರಥಮ ಹೆಜ್ಜೆಯಾಗಿ ತೆಗೆದುಕೊಂಡರೂ ಕರ್ನಾಟಕ ಪ್ರಾಂತದ ಬೇಡಿಕೆ ವಿಶೇಷ ಕಳಕಳಿಯಿಂದ ಮುಂದೆ ಬರಬಹುದು! ಆಂಧ್ರ ಮೊದಲಾಗಿ ರೂಪುಗೊಳ್ಳುವಾಗ ಕರ್ನಾಟಕದ ಗಡಿಪ್ರದೇಶ--ತುಂಗಭದ್ರಾಯೋಜನೆ ಪ್ರಶ್ನೆ--ಮುಂತಾದ ವಿಚಾರಗಳ ಬಗೆಹರಿಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಕೆ. ಪಿ. ಸಿ. ಸಿ.ಯು ಒಳ್ಳೆಯ ಮುತುವರ್ಜಿಯಿಂದ ಕಾರ್ಯನಡೆಸಬೇಕಾದದು ಅನಿವಾರ್ಯ ಮತ್ತು ಅತ್ಯಂತ ಆವಶ್ಯಕ ಕೂಡಾ!

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ, ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ ೧೪

ಬರೀ ರೂ. 12ಕ್ಕೆ ಮಿತ ದಾನಾನು

ನಮ್ಮ ವಾಚುಗಳ ಜನಪ್ರಿಯವಾಗುವ ಸಲುವಾಗಿ ನಾವು ನಮ್ಮ 17ಜ್ಯುವೆಲ ವಾಟರ್‌ಪ್ರೂಫ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳನ್ನು ಪ್ರಕಟಿತ ದಾಸ್ತಾನು ಮುಗಿಯುವ ತನಕ ಬರೀ ರೂ. 12ಕ್ಕೆ ವಿಕ್ರಯಿಸಲು ನಿರ್ಧರಿಸಿದ್ದೇವೆ.

U. W. CO. (N. U).
Post Box No. 6871 CULCUTTA-7.

ಲೋಕಾಂತ್ರ

ಭಾರತದಲ್ಲಿ ಪಾಕಿಸ್ತಾನೀ ವೈಮಾನಿಕನ ಬಂಧನ

ಪಾಕಿಸ್ತಾನ ವೈಮಾನಿಕನೋರ್ವನು ಒಬ್ಬರೇ ಕೂತುಕೊಳ್ಳುವ ವಿಮಾನದ ಮೂಲಕ ಭಾರತದ ಪಠಾಣ್ ಕೋಟ್ ಜಿಲ್ಲೆಯ ಹಳ್ಳಿಯಲ್ಲಿ ಬಂದಿಳಿದನು. ಭಾರತದ ಪೋಲೀಸರು ಅವನನ್ನು ಬಂಧಿಸಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿರುವರು. ಹೆಚ್ಚಿನ ತನಿಖೆಗಾಗಿ ಅವನನ್ನು ಪೋಲೀಸರ ವಶಕ್ಕೆ ಕೊಡಲಾಗಿದೆ.

ಅರಸ ಜಾರ್ಜರ ಅಸ್ವಾಸ್ಥ್ಯ

ಇಂಗ್ಲಂಡದ 6ನೇ ಜಾರ್ಜರ ಪುಪ್ಪುಸದ ಶಸ್ತ್ರಕ್ರಿಯೆಯು ಬಕಿಂಗಹ್ಯಾಮ ಅರಮನೆಯಲ್ಲಿ ನಡೆದಿದ್ದು ಅವರ ದೇಹಸ್ಥಿತಿಯು ತೃಪ್ತಿದಾಯಕವಿದೆಯೆಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ರಾಷ್ಟ್ರದ ಜನರು ಅರಸರ ಬಗ್ಗೆ ಪ್ರಾರ್ಥನೆ ಕೈಗೊಂಡರು. ಭಾರತದ ಅಧ್ಯಕ್ಷರೂ ಅರಸರ ಅಸ್ವಾಸ್ಥ್ಯದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುವ ಸಂದೇಶವನ್ನು ಕಳಿಸಿದ್ದರು!

ವೈಭವಪೂರ್ಣ ಅಧಿವೇಶನ

ಬರುವ ತಿಂಗಳು ದಿಲ್ಲಿಯಲ್ಲಿ ಸೇರಲಿರುವ ಕಾಂಗ್ರೆಸ್ ಅಧಿವೇಶನವನ್ನು ವೈಭವಪೂರ್ಣವಾಗಿ ನಡೆಸಬೇಕೆಂದು ಕಾಂಗ್ರೆಸು ಹಾಗೂ ನಗರ ಸಭಾ ಅಧಿಕಾರಿಗಳು ಸಕ್ಕವತಿ ನಗರವನ್ನು 50 ಸಾವಿರ ಜನ ಕೂಡುವ ಸುವ್ಯವಸ್ಥೆಯ ಕಾರ್ಯಕೈಗೊಂಡಿದ್ದಾರೆ ಈ ನಗರದ ಅಲಂಕಾರಕ್ಕೆ 4 ಲಕ್ಷ ರೂ. ವೆಚ್ಚ ಬರಬಹುದಾಗಿದೆ.

ಚರ್ಚಿಲ್ ಕಮ್ಯುನಿಸ್ಟ ಸ್ಪರ್ಧೆ

ಅಕ್ಟೋಬರ 25ಕ್ಕೆ ಬ್ರಿಟನಿನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂನ್ಸರ್ವೇಟಿವ್ ಪಕ್ಷದ ಧುರೀಣರಾದ ವಿನ್ಸಟನ್ ಚರ್ಚಿಲ್ಲರಿಗೆ ವಿರುದ್ಧವಾಗಿ ಕಮ್ಯೂನಿಸ್ಟ ಪಕ್ಷದ ಡೇಲಿವರ್ಕರ ಪತ್ರಿಕೆಯ ಸಂಪಾದಕರಾದ ಜೆ. ಆರ್. ಕಾಂಬೆಲರು ಚುನಾವಣೆಯಲ್ಲಿ ಸ್ಪರ್ಧಿಸುವರು.

ರೈಲ್ವೆ ಕೆಲಸಗಾರರ ಮಾತುಕತೆ

ತಿಂಗಳ ಪ್ರಾರಂಭದಲ್ಲಿ ರೈಲ್ವೆ ಕೆಲಸಗಾರರ ಹಾಗೂ ರೈಲ್ವೆಬೋರ್ಡಿನವರೊಳಗೆ ನಡೆದ ಮಾತುಕತೆಯಂತೆ ಕೆಲಸಗಾರರು ಹಲವು ಮುದ್ದೆಗಳ ವಿಚಾರವನ್ನು ಒಪ್ಪಿಸಿದ್ದು ರೈಲ್ವೆ ಮಂಡಳಿವು ಅದನ್ನು ವಿಮರ್ಶೆ ನಡೆಸಿರುತ್ತದೆ. ಇದೇ ತಿಂಗಳ 27ಕ್ಕೆ ನಡೆಯಲಿರುವ ಸಭೆಯಲ್ಲಿ ಈ ಮನವಿಯ ಕುರಿತು ಚರ್ಚೆ ನಡೆದು ತೀರ್ಮಾನಕ್ಕೆ ಬರಬಹುದಾಗಿ ತಿಳಿಯುತ್ತದೆ.

ಅಮೇರಿಕೆಯ ಆಹಾರದಿಂದ 7ಲಕ್ಷ ರೂ. ನಷ್ಟ

ಅಮೇರಿಕೆಯಿಂದ ಆಹಾರ ಧಾನ್ಯವನ್ನು ಹೊತ್ತು ತರುತ್ತಿದ್ದ ಪ್ರಥಮ ಹಡಗಕ್ಕೆ ಸುಯೇಜ ಕಾಲುವೆಯಲ್ಲಿ ಡ್ಯಾನಿಶ್ ಹಡಗವು ಡಿಕ್ಕಿ ಹೊಡೆದುದರ ಫಲವಾಗಿ 1900 ಟನ್ ಗೋದಿ ಕೆಟ್ಟಿದ್ದು ಸುಮಾರು 7½ ಲಕ್ಷ ರೂ. ನಷ್ಟವಾಗಿದೆ. ಈ ನಷ್ಟದ ಪರಿಹಾರಕ್ಕಾಗಿ ವಿಚಾರಿಸಲು ಕಾಯರೋದಲ್ಲಿಯ ತನ್ನ ರಾಯಭಾರಿಗೆ ಭಾರತ ಸರಕಾರವು ತಿಳಿಸಿರುತ್ತದೆ.

ಸಮಾಜವಾದೀ ಹುರಿಯಾಳುಗಳ ಯಾದಿ.

ಮುಂಬಯಿ, ಮದ್ರಾಸ್, ಹೈದರಾಬಾಗ, ಮೈಸೂರ ಮೊದಲಾದ ಶಾಸನಸಭೆಗಳಿಗೂ ಪಾರ್ಲಿಮೆಂಟಿಗೂ ಸಮಾಜವಾದೀ ಪಕ್ಷದ ಟಿಕೇಟಿನ ಮೇಲೆ ಸ್ಪರ್ಧಿಸುವ ಹುರಿಯಾಳುಗಳ ಯಾದಿಯನ್ನು ಸಪ್ಟೆಂಬರ 29-30ಕ್ಕೆ ಪುಣೆಯಲ್ಲಿ ಕೂಡಲಿರುವ ಸಮಾಜವಾದೀ ಪಾರ್ಲಿಮೆಂಟರಿ ಮಂಡಳದಲ್ಲಿ ಸಿದ್ಧಗೊಳಿಸಲಾಗುವದಂತೆ.

3000 ಯಾತ್ರಿಕರ ಮರಣ

ಮುಸಲ್ಮಾನರ ಪುಣ್ಯ ಸ್ಥಳವಾದ ಮಕ್ಕಾ ಯಾತ್ರೆಗೆ ಹೋಗಿದ್ದ ಮೂವತ್ತು ಸಾವಿರ ಯಾತ್ರಿಕರಲ್ಲಿ 3 ಸಾವಿರ ಮಂದಿ ಅತಿ ಉಷ್ಣತೆಯಿಂದಾಗಿ ಮರಣಹೊಂದಿದರು.

ಭಾರತ 15 ಹಡಗಗಳನ್ನು ಖರೀದಿ ಮಾಡಿತು.

ಭಾರತದ ಸಿಂಧ್ಯ ಸ್ಟೀಮ ನ್ಯಾವಿಗೇಶನ್, ಭಾರತ ಲೈನ್ ಕಂಪೆನಿ, ಮತ್ತು ಗ್ರೇಟ ಈಸ್ಟರ್ನ ಕಂಪೆನಿಗಳು ಒಟ್ಟಿಗೆ 15 ವ್ಯಾಪಾರಿ ಹಡಗುಗಳನ್ನು ಅಮೇರಿಕೆಯ ಸಮುದ್ರ ಸಂಬಂಧ ಆಡಳಿತದಿಂದ ಕೊಂಡಿವೆಯೆಂದು ತಿಳಿಯುತ್ತದೆ.

ಮದ್ರಾಸ ಮಂತ್ರಿಗಳ ನಿರ್ಧಾರ

ಮದ್ರಾಸು ಸರಕಾರದ ಮಂತ್ರಿಗಳು ಮದ್ರಾಸ ಸರಕಾರದ ಚುನಾವಣಾ ಪ್ರಚಾರಕ್ಕಾಗಿ ಕೈಗೊಳ್ಳುವ ಪ್ರವಾಸಕ್ಕೆ ಸರಕಾರದಿಂದ ಪ್ರವಾಸಭತ್ತೆಯನ್ನು ತೆಗೆದುಕೊಳ್ಳುವದಿಲ್ಲವೆಂದು ನಿರ್ಧರಿಸಿರುವರಂತೆ.

ಕಾಂಗ್ರೆಸ್ಸಿಗರೀರ್ವರ ಠೇವು ಜಪ್ತು?

ಸಿಕಂದ್ರಾಬಾದ ನಗರ ಸಭೆಯ ಎರಡ ಉಪಚುನಾವಣೆಗಳಲ್ಲಿ ಸಮಾಜವಾದೀ ಪಕ್ಷದ ಧುರೀಣರೀರ್ವರು ಪ್ರಚಂಡ ಬಹುಮತದಿಂದ ಆರಿಸಿಬಂದದ್ದು ಕಾಂಗ್ರೆಸ್ಸಿಗರೀರ್ವರ ಠೇವು ಜಪ್ತಾಯಿತೆಂದು ತಿಳಿಯುತ್ತದೆ. ಸ್ವತಂತ್ರವಾಗಿ ನಿಂತವರ ಪಾಡೂ ಅಷ್ಟೆ!

ಮದ್ರಾಸ ಪ್ರಾಂತದ ಕಲೆಕ್ಟರರಿಗೆ ಚುನಾವಣಾ ಆದೇಶ

ಚುನಾವಣಾ ನಿಯಮಕ್ಕನುಸಾರವಾಗಿ ಸ್ವತಂತ್ರ ಹಾಗೂ ನಿಷ್ಪಕ್ಷ ರೀತಿಯಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಬೇಕೆಂದು ಪ್ರಾಂತದ ಕಲೆಕ್ಟರ ಸಭೆಯಲ್ಲಿ ಮದ್ರಾಸದ ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರವರು ಆದೇಶವಿತ್ತರು.

ನೆಹ್ರೂ ಪಾರ್ಲಿಮೆಂಟಿಗೆ ಸ್ಪರ್ಧಿಸುವರು

ಶ್ರೀ ಜವಾಹರಲಾಲ ನೆಹರೂರವರು ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಅಲಹಾಬಾದದಿಂದ ಪಾರ್ಲಿಮೆಂಟಿನ ಸದಸ್ಯಸ್ಥಾನಕ್ಕೆ ಸ್ಪರ್ಧಿಸಲಿರುವರಾಗಿ ತಿಳಿಯುತ್ತದೆ.

ಕಲಾವೆಂಕಟರಾಯರಿಗೆ ಮಂತ್ರಿಪದ

ಮಾಜೀ ಅ. ಭಾ. ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಕಲಾವೆಂಕಟರಾಯರಿಗೆ ಮದ್ರಾಸ ಮಂತ್ರಿಮಂಡಲದಲ್ಲಿ ಒಂದು ಸ್ಥಾನವನ್ನು ಕೊಡಿಂಸಲಾಗಿದೆಯೆಂದೂ ಅವರು ಒಪ್ಪುವದಾದರೆ ಕೂಡಲೇ ಅಧಿಕಾರ ವಹಿಸಬಹುದೆಂದು ಕುಮಾರ ಸ್ವಾಮಿ ರಾಜಾರವರು ಹೇಳಿದರು!

ಉಡುಪಿ ಡಿ. ಮು. ಕೋರ್ಟಿನಲ್ಲಿ

O S. No 117/1951

ದೇವಮ್ಮ ಸೆಟ್ಟಿ ಕೂಡಾ —ವಾದಿಯು

ಮಾಜಯ ಸೆಟ್ಟಿ ಕೂಡಾ —ಪ್ರತಿವಾದಿ.

ಇವರೊಳಗೆ

2ನೇ ಪ್ರತಿವಾದಿ ಶೇಷ ಸೆಟ್ಟಿ—ಕೃಷ್ಣಮ್ಮ ಸೆಟ್ಟಿ ಮಗ.

ಉಡುಪಿತಾಲೂಕು ನಾಲ್ಲೂರು ಗ್ರಾಮದ ವಿನಾಯಕರಿನಲ್ಲಿರುವ ದೊಡ್ಡಮನೆ.

ಮೇಲ್ಕಂಡ 2ನೇ ಪ್ರತಿವಾದಿ ಶೇಷ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ತಾ. 13—9—1881ರಲ್ಲು ದುಗ್ಗಿ ಸೆಟ್ಟಿ ಎಂಬವಳು ಪ್ರತಿವಾದಿರ ಪೂರ್ವಾಧಿಕಾರಿ ಕಜೆಕೆ ನಾರಾಯಣ ಕಮ್ತಿರಿಗೆ—ರಜಿಸ್ಟ್ರಿ ನಿರೂಪ್ಯಾ 1250ಕ್ಕೆ ಬರೆಕೊಟ್ಟ ಭೋಗ್ಯಾದಿ ಆಡವಿನ redemption ಕುರಿತು ಪ್ಲೈಂಟು ನಿವೃತ್ತಿಗಳ ಬಗ್ಗೆ ಮಾಡಿದ ಮೇಲ್ಕಂಡ ದಾವಾ ತಾ 3—10—1951ಕ್ಕೆ ತನ್ನಿಗೆ ಇಟ್ಟಿರುತ್ತದೆ. ಮೇಲ್ಕಂಡ ಪ್ರತಿವಾದಿಯು ತನ್ನ ಉದಾಹರಣೆಯಿದ್ದರೆ ಸ್ವತಹಾ ಯಾ ವಕೀಲ ಮುಖಾಂತರ ಸದ್ರಿ ತಾ. 3—10—1951ಕ್ಕೆ ಬೆಳಗ್ಗೆ ಗಂಟೆ 11ಕ್ಕೆ ಈ ಕೋರ್ಟುಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಆತನನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು,

K. J. Ballal

Pleader for Plaintiff

Camp- Udipi, 24-9 51-



Approved from by the Govt. of Mysore
Certificated by the Agent of the Govt of Cylone & Indian



"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, B SC, F. I. A

(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯು ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾವಿರದ ಸಾವಿರಕ್ಕೆ ರೂ 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟಸುಬ್ಬಭಟ್

For up-to-date Lodging & Boarding

ROYAL MAHAL,

UDIPI, S. Kanara.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ 3—0—0
ಗುರುವಾರ ಉಡುಪಿ, ೨೭-೯-'೫೧

ಪರ್ಶಿಯ-ರಶಿಯ ಸಂಬಂಧ

ಪರ್ಶಿಯ ಎಣ್ಣೆ ತಂಟೆ ಪ್ರಕರಣವು ಇಂಗ್ಲೆಂಡಿನವರ ಕೈಯಿಂದ ಬಗೆಹರಿಯುವ ಲಕ್ಷಣ ಕಾಣುತ್ತಲಿದೆ. ಬ್ರಿಟನ್ ಮತ್ತು ಅಮೇರಿಕಾ ನಡೆಸಿದ ಮಾತುಕತೆಗಳು ವಿಫಲಗೊಂಡಿವೆ. ಅಧ್ಯಕ್ಷ ಟ್ರುಮನ್ನರ ರಾಯಭಾರಿ ಹ್ಯಾರಿಮನ್ನರು ಸರಿಯಾದ ಮಾರ್ಗದರ್ಶನ ಮಾಡಬಹುದೆಂದು ನಿರೀಕ್ಷಿಸಿದ್ದರೂ ಬ್ರಿಟನದ ಇಚ್ಛೆಯನ್ನೇ ಅವರು ಸಮರ್ಥಿಸಿದ್ದರಿಂದ ಪರ್ಶಿಯಕ್ಕೆ ಸಂಧಾನದ ಬಗ್ಗೆ ಸಮಾಧಾನವಿಲ್ಲ.

ಈಚೆಗೆ ಬ್ರಿಟನಿಗೆ ಕೊನೆ ಎಚ್ಚರಿಕೆಯೆಂದು ಪರ್ಶಿಯದ ಪ್ರಧಾನ ಮಂತ್ರಿ ಡಾ| ಮುಸಾದಿಕರು ಹ್ಯಾರಿಮನರಿಗೆ ಕಳಿಸಿದ ಪತ್ರವನ್ನು ಬ್ರಿಟನಿಗೆ ಮುಟ್ಟಿಸಲು ಅವರು ನಿರಾಕರಿಸಿದರು. ಅರ್ಥಾತ್ ಈ ಎಚ್ಚರಿಕೆಯಲ್ಲಿ ಈ ಹಿಂದೆ ನಡೆದ ಮಾತುಕತೆಗಳಿಗಿಂತ ಹೆಚ್ಚಿನ ಯಾವುದೇ ಸೂಚನೆಯು ಪರ್ಶಿಯದ ಮುಂದಿನ ನಿಲುವಿನಲ್ಲಿ ಇಲ್ಲ. ಹಿಂದಿನ ಸೂಚನೆಯನ್ನೇ ಬದಲಿಸದೆ, ಅಂತಲೇ ಹ್ಯಾರಿಮನ್ನರು ಅದನ್ನು ಬ್ರಿಟನಿಗೆ ಕಳಿಸಲು ನಿರಾಕರಿಸಿದರು. ಹ್ಯಾರಿಮನ್ನರು ನಿರಾಕರಿಸಿದ್ದರ ಮೇಲೆ ಬ್ರಿಟನ್ನಿಗೆ ನೇರವಾಗಿ ಕಳಿಸಬೇಕಾಯ್ತು. ಬ್ರಿಟನ ಹಾಗೂ ಮುಂದಿನ ಮಾತು ಶಕ್ಯವಿಲ್ಲವೆಂದು ಹೇಳುತ್ತದೆ. ಎಣ್ಣೆ ವಿಕ್ರಯ ಹಾಗೂ ಖರೀದಿ ಹಕ್ಕು ಆಂಗ್ಲೋ ಇರಾಣಿಯನ್ ನೌಕರರ ಕೆಲಸ ಕ್ಷೇತ್ರ ಇವೆಲ್ಲ ಈ ಹಿಂದೆ ಇರಾಣದಿಂದ ನಿರಾಕರಿಸಿದ್ದಾಗಿರುತ್ತದೆ.

ಒಂದೇ ಮಾತುಕತೆ ನಡೆಸಬೇಕು— ಇಲ್ಲವೆ ಪರ್ಶಿಯದಿಂದ [illegible] ಕೊನೆಯದಾಗಿ ಎಚ್ಚರಿಕೆ ಕೊಡುತ್ತ ಕೊನೆಯದಾಗಿ ಎಚ್ಚರಿಕೆ ಕೊಡು ವಂತದ್ದಲ್ಲಿ ಡಾ| ಮುಸಾದಿಕರಿಗೆ ಹಲವು ವಿರೋಧ ಸೂಚನೆಗಳೂ ಒಂದಿವೆ. ಪರ್ಶಿಯದ ರಾಜಕಾರಣದಲ್ಲಿ ಮುಸಾದಿಕರ ನೀತಿಗೆ ಸಂಪೂರ್ಣ ಬೆಂಬಲವಿದೆಯೆಂದು ಹೇಳಲು ಬರುವಂತಿಲ್ಲ. ಎಣ್ಣೆಯ ಉತ್ಪಾದನಾ ಕಾರ್ಯವು ಕುಂಠಿತವಾಗಿದ್ದು ಇರಾಣಕ್ಕೆ ಅದರಿಂದ ವಿಶೇಷ ಹಾನಿತಟ್ಟಬಹುದಾಗಿದೆ. ಕೂಡಲೇ ಕಾರ್ಯ ಕೈಗೊಂಡು ಹೋಗುವದರಲ್ಲಿ ಮುಸಾದಿಕರು ಅಸಮರ್ಥರಾಗಿದ್ದಾರೆನ್ನುವ ಅಸಂತೋಷ ಒಳಗೊಳಗೆ ಬೆಳೆಯುತ್ತಲಿದೆ.

ಈ ಸಂದರ್ಭವನ್ನು ಸಾಧಿಸಿಯೇ ರಶಿಯವು ಎಣ್ಣೆ ವಿನಿಮಯ ಒಪ್ಪಂದಕ್ಕೆ ಮುಂದೆ ಬಂದಿರುವದು. ಇದರ ಜೊತೆಗೆ ಹೊಸ ವ್ಯಾಪಾರ ಮಾತುಕತೆಗಳೂ ನಡೆದಿದ್ದು ಇರಾಣದ ಎಣ್ಣೆಯ ಬದಲಾಗಿ ಸಕ್ಕರೆ ಕಾರಖಾನೆ ಯಂತ್ರ ಮುತ್ತಿತರ ಸರಕುಗಳನ್ನು ರಶಿಯ ಕೊಡಬೇಕೆಂದು ಪರ್ಶಿಯ ಸೂಚಿಸಿದೆ. ರಶಿಯ ಈ ಒಡಂಬಡಿಕೆಯ ಸಂದರ್ಭ ಸಾಧಿಸಿ ಹಲವು ರಾಜಕೀಯ ಸವಲತ್ತುಗಳನ್ನು ಕೇಳುತ್ತಿದೆ.

1) ಇಂಗ್ಲೆಂಡದಲ್ಲಿಯ ಬ್ರಿಟಿಶ ಬ್ಯಾಂಕನ್ನು ಮುಚ್ಚಬೇಕು. 2) ಸೋವಿಯಟ ಗಡಿಯಲ್ಲಿ ಗವರ್ನರರಾಗಿರುವ ಎಟಿಬಲರನ್ನು ಕಿತ್ತುಗೆಯಬೇಕು. 3) ಅಬದಾನದಲ್ಲಿಯ ಬ್ರಿಟಿಶ ತಾಂತ್ರಿಕರನ್ನೆಲ್ಲ ಹೊರಗಟ್ಟಬೇಕು. 4) ಇರಾಣಿ ಎಣ್ಣೆಯನ್ನು ರಶಿಯಾ ಗಂಡಿನ ರಾಷ್ಟ್ರಗಳಿಗೆ ಮಾರಬೇಕು. 5) ಕಮ್ಯೂನಿಷ್ಟ ಕೈದಿಗಳನ್ನು ಬಂಧಮುಕ್ತ ಮಾಡಬೇಕು. 6) ಕಮ್ಯೂನಿಸ್ಟ ಪಕ್ಷವನ್ನು ಅಕ್ರಮ ಮಾಡಿದ್ದನ್ನು ರದ್ದು ಪಡಿಸಬೇಕು. ಇಂತಹ ಪ್ರಾಮುಖ್ಯ ಶರ್ತಗಳನ್ನು ರಶಿಯ ಮುಂದೆ ಮಾಡಿದೆ.

ರಶಿಯದ ಈ ಸಮ್ಮಂಧವು ರಾಜಕಾರಣದಲ್ಲಿ ಅತ್ಯಂತ ಮಹತ್ವದ್ದಾಗಬಹುದು. ಪರ್ಶಿಯದ ರಾಜಕೀಯ-ಆರ್ಥಿಕ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಲಿದ್ದು ಇನ್ನು ಮೂರು ನಾಲ್ಕು ತಿಂಗಳೊಳಗಾಗಿ ನಡೆಯಲಿರುವ ಚುನಾವಣೆಯಲ್ಲಿ ತೀವ್ರತರವಾದ ಬದಲಾವಣೆ ಕಂಡು ಬರಬಹುದಾಗಿದೆ. ಆಂಗ್ಲೋ ಅಮೇರಿಕಾನರ ಧೋರಣೆಗೆ ವಿರುದ್ಧವಾದ ಹಂಬಿಕೆಯನ್ನು ರಶಿಯವು ಪರ್ಶಿಯದಲ್ಲಿ ಹೂಡುವದರಿಂದ ಪರ್ಶಿಯವು ಆಂಗ್ಲೋ ಅಮೇರಿಕಾನರ ಶ್ವೇತಭಾವನೆಗೆ ಕಾರಣವಾಗಬಹುದು. ತನ್ನ ರಾಷ್ಟ್ರವನ್ನು ಹಕೋಟಿಯಲ್ಲಿಟ್ಟು ಕೊಂಡ ರಾಷ್ಟ್ರಧಾರಿ ಮಾಡುವ ಕೆಚ್ಚು ಮುಸಾದಿಕರಲ್ಲಿ ಕಡಿಮೆಯಾದುದರಿಂದ ಬ್ರಿಟನ ಅಧಿಕಾರವನ್ನು ಪರ್ಶಿಯದ ಜನರು ಇಚ್ಛಿಸದೆ ವಿರೋಧ ವ್ಯಕ್ತಿ ಮಾಡುವದರಿಂದಲೂ—ಎಣ್ಣೆ ಉತ್ಪಾದನಾ ಕಾರ್ಯವು ನಿಂತು ಹೋಗಿದ್ದರಿಂದ ದೊರಕ್ಕೊಂಟಾದ ಆರ್ಥಿಕ ಪೆಟ್ಟಿನಿಂದಲೂ ಪರ್ಶಿಯ-ರಶಿಯವನ್ನು ಹಚ್ಚಿ ಆಕರ್ಷಿಸಿಕೊಳ್ಳಬಹುದು. ಮಾತ್ರವಲ್ಲ ಉಭಯ ರಾಷ್ಟ್ರಗಳಲ್ಲಿ ಪ. ರಾಜಕೀಯ ಸಂಬಂಧ ಗಾಢವಾಗಲೂಬಹುದು.

ಹಿಂದೂ ಧರ್ಮ ಶಾಸ್ತ್ರಕ್ರೋಡೀಕರಣ ಮಸೂದೆಗೆ ವಿರೋಧ?

ಈಚೆಗೆ ಒಂದು ವಾರದಿಂದ ಪಾರ್ಲಿಮೆಂಟನಲ್ಲಿ ಅತ್ಯಂತ ಬಿರುಸಿನಿಂದ ನಡೆಯುತ್ತಿರುವ ಹಿಂದೂ ಧರ್ಮ ಶಾಸ್ತ್ರ ಕ್ರೋಡೀಕರಣದ ಮಸೂದೆಯು ಸಾರ್ವತ್ರಿಕ ಚುನಾವಣೆಯ ಒಳಗೆ ಮುಕ್ತಾಯಗೊಳ್ಳುವದು ಅಸಂಭವವೆಂದು ತಿಳಿಯುತ್ತದೆ. ಮಸೂದೆಯ ಮೊದಲನೆಯ ಕಲಮಾಗಿ ಏಕಪತ್ನಿತ್ವ ಹಾಗೂ ವಿವಾಹವಿಚ್ಛೇದನದ ಕುರಿತು ತೀವ್ರವಾದ ಚರ್ಚೆ ನಡೆಯಿತು. ಡಾ| ಮುಖರ್ಜಿ, ಪಂ. ಗೋವಿಂದ ಮಾಲವೀಯ ಮೊದಲಾದ ಸದಸ್ಯರು ಮಸೂದೆಯನ್ನು ಕಟುವಾಗಿ ಟೀಕಿಸಿರುವರು. ಮಸೂದೆಯು ಹಿಂದುಗಳ ಸಂಪ್ರದಾಯವನ್ನೆಲ್ಲ ಬದಲಿಸಿ, ಹಿಂದೂ ಸಂಸ್ಕೃತಿಗೆ ಕೊಡಲಿಯೇಟನ್ನಿಟ್ಟದೆಯೆಂದೂ, ಅನ್ಯ ಮತಸ್ಥರ ಸಂಪ್ರದಾಯವನ್ನು ಹಾಗೆಯೇ ಉಳಿಸಿದ್ದು ಮಹಾ ಪಕ್ಷಪಾತತನವೆಂದೂ ಟೀಕಿಸಿದರು. ಹೀಗೆ ಈ ಮಸೂದೆಗೆ ತೀವ್ರತರವಾದ ವಿರೋಧ ಕಂಡು ಬಂದಿರುವದರಿಂದಲೂ ಇದು ಚರ್ಚಾಸ್ಪದ ವಿಚಾರವಾಗಿರುವುದರಿಂದಲೂ ಶೀಘ್ರದಲ್ಲಿ ಮುಕ್ತಾಯಗೊಳ್ಳುವ ಲಕ್ಷಣವಿಲ್ಲ. ಮಾತ್ರವಲ್ಲ ಇನ್ನೂ ಹಲವಾರು ಮಸೂದೆಗಳ ಕುರಿತು ಪಾರ್ಲಿಮೆಂಟು ಚರ್ಚಿಸಬೇಕಾಗಿದೆ. ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವದರಿಂದ ಡಾ| ಅಂಬೇಡಕರರು ಮಂತ್ರಿ ಪದದಿಂದ ನಿವೃತ್ತರಾಗುವದರಿಂದ ಆ ಒಳಗೆ ಮಸೂದೆಯನ್ನು ಪಾಸು ಮಾಡಬೇಕೆಂಬ ಪ್ರಬಲ ಇಚ್ಛೆಯನ್ನು ಅವರು ಇಟ್ಟುಕೊಂಡಿರುವರೆಂದೂ ತಿಳಿಯುತ್ತದೆ.

ಕೊರಿಯ ಮಾತುಕತೆಯಾರಂಭವಾಗಬಹುದು.

25 ದಿನಗಳ ಹಿಂದೆ ಕೆಸಾಂಗದಲ್ಲಿ ಕೊರಿಯಾ ಯುದ್ಧವಿರಾಮ ಮಾತುಕತೆ ಮುರಿಯಲಿಕ್ಕೆ ಕಮ್ಯೂನಿಸ್ಟರು ಕಾರಣರೆಂದೂ—ಸಂ. ರಾ. ದಳದವರು ಕಾರಣರೆಂದು ಪ್ರತಿಭಟನೆ ನಡೆಯುತ್ತಿತ್ತಷ್ಟೆ! ಸದ್ಯ ಪುನಃ ಮಾತುಕತೆ ನಡೆಸುವ ಪ್ರಯತ್ನ ನಡೆಯುತ್ತಲಿದೆ. ಜನರಲ್ ರಿಜವೆಸು ವರ ಹಿರಿಯ ಸಂಪರ್ಕ ಅಧಿಕಾರಿಗಳು ಮುಂದಿನ ಮಾತುಕತೆ ಪೂರ್ವಸಿದ್ಧತೆಗಾಗಿ ಕೊರಿಯಾದಲ್ಲಿಯ ತಮ್ಮ ಶಾಂತಿಶಿಬಿರಕ್ಕೆ ತೆರಳುವರು

ತಿರಸ್ಕಾರ್ಯ ತಿರುಗಿ ಕಾಂಗ್ರೆಸ್ಸಿಗೆ?

ಕಾಂಗ್ರೆಸ್ಸಿನಿಂದ ಹೊರಬಿದ್ದ ಕಾಂಗ್ರೆಸ್ಸಿಗರು ತಿರುಗಿ ಕಾಂಗ್ರೆಸ್ಸನ್ನು ಸೇರಬೇಕೆಂದು ಪ್ರಧಾನಿ ಶ್ರೀ ಜವಾಹರಲಾಲರ ಬಿನ್ನಹವನ್ನು ಅನೇಕ ಕಾಂಗ್ರೆಸ್ಸಿಗರು ಅಭ್ಯಸಿಸುತ್ತಲಿದ್ದಾರಂತೆ. ರಫಿ ಅಹಮ್ಮದ ಕಿಡ್ವಾಯಿಯವರು ನೆಹ್ರೂವರ ಆಹ್ವಾನವನ್ನು ಮನ್ನಿಸಿ ಕಾಂಗ್ರೆಸ್ಸಿಗೆ ತಿರುಗಿ ಬರಲು ಸಿದ್ಧರಾಗಿದ್ದಾರೆ. ಕಿ.ಮ.ಪ್ರ. ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರೊಡನೆ ಅವರು ಸಮಾಲೋಚನೆ ನಡೆಸಿರುವರು. ಇದೇ ತಿಂಗಳ 27 ಕ್ಕೆ ಕಲ್ಕತ್ತಾದಲ್ಲಿ ಜರಗಲಿರುವ ಕಿಸಾನ ಮಜದೂರ ಪ್ರಜಾಪಕ್ಷದ ಕೇಂದ್ರ ಸಮಿತಿ ಸಭೆ ಕರೆಯಲಾಗಿದ್ದು ಆ ಸಂದರ್ಭದಲ್ಲಿ ತನ್ನ ನಿಲುಮೆಯನ್ನು ರಫಿಯವರು ಸ್ಪಷ್ಟೀಕರಿಸಬಹುದು.

ಮುದ್ಗಲ್ಲರನ್ನು ಹೊರತಳ್ಳಲಾಯಿತು

ಪಾರ್ಲಿಮೆಂಟು ಸದಸ್ಯರಾಗಿದ್ದ ಶ್ರೀ ಮುದ್ಗಲ್ಲರು ಪಾರ್ಲಿಮೆಂಟಿಗೆ ಅವಮಾನಕರವಾದ ವ್ಯವಹಾರಕ್ಕೆ ಕೈಹಾಕಿದ್ದನ್ನು ಬಯಲಿಗೆ ತೆಗೆಯಲಾಗಿದೆ. ಅವರ ಮೇಲಿನ ಆರೋಪವು ಸಮರ್ಪಕವಿದೆಯೆಂದು ವಿಚಾರಣಾ ಸಮಿತಿ, ವರದಿ ಮಾಡಿದ ಪ್ರಯುಕ್ತ ಅವರನ್ನು ಪಾರ್ಲಿಮೆಂಟನಿಂದ ಹೊರಪಡಿಸುವದು ಮಾತ್ರವಲ್ಲದೆ ಮುಂದೆ ಅವರನ್ನು ಚುನಾವಣೆಗೆ ನಿಲ್ಲದಂತೆ ಪ್ರತಿಬಂಧಿಸಲಾಗಿದೆಂದು ತಿಳಿದುಬರುತ್ತದೆ.

ಏಜನ್ಸಿ ಪಡೆಯಿರಿ!
ಮತ್ತು
ತುಂಬ ಕಮಿಶನ್ ಗಳಿಸಿರಿ!

ಸಹ್ಯಾದ್ರಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—ನಾಸಿಕ

ಇದರ ಮುಖ್ಯ ಆಧವಾ ಉಪವೃತ್ತಿಯಾಗಿ ಏಜನ್ಸಿ ಪಡಕೊಳ್ಳಿರಿ ಆಕರ್ಷಕ ಮತ್ತು ಉದಾರ ಶರ್ತಗಳು. ಮೇಲ್ಮರಗತಿಯ ಜೀವವಿಮಾ ಸಂಸ್ಥೆಯಿದು

G. G Soundankar
Managing Director
The Sahyadri Insurance Co., Ltd. Nasik

Academy of General Education
Manipal, S. Kanara.

KASTURBA MEDICAL COLLEGE

Applications are invited from ladies for the post of Matron for the women's section of The Kasturba Medical College Hostel, Manipal. Applicants should be above 30 years of age and should have passed atleast the S. S. L. C. examination. In addition to looking after the women residents the Matron will be in charge of the stores and accounts of the entire hostel. She must possess sufficient knowledge of accounts and housekeeping and must be capable of running the establishment efficiently. Applications giving full particulars should reach the undersigned before 7th October, 1951

Dr. T. M. A. Pai
Registrar

In the Court of the District Munsif of Kasaragod
S. C. No. 129/1951

Ammu Shetty Nephew of Kiniannu Bhandary residing at Mangalpadi Village Kasaragod Taluq

—Plaintiff

AND

Moidin Saheb son of Sheikh Alli Saheb residing at Kodibail village Kasaragod Taluq — Defendan[t]

Please take notice that th[e] plaintiff has filed a sui[t] against the defendant fo[r] recovery of the plaint clai[m] and the suit is posted [to] 1-10-1951 for his appea[r]ance failing which the defe[n]dant will be declared expart[e]

K. Narayana Naya[k]
Advocate for plain[tiff]
Kasaragod, 22-9-1951

ಉಡುಪಿ

ಕರ್ನಾಟಕ ಸಂಘದ ಕಡೆಯಿಂದ ದಸರಾ ಸಾಹಿತ್ಯೋತ್ಸವದ ವೇಳೆ ತಾ. ೭—೧೦—೫೧ರಿಂದ ನಾಲ್ಕು ದಿವಸಗಳ ಪರಿಯಂತ ಪ್ರತಿದಿನ ಪೂರ್ವಾಹ್ನ ಗಂಟೆ 9-30 ರಿಂದ ಅನುಕ್ರಮವಾಗಿ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ದಾಸಸಾಹಿತ್ಯ ಸ್ಪರ್ಧೆ, [ಹೆಮ್ಮಕ್ಕಳಿಗೆ ಮಾತ್ರ] ಮತ್ತು ಕಾವ್ಯವಾಚನ ಸ್ಪರ್ಧೆಗಳು ಉಡುಪಿ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ನಡೆಯಲಿರುವವು. ಸ್ಪರ್ಧಾಳುಗಳು ಅಪೇಕ್ಷಾ ಪತ್ರಗಳನ್ನು ಸಾಕಷ್ಟು ಮುಂಗಡವಾಗಿ ಕಾರ್ಯದರ್ಶಿಗಳಿಗೆ ಕಳುಹಿಸತಕ್ಕದ್ದು.

[ವೆಂಕಟ್ರಾಮಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆಗೆ ವಿಷಯಗಳು:] 1 ಪ್ರಕೃತ ಕರ್ನಾಟಕ ಪ್ರಾಂತೀಕರಣವು ಶ್ರಮ ಸಾಧ್ಯವಾದುದೆ? ಹೇಗೆ? 2 ಕರ್ನಾಟಕ ಕಾದಂಬರಿಗಳಲ್ಲಿ ನಿಮ್ಮ ಮೆಚ್ಚಿನ ಕಾದಂಬರಿ ಯಾವುದು? ಏಕೆ? 3 ಭಾರತದಲ್ಲಿ ಈಗಿರುವ ಜನತಾ ಮುಖಂಡರಲ್ಲಿ ಅತ್ಯಂತ ಆದರಣೀಯರು ಯಾರು? ಏಕೆ? 4 ಮುಂಬರುವ ಚುನಾವಣೆಯಲ್ಲಿ ನಿಮ್ಮ ಮತ ಯಾವ ಪಕ್ಷಕ್ಕೆ? ಏಕೆ? 5 ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾದುದರ ಗುಣಾವಗುಣಗಳಾವುವು? 6 ಭಾರತದ ಸಣ್ಣ ದೊಡ್ಡ ಕೈಗಾರಿಕೆಗಳ ರಾಷ್ಟ್ರೀಕರಣದಿಂದ ಸಾಧಕವೆ, ಬಾಧಕವೇ? ಹೇಗೆ?

ಸಭೆಗಳು:— ಸೋಶಲಿಸ್ಟ್ ಪಕ್ಷದ ಸಭೆಯು ತಾ. 23ರಲ್ಲು ಚಿನ್ನದಪಾಲ್ಕಿಯಲ್ಲಿ ಶ್ರೀ ಎಸ್. ವಿಠಲದಾಸರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎಮ್. ಜಿ. ಹೆಗ್ಡೆ, ಕೆ. ಟಿ. ರಾವ್, ಆರ್. ಮಾರ್ಟಿನ್ ಮೊದಲಾದವರ ಭಾಷಣಗಳಾದುವು.

ಕಮ್ಯೂನಿಸ್ಟ್ ಪಕ್ಷದ ಸಭೆಯೊಂದು 23ರಲ್ಲು ರಥಬೀದಿಯಲ್ಲಿ ಶ್ರೀ ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಜರಗಿ ಪಕ್ಷದ ಧ್ಯೇಯ ಧೋರಣಾದಿಗಳನ್ನು ವಿವರಿಸಿ ಭಾಷಣಗಳಾದುವು.

ಲೋರಿ ಅಪಘಾತ:— ಇದೇ ತಾ. 23ರಂದು ಬೆಳಗ್ಗೆ ಕುಂಜಿಬೆಟ್ಟು ದಾಟಿ ಸ್ವಲ್ಪ ದೂರದಲ್ಲಿ ಮಂಗಳೂರಿನಿಂದ ಉಡುಪಿಗೆ ಬರುವ ಮೋಟಾರ್ ಲೋರಿಯೊಂದರ ಅವಘಾತದಿಂದಾಗಿ ಎದುರಾಗಿ ಬರುತ್ತಿದ್ದ ದನಗಳ ಹಿಂಡಿನಲ್ಲಿ ಕೆಲವು ಸತ್ತು ಹೋದುವೆಂದೂ ಮತ್ತೆ ಕೆಲವಕ್ಕೆ ಜಖಂ ಆಗಿದೆ ಎಂದೂ ತಿಳಿದುಬರುತ್ತದೆ.

ಕಸ್ತೂರಿಬಾ ಮೆಡಿಕಲ್ ಕಾಲೇಜು: ಇದರ ಆಡಳಿತೆಗಾಗಿ ಉಡುಪಿಯ ಅರುಜನ ಎಮ್. ಬಿ. ಬಿ. ಎಸ್. ಡಾಕ್ಟರರು ಮತ್ತು ಮಂಗ್ಳೂರಿನ ಮೂವರು ಅಧ್ಯ ಡಾಕ್ಟರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಕಾಲೇಜಿನ ಉದ್ಘಾಟನಾ ಸಮಾರಂಭವನ್ನು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಶ್ರೀಯುತ ಪಾಟೀಲ ಪುಟ್ಟಪ್ಪ ಅವರ ಹಸ್ತದಿಂದ ತಾ. 24-10-51ರಂದು ನೆರವೇರಿಸಬೇಕೆಂದು ಎಕಡೆಮಿ ಅಫ್ ಜನರಲ್ ಎಜ್ಯುಕೇಶನ್‌ನವರ ಕಾರ್ಯಕಾರಿ ಮಂಡಳಿಯವರು ನಿರ್ಧರಿಸಿದ್ದಾರೆ. ಕಾಲೇಜಿನ ಸೀಟುಗಳು ಭರ್ತಿಯಾಗಿರುತ್ತವಲ್ಲದೆ, ಪ್ರವೇಶ ದೊರೆತವರಲ್ಲಿ 14 ಜನ ಮಹಿಳೆಯರಿದ್ದಾರೆಂದೂ ಅವರಿಗೆ ಉಳಕೊಳ್ಳಲು ಯೋಗ್ಯ ವಸತಿ ಗೃಹ ಸಿದ್ಧಪಡಿಸಿರುವರೆಂದೂ ತಿಳಿದುಬಂದಿದೆ.

ನಮಗೆ ಬಂದ ಪತ್ರ

ಕೊಳ್ಕರ್ಣೆ ಸೋಮವಾರ ಸಂತೆಯಲ್ಲಿ ಸಂತೆ ಮಾರ್ಕೆಟು ಕಂಟ್ರಾಕ್ಟರರು ತಲೆಹೊರೆಗೆ ಒಂದಾಣೆ ಸುಂಕ ಎಂಬ ನಿಯಮವಿದ್ದರೂ ಹೆಚ್ಚಿಗೆ ಸುಂಕ ವಸೂಲು ಮಾಡುತ್ತಿರುವರೆಂದೂ ಸಂಬಂಧಪಟ್ಟವರು ಈ ಕುಂತು ತನಿಖೆನಡಿಸಿ ಬಡವರಿಗಾಗುತ್ತಿರುವ ಕಷ್ಟವನ್ನು ಹೋಗಲಾಡಿಸಬೇಕೆಂದೂ ಅರ್ಥಪೂರ್ಣ ದೀರ್ಘ ಪತ್ರವೊಂದನ್ನು ಪ್ರಕಟಣೆಗಾಗಿ ಶ್ರೀ. ಕಂಜೂರು ಮಹಾಬಲ ಶೆಟ್ಟರು ಕಳುಹಿಸಿರುವರು.

ಕಾಂಗ್ರೆಸ್ ಉಮೇದ್ವಾರಿಗಳು.

ಕೆಳಗಿನ ಮಹನೀಯರು ಕಾಂಗ್ರೆಸ್ ನಮ್ಮ ಜಿಲ್ಲೆಯ ಆಯಾಯ ಮತದಾ - ಕ್ಷೇತ್ರದಿಂದ ಕೆ. ಪಿ. ಸಿ. ಸಿ. ಗೆ ತಮ್ಮ ಅರ್ಜಿಗಳನ್ನು ಸಲ್ಲಿಸಿರುವರಾಗಿ ತಿಳಿದು ಬಂದಿದೆ.

1] ಕುಂದಾಪುರ—ವೈ. ಮಂಜಯ್ಯ ಶೆಟ್ರು.

2] ಬ್ರಹ್ಮಾವರ—1. ಎ. ಬಿ. ಶೆಟ್ರು. 2. ಕೆ. ಎಸ್. ಹೆಗ್ಡೆಯವರು. 3. ಕೊಳ್ಕೆಬೈಲು ಸೂರಪ್ಪ ಸೆಟ್ರು. 4. ಬಿ. ಮಂಜಯ್ಯ ಹೆಗ್ಡೆಯವರು. 5. ಜಗಜೀವನದಾಸ್ ಸೆಟ್ರು. 6. ಡಾ॥ ಮಂಜಯ್ಯ ಹೆಗ್ಡೆಯವರು. 7. ಬಿ. ಕರುಣಾಕರ ಹೆಗ್ಡೆ

3] ಉಡುಪಿ—1. ಟಿ. ಎ. ಪೈ, 2. ಪಿ. ಉಪೇಂದ್ರ ನಾಯ್ಕರು. 3. ಹಿರಿಯಣ್ಣ ಹೆಗ್ಡೆಯವರು.

4] ಕಾರ್ಕಳ—1. ಎ. ಬಿ ಶೆಟ್ರು, 2. ಕೆ. ಎಸ್. ಹೆಗ್ಡೆಯವರು 3. ಕೆ. ಟಿ ಮುಕುಂದ ಪ್ರಭು. 4. ಬಿ. ಆರ್. ಕರ್ಕೇರ. 5. ಎಮ್. ಡಿ. ಅಧಿಕಾರಿ.

5] ಮಂಗಳೂರು—1. ಶ್ರೀ. ಎಲ್. ಸಿ. ಪ್ಯಾಸರು. 2. ಡೇನಿಸ್ ಪಿಂಟೋ. 3. ಬಿ. ಆರ್. ಕರ್ಕೇರ.

6] ಮೂಲ್ಕಿ—1. ಎ. ಬಿ. ಶೆಟ್ರು. 2. ಕೆ. ಕೆ ಸೆಟ್ರು. 3. ಬಿ. ಆರ್. ಕರ್ಕೇರರು. 4. ಎನ್. ಎಸ್. ಕಿಲ್ಲೆಯವರು. 5. ಡೇನಿಸ್ ಪಿಂಟೋರವರು. 6. ಡಾ॥ ಚಂದಾವರು. 7. ಎನ್. ಎನ್. ಸುವರ್ಣರು. 8. ರಾಜೀವ ಭಂಡಾರಿ. 9. ಮಂಜೇಶ್ವರ ಶ್ರೀನಿವಾಸ ನಾಯ್ಕರು 10. ಡಾ॥ ಕೆ. ಬಿ. ಶೆಟ್ಟರು.

7] ಬಂಟ್ವಾಳ—1. ನಾಗಪ್ಪ ಆಳ್ವರು. 2. ವೈಕುಂಠ ಬಾಳಿಗಾ. 3. ಅಮ್ಮೆಂಬಳ ಕೃಷ್ಣರಾವ್ 4. ಡಾ॥ ಬಾಳಪ್ಪ ಸೆಟ್ರು.

8] ಪುತ್ತೂರು—1. ಕೆ. ವೆಂಕಟ್ರಮಣ ಗೌಡರು. 2. ಜಗನ್ನಾಥ ರೈಗಳು. 3. ಡಾ॥ ಬಾಳಪ್ಪ ಸೆಟ್ರು. 4 ವೇಣುಗೋಪಾಲ ನಾಯ್ಕರು.

9] ಕಾಸರಗೋಡು—1. ಎಮ್. ಎಸ್. ಮೊಗ್ರಾಲ್. 2. ಎಚ್. ಎಚ್. ಚವ್ವಾಡರೂ.

10] ಹೊಸದುರ್ಗ—ಎಚ್. ಎಚ್. ಚವ್ವಾಡರು.

11] ಹರಿಜನ—1. ಕೃಷ್ಣ. ಬಿ. ಎ. ಬಿ. ಟಿ. 1. ಎಮ್. ಈಶ್ವರ.

ಪಾರ್ಲಿಮೆಂಟು ಉತ್ತರ:—ಶ್ರೀನಿವಾಸ ಮಲ್ಯರು.

„ ದಕ್ಷಿಣ:—ಬೆನಗಲ್ ಶಿವರಾಯರು.

ಅಪ್ಪರ್ ಚೇಂಬರ್:—ಯು. ಸಿ. ರಾಮ್. ಭಟ್ರು. ಎಮ್. ಎಸ್. ಶ್ರೇಷ್ಠ.

1951--1952ರ ಲಿವಿಕ್ರಮ

1951-52ರ ಲೆವಿಕ್ರಮವು ಕೆಳಗಿನ ಉದಾಹರಣೆಯಂತೆ ನಡೆಯುವುದು. ಇದನ್ನು ರೈತರು ಮತ್ತು ಅಧಿಕಾರಿಗಳು ಗಮನದಲ್ಲಿಡಬೇಕಾಗಿದೆ.

1 ಎಕ್ರೆ ಮತ್ತು ಅದಕ್ಕಿಂತ ಕಡಿಮೆ — ; 1 ಎಕ್ರೆ ಮೇಲ್ಪಟ್ಟು 2 ಎಕ್ರೆ ವರೆಗೆ 1 ಮುಡಿಯಂತೆ, 3 ಎಕ್ರೆಯ ವರೆಗೆ 2 ಮುಡಿಯಂತೆ, 4 ಮತ್ತು 5 ಎಕ್ರೆಯ ವರೆಗೆ 3 ಮುಡಿಯಂತೆ, 6, 7, 8 ಎಕ್ರೆಯ ವರೆಗೆ 4 ಮುಡಿಯಂತೆ, 9, 10 ಎಕ್ರೆಯ ವರೆಗೆ ಐದು ಮುಡಿಯಂತೆಯೂ ಇದೇ ರೀತಿ ಏರುತ್ತಾ ಹೋದಂತೆ ಅದೇ ಪ್ರಮಾಣದಲ್ಲಿ ಕೊಡಬೇಕಾಗಿದೆ.

ವಿ. ಸೂ.— ಈ ಮೇಲಿನ ಕ್ರಮವು ಪ್ರತಿ ಬೆಳೆಗೂ, ಪ್ಲೇಟ್ ಸಿಸ್ಟಮ್‌ಗೆ ಸರಿಯಾಗಿ ಪ್ರತ್ಯಪ್ರತ್ಯೇಕವಾಗಿ ಅನುಸರಿಸಲ್ಪಡುವುದು.

ದ. ಕ. ಜಿಲ್ಲೆಯೊಳಗೆ ಬೇಸಾಯ ಮಾಡಿದ ಒಕ್ಕಲದಾರನೆ ಇರಲಿ, ಒಕ್ಕಲೇ ಇರಲಿ, ಅಂತಹವರೆಲ್ಲಾ ಬೆಳೆ ಕಟಾವಾದ ಹದಿನಾಲ್ಕು ದಿವಸಗಳೊಳಗಾಗಿ ಆಯಾಯ ಕ್ಷೇತ್ರದ ತಹಶಿಲ್ದಾರ್ ಮತ್ತು ರೇಶನಿಂಗ್ ಆಫೀಸರರೊಡನೆ ಉತ್ಪತ್ತಿಯಾದ ಭತ್ತದ ದೃಢ ಪತ್ರವನ್ನು ಹಾಜರು ಮಾಡಬೇಕು.

THE UDIPI BANK LIMITED

ದಿ ಉಡುಪಿ ಬೇಂಕ್, ಲಿಮಿಟೆಡ್.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಸಾಲಗಳ ಬಡ್ಡಿ ಮತ್ತು ಅಸಲು ಐವೇಜುಗಳ ವಸೂಲಿ ಬಗ್ಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವರು ಮೃತಪಟ್ಟಿದ್ದಾರೆಂಬುದಾಗಿಯೂ, ಕೆಲವರು ಪರಸ್ಥಳಗಳಲ್ಲಿ ವಾಸಿಸುತ್ತಾರೆಂಬ ಸಬಬಿನ ಮೇಲೆ ಜ್ಯಾರಿಯಾಗದೆ, ಇನ್ನು ಕೆಲವರಿಗೆ ಜ್ಯಾರಿಯಾಗಿಯೂ ನಗಗಳನ್ನು ಬಿಡಿಸಿಕೊಂಡು ಹೋಗದಿರುವದರಿಂದ, ಈ ಕೆಳಗೆ ಹೆಸರು ಕಾಣಿಸಿದವರ ಪೈಕಿ ಮೃತಪಟ್ಟವರ ವಾರಿಸುದಾರರಿಗೂ ಮತ್ತು ಇತರರಿಗೂ ತಿಳಿಯಪಡಿಸುವದೇನೆಂದರೆ:—

ಸದ್ರಿ ಸಾಲಗಳ ಬಧ್ರತೆಗಾಗಿ ಇಟ್ಟ ಚಿನ್ನಾಭರಣಗಳನ್ನು ತಾರೀಕು 3-10-1951ನೇ ಬುಧವಾರ ಅಪರಾಹ್ನ ಗಂ. 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಬೇಂಕಿಗೆ ಯುಕ್ತಕಂಡಲ್ಲಿ ಪುನಃ ನೋಟೀಸು ಕೊಡದೇನೆ ಏಲಂ ಮುಂದುವರಿಸುವ ಹಕ್ಕು ಬೇಂಕಿಗೆ ಇರುವುದು.

ಲೋನು ನಂಬ್ರ	ಹೆಸರು ಮತ್ತು ವಿಳಾಸ.	ಮೊಬಲಗು
	ಕಲ್ಯಾಣಪುರ ಶಾಖೆ	ರೂ. ಆ. ಪೈ.
414/48 1-11-48	ಹಸನ್‌ಸಾಹೇಬ, ಇಸಾಕ್ ಸಾಹೇಬರ ಮಗ, ಬಗ್ಗಾರ್ ಬೆಟ್ಟು ಮೂಡುತೋನ್ಸೆ, ಕಲ್ಯಾಣಪುರ.	15-0 -0
180/49 15-6-49	ಕೆ. ಆರ್ ಮಲ್ಲಿ, ಕೆ. ಎಸ್. ಮಲ್ಲಿಯವರ ಮಗ, ಕಲ್ಯಾಣಪುರ.	70-0 -0
184/49 17-6-49	ಚೆಲ್ಲ ಪೂಜಾರಿ, ಬಾಬ ಪೂಜಾರಿಯವರ ಮಗ, ಮೂಡುತೋನ್ಸೆ ಕಲ್ಯಾಣಪುರ.	10-0 -0
190/49 22-6-49	ಕೆ. ಶಾಂತಯ್ಯ ನಾಯ್ಕ, ಕೆ. ಅಣ್ಣಪ್ಪ ನಾಯ್ಕರ ಮಗ, ಪೋರ್ಟ್ ಕಂಪೌಂಡ್, ಕಲ್ಯಾಣಪುರ.	30-0 -0
272/49 1-8-49	ದೇಜು ಬೆಲ್ಚಡ, ಬೀರಪ್ಪ ಬೆಲ್ಚಡರ ಮಗ, ಮೂಡು ಬೆಟ್ಟು, ಕಲ್ಯಾಣಪುರ.	15-0 -0
321/49 25-8-49	ಯು. ರಾಮಣ್ಣ ಸೇರ್ವೆಗಾರ, ಮರ್ಚಂಟ್, ಕಲ್ಯಾಣಪುರ.	30-0 -0
365/49 5-10-49	ಡಿ. ಸೆಬ್ಬಿಯಾನ್, ಕಲ್ಯಾಣಪುರದಲ್ಲಿ ವಾಸಿಸುವವರು	13-8 -0
49/50 28-2-50	ಟಿ. ಕೃಷ್ಣಪ್ಪ, ತನ್ನ ಪೂಜಾರಿಯ ಅಳಿಯ ಮೂಡುತೋನ್ಸೆ, ಕಲ್ಯಾಣಪುರ.	198-0 -0
	ಉಡ್ಪಿ ಶಾಖೆ	
88/48 27-9-48	ಬೊನಿಫೇಸ್ ಬರ್ನಾಡ ಲೂವಿಸ್, ಮಾರ್ಸೆಲ್‌ಸಲ್ಡೋ ಹರ್ ಲೂವಿಸರ ಮಗ, ಪಡುತೋನ್ಸೆ, ಕಲ್ಯಾಣಪುರ.	50-0 -0

ಬೇಂಕಿನ ಆಫೀಸು
ಉಡ್ಪಿ, ತಾ. 24-9-1951

ಪಿ. ಪುರುಷೋತ್ತಮ ಪ್ರಭು
ಏಜಂಟ್

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ರೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯವಿಟ್ಟು ಈ ವಿಳಾಸಕ್ಕೆ ಬರೆಯಿರಿ,

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)

ಹೈಕೋರ್ಟು ಒರಿಜಿನಲ್ ಸೈಡ್, ಮದ್ರಾಸು

ಓ. ಪಿ. ನಂಬ್ರ 281/1951.

ಇಂಡಿಯನ್ ಕಂಪೆನೀಸ್ ಆಕ್ಟು ಮತ್ತು ದಿ ಕೆನರಾ ಟಿಂಬರ್ಸ್ ಲಿಮಿಟೆಡ್, ಮಂಗಳೂರು, ದ. ಕನ್ನಡ— ಈ ವಿಚಾರಗಳಲ್ಲಿ.

ಅಹಮ್ಮದ್ ಕಾಸ್ಸಿಂ ... ... ಅರ್ಜಿದಾರ.

ಮೇಲ್ಕಾಣಿಸಿದ ಕೆನರಾ ಟಿಂಬರ್ಸ್ ಲಿಮಿಟೆಡ್ ಕಂಪೆನಿಯನ್ನು ಇಂಡಿಯನ್ ಕಂಪೆನೀಸ್ ಆಕ್ಟಿನ 162ನೆ ಸೆಕ್ಷನ್ ಪ್ರಕಾರ ಬರ್ಖಾಸ್ತು ಮಾಡಬೇಕಾಗಿ ಅರ್ಜಿದಾರನು ತಾ. 20-8-'51ರಲ್ಲು ಮಾಡಿದ ಅರ್ಜಿಯು ಮೇಲ್ಕಾಣಿಸಿದ ಕೋರ್ಟಿನಲ್ಲಿ ಇಷ್ಟರಿಂದ ತಾ. 18-10-51ಕ್ಕೆ ತನಿಖೆಗೆ ಇಡೋಣಾಗಿಯದೆ. ಅರ್ಜಿದಾರನು ಕೇಳಿದ ಹುಕುಮನ್ನು ಕೋರ್ಟಿನಿಂದ ಕೊಡುವ ವಿಷಯದಲ್ಲಿ ಪುಷ್ಟೀಕರಿಸುವವರು ಅಥವಾ ಆಕ್ಷೇಪವೆತ್ತುವವರು ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಖುದ್ದಾಗಿಯೂ ವಕೀಲರ ಮುಖಾಂತರ ಹಾಜರಾಗಬೇಕಾಗಿ ಸೂಚಿಸೋಣಾಗುತ್ತದೆ. ಅರ್ಜಿದಾರನು ಮಾಡಿದ ಅರ್ಜಿಯ ನಕಲನ್ನು ಅಪೇಕ್ಷಿಸುವವರು ಕೆಳಗೆ ಸಹಿ ಮಾಡಿದವರಿಂದ ನಿರ್ದಿಷ್ಟ ಫೀಸನ್ನು ತೆತ್ತು ಪಡೆಯಬಹುದು.

12-9-51
20 ತಂಬುಚೆಟ್ಟಿ ಸ್ಟ್ರೀಟ್
ಮದ್ರಾಸು.

ಕೆ. ವಿಠಲ ರಾವ್,
ಅರ್ಜಿದಾರನ ಕಡೆ ವಕೀಲ್.

ಸೂ:— ಮೇಲೆ ಸೂಚಿಸಿದಂತೆ ತಕ್ಕ ದಿನ ಹಾಜರಾಗಿ ಅರ್ಜಿ ಕುರಿತು ತಮ್ಮ ಹೇಳಿಕೆಗಳನ್ನು ಕೊಡಲಪೇಕ್ಷಿಸುವವರು ಯಾ ಸಂಸ್ಥೆಗಳು ತಂತಮ್ಮ ಹೆಸರು, ವಿಳಾಸಾದಿಗಳನ್ನು ತಾ. 17-10-51ನೆ ದಿವಸ ಅಪರಾಹ್ನ 3 ಗಂಟೆಯೊಳಗೆ ಅರ್ಜಿದಾರರ ವಕೀಲರಿಗೆ ತಲ್ಪುವಂತೆ ಕಳುಹಿಸತಕ್ಕದ್ದು.

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು—ಇದೇ ತಾ. 15ರಲ್ಲು ಹನ್ನೊಂದು ಗಂಟೆಗೆ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಕಾರ್ಕಳದಿಂದ ಆರಿಸಿ ಬಂದ ಶ್ರೀ ಎಮ್. ಎಸ್. ಅಧಿಕಾರಿಗಳು ಪ್ರಮಾಣ ಸ್ವೀಕರಿಸಿದರು. ಬಳಿಕ ಶ್ರೀ ಕೆ. ಸದಾಶಿವ ಆಳ್ವ ಮತ್ತು ಶ್ರೀಮತಿ ಗಿರಿಜಾ ಬಾಯಿ ಹೆಗ್ಗಡ್ತಿಯವರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು.

ಆ ಮೇಲೆ 1950-51ನೇ ವರ್ಷದ ಆಡಳಿತ ವರದಿಯನ್ನು ಸಭೆಯು ಮಂಜೂರುಮಾಡಿತು. ಜಿಲ್ಲಾ ಬೋರ್ಡುಗಳ ಸಾಧಾರಣೆಯ ಬಗ್ಗೆ ಸರಕಾರವು ಪ್ರಕಟಿಸಿದ ಪ್ರಶ್ನಾವಳಿಗೆ ಉತ್ತರ ತಯಾರಿಸಲು ಶ್ರೀಗಳಾದ ಎಸ್. ನರ್ಸಪ್ಪಯ್ಯ, ಬಿ. ಎಸ್. ಭಾಸ್ಕರ ರೈ, ಡಾ। ಕೆ. ಬಾಳಪ್ಪ ಸೆಟ್ಟಿ, ಶ್ರೀಗಳಾದ ಎ. ಕೆ. ಹೆಗ್ಗಡೆ, ಡಿ. ಪುಟ್ಟು ಸ್ವಾಮಿ, ಶ್ರೀಮತಿ ಶಾರದಾ ಬಾಯಿ ಮಂಗಳೂರ್ ಮಂತಾದವರಿರುವ ಒಂದು ಸಮಿತಿಯನ್ನು ರಚಿಸಲಾಯಿತು.

ಆಫೀಸಿನ ಕಾರಕೂನರಿಗೆ ನೂರಿ ಪದದೆಗಾಗಿ ರೂ 50ರಂತೆ ಕೆಲವರಿಗೆ ಸಾಲ ಮಂಜೂರು ಮಾಡಿದ ಮೇಲೆ, ಕಾರ್ಕಳ ಪಂಚಾಯತ ಬೋರ್ಡಿನವರು ಕೇಳಿದ ಸ್ಥಳವನ್ನು ಕೊಡಲು ಸಾಧ್ಯವೆಂಬ ನಿರ್ಣಯಿಸಲಾಯಿತು. ಜಿಲ್ಲಾ ಬೋರ್ಡಿನ ರೆವಿನ್ಯೂ ಇನ್ಸ್‌ಪೆಕ್ಟರರ ಪ್ರಯಾಣ ಭತ್ಯೆಯನ್ನು ರೂ 33 ರಿಂದ ರೂ 45ಕ್ಕೆ ಏರಿಸಲಾಯಿತು. ಇವುಗಳಲ್ಲದೆ ಸರಕಾರವು ಮಂಜೂರುಮಾಡಿದ ರೂ. 3954,950ರ 169 ಕೆಲಸಗಳನ್ನು ರಿಕಾರ್ಡು ಮಾಡಲಾಯಿತು ಜಿಲ್ಲೆಯಲ್ಲಿನ ಆಡಿಕೆ ಮತ್ತು ಕಟ್ಟುವ್ಯವಸಾಯಗಾರರಿಗೆ ಲೈಸೆನ್ಸು ಫೀಸು ಹೇರಿಸುವ ವಿಚಾರದಲ್ಲಿ ತಕ್ಕ ಸಲಹೆಕೊಡಲು ಎಸ್. ನರ್ಸಪ್ಪಯ್ಯ, ಡಾ। ಬಾಲಪ್ಪ ಸೆಟ್ಟಿ, ಪುಟ್ಟು ಸ್ವಾಮಿ, ಎಫ್. ಎಕ್ಸ್. ಡಿ' ಪಿಂಟೋ, ಬಿ. ಎಸ್. ಭಾಸ್ಕರ ರೈ, ಮತ್ತು ಎಮ್ ಎಸ್. ಅಧಿಕಾರಿಗಳಿರುವ ಒಂದು ಸಮಿತಿ ರಚಿಸಲಾಯಿತು. ಆ ಮೇಲೆ ಮಂಗಳೂರಿನಿಂದ ಮಲ್ಪೆಗೆ ರೈಲುಹಾದಿ ಹಾಕಬೇಕೆನ್ನುವ, ಮಿಯರ್ ಮತ್ತು ಉದ್ಯಾವರ ಹೊಳೆಗಳಿಗೆ ಸಂಕಗಳಾಗಬೇಕೆನ್ನುವ ಠರಾವುಗಳಾದುವು ಆ ಮೇಲೆ ಹೆಜಮಾಡಿಯಲ್ಲಿ ಹೈಸ್ಕೂಲು ತೆರೆಯುವ ವಿಚಾರವು ಚರ್ಚಿಸಲ್ಪಟ್ಟು ಊರವರು ಕಟ್ಟಡದ ಉಪಕರಣಗಳನ್ನು ಒದಗಿಸಿ, ರೂ. 5000/- ಇದುಗಂಟು ಇಡುವ ಶರ್ತದಲ್ಲಿ ಹೈಸ್ಕೂಲು ತೆರೆಯುವ ನಿರ್ಣಯವಾಯಿತು.

ಜಿಲ್ಲಾಬೋರ್ಡಿನ 1950-51ನೆ ವರ್ಷದ ವರದಿಯು—ಚರ್ಚೆಗೆ ಬಂದಾಗ ಶ್ರೀ ಬಿ ಎಸ್. ಭಾಸ್ಕರರೈಗಳು ಮಾತನಾಡುತ್ತಾ ಬೋರ್ಡಿನ ರಸ್ತೆಗಳು, ಶಾಲೆಗಳ ಫಲಿತಾಂಶ ಅತೃಪ್ತಿಕರವೆಂದರು. ಆರೋಗ್ಯಾಧಿಕಾರಿಗಳ ವಿಚಾರದಲ್ಲಿ ಅತೃಪ್ತಿ ವ್ಯಕ್ತಪಡಿಸಿದರಲ್ಲದೆ ಅವರ ವಿಚಾರದಲ್ಲಿ ಹಲವು ದೂರುಗಳು ಬಂದಿವೆಯೆಂದರು. ಕಡವುಗಳ ಹರಾಜಿನಲ್ಲಿ ಇನ್ನೂ ದೋಷವಿದೆಯೆಂದರು. ಅಧ್ಯಕ್ಷರು ತಮ್ಮ ಉತ್ತರದಲ್ಲಿ ಉಪಾಧ್ಯಾಯರಿಗೆ ಬೋರ್ಡು ಕೊಡುವ ಸಂಬಳವು ಕಡಿಮೆ ಎಂದೂ ಆದ್ದರಿಂದ ಅವರನ್ನೇ ದೂರುವುದು ಸರಿಯಲ್ಲವೆಂದೂ ಹೇಳಿದರಲ್ಲದೆ ಬೋರ್ಡಿನ ಆಡಳಿತೆಯಲ್ಲಿ ಕೊರತೆಗಳಿರಲು ಕೆಲವುಗಳಲ್ಲಿ ಸರಕಾರದ ನಿಯಮಗಳೇ ಕಾರಣವೆಂದರು. ಹೈಸ್ಕೂಲುಗಳನ್ನು ಒದಗಿಸಿ ಕೊಡುವಲ್ಲಿ ಸಾರ್ವಜನಿಕರು ಮಾಡಿದ ಕೊಡುಗೈ ದಾನಗಳನ್ನು ಶ್ಲಾಘಿಸಿದರು. ಜಿಲ್ಲೆಯಲ್ಲಿ ರಸ್ತೆಗಳು ಸಾಕಾಗಿಲ್ಲವೆಂದೂ ಅವುಗಳ ಪರಿಸ್ಥಿತಿಯಲ್ಲೂ ಅಭಿವೃದ್ಧಿಯಾಗಿಲ್ಲವೆಂಬುದು ಸತ್ಯವಾದರೂ ಅವುಗಳನ್ನು ಸರಿಪಡಿಸಿ ಕೊಳ್ಳುವಲ್ಲಿ ಇರುವ ತೊಂದರೆಗಳನ್ನು ತಿಳಿಸಿದರು. [ಮಂಜೂರಾದ ವರದಿಯ ಸಾರಾಂಶವನ್ನು ಬರುವ ವಾರ ಕೊಡಲಾಗುವುದು.]

ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತಿಕ ಸಮ್ಮೇಳನವು ಇದೇ ತಾ. 18ರಿಂದ 21ರ ವರೆಗೆ ಉಳ್ಳಾಲದಲ್ಲಿ ಜರಗಿ, ತಾ. 21ರಂದು ಸಂಜೆ ಮಂಗಳೂರಿನ ಕೇಂದ್ರ ಬಯಲಿನಲ್ಲಿ ಬಹಿರಂಗ ಅಧಿವೇಶನವು ಶ್ರೀ ಎಸ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿ, ಹಲವರ ಭಾಷಣ, ಠರಾವುಗಳಾದುವು.

ಕಾರ್ಕಳ—ಇಲ್ಲಿಯ ಬಾಸೆಲ್ ಮಿಶನ್ ಶಾಲಾ ಕಟ್ಟಡಕ್ಕೆ ಹೊಸತಾಗಿ ಕೂಡಿಸುವ ವಿಭಾಗದ ಪ್ರವೇಶೋತ್ಸವವು ಇದೇ ತಾ. 6 ರಂದು ರೆ। ಜೆ. ರೊಸ್ಸೆಲ್ ದೊರೆಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರ ವರದಿವಾಚನವಾದನಂತರ ಹೆತ್ತವರ ಸಂಘದ ಅಧ್ಯಕ್ಷ ಶ್ರೀ ಬಿ. ಕರುಣಾಕರ ಹೆಗ್ಗಡೆಯವರು ಕಾರ್ಕಳ ಕೇಂದ್ರಕ್ಕೊಂದು ಹಾ। ಎ. ಶಾಲೆಯ ಆವಶ್ಯಕತೆಯನ್ನು ಸೂಚಿಸಿ, ಬಾಸೆಲ್ ಮಿಶನಿನವರು ಈ ಕಾರ್ಯವನ್ನು ಮಾಡಬೇಕೆಂದು ಅಪೇಕ್ಷಿಸಿದರು. ಊರವರಿಂದ ಮೂರು ಸಾವಿರ ರೂಪಾಯಿಗಳ ಧನಸಹಾಯ ಕೊಡಿಸುವೆವಾಗಿಯೂ ಅಧಿಯುವ ಚನವಿತ್ತರು. ಸೆಟ್ಟಿಬೆಟ್ಟು ರಾಜಯ ಮೆಮೋರಿಯಲ್ ಫಂಡಿನ ಹಣವನ್ನು ಈ ಕಾರ್ಯಕ್ಕೆ ಕೊಡುವಂತೆ ಕೇಳಿಕೊಳ್ಳಬೇಕಾಗಿ ಶ್ರೀ ಆನಂದ ಸೆಟ್ಟರು ಸೂಚಿಸಿದರು.

ಪಡುಬಿದ್ರೆ—ವಯಸ್ಕರ ಶಿಕ್ಷಣ ತರಬೇತಿ ಶಾಲೆಯ ತೃತೀಯಾಧಿವೇಶನದ ಉದ್ಘಾಟನೆಯು ತಾ. 7ರಂದು ಫಿಶರೀಸ್ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ತರಬೇತಿ ಶಿಬಿರದ ಮುಖ್ಯೋಪಾಧ್ಯಾಯರಾದ ಟಿ. ಎಲ್. ರಾಮಸ್ವಾಮಿ ಸ್ವಾಗತಭಾಷಣವಿತ್ತರು.

ಪಂಜಿನಡ್ಕ:—ಕೇಂಜೆ ಪ್ರಾಥಮಿಕ ಶಾಲೆಯಲ್ಲಿ ತಾ. 14—9—51 ಕ್ಕೆ ಮಂಗಳೂರು ಹಿಟ್ಟುವು ರೇಂಜು ಇನ್ಸ್‌ಪೆಕ್ಟರ್ ಶ್ರೀ ಬಿ. ಆರ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಮೂಲ್ಕಿ—ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ತಾ. 14ರಲ್ಲಿ ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯ ಜನ್ಮದಿನಾಚರಣೆಯು ಶ್ರೀ ಕೆ. ಸದಾನಂದ ರಾಜರವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು.

ಧರ್ಮಸ್ಥಳ:—ಅಕ್ಟೋಬರ 15ರಿಂದ 30ರ ತನಕ ಡಾ। ಎಮ್. ಸಿ. ಮೋದಿಯವರು ಕುರುಡರಿಗೆ ಕಣ್ಣಿನ ಚಿಕಿತ್ಸೆಮಾಡುವರೆ ಶ್ರೀ ಧರ್ಮಸ್ಥಳದಲ್ಲಿ ಶ್ರೀಮಾನ್ ಮಂಜಯ್ಯ ಹೆಗಡೆಯವರ ಆಶ್ರಯದಲ್ಲಿ ಮೊಕ್ಕಾಂ ಮಾಡುವರು, ಇವರು ಕಣ್ಣಿನಪರೆ, ದೃಷ್ಟಿ ದೋಷ, ಕೋಸುಕಣ್ಣು ಮೊದಲಾದ ರೋಗಗಳನ್ನು ಶಸ್ತ್ರ ಪ್ರಯೋಗವೇ ಮೊದಲಾದ ವಿಧಾನಗಳಿಂದ ಗುಣಪಡಿಸುವವರಿದ್ದಾರೆ. ಇವರು ಅಮೇರಿಕಾ ಮೊದಲಾದ ಪರದೇಶಗಳಲ್ಲಿ ಕಲಿತುಬಂದ ಪ್ರಸಿದ್ಧ ಡಾಕ್ಟರರು. ಬೊಂಬಾಯಿ ಪ್ರಾಂತ್ಯಗಳಲ್ಲಿ ಸಾವಿರಾರು ಕಣ್ಣುರೋಗಿಗಳನ್ನು ಗುಣಪಡಿಸಿದ್ದಾರೆ. ಮದ್ರಾಸು ಪ್ರಾಂತ್ಯದಲ್ಲಿ ಇದೇ ಅವರ ಮೊದಲಿನ ಪ್ರಯೋಗ. ರೋಗಿಗಳಿಗೆ ಆಹಾರ ಮೊದಲಾದ ಉಪಚಾರವು ಶ್ರೀ ಹೆಗಡೆಯವರಿಂದ ಸಿಕ್ಕುವದು. ರೋಗಿಗಳಿಗೆ ಬೇಕಾದ ಬಟ್ಟಲು, ತಂಬಿಗೆ, ಬೆಡ್ಡಿಂಗ್ ವಗೈರೆ ರೋಗಿಗಳೇ ತರುವದು ಉತ್ತಮ. ದಿಕ್ಕಿಲ್ಲದ ಬಡ ಅನಾಥ ರೋಗಿಗಳ ಬಸ್ ಚಾರ್ಜನ್ನು ಅವರ ಊರಿನ ವಕೀಲರ ಅಥವಾ ಗಣ್ಯ ಮನುಷ್ಯರ ಶಿಫಾರಸು ಪತ್ರ ಹಾಜರುಪಡಿಸುವಲ್ಲಿ ಶ್ರೀ ಹೆಗಡೆಯವರೇ ಕೊಡುವರು. ಅಪೇಕ್ಷೆ ಇರುವ ರೋಗಿಗಳು ಅಕ್ಟೋಬರ ತಾ. 13ರಲ್ಲು ಧರ್ಮಸ್ಥಳಕ್ಕೆ ಬರಬೇಕಾಗುವದು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No 331/1951

...ಜುನಾಥ ಸೋಮಯಾಜಿ —ವಾದಿ

ಮತ್ತು

...ಜ ಶೆಟ್ಟಿ —ಪ್ರತಿವಾದಿ

ಇವರೊಳಗೆ

...ರ್ಕಳ ತಾಲ್ಲೂಕು ಶಿವಪುರ ಗ್ರಾಮದಲ್ಲಿ ...ರಾಮಣ್ಣ ಸೂಡರ ಅಳಿಯ ಬೋಜ... ...ಗೆ ತಿಳಿಸುವುದೇನಂದ್ರೆ.

...ಈ ವಾದಿವಳಗೆ ಚಾಲಗೇಣಿ ಹಕ್ಕಿನಿಂ... ...ಭವಿಸಿ ಬರುವ ಆಸ್ತಿಯ ಸ್ವಾಧೀನ... ...ಗೇಣಿ ಬಾಕಿ ವಗೈರೆ ಭಿವೃತ್ತಿಕೇಳಿ ವಾ... ...ನಿಮ್ಮಮೇಲೆ ಸೋಲಿನ ಕೋರ್ಟಿನ... ...ಮಾಡಿದ ಮೇಲಿನ ದಾವೆಯು ತಾರೀಕು 29-9-1951ಕ್ಕೆ ತನ್ನಿಗೆ ಇಡೋಣಾಗಿಯದೆ. ...ದಾವೆಯಲ್ಲಿ ನಿಮಗೇನಾದರೂ ಉದಾ... ...ಲಿಕ್ಕಿದ್ದರೆ ನೀವು ಸದ್ರಿ ತಾರೀಕು 29-9-1951ನೇ ದಿವಸ ಪೂರ್ವಾಹ್ನ ಘಂಟೆ 10 ...ತಹಾ ಅಥವಾ ವಕೀಲರ ಮುಖಾಂತ್ರ... ...ರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕ... ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ...ದಾವೆಯು ತೀರ್ಮಾನಿಸಲಾಗುವುದು

ಬೈಲೂರು ವಾಸುದೇವರಾವ್.
ವಾದಿಕಡೆ ಎಡ್ವಕೇಟ್.

...ರ್ಕಳ, 20-9-1951.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ · 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ವಿಷಯ.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಿಟ್ಟು ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

The most powerful medicine for ASTHMA
(Registered and Genuine)
CHITRAKOT
ASTHMA SPECIFIC.
Hundred years fame to cure the dreaded disease permanently only by one dose to be taken on Sharad-purnima (full moon) dated 14-10-51.
Apply at once in English
Kr Badri Nath Singh,
SHUBH CHINTAK KARYALAYA,
CHITRAKOT, Distt. Banda,
U. P.



"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ, ಉತ್ಕೃಷ್ಟ ತರಗತಿಯ ಯಂತ್ರ.
ಬೆಲೆ ರೂ. 465
ನಿಮ್ಮ ಬಂದರ ಡಿಲೆವರಿ.

The Vijay Engineering Co. Ltd.,
BOMBAY-10.

For energetic and active living,
for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart

ಬಂದಿರುವ ರಾಷ್ಟ್ರದ ನೂತನ ಘಟನೆ

ಮೂಲಭೂತ ಹಕ್ಕುಗಳು

[ಕಳೆದ ಸಂಚಿಕೆಯಿಂದ ಮುಂದರಿದುದು]

ತ್ತು ಹಿಂದೂಸ್ಥಾನದ ಪ್ರಾಂತ್ಯದೊಳಗಣ ಮತ್ತು ಹಿಂದೂಸ್ಥಾನದ ಸರಕಾರದ ಹಿಡಿತಕ್ಕೆ ಒಳಪಟ್ಟ ಸ್ಥಳೀಯ ಅಥವಾ ಇತರ ಅಧಿಕಾರಿಗಳನ್ನು ಒಳಪಟ್ಟು ಅಥವಾ ಅವಲಂಬಿಸಿಕೊಂಡಿರುತ್ತದೆ.

13 ಈ ಮೂಲಭೂತ ಹಕ್ಕುಗಳಿಗೆ ವಿರೋಧಹೋಗುವ ಕಾನೂನುಗಳು. (1) ಹಿಂದೂಸ್ಥಾನದಲ್ಲಿ ಈ ಘಟನೆಯು ಜ್ಯಾರಿಗೆ ಬರುವ ಮೊದಲು ಇದ್ದ ಯಾವುದೇ ಪ್ರಕರಣಕ್ಕೆ ವಿರೋಧವಿದ್ದಲ್ಲಿ ಅಂತಹ ಕಾನೂನು ಅಷ್ಟರ ಮಟ್ಟಿಗೆ ಅಸಿಂಧುವಾಗಿರುತ್ತದೆ.

(2) 'ಸ್ಟೇಟು' ಈ ಭಾಗವು ಕೊಡುವ ಹಕ್ಕುಗಳನ್ನು ತೆಗೆಯುವ ಅಥವಾ ಕಿರಿದು ಮಾಡುವ ಯಾವುದೇ ಕಾನೂನನ್ನೂ ಮಾಡಬಾರದು. ಹಾಗೆ ಈ ಶರ್ತಕ್ಕೆ ವಿರೋಧವಾಗಿ ಮಾಡಬಹುದಾದ ಯಾವುದೇ ಕಾನೂನು ಹಾಗೆ ವಿರೋಧಹೋಗುವ ಮಟ್ಟಿಗೆ ಅಸಿಂಧುವಾಗಿರತಕ್ಕದ್ದು.

(3) ಈ 'ಆರ್ಟಿಕಲ್' ಅಥವಾ ನಿಬಂಧನೆಯಲ್ಲಿ ಸಂದರ್ಭಾನುಸಾರವು ಬೇರೆ ಅರ್ಥವನ್ನು ಉದ್ದೇಶಿಸದಿದ್ದಲ್ಲಿ.

(a) 'ಲಾ' ಅಥವಾ ಕಾನೂನು ಎಂಬುದು, ಯಾವುದೇ ಓರ್ಡಿನೆನ್ಸ್ (ವಿಪರೀತ ಕಾಯಿದೆ), Order (ಹುಕುಂ), Bye-law (ಒಳನಿಬಂಧನ), Rule (ಸೂತ್ರ), Regulation(ನಿಯಮದಿಂದ ನಡೆಸುವಿಕೆ) notification (ಪ್ರಕಟಣೆ) ಹಿಂದೂಸ್ಥಾನದಲ್ಲಿ ಕಾನೂನಿನ ಬೆಲೆಯುಳ್ಳ Custom or usage (ಪದ್ಧತಿ ಯಾ ಕಟ್ಟಳೆ) ಗಳನ್ನು ಅವಲಂಬಿರುವುದು.

b) "ಜ್ಯಾರಿಯಲ್ಲಿರುವ ಕಾನೂನು"(Law in force) ಎಂಬುದು ಈ ಘಟನೆಯು ಜ್ಯಾರಿಗೆ ಬರುವ ಮೊದಲು ಇದ್ದು ಈ ಮೊದಲು ರದ್ದು ಮಾಡದಿದ್ದ ಈ ಮೊದಲಿನ ಶಾಸನ ಸಭೆಗಳು ಯಾ ಇನ್ನಾವ ಸಮರ್ಥ ಅಧಿಕಾರಿಗಳು ಮಾಡಿದ್ದ ಕಾನೂನುಗಳನ್ನು ಅವಲಂಬಿಸಿಕೊಂಡಿರುವುದು. ಅಂತಹ ಕಾನೂನು ಈ ಘಟನೆ ಜ್ಯಾರಿಗೆ ಬರುವ ವೇಳೆ ಅಥವಾ ಅದರ ಯಾವುದೇ ಅಂಶವು ಯಾವುದೇ ಭಾಗದಲ್ಲಿ ಜ್ಯಾರಿಗೆ ಬಾರದಿದ್ದರೂ ಅದು ಜ್ಯಾರಿಯಲ್ಲಿರುವ ಕಾನೂನು ಎನ್ನಿಸಿಕೊಳ್ಳುತ್ತದೆ.

ಸಮಾನತ್ವ ಹಕ್ಕುಗಳು

14 ಕಾನೂನಿನ ನೇತೃತ್ವದಲ್ಲಿಯ ಸಮಾನತೆ:— ಹಿಂದೂಸ್ಥಾನದ ಯಾವುದೇ ಪ್ರಾಂತ್ಯದಲ್ಲಿ "ಸ್ಟೇಟು" ಯಾವುದೇ ವ್ಯಕ್ತಿಗೂ ಕಾನೂನಿನ ದೃಷ್ಟಿಯಲ್ಲಿ ಸಮಾನತೆಯನ್ನು ತೋರಿಸದಿರಬಾರದು ಅಂತೆಯೇ ಕಾನೂನಿನ ಸರೀತಿಯ ಸಂರಕ್ಷಣೆಯನ್ನು ನೀಡದಿರಬಾರದು.

15 ಮತ, ವಂಶ, ಜಾತಿ, ಸ್ತ್ರೀ ಅಥವಾ ಪುರುಷ ಅಥವಾ ಜನ್ಮಸ್ಥಾನದಿಂದ, ಯಾವುದೇ ತಾರತಮ್ಯವನ್ನು ತೋರಿಸದಂತೆ ತಡೆ:—1) ಸ್ಟೇಟು ಯಾವುದೇ ಪೌರನಲ್ಲಿ ಮತ, ವಂಶ, ಜಾತಿ, ಸ್ತ್ರೀ ಪುರುಷಲಿಂಗ, ಅಥವಾ ಜನ್ಮಸ್ಥಾನದ ನೆಲೆಯಿಂದ ಅಥವಾ ಇವುಗಳಲ್ಲಿ ಯಾವುದೇ ಒಂದರ ಕಾರಣದಿಂದಲೂ ಭೇದವನ್ನು ತೋರಿಸಕೂಡದು.

2) ಯಾವನೊಬ್ಬ ಪೌರನೂ ಮತ, ವಂಶ, ಜಾತಿ, ಸ್ತ್ರೀ ಅಥವಾ ಪುರುಷ ಅಥವಾ ಜನ್ಮಸ್ಥಾನ ಅಥವಾ ಇವುಗಳ ಪೈಕಿ ಯಾವುದೊಂದರ ನೆಲೆಯಿಂದಲೂ ಈ ಕೆಳಗಣ ವಿಷಯದಲ್ಲಿ ಯಾವುದೊಂದು ಕುಂದು ಕೊರತೆ, ಬಾಧ್ಯತೆ, ನಿರ್ಬಂಧನೆ ಅಥವಾ ಶರ್ತಗಳಿಗೂ ಒಳಪಡಬಾರದು.

a) ಅಂಗಡಿಗಳಿಗೆ,ಸಾರ್ವಜನಿಕ ಉಪಹಾರಗೃಹ, ಹೋಟೆಲು, ಮತ್ತು ಸಾರ್ವಜನಿಕ ಸಂತೋಷಾಕರ ಸ್ಥಳಗಳೂ ಪ್ರವೇಶ ಅಥವಾ

b) ಬಾವಿ, ಕೆರೆ, ಸ್ನಾನದ ಸ್ಥಳಗಳು, ರಸ್ತೆಗಳು, ಅಥವಾ ಸ್ಟೇಟ್ ಹಣದಿಂದ ಪೂರ್ಣವಾಗಿ ಅಥವಾ ಕೆಲಮಟ್ಟಿಗೆ ನಿರ್ಮಿತ ಅಥವಾ ಸಾರ್ವಜನಿಕರಿಗೆ ಅರ್ಪಿಸಿದ ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸುವುದು.

3) ಆದರೆ ಈ ಆರ್ಟಿಕಲ್ (ನಿಬಂಧನೆ)ನಲ್ಲಿ ಹೇಳಿದ ಯಾವುದೊಂದೂ, ಹೆಂಗಸು ಮತ್ತು ಮಕ್ಕಳ ಮಟ್ಟಿಗೆ ಪ್ರತ್ಯೇಕ ವಿಧಿಯನ್ನು ಸ್ಟೇಟಿಗೆ ಮಾಡುವರೆ ಅಂತರಾಯವನ್ನೊಡ್ಡ ಕೂಡದು.

(ಬರುವ ಸಂಚಿಕೆ ನೋಡಿರಿ)

IIIನೇ ಭಾಗ.

ಸಾರ್ವತ್ರಿಕವಾಗಿ ಅನ್ವಯಿಸುವ ಅಂಶ.

[ಇದು ಘಟನೆಯ ಪ್ರಾಮುಖ್ಯವಾದ ಒಂದು ಭಾಗ. ಘಟನೆಯು ಇದರಲ್ಲಿ ಹೇಳುವ ಹಕ್ಕುಗಳನ್ನು ಕಾದಿಟ್ಟಿರುವುದರಿಂದ, ಪಾರ್ಲಿಮೆಂಟು ಅಥವಾ ಇತರ ಯಾವದೇ ಶಾಸನಸಭೆಗಳಿಗೂ ಇವನ್ನು ಮೀರಿಟ್ಟ ಕಾನೂನು ಮಾಡುವರೇ ಅಧಿಕಾರವಿರುವುದಿಲ್ಲ. ಹಾಗೆ ಇವನ್ನು ಮೀರಿ ಅಥವಾ ಇದಕ್ಕೆ ವಿರೋಧವಾಗಿ-ಕಾನೂನುಗಳನ್ನು ಮಾಡಿದ್ದಲ್ಲಿ ಅವು ಸಿಂಧುವಾಗತಕ್ಕದ್ದಲ್ಲ. ಅಂತೆಯೇ ಇವಕ್ಕೆ ವಿರೋಧವಾಗಿ ಇರತಕ್ಕ ಯಾವುದೇ ಕಾನೂನೂ ಸಿಂಧುವಾಗತಕ್ಕದ್ದಲ್ಲ]

12 ವಿವರಣೆ:—ಈ ಭಾಗದಲ್ಲಿ ಸಂದರ್ಭಾನುಸಾರ ಬೇರೆ ಅರ್ಥ ಅಗತ್ಯಬೀಳದಲ್ಲಿ 'ಸ್ಟೇಟ್' ಎಂಬುದು ಹಿಂದೂಸ್ಥಾನದ ಸರಕಾರ, ಮತ್ತು ಪಾರ್ಲಿಮೆಂಟು, ಪ್ರತಿ ಒಂದು ಸ್ಟೇಟಿನ ಶಾಸನ ಸಭೆ ಮತ್ತು ಸರಕಾರ, ಮ

[೩ನೇ ಪುಟದಿಂದ ಮುಂದರಿಸಿದ್ದು]

ದರೂ ಅಷ್ಟು ಇಲ್ಲವೆಂದು ಭಾವಿಸಿದ್ದರೆ, ಪಕ್ಷಗಳು ಪ್ರಬಲವಾಗಬೇಕಾದರೆ ಹಣ ಸಂಗ್ರಹ ಬೇಕು. ಧನಿಕರು ಹಣಸಹಾಯ ಮಾಡಿ ಪಕ್ಷಗಳನ್ನು ತಮ್ಮ ಅಂಕೆಯೊಳಗಿರಿಸಿಕೊಳ್ಳುವವು. ಶ್ರೀಮಂತರ ಬಲೆಗೆ ಸಿಕ್ಕಿದ ಪಕ್ಷಗಳು ತಮ್ಮ ಆತ್ಮಸನ್ಮಾನವನ್ನು ಹರಣಮಾಡಿಕೊಂಡಂತೆಯೇ ಸರಿ

ಪಕ್ಷಗಳಲ್ಲಿ ಕೆಲವು ನ್ಯೂನತೆಗಳಿದ್ದರೆ ಹಲವು ಒಳ್ಳೆ ಪದ್ಧತಿಗಳೂ ಇವೆ. ಪ್ರಜಾಮತ ಸರಕಾರವನ್ನು ಪಕ್ಷಗಳಿಲ್ಲದೆ ನಡೆಸುವುದೇ ಕಷ್ಟ. ರಾಜನೀತಿ ನಿಪುಣರಾದ ಪೀಲ್, ಡಿಸ್ರೇಲಿ, ಗ್ಲ್ಯಾಡಸ್ಟನ್ ಇವುಗಳ ದೋಷಗಳನ್ನು ಅರಿತಿರುವರಾದರೂ ಅಗತ್ಯವೆಂತ ಮನಗಂಡಿರುವರು. ಪಕ್ಷಗಳು ಗೊಂದಲವಿರುವಲ್ಲಿ ನೆಮ್ಮದಿ ತರುವವು. ಗಲಿಬಿಲಿ ಇರುವಲ್ಲಿ ಕ್ರಮ ತರುವವು. ಅಮೇರಿಕ. ಫ್ರಾನ್ಸ್, ಇಂಡಿಯಾ ಮತ್ತು ಇಂಗ್ಲಾಂಡು ಇಂಥ ದೊಡ್ಡ ದೇಶಗಳಲ್ಲಿ ಜನಮತವನ್ನು ಎಬ್ಬಿಸುವರೆ, ಪ್ರೋತ್ಸಾಹಿಸುವರೆ, ತಿಳುವಳಿಕೆ ಅಥವಾ ವಿಚಾರಶಕ್ತಿ ಕೊಡುವರೆ ಪಕ್ಷಗಳು ಅಗತ್ಯ. ಪ್ರತಿ ಪಕ್ಷವೂ ತಮ್ಮ ತಮ್ಮ ಜಂಭ ಕೊಚ್ಚಿಕೊಳ್ಳುವಾಗ ವಿಚಾರಗಳ ಎಲ್ಲಾ ವಿಷಯಗಳೂ ಜನರಿಗೆ ಮಂದಟ್ಟಾಗುತ್ತವೆ. ಒಂದು ಕಡೆಯವರು ವಾದಿಸುವಾಗ ಇನ್ನೊಂದು ಕಡೆಯವರ ತಪ್ಪುಗಳನ್ನು ಎತ್ತಿಹೇಳಿ ಖಂಡಿಸಬೇಕಾಗುತ್ತದೆ. ರಾಜಕೀಯ ವಿಚಾರದಲ್ಲಿ ಆಸಕ್ತಿ ತೋರಿಸುವವರಿಗೂ ಸಹಾ ಇದರಿಂದ ಅನುಭವ ದೊರೆಯುತ್ತಾ ಹೋಗುತ್ತದೆ, ಜಲವಿ ಬಾಗಿಲಿನಲ್ಲಿ ತೆರೆಗಳ ಏರುಇಳಿತಗಳಿಂದ ನೀರು ಸ್ವಚ್ಛವಾಗುವಂತೆ ರಾಜ್ಯವನ್ನು ಪಕ್ಷಗಳು ಜೀವಂತವಾಗಿರುವವು. ಪಕ್ಷಗಳು ಗುರುತು ಹಿಡಿಯುವ ದೀಪದಂತಿರುವವು. (Searchlight) ಪಕ್ಷಗಳಿಲ್ಲದಿರುವಲ್ಲಿ ಜನಮತವು ಮುಸುಕಿನೊಳಗಿದ್ದು ಅಪ್ರಯೋಜನವಾಗುವವು. ಪಕ್ಷಗಳಿಲ್ಲದಿರುವಲ್ಲಿ ಪತ್ರಿಕೆಗಳ ಹೇಳಿಕೆಯೇ ದೇವವಾಕ್ಯವಾಗಿ ಜನರಿಗೆ ಕಾಣುವದು. ಪಕ್ಷಗಳಿಲ್ಲದಿರುವಲ್ಲಿ ನ್ಯಾಯಸಭೆಯಲ್ಲಿ ಯಾರಾದ್ಯಾರು ತಮ್ಮನ್ನು ಹಿಂಬಾಲಿಸುವರೆಂದು ತಿಳಿಯದೆ ಶಕ್ತಿಹೀನವಾಗುವದು. ಯಾಕೆಂದರೆ ಪ್ರತಿ ಸದಸ್ಯನೂ ತನಗೆ ತೋರಿದಂತೆ ಅವನ ಚಿಕ್ಕ ಅನುಭವದಂತೆ ಮತ ಕೊಡುವನು.

ಬರುವ ಸಂಚಿಕೆ ನೋಡಿರಿ

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ.

The Karnataka Bank, Ltd., Udipi

NOTICE

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ:-

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದಿದ್ದುದರಿಂದ ಸದ್ರಿಯವರಿಗೆ ಕ್ರಮದಂತೆ ರಿಜಿಸ್ಟ್ರ ನೋಟೀಸುಗಳನ್ನು ಕೊಟ್ಟಾಗ್ಯೂ, ಕೆಲವು ಜ್ಯಾರಿಯಾಗದೆಯೂ, ಕೆಲವರು ಸ್ವೀಕರಿಸದೆಯೂ ವಾಪಾಸು ಬಂದು, ಬೇಂಕಿಗೆ ಬರತಕ್ಕ ಆವೇಜು ಪಾವತಿ ಮಾಡದಿದ್ದುದರಿಂದ, ಬೇಂಕಿಗೆ ಬರತಕ್ಕ ಅಸಲು ಬಡ್ಡಿ, ಆವೇಜು ಮತ್ತು ಚಾರ್ಜ ವಗೈರೆಯನ್ನು ಇದೇ ಬರುವ ತಾ॥ 5-10-1951ನೇ ಶುಕ್ರವಾರ ಬೇಂಕಿಗೆ ಪಾವತಿ ಮಾಡಿ ಈಡಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗತಕ್ಕದ್ದು. ಮೃತರಾಗಿದ್ದಲ್ಲಿ ಮೃತರ ವಾರೀಸುದಾರರು ವಾರಿಸು ಸರ್ಟಿಫಿಕೇಟನ್ನು ಹಾಜರುಪಡಿಸಿ ಬೇಂಕಿಗೆ ಬರತಕ್ಕ ಐವೇಜನ್ನು ಪಾವತಿಮಾಡಿ ಈಡಿಟ್ಟ ನಗವನು ಬಿಡಿಸಿಕೊಂಡು ಹೋಗತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಆಭರಣಗಳನ್ನು ತಾ॥ 17-10-1951ನೇ ಬುಧವಾರ ಮಧ್ಯಾಹ್ನ ಗಂಟೆ 1ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಗತ್ಯಪಟ್ಟಲ್ಲಿ ಏಲಂ ಮಾಡುವ ತಾರೀಕನ್ನು ಪುನಃ ನೋಟೀಸು ಕೊಡದೇನೇ ಮುಂದರಿಸಿ ಸದ್ರಿ ಆಭರಣಗಳನ್ನು ಏಲಂ ಮಾಡಲಾಗುವುದು ತಿಳಿದಿರುವುದು.

ಲೋನಿನ ನಂಬ್ರ	ಆಸಾಮಿಗಳ ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
641/48	ಅಣ್ಣಯ್ಯ ಶೆಟ್ಟಿ-ಮಂಜುನಾಥ ಶೆಟ್ಟಿಯ ಮಗ-ಚಿತ್ತರಂಜನ ಬಿಲ್ಡಿಂಗ್ ಬಳಿ ವಾಸಿಸುವವ ಪಡುಪೇಟೆ-ಉಡುಪಿ.	ಅಸಲು ರೂಪಾಯಿ 42/- ಮತ್ತು ಇದರ ಮೇಲಣ ತಾ 25-7-50ರಿಂದ 8% ಯಲ್ಲಿ ವಸೂಲು ವರೆಗಿನ ಬಡ್ಡಿ-
639/49	—Do—	ಅಸಲು ರೂಪಾಯಿ 25/- ಮತ್ತು ಇದರ ಮೇಲಣ ತಾ. 28-2-51ರಿಂದ 9% ಯಲ್ಲಿ ವಸೂಲು ವರೇಗಿನ ಬಡ್ಡಿ,
650/49	—Do—	ಅಸಲು ರೂಪಾಯಿ 100/- ಮತ್ತು ಇದರ ಮೇಲಣ ತಾ. 7-12-49ರಿಂದ 9% ಯಲ್ಲಿ ವಸೂಲು ವರೆಗಿನ ಬಡ್ಡಿ-
5/50	ಅನಂತಯ್ಯ ಶೇಟ್-ರಾಘವ ಶೇಟರ ಮಗ ಕೊಳದ ಪೇಟೆ-ಉಡುಪಿ.	ಅಸಲು ರೂಪಾಯಿ 46-0-0 ಮತ್ತು ಇದರ ಮೇಲಣ ತಾ. 1-1 50ರಿಂದ 9% ಯಲ್ಲಿ ವಸೂಲುವರೆಗಿನ ಬಡ್ಡಿ-
75/50	N. ಶಾಂತಿ ರಾಜಯ್ಯ-ಗುಮ್ಮಣ್ಣಯ್ಯನ ಅಳಿಯ-ಪೋಸ್ಟು ಕೊಕ್ಕರ್ಣೆ ದ. ಕ.	ಅಸಲು ರೂಪಾಯಿ 175- ಮತ್ತು ಇದರ ಮೇಲಣ ತಾ. 11-2-50ರಿಂದ 8% ಯಲ್ಲಿ ವಸೂಲುವರೆಗಿನ ಬಡ್ಡಿ-
133/50	ವಿ ಶೀನ ಶೆಟ್ಟಿ- ನಂದ್ಯಪ್ಪಶೆಟ್ಟಿ ಮಗ ಟೈಲರ್-ಶರ್ಕಳ ಮಣಿಪಾಲ ಪೋಸ್ಟು-ದ. ಕ.	ಅಸಲು ರೂಪಾಯಿ 325- ಮತ್ತು ಇದರ ಮೇಲಣ ತಾ. 20-3-50ರಿಂದ 7% ಯಲ್ಲಿ ವಸೂಲುವರೆಗಿನ ಬಡ್ಡಿ-
255/50	—Do—	ಅಸಲು ರೂಪಾಯಿ 65/- ಮತ್ತು ಇದರ ಮೇಲಣ ತಾ. 25-5-50ರಿಂದ ವಸೂಲು ವರೇಗೆ 9% ಯಲ್ಲಿ ಬಡ್ಡಿ-
256/50	—Do—	ಅಸಲು ರೂಪಾಯಿ 80/- ಮತ್ತು ಇದರ ಮೇಲಣ ತಾ 25-5-50ರಿಂದ 9% ಯಲ್ಲಿ ವಸೂಲು ವರೆಗಿನ ಬಡ್ಡಿ-
263/50	ಕಿಟ್ಟಿಯಾಚಾರಿ – ಸುಬ್ರಾಯಾಚಾರಿ ಮಗ-ಹಾವಂಜೆ- ಕೊಳಲಗಿರಿ- ಪೋಸ್ಟು, ದ. ಕ.	ಅಸಲು ರೂಪಾಯಿ 40 ಇದರ ಮೇಲಣ ತಾ. 31-5-50ರಿಂದ ವಸೂಲು ವರೇಗೆ 9% ಯಲ್ಲಿ ಬಡ್ಡಿ-
456/50	N. ಶಾಂತಿರಾಜಯ್ಯ-S. A ಗುಮ್ಮಣ್ಣಯ್ಯನವರ ಅಳಿಯ – ಕೊಕ್ಕರ್ಣೆ-ಪೋಸ್ಟು–ಕೊಕ್ಕರ್ಣೆ–ದ. ಕ.	ಅಸಲು ರೂಪಾಯಿ 175/- ಮತ್ತು ಇದರ ಮೇಲಣ ತಾ. 30-8-50ರಿಂದ ವಸೂಲು ವರೆಗೆ 8% ಯಲ್ಲಿ ಬಡ್ಡಿ.
638/50	ಅನಂತಯ್ಯ ಶೇಟ್ ರಾಘವ ಶೇಟರ ಮಗ-ಕೊಳದಪೇಟೆ. ಉಡುಪಿ,ದ. ಕ.	ಅಸಲು ರೂಪಾಯಿ 220/- ಮತ್ತು ಇದರ ಮೇಲಣ ತಾ. 11-12-50ರಿಂದ 8% ಸಲೆಯಲ್ಲಿ ವಸೂಲುವರೆಗೆ ಬಡ್ಡಿ.

ಆಫೀಸು.—
ದಿ ಕರ್ನಾಟಕ ಬೇಂಕ್ ಲಿಮಿಟೆಡ್,
ತೆಂಕಪೇಟೆ, ಉಡುಪಿ, ದ.ಕ. 21-9-51

(Sd) **P. Madhava Rao,**
AGENT.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 145/19..

ಅಬ್ದುಲ್ಲ ಬ್ಯಾರಿ-ಅಬ್ದುಲ್ಲ ರಹಿಮಾನ ಬ್ಯಾರಿ ಮಗ ಕೋಡಿಬೈಲುಗ್ರಾಮದಲ್ಲಿರುವ ವಾದಿ

ಮತ್ತು

1. ಪಾತುಂಮಾಬಿ- ಸಾಬಜಾನ್ ಸಾಹೇಬರ ವಿಧವೆ, 2. ಸೇಶುಫಬಿ, 3 ಅಪ್ಪಾ.. 4. ತದಿಜಾಬಿ, 5ಸೇಕ್ ಸ್ಸನ್, 6. ಅ.. ರಾಬಿ, 7.ಅಲೀಮಾಬಿ, 8 ಸೇಕ್ ಇಸ್ಮಾ.. ಸದ್ರಿ ಸಾಬಜಾನ್ ಸಾಹೇಬರ ಮಕ್ಕಳ ಪೈಕಿ 5ರಿಂದ 8ನೇ ವರೇಗಿನ ಪ್ರತಿವಾದಿಗಳು ಮೈನರರು ಇವರ ಗಾರ್ಡಿಯನ್ ಇವರ ತಾಯಿ 1ನೇ ಪ್ರತಿವಾದಿ ಪಾತುಮಾಬಿ ಇವರೆಲ್ಲರೂ ಉಪ್ಪಳ ಗ್ರಾಮದಲ್ಲಿರುವವರು...ಪ್ರತಿವಾದಿಯು.

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿರು ಪಾತುಮಾಬಿ ವಗೈರೆಗೆ ಈ ಮೂಲಕ ತಿಳಿಸುವದೇನಂದರೆ.

1ನೇ ಪ್ರತಿವಾದಿಯ ಮಗ, 2ರಿಂದ 8ನೇ ವರೇಗಿನ ಪ್ರತಿವಾದಿರ ಅಂಣ, ಮೃತನಾದ ಅಬ್ದುಲ್ಲ ಸಾಹೇಬನು ವಾದಿಗೆ ತಾರೀಖು 16-5-51ರಲ್ಲು ರುಪಾಯಿ 125-0 0ಕ್ಕೆ ಬರಕೊಟ್ಟ ಡಿ. ಪ್ರೋ. ನೋಟು ಪ್ರಕಾರ ಬರುವ ಅಸಲು ಬಡ್ಡಿಯನ್ನು ಕೋರ್ಟ್ ಚಾರ್ಜ ಸಮೇತ ವಸೂಲು ಮಾಡಿ ಕೊಳ್ಳುವ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 1 10-1951ಕ್ಕೆ ಅಖೇರು ತನಿಖೆಗೆ ಇಟ್ಟಿರುತ್ತದೆ. ನೀವು ಸದ್ರಿ ವ್ಯಾದೇಗೆ ಹಾಜರಾಗದಿದ್ದರೆ ವ್ಯಾಜ್ಯವು ಎಕ್ಸಪಾರ್ಟಿಯಾಗಿ ತೀರ್ಮಾನವಾದೀತು

(Sd.) **S. Lakshman Rao**
Vakil.
ಕಾಸರಗೋಡು, ತಾ॥ 21-9-51.

ಪ್ರವಾಸಿಯ ಪತ್ರಗಳು ೧೩

ಪ್ರಿವಿಕೌನ್ಸಿಲ್

ಕಳೆದ ಪತ್ರದಲ್ಲಿ ಫೋರ್ಡ್ ಕಾರ್ಖಾನೆಯನ್ನು ಸಂದರ್ಶಿಸಿದ ವಿಷಯ ಬರೆದಿರುವೆನು. ಅಲ್ಲಿಂದ ಲಂಡನ್ನಿಗೆ ಹಿಂದಿರುಗಿ ಬಂದೊಡನೆ ಸದಾ ಪ್ರಿವಿಕೌನ್ಸಿಲ್ ಎಂಬ ಕೋರ್ಟಿಗೆ ಹೋದು ಅದರ ಕೆಲಸವನ್ನು ಸಂದರ್ಶಿಸಿದೆನು. ಅಲ್ಲಿಗೆ 2 ಸಾರಿ ಹೋಗಿದ್ದೆ. ಈ ಮುಂಚೆ ವಾಚಕರಿಗೆ ಲಂಡನಿನ ಹೈಕೋರ್ಟು ಏಷ ತಿಳಿಸಿದ್ದೆ. ಇದು ಅದಕ್ಕಿಂತಲೂ ಮೇಲಿನ ಸಂಸ್ಥೆ. ಹೈಕೋರ್ಟಿನಲ್ಲಿ ನಡೆಯುವ ದೊಡ್ಡ ವ್ಯಾಜ್ಯಗಳ ತೀರ್ಪುಗಳ ಮೇಲೆ ಅಪೀಲು, ಲಾರ್ಡ್ಸ್ ಸಭೆಗೆ (House of Lords). ಆ ಸಭೆಯ ವಿಷಯ ಮುಂಚೆ ನಾನು ಬರೆದಿದ್ದು ನ್ಯಾಯ ಸಭೆಯಾಗಿ- ಕೋರ್ಟಾಗಿ ಅ[illegible]. ಅದು ಬೆಳಗಿನ ಸಮಯ ಕೆಲವೇ ಸದಸ್ಯರಿದ್ದು ಕೋರ್ಟಾಗಿ ಕೂತುಕೊಳ್ಳುವುದು. ಆದರೆ ಇದು ಬ್ರಿಟನ್ ದೇಶಕ್ಕೆ ಮಾತ್ರ ಸಂಬಂಧಿಸಿದ್ದು. ಅದರ ಹೊರಗಿನ ದೊಡ್ಡ ನಂಬ್ರಗಳು ಅಂದರೆ ಕೆನಡಾ, ಸೌತ್ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಎ ಡು ವರ್ಷಗಳ ಮುಂಚೆ ಇಂಡ್ಯಾ ದೇಶದಿಂದ ಕೂಡಾ ನಂಬ್ರಗಳು ಪ್ರಿವಿಕೌನ್ಸಿಲ್‌ಗೇ ಬಾರದು ಅಲ್ಲಿಯೇ ತೀರ್ಮಾನಿಸುವುದು. ಈ ಅಪೀಲುಗಳನ್ನು ಬ್ರಿಟನ್ನಿನ ರಾಜನಿಗೆಂತ ಮಾಡುವುದಾದರೂ ಅವರು ಅವುಗಳನ್ನು ಸ್ವತಃ ತೀರ್ಮಾನಿಸದೆ ಅವರ ಅವರ ಮಂತ್ರಿಗಳಾದ ಈ ಕೌನ್ಸಿಲಿನವರಿಗೆ ಕೊಡುತ್ತು ಅವರು ಕೊಡುವ ತೀರ್ಮಾನವೇ ರಾಜರ ತೀರ್ಪಾಗಿರುತ್ತದೆ.

ಹೀಗೆ ಇರುವ ಈ ಪ್ರಿವಿಕೌನ್ಸಿಲು ಇರುವ ಸ್ಥಳವು ಡೌನಿಂಗ್ ಸ್ಟ್ರೀಟ್ ಎಂಬ ಒಂದು ರಸ್ತೆಯಲ್ಲಿ. ಆ ರಸ್ತೆಯು ಪಾರ್ಲಿಮೆಂಟು ಕಟ್ಟೋಣದ ಸಮೀಪವಿರುತ್ತದೆ. ಈ ರಸ್ತೆಯು ಬಹು ಪ್ರಸಿದ್ಧವಾದದ್ದು. ಯಾಕಂದರೆ ಮುಂಚಿನಿಂದಲೂ ಬ್ರಿಟಿಷ್ ದೇಶದ ಮುಖ್ಯ ಮಂತ್ರಿಯು ಇಲ್ಲಿಯೇ ವಾಸ್ತವಿಸುವುದು. ಈ ರಸ್ತೆಯಲ್ಲಿರುವ ಹತ್ತನೇ ನಂಬ್ರದ ಮನೆಯಲ್ಲಿ ಮುಖ್ಯಮಂತ್ರಿ ಮತ್ತು ಅದಕ್ಕೆ ತಾಗಿರುವ ಹನ್ನೊಂದರಲ್ಲಿ ಹಣಕಾಸಿನ (Chancellor of the Exchequer) ಮಂತ್ರಿ ಇರುವುದು. ಆವೆರಡೂ ಮನೆಗಳು ನೋಡಲಿಕ್ಕೆ ಬಹು ಸಾಮಾನ್ಯ ಮನೆಗಳಾಗಿದ್ದು ಬ್ರಿಟಿಷ್ ದೇಶದಲ್ಲಿ ನಡೆದು ಬಂದ ಪ್ರಜಾಪ್ರಭುತ್ವದ ಒಂದು ದೊಡ್ಡ ಗುಣವನ್ನು ತೋರಿಸುತ್ತವೆ. ಯಾಕಂದರೆ ಇವರ ದೊಡ್ಡಸ್ತಿಕೆ ಅಥವಾ ಐಶ್ವರ್ಯವನ್ನು ತೋರಿಸುವುದಾಗಿದ್ದರೆ ಈ ಮನೆಗಳಿಗಿಂತ ಎಷ್ಟೋ ಗಂಭೀರವಾದ ಮನೆಗಳನ್ನು ಅವರು ಉಳಕೊಳ್ಳಲಿಕ್ಕೆ ಕೊಡಬಹುದಿತ್ತು. ಹಾಗೆ ಮಾಡದೆ ಕೇವಲ ಸರ್ವಸಾಮಾನ್ಯರಿಗೊಪ್ಪಿರುವ ಮನೆಯಲ್ಲಿ ಅವರು ವಾಸ್ತವಿಸುವುದನ್ನು ನೋಡುವಾಗ ನಾವು ಅದರಿಂದ ಒಂದು ಪಾಠವನ್ನು ಕಲಿಯಬೇಕಾಗುತ್ತದೆ. ಅವೆರಡೂ ಮನೆಗಳ ಎದುರು ದಾರಿಯಲ್ಲಿ ಕೇವಲ ಒಬ್ಬ ಪೋಲೀಸ್ ಕಾನ್‌ಸ್ಟೇಬಲನು ಯಾವ ಆಡಂಬರವಿಲ್ಲದೆ ನಿಂತಿರುವನು. ಇದೇ ಹೊಸ ದಿಲ್ಲಿಗೆ ಹೋಗಿ ಅಲ್ಲಿ ನಮ್ಮ ಮುಖ್ಯ ಮಂತ್ರಿಗಳಿರುವ ಅರಮನೆಯನ್ನೂ ಅದರ ಎದುರು ಬಂದೋಬಸ್ತಿಗಿರುವ ಸೈನಿಕರ ಪಡೆಯನ್ನು ನೋಡುವಾಗ ಆ ಚಿತ್ರಕ್ಕೂ ಈ ಚಿತ್ರಕ್ಕೂ ಇರುವ ಅಜಗಜಾಂತರ ಭೇದ.

ನಾನು ಈ ವರೆಗೆ ನೋಡಿದ ಯಾವ ಕೋರ್ಟುಗಳಲ್ಲಿಯೂ ಇಲ್ಲಿ ನಡೆಯುವಷ್ಟು ಸಮಾಧಾನದ ಕೆಲಸವನ್ನು ನೋಡಲಿಲ್ಲ. ಕೋರ್ಟು ನಡೆಯುತ್ತಿದ್ದ ಕೋಣೆಯು ಕಟ್ಟಡದ ಉಪ್ಪರಿಗೆಯಲ್ಲಿದ್ದು ಸುಮಾರು 40 ಅಡಿ ಉದ್ದ, 30 ಅಡಿ ಅಗಲ, 15 ಅಡಿ ಎತ್ತರದ ಸಾಧಾರಣದ ಒಂದು ಕೋಣೆ. ಅದರ ಒಂದು ಬದಿಯಲ್ಲಿ ಉರುಟಾದ ಅರ್ಧ ಚಂದ್ರಾಕಾರದ ಮೇಜು ಅಲ್ಲಿ 5 ಜನ ಜಡ್ಜರು ಕೂತಿದ್ದರು. ಅದರ ಅಧ್ಯಕ್ಷರು ಮಧ್ಯದಲ್ಲಿ ಕೂತಿದ್ದು ಅವರ ಹೆಸರು ಲೋರ್ಡ್ ಸೈಮಂಡ್ಸ್. ಅವರ ಒತ್ತಿನಲ್ಲಿ ಬಲಭಾಗದಲ್ಲಿ ಲೋರ್ಡ್ ನೋರ್ಮಂಡ್ ಎಡಭಾಗದಲ್ಲಿ ಲೋರ್ಡ್ ರೀಡ್, ಈ ಮೂವರ ಬಲಭಾಗಕ್ಕೆ ಲೋರ್ಡ್ ರೆಡ್‌ಕ್ಲಿಫ್, ಎಡಭಾಗಕ್ಕೆ ಲೋರ್ಡ್ ಎಸ್ಕ್ವಿತ್. ಈ ಎಸ್ಕ್ವಿತರು ಒಂದನೇ ಮಹಾ ಯುದ್ಧದ ಕಾಲದಲ್ಲಿ ಕೆಲವು ಸಮಯ ಬ್ರಿಟನ್ನಿನ ಮುಖ್ಯ ಮಂತ್ರಿಯಾಗಿದ್ದ ಎಸ್ಕ್ವಿತ್‌ರ ಮಗ. ಹೀಗೆ 5 ಜನರು ಜಡ್ಜರು. ಅವರ ಎದುರು ಬಲಭಾಗದಲ್ಲಿ ಅಪೆಲೆಂಟರ ಕಡೆ ವಕೀಲರು. ಎಡಭಾಗದಲ್ಲಿ ರೆಸ್ಪೊಂಡೆಂಟ್ ಕಡೆಯ ವಕೀಲರು, ಇವರು ಇಬ್ಬಿಬ್ಬರು. ಇನ್ನು ಸ್ವಲ್ಪ ಮುಂದೆ ಎರಡೂ ಪಕ್ಕದಲ್ಲಿ 2 ಸಣ್ಣ ಮೇಜುಗಳು ಅವುಗಳ ಬದಿ ಎರಡೆರಡು ಕುರ್ಚಿಗಳು. ಇವುಗಳಲ್ಲಿ ಉಭಯ ಕಕ್ಷಿಗಾರರ ಕಡೆ ಸೊಲಿಸಿಟರ್ಸ್ ಕಡೆ ಗುಮಾಸ್ತರು. ಹೀಗೆ ಎಲ್ಲರೂ ಈ ನಂಬ್ರಕ್ಕೆ ಸಂಬಂಧಿಸಿದವರು ಆಗಿದ್ದು ಹೊರಗಿನಿಂದ ಬಂದ ಜನ ನಾನೊಬ್ಬ ಆಗಿದ್ದೆ. ಲಂಡನ್ ಬೇರೆ ಕೋರ್ಟುಗಳಲ್ಲಿ ಹೆಚ್ಚಾಗಿ ಊರಿನವರು ಬಂದು ನೋಡುವರು. ಆದರೆ ಹಾಗೆ ಇಲ್ಲಿಗೆ ಬರುವವರು ಕಡಿಮೆ.

ಜಡ್ಜರು ಕೂತ ಮೇಜಿನ ಎದುರಾಗಿ ಗೋಡೆಯ ಮೇಲೆ ನಮ್ಮ ದೇಶದವರಾಗಿದ್ದು ಈ ಕೋರ್ಟಿನಲ್ಲಿ ಅನೇಕ ವರ್ಷಗಳು ಜಡ್ಜರಾಗಿರುತ್ತಿದ್ದ ಅಮೀರ್ ಅಲಿ ಎಂಬವರ ಭಾವಚಿತ್ರವಿತ್ತು. ಕೋಣೆಯ ಎಡ ಪಾರ್ಶ್ವದಲ್ಲಿ ದೊಡ್ಡದಾದ ಮತ್ತು ಎತ್ತರವಾದ ಮೂರು ಕಿಟಕಿಗಳು. ಬಲಭಾಗದಲ್ಲಿ ನಮಗೆ ಹೋಗಿ ಬರಲಿಕ್ಕೆ ಇದ್ದ ಒಂದೇ ಬಾಗಿಲು. ಕೋಣೆಯ ಗೋಡೆಗಳ ಬದಿ ಕಾನೂನು ಪುಸ್ತಕಗಳು ತುಂಬಿದ್ದ ಕಪಾಟುಗಳು. ಜಡ್ಜರ ಹಿಂದೆ ಅವರು ಹೋಗಿ ಬರಲಿಕ್ಕಿರುವ ಬಾಗಿಲು ಮತ್ತು ಲೈಬ್ರರಿ ಕೋಣೆ. ಆ ಕಿಟಕಿಗಳ ಹೊರಗೆ ಕೆಲವು ಹಸುರು ಚಿಗುರು ಬರುತ್ತಿದ್ದ ಮರಗಳಿದ್ದ ಒಂದು ಚಿಕ್ಕ ಉದ್ಯಾನ.

ಈಗ ನಡೆಯುತ್ತಿದ್ದ ನಂಬ್ರ ಏನೆಂತ ವಾಚಕರಿಗೆ ತಿಳಿಯಲಿಕ್ಕೆ ಕುತೂಹಲವಿರಬಹುದು. ನಾನು ಸಂದರ್ಶಿಸಿದ ಎರಡೂ ದಿವಸದಲ್ಲಿ, ಕೆನಡಾ ದೇಶದ ಪ್ರಿವಿ ಕೋರ್ಟಿನ ತೀರ್ಪಿನ ಮೇಲೆ ಒಂದು ಅಪೀಲು ಹೇರಿಂಗ್ ಆಗುತ್ತಿತ್ತು.

1946ನೇ ಜುಲ್ಯಾ ತಿಂಗಳಲ್ಲಿ ಕೆನಡಾ ದೇಶದಲ್ಲಿ ಅಲ್ಬರ್ಟ್ ಎಂಬ ಪ್ರಾಂತದಲ್ಲಿ ಒಂದು ದೊಡ್ಡ ನೀರಾವರಿ ಕೆಲಸಕ್ಕೋಸ್ಕರ ಸುರಂಗ ತೆಗೆಯಲಿಕ್ಕೆ ಕಂಟ್ರೆಕ್ಟರ್ ವಾದಿ ಕಂಪೆನಿಯವರು ಅಲ್ಲಿದ್ದ ಸರಕಾರದೊಡನೆ ಬರಹ ಮೂಲಕ ಕಂಟ್ರಾಕ್ಟ್ ಮಾಡಿದರು. ಅದರಲ್ಲಿ ಅನೇಕ ಶರ್ತಗಳಿದ್ದವು. ಅದರೆ ಈಗ ನಮ್ಮ ಅನುಭವಕ್ಕೆ ಮುಖ್ಯವಾದ ಶರ್ತಯಾವುದೆಂದರೆ ಕಂಟ್ರಾಕ್ಟರು ಕೆಲಸಕ್ಕೋಸ್ಕರವಾಗಿ ತರುವ ಸಾಮಾನುಗಳೂ ಮೆಶೀನುಗಳೂ ಎಲ್ಲಾ ಕೆಲಸ ಮುಗಿಯುವ ತನಕ, ಸರ್ಕಾರದ ಸೊತ್ತುಗಳೇ ಆಗಿರಬೇಕೆಂಬುದು ಕೆಲಸವು ಬಹು ದೊಡ್ಡದು. ಲಕ್ಷಗಟ್ಟಲೆ ಮೌಲ್ಯದ್ದು. ಹೀಗೆ ವಾದಿ ಕಂಪೆನಿಯು ಕೆಲಸ ನಡೆಸುವಾಗ ಅದರ ಮೇಲೆ ಅಲ್ಲಿರುವ ಸಕ್ಕರೆ ಪಟ್ಟಣ (Sugar City) ಎಂಬ ಮುನಿಸಿಪಾಲಿಟಿಯವರು, ಸುಮಾರು 2 ಲಕ್ಷ ಡಾಲರು (ಡಾಲರಿಗೆ ಈಗ ಅಂದಾಜು ೪ ರೂಪಾಯಿ) ತೆರಿಗೆಯನ್ನು ಹೊರಿಸಿ ಆ ತೆರಿಗೆ ಕೊಡದ ಕಾರಣ ವಸೂಲಿ ಬಗ್ಗೆ ಈ ನೀರಾವರಿ ಕೆಲಸಕ್ಕೆ ವಾದಿ ಕಂಪೆನಿಯವರು ತಂದಿದ್ದ ಸೊತ್ತುಗಳನ್ನು ಜಪ್ತಿಮಾಡಿ ಹಿಡಿದರು. ಆಗ ಕಂಪೆನಿಯವರು ಹಾಗೆ ಹಿಡಿದದ್ದು ಸರಿಯಲ್ಲ, ತೆರಿಗೆಯು ನ್ಯಾಯವಾದದ್ದಲ್ಲ, ಒಂದು ವೇಳೆ ನ್ಯಾಯವಾದರೂ ಆ ಸೊತ್ತು, ಕಂಟ್ರಾಕ್ಟು ಶರ್ತದ ಮೇರೆಗೆ ಕೆಲಸ ಮುಗಿಯುವ ತನಕ ಸರಕಾರದವುಗಳಾದ್ದರಿಂದ ಅವುಗಳನ್ನು ಹಿಡಿಯಲಿಕ್ಕೆ ಹಕ್ಕಿಲ್ಲ ಎಂತ ೧೯೪೭ನೇ ಎಪ್ರಿಲ್ ತಿಂಗಳು ವ್ಯಾಜ್ಯವನ್ನು ಹೂಡಿದರು. ಪ್ರತಿವಾದಿ ಮುನ್ಸಿಪಾಲಿಟಿ ಸಾಧನೆ ಏನೆಂದರೆ, ತೆರಿಗೆ ನ್ಯಾಯವಾಗಿ ಹೊರಿಸಿದ್ದು, ಅದನ್ನು ಕೋರ್ಟಿನಲ್ಲಿ ಆಕ್ಷೇಪಿಸಕೂಡದು, ಸೊತ್ತುಗಳು ವಾದಿ ಕಂಪೆನಿದ್ದು ಸರಕಾರದವುಗಳಲ್ಲ ಆದ ಕಾರಣ ತೆರಿಗೆ ಬಗ್ಗೆ ಮಾಡಿದ ಜಪ್ತಿ ಸರಿಯಾದ್ದು ಎಂಬುದೇ ಸಾಧನೆ. ಅಲ್ಬರ್ಟ್ ಪ್ರಾಂತ ಮೂಲ ಕೋರ್ಟಿನಲ್ಲಿ ಸುರು. ಆದ ನಂಬ್ರವು ಶಫರ್ಡ್ ಎಂಬ ಒಬ್ಬರೇ ಜಡ್ಜರು ತನ್ನ ಮುಂದಿ ವಾದಿಗೆ ಗುಣವಾಗಿ, ತೆರಿಗೆಯು ನ್ಯಾಯವಾಗಿ ಹೊರಿಸಿದ್ದಲ್ಲ ಎಂತ 1949ನೇ ಎಪ್ರಿಲ್ ತಿಂಗಳಲ್ಲಿ ವಿಧಿಸಿದರು. ಅದರ ಮೇಲೆ ಪ್ರತಿವಾದಿ ಸಕ್ಕರೆ ಪಟ್ಟಣದ ಮುನಿಸಿಪಾಲಿಟಿಯವರು ಅಪೀಲು ಕೋರ್ಟಿಗೆ ಕೂಡಲೇ ಅಪೀಲು ಹಾಕಿ, ಅಲ್ಲಿ ಮೂರು ಜನ ಜಡ್ಜರು 1949ನೇ ಜೂನ್ ತಿಂಗಳಲ್ಲಿ ಮೂಲ ತೀರ್ಪು ಸರಿಯೆಂತ ನಿಶ್ಚಯಿಸಿ ಅಪೀಲು ಡಿಸ್ಮಿಸ್ ಮಾಡಿದರು. ನಂತರ ಪುನಃ ಆ ತೀರ್ಪಿನ ಮೇಲೆ ಪ್ರತಿವಾದಿ ಮುನ್ಸಿಪಾಲಿಟಿಯು ಅದರ ಮೇಲಿನ ಕೋರ್ಟಿಗೆ ಪುನಹಾ ಅಪೀಲನ್ನು ಮಾಡಿ ಅದು 5 ಜನ ಜಡ್ಜರ ಮುಂದೆ ತೀರ್ಮಾನಕ್ಕೆ 1950ನೇ ಮೇ ತಿಂಗಳಲ್ಲಿ ಬಂತು. ಆ ತೀರ್ಪು ಕೆಳಗಿನ ಎರಡು ಕೋರ್ಟಿನ ತೀರ್ಪುಗಳನ್ನು ರದ್ದುಪಡಿಸಿ, ತೆರಿಗೆ ಸ್ವತಃ ನೇರವಾ[illegible] ನ್ಯಾಯವಾದ್ದೆಂತಲೂ, ಅದರೆ ಕಂಟ್ರಾಕ್ಟು ಮುಗಿಯುವ ತನಕ, ಸೊತ್ತುಗಳು, ಸರಕಾರಕ್ಕೆ ಸೇರಿದವುಗಳಾದ್ದರಿಂದ ಅವುಗಳನ್ನು ಜಪ್ತಿಮಾಡಲಿಕ್ಕೆ ಕೂಡದೆಂತ ತೀರ್ಮಾನ ಕೊಟ್ಟು, ವಾದಿ ಕಂಪೆನಿಯ ನಂಬ್ರವನ್ನು ಡಿಸ್ಮಿಸ್ ಮಾಡಿದರು. ಹೀಗೆ ಬಂದು ಮಾಡಿದ ತೀರ್ಪಿನ ಮೇಲೆ ವಾದಿ ಕಂಪೆನಿಯು ಪುನಃ ಈ ಅಪೀಲನ್ನು ಪ್ರಿವಿ ಕೌನ್ಸಿಲಿಗೆ ಮಾಡಿ ನಾನು ಹೋದಾಗ ಅದರ ಹೇರಿಂಗ್ ನಡೆಯುತ್ತಿತ್ತು.

[ಪಿಣಾಂವಾಣಿ] —ಕೆ. ಆರ್. ಕಾರಂತ

(ಬರುವ ವಾರದ ಸಂಚಿಕೆ ನೋಡಿರಿ.)

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

ಶಾ ಕಂಪೆನಿ, ಮಂಗಳೂರು.

THE PANGAL NAYAK BANK LIMITED

Head Office] (Incorporated in 1920.) [Udipi: S K

SEASON DEPOSITS are received and accepted on the following terms:—

For three, four or five months deposits at 3% p. a

For six seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಣುಗು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸರಗು ಹೋಗುತ್ತಿದ್ದರೆ, ಕೊಲಿಕಾಟು ಗರ್ಭಾಯದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಚುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕಾಂಬಳ-ಯಿ ಒಳ್ಳೆಯ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೆಡಿಕಲ್ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಬಸಿದ್ಧಪ್ಪ ಹಾಂಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆ ನೋವು,ಘಾಯಗಳು, ಚಾಚುಕೊಳ್ಳುವುದು, ಚೇಳುಕಚ್ಚುವಂತಾದವು, ಪಕ್ಷವಾತ,ನೋವಿನ, ನೋವಿರುವ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಮುಖ್ಯ ಕಟ್ಟಿ ಮತ್ತು ಸನ್ನಲ್ಲಿ ಸಿಗ್ತುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯ ಮತ್ತು ಕಲ್ಕತ್ತ.

ವಾರದ ಭವಿಷ್ಯ

ತಾರೀಕು 27-9-51 ರಿಂದ — ತಾರೀಕು 3-10-51 ರವರೆಗೆ

ಮೇಷ—ಈ ವಾರವು ನಿಮ್ಮ ಭಾಗಕ್ಕೆ ಉತ್ತಮವಾಗಿರುವದು. ಉದ್ಯೋಗದಲ್ಲಿ ಪ್ರಗತಿಯಾಗುವದು. ಆರ್ಥಿಕ ಭಾಗವು ಸುಧಾರಿಸುವದು. ಆಪ್ತೇಷ್ಟರ ಮತ್ತು ಬಂಧು ಮಿತ್ರರ ಸಮಾಗಮವಾಗಲಿದೆ. ಕೆಲವೊಮ್ಮೆ ಆಕಸ್ಮಿಕ ಪ್ರವಾಸಗಳೊದಗಲಿವೆ. ಅನಿಮಿತ್ತವಾಗಿ ಸ್ವಲ್ಪ ಕಷ್ಟನಷ್ಟಗಳೊದಗುವವು. ಕಫ ಪಿತ್ತ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲೀತು. ಗೃಹಸಂಸಾರದಲ್ಲಿ ಏನೊಂದೂ ಕುಂದುಕೊರತೆಗಳಿಗವಕಾಶವಿಲ್ಲದ ಕಾರಣ ದಿನಯಾಪನೆಯು ಸುಖಮಯವಾಗಲಿದೆ. ಪ್ರಾರಂಭದ 4 ದಿನಗಳಲ್ಲಿ ಸ್ತ್ರೀ ಧನಾಪ್ತಿ, ಯಾನ ವಾಹನಾದಿಗಳು ಲಭಿಸುವವು.

ವೃಷಭ—ದೈವಾನುಗ್ರಹದಿಂದಾಗಿ ನಿಮ್ಮ ಹೆಚ್ಚಿನ ಮನೋರಥಗಳು ಈಡೇರುವವು. ಸಮಾಜದಲ್ಲಿ ಸಾಕಷ್ಟು ಸ್ಥಾನಮಾನಗಳನ್ನು ಗಳಿಸುವಿರಿ. ಖರ್ಚಿನ ಸಲುವಾಗಿ ಹೆರವರನ್ನಾಶ್ರಯಿಸಬೇಕಾಗಿಲ್ಲವು. ಆದರೆ ಸಂಸಾರದಲ್ಲಿ ನಾನಾತರದ ವಿಪತ್ತುಗಳು ಬರಲಿವೆ. ಗ್ರಹಚ್ಛಿದ್ರದಶೆಯಿಂದಾಗಿ ಪರಸ್ಪರ ವೈಮನಸ್ಸು ಕಲಹಗಳುದ್ಭವಿಸುವವು. ದುರ್ಜನರ ಮೋಸಕ್ಕೆ ಸಿಲುಕಿ ಕಷ್ಟನಷ್ಟಗಳನ್ನನುಭವಿಸಬೇಕಾದೀತು. ಶತ್ರುವರ್ಗದವರಿಂದ ಸದಾ ಸಣ್ಣಪುಟ್ಟ ಕೀಟಲೆಗಳು ಬರುತ್ತಿರುವವು. ತಾ 27, 2, 3 ಈ ದಿನಗಳು ಮಿಕ್ಕ ದಿನಗಳಿಗಿಂತ ಉತ್ತಮವಾಗಿವೆ.

ಮಿಥುನ—ಪರರ ಹಂಗಿಲ್ಲದೆ ಯಾವ ಕಾರ್ಯವನ್ನು ಕೂಡಾ ಸಾಧಿಸಲು ಸಿದ್ಧ ನೀವು ಶಕ್ತರಿರುವಿರಿ. ಅಪತ್ಯವರ್ಗದಿಂದಲೂ ನೀಚಜನರಿಂದಲೂ ಧನಲಭಿಸುವ ಯೋಗವಿದೆ. ಬಂಧುಜನರ ಸಹಕಾರವು ತುಂಬಾ ಇರುವುದರಿಂದ ನಿಮ್ಮ ಸಂಕಲ್ಪಗಳು ಸಫಲಗಳಾಗುವವು. ಆದರೆ ಗುರುಹಿರಿಯರ ಆಗ್ರಹಕ್ಕೆ ಸಿಲುಕುವ ಸಂಭವವಿರುವುದರಿಂದ ಆ ಭಾಗದಲ್ಲಿ ಹೆಚ್ಚಿನ ವಿನಯಶೀಲರಾಗಿರಿ. ಆಪ್ತಜನರ ವಿಯೋಗದಿಂದಾಗಿ ದುಃಖ ಸಂಭವಿಸಲಿದೆ. ತಾ. 28, 29 ಹೊರತಾದ ದಿನಗಳಲ್ಲಿ ಮನಶ್ಚಾಂಚಲ್ಯದಿಂದಾಗಿ ಅನಿಷ್ಟ ಅಪವಾದಾದಿಗಳ ಭಯವಿದೆ.

ಕರ್ಕಾಟ—ನಿಮ್ಮ ದೇಹ ಪ್ರಕೃತಿಗೆ ಕೊಂಚ ಪಿತ್ತದೋಷದಿಂದಾಗಿ ತೊಡಕುಂಟಾದೀತಾದರೂ ಇತರ ಭಾಗಗಳೆಲ್ಲವೂ ಉತ್ತಮವಾಗಿರುವವು. ನಿಮ್ಮ ಪ್ರತಿಯೊಂದು ಉದ್ಯಮವೂ ಕೂಡ ಯಶಸ್ವಿಯಾಗಿ ಪರಿಣಮಿಸುವದು. ಸಾಂಸಾರಿಕ ಆವಶ್ಯಕತೆಗಳೆಲ್ಲವೂ ನಿವೃತ್ತಿಹೊಂದಿ ಸುಖದಿಂದ ಕಾಲಕಳೆವಿರಿ. ಸಂಪದ್ಭಾಗವು ಅತ್ಯುತ್ತಮವಾಗಲಿದೆ. ವಿದ್ಯೋಪಜೀವಿಗಳಿಗೂ ನೌಕರಿವರ್ಗಕ್ಕೂ ವಿಶೇಷತಃ ವ್ಯಾಪಾರಿಗಳಿಗೂ ಈ ವಾರವು ಅತ್ಯಂತ ಉತ್ತಮವಿದೆ. ತಾ. 27, 30, 1, 2, 3 ಈ ದಿನಗಳಲ್ಲಿ ನಿಮ್ಮ ಕಾರ್ಯವು ನಿರರ್ಗಳವಾಗಿ ನಡೆಯಲಿದೆ.

ಸಿಂಹ—ಇಷ್ಟಕ್ಕಿಂತ ದ್ವಿಗುಣ ಅನಿಷ್ಟಗಳು ಪ್ರಾಪ್ತವಾಗಲಿವೆ. ಆದರೂ ನಿಮ್ಮ ಆರ್ಥಿಕ ಭಾಗವು ಚೆನ್ನಾಗಿರುವುದರಿಂದ ವಿಶೇಷ ಖರ್ಚುವೆಚ್ಚಗಳು ಪ್ರಾಪ್ತವಾದರೂ ಅಸಲುವಾಗಿ ನೀವು ಸಾಲಮಾಡಬೇಕಾದ ಪ್ರಸಂಗವೊದಗಲಾರದು. ವಾರದಲ್ಲಿನ ಹೆಚ್ಚಿನ ಸಮಯವನ್ನು ನೀವು ಮಾರ್ಗಾತಿಕ್ರಮಣದಲ್ಲೇ ಕಳೆಯಬೇಕಾದೀತು. ಆಪ್ತೇಷ್ಟಜನರೊಡನೆ ಅವಿಶ್ವಾಸವುಂಟಾದೀತು. ಕೆಲವೊಮ್ಮೆ ಶಸ್ತ್ರಾದಿಗಳಿಂದ ಅಪಾಯ ಸಂಭವಿಸುವ ಯೋಗವಿದೆ. ತಾ 28, 29, 3 ಈ ದಿನಗಳು ಹೆಚ್ಚಿನ ಹಾನಿಕರಗಳಾಗಲಾರವು.

ಕನ್ಯಾ—ವ್ಯಂಗಿತನಾದ ಕುಜನೂ ಜನ್ಮಸ್ಥ ರವಿಶನಿಗಳೂ ನಿಮಗೆ ಹೆಚ್ಚಿನ ಬಾಧೆಯನ್ನೀಯಲಿರುವರು. ನಿಮ್ಮ ದುಡಿಮೆಗಿಂತ ದ್ವಿಗುಣ ವ್ಯಯವಾದೀತು. ದೇಹದಾರೋಗ್ಯವೂ ಕೂಡ ಕೆಡಲಿದೆ. ವಿಶೇಷತಃ ಶ್ರಮಜೀವಿಗಳಿಗೆ ಈ ವಾರವು ದುಃಖದಾಯಿಯಾಗಿ ಪರಿಣಮಿಸಲಿರುವದು. ಆತ್ಮೀಯರ ವಿಯೋಗದಿಂದಾಗಿಯೂ ಶತ್ರುಜನರ ಪೀಡೆಯಿಂದಾಗಿಯೂ ನಿಮ್ಮ ಮನಸ್ಸಿಗೆ ಶಾಂತಿಯಿರದು. ತಾ. 27, 30, 1 ಈ ದಿನಗಳಲ್ಲಿ ಶ್ರಮಕ್ಕುಚಿತವಾದ ಫಲಪ್ರಾಪ್ತಿ ಮಿತ್ರರ ಭೆಟ್ಟಿಯೂ ಆಗಲಿದೆ.

ತುಲಾ—ನೀವೆಷ್ಟೇ ಶ್ರಮವಹಿಸಿ ದುಡಿದರೂ ಈ ವಾರದಲ್ಲಿ ನಿಮ್ಮ ಖರ್ಚನ್ನು ಸುಧಾರಿಸಲಾಗಲಾರದು. ಸುತ್ತಮುತ್ತಲಿಂದಲೂ ಅಪಸ್ವರಂಪರೆಗಳು ಬರಲಿವೆ. ಕಿನುಪೀಡೆ ಮನೋರೋಗಗಳು ದಿನದಿಂದ ದಿನಕ್ಕೆ ಹೆಚ್ಚುವವು. ಆದರೂ ಜನತೆಯಿಂದ ಗೌರವಾದಿಗಳನ್ನು ಗಳಿಸಿ ಮಿತ್ರರ ಬೆಂಬಲವು ಪರಿಪೂರ್ಣವಿರುವುದರಿಂದ ದಿನಯಾಪನೆಯು ಹೆಚ್ಚಿನ ಕಷ್ಟದಾಯಿಯಾಗಲಾರದು. ವಿದ್ಯೋಪಜೀವಿಗಳಿಗೂ ಸೇವಕ ವರ್ಗದವರಿಗೂ ಈ ಕಾಲವು ಅಷ್ಟೇನು ಉತ್ತಮವಲ್ಲ. ತಾ. 30, 1, 2, ಅನಿಷ್ಟಕರಗಳಿವೆ.

ವೃಶ್ಚಿಕ—ದೈವವು ನಿಮ್ಮ ಮೇಲೆ ಪೂರ್ಣಾನುಗ್ರಹವನ್ನು ಬೀರುವುದು. ಅತಏವ ನೀವು ಯಾವ ಕಾರ್ಯವನ್ನು ಕೈಗೊಂಡರೂ ವಿಜಯಿಗಳಾಗುವದರಲ್ಲಿ ಸಂದೇಹವಿಲ್ಲ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಒಳ್ಳೆಯರನ್ನು ವಿಜಯವೂ ಲಾಭವೂ ಲಭಿಸುವದು. ನಿಮ್ಮ ಆರ್ಥಿಕ ಪರಿಸ್ಥಿತಿಯು ಅತೀವ ಉತ್ತಮವಾಗಲಿದೆ. ಆದರೂ ಕೆಲವೊಮ್ಮೆ ವೃಥಾ ವಾಕ್ಕಲಹಕ್ಕೆ ಸಿಲುಕಿ ಚಿಂತೆಗೊಳ್ಳಬೇಕಾದ ಪ್ರಸಂಗ ಬರುವದು. ವಾರದ ಆದ್ಯಂತ ದಿನಗಳನ್ನುಳಿದು ಮಿಕ್ಕ ದಿನಗಳು ಅತೀವ ಪ್ರಶಸ್ತವಿವೆ.

ಧನು—ಸೋದರ ವರ್ಗದವರಿಂದಲೂ ಬಂಧು ಜನತೆಯಿಂದಲೂ ಉಂಟಾದ ಮನೋವೇದನೆಯು ಸದಾ ನಿಮ್ಮನ್ನು ಬಾಧಿಸುತ್ತಿರುವುದು. ಪಿತ್ಥದೋಷದಿಂದಾಗಿ ತಲೆಶೂಲೆ ನಿಶ್ಯಕ್ತಿಗಳು ಹೆಚ್ಚುವವು. ಆದರೆ ನಿಮ್ಮ ಕಾರ್ಯಶಕ್ತಿಯು ಕುಂಠಿತವಾಗಲಾರದು. ಹೆಚ್ಚಿನ ನಿಮ್ಮ ಮನೋರಥಗಳು ಕಾರ್ಯರೂಪಕ್ಕೆ ಬರಲಿವೆ. ಗೃಹಸುಖವೂ ತೃಪ್ತಿಕರವಿರುವುದು. ವ್ಯಾಪಾರ ವ್ಯವಹಾರಗಳಲ್ಲಿ ವಿಜಯವು ನಿಶ್ಚಿತವು. ಪ್ರಾರಂಭದ 4 ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಸಮರ್ಥವಿವೆ.

ಮಕರ—ಗ್ರಹಮಂಡಲವೇ ಪ್ರತಿಕೂಲಸ್ಥಾನವನ್ನಾಕ್ರಮಿಸಿರುವುದು. ಇಂತಹ ದುರ್ದೈವದ ಸಮಯದಲ್ಲಿ ನಿಮ್ಮ ಪೌರುಷವೇನೂ ಸಾಗಲಾರದು. ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ನಷ್ಟವೇ ಅಧಿಕವಾಗಿ ಪರಿಣಮಿಸಲಿದೆ. ಖರ್ಚುವೆಚ್ಚಗಳಂತೂ ಕ್ಷಣೇ ಕ್ಷಣೇ ಅಧಿಕವಾಗುವುವು. ಇದೆ ಕಾರಣ ಮರ್ಯಾದೆಯಿಂದ ದಿನಗಳೆಯಲು ಬಹಳ ಕಷ್ಟವಾಗುವದು. ವಿನಾಕಾರಣ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಲಿದೆ. ವಾರದ ಆದ್ಯಂತ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

ಕುಂಭ—ಯುಕ್ತಿ ಮತ್ತು ಸಾಹಸಗಳಲ್ಲಿ ಅದ್ವಿತೀಯರಿರುವಿರಿ. ನೀವು ಕೈಗೊಂಡ ಪ್ರತಿಯೊಂದು ಕಾರ್ಯಗಳೂ ನಿಮ್ಮಿಚ್ಛೆಯಂತೆಯೇ ಫಲಕೊಡಲಿವೆ. ನಿಮ್ಮ ಶ್ರಮಕ್ಕಿಂತಲೂ ಅಧಿಕವಾದ ಫಲ ಲಭಿಸುವದು. ವ್ಯಾಪಾರೀ ಜನರಿಗೆ ಆಕಸ್ಮಿಕ ನಷ್ಟವುಂಟಾದೀತು. ಹೆಚ್ಚಿನ ಸಮಯವನ್ನು ಪ್ರಯಾಣದಲ್ಲೇ ಕಳೆಯಬೇಕಾಗಿ ಬರುವದು. ವಾತಾಧಿಕ್ಯದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಧಕ್ಕೆ ತಗಲಲಿದೆ. ವಿದ್ಯೋಪಜೀವೀ ನೌಕರಿ ವರ್ಗಕ್ಕೆ ಈ ವಾರವು ಅತ್ಯುತ್ತಮವಾಗಿದೆ. ಸ್ತ್ರೀಯರಿಂದ ಕಲಹಾಪವಾದಗಳ ಭಯವಿದೆ. ವಾರಾದಿಯ 3 ದಿನಗಳುತ್ತಮವಿವೆ.

ಮೀನ—ಧನಭಾಗ್ಯಪತಿಯಾದ ಅಂಗಾರಕನೊಬ್ಬನೇ ಸದ್ಯ ನಿಮಗನುಕೂಲನಾಗಿರುವನು. ಆದ್ದರಿಂದ ನಿಮಗೆ ಆರ್ಥಿಕ ಸಂಬಂಧವಾದ ಯಾವ ತೊಂದರೆಗಳೂ ಸಂಭವಿಸಲಾರವು. ಆದರೆ ತನುಮನಗಳಿಗೆ ಸದಾ ಪೀಡೆ ತಪ್ಪಿದ್ದಲ್ಲವು. ವಿಜಾತೀಯರೊಡನೆ ಕಲಹವಾದೀತು. ನೌಕರಿ ವರ್ಗದವರಿಗೆ ಮೇಲಧಿಕಾರಿಗಳಿಂದ ತೊಂದರೆ ಬರಲಿದೆ. ವಿರೋಧಿಗಳೂ ಕೂಡ ಪ್ರತಿ ಕಾರ್ಯೋದ್ಯಮದಲ್ಲಿ ಆಸಕ್ತರಾಗಿರುವರು. ಆದರೂ ತಾ. 28, 29, 30, 1 ಈ ದಿನಗಳು ಅನಿಷ್ಟಗಳು ಕಡಿಮೆಯಾಗಿ ಇಷ್ಟಪ್ರಾಪ್ತಿಯಾದೀತು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ ಸೂತಿಕಾ ರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಹುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾಮಣೆ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಪಪ್ಪ ಸಿದ್ಧಲಿಂಗಪ್ಪ ಧಾರವಾಡಕರ ಬಿಜಾಪುರ ನಂಜುಂಡೇಶ್ವರ ಮೆಡಿಕಲ್ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ [illegible]

ವಿವಿಧ ಪಾತ್ರೆಗಳು



[illegible] ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಜಿ ವ್ಯಾಪಾರಾಲಯ,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲಿಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗದಿದ್ದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗದಿದ್ದಲ್ಲಿ; ರೂ. 3; ಸ್ಪೆಶಲ್ ರೂ. 5 ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ಬೇರೆ.]

Mrs D. DEVEE, F. Ps. (N. J.)
Tollygunge CALCUTTA
ಸ್ಟಾಕಿಸ್ಟರು [illegible] ಮಂಗಳೂರು

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

31ನೆ ವರ್ಷ

4—10—1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ-ದ.ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೫

NAVAYUGA WEEKLY Post Box No. 22 UDIPI.

Vol 31
No. 5

ಸ್ವತಃ ಮೇಲೆ ಸಹಾನುಭೂತಿಯನ್ನು ತೋರಿಸುವ ವಾಡಿಕೆ ನಮ್ಮಲ್ಲಿದೆ. ತೀರಿ ಹೋದವನ ಮೇಲೆ ಯಾರೂ ಸೇಡು ತೀರಿಸಿಕೊಳ್ಳಲು ಬಯಸುವುದಿಲ್ಲ. ಹೃದಯದೊಳಗೆ ಎಷ್ಟೇ ನಂಜಿಯಿದ್ದರೂ—ಕೊಟ್ಟಿ ಕಿಚ್ಚಿದ್ದರೂ ಔಪಚಾರಿಕವಾಗಿಯಾದರೂ ಅವನ ಗುಣಕಥನ ಮಾಡದೇ ಇಲ್ಲ. ಕಟು ಸಾಮ್ರಾಜ್ಯವಾದಿಯಾದ ವಿನ್‌ಸ್ಟನ್ ಚರ್ಚಿಲ್ಲರು ಯುದ್ಧಸ್ಮೃತಿಯೆಂಬ ಪುಸ್ತಕದಲ್ಲಿ ಪೂಜ್ಯ ಗಾಂಧೀಜಿಯವರ ಕುರಿತು ಅಣಕವಾಡಿದ್ದಾರೆ. ಗಾಂಧೀಜಿ ಉಪವಾಸದ ಮೊದಲಕ್ಕೆ ಬರೀ ನೀರನ್ನು ಸಹ ಉಪಯೋಗಿಸುತ್ತಿದ್ದು ಮಾತ್ರ ಗ್ಲೂಕೋಸನ್ನು ಉಪಯೋಗಿಸುವರೆಂದು ವಿಧ್ಯರೋಪವನ್ನು ಮಾಡಿರುವರು. ವರ್ಣದ್ವೇಷ ಜಾತಿಯ ಸಂಕುಚಿತ ಮನೋವೃತ್ತಿಯ ಈ ಮನುಷ್ಯ ಈ ಹಿಂದೆ ಅರೆಬೆತ್ತಲೆಯ ಫಕೀರನೆಂದುದನ್ನು ಜ್ಞಾಪಿಸಿಕೊಂಡರೆ ಈ ಅಣಕವೇನು ಮಹತ್ವದಲ್ಲ! ಆಗ ಬ್ರಿಟಿಶ ಪ್ರಧಾನಿಯಾಗಿದ್ದ ಈ ಶ್ರೀಮಂತರು "ನಾನು ಉಪವಾಸ ಕಾಲದಲ್ಲಿ ಗಾಂಧೀಜಿಯವರನ್ನು ಎರಡು ಬಾರಿ ಕಾಣುತ್ತಲಿದೆ. ಅವರ ಜೀವಕ್ಕೆ ಗಂಡಾಂತರ ಬರಬಹುದೆಂಬ ಸೂಚನೆಯನ್ನು ಕೊಟ್ಟಾಗಲೂ ಅವರು ಗ್ಲೂಕೋಸನ್ನು - ಗ್ಲೂಕೋಸ ಇಂಜಕ್ಷನನ್ನು ತೆಗೆದುಕೊಳ್ಳುವದಕ್ಕೆ ನಿರಾಕರಿಸುತ್ತಿದ್ದರು." ಎಂದು ಚರ್ಚಿಲ್ಲರು ಆ ಪತ್ರವನ್ನು ಬಯಲಿಗೆಳೆದಿದ್ದಾರೆ. ಸತ್ತ ಮೇಲೂ ನಾಲ್ಕು ಹಿತದ ಮಾತನ್ನಾಡಲರಿಯದ ಈ ಸಾಮ್ರಾಜ್ಯವಾದಿ ಸ್ವದೇಶೋದ್ಧಾರಕ್ಕೆ ದುಡಿದು ವಿಜಯಪಡೆಯುತ್ತೇನೆಂದು ಹೆಮ್ಮೆ ಕೊಚ್ಚುತ್ತಾರಂತೆ ಈಗಲೂ. ಇಂತಹ ಕಿಲುಬುಳ್ಳ ಮನುಷ್ಯರು ಎಲ್ಲಿಯೂ ಶೋಭಿಸುವುದಿಲ್ಲ! ದ್ವಿತೀಯ ಮಹಾಯುದ್ಧದಲ್ಲಿ ತನ್ನ ಕುಟಿಲ ನೀತಿಯಿಂದ ವಿಜಯಿಯಾದೆನೆಂದು ಹೆಮ್ಮೆಪಟ್ಟರೂ ಇವರ ಅಪಮಾನಕರವಾದ ಆದೇಶದಿಂದ ಲಕ್ಷ ಲಕ್ಷ ಜನ ಗುಂಡಿಗಾಹುತಿಯಾದುದನ್ನು ಜನತೆ ಮರೆಯಲಿಲ್ಲ! ಅದರ ಬೆನ್ನಲ್ಲೇ ನಡೆದ ಮಹಾ ಚುನಾವಣೆಯಲ್ಲಿ ಚರ್ಚಿಲ್ಲರು ನಾಮಮಾತ್ರ ಶೇಷರಾದರು. ವಿಜಯಮಾಲೆ ಹಾಕಿಕೊಂಡು ಮೇಲೇರಿದವರು ಇಳಿದು ಹೋದರು! ಕಿಲುಬು ಮನಸ್ಸಿನ ಈ ಬಿಳಿಯ ಮುದಿ ದರವೇಶಿ ಮೇಲೆ ಬಂದಾನೆಂದು ಊಹಿಸುವುದು ಶಕ್ಯವೇ?

ಮೂವತ್ತು ವರ್ಷಗಳಿಂದ ಗಾಂಧೀಜಿಯ ಅನುಯಾಯಿಯೆನಿಸಿದ್ದು ಕಾಂಗ್ರೆಸ್ಸಿನಲ್ಲಿ ದುಡಿಯುತ್ತಿದ್ದ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ಸಿನಲ್ಲಿಯ ಲೋಪದೋಷ ನಿವಾರಣಾರ್ಥವಾಗಿ ಕಾಂಗ್ರೆಸ್ಸಿನಿಂದ

ಏರಿಳಿತಗಳು!

ಹೊರಬಂದು, ಕಿ. ಮ. ಪ್ರ. ಪಾರ್ಟಿ ಕಟ್ಟಿಕೊಂಡರು. ಪಾರ್ಟಿಯ ಮೂಲಕ ದೇಶಸೇವೆಯಲ್ಲಿ ನಿರತವಾಗುವದಷ್ಟೇ ಆಚಾರ್ಯರಿಗೆ ಬೇಕಾಗಿಲ್ಲ. ಕಾಂಗ್ರೆಸ್ ಸಂಸ್ಥೆ ಬರಕಾಸ್ತುಗೊಳ್ಳಬೇಕೆಂದು ಘೋಷಿಸಿದರು. ಕಾಂಗ್ರೆಸ್ಸಿನ ಶ್ರೇಷ್ಠ ಧುರೀಣರನ್ನು ಟೀಕಿಸಿದರು. ಮೂವತ್ತು ವರ್ಷಗಳಿಗಿಂತಲೂ ಹೆಚ್ಚಾಗಿ ಕಾಂಗ್ರೆಸ್ಸಿನ ಬಗ್ಗೆ ದುಡಿದ ಆಚಾರ್ಯರಿಗೆ ತಾನು ಹೊರಬಂದಾಗಲೇ ಆ ಸಂಸ್ಥೆ ಅಪವಿತ್ರವೆಂದು ಕಂಡದ್ದು ಪರಮಾಶ್ಚರ್ಯದ ಸಂಗತಿ. ಮತ್ತು ಕೆಲ ಆಚಾರ್ಯರಿಗೆ ತನ್ನನ್ನು ಬೆಂಬಲಿಸುವ ಕೂಟವೊಂದು ಬೇಕಾಗಿತ್ತು. ಕಾಂಗ್ರೆಸ್ಸಿನ ಜಾತೀಯತೆ-ಅರಾಜಕತೆಯ ಕುರುಹು ಕಾಣುತ್ತಿರುವಾಗಲೇ ಆಚಾರ್ಯರ ದುಂದುಬಾಣ ಹೊರಟಿತು! ಅಂತಲೇ ಬಹಳ ಜನ ಆಚಾರ್ಯರ ಪಾರ್ಟಿಗೆ ಸೇರಿದರು. ಸೇರಿದ ಬಳಿಕ ಆಲ್ಲಾದುದಾದರೂ ಏನು? ಸೇರಿಯುವರನ್ನು ಬೆರಳೆಟ್ಟು ತೋರಿಸುವ ಕೃಪಲಾನಿ ಸ್ವತಃ ಸರ್ವಾಧಿಕಾರಿಯಾಗಿದ್ದಾರೆ. ಒಳಕೊಕ್ಕಿದ ಜನರಲ್ಲಿ ಸಮಾನತಾ ಭಾವನೆಯು ಬದಲಾಗಿ ಸರ್ವಾಧಿಕಾರದ ಲಕ್ಷಣಗಳೇ ಕಂಡು ಬಂದಿರಬೇಕು! ಈಗ ನೆಹ್ರೂರವರ ಕೊರಗಿ ಹೋದವರನ್ನು ತಿರುಗಿ ಒಳಗೆ ಕರೆಯುತ್ತಿರುವ ವೇಳೆ ಎಲ್ಲರೂ ಕೃಪಲಾನಿಯವರನ್ನು ಕೈಬಿಡುತ್ತಲಿದ್ದಾರೆ. ಮಾತ್ರವಲ್ಲ ಹಲವು ಕಡೆ ಪ್ರಜಾಪಾರ್ಟಿಯ ಬೋರ್ಡ ಸಮಾಪ್ತಿಗೊಂಡು ಕಾಂಗ್ರೆಸ್ಸಿಗೆ ಸೇರಿದ ದಾಖಲೆಗಳು ಕಂಡು ಬಂದಿವೆ. ಆಚಾರ್ಯರ ಕೀರ್ತಿ ಶಿಖರ ಮೇಲೇರಿದಂತೆಯೇ ಕೆಳಗಿಳಿಯಿತು. ಪಕ್ಷದ ಪ್ರಮುಖರೇ ಕಾಂಗ್ರೆಸ್ಸಿಗೆ ಸೇರಬೇಕೆಂದು ಒತ್ತಾಯಿಸಿ ಆಚಾರ್ಯರನ್ನು ನಡು ನೀರಿನಲ್ಲಿ ಕೈಬಿಡುತ್ತಲಿದ್ದಾರೆ. ನಿಜವಾಗಿಯೂ ಇದು ಸೋಜಿಗದ ಸಂಗತಿ! ಈ ಒಂದೆರಡು ತಿಂಗಳಲ್ಲಿ ಕಾಂಗ್ರೆಸ್ಸಿನ ಬಗ್ಗೆ ಅವರು ಮಾತನಾಡಿದ ಮಾತುಗಳಿಂದ ತಿರುಗಿ ಅದೇ ಸಂಸ್ಥೆಗೆ ಶರಣು ಹೋಗುವದಾದರೂ ಹೇಗೆ? ಎಂದು ತಿಂಗಳಲ್ಲಿ ಅವರ ಖ್ಯಾತಿ ದೆಳಿಯಿತೇನೋ ಸಹಜ; ಆದರೆ ಮುಂದಿನ ಕಾಲ ಇಳಿಮುಖವಾಗುವ ಲಕ್ಷಣ ಕಾಣುತ್ತಲಿದೆ.

ಮುಂಬರುವ ಚುನಾವಣೆಯು ಕಾಂಗ್ರೆಸ್ ಧುರೀಣರುಗಳ ಆಯ್ಕೆಯ ಪ್ರಶ್ನೆ ಮುಂದೆ ಬಂದಿದೆ. ಈ ಹೋರಾಟದಲ್ಲಿ ಯಾರು ಗೆಲ್ಲುತ್ತಾರೆ ಯಾರು ಸೋಲುತ್ತಾರೆಂದು ಹೇಳುವುದು ಕಷ್ಟವಾಗಿದೆ. ಆದರೂ ಒಬ್ಬರನ್ನೊಬ್ಬರು ಎತ್ತಿ ಹಿಡಿಯುವುದೂ— ಅವರ ಗುಣಕಥನವನ್ನು ಮಾಡುವದೂ—ಇತಿಹಾಸ ಹೇಳುವದೂ—ನಡೆಯುತ್ತಲಿದೆ. ಕೆಲವರು ತಮ್ಮ ಕೂರ್ವೇತಿಹಾಸದಿಂದ ತಾವು ಗೆಲ್ಲಬಹುದೆಂದು ತರ್ಕ ಹೂಡಿದರೆ ಇನ್ನು ಕೆಲವರು ನೆಹ್ರೂರವರ ಸೂಚನೆಯಂತೆ ನಮಗೇ ಪ್ರಥಮ ಪ್ರಾಶಸ್ತ್ಯವೆಂದು ಟಿಕೆಟ್ ಕಟ್ಟಿಕೊಂಡಿದ್ದಾರೆ. ಆದರೆ—ನಂಬಿಕೆ ಎಂಬುದು ಅತ್ಯಂತ ಸೂಕ್ಷ್ಮದವಾದ ಒಂದು ಸಂಗತಿ! ಆತ್ಮ ಸಮರ್ಥನೆಯ ನೆಪದಲ್ಲಿ ತಮ್ಮ ಪ್ರತಿಸ್ಪರ್ಧಿಯಾಗಿ ನಿಲ್ಲುವವರನ್ನು ಒತ್ತಿ ಹಿಡಿಯುವ ಧೋರಣೆಯನ್ನು ಕೆಲವರು ಪಡೆದಿದ್ದಾರೆ. ನಾಳಿನ ಫಲಿತಾಂಶ ಏನಿದ್ದರೂ ಕೆಲವರ ಹೆಸರು ಈಗಲೇ ಗಗನಕ್ಕೆ ಏರಿಸಲಾಗಿದೆ! ಮೇಲಿನ ಕೃಪೆ ಭರವಸೆಯಿಂದಲೋ — ತಾವು ಟಿಕೇಟನ್ನು ಪಡೆದೇ ಪಡೆಯುತ್ತೇವೆಂದು ಹಲವರು ಲೆಕ್ಕ ಹಾಕಿರಲೂ ಬಹುದು. ಮಾತ್ರವಲ್ಲ ಉಳಿದವರ ಶಕ್ತಿಯನ್ನು ಕುಗ್ಗಿಸುವದಕ್ಕೆ ಯುಕ್ತಿಸಲೂ ಬಹುದು! ಆದರೆ ನಾಳೆ ಫಲಿತಾಂಶ ತಿರುವುಮುರುವಾದರೆ ಏರಿದವರು ಇಳಿಯಲೇ ಬೇಕಾಗುತ್ತೆ! ಕೆಳಗಿಂದ ಮೇಲೆ ಏರುವದು ಕಷ್ಟವೂ ಅಲ್ಲ ಜಗತ್ತಿಗೆ ಹೊಸದೂ ಅಲ್ಲ; ಮೇಲಿಂದ ಕೆಳಗಿಳಿಯುವುದು ಬಹಳ ಕಠಿಣವಾಗಿ ತೋರಿದರೂ ಬಹಳ ಕಷ್ಟದ ಸಂಗತಿ! ಸ್ವಲ್ಪ ಅಪಮಾನವೂ ಹೌದು!

ಇಳಿಮುಖತೆ ಇದ್ದ ಹಾಗೆಯೇ ಮನುಷ್ಯನ ಜೀವನದಲ್ಲಿ ಏರಿಳಿತಗಳಿವೆಯೆಂಬುದಕ್ಕೆ ಮೇಲಿನ ದಾಖಲೆಗಳು ಸಾಕಷ್ಟು ಪುಷ್ಟಿ ಕೊಡುತ್ತವೆ.

Our Cumulative Deposit Scheme

A Cumulative Deposit is a very Convenient plan for making compulsory provision for old age, or children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.

ಪ್ರಜಾಸತ್ತೆ [ಕಳೆದ ಸಂಚಿಕೆಯಿಂದ ಮುಂದರಿದುದು] **ಲೇಖಾಂಕ ೨**

ಸಂಪ್ರದಾಯ ಮತ್ತು ಪದ್ಧತಿ

ಪ್ರಜಾಪ್ರಭುತ್ವವು ಜನಮತವನ್ನು ಹೊಂದಿರುವದು. ಜನಮತವು ಹೆಚ್ಚಾಗಿ ಸಾಂಪ್ರದಾಯ ಮತ್ತು ಪದ್ಧತಿಯನ್ನು ಹೊಂದಿರುವದು. ಮಾನವರು ಸಾಂಪ್ರದಾಯಗಳನ್ನನುಸರಿಸಿ ನಡೆಯುವವರು. ಸರ್ವ ಜನರೂ ತಮ್ಮ ನಡೆನುಡಿ, ಉಡಿಗೆ ತೊಡಿಗೆ, ಊಟ ಉಪಚಾರ, ನಡತೆ ಗುಣಗಳಲ್ಲಿ ಸಹಾ ಪದ್ಧತಿಯನ್ನೇ ಅನುಸರಿಸಿ ನಡೆಯುವರು. ನಾವು ಮಾಡುವವರಿಗೆ ಮತ್ತು ಬೇಸಾಯ ಕ್ರಮವು ಪ್ರಾಚೀನ ಕಾಲದ ರೀತಿಯಂತಲೇ ಇದೆ. ಯಾವ ಸುಧಾರಣೆಯನ್ನು ತರಲು ನಮಗೆ ಮನಬರಿಯುವುದಿಲ್ಲ. ಸಾಂಪ್ರದಾಯಗಳಿಗೆ ನಾವು ಕಟ್ಟು ಬಿದ್ದಿದ್ದೇವೆ. ಐವರ್. ಜಿ ಸಿ ಬ್ರೌನ್ (Ivor. G. C. Browrn ಎಂಬವರು ತಮ್ಮ "ಪ್ರಜಾಸತ್ತೆಯ ಅರ್ಥ" (The meaning of Democracy.) ಎಂಬ ಗ್ರಂಥದಲ್ಲಿ ಹೇಳಿದಂತೆ ಯಾವ ಸುಧಾರಕರು ಏನೇ ಹೇಳಲಿ ರಾಜ್ಯದಲ್ಲೇನೇ ಆಗಲಿ ಮಲಗುವ ಕೋಣೆಯ ಕಿಟಕಿಗಳನ್ನು ಭದ್ರವಾಗಿ ಮುಚ್ಚುವೆವು. ಆದಿತ್ಯವಾರ ಶುಭ್ರ ವಸ್ತ್ರವನ್ನು ಧರಿಸುವೆವು. ಜನಮತವೆಂಬುದು ಇಂಥಾ ನ್ಯಾಯ ಬದ್ಧದಲ್ಲಿದ್ದ ನಡತೆ ಮತ್ತು ನಂಬಿಕೆಗಳಲ್ಲಿ ಬೇರೂರಿದೆ.

ಪ್ರತಿವ್ಯಕ್ತಿಗೂ ಅಭ್ಯಾಸ ಗುಣವು ಹೇಗೋ ಹಾಗೆಯೇ ರಾಷ್ಟ್ರಕ್ಕೂ ತನ್ನದೇ ಆದ ಸಂಪ್ರದಾಯ ಅಥವಾ ಪದ್ಧತಿಯಿರುವುದು. ಒಂದು ವ್ಯಕ್ತಿಯು ಸಾಧಾರಣ ಒಂದೇ ಕ್ರಮದಲ್ಲಿ ಆಲೋಚಿಸುವದು, ಕೆಲಸ ಮಾಡುವದು ಅಥವಾ ಆಚರಿಸುವುದೇ ಅಭ್ಯಾಸ ಗುಣವಾಗಿದೆ. ಒಂದು ಕಾಲದಲ್ಲಿ ಮತವಿರೋಧಿಗಳನ್ನು ಕೊಲ್ಲುವದೇ ಸಂಪ್ರದಾಯವಾಗಿತ್ತು. ನಮ್ಮ ದೇಶದಲ್ಲಿ ಸತ್ತ ಗಂಡನ ಶವದೊಟ್ಟಿಗೆ ಜೀವಂತಳಾದ ಹೆಂಡತಿಯನ್ನು ದಹನಮಾಡುತ್ತಿದ್ದರು. ಇದಕ್ಕೆ ಸತಿಸಹಗಮನವೆಂದು ಕರೆಯುತ್ತಿದ್ದರು. ಅನಂತರ ಅಮಂಗಳೆಯರಾದವರನ್ನು ವಿರೂಪಪಡಿಸುತ್ತಿದ್ದರು. ಇತ್ತೀಚೆಗೆ ಅಲ್ಲಲ್ಲಿ ಕೆಲವರು ವಿಧವಾ ವಿವಾಹಕ್ಕೆ ಪ್ರೋತ್ಸಾಹ ಕೊಡುತ್ತಿರುವರು. ಒಂದು ಕಾಲದಲ್ಲಿ ಬಾಲ್ಯವಿವಾಹವು ಪದ್ಧತಿಯಾಗಿತ್ತು. ಈಗ ಅದನ್ನು ನಿಷೇಧಿಸುವರು. ಒಂದು ಕಾಲದಲ್ಲಿ ರಾಜಕೀಯ ವಿಚಾರದಲ್ಲಿ ಹೆಂಗಸರಿಗೇನೂ ಅಧಿಕಾರವಿಲ್ಲ. ಮತಗಣನೆಯ ಕಾಲದಲ್ಲಿ ಮತ ಕೊಡುವ ಹಕ್ಕು ಸಹಾ ಇಲ್ಲ. ಅಮೇಲಣ ಮತ್ತು ಫ್ರಾನ್ಸ್ ಈ ಎರಡೂ ರಾಷ್ಟ್ರಗಳಲ್ಲಿ ಪ್ರಜಾಸತ್ತೆಯನ್ನು ಸಾರುವಾಗ ಎಲ್ಲರೂ ಸಹೋದರರೆಂಬ ಭಾವನೆಯನ್ನು ಘೋಷಿಸಿದ್ದರು. ಸಹೋದರಿಯರ ನೆನಸೇ ಅವರಿಗಾಗಲಿಲ್ಲ. ಅಂಥಾ ಕ್ರಾಂತಿಯಲ್ಲಿ ಭಾಗವಹಿಸಲು ಅವರಿಗೆ ಒಂದಿಷ್ಟೂ ಎಡೆಕೊಡಲಿಲ್ಲ. ಆಧುನಿಕ ಕಾಲದಲ್ಲಿ ಇಂಥಾ ಸಂಪ್ರದಾಯಗಳು ಅದೃಶ್ಯವಾಗುತ್ತಾ ಬಂದರೆ, ಪದ್ಧತಿಗಳನ್ನು ಥಟ್ಟನೆ ಹೋಗಲಾಡಿಸುವದು ಕಷ್ಟವಾದರೂ ಸಮಯ ಸಂದಂತೆ ಅವು ಮಾಯವಾಗುವವು.

ದೇಶದ ಧುರೀಣರ ಮಹತ್ವ ಮತ್ತು ರಾಷ್ಟ್ರದ ಪವಿತ್ರತೆ ಎಂಬುದು ಸರ್ವಜನರ ಪಿತ್ರಾರ್ಜಿತವಾಗಿರುವದು. ಇಂಥಾ ಸಾಂಪ್ರದಾಯಗಳು ದೀರ್ಘಕಾಲದ ಬೆಳವಣಿಗೆಯಿಂದ ಬರತಕ್ಕದ್ದಾಗಿದೆ. ಬಹುಕಾಲದಿಂದ ನಡೆದುಬಂದ ವಿದ್ಯಾಲಯಗಳಲ್ಲಿ ಇದನ್ನು ನಾವು ಪ್ರತ್ಯಕ್ಷ ನೋಡಬಹುದು. ನಮ್ಮ ದೇಶದ ಗತಕಾಲದಲ್ಲಿ ಟೇಕ್ಸೀಲ ಮತ್ತು ನಳಂದ ಎಂಬಲ್ಲಿ ಮತ್ತು ಈಗಿನ ಕಾಲದ ಓಕ್ಸಫೋರ್ಡ್ ಮತ್ತು ಕೇಂಬ್ರಿಜಿನಲ್ಲಿ ಸಹಾ ಇಂಥಾ ಸಾಂಪ್ರದಾಯಗಳು ತೋರಿಬರುವದು. ರಾಜಕಾರಣಿಗಳು ಯಾವ ಧ್ಯೇಯವನ್ನು ವಹಿಸಬೇಕು, ಜನರ ನಂಬಿಕೆಗೆ ಅರ್ಹವಾಗಲು ಅವರಲ್ಲಿ ಯಾವ ಯಾವ ಗುಣಗಳು ಬೇಕೆಂಬುದರ ಬಗ್ಗೆ ತಮ್ಮದೇ ಆದ ಪರೀಕ್ಷೆಯನ್ನು ಮತ್ತು ಆಧಾರವನ್ನು ಮಾಡಿಕೊಳ್ಳುವರು. ಸತ್ಯ, ಗೌರವ ನಿಸ್ವಾರ್ಥತೆ ಮತ್ತು ಧೈರ್ಯ ಇಂಥ ಗುಣಗಳನ್ನೇ ಪೂರ್ಣ ಲಕ್ಷಣಗಳ ತೂಕ ಅಥವಾ ಅಳತೆಯನ್ನಾಗಿಟ್ಟುಕೊಂಡಿರುವರು. ವಿಶಾಲ ದೃಷ್ಟಿಯಿಂದ ನೋಡುವದಾದರೆ ಸಾಂಪ್ರದಾಯವೆಂಬುದು ಒಂದೇ ದೇಶದ ಗತಕಾಲದ ಎಲ್ಲಾ ಪ್ರಭಾವಗಳು ಕೂಡಿ ವರ್ತಮಾನ ಕಾಲದಲ್ಲಿ ಯಾವ ದಾರಿ ಹಿಡಿಯಬೇಕೆಂಬುದದನ್ನು ಸೂಚಿಸುತ್ತದೆ. ಇಂಥಾ ಲಕ್ಷಣಗಳ ಪ್ರಭಾವದ ಒಳ್ಳೇ ದೃಷ್ಟಾಂತಗಳನ್ನು ಅಮೇರಿಕ ಮತ್ತು ಸ್ವಿಜರಲೇಂಡಿನಲ್ಲಿ ನೋಡಬಹುದು. ಅಲ್ಲಿನ ಜನರು ಪರಂಪರೆಯಾಗಿ ಸ್ವಾತಂತ್ರ್ಯಪ್ರಿಯರು ಸಾಂಪ್ರದಾಯಿಕವಾಗಿ ಕರ್ತವ್ಯನಿರತರು. ಸಾಮಾಜಿಕ ಜವಾಬ್ದಾರಿಯನ್ನರಿತವರಾಗಿ ಶಾಸನಗಳನ್ನು ಪದ್ಧತಿಯಂತೆ ಗೌರವಿಸಿ ಮಾನ್ಯತೆ ಕೊಡುವುದು ಪ್ರತಿ ವ್ಯಕ್ತಿಯ ಮನಸ್ಸಿನಲ್ಲೂ ಬೇರೂರಿರುವದು.

ಸಂಪ್ರದಾಯಗಳಲ್ಲಿ ಒಳ್ಳೇದು ಮತ್ತು ಕೆಟ್ಟದ್ದು ಎರಡೂ ಇವೆ. ಕೆಟ್ಟ ನಡತೆಯ ಸೋಂಕು ತಲಾಂತ್ರ ಅಂಟಿಕೊಳ್ಳಬಹುದು. ಗ್ರೀಕರ ಪ್ರಜಾಪ್ರಭುತ್ವದಲ್ಲಿ ಲಂಚಗುಳಿತನವು ವಾಡಿಕೆಯಾಗಿತ್ತು. ಇಂಗ್ಲಾಂಡಿನಲ್ಲಿ ವಾಲಿಪೋಲರ ಸರಕಾರದಲ್ಲಿ ಇದು ರೂಢಿಯಾಗಿತ್ತು. ಸಾಧಾರಣ ಹತ್ತೊಂಭತ್ತನೆ ಶತಮಾನದ ಮಧ್ಯದ ಸಮಯದ ವರೆಗೆ ಈ ದುರ್ಗುಣವು ಮತದಾರರ ಫಿರ್ಕದಲ್ಲಿ (Constituency) ಇದ್ದಿದೆ. ಯುದ್ಧಪ್ರಿಯತೆಯು ಜರ್ಮನರಲ್ಲಿ ಬಹುಕಾಲದ ಪದ್ಧತಿಯಾಗಿರುವದು. ವರ್ಣಭೇದವೆಂಬುದು ದಕ್ಷಿಣ ಆಫ್ರಿಕದ ಬಿಳಿಜನರ ಸಾಂಪ್ರದಾಯವಾಗಿದೆ. ಜಾತಿಭೇದವೆಂಬುದು ನಮ್ಮ ಪರಂಪರೆಯಾಗಿದೆ. ಸಾಂಪ್ರದಾಯಗಳು ನಿಧಾನವಾಗಿ ಬೆಳೆಯುವವು. ಆದರೆ ಪಕ್ಕನೆ ಬಿದ್ದುಹೋಗುವವು. ಜನಸಂಖ್ಯೆಯು ಹೆಚ್ಚಿದಂತೆ ಸ್ವಾತಂತ್ರ್ಯ ಪಡೆದ ಜನರೂ ಜಾಸ್ತಿಯಾದಂತೆ ಅಥವಾ ರಾಷ್ಟ್ರಕ್ಕೆ ಗಂಡಾಂತರಗಳೊದಗಿದರೆ ಸಾಂಪ್ರದಾಯಗಳು ತನ್ನಷ್ಟಕ್ಕೆ ಮೂಲೆ ಹಿಡಿಯುವವು. ಲೋಕದಲ್ಲಿ ವಿದ್ಯೆಯು ಪಸರಿಸಿ ಓದುಬರಹ ತಿಳಿದವರ ಸಂಖ್ಯೆಯು ಹೆಚ್ಚಿದ ನಂತರ ಪುಸ್ತಕಗಳು ಮತ್ತು ಪತ್ರಿಕೆಗಳು ಜನರಿಗೆ ನವೀನ ಅನುಭವಗಳನ್ನು ಕೊಡುವುದರಿಂದ ಅರ್ಥವಿಲ್ಲದ ಅನೇಕ ಸಾಂಪ್ರದಾಯಗಳು ಒಂದೊಂದೇ ಕುಸಿದುಬೀಳಲು ಪ್ರಾರಂಭವಾದವು. ಇದನ್ನೆಲ್ಲಾ ಅವಲೋಕಿಸುವದಾದರೆ ತಿಳುವಳಿಕೆಯುಳ್ಳ ಸ್ವಲ್ಪ ಜನರು ಅಥವಾ ಯಾರಾದರೂ ದೊಡ್ಡವ್ಯಕ್ತಿಯು ಸಾಂಪ್ರದಾಯಕ್ಕೆ ವಿರೋಧವಾದ ಯಾವದೊಂದು ವಿಷಯದ ಕುರಿತು ಹೊಸ ಅನುಭವವನ್ನು ಪಣತೊಟ್ಟು ಸಾಧಿಸುವದಾದರೆ ಅದು ಅತಿ ನಿಂದ್ಯಾಸ್ಪದವಲ್ಲದಿರುವಲ್ಲಿ ಮತ್ತು ಮಾನವರ ಸ್ವಾಭಾವಿಕ ಗುಣಗಳಿಗೆ ವಿರೋಧವಲ್ಲದ್ದಾದರೆ ಎಷ್ಟು ದೀರ್ಘಕಾಲದ ಅನುಭವವಾದರೂ ಬದಲಾಯಿಸಬಹುದೆಂಬುದು ನಿಶ್ಚಯ. ಜನರ ಅಪವಾದ ಮತ್ತು ದೂಷಣೆಗಳನ್ನು ಕೇಳಲಿಕ್ಕೂ ಸಹಿಸಲಿಕ್ಕೂ ಸಹನ ಶಕ್ತಿ ಇವರಲ್ಲಿರಬೇಕು. ಇಂಥವರೇ ಹೊಸದಾರಿಯನ್ನು ತೋರುವವರು. ಇದೇ ಕ್ರಮದಿಂದಲೇ ವೈಯಕ್ತಿಕ ಅಭಿಪ್ರಾಯವು ಮೆಲ್ಲಮೆಲ್ಲಗೆ ಜನಮತವಾಗುವದು. ಪ್ರಾಚೀನ ಕಾಲದಲ್ಲಿ ಗ್ರೀಕರು ಮತ್ತು ರೋಮು ದೇಶದವರ ಸಣ್ಣ ಸಣ್ಣ ಪ್ರಭುತ್ವದಲ್ಲಿ ಗುಲಾಮರು ಮತ್ತು ಪರದೇಶೀಯರ ಪ್ರಜೆಗಳನ್ನು ಎಣಿಕೆಗೆ ತಂದಿದ್ದರು. ಆ ಕಾಲದಲ್ಲಿ ಪ್ರಜಾಸತ್ತೆಯು ಜಾರಿಯಲ್ಲಿರುವಲ್ಲೆಲ್ಲಾ ಗುಲಾಮರು ತುಂಬಿಹೋಗಿರುವರು. ಆಧುನಿಕ ಕಾಲದ ಪ್ರಜಾಸತ್ತೆಯಲ್ಲಿ ಸ್ವತಂತ್ರ್ಯವಿರುವವರು ಎಲ್ಲಿ ಹೆಚ್ಚಿರುವರೋ ಅಲ್ಲಿ ಪ್ರಜಾಸತ್ತೆಯು ಬೆಳೆದಿರುವವು. ಆ ಕಾಲದ ಸಂಪ್ರದಾಯಕ್ಕೂ ಈಗಿನ ಕಾಲದ ಸಂಪ್ರದಾಯಕ್ಕೂ ಎಷ್ಟು ಭೇದಭಾವವಿದೆ ಎಂಬುದನ್ನು ನೋಡಬಹುದು. ಈಗಿನ ಕಾಲದಲ್ಲಿ ಜನರನ್ನು ಮಾರಾಟಮಾಡಿದ್ರೆ ಸರಕಾರದವರು ಶಿಕ್ಷಿಸುವರು. ಹಾಗೆ ಮಾಡುವವರು ತಪ್ಪಿದಲ್ಲಿ ಅಂತರರಾಷ್ಟ್ರದವರು ಕೇಳುವರು. ಪ್ರಜಾಪ್ರಭುತ್ವವು ಕೆಲವು ಸಂಪ್ರದಾಯಗಳನ್ನು ಹೊಂದಿರುವದಾದ್ರೂ ಅವೇ ಅದಕ್ಕೆ ಆಧಾರವಲ್ಲವೆಂದು ಈ ಮೇಲಿನ ದೃಷ್ಟಾಂತದಿಂದ ಸಮಾಧಾನವಾದೀತು. ಆದರೆ ಯಾವ ಕಾಲದಲ್ಲಿಲ್ಲ ಪ್ರಜಾಪ್ರಭುತ್ವ ಜನಮತವನ್ನೇ ಹೊಂದಿರುವದೆಂಬುದು ನಿಸ್ಸಂದೇಹ. ಜನಮತವಿಲ್ಲದಿರುವಲ್ಲಿ ಪ್ರಜಾಪ್ರಭುತ್ವಕ್ಕೆ ಉಳಿಗಾಲ್ಲವಿಲ್ಲದಂತಾಗುವುದು.

— ಸಿ. ಎಚ್. ಶೆಟ್ಟಿ, ಬಿ. ಎ.

(ಮುಂದುವರಿಯುವದು)

TEL. 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಠೇವು ರೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.)

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಅಂಬೇಡ್ಕರ್ ರಾಜಾಜಿ ನಿವೃತ್ತಿಹೊಂದುವರೇ?

ಅತ್ಯಂತ ನೇಮನಿಷ್ಠೆಯಿಂದು ಕೆಲಸದ ರಾಜಾಜಿಗೀಗ 72 ತುಂಬುತ್ತಲಿದೆ. ಕಳೆದ ವರ್ಷವೇ ರಾಜಕೀಯದಿಂದ ಬಿಡುಗಡೆ ಹೊಂದಬೇಕೆಂದು ಬಯಸಿದ್ದವರು, ಸರದಾರ್ ಪಟೇಲರು ನಿಧನ ಹೊಂದಿದುದರಿಂದ ಗೃಹಖಾತೆಯನ್ನು ಅವರು ವಹಿಸಿಕೊಳ್ಳುವದು ಅನಿವಾರ್ಯವಾಯಿತು. ಮುಂಬರುವ ಚುನಾವಣೆಯಲ್ಲಾಗಲೀ-- ರಾಜಕೀಯ ಕಾರ್ಯಗಳಲ್ಲಾಗಲೀ ಭಾಗವಹಿಸದೆ ತನ್ನ ಹುಟ್ಟೂರಾದ ಮದ್ರಾಸದಲ್ಲಿ ಮುಂದಿನ ದಿನಗಳನ್ನು ಕಳೆಯುವ ದೃಢ ನಿರ್ಧಾರ ಮಾಡಿದ್ದಾರೆ ರಾಜಾಜಿ.

ಕೊನೆಯದಾಗಿ ರಾಜಕೀಯದಿಂದ ಬಿಡುಗಡೆ ಹೊಂದುವಾಗ ತನ್ನ ಪತ್ರಿಕಾ ಮಸೂದೆಗೆ ಜೀವದಾನ ಕೊಡಬೇಕೆಂದು ಬಯಸಿದ್ದರು. ರಾಜಾಜಿಯ ಮಸೂದೆಯಿಂದ ಪತ್ರಿಕೆಗಳ ಅಂತಸ್ತು-ವಿಷಯ ವೈವಿಧ್ಯತೆಗಳು ಮರ್ಯಾದಿತಗೊಳಿಸುವವಾದರೂ ಹಲವು ಪತ್ರಿಕೆಗಳು ಇದರಿಂದ ಮಣ್ಣು ಮುಕ್ಕುವುದು ಖಂಡಿತ! ಈಗ ಪಾರ್ಲಿಮೆಂಟಿನ ಮುಂದೆ ಬಲವತ್ತರವಾದ ವಿರೋಧ ಸೂಚನೆಗಳೊಂದಿಗೆ ಪರಿಶೀಲನ ಸಮಿತಿಗೆ ಒಪ್ಪಿಸಲಾಗಿದೆ. ತಾನು ಹೊರಬರುವಾಗ ಯಾವ ರೀತಿಯಿಂದಲಾದರೂ ಈ ಮಸೂದೆಗೆ ಜೀವದಾನಮಾಡಬೇಕೆಂದು ರಾಜಾಜಿ ಹಟಹಿಡಿದಿದ್ದರು. ತಾಸುತಾಸುಗಟ್ಟಲೆ ವಾದಿಸಿದ್ದರು. ಇಂದು ಪರಿಶೀಲನ ಸಮಿತಿಯು ಒಪ್ಪಿಸಿದ ವರದಿಯಿಂದ ರಾಜಾಜಿಗೆ ಅಮಿತಾನಂದವಾಗಿರಬಹುದು. ಏಕೆಂದರೆ ಪರಿಶೀಲನ ಸಮಿತಿಯು ಹೆಚ್ಚೇನೂ ಬದಲಾವಣೆ ಮಾಡದೆ ರಾಜಾಜಿಯ ಬಯಕೆಯನ್ನು ಈಡೇರಿಸಿಯದೆ. ಪರಿಶೀಲನ ಸಮಿತಿಯಲ್ಲಿ ಮಸೂದೆಯ ಕುರಿತು ಭಿನ್ನಾಭಿಪ್ರಾಯ ತಲೆದೋರಿತ್ತಾದರೂ ಕೊನೆಗೆ ಸೌಮ್ಯರೀತಿಯ ಕೆಲವು ತಿದ್ದುಪಡಿಗಳ ಮೂಲಕ ಅದು ಪರಿಷ್ಕಾರಗೊಂಡಿತು. ಅಂತಲೇ ರಾಜಾಜಿ ತನ್ನ ಚಾಣಾಕ್ಷ ನೀತಿಗೆ ಹೆಮ್ಮೆಪಡುತ್ತಿರಬೇಕು. "ಬೆತ್ತಲೆ ಪತ್ರಿಕೆಗಳು ಹೋಗಬೇಕೆಂಬುದೇ ನನ್ನ ವಾದ" ಎಂದಿದ್ದಾರೆ ರಾಜಾಜಿ! ಈ ಮಸೂದೆಯಿಂದ ಅಷ್ಟೆ ಮಾತ್ರವಲ್ಲ ಸರಕಾರ ಇಷ್ಟಬಂದಾಗ ಕಾಯಿದೆಯ ಮೂಲಕ ಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದೆಂದು ಆ ಚಾಣಾಕ್ಷನಿಗೆ ಗೊತ್ತಿರುವದನ್ನು ಬಾಯ್ಬಿಡದೆ ಮನಸ್ಸಿನಲ್ಲೇ ಹಿಗ್ಗಿರಬೇಕು. ಅಂತೂ ರಾಜಾಜಿ ರಾಜಕೀಯದಿಂದ ನಿವೃತ್ತಿಗೊಳ್ಳುವದು ಖಂಡಿತ! ಹೇಳಿದವರಿಗೆ 'ಈ ಬುದ್ಧಿಶಾಲೀ ಮುದುಕನ ಅವಶ್ಯ ಬೇಕೆಂದು' ಅಂದರೂ ರಾಜಾಜಿಗೆ ತಾನು ಹೊರಗುಳಿಯುವದರಲ್ಲೇ ತೃಪ್ತಿ. ಕೊನೆಗೊಮ್ಮೆ ಮಸೂದೆ ಬದುಕಿದರಿಂದ ಇನ್ನೊಂದು ಬಗೆಯ ತೃಪ್ತಿಯುಂಟಾಗಿರಬೇಕು! ಆದರೆ ಪತ್ರಿಕೆಗಳು ಈ ಚಾಣಾಕ್ಷನ ದೂರಾಲೋಚನೆ (ದುರಾಲೋಚನೆಯಲ್ಲ) ಯನ್ನೆಂದೂ ಮರೆಯುವಂತಿಲ್ಲ!

ಅಂಬೇಡ್ಕರರ ಅಂತರ್ಲಾಗ

ಕೇಂದ್ರ ಸರಕಾರದ ಕಾಯಿದೆ ಮಂತ್ರಿಗಳೂ ಹಿಂದೂ ಕೋಡು ಮಸೂದೆಯ ಪ್ರವರ್ತಕರೂ ಆದ ಡಾ। ಅಂಬೇಡ್ಕರರು ತನ್ನ ಮಂತ್ರಿಪದವಿಗೆ ರಾಜೀನಾಮೆಯನ್ನು ಸಲ್ಲಿಸಿ ಅದನ್ನು ಶೀಘ್ರ ತನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಧಾನ ಮಂತ್ರಿ ನೆಹ್ರೂರವರನ್ನು ಕೇಳಿಕೊಂಡಿರುವರಂತೆ! ಅಂಬೇಡ್ಕರರು ರಾಜಾಜಿಯಂತೆ ತುಂಬು ವಯಸ್ಸಿನ ಮುದುಕರೇನಲ್ಲ. ಅವರು ರಾಜೀನಾಮೆಯನ್ನು ಸಲ್ಲಿಸಬೇಕಾದರೆ ಅದಕ್ಕೆ ಮುಖ್ಯ ಕಾರಣ ಹಿಂದೂ ಧರ್ಮಶಾಸ್ತ್ರ ಕ್ರೋಢೀಕರಣ ಮಸೂದೆಯನ್ನು ತತ್ಕಾಲ ಮುಂದೂಡಿದ್ದೇ ಆಗಿರುತ್ತದೆ. ಹಿಂದೂ ಕೋಡು ಮಸೂದೆಗೆ ಪಾರ್ಲಿಮೆಂಟಿನಲ್ಲಿ ಮಾತ್ರವಲ್ಲದೆ ಇಡಿಯ ದೇಶದಲ್ಲೇ ಪ್ರತಿಸೂಚನೆ ಪ್ರಕೋಪ ಮನೋವೃತ್ತಿ ಕಂಡುಬರುತ್ತಿರುವದನ್ನು ಲಕ್ಷಿಸಿ ಮುಂಬರುವ ಚುನಾವಣೆಯಲ್ಲಿ ಅದರ ಪ್ರತಿಕ್ರಿಯೆ ಏನಾದೀತೆಂಬುದನ್ನು ಚೆನ್ನಾಗಿ ಗ್ರಹಿಸಿಯೇ ಈ ಮಸೂದೆಯನ್ನು ಮುಂದೂಡಿದ್ದಾಗಿದೆನ್ನಬಹುದು! ವಿಸರ್ಜಿತ ಪ್ರಸ್ತಾವದ ಮಸೂದೆಯನ್ನು ಪಾಸು ಮಾಡಬೇಕೆಂದು ಅಂಬೇಡ್ಕರರು ಪ್ರಯತ್ನ ಮಾಡಿದರು. ಅದರಲ್ಲಿ ನೆಹ್ರೂ ತನ್ನ ಬಲಗೈ ಬಂಟನಾಗಿರುವಾಗ ಅವರಿಗೇನೂ ಸಂಶಯವಿರಲಿಲ್ಲ! ಅಲ್ಪ ಸಂಖ್ಯೆಯಲ್ಲಿ ಅವರ ಮಸೂದೆಯನ್ನು ಬೆಂಬಲಿಸುವವರೂ ಇದ್ದರು. ಆದರೆ ನೆಹ್ರೂ ಅಂಬೇಡ್ಕರರನ್ನು ಸಂಪೂರ್ಣ ಕೈಬಿಟ್ಟುಬಿಟ್ಟರು!

ನೆಹ್ರೂ ಅದರಲ್ಲಿ ಆಸ್ಥೆಯನ್ನು ತೋರಿಸದಿರಲು ಮುಖ್ಯ ಕಾರಣ, ಒಂದನೆಯದಾಗಿ ಮುಂಬರುವ ಚುನಾವಣೆಯ ಮೇಲಾಗುವ ದುಷ್ಪರಿಣಾಮದ ಭೀತಿ—ಎರಡನೆಯದಾಗಿ ಕಾಂಗ್ರೆಸ್ಸಿನ ಉಚ್ಚ ವ್ಯಕ್ತಿಗಳಿಗೇ ಅದು ಬೇಡಾಗಿರುವಂಥದ್ದು! ಇವೆರಡು ಪ್ರಬಲವಾದ ಕಾರಣಗಳು. ಈ ವಿರೋಧ-ಆತಂಕಗಳನ್ನು ಅಂಬೇಡ್ಕರರೂ ಬಲ್ಲರು. ಇಂತಹ ಕಾರಣಗಳಿಗೆ ಬೆದರದೆ ನೆಹ್ರೂ ಸಹಕರಿಸಬಹುದೆಂಬ ಪ್ರಬಲೇಚ್ಛೆ ಅಂಬೇಡ್ಕರರಲ್ಲಿತ್ತು! ನೆಹ್ರೂಗಳಾದರೋ ಈ ಮಟ್ಟಿಗೆ ಪ್ರವಾಹದೊಂದಿಗೆ ತೇಲಾಡುವ ವ್ಯಕ್ತಿಗಳಾದರೆಂದೇ ಹೇಳಬೇಕು. ಈಚೆಗೆ ಸರ್ವಾಧಿಕಾರಿಯ ಲಕ್ಷಣಗಳೇ ಅವರಲ್ಲಿ ಮೂರ್ತೀಭವಿಸಿದಂತಿದೆಂದು ಹಲವರು ಆರೋಪಿಸಿದ್ದಕ್ಕೆ ಸರಿಯಾಗಿ ಹಲವು ಪತ್ರಿಕೆಗಳು 'ಹೊವೇನೋ' ಎನ್ನುವಷ್ಟು ಮೆಚ್ಚಿಕೊಳ್ಳುತ್ತಿದ್ದವು. ಹಿಂದೂ ಧರ್ಮ ಕ್ರೋಢೀಕರಣ ಮಸೂದೆಯು ನೆಹ್ರೂ ಛಲ ಹಿಡಿದಿದ್ದರೆ ಪಾರ್ಲಿಮೆಂಟಿನಲ್ಲಿ ಪಾಸಾಗುತ್ತಿತ್ತು! ಆದರೆ ಅವರು ಜನರ ಬಲವಿತ್ತ ಕಡೆಗೆ ಸ್ವಲ್ಪ ದೃಷ್ಟಿ ಹರಿಸಿದಂತಿದೆ.

ಪಾರ್ಲಿಮೆಂಟು ಇನ್ನೂ ಮಹತ್ವದ ಹಲವು ಮಸೂದೆಗಳನ್ನು ಚರ್ಚಿಸಬೇಕಾದ ಕಾರ್ಯವಿರುವದರಿಂದ ಈ ಮಸೂದೆಯ ಮೇಲೆ ಚರ್ಚೆ ನಡೆಸುವದರಲ್ಲೇ ದೀರ್ಘ ಕಾಲ ತಳ್ಳುವದು ಯೋಗ್ಯವಾಗದೆಂದು ನೆಹ್ರೂ ಹೇಳುವಂತೆ ತೋರಿಕೆಯ ಮಟ್ಟಿಗೆ ಸಹಜವಾದರೂ ಮೊದಲಿನ ಎರಡು ಕಾರಣಗಳು ಮುಖ್ಯವಾಗಿವೆಂಬುದನ್ನು ನಾವು ಮರೆಯತಕ್ಕದ್ದಿಲ್ಲ! ಹೀಗೆ ನಡುನೀರಿನಲ್ಲಿ ನೆಹ್ರೂ ಅಂಬೇಡ್ಕರರನ್ನು ಕೈಬಿಡುವರೆಂದು ಅವರು ಊಹಿಸಿರಲಿಲ್ಲ! ಮಾತ್ರವಲ್ಲ, ಮಸೂದೆಗೆ ಜೀವದಾನ ಕೊಡುವ ವಿಚಾರದಲ್ಲಿ ಅಂಬೇಡ್ಕರರು ಬಹಳವಾಗಿ ವಾಗ್ಯುದ್ಧ ನಡೆಸಿ ತನ್ನ ಛಲವನ್ನು ಸಾಧಿಸಿಯೇ ಬಿಡುವೆನೆಂಬ ಪಣತೊಟ್ಟಿದ್ದರು—ತಾನು ಹೊರಬರುವ ಮುನ್ನ ಆ ಮಸೂದೆ ಕಾರ್ಯರೂಪದಲ್ಲಿ ಬರಲೇಬೇಕೆಂಬ ಹಟ—ಉದ್ದೇಶಗಳನ್ನು ಅವರಲ್ಲಿತ್ತು! ನೆಹ್ರೂರವರು ಗಾಳಿಬಂದತ್ತ ತೂರಿಕೊಂಡದ್ದರ ಫಲವಾಗಿ ಅವರ ಆಶಾಗೋಪುರಗಳೆಂದು ಕುಸಿದುಬೀಳುವಂತಾಗಿವೆ. ಅಂತಲೇ ಅಂಬೇಡ್ಕರರು ತನ್ನ ಮಂತ್ರಿಪದಕ್ಕೆ ರಾಜೀನಾಮೆಯನ್ನಿತ್ತು—ಸುಪ್ರೀಮು ಕೋರ್ಟಿನಲ್ಲಿ ವಕೀಲವೃತ್ತಿ ಕೈಗೊಳ್ಳುವರಂತೆ! ಪ್ರಚಂಡ ವಾಗ್ಮಿಗಳೂ, ತಾರ್ಕಿಕರೂ ಆದ ಅಂಬೇಡ್ಕರರಿಗೆ ಕೊನೆಗಾದರೂ ಬಡಬಡಿಕೆಗೆ ಒಂದು ರಂಗ ಬೇಕೇ ಬೇಕು! ಆದರೆಂತಲಿ ಅವರು ಮಂತ್ರಿಪದವಿಯಿಂದ ವಕೀಲವೃತ್ತಿಗೆ ಅಂತರ್ಲಾಗ ಹೊಡೆದಿರಬೇಕು!

ಬರೇ ರೂ. 12ಕ್ಕೆ ಮಿತ ದಾಸ್ತಾನು



ನಮ್ಮ ವಾಚುಗಳು ಜನಪ್ರಿಯವಾಗುವ ಸಲುವಾಗಿ ನಾವು ನಮ್ಮ 17 ಜ್ಯುವೆಲ್ಸ ವಾಟರ್‌ಪ್ರೂಫ್ ರೋಲ್ಡ್ ಗೋಲ್ಡ್ ರಿಸ್ಟ್‌ವಾಚುಗಳನ್ನು ಸೀಮಿತ ದಾಸ್ತಾನು ಮುಗಿಯುವ ತನಕ ಬರೇ ರೂ. 12ಕ್ಕೆ ವಿಕ್ರಯಿಸಲು ನಿರ್ಧರಿಸಿದ್ದೇವೆ.

U. W. CO. (N. U).
Post Box No. 6871 CULCUTTA-7.

The Popular Insurance Company Limited,

"POPULAR BUILDINGS" – MANGALORE.

Estd. 1929.

Post Box 34
Telephone 217.
Tel. "POPULAR".

Rs. 1,20,00,000

Yes that is the sum the "POPULAR" has undertaken to pay thousands of its *satisfied* Policyholders

It is the provision made for their Old Age or for their Dependants. YOU too need this provision and the "POPULAR"- Your Own Company- is there to plan and take care of your future. Be a POPULAR POLICYHOLDER today.

We have attractive and remunerative appointments of Special and Ordinary agencies Full or part time, you can add to your income in taking to "POPULAR" Representation Please call at the Office for further details

ಅಲ್ಲಾ ಯಾರನ್ನು ಕಾಯಬೇಕು?

ಪರ್ಶಿಯದಿಂದ ಬ್ರಿಟಿಶರನ್ನು ಹೊರ ತಳ್ಳುವ ಆಜ್ಞೆಯನ್ನು ಹೊರಡಿಸುತ್ತಾ ಪ್ರಧಾನಮಂತ್ರಿ ಡಾ| ಮುಸಾದಿಕರು "ಬ್ರಿಟಿಶರಿಗೆ ಅಲ್ಲಾ ಸದ್ಬುದ್ಧಿಯನ್ನು ಕೊಟ್ಟು ಕಾಪಾಡಲಿ" ಎಂದು ಹೇಳಿರುವರು. ಇಂದು ಪರ್ಶಿಯ ಬ್ರಿಟಿಷರೊಳಗೆ ಬೆಳೆಯುತ್ತಿರುವ ದ್ವೇಷ ಭಾವನೆಯನ್ನು ನೋಡಿದರೆ ಅಲ್ಲಾ ಯಾರನ್ನು ಕಾಯಬೇಕು- ಯಾರಿಗೆ ರಕ್ಷಣೆ ಕೊಡಬೇಕೆಂಬುದು ಒಂದು ಸಮಸ್ಯೆಯೇ.

ಅಬದಾನದಲ್ಲಿಯ ಮುನ್ನೂರು ಜನ ಬ್ರಿಟಿಶ ತಜ್ಞರನ್ನು ಪರ್ಶಿಯವನ್ನು ಬಿಟ್ಟು ಹೊರಡಬೇಕೆಂಬ ಸುಗ್ರೀವಾಜ್ಞೆಯನ್ನು ಹೊರಡಿಸಿರುವದರಿಂದ ಬ್ರಿಟನ್ನಿಗೆ ವಿಶೇಷ ಕಳವಳವುಂಟಾಗಿದೆ. ಪರ್ಶಿಯದ ಆಜ್ಞೆಯನ್ನು ಪ್ರತಿಭಟಿಸುವ ಕಠಿಣಭಾಷೆಯ ಪತ್ರವೊಂದನ್ನು ಪರ್ಶಿಯದಲ್ಲಿಯ ಬ್ರಿಟಿಶ ರಾಯಭಾರಿಯ ಮೂಲಕ ಮುಸಾದಿಕರಿಗೆ ಮುಟ್ಟಿಸಲಾಗಿದೆ. ಇನ್ನೊಂದು ಪತ್ರವನ್ನು ಅಮೇರಿಕೆಗೂ ಕಳಿಸಲಾಗಿದೆ. ಅಬದಾನದ ಎಣ್ಣೆ ಕಂಪೆನಿಯು ಪರ್ಶಿಯ ಸರಕಾರದ ಸೈನ್ಯ ಸಂರಕ್ಷಣೆಯೊಂದಿಗೆ ಪೂರ್ಣ ಅವರದೇ ಆಗಿ ಪರಿವರ್ತಿತವಾಗಿದ್ದು ಯಾವ ಬಿಳಿಯನೂ ಒಳಗೆ ಪ್ರವೇಶಿಸದಂತೆ ಸರ್ಪಕಾವಲನ್ನಿಡಲಾಗಿದೆ.

ಬ್ರಿಟನು ಈ ಅಪಮಾನವನ್ನು ಹೇಗೆ ಸಹಿಸೀತು? ಅಕ್ಟೋಬರ 25ಕ್ಕೆ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಅದು ಮಗ್ನವಾಗಿರುವ ಸಂಧಿಯನ್ನು ಸಾಧಿಸಿಯೇ ಡಾ| ಮುಸಾದಿಕರು ಉಗ್ರ ಕಾರ್ಯಕ್ರಮ ಕೈಗೊಂಡಿರುವರು. ಬ್ರಿಟನಿಗೆ ಇನ್ನುಳಿದಿರುವುದು ಎರಡೇ ಮಾರ್ಗ: ಒಂದು ಸೈನ್ಯ ಶಕ್ತಿಯಿಂದ ಎಣ್ಣೆ ಕಂಪೆನಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಇನ್ನೊಂದು, ಪರ್ಶಿಯದ ರಾಷ್ಟ್ರೀಕರಣ ತತ್ವವನ್ನು ಇದ್ದಕ್ಕಿದ್ದ ಹಾಗೆಯೇ ಒಪ್ಪುವದು. ಸೈನ್ಯ ಶಕ್ತಿಯನ್ನು ಪ್ರಯೋಗಿಸುವದಕ್ಕೆ ಅಧ್ಯಕ್ಷ ಟ್ರೂಮನ್ನರು ವಿರೋಧವನ್ನು ಸೂಚಿಸಿರುತ್ತಾರೆ. ಸಂಧಾನ ಮಾತುಕತೆಗಳ ಮೂಲಕವೇ ಬಗೆಹರಿಯಬೇಕೆಂದು ಟ್ರೂಮನ್ನರು ಉಭಯ ರಾಷ್ಟ್ರಗಳಿಗೂ ತಿಳಿಸಿರುವರು. ಬ್ರಿಟನಿನ ಮಂತ್ರಿಮಂಡಳದಲ್ಲಿ ಸಮಾಲೋಚನೆ ನಡೆದಿದ್ದು ವಿರೋಧಿ ಪಕ್ಷದವ್ರ ಧುರೀಣರೊಡನೆ ಅಟ್ಲಿಯವರು ಗುಪ್ತ ಮಾತುಕತೆ ನಡೆಸಿರುವರು. ಇಂಗ್ಲಂಡದ ಶಾಹರಿಗೆ ಬ್ರಿಟಿಶರನ್ನು ಬಹಿಷ್ಕರಿಸುವ ಈ ಆಜ್ಞೆಯನ್ನು ತಡೆಹಿಡಿಯುವ ಅಧಿಕಾರವಿರುವದರಿಂದ ಅವರಿಗೆ ಹಾಗೆ ವರ್ತಿಸುವಂತೆ ತಿಳಿಸಬೇಕೆಂದು ಬ್ರಿಟನು ಸೂಚಿಸಿಯುಸಿದರೂ ಡಾ| ಮುಸಾದಿಕರು ಶಾಹರನ್ನು ತನ್ನ ಧ್ಯೇಯಮುಷ್ಟಿಯಲ್ಲಿಟ್ಟುಕೊಂಡಿರುವ ಪ್ರಯುಕ್ತ ಅದು ಪ್ರಯೋಜನಕಾರಿಯಾಗುವಂತಿಲ್ಲ. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಶಾಹ ತಂದೆಯವರನ್ನು ಬ್ರಿಟಿಶರು ಗಡೀಪಾರು ಮಾಡಿರುವದನ್ನು ಜ್ಞಾಪಿಸಿ ಶಾಹರಿಗೆ ಬೆದರಿಕೆ ಹಾಕಲಾಗಿದೆ.

ಇರಾಣವು ಬೇರೆ ಬೇರೆ ರಾಷ್ಟ್ರಗಳಿಗೆ ಎಣ್ಣೆ ಪೂರೈಸುವ ನಿರ್ಧಾರಮಾಡಿರುವದನ್ನು ಬ್ರಿಟನು ಪ್ರತಿಭಟಿಸಿದೆ, ಪರ್ಶಿಯಾ ಇಂಗ್ಲಂಡದ ನಡುವಿನ ಅರಬ ನದಿಗೆ ಯುದ್ಧ ಹಡಗುಗಳು ಬಂದು ನಿಲಸಿವೆ. ಬ್ರಿಟಿಶ ವಿಮಾನಿಕರಿಗೆ ಎಣ್ಣೆ ಶುದ್ಧೀಕರಣ ಕಾರಖಾನೆಯ ಹತ್ತಿರ ಸಜ್ಜಾಗಿನಿಂತಿವೆ. ರೇಡಿಯೋ ಮೂಲಕ ಬ್ರಿಟನು ಸೈನ್ಯಕ್ರಮವನ್ನು ಸಾರಿದಾಗ್ಯೂ ಕೂಡಲೇ ಪರ್ಶಿಯವನ್ನು ಮುತ್ತಿಗೆ ಹಾಕುವ ಸರ್ವಸನ್ನಾಹ ಬ್ರಿಟನು ಮಾಡಿಯಿದೆ. ಸುಸಜ್ಜಿತವಾದ ಬ್ರಿಟಿಶ ಸೈನಿಕರನ್ನು ಪ್ರತಿಭಟಿಸುವ ಸಾಮರ್ಥ್ಯ ಪರ್ಶಿಯಕ್ಕೊಂದಕ್ಕೆ ಇರಲಾರದು! ರಶಿಯದ ಸಹಾಯ ಯಾಚಿಸದೆ ಅನ್ಯಗತಿಯಿಲ್ಲ!

ಬ್ರಿಟನು ಯುದ್ಧದ ಪೂರ್ವ ಸಿದ್ಧತೆಯನ್ನು ನಡೆಸಿರುವದಾದರೂ ಭದ್ರತಾ ಮಂಡಳಕ್ಕೆ ಪರ್ಶಿಯದ ವಿರುದ್ಧ ದೂರನ್ನು ಒಯ್ದಿದೆ. ಭದ್ರತಾ ಮಂಡಳವು ಉಳಿದ ಸಮಸ್ಯೆಗಳನ್ನು ಬದಿಗೊತ್ತಿ ಇದನ್ನೆ ಜರೂರಿಗೆ ಎತ್ತಿಕೊಳ್ಳುವದು ಅಲ್ಲದೆ ರಶಿಯ ಭದ್ರತಾ ಮಂಡಳದ ಮೂಲಕ ಬ್ರಿಟನ್ನಿಗೆ ಸಹಕಾರ ನೀಡುವದು ಖಂಡಿತ. ಪರ್ಶಿಯದ ಪರವಾಗಿ ವಾದಿಸಲು ಡಾ| ಮುಸಾದಿಕರೇ ಹೋಗುವವರಿದ್ದಾರೆ. ಕೊನೆಗಾದರೂ ಪರ್ಶಿಯ ಆಂಗ್ಲೋ ಅಮೇರಿಕನರ ಆದೇಶವನ್ನು ಒಪ್ಪಬಹುದೇನೊ; ಅಂತೂ ಉಭಯತರಿಗೂ ಅತಿ ಶೀಘ್ರವಾಗಿ ಬಗೆಹರಿಯಬೇಕಾದ ಸಮಸ್ಯೆಯಿದು. ಸಂಧಾನದ ಹೊರತು ಸಮರವೇ ಗತಿಯೆಂದಾದರೆ ಬ್ರಿಟನ್ನಿಗಿಂತಲೂ ಹೆಚ್ಚಿನ ಗಂಡಾಂತರ ಪರ್ಶಿಯಕ್ಕಿದೆಯೆಂಬುದನ್ನು ನಾವು ಮುಖ್ಯವಾಗಿ ಲಕ್ಷಿಸಬೇಕು. ರಶಿಯ ಹಿಂದಿನಿಂದ ಬಂದರೂ ಪರ್ಶಿಯದ ಎಣ್ಣೆಗನಿಯಲ್ಲಿ ಯುದ್ಧದ ಕಿಡಿ ಹಾರಿದರೆ ಪರ್ಶಿಯ ಸರ್ವಸ್ವವನ್ನು ಕಳೆದುಕೊಳ್ಳಬೇಕಾಗುವದು. ಅಂತಲೇ ಅಲ್ಲಾ ಕಾಯಬೇಕಾದದು ಬ್ರಿಟನನ್ನು ಮಾತ್ರವಲ್ಲ ಪರ್ಶಿಯವನ್ನು ಕೂಡ! ಎಂಬುದನ್ನು ನಾವು ಮರೆಯಬಾರದು.

ಕಾಂಗ್ರೆಸಿನಲ್ಲಿ ಐಕ್ಯಸಾಧನೆ

ಶ್ರೀ ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾದಂದಿನಿಂದ ಕಾಂಗ್ರೆಸ್ ಐಕ್ಯಸಾಧನೆಯಲ್ಲಿ ಅಪೂರ್ವವಾದ ಯಶ ಗಳಿಸಿದ್ದಾರೆ. ಕಾಂಗ್ರೆಸ್ ಪುಢಾರಿಗಳ ಅಹಂತೆ-ಕರ್ತವ್ಯನಿಷ್ಠೆ-ದೇಶಸೇವಾದೃಷ್ಟಿ-ಮುಂತಾದ ವಿಚಾರಗಳಲ್ಲಿ ಅವರ ಮನ ನಾಟುವಾದ ಮಾತುಗಳನ್ನು ಆಡಿದ್ದಾರೆ. ಶ್ರೀ ನೆಹರೂರವರ ಆದೇಶದಂತೆ ಕಾಂಗ್ರೆಸಿಗರಲ್ಲಿ ನವಚೈತನ್ಯಮೂಡುವಂತಾದರೆ ಕಾಂಗ್ರೆಸ್ ತಿರುಗಿ ಹಿಂದಿನ ಜನಾನುರಾಗವನ್ನು ಗಳಿಸಿ ಮುಂದಿನ ಚುನಾವಣೆಯಲ್ಲಿ ಹೆಚ್ಚಿನ ಯಶಗಳಿಸಬಹುದಾಗಿದೆ. ನೆಹರೂರವರ ಪ್ರಯತ್ನದಿಂದ ಕಾಂಗ್ರೆಸ್ಸಿನಿಂದ ಹೊರಹೋದವರಲ್ಲೂ, ಬಣ ಕಟ್ಟಿಕೊಂಡವರಲ್ಲೂ ಒಮ್ಮತವಾಗುವ ಶುಭ ಚಿಹ್ನೆ ಕಂಡುಬರುತ್ತಲಿದೆ. ಪೂರ್ವ ಪಂಜಾಬದ ಡಾ| ಗೋಪೀಚಂದ ಭಾರ್ಗವ ಮತ್ತು ವಿರೋಧಿಪಕ್ಷದ ಭೀಮಸೇನ ಸಾಚಾರವರ ಬಣಗಳೊಳಗಿನ ಬಿಕ್ಕಟ್ಟು ಪರಿಹಾರವಾಗಿರುತ್ತದೆ. ಈ ಬಣಗಳಲ್ಲಿಯ ಭಿನ್ನಾಭಿಪ್ರಾಯ ಘೋರತೆಗಳಿಂದ ಕಾಂಗ್ರೆಸ್ಸಿಗೆ ವಿಶೇಷ ಧಕ್ಕೆ ಬರುವ ಸಂಭವವಿದ್ದುದನ್ನು ನೆಹರೂರವರು ಒಳ್ಳೆಯ ಮುತ್ಸದ್ದಿತನದಿಂದ ಬಗೆಹರಿಸಿದ್ದಾರೆ. ಕಲ್ಕತ್ತೆಯಲ್ಲಿ ನಡೆದ ಕಿಸಾನ ಮಜದೂರ ಪ್ರಜಾಪಾರ್ಟಿಯ ಸಭೆಯಲ್ಲಿ ಕಿದ್ವಾಯಿ ಗುಂಪಿನವರು ನೆಹರೂರವರ ವಿನಂತಿಯ ಮೇಲೆ ಕಾಂಗ್ರೆಸ್ಸಿಗೆ ತಿರುಗಿ ಸೇರುವ ಮನಸ್ಸನ್ನು ವ್ಯಕ್ತಪಡಿಸಿರುತ್ತಾರೆ. ಹೀಗೆ ದೇಶಾದ್ಯಂತ ಕಾಂಗ್ರೆಸ್ಸಿಗೆ ಸೇರುವ ಹಾಗೂ ಬೆಂಬಲ ಕೊಡುವ ಸಲ್ಲಕ್ಷಣಗಳು ಕಂಡುಬಂದಿರುವದಕ್ಕೆ ನೆಹರೂರವರ ಪ್ರಯತ್ನದ ಫಲಶ್ರುತಿಯೆಂದೇ ಹೇಳಬೇಕು! ಪುಢಾರಿಗಳ ವಿಚಾರದಲ್ಲಿ ಅವರು ಆಡಿದಂತಹ ಅಕ್ಷರಶಃ ಕಾರ್ಯರೂಪದಲ್ಲಿ ಬರುವಂತಾದರೆ ಕಾಂಗ್ರೆಸು ಭದ್ರವಾದ ತಳಹದಿಯ ಮೇಲೆ ನಿಲ್ಲುವದೆಂಬುದಕ್ಕೆ ಸಂದೇಹವೇ ಇಲ್ಲ!

ಕೆ.ಪಿ.ಸಿ.ಸಿಯ ನಿರ್ಣಯಗಳು

ಕಳೆದ ವಾರ ಹುಬ್ಬಳ್ಳಿಯಲ್ಲಿ ಜರಗಿದ ಕೆ. ಪಿ. ಸಿ. ಸಿ. ಸಭೆಯ ಹಲವು ಮಹತ್ವದ ಗೊತ್ತುವಳಿಯನ್ನು ಸ್ವೀಕರಿಸಿದೆ. ಆಂಧ್ರ ಪ್ರಾಂತದ ರಚನೆಯೊಂದಿಗೆ ಕರ್ನಾಟಕ ಪ್ರಾಂತರಚನೆಯೂ ಆಗಲಿ—ಇಲ್ಲವೆ ಅದಕ್ಕೊಂದು ನಿರ್ದಿಷ್ಟ ರೂಪರೇಷೆಯನ್ನು ರಚಿಸುವಂತಾಗಲಿ—ಎಂಬುದನ್ನು ಎಲ್ಲರೂ ಒಪ್ಪುತ್ತಿರುವಂತಿದೆ. ಈ ಪ್ರಶ್ನೆಯನ್ನು ಬಿಡಿಬಿಡಿಯಾಗಿ ಪರಿಹರಿಸದೆ ಇಡಿಯಾಗಿಯೇ ಬಗೆಹರಿಸಬೇಕೆಂದು ನಾವು ಕಳೆದ ಬಾರಿ ಸೂಚಿಸಿದ್ದೆವು. ಕೆ. ಪಿ. ಸಿ. ಸಿಯೂ ಅದೇ ತತ್ವವನ್ನಿಂದು ಎತ್ತಿಹಿಡಿದಿದೆ. ಅದು ಸ್ವೀಕರಿಸಿದ ಗೊತ್ತುವಳಿಗಳಲ್ಲಿ 1) ಅನೇಕ ಆಡಳಿತೆಗಳಿಗೆ ಒಳಪಟ್ಟಿರುವ ಕರ್ನಾಟಕವು ಯಾವ ದಿಸೆಯಲ್ಲಿಯೂ ಪ್ರಗತಿಯನ್ನು ಹೊಂದಿಲ್ಲ- ಇದರಿಂದ ತೀವ್ರ ಅಸಮಾಧಾನ ಹಾಗೂ ಕ್ಷೋಭೆ ಜನರಲ್ಲುಂಟಾಗಿದೆ. 2) ಮದ್ರಾಸ, ಮುಂಬೈ ಹಾಗೂ ಹೈದರಾಬಾದ ಸಂಸ್ಥಾನಗಳಲ್ಲಿ ಕನ್ನಡಿಗರ ಅಲ್ಪಸಂಖ್ಯೆಯಿರುವದರಿಂದ ಆಡಳಿತೆಯಲ್ಲಿ ಕರ್ನಾಟಕದ ನೀತಿಗೆ ಬೆಲೆಯಿರುವುದಿಲ್ಲ. 3) ಕರ್ನಾಟಕದಲ್ಲಿ ವಿಪುಲ ನೈಸರ್ಗಿಕ ಸಾಧನ ಸಂಪತ್ತಿದ್ದರೂ ಕರ್ನಾಟಕವು ಅಭಿವೃದ್ಧಿ ಹೊಂದದೆ ಹಿಂದುಳಿದು ಬಿಟ್ಟಿದೆ, ಈ ಮೂರು ಗೊತ್ತುವಳಿಗಳು ಅತ್ಯಂತ ಮಹತ್ವದ್ದಾಗಿದ್ದು ಕರ್ನಾಟಕ ಯಥಾರ್ಥಸ್ಥಿತಿಯನ್ನು ಪ್ರತಿಪಾದಿಸುವಂತಹದಾಗಿದೆ.

ನೆಹರೂರವರ ಐಕ್ಯಸಾಧನೆಯನ್ನನುಸರಿಸಿ ಕೆ. ಪಿ. ಸಿ. ಸಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಬಿಟ್ಟುಹೋದವರನ್ನು ಅಕ್ಟೋಬರ ತಿಂಗಳೊಳಗಾಗಿ ತಿರುಗಿ ಸೇರಬೇಕೆಂತಲೂ ಹಾಗೆ ಸೇರಿದವರಲ್ಲಿ ಯೋಗ್ಯರಾದವರನ್ನು ಪುಢಾರಿಗಳನ್ನಾಗಿ ಆರಿಸಲಾಗುವದೆಂದೂ, ಶ್ರೀಗಳಾದ ಹೊಸಮನಿ ಸಿದ್ದಪ್ಪ, ಕೆ. ಆರ್. ಕಾರಂತ, ಜಿನರಾಜ ಹೆಗ್ಡೆ, ಎಸ್. ಎನ್. ಅಂಗಡಿ ಮುಂತಾದವರಿಗೆ ತಂತಿ ಕಳಿಸಿರುತ್ತಾರೆ. ಈ ಮಹನೀಯರು ಈ ಆಹ್ವಾನವನ್ನು ಮನ್ನಿಸಿ ಕಾಂಗ್ರೆಸ್ಸನ್ನು ಸೇರುವಂತಾದರೆ ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಅಪೂರ್ವವಾದ ಯಶ ದೊರಕುವದೆನ್ನುವದರಲ್ಲಿ ಸಂದೇಹವಿಲ್ಲ. ಉಜ್ವಲ ಏಕೀಕರಣವಾದಿಗಳಾದ ಇವರಿಗೆ ಆಂಧ್ರದೊಡನೆ ಕರ್ನಾಟಕ ಪ್ರಾಂತರಚನೆಯಾಗುವ ಸಂಭವವಿರುವದರಿಂದ ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ತಮ್ಮ ಪ್ರಾಂತ ನಿರ್ಮಾಣ ಕಾರ್ಯಕ್ಕೆ ಚಾಲನೆ ಕೊಡಬಹುದು. ಆದರೆ ಈ ವರೆಗೆ ಅಧ್ಯಕ್ಷರ ಆಹ್ವಾನದ ಪ್ರತಿಕ್ರಿಯೆ ಏನೆಂದು ತಿಳಿದು ಬಂದಿಲ್ಲ!

ಪುಢಾರಿಗಳ ಆಯಿಕೆಯ ವಿಚಾರದಲ್ಲಿ ಯಾರಿಗೂ ಅನ್ಯಾಯವಾಗದಂತೆ ಕೆ. ಪಿ. ಸಿ. ಸಿ. ಯು ಜಾಗ್ರತೆ ವಹಿಸುವದೆಂದು ಶ್ರೀ ನಿಜಲಿಂಗಪ್ಪನವರು ಹೇಳಿರುವರು. "ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವಿರೋ?" ಎಂದು ಪ್ರಶ್ನಿಸಿದಾಗ ಅಧ್ಯಕ್ಷರು "ಕರ್ನಾಟಕದಲ್ಲಿ ಕರ್ನಾಟಕ ಏಕೀಕರಣವನ್ನು ಯಾರೂ ವಿರೋಧಿಸುವುದಿಲ್ಲವಾದ್ದರಿಂದ ಆ ಪ್ರಶ್ನೆಯೇ ಉದ್ಭವಿಸಲಾರದು" ಎಂದಿದ್ದಾರೆ. ಈ ಮಾತಿನಲ್ಲಿ ಅಚಲವಾದ ಶ್ರದ್ಧೆ ಶ್ರೀ ನಿಜಲಿಂಗಪ್ಪನವರಿಗಿರಬಹುದು. ಆದರೆ ನಮ್ಮದಿ ಕನ್ನಡದ ಮಟ್ಟಿಗೆ ಈ ನಂಬಿಗೆಯನ್ನಯಸುತ್ತದೆಂದು ಹೇಳುವದು ಸಾಧ್ಯವಿಲ್ಲ. ಇಂದು ಪುಢಾರಿಗಳಾಗಿ ನಿಂತವರಲ್ಲಿ ಅನೇಕರು ಪ್ರಾಂತೀಕರಣದ ಭಾವನೆಗಳವರೆಂದು ಭಾವಿಸುವದು ದುಸ್ಸರವಾಗಿದೆ. ಮಾತ್ರವಲ್ಲ ಈ ಹಿಂದೆ ಕರ್ನಾಟಕ ಪ್ರತಿನಿಧಿಗಳಾಗಿ ಕೇಂದ್ರ ಮತ್ತು ಪ್ರಾಂತಿಕ ಸರಕಾರದಲ್ಲಿದ್ದವರು ಅದನ್ನು ಪುರಸ್ಕರಿಸುವದರ ಬದಲಾಗಿ ತಿರಸ್ಕರಿಸುತ್ತಿದ್ದದ್ದನ್ನು ನಾವೀಗ ನೆನೆಯಬೇಕು! ಮಂಗಳೂರಿನ ಮಿತ್ರರೊಬ್ಬರು "ಈಗ ಆಂಧ್ರ ಪ್ರಾಂತವು ಆಗುವದರಲ್ಲಿದೆ. ನಾವೀಗ ಅಡ್ಡಗಾಲು ಹಾಕಿದರೆ ನಮಗೆ ಮಹತ್ವ ಬರುವದು" ಎಂದು ಸೂಚಿಸಿದ್ದರಲ್ಲಿ ಪ್ರಾಂತಾಭಿಮಾನವಿರುವದಾದರೂ ಸ್ವತಃ ಅವರ ಜಿಲ್ಲೆಯಲ್ಲೇ ಪ್ರಾಂತರಚನೆಗೆ ಅಡ್ಡಗಾಲಿಡುವವರಿದ್ದಾರೆಂಬುದನ್ನು ತಿಳಿಯದಿದ್ದುದು ಸೋಜಿಗದ ಸಂಗತಿ! ಕೆ. ಪಿ. ಸಿ. ಸಿ.ಯು ಪುಢಾರಿಗಳನ್ನು ಆಯಿಸುವಾಗ ಈ ಮಹತ್ವದ ವಿಚಾರವನ್ನು ಮರೆಯಕೂಡದೆಂಬುದನ್ನು ನಾವಿಲ್ಲಿ ಸೂಚಿಸಬೇಕಾಗಿದೆ.


“ವಿಜಯ” ಕಬ್ಬಿನ ಗಾಣ
ಎರಡು ಎತ್ತುಗಳಿಂದ ಎಳೆಯಲ್ಪಡುವ, ಉತ್ಕೃಷ್ಟ ತರಗತಿಯ ಯಂತ್ರ.
ಬೆಲೆ ರೂ. 465.
ನಿಮ್ಮ ಬಂದರ ಡಿಲೆವರಿ.
The Vijay Engineering Co. Ltd.,
BOMBAY-10.

ಲೋಕಾಂತ

ಭದ್ರತಾಮಂಡಳಕ್ಕೆ ಕಾಶ್ಮೀರ ವರದಿ

ಭಾರತ ಪಾಕಿಸ್ತಾನಗಳೊಡನೆ ಕಾಶ್ಮೀರೀ ಸಮಸ್ಯೆಯನ್ನು ಚರ್ಚಿಸಿದ ನಂತರ ಜಿನೇವಾದಲ್ಲಿ ಭದ್ರತಾ ಮಂಡಳಕ್ಕೆ ಒಪ್ಪಿಸುವ ವರದಿಯನ್ನು ಡಾ| ಗ್ರ್ಯಾಹ್ಯಾಮರು ಸಿದ್ಧಗೊಳಿಸಿರುವರು. ಅಮೇರಿಕೆಗೆ ಹೋದ ಬಳಿಕ ಅದನ್ನು ಪೂರ್ತಗೊಳಿಸಿ ಅಕ್ಟೋಬರ ತಿಂಗಳ ಮಧ್ಯದಲ್ಲಿ ಭದ್ರತಾ ಮಂಡಳಕ್ಕೆ ಒಪ್ಪಿಸಬಹುದು. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು ಚರ್ಚೆಯಲ್ಲಿ ಭಾಗವಹಿಸುವದರ ಸಲುವಾಗಿ ಅಮೇರಿಕೆಯಲ್ಲೇ ಉಳಿದಿರುವರು.

ಮದ್ರಾಸದಲ್ಲಿ ದೊಡ್ಡ ಸಾಯಕಲ್ ಕಾರಖಾನೆ

ಬ್ರಿಟಿಶ ಮತ್ತು ಹಿಂದೀ ಸಂಯುಕ್ತ ಬಂಡವಲದಿಂದ ಭಾರತದಲ್ಲಿಯೇ ಅತ್ಯಂತ ದೊಡ್ಡದಾದ ಸಾಯಕಲ್ ಕಂಪೆನಿಯೊಂದನ್ನು ಮದ್ರಾಸದ 17 ಮೈಲು ದೂರದ ಅಂಬತ್ತೂರಿನಲ್ಲಿ ಮದ್ರಾಸ ಗವರ್ನರರು ಉದ್ಘಾಟಿಸಿದರು. ಮೊದಲಿನ ವರ್ಷ ಈ ಕಂಪೆನಿಯು ಒಂದು ಲಕ್ಷ ಸಾಯಕಲ್‌ಗಳನ್ನು ತಯಾರಿಸುವದು. ಎರಡು ವರ್ಷಗಳನಂತರ ಪ್ರತಿ ವರ್ಷಕ್ಕೂ 2 ಲಕ್ಷ ಸಾಯಕಲನ್ನು ತಯಾರಿಸಲಿದೆ.

ರೈಲ್ವೆ ಕೆಲಸಗಾರರ ಮಾತುಕತೆ

ರೈಲ್ವೆ ಕೆಲಸಗಾರರ ಮಹಾಮಂಡಳ ಹಾಗೂ ರೈಲ್ವೆ ಇಲಾಖೆಯವರೊಡನೆ ನಡೆದ ಮಾತುಕತೆಗಳು ಯಾವುದೇ ರೀತಿಯ ನಿರ್ಧಾರಕ್ಕೆ ಬರದೆ ಬರುವತಿಂಗಳಿಗೆ ಮುಂದುವರಿಸಲಾಗಿದೆಂದು ತಿಳಿಯುತ್ತದೆ. ಈ ವರೆಗೆ ಸುಮಾರು 18 ವಿಷಯಗಳ ಚರ್ಚೆ ನಡೆಯಿತು. ಸುಮಾರು 100 ಹಾಗೂ 200 ರೂ. ಸಂಬಳ ಪಡೆಯುವವರಿಗೆ ಇಂಟರ ಕ್ಲಾಸು ಹಾಗು ಸೆಕೆಂಡ ಕ್ಲಾಸ ಪಾಸು ಕೊಡಬೇಕೆಂಬ ಅ. ಭಾ. ರೈಲ್ವೆ ಕೆಲಸಗಾರರ ಮಂಡಳ ಸೂಚಿಸಿದ್ದನ್ನು ಸರಕಾರ ನಿರಾಕರಿಸಿದೆ.

ವಿನೋಬಾ ಭಾವೆಯವರ ಭೂದಾನ ಕ್ರಮ

ಭೂಮಿಯಿಲ್ಲದವರಿಗಾಗಿ ಭೂಮಿಯನ್ನು ಹಂಚಲು ಯಾಚಿಸುವ ಕ್ರಮದಿಂದ ಸಂಗ್ರಹಿಸಲು ಹೊರಟ ಶ್ರೀ ವಿನೋಬಾ ಭಾವೆಯವರಿಗೆ ಈ ವರೆಗೆ 5730 ಎಕ್ರೆ ಭೂಮಿ ದೊರಕಿದೆಂದು ತಿಳಿಯುತ್ತದೆ.

ಕೊರಿಯದ ಮಾತುಕತೆ

ಕೊರಿಯದ ಸಂಧಾನ ಮಾತುಕತೆಗೆ ಹೊಸ ಸ್ಥಳವೊಂದನ್ನು ಜನರಲ್ ರಿಜವೆಯವರು ಸೂಚಿಸಿದ್ದು ಅದಕ್ಕೆ ಕಮ್ಯೂನಿಸ್ಟರ ಪ್ರತಿಕ್ರಿಯೆ ಏನೆಂಬುದು ತಿಳಿದುಬಂದಿಲ್ಲ. ಮಾತುಕತೆ ಫಲಿಸದೇ ಹೋದರೆ ನೂತನಾಸ್ತ್ರಗಳು ಪ್ರಯೋಗಿಸಲ್ಪಡಬಹುದೆಂದು ಪೀಕಿಂಗ ರೇಡಿಯೋ ಸಾರಿದೆ.

ಭಾರತಕ್ಕೆ ಬರ್ಮಾದ ಅಕ್ಕಿ

ಭಾರತ ಮತ್ತು ಬರ್ಮಾಗಳೊಡನೆ ದೀರ್ಘಾವಧಿ ವ್ಯಾಪಾರೀ ಒಪ್ಪಂದವಾಗಿದ್ದು ಆ ಒಪ್ಪಂದದಂತೆ ಬರ್ಮಾವು ಭಾರತಕ್ಕೆ ವರ್ಷಕ್ಕೆ ೩½ ಲಕ್ಷ ಟನ್ ಅಕ್ಕಿಯನ್ನು ಕಳಿಸುವದು. ಈ ಒಪ್ಪಂದವು 1955ರ ವರೆಗೆ ಬಳಕೆಯಲ್ಲಿರುವದು. ಅಕ್ಕಿ ಮಾತ್ರವಲ್ಲದೆ ಕಟ್ಟಿಗೆ, ಒಟಾಟಿ ಮುಂತಾದ ಪದಾರ್ಥಗಳು ದೊರಕಲಿದ್ದು ಇದಕ್ಕೆ ಪ್ರತಿಯಾಗಿ ಭಾರತವು ಬರ್ಮಾಕ್ಕೆ ಶೇಂಗಾ ಎಣ್ಣೆ, ಸಣಬಿನ ಚೀಲ, ನೂಲು, ಉಕ್ಕು ಕಬ್ಬಿಣವನ್ನು ಕಳಿಸಲಿದೆ.

ಅಮೇರಿಕೆಯ ಬಗ್ಗೆ ಭಾರತದ ತಪ್ಪು ಕಲ್ಪನೆ

ಫ್ರಾನ್ಸ್ ಮತ್ತು ರಶಿಯಾಗಳಲ್ಲಿ ಅಮೇರಿಕೆಯ ರಾಯಭಾರಿಯಾಗಿದ್ದ ವಿಲಿಯಂ ಸಿ. ಬುಲಿಟ್ಟರು ಜಾಗತಿಕ ಪ್ರವಾಸವನ್ನು ಪೂರೈಸಿಕೊಂಡು ಬಂದಿದ್ದು ಭಾರತ ಹಾಗೂ ಅದರ ಸಮಸ್ಯೆಗಳ ಕುರಿತು ಆಳವಾದ ಅಭ್ಯಾಸಮಾಡಿ ಅಮೇರಿಕೆಯ "ಲಾಯಿಫ್" ಪತ್ರಿಕೆಗೆ ಒಂದು ಲೇಖನ ಬರೆದಿರುವರು. ಅದರಲ್ಲಿ 'ಬ್ರಿಟಿಶ ಅಧಿಕಾರದ ಬಗ್ಗೆ ಭಾರತದಲ್ಲಿದ್ದ ದ್ವೇಷ ಮತ್ತು ಅಂಜಿಕೆಗಳು ಈಗ ಅಮೇರಿಕೆಯ ಅಧಿಕಾರದ ಬಗ್ಗೆ ಪರಿವರ್ತನವಾಗಿವೆ. ಭಾರತವನ್ನೊಳಗೊಂಡು ಇಡೀ ಏಶಿಯದ ಮೇಲೆ ಪ್ರಭುತ್ವ ಸ್ಥಾಪಿಸಲು ಅಮೇರಿಕೆ ಬಯಸಿದೆ. ನಮ್ಮ ಶಸ್ತ್ರಾಸ್ತ್ರಬಲದ ಹೆಚ್ಚಳದಿಂದ ಭಾರತೀಯರ ಸುರಕ್ಷಿತತೆಯ ಭಾವನೆಯ ಬದಲು ಅಂಜಿಕೆಯ ಭಾವನೆಯುಂಟಾಗಿದೆ" ಎಂದಿರುವರು.

ರಾಷ್ಟ್ರ ಸ್ಥಾಪಕ ಸಂಘ

ಇದೇ ಅಕ್ಟೋಬರ ಮೊದಲನೇ ವಾರದೊಳಗಾಗಿ ಆಂಧ್ರ ಪ್ರಾಂತ ರಚನೆಯಾಗದಿದ್ದರೆ ಸತ್ಯಾಗ್ರಹ ಮಾರ್ಗದಿಂದ ಆಂಧ್ರ ಪ್ರಾಂತ ರಚಿಸಲು ರಾಷ್ಟ್ರ ಸ್ಥಾಪಕ ಸಂಘವನ್ನು ಆಂಧ್ರದಲ್ಲೆಲ್ಲ ಸ್ಥಾಪಿಸಲಾಗಿದೆ. ಈ ಸಂಘದಲ್ಲಿ ಭಾಗವಹಿಸಲು ಸ್ವಯಂಸೇವಕರ ಅರ್ಜಿಗಳು ಬಹು ಸಂಖ್ಯೆಯಲ್ಲಿ ಬರುತ್ತಿವೆಯಂತೆ. ಅಕ್ಟೋಬರ 7ನೇ ತಾರೀಕಿಗೆ ಗುಂಟೂರಿನಲ್ಲಿ ಶ್ರೀ ಟಿ. ಸಾಂಬಮೂರ್ತಿಯವರ ಅಧ್ಯಕ್ಷತೆಯಲ್ಲಿ ಪ್ರಜಾಪರಿಷತ್ತು ನಡೆಯಲಿದೆಯೆಂದು ತಿಳಿಯುತ್ತದೆ!

ಮದ್ರಾಸು ಸರಕಾರೀ ನೌಕರರ ನೇಮಕ

ಮದ್ರಾಸ ಸರಕಾರದ ಹೊಸ ಕಾಯದೆಯಂತೆ 20 ನೌಕರಿಗಳಲ್ಲಿ ಮೂರನ್ನು ದಲಿತ ವರ್ಗದವರಿಗಾಗಿಯೂ 5ನ್ನು ಹಿಂದುಳಿದ ವರ್ಗದವರಿಗಾಗಿಯೂ ಉಳಿದ 12 ಸ್ಥಳಗಳನ್ನು ಯೋಗ್ಯತೆಯನುಸಾರವಾಗಿಯೂ ನೇಮಿಸಿಕೊಳ್ಳಲಾಗುವದೆಂದು ತಿಳಿಯುತ್ತದೆ.

ಭಾರತದ ಕ್ಷಯರೋಗ ಸಂಘ

ಕ್ಷಯರೋಗ ನಿರೋಧ ಚಳವಳವನ್ನು 1950ನೆ ಇಸವಿ ಅಕ್ಟೋಬರ್ ತಿಂಗಳ ತಾ 2ರಂದು ಮಾನ್ಯ ರಾಜಕುಮಾರಿ ಅಮೃತ ಕೌರರು ಉದ್ಘಾಟಿಸಿದರು. ಕ್ಷಯರೋಗದ ಮೇಲಿನ ಹೋರಾಟದ ಪ್ರಥಮ ಚಳವಳದ ಪರಿಣಾಮವಾಗಿ ಭಾರತದಾದ್ಯಂತದಲ್ಲಿ ಹತ್ತು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಮೊಬಲಗಿನ ನಿಧಿ ಕೂಡಿಸಲಾಗಿದೆ. ಅನೇಕ ಪ್ರಾಂತಗಳಲ್ಲಿ ಗವರ್ನರರೂ, ಮಂತ್ರಿಗಳೂ ಚಳವಳವನ್ನು ಉದ್ಘಾಟಿಸಿದ್ದರು. ಸಂಗ್ರಹವಾದ ನಿಧಿಯಲ್ಲಿ ಮದ್ರಾಸು ಪ್ರಾಂತದಿಂದ ರೂ. 1,13,018/- ಜಮೆಯಾಗಿತ್ತು.

ಪ್ರತಿ ವರುಷದಲ್ಲೂ ಭಾರತ ಕ್ಷಯರೋಗ ಸಂಘವು ಮಹಾತ್ಮಾ ಗಾಂಧಿಯವರ ಜನ್ಮದಿನದ ಮೊದಲುಗೊಂಡು ಅಂದರೆ ಅಕ್ಟೋಬರ್ ತಿಂಗಳ ತಾ. 2ರಿಂದ ಪ್ರಜಾಪ್ರಭುತ್ವ ದಿನಾಚರಣೆ ಅಂದರೆ ಜನವರಿ 26ನೇ ದಿನಾಂಕದ ತನಕ ಕ್ಷಯರೋಗದ ಮೇಲಿನ ಹೋರಾಟದ ಚಳವಳಿ ನಡೆಸಬಹುದೆಂದು ಭಾರತ ಸರಕಾರ ಅನುಮತಿ ಕೊಟ್ಟಿದೆ. ಪ್ರಾಂತ್ಯಗಳು ಸಂಗ್ರಹಿಸಿದ ನಿಧಿಯನ್ನು ತಮ್ಮ ಯೋಜನೆಗಳನ್ವಯ ವ್ಯಯಮಾಡಲಿವೆಯೆಂದು ತಿಳಿದಿದೆ. ಈ ವರುಷ ಮಹಾತ್ಮಾಜೀಯವರ ಜನ್ಮದಿನವಾದ 2-10-51ರಲ್ಲು ಕ್ಷಯರೋಗ ಮೇಲಿನ ಹೋರಾಟದ ಚಳವಳಿ ಪ್ರಾರಂಭವಾಗಿ ತಾ. 26-1-1952ರಲ್ಲು ಕೊನೆಗೊಳ್ಳುವುದು. ಕಳೆದ ವರ್ಷದಲ್ಲಿ ಸಂಗ್ರಹಿಸಿದ ಮೊಬಲಗಿಗಿಂತ ಎರಡು ಪಾಲಷ್ಟನ್ನಾದರೂ ಈ ವರುಷ ಸಂಗ್ರಹಿಸಲು ಸಂದರ್ಭವನ್ನು ಉಪಯೋಗಿಸಿಕೊಳ್ಳುವ ನಿರೀಕ್ಷೆಯಿದೆ.

ನೋಟೀಸು.

"Hospital Poor Fund Mulki" ಯಾ ವರ್ಷಾವಧಿ ಮಹಾಸಭೆಯು ತಾರೀಕು 26-10-51ನೇ ಶುಕ್ರವಾರ ಸಾಯಂಕಾಲ ಗಂಟೆ 4-30ಕ್ಕೆ, ಮುಲ್ಕಿ ಲೋಕಲ್ ಫಂಡ್ ಆಸ್ಪತ್ರಿ ಕಟ್ಟಡದಲ್ಲಿ ಜರಗಲಿರುವುದು. ಮೆಂಬರರೆಲ್ಲರೂ ಹಾಜರಿರಬೇಕಾಗಿ ಅಪೇಕ್ಷಿಸುವ,

ಯಂ ಆರ್. ಯಚ್. ಪೂಂಜ.
ಸೆಕ್ರೆಟರಿ.

Hospital Poor Fund Mulki.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ ಐ ಪಿ) ಮುಂಬಯಿ, ೧೪

ಬಹುಕಾಲ ಬಾಳಿಕೆಬರುವಂತೆ ಅಸಾಧಾರಣವಾದ ಶಕ್ತಿ ಇದೆ.

ಎಸ್ಟ್ರೆಲಾ ಬ್ಯಾಟರಿಗಳು ದೀರ್ಘಕಾಲ ಬಾಳಿಕೆಬರುವದಕ್ಕೆಂದು ಪ್ರಸಿದ್ಧಿಯಾಗಿ ಬಹಳ ಹಿಡಿಯುದಂತೆ ಇರುವುದು, ಪ್ರಕಾಶಮಾನವಾದ ಬೆಳಕು, ಇವೇ ಇವುಗಳ ವೈಶಿಷ್ಟ್ಯ.

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ

ಎಸ್ಟ್ರೆಲಾ ಬ್ಯಾಟರಿಗಳು

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್,
ಬೊಂಬಾಯಿ ೧೯.
ಶಾಖೆಗಳು ಕಲ್ಕತ್ತಾ, ದಿಲ್ಲಿ, ಮದ್ರಾಸು, ಕಾನ್‌ಪೂರ್, ನಾಗಪೂರ್.

NAS 637

ಕೊರಡ್ಕಲ್ ಶ್ರೀನಿವಾಸರಾವ್ ವಿರಚಿತ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ ರೂ 1 8 0

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0
ಗುರುವಾರ ಉಡುಪಿ, ೪-೧೦-'೫೧

ಗಾಂಧೀ ಜಯಂತಿ

ಅಕ್ಟೋಬರ 2ರಂದು ಗಾಂಧೀಜಿ ಜಯಂತಿಯನ್ನಾಚರಿಸುವ ಒಂದು ಸಂಪ್ರದಾಯವನ್ನು ನಾವಿಟ್ಟುಕೊಂಡು ಬಂದಿದ್ದೇವೆ. ಸ್ವಾತಂತ್ರ್ಯ ಪ್ರಾಪ್ತಿಯ ಮುನ್ನ ಅದನ್ನು ಆಚರಿಸುವಲ್ಲಿ ನಮಗಿದ್ದ ಆ ದೊಂದು ಬಗೆಯ ವಿಶ್ವಾಸ-ಭಕ್ತಿ-ಉತ್ಸಾಹಗಳಿಂದಿರುವುದಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಮಹಾತ್ಮರ ಜನ್ಮದಿನವನ್ನಿಂದು ನಾವು ಅದಕ್ಕಿಂತಲೂ ಮಿಗಿಲಾದ ವೈಭವಗಳಿಂದ ಆಚರಿಸಬೇಕಾಗಿತ್ತು! ಆದರೆ ನಾವಿಂದು ಕೇವಲ ಸಂಪ್ರದಾಯಬದ್ಧರಾಗಿ ಅದನ್ನು ಆಚರಿಸುವಂತಿದೆ.

ಬಾಪೂಜಿ ಹಾಕಿಕೊಟ್ಟಿರುವ ತತ್ವಾದರ್ಶಗಳ ಮಾರ್ಗದಲ್ಲಿ ನಡೆಯುವ ಸ್ಥಿತಿಯಲ್ಲಿಂದು ನಾವಿಲ್ಲ, ಆ ದಿವ್ಯ ಸಂದೇಶಾಮೃತವನ್ನು ನಾವು ಪಾನ ಮಾಡಿದ್ದರೆ ತಾನೆ ನಮ್ಮ ಮನಸ್ಸು ಪರಿಶುದ್ಧಗೊಳ್ಳಬೇಕು? ಸತ್ಯ ಅಹಿಂಸೆ, ಸನ್ಮಾರ್ಗ ಪ್ರವೃತ್ತಿ ಒಂದು ಕಠಿಣವಾದ ಬಂಧನವನ್ನು ಕಳಚಿತಾದರೂ ತಮ್ಮ ಜೀವನದಲ್ಲಿಯ ಲೋಪದೋಷಗಳನ್ನು ಪರಿಹರಿಸದೆ ಬಿಟ್ಟಿರುವದು ನಮ್ಮ ದುರ್ದೈವ!

ಸ್ವಾತಂತ್ರ್ಯಪ್ರಾಪ್ತಿಯಾದ ಈ ನಾಲ್ಕು ವರ್ಷಗಳಲ್ಲಿ ಬಾಪೂಜಿಯ ಮೂಲತತ್ವಕ್ಕೆ ಕುಠಾರಪ್ರಾಯವಾದ ಕಾರ್ಯಗಳನ್ನೇ ಕಾಂಗ್ರೆಸಿಗರು ಮಾಡುತ್ತಿರುವ ಹಲವು ದಾಖಲೆಗಳೂ ಇವೆ! ಸತ್ಯಪ್ರೇಮ-ಸಮಾನತಾಭಾವಗಳಿಂದ ಎಲ್ಲರೂ ಸುಖಿಗಳಾಗುವಂತೆ 'ರಾಮರಾಜ್ಯ'ವನ್ನು ಕಟ್ಟುವೆನೆಂಬ ಸುಂದರ ಕಲ್ಪನೆಯೊಂದನ್ನು ಆ ಮಹಾಶಿಲ್ಪಿ ಚಿತ್ರಿಸಿದ್ದರು! ತಾತ್ವಿಕ ಮನೋಧರ್ಮದಿಂದ ಲೋಕವನ್ನೇ ಗೆಲ್ಲುವ ಮಹಾ ತಪಸ್ವಿಯವರು. ಅವರು ಬದುಕಿ ಉಳಿಯುವಂತಿದ್ದರೆ ತಮ್ಮ ತಪಃಪ್ರಭಾವದಿಂದ ತಮ್ಮ ಕನಸನ್ನು ನೆನಸಾಗಿಸುತ್ತಿದ್ದರು! ಆದರೆ ದುರ್ದೈವದಿಂದ ಹಾಗಾಗಲಿಲ್ಲ! ಇಂತಹ ಸಂದಿಗ್ಧ ಸಮಯದಲ್ಲೇ ಜಾತ್ಯಂಧನೊಬ್ಬನ ಗುಂಡಿಗೆ ತುತ್ತಾಗಬೇಕಾಯ್ತು! ಮಾನವ ತನ್ನ ಕೃತಿಯಿಂದ ದೈವತ್ವವನ್ನೂ ಪಡೆಯಬಲ್ಲ; ದಾನವನೂ ಆಗಬಲ್ಲನೆಂಬುವದಕ್ಕೆ ಇದು ಉತ್ತಮ ಉದಾಹರಣೆ!

ಒಬ್ಬ ಸತ್ಪುರುಷನ ಮಾರ್ಗ ದರ್ಶನದಿಂದ—ಸಚ್ಚಾರಿತ್ರ್ಯದಿಂದ— ಇಡಿಯ ಲೋಕದ ಕಲ್ಯಾಣವನ್ನೇ ಸಾಧಿಸಬಹುದೆನ್ನುವದಕ್ಕೆ ಮಹಾತ್ಮಾ ಗಾಂಧಿಜೀ ಆದರ್ಶ ಪ್ರಾಯರಾಗಿದ್ದಾರೆ. ನಮ್ಮ ಮುಂದೆ ಮಹಾಸಮಸ್ಯೆ ಬಂದು ನಿಂತಾಗ—ಜಾತೀಯತೆಯ ಗೊಂದಲವೆದ್ದಾಗ—ದೇಶಕ್ಕೆ ಗಂಡಾಂತರ ಬಂದಾಗ—ಗಾಂಧೀಜಿಯನ್ನು ನೆನೆಸಿಕೊಳ್ಳುತ್ತಿದ್ದೆವು. ಸಮಸ್ಯೆ ಎಷ್ಟೇ ಕಠಿಣವಾಗಿದ್ದರೂ ಗಾಂಧೀಜಿ ಹಸನ್ಮುಖಿಯಾಗಿ ಅದನ್ನು ಪರಿಹರಿಸುತ್ತಿದ್ದರು. ಗಾಂಧೀಜಿಯ ಆದೇಶವೆಂದ ರಾಜಕೀಯ ರಂಗದಲ್ಲಿ ಮಾತ್ರವಲ್ಲ ದೇಶದ ಜನತೆಯ ಶೀಲಸಭ್ಯತೆಯ ಮೇಲೂ ಒಳ್ಳೆಯ ಪರಿಣಾಮವಾಗುತ್ತಿತ್ತು! ಅದರಿಂದು ಅಂತಹ ದಿವ್ಯಶಕ್ತಿಯೊಂದು ನಮ್ಮಲ್ಲಿಲ್ಲ! ಅಂತಲೇ ಕಣ್ಣಿದ್ದೂ ಕುರುಡರಾಗಿದ್ದೇವೆ!

ಗಾಂಧೀಜಿ ಜಯಂತಿಯ ಈ ಪುಣ್ಯ ದಿನದಲ್ಲಿ ಆಗಿ ಹೋದ ದಿನಗಳನ್ನು ನೆನೆದುಕೊಂಡು, ಲೋಪದೋಷಗಳೂ, ಅನುಚಿತ ಮಾರ್ಗಗಳೂ ನಡೆದಿದ್ದರೆ ಅದನ್ನು ಮರೆತು ಸನ್ಮಾರ್ಗಪ್ರವೃತ್ತರಾಗಬೇಕೆಂದೂ ಅಂತೆಯೆ ಪ್ರತಿಜ್ಞಾಬದ್ಧರಾಗಬೇಕೆಂದೂ ಎಲ್ಲರೂ ಹಾರೈಸುವದು ಒಂದು ಪದ್ಧತಿ; ಇಲ್ಲವೆ ಫ್ಯಾಶನ್ನು ಎನ್ನಬಹುದು. ದೇಶಸ್ವಾತಂತ್ರ್ಯಾನಂತರ ಇಂತಹ ಜಯಂತಿಗಳು ತುಂಬ ಕಳೆದವು. ಪ್ರತಿಜ್ಞೆ ತೊಟ್ಟದ್ದೂ ಆಯಿತು! ಆದರೆ ಕಷ್ಟಪರಂಪರೆಗಳೂ—ಅವ್ಯಾಹತಗಳೂ ಜಾತೀಯ-ತೆ ಸಂಕುಚಿತತೆಯ ಮನೋವೃತ್ತಿಯೂ ಕಾಂಗ್ರೆಸ್ಸಿಗರಲ್ಲಿ ಇನ್ನೂ ಇನ್ನೂ ಬೆಳೆಯುತ್ತಿರುವ ದುರ್ಲಕ್ಷಣಗಳು ಕಂಡು ಬರುತ್ತಲಿವೆ. ಹಿಂದೂ ಮುಸಲ್ಮಾನರಲ್ಲಿ ಸಹೋದರಭಾವವನ್ನು ಬೆಳೆಸಿಯೂ ನಾವೆಲ್ಲ ಒಂದೇ ಕುಟುಂಬದವರೆಂಬ ಕಲ್ಪನೆಯನ್ನು ಹುಟ್ಟಿಸಿಯೂ ಮಾನವೀಯತೆಯ ಉತ್ತಮಾದರ್ಶದ ಪಾಠ ಹೇಳಿದ್ದನ್ನು ನಾವಿಂದು ಮರೆತು ನಮ್ಮ ನಮ್ಮೊಳಗೆ ಜಾತೀಯತೆ-ಪಕ್ಷಪಂಗಡಗಳನ್ನು ಕಟ್ಟಿಕೊಂಡು ದೇಶದ ಐಕ್ಯಕ್ಕೆ ಗಂಡಾಂತರವನ್ನುಂಟುಮಾಡುವದರಲ್ಲಿ ಪ್ರವೃತ್ತರಾಗಿದ್ದೇವೆ ಆತ್ಮರಕ್ಷಣೆಗೆ ಇಲ್ಲವೆ ಸ್ವಾರ್ಥಸಾಧನೆಗೆ ಗಾಂಧೀಜಿಯ ಆದರ್ಶವನ್ನೆತ್ತಿ ಹಿಡಿಯುವುದೂ— ಪರೋಪದೇಶ ಮಾಡುವದೂ ರೂಢಿಯಾಗಿಬಿಟ್ಟಿದೆ.

ಆದರ್ಶ ನೀತಿ ತೋರಿಕೆಯ ಮಟ್ಟಿಗೆ ಮಾತ್ರವಲ್ಲದೆ ಕಾರ್ಯಾಚರಣೆಯ ಮಟ್ಟಿಗೆಂಬುದನ್ನೂ ನಾವರಿತುಕೊಳ್ಳಬೇಕಾಗಿದೆ. ಬಾಪೂಜಿ ತನ್ನ ಇಡಿಯ ಜೀವಮಾನವನ್ನೇ ಇಂತಹ ತತ್ವ ಪರಿಪಾಲನೆಗಾಗಿ ಧಾರೆಯೆರೆದಿದ್ದಾರೆ. ತಾನು ನಂಬಿಗೆಯಿಟ್ಟು ಅನುಸರಿಸುತ್ತಿರುವ ಆದರ್ಶದ ಮೇಲೆ ಅವರಿಗೆ ಅಚಲವಾದ ಶ್ರದ್ಧೆಯಿತ್ತು. ಗುರಿ ಸಾಧಿಸುವ ಹಟಯೋಗವಿತ್ತು! ಅಂತಲೇ ಇಡಿಯ ಲೋಕಕ್ಕೆ ಅವರು ಆದರ್ಶಪ್ರಿಯ ವ್ಯಕ್ತಿಗಳಾಗಿದ್ದರು!

ಇಂದು ಕಾಂಗ್ರೆಸು ಜನತಾಪ್ರೀತಿಯನ್ನು ಗಳಿಸಿ ಭದ್ರವಾದತಳಹದಿಯ ಮೇಲೆ ನಿಲ್ಲಬೇಕಾದರೆ ಬಾಪೂಜೀ ಹಾಕಿಕೊಟ್ಟ ಮಾರ್ಗವನ್ನು ಹೃತ್ಪೂರ್ವಕವಾಗಿ ಆಚರಣೆಗೆ ತರುವದೊಂದೇ ಉತ್ತಮ ಪರಿಹಾರ ಮಾರ್ಗ. ಜೀವನದಲ್ಲಿ ತ್ಯಾಗ-ಸಹನ ಶೀಲ- ಸತ್ಯ ಪರಿಪಾಲನೆ ಮುಂತಾದ ವಿಶಿಷ್ಟ ಗುಣಗಳು ಅವಶ್ಯ ಬೇಕು. ಗಾಂಧೀಜಿಯ ಹೆಸರನ್ನೆತ್ತುವವರೂ—ಪರೋಪದೇಶಕ್ಕಾಗಿ ಆದರ್ಶ ಹೇಳುವವರೂ--ಗಾಂಧೀಜಿಯ ತತ್ವದ ಮೂಲಕ ದೇಶದ ಕಲ್ಯಾಣವನ್ನು ಬಯಸುವವರೂ--ಅವರ ಮೂಲ ತತ್ವಗಳ ಕಾರ್ಯಾಚರಣೆಯಲ್ಲಿ ತಮ್ಮ ತಮ್ಮ ಹೃದಯಗಳನ್ನು ತಾವು ತಾವೇ ನೋಡಿಕೊಳ್ಳುವಂತಾದರೆ ಮಾತ್ರ, ಇಂದಿನ ಆಚರಣೆ ಫಲಕಾರಿಯಾದೀತು! ಇಲ್ಲವಾದರೆ ಇದು ಅಂಧಾನುಕರಣೆಯೇ ಸರಿ!

ಬ್ರಿಟನಿನಲ್ಲಿ ಚುನಾವಣೆ

ಬ್ರಿಟನಿನಲ್ಲಿ ಎಲ್ಲಾ ಕಡೆಗಿಂತಲೂ ಮೊದಲಾಗಿ ಚುನಾವಣೆಯ ಡಿಮುಲಿವೆ ಒಂದೇ ವರ್ಷದೊಳಗಾಗಿ ನಡೆಯುವ ಚುನಾವಣೆಯು ಅತ್ಯಂತ ಮಹತ್ವಪೂರ್ಣವಾಗಿರುತ್ತದೆ. ಕಳೆದಬಾರಿಯ ಚುನಾವಣೆಯಲ್ಲಿ ಬ್ರಿಟನು ಕೇವಲ ಏಳು ಮತಗಳಿಂದ ವಿಜಯಶಾಲಿಯಾಗಿತ್ತು! ಈ ಅಲ್ಪ ಬಹುಮತದಿಂದ ಕೂಲಿಗಾರ ಪಕ್ಷವು ಹಲವು ಬಾರಿ ಪರಾಭವವನ್ನು ಪಡೆಯಬೇಕಾಯಿತು! ಬರುವ ಚುನಾವಣೆಯಲ್ಲಿ ಬಹುಮತದಿಂದ ಕೂಲಿಗಾರ ಪಕ್ಷವೇ ಗೆಲ್ಲಬಹುದೆಂಬ ಭರವಸೆ ಆಕಾಂಕ್ಷೆ ಕೂಲಿಗಾರ ಪಕ್ಷಕ್ಕಿರುತ್ತದೆ. ಆದರೆ ವಿರೋಧಿ ಪಕ್ಷವು ಅನಿರೀಕ್ಷಿತವಾದ ಈ ಚುನಾವಣೆಯು ಕೂಲಿಗಾರರ ಪಕ್ಷದ ಅಸಮರ್ಥ ಆಡಳಿತೆಯ ಕುರುಹೆಂದು ಟೀಕಿಸಿಯದೆ. ಕಾನ್ಸರ್ವೇಟಿವ್ ಪಕ್ಷದಧುರೀಣ ವಿನ್‌ಸ್ಟನ್ ಚರ್ಚಿಲ್ಲರು ತಮ್ಮ ಪಕ್ಷದ ಘೋಷಣಾಪತ್ರವನ್ನು ಹೊರಡಿಸಿರುವರು. ಅದರಲ್ಲಿ ಕುತೂಹಲಪೂರ್ಣವಾದ ಹಲವು ಆಶ್ವಾಸನಗಳಿವೆ. ಸದಾ ರಶಿಯದ ಮೇಲೆ ಬೆಂಕಿ ಕಾರುವ ಸಾಮ್ರಾಜ್ಯವಾದಿ ಚರ್ಚಿಲ್, ರಶಿಯದೊಡನೆ ಸ್ನೇಹವನ್ನು ಬೆಳೆಸಲಾಗುವದೆಂದು ಹೇಳಿರುವರು. ಕೂಲಿಗಾರ ಪಕ್ಷದಿಂದ ಯಶಸ್ವಿಯಾಗದ ಉಕ್ಕು ಮತ್ತು ಕಬ್ಬಿಣ ರಾಷ್ಟ್ರೀಕರಣ ಕಾಯಿದೆಯನ್ನು ರದ್ದುಗೊಳಿಸಲಾಗುವದಂತೆ. ಲಾಭದ ಮೇಲೆ ಹೇರಿರುವ ಕರವನ್ನು ಪುನರ್ಘಟಿಸಿ ಬಂಡವಳಗಾರರಿಗೇನೇ ಹೆಚ್ಚಿನ ಸಹಾಯ ಸಲ್ಲಿಸಲಾಗುವದಂತೆ. ಎಲ್ಲ ಆಶ್ವಾಸನೆಗಳೂ ವಿಕ್ಟೋರಿಯಾ ಮಹಾರಾಣಿಯವರ ಕಾಲದ್ದೇ ಆಗಿದೆಂದು ಲೇಬರ್ ಪಾರ್ಟಿಯು ಟೀಕಿಸಿದ್ದು ಪೂರ್ತ ಸುಳ್ಳೆಂದು ಹೇಳಲು ಬರುವಂತಿಲ್ಲ! ಬಂಡವಳಗಾರರ ಹಿತಚಿಂತನೆಯನ್ನು ಎತ್ತಿ ಹಿಡಿಯುವ ಕಾನ್ಸರ್ವೇಟಿವ್ ಪಕ್ಷವು ಪ್ರಜಾಪ್ರಭುತ್ವ ಧೋರಣೆಯು ಜನಕ್ಕೆ ಪಥ್ಯವಾಗುತ್ತಿರುವ ಈ ಕಾಲದಲ್ಲಿ ಹೇಗೆ ಜಯಶೀಲವಾಗುತ್ತದೋ ಸಂಶಯಾಸ್ಪದ ವಿಚಾರ!

ಕೂಲಿಗಾರ ಪಕ್ಷವು ತನ್ನ ಘೋಷಣೆಯಲ್ಲಿ ಉತ್ಪಾದನೆ ಹೆಚ್ಚಿಸಿ ಎಲ್ಲರಿಗೂ ಉದ್ಯೋಗ, ದೇಶದ ಸಂಪತ್ತಿನಲ್ಲಿ ನ್ಯಾಯವಾದ ಪಾಲು ಹಂಚೋಣ--ಯೋಗ್ಯ ಉದ್ಯಮಗಳ ರಾಷ್ಟ್ರೀಕರಣ-ಬಂಡವಳಗಾರರ ಲಾಭದ ಮೇಲೆ ವಿಶೇಷಕರ-- ಶಾಂತಿ ಸುರಕ್ಷಿತತೆಯ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳುವುದು—ವಿದೇಶಾಂಗ ನೀತಿಯಲ್ಲಿ ರಶಿಯದೊಡನೆ ಸ್ನೇಹವನ್ನು ಗಳಿಸುವುದು— ಹಿಂದುಳಿದ ದೇಶಗಳಿಗೆ ಹೆಚ್ಚಿನ ಸಹಾಯನೀಡುವುದು—ಮುಂತಾದ ವಿಚಾರಗಳನ್ನು ನಮೂದಿಸಲಾಗಿದೆ. ವಿರೋಧಿ ಪಕ್ಷಗಳವರು ಕೂಲಿಕಾರ ಪಕ್ಷದ ಮೇಲೆ ಆರೋಪವೆತ್ತಿದ್ದನ್ನು ಖಂಡಿಸಲಾಗಿದೆ. ದೇಶ ವಿದೇಶಗಳಲ್ಲಿ ಕೂಲಿಗಾರ ಪಕ್ಷದ ಮೇಲೆ ಸಹಾನುಭೂತಿಯಿರುವದು ಕಂಡು ಬರುತ್ತದೆ. ಆರು ವರ್ಷಗಳ ಆಡಳಿತದಲ್ಲಿ ಕೂಲಿಗಾರ ಪಕ್ಷವು ಸಾಧಿಸಿದ ಅಂಶವು ಕಡಿಮೆಯೇ ಆದರೂ ಅದು ದ್ವಿತೀಯ ಮಹಾಯುದ್ಧದಿಂದ ಜರ್ಜರಿತವಾದ ರಾಷ್ಟ್ರವನ್ನು ಪುನರ್ರಚನೆಗೊಳಿಸಿದ್ದನ್ನು ಮರೆಯಲಶಕ್ಯವಲ್ಲ. ಅಂತಲೇ ಇದೇ ತಿಂಗಳ ಕೊನೆಯ ಭಾಗದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಕೂಲಿಗಾರ ಪಕ್ಷವೇ ಗೆಲ್ಲುವದು ಹೆಚ್ಚು ಸಂಭವನೀಯವೆಂದು ಕಾಣುತ್ತದೆ.

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲತ್ತಪಗಡೆ	0-6-0

ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕಭಂಡಾರ, ಉಡುಪಿ.

ಹೊಸಕೆರೆ ಚಿದಂಬರಯ್ಯನವರಿಂದ
ಅನುವಾದಿಸಲ್ಪಟ್ಟ ಗೀತೆಯ
ಸಮಶ್ಲೋಕ ಭಾಷಾಂತರ.

ಪ್ರತಿಯೊಬ್ಬನೂ ಓದತಕ್ಕ
ಪವಿತ್ರ ಗ್ರಂಥ.
ಬೆಲೆ. 0—12—0.
ನವಯುಗ ಪ್ರೆಸ್, ಉಡುಪಿ.



BALLBEARING
—THE LIFEBLOOD OF THE INDUSTRY!

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS—"CHEAPTRADE"
A. RAMSON AND CO.
6 R MISTRI BUILDING BALARAM S. BOMBAY

ಜನಮತ

ಕಾಂಗ್ರೆಸು ತತ್ವಗಳ ಮೇಲೆ ಶ್ರಮಜೀವಿಗಳ ಸಂಘಟನೆ ಅಗತ್ಯ.

ಪರಿಶುದ್ಧವಾದ ಕಾಂಗ್ರೆಸು ತತ್ವಗಳನ್ನು ಒಪ್ಪದ ಜನರು ನಮ್ಮ ಭಾರತದಲ್ಲಿ ವಿರಳ ಹಾಗೆಯೇ ಆ ತತ್ವಗಳನ್ನು ಅಚ್ಚಳಿಸದೆ ಬಣ್ಣಗೆಡಿಸದೆ ಅಕ್ಷರಶಃ ಪಾಲಿಸುವವರೂ ವಿರಳ. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಸ್ವಾತಂತ್ರ್ಯ ದೊರೆಯುವ ತನಕ ಮಾತ್ರ ಕಾಂಗ್ರೆಸಿಗರೆಲ್ಲರದು ಒಂದೇ ಗುರಿ, ಒಂದು ಧ್ಯೇಯ, ಒಂದೇ ಶ್ರದ್ಧೆ, ಒಂದೇ ದೇಶಾಭಿಮಾನ, ಎಲ್ಲರೂ ನಿಸ್ವಾರ್ಥಿಗಳಾಗಿಯೂ ದೇಶಾಭಿಮಾನಿಗಳಾಗಿಯೂ ಕಾಣಿಸಿಕೊಂಡರು. ಹಾಗೂ ಮಹಾತ್ಮರ ಆತ್ಮಪ್ರಭಾವದಿಂದ ಸ್ವರಾಜ್ಯವೂ ಲಭಿಸಿತು. ಇದೆಲ್ಲಾ ಒಂದು ಇಂದ್ರಜಾಲದಂತೆ ಆಗಿಹೋಯಿತು. ಗಳಿಸಿದ ಸ್ವಾತಂತ್ರ್ಯವನ್ನು ಅನುಭವಿಸುವ ಕಾಲದಲ್ಲಿ ಧ್ಯೇಯಧೋರಣೆಗಳೂ ಅಭಿಮಾನಾಕಾಂಕ್ಷೆಗಳೂ ಪ್ರತ್ಯೇಕ ಪ್ರತ್ಯೇಕವಾಗಿ ನಿಂತವು ಭೇದಾಭೇದಗಳು ಆರಂಭವಾದುವು. (ಆಹಾರವಿತರಣೆಯ ರೀತಿ ನೀತಿ ಒಂದನ್ನು ನೋಡಿದರೆ ಸಾಕು.)

ರಾಜಕೀಯ ಜೈಲಿಗೆ ಹೋದ ಸರ್ಟಿಫಿಕೇಟು, ಖಾದಿ ಉಡುಗೆ ಇವೆರಡೇ ಕಾಂಗ್ರೆಸಿಗರ ಮುಖ್ಯ ಯೋಗ್ಯತೆಗಳಾದುವು. ಹಳ್ಳಿಯಿಂದ ದಿಲ್ಲಿಯ ವರೆಗೆ ಈ ಆಧಾರದ ಮೇಲೆ ಕಾಂಗ್ರೆಸು ಸಂಸ್ಥೆಗಳ ರಚನೆಯಾಯಿತು. ಬಟ್ಟೆ ಬಿಟ್ಟ ಧ್ಯೇಯ ಧೋರಣೆಗಳು ಪುನಃ ಹೃದಯವನ್ನು ಸೇರಿಕೊಂಡವು. ಇದಕ್ಕೆ ಕಾಲಪ್ರಕೃತಿಗಳು ವಿಮುಖವಾಗಿ ನಿಂತವು. ಅಂತು ತರ್ಕತರ್ಕಗಳು ಬೆನ್ನಿಗೆ ಬೆನ್ನು ಹಾಕಿ ನಿಂತವು. ಬಡತನ ಸ್ವಾನುಭವವುಳ್ಳ ಪ್ರತಿನಿಧಿಗಳು ಕಾಂಗ್ರೆಸು-ವ-ಸರಕಾರದಲ್ಲಿ ಇಲ್ಲದ ಕಾರಣ ಮಧ್ಯಮ ತರಗತಿಯವರೂ ಬಡಬಗ್ಗರೂ ಸಹಿಸಲಾರದ ಕಷ್ಟಗಳನ್ನು ಅನುಭವಿಸಬೇಕಾಗಿ ಬಂತು.

ಕಾಂಗ್ರೆಸು ತತ್ವ ಪರಮಾತ್ಮನ ಹೃದಯದಂತೆ ಪರಿಶುದ್ಧವಾದುದು. ಆದರೆ ಅದನ್ನು ಧರಿಸುವ ಪರಿಶುದ್ಧ ವ್ಯಕ್ತಿಗಳೇ ವಿರಳ. ಹೃದಯ ಸಂಸ್ಕಾರಹೊಂದಿದ ಪರಿಶುದ್ಧ ವ್ಯಕ್ತಿಗಳು ಸರಕಾರದ-ವ-ಕಾಂಗ್ರೆಸಿನ ಚುಕ್ಕಾಣಿಯನ್ನು ಹಿಡಿಯುವ ತನಕ ದೇಶಕ್ಕೆ ಸುಖವಿಲ್ಲ. ಕಾಲಪ್ರಕೃತಿಗಳ ಒಲವಿಲ್ಲ. ಎಂದು ಒಂದೇ ಒಂದು ಚಿಕ್ಕ ಕಣವನ್ನು ನ್ಯಾಯವಾಗದೆ ಒಟ್ಟನ್ನು ಯಾಚಿಸದೆ ದೇಶದ ಮುಂದಾಳಾಗಿ ಜನರು ಆರಿಸಲ್ಪಡುವರೋ ಅಂದು ದೇಶಕ್ಕೆ ಸುಖ ಉಂಟು ಕಾಲಪ್ರಕೃತಿಗಳು ಒಲಿಯುವುವು. ಅಂದಿನಿಂದ ಸರಕಾರವು ಆದಂದ್ರಾಕಗಾಗಿ ಬಾಳಿ ಮೆರೆಯುವುದು.

ನಿಸ್ವಾರ್ಥಿಗಳಾದ ವ್ಯಕ್ತಿಗಳು ಕಾಂಗ್ರೆಸು-ವ- ಸರಕಾರದ ಚುಕ್ಕಾಣಿಯನ್ನು ಹಿಡಿದು ಕಾಂಗ್ರೆಸು ತತ್ವಗಳ ಮೇಲೆ ರಾಜ್ಯಭಾರ ಮಾಡುವ ತನಕ ಶ್ರಮಜೀವಿಗಳ ಕಷ್ಟಪರಿಹಾರ-ವ-ಉದ್ಧಾರದ ಜವಾಬ್ದಾರಿಯು ಶ್ರಮಜೀವಿಗಳ ಕೈಯಲ್ಲಿಯೇ ಉಳಿಯುವುದು. ಆ ಬಗ್ಗೆ ಶ್ರಮಜೀವಿಗಳ ಸಂಘಟನೆ ಅತಿ ಅಗತ್ಯ. ಈ ಸಂಘಟನೆಯು ಕಾಂಗ್ರೆಸು ತತ್ವಗಳ ಅಡಿಗಲ್ಲಿನ ಮೇಲೆ ರಚನೆಯಾಗಿ ಕಾಂಗ್ರೆಸು ತತ್ವಗಳಿಂದಲೇ ಬೆಳೆಯಬೇಕು, ಕಮ್ಯೂನಿಸ್ಟರು- ಸಮಾಜವಾದಿಗಳು ಬಂದಿದ್ದರೂ ಇದರ ಒಳಗೆ ಪ್ರವೇಶಿಸಕೂಡದು. ಬಡವರ ಸಂಘಟನೆಯು ಕಾಂಗ್ರೆಸು ತತ್ವಗಳನ್ನು ಉಜ್ಜಿತಗೊಳಿಸುವ ಕಾಂಗ್ರೆಸಿನ ಫೀಡರ್ (Feeder) ಸಂಸ್ಥೆಯಾಗಿರಬೇಕು. ಮುಂದಿನ ಚುನಾವಣೆಯಲ್ಲಿ ಪ್ರಾಮಾಣಿಕನಾದ ಮತ್ತು ನಿಸ್ವಾರ್ಥಿಯಾದ ಯೋಗ್ಯ ಮನುಷ್ಯನು ಕಾಂಗ್ರೆಸಿನ ಒಳಗಿರಲಿ ಹೊರಗಿರಲಿ ಆತನಿಗೆ ಬೆಂಬಲಕೊಡಬೇಕು. ಯಾವ ಸಂಸ್ಥೆಯಿಂದಾಗಲೀ ಹುರಿಯಾಳಾಗಿ ನಿಲ್ಲಿಸಲ್ಪಟ್ಟ ಮನುಷ್ಯನು ಶ್ರೀಮಂತನಿರಲಿ, ದೊಡ್ಡ ಡಿಗ್ರಿ ಪಡೆದವನಿರಲಿ, ಆತನು ಒರೆಗಲ್ಲಿನಲ್ಲಿ ಹಾಕಲ್ಪಟ್ಟು ಚಿನ್ನವಾಗಿದ್ದರೆ ಆತನಿಗೆ ಬೆಂಬಲಕೊಡಬೇಕು, ಅಲ್ಲಿ ಶ್ರಮಜೀವಿಗಳೇ ತಮ್ಮ ಸ್ವಂತ ಬಲದಿಂದ ಸ್ಪರ್ಧೆಗೆ ನಿಲ್ಲಬೇಕು. ಇದಕ್ಕೋಸ್ಕರ ಒಂದು ಚಿಕ್ಕಾಸನ್ನಾದರೂ ವ್ಯಯಮಾಡಬಾರದು. ದುಡ್ಡಿನ-ವ-ಡಿಗ್ರಿಯ ಇದಿರಿಗೆ ಜೈಸುವುದು ಕಷ್ಟ. ಆದರೆ ಈಗಲೇ ಅಂತಹ ಚಳವಳವನ್ನು ಆರಂಭಿಸಿದರೆ ಮುಂದಕ್ಕೆ ಜಯವುಂಟು. ಧೈರ್ಯಸಾಹಸಗಳು ತುಂಬಿಕೊಂಡು ಸ್ಥಾನಗಳನ್ನು ಕೂಡಾ ಗಳಿಸಬಹುದು. ಈ ಸೂಚನೆಯು ನ್ಯಾಯವೆಂತ ಕಂಡು ಬಂದರೆ ನಿಸ್ವಾರ್ಥಿಯಾಗಿ ಸಾಮರ್ಥ್ಯವುಳ್ಳ ಶ್ರಮಜೀವಿಗಳ ಮುಂದಾಳುಗಳು ಅಲ್ಲಲ್ಲಿ ಕಾಣಿಸಿಕೊಳ್ಳುವುದು ಅಗತ್ಯ.

ವಿ ಬಾಬು ಶೆಟ್ಟಿ,
ವಿಟ್ಲ, ದ. ಕ.

ಉಡುಪಿ

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು—ಕಳೆದ ತಾ. 29ರಲ್ಲು ತಾಲೂಕು ಕಚೇರಿಯಲ್ಲಿ ಕಮಿಟಿ ಉಪಾಧ್ಯಕ್ಷ ಶ್ರೀ ದಟ್ಟು ಎ ಸುಚೀತರ ಅಧ್ಯಕ್ಷತೆಯಲ್ಲಿ ಜರಗಿತು. ಮಾಜಿ ಸೈನಿಕರು ಭೂದಾನಕ್ಕಾಗಿ ಮಾಡಿದ ಅರ್ಜಿಗಳನ್ನು ಬೇಗನೆ ಇತ್ಯರ್ಥ ಮಾಡುವ ಬಗ್ಗೆ ಒಬ್ಬ ಸ್ಪೆಶಲ್ ರೆವಿನ್ಯೂ ಇನ್ಸ್ಪೆಕ್ಟರನ್ನು ನೇಮಕಮಾಡುವಂತೆ ಜಿಲ್ಲಾ ಕಲೆಕ್ಟರರನ್ನೂ, ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾಸಹಾಯವನ್ನು ಕೊಡಿಸಬೇಕಾಗಿ ಬಂದ ಅರ್ಜಿಗಳನ್ನು ಬೇಗನೆ ಇತ್ಯರ್ಥ ಪಡಿಸುವಂತೆ ಜಿಲ್ಲಾ ಎಜ್ಯುಕೇಶನಲ್ ಆಫೀಸರರನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಮುನಿಸಿಪಲ್ ಕೌನ್ಸಿಲು ಸಭೆಯು—ಕಳೆದ ತಾ. 29ರಲ್ಲು ಸಂಜೆ ಚೇರ್ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲಾದನಂತರ ಕಲ್ಸಂಕದ ಶಿಶುಕ್ಷೇಮ ಚಿಂತನಾ ಕೇಂದ್ರದ ಸಾಮಾಗ್ರಿಗಳಿಗಾಗಿ ರೂ. 300/– ಸಂಕ್ಷನ್ ಮಾಡಲಾಯಿತು. ಗೋ ಆಸ್ಪತ್ರೆಯನ್ನು ತೆರೆಯುವ ಯೋಜನೆಯನ್ನು ಮುಂದಿನ ಬಜೆಟ್ ಕಮಿಟಿ ಅವಗಾಹನೆಗೆ ಬಿಡಲಾಯಿತು. ವಿದ್ಯುತ್ ಸರಬರಾಯಿಯ ಚಾರ್ಜಿನಲ್ಲಿಯ 50% ಸರ್ ಚಾರ್ಜು ಹಿಂತೆಗೆಯಲು ಪ್ರಕೃತ ಸಾಧ್ಯವಿಲ್ಲವೆಂದು ಸರಕಾರಿಯ ಪಾತ್ರನ್ನು ರಿಕಾರ್ಡು ಮಾಡಲಾಯಿತು.

ಹಾಲು ಸರಬರಾಯಿ ಸಹಕಾರ ಸಂಘವು—ಇದೇ ತಾ. 2ರಲ್ಲು ತನ್ನ ಕಾರ್ಯವನ್ನು ಪ್ರಾರಂಭಿಸಿತು. ಶುದ್ಧ ಹಾಲನ್ನು ಪಡಕೊಂಡು ಜನತೆಗೆ ವಿತರಣೆ ಮಾಡಲು ಅನುಕೂಲ ವಾತಾವರಣ.

ಗೊಬ್ಬರ ಸಪ್ತಾಹ ಮತ್ತು ಗಾಂಧಿ ಜಯಂತಿಯು ಇದೇ ತಾ. 2ರಲ್ಲಿ ಉಡುಪಿಯಲ್ಲಿ ಆಚರಿಸಲಾಯಿತು. ಬೆಳಗೆ ರಾಷ್ಟ್ರಧ್ವಜವಂದನೆ ನಡೆಯಿತು. ಸಂಜೆ ಬೋರ್ಡು ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ನೂಲು ತೆಗೆಯುವ ಕಾರ್ಯಕ್ರಮ ನಡೆಯಿತು. ನಂತರ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿ ಮುನಿಸಿಪಲ್ ಹೆಲ್ತ್ ಆಫೀಸರ್ ಮೊದಲಾದವರ ಭಾಷಣಗಳಾದುವು. ಮುನಿಸಿಪಲ್ ಕಮಿಶನರ್ ಶ್ರೀ ಸೋಜರು ಧನ್ಯವಾದಗಳನ್ನು ಸಿಸಿದರು.

ಕೇಳಿಕೆ— ಇತ್ತೀಚೆಗೆ ಮತದಾರ ಸಂಘವೊಂದು ಸ್ಥಾಪನೆಯಾಗಿರುವುದೆಂದೂ ಅದರಲ್ಲಿ ಉಡುಪಿ ಮತದಾರ ಕ್ಷೇತ್ರದಿಂದ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರನ್ನು ಎಸೆಂಬ್ಲಿಗೆ ಕಾಂಗ್ರೆಸ್ ಉಮೇದ್ವಾರರಾಗಿ ಆರಿಸುವಂತೆ ಸರ್ಕಲ್ ಕಾಂಗ್ರೆಸ್ ಕಮಿಟಿಯು ಶಿಫಾರಸು ಮಾಡಲು ಕೇಳಿಕೊಳ್ಳಬೇಕೆಂಬ ನಿರ್ಣಯವಾಗಿರುವುದೆಂದೂ ಮತದಾರ ಸಂಘದ ಅಧ್ಯಕ್ಷ ಶ್ರೀ. ಬಿ. ಮೋಹನದಾಸ ಎಂ. ಶೆಣಯರವರು ತಿಳಿಸುತ್ತಾರೆ.

ಉಡುಪಿ ಕರ್ನಾಟಕ ಸಂಘದ ಸಾಹಿತ್ಯೋತ್ಸವ—ತಾ 7-8-9 10ರಲ್ಲಿ ಉಡುಪಿಯ ಕರ್ನಾಟಕ ಸಂಘದವತಿಯಿಂದ ಪೀಪಲ್ಸ್ ಹಾಲಿನಲ್ಲಿ ದಸರಾಸಾಹಿತ್ಯೋತ್ಸವವು ನಡೆಯಲಿರುವುದು. ಈ ಸಮಾರಂಭದಲ್ಲಿ ಶ್ರೀಗಳಾದ ಎಂ. ಆರ್. ಶ್ರೀನಿವಾಸಮೂರ್ತಿ, ವಿ. ಬಿ. ನಾಯಕ(ಸಂಪಾದಕ ಸಂ. ಕರ್ನಾಟಕ) ಬಿ. ಶೀನಾರಾಮಯ್ಯ ಎಂ.ಎ.ಎ. ಎನ್. ಮೂರ್ತಿರಾವ್ ಎಂ. ಎ ಬಿ. ಹೆಬ್ಬಾ ಶ್ರೀಧರ ಸೇಡಿಯಾಪು ಕೃಷ್ಣಭಟ್ಟ, ಶ್ರೀನಿವಾಸರಾವ್ ಬಿ, ಎ. ಬಿ. ಟಿ, ಕೆ. ಬಿ. ರಾಮಕೃಷ್ಣರಾವ್, ಬಿ. ಎ. (ಆನರ್ಸ,) ವಿ. ಎಸ್. ಕುಡ್ವ, ಕೊಲಗಿ ಶೇಷಾಚಾರ್ ಎಂ. ಎ, ಬಿ. ರಾಮಚಂದ್ರರಾವ್, ಎಂ. ಎ, ಬಿ. ಎಲ್. ಎ.ಎಸ್. ರಾಮಕೃಷ್ಣ ಟಿ. ನಾರಾಯಣ ಅಯ್ಯಂಗಾರ್ ಎಂ. ಎ. ಮುಂತಾದ ಮಹನೀಯರು ಭಾಗವಹಿಸಲಿರುವರು, ಪ್ರತಿದಿನವೂ ಬೆಳಗ್ಗೆ ಕ್ರಮವಾಗಿ ಭಾಷಣ ಸ್ಪರ್ಧೆ, ಲೇಖನ ಸ್ಪರ್ಧೆ, ವಾಚನ ಸ್ಪರ್ಧೆ, ಪಾಠ ಸಾಹಿತ್ಯ ಸ್ಪರ್ಧೆ [ಹುಡುಗಿಯರಿಗೆ] ಗಳು ನಡೆಯಲಿವೆ. ಪ್ರತಿದಿನ ರಾತ್ರಿ ನಾಟಕ, ನೃತ್ಯ ಮುಂತಾದ ಮನರಂಜನೆಯ ಕಾರ್ಯಕ್ರಮಗಳಿರುತ್ತವೆ ಸರ್ವರಿಗೂ ಸ್ವಾಗತವಿದೆಯೆಂದು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕು. ಶಿ. ಹರಿದಾಸ ಭಟ್ಟರು ತಿಳಿಸುತ್ತಾರೆ.

Notice

ಉಡುಪಿ ಡಿ ಮು. ಕೋರ್ಟಿನಲ್ಲಿ

O. S. No. 354/1951

1) ಜೋಸೆಫ ರೆಬೆಲೊ 2) ಎಡ್ವರ್ಡ ರೆಬೆಲೊ, ಜನ್ರಲ್ ಏಜಂಟ್ Mr John P. Sequeira —ವಾದಿ

ಮತ್ತು

ರುದ್ರಯ್ಯಾಚಾರಿ ಕೂಡಾ —ಪ್ರತಿವಾದಿಯವರೊಳಗೆ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿ (1) ರುದ್ರಯ್ಯಾಚಾರಿ (5) ನಾರಾಯಣಾಚಾರಿ ಸದಿಯಾಚಾರಿ ಮಕ್ಕಳು, ಉಡ್ಪಿ ತಾಲ್ಕು ಅಂಬ್ಲಪಾಡಿ ಗ್ರಾಮದಲ್ಲಿರುವವರು- ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ:—

ಮೇಲ್ಕಂಡ ವಾದಿಯು ಪ್ರತಿವಾದಿರ ಮೇಲೆ ದಾವಾ ಆಸ್ತಿಯ ಸ್ವಾಧೀನತೆಗೂ ಹುಟ್ಟುವಳಿಗೂ ಮಾಡಿದ ಮೇಲ್ಕಂಡ ದಾವೆಯು ತಾ. 16–10—1951ಕ್ಕೆ 1ಮತ್ತು 5ನೇ ಪ್ರತಿವಾದಿರಿಗೆ ನೋಟೀಸು ಬಗ್ಗೆ ಮುಟ್ಟಿದೆ. ಸದ್ರಿ ಪ್ರತಿವಾದಿರಿಗೆ ವ್ಯವಹರಿಸುವಂತಾದ್ದಿದ್ದಕ್ಕೆ ಸದ್ರಿ ತಾ. 16—10—1951ನೇ ದಿವ್ಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜವಾಬು ಹೇಳುವಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ಸದ್ರಿದಾವೆಯು ತೀರ್ಮಾನಿಸಲ್ಪಡುವುದು.

P. V. Acharya,
Vakil for Plaintiffs,
ಉಡ್ಪಿ, ತಾ. 25—9—51

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ಉಂಟು ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, B SC, F. I. A
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: **ಉಡುಪಿ, ದ. ಭಾರತ.**

ಸನ್ಯಾಸಿ, ಸಂಸಾರಿ, ಸೂಳೆ
ಈ ಮೂವರ ಜೀವನವನ್ನು ವಿಮರ್ಶಾತ್ಮಕವಾಗಿ ಚಿತ್ರಿಸಿದ

❖ ಚಿತ್ರಲೇಖಾ ❖

ದಿಗ್ದರ್ಶನ: ಕಿದಾರಶರ್ಮ.
ಪಾತ್ರವರ್ಗ:-ಮೆಹತಾಬ್, ನಂದ್ರೇಕರ್, ಮೊನಿಕಾದೇಸಾಯಿ, ಜ್ಞಾನಿ, ರಾಜೇಂದ್ರ, ಭರತ್ ಭೂಷಣ್, ಮೊದಲಾದವರು.

ತಾ.7-10-5 ರಿಂದ **ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್** ಉಡುಪಿ
ಬರುವ ಚಿತ್ರ—ಗುಣಸುಂದರಿ ನಿರೂಪರೆಸ್ಸ್.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.
ನವಯುಗ ಪ್ರೆಸ್, ಉಡುಪಿ.

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. C.)
Nagdevi BOMBAY 3



Approved from by the Govt. of Madras Certificated by the Agent of the Gold Cylone & Indian

ಬಂಧಿರುವ ರಾಷ್ಟ್ರದ ನೂತನ ಘಟನೆ

ಮೂಲಭೂತ ಹಕ್ಕುಗಳು

[ಕಳೆದ ಸಂಚಿಕೆಯಿಂದ ಮುಂದರಿದುದು]

16. ಸಾರ್ವಜನಿಕ ಉದ್ಯೋಗ ಸಮಾನ ಸಂದರ್ಭ ಅಥವಾ ಅವಕಾಶ:—

1] ಸ್ಟೇಟಿನ ಯಾವ ಅಧಿಕಾರ ಅಥವಾ ಉದ್ಯೋಗಕ್ಕೂ, ಯಾವನೊಬ್ಬ ಪೌರನಿಗೂ ಸಮಾನ ಅವಕಾಶ ಅಥವಾ ಸಂದರ್ಭ ಇರತಕ್ಕದ್ದು

2] ಸ್ಟೇಟಿನ ಯಾವ ಅಧಿಕಾರ ಅಥವಾ ಉದ್ಯೋಗಕ್ಕೂ ಯಾವನೊಬ್ಬ ಪೌರನೂ, ಜಾತಿ ಮತ, ವಂಶ, ಜಾತಿ, ಗಂಡು, ಹೆಣ್ಣು, ಪಾರಂಪರ್ಯತೆ, ಹುಟ್ಟು ಸ್ಥಳ, ವಾಸ್ತವ್ಯ ಅಥವಾ ಇವುಗಳಲ್ಲಿ ಯಾವುದೊಂದರ ಕಾರಣದಿಂದಲೂ, ಅನರ್ಹನಾಗಿರಕೂಡದು.

3] ಆದರೆ ಈ ಆರ್ಟಿಕಲ್ಲಿನಲ್ಲಿ ಹೇಳಿದ ಯಾವುದೊಂದು ವಿಷಯವೂ, ಪಾರ್ಲಿಮೆಂಟು ಮೊದಲನೇ ಶೆಡ್ಯೂಲಿನಲ್ಲಿ ನಮೂದಿಸಿದ ಯಾವುದೊಂದು ಸ್ಟೇಟು ಅಥವಾ ಅಂತಹ ಸ್ಟೇಟಿನ ಯಾವುದೇ ಸ್ಥಳೀಯ ಅಥವಾ ಇನ್ನಿತರ ಅಧಿಕಾರಿಗಳು ಯಾವುದೊಂದು ತರಗತಿಯ ಉದ್ಯೋಗಗಳ ಬಗ್ಗೆ ಆ ಸ್ಟೇಟಿನೊಳಗೆ ಅಂತಹ ಉದ್ಯೋಗಗಳ ಬಗ್ಗೆ ಉದ್ಯೋಗಕ್ಕಿಂತ ಮುಂಚೆ ವಾಸ್ತವ್ಯವಿರುವ ಬಗ್ಗೆ ತಕ್ಕ ಕಾನೂನನ್ನು ಮಾಡುವರೆ ತಡೆಯುನ್ನೊಡ್ಡಬಾರದು.

4] ಈ ಆರ್ಟಿಕಲ್ಲಿನಲ್ಲಿ ಹೇಳಿದ ಯಾವುದೊಂದು ವಿಷಯವೂ ಯಾವ ಸ್ಟೇಟೂ, ಆ ಸ್ಟೇಟಿನ ಅಭಿಪ್ರಾಯ ಪ್ರಕಾರ ಹಿಂದೆ ಬಿದ್ದು ಸ್ಟೇಟಿನ ಉದ್ಯೋಗದಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದದ ಹಿಂದುಳಿದ ಯಾವುದೇ ಪಂಗಡಗಳ ಬಗ್ಗೆ, ಸಾಕಷ್ಟು ಉದ್ಯೋಗಗಳ ಏರ್ಪಾಡಿನ ನಿವೃತ್ತಿಯನ್ನು ಮಾಡುವರೇ ತಕ್ಕ ನಿಬಂಧನೆಗಳನ್ನು ಮಾಡುವರೇ ಏನೊಂದು ಅಡ್ಡಿಯನ್ನೂ ಒಡ್ಡಕೂಡದು.

5) ಈ ಆರ್ಟಿಕಲ್ಲು, ಒಂದು ಧಾರ್ಮಿಕ, ಅಥವಾ ಪ್ರತ್ಯೇಕ ನಾಮದ ಸಂಸ್ಥೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಒಂದು ಹುದ್ದೆಗೆ ಬರತಕ್ಕ ವ್ಯಕ್ತಿಯನ್ನು ಅಥವಾ ಆಡಳಿತ ಸಂಸ್ಥೆಯ ಸದಸ್ಯನು ಆ ಕುರಿತಾದ ಮತದವನಿರಬೇಕು ಅಥವಾ ಅಂತಹ ಸಮಾಜಕ್ಕೆ ಸಂಬಂಧಪಟ್ಟವನಿರಬೇಕು. ಎಂದಿರುವ ಯಾವುದೇ ಕಾನೂನಿಗೆ ಅಡ್ಡಿಯನ್ನೊಡ್ಡದು

17 ಅಸ್ಪೃಶ್ಯ ನಿವಾರಣೆ:— ಅಸ್ಪೃಶ್ಯತೆಯನ್ನು ಈ ಮೂಲಕ ನಿವಾರಿಸಿರುತ್ತದೆ. ಯಾವ ರೂಪದಲ್ಲೂ ಅದರ ಆಚರಣೆಯು ನಿಷೇಧಿಸಲ್ಪಟ್ಟೂ ಅಕಂಕಿಸಲ್ಪಟ್ಟೂ ಇರುತ್ತದೆ. ಅಸ್ಪೃಶ್ಯತೆಯಿಂದ ಬರತಕ್ಕ ಯಾವುದೊಂದು ದುರ್ಬಲತೆಯನ್ನು ಒತ್ತಾಯ ಅಥವಾ ಜಾರಿಪಡಿಸಿದಲ್ಲಿ ಅದು ತಕ್ಷೀರು ಆಗಿದ್ದು ಕಾನೂನು ಪ್ರಕಾರ ಶಿಕ್ಷಿಸಲ್ಪಡುತ್ತದೆ.

18 ಬಿರುದು ಅಥವಾ ಪದವಿಗಳನ್ನು ರದ್ದು ಮಾಡೋಣ:- 1) ಸ್ಟೇಟು, ಮಿಲಿಟರಿ, ಅಥವಾ ವಿದ್ಯಾ ಶಾಲೆಯ ಅಥವಾ ಸಾಂಘಿಕ ಪ್ರದರ್ಶನದ ಬಗ್ಗೆ ವಿನಹ ಇತರ ಕಾರಣ ಅಥವಾ ವಿಷಯಗಳಲ್ಲಿ ಬಿರುದು ಅಥವಾ ಪದವಿಗಳನ್ನು ಕೊಡಕೂಡದು.

2) ಹಿಂದೂಸ್ಥಾನದ ಪೌರನು, ಪರದೇಶದಿಂದ ಯಾವ ಬಿರುದನ್ನೂ ಅಂಗೀಕರಿಸಕೂಡದು.

3) ಹಿಂದೂಸ್ಥಾನದ ಪೌರನಾಗಿಲ್ಲದವನು, ಸ್ಟೇಟಿನೊಳಗೆ ಲಾಭದಾಯಕ ವೃತ್ತಿ, ಉದ್ಯೋಗ ಅಥವಾ ಭರವಸೆಯ ಸ್ಥಾನಗಳು ತನಗಿರುವ ವರೆಗೆ, ಅನ್ಯದೇಶದ ಬಿರುದುಗಳನ್ನು ಪ್ರೆಸಿಡೆಂಟರ ಒಪ್ಪಿಗೆ ವಿನಹ ಪಡೆಯಬಾರದು.

4) ಸ್ಟೇಟಿನೊಳಗೆ ಲಾಭದಾಯಕ ವೃತ್ತಿ ಅಥವಾ ಭರವಸೆಯ ಸ್ಥಾನಗಳು ಇರುವ ತನಕ, ಪ್ರೆಸಿಡೆಂಟರ ಒಪ್ಪಿಗೆ ವಿನಹಾ, ಅನ್ಯದೇಶದಿಂದ ಯಾವುದೇ ಇನಾಮು, ಮುನಾಫೆ, ಅಥವಾ ಹುದ್ದೆಯನ್ನು ಪಡೆಯಬಾರದು.

[ಮುಂದೆ ಬರುವ ವಿಷಯ:
"ಸ್ವಾತಂತ್ರಿಕ ಹಕ್ಕು"]

—ಬಿ. ಬಿ ಶೆಟ್ಟಿ, ಎಡ್ವೊಕೇಟ್
ಮಂಗಳೂರು.

ಪೆರಡಾಲ—ಬರುವ ತಾ. 6, 7, 8 ರಲ್ಲು ದಸರಾ ಮಹೋತ್ಸವವು ಭಾಷಣ ನಾಟಕಾದಿ ಕಾರ್ಯಕ್ರಮಗಳಿಂದ ಜಾಗಲಿದೆ.

ಕಾಸರಗೋಡು—ಜಿಲ್ಲಾ ಆನೆಯ ಆಯುರ್ವೇದ ಪರಿಷತ್ತು, ಬಿ. ಇ ಎಂ. ಹೈಸ್ಕೂಲು ಮದಾಂಗಣದಲ್ಲಿ ಜರಗುವುದು. ಕೆ. ಆರ್. ಕಾರಂತರು ಪರಿಷತ್ತನ್ನು ಉದ್ಘಾಟಿಸುವರು. ಮೈಸೂರು ಸರಕಾರದ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ| ಸಿ. ದ್ವಾರಕನಾಥನ್, ಇವರು ಶಾಸ್ತ್ರ ಸಂಭಾಷಾ ವಿಭಾಗಕ್ಕೆ, ಹಾಗೂ ಡಾ| ಯು. ವಿ. ಕೃಷ್ಣ, L. I. M. ಇವರು ಸಮ್ಮೇಲನಕ್ಕೆ, ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

ಮುಚೂರು—ತಾ. 16-9-51ರಲ್ಲಿ ಗ್ರಾಮಸ್ಥ ಸಭೆಜರಗಿ ಗ್ರಾಮ ಸುಧಾರಣಾ ಸಮಿತಿಯೊಂದು ರಚಿಸಲ್ಪಟ್ಟಿದೆ. ಪಟೇಲ್ ದೇವು ಮಾಡರು ಅಧ್ಯಕ್ಷ, ಸಾಲ್ವದೋರ್ ಮಾರ್ ಕಾರ್ಯದರ್ಶಿ, ನಾರಾಯಣ ಭಟ್ಟರು ಕೋಶಾಧಿಕಾರಿ ಮತ್ತು 9ಜನರ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಿ ಹಲವರ ಭಾಷಣಗಳಾದುವು.

ಬ್ರಹ್ಮಾವರ—ತಾ. 28-9-51ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಜರಗಿ ಕಾಂಗ್ರೆಸ್ ಅಧ್ಯಕ್ಷಪದವಿ ಬಿಟ್ಟುಕೊಟ್ಟ ತಂಡನ್, ಇದನ್ನು ವಹಿಸಿದ ನೆಹರು, ಕಾಂಗ್ರೆಸ್ ಕಾರ್ಯದರ್ಶಿಗಳಾದ ಬಗ್ಗೆ ಶ್ರೀ ನಿವಾಸ ಮಲ್ಯರನ್ನು ಅಭಿನಂದಿಸಲಾಯಿತು. ಬ್ರಹ್ಮಾವರ ಮತದಾರ ಕ್ಷೇತ್ರದಿಂದ ಶಾಸನಸಭೆಗೆ ಕಾಂಗ್ರೆಸ್ ಉಮೇದ್ವಾರಿಯಾಗಿ ಅರ್ಜಿ ಸಲ್ಲಿಸಿದ ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರ ಉಮೇದ್ವಾರಿಕೆಯನ್ನು ಶಿಫಾರಸು ಮಾಡಲಾಯಿತು. ಗಾಂಧಿ ಜಯಂತಿಯನ್ನು ಆಚರಿಸಬೇಕೆಂದಾಯಿತು.

ಆಲಿವೂರು—ಇಲ್ಲಿಯ ಹೊಳೆಗೆ ಸಂಕ ಹಾಕಿಸುವ ಸಲಹಾಸಮಿತಿಯ ಸಭೆಯು ಕಳೆದ ತಾ. 26ರಲ್ಲು ಸಮಿತಿಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಟಿ ಸ್ಥಾಪಿತವಾದಂದಿನಿಂದ ಈ ತನಕ ಆದ ಕೆಲಸದ ವರದಿಯು ಓದಲ್ಪಟ್ಟಿತು. ಕಾರ್ಯದರ್ಶಿ ಶ್ರೀ ಎ. ಬಿ. ಕೃಷ್ಣರಾಯರು ಕೆಲವೂ ಹಿತಗಳನ್ನಿತ್ತರು. ಮೂರುಸಾವಿರ ರೂಪಾಯಿಗಳು ಈ ತನಕ ಜಮೆಯಾಗಿದ್ದು ಇನ್ನು ಬಾಕಿಯಾದ ಸಾಧಾರಣ ಏಳು ಸಾವಿರ ರೂಪಾಯಿಗಳನ್ನು ಸಂಗ್ರಹಿಸಲು ಇನ್ನು ಆರು ತಿಂಗಳ ಅವಧಿಯೊಳಗಾಗಿ ಒಟ್ಟುಮಾಡಬೇಕೆಂದಾಯಿತು. ಹಡು ಆಲಿವೂರು ರಸ್ತೆ ಜೋಡಣೆಯ ಬಗ್ಗೆ ಕಾರ್ಯನೆಸಗಲು ಸಮಿತಿಯೊಂದರ ರಚನೆಯಾಯಿತು.

ಅಕ್ಕಿ ಭತ್ತ ಒಪ್ಪಿಸುವ ಅವಧಿ—ಮದ್ರಾಸು ಸರಕಾರದ ಲೆವಿ ಕಾನೂನಿನನ್ವಯ ಫಸಲಿ 1361ನೆ ಮೊಸಲನೆ ಬೆಳೆಯ ಮೆಗತಿ ಅಕ್ಕಿಯೂ ಭತ್ತವನ್ನು ದ. ಕ. ಜಿಲ್ಲಾ ಸಹಕಾರಿ ಸ್ಟೋರು ಯೂ ಅದರ ಶಾಖೆಗಳಿಗೆ ಈ ಕೆಳಗೆ ನಮೂದಿಸಿದ ತಾರೀಕುಗಳೊಳಗೆ ಒಪ್ಪಿಸಬೇಕಾಗಿದೆ.

ಭತ್ತ—ಹೊಸದುರ್ಗ ಸಬ್ ತಾಲೂಕು. ಸಪ್ಟೆಂಬರ ತಾ. 30ರೊಳಗೆ ಒಂದೇ ಕಂತಿನಿಂದ ತೆರತಕ್ಕದ್ದು. ಜಿಲ್ಲೆಯ ಇತರ ಭಾಗಗಳಲ್ಲಿ—ತಾ. 31—10—1951ರೊಳಗೆ ಒಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದು.

ಅಕ್ಕಿ—ಹೊಸದುರ್ಗ ಸಬ್ ತಾಲೂಕನ್ನು ಹೊರತು ಮಿಕ್ಕ ಎಲ್ಲಾ ಭಾಗಗಳಲ್ಲೂ ತಾ. 30—11—1951ರ ವಳಗೆ ಒಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದು.

42 ಸೇರಿನ ಮುಡಿ ಒಂದರ ಅಕ್ಕಿ ಯಾ ಭತ್ತದ ದರ ಈ ರೀತಿಯಾಗಿದೆ:— ಅಕ್ಕಿ: ಮೊದಲನೇ ದರ್ಜೆ ಮುಡಿ ಒಂದರ ರೂ. 15—5—9 ಮತ್ತು ಎರಡನೇ ದರ್ಜೆ ಮುಡಿ ಒಂದರ ರೂ. 14/

ಭತ್ತ: ಮೊದಲನೇ ದರ್ಜೆ ಮುಡಿ ಒಂದರ ರೂ. 6-12-9 ಮತ್ತು ಎರಡನೇ ದರ್ಜೆ ಮುಡಿ ಒಂದರ ರೂ 6-3-6

ಮುಂಬಯಿ—ಕರ್ನಾಟಕ ಬಿಲ್ಲವರ ಯೂನಿಯನಿನ ಮಹಾಸಭೆಯು 7-10-51 ನೇ ಅಪರಾಹ್ನ ಘಂ. 2-30ಕ್ಕೆ 17. ಬಿ., ಎಲ್ಫಿನ್ ಸ್ಟನ್ ಸರ್ಕಲ್, ೧ನೇ ಮಾಳಿಗೆಯಲ್ಲಿ ಜರಗಲಿರುವುದು.

ಮದ್ರಾಸ್ ಲಾ ಕಾಲೇಜ್ ಕರ್ನಾಟಕ ಸಂಘದ—ಉದ್ಘಾಟನಾ ಸಮಾರಂಭೋತ್ಸವವು ಶ್ರೀ. ಬಾಬು ಶೆಟ್ರ ಅಧ್ಯಕ್ಷತೆಯಲ್ಲಿ ತಾ. 21-9-51ರಲ್ಲಿ ಜರಗಿ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಉದ್ಘಾಟನಾ ಭಾಷಣವನ್ನಿತ್ತರು. ಶ್ರೀ ಎನ್. ಎಸ್. ಹಾಲಾಡಿ. ಅವರಿಂದ ಸ್ವಾಗತ, ಶ್ರೀ ಸೀತಾರಾಮ ಕುಮಾರ ಶೆಟ್ರ ಸಂಗೀತ, ಸೀತಾರಾಮಯ್ಯನವರಿಂದ ಸಂಗೀತಗಾರರ ಪರಿಚಯ, ಶ್ರೀ ಲಕ್ಷ್ಮೀ ನಾರಾಯಣರಾಯರಿಂದ ಧನ್ಯವಾದಗಳಾದುವು.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು 1951 ನೇ ಇಸ್ವಿ ನವಂಬ್ರ 13ರಿಂದ ಅದೇ ತಿಂಗಳ ತಾ 28ರ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೂರ್ಣಿಮಾ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆ ದಿವಸದ ಯಾ ಸುಬ್ರಮಣ್ಯ ದಿಪೋತ್ಸವದ ಪರಿಯಂತ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ನಾಲ್ಕಾಣೆಯ ಮೇರೆಗೆ ಫೀಸು ವಸೂಲು ಮಾಡಲಾಗುವುದು. ಒಂದು ತಿಂಗಳ ಕರುಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಪಡಿಸೋಣಾಗಿಯದೆ. ಸಂದರ್ಭ ಒದಗಿದ್ದಲ್ಲಿ ಸದ್ರಿ ಫೀಸನ್ನು ಏರಿಸಲೂ ಬಹುದು ಯಾ ಅಧಿಕ ಫೀಸನ್ನು ವಸೂಲು ಮಾಡಲೂ ಬಹುದು.

ಪರಂತು ರೆವಿನ್ಯೂ ಡಿವಿಜನಲ್ ಆಫೀಸರರು ಅವಶ್ಯವೆಂದು ತೋರುವ ಯಾವತ್ತೂ ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಪಡಿಸಬಹುದು.

(Sd/) ಬಿ ಎನ್. ಹೆಗ್ಡೆ.
ರೆವಿನ್ಯೂ ಡಿವಿಜನಲ್ ಆಫೀಸರು.

ರೆವಿನ್ಯೂ ಡಿವಿಜನಲ್ ಆಫೀಸು,
ಪುತ್ತೂರು ತಾ. 8-9-1951

PUBLIC NOTICE

All take notice that the Commissioner C. Abdulla, Advocate, Kasaragod appointed as a Commissioner in O. S. No. 387/17 on the file of the Kasaragod District Munsiff Court will be sold by public auction of the garden in R. S. 82/ll of Arikadi village with the tiled house thereon in Commissioner's Office at Kasaragod on 4-11-1951 at 11 A. M.

Conditions of the Sale:

1. The upset price of the garden with the tiled house thereon is fixed at Rs. 1000/- (One thousand) only.

2. 25% of the purchase money will have to be paid by purchaser to the Commissioner immediately before the bid is accepted and the balance within 14 days from the date of sale to the Commissioner. If the purchaser fails to pay the balance amount, the amount already paid will be forfeited and he will be liable for all loss incurred at a resale.

3. The purchaser of the property will be entitled to take delivery of the property with the house after the final decree.

(Sd.) **C. Abdulla,**
Commissioner.

Kasaragod, 27-9-'51.

For Protection and Provision

Consult

The New Guardian of India Life Insurance Co., Ltd.

Head office: **MADRAS**

(Estd 1934)

A Policy in this Progressive Life Office is good investment: its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ

ಕಾಳಿಕಮಾಲಿ

ಚವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ.

ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ
ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ
ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.

AYURVEDIC PHARMACY
Baba kali Kamali-Wala RISHIKESH.

ಮಂಗಳೂರು

ದ. ಕ ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆ

ಮೊನ್ನೆ ನಡೆದ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಕಳೆದ ತಾ. 22ರಲ್ಲು ಶ್ರೀ ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯು ಜರಗಿತು ಈ ಸಭೆಗೆ ಜಿಲ್ಲೆಯ ಸಾಧಾರ 90 ಮಂದಿ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಸಭಾರಂಭದಲ್ಲಿ ಅಧ್ಯಕ್ಷರು ಸಭೆ ಕರೆದ ಉದ್ದೇಶವನ್ನು ತಿಳಿಸಿದ ನಂತರ ಪ್ರಧಾನ ಕಾರ್ಯದರ್ಶಿ ಶ್ರೀ ಕೆ ಕೆ ಸೆಟ್ಟರು ಮಾತಾಡುತ್ತಾ, ಕಾಂಗ್ರೆಸು ಸಂಸ್ಥೆಯು ಬಲವಾಗಿ ಬಾಳಿ ಬರಲು ಕಾಂಗ್ರೆಸಿಗರು ಹೇಗೆ ಕಾರ್ಯವೆಸಗಬೇಕೆಂಬುದನ್ನು ತಿಳಿಸಿದರು. ಇಂದಿನ ಕಾಂಗ್ರೆಸ್ ಆಡಳಿತದ ರೀತಿಗಳಿಂದಾಗಿ ಜನತೆಯು ಟೀಕೆಟಿಪ್ಪಣಿಗಳಿಗೆ ಸರಿಯಾದ ಉತ್ತರವೀಯುವುದೇ ಕಷ್ಟವಾಗಿದೆ ಎಂದು ಶ್ರೀ ಎಮ್. ಉಮೇಶರಾಯರು ನುಡಿದುದನ್ನು ಶ್ರೀ ಎಮ್. ಎಸ್. ಕಾಂಗಳು ಪುಷ್ಟೀಕರಿಸಿದರು ನಂತರ ಮಾತನಾಡಿದ ಶ್ರೀ ಬಿ. ವಿಠಲದಾಸ ಸೆಟ್ಟರು, ಕಾಂಗ್ರೆಸ್ ಅಧ್ಯಕ್ಷರೂ ಪ್ರಧಾನ ಮಂತ್ರಿಗಳು ಒಬ್ಬರೇ ಆಗುವ ಯುಕ್ತತೆಯನ್ನು ಆಲೋಚಿಸುವುದು ಅವಶ್ಯವಿದೆಯೆಂದರು. ಕಾಂಗ್ರೆಸ್ ಸಂಸ್ಥೆಯಲ್ಲಿ ತಾತ್ವಿಕ ದೌರ್ಬಲ್ಯವೇನೂ ಇರುವುದಿಲ್ಲ, ಆದರೆ ತಪ್ಪು ನಿಷ್ಠೆಯಿಂದ ನಡೆಯುವ ಕೆಲಸಗಾರರು ಕಡಿಮೆಯಾಗಿದ್ದಾರೆ ನಿಜವಾದ ಕಾಂಗ್ರೆಸಿಗರಿಗೆ ತತ್ವ ಮುಖ್ಯವಲ್ಲದೆ ವ್ಯಕ್ತಿ ಮುಖ್ಯವಲ್ಲವೆಂದು ಶ್ರೀ ಎಮ್ ಡಿ ಅಧಿಕಾರಿಗಳು ಹೇಳಿದರು ಆತ್ಮವಿಶ್ವಾಸದಿಂದ ಕಾರ್ಯ ಪ್ರವರ್ತರಾಗಬೇಕು ಕಾಂಗ್ರೆಸ್ ಉಮೇದ್ವಾರರನ್ನು ಆರಿಸುವ ವಿಷಯದಲ್ಲಿ ಜಾತ್ಯತೀತ ಧೋರಣೆಗೆ ಪ್ರಾಮುಖ್ಯತೆ ಕೊಡಬೇಕೆಂದು ಶ್ರೀ ವೇಣು ಗೋಪಾಲ ನಾಯಕರು ಅಭಿಪ್ರಾಯಪಟ್ಟರು. ಶ್ರೀಗಳಾದ ಶಿವಾನಂದ ಮಡಿಕೇಕರ್, ಪೂಥವ ಪಡಿಯಾರ್, ಕೇಶವಕುಡುವರು ತಂತಮ್ಮ ಸ್ವಹಿತೋಕ್ತಿಗಳನ್ನಾಡಿದರು. ಶ್ರೀ ಬಿ ದೇವಪ್ಪ ಆಳ್ವರು, ಅಂತ್ಯದಲ್ಲಿ ಮಾತಾಡಿ, ಒಕ್ಕಲುಹಿತ ಮಸೂದೆಯ ಕುರಿತು ಸರಕಾರದ ಧೋರಣೆಯನ್ನು ಖಂಡಿಸಿದರು ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಹಳ್ಳಿಹಳ್ಳಿಗಳನ್ನು ಸಂದರ್ಶಿಸಿ ಪ್ರಚಾರಕಾರ್ಯ ನಡೆಸಬೇಕೆಂದರು ಶ್ರೀ ಕೆ ಕೆ ಸೆಟ್ಟರು ಉತ್ತರವೀಯುತ್ತಾ, ಕಾಂಗ್ರೆಸಿನ ಮತ್ತು ದೇಶದ ಹಿತದೃಷ್ಟಿಯಿಂದ ಒಕ್ಕಟ್ಟು ಮತ್ತು ಬಾಧುತ್ವದಿಂದ ನಡೆದು, ಪಂಡಿತ ನೆಹರೂರವರ ಹಸ್ತವನ್ನು ಬಲಗೊಳಿಸುವ ಅವಶ್ಯಕತೆಯನ್ನು ಸೂಚಿಸಿದರು

ನಂತರ ಪಂಡಿತ ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಿ ಬಂದುದರ ಬಗ್ಗೆ ಅವರನ್ನು ಅಭಿನಂದಿಸುವ ಮತ್ತು ಅವರ ಧೋರಣೆಗೆ ಬೆಂಬಲವೀಯುವ, ಶ್ರೀ ಟಂಡನರು ಅಧ್ಯಕ್ಷಪದವನ್ನು ಬಿಟ್ಟು ಕಾಂಗ್ರೆಸಿನ ಬಿಕ್ಕಟ್ಟನ್ನು ಬಗೆಹರಿಸಲು ಅನುಕೂಲ ವಾತಾವರಣವನ್ನುಂಟುಮಾಡುವ ಬಗ್ಗೆ ಅವರನ್ನು ಪ್ರಶಂಸಿಸುವ, ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟ ಬಗ್ಗೆ ಶ್ರೀ ಯು. ಎಸ್. ಮಲ್ಯರನ್ನು ಅಭಿನಂದಿಸುವ ಕಾಂಗ್ರೆಸ್ ಸಂಸ್ಥೆಯನ್ನು ಬಲಗೊಳಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು

ಸ್ವಾಗತ ಸತ್ಕಾರ—ಜಿಲ್ಲಾ ವರ್ಕರ್ ಸಂಘದವರು ಕಳೆದ ತಾ. 2೬ರಲ್ಲು ಸಂಜೆ ಮಂಗಳೂರಿಗೆ ಬಂದಿದ್ದ ಸೂಸೆಯ ಕೇಂದ್ರ ಜಲಶಕ್ತಿ, ನೀರಾವರಿ ಮತ್ತು ನೌಕಾ ಸಂಶೋಧನಾ ನಿಲಯದ ಡೈರೆಕ್ಟರರಾದ ಶ್ರೀ ಡಿ. ವಿ. ಜೋಗ್ಲೇಕರರನ್ನೂ ಅವರೊಂದಿಗೆ ಒಂದಿದ್ದ ಶ್ರೀ ತಾಲ್ವಾನಿ ಮತ್ತು ಶ್ರೀ ಮುರ್ ಹೆಲ್‍ಕರರನ್ನೂ ತಮ್ಮಲ್ಲಿಗೆ ಸ್ವಾಗತಿಸಿ ಸತ್ಕರಿಸಿದರು.

ಪುಣ್ಯದಿನಾಚರಣೆ—ರಾಜಾ ರಾಮ ಮೋಹನರಾಯರ 118ನೆ ಪುಣ್ಯದಿನಾಚರಣೆಯು ಕಳೆದ ತಾ. 27ರಂದು ಸಂಜೆ ಮಂಗಳೂರಿನ ಬ್ರಹ್ಮ ಮಂದಿರದಲ್ಲಿ ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಮ್. ಬಿ. ಪಾಪಿಮಿ, ಅವರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು.

‘ಲೆವಿ’ ಪದ್ಧತಿ — ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಿದ ಕಳೆದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ‘ಲೆವಿ’ಪದ್ಧತಿಯಂತೆ ಅಕ್ಕಿಯನ್ನು ಸರ್ಕಾರಿಗೆ ಹಾಕುವ ತಾರೀಖು, ಅದರ ಬೆಲೆ ಇತ್ಯಾದಿಗಳನ್ನು ವಿವರಿಸಿದರು.

ಆಹಾರೋತ್ಪಾದನ ಸಭೆಯು — ಕಳೆದ ತಾ 24ರಲ್ಲು ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಯು ಪದ್ಮನಾಭ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಲೆವಿಪದ್ಧತಿಯ ಕುರಿತು ಚರ್ಚೆ ನಡೆಯಿತು ಬಾವಿ ಯೋಜನೆಯಂತೆ ಹೊಸ ಬಾವಿಗಳ ಕೆಲಸಗಳನ್ನು ಪೂರ್ಣಮಾಡುವ ದಿನವನ್ನು ತಾ 30-6-1952ರವರೆಗೆ ಮುಂದುವರಿಸಲಾಯಿತೆಂದೂ ಈ ಜಿಲ್ಲೆಯಲ್ಲಿ ಒಂದು ವರ್ಕ್‍ಶೋಪ್ ತೆರೆಯುವ ವಿಚಾರವನ್ನು ಸರಕಾರವು ಪರ್ಯಾಲೋಚಿಸುತ್ತಿದೆಯೆಂದೂ ಸಭೆಯಲ್ಲಿ ತಿಳಿಸಲಾಯಿತು

ಬೋಟಿ ಕೆಲಸಗಾರರ ಸಭೆಯು—ಕಳೆದ ತಾ. 23ರಂದು ಶ್ರೀ ಬಿ ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಬೋಟಿ ಕೆಲಸದವರಿಗಾಗುವ ತೊಂದರೆಗಳನ್ನು ವಿವರಿಸಿ ಕೆಲವರ ಭಾಷಣಗಳಾದುವು.

ಜಿಲ್ಲೆಗೆ ಆಹಾರ—ಈಗಾಗಲೇ ಕೊಚ್ಚಿಯಿಂದ ಸುಮಾರು 1500ಟನ್ ಗೋಧಿ ಮತ್ತು 200ಟನ್ ಮಿಲೋ ಬಂದಿರುತ್ತದೆ. ಅಲ್ಲದೆ ೨000ಟನ್ ಅಕ್ಕಿ ಬರಲಿದೆ. ಈ ಪೈಕಿ 150ಟನ್ ಅಕ್ಕಿ ಬಂದಿರುವುದು.

ಜಿಲ್ಲಾ ಸೈನಿಕ ಸಮಿತಿ ಸಭೆಯು—ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ, ಜಮಾದಾರ್ ಡಿ’ಲೆನೋಸ್ ಅವರಿಗೆ ಕೋಣೆಸಾಕಣೆಯ ಕ್ಷೇತ್ರಕ್ಕಾಗಿ ರೂ. 250/- ಕೊಡಲಾಯಿತು ಮಂಗಳೂರಲ್ಲಿ ‘ಡೈರಿ ಫಾರ್ಮ್’ ತೆರೆಯುವ ವಿಚಾರ ಚರ್ಚೆಯಾಗಿ ಹಣದ ಅಭಾವದಿಂದಾಗಿ ಬಿದ್ದು ಹೋಯಿತು

ಕರ್ನಾಟಕ ಏಕೀಕರಣ ಪಕ್ಷ ಮತ್ತು ಪ್ರಜಾ ಪಕ್ಷದವರು – ಒಂದಾಗುವ ನಿರ್ಣಯವಾಗಿ ಹುಬ್ಬಳ್ಳಿಯಲ್ಲಿ ಏಕೀಕರಣ ಪಕ್ಷವು ನೀರಿ ಪ್ರಜಾಪಕ್ಷದವರೊಡನೆ ಮಿಲನವಾಗುವ ವಿಚಾರದಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನೂ ಪ್ರಜಾಪಕ್ಷದ ಆಚಾರ್ಯ ಕೃಪಲಾನಿಗಳಿಗೆ ಕಳುಹಿಸಲಾಗಿದ್ದು, ಆಚಾರ್ಯರೀಗ ಅದಕ್ಕೊಪ್ಪಿರುತ್ತಾರೆ. ಈ ಮಿಲನದಂತೆ ನಮ್ಮ ಜಿಲ್ಲೆಯಲ್ಲಿ ಶ್ರೀ ಕೆ ಆರ್. ಕಾರಂತರು ಪ್ರಜಾಪಕ್ಷದ ಸಂಘಟನೆ ಮಾಡಲಿರುವರು.

ಜಿಲ್ಲಾ ಬೋರ್ಡ ಆಡಳಿತದ ವರದಿ 1951–52— ಜಿಲ್ಲೆಯಲ್ಲಿ ಮಂಗಳೂರು ಉಡುಪಿ ನಗರ ಸಭೆಗಳೂ, 237 ಪಂಚಾಯತುಗಳೂ ಇವೆ. ಇವುಗಳ ಆಡಳಿತಗೊಳಗಾಗದೆ ಇರುವ ಭೂಭಾಗವೆಲ್ಲ ಈ ಬೋರ್ಡಿನ ಅಧಿಕಾರಕ್ಕೊಳಗಾಗಿದೆ ವರದಿ ವರ್ಷದಲ್ಲಿ ಅಧ್ಯಕ್ಷರು ರೂ. 1833-15 0 ಪ್ರಯಾಣಭತ್ತೆ ತೆಗೆದಿರುತ್ತಾರೆ ಉಪಾಧ್ಯಕ್ಷರ ಪ್ರಯಾಣದ ವೆಚ್ಚವು ರೂ 197-15-0 ಅಧ್ಯಕ್ಷರಾದ ಶ್ರೀ ಬಿ ಮಂಜಯ್ಯ ಹೆಗ್ಗಡೆಯವರ ವರದಿ ವರುಷದಲ್ಲಿ 71ದಿನಗಳ ಮತ್ತು ಉಪಾಧ್ಯಕ್ಷ ಶ್ರೀ ಎಫ್ ಎಕ್ಸ್. ಡಿ’ ಪಿಂಟೋರವರು 11ದಿನಗಳ ಪ್ರಯಾಣ ಮಾಡಿರುತ್ತಾರೆ ವರದಿ ವರುಷದಲ್ಲಿ ಬೋರ್ಡು 777ಮೈಲು ರಸ್ತೆಗಳನ್ನು ನೋಡಿಕೊಂಡಿದೆ. ಈ ವರ್ಷದಲ್ಲಿ 17ಮೈಲುಗಳನ್ನು ಹೊಸರಸ್ತೆಗಳಾಗಿವೆ. ಇವುಗಳ ವೆಚ್ಚವು ರೂ. 2,53,395.

ಶಿಕ್ಷಕರ ಶಾಲೆ—ಜಿಲ್ಲಾ ಬೋರ್ಡಿನ ಆಡಳಿತಕೊಳಗಾದ ಭಾಗದಲ್ಲಿ 2,33,612 ಮಂದಿ ಶಾಲೆ ಕಲಿಯುವ ಪ್ರಾಯದ ಮಕ್ಕಳಿದ್ದಾರೆಂದು ತಿಳಿಯುತ್ತದೆ. ಅವರಲ್ಲಿ 1 25,770 ಬಾಲಕರು ಮತ್ತು 1,07,842 ಮಂದಿ ಬಾಲಕಿಯರು, ಈ ಪೈಕಿ ಶಿಕ್ಷಣ ಸೌಕರ್ಯ ಒದಗದವರ ಸಂಖ್ಯೆ 10,07,640 ಪ್ರಾಥಮಿಕ ವಿದ್ಯಾಸಿಧಿಯಿಂದ ಒಟ್ಟು ರೂ. 15,50,339/- ವೆಚ್ಚವಾಗಿದೆ ಒಬ್ಬ ವಿದ್ಯಾರ್ಥಿಗೆ ಸರಾಸರಿ ರೂ 21—15—9 ವೆಚ್ಚವಾಗುತ್ತದೆ. ಜಿಲ್ಲೆಯ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ಒಟ್ಟು 16,960 ಬಾಲಕರು 3982 ಬಾಲಕಿಯರು ಕಲಿಯುತ್ತಾರೆ. ಜಿಲ್ಲಾ ಬೋರ್ಡಿನ 11ಶಾಲೆಗಳ ಮಕ್ಕಳ ಸಂಖ್ಯೆ 4,398, ಜಿಲ್ಲಾ ಬೋರ್ಡಿನ ಮಾಧ್ಯಮಿಕ ಖಾತೆಯಲ್ಲಿ ಕಲಿವ ಹೆಮ್ಮಕ್ಕಳ ಸಂಖ್ಯೆ 524 ಮಾತ್ರ

ಆರ್ಥಿಕ ವಿಚಾರ-ವರದಿ ವರ್ಷದಲ್ಲಿ ಭೂಕಂದಾಯದಿಂದ ಜಿಲ್ಲಾಬೋರ್ಡಿಗೆ ರೂ 307,834 ಜಮೆಯಾಗಿದೆ. ಬೋರ್ಡಿನ ಸರ್ವಸಾಮಾನ್ಯ ಆರ್ಥಿಕ ವಿಚಾರವು ಹೀಗಿದೆ — ಪ್ರಾರಂಭದ ಶಿಲ್ಕು ರೂ 1,42,244, ವರ್ಷದಲ್ಲಿ ಜಮೆ ರೂ. 9,04,756, ಒಟ್ಟು ಖರ್ಚು ರೂ. 9,39 586, ಕೊನೆಯಲ್ಲಿ ಶಿಲ್ಕು ರೂ. 1,07,414.

ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಮತ್ತಿತರ ಎಲ್ಲಾ ತರದ

ಉಪಯುಕ್ತ ಪುಸ್ತಕಗಳ ಸಂಗ್ರಹ

ರುದಾವತಿ	0	3	0	ಕಾಲವೇ ಬದಲಾಗಿದೆ	0	4	0
ಹೈದರಾಬಾದ್ ವಿಜಯ	0	4	0	ಭಾರತದ ಸಾಹಿತ್ಯ ಕಲೆಗಳು	0	4	0
ನಡೆಯ ಗಾಂಧಿ	0	3	0	ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಂತಿಯ ಮಡಿಲಿನಲ್ಲಿ	0	3	0	ಹಂಬಲ	0	4	0
ಲಿಷೀಕದಲ್ಲಿ	0	5	0	ಭಾರತಚಿತ್ರದ ಅಂಚೆಚೀಟುಗಳು	0	3	0
ಗಲಿದ ಅಕ್ಕ ಸರೋಜಿನಿ	0	3	0	ತ್ರಿಶೂಲ	0	5	0
ನ್ನ ಹೆಂಡತಿ	0	3	0	ಪುಸ್ತಕಪುರಾಣ	0	4	0
ಣ್ಯಫಲ	0	4	0	ಹಳ್ಳಿಯಲ್ಲಿ ನಡೆದ ನಾಟಕ	0	3	0
ಬಿದಾರಿ	0	3	0	ನೆರೆಯ ಗಾಂಧಾರ	0	3	0
ಕಾಂತ	0	3	0	ಮಾತಿನಯುಗದ ಮಹಾಪ್ರಭಾವ	0	3	0
ಂಚಮುಖಿ	0	4	0	ವಿಜ್ಞಾನದ ಬೆಳವಣಿಗೆ	0	4	0
ಾತೀಭೋಕಳ್ಳ ಬಲಿ	0	3	0	ಡಾ। ಹರ್ಡೀಕರ್	0	5	0
ನಸೇವೆಯ ಸೋಗಿನಲ್ಲಿ	0	3	0	ತೆಂಗಿನ ತವರು	0	6	0
ಕಂಡ ಅವಳು	0	3	0	ಪ್ರಾಯಶ್ಚಿತ್ತ	0	3	0
ವೇಣಿ	0	3	0	ಪ್ರಭಾ	0	3	0
ಲುಪಂಗಿ	0	4	0	ಕವನಗಳ ಸಂಗ್ರಹ	0	12	0
ಾಡಿಗೆಯ ಮನೆ	0	3	0	ಸ್ವಪ್ನಲೋಕ	0	6	0
ಕರ್ಮೂನಕಾಲದ ನಾಲ್ವರು				ಮನೆಹೊರಗಿನ ಮಹಾಜೀವಿಗಳು	0	5	0
ಮಹಾನುಭಾವರು	0	4	0	ಘಂಟೆಸೂರಾ ೪ ಭಾಗಗಳು	2	0	0
ೇವರ ನಾಮ ಮತ್ತು ಸಾಧನೆ	0	3	0	ಮಾರ್ಪಾಟ	0	4	0
ೆರಡು ಕತೆಗಳು	0	3	0	ಭಾರತದ ರಾಷ್ಟ್ರಗೀತೆ	0	3	0
ೆರಸ-ವಿರಸ	0	3	0	ನಮ್ಮ ಬಹು ದೊಡ್ಡ ಶತ್ರು	0	4	0
ಹೃದಯೇಶ್ವರಿ	0	4	0	ಕೈಲಾಸ	0	3	0
ವಿಧ ವಿಷಯ ಕೋಶ ಭಾಗ ೨	0	6	0	ಚೌತಿ	0	4	0
ಡಿಮುತ್ತುಗಳು ೧, ೨, ೩	0	12	0	ಕತ್ತು ಕೊಯ್ದವರಾರು	0	5	0
ಲವಿಲ್ಲದ ಹೆಣ್ಣು	1	8	0	ನವಾಬನ ಅಗ್ನಿಕುಂಡ	0	4	0
ವರು ಮನೆಯಿಂದ	0	4	0	ಬೆಳ್ಳಿಹಬ್ಬ	0	4	0
ಾಗ್ಯಲಕ್ಷ್ಮಿ	1	4	0	ಉಷಾ	0	4	0
ಯುಗವಾಣಿ	0	8	0	ವಿಧಿಲೀಲೆ	0	4	0
ೇ ಹೃದಯ	0	4	0	ಪರಮಾಣು ಪ್ರಪಂಚ	0	4	0
ೇಷ	0	3	0	ನೀತಿ ವಿನೋದ ಕತೆಗಳು	0	12	0
ರಡು ಏಕಾಂಕ ನಾಟಕಗಳು	0	4	0	ಸಾಹಸ ಭೀಮ ವಿಜಯ	0	8	0
ಹಾಪ್ರಭುತ್ವವನ್ನು ಕುರಿತು	0	8	0	ಭಾರತದ ಗುರುಕುಲ	0	6	0
ಾಷಿದನ ದಿನಚರಿ	0	3	0	ಲಕ್ಷ್ಮಪಗಡೆ	0	6	0
ಧುನಿಕ ಭಾರತ	0	4	0				

ಈ ಎಲ್ಲಾ ಹಿರಿಯ ಪುಸ್ತಕಗಳನ್ನು ರೂ ೨೦/ಕ್ಕೆ ಕೊಡಲಾಗುವುದು.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್

(1) ಅಂಕೆರಂಗ ಕಾರ್ಯಾಲಯ, ಉಡುಪಿ.

ಉಡುಪಿ. ಡಿ ಮು. ಕೋರ್ಟಿನಲ್ಲಿ

O. S. No 334/51.

ರಾಮಚಂದ್ರ ಭಟ್ಟ .. ವಾದಿ.

ಮತ್ತು

ಪ್ರತಿವಾದಿ .. ತಮ್ಮಯ್ಯಾಚಾರಿ

ಮೇಲ್ಕಂಡ ಪ್ರತಿವಾದಿ ತಮ್ಮಯ್ಯಾಚಾರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ತಮ್ಮಯ್ಯಾಚಾರಿ-ರಾಮಣ್ಣ ಆಚಾರಿ ಮಗ ಉಡುಪಿ ತಾಲೂಕು ಅಂಬಲಪಾಡಿ ಗ್ರಾಮದಲ್ಲಿರುವವ

ವಾದಿಗೆ ಪ್ರತಿವಾದಿಯಿಂದ ಪ್ರೋನೋಟು ಅಸಲು ಬಾಬ್ತು ಕಳೆದ ವಿಕೃತಿ ಸಂವತ್ಸರದ ಮಾರ್ಗಶಿರ ಬಾಲಗೇಣಿಯ ಗೇಣಿ ಮತ್ತು ಅಸ್ತಿಸ್ವಾಧೀನತೆ ಬಗ್ಗೆ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾ 15-10-51ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಪ್ರತಿವಾದಿಯು ತನ್ನ ಉದಾಹರಣೆಯಿದ್ದರೆ ಸ್ವತಹಾ ಯಾ ವಕೀಲರ ಮೂಲಕ ಹಾಜರಿ ತಾ 15-10-51ಕ್ಕೆ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರು ಇಲ್ಲದಿದ್ದರೆ ನಿಮ್ಮನ್ನು ಗೈರುಹಾಜರು ಮಾಡಿಕೊಳ್ಳತಕ್ಕದ್ದು. ಪ್ರತಿವಾದಿಯನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು

K J Ballal.

Vakil for Plaintiff.

Udipi,-22-9-1951

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ

ಉಡುಪಿ

ಸ್ಥಾಪಕರು

ಶ್ರೀ ಉಳ್ಳಾಲ ಮಂಗೇಶರಾವ್,

ಬಿ. ಎ. ಎಲ್. ಟಿ,

ಸಂಪಾದಕರು

ಕೆ ಆರ್ ಶೆಟ್ಟಿ ಮತ್ತು ಕೆ ಎಚ್. ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ.

ವಾರ್ಷಿಕ ಚಂದಾ ರೂ. 3-0-0

ಮೆನೇಜರ್,

ಬಾಲಚಂದ್ರ, ಉಡುಪಿ

ಸಂಘಗಳ ಮೂಲಕ ಬಂಜರು ಸಾಗುವಳಿಗೆ ಸರಕಾರದ ಸಹಾಯ

ಈ ಕುರಿತು ತಾ. 5-3-1951ನೇ ನಂ. 85 (ಎಫ್.ಪಿ) ಆಹಾರ ಮತ್ತು ಕೃಷಿ(ಆಹಾರದ ಉತ್ಪಾದನೆ) ಇಲಾಖೆ, ಈ ಹುಕುಮಿನ ತಾತ್ಪರ್ಯ ಕೆಳಗೆ ಕೊಟ್ಟಿದೆ.

2 ಭೂಮಿ ವಸಾಹತು ಸಂಘಗಳ(Land Colonisation societies) ಸದಸ್ಯರಿಗೆ ಸರಕಾರದಿಂದ ಸಿಗುವ ಕೆಳಗೆ ಕಾಣಿಸಿದ ತರದ ಸಹಾಯವನ್ನು ಸಹಕಾರಿ ಸಂಘಗಳ ಮೂಲಕ ಬಂಜರು ಸ್ಥಳಗಳ ಸಾಗುವಳಿ ವಹಿಸಿಕೊಳ್ಳುವವರಿಗೆ ಕೊಡಬಹುದು. ಯಾವದೆಂದರೆ:—

1] ಸಂಘದಲ್ಲಿ ಪಾಲು ಪಡೆಯುವ ಬಗ್ಗೆ ಪ್ರತಿ ಮೆಂಬರನಿಗೆ ರೂ. 10ರಂತೆ ಧರ್ಮಾರ್ಥವಾಗಿ ಕೊಡಲಾದೀತು.

2] ಪ್ರಥಮದ ವರ್ಷದಲ್ಲಿ ಮಾತ್ರ ಎಕ್ರೆ 1ರ ರೂ. 5ರಂತೆ ಗೊಬ್ಬರ ಪಡೆಯುವರೆ ಉಚಿತವಾಗಿ ಕೊಡಲಾದೀತು.

3] ಪ್ರಥಮ ವರ್ಷದಲ್ಲಿ ಎಕ್ರೆ 1ರ ರೂ. 20 ವರೆಗಿನ ಬೆಲೆಯ ಬೀಜ ಉಚಿತ. ಕೃಷಿ ಪ್ರದರ್ಶಕರು (Demonstrators) ಸಿಫಾರಸು ಮಾಡಿದಲ್ಲಿ ನಂಜ ಭೂಮಿಗಳ ಸಂಗತಿಯಲ್ಲಿ ಎಕ್ರೆ 1ರ ರೂ. 5ರ ವರೆಗೆ ಗ್ರೇಂಟು.

4] ರೂ. 250 ಬೆಲೆಗೆ ಮೀರದ ಒಂದು ಜೊತೆ ಎತ್ತುಗಳನ್ನು ಪಡೆಯುವರೆ ಅರೆನಾಸ ಗ್ರೇಂಟು—ಮಿಕ್ಕ ಅರ್ಧಾಂಶ ಆ ಮೆಂಬರನು ಕೈಯಿಂದ ಹಾಕಬೇಕು. ಒಂದು ವೇಳೆ ಸ್ವಂತ ಹಣವಿಲ್ಲದಿದ್ದಲ್ಲಿ 5 ವರ್ಷಗಳಲ್ಲಿ ಸಮಸಮಾನವಾದ 5 ವರ್ಷಾವಧಿ ಕಂತಿನಿಂದ ಮರುಪಾವತಿ ಮಾಡುವ ಶರ್ತದಿಂದ ಸಿಬಡ್ಡಿ ಸಾಲ ಕೊಡಲಾಗುವದು.

5] ಉಪಕರಣಗಳನ್ನು ಕೊಂಡುಕೊಳ್ಳುವ ಬಗ್ಗೆ ಪ್ರತಿ ಮೆಂಬರನಿಗೆ ನಿಬಡ್ಡಿಯಿಂದ ರೂ. 75ರ ವರೆಗೆ ಸಾಲ ಕೊಡಲಾದೀತು. ಇದನ್ನು 15 ಸಮಸಮಾನ ವರ್ಷಾವಧಿ ಕಂತುಗಳಿಂದ ಸಲಾಯಿಸತಕ್ಕದ್ದು.

6] ಭೂಮಿಯನ್ನು ಸಾಗುವಳಿಗೆ ಸಜ್ಜುಗೊಳಿಸುವ ಅರ್ಧಾಂಶ ಖರ್ಚಿನ ಬಗ್ಗೆ ಎಕ್ರೆ 1ರ ರೂ. 25ರ ವರೆಗೆ ನಿಬಡ್ಡಿ ಸಾಲ ಕೊಡಲಾದೀತು. ಇದನ್ನು 10 ವರ್ಷಗಳಲ್ಲಿ ಪಾವತಿ ಮಾಡತಕ್ಕದ್ದು.

7] ಕಿರ್ವೆ ವ ಸೀರಿನ ತೆರಿಗೆ ಪ್ರಥಮದ 3 ವರ್ಷಗಳಲ್ಲಿ ಮಾಫಿ. ಅನಂತರ ಸ್ಥಿತಿ ವಿಚಾರದಿಂದ ತೀರ್ಮಾನಿಸಲಾದೀತು.

10 ವರ್ಷಗಳಿಗಿಂತಲೂ ಮಿಕ್ಕಿ ಸಾಗುವಳಿಯಾಗದ ಬಂಜರುವ ಸ್ಥಳಗಳ ಕುರಿತು ಮಾತ್ರ ಮೇಲಿನ ರಿಯಾಯತಿಗಳು ಅನ್ವಯಿಸುವವು.

3 ಸರಕಾರಿ ಸ್ಥಳಗಳನ್ನು 10 ವರ್ಷಗಳಿಗೆ ಕನಿಷ್ಠಯಾಗದ ಅವಧಿಗೆ ಸಂಘಗಳಿಗೆ ಹಂಗಾಮಿಯಾಗಿ ಕೊಡಲು ಸರಕಾರದವರಿಗೆ ಸಮ್ಮತಿಯಿದೆ. ಆದರೆ ಈ ರೀತಿ ಸರಕಾರಿ ಸ್ಥಳಗಳನ್ನು ಕೊಡುವ ಸಂಗತಿಗಳಲ್ಲಿ ಸರಕಾರದವರು ಈ ಮೊದಲು ಆಜ್ಞಾಪಿಸಿದಂತೆ ರಾಜಕೀಯ ಪತ್ರಸ್ಥರು, ನಿವೃತ್ತ ಸೈನಿಕರು ಮತ್ತು ಬೇರೆಯವರ ಪ್ರಥಮ ಹಕ್ಕುಗಳಿಗೆ ಒಳಪಟ್ಟು ಕೊಡತಕ್ಕದ್ದು.

4 ಈ ಸ್ಥಳಗಳಲ್ಲಿ ಸರಕಾರಿ ಖರ್ಚಿನಿಂದ ಬಾವಿಗಳನ್ನು ತೋಡಿಸಬೇಕೆಂಬ ಸೂಚನೆಯು ಕುರಿತು, ನೀರಾವರಿಯು ಬೇರೆ ವಿಧದಲ್ಲಿ ಸ್ವಾಭಾವಿಕವಾಗಿ ಸಿಕ್ಕಬಹುದಾದ ಸ್ಥಳಗಳನ್ನೇ ಸಾಗುವಳಿಗೆ ಸಾಗುಮಾಡಲು ಸಂಘಗಳು ಕೈಕೊಳ್ಳುವುದು ಉಚಿತವೆಂತ ಸರಕಾರದವರ ಅಭಿಪ್ರಾಯ. ಬಾವಿಗಳನ್ನು ತೋಡಿಸುವುದು ಅತಿ ಅಗತ್ಯವಾದ ಸಂಗತಿಗಳಲ್ಲಿ ಆ ಕುರಿತು ಕಲೆಕ್ಟರರಿಗೆ ಸಂಘಗಳು ಮನವಿ ಮಾಡಬೇಕು ಹಾಗೆ ಮಾಡಿದ್ದಲ್ಲಿ ಖಾಸಗಿ ಕೃಷಿಕರಿಗೆ ಬಾವಿಗಳಿಗೆ ಸರಕಾರದಿಂದ ಸಿಕ್ಕಲಿರುವ ಸಹಾಯ ಧನದ ರೂಲ್ಸುಗಳ ಮೇರೆಗೆ ಸಹಾಯ ಸಿಕ್ಕುವುದು.

5 ಮೇಲಿನ 2ನೇ ಕಲಮಿನ (1) ರಿಂದ (4) ವರೆಗಿನ ಉದ್ದೇಶಗಳಿಗೆ ಸುಮಾರು 5 ಎಕ್ರೆಯ ಜಮೀನಿಗೆ ರೂ. 170 ರಂತೆ ಸರಕಾರದಿಂದ ಧರ್ಮಾರ್ಥ ಗ್ರಾಂಟು ಕೊಡಲಾಗುತ್ತದೆ. ಎಂದರೆ ಎಕ್ರೆಗೆ ಸರಾಸರಿ ರೂ. 34ರಂತೆ ಆಯಿತು. 1951—52ನೇ ವರ್ಷದಲ್ಲಿ ಸಹಕಾರಿ ಸಂಘಗಳು ಈ ಕೆಲಸವನ್ನು ವಹಿಸಿಕೊಂಡು ಮೆಂಬರರಿಗೆ ಹಂಚಿಕೊಟ್ಟು, ಅಂತಹ ಮೆಂಬರರಿಗೆ ಮೇಲೆ ಹೇಳಿದಂತೆ ಒಟ್ಟು ಹಣ ಎಷ್ಟು ಬೇಕಾಗುವುದು ಎಂಬುದು ಎಲ್ಲಾ ಸಂಘದವರು ಪಡೆಯುವ ಸ್ಥಳಗಳ ವಿಸ್ತೀರ್ಣದ ಮೇಲೆ ಹೊಂದಿಕೊಂಡಿದೆ. ಈ ಯೋಜನೆಯು ಇಂಡಿಯಾ ಸರಕಾರದಿಂದ ಹಣದ ಸಹಾಯ ಸಿಕ್ಕತಕ್ಕ ಆಹಾರ ಉತ್ಪಾದನೆಯ ಯೋಜನೆಗಳ ಪೈಕಿ "ಮಿಸಲೇನಿಯಸ್" ಶಿರ್ಷಿಕೆಗೆ ಸೇರಿದ್ದಾಗಿದ್ದು ಆ ಸರಕಾರದಿಂದ ಸಿಕ್ಕತಕ್ಕ ಅರ್ಧಾಂಶದ ಬಗ್ಗೆ ಮದ್ರಾಸ್ ಸರಕಾರದಿಂದ ಬಂಕೊಳ್ಳಬೇಕಾಗುವುದು. ಆದುದರಿಂದ (1) ಧರ್ಮಾರ್ಥ ಸಹಾಯದ ಗ್ರಾಂಟು (2) ನಿಬಡ್ಡಿ ಸಾಲ ಮತ್ತು (3) ಮೇಲೆ 2ನೇ ಕಲಮಿನಲ್ಲಿ ಹೇಳಿದಂತೆ ಸವಲತ್ತುಗಳನ್ನು ಕೊಡುವುದರಿಂದ ಉಂಟಾಗುವ ಬಡ್ಡಿಯ ನಷ್ಟದ ಅಂದಾಜು ಹೀಗೆ ಮೂರು ಬಗೆಯ ಖರ್ಚುಗಳಿಗೆ 1951-52ನೇ ವರ್ಷದಲ್ಲಿ ಒಟ್ಟು ಎಷ್ಟು ಬೇಕಾಗುತ್ತದೆಂಬ ಅಂದಾಜು ಪಟ್ಟಿಯನ್ನು ಸಹಕಾರಿ ಸಂಘಗಳ ರಿಜಿಸ್ಟ್ರಾರರು ಕೂಡಲೇ ಅತೀ ಜರೂರಾತಿಯಿಂದ ಮುದ್ರಾಸಿನ ಆಹಾರ ಉತ್ಪಾದನೆಯ ಕಮಿಷನರಿಗೆ ರವಾನಿಸತಕ್ಕದ್ದು.

6 ಈ ಹುಕುಮಿನ ಪ್ರಕಾರ ಸರಕಾರದಿಂದ ಸ್ಪಷ್ಟವಾಗಿ ಸೆಂಕ್ಷನ್ ದೊರೆತ ವಿನಹ ಯಾವುದೊಂದೂ ಖರ್ಚು ಮಾಡಕೂಡದು.

[ಈ ಹುಕುಮಿನಂತೆ ಮಂಗಳೂರು ಸರ್ಕಲಿನಲ್ಲಿ ಆ ವರೆಗೆ ಬಂದ 53 ಸಂಘಗಳ ಅರ್ಜಿಗಳಿಗೆ ಅಂದಾಜು ರೂ. 1,51,000 (1) ರಿಂದ (4)ರ ವರೆಗಿನ ಉದ್ದೇಶಗಳಿಗೆ ಧರ್ಮಾರ್ಥ ಗ್ರೇಂಟುಗಳಿಗೆ - ಬೇಕೆಂತಲೂ ರೂ. 2,50,000 ಸಾಲಗಳ ಬಗ್ಗೆ ಬೇಕಾಗುವದೆಂತಲೂ ಡಿ ರಿಜಿಸ್ಟ್ರಾರರು ತಾ 8-4-51 ರಲ್ಲಿ ರಿಜಿಸ್ಟ್ರಾರರಿಗೆ ರಿಪೋರ್ಟು ಮಾಡಿ ಎವ ದಾಗಿ ತಿಳಿದು ಬರುತ್ತದೆ]

[ಕನ್ನಡ ಸಹಕಾರಿ]

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮೋತ್ತರದ

ಪಂಗ್ತಿ ಪುಸ್ತಕಗಳು

ಜಿಲ್ಲೆಯಾಗಿಯೂ ರಟಾಯಿಗೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ.

ರಸನಿಮಿಷಗಳು

"ಯೋಗ್ಯರಾದವರನ್ನು ನೋಡಿಯೇ ತಿಕೇಟನ್ನು ಕೊಡಿರಿ" —ನೆಹ್ರೂ.

—ನಮ್ಮ ಬಳ್ಳು ಇಲಾಖೆಯವರು ತಿಕೇಟು ಕೊಡುತ್ತಿರುವುದು ಇದೇ ಕ್ರಮದಿಂದ!

೦೦೦

"ನಾಯಿಗಳಾಗಿ ಬದುಕುವದಕ್ಕಿಂತ ನಾಲ್ಕು ದಿನವಾದರೂ ಹುಲಿಗಳಾಗಿ ಬಾಳೋಣ" - ಉಗ್ರ ಸಮಾಜವಾದಿಗಳೊಬ್ಬರು.

—ಹೌದು ಹುಲಿಗಳಾದ ಮೇಲೆ ನಾಯಿಗಳನ್ನು ತಿನ್ನಬಹುದು. ಅಂತೂ ನರನಾಗುವುದು ಯಾರಿಗೂ ಬೇಡಾಗಿದೆ.

೦೦೦

"ಅಧಿಕಾರ ಕೈಗೆ ಬಂದ ಮೇಲೆ ಎಲ್ಲರೂ ದೊಡ್ಡವರಾಗುತ್ತಾರೆ ಈ ಕಾಂಗ್ರೆಸ ರಾಜ್ಯದಲ್ಲಿ!" —ಕಾಮ್ರೇಡುಗಳ ಭಾಷಣ.

—ಸಹಜವೇ; ಮೊನ್ನೆ ಕಾಂಗ್ರೆಸ್ ಕಾರ್ಯದರ್ಶಿ ಪದಕ್ಕೇರಿದ ಶ್ರೀನಿವಾಸ ಮಲ್ಯರೀಗ "ಮಲ್ಲಯ್ಯ"ರಾಗಿದ್ದಾರೆ!

೦೦೦

"ಚುನಾವಣೆ ಹತ್ತಿರ ಬಂದ ಹಾಗೆ ಕೆಲಸ ರನ್ನು ಎತ್ತಿಹಿಡಿಯುವ ಕಾರ್ಯ ನಡೆಯುತ್ತಲಿದೆ." —ಸುದ್ದಿ.

—ಅಂತೆಯೇ ಉಳಿದವರನ್ನು ಒತ್ತಿಹಿಡಿಯುವ ಕಾರ್ಯವೂ ರಭಸದಿಂದ ಸಾಗುತ್ತಲಿದೆ.

೦೦೦

ಕಾಂಗ್ರೆಸ್ ಸರ್ಕಲ್ ಸಮಿತಿಯವರು ಒಳ್ಳೆ ಆಟವಾಡುತ್ತಿದ್ದು ಹಲವರಿಗೆ ತಿಕೇಟು ಸಿಗುವುದೇ ಕಷ್ಟವಾಗುತ್ತಿದೆಯಂತೆ!

೦೦೦

"ನಮ್ಮ ಸರಕಾರ ಬಂದರೆ ಕುಡುಕತನದ ಬಹಿಷ್ಕಾರವನ್ನು ತೆಗೆಯುತ್ತೇವೆ." —ಸಮಾಜವಾದಿಗಳು.

—ಹಾಗಾದರೆ ಇನ್ನು ಕದಿಯುವದನ್ನು ಕಳ್ಳಸಂತೆ, ಕನ್ನಹಾಕುವುದು ಮುತ್ತು ಕನ್ನ ಕೊರೆಯುವದು! ಇಷ್ಟೆ!

೦೦೦

"25 ವರ್ಷಗಳೊಳಗಾಗಿ ಚಂದ್ರಲೋಕವನ್ನು ಮುಟ್ಟಬಹುದು" —ವಿಜ್ಞಾನಿಗಳು.

—ದಾರಿಯಲ್ಲಿ ಯಮಲೋಕವನ್ನೂ ಕಾಣಬಹುದಂತೆ!

೦೦೦

"ನನ್ನ ಸಾಹಿತ್ಯ ಚಟುವಟಿಕೆಯ ಕೆಲಸ ಬಹಳ ಉಳಿದದ್ದರಿಂದ ನಾನು ರಾಜಕೀಯದಿಂದ ಬಿಡುಗಡೆ ಹೊಂದಬಿಚ್ಛಿಸುತ್ತೇನೆ" —ಆಹಾರಮಂತ್ರಿ ಮುನ್ಶಿ

—ಅನ್ನದಾತಾ ಸುಖೀ ಭವ!

೦೦೦

"ಮುಂದ್ದಲ್ಲಿನ್ನು ಹೇಗಾದರೂ ಪಾರು ಮಾಡಿ ಉಳಿಸಬೇಕೆಂದು ಯತ್ನಿಸಿದೆವು" —ವಿದ್ಯಾರ್ಥಿ ಸಮಿತಿ.

—ಆದನ್ನೇ ನಾವು ಹೇಳುತ್ತಿರುವುದು. ಈ ಹಿಂದೆ ಹೀಗೆ ನಡೆಯದಿರುವಾಗ ಇದೇಕೆ ಹೀಗಾಯಿತೆಂದು?

೦೦೦

"ಕಪ್ಪು ಕನ್ನಡಕದವರೆಲ್ಲರು ರಾಜಕೀಯದಿಂದ ಬಿಡುಗಡೆ ಹೊಂದುವರು." —ಸುದ್ದಿ.

—ಬಿಳಿಟೋಪ್ಪಿಯವರಲ್ಲ ತಾನೇ!

೦೦೦

ಸರಕಾರೀ ಗ್ರಾಂಟನ್ನು ಪಡೆಯುವ ಹಿಂದೂ ಯೂನಿವರ್ಸಿಟಿಯ 'ಹಿಂದೂ', ಅಲಿಗ್ರಾ ಯೂನಿವರ್ಸಿಟಿಯ 'ಮುಸ್ಲಿಮ್' ಶಬ್ದಗಳು ಜಾತೀಯತೆಯ ಭಾವನೆಯನ್ನುಂಟುಮಾಡುವದರಿಂದ ಅದನ್ನು ಬದಲಿಸುವುದುತ್ತಮ. —ಒಂದು ಸೂಚನೆ

—ಹೌದು ನಮ್ಮಲ್ಲಿಯ ಮರಗಳು ಸರಕಾರದ ಅಧಿಕಾರಕ್ಕೆ ಒಳಪಟ್ಟುದರಿಂದ ಇನ್ನು ಮುಂದೆ ಮಠಾಧಿಪತಿಗಳೆಂದು ಕರೆಯುವದರ ಬದಲಾಗಿ ಕೇವಲ ದಂಡಾಧಿಪತಿಗಳೆಂದು ಕರೆಯಬೇಕೆಂದು ಹಲವರು ಸೂಚಿಸುತ್ತಲಿರುವರಂತೆ!

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟ್ರಮಣ ದೇವರ ಸನ್ನಿಧಿಯಲ್ಲಿ—ಇದೇ ಅಶ್ವೀಜ ಶುದ್ಧ ದಶಮಿ ಬುಧವಾರ ಲಗಾಯ್ತು ಅಶ್ವಿಜ ಬಹುಳ ೨ ಬುಧವಾರ (ತಾ. 10-10-51ಕ್ಕೆ ಆರಂಭವಾಗಿ 17-10-5 ರವರೆ ಏಳು ದಿನಗಳ ಅಹೋರಾತ್ರಿ ಭಜನಾ ಸಪ್ತಾಹವು ಶ್ರೀ ದೇವತಾನುಗ್ರಹದಿಂದಲೂ, ಇಷ್ಟರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರ ಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವವಿಧ ಭೋಗಗಳೊಂದಿಗೆ ಸಾಂಗವಾಗಿ ನೆರವೇರಲಿರುವುದು. ಈ ಮಹೋತ್ಸವಕ್ಕೆ ತಾವು ಆಗತ್ಯವಾಗಿ ಬಂದು, ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ಶ್ರೀದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ನಡೆಯಬಹುದಾದ ಸದ್ವಿನಿಯೋಗಗಳ ವಿವರ:— ರಾತ್ರಿಕಾಲದ ಹೂವಿನ ಪೂಜೆ ರೂ. 10 0-0, ಹೂವಿನ ಪೂಜೆಗೆ ರೂ. 5-0-0, ದೀಪಾರಾಧನೆ ರೂ. 2-0 0, ಪಿಟ್ಟಿಪಿಂಡಿ 0 8-0, ಕರ್ಪೂರಾರತಿ 0-2-3, ತುಳಸೀಹಾರ 0-1-3, ಅಹೋರಾತ್ರಿ ಪೂರ್ಣವಿನಿಯೋಗಕ್ಕೆ ರೂ. 25.

ಪಾಂಗಾಳ ಅಣ್ಣಪ್ಪ ನಾಯಕ್.
ಪ್ರಕೃತ ಆಡಳ್ತೆದಾರ,
ಕಟಪಾಡಿ, 1-10-51.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸಲಭವಾಗಿರುವುದು.

ಇವರ ನವಜೀವಾತು ಎಂಬ ಪೌಷ್ಟಿಕ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಧೀನಸ್ಥರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು

'ಕುಂಪಾರ' ಬಿಲ್ಲೆಗಳನು ಉಪಯೋಗಿಸಿದರೆ ಹದಿನೆಟ್ಟ ಋತುಸ್ರಾವವಾಗುತ್ತದು, ಹಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ. 3-1 ಸ್ಪೆಶಲ್ ರೂ. 5. ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

MRS P. DEVEE, F DS. (N. J.)
Tollygunge CALCUTTA
ಸ್ವಾಧೀನಸ್ಥರು ಶಹಾ ಕಂಪೆನಿ, ಮಂಗಳೂರು

(ಕಳೆದ ಸಂಚಿಕೆಯಿಂದ ಮುಂದರಿದುದು)

ನಂಬ್ರ ಹೇರಿಂಗ್ ಮಾಡಲಿಕ್ಕೆ ಕೆನಡಾ ದೇಶದಲ್ಲಿ ಅಲ್ಲಿಯ ಕೋರ್ಟಿನಲ್ಲಿ ಹೇರಿಂಗ್ ಮಾಡಿದ ವಕೀಲರೇ ಬಂದು ಹೇರಿಂಗ್ ಮಾಡಿದ್ದು. ಅಪೆಲೆಂಟ್ ಕಡೆ ವಕೀಲರ ಹೆಸರು ಬೆರನ್ [Barron] ಮತ್ತು ರೆಸ್ಪೋಂಡೆಂಟರ ಕಡೆ ವಕೀಲರು ವರ್ಚ್ಯು [A.G Virtue] ನಾನು ಒಳಕ್ಕೆ ಹೋಗುವಾಗ ಅಪೆಲೆಂಟರ ಕಡೆ ಬೆರನ್ ವಕೀಲರು ಹೇರಿಂಗ್ ಮಾಡುತ್ತಿದ್ದರು. ಅವರು ಸುಮಾರು 40 ವರ್ಷ ಪ್ರಾಯದವರಾಗಿದ್ದು, ಚಲೋ ರೀತಿಯಿಂದ ಹೇರಿಂಗ್ ಮಾಡಿದರು. ಆ ಎರಡೂ ಕಡೆಯವರು ಹೇರಿಂಗ್ ಮಾಡುವ ಮುಂಚೆ ಮಾಡತಕ್ಕ ಹೇರಿಂಗನ್ನು ಮುಂಚೆಯೇ ತಯಾರ್ ಮಾಡಿಕೊಂಡು ಟೈಪು ಮಾಡಿದ ಪುಸ್ತಕಗಳನ್ನು ಕೈಯಲ್ಲಿ ಇಟ್ಟುಕೊಂಡು, ಅದನ್ನೇ ಆಗಾಗ ನೋಡಿಕೊಂಡು ಹೇರಿಂಗ್ ಮಾಡುತ್ತಿದ್ದರು. ಹೇರಿಂಗ್ ಬಹು ಸಮಾಧಾನದಲ್ಲಿ ನಡೆಯುತ್ತಿತ್ತು. ಜಡ್ಜರ ಪೈಕಿ ಒಬ್ಬರಲ್ಲ ಒಬ್ಬರು ಅವರಿಗೆ ಅನುಭವ ತಿಳಿಯುವ ಬಗ್ಗೆ ಒಂದಲ್ಲ ಒಂದು, ಸವಾಲು ಕೇಳುತ್ತಿದ್ದರು. ಜಡ್ಜರ ಮುಂದೆಯೂ ಒಂದೊಂದು ಗ್ಲಾಸು ನೀರಿದ್ದು, ಅದನ್ನು ಸ್ವಲ್ಪ ಸ್ವಲ್ಪ ಕುಡಿಯುತ್ತಿದ್ದರು. ಅನಂತರ ಕೆಲವು ಸಮಯ ಹೀಗೆಯೇ ಹೇರಿಂಗ್ ಆದನಂತರ "ನೀವು ಹೇರಿಂಗ್ ಮಾಡಿದ್ದು ಸಾಕು, ನಿಮಗೆ ನಮ್ಮ ಧನ್ಯವಾದ" ಎಂತ ಜಡ್ಜರು ಬೆರನ್ ವಕೀಲರಿಗೆ ಹೇಳಿ, ನಂತರ ರೆಸ್ಪೋಂಡೆಂಟರ ಕಡೆಯಿಂದ ವರ್ಚ್ಯು ವಕೀಲರ ಹೇರಿಂಗ್ ಸುರು ಆಯಿತು. ಇವರು ಸುಮಾರು 55 ವರ್ಷದಷ್ಟು ಪ್ರಾಯದವರಾಗಿ, ಅಷ್ಟು ಹುಶಾರಿದ್ದಂತೆ ನನಗೆ ತೋರಲಿಲ್ಲ. ಅವರು ಪ್ರಥಮತಃ ಅನೇಕ ಕಾನೂನಿನ ಪ್ರಕರಣಗಳನ್ನು ಓದಿ ಅವುಗಳನ್ನು ವಿವರಿಸುವಾಗಲೇ ಜಡ್ಜರಿಗೂ, ನನಗೂ ಕೂಡ; ಅಲಸ್ಯ ಸುರು ಆಯಿತು. ಅನಂತರ ಮುನ್ಸಿಪಾಲಿಟಿಯವರು ಆಸ್ಪತ್ರೆ, ಶಾಲೆ ಮೊದಲಾದ ಅನೇಕ ಧರ್ಮಾರ್ಥ ಕಾರ್ಯವನ್ನು ಕೈಗೊಂಡಿದ್ದರಾಗಿಯೂ ಅವರಿಗೆ ಸರಿಯಾಗಿ ತೆರಿಗೆ ವಸೂಲು ಆಗದಿದ್ದರೆ ಈ ಕೆಲಸ ನಡೆಸಲಿಕ್ಕೆ ಬಹಳ ಕಷ್ಟವಾದೀತೆಂತಲೂ ಹೇರಿಂಗ್

ಪ್ರವಾಸಿಯ ಪತ್ರಗಳು ೧೩-೧೪

ಮಾಡಿದರು ನಂತರ ಸೋಲ್ಸಿ ಪ್ರಶ್ನೆಯನ್ನು ಓದಲಿಕ್ಕೆ ಸುರುಮಾಡಿದರು. ಇದಲ್ಲ ಕೇಳುವಾಗ ಅವರು ಕೆನಡಾ ದೇಶದಿಂದ ಅಷ್ಟು ಖರ್ಚುಮಾಡಿ, ಹೇರಿಂಗ್ ಮಾಡಲಿಕ್ಕೆ ಲಂಡನ್ ವರೇಗೆ ಬರಬೇಕಿತ್ತೋ ಎಂಬುದು ನನಗೆ ಸಂಶಯವಾಯಿತು. ಹೀಗೆ ಅನೇಕ ಗಂಟೆಗಳ ವರೆಗೆ ಅವರ ಹೇರಿಂಗ್ ನಡೆದು ಎಷ್ಟು ಬೇಸರವಾದರೂ ಅವುಗಳನ್ನೆಲ್ಲಾ ಬಹು ಸಾವಧಾನದಿಂದ 5 ಜಡ್ಜರು ಕೇಳಿದರು. ಬೇರೆ ಯಾವ ಕೋರ್ಟಿನಲ್ಲಿಯಾಗುತ್ತಿದ್ದರೆ "ನೀವು ಹೇಳಿದ್ದು ಸಾಕು, ನಮಗೆಲ್ಲ ಅರ್ಥವಾಯಿತೆಂದು ಹೇಳಿ" ಅವರ ಬಾಯಿಯನ್ನು ಮುಚ್ಚಿಸುತ್ತಿದ್ದರು. ಆದರೆ ಇಲ್ಲಿಯಾತ 5 ಜನ ಜಡ್ಜ ಮಹನೀಯರು ಹಾಗೆ ಹೇಳದೆ, ನಂಬ್ರವನ್ನು ಗುರುವಾರ ದಿನ ಸಾಯಂಕಾಲದಿಂದ (ನಾನು ಹೋದ ಎರಡನೇ ದಿನ) ಮುಂದಿನ ಸೋಮವಾರ ದಿನಕ್ಕೆ ಮುಂದುವರಿಸಿಟ್ಟರು. ಇದರಲ್ಲಿ ಅವರ ಮತ್ತು ಈ ಸಂಸ್ಥೆಯ ಮಹತ್ವವು ಕಾಣುತ್ತದೆ. ನಂಬ್ರನ್ನೂ ನಂತರ ಯಾವ ತರದ ತೀರ್ಮಾನವಾಯಿತೆಂತ ಈ ವರೆಗೂ ನನಗೆ ತಿಳಿಯಲಿಲ್ಲ. ಆದರೆ, ನಾನು ಕೋರ್ಟಿನಲ್ಲಿದ್ದ ಸಮಯದಲ್ಲಿ ಮಾಡಿದ ಅಭಿಪ್ರಾಯವೇನೆಂದರೆ, ಕೆಳಕೋರ್ಟಿನ 5 ಜನ ಜಡ್ಜರ ತೀರ್ಪನ್ನು ಇವರು ರದ್ದು ಪಡಿಸಿ ಪ್ರಥಮ 2 ಕೋರ್ಟುಗಳ ತೀರ್ಮಾನವನ್ನೇ ಮಂಜೂರು ಮಾಡಬಹುದಾಗಿ ಕಂಡಿತು. ಅಂದರೆ ವಾದಿ ಕಂಪೆನಿಯು ಸಾಧನೆಯನ್ನೇ ಅಂಗೀಕರಿಸುವರೆಂತ. ನಂಬ್ರದ ಆಖೈರಿ ತೀರ್ಮಾನವು ಹ್ಯಾಗೂ ಇರಲಿ, ಮುಗಿಯುವಾಗ 4 ಕೋರ್ಟುಗಳ ಎರಡೂ ಕಡೆ ಖರ್ಚು ತೆರಿಗೆ ಮೌಲ್ಯಕ್ಕೂ ಮಿಕ್ಕಬಹುದು.

ಪ್ರವಾಸಿಯ ಪತ್ರಗಳು ೧೪

'ಟವರ್ ಒಫ್ ಲಂಡನ್'

ಕಳೆದ ಪತ್ರದಲ್ಲಿ ಪ್ರಿವಿಕೌನ್ಸಿಲ್ ವಿಷಯ ಬರೆದಿದ್ದೆ. ಅದನ್ನು ನೋಡಿದ ಮರುದಿನ ಲಂಡನ್ನಿನ ಒಂದು ಮುಖ್ಯ ಸಂಸ್ಥೆಯಾದ 'ಟವರ್ ಒಫ್ ಲಂಡನ್' ಅಥವಾ ಲಂಡನ್ ಗೋಪುರವನ್ನು ನೋಡಿದೆನು. ಆದರೆ ಅದರ ಹೆಸರು ಗೋಪುರವೆಂದ್ದಿದರೂ, ಅದು ಅನೇಕ ಗೋಪುರಗಳಿಂದ ಕೂಡಿದ ಒಂದು ದೊಡ್ಡ ಕೋಟೆಯಾಗಿರುತ್ತದೆ. ಇದರ ಚರಿತ್ರೆಯೇ ಬ್ರಿಟಿಶ್ ದೇಶದ ಹಿಂದಿನ ಚರಿತ್ರೆ, ಎನ್ನಬಹುದು. ಇದು ಥೇಮ್ಸ್ ನದಿಗೆ ತಾಗಿ ಅದರ ಬಡಗುದಿಕ್ಕಿನ ದಡದಲ್ಲಿ ಕಟ್ಟಿದ್ದಾಗಿರುತ್ತದೆ. ಹಾಗೆ ಪ್ರಥಮತಃ ಕಟ್ಟಿದ್ದು ಹನ್ನೊಂದನೇ ಶತಮಾನದಲ್ಲಿ ಇಂಗ್ಲೆಂಡಿನ ಮೇಲೆ ಯುದ್ಧ ಮಾಡಿ ಗೆದ್ದ 'ವಿಲಿಯಮ್ ದಿ ಕೊಂಕರರ್' ಎಂಬವನು, ಇವನ ವಿಷಯ ಮುಂಚೆ ಪಾರ್ಲಿಮೆಂಟ್ ವಿಸ್ತರಿಸಿದಾಗ ಬರೆದಿದ್ದೆ. ಈ ಕೋಟೆ ಮತ್ತು ಸುತ್ತುಮುತ್ತಿನ ಜಾಗ ಸುಮಾರು 18 ಎಕ್ರೆ. ನಾಲ್ಕು ಸುತ್ತಲೂ ಕೋಟೆ ಗೋಡೆಗಳು ಮತ್ತು ಅದರ ಹೊರಗೆ ಸುತ್ತಲೂ ನೀರು ತುಂಬಲಿಕ್ಕೆ ಹೊಂಡ (moat). ಕೋಟೆಯೊಳಕ್ಕೆ ಅನೇಕ ಕಟ್ಟೋಣಗಳಿವೆ. ಅದರಲ್ಲಿ ಒಂದನೇ ಜೇಮ್ಸ್ ಎಂಬ ಅರಸನ ಕಾಲದ ವರೆಗೆ ಇಂಗ್ಲೆಂಡಿನ ಅರಸರು ವಾಸಿಸುತ್ತಿದ್ದ ಅರಮನೆಯು ಒಂದು ಬದಿಯಲ್ಲಿ. ಮಧ್ಯದಲ್ಲಿ ಪೂರ್ವಕಾಲದಿಂದ ಇಂಗ್ಲೆಂಡಿನಲ್ಲಿ ಮತ್ತು ಯುರೋಪ್ ದೇಶದಲ್ಲಿ ಬೇರೆ ಬೇರೆ ಕಾಲದಲ್ಲಿ ಉಪಯೋಗಿಸುತ್ತಿದ್ದ ಖಡ್ಗ, ಬಂದೂಕು, ತೋಪುಗಳು, ಮತ್ತು ಯುದ್ಧ ಮಾಡುವಾಗ ಧರಿಸುತ್ತಿದ್ದ ಉಕ್ಕಿನ ಕವಚಗಳು, ಇನ್ನೂ ಹಲವು ತರದ ಯುದ್ಧ ಸಾಮಗ್ರಿಗಳು ಇಟ್ಟಿರುವ ದೇಶದ ದೊಡ್ಡ ಒಂದು ವಸ್ತು ಪ್ರದರ್ಶನ ಶಾಲೆಯಿರುತ್ತದೆ. ಈ ಕಟ್ಟೋಣಕ್ಕೆ ಬಿಳಿಗೋಪುರವೆಂದು (White Tower) ಹೆಸರು. ಇದು ಸುಮಾರು 110 ಅಡಿ ಚಚ್ಚೌಕವಿದ್ದು 90 ಅಡಿ ಎತ್ತರವಾದ ಎರಡು ಉಪ್ಪರಿಗೆಯ ಕಟ್ಟೋಣ. ಇದರ ಗೋಡೆ 15 ಅಡಿ ದಪ್ಪ. ಇದು ಹಿಂದಿನ ಕಾಲದಲ್ಲಿ ಸೆರೆಮನೆಯಾಗಿ ಕೂಡ ಉಪಯೋಗಿಸಲ್ಪಟ್ಟಿತ್ತು. ದೇಶದ ಮತ್ತು ಪರದೇಶದ ಸೆರೆಹಿಡಿದ ಅನೇಕ ಮುಖ್ಯ ಪುರುಷರು ಮತ್ತು ಅರಸರು ಇಲ್ಲಿ ಇಡಲ್ಪಡುತ್ತಿದ್ದರು. ಇದರ ಪಶ್ಚಿಮಕ್ಕೆ ಒಂದು ಬಾಲಿ ಸ್ಥಳವಿದ್ದು, ಅದಕ್ಕೆ ಟವರ್ ಗ್ರೀನ್ (Tower Green) ಎಂಬ ಹೆಸರು—ಅಂದರೆ ಹುಲ್ಲು ಬೆಳೆಯುವ ಸ್ಥಳ. ಅದರ ಮಧ್ಯದಲ್ಲಿ ಒಂದು ಚೌಕದ ಶಿಲೆಗಲ್ಲು ಹುಗಿದ ಜಾಗವಿದೆ. ಅದು ಮುಂಚಿನ ಕಾಲದಲ್ಲಿ ಈ ಕೆಳಗೆ ಕಾಣಿಸಿದ ಏಳು ಜನರ ಶಿರಗಳನ್ನು ಕತ್ತರಿಸಿದ ಜಾಗ. ಅವರ ಹೆಸರು ಮತ್ತು ಹಾಗೆ ಕೊಂದ ವರ್ಷ ಕೆಳಗೆ ಬರೆದಿದೆ:—

1. ಲೋರ್ಡ್ ಹೇಸ್ಟಿಂಗ್ಸ್ 1483. 2. ಎಂಟನೇ ಹೆನ್ರಿಯ ಎರಡನೇ ಹೆಂಡತಿ 1536. 3. ಸೆಲ್ಸ್ಬರಿ ಪ್ರಭುವಿನ ಹೆಂಡತಿ ಮಾರ್ಗರೆಟ್ 1541. 4. ಎಂಟನೇ ಹೆನ್ರಿಯ ಐದನೇ ಹೆಂಡತಿ ರಾಣಿ ಕೆಥರಿನ್ ಹವರ್ಡ್ 1542. 5. ಅವಳ ಸೇವಕಿ ರೋಶ್ ಫೋರ್ಡ್ ಪ್ರಭುವಿನ ಹೆಂಡತಿ ಜೇನ್. ಅದೇ ದಿವ. 6. ಡಡ್ಲಿ ಪ್ರಭುವಿನ ಹೆಂಡತಿ ಲೇಡಿ ಜೇನ್‌ಗ್ರೇ 1554. 7. ಎಸೆಕ್ಸ್ ಪ್ರಭು ರೋಬರ್ಟ್ ಡೆವೆರೋ 1601.

ಈ ಪೈಕಿ ಆರನೇ ಲೇಡಿ ಜೇನ್‌ಗ್ರೇ ಎಂಬವಳು ಅಲ್ಲಿಯೇ ಸಮೀಪದಲ್ಲಿರುವ ಕಟ್ಟೋಣದ ಒಂದು ಉಪ್ಪರಿಗೆಯಲ್ಲಿ ಇರುತ್ತಿದ್ದು ಅವಳ ಗಂಡ ಡಡ್ಲಿಯ ತಲೆಕಡಿದ ದೇಹವನ್ನು ಅದರ ಕಿಂಡಿಯಿಂದ ತಾನು ಸಾಯುವ ಮುಂಚೆ ನೋಡಿದಳಂತೆ. ಈಗಲೂ ಆ ಕಿಂಡಿಯನ್ನು ತೋರಿಸಿ ಅದು "ಲೇಡಿ ಜೇನ್ ಗ್ರೇ ಕಿಂಡಿ" ಎಂತ ಅವಳ ಕಥೆಯನ್ನು ಅಲ್ಲಿ ಹೇಳುವರು. ಮೇಲೆ ಬರೆದ 7 ಜನರ ಶವವನ್ನು ಅಲ್ಲಿಯೇ ಸಮೀಪದಲ್ಲಿ ನಂತರ ಕಟ್ಟಿಸಿದ ಒಂದು ಸಣ್ಣ ಇಗರ್ಜಿಯಲ್ಲಿ ಹುಗಿಯಲಾಗಿದೆ.

ಈ ಸ್ಥಳಕ್ಕೆ ಸಮೀಪದಲ್ಲಿ ಹೊರಗಿಂದ ಕೋಟೆಗೆ ಬರಲಿಕ್ಕೆ ಒಂದು ಗೋಪುರವಿದೆ. ಆ ಗೋಪುರದ ಹೆಸರು ರಕ್ತದ ಗೋಪುರವೆಂದು (Bloody Tower). ಇದರ ಉಪ್ಪರಿಗೆಯಲ್ಲಿ ಸುಮಾರು 10 ಅಡಿ ಚಚ್ಚೌಕದ ಕೋಣೆಯಲ್ಲಿ ಅನೇಕ ಪುರುಷರು ಕಷ್ಟದುಃಖವನ್ನು ಅನುಭವಿಸಿರುವರು. 1483ರ

(೧೨ನೇ ಪುಟ ನೋಡಿರಿ)

NOTICE

In the Court of the District Munsif of Udipi.

O. P No. 36/1951

(In the matter of the debts due to the estate of Rajamma Shettigarthi (deceased)

Parkala Anthayya Shettigara, son of Kadekar Gurva Shettigara residing at Parkala of Herga Village, Udipi Taluk .. Petitioner

To whomsoever it may concern.

Notice is hereby given that the abovenamed Petitioner has made application to the above Court for the grant of a uccession certificate, empowering him to collect the amounts detailed in the said application and that the same is posted to 17-10-1951 for hearing and that those who intend to oppose the said application may appear either in person or by a pleader duly instructed before the said Court at the time of the hearing of the said application on 17-10-1951 and file their objections

H. Ramanatha Pai,
Advocate for Petitioner.
Udipi, S. K. Dated 21-9-1951.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ತೂಲಿ, ಅರ್ಧಾಂಗ ವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಾಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುತ್ತದೆ. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ್ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಸಂಜುದೇಶ್ವರ ಮರ್ಚಂಟ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಶಿವಬಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೋವು, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಚ್ಚಿ ಮದ್ದು ಸಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

[೧ನೇ ಪುಟದಿಂದ ಮುಂದುವರಿಸಿದುದು]

ಲ್ಲಿ ಇಂಗ್ಲೆಂಡಿನ ರಾಜಸ್ಥಾನಕ್ಕೆ ಬಂದ ಐದನೇ ಎಡ್ವರ್ಡ್ ಎಂಬ ಚಿಕ್ಕ ಹುಡುಗ ಮತ್ತು ಅವನ ತಮ್ಮ, ಇಬ್ಬರನ್ನು ಈ ಕೋಣೆಯಲ್ಲಿ ಕೊಂದದ್ದು. ಹಾಗೆ ಅವರನ್ನು ಕೊಲ್ಲಿಸಿದ್ದು ಅವರ ಚಿಕ್ಕಪ್ಪಂದಿ III ನೇ ರಿಚರ್ಡ್ ಎಂದು ಚರಿತ್ರೆಯು ಹೇಳುತ್ತದೆ. ಹಾಗೆ ಕೊಲ್ಲಿಸಿ ಅವನೇ ಅರಸನಾದ. ಆ ಎರಡೂ ಮಕ್ಕಳ ಚಿತ್ರವನ್ನು ಈಗಲೂ ಆ ಕೋಣೆಯಲ್ಲಿ ಕಾಣಬಹುದು. ಅದರ ಒಂದು ಶತಮಾನದ ನಂತರ ಎಲಿಸಬೆತ್ ರಾಣಿ ಕಾಲದಲ್ಲಿ ಸರ್ ವಾಲ್ಟರ್ ರಾಲಿ (Sir Walter Ralegh) ಎಂಬವನು ಇಲ್ಲಿ 13 ವರ್ಷ ಸೆರೆಮನೆಯಲ್ಲಿ ಇದ್ದನು. ಆ ಕೋಣೆಗೆ ತಾಗಿ 3 ಅಡಿಗಿಂತಲೂ ಕಡಿಮೆ ಅಗಲವಿರುವ ಸುಮಾರು 20 ಅಡಿ ಉದ್ದದ ವೇದಿಕೆ (Gallery) ಯಲ್ಲಿ ಅವನು ದಿನನಿತ್ಯವೂ ವ್ಯಾಯಾಮಕ್ಕೋಸ್ಕರ ಹಿಂದೆ ಮುಂದೆ ನಡೆಯುತ್ತಿದ್ದ. ಈಗಲೂ ಅದಕ್ಕೆ 'ರಾಲಿಯ ವಾಕ್' (Ralegh's Walk) ಎಂತ ಹೇಳುವರು. ನಂತರ 1618 ರಲ್ಲಿ ಅವನನ್ನು ಫಾಶಿಗೆ ಹಾಕಿದರು.

ಈ ಗೋಪುರಕ್ಕೆ ತಾಗಿರುವ ಇನ್ನೊಂದು ಗೋಪುರದ ಸಣ್ಣ ಕೋಣೆಯಲ್ಲಿ ಬ್ರಿಟಿಶ್ ರಾಜರಾಣಿಯರು ಧರಿಸುತ್ತಿದ್ದ ಮತ್ತು ಈಗಲೂ ಧರಿಸುವ ಆಭರಣಗಳ ಭಂಡಾರವಿದೆ. ಅವುಗಳ ಬೆಲೆ ಎಷ್ಟೆಂದು ಹೇಳಲು ಅಸಾಧ್ಯ. ಸಾವಿರಾರು ವಜ್ರಗಳು ಕಟ್ಟಿರುವ ಚಿನ್ನದ ಕಿರೀಟಗಳು ಮತ್ತು ರಾಜದಂಡಗಳಿವೆ. ಹಾಗೆ 1912 ರಲ್ಲಿ ನಡೆದ ಡಿಲ್ಲಿ ದರ್ಬಾರಿನಲ್ಲಿ ಐದನೇ ಜೋರ್ಜರು ಧರಿಸಿದ ಕಿರೀಟದಲ್ಲಿ ಕೆಂಪು ಹಚ್ಚುಗಳಲ್ಲದೆ 6 ಸಾವಿರಕ್ಕೆ ಮಿಕ್ಕ ವಜ್ರಗಳಿರುತ್ತವೆ. ಇಲ್ಲಿಯೇ ನಮ್ಮ ದೇಶದಿಂದ ಹೋದ ಮೊಗಲ್ ರಾಣಿ ನೂರ್ ಜಹಾನ್ ಎಂಬವಳು ಧರಿಸುತ್ತಿದ್ದ 'ಕೋಹಿನೂರು' ಎಂಬ ಪ್ರಸಿದ್ಧ ವಜ್ರವನ್ನು ಕಾಣಬಹುದು. ಈ ಎರಡು ಗೋಪುರಗಳಿಗೆ ತಾಗಿರುವ ಬಾಗಿಲಿಗೆ 'ದ್ರೋಹಿಗಳ ದ್ವಾರ' (Traitor's Gate) ಎಂಬ ಹೆಸರು. ಈ ಬಾಗಿಲಿನ ಮೂಲಕ ಪೂರ್ವ ಕಾಲದಲ್ಲಿ ಅನೇಕರನ್ನು ಸೆರೆಹಿಡಿದು ಥೇಮ್ಸ್ ಹೊಳೆಯ ದಾರಿಯಾಗಿ ತಂದು ಕೋಟೆಯೊಳಗೆ ಸೆರೆಮನೆಯಲ್ಲಿಡುತ್ತಿದ್ದರು. ಅವರ ಹೆಸರುಗಳನ್ನೆಲ್ಲಾ ಬರೆಯುವುದಾದರೆ ಬಹು ದೊಡ್ಡ ಪಟ್ಟಿಯಾದೀತು. ಒಂದು ಕಾಲದಲ್ಲಿ ಮೇಲೆ ಹೇಳಿದ ಎಲಿಜಬೆತ್ ಕೂಡಾ ಇಲ್ಲಿ ಸೆರೆಯಲ್ಲಿದ್ದಳು, ಅವಳು ರಾಣಿಯಾಗುವ ಮೊದಲು ಅನಂತರ.

ಈ ಕೋಟೆಯ ಇನ್ನೊಂದು ಬದಿಯಲ್ಲಿ ಮುಂಚಿನಿಂದಲೂ ಸೈನಿಕರಿರುವ ಒಂದು ಕಟ್ಟಡವಿದೆ. ಈಗಲೂ ಅಲ್ಲಿ ಸೈನಿಕರಿರುತ್ತಾರೆ. ಹೀಗೆ ಕೋಟೆಯನ್ನು ಸುಮಾರು ಮೂರು ತಾಸಿನ ತನಕ ಸಂದರ್ಶಿಸಿ ಇಂಗ್ಲಿಷ್ ಜನರ ಹಿಂದಿನ ಈ ರಕ್ತಮಯವಾದ ಚರಿತ್ರೆಯ ವಿದ್ಯಮಾನಗಳನ್ನು ನೋಡುವಾಗ ನನ್ನ ಮನಸ್ಸಿಗೆ ಒಂದು ತರದ ಅಸಹ್ಯವೇ ಉಂಟಾಯಿತು.

ಹೀಗೆ ಇಂಗ್ಲೆಂಡಿನಲ್ಲಿ ನೋಡಿದ ಅನೇಕ ವಿಷಯಗಳನ್ನು ಈ ಮೊದಲೆ ಬರೆದಂತಾಯಿತು. ಎಪ್ರಿಲ್ 22 ರಿಂದ ಮೇ 26 ವರೆಗೆ, ಲಂಡನ್ ಮತ್ತು ಮುಂಚೆ ವಿವರಿಸಿದ ಅನೇಕ ಸ್ಥಳಗಳನ್ನು ಸಂದರ್ಶಿಸಿ, ಮೇ 27 ನೇ ಆದಿತ್ಯವಾರ ಬೆಳಿಗ್ಗೆ ಲಂಡನಿನಿಂದ ರೈಲ್ ಮೂಲಕ ಫ್ರಾನ್ಸ್ ದೇಶದ ಪ್ರಧಾನ ಪಟ್ಟಣವಾದ ಪಾರಿಸ್ಸಿಗೆ ಹೊರಟೆನು. ಮುಂದಿನ ಪ್ರಯಾಣದ ವಿಷಯ ಇನ್ನು ಬರೆಯುವ ಪತ್ರಗಳಲ್ಲಿ.

(ವಿಚಾರವಾಣಿ) ಕೆ. ಆರ್. ಕಾರಂತ.

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್, ಉಡುಪಿ.

ವಾರದ ಭವಿಷ್ಯ

ತಾರೀಕು 4-10-51 ರಿಂದ — ತಾರೀಕು 10-10-51 ವರೆಗೆ

ಮೇಷ — ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಹಿಂದಿನಗಿಂತ ಯಾವ ಭಾಗದಲ್ಲೂ ಬದಲಾವಣೆಯಾದಂತೆ ಕಾಣಿಸುವುದಿಲ್ಲ. ಗುರುಹಿರಿಯರ ಸಲುವಾಗಿ ಸ್ವಲ್ಪ ವಿಧೇಯರಾಗಿ ನಡೆಕೊಳ್ಳಿರಿ. ಮಕ್ಕಳ ಆರೋಗ್ಯದ ಕಡೆಗೆ ಚೆನ್ನಾಗಿ ಲಕ್ಷ್ಯಕೊಡಿರಿ. ಇತರ ಯಾವ ಭಾಗದಲ್ಲೂ ನಿಮಗೆ ಚಿಂತೆಗವಕಾಶವಿಲ್ಲವು. ತತ್ರಾಪಿ ನಿಮ್ಮ ಆರ್ಥಿಕಭಾಗವು ವಿಶೇಷತಃ ಸುಧಾರಿಸುವದು. ಸತ್ಕಾರ್ಯಗಳ ಸಲುವಾಗಿ ಕೆಲವಂಶ ವ್ಯಯಿಸುವಿರಿ. ತಾ. 4, 9, 10 ಈ ದಿನಗಳತ್ಯುತ್ತಮವಿವೆ.

ವೃಷಭ — ಸಾಂಸಾರಿಕ ತಾಪತ್ರಯಗಳು ಬಹುಮುಖದಿಂದ ಬರಲಿವೆ. ಸಹೋದರರೊಳು ಮನಸ್ತಾಪ, ತಂದೆ ಮಕ್ಕಳೊಳು ಕಲಹ, ಗಂಡಹೆಂಡಿರೊಳು ಜಗಳ ಇತ್ಯಾದಿ ನಾನಾತರದ ಪೀಡೆಗಳು ಸಂಭವಿಸುವದಾದರೂ ಗುರ್ವನುಗ್ರಹವೊಂದು ಬಲವಾಗಿರುವುದರಿಂದ ನೀವು ಸುಧಾರಿಸಿಕೊಳ್ಳಲು ಸಮರ್ಥರಾಗುವಿರಿ. ಉದ್ಯೋಗದಲ್ಲಿ ಶ್ರಮಕ್ಕೆ ತಕ್ಕದಾದ ಫಲಲಭಿಸುವದು. ಹಣದ ಅಡಚಣೆಯು ಕಾಣಿಸದು. ಶ್ರಮದೇನಿಗಳಿಗೆ ಸ್ವಲ್ಪ ದಿನಗಳವುದು ಕಷ್ಟವಾದೀತು. ತಾ. 4, 5, 6 ರಲ್ಲಿ ಭೋಗ ವಿಜಯಲಾಭಗಳಿವೆ.

ಮಿಥುನ — ಸುಖದುಃಖಗಳು ತುಲ್ಯಬಲವುಳ್ಳವುಗಳಾಗಿರುವವು. ಶಕ್ತಿಮೀರಿ ದುಡಿಯುವಿರಿ. ಆದರೆ ದುಡಿಮೆಗೆ ತಕ್ಕ ಪ್ರತಿಫಲ ಕಾಣಿಸದು. ಖರ್ಚಿನ ಸಲುವಾಗಿ ಬೇರೆಯವರನ್ನಾಶ್ರಯಿಸಬೇಕಾಗಿಲ್ಲವು. ಮನಶ್ಚಾಂಚಲ್ಯವು ದಿನೇದಿನೇ ಅಧಿಕವಾಗುವದು. ಕೆಲವೊಮ್ಮೆ ಕುಮಾರ್ಗ ಪ್ರವೃತ್ತರಾಗಿ ಜನನಿಂದೆ ಅಪವಾದಗಳಿಗೆ ಸಿಲುಕುವಿರಿ. ಎಷ್ಟಾದರೂ ನಿಮ್ಮ ತನುಮನಗಳಿಗೆ ಸುಖಶಾಂತಿಯು ಲಭಿಸಲಿದೆ. ತಾ. 5, 6, 7, 8 ಈ ದಿನಗಳಲ್ಲಿ ನಿಮ್ಮ ಬಯಕೆಯು ತೊಡಕುತೊಂದರೆಗಳಿಲ್ಲದೆ ನೆರವೇರುವದು.

ಕರ್ಕಾಟಕ — ಧನಧಾನ್ಯಲಾಭಪರಂಪರೆಯ ರವಿಗುರು, ಶುಕ್ರರು ಸುಸ್ಥಾನವನ್ನು ಹೊಂದಿರುವ ಕಾರಣ ಈ ಸಮಯದಲ್ಲಿ ನಿಮ್ಮ ಸಂಪತ್ಭಾಗವು ಬಹುತೇಕ ಅಭಿವೃದ್ಧಿಯನ್ನೊಂದಲಿರುವದು. ಅಲ್ಪಾಯಾಸದಿಂದ ಮಹತ್ಫಲವನ್ನು ಪಡೆವಿರಿ. ಪ್ರಬಲರಾದ ಶತ್ರುಗಳೂ ಕೂಡ ನಿಮ್ಮಧೀನರಾಗಲಾರರು. ರಾಜಕೀಯ ಜನರಿಂದ ಪೀಡೆ ಸಂಭವಿಸುವ ಯೋಗವಿದೆ. ಆರೋಗ್ಯದ ಕಡೆಗೆ ಸ್ವಲ್ಪ ದೃಷ್ಟಿ ಇಡಿರಿ. ವಾರಾಂತ್ಯದ 4 ದಿನಗಳು ಅನುಕೂಲವಾಗಿವೆ.

ಸಿಂಹ — ಆರೋಗ್ಯದ ಕಡೆಗೆ ಹೆಚ್ಚಿನ ಲಕ್ಷ್ಯವನ್ನಿಡಿರಿ. ವಾತ, ಕಫಗಳ ದೋಷದಿಂದಾಗಿ ಪ್ರಕೃತಿಯು ಕೆಡಲಿದೆ. ಸದ್ಯ ಯಾವ ಉದ್ಯಮದಲ್ಲೂ ಪ್ರಗತಿಯು ಕಾಣಿಸದು. ಉತ್ಪತ್ತಿಗಿಂತ ಅಧಿಕ ಖರ್ಚು ಪ್ರಾಪ್ತವಾಗುವದು. ಸೈಕಲ್, ಮೋಟಾರ್ ಇತ್ಯಾದಿ ವಾಹನಗಳ ಮೇಲಿನ ಪ್ರಯಾಣವು ಅಪಾಯಕರವಾಗಿ ಪರಿಣಮಿಸೀತು. ಮಾತ್ರವಲ್ಲದೆ ಹೆಚ್ಚಿನ ಕಷ್ಟನಷ್ಟಗಳೂ ಪ್ರಾಪ್ತವಾಗಲಿವೆ. ಬಂಧುಮಿತ್ರರಿಂದಲೂ ಮನಸ್ತಾಪಕ್ಕೆಡೆಯುಂಟಾಗುವದು. ತಾ. 4, 9, 10, ಬೇರೆ ದಿನಗಳಿಗಿಂತ ಉತ್ತಮವಿವೆ.

ಕನ್ಯಾ — ನೀವೆಷ್ಟೇ ಶ್ರಮಪಟ್ಟು ದುಡಿಯಿರಿ ದಿನಾಂತ್ಯದಲ್ಲಿ ಕೈ ಬರಿದಾಗುವದು. ತತ್ರಾಪಿ ನಿಮ್ಮ ಆತ್ಮಕ್ಕೆ ಶಾಂತಿಯಿರದು. ಸದ್ಯಾ ಒಂದಿಲ್ಲೊಂದು ತೆರನಾದ ರೋಗವು ಬಂಧಿಸುವದು. ವಿಷಾಗ್ನಿಗಳಿಂದ ಅಪಾಯ ಸಂಭವಿಸೀತು. ಆಪ್ತೇಷ್ಟರ ವಿರಹದಿಂದಲೂ ಅನಿರೀಕ್ಷಿತ ಪ್ರಾಪ್ತವಾಗುವ ಖರ್ಚಿನಿಂದಲೂ ಕಷ್ಟಚಿಂತೆಗಳಿಗೀಡಾಗುವಿರಿ. ಆದರೂ ಸುಖಶಾಂತಿಯುತ ಸುರಗುರುಗಳ ಅನುಗ್ರಹದಿಂದಾಗಿ ಹೆಚ್ಚಿನ ದೋಷಗಳು ನಶವಾಗುವವು. ತಾ. 5, 6, ಲಾಭಕರ ದಿನಗಳು.

ತುಲಾ — ನೀವು ಕೈಗೊಂಡ ಹೆಚ್ಚಿನ ಕಾರ್ಯಗಳು ಶತ್ರುಜನರ ಪೀಡೆಯಿಂದಲೂ ಆರ್ಥಿಕ ದುರವಸ್ಥೆಯಿಂದಲೂ ಅರ್ಧದಲ್ಲೇ ಕೈಬಿಡುವ ಪ್ರಸಂಗ ಬರಲಿದೆ. ಸ್ವಭಾವಿಕ ನಿಮ್ಮ ಯೋಗ್ಯತೆಗೆ ಮಿಕ್ಕಿ ದುಡಿಯುವಿರಾದರೂ ಖರ್ಚು ದ್ವಿಗುಣವಾಗುವುದರಿಂದ ದಿನಯಾಪನೆಯು ಕಷ್ಟವಾಗುವದು. ಲೋಕಾಪವಾದ ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದಮೇಲೆ ಬರಲಿವೆ. ಸನ್ಮಿತ್ರರ ಬೆಂಬಲದಿಂದಾಗಿ ತಾ. 4, 7, 8 ಈ ದಿನಗಳಲ್ಲಿ ಹೆಚ್ಚಿನ ಇಷ್ಟಾರ್ಥವನ್ನು ಪಡೆವಿರಿ.

ವೃಶ್ಚಿಕ — ಗ್ರಹಮಾನವು ಅನುಕೂಲವಿರುವದು. ಎಂತಹ ಮಹತ್ಕಾರ್ಯವೇ ಇರಲಿ ಅದು ನಿಮ್ಮ ಭಾಗಕ್ಕೆ ತೃಣಸಮಾನವಾಗುವದು. ಮಾತ್ರವಲ್ಲ ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಲಭಿಸುವದು. ಉದ್ಯೋಗವ್ಯಾಪಾರ ನೌಕರಿ ಮತ್ತು ಸೇವಕವರ್ಗದವರಿಗೂ ಕೂಡ ಕಾಲವು ಅನುಕೂಲವಾಗಿ ಪರಿಣಮಿಸಲಿದೆ. ಕೆಲವೊಮ್ಮೆ ವಿನಾಕಾರಣ ವಾಕ್ಕಲಹವಾದೀತು. ಜಾಗ್ರತೆಯಿಂದಿರಿ. ತಾ. 5, 6, 9, 10 ರಲ್ಲಿ ಭೋಗವಿಜಯ ಲಾಭಗಳನ್ನು ಪಡೆವಿರಿ.

ಧನು — ಸದಿನಗಳು ಸಮೀಪಿಸಿವೆ. ಹಿಂದಿನ ಶೋಕತಾಪತ್ರಯಗಳಿಂದ ಮುಕ್ತರಾಗುವಿರಿ ಮಾತ್ರವಲ್ಲ ಸಾಲಶೂಲಗಳಿಂದಲೂ ಮುಕ್ತರಾಗಿ ಕೈಯಲ್ಲಿ ಸ್ವಲ್ಪ ಹಣವನ್ನು ಸಂಗ್ರಹಿಸುವಿರಿ. ಪಿತ್ತದೋಷದಿಂದಾಗಿ ದೇಹಾಲಸ್ಯ ದೌರ್ಬಲ್ಯ ಕಾರ್ಶ್ಯಗಳು ಕಾಣಿಸುವವು. ಬಂಧುವರ್ಗದವರೊಡನೆ ಮನಸ್ತಾಪವುಂಟಾದೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲವು ಅನುಕೂಲವಾಗಿದೆ. ತಾ. 4, 7, 8 ಈ ದಿನಗಳಲ್ಲಿ ಮಿತ್ರರ ಭೆಟ್ಟಿ ಲಾಭ ಸಂತೋಷಗಳಿವೆ.

ಮಕರ — ನಿಮ್ಮ ಅದೃಷ್ಟವು ದಿನೇದಿನೇ ಹ್ರಾಸವಾಗುತ್ತಾ ಬರುತ್ತಿದೆ. ಯಾವ ಕಾರ್ಯಕ್ಕೆ ಕೈಹಾಕಿದರೂ ನಷ್ಟವೇ ಅಧಿಕವಾದೀತು. ಶತ್ರು ಜನರಿಂತೂ ಶಕ್ತಿಮೀರಿ ಉಪದ್ರವಿಸುವರು. ಲೇವಾದೇವಿಯ ಸಂಬಂಧ ಕಲಹವೆದ್ದು ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಲಿದೆ. ಪ್ರವಾಸ ಸ್ಥಾನಚಲನೆಗಳ ಯೋಗವು ಕಾಣಿಸುವದು. ವ್ಯಾಪಾರವರ್ಗದವನ್ನುಳಿದು ಇತರರಿಗೆ ಕಾಲವು ಪ್ರತಿಕೂಲವಿದೆ. ತಾ. 6, 7 ಮಾತ್ರ ಒಳ್ಳೆಯದಲ್ಲ.

ಕುಂಭ — ಸಾಂಸಾರಿಕ ಚಿಂತೆಯು ದಿನದಿನಕ್ಕೆ ಹೆಚ್ಚಲಿದೆ. ಸ್ತ್ರೀಜನರಿಂದ ಕಲಹ ತನ್ನಿಮಿತ್ತ ಅನಿಷ್ಟ ಅಪವಾದಗಳೂ ಬರಲಿವೆ. ಮನೆಯಾಳಿಯಂತೂ ಅನುದಿನ ಜಗಳಾಡುವಳು. ಆರೋಗ್ಯದ ಮಟ್ಟಿಗೂ ಈ ಕಾಲವು ಅನುಕೂಲವಾಗಿಲ್ಲವು. ಆದರೆ ನಿಮ್ಮ ಕರ್ಮದಲ್ಲಿ ಪ್ರತಿಫಲವೇನೂ ಉತ್ತಮವಾಗಿರುವದು. ನಿರೀಕ್ಷೆಗಿಂತಲೂ ಹೆಚ್ಚಿನ ಫಲ ಲಭಿಸಲಿದೆ. ಅನಿರೀಕ್ಷಿತ ಧನ ಲಭಿಸೀತು. ತಾ. 5, 6, 7, 8, ಈ ದಿನಗಳಲ್ಲಿ ಮಹಾಸುಖ ಇಷ್ಟಪ್ರಾಪ್ತಿ ಮಿತ್ರಲಾಭಗಳಾಗುವವು.

ಮೀನ — ಯಾವ ಉದ್ಯಮದಲ್ಲೂ ಶ್ರೇಯಸ್ಸಿಲ್ಲವು. ನೀವೇನೋ ನಿಮ್ಮ ಶಕ್ತಿಯನ್ನತಿಕ್ರಮಿಸಿ ಕೆಲಸ ಮಾಡುವಿರಿ. ಆದರೆ ನಿಮ್ಮ ಆಪ್ತಬಂಧುಗಳೇ ಪ್ರತಿಕೂಲವಾಗಿ ನಿಲ್ಲುವುದರಿಂದ ನಿಮ್ಮ ಪ್ರಯತ್ನವು ಸಫಲವಾಗುವದು ದುರ್ಲಭವೇ ಸರಿ. ಮನೋಧೈರ್ಯವೂ ಮಾಯವಾಗುವದು. ವಿನಾಕಾರಣ ಜಗಳಗಳು ಹೆಚ್ಚುವವು. ದೇಹದಾರೋಗ್ಯವು ಕೆಡಲಿದೆ. ದಿನಯಾಪನೆಯು ಕಷ್ಟರವಾಗಿ ಪರಿಣಮಿಸೀತು. ವಾರಾಂತ್ಯದ 4 ದಿನಗಳು ಉಳಿದ ದಿನಗಳಿಗಿಂತ ಉತ್ತಮವಿವೆ.

— ಮಕ್ಕಳನ್ನು ಪಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿನಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರಿಗೆಯಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಚಾಲಕರು:— ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಧಾರವಾಡ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ದಾ… ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ ಬಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ಬಾದಾಮಿ — ಮಾದಿಹಾಳ ಕೃಷ್ಣ … ಎಲ್ ಕಮಲಾಪುರ, ಶಿರಸಿ, ಸಾವನೂರ, ಬ್ಯಾಡಗಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929 ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು

ನಾನಾ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಪುರ ವ್ಯಾಪಾರಿಗಳು, ರಥಬೀದಿ, ಉಡುಪಿ

EDITED, PRINTED & PUBLISHED BY K. D. SHETTY AT THE NAVAYUGA PRESS, UDIPI, S. INDIA

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

31ನೆ ವರ್ಷ

11–10–1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೬

NAVAYUGA WEEKLY Post Box No. 22 UDIPI.

Vol. 31
No. 6

ಜಾತೀಯತೆ

ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹ್ರುರವರು ಮೊನ್ನೆ ದಿಲ್ಲಿಯಲ್ಲಿ ನಡೆದ ಚರಖಾಜಯಂತಿ ಸಭೆಯಲ್ಲಿ ಮಾತನಾಡುತ್ತಾ, "ಜಾತೀಯ ನೆಪದಿಂದ ಒಬ್ಬನೊಬ್ಬರು ಹೊಡೆದಾಡಲು ಕೈಯೆತ್ತಿದರೆ ಸರಕಾರದಲ್ಲಿದ್ದರೂ ಸರಿ– ನನ್ನ ಮೈಯಲ್ಲಿ ಒಂದು ಹನಿ ರಕ್ತವಿರುವ ವರೆಗೆ ಅವನನ್ನು ಎದುರಿಸುವೆನು" ಎಂದು ಹೇಳಿದರು.

ಈಚೆಗೆ ಹತ್ತು ಹದಿನೈದು ದಿನಗಳಲ್ಲಿ [illegible] ಅವರು ಕಾಂಗ್ರೆಸ್ ಅಧ್ಯಕ್ಷ ಪದದಿಂದ ಕಾಂಗ್ರೆಸ್ಸಿನ ಐಕ್ಯ ಸಾಧನೆಗಾಗಿಯೂ, ಶುದ್ಧೀಕರಣಕ್ಕಾಗಿಯೂ, ಮನನೀಯವಾದ ಆದೇಶವನ್ನು ಕೊಡುತ್ತ ಬಂದಿದ್ದಾರೆ. ಕಾಂಗ್ರೆಸ್ ಹುದ್ದೆಗಾರರ ಅರ್ಹತೆ ಬಗ್ಗೆ–ಆಯ್ಕೆಯ–ಬಗ್ಗೆ ಅವರು ಹೇಳಿದ ಸಲಹೆ ನಿಜವಾಗಿಯೂ ಅತ್ಯಂತ ಮಹತ್ವವಾದುದು. ಆದರೆ ಆ ಮಾತುಗಳು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೆಚ್ಚಿನ ಪರಿಣಾಮ ಮಾಡಿದ್ದು ಕಂಡುಬರುವುದಿಲ್ಲ. ಹಲವರು ನೆಹ್ರೂರವರ ವಾದವನ್ನು ಮಾನುತ್ತೇವೆಂದು ಭರವಸೆ ಕೊಟ್ಟರೇ ವಿನಹ ಕಾರ್ಯರೂಪದಲ್ಲಿ ಏನನ್ನೂ ಮಾಡಲಿಲ್ಲ! ನೆಹ್ರೂ ವಾದ ಒತ್ತಟ್ಟಿಗೆ; ಕಾಂಗ್ರೆಸ್ ಕಾರ್ಯಕರ್ತರ ಕಾರ್ಯ ಒತ್ತಟ್ಟಿಗೆ ಆಯಿತು.!

ಜಾತೀಯತೆಯ ಕುರಿತು ನೆಹ್ರೂ ಅಷ್ಟು ನಿಷ್ಠುರವಾಗಿಯೂ– ಖಂಡತುಂಡವಾಗಿಯೂ ಮಾತನಾಡಬೇಕಿದ್ದರೆ ಇಂದು ಭಾರತದಲ್ಲಿ ಜಾತೀಯತೆ ಅತ್ಯಂತ ವಿಷಮಾವಸ್ಥೆಗೆ ಬಂದು ಮುಟ್ಟಿರುವುದೇ ಕಾರಣವಾಗಿರಬೇಕು. ನೆಹ್ರೂರಂತಹ ಉಜ್ವಲ ದೇಶಾಭಿಮಾನಿಗಳಿಗೆ–ಜಾತ್ಯತೀತ ರಾಷ್ಟ್ರ ನಿರ್ಮಾಣಕರಿಗೆ–ದೇಶದ ಒಟ್ಟು ಜನರ ಹಿತವನ್ನು ಬಯಸುವವರಿಗೆ.– ಜಾತೀಯತೆಯ ಮನೋವೃತ್ತಿಯಿಂದ ಅತೀವ ಖೇದವಾಗುವುದು ಸಹಜವೇ ಆಗಿದೆ- ನೆಹ್ರೂರವರು ಕಳಕಳಿಯಿಂದ ಬಿನ್ನವಿಸಿಕೊಂಡರೂ ಜಾತೀಯ ವಾದಿಗಳ ಮನಸ್ಸಿನ ಮೇಲೆ ಪರಿಣಾಮವಾಗಬಹುದೆಂದು ಊಹಿಸುವುದು ಕಷ್ಟವಾಗಿದೆ.

ಗಾಂಧೀಜೀಯ ಸ್ವಾತಂತ್ರ್ಯ ಸಮರದಲ್ಲಿ ಭುಜಕ್ಕೆ ಭುಜಕೊಟ್ಟು ದೇಶಸೇವೆಯಲ್ಲಿ ನಿಂತಿರಾದವರು ಸ್ವಾತಂತ್ರ್ಯಬಂದ ಮೇಲೇಕೆ ಹೀಗಾದರು?ಎಂದು ಪ್ರಶ್ನೆ ಹುಟ್ಟಬಹುದು! ಇದರ್ಥವಿಷ್ಟೆ. ಸದ್ಯ ಹುಟ್ಟಿಕೊಂಡಿರುವ ಈ ಜಾತೀಯತೆ ಒಂದು ಸಂಪ್ರದಾಯ ಇಲ್ಲವೆ ಸಂಸ್ಕೃತಿಯಿಂದ ಬಂದುದಲ್ಲ! ಹಿಂದೂ ಮಹಾಸಭೆ–ರಾಮರಾಜ್ಯ ಪರಿಷತ್, ಆರ್. ಎಸ್. ಎಸ್., ಮುಂತಾದ ಜಾತೀಯ ಸಂಸ್ಥೆಗಳು ಒಂದು ಧರ್ಮಸಂಸ್ಕೃತಿಯನ್ನವಲಂಬಿಸಿ ಜಾತೀಯತೆಯನ್ನು ಹುಟ್ಟಿಸುತ್ತಿರುವರಾದರೂ ಜನತೆ ಜಾಗ್ರತಿ ವಹಿಸಿದರೆ ಅದರಿಂದೇನೂ ಪ್ರಮಾದವಾಗದು! ಆದರೆ ನಮ್ಮಲ್ಲಿ ಬೆಳೆಯುತ್ತಿರುವುದು ಇನ್ನೊಂದು ಬಗೆಯ ಜಾತೀಯತೆ!

ಅಲ್ಪಸಂಖ್ಯಾತರಿಗೆ ಸರಿಯಾದ ನ್ಯಾಯದಾನವಾಗಬೇಕು; ಬಹುಸಂಖ್ಯಾತರಿಂದ ವಂಚನೆಯಾಗಬಾರದೆಂದು ಗಾಂಧೀಜಿ ಸೂಚಿಸಿದ್ದರು. ಇದರಲ್ಲಿ ಜಾತೀಯತೆಯಿರಲಿಲ್ಲ. ಆದರೆ ಕಾಂಗ್ರೆಸ್ ಅಧಿಕಾರವನ್ನು ವಹಿಸಿದ ಮೇಲೆ ಈ ತತ್ವ ಜಾತೀಯತೆಯ ರೂಪದಲ್ಲಿ ಬದಲಾವಣೆಗೊಂಡಿತು. ದೇಶದ ಮುಂದಿರುವ ಸಮಸ್ಯೆಯನ್ನು ಬಗೆಹರಿಸುವಲ್ಲಿ ಆಸಕ್ತರಾಗದೆ, ಕೇವಲ ಸ್ವಜಾತಿಯ ಉನ್ನತಿ, ಅಧಿಕಾರ ಪ್ರಾಪ್ತಿಯ ಪ್ರಯತ್ನದ ಕಡೆಗೆ ಒಲವು ಹರಿಯಿತು. ಅಧಿಕಾರ ಲಾಲಸೆಯಿಂದ ಜಾತೀಯತೆ ಕವಲು ಕವಲಾಗಿ ಬೆಳೆಯುತ್ತಲಿದೆ. ಈ ನಾಲ್ಕು ವರ್ಷಗಳಲ್ಲಿ ಅಧಿಕಾರದ ಲಾಲಸೆಯಿಂದ ಈ ಜಾತೀಯತೆ ಚೆನ್ನಾಗಿ ಬೇರುಬಿಟ್ಟು ನಿಲ್ಲುವಂತಾಯಿತು. ಅಧಿಕಾರ ಸ್ಥಾನಮಾನದ ಅಭಿಲಾಷೆಯಿಂದ ರಾಜಕೀಯ ರಂಗವೂ ಜಾತೀಯತೆಯಿಂದ ಕಲುಷಿತವಾಗಿದೆ. ಸಣ್ಣ ಪುಟ್ಟ ತಾಲೂಕು ಜಿಲ್ಲೆಗಳಲ್ಲೂ ಒಂದು ಕಮಿಟಿಯಾದರೂ ಕೂಡಾ ಅಲ್ಲಿ ಈ ಜಾತೀಯ ಭಾವನೆಯ ಮೇಲೆಯೇ ಅದರ ಅಸ್ತಿವಾರ ಹಾಕಲಾಗುತ್ತದೆ. ಒಂದು ಜಾತಿಯವರು ಸ್ವಜಾತಿಯ ಕೈಮೇಲಾಗಬೇಕೆಂದು ಯತ್ನಮಾಡಿದರೆ ಅವರನ್ನು ಹೊರಚೆಲ್ಲಿ ತಮ್ಮ ಬಲವನ್ನು ತೋರಬೇಕೆಂದು ಇನ್ನೊಂದು ಜಾತಿಯವರು ಸ್ಪರ್ಧೆ ನಡೆಸುವರು. ಕೊನೆಗಾದರೂ ಇದರ ಫಲ; ರೂಪಿಸಬೇಕಾಗಿರುವ ಕಟ್ಟಡವು ಕುಸಿದು ಬೀಳುವುದೇ! ಇದೇ ವೇಳೆಗೆ–ಹೋರಾಟ ದೇಶಾದ್ಯಂತ ನಡೆಯುತ್ತಿರುವುದನ್ನು ನಾವು ಅಲಕ್ಷಿಸುವಂತಿಲ್ಲ! ಅದರಲ್ಲೂ ದ. ಭಾರತದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯು ಮಾನವೀಯತೆಯನ್ನು ಕಳೆದುಕೊಂಡು ಪಶುವೃತ್ತಿಗಿಳಿದಂತೆ ತೋರುತ್ತಲಿದೆ!

ಈ ಬಗೆಯ ದುಷ್ಟ ಪದ್ಧತಿಯ ಅನುಕರಣೆಯಿಂದ ದೇಶಕ್ಕೆ ಗಂಡಾಂತರವಿದೆಯೆಂಬುದು ನಿಸ್ಸಂಶಯ. ಒಬ್ಬರನ್ನೊಬ್ಬರು ಜಾತೀಯತೆ ಸಂಕುಚಿತತೆ ಸಂದೇಹ ದೃಷ್ಟಿಯಿಂದ ಕಾಣುವಂತಾದರೆ ಸರಕಾರವಾಗಲೀ–ದೇಶವಾಗಲೀ ಕ್ರಮಬದ್ಧವಾದ ಧೋರಣೆಯಿಂದ ಮುಂದೆ ಸಾಗುವುದು ಶಕ್ಯವಿಲ್ಲ!

ಪರಸ್ಪರ ತಪ್ಪು ತಿಳುವಳಿಕೆಗಳುಂಟಾಗಿ ದೇಶ ಅವನತಿಯ ಮಾರ್ಗವನ್ನು ಹಿಡಿಯುವದರಲ್ಲಿ ಸಂದೇಹವೇ ಇಲ್ಲ! ನಮ್ಮಲ್ಲಿಯ ಒಗ್ಗಟ್ಟು ಶಿಥಿಲವಾಗಿ ಬೇರೆಯವರು ನಮ್ಮ ದೌರ್ಬಲ್ಯದ ಲಾಭವನ್ನು ಪಡೆಯಲು ಹವಣಿಸುವುದು ಸ್ವಾಭಾವಿಕ!

ದೇಶದ ಸುರಕ್ಷಿತತೆಗೂ–ಅಭ್ಯುದಯಕ್ಕೂ ಅಲ್ಲಿಯ ಜನತೆಯ ಐಕ್ಯಸಾಧನೆಯೆ ಮುಖ್ಯವಾಗಿದೆ. ಒಂದು ಯೋಜನೆ ಕೈಗೊಳ್ಳಬೇಕಾದರೆ – ಸರಕಾರದೊಡನೆ ಜನತೆ ಸಹಕರಿಸಬೇಕಾದರೆ––ಜಾತೀಯ ಹಾಗೂ ಸ್ವಾರ್ಥ ಮನೋವೃತ್ತಿಯನ್ನು ಸಂಪೂರ್ಣ ತೊಡೆದು ಹಾಕಲೇಬೇಕು.! ಹಲವಾರು ಪಂಥಪಂಗಡ––ಜಾತಿಗಳುಳ್ಳ ನಮ್ಮ ದೇಶ ಜಾತೀಯ ಭಾವನೆಯಿಂದಲೇ ರಾಜಕೀಯವನ್ನು [illegible]ವಂತೆ ಮಾಡಿದರೆ ದೇಶಕ್ಕೆ ಅದಕ್ಕಿಂತ ಮಿಗಿಲಾದ ಕೇಡು ಬೇರೇನಿದೆ?

ತಿಳಿದೂ ತಿಳಿದೂ ನಾವು ಅವನತಿಯ ಮಾರ್ಗವನ್ನು ಹಿಡಿಯುತ್ತಲಿದ್ದೇವೆ. ದೇಶದ ಹಿತದ ದೃಷ್ಟಿಯಿಂದಲೂ-ರಾಜಕೀಯ ದೃಷ್ಟಿಯಿಂದಲೂ ಈ ವಾದ ಸರಿಯಲ್ಲ, ಹಿತವಲ್ಲ! ಮಾತ್ರವಲ್ಲ ಅತ್ಯಂತ ಗಂಡಾಂತರಪ್ರಾಯವಾಗಿದೆ. ಇದನ್ನು ಲಕ್ಷಿಸಿಯೇ ಮಾನ್ಯ ಪ್ರಧಾನಮಂತ್ರಿಯವರು ಗಂಭೀರವಾದ ಎಚ್ಚರಿಕೆಯನ್ನು ಕೊಟ್ಟಿರುವರು! ದೇಶಕ್ಕೆ ಬಂದ ಈ ಮಹಾ ಆಪತ್ತನ್ನು ತಪ್ಪಿಸುವದೂ ಬಿಡುವುದೂ ನಮ್ಮನ್ನೇ ಹೊಂದಿಕೊಂಡಿದೆ.

WANTED

Special Agents For The Following Places:

1. Kundapur 2. Udipi 3. Karkala 4 Puttur

Moderate business guarantee needed
Successful candidates will be selected as
Inspectors with permanent pay and other facilities.

Apply to:

The Assian Assurance Co., Ltd.,

Branch Office:
Hampankatta,
Mangalore, S. K.

Head Office:
"Assian Building", Ballard
Estate, Fort, **Bombay**

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಜಾಶಕ್ತಿ

ಜನರೂ ಜನಮತವೂ

[ಕಳೆದ ಸಂಚಿಕೆಯಿಂದ ಮುಂದರಿದುದು]

ಪ್ರಜಾಸತ್ತೆಯೆಂಬುದು ಜನರಿಂದ ಜನರ ಬಗ್ಗೆ ನಡೆಸಲ್ಪಡುವ ಜನರ ಸರಕಾರವೆಂತ ಪ್ರತಿಯೊಬ್ಬನ ಬಾಯಿನುಡಿಯಾಗಿರುವದು ಗ್ರೀಕರ ಕಾಲದಲ್ಲಿ ಸಹಾ ಪ್ರಜಾಸತ್ತೆ ಎಂದರೆ ಜನರ ಅಧಿಕಾರವೆಂಬರ್ಥವೇ ಆಗಿದೆ. ಶಾಸನ ಮೂಲಕ ವ್ಯಕ್ತಿಗಳಿಗೆ ರಾಜಕೀಯ ಸ್ವಾತಂತ್ರ್ಯ ಕೊಡುವದೇ ಅಧಿಕಾರವನ್ನು ಜನರಿಗೆ ಹಂಚಿ ಸೇರಿಸಿಕೊಡುವದಾಗಿದೆ ರಾಜಕೀಯ ಹಕ್ಕೆಂಬುದು ನ್ಯಾಯಸಭೆಗೆ ಹೋಗುವದು ಅಥವಾ ತಮ್ಮ ಪರವಾಗಿ ಬೇರೆ ಜನರನ್ನು ಚುನಾಯಿಸುವದಾಗಿದೆ. ಇದೇ ನಾಗರಿಕರ ಹಕ್ಕಾಗಿದೆ. ಪ್ರಾಚೀನ ಕಾಲದಲ್ಲಿ ಎಲ್ಲರಿಗೂ ಮತ ಕೊಡುವ ಹಕ್ಕಿರಲಿಲ್ಲ. ಪೆಲೋಪೊನೀಸಿಯಾ ಯುದ್ಧದ ಸಮಯ ಸುಮಾರು 2,30000 ಜನರಿರುವ ಪ್ರಜಾಸತ್ತೆಯು ಎಥೆನ್ಸ್ ರಾಷ್ಟ್ರದಲ್ಲಿ 30000 ಜನರಿಗೆ ಮಾತ್ರ ಮತ ಕೊಡುವ ಹಕ್ಕಿತ್ತು. ಪರದೇಶೀಯರಿಗೆ ಗುಲಾಮರಿಗೆ ಮತ್ತು ಹೆಂಗಸರಿಗೆ ಈ ಹಕ್ಕನ್ನು ಕೊಡಲಿಲ್ಲ. ಆ ಕಾಲದಲ್ಲಿ ಮತದಾರರೆಂಬವರು ಒಂದು ಮಿತ್ರಮಂಡಳಿಯಾಗಿತ್ತು. ಆದಾಗ್ಯೂ ಅಷ್ಟು ಜನ ಮತದಾರರಿರುವರೆಂಬುದು ಆಗ ಒಂದು ಮಹತ್ವದ ಸಂಗತಿಯಾಗಿತ್ತು. ಆಧುನಿಕ ಕಾಲದಲ್ಲಿ ಸಹಾ ಎಲ್ಲರಿಗೂ ಮತಕೊಡುವ ಹಕ್ಕಿಲ್ಲವೆಂಬುದನ್ನು ನಾವು ಅನುಭವದಲ್ಲಿ ಕಾಣುತ್ತೇವೆ. ಚುನಾವಣೆಯಲ್ಲಿ ಭಾಗ ವಹಿಸುವವರೂ ಜನರೂ ಒಂದೇ ಎಂದು ಹೇಳಲು ಬರುವದಿಲ್ಲ. ಇಂಗ್ಲೆಂಡಿನಲ್ಲಿ 1918ರಲ್ಲಿ ಒಂದು ದೊಡ್ಡ ಸುಧಾರಣೆಯಾಗಿತ್ತು. ಅದರಲ್ಲಿ ಸಹಾ ಹೆಂಗಸರಿಗೆ 30 ವರುಷವಾದ ಮೇಲೆ ಮತ ಕೊಡುವ ಹಕ್ಕು ಬರುವದೆಂದು ತೀರ್ಮಾನಿಸಿರುವರು. ಗಂಡಸರಿಗೆ 20 ವರುಷಕ್ಕೆ ಹಕ್ಕು ಬರುವಾಗ ಹೆಂಗಸರಿಗೆ 30ಕ್ಕೆಂತ ಇಟ್ಟದ್ದು ಸೀಮಾಬಾಹಿರವಾದದ್ದೆಂದೇ ಹೇಳಬೇಕು, ಪ್ರಜಾಸತ್ತೆಯ ಘೋಷಣೆಯು ದೊಡ್ಡದಾಗಿ ತಲೆಎತ್ತಿದ ಫ್ರಾನ್ಸಿನಲ್ಲಿ ಸಹಾ ಹೆಂಗಸರಿಗೆ ಮತ ಕೊಡುವ ಹಕ್ಕಿಲ್ಲ.

ಆದಾಗ್ಯೂ ಜನರ ವಾಕ್ಯವೇ ಜನಾರ್ಧನ ವಾಕ್ಯ (Vox populi Vox Dei) ವೆಂದು ಹೇಳುವೆವು. ಈ ಕುರಿತು ಸರ್ ಹೆನ್ರಿ ಮೈನ್ಸ್ (Sir Henry Maiece) ಎಂಬ ತಜ್ಞರು ಹೀಗೆ ಖಟವಾಗಿ ಹೇಳುವರು: "ಜನರ ವಾಕ್ಯವು ದೇಶದ ವಾಕ್ಯವಾಗಬಹುದು. ಆದರೆ ನಾವು ತುಸು ಆಲೋಚಿಸುವುದಾದರೆ ಜನರೆಂದರ್ಯಾರು ವಾಕ್ಯವೆಂದರೇನೆಂಬುದರ ಕುರಿತು ನಮ್ಮಲ್ಲಿ ಒಂದು ಒಪ್ಪಂದ ಅಥವಾ ಒಡಂಬಡಿಕೆಯೇ ಇಲ್ಲವೆಂತ ಕಾಣುತ್ತದೆ." ಚಕ್ರಾಧಿಪತ್ಯದಲ್ಲಿ ಸಹಾ ತಾತ್ಪರ್ಯ ರೂಪದಲ್ಲಿ ಜನಮತ ಸ್ವೀಕಾರವಿರಬಹುದು. ಪ್ರಜಾಪ್ರಭುತ್ವದ ಸೋಗಿನಲ್ಲಿ ನಿರಂಕುಶ ಅಧಿಕಾರವು ನೆಲಸಬಹುದು, ರಾಜಕೀಯ ಅಧಿಕಾರವು ಜನಮತವನ್ನು ಹೊಂದಿರುವದೇ ಪ್ರಜಾಸತ್ತೆಯ ಚಿನ್ಹೆಯಾಗಿದೆ. ಆದ್ದರಿಂದ ನಾವು ಮೊದಲಾಗಿ ಜನರೆಂದರೇನು? ಎಂ ಮತವೆಂದರೇನು ಎಂಬುದನ್ನು ತಿಳಿಯಬೇಕಾಗಿದೆ- ಇದೊಂದು ಮಾರ್ಮಿಕತೆಯ ಸವಾಲಾಗಿ ಕೆಲವರಿಗೆ ಕಾಣಿಸಬಹುದಾದರೂ ಈ ಮಾತಿನಲ್ಲಿ ಹುರುಳಿದೆ.

ಬಹುಪಕ್ಷದವರ ಅಭಿಪ್ರಾಯವನ್ನು ಜನರು ತತ್ವವೆಂದೆಣಿಸಬಹುದೋ? ಹಾಗೆ ಲೆಕ್ಕಿಸಲು ಬರುವದಿಲ್ಲ- ಒಬ್ಬ ದಾರಿಹೋಕನನ್ನು ಕತ್ತಲೆಯ ಆ ಇಬ್ಬರು ಕಳ್ಳರು ಅಡ್ಡಗಟ್ಟಿ ಆತನ ಸೊತ್ತುಗಳನ್ನೆಲ್ಲಾ ಪಾಲುಮಾಡಿಕೊಳ್ಳುವದೆಂತ ನಿಶ್ಚೈಸಿದರೆ ಅಲ್ಲಿ ಒಂದು ಸಾಮ್ಯವಾದದ ಸಮಾಜವು ಹುಟ್ಟಿ ಸೊತ್ತುಗಳನ್ನು ಪಾಲುಮಾಡಿ ಸೇರಿಸಿಕೊಳ್ಳುವದೆಂತ ತೀರ್ಮಾನಿಸಿತೆಂದರೆ ಹುಚ್ಚ ಮಾತೆಂತ ಹೇಳಲಿಕ್ಕಿಲ್ಲವೆ? ಒಬ್ಬ ಕಳ್ಳನು ಇಬ್ಬರು ದಾರಿಹೋಕರಾದರೂ ಇದೇ ಅರ್ಥವಾಗದೆ ಹಡಗವು ಮುಳುಗಿ ಒಬ್ಬ ಪ್ರಯಾಣಿಕನು ಒಂದು ದ್ವೀಪಕ್ಕೆ ತೆರೆಗಳಿಂದ ಒಯ್ಯಲ್ಪಟ್ಟಾಗ ಅಲ್ಲಿ ಮನುಷ್ಯರನ್ನು ತಿನ್ನುವ ಅನಾಗರಿಕರು ಕೊಡುವ ತೀರ್ಪಿಗೆ ಸಹಾ ಇದೇ ಅರ್ಥ ಕಟ್ಟಬೇಕಾಗುತ್ತದೆಂದು ಐವರ್ ಬ್ರೌನ್ (Ivor Browu) ಹೇಳಿರುವರು ಒಂದು ಅಭಿಪ್ರಾಯವು ಕೆಲವರ ಮಟ್ಟಿಗೆ ಸಾಮಾನ್ಯವಾಗಿರುವದು ಇನ್ನೊಂದು ಇನ್ನು ಕೆಲವರ ಮಟ್ಟಿಗೆ ಒಪ್ಪಿಗೆಯಾಗಿರಬಹುದು ಆದರೆ ಯಾವ ಅಭಿಪ್ರಾಯವೂ ಸಾರ್ವಜನಿಕ ಮತವೆನಿಸಲಾರದು. ಬರೀ ಬಹುಪಕ್ಷವೆಂಬುದೊಂದೇ ಸಾಲದು. ಯಾವ ಅಭಿಪ್ರಾಯಕ್ಕೆ ನೈತಿಕ ಮತ್ತು ರಾಜಕೀಯ ಕಾರಣಗಳಿಂದ ಅಲ್ಪಸಂಖ್ಯಾಕರು ತಲೆಬಾಗುವರೋ ಅದೇ ಜನಮತವೆಂದು ತಿಳಿಯಬೇಕು. ದಕ್ಷಿಣ ಅಮೇರಿಕದಲ್ಲಿ ನಿಗ್ರೋ ಜನರ ಪ್ರಶ್ನೆ ದಕ್ಷಿಣ ಆಫ್ರಿಕದಲ್ಲಿ ವರ್ಣೀಯರ ಪ್ರಶ್ನೆ ಮತ್ತು ಮುಸಲ್ಮಾನ ರಾಷ್ಟ್ರಗಳಲ್ಲಿ ಮುಸ್ಲಿಮೇತರರ ಪ್ರಶ್ನೆ ಇವೆಲ್ಲಾ ಜನಮತದ ಕುರಿತು ನಿಜವಾದ ಅನುಭವ ಕೊಡುವದಾಗಿವೆ.

ಜನಮತ ಹುಟ್ಟುವರೆ ಸರ್ವಾನುಮತ ಇರುವದೆ. ಒಳ್ಳೇದೋ? ಇದು ಸಹಾ ಬೇಕೆಂತಿಲ್ಲ. ಅವಿರೋಧವಿದ್ದಲ್ಲಿ ಜನಮತ ಉಂಟಾಗುವುದೆಂಬುದು ಅರ್ಥವಿಲ್ಲದ ಮಾತು. ಹಾಗೆ ತಿಳಿದರೆ ಜನಮತವಿರುವುದು ಅಪರೂಪ ಅಥವಾ ಇಲ್ಲವೆಂತ ಹೇಳಿದಂತೆಯೇ ಸರಿ. ಸರ್ವಾನುಮತಕ್ಕೆ ಯಾವ ಸರಕಾರದಲ್ಲಿಯೂ ನಿಶ್ಚಯವಾಗಿ ಬೆಲೆ ಇದೆ, ಪೋಲೇಂಡಿನಲ್ಲಿ ಈ ಮೊದಲು ಶಾಸನ ಸಭೆಯಲ್ಲಿ ಎಲ್ಲಾ ಠರಾವುಗಳಿಗೆ ಸರ್ವಾನುಮತ ಬೇಕಿತ್ತು. ಜನರು ಅದು ಸ್ವಾತಂತ್ರ್ಯದ ಕೊನೆಯ ಮಟ್ಟವೆಂದು ಹೊಗಳಿರುವದಾದರೂ ಪ್ರಜಾಪ್ರಭುತ್ವದ ತತ್ವಕ್ಕೆ ಅದು ವಿರೋಧವಾದದ್ದು. ಪ್ರಜಾಸತ್ತೆಯಲ್ಲಿ ಸಾರ್ವಜನಿಕ ಪ್ರಶ್ನೆಗಳು ಸಾಮಾನ್ಯ ಜನಮತದಿಂದ ತೀರ್ಮಾನಿಸತಕ್ಕದ್ದಾಗಿ ಹೊರತು ಸರ್ವಾನುಮತದಿಂದಲ್ಲ. ಇದರಲ್ಲಿ ಅಲ್ಪಸಂಖ್ಯಾಕರು ಜನಮತಕ್ಕೆ ತಮ್ಮ ಕರ್ತವ್ಯವೆಂದು ತಲೆಬಾಗುವರು

ಮೇಲೆ ಹೇಳಿದಂತೆ ಬಹುಪಕ್ಷವು ಸಾಕಾಗದೆಂತಾದರೆ ಸರ್ವಾನುಮತವು ಅಗತ್ಯವಿಲ್ಲವೆಂತಾದರೆ ಜನಮತವನ್ನು ತಿಳಿಯುವುದು ಹೇಗೆ? ರೂಸ್ಸೋ ಎಂಬ ದೊಡ್ಡ ತಜ್ಞರು ಅವರ ಸೋಶಿಯಲ್ ಕೋಂಟ್ರಾಕ್ಟ್ [Social Contract] ಎಂಬ ಗ್ರಂಥದಲ್ಲಿ ಹೀಗೆಂದಿರುವರು. "ಸರಕಾರವನ್ನು ಸ್ಥಾಪಿಸುವಾಗ ಜನರೆಲ್ಲರೂ ಒಟ್ಟು ಕೂಡಿ ತಮ್ಮ ಸಾಮಾನ್ಯ ಮತವನ್ನು ಬಲವಾಗಿ ಉಪಯೋಗಿಸುವರು. ರಾಜಕೀಯ ವಿಚಾರಗಳಿಗೆಲ್ಲಾ ಇದೇ ಸಾಮಾನ್ಯ ಮತವೆಂಬದೇ ಜನಮತ ಅಥವಾ ಸಾರ್ವಜನಿಕ ಮತವೆಂದು ಪರಿಗಣಿಸಲ್ಪಡುವುದು. ಜನರು ತಾವು ಕೂಡಿದ ಸಭೆಯಲ್ಲಿ ಕೇಳಲ್ಪಟ್ಟ ವಿಷಯಗಳಿಗೆ ಕೊಡುವ ಮತವು ಅವರ ವೈಯಕ್ತಿಕ ಮತವಲ್ಲ. ಸಾಮಾನ್ಯ ಮತಕ್ಕೆ ಅವರು ಕೊಡುವ ಅಭಿಪ್ರಾಯವಾಗಿದೆ. ಇದರಿಂದ ಅಲ್ಲಗಳೆದ ಅಲ್ಪಸಂಖ್ಯಾಕರ ಅನುಭವವು ನಿಷ್ಫಲವಾದಂತಾಗಲಿಲ್ಲ. ಸಾಮಾನ್ಯ ಮತದ ಕುರಿತು ಅವರು ತಪ್ಪು ಅನುಭವ ಮಾಡಿರುವರೆಂಬರ್ಥವಾಗಿದೆ."

ಜನತೆಗೆ ರಾಜಕೀಯ ವಿಚಾರದಲ್ಲಿ ಜನಮತವನ್ನು ಸೂಚಿಸುವರೆ ಅರ್ಹತೆ ಇರಬೇಕಾದ್ರೆ ಸರಕಾರದ ಧ್ಯೇಯ ಮತ್ತು ಗುರಿಯ ವಿಷಯ ಮತ್ತು ಆ ಗುರಿಯನ್ನು ಮುಟ್ಟುವರೆ ಸಾಧಿಸುವ ತತ್ವಗಳಲ್ಲಿ ಮತ್ತು ವಿಧಿ ಕ್ರಮಗಳಲ್ಲಿ ಒಪ್ಪಂದವಿರಬೇಕು. ಬಹುಪಕ್ಷದವರ ಅಭಿಪ್ರಾಯಕ್ಕೆ ವಿಶ್ವಾಸದಿಂದ ತಲೆಬಾಗುವಲ್ಲಿ ಮಾತ್ರ ಜನಮತವನ್ನು ತಿಳಿಯಬಹುದು. ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿನಲ್ಲಾದ ಠರಾವಿಗೆ ಎಲ್ಲರೂ ತಲೆಬಾಗುವರು ಅಮೇರಿಕದಲ್ಲಿ ಕೋರ್ಟಿನವರ ನಿರ್ಣಯಕ್ಕೆ ಮನ್ನಣೆ ಕೊಡುವರು.

ಸಮಾಜವು ಬಲ ಅಥವಾ ಒಪ್ಪಿಗೆ ಈ ಎರಡರಲ್ಲೊಂದರ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿರುವದು. ಪ್ರಜಾಸತ್ತಾತ್ಮಕ ಸರಕಾರ ಜನರ ಒಲವು ಮತ್ತು ವಿಶ್ವಾಸವನ್ನು ಹೊಂದಿರುವುದು. ಶಿವಾಯ ಬಲಾತ್ಕಾರದ ಮೇಲಲ್ಲ. ಪ್ರಜಾಸತ್ತೆಯಲ್ಲಿ ಕೆಲವು ಸಮಯ ಬಲವನ್ನುಪಯೋಗಿಸಬೇಕಾಗುತ್ತದೆ. ಇದಕ್ಕೆ ನಕಾರಾತ್ಮಕ ಬಲವೆನ್ನುವರು [Negative force] ದೊಡ್ಡ ತಪ್ಪನ್ನು ಶಿಕ್ಷಿಸುವುದಕ್ಕೂ ಸಮಾಜವು ಸಣ್ಣ ತಪ್ಪನ್ನು ಮಾಡುವದಾಗಿದೆ. ಎಲ್ಲಿ ವರೆಗೆ ಅಲ್ಪ ಸಂಖ್ಯಾಕರು ವಿರೋಧಭಾವಗಳಿದ್ದರೂ ವಿಶ್ವಾಸ ಭಕ್ತಿ ತೋರಿಸಿ ಜನಮತಕ್ಕೆ ತಲೆಬಾಗುವರೋ ಅಲ್ಲಿ ತನಕ ಸಮಾಜವು ಒಲುಮೆಯಿಂದ [persuasion] ಇದೆ ಎನ್ನಬಹುದು. ಎಲ್ಲಿ ಅಲ್ಪ ಸಂಖ್ಯಾಕರು ವಿರೋಧಿಸಿ ಒಪ್ಪಿಗೆ ಕೊಡುವುದಿಲ್ಲವೋ ಅಥವಾ ಬಲಪ್ರಯೋಗ ಮಾಡುವರೆ ಬಹುಪಕ್ಷದವರ ಬಲಕ್ಕೆ ಅಂಜಿರುವರೋ ಅಲ್ಲಿ ಸಮಾಜವು ಬಲಾತ್ಕಾರದಿಂದ [force] ಇದೆ ಎಂದು ನಂಬಬಹುದು. ಅವರ ವಿಧೇಯತೆ ಎಂಬುದು ಒತ್ತಾಯಕ್ಕಾಗಿದೆಯಲ್ಲದೆ ಭಕ್ತಿಪೂರ್ವಕವಾಗಿರುವದಿಲ್ಲ. ಎಲ್ಲಿ ಅಲ್ಪ ಸಂಖ್ಯಾಕರು ಉದಾರಬುದ್ಧಿಯಿಂದ ಬಹುಮತಕ್ಕೆ ಪುರಸ್ಕಾರ ಕೊಡುವರೋ ಅಲ್ಲಿ ಪ್ರಜಾಪ್ರಭುತ್ವವು ಬಲಾತ್ಕಾರದಿಂದಿಲ್ಲವೆಂಬುದು ನಿಸ್ಸಂದೇಹ.

—ಸಿ. ಎಚ್. ಶೆಟ್ಟಿ, ಬಿ. ಎ.

[ಮುಂದರಿಯುವುದು.]

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ, ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸ್ಥಿರ ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು,

ಚುನಾವಣಾ ಚಮತ್ಕಾರಗಳು

ಮುಂಬರುವ ಚುನಾವಣೆಯು ಕಾಂಗ್ರೆಸ್ ಹುರಿಯಾಳುಗಳನ್ನು ಆರಿಸುವ ಪದ್ಧತಿಯನ್ನು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳು ಮೊನ್ನೆ ಮುಗಿಸಿದವು. ಒಂದೊಂದು ಸ್ಥಾನಕ್ಕೆ ಮೂರೋ ನಾಲ್ಕೋ ಉಮೇದುವಾರರ ಹೆಸರು ಬಂದಿದ್ದು ಅದನ್ನು ಆಭ್ಯಾಯಿಸುವಾಗ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳಿಗೆ ನಿಜವಾಗಿಯೂ ತಲೆಸಿಡಿತ ಉಂಟಾಗಿರಬೇಕು. ಎಷ್ಟೇ ಜಾಗ್ರತೆ ವಹಿಸಿದರೂ ದೂರದೃಷ್ಟಿಯಿಟ್ಟುಕೊಂಡರೂ ಪಕ್ಷಪಾತದ ಅಪವಾದ ತಪ್ಪುವಂತಿಲ್ಲ! ಅದಕ್ಕೆಂತಲೋ ಏನೋ ಹಲವು ಸಮಿತಿಗಳು ಹುರಿಯಾಳುಗಳ ಹೆಸರನ್ನು ಪ್ರಕಟಿಸದೆ ಮೇಲಕ್ಕೆ ಕಳಿಸಿವೆ.

ಕೆ. ಪಿ. ಸಿ. ಸಿ.ಯು ಶಿಫಾರಸು ಮಾಡಿದ ಯಾದಿಯೊಂದು ಪ್ರಕಟಗೊಂಡಿದ್ದು ಕರ್ನಾಟಕದ ಜನತೆಯಲ್ಲಿಯೂ ಇತರರಲ್ಲಿಯೂ ಆಶ್ಚರ್ಯವನ್ನುಂಟು ಮಾಡಿದೆ! ದ. ಕನ್ನಡದವರ ಆಯ್ಕೆಯು ಬಹುಮಟ್ಟಿಗೆ ಆಶಾದಾಯಕವಾಗಿದೆಂದು ಹೇಳಬಹುದು! ಆದರೆ ಉಳಿದಂಶದಲ್ಲಿ ಕೆ. ಪಿ. ಸಿ. ಸಿ. ಯ ವರ್ತನೆ ವಿಚಿತ್ರವಾಗಿದೆ ಎಂಬ ಸುದ್ದಿಗಳು ಕೇಳಬರುತ್ತಿವೆ.

ಶ್ರೀಗಳಾದ ಕೆ. ಎಫ್. ಪಾಟೀಲ, ದ. ಪ. ಕರಮರಕರ, ಬಿ. ಎನ್. ಮುನವಳ್ಳಿ ಈ ಮೂವರ ಹೆಸರನ್ನು ಕಡೆಗಣಿಸಿದ್ದು ಸೋಜಿಗದ ಸಂಗತಿ! ಕೇಂದ್ರ ಸಂಪುಟದ ಮಂತ್ರಿಗಳಾದ ಆರ್. ಆರ್. ದಿವಾಕರರ ಹೆಸರನ್ನು ನಮ್ಮ ಜಿಲ್ಲೆಯವರೇ ಆದ ಜೋಕಿಂ ಆಳ್ವರ ಹೆಸರಿನೊಂದಿಗೆ ಸ್ಪರ್ಧೆಯ ರೀತಿಯಲ್ಲಿ ಸೇರಿಸಲಾಗಿದೆ! ಉಜ್ವಲ ದೇಶಸೇವಾಧುರೀಣರೂ ಕರ್ನಾಟಕ ಏಕೀಕರಣದ ಸೂತ್ರಧಾರರೂ ಆದ ಯೋಗ್ಯ ಹುರಿಯಾಳುಗಳನ್ನು ಬಿಟ್ಟು ಹಲವರನ್ನು ಆರಿಸಿದ ಔಚಿತ್ಯವೇನೆಂದೇ ಅರ್ಥವೇ ಆಗುವುದಿಲ್ಲ! ಪ್ರಧಾನ ಮಂತ್ರಿಯವರು ಪದೇ ಪದೇ ಆದೇಶವಿತ್ತದ್ದೂ ವ್ಯರ್ಥವೇನೋ ಎನಿಸುತ್ತದೆ.

ಅಂತೂ ಚುನಾವಣೆ ಹತ್ತಿರ ಬಂದ ಹಾಗೆಲ್ಲ ಚಮತ್ಕಾರ-ಜಾದುವಿದ್ಯೆಗಳೇ ಹೆಚ್ಚಾಗಿ ಕಂಡು ಬರುತ್ತಿವೆ. ಸ್ವಾರ್ಥ-ಜಾತೀಯತೆಯ ದುರ್ಲಾಭವನ್ನು ಕಾಂಗ್ರೆಸ್ ಕಾರ್ಯಕರ್ತರು ಪಡೆಯುವ ಹಂಚಿಕೆ ಹೂಡಿದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸೋಲು ಕಟ್ಟಿಟ್ಟದ್ದು! ಬೇರೆ ಬೇರೆ ಪಕ್ಷಗಳು ಕಾಂಗ್ರೆಸ್ಸಿನ ಮೇಲೆ ಕತ್ತಿಕಟ್ಟಿ ನಿಂತಿರುವಾಗ – ಜನತೆಯನ್ನು ವಂಚಿಸಲೆತ್ನಿಸುವಾಗ– ಕಾಂಗ್ರೆಸ್ಸು ಯೋಗ್ಯ ಹಾಗೂ ಜನಪ್ರಿಯ ಹುರಿಯಾಳುಗಳನ್ನು ಆರಿಸದೇ ಹೋದರೆ ಮುಂಬರುವ ಚುನಾವಣೆಯಲ್ಲಿ ವಿರೋಧಿ ಪಕ್ಷದ ಕೈಮೇಲಾಗುವದರಲ್ಲಿ ಸಂದೇಹವೇ ಇಲ್ಲ!

ಕರ್ನಾಟಕ ಏಕೀಕರಣ ಪಕ್ಷದವರು ಆಚಾರ್ಯರ ಪ್ರಜಾಪಾರ್ಟಿಯಲ್ಲಿ ಐಕ್ಯಗೊಂಡ ಸುದ್ದಿ ಕೇಳುತ್ತಲಿದೆ. ಮಾತ್ರವಲ್ಲ ದ. ಕನ್ನಡದಲ್ಲಿ ಈಗಾಗಲೇ ಪಾರ್ಟಿಯ ಸಭೆ ಚಟುವಟಿಕೆಗಳು ನಡೆದಿವೆ. ಸೋಶಲಿಸ್ಟರೂ ಪ್ರಜಾಪಾರ್ಟಿಯವರೂ ಕೂಡಿಕೊಂಡು ಚುನಾವಣಾಂಗಣದಲ್ಲಿ ಪರಸ್ಪರ ಸಹಕರಿಸಿಕೊಂಡು ಹೋಗುವ ನಿರ್ಧಾರವನ್ನೂ ಮಾಡಿರುವರಂತೆ!

ದ. ಕನ್ನಡದ ಹುರಿಯಾಳುಗಳ ಪಟ್ಟಿಯನ್ನು ನೋಡಿ ವಿರೋಧಿ ಪಕ್ಷದವರಿಗೆ ಕೊಂಚ ನಿರಾಶೆಯೂ ಆಗಿರಬಹುದು. ಆಯಾ ಪ್ರದೇಶದ ಜನಕ್ಕೆ ಒಗ್ಗದವನೊಬ್ಬನನ್ನು ಕಾಂಗ್ರೆಸ್ ನಿಲ್ಲಿಸಿದರೆ ಅದರ ಲಾಭವನ್ನು ಬೇರೆ ಪಕ್ಷಗಳು ಪಡೆಯಬಹುದೆಂಬ ಇಚ್ಛೆ ಬಲವಾಗಿತ್ತು! ಆದರೆ ಕೆ. ಪಿ. ಸಿ. ಸಿಯು ಒಳ್ಳೆಯ ಮುತ್ಸದ್ದಿತನದಿಂದ ದ. ಕ. ಜಿಲ್ಲೆಯ ಯಾದಿಯನ್ನು ತಯಾರಿಸಿದ್ದರಿಂದ ಉಳಿದ ಪಕ್ಷಗಳಿಗೆ ನಿರಾಶೆಯಾಗಿರಬೇಕು. ಅಂತೂ ಕಾಂಗ್ರೆಸ್ಸಿಗಿದಿರಾಗಿ ಸ್ಪರ್ಧಿಸಿ ಒಂದೆರಡು ಸ್ಥಾನವನ್ನಾದರೂ ಗಳಿಸುವ ಸಾಮರ್ಥ್ಯವಿರುವದು ಪ್ರಜಾ ಪಾರ್ಟಿಗೆ ಅರ್ಥಾತ್ ಏಕೀಕರಣ ಪಕ್ಷಕ್ಕೇನೇ! ಎರಡನೆಯದಾಗಿ ಸೋಶಲಿಸ್ಟರು ಬರಬಹುದೇನೊ! ಸೋಶಲಿಸ್ಟರ ಬಲವು ಉಳಿದೆಡೆಗೆಲ್ಲ ಕಾಂಗ್ರೆಸು ಯೋಗ್ಯ ಹುರಿಯಾಳುಗಳನ್ನೇ ಆರಿಸುವ ಪ್ರಯತ್ನ ನಡೆಸಿದರೆ ಸೋಶಲಿಸ್ಟರ ಚೀಟು ಮೇಲೆ ಬೀಳುತ್ತದೋ ಹೇಗೆಂಬುದು ಸಂಶಯಾಸ್ಪದ ವಿಚಾರ!

ಈ ಶಿಫಾರಸು ಪತ್ರವೇ ಕೊನೆಯದಾದೀತೆಂದು ನಾವು ನಿರೀಕ್ಷಿಸುವದು ತಪ್ಪಾದರೂ ಮೇಲಿನವರು ಇದಕ್ಕಿಂತ ಹೆಚ್ಚೇನೂ ಬದಲಾವಣೆ ಮಾಡಲಾರರು! ಒಂದು ವೇಳೆ ತಿರುವು ಮುರುವು ಆಗುವಂತಾದರೆ ಚುನಾವಣಾ ಪರಿಣಾಮವೂ ಬೇರಾಗಬಹುದು.

ಕೇಂದ್ರ ಪಾರ್ಲಿಮೆಂಟರೀ ಬೋರ್ಡಿನಿಂದ ಏನಾಗಬಹುದೆಂದು ಹಲವರಿನ್ನೂ ಕಾತರಿಸುತ್ತಿದ್ದಾರೆ! ತಮ್ಮ ಅರ್ಹತೆಯ ಅನುಭವವನ್ನು ಹುಬ್ಬಳ್ಳಿಯಲ್ಲಿ ಮಾಡಿಕೊಟ್ಟಿರುವದು ಸಾಲದೆ ದಿಲ್ಲಿಯಲ್ಲಿ ಮಾಡಿಕೊಡಬೇಕೆಂಬವರೂ ಇದ್ದಾರೆ. ಯಾರ ಸ್ಥಾನವೂ ಸ್ಥಿರವಲ್ಲ ಮೇಲಿನದು ಮುಖ್ಯವೆನ್ನುವ ಗಾಳಿ ಸುದ್ದಿ ಇನ್ನೂ ಹರಡುತ್ತಲಿದೆ. ಕೆ. ಪಿ. ಸಿ. ಸಿ.ಯು ನಿರ್ಣಯಿಸಿದ್ದನ್ನು ಪಾರ್ಲಿಮೆಂಟರೀ ಬೋರ್ಡು ಇದ್ದಕ್ಕಿದ್ದ ಹಾಗೆಯೇ ಒಪ್ಪಿಕೊಳ್ಳಲಾರದೆಂಬುದು ಖಂಡಿತ. ಬೇರೆ ಕಡೆಯಿಂದ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವ ತಂತಿ ಕಾಗದ ಹೇಳಿಕೆಗಳು ನೆಹರೂರವರೆಡೆಗೆ ಧಾವಿಸಿವೆ! ಹುಚ್ಚೇಶ್ವರ ಮುದ್ಗಲ್ಲರಂತಹ ಜಾತೀಯವಾದಿಗಳ-ಅವಾಂತರಗಳು ಇದರಲ್ಲೂ ಸೇರಿಕೊಂಡಿವೆಯೆಂಬುದು ನೆಹರೂ ತಿಳಿದಾಗ ಒಮ್ಮೆ ಕಿಡಿಕಿಡಿಯಾಗಿ ಹಾರಲುಂಟು! ಆದ್ದರಿಂದ ಕೆ. ಪಿ. ಸಿ. ಸಿ.ಯ ನಿರ್ಣಯವು ಕೊನೆಯದ್ದೆಂದೂ ಆಗಲೂ ಸಾಧ್ಯವಿಲ್ಲ. ನಮ್ಮ ಜಿಲ್ಲೆಯಮಟ್ಟಿಗೆ ಯಥಾವತ್ತಾದರೂ ನಮ್ಮ ಯು. ಶ್ರೀನಿವಾಸ ಮಲ್ಯರವರು ಧಾರೀ "ಮಲ್ಲಯ್ಯ" ಪದವಿಗೇರಿರುವದರಿಂದ ಏನಾದರೂ ಚಾಣಾಕ್ಷ ತಂತ್ರ ಹೂಡಬಹುದೇ? ಎಂದು ಹಲವರು ಕನವರಿಸುತ್ತಿರುವುದೂ ಉಂಟು! ಇಂತಹ ಊಹೆಗಳಲ್ಲಿ ಹಲವರಿಗೆ ಒಳಗಿಂದೊಳಗೆ ಅತಿ ನಿಂ.ತಿ. ಒಂದು ಬಗೆಯ ಭಳಿ ಕೂಡಾ ಇದೆ. ಮಲ್ಯರ ಮಲ್ಲಯ್ಯನಿಗೆ ಕೈಯಾಡಿಸುವ ಅಧಿಕಾರ ಅಲ್ಲಿರುವುದರಿಂದಲೂ ತಾನೂ ಒಬ್ಬ ಉಮೇದುವಾರನಾಗಿರುವದರಿಂದಲೂ ತನ್ನ ಕಾರ್ಯಕ್ಷೇತ್ರದ ಬಲಾಬಲವನ್ನು ನೋಡಿಕೊಂಡು ದೂರದೃಷ್ಟಿಯನ್ನು ಬೀರಲೂ ಬಹುದು! ಇವನ್ನೆಂದೂ ಧರ್ದೃಷ್ಟಿಯೆಂದು ಹೆಸರಿಸಲು ಸಾಧ್ಯ ಉಂಟೇ?

ಧಾರೀಮಣಿ-- ಆರ್ಥಿಕಬಲವು-- ಶ್ರೀಮದ್ಗಾಂಭೀರ್ಯ--ಮೊಳ್ಪು ಆಶ್ವಾಸನೆ ಮುಂಬರುವ ಚುನಾವಣೆಯಲ್ಲಿ ಫಲಿಸುವಂತಿಲ್ಲ! ಜನತೆಯ ಒಲವು ಯೋಗ್ಯ ಹುರಿಯಾಳುಗಳ ಮೇಲಿದೆ ಎಂಬುವದರಲ್ಲಿ ಅನುಮಾನವಿಲ್ಲ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

ESTD: 1925 H. O: UDIPI.



"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ.

ಉತ್ಕೃಷ್ಟ ತರಗತಿಯ ಯಂತ್ರ.

ಬೆಲೆ ರೂ. 465.

ನಿಮ್ಮ ಬಂದರ ಡಿಲಿವರಿ.

The Vijay Engineering Co. Ltd.,
BOMBAY-10.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 249/1951.

ಕುಂಞಾಮು ಬ್ಯಾರಿ – – ವಾದಿ.

ಶ್ರೀ ರಕ್ಷಮರ್ಂರಾಜು–ಚಂದಯ್ಯ ಹೆಗಡೆಯವರ ಮಗ–ಮಂಗಳೂರು ತಾಲೂಕು ಬಂಟ್ವಾಳ ಕಸಬೆಯಲ್ಲಿರುವವ– ಪ್ರತಿವಾದಿ.

ಪ್ರತಿವಾದಿಯು ವಾದಿಗೆ ಬರಕೊಟ್ಟ ಜಾಂಡಿ ಪ್ರೋನೋಟು ಮೇರೆಗಿನ ಅಸಲು ಬಡ್ಡಿ ಖರ್ಚುಗಳಿಗೆ ವಾದಿಯು ದಾವೆ ಮಾಡಿದ್ದು ವ್ಯಾಜ್ಯವು ತಾರೀಕು 25-10-1951 ಕ್ಕೆ ವಿಚಾರಣೆಗೆ ಇಟ್ಟಿರುವ ಸಂಗತಿ ಈ ಮೂಲಕ ತಿಳಿಸಲಾಗಿಯದೆ.

(Sd) **P. Ahmad**,
Advocate for Plaintiff.

ಕಾಸರಗೋಡು 1-10-51.

ಪ್ರಕಟಣೆ

ಉಡಿಪಿ ತಾಲೂಕು ಎಲ್ಲೂರ್ [illegible] ಗ್ರಾಮದಲ್ಲಿರುವ ದೇಯು ಸೆಟ್ಟಿ ಮಗ [illegible] ಸೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ—

ನಾನು ನನ್ನ ದೊಡ್ಡ ತಾಯಿ [illegible] ಮಗ [illegible] ಸೆಟ್ಟಿಗೆ ಈ ದಿನ ಅಲ್ಲಾದಾ ರಜಿಸ್ಟ್ರಿ ನೋಟೀಸಿನಲ್ಲಿ ವಿವರವಾಗಿ ತಿಳಿಸಿದಂತೆ ಅವರು ಅವರ ಮಗ [illegible] ಸೆಟ್ಟಿಯ ಸಹಾಯದಿಂದ ನನ್ನನ್ನು ಮೋಸಗೊಳಿಸಿ ನನ್ನ ತಿಳುವಳಿಕೆಯಿಲ್ಲದೆ ತಾ. 26-7-1951 ರಲ್ಲಿ ಬರಾಯಿಸಿಕೊಂಡ ವಿಭಾಗಪತ್ರವು [illegible] ಅದರಿಂದ ನನ್ನ ಕುಟುಂಬದ [illegible] ಆಸ್ತಿಗಳಲ್ಲಿ ನನಗಿರುವ ಅಧಿಕಾರಕ್ಕೆ [illegible] ಬಾಧಕವಾಗಕೂಡದು. ನನ್ನ ನ್ಯಾಯವಾದ ಅಧಿಕಾರದ ಪಾಲನ್ನು ಕೇಳಿ ಕ್ರಮಪ್ರಕಾರ ವಿಭಾಗಪತ್ರವಾಗಬೇಕೆಂದು [illegible] ನೋಟೀಸಿನಲ್ಲಿ ತಿಳಿಸಿರುತ್ತೇನೆ. ಅದರಿಂದ ಸದ್ರಿ ವಿಭಾಗ ಪತ್ರ ಪ್ರಕಾರ [illegible] ಸದ್ರಿ [illegible] ಆಸ್ತಿಗಳನ್ನು ಯಾರಾದರೂ ಸ್ವಾಧೀನ ಮಾಡಿಕೊಂಡಲ್ಲಿ ಅದು ನಿಷ್ಫಲವಾಗುವದೆಂದು ಈ ಮೂಲಕ ತಿಳಿಯಪಡಿಸಿದ್ದೇನೆ.

[illegible] ಸೆಟ್ಟಿ

ಎಲ್ಲೂರ್, ತಾ. 3-10-51.

ಮುನ್ಸಿಯವರು ಆಹಾರ ಉಪದೇಶ ನಿಲ್ಲಿಸಲಿ

ಕೇಂದ್ರ ಸರಕಾರದ ಆಹಾರ ಮಂತ್ರಿ ಮುನ್ಸಿಯವರು ಸಾಹಿತ್ಯ ಚಟುವಟಿಕೆಯಲ್ಲಿ ಭಾಗವಹಿಸುವದರ ಸಲುವಾಗಿ ರಾಜಕೀಯ ರಂಗವನ್ನು ತ್ಯಜಿಸುವದಾಗಿ ಹೇಳಿರುವರು. ಈ ವರೆಗೆ ಪಾರ್ಲಿಮೆಂಟಿನ ಮುಂದೆಯೂ ಇತರ ಕಡೆಗಳಲ್ಲೂ ಹೇಳಿದಂಶವನ್ನು ಲಕ್ಷಿಸಿದರೆ ಅದೊಂದು ಬಗೆಯ ಕಲ್ಪನಾ ಸಾಹಿತ್ಯವನ್ನೇ ಅರ್ಥಾತ್ ಕಟ್ಟುಕತೆಯನ್ನೇ ಅವರು ನಿರ್ಮಿಸಿದರೆಂದರೆ ತಪ್ಪಾಗದು! ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಈ ಆಹಾರ ಸಮಸ್ಯೆಯನ್ನು ಬಗೆಹರಿಸುವಲ್ಲಿ ಭಾರತ ಸರಕಾರ ಸಂಪೂರ್ಣ ಪರಾಭವಗೊಂಡಿದೆ. ಕೇಂದ್ರ ಸರಕಾರದ ಅನಿಶ್ಚಿತ ಆಹಾರ ಧೋರಣೆಯಿಂದ ಪ್ರಾಂತಿಕ ಸರಕಾರಗಳು ಹಲವು ರೀತಿಯ ಕಷ್ಟಪರಂಪರೆಗಳನ್ನು ಎದುರಿಸಬೇಕಾಗುವುದು. ಮದ್ರಾಸದ ಆಹಾರವನ್ನು ಪ್ರಸ್ತಾಪಿಸುತ್ತಾ ಶ್ರೀ ಮುನ್ಸಿಯವರು "ಮದ್ರಾಸದ ಸ್ಥಿತಿ ಸುಧಾರಿಸಿದ" ಯೆಂದು ಹೇಳಿದರು. ಮರುಕ್ಷಣದಲ್ಲಿಯೇ ಮದ್ರಾಸದ ಆಹಾರ ಮಂತ್ರಿ ರೋಚೆ ವಿಕ್ಟೋರಿಯಾರವರು ಸಖೇದಾಶ್ಚರ್ಯವನ್ನು ವ್ಯಕ್ತಪಡಿಸಿದ್ದರು! ಆತ್ಮಸಮರ್ಥನೆಯನ್ನು ಮಾಡಿಕೊಳ್ಳುವದಕ್ಕೋಸ್ಕರ ಮುನ್ಸಿಯವರು ಪಾರ್ಲಿಮೆಂಟಿನ ಮುಂದೆ ಕಟ್ಟುಕತೆಯನ್ನು ಕಟ್ಟುತ್ತಲಿದ್ದಾರೆ. ಆಹಾರವನ್ನು ಹೆಚ್ಚಾಗಿಸುವದಕ್ಕೆ ಇಲ್ಲವೆ ಬೆಳೆಸುವದಕ್ಕೆ ಕೈಗೊಂಡ ಕಾರ್ಯಕ್ರಮಗಳು ವಿಧಾಯಕವಾಗಿಲ್ಲವೆನ್ನುವದಕ್ಕೆ ಇಂದು ಸಾಕಷ್ಟು ದಾಖಲೆಗಳು ಸಿಗುತ್ತಿವೆ. ವಿದೇಶದಿಂದ ತರಿಸಲ್ಪಟ್ಟ ಆಹಾರ ಧಾನ್ಯದಿಂದ ಕೋಟಿಗಟ್ಟಲೆ ನಷ್ಟವಾಗಿದೆ. ನಾಲ್ಕು ವರ್ಷಗಳಿಂದ ಆಹಾರ ಉತ್ಪಾದನೆಗೆಂದು ವ್ಯಯಿಸಿದ್ದರಲ್ಲಿ ಫಲಪ್ರಾಪ್ತಿ, ಬಹಳ ಕಡಿಮೆಯೇ. ಈಚೆಗೆ ವಿನೋಬಾಭಾವೆಯವರು ಆಹಾರ ಹೆಚ್ಚಿಸುವದಕ್ಕೆ ಹಾಳು ಭೂಮಿಯನ್ನು ಎಲ್ಲರಿಗೂ ಹಂಚಿ ಸಾಗುವಳಿ ಮಾಡಬೇಕೆಂದು ಸೂಚಿಸಿದ್ದಾರೆ. ಇಂದಿನ ಪರಿಸ್ಥಿತಿ ಸುಧಾರಿಸಬೇಕಾದರೆ ಭೂಸುಧಾರಣೆಯಾಗಬೇಕು! ನಮ್ಮ ದೇಶದಲ್ಲಿ ಹಾಳು ಬಿದ್ದಿರುವ ಭೂಮಿಗಳು ಹಾಗೆಯೇ ಇವೆ.

ನಗರದಲ್ಲಿ ಕೂತು ಆಹಾರ ಮಂತ್ರ ಜಪಿಸುವ ನಮ್ಮ ಮಂತ್ರಿವರ್ಯರು ಸಾಗುವಳಿಯಾಗದೆ ಉಳಿದಿರುವ ಭೂಮಿಯನ್ನು ಲಕ್ಷಪೂರ್ವಕ ನೋಡಲಿ! ಮೈಸೂರಿನ ಮಲೆನಾಡ, ಉತ್ತರ ಕರ್ನಾಟಕದ ಪ್ರದೇಶಗಳೂ ದ. ಕನ್ನಡದ ಹಲವಂಶಗಳೂ ಸಾಗುವಳಿಗೆ ಉಪಯೋಗಿಸಿ ಅಭಿವೃದ್ಧಿಗೊಳ್ಳುವಂತಾದರೆ ಆಹಾರ ಕೊರತೆ ಎಲ್ಲಿಯದು? ಸರಕಾರದ್ದೆಂದು ಹೇಳಲಾಗುವ ಸಹಸ್ರಾರು ಎಕ್ರೆ ಭೂಮಿಗಳು ಇನ್ನೂ ಕಾದಿಡುವದರ ಔಚಿತ್ಯವೇನು? ಅದನ್ನೇಕೆ ಭೂಮಿ ಇಲ್ಲದವರಿಗೆ ಹಂಚಕೂಡದು? ಈ ಬಗೆಯ ವಿಧಾಯಕವಾದ ಕಾರ್ಯ ಕೈಗೊಳ್ಳದೆ ಹೋದರೆ ನಮ್ಮ ಆಹಾರ ಸ್ಥಿತಿ ಸುಧಾರಿಸುವದಾದರೂ ಎಂತು?

ಹಲವು ಪ್ರಾಂತಗಳು ನಮ್ಮ ಆಹಾರ ಬೆಳವಣಿಗೆಯ ಅಂಕಿಸಂಖ್ಯೆಗಳನ್ನು ಕೊಟ್ಟಿವೆ. ಹೆಚ್ಚಿನ ಅಂಕಿಸಂಖ್ಯೆಗಳು ಆಹಾರೋತ್ಪಾದನೆಯಲ್ಲಿ ಯಶಸ್ವಿಯಾಗದೆ ಇರುವದು ಮಾತ್ರವಲ್ಲದೆ ಮುಂಬಯಿಯಂತಹ ಪ್ರದೇಶದಲ್ಲಿ ಕುಗ್ಗಿದ ಸಿದ್ಧಿಯೂ ಇದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸರಕಾರವು ಅಕ್ಕಿಗೆ ಸರಿಯಾದ ಅಂದರೆ ಯೋಗ್ಯವಾದ ಧೋರಣೆಯನ್ನು ಗೊತ್ತುಪಡಿಸದೇ ಇರುವಂಥದ್ದು. ಉಳಿದ ಪದಾರ್ಥಗಳು ಯುದ್ಧ ಪೂರ್ವ ಬೆಲೆಗಿಂತ ಹತ್ತು ಪಟ್ಟು ಹೆಚ್ಚಾಗಿರುವಾಗ ಅಕ್ಕಿಯ ಧಾರಣೆಯು ಅದೇ ಮಟ್ಟದಲ್ಲಿ ಇರಬೇಕಾಗಿತ್ತು. ಅಂತಲೆ ಇಂದು ಬೆಲ್ಲ ಇತರ ದವಸಧಾನ್ಯ, ಕಬ್ಬು, ಇತರ ಬೆಳೆಗಳು ಹೆಚ್ಚಾಗಿವೆ. ಹತ್ತಿ ಸಣಬುಗಳ ಮೇಲಾಟವೂ ನಡೆದಿದೆ. ವಿದೇಶಗಳಿಂದ ತರುವ ನಿಕೃಷ್ಟ ತರದ ಆಹಾರಕ್ಕೆ ಮಿತಿಮೀರಿ ಬೆಲೆ ತೆರುವಾಗ ದೇಶದ ಆಹಾರ ಧಾನ್ಯಕ್ಕೆ ಸರಿಯಾದ ಬೆಲೆಯನ್ನು ಗೊತ್ತುಪಡಿಸುವುದು ನ್ಯಾಯವಲ್ಲವೆ? ಅಕ್ಕಿಯ ಬೆಲೆಯು ಲಾಭದಾಯಕವಾದರೆ ಅದರ ಉತ್ಪಾದಕ ಕಾರ್ಯದಲ್ಲಿ ಆಸಕ್ತಿ ಹೆಚ್ಚುವುದು ಸ್ವಾಭಾವಿಕ. ಇದರಿಂದ ಆಹಾರ ಸಮಸ್ಯೆಯು ತನ್ನಿಂದತಾನೆ ಬಗೆಹರಿಯುವದರಲ್ಲಿ ಸಂದೇಹವಿಲ್ಲ!

ಈ ಕ್ರಮದಿಂದ ಬಡವರಿಗೆ ಅನ್ಯಾಯ ಮಾಡಿದಂತಾಗುವದೆಂದು ಹಲವರು ದೂರಬಹುದು. ಆದರೆ ಆ ವಾದಕ್ಕೆ ಅರ್ಥವಿಲ್ಲ! ಈಗ ಅಕ್ಕಿಯ ಅಭಾವ ಇರುವಾಗ ಬಡವರ ಉಪಕಾರಕ್ಕೆಂದು ಅಕ್ಕಿಯನ್ನು ಕಡಿಮೆ ಧಾರಣೆಯಲ್ಲಿಯಾರೂ ವಿಕ್ರಯಿಸಲಿಲ್ಲ! ಎಪ್ಪತ್ತೋ–ಅರುವತ್ತೋ ರೂಪಾಯಿ ಕೊಂಡುಕೊಳ್ಳುವ ಕಳ್ಳಸಂತೆಯ ಮಾರ್ಗವನ್ನು ಎದುರಿಸಬೇಕೆಂಬ ಇಚ್ಛೆಯುಳ್ಳವರೆಲ್ಲರೂ ಅನುಭವಿಸಬೇಕಾಗಿದೆ. ಸೇರಿಗೆ ಒಂದೂ ಕಾಲುರೂಪಾಯಿಯನ್ನು ತೆತ್ತು ತರುವ ಹೀನ ಪಾಡು ಮಧ್ಯಮ ತರಗತಿಯವನಿಗೆ ಮಾತ್ರವಲ್ಲದೆ ಬಡವನಿಗೂ ಉಂಟು! ಅಂದ ಮೇಲೆ ಅಕ್ಕಿಯ ಧಾರಣೆಯನ್ನೇರಿಸಿ ಆಹಾರೋತ್ಪಾದನಾ ಕಾರ್ಯಕ್ಕೇಕೆ ಪ್ರೋತ್ಸಾಹ ಕೊಡಬಾರದು? ವರ್ಷವರ್ಷಕ್ಕೆ ಸಾಕಷ್ಟು ಆಹಾರ ಎಂದು ಬಂದೀತು–ಹಸಿವೆ ಹಿಂಗೀತು–ಎಂದು ನಾವು ಕನವರಿಸಿದ್ದು ಕನವರಿಸಿದ್ದೇ. ಮಂತ್ರಿಗಳು ನೀಡುತ್ತಿರುವ ಭರವಸೆಗಳೂ ತೋರಿಸುತ್ತಿರುವ ಆದರ್ಶಗಳೂ ಅವ್ಯಾಹತವಾಗಿ ಸಾಗುತ್ತಿದ್ದರೂ ದೇಶದ ಜನರ ಅನ್ನದ ಪ್ರಶ್ನೆ ಇನ್ನೂ ಬಗೆಹರಿಯಲಿಲ್ಲ.

ಬಡವರ ಉದ್ಧಾರವೆಂದು ಸರಕಾರ ಆಹಾರ ಧೋರಣೆಯಲ್ಲಿ ಅನುಸರಿಸುತ್ತಿರುವ ಕ್ರಮದಿಂದ ಕಳ್ಳಸಂತೆಗೆ ಸರಿಯಾದ ಚಾಲನೆ ಕೊಟ್ಟಂತಾಗಿದೆ. ಇಂದು ಅಕ್ಕಿಗಾಗಿ ಎಪ್ಪತ್ತೋ ಅರುವತ್ತೋ ತೆರುವದು ಆಶ್ಚರ್ಯವಾಗಿಲ್ಲ; ಅನಿವಾರ್ಯವೆಂದೇ ಆಗಿದೆ ನಮ್ಮ ಈ ಕಾಂಗ್ರೆಸ್ ರಾಜ್ಯದಲ್ಲಿ! ಅಂದಮೇಲೆ ವಿಧಾಯಕವಲ್ಲದ—ಕಾರ್ಯರೂಪಕ್ಕೆ ಬರದ ಈ ಒಣಾದರ್ಶಗಳೇಕೆ? ಭೂಸ್ವೀಕಾರ ಹಾಗೂ ದಾನಕ್ರಮವನ್ನು ಕೈಗೊಂಡಿರುವ ಆಚಾರ್ಯ ವಿನೋಬಾ ಭಾವೆಯವರ ಆದರ್ಶವನ್ನೇಕೆ ನಮ್ಮ ಮಂತ್ರಿವರ್ಯರು ಮಾಡಕೂಡದು? ಭೂಮಿಯನ್ನು ಸದುಪಯೋಗಗೊಳಿಸುವದರಿಂದ ಎಲ್ಲರಿಗೂ ತಮ್ಮದೆಂದು ದುಡಿಯಲು ಭೂಮಿ-ಉಣಲು ಅನ್ನ-ಉದ್ಯೋಗವು ತನ್ನಿಂದ ತಾನೇ ದೊರಕುವುದಿಲ್ಲವೇ? ಮಾತ್ರವಲ್ಲ; ಬಡವರು ಬಲ್ಲಿದರೆಂಬ ಭೇದಭಾವನೆಯೂ ದೂರಾಗಿ ನಮ್ಮ ರೈತರು ಕಮ್ಯುನಿಸ್ಟರಾಗಿ ವೇಷಾಂತರ ಹೊಂದುವ ಗೋಳು ನಿಲ್ಲಬಹುದಲ್ಲವೇ?

ಮುಖ್ಯವಾಗಿ ಭಾರತ ಸರಕಾರವು ಶಾಸ್ತ್ರವಿಹಿತವಾದ ಮಾರ್ಗವನ್ನವಲಂಬಿಸಬೇಕು. ಯಥಾರ್ಥವಾದ ಕಾರ್ಯ ಕೈಗೊಳ್ಳಬೇಕು! ಹಸಿದ ಜನರಿಗೆ ಬೇಕಾಗಿರುವದು ಮಂತ್ರಿಗಳ ರಸಪೂರ್ಣ ಭಾಷಣವಲ್ಲ; ಪರ್ವತಾಕಾರವಾದ ಯೋಜನೆಗಳೂ ಅಲ್ಲ; ಸಕಾಲಿಕವಾದ ಉಪಕ್ರಮ.

ದೇಶದ ಮುಂದಿರುವ ಈ ಪ್ರಶ್ನೆಯನ್ನು ಬಗೆಹರಿಸದ ಯಾವ ಪಕ್ಷವೊಂದರೂ ಜನ ಸಹಿಸುವುದಿಲ್ಲ! ನಾಲ್ಕು ವರ್ಷಗಳಲ್ಲಿಯೂ ಕಾಂಗ್ರೆಸ್ಸಿನಿಂದ ಬಗೆಹರಿಯಲಾಗದ ಈ ಸಮಸ್ಯೆ ಮುಂದಾದರೂ ಇದೇ ಅಸಮಗ್ರ ಧೋರಣೆಯಿಂದ ಪರಿಹಾರವಾದೀತೆಂದು ನಾವು ಭಾವಿಸುವುದು ಹುಚ್ಚು ಕಲ್ಪನೆಯೇ ಸರಿ! ಮಾತ್ರವಲ್ಲ ಈ ಬಗೆಯ ಅಂಧಾನುಕರಣೆಯಿಂದ ದೇಶದ ಜನತೆಯನ್ನು ಬಂಗಾಲದ ದವಡೆಗೆ ತಳ್ಳುವದರಲ್ಲಿ ಸಂದೇಹವಿಲ್ಲ!

ಜನಕ್ಕೆ ಉಣಲು ಅನ್ನ, ಉಡಲು ಬಟ್ಟೆ, ದುಡಿಯಲು ಉದ್ಯೋಗ ಈ ಮೂರು ಅವಶ್ಯ ಬೇಕಾಗಿವೆ. ಈ ಮೂರಕ್ಕೆ ಎಲ್ಲಿ ಕೊರತೆಯಿಲ್ಲವೋ–ಅಲ್ಲಿ ಸರಕಾರ ಸಮರ್ಥವಾಗಿದೆಯೆಂದು ಭಾವಿಸಬಹುದು. ಇವನ್ನು ನೀಡದ ಸರಕಾರ ಎಷ್ಟೇ ಆದರ್ಶ ಸರಕಾರವಾದರೂ—ಬಹಳ ಕಾಲ ಬಾಳದೆಂಬುದನ್ನು ನಾವು ಮರೆಯಬಾರದು! ಇಂದು ದಿಲ್ಲಿಯಿಂದ ಹಳ್ಳಿಯವರೆಗೆ ವ್ಯಾಪಕತೆಯನ್ನು ಹೊಂದಿರುವ ರಾಜಕೀಯ ಪ್ರಶ್ನೆಯೆಂದರೆ ಇದೇ!

ಅಂತಲೇ ಮುನ್ಸಿಯವರು ಸರಿ ಬರುವ ಗದ್ದುಗೆಯನ್ನೇರುವದೊಳ್ಳಿತೆಂದು ಹೇಳುತ್ತೇವೆ. ಅನ್ನಕ್ಕೂ ಆಲೋಚನೆಗೂ ಬಹಳ ಅಂತರವಿದೆ. ಆಲೋಚನೆಯಿಂದ ಕಲ್ಪನಾತೀರ ತೋರಬಹುದೇನೋ! ಆದರೆ ಅನ್ನದ ಪ್ರಶ್ನೆ ಅಷ್ಟು ಸುಲಭವಲ್ಲ; ಲೋಕ ಹಾಗೂ ಪ್ರಕೃತಿ ಜ್ಞಾನಬೇಕು! ದೇಶದ ಮುಂದಿರುವ ದುಃಸ್ಥಿತಿಗೆ ಈ ಅಜ್ಞಾನವೇ ಕಾರಣವಾಗಿದೆ ಎಂಬುದನ್ನು ಮರೆಯದಿರೋಣ!

ಯಕ್ಷಗಾನ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲತ್ತಪಗಡೆ	0-6-0

ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕಭಂಡಾರ,
ಉಡುಪಿ.

ಋತುಸ್ರಾವ ನಿಂತಿತು
'ಕುಮಾರಿ' ಗುಳಿಗೆಗಳನು ಉಪಯೋಗಿಸಿದರೆ ಹದಹಟ್ಟಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶಲ್ ರೂ. 5– ಅಧಿಕಾಧಿಕ ಸ್ಪೆಶಲ್ ರೂ. 8. [ವಿ. ಪಿ. ಖರ್ಚು ಪ್ರತ್ಯೇಕ.]
Mrs. D. DEVEE, F DS (N. J.)
Tollygunge CALCUTTA
ಪ್ರಾತಿನಿಧ್ಯರು ಕಹಾಕಂಪನಿ, ಮಂಗಳೂರು



Approved from by the Govt. of Mysore Certificated by the Agent of the Govt of Cylone & Indian

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.
Moolky, S. K.

TEL: 40592
WATSONS AERATED WATERS
14 Parel Road, Cross Lane, BOMBAY 12
ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.
ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.
ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.
ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0
ಗುರುವಾರ ಉಡುಪಿ,೧೧-೧೦-'೫೧

ಕೇಂದ್ರ ಮತ್ತು ಕರ್ನಾಟಕ

ಪಾರ್ಲಿಮೆಂಟಿನಲ್ಲಿ ಮೈಸೂರಿನ ಮಲೆನಾಡು ಪ್ರದೇಶದ ಅಭಿವೃದ್ಧಿಯನ್ನು ನಿಲ್ಲಿಸಲಾಗಿದೆಂದು ಆಹಾರ ಮಂತ್ರಿ ಕೆ. ಎಂ. ಮುನ್ಷಿಯವರು ಹೇಳಿದರು. ಕರ್ನಾಟಕವು ಆಹಾರದ ವಿಚಾರದಲ್ಲಿ ಸ್ವಾವಲಂಬಿಯಾಗಿರುವದಾದರೂ ಪ್ರಾಂತೀಯ ಸರಕಾರಗಳ ಆಹಾರ ಧೋರಣೆಯಿಂದ ಆಹಾರ ಕೊರತೆ ನಮಗಾಗುತ್ತಿರುವದನ್ನು ನಾವು ಅಲಕ್ಷಿಸುವಂತಿಲ್ಲ! ಮೈಸೂರಿನ ಹಲವು ಪ್ರದೇಶಗಳಲ್ಲಿ ಆಗಿಂದಾಗ್ಗೆ ಬರಗಾಲ ಬಂದಿರುವದು ನಮಗೆ ವಿದಿತ ವಿಚಾರ. ದ. ಕನ್ನಡದಂತಹ ಉಳಿತಾಯ ಪ್ರದೇಶಗಳಲ್ಲಿಯೂ ಆಹಾರ ಪರಿಸ್ಥಿತಿಯು ನಿಕೃಷ್ಟವಾಗಿದೆ-ಸಾಯುವವರೆಗೆ ಬದುಕಬೇಕೆಂಬ ಆಶೆ ಪ್ರತಿಯೊಬ್ಬರಿಗೂ ಇದ್ದದ್ದೇ. ಅಂತಲೇ ನಮ್ಮ ಜನ ದುಬಾರಿ ಬೆಲೆಕೊಟ್ಟು ಅಕ್ಕಿಕೊಂಡೋ, ಒಪ್ಪತ್ತೂಟ ಮಾಡಿಯೋ—ಗೆಡ್ಡೆಗೆಣಸು ತಿಂದೋ-ನರಕ ಸಮಾನಜೀವನ ನಡೆಸುತ್ತಿರುವರಾದರೂ ಬರಗಾಲದ "ಬಿಸಿ" ನಮ್ಮ ಜಿಲ್ಲೆಗೆ ಬಿದ್ದಿರುವುದಿಲ್ಲ! ಏಕೆಂದರೆ ಸರಕಾರೀ ಲೆಕ್ಕದಲ್ಲಿ ನಮ್ಮದು ಉಳಿತಾಯದ ಜಿಲ್ಲೆ! ಅಂದ ಮೇಲೆ ಅವರು ನಮ್ಮ ಯಥಾರ್ಥ ಚಿತ್ರವನ್ನು ಹೇಗೆ ಬಣ್ಣಿಸಿಯಾರು?

ಮೈಸೂರು ಪ್ರಾಂತವೂ ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಿಲ್ಲ! ಮಲೆನಾಡು ಪ್ರದೇಶದ ಪ್ರಶಸ್ತ ಪ್ರದೇಶವನ್ನು ಅಭಿವೃದ್ಧಿಗೊಳಿಸಿ ಹೆಚ್ಚು ಆಹಾರ ಬೆಳೆಸುವ ಕಾರ್ಯವನ್ನು ಕೇಂದ್ರ ಸರಕಾರವು ಮಾಡಬೇಕಿತ್ತು. ಮಾತ್ರವಲ್ಲ, ಮಲೆನಾಡಿನ ಅರಣ್ಯ ಸಂಪತ್ತನ್ನು ವನಮಹೋತ್ಸವ ಘಟಿಸುವ ಮುನ್ಷಿಯವರು ಸದುಪಯೋಗಗೊಳಿಸಬೇಕಿತ್ತು! ಆದರೆ ಅದು ಕರ್ನಾಟಕವೆಂಬ ದೃಷ್ಟಿಯಿಂದ ಅಲಕ್ಷಿಸಲ್ಪಟ್ಟಿದೆ. ಕೇಂದ್ರ ಸರಕಾರಕ್ಕೆ ಹೆಚ್ಚು ಖರ್ಚು ಬರುವದೆಂದು ಮಲೆನಾಡಿನ ಅಭಿವೃದ್ಧಿ ಕಾರ್ಯವನ್ನು ಬಿಟ್ಟು ಕೊಡಲಾಗಿದೆಯಂತೆ!

ಕರ್ನಾಟಕ ಪ್ರಶ್ನೆ ಬಂದಾಗಲೆಲ್ಲ ನಮ್ಮ ಮಂತ್ರಿಗಳಿಗೆ ಬೇರೆ ಬೇರೆ ತಾಪತ್ರಯಗಳೂ—ಆರ್ಥಿಕ ಮುಷ್ಕಿಲಿಗಳೂ ಮುಂದೆ ಬರುತ್ತವೆ. ಪಶ್ಚಿಮ ಕರಾವಳಿಯಲ್ಲಿ ಮಹಾಬಂದರ ರಚನೆಯ ಕುರಿತು ಕಮಿಟಿಗಳಾದವು-ವರದಿ ಹೋಯಿತು. ನೈಸರ್ಗಿಕ ಬಲವು ಮಲ್ಪೆಯ ಪ್ರಾಶಸ್ತ್ಯವನ್ನು ಎತ್ತಿ ಹಿಡಿಯುತ್ತದೆಂದಾಯಿತು, ಕಮಿಟಿಯ ಸದಸ್ಯರೂ ಅದನ್ನೇ ಶಿಫಾರಸು ಮಾಡಿತು. ಮೈಸೂರವರೂ ಸೈ ಎಂದರು. ಮುಖ್ಯಸ್ಥರ ಮಾತು ಬಹಳ ಗುಟ್ಟಿಂತೆ! ಆದರೆ ಸಹಸ್ರ, ಸಹಸ್ರ ಖರ್ಚು ಮಾಡಿ ಶೋಧ ನಡೆಸಿದ ಸಮಿತಿಯ ತೀರ್ಮಾನವಿನ್ನೂ ಹೊರಬೀಳಲಿಲ್ಲ? ಇದೇಕೆ ಹೀಗೆ? ಎಂದ ವಿಚಾರವಂತರಿಗೆ ಅಚ್ಚರಿಯಾಗಬಹುದು. ಆದರೆ ಇದಕ್ಕೆ ಮುಖ್ಯ ಕಾರಣ 'ಕರ್ನಾಟಕ' ಎಂಬ ಒಂದೇ ಅಲಕ್ಷ್ಯಭಾವ ಹೊರತು ಬೇರಿಲ್ಲ!

ಮದ್ರಾಸ ಪ್ರಾಂತದಲ್ಲಿ ಚಿಕ್ಕಪುಟ್ಟ ನೀರಾವರೀ ಯೋಜನೆಗಳೆಂದು ಸುಮಾರು 300 ಕ್ಕೂ ಮಿಕ್ಕಿ ಇರುವಾಗ ದ. ಕರ್ನಾಟಕದ ಪಾಲಿಗೆ ಒಂದೇ ಒಂದು ಯೋಜನೆ ಆಗಲಿಲ್ಲ. ಮಾತ್ರವಲ್ಲ ನಮ್ಮ ಜಿಲ್ಲೆಯಲ್ಲಿ ನೀರಾವರೀ ಯೋಜನೆಯನ್ನು ಕೈಗೊಳ್ಳುವಂತಾದರೆ ಉಳಿದೆಡೆಗಿಂತ ಉತ್ತಮವಾದ ಆಹಾರೋತ್ಪಾದನೆಯಾಗುವದರಲ್ಲಿ ಸಂದೇಹವೇ ಇಲ್ಲ. ಮಂಗಳೂರಿನ ಜನರು ಆನೆಗಾಲಿನಂತಹ ಅಸಹ್ಯ ರೋಗದಿಂದ ನರಳುತ್ತಿರುವಾಗ— ಈ ರೋಗ ಜನಜೀವನವನ್ನು ನರಕಸಮಾನವನ್ನಾಗಿ ಮಾಡುತ್ತಿರುವಾಗ—ನೀರ ಸರಬರಾಯಿ ಯೋಜನೆಗೆಂದು ಯೋಚಿಸಿದ್ದ ಯೋಜನೆಯಲ್ಲೇ ಉಳಿದಿದೆ ಇನ್ನೂ! ವಿದ್ಯುಚ್ಛಕ್ತಿ ಸರಬರಾಯಿಯ ಹಣೆಬರಹವೂ ಪ್ರಾಂತದ ಬೇರೆಡೆಗಳ ಅಭಿವೃದ್ಧಿ ಕಾರ್ಯಗಳು ಕಾರ್ಯರೂಪದಲ್ಲಿ ಬಂದಷ್ಟು ಶೀಘ್ರಗತಿಯಿಂದ ನಡೆಯುತ್ತಿಲ್ಲ!

ಕಾರವಾರ ಪ್ರದೇಶದಲ್ಲಿ ಖನಿಜ ಸಂಪತ್ತುಗಳಿವೆಯೆಂದು ಹೇಳಲಾಗುತ್ತಿದೆ. ಕಬ್ಬಿಣ, ಮೆಂಗನೀಸ್, ಮುಂತಾದ ಲೋಹಗಳು ಕಾರವಾರದಿಂದ 32 ಮೈಲು ದೂರದ ಕಾಯಿಗಾ ಹಳ್ಳಿಯ ಪ್ರದೇಶದಲ್ಲಿ ವಿಪುಲವಾಗಿ ದೊರಕಬಹುದೆಂದು ನಿರೀಕ್ಷಿಸಲಾಗಿದೆ. ಪ್ರಯತ್ನಪೂರ್ವಕವಾದ ಶೋಧ ನಡೆಸುವಂತಾದರೆ ಅಮೂಲ್ಯವಾದ ಖನಿಜ ಸಂಪತ್ತುಗಳು ದೊರಕಿ ಅದರಿಂದ ಕರ್ನಾಟಕದ ನಾನಾ ಬಗೆಯ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ!

ಈ ಮಹತ್ವದ ಸಂಗತಿಯನ್ನು ಲಕ್ಷಿಸಿಯೇ ಪೊನ್ನೆ ಕೆ. ಪಿ. ಸಿ. ಸಿಯು ಕೇಂದ್ರ ಸರಕಾರವು ಕರ್ನಾಟಕದ ಅಭಿವೃದ್ಧಿಯನ್ನು ಸಂಪೂರ್ಣ ಅಲಕ್ಷಿಸಿದೆಂದು ಗೊತ್ತುವಳಿಯೊಂದನ್ನು ಸ್ವೀಕರಿಸಿರಬೇಕು! ಆದರೆ ನಮ್ಮ ಮಂತ್ರಿವರ್ಯರು ಇದನ್ನೆಲ್ಲಿ ಲಕ್ಷಿಸಿಯಾರು? 'ಹೆಚ್ಚು ಆಹಾರ ಬೆಳೆಸಿರಿ' 'ವನಮಹೋತ್ಸವ' ಪ್ರಚಾರಗಳಿಗೆ ಲಕ್ಷ ಲಕ್ಷ ವ್ಯಯಿಸುವುದಕ್ಕೆ ಆರ್ಥಿಕ ದುಃಸ್ಥಿತಿ ಅಡ್ಡ ಬರಲಿಲ್ಲ—ಇಂಗ್ಲಂಡಿನ ಜೀಪು ಕಾರುಗಳಿಗಾಗಿ ಹಣ ವ್ಯಯ ಮಾಡುವುದಕ್ಕೆ ಹಣದಭಾವ ಬರಲಿಲ್ಲ—ಗೊಬ್ಬರದ ಅವ್ಯಾಪಾರದಲ್ಲಿ ಕೋಟಿಗಟ್ಟಲೆ ಕಳೆದುಕೊಂಡದ್ದು ವ್ಯರ್ಥವಲ್ಲ—ನೂತನ ಗೃಹಗಳ ರಚನೆಯಲ್ಲಿ ಕೈಸುಟ್ಟುಕೊಂಡದ್ದು ಅಪವ್ಯಯವಲ್ಲ--ವಿದೇಶಗಳಿಂದ ಆಹಾರ ತರಿಸಿಕೊಂಡು 25 ಕೋಟಿ ನಷ್ಟಕ್ಕೆ ಗುರಿಯಾದದ್ದು ಅಪ್ರಯೋಜಕವಲ್ಲ-- ಆದರೆ ಇಡಿಯ ದೇಶಕ್ಕೆ ಲಾಭವಾಗುವ ಅಭಿವೃದ್ಧಿಯ ಕಾರ್ಯವನ್ನು ಕರ್ನಾಟಕದಲ್ಲಿ ಕೈಗೊಂಡರೆ ಅದು ಅಪ್ರಯೋಜಕವೆನಿಸುತ್ತದೆ. ಆರ್ಥಿಕ ದುಃಸ್ಥಿತಿ ಹಿಮಾಚಲ ಬೆಟ್ಟಕ್ಕಿಂತಲೂ ಹಿರಿದಾಗುತ್ತದೆ.

ಮೇಲಿನ ಮಾತನ್ನು ಪ್ರಾಂತಾಭಿಮಾನದಿಂದ ನಾವು ಹೇಳುತ್ತಿಲ್ಲ. ಕಾಂಗ್ರೆಸು ಸರಕಾರ ಅಧಿಕಾರಕ್ಕೆ ಬಂದ ಮೇಲೆ ಉಳಿದ ಪ್ರದೇಶಗಳಲ್ಲಿ ಕೈಗೊಂಡ ಕಾರ್ಯಕ್ರಮದಂತೆ ಕರ್ನಾಟಕದ ಹಿತಚಿಂತನೆಯನ್ನೂ ಮಾಡಬೇಕಿತ್ತೆಂಬುದೇ ನಮ್ಮ ವಾದ. ಮದ್ರಾಸು ಪ್ರಾಂತದ ಕನ್ನಡ ಜಿಲ್ಲೆಗಳ ಪಾಡಂತೂ ಮಲತಾಯಿ ಮಕ್ಕಳ ಪಾಡಿನಂತೇ ಆಗಿದೆ- ಸಹಸ್ರಾರು ಯೋಜನೆಗಳು ರೂಪುಗೊಳ್ಳುತ್ತಿರುವಾಗ—ಕರ್ನಾಟಕದ ಪ್ರದೇಶದ ಪ್ರಾಕೃತಿಕ ಸಂಪತ್ತನ್ನಾದರೂ ಅಭಿವೃದ್ಧಿಗೊಳಿಸಬೇಡವೆ? ಬಂದರದ ಒಂದು ಪ್ರಶ್ನೆಯಲ್ಲಿ ಸ್ಥಳದ ಪ್ರಾಶಸ್ತ್ಯವನ್ನು ಹೇಳುವದಕ್ಕೂ ಸಮಿತಿಗೆ ಈ ಎರಡು ವರ್ಷಗಳಲ್ಲಿ ಆಗದೆ ಹೋಯಿತೇ? ಕೊಂಡಾಣದಲ್ಲಿ ಕಾರ್ಯ ಭರದಿಂದ ನಡೆಯುತ್ತಿರುವಾಗ ಅದೇ ಕಾಲದಲ್ಲಿ ನೇಮಕಗೊಂಡ ಉಪಸಮಿತಿಗೆ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರದ ನಿಶ್ಚಿತಾಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗದೆ ಹೋಯಿತೆ? ಇದನ್ನು ಸುವ್ಯಸ್ಥಿತ ರಾಜನೀತಿಯ ಕ್ರಮವೆಂದು ಹೇಳುತ್ತಾರೆಯೇ?

ಸ್ವಾತಂತ್ರ್ಯ ಹೋರಾಟದಲ್ಲಿ ರಾಜಕೀಯ ದೃಷ್ಟಿಯಿಂದಲೂ ಕರ್ನಾಟಕವು ಗಣ್ಯ ಸ್ಥಾನವನ್ನು ಪಡೆದದ್ದಾಗಿರುತ್ತದೆ. ಪರಿಸ್ಥಿತಿಯನ್ನು ಇಷ್ಟು ಕಾಲ ಸಹಿಸಿರುವದು ಕನ್ನಡಿಗರ ಸಹನಶೀಲ ಮನೋವೃತ್ತಿಯನ್ನು ವ್ಯಕ್ತಪಡಿಸುತ್ತದೆ. ಆದರೆ ಕೇಂದ್ರ ಸರಕಾರದ ನಮ್ಮ ನಾಯಕರು ಅವಕ್ಕೆ ಪ್ರತಿಯಾಗಿ ಕರ್ನಾಟಕದ ಜನತೆಯನ್ನು ಅಲಕ್ಷಿಸುತ್ತ ಬಂದದ್ದು ನಿಜವಾಗಿಯೂ ವಿಷಾದದ ಸಂಗತಿ!

ಲೋಕಾಂತ

ಕೊರಿಯಾ

ಕೊರಿಯಾ ಯುದ್ಧ ವಿರಾಮ ಮಾತುಕತೆಗಳು ಕಿಸಾಂಗ ತಟಸ್ಥ ಪ್ರದೇಶದ ದಕ್ಷಿಣ ತುದಿಯಲ್ಲಿರುವ ಪಾನಮುಂಜಾನದಲ್ಲಿ ಪುನಃ ಅಕ್ಟೋಬರ 10ಕ್ಕೆ ಆರಂಭವಾಗಲಿವೆಯೆಂದು ತಿಳಿದುಬರುತ್ತದೆ.

ಪರ್ಶಿಯಾದ ಮಾತುಕತೆ

ಪರ್ಶಿಯಾದ ಮಾತುಕತೆ ಭದ್ರತಾ ಮಂಡಳದಲ್ಲಿ ಚರ್ಚೆಗೆ ಬರುವದಿದ್ದು ಅದರಲ್ಲಿ ಭಾಗವಹಿಸಲು ಡಾ. ಮುಸಾದಿಕರು ನ್ಯೂಯಾರ್ಕಿಗೆ ಆಗಮಿಸಿರುವರು. ಬ್ರಿಟನು ಈಗಲೂ ಪರ್ಶಿಯಾದೊಡನೆ ಸಂಧಾನ ನಡೆಸುವದರ ಸಲುವಾಗಿ ಅಮೇರಿಕೆಯು ಒಳ್ಳೆಯ ಮಧ್ಯಸ್ಥಿಕೆತನದಿಂದ ವರ್ತಿಸುತ್ತಿದೆ. ಅಂತರಾಷ್ಟ್ರೀಯ ನ್ಯಾಯಾಲಯವು ಇತ್ತ ಆದೇಶವನ್ನು ಪರ್ಶಿಯವು ಒಪ್ಪಲೇ ಬೇಕೆಂದು ಒತ್ತಾಯಿಸಬೇಕೇ? ಅಥವಾ ಬೇರೆ ಉಪಾಯಗಳ ಮೂಲಕ ಭದ್ರತಾ ಮಂಡಳದಲ್ಲಿ ಚರ್ಚೆಗೆ ಬರಲೇನೆ ಬಗೆಹರಿಸಬಹುದೇ? ಎಂಬ ಸವಾಲೋಚನೆಗಳೂ ನಡೆಯುತ್ತಲಿವೆ.

ಪಾಕ್ ನೀತಿ!

ಪಾಕಿಸ್ತಾನಿಗಳು ಅನಸಾರ ಮತ್ತು ರಾಷ್ಟ್ರೀಯ ಸಂರಕ್ಷಣ ನಿಧಿಗೆ ಹಿಂದುಗಳಿಂದ ಬಲಾತ್ಕಾರವಾಗಿಯೂ ಒತ್ತಾಯಪೂರ್ವಕವಾಗಿಯೂ ಚಂದಾ ಕೇಳುತ್ತಲಿದ್ದು ಅದರ ವಿಚಾರಣೆ ನಡೆಸಬೇಕೆಂದು ಭಾರತ ಸರಕಾರ ಪಾಕ್ ಸರಕಾರಕ್ಕೆ ತಿಳಿಸಿದೆ.

ನೀರಿನ ತಂಟೆ

ಪಾಕಿಸ್ತಾನದಿಂದ ಭಾರತಕ್ಕೆ ಹರಿಯುವ ಸತಲಜ ನದೀ ನೀರನ್ನು ಪಾಕಿಸ್ತಾನಕ್ಕೇನೆ ಉಪಯೋಗಿಸಿಕೊಳ್ಳುವದಕ್ಕೆ ಪಾಕ್ ಸರಕಾರವು ಕಾಲುವೆಯೊಂದನ್ನು ನಿರ್ಮಿಸುತ್ತಲಿದೆ. ವಿಭಜನೆಯಾದಂದಿನಿಂದಲೂ ಈ ಪ್ರಯತ್ನ ನಡೆದಿದೆ. ಭಾರತ ಸರಕಾರವು ಇದರಿಂದ ಉದ್ಭವಿಸುವ ಗಂಡಾಂತರಗಳನ್ನು ಎದುರಿಸಲು ಮುಂಜಾಗ್ರತೆ ವಹಿಸಿದೆಯೆಂದು ತಿಳಿಯುತ್ತದೆ.

ಇಥಿಯೋಪಿಯ ಸರಕಾರದ ದಾನ

ಇಥಿಯೋಪಿಯಾ ಸರಕಾರವು ಭಾರತದ ಬರಗಾಲ ಪೀಡಿತ ಜನರಿಗೆ ಪುಕ್ಕಟೆಯಾಗಿ ಹಂಚಲು 500 ಟನ್ ಆಹಾರಧಾನ್ಯವನ್ನು ದಾನವಾಗಿ ಕೊಟ್ಟಿರುತ್ತದೆ.

ಸ್ಟಾಲಿನ್ನರ ಬಾಂಬು

ರಶಿಯದೊಡನೆ ಅಣುಬಾಂಬಿದೆಯೆಂತಲೂ ಅದು ಅದನ್ನು ದೇಶದ ವಿನಾಶಕ್ಕೆ ಉಪಯೋಗಿಸುವುದಿಲ್ಲವೆಂದೂ ಅಮೇರಿಕೆಯು ಉಪಯೋಗಿಸಿದರೆ ಅದಕ್ಕೆ ಪ್ರತಿಯಾಗಿ ಉಪಯೋಗಿಸುವಷ್ಟು ಅಟಂಬಾಂಬುಗಳು ತನ್ನಲ್ಲಿವೆಯೆಂದು ಸ್ಟಾಲಿನ್ನರು ಹೇಳಿರುವರು.

ದಲಿತ ವರ್ಗದಿಂದ ಘೋಷಣೆ—

ಅ. ಭಾ. ದಲಿತ ವರ್ಗಗಳ ಮಹಾಮಂಡಲವು ಚುನಾವಣಾ ಘೋಷಣೆ ಪತ್ರವನ್ನು ಹೊರಡಿಸಿದ್ದು ಸಂಪತ್ತಿ ಸಂಯಮನ ಹಾಗೂ ಔದ್ಯೋಗಿಕ ಮತ್ತು ಒಕ್ಕಲತನದ ಉತ್ಪಾದನ ಹೆಚ್ಚಿಸುವುದೇ ತನ್ನ ಗುರಿಯೆಂದು ಸ್ಪಷ್ಟೀಕರಿಸಿದೆ.

ಮಂತ್ರಿ ರೆಡ್ಡಿಯವರ ಅಭಿಪ್ರಾಯ

ರಜಿಸ್ಟರ್ಡ್ ಮತ್ತು ಮಾನ್ಯತೆಹೊಂದಿದ ಸಂಸ್ಥೆ, ಸಭೆಗಳು ಏರ್ಪಡಿಸುವ ಸಂಗೀತ ನೃತ್ಯ ಮೊದಲಾದ ಮನರಂಜನೆಗಳನ್ನು ಮನರಂಜನ ಕರದಿಂದ ಮುಕ್ತಗೊಳಿಸಲಾಗುವದೆಂದು ಮಂತ್ರಿ ಗೋಪಾಲ ರೆಡ್ಡಿಯವರು ಸಾರಿದರು.

ವಿಮಾನಾಪಘಾತದಿಂದ 5 ಜನರ ಮರಣ

ಹಿಂದಿ ವಿಮಾನ ದಳದ ಡಕೋಟಾ ವಿಮಾನವು ಪೇಶಾವರ ಹತ್ತಿರ [illegible]ದ್ದು 5 ಜನರು ಮೃತಪಟ್ಟಿರುವರೆಂದು ತಿಳಿದುಬರುತ್ತದೆ. ಅದರಲ್ಲೊಬ್ಬ ವಿಮಾನಾಧಿಕಾರಿಯೂ ಇದ್ದರೆಂದು ತಿಳಿಯುತ್ತದೆ.

ನೆಹ್ರೂರವರ ಚುನಾವಣಾ ಸಂಚಾರ.

ಪ್ರಧಾನ ಮಂತ್ರಿ ಜವಾಹರಲಾಲ ನೆಹ್ರೂರವರು ಚುನಾವಣಾ ಪ್ರಚಾರಕ್ಕಾಗಿ ದೇಶಾದ್ಯಂತ ಸಂಚರಿಸುವರಾಗಿ ತಿಳಿದುಬರುತ್ತದೆ. ಅಕ್ಟೋಬರಾಂತ್ಯದೊಳಗಾಗಿ ಮುಂಬಯಿ ಪ್ರಾಂತ್ಯದಲ್ಲಿ ಪ್ರಚಾರ ಕಾರ್ಯ ಕೈಗೊಳ್ಳಬಹುದು.

ಮದ್ರಾಸಕ್ಕೆ ಆಹಾರ

ಬರ್ಮಾದಿಂದ ಮದ್ರಾಸಕ್ಕೆ 7095 ಟನ್ ಅಕ್ಕಿಯು ಬಂದಿರುತ್ತದೆ. ಅಮೇರಿಕೆಯಿಂದ 3000 ಟನ್ ಗೋಧಿಯು ಬಂದಿದ್ದು ಅದರಲ್ಲಿ 1000 ಟನ್ ಗೋಧಿಯು ಮದ್ರಾಸಿನ ಪಾಲಿಗೆ ಬರುವದು. ಉಳಿದ 2000 ಟನ್ ಮೈಸೂರಿಗೆ ಹಂಚಲಾಗುವದಂತೆ!

ಉಡುಪಿ

ಕೊನೆಯ ಪ್ರಕಟನೆ—1950ನೆ ಇಸವಿ ರಿಪ್ರಸೆಂಟೇಶನ್ ಒಫ ದಿ ಪೀಪಲ್ಸ್ (ಮತದಾರ ಪಟ್ಟಿತಯಾರಿಸುವ ಬಗ್ಗೆ) ರೂಲ್ 1ರ ಮೇರೆಗೆ ಉಡುಪಿ ಮತ್ತು ಬ್ರಹ್ಮಾವರ ಎಸೆಂಬ್ಲಿ ಕ್ಷೇತ್ರದ ಮತದಾರರ ಪಟ್ಟಿಯು ತಾ 6-10-51ರಲ್ಲಿ ಕೊನೆಯದಾಗಿ ಪ್ರಕಟಿಸಲ್ಪಟ್ಟಿರುವುದೆಂದು ಸ್ಥಳೀಯ ಇಲೆಕ್ಟೊರಲ್ ರಿಜಿಸ್ಟ್ರೇಶನ್ ಅಫೀಸರರು ತಿಳಿಸುತ್ತಾರೆ.

ಮಿತ್ರಗೊಬ್ಬರ ಸಪ್ತಾಹವು—ಉಡುಪಿಯಲ್ಲಿ ಇದೇ ತಾ 2ರಲ್ಲಿ ಪ್ರಾರಂಭವಾಗಿ ತಾ 8ರಲ್ಲಿ ಕೊನೆಗೊಂಡಿತು. ಇಲ್ಲಿನ ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಸಾರ್ವಜನಿಕ ಸಭೆಯು ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಹೆಲ್ತ್ ಆಫೀಸರ್ ಶ್ರೀ ರಾಮಚಂದ್ರ ರಾಯರು ಸಪ್ತಾಹದ ಮಹತ್ತ್ವವನ್ನು ವಿವರಿಸಿ ಭಾಷಣಮಾಡಿದರು. ಅಧ್ಯಕ್ಷರು ಸದ್ಯದ ಆಹಾರ ಕೊರತೆಯ ಕುರಿತು ಪ್ರಸ್ತಾಪಿಸಿ ಕೃಷಿಕ, ರೈತ ಬಂಧುಗಳು ಮಿತ್ರಗೊಬ್ಬರವನ್ನು ಉಪಯೋಗಿಸಿ ಆಹಾರ ಧಾನ್ಯಗಳ ಜಾಸ್ತಿ ಉತ್ಪತ್ತಿಯ ಕಡೆಗೆ ಗಮನ ಕೊಡಬೇಕೆಂದರು. ಮುನಿಸಿಪಲ್ ಕಮಿಶನರ್ ಶ್ರೀ ಎ. ಎಸ್. ಡಿ. ಸೋಜರು ಧನ್ಯವಾದಗಳನ್ನರ್ಪಿಸಿದರು.

ಕುಷ್ಠರೋಗ ನಿವಾರಣಾ ಸಪ್ತಾಹವು ತಾ. 8ರಲ್ಲು ಮಧ್ಯಾಹ್ನ ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಪ್ರಾರಂಭವಾಯಿತು. ಮದ್ರಾಸು ಸರಕಾರದ ಡೈರೆಕ್ಟರ್ ಒಫ್ ಮೆಡಿಕಲ್ ಸರ್ವಿಸಿನ ಡಾ। ಕೆ. ವಾಸುದೇವ ರಾಯರು ಸಪ್ತಾಹವನ್ನು ಉದ್ಘಾಟಿಸುತ್ತಾ ಕುಷ್ಠರೋಗ ನಿವಾರಣಾ ಕಾರ್ಯದಲ್ಲಿ ಜನತೆಯು ಮುಂದಾಗಿ ಬಂದು ಸರಕಾರೀ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದರು. ಸಭಾಧ್ಯಕ್ಷತೆಯನ್ನು ವಹಿಸಿದ ಶ್ರೀ ಟಿ. ಎಸ್. ಜಗದೀಶನ್ ಅವರು ಮಾತನಾಡುತ್ತಾ ಉಡುಪಿಯ ಜನತೆಯು ಬುದ್ಧಿಯಲ್ಲಿಯೂ ಸಂಪತ್ತಿನಲ್ಲಿಯೂ ಗಣನೀಯ ಸ್ಥಾನ ಪಡೆದಿರುವುದು ಸಂತೋಷದ ವಿಷಯವೆಂದು ಹೇಳಿ ಅವರ ಸ್ಥಾನಮಾನಗಳನ್ನು ಕುಷ್ಠರೋಗ ಪೀಡಿತ ಬಡಜನ ಬಂಧುಗಳನ್ನು ಉದ್ಧಾರ ಮಾಡುವುದರಲ್ಲಿ ವಿನಿಯೋಗಿಸಬೇಕೆಂದು ವಿನಂತಿಸಿದರು. ಡಾ। ಎನ್. ವಿಜಯ ರಾಘವನ್ ಮತ್ತು ಮಂಗಳೂರಿನ ಡಾ। ಕ್ರೈಲೊ ಅವರು ಕುಷ್ಠರೋಗ ನಿವಾರಣೆಯ ಕುರಿತು ಮಾತನಾಡಿದರು. ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಂ ಅವರು ಪಾರಿತೋಷಕ ವಿತರಣೆ ಮಾಡಿದರು. ಸಭಾರಂಭದ ಪೂರ್ವದಲ್ಲಿ ಶ್ರೀ ಅಧಮಾರು ಸ್ವಾಮಿಗಳವರು ಧ್ವಜಾರೋಹಣ ಮಾಡಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನಿತ್ತ ಬಳಿಕ ಸಪ್ತಾಹ ಪ್ರಾರಂಭೋತ್ಸವವು ಕೊನೆಗೊಂಡಿತು. ಈದಿನ ಬೆಳಗ್ಗೆ ಸ್ಥಳೀಯ ಕಮಿಟಿಯ ಕಡೆಯಿಂದ ನೂರಾರು ಅತಿಥಿಗಳಿಗೆ ಉಪಾಹಾರವಿತ್ತರು.

ಪ್ರಜಾಪಕ್ಷ ಸ್ಥಾಪನೆ—ಪ್ರಜಾಪಕ್ಷದ ಮುಂದಾಳುಗಳಾದ ಶ್ರೀಗಳಾದ ಕೆ. ಆರ್. ಕಾರಂತ ಮತ್ತು ಕೆ. ಬಿ. ಜಿನರಾಜ ಹೆಗ್ಗಡೆಯವರು ತಾ. 8ರಂದು ಸಂಜೆ ಕೂಡಿದ ಸಭೆಯಲ್ಲಿ ಮಾತನಾಡುತ್ತಾ ಪ್ರಜಾಪಕ್ಷ ಸ್ಥಾಪನೆ ಏತಕ್ಕಾಗಬೇಕು. ಈಗಿನ ಕಾಂಗ್ರೆಸ್ ಆಡಳಿತದಿಂದ ಜನತೆಗಾದ ಅಪರಾಧಗಳಾವುವು ಇತ್ಯಾದಿ ವಿಷಯಗಳನ್ನು ವಿವರವಾಗಿ ವಿವರಿಸಿದರು. ಬಳಿಕ ಉಡುಪಿ ಮತದಾರ ಕ್ಷೇತ್ರಕ್ಕೆ ಪ್ರಜಾಪಕ್ಷ ಶಾಖೆಯೊಂದನ್ನು ಸ್ಥಾಪಿಸುವುದಾಗಿ ನಿರ್ಧಾರವಾಯಿತು. ಶ್ರೀಗಳಾದ ಬಿ. ವಾಸುದೇವ ರಾವ್, ಡಾ। ಪಿ. ಜಿ. ಆಚಾರ್, ಡಾ। ಡಬ್ಲ್ಯು. ಎ. ಸಂಪತ್, ಟಿ. ವಾಸುದೇವನ್, ಸೆಬಾಸ್ಟಿಯನ್ ಮಾರ್ಟಿಸ್, ಅನಂತ ಕೃಷ್ಣಾಚಾರ್ಯ, ಬಿ. ಎಸ್. ಲೂವಿಸ್ ಕಲ್ಯಾಡಿ ರಾಮರಾವ್, ಯು. ಎಮ್. ಇಬ್ರಾಹಿಮ್ ಸಾಹೇಬ ಕೆ. ಎಸ್. ಐತಾಳರಿರುವ ಎಡ್‌ಹಾಕ್ ಕಮಿಟಿಯ ರಚನೆಯಾಯಿತು

ಸರಕಾರಿ ನೌಕರರ ಮೇಲಣ ಸುಳ್ಳು ದಾವೆಗಳನ್ನು— ಪ್ರತಿಭಟಿಸುವರಿ ಸರಕಾರೀ ಕಡೆಯ ವಕೀಲರ ಸಹಾಯವನ್ನು, ಆಪಾದನೆಗೊಳಗಾದ ಸರಕಾರಿ ನೌಕರರಿಗೆ ಕೊಡಲಾಗುವುದೆಂದು ಮದ್ರಾಸು ಸರಕಾರದ ಪ್ರಕಟಣೆಯೊಂದು ಹೊರಟಿದೆ. ವಿನಾ ಕಾರಣದಿಂದ ಸರಕಾರಿ ನೌಕರರ ಮೇಲೆ ಲಂಚಗೂಳಿತನ ಮೊದಲಾದ ಆರೋಪಗಳನ್ನು ಹೊರಿಸಿ ಅವರಿಗೆ ಉಪದ್ರವೀಯುವ ಚಾಳಿಯನ್ನು ತಡೆಗಟ್ಟುವುದೇ ಇದರ ಉದ್ದೇಶವಾಗಿದೆ. ಜಿಲ್ಲೆಯ ಕೆಳನೌಕರರಿಗೆ ಜಿಲ್ಲಾ ಕಲೆಕ್ಟರರೂ, ಜಿಲ್ಲಾಧಿಕಾರಿಗಳಾದರೆ ಅವರ ಮೇಲಿನ ಅಧಿಕಾರಿಗಳೂ ಸರಕಾರಿ ವಕೀಲ ತನ್ನೀಯುವ ಅಧಿಕಾರಿಗಳಾಗಿರುತ್ತಾರೆ.

ಕಸ್ತೂರಿಬಾ ಮೆಡಿಕಲ್ ಕಾಲೇಜು, ಉಡುಪಿ—ಈ ಕಾಲೇಜಿನ ಉದ್ಘಾಟನಾ ಸಮಾರಂಭಕ್ಕಾಗಿ ಸರ್ವಸಿದ್ಧತೆಗಳೂ ಆಗಿರುವಾಗ, ಅಕಸ್ಮಾತ್ 1916ನೆಯ ಇಸವಿಯಲ್ಲಿ ಪಾಸಾದ ಮೆಡಿಕಲ್ ಆಕ್ಟಿನ ನಿಬಂಧನೆಯಂತೆ ಸರಕಾರದ ಅನುಮತಿ ಇಲ್ಲದೆ, ಅಥವಾ ವಿಶ್ವವಿದ್ಯಾನಿಲಯದ ಅಂಗೀಕೃತವಿಲ್ಲದೆ ಕಾಲೇಜನ್ನು ನಡೆಸಕೂಡದೆಂಬ ವಿಷಯ ಗೋಚರಕ್ಕೆ ಬಂದುದರಿಂದ ಕಾಲೇಜನ್ನು ತೆರೆಯಲು ಪ್ರಕೃತ ಅನುಕೂಲವಿಲ್ಲದೆ ಮುಂದೆ ಹಾಕಬೇಕಾಯಿತು ಎಂದು ತಿಳಿಯುತ್ತೇವೆ. ಜಾಗ, ಕಟ್ಟಡ, ಲೆಬೋರೇಟರಿ ಇವುಗಳೆಲ್ಲ ಸಿದ್ಧವಾಗಿರುವಾಗ, ಬೇಕಾದುದಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಮುಂದೆಬಂದಿರುವಾಗ, ಅನುಭವದ ಪದವಿ ಪಡೆದ ಪ್ರೊಫೆಸರರೂ ನೇಮಕಕ್ಕಾಗಿ ಅಪೇಕ್ಷಿಸಿದ್ದಿರುವಾಗ, ಇದೊಂದು ಕಾನೂನಿನಿಂದ ಕಾಲೇಜು ಮುಂದುವರಿಸಬೇಕಾಗಿ ಬಂದುದರಿಂದ ಜನರಲ್ಲಿ ಅತೀವ ನಿರುತ್ಸಾಹ ಉಂಟಾಗಿದೆ. ಈ ಕಾನೂನಿನಲ್ಲಿ ಡಿಗ್ರಿಕೊಡುವ ಅಧಿಕಾರವನ್ನು ಯಾವುದೇ ಯೋಗ್ಯ ಸಂಸ್ಥೆಗೆ ಒಪ್ಪಿಸಲು ಪ್ರಾಂತೀಯ ಸರಕಾರಕ್ಕೆ ಅನುಮತಿ ಇರುವುದರಿಂದ, ಸಾರ್ವಜನಿಕ ಸಂಸ್ಥೆ ಎಂದೆನಿಸಿಕೊಂಡಿರುವ ಎಕೆಡಮಿ ಆಫ್ ಜನರಲ್ ಎಜ್ಯುಕೇಶನ್‌ಗೆ ಮದ್ರಾಸು ಸರಕಾರವು ಈ ಅಧಿಕಾರವನ್ನು ಕೊಡುವುದರಲ್ಲಿ ನ್ಯಾಯವಿದೆ. ಇದಕ್ಕಾಗಿ ಪ್ರಾಂತೀಯ ಸರಕಾರವನ್ನೂ, ಕೇಂದ್ರ ಸರಕಾರವನ್ನೂ ಎಕೆಡಮಿಯ ಚಾನ್ಸಲರರಾದ ಡಾ। ಮಾಧವ ಪೈಗಳು ಭೇಟಿಯಾಗಲಿದ್ದಾರೆಂದೂ ಅಲ್ಲದೆ ಈ ಕಾಲೇಜಿನ ಅಂಗೀಕಾರ ಕರ್ನಾಟಕ ವಿಶ್ವವಿದ್ಯಾಲಯದವರಿಂದ ದೊರಕಿಸಿಕೊಳ್ಳುವ ಪ್ರಯತ್ನವನ್ನು ಮಾಡಲಿದ್ದಾರೆಂದೂ ಈ ದಿನ ನಡೆದ ಪತ್ರಿಕಾ ವ್ಯವಸಾಯಿಗಳ ಸಭೆಯಲ್ಲಿ ತಿಳಿಸಿದರು. ಡಾ। ಪೈಗಳ ಈ ಕಾರ್ಯದಲ್ಲಿ ಜಯವು ದೊರೆಯಲೆಂದು ನಾವು ಹಾರೈಸುತ್ತೇವೆ.

ಉಡುಪಿಯ ಕರ್ನಾಟಕ ಸಂಘದ ಸಾಹಿತ್ಯೋತ್ಸವ

ಈಗ್ಗೆ ಆರು ವರುಷಗಳಿಂದ ಉಡುಪಿಯ ಕರ್ನಾಟಕ ಸಂಘವು ನಡೆಯಿಸುತ್ತಿದ್ದ ಸಾಹಿತ್ಯೋತ್ಸವವು ಈ ಬಾರಿ ಕೆಲವು ಲೋಪದೋಷಗಳಿಂದ ಯುಕ್ತವಾದರೂ, ಸುಸೂತ್ರವಾಗಿ, ವಿಜೃಂಭಣೆಯಿಂದ ಜರಗಿತೆಂದೇ ಹೇಳಬೇಕು. ಉಡುಪಿಯ ಜನತಾ ಭವನವು ದೊರೆಯದ ಕಾರಣ ಉತ್ಸವವು ಸಂಸ್ಕೃತ ಕಾಲೇಜಿನ ಚಪ್ಪರದಲ್ಲಿ ಒಕ್ಟೋಬರ 1ರಂದು ಆರಂಭವಾಯಿತು. ಅಂದು ಸಂಘದ ಅಧ್ಯಕ್ಷರಾದ ಪಿ. ನಾರಾಯಣ ಅಯ್ಯಂಗಾರರು ಅಧ್ಯಕ್ಷತೆ ವಹಿಸಿದ್ದರು. ವಿ. ಎಸ್. ಕುಡ್ವಾ ಅವರು ಉತ್ಸವವನ್ನು ಉದ್ಘಾಟಿಸುತ್ತಾ ಸ್ಥಳ ಬದಲಾವಣೆಯನ್ನು ಸಂಘದ ಮೇಲೆ ಅನಾವಶ್ಯಕವಾಗಿ ಹೇರಿದ ಜಿಲ್ಲಾ ಬೋರ್ಡಿನ ಧೋರಣೆಯನ್ನು ಸ್ವಲ್ಪದರಲ್ಲಿ ಟೀಕಿಸಿ, ಉತ್ಸವವನ್ನು ಉದ್ಘಾಟಿಸಲು ತನಗೆ ಆನಂದವಾಗುವುದೆಂದರು. ಮಣಿಪಾಲದ ಶ್ರೀ ಎ. ಎಸ್. ರಾಮಕೃಷ್ಣರು ಡಿ.ವಿ.ಜಿಯವರ 'ಸಾಹಿತ್ಯ ಶಕ್ತಿ' ಎಂಬ ಗ್ರಂಥವನ್ನು, ಸೋದಾಹರಣವಾಗಿ ವಿಮರ್ಶಿಸಿದ ತರುವಾಯ ಅಂದಿನ ಮುಖ್ಯ ಉಪನ್ಯಾಸಕರಾದ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ಕವಿ ಮುದ್ದಣ್ಣನ ಕುರಿತು ರಸವತ್ತಾಗಿ ಸುದೀರ್ಘವಾಗಿ ಭಾಷಣಮಾಡಿದರು. ಎರಡನೆಯ ದಿನ ಬರಬೇಕಾಗಿದ್ದ ಈರ್ವರು ಉಪನ್ಯಾಸಕರು ನಿರಾಸೆಗೊಳಿಸಿದುದರಿಂದ ಮು. ಗ್ರಾ. ಮ. ಕಾಲೇಜಿನ ಕರ್ನಾಟಕದ ಪ್ರಾಧ್ಯಾಪಕರಾದ ಶ್ರೀ ಕೆ. ಬಿ. ರಾಮಕೃಷ್ಣರಾಯರು ಕವಿಂದ್ರ ರವೀಂದ್ರರ ಸಾಹಿತ್ಯದರ್ಶನವನ್ನು ತಮ್ಮ ಸ್ವಾನುಭವ ಪೂರ್ಣವೂ, ಭಾವನಾ ಪೂರಿತವೂ ಆದ ಶೈಲಿಯಲ್ಲಿ ವಿವರಿಸಿದರು. ಅಂದಿನ ಅಧ್ಯಕ್ಷರಾದ ಎಂ. ಆರ್. ಶ್ರೀ ಅವರು ಹಂಪೆಯ ಕವಿಯ ಭಕ್ತಿಮಾರ್ಗವನ್ನು ಪಂಡಿತ ಪಾಮರ ರಂಜಕವಾಗುವಂತೆ ವಿಶ್ಲೇಷಿಸಿದರು. ಮೂರನೆಯದಿನ, ಅಂದರೆ ತಾ ೯ರಂದು ಸಂಘವು ಶ್ರೋತೃಗಳಿಗೆ ಸಾಹಿತ್ಯದ ರಸದೂಟವನ್ನೇ ಒದಗಿಸಿತು. ಕೋಲಾರದ ಪ್ರೊಫೆಸರ್ ರಾಘವಾಚಾರ್ಯರು ಸಾಹಿತ್ಯ ಮತ್ತು ಧರ್ಮ ಎಂಬುದನ್ನಾರಿಸಿ ಯಾವ ಸಾಹಿತ್ಯದಲ್ಲಿ ಧರ್ಮದೃಷ್ಟಿ ಇದೆಯೋ, ಚಿರಂತನ ಸೌಂದರ್ಯದ ಸೃಷ್ಟಿ ಇದೆಯೋ, ಅದೇ ಅಮರ ಸಾಹಿತ್ಯವೆಂದೂ, ವಸ್ತುವಾದವು ಬರಿಯ ಪಟ್ಟಣವೆಂದೂ ಹೇಳಿ ರಾಮಾಯಣ, ಮಹಾಭಾರತ, ಬೈಬಲ್ ಕೊರಾನುಗಳ ಸಾಹಿತ್ಯ ಸೃಷ್ಟಿಯ ಕಡೆಗೆ ಕೈತೋರಿದರು. ಅಧ್ಯಕ್ಷರಾದ ಶ್ರೀ ಎ. ಎನ್. ಮೂರ್ತಿರಾಯರು ಶೇಕ್ಸ್‌ಪಿಯರ್ ನಾಟಕಗಳಲ್ಲಿ ಕಾಣುವ ಸಮಗ್ರ ದೃಷ್ಟಿಯನ್ನು, ಅಲ್ಲಿ ಕಂಡುಬರುವ ಹಲಬಗೆಯ ವ್ಯಕ್ತಿ ಚಿತ್ರಣವನ್ನು, ಮನುಷ್ಯ ವ್ಯಾಪಾರದ ವರ್ಣನೆಗಳನ್ನು ವಿವರಿಸುತ್ತ ಭಾರತೀಯರ ಎರಡು ಮಹಾಕಾವ್ಯಗಳನ್ನು ಹೊರತುಪಡಿಸಿದರೆ ಶೇಕ್ಸ್‌ಪಿಯರನಿಂದ ಅದಷ್ಟು ಉದಾತ್ತೀಕರಣ ಬೇರೆ ಯಾವ ಕವಿಯಿಂದಲೂ ಕಾವ್ಯದಿಂದಲೂ ಆಗಲಾರದು ಎಂದು ತಮ್ಮ ಲೀಲಾಜಾಲವಾದ ರಸಮಯ ಶೈಲಿಯಲ್ಲಿ ವರ್ಣಿಸಿದರು. ಅದಕ್ಕೆ ಮೊದಲು ಶ್ರೀ ಟಿ ಅನಂತ ಪೈ ಅವರು ನಮ್ಮ ಸರಕಾರವು ಹೊರಡಿಸಿದ ಪಂಚವಾರ್ಷಿಕ ಯೋಜನೆಯನ್ನು ವಿಮರ್ಶಿಸುತ್ತಾ ಕರ್ನಾಟಕಕ್ಕೆ ಅದರಲ್ಲೂ ನಿಮ್ಮ ಜಿಲ್ಲೆಗೆ ಈ ಯೋಜನೆಯಿಂದ ಯಾವ ಉಪಯೋಗವೂ ಇಲ್ಲ ಎಂಬ ತೀರ್ಮಾನಕ್ಕೆ ತಮ್ಮ ಸುಲಭ ಕನ್ನಡ ಶೈಲಿಯ ಸಭಿಕರನ್ನು ಒಯ್ದರು. ಕೌಲಗಿ ಶೇಷಾಚಾರ್ಯರು ರಾಮಾಯಣದ ಕುರಿತು ಮಾತಾಡಿದರು. ನಾಲ್ಕನೆಯ ದಿನ ಶ್ರೀ ಬೆಳ್ಳೆ ರಾಮಚಂದ್ರರಾಯರು ಕಲಿಯುಗದಲ್ಲೂ ಕಲೆ ಎಂಬ ವಿಷಯವಾಗಿಯೂ ಸೇಡಿಯಾಪು ಅವರು ಗದಾಯುದ್ಧ ಮಹಾಕಾವ್ಯದ ಕುರಿತು ಉಪನ್ಯಾಸ ಮಾಡಿದರು. ಬನ್ನಂಜೆ, ಶಂಕರಭಟ್ಟ, ಕೆದಿಲಾಯ, ಕುಮಾರ ಸ್ವಾಮಿ ಮೊದಲಾದವರು ಕನ್ನಡ ಕಾವ್ಯ ಕಾರ್ಯ ಚರ್ಚೆ ನಡೆಯಿಸಿದರು, ನಾಲ್ಕುದಿನ ಶ್ರೀನಿವಾಸ್ ರಾವ್, ಶ್ರೀ ರಮಣಾಚಾರ್ಯ ಮುಂತಾದವರ ಗೀತಕಾವ್ಯ ವಾಚನಗಳದ್ದವು, ಕೊನೆಯದಿನ [illegible] ಅವರ ಹಸ್ತದಿಂದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಕೊಡಲಾಯಿತು.

ಮನರಂಜನೆ ಕಾರ್ಯಕ್ರಮಗಳನ್ನು ಸೇರಿಸಿದ್ದರಿಂದ ಜನಸಾಮಾನ್ಯರಿಗೆ ಈ ಸಲ ಬಹಳ ತೃಪ್ತಿಯಾಗಲಿಲ್ಲವಾದರೂ, ಸಾಹಿತ್ಯದ ಉತ್ಸವ ಯಶಸ್ವಿಯಾಗಿಯೇ ಜರಗಿತೆಂದು ಹೇಳಬಹುದು. ಸಂಘದ ಕೆಲಸ ಹೀಗೆಯೇ ಮುನ್ನಡೆಯಲಿ ಎಂದು ಹಾರೈಸುವೆವು.

PUBLIC NOTICE

All take notice that the Commissioner C. Abdulla, Advocate, Kasaragod appointed as the Commissioner in O. S. No 387/47 on the file of the Kasaragod District Munsiff Court will sell by public auction the garden in R. S. 82/11 of Arikadi village with the tiled house thereon in Commissioner's Office at Kasaragod on 4-11-1951 at 11 A. M.

Conditions of the Sale:

1. The upset price of the garden with the tiled house thereon is fixed at Rs. 1000/- (One thousand) only.
2. 25% of the purchase money will have to be paid by purchaser to the Commissioner immediately before the bid is accepted and the balance within 14 days from the date of sale to the Commissioner. If the purchaser fails to pay the balance amount, the amount already paid will be forfeited and he will be liable for all loss incurred at a resale.
3. The purchaser of the property will be entitled to take delivery of the property with the house after the final decree.

(Sd) **C. Abdulla**,
Commissioner.

Kasaragod; 8-10-'51

ನಡಿಯುವ ಚಿತ್ರ

ರಣಜಿತ್‌ರವರ ನೀತಿಪರ ಸಾಮಾಜಿಕ ಚಿತ್ರ.

ಗುಣ ಸುಂದರಿ

ನಿರೂಪ ರಾಯ್, ಮನೋಹರದೇಸಾಯಿ.

ತಾ. 12 10-51ರಿಂದ

ಬೊಂಬೇ ಟಾಕೀಸಿನವರ

ಮಹಲ್

ಅಶೋಕ್ ಕುಮಾರ್, ಮಧುಬಾಲ,

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಹೊಸಕೆರೆ ಚಿದಂಬರಯ್ಯನವರಿಂದ
ಅನುವಾದಿಸಲ್ಪಟ್ಟ ಗೀತೆಯ
ಸಮೂಲ ಭಾಷಾಂತರ.

ಗೀತೆಯ ಕೈಗನ್ನಡಿ

ಪ್ರತಿಯೊಬ್ಬನೂ ಓದತಕ್ಕ
ಪವಿತ್ರ ಗ್ರಂಥ.

ಬೆಲೆ. 0—12—0

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಕಾಂಗ್ರೆಸ ಉಮೇದ್ವಾರರು:– ನಮ್ಮ ಜಿಲ್ಲೆಯಿಂದ ಮದ್ರಾಸ್ ಎಸೆಂಬ್ಲಿಗೆ ಕಾಂಗ್ರೆಸ್ ಟಿಕೇಟಿನ್ನಪೇಕ್ಷಿಸಿ ಅರ್ಜಿ ಮಾಡಿಕೊಂಡವರಲ್ಲಿ ಈ ಕೆಳಗಿನವರನ್ನು ಶಿಫಾರಸು ಮಾಡಲಾಗಿದೆ ಎಂದು ತಿಳಿದು ಬಂದಿದೆ. 1. ಕುಂದಾಪುರ: ಶ್ರೀ ವೈ. ಮಂಜಯ್ಯ ಸೆಟ್ಟಿ. 2. ಬ್ರಹ್ಮಾವರ: ಶ್ರೀ ಜಗಜ್ಜೀವನ ದಾಸ್ ಸೆಟ್ಟಿ, 3. ಉಡುಪಿ: ಶ್ರೀ ಟಿ. ಎ. ಪೈ, 4. ಕಾರ್ಕಳ: ಶ್ರೀ ಎ. ಬಿ. ಸೆಟ್ಟಿ, 5. ಮೂಲ್ಕಿ: ಶ್ರೀ ಎನ್. ಎಸ್. ಮುವರ್, 6. ಮಂಗಳೂರು: ಶ್ರೀ ಎಲ್. ಸಿ. ಪಾಯಸ್, 7. ಪುತ್ತೂರು: ಶ್ರೀ ವೆಂಕಟ್ರಮಣ ಗೌಡ, 8. ಹರಿಜನ ಸೀಟಿಗೆ ಶ್ರೀ ಟಿ. ಕೃಷ್ಣ ಅಥವಾ ಈಶ್ವರ, 9. ಪಾಣೆಮಂಗಳೂರು: ಡಾ| ನಾಗಪ್ಪ ಆಳ್ವ, 10. ಕಾಸರಗೋಡು: ಶ್ರೀ ಎಮ್. ಎಸ್. ಮೊಗ್ರಾಲ್.

ಕೇಂದ್ರ ಪಾರ್ಲಿಮೆಂಟಿಗೆ ಶ್ರೀಗಳಾದ ಯು. ಶ್ರೀನಿವಾಸ ಮಲ್ಯ ಮತ್ತು ಬೆನಗಲ್ ಶಿವರಾಯರು.

ಇದೇ ತಾ. 15ರಂದು ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಯು ಕೊನೆಯ ತೀರ್ಮಾನವನ್ನು ಕೈಕೊಳ್ಳುವುದು.

ಮಳೆ:– ಆಗೋಸ್ತು ತಿಂಗಳಿನಿಂದ ನಿಂತಿದ್ದ ಮಳೆಯು ಈಗ ಕೊಯಿಲಿನ ಸಮಯದಲ್ಲಿ ಒಂದು ವಾರದಿಂದ ಜಿಲ್ಲೆಯ ಅಲ್ಲಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದು ಹಾನಿ ಮಾಡುತ್ತಿದೆ. ಎರಡು ವಾರಗಳ ಹಿಂದೆ, ಮಂಗಳೂರಲ್ಲಿ ತಿಂಗಳು ಕೊಡಗಿದ್ದ ಕರಾವಳಿಯ ಸ್ಟೀಮರುಗಳು ಈಗ ಇಲ್ಲಿ ನಿಲ್ಲಲಾರದೆ ಮುಂದುವರಿಯುತ್ತಿವೆ. ಮೂರು ಮಂಜಿಗಳೂ ಮುಳುಗಿದ ವಾರ್ತೆ ಬಂದಿದೆ.

ಡಾ| ಬೆಸೆಂಟರ ಸ್ಮರಣೆ—ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವವು ಇದೇ ತಾ 1ರಂದು ಸಂಚಾಲಕರಾದ ಶ್ರೀ ಪಿ. ಟಿ. ರಾಮನ್ ನಾಯರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಬಿ. ರಘುನಾಥ ಸುಜೀರ್‌ರವರು ಸ್ವಾಗತಿಸಿದಮೇಲೆ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾ ಎಲ್. ರಾಯರು ವರದಿಯನ್ನೋದಿದರು ಶ್ರೀ ಎಮ್. ರಾಮಚಂದರ್, ಅವರು ಡಾ| ಬೆಸೆಂಟರ ಕುರಿತು ಮಾತನಾಡಿದಬಳಿಕ ಬಹುಮಾನ ವಿತರಣೆ, ವಿನೋದಾವಳಿಗಳ ಪ್ರದರ್ಶನಗಳಾದುವು. ಶ್ರೀ ಎಮ್. ಎಸ್. ಪಣಂಬೂರರಾಯರು ಧನ್ಯವಾದಗಳನ್ನರ್ಪಿಸಿದರು. ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಕಳೆದ ತಾ. 30ರಂದು ಜರಗಿದ ಮಹಿಳೆಯರ ದಿನಕ್ಕೆ ಶ್ರೀಮತಿ ಕಮಲಾಬಾಯಿಯವರು ಅಧ್ಯಕ್ಷೆಯಾಗಿದ್ದರು. ಶಾಲಾ ಉಪಾಧ್ಯಾಯಿನಿ ಶ್ರೀ ಕೆ ಮನೋರಮಾ, ಅವರು ವಂದನಾರ್ಪಣ ಮಾಡಿದರು. ವಿದ್ಯಾರ್ಥಿ ಕೆ. ಕಮಲಾ, ಅವರು ಬೆಸೆಂಟರ ಕುರಿತು ಉಪನ್ಯಾಸವನ್ನೋದಿದರು.

ಚೀನಾದಿನ—ಮಂಗಳೂರಿನ ಜನತಾ ಮಂಡಳಿಯ ನೇತೃತ್ವದಲ್ಲಿ ಸ್ವತಂತ್ರ ಚೀನದ ಎರಡನೆ ವಾರ್ಷಿಕೋತ್ಸವವು ಜರಗಿತು. ಚೀನದ ಸಾಧನೆಯ ಕುರಿತು ಶ್ರೀಗಳಾದ ಕೇಶವ ಭಟ್ಟ, ಎಮ್. ಶಾಂತಾರಾಮ ಪೈ, ಕೆ. ಈಶ್ವರ ಭಟ್ಟರು ಮಾತನಾಡಿದರು. ಅಂದಿನ ಸಭೆಗೆ 'ಜನವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಸುಜೀರ್ ಮಂಜುನಾಥ ನಾಯ್ಕರು ಅಧ್ಯಕ್ಷರಾಗಿದ್ದರು.

ದ. ಕ. ಜಿಲ್ಲಾ ವಿದ್ಯಾ ಪರಿಷತ್ತು: ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ವತಿಯಿಂದ ಕಳೆದ ತಾ. 29 ಮತ್ತು 30ರಲ್ಲಿ ಸ್ಥಳೀಯ ಗಣಪತಿ ಹೈಸ್ಕೂಲಲ್ಲಿ ಜರಗಿತು, ಪ್ರಥಮ ದಿನದ ಸಭೆಯು ಶ್ರೀ. ಎಲ್. ಸಿ ಪಾಯಸ್, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ವಿದ್ಯಾಧಿಕಾರಿಗಳು ಸಮ್ಮೇಳನದ ಉದ್ಘಾಟನಾ ಭಾಷಣ ಮಾಡಿದರು.

"ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರ ವ್ಯಕ್ತಿತ್ವ" ಎಂಬ ವಿಷಯದ ಮೇಲೆ ಶ್ರೀ ಕೋಟ ಕುಂದರ ಕೃಷ್ಣನವರು ಮಾತಾಡಿದರು. ಶ್ರೀ ಎಚ್. ಜಿ. ಹಂದೆಯವರು, ಉಪಾಧ್ಯಾಯನ ವ್ಯಕ್ತಿಯು ಜಗತ್ತುಗಳು ಮತ್ತು ಅವನ್ನು ಸುಧಾರಿಸಲು ಮಾಡಬಹುದಾದ ಪ್ರಯತ್ನದ ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಕೊನೆಯ ಭಾಷಣದಲ್ಲಿ ಉಪಾಧ್ಯಾಯರ ಸೇವೆ, ಅವರ ಸ್ಥಾನದ ಮಹತ್ವ, ಸಮಾಜದಲ್ಲಿ ಅವರ ಕರ್ತವ್ಯದಿಂದಾಗಬಹುದಾದ ಉತ್ತಮ ಕಾರ್ಯಗಳು ಅವರ ಪ್ರಸ್ತುತ ಆರ್ಥಿಕ ಸ್ಥಾನ ಮೊದಲಾದುವುಗಳನ್ನು ವಿವರಿಸಿ ಅದನ್ನು ಸುಧಾರಿಸಲು ಹಲವು ವರ್ಷಗಳಿಂದ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿದ್ದ ಉಪಾಧ್ಯಾಯರುಗಳ ಸಮ್ಮೇಳನಗಳು ಮತ್ತುವುಗಳಿಂದಾದ ಪ್ರಯೋಜನವನ್ನು ವಿವರಿಸಿದರು. ಉಪಾಧ್ಯಾಯರ ಪರಿಸ್ಥಿತಿ ಸುಧಾರಿಸಬೇಕಾದರೆ ಅವರು ಸಂಘಟಿತರಾಗಿ ಏಕಧ್ವನಿಯಿಂದ ತಮ್ಮ ಬೇಡಿಕೆಗಳ ಬಗ್ಗೆ ಆಂದೋಲನ ನಡೆಸಬೇಕೆಂದು ಕೇಳಿಕೊಂಡರು.

ತಾ. 30ರಂದು ಎರಡನೆ ದಿನದ ಸಮ್ಮೇಳನವು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್ ಎಸ ಪಣಂಬೂರರಾಯರು "ಮಕ್ಕಳು ನಮ್ಮ ಭಂಡಸ" ಎಂಬುದರ ಕುರಿತೂ ಶ್ರೀ ಎಸ್. ಮಂಜುನಾಥರಾಯರು ಕನ್ನಡದಲ್ಲಿಯ ಸೂಚನಾ ಪುಸ್ತಕಗಳು ಎಂಬ ವಿಷಯದ ಮೇಲೆ ಮಾತನಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆ ಮೊದಲಾದ ಕಾರ್ಯಕ್ರಮಗಳಿಂದ ಸಮ್ಮೇಳನವು ಕೊನೆಗೊಂಡಿತು.

ವಿದ್ಯಾ ಮಂತ್ರಿ ಮಾಧವ ಮೆನನ್—ಅವರು ಇದೇ ಅಕ್ಟೋಬರ 11ರಂದು ಬೆಳಿಗ್ಗೆ ಕಣ್ಣಾನೂರಿನಿಂದ ಜನತಾ ಎಕ್ಸ್‌ಪ್ರೆಸ್ಸಿನಿಂದ ಹೊರಟು ಪೂರ್ವಾಹ್ನ ಗಂಟೆ 9-9ಕ್ಕೆ ನಿಲ್ದಾಣಕ್ಕೆ ಬರುವರು, ಕಾರ್ಯಕ್ರಮಗಳನ್ನು ಮುಗಿಸಿ ರಾತ್ರೆ 7-45ಕ್ಕೆ ಕಣ್ಣಾನೂರಿಗೆ ಹಿಂತಿರುಗುವರು.

ಕೃಷಿಮಂತ್ರಿ ಎ ಬಿ. ಸೆಟ್ಟಿರು 1950-51ರಲ್ಲಿ ಹೆಚ್ಚು ಭತ್ತ ಬೆಳೆಸಿದ ಬಗ್ಗೆ ಶ್ರೀ ಮಹಾಬಲ ಸೆಟ್ಟಿಗೆ ಜಿಲ್ಲಾ ಪಾರಿತೋಷಕವೀಯುವ ಸಮಾರಂಭವು ಇದೇ ತಾ. 9 ರಲ್ಲಿ ಮಂಗಳೂರು ತಾಲೂಕು ಕಚೇರಿಯಲ್ಲಿ ಕೃಷಿ ಮಂತ್ರಿ ಎ. ಬಿ. ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು.

ಬಿ ಪೂಜಿ ಭಾವಚಿತ್ರಅನಾವರಣ—ಮಂಗಳೂರು ಬೆಂಟ್‌ಕೋರ್ಟು ಹಾಲಿನಲ್ಲಿ ಜಿಲ್ಲಾ ಕಲೆಕ್ಟರಿಂದ ಇದೇ ತಾ. 2ರಂದು ಬೆಳಿಗ್ಗೆ ಬಾಪೂಜಿಯವರ ಭಾವಚಿತ್ರ, ಅನಾವರಣ ನಡೆಯಿತು ಭಾವಚಿತ್ರವು ಶ್ರೀ ಆ. ಜಿ. ಉಭಯ, ಅವರಿಂದ ದಾನವಾಗಿ ಕೊಡಲಾಗಿತ್ತು. ಬೆಂಟ್‌ಕೋರ್ಟು ಅಧ್ಯಕ್ಷ ಶ್ರೀ ಎಮ್. ವೆಂಕಟೇಶ ಪೈಗಳು ಇದನ್ನು ಸ್ವೀಕರಿಸಿದರು ಉಪಾಧ್ಯಕ್ಷ ಶ್ರೀ ಸಿ. ವಿ ಅಚ್ಯುತನ್, ಅವರು ವಂದಿಸಿದರು.

ಪೆರ್ಡೂರು—ಇದೇ ತಾ. 2ರಲ್ಲಿ ಪೆರ್ಡೂರಲ್ಲಿ ಗಾಂಧಿಜಯಂತಿ ಆಚರಿಸಲಾಯಿತು. ಬೆಳಿಗ್ಗೆ ರಾಷ್ಟ್ರಧ್ವಜಾರೋಹಣ, ಬಾಲಬಾಲಿಕೆಯರ ಮೆರವಣಿಗೆ, ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಕಾರ್ಯಕ್ರಮಗಳಾಗಿ ಮಕ್ಕಳಿಗೆ ತಿಂಡಿ ಹಂಚಲಾಯಿತು. ಕಲಾಮಂಡಳಿಯ ವರ್ಧಂತಿಯೂ ಈ ದಿನ ಆಚರಿಸಲಾಯಿತು.

ಪೆಕ್ಕಟ್ಟೆ—ಸ್ಥಳೀಯ ಸಂಘ..ಯ ತ ಮತ್ತು ಊರವರ ಕೂಡುವಿಕೆಯಿಂದ ಗಾಂಧಿ ಜಯಂತಿ ಮತ್ತು ಮಿತ್ರಗೋಷ್ಠಿ ದಿನಾಚರಣೆಯು ತಾ. 2ರಂದು ಶ್ರೀ ಬಿ. ಶ್ರೀನಿವಾಸ ಸೆಟ್ಟಿರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾಗಿ ಬಹುಮಾನ, ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮಗಳಾದುವು.

ಕಂಡ್ಲೂರು—ತ್ರಾಯಬೋಧ ... ಹಿಮಾಂಟರ ಕನ್ನಡ ಶಾಲೆಯಲ್ಲಿ ಗಾಂಧೀಜೀಯವರ ಹುಟ್ಟುಹಬ್ಬದ ದಿನಾಂಕ 2ರಂದು ವಿವಿಧ ಕಾರ್ಯಕ್ರಮಗಳಿಂದ ಶ್ರೀ ಸ್ ...ರು ಅಂತಣ್ಣ ಸೆಟ್ಟಿರ ನೇತೃತ್ವದಲ್ಲಿ ಜರಗಿತು.

ಮುಡ-ಕ್ಕಾರು—ಇಲ್ಲಿಯ ಗ ಡಿ ಯನ್ ಎಂಜಲ್ಸ್ ಹಾ| ಎ| ಶಾಲೆಯಲ್ಲಿ ತಾ. 2 ರಂದು ಬಾಪೂಜಿ ಜನ್ಮದಿನವು ಶ್ರೀ ಎನ್. ಎಸ್. ಮಧ್ಯಸ್ಥರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ಇನ್ನ—ಮಂಗಳೂರು ತಾಲೂಕು ಇನ್ನ ಗ್ರಾಮದಲ್ಲಿ ಕಳೆದ ತಾ. 29ರಲ್ಲಿ ರಾತ್ರಿ ಬಂದ ವಿಪರೀತ ಮಳೆಯ ದೆಸೆಯಿಂದಾಗಿ ಶಾಂಭವಿ ಹೊಳೆಯಲ್ಲಿ ನೆರೆಬಂದು ಗದ್ದೆಗಳಲ್ಲಿ ಕೊಯಿದು ಹಾಕಿದ ಭತ್ತದ ಸೂಡಿಗಳೆಲ್ಲ ನೆರೆಪಾಲಾದವು. ಸಾಧಾರಣ 500ಮುಡಿ ಭತ್ತ ನಷ್ಟವಾಗಿರಬಹುದೆನ್ನಲಾಗಿದೆ.

ಕುಂಭಳೆ—ಕಳೆದ ಒಂದು ವಾರದಿಂದ ವಿಪರೀತ ಮಳೆಬಂದಿದ್ದು ಕಟಾವಾದ ಬತ್ತವು ನೀರುಪಾಲಾಗಿರುವುದು.

ನಿಡ್ಡೋಡಿ—ಸ್ಥಳೀಯ ಸತ್ಯನಾರಾಯಣ ಹಾ| ಎ| ಶಾಲೆಯಲ್ಲಿ ತಾ. 2ರಂದು ಮಹಾತ್ಮಾಜೀಯವರ ಜನ್ಮದಿನವಾಚರಿಸಲಾಯಿತು. ಅಂತೆಯೇ ಮಿತ್ರಗೋಷ್ಠಿ ಸಪ್ತಾಹ ದಿನಾಚರಣೆಯೂ ನಡೆಯಿತು. ವಿದ್ಯಾರ್ಥಿಗಳು ಆಗಾಗಲೇ ಎರಡು ತಂಡೋಪತಂಡಗಳನ್ನು ರಚಿಸಿಕೊಂಡಿರುವರು.

ಕಡ ವ್ಯಾಪಾರ-ಎರಡು ವಾರಗಳ ಮಟ್ಟಿಗೆ ಮಾತ್ರ



ಡೆಸ್ಟ್ ಎಂಡ್ ಮಾದರಿಯ ಆಕರ್ಷಕ ಸ್ವಿಸ್ ರಿಸ್ಟ್‌ವಾಚು(ಐದು ವರುಷ ಗ್ಯಾರಂಟಿ) ಬೆಲೆ ರೂಪಾಯಿ 38/- ಬೆಲೆ. ಅರ್ಧಾಂಶ ಕಿಮ್ಮತ್ತು ರೂಪಾಯಿ 19/-ಕ್ಕೆ ವಿ. ಪಿ. ಮೂಲಕ ಕಳಿಸಲಾಗುವುದು. ಉಳಿದ ಅರ್ಧಾಂಶವನ್ನು ಮೂರು ತಿಂಗಳ ನಂತರ ಈ ವಾಚು ಒಳ್ಳೆಯದು ಎಂದು ತೋರಿದರೆ ಪಾವತಿ ಮಾಡುವ ಶರತ್ತಿನ ಮೇಲೆ. ಇಲ್ಲವಾದರೆ ವಾಚು ಹಿಂತಿರುಗಿಸಬೇಕು. ಹಣ ರೂಪಾಯಿ 19/- ಮರಳಿ ಕೊಡಲಾಗುವುದು. 15ಜುವೆಲ್ಲುಗಳುಳ್ಳ ಪಕ್ಕಾ ಕ್ರೋಮ್ ಗೋಲ್ಡ್ ವಾಚಿಗೆ ರೂಪಾಯಿ 80/- (ರೂ 43/- ಈಗ ಕೊಡುವುದು, ಉಳಿದ ಅರ್ಧಾಂಶ ಮೂರು ತಿಂಗಳ ನಂತರ.) ಇಂದೇ ಆರ್ಡರು ಕೊಡಿರಿ.

Uniteb Watch Co. (N)
Post Box No. 6871
CALCUTTA-7.

"ವಿನ್ನು ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ ಎ ಪಂಡಿತ್, B SC , F I. A
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚಿಲ್ಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ ಆಜೀವ (Whole Life) ಮತ್ತು ಉಂಬಳ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನೂ ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: **ಉಡುಪಿ,** ದ ಭಾರತ.

For energetic and active living,
for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals Useful for men, women and Children alike An ideal tonic for weak nerves and heart.
AYURVEDIC PHARMACY
Baba kali Kamali-Wala RISHIKESH

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ... ಹಿತ್ತಾಳೆ ... ತಾಮ್ರದ ... ದ ವಿವಿಧ ... ಗಳು ... ನಮ್ಮ ... ಪಾತ್ರೆಗಳಿಗೆ ... ಅಂಗಡಿಯ ... ರಿಗೆ ಭೇಟಿ ಕೊಡಿರಿ

ಭಟ್ ... ವ್ಯಾಪಾರಸ್ಥರು
..., ಉಡುಪಿ

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3

ಕೊಡಿಯಾಲ್ ಶ್ರೀನಿವಾಸರಾವ್
ವಿರಚಿತ
ಸುಲಭದಲ್ಲಿ ಇಂಗ್ಲಿಷ
ಅಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಂಡಿತ ನೆಹರುಗಳ ಘನವಾದ ಉದ್ದೇಶ.

ಸಾಮರ್ಥ್ಯ ಮತ್ತು ಸಂಪೂರ್ಣತೆಯೂ ಹುರಿಯಾಳುಗಳಲ್ಲಿ ತುಂಬಿರಬೇಕು

ಲೇಖಕರು:- ಬಿ. ಬಿ. ಶೆಟ್ಟಿ, ಎಡ್ವಕೇಟ್, ಮಂಗಳೂರು.

ಪಂಡಿತ ನೆಹರುಗಳು ಚುನಾವಣೆಗೆ ಕಾಂಗ್ರೆಸು ಕಡೆಯಿಂದ ನಿಲ್ಲತಕ್ಕ ಹುರಿಯಾಳುಗಳು ಎಂತವರಿರಬೇಕೆಂಬುದನ್ನು ಸೂಚಿಸುತ್ತಾ, ಯೋಗ್ಯರೀತಿಯ ಹುರಿಯಾಳುಗಳನ್ನೇ ಹೆಕ್ಕಿ ನಿಲ್ಲಿಸಬೇಕು ಎಂದು ಹೇಳುತ್ತಿದ್ದರು. ಅಂತಹ ಹುರಿಯಾಳುಗಳು ಕಾಂಗ್ರೆಸು ಸಂಸ್ಥೆಯೊಳಗಿಲ್ಲದಿದ್ದರೆ, ಅವರನ್ನು ಹೊರಗಿನಿಂದಲಾದರೂ ತಂದು ನಿಲ್ಲಿಸಬೇಕು ಎಂದು ಒತ್ತಿ ಹೇಳುತ್ತಿದ್ದಾರೆ. ಕಾಂಗ್ರೆಸಿಗೆ ಅರ್ಜಿಯನ್ನು ಹಾಕಿ ಅದನ್ನು ಹಿಂಬಾಲಿಸಿ ಹೋಗುವ ಮತ್ತು ಖರ್ಚಿನ ಬಗ್ಗೆ ವಿಶೇಷ ನಿಧಿಯನ್ನು ಕಟ್ಟಿಕೊಳ್ಳುವ ಪ್ರಸಂಗವಿರುವವರನ್ನೇ ಆರಿಸುವ ಇಂದಿನ ಪಂಕ್ತಿಯು ಪಂಡಿತ ನೆಹರುಗಳು ಸಾರುತ್ತಿರುವ ಕ್ರಮಕ್ಕೆ ವಿರೋಧವಿರುವುದು. ಪಂಡಿತ ನೆಹರುಗಳು ತನ್ನ ನೂತನ ವಿಧಾನವನ್ನು ಜ್ಯಾರಿಗೆ ತರುವರೇ ಹೊಸ ಯೋಜನೆಯನ್ನೇ ಹೂಡುವಂತೆ ತೋರುತ್ತದೆ. ಅವರು ಲುಧಿಯಾನದಲ್ಲಿ ಮಾಡಿದ ಭಾಷಣ ಪ್ರಕಾರ ಹೊಸ ಚುನಾವಣೆ ಕ್ರಮವನ್ನೇ ಕೈಕೊಳ್ಳುವಂತೆ ಕಾಣುತ್ತದೆ. ಅವರು ಸಂಪೂರ್ಣತೆ ಮತ್ತು ಸಾಮರ್ಥ್ಯ ತುಂಬಿದ್ದ ವ್ಯಕ್ತಿಗಳನ್ನು ಆರಿಸುವುದು ಅತೀ ಅವಶ್ಯವೆಂದೂ, ಆ ಬಗ್ಗೆ ಹಿಂದೂಸ್ಥಾನವನ್ನು ಅನೇಕ ವಲಯಗಳನ್ನಾಗಿ ಕೂಡಲೇ ವಿಭಾಗಿಸುವುದೆಂದೂ, ಮತ್ತು ಪ್ರತ್ಯೇಕ ಕಾಂಗ್ರೆಸು ಕಮಿಟಿಗಳನ್ನು ಚುನಾವಣೆಗೆ ಸಂಬಂಧಪಟ್ಟ ಯಾವತ್ತು ವಿಷಯಗಳನ್ನು ತೀರಿಸುವರೇ ನಿರ್ಮಿಸುವುದೆಂದೂ ಜಾತೀಯತೆಯು ಚುನಾವಣಾ ರಂಗದಲ್ಲಿ ಯಾವ ರೂಪದಲ್ಲಿಯೂ ತೋರಿ ಬರಬಾರದೆಂದೂ ಹೇಳುತ್ತಿದ್ದಾರೆ.

ಕಾಂಗ್ರೆಸು ಹುರಿಯಾಳುವಿನಲ್ಲಿ ವ್ಯಕ್ತಿ ಸಾಮರ್ಥ್ಯ ಮತ್ತು ಭಾವಶುದ್ಧಿಯಿದ್ದು, ಅತನು ಇತರ ರೀತಿಯಲ್ಲಿ ಅಂಗಾಂಗಳಿದ್ದವನಿಗಿಂತ ದುರ್ಬಲನಿದ್ದು, ಒಂದುವೇಳೆ ಚುನಾವಣೆಯಲ್ಲಿ ಸೋತರೂ ವ್ಯಸನವಿಲ್ಲ. ಹತ್ತು ಕಡೆಯಲ್ಲಿ ಆ ರೀತಿಯ ಸೋಲುವಿಕೆಯು, ನೂರು ಕಡೆಗಳಲ್ಲಿ ಕಾಂಗ್ರೆಸಿಗೆ ಗೆಲನ್ನು ಕೊಡುವುದು. ಅಂತಹ ಸೋಲುವಿಕೆಯಿಂದ, ಕಾಂಗ್ರೆಸನ್ನು ಸರ್ವರೀತಿಯಲ್ಲೂ ಭಕ್ತಿಯಿಂದ ಆರಾಧಿಸುತ್ತಿದ್ದ ಹಿಂದೂಸ್ಥಾನದ ಜನತೆಯು, ಕಾಂಗ್ರೆಸಿನ ಮೇಲೆ ಎಷ್ಟೇ ಆಗ್ರಹವಿದ್ದರೂ, ಇಂದು ಕೂಡಾ ಕಾಂಗ್ರೆಸು ತನ್ನ ಧ್ಯೇಯವನ್ನು ಮತ್ತು ಲಕ್ಷ್ಯವನ್ನು ದ್ರವ್ಯಕ್ಕಾಗಲೀ ಅಥವಾ ಕಾಂಗ್ರೆಸು ಪಕ್ಷದ ಯಾವುದೊಂದು ಇತರ ಲಾಭಕ್ಕಾಗಲೀ ವಿಕ್ರಯಿಸಲಿಲ್ಲವೆಂಬುದನ್ನು ಪರಿಪೂರ್ಣ ತಿಳಿಯುವುದು. ಇದರಿಂದ ಕಾಂಗ್ರೆಸಿನಲ್ಲಿ ಜನತೆಗೆ ವಿಶ್ವಾಸವು ಹುಟ್ಟುವುದು. ಇದರ ಮೇಲಿನ ಬೇಸರವು ತೊಲಗುವುದು. ಭಾವಶುದ್ಧಿಯುಳ್ಳ ಮತ್ತು ಸಂಪೂರ್ಣತೆಯು ಹುರಿಯಾಳುಗಳನ್ನೇ ಯಾವರೀತಿಯಲ್ಲೂ ನಿಲ್ಲಿಸುವುದು. ಎಷ್ಟರ ಮಟ್ಟಿಗೆ ಅವಶ್ಯವೆಂಬುದನ್ನು ಒತ್ತಿ ಹೇಳುತ್ತಾ, ತಾನು ಈ ಒಂದು ವಿಷಯದಲ್ಲಿ ಮಾತ್ರ ಮುಂಬಿನ ಕಾಂಗ್ರೆಸ್ ಅಧ್ಯಕ್ಷ ಟಾಂಡನರ ಕೂಡೆ, ಕಾಂಗ್ರೆಸ್ಸಿಗೆ ಅರ್ಜಿ ಹಾಕದಿದ್ದವನು ಉತ್ತಮ ಸಂಪೂರ್ಣತೆ ಮತ್ತು ಸಾಮರ್ಥ್ಯ ಉಳ್ಳ ವ್ಯಕ್ತಿಯಿದ್ದವನಿದ್ದರೆ ಅಂತವನನ್ನು ಹುರಿಯಾಳಾಗಿ ಆರಿಸಬೇಕೆಂಬುದನ್ನು ಸಂಪೂರ್ಣ ಒಪ್ಪುತ್ತೇನೆ ಎಂದು ಪಂಡಿತ ನೆಹರುಗಳು ಅನ್ನುತ್ತಾರೆ. ನೆಹರುಗಳು ಧನವಂತನಾಗಬೇಕೆಂದು ಇಚ್ಛಿಸುವುದಿಲ್ಲ. ತನ್ನ ವರ್ಚಸ್ಸಿನಿಂದ ಹೇಗಾದರೂ ಮತವನ್ನು ಗಳಿಸಬಲ್ಲವನು ಹುರಿಯಾಳಾಗಿ ಬರಬೇಕೆಂದು ಇಚ್ಛಿಸುವುದಿಲ್ಲ. ಅಗತ್ಯವಾಗಿ ಗೆದ್ದು ಬರತಕ್ಕವನನ್ನು ನಿಲ್ಲಿಸಬೇಕೆಂದು ಕೇಳುವುದಿಲ್ಲ. ಹುರಿಯಾಳುವಿನಿಂದ ಕಾಂಗ್ರೆಸಿಗೆ ಶಕ್ತಿ ಬರಬೇಕೆಂದು ಇಲ್ಲಿಯ ಜನತೆಯು ಊಹಿಸುವಂತೆ ಎಣಿಸುವುದಿಲ್ಲ. ಹುರಿಯಾಳುವಿನಿಂದ ಕಾಂಗ್ರೆಸಿನ ನಿರ್ಮಲತೆಯು ಮತ್ತು ಘನವಾದ ಮಟ್ಟವು ಸಂಪೂರ್ಣ ಜನತೆಗೆ ತೋರಿ ಬರಬೇಕು. ಜನತೆಯ ಪ್ರೇಮ ವಿಶ್ವಾಸಕ್ಕೆ ಇದರಿಂದ ಕಾಂಗ್ರೆಸು ಪಾತ್ರವಾಗಬೇಕೆಂದು ಹೇಳುತ್ತಿದ್ದಾರೆ. ಕಾಂಗ್ರೆಸನ್ನು ಜನತೆಯು ಕಾಂಗ್ರೆಸು ಸರಕಾರದ ವರ್ತನೆಯಿಂದ ನೋಡತಕ್ಕದ್ದಲ್ಲ. ಕಾಂಗ್ರೆಸಿನ ಧ್ಯೇಯವು ಘನವಾದದ್ದಿದೆ. ಘನವಾದ ವ್ಯಕ್ತಿಗಳು ಆರಿಸಿಬಂದಲ್ಲಿ ಕಾಂಗ್ರೆಸು ವೈರಿಗಳನ್ನೂ ಕೂಡಾ ಪ್ರೇಮಪಾಶದಿಂದ ಎಳೆಯಲು ಸಾಧ್ಯ ಎಂಬ ದೃಷ್ಟಿ ಅವರಲ್ಲಿರಬೇಕು. ಕಾಂಗ್ರೆಸು ಚುನಾವಣಾ ಸಂಸ್ಥೆಗಳು, ಪಂಡಿತ ನೆಹರುಗಳ ಘನವಾದ ಉದ್ದೇಶದ ಜವಾಬ್ದಾರಿಯನ್ನು ಹೊತ್ತು ಹುರಿಯಾಳುಗಳನ್ನು ಚುನಾವಣಾರಂಗಕ್ಕೆ ಇಳಿಸಿದ್ದಲ್ಲಿ ಕಾಂಗ್ರೆಸನ್ನು ಹೊತ್ತು ಇಂದಿನವರೇಗೆ ಸಾಕಿ ಸಲಹಿದ ಹಿಂದೂಸ್ಥಾನದ ಜನತೆಯು, ಯಾವುದೇ ಭಿನ್ನಾಭಿಪ್ರಾಯವಿದ್ದರೂ ಕಾಂಗ್ರೆಸನ್ನು ನಿರಾಕರಿಗೊಳಿಸದು. ವ್ಯಕ್ತಿಯ ಭಾರ ಮತ್ತು ಸಂಪತ್ತು ಹುರಿಯಾಳುವನ್ನು ಆರಿಸುವದಕ್ಕೆ ಬೇಕಾದ ವಿವರಣೆಯಲ್ಲಿ ಇದನ್ನು ಚುನಾವಣಾ ಸಂಸ್ಥೆಗಳು ಜ್ಞಾಪಕದಲ್ಲಿಟ್ಟುಕೊಂಡು, ಹುರಿಯಾಳುಗಳನ್ನು ಆರಿಸುವುದರಲ್ಲಿ ಅದನ್ನು ಪರಿಪಾಲಿಸದಿದ್ದಲ್ಲಿ, ಟಾಂಡನರ ವರ್ಕಿಂಗ್ ಕಮಿಟಿಯಿಂದ ನೆಹರುಗಳು ರಾಜಿನಾಮೆ ಕೊಟ್ಟದ್ದರಿಂದ ಕಳವಳಪಟ್ಟು ಚುನಾವಣಾ ಸಮಯದಲ್ಲಿ ಅಗತ್ಯವಾಗಿಯೂ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ನೆಹರೂರವರು ವಹಿಸಿಕೊಳ್ಳಬೇಕೆಂದು ಕೇಳಿಕೊಂಡ ಕಾಂಗ್ರೆಸು ಸಂಸ್ಥೆಗಳು, ನೆಹರೂರವರ ಧ್ಯೇಯವನ್ನು ಕಾರ್ಯದಲ್ಲಿ ಎಲ್ಲಿ ಪಾಲಿಸಿದಂತಾಗುತ್ತದೆ? ನೆಹರೂರವರ ದೀಕ್ಷೆಯನ್ನು ಪರಿಪಾಲಿಸುವುದು ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದು ನಿರ್ದಾಕ್ಷಿಣ್ಯದಿಂದ, ನಿರ್ಭೀತಿಯಿಂದ, ಸ್ವಾರ್ಥತೆಯನ್ನು ಬಿಟ್ಟು ಘನವಾದ, ಸಂಪೂರ್ಣತೆಯ, ಭಾವಶುದ್ಧಿಯುಳ್ಳ ಸಮರ್ಥ ವ್ಯಕ್ತಿಗಳನ್ನು ಚುನಾವಣಾ ಸಂಸ್ಥೆಗಳು ಆರಿಸಿ ನಿಲ್ಲಿಸಲಿ. ಸೋಲುಗೆಲುವಿನ ಕಡೆಗೆ ಹೆಚ್ಚಿನ ಗಮನವನ್ನು ಕೊಡದಿರಲಿ. ಅಂತಹ ವ್ಯಕ್ತಿಗಳು ಸೋಲಿಕ್ಕಿಲ್ಲವೆಂಬ ಪರಿಹಾಸ್ಯದ ಮಾತುಗಳನ್ನು ಆಡದಿರಲಿ. ಜನತೆಯು ದಕ್ಷತೆಯತ್ತ ನೋಡಿ ಮತದಾನ ಮಾಡುವ ಈ ಸಂದರ್ಭದಲ್ಲಿ, ಮತದಾರರಿಗೆ ವ್ಯಕ್ತಿಯ ಯೋಗ್ಯತಾಯೋಗ್ಯತೆಯನ್ನು ಪರೀಕ್ಷಿಸಿ ಮತದಾನ ಮಾಡುವ ಅವಕಾಶವು ಇಂದು ಇರುವುದಿಲ್ಲ. ಅದು ಅಗತ್ಯವಾಗಿಯೂ ಮತದಾರರಿಗೆ ಇರತಕ್ಕ ಪವಿತ್ರ ಹಕ್ಕು. ಮತದಾರರಿಂದ ಈ ಹಕ್ಕನ್ನು ತೆಗೆದು ತಾವೇ ಇಟ್ಟುಕೊಳ್ಳುವ ಚುನಾವಣಾ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನು ಅರಿತು ಉತ್ತಮ ವ್ಯಕ್ತಿಗಳನ್ನು ಚುನಾವಣೆ ರಂಗಕ್ಕಿಳಿಸುವುದು ಅತೀ ಅಗತ್ಯವಿರುತ್ತದೆ. ಉತ್ತಮ ವ್ಯಕ್ತಿಯು ಪ್ರತಿನಿಧಿಯಾಗಿ ಬಾರದಿದ್ದಲ್ಲಿ ಅದು ಚುನಾವಣಾ ಸಂಸ್ಥೆಗಳ ಭಾರವಿರುತ್ತದೆ. ಇದನ್ನು ಕಾಂಗ್ರೆಸು ಚುನಾವಣಾ ಸಂಸ್ಥೆಗಳಾದರೂ ಚೆನ್ನಾಗಿ ತಿಳಿದು ತಮ್ಮ ಕರ್ತವ್ಯವು ಪವಿತ್ರವಾದುದೆಂದು ತಿಳಿದು ಉತ್ತಮ ಪ್ರತಿನಿಧಿಗಳನ್ನು ಜನತೆಯ ಮುಂದಿಡಲಿ. ಅವರಿಗೆ ಜನತೆಯು ಸಂಪೂರ್ಣ ಬೆಂಬಲವಿತ್ತು, ಕಾಂಗ್ರೆಸ್ಸಿಗೆ ಧಾರಾಳ ಜನಸೇವೆ ಮಾಡಲು ಅವಕಾಶವನ್ನು ಕೊಡಲಿ. ಕಾಂಗ್ರೆಸು ರಾಷ್ಟ್ರವನ್ನು ಸಜ್ಜುಗಟ್ಟಿನಲ್ಲಿ ಇಟ್ಟ ನಂತರ ಇತರ ಪಕ್ಷಗಳೂ ಅಧಿಕಾರಕ್ಕೆ ಬಂದು ತಮ್ಮ ನವೀನ ಪ್ರಯೋಗಗಳನ್ನು ಮಾಡಿದಲ್ಲಿ ಹೆಚ್ಚಿನ ದುರವಸ್ಥೆ ಬರಲಿಕ್ಕಿಲ್ಲ. ಅದರೆ ಇಂದು ರಾಷ್ಟ್ರವು ವ್ಯವಸ್ಥಿತ ರೀತಿಗೆ ಬರುವರೇ ಎಡೆಬಿಡದೆ ಕಾಂಗ್ರೆಸು ಕೆಲಸವನ್ನು ಮಾಡುತ್ತಿರುವಲ್ಲಿ, ಕಾಂಗ್ರೆಸನ್ನು ಹೊರದಬ್ಬಿ, ಇತರ ಪಕ್ಷಗಳು ಹೇಗೆ ವರ್ತಿಸಿಯಾವು ನೋಡೋಣವೆಂಬ ವಿನೋದದ ಪರೀಕ್ಷೆಗೆ ಚುನಾವಣೆಯು ಒಂದು ದೊಡ್ಡ ಹಾಸ್ಯವೆಂದು ಜನತೆಯು ಹೊರಟರೆ ಅದರ ಕಹಿಯನ್ನು ಜನತೆಯೇ ಉಣ್ಣಬೇಕಾದೀತು. ಈ ವಿಧದಲ್ಲಿ ಜನತೆಯು ತನ್ನ ಜವಾಬ್ದಾರಿಯನ್ನು ತಿಳಿದಿರಲಿ.



BALLBEARING
—THE LIFEBLOOD OF THE INDUSTRY!

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —'CHEAPTRADE'

A. RAMSON AND CO.
MISTRI BUILDING ... BOMBAY 7

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

Notice

IN THE COURT OF THE DISTRICT MUNSIF OF UDIPI.

O. P. No. 38/1951.

(In the matter of the debts due to the estate of Parkala Appayya Kamthi-deceased.)

P. Vittal Kamthi, son of Parkala Appayya Kamthi, residing in Herga Village, Udipi Taluq.

—Petitioner.

To whomsoever it may concern

Notice is hereby given that the abovenamed- Petitioner has made an application to the above Court for the grant of a succession certificate, empowering him to collect the amount specified in the said application, and that the same is posted to 31-10-1951 for hearing and that those who intend to oppose the said application may appear either in person or by a Pleader before the said Court at the time of hearing of the said application on 31-10-1951 and file their objections, if any.

H RAMANATHA PAI,
Advocate for Petitioner.,
Dated, 4-10-1951, Udipi, S. K.

ಪ್ರಕಟಣೆ.

ಉಡ್ಪಿ ತಾಲೂಕು ನಂದಿಕೂರು ಗ್ರಾಮದಲ್ಲಿರುವ ಮಾಜಿ ಪಟೇಲ್ ಸಿದ್ದು ಸೆಟ್ಟಿ ಅಳಿಯ ಪಟೇಲ್ ದೊಡ್ಡಣ್ಣ ಸೆಟ್ಟಿಯು ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:-

ನನ್ನ ಚಿಕ್ಕತಂದೆ ಮಂಗ್ಳೂರು ತಾಲೂಕು ಐಕಳ ಗ್ರಾಮದ ಹಿರಿಯ ಮನೆ ತಿಮ್ಮಣ್ಣ ಸೆಟ್ಟಿಯರ ಮಗ ಸೆಟ್ರು ಕಳೆದ ತಾ. 1-10-51ರಲ್ಲಿ ಪಡ್ರಿ ಗ್ರಾಮದ ಗುಡ್ಡ ಅಂಗಡಿಯಲ್ಲಿರುವ ಅವರ ಸ್ವಂತ ಬಂಗ್ಲೆಯಲ್ಲಿ ಮೃತಪಟ್ಟಿರುತ್ತಾರೆ. ಅವರು ಅಸಲ ತಾರೀಕು 9-3-1951ರಲ್ಲಿ ಅವರ ಬಾಬ್ತು ಆಸ್ತಿಗಳಲ್ಲಿ ಕೆಲವು ಮಟ್ಟಿಗೆ ನನಗೂ ಕೆಲವು ಮಟ್ಟಿಗೆ ಇತರರಿಗೂ ಹಕ್ಕು ಸ್ಥಾಪಿಸಿ ರಿಜಿಸ್ಟ್ರೀ ಸಿಸಿ ಒಂದು ವಿಲ್‌ನಾಮೆ ಬರದಿಟ್ಟಿರುತ್ತಾರೆ. ಅವರು ಮರಣ ಪಟ್ಟನಂತರ ಅವರ ಶವವನ್ನು ಅವರ ಕುಟುಂಬಿಗಳು ಕುಟುಂಬದ ಮನೆಗೆ ತೆಗೆದುಕೊಂಡು ಹೋಗಿ ದಹನ ವಗೈರೆ ಕೆಲಸವನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಕೆಲವು ಕಾಗದಗಳಿಗೆ ಶವದ ಕೈ ಮೋರವನ್ನು ತೆಗೆದು ಕೊಂಡಿರುತ್ತಾರಾಗಿ ನನಗೆ ತಿಳಿದು ಬಂದಿರುತ್ತದೆ. ಹಾಗೆ ತೆಗೆದುಕೊಂಡಿರಬಹುದಾದ ಕೈಮೋರದ ಆಧಾರದ ಮೇಲೆ ಉಂಟುಮಾಡಿಕೊಳ್ಳಬಹುದಾದ ಯಾವ ತರದ ರಿಕಾರ್ಡು ಸಿಂಧುವಾಗತಕ್ಕದ್ದಲ್ಲ ವ ಮೇಲೆ ಹೇಳಿದ ವಿಲ್ ನಾಮೆಗೆ ಒಳಗಾದ ಸೊತ್ತುಗಳ ಮೇಲೆ ಬಾಧಿಸತಕ್ಕವುಗಳಲ್ಲ. ಎಂಬ ವಿಚಾರವನ್ನು ಮುಂದಾಗಿ ಸರ್ವ ಜನರ ಎಚ್ಚರಿಕೆಗೆ ತಂದಿರುತ್ತದೆ.

A. Doddanna Shetty
Patil
ಮೊಕ್ಕಾಂ ನಂದಿಕೂರು, ತಾ. 5-10-1951.

ಪ್ರವಾಸಿಯ ಪತ್ರಗಳು ೧೫

ಲಂಡನಿನಿಂದ ಪೆರಿಸಿಗೆ ಪ್ರಯಾಣ.

ಕಳೆದ ಮೇ ತಾ. 27ನೇ ಆದಿತ್ಯವಾರ ದಿನ ಬೆಳಗ್ಗೆ ಗಂಟೆ 10½ಗೆ ಬಿಡುವ ರೈಲಲ್ಲಿ ಹೊರಟು ಡೋವರ್ ಎಂಬ ಇಂಗ್ಲೆಂಡಿನ ಪೂರ್ವ ತೀರದ ಬಂದರಕ್ಕೆ ಮಧ್ಯಾಹ್ನ ಗಂಟೆ 12ಕ್ಕೆ ಬಂದು ಮುಟ್ಟಿದೆ. ಈ ರೈಲಲ್ಲಿ ಎಲ್ಲರೂ ಡೋವರ್‌ಗೆ ಬರುವ ಪ್ರಯಾಣಿಕರು ಇದ್ದುದರಿಂದ ರೈಲು ಮಧ್ಯೆ ಎಲ್ಲೂ ನಿಲ್ಲಲಿಲ್ಲ. ಬಂದ ದೂರ ಸುಮಾರು 75 ಮೈಲು ಆಗಬಹುದು. ಡೋವರ್ ಪಟ್ಟಣವು ಲಂಡನಿನಿಂದ ದಕ್ಷಿಣ ಪೂರ್ವಕ್ಕೆ ಇರುತ್ತದೆ. ಅಲ್ಲಿ ನಮ್ಮ ಸಾಮಾನು ಕಸ್ಟಮ್ಸ್ ಆಫೀಸರಿಂದ ಸುಲಭದಲ್ಲೇ ಪರೀಕ್ಷಿಸಲ್ಪಟ್ಟು ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ಸ್ಟೀಮರ್ ಬಿಟ್ಟಿತು. ಸ್ಟೀಮರ್ ಅಂದರೆ ನಾನು ಮುಂಚೆ ವಿವರಿಸಿದ್ದ "ಸ್ಟ್ರಾತ್‌ನೇವರ್"ನಂಥ ದೊಡ್ಡ ಸ್ಟೀಮರ್ ಅಲ್ಲ. ಸಣ್ಣ ತರದ್ದಾಗಿ ನಾನು ಲಿವರ್‌ಪೂಲ್‌ನಿಂದ ಡಬ್ಲಿನ್‌ಗೆ ಹೋಗಿದ್ದ ಸ್ಟೀಮರ್‌ನಂತಿರುವುದು. ಹಾಗೆ ಒಂದು ಗಂಟೆಗೆ ಹೊರಟ ಸ್ಟೀಮರು ಸುಮಾರು 20 ಮೈಲು ಅಗಲವಾದ ಡೋವರ್ ಜಲಸಂಧಿಯನ್ನು ದಾಟ 2 ಗಂಟೆ 5 ಮಿನಿಟಿಗೆ ಡೋವರಿನ ದಕ್ಷಿಣ ಪೂರ್ವಕ್ಕಿರುವ ಫ್ರಾನ್ಸ್ ದೇಶದ ಕಲೇ ಎಂಬ ಬಂದರಿಗೆ ಬಂದು ಸೇರಿತು. ಅಲ್ಲಿ ನಮಗೋಸ್ಕರ ತಯಾರಿಸಿದ್ದ ರೈಲಿಗೆ ಬಂದು ಸೇರಿದೆವು. ರೈಲಲ್ಲಿ ನಮ್ಮ ಸ್ಥಾನಗಳನ್ನು ಮುಂಚೆಯೇ ರಿಸರ್ವ್ ಮಾಡಿದ್ದ ಕಾರಣ ಯಾವ ತೊಂದರೆಯೂ ಇಲ್ಲದೆ ಪ್ರಯಾಣ ಮಾಡಲಿಕ್ಕೆ ಸುಲಭವಾಯಿತು. ಗಂಟೆ 2-40ಕ್ಕೆ ರೈಲು ಬಿಟ್ಟಿತು.

ಸಮುದ್ರದಾಟಿ ಕಲೇ ಬಂದರವನ್ನು ಸೇರಿದೊಡನೆ ದೇಶ ಮತ್ತು ಹವೆ ಬದಲಾಗಿ ಬದಲಾಯಿಸಿದ್ದು ಸ್ಪಷ್ಟವಾಗಿ ಕಂಡು ಬಂತು. ಇಂಗ್ಲೆಂಡ್ ಅಥವಾ ಸ್ಕಾಟ್ಲೆಂಡ್ ದೇಶಗಳಲ್ಲಿ ಹೆಚ್ಚಾಗಿ ಯಾವಾಗ ನೋಡಿದರೂ ಮೋಡಗಳೇ ಇದ್ದು ಸೂರ್ಯನ ಕಿರಣವೇ ಕಡಿಮೆ. ಇಡೀ ದಿವಸದಲ್ಲಿ ಸರಾಸರಿ 2, 3 ಗಂಟೆ ಬಿಸಿಲು ಬಿದ್ದರೆ ಪುಣ್ಯ. ಆ ಕಾರಣದಿಂದ ಹೆಚ್ಚಾಗಿ ಯಾವಾಗಲೂ ಮನಸ್ಸಿಗೆ ಹರ್ಷ ಕಡಿಮೆ. ಆದರೆ ಫ್ರಾನ್ಸ್ ದೇಶ ಮುಟ್ಟಿ ಕಲೇ ಊರಲ್ಲಿ ಇಳಿದೊಡನೆಯೇ ಮತ್ತು ನಂತರ ಫ್ರಾನ್ಸಿನಲ್ಲಿ ಎಲ್ಲಿಲ್ಲಿ ಹೋಗುವಾಗಲೂ ಚೆನ್ನಾಗಿ ಬಿಸಿಲಿದ್ದು ಊರೆಲ್ಲಾ ರಮ್ಯವಾಗಿ ಕಂಡದ್ದಲ್ಲದೆ ಮನಸ್ಸಿನಲ್ಲಿ ಕೂಡ ಒಂದು ತರವಾದ ಸಂತೋಷ ಉಂಟಾಗುತ್ತದೆ. ಇದೇ ಕಾರಣದಿಂದ 18ನೇ ಶತಮಾನದಲ್ಲಿ ಜೀವಿಸುತ್ತಿದ್ದ ಫ್ರಾನ್ಸ್ ದೇಶದ ಪ್ರಸಿದ್ಧ ರಾಜಕೀಯ ತತ್ವಜ್ಞಾನಿಯಾಗಿದ್ದ ಜೀನ್ ಜಾಕ್ಸ್ ರೂಸೊ [Jean Jacques Rousseau] ಎಂಬವನು ಇಂಗ್ಲೆಂಡಿನಲ್ಲಿ ಕೆಲವು ಸಮಯ ಜೀವಿಸಿ ಬರುವಾಗ ಅಲ್ಲಿ ಬರೆದ ತನ್ನ ಜೀವನ ಚರಿತ್ರೆಯಲ್ಲಿ ಇಂಗ್ಲೆಂಡ್ ದೇಶವು ವ್ಯಾಕುಲ ದ್ವೀಪವೆಂತ [Melancholy Island] ಎಂತ ಅವನ ಆ ಪುಸ್ತಕದಲ್ಲಿ ಎಲ್ಲೋ ಒಂದೆಡೆ ಹೇಳುತ್ತಾನೆ.

ನಮ್ಮ ರೈಲು ದಾರಿಯಲ್ಲಿದ್ದ ಫ್ರಾನ್ಸ್ ದೇಶವು ನೋಡಲಿಕ್ಕೆ ಬಹು ರಮ್ಯವಾಗಿ ಕಂಡಿತು. ಎಲ್ಲೆಲ್ಲಿಯೂ ಗೋಧಿ ಬೆಳೆಯುವ ಭೂಮಿಗಳು. ಹಳದಿ ಬಣ್ಣದ ದನಗಳು ತಿನ್ನಲಿಕ್ಕಾಗಿ ಬೆಳೆಯುವ ಸಾಸಿವೆ ಪೈರು. ಕೆಲವು ಕಡೆಗಳಲ್ಲಿ ಹಸುರು ಹುಲ್ಲುಗಾವಲುಗಳು—ಹೀಗೆ ಬಯಲು ಸೀಮೆಯಂತಿರುವ ಭೂಮಿಗಳು ಎಲ್ಲೆಲ್ಲಿಯೂ ಕಾಣಸುತ್ತಿದ್ದವು. ಕೆಲವು ಕಾಲ ಹೀಗೆ ಪ್ರಯಾಣ ಮಾಡುವಾಗ ಸಮುದ್ರದ ಸಮೀಪವೇ ರೈಲು ಚಲಿಸುತ್ತಿದ್ದು ಬೊಲೋನ್ (Bologne) ಎಂಬ ಬಂದರವು ದೂರದಲ್ಲಿ ಕಾಣುತ್ತಿತ್ತು. ನಂತರ ರೈಲು ಸಮುದ್ರ ತೀರವನ್ನು ಬಿಟ್ಟು ದೇಶದ ಒಳಕ್ಕೆ ಹೊಕ್ಕು ಎಬ್‌ವಿಲ್ (Abbeville) ಎಂಬ ಪಟ್ಟಣವು ಸಿಕ್ಕಿತು. ಅಲ್ಲಲ್ಲಿ ಹಳೆಯ ಮನೆಗಳು ಕಂಡವು. ಅವರ ಮನೆಗಳು ಹೆಚ್ಚಾಗಿ ಹಳೆ ಕಟ್ಟಡಗಳಾಗಿದ್ದು ಕಳೆದ ಯುದ್ಧದ ಕಾರಣ ಹೆಚ್ಚಾಗಿ ನಾಶವಾಗಿದ್ದವು. ಅನೇಕ ಕಡೆಗಳಲ್ಲಿ ಬಿದ್ದ ಹಂಚಿನ ಮಾಡುಗಳನ್ನು ಕೂಡ ಪುನಃ ಇಟ್ಟಿರಲಿಲ್ಲ. ಮನೆಗಳು ಹೆಚ್ಚಾಗಿ ಪ್ರತ್ಯೇಕ ಪ್ರತ್ಯೇಕ. ಅಂದರೆ ಇಂಗ್ಲಾಂಡಿನಂತೆ ಸಾಲು ಸಾಲಾಗಿ ಉಪ್ಪರಿಗೆ ಮನೆಗಳಲ್ಲ. ಕೆಲವು ಕಡೆಗಳಲ್ಲಿ ಯುದ್ಧದಲ್ಲಿ ಬೋಂಬು ಬಿದ್ದ ಕಟ್ಟಡಗಳು ದುರಸ್ತಿ ಮಾಡದೆ ಕೆಲಸ ನಡೆಯದೇ ಹಾಗೆ ಬಾಕಿ ಇರುತ್ತಿದ್ದವು. ಸಾಧಾರಣವಾಗಿ ಹೇಳುವುದಾದರೆ ಯುದ್ಧಕಾಲದಲ್ಲಿ ಆದ ನಷ್ಟದಲ್ಲಿ ಮುಕ್ಕಾಲು ಅಂಶ ದುರಸ್ತಿ ಪಡದ ಇದ್ದ ಸ್ಥಿತಿಯಲ್ಲೇ ಇರುತ್ತವೆ. ಅದೇ ಇಂಗ್ಲಾಂಡಿನಲ್ಲಿ ಮುಕ್ಕಾಲು ಅಂಶ ದುರಸ್ತಿ ಪಡಿಸಿದ್ದಾರೆ. ಇದರಿಂದ ಫ್ರೆಂಚ್ ಜನರು ಸ್ವಲ್ಪ ಉದಾಸೀನವಿರುವುದಾಗಿ ನನ್ನ ಮನಸ್ಸಿಗೆ ಕಂಡಿತು.

ಕೃಷಿ ಕೆಲಸವು ಹೆಚ್ಚಾಗಿ ಇಂಗ್ಲೆಂಡಿನಂತೆ ಯಂತ್ರಗಳ ಮೂಲಕ ಅಲ್ಲ. ಕೈಯಿಂದಲೇ ಎನ್ನಬಹುದು. ಕುದುರೆಗಳನ್ನು ಉಪಯೋಗಿಸಿ ಉಳುವುದು ಜಾಸ್ತಿ. ಆದರೆ ಇಂಗ್ಲೆಂಡಿನಲ್ಲಿ ಈ ಮುಂಚೆ ನಾನು ಹೇಳಿದಂತೆ ಹುಲ್ಲು ಬೆಳೆಯುವ ಭೂಮಿ ಹೆಚ್ಚಾಗಿ ಇರುತ್ತಿರುವಲ್ಲಿ ಇಲ್ಲಿ ಆಹಾರ ಬೆಳೆಯುವ ಕೃಷಿ ಭೂಮಿ ಜಾಸ್ತಿ. ಆದಕಾರಣ ಫ್ರಾನ್ಸಿನಲ್ಲಿ ಎಲ್ಲೆಲ್ಲೂ ಊಟ ತಿಂಡಿಗೆ ಯಾವ ನಿಯಂತ್ರಣವೂ ಇಲ್ಲ ಮತ್ತು ಸಮೃದ್ಧಿಯಾಗಿ ಸಿಕ್ಕುವುದು. ಅಲ್ಲಲ್ಲಿ ಕಾಡಿಟ್ಟ ಕಾಡುಗಳು ಕೂಡ ಅನೇಕ ಇರುತ್ತವೆ. ಅವುಗಳಲ್ಲಿ ಒಂದೇ ತರದ ಮರಗಳಲ್ಲದೆ ಮಿಶ್ರಣವಾದ ಮರಗಳು ಜಾಸ್ತಿ. ಹಳ್ಳಿಯ ರಸ್ತೆಗಳು ಇಂಗ್ಲಾಂಡಿನಂತೆ ತಾರು ಹಾಕಿದವುಗಳು ಕಡಿಮೆ. ಹೆಚ್ಚಾಗಿ ಬೀಗಲ್ಲಿನವು. ಅಗಲವೂ ಕಡಿಮೆ.

ಹೀಗೆ ಸುಮಾರು 2 ಗಂಟೆ ಪ್ರಯಾಣ ಮಾಡಿದ ನಂತರ ನಾಲ್ಕುವರೆ ಗಂಟೆ ಸಮಯ ಎಮಿಯನ್ಸ್ [Amieps] ಎಂಬ ಪಟ್ಟಣವು ಬಂತು. ರೈಲು ಎಲ್ಲಿಯೂ ನಿಲ್ಲದೆ ವೇಗದಲ್ಲಿ ಚಲಿಸುತ್ತಿತ್ತು. ಆಗ ನಮ್ಮ ರೈಲು ಕೋಣೆಯ ಬದಿಯಲ್ಲಿ ಕೈಯಲ್ಲಿದ್ದ ಗಂಟೆಯನ್ನು ಬಾರಿಸಿಕೊಂಡು ಇಂಗ್ಲಿಷ್‌ನಲ್ಲಿ "ಲಂಚ್ ಇಸ್ ರೆಡಿ, ಯೂ ಆರ್ ವೆಲ್ ಕಮ್" "ಊಟಕ್ಕೆ ತಯಾರಿದೆ, ನಿಮಗೆ ಸ್ವಾಗತ" ಎಂತ ಕೋಣೆ ಕೋಣೆಗೆ ಬಂದು ಹಾಡು ಹೇಳುವಂತೆ ಕೂಗುತ್ತ ಒಬ್ಬ ರೈಲ್ವೆ ನೌಕರನು ತಿರುಗಾಡಿದನು. ಆಗ ನಾವೆಲ್ಲರೂ ಆಹಾರ ತಯಾರಿಸಿಟ್ಟ ಕೋಣೆಗೆ ಹೋದೆವು. ಅಲ್ಲಿ ಆಗಲೇ ತಯಾರಿಸಿದ ಬಿಸಿ ಬಿಸಿಯಾದ ಮತ್ತು ಬಹು ರುಚಿಕರವಾದ ಟೋಸ್ಟು, ಮತ್ತು ಅದಕ್ಕೆ ಬೇಕಾದ ಜಾಮ್. ಬೇಕಾದಷ್ಟು ಚಹಾ ಕಾಫಿ, ಅದಕ್ಕೆ ನಾವೇ ಸೇರಿಸಿಕೊಳ್ಳುವ ದಪ್ಪವಾದ ಕ್ರೀಮ್, ಅಂದರೆ ಹಾಲಿನ ಕೆನೆ ಮತ್ತು ಒಂದು ಎಲೆ ಮೇಲೆ ಪರಿಸು ಬಾಳೆಹಣ್ಣು ಇಟ್ಟಿದ್ದವು. ತಗಲಿದ ಖರ್ಚು 191 ಫ್ರಾಂಕ್ಸ್. ಅಂದರೆ ಸುಮಾರು 2¼ ರೂಪಾಯಿ. ಇಷ್ಟಕ್ಕೆ ಇಂಗ್ಲಾಂಡಿನಲ್ಲಾದರೆ ಅಂದಾಜಿನಲ್ಲಿ 1¼ ರೂಪಾಯಿ ಆಗುತಿತ್ತು. ಆದರೆ ಅಲ್ಲಿಯಂತೆ ಇಲ್ಲಿ ಇನಾಮು ಕೊಡಬೇಕಾದುದಿಲ್ಲ. ಅದನ್ನು ಬಿಲಿನಲ್ಲೇ ಸೇರಿಸುವರು. ಹೀಗೆ ನಾವು ಕೆಲವರು ಟಿಫಿನ್ ಮಾಡಿದೆವು. ಇನ್ನು ಕೆಲವರು ಸರಿಯಾದ ಊಟವನ್ನೇ ಮಾಡಿದರು. ಹಾಗೆ ಊಟ ಮಾಡಿದ ಒಬ್ಬ ಆಂಗ್ಲ ಸ್ತ್ರೀಯು ಇನ್ನೊಬ್ಬಳ ಹತ್ತಿರ ಹೇಳಿದ್ದೇನೆಂದರೆ—"ಆರು ಆರು ಪದಾರ್ಥ ಇದ್ದ ಊಟ ಮತ್ತು ವೈನ್ ಕೂಡಾ ತೆಗೆದು ಕೊಂಡೆ ಇಷ್ಟು ಚಲೋ ಊಟ ಮಾಡದೆ ಬಹುಕಾಲವಾಯಿತು." ಎಂದು.

ಹಾಗೆ ಸ್ವಲ್ಪ ಕಾಲ ಪ್ರಯಾಣ ಮಾಡಿ ರೈಲು ಎಲ್ಲೂ ನಿಲ್ಲದೆ ಗಂಟೆ 5-52ಕ್ಕೆ ಸರಿಯಾಗಿ ಕಲೆಯಿಂದ ಸುಮಾರು 150 ಮೈಲು ದೂರವಿರುವ ಪೆರೀಸ್ ನಗರಕ್ಕೆ ಬಂದು ಸೇರಿದೆವು. ಅಲ್ಲಿಂದ ಸುಮಾರು 2 ಮೈಲು ದೂರವಿದ್ದ ಹೋಟೆಲ್ ಎಂಗ್ಲಟೇರ್ ಎಂಬ ಥೋಮಸ್ ಕುಕ್ ಕಂಪೆನಿಯವರು ನನ್ನ ಬಗ್ಗೆ ರಿಸರ್ವ್ ಮಾಡಿದ್ದ ಹೋಟೆಲಿಗೆ ಬಂದು ಸೇರುವಾಗ ಕತ್ತಲೆ ಆಯಿತು. ಈ ಹೋಟೆಲು ಸಾಧಾರಣ ಎರಡನೇ ತರಗತಿಯದಾಗಿದ್ದು, ಅನೇಕ ಇಂಗ್ಲಿಷ್ ಪ್ರಯಾಣಿಕರು ಇಲ್ಲಿ ಇದ್ದರು. ಹಾಗೆ ನನ್ನ ಕೋಣೆಗೆ ತಾಗಿದ್ದ ಕೋಣೆಯಲ್ಲಿ ಆ ಊರಿನ ಬ್ರಿಟಿಷ್ ಕಾನ್ಸಲೇಟಿನಲ್ಲಿ ಕೆಲಸಕ್ಕಿದ್ದ ಇಬ್ಬರು ಯೌವನಸ್ಥ ಬ್ರಿಟಿಷ್ ನೌಕರರು ಮತ್ತು ಒಬ್ಬ ಸ್ತ್ರೀ ಕೂಡಾ ಮಧ್ಯರಾತ್ರಿ ತನಕ ಪಿಟೀಲ್ ಬಾರಿಸಿ ಹೆಚ್ಚು ಗಲಾಟೆ ಮಾಡದೆ ಸಮಾಧಾನದಲ್ಲಿ ಒಟ್ಟಿಗೆ ಹಾಡಿಕೊಂಡು ಗಾಯನ ಕಲಿಯುತ್ತಿದ್ದರು.

ಗಾಯನ, ನೃತ್ಯ ಮತ್ತು ಇನ್ನೂ ಅನೇಕ ತರದ ಕಲಾಕೌಶಲಗಳಿಗೆ ತವರು ಮನೆಯಾದ ಪೆರಿಸ್ ನಗರದಲ್ಲಿ ಇದು ನನ್ನ ಪ್ರಥಮ ಅನುಭವ. ಹೀಗೆ ಬಂದವನು ಪಠಿವಾರ ತನಕ ಆರು ದಿನ ಇಲ್ಲಿ ಇದ್ದು ಪಡೆದ ಅನುಭವವನ್ನು ಮುಂದಿನ ಪತ್ರಗಳಲ್ಲಿ ಬರೆಯುವೆನು.

(ವಿಚಾರವಾಣಿ) ಕೆ. ಆರ್. ಕಾರಂತ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ತಲೆಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಲ್ ಕ್ರೀಂ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಶಿಮ್ಮ ಸ್ನಾನ, ಊಟ, ಉಪಹಾರ, ಪ್ರೈವೇಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕಳವಿರ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

For up-to-date Lodging & Boarding
ROYAL MAHAL,
UDIPI. S. Kanara.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

I EGD

ಹುಳು ಕಡಿತ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ.

ತಾರೀಕು 11-10-51 ರಿಂದ ವಾರದ ಭವಿಷ್ಯ ತಾರೀಕು 17-10-51 ವರೆಗೆ

ಮೇಷ—ಈ ವಾರದಲ್ಲಿ ನಿಮ್ಮ ಕಾರ್ಯಕಲಾಪಗಳು ಯಶಸ್ವಿಯಾಗಿ ಕೊನೆ ಹೊಂದುವವು. ಪುತ್ರ ಮಿತ್ರ ಬಂಧುಬಾಂಧವರೂ ಕೂಡ ನಿಮಗನುಕೂಲರಾಗುವರು. ಆದರೂ ಮಾನಸಿಕ ಚಿಂತೆಯಿಂದ ಸದಾ ಪೀಡಿಸಲ್ಪಡುವಿರಿ. ಪ್ರವಾಸದಲ್ಲಿ ಅನಿಷ್ಟಗಳೊದಗುವ ಲಕ್ಷಣಗಳಿವೆ. ಉದ್ಯೋಗಿಕ ಭಾಗದಲ್ಲೂ ವ್ಯಾಪಾರೀ ಕ್ಷೇತ್ರದಲ್ಲೂ ಅಭಿವೃದ್ಧಿಯನ್ನೈದುವಿರಿ. ಬಲವಂತರಾದ ಶತ್ರುಗಳೂ ಕೂಡ ನಿಮಗೆ ತಲೆ ಬಾಗಲಿರುವರು. ದಿನಗಳು ಸುಖಮಯಗಳಾಗಿವೆ. ತಾ. 13, 14ರಲ್ಲಿ ಕಿಂಚಿದ್ದೇಹಾಲಸ್ಯ ವ್ಯರ್ಥ ಧನ ವ್ಯಯವು ಕಾಣಿಸೀತು.

ವೃಷಭ:—ನಿಮ್ಮ ಪ್ರಕೃತಿಯು ಬಹು ಮಟ್ಟಿಗೆ ಸುಧಾರಿಸಲಿದೆ. ಪ್ರಯತ್ನಕ್ಕುಚಿತವಾದ ಫಲಪ್ರಾಪ್ತಿಯಾಗುವದು ಆದರೆ ಮನೆಯ ಜನರೊಳು ಪರಸ್ಪರ ಕಲಹ ಕಟಾಟಿಗಳುಂಟಾಗುವುದರಿಂದ ಗೃಹಸುಖವು ಲಭಿಸಲಾರದು. ಕೃತ್ರಿಮ ಮಿತ್ರರ ದೆಸೆಯಿಂದಾಗಿ ಕಷ್ಟ ನಷ್ಟಾಪವಾದಾದಿಗಳಿಗೆ ಗುರಿಯಾದೀರಿ. ವ್ಯಾಪಾರಿಗಳು ನೌಕರಿ ಜನರುಗಳನ್ನು ಹೊರತಾಗಿ ಇತರರಿಗೆ ಈ ವಾರವು ಅಷ್ಟೊಂದು ತೃಪ್ತಿಕರವಾಗಿಲ್ಲವು. ಆದರೂ ವಾರಾದಿಯ 4ದಿನಗಳಲ್ಲಿ ಸುಖಲಾಭಯಶಸ್ಸುಗಳನ್ನು ಪಡೆವಿರಿ.

ಮಿಥುನ:—ಕಾಲಕ್ಕೆ ತಕ್ಕ ಕೋಲವೆಂಬತೆ ಸಮಯ ಬಂದಂತೆ ವರ್ತಿಸಬೇಕಾಗುವದು. ಈ ವಾರದಲ್ಲಿ ನೀವು ಋಜುಮಾರ್ಗವನ್ನು ಹಿಡಿದರೆ ಪರಿಣಾಮವು ನೆಟ್ಟಗಾಗದು. ಶಠಂ ಪ್ರತಿ ಶಾಠ್ಯಂ ಎಂದಂತೆ ವಕ್ರಮಾರ್ಗಿಗಳ ಕೂಡೆ ವ್ಯವಹಾರ ಮಾಡುವಾಗ ನೀವೂ ಕೂಡ ವಕ್ರಮಾರ್ಗವನ್ನೇ ಹಿಡಿಯಬೇಕಾಗುವುದು. ನಿಮ್ಮ ಖರ್ಚನ್ನು ನೀವೇ ಸುಧಾರಿಸಲು ಶಕ್ತರಿರುವಿರಿ. ಸಾಂಸಾರಿಕ ತಾಪತ್ರಯಗಳು ಪಲಾಯನವಾಗಿ ಸುಖದಿಂದ ಕಾಲಕಳೆವಿರಿ. ವಾರಾಂತ್ಯದ 5ದಿನಗಳು ಹಿತಕರಗಳಿವೆ.

ಕರ್ಕಟ:—ಸರ್ವ ಮುಖದಿಂದಲೂ ಈ ವಾರವು ನಿಮಗೆ ಅನುಕೂಲವಾಗಿರುವುದು. ಆದರೆ ತಾನು ಮಾಡುವದುತ್ತಮ ಎಂಬ ವಚನದಂತೆ ಪರರ ಮೇಲೆ ವಿಶ್ವಾಸವಿಟ್ಟು ಜವಾಬ್ದಾರೀ ಕೆಲಸಗಳನ್ನು ನಿರ್ವಹಿಸಲು ಬಿಟ್ಟಲ್ಲಿ ಪರಿಣಾಮವು ಒಳ್ಳೆತಾಗದು ಕೆಲವೊಮ್ಮೆ ಅಧಿಕಾರಿಗಳ ಕೋಪಕ್ಕೆ ಸಿಲುಕುವ ಯೋಗವಿದೆ. ಉಷ್ಣ ಪಿತ್ತಪ್ರಕೋಪದಿಂದ ಆರೋಗ್ಯ ಕೆಟ್ಟೀತು. ಜಾಗ್ರತೆ. ವಾರಾಂತ್ಯದ 3ದಿನಗಳು ಅತ್ಯುತ್ತಮವಿವೆ.

ಸಿಂಹ:—ಕಾಲಗತಿಯು ಪ್ರತಿಕೂಲವಾಗಿರುವದು, ನಿಮ್ಮ ಸಂಕಲ್ಪಗಳಿಗೆ ಹಲವಾರು ತೆರದ ವಿಘ್ನಗಳು ಬರಲಿವೆ ಆಪ್ತೇಷ್ಟರೊಡನೆ ಕಲಹ ಅವಿಶ್ವಾಸಗಳುಂಟಾದಾವು. ಗುರುಹಿರಿಯರ ಆಗ್ರಹಕ್ಕೆ ಸಿಲುಕಲಿರುವಿರಿ. ದುಡಿಮೆಯು ಇಮ್ಮಡಿ ವ್ಯಯವಾಗುವುದರಿಂದ ಆರ್ಥಿಕ ಬಿಕ್ಕಟ್ಟಿನಿಂದ ಪೇಚಾಡುವಿರಿ. ವೃಕ್ಷಾರೋಹಣ ವಾಹನಗಳಲ್ಲಿ ಯಾನ ಮೊದಲಾದುವನ್ನು ಸದ್ಯ ಬಹಿಷ್ಕರಿಸಿರಿ. ಅಪಾಯದ ಯೋಗವಿದೆ. ವಾರಾದಿಯ 2ದಿನಗಳು ಹೆಚ್ಚು ಅನಿಷ್ಟಗಳಿಗಿಲ್ಲವೂ

ಕನ್ಯಾ:—ಸಪ್ತಮಸ್ಥ ಸುರಗುರುಗಳನ್ನು ಬಿಟ್ಟರೆ ಮತ್ತವರ್ಗಾರೂ ಸದ್ಯ ನಿಮಗೆ ಅನುಕೂಲರಾಗಿಲ್ಲವಾದ್ದರಿಂದ ದುಡಿಮೆಗಿಂತ ತ್ರಿಗುಣ ವ್ಯಯವು ಪ್ರಾಪ್ತವಾಗಿ ಹಣದ ಬಿಕ್ಕಟ್ಟಿನಿಂದ ಮರ್ಯಾದೆ ಕಾಯ್ದುಕೊಳ್ಳಲು ಕಷ್ಟವಾಗುವದು. ಶತ್ರುಜನರ ಉಪಟಳದಿಂದಾಗಿ ಹೆಚ್ಚಿನ ನಿಮ್ಮ ಕಾರ್ಯಗಳು ವಿಫಲಗಳಾಗುವವು ಸ್ತ್ರೀಜನರಿಂದ ಕಲಹಾನಿಷ್ಟಗಳ ಯೋಗವಿದೆ ಆರೋಗ್ಯದ ಮಟ್ಟಿಗೆ ಹೆಚ್ಚಿನ ಗಮನವನ್ನಿಡಿರಿ ವಾರಾದಿಯ 4ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಹೆಚ್ಚಿನ ಅನಿಷ್ಟಗಳನ್ನು ಸುಖದಿಂದ ಪಾರುಗಾಣಿಸುವಿರಿ.

ತುಲಾ:—ಇತ್ತೀಚೆಗೆ ನಿಮ್ಮ ಪರಿಸ್ಥಿತಿಯು ಬಹಳ ಕೆಟ್ಟಿದೆ. ದಿನೇ ದಿನೇ ಆರ್ಥಿಕ ಮುಗಟ್ಟು ತೊಡಕು ತಾಪತ್ರಯಗಳು ಹೆಚ್ಚುತ್ತಾ ಬರುತ್ತಿವೆ ಆರೋಗ್ಯ ಭಾಗವು ಚೆನ್ನಾಗಿಲ್ಲದುದರಿಂದಲೂ ಮನೋರೋಗವೂ ಕೂಡ ಹೆಚ್ಚಾಗಿ ಪೀಡಿಸುವುದರಿಂದಲೂ ನಿಮಗೆ ಸ್ವಪ್ನದಲ್ಲೂ ಸುಖವೆಂಬುದು ದುರ್ಲಭವಾದೀತು ವಾಸ್ತವಿಕವಾಗಿ ನಿಮ್ಮ ಯೋಗ್ಯತೆಗೆ ಮಿಕ್ಕಿ ಉದ್ಯೋಗ ಮಾಡುವಿರಿ ತಕ್ಕ ಫಲವೂ ಲಭಿಸುವದು. ಆದರೆ ಅನಿರೀಕ್ಷಿತವಾಗಿ ಬಂದೊದಗುವ ಅನರ್ಥ ಪರಂಪರೆಗಳನ್ನು ಎದುರಿಸುವ ಶಕ್ತಿ ನಿಮಗೆ ಬರದು. ಆದರೂ ವಾರಾಂತ್ಯದ 5ದಿನಗಳು ಇದ್ದುದರಲ್ಲಿ ಉತ್ತಮವಾದಾವು

ವೃಶ್ಚಿಕ—ನಿಮ್ಮಲ್ಲಿನ ಶಕ್ತಿ ಸಂಸ್ಕಾರಗಳಿಗುಚಿತವಾದ ಯುಕ್ತಿಯೂ ಸದ್ಯ ನಿಮ್ಮಲ್ಲಿರುವುದರಿಂದ ನಿಮ್ಮ ಪ್ರಯತ್ನಗಳು ಸಂಪೂರ್ಣ ಫಲವನ್ನೀಯಬಲ್ಲುವು. ಯಾವ ವಿಭಾಗದಲ್ಲೂ ನಿಮಗೆ ಕೊರತೆ ಕಾಣಿಸದು ಸಾಂಸಾರಿಕ ಸುಖ, ಜನತೆಯಲ್ಲಿ ಸನ್ಮಾನ ರಾಜಕೀಯದಲ್ಲಿ ಯಶಸ್ಸೂ ಕೂಡ ಲಭಿಸಲಿದೆ. ಆದರೊಂದು, ನಾಲಿಗೆಯನ್ನು ಸ್ವಲ್ಪ ಬಿಗಿಹಿಡಿದಿರಿ. ಮಾತುಮಾತಿನಿಂದಾಗಿ ವ್ಯರ್ಥ ಕಲಹಗಳುಂಟಾಗುವ ಯೋಗವಿದೆ. ವಾರಾಂತ್ಯದ 3ದಿನಗಳಲ್ಲಿ ಸುಖ, ಲಾಭ, ವಿಜಯಗಳು ಲಭಿಸುವವು

ಧನು—ಬಹುಮಟ್ಟಿನ ನಿಮ್ಮ [illegible] ಷತ್ರುಯುಗಳು ನಿವೃತ್ತಿ ಹೊಂದಿದವು. ಆದರೂ ನಿಮ್ಮ ಮನಸ್ಸಿಗೆ ಇನ್ನೂ ಶಾಂತಿಯುಲ್ಲವಾಗಿದೆ ನಿಮ್ಮ ಉದ್ಯಮಕ್ಕನುಗುಣವಾದ ಫಲಪ್ರಾಪ್ತಿಯಿರುವುದರಿಂದ ದಿನ ಯಾಪನೆಯು ಕಷ್ಟಸಾಧ್ಯವಾಗದು ಆಕಸ್ಮಿಕ ಪ್ರವಾಸದ ಯೋಗವಿದೆ. ಗೃಹ ತಾಪತ್ರಯಗಳು ಕಡಿಮೆಯಾಗುವವು ದುಷ್ಟಾಪವಾದಕ್ಕೆ ಸಿಲುಕುವ ಸಂಭವವಿದೆ. ಬಂಧು ಜನರೂ ಕೂಡ ಸದ್ಯ ನಿಮಗೆ ಶತ್ರುಗಳಂತೆ ಕಾಣಬಹುದು. ತಾ. 14, 15ರಲ್ಲಿ ಇಷ್ಟಾರ್ಥಗಳು ನಿರ್ವಿಘ್ನದಿಂದ ನೆರವೇರುವವು.

ಮಕರ—ದೈವಬಲವು ಪೂರ್ಣ ಕೆಟ್ಟಿರುವುದು. ಆದಕಾರಣ ಇಂದಿನ ದಿನದಲ್ಲಿ ನಿಮ್ಮ ಜೀವನವು ಬಹಳ ಕಠಿಣ ಸಮಸ್ಯೆಯಾಗಿ ಪರಿಣಮಿಸಲಿದೆ. ಪತ್ನೀಪುತ್ರರ ವಿರಹ, ಸ್ಥಾನಚ್ಯುತಿ, ಕಾರ್ಯಭಂಗ, ಶತ್ರುಪೀಡೆ, ಜನತಾ ವಿರೋಧ ತತ್ಪಾಪಿ ಆರ್ಥಿಕ ದುರವಸ್ಥೆ ಇವೆಲ್ಲವೂ ಏಕ ಕಾಲದಲ್ಲಿ ಪ್ರಾಪ್ತವಾಗುವದರಿಂದ ನಿಮಗೆ ಜೀವನದಲ್ಲೇ ಕೊಂಚ ಜಿಗುಪ್ಸೆಯುಂಟಾಗ ಬಹುದು. ಆದರೂ ತಾ 13, 14, ಈ 2ದಿನಗಳಲ್ಲಿ ಅನಿಷ್ಟಗಳು ಕೊಂಚ ಕಡಿಮೆಯಾಗಲಿವೆ.

ಕುಂಭ:—ಸಂಸಾರದಲ್ಲಿ ನಿಮಗೆ ಅಷ್ಟು ಸುಖದೊರಕಲಾರದು. ಹೆಂಡತಿ ಮಕ್ಕಳು ನಿಮಗೆ ಶತ್ರುರೂಪವಾಗಿ ಪರಿಣಮಿಸುವರು ಗೃಹಕಲಹವು ದಿನೇ ದಿನೇ ಬೆಳೆಯುತ್ತಾ ಹೋಗಲಿದೆ. ಸ್ತ್ರೀಯರಿಂದಾಗಿ ಕೆಟ್ಟ ಮಾತುಗಳನ್ನು ಕೇಳಬೇಕಾದೀತು. ಮಾತ್ರವಲ್ಲ ನಿಮ್ಮ ಆರೋಗ್ಯವು ಕೂಡ ತೃಪ್ತಿಕರವಾಗಿದು. ಆದರೆ ನಿಮ್ಮ ಉದ್ಯಮದ ಫಲಿತಾಂಶವು ಚೆನ್ನಾಗಿರುವುದರಿಂದ ಹಣದ ಕೊರತೆಯಾಗದು ತಾ. 13, 14, ಮಾತ್ರ ಕೊಂಚ ಅನಿಷ್ಟಕಾಯಿದೆ.

ಮೀನ:—ಸ ಹಸಿಗಳಿಂದ ನಿಮ್ಮ ಮನೋಧೈರ್ಯವು ಇಂದೀಗಲುತ್ತಮವಾಗಿರುವದು. ಯಾವ ಕಾರ್ಯಕ್ಕೂ ಮುಂದಾಗಿ ಹೋಗಲು ಬೆದರುವಿರಿ. ಕಾರಣ ನಿಮ್ಮ ಮನೋದೌರ್ಬಲ್ಯವೇ. ಬಹುಮುಖದಿಂದ ಪ್ರಾಪ್ತವಾಗ ತಕ್ಕ ಖರ್ಚನ್ನು ನಿರ್ವಹಿಸಲು ಶಕ್ತಿಸಾಲದೆ ಸಿಕ್ಕ ಸಿಕ್ಕವರ ಕೂಡೆ ಸಾಲಮಾಡುವಿರಿ ಕೆಲವೊಮ್ಮೆ ಕಾರಣವಿಲ್ಲದೆ ಸುಮ್ಮನೆ ಅಲೆದಾಡುವಿರಿ. ಶತ್ರುಗಳ ಪೀಡೆಯೂ ಕಡಿಮೆಯಿರದು, ಆದರೂ ತಾ. 13, 14ರಲ್ಲಿ ಮಿತ್ರರ ಬಲದಿಂದ ಕೆಲವೊಂದು ಇಷ್ಟಾರ್ಥಗಳನ್ನು ಹೊಂದುವಿರಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉಡುಕು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ದಳ್ಳ ಪರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:—ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸರ್ವೆಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಏಜಂಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, [illegible] ಬಾಗಲಕೋಟೆ [illegible]—
[illegible] ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ [illegible]

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd.No. M. 3618

ESTD. 1921 ಸ್ಥಾಪಿತ

31ನೆ ವರ್ಷ

18-10-1951

LICENCE No. 31
Licensed to Post without Prepayment

Founder: Sri A. B Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೭

NAVAYUGA WEEKLY Post Box No. 22 UDIPI.

Vol. 31
No 7

ಆಕರ್ಷಕ–ಆದರೆ ಅಪಾಯ!

ಚುನಾವಣೆ ಹತ್ತಿರ ಹತ್ತಿರ ಬರುವಾಗ ನೂತನ ವಿಚಾರಗಳು ನಮಗೆ ಕಂಡುಬರುತ್ತಿವೆ. ನಾಲ್ಕುವರ್ಷ ಜೀವನದಲ್ಲಿ ಭಾರತೀಯರಿಗೆ ಕಂಡುಬಾರದ ಸ್ವಾತಂತ್ರ್ಯ ಸುಖಾನುಭವವನ್ನು ತಾವು ಸಾಧಿಸಿಕೊಡುವೆವೆಂದು ಹಲವು ಪಕ್ಷಗಳು ಜನತೆಯನ್ನು ವಂಚಿಸುತ್ತಿವೆ. ಅಜ್ಞಾನ–ಅವಿದ್ಯೆಗಳ ಪರಿಣಾಮದಿಂದ ಹಲವರು ಇಂತಹ ಮೋಜಿನ ಮಾತಿಗೆ ಮರುಳಾಗಲೂಬಹುದು. ಅಲ್ಲದೆ ಸ್ವಾತಂತ್ರ್ಯಬಂದುದರಿಂದ ನಮಗೇನು ಅನುಕೂಲ? ಕಾಂಗ್ರೆಸ ಸರಕಾರ ಈ ನಾಲ್ಕುವರ್ಷಗಳಲ್ಲಿ ಸಾಧಿಸಿದ್ದೇನ? ಎಂಬುದನ್ನು ಅನುಭವವಿಲ್ಲದವರಿಗೆ ತಿಳಿಸಿದವರಿಲ್ಲ. ವಿದ್ಯೆಯನ್ನು ಕಲಿತು ಸ್ವಬುದ್ಧಿಯಿಟ್ಟುಕೊಂಡವರೂ ಕೂಡಾ ಸ್ವಾರ್ಥ–ಸ್ವಪ್ರತಿಷ್ಠೆ–ಅಧಿಕಾರಲಾಲಸೆಯಿಂದ ಇಂತಹ ಪಕ್ಷಗಳ ಬಾಲ ಹಿಡಿಯುವುದುಂಟು! ಹೊಸ ಪಕ್ಷಗಳು ಕೊಡುವ ಆಶ್ವಾಸನೆಗಳು ಕೇಳಲು ಬಹಳ ರಮ್ಯವಾಗಿರುತ್ತವೆ; ಆಕರ್ಷಕವಾಗಿರುತ್ತವೆ. ಆರ್ಥಿಕ ಆಘೋಷಣೆಗಳು ಯಥಾರ್ಥವಾಗಿ ಕಾರ್ಯರೂಪದಲ್ಲಿ ಬರಬಹುದೆಂಬ ಅಂಧವಿಶ್ವಾಸವನ್ನು ಕಟ್ಟಿಕೊಳ್ಳುವರು. ವಸ್ತುತಃ ಅವುಗಳು ಆ ಪಕ್ಷಗಳ ಕೇವಲ ಘೋಷಣಾ ಪತ್ರವೆಂಬುದನ್ನು ಮರೆತಿದ್ದೇವೆ. ಅವುಗಳು ಆಕರ್ಷಕವಾಗಿವೆಯೆಂದು ನಾವು ಸ್ವೀಕರಿಸುವುದು ದೇಶದ ಹಿತದ ದೃಷ್ಟಿಯಿಂದ ಅಪಾಯಕರ! ಅಲ್ಪಾನುಭವ–ಅಹಂಕಾರ ಮನೋವೃತ್ತಿ ಅಲ್ಪ ಸಂಖ್ಯಾತರಿಂದ ಕೂಡಿದ ಆ ಪಕ್ಷಗಳಿಂದ ಏನೂ ಸಾಧಿಸಲು ಬರುವಂತಿಲ್ಲ! ಮಾತ್ರವಲ್ಲ ಜನತೆಯನ್ನು ತಪ್ಪುದಾರಿ ಹಿಡಿಯುವಂತೆ ಮಾಡಿ ದೇಶದ ಶಾಂತಿ ಸುರಕ್ಷಿತತೆಯ ಬಗ್ಗೆ ಅವುಗಳಿಂದ ಅಪಾಯ ಹಾಗೂ ಗಂಡಾಂತರವಿದೆಯೆಂಬುದನ್ನು ಜನತೆ ಮರೆಯಕೂಡದು!

ಕಾಂಗ್ರೆಸ್ಸಿನ ಮುಂದಾಳುಗಳೆಂದು ಹಲವು ಅಧಿಕಾರಿಗಳು ಜನತೆಯ ನಡುವೆ ಕಾಣಿಸಿಕೊಳ್ಳುವದುಂಟು. ಬ್ಲ್ಯಾಕ್ ಮಾರ್ಕೆಟ್, ಕಳ್ಳಸಂತೆ ಮುಂತಾದ ಅವ್ಯಾಪಾರ ನಡೆಸಿ ಜನತೆಗೆ ಕೇಡುಬಯಸಿದವರು ಕಾಂಗ್ರೆಸ್ ಟಿಕೇಟಿನಿಂದ ಹುರಿಯಾಳುಗಳಾಗಲು ಕತ್ತುಮುಂದೆ ಚಾಚಿದ್ದಾರೆ. ಆರ್ಥಿಕ ಬಲವಿನಿಂದಲೊ– ಬೇರೆ ಆಶ್ವಾಸನೆಗಳಿಂದಲೋ ಜನತೆಯನ್ನು ಆಕರ್ಷಿಸಿಕೊಂಡಿದ್ದಾರೆ ಇನ್ನು ಹಲವರು ನಯವಾದ ಮಾತಿನಿಂದ ಜನತೆಯನ್ನು ಆಕರ್ಷಿಸಿಕೊಂಡಿದ್ದಾರೆ. ಸಂಸ್ಥೆಯ ಲಾಭವನ್ನು ಪಡೆಯುವ ಈ ಕಪಟವೇಷಧಾರಿಗಳ ವರ್ತನೆ ನಮಗೆ ಆಕರ್ಷಕವಾಗಿ ಕಾಣಬಹುದು! ಆದರೆ ಕೊಂಚರಣೆ, ಶ್ರೀಮದ್ಗಾಂಭೀರ್ಯವನ್ನು ಕಂಡ ನಾವು ಮೋಸಹೋಗಬಾರದು. ಇಷ್ಟು ಆಕರ್ಷಕವಾಗಿರುವವಾದರೂ ಅವ ಕಾಣೆಯುವಲ್ಲಿ ಆಕರ್ಷಕ ಆಶ್ವಾಸನೆಗಳ ಮೇಲೆ ನಾವು ನಾಯಕತ್ವದ ಅರ್ಹತೆಯಿರುವರೆಂದು ನಂಬಿದರೆ ಅನುಕೂಲಗಳಿಗಿಂತ ಅಪಾಯಗಳೇ ಜಾಸ್ತಿಯಾಗಬಹುದು.

ಸಮಾಜವಾದಿಗಳ ಪಕ್ಷ ನಮ್ಮ ದೇಶದ ಇನ್ನೊಂದು ಪ್ರಬಲಪಕ್ಷವೆನ್ನಬೇಕು. ಚುನಾವಣೆ ಹತ್ತಿರ ಬರುವಾಗ ಸಮಾಜವಾದಿಗಳು ಆಕರ್ಷಕವಾದ ಆಶ್ವಾಸನೆಗಳನ್ನು ಮುಂದೆ ಮಾಡುತ್ತಲಿರುವರು ಕೂಲಿಗಾರರೊಡನೆ ಸೇರಿಕೊಂಡು ತಾವು ಕೂಲಿಗಾರರ ಬಂಧು"ಗಳೆಂದು ತೋರಿಸಿಕೊಡುವರು, ರೈಲ್ವೆಯ ಮುಷ್ಕರವದಕ್ಕೊಂದು ಉತ್ತಮ ಉದಾಹರಣೆ–ಇದರಲ್ಲಿ ಅವರ ಮೂಲೋದ್ದೇಶ ಕೆಲಸಗಾರರ ಅಭ್ಯುದಯವಲ್ಲ, ಅವರನ್ನು ಆಕರ್ಷಿಸಿಕೊಳ್ಳುವ ಆಕಾಂಕ್ಷೆ! ನಮ್ಮ ದೇಶದಲ್ಲಿ ಹೆಚ್ಚು ಜನ ಬೇಸಾಯಗಾರರಿದ್ದಾರೆ. ಅವರ ಬಲವನ್ನು ಗಳಿಸುವದಕ್ಕೋಸ್ಕರ ಜಮೀನ್ದಾರೀ ನಿರ್ಮೂಲನವನ್ನು ತರುತ್ತೇವೆಯೆಂದು ಸಾರಿದ್ದಾರೆ. ಆದರೇನ ಕಾಂಗ್ರೆಸ್ ಸರಕಾರವೂ ಅದನ್ನು ನ್ಯಾಯದಲ್ಲಿ ತರುವದನ್ನು ಒಪ್ಪಿದೆ. ಆದರೂ ಕೃಷಿಕರ ಹಿತರಕ್ಷಣೆಯನ್ನು ಹೇತುವನ್ನಾಗಿಟ್ಟುಕೊಂಡು ಧನಿಯ ಭೂಮಿಯ ಮೇಲೆ ನಿಮ್ಮದೇ ಸಂಪೂರ್ಣ ಒಡೆತನವನ್ನು ಕೊಡುತ್ತೇವೆಯೆಂದು ಆಶ್ವಾಸನೆಯಿತ್ತಿದ್ದಾರೆ. ಇದರ ಜೊತೆಗೆ ಒಕ್ಕಲಿಗರಿಗೆ ಇನ್ನೊಂದು ವಿಚಿತ್ರರೀತಿಯ ಆಶ್ವಾಸನವಿದೆ. ಅದೇನೆಂದರೆ ಮಧ್ಯಪಾನ ನಿಷೇಧವನ್ನು ತೆಗೆದುಹಾಕುವದಂತೆ. ಇದು ಬಡವರ ಬಂಧುಗಳ ಆದರ್ಶ! ತನ್ನ ದಿನದ ಉತ್ಪನ್ನವನ್ನು ಈ ರೀತಿಯಾಗಿ ವ್ಯಯಿಸಿ ಒಡಕುಸಂಸಾರಗಳನ್ನು ಗೋಳಿಗೆ ಗುರಿಪಡಿಸುವದು ಒಂದು ನ್ಯಾಯ– ಆದರ್ಶವೆಂದಾದರೆ ಅದಕ್ಕಿಂತ ಮಿಗಿಲಾದ ಪ್ರಮಾದ ಬೇರೇನುಂಟು? ಈ ಬಗೆಯ ದುರಾಶೆಯ ಮೂಲಕ ಸಾಮಾನ್ಯ ಜನರ ಬಲವನ್ನು ಸಮಾಜವಾದಿಗಳು ಬಯಸುತ್ತಾರೆ. ಅನಾಪೇಕ್ಷಿಗಳಾದ ಹಲವರಿಗೆ ಈ ಕೇಳಿಕೆ–ಆಶ್ವಾಸನೆ ಆಕರ್ಷಕವಾಗಿ ತೋರಬಹುದು– ಇಂಥದೇ ಸರಕಾರ ನಮಗೆ ಬೇಕೆಂದೂ ಅಪೇಕ್ಷಿಸಬಹುದು. ಅವುಗಳ ಮೇಲೆ ಆಶೆ ಇಟ್ಟುಕೊಂಡವರಿಗೆ ಇದು ಆಕರ್ಷಣೆಂದು ತೋರಿತೇ ವಿನಹ ಅಪಾಯವೆಂದು ತೋರಲಿಕ್ಕಿಲ್ಲ! ಕುಡಿದವನಿಗೆ ರಸ್ತೆಯಂಚಿನ ದೀಪದ ಕಂಬಗಳೇ ಓಲಾಡುವಂತೆ ತೋರುತ್ತದೆ ವಿನಹ ತಾನು ವಾಲುತ್ತಿರುವೆನೆಂದು ತೋರುವುದಿಲ್ಲ. ಅಂತೆಯೇ ಸತ್ಯಾಲಕ್ಷ್ಯ ಹಿತವೆಂದು ತೋರುವ ಈ ಆಶ್ವಾಸನೆ ತುಂಬ ಆಕರ್ಷಕವಾದರೂ ಆಚರಣೆಗೆ ಬಂದರೆ ಅತ್ಯಂತ ಅಪಾಯಕರವೆಂದು ಮತ್ತೆ ಅನುಭವವಾದೀತು.

ದೇಹಸ್ವಾಸ್ಥ್ಯವಿಲ್ಲದವನಿಗೆ ಪಥ್ಯವಿರಬೇಕೆಂದು ವೈದ್ಯರು ಸೂಚಿಸಿದರೂ ಬಾಯಿ ಚಪಲ ಬೇಡುವುದನ್ನೇ ಹಾರೈಸುತ್ತದೆ. ಅಪಥ್ಯವಾದ ವಸ್ತುಗಳು ಅಥವಾ ತಿಂಡಿತಿನಸುಗಳು ಆತನನ್ನು ಆಕರ್ಷಿಸಿಕೊಳ್ಳಬಹುದು. ಆದರೆ ಅದರಿಂದ ಆತನ ಬದುಕಿಗೇ ಅಪಾಯ ಉಂಟಾದೀತು!

ವಾಕ್ಚಾತುರ್ಯದಿಂದಲೋ — ರೂಪಸೌಂದರ್ಯದಿಂದಲೋ ಒಬ್ಬರನ್ನೊಬ್ಬರು ಆಕರ್ಷಿಸಿಕೊಳ್ಳುವದುಂಟು. ಮಾತಿನ ಮೃದುತನದಿಂದ ತಾನು ಪರ ಲಕ್ಷ್ಯದಿಂ:– ಲೋಕಸೇವಾನಿರತನೆಂದು ಪ್ರದರ್ಶಿಸಿಕೊಳ್ಳುವದುಂಟು! ಅಂತಹ ಮನುಷ್ಯರು ಬಹಳ ಸುಲಭವಾಗಿ ಬೇರೆಯವರನ್ನು ಆಕರ್ಷಿಸಿಕೊಂಡು ತಮ್ಮ ಬಲೆಗೆ ಸೇರಿಸಿಕೊಳ್ಳುತ್ತಾರೆ ಆದರೆ ಕೊನೆಗೆ ಅವರ ಅಂತರ್ಯವೇನೆಂದು ತಿಳಿಯುವುದು ಅಪಾಯಕರ ಸನ್ನಿವೇಶ ಸಂದರ್ಭಗಳು ಬಂದಾಗಲೇ!

ಅಂತೂ ಮಹತ್ವಾಕಾಂಕ್ಷೆ ಇರುವಲ್ಲಿ ಆಕರ್ಷಣೆ ಬೇಕೇ ಬೇಕು. ಈ ಮಹತ್ವಾಕಾಂಕ್ಷೆಗಳು ಸ್ವಾರ್ಥ–ಸಂಕುಚಿತತೆ–ಜಾತೀಯತೆಯಿಂದ ಕೂಡಿದ್ದರೆ ಜನತೆಯ ಪಾಲಿಗೆ ಅವು ಅಪಾಯಕರವೇ ಸರಿ!

WANTED

Special Agents For The Following Places:

1. Kundapur 2 Udipi 3 Karkala 4 Puttur

Moderate business guarantee needed
Successful candidates will be selected as
Inspectors with permanent pay and other facilities

Apply to:

The Assian Assurance Co., Ltd.,

Branch Office: Hampankatta, Mangalore, S K
Head Office: "Assian Building", Ballard Estate, Fort, Bombay

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.



ಸಾಮಾನ್ಯ ಜನರಲ್ಲಿ ಜನಮತವೆಂಬುದು ಅಂಕೆ ಸಂಖ್ಯೆಯನ್ನು ಹೊಂದಿರುವದೆಂತ ತಪ್ಪು ಅಭಿಪ್ರಾಯವಿರುವುದು. ಜೇಮ್ಸ್ ಬ್ರೈಸ್ ಎಂಬುವರು ಹೇಳಿದಂತೆ ಒಂದು ಕಡೆ ಉತ್ಸಾಹಿಗಳಾದ 49 ಜನರಿದ್ದು ಇನ್ನೊಂದು ಕಡೆ ನಿರುತ್ಸಾಹಿಗಳಾದ 51 ಜನರಿದ್ದರೆ ಮೊದಲು ಹೇಳಿದ ಕಡಮೆ ಸಂಖ್ಯೆಯವರ ಅಭಿಪ್ರಾಯವೇ ಕೂಡಲೇ ಅಲ್ಲದಿದ್ದರೂ ಸ್ವಲ್ಪ ಸಮಯದಲ್ಲೇ ಜನಮತವಾಗುವದು. ಹೆಚ್ಚು ತಿಳುವಳಿಕೆಯುಳ್ಳ ತಜ್ಞರ ಅಭಿಪ್ರಾಯವು ಕೆಲವು ಸಲ ಜನಮತವಾಗುವದು ಅಜ್ಞಾನಿಗಳಾದ ಲಕ್ಷೋಪಲಕ್ಷ ಜನರ ಅಭಿಪ್ರಾಯವು ಬೆಲೆಬಾರದೆ ಹೋಗುವದು. ಜನಮತವೆಂಬುದು ಅಂಕೆಯ ಬಹುಮತವಲ್ಲ. ಬಹು ಪಕ್ಷವೆಂದರೆ ಭಾರವುಳ್ಳವ ಜನತೆಯ ಬಹು ಪಕ್ಷ.

ಜನಮತವೆಂಬುದು ನಿಜವಾಗಿ ಸಾರ್ವಜನಿಕ (Public) ವಾಗಬೇಕು ಮತ್ತು ನಿಜವಾದ ಮತ (Opinion) ವಾಗಬೇಕು. ನಮ್ಮ ಅಭಿಪ್ರಾಯಗಳಲ್ಲಿ ಕೆಲವು ನಮ್ಮ ತಿಳುವಳಿಕೆಯಿಂದ ಹುಟ್ಟಿದವು. ಕೆಲವು ಸ್ವಂತ ಅನುಭವದಿಂದ ಬಂದವು. ಇನ್ನು ಹೆಚ್ಚಾಗಿ ಇತರರಿಂದ ತಯಾರಾದ್ದನ್ನು ನಾವು ನಮ್ಮದೆಂತ ಸ್ವೀಕರಿಸಿರುವೆವು. ನಮ್ಮ ಮತಾಚಾರವನ್ನು ಗುರುಹಿರಿಯರಿಂದ ಕೇಳಿ ಆಚರಿಸುವೆವು. ರಾಜಕೀಯ ವಿಚಾರದಲ್ಲಿ ಪಕ್ಷಗಳು ಪತ್ರಿಕೆಗಳು ಸೂಚಿಸಿದಂತೆ ನಡೆಯುವೆವು ತತ್ವಗಳ ಬಗ್ಗಾಗಿ ಪಕ್ಷಗಳನ್ನಿಟ್ಟುಕೊಂಡಿರುವದಾದರೂ ಅವುಗಳೇ ನಮಗೆ ತತ್ವಗಳನ್ನು ತಯಾರಿಸುವವು. ನಾವು ಅರಿತಾಗಲೀ ಅರಿಯದೆಯಾಗಲೀ ಪರರ ಹೇಳಿಕೆಯನ್ನನುಸರಿಸಿ ನಡೆಸುವವದಾದರೂ ಅವುಗಳು ನಿಜವಾದ ಮತವಲ್ಲವೆಂತಾಗಲಿಕ್ಕಿಲ್ಲ. ಎಲ್ಲಾ ಸಮಾಜಗಳಲ್ಲೂ ಹಲವು ವಿಚಾರಗಳನ್ನು ಜನರು ಸಿದ್ಧಾಂತವೆಂದು ನಂಬುವರು. ಅವುಗಳೇ ಜನಮತವಾಗುವವು. ಆದರೆ ಪ್ರತಿ ವಿಚಾರವು ಹೀಗಾಗದು. ನಿತ್ಯಕಟ್ಟಳೆ ವ್ಯವಹಾರದಲ್ಲಿ ಹಲವು ಹೊಸ ಸಂಗತಿಗಳು ಮುಂದೆಬರುತ್ತವೆ. ಆಗ ಸ್ವಂತ ಆಲೋಚನೆ ಬೇಕಾಗಿದೆ. ಪ್ರತಿಯೊಂದರಲ್ಲೂ ಪರರ ಹೇಳಿಕೆ ಕೇಳುವದೆಂತಾದರೆ ಸ್ವಂತ ಅನುಭವವೇ ಇಲ್ಲವೆಂಬರ್ಥವಾಗುತ್ತದೆ. ಮನುಷ್ಯನಲ್ಲಿ ವಿಶ್ವಾಸವಿಡಬಹುದು ಪಕ್ಷಗಳಲ್ಲಿ ನಂಬಿಕೆ ಇರಬಹುದು ಆದರೆ ಪ್ರಶ್ನೆ ಎದುರುಬಂದ ವಿಷಯ ಸ್ವಂತ ಅನುಭವವಿಲ್ಲವೆಂಬುದೇ ಅರ್ಥ.

ಜನಮತ ಉಂಟಾಗುವ ಗುಣಲಕ್ಷಣಗಳು ಯಾವ್ಯಾವದು ಎಂಬುದನ್ನು ತಿಳಿಯಬೇಕಾಗಿದೆ. ತಜ್ಞರ ಅಭಿಪ್ರಾಯದ ಮಟ್ಟಿಗೆ ಹೇಳುವದಾದರೆ ಇದು ಏಕಮತ ಸಂಯೋಗದ ಸ್ವಾರ್ಥತೆಯ ತತ್ವ (Doctrine of Harmony of Interest) ಹೊಂದಿರುವದು. ಜನರು ತಮ್ಮ ಪ್ರಯೋಜನ ಮತ್ತದನ್ನು ಹೊಂದುವರೆ ಹಿಡಿಯುವ ದಾರಿ ಅವುಗಳ ಕುರಿತು ಮತಭೇದ ಉಂಟಾಗುವದು. ಮೇಲೆ ಹೇಳಿದ ತತ್ವದ ಅರ್ಥವೇನೆಂದರೆ ಸರ್ವಜನರ ಪ್ರಯೋಜನವೂ ಒಂದೇ ಆದ್ದರಿಂದ ಐಕ್ಯತೆಯಿಂದ ನಡೆಯುವರು ತಮಗೆ ಕೆಟ್ಟದ್ದಾಗುವದನ್ನು ತಾವೇ ಮಾಡಿಕೊಳ್ಳಬ ಯಾರೂ ತಯಾರಿಲ್ಲ. ಆದರೆ ಬಹು ಪಕ್ಷದವರು ಅನ್ಯಾಯವಾಗಿ ಅಲ್ಪ ಸಂ

ಪ್ರಜಾಸತ್ತೆ

ಜನರೂ ಜನಮತವೂ

[ಕಳೆದ ಸಂಚಿಕೆಯಿಂದ ಮುಂದರಿದುದು]

ಖ್ಯಾತರನ್ನು ಕಷ್ಟಕ್ಕೀಡು ಮಾಡಬಹುದು ಆದಲ್ಲದೆ ಈಗಿನ ಜನಾಂಗದವರು ನಾಳೆ ಬರುವ ಜನಾಂಗಕ್ಕೆ ಕೆಡುಕುಂಟಾಗುವ ಕಾರ್ಯವೆಸಗಬಹುದು. ಸ್ವಾರ್ಥದ ಐಕ್ಯತೆ ಇಲ್ಲದಿದ್ದರೆ ನಾವು ನಾಗರಿಕರಾಗಲಿಕ್ಕಿಲ್ಲ ಮತ್ತು ಸಮಾಜ ಸಂಘಟಿಸಲಿಕ್ಕಿಲ್ಲ. ಮಾನವರು ಗುಂಪಾಗಿ ಜೀವಿಸುವ (Gregarious animal) ಪ್ರಾಣಿಗಳಲ್ಲಿ ಶ್ರೇಷ್ಠವರ್ಗದವರು. ಗುಂಪಾಗಿ ಜೀವಿಸುವ ಪ್ರಾಣಿಗಳಲ್ಲಿ ಹಿಂಡುಗಳ ಸ್ವಾಭಾವಿಕ ಬುದ್ಧಿ ಇರುತ್ತದೆ. ಮನುಷ್ಯರು ಇತರ ಹಿಂಡುಗಳಂತೆ ವರ್ತಿಸುವದು ಸಂಯುಲ್ಲವೆಂತ ಪ್ರಾಜ್ಞರು ಸಹೋದರ ಭಾವವೆಂಬುದಿರಬೇಕೆಂತ ಪ್ರಾಚೀನ ಕಾಲದಿಂದ ಬೋಧಿಸುವದಾಗಿದೆ. ಆದ್ದರಿಂದಲೇ ಫ್ರೆಂಚರು ಸಹೋದರತ್ವದ ಕುರಿತು ಅವರ ಡಿಕ್ಲೇರೇಶನ್ನಿನಲ್ಲಿ ಒತ್ತಿ ಹೇಳಿರುವರು. ಮೇಲೆ ಹೇಳಿದ ತತ್ವದಲ್ಲಿ ಸ್ವಲ್ಪ ಸತ್ಯವಿರುವುದಾದರೂ ಅದೇ ಸಂಪೂರ್ಣವೆಂತ ವಿಶ್ವಾಸವಿಡುವದು ತಪ್ಪು. ರಾಜಕೀಯ ವಿಚಾರದ ಒತ್ತಡದಲ್ಲಿ ಮತ್ತು ಮತದಾರರ ಸಂಖ್ಯೆಯು ಜಾಸ್ತಿಯಾದಲ್ಲಿ ಮತ್ತು ರಾಷ್ಟ್ರಗಳು ದೊಡ್ಡದಾಗಿ ವಿಶಾಲವಾದ ಮೇಲೆ ಮನುಷ್ಯರಿಗೆ ಯಾವ ಸಮಯದಲ್ಲಿ ಯಾವ್ಯಾವ ಪ್ರೇರಣೆಗಳುಂಟಾಗುವವು ಎಂದು ಗತಕಾಲದ ತತ್ವಜ್ಞಾನಿಗಳು ಆಲೋಚಿಸಲೇ ಇಲ್ಲ. ವರ್ಣ ಭೇದವೆಂಬುದು ಇದನ್ನೆಲ್ಲಾ ಮೂಲೆಗೊತ್ತಿ ಯುಬಿ ವರ್ಣದವರು ತಂತಮ್ಮ ಹಿತವನ್ನೇ ಸಾಧಿಸುವರು ಇದರಿಂದ ಕೆಲವೆಡೆ ಪ್ರಜಾಮತ ಸರಕಾರವು ಸರಾಗವಾಗಿ ನಡೆಯುದಂತೆ ತಡೆ ಬಂದದೆ. ಒಂದು ಜನಾಂಗವು ಉತ್ಕೃಷ್ಟವೆಂದೂ ಇನ್ನೊಂದು ಸರಿಸಮಾನರಾಗಬೇಕೆಂತ ಸಾಧಿಸುವಾಗ ಅಲ್ಪಸಂಖ್ಯಾತರು ಬಹುಮತಕ್ಕೆ ಎಂದೂ ತಲೆಬಾಗರು. ಪರಸ್ಪರ ವಿರುದ್ಧ ಯಾವಾಗಲೂ ಇರುವದು. ಇವರು ಮುಖ್ಯ ರಾಜಕೀಯ ವಿಚಾರವಾದ ರಾಜ್ಯ ಘಟನೆ, ಸರಕಾರದವರ ಅಧಿಕಾರ ವಗೈರೆ ವಿಷಯ ಭಿನ್ನಾಭಿಪ್ರಾಯ ತೋರುವದು. ಇವರನ್ನು ಪರಸ್ಪರ ವಿರುದ್ಧಗಳೆಂದು (Irreconcilables) ಕರೆಯುವರು ಇವರ ಮಟ್ಟಿಗೆ ಜನಮತವೆಂಬುದೇ ಇಲ್ಲ. ತಾಳ್ಮೆ, ಸಹಕಾರ, ಐಕ್ಯತೆ ಮತ್ತು ವಿಧೇಯತೆ ಇವೇ ಮೊದಲಾದ ಗುಣಗಳು ಇವರ ಆಸುಪಾಸಿನಲ್ಲಿ ಸಹಾ ಇರುವುದಿಲ್ಲ. ಇಂಥಾ ಸಂಘ ಸಂಸ್ಥೆಗಳು ದುರ್ದೈವವಶಾತ್ ನಮ್ಮ ರಾಷ್ಟ್ರದಲ್ಲಿ ಇತ್ತೀಚೆಗೆ ಎಷ್ಟೋ ತಲೆದೋರಿವೆ. ಇಂಥಾ ಸಮಾಜದಲ್ಲಿ ಜನಮತವನ್ನು ತಿಳಿಯುವುದೇ ಕಷ್ಟ ಪ್ರಜಾಸತ್ತೆಯ ಅಡಿಗಲ್ಲನ್ನೇ ಕಿತ್ತು ಹಾಕುವ ದುರ್ಲಕ್ಷಣಗಳು ಇದರಲ್ಲಿವೆ. ಇಂಥಾ ಸಮಾಜವು ಸ್ವತಂತ್ರ ಸರಕಾರ ನಡೆಸಲು ಅಯೋಗ್ಯವೆಂದೇ ಹೇಳಬೇಕು. ಒಂದು ಸಮಾಜದಲ್ಲಿ ಸಜಾತೀಯವರಿರುವದು ಒಳ್ಳೇದು (Homogenous Population) ಮಾತ್ರ ತರ ದೇಶಗಳಲ್ಲಿ ಇತರ ಜನಾಂಗದವರು ವಾಸಿಸಲು ಕಾನೂನು ನಿರ್ಬಂಧ ಮತ್ತು ಮಿತಿ ಇದೆ. ಅನೇಕ ಜಾತಿ ಮತ್ತು ವರ್ಣದವರಿದ್ದರೂ ರಾಜಕೀಯ ವಿಚಾರದಲ್ಲಿ ಒಂದು ಮಾತಬಹುದೆಂಬ ಬಗ್ಗೆ ಸ್ವಿಜರ್ಲೇಂಡು ಒಂದು ಮುಖ್ಯ ದೃಷ್ಟಾಂತವಾಗಿದೆ. ಜನಮತದ ಅನುಕೂಲತೆಗೆ ಇನ್ನೊಂದು ಬಲವಾದ ಗುಣ ಬೇಕಾಗಿದೆ. ತಮ್ಮ ವಿರೋಧವನ್ನು ಶಾಂತರೀತಿಯಿಂದ ನ್ಯಾಯ ಮಾರ್ಗದಲ್ಲಿ ಸೂಚಿಸುವರೆ, ಪ್ರಚಾರ ಮಾಡುವರೆ ಮತ್ತು ಜನರನ್ನು ಒಲಿಸುವರೆ ವಾಕ್ ಸ್ವಾತಂತ್ರ್ಯವಿರಬೇಕು. ಜನರು ಪ್ರೋತ್ಸಾಹಿಸಿ ಒಲಿಸುವ ಹಕ್ಕಿಲ್ಲದಿರುವಲ್ಲಿ ಸರಕಾರವು ಬಹುಮತವನ್ನನುಸರಿಸಿ ನಡೆಯುತ್ತೇವೆಂಬ ಬಗ್ಗೆ ಸಮಾಧಾನವಾಗುವದಿಲ್ಲ ಮತ್ತು ನಿಜವಾದ ಜನಮತವೆಂದು ನಂಬಿಕೆಯಿಟ್ಟು ವಿಶ್ವಾಸಪೂರ್ವಕವಾಗಿ ಒಪ್ಪಿಗೆ ಕೊಡಲು ಮನಸ್ಸು ಒಡಂಬಡುವದಿಲ್ಲ.

ಜನಮತಕ್ಕೂ ಒಂದು ಮಿತಿಯಿದೆ. ಎಲ್ಲಾ ವಿಷಯಗಳಿಗೂ ಜನಮತ ಬೇಕೆನ್ನುವದು ತಪ್ಪು. ಮತಾಚಾರದ ವಿಷಯ ತಾಳ್ಮೆ ಬೇಕು ರಾಜಕೀಯ ಎದುರು ಪಕ್ಷದವರ ಕುರಿತು ಸಹನ ಶಕ್ತಿ ಬೇಕು ರಾಜ್ಯ ಘಟನೆಯು ಶಾಸನ ರೂಪದಲ್ಲಿ ಬರಹ ಮೂಲಕವಿರುವಲ್ಲಿ ಜನಮತವೆಂಬುದು ಅದರ ತಳ್ಳಿಗೆ ಹೋಗಬಾರದು. ಹೀಗಲ್ಲದಿರುವಲ್ಲಿ ಪ್ರಜಾಸತ್ತೆಯು ತಳಹದಿಯನ್ನೇ ಮುಗುಚಿದಂತಾಗುವದು. ಜನರಲ್ಲಿ ಸಾಧಾರಣ ಒಪ್ಪಿಗೆ ಇರುವ ವಿಚಾರಗಳಲ್ಲಿ ಮತ್ತು ಜನರಲ್ಲಿ ದೃಢನಂಬಿಕೆಯಿರುವ ಕೆಲವು ವಿಚಾರಗಳಲ್ಲಿ ಭೇದ ಉಂಟಾದರೆ ಇನ್ನು ಹೆಚ್ಚು ಜನರು ತಮ್ಮ ತಿಳುವಳಿಕೆಯಿಂದ ಬುದ್ಧಿಯುಕ್ತಿ ಮಾರ್ಗಕ್ಕೆ ಬರುವರೆ ಸಾಕಷ್ಟು ಅನುಕೂಲತೆ ಮತ್ತು ಸಂಗ್ರಹ ಇರುವದಾದರೆ ಜನಮತವನ್ನು ಎಣಿಸಬಹುದು. ಸರಿಯಾದ ಜನಮತ ಉಂಟಾಗಬೇಕಾದರೆ ಜನರಲ್ಲಿ ವಿದ್ಯೆ, ಬುದ್ಧಿ ಬೇಕು. ಸಾಮಾನ್ಯ ಜನರು ಸಾರ್ವಜನಿಕ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕು.

—ಸಿ. ಎಚ್. ಶೆಟ್ಟಿ, ಬಿ. ಎ.

(ಮುಂದುವರಿಯುವುದು.)

TEL 40592

WATSONS AERATED WATERS
14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಶ್ಚಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು,	ಸ್ಥಿರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

WANTED

Agents for the sale of our new design fountain pens on Rs 300/- To Rs. 400/ P. M. salary or commission basis For samples and free terms apply:

LAWRANCE BROTHERS (N. W. U.)
Nagdevi BOMBAY 3

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಾವಿಗೆ ಹಾಲೆರದಂತೆ!

ಭಾರತ ಸರಕಾರದ ಕಾಯಿದೆ ಮಂ[ತ್ರಿ ಡಾ|] ಅಂಬೇಡ್ಕರರ ರಾಜೀನಾಮೆಯು ಸ್ವತಃ [ಒಂದು ಘಟನೆ]ವೊಂದು ಅತ್ಯಂತ ನಿಂದಾಸ್ಪದವಾದುದು [ಆಗಿ]ರುತ್ತದೆ. ಸಾರ್ವಜನಿಕ ಅಭಿಪ್ರಾಯ ಅ[ನು]ಭವಗಳ ಮೇಲೆ ಸರ್ವಾಧಿಕಾರವನ್ನು [ಹೇ]ರುವ ಅಂಬೇಡ್ಕರರಂತಹ ಜಾತೀಯ[ವ್ಯ]ಕ್ತಿ ಪ್ರಜಾಪ್ರಭುತ್ವದಲ್ಲೇಲು ಗೀರಾ ಅ[ಯೋ]ಗ್ಯರೆಂಬುದು ಅವರ ವರ್ತನೆಯಿಂದ [ನ]ಮಗೆ ಮನವರಿಕೆಯಾಗದಿರದು.

ಮುಖ್ಯವಾಗಿ ಹಿಂದೂ ಶಾಸ್ತ್ರ ಕ್ರೋ[ಡೀ]ಕರಣ ಮಸೂದೆಯನ್ನು ಮುಂದು[ವರ]ಸದ್ದೇ ರಾಜಿನಾಮೆಗೆ ಕಾರಣ[ವ]ಾಗಿರುತ್ತದೆಂಬುದನ್ನು ನಾವು ಹಿಂದೆ [ಯೇ] ಬರೆದಿದ್ದೆವು. ಡಾ| ಅಂಬೇಡ್ಕ[ರ]ರು ನೆಹರೂರವರಿಗೆ ಹಿಂದೆ ಬರೆದ [ಪ]ತ್ರದಲ್ಲಿ ತನ್ನ ಅನಾರೋಗ್ಯದ ನಿಮಿತ್ತ [ತಾ]ನು ಮಂತ್ರಿಪದದಲ್ಲಿ ಕಾರ್ಯ ಮಾಡು[ವು]ದು ಸಾಧ್ಯವಿಲ್ಲೆಂದೂ, ಆದಷ್ಟು ಶೀಘ್ರ [ನಿ]ವೃತ್ತಿಗೊಳಿಸಬೇಕೆಂದೂ ಕೇಳಿಕೊಂಡಿ[ದ್ದ]ರು. ಈಗ ಅದೇ ಮಾತನ್ನು "ಹಿಂದೂ [ಕ]ೋಡ್ ಮಸೂದೆ ಸಂಪೂರ್ಣ ಪಾಸಾಗ[ಬ]ೇಕೆಂಬ ಉದ್ದೇಶದಿಂದ ಆ ಬೇಡಿಕೆಯ[ನ್ನು] ಹಾಕಲಾಗಿದೆಯೆಂದು ತಿರುಗಿಸಿಕೊಂಡಿದ್ದಾರೆ.

ರಾಜಿನಾಮೆಯ ನಿಮಿತ್ತ ಅವರು ಕೊಟ್ಟ ಕಾರಣಗಳು ನಿಜವಾಗಿಯೂ ನಿಂದಾಸ್ಪದವಾದಂಥವುಗಳು. 1) ಇತರ ಮಂತ್ರಿಗಳಿಗೆ ಎರಡು ಮೂರು ಖಾತೆಗಳನ್ನು ಹಂಚಿದರೂ ನನ್ನ ಪಾಲಿಗೆ ಯಾವ ಖಾತೆಯನ್ನೂ ಹಂಚಲಿಲ್ಲ 2] ಪ್ರಧಾನ ಮುಖ್ಯಮಂತ್ರಿಗಳು ಬೇಕೆಂತಲೇ ಹಿಂದೂ ಶಾಸ್ತ್ರ ಕ್ರೋಡೀಕರಣ ಮಸೂದೆಯ ಕತ್ತು ಹಿಸುಕಿದ್ದಾರೆ. 3) ಕಮ್ಯೂನಿಸ್ಟ ಚೀನದ ಕುರಿತು ಭಾರತ ಸರಕಾರವು ಒಲವನ್ನು ತೋರಿಸಿ ಅಮೆರಿಕೆಯೊಡನೆ ತಿರಸ್ಕಾರ ಕಟ್ಟಿಕೊಂಡದ್ದು ದೇಶದ ಅನಿಷ್ಟಕ್ಕೆ ಕಾರಣವಾಗಿದೆ 4] ಕಾಶ್ಮೀರವನ್ನು ವಿಭಜಿಸಿ ಪಾಕಿಸ್ಥಾನದಂಶವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕು 5] ದಲಿತ ವರ್ಗದವರ ವಿದ್ಯೆ, ಉದ್ಯೋಗ, ಅಭಿವೃದ್ಧಿಗಾಗಿ ಸರಕಾರ ಏನನ್ನೂ ಮಾಡಲಿಲ್ಲ. ಎಂಬಾಶಯದ ಆರೋಪಗಳನ್ನು ಡಾ| ಅಂಬೇಡ್ಕರರು ಕೊಟ್ಟಿರುವರು.

ಮೇಲಿನ ವಾದಗಳು ಪಲ್ಲವೆ ಆರೋಪಗಳು ದೇಶವಿದೇಶಗಳಲ್ಲಿ ತನ್ನ ಖ್ಯಾತಿ ಬೆಳಗಿ ಮುಂಬರುವ ಚುನಾವಣೆಯಲ್ಲಿ ಗೆಲ್ಲಬೇಕೆಂದು ಮೂಲೋದ್ದೇಶವನ್ನು ಪ್ರತಿಬಿಂಬಿಸುವಂತಿದೆ. ಕೆಲವು ದಿನಗಳ ಕೆಳಗೆ ಆ ಭಾ. ದಲಿತ ವರ್ಗದ ಘೋಷಣಾ ಪತ್ರದಲ್ಲಿ ಭಾರತದ ವಿದೇಶಾಂಗ ನೀತಿಯನ್ನೂ, ಮದ್ಯಪಾನ ನಿರೋಧ ಕ್ರಮವನ್ನೂ ಟೀಕಿಸಲಾಗಿದೆ. ನಾಲ್ಕು ವರ್ಷಗಳಿಂದ ಕಾಯಿದೆ ಮಂತ್ರಿಯಾಗಿದ್ದುಕೊಂಡು ಹೊರಗೆ ಬಂದ ತಕ್ಷಣ ಸರಕಾರದ ವಿರುದ್ಧ ಈ ರೀತಿಯ ಬಂಡಾಯವೇಳುವದಕ್ಕಿಂತ ಮಿಗಿಲಾದ ದೇಶದ್ರೋಹ ಬೇರಿರಲಾರದು. ದಲಿತವರ್ಗದವರಿಗೆ ಭಾರತ ಸರಕಾರವು ನೀಡಿದ ಸಹಕಾರ–ಅಧಿಕಾರ ಸಹಜವಾಗಿಯೂ ಶ್ಲಾಘನೀಯವಾದುದು! ಆರಂಭದಿಂದಲೂ ಆ ಜನತೆಯ ಅಭಿವೃದ್ಧಿಗಾಗಿ ಹೇರಳ ಹಣವನ್ನು ವ್ಯಯ ಮಾಡಿದೆ. ಯೋಗ್ಯ ಸ್ಥಾನಮಾನ ಹಾಗೂ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟಿದೆ.

ಹೀಗಿದ್ದರೂ ಡಾ| ಅಂಬೇಡ್ಕರರು ಉಪಕಾರವನ್ನು ಮರೆತು ಅಸತ್ಯ ನುಡಿಗಳನ್ನಾಡಿದ್ದಾರೆ. ಕಮ್ಯೂನಿಸ್ಟ ಚೀನದ ಪರವಾಗಿ ಭಾರತ ಸರಕಾರ ವಹಿಸಿದ ನಿಲುಮೆ ಅತ್ಯಂತ ಯೋಗ್ಯವೇ ಇರುತ್ತದೆ. ಬಂಡವಳಶಾಹಿಗಳ ಅಲ್ಪಶಿಗೆ ಬಲಿಬಿದ್ದು ಆತ್ಮಗೌರವವನ್ನು ಕಳೆದುಕೊಳ್ಳುವದನ್ನು ಭಾರತ ಸರಕಾರವೆಂದೂ ಸಹಿಸದು! ಸ್ವಾರ್ಥಕ್ಕಾಗಿ ಬಂಡವಳಶಾಹಿಗಳ ಗುಲಾಮರಾಗುವುದು ಹೇಡಿಗಳ ಲಕ್ಷಣವೇ ಸರಿ! ಪಾಕಿಸ್ತಾನದ ಮಟ್ಟಿಗೆ ಹೇಳುವದೆಂದರೆ ಭಾರತ ಸರಕಾರವು ಕಾಶ್ಮೀರ ಜನತೆಯ ಇಚ್ಛೆಯ ಮೇರೆಯೆ ಆದು ಕಾಶ್ಮೀರದ ಆತ್ಮರಕ್ಷಣೆಗಾಗಿ ನಿಂತಿದೆ. ಕಾಶ್ಮೀರ ಜನ ಬೇಡವೆಂದರೆ ಮರುಕ್ಷಣದಲ್ಲೇ ಭಾರತವು ಕಾಲು ಕೀಳುವುದು. ವಸ್ತುಸ್ಥಿತಿಯ ಪರಿಪೂರ್ಣ ಜ್ಞಾನವುಳ್ಳ ಅಂಬೇಡ್ಕರರು ತಿಳಿದೂತಿಳಿದೂ ಕಾಶ್ಮೀರದಲ್ಲಿಯ ಭಾರತದ ನಿಲುಮೆಯ ಬಗ್ಗೆ ಅನುಚಿತವಾದ ಮಾತನ್ನಾಡಿದ್ದಾರೆ. ನಂಜು, ಸ್ವಾರ್ಥ, ಸ್ವಪ್ರತಿಷ್ಠೆ, ಜಾತೀಯತೆಗಳೇ ಅವರಲ್ಲಿ ಎದ್ದು ಕಾಣುತ್ತಿವೆ.

ಈ ಹಾರಾಟ, ಅಬ್ಬರ, ಆಕ್ರೋಶ ಬರುವ ಚುನಾವಣೆಯ ಪ್ರಚಾರ ವೈಖರಿಯಲ್ಲದೆ ಬೇರೇನಿಲ್ಲ! ಭಾರತದ ವಿದೇಶಾಂಗ ನೀತಿಯನ್ನು ಟೀಕೆ ಮಾಡಿದ್ದು ವಿದೇಶಗಳಲ್ಲಿ ಹಾಗೂ ಪಾಕಿಸ್ತಾನದಲ್ಲಿಯೂ ತನಗೆ ಬೆಂಬಲ ಪ್ರಖ್ಯಾತಿ ದೊರೆಯಲೆಂಬ ಒಂದೇ ಉದ್ದೇಶದಿಂದ! ಡಾ| ಅಂಬೇಡ್ಕರರು ಬುದ್ಧಿವಂತರೇನೋ ಹೌದು; ಈಗ ಅವರು ತೋರಿಸುವ ಅತಿ ಬುದ್ಧಿವಂತಿಕೆಯಿಂದ ದಲಿತ ವರ್ಗಕ್ಕೂ–ದೇಶಕ್ಕೂ ಕೂಡಿಯೇ ಅನ್ಯಾಯಮಾಡಿದಂತಾಗಿದೆ. ಮಾತ್ರವಲ್ಲ ನಾಲ್ಕು ವರ್ಷಗಳಲ್ಲಿ ಸರಕಾರದೊಂದಿಗೆ ಇದ್ದು ಇಂದು ಅಂತರಂಗ ವಿಚಾರದಲ್ಲಿ ಕಲುಷಿತ ವಾತಾವರಣವನ್ನುಂಟುಮಾಡಿದ್ದನ್ನು ನೋಡುವಾಗ ನೆಹರೂರವರು ಅವರನ್ನು ಮಾನ್ಯತೆಕೊಟ್ಟು ನಡೆಸಿಕೊಂಡದ್ದು "ಹಾವಿಗೆ ಹಾಲೆರದಂತಾಯಿತೇನೋ" ಎಂದೆನಿಸುತ್ತದೆ.

ಭಾರತದ ಚಲಚ್ಚಿತ್ರದಲ್ಲಿ ಪ್ರಗತಿ

ಚಲಚ್ಚಿತ್ರ ನಿರ್ಮಾಣ ಕಾರ್ಯದಲ್ಲಿ ಭಾರತವು ಎರಡನೆಯ ಸ್ಥಾನವನ್ನು ಗಳಿಸಿರುತ್ತದೆ. 60 ಸ್ಟುಡಿಯೋಗಳು ವರ್ಷ ಒಂದಕ್ಕೆ ಸುಮಾರು 275 ಚಿತ್ರಗಳನ್ನು ತಯಾರಿಸುತ್ತಿವೆ. 3250 ಸಿನೇಮಾ ಗೃಹಗಳಿರುತ್ತವೆಯೆಂದು ತಿಳಿದುಬರುತ್ತದೆ. ಸುಮಾರು 60 ಕೋಟಿ ಜನ ನೋಡಿ ಆನಂದಿಸುವ ಈ ಉದ್ದಿಮೆಯ ಆದಾಯವು 20 ಕೋಟಿ ಇರುತ್ತದೆ.

ದಿನದಿಂದ ದಿನಕ್ಕೆ ಪ್ರಗತಿ ಹೊಂದುತ್ತಿರುವ ಚಲಚ್ಚಿತ್ರ ಉದ್ದಿಮೆಯ ಸುಧಾರಣೆಯ ಬಗ್ಗೆ ಸರಕಾರವು ವಿಚಾರಣಾ ಸಮಿತಿಯನ್ನೇರ್ಪಡಿಸಿದ್ದು ಆ ಸಮಿತಿಯೂ ಕೂಲಂಕುಷ ವಿಚಾರವಿನಿಮಯ ಮಾಡಿ ಸರಕಾರಕ್ಕೆ ವರದಿ ಒಪ್ಪಿಸಿರುತ್ತದೆ. ಅಮೇರಿಕೆಯನ್ನು ಬಿಟ್ಟರೆ ಭಾರತವೇ ಈ ಉದ್ದಿಮೆಯಲ್ಲಿ ಪ್ರಧಾನವಾದ ಸ್ಥಾನ ಪಡೆಯುವದೆಂದು ಸಮಿತಿ ಅಭಿಪ್ರಾಯ ಪಟ್ಟಿದೆ. ಪರದೇಶಗಳಲ್ಲೂ ಭಾರತದ ಚಿತ್ರಗಳ ಬೇಡಿಕೆ ಹೆಚ್ಚಿದೆ. ತಾಂತ್ರಿಕವಾಗಿ ಚಲಚ್ಚಿತ್ರ ತಯಾರಿಕೆಯಲ್ಲಿ ಸುಧಾರಣೆ ನಡೆದಿರುವದಾದರೂ ಕಲಾತ್ಮಕವಾಗಿಯೂ, ವಸ್ತುನಿರೂಪಣೆಯಲ್ಲಿಯೂ ಅನೇಕ ಹಲವು–ಲೋಪದೋಷಗಳು ಹೆಚ್ಚಾಗಿವೆಯೆಂದು ಸಮಿತಿಯು ಸೂಚಿಸಿದಂತೆ ಶ್ಲಾಘನೀಯವಾದುದು!

ಜನತೆಯ ಬುದ್ಧಿ ತಿಳುವಳಿಕೆಗೆ ಚಲಚ್ಚಿತ್ರವು ಹೇಗೆ ಮುಖ್ಯ ಸಾಧನವಾಗಿದೆಯೋ–ಅಶ್ಲೀಲ ವರ್ತನೆಗೆ–ವಿಲಾಸ ಜೀವನಕ್ಕೆ ಅಷ್ಟೇ ಪ್ರಧಾನವಾಗಿದೆ. ಬಹಳ ಕಡಿಮೆ ಸಂಖ್ಯೆಯಲ್ಲಿ ಉತ್ತಮ ಚಿತ್ರಗಳು ಬರುತ್ತಿವೆ. ಆರ್ಥಿಕ ಮುಗ್ಗಟ್ಟು ಈ ಉದ್ಯಮಕ್ಕೂ ತಟ್ಟಿದೆಯಾದ್ದರಿಂದ ಚಿತ್ರನಿರ್ಮಾಪಕರು ಹಣ ಸಂಪಾದನೆಯ ದೃಷ್ಟಿಯಿಂದ ಜನಮನರಂಜನೆಯ ಸಾಮಾನ್ಯ ಚಿತ್ರಗಳನ್ನೇ ನಿರ್ಮಿಸುತ್ತಲಿದ್ದಾರೆ. ವಸ್ತುತಃ ಜನರ ಅಭಿರುಚಿ ಇದರಿಂದ ಕೆಡುತ್ತಲಿದೆ. ಉತ್ತಮ ಕತೆ, ನಿರ್ದೇಶನ, ಕಲಾ ಪ್ರೌಢಿಮೆಗಳಿಂದ ಕೂಡಿದ ಚಿತ್ರಗಳು ಬಹಳ ಕಡಿಮೆ ಅಂತಲೇ ಈ ಮುಖ್ಯವಾದ ಅಂಶದಲ್ಲಿ ಆದೇಶ ಕೊಡಲು ಶಾಶ್ವತ ಸ್ವಾಯತ್ತ ಚಲಚಿತ್ರ ಮಂಡಲವೊಂದನ್ನು ನೇಮಿಸಬೇಕೆಂದು ಸಮಿತಿ ಸೂಚಿಸಿದೆ. ಈ ಮಂಡಳದಲ್ಲಿ ನಿರ್ದೇಶಕರು, ಪ್ರದರ್ಶಕರು, ಕಲಾವಿದರು, ಕೆಲಸಗಾರರು ಹಾಗೂ ಸರಕಾರದ ಪ್ರತಿನಿಧಿಗಳಿರುವರು. ಚಿತ್ರನಿರ್ಮಾಣದಲ್ಲಿ ಸುಧಾರಣೆ ಕೈಗೊಳ್ಳುವುದು ಮಾತ್ರವಲ್ಲದೆ ಆರ್ಥಿಕ ಸಹಕಾರ–ವಿದೇಶಗಳಿಗೆ ನಿರ್ಯಾತ–ಆಯಾತ ಸಂಬಂಧಗಳ ಮೇಲ್ವಿಚಾರಣೆ ಮುಂತಾದ ಅಧಿಕಾರವು [illegible] ಕ್ಕಿದೆ.

ಚಲಚ್ಚಿತ್ರ ವಿಚಾರಣಾ ಸಮಿತಿಯು ಇಷ್ಟು ದೀರ್ಘ ಕಾಲ ವಿಚಾರ ಪರಿಶೀಲನೆಗಾಗಿ ತೆಗೆದುಕೊಂಡರೂ ಕೊನೆಗೆ ಅಪಾದಾಯಕವೂ–ವಿಧಾಯಕವೂ ಆಗಿರುವ ವರದಿಯನ್ನು ಒಪ್ಪಿಸಿತೆಂದೇ ಹೇಳಬೇಕು!

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925 H. O. UDIPI.



"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ, ಉತ್ಕೃಷ್ಟ ತರಗತಿಯ ಯಂತ್ರ.

ಬೆಲೆ ರೂ. 465.

ನಿಮ್ಮ ಬಂದರ ಡಿಲೆವರಿ

The Vijay Engineering Co. Ltd.

BOMBAY-10.

ಋತುಸ್ರಾವ ನಿಂತಿತು

'ಕುಸುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಪದರಷ್ಟು ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾಧಾರಣ ಮುಂದಿಗೆ ಮಾತ್ರೆ ಗುಣವಾಗದಿದ್ದಲ್ಲಿ ರೂ. 3; ಸ್ಪೆಶಲ್ ರೂ. 5– ಅಧಿಕಾಧಿಕ ಸ್ಪೆಶಲ್ ರೂ. 8– [ಪೋ. ಖ. ಪತ್ಯೇಕ ಪ್ರತ್ಯೇಕ.]

MIS D. DEVEE, F. DS (N. J.)

Tollygunge CALCUTTA

ಸ್ತ್ರೀ ತಜ್ಞರು ಕಲಕತ್ತ, ಬಂಗಾಲ

ಮುಸ್ಲಿಮ ರಾಷ್ಟ್ರದಲ್ಲಿ ಬ್ರಿಟನದ ವರ್ಚಸ್ಸು ಕುಗ್ಗುವುದೇ?

ಇರಾಣ ಎಣ್ಣೆ ತಂಟೆಯು ಪ್ರಕರಣ ಇನ್ನೂ ಬಗೆಹರಿಯದಿರುವಾಗ ಸುಡಾನದ ಸಮಸ್ಯೆಯು ಬ್ರಿಟನ್ನಿನ ತಲೆತಿನ್ನುತ್ತಲಿದೆ. ಇರಾಣವು ದೀರ್ಘಾವಧಿ ಒಪ್ಪಂದವನ್ನು ಹೇಗೆ ಮುರಿದುಕೊಂಡಿತೋ ಹಾಗೆಯೇ ಇಜಿಪ್ತವು ಸುಡಾನದ ಬಗ್ಗೆ ಮಾಡಿಕೊಂಡಿರುವ ಒಪ್ಪಂದವನ್ನು ಮುರಿದಿದೆ. 1936ರಲ್ಲಾದ ಒಪ್ಪಂದದನ್ವಯ ಸುಡಾನದ ಮೇಲೆ ಬ್ರಿಟನ ಹಾಗು ಇಜಿಪ್ತದ ಸಂಯುಕ್ತ ಆಡಳಿತವಿರಬೇಕೆಂಬ ಕರಾರಾಗಿ ಸುಯೇಜ ಕಾಲುವೆ ಪ್ರದೇಶದ ಸಂರಕ್ಷಣೆಗೆ ಬ್ರಿಟಿಶ ಸೈನ್ಯವನ್ನಿರಿಸಲು ಇಜಿಪ್ತ ಒಪ್ಪಿಗೆಯನ್ನಿತ್ತಿತ್ತು. ಆದರೆ ಸುಡಾನದ ಮೇಲೆ ಬ್ರಿಟಿಶರ ವರ್ಚಸ್ಸೇ ಹೆಚ್ಚಾಗಿತ್ತು. ಇಜಿಪ್ತವು ಕೇವಲ ಹೆಸರಿಗೆಮಾತ್ರ ಇದ್ದಂತಿತ್ತು! ಇಜಿಪ್ತವು ಈ ಒಪ್ಪಂದವನ್ನು ಪುನರ್ವಿಮರ್ಶಿಸಬೇಕೆಂದು ಹೇಳುತ್ತ ಬಂದಿರುವದಾದರೂ ಬ್ರಿಟನು ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ತಿರಸ್ಕರಿಸುತ್ತ ಬಂದಿದೆ.

ಈಗ ಇಜಿಪ್ತ ಅರಸು ಫರೂಕರು ಸುಡಾನ ಅರಸರೆಂದು ಇಜಿಪ್ತವು ಘೋಷಿಸಿದೆ. ಮಾತ್ರವಲ್ಲದೆ ಬ್ರಿಟಿಶರ ಅಧಿಕಾರದಿಂದ ಇಜಿಪ್ತದ ಏಕಚ್ಛತ್ರಾಧಿಪತ್ಯಕ್ಕೆ ಒಳಗಾಗುವದರಲ್ಲಿ ಅಲ್ಲಿಯ ಜನತೆ ಸಂತೋಷವನ್ನು ವ್ಯಕ್ತಪಡಿಸಿಯದೆ, ಸುಯೇಜ ಕಾಲುವೆಯ ಪ್ರದೇಶದಲ್ಲಿ ಬ್ರಿಟಿಶ ವಿನಾಶಿಕೆ ಹಾಗೂ ಸೈನ್ಯ ನಿಂತಿರುವದನ್ನು ಇಜಿಪ್ತವು ವಿರೋಧಿಸಿಯದೆ.

ಇರಾಣವು ಬ್ರಿಟಿಶರನ್ನು ಹೊರದೂಡುವ ಅವಮಾನಕಾರಕ ಕಾರ್ಯವನ್ನು ಅನ್ಯಾಯವಾಗಿ ಕೈಗೊಂಡದ್ದರ ಫಲವಾಗಿ ಬ್ರಿಟನು ಸುಯೇಜ ಕಾಲುವೆಯ ಪ್ರದೇಶದಲ್ಲಿ ವಿನಾಶಿಕೆ ಹಾಗೂ ಸೈನ್ಯಗಳನ್ನು ನಿಲ್ಲಿಸಿರುತ್ತದೆ. ಸುಯೇಜ ಕಾಲುವೆಯಿಂದ ಕಾಲ್ತೆಗೆಯಬೇಕೆಂಬ ಹಟದಿಂದ ಯುರೋಪವು ಏಶಿಯಾ ರಾಷ್ಟ್ರಗಳ ಮುಖ್ಯ ಸಂಬಂಧವನ್ನು ಕಡಿದುಕೊಳ್ಳಬಹುದಾಗಿದೆ. ಸುಯೇಜ ಕಾಲುವೆಯಿಂದ ಬ್ರಿಟನು ಸುಲಭವಾಗಿ ಹೊರಬೀಳಲು ಸಾಧ್ಯವಿಲ್ಲ, ಏಕೆಂದರೆ ಹೊರಬೀಳುವದರಿಂದ ಅರಬ ರಾಷ್ಟ್ರಗಳ ಮೇಲೆ ಬ್ರಿಟನದ ಯಾವ ವರ್ಚಸ್ಸೂ ಉಳಿಯದು. ಇರಾಣದ ಎಣ್ಣೆಯೂ ಕೈಬಿಡಬಹುದು. ಬ್ರಿಟನದ ಉದ್ದಿಮೆ-ವಾಣಿಜ್ಯ-ರಾಜಕೀಯಗಳ ಮೇಲೆ ವಿಶೇಷ ಪ್ರಭಾವ ಬೀಳುವಂತಹ ಪ್ರಶ್ನೆ ಇದಾದುದರಿಂದಲೇ ಸ್ವಲ್ಪ ಗಂಭೀರವಾಗಿಯೇ ಬ್ರಿಟನು ಚಿಂತಿಸಬೇಕಾದೀತು

ಇರಾಣವು ಒಪ್ಪಂದವನ್ನು ಮುರಿದು ಬ್ರಿಟಿಶರನ್ನು ಹೊರಗೆ ತಳ್ಳಿದ ಆದರ್ಶವು ಎಜಿಪ್ತಕ್ಕೆ ಎದೆಗಾರಿಕೆಯನ್ನು ಕೊಟ್ಟಿರಬೇಕು! ಇಜಿಪ್ತವು ಆಂಗ್ಲೋ ಇಜಿಪ್ತ ಒಪ್ಪಂದವನ್ನು ರದ್ದುಗೊಳಿಸುವ ಮಸೂದೆಯನ್ನು ಪಾಸುಮಾಡಿಕೊಂಡು ಬ್ರಿಟನನ್ನು ಸುಯೇಜ ಕಾಲುವೆಯಿಂದ ಹೊರತಳ್ಳುವ ಸಿದ್ಧತೆಯಲ್ಲಿದ್ದರೂ ಬ್ರಿಟನು ಸುಯೇಜ ಕಾಲುವೆಯಲ್ಲಿ ಬ್ರಿಟಿಷ್ ಠಾಣ್ಯಗಳನ್ನು ಭದ್ರಗೊಳಿಸುವದರ ಸಲುವಾಗಿ ಅಲ್ಲಿಗೆ ಹೋಗಲು ಸಿದ್ಧರಾಗಬೇಕೆಂದು ಬ್ರಿಟಿಶ ಸೈನಿಕರಿಗೆ ಅಪ್ಪಣೆಕೊಟ್ಟಿರುತ್ತದೆ. ಇಜಿಪ್ತಕ್ಕೆ ಹಲವು ಸೂಚನೆಗಳನ್ನು ಮುಂದೆ ಮಾಡಿದೆಯಾದರೂ ಸುಯೇಜ ಕಾಲುವೆಯ ಒಡೆತನವನ್ನು ಅದು ಸುಲಭವಾಗಿ ಬಿಟ್ಟುಕೊಡಲಾರದು.

ಪಾಕ್ ಸಂಪಾದಕರ ದೂರದೃಷ್ಟಿ

ಪಾಕಿಸ್ತಾನದ ಹದಿನಾರು ಪತ್ರಿಕಾ ಸಂಪಾದಕರು ಕಾಶ್ಮೀರ ಸಮಸ್ಯೆಯು ಕುರಿತು ಸಂ. ರಾ. ಸಂಘವು ಮೀನ ಮೇಷ ಎಣಿಸುತ್ತಿದ್ದುದರ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸಿ ಕೂಡಲೇ ಈ ವಿಚಾರವನ್ನು ತೀರ್ಮಾನಿಸಬೇಕೆಂದು ಸೂಚಿಸಿದೆ- ಡಾ! ಗ್ರಾಹ್ಯಾಮರು ಇಷ್ಟು ದೀರ್ಘ ಕಾಲ ತನ್ನ ವರದಿಗಾಗಿ ಕಳೆದುದನ್ನು ನೋಡಿ ಗ್ರಾಹ್ಯಾಮರ ವರದಿಯ ಮೇಲೆ ಪ್ರಮಾಣಿಕತೆಯ ಸಂಶಯ ಮೂಡಿದೆಯಂತೆ! ಭಾರತ ಸೈನಿಕರ ಹಾಗೂ ಪತ್ರಿಕೆಗಳ ಬಲಪ್ರಯೋಗದಿಂದ ಕಾಶ್ಮೀರಿಗಳ ಭವಿತವ್ಯಕ್ಕೆ ಗಂಡಾಂತರವಿದೆಯೆಂದು ಕಳವಳವನ್ನು ವ್ಯಕ್ತಪಡಿಸಲಾಗಿದೆ. ಸಂ. ರಾ. ಸಂಘ ಹಾಗೂ ಅದರಲ್ಲಿ ಭಾಗವಹಿಸುವ ರಾಷ್ಟ್ರಗಳು ಇದರಲ್ಲಿ ಹೆಚ್ಚಿನ ಆಸ್ಥೆ ವಹಿಸಬೇಕು—ಇಲ್ಲವಾದರೆ ಪರಿಸ್ಥಿತಿ ವಿಷಮತೆಗೆ ಮುಟ್ಟಬಹುದು. ಸಾಧ್ಯವಾದರೆ ಸಂಧಾನದ ಮೂಲಕ ಇಲ್ಲವಾದರೆ ಬಲಪ್ರಯೋಗ ಮಾಡಿಯಾದರೂ ಈ ಸಮಸ್ಯೆಯನ್ನು ಸಂ. ರಾ. ಸಂಘ ಅದರಲ್ಲೂ ವಿಶೇಷವಾಗಿ ಆಂಗ್ಲೋ ಅಮೇರಿಕನರು ಮುತುವರ್ಜಿವಹಿಸಬೇಕೆಂದೂ ಬೆದರಿಕೆ ಹಾಕಿರುತ್ತದೆ.

ನಂದಾರ ಉದ್ದಿಮೆ ಮಸೂದೆ

ದೇಶದ ಅಭ್ಯುದಯಕ್ಕೆ ಉದ್ದಿಮೆಗಳ ಪ್ರಗತಿ ಮುಖ್ಯವಾಗಿದೆ. ನಮ್ಮ ದೇಶದಲ್ಲಿ ಚಿಕ್ಕ ಪುಟ್ಟ ಉದ್ದಿಮೆಗಳು ಹೆಚ್ಚಾಗಿರುವದಾದರೂ ಅವುಗಳ ಸ್ಥಿತಿಗತಿಯನ್ನು ವಿಚಾರಿಸಿದ್ದಲ್ಲಿ ವ್ಯವಸ್ಥಿತವಾದ ರೀತಿ ನೀತಿ ಕಂಡು ಬರುವದಿಲ್ಲ. ಸರಕಾರವು ಇಂತಹ ಉದ್ದಿಮೆಗಳ ಮೇಲೆ ತನ್ನ ಹತೋಟಿಯನ್ನಿಟ್ಟುಕೊಳ್ಳುವದಾಗಲೀ—ರಾಷ್ಟ್ರೀಕರಣವನ್ನು ಮಾಡುವದರಿಂದಾಗಲೀ ಅವುಗಳ ಅಭಿವೃದ್ಧಿಯಾಗಬಹುದೆಂದು, ಹಲವರ ವಾದವಿದ್ದರೂ ಕೆಲವರು ಖಾಸಗೀ ಉದ್ದಿಮೆಗಳಲ್ಲಿ ಸರಕಾರ ಕೈ ಹಾಕುವದರಿಂದ ಅನಿಷ್ಟವಾಗುವದೆಂದು ವಾದಿಸುವರು. ಅಭಿವೃದ್ಧಿ ಸಮಿತಿಯನ್ನು ನಿರ್ಮಿಸಿ ಉದ್ದಿಮೆಗಳ ಹಿತಾಹಿತಗಳನ್ನು ಪರಿಶೀಲಿಸುವ ಪರಿಶೀಲಕ ಸಮಿತಿಯು ಯೋಜನೆ ಸ್ವಾಗತಾರ್ಹವಾಗಿದೆ. ಅಭಿವೃದ್ಧಿ ಸಮಿತಿಯಲ್ಲಿ ಒಡೆಯರು, ಮಜದೂರರು, ಗ್ರಾಹಕ ಪ್ರತಿನಿಧಿಗಳು ಕೂಡಿ ಒಟ್ಟು ಮೂವತ್ತು ಜನರಿರಬಹುದೆಂದು ಹೇಳಲಾಗಿದೆ.

ಸದ್ಯ ಉದ್ದಿಮೆಗೆ ಸರಕಾರ ನೀಡುತ್ತಿರುವ ಸಹಕಾರ ಪ್ರೋತ್ಸಾಹ ಅಷ್ಟೊಂದು ಆಶಾದಾಯಕವಾಗಿಲ್ಲ. ಲಕ್ಷಗಟ್ಟಲೆ ವ್ಯಯಿಸಿದವರಿಗೂ ಚಿಕ್ಕಪುಟ್ಟ ಬಂಡವಲ ಹಾಕಿದವರಿಗೂ ಲಾಯಸೆನ್ಸ ಕೊಡುವಲ್ಲಿ ಸರಕಾರವು ಅನುಸರಿಸುತ್ತಿರುವ ಪಕ್ಷಪಾತ—ಕಾಲವ್ಯಯ ಮುಂತಾದ ವಿಚಾರಗಳ ಮೇಲೆ ಸದಸ್ಯರು ಬಲವಾದ ಟೀಕೆ ಮಾಡಿದರು. ಮುಂದಕ್ಕೆ ಅಂತಹ ಅರ್ಜಿಗಳು ಸರಕಾರಕ್ಕೆ ಬಂದ ನಾಲ್ಕು ತಿಂಗಳೊಳಗಾಗಿಯೇ ತೀರ್ಮಾನವನ್ನು ತಿಳಿಸುವದಾಗಿಯೂ, ಮಾನ್ಯ ಮಂತ್ರಿಗಳು ಹೇಳಿದರು. ಕೊಡಬಹುದಾದ ಲಾಯಸೆನ್ಸದ ಮೇಲೆ ಸರಕಾರ ಉದ್ದಿಮೆಗಳನ್ನು ತನ್ನ ಸ್ವಾಧೀನಪಡಿಸಿಕೊಳ್ಳುವುದಕ್ಕೂ, ಅಂತರಂಗ ಅವ್ಯವಸ್ಥೆಯಲ್ಲಿ ಕೈಹಾಕುವದಕ್ಕೂ ಸಂಪೂರ್ಣ ಅಧಿಕಾರ ಉಳ್ಳದ್ದಾಗಿರುತ್ತದೆ. ಇದೇ ಆಧಾರದ ಮೇಲೆ ಲಾಯಸೆನ್ಸ ಕೊಡಲಾಗುವುದು. ಅಪರಾಧಕ್ಕಾಗಿ 6 ತಿಂಗಳ ಶಿಕ್ಷೆ ಇಲ್ಲವೆ 5000 ದಂಡ ಎಂಬ ಪರಿಮಿತಿಯನ್ನೂ ಇನ್ನೂ ಕಠಿಣವಾಗಿಸುವದಕ್ಕೆ "ಅಥವಾ ಎರಡನ್ನೂ" ಎಂದು ತಿದ್ದುಪಡಿಮಾಡಿದ್ದು ಯೋಗ್ಯವೇ ಆಗಿದೆ- ಏಕೆಂದರೆ ತಾವು ಮಾಡುವ ಮಹಾಪರಾಧಕ್ಕೆ ದಂಡವನ್ನು ತೆತ್ತುಬಿಡುವದು ಸಾಮಾನ್ಯ ಶಿಕ್ಷೆಯಾಗಬಹುದು. ಎರಡನ್ನೂ ಅಪರಾಧಿಗಳ ಮೇಲೆ ಹೇರಬಹುದೆಂಬ ವಿಚಾರವನ್ನು ಮಸೂದೆಯಲ್ಲಿ ಸೇರಿಸಿದ್ದರಿಂದ ಶಿಕ್ಷೆ ಗಂಭೀರ ಸ್ವರೂಪದ್ದಾಯಿತು! ಪರಿಶೀಲಕ ಸಮಿತಿಯು ಒಪ್ಪಿಸಿದ ಈ ಉದ್ದಿಮೆ ಮಸೂದೆಯು ದೇಶದ ಹಿತಾಭಿವೃದ್ಧಿಯ ದೃಷ್ಟಿಯಿಂದ ಯೋಗ್ಯವಾಗಿರುತ್ತದೆ. ಸರಕಾರ ವಿಶೇಷ ಟೀಕೆ ಟಿಪ್ಪಣಿಗಳಿಲ್ಲದೆ ವಿಧಾಯಕವಾದ ತಿದ್ದುಪಡಿಗಳೊಂದಿಗೆ ಸ್ವೀಕರಿಸಿದ್ದು ಸ್ವಾಗತಾರ್ಹವಾದ ಸಂಗತಿ!

ಹುರಿಯಾಳುಗಳ ತಕರಾರು

ಕೇಂದ್ರ ಚುನಾವಣಾ ಮಂಡಳಕ್ಕೆ 15 ಪ್ರಾದೇಶಿಕ ಕಾಂಗ್ರೆಸ ಸಮಿತಿಗಳಿಂದ ಹುರಿಯಾಳುಗಳ ಯಾದಿ ಬಂದಿದ್ದರೂ ಕೇರಳ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯಿಂದ ಇನ್ನೂ ಬಂದಿರುವುದಿಲ್ಲ. ಸಂಪೂರ್ಣ ಮಾಹಿತಿಯೊಂದಿಗೆ ಯಾದಿಗಳನ್ನು ಕಳಿಸಿದ್ದರಲ್ಲಿ ಪ. ಬಂಗಾಲ, ಮಧ್ಯಭಾರತ, ಕರ್ನಾಟಕ, ರಾಜಸ್ಥಾನ ಮತ್ತು ನಾಗಪುರ ಇವು ಮುಖ್ಯವಾಗಿವೆ. ಆಂಧ್ರ, ಆಸ್ಸಾಮ, ಒರಿಸಾ, ಹೈದರಾಬಾದ, ಗುಜರಾತ, ಮುಂಬೈ ಮತ್ತು ಮಹಾರಾಷ್ಟ್ರಗಳು ಕೇವಲ ಯಾದಿಯನ್ನು ಮಾತ್ರ ಕಳಿಸಿದ್ದು ಉಳಿದ ಪ್ರಾಮುಖ್ಯ ಕಾಗದ ಪತ್ರಗಳನ್ನು ಕಳಿಸಿರುವುದಿಲ್ಲ.

ಪ್ರದೇಶ ಕಾಂಗ್ರೆಸ್ ಸಮಿತಿಯು ಆಯ್ಕೆಯ ವಿರುದ್ಧ ಅಪೀಲುಗಳು ಈಗಾಗಲೇ ಕೇಂದ್ರಕ್ಕೆ ಮುಟ್ಟಿವೆ. ಹಲವು ಅನಾಮಧೇಯ ದೂರುಗಳು ಬಂದಿದ್ದು ಅದನ್ನು ಕಾಂಗ್ರೆಸ್ ಸಮಿತಿಯು ಲಕ್ಷ್ಯಕ್ಕೆ ತೆಗೆದುಕೊಳ್ಳುವದಿಲ್ಲವೆಂದೂ, ಅಸಂತುಷ್ಟರಾದವರು ಯೋಗ್ಯ ಕಾರಣಗಳ ಮೂಲಕ ತಮ್ಮ ದೂರನ್ನು ಕಳಿಸಿದರೆ ಲಕ್ಷ್ಯಕೊಡಲಾಗುವದೆಂದೂ ಪ್ರಧಾನ ಕಾರ್ಯದರ್ಶಿ ಲಾಲಬಹದ್ದೂರ ಶಾಸ್ತ್ರಿಗಳು ಹೇಳಿರುವರು. ತಮ್ಮ ದೂರುಗಳನ್ನು ಪ್ರತಿಪಾದಿಸುವದಕ್ಕಾಗಿಯೇ ಹುರಿಯಾಳುಗಳು ದಿಲ್ಲಿಗೆ ಬರಬೇಕಾಗಿಲ್ಲವೆಂದುದರಿಂದ ಇಷ್ಟರಲ್ಲೇ ಹಲವರು ಅಕಡೆ ಧಾವಿಸಿ ಕಾಂಗ್ರೆಸ್ ಕಾರ್ಯಕರ್ತರಿಗೆ ಕೀಟಲೆ ಕೊಡುತ್ತಿದ್ದಾರೆಂದು ಅರ್ಥವಾಗುತ್ತದೆ. ಕರ್ನಾಟಕ ಪ್ರದೇಶ ಸಮಿತಿಯ ನಿರ್ಣಯದ ವಿರುದ್ಧ ಈ ವರೆಗೆ ಕೇವಲ ೨೦ ಅರ್ಜಿಗಳು ಬಂದಿರುವದಾಗಿ ತಿಳಿಯುತ್ತದೆ. ಕೇಂದ್ರ ಚುನಾವಣಾ ಮಂಡಳಕ್ಕೆ ದೂರು ಕೊಡುವವರು ಅರ್ಜಿಯ ಒಂದು ಪ್ರತಿಯನ್ನು ಪ್ರದೇಶ ಕಾಂಗ್ರೆಸ ಸಮಿತಿಗೆ ಮುಟ್ಟಿಸಬೇಕೆಂಬ ನಿಯಮವನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಪ್ರಧಾನ ಕಾರ್ಯದರ್ಶಿ ತಡವಾಗಿ ತಿಳಿಸಿರುವ ಪ್ರಯುಕ್ತ ಹೆಚ್ಚಿನ ಅರ್ಜಿಗಳು ಪ್ರದೇಶ ಕಾಂಗ್ರೆಸ ಸಮಿತಿಗೆ ಬಾರದೆ ನೇರಾಗಿ ದಿಲ್ಲಿಗೆ ಪಯಣ ಬೆಳೆಸಿವೆಯೆಂದು ಖಾತ್ರಿಯಾಗುತ್ತದೆ. ಕೇಂದ್ರ ಚುನಾವಣಾ ಮಂಡಳವು ಯಾದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳುವ ಕಾಲಕ್ಕೆ ಹಾಜರಿರಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯು ಸದಸ್ಯರು ಹಾಜರಿರಬೇಕೆಂಬ ಆಮಂತ್ರಣ ಬಂದಿರುವದು. ಕೆ. ಪಿ. ಸಿ- ಸಿ. ಯು ಯಾದಿಯು ದೋಷಪೂರ್ಣವಾಗಿದೆಯೆನ್ನುವ ದೂರುಗಳು ದಿಲ್ಲಿಗೆ ಅಧಿಕವಾಗಿ ಬರುತ್ತಿವೆಯೆಂದು ತಿಳಿದುಬರುತ್ತದೆ. ದ. ಕ. ಜಿಲ್ಲೆಯು ಹೊರತು ಉಳಿದ ಭಾಗಗಳಲ್ಲಿಯು ಆಯ್ಕೆಯ ವಿಚಾರದಲ್ಲಿ ಅಸಂತೃಪ್ತಿಯಿದೆ ಎಂಬುದು ಹುಬ್ಬಳ್ಳಿಯು ಸಂಯುಕ್ತ ಕರ್ನಾಟಕದಲ್ಲಿ ಬರುತ್ತಿರುವ ಮಹನೀಯ ವ್ಯಕ್ತಿಗಳ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ. ಪತ್ರಿಕೆಯ ಸಂಪಾದಕದ್ವಯರಿಗೆ ಸ್ಥಾನ ದೊರಕಲಿಲ್ಲವೆಂದು ಪತ್ರಿಕೆಯು ಟೀಕೆಯನ್ನು ಪ್ರಾರಂಭಿಸಿದೆಂದು ಹಲವರು ಆರೋಪಿಸುವದನ್ನು ಶ್ರೇಷ್ಠ ವ್ಯಕ್ತಿಗಳ ಈ ಹೇಳಿಕೆಗಳು ಅಲ್ಲಗಳೆಯುತ್ತವೆ.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಪಂಡಿತ್, B. SC, F. I. A

(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ,೧೮-೧೦-'೫೧

ಜಾತೀಯತೆಯ ನಿರ್ಮೂಲಕರಾರು?

ಭಾರತ ಪ್ರಧಾನಿ ನೆಹ್ರೂರವರು ಸತ್ಯವತಿ ನಗರದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಶಿಕ್ಷಣ ಶಿಬಿರದಲ್ಲಿ ಜಾತೀಯತೆಯು ಹೀನ ಮನೋವೃತ್ತಿಯು ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಪ್ರಥಮ ಶತ್ರುವಾಗಿದೆಂದು ಹೇಳಿರುವರು. ಈಚೆಗೆ ಹಲವು ಸಮಯಗಳಿಂದ ಈ ಭಾವನೆ ಬೆಳೆಯುತ್ತಿದ್ದು ಕಲುಷಿತ ವಾತಾವರಣ ನಿರ್ಮಾಣಗೊಂಡದ್ದಕ್ಕೆ ನೆಹ್ರೂರಂತೆಯೆ ನಮಗೂ ವಿಷಾದವಾಗಿದೆ. ಕಾಂಗ್ರೆಸ್ ಅಧ್ಯಕ್ಷ ಪದವಿಗೇರಿದಂದಿನಿಂದ ಮುಖ್ಯ ಪ್ರಧಾನಿಗಳ ಅತ್ಯಮೂಲ್ಯ ಸಲಹೆಗಳು ಕಾಂಗ್ರೆಸ್ ಶುದ್ಧೀಕರಣ ಶಕ್ತ್ಯ—ಭದ್ರತೆಗೂ ರಾಮ ಬಾಣದಂತಿವೆ. ಆದರೆ ಅಂತಹ ಆದೇಶಗಳು ಕಾರ್ಯರೂಪದಲ್ಲಿ ಬಾರದೆ ಕೇವಲ ಕಂಠಶೋಷಣೆಯೆಂದು ಹೇಳುವ ಪ್ರಸಂಗ ಬಂದಿದೆ.

ನೆಹ್ರೂರವರು ಹಿಂದೂ ಮಹಾಸಭೆ ಹಾಗೂ ಜನಸಂಘ ಮುಂತಾದ ಸಂಸ್ಥೆಗಳ ಪ್ರಚಾರ ವೈಖರಿಯನ್ನು ಜಾತೀಯತೆಯ ಬಣ್ಣ ಕೊಟ್ಟು ಟೀಕಿಸುವಲ್ಲಿ ಕಥ್ಯಾಂಶವಿರುವದಾದರೂ ಅದಕ್ಕಿಂತಲೂ ಉಗ್ರಸ್ವರೂಪದ ಜಾತೀಯತೆ ಕಾಂಗ್ರೆಸ್ಸಿನಲ್ಲೇ ಬೇರುಬಿಟ್ಟಿರುವದನ್ನು ಇಂದು ಅವರು ಮರೆತಂತಿದೆ! ದೇಶದಲ್ಲುಂಟಾಗಿರುವ ಅರಾಜಕತೆ — ಅಸಂತೃಪ್ತಿ — ಅಸಹಕಾರ ಮನೋವೃತ್ತಿ ಕಾಂಗ್ರೆಸ್ಸಿನಿಂದಲೇ ಹುಟ್ಟಿದಂತಿದೆ. ನೆಹ್ರೂರವರು ಪಾರ್ಲಿಮೆಂಟರೀ ಬೋರ್ಡಿಗೆ ರಾಜಿನಾಮೆಯನ್ನಿತ್ತುದೂ ಸದ್ಯ ಕಾಂಗ್ರೆಸ್ ಅಧ್ಯಕ್ಷ ಪದಕ್ಕೇರುದುದೂ ಜಾತೀಯತೆಯ ದುಷ್ಟ ನೀತಿ ಉಬ್ಬಿ ಕಾಂಗ್ರೆಸ್ಸಿಗರಲ್ಲಿ ಕಂಡು ಬಂದದ್ದರಿಂದಲೇ! ಘಟನೆಯನ್ನೇ ಬದಲಿಸಿ ಈ ಮನೋವೃತ್ತಿಯನ್ನು ಹಾಕಿಕೊಟ್ಟವರು ಕಾಂಗ್ರೆಸಿಗರಲ್ಲದೆ ಬ್ರಿಟಿಶರಲ್ಲವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಎಲ್ಲ ಪಂಗಡದವರನ್ನೂ ಮೆಚ್ಚಿಸುವ ಈ ಧೋರಣೆಯನ್ನು ಕಾಂಗ್ರೆಸು ಅನುಸರಿಸಿದ್ದರಿಂದಲೇ ಹೀಗಾಯಿತೆನ್ನುವದಕ್ಕೆ ಸಾಕಷ್ಟು ದಾಖಲೆಗಳು ನಮ್ಮ ಮುಂದಿವೆ.

ಚುನಾವಣಾ ರಂಗದಲ್ಲಿಯೂ ಅದೇ ಬಗೆಯಾಗಿದೆ. ಪ್ರದೇಶ ಕಾಂಗ್ರೆಸ್ ಸಮಿತಿಗಳು ಕಳಿಸಿರುವ ಯಾದಿಗಳು ಕೇವಲ ಜಾತೀಯತೆಯ ತಳಹದಿಯ ಮೇಲೆ ನಡೆದಿದ್ದು ವ್ಯಕ್ತಿಪ್ರಾಶಸ್ತ್ಯವನ್ನು ಮರೆತಿವೆಯೆಂದು ದೇಶದ ನಾಲ್ಕೂ ದಿಕ್ಕಿನಲ್ಲಿ ಗುಲ್ಲೆದ್ದಿದೆ. ಕೆ. ಪಿ. ಸಿ. ಸಿಯ ನಿರ್ಣಯದ ಮೇಲೆಯೂ ಇಂತಹ ಅಪವಾದ ಹೊರಿಸಲ್ಪಟ್ಟಿದೆ.

ಲೋಕಾನುಭವ ಪ್ರತಿಭಾಶಾಲಿತ್ವ ಶೀಲತ್ವಗಳು ವ್ಯಕ್ತಿಯೊಳ್ವರಲ್ಲಿದ್ದರೆ ಅವನು ಕಾಂಗ್ರೆಸಿಗನಲ್ಲವಾದರೂ ಆತನನ್ನು ಆರಿಸಬೇಕೆಂದು ನೆಹ್ರೂ ಸೂಚಿಸಿದ್ದರ ಅರ್ಥವೂ ಹುರಿಯಾಳುವಿನ ಯೋಗ್ಯತೆಗೆ ಪ್ರಾಧಾನ್ಯ ಕೊಡತಕ್ಕಂಥವಾಗಿ-ಎತ್ತಿದೆ ವಿನಹ ಜಾತೀಯತೆಗಲ್ಲ! ಆದರೆ ಈಗ ನಡೆಯುವ ಹುರಿಯಾಳುಗಳ ಆಯ್ಕೆಯು ಜಾತೀಯತೆಯ ಪ್ರಾಧಾನ್ಯತೆಯಿಂದ ನಡೆದಿದೆಯೆಂದೇ ಹೇಳಬೇಕಲ್ಲದೆ ವ್ಯಕ್ತಿವೈಶಿಷ್ಟ್ಯತೆಯಿಂದ ನಡೆದಿದೆಯೆಂದು ಹೇಳುವುದು ಕಷ್ಟಸಾಧ್ಯ! ಒಂದು ವೇಳೆ ಒಂದೇ ಜಾತಿಯಲ್ಲಿ ಅತ್ಯಂತ ಯೋಗ್ಯ ಹುರಿಯಾಳುಗಳು ಸಿಗುವಂತಿದ್ದರೆ ಅವರನ್ನು ಆರಿಸಿದ ಪಕ್ಷದಲ್ಲಿ ಪಂಗಡದ ಮೇಲೆ ಜಾತೀಯತೆಯ ದೋಷಾರೋಪಣೆಯನ್ನು ಮಾಡಲಾಗುವುದು. ಉದಾಹರಣಾರ್ಥವಾಗಿ ದ. ಕ ಜಿಲ್ಲೆಯ ಯಾದಿಯು ಅತ್ಯಂತ ಆಶಾದಾಯಕವಾಗಿದ್ದರೂ ಹಲವು ಪಂಗಡದವರಿಗೆ ಹೆಚ್ಚು ಸ್ಥಾನ ದೊರಕಿತೆಂದೂ ಜಾತೀಯತೆಯ ದಾಂಧಲೆಯನ್ನೆಬ್ಬಿಸುವ ಹಂಚಿಕೆ ಹಿಂದಿನಿಂದ ನಡೆಯುತ್ತಲಿದೆ. ಜನಪ್ರಿಯರೂ, ಯೋಗ್ಯ ಕಾರ್ಯಕರ್ತರೂ ಆಗಿದ್ದು ನಮ್ಮ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ಅವರಿಂದಾಗುವದಾದರೆ ಉಳಿದವರೇಕೆ ಕಿಚ್ಚುಪಡಬೇಕು? ಜಾತೀಯತೆಯ ಅಸ್ತ್ರವನ್ನು ಎತ್ತಿ ಹಿಡಿಯಬೇಕು? ಇವಕ್ಕೆಲ್ಲ ಕಾರಣ ಕಾಂಗ್ರೆಸು ಈ ವರೆಗೆ ಅನುಸರಿಸಿಕೊಂಡು ಬಂದಿರುವ ದುಷ್ಟ ಪದ್ಧತಿಯೇ ಆಗಿರುತ್ತದೆ.

ನಾವೆಲ್ಲ ಮಾನವ ಕುಟುಂಬಿಗಳು. ಪ್ರಕೃತಿದತ್ತ ವ್ಯಕ್ತಿವೈಶಿಷ್ಟ್ಯವನ್ನು— ದೇಶಾಭಿವೃದ್ಧಿಯ ಶ್ರೇಷ್ಠ ಆಕಾಂಕ್ಷೆಯನ್ನು ಜಾತೀಯತೆಯ ಪಾಶದಡಿಯಿಂದ ನಾಶಗೊಳಿಸುವ ಪಾಪಕೃತ್ಯವನ್ನೇಕೆ ಮಾಡಬೇಕು? ಮೇಲು ಕೀಳು ಆ ಜಾತಿ ಈ ಜಾತಿ, ದೀನ-ಧನಿಕ, ಎನ್ನುವ ಸಂಕುಚಿತ ಮನೋವೃತ್ತಿಗಳನ್ನು ವಿದ್ಯೆ ಬುದ್ಧಿ ತಿಳುವಳಿಕೆಗಳಿಂದ ತೊಡೆದು ಹಾಕಬೇಕು. ಜನತೆ ಸುಸಂಸ್ಕೃತವಾದ ಮಾರ್ಗವನ್ನನುಸರಿಸಿದಾಗ ಈ ವಿಶಾಲ ಮನೋವೃತ್ತಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ನಾವೆಲ್ಲ ಒಂದು ಕುಟುಂಬದವರು ಎಂಬ ಆತ್ಮೀಯತೆ ಮೊಳೆಯುತ್ತದೆ. ಇದು ಬೆಳೆಯಬೇಕಾದರೆ ಜಾತ್ಯತೀತ ಮನೋಭಾವನೆಯನ್ನು ರಾಜಕೀಯ, ಸಾಮಾಜಿಕ ರಂಗಗಳಲ್ಲಿ ತೋರಿಸಿಕೊಡಬೇಕು. ಅಂತಾದರೆ ಮಾತ್ರ ನಮ್ಮಲ್ಲಿ ಐಕ್ಯತೆಯುಂಟಾಗಿ ದೇಶದ ಅಭ್ಯುದಯವನ್ನು ಸಾಧಿಸುವಲ್ಲಿ ನೂತನ ಶಕ್ತಿ ಬರುವದು. ಅಂತಹ ಸನ್ಮಾರ್ಗ ಪ್ರವೃತ್ತಿಯಲ್ಲಿ ನಡೆದು ಕಾಂಗ್ರೆಸು ಜಾತ್ಯತೀತ ಸಂಸ್ಥೆಯೆಂದು ತೋರಿಸಿಕೊಡಲಿ! ಇದನ್ನು ಸಾಧಿಸದೆ ಶ್ರೀ ನೆಹ್ರೂರವರು ಘಂಟಾಘೋಷವಾಗಿ ಹೊರಡಿಸುವ ಈ ಜಾತೀಯ ಖಂಡನಾದ ಕೇವಲ ಅರಣ್ಯರೋದನವೇ ಸರಿ!

ಲಿಯಾಖತರ ಕೊಲೆ

ಪಾಕಿಸ್ತಾನ ಪ್ರಧಾನ ಮಂತ್ರಿ ಲಿಯಾಖತ್ ಅಲೀಖಾನರು ರಾವಳಪಿಂಡಿಯಲ್ಲಿ ಸುಮಾರು ಮೂವತ್ತು ಸಹಸ್ರ ಜನ ಕೂಡಿದ ಸಭೆಯಲ್ಲಿ ಭಾಷಣ ಮಾಡಲು ಆರಂಭಿಸಿದಾಗ ಹತ್ತಿರದಿಂದಲೇ ಗುಂಡಿನೇಟು ನೇರಾಗಿ ಲಿಯಾಖತರ ಎದೆಗೆ ಬಡಿಯಿತು. ಸಾಜೇಗ ಎಂಬ ಓರ್ವ ಮುಸಲ್ಮಾನನಿಂದಲೇ ಈ ಕೃತ್ಯ ನಡೆಯಿತೆಂದು ಹೇಳಲಾಗಿದೆ. ಲಿಯಾಖತರನ್ನುಳಿಸುವದರ ಸಲುವಾಗಿ ಮಾಡಿದ ಪ್ರಯತ್ನ ವಿಫಲಗೊಂಡು ಅವರು ಮರುಕ್ಷಣದಲ್ಲೇ ಮೃತರಾದರು. ಕೊಲೆಗಡುಕನನ್ನು ಲಿಯಾಖತರ ರಕ್ಷಣಾ ಸೈನಿಕರು ಕೂಡಲೇ ಕೊಲೆಗೈದರೆಂದೂ ತಿಳಿಯುತ್ತದೆ.

ಈಜಿಪ್ತದ ತಿರಸ್ಕಾರ

ಬ್ರಿಟನ್, ಅಮೆರಿಕಾ, ಫ್ರಾನ್ಸ್ ಮತ್ತು ಟರ್ಕಿ ಈ ನಾಲ್ಕು ರಾಷ್ಟ್ರಗಳು ಸುಯೆಜ ಕಾಲುವೆ ಸಂಬಂಧದಲ್ಲಿ ಈಜಿಪ್ತ ಸರಕಾರಕ್ಕೆ ಕಳಿಸಿದ ಸೂಚನೆಗಳು ಬ್ರಿಟನ್ನಿಗೆ ಅನುಕೂಲವಾಗಿದ್ದು ಈಜಿಪ್ತದ ಉದ್ದೇಶಕ್ಕೆ ಭಂಗ ಬರುವದರಿಂದ ಚತುರ್ರಾಷ್ಟ್ರಗಳ ಸೂಚನೆಯನ್ನು ಈಜಿಪ್ತವು ತಿರಸ್ಕರಿಸಿದೆ.

ಎಣ್ಣೆ ತಂಟೆಯಲ್ಲಿ ಭಾರತದ ನಿಲುವು

ಸಂ. ರಾ. ಸಂಘದ ಮುಂದೆ ಚರ್ಚೆಗೆ ಬರಲಿರುವ ಪರ್ಶಿಯಾ ಎಣ್ಣೆಯ ತಂಟೆಯ ವಿಚಾರದಲ್ಲಿ ಭಾರತವು ಯಾವ ಪಕ್ಷವನ್ನು ಸಮರ್ಥಿಸಬಹುದೆಂಬ ಕುರಿತು ಭಾರತ ಪ್ರತಿನಿಧಿಗೆ ಭಾರತ ಸರಕಾರವು ಸೂಚಿಸಿದೆಯೆಂದು ತಿಳಿದು ಬರುತ್ತದೆ. ಭಾರತದ ನಿಲುವೆಯು ಪೂರ್ತಿ ಪಾಠ ನಮಗೆ ತಿಳಿದಿಲ್ಲವಾದರೂ ಬ್ರಿಟನದ ಗೊತ್ತುವಳಿಯಲ್ಲಿ ತಿದ್ದುಪಡಿಯಾಗಬೇಕೆಂದು ಭಾರತ ಆಗ್ರಹ ಹಿಡಿಯಬಹುದಂತೆ. ತನ್ನ ಅಭಿಪ್ರಾಯಕ್ಕೆ ಸರಿಯಾದ ಮನ್ನಣೆ ಸಿಗದೆ ಹೋದರೆ ತಟಸ್ಥವಾಗುಳಿಯಲೂ ಬಹುದು

ಕೊರಿಯದಲ್ಲಿ ಪ್ರಗತಿಯಿಲ್ಲ.

ಸಂ. ರಾ. ಸಂಘದ ಸೈನಿಕರು ಕಮ್ಯೂನಿಸ್ಟರ ಮೇಲೆ ವಿಶೇಷ ಧಾಳಿ ನಡೆಸಿ ಜೀವಹಾನಿ ಮಾಡಿಸುವದು ಮಾತ್ರವಲ್ಲದೆ ಕಿಯಾಂಗದ ತಟಸ್ಥ ಪ್ರದೇಶದ ಮೇಲೆ ಸಂ. ರಾ. ಸೈನಿಕರು ವಿಮಾನ ಯುದ್ಧ ನಡೆಸಿದ್ದನ್ನು ಕಮ್ಯೂನಿಸ್ಟರು ಪ್ರತಿಭಟಿಸಿದ್ದಾರೆ. ಜನರಲ್ ರಿಜವೆಯವರೇ ತನ್ನ ಸೈನಿಕರ ಕೃತ್ಯವನ್ನು ಒಪ್ಪಿಕೊಂಡಿರುವರು. ಅಂತಲೇ ಯುದ್ಧ ವಿರಾಮ ಮಾತುಕತೆಯಲ್ಲಿ ಇನ್ನೊಂದು ಪ್ರಗತಿ ಕಂಡು ಬರಲಿಲ್ಲ.

ಅಮೆರಿಕ ಮತ್ತು ಭಾರತ ಮೈತ್ರಿ

“ಅಮೇರಿಕ ಮತ್ತು ಭಾರತ ಜಗತ್ತಿನ ಅತಿ ದೊಡ್ಡ ರಾಷ್ಟ್ರಗಳು. ನಮ್ಮ ಉಭಯರ—ಪರಸ್ಪರ ಅಭಿಪ್ರಾಯಗಳು ಏಕವ ಜವಾಬ್ದಾರಿ ಶಾಂತಿಯ ಮಾರ್ಗವನ್ನು ಸುಲಭವಾಗಿ ಕಂಡುಹಿಡಿಯಬಹುದು. ಅಮೇರಿಕಾ ಮತ್ತು ಭಾರತಗಳೊಳಗಿನ ಪ್ರೇಮ ವಿಶ್ವಾಸಗಳು ಅತಿಶಯವಾಗಿ ಬೆಳೆಯುವಂತೆ ಹೃತ್ಪೂರ್ವಕವಾಗಿ ದುಡಿಯುತ್ತೇನೆ” ಎಂದು ಅಮೆರಿಕೆಯ ಭಾರತ ರಾಯಭಾರಿಯಾದ ಚೆಸ್ಟರ್ ಬೌಲರು ಅಮೆರಿಕೆಯನ್ನು ಬಿಟ್ಟು ಹೊರಡುವಾಗ ಹೇಳಿದರು.

ನೆಹ್ರೂರವರ ಚುನಾವಣಾ ಸಂಚಾರ

ಶ್ರೀ ಜವಾಹರಲಾಲ ನೆಹ್ರೂರವರು ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕಾಗಿ ಎಲ್ಲ ಪ್ರಾಂತಗಳಲ್ಲಿಯೂ ಎಂಟೆರಡು ದಿನ ಪ್ರವಾಸ ಕೈಗೊಳ್ಳುವರಾಗಿ ತಿಳಿದುಬರುತ್ತದೆ.

ಉತ್ತರ ಪ್ರದೇಶ

ಉತ್ತರ ಪ್ರದೇಶ ಪ್ರಜಾಪಾರ್ಟಿಯ ಮುಖ್ಯ ಧುರೀಣರಾದ ಶ್ರೀ ಕೃಷ್ಣದತ್ ಪಾಲಿವಾಲರವರು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಆಹ್ವಾನವನ್ನು ಸ್ವೀಕರಿಸಿ ಸುಮಾರು 70 ಜನ ಸದಸ್ಯರ ಕಾಂಗ್ರೆಸು ಹುರಿಯಾಳ್ತನದ ಯಾದಿಯನ್ನವರಿಗೆ ಒಪ್ಪಿಸಿರುವರು. ಇನ್ನೂ ಅನೇಕ ಮಾಜಿಯಾದ ಪ್ರಜಾಪಾರ್ಟಿಯ ಸದಸ್ಯರು ತಿರುಗಿ ಕಾಂಗ್ರೆಸ್ಸಿಗೆ ಬರುವವರಿದ್ದು ಅವರು ಕಾಂಗ್ರೆಸ್ ಟಿಕೇಟಿನಿಂದ ಚುನಾವಣೆಯಲ್ಲಿ ಸ್ಪರ್ಧಿಸಲಿರುವರು.

ಚಂದಾದಾರರಲ್ಲಿ

'ನವಯುಗ'ದ ಚಂದಾ ಬಾಕಿದಾರರಿಗೆಲ್ಲಾ ಈ ಮೊದಲೇ ನೆನಪೋಲೆಗಳನ್ನು ಕಳಿಸಿರುತ್ತದೆ ಎಲ್ಲರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ತಿರುಗಿಯೊಮ್ಮೆ ವಿನಂತಿಸಲಾಗಿದೆ

ಮೆನೇಜರ್.

ಹೊಸಕೆರ ಚಿದಂಬರಯ್ಯನವರಿಂದ
ಅನುವಾದಿಸಲ್ಪಟ್ಟ ಗೀತೆಯ
ಸರಳ ಭಾಷಾಂತರ

ಪ್ರತಿಯೊಬ್ಬನೂ ಓದತಕ್ಕ
ಪವಿತ್ರ ಗ್ರಂಥ
ಬೆಲೆ. 0—12—0.
ನವಯುಗ ಪ್ರೆಸ್, ಉಡುಪಿ.

ನಡೆಯುವ ಚಿತ್ರ
ಪ್ರತಿ ಕುಟುಂಬವೂ ನೋಡತಕ್ಕ ಸೋದರ ಸೋದರಿಯರ ಕಥೆಯೇ
ಭಾಯಿ ಬಹೆನ್
ಪ್ರೇಮ ಅದೀಬ್, ಗೀತಾಬಾಲಿ, ಯಶೋಧರಾ ಕಟ್ಜು, ಗೋಪ್ ಮೊದಲಾದವರು
ಬರುವ ಚಿತ್ರ
ನಗೀನಾ ನೂತನಾ ಸಮರ್ಥ ಮತ್ತು ನಾಸಿರ್ ಖಾನ್.
ನಿರೀಕ್ಷಿಸಿರಿ— ಉಸ್ತಾದ್ ಪೇದ್ರೊ, ಅಂಜಿ, ಬಾದಲ್.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಉಡುಪಿ

ಕೋರಂ ಇಲ್ಲ:— ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಇದೇ ತಾ. 13ರಂದು ಸಂಜೆ ಚೇರ್‌ಮೇನ್ ಮತ್ತು ವೈಸ್ ಚೇರ್‌ಮೆನ್ನರ ಗೈರ ಹಾಜರಿಯಲ್ಲಿ ಶ್ರೀ ಟಿ ರಘುಪತಿ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಶ್ನೋತ್ತರಗಳ ವಿಚಾರದಲ್ಲಿ ಸಮರ್ಪಕ ಉತ್ತರ ದೊರೆಯದಿದ್ದುದರಿಂದ ಅತೃಪ್ತಿಗೊಂಡ ಶ್ರೀ ಎ. ಮಂಜುನಾಥ ರಾಯರು ಕಮೀಶನರರ ರೀತಿ ನೀತಿಗಳನ್ನು ನಿಷೇಧಿಸಿ ಸಭೆ ಬಿಟ್ಟು ಹೊರ ಪ್ರಯಾಣ ಮಾಡಿದರು. ಈ ಸಭೆಗೆ ಹಾಜರಿದ್ದುದು ಬರೇ ಆರು ಮಂದಿ ಮಾತ್ರ. ಶ್ರೀ ...ಯ... ಸಭೆ ಬಿಟ್ಟು ಹೋದುದರಿಂದ ಕನಿಷ್ಠ ಹಾಜರಿಯೂ ಇಲ್ಲದಂತಾಗಿ ಸಭೆ ಮುಂದರಿಸಲಾಯಿತು.

ದ. ಕ. ಜಿಲ್ಲೆಯ ಉತ್ತರ ಭಾಗದ ಪಾರ್ಲಿಮೆಂಟರಿ ಮತ ಕ್ಷೇತ್ರದ ಯಾದಿಯು ಕುಂದಾಪುರ ಡಿವಿಜನಲ್ ಆಫೀಸಿನಲ್ಲಿ ಇದೇ ತಾ. 11ರಂದು ಅಖೈರಿಯಾಗಿ ಪ್ರಸಿದ್ಧಿಪಡಿಸಲ್ಪಟ್ಟಿದೆ ಎಂದೂ ಸಾರ್ವಜನಿಕರು ಇದನ್ನು ಬಂದು ನೋಡಬಹುದೆಂದೂ ಕುಂದಾಪುರ ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹ, ಅವರು ತಿಳಿಸುತ್ತಾರೆ.

ವರ್ಧಂತಿ ಸಮಾರಂಭ:— ಕಳೆದ ವಿಜಯ ದಶಮಿ ದಿನ ಉಡುಪಿಯ ವೈದಿಕ ಧರ್ಮವೀರ ಪರಿಷತ್ತಿನ ವರ್ಧಂತಿ ಸಮಾರಂಭವು ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾವಲ್ಲಭ ಸ್ವಾಮಿಗಳವರ ನೇತೃತ್ವದಲ್ಲಿ ಸಾಂಗವಾಗಿ ಜರಗಿತು. ಕಾಣೂರು ಮಠದ ವಿದ್ಯಾವಾರಿನಿಧಿ ತೀರ್ಥಸ್ವಾಮಿಗಳವರೇ ಮೊದಲಾದವರ ಉಪನ್ಯಾಸಗಳಾದುವು.

ಮಾನ್ಯ ಕೃಷಿಮಂತ್ರಿ ಶ್ರೀ ಎ ಬಿ ಸೆಟ್ಟರು— ಇದೇ ತಾ 11ರಂದು ಕುಂದಾಪುರದಿಂದ ಉಡುಪಿಗೆ ಬಂದಿದ್ದು ಸ್ಥಳೀಯ ವಿದ್ಯಮಾನಗಳನ್ನು ಪರಿಶೀಲಿಸಿದರು. ಕಾಂಗ್ರೆಸ್ ಆಫೀಸಿನಲ್ಲಿ ಮಂತ್ರಿಗಳೊಡನೆ ಸಭೆಸೇರಿದ ಸಂದರ್ಭದಲ್ಲಿ ಡಾ| ಟಿ. ಮಾಧವಪೈಗಳು ಕಸ್ತೂರಬಾ ಮೆಡಿಕಲ್ ಕಾಲೇಜಿನ ಕುರಿತು ವಿಚಾರ ವಿನಿಮಯ ಮಾಡಿದರು.

ಸಹಕಾರಿಗಳ ಒಡನಾಡಿತನದ ಸಭೆಗಳು— ಇದೇ ತಾ 21ನೆ ಆದಿತ್ಯವಾರ ಬೆಳಗ್ಗೆ 9½ಗಂಟೆಗೆ ಉಡುಪಿಟೋಟಲ್ ಕೋಆಪರೇಟಿವ್ ಯೂನಿಯನ್ ಆಫೀಸಿನಲ್ಲೂ, ಅಪರಾಹ್ನ 2½ತಾಸಿಗೆ ಬ್ರಹ್ಮಾವರ ಸಹಕಾರ ಸಂಘದ ಆಫೀಸಿನಲ್ಲೂ, ಜಾಗಲಿ-ಎಮವು ದ. ಕ. ಜಿಲ್ಲಾ ಸಹಕಾರಿ ಸೆಂಟ್ರಲ್ ಬೇಂಕಿನ ಅಧ್ಯಕ್ಷ ಶ್ರೀ ಎಮ್. ಶಿವರಾವ್, ಜಿಲ್ಲಾ ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್ ಮೊದಲಾದವರು ಬರಲಿರುವರು.

ಇಲೆಕ್ಟ್ರಿಕ್ ದೀಪಗಳಿಲ್ಲ— ಸ್ಥಳೀಯ ಇಲೆಕ್ಟ್ರಿಕ್ ಕಂಪನಿಯು ರಾಷ್ಟ್ರೀಕರಣ ಮಾಡಲ್ಪಟ್ಟ ನಂತರ ಯೋಗ್ಯ ಎಂಜಿನ್ ತಾಳಲ್ಪಟ್ಟು ಇಲೆಕ್ಟ್ರಿಕ್ ಸಂಬಂಧಾಯ ಸುಧಾರಣೆ ಹೊಂದಬಹುದೆಂದು ಜನತೆ ನಿರೀಕ್ಷಿಸಿತ್ತು. ಇದ್ದ ಹಳೇ ಎಂಜಿನ್ ಹಾಳಾದುದರಿಂದ ಇದೇ ತಾ 14ರಿಂದ ನಾಲ್ಕು ದಿನಗಳವರೆಗೆ ವಿದ್ಯುತ್ ಸಂಬಂಧಾಯ ಸಂಪೂರ್ಣವಾಗಿ ದೊರೆಯಲಾರದೆಂದು ಸಂಬಂಧಪಟ್ಟವರು ಜಾಹೀರು ಮಾಡಿರುತ್ತಾರೆ. ಬೀದಿದೀಪಗಳು ಮಾತ್ರ ಮಿಂಚುಹುಳಗಳಂತೆ ಪ್ರಕಾಶಿಸುತ್ತಿವೆ.

ಮಂಗಳೂರು

ಬಹುಮಾನ ವಿತರಣೆ— ಅಧಿಕ ಬೆಳೆಯ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚುವ ಪ್ರಯುಕ್ತ ಮಂಗಳೂರು ತಾಲೂಕು ಆಫೀಸಿನಲ್ಲಿ ಕೃಷಿಮಂತ್ರಿ ಶ್ರೀ ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿತು. 37 ಮಂದಿ ರೈತರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಪ್ರಥಮ ಬಹುಮಾನವು ಕಾಸರಗೋಡಿನ ಕುಡ್ಲು ಗ್ರಾಮದ ಶ್ರೀ ಮಹಾಬಲ ಸೆಟ್ಟರಿಗೆ ದೊರೆಯಿತು. ಇವರು ಎರಡನೆ ಬೆಳೆಯಲ್ಲಿ ಎಕ್ರೆಗೆ 6300 ರಾತ್ಲ ಭತ್ತ ಬೆಳೆಸಿದ್ದರು. ತಾಲೂಕುವಾರು ಸ್ಪರ್ಧೆಯಲ್ಲಿ ಶ್ರೀ ರಾಮಯ್ಯ ಆಳ್ವ (ಪುತ್ತೂರು), ಟಿ. ರಮಾನಾಥ ಪೈ [ಉಡುಪಿ], ಪದ್ಮರಾಜ ಹೆಗ್ಡೆ [ಕಾರ್ಕಳ], ನಾರಾಯಣ ಸೆಟ್ಟಿ [ಕುಂದಾಪುರ] —ಇವರಿಗೆ ಬಹುಮಾನ ದೊರೆಯಿತು. ಬಹುಮಾನ ವಿತರಣೆಯಾದ ಬಳಿಕ ಶ್ರೀಗಳಾದ ಪಿ ಆರ್. ಆರ್. ಪೂಂಜ ಮತ್ತು ಕೆ. ಟಿ. ಆಳ್ವರು ಭಾಷಣವಿತ್ತರು. ಡಾ| ನಾಗಪ್ಪ ಆಳ್ವರು ಧನ್ಯವಾದಗಳನ್ನಿತ್ತರು.

ನಾಡಹಬ್ಬ— ಮಂಗಳೂರಿನ ಪ್ರಗತಿ ಮಂಡಳಿ, ಜನಮತ ಸಮಿತಿ ಮತ್ತು ಜನಪದ ಕಲಾಮಂದಿರಗಳ ನೇತೃತ್ವದಲ್ಲಿ ಇದೇ ತಾ. 7 ಮತ್ತು 8ರಲ್ಲು ಮಂಗಳೂರಲ್ಲಿ ನಾಡಹಬ್ಬ ಜರಗಿತು. ಮೊದಲದಿನದ ಎರಡು ಭಾಷಣಗಳ ಕಾರ್ಯಕ್ರಮಕ್ಕೆ ಶ್ರೀ ಕೆ. ಎಲ್. ಎಸ್. ರಾಯರು ಅಧ್ಯಕ್ಷರಾಗಿದ್ದರು. ಡಾ| ಕೆ ಗಿರಿಧರ ರಾಯರು 'ಸಾರ್ವಜನಿಕ ಆರೋಗ್ಯದ' ವಿಚಾರವಾಗಿಯೂ ಶ್ರೀ ಕೆ. ಸೂರ್ಯನಾರಾಯಣ ಅಡಿಗರು 'ಸಾರ್ವಜನಿಕ ಜೀವನದ' ವಿಚಾರವಾಗಿಯೂ ಮಾತನಾಡಿದರು. ಅಧ್ಯಕ್ಷರ ಭಾಷಣವಾದ ನಂತರ ಶ್ರೀ ಎಮ್. ಪಿ. ನಾರಾಯಣ ಮಾರ್ಲರು ವಂದನೆ ಅಭಿನಂದಿಸಿದರು. ಮರುದಿನ ಇದೇ ಸಮಾರಂಭದ ಅಂಗವಾಗಿ ಶ್ರೀ ಶ್ರೀನಿವಾಸ ಉಡುಪ ಮತ್ತು ಗೆಳೆಯರಿಂದ ಸಂಗೀತ ಕಾರ್ಯಕ್ರಮಗಳೂ ಜರಗಿದವು

ಕ್ಷಯರೋಗ ಮೊಹರುಗಳ ಮಾರಾಟ— ದ. ಕ. ಜಿಲ್ಲಾ ಕ್ಷಯರೋಗ ಮೊಹರುಗಳ ಮಾರಾಟದ ಚಳವಳವನ್ನು ಕಳೆದ ತಾ. 2ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀ ಡಿ. ಮೋಹನರಾಯರು ಕಳೆದ ವರುಷ ಈ ಸಂಬಂಧ ನಡೆದ ಕಾರ್ಯಕಲಾಪಗಳನ್ನು ಓದಿದುದಲ್ಲದೆ, ಮೊಹರುಗಳನ್ನು ಜನರು ಅಧಿಕಾಧಿಕ ಸಂಖ್ಯೆಯಲ್ಲಿ ಪಡೆಕೊಂಡು ಕ್ಷಯ ರೋಗವನ್ನು ಹೋರಾಡುವುದರಲ್ಲಿ ನೆರವಾಗಬೇಕೆಂದೂ, ಮೂಡಬಿದ್ರೆಯಲ್ಲಿ ರಚನೆಯಾಗುತ್ತಿರುವ ಟಿ ಬಿ. ಸೆನಿಟೋರಿಯಮಿಗೆ ನೆರವು ನೀಡಬೇಕೆಂದೂ ಕೋರಿದರು.

ವಿಜಯ ಬೇಂಕಿನ ಬೊಂಬಾಯಿ ಶಾಖಾ ಕಛೇರಿ ಬದಲಾವಣೆ:— ಮಂಗಳೂರಿನ ವಿಜಯ ಬೇಂಕಿನ ಬೊಂಬಾಯಿ ಶಾಖಾ ಕಚೇರಿಯು ಈ ತನಕ 321 ತಾಕುರ್‌ದ್ವಾರ್, ಬೊಂಬಾಯಿ-2 ರಲ್ಲಿ ಇದ್ದುದನ್ನು ತಾ. 3-10-1951ರಿಂದ 18 B, ಹಮಾನ್ ಚೇಂಬರ್ಸ್, ಪಾರ್ಶಿ ಬಜಾರ್ ಸ್ಟ್ರೀಟ್, ಫೋರ್ಟ್ ಬೊಂಬಾಯಿಗೆ ಒಯ್ಯಲಾಗಿದೆ.

ಯೋಜಗ ಪ್ರ ತಿಮ್ಮಪ್ಪ ಹೆಗ್ಡೇರು— ಇದೇ ತಾ. 15ನೇ ರಾತ್ರಿ ಶಸ್ತ್ರ ಚಿಕಿತ್ಸೆಗೆ ಹೋದವರು ಮಂಗಳೂರಲ್ಲಿ ನಿಧನಹೊಂದಿದರೆಂಬುದು ಅತ್ಯಂತ ವಿಷಾದಕರವಿದೆ. ಶ್ರೀಯುತರು ಪ್ರಸಿದ್ಧ ಬಂಟ ಮನೆತನಕ್ಕೆ ಸೇರಿದವರಾಗಿದ್ದು ತಮ್ಮ ಸರಳ, ಸೌಜನ್ಯಾದಿ ಸದ್ಗುಣಗಳಿಂದ ಸರ್ವ ಜನಪ್ರೀತರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿ ಕೋರುತ್ತೇವೆ.

ದಿ ಉಡುಪಿ ಬೇಂಕ್ ಲಿಮಿಟೆಡ್, ಉಡುಪಿ
THE UDIPI BANK LIMITED, UDIPI

ನೋಟೀಸು

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ:-

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಸಾಲಗಳ ಬಾಬ್ತು ಅಸಲು ಐವೇಜು, ಬಡ್ಡಿ ವ ಇತರ ಖರ್ಚುಗಳನ್ನು ಕ್ಲುಪ್ತ ಮ್ಯಾದೆಗೆ ಸಲಾಯಿಸದೆ ಇದ್ದುದರಿಂದ ಸದರಿ ಲೋನುಗಳ ಬಾಬ್ತು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 27-10-1951ನೇ ಶನಿವಾರ ಹಗಲು ಗಂಟೆ 11-30ಕ್ಕೆ ನಮ್ಮ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಗುವದು. ಯಾವ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೆ ಮುಂದುವರಿಸಲಾಗುವುದು. ತಿಳಿದಿರಲಿ

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಬಾಕಿ ಇರುವ ಅಸ್ಲು ಐವೇಜು
	ಕಲ್ಯಾಣಪುರ ಶಾಖೆ	ರೂ. ಆ. ಪೈ.
201/50	ಶಕ್ತಿ ಸೇರಿಗಾರ್ತಿ, ಕೊರಬ ಸೇರಿಗಾರರ ಹೆಂಡತಿ, ವೆಂಕಟರಮಣ ದೇವಸ್ಥಾನದ ಹತ್ತಿರ ವಾಸಿಸುವವಳು, ಕಲ್ಯಾಣಪುರ	45-0-0
220/50	ಸಾಬು ಸಾಹೇಬ್, ಹಸನ್ ಸಾಹೇಬರ ಮಗ, ತಿಮ್ಮಣ್ಣ ಕುದ್ರು, ಕೆಮ್ಮಣ್ಣು.	125-0-0
342/50	ಕೆ. ಚಂದಪ್ಪ ಪಿ. ಸುವರ್ಣ, ಅಪ್ಪು ಮರಕಾಲರ ಮಗ, ಅರಮನೆ ಹಿತ್ಲು, ಕಲ್ಯಾಣಪುರ	120-0-0
877/50	ಟಿ ಕೊರಬ ಪೂಜಾರಿ, ಚೀಂಕ ಪೂಜಾರಿಯವರ ಅಳಿಯ, ಮೂಡುತೋನ್ಸೆ ಗ್ರಾಮ, ನಡುಂಬಳ್ಳಿ, ಕಲ್ಯಾಣಪುರ	100-0-0
396/50	ಚಂದಪ್ಪ ಪಿ ಸುವರ್ಣ, ಅಪ್ಪು ಮರಕಾಲರ ಮಗ, ಅರಮನೆ ಹಿತ್ಲು, ಕಲ್ಯಾಣಪುರ.	165-0-0
57/51	ಅಣ್ಣಯ್ಯ ಪೂಜಾರಿ, ಅಪ್ಪಯ್ಯ ಪೂಜಾರಿಯವರ ಅಳಿಯ, ಮೂಡಬೆಟ್ಟು, ಕಲ್ಯಾಣಪುರ.	15-0-0
63/51	ಎಚ್ ಪಿ. ಮೆಂಡನ್, ದೊಡ್ಡಮನೆ, ಉಪ್ಪೂರು.	144-0-0
143/51	ಶಕ್ತಿ ಸೇರಿಗಾರ್ತಿ, ಕೊರಬ ಸೇರಿಗಾರರ ಹೆಂಡತಿ, ವೆಂಕಟರಮಣ ದೇವಸ್ಥಾನದ ಹತ್ತಿರ ವಾಸಿಸುವವಳು, ಕಲ್ಯಾಣಪುರ	25-0-0
154/51	ಯು. ರಾಮಕೃಷ್ಣ, ಹೂವಯ್ಯ ಸೇರಿಗಾರರ ಮಗ, ವ್ಯಾಪಾರಸ್ಥರು, ಕಲ್ಯಾಣಪುರ.	75-0-0
174/51	ಯು. ರಾಮಕೃಷ್ಣ, ಹೂವಯ್ಯ ಸೇರಿಗಾರರ ಮಗ, ವ್ಯಾಪಾರಸ್ಥರು, ಕಲ್ಯಾಣಪುರ.	30 0-0
192/51	ಯು. ರಾಮಕೃಷ್ಣ, ಹೂವಯ್ಯ ಸೇರಿಗಾರರ ಮಗ, ವ್ಯಾಪಾರಸ್ಥರು, ಕಲ್ಯಾಣಪುರ.	37-0-0
	ಉಡುಪಿ ಶಾಖೆ	
64/51	ಯು. ರಾಮಕೃಷ್ಣ, ಹೂವಯ್ಯ ಸೇರಿಗಾರರ ಮಗ, ವ್ಯಾಪಾರಸ್ಥರು, ಕಲ್ಯಾಣಪುರ.	180-0-0

ಆಫೀಸು
ಉಡುಪಿ, ತಾ. 17-10-1951

ಪಿ. ಪುರುಷೋತ್ತಮ ಪ್ರಭು,
ಏಜಂಟ್.

ನೋಟೀಸು

ಉಡುಪಿ. ಡಿ. ಮು ಕೋರ್ಟಿನಲ್ಲಿ.

O. S. No. 392/1951.

ಭಾಗಿ ಹೆಗ್ಗಡ್ತಿ —ವಾದಿಳು

ಮತ್ತು

ಸುಂದರ ಹೆಗ್ಗಡ್ತಿ—ವಾದಿಯಾದ ಬಾಗಿ ಹೆಗ್ಗಡ್ತಿಯ ಮಗಳು—ಉಡುಪಿ ತಾಲೂಕು ಶಿರ್ವ ಗ್ರಾಮ —ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ವಾದಿ ವ ಪ್ರತಿವಾದಿ ವಗೈರೆರ ಕುಟುಂಬ ದಸ್ತು ತಾ 5—2—1949ರಲ್ಲು ಆದ ರಿಜಿಸ್ಟ್ರಿ ಸಿಕ್ಕ ವಿಭಾಗ ಪತ್ರ ಪ್ರಕಾರ ವಾದಿಗೆ ಬರಬೇಕಾದ ಕಳೆದ ನಿರೋಧಿ ಮತ್ತು ವಿಕೃತಿ ಸಂವತ್ಸರಗಳ ಜೀವನಾಂಶವನ್ನು ಬರಮಾಡಿಕೊಳ್ಳುವರ್ಕೆ ವಾದಿಳು ಮಾಡಿದ ಮೋಕ್ಕಂದ ದಾವೆಯು ತಾ. 26—10—1951ಕ್ಕೆ ಇರೋದಾಗಿರುತದೆ. ಆ ಕುರಿತು ಉದಾಹರಿಸುವಂಪಾದ್ದಿದ್ದರೆ ಆ ದಿವ್ಸ ಪೂರ್ವಾಹ್ಣ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ವ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. RAMAKRISHNA RAO.
Vakil for Plaintiff.
Udipi, 16-10-1951.

ನೋಟೀಸು

ಮಂಗಳೂರು ತಾಲೂಕು ಬ್ಯಕಳ ಗ್ರಾಮದ ಹಿರಿಯ ಮನೆಯಲ್ಲಿರುವ ಅಂತಕ್ಕ ಸೆಟ್ಟಿರ ಮಗಳು ಉಂಞಕ್ಕೆ ಸೆಡ್ತಿ । ಮತ್ತು ಈಕೆಯ ತಂಗಿ ಸುಂದರಿ ಸೆಟ್ಟಿ । ಕೂಡಾ ಎರಡು ಜನರು ತಿಳಿಯಪಡಿಸುವುದೇನೆಂದರೆ

ನಮ್ಮ ಅಜ್ಜ ಇತ್ತಲಾಗೆ ಮೃತಪಟ್ಟ ಬ್ಯಕಳ ಗ್ರಾಮದ ಹಿರಿಯ ಮನೆಯಲ್ಲಿರುವ ತಿಮ್ಮಾಜು ಸೆಡ್ತಿರ ಮಗ ಸುಬ್ಬಯ್ಯ ಸೆಟ್ಟಿ ಇದೇ ಕಳೆದ 30 9-51ರಲ್ಲು ತನ್ನ ಸ್ಥಿರ ಬುದ್ಧಿಯಿಂದಲೂ ಅತ್ಯಸಂತೋಷದಿಂದಲೂ ಬರೆದಿಟ್ಟ ವೀಲು ಮೇರೆಗೆ ಅವರ ಹಕ್ಕಿನ ಬಾಬ್ತು ಮೂಲಗೇಣಿ ವಕ್ಲ ಸ್ವಾಧೀನವಿರುವ ಐಕಂಜೆ ಗ್ರಾಮದ ಆಸ್ತಿಯ ಧನಿಕನ ಹಕ್ಕಿನಲ್ಲಿ ನಮ್ಮ ಪೈಕಿ ಎರಡನೇಯವರ ಮಗಳು ಸುಬ್ಬಕ್ಕೆಗೂ, ಸದ್ರಿ ಸುಬ್ಬಯ್ಯ ಸೆಟ್ಟಿ ಎರಡನೇ ಹೆಂಡ್ತಿ ಮಗಳು ತಾಂಬಕ್ಕೆಗೂ ಸರಿ ಸಮಾನವಾದ ಹಕ್ಕು ಸ್ಥಾಪಿಸಿರುತ್ತಾರೆ. ಸದ್ರಿ ಸುಬ್ಬಯ್ಯ ಸೆಟ್ಟಿ ಅವರ ಹಕ್ಕಿನ ಬಾಬ್ತು ಇತರ ಎಲ್ಲಾ ಸ್ಥಿರ ಚರ ಸೊತ್ತುಗಳಲ್ಲಿಯೂ ಮೊದಲಿನಿಂದ ಬಹಾ ಯಾವತ್ತೂ ಸಂಗಳಿಗೆ ಸಹಾ ನಮಗೆ ಪರಿಸಮಾನವಾಗಿ ಸಂಪೂರ್ಣ ಹಕ್ಕು ಸ್ಥಾಪಿಸಿರುತ್ತಾರೆ. ಸದ್ರಿ ಸುಬ್ಬಯ್ಯ ಸೆಟ್ಟಿ ಸೊದ್ಲು ಬರೆದಿಟ್ಟ ಮೂರು ವೀಲು ನಾಮೆಗಳನ್ನು ಸದ್ರಿ ವೀಲು ಮೋರೆ ರದ್ದು ಮಾಡಿರುತ್ತಾರೆ. ಆದುದರಿಂದ ಮುಂಚಿನ ವೀಲು ಮೋರೆಗೆ ಉಂಟು ಮಾಡಿದ ಯಾವತ್ತು ಹಕ್ಕುಗಳು ನಾಶವಾಗಿವೆ.

ಈ ಎಲ್ಲಾ ಸಂಗತಿ ಸಂಪೂರ್ಣ ತಿಳಿದವರಾದ ಅಡ್ಡೆ ಪಟೇಲ ದೊಡ್ಡಣ್ಣ ಸೆಟ್ಟಿ ಸದ್ರಿ ಆಖೇರಿ ವೀಲನ್ನು ಆಕ್ಷೇಪಿಸುವ ಇಂಗಿತದಿಂದ ಈ ಪತ್ರಿಕೆಯಲ್ಲಿ 5-10-51ರಲ್ಲಿ ಕೊಟ್ಟ ಪ್ರಕಟಣೆಯು ಸದ್ರಿ ಆಖೈರು ವೀಲು ಮೇರೆಗೆ ನಮಗೆ ಕೂಡಾ ಉಂಟಾದ ಹಕ್ಕುಗಳ ಮೇಲೆ ಬಾಧಿಸತಕ್ಕದ್ದಲ್ಲ. ಸದ್ರಿ ವೀಲು ಸದ್ರಿ ಪ್ರಕಟಣೆಯಲ್ಲಿ ಸೂಚಿಸಿದ ಯಾವ ದೂಷಣೆಗೂ ಒಳಪಟ್ಟದ್ದಲ್ಲ. ಸದ್ರಿ ಪ್ರಕಟಣೆಯನ್ನು ನಾವು ಸಂಪೂರ್ಣ ನಿರಾಕರಿಸುತ್ತೇವೆ.

॥ ಈ ಎಡ ಹೆಬ್ಬೆಟ್ಟು ಮುದ್ರೆ ಉಂಞಕ್ಕೆ ಸೆಡ್ತಿಯದು, ಸುಂದರಿ ಸೆಡ್ತಿ ರುಜು

ಬ್ಯಕಳ, 12-10-51.

ಅಡಕೆ ಮತ್ತು ತೆಂಗು ಮಾರ್ಕೆಟು ಕಮಿಟಿ, ಮಂಗಳೂರು.

ಇದರ ಉದ್ದೇಶ ಮತ್ತು ಕಾರ್ಯಸಾಧನೆ

ಮದರಾಸಿನ 1933ನೇ ಇಸವಿಯ ವ್ಯಾಪಾರಿ ಮಾರ್ಕೆಟು ಆಕ್ಟು ಇತರ ಜಿಲ್ಲೆಗಳಲ್ಲಿ ಹತ್ತಿ, ನೆಲಗಡಲೆ ಮತ್ತು ಹೊಗೆಸೊಪ್ಪು ಇವುಗಳಿಗೆ ಜ್ಯಾರಿಯಲ್ಲಿದ್ದು ಈಗಾಗಲೇ ಅಡಕೆ ಮತ್ತು ತೆಂಗಿನಕಾಯಿಗಳಿಗೆ ಮಲಬಾರು ಮತ್ತು ದಕ್ಷಿಣಕನ್ನಡಾ ಜಿಲ್ಲೆಗಳಲ್ಲಿ ಜ್ಯಾರಿಗೆ ತರಲ್ಪಟ್ಟಿದೆ. ಈ ಕಾನೂನಿನ ಮುಖ್ಯ ಉದ್ದೇಶವೇನೆಂದರೆ ಈ ಬೆಳೆಗಳ ವ್ಯಾಪಾರಗಳನ್ನು ಕ್ರಮಗೊಳಿಸಿ, ಅದರಿಂದ ಬೆಳೆಯುವ ರೈತನಿಗೆ ಯೋಗ್ಯ ಧಾರಣೆ ಸಿಕ್ಕುವಂತೆಯೂ ವ್ಯಾಪಾರಸ್ಥರಿಗೆ ಒಂದೇ ಸ್ಥಳದಲ್ಲಿ ಒಳ್ಳೆಯ ಸರಕು ದೊರೆಯುವಂತೆಯೂ, ಕೊಂಡುಕೊಳ್ಳುವವನಿಗೆ ಧಾರಣೆಗೆ ತಕ್ಕಂತೆ ಯೋಗ್ಯ ಸರಕು ಪಡೆಯಲು ಸಹಾಯವಾಗುವಂತೆಯೂ ಆಗಿದೆ

ಇದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರ್ಕೆಟು ಕಮಿಟಿಯು ಕೆಲಸ ಪ್ರಾರಂಭಿಸಿರುವುದು ಈಗಲೇ ಹೆಚ್ಚಿನವರಿಗೆ ತಿಳಿದಿದೆ. ಇದರ ಪರಿಣಾಮವಾಗಿ ಈ ಕೆಳಗಿನ ಕ್ರಮಬದ್ಧ ಪದ್ಧತಿಗಳನ್ನು ಜ್ಯಾರಿಗೆ ತರಲಾಗಿದೆ:—

1) ಅಡಿಕೆಯ ಮತ್ತು ಕೊಬ್ಬರಿಯ ತೂಕವು ಸರಿಯಾದ ಇಂಗ್ಲಿಷು ರಾತ್ಲು ತೂಕದಲ್ಲಿಯೇ ಮಾಡಬೇಕಾಗಿದೆ ಅಂದರೆ ಹಳ್ಳಿಗಳಲ್ಲಿ 28ರಾತ್ಲು ಎಂದು ಹೇಳುವ ಮಣದ ಲೆಕ್ಕದ 560ರಾತ್ಲು ಖಂಡಿ ಅಡಿಕೆ ತೂಕ ಮಾಡಿದರೆ ಅದು ಸರಿಯಾಗಿ 576 ಇಂಗ್ಲಿಷು ರಾತ್ಲು ತೂಕವಾಗಬೇಕು ಮತ್ತು ಆ 576ರಾತ್ಲುಗಳ ಕ್ರಯ ಅವನಿಗೆ ಸಿಕ್ಕಬೇಕಾಗಿದೆ.

2) ಅಡಿಕೆಯ ಕಮಿಶನ್ 112ರಾತ್ಲಿನ ಹಂಡ್ರೆಡ್ ವೈಟಿಗೆ ರೂ. 3-8-0 ಎಂದು ನಿರ್ಣಯಿಸಿರುವುದರಿಂದ ಇದಕ್ಕಿಂತ ಹೆಚ್ಚಿಗೆ ಕಮಿಶನ್ ಯಾವ ಕಮಿಶನ್ ಏಜಂಟರೂ ತೆಗೆದುಕೊಳ್ಳಬಾರದಾಗಿ ಕಾನೂನಿದೆ.

3) ಇಷ್ಟರವರೆಗೆ ಕಮಿಶನ್ ಏಜಂಟರು ಮಾರುವಾಗ 140 ರಾತ್ಲಿನ ಒಂದು ಗೋಣಿ ಅಡಿಕೆಗೆ ಅರ್ಧರಾತ್ಲು ಅಡಿಕೆಯನ್ನು ಧರ್ಮಾರ್ಥವಾಗಿ ಹೆಚ್ಚಿಗೆ ಕೊಡುವುದನ್ನು ಈಗ ಸಂಪೂರ್ಣ ನಿಲ್ಲಿಸಲಾಗಿದೆ. ಇನ್ನು ಯಾವ ರೈತರೂ ಈ ಹೆಚ್ಚಿಗೆ ಅರ್ಧರಾತ್ಲು ಅಡಿಕೆಯನ್ನು ಕೊಡುವ ಅಗತ್ಯವಿಲ್ಲ.

4) ತೂಕವಾದ ಮೇಲೆ ಮಾರಾಟವಾದೊಡನೆ ಪೂರಾ ಹಣವನ್ನು ಪಾವತಿ ಮಾಡಬೇಕೆಂದಾಗಿರುವುದು.

5) ಹಳ್ಳಿಗಳಲ್ಲಿಯೂ ವ್ಯಾಪಾರಸ್ಥರು ಕೊಂಡುಕೊಳ್ಳುವಾಗ್ಯೆ ಸರಿಯಾದ ತೂಕದಲ್ಲೇ ಪಡೆಯಬೇಕಾಗಿದೆ.

6) ಲೈಸನ್ಸು ಪಡೆಕೊಳ್ಳದ ಯಾವನೊಬ್ಬ ವ್ಯಾಪಾರಿಯೂ, ಈ ಬೆಳೆಗಳಲ್ಲಿ ವ್ಯಾಪಾರ ಮಾಡಬಾರದಾಗಿ ಕಾನೂನಿದೆ.

7) ರೈತನು ಲೈಸನ್ಸು ಇಲ್ಲದೆ ಅವನ ಸ್ವರನ್ನು ಎಲ್ಲಿಯೂ ಯಾರಿಗೂ ಮಾರಲು ನಿರ್ಬಂಧವಿಲ್ಲ ಮಾತ್ರವಲ್ಲದೆ ಕ್ರಯ ನಿಯಂತ್ರಣವೂ ಇಲ್ಲ.

ಇವುಗಳಲ್ಲದೆ, ರೈತರಿಗೂ ವ್ಯಾಪಾರಸ್ಥರಿಗೂ ಅನುಕೂಲವಾಗುವಂತೆ, ಮಾರ್ಕೆಟು ಯಾರ್ಡುಗಳು ತೆರೆಯಲ್ಪಟ್ಟು, ನ್ಯಾಯವಾದ ಕ್ರಮ ಬದ್ಧವಾದ ವ್ಯಾಪಾರಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡುವುದು ಈ ಕಮಿಟಿಯ ಉದ್ದೇಶವಾಗಿದೆ.

ರೈತರಿಗೆ ಈ ಕಮಿಟಿಯಿಂದ ತುಂಬಾ ಅನುಕೂಲತೆಗಳಿವೆ-ಯಾವ ಪ್ರತಿಬಂಧವೂ ಇಲ್ಲ ವ್ಯಾಪಾರಸ್ಥರಿಗೆ ನ್ಯಾಯವಾದ ವ್ಯಾಪಾರಕ್ಕೆ ಅನುಕೂಲವೂ ಸೌಕರ್ಯವೂ ಇದರಿಂದಿರುವುದರಿಂದ, ಎಲ್ಲರೂ ಈ ಕಮಿಟಿಯೊಂದಿಗೆ ಸಹಕರಿಸುವರಾಗಿ ನಂಬಲಾಗಿದೆ.

ಬಸ್ರೂರು—ಇಲ್ಲಿಯ ಕಲಾಮಾಲಾ ಕಾರ್ಯಾಲಯದಲ್ಲಿ ದಸರೆ ದಿನಗಳಲ್ಲಿ ನಾಡಹಬ್ಬವು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಬೈಲೂರು—ಸ್ಥಳೀಯ ಗಾಂಧಿ ಮಿತ್ರರ ಸಂಘದ ಭವನದಲ್ಲಿ ಇದೇ ತಾ 8, 9, 10ರಲ್ಲು ನವರಾತ್ರಿ ಮಹೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀಗಳಾದ ಜಿ. ನಾರಾಯಣ ಹೆಗ್ಡೆ, ಆರ್. ಡಿ. ಶಾಸ್ತ್ರಿ ಮತ್ತು ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಅನುಕ್ರಮವಾಗಿ ಅಧ್ಯಕ್ಷತೆ ವಹಿಸಿದರು. ಶ್ರೀಗಳಾದ ಬಿ ಎ. ಪೈ, ಎ. ಜಿ. ಆಳ್ವ, ಕೆ. ಶ್ರೀನಿವಾಸ ಪೈ, ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಎಚ್. ನರಸಿಂಹ ಮೊದಲಾದವರ ಭಾಷಣಗಳಿದ್ದುವು. ಶ್ರೀಗಳಾದ ಬಿ ಜಗನ್ನಾಥ ನಾಯಕ್ ಮತ್ತು ನೀರೆ ಕೃಷ್ಣ ಭಟ್ಟರು ಅನುಕ್ರಮವಾಗಿ ಹರಿಜನ ಶಾಲಾ ಮಕ್ಕಳಿಗೆ ವಸ್ತ್ರವನ್ನು, ತಿಂಡಿಯನ್ನು ಹಂಚಿದರು.

ಕೊಂಪದವು - ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ 7ರಂದು ಹೊಸ್ತಿನ ಕೂಟ ಮತ್ತು ಶ್ರೀ ಶಾರದಾ ಪೂಜಾ ಸಮಾರಂಭವು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಭಾಸ್ಕರ ರೈ ಮತ್ತು ಗ್ರಾಮದ ಮುಖ್ಯಸ್ಥರು ಶಾಲಾ ಕಟ್ಟಡದ ಹೀನಾವಸ್ಥೆಯನ್ನು ಮನಗಂಡು ಹೊಸ ಕಟ್ಟೋಣದ ಯೋಜನೆ ಮಾಡಿದರು.

ಸುರತ್ಕಲ್ ಅಗ್ಗಿದಕಳಿ—ಹಾ। ಎ। ಶಾಲೆಯ 56ನೆ ವರ್ಧಂತಿ ಹಾಗೂ ದಸರಾ ಮಹೋತ್ಸವಗಳು ಇದೇ ತಾ 6ರಂದು ಶ್ರೀ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿದವು.

ಸುರತ್ಕಲ್ ಮುಕ್ಕ ಮಿತ್ರಪಟ್ಣ—ಗಂಗಯ್ಯ ಸ್ಮಾರಕ ರಾತ್ರಿಶಾಲೆಯಲ್ಲಿ ದಸರಾ ಮಹೋತ್ಸವವು ಇದೇ ತಾ. 8ರಂದು ಸಂಜೆ ಯಶಸ್ವಿಯಾಗಿ ಜರಗಿತು.

ಸುರತ್ಕಲ್—ವಿದ್ಯಾದಾಯಿನೀ ಹೈಸ್ಕೂಲಿನಲ್ಲಿ ನಾಡಹಬ್ಬವು ದಿನಾಂಕ 7 ರಂದು ಶ್ರೀ ಆರ್. ಕೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಶಿವರಾವ್, ಎಮ್. ಎಸ್. ಏಕಾಂಬರ ರಾವ್, ನರಸಪ್ಪಯ್ಯ, ಮೊದಲಾದವರು ಈ ಕಾಲಕ್ಕೆ ಹಾಜರಿದ್ದರು. ವಿದ್ಯಾರ್ಥಿ ಸಂಘದ ಮಂತ್ರಿ ಸ್ವಾಗತ ಭಾಷಣಮಾಡಿದರು ಅಧ್ಯಕ್ಷರು ಶಾಲಾ ಹಿತವನ್ನು ಕೋರಿ ಮಾತನಾಡಿದ ನಂತರ ವಿವಿಧ ವಿನೋದಾವಳಿಗಳಾದುವು.

ನೀಲಾವರ—ಇಲ್ಲಿಯ ಶ್ರೀ ಮ. ಹಿ. ಪ್ರವರ್ಧಿನಿ ಶಾಲೆಯಲ್ಲಿ ಇದೇ ತಾ. 7ರಲ್ಲು ಶಾಲಾ ವರ್ಧಂತಿ ಸಮಾರಂಭವು ಶ್ರೀ ಪಿ. ವಿ. ರಮೇಶ ಅಡಿಗಳ ಅಧ್ಯಕ್ಷತೆಯಲ್ಲಿ ಜರಗಿತು, ಶಾರದಾಪೂಜೆ, ಸ್ವಾಗತಗೀತೆ, ಕೋಲಾಟ, ಯಕ್ಷಗಾನ ಇತ್ಯಾದಿ ಮಕ್ಕಳ ಚಟುವಟಿಕೆಗಳಾದುವು. ಶ್ರೀಗಳಾದ ಕೆ. ಎಸ್. ನಾಯಕ್, ಹೆಡ್ಮಾಸ್ಟರ್ ಶ್ರೀ ಅಣ್ಣಪ್ಪ ಭಟ್ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು. ಪ್ರಸಾದ ವಿತರಣೆ, ಸಭಾಪೂಜಾದಿಗಳಿಂದ ಸಮಾರಂಭ ಕೊನೆಗೊಂಡಿತು.

ಬೇಳೂರು—ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶಾರದಾ ಪೂಜಾ ಸಮಾರಂಭವು ಇದೇ ತಾ. 7ರಲ್ಲು ಶ್ರೀ ಎಸ್. ಎಸ್. ಬೇಳೂರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಬಾಳಕುದ್ರು—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಮಕ್ಕಳ ರಕ್ಷಕರ ಕೂಟದ ಸಭೆಯೂ ಶ್ರೀ ಶಾರದಾ ಪೂಜೆಯೂ ದಿನಾಂಕ 7ರಂದು ಶ್ರೀ ಬಿ ಅನಂತರಾಮ ಉಡುಪರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಮಹಾಬಲ ಮಧ್ಯಸ್ಥರು ಸ್ವಾಗತ ಭಾಷಣ ಮಾಡಿದನಂತರ ಶ್ರೀಗಳಾದ ಶ್ರೀನಿವಾಸ ಕೆದ್ಲಾಯ, ಡಾ। ಯು. ಎಸ್. ಕಲ್ಕೂರ್, ಬಿ ಎಲ್. ಕೆದ್ಲಾಯ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು.

ಕುಂದಾಪುರ—ಕುಂದಾಪುರ ಮತದಾರ ಕ್ಷೇತ್ರದ ವೋಟರ ಲಿಸ್ಟು ಪಟ್ಟಿಯು ಇದೇ ತಾ. 8 ಕ್ಕೆ ಪ್ರಸಿದ್ಧಿಸಲಾಗಿದೆ.

ಕಲಿದ್ಯ—ಸ್ಥಳೀಯ ಪಂಚಾಯತ ಬೋರ್ಡ ಶಾಲೆಯಲ್ಲಿ ಇದೇ ತಾ 7ರಲ್ಲಿ ಶ್ರೀ ಶಾರದಾ ಪೂಜಾಸಮಾರಂಭವು ಶ್ರೀ ವಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಭಜನೆ ಮಕ್ಕಳ ಚಟುವಟಿಕೆ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳಾದುವು.

ಕುಂಬಳೆ-ಮಾಯಿಪಾಡಿ ಬುನಾದಿ ಶಿಕ್ಷಣ ತರಬೇತುಶಾಲೆಯಲ್ಲಿ ಇದೇ ತಾ 10ರಂದು ಮೊಹರಮ್ ದಿನಾಚರಣೆ ಸಂಬಂಧ ಸಭೆ, ಭಾಷಣಗಳಾದುವು.

ಕೊಕ್ಕರ್ಣೆ - ಸ್ಥಳೀಯ ಬೋ। ಶಾ। ಎ। ಶಾಲೆಯಲ್ಲಿ ಶಾರದಾಪೂಜೆಯು ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ನೆರವೇರಿತು ಈ ಶಾಲೆಯಲ್ಲಿ ಸ್ಥಳಾಭಾವವುಂಟಾಗುತ್ತದೆಂದು ಚಾತ್ರದಾರರೊಬ್ಬರು ಬರೆಯುತ್ತಾರೆ. ಇದೇ ಶಾಲೆಯ ವಠಾರದಲ್ಲಿ ತಾ. 8ರಲ್ಲು ಉಡುಪಿ ಎಗ್ರಿಕಲ್ಚರಲ್ ಡೆಮೊನ್ಸ್ಟ್ರೇಟರ ನೇತೃತ್ವದಲ್ಲಿ ಗೊಬ್ಬರಸಪ್ತಾಹ ಕಾರ್ಯಕ್ರಮವು ನೆರವೇರಿತು. ಶ್ರೀಗಳಾದ ಮಹಾಬಲಶೆಟ್ರು, ರಾಜುಬೋಂಟ್ರ ಮೊದಲಾದವರ ಸಂದರ್ಭೋಚಿತ ಭಾಷಣಗಳಿದ್ದುವು

ಧರ್ಮಸ್ಥಳ—ಧರ್ಮಸ್ಥಳದಲ್ಲಿ ಶ್ರೀ ಮಂಜಯ್ಯ ಹೆಗ್ಗಡೆಯವರು ಕಣ್ಣಿನ ರೋಗಿಗಳ ಉಪಚಾರದ ಸಲುವಾಗಿ ಡಾ। ಎಮ್. ಸಿ. ಮೋದಿಯವರನ್ನು ಆಮಂತ್ರಿಸಿದ್ದಾರೆ. ಅಲ್ಲದೆ ಬಡರೋಗಿಗಳ ಊಟೋಪಚಾರದ ವ್ಯವಸ್ಥೆಯನ್ನು ಪುಕ್ಕಟೆಯಾಗಿ ಮಾಡಿದ್ದಾರೆ. ಬಹಳ ಬಡವರಿದ್ದರೆ ಅವರ ಪ್ರವಾಸದ ಖರ್ಚನ್ನು ಕೂಡಾ ಕೊಡುವ ವ್ಯವಸ್ಥೆ ಮಾಡಿದ್ದಾರೆ. ನೇತ್ರರೋಗಿಗಳು ಅವಶ್ಯವಾಗಿ ಈ ಸುಪ್ರಸಂಗದ ಲಾಭವನ್ನು ಹೊಂದುವಂತೆ ಅಪೇಕ್ಷಿಸಲಾಗುತ್ತದೆ. ನೇತ್ರ ರೋಗಿಗಳ ಚಿಕಿತ್ಸೆಯು ಇದೇ ತಾ. 15ರಿಂದ ಪ್ರಾರಂಭವಾಗಿಯದೆ. ಚಿಕಿತ್ಸಾರ್ಥಿಗಳು ಬಹು ಸಂಖ್ಯೆಯಿಂದ ಬರುತ್ತಿದ್ದಾರೆ.

ಮೂಲೂರು—ಇದೇ ತಾ. 2ರಿಂದ 8ರ ತನಕ ಮೂಲೂರಲ್ಲಿ ಮಿಶ್ರಗೊಬ್ಬರ ಸಪ್ತಾಹವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಕೊನೆಯ ದಿನ ಶಾಲಾ ಮಕ್ಕಳ ಹಾಗೂ ಊರವರ ಮೆರವಣಿಗೆಯಾಗಿ ಮಿಶನ್ ಶಾಲಾ ವಠಾರದಲ್ಲಿ ಶ್ರೀ ಎಮ್. ಭೋಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಉತ್ತಮ ಮಿಶ್ರಗೊಬ್ಬರ ತಯಾರಿಸಿದವರಿಗೆ ಬಹುಮಾನ ವಿತರಣೆಯಾಯಿತು ಶಾಲಾ ಬಾಲಕರಿಗೆ ಸಿಹಿತಿಂಡಿ ಹಂಚಲಾಯಿತು. ಸಭಿಕರ ಭಾಷಣ, ಧನ್ಯವಾದಾರ್ಪಣೆಯೊಂದಿಗೆ ಕಾರ್ಯಕ್ರಮು ಕೊನೆಗೊಂಡಿತು.

ಕಾಸರಗೋಡಿನಲ್ಲಿ ಜಿಲ್ಲಾ ಆಯುರ್ವೇದ ಸಮ್ಮೇಳನವು:—ಇದೇ ತಾ 6ರಲ್ಲು ಡಾ। ಯು. ವಿ. ಕೃಷ್ಣ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಡಾ। ಕೆ. ಸಿ. ಆಳ್ವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ಆರ್. ಕಾರಂತ, ಎಮ್. ಎಲ್. ಎ. ಅವರು ಸಮ್ಮೇಳನದ ಉದ್ಘಾಟನೆ ಮಾಡುತ್ತ, ಆಯುರ್ವೇದ ವೃತ್ತಿಯವರು ತಮ್ಮ ಉದ್ಧಾರಕ್ಕಾಗಿ ತಾವೇ ಪ್ರಯತ್ನಿಸಬೇಕೆಂದು ಹೇಳಿ, ವೈದ್ಯರು ಸಂಘಟಿತರಾಗಬೇಕೆಂದರು. ಶಾಸ್ತ್ರ ಸಂಭಾಷಾ ವಿಭಾಗದ ಅಧ್ಯಕ್ಷ ಡಾ। ಸಿ. ದ್ವಾರಕಾನಾಥರು ತಮ್ಮ ಭಾಷಣದಲ್ಲಿ, ಈ ದೇಶದ ವೈದ್ಯಶಿಕ್ಷಣ, ವೈದ್ಯ ಸಂಶೋಧನೆ, ವೈದ್ಯ ಸೌಕರ್ಯಾದಿಗಳಲ್ಲಿ ಆಯುರ್ವೇದಕ್ಕೆ ಉಜ್ವಲವಾದ ಭವಿಷ್ಯವಿದೆ ಎಂದರು. ಡಾ ಎಮ್ ಆರ್. ಭಟ್, ಪಾಣಾಜೆ ವೈದ್ಯ ಶ್ರೀ ಶಂಕರನಾರಾಯಣ ಭಟ್ ಮೊದಲಾದವರು ಆಯುರ್ವೇದದ ಕುರಿತು ಭಾಷಣವಿತ್ತರು.

ಸಮ್ಮೇಳನವು ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರ ನಿಧನಕ್ಕೂ ವೈದ್ಯರತ್ನ ಡಾ। ಕೆ. ಶಂಕರಭಟ್ಟರ ನಿಧನಕ್ಕೂ ದುಃಖ ಸೂಚಿಸಿತು. ಅನಂತರ 'ಇಂಡಿಯನ್' ಶಬ್ದದ ಬದಲಿಗೆ 'ಇಂಡಿಜಿನಸ್' ಶಬ್ದ ಉಪಯೋಗಿಸುವ ಯೋಚನೆಯನ್ನೂ ತೀವ್ರವಾಗಿ ಖಂಡಿಸುವ, ಸಂಡಿಕ ಸಮಿತಿ ಸೂಚನೆ, ಚೋಪ್ರಾ ಸಮಿತಿಯ ಸೂಚನೆ ಮತ್ತು ಆರೋಗ್ಯ ಮಂತ್ರಿಗಳ ಪರಿಷತ್ತಿನ ನಿರ್ಣಯಗಳನ್ನು ಕೇಂದ್ರಸರಕಾರವೂ ಪ್ರಾಂತಿಕ ಸರಕಾರಗಳೂ ಜಾರಿಗೆತರಬೇಕೆನ್ನುವ ಆಕಾಂಕ್ಷೆ [illegible] ರೋಧ ಕಾನೂನಿನಿಂದ ವಿನಾಯಿತಿಗೊಳಿಸಬೇಕೆನ್ನುವ, ಕೇಂದ್ರಸರಕಾರದ ಆರೋಗ್ಯ ಮಂತ್ರಿಗಳ ಬಜೆಟು ಭಾಷಣವನ್ನು ಸ್ವಾಗತಿಸುವ ಮತ್ತು ಅಲ್ಲಿ ಹೇಳಿದುದನ್ನು ಮದ್ರಾಸು ಸರಕಾರವು ಆಚರಿಸಬೇಕೆನ್ನುವ, ವಿಜ್ಞಾನದಲ್ಲಿ 'ಜೀವಶಾಸ್ತ್ರ' ಎಂಬ ಅರ್ಥದಲ್ಲಿ ಇಲ್ಲಿ 'ಆಯುರ್ವೇದ'ವೆಂಬ ಪದವನ್ನೇ ಸರಕಾರವೂ ಅಧಿಕೃತವಾಗಿ ಉಪಯೋಗಿಸುವಂತಾಗಬೇಕೆನ್ನುವ, ಭೋರ್ ಸಮಿತಿಯ ಸೂಚನೆಗಿಂತ ಚೋಪ್ರಾ ಸಮಿತಿಯ ಸೂಚನೆಯು ಪ್ರಜಾದೃಷ್ಟಿಯಿಂದ, ಆರೋಗ್ಯಸೌಕರ್ಯ ಒದಗಿಸುವ ದೃಷ್ಟಿಯಿಂದಲೂ ಉತ್ತಮವಾಗಿರುವುದರಿಂದ ಅದನ್ನೇ ಅನುಸರಿಸಬೇಕೆನ್ನುವ, ಮದ್ರಾಸು ಸರಕಾರವು ಈ ಮೊದಲೇ ಕೊಟ್ಟ ಆಶ್ವಾಸನೆಯಂತೆ ಆಯುರ್ವೇದ ಪದ್ಧತಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಕೂಡಲೇ ತರಬೇಕೆಂಬ ಈ ಮಸೂದೆ ಶಾಸ್ತ್ರೀಯ ಪರೀಕ್ಷಿತ ವೈದ್ಯರ ಸ್ಥಾನಮಾನಗಳನ್ನು ಆಯುರ್ವೇದ ವೈದ್ಯರಿಗೂ ಕಲ್ಪಿಸಿಕೊಡಬೇಕೆನ್ನುವ, ಆಯುರ್ವೇದ ಚಿಕಿತ್ಸಾಲಯಗಳಲ್ಲಿ ಆಧುನಿಕ ಪದ್ಧತಿಗಳನ್ನು ಸೇರಿಸಬೇಕೆನ್ನುವ ಗ್ರಾಮ ವೈದ್ಯ ಯೋಜನೆಯಂತೆ ತರಬೇತುಗೊಳಿಸುವವರಿಗೆ ಯೋಗ್ಯ ಸವಲತ್ತುಗಳನ್ನು ಒದಗಿಸಿ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ
ಕಾಳಿಕಮಾಲಿ
ಚವನ ಪ್ರಾಶವನ್ನೇ
ಸದಾ ಸರ್ವದಾ ಉಪಯೋಗಿಸಿರಿ
ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ
ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ
ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.
ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—
ಎಂ. ವಿನಾಯಕ ರಾವ್, ಒಸ್ಕಂಡ ರಸ್ತೆ, ಉಡುಪಿ, ದ ಕ
ಬೆಲೆ: 2 ಪೌಂಡಿನ ಟಿನ್ನಿಗೆ ರೂ 10-0-0 (ಅಂಚೆವೆಚ್ಚ ಪ್ರತ್ಯೇಕ)
AYURVEDIC PHARMACY
Baba kali Kamali-Wala RISHIKESH

ಈ ಸಲದ ಚುನಾವಣೆಯಲ್ಲಿ ಪ್ರತಿಯೊಬ್ಬ ಪ್ರಾಯಸ್ಥ ಮೆಂಬರನಿಗೂ ವೋಟು ಕೊಡುವ ಅಧಿಕಾರವಿದೆ ಎಂಬ ವಿಷಯವು ಎಲ್ಲರಿಗೂ ಗೊತ್ತಿರಬಹುದು. ವೋಟುಕೊಡುವ ಒಬ್ಬ ಮೆಂಬರನಿಗೆ ಎರಡು ಕಡೆಗಳಲ್ಲಿ ವೋಟುಕೊಡುವ ಹಕ್ಕಿದೆ. ಒಂದು ಕಡೆಯಲ್ಲಿ ಎಸೆಂಬ್ಲಿ ಉಮೇದ್ವಾರನ ಬಗ್ಗೆಗಿ. ಮತ್ತೊಂದು ಕಡೆ ಪಾರ್ಲಿಮೆಂಟಿನ ಉಮೇದ್ವಾರನ ಬಗ್ಗೆಗಿ ಆಗಲಿರುತ್ತದೆ. ಈ ಚುನಾವಣೆಯು ನಮ್ಮ ಭವಿಷ್ಯವನ್ನು ನಿರ್ಣಯಿಸತಕ್ಕದ್ದಾಗಿದೆ. ಈ ಹಿಂದೆ ವೋಟುಕೊಡುವ ಅಧಿಕಾರವು ತೀರ್ವೆಕೊಡುವವರನ್ನೂ ನಿಶ್ಚಿತ ಯೋಗ್ಯತೆವುಳ್ಳವರನ್ನೂ ಹೊಂದಿಕೊಂಡಿತ್ತು. ಆದರೆ ಈಗ, ಪ್ರಾಯಕ್ಕೆ ಬಂದ ಪ್ರತಿಯೊಬ್ಬ

ಪ್ರಕಟಣೆ

ಕುಂದಾಪುರ ತಾಲ್ಲೂಕು ಅನಗಳ್ಳಿ ಗ್ರಾಮದ ಕೋಷ್ಟದಲ್ಲಿರುವ ಮೊಗೇರ ಹಳೆಯಮ್ಮ ಹೆಂಗ್ಸಿನ ಮಗಳು ಗೌರಿ ಹೆಂಗ್ಸು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ—

ನಾನು ಮತ್ತು ನನ್ನ ಮಕ್ಕಳು ನಾರಾಯಣ ಕೂಡಾ ೨ಜನರು ಮೇಲೆ ಹೇಳಿದ ಅನಗಳ್ಳಿ ಗ್ರಾಮದಲ್ಲಿ ನನ್ನ ಸ್ವಂತ ದಾಖಲಗೇಣಿ ಹಕ್ಕಿನ ಸ್ಥಳದಲ್ಲಿ ಬಹಳ ಸಮಯದಿಂದ ಮನೆ ವಗೈರೆ ಮಾಡಿಕೊಂಡು ಜೀವಿಸಬರುತ್ತೇವೆ ನನ್ನ ಪ್ರಾಯಬಂದ 2ಜನ ಗಂಡುಮಕ್ಕಳು ಗಟ್ಟದಮೇಲೆ ಗೈಯಲಿಕ್ಕೆ ಪ್ರತಿವರ್ಷ ಹೋಗಿಬರುವಂತೆ ಈ ವರ್ಷ ಸಹಾ ಗಟ್ಟದ ಮೇಲೆ ಗೈಯ್ಯಲಿಕ್ಕೆ ಹೋಗಿರುತ್ತಾರೆ. ಮನೆಯಲ್ಲಿ ವಾಸ್ತವ್ಯವಿದ್ದ ನನ್ನ ಹಿರಿಮಗ ನಾರಾಯಣನೆಂಬವನು ಬೇರೆ ಬೇರೆ ಕೇಡಿ ಕೂಟಕ್ಕೆ ಸೇರಿ, ಕುಟುಂಬಕ್ಕೆ ವಿಮುಖನಾಗಿ ತಮ್ಮಂದಿರು ಸಂಪಾದನೆ ಮಾಡಿಕೊಡುವ ಹಣವನ್ನು ಕುಟುಂಬದ ಬಗ್ಗೆ ಸರಿಯಾಗಿ ಖರ್ಚುಮಾಡದೆ ಬೇರೆಯವರ ದುರ್ಬೋಧನೆಗೆ ಒಳಪಟ್ಟು, ಅನಾವ್ಯಯ ಮಾಡುತ್ತಾ ಬರುತ್ತಿರುವುದಲ್ಲದೆ ಕಳೆದ ಸುಮಾರು 2ದಿವ್ಸದ ಹಿಂದೆ, ತಮ್ಮ ಜೀವನದ ಬಗ್ಗೆ ಹೊಸದಾಗಿ ಅಕ್ಕಿ ರೇಶನ್ ಕಾರ್ಡ್ ಮಾಡಬೇಕಾಗಿಯೂ, ಆ ಬಗ್ಗೆ ಅರ್ಜಿಕೊಡುವರೆ ಹೆಬ್ಬೆಟ್ಟು ಅಗತ್ಯವಿರುವದಾಗಿ, ಬರಹ ಅರಿಯದವ ಹೆಡ್ಡ ಹೆಣ್ಣು ಹೆಂಗಸಾದ ನನಗೆ ಮೇಲೆ ಹೇಳಿದ ನಾರಾಯಣನು ನಂಬ್ಸಿ ನನ್ನಿಂದ ಕೆಲವು ಕಾಗ್ದಗಳಿಗೆ ಕೆಲವು ಹೆಬ್ಬೆಟ್ಟಿನ ಮುದ್ರೆಯನ್ನು ಒತ್ತಿಕೊಂಡು ಹೋಗಿರುತ್ತಾನೆ, ನಂತರ ಅತ ಹೊಸರೇಶನ್ ಕಾರ್ಡ್ ತಂದು ಕೊಡದೆಯೂ, ಸಮರ್ಪಕವಾದ ಉತ್ತರ ಕೊಡದೆ ಮನೆಯನ್ನೂ ಸಹಾ ಬಿಟ್ಟು, ಅಲಕ್ಕಾಗಿ ತಿರುಗಾಡುತ್ತಾ ಇದ್ದದ್ದರಿಂದ ನಾನು ಬೇರೆಯವರ ಹತ್ತರ ವಿಚಾರಿಸುವಾಗ, ಸದ್ರಿ ನಾರಾಯಣನು ನನಗೆ ವಿಮುಖನಾಗಿ, ಕುಟುಂಬಕ್ಕೆ ಮೋಸ ಮಾಡುವಗೋಸ್ಕರ, ಅತನನ್ನಿಂದ ಪಡಕೊಂಡ ಹೆಬ್ಬೆಟ್ಟುಗಳ ಸಹಾಯದಿಂದ ಸಿವರ್ಗಾಣ ರಿಕಾರ್ಡುಗಳನ್ನು ತಯಾರಿಸುವ ಪ್ರಯತ್ನದಲ್ಲಿ ಇರುವದಾಗಿ ಇತ್ತಲಾಗಿ ತಿಳಿದು ಬಂದಿರುತ್ತದೆ.

ಸದ್ರಿ ನಾರಾಯಣನು ನನ್ನನ್ನು ನಂಬ್ಸಿ, ಮೋಸದಿಂದ ಪಡಕೊಂಡು ಹೋದ ಹೆಬ್ಬೆಟ್ಟುಗಳ ಸಲಹೆಯಿಂದ, ಯಾವತರದ ರಿಕಾರ್ಡುಗಳನ್ನು ಮಾಡಿದ್ದಿದ್ದರೂ ಮಾಡಿದರೂ ಅಂಥಾ ರಿಕಾರ್ಡುಗಳು ಯಾವದೂ ನನ್ನಮೇಲೆ ಬಾಧಿಸತಕ್ಕದ್ದಲ್ಲ. ಹಾಗೆ ಅತ ಮಾಡಬಹುದಾದ ಯಾವ ದಾಖ್ಲೆಗಳಿಗೂ ನನ್ನ ಒಪ್ಪಿಗೆ ಇರುವುದಿಲ್ಲ. ಅವುಗಳು ನನ್ನ ಮೇಲೆ ನನ್ನ ಕುಟುಂಬದ ಮೇಲೆ ಬದ್ಧವಾದ್ದಲ್ಲವ ಸಿಂಧುವಾಗತಕ್ಕದ್ದೂ ಅಲ್ಲ. ನಾನು ಇದೇ ಕಳೆದ ಜುಲ್ಯಾ ತಿಂಗಳಲ್ಲಿ ಕುಂದಾಪುರದಲ್ಲಿರುವ ನ್ಯಾಲಾಡಿ ಸೂರಪ್ಪ ಸೆಟ್ರಿಗೆ ರೂಪಾಯಿ 300/-ನ್ನು ಪಡಕೊಂಡು ಒಂದು ಡಿಮಾಂಡು ನೋಟು ಬರಕೊಟ್ಟಿದ್ದರ ಹೊರ್ತು ಬೇರೆಯಾರಿಗೂ ಈ ವರೆಗೂ ನಾನು ಯಾವತರದ ರಿಕಾರ್ಡು ವಗೈರೆ ಮಾಡಿಕೊಟ್ಟಿದ್ದಿಲ್ಲ ವಿಚಾರ ಸಂಗ್ತಿ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಲುತ್ತದೆ.

● ಈ ಯಡ ಹೆಬ್ಬೆಟ್ಟಿನ ಮುದ್ರೆ

ಗೌರಿ ಹೆಂಗ್ಸಿನ ರುಜು..

ಮೊಕ್ಕಾಂ ಅನಗಳ್ಳಿ.

ತಾರೀಕು, 10-10-1951.

ಜನಮತ

ಮುಂಬರುವ ಚುನಾವಣೆಯಲ್ಲಿ ಪ್ರತಿಯೊಬ್ಬ ವೋಟರನೂ ತಿಳಿಯಬೇಕಾದ ಸಂಗತಿಗಳು

ವ್ಯಕ್ತಿಗೂ ಅರ್ಹತೆ ಇದೆ. ಅಂದ ಮೇಲೆ ವೋಟರನಿಗೆ ತುಂಬಾ ಮಹತ್ವವಿದೆ, ಆದುದರಿಂದ ಪ್ರತಿಯೊಬ್ಬ ವೋಟರನು ತಿಳಿಯಬೇಕಾದ ಸಂಗತಿಗಳು ಅನೇಕವಿವೆ

ಈ ಚುನಾವಣೆಗೆ ನಮ್ಮಲ್ಲಿ ಅನೇಕ ಪಾರ್ಟಿ ಸಂಗಡಗಳಿರುವುದರಿಂದ ಒಂದೊಂದು ಪಕ್ಷದ ಸಲುವಾಗಿ ಒಬ್ಬೊಬ್ಬ ವ್ಯಕ್ತಿಯು ಚುನಾವಣೆಯಲ್ಲಿ ಸ್ಪರ್ಧಿಸಲು ನಿಲ್ಲುವನು. ನಿಲ್ಲುವ ಪ್ರತಿಯೊಬ್ಬ ವ್ಯಕ್ತಿಯೂ, ತಾನು ಯೋಗ್ಯನೆಂದೂ, ಮುಂದೆ ಜನರ ಹಿತಕ್ಕಾಗಿ ದುಡಿವೆನೆಂದೂ, ಹೇಳುವದು ಸ್ವಭಾವಸಿದ್ಧ. ಈ ಬಗ್ಗೆ ವೋಟರರು ಮೋಸಹೋಗದೆ ಎಚ್ಚರದಿಂದ ಬೇಕು. ಇಂಥ ಬಡಕತನ-ಅಧಿಕಾರ ಲಾಲಸೆ-ಸ್ವಾರ್ಥ, ಇವು ಜನರನ್ನು ಸೇರಿಕೊಂಡಿರುವುದರಿಂದ ಜನರು ಅವುಗಳಿಗೆ ಬಲಿಬಿದ್ದಿರುವರು. ನಮ್ಮ ಮುಂದಾಳುಗಳಿಗೆ ಮೇಲಿನ 3ಗುಣಗಳು ಇವೆಯೋ ಎಂದು ಚೆನ್ನಾಗಿ ಆಲೋಚಿಸಬೇಕು ನಮ್ಮ ಹಳ್ಳಿಗಗಳಲ್ಲಿರುವವರು ಇದೊಂದನ್ನೂ ಆಲೋಚಿಸುವದಿಲ್ಲ. ಯಾರಾದರೊಬ್ಬ ದೊಡ್ಡ ಮನುಷ್ಯ ಬಂದು "ನಮ್ಮ ಭಾವನ ತಂಗಿ ಗಂಡ" ವೋಟಿಗೆ ನಿಂತಿದ್ದಾರೆ, ನೀವೆಲ್ಲರೂ ಅವರಿಗೆ ವೋಟುಕೊಡಬೇಕೆಂದರೆ ಸರಿ, ದೊಡ್ಡ ಮನುಷ್ಯರ ಮಾತನ್ನು ಮೀರಲಿಕ್ಕೆ ಬರುತ್ತದೆಯೇ ಎಂದು ತಮ್ಮ ಅಮೂಲ್ಯ ಹಕ್ಕನ್ನು ಕಳಕೊಂಡು ಬಿಡುತ್ತಾರೆ, ಅಂತಹ ಪ್ರಸಂಗಕ್ಕೆ ಎಡೆಕೊಡ ಬೇಡಿರಿ,

ನಮ್ಮಲ್ಲಿ ಜಾತೀಯತೆ ಹೆಚ್ಚುಕೊಂಡಿದೆ. ವೋಟಿಗೆ ನಿಂತ ವ್ಯಕ್ತಿಗಳು ಯಾವ ಸಮಾಜದವರೇ ಇರಲಿ– ಯಾವ ಜಾತಿಯವರೇ ಇರಲಿ. ಅವರಲ್ಲಿ ಯಾರು ಯೋಗ್ಯತೆವುಳ್ಳವರು ಎಂದು ತಿಳಿದು ಅಂಥವರಿಗೇನೆ ನಮ್ಮ ವೋಟನ್ನು ಕೊಡಬೇಕು ವೋಟು ಕೊಡುವುದೆಂದರೆ ಸಾಮಾನ್ಯ ವಿಷಯವಲ್ಲ. ನಮ್ಮ ಸಂಪೂರ್ಣ ಅಧಿಕಾರ ವಹಿಸಿಕೊಟ್ಟ ಹಾಗೆ, ಆದುದರಿಂದ ಸರಿಯಾಗಿ ಆಲೋಚಿಸಿ ವೋಟನ್ನು ಕೊಡಬೇಕಾಗಿದೆ, ಕೆಲವು ವ್ಯಕ್ತಿಗಳು ತಮ್ಮ ಐಶ್ವರ್ಯದಬಲದಿಂದ ವೋಟರ ಮನಸ್ಸನ್ನು ಸೆಳೆಯಬಹುದು; ಅದಕ್ಕೆ ಎಡೆಕೊಡಬೇಡಿರಿ. ಅದು ನಮ್ಮ ಬಾಳುವೆ ಹಾಳುಮಾಡಿಕೊಂಡಂತೆ. ಪರೋಪಕಾರ ಶಕ್ತಿ–ನಿಸ್ವಾರ್ಥತೆ–ದೇಶಪ್ರೇಮ ಇವು ಯಾರಲ್ಲಿವೆಯೋ ಅವನಿಗೇನೇ ನಿಮ್ಮ ಓಟನ್ನು ಕೊಡಿರಿ. ಎಷ್ಟೋ ಮಂದಿ ವೇಷ ಪಲ್ಲಟಿಸಿಕೊಂಡು ಕೋಂಗ್ರೆಸ್ಸನ್ನು ಹೊಕ್ಕು ಅಲ್ಲಿ ಹೊಲಸನ್ನುಂಟು ಮಾಡಿರುತ್ತಾರೆ, ಅದು ನಿಮಗೆ ಗೊತ್ತಿರಬಹುದು. ಅಂಥಹ ಪಲ್ಲಟವೇಷಧಾರಿಗಳಿಗೆ ವೋಟುಕೊಡಬೇಡಿರಿ. ಅವರು ನಿಜವಾಗಿಯೂ ದೇಶಪ್ರೇಮಿಗಳಲ್ಲ· ಸ್ವಾರ್ಥ ಪ್ರಿಯರು, ಅಧಿಕಾರ ಆಸೆಯವರು, ಇದನ್ನು ಚೆನ್ನಾಗಿ ಅರಿತು ನಮ್ಮ ಮುಂದಾಳುಗಳನ್ನು ಆರಿಸಿರಿ.

—ಶ್ರೀ. ಎನ್. ಎಸ್. ಬೀಳೂರು

ರೈತವಾಣಿ

1951ನೇ ಇಸ್ವಿಯ ಹಳೆಯ ಬೆಳೆಯ ಅಕ್ಕಿ, ಭತ್ತವನ್ನು ಲೇವಿ ಕ್ರಮದಂತೆ ಸಾಗುವಳಿದಾರರು ಸ್ಟೋರಿಗೆ ಒಪ್ಪಿಸತಕ್ಕದೆಂಬ ಬಹು ಹುಕುಂ ವಾರ್ತಾ ಪತ್ರಿಕೆಗಳ ಮುಖಾಂತರ ಪ್ರಕಟವಾಗಿರುತ್ತದೆ. ಅದರಲ್ಲೂ ಕಳೆದ ವರ್ಷಕ್ಕೆ ಅಕಿ ಭತ್ತ ಒಪ್ಪಿಸುವ ವ್ಯಾವೆಗಳು ನಾಲ್ಕುಯಿದ್ದರೆ ಈ ವರ್ಷ ಭತ್ತವಾದರೆ ಇದೇ ಅಕ್ಟೋಬರ ತಿಂಗಳ ಆಖ್ಯೆರಿ ದವಳಗೂ, ಅಕ್ಕಿಯಾದರೆ ಬರುವ ನವಂಬ್ರ ತಿಂಗಳ ಅಖ್ಯೆರಿ ವಳಗೂ ಒಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದೆಂದೂ ನಮೂದಿಸಿಯದೆ ಹಳ್ಳಿಗಳಲ್ಲಿ ಈ ವರ್ಷದ ಹಿಂಗಾರುಮಳೆಯ ದೆಸೆಯಿಂದ ಬೆಳೆ ಕಟಾವು ಪೂರ್ಣ ಮುಗಿದಿಲ್ಲವಾದರೂ, ಹೆಚ್ಚಿನ ಹಳ್ಳಿಯ ರೈತರಿಗೆ ತಮ್ಮ ಹಿಂದಿನ ಹಾಗೂ ಮುಂದಿನ ಆಚರಣೆಗೋಸ್ಕರ ಭತ್ತವನ್ನು ಆದಷ್ಟು ಶೀಘ್ರವಾಗಿ ಸಂಬಂಧಪಟ್ಟ ಡಿಪೋಗಳಿಗೆ ಸಂದಾಯ ಮಾಡಿ ಹೆಚ್ಚಿನ ತೊಂದರೆಯಿಂದ ಪಾರಾಗುವ ಹಿಂದಾಸೆಯಿದ್ದರೂ, ಅಕ್ಕಿ ಭತ್ತ ಪಡಕೊಳ್ಳುವವರಾರು? ಈ ಮೊದಲಿನಂತೇ S. K. C. C. W. Stores ಗಳ ಮುಖಾಂತರವೇ? ಹಾಗಿದ್ದರೆ ಸಮ್ಬಂಧಪಟ್ಟ ಸ್ಟೋರುಗಳು ಈ ತನಕ ಯಾಕೆ ತೆರೆದಿಲ್ಲ? ಅಥವಾ ಬೇರೇನಾದರೂ ವ್ಯವಸ್ಥೆಯಿದೆಯೋ? ಹೇಗಿದ್ದರೂ ಅಬಗ್ಗೆ ಯೇನೊಂದು ಸುದ್ದಿಯೂ ಹಳ್ಳಿಯ ರೈತರಿಗೆ ಯಾಕೆ ತಿಳಿದಿಲ್ಲ?

ಹೊಸ ಅಕ್ಕಿ ಕೆಲದಿನಗಳ ಮೊದಲೇ ಪೇಟೆಯ ಹೋಟೇಲುಗಳಲ್ಲಿ ಕೂಡಾ ಉಪಯೋಗಿಸುತ್ತಾರಾದರೂ, ಯಾವ ವಿಧದಿಂದ ಅವರಿಗೆ ದೊರೆಯಿತು? ಇತ್ಯಾದಿ ವಿಚಾರಿಸಿದರೆ ಸಂಬಂಧಪಟ್ಟ ಇಲಾಖೆಯವರ ಅಸಡ್ಡೆಯಿಂದಾಗಿ ಹಳ್ಳಿಯ ರೈತರು ತುಂಬಾ ಕಷ್ಟನಷ್ಟಕ್ಕೀಡಾಗಿರುತ್ತಾರೆ ತಮ್ಮ ಅಡಚಣೆಗಳ ನಿವಾರಣೆಗೋಸ್ಕರ ಕೆಲಬಡ ರೈತರು ಅಲ್ಲಲ್ಲಿ ಭತ್ತ ವಿಕ್ರಯಿಸುತ್ತಾರೆ. ಇನ್ನು ಸ್ಟೋರುಗಳು ತೆರೆದು, ಲೆವಿ ನೋಟೀಸು ಜ್ಯಾರಿಯಾಗುವಾಗ ನೋಟೀಸಿನಲ್ಲಿರುವಷ್ಟು ಅಕ್ಕಿಭತ್ತ ಬಡರೈತನಲ್ಲಿ ಹಾಜರಿಲ್ಲದಿದ್ದರೆ ಅತನ ಮುಂದಿನ ಬೆಳೆಯ ದೀಜಕ್ಕೂ ಸಂಚಕಾರವಾಗುವ ಕಾಲವಲ್ಲವೇ? ಸ್ಟೋರುಗಳು ಕೂಡಾ ಪೇಟೆಪಟ್ಟಣಗಳಲ್ಲಿ ಮಾತ್ರ ತೆರೆದರೆ ಎಂಟು ಹತ್ತು ಮೈಲು ದೂರದ ಹಳ್ಳಿಗರಿಗೆ ಕಷ್ಟನಷ್ಟವಲ್ಲವೇ? ಪ್ರಕೃತ ಅಕ್ಕಿ ಭತ್ತ ಅಧಿಕ ಚಲಾವಣೆಯಾಗುವ ಈ ಸಮಯದಲ್ಲಿ ತಕ್ಕ ವ್ಯವಸ್ಥೆ ಕೈಕೊಳ್ಳದಿದ್ದದ್ದರಿಂದ ಬಡರೈತರು ಬ್ಲೇಕ್‌ಮಾರ್ಕೆಟ್ ಮಾಡುವಂತೆ ಸಂಬಂಧಪಟ್ಟ ಇಲಾಖೆಯೇ ಪ್ರೇರೇಪಿಸಿದಂತಾಗುವುದೆಂದು ವಿಷಾದದಿಂದ ಹೇಳಬೇಕಾಗುತ್ತದೆ ಅದ್ದರಿಂದ ಇನಾದರೂ ಬಡರೈತರ ಪರವಾದ ಈ ಕೋರಿಕೆಯನ್ನು ಸಂಬಂಧಪಟ್ಟ ಇಲಾಖೆಯವರು ಆದಷ್ಟು ಬೇಗನೆ ಪೂರೈಸಲಾರರೇ?

ಯಂ. ವಿಠಲ ಶೆಟ್ಟಿ,
ಪೋಸ್ಟು ಕಣಮರು.

For Protection and Provision

Consult

The New Guardian of India Life Insurance Co., Ltd.

Head office: **MADRAS**

(Estd 1934)

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

BALLBEARING
—THE LIFEBLOOD OF THE INDUSTRY'

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —'CHEAPTRADE'

A. RAMSON AND CO.
A.P. MISTRI BUILDING BALARAM ST. BOMBAY

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.
Moolky, S. K.

ಪ್ರವಾಸಿಯ ಪತ್ರಗಳು ೧೬

ಪ್ಯಾರಿಸ್ ನಗರ

ಯುರೋಪಿನಲ್ಲಿ ನಾನು ನೋಡಿದ ಅತೀ ದೊಡ್ಡ ಪಟ್ಟಣಗಳೆಂದರೆ—ಲಂಡನ್, ಬರ್ಲಿನ್, ರೋಮ್, ಪ್ಯಾರಿಸ್, ಇವುಗಳಲ್ಲಿ ಬಹು ಸುಂದರವಾದ ನಗರವು ಪ್ಯಾರಿಸ್. ಅದರ ಚಂದವು ಎಲ್ಲೆಲ್ಲಿಯೂ ಕಾಣುತ್ತದೆ. ಅದರ ರಸ್ತೆಗಳಲ್ಲಿ ಉದ್ಯಾನವನಗಳಲ್ಲಿ ಕಟ್ಟೋಣಗಳಲ್ಲಿ, ಅಂಗಡಿಗಳಲ್ಲಿ ರೆಸ್ಟೋರೆಂಟ್‌ಗಳಲ್ಲಿ, ನೃತ್ಯಮಂದಿರಗಳಲ್ಲಿ, ಎಲ್ಲೆಲ್ಲಿಯೂ ಅದರ ಚೆಲುವಿಕೆಯು ಕಣ್ಣಿಗೆ ಬೀಳುತ್ತದೆ. ಅಲ್ಲದೆ ಕಳೆದ ಯುದ್ಧದಲ್ಲಿ ಮಾರ್ಶಲ್ ಪೆಟೇನರ ಫ್ರೆಂಚ್ ಸರಕಾರವು ಹಿಟ್ಲರನು ಹೇಳಿದ್ದಕ್ಕೆ ಒಪ್ಪಿ ಜರ್ಮನರಿಗೆ ಶರಣಾಯಿತು. ಹಾಗೆ 1940ರಿಂದ 1944ರ ವರೆಗೆ ಅವರ ಅಧೀನವಾದ ಕಾರಣ ಯುದ್ಧದಲ್ಲಿ ಬಾಂಬು ಬೀಳದೆ ನಷ್ಟವಾಗಲಿಲ್ಲ. ಹೇಗೆ ಲಂಡನ್ ಮಧ್ಯೆ ಥೇಮ್ಸ್ ನದಿ ಸುತ್ತಿ ಸುತ್ತಿ ಹೋಗುವುದೋ ಹಾಗೆ ಪ್ಯಾರಿಸಿನ ಮಧ್ಯೆ ಸೀನ್ (Seine) ಎಂಬ ನದಿಯು ಒಂದು ಬಗ್ಗಿದ ಬಿಲ್ಲಿನಂತೆ ಇದ್ದು ಪೂರ್ವದಿಂದ ಪಶ್ಚಿಮಕ್ಕೆ ಹರಿಯುವುದು. ನಗರದ ಮೂರರಲ್ಲಿ ಎರಡಂಶ ನದಿಯ ಉತ್ತರಕ್ಕೂ ಉಳಿದ ಒಂದಂಶ ಅದರ ದಕ್ಷಿಣಕ್ಕೂ ಇರುವುದು. ನದಿಯ ನೀರು ಥೇಮ್ಸ್ ನದೀ ನೀರಿಗಿಂತ ಸ್ವಚ್ಛವಾಗಿದ್ದು ನದಿಯು ಪ್ಯಾರಿಸಿನಿಂದ ಸುಮಾರು 100 ಮೈಲು ಹರಿದು ಫ್ರಾನ್ಸಿನ ಪಶ್ಚಿಮದಿಕ್ಕಿನಲ್ಲಿರುವ ಸಮುದ್ರಕ್ಕೆ ಸೇರುತ್ತದೆ. ಪಟ್ಟಣವು ಸುಮಾರು 10-12 ಮೈಲು ಅಗಲವಿದ್ದು ಉರುಟಾಕಾರವಾಗಿದೆ, ಅದರ ಜನಸಂಖ್ಯೆ 2¾ ಮಿಲಿಯ. ಲಂಡನ್ ಮತ್ತು ಪ್ಯಾರಿಸನ್ನು ಹೋಲಿಸುವುದಾದರೆ ಲಂಡನಿನ ಕೆಲವು ರಸ್ತೆಗಳು ಬಹು ಸಪೂರ, ಅದರ ಮುಖ್ಯ ರಸ್ತೆಗಳು 40-50- ಅಡಿಗಿಂತ ಜಾಸ್ತಿ ಇಲ್ಲ. ಪ್ಯಾರಿಸಿನಲ್ಲಾದರೆ ಅನೇಕ ರಸ್ತೆಗಳು 100-150 ಅಡಿ ಅಗಲ. ಕೆಲವು ಫರ್ಲಾಂಗ್ ಅಗಲ ಕೂಡಾ ಇವೆ. ಅವುಗಳಿಗೆ "ಬೂಲ್‌ವಾರ್" (Boulevord) ಎನ್ನುವರು. ರಸ್ತೆಗಳ ಎರಡೂ ಬದಿ ಅಗಲವಾದ ಕಲ್ಲು ಹಾಸಿದ ಎತ್ತರವಾದ ಕಾಲುದಾರಿಗಳು. ಅವುಗಳಲ್ಲಿ, ಈ ಮುಂಚೆ ನಾನು ಮಾರ್ಸೇಲ್ಸ್ ವಿಷಯ ಬರೆದಂತೆ, ಅಲ್ಲಲ್ಲಿ ಹೊಟೇಲುಗಳ ಎದುರಾದರೆ ನೂರಾರು ಕುರ್ಚಿಗಳನಿಟ್ಟು ಜನರು ಕೂತು ಫಲಹಾರಮಾಡಿ ಸಂಭಾಷಣ ಮಾಡುವರು. ಈ ಕಾಲುದಾರಿಗಳ ಬದಿ ಹೆಚ್ಚಾಗಿ ಹಸುರಾದ ಸಾಲುಮರಗಳು—ಒಂದೊಂದು ರಸ್ತೆಯಲ್ಲಿ ಒಂದೊಂದು ಜಾತಿಯ ಮರಗಳು. ರಸ್ತೆಯ ಬದಿ ಅಲ್ಲಲ್ಲಿ ಪುರುಷರ ಪ್ರತಿಮೆಗಳು (Statues) ಈ ಮಧ್ಯೆ ಅಗಲವಾದ ಡಾಮರು ಹಾಕಿದ ರಸ್ತೆಗಳು—ರಾತ್ರಿ ಎಲ್ಲೆಲ್ಲೂ ವಿದ್ಯುದ್ದೀಪಗಳ ಬೆಳಕು. ತಿರುಗಾಟಕ್ಕೆ ಬಸ್ಸುಗಳು—ಟ್ರಾಮುಗಳು ಮತ್ತು ನೆಲದಡಿ ಟ್ಯೂಬ್ ರೈಲುಗಳು ಕೂಡಾ ಇವೆ. ಆದರೆ ಇವು ಯಾವುವೂ ಲಂಡನಿನಷ್ಟು ಒಳ್ಳೆಯದಲ್ಲ. ಇನ್ನು ಅನೇಕ ಬಾಡಿಗೆ ಕಾರುಗಳು ಕೂಡಾ ಇವೆ. ಲಂಡನಿನಲ್ಲಿ ಈ ಮುಂಚೆ ನಾನು ಬರೆದಂತೆ ಕ್ಲಪ್ತ ದರದಿಗೆ ಅದರ ಮೇಲೆ ನಿಶ್ಚಿತವಾದ ಇನಾಮು ಕೊಟ್ಟರೆ ಸಂತೋಷಪಟ್ಟು ಕೊಡದಿದ್ದರೆ ಏನೂ ಹೇಳುವುದಿಲ್ಲ. ಆದರೆ ಇಲ್ಲಿಯ ಕ್ರಮವೇ ಬೇರೆ. ಒಂದು ಸಾರಿ ನಾನು ತಿರುಗಾಡಿದ ಕಾರಿನ ಮೀಟರಿನಲ್ಲಿ 185 ಫ್ರಾಂಕ್ಸು ಬಾಡಿಗೆ ಕಂಡರೂ ಡ್ರೈವರನಿಗೆ ನಾನು 350 ಫ್ರಾಂಕ್ಸು ಕೊಟ್ಟರೂ ತೃಪ್ತಿ ಇಲ್ಲ. ಹೀಗೆ ದಿನ ನಿತ್ಯವೂ ನನ್ನ ಅನುಭವ. ಅಂದರೆ ಸ್ವಲ್ಪ ಕ್ರಮವಿಲ್ಲದ ಜನರು. ಅವರು ಕೇಳಿದಷ್ಟು ಕೊಡದಿದ್ದರೆ ಬೈಗಳು. ಇದು ಬಹುಶಃ ನಾನು ಪರವೂರಿನವ ಎಂತ ಕಂಡು ಅವರು ಮಾಡಿರಬಹುದು. ಬೇರೆಯವರ ಅನುಭವವೂ ಹೀಗೆಯೇ. ಅದನ್ನು ಪೋಲೀಸರಿಗೆ ತಿಳಿಸಿದರೆ ಅವರಿಗೆ ಜುಲ್ಮಾನೆಯಾಗಬಹುದು. ಆದರೆ ನಂಬ್ರ ಮಾಡಿ ಹೇಳುವುದಕ್ಕಿಂತ ಕೇಳಿದಷ್ಟು ಕೊಡುವುದೇ ಲೇಸು. ರಸ್ತೆಗಳಲ್ಲಿ ಕಾರುಗಳನ್ನು ಓಡಿಸುವುದರಲ್ಲಿ ಕೂಡಾ ಒಂದು ಕ್ರಮವಿಲ್ಲ. ಎಲ್ಲೆಲ್ಲಿಯೂ ಹೋರ್ನ್ ಮಾಡುವ ಗಲಾಟೆಯೇ. ಕಾರು ಓಡಿಸುವಾಗ ಒಂದು ಇನ್ನೊಂದಕ್ಕೆ ತಾಗಿ ಹೊಡೆಯುವುದು, ಅವರ ಬಗ್ಗೆ ಇಬ್ಬರೂ ಗೌಜಿನಲ್ಲಿ ಬೈದುಕೊಳ್ಳುವುದು, ಸಾಧಾರಣ ನಮ್ಮ ದೇಶದಂತೆಯೇ ಎಂದರೆ ಹೆಚ್ಚಾಗಲಾರದು. ಆದರೆ ಲಂಡನಿನಲ್ಲಿ ಒಂದೇ ಒಂದು ಸಾರಿ ಹೋರ್ನ್ ನಾನು ಕೇಳಲಿಲ್ಲ. ಹೋರ್ನ್ ಮಾಡಲಿಕ್ಕೇ ಕೂಡದು. ಕಾರು ಓಡಿಸುವುದರಲ್ಲಿ ಕೂಡಾ ಕ್ರಮವಿದೆ. ಅಲ್ಲಿಯ ಜನರ ನಡತೆಯೇ ಒಂದು ಮಾದರಿ ಎನ್ನಬೇಕು. ನಾನು ಪ್ಯಾರಿಸಿಗೆ ಹೋದ ಮರುದಿನ (ತಾ. 28-5-1951) ಮಧ್ಯಾಹ್ನ 1 ಗಂಟೆಗೆ ಪೇಟೆಯಲ್ಲಿರುವಾಗ ಸರಿಯಾದ ಒಂದು ಮಳೆ ಬಂತು ಜನರೆಲ್ಲರೂ ಗಲಾಟೆಯಾಗಿ ಓಡಿದರು. ಆದರೇ ಅದೇ ಲಂಡನಿನಲ್ಲಾದರೆ ಒಬ್ಬನೇ ಒಬ್ಬ ಗಂಡಸಾಗಲೀ ಹೆಂಗಸಾಗಲೀ ಓಡದೆ ಮಳೆಯಲ್ಲೇ ನಡೆಯುತ್ತಿದ್ದರು. ಪ್ಯಾರಿಸ್ ರಸ್ತೆಯಲ್ಲಿ ನಡೆಯುವಾಗ ಇನ್ನೊಂದು ಕ್ರಮ. ನಾವು ನಡೆದು ಬರುವಾಗ ಎದುರಿನಿಂದ ಥಕ್ಕನೆ ನಮ್ಮ ಫೋಟೋ ತೆಗೆದು ಕೂಡಲೇ ನಮ್ಮ ಕೈಯಲ್ಲಿ ನೋಟೀಸು—"ನಿಮ್ಮ ಫೋಟೋ ಈ ದಿನ ಇಷ್ಟು ಗಂಟೆಗೆ ತೆಗೆಯಲಾಯಿತು ಇದರ ಪ್ರತಿಗಳು ನಿಮಗೆ ಬೇಕಾದರೆ ಇಂಥಲ್ಲಿ ನಾಳೆ ಇಂತಿಷ್ಟು ಗಂಟೆಗೆ ಸಿಕ್ಕುವುದು!" ಎಂತ.

ಇನ್ನು ತಿರುಗಾಡುವಾಗ ಭಾಷೆ ಕೂಡಾ ಸ್ವಲ್ಪ ಕಷ್ಟವೇ. ಈ ವರೇಗೆ ಬ್ರಿಟನಿನಲ್ಲಿ ಎಲ್ಲಿ ಹೋದರೂ ಇಂಗ್ಲಿಷ್ ಭಾಷೆ ನನಗೆ ಗೊತ್ತಿದ್ದ ಕಾರಣ ಯಾವ ತೊಂದರೆಯೂ ಇಲ್ಲದೆ ಸುಲಭ ಪ್ರಯಾಣವಾಯಿತು. ಪ್ಯಾರಿಸಿನಲ್ಲಿ ಸ್ವಲ್ಪ ಕಷ್ಟವೇ ಸರಿ. ನೂರರಲ್ಲಿ 15-20ರಷ್ಟು ಜನರಿಗೆ ಮಾತ್ರ ಇಂಗ್ಲಿಷ್ ಗೊತ್ತು. ಹೈಸ್ಕೂಲುಗಳಲ್ಲಿ ಈಗ ಕೂಡಾ ಇಂಗ್ಲಿಷ್ ಕಲಿಸುತ್ತಾರಂತೆ ಆದರೆ ಚಲಾವಣೆಯಲ್ಲಿ ಇಲ್ಲ. ದೊಡ್ಡ ದೊಡ್ಡ ಅಂಗಡಿಗಳಲ್ಲಿ, ಹೊಟೇಲು ರೆಸ್ಟೋರೆಂಟುಗಳಲ್ಲಿ ಒಬ್ಬರಾದರೂ ಇಂಗ್ಲಿಷ್ ಮಾತಾಡುವವರಿದ್ದಾರೆ, ಆದೇ ಜರ್ಮನಿ, ಇಟೇಲಿಗೆ ಹೋದಾಗ ಬಹು ಕಷ್ಟ. ಕೆಲವು ಕಡೆ ಕೈಸನ್ನೆಯಿಂದಲೇ ನಮ್ಮ ಕೆಲಸವಾಗಬೇಕು. ಪ್ಯಾರಿಸಿನಲ್ಲಿ ಅಷ್ಟು ಕಷ್ಟವಿಲ್ಲ. ಆದರೆ ಸುಲಭವೂ ಅಲ್ಲ. ಇಲ್ಲಿ ಇನ್ನೊಂದು ವಿಶೇಷವೆಂದರೆ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆ ವರೆಗೆ ಎಲ್ಲಾ ಆಫೀಸುಗಳಲ್ಲಿ, ಅಂಗಡಿಗಳಲ್ಲಿ ರಜೆ. ಅಂದರೆ ಕೆಲಸವೇ ಇಲ್ಲ. ಹೀಗಾಗಿ ಮಧ್ಯಾಹ್ನ 11 ಗಂಟೆಗೆ ಒಂದು ಕೆಲಸಕ್ಕೆಂತ ಹೋದರೆ ಅದು 12 ಗಂಟೆ ಒಳಗೆ ಮುಗಿಯದಿದ್ದರೆ 12ರಿಂದ 2ರ ವರೇಗೆ ಹತ್ತಿರವಿದ್ದ ರೆಸ್ಟೋರೆಂಟಿಗೆ ಹೋಗಿ ಅಲ್ಲಿ ಉಪಹಾರಕ್ಕೆಂತ 2 ಗಂಟೆಯನ್ನಾದರೂ ಕಳೆದು ನಂತರ ಕೆಲಸ ಮುಗಿಸಬೇಕು. ಇದೇ ಇಟೇಲಿ ದೇಶದ ರೋಮ್ ಎಂಬಲ್ಲಿಯಾದರೆ ವೈಶಾಖದಲ್ಲಿ 3 ಗಂಟೆ ವಿರಾಮ. 12ರಿಂದ 3 ಗಂಟೆ ವರೇಗೆ!

ಅಲ್ಲಲ್ಲಿ ದೊಡ್ಡ ರಸ್ತೆಗಳು—ಬೂಲ್‌ವಾರ್‌ಗಳು, ಉದ್ಯಾನಗಳು ಇರುವ ಕಾರಣ ನಗರವು ಬಹಳ ವಿಶಾಲವಾಗಿ ಹರಡಿರುತ್ತದೆ. ಮತ್ತು ನಗರದ ಎಲ್ಲಾ ಭಾಗಗಳಲ್ಲಿ ಅಲ್ಲಲ್ಲಿ ಪ್ರಸಿದ್ಧ ಕಟ್ಟೋಣಗಳಿವೆ. ಇನ್ನು ಸಾಮಾನ್ಯ ಕಟ್ಟೋಣಗಳು ಕೂಡಾ ವಾಸ್ತು ಶಾಸ್ತ್ರಕ್ಕೆ ಅನುಕೂಲವಾಗಿ ರಚಿಸಿದ್ದು ಕಾಣಲಿಕ್ಕೆ ರಮ್ಯವಾಗಿರುವುವು. ಇಲ್ಲಿಯ ಅಂಗಡಿಗಳು ಕೂಡಾ ಸುಂದರ, ಅವುಗಳಲ್ಲಿ ಸಾಮಾನುಗಳನ್ನು ಇಡುವುದರಲ್ಲೇ ಒಂದು ಕುಶಲತೆ ಇದೆ. ಅವುಗಳನ್ನು ನೋಡುವಾಗಲೇ ಮನಸ್ಸಿಗೆ ಹರ್ಷವುಂಟಾಗುತ್ತದೆ. ಇಷ್ಟು ಚಮತ್ಕಾರವು ಬೇರೆ ಯಾವ ದೊಡ್ಡ ಪಟ್ಟಣದಲ್ಲೂ ಕಾಣಲಾರದು.

ಪ್ಯಾರಿಸಿನಲ್ಲಿ ಹಲವು ತರದ ಕೈಗಾರಿಕೆಗಳಿವೆ ವಸ್ತ್ರ ಬಟ್ಟೆಗಳಿಗೆ ಹೆಸರುಹೋದ ಊರು. ವಾಚು, ಬೂಟ್ಸು, ವಿಚಿತ್ರ ವಸ್ತುಗಳು, ಗಾಯನ ಉಪಕರಣಗಳು, ಪುಸ್ತಕಗಳು, ಚಿತ್ರಗಳು, ಪ್ರತಿಮೆಗಳು, ಹಿಟ್ಟು, ಎಣ್ಣೆ, ಕಾರುಗಳು, ಪರಿಮಳದ ವಸ್ತುಗಳು (Perfumes) ಅಲಂಕಾರ ಅಂಗಡಿಗಳಲ್ಲೆಲ್ಲಾ ಸಾಮಾನುಗಳು ತುಂಬಿಕೊಂಡಿವೆ. ಇಂಥ ಅಂಗಡಿಗಳ ಮಧ್ಯೆ ಅಲ್ಲದೆ ರೆಸ್ಟೋರೆಂಟ್‌ಗಳು. ಅವುಗಳ ಒಳಕ್ಕೆ ಬಹು ಸ್ವಚ್ಛ, ಸ್ವಚ್ಛಕ್ಕಿಂತಲೂ ಜಾಸ್ತಿ ಸುಂದರ. ಗೋಡೆಯ ಬದಿ ಗಾಜಿನ ಕಂಡಿಗಳು. ಅವುಗಳೊಳಗೆ ಕೃತಕ ಗಿಡ ಹೂವುಗಳು. ಮಧ್ಯೆ ಉರಿಯುವ ಸಣ್ಣ ವಿದ್ಯುದ್ದೀಪಗಳು—ಇಷ್ಟು ಸ್ವಚ್ಛತೆ ಪ್ಯಾರಿಸಿನ ರೆಸ್ಟೋರೆಂಟ್‌ಗಳ ಬೇರೆ ಯಾವ ದೊಡ್ಡ ನಗರದಲ್ಲೂ ಇಲ್ಲ. ಅದಕಾರಣವೇ ಪ್ಯಾರಿಸಿನ ಜನರು ಅನೇಕ ತಾಸು ಸಮಯ ರೆಸ್ಟೋರೆಂಟ್‌ಗಳ ಒಳಕ್ಕೆ, ಹೆಚ್ಚಾಗಿ ರಸ್ತೆಯ ಬದಿ ಹೊರಕ್ಕೆ ಕೂತು ಕ್ಲಬ್ಬಿನಂತೆ ಅಲ್ಲಿ ಸಮಯ ಕಳೆಯುವರು. ರಾತ್ರಿ 10-11 ಗಂಟೆಯ ವರೆಗೂ ಸಾಮಾನ್ಯವಾಗಿ ಎಲ್ಲೆಲ್ಲೂ ಹೀಗೆ ಜನರಿರುವುದು ಸ್ವಾಭಾವಿಕ. ಊಟ ತಿಂಡಿಗಳ ಖರ್ಚು ಸಾಮಾನ್ಯ ಲಂಡನಿಗಿಂತ ಒಂದುವರೆ ಪಾಲು. ಇದು ಎಲ್ಲಾ ಕಡೆಗಳಲ್ಲೂ ಹಾಗೆಯೇ.

ಪ್ಯಾರಿಸ್ ನಗರದ ಮುಖ್ಯ ವಿಷಯಗಳನ್ನು ಸರಿಯಾಗಿ ತಿಳಕೊಳ್ಳಬೇಕಾದರೆ ಕನಿಷ್ಟ ಒಂದು ತಿಂಗಳು ಸಮಯವಾದರೂ ಬೇಕು. ನಾನಿದ್ದ ಬರೇ 5 ದಿನಗಳಲ್ಲಿ ಇದು ಎಲ್ಲ ಸಾಧ್ಯ? ಆದ ಕಾರಣವೇ ನನಗೆ ಸಿಕ್ಕಿದ ಅಲ್ಲಿಯ ಕೆಲವು ಫ್ರೆಂಚ್ ಮಿತ್ರರೂ ನಮ್ಮ ದೇಶದ ಒಬ್ಬಿಬ್ಬರೂ ಕೂಡಾ ನಾನು 5 ವಾರ ಬ್ರಿಟನಿನಲ್ಲಿದ್ದು ಇಲ್ಲಿ 5 ದಿನ ಮಾತ್ರ ಇರುವುದು ಕೇವಲ ಅನ್ಯಾಯವೆಂದರು. ಇದು ನಿಜ, ಆದರೆ ನನ್ನ ಉಳಿದ 3 ವಾರಗಳಲ್ಲಿ ಅನೇಕ ಊರುಗಳ ತಿರುಗಾಟವು ಮುಂಚೆಯೇ ನಿಶ್ಚಯಿಸಿ ಅಲ್ಲಿ ಹೊಟೇಲುಗಳು ಕೂಡಾ ರಿಸರ್ವ್ ಮಾಡಿದ್ದ ಕಾರಣ ಈ ಊರನ್ನು ಇನ್ನುಳಿದ ಊರುಗಳನ್ನು ಕೂಡಾ ಅವಸರದಲ್ಲೇ ಕಾಣಬೇಕಾಯಿತು.

(ಮುಂದುವರಿಯುವುದು)

ವಿಚಾರವಾಣಿ —ಕೆ. ಆರ್. ಕಾರಂತ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜೆಂಟ್:—

ಶಾ ಕಂಪೆನಿ, ಮಂಗಳೂರು.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾಕಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

For up-to-date Lodging & Boarding

ROYAL MAHAL,

UDIPI. S. Kanara.

ವಿವಿಧ ಪಾತ್ರೆಗಳು



ಎಲ್ಲಾ ತರದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಲೋಹಗಳಿಂದಾದುವುಗಳ ವಿವಿಧ ಪಾತ್ರೆಗಳು ಸಾಮಾನುಗಳು ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ

ತಾರೀಕು 18-10-51 ರಿಂದ **ವಾರದ ಭವಿಷ್ಯ** ತಾರೀಕು 24-10-51 ವರೆಗೆ

ಮೇಷ—ಅನೇಕ ವಾರಗಳಿಂದ ಸ್ವಲ್ಪ ಉತ್ತಮವಾಗಿದ್ದ ನಿಮ್ಮ ದೈವವು ಇಂದೀಗ ಸ್ವಲ್ಪ ಬದಲಾಯಿಸಲಿದೆ. ಮುಂಚಿನಂತೆ ಉದ್ಯೋಗವು ಸಾಗಲಾರದು. ಉತ್ಪತ್ತಿ ಕಡಿಮೆಯಾಗುವುದರಿಂದ ಖರ್ಚು ಹೆಚ್ಚಾಗಿ ಕಾಣಿಸುವದು. ಆರೋಗ್ಯ ಕೆಡಲಿದೆ. ಪ್ರವಾಸಗಳು ಹೆಚ್ಚುವವು. ಬಂಧುಗಳನೆರವು ಸಿಗಲಾರದು. ಆಪ್ತೇಷ್ಟರ ವಿಯೋಗವುಂಟಾಗಲಿದೆ. ಈ ಎಲ್ಲಾ ಕಾರಣಗಳಿಂದಾಗಿ ನಿಮ್ಮ ಮನೋರೋಗವು ಹೆಚ್ಚಲಿದೆ. ಆದರೂ ತಾ 20, 21, 22 ಈ ದಿನಗಳಲ್ಲಿ ಕಿಂಚಿತ್ಸುಖಲಾಭಗಳನ್ನು ಕಾಣುವಿರಿ.

ವೃಷಭ—ಈ ಸಮಯವು ಶ್ರೇಷ್ಠವಾಗಿರುವದು. ನಿಮ್ಮ ಸಂಕಲ್ಪಗಳೆಲ್ಲವೂ ಅಲ್ಪಯತ್ನದಿಂದ ಕಾರ್ಯಕೊನೆಗೆ ಬರಲಿವೆ. ಸಂಸಾರಿಕ ತಾಪತ್ರಯಗಳೆಲ್ಲವೂ ನೀಗಿ ಸುಖದಿಂದ ಕಾಲಯಾಪನೆ ಮಾಡುವಿರಿ. ಮಾತ್ರವಲ್ಲ ಆರ್ಥಿಕ ಭಾಗದಲ್ಲಿ ವಿಶೇಷ ಪ್ರಗತಿಯನ್ನೈದುವಿರಿ. ವಿದ್ಯಾರ್ಥಿಗಳಿಗೂ ನೌಕರಿ ವರ್ಗದವರಿಗೂ ವಿಶೇಷತಃ ಈವಾರವು ಅನುಕೂಲವಾಗಿ ಪರಿಣಮಿಸುವದು. ತಾ 18-19 23-24 ಈ ದಿನಗಳಲ್ಲಿ ಭೋಗಲಾಭ ಸುಖ ವಿಜಯಗಳಿವೆ.

ಮಿಥುನ—ಕಷ್ಟಪಟ್ಟು ದುಡಿಯುವಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕದಾದ ಫಲವು ಲಭಿಸುವದು. ಆದರೆ ನಿಮ್ಮ ಖರ್ಚುವೆಚ್ಚಗಳು ಉತ್ಪತ್ತಿಯ ದ್ವಿಗುಣವಾಗಿರುವುದರಿಂದ ದಿನಗಳೆಯುದು ಕಷ್ಟವಾಗುವದು. ಗೃಹಚ್ಛಿದ್ರಗಳು ಹೆಚ್ಚಿ ಪರಸ್ಪರ ಮನೆಯವರೊಳು ಬಿಕ್ಕಟ್ಟುಂಟಾಗಲಿದೆ. ಚಂಚಲಮನಸ್ಕರಾದ ನೀವು ಶತ್ರುಜನರಪೀಡೆಗೆ ಬೆದರಿ ಕೆಲವೊಮ್ಮೆ ಉದಾಸೀನ ತಾಳುವ ಪ್ರಸಂಗಬರಲಿದೆ. ತಾ 20, 21, 22 ರಲ್ಲಿ ನಿಮ್ಮ ಬಯಕೆಯು ಕಷ್ಟದಿಂದ ನೆರವೇರುವದು.

ಕರ್ಕಟ—ಕೈಕೆಸರಾದರೆ ಬಾಯಿಮೊಸರಾದೀತೆಂಬ ನಾಣ್ಣುಡಿಯಂತೆ ಕಷ್ಟಪಟ್ಟರೆ ಇಷ್ಟ ಸಿದ್ಧಿಸಿಯೇ ತೀರುವದು. ದೈವವೂ ಪೆಟ್ಟನೆ ನಿಮಗನುಕೂಲವಾಗಿಯೇ ಇರುವದು. ಸ್ವದೇಹಾರೋಗ್ಯ ವಿಚಾರದಲ್ಲಿ ಸ್ವಲ್ಪ ಜಾಗರೂಕತೆಯಿಂದಿರಿ. ರಾಜಾಧಿಕಾರಿಗಳಿಂದ ಪೀಡೆಯುಂಟಾಗಬಹುದು. ನಿಮ್ಮ ಮನೋರಥಗಳು ಅಲ್ಪಪರಿಶ್ರಮದಿಂದ ಸಿದ್ಧಿಸಲಿವೆ. ಬೇರಾವ ವಿಧದ ತೊಂದರೆಯೂ ನಿಮಗುಂಟಾಗದು. ತಾ 18, 19, 23, 24, ಅತ್ಯುತ್ತಮವಿವೆ.

ಸಿಂಹ—ದೈವವನ್ನು ನಿಮ್ಮಮೇಲೆ ಅನುಗ್ರಹ ವೃಷ್ಟಿಯನ್ನು ಬೀರಿಲ್ಲವು ದೇಹದಲ್ಲಿ ಕಜ್ಜಿ ತುರಿ ಇತ್ಯಾದಿ ಚರ್ಮರೋಗಗಳು ಕಾಣಿಸಿಕೊಂಡಾವು. ಅನಿರೀಕ್ಷಿತವಾಗಿ ಪ್ರವಾಸವು ಗಂಟುಬಿದ್ದು ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡುವದು, ಕೈಗೊಂಡ ಕಾರ್ಯಗಳನ್ನು ಶತ್ರುಗಳ ಪೀಡೆಯಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ಅರ್ಧದಲ್ಲೇ ಕೈಬಿಡಬೇಕಾಗುವದು. ಸ್ವಜನರ ನೆರವು ದೊರೆಯಲಾರದು ಎಷ್ಟೇ ದುಡಿದರೂ ದಿನಾಂತ್ಯದ ಬರಿಗೈಯವರಾಗುವಿರಿ. ವಾರಾದಿಯ 5 ದಿನಗಳು ಹೆಚ್ಚಿನ ಆಪತ್ಕಾರಿಗಳಲ್ಲ.

ಕನ್ಯಾ—ಕಳೆದವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ಉತ್ತಮವಿರುವದು. ಖರ್ಚುಗೆಕಷ್ಟ ದುಡಿಮೆಯಿದೆ. ಗೃಹತಾಪತ್ರಯಗಳು ಕಡಿಮೆಯಾಗುವವು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಬಂಧುಮಿತ್ರರ ಬೆಂಬಲದಿಂದಾಗಿ ನಿಮ್ಮ ಹೆಚ್ಚಿನ ಬಯಕೆಗಳು ಈಡೇರುವವು. ಜನ್ಮಗತ ಶನಿಯಿಂದಾಗಿ ಸದಾ ಒಂದಲ್ಲೊಂದು ಕಿರಿದಾದ ದೇಹಾಲಸ್ಯವು ನಿಮ್ಮನ್ನು ಪೀಡಿಸಲಿದೆ. ವಾರಾಂತ್ಯದ 5 ದಿನಗಳು ಇಷ್ಟಸಾಧಕಗಳಾಗಿವೆ.

ತುಲಾ—ಬಿರುನುಡಿಗಳನ್ನಾಡುವುದರಿಂದ ಜನರೊಡನೆ ಜಗಳವಾಗುವದು ಮಾತ್ರವಲ್ಲ ಜನರ ತಿರಸ್ಕಾರಕ್ಕೊಳಗಾಗುವಿರಿ. ವ್ಯಾಪಾರವ್ಯವಹಾರಗಳಲ್ಲಿ ಫಲವು ಉತ್ತಮವಿರುವದು. ಆದರೂ ನಿಮ್ಮ ಖರ್ಚುಗಳು ಆದಾಯವನ್ನು ಮೀರುವ ಸಾಧ್ಯತೆ ಗುರಿಮಾಡುವವು ಆಕಸ್ಮಿಕ ಅನರ್ಥ ಶೋಕ ಪರಂಪರೆಗಳು ಬರಲಿವೆ. ವಿರೋಧಿಗಳ ಪ್ರತೀಕಾರ ಕಾರ್ಯವೂ ಮನೋರೋಗವೂ ದಿನೇ ದಿನೇ ಬಲಿಯುತ್ತಾ ಹೋಗುವದು. ತಾ. 23, 24 ಈ ಎರಡು ದಿನಗಳು ಬೇರೆ ದಿನಗಳಿಗಿಂತ ಉತ್ತಮ.

ವೃಶ್ಚಿಕ—ಸದ್ಯದ ದಿನಗಳು ಕಳೆದ ವಾರದಂತಲ್ಲದಿದ್ದರೂ ನಿಮಗೆ ಹೆಚ್ಚಿನ ತೊಡಕುತೊಂದರೆಗಳೇನೂ ಉಂಟಾಗದು. ಗುರ್ವನುಗ್ರಹದಿಂದಾಗಿ ನಿಮ್ಮ ಕಾರ್ಯಕಲಾಪಗಳು ಅನಾಯಾಸದಿಂದ ನೆರವೇರುವವು. ಶ್ರಮಜೀವಿಗಳಾದ ಸೇವಕವರ್ಗದವರಿಗೆ ಈ ಸಮಯವು ಉತ್ತಮವಿರುವದು. ಜನತೆಯಲ್ಲಿ ಗೌರವಾದರಗಳನ್ನು ಪಡೆವಿರಿ. ಸದಾಚಾರಸಂಪನ್ನರಾದ ಸಜ್ಜನರಿಗೆ ಅನಿಷ್ಟಗಳೇನೂ ಕಾಣೆಸವು. ಒಮ್ಮೊಮ್ಮೆ ವ್ಯರ್ಥಕಲಹ ಖರ್ಚುಗಳು ಕಾಣಿಸುವವು. ವಾರಾದಿಯ 2 ದಿನಗಳು ಸುಖಧನ ವಿಜಯದಾಯಿಗಳಾಗಿವೆ.

ಧನು—ಭಾಗ್ಯಪತಿಯು ಲಾಭಕ್ಕೆ ಬಂದಿರುವನು. ನಿಮ್ಮ ಪ್ರತಿಯೊಂದು ಕೆಲಸವೂ ಉತ್ತಮ ಫಲ ಕೊಡಲಿದೆ. ಬಂಧುಮಿತ್ರರ ಬೆಂಬಲವು ಚೆನ್ನಾಗಿರುವುದು. ತಕ್ಷಣವೇ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಯಶಸ್ವಿಗಳಾಗುವಿರಿ. ಇಷ್ಟಾದರೂ ನಿಮಗೆ ಪ್ರಬಲವಾದ ನರರೋಗದ ಬಾಧೆಯು ಸತತವಿರುವ ರೋಗ್ಯದ ವಿಚಾರದಲ್ಲಿ ಸ್ವಲ್ಪ ನಿಗಾ ತೆಗೆದುಕೊಳ್ಳಿರಿ. ಸ್ಥಿರಮನಸ್ಕರಾಗಿ ಕಾರ್ಯರಂಗದಲ್ಲಿ ಮುನ್ನಡೆದರೆ ನಿಮ್ಮ ಇಷ್ಟಾರ್ಥವು ವಾರಾದಿಯ 5 ದಿನಗಳಲ್ಲಿ ಯಾವೊಂದು ತೊಂದರೆಗಳಿಲ್ಲದೆ ನೆರವೇರುವದು

ಮಕರ—ನಿಮ್ಮ ಪರಿಸ್ಥಿತಿಯು ಇಂದೀಗ ಬಹುಮಟ್ಟಿಗೆ ಸುಧಾರಿಸುವದು ನಿಮ್ಮ ಖರ್ಚುವೆಚ್ಚಗಳಿಗಾಗಿ ಪರರನ್ನಾಶ್ರಯಿಸಬೇಕಾಗಿಲ್ಲ. ಸ್ವಯಂಸಮರ್ಥರಾದ ನಿಮಗೆ ನೌಕರಿ ವ್ಯಾಪಾರ ವೈದ್ಯಕೀಯ ವೃತ್ತಿಯಲ್ಲಿ ಒಳ್ಳೆಯ ಫಲಪ್ರಾಪ್ತಿಯಿದೆ. ಕೆಲವೊಮ್ಮೆ ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ಹಾನಿಯೊದಗೀತು. ಕಾರ್ಯಗಳಿಗೂ ವಿಘ್ನಗಳುಂಟಾದಾವು. ಆದರೂ ಪ್ರಬಲ ಮಿತ್ರಬಲವುಳ್ಳ ನಿಮಗೆ ವಾರಾಂತ್ಯದ 5 ದಿನಗಳು ಶ್ರೇಯೋದಾಯಿಗಳಾಗಿವೆ.

ಕುಂಭ—ಗುರುವೊಬ್ಬನನ್ನು ಬಿಟ್ಟು ಎಲ್ಲಾ ಗ್ರಹರೂ ವಿಮುಖರಾಗಿರುವುದರಿಂದ ಈವಾರದಲ್ಲಿ ಅನೇಕ ಕಷ್ಟನಷ್ಟಗಳನ್ನನುಭವಿಸುವಿರಿ. ಲೇವಾದೇವಿ ನಿಮಿತ್ತ ವ್ಯರ್ಥ ಕಲಹವಾಗಿ ಕೋರ್ಟು ಮನೆಗಳಿಗೆ ತಿರುಗುವ ಪ್ರಸಂಗವುಂಟಾದೀತು. ವಿಶೇಷತಃ ಸ್ತ್ರೀಯರಿಂದ ಕಲಹ ಅನಿಷ್ಟ ಅಪಮಾನಗಳು ಸಂಭವಿಸಲಿವೆ. ಪತ್ನೀ ಪುತ್ರರ ವಿರಹ ಆಪ್ತೇಷ್ಟರ ವಿಯೋಗಗಳು ಉಂಟಾದಾವು. ವಾರಾಂತ್ಯದ 2 ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಸ್ವಲ್ಪ ಶುಭವನ್ನು ಕಾಣಲಿರುವಿರಿ.

ಮೀನ—ಈ ವಾರವು ನಿಮಗೆ ಆರ್ಥಿಕ ವಿಚಾರದಲ್ಲಿ ಉತ್ತಮವಿದೆ. ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಕೀರ್ತಿಯು ಪ್ರತಿಯೊಂದು ಕಾರ್ಯಗಳಲ್ಲೂ ಲಭಿಸುವದು ಆದರೆ ಇತರ ಆರೋಗ್ಯ ಮತ್ತು ಗೃಹಕೃತ್ಯ ವಿಚಾರದಲ್ಲಿ ನಿಮಗೆ ಸುಖನೆಮ್ಮದಿಗಳಿಲ್ಲವು. ಮಿತ್ರಜನರೂ ಕೂಡ ಸದ್ಯ ನಿಮಗೆ ನೆರವಾಗಲಾರರು ಶತ್ರುಗಳ ಕೈವಾಡದಿಂದಾಗಿ ಮನೆಯ ಜನರಲ್ಲಿ ಪರಸ್ಪರ ಕಲಹ ಕಟ್ಟಾಟವುಂಟಾದಾವು. ವಾರಾದಿಯ 2 ದಿನಗಳಲ್ಲಿ ಕಾರ್ಯವಿಜಯ ಧನಲಾಭಗಳಿವೆ

ಗೊನೋರಿಯಾ ಸರಮಾಲೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಸುರಿಸುತ್ತಿದ್ದರೆ, ಮೂತ್ರಕೋಶ ಹಾಗು ಜನನೇಂದ್ರಿಯದ ಕೊಳವೆ ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಬೊಬ್ಬೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡೆಯುವದು ಸ್ತ್ರೀಯರ ಬಿಳಿಸೆರಗು ಹೋಗುತ್ತಿದ್ದರೆ, ಗರ್ಭಕೋಶ ನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಉಪಯುಕ್ತ. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಪೊಳೆ ತುಪ್ಪದಲ್ಲಿ ತೆಗೆದುಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತೆಗೆದುಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಪೇಟಿಗೆಯಲ್ಲಿ ಇಟ್ಟರಲ್ಲ, ಥಂಡಿ ಮಳೆಗಾಲದಲ್ಲಿ ಬೇನೆಹುಟ್ಟಿದಲ್ಲಿ ತೆಗೆದುಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟು ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮಾರ್ಕೆಟ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾರನ್ನ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

ಅಂದವಾದ ಮತ್ತು

ಅಚ್ಚುಕಟ್ಟಾದ ಮುದ್ರಣಕ್ಕೆ

ನವಯುಗ ಪ್ರೆಸ್, ಉಡುಪಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ಥ ಹಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಶೂಲಿ ಗುಣವಾಗಿ ಸ್ತ್ರೀಯರು ಗರ್ಭವಂತರಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹಡದೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ಬಿಜಾಪೂರ— ಗಣಪತಿ ಸಿದ್ಧಲಿಂಗಪ್ಪ ಧಾರವಾಡಕರ ಬಿಜಾಪೂರ ನಂಜುಂಡೇಶ್ವರ ಮಾರ್ಕೆಟ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಎಸ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. L. SHETTY AT THE NAVAYUGA PRESS, UDIPI, S.INDIA.

Regd. No. M. 3618

ESTD. 1921 ಸ್ಥಾಪನೆ

25—10—1951

LICENCE No. 31
Licensed to Post without Prepayment

31ನೆ ವರ್ಷ

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧ ವಾರ ೮

NAVAYUGA WEEKLY Post Box No. 22 UDIPI.

Vol. 31 No. 8

ಅನುಚಿತ ಮಾರ್ಗಗಳು

ರಾಷ್ಟ್ರದ ಅಭ್ಯುದಯ ಹಾಗೂ ಸುಸಂಸ್ಥಾಪನದ ಬಗ್ಗೆ ಮುಂಬರುವ ಚುನಾವಣೆಯಲ್ಲಿ ಮುಂಜಾಗ್ರತೆ ವಹಿಸಬೇಕಾದದ್ದು ಅತ್ಯಂತ ಮಹತ್ವದ್ದೆಂದು ನೆಹರೂ ಹೇಳುತ್ತಿರುವರು. ಯೋಗ್ಯ ಹುರಿಯಾಳುಗಳನ್ನಷ್ಟೇ ನಾವು ಆರಿಸಬೇಕೆಂಬ ವಾದದ ಆವಶ್ಯಕತೆಯನ್ನು ಎಲ್ಲರೂ ಬಲ್ಲರು. ಅಜ್ಞಾನ ಅನಕ್ಷರತೆಯಿಂದ ಕೂಡಿದ ಬಹುಸಂಖ್ಯಾಕ ಜನರಿಗೆ ಯಥಾರ್ಥ ರಾಜಕೀಯ ಜ್ಞಾನವನ್ನು ಮಾಡಿಕೊಡುವದು ಧುರೀಣರ ಹಾಗೂ ಪತ್ರಿಕೆಗಳ ಮುಖ್ಯ ಕರ್ತವ್ಯ! ಅನುಭವಿಕ ವ್ಯಕ್ತಿಗಳೂ, ಪತ್ರಿಕೆಗಳೂ ಈ ಸಂಧಿಕಾಲದಲ್ಲಿ ಅಮೂಲ್ಯ ಸೇವೆಯನ್ನು ಸಲ್ಲಿಸಲು ಮರೆಯಲಾಗದು. ಅಂತೆಯೇ ಹುರಿಯಾಳುಗಳಾಗತಕ್ಕವರೂ ಅವರ ಬೆಂಬಲಿಗರಾಗಿ ನಿಲ್ಲುವವರೂ, ಪತ್ರಿಕೆಗಳೂ ವಿಶಿಷ್ಟವಾದ ಒಂದು ಸಂಪ್ರದಾಯವನ್ನನುಸರಿಸುವದು ಯೋಗ್ಯ ಧರ್ಮ. ತಾವು ಎತ್ತಿಹಿಡಿಯಬೇಕಾದ ವ್ಯಕ್ತಿಯ ಆರಾಧನೆಯಿಂದ ದೇಶಹಿತದ ವಿಶಾಲ ದೃಷ್ಟಿಯ ಔದಾರ್ಯವನ್ನಷ್ಟೇ ಇಟ್ಟುಕೊಳ್ಳಬೇಕೇ ಹೊರತು, ಸ್ವಾರ್ಥ ಸ್ವಪ್ರತಿಷ್ಠೆಗಳಿಗೆ ಬಲಿಬೀಳಬಾರದು! ಇದರಿಂದ ದೇಶಕ್ಕೆ ಹಿತವಾಗುವಂತಿಲ್ಲ!

ಅವಿದ್ಯಾವಂತರೂ, ಯಥಾರ್ಥ ರಾಜಕೀಯ ಜ್ಞಾನವಿಲ್ಲದವರೂ ಹೆಚ್ಚಿನ ಮತದಾರರಾಗಿದ್ದಾರೆ. ಇಂತಹ ಜನದ ಮುಂದೆ ಅವರ ಓಟಿನ ಮಹತ್ವಕೆ ಹಾಗೂ ಬೆಲೆಯನ್ನು ಪ್ರತಿಬಿಂಬಿಸುವದು ನಾಗರಿಕರ ಮುಖ್ಯ ಕರ್ತವ್ಯವೇನೋ ಸಹಜ! ಆದರೆ ಈಚೆಗೆ ಹಲವರು ಅನುಸರಿಸುತ್ತಿರುವ ಧೋರಣೆಯನ್ನು ನೋಡಿದರೆ ನಿಜವಾಗಿಯೂ ವಿಷಾದವಾಗುತ್ತದೆ. ಕಾಂಗ್ರೆಸ್ಸಿನ ಮೇಲೂ, ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಶ್ರೀ ನೆಹ್ರೂರಂತಹರ ಮೇಲೂ ಆಗುತ್ತಿರುವ ಟೀಕೆಟಿಪ್ಪಣಿಗಳ ಸುರಿಮಳೆಗಳನ್ನು ಲಕ್ಷಿಸಿದರೆ ನಮ್ಮ ಜನದ ಮನೋಮಟ್ಟ ಸುಸಂಸ್ಕೃತವಾಗುವದರ ಬದಲು ಅವನತಿಯ ಕಡೆಗೆ ಇಳಿಯುತ್ತದೇನೋ ಎಂದು ಭಾಸವಾಗುತ್ತದೆ. ಟೀಕೆಟಿಪ್ಪಣಿಗಳು ವ್ಯಕ್ತಿಯ ತತ್ವಆದರ್ಶಗಳ ಕುರಿತಾದರೆ ಆ ಮಾತು ಬೇರೆ. ಇಂದಾಗುತ್ತಿರುವ ದೋಷಾರೋಪಗಳು ವ್ಯಕ್ತಿಗತವಾದ ದೂಷಣೆಗಳಾಗಿರುತ್ತವೆ.

ಇಂತಹ ಆರೋಪ ದೂಷಣೆಗಳು ಹುಟ್ಟುವದಕ್ಕೆ ಮುಖ್ಯವಾಗಿ ಎರಡು ಕಾರಣಗಳು. ಒಂದು ತಾನು ಸಾಧಿಸಬೇಕಾದ ವಿಚಾರದಲ್ಲಿ ತನಗಿರುವ ಅಜ್ಞಾನ ಹಾಗೂ ಭೀತಿ. ಇನ್ನೊಂದು ಪರರ ಮೇಲೆ ದೋಷಾರೋಪಣೆ ಮಾಡಿಯೂ ತಪ್ಪು ಕಲ್ಪನೆಯನ್ನು ಹುಟ್ಟಿಸಿಯೂ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಬಹುದೆಂಬ ಹಂಬಲ! ಇದು ತೀರ ಅನುಚಿತ ಮಾರ್ಗ! ಹುರಿಯಾಳಾಗಿ ನಿಲ್ಲತಕ್ಕವನೂ ಅವನ ಅನುಯಾಯಿಗಳೂ, ಪ್ರಚಾರ ಪತ್ರಿಕೆಗಳೂ ಅವರ ಗೊತ್ತುಗುರಿ ಧ್ಯೇಯಗಳ ಪರಿಪೂರ್ಣ ಜ್ಞಾನವನ್ನು ಜನತೆಗೆ ಪ್ರತಿಬಿಂಬಿಸಬೇಕು. ವಿಧಾಯಕ ಕ್ರಮಗಳಿಂದ ಅಂತಹ ಪಕ್ಷಗಳ ಆವಶ್ಯಕತಾಭಾವನೆಯನ್ನು ಜನರಲ್ಲಿ ಹುಟ್ಟಿಸಬೇಕು. ತಮ್ಮ ದೌರ್ಬಲ್ಯವನ್ನು ಹೋಗಲಾಡಿಸುವದಕ್ಕೆ ಬೇರೆಯವರ ಒಲವು ಖ್ಯಾತಿಗಳ ಮೇಲೆ ಬಣ್ಣ ಬಳಿಯಬಾರದು! ದೇಶಕ್ಕೆ ವಿಘಾತುಕವಲ್ಲದ ಲೋಪದೋಷಗಳು ಧುರೀಣರಲ್ಲಿದ್ದರೆ ಅದನ್ನು ಅತಿರಂಜಿತವಾಗಿ ವರ್ಣಿಸಿ ತೇಜೋವಧೆ ಮಾಡುವದು ಯುಕ್ತವಲ್ಲ. ಅವನ ಉಜ್ವಲ ಅನುಭವಗಳಿಂದ ದೇಶಕ್ಕೆ ಹಿತವಾಗುವಂತಿದ್ದರೆ ಸಾಮಾನ್ಯ ವಿಚಾರಗಳನ್ನು ಎತ್ತಿ ಹೇಳಬೇಕಾದ್ದಿಲ್ಲ. "ಲೋಕೋಭಿನ್ನರುಚಿಃ" ಎಂಬಂತೆ ಒಬ್ಬನ ನಡತೆ-ಜೀವನಕ್ರಮ-ರೀತಿನೀತಿ ಇನ್ನೊಬ್ಬನಿಗೆ ಸಮ್ಮತವಾಗದೆ ಇರಬಹುದು. ಅದೇ ಕಾರಣದಿಂದ ಬೇರೆಯವರ ಖಾಸಗೀ ವಿಚಾರದಲ್ಲಿ ನಾವು ಕೈಹಾಕುವದು ಯೋಗ್ಯವಾದೀತೇ?

ಕಾಂಗ್ರೆಸ್ಸಿನ ಹುರಿಯಾಳುಗಳು ಕಾರನಲ್ಲಿ ತಿರುಗಾಡಿದರೆ ತಪ್ಪೇನು — ಬ್ಯಾಂಕಿನ ಮ್ಯಾನೇಜರೆಂದೂ, ಮೋಟಾರು ಕಂಪೆನಿಯ ಒಡೆಯರೆಂದೂ ಬಂಡವಾಳಶಾಹಿತನವನ್ನು ಆರೋಪಿಸುವದು ಯುಕ್ತವಲ್ಲ. ನಾವು ನೋಡಬೇಕಾದ್ದು ಅವರ ಪರಿಸ್ಥಿತಿ, ಶ್ರೀಮಂತಿಕೆಯನ್ನಲ್ಲ. ಅವನ ವಿಶಾಲ ಮನೋವೃತ್ತಿಯನ್ನು! ಸಾಮಾನ್ಯ ಜನರಿಂದ ಮಂತಿಗೆ ಪರಾಡವನ್ನೆತ್ತಿ ತಾನೂ ಒಬ್ಬ ಧುರೀಣನೆಂದು ಕಿರಿಚಾಟ ಪರದಾಟ ನಡೆಸುವದಕ್ಕಿಂತ ತನ್ನ ಸಂಪತ್ತನ್ನು ದೇಶಸೇವೆಗಾಗಿ ಉಪಯೋಗಿಸುವಂತಾದರೆ ನಾವೇಕೆ ಟೀಕಿಸಬೇಕು? ವಿದೇಶಗಳ ಧುರೀಣರೆಲ್ಲ ಮೊದಲು ಪತ್ರಿಕೆ ಮಾರುವವರೋ—ಗುಡಿಕೈಗಾರಿಕೆಯ ವೃತ್ತಿಯಿಂದ ಜೀವಿಸುವವರೋ—ಆಗಿದ್ದು ಕೊನೆಗೆ ಶ್ರೀಮಂತಿಕೆಯನ್ನು ಪಡೆದವರು. ಆದರೆ ನಮ್ಮ ದೇಶದ ಧುರೀಣರು ತದ್ವಿರುದ್ಧವಾಗಿದ್ದಾರೆ. ನೆಹರೂ, ಪಟೇಲ್, ಇವರೆಲ್ಲ ಅಗರ್ಭ ಶ್ರೀಮಂತರು. ಸ್ವಾತಂತ್ರ್ಯ ಪ್ರಾಪ್ತಿಗಾಗಿ ತಮ್ಮ ಅಮೂಲ್ಯ ಜೀವನ-ಸಂಪತ್ತುಗಳನ್ನು ಧಾರೆಯೆರೆದವರು. ಹೆಚ್ಚು ಜನ ಕಾಂಗ್ರೆಸ್ಸಿಗರ ಜೀವನವು ಪರಿಸ್ಥಿತಿಯ ಅನುಭವನ್ನು ಪಡೆಯಲುಪಕ್ರಮಿಸುವವರಿಗೆ ತ ಮಹತ್ವಪೂರ್ಣವೂ, ನೈರ್ಮಲ್ಯವೂ, ಸ್ವಚ್ಛವೂ ಆಗಿದೆ. ಆತ್ಮಸಮರ್ಥನೆಯ ಹಂಬಾಟದಲ್ಲಿ ಬೇರೆಯವರನ್ನು ಅಶ್ಲೀಲವಾಗಿ ಟೀಕಿಸುವದು ಯುಕ್ತವಲ್ಲ

ಟೀಕೆ-ವಿಮರ್ಶೆಮಾಡುವದೂ ಒಂದು ಕಲೆ. ಟೀಕೆಗೆ ಗುರಿಯಾದವನಿಗಿಂತಲೂ ಟೀಕೆ ಮಾಡುವವನ ಮೇಲೆ ಜನಸಂಶಯವು ತಾಳುವದೂ ಉಂಟು. ಕಾರಣ ಮಾತುಗಳು ನಂಜು-ಅಶ್ಲೀಲಗಳಿಂದ ತುಂಬಿದ್ದರೆ ಜಿಗುಪ್ಸೆಯನ್ನುಂಟುಮಾಡುವದು ಸ್ವಾಭಾವಿಕ! ಮಾತು ಮನಸ್ಸಿನ ಪ್ರತಿಬಿಂಬ! ಮನಸ್ಸು ಪರಿಶುದ್ಧವಾಗಿದ್ದರೆ- ಪರಿಪಕ್ವವಾಗಿದ್ದರೆ- ವಿಮರ್ಶಾತ್ಮಕವೂ ಮರ್ಯಾದಾಪೂರ್ಣವೂ ಆದಮಾತುಗಳೇ ಹೊರಹೊಮ್ಮುತ್ತವೆ. ಸ್ವಾರ್ಥಸಾಧನೆ, ನಂಜುಗಳಿಂದ ತುಂಬಿದ್ದರೆ ಅದಕ್ಕನುಚಿತವಾದ ಮಾತುಗಳೇ ಬರುತ್ತವೆ.

ಚುನಾವಣಾರಂಗದಲ್ಲಿ ಗೆಲ್ಲುವದಕ್ಕಾಗಿ ಈ ಬಗೆಯ ಮಾರ್ಗವನ್ನನುಸರಿಸುತ್ತಿರುವುದು ಸೋಜಿಗದ ಸಂಗತಿ. ಅಪಪ್ರಚಾರ-ಆರೋಪಗಳಿಂದ ಸಾಮಾನ್ಯ ಜನತೆಯಲ್ಲಿ ಒಂದು ರೀತಿಯ ಗಲಿಬಿಲಿ—ಗೊಂದಲಉಂಟಾಗಿ ಅಮೂಲ್ಯವಾದ ಮತಗಳು ಪಾತ್ರಾಪಾತ್ರ ವಿವೇಚನೆಯಿಲ್ಲದೆ ಬೇಡಾದ ಕಡೆಗೆ ಹೋಗಬಹುದು. ಆದಕಾರಣ ಪ್ರತಿಯೊಬ್ಬರೂ ಅನಾರ್ಯ ಅಶ್ಲೀಲ ಕ್ರಮಗಳಿಂದ ಜನತೆಯನ್ನು ವಂಚಿಸುವ ಅನುಚಿತ ಮಾರ್ಗವನ್ನನುಸರಿಸುವುದು ಸರಿಯಲ್ಲವೆನ್ನುತ್ತೇವೆ. ಟೀಕೆ ಮಾಡುವ ಪ್ರಸಂಗ ಬಂದರೆ ಆ ಟೀಕೆ ಮರ್ಯಾದಾಪೂರ್ಣವೂ- ವಿಧಾಯಕವೂ ಆಗಿದ್ದು ಸನ್ಮಾರ್ಗದರ್ಶನಮಾಡುವಂತಹದಾಗಿರಲಿ!

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ಎ. ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲಾ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಪಾತ್ರಗಳಿಗೆ ಪಾತ್ರವಾಗಿದೆ. ಕಂಪೆನಿಯು ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಅಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ಮಧ್ಯಕಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಪ್ರಜಾಸತ್ತೆ

ಜನರೂ ಜನಮತವೂ

[ಕಳೆದ ಸಂಚಿಕೆಯಿಂದ ಮುಂದರಿದುದು]

ಎಲ್ಲಿ ವಿಧಿನಿಯಮ ಸರಕಾರವಿರುವು ದೋ ಅಲ್ಲಿ ಜನರ ಸಂಕಲ್ಪವು ಮತಗಣನೆಯಿಂದ ತಿಳಿಯಬೇಕಾಗಿದೆ. ಇದಕ್ಕೆ ಪ್ರಜಾಮತ ಸಂಗ್ರಹ (Referendum) ಮತ್ತು ಉಪಕ್ರಮ ಅಥವಾ ಆರಂಭ (Initiative) ಬೇಕು. ಜಬರದಸ್ತನ್ನು ನಿಲ್ಲಿಸುವರೆ ಕಾನೂನು ಬೇಕು. ಮತದಾರರನ್ನು ಪರೀಕ್ಷಿಸುವ ಆಕಶೆ ಕೋಲು ಇಲ್ಲದ ಕಾರಣ ಎಲ್ಲರಿಗೂ ಅಂದರೆ ಜಾಣನಿಗೂ ದಡ್ಡನಿಗೂ ಒಂದೇ ರೀತಿಯ ಮತದ ಹಕ್ಕಿರಬೇಕು. ಜನಮತವೆಂದರೆ ಸಾರ್ವಜನಿಕ ವಿಚಾರದ ಕುರಿತು ಜನರ ಅಭಿಪ್ರಾಯದ ಗೋಷ್ಠಿಯಾದ್ದರಿಂದ ಶುರುವಿನಲ್ಲಿ ಗಲಿಬಿಲಿಯಾಗಿದ್ದು ಕೊನೆಗೆ ಗಟ್ಟಿಯಾಗುವದು. ಪ್ರಬಲವಾದ ಅಭಿಪ್ರಾಯವೇ ಉತ್ತಮವೆನಿಸಿ ಜನಮತವಾಗುವದು. ಓಟಿನ ಮೂಲಕವೇ ಜನಮತ ತಿಳಿಯಬೇಕಾಗಿದೆ. ಓಟು ತೆಗೆಯುವವರೆಗೆ ಅನುಮಾನಕರವಾಗಿರುವದು.

ಆದರೆ ಆಚರಣೆಯಲ್ಲಿ ಓಟಿನ ಮೂಲಕವೇ ಜನಮತವನ್ನು ನಾವು ನಿರ್ಣಯ ಮಾಡುವುದಿಲ್ಲ. ಕೆಲವು ಸಮಯ ಓಟಿನ ಅಗತ್ಯವೇ ಇರುವುದಿಲ್ಲ. ಪತ್ರಿಕೆಗಳು ಸುರಕ್ಷಿತವಾದ ಮಾರ್ಗದರ್ಶಕರಲ್ಲ ಸಭೆಗಳು ನಿಜವಾದ ಸೂಚಿಕೆಗಳಲ್ಲ ಆಪಗೊಪದ ಚುನಾವಣೆಗಳು ಸ್ಥಳೀಯ ನಾಶಾವರಣವನ್ನು ಹೊಂದಿರುವವು. ಜನಮತವನ್ನು ತಿಳಿಯಬೇಕಾದರೆ ಎಲ್ಲಾ ತರಗತಿಯ ಜನರೊಡನೆ ಬೆರಸಿ ಮಾತನಾಡಬೇಕು, ಅವರ ಮನೋಗತವನ್ನು ತಿಳಿಯಬೇಕು. ಪಕ್ಷಪಾತವಿಲ್ಲದ ಜನರು ಕೆಲವರಿದ್ದೆ ಇರುವುದರಿಂದ ಅವರೊಡನೆ ಮಾತನಾಡುವದೇ ಸತ್ಯವನ್ನು ತಿಳಿಯುವ ದಾರಿಯಾಗಿದೆ, ಮೂರು ತರಗತಿಯ ಜನರು ಜನಮತವನ್ನುಂಟುಮಾಡುವರೆಂದು ಬ್ರೈಸ್ ಎಂಬವರು ಹೇಳಿರುವರು. ಕೆಲವರು ತಮ್ಮ ಉದ್ಯೋಗವೇ ಆಗಿ ಅಥವಾ ಬೇರೆ ಕಾರಣದಿಂದ ಯಾವಾಗಲೂ ರಾಜಕೀಯ ವಿಚಾರದಲ್ಲಿ ಮಗ್ನರಾಗಿರುವರು. ಇವರ ಸಂಖ್ಯೆ ಕಡಿಮೆಯಾದರೂ ಇವರೇ ಜನಮತ ಹುಟ್ಟಿಸುವರು. ಇನ್ನು ಕೆಲವರು ರಾಜಕೀಯ ವಿಚಾರದಲ್ಲಿ ಲಕ್ಷ್ಯವಿದ್ದವರಾದರೂ ಚಟುವಟಿಕೆಯಾಗಿರುವುದಿಲ್ಲ. ಇವರು ಸರಿಯಾಗಿ ಕೇಳುತ್ತಾರೆ ಓದುತ್ತಾರೆ ವಾದ ವಿವಾದದ ತರ್ಕ ಕುತರ್ಕಗಳನ್ನು ವಿಮರ್ಶಿಸಿ ಒಂದು ಅಭಿಪ್ರಾಯಕ್ಕೆ ಬರುವರು. ಇವರು ಹಿಂದೆ ಹೇಳಿದವರ ಅಭಿಪ್ರಾಯವನ್ನು ತಿದ್ದಿ ಸರಿಪಡಿಸಿ ಅವರ ತೀವ್ರತೆಯನ್ನು ನಿಲ್ಲಿಸಿ ಜನಮತವನ್ನು ರೂಪಿಸಿ ಆಕಾರಕ್ಕೆ ತರುವವರು. ಇವರ ಆಲೋಚನೆಯೇ ಜನಮತವಾಗಲು ಹೆಚ್ಚು ಅವಕಾಶವಿದೆ. ಮೂರನೇಯದಾಗಿ ಅನೇಕ ನಾಗರಿಕರಿರುವರು. ಇವರು ಸಾರ್ವಜನಿಕ ವಿಚಾರದಲ್ಲಿ ಅಸಡ್ಡೆ ಮತ್ತು ಉದಾಸೀನತೆ ತೋರುವವರು. ಇವರು ಓದುವವರೂ ಅಲ್ಲ ಆಲೋಚಿಸುವವರೂ ಅಲ್ಲ. ಇವರು ತಮ್ಮ ಸುತ್ತಮುತ್ತಲು ಯಾವ ಅಭಿಪ್ರಾಯ ಚಾಲ್ತಿಯಾಗಿರುವದೋ ಅದನ್ನೇ ಸ್ವೀಕರಿಸುವರು. ಕೆಲವು ಸಮಯ ಇವರು ವ್ಯಕ್ತಿಯನ್ನು ಹೊಂದಿರುವರು. ಅತನ ಮತವು ಹೇಗೇ ಇರಲಿ ಆಲೋಚಿಸದೆ ಕಣ್ಣು ಮುಚ್ಚಿಕೊಂಡು ಕೊಡುವವರಾದುದರಿಂದಲೂ ಮತ್ತು ಜನಸಂಖ್ಯೆಯಲ್ಲಿ ಇವರು ಹೆಚ್ಚಿರುವುದರಿಂದಲೂ ಪಕ್ಷಗಳು ಇವರನ್ನ ವಿಶ್ವಾಸದಿಂದು ಹತ್ತಿರ ಮಾಡಿಕೊಳ್ಳುವರು. ಇವರು ಪಾಡಿಕೆಯಲ್ಲಿರುವ ಘೋಷಣೆಯನ್ನೇ ಎತ್ತಿ ಹೇಳುವರು. ಓಟಿಗಿಂತ ಈ ಕ್ರಮವೇ ಒಳ್ಳೇದು, ದುರುಪಯೋಗ ಮಾಡತಕ್ಕದ್ದಲ್ಲ ದುರ್ಮಾರ್ಗ ಕೈಕೊಳ್ಳತಕ್ಕದ್ದಲ್ಲ.

ಜನಮತವು ರಾಜಕೀಯ ಪಕ್ಷಗಳ ಉಗ್ರಗಾಮಿತ್ವವನ್ನು ನಿಲ್ಲಿಸುವದು- ಅವಿವೇಕತ್ವ ಮತ್ತು ವಿಚಾರ ಮಾನ್ಯತೆಯನ್ನು ದೂರಮಾಡುವವು. ಪಕ್ಷದಿಂದ ನಡೆಸಲ್ಪಡುವ ಸರಕಾರವು ತನ್ನ ಅಧಿಕಾರವನ್ನು ದುರುಪಯೋಗ ಮಾಡದಂತೆ ನೋಡಿಕೊಳ್ಳುವವು. ಜನಮತದ ತಾಳ್ಮೆ ಮತ್ತದರ ಚಟುವಟಿಕೆಗಳಿಂದ ಒಂದು ರಾಷ್ಟ್ರವು ಸ್ವತಂತ್ರ ಸರಕಾರ ನಡಿಸಲು ಯೋಗ್ಯವೋ ಅಲ್ಲವೋ ಎಂಬುದನ್ನು ತೋರಿಸುವದು ರಾಷ್ಟ್ರದಲ್ಲಿ ದೃಢ ಸಂಕಲ್ಪದ ಮುಂದಾಳುಗಳಿರಬೇಕು. ಒಂದೊಂದು ಸಲ ಜನರಿಗೆ ಅಪ್ರಿಯವಾದ ಸಂಗತಿಗಳನ್ನು ಎತ್ತಿ ಹಿಡಿದು ಜನರ ದೂಷಣೆಗಳ ಸಹಾ ಕೇಳುವ ಧೈರ್ಯವಂತರಾಗಬೇಕು. ಧೈರ್ಯವೆಂಬುದು ರಾಜಕಾರಣಿಗಳಲ್ಲಿ ಅಪರೂಪದ ಗುಣವಾದಾಗ್ಯೂ ಪ್ರಜಾಮತದ ಸರಕಾರವಿರುವಲ್ಲಿ ಅತಿ ಅಗತ್ಯ. ಆದ್ದರಿಂದಲೇ ಪೆರಿಕ್ಲಿಸ್ ಎಂಬವರು ರಾಜಕಾರಣಿಗಳಿಗೆ ಧೈರ್ಯ ಪ್ರಮುಖ್ಯ ಗುಣವೆಂದಿರುವರು.

ಪ್ರಜಾಸತ್ತೆಯೂ ಪ್ರತಿನಿಧಿ ಸರಕಾರವೂ

ಪ್ರಜಾಸತ್ತೆಯಲ್ಲಿ ಅಧಿಕಾರವು ಸಮಾನತೆಯ ಆಧಾರದ ಮೇಲೆ ಜನರಲ್ಲಿ ಹಂಚಲ್ಪಟ್ಟಿದೆಎಂದು ನಾವು ಒಪ್ಪಿಕೊಂಡ ಮೇಲೆ ಪ್ರಜಾಮತ ಸರಕಾರವು ಯಾವ ರೀತಿಯಿಂದ ನಡೆಯಬೇಕೆಂಬುದನ್ನು ನಾವೀಗ ತಿಳಿಯಬೇಕಾಗಿದೆ ರಾಷ್ಟ್ರವು ಬಹಳ ಚಿಕ್ಕದಾದಲ್ಲಿ ಅಥವಾ ನಾಗರಿಕ ಹಳ್ಳಿಯವರು ಬಹಳ ಕಡಿಮೆ ಸಂಖ್ಯೆಯಲ್ಲಿರುವಲ್ಲೆಲ್ಲಾ ಜನರು ತಮಗೆ ಬೇಕಾದ ಕಾನೂನು ನಿರ್ಣಯ ನಿಬಂಧನೆಗಳನ್ನು ತಾವೆಲ್ಲರೂ ಒಟ್ಟು ಕೂಡಿದ ಸಭೆಯಲ್ಲಿ ತಾವೇ ಸ್ವತಹಾ ತೀರ್ಮಾನಿಸಿ ತಯಾರಿಸಿಕೊಳ್ಳಬಹುದು. ಪ್ರಾಚೀನ ಕಾಲದ ಗ್ರೀಕರ ಪ್ರಜಾಸತ್ತೆಯಲ್ಲಿ ನಾಗರಿಕರೆಲ್ಲರೂ ಸಭೆ ಸೇರಿ ಇದೇ ರೀತಿ ನಡಕೊಳ್ಳುತ್ತಿದ್ದರು. ಆಧುನಿಕ ಕಾಲದಲ್ಲಿ ಸಹಾ ಕೆಲವು ಸಂಘ ಮತ್ತು ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಪ್ರಜಾಸತ್ತೆಯ ರೀತಿಯಲ್ಲೇ ನಡಸುವದಾದ್ದರಿಂದ ಸದಸ್ಯರೆಲ್ಲಾ ಕೂಡಿ ತಮ್ಮ ತಮ್ಮ ಅಭಿಪ್ರಾಯ ಸೂಚಿಸಿ ಪ್ರತಿಯೊಬ್ಬನೂ ತನಗಿರುವ ಒಂದೇ ಓಟಿನಿಂದ ಮತವನ್ನು ಕೊಡುವನು. ಅವರು ಶ್ರೇಷ್ಠ ಮತವನ್ನು ಎಣಿಕೆ ಮಾಡಿ ದಾಖಲೆಗೆ ತೆಕ್ಕೊಳ್ಳುವರು. ಇಂಥಾ ಸಂಘಸಂಸ್ಥೆಗಳಲ್ಲಿ ಅಧಿಕಾರವು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಟ್ಟಿದೆಯೆಂದು ಹೇಳಬಹುದು.

ಇಂಥಾ ಸಣ್ಣ ಸಂಸ್ಥೆಗಳ ಆಡಳಿತೆಯಲ್ಲೂ ಚುನಾವಣೆಯ ಕ್ರಮವು ಅಗತ್ಯ ಮತ್ತು ಪ್ರತಿನಿಧಿಗಳಿಗೆ ಕೆಲವು ಮಟ್ಟಿನ ಅಧಿಕಾರ ಕೊಡಬೇಕೆಂಬುದನ್ನು ನಾವು ಒಪ್ಪಬೇಕಾಗುತ್ತದೆ. ಸಭೆಯಲ್ಲಿ ಕೂಡಿದ ಜನರು ಎಷ್ಟು ಚುರುಕಾದರೂ ಬುದ್ಧಿವಂತರಾದರೂ ಅವರ ಮುಂದಿರುವ ಪ್ರಶ್ನೆಗಳ ಕುರಿತು ಹೆಚ್ಚಾಗಿ ಒಪ್ಪಿಗೆ ಅಥವಾ ತಿರಸ್ಕಾರ ಇವರಡರೊಳಗೊಂದನ್ನು ಸೂಚಿಸಬಲ್ಲರಲ್ಲದೆ ಅಲ್ಲಿ ಮಂಜೂರಾದ ಕೆಲವು ನಿರ್ಣಯಗಳಲ್ಲೂ ಜ್ಯಾರಿಗೆ ತರಲು ಅವರು ಕಾರ್ಯದರ್ಶಿಗಳಲ್ಲ. ಅವುಗಳನ್ನು ಕಾರ್ಯರೂಪಕ್ಕೆ ತರುವರೆ ಕಾರ್ಯನಿರ್ವಾಹಕ ಮಂಡಳಿಯನ್ನಾಗಲೀ ನೌಕರರನ್ನಾಗಲೀ ನೇಮಕ ಮಾಡಬೇಕು. ಪ್ರಜಾಸತ್ತೆಯ ರೀತಿಗನುಸಾರವಾಗಿ ಈ ಕಾರ್ಯನಿರ್ವಾಹಕರು ಸಭೆಯ ಸದಸ್ಯರೆಲ್ಲರೂ ಕೂಡಿ ಚುನಾಯಿಸುವರು ಅವರು ಮುಂದಿನ ಕಾರ್ಯಕ್ರಮಗಳು ಒಳ್ಳೇದು ಕೆಟ್ಟದ್ದು ಎರಡೂ ಚುನಾಯಿಸದ ಸಭೆಯ ಮೇಲ್ವಿಚಾರಣೆಗೆ ಒಳಪಟ್ಟದ್ದಾಗಿರುತ್ತವೆ. ಈ ಸಭೆಗೆ ಅವರು ಜವಾಬ್ದಾರರಾಗಿರುತ್ತಾರೆ. ಚುನಾಯಿತರಾದವರು ಈ ಸಭೆಯ ಧ್ಯೇಯ ಮತ್ತು ಧೋರಣೆಯನ್ನನುಸರಿಸಿ ನಡೆಯಬೇಕು. ಇಂಥಾ ನೌಕರರು ನಿಜವಾದ ಪ್ರತಿನಿಧಿಗಳು. ಪ್ರಜಾಸತ್ತೆಯ ಕ್ರಮವನ್ನನುಸರಿಸಿ ನಡೆಯುವ ಸಣ್ಣ ಸಂಸ್ಥೆಗಳಿಂದೂ ಪ್ರಾತಿನಿಧ್ಯವೆಂಬುದು ಅವಶ್ಯವಾದ ಮೂಲಾಧಾರವಾಗಿದೆ. ಆಧುನಿಕ ಪ್ರಜಾಸತ್ತೆಯ ರಾಷ್ಟ್ರವು ಬಹು ವಿಶಾಲವಿರುವುದು ಮತದಾರರ ಹಕ್ಕಿಗೆ ಮಿತಿಯಿಲ್ಲವಾದುದೂ ಸಂಖ್ಯೆಯು ಜಾಸ್ತಿ ಇರುವುದು. ಗ್ರೀಕರ ಕಾಲದಲ್ಲಿ ರೂಢಿಯಿದ್ದ ಅಥವಾ ಈಗಿನ ಕಾಲದ ಸಂಘಸಂಸ್ಥೆಗಳ ಕ್ರಮದಂತೆ ಸರ್ವ ಮತದಾರರೂ ಕೂಡಿ ನಿರ್ಣಯಗಳನ್ನು ಮಾಡುವದು ಕಷ್ಟ. ದೇಶದ ವ್ಯವಹಾರವು ಜಾಸ್ತಿಯಾದ್ದರಿಂದಲೂ ಜನರು ತಮ್ಮ ಉದ್ಯೋಗ ಕಸಬಿ ಕೆಲಸದ ಜವಾಬ್ದಾರಿಗಳನ್ನು ಬಿಟ್ಟು ಆಗಾಗ ಸಭೆ ಸೇರುವುದು ಕಷ್ಟ. ಎಥೆನ್ಸಿನಲ್ಲಿ ಸೇವಾವೃತ್ತಿಯ ಹಲವು ಗುಲಾಮರಿರುವುದರಿಂದ ನಾಗರಿಕರಿಗೆ ಸಭೆಕೂಡುವರೆ ಅವಕಾಶವಿದ್ದಿತು. ಇದೇ ರೀತಿಯ ಅನೇಕ ಕಾರಣಗಳಿಂದ ನಾವು ಕಾರ್ಯಕಾರಿ ಸಮಿತಿಗೆ ಮಾತ್ರವಲ್ಲ ನ್ಯಾಯಸಭೆಗೂ ಚುನಾವಣೆಯ ಮೂಲಕ ಪ್ರತಿನಿಧಿಗಳನ್ನು ಕಳಿಸುವ ಪದ್ಧತಿಗೆ ಗಂಟುಬಿದ್ದಿರುವೆವು. ಇದಕ್ಕಾಗಿ ರಾಷ್ಟ್ರಗಳನ್ನು ಚುನಾವಣೆಯ ರಂಗದ ಘಟಕಗಳಾಗಿ ವಿಂಗಡಿಸಬೇಕಾಯಿತು. ಪ್ರತಿಯೊಂದು ಘಟಕವು ಅದರದರ ಜನಸಂಖ್ಯೆಯ ಪ್ರಮಾಣದಲ್ಲಿ ಒಂದು ಅಥವಾ ಹೆಚ್ಚಿಗೆ ಸದಸ್ಯರನ್ನು ಚುನಾಯಿಸುವುದು. ಮೊದಮೊದಲು ಘಟಕಗಳು ಪ್ರಾಂತ ವಿಭಾಗಗಳಾಗಿರುವವು. ಇತ್ತೀಚೆಗೆ ಘಟಕಗಳು ಜನಸಂಖ್ಯೆಯನ್ನು ಹೊಂದಿರುವವು.

—ಸಿ ಎಚ್. ಶೆಟ್ಟಿ, ಬಿ. ಎ

[ಮುಂದುವರಿಯುವುದು]

TEL 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ಭದ್ರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ನೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ**

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಲಿಯಾಖತರ ನಿಧನದಿಂದ ಉಭಯ ರಾಷ್ಟ್ರಗಳಿಗೂ ಆಪತ್ತು!

ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತರ ಕೊಲೆಯಿಂದ ಭಾರತ ಪಾಕಿಸ್ತಾನ ಎರಡಕ್ಕೂ ಹಾನಿಯಿದೆ. ಲಿಯಾಖತರು ರಾಜಕೀಯ ಶತ್ರುವಾಗಿದ್ದರೂ ಉಭಯ ರಾಷ್ಟ್ರಗಳೊಳಗಿನ ಶಾಂತಿ ಸುರಕ್ಷಿತತೆಯ ಬಗ್ಗೆ ಕಾತುರರಾಗಿರುವುದನ್ನು ಮರೆಯತಕ್ಕದ್ದಲ್ಲ! ರಾಷ್ಟ್ರದ ಮುಖ್ಯ ಧುರೀಣರು ಹೀಗೆ ಅಮಾನುಷ ಕೃತಿಗೆ ತುತ್ತಾಗುವುದು ನಾಡಿನ ದುರ್ದೈವವೆಂದೇ ಹೇಳಬೇಕು. ಈಚೆಗೆ ಈ ಬಗೆಯ ರಾಕ್ಷಸೀ ಕೃತ್ಯವು ಏಶಿಯದಲ್ಲೆಲ್ಲ ಹೆಚ್ಚಾಗಿ ಕಂಡುಬರುತ್ತಲಿದೆ. ಮಹಾತ್ಮಾ ಗಾಂಧಿ, ಜೋರ್ಡಾನದ ಅಬ್ದುಲ್ಲಾ, ಬರ್ಮಾದ ಮಂತ್ರಿಗಳ, ಇರಾಣದ ಪ್ರಧಾನ ಮಂತ್ರಿ ರಜಮಾರ ಮುಂತಾದವರ ಕೊಲೆ ಮೇಲಿಂದ ಮೇಲೆ ನಡೆಯಿತು. ಅದರ ಬೆನ್ನಲ್ಲೇ ಲಿಯಾಖತರ ಕೊಲೆಯೂ ಆಯಿತು! ರಾಷ್ಟ್ರದ ಧುರೀಣರನ್ನು ಕೊಲ್ಲುವದರ ಮೂಲಕ ಸೇಡನ್ನು ತೀರಿಸಿಕೊಳ್ಳುವ ಈ ಮೂರ್ಖರು ಏಶಿಯದಲ್ಲೆಲ್ಲ ವ್ಯಾಪಿಸಿದ್ದಾರೆ.

ಅಮಾನುಷವಾದ ಈ ಕೃತಿಯಿಂದ ಸರಕಾರ ಇಲ್ಲವೇ ದೇಶದಲ್ಲಿ ಅರಾಜಕತೆಯುಂಟಾಗಿ ಬುಡಮೇಲಾಗಲಿಕ್ಕಿಲ್ಲವೆಂದು ಹೇಳುವವರೂ ಉಂಟು; ಇದರಿಂದ ಜನತೆ ಅಳಿದ ಮಹಾನುಭಾವನ ಸ್ಮಾರಕಾರ್ಥವಾಗಿ ಜಾಗೃತರಾಗುವರೆಂದು ವಾದಿಸುವವರೂ ಉಂಟು. ಈ ವಾದವನ್ನು ಪರಿಪೂರ್ಣವಾಗಿ ನಾವು ಒಪ್ಪದೇ ಹೋದರೂ ರಾಷ್ಟ್ರನಾಯಕನ ಅಗಲುವಿಕೆಯಿಂದ ದೇಶಕ್ಕೆ ನಷ್ಟವುಂಟಾಗಬಹುದೆಂಬುದನ್ನು ಒಪ್ಪಬಹುದು. ಮಹಾತ್ಮಾ ಗಾಂಧೀಜಿಯವರು ನಮ್ಮನ್ನಗಲಿದ ಬಳಿಕ ಕಾಂಗ್ರೆಸಿನಲ್ಲೂ—ಆಡಳಿತದಲ್ಲೂ ಹಲವಾರು ಲೋಪದೋಷಗಳೂ ಮತಭೇದಗಳೂ ಹುಟ್ಟಿದವು. ಜಾತೀಯತೆಗಳು ಬೇರು ಬಿಟ್ಟವು. ತತ್ಫಲವಾಗಿ ಕಿ. ಮ. ಪ್ರ ಪಾರ್ಟಿ ಹುಟ್ಟಿಕೊಂಡಿತು. ಇಂತಹ ಸಂದರ್ಭ ಹುಟ್ಟಿದಾಗಲೆಲ್ಲ ಗಾಂಧೀಜಿ ಇರುತ್ತಿದ್ದರೆ ಏನಾದರೂ ಮಾರ್ಗದರ್ಶನ ಮಾಡುತ್ತಿದ್ದರು—ಬುದ್ಧಿಯ ನಾಲ್ಕು ಮಾತು ಹೇಳುತ್ತಿದ್ದರು ಎಂದು ತೋರುತ್ತಿತ್ತು! ಕೊನೆಗಾದರೂ ಶ್ರೀ ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್ಸಿಗೆ ಮತ್ತೆ ಜೀವದಾನ ಮಾಡಬೇಕಾದ ಪ್ರಸಂಗ ಒದಗಿತು.

ಕಾಶ್ಮೀರವನ್ನು ಬಲಪ್ರಯೋಗದಿಂದಲೇ ಕಸಿದುಕೊಳ್ಳಬೇಕೆಂಬ ವಾದ ಪಾಕಿಸ್ತಾನದಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದು ಲಿಯಾಖತ್ ಸರಕಾರದ ಸೌಮ್ಯ ಧೋರಣೆಯನ್ನು ಸಹಿಸಲಾರದೆ ಮಿಲಿಟರಿ ಅಧಿಕಾರಿಗಳು ಲಿಯಾಖತರನ್ನು ಬಂಧಿಸಿ ಮಿಲಿಟರಿ ಸರಕಾರ ಸ್ಥಾಪಿಸಬೇಕೆಂದು ಕಾರಸ್ಥಾನ ನಡೆಸಿದ್ದು ನಮಗೆಲ್ಲ ತಿಳಿದ ವಿಚಾರವೇ. ಅಂತಹ ಅಧಿಕಾರಿಗಳನ್ನು ಲಿಯಾಖತರು ಈಗ ಬಂಧೀಖಾನೆಯಲ್ಲಿಟ್ಟವರು! ಕಾಶ್ಮೀರ ಸಮಸ್ಯೆಯ ಬಗ್ಗೆ ಒಂದು ಪಂಗಡ ಅಸಂತೃಪ್ತವಾಗಿದ್ದರೆ—ಆರ್ಥಿಕ ಮುಗ್ಗಟ್ಟು-ಜೀವನ ನಿರ್ವಹಣಾ ವೆಚ್ಚದಿಂದ ಬೇರೊಂದು ಪಂಗಡ ನೊಂದುಕೊಂಡಿದೆ. ಈಚೆಗಂತೂ ರಕ್ಷಣಾ ಖಾತೆಗೆ ಹೇರಳ ಹಣವನ್ನು ವ್ಯಯಿಸಲಾಗಿದೆ. ವಿದೇಶಗಳಲ್ಲಿ ಭಾರತದ ವಿರುದ್ಧ ಅಪಪ್ರಚಾರ ಕೈಗೊಳ್ಳಲು ಪಾಕ್ ಸರಕಾರ ಹಣ ವ್ಯಯಿಸಿದ್ದು ಅಷ್ಟಿಷ್ಟಲ್ಲ! ಅದರದು ನೀರ ಮೇಲಿನ ಹೋಮದಂತೆ ವ್ಯರ್ಥವೇ ಆಗಿದೆ. ಅಂತಲೇ ಪಾಕಿಸ್ತಾನದಲ್ಲಿ ಜೀವನವು ಅತ್ಯಂತ ನಿಕೃಷ್ಟವಾಗಿದ್ದು ಜನತೆಯಲ್ಲಿ ಅಸಂತೋಷ ಬೇರೆ ಏರಿರುವದು.

ಕೆಲವು ತಿಂಗಳ ಹಿಂದೆ ಅಲೀಖಾನರು ಯುದ್ಧದ ತಿರುಬೊಬ್ಬೆಯನ್ನು ಹಾಕಿದ್ದರೂ ವಸ್ತುತಃ ಭಾರತದ ವಿರುದ್ಧ ಯುದ್ಧ ಹೂಡಬೇಕೆಂಬ ಇಚ್ಛೆ ಅವರಲ್ಲಿದ್ದಿಲ್ಲ! ಅಷ್ಟರ ಬುದ್ಧಿಗೆಯ ಕುಶಲತೆ! ಕಾಶ್ಮೀರದ ಬಗ್ಗೆ ಸೈನ್ಯಕ್ರಮ ಕೈಗೊಂಡರೆ ಅದರಿಂದಾಗುವ ದುಷ್ಪರಿಣಾಮದ ಪರಿಪೂರ್ಣ ಜ್ಞಾನವುಳ್ಳವರವರು! ಕ್ರಾಂತಿಪ್ರಿಯ ಜನರನ್ನು ಆಳುವುದು ಸುಲಭವೇನಲ್ಲ! ದೂರದೃಷ್ಟಿ—ಆಳವಾದ ರಾಜಕೀಯ ಅನುಭವ ಅವರಲ್ಲಿತ್ತು! ಪೂರ್ಣ ವಿಚಾರ ವಿವೇಕ — ಯೋಚನೆಗಳಿದ್ದುದರಿಂದಲೇ ಭಾರತ ಪಾಕಿಸ್ತಾನಗಳೊಳಗೆ ಉಂಟಾದ ಯುದ್ಧ ಕಾರ್ಮೋಡಗಳು ವಾಗ್ಯುದ್ಧದಿಂದ ಕೊನೆಗೊಂಡವು.

ಪಾಕಿಸ್ತಾನದ ಜನಪ್ರಿಯ ನಾಯಕರಾಗಿದ್ದುಕೊಂಡು ಸುವ್ಯವಸ್ಥಿತ ಆಡಳಿತಕ್ಕಾಗಿ ಬಹಳವಾಗಿ ಶ್ರಮಿಸಿದ್ದರು. ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯದಿರುವಾಗ-ಭಾರತ ಪಾಕಿಸ್ತಾನಗಳ ನಡುವೆ ವಿವಾದಾಸ್ಪದ ವಿಷಯಗಳು ಉಳಿದುಕೊಂಡಿರುವಾಗಲೇ ಲಿಯಾಖತರು ಕೊಲೆಗಡುಕನ ಗುಂಡಿಗೆ ತುತ್ತಾದರು.

ಲಿಯಾಖತರ ಅಗಲುವಿಕೆಯಿಂದ ಪಾಕಿಸ್ತಾನಕ್ಕೆ ಮಾತ್ರವಲ್ಲ ಭಾರತಕ್ಕೂ ವಿಷಾದವಾಗಿದೆ. ಶ್ರೀ ನೆಹರೂರವರು ಲಿಯಾಖತರ ಬಗ್ಗೆ ಕಳುಹಿದ ಸಂದೇಶವು ಉಭಯ ರಾಷ್ಟ್ರಗಳ ಹಿಂದಿನ ಕಹಿ ಅನುಭವವನ್ನು ಮರೆತು ಇನ್ನು ಮುಂದೆ ಸಹಕಾರ ಮೈತ್ರಿಗಳಿಂದಿರುವುದಕ್ಕೆ ತುಂಬ ಸಹಾಯಕವಾಗಿದೆ. ಸದ್ಯ ನಾಜಿಮುದ್ದೀನರು ಮುಖ್ಯಮಂತ್ರಿಗಳಾಗಿಯೂ, ಗುಲಾಮ ಮಹಮ್ಮದರು ಗವರ್ನರ ಜನರಲ್ಲರಾಗಿರುವರಾದರೂ ಸಂಧಾನ ಮಾತುಕತೆಗಳಲ್ಲಿ ಲಿಯಾಖತರ ಕೊರತೆಯು ಉಭಯ ರಾಷ್ಟ್ರಗಳಿಗೂ ಕಂಡುಬಾರದಿರಲಾರದು!

ಬ್ರಿಟಿಷರ ಮೇಲೆ

ಮುಸಾದಿಕರ ಆರೋಪ

50 ವರ್ಷಗಳಿಂದ ಬ್ರಿಟಿಶರು ಇರಾಣದ ಎಣ್ಣೆಯನ್ನು ಗುತ್ತಿಗೆ ಹಿಡಿದು ಪರ್ಶಿಯವನ್ನು ಬಡತನ ದಾರಿದ್ರ್ಯಗಳಿಂದ ಬಳಲುವಂತೆ ಮಾಡಿದರೆಂದು ಪರ್ಶಿಯದ ಮುಖ್ಯಮಂತ್ರಿ ಮುಸಾದಿಕರು ಸಂ. ರಾ. ಸಂಘದೆದುರು ವಾದಿಸಿದರು. ಇರಾಣ ಎಣ್ಣೆ ಕಂಪೆನಿಯ ಲೆಕ್ಕದಂತೆ 1948ರಲ್ಲಿ ಬ್ರಿಟನಿಗೆ 61 ದಶಲಕ್ಷ ಪೌಂಡು ಆದಾಯವಾಗಿದೆ. ಆದರಲ್ಲಿ ಪರ್ಶಿಯಾಕ್ಕೆ ದೊರಕಿದ್ದು ಕೇವಲ 9 ದಶಲಕ್ಷ ಪೌಂಡು. 1950ರಲ್ಲಿ ಆಂಗ್ಲೋ ಇರಾಣಿಯನ್ ಕಂಪೆನಿಗೆ 50-55 ಕೋಟಿ ಡಾಲರುಗಳಷ್ಟು ಲಾಭವಾಗಿದೆ. ಇದರಿಂದ ಇರಾಣಕ್ಕೆ ದೊರೆತದ್ದು ಕೇವಲ 4½ ಕೋಟಿ ಡಾಲರುಗಳು ಮಾತ್ರ. ಎಣ್ಣೆಗಣಿಯು ಪರ್ಶಿಯದ ಪ್ರಕೃತಿದತ್ತವಾದ ಸಂಪತ್ತು! ಅದರ ಜೀವನೋತ್ಕರ್ಷತೆಯು ಏಕಮಾತ್ರ ಉದ್ದಿಮೆಯಾಗಿರುತ್ತದೆ. ಪರ್ಶಿಯನ್ನರೇ ದುಡಿದು ಅಭಿವೃದ್ಧಿಗೆ ಕಾರಣರಾದರೂ ಎಣ್ಣೆಯ ಲಾಭವು ವಿದೇಶೀಯರಿಗೆ ಮಾತ್ರವಲ್ಲ, ಉನ್ನತಾಧಿಕಾರ ಪದವಿ, ತಾಂತ್ರಿಕ ಅನುಭವವನ್ನು ಬ್ರಿಟಿಶರಿಗೆ ಮಾತ್ರ ಕೊಡಲಾಗಿದೆ. ಅಂತಲೇ ಡಾ| ಮುಸಾದಿಕರು ಆಂತರಿಕ ವ್ಯವಹಾರದಲ್ಲಿ ಭದ್ರತಾ ಮಂಡಲಕ್ಕೆ ಅಧಿಕಾರವಿಲ್ಲೆಂದು ವಾದಿಸಿರುವರು. ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಈ ಎಣ್ಣೆ ತಂಟೆಯ ಬಗ್ಗೆ ತೀರ್ಪುಕೊಡುವ ಅಧಿಕಾರವಿದೆಯೋ ಇಲ್ಲವೋ ಎಂಬುದನ್ನು ಅಂತರರಾಷ್ಟ್ರೀಯ ನ್ಯಾಯಾಲಯ ನಿಶ್ಚಯಿಸುವ ವರೆಗೆ ಭದ್ರತಾ ಮಂಡಳವು ಈ ಚರ್ಚೆಯನ್ನು ಮುಂದೆ ಮಾಡಿರುತ್ತದೆ. ಬ್ರಿಟನು ಮುಂದೆ ಮಾಡಿರುವ ಗೊತ್ತುವಳಿಯನ್ನು ಮೊದಲಿಗೆ ಭಾರತವು ತಿದ್ದುಪಡಿ ಮಾಡಬಯಸಿದಂಶವನ್ನು ಬ್ರಿಟನು ಒಪ್ಪಿದೆ. ಯುಗೊಸ್ಲೇವಿಯವೂ ಬ್ರಿಟನಿನ ಗೊತ್ತುವಳಿಯನ್ನು ಅನುಮೋದಿಸುವ ಭರವಸೆಯನ್ನಿತ್ತರೂ ಕೊನೆಯ ಕ್ಷಣದಲ್ಲಿ ಯುಗೋಸ್ಲಾವಿಯಾ ಸರಕಾರದ ಆಜ್ಞೆಯ ಮೇರೆಗೆ ಅದು ವಿರುದ್ಧ ಧೋರಣೆ ವಹಿಸಿತು,

ಈಜಿಪ್ತದಲ್ಲಿ

ಯುದ್ಧಕಿಡಿ ಹಾರಬಹುದೇ?

ಬ್ರಿಟನದ ವಿರುದ್ಧ ಪ್ರತೀಕಾರ ಚಳುವಳಿ ಹೂಡುವ ನಿರ್ಧಾರವನ್ನು ಈಜಿಪ್ತವು ಕೈಗೊಂಡಿದೆ. ಒಂದು ಕಡೆ ಸುಡಾನವೂ, ಇನ್ನೊಂದು ಕಡೆ ಇರಾಣದ ಪ್ರಶ್ನೆ ತಲೆ ತಿನ್ನುತ್ತಿರುವ ಸಂಧಿಕಾಲದಲ್ಲೇ ಈಜಿಪ್ತವು ಗಂಭೀರ ಕ್ರಮವನ್ನನುಸರಿಸಿದಂತೆ ತೋರುತ್ತದೆ. ಬ್ರಿಟಿಶರ ಸರಕುಗಳನ್ನು ಬಹಿಷ್ಕರಿಸುವ ಹಾಗೂ ಹೊರದೂಡುವ ಚಳುವಳಿಯು ಉಗ್ರರೂಪವನ್ನು ತಾಳುತ್ತಲಿದೆ. ಚಳುವಳಿಯನ್ನು ಸಂಘಟಿಸಲು ಮಿನಿಸ್ಟರ ಹಾಗೂ ಡೆಪ್ಯುಟಿಗಳಿಂದ ಕೂಡಿದ ಉಚ್ಚ ರಾಷ್ಟ್ರೀಯ ಕಮಿಟಿಯು ರಚಿಸಲ್ಪಟ್ಟಿದೆ. ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೂ, ನೌಕರರೂ, ವ್ಯಾಪಾರಿಗಳೂ ಸಮಸ್ತರೂ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಬ್ರಿಟಿಶ ಸೈನಿಕರು ಹೆಚ್ಚು ಹೆಚ್ಚಾಗಿ ಬಂದು ನೆಲೆ ನಿಂತಿರುವರು. ಯುದ್ಧ ನೌಕೆ—ವಿನಾಶಿಕೆಗಳು ಸುಸಜ್ಜಿತವಾಗಿ ನಿಂತಿವೆ. ಸುಯೇಜ ಕಾಲುವೆಯ ಪ್ರದೇಶದ ಸ್ತ್ರೀ ಮಕ್ಕಳನ್ನು ಬ್ರಿಟನಿಗೆ ಸಾಗಿಸಲಾಗಿದ್ದು ಅಲ್ಲಿ ಬ್ರಿಟನ ಸೈನಿಕರು ಮಾತ್ರ ಉಳಿದಿರುವರು. ಇಷ್ಟರಲ್ಲೇ ಈಜಿಪ್ತ ಬ್ರಿಟಿಶ ಸೈನಿಕರೊಳಗೆ ಘರ್ಷಣೆ ನಡೆದು ಈಜಿಪ್ತ ಸೈನಿಕರೀರ್ವರು ಮಡಿದಿರುವರು. ಆಂಗ್ಲೋ ಈಜಿಪ್ತ ತಂಟೆಯನ್ನು ಸಂಧಾನದ ಮೂಲಕ ಬಗೆಹರಿಸಲು ಇಟಲಿಯು ಮುಂದೆ ಬಂದಿರುವದಾದರೂ ಈಜಿಪ್ತದ ವಿದೇಶ ಮಂತ್ರಿಗಳು ಬ್ರಿಟಿಶರು ಈಜಿಪ್ತದಿಂದ ಹೊರಹೋಗುವ ವರೆಗೆ ಅವರೊಂದಿಗೆ ನಾವು ಯಾವ ವ್ಯವಹಾರವೂ ಕೈಗೊಳ್ಳುವಂತಿಲ್ಲವೆಂದು ಸ್ಪಷ್ಟವಾಗಿ ನುಡಿದಿದ್ದಾರೆ. ಸುಯೇಜ ಕಾಲುವೆಯ ಸಮಸ್ಯೆಯು ಬ್ರಿಟನದ ಜೀವಾಳದ ಪ್ರಶ್ನೆಯಾದುದರಿಂದಲೂ— ಈಜಿಪ್ತವು ತನ್ನಧಿಕಾರ ಭದ್ರತೆಗಾಗಿ ಕೊನೆಯ ತನಕ ಹೋರಾಟ ನಡೆಸುವ ಸಿದ್ಧತೆ ನಡೆಸಿರುವದರಿಂದಲೂ ಪರಿಸ್ಥಿತಿ ತುಸು ಗಂಭೀರವಾಗಬಹುದು!

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O. UDIPI.

ಆವಶ್ಯವುಳ್ಳ ಎಲ್ಲಾ ಮಾಹಿತಿ
ಗಳನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ
ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ

ನವಯುಗ ಪ್ರೆಸ್, ಉಡುಪಿ

ಸತ್ಯವತೀ ನಗರದ ಕಾಂಗ್ರೆಸ್ ಅಧಿವೇಶನ

57ನೇ ಅ. ಭಾ. ಕಾಂಗ್ರೆಸ್ ಅಧಿವೇಶನವು ಇದೇ ತಿಂಗಳ 18-19ರಲ್ಲಿ ಯಶಸ್ವಿಯಾಗಿ ಕೊನೆಗೊಂಡಿತು. ಶ್ರೀ ನೆಹ್ರೂರವರ ಸಮರ್ಥ ಅಧ್ಯಕ್ಷತೆಯಲ್ಲಿ ಜರಗುವ ಈ ಅಧಿವೇಶನವನ್ನು ಅತ್ಯಂತ ವೈಭವಪೂರ್ಣವಾಗಿ ನಡೆಸಬೇಕೆಂದು ಕಾಂಗ್ರೆಸ್ ಕಾರ್ಯಕರ್ತರು ಯತ್ನಮಾಡಿದ್ದರೂ ಸಿದ್ಧಮಾಡಿಟ್ಟವು ಅಗ್ನಿನಾರಾಯಣನಿಗೆ ಆಹುತಿಯಾಗಿ ಸುಮಾರು ಎಂಟು ಲಕ್ಷ ರೂ. ಮೌಲ್ಯದ ಹಾನಿಯಾಯಿತು! ಅಲಂಕಾರಿಕವಾಗಿ ಅಧಿವೇಶನಕ್ಕೆ ಕಳೆ ಬರದೆ ಹೋದರೂ ವಿಧಾಯಕ ಕಾರ್ಯಕ್ರಮ-ಗೊತ್ತುವಳಿಗಳಿಂದ ಕಾಂಗ್ರೆಸ್ಸಿನಲ್ಲಿ ನವಚೈತನ್ಯ ಹುಟ್ಟುವಂತಾಗಿದೆ.

ನೆಹ್ರೂರವರು ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ತಾನು ಸಾಧಿಸಿದ ಪ್ರಗತಿ-ವಿದೇಶ ನೀತಿ-ಪಂಚವಾರ್ಷಿಕ ಯೋಜನೆ-ಮುಂತಾದ ವಿಚಾರಗಳ ಕುರಿತು ಮನನೀಯವಾದ ಮಾತನ್ನಾಡಿರುತ್ತಾರೆ. ಕಾಂಗ್ರೆಸ್ಸಿನಲ್ಲಿರುವ ಮತಭೇದ--ಜಾತೀಯತೆಯನ್ನು ತೊಡೆದು ಹಾಕಿ, ಅದರ ಭದ್ರತೆಗಾಗಿಯೂ, ಐಕ್ಯಕ್ಕಾಗಿಯೂ ಕಾಂಗ್ರೆಸ್ಸಿಗರು ಸಂಘಟಿತರಾಗಬೇಕೆಂದು ನೆಹ್ರೂರವರು ಈ ವರೆಗೆ ಆದೇಶ ಕೊಟ್ಟಿದ್ದನ್ನೇ ಇಲ್ಲಿಯೂ ಉದ್ಧರಿಸಿ ಹೇಳಿರುತ್ತಾರೆ. ಅಧಿವೇಶನವು ನೆಹ್ರೂರವರ ವಿದೇಶಾಂಗ ನೀತಿಯನ್ನು ಶ್ಲಾಘಿಸುವ--ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕೆನ್ನುವ--ಜಾತೀಯತೆಯ ಮನೋಭಾವನೆಯಿಂದ ಕಾಂಗ್ರೆಸ್ಸಿನ ಅಂತಸ್ಸತ್ವ ಕೆಡುತ್ತಿರುವದರಿಂದ ಅದನ್ನು ಬಹಿಷ್ಕರಿಸಬೇಕೆನ್ನುವ ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿಯದೆ.

ಭಾಷಾವಾರು ಪ್ರಾಂತರಚನೆಯ ಪೂರ್ವ ಸೂಚನೆಯಾಗಿ ಗಡಿನಿರ್ಣಯಕ ಸಮಿತಿಯನ್ನು ನೇಮಿಸಬೇಕೆಂಬ ಸೂಚನೆಯನ್ನು ಶ್ರೀ ನೆಹ್ರೂರವರು ಮುಂಬರುವ ಚುನಾವಣೆಯಲ್ಲಿ ಇದರಿಂದ ಬಿಕ್ಕಟ್ಟುಂಟಾಗುವದೆಂಬ ಕಾರಣದಿಂದ ಕಡೆಗಣಿಸಿದ್ದು ಗಾಯದ ಮೇಲೆ ಉಪ್ಪು ಹಚ್ಚಿದಂತಾಗಿದೆ. ಭಾಷಾವಾರು ಪ್ರಾಂತರಚನೆಯ ಚಳವಳಿಯು ಗಂಭೀರವಾಗುತ್ತಿರುವಾಗ ಕಾಂಗ್ರೆಸು ಈ ರೀತಿಯ ಅಲಕ್ಷ್ಯಭಾವವನ್ನು ತೋರಿಸಿದ್ದು ಚುನಾವಣಾ ದೃಷ್ಟಿಯಿಂದ ಎಷ್ಟು ಮಾತ್ರಕ್ಕೂ ಯೋಗ್ಯವಾಗಲಾರದು. ಆಂಧ್ರ ಪ್ರಾಂತರಚನೆಯ ಬಗ್ಗೆ ಸ್ವಾಮಿ ಸೀತಾರಾಮರು ಕೈಗೊಂಡ ಉಪವಾಸದ ಪ್ರತಿಕ್ರಿಯೆಯಾಗಿ ನೆಹ್ರೂರವರು ಅದಷ್ಟು ಶೀಘ್ರ ಪ್ರಾಂತರಚನೆ ಕಾರ್ಯ ಕೈಗೊಳ್ಳಲಾಗುವದೆಂದು ಆಶ್ವಾಸನೆ ಕೊಟ್ಟಿದ್ದನ್ನೂ-- ಗಡಿನಿರ್ಣಯಕ ಸಮಿತಿಯನ್ನು ವಿರೋಧಿಸಿದ್ದನ್ನೂ ಲಕ್ಷಿಸುವಾಗ ಅವರಿಗೆ ಈ ಪ್ರಾಂತೀಯವಾದದಲ್ಲಿ ಏನೇನೂ ಸಹನೆಯಿಲ್ಲವೆಂಬುದು ಇನ್ನಷ್ಟು ಖಚಿತವಾಗುತ್ತದೆ. ತತ್ಫಲವಾಗಿ ದ. ಭಾರತದಲ್ಲಿ ಇದರ ತೀವ್ರ ಪರಿಣಾಮವುಂಟಾಗುವದು ಖಂಡಿತವೇ!

ಈ ಹಿಂದೆ ನಾಸಿಕ-ಬೆಂಗಳೂರುಗಳಲ್ಲಿ ನಡೆದ ಅಧಿವೇಶನಗಳಲ್ಲಿ ಮತಭೇದ-ಬಿಕ್ಕಟ್ಟುಗಳೇ ಹೆಚ್ಚಾಗಿ ಕಂಡುಬಂದಿದ್ದರೂ ಸತ್ಯವತೀ ನಗರದ ಅಧಿವೇಶನವು ಐಕ್ಯಸಾಧನೆ-ಶಕ್ತಿಯನ್ನು ತಂದುಕೊಟ್ಟಿದೆ. ಎಲ್ಲರೂ ನೆಹ್ರೂರವರ ವಾದಕ್ಕೆ ಕೈಎತ್ತುವದೇ ಕಾಣುತ್ತಿತ್ತು!

ಆಚಾರ್ಯರಿಗೆ ತ್ರಿಸಂಕುಸ್ವರ್ಗ

ಸತ್ಯವತೀ ನಗರಾಧಿವೇಶನದ ಮುಖ್ಯ ಪ್ರತಿಕ್ರಿಯೆಯೆಂದರೆ ಕಿಸಾನ ಮಜದೂರ ಪಾರ್ಟಿಗೆ ಪ್ರತ್ಯಕ್ಷವಾಗಿಯೂ-- ಅಪ್ರತ್ಯಕ್ಷವಾಗಿಯೂ ಆದ ಆಘಾತ! ಆಚಾರ್ಯರಿಗೆ ವಿಶೇಷ ಆಮಂತ್ರಣ ಬಂದಿದ್ದು ಅಧಿವೇಶನ ಕಾಲದಲ್ಲಿ ಅವರು ಉಪಸ್ಥಿತರಿದ್ದು ಕಾಂಗ್ರೆಸ್ಸಿನಲ್ಲಾಗುವ ಪರಿವರ್ತನೆಯನ್ನು ಅರಿಕ್ಷಿಸುತ್ತಿದ್ದರು. ನೆಹ್ರೂರವರ ಮೇಲೆ ಎಂಥಹ ಬ್ರಹ್ಮಾಸ್ತ್ರ ಬಿಟ್ಟರೂ ಜನತೆಯ ಬಲವನ್ನು ಗಳಿಸಿಕೊಳ್ಳಲು ಸಾಧ್ಯವಿಲ್ಲವೆಂಬುದು ಆಚಾರ್ಯರಿಗೆ ಮನವರಿಕೆಯಾಗಿರಬೇಕು- ಕಾಂಗ್ರೆಸ್ಸಿನಿಂದ ಹೊರಬಂದು ಆಚಾರ್ಯರನ್ನು ಉತ್ಸವದ ಮೂರ್ತಿಯಂತೆ ಮೆರವಣಿಗೆ ತೆಗೆದವರು ಈಗ ಕಾಂಗ್ರೆಸು ಸೇರಿಕೊಂಡಿದ್ದಾರೆ- ಸೇರುತ್ತಲಿದ್ದಾರೆ! ಬಾವಲೀ ಜಾತಿಗೆ ಸೇರಿದ ಕಿದ್ವಾಯಿ ಅತ್ತಿಂದಿತ್ತ— ಇತ್ತಿಂದತ್ತ ಅಂತರ್ಲಾಗ ಹೊಡೆದು ಕೊನೆಗೂ ನೆಹ್ರೂರವರ ಕೃಪಾಛತ್ರದಲ್ಲಿ ಆಶ್ರಯ ಪಡೆದರು!

ಅಂತಲೇ ಕೃಪಲಾನಿಯವರು ದ. ಭಾರತಕ್ಕೆ ಪಯಣ ಬೆಳೆಸಿದ್ದಾರೆ. ಮದ್ರಾಸಿನಲ್ಲಿ ಸತ್ಯವತೀ ನಗರದಲ್ಲಾದ ತಲೆಭಾರವನ್ನು ಸ್ವಲ್ಪ ಇಳಿಸಿದರನ್ನಬೇಕು. 'ಕಾಂಗ್ರೆಸ್ ಸತ್ತಕುದುರೆ'ಯಾದುದರಿಂದ ಅದು ಸುವ್ಯವಸ್ಥಿತವಾದ ಆಡಳಿತವನ್ನು ಕೈಗೊಂಡರೂ—ಜನಪ್ರಿಯ ಸಂಸ್ಥೆಯಾದರೂ ತಾನು ಕಾಂಗ್ರೆಸು ಸೇರುವಂತಿಲ್ಲವೆಂದಿರುವರು. ಅಂದ ಮೇಲೆ ಆಚಾರ್ಯರಿಗೆ ಬೇಕಾಗಿರುವದು ಒಂದೇ. ಅದೆಂದರೆ ತನ್ನ ಬಾಯಿ ಚಪಲವನ್ನು ತೀರಿಸಿಕೊಳ್ಳುವದಕ್ಕೆ ಒಂದು ರಂಗ!

ನೆಹ್ರೂರವರು ಸ್ವತಃ ಚುನಾವಣಾ ಪ್ರಚಾರಕ್ಕಾಗಿ ದೇಶಾದ್ಯಂತ ಪ್ರವಾಸ ಕೈಗೊಳ್ಳುವದಾಗಿ ಸಾರಿದ್ದರಿಂದ ಕೃಪಲಾನಿಯಂತೆ ಉಳಿದ ಪಕ್ಷದವರಿಗೂ ಮಹಾಘಾತವಾಗಿರಬೇಕು! ದಿಲ್ಲಿಯಲ್ಲಿ ಕೂತೇ ಪ್ರಜಾಪಾರ್ಟಿಗೆ ಗಾಳ ಹಾಕಿದ ನೆಹ್ರೂರವರು ಪ್ರವಾಸ ಕೈಗೊಂಡು ಮೂಗಿನ ಹಗ್ಗ ಹಿಡಿಯುವ ಖಾತ್ರಿ! ಅಂತೂ ಕೃಪಲಾನಿಯ ಈ 'ತ್ರಿಶಂಕು' ಅವಸ್ಥೆಯನ್ನು ನೋಡುವಾಗ ಜೀವಂತವಿದ್ದು ಮೃತಪ್ರಾಯನಾದ ಮನುಷ್ಯನಿಗಿಂತ 'ಸತ್ತಕುದುರೆಯೇ' ಪುಣ್ಯಶಾಲಿ ಎಂತ ಭಾಸವಾಗುತ್ತದೆ.

ದ. ಕ. ಜಿಲ್ಲೆಯಲ್ಲಿ ಆಚಾರ್ಯರ ಪಾರ್ಟಿ

ಕಾಂಗ್ರೆಸನ್ನು ಸೋಲಿಸಿಬಿಡಬೇಕೆಂಬ ಇರಾದೆಯಿಂದ ಸಮಾಜವಾದಿಗಳೂ, ಕಮ್ಯೂನಿಷ್ಟರೂ ದಾಂಧಲೆಯನ್ನೆಬ್ಬಿಸುತ್ತಿರುವಾಗಲೇ ಪ್ರಜಾಪಾರ್ಟಿಯು ಜನನವಾಯಿತು. ಸಮಾಜವಾದಿ ಹಾಗೂ ಪ್ರಜಾಪಾರ್ಟಿಯೊಳಗೆ ಚುನಾವಣಾ ಹೊಡೆದಾಟವಿಲ್ಲೆಂದು ಹೇಳಲಾಗಿದ್ದರೂ ನಮ್ಮ ಜಿಲ್ಲೆಯ ಮಟ್ಟಿಗೆ ಸಹಕಾರವೆನ್ನುವದು ಸ್ವಲಾಭಕ್ಕಾಗಿ ಇದ್ದಂತೆ ತೋರುತ್ತದೆ. ಕೆ. ಪಿ. ಸಿ. ಸಿ. ಯ ಯಾದಿಯನ್ನು ನೋಡಿ ಸಮಾಜವಾದಿಗಳು ಹೊಟ್ಟೆಯುರಿಸಿಕೊಳ್ಳುವಾಗಲೇ ಪ್ರಜಾಪಾರ್ಟಿ ಅಲ್ಪಸ್ವಲ್ಪ ಆಶಾಕಿರಣವಿದ್ದಲ್ಲೆಲ್ಲ ತನ್ನ ವರ್ಚಸ್ಸನ್ನುಪಯೋಗಿಸಿಯದೆ "ಯಾರು ಬಂದರೂ ನಮಗೆ ಜಯ ಕಟ್ಟಿಟ್ಟದ್ದು" ಎನ್ನುವ ಆತ್ಮವಿಶ್ವಾಸವನ್ನು ಸಮಾಜವಾದಿಗಳು ವ್ಯಕ್ತಪಡಿಸಿರುವದಾದರೂ ಕೊನೆಗೆ ಇದು 'ಕಟ್ಟಿಟ್ಟ ಮಾತೇ' ಆಗಿ ಉಳಿಯಬಹುದೇನೋ ಎನಿಸುತ್ತದೆ. ಪ್ರಜಾಪಾರ್ಟಿಯವರು ಎಲ್ಲ ಕಡೆಯಲ್ಲೂ ಪಾರ್ಟಿಯ ಸಂಘಟಕರನ್ನೂ, ಕಮಿಟಿಗಳನ್ನೂ ಮಾಡಿರುವರು. ಪ್ರಚಾರ ವೈಖರಿಯೂ ತಕ್ಕಮಟ್ಟಿಗಾಗಿದೆ. ಕಾಂಗ್ರೆಸ್ಸಿನ ನಂತರ ಒಂದೆರಡು ಶೀಟುಗಳನ್ನು ಪಡೆಯುವ ಅರ್ಹತೆ ಇರುವದು ಇವರಿಗೇನೇ. ಆದರೆ ಈ ಅರ್ಹತೆ ಪಾರ್ಟಿಯ ತತ್ವಾದರ್ಶಗಳ ಮೇಲಲ್ಲ ವ್ಯಕ್ತಿಗತವಾದ ಯೋಗ್ಯತೆಯ ಮೇಲೆ ಹೊಂದಿಕೊಂಡಿದೆ. ಗಾಳಿ ಬಂದತ್ತ ತೂರಿಕೊಳ್ಳುವ ಜನರೂ ಇದರಷ್ಟು ಸಾಕಷ್ಟು ಇದ್ದಾರೆನ್ನುವದಕ್ಕೆ ಈಚೆಗೆ ಪಾರ್ಟಿಗೆ ಸೇರಿದವರು ಮರುಕ್ಷಣದಲ್ಲಿಯೇ ರಾಜಿಯನ್ನಿತ್ತು ಹೊರಬರುವದು ಸಾಕ್ಷಿಯಾಗಿದೆ.

ಪ್ರಜಾಪಾರ್ಟಿಯ ವ್ಯಕ್ತಿಗಳ ಮೇಲಿರುವ ಅಭಿಮಾನ ಈ ಹಿಂದೆ ಅವರು ಕಾಂಗ್ರೆಸ್ಸಿಗರಾಗಿದ್ದು ಜನಪ್ರಿಯರಾಗಿರುವದರಿಂದಲೇ! ಆದರೆ ಈಚೆಗೆ ಈ ಪಾರ್ಟಿಯವರು ಯೋಗ್ಯ ಕಾಂಗ್ರೆಸ್ ಹುರಿಯಾಳಿನಿದಿರಾಗಿ ಅದೇ ಸಮಾಜದ ಇನ್ನೊಬ್ಬ ಯೋಗ್ಯ ಹುರಿಯಾಳವನ್ನು ಪಾರ್ಟಿ ಟಿಕೇಟು ಕೊಟ್ಟು ಮುಂದೆ ನಿಲ್ಲಿಸಿರುವದರಿಂದ ಪ್ರಜಾಪಾರ್ಟಿಯ ಮುಖ್ಯ ಧುರೀಣರ ಮೇಲಿರುವ ವಿಶ್ವಾಸಕ್ಕೆ ಧಕ್ಕೆ ಬರುವ ಲಕ್ಷಣಗಳು ಕಂಡು ಬರುತ್ತಿವೆ. ವ್ಯಕ್ತಿಗತವಾದ ಬಲವಿನಿಂದ ಪಾರ್ಟಿ, ಅಲ್ಪಯಶ ಗಳಿಸಬಹುದೆಂಬ ಆಶೆನಿರೀಕ್ಷೆಗಳು ಬ್ರಹ್ಮಾವರದಲ್ಲಿ ನಡೆಯುವ ಸ್ಪರ್ಧೆಯಿಂದ ಕುಗ್ಗಬಹುದು! ಈ ಸ್ಪರ್ಧೆಯು ಜಿಲ್ಲೆಯ ಪ್ರಮುಖ ಜನಾಂಗದಲ್ಲುಂಟಾಗಿ ಉಳಿದ ಪಕ್ಷಗಳು ಅದರ ಲಾಭವನ್ನು ಪಡೆಯುವದಕ್ಕೆ ಪಾರ್ಟಿಯು ಕಾರಣವಾಗಬಹುದಾಗಿದೆ. ಅದೂ ಕೂಡಾ ಒಂದೇ ಸ್ಥಳದಲ್ಲಿ ಸಮರ್ಥರಾದ ಹುರಿಯಾಳುಗಳು ಸ್ಪರ್ಧಿಸುವ ಪ್ರಸಂಗ ಹುಟ್ಟಬಂದಿತ್ತೆನ್ನುವ ಕಲ್ಪನೆ ಹೆಚ್ಚಿನ ಜನರಲ್ಲಿ ಉಂಟಾಗಿದೆ. ಈ ಸ್ಪರ್ಧೆಯಿಂದ ಕಾಂಗ್ರೆಸ್ಸಿನ ಸತ್ವಪರೀಕ್ಷೆಯಾಗುವದರ ಜೊತೆಗೆ ಇಡೀ ಜಿಲ್ಲೆಯಲ್ಲಿ ಪ್ರಜಾಪಾರ್ಟಿಯ ಕಾರ್ಯಕ್ಷೇತ್ರಕ್ಕೇನೆ ಧಕ್ಕೆ ಬರಬಹುದು!

ಕರ್ನಾಟಕದ ಯಾದಿಯಲ್ಲಿ ಪುನರ್ವಿಮರ್ಶೆಯಾಗಿದ್ದು ಹಲವು ಬದಲಾವಣೆಯಾಗಿದ್ದರೂ ಫಲಿತಾಂಶ ಗುಪ್ತವಾಗಿಯೇ ಇರಿಸಲ್ಪಟ್ಟಿದೆ. ದ. ಕ. ಜಿಲ್ಲೆಯ ಅಸಂತೃಪ್ತ ಹುರಿಯಾಳುಗಳು ದಿಲ್ಲಿಯವರೆಗೆ ಸಾಗಿದ್ದು ಹಲವರ ಪ್ರಯತ್ನ ಫಲಿಸಿತೆಂದೂ ಊಹಾಪೋಹೆಯುದ್ದಿದೆ. ಕಾಂಗ್ರೆಸ್ಸನ್ನು ಬಲಗೊಳಿಸುವ ದೃಢಸಂಕಲ್ಪ ಜಿಲ್ಲೆಯ ಜನರಲ್ಲುಂಟಾಗಿರುವದರಿಂದ ಇತರ ಪಾರ್ಟಿಗಳ ವರ್ಚಸ್ಸು ಹೆಚ್ಚಾಗಿ ಬೀರುವಂತಿಲ್ಲ. ಆಚಾರ್ಯರ ಪಾರ್ಟಿ ಆತ್ಮಘಾತುಕ ಕಾರ್ಯವನ್ನು ತನ್ನ ಕೈಯಿಂದಲೇ ಮಾಡಿಕೊಳ್ಳುವದೋ ಹೇಗೆಂಬುದನ್ನು ಮುಂದೆ ನೋಡಬೇಕು!

ಸಂರಕ್ಷಣೆ ಹಾಗೂ ಸಂಚಯಕ್ಕೆ
ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು. ಮದ್ರಾಸು. [1934
ವಿಚಾರಿಸಿರಿ
ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ, ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.
ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ;
ದಿ ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ)

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್, ಉಡುಪಿ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೫-೧೦-'೫೧

ಕಾಶ್ಮೀರ ಸಮಸ್ಯಾಪರಿಹಾರಕ್ಕೆ ಸುವರ್ಣಸಂಧಿ!

ಭಾರತ ಪಾಕಿಸ್ತಾನಗಳೊಳಗೆ ವಿವಾದಾಸ್ಪದವಾದ ಕಾಶ್ಮೀರ ಸಮಸ್ಯೆಯ ಬಗ್ಗೆ ಡಾ| ಗ್ರಾಹ್ಯಾಮ ತನ್ನ ವರದಿಯನ್ನು ಸಂ. ರಾ. ಸಂಘಕ್ಕೆ ಒಪ್ಪಿಸಿರುವರು. ಸುಮಾರು ಹನ್ನೊಂದು ವಾರಗಳಲ್ಲಿ ಉಭಯ ರಾಷ್ಟ್ರದ ಧುರೀಣರಲ್ಲಿ ವಿಚಾರ ವಿನಿಮಯ ಮಾಡಿಯೂ ಕಾಶ್ಮೀರದ ವಸ್ತುಸ್ಥಿತಿಯನ್ನವಲೋಕಿಸಿಯೂ ವರದಿಯನ್ನೊಪ್ಪಿಸಿದ್ದಾಗಿರುತ್ತದೆ. ಈ ಹಿಂದೆ ಕಾಶ್ಮೀರಕ್ಕೆ ಪ್ರತಿನಿಧಿಯಾಗಿ ಬಂದಿದ್ದ ಸರ್. ಓವೆನ್ ಡಿಕ್ಸನ್ನರ ವರದಿಗಿಂತ ಡಾ| ಗ್ರಾಹ್ಯಾಮರ ವರದಿಯು ಆಶಾದಾಯಕವಾಗಿದೆ. ಕಾಶ್ಮೀರ ಸಮಸ್ಯೆ ಸಂಧಾನದ ಮೂಲಕ ಬಗೆಹರಿಯದೆಂದು ಡಿಕ್ಸನ್ನರು ವಾದಿಸಿದ್ದರು. ಮಾತ್ರವಲ್ಲದೆ ಸಂ. ರಾ. ಸಂಘದ ಆಡಳಿತಕ್ಕೆ ಒಳಪಡಿಸಬೇಕೆಂಬ ಸೂಚನೆಯನ್ನೂ ಮಾಡಿದ್ದರು. ಸೈನ್ಯ ನಿರ್ಗಮನ ವಿಚಾರದಲ್ಲಿ ಉಭಯ ರಾಷ್ಟ್ರಗಳೊಳಗೆ ಒಮ್ಮತವನ್ನು ಸಾಧಿಸುವುದು ಅವರಿಂದ ಸಾಧ್ಯವಾಗಲಿಲ್ಲ. ಡಾ| ಗ್ರಾಹ್ಯಾಮರಿಗೂ ಅದು ಪೂರ್ತಿಯಾಗಿ ಸಾಧ್ಯವಾಗದೆ ಹೋದರೂ ಪಾಕಿಸ್ತಾನವು ಆಜಾದ ಕಾಶ್ಮೀರದಿಂದ ತನ್ನ ಸೈನಿಕರನ್ನು ಹಿಂತೆಗೆದು ಕೊಳ್ಳಬೇಕೆಂದೂ, ಆಜಾದ ಕಾಶ್ಮೀರದ ಹೆಚ್ಚಿನ ಸೈನಿಕರನ್ನು ವಿಸರ್ಜಿಸಿ ನಾಲ್ಕುಸಾವಿರ ನಾಗರಿಕ ಸೈನಿಕರು ಮಾತ್ರ ಉಳಿಯತಕ್ಕದ್ದೆಂದೂ ಭಾರತದ ಹೆಚ್ಚಿನ ಸೈನ್ಯವನ್ನು ಹಿಂದೆ ತೆಗೆದುಕೊಳ್ಳಬೇಕೆಂದೂ ಅವರು ಕೊಟ್ಟ ಸಲಹೆಗಳನ್ನು ಉಭಯ ರಾಷ್ಟ್ರಗಳು ಒಪ್ಪುವ ಸಂಭವ ಹೆಚ್ಚೆಂದು ತೋರುತ್ತದೆ.

ಕಾಶ್ಮೀರ ಸಮಸ್ಯೆಯು ಶೀಘ್ರವಾಗಿ ತೀರ್ಮಾನವಾಗಬೇಕೆಂಬ ಮಹತ್ವಾಕಾಂಕ್ಷೆ—ಕಳಕಳಿ—ಉಭಯ ರಾಷ್ಟ್ರಗಳಲ್ಲೂ ಕಂಡುಬರುತ್ತಿದೆ. ಈ ವಿವಾದದ ಕುರಿತು ಭಾರತ ಪಾಕಿಸ್ತಾನದ ಧುರೀಣರು ಕೈಗೊಂಡಿರುವ ಯುದ್ಧಪ್ರಚೋದಕ ನೀತಿಯನ್ನು ಪ್ರತಿಬಂಧಿಸಬೇಕೆಂದು ಡಾ| ಗ್ರಾಹ್ಯಾಮರು ಸೂಚಿಸಿದ್ದಾರೆ. ಯುದ್ಧಪ್ರಚೋದಕ ಪ್ರಚಾರ ಕ್ರಮವನ್ನು ಪಾಕಿಸ್ತಾನವು ಮೊದಲಾಗಿ ಆರಂಭಿಸಿ ಭಾರತವನ್ನು ಕೆಣಕಿದ್ದನ್ನೂ—ಯುದ್ಧ ರಕ್ಷಣೆಯ ಪ್ರಯೋಗ ನಡೆಸಿದ್ದನ್ನೂ ಡಾ| ಗ್ರಾಹ್ಯಾಮರು ಪ್ರತ್ಯಕ್ಷವಾಗಿ ಉಕ್ತಿಸಿದ್ದರೂ ಭಾರತ ಪಾಕಿಸ್ತಾನಗಳೆರಡೂ ಪ್ರಚೋದಕ ಮಾರ್ಗವನ್ನು ಕೈಗೊಂಡಿವೆಯೆಂದು ಹೇಳಿದ್ದು ಸೋಜಿಗದ ಸಂಗತಿ! ಕಾಶ್ಮೀರದಲ್ಲಿ ಘಟನಾ ಸಮಿತಿ ರಚನೆಗೊಳ್ಳುವುದರಿಂದ ಈ ತೊಡಕು ಇನ್ನಷ್ಟು ಗಂಭೀರವಾಗಬಹುದು ಎಂದೂ ಅವರು ಹೇಳಿರುವರು. ಮೂರು ವರ್ಷಗಳಿಗೂ ಮಿಕ್ಕಿ ಕಾಶ್ಮೀರದ ಕುರಿತು ಸಂ. ರಾ. ಸಂಘವು ಮೀನ ಮೇಷವೆಂದು ಹೇಳುತ್ತ ಬಂದಿರುವುದನ್ನು ಲಕ್ಷಿಸಿಯೇ ಕಾಶ್ಮೀರ ಜನತೆ ತಮ್ಮ ರಾಷ್ಟ್ರದ ಭವಿತವ್ಯವನ್ನು ತಾವೇ ನಿರ್ಧರಿಸಲು ಮುಂದೆ ಬಂದಿರುವರೆಂಬುದು ಗ್ರಾಹ್ಯಾಮರಿಗೆ ತೋಚದೆ ಹೋದದ್ದು ಆಶ್ಚರ್ಯದ ವಿಚಾರ!

ಕಾಶ್ಮೀರದ ಸಮಸ್ಯೆಯ ನಂತರ ಕೊರಿಯಾ, ಪರ್ಶಿಯಾ, ಮುಂತಾದ ಪ್ರಶ್ನೆಗಳು ಸಂ. ರಾ. ಸಂಘದ ಮುಂದೆ ಬಂದವು. ಇವೆಲ್ಲ ಆಂಗ್ಲೋ ಅಮೇರಿಕನರಿಗೆ ಗಂಡಾಂತರ ಪ್ರಾಯವಾದವುಗಳು. ಅಂತಲೇ ಅತ್ಯಂತ ಆಸ್ಥೆಯಿಂದ ಸಂಘ ಈ ವಿಚಾರವನ್ನು ಮೂಲೆಗೊತ್ತಿ ಅದನ್ನು ಎತ್ತಿಕೊಂಡಿತು. ಇಷ್ಟು ದೀರ್ಘ ಕಾಲ ಅದು ಕಾಲಹರಣ ಮಾಡಿದುದರ ಮುಖ್ಯ ಫಲಿತಾಂಶವೆಂದರೆ ಭಾರತ ಪಾಕಿಸ್ತಾನಗಳೊಳಗೆ ದ್ವೇಷ ಬೆಳೆದು— ಕಾಶ್ಮೀರದಲ್ಲಿ ಪಾಕಿಸ್ತಾನಕ್ಕೆ ಭಾರತದಷ್ಟೇ ಸಮಾನ ಹಕ್ಕಿನ ಕಲ್ಪನೆಯನ್ನು ಸ್ಥಿರಗೊಳಿಸಿದ್ದು! ಹಾವು ಸಾಯಲೂ ಬಾರದು; ಕೋಲು ಮುರಿಯಲೂ ಬಾರದೆಂಬಂತೆ ಅದು ವರ್ತಿಸುತ್ತಿದೆ. "ಸಹನೆಗೂ ಒಂದು ಮಿತಿ ಇದೆ" ಎಂದು ಪಾಕಿಸ್ತಾನದ ನೂತನ ಪ್ರಧಾನ ಮಂತ್ರಿಗಳು ಹೇಳಿದ್ದನ್ನು ನಾವೂ ಒಪ್ಪುವೆವು. ಡಾ| ಗ್ರಾಹ್ಯಾಮರು ಹಲವು ಪರಿಹಾರ್ಯ ಮಾರ್ಗಗಳನ್ನು ಸೂಚಿಸಿ ಇನ್ನು ಮೂರು ತಿಂಗಳು ಸಂ. ರಾ. ಪ್ರತಿನಿಧಿ ಕಾರ್ಯ ನಡೆಸತಕ್ಕದ್ದೆಂದು ವರದಿ ಮಾಡಿದ್ದಾರೆ. ಈ ಕಾರ್ಯ ಯಶಸ್ವಿಯಾಗಬೇಕಾದರೆ ನಿಃಸೈನ್ಯೀಕರಣ ಹಾಗೂ ಕಾಲಪರಿಮಿತಿಯನ್ನು ಉಭಯ ರಾಷ್ಟ್ರಗಳು ಒಪ್ಪಬೇಕಾಗಿದೆ. ಸ್ವೇಚ್ಛೆಯಂತೆ ಸಂ. ರಾ. ಸಂಘವೇನೂ ಮಾಡುವಂತಿಲ್ಲ. ಮಾತ್ರವಲ್ಲದೆ ತಾನು ನಿರ್ದೇಶಿಸುವ ಅಂಶಗಳೆಲ್ಲ ನಿಶ್ಪಕ್ಷಪಾತವಾಗಿದ್ದು ತಮ್ಮ ಬಲವನ್ನು ಅಲ್ಲಿ ಸ್ಥಿರಗೊಳಿಸುವ ಪ್ರಬಲ ಉದ್ದೇಶವನ್ನೆಂದೂ ಆಂಗ್ಲೋ ಅಮೆರಿಕನರು ಬಿಟ್ಟುಕೊಡುವಂತಿಲ್ಲ. ಕೊರಿಯದ ಸಂಧಾನ ಮಾತುಕತೆಗಳು ವಿಫಲಗೊಂಡ ಸಮಯವೇ ಮುಂದಿನ ದಾಳಿಯೆಂದು 'ಕಮ್ಯೂನಿಸ್ಟರು ಉದ್ಗಾರ ತೆಗೆದಿದ್ದಾರೆ. ಇಜಿಪ್ತವು ಬ್ರಿಟನ್ನು ಹೊರದೂಡುವ ಗಂಭೀರ ಘೋಷಣೆಯನ್ನು ಮಾಡಿದೆ. ಇರಾಣದ ಎಣ್ಣೆ ಪ್ರಶ್ನೆಯಲ್ಲಿ ಸಂ. ರಾ. ಸಂಘಕ್ಕೆ ಕೈಹಾಕುವ ಅಧಿಕಾರವೇ ಇಲ್ಲವೆನ್ನುತಿದ್ದಾರೆ ಡಾ| ಮುಸಾದಿಕರು. ಅಂದಮೇಲೆ ಆಂಗ್ಲೋ ಅಮೆರಿಕನರ ಮೇಲೆ ಬೆಳೆಯುತ್ತಿರುವ ಈ ದ್ವೇಷ ಭಾವನೆಯಿಂದ ಯುದ್ಧದ ಕಿಡಿ ಹಾರಬಹುದು. ಏಶಿಯದಲ್ಲಿ ತಮ್ಮ ಠಾಣೆಯನ್ನು ಭದ್ರಗೊಳಿಸಿ ಕಮ್ಯೂನಿಸ್ಟರ ಹಾಗೂ ತಮ್ಮ ಘೋಷಣೆಗೆ ವಿರುದ್ಧವಾದವರ ಮೇಲೆ ಯುದ್ಧ ಸಾರುವದಕ್ಕೆ ಒಂದು ಸ್ಥಾನ ಬೇಕೇ ಬೇಕು. ಅಂತಲೇ ಅವರ ಒಲವು ಕೊನೆಗೂ ಪಾಕಿಸ್ತಾನದ ಕಡೆಗೇನೇ!

ಈ ವರೆಗೆ ಕಾಶ್ಮೀರ ಸಮಸ್ಯೆಯ ಕುರಿತಾದ ವರದಿಗಳಿಂದ ನಾವು ಮುಖ್ಯವಾಗಿ ಅರಿತುಕೊಳ್ಳಬೇಕಾದ ಅಂಶವೆಂದರೆ ಈ ಪ್ರಶ್ನೆಯು ಉಭಯ ರಾಷ್ಟ್ರಗಳೂ ಪರಸ್ಪರ ವಿಚಾರವಿನಿಮಯ ಮಾಡಿ ಬಗೆಹರಿಸಿಕೊಳ್ಳಬೇಕಲ್ಲದೆ ಸಂ. ರಾ. ಸಂಘದಿಂದಲ್ಲವೆಂಬುದೇ. ಭಾರತದ ವಿದೇಶಾಂಗ ನೀತಿಯು ಜಾಗತಿಕ ರಂಗದಲ್ಲಿ ಗೌರವಾದರಗಳನ್ನು ಪಡೆದಿರುವಾಗ ನೆರೆಯ ರಾಷ್ಟ್ರದೊಡನೆ ವೈರವನ್ನು ಕಟ್ಟಿಕೊಂಡಿರುವದು ಯೋಗ್ಯವಲ್ಲ! ಬೇರೆಯವರ ಅಪೇಕ್ಷೆ—ಮಾರ್ಗದರ್ಶನಗಳಿಂದ ಉಭಯ ರಾಷ್ಟ್ರಗಳಲ್ಲಿ ತಪ್ಪು ಗ್ರಹಿಕೆ ದ್ವೇಷ ಭಾವನೆ ವೃದ್ಧಿಗೊಂಡಿತೇ ವಿನಹ ಸ್ನೇಹಭಾವನೆ ಅಂಕುರಿಸಲಿಲ್ಲ! ಲಿಯಾಖತರು ಕೊಲೆಯಾಗಲ್ಪಟ್ಟುದರಿಂದ ಭಾರತ ಪಾಕಿಸ್ತಾನ ಸಂಧಾನ ಮಾತುಕತೆಯಲ್ಲಿ ತೊಡರುಂಟಾಗಬಹುದಾದರೂ ನೆಹ್ರೂರವರು ಕಳಿಸಿದ ಹೃದಯಸ್ಪರ್ಶಿ ಸಂದೇಶದಿಂದ ಪಾಕಿಸ್ತಾನಿಗಳ ಹೃದಯ ಪರಿವರ್ತನೆಗೊಂಡಂತಿದೆ. ಪಾಕಿಸ್ತಾನದ ಪ್ರಧಾನಿ ನಾಜೀಮುದ್ದೀನರು "ನೆಹ್ರೂರವರ ಪ್ರತಿಯೊಂದು ಶಬ್ದವನ್ನು ನಾನು ಹೃತ್ಪೂರ್ವಕವಾಗಿ ಮೆಚ್ಚುತ್ತೇನೆ. ಪಾಕಿಸ್ತಾನ ಜನತೆಯು ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಗೌರವಯುತವಾಗಿ ಮತ್ತು ಮರ್ಯಾದೆಯಿಂದ ವರ್ತಿಸಬೇಕೆಂಬುದನ್ನು ಕೇಳಿ ನನಗೆ ಅತೀವ ಆನಂದವಾಗಿದೆ" ಎಂದಿರುವರು. ಆಂಗ್ಲೋ ಅಮೆರಿಕನರ ತೀರ್ಮಾನದಿಂದ ಸಮಸ್ಯೆ ಬಗೆಹರಿಯದೆ ಭಾರತದೊಡನೆ ವಿನಯದಿಂದ ವರ್ತಿಸುವದರಿಂದ ಮಾತ್ರ ಅದು ಶಕ್ಯವೆಂಬುದು ಪಾಕಿಸ್ತಾನಕ್ಕೆ ಚೆನ್ನಾಗಿ ಮನವರಿಕೆಯಾಗಿದೆ. ಅಂತಲೇ ನಾಜೀಮುದ್ದೀನರು ನೆಹ್ರೂರವರ ಸಹಕಾರವನ್ನು ಯಾಚಿಸಿದ್ದಾರೆ. ನಿಜವಾಗಿಯೂ ಇದು ಪಾಕ್ ಸರಕಾರದ ಪ್ರಗತಿಪರ ಧೋರಣೆಯ ಮೊದಲ ಹೆಜ್ಜೆಯೆನಬೇಕು!

ಕಾಶ್ಮೀರ ಸಮಸ್ಯೆ ವಿವೇಕಪೂರ್ವಕ ತೀರ್ಮಾನವಾಗುವದರಿಂದ ನೀರಿನ ತಂಟೆ—ನಿರಾಶ್ರಿತರ ಸಮಸ್ಯೆ—ಬಗೆಹರಿಯುವದು ಮಾತ್ರವಲ್ಲದೆ ಉಭಯ ರಾಷ್ಟ್ರಗಳ ಆರ್ಥಿಕ ಸಾಮಾಜಿಕಾಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ! ಕಾಶ್ಮೀರ ಸುರಕ್ಷಿತತೆಯ ಬಗ್ಗೆ ಭಾರತ ಸರಕಾರ ನೂರು ಕೋಟಿಗಿಂತಲೂ ಮಿಗಿಲಾದ ಹಣ ವ್ಯಯ ಮಾಡಿದೆ. ಕಾಶ್ಮೀರ ಜನತೆಯ ಹಾಗೂ ಜನತೆಯ ಇಚ್ಛೆಯಂತೆಯೇ ಭಾರತ ಸೈನಿಕರು ಅಲ್ಲಿ ನೆಲೆನಿಂತದ್ದಾಗಿರುತ್ತದೆ. ನಿರಂಕುಶ ಪ್ರಭುತ್ವದಿಂದ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಆಕ್ರಮಿಸಲು ಸಾಧ್ಯವಿಲ್ಲವೆಂಬುದು ಇಜಿಪ್ತ—ಇರಾಣಗಳ ರಾಜಕೀಯ ಕ್ರಾಂತಿಯಿಂದ ಸಮರ್ಥವಾಗದೇ? ಕಾಶ್ಮೀರ ಜನತೆಯ ಇಚ್ಛೆಗೆ ವಿರುದ್ಧ ಒಂದು ಕ್ಷಣವೂ ಭಾರತ ಸೈನ್ಯ ಅಲ್ಲಿ ನಿಲ್ಲದು. ಸಾರ್ವಜನಿಕ ಮತಗಣನೆಯನ್ನಯ ಕಾಶ್ಮೀರ, ಪಾಕಿಸ್ತಾನಕ್ಕೆ ಸೇರಬೇಕೋ ಭಾರತಕ್ಕೆ ಸೇರಬೇಕೋ ಎಂದು ನಿರ್ಧರಿಸುವ ಹಕ್ಕನ್ನು ಅವರಿಗೇ ಬಿಟ್ಟುಕೊಟ್ಟಿರುವದರಿಂದ ಭಾರತವೆಂದೂ ಅಪವಾದಕ್ಕೆ ಗುರಿಯಾಗಲು ಸಾಧ್ಯವಿಲ್ಲ! ಪಾಕಿಸ್ತಾನವಾದರೂ ಭಾರತ ಸೈನಿಕರ ಸಂಪೂರ್ಣ ವಿಸರ್ಜನೆಯಾಗಬೇಕೆಂದು ಹಟಮಾರಿತನವನ್ನೇಕೆ ಹಿಡಿಯಬೇಕು? ಅಥವಾ ಸ್ವಲ್ಪಮಟ್ಟಿಗೆ ಹಿಂದೆಗೆದುಕೊಳ್ಳುವದಾದರೂ ಡಾ| ಗ್ರಾಹ್ಯಾಮರ ವರದಿ ಪಾಕಿಸ್ತಾನದ ಮಟ್ಟಿಗೆ ಅನುಕೂಲವಾಗಿಯೇ ಇರುತ್ತದೆ. ಪರಿಸ್ಥಿತಿ ಇಷ್ಟು ನಿಚ್ಚಳವಿರುವಾಗ—ಸಮರವನ್ನು ತಪ್ಪಿಸುವ ಸಾಧನೆ ಉಪಾಯ—ಭಾರತ ಪಾಕಿಸ್ತಾನಗಳ ಕೈಯಲ್ಲೇ ಇರುವಾಗ—ಬೇರೆಯವರ ಮ[illegible]ಟ ಮಾಡುವ ನ್ಯಾಯದ ಆವಶ್ಯಕತೆ ಕಾಣುವುದಿಲ್ಲ. ಅದುದರಿಂದ ಶ್ರೀ ನೆಹ್ರೂರವರ ಮಾತಿನ [illegible] ಪಾಕ್ ಪ್ರಧಾನಿಗಳ [illegible] ಸುವದಕ್ಕೆ ಇದು ಒಳ್ಳೆ ಸಮಯವೆಂದೆನಿಸುತ್ತದೆ. ಉಭಯ ರಾಷ್ಟ್ರಗಳೂ ಈ ಸುವರ್ಣಸಂಧಿಯನ್ನು ಕಳೆದುಕೊಳ್ಳದೆ ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸುವಂತಾಗಲೆಂದು ಹಾರೈಸುತ್ತೇವೆ.

ಜಗತ್ತಿನ ಸುತ್ತುಮುತ್ತು....

ಪಾನಮುಂಜಾನದಲ್ಲಿ

ಕೊರಿಯಾ ಯುದ್ಧ ಮುಕ್ತಾಯದ ಮಾತುಕತೆ ಪಾನಮುಂಜಾನದಲ್ಲಿ ಸಂ. ರಾ. ಸಂಘ ಅಧಿಕಾರಿಗಳ ಹಾಗೂ ಕಮ್ಯೂನಿಸ್ಟರ ನಡುವೆ ಆರಂಭವಾಗಿದೆ.

ಆದರೆ....

ಕೊರಿಯಾ ಯುದ್ಧ ಮುಕ್ತಾಯಕ್ಕೆ ಸಮರವೇ ಯೋಗ್ಯ ಮಾರ್ಗವಲ್ಲದೆ ಸಂಧಾನವಲ್ಲ; ಅಮೇರಿಕೆಯು ಆಪತ್ತಿಗೊಳಗಾಗಿದ್ದ ಕಾರಣದಮೇಲೆ ಸಂಧಾನ ಯಾಚಿಸುತ್ತದೆ. ಯುದ್ಧದಲ್ಲೇ ತಮ್ಮ ಪರಾಕ್ರಮ ತೋರಿಸಿ ವಿಜಯಿಗಳಾಗುವೆಂದು ಕಮ್ಯೂನಿಸ್ಟ್ ಚೀನದ ಮುಖ್ಯ ಮಂತ್ರಿ ಹೇಳಿದರು.

ಇರಾಣದ ಎಣ್ಣೆ ತಂಟೆ

ಅಂತರಾಷ್ಟ್ರೀಯ ನ್ಯಾಯಾಲಯದವರು ಇರಾಣ ಎಣ್ಣೆಯ ವಿಚಾರದಲ್ಲಿ ತಮಗೆ ಅಧಿಕಾರವಿದೆಯೋ—ಇಲ್ಲವೋ ಎಂಬ ಕುರಿತು ತೀರ್ಪು ಕೊಡುವವರಿದ್ದು ಬಳಿಕವೇ ಆ ವಿಷಯವನ್ನು ಸಂ. ರಾ. ಸಂಘ ಚರ್ಚೆಗೆ ತೆಗೆದುಕೊಳ್ಳುವದಂತೆ.

ಕಾಶ್ಮೀರ ಪ್ರಶ್ನೆ

ಡಾ| ಗ್ರಾಹ್ಯಾಮರ ವರದಿಯನ್ನು ಸಂ. ರಾ. ಸಂಘವು ಈ ತಿಂಗಳ 29ಕ್ಕೆ ಪ್ಯಾರಿಸದಲ್ಲಿ ಕೂಡಲಿರುವ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವದು.

For energetic and active living, for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart.
Price per tin containing 80 tolas Rs. 10-0-0 Postage extra
Stockist for South & N. Kanara & Mysore state: **M. Vinayaka Rao,** Bannanje Road, Udipi, S. K.
AYURVEDIC PHARMACY
Baba kali Kamali-Wala RISHIKESH.

ಉಡುಪಿ

ಬಹುಮಾನ ವಿತರಣೆ—ಉಡುಪಿ ತಾಲೂಕಿನಲ್ಲಿ ಕಂಪೋಸ್ಟ್ ಪದ್ಧತಿಯಲ್ಲಿ ಹೆಚ್ಚಿನ ಹೊಂಡಗಳನ್ನು ತಯಾರಿಸಿದ ಮುಲ್ಲರು ಗ್ರಾಮಕ್ಕೆ ಸರಕಾರದ ರೂ. 25/-ನಮೌಲ್ಯದ ಬಹುಮಾನ ಹಂಚುವ ಸಮಾರಂಭವು ಇದೇ ತಾ. 20ರಂದು ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್ ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ ಸಹಕಾರಿಗಳ ಒಡನಾಡಿ ಕೂಟದ ಸ್ನೇಹ ಸಭೆಯು ಇದೇ ತಾ. 21ರಂದು ಬಡಗುಬೆಟ್ಟು ಸಂಘದ ಯೂನಿಯನ್ ಆಫೀಸಿನಲ್ಲಿ ಜರಗಿತು. ಸೆಂಟ್ರಲ್ ಬೇಂಕಿನ ಅಧ್ಯಕ್ಷ ಶ್ರೀ ಎಮ್. ಶಿವರಾಯರು ಸಂಘಗಳ ಬೆಳವಣಿಗೆ ಮುಂತಾದ ವಿಷಯಗಳನ್ನು ಮಾತನಾಡಿದರು. ಜಿಲ್ಲಾ ರಿಜಿಸ್ಟ್ರಾರ್ ಶ್ರೀ ಶೇಷಪ್ಪ ಶೆಣೈ ಮೊದಲಾದವರು ಹಾಜರಿದ್ದರು. ಅಂದೇ ಮಧ್ಯಾಹ್ನ ಬ್ರಹ್ಮಾವರ ಸಂಘದ ಆಫೀಸಿನಲ್ಲಿ ಈ ರೀತಿಯ ಸಭೆ ಮತ್ತು ಮಾತುಕಥೆಗಳಾದುವು.

ಉಡುಪಿಯ ಪ್ರಜಾಪಾರ್ಟಿಯ—ಕಾರ್ಯನಿರ್ವಾಹಕ ಕಮಿಟಿಯ ಸಭೆಯು ಇದೇ ತಾ. 21ರಂದು ಶ್ರೀ ಬಿ. ಎಸ್. ಲೂವಿಸ್, ಅವರ ಅಧ್ಯಕ್ಷತೆಯಲ್ಲಿ ಜರಗಿ ಪಾಕಿಸ್ತಾನ ಪ್ರಧಾನ ಮಂತ್ರಿ ಲಿಯಾಖತ್ ಅಲಿಖಾನರ ನಿಧನದ ಬಗ್ಗೆ ದು:ಖಸೂಚಿಸುವ ನಿರ್ಣಯವಾಯಿತು.

ಕಾಂಗ್ರೆಸ್ ಪ್ರಚಾರ — ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಕಾಂಗ್ರೆಸ್ ಪ್ರಚಾರಕಾರ್ಯದ ಉದ್ಘಾಟನಾ ಸಮಾರಂಭವು ಇದೇ ತಾ. 30ನೇ ಮಂಗಳವಾರ ಸಂಜೆ ಘಂಟೆ 5-30ಕ್ಕೆ ರಥಬೀದಿಯಲ್ಲಿ ನೆರವೇರಲಿರುವುದು. ಉದ್ಘಾಟನಾ ಕಾರ್ಯವನ್ನು ಪಾರ್ಲಿಮೆಂಟು ಸದಸ್ಯರಾದ ಶ್ರೀಯುತ ಬೆನೆಗಲ್ ಶಿವರಾಯರು ಜರಗಿಸುವುದಲ್ಲದೆ "ಕಾಂಗ್ರೆಸಿನ ಧ್ಯೇಯಧೋರಣೆ"ಯ ಕುರಿತು ಭಾಷಣಮಾಡಲಿರುವರು. ಅಲ್ಲದೆ, ಶ್ರೀಯುತ ಬಿ. ವೈಕುಂಠ ಬಾಳಿಗ "ಕಾಂಗ್ರೆಸ್ಸಿಗೇಕೆ ಬೆಂಬಲ ಕೊಡಬೇಕು" ಎಂಬ, ಶ್ರೀಯುತ ಎಲ್. ಸಿ. ಪಾಯಿಸರು "ಕಾಂಗ್ರೆಸು ಮತ್ತು ಅಲ್ಪಸಂಖ್ಯಾಕರು" ಎಂಬ, ಶ್ರೀಯುತ ಟಿ. ಎ. ಪೈಗಳು "ಕಾಂಗ್ರೆಸ್ಸಿನ ಆರ್ಥಿಕ ಧೋರಣೆಯೂ" ಎಂಬ ವಿಷಯಗಳ ಮೇಲೆ ಭಾಷಣಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ವರ್ಧಂತಿ—ಸ್ಥಳೀಯ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಇದರ 26ನೆಯ ವಾರ್ಷಿಕೋತ್ಸವವು ಡಾ। ಸಂದರರಾವು ಪೈಯವರ ಅಧ್ಯಕ್ಷತೆಯಲ್ಲಿ ಇದೇ ತಾರೀಕು 20ರಂದು ಆಚರಿಸಲ್ಪಟ್ಟಿತು. ಇದೇ ಸಮಯ ಈ ಬೇಂಕಿನವರು ಸಜ್ಜುಗೊಳಿಸಿದ 'ಭದ್ರತೆಯ ಕೋಣೆ' (safe deposit vault) ಯ ಉದ್ಘಾಟನೋತ್ಸವವನ್ನು ಜಿಲ್ಲಾ ಕಲೆಕ್ಟರಾದ ರಾಜರತ್ನಂರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಆ ಉಪಹಾರದ ನಂತರ, ಬೇಂಕಿನ ಮೆನೇಜಿಂಗ್ ಡೈರೆಕ್ಟರಾದ ಡಾ। ಮಾಧವ ಪೈಗಳು ಬೇಂಕಿನ ಕಾರ್ಯಕಲಾಪ ಮತ್ತು ಪ್ರಗತಿಯನ್ನು ವಿವರಿಸಿದರು. ಶ್ರೀಯುತ ರಾಜರತ್ನಂರವರು ತಮ್ಮ ಉದಾತ್ತ ಭಾಷಣದಲ್ಲಿ ಬೇಂಕಿಗೆ ಶ್ರೇಯೋಭಿವೃದ್ಧಿಯನ್ನು ಕೋರಿದರು. ಇಂತಹ ಸಂಸ್ಥೆಗಳಿಂದ ಕೃಷಿ ಕೈಗಾರಿಕೆಗಳಿಗೆ ನೆರವಾಗಲಿ ಎಂದು ಆಶಿಸಿದರು. ಅಧ್ಯಕ್ಷರು ಬೇಂಕಿಂಗ್ ವ್ಯವಸಾಯದ ಆಗುಹೋಗುಗಳನ್ನು ವಿಮರ್ಶಿಸುತ್ತ ಈ ಬೇಂಕಿನ ಉನ್ನತಿಯನ್ನು ಬಯಸಿದರು. ಬೇಂಕಿನ ಜನರಲ್ ಮೆನೇಜರರಾದ ಶ್ರೀಯುತ ಟಿ. ಎ. ಪೈಗಳು ಧನ್ಯವಾದವನ್ನು ಕೊಡುತ್ತ, ಬೇಂಕಿಂಗ್ ವ್ಯವಸಾಯದಲ್ಲಿ ಆಡಳಿತೆ ನೋಡುವವರ ಕಷ್ಟ ಇಷ್ಟಗಳನ್ನು ವಿವರಿಸುತ್ತ, ಈ ಉದ್ಯಮವನ್ನು ರಾಷ್ಟ್ರೀಕರಣ ಮಾಡುವುದರಿಂದ ದೇಶದ ಹಿತ ಸಾಧಿಸಬಲ್ಲುದಾದರೆ, ಅದನ್ನು ಬೇಂಕಿನ ಆಡಳಿತೆ ಸ್ವಾಗತೀಕರಿಸುವುದು ಎಂದು ವಿಶ್ವಾಸಪೂರ್ವಕ ನುಡಿದರು. ಅನಂತರ ಸಭೆ ಮುಕ್ತಾಯವಾಯಿತು.

ಸಾರ್ವಜನಿಕ ಸಭೆ—ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಯೋಜನೆಯ ಕುರಿತು ಇದೇ ತಾರೀಕು 25ನೇ ಗುರುವಾರ ಸಂಜೆ ಗಂಟೆ 4ಕ್ಕೆ ಸ್ಥಳೀಯ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಸಭೆ ಸೇರಲಿದೆ. ಸರ್ವರಿಗೂ ಸುಸ್ವಾಗತವಿದೆ ಎಂದು ಶ್ರೀಯುತ ಎ. ಜೆ. ಆಳ್ವೆಯವರು ತಿಳಿಸುತ್ತಾರೆ.

ಕಸ್ತೂರಿಬಾ ಮೆಡಿಕಲ್ ಕಾಲೇಜು:-ಇದ ಅಂಗೀಕಾರ ಕೋರಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಜಿಸಲ್ಲಿಸುವುದಾಗಿ ಪತ್ರಿಕೋದ್ಯಮಿ ಸಭೆಯಲ್ಲಿ ಡಾ। ಮಾಧವ ಪೈಗಳು ತಿಳಿಸಿರುವರು. ಮುಂಬಯಿ ಸರಕಾರದ ಸಮ್ಮತಿ ಪಡೆದುಕೊಂಡು ಈ ಕಾಲೇಜನ್ನು ಅಂಗೀಕರಿಸುವ ಕವಲತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕಿದೆ. ಕರ್ನಾಟಕ ವಿಶ್ವವಿದ್ಯಾಲಯವು ಈ ಕೆಲಸವನ್ನು ಪೂರೈಸುವರೆ, ಮುಂಬಯಿ ಸರಕಾರ ಸಮ್ಮತಿಯನ್ನು ಕೊಡುವರೆ, ಹಾಗೂ ಮದ್ರಾಸು ಸರಕಾರ ಈ ಕಾಲೇಜಿಗೆ ಸರ್ವವಿಧದಲ್ಲೂ ಸಹಕಾರ ಕೊಡುವರೆ ಅಲ್ಲದೆ ಸಾರ್ವಜನಿಕ ಸಭೆ ಸೇರಿ ಗೊತ್ತುವಳಿಗಳನ್ನು ಅವರವರಿಗೆ ಕಳುಹಿಸುವುದರಿಂದ ಆರೇ ತಿಂಗಳಲ್ಲಿ ಅಂಗೀಕಾರ ದೊರೆತು ಕಾಲೇಜು ಪ್ರಾರಂಭವಾಗಲು ಸಾಧ್ಯವಿರುವುದರಿಂದ ಈ ವಿಷಯದಲ್ಲಿ ಸಾರ್ವಜನಿಕರು ಸಹಕರಿಸುವುದು ಉತ್ತಮ.

ಚನ್ನಿಗೋಳಿ:-ಇದೇ ತಾ 10ರಂದು ಕೆಮ್ರಾಲು ಗ್ರಾಮದ ಸೇನಾಕರಿಯ ಕುಚೆಪೂರು ಹರಿಜನ ಕೊಲನಿಯಲ್ಲಿ ಮೂಲ್ಕಿಯ ಒಂಭತ್ತು ಮಾಗಣೆಯ ಶಿವಸಮಾಜ ಸಂಘದವರು ಮತ್ತು ಹಳೆಯಂಗಡಿ, ತಾಳಿಪಾಡಿ, ಮುಂಡೂರು ಮೊದಲಾದ ಸ್ಥಳಗಳ ಹರಿಜನ ಸಂಘದವರೊಂದಿಗೆ ಕೂಡಿಕೊಂಡು ಶ್ರೀ ಕೆ. ವೆಂಕಟ್ರಾಯರ ನೇತೃತ್ವದಲ್ಲಿ ಬಡಹರಿಜನ ಅಭಿವೃದ್ಧಿಯ ಕುರಿತು ಸಭೆಜರಗಿಸಿದರು. ಬಳಿಕ ಉಪಾಹಾರ ನಡೆಯಿತು.

ಧರ್ಮಸ್ಥಳ:-ಡಾ। ಮೋದಿಯವರಿಂದ ತಾ 15ರಲ್ಲಿ ಪ್ರಾರಂಭವಾದ ಕಣ್ಣು ಚಿಕಿತ್ಸೆಯು ಮರುದಿನವೇ ಅಂತ್ಯಗೊಳಿಸಲ್ಪಟ್ಟಿರುವುದೆಂದೂ ಕಣ್ಣು ರೋಗಿಗಳು ಇನ್ನು ಬಂದರೆ ಪ್ರಯೋಜನವಿಲ್ಲವೆಂದೂ ತಿಳಿದು ಬಂದಿದೆ.

ಕೊರಾಡಿ:-ಇಲ್ಲಿಯ ಮಹಾತ್ಮಾಗಾಂಧಿ ಹಿಂದೀ ಶಾಲೆಯವರು ಇತ್ತೀಚೆಗೆ B.L. ಅಡಿಗಳ ನೇತೃತ್ವದಲ್ಲಿ ಗೇರಸಪ್ಪ, ಭದ್ರಾವತಿ, ಬೆಂಗಳೂರು, ಮೈಸೂರು ಮುಂತಾದ ಕಡೆಗಳ ಪ್ರವಾಸವನ್ನು ಯಶಸ್ವಿಯಾಗಿ ಪೂರೈಸಿ ಬಂದರು.

ಕುಂಬಳೆ:—ಪಾಕಿಸ್ತಾನ್ ಪ್ರಧಾನಿ ಜನಾಬ್ ಲಿಯಾಖತ್ ಅಲಿಖಾನರ ಅಕಾಲ ನಿಧನದ ಬಗ್ಗೆ ಸಂತಾಪಸೂಚಿಸುವ ಸಭೆಯೊಂದು ಇಲ್ಲಿ ಜರಗಿತು. ಮುಸಲ್ಮಾನ ಬಂಧುಗಳು ಹರತಾಳವನ್ನಾಚರಿಸಿದರು.

ಮೊಗ್ರಾಲಿನಲ್ಲಿ ಇದೇ ತಾ 18ರಂದು ಸಂಜೆ ಹುಲ್ಲುಛಾವಣಿಯ ಮನೆಗೆ ಅಕಸ್ಮಾತ್ ಬೆಂಕಿತಗಲಿ ಮನೆಯು ಸುಟ್ಟುಹೋದುದಲ್ಲದೆ, ಮನೆಯೊಳಗಿದ್ದ ಅಸ್ವಸ್ಥ ಹೆಂಗಸು ಕೂಡಾ ಮೃತಪಟ್ಟಿತು.

ಕಟಪಾಡಿ:-ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯ ದೇವತಾ ಮಂದಿರದಲ್ಲಿ ಹದಿನೆಂಟನೇ ವಾರ್ಷಿಕೋತ್ಸವವು ತಾ 3-11-51ನೇ ಶನಿವಾರ ಆರಂಭಿಸಲ್ಪಟ್ಟು, ತಾ 9-11-51ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಯಿಂದ ಮರುದಿನ ಪೂರ್ವಾಹ್ನ 9ಗಂಟೆಯ ವರೆಗೆ ಜರಗುವ ಸಪ್ತಭಜನಾಮಹೋತ್ಸವದ ಶ್ರೀ ದೇವೀಸಪ್ತಾಹ ಮಹೋತ್ಸವದೊಂದಿಗೆ ಅಂತ್ಯವಾಗಲಿರುವುದು. ಈ ಮಹೋತ್ಸವಕ್ಕೆ ಎಲ್ಲರೂ ಸಂತಮಂಡಳಿ ಬಂಧುಮಿತ್ರರೊಡಗೂಡಿ ಬಂದು, ಸಮಾಜ ಮತ್ತು ದೇವರ ಸೇವಾ ಕಾರ್ಯಗಳಲ್ಲಿ ಸಹಭಾಗಿಗಳಾಗಬೇಕಾಗಿ ಕೋರಲಾಗಿದೆ.

ಸಪ್ಟಂಬರ ತಿಂಗಳ ಫಿರ್ಕಾಭಿವೃದ್ಧಿ ಕಾರ್ಯ:—

ಕುಂಬಳೆ—2½ ಎಕ್ರೆ ಜಾಗೆಯು ಸಮತಟ್ಟು ಮಾಡಲ್ಪಟ್ಟಿತು. ಒಂದು ವಯಸ್ಕರ ಶಿಕ್ಷಣ ಶಾಲೆಯು ತೆರೆಯಲ್ಪಟ್ಟಿದು. 5½ ಫರ್ಲಾಂಗು ಮಾರ್ಗದ ಕೆಲಸವು ಮಾಡಲ್ಪಟ್ಟಿದೆ. ಒಂದು ಉತ್ತಮ ಜಾತಿಯ ಕೋಣ ಯನ್ನು ಒದಗಿಸಿಕೊಟ್ಟಿದೆ.

ಮಂಜೇಶ್ವರ—ಆರು ಎಕ್ರೆ ಬಂಜರು ಭೂಮಿಯು ಟ್ರೇಕ್ಟರಿನ ಸಹಾಯದಿಂದ ಉಳಲ್ಪಟ್ಟು ಬೆಳೆಮಾಡಲ್ಪಟ್ಟಿದೆ. 4½ ಎಕ್ರೆ ಮಾರ್ಗದ ಕೆಲಸವು ಮುಗಿದಿದೆ.

ಮೂಲ್ಕಿ—ಒಂದು ವಯಸ್ಕರ ಶಿಕ್ಷಣ ಶಾಲೆಯು ತೆರೆಯಲ್ಪಟ್ಟಿದೆ. ಒಂದು ಕಾಲ್ವಂಕದ ಕೆಲಸವು ಸಂಪೂರ್ಣವಾಗಿದೆ. 17 ಉತ್ತಮ ಜಾತಿ ಕೋಳಿಮೊಟ್ಟೆಗಳನ್ನು ಮರಿಮಾಡುವ ಸಲುವಾಗಿ ರೈತರಿಗೆ ಒದಗಿಸಿಕೊಟ್ಟಿದೆ.

ದೀಪಾವಳಿ ಸಂಬಂಧ ಪ್ರೆಸ್ಸಿಗೆ ರಜೆ ಇರುವುದರಿಂದ ಒರುವ ವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

—ಮೆನೇಜರ್

ತಾರೀಕು 23—10—1951ರಿಂದ—

❖ ಆಂಶಿ ❖

ನಳಿನಿ ಜಯವಂತ್ ಮತ್ತು ಶೇಖರ್

ಬರುವ ಚಿತ್ರ:

ಲಡ್ಡಿ ಚಂದಲ್, ಕನ್ನಡ ಹರಿಶ್ಚಂದ್ರ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 354/1947

S. E. A- 69/1951

ಮಂಮ್ಮುಂಞಿ ಯಾನೆ ಮಹಮ್ಮದಳು,

—ಅರ್ಜಿದಾರ

ಮತ್ತು

ಆ್ಯಸಾಬಿ ಸಹಾ ರೆಸ್ಪಾಂಡೆಂಟ್ಸ್

3) ಆ್ಯಸಂಮ ಅಬ್ದುಲ್ ರಹಿಮಾನ ಮಗಳು ವ, ಕುಂಡುಕಂಡ ಸುಲೇಮಾನ ಹೆಂಡ್ತಿ.

4) ಕಂಬಂಮ್ಮ ಸದ್ರಿ ಅಬ್ದುಲ್ ರಹಿಮಾನ ಮಗಳು ವ, ಮಂಮದ ಹೆಂಡ್ತಿ.

6) ಮರಿಯಾ ಸದ್ರಿ ಅಬ್ದುಲ್ಲ ರಹಿಮಾನ ಮಗಳು ವ, ಇಬ್ರಾಹಿಮ್ ಹೆಂಡ್ತಿ.

ಕಾಸರಗೋಡು ತಾಲೂಕು ಕೂಡ್ಲು ಗ್ರಾಮದಲ್ಲಿರುವವರು.

ಮೇಲ್ಕಂಡ ವ್ಯಾಜ್ಯದ ಡಿಕ್ರಿಯ ಸ್ಥಿರಾಸ್ತಿಗಳ ಮೇಲೆ ಅಮ್ಲಜ್ಯಾರಿ ನಡಿಸುವರೆ ಕ್ರಮಸ್ವಾಡಿಗೆ ವರ್ಗಾಯಿಸಬೇಕಾಗಿ ದಾಖಲುಮಾಡಿದ ಸದ್ರಿ ಅರ್ಜಿಯು ತಾರೀಕು 5-11-51ಕ್ಕೆ ಇಟ್ಟಿರುವ ಸಂಗ್ತಿ ಯಿ ಮೂಲಕ ತಿಳಿಸೋಣಾಗಿಯದೆ.

Sd/. **P. Ahamad**

Advocate for Petitioner

ಕಾಸರಗೋಡು, 8-10-51

THE CATHOLIC BANK, LTD., UDIPI.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ಮೇಲ್ಕಾಣಿಸಿದ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮ ಪ್ರಕಾರ ರಿಜಿಸ್ಟರ್ ನೋಟೀಸು ಕೊಟ್ಟಲ್ಲಿ 1 ಮತ್ತು 6ನೇ ಆಸಾಮಿಗಳು ಊರಿನಲ್ಲಿ ಇಲ್ಲವೆಂತಲೂ 2, 3, 4, ಮತ್ತು 5ನೇ ಆಸಾಮಿಗಳು ಪಡೆದುಕೊಂಡು ವಸೂಲುಕೊಡದೆ ಇರುವುದರಿಂದಲೂ ಸದರೀಯವರಿಗೆ ಮತ್ತು ಸದರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಸಪಡಿಸುವುದೇನೆಂದರೆ ಸದರೀಯವರು ಈಡಿಟ್ಟ ನಗಗಳನ್ನು ಇದೇ ಅಕ್ಟೋಬರ ತಿಂಗಳ ತಾರೀಕು 27ನೇ ಶನಿವಾರ ಗಂಟೆ 12-30ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಯಾವತ್ತೂ ದಿನಗಳಲ್ಲಿ ಪುನ: ನೋಟೀಸು ಕೊಡದೇ ಬ್ಯಾಂಕಿನ ಪಕಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

Date	J-L.No	Name of the borrower (ಹೆಸರು ಮತ್ತು ವಿಳಾಸ)	Principal amount
2-7-49	25/3	ಸುಬ್ಬ ಕಾಳಪ್ಪನ ಮಗ ಕುಂಜಾರು ಗ್ರಾಮ, ಉಡ್ಪಿ	65-11-0
8-7-49	25/43	ಅಬ್ದುಲ್ ಕರೀಮ್, ಖಾದರ್ ಬಾಷಾ ಮಗ, ಉದಿಯಾವರ.	36- 2-0
27-7-49	25/149	ಬಸ್ತಿಯಂ ಫೆರ್ನಾಂಡಿಸ್ ಫೇಬ್ರು ಫೆರ್ನಾಂಡೀಸರ ಮಗ, ಕಟ್ಟಂಗೇರಿ, ಮೂಡುಬೆಳ್ಳೆ ಪೋಸ್ಟು.	41-11-0
6-1-50	26/39	ಎಮ್. ನರಹರಿ ರಾವ್, ಎಮ್ ನರಸಿಂಗ ರಾಯರ ಮಗ, C/o ಉಡ್ಪಿ ಪೋಸ್ಟು ಆಫೀಸು.	41- 3-0
31-1-50	26/168	U. S. ಮೊಹಿದಿನ್ U. S. ಮಾಸಿಮ್ ಸಾಹೇಬರ ಮಗ, ಕಿನ್ನಿಮೂಲ್ಕಿ, ಉಡ್ಪಿ.	58- 9-0
26.10.50	26/2449	ಶೇಕ್ ಹುಸೆನ್ ಸಾಹೇಬ ಹಾಜೀ ಹಾದಮ್ ಸಾಹೇಬರ ಮಗ ಡ್ರಾಯಿವರ್, ಕಟ್ಪಾಡಿ ಉಡ್ಪಿ.	28- 1-0

For The Catholic Bank, Ltd., **V. ANDRADE,** Agent.

NOTIFICATION

Applications will be received by the Commissioner, Udipi Municipality, Udipi upto 3 P.M. on 31-10-51 from Urdu trained teachers for appointment in a permanent vacancy in the Municipal Hindustani school. The selected candidate will be paid a salary of Rs. 30/- p. m. in the scale of Rs. 30-1-45 plus the dearness allowance of Rs. 19/- p. m.

Sd. **A S. D'Souza,**
Commissioner.

Municipal Office, Udipi.
Dated 23-10-51.

ಮಂಗಳೂರು.

ಶ್ರೀ ಬೆನಗಲ್ ಶಿವರಾಯರನ್ನು- ಇದೇ ತಾ. 18ರಂದು ಸಂಜೆ ಮಂಗಳೂರಿನ ಪತ್ರಿಕೋದ್ಯೋಗಿ ಸಂಘದವರು ಸ್ವಾಗತಿಸಿ ಲಘು ಉಪಹಾರದಿಂದ ಸತ್ಕರಿಸಿದರು. ನಂತರ ಸಂಘದ ಅಧ್ಯಕ್ಷ ಶ್ರೀ ಡಿ. ಪುಟ್ಟುಸ್ವಾಮಿಯವರ ವಿನಂತಿಯಂತೆ ಶ್ರೀಯುತರು ನಮ್ಮದೇಶದಲ್ಲಿ ಪತ್ರಿಕೋದ್ಯಮ ಬೆಳೆದು ಬಂದ ವಿಚಾರವಾಗಿ ಮಾತನಾಡುತ್ತಾ, ಕಂಪನಿಯ ಕಾಲದಲ್ಲಿ ಆಡಳಿತೆಯ ಹುಳುಕು ತೋರಿಸಿಕೊಟ್ಟದ್ದರಿಂದ ಆಂಗ್ಲೇಯ ಸಂಪಾದಕರೇ ಗಡಿಪಾರು ಮಾಡಲ್ಪಟ್ಟರೆಂದೂ, ಅಂದು ಅಂತಹ ಉತ್ತಮ ಮಟ್ಟವಿದ್ದಿತೆಂದೂ ತಿಳಿಸಿದರು. ಮುಂದೆ ಬ್ರಿಟಿಷರ ಸಾಮ್ರಾಜ್ಯ ಕಾಲದಲ್ಲಿ 'ಆಂಗ್ಲೋ-ಇಂಡಿಯನ್' ಮಟ್ಟವು ಅಷ್ಟು ಉತ್ತಮವಿರಲಿಲ್ಲ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಭಾರತದ ಪತ್ರಿಕೆಗಳು ನಿಜವಾದ ತ್ಯಾಗವಮಾಡಿವೆ. ಇನ್ನು ನಮ್ಮಲ್ಲಿ ಪತ್ರಿಕೋದ್ಯೋಗಿಗಳಿಗೆ ತಕ್ಕ ಸಂಬಳ ಸಿಕ್ಕುವುದಿಲ್ಲ ನಮ್ಮ ಪತ್ರಿಕೆಗಳಲ್ಲಿ ವೈವಿಧ್ಯಗಳಿಲ್ಲ. ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚಿನ ಗಮನವೀಯಬೇಕು. ಪ್ರಜಾಪ್ರಭುತ್ವದ ಸಫಲತೆಯ ವಿಚಾರದಲ್ಲಿ ಸಾರ್ವಜನಿಕರಿಗೆ ಸರಿಯಾದ ಶಿಕ್ಷಣವೀಯುವ ಹೊಣೆಗಾರಿಕೆ ಪತ್ರಿಕೆಗಳಿಗೆ ಸೇರಿದುದೆಂದು ಮುಂತಾಗಿ ಮಾತನಾಡಿದರು. ಕಾರ್ಯದರ್ಶಿ ಶ್ರೀ ಯು. ನರಸಿಂಹರಾಯರು ಅಭಿನಂದಿಸಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯು ತಾ. 15ರಂದು ಡಾ। ಕೆ ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ಚುನಾವಣೆಯ ವಿಚಾರವನ್ನು ಚರ್ಚಿಸಲಾಯಿತು. ಶ್ರೀ ಬೆನಗಲ್ ಶಿವರಾಯರು ಕೆಲವೊಂದು ಸೂಚನೆಗಳನ್ನು ಸಭೆಯ ಮುಂದಿಟ್ಟನಂತರ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಕಾಂಗ್ರೆಸಿನ ಕಾರ್ಯ ಭರದಿಂದ ಸಾಗಬೇಕೆಂದೂ ವಿರೋಧಪಕ್ಷದವರಲ್ಲಿ ಕಮ್ಯೂನಿಸ್ಟರ ವಿಚಾರವಾಗಿ ಮಾತ್ರ ಗಮನ ಕೆಗೆದುಕೊಂಡರೆ ಸಾಕೆಂದೂ ತಿಳಿಸಿದರು. ಶ್ರೀ ಕೆ. ಆರ್. ಆಚಾರ್ಯರು ಮಾತನಾಡುತ್ತ ಚುನಾವಣೆಯ ಸಫಲತೆಗೆ ಕೆಲವು ಸೂಚನೆಕೊಟ್ಟರು. ನಂತರ ಪ್ರಚಾರ ಸಮಿತಿ, ಆರ್ಥಿಕ ಸಮಿತಿ, ಸಂಘಟನಾ ಸಮಿತಿಗಳೆಂದು ಕೆಲವು ಸಮಿತಿಗಳ ರಚನೆಯಾಯಿತು.

ಶ್ರೀ ಆನಂದನ್ ನಂಬಿಯಾರರು- ಇದೇ ತಾ. 18ರಲ್ಲು ಸಂಜೆ ಕೇಂದ್ರಮೈದಾನದಲ್ಲಿ ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಮಜೂರರ ಹಿತವನ್ನು ಬಯಸುವ ಕಮ್ಯೂನಿಸ್ಟ್ ಪಂಥದ ಹುರಿಯಾಳುಗಳಿಗೆ ಮತಕೊಡಬೇಕೆಂದರು, ಇವರ ಮಲೆಯಾಳೀ ಭಾಷಣವನ್ನು ಶ್ರೀ ಎ ಕೃಷ್ಣ ಶೆಟ್ಟರು ತುಳುವಿಗೆ ತರ್ಜುಮೆ ಮಾಡಿದರು.

ಶಿಕ್ಷಣ ಮಂತ್ರಿ ಮಾನ್ಯ ಮಾಧವ ಮೆನನ್ನರು—ಇದೇ ತಾ. 12ರಂದು ಬೆಳಿಗ್ಗೆ ದಕ್ಷಿಣ ಮಲಬಾರು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಸಿ. ಕೆ. ಗೋವಿಂದನ್ ನಾಯರ್ ಎಮ್. ಎಲ್. ಎ; ಅವರೊಂದಿಗೆ ನೀಲೇಶ್ವರಕ್ಕೆ ಆಗಮಿಸಿ ಅಲ್ಲಿಯ ಕೋಪರೇಟಿವ್ ಸ್ಟೋರ್ಸ್ ಕಟ್ಟಡದಲ್ಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣವಿತ್ತರು. ಮಧ್ಯಾಹ್ನ ಸಾರ್ವಜನಿಕ ಸಭೆಯಲ್ಲಿ ಚುನಾವಣಾ ಕಾರ್ಯಕ್ರಮದ ಕುರಿತು ಮಾತನಾಡಿದರು, ಅಪರಾಹ್ನ ಕಾಂಞಂಗಾಡಿಗೆ ತೆರಳಿ, ಅಲ್ಲಿಯ ವಕೀಲ್ ಕ್ಲಬ್ಬಿನ ಉದ್ಘಾಟನೆ ನಡೆಸಿದರು. ಸಂಜೆ ಕಣ್ಣಾನೂರಿಗೆ ತೆರಳಿದರು.

ವಜ್ರೋತ್ಸವ ಸಹಾಯಾರ್ಥ ಪ್ರದರ್ಶನ—ಸ್ಥಳೀಯ ಕೆನರಾ ಹೈಸ್ಕೂಲಿನ ವಜ್ರೋತ್ಸವಕ್ಕೆ ನಿಧಿಯನ್ನು ಸಂಗ್ರಹಿಸುವರೆ ಸಹಾಯಾರ್ಥ ಪ್ರದರ್ಶನದ ಐದು ದಿನಗಳ ಕಾರ್ಯಕ್ರಮ ಕಳೆದ ದಸರಾದಲ್ಲಿ ನಡೆಯಿತು. 'ಮಿಸ್‌ರೀನ' ಸಾಮಾಜಿಕ ನಾಟಕ, ಯಕ್ಷಗಾನ, ಹರಿಕಥಾ ಕಾಲಕ್ಷೇಪ, ನೃತ್ಯ, 'ಕಾಶ್ಮೀರ ಬಂಧವಿಮೋಚನ' ಎಂಬ ನೂತನ ರಾಜಕೀಯ ನಾಟಕ ಪ್ರದರ್ಶನಾದಿಗಳೇ ಪ್ರಾಮುಖ್ಯ ಅಂಗಗಳಾಗಿದ್ದುವು.

ಎಕ್ಸ್‌ರೇ ಪ್ಲಾಂಟ್—ಸರಕಾರಿ ಆಸ್ಪತ್ರೆಗೆ ನೂತನವಾಗಿ ಕೊಂಡುಕೊಂಡ 'ಎಕ್ಸ್‌ರೇ ಪ್ಲಾಂಟ್' ಈಗಾಗಲೇ ಇರಿಸಲ್ಪಟ್ಟು ಕಾರ್ಯಾಚರಣೆಗೆ ತೊಡಗಿದೆ. ಈ ಪ್ಲಾಂಟು 150 ma ಶಕ್ತಿಯುಳ್ಳದ್ದಾಗಿದ್ದು ಇಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅತಿದೊಡ್ಡ ಕ್ಷಕಿರಣ ಯಂತ್ರವೆಂದು ಹೇಳಬಹುದಾಗಿದೆ.

ಅಖಿಲ ಭಾರತ ಚರ್ಮಾ ಸಂಘ, ದಕ್ಷಿಣ ಕನ್ನಡ ಮತ್ತು ಕೊಡಗು ಶಾಖೆ—ದಕ್ಷಿಣ ಕನ್ನಡ ಮತ್ತು ಕೊಡಗು ಪ್ರಾಂತ್ಯಗಳಲ್ಲಿರುವ ಕತಾಯಿ ಮಂಡಳಿಗಳ ಸಮಸ್ತ ಸದಸ್ಯರ ಅವಗಾಹನೆ ಬಗ್ಗೆ ತಿಳಿಸುವುದೇನೆಂದರೆ:- ಕತಾಯಿ ಮಂಡಳಿಗಳ ಸಂಬಂಧವಾದ ಎಲ್ಲಾ ಸಮಸ್ಯೆಗಳಿಗೂ ನಿಗಾವ ಕೊಟ್ಟು ಸಂಘಟಿಸುವ ಬಗ್ಗೆ ಈ ಕಚೇರಿಯು ತೆರೆಯಲಾಗಿದೆ. ಅನಕ್ಷರಸ್ಥ ಸದಸ್ಯರಲ್ಲರೂ ವ ಇತರರೂ ಅಗತ್ಯವಿರುವ ಪತ್ರವ್ಯವಹಾರವನ್ನು 'ಸಂಚಾಲಕ ಕತಾಯಿ ಮಂಡಳ, ದಕ್ಷಿಣಕನ್ನಡ ಮತ್ತು ಕೊಡಗು ಕಚೇರಿ; ರಥಬೀದಿ, ಮಂಗಳೂರು' ಈ ವಿಳಾಸಕ್ಕೆ ಬರೆದುಕೊಳ್ಳುವುದು.

ದ. ಕ. ಅಂಚೆ-ತಂತಿ ಕೆಲಸಗಾರರ ಜಿಲ್ಲಾ ಸಮ್ಮೇಳನವು:-ಇದೇ ತಾ 14ರಂದು ಗಣಪತಿ ಶಾಲೆಯ, ಶಾರದಾ ಸದನದಲ್ಲಿ ಜರಗಿತು. ಅಖಿಲ ಭಾರತ ರೈಲ್ವೆ ಮಜ್ದೂರ ಮಂಡಲದ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು. ಬೆಳಿಗ್ಗೆ ಪ್ರಾಂತಿಕ ಸಂಘದ ಉಪಾಧ್ಯಕ್ಷ ಶ್ರೀ ಪಿ. ಕೆ. ಭುಜಂಗ ರಾಯರು ರಾಷ್ಟ್ರಧ್ವಜಾರೋಹಣ ನಡೆಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ. ಗಂಗಾಧರ ರಾಸರು ಸರ್ವರನ್ನು ಸ್ವಾಗತಿಸುತ್ತಾ 'ಇಂದು ಎಲ್ಲಿ ನೋಡಿದರೂ ಲಂಚ ಗುಳಿತನವು ಅವ್ಯವಸ್ಥೆಯೂ ತಾಂಡವವಾಡುತ್ತಿವೆ. ಕೆಲಸ ಮಾಡುವವರಿಗೆ ಜೀವಿಸುವಷ್ಟು ಸಂಬಳ ವಿಲ್ಲದಿದೆ. ಯಾವುದಕ್ಕೂ ಹಣವಿಲ್ಲವೆಂಬ ಕೂಗು, ಇಂತಹ ಪರಿಸ್ಥಿತಿಯಲ್ಲಿ ದಾನ ನಿರೋಧಸಂತಹ ಶಾಸನ ವಿರುವುದರಿಂದ ಹಾನಿಯೇ ಹೆಚ್ಚು' ಎಂದರು. ಶ್ರೀ ಬಿ. ವೈಕುಂಠ ಬಾಳಿಗರು, ಸಮ್ಮೇಳನದ ಉದ್ಘಾಟನೆ ಮಾಡುತ್ತಾ 'ಆಡಳಿತೆಯಲ್ಲಿ ಅವ್ಯವಸ್ಥೆಯಿರಬಹುದು ಆದರೆ ನೆಹರುಗಳಂತಹ ಮುಖಂಡರಲ್ಲಿ ಒಂದಿಷ್ಟು ಕೊರತೆಯಿಲ್ಲ, ಸಮಾನತೆಯ, ಸರ್ವಸಮನ್ವಯದ ಕಾಲ ಮೂಡಿ ಬಂದಿದೆ, ಎಲ್ಲರ ಸುಖಕ್ಕಾಗಿ, ಶಾಂತಿಗಾಗಿ ಎಲ್ಲರೂ ಪ್ರಯತ್ನಿಸಬೇಕು' ಮುಂತಾಗಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೇಂದ್ರ ಸರಕಾರದ ಯೋಜನಾ ಆಯೋಗದ ವರದಿಯನ್ನು ವಿಮರ್ಶಿಸುತ್ತ, ಅದರಲ್ಲಿ ಮುಂದಿನ ಐದು ವರುಷಗಳಲ್ಲಿ ಮಜೂರರ ಸಂಬಳದಲ್ಲಿ ಯಾವರೀತಿಯ ಹೆಚ್ಚಳವಾಗುವಂತಿಲ್ಲವೆಂಬುದನ್ನು ಟೀಕಿಸಿದರು. ಬೆಲೆಯು ಏರುತ್ತಿರುವಾಗ ಅದನ್ನು ಇಳಿಸುವ ಗೊಡವೆಯನ್ನು ಬಿಟ್ಟು ಈ ರೀತಿ ಸಂಬಳವನ್ನು ಹೆಚ್ಚಿಸಲಾಗದೆಂದು ನಿರ್ಧರಿಸುವುದು ಸರಿಯಲ್ಲವೆಂದರು. ಬಳಿಕ ಪೋಸ್ಟ್‌ಮಾಸ್ಟರ್ ಜನರಲರ ಪ್ರತಿನಿಧಿಯಾಗಿ ಮದ್ರಾಸಿನಿಂದ ಬಂದಿದ್ದ ಶ್ರೀ ಕೆ. ನಾರಾಯಣ ಶೆಟ್ಟರು, ಶ್ರೀ ಬೆನಗಲ್ ಶಿವರಾವ್, ಶ್ರೀಗಳಾದ ಎಲ್. ಸಿ. ಪಾಯಿಸ್, ಪಿ. ಕೆ. ಭುಜಂಗರಾವ್ ಮೊದಲಾದವರು ಮಾತನಾಡಿದರು.

ಸಮ್ಮೇಳನವು ತನ್ನ ಹತ್ತುಮೊದಲ ಗೊತ್ತುವಳಿಯಲ್ಲಿ ಕೇಂದ್ರ ಸರಕಾರಕ್ಕೆ ತನ್ನ ಅಚಲವಾದ ವಿಧೇಯತೆಯನ್ನು ತೋರುತ್ತ, ದೇಶದ ರಕ್ಷಣೆಗಾಗಿ ಅನುಕೂಲವಾದ ತ್ಯಾಗವನ್ನು ಮಾಡುವ ನಿರ್ಣಯವನ್ನು ಸ್ವೀಕರಿಸಿತು. ಮುಷ್ಕರವನ್ನು ತಡೆಗಟ್ಟುವ ವಿಶೇಷಾಜ್ಞೆಯನ್ನು ಜಾರಿಗಿಸುವ ಸರಕಾರವು ಅದ್ಧಾಗನೆ ಮಾತ್ತರೂ, ಬೆಲೆಯನ್ನು ಇಳಿಸದಿರುವುದಕ್ಕೆ ವಿಷಾದ ಸೂಚಿಸುವ ಮತ್ತು ಬೆಲೆಗೆ ತಕ್ಕಂತೆ ತುಟ್ಟಿಭತ್ತೆ ಕೊಡಬೇಕೆನ್ನುವ, ಅಂಚೆ, ತಂತಿ ತಜ್ಞ ಸಮಿತಿಯ ಸೂಚನೆಯನ್ನು ಕೂಡಲೇ ಪಾಲಿಸಬೇಕೆನ್ನುವ, ಕೇಂದ್ರಸರಕಾರವು ಸಂಬಳ ಯತ ವಿಚಾರದಲ್ಲಿ ಸರಕಾರದ ಮುಂದಿರಿಸಿದ ಕೇಳಿಕೆಯನ್ನು ಒಪ್ಪುವ್ಯಸಂಬಳವನ್ನು ಹೊಸ ರೀತಿಯಲ್ಲೇ ನಿರ್ಣಯಿಸಬೇಕೆನ್ನುವ ಇತ್ಯಾದಿ ಠರಾವುಗಳಾದುವು.

ಶ್ರೀ ಕೆ. ಕೆ. ಶೆಟ್ಟರ ಉಪವಾಸ: ಒಕ್ಕಲುಹಿತ ಮಸೂದೆಯನ್ನು, ವ ಒಕ್ಕಲು ಎಬ್ಬಿಸದಂತೆ ಸ್ತಂಭನ ಮಸೂದೆಯನ್ನು ಕುರಿತು ಕೆಲಮಂತ್ರಿಗಳನ್ನು ಕೆಲ ಒಕ್ಕಲುಗಳಿಗೆ ತಾವು ಕೊಟ್ಟ ಆಶ್ವಾಸನೆಯು ಸುಳ್ಳಾದ ಪ್ರಾಯಶ್ಚಿತ್ತಕ್ಕಾಗಿಯೂ ಆತ್ಮಶುದ್ಧಿಗಾಗಿಯೂ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಇದೇ ತಾ. 22ರಿಂದ ಒಂದು ವಾರದ ಉಪವಾಸವನ್ನಾಚರಿಸುವುದಾಗಿ ಪ್ರಕಟಿಸಿದ್ದಾರೆ.

ಕುಂದಾಪುರದಲ್ಲಿ ಕಾಂಗ್ರೆಸಿನ ಚುನಾವಣೆಯ ಪ್ರಚಾರ ಸಭೆಗಳು.- ಬಸರೂರಲ್ಲಿ ತಾ. 12-10-51ರಂದು ಸ್ಥಳೀಯ ಚರ್ಚಿನ ಗುರುಗಳ ಅಧ್ಯಕ್ಷತೆಯಲ್ಲಿಯೂ ಕಕ್ಕುಂಜೆಯಲ್ಲಿ ತಾ. 14-10-51ರಂದು ಶ್ರೀ ವಕೀಲ್ ಎನ್. ನಾರಾಯಣ ಶೆಟ್ರ ಅಗ್ರಾಸನದಲ್ಲಿಯೂ, ಕಲ್ಲೂರಲ್ಲಿ ತಾ. 16-10-51ರಂದು ಸ್ಥಳೀಯ ಇಗರ್ಜಿಯ ಫಾದರರ ಅಧ್ಯಕ್ಷತೆಯೂ ಗುಡ್ಡೆ ಅಂಗಡಿಯಲ್ಲಿ ತಾ 17-10-51ರಂದು ಶ್ರೀ ರಾಮಾಚಾರ ಆಚಾರ್ಯರ ಅಗ್ರಾಸನದಲ್ಲಿಯೂ ಸಭೆಗಳು ಜರಗಿದವು ಜನ ೩ ಸಾವಿರ ನೆರೆದಿದ್ದರು. ಕಾಂಗ್ರೆಸು ಸರಕಾರ, ಅದರ ಮುಂದಿರುವ ಕಠಿಣ ಸಮಸ್ಯೆಗಳು ಕಾಂಗ್ರೆಸು ಸರಕಾರದಿಂದ ದೇಶಕ್ಕೆ ಸಿಕ್ಕಿದ ಪ್ರಯೋಜನ. ಈಗಿನ ಆಹಾರ ಅಭಾವದ ಕಾರಣ, ಅದಕ್ಕಾಗಿ ಸರಕಾರವು ಕೈಕೊಂಡ ಯೋಜನೆಗಳು, ಕಾಂಗ್ರೆಸು ವಿರೋಧಿಗಳ ಉದ್ದೇಶ ಅವರ ಟೀಕೆ ಅಪಪ್ರಚಾರ ಅವರು ಜನತೆಯನ್ನು ವಂಚಿಸಿ ತಪ್ಪುತಿಳುವಳಿಕೆ ಉಂಟುಮಾಡಿ ಜನರಿಗೆ ತಮ್ಮ ನಿಜಸ್ವರೂಪವನ್ನು ತೋರಿಸದೆ. ಸುಳ್ಳು ಆಶ್ವಾಸನೆಗಳನ್ನು ಕೊಡುತ್ತ ಮೋಸಮಾಡುವುದರಲ್ಲಿದ್ದಾರೆ. ತಮ್ಮ ಓಟುಗಳನ್ನು ಈ ಮತದಾರ ಕ್ಷೇತ್ರದಿಂದ ಕಾಂಗ್ರೆಸು ಉಮೇದ್ವಾರರಾಗಿ ಎಸೆಂಬ್ಲಿಗೆ ಆರಿಸಿದ ಜನಪ್ರಿಯ ಶ್ರೀ ಬಸ್ರೂರ ಮಂಜಯ್ಯ ಶೆಟ್ಟರಿಗೂ ಪಾರ್ಲಿಮೆಂಟಿಗೆ ಆರಿಸಿದ ಕಾಂಗ್ರೆಸು ಧುರೀಣರಾದ ಶ್ರೀ ಶ್ರೀನಿವಾಸ ಮಲ್ಯರಿಗೂ ಓಟು ಕೊಟ್ಟು ಬೆಂಬಲ ನೀಡಬೇಕಾಗಿ ವಿನಂತಿಸಿ· ಶ್ರೀ ಬಿ. ಸುಬ್ಬಣ್ಣ ಶೆಟ್ಟರು ಶ್ರೀ [illegible] ಶೆಟ್ಟರು. ಶ್ರೀ ಎಮ್ ಎಮ್ ಹೆಗ್ಡರು. ಶ್ರೀ ಸುಬ್ಬಣ್ಣ ಉಪ್ಪರು. ಶ್ರೀ ಎಚ್. ಕೆ. ಶೆಟ್ರು, ಉಪಾಧ್ಯಾಯರು. ಶ್ರೀ ಮಂಜ ಪೂಜಾರು. ಶ್ರೀ ವೈ. ಮಂಜಯ್ಯ ಶೆಟ್ರು ಭಾಷಣಗನ್ನಿತ್ತರು. ಸಭಾಧ್ಯಕ್ಷರು ಕಾಂಗ್ರೆಸನ್ನು ಕೊಂಡಾಡಿ ಜನತೆಗೆ ಹಿತಕರವಾದ ಬೋಧೆಯನ್ನಿತ್ತರು.

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.



Approved from by the Govt. of Mysore Certificated by the Agent of the Govt of Cylone & Indian

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ಸಾಮವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K



"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ.
ಉತ್ಕೃಷ್ಟ ತರಗತಿಯ ಯಂತ್ರ.
ಬೆಲೆ ರೂ 465.
ನಿಮ್ಮ ಬಂದರ ಡಿಲೆವರಿ.

The Vijay Engineering Co. Ltd.,
BOMBAY-10.

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲಕ್ಷ್ಮನಗಡೆ	0-8-0

ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!

ನವಭಾರತ ಪುಸ್ತಕಭಂಡಾರ,
ಉಡುಪಿ.

ಸಾದರ-ಸ್ವೀಕಾರ

೧ ಬೇತಾಳಗಳ ಕುಣಿತ

ಲೇಖಕರು: ಶ್ರೀ ಬಿ. ಎಚ್. ಶ್ರೀಧರ ಎಂ. ಎ. ಪ್ರಕಾಶಕರು: ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ. ಬೆಲೆ ರೂ. ೧—೦—೦

"ಬೇತಾಳಗಳ ಕುಣಿತ ಅಥವಾ ಸಿದ್ಧ ಸಭೆಯ ಕಾರ್ಯಕಲಾಪಗಳು" ನವೀನ ರೀತಿಯ ವಿಡಂಬನೆಯಾಗಿರುತ್ತದೆ. ಕರ್ನಾಟಕದಲ್ಲಿ ವಿಡಂಬನೆಯ ಸಾಹಿತ್ಯಗಳು ಬಹಳವಾಗಿ ಬಂದಿರುವುದಾದರೂ ಶ್ರೀಮಾನ್ ಬಿ. ಹೆಚ್. ಶ್ರೀಧರರ ವಿಡಂಬನೆಗಳು ಅವೆಲ್ಲಕ್ಕಿಂತಲೂ ಭಿನ್ನವಾಗಿರುತ್ತವೆ. ರಾಜಕೀಯ-ಸಾಮಾಜಿಕ-ಔದ್ಯೋಗಿಕ ರಂಗಗಳ ಮೇಲೆ ವಿಡಂಬನಾತ್ಮಕ ದೃಷ್ಟಿಯನ್ನು ಹರಿಸಲಾಗಿದೆ. ಈ ವಿಡಂಬನೆಗಳಲ್ಲಿ ವಿಚಾರಪೂರ್ವಕ ವಿನೋದವೂ ಇದೆ ಸ್ವಲ್ಪ ಗಂಭೀರವೂ ಹೌದು, ಜೊತೆಗೆ ಕವಿತೆಗಳು ಇನ್ನಷ್ಟು ಪೋಷಕವಾಗಿ ರಸವತ್ತಾಗಿ ಬಂದಿವೆ. ವಿಷಯಗ್ರಹಣ ತುಸು ಗಂಭೀರವಾಗಿದೆಂದು ಹೇಳಬಹುದಾದರೂ ವಿಚಾರವಂತರಿಗೆ ಅತ್ಯಂತ ಪ್ರಿಯವಾಗುವದರಲ್ಲಿ ಸಂದೇಹವಿಲ್ಲ.

೨ ಜನವರಿ ೨೬

ಲೇಖಕರು: ಶ್ರೀ ಕೃಷ್ಣ ಪಾಟೀಲ. ಪ್ರಕಾಶಕರು: ಅಜಿತ ಪ್ರಕಾಶನ ತಿಲಕ ಚೌಕ ಬೆಳಗಾವಿ. ಬೆಲೆ: ೦—೫—೦

42ರ ರಾಜಕೀಯಾಂದೋಲನವನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದ ನಾಟಕವಿದು. ಸ್ವಾತಂತ್ರ್ಯ ಸಮರದಲ್ಲಿ ನಮ್ಮ ದೇಶದ ತರುಣರು ಧುಮುಕಿದ ಬಗೆಯನ್ನು ಚಿತ್ರಿಸಲಾಗಿದೆ. ಕತೆ, ಅವಾತಾವರಣಕ್ಕೆ ಹೊಂದಿಕೆಯಾಗಿದ್ದು ದೇಶಾಭಿಮಾನ-ರಾಷ್ಟ್ರೀಯ ಮನೋವೃತ್ತಿ-ಸ್ವಾತಂತ್ರ್ಯಕಾಂಕ್ಷೆಯನ್ನು ವ್ಯಕ್ತಪಡಿಸುತ್ತದೆ. ರಂಗದಮೇಲೆ ಜಪ್ಸೊಂದು ಯಶಸ್ವಿಯಾದೀತೆಂದು ಹೇಳಲು ಬರುವಂತಿಲ್ಲ. ಓದಬಹುದಾದ ರಾಜಕೀಯ ದೇಶಾಂತ ಚಿತ್ರದ ಒಂದು ಸಾಮಾನ್ಯ ನಾಟಕ.

ಹೊಸ ಪತ್ರಿಕೆಗಳು

೧ ದಾಂಪತ್ಯ ಜೀವನ (ಮಾಸ ಪತ್ರಿಕೆ)

ಸಂಪಾದಕರು: ಶ್ರೀ ದೊಡ್ಡೇರಿ ವೆಂಕಟಗಿರಿರಾವ್ ಬೆಲೆ ರೂ.0–5–0 ಸಾಧನ ಪ್ರಕಟಣಾಲಯ, ದೊಡ್ಡ ಬಳ್ಳಾಪುರ.

ಕಾಮ ವಿಜ್ಞಾನ, ಸಂತಾನ ವಿಜ್ಞಾನ, ದಾಂಪತ್ಯ ವಿಜ್ಞಾನ, ಆರೋಗ್ಯ ವಿಜ್ಞಾನಗಳಿಗೆ ಮೀಸಲಾಗಿರುವ ಈ ಪತ್ರಿಕೆಯಲ್ಲಿಯ ಸರ್ವಸಾಮಾನ್ಯ ಎಲ್ಲಬರಹಗಳೂ ಅತ್ಯಮೂಲ್ಯವಾಗಿವೆ. ಶ್ರೀಮಾನ್ ದೊಡ್ಡೇರಿ ವೆಂಕಟಗಿರಿರಾಯರ ಸಂಪಾದಕತ್ವದಲ್ಲಿ 'ದಾಂಪತ್ಯ ಜೀವನ'ವು ಇದೇ ಬಗೆಯ ವಿಷಯ ವೈವಿಧ್ಯತೆಗಳಿಂದ ಮುಂದೆಯೂ ಕನ್ನಡಿನಲ್ಲಿ ಕಂಗೊಳಿಸಲಿ.

೨ ಸತ್ಯಾರ್ಥಿ (ಮಾಸ ಪತ್ರಿಕೆ)

ಸಂಪಾದಕರು: ಶ್ರೀ ಎಂ. ಬಿ. ಮುತ್ತಪ್ಪ ಪೊನ್ನಂಪೇಟೆ ಕೊಡಗು. ಬಿಡಿಸಂಚಿಕೆ 0–4–0. ವಾ. ಚಂದಾ 3-4–0.

ಸತ್ಯಾರ್ಥಿ ವಿಚಾರಪೂರ್ಣ ಬರಹಗಳಿಂದಲೂ, ವಿಷಯ ವೈಶಿಷ್ಟ್ಯದಿಂದೂ ದಿನದಿಂದ ದಿನಕ್ಕೆ ತನ್ನ ಅಂತಸ್ತನ್ನು ಹೆಚ್ಚಿಸಿಕೊಂಡು ಬರುತ್ತಿ ಎವುದು ಅಭಿಮಾನದ ಸಂಗತಿ! ತರುಣ ಸಾಹಿತಿಗಳ ಮನನೀಯ ವಿಚಾರಗಳು ನಿಜವಾಗಿಯೂ ಸ್ವಾಗತಾರ್ಹವಾಗಿವೆ.

೩ ಅಭ್ಯುದಯ (ವಾರಪತ್ರಿಕೆ)

ಸಂಪಾದಕರು: ಶ್ರೀ ಜಿ. ಆರ್. ಪಂಡಿತ, ಅಭ್ಯುದಯ ಕಾರ್ಯಾಲಯ, ಗಾಂಧೀ ಚೌಕ, ಧಾರವಾಡ. ವಾ. ಚಂದಾ ರೂ. 3–8–0

'ಅಭ್ಯುದಯ' ಪ್ರಚಲಿತ ರಾಜಕೀಯಗಳ ನೈತಿಕ ವಿಮರ್ಶೆಮಾಡುವ ಮುಖ್ಯೋದ್ದೇಶದಿಂದ ಹೊರಟಿಂತಿದೆ ಪತ್ರಿಕೆಯು ಎರಡು ಸ್ಪುಟಗಳೂ ವಿಚಾರ ಕಿಡಿಯನ್ನು ಹಾರಿಸುತ್ತವೆ. ಅಭ್ಯುದಯಕ್ಕೆ ಉಜ್ವಲ ಭವಿಷ್ಯವಿದೆಂದು ಈ ಪ್ರಥಮ ಸಂಚಿಕೆಯು ಸೂಚಿಸುತ್ತದೆ.

೪ ಪ್ರವಾಹ (ವಾರ ಪತ್ರಿಕೆ)

ಸಂಪಾದಕರು: ಶ್ರೀ ಎನ್. ಎಮ್. ಆರ್. ರಾವ್. ಪ್ರವಾಹ ಕಾರ್ಯಾಲಯ ವೈದಾನ ರೋಡ್ ಮಂಗಳೂರು. ವಾ. ಚಂದಾ ರೂ. 2-4-0.

ಪ್ರಕೃತದ ಚುನಾವಣಾ ಪ್ರವಾಹದಲ್ಲಿ ತೇಲಿಬಂದ ಕಿರು ಪ್ರವಾಹವಿದು. ಅನಾಸ್ಥದ ವಿಚಾರಗಳನ್ನು ಹಬ್ಬಿಸಿ ಜನತೆಯನ್ನು ತಪ್ಪು ಮಾರ್ಗಕ್ಕೆ ಹಚ್ಚುವದಕ್ಕಿಂತ ಯಥಾರ್ಥ ವಿಚಾರದಿಂದ ಸನ್ಮಾರ್ಗ ಪ್ರವೃತ್ತರನ್ನಾಗಿ ಮಾಡುವದು ಪತ್ರಿಕೆಗಳ ಆದ್ಯಕರ್ತವ್ಯ. ಪ್ರವಾಹ ಈ ಆದರ್ಶವನ್ನು ಅವಶ್ಯವಾಗಿ ಪಾಲಿಸಬೇಕಾಗಿದೆ.

೫ ಸಂಗ್ರಾಮ (ವಾರಪತ್ರಿಕೆ)

ಸಂಪಾದಕರು: ಶ್ರೀ ಕೆ. ರಾಮಚಂದ್ರ ರಾವ್. ಸಂಗ್ರಾಮ ಕಾರ್ಯಾಲಯ ನೆಲ್ಲಿಕಾಯಿ ರೋಡ್ ಮಂಗಳೂರು 1 ವಾ. ಚಂದಾ ರೂ. 3–12–0.

ನೂತನ ಪತ್ರಿಕೆಯಾದ ಸಂಗ್ರಾಮದ ಕುರಿತು ವಿಶೇಷವಾಗಿ ಹೇಳಬೇಕಾದ್ದೇನೂ ಇಲ್ಲ. ಎಲ್ಲ ಪತ್ರಿಕೆಗಳಂತೆ ಟೀಕೆ-ಟಿಪ್ಪಣಿ-ರಾಜಕೀಯ ಲೇಖನ ಇದರಲ್ಲೂ ಉಂಟು!

ಬಂಟರ ಯಾನೆ ನಾಡವರ ಸಂಘದ ೪2ನೇ ವಾರ್ಷಿಕ ವರದಿ.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ನಲುವತ್ತೆರಡನೇ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ. ವರ್ಷದಿಂದ ವರ್ಷಕ್ಕೆ ಈ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಾ ನಾಡವರ ಸಮಾಜದ ಸರ್ವತೋಮುಖ ಯಶಸ್ಸಿಗೆ ಕಾರಣವಾಗಿದೆ ಎನ್ನುವದಕ್ಕೆ ಅಭಿಮಾನವೆನ್ನಿಸುತ್ತದೆ.

ಮುಂಬಾಯಿ:—ಬಂಟ್ಸ್ ಕೋ ಒಪರೇಟಿವ್ ತನ್ಸ್ಯುಮರ್ಸ್ ಸೊಸೈಟಿಯ ನಾಲ್ಕನೆ ವರುಷದ ಮಹಾಸಭೆಯು ತಾ 30-9-51ರಲ್ಲು ಮಾನವಮಾಲಿ ಹಾಲ್, ದಾದರ್ ಇಲ್ಲಿ ಶ್ರೀ ಪಾದೆಬೆಟ್ಟು ವಾಸು ಶೆಟ್ರವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರ್ಷದ ಲೆಕ್ಕ ಪತ್ರವನ್ನು ಸಭೆಯು ಮುಂದಿಡಲಾಗಿ, ಪರಿಶೋಧಿಸಿದ ನಂತರ ಸರ್ವಾನುಮತದಿಂದ ಮಂಜೂರಾಯಿತು. ಮುಂದಿನ ವರ್ಷದ ಕಾರ್ಯ ನಿರ್ವಾಹದ ಬಗ್ಗೆ ಈ ಕೆಳಗಿನವರನ್ನು ಸಭೆಯಲ್ಲಿ ಆರಿಸಲ್ಪಟ್ಟಿತು.

ಮೆನೇಜಿಂಗ್ ಕಮಿಟಿ ಮೆಂಬರರು

ಶ್ರೀ ಪಾದೆಬೆಟ್ಟು ವಾಸು ಶೆಟ್ರು, ಶ್ರೀ ಸಿದ್ದು ಟಿ. ಶೆಟ್ರು, ಶ್ರೀ ಸೇಸು ಯಸ್. ಶೆಟ್ರು, ಶ್ರೀ ಪಿ. ರಾಮಣ್ಣ ಶೆಟ್ರು, ಶ್ರೀ ನರ್ಸು ಯಸ್. ಶೆಟ್ರು, ಶ್ರೀ ಪಿ. ಕಟ್ಟರ ಶೆಟ್ರು, ಶ್ರೀ ವಾಸು ಕೆ. ಶೆಟ್ರು, ಶ್ರೀ ವೆಂಕಪ್ಪ ಆರ್. ಶೆಟ್ರು, ಶ್ರೀ ಯುನ್. ಜೋಗಪ್ಪ ಹೆಗ್ಡೆಯರು ಶ್ರೀ ನಾಗಪ್ಪ ಸಿ. ಶೆಟ್ರು, ಮತ್ತು ಶ್ರೀ ಕಾಂತಪ್ಪ ಜಿ. ಶೆಟ್ರು.

ಕಂಟ್ರೋಲ್ ಕಮಿಟಿ ಮೆಂಬರರು

ಶ್ರೀ ಸುಂದರ ಯಸ್. ಶೆಟ್ರು ಶ್ರೀ ಕೆ. ಸೀತಾರಾಮ ಶೆಟ್ರು ಶ್ರೀ ಬಿ. ಗೋಪಾಲ ಶೆಟ್ರು. ಪ್ರೆಸಿಡೆಂಟ್:—ಪಾದೂರು ಉಜ್ಜಣ್ಣ ಶೆಟ್ರು.

ಆಡಿಟರರು:—ಬಾಟ್ಲಿವಾಯಿ ಮತ್ತು ಪುರೋಹಿತ್.

ಮದ್ರಾಸು ಸರಕಾರದ ಕನ್ನಡ ಗ್ರಂಥ ಸ್ಪರ್ಧೆ.

ಈ ಮೇಲಿನ ಸ್ಪರ್ಧೆಗೆ ಪುಸ್ತಕಗಳನ್ನು ಕಳುಹಿಸಬೇಕಾದ ತಾರೀಕನ್ನು ತಾ.31-10-51ರವರೆಗೆ ಮುಂದುವರಿಸಲಾಗಿದೆ. ಸ್ಪರ್ಧೆಯ ವಿಷಯಗಳನ್ನು ಈ ಕೆಳಗಿನ ಬದಲಾವಣೆಯನ್ನು ಮಾಡಲಾಗಿದೆ.

1) ನಾಟಕ. 2) ಕಾದಂಬರಿ 3) ಗುಡಿಕೈಗಾರಿಕೆ ಅಥವಾ ವಿಡಂಬನ ಸಾಹಿತ್ಯ.

ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ:

ಕಾರ್ಯದರ್ಶಿ, ಕರ್ನಾಟಕ ಸಂಘ, 16 ವೀರಸ್ವಾಮಿಪಿಳ್ಳೆ ಸ್ಟ್ರೀಟ್, ಎಗ್ಮೋರ್. ಮದ್ರಾಸು 8-

ಬೇಕಾಗಿದ್ದಾರೆ

ಹೆಗ್ಗುಂಜೆ. ಬಿ. ಟಿ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 1-11-51ರಿಂದ ಕೆಲಸಮಾಡಲು ಎಸ್. ಎ. ಗ್ರೇಡಿನ ತರಬೇತಿ ಪರೀಕ್ಷೆಯಲ್ಲಿ ಪಾಸಾದ ಯೋಗ್ಯ ಉಪಾಧ್ಯಾಯ, ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಸಂಬಳ ಮತ್ತು ತುಟ್ಟಿಬತ್ತೆ ಸರಕಾರಿ ನಿಯಮದಂತೆ ಕೊಡಲಾಗುವುದು. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದು.

ಮೆನೇಜರ್

ಬಿ. ಟಿ ಹಾ. ಎ. ಶಾಲೆ

ಹೆಗ್ಗುಂಜೆ, ಪೋಸ್ಟ್ ಮಂದಾರ್ತಿ

ತಾ 22-10-51

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾಚಿಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೋವು, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

THE PANGAL NAYAK BANK LTD., KATAPADI S.K.

ದಿ ಪಾಂಗಾಳ ನಾಯಕ್ ಬೇಂಕ್ ಲಿ, ಕಟಪಾಡಿ ದ.ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ಟ್ರೀ ನೋಟೀಸು ಕೊಟ್ಟಾಗ್ಯೂ ಬಾಕಿಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರೀ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ, ಕೆಲವರು ಮೃತಪಟ್ಟಿರುವರೆಂಬ ಸಂಗತಿ ಬೇಂಕಿಗೆ ತಿಳಿದು ಬಂದರೂ, ಮೃತಪಟ್ಟವರ ವಾರೀಸುದಾರರು ಸದ್ರಿ ಲೋನಿಗೆ ಸಂಬಂಧಪಟ್ಟ ಅಸ್ಲುಬಡ್ಡಿ ವ ಖರ್ಚು ಇತ್ಯಾದಿಗಳನ್ನು ಇನ್ನೂ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಹ್ಯವೇಜುಗಳನ್ನು ಇದೇ ತಾರೀಕು 31-10-1951ನೇ ಬುಧವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಎಲ್ಲಾ ಚಿನ್ನಾಭರಣಗಳನ್ನು ಇದೇ ಬರುವ ತಿಂಗಳ ತಾರೀಕು 3-11-1951ನೇ ಶನಿವಾರ ಮಧ್ಯಾಹ್ನ ಗಂಟೆ 2-30ಕ್ಕೆ ಯಾ ಬೇಂಕಿಗೆ ಯುಕ್ತತೋರುವ ಅನಂತರ ದಿವಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು, ತಿಳಿದಿರಲಿ.

ಲೋ. ನಂಬ್ರ	ಈಡಿಟ್ಟವರ ಹೆಸರು ಮತ್ತು ವಿಳಾಸ.	ಅಸಲು
		ರೂ.ಆ.ಪೈ.
1512/49	ಬಾವು ಬ್ಯಾರಿ, ಹೈದರೋಸ್ ಬ್ಯಾರಿಗಳ ಮಗ, ಪೊಲ್ಯಾಡಿ ಕಟಪಾಡಿ, ದ. ಕ.	15-0-0
1096/50	ಅಬ್ದುಲ್‌ಖಾದರ್ ಸಹೇಬ್, ಶೇಕ್ ಅಹಮ್ಮದ್ ಸಾಹೇಬರ ಮಗ, ಮಟ್ಟು ಕಟಪಾಡಿ, ದ. ಕ.	12-0-0
1280/50	ಕೆ. ಶೇಸಗಿರಿ ರಾವ್, ಜನಾರ್ಧನ ರಾಯರ ಮಗ, ಮೂಡಬೆಟ್ಟು ಗ್ರಾಮ, ಕಟಪಾಡಿ ದ. ಕ.	90-0-0
1591/50	ಕೆ. ಶೇಸಗಿರಿ ರಾವ್, —Do—	40-0-0
1590/50	ತಾಟು ಪೂಜಾರ್ತಿ, ಮಾನೆ ಪೂಜಾರ್ತಿ ಮಗಳು, ಮೂಡಬೆಟ್ಟು ಗ್ರಾಮ, ಕಟಪಾಡಿ ದ. ಕ.	16-0-0
1743/50	ಬಾಬು ಚಂದು, ಚಂದು ಮಗ, ಮೂಡಬೆಟ್ಟು ಗ್ರಾಮ, ಕಟಪಾಡಿ ದ. ಕ.	7-0-0
1934/50	ಮೊಣ್ಣ ಪೂಜಾರಿ, ತಾಡ ಪೂಜಾರಿಯ ಅಳಿಯ, ಮೂಡಬೆಟ್ಟು ಗ್ರಾಮ, ಕಟಪಾಡಿ ದ. ಕ.	12-0-0

Office of the Bank,
KATAPADI, S.K.
Dated 19-10-1951

P. S. NAYAK,
Agent.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮುತ್ರಸ್ರಾವ ನಿಂತಿತು

'ಕುಮಾರಿ' ಪಿಲ್ಸುಗಳನು ಉಪಯೋಗಿಸಿದರೆ ಹದತಪ್ಪಿ ಮುತ್ರಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಪಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಚಾರ್ಜು ಪ್ರತ್ಯೇಕ.]

MIS D. DEVEE, F. DS (N. J.)
Tollygunge CALCUTTA

ಸ್ಟಾಕಿಸ್ಟರು ಕರ್ನಾಟಕ ಕಂಪೆನಿ, ಮಂಗಳೂರು

ಪ್ರವಾಸಿಯ ಪತ್ರಗಳು ೧೬

ಪೇರಿಸ್ ನಗರ

[ಹಿಂದಿನ ಸಂಚಿಕೆಯಿಂದ ಮುಂದರಿದುದು]

ನಗರತಿರುಗಾಡುವ ಬಗ್ಗೆ ನಾನು ಉಳಕೊಂಡ ಹೊಟೇಲಲ್ಲೇ ಬಸ್ಸು ಕಂಪೆನಿಗಳ ಟಿಕೇಟು ದೊರಕಿತು. ಎಲ್ಲ ದೊಡ್ಡ ಪಟ್ಟಣಗಳಲ್ಲೂ ಇದೇ ಕ್ರಮ, ಹೊಟೇಲು ಅಧಿಕಾರಿಗಳಿಗೆ ಇದರಲ್ಲಿ ಕಮಿಶನ್ ಸಿಕ್ಕುತ್ತದೆ, ಮತ್ತು ನಮಗೂ ಒಂದು ಆದಾಯ. ಒಂದೆರಡು ಮೈಲು ದೂರವಿರುವ ಬಸ್ಸು ಆಫೀಸಿಗೆ ನಾವು ಖರ್ಚುಮಾಡಿ ಹೋಗಬೇಕಾದ್ದಿಲ್ಲ. ನಮ್ಮ ಹೊಟೇಲಿಗೇ ಬಸ್ಸು ಬಂದು ನಮ್ಮನ್ನು ತೆಗೆದುಕೊಂಡು ಹೋಗುವುದು. ಹೀಗೆ ನಾನು 4 ಟಿಕೇಟು ಪಡಕೊಂಡೆ—

(1) ಈಗಿನ ಪೇರಿಸ್ (Paris Modern -600 ಫ್ರಾಂಕ್ಸ್—ಅಂದಾಜು ರೂಪಾಯಿ 4.

(2) ಪೇರಿಸಿನಿಂದ ಸುಮಾರು 12 ಮೈಲು ದೂರವಿರುವ ಫ್ರಾನ್ಸಿನ ಮುಂಚಿನ ಅರಸರು ಕಟ್ಟಿದ್ದ ಅರಮನೆಇರುವ 'ವರ್ಸೈಲ್' (Versaille) ಎಂಬ ಊರಿಗೆ 750 ಫ್ರಾಂಕ್ಸ್— ರೂಪಾಯಿ 10.

(3) ಹಾಗೆಯೇ ಇನ್ನೊಂದು ಕಡೆ 38 ಮೈಲು ದೂರ ಇರುವ ಫೊಂಟೆನ್‌ಬ್ಲೂ (Fontainbleau) ಎಂಬ ಅರಮನೆಯಿರುವ ಊರು ಮತ್ತು ಕಾಡು- 1275 ಫ್ರಾಂಕ್ಸ್- ರೂ. 19.

(4) ರಾತ್ರಿಯ ಪೇರಿಸ್- Paris dy-Night) ಇದಕ್ಕೆ 2,500 ಫ್ರಾಂಕ್ಸ್- ರೂ. 33-0-0

ಹೀಗೆ ಅಂದಾಜು ರೂ. 70 ಒಂದೇ ಸಾರಿ ಖರ್ಚು ಆಯಿತು. ಈ ನಮ್ಮ ತಿರುಗಾಟದ ಬಸ್ಸುಗಳು ಒಂದೇ ಕಂಪೆನಿಯದಾಗಿದ್ದು ಉತ್ತರಭಾಗದ ಪೇರಿಸಿನ ಮಧ್ಯವಿರುವ ಪ್ರಸಿದ್ಧವಾದ ಒಪೇರಾ (Opera) ಎಂಬ ನಾಟಕ ಮಂದಿರ ಸಮೀಪದಿಂದ ಹೊರಡುವುವು. ಪ್ರತಿ ಒಂದು ಬಸ್ಸಿನಲ್ಲಿ ಸುಮಾರು 30 ಜನಕೂ ಕುಳಿತುಕೊಳ್ಳಬಹುದು. ಅವುಗಳ ಎದುರು ಒಬ್ಬ ಮಾರ್ಗದರ್ಶಕನಿದ್ದು ಆವನು ಬಸ್ಸು ಚಲನೆಯಾಗುವಾಗ ಧ್ವನಿವರ್ಧಕ ಯಂತ್ರದ (Loud Speaker) ಮೂಲಕ ನಮಗೆ ಆಗಾಗ ಅನುಭವ ಹೇಳುವನು- ಅದು ಒಂದು ಸಾರಿ ಫ್ರೆಂಚು ಭಾಷೆಯಲ್ಲಿ, ಎರಡನೇಸಾರಿ ಇಂಗ್ಲೀಷು, ಮೂರನೇಸಾರಿ ಇಟೇಲಿಭಾಷೆ, ಅಗತ್ಯವಾದರೆ ಜರ್ಮನ್‌ಭಾಷೆ ಕೂಡ ಹೀಗೆ ಬಸ್ಸಿನಪ್ರಯಾಣಕರಿಗೆ ಯಾವ ಯಾವಭಾಷೆ ತಿಳಿಯುವುದೋ ಅದರಲ್ಲೆಲ್ಲಾ ತಿಳಿಸುವನು. ಒಬ್ಬನೇ ಮಾರ್ಗದರ್ಶಕನಿಗೆ ಈ ಎಲ್ಲಾ ಭಾಷೆಗಳು ಬರುವುದುಂಟು. ಇನ್ನು ಕೆಲವುಸಾರಿ 2, 3 ಕಂಪೆನಿಯವರು ಅವರವರ ಬಸ್ಸಿನ ಜನರನ್ನು ಕೂಡಿಸಿಕೊಂಡು ಭಾಷಾವಾರು ಪ್ರಕಾರ ವಿಭಾಗಿಸಿ ಒಂದೊಂದು ಬಸ್ಸಿನಲ್ಲಿ ಒಂದೊಂದು ಭಾಷೆಯವರನ್ನು ತೆಗೆದುಕೊಂಡು ತಿರುಗಾಡಿಸುವರು. ಆಗ ಒಂದೊಂದೇ ಭಾಷೆಯಲ್ಲಿ ವಿವರಿಸಿದರೆಸಾಕು.

ಹೀಗೆ 1ನೇ ಟಿಕೇಟಿನ ಪ್ರಯಾಣ ಪ್ರಥಮ ದಿನ ಮಧ್ಯಾಹ್ನದ ತಿರುಗಾಟ ನಾನುಮಾಡಿದೆ. ಮೊದಲಿಗೆ 'ಮೆಡಲಿನ್' ಎಂಬ ಪ್ರಸಿದ್ಧ ಒಂದು ಇಗರ್ಜಿಯನ್ನು ಕಂಡೆವು. ಅದು ನಾನು ಪ್ರಸ್ತಾಪಿಸಿದ ಒಪೇರಾದಿಂದ ಅರ್ಧಮೈಲು ದೂರವಿದ್ದು ಪಟ್ಟಣದ ಮಧ್ಯದಲ್ಲೇ ಇದೆ. ಅದನ್ನು 1760ರಲ್ಲಿ ಕಟ್ಟಿದ್ದು, ಅದು ಒಂದು ಕೆಥೊಲಿಕ್ ಇಗರ್ಜಿ. ಅದರಲ್ಲಿ ವಿಶೇಷವೆಂದರೆ ಎದುರುಭಾಗದಲ್ಲಿ 40-50 ಅಡಿ ಎತ್ತರದ 8 ಉರುಟು ಕಂಭಗಳು ಇವೆ. ಕಟ್ಟುವಿಕೆ ನೋಡಲಿಕ್ಕೆ ಚಂದವಾದದ್ದು. ಒಳಗೆಲ್ಲಾ ಅನೇಕ ತರದ ಚಿತ್ರಗಳು. ಇದನ್ನು ನೋಡಿ ಸುಮಾರು 1 ಮೈಲು ದೂರಹೋದೆವು. ಅಲ್ಲಿ 'ಆರ್ಕ್‌ಡಿಟ್ರಿಯಂಫ್' (Arc De Triamphe) ಅಥವಾ ವಿಜಯದ ಕಮಾನು ಎಂಬ ಪ್ರಸಿದ್ಧವಾದ ಒಂದು ಗೋಪುರವಿದೆ. ಅದು ಸುಮಾರು 150 ಅಡಿ ಎತ್ತರ 150 ಅಡಿ ಅಗಲವಾಗಿದ್ದು ತಲೆಯಲ್ಲಿ ಕಮಾನಿನ ಆಕಾರ. ಇದು ಫ್ರಾನ್ಸ್‌ದೇಶವು 1ನೇ ನೆಪೋಲಿಯನನ ಕಾಲದಲ್ಲಿ ಯುದ್ಧಮಾಡಿ ಗೆದ್ದ ಅನೇಕ ಯುದ್ಧಗಳ ಸ್ಮಾರಕವಾಗಿ ಅವನ ಕಾಲದಲ್ಲಿ ಕಟ್ಟಲಿಕ್ಕೆ ಸುರುಮಾಡಿ ಕೆಲವು ವರ್ಷಗಳ ನಂತರ ಮುಗಿಸಿದ್ದು. ಅದರ ಬದಿಯಲ್ಲಿ ಅನೇಕ ಸೈನಿಕರ ಪ್ರತಿಮೆಗಳನ್ನು ಸಾಲುಸಾಲಾಗಿ ಕೆತ್ತಿದೆ. ಮತ್ತು ಇದರ ಅಡಿ ನೆಲದಲ್ಲಿ ಒಂದನೇ ಮಹಾಯುದ್ಧದಲ್ಲಿ ಮೃತಪಟ್ಟ ಹೆಸರು ತಿಳಿಯದ ಸೈನಿಕನ (Unknown Soldier) ಶವವು ಹೂಗಿಡಿದೆ. ಅವನ ಸ್ಮಾರಕವಾಗಿ ದಿನನಿತ್ಯವೂ ಆಗಿನಿಂದ ಈ ವರೆಗೆ ಅಗ್ನಿಕುಂಡದಲ್ಲಿ ಬೆಂಕಿ ಉರಿಸುವರು. ಮತ್ತು ಅಲ್ಲಿ ಬೇರೆ ಬೇರೆ ದೇಶಗಳಿಂದ ಬರುವ ಹೂಮಾಲೆಗಳನ್ನು ಇಡುವರು. ನಾನು ಹೋದಾಗ ಅಲ್ಲಿಗೆ ಆಗಲೇ ಬಂದಿದ್ದ ಕಳೆದ ಮಹಾಯುದ್ಧವನ್ನು ಯುರೋಪಿನಲ್ಲಿ ಗೆದ್ದ ಅಮೇರಿಕದ ಸೇನಾಪತಿ ಐಸನ್ ಹೊವರರು ಬಂದು ಅಲ್ಲಿ ಇಟ್ಟ ಒಂದು ದೊಡ್ಡ ಹೂವಿನ ಮಾಲೆ ಇತ್ತು. ಈ ಗೋಪುರದ ಸುತ್ತಲೂ ಉರುಟು ಆಕಾರದಲ್ಲಿ ಅಗಲವಾದ ರಸ್ತೆಯಿದ್ದು ಅದರ ಬದಿಯಿಂದ ಗಡಿಯಾರದ ಕೈಗಳಂತೆ ಸರಿಯಾಗಿ 12 ದಿಕ್ಕಿಗೆ 12 ಬಹುದೊಡ್ಡ ಹೆದ್ದಾರಿಗಳು [avenues] ಹೊರಟುಹೋಗುವುವು.

ನಗರದ ಇನ್ನೊಂದು ಕಡೆಯಲ್ಲಿ 'ಐಫೆಲ್' ಎಂಬ ಗೋಪುರ (Eiffel Tower) ಇದೆ. ಇದನ್ನು 1890ರಲ್ಲಿ ಕಬ್ಬಿಣದ ಪಟ್ಟಿಯಿಂದಲೇ ಕಟ್ಟಿದ್ದು. ಇದರ ಎತ್ತರ 954 ಅಡಿ. ಕಟ್ಟಲಿಕ್ಕೆ ಸಮಯ ಸುಮಾರು 8 ಮಿಲಿಯ ಚಿನ್ನದ ಫ್ರಾಂಕನ್ನು ಖರ್ಚಾಗಿತ್ತು. ಆ ಸಮಯ ಪೇರಿಸಿನಲ್ಲಿ ನಡೆದ ದೊಡ್ಡ ಒಂದು ಪ್ರದರ್ಶನಕ್ಕೋಸ್ಕರವಾಗಿ ಈ ಗೋಪುರವನ್ನು ಕಟ್ಟಿದ್ದು. ಇದರ ಒಳಗಿನಿಂದ ಇದರ ತಲೆಗೆ ವಿದ್ಯುಚ್ಛಕ್ತಿಯ ತೊಟ್ಟಿಲಿನ ಮೂಲಕ ಹೋಗಬಹುದು. ಮತ್ತು ಅದರ ತಲೆಯಿಂದ ಸುಮಾರು 60 ಮೈಲು ದೂರ ಪೇರಿಸಿನ ಸುತ್ತಮುತ್ತಲಿನ ಊರುಗಳನ್ನು ಕಾಣಬಹುದು. ಇದರ ಸಮೀಪವೇ 1937ರಲ್ಲಿ ನಡೆದ ಇನ್ನೊಂದು ಪ್ರದರ್ಶನಕ್ಕೋಸ್ಕರ ಮಾಡಲ್ಪಟ್ಟ ಪಡಿಸಿದ ಒಂದು ಸುಂದರವಾದ 'ಡಿ ಶೆಲೊ' (Palaise De Chaillot) ಎಂಬ ಅರಮನೆ ಇದೆ. ಇದರಲ್ಲಿ 1948ನೇ ಇಸವಿಯಲ್ಲಿ ಸಂಯುಕ್ತ ರಾಷ್ಟ್ರಗಳ ಸಂಘದ (U-N.O.) ಸಭೆ ಕೂಡಿತ್ತು. ಇದರಲ್ಲಿ ಹೊಸತಾದ ನಾಟಕ ಶಾಲೆ ಇದೆ ಮತ್ತು ಫ್ರಾನ್ಸ್ ದೇಶದ ಅನೇಕ ತರದ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಈ ಅರಮನೆ ಇರುವ ಸ್ಥಳವು ಎತ್ತರದಲ್ಲಿದ್ದು ಅಲ್ಲಿಂದ ನೋಡುವಾಗ ಸಮೀಪದಲ್ಲಿ ಸೀನ್ ನದಿಯೂ ಮತ್ತು ದಕ್ಷಿಣ ಪೂರ್ವಕ್ಕಿರುವ ಪೇರಿಸ್ ನಗರದ ಪಟ್ಟಿನ ಅಂಶವೂ ಬಹು ಸುಂದರವಾಗಿ ಕಾಣುವುವು.

ಇನ್ನೊಂದು ಕಡೆಯಲ್ಲಿ ಒಂದು ಸ್ಮಾರಕ ಕಟ್ಟಡವಿದೆ. ಅದರ ಹೆಸರು 'ಡೋಮ್ ಡಿ ಇನ್ವಲಿಡ್' (Dome De Invalides) ಎಂದು. ಇದು 1671ರಲ್ಲಿ ಯುದ್ಧಕ್ಕೆ ಹೋಗಿ ಅಂಗಹೀನರಾದ ಸೈನಿಕರಿಗೋಸ್ಕರ ಕಟ್ಟಿದ್ದು, ಆದರೆ ಈಗ ಅದು ಒಂದನೇ ನೆಪೋಲಿಯನ್ ಮತ್ತು ಅವನ ಸಂಬಂಧಿಕರ ಗೋರಿಯಾಗಿರುತ್ತದೆ. ನೆಪೋಲಿಯನ್ನನ ಶವವನ್ನು ಒಂದು ಕೆಂಪುಕಲ್ಲನ್ನು ಕತ್ತಿ ಮಾಡಿದ ಉದ್ದ ಪೆಟ್ಟಿಗೆಯಲ್ಲಿ ಇಟ್ಟಿರುತ್ತದೆ, ಇದರ ಸುತ್ತಲು 12 ಕಂಬಗಳಿದ್ದು ಅವುಗಳಲ್ಲಿ ದೇಗುಲ್ಲಿನಲ್ಲಿ ಕೆತ್ತಿದ ಸ್ತ್ರೀರೂಪದ ಪ್ರತಿಮೆಗಳಿರುತ್ತವೆ, ಪ್ರತಿಯೊಂದು ಪ್ರತಿಮೆಯೂ ನೆಪೋಲಿಯನನು ಮಾಡಿದ ದಂಡಯಾತ್ರೆ ಒಂದೊಂದು ವಿಷಯದ ಸ್ಮಾರಕವಾಗಿರುತ್ತದೆ. ಅವನು ರಚಿಸಿದ ಕಾನೂನು [Code Napolean] ಅವನು ಮಾಡಿದ ಬೇರೆ, ಹೀಗೆ 12 ಕೆಲಸಗಳ ವಿಷಯ 12 ಪ್ರತಿಮೆಗಳು, ಈ 12 ಕಂಬಗಳ ಮೇಲೆ ಕಟ್ಟಿರುವ ಛಪ್ಪರಿಗೆಯಲ್ಲಿ ಅನೇಕ ತರದ ಚಿತ್ರ ಮತ್ತು ಪ್ರತಿಮೆಗಳಿರುತ್ತವೆ. 1830ರಲ್ಲಿ ಮೃತಹೊಂದಿದ ಅವನ 21 ವರ್ಷ ಪ್ರಾಯದ ಮಗ, ಮೃತಪಟ್ಟ ಅವನ ಸಹೋದರ ಜೋಸೆಫ್, ಹೀಗೆ ಅವನ ಇತರ ಸಂಬಂಧಿಕರ ಅನೇಕ ಗೋರಿಗಳು ಇಲ್ಲಿ ಇವೆ.

ನಗರದ ಇನ್ನೊಂದು ಕಡೆಯಲ್ಲಿ ವಿಶೇಷವಾದ ಒಂದು ವಸ್ತುಪ್ರದರ್ಶನ ಶಾಲೆ ಇದೆ. ಅದರ ಹೆಸರು "ಲೂವರ್ ಅರಮನೆ" [Louvre] ಎಂದು. ಇದು ನಾನು ನೋಡಿದ ಎಲ್ಲಾ ವಸ್ತುಶಾಲೆಗಳಲ್ಲಿ ವಿಶೇಷವಾದದ್ದೆಂದು ಹೇಳಬೇಕು. ಅದು 40 ಎಕ್ರೆ ಜಾಗದಲ್ಲಿದ್ದು ಅನೇಕ ಭಾಗಗಳುಳ್ಳ ಬಹುದೊಡ್ಡ ಕಟ್ಟಡ. ಇದಕ್ಕೆ ಸಾಟಿ ಎರಡನೆಯದು- ರೋಮ್ ನಗರದಲ್ಲಿ ಕೆಥೋಲಿಕ್ ಮತದ ಪೋಪ್‌ಸಾಹೇಬರ ಅಧೀನದಲ್ಲಿರುವ ವೆಟಿಕನ್ [Vatican] ವಸ್ತುಶಾಲೆ. ಇದರಲ್ಲಿ ಇರುವಷ್ಟು ವಿಶೇಷ ಚಾರಿತ್ರಿಕ ಮತ್ತು ಕಲಾ ವಸ್ತುಗಳು ಬೇರೆಲ್ಲಿಯೂ ಇಲ್ಲ. ಅವುಗಳ ಪೈಕಿ ಲೂವರ್ ಶಾಲೆಯೇ ಮೇಲ್ಪಟ್ಟದ್ದು. ಅದರಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ವಿಷಯಕ್ಕೆ ಸಂಬಂಧಿಸಿದ ವಸ್ತುಗಳನ್ನಿಟ್ಟಿರುತ್ತಾರೆ. ಹಾಗೆ ತೈಲಚಿತ್ರಗಳಿರುವ ಭಾಗದಲ್ಲಿ ನೂರಾರು ಲೋಕಪ್ರಸಿದ್ಧ ಚಿತ್ರಕಾರರು ಮಾಡಿದ ತೈಲಚಿತ್ರಗಳಿವೆ. ಅವುಗಳನ್ನು ಗೋಡೆಗೆ ಸಿಕ್ಕಿಸಿದ್ದು ಕೆಲವು ಚಿತ್ರಗಳು 10-15 ಅಡಿ ಅಗಲ, 25-30 ಅಡಿ ಉದ್ದ, ಅಷ್ಟು ದೊಡ್ಡವುಗಳೂ ಕೂಡಾ ಇವೆ. ದೊಡ್ಡದು ಮಾತ್ರವಲ್ಲ, ಅವುಗಳ ಕೆಲಸ ಅಷ್ಟು ವಿಶೇಷವಾದದ್ದು. ಹಾಗೆ ಅನೇಕ ಸಭಾಂಗಣಗಳು-ಅವುಗಳಲ್ಲಿ ಅಲ್ಲಲ್ಲಿ ಈಗಿನ ಚಿತ್ರಕಾರರು ಕೂತು ಈ ಹಿಂದಿನ ಚಿತ್ರಗಳನ್ನು ಪಡಿಸುವರು. ಇನ್ನೊಂದು ಕಡೆಯಲ್ಲಿ ಮುಂಚಿನ ಕಾಲದಲ್ಲಿ ಪ್ರಖ್ಯಾತಿ ಹೊಂದಿದ ಶಿಲ್ಪಿಗಳಿಂದ ತಯಾರಿಸಿದ ನಾನಾ ಶಿಲ್ಪಕಲೆ ಪ್ರತಿಮೆಗಳು- ಹಾಗೆಯೇ ಈಜಿಪ್ಟ್, ಸಿರಿಯಾ, ಟ್ರಾನ್ಸ್, ಬೇಬಿಲೋನ್, ಗ್ರೀಸ್ ವಗೈರೆ ಬೇರೆ ಬೇರೆ ದೇಶಗಳ ಹಿಂದಿನ ಕಲಾಕೌಶಲ್ಯಗಳು. ಈ ವಸ್ತುಸಂಗ್ರಹ ಶಾಲೆಯನ್ನು ಸರಿಯಾಗಿ ನೋಡಬೇಕಾದರೆ [illegible] ಬೇಕಾದರೂ ನಾನದ ನನ್ನೊಟ್ಟಿಗೆ ಇದ್ದ ಒಬ್ಬ ಜೊಂಬಾಯಿ ಸ್ನೇಹಿತ ಶಾಹರ್ ಎಂಬವರೂ ಸುಮಾರು 3 ಗಂಟೆ ಸಮಯ ತಿರುಗಾಡಿ ನೋಡಿದೆವು.

(ಮುಂದುವರಿಯುವುದು)

ಪಿಟಾರವಾಣಿ —ಕೆ. ಆರ್. ಕಾರಂತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಉಡುಪಿಗೆ ಹೋಗಬೇಕು! ಅದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ನೇರವಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI. S. Kanara

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಧಾತು ಹೋಗುವುದು, ಬಿಳುಪು, ಹಳದಿ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು ಶರೀರಗಳಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ವಾರದ ಭವಿಷ್ಯ

ತಾರೀಕು 25-10-51 ರಿಂದ — ತಾರೀಕು 31-10-51 ವರೆಗೆ

ಮೇಷ—ದಿನದಿಂದದಿನಕ್ಕೆ ಖರ್ಚಿನ ಭಾಗಗಳು ಏರುತ್ತಾ ಹೋಗುವವು. ಪ್ರವಾಸಿಗಳಿಗೆ ನಾನಾರೀತಿಯ ಕಷ್ಟನಷ್ಟಗಳೊದಗುವವು. ಗುರುಹಿರಿಯರು ನಿಮ್ಮಮೇಲೆ ವಕ್ರದೃಷ್ಟಿಯನ್ನಿಡುವರು. ನಿಮ್ಮ ಉದ್ಯೋಗಕ್ಕೆ ಶತ್ರುಜನರಿಂದ ಆಗಾಗ ವಿಘ್ನಗಳು ಬೀರುವವಾದರೂ ಕಷ್ಟಸಹಿಷ್ಣುಗಳೂ ಸಾಹಸಿಗಳೂ ಆದ ನೀವು ಉದ್ಯಮದಲ್ಲಿ ಮುಂದಾಗುವಿರಿ. ತನುಪೀಡೆ ಮನೋರೋಗಗಳು ಸದಾ ಪೀಡಿಸುತ್ತಿರಬಹುದು. ಸಾಂಸಾರಿಕ ಸುಖವೂ ದುರ್ಲಭವೆನಿಸುವದು. ವಾರಾಂತ್ಯದ 5 ದಿನಗಳಲ್ಲಿ ಶುಭೋಭ ಕಾರ್ಯಸಿದ್ಧಿಗಳು ಆಗಲಿವೆ.

ವೃಷಭ—ನಿಮ್ಮ ಭಾಗ್ಯವಿಯು ಉದಯಗಿರಿಗೆ ಬಂದಿರುವನು. ನಿಮ್ಮ ಪ್ರತಿಯೊಂದು ಕಾರ್ಯ ಕಲಾಪಗಳೂ ಏನೊಂದೂ ವಿಘ್ನವಿಡ್ಡುಗಳಿಲ್ಲದೆ ಕೊನೆಮುಟ್ಟುವವು. ನಿಮ್ಮ ನಿರೀಕ್ಷೆಗೆ ತಕ್ಕುದಾದ ಫಲಲಾಭವಾಗುವದು. ಸಾಂಸಾರಿಕ ಚಿಂತೆಗಳು ಆಗಾಗ ಬೆನ್ನುಹತ್ತಲಿವೆ. ಸಾಂಸರ್ಗಿಕ ದೋಷದಿಂದ ಕೆಲವೊಂದು ಅಪವಾದಗಳಿಗೂ ವ್ಯರ್ಥ ಖರ್ಚಿಗೂ ಸಿಲುಕಲಿರುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನೌಕರಿ ವರ್ಗದವರಿಗೂ ವರ್ಕರ್ ಜನತೆಗೂ ಈ ವಾರವು ಅತ್ಯಂತ ಪ್ರಶಸ್ತವಿದೆ. ವಾರಾಂತ್ಯದ 2 ದಿನಗಳು ಅತ್ಯುತ್ತಮವಿವೆ.

ಮಿಥುನ—ಕಷ್ಟಸಹಿಷ್ಣುಗಳಾದ ನಿಮ್ಮ ಇಷ್ಟದಂತೆ ಕಾರ್ಯವು ನೆರವೇರಿದರೂ ದೇಹಕ್ಕೆ ಸುಖವಿಲ್ಲ, ಮನಸ್ಸಿಗೆ ನೆಮ್ಮದಿಯಿಲ್ಲದಂತಾಗುವದು. ಶತ್ರುವರ್ಗದವರು ಮೇಲಿಂದ ಮೇಲೆ ಕೀಟಲೆಗಳನ್ನುಂಟುಮಾಡುತ್ತಿರುವರು. ಆಪ್ತೇಯರೂ ಬಂಧುಗಳೂ ಇವರುಗಳಿಂದ ದೂರವಾಗುವಿರಿ. ಹೆಚ್ಚೇಕೆ ಕೈಹಿಡಿದ ಹೆಂಡತಿಯೂ ನಿಮ್ಮನ್ನು ಸಂಶಯ ದೃಷ್ಟಿಯಿಂದ ನೋಡುವಳು. ಗೃಹಕಲಹಗಳು ದಿನದಿನಕ್ಕೆ ಹೆಚ್ಚುತ್ತಾ ಹೋಗುವವು. ಆದರೂ ಆರ್ಥಿಕ ತಗಾದೆಯು ನಿಮಗೊದಗದು. ವಾರಾದಿಯ 2 ದಿನಗಳು ಬೇರೆ ದಿನಗಳಿಗಿಂತ ಉತ್ತಮವಿರುವವು.

ಕರ್ಕಟ—ಸದ್ಯ ನಿಮ್ಮ ಅದೃಷ್ಟವು ಉತ್ತಮವಾಗಿಯೇ ಇರುವದು. ಎಂತಹ ಮಹತ್ಕಾರ್ಯವೇ ಇರಲಿ, ನಿಮ್ಮ ಭಾಗಕ್ಕದು ತೃಣಸಮವೆನಿಸುವದು. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆವ ಪ್ರಸಂಗವೆಂದಿಗೂ ಒದಗಲಾರದು. ಬಂಧುಮಿತ್ರರ ನೆರವು ಆರ್ಥಿಕ ಬಲವು ಚೆನ್ನಾಗಿರುವುದರಿಂದ ವಿಜಯಶ್ರೀಯು ಸದಾ ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಿಸುವಳು. ಆದರೆ ರಾಜಕೀಯ ವಿಚಾರಕ್ಕೆ ಮಾತ್ರ ಈ ಕಾಲವು ಅನುಕೂಲವಿಲ್ಲ. ತಾ 27, 28, 29 ಈ ದಿನಗಳಲ್ಲಿ ನಿಮ್ಮ ಪ್ರಯತ್ನದ ಫಲವು ಸುಲಭದಲ್ಲಿ ಲಭಿಸೀತು.

ಸಿಂಹ—ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲಪ್ರಾಪ್ತಿಯಾಗುವದಾದರೂ ಕೂಡ ಖರ್ಚು ದ್ವಿಗುಣವಾಗಿ ಪರಿಣಮಿಸುವದರಿಂದ ನೀವು ಹಣವನ್ನು ಕಷ್ಟದಿಂದ ಕಳೆಯಬೇಕಾಗಿದೆ. ಹಣದ ಬಿಕ್ಕಟ್ಟು ವಿಶೇಷವಾಗುವದು. ಗುರುಹಿರಿಯರೊಡನೆಯೂ ಇಷ್ಟೇಷ್ಟರೊಡನೆಯೂ ಜಗಳವಾಗುವದು. ಕಫ, ವಾತ ಪ್ರಕೋಪಗಳಿಂದಾಗಿ ದೇಹದಾರೋಗ್ಯವು ಕೂಡ ಕೆಡಲಿದೆ. ಪ್ರಯಾಣದಲ್ಲಿ ನಾನಾ ತರದ ಕಷ್ಟನಷ್ಟಗಳೊದಗಬಹುದು. ತಾ. 25, 26, 30, 31 ಅಷ್ಟೊಂದು ಹಾನಿಕಾರಿಯಾಗದು.

ಕನ್ಯಾ—ಜನ್ಮಗತ ಶನಿಯು ಸದಾ ನಿಮ್ಮ ಆರೋಗ್ಯಕ್ಕೆ ಭಂಗ ತರುತ್ತಿರುವನು. ವ್ಯಾಪಾರ ವ್ಯವಹಾರಗಳಲ್ಲಿ ಚತುರರಾದ ನೀವು ಸಾಕಷ್ಟು ಧನ ಗಳಿಸುವಿರಾದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸೊಂದೂ ಉಳಿಯಲೊಲ್ಲದು. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ಗಳಿಸುವಿರಿ. ಗೃಹತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು. ರಾಜಕೀಯ ಕ್ಷೇತ್ರದಲ್ಲಿ ಸದ್ಯ ಒಳ್ಳಿತು ಕಾಣಿಸದು. ಸ್ತ್ರೀಜನರೊಡನೆ ಕಲಹವಾದೀತು. ತಾ 27, 28, 29 ರಲ್ಲಿ ಸುಖಭೋಗ ಲಾಭಗಳು ತೃಪ್ತಿಕರವಿರುವವು.

ತುಲಾ—ಈ ವಾರದಲ್ಲಿ ನಿಮ್ಮ ಅದೃಷ್ಟವು ಸ್ವಲ್ಪ ಹೀನಸ್ಥಿತಿಗೆ ಬಂದಿರುವುದರಿಂದ ನಿಮ್ಮ ಕನಸುಮನಸಿಗೆ ಸುಖಶಾಂತಿಯು ದುರ್ಲಭವಾಗುವದು. ಕಷ್ಟಪಟ್ಟು ದುಡಿವಿರಿ. ಆದರೆ ದುಡಿಮೆಯ ಫಲವು ನಿಮ್ಮ ಸ್ವಾರ್ಥಕ್ಕೆ ಬೀಳದೆ ವ್ಯರ್ಥವಾಗಿ ಹಾಳಾಗಲಿದೆ. ಸಮುದ್ರದಲೆಗಳಂತೆ ತೊಂದರೆಗಳು ಅನರ್ಥಪರಂಪರೆಗಳು ಬಂದು ಪೀಡಿಸಲಿವೆ. ಆಪ್ತಬಂಧುಗಳ ವಿಯೋಗವಾದೀತು. ಅನಿರೀಕ್ಷಿತವಾಗಿ ಪ್ರವಾಸ ಗಂಟುಬೀಳುವದು. ವಿಷಾಗ್ನಿಗಳ ಭಯಕ್ಕವಕಾಶವಿದೆ. ಆದರೂ ತಾ, 25, 26, 30, 31 ಈ ದಿನಗಳಲ್ಲಿ ಮಿತ್ರರ ಸಮಾಗಮ ಲಾಭ ಸಂತೋಷಗಳು ಕಾಣಿಸುವವು.

ವೃಶ್ಚಿಕ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬ ಪದವನ್ನು ನೀವು ಸದಾ ಜಪಿಸಬೇಕಾದೀತು. ಈ ವಾರದಲ್ಲಿ ಕಾರಣ ನಿಷ್ಕಾರಣವಾಗಿ ಮಾತನಾಡಿದವರೊಡನೆ ಜಗಳವಾಗುವದು. ಆರೋಗ್ಯವು ಕೂಡ ಸರಿಯಿರಲಾರದು. ಆದರೆ ನಿಮ್ಮ ಕಾರ್ಯಕಲಾಪಗಳು ಶತ್ರುಗಳ ಪೀಡೆಯಿಂದ ಕುಂಠಿತವಾಗುವದಾದರೂ ಪ್ರಯತ್ನಕ್ಕನುಚಿತವಾದ ಫಲಲಭಿಸುವುದರಲ್ಲಿ ಸಂದೇಹವಿಲ್ಲ. ನೀಚಜನರಿಂದ ಧನಲಭಿಸುವ ಯೋಗವಿದೆ. ಗೃಹಕೃತ್ಯ ವಿಚಾರದಲ್ಲಾವ ಕೊರತೆಯೂ ಉಂಟಾಗದು. ವಾರಾದಿಯ 5 ದಿನಗಳು ಸುಖಲಾಭದಾಯಗಳು.

ಧನು:—ನಿಮ್ಮ ಭಾಗ್ಯಕರ್ಮ ಪತಿಗಳೂ ಲಾಭಸ್ಥಾನಕ್ಕೆ ಬಂದಿರುವರು. ಆದ ಕಾರಣ ನಿಮ್ಮ ಪ್ರತಿಯೊಂದು ಕಾರ್ಯಗಳೂ ನಿರೀಕ್ಷೆಗಿಂತ ಅಧಿಕವಾದ ಫಲವನ್ನೀಯುವವು. ಹಿಂದಿನ ಸಾಲಗಳಿಂದ ಮುಕ್ತರಾಗಿ ಸುಖದಿಂದ ಕಾಲಕಳೆವಿರಿ. ಆದರೆ ಮನಸ್ಸು ಸದಾ ಚಂಚಲವಾದೀತು. ಬಂಧು ವರ್ಗದವರೊಡನೆ ಮನಸ್ತಾಪ ಹುಟ್ಟುವಂಥಾ ಕಾರ್ಯಗಳು ಜರಗಲಿವೆ. ನೀಚ ಜನರ ಸಹವಾಸದಿಂದಾಗಿ ಕೀರ್ತಿಗೆ ಕಳಂಕಬರುವ ಸಂಭವವಿರುವದು. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಸಂಕಲ್ಪವು ನಿರ್ವಿಘ್ನದಿಂದ ಸಿದ್ಧಿಸುವದು.

ಮಕರ:—ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಬಹುಮಟ್ಟಿಗೆ ಸುಧಾರಿಸಲಿರುವುದು. ಹೆಚ್ಚಿನ ಕಾರ್ಯಗಳು ನಿಮ್ಮ ಇಷ್ಟದಂತೆ ಫಲಿಸುವವು. ಖರ್ಚಿಗೆ ಸಾಕಾಗುವಷ್ಟು ಉತ್ಪತ್ತಿ ಯಿರೋಣದರಿಂದ ದಿನ ಯಾಪನೆಯು ಸುಗಮವಾದೀತು. ಆದರೆ ಶತ್ರುಜನರ ಕಾಟವು ಅಸಹನೀಯವಿರುವದು. ಈ ಕಾರಣದಿಂದಾಗಿ ಧನಮಾನಗಳಿಗೆ ಧಕ್ಕೆ ತಗಲೀತು. ಧರ್ಮಕರ್ಮಗಳಲ್ಲಿ ಅನಾದರವೂ ಗುರುಹಿರಿಯರಲ್ಲಿ ತಿರಸ್ಕಾರ ಭಾವನೆಯೂ ಬೆಳೆಯಲಿದೆ. ವಾರಾಂತ್ಯದ 2 ದಿನಗಳೂ ಅನುಕೂಲವಿವೆ.

ಕುಂಭ:—ದೈವವು ಅತೀವ ಪ್ರತಿಕೂಲಸ್ಥಿತಿಗೆ ಬಂದಿರುವದು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನೆಯು ಮಸಣದಂತೆ ಪರಿಣಮಿಸುವದು. ಸ್ತ್ರೀಯರ ನಿಮಿತ್ತವಾಗಿ ಕಷ್ಟನಷ್ಟ ಪರಂಪರೆಗಳು ಬರಲಿವೆ. ಅರ್ಧಾಂಗಿಯ ಆರೋಗ್ಯ ಕೆಡಲಿದೆ. ಆಪ್ತೇಷ್ಟರ ವಿರಹದಿಂದ ಅತೀವ ಸಂತಾಪಕ್ಕೀಡಾಗುವಿರಿ. ಲೇವಾದೇವಿಯ ನಿಮಿತ್ತವಾಗಿ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಬಹುದು. ಆದರೂ ಬೃಹಸ್ಪತಿಯ ಅನುಗ್ರಹವೊಂದು ನಿಮಗಿರುವುದರಿಂದ ವಾರಾದಿಯ 2 ದಿನಗಳು ದುಃಖಕಾರಿಗಳಾಗಲಾರವು.

ಮೀನ:—ಬೇರೆಯವರ ಸಹಾಯವನ್ನು ಯಾಚಿಸದೆ ಸ್ವಯಂಮೇವ ಕಾರ್ಯವನ್ನು ಕೊನೆಗೊಳಿಸಲು ಶಕ್ತರಿರುವಿರಿ. ನಿಮ್ಮ ಪ್ರಯತ್ನವು ಸಫಲವಾಗುವದು. ಮಾತ್ರವಲ್ಲ ಆಕಸ್ಮಾತ್ ಧನಲಭಿಸುವ ಯೋಗವಿದೆ. ಹೆಚ್ಚಿನ ಸಮಯವನ್ನು ದಾರಿಯಲ್ಲೇ ಕಳೆವಿರಿ. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟಸಂಭವಿಸೀತು. ದೇಹಾರೋಗ್ಯವು ಪೂರ್ಣ ಉತ್ತಮವಿರುವದು. ಮನೆಯಾಕೆಯೊಡನೆ ಕಲಹವಾಗುವದು. ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಕಷ್ಟಗಳೂ ದೂರವಾಗುವವು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಉ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು, ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೋಲಿಕಾಟ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕ ಪ್ರತಿನಿಧಿ:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಚ್ಚು ಮಕ್ಕಳ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಋತುಸ್ನಾನವಾದ ಮೇಲೆ ಸೇವಿಸಬೇಕು.

ಪಥ್ಯ:—ಹೆರವಿನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ಬಿಜಾಪುರ— ಚನ್ನಪ್ಪ ಸಿದ್ದಲಿಂಗಪ್ಪ ಧಾರವಾಡಕರ ಬಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಸ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪಿತ

31ನೆ ವರ್ಷ

8-11-1951

Founder: Sri A. B. Shetty, Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ. ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧ ವಾರ ೯

NAVAYUGA WEEKLY Post Box No. 22 UDIPI.

Vol. 31 No. 9

ಕಾಂಗ್ರೆಸ್ಸಿಗೇನು ಬೇಕು?

ನಾಲ್ಕು ವರ್ಷ ಆಡಳಿತವನ್ನು ನಡೆಸಿದ ಕಾಂಗ್ರೆಸ್ಸಿಗೇನು ಬೇಕು? ಅಥವಾ ಏನು ಬೇಕು? ಎನುವದನ್ನು ಸದ್ಯ ವಿಮರ್ಶಿಸುವದು ಅವಶ್ಯಕ. ಕಾಂಗ್ರೆಸ್ಸಿನ ಮೂಲತತ್ವವನ್ನು ಹಿಡಿದು ಸಾಗುವವರಿಗೆ ಇಂತಹ ಪ್ರಶ್ನೆಗಳ ಉತ್ತರ ಅದರಲ್ಲೇ ಕಾಣಬಹುದಾಗಿದೆ. ಆದರೆ ಕೇವಲ ಸ್ವಾರ್ಥಸಾಧಕರಿಗೆ ಅದು ಅರ್ಥವಾಗದು. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತೆಯೆ!

ನಾವಿಂದು ಸಂಸ್ಥೆಯ ಆದರ್ಶವನ್ನು ಪರಿಪಾಲಿಸಬೇಕೋ-ವ್ಯಕ್ತಿ ಪ್ರಭಾವವನ್ನು ನೋಡಬೇಕೋ ಎನುವ ವಿಚಾರದಲ್ಲೇ ಮತಭೇದವುಂಟಾಗಿದೆ. ಪ್ರಧಾನಮಂತ್ರಿ ನೆಹ್ರೂರವರು: "ಚುನಾವಣೆಯಲ್ಲಿ ನಮಗೆ ಸೋಲಾದರೂ ಚಿಂತಿಲ್ಲ; ನಮ್ಮ ಆದರ್ಶವನ್ನು ಬಿಡಲಾಗದು" ಎಂದಿರುವುದನ್ನು ಲಕ್ಷಿಸಿದರೆ ನಮಗೆ ವ್ಯಕ್ತಿಗಳಿಗಿಂತಲೂ ತತ್ವಾದರ್ಶಗಳು ಮೇಲಾದವೆಂದು ಅರ್ಥವಾಗುತ್ತದೆ. 'ಕಾಂಗ್ರೆಸ್ಸಿಗನಲ್ಲದಿದ್ದರೂ ಯೋಗ್ಯ ವ್ಯಕ್ತಿತ್ವವಿದ್ದರೆ ಆತನನ್ನು ಕರೆದು ಕಾಂಗ್ರೆಸ್ ಟಿಕೇಟು ಕೊಡಿರಿ' ಎಂದೂ ಅವರು ಹೇಳಿರುವರು. ಈ ಮಾತು ಮೊದಲಿನದಕ್ಕೆ ಕೊಂಚ ವಿರುದ್ಧಭಿಪ್ರಾಯವನ್ನು ವ್ಯಕ್ತಪಡಿಸುವಂತಿದೆ. ಈ ಸಮಸ್ಯೆ ಕಾಂಗ್ರೆಸ್ಸಿನಲ್ಲಿ ದಿನದಿಂದ ದಿನಕ್ಕೆ ವೃದ್ಧಿಗೊಳ್ಳುತ್ತಾ ಐಕ್ಯಕ್ಕೆ ಭಂಗತರುವಂತೆ ತೋರುತ್ತದೆ. ಯೋಗ್ಯ ಮುಂದಾಳುಗಳ ಬೇಕೆನ್ನುವ ವಾದವೊಂದು ಕಡೆ—ಸಂಸ್ಥೆಯ ಮಹತ್ವಿಕೆಯನ್ನು ನೋಡಿ ಗೌರವಿಸಬೇಕೆನ್ನುವ ವಾದವೊಂದು ಕಡೆ—ಜನತೆಯನ್ನು ಆಚೀಚೆ ಜಗ್ಗುವಂತಿದೆ. ಜನ, ಸ್ವಾರ್ಥಸಾಧನೆಯ ಉದ್ದೇಶದಿಂದ ಮಾತಿನ ಮುಖವನ್ನು ಬದಲಿಸುತ್ತಾರೆ. ಕಾಂಗ್ರೆಸು ಮಹಾಸಂಸ್ಥೆಯೆಂದೂ ಪೂಜಿಸಬೇಕೆನುವ ವಾದದಲ್ಲಿ ಅದರ ತತ್ವವನ್ನು ಪರಿಪಾಲಿಸಬೇಕೆಂಬುದೇ ಅಗಿದೆ. ಈ ಸಂಸ್ಥೆಯಲ್ಲಿ ಯೋಗ್ಯರೂ ಇದ್ದಾರೆ ಸ್ವಲ್ಪ ಜನ ಅಯೋಗ್ಯರೂ ಇದ್ದಾರೆ. ದೇಶಹಿತ ಕಾರ್ಯಗಳ ನಡುವೆ ತಿಳಿದೋ—ತಿಳಿಯದೆಯೋ- ಅನಿವಾರ್ಯವಾಗಿಯೋ ಹಲವು ಲೋಪದೋಷಗಳೂ ಕಂಡುಬಂದಿವೆ. ಒಂದೇ ಸಂಸ್ಥೆಯಲ್ಲಿ ತತ್ವಕ್ಕೆ ವಿರುದ್ಧವಾಗಿ ವರ್ತಿಸುವ ಜನವೂ ಸೇರಿಕೊಂಡದ್ದರಿಂದ ಇತರರು ಇಡಿಯ ಸಂಸ್ಥೆಯೆ ಕೆಟ್ಟದೆನ್ನುತ್ತಾರೆ. ಇದು ಸರಿಯಲ್ಲ: ಕಾಂಗ್ರೆಸ್ಸಿನ ಧ್ಯೇಯ ಅತ್ಯಂತ ಶ್ರೇಷ್ಠವಾದುದು! ನಮ್ಮ ದೇಶದ ಮಟ್ಟಿಗೆ ಅದು ಕಾಮಧೇನು. ಆದರೆ ಕೆಲವು ಜನ ಮೂಲತತ್ವದಲ್ಲಿಯ ಹಿತವನ್ನು ಲಕ್ಷಿಸದೆ ಟೀಕಿಸುತ್ತಲಿದ್ದಾರೆ. ಆದುದರಿಂದ ಇಲ್ಲಿ ಆಗಬೇಕಾದ ಬದಲಾವಣೆ—ಇಲ್ಲವೆ ತಿದ್ದುಪಡಿಯೆಂದರೆ ಸಂಸ್ಥೆಯೊಳಗೆ ಸೇರಿಕೊಂಡಿರುವ ಲೋಪದೋಷದಿಂದ ಕೂಡಿದ ಜನರನ್ನು ಹೊರಹಾಕುವದೇ ಆಗಿರುತ್ತದೆ. ಒಂದೇ ಸಂಸ್ಥೆಯಲ್ಲಿ ಕೂಡಿರುವಾಗ ಅದರ ತತ್ವಾದರ್ಶಗಳಿಗೆ ತಲೆಬಾಗಲೇ ಬೇಕು. ಆದರ್ಶದಂತೆ ನಡೆಯಲಾರದವರು ಅಲ್ಲಿ ಉಳಿಯುವದು ಸರಿಯಲ್ಲ! ನೆಹ್ರೂ ಆದರ್ಶ ದೊಡ್ಡದೆಂದು ಹೇಳಿದ್ದು ಇದನ್ನೇ. ಎರಡು ಬಗೆಯ ಜನ ಅದರಲ್ಲಿ ಸೇರಿಕೊಂಡಿರುವದರಿಂದ ಸಂಸ್ಥೆಯ ಮೇಲಿನ ಅಪವಾದ ಆದರ್ಶದ ಮೇಲೇ ತಟ್ಟಿದಂತಿದೆ. ಆದುದರಿಂದ ಆದರ್ಶವನ್ನು ಕಾಪಾಡಿಕೊಳ್ಳುವದು ಕಾಂಗ್ರೆಸ್ಸಿನ ಮುಖ್ಯ ಕರ್ತವ್ಯವೆಂದಾಯಿತು.

ಕಾಂಗ್ರೆಸ್ಸಿನ ಹೆಸರಿನಲ್ಲಿ ನಿಲ್ಲುವವನು ಎಂಥವನೂ ಆಗಲೂ ಸಾಧ್ಯವೇ? ಎನುವ ಇನ್ನೊಂದು ಸಮಸ್ಯೆಯು ಮೇಲಿನ ಆದರ್ಶದಿಂದ ತನ್ನಿಂತಾನೆ ಪರಿಹಾರ್ಯವಾಗುತ್ತದೆ. ಕಾಂಗ್ರೆಸ್ಸಿನ ಆದರ್ಶ ದೇಶದ ಹಿತಕ್ಕಾಗಿಯೇ ಇರುತ್ತದೆಂದ ಮೇಲೆ ಅದನ್ನು ಆಚರಣೆಯಲ್ಲಿ ತರಬೇಕಾದರೆ ಆದರ್ಶವೆಂಬುದು ಅಕ್ಷರಶಃ ಅವನಲ್ಲಿದ್ದೇ ತೀರಬೇಕು. ವ್ಯಕ್ತಿಯ ಯೋಗ್ಯತೆಯನ್ನಳೆಯುವದಕ್ಕೆ ತತ್ವಾದರ್ಶಗಳೇ ಮಾನದಂಡಗಳು! ಇಲ್ಲಿ ಸ್ವಾರ್ಥಸಂಕುಚಿತತೆಯ ಪ್ರಶ್ನೆ ಮೂಡಲೆಡೆಯಿಲ್ಲ. ಇದನ್ನೆಲ್ಲ ಲಕ್ಷಿಸುವಾಗ ಕಾಂಗ್ರೆಸ್ಸಿನ ಆದರ್ಶವಾಗಲೀ—ನೆಹ್ರೂ ಆದೇಶವಾಗಲೀ ಬೇರೆ ಬೇರೆಯಲ್ಲ—ಭೇದ ಕಲ್ಪಿಸಿ,ಸ್ವಾರ್ಥ ಸಾಧಿಸುವವರ ಹಂಚಿಕೆ ಇಲ್ಲವೆ ಕಲ್ಪನಾಲಹರಿಯೆಂದು ನಮಗೆ ಅರ್ಥವಾಗವೇ? ಕಾಂಗ್ರೆಸ್ಸಿನ ಹಿತದ ದೃಷ್ಟಿಯಿಂದ ಈ ಶುದ್ಧೀಕರಣವಾಗುವದು ಅವಶ್ಯವಾಗಿದೆ.

ಆರೋಗ್ಯದ ಬೆಲೆ ತಿಳಿಯುವುದು ಅನಾರೋಗ್ಯ ಬಂದಾಗಲೇ. ಬಾಡ ಕಳೆದದ್ದು ಅರಿವಿಗೆ ಬರುವದು ಎಲೆ ಹಣ್ಣಾದಾಗಲೇ! ಅಂತೆಯೆ ಇಂದು ನಮ್ಮ ಕಾಂಗ್ರೆಸ್ಸಿನ ಸ್ಥಿತಿಯಾಗಿರುವದು. ನಾಲ್ಕು ವರ್ಷಗಳಲ್ಲಾದ ಆಂದೋಲನದಲ್ಲಿ ಕಾಂಗ್ರೆಸ್ ಶ್ರಮಿಸಿದ್ದನ್ನು ಹೇಳುವವರು ಬಹಳ ಕಡಿಮೆ- ತಪ್ಪಿದಲ್ಲೆಲ್ಲ ಟೀಕೆಟಿಪ್ಪಣಿಗಳಾಗುತ್ತಿವೆ. ಕಾಂಗ್ರೆಸು ಸಾಧಿಸಿದ್ದನ್ನು ಯಾರೂ ಎತ್ತಿ ಹೇಳುವಂತಿಲ್ಲ. ಮಾತ್ರವಲ್ಲ; ಹಲವು ಸಂದರ್ಭಗಳಲ್ಲಿ ಎಡಪಕ್ಷಗಳು ಮಿಥ್ಯಾರೋಪದಿಂದ ಸ್ವಾರ್ಥವನ್ನು ಸಾಧಿಸುವ ಹಂಚಿಕೆ ಮಾಡಿದ್ದುಂಟು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಪ್ರತಿಕ್ರಿಯೆ ಏನು? ಟೀಕೆಗೆ ವಿರುದ್ಧವಾಗಿ ಟೀಕೆ ಮಾಡುವದು ಸರಿಯಾದ ಪ್ರತಿಕ್ರಿಯೆಯೆಂದು ಭಾವಿಸುವದು ಸರಿಯಾಗಲಾರದು. ಅಧಿಕಾರ ಉಳ್ಳವರು ಅಹಂಕಾರಿಗಳಾಗಕೂಡದು! ಎಂದು ಕೈ ಕಟ್ಟಿದರೆ ಕಾರ್ಯ ಸಿದ್ಧವಾಗುವದೆ? ಆದುದರಿಂದ ಬೇರೆಯವರ ತಪ್ಪನ್ನೆತ್ತಿ ಹೇಳುವದಕ್ಕಿಂತ ತಾವು ಕಳೆದ ನಾಲ್ಕು ವರ್ಷಗಳಲ್ಲಿ ಸಾಧಿಸಿದ್ದೇನು? ಸಾಧಿಸಲಾಗದೆ ಉಳಿದಿರುವ ವಿಚಾರಗಳಿಗೆ ಸಮಾಧಾನವೇನು? ಮುಂದೆ ತಾನು ಕಾರ್ಯರೂಪದಲ್ಲಿ ತರಬಹುದಾದ ಯೋಜನೆಗಳಿಂದ ಯಾವ ಸಮಸ್ಯೆ ಬಗೆಹರಿಯಬಹುದು? ಎಂಬುದನ್ನು ಜನತೆಗೆ ತಿಳಿಸುವದೇ ಮುಖ್ಯವಾಗಿದೆ. ಮುಖ್ಯವಾಗಿ ಈ ಕಾರ್ಯ ಹಳ್ಳಿಯಲ್ಲಾಗಬೇಕು. ನಾಲ್ಕು ವರ್ಷಗಳಲ್ಲಿ ಹಳ್ಳಿಯನ್ನು ಕಂಡದ್ದು ಸೋಶಲಿಸ್ಟ್-ಕಮ್ಯೂನಿಸ್ಟರೇ ಹೊರತು ಕಾಂಗ್ರೆಸ್ಸಿಗರಲ್ಲ! ಇದರ ದುರ್ಲಾಭವನ್ನು ಎಡಪಕ್ಷಗಳು ಈಗ ಪಡೆಯುತ್ತಿವೆ. ಕಾಂಗ್ರೆಸ್ಸಿಗರು ತಡವಾಗಿಯಾದರೂ ಹಳ್ಳಿಗಿಳಿಯುವದು ಅತಿಮುಖ್ಯವಾಗಿದೆ. ಜೊತೆಯಲ್ಲದವರು ಟೀಕಿಸಲಿ-ವಿಚಾರವಂತರೇ ಟೀಕಿಸಲಿ-ಕಾಂಗ್ರೆಸು ಜವಾಬ್ದಾರಿಯುಳ್ಳ ಸಂಸ್ಥೆಯಾದುದರಿಂದ ಜಗಳಗಂಟಿಯಾಗಲು ಸಾಧ್ಯವಿಲ್ಲ! ಗಾಜಿನಮನೆಯಲ್ಲಿರುವವರು ಬೇರೆಯವರ ಮನೆಗೆ ಕಲ್ಲೆಸೆಯುವುದೆಂದರೆ ಆತ್ಮಘಾತುಕ ಕಾರ್ಯವೇ ಸರಿ! ಘನವಾದ ಉದ್ದೇಶ ಇಲ್ಲವೆ ದೂರದೃಷ್ಟಿ ಈ ಸಂದರ್ಭದಲ್ಲಿ ಕಾಂಗ್ರೆಸ್ಸಿಗೆ ಅವಶ್ಯ ಬೇಕು.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

ESTD: 1925. H. O: UDIPI.

ಪ್ರಜಾಸತ್ತೆ

ಪ್ರಜಾಸತ್ತೆಯೂ ಪ್ರತಿನಿಧಿ ಸರಕಾರವೂ

(ಕಳೆದ ಸಂಚಿಕೆಯಿಂದ ಮುಂದರಿದುದು)

ನಿಜವಾದ ಪ್ರತಿನಿಧಿ ಸರಕಾರವು ನಾವು ಎಣಿಸಿದಷ್ಟು ಸುಲಭ ರೀತಿಯಲ್ಲಿ ಸಾಗಲಾರದು. ಇದಕ್ಕೆ ನಾನಾತರದ ತೊಡಕುಗಳವೆ ಎಂಬುದನ್ನು ತಿಳಿದುಕೊಳ್ಳಬೇಕು. ಜನರು ತಮ್ಮ ಸಮಾನತೆಯ ಹಕ್ಕಿನ ಅಧಿಕಾರವನ್ನು ಪ್ರತಿನಿಧಿಗಳ ಮುಖೇನ ಕಾರ್ಯವೆಸಗಲು ಹೊರಟಾಗ ಕೆಲವು ತೊಂದರೆಗಳು ಅಡ್ಡಬರುವವು. ಒಂದುಕಡೆಯಲ್ಲಿ ನಮ್ಮಲ್ಲಿ ತೋರುವ ಹಲವು ಲಕ್ಷಣಗಳು, ವಿರೋಧ ಸಾಂಪ್ರದಾಯಗಳು, ಹುಟ್ಟುಗುಣಗಳು ಮೂಢಭಕ್ತಿ ಮತ್ತು ಆಶೆಗಳು ಇವುಗಳಿಂದ ತಯಾರಾಗುವ ಜನಮತವು ಬಹು ಸುಲಭದಿಂದ ಸ್ಪಷ್ಟವಾಗಿ ಉಚ್ಚರಿಸಲ್ಪಡುವುದಿಲ್ಲ. ಜನಮತದ ಮರುಧ್ವನಿಯಾಗುವ ನ್ಯಾಯ ಸಭೆಯನ್ನು ರಚಿಸುವದು ಕಷ್ಟದ ಕೆಲಸವಾಗಿದೆ. ಜನರು ಸ್ಪಷ್ಟವಿಲ್ಲದ ಮತ್ತು ಅನಿಶ್ಚಿತ ಮತವುಳ್ಳವರಾಗಿ ಬರೆ ಗುಣಾಗುಣಗಳುಳ್ಳವರಾದರೆ ಸ್ವಾರ್ಥಪರ ಮುಂದಾಳುಗಳ ಕುತಂತ್ರದ ಬಲೆಗೆ ಬೀಳುವರು. ಜನರಲ್ಲಿ ನಿಜವಾದ ಅಭಿಪ್ರಾಯವಿಲ್ಲದಿದ್ದರೆ ಮತ್ತದನ್ನು ಇತರರು ಕೇಳುವಂತಾಗದಿದ್ದರೆ ಅದು ಜನಜನಿತವಾಗಿ ಕೇಳುವಂತೆ ಒಂದು ಕ್ರಮವಾದ ದಾರಿಯಿಂದಲೇ ಹರಿಯಬೇಕು. ಆಧುನಿಕ ಪ್ರಜಾಸತ್ತೆಯಲ್ಲಿ ನ್ಯಾಯಸಭೆಗಳು ಅದಕ್ಕೆ ಅನುಕೂಲವಿದ್ದರೂ ಪ್ರತಿನಿಧಿಗಳು ಸೇವೆಸಲ್ಲಿಸುವ ಬರೀ ಪೌಕರರಾಗಿ ತೋರುವದೇ ಹೊರತು ತಮ್ಮ ಮೇಲಧಿಕಾರಿಗಳಾದ ಜನರ ಮತವನ್ನು ಸಂಪೂರ್ಣ ಪ್ರತಿಬಿಂಬಿಸಿ ವ್ಯಕ್ತಪಡಿಸುವರೆಂದು ಹೇಳಲು ಧೈರ್ಯಬರುವದಿಲ್ಲ. ಚುನಾವಣೆ, ಬಹುಮತ ಮತ್ತು ಗುಪ್ತಮತ ಮೊದಲಾದವುಗಳೆಲ್ಲಾ ಇರುವದಾದರೂ ನಿಜವಾದ ಬಹುಮತ ಪಡೆದುಬರುವ ಸದಸ್ಯರು ಬಹಳ ಕಡಮೆ. ಒಂದುವೇಳೆ ಯೋಗ್ಯವಾದ ಪ್ರತಿನಿಧಿಗಳನ್ನು ಚುನಾಯಿಸಿದರೂ ಅವರನ್ನು ಚುನಾವಣೆಯಾದ ನಂತರ ಅಂಕೆಯಲ್ಲಿರಿಸಿಕೊಳ್ಳುವದು ಮತ್ತೊಂದು ತರದ ಕಷ್ಟ. ಕಾರ್ಯದರ್ಶಿಗಳು ಚುನಾಯಿತರಾದವರಾದರೂ ಅವರು ಅಧಿಕಾರ ಬಲದಿಂದ ಅಹಂಕಾರ, ಹೆಮ್ಮೆ, ಗರ್ವವುಳ್ಳವರಾಗಿ ತಮಗೆ ಅಧಿಕಾರ ಕೊಟ್ಟವರ್ಯಾರೆಂಬುದನ್ನು ಮರೆತುಬಿಡುವರು. ಆಡಳಿತ ನಡೆಸುವವರು ಹಲವು ಸಮಯ ಅಧಿಕಾರದ ದರ್ಪತೋರಿಸಿದ್ದುಂಟು. ಆದುದರಿಂದಲೇ ವಾಲ್ಟ್‌ವಿಟ್‌ಮ್ಯಾನ್ ಎಂಬವನು ಚುನಾಯಿತ ಸದಸ್ಯರ ಕೆಚ್ಚೆದೆಯತನಕ್ಕೆ ಮಿತಿಯೇ ಇಲ್ಲವೆಂದು ಆಕ್ಷೇಪವೆತ್ತಿರುವರು. (The neverending audacify of elected persoued Walt Whiman) ಚುನಾಯಿತರಲ್ಲದವರ ದಿಟ್ಟತನವನ್ನು ನಿಲ್ಲಿಸಬಹುದು. ಚುನಾಯಿತರ ಕೆಚ್ಚೆದೆಯತನವನ್ನು ತಡೆಗಟ್ಟುವದು ಸ್ವಲ್ಪಕಷ್ಟ. ತಾವು ಚುನಾಯಿತರಾದ ಪ್ರತಿನಿಧಿಗಳೆಂಬ ಧೈರ್ಯದಿಂದ ಪ್ರಜಾಸತ್ತೆಯ ಸೋಗಿನಲ್ಲಿ ಕೆಲವು ಬೇಜವಾಬ್ದಾರೀ ಕಾರ್ಯವೆಸಗುವರು ಬ್ರಿಟಿಷರನ್ನು ಅಧಿಕಾರ ಚ್ಯುತರನ್ನಾಗಿ ಮಾಡಿ ಹೊರದೂಡಬಲ್ಲೆವು. ಆದರೆ ಡಿಲ್ಲಿಯಲ್ಲಿರುವ ತಮ್ಮ ಕಾರ್ಯಕಾರಿ ಮಂಡಲಿಯವರನ್ನು ಹೊರತಳ್ಳುವದು ಸ್ವಲ್ಪಕಷ್ಟದ ಕೆಲಸ. ಇಂಗ್ಲಿಷರು ತಮ್ಮ ಅರಸನಾದ 1ನೇ ಚಾರ್ಲಿಸರ ರುಂಡವನ್ನು ತರಿಸಿದಷ್ಟು ಸುಲಭದಲ್ಲಿ ವೈಟ್‌ಹೋಲಿನಲ್ಲಿ ಮಂತ್ರಿಗಳನ್ನು ಹೊರದೂಡುವದು ಅಸಾಧ್ಯ.

ಆತಂಕವಿಲ್ಲದ ಪ್ರೌಢಮತದಾನವಿರುವದಾದರೂ ಎಲ್ಲರಿಗೂ ಮತಕೊಡುವರೆ ಸಂಸಮಾನ ಹಕ್ಕಿರುವದೆಂದು ಒಪ್ಪಿಕೊಂಡರೂ ರಾಷ್ಟ್ರವನ್ನು ಫಿರ್ಕಾಗಳಾಗಿ ವಿಂಗಡಿಸಿ ಸದಸ್ಯರನ್ನು ಆರಿಸುವದಾದರೂ ಸಾರ್ವಜನಿಕ ಅಭಿಪ್ರಾಯವನ್ನು ನ್ಯಾಯಸಭೆಯಲ್ಲಿ ಪ್ರತಿಬಿಂಬಿಸುವಂತೆ ಸಾಧಿಸುವದು ಪ್ರಜಾಸತ್ತೆಗೆ ಅವಶ್ಯವಾದದ್ದಾದರೂ ಕಷ್ಟವಾಗಿದೆ. ಇದರಲ್ಲಿ ಹಲವು ಗಲಿಬಿಲಿಯ ಜಟಿಲುಗಳು ನಮಗೆದುರು ಬರುತ್ತವೆ. ಉದಾಹರಣೆಯಾಗಿ ಹೇಳುವುದಾದರೆ: ಒಂದು ಫಿರ್ಕಾದಲ್ಲಿ ಒಟ್ಟಿಗೆ 25000ಮತದಾರರಿದ್ದರೆ ಎರಡು ಜನ ಹುರಿಯಾಳುಗಳಿದ್ದರೆಂದು ಭಾವಿಸುವ. ಮತಗಣನೆಯ ಕಾಲದಲ್ಲಿ 5000 ಮತದಾರರು ತಮ್ಮ ಹಕ್ಕನ್ನು ಉಪಯೋಗಿಸಲಿಲ್ಲ. ಮತಕೊಟ್ಟ 20000, ಜನರ ಪೈಕಿ 1000 ಮತ ಅಥವಾ ಅದಕ್ಕೂ ಮಿಕ್ಕಿ ಮತಸಿಕ್ಕಿದವನು ಚುನಾಯಿತನಾಗುವನು. 9999 ಮತಸಿಕ್ಕಿದವನು ಸೋತುಹೋದನು. ಪರೀಕ್ಷೆ ಮಾಡುವದಾದರೆ 25000 ಮತಗಳ ಪೈಕಿ 14999 ಮತ ಬೇಡವೆಂದರೂ 1000 ಮತ ಸಿಕ್ಕಿದವನು ಬಹುಮತದಿಂದ ಚುನಾಯಿತನಾದನೆನ್ನುವೆವು. ಮತದಾರರು ಕೊಡದೆ ಇರುವದಕ್ಕೆ ಆತನು ಜವಾಬ್ದಾರನಲ್ಲವಾದ ಕಾರಣ ನಾವಿದಕ್ಕೆ ಒಪ್ಪಬೇಕಾಗುತ್ತದೆ. ಇದೇ ಫಿರ್ಕಾದಲ್ಲಿ ಎರಡು ಉಮೇದ್ವಾರರ ಬಗ್ಗೆ ಮೂರು ಹುರಿಯಾಳುಗಳಿದ್ದರೆ 20000 ಮತದಾನದಲ್ಲಿ ಒಬ್ಬನಿಗೆ 8000, ಇನ್ನೊಬ್ಬನಿಗೆ 6500, ಮತ್ತೊಬ್ಬನಿಗೆ 5500ಸಿಕ್ಕಿರುತ್ತದೆಂದಾದರೆ 3000 ಮತದೊರೆತವನು ಚುನಾಯಿತನಾದನೆನ್ನುವೆವು. ಮತಕೊಟ್ಟ 20,000 ಜನರಲ್ಲಿ 1200ಜನರ ವಿರೋಧವು ಆತನಾಗಿದ್ದರೂ ಫಿರ್ಕಾದ ಒಟ್ಟು ಮತದಾರರ ಪೈಕಿ 17000 ಆತನಿಗಿಲ್ಲದೆ ಬಹುಮತದಿಂದ ಆರಿಸಿ ಬಂದವನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದೇರೀತಿಯಲ್ಲಿ ಹಲವು ಫಿರ್ಕಾಗಳಲ್ಲಿ ನಡೆದರೆ ಇಡೀ ನ್ಯಾಯಸಭೆಯ ಸದಸ್ಯರೆಲ್ಲರೂ ಕಡಿಮೆ ಜನರಿಂದ ಚುನಾಯಿತರಾದವರೆಂದೇ ಹೇಳಬೇಕು. ಹೀಗಾದಲ್ಲಿ ಸದಸ್ಯರು ಎಷ್ಟರಮಟ್ಟಿನ ಪ್ರಜಾಪ್ರತಿನಿಧಿಗಳೆಂದು ಹೇಳಬಹುದು? ಒಬ್ಬ ಉಮೇದ್ವಾರನಿಗೆ ಇದಿರು ಹುರಿಯಾಳುಗಳಿಗಿಂತ ಒಂದುಮತ ಹೆಚ್ಚಿಗೆ ದೊರೆತರೆ ಸಾಕು. ಹೀಗೆ ಮತಗಳು ಪಾಲುಪಾಲಾಗಿ ಬೇರೆಬೇರೆಯವರಿಗೆ ಹಂಚಿಹೋದಲ್ಲಿ ಕಡಮೆ ಜನರ ಬೆಂಬಲದಿಂದ ಹೆಚ್ಚು ಸ್ಥಾನಗಳನ್ನು ಕೆಲವು ಪಕ್ಷಗಳು ಪಡೆಯುವವು. ಇದೇ ರೀತಿಯಲ್ಲಿ ಹೆಚ್ಚುಮತವನ್ನು ಪಡೆದೂ ಸ್ವಲ್ಪಜನರು ಮಾತ್ರ ಆರಿಸಿ ಬರುವಂಥ ಯೋಗವೂ ಇದೆ. ಹೀಗೆ ನಡೆದಲ್ಲೆಲ್ಲಾ ನಿಜವಾದ ಪ್ರತಿನಿಧಿ ಸರಕಾರವಿದೆ ಎನ್ನಲು ಬರುವದಿಲ್ಲ. ಇವರು ಕೆಲವು ಸಮಯ ಜನಾಭಿಪ್ರಾಯಕ್ಕೆ ವಿರೋಧವಾಗಿ ನಡೆಯಲೂ ಬಹುದು. 1886ರಲ್ಲಿ ಇಂಗ್ಲೆಂಡಿನಲ್ಲಿ ಹೋಮ್‌ರೂಲು ಪಕ್ಷ (Home Rule Party) ದವರು 2,103,954 ಮತಗಳಿಂದ 283 ಸ್ಥಾನಗಳನ್ನು ಪಡೆದಿರುವರು, ಯೂನಿಯನಿಸ್ಟರು (Unionists) 2,049,137 ಮತಗಳಿಂದ 387 ಸ್ಥಾನಗಳನ್ನು ಪಡೆದಿರುವರು. ಇದೇ ರೀತಿಯಲ್ಲಿ 1874ರ ಚುನಾವಣೆಯಲ್ಲಿ ಕನ್ಸರ್‌ವೇಟಿವ್ ಪಕ್ಷದವರು (Conservative Party) 356 ಸ್ಥಾನಗಳನ್ನು 1,222,000 ಮತಗಳಿಂದ ಪಡೆದಿರುವರು- ಲಿಬರಲ್ ಪಂಗಡದವರು ಮತ್ತು ರ್‍ಯಾಡಿಕಲ್ ಪಂಗಡವರು (Liberals and Radicals) ಒಟ್ಟು 296ಸ್ಥಾನಗಳನ್ನೂ 1,436,000 ಮತಗಳಿಂದ ಪಡೆದಿರುವರು. ಇನ್ನು 1918ನೇ ಚುನಾವಣೆಯಲ್ಲಿ ಕೊಯಲೀಶನ್ ಪಕ್ಷದವರು (Coalition party) ಶೇಕಡ 53ರಷ್ಟು ಮತಗಳಿಂದ ಶೇಕಡ 80ಸ್ಥಾನಗಳನ್ನು ಗಳಿಸಿರುವರು. ಇದು ನಿಜವಾದ ಪ್ರತಿನಿಧಿ ಸರಕಾರವಲ್ಲ. ಇದು ಅಕಸ್ಮಾತ್ತಾಗಿ ಅದೃಷ್ಟದಿಂದ ಸಿಕ್ಕಿದ ಸ್ಥಾನಲಾಭ. ಜನಸಂಖ್ಯೆಯನ್ನು ಎಣಿಕೆಗೆ ತಾರದ ಬರೀ ಫಿರ್ಕಾಗಳ ಸ್ಥಾನಗಳನ್ನೇ ಲೆಕ್ಕಕ್ಕೆ ತಂದುಕೊಂಡು ಸದಸ್ಯರನ್ನು ಆರಿಸುವಲ್ಲಿ ಮತ್ತು ಅನ್ಯಾಯಕ್ಕೆ ಎಡೆಕೊಟ್ಟಂತಾಗುತ್ತದೆ.

ನಾವು ಯಾವಾಗಲೂ ಸಾರ್ವಜನಿಕ ಅಭಿಪ್ರಾಯ ಜನಮತ ಇವುಗಳ ಕುರಿತು ಮಾತನಾಡುವೆವು. ಆದರೆ ಪ್ರತಿಯೊಂದು ವಿಷಯದಲ್ಲೂ ಒಂದು ಬಹುಮತ ಇನ್ನೊಂದು ಕಡಮೆ ಸಂಖ್ಯಾತರ ಮತವು ಇದುಂಟೆಂದು ನೆನಪಿನಲ್ಲಿಟ್ಟುಕೊಳ್ಳುವದಿಲ್ಲ. ನಮ್ಮ ಚುನಾವಣೆಯ ರೀತಿನೀತಿಗಳಂತೆ ಅಲ್ಪಸಂಖ್ಯಾತರಿಗೆ ಸ್ಥಾನದೊರಕುವದು ಬಹಳ ಕಷ್ಟವಾಗಿದೆ. ನಮ್ಮ ರಾಷ್ಟ್ರದಲ್ಲಿ 4000ಚುನಾವಣಾ ಸ್ಥಾನಗಳವೆ.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ

ಕಾಳಿಕಮಾಲಿ

ಚವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ.

ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—

ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.

ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10—0—0 (ಅಂಚೆವೆಚ್ಚ ಪ್ರತ್ಯೇಕ)

AYURVEDIC PHARMACY
Baba kali Kamali-Wala RISHIKESH.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಷ್ಯದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವೈಕುಂಠಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಮ್ಯಾನೇಜಿಂಗ್ ಡೈರೆಕ್ಟರ್...)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಎಲ್ಲ ಕಡೆ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು. ಬೊಂಬಾಯಿ ಮತ್ತು ಕಲ್ಕತ್ತ.

ದಾಗರು ಅಲ್ಪಸಂಖ್ಯಾತರಿದ್ದರೆ ಯಾವ ಧಿಕಾರದಲ್ಲಿಯೂ ಅವರಿಗೆ ಸ್ಥಾನದೊರೆಯದು. ಇಡೀ ರಾಷ್ಟ್ರದಲ್ಲಿ ನಾಲ್ಕು ಮಿಲಿಯ ಜನರಿಗೆ ಪ್ರತಿನಿಧಿಗಳಿಲ್ಲವೆಂದೇ ಅಗುತ್ತದೆ. ಈ ಪದ್ಧತಿಯಿಂದ ಮತದಾರರಿಗೆ ಮಾತ್ರವಲ್ಲ ದೇಶಕ್ಕೂ ಹಾನಿಯುಂಟು. ಹೊಸಹೊಸ ಆಲೋಚನೆಗಳು ಅನುಭವಗಳು ದೇಶದ ಏಳಿಗೆಗೆ ಮತ್ತು ವೃದ್ಧಿಗೆ ಉತ್ತೇಜನ ವಸ್ತುಗಳು. ನಾವು ತಿನ್ನುವ ಆಹಾರಕ್ಕೆ ಉಪ್ಪು ಹೇಗೆ ಅಗತ್ಯವೋ ಹಾಗೆಯೇ ಅಲ್ಪಸಂಖ್ಯಾತರ ಅಭಿಪ್ರಾಯವು ಜನಮತಕ್ಕೆ ಅಗತ್ಯವಿರುವುದು. ಇಂಥಾ ಸಂದರ್ಭಗಳೊದಗುವದು ತಪ್ಪಿಸಿ ಜನರ ಸಂಗವಾದ ಹಕ್ಕನ್ನು ಪ್ರತಿನಿಧಿ ಸರಕಾರಗಳಲ್ಲಿ ತೋರ್ಪಡಿಸಿ ಜನಮತವನ್ನು ನ್ಯಾಯಸಭೆಯಲ್ಲಿ ಅಳ್ವಳಿಸುವಂತೆ ಮಾಡುವರೆ ಸೆಕಂಡ ಬೆಲ್ಲಟ್ (Second ballot) ಅಲ್ಟರ್‌ನೇಟ್ ವೋಟು (Altornate vote) ಮತ್ತು ಪ್ರೊಪೋರ್ಶನಲ್ ರೆಪ್ರೆಸೆಂಟೇಶನ್ ಇವೇ ಮೊದಲಾದ ಯತ್ನಗಳನ್ನು ಇತ್ತೀಚೆಗೆ ಕಂಡು ಹಿಡಿದಿರುವರು. ಇವುಗಳಿಂದಾಗಲೀ ಇನ್ನಿತರ ಯತ್ನಗಳಿಂದಲಾದರೂ ನಿಜವಾದ ಬಹುಮತದವರಿಗೆ ದೇಶದಲ್ಲಿರುವ ಬಹುಮತವು ದೊರೆಯುವಂತೆ ಮಾಡಬಹುದು. ಆದರೂ ಕೆಲವು ವೈಯಕ್ತಿಕ ವ್ಯಕ್ತಿಗಳಿಗೆ ಸ್ಥಾನ ದೊರೆಯುವದು ಕಷ್ಟ. ಅಂಥವರು ಲೋಕದಲ್ಲಿ ಬಹಳ ಕಡಿಮೆಯಾದ್ದರಿಂದ ಇದನ್ನು ಗಮನಕ್ಕೆ ತರುವದು ಅನಾವಶ್ಯಕ. ಪ್ರತಿನಿಧಿ ಸರಕಾರವೆಂಬುದು ಕನ್ನಡಿಯ ಹಾಗೆ ಸಂಪೂರ್ಣ ಪ್ರತಿಬಿಂಬಿಸುವಂಥಾದ್ದಲ್ಲ. ಫೋಟೋಗ್ರಾಫಿನ ಹಾಗೆ ನಿಜರೂಪವನ್ನು ತೋರಿಸುವಂಥಾದ್ದು ಅಲ್ಲ. ಅದು ಜನರ ಒಂದು ತರದ ನಕಲಿನಂತಿರುವದಾಗಿದೆ. ರಾಜಕೀಯ ಪಕ್ಷದಲ್ಲಿ ಸಾಧಾರಣ ಮಟ್ಟಿನ ಹೋಲಿಕೆಯೇ ಹೊರತು ಎಲ್ಲಾ ವಿಚಾರದಲ್ಲೂ ಒಂದು ಲಕ್ಷಣವನ್ನು ತಪ್ಪದೇ ಅಗಬೇಕೆಂದ್ರೆ ತಪ್ಪುವೇ ಸರಿ. ಪ್ರತಿನಿಧಿ ಸಭೆಯು ಜನರ ನಿಜವಾದ ಪ್ರತಿನಿಧಿಗಳಾಗುವರೆ ಪಕ್ಷಗಳು ಬೇಕೆಂಬುದನ್ನು ಈ ಹಿಂದೆಯೇ ಹೇಳಿಯದೆ. ನಾವು ಪ್ರತಿನಿಧಿ ಜನಮತ ಹೊಂದಿರುವರೆಂಬುದನ್ನು ಕಹಾ ತಿಳಿಯದೆ ನಾವು ಪ್ರತಿನಿಧಿಗಳನ್ನು ಯೋಗ್ಯತೆಯಿಂದ ಆರಿಸಿದರೆ ಸಾಲದು. ಅವರು ಸಭೆಯಲ್ಲಿ ಹೇಗೆ ವರ್ತಿಸುತ್ತಾರೆ. ಜನಮತದಂತೆ ನಡೆಯುತ್ತಾರೋ ಸ್ವೇಚ್ಛೆಯಂತೆ ವರ್ತಿಸುತ್ತಾರೋ ಎಂಬುದನ್ನು ನೋಡಬೇಕು. ಸದಾ ಜಾಗರೂಕತೆಯೇ ಸ್ವಾತಂತ್ರ್ಯದ ಬೆಲೆಯಾಗಿದೆ. ಎಂದಿರುವರು.

ಸಿ ಎಚ್. ಸೆಟ್ಟಿ ಬಿ. ಎ.

(ಮುಂದುವರಿಯುವುದು)

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 291/1951

ಮಹಮ್ಮದ ಕುಂಞ ಬ್ಯಾರಿ -ವಾದಿ,

N. ಆದ್ರೆ ಬ್ಯಾರಿ, ಅಂದು ಬ್ಯಾರಿ ಮಗ, ಕಾಸರಗೋಡು ತಾಲೂಕು ಮಂಜೇಶ್ವರ ಗ್ರಾಮದ ಅರಯನ್ನಪ್ಪಾಡಿಯಲ್ಲಿ ಬವದ.

-ಪ್ರತಿವಾದಿ.

ಪ್ರತಿವಾದಿಯು ವಾದಿಗೆ ಬರಕೊಟ್ಟ ಡಿಮಾಂಡ ಪ್ರೋನೋಟಿನ ಅಸಲು ಬಡ್ಡಿ ಅಸಲಿಗೆ ವಾದಿಯು ದಾಖಲು ಮಾಡಿದ ವ್ಯಾಜ್ಯವು ತಾರೀಖು 16-11-1951ಕ್ಕೆ ತನಿಖೆಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗಿರುವುದೆ.

(Sd) P Ahmad,
Advocate for Plaintiff.
ಕಾಸರಗೋಡು, 25-10-1951

ಕ್ಷಯರೋಗ ಮುದ್ರೆಗಳ ಮಾರಾಟದ
ದ್ವಿತೀಯ ಚಳವಳ

(ಏರ್ಪಡಿಸಿದವರು ಭಾರತದ ಕ್ಷಯರೋಗ ಸಂಘ, ನವದಿಲ್ಲಿ)

ಮೊದಲನೆ ಕ್ಷಯರೋಗದ ಮುದ್ರೆಗಳ ಮಾರಾಟ ಚಳವಳದಿಂದ ರೂ. **10,30,000** ಉತ್ಪತ್ತಿಯಾಗಿದೆ. ಈ ನಿಧಿಯು ಭಾರತದಲ್ಲಿ ಕ್ಷಯರೋಗ ನಿವಾರಣಾ ಕಾರ್ಯಕ್ರಮಗಳನ್ನು ಕೈಕೊಳ್ಳುವುದಕ್ಕಾಗಿ ವಿನಿಯೋಗಿಸಲ್ಪಡುವುದು.

"........ಅತ್ಯಂತ ನೋವಿನಿಂದ ನರಳುತ್ತಿರುವ ನಮ್ಮ ಬಂಧುಗಳ ದುಃಖವನ್ನು ಮರೆಯದಿರೋಣ; ನಮ್ಮ ಮಧ್ಯದಲ್ಲಿಯೇ ಕ್ಷಯರೋಗವೆಂಬ ಅತ್ಯಂತ ಚುರುಕಾದ ಗುಪ್ತ ಶತ್ರುವು ಇದ್ದುಕೊಂಡು ನಮ್ಮ ಜನರನ್ನು ಅಪಾರ ನಾಶಕ್ಕೆ ಗುರಿಪಡಿಸುವುದಲ್ಲದೆ ನಮ್ಮ ಜನಾಂಗದ ರಕ್ತಿಯನ್ನೇ ಹೀರಿ, ಅದರ ಅಡಿಗಟ್ಟನ್ನೇ ಬಲಹೀನವನ್ನಾಗಿ ಮಾಡುವುದು.

ರಾಜಕುಮಾರಿ ಅಮೃತಕೌರ್.

ದೀಪಾವಳಿ ಕಳೆಯಿತು; ಮತ್ತೊಮ್ಮೆ ಲಕ್ಷ ದೀಪೋತ್ಸವ ಬಂತು!

ನೆನಪಿರಲಿ! ಕ್ಷಯರೋಗದಿಂದ ಪೀಡಿತರಾದ ಲಕ್ಷೋಪಲಕ್ಷ ನಮ್ಮ ಬಂಧುಗಳಿಗೆ ಜೀವನದ ಸಂತೋಷಗಳೇ ಇಲ್ಲವಾಗಿವೆ ಈ ಭಯಂಕರ ರೋಗವನ್ನು ಇದಿರಿಸುವ ಪ್ರಯತ್ನದಲ್ಲಿರುವವರಿಗೆ ಸಹಾಯ ಮಾಡುವ ಮೂಲಕ ಅವರಿಗೆ ನಮ್ಮ ಸಹಾನುಭೂತಿಯನ್ನು ತೋರಿಸೋಣ ದಯಮಾಡಿ ಕ್ಷಯರೋಗದ ಮುದ್ರೆಯನ್ನು ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ. ಒಂದು ಮುದ್ರೆಯ ಬೆಲೆ **ಒಂದಾಣೆ ಮಾತ್ರ.** ಅದು ಶಾಂತಿಯ, ಸಂತೋಷದ ಮತ್ತು ಸಂತ್ಸೋಷದ ಸಂಕೇತವಾಗಿದೆ.

ಹಿಂದಿನ ವರ್ಷದ ಕ್ಷಯರೋಗ ಮುದ್ರೆಗಳ ಮಾರಾಟದ ಚಳವಳದಲ್ಲಿ ನಿಮ್ಮ ಸಂಸ್ಥಾನವು ರೂ. 1,43,918 ಒಟ್ಟುಗೂಡಿಸಿದೆ. ಈ ನಿಧಿಯು ಕ್ಷಯರೋಗ ನಿವಾರಣಾ ಕಾರ್ಯಕ್ಕಾಗಿ ನಿಮ್ಮ ಸಂಸ್ಥಾನದಲ್ಲಿಯೇ ವ್ಯಯಿಸಲ್ಪಡುವುದು.

ಈ ಮುದ್ರೆಗಳು ದೊರೆಯುವ ಸ್ಥಳ:-

ಗೌ. ಕಾರ್ಯದರ್ಶಿ, ಮದ್ರಾಸ್ ಕ್ಷಯರೋಗ ಸಂಘ,
ಚೀಫ್ ಹೆಲ್ತ್ ಆಫೀಸರರ ಆಫೀಸು, ರಿಪ್ಪನ್ ಬಿಲ್ಡಿಂಗ್ಸ್, ಮದ್ರಾಸ್,
ಮತ್ತು ಸಂಸ್ಥೆ ಇತರ ಏಜನ್ಸಿಗಳಿಂದ.

ಈ ಸ್ಥಳವನ್ನು ಉದಾರ ದಾನ ಮಾಡಿದವರು;

ಮೆಸರ್ಸ್ ರಾಣೆ (ಮದ್ರಾಸ್) ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಸಮರಾನಂತರವೇ ಶಾಂತಿ.

'Peace only after the war' ಎನುವ ಯುದ್ಧಪ್ರಿಯ ಚರ್ಚಿಲ್ಲರು ತಿರುಗಿ ಅಧಿಕಾರಕ್ಕೆ ಬಂದಿರುವದು ಅತ್ಯಂತ ಆಶ್ಚರ್ಯ ಹಾಗೂ ವಿಸ್ಮಯಕರ ಸಂಗತಿ! ಸುಮಾರು ಆರೇಳು ವರ್ಷಗಳಿಂದ ಕೂಲಿಕಾರ ಪಕ್ಷವು ಅಧಿಕಾರವು ನಡೆಸುತ್ತಿದ್ದು ಕಳೆದ ವರ್ಷ ಕೇವಲ 9 ಮತಗಳ ಬಹುಮತದಿಂದ ಅಧಿಕಾರ ನಡೆಸುವದು ದುಸ್ತರವೆಂದು ಕಂಡು ಬಂದುದರಿಂದ ಕ್ಲಿಮೆಂಟ್ ಅಟ್ಲಿಯವರು ಒಂದು ವರ್ಷಗಳೊಳಗಾಗಿ ಸಾರ್ವತ್ರಿಕ ಚುನಾವಣೆ ನಡೆಸಿದ್ದಾಗಿರುತ್ತದೆ. ಚುನಾವಣೆಯಲ್ಲಿ ಬಹುಮತ ಕೂಲಿಗಾರ ಪಕ್ಷಕ್ಕೆ ದೊರಕಬಹುದೆನುವ ವಿಶ್ವಾಸ ಭರವಸೆಗಳು ಅಟ್ಲಿಯವರಿಗಿತ್ತು. ಜಗತ್ತು ಕೂಡಾ ಅದನ್ನೇ ನಿರೀಕ್ಷಿಸಿತ್ತು. ಆದರೆ ಪರಿಸ್ಥಿತಿ ಬುಡಮೇಲಾಯಿತು. 77 ವರ್ಷದ ಚರ್ಚಿಲ್ ಅಧಿಕಾರಕ್ಕೆ ಬಂದರು. ಮುಖ್ಯ ಮಂತ್ರಿಯಾಗಿ ಸಂರಕ್ಷಣೆಯ ಖಾತೆಯನ್ನು ತಾನು ತೆಗೆದುಕೊಂಡರು. ಉಪಮುಖ್ಯ ಮಂತ್ರಿಯಾಗಿ ವಿದೇಶಖಾತೆಯನ್ನು ಆ್ಯಂಥನಿ ಈಡೆನ್ನರು ವಹಿಸಿಕೊಂಡಿರುವರು. ಮಂತ್ರಿಮಂಡಳ ಅಧಿಕಾರವನ್ನು ವಹಿಸಿರುತ್ತದೆ.

ಕೂಲಿಕಾರಪಕ್ಷದ ಪರಾಭವದಿಂದ ಹಲವು ರಾಷ್ಟ್ರಗಳಿಗೆ ಸಖೇದಾಶ್ಚರ್ಯ ಉಂಟಾಗಿರುವದು ಸ್ವಾಭಾವಿಕ. 23ರಷ್ಟು ಬಹುಮತ ಪಡೆದು ಬಂದ ಕನ್ಸರ್ವೇಟಿವ್ ಸಬಲವಾದುದಾಗಿಯೇ ಇರುತ್ತದೆ. ಕೂಲಿಕಾರ ಪಕ್ಷ ಅಧಿಕಾರಕ್ಕೆ ಬಂದನಂತರ ದ್ವಿತೀಯ ಮಹಾಯುದ್ಧದಲ್ಲಾದ ಹಾನಿಯನ್ನು ಪರಿಹರಿಸಲು ಶ್ರಮಿಸಿತು. ಭಾರತವೇ ಮೊದಲಾದ ರಾಷ್ಟ್ರಗಳಿಗೆ ಸ್ವಾತಂತ್ರ್ಯವನ್ನಿತ್ತಿತು! ಸಾಮಾನ್ಯಜನತೆಯ ಹಿತರಕ್ಷಣೆಗಾಗಿ ಕೂಲಿಗಾರ ಪಕ್ಷ ಎಷ್ಟೇ ಶ್ರಮಿಸಿದರೂ ಮಧ್ಯಮ ವರ್ಗದವರ ಜೀವನ ನಿರೀಕ್ಷಿತದಷ್ಟು ಉತ್ತಮವಾಗಿರಲಿಲ್ಲ ಮಾತ್ರವಲ್ಲ ವಿದೇಶಾಂಗ ನೀತಿಯ ಪರಿಣಾಮವಾಗಿ ಬ್ರಿಟನು ತನ್ನ ಸಂಪತ್ತನ್ನು ಕಳೆದು ಕೊಳ್ಳುವ ಸಂದರ್ಭಗಳನ್ನೂ ಬ್ರಿಟನದ ಬಹುಸಂಖ್ಯಾತ ಜನದ ಆತ್ಮಾಭಿಮಾನವನ್ನು ಕೆರಳಿಸಿಯದೆ. ಸಾಮ್ರಾಜ್ಯ ಶಾಹಿತ್ವಕ್ಕೆ ಮನಸೋಲುವದಕ್ಕೆ ಮುಖ್ಯಕಾರಣಗಳು ಎರಡು. ಒಂದು ಇರಾಣದ ಪ್ರಶ್ನೆ; ಇನ್ನೊಂದು ಇಜಿಪ್ತದ್ದು. ಇವೆರಡು ಪ್ರಶ್ನೆಯನ್ನು ಬಗೆಹರಿಸುವಲ್ಲಿ ಕೂಲಿಗಾರ ಪಕ್ಷ ಸಮರ್ಥವಾಗದೆ ಅವೆರಡೂ ಕೈಬಿಡುವ ಲಕ್ಷಣಗಳು ಕಂಡುಬಂದವು. ಇಂತಹ ಸಂದರ್ಭದಲ್ಲೆಲ್ಲ ಚರ್ಚಿಲ್ಲರೇ ಯೋಗ್ಯರೆಂಬುದು ಅಲ್ಲಿನ ಜನಕ್ಕೆ ಚೆನ್ನಾಗಿ ಗೊತ್ತು. ಅಂತಲೇ ಯುದ್ಧಪ್ರಿಯ ಚರ್ಚಿಲ್ಲರು ಆರಿಸಿಬಂದಿರುವರು. ಅವರಿಗೆ ಪ್ರಿಯವಾದುದು ಮೊದಲೇ ಇಲ್ಲಿ ನಿರ್ಮಾಣಗೊಂಡಿದೆ.

ಇಜಿಪ್ತದಲ್ಲಿ ಬ್ರಿಟಿಶರ ಸೈನ್ಯ

ಇಜಿಪ್ತದ ಸಾರ್ವಭೌಮತ್ವವನ್ನು ಮನ್ನಿಸಿ ತನ್ನ ಸೈನ್ಯ ಹಿಂತೆಗೆದುಕೊಂಡು ಹೊರಡಬೇಕೆಂದು ಇಜಿಪ್ತವು ಸ್ಪಷ್ಟ ಹೇಳಿರುವದಾದರೂ ಬ್ರಿಟನ್ನು ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡಂತಿಲ್ಲ- ಪಾಕಿಸ್ತಾನದ ವಿದೇಶಾಂಗ ಮಂತ್ರಿ ಮಧ್ಯಸ್ಥಿಕೆಯ ಆತುರವನ್ನು ಪ್ರದರ್ಶಿಸಿದ್ದನ್ನು ಇಜಿಪ್ತ ನಿರಾಕರಿಸಿದೆ. ಇಜಿಪ್ತಕ್ಕೆ ಬ್ರಿಟನು ಪೆಟ್ರೋಲನ್ನು ಕಳಿಸಿಕೊಡುವದನ್ನು ನಿಲ್ಲಿಸಿಬಿಟ್ಟಿರುವುದರಿಂದ ಪ್ರಕ್ಷುಬ್ಧ ವಾತಾವರಣವುಂಟಾಗಿದೆ. ವಿಮಾನ ಹಾಗೂ ನೌಕೆಗಳ ಮೂಲಕ ಬ್ರಿಟನು ಸೈನ್ಯವನ್ನು ಕಳಿಸಾಕಿದ್ದನ್ನು ನೋಡುವಾಗ ಸುಯೇಜದ ಪ್ರಶ್ನೆ ಬಲಪ್ರಯೋಗದಿಂದಲೇ ಇತ್ಯರ್ಥವಾಗಲೆಂದು ಕನ್ಸರ್ವೇಟಿವ್ ಸರಕಾರದ ಮನೀಷೆಯಿದೆಯೆಂದು ಅರ್ಥವಾಗುತ್ತದೆ. ಬರುವ ವಾರದಲ್ಲಿ ಪ್ಯಾರಿಸದಲ್ಲಿ ಜರಗುವ ಸಂರಾ, ಸಂಘದೆದುರು ಈ ಮಾತುಕತೆ ಬರುವ ಸಂಭವವುಂಟೆಂದು ತಿಳಿಯುತ್ತದೆ. ಇಜಿಪ್ತದ ಬಂಧವಿಮೋಚನೆಗೆ ಭಾರತದ ನೈತಿಕ ಬೆಂಬಲವನ್ನು ಕೋರಲಾಗಿದೆ. ಭಾರತ ಸ್ವಾತಂತ್ರ್ಯದ ಮೂಲಪುರುಷರೂ ಜಗತ್ತಿನ ಶ್ರೇಷ್ಠ ವ್ಯಕ್ತಿಗಳೂ ಆದ ಮಹಾತ್ಮಾ ಗಾಂಧಿಯವರ ಆದರ್ಶವೇ ತಮಗೆ ಸ್ಫೂರ್ತಿಯಾಗಿದೆಂದು ವಿದೇಶ ಮಂತ್ರಿ ಪಾಶಾರವರು ಹೇಳಿರುವರು. ನೆಹರೂರವರು ಭಾರತದ ಸಹಾನುಭೂತಿಯನ್ನು ವ್ಯಕ್ತಪಡಿಸಿ ಸುಯೇಜ ಕಾಲುವೆ ಪ್ರದೇಶವನ್ನು ಇಜಿಪ್ತದ ರಾಜಕೀಯ ಅಧಿಕಾರಕ್ಕೊಪ್ಪಿಸಿ ಸಂಪರ್ಕದ ಬಗ್ಗೆ ಅಂತರರಾಷ್ಟ್ರೀಯ ವ್ಯವಸ್ಥೆ ಮಾಡಿಕೊಳ್ಳಬಹುದೆಂದಿರುವರು.

ಪಾಕ್ ಸ್ನೇಹ ಸಂಬಂಧ

ಶ್ರೀ ನೆಹರೂರವರು ಸುದ್ದಿಗಾರರ ಸಭೆಯಲ್ಲಿ ಪಾಕಿಸ್ಥಾನದೊಡನೆ ಸ್ನೇಹವನ್ನು ಬೆಳೆಸಲು ತಾವು ಆತುರರಾಗಿರುವೆಂದೂ- ಅನಾಕ್ರಮಣ ಒಪ್ಪಂದಕ್ಕೆ ತಾನು ಸಿದ್ಧನಿರುವೆನೆಂದೂ ಹೇಳಿರುವರು. ಲಿಯಾಖತ್ ಅಲಿಖಾನರ ವಿಯೋಗದಿಂದ ಉಭಯ ರಾಷ್ಟ್ರಗಳಲ್ಲಿ ಜಾತೀಯ ತ್ವೇಷ ಕಡಿಮೆಯಾಗಿದ್ದು ಸ್ನೇಹಸಂವರ್ಧಿಸುವ ಲಕ್ಷಣಗಳು ಕಂಡು ಬರುತ್ತಿವೆ. ಭಾರತ ಪಾಕಿಸ್ತಾನ ಮುಖ್ಯ ಮಂತ್ರಿಗಳೊಳಗೆ ಭೇಟಿ ನಡೆಯಬಹುದೆಂದೂ ಊಹಾಪೋಹೆಯಿದ್ದಿದೆ. ಉಭಯರಾಷ್ಟ್ರಗಳ ನಡುವೆ ವಿವಾದಾಸ್ಪದ ವಿಷಯ ಭದ್ರತಾಮಂಡಳದ ಮುಂದಿರುವ ಪ್ರಯುಕ್ತ ಸದ್ಯ ಆ ಮಾತುಕತೆ ಸೂಕ್ತವಲ್ಲವೆಂದು ನೆಹರೂ ಅಭಿಪ್ರಾಯ ಪಟ್ಟಿರುವರು. ಈ ಪ್ರಶ್ನೆಯನ್ನು ಭಾರತ ಪಾಕಿಸ್ತಾನಗಳೇ ಬಗೆಹರಿಸುವದೊಂದೇ ಉತ್ತಮ ಪರಿಹಾರ್ಯ ಮಾರ್ಗವಾಗಬಹುದೆಂದು ಕಳೆದ ಬಾರಿ ನಾವು ಸೂಚಿಸಿದ್ದೆವು. ನೆಹರೂರವರು ತಮ್ಮ ಹೇಳಿಕೆಯಲ್ಲಿ "ಮುಖ್ಯ ಸಮಸ್ಯೆಯ ಪರಿಹಾರವನ್ನು ಕಂಡುಹಿಡಿವ ಮಾತನ್ನು ನಮಗೇ ಬಿಟ್ಟುಕೊಟ್ಟರೆ ಬಹಳ ಸಂತೋಷ"ವೆಂದಿರುವರು.

ಸಂ ರಾ. ಸಂಘದ ಪ್ಯಾರಿಸ್ ಸಭೆ

ಕಾಶ್ಮೀರ ಸಮಸ್ಯೆಯು ಪ್ಯಾರಿಸದಲ್ಲಿ ಜರಗುವ ಸಭೆಯ ಮುಂದೆ ಚರ್ಚೆಗೆ ಬರುವದೆಂದು ಗೊತ್ತಾಗಿದ್ದರೂ ಈ ಸಭೆಯು ಕೇವಲ ಔಪಚಾರಿಕವಾಗಿರುವದೆಂದು ಹೇಳಲಾಗಿದೆ. ಕಾಶ್ಮೀರ ಮಧ್ಯಸ್ಥಗಾರರಾದ ಡಾ. ಗ್ರಾಹ್ಯಾಮರು ಕಾಶ್ಮೀರದಲ್ಲಿ ಮಧ್ಯಸ್ಥ ಕಾರ್ಯವನ್ನು ಮುಂದುವರಿಸಬಹುದೆಂಬ ಇಚ್ಛೆಯನ್ನು ತನ್ನ ವರದಿಯಲ್ಲಿ ವ್ಯಕ್ತಪಡಿಸಿದ್ದರಿಂದ ತತ್ಕಾಲ ಅದೇ ಕಾರ್ಯವನ್ನು ಅವರು ಮುಂದುವರಿಸುವಂತೆ ಸಂ. ರಾ. ಸಂಘ ಆದೇಶವನ್ನೀಯಬಹುದೆಂದು ತಿಳಿಯುತ್ತದೆ. ಅಸ್ಟ್ರೇಲಿಯದ ವಿದೇಶ ಮಂತ್ರಿ ಕೇಸಿಯವರು ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಮಧ್ಯಸ್ಥಿಕೆಯ ಮಾತುಕತೆಯನ್ನು ಉಭಯ ರಾಷ್ಟ್ರಗಳ ಮಹಾಪ್ರತಿನಿಧಿಗಳೊಡನೆ ಔಪಚಾರಿಕವಾಗಿ ನಡೆಸಿರುವರು. ಭಾರತದಲ್ಲಿ ಜನವರಿಯಲ್ಲಿ ಜಗತ್ತಿನಲ್ಲೇ ಹಿರಿದಾದ ಚುನಾವಣೆ ನಡೆಯಲಿರುವ ಪ್ರಯುಕ್ತ ಅವೊಳಗಾಗಿ ಕಾಶ್ಮೀರ ಸಮಸ್ಯೆಯ ಕೊನೆಯ ನಿರ್ಣಯ ಕೈಗೊಳ್ಳುವ ಸಂಭವ ಕಡಿಮೆ- ಕಾಶ್ಮೀರದಲ್ಲಿ ರಚನೆಗೊಂಡಿರುವ ಘಟನಾಸಮಿತಿಯಿಂದ ಸಂ. ರಾ. ಸಂಘಕ್ಕೆ ಕಳವಳವುಂಟಾಗಿರುವದಾದರೂ ತನ್ನ ತೀರ್ಮಾನಕ್ಕೆ ಅದರಿಂದ ಧಕ್ಕೆ ಬರಲಾರದು! ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಾಫ್ರುಲ್ಲಾಖಾನರು ಕನ್ಸರ್ವೇಟಿವ್ ಪಕ್ಷದ ಒಲವನ್ನು ಸಾಧಿಸುವ ಯತ್ನ ನಡೆಸುತ್ತಿದ್ದಾರೆ. ಬ್ರಿಟನದ ವಿದೇಶಾಂಗ ಮಂತ್ರಿ ಆಂಥೋನಿಯವರೊಡನೆ ಇಷ್ಟರಲ್ಲೇ ಕಾಶ್ಮೀರದ ಬಗ್ಗೆ ಚರ್ಚೆ ನಡೆಸಿರುವದಾಗಿ ತಿಳಿಯುತ್ತದೆ. ಇಜಿಪ್ತ ಪ್ರಕರಣದಲ್ಲಿ ತಾನು ಮಧ್ಯಸ್ಥಗಾರನಾಗಿ ಮಾತನಾಡಿದ್ದನ್ನು ಇಜಿಪ್ತವು ನಿರಾಕರಿಸಿತ್ತಷ್ಟೆ, ಇದಕ್ಕೆ ಮುಖ್ಯ ಕಾರಣ ಅವರು ಬ್ರಿಟನದ ಪರವಾಗಿ ವಾದಿಸಿದ್ದೇ ಆಗಿರುತ್ತದೆಂದು ತಿಳಿಯುತ್ತದೆ.

ಘಟನಾಸಮಿತಿ

ಕಾಶ್ಮೀರ ಘಟನಾಸಮಿತಿಯೂ ಯಶಸ್ವಿಯಾಗಿ ನಿರ್ಮಾಣಗೊಂಡಿದ್ದು ಗುಲಾಮ ಮಹಮ್ಮದರು ಅಧ್ಯಕ್ಷರಾಗಿ ಆರಿಸಿ ಬಂದಿರುವರು. ಘಟನಾ ಸಮಿತಿಯ 75 ಸ್ಥಳಗಳೂ ರಾಷ್ಟ್ರೀಯ ಪರಿಷತ್ತಿನವರೇ ಆರಿಸಿಬಂದಿರುವದು ರಾಷ್ಟ್ರೀಯ ಪರಿಷತ್ತಿನ ಮೇಲೆ ಕಾಶ್ಮೀರದ ಜನತೆಗಿರುವ ವಿಶ್ವಾಸದ ದ್ಯೋತಕವಾಗಿದೆ. ಸುಮಾರು ಇಪ್ಪತ್ತು ವರ್ಷಗಳಿಗೂ ಮೇಲ್ಪಟ್ಟು ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನವರು ಸ್ವಾತಂತ್ರ್ಯಕ್ಕಾಗಿ—ನಿರಂಕುಶ ಪ್ರಭುತ್ವದ ವಿಮೋಚನೆಗಾಗಿ ಹೋರಾಟ ನಡೆಸಿರುವರು. ಘಟನಾ ಸಮಿತಿಯ ಮೂಲಕ ಕಾಶ್ಮೀರವನ್ನು ಜಾತ್ಯತೀತರಾಷ್ಟ್ರವೆಂದು ಘೋಷಿಸಿಕೊಟ್ಟು ತಮ್ಮ ಭವಿತವ್ಯವನ್ನು ತಾವೇ ನಿರ್ಧರಿಸಿಕೊಳ್ಳಬೇಕೆಂಬ ಇವರ ದೀರ್ಘ ಕಾಲದ ಬಯಕೆ ಇಂದು ಈಡೇರಿದಂತಾಯಿತು!

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, B. SC , F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋವಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.





Approved from by the Govt. of Mysore
Certificated by the Agent of the Govt of Cylone, & Indian

ಒಕ್ಕಲತನ ಶಿಕ್ಷಣದಲ್ಲಿ ಸುಧಾರಣೆ.

ಭಾರತ ಒಕ್ಕಲುತನ ಪಂಪತ್ತು ದಿಲ್ಲಿಯಲ್ಲಿ ಜರಗಿದ್ದು ಒಕ್ಕಲುತನದ ಪದವೀಧರರು ಅಧಿಕಾರಿಗಳಾಗಿ ಮಾತ್ರ ಉಳಿಯುವದಲ್ಲದೆ ಅನುಭವಿಕ ರೈತನನ್ನಾಗಿಯೂ ತರಬೇತಿಗೊಳಿಸಬೇಕೆಂಬ ಸೂಚನೆ ಪರಿಷತ್ತಿನಲ್ಲಿ ಬಂದಿರುವದು. ಆಹಾರ ಮಂತ್ರಿ ಮುನ್ಷಿಯವರ ಹೇಳಿಕೆಯಂತೆ ನಮ್ಮ ದೇಶದ ಜನಸಂಖ್ಯೆ ವರ್ಷಕ್ಕೆ ಹತ್ತು ಲಕ್ಷದಂತೆ ಹೆಚ್ಚುತ್ತಿದೆ. ಈಗ 510 ಲಕ್ಷ ಟನ್ ಧಾನ್ಯ ಬೇಕಾಗುತ್ತದೆ. ಅನಾವೃಷ್ಟಿಯಿಂದಲೂ-ಪ್ರಕೃತಿಯ ಪ್ರಕೋಪದಿಂದಲೂ-ಎಣಿಸಿದಷ್ಟು ಆಹಾರ ನಮಗೆ ದೊರಕುವುದಿಲ್ಲ. ಭಾರತದ 40 ಕೋಟಿ ಎಕ್ರೆ ಭೂಮಿಯಲ್ಲಿ ನೂರಕ್ಕೆ 61ರಷ್ಟು ಬೇಸಾಯಕ್ಕೊಳಪಟ್ಟಿವೆ. 16ರಷ್ಟು ಪಡು ಬಿದ್ದಿದೆ. 23ರಷ್ಟು ಕೃಷಿಗೆ ಯೋಗ್ಯವಾಗಿದ್ದರೂ ಅಲ್ಲಿ ಬೇಸಾಯ ನಡೆದಿಲ್ಲ. ಕೃಷಿ ಯೋಗ್ಯವಾದ ಭೂಮಿಯಲ್ಲಿ 1230 ಲಕ್ಷ ಎಕರೆ ಭೂಮಿಯಲ್ಲಿ ಪುರಾತನ ರೀತಿಯ ಒಕ್ಕಲತನ ನಡೆಯುತ್ತಲಿದೆ. 480 ಲಕ್ಷ ಎಕ್ರೆ ನೀರಾವರಿಗೊಳಪಟ್ಟಿದೆ. ಉಳಿದ ಭೂಮಿಯು ಮಳೆಯನ್ನೇ ಅವಲಂಬಿಸಿದೆ. ನೀರಾವರಿಗೊಳಪಟ್ಟ 480 ಎಕರೆ ಭೂಮಿಯಲ್ಲಿ ಆದಷ್ಟು ಉತ್ಪಾದನ ಹೆಚ್ಚಿಸಬೇಕು. ಪಡಬಿದ್ದಿರುವ ಒಂದು ಕೋಟಿ ಎಕರೆ ಭೂಮಿಯನ್ನು ಸಾಗುವಳಿ ಮಾಡಬೇಕಾಗಿದೆ.

ಒಕ್ಕಲತನದ ಪದವೀಧರರು ರೈತತನದ ಕಾರ್ಯವನ್ನು ಕಡ್ಡಾಯವಾಗಿ ಕಲಿಯಬೇಕೆಂಬ ನಿಯಮವು ಅತ್ಯಂತ ಯೋಗ್ಯವಾದ ಸೂಚನೆ. ರೈತನಿಗೆ ಸರಿಯಾದ ಮಾರ್ಗದರ್ಶನ ಮಾಡಿ ಒಕ್ಕಲತನವನ್ನು ಸುಧಾರಿಸುವದು ಆದ್ಯ ಕರ್ತವ್ಯವಾಗಿದೆ. ಕಡ್ಡಾಯವಾಗಿ ರೈತತನವನ್ನು ವಿದ್ಯಾರ್ಥಿಗಳು ಅಭ್ಯಸಿಸಬೇಕಾದರೆ ಹಳ್ಳಿಯ ಕ್ಷೇತ್ರವನ್ನು ಆಶ್ರಯಿಸುವದು ಅನಿವಾರ್ಯ ಆಗಿಂದಾಗ್ಗೆ ಬಂದು ಕಲಿಯುವದಕ್ಕಿಂತಲೂ ರೈತವಾರೀ ಸಮಯದಲ್ಲಿ ಎರಡೋ ಮೂರು ತಿಂಗಳಲ್ಲಿ ಅಲ್ಲಿಯೇ ಇದ್ದುಕೊಂಡು ಅಭ್ಯಸಿಸುವದು ಯೋಗ್ಯವಾಗಿದೆ. ಇದರಿಂದ ರೈತನು ಚೇತರಿಸಿಕೊಳ್ಳುವದು ಮಾತ್ರವಲ್ಲದೆ ತನ್ನ ಉದ್ಯೋಗದಲ್ಲಿ ಉತ್ಸುಕತೆಯನ್ನು ತಾಳುವದರಲ್ಲಿ ಸಂದೇಹವಿಲ್ಲ. ಒಕ್ಕಲುತನ ಅಭಿವೃದ್ಧಿಯಾಗಿ ಆಹಾರ ಸಮಸ್ಯೆ ಇದರಿಂದ ನಿಧಾನವಾಗಿಯಾದರೂ ಬಗೆಹರಿಯಬಹುದು.

ಮದ್ರಾಸ ಪ್ರಾಂತದಲ್ಲಿಯ ವಿರುದ್ಧ ಪಕ್ಷಗಳು

ಮದ್ರಾಸದ ಶಾಸನ ಸಭೆಗಿರುವ 375 ಸ್ಥಾನಕ್ಕೂ ಲೋಕಸಭೆಗಿರುವ 75 ಸ್ಥಳಗಳಿಗೂ ಬೇರೆ ಬೇರೆ ಪಕ್ಷಗಳಿಂದ ಮೇಲಾಟ ನಡೆಯಲಿದೆ. ಭಾರತದಲ್ಲಿಯ ಪ್ರಮುಖ ಎಂಟು ರಾಜಕೀಯ ಪಕ್ಷಗಳು ಮಾತ್ರವಲ್ಲದೆ ಮದ್ರಾಸವೆ ಕಾರ್ಯಕ್ಷೇತ್ರವಾಗಿರುವ ಇನ್ನಿತರ ಆರು ಪಕ್ಷಗಳೂ ಕಾಂಗ್ರೆಸ್ಸಿಗಿದಿರಾಗಿ ಸ್ಪರ್ಧಿಸಲಿರುವವು. ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನ ನವಂಬರ 21. ಮತದಾನವು ಮದ್ರಾಸ ಪ್ರಾಂತದಲ್ಲಿ 1952ನೇ ಜನವರಿ 2ನೇ ದಿನಾಂಕದಿಂದಾರಂಭಿಸಿ ಮೂರು ವಾರಗಳಲ್ಲಿ ಮುಕ್ತಾಯಗೊಳ್ಳುವದು. ಫೆಬ್ರುವರಿ 11ನೇ ದಿನಾಂಕದೊಳಗಾಗಿ ಫಲಿತಾಂಶವು ಪ್ರಕಟಿಸಲ್ಪಡುವದಾಗಿ ತಿಳಿಯುತ್ತದೆ.

ಕಾಂಗ್ರೆಸ್ಸಿಗಿದಿರಾಗಿ ನಿಲ್ಲುವ ವಿರೋಧಿ ಪಕ್ಷಗಳಲ್ಲಿ ಸಮಾಜವಾದೀ ಪಕ್ಷ, ಕಿಸಾನ ಮಜದೂರ ಪ್ರಜಾಪಾರ್ಟಿ, ಕಮ್ಯೂನಿಸ್ಟ ಪಾರ್ಟಿ, ಜನಸಂಘ ಇವೇ ಮೊದಲಾದವುಗಳಿರುತ್ತವೆ. ಕಾಂಗ್ರೆಸದ ಹುರಿಯಾಳುಗಳ ಯಾದಿಗಳಲ್ಲಿ ಹಲವು ಪ್ರದೇಶದವುಗಳನ್ನು ಪ್ರಕಟಿಸಲ್ಪಟ್ಟಿವೆ. ಆಂಧ್ರದ ಯಾದಿ ಸದ್ಯವೇ ಪ್ರಸಿದ್ಧಗೊಂಡಿದ್ದು ತಮಿಳನಾಡಿನ ಯಾದಿ ಇಷ್ಟರಲ್ಲೇ ಪ್ರಕಟನೆಗೆ ಬರಬಹುದಾಗಿದೆ.

ಮದ್ರಾಸದ ಮುಖ್ಯ ಮಂತ್ರಿಯೇ ಆದಿಯಾಗಿ ಒಂಭತ್ತು ಮಂತ್ರಿಗಳು ಪುನಃ ಚುನಾವಣೆಗೆ ನಿಲ್ಲುವರು. ಮದ್ರಾಸು ನಗರದಿಂದ ಪಾರ್ಲಿಮೆಂಟಿನ ಲೋಕಸಭೆಗೆ 5 ಪಕ್ಷಗಳು ಸ್ಪರ್ಧಿಸುವವು. ಆರು ಮಂದಿಯೂ ಆಯಾಯ ಪಕ್ಷದ ಪ್ರಮುಖ ವ್ಯಕ್ತಿಗಳಾಗಿರುವರು. ಆಂಧ್ರಪ್ರಜಾ ಪಾರ್ಟಿಯ ಧುರೀಣರಾದ ಶ್ರೀ ಟಿ. ಪ್ರಕಾಶಂರವರು ಮದ್ರಾಸು ಶಾಸನ ಸಭೆಗೆ ಸ್ಪರ್ಧಿಸುವರು. ಅವರಿಗೆ ಕಾಂಗ್ರೆಸ್ ಮತ್ತು ಮದ್ರಾಸ್ ಪ್ರಾಂತದ ಇತರ ರಾಜಕೀಯ ಪಕ್ಷಗಳು ಹುರಿಯಾಳುಗಳನ್ನು ನಿಲ್ಲಿಸಿರುವವು.

ಆಂಧ್ರ ಮತ್ತು ಮಲಬಾರಗಳಲ್ಲಿ ವಿರೋಧಿ ಪಕ್ಷಗಳ ಪಾಟಿ ಅತಿಯಾಗಿದೆ. ಆಂಧ್ರದಲ್ಲಿ ಕಿಸಾನ ಮಜದೂರ ಪ್ರಜಾ ಪಾರ್ಟಿ ಸಮಾಜವಾದೀ ಪಕ್ಷಗಳ ಹೋರಾಟವಿದೆ. ಅದರಲ್ಲೂ ಪ್ರಜಾಪಾರ್ಟಿಯೇ ಪ್ರಬಲ ವಿರೋಧಿ ಪಕ್ಷವೆನ್ನಬಹುದು. ಮಲಬಾರದಲ್ಲಿ ಕಮ್ಯೂನಿಸ್ಟ ಹಾಗೂ ಸಮಾಜವಾದಿಗಳ ಬಲವು ಜಾಸ್ತಿಯಾಗಿದೆ. ಎಲ್ಲೆಲ್ಲ ಅಲ್ಪಸ್ವಲ್ಪ ಪ್ರಜಾಪಾರ್ಟಿಗೂ ಸ್ಥಾನವಿರಬಹುದು ಮಲಬಾರದಲ್ಲಿ ಕಮ್ಯೂನಿಸ್ಟ-ಸಮಾಜವಾದಿಗಳ ಇದಿರಲ್ಲಿ ಕಾಂಗ್ರೆಸ್ಸು ಹೆಚ್ಚಿನ ಪ್ರಭಾವ ಬೀರುವಂತಿಲ್ಲ!

ಮುಂಬರುವ ಚುನಾವಣಾ ಪ್ರಚಾರವು ಈಗಾಗಲೇ ಆರಂಭವಾಗಿರುವದಾದರೂ ಎಲ್ಲ ಹುರಿಯಾಳುಗಳ ಪಟ್ಟಿ-ಮತದಾರಕ್ಷೇತ್ರ ನಿಶ್ಚಯವಾದ ಮೇಲೆ ಇನ್ನಷ್ಟು ಜೋರು ಪ್ರಚಾರ ಕಾರ್ಯ ಆರಂಭವಾಗಬಹುದು. ಈಗಾಗಲೇ ಎಲ್ಲ ಪಕ್ಷಗಳೂ ಚುನಾವಣಾ ಪ್ರಚಾರದ ಪೂರ್ವಯೋಜನೆಯನ್ನು ಮಾಡುತ್ತಿವೆ. ಕಾರ್ಯಕರ್ತರ ಸಂಘಟನಾಕಾರ್ಯ ಆರಂಭವಾಗಿದೆ. ಡಿಸೆಂಬರದ ಮೊದಲಿಗೆ ಪ್ರಚಾರ ವಿಶೇಷ ಭಾವದಿಂದ ನಡೆಯಬಹುದು!

ನಂಜುಂಡಯ್ಯನವರ ವರದಿ

ರಾಷ್ಟ್ರೀಯ ಬಂದರ ಮಂಡಳದ ಆದೇಶದಂತೆ ಭಾರತ ಸರಕಾರವು ಬಂದರದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ವಿಶಾಖಪಟ್ಟಣ ಬಂದರದ ಮುಖ್ಯಾಧಿಕಾರಿಗಳಾದ ಶ್ರೀ ಎನ್. ನಂಜುಂಡಯ್ಯನವರನ್ನು ನೇಮಿಸಿರುತ್ತದೆ. ಶ್ರೀ ನಂಜುಂಡಯ್ಯ ಸಮಿತಿಯವರು ಮಂಗಳೂರು ಸಣ್ಣ ಬಂದರಾಗಲು ಬೇಕಾದ ಸೌಕರ್ಯ-ಅವಶ್ಯಕತೆ—ಬೇಕಾಗುವ ವೆಚ್ಚ--ಪ್ರಾಕೃತಿಕ ಗುಣಲಕ್ಷಣವನ್ನು ತನ್ನ ವರದಿಯಲ್ಲಿ ಸ್ಪಷ್ಟೀಕರಿಸಿರುವರು. ಜೊತೆಯಲ್ಲಿ ಮಂಗಳೂರು ಪ್ರಬುದ್ಧ ಬಂದರವಾಗಲು ಅರ್ಹತೆಯುಳ್ಳದ್ದೆಂದೂ ಹೇಳಿರುವರು. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಮತ್ತೆ ಪ್ರಾಶಸ್ತ್ಯವನ್ನು ಅಲ್ಲಗಳೆಯಲಾಗಿದೆ. ಅದನ್ನು ವ್ಯಕ್ತಪಡಿಸಲಾಗಿದೆ. ತೂತುಕುಡಿಯಲ್ಲಿ ರಚಿಸಿದಂತೆ ಮಂಗಳೂರಿನಲ್ಲಿಯೂ ಒಂದು ಪೋರ್ಟನಿಧಿ ರಚಿಸುವ ಅಗತ್ಯವಿದೆಯೆಂದು ವರದಿಯಲ್ಲಿ ಸೂಚಿಸಲಾಗಿದೆ.



ತುಕ್ಕು ಹಿಡಿಯದಿರುವಂತೆ ತಯಾರಿಸಿದ್ದು ಬಹುಕಾಲ ಹೊಸದರಂತೆಯೇ ಇರುತ್ತದೆ. ಎಸ್ಟ್ರೆಲಾ ಬ್ಯಾಟರಿಗಳು ಮತ್ತು ಸೆಲ್‌ಗಳು ಪ್ರಕಾಶಮಾನವಾದ ಬೆಳಕನ್ನು ಕೊಡುತ್ತ ಬಹುಕಾಲ ಬಾಳಿಕೆ ಬರುತ್ತವೆ.

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ESTRELA
REGD TRADE MARK

ಎಸ್ಟ್ರೆಲಾ
ಬ್ಯಾಟರಿಗಳು

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್,
ಬೊಂಬಾಯಿ ೧೯.
ಶಾಖೆಗಳು: ಕಲ್ಕತ್ತಾ, ದಿಲ್ಲಿ, ಮದ್ರಾಸು,
ಕಾನ್‌ಪೂರ್, ನಾಗಪೂರ್.

NASAB



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಚಕ್ಕೆ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೊರಡ್ಕರ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. I 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೮-೧೧-'೫೧

ಭಾರತದ ಜಾತ್ಯತೀತ ಧೋರಣೆ

ಕಾಶ್ಮೀರ ಘಟನಾ ಸಮಿತಿಯ ರಚನೆಯಾಗಿ ಕಾಶ್ಮೀರೀ ಜನತೆ ತಮ್ಮ ಭವಿತವ್ಯದ ಕುರಿತು ತಾವೇ ನಿರ್ಧರಿಸುವ ಕಾಲ ಈಗ ಸನ್ನಿಹಿತವಾಗಿದೆ. ಜನತೆಯ ಏಕಮಾತ್ರ ಪ್ರೀತಿಪಾತ್ರ ಸಂಸ್ಥೆಯಾದ ರಾಷ್ಟ್ರೀಯ ಪರಿಷತ್ತು ಅಪೂರ್ವವಾದ ಯಶಸ್ಸನ್ನು ಗಳಿಸಿದ್ದನ್ನು ಲಕ್ಷಿಸುವಾಗ ಕಾಶ್ಮೀರೀ ಜನತೆಯಲ್ಲಿ ಕಾಶ್ಮೀರವು ಭಾರತಕ್ಕೆ ಸೇರುವುದು ಹೆಚ್ಚು ಇಷ್ಟವೆಂಬುದು ಸ್ಪಷ್ಟವಾಗುವುದು. ಪಾಕಿಸ್ತಾನಕ್ಕೆ ಸೇರುವದು ಬೇಕಾಗಿದ್ದರೆ—ಭಾರತವು ಜಾತೀಯ ಪಕ್ಷಪಾತಿ ರಾಷ್ಟ್ರವೆಂದು ತಿಳಿದಿದ್ದರೆ ಜನ ಬೇರೆ ರೀತಿಯ ಮಾರ್ಗವನ್ನನುಸರಿಸುತ್ತಿತ್ತು. ಸದ್ಯ ರಾಷ್ಟ್ರೀಯ ಪರಿಷತ್ತು ಗಳಿಸಿದ ಅಪಾರವಾದ ಯಶಸ್ಸಿನಿಂದ ಭಾರತದ ನಿಲುಮೆಯ ಬಗ್ಗೆ ಕಾಶ್ಮೀರಿಗಳಿಗೆ ಭಿನ್ನಾಭಿಪ್ರಾಯವಿಲ್ಲೆಂದು ಸ್ಪಷ್ಟವಾಗುವದು.

ಸಂ. ರಾ. ಸಂಘದ ಪ್ರತಿನಿಧಿಗಳು ಕಳೆದ ಮೂರು ವರ್ಷಗಳಿಂದ ಜನತೆಯ ಒಲವನ್ನು ತಿಳಿದಿದ್ದರೂ ಬೇಕೆಂತಲೇ ಒಡಕನ್ನು ಹುಟ್ಟಿಸುವ ಪರಿಸ್ಥಿತಿಯನ್ನು ನಿರ್ಮಿಸುತ್ತ ಬಂದಿರುವದು ಕಂಡುಬರುತ್ತದೆ. ಈಗ ರೂಪಿತವಾಗಿರುವ ಘಟನಾ ಸಮಿತಿಯು ಮುಖ್ಯವಾಗಿ ವಿಚಾರಿಸಬೇಕಾದ 1) ಸಂಸ್ಥಾನದ ಆಡಳಿತಕ್ಕಾಗಿ ರಾಜ್ಯ ಘಟನೆಯನ್ನು ತಯಾರಿಸುವದು. 2) ರಾಜವಂಶದ ಭವಿತವ್ಯವನ್ನು ನಿರ್ಧರಿಸುವದು. (3) ಜಮೀನ್ದಾರರ ಪರಿಹಾರ ಪ್ರಶ್ನೆಯನ್ನು ವಿಚಾರ ಮಾಡುವದು (4) ಸಂಸ್ಥಾನವು ಯಾವ ದೇಶಕ್ಕೆ ಒಳಪಡಬೇಕು ಎಂಬುದನ್ನು ನಿರ್ಧರಿಸುವದು ಈ ನಾಲ್ಕು ಅಂಶದಲ್ಲಿ ಕೊನೆಯದು ಮುಖ್ಯವಾಗಿದೆ. ಮೂರು ವರ್ಷಗಳಲ್ಲಿ ತೀರ್ಮಾನ ಕೊಡಲಾಗದ ಸಮಸ್ಯೆಗೆ ಘಟನಾ ಸಮಿತಿಯು ಈಗ ತಾನೇ ಉತ್ತರಿಸುವದು. ಘಟನಾಸಮಿತಿಯ ನಿರ್ಧಾರವು ಇಡೀ ಕಾಶ್ಮೀರದ್ದೇ ಆದ ಮೇಲೆ ಬೇರೆಯವರ ನ್ಯಾಯಮಾರ್ಗಕ್ಕೆ ಇಲ್ಲಿ ಬೆಲೆಯಿಲ್ಲ. ಆದರಲ್ಲೂ ಸಮಿತಿಯು ಭಾರತಕ್ಕೇ ಕಾಶ್ಮೀರ ಸೇರಕೊಳ್ಳಬೇಕೆಂದು ನಿರ್ಧರಿಸುವದರಲ್ಲಿ ಸಂದೇಹವಿಲ್ಲ. ಆದರೂ ಶೇಖ ಅಬ್ದುಲ್ಲಾರವರು ಈ ಅಂಶದಲ್ಲಿ ತಿರುಗೊಮ್ಮೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವದೆಂದು ಹೇಳಿದ್ದು ಗಮನಾರ್ಹವಾದ ಸಂಗತಿ! ಇದರಿಂದ ಜನತೆಯ ಇಚ್ಛೆಯನ್ನು ಇನ್ನಷ್ಟು ಖಚಿತಪಡಿಸಿದಂತಾಯಿತು. ಸಂ. ರಾ. ಸಂಘವು ತೀರ್ಮಾನಕೊಡುವ ಮೊದಲೇ ಕಾಶ್ಮೀರವು ತನ್ನ ನಿರ್ಧಾರವನ್ನು ಮಾಡಿಕೊಳ್ಳುವದರಿಂದ ಸಂ. ರಾ. ಸಂಘ ಇಷ್ಟು ದೀರ್ಘಕಾಲ ಸಮಯವನ್ನು ವ್ಯರ್ಥಗೊಳಿಸಿದಂತೆಯೇ ಆಗುವದು! ವಿವಾದಾಸ್ಪದವಾದ ಇಡಿಯ ಪ್ರಶ್ನೆ ನಿಂತಿರುವದೇ ಸಾರ್ವಜನಿಕ ಮತಗಣನೆಯನ್ನವಲಂಬಿಸಿಕೊಂಡು! ಈ ಪ್ರಶ್ನೆಯನ್ನು ಕಾಶ್ಮೀರಿಗಳು ನಿರ್ಧರಿಸಿದ್ದನ್ನಷ್ಟೇ ಸಂ. ರಾ. ಸಂಘ ಸೂಚಿಸಬೇಕು. ಇದಕ್ಕೆ ವಿರುದ್ಧವಾದ ಆದೇಶ ಅದು ಕೊಡುವಂತಿಲ್ಲ! ಮತಗಣನ ವಿಚಾರದಲ್ಲಿ ಪಾಕಿಸ್ತಾನ ಹಸ್ತಕ್ಷೇಪ ಮಾಡುವಂತೆ ಕುಯುಕ್ತಿಯನ್ನು ತೋರಿಸಿಕೊಡುವದಕ್ಕೆ ಇದರಿಂದ ತೊಂದರೆಯಾಗಬಹುದು. ಮಾತ್ರವಲ್ಲ ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಬೇಕೆಂಬ ಇಚ್ಛೆಗೆ ಘಟನಾಸಮಿತಿಯ ನಿರ್ಣಯದಿಂದ ವಜ್ರಪ್ರಹಾರವಾದಂತಾಗಬಹುದು.!

ಕಾಶ್ಮೀರದ ಬಹುಸಂಖ್ಯಾಕ ಜನರು ಮುಸಲ್ಮಾನರು. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಜೋಡಿಸಲು ಅನೇಕ ರಾಜಮಾರ್ಗಗಳೂ, ಜಲಮಾರ್ಗಗಳೂ ಇರುತ್ತವೆ. ಭೌಗೋಲಿಕ ರೀತಿಯ ಅನುಕೂಲ್ಯತೆಯೂ ಭಾರತಕ್ಕಿಂತ ಪಾಕಿಸ್ತಾನಕ್ಕೆ ಸೇರುವದರಲ್ಲುಂಟು—ಧರ್ಮ ಸಂಸ್ಕೃತಿಯಲ್ಲೂ ಸಮಾನತೆಯುಂಟು! ಹೀಗಿದ್ದರೂ ಕಾಶ್ಮೀರ ಭಾರತಕ್ಕೆ ಸೇರುವ ನಿರ್ಧಾರ ಮಾಡುವದರ ಔಚಿತ್ಯವೇನು? ಸಂಸ್ಥಾನದ ಸಂರಕ್ಷಣೆ, ವಿದೇಶನೀತಿ, ಮತ್ತು ಸಾರಿಗೆ ವಿಷಯಗಳನ್ನು ಭಾರತ ಸರಕಾರಕ್ಕೆ ಬಿಟ್ಟು ಕೊಡುವದರ ಔದಾರ್ಯದ ಒಳಗುಟ್ಟೇನು? ಭಾರತ ಸರಕಾರವು ಕೋಟಿಗಟ್ಟಲೆ ಹಣ ಸುರಿಸಿ ಕಾಶ್ಮೀರದ ಸುರಕ್ಷಿತತೆಯನ್ನು ಕಾಪಾಡಿಕೊಂಡಿದ್ದರೂ ನಾಳಿನ ದಿನ ಹೊರಬರುವ ಪ್ರಸಂಗ ಬಂದರೆ ಇಷ್ಟು ಹಣ ವ್ಯಯಿಸಿದ್ದು ವ್ಯರ್ಥವಲ್ಲವೇ? ಮುಂತಾದ ಪ್ರಶ್ನೆಗಳು ಮೂಡುತ್ತವೆ.

ಇವಕ್ಕೆಲ್ಲ ಸರಿಯಾದ ಉದಾಹರಣೆಯೆಂದರೆ ಭಾರತದ ಜಾತ್ಯತೀತ ಧೋರಣೆಯೇ. ಭಾರತ ಎಂತಹ ಕಠಿಣ ಸಂದರ್ಭ ಬಂದಾಗಲೂ ಅಲ್ಪಸಂಖ್ಯಾಕರಿಂದು ಮತ್ತು ವಿಧರ್ಮೀಯರಿಂದು ಜಾತೀಯತೆಯನ್ನೂ—ಪಕ್ಷಪಾತವನ್ನೂ ತೋರಿಸಿದ್ದಿಲ್ಲ! ಹಿಂದೂಗಳೇ ಅಧಿಕವಾಗಿರುವ ನಮ್ಮ ದೇಶದಲ್ಲಿ ಅವರಿಗಿಂತಲೂ ಮಿಗಿಲಾದ ಧಾರ್ಮಿಕ—ಸಾಮಾಜಿಕ—ಆರ್ಥಿಕ ಸೌಲಭ್ಯಗಳು ಅಲ್ಪಸಂಖ್ಯಾಕರಿಗೆ ದೊರತಿವೆ. ಈ ಬಗೆಯ ಸಮಾನತಾ ರಾಜಕೀಯ ನೀತಿಯೆ ದೇಶದ ಒಳಹೊರಗಿನ ಖ್ಯಾತಿಗೆ ಕಾರಣವಾಗಿದೆ. ಎಂತಹ ಗಂಭೀರ ಸಮಸ್ಯೆಯುಂಟಾದಾಗಲೂ ಅಗ್ನಿಪರೀಕ್ಷೆ ನಡೆದಾಗಲೂ ಈ ಆದರ್ಶವೇ ಭಾರತವನ್ನು ಕಾಪಾಡಿದೆ. ಪಾಕಿಸ್ತಾನವು ಹೆಚ್ಚಾಗಿ ಧಾರ್ಮಿಕ ತಳಹದಿಯ ಮೇಲೆ ರೂಪುಗೊಂಡಿರುವ ರಾಷ್ಟ್ರ! ಔದ್ಯೋಗಿಕ ಹಾಗೂ ವ್ಯಾಪಾರರಂಗಗಳಲ್ಲಿ ಭಾರತವು ಬಹಳ ಮುಂದಾಗಿದೆ. ಪ್ರಜಾಪ್ರಭುತ್ವಕ್ಕೆ ಕಳೆಸಿದ ಭಾರತದ ಘಟನೆಯು ಕಾಶ್ಮೀರದ ಆರ್ಥಿಕ ಸಾಮಾಜಿಕ ಔದ್ಯೋಗಿಕಾಭಿವೃದ್ಧಿಗೆ ಅತ್ಯಂತ ಅನುಕೂಲವಾಗಿರುತ್ತದೆ. ಇವನ್ನೆಲ್ಲ ವಿಚಾರಿಸಿಯೇ ಕಾಶ್ಮೀರಿಗಳು ಭಾರತದ ಮೇಲೆ ತಮ್ಮ ಒಲವನ್ನು ವ್ಯಕ್ತಪಡಿಸಿದ್ದಾಗಿರುತ್ತದೆ.

ಶೇಖ ಅಬ್ದುಲ್ಲಾರ ಸರಕಾರದ ಮೇಲೆ ವಿಶ್ವಾಸವಿಡುವದಕ್ಕೆ ಇನ್ನೊಂದು ಅಳವರ್ಕ ಕಾರಣವೆಂದರೆ ಒಕ್ಕಲತನದ ಸುಧಾರಣೆಯನ್ನು ಸಾಧಿಸಿ ಭೂಮಿಯನ್ನು ಕೃಷಿಕರಿಗೆ ಒಪ್ಪಿಸಿರುವದು. ಜಮೀನ್ದಾರರ ಪರಿಹಾರ ಪ್ರಶ್ನೆಯನ್ನೂ ಸರಕಾರ ವಿಚಾರಿಸುವದಾಗಿ ತಿಳಿಸಿರುತ್ತದೆ. ಇದರಿಂದಾಗಿ ದೀನರೂ ಧನಿಕರೂ ಸರಕಾರದ ಮೇಲೆ ಅಸಂತೃಪ್ತರಾಗುವಂತಿಲ್ಲ.

ಕಾಶ್ಮೀರ ಭಾರತ ಸಂಬಂಧವು ಹೀಗೆ ಗಾಢವಾಗುತ್ತ ಬರುವದಕ್ಕೆ ಅಭಿಮಾನಪಡಬೇಕು. ಭಾರತ ಸರಕಾರದ ಮೇಲೆ ಜಾತೀಯತೆಯ ಆರೋಪಣೆಯನ್ನು ಮಾಡುವವರು ಈ ಸಂಬಂಧವನ್ನು ಚೆನ್ನಾಗಿ ಪರಾಂಬರಿಸಬೇಕು. ತಿಳಿದೋ—ತಿಳಿಯದೆಯೋ ವಿದೇಶಾಂಗ ನೀತಿಯ ಮೇಲೆ ಟೀಕೆ ಮಾಡಲಾಗುತ್ತಿದೆ. ಯಥಾರ್ಥವಾಗಿ ನೋಡುವದಾದರೆ ಭಾರತದ ವಿದೇಶಾಂಗ ನೀತಿಯು ಜಗತ್ತಿಗೇ ಮಾದರಿಯಾಗಿದೆ. ಶ್ರೀ ನೆಹರೂರವರ ಜಾತ್ಯತೀತ ರಾಜಕೀಯ ಧೋರಣೆಯಿಂದ ಕಾಶ್ಮೀರ ಸಮಸ್ಯೆ ಮಾತ್ರವಲ್ಲ ಪಾಕಿಸ್ತಾನದ ದ್ವೇಷಭಾವನೆ ದೂರಾಗಿ ಉಭಯ ರಾಷ್ಟ್ರಗಳ ಸ್ನೇಹ ಸಂವರ್ಧಿಸುತ್ತಿರುವದರಲ್ಲಿ ಸಂದೇಹವೇ ಇಲ್ಲ.

ಮಂಗಳೂರು ಬಂದರದ ಶೀಘ್ರ ಕಾರ್ಯಕ್ರಮ

ಸಣ್ಣ ಬಂದರ ಸುಧಾರಣೆಯ ನಿಮಿತ್ತ ಮದ್ರಾಸು ಸರಕಾರ 2½ಕೋಟಿ ವಿನಿಯೋಗಿಸಲಿದ್ದು, ಮಂಗಳೂರು ಬಂದರದ ಕಾರ್ಯವನ್ನು ಕೂಡಲೇ ಕೈಗೊಳ್ಳುವದಾಗಿ ಮಂತ್ರಿ ಭಕ್ತವತ್ಸಲಂರವರು ಸುದ್ದಿಗಾರರ ಸಭೆಯಲ್ಲಿ ಹೇಳಿದರು. ವೆಚ್ಚದಲ್ಲಿ ಸೇಕಡಾ 50ರಷ್ಟು ಕೇಂದ್ರ ಸರಕಾರವೂ, 25ರಷ್ಟು ಪ್ರಾಂತೀಯ ಸರಕಾರವೂ 25ರಷ್ಟು ಪೋರ್ಟ ನಿಧಿಯಿಂದಲೂ ಪೂರೈಸಲಾಗುವದೆಂದು ತಿಳಿಯುತ್ತದೆ.

ಮದ್ರಾಸಕ್ಕೆ ಅಕ್ಕಿ

ಮದ್ರಾಸ ಪ್ರಾಂತದಲ್ಲಿಯ ಅಕ್ಕಿಯ ಕೊರತೆಯ ಆತಂಕಕಾರಕ ಸ್ಥಿತಿಯನ್ನು ನಿವೇದಿಸುವ ಪತ್ರವೊಂದನ್ನು ಮದ್ರಾಸದ ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರವರು ಶ್ರೀ ನೆಹರೂರವರಿಗೆ ಬರೆದಿದ್ದು ಈಗ ಅವರಿಂದ ಕೇಂದ್ರ ಸರಕಾರವು ಶಕ್ತಿ ಮೀರಿ ಅಕ್ಕಿಯನ್ನೊದಗಿಸುವದಾಗಿ ಪತ್ರ ಬಂದಿರುತ್ತದೆ.

ಅಕ್ಕಿ ಭತ್ತ ಧಾರಣೆಯಲ್ಲಿ ಸುಧಾರಣೆ

ಚಾಲ್ತಿ ವರ್ಷದ ಅಕ್ಕಿ ಭತ್ತದ ಧಾರಣೆಯನ್ನು ಹೆಚ್ಚಿಸಬೇಕೆಂದು ಮದ್ರಾಸ ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿರುತ್ತದೆ. ಧಾರಣೆಯನ್ನು ಏರಿಸುವದರಿಂದ ಉತ್ಪಾದನಾ ಕಾರ್ಯವು ಹೆಚ್ಚಿ ಆಹಾರದ ಕೊರತೆಯು ಕೊಂಚ ನೀಗಬಹುದೆಂದು ಪ್ರಾಂತಿಕ ಸರಕಾರದ ಅಭಿಪ್ರಾಯವಿರುತ್ತದೆ.

ಭಾರತಕ್ಕೆ ಜಾಗತಿಕ ಬ್ಯಾಂಕಿನ ಶಿಷ್ಯಮಂಡಳ

ಭಾರತದ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಕೆಲ ವಿಶಿಷ್ಟ ಯೋಜನೆಗಳನ್ನು ಪರೀಕ್ಷಿಸಿ ಭಾರತಕ್ಕೆ ಜಾಗತಿಕ ಬ್ಯಾಂಕು ಎಷ್ಟು ಸಾಲಕೊಡಬಹುದು ಎಂಬ ವಿಚಾರದಲ್ಲಿ ವರದಿಕೊಡಲು ಜಾಗತಿಕ ಬ್ಯಾಂಕಿನ ಶಿಷ್ಯಮಂಡಳವು ಭಾರತಕ್ಕೆ ಬಂದಿರುವದು. ಮುಖ್ಯವಾಗಿ ನದಿಕೊಳ್ಳ ಯೋಜನೆ—ಉಕ್ಕು ಮತ್ತು ಕಬ್ಬಿಣ ಕಾರಖಾನೆಗಳ ವಿಚಾರವನ್ನು ಅವರು ಪರಿಶೀಲಿಸುವರು.

ಡಾ। ಕಟಜುರವರಿಗೆ ಕಾಯಿದೆ ಮತ್ತು ಗೃಹಖಾತೆ

ಕೇಂದ್ರ ಸರಕಾರದ ಮಂತ್ರಿಗಳಾಗಿ ನೇಮಕಗೊಂಡ ಡಾ। ಕೆ. ಎನ್. ಕಟಜೂ ಅವರು ಗೃಹ ಮತ್ತು ಕಾಯಿದೆ ಖಾತೆಗಳನ್ನು ವಹಿಸಿಕೊಳ್ಳುವರಾಗಿ ಸರಕಾರೀ ಪ್ರಕಟನೆಯಲ್ಲಿ ಹೇಳಲಾಗಿದೆ.

726 ಪ್ರಜಾಪಕ್ಷದ ಹುರಿಯಾಳುಗಳು

ಕಿಸಾನ ಮಜದೂರ ಪ್ರಜಾ ಪಾರ್ಟಿಯ ಕೇಂದ್ರ ಸಮಿತಿಯು ದೇಶದ ಬೇರೆ ಬೇರೆ ಪ್ರಾಂತಿಕ ಶಾಸನ ಸಭೆಗಳಿಗೆ 635 ಲೋಕ ಸಭೆಗೆ 91ಜನ ಹುರಿಯಾಳುಗಳನ್ನು ಆರಿಸಿಯದೆಯೆಂದು ಗೊತ್ತಾಗಿದೆ.

ಪಂಜಾಬದ ರಾಜಕೀಯ

ಪಂಜಾಬ ಪ್ರದೇಶದ126 ಶಾಸನ ಸಭೆಗಳ ಸ್ಥಾನಕ್ಕೂ ಲೋಕ ಸಭೆಯ 18 ಸ್ಥಾನಗಳಿಗೂ ಒಟ್ಟಿಗೆ ಮೂರು ಸಾವಿರ ನಾಮ ಪತ್ರಗಳು ಬಂದಿವೆಯೆಂದು ತಿಳಿಯುತ್ತದೆ ಪಂಜಾಬದ ಹಿಂದಿನ ಮಂತ್ರಿ ಡಾ। ಗೋಪಿಚಂದ್ರ ಭಾರ್ಗವ ಹಾಗೂ ಅವರ ಮಿತ್ರರು ಕಾಂಗ್ರೆಸ ಟಿಕೇಟನ್ನು ನಿರಾಕರಿಸಿದ್ದು ಕಾಂಗ್ರೆಸು ಹುರಿಯಾಳುವಿನ ವಿರುದ್ಧ ಸ್ವತಂತ್ರ ಹುರಿಯಾಳಾಗಿ ಸ್ಪರ್ಧಿಸಲಿರುವರೆಂದು ತಿಳಿದುಬರುತ್ತದೆ.

ನಮ್ಮ ಚಂದಾದಾರರಲ್ಲಿ

'ನವಯುಗ'ದ ಚಂದಾಹಣ ಬಾಕಿಯಾದವರಿಗೆಲ್ಲಾ ಅವರವರ ಬಾಕಿಯನ್ನು ಕಾಣಿಸಿ ಪ್ರತ್ಯಪ್ರತ್ಯೇಕ ಕಾಗದಗಳನ್ನು ಬರೆಯಲಾಗಿದೆ. ಎಲ್ಲರೂ ದಯಮಾಡಿ ಬಾಕಿಯನ್ನು ಆದಷ್ಟು ತ್ವರ್ಯ ಮನಿಯಾರ್ಡರ ಮಾಡಿ ಕಳುಹಿಸಿ ಕೊಡುವಂತೆ ತಿರುಗೊಮ್ಮೆ ವಿನಂತಿಸುತ್ತೇವೆ.

ಮೆನೇಜರ್.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಚುನಾವಣಾ ಪ್ರಚಾರ ಶಾಖೆಯಿಂದ ಬಂದ ಚುನಾವಣಾ ಪ್ರಚಾರ ಲೇಖನ, ಶ್ರೀ ಡಿ. ಮಂಜಯ್ಯ ಹೆಗ್ಗಡೆಯವರಿಂದ ಕಳುಹಿಸಲ್ಪಟ್ಟ ಅವರ ಕೌನ್ಸಿಲು ಮೆಂಬರಿಕೆಯ ಸಂಕ್ಷಿಪ್ತ ವರದಿ ಮತ್ತಿತರ ಬಾಬ್ತುಗಳನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ.

ಸಂ. ನ.

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!
ಸಾಹಸ ಭೀಮ ವಿಜಯ 0-8-0
ಭಾರತದ ಗುರುಕುಲ 0-6-0
ಲಕ್ಷ್ಮಪಗಡೆ 0-6-0
ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ
ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕಭಂಡಾರ,
ಉಡುಪಿ.

ಮಂಗಳೂರು

ಮಂಗಳೂರು ಮ್ಯುನಿಸಿಪಲ್ ಕೌನ್ಸಿಲು ಸಭೆಯು:-ಕಳೆದ ತಾ. 31ರಲ್ಲು ಜರಗಿತು. ವೆಬ್‍ಸ್ಟರ್ ಮಾರ್ಕೆಟನಲ್ಲಿ ಒಂದು ಗೋಡೆ ಕಟ್ಟಲು ರೂಪಾಯಿ 300/ ಮತ್ತು ಲೋಂಡಿಡ್ ಕಟ್ಟಲು ರೂಪಾಯಿ 1400/-ಮಂಜೂರಾಯಿತು. ಕಂಡತ್ತಪಳ್ಳಿಯಲ್ಲಿ ರಚಿಸಲಿರುವ ಕಸಾಯಿಖಾನೆಗಾಗಿ ಗುರುತಿಸಿದ ಸ್ಥಳವು ಅನುಕೂಲವಲ್ಲದ್ದರಿಂದ ಸಾರ್ವಜನಿಕ ಆರೋಗ್ಯ ಖಾತೆಯು ಬೇರೆ ಸ್ಥಳವನ್ನು ಆರಿಸಬೇಕೆಂದಾಯಿತು. ಸಾರ್ವಜನಿಕ ಆರೋಗ್ಯ ಖಾತೆಯ ನೌಕರರು ಕಳುಗಿ ಸಂಬಳ, ಮನೆಬಾಡಿಗೆ ಭತ್ತೆ ಇತ್ಯಾದಿಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಂಡ ಮನವಿಯ ಕುರಿತು ಸರಕಾರದ ಒಪ್ಪಿಗೆ ಪಡೆಯಲು ಶ್ರೀಯುತ ಎಲ್. ಸಿ. ಪಾಯಸ್ ಮತ್ತು ಎಸ್. ಗೋಪಾಲ ಸಾಲೆನ್ನರು ಮದ್ರಾಸಿಗೆ ಹೋಗುವುದೆಂದಾಯಿತು. ಮಣ್ಣಗುಡ್ಡೆಯಲ್ಲಿ ಇದೇ ತಾ. 15ರಿಂದ ದಸಂಬರ ತಾ. 15ರ ವರೆಗೆ 'ಕಾರ್ನಿವಾಲ್' ಪ್ರದರ್ಶನ ಮಾಡಲು ಶ್ರೀ ಎಮ್. ಗೋಪಾಲರಾಯರಿಗೆ ಅನುಮತಿ ಕೊಡಲಾಯಿತು.

ಜಿಲ್ಲಾ ಬೋರ್ಡು ಪಂದ್ಯಾಟಗಳು ಕಳೆದ ತಾ. 26ರಂದು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಸಿ. ಟಿ. [illegible]ಮನ್ ನಾಯರ್, ಬಹುಮಾನ ವಿತರಣೆ ಮಾಡಿದರು, ಡಿ, ಎಸ್, ಪಿ, ಇ, ಎಲ್, [illegible]ಸಿಯವರು ಅಭಿನಂದಿಸಿದರು, ಜಿಲ್ಲೆಯ [illegible]ರ ಬೇರೆ ಭಾಗಗಳಿಂದ ಪೋಲೀಸರೂ ಅ[illegible]ಂಗಳೂ ಪಂದ್ಯಾಟದಲ್ಲಿ ಭಾಗವಹಿ[illegible]ರು.

ಶ್ರೀ ಕೆ. ಕೆ. ಸೆಟ್ಟರು—ತಮ್ಮ ಒಂದು ವಾರದ ಉಪವಾಸವನ್ನು ಯಶಸ್ವಿಯಾಗಿ ಕೊನೆಗೊಳಿಸಿದರೆಂದು ಹೇಳಲಾಗಿದೆ.

ಕಾಂಗ್ರೆಸ್ ಪ್ರಚಾರ ಸಭೆಗಳ ಉದ್ಘಾಟನೆಯು—ಕಳೆದ ತಾ 27ರಲ್ಲಿ ಸಂತ ಕೇಂದ್ರ ಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಬೆನಗಲ್ ಶಿವರಾಯರ ಭಾಷಣದ ಮೂಲಕ ನಡೆಯಿತು. ಶ್ರೀ ರಾಯರ ಭಾಷಣವನ್ನು ಶ್ರೀ ಕೆ. ಕೃಷ್ಣರಾಯರು ಕನ್ನಡಕ್ಕೆ ಭಾಷಾಂತರಿಸಿದರು. ಶ್ರೀ ಬಿ. ವೈಕುಂಠ ಬಾಳಿಗರು ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಳೆಯು ಆರಂಭವಾದುದರಿಂದ ಸಭೆಯನ್ನು ಬೇಗನೆ ಮುಕ್ತಾಯಗೊಳಿಸಬೇಕಾಯಿತು.

ಡಾ। ಎಮ್. ಸಿ. ಮೋದಿಯವರಿಗೆ ಸತ್ಕಾರ—ಮಂಗಳೂರಿನ ನಿವಿಷ್ಟ ಭಾರತೀಯ ವೈದ್ಯ ಸಂಘದವರು ಕಳೆದ ತಾ. 27ರಂದು ಡಾ। ಮೋದಿಯವರನ್ನು ಸ್ವಾಗತಿಸಿ ಸತ್ಕರಿಸುವ ಸಭೆ ಏರ್ಪಡಿಸಿದ್ದರು. ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಮೈಸೂರು ಸರಕಾರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ ಎಸ್. ಧರಣೇಂದ್ರಯ್ಯನವರು ಮೋದಿಯವರ ಪರಿಚಯ ಮಾಡಿಕೊಟ್ಟರು ಡಾ। ಮೋದಿಯವರು ಲಿಂಗಾಯತ ಕುಟುಂಬದವರಿದ್ದು ದೈವದತ್ತವಾದ ಈ ನೇತ್ರ ಚಿಕಿತ್ಸೆಯ ಶಕ್ತಿಯನ್ನು ಪಡೆದಿದ್ದಾರೆಂದರು. ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮೋದಿಯವರ ವಿದ್ವತ್ತನ್ನು ಶ್ಲಾಘಿಸಿದರಲ್ಲದೆ ವೈದ್ಯಕೀಯ ವಿಚಾರದಲ್ಲಿ ನಮ್ಮ ಸರಕಾರವು ವಹಿಸಿದ ಧೋರಣೆಯನ್ನು ಖಂಡಿಸಿದರು. ಡಾ। ಎಮ್. ಎಸ್. ಶರ್ಮ, ಡಾ। ಎಮ್. ಆರ್. ಭಟ್ ಮೊದಲಾದವರು ಮಾತನಾಡಿದ ನಂತರ ಡಾ। ಮೋದಿಯವರು ಉತ್ತರವೀಯುತ್ತಾ 'ನೇತ್ರ ಚಿಕಿತ್ಸೆಯು ಭಾರತೀಯರದ್ದಾಗಿದೆ. ಸುಶ್ರುತನಿಂದ ಮುಂದೆ ಈ ಚಿಕಿತ್ಸೆಯಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಚಿಕಿತ್ಸೆಗಳೆಲ್ಲ ಅವನು ಹೇಳಿದಂತೆಯೇ ಆಗುತ್ತಿವೆ' ಎಂದರು. ಮುಂದುವರಿಸುತ್ತ 'ದೇಶದಲ್ಲಿ 20 ಲಕ್ಷ ಪರಿಪೂರ್ಣ ಕುರುಡರು, 40 ಲಕ್ಷ ಅರೆ ಕುರುಡರು ಇರುವರು. ಇದನ್ನು ಹೋಗಲಾಡಿಸುವುದಕ್ಕಾಗಿ ಇಂತಹ ಶಿಬಿರಗಳೇ ಯೋಗ್ಯವೆಂದು ಭಾವಿಸಿ ಈ ಕಾರ್ಯ ಕೈಕೊಂಡೆ' ಎಂದರು. ಧರ್ಮಸ್ಥಳ ಶಿಬಿರದ ಕುರಿತು ಮಾತನಾಡುತ್ತಾ ಇಂತಹ ಶಿಬಿರ ಜಗತ್ತಿನ ಚರಿತ್ರೆಯಲ್ಲೇ ಮೊದಲು ಎಂದರು. ಅಧ್ಯಕ್ಷ ಭಾಷಣಾ ನಂತರ ಶ್ರೀ ವೆಂಕಪ್ಪಯ್ಯನವರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲಾ ಬೋರ್ಡು ಸಭೆಯು ಇದೇ ತಾ 12ನೆ ಸೋಮವಾರ ಪೂರ್ವಾಹ್ನ 11 ಗಂಟೆಗೆ ಬೋರ್ಡಿನ ಮೀಟಿಂಗ್ ಹಾಲಿನಲ್ಲಿ ಜರಗುವುದು.

ಮುಂಬರುವ ಮಹಾಚುನಾವಣೆಗೆ ಸಂಬಂಧಪಟ್ಟ ಇಲಾಖಾ ಟ್ರೈನಿಂಗ್ ಕ್ಲಾಸುಗಳು ಜಿಲ್ಲೆಯ ನಿರ್ದಿಷ್ಟ ಕೇಂದ್ರಗಳಲ್ಲಿ ಈಗಾಗಲೇ ಪ್ರಾರಂಭವಾಗಿವೆ.

ಶ್ರೀ ಜಯಪ್ರಕಾಶ ನಾರಾಯಣರ ಜಿಲ್ಲಾ ಪ್ರವಾಸ— ಸೋಶಲಿಸ್ಟ ಪಾರ್ಟಿಯ ಸುಪ್ರಸಿದ್ಧ ಮುಂದಾಳು ಶ್ರೀ ಜಯಪ್ರಕಾಶ ನಾರಾಯಣರು ಇದೇ ನವಂಬರ ತಿಂಗಳ ತಾ 16ಕ್ಕೆ ಮಂಗಳೂರಿಗೆ ಬರಲಿರುವರು. ಚುನಾವಣಾ ಪ್ರಚಾರಕ್ಕಾಗಿ ಉಡುಪಿ, ಕುಂದಾಪುರ ತಾಲೂಕುಗಳಲ್ಲೂ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿರುವರು.

ಉಡುಪಿ

ಮೆಡಿಕಲ್ ಕಾಲೇಜು ಯೋಜನೆಗೆ ಬೆಂಬಲ—ಉಡುಪಿಯ ಮಹಾಜನರ ಸಭೆಯೊಂದು ಈಚೆಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಜೆ. ಅಲ್ಸೆಯವರು ಸಭೆ ಕರೆದುದರ ಉದ್ದೇಶವನ್ನು ವಿವರಿಸಿ ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್, ಮಣಿಪಾಲ್, ಇವರು ತೆರೆಯಬೇಕೆಂದಿದ್ದ ಕಸ್ತೂರಬಾ ಮೆಡಿಕಲ್ ಕಾಲೇಜು ಯೋಜನೆಯನ್ನು ಹೇಗೆ ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತೆಂಬುದನ್ನು ಹೇಳಿದರು. ಎಕೆಡಮಿ ರಿಜಿಸ್ಟ್ರಾರ್ ಡಾ। ಟಿ ಮಾಧವ ಪೈಗಳು ಕೂಡಾ ಮಾತನಾಡುತ್ತಾ ಈ ಯೋಜನೆಯು ಹೇಗೆ ಜನಾದರಣೀಯವಾಗಿದೆ ಎಂಬುದನ್ನು ಸ್ಪಷ್ಟ ಮಾತುಗಳಿಂದ ವಿವರಿಸಿದರು. ಶ್ರೀ. ಡಬ್ಲ್ಯು. ಎ. ಸುಬಿಕ್ಷ ಅವರು ಮಾತನಾಡುತ್ತಾ ಈ ಕಾಲೇಜು ಸ್ಥಾಪನೆಯ ಆವಶ್ಯಕತೆಯನ್ನು ಸೂಚಿಸಿದರು. ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್-ಇವರು ಈ ಯೋಜನೆಯನ್ನು ಮುಂದೊತ್ತಬೇಕಾಗಿಯೂ ಇದು ಫಲದಾಯಕವಾಗುವಂತೆ ಸರಕಾರವೂ ಜನತೆಯೂ ಪ್ರೋತ್ಸಾಹವನ್ನೀಯಬೇಕೆಂದೂ ಅಂತೆಯೇ ಕರ್ನಾಟಕ ವಿದ್ಯಾಪೀಠವು ಈ ಕಾಲೇಜನ್ನು ಸಂಯೋಜಿಸಿಕೊಂಡು ಮನ್ನಣೆಯೀಯಬೇಕೆಂದು ವಿನಂತಿಸುವ ಗೊತ್ತುವಳಿಗಳಾದುವು.

ಕಮ್ಯುನಿಸ್ಟ ಪಕ್ಷದ ಪ್ರಚಾರ ಸಭೆಯು ಇದೇ ತಾ. 4ರಲ್ಲು ಸಂಜೆ ಅಜ್ಜರಕಾಡು ಮೈದಾನಿನಲ್ಲಿ ಶ್ರೀ ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಶೀನ ನಾಯ್ಕ ಮತ್ತು ದಾಸ ಸೇರಿಗಾರರು ಮುಂದಿನ ಚುನಾವಣೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಕಮ್ಯುನಿಸ್ಟ್ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿ ಮುಂದಿನ ಚುನಾವಣೆಯಲ್ಲಿ ಈ ಪಕ್ಷವು ಭಾಗವಹಿಸುವುದಾಗಿ ಘೋಷಿಸಿದರು.

ಎಂ ಜಿ ಎಮ್. ಕಾಲೇಜು ಉಡುಪಿ—ತಾ. 5-11-51ರಲ್ಲಿ ಕಾಲೇಜ್ ಪಾರ್ಲಿಮೆಂಟ್ ಯೂನಿಯನ್ನಿನ ಉದ್ಘಾಟನಾ ಸಮಾರಂಭವು ಪ್ರಿನ್ಸಿಪಾಲ್ ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉದ್ಘಾಟಕರಾದ ಶ್ರೀ ಟಿ. ಎ. ಪೈಗಳು ಸರಕಾರದ ಆರ್ಥಿಕ ಧೋರಣೆ ವಿಚಾರವಾಗಿ ಮಾತನಾಡಿದರು. ಯೂನಿಯನ್ನಿನ ಅಧ್ಯಕ್ಷ ಮೂಲೂರು ಜಗನ್ನಾಥ ಹೆಗ್ಡೆಯವರ ಧನ್ಯವಾದ ನಂತರ ಲಘೂಪಹಾರದೊಂದಿಗೆ ಸಭೆ ಮುಕ್ತಾಯಗೊಂಡಿತು

ಡಾ। ಮೋದಿಯವರಿಗೆ ಸತ್ಕಾರ—ಸುಪ್ರಸಿದ್ಧ ನೇತ್ರ ಚಿಕಿತ್ಸಕರಾದ ಡಾ। ಮೋದಿಯವರಿಗೆ ತಾ. 28-10-51ನೇ ಸಂಜೆ ಶ್ರೀ ಟಿ. ಎನ್. ಕೇಲುನಂಬಿಯಾರರು ಬ್ರಹ್ಮಗಿರಿಯ ತಮ್ಮ ನೂತನ ಔಷಧ ಕಾರ್ಖಾನೆಯ ಕಟ್ಟಡದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಡಾ। ಸುಂದರರಾಮ ಪೈಗಳು ಸಭಾಧ್ಯಕ್ಷರಾಗಿದ್ದರು. ಉಪಾಹಾರವಾದ ಬಳಿಕ ಶ್ರೀ ನಂಬಿಯಾರರು ಡಾ। ಮೋದಿಯವರ ಪರಿಚಯಭಾಷಣಮಾಡಿದರು. ಶ್ರೀ ಕಾ। ಸಾ। ಧರಣೇಂದ್ರಯ್ಯನವರು ಡಾ। ಮೋದಿಯವರ ನೇತ್ರಚಿಕಿತ್ಸೆ ನೈಪುಣ್ಯವನ್ನು ವಿವರಿಸಿ ಅವರ ಉಜ್ವಲ ಭವಿಷ್ಯವನ್ನು ಸೂಚಿಸಿದರು. ಶ್ರೀ ಟಿ. ಎ. ಪೈಗಳು ಅತಿಥಿಗಳ ನೈಜ ಗುಣ ಪ್ರಾವೀಣ್ಯಾದಿಗಳನ್ನು ಮೆಚ್ಚಿ ಅವರ ಪ್ರಯೋಜನವು ಉಡುಪಿಯವರಿಗೂ ಸಿಗುವಂತಾಗಲೆಂದರು.

ಡಾ। ಮೋದಿಯವರು ತಮ್ಮ ಭಾಷಣದಲ್ಲಿ ಧರ್ಮಸ್ಥಳ ಶಿಬಿರದ, ಮತ್ತು ಪರದೇಶ ಸಂಚಾರದ ತಮ್ಮ ಅನುಭವವನ್ನು ವಿವರಿಸಿದರು. ಅಧ್ಯಕ್ಷ ಡಾ। ಪೈಗಳು ಅತಿಥಿಗಳ ನಿಸ್ವಾರ್ಥ ಸೇವಾ ಬುದ್ಧಿಯನ್ನು ಕೊಂಡಾಡಿ ಶ್ರೀ ನಂಬಿಯಾರ ಮೂಲಕ ಅವರ ಶಿಬಿರವೊಂದು ಉಡುಪಿಯಲ್ಲೂ ಜರಗುವಂತಾಗಲೆಂದರು. ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಉಡ್ಪಿ ತಾಲೂಕು ಖಾಸಗಿ ಶಾಲೆಗಳ ಮನೇಜರರ ಸಭೆಯು—ತಾ. 28-10-51ರಲ್ಲಿ, ಇನ್ನಂಜೆ ಶಾಲಾ ಮನೇಜರರಾದ ಶ್ರೀ ಶ್ರೀನಿವಾಸ ಪಿತ್ರಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈಗಿನ ಕಾಲಸ್ಥಿತಿಗನುಸರಿಸಿ ಇತರ ಶಾಲೆಗಳ ಅಧ್ಯಾಪಕರಂತೆಯೇ ಖಾಸಗಿ ಶಾಲೆಗಳ ಟ್ರೈನ್ಡ್ ಅಧ್ಯಾಪಕರಿಗೂ ಪಿಂಚಿಕೊಡಬೇಕಾಗಿದ್ದ ತಿಂಗಳೊಂದರ ರೂಪಾಯಿ 3 0-0ನ್ನು ಸರಕಾರವೇ ಕೊಡದೆ-ಯಾವ ಉತ್ಪತ್ತಿಯೂ ಇಲ್ಲದ ಮನೇಜರರು ತಮ್ಮ ಕೈಯಿಂದಲೇ ಕೊಡಬೇಕೆಂತಲೂ ತಪ್ಪಿದರೆ ಸಂಬಂಧಪಟ್ಟ ಶಾಲೆಗಳ ಗ್ರಾಂಟು-ಯಾ-ಮಂಜೂರಾತಿಗೆ ತೊಂದರೆಯಾಗುವದೆಂತಲೂ ಇಲಾಖಾಧಿಕಾರಿಗಳಿಂದ ಇತ್ತೀಚೆಗೆ ಬಂದ ಈ ಅನ್ಯಾಯದ ಹುಕುಮನ್ನು ಸಭಿಕರೆಲ್ಲರೂ ಏಕಕಂಠದಿಂದ ವಿರೋಧಿಸಿ ಮಾತನಾಡಿದರು. ಮಾತ್ರವಲ್ಲದೆ, ಇತರ ಅಧ್ಯಾಪಕರಂತೆ ಟೀಚರ್ ಮೆನೇಜರರು ಸಹ ಸರ್ವಿಸು ರಿಜಿಸ್ಟ್ರಿಯನ್ನು ಇಟ್ಟುಕೊಳ್ಳಬೇಕಾಗಿ ಅಧಿಕಾರಿಗಳಿಂದ ಹುಕುಂ ಬಂದಿಲ್ಲದಲ್ಲದೇ ಎಲ್ಲರೂ T. S. R. ಬಗ್ಗೆ ಸಕಾಲದಲ್ಲಿ ಅರ್ಜಿ ಬರೆಕೊಂಡು ರಿಜಿಸ್ಟ್ರಿಗಳನ್ನು ಒದಗಿಸಿಕೊಂಡಿದ್ದರೂ, ಈ ತಾಲೂಕಿನ ಹೆಚ್ಚಿನ ಟೀಚರ್ ಮೆನೇಜರರಿಗೆ 1950ನೇ ಇಸವಿಯ ಇಡೀ ವರ್ಷದ ಗ್ರಾಂಟನ್ನು ಈ ವರೆಗೂ ಕೊಡದೆ ತಡೆಹಿಡಿದಿರುವ ಅನ್ಯಾಯವನ್ನೂ ಸಮ್ಮಂಧಪಟ್ಟ ಟೀಚರ್ ಮೆನೇಜರರು ಹೃದಯದ್ರಾವಕವಾಗಿ ವಿವರಿಸಿ ಹೇಳಿದರು. ಒಟ್ಟಾರೆ ಈ ರೀತಿ ಖಾಸಗಿ ಶಾಲಾ ಮೆನೇಜರರಿಗೆ ಆಗಾಗ್ಗೆ ಉಂಟಾಗುವ ತೊಂದರೆಗಳನ್ನು ಶೀಘ್ರವಾಗಿ ನಿವಾರಿಸುವಂತೆ ಜಿಲ್ಲಾಧಿಕಾರಿಗಳಿಗೂ, ಡೈರೆಕ್ಟರರಿಗೂ, ವಿದ್ಯಾಮಂತ್ರಿಗಳಿಗೂ ಬರೆಕೊಳ್ಳಬೇಕಾಗಿ ಒಮ್ಮತದಿಂದ ನಿರ್ಧಾರವಾಗಿ, ಆ ಬಗ್ಗೆ ತಾಲೂಕಿನ ಎಲ್ಲಾ ಖಾಸಗಿ ಶಾಲೆಗಳ ಮೆನೇಜರರ ಮಹಾಸಭೆಯನ್ನು ತಾ. 11-11-51ನೇ ಆದಿತ್ಯವಾರ ಅಪರಾಹ್ನ ಉಡ್ಪಿ ಬೋರ್ಡ್ ಹಾ. ಎ. ಶಾಲೆಯಲ್ಲಿ ಜರಗಿಸಬೇಕಾಗಿ ನಿಶ್ಚಯವಾಯ್ತು ಎಂದು ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಬರೆಯುತ್ತಾರೆ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠಕಟ್ಟಿ ಋತುಸ್ರಾವವಾಗುತ್ತದು, ಹಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಡುಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ.]

MIS. D. DEVEE, P. DB. (N. J.)
Tollygunge CALCUTTA.
ಸ್ಟಾಕಿಸ್ಟರು ಕಮಾಳಂಪನಿ, ಮಂಗಳೂರು

ಉಡುಪಿಯ ಲಕ್ಷದೀಪೋತ್ಸವಕ್ಕಾಗಿ
ಎಮ್. ಎಸ್. ಸುಬ್ಬುಲಕ್ಷ್ಮಿಯ ಆಗಮನ.
ಸುಬ್ಬುಲಕ್ಷ್ಮಿಯು ಸುಬ್ಬುಲಕ್ಷ್ಮಿಯಾಗಿಯಲ್ಲ!
ಭಕ್ತಮೀರಳಾಗಿ.
ಭಕ್ತಮೀರಾ (ಹಿಂದಿ)
ತಾರೀಕು 10—11—1951ರಿಂದ—
ಬರುವ ಚಿತ್ರಗಳು-ಹನುಮಾನ್, ಪಾತಾಳ ವಿಜಯ, ಬಾಜಿ, ಕಾಲಿ ದಾದಲ್, ಇತ್ಯಾದಿ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ,ಶಾಲಾ ಕೊಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
[illegible]
ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ
ದೊರೆಯುತ್ತವೆ.
ವಿಚಾರಿಸಿ:—
ನವಭಾರತಪುಸ್ತಕಭಂಡಾರಉಡುಪಿ.

ಬರೇ ರೂ. 20ಕ್ಕೆ
'ಅಂತರಂಗ'ದ 70ಪ್ರಕಟಣೆಗಳು!
ಕಥೆ, ಕಾದಂಬರಿ, ಕವಿತೆ, ಚಿತ್ರ, ನಾಟಕ, ಪ್ರಬಂಧ ಮೊದಲಾದ ನಾನಾ ಬಗೆಯ ಕೃತಿಗಳು!
ಮೂರಾಣೆಯಿಂದ ಎರಡು ರೂಪಾಯಿ ವರೆಗಿನ, ವಾಚನಾಲಯಗಳಿಗೆ ಯೋಗ್ಯವಾದ 70 ಪುಸ್ತಕಗಳು.
ಪುಸ್ತಕದ ಒಟ್ಟು ಬೆಲೆ ರೂ. 23/-
ಒಮ್ಮೆಯೇ ತರಿಸಿಕೊಳ್ಳುವವರಿಗೆ
ಟಪ್ಪಾಲು ಖರ್ಚು ಸಹಿತ
ರೂ. 20/- ಮಾತ್ರ!
(1) ಅಂತರಂಗ ಕಾರ್ಯಾಲಯ ಉಡುಪಿ.
(2) ನವಭಾರತ ಪುಸ್ತಕಭಂಡಾರ ಉಡುಪಿ.

ಕುಂಬಳೆ:—ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರಕ್ಕಾಗಿ ಕಳೆದ ತಾ 21ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ। ಕೆ. ಎಸ್. ಆಳ್ವರೂ ಡಾ। ಬಿ. ಆರ್. ಹೆಗ್ಡೆಯವರೂ ಬಂದಿದ್ದರು.

ಪ್ರಜಾಪಕ್ಷದ ಕಡೆಯಿಂದ ಶ್ರೀ ಕೆ. ಆರ್. ಕಾರಂತರೇ ಮೊದಲಾದವರು ಪ್ರಚಾರ ಕಾರ್ಯ ಕೈಗೊಂಡಿರುವರು. ಸ್ವತಂತ್ರ ಪಕ್ಷದ ಉಮೇದ್ವಾರರ ಕಡೆಯಿಂದಲೂ ಪ್ರಚಾರ ಕಾರ್ಯ ನಡೆಯುತ್ತಿದೆ.

ಬಂಟ್ವಾಳ:—ಕುಂಬಳೆ ಫಿರ್ಕಾದ ಬಂಟ್ವಾಳ ಕೇಂದ್ರದಲ್ಲಿ ಕಳೆದ ತಾ 24ರಂದು ರೂರಲ್ ವೆಲ್‌ಫೇರ್ ಕಮಿಟಿಯ ಸಭೆಯು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಂಬಳೆ ಫಿರ್ಕಾದಲ್ಲಿ ಎಂಟು ಚಿಕ್ಕ ನೀರಾವರಿ ಕೆಲಸಗಳು ಸಾಗುತ್ತಿವೆಯಾಗಿ ಅಸಿಸ್ಟೆಂಟ್ ಇಂಜಿನಿಯರರು ತಿಳಿಸಿದರು. ಹಳೆಯಂಗಡಿಯಲ್ಲಿ ಮೀನು ಮಾರ್ಕೆಟು ಕಟ್ಟಿಸುವರೆ ಜಾಗ ಸಿದ್ಧವಾಗಿದ್ದು ಅದರ ಯೋಗ್ಯತೆ ಕುರಿತು ವರದಿ ಮಾಡುವರೆ ಜಿಲ್ಲಾ ಹೆಲ್ತ್ ಆಫೀಸರರನ್ನು ಕೇಳಿಕೊಳ್ಳಲಾಯಿತು. ಮಂಜೇಶ್ವರದಲ್ಲಿ ರೇಡಿಯೊ ನಿಲ್ದಾಣವನ್ನು ಕಟ್ಟಿಸುವರೆ ಕಾರ್ಯಕ್ರಮವು ಕೈಕೊಳ್ಳಬೇಕೆಂದಾಯಿತು. ಕುಂಬಳೆ ದೇವಸ್ಥಾನ ಕೆರೆಯ ನೀರುಹಾಳಾಗಿದ್ದುದರ ದೆಸೆಯಿಂದ ಉಂಟಾದ ತೊಳ್ಳೆಕಾಟವನ್ನು ನೀಗಿಸಲು ತಕ್ಕ ವ್ಯವಸ್ಥೆ ಮಾಡಲು ನಿರ್ಧಾರವಾಯಿ.

ಕನ್ನಡ ಸಾಹಿತ್ಯ ಪರಿಷತ್ತು:—ಇವರು ಏರ್ಪಡಿಸಿದ ಈ ವರ್ಷದ ಸಾಹಿತ್ಯ ಪರೀಕ್ಷೆಗಳು ಇದೇ ತಾ 24, 25, 26ರಲ್ಲಿ ಜರಗಲಿರುವವು. ನಮ್ಮ ಜಿಲ್ಲೆಯಲ್ಲಿ ಉಡುಪಿಯು ಪರೀಕ್ಷಾ ಕೇಂದ್ರವಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನ:—35ನೇ ಕನ್ನಡ ಸಾಹಿತ್ಯ ಸಮ್ಮೇಳನವು ಬರುವ ಎಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಹಾಸನ ಜಿಲ್ಲೆಯ ಬೇಲೂರಲ್ಲಿ ಜರಗಲಿದೆ. ಈ ಸಂಬಂಧ ಸ್ವಾಗತ ಸಮಿತಿ ರಚಿಸಲು ತಾ 11-11-51ನೇ ಭಾನುವಾರ ಮಧ್ಯಾಹ್ನ 2ಗಂಟೆಗೆ ಬೇಲೂರು ಪುರ ಭವನದಲ್ಲಿ ಸಭೆ ಜರಗಲಿದೆ.

ಕುಂದಾಪುರದಲ್ಲಿ ಕಾಂಗ್ರೆಸು ಚುನಾವಣೆಯ ಪ್ರಚಾರ ಸಭೆಗಳು—ತಾ 20-10-51ರಂದು ಹಂಗ್ಳೂರು ಗ್ರಾಮದಲ್ಲಿ ಶ್ರೀ. ಎಸ್. ಎಸ್. ಪರಮೇಶ್ವರಯ್ಯ ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿಯೂ ತಾ. 28-10-51ರಂದು ಕುಂದಾಪುರ ಕೋಡಿಯಲ್ಲಿ ಶ್ರೀ. ಕೆ. ಸುಬ್ರಾಯ ಹವಲ್ದಾರರ ಅಗ್ರಾಸನದಲ್ಲಿಯೂ ಸಭೆಗಳು ಜರಗಿದವು. ಪ್ರಾರ್ಥನೆ ನಂತರ ಕಾಂಗ್ರೆಸು ವಿರೋಧಿಗಳ ಅಪ ಪ್ರಚಾರ ಟೀಕೆಗಳಿಗೆ ಸರಿಯಾದ ಪ್ರತ್ಯುತ್ತರ ಕೊಟ್ಟು, ಜನತೆಯಲ್ಲಿರುವ ತಪ್ಪು ಅಭಿಪ್ರಾಯವನ್ನು ಸಕಾರಣವಾಗಿ ಬಯಲಿಗೆಳೆದು, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ಉನ್ನತಿಗಾಗಿ, ದೇಶದ ಕಲ್ಯಾಣಕ್ಕಾಗಿ, ಅವಿಶ್ರಾಂತ ದುಡಿದು ತ್ಯಾಗ ಬಲಿದಾನ ಮಾಡಿದ ಏಕಮೇವ ಸಂಸ್ಥೆಯಾದ ಕಾಂಗ್ರೆಸಿಗೆ ಬೆಂಬಲ ಕೊಡಬೇಕೆಂದು ವಿನಂತಿಸಿ, ಶ್ರೀ. ಎಮ್. ಎಮ್. ಹೆಗ್ಡೆ. ಶ್ರೀ. ಅಣ್ಣಪ್ಪ ಕಾರಂತ. ಶ್ರೀ. ಬಿ. ಸುಬ್ಬಣ್ಣ ಶೆಟ್ಟಿ. ಇವರು ಭಾಷಣವಿತ್ತರು. ಆ ಗ್ರಾಮದವರೇ ಆದ ಶ್ರೀ. ದಾಮೋದರ ಪೈ. ಜನಾಬ್ ಮುಲ್ಲಾ ಸಾಹೇಬ್ ಇವರೂ ಕಾಲೋಚಿತ ಸುರಸ ಭಾಷಣವನ್ನಿತ್ತರು. ಕಾಂಗ್ರೆಸು ಹುರಿಯಾಳು ಶ್ರೀ. ಎಡ್ಮರೆ ಮಂಜಯ್ಯ ಸೆಟ್ಟಿ, ಕಾಂಗ್ರೆಸಿನ ಧೋರಣೆ. ಅದರ ಮುಂದಿರುವ ಕಠಿಣ ಸಮಸ್ಯೆಗಳು. ಅವುಗಳ ನಿವಾರಣೋಪಾಯಗಳನ್ನು ವಿವರಿಸಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸಿಗೆ ಬೆಂಬಲ ಕೊಟ್ಟರೆ ನಮ್ಮ ದೇಶದ ಕಲ್ಯಾಣವು ಕಟ್ಟಿಟ್ಟದ್ದು ಎಂದು ಜನತೆಗೆ ಆಶ್ವಾಸನವನ್ನಿತ್ತರು. ಸಭಾಧ್ಯಕ್ಷರು. ನಮ್ಮ ಹುರಿಯಾಳ್ಗಳಾದ ಜನಪ್ರಿಯ ಎಡ್ಮರೆ ಮಂಜಯ್ಯ ಶೆಟ್ರಿಗೂ ಪಾರ್ಲಿಮೆಂಟು ಉಮೇದ್ವಾರರಾದ ಕಾಂಗ್ರೆಸು ಧುರೀಣ. ಶ್ರೀ. ಶ್ರೀನಿವಾಸ ಮಲ್ಯರಿಗೂ ಮತಕೊಟ್ಟು ಆರಿಸಬೇಕಾಗಿ ವಿನಂತಿಸಿದರು. ನಂತರ ರಾಷ್ಟ್ರಗೀತ ಹಾಡಿ ಸಭೆಯು ಚದರಿತು.

ಮೂಡುಬಿದ್ರೆ:—ಇದೇ ಬರುವ ದಶಂಬರ ತಿಂಗಳ ಮೂರನೇ ವಾರದಲ್ಲಿ ಡಾ. ಎಂ. ಸಿ. ಮೋದಿಯವರಿಂದ. ಇಲ್ಲಿಯ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರವನ್ನು ತೆರೆಯಲಿದ್ದು ಈ ಬಗ್ಗೆ ಯೋಗ್ಯ ವ್ಯವಸ್ಥೆಗಳಾಗುತ್ತಿವೆ.

ಧರ್ಮಸ್ಥಳ:—ಶ್ರೀ ಡಿ. ಮಂಜಯ್ಯ ಹೆಗ್ಡೆಯವರ ಉದಾರಾಶ್ರಯದಲ್ಲಿ ಡಾ। ಮೋದಿಯವರಿಂದ ತಾ 15-10-51ರಿಂದ ತಾರೀಕು 31-10-51ರ ವರೇಗೆ ನೇತ್ರ ಚಿಕಿತ್ಸೆ ಶಿಬಿರವು ಜರಗಿ ಸುಮಾರು 5000 ಕಣ್ಣು ರೋಗಿಗಳನ್ನು ಪರೀಕ್ಷಿಸಿದ್ದಾಯಿತು. ಶ್ರೀ ಹೆಗ್ಡೆಯವರು ವಸತಿ, ಆಹಾರದ ವ್ಯವಸ್ಥೆ ಮಾಡಿದ್ದಲ್ಲದೆ ಬಡರೋಗಿಗಳಿಗೆ ಪ್ರಯಾಣದ ವೆಚ್ಚವನ್ನೂ ಕೊಟ್ಟಿರುವರು.

ಪಡುಬಿದ್ರೆ:—ಇಲ್ಲಿಯ ಸರಕಾರಿ ವಯಸ್ಕರ ಶಿಕ್ಷಣ ತರಬೇತಿ ಶಾಲೆಯ ನಾಲ್ಕನೆ ಅಧಿವೇಶನ ಉದ್ಘಾಟನಾ ಸಮಾರಂಭವು ಕಳೆದ ತಾ 23ರಲ್ಲಿ ಮಂಗಳೂರು ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ. ಪಿ. ರಮಾನಂದ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ತರಬೇತಿ ಶಾಲಾ ಮುಖ್ಯೋಪಾಧ್ಯಾಯರ ಟಿ. ಲಕ್ಷ್ಮಿನಾರಾಯಣ ರಾಯರು ಸ್ವಾಗತ ಭಾಷಣ ಮಾಡಿದರು. ಮಂಗಳೂರು ಟ್ರೈನಿಂಗ್ ಕಾಲೇಜಿನ ವಿಜ್ಞಾನ ಶಾಖೆಯ ಪ್ರೊಫೆಸರ್ ಶ್ರೀ ಪಿ. ರಾಂತಾರಾಮರಾಯರು ಉದ್ಘಾಟನಾ ಭಾಷಣವಿತ್ತರು. ನಂತರ ವಿನೋದಾವಳಿ ಇತ್ಯಾದಿ ಕಾರ್ಯಕ್ರಮಗಳಾದುವು.

ಹಿರಿಯಡ್ಕ—ತಾ. 20-10-51ರಲ್ಲಿ ಡಾ। ಎಮ್. ಸಿ. ಮೋದಿಯವರು ಇಲ್ಲಿಗೆ ಆಗಮಿಸಿದ್ದರು. ಊರಿನ ನಾಗರಿಕರೆಲ್ಲರೂ ಅವರನ್ನು ಸ್ವಾಗತಿಸಿ ಮಾನಪತ್ರವನ್ನು ಸಮರ್ಪಿಸಿದರು. ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರವು ಡಾ। ಮೋದಿಯವರ ಕೈಯಿಂದ ವಿತರಣ ಮಾಡಲ್ಪಟ್ಟಿತು. ಶ್ರೀ ಧರಣೇಂದ್ರಯ್ಯನವರು ಅಧ್ಯಕ್ಷರಾಗಿದ್ದರು.

ತಾ. 30-10-51ರಲ್ಲಿ ಎಸ್. ಗಣಪಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಶ್ರೀ ದಯಾನಂದ ಸರಸ್ವತಿಯವರ ನಿರ್ವಾಣೋತ್ಸವವು ಜರಗಿತು.

ಬಾರಕೂರು—ತಾ. 3-11-51ರಲ್ಲಿ ನೇಶನಲ್ ಹೈಸ್ಕೂಲಿನ ಮಂಟಪದಲ್ಲಿ ನಾಗರಿಕರ ಸಭೆಯು ಡಾ। ಕೆ. ರಾಘವೇಂದ್ರ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ರೆವರೆಂಡ್ ಫಾದರ್ ನಜರೆತ್, ಡಾ। ಎ. ಎಸ್. ಹೆಬ್ಬಾರ್, ಡಾ। ಬಿ. ಕೃಷ್ಣಬಾಯರಿ, ಶ್ರೀ ಜೋನ್ ಪಿ ಸಿಕೇರ, ಅಧ್ಯಕ್ಷ ಪಂಚಾಯತ ಬೋರ್ಡ್, ಶ್ರೀ ಪಿ. ಎಸ್. ಭೋಜರಾವ್ ಹೆಡ್‌ಮಾಸ್ತರ್ ನೇಶನಲ್ ಹೈಸ್ಕೂಲ್, ಮೊದಲಾದವರು ಈಗಿನ ಸ್ಥಿತಿಯಲ್ಲಿ ಹೆಚ್ಚಿನ ವ್ಯಾಸಂಗೀಯ ಶಿಕ್ಷಣವನ್ನು ಕೊಡುವ ಸಂಸ್ಥೆಗಳ ಅತ್ಯಗತ್ಯವಂದೂ ಸರಕಾರದ ಮತಿಯಿಂದ ಪ್ರಕೃತ ಅಂತಹ ಸಂಸ್ಥೆಗಳು ತೆರೆಯಲ್ಪಡುವ ಸಂಭವವಿಲ್ಲದಿರುವದರಿಂದ "ಎಕಡೆಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ"ದಂತಹ ಗೌರವ ಸಂಸ್ಥೆಯು ಮೆಡಿಕಲ್ ಕಾಲೇಜನ್ನು ತೆರೆಯಲು ಮುಂದೆ ಬಂದದ್ದು ಸ್ತುತ್ಯಾರ್ಹವೆಂದೂ ಅವರ ಯೋಜನೆಗಳಿಗೆ ಮಾನ್ಯ ಸರಕಾರದವರೂ ನಾಗರಿಕರೂ ತುಂಬಾ ಸಹಕಾರ ಪ್ರೋತ್ಸಾಹಗಳನ್ನು ಕೊಡಬೇಕೆಂದೂ ವ್ಯಕ್ತಪಡಿಸಿದರು. ಹಾಗೆಯೇ ನಿರ್ಣಯಗಳು ಸರ್ವಾನುಮತದಿಂದ ಮಾಡಲ್ಪಟ್ಟು ಇವುಗಳನ್ನು ಸರಕಾರದವರ ಮತ್ತು ವಿಶ್ವವಿದ್ಯಾಲಯದವರ ಗಮನಕ್ಕೆ ತರಲು ನಿರ್ಧರಿಸಲಾಯಿತು.

ನೋಟೀಸು

ಜೈ ಭಾರತ್ ಡೈಲಿ ಅಕ್ಷನ್ ಚಿಟ್ ಫಂಡು, ಕಲ್ಯಾಣಪುರ, ದ. ಕ.

(Regd. No 1448)

ಮೇಲಿನ ಚಿಟ್ ಫಂಡನ್ನು ನಾನೇ ಪ್ರೊಪ್ರೈಟರನಾಗಿ ನಡಿಸಿಕೊಂಡು ಬರುತ್ತಿದ್ದು ತಾ 1-11-51ರಿಂದ ಇದರ ಸರ್ವಾಧಿಕಾರವನ್ನು ಶ್ರೀಗಳಾದ ಆಗಸ್ಟಿನ್ ಮಸ್ಕರೇನ್ಹಸ್‌ರ ಮಗ ಸಿರಿಲ್ ಮಸ್ಕರೇನ್ಹಸ್ ಮತ್ತು ಬಿ. ಮುಂಡಪ್ಪನವರ ಮಗ ಬಿ ರಾಮಪ್ಪನವರಿಗೂ ಸಂಪೂರ್ಣವಾಗಿ ಬಿಟ್ಟುಕೊಟ್ಟಿರುತ್ತೇನೆ ಈ ಚಿಟ್ ಫಂಡಿಗೆ ಸಂಬಂಧಿಸಿದ ಯಾವತ್ತೂ ಹಿಂದಿನ ಯೂ ಇನ್ನು ಮುಂದಿನ ಲಾಭ ನಷ್ಟಗಳಿಗೆ ಅಥವಾ ಯಾವುದೊಂದು ತರದ ಲೇವಾದೇವಿಗೆ ನಾನು ಜವಾಬ್ದಾರನಾಗಿರುವುದಿಲ್ಲ ಎಂಬ ಸಂಗ್ತಿಯನ್ನು ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿಯದೆ.

P. Devendra Nayak,
1—11—51

Sri B. Manjaya Hegde, B A B L.
President, District Board,
South Kanara.

TENDER NOTICE

Sealed Tenders are invited for the supply of different articles of furniture to the several Board Elementary Schools under the District Board and should reach the District Board Office by 5 P. M. on 30-11-1951. The sealed cover containing the tender should be superscribed as "Tender for the supply of furniture to Board Elementary Schools for 1951-52." The intending tenderers may peruse the conditions of tender and the copy of the schedule dimensions etc., of the different articles of furniture in the District Board Office between 11 A. M. to 5 P. M. on any working day before 30-11-1951.

(Sd) **Deju Uchil**
For President,
District Board, S. Kanara,
S. K. Dt. Board Office,
Mangalore, 27-10-51.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 225/1951

ಬೀಪಾತುಮ್ಮ —ವಾದಿಳು

ಬಿ. ಮೊಯಿದಂ ಕುಟ್ಟಿ ಬ್ಯಾರಿ ಆದೂರು ಪಸನಾರಿ ಬ್ಯಾರಿ ಮಗ, ಕಾಸರಗೋಡು ತಾಲೂಕು ಮುಳಿಯಾರು 2ನೇ ಗ್ರಾಮದ ಬಾವಿಕೆರೆಯಲ್ಲಿರುವವ_

—ಪ್ರತಿವಾದಿ

ಪ್ರತಿವಾದಿಯಿಂದ ವಾದಿಳಿಗೆ ದಿಮಾಂಡ ಪ್ರೊನೋಟು ಮೇರೆಗೆ ಬರಬೇಕಾದ ಅಸಲು ಬಡ್ಡಿ ಆ್ಯವಜಿಗೆ ವಾದಿಳು ದಾಖಲ್ಲುಮಾಡಿದ ಸದ್ರಿ ವ್ಯಾಜ್ಯವು ತಾರೀಕು 17-11-1951ಕ್ಕೆ ಯಿಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ.

Sd/- **P. Ahmad,**
Advocate for plaintiff.
ಕಾಸರಗೋಡು 3-11-51

ಟೆಂಡರ್ ನೋಟೀಸು

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಸ್ಥಾಪನಾ ನಂಬರ 521ನೇ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟಿಗಳ ಆಫೀಸಿನಿಂದ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ

ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಬಾಬಿನಲ್ಲಿ ಎಸ್ಟಿಮೇಟಿನಲ್ಲಿ ತೋರುವ ಬಾಕಿ ಇರುವ ಕಾಮಗಾರಿಗಳನ್ನು ನಡೆಸುವ ಬಗ್ಗೆ ಮೊಹರು ಹಾಕಿದ ಟೆಂಡರುಗಳನ್ನು ಅಗತ್ಯವುಳ್ಳವರು ತಾ. 19-11-51ನೇ ಸಾಯಂಕಾಲ 5ಗಂಟೆಯೊಳಗೆಆಫೀಸ್ ಒಫ್ ದಿ ಡಿಸ್ಟ್ರಿಕ್ಟ್ ಕಮಿಶನರ್ ಹಿಂದೂ ರಿಲೀಜಿಯಸ್ ಎಂಡ್ ಚೆರಿಟೇಬಲ್ ಎಂಡೋಮೆಂಟ್ಸ್ ಮಂಗಳೂರು- 1. ಇವರ ಆಫೀಸಿಗೆ ಹಾಜರು ಪಡಿಸತಕ್ಕದ್ದು. ಟೆಂಡರುಗಳು ತಾರೀಕು 20-11-51ನೇ ಸಾಯಂಕಾಲ 3ಗಂಟೆಗೆ ಮೇಲ್ಕಂಡ ಕಮಿಶನರಿಂದ ತೆರೆಯಲ್ಪಡುವುವು

ಟೆಂಡರುಗಳನ್ನು ಅಪೇಕ್ಷಿಸುವವರು ಅನುಸರಿಸತಕ್ಕ ಶರ್ತಗಳು:-

1] ದೇವಸ್ಥಾನದ ಟ್ರಸ್ಟಿಗಳ ಆಫೀಸಿನಿಂದ ಪ್ರತಿ ಟೆಂಡರಿಗೆ ಒದಗಿಸೋಣಾಗುವ ಕೆಲಸಗಳ ವಿವರ ಪತ್ರಿಕೆಯನ್ನು ಪಡೆಕೊಳ್ಳತಕ್ಕದ್ದು.

2] ಪ್ರತಿಯೊಬ್ಬ ಟೆಂಡರನೂ ಟೆಂಡರಿನೊಂದಿಗೆ ದೇವಸ್ಥಾನದ ಲೆಕ್ಕಕ್ಕೆ ಬ್ರಹ್ಮಾವರ ಸಿಂಡಿಕೇಟ್ ಬೇಂಕಿನ S. B. ಎಕೌಂಟಿನಲ್ಲಿ ರೂಪಾಯಿ 200-ನ್ನು ಜಮಾಮಾಡಿ ರಶೀದಿಯನ್ನು ಇಡತಕ್ಕದ್ದು.

3] ಮೇಲೆ ಕಾಣಿಸಿದಂತೆ ಬ್ರಹ್ಮಾವರ ಸಿಂಡಿಕೇಟ್ ಬೇಂಕಿನ ರಶೀದಿಯಿಲ್ಲದೆ ಬಂದ ಟೆಂಡರುಗಳನ್ನು ಸ್ವೀಕರಿಸೋಣಾಗಲಿಕ್ಕಿಲ್ಲ

4] ಮಂಜೂರಾದ ಟೆಂಡರನಿಗೆ ತಿಳಿಸಲಾಗುವುದು. ಅತನು ತಿಳಿಸಿದ ಎಂಟು ದಿನಗಳೊಳಗಾಗಿ ಮೇಲ್ಕಾಣಿಸಿದ ರೂಪಾಯಿ 200/- ಅಲ್ಲದೆ ರೂಪಾಯಿ 150/-ನ್ನು ಹಾಜರುಪಡಿಸಿ ಕ್ರಮವಾಗಿ ಕರಾರು ಬರಕೊಡತಕ್ಕದ್ದು

5] ಮಂಜೂರಾದ ಟೆಂಡರನ ಲೆಕ್ಕಕ್ಕೆ ಮೇಲ್ಕಾಣಿಸಿದಂತೆ ಬಾಕಿಯಾಗುವ ರೂಪಾಯಿ 350/-ನ್ನು ಅತನ ಕೆಲಸವು ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಇರುವುದೆಂದು ಇಂಜಿನಿಯರ್ ಸರ್ಟಿಫಿಕೇಟು ಕೊಟ್ಟ ನಂತರ ವಾಪಾಸು ಕೊಡಲಾಗುವುದು.

6] ಕೆಲಸವನ್ನು ತಾ. 11-2-52ರೊಳಗೆ ಪೂರೈಸಿ ಕೊಡತಕ್ಕದ್ದು

7] ಮೇಲಿನ ಎರಡನೇ ಕಲಮಿನಲ್ಲಿ ಹೇಳಿದಂತೆ ಮಂಜೂರಾಗದ ಟೆಂಡರುಗಳ ಹಣವನ್ನು ಕೂಡಲೇ ವಾಪಾಸು ಕೊಡಲಾಗುವುದು.

8] ಟೆಂಡರ್ ಕವರಿನಲ್ಲಿ ಶ್ರೀ ಮಂದಾರ್ತಿ ದೇವಸ್ಥಾನದ ಕಟ್ಟೋಣದ ಕಂಟ್ರಾಕ್ಟಿನ ಟೆಂಡರ್ ಲೆಟರು ಎಂತಲೂ ಅರ್ಜಿದಾರರ ವಿಳಾಸವನ್ನೂ ಸಹ ಕವರಿನ ಮೇಲುಗಡೆ ಬರೆಯತಕ್ಕದ್ದು.

H. ಶೇಷ ಹೆಗ್ಡೆ,
ಮೆನೇಜಿಂಗ್ ಟ್ರಸ್ಟಿ
ಮಂದಾರ್ತಿ ದೇವಸ್ಥಾನ 31-10-51

ಕಾಂಗ್ರೆಸ್ಸೊಂದೇ ಪ್ರಬಲ ಸಂಸ್ಥೆ!

ಉಡುಪಿಯಲ್ಲಿ ತಾ ೩ರಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ಸಭೆಯಲ್ಲಿ ಶ್ರೀ ಬೆನಗಲ್ ಶಿವರಾಯರ ಭಾಷಣ

ಮುಂಬರುವ ಚುನಾವಣೆಯ ಪ್ರಚಾರಾರ್ಥವಾಗಿ ಕೂಡಿದ ಸಭೆಯನ್ನು ಉದ್ಘಾಟಿಸುತ್ತಾ ಶ್ರೀ ಬೆನಗಲ್ ಶಿವರಾಯರು ಭಾರತದ ಹಿತ ಮತ್ತು ಕಲ್ಯಾಣ ದೃಷ್ಟಿಯಿಂದ ಕಾಂಗ್ರೆಸ್ಸೇ ಅಧಿಕಾರ ವಹಿಸಿ ಬರುವದು ಅತಿ ಯೋಗ್ಯವಾಗಿದೆ. ಅವಿರತ ಹೋರಾಟ ಮೂಲಕ ನಾವು ಸಾಧಿಸಿದ ಸ್ವಾತಂತ್ರ್ಯವನ್ನು ದುರುಪಯೋಗಗೊಳಿಸದೆ ಸಾರ್ಥಕಗೊಳಿಸುವದು ಮಹತ್ವದ ಸಂಗತಿ. ಸ್ವಾರ್ಥ–ಅಧಿಕಾರ ಲಾಲಸೆಯಿಂದ ಹಲವು ಪಕ್ಷಗಳು ಹುಟ್ಟುತ್ತಿವೆ. ಮಾತ್ರವಲ್ಲ ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಜನತೆಯನ್ನು ತಪ್ಪು ಮಾರ್ಗಕ್ಕೆ ಹಚ್ಚುವ ಕೆಲಸವನ್ನು ಮಾಡುತ್ತಿವೆ. ಈ ಜಿಲ್ಲೆಯ ಜನರು ಬಗೆಯ ವಂಚನೆಗೆ ಒಳಗಾಗದೆಂದು ನನಗೆ ಭರವಸೆಯಿದೆ. ದಕ್ಷಿಣ ಕನ್ನಡ ಜನಮತವನ್ನು ತಿಳಿದ ಮೇಲೆ ಕಾಂಗ್ರೆಸಿಗೆ ಇಲ್ಲಿ ಜಯ ಕಟ್ಟಿಟ್ಟಿದ್ದೆನುವ ನಂಬಿಕೆ ಸ್ಪಷ್ಟಂಟಾಗಿದೆ.

ಈ ಹಿಂದೆ ಕಾಂಗ್ರೆಸ್ ಟಿಕೇಟಿನಿಂದ ಪಾರ್ಲಿಮೆಂಟು–ಅಸ್ಸೆಂಬ್ಲಿಗೆ ಹೋದವರು ತಮ್ಮ ಕಾರ್ಯಕ್ಷೇತ್ರವನ್ನು ಮರೆತಿರುವ ಸುದ್ದಿ ಕೇಳಿ ಬರುತ್ತಲಿದೆ. ಅದರೆ ಆರಿಸಿ ಹೋಗುವವರು ತಮ್ಮ ಹೊಣೆಗಾರಿಕೆಯನ್ನು ಮರೆತುಬಿಡದೆ ಆಗಿಂದಾಗ್ಗೆ ಮತದಾರರೊಡನೆ ಸಂಪರ್ಕ ಬೆಳಸಿ ತಾವು ಸಾಧಿಸಿದ್ದನ್ನು, ಸಾಧಿಸಬೇಕಾದುದನ್ನು ತಿಳಿಸುವವರಿದ್ದಾರೆ. ನಾಯಕರೊಡಗಲಂತೆ ತಲೆಯೆತ್ತುವ ಪಕ್ಷಗಳಿಗೆ ಮತದಾನ ಮಾಡುವ ಜಯ ಶೀಲವಾದರೆ ಅಲ್ಪ ಸಂಖ್ಯಾತ ಪ್ರತಿನಿಧ್ಯವುಳ್ಳ ಅವುಗಳಿಂದ ಯಾವ ಪುರುಷಾರ್ಥವೂ ಆಗುವಂತಿಲ್ಲ. ಭಾರತವನ್ನು ಬಲವಾದ ತಳಹದಿಯ ಮೇಲೆ ನಿಲ್ಲಿಸಿ ಅದರ ಸಂರಕ್ಷಣೆಯನ್ನು ಸಾಧಿಸಿಕೊಳ್ಳಲು ಕಾಂಗ್ರೆಸು ಮಾತ್ರ ಸಮರ್ಥವಾಗಿದೆಂದು ಹೇಳಿದರು.

ಒಂದು ಶತಮಾನದಲ್ಲೂ ಆಗದ ಸುಧಾರಣೆ

ದ. ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ಶತಮಾನದಿಂದಲೂ ಆಗದ ಸುಧಾರಣೆಗಳು–ಜನಹಿತ ದೊರೆಯದ ಸೌಕರ್ಯಗಳು ಕಾಂಗ್ರೆಸ್ ರಾಜ್ಯಾಡಳಿತದಲ್ಲಿ ಪ್ರಾಪ್ತವಾಗಿದೆ. ಕಾಂಗ್ರೆಸನ್ನು ಶ್ರೇಷ್ಠವಾದ ಸಂಸ್ಥೆ ಬೇರೊಂದಿರದೆಂದು. ಕಾಂಗ್ರೆಸ್ಸಿನ ಹಿರಿಯ ಆದರ್ಶದಲ್ಲಿ ಸ್ವಾರ್ಥಪ್ರಾಯ ತಾಳಿ ಯಾರೂ ಹೊಂದಬಾರದು ಇರುವುದಿಲ್ಲ. ಹಲವರು ಕೇವಲ ವ್ಯಕ್ತಿದ್ವೇಷದಿಂದ ಹೊರಬಂದು ನೂತನಪಕ್ಷ ರಚಿಸಿ ಕಾಂಗ್ರೆಸ್ಸನ್ನು ಟೀಕಿಸುತ್ತಲಿದ್ದಾರೆ. ಕಾಂಗ್ರೆಸ್ಸಿನ ಕುರಿತು ವೃಥಾಲಾಪವನ್ನು ಕೈಗೊಂಡವರ ಬಲೆಗೆಸಿಲುಕದೆ ಕಾಂಗ್ರೆಸ್ಸಿಗೇ ತಮ್ಮ ಪೂರ್ತಿ ವರ್ಧಿತವಾದ ಬೆಂಬಲ ಕೊಡಬೇಕೆಂದೂ ಯಾರಿಗಾದರೂ ಕಾಂಗ್ರೆಸಿನ ಹಿತಸಾಧನೆಯ ಕುರಿತು ಯಾವ ಟೀಕೆ ಪ್ರಶ್ನೆ ಕೇಳಬೇಕೆಂದಿದ್ದರೆ ದಯಮಾಡಿ ಬಂದು ಕೇಳಬಹುದೆಂದೂ ತಾನು ಉತ್ತರಿಸಲು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇನೆಂದೂ ಹೇಳಿದರು.

ಜಗತ್ತಿಗೇ ಮಾದರಿ!

ಭಾರತದಲ್ಲಿಯ ಅಲ್ಪಸಂಖ್ಯಾತರನ್ನು ಕಾಂಗ್ರೆಸ್ಸು ನಡೆಸಿಕೊಂಡ ರೀತಿನೀತಿ ಜಗತ್ತಿಗೇ ಮಾದರಿಯಾಗಿದೆ! ಅಲ್ಪಸಂಖ್ಯಾತರ ಸರ್ವಸಾಮಾನ್ಯ ಹಕ್ಕೂ ವ್ಯತಿರಿಕ್ತ ಬರದಂತೆ ಕಾಂಗ್ರೆಸ್ಸು ನಡೆದುಕೊಂಡಿದೆ. ತನ್ನ ರಾಜ್ಯಾಡಳಿತ ಕ್ರಮದಿಂದ ಭಾರತ ಪ್ರಾಕ್ಟಿಕಲ್ ರಾಷ್ಟ್ರವೆಂಬುದನ್ನು ಕಾಂಗ್ರೆಸು ತೋರಿಸಿಕೊಟ್ಟಿದೆ. ನಮ್ಮ ಜಿಲ್ಲೆಯ ಅಲ್ಪ ಸಂಖ್ಯಾತರಲ್ಲಿ ಪ್ರಬಲರಾದ ಕ್ರಿಶ್ಚಿಯನ್ ಹಾಗೂ ಮುಸಲ್ಮಾನರು ಕಾಂಗ್ರೆಸ್ಸಿಗೇ ತಮ್ಮ ಸಹಕಾರ ನೀಡುವದರಲ್ಲಿ ಸಂದೇಹವಿಲ್ಲವೆಂದು ಮಂಗಳೂರಿನ ಶ್ರೀ ಎಲ್. ಸಿ. ಪ್ಯಾಸರು ಹೇಳಿದರು.

ಬ್ರಿಟಿಶರ ಆಡಳಿತದಿಂದ ದಾಸ್ಯತ್ವ

ದ್ವಿತೀಯ ಮಹಾ ಯುದ್ಧ ಕಾಲದಲ್ಲಿ ಬ್ರಿಟಿಷರು ಭಾರತೀಯರನ್ನು ಸುಲಿದುದರ ಫಲವಾಗಿ ನಾವಿಂದು ಈ ದುಃಸ್ಥಿತಿಗೆ ಬಂದಿದ್ದೇವೆ. ಸುಮಾರು 250 ಕೋಟಿಯಿಂದ 1250 ಕೋಟಿಯ ತನಕ ನೋಟನ್ನು ಅಚ್ಚುಹಾಕಿಸಿ ಆತಿಪ್ರಸರಣಕ್ಕೆ ಕಾರಣ ಮಾಡಿದರು. ಸದ್ಯ ಭಾರತ ಸರಕಾರವು ಅನುಸರಿಸುತ್ತಿರುವ ಮಧ್ಯವರ್ತಿ ಮಾರ್ಗದಿಂದಲೇ ನಮ್ಮ ಮುಂದಿನ ಬಿಕ್ಕಟ್ಟು ಪರಿಹಾರವಾಗಲು ಸಾಧ್ಯವಿದೆ. ಆಹಾರ ಭಾವ–ಕಂಟ್ರೋಲ್‌ಗಳ ಕುರಿತು ಬೇರೆ ಬೇರೆ ಪಕ್ಷಗಳು ನಾನಾ ರೀತಿಯಲ್ಲಿ ಮಾತನಾಡುತ್ತಲಿವೆ. ಕಾಂಗ್ರೆಸ್ಸನ್ನು ಟೀಕಿಸುವಾಗ ತಮ್ಮ ನಿಲುವು ಯೋಜನೆಂಬುದರ ನಿಶ್ಚಿತಾಭಿಪ್ರಾಯ ಅವುಗಳಿಗೂ ಇರುವುದಿಲ್ಲ. ಇಂತಹ ಗೊತ್ತುಗುರಿಯಿಲ್ಲದ ಪಕ್ಷಗಳು ಅಧಿಕಾರಕ್ಕೆ ಬಂದರೆ ಆರಾಜಕತೆ ಯುಂಟಾಗುವುದು. ಸ್ವಾಭಾವಿಕ. ಅಂತಲೆ ಸರ್ವವಿಧದಿಂದಲೂ ಕಾಂಗ್ರೆಸ್ಸೊಂದೇ ನಮ್ಮ ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ಸಂಸ್ಥೆ. ಇದಕ್ಕೆ ನೀವೆಲ್ಲ ಬೆಂಬಲ ಕೊಡಬೇಕೆಂದೂ ● ಬಿ. ಎ. ಪೈಗಳವರು ಹೇಳಿದರು.

ಹಿಂದುಳಿದವರ ಉದ್ಧಾರ

ಹಿಂದುಳಿದ ಜನಾಂಗದ ಉದ್ಧಾರಕ್ಕಾಗಿ ಕಾಂಗ್ರೆಸ್ಸು ಬಹಳವಾಗಿ ಶ್ರಮಿಸಿದೆ; ಮಾತ್ರವಲ್ಲ ಪ್ರಥಮವಾಗಿ ಪ್ರಾಶಸ್ತ್ಯ ಕೊಟ್ಟಮೇಲೆ ತರುವಂತೆ ಯತ್ನಮಾಡಿದೆ. ಕಾಂಗ್ರೆಸು ಹಿಂದುಳಿದವರ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದರಿಂದ ಹಿಂದುಳಿದವರ ಪ್ರತ್ಯುಪಕಾರವಾದ ಬೆಂಬಲ ಸಹಕಾರ ಕಾಂಗ್ರೆಸ್ಸಿಗೆ ನೀಡುವರಾಗಿ ನಾನು ನಂಬಿದೇನೆ ಮಾತ್ರವಲ್ಲ ಅವರ ಪರವಾಗಿ ಭರವಸೆಯನ್ನೂ ಕೊಡುತ್ತೇನೆ. ಎಂದು ಶ್ರೀ ಎಸ್. ಎಲ್. ಸುವರ್ಣರು ಹೇಳಿದರು.

ಪರಿಶುದ್ಧ ಸಂಸ್ಥೆ ಕಾಂಗ್ರೆಸ್

ಕಾಂಗ್ರೆಸ್ ಪರಿಶುದ್ಧವಾದ ಸಂಸ್ಥೆ! ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಆಂದೋಲನಗಳನ್ನು ನಾವಿಲ್ಲಿ ಸ್ಮರಿಸಬಹುದಾಗಿದೆ. ನೆಹ್ರೂರಂತಹ ಧುರೀಣರಿರುವಾಗ ನಮಗಾವರೀತಿಯ ಭಯವೂ ಬೇಡ. ಈ ದೇಶಿಯರು ನಮ್ಮ ಚುನಾವಣಾ ಫಲಿತಾಂಶವನ್ನು ಕುತೂಹಲದಿಂದ ನಿರೀಕ್ಷಿಸುತ್ತಿರುವಾಗ ನಾವು ಅಲಕ್ಷ್ಯಭಾವದಿಂದ ನೋಡಕೂಡದು. ವಿರುದ್ಧ ಪಕ್ಷಗಳು ಕೊಡುತ್ತಿರುವ ಪೊಳ್ಳು ಆಶ್ವಾಸನೆಗಳಿಗೆ ಬಲಿಬೀಳಬೇಡಿರಿ. ಕಾಂಗ್ರೆಸ್ಸೊಂದೇ ನಮ್ಮ ಸಕಲ ಇಷ್ಟಾರ್ಥವನ್ನು ಈಡೇರಿಸಬಲ್ಲ ಸಂಸ್ಥೆಯಾದುದರಿಂದ ಅದಕ್ಕೇನೇ ಎಲ್ಲರೂ ತಮ್ಮ ಬೆಂಬಲ ನೀಡಬೇಕೆಂದು ಅಧ್ಯಕ್ಷ ಶ್ರೀ ಅಡೂರು ಲಕ್ಷ್ಮೀನಾರಾಯಣರಾಯರು ಹೇಳಿದರು.

ಈ ಸಮಾರಂಭವು ಶ್ರೀಕೃಷ್ಣ ಪರಮಾತ್ಮನ ಸನ್ನಿಧಿಯಲ್ಲಿ ಜರಗುವ ಪ್ರಯುಕ್ತ ಶ್ರೀ ಪರಮಾತ್ಮನ ಪರಿಪೂರ್ಣ ಅನುಗ್ರಹ ಆದಕ್ಕಿದೆ ಎಂದು ಧನ್ಯವಾದವನ್ನರ್ಪಿಸುತ್ತಾ ಶ್ರೀ ಸಂಜೀವ ಪೈಗಳು ಹೇಳಿದರು.

ರಥಬೀದಿಯಲ್ಲಿ ಶ್ರೀ ಮುಕ್ತಿಗೆ ಮುಕುಟ ಮುಖಮಂಟಪದಿದಿರು ಜರಗಿದ ಈ ಸಾರ್ವಜನಿಕ ಪ್ರಚಾರ ಸಭೆಗೆ ಶ್ರೀ ಅಡೂರು ಲಕ್ಷ್ಮೀನಾರಾಯಣರಾಯರು ಅಧ್ಯಕ್ಷರಾಗಿಯೂ ಬೆನಗಲ್ ಶಿವರಾಯರು ಉದ್ಘಾಟಕರಾಗಿಯೂ ಬಂದಿದ್ದರು. [ಸ್ಥಳೀಯ ಕಾಂಗ್ರೆಸ್ ಕಮಿಟಿಯ ಪರಿಯಿಂದ ಈ ಸಭೆಯು ಏರ್ಪಾಟಾಗಿತ್ತು.]

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹಳದಿ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರಗಳಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

ಶಾ ಕಂಪೆನಿ, ಮಂಗಳೂರು.

ನೋಟೀಸು

R. O. C. R.... [illegible]

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಉಡುಪಿ ಮುನಿಸಿಪಲ್ ಬಸ್ ಸ್ಟೇಂಡಿನ ಪರಾರಿಯೊಳಗಿರುವ ಎರಡು ಮರದ ಗೂಡುಗಳನ್ನು ಗುತ್ತಿಗಾಗಿಗೆ ವ ಗುತ್ತಿದಾರರಿಗೆ ಸ್ವಾಧೀನಕ್ಕೆ ಬಿಟ್ಟುಕೊಡುವ ತಾರೀಕಿನಿಂದ 3ವರ್ಷದ ತನಕ ಬಾಡಿಗೆಗೆ ಉಪಯೋಗಿಸಿಕೊಳ್ಳುವ ಹಕ್ಕನ್ನು, ಮುನಿಸಿಪಲ್ ಕಮಿಶನರ್‌ರವರು ಆ ಕುರಿತು ಪ್ರಾರಿಯದ್ದಿರತಕ್ಕ ನಿಯಮಗಳಿಗನುಸಾರವಾಗಿ ತಾ. 12-11-51ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಬಹಿರಂಗವಾಗಿ ಮುನಿಸಿಪಲ್ ಆಫೀಸಿನಲ್ಲಿ ಏಲಂ ಮೂಲಕ ಮಾರಾಟ ಮಾಡುವರು. ಟ್ಟಾಕ್ ಉಳ್ಳವರು ಏಲಂನಲ್ಲಿ ಪಾಲಿಸಿಕೊಳ್ಳಬಹುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಗತ್ಯವಿದ್ದಲ್ಲಿ ಆಫೀಸು ದಿನಗಳಲ್ಲಿ ಆಫೀಸು ಸಮಯದಲ್ಲಿ ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(Sd) A. S. D' Souza.

ಕಮಿಶನರ್.

ಮುನಿಸಿಪಲ್ ಆಫೀಸು, ಉಡುಪಿ.

ತಾರೀಕು. 2-11-51.

ದಿ ವಿಜಯಾ ಬೇಂಕ್ ಲಿಮಿಟೆಡ್ ಬ್ಯೆಂದೂರು (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು–ವ–ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಇರುವುದರಿಂದ ಸದ್ರಿಯವರು ನಮ್ಮ ಬೇಂಕಿನಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ನವಂಬರ ತಿಂಗಳ ತಾರೀಕು 24ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ–ಯಾ–ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಬೇಂಕಿನ ವಠಾರದಲ್ಲಿ ಹರಾಜುಮಾಡಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬ್ಲಗು
1116/46-7	ಶ್ರೀ ಬಿ. ನಾರಾಯಣ ಹೊಳ್ಳ, ನಾಗಪ್ಪ ಹೊಳ್ಳರ ಮಗ, ಭೂಪಸ್ಥಳದ ಬ್ಯೆಂದೂರು	ರೂ. ಆ 552-14
419/47-8	ಕೊಲ್ಲೆ ತಿಮ್ಮಪ್ಪ ಸೇಟ್, ಸುಬ್ರಾಯ ಸೇಟರ ಮಗ, ಬಿಜವಾಡಿ ಬ್ಯೆಂದೂರು	21-12
5/50	ಬಿ. ನರಸಿಂಹ ಸೆಟ್ಟಿ, C/o ಶ್ರೀ ಕೆ. ನರಸಿಂಹ ಹೆಗ್ಡೆ, ಟಿಂಬರ್ ಮರ್ಚೆಂಟ್ ಬ್ಯೆಂದೂರು	9-11
1174/48-9	ಬೈಸಿಕಲ್ ಕೆ. ಶ್ರೀನಿವಾಸ, ಅನಂತ ಭಟ್ಟರ ಮಗ, ಕೊಟಿತಿರೂರು ಗ್ರಾಮ ಕೊಲ್ಲೂರು.	167-10
940/48-9	ಕೆ. ದಾಸಪ್ಪ ಶ್ಯಾನುಭಾಗ, ಆರ್ದಪ್ಪ ಶ್ಯಾನುಭಾಗರ ಮಗ, ಕಂಬದ ಕೋಣೆ	98- 5
64/49	—do—	152- 6
231/49	—do—	141- 4
1354/50	—do—	591- 0
158/50	● ಯು. ನಾರಾಯಣ ನ್ಯಾಕ್ ಹೆಡ್‌ಮಾಸ್ಟರ್ ಬೋ. ಎ. ಶಾಲಾ, ಬಾದ ಬ್ಯೆಂದೂರು	64- 7
425/50	—do—	43- 8
505/50	—do—	96-15
443/50	ಶ್ರೀ ಕುಟ್ಟ ಸೇರುಗಾರ ಮಂಜಯ್ಯ ಸೇರುಗಾರರ ಮಗ, ಬೇಲೆಮನೆ, ಕೊಣೆಬಾಗಿಲು ಪಡುವರಿ	13- 3
521/50	ಶ್ರೀ ಬೇಲೆಮನೆ ಕೃಷ್ಣ ಸೇರುಗಾರ ಮಂಜಯ್ಯ ಸೇರುಗಾರ ಪಡುವರಿ.	27- 2
167/50	ಶ್ರೀ ಶುಕ್ರವಾರ್ ಭಾಷಾ ಸಾಹೇಬ್, ಮಹಮ್ಮದ್ ಗೌಸ್ ಸಾಹೇಬರ ಮಗ, ಮಾಡಿಕಲ್, ಉಪ್ಪುಂದ.	218- 7

ಬ್ಯೆಂದೂರು 27-10-1951

ಎಚ್. ರಾಜೀವ ಸೆಟ್ಟಿ,
ಏಜಂಟ್.

NOTICE

In the Court of the District Munsiff of Kasaragod

O.S.23/51 and O.S.43/51

Thimmanna Bhandary son of Akkamma residing at Shiria village

—Plaintiff

and

Abdul Rahiman son of Mammad residing at Shiria village

—Defendant

Please take Notice that the abovenamed plaintiff has filed the above two suits against the defendant for recovery of plaint claims and the suits are posted to 6-11-1951 for appearance of the defendant, failing which the defendant will be declared ex-parte in the said suits.

K. Narayana Nayak

Advocate for plaintiff.

Kasaragod, 26-10-1951.

ಚುನಾವಣೆಯಲ್ಲಿ ಕಾಂಗ್ರೆಸ್ಸೇ ಏತಕ್ಕೆ ಜಯಶೀಲವಾಗಿ ಬರಬೇಕು?

ಬರೆದವರು:- ಶ್ರೀ. ಬಿ. ಬಿ. ಶೆಟ್ಟಿ, ಎಡ್ವೋಕೇಟ್, ಮಂಗಳೂರು

ಚುನಾವಣೆಯು ಸಮೀಪಿಸುತ್ತಾ ಬರುತ್ತಿದ್ದು ಚುನಾವಣಾರಂಗದಲ್ಲಿ ಅನೇಕ ಪಕ್ಷಗಳು ತಮ್ಮನ್ನು ಆರಿಸಿ ಕಳುಹಿಸಿರಿ ಎಂದು ಸ್ಪರ್ಧಿಸುತ್ತಿರುವಾಗ, ಕಾಂಗ್ರೆಸ್ಸನ್ನೇ ಆರಿಸಿ ಕಳುಹಿಸುವ ಆವಶ್ಯಕತೆ ಯೇನೆಂಬುದನ್ನು ಜನಸಾಮಾನ್ಯರು ಇಂದು ತುಸು ಆಲೋಚಿಸಬೇಕಾಗಿದ್ದುತ್ತದೆ.

(1) ಹಿಂದೂಸ್ಥಾನದಲ್ಲಿ ಇಂದು ಸುಮಾರು 120 ಬೇರೆ ಬೇರೆ ಪಕ್ಷಗಳು ಇರುತ್ತವೆ. ಈ ಬೇರೆ ಬೇರೆ ಪಕ್ಷಗಳಿಗೆ ಬೇರೆ ಬೇರೆ ಮುಖಂಡರೂ ಬೇರೆಬೇರೆ ಧೋರಣೆಗಳೂ ಇರುತ್ತವೆ. (2) ಇವುಗಳೆಲ್ಲಾ ಇತ್ತೀಚೆಗೆ ಜನ್ಮವೆತ್ತಿ ತಮ್ಮಷ್ಟಕ್ಕೆ ತಾವೇ ತಮ್ಮ ಸಾಮರ್ಥ್ಯವನ್ನು ಇಷ್ಟು ವರೆಗೆ ವ್ಯಕ್ತಪಡಿಸಿದ್ದಿಲ್ಲ. (3) ಕಾಂಗ್ರೆಸ್ಸನ್ನು ವಿರೋಧಿಸುವ ಬಗ್ಗೆ ಇವೆಲ್ಲವೂ ಒಂದಾಗಿ ಒಂದು ವೇಳೆ ಸರಕಾರವನ್ನು ನಿರ್ಮಿಸುವ ಸಂದರ್ಭವೊದಗಿದ್ದಲ್ಲಿ ಏನು ಪ್ರಸಂಗ ಒದಗೀತೆಂತ ತುಸು ಆಲೋಚಿಸೋಣ (a) ಪ್ರತಿಯೊಂದು ಸಂಗತವೂ ಸರಕಾರವನ್ನು ನಡೆಯಿಸುವುದರಲ್ಲಿ ಹೊಸದಾಗಿ ಮನಃಶಕ್ತಿಯನ್ನು ಪಡೆಯಬೇಕಾಗಿದ್ದು ಮಹತ್ತರವಾದ ಕಾರ್ಯಗಳು ಆಡಳಿತೆಯ ದುಸ್ಥಿತಿಗೆ ಜನರು ಸಿಕ್ಕಿ ನರಳುವ ಪ್ರಸಂಗ ಬಂದೊದಗಬಹುದು. (b) ಪ್ರತಿಯೊಂದು ಪಕ್ಷಕ್ಕೂ ಬೇರೆ ಬೇರೆ ಧೋರಣೆಯಿದ್ದು, ಆಯಾಯ ಪಕ್ಷದವರು ತಮ್ಮ ಧೋರಣೆಯೇ ಜ್ಯಾರಿಗೆ ಬರಬೇಕೆಂಬ ಹೋರಾಟಕ್ಕೆ ಪ್ರಾರಂಭಿಸಿ, ಆಡಳಿತೆಯು ಈ ರೀತಿಯ ಘರ್ಷಣೆಗೆ ಸಿಕ್ಕಿ ಸರಕಾರವು ಸರಾಗವಾಗಿ ನಡೆದು ಬರುವರೇ ಅಸ್ಪದ ವಿರಲಾರದ. (c) ಅಲ್ಲದೆ ಈ ಘರ್ಷಣೆಯಲ್ಲಿ ಪ್ರತಿಯೊಂದು ಪಕ್ಷವೂ ತಾವೇ ಸರಕಾರವನ್ನು ನಡೆಸಬೇಕು, ತಮಗೇ ಮುಂದಾಳುತನ ಬೇಕು, ಎಂಬ ಸ್ಪರ್ಧೆಗಿಳಿದು ಒಂದೇ ನಿಶ್ಚಿತ ಅಭಿಪ್ರಾಯದ ಸರಕಾರವಿಲ್ಲದೆ ಹೆಜ್ಜೆ ಹೆಜ್ಜೆಗೂ ನೂತನ ಪಕ್ಷಗಳು ಮುಂದಾಳು ತನವನ್ನು ಕಟ್ಟಿಕೊಂಡು ಮಂತ್ರಿಮಂಡಳಗಳು ಬೇಗ ಬೇಗನೆ ಬರುತ್ತಿದ್ದು ಯಾವದೊಂದು ಧೋರಣೆಯೂ ನಡೆದುಬಾರದೆ ಸರಕಾರದ ದುರ್ಬಲತೆಯಿಂದ ಇಂದಿನ ಸ್ಥಿತಿಗಿಂತ ಎಷ್ಟೋ ಜಾಸ್ತಿಯಾಗಿ ಜನತೆಯು ನರಳುವ ಪ್ರಸಂಗವು ಬಂದು ಬಿಡುವುದು.

ಆದರೆ ಕಾಂಗ್ರೆಸು ಈ ರೀತಿಯ ಸಂಸ್ಥೆಯಲ್ಲ. ಸುಮಾರು 60 ವರ್ಷಗಳಿಗೂ ಮೇಲ್ಪಟ್ಟ ಬಾಳಿಕೆಯಿದ್ದು ಅನೇಕ ಅವಘಡಗಳನ್ನು ದಾಟಿ, ನಿಶ್ಚಿತ ಧೋರಣೆಯಿದ್ದು ಒಂದೊಂದನ್ನೇ ಜಾರಿಯಲ್ಲಿ ತರುತ್ತಿರುವ ಸ್ವಂತ ಸಾಮರ್ಥ್ಯವಿರುವ ಸ್ವತಂತ್ರವಾದ ಸಂಸ್ಥೆಯಿರುವುದು. ಸ್ವತಂತ್ರ ಹೋರಾಟದಲ್ಲಿ ಪ್ರಚಂಡ ಹೋರಾಟನಡೆಸಿ ರಾಷ್ಟ್ರದ ಆಶೆಯ ಬೀಡು ಎನಿಸಿದೆ, ಇದು ರಾಷ್ಟ್ರವನ್ನು ಗುಲಾಮಗಿರಿಯಿಂದ ಎಳೆದು ಸ್ವತಂತ್ರವನ್ನು ಕೊಟ್ಟಿರುವುದು. ಇತರ ಪಕ್ಷಗಳನ್ನು ನಡೆಸಿಬರುವ ಮುಖಂಡರು ಇದರ ಆಶ್ರಯದಲ್ಲಿ ತರಬೇತಿ ಹೊಂದಿ ಹೋದವರಿರುತ್ತಾರೆ, ರಾಷ್ಟ್ರದ ಅನೇಕ ಗಣನೀಯ ಮಹನೀಯರು ತಮ್ಮ ಆಯುಷ್ಯವನ್ನು ಇದರ ಸೇವೆಯಲೇ ಸವೆದು ಇದಕ್ಕೆ ಶಕ್ತಿಯನ್ನಿತ್ತು ಸ್ವರ್ಗಸ್ಥರಾಗಿರುತ್ತಾರೆ. ಪೂಜ್ಯ ಮಹಾತ್ಮಾ ಗಾಂಧಿಯವರು ಇದರ ಧ್ಯೇಯಪಾಲನೆಗಾಗಿ ತಮ್ಮ ಪ್ರಾಣವನ್ನೇ ದಾನವಿತ್ತಿರುತ್ತಾರೆ. ಇಷ್ಟೊಂದು ಘನವಾದ ಸಂಸ್ಥೆಯನ್ನು ಸ್ವಾತಂತ್ರ್ಯವನ್ನು ಪಡೆದ ಮೂರು ನಾಲ್ಕು ವರ್ಷಗಳಲ್ಲೇ ಪ್ರಪಂಚದ ಇಂದಿನ ಸ್ಥಿತಿಗೆ ಕಣ್ಣು ಮುಚ್ಚಿ ಕಾರಣಗಳನ್ನು ಕಲ್ಪಿಸಿಕೊಂಡು ಇದನ್ನು ಅಧಿಕಾರದಿಂದ ಹೊರದಬ್ಬಿ ಎಂಬ ಕೂಗನ್ನು ಎಬ್ಬಿಸಬಹುದೇ? ಕಾಂಗ್ರೆಸು ಅಧಿಕಾರದಿಂದ ಹೊರಬಂದಲ್ಲಿ ಅಧಿಕಾರವನ್ನು ವಹಿಸತಕ್ಕ ಇನ್ನೊಂದು ಸಮರ್ಥ ಸಂಸ್ಥೆಯಾದರೂ ಯಾವುದು? ಇದನ್ನು ನಾವು ಇಂದು ನಿಶ್ಚಯಿಸಿರುತ್ತೇವೆಯೋ? ಪಂಡಿತ ಜವಾಹರಲಾಲರಂತಹ ವ್ಯಕ್ತಿಗಳ ಅಸ್ತಿತ್ವ ಮುಂದಾಳುತನದಲ್ಲಿ ಮುನ್ನಡೆದು ಬರುತ್ತಿರುವ ರಾಷ್ಟ್ರವು ಸ್ವತಂತ್ರಸಿಕ್ಕಿದ ಇಷ್ಟರಲ್ಲೇ ಅಂತರ್ ರಾಷ್ಟ್ರೀಯ ಕೂಟಗಳಲ್ಲಿ ಮೇಲ್ಮೆಯ ಸ್ಥಾನವನ್ನು ಹೊಂದಿರುತ್ತದೆ, ಸ್ವತಂತ್ರದ ಆದಿಯಲ್ಲೇ ರಾಷ್ಟ್ರದ ವಿಭಜನೆಯಿಂದ ಎಂತಹ ಸಮರ್ಥ ಸರಕಾರವನ್ನೂ ಬೆದರಿಸತಕ್ಕ ನಿರಾಶ್ರಿತರ ಪ್ರಶ್ನೆ, ಬರ್ಮಾ ಪಾಕಿಸ್ಥಾನಗಳನ್ನು ಕಳಕೊಂಡ ಪರಿಣಾಮವಾಗಿ ಒದಗಿದ ಆಹಾರ ಪರಿಸ್ಥಿತಿಯಿದ್ದಾಗ್ಯೂ, ಇವುಗಳನ್ನು ಅತೀ ಜಾಗ್ರತೆಯಿಂದ ದಾಟಿ ಸಾಗುತ್ತಿರುವ ರಾಷ್ಟ್ರದ ಚುಕ್ಕಾಣಿಯನ್ನು ಹಿಡಿದಿರುವ ಕಾಂಗ್ರೆಸನ್ನು ಹೊರದಬ್ಬಿ ಅನ್ಯ ಪಕ್ಷವನ್ನು ಆರಿಸಿದ್ದಲ್ಲಿ ರಾಷ್ಟ್ರದ ಮುಂದಿನ ಸ್ಥಿತಿಯೇನು, ಎಂಬುದನ್ನು ಕಾಂಗ್ರೆಸನ್ನು ದೂರುವ ಜನತೆಯು ಜವಾಬ್ದಾರಿಯಿಂದ ಆಲೋಚಿಸಿದ್ದಿಲ್ಲ. ಕಾಂಗ್ರೆಸ್ಸಿನ ಒಳಗೆ ಕೆಲವು ಅಕೃತ್ರಿಮರಾದ ವ್ಯಕ್ತಿಗಳು ಸೂತ್ರಚಾಲಕರಾಗಿದ್ದಾರೆ ಎಂಬ ವಾಕ್ಯದಿಂದ ಇಡೀ ಕಾಂಗ್ರೆಸು ಅವರ ನಿರ್ಧಾರವು ಕೆಟ್ಟದೆಂದಾಗಲಿಲ್ಲ. ಅದು ಇಂದು ಕಾಂಗ್ರೆಸಿನ ಮೇಲಿನ ಅಪವಾದವಿದ್ದರೆ ಅಂತಹ ಸೂತ್ರಚಾಲಕರನ್ನು ಉತ್ತಮ ವ್ಯಕ್ತಿಗಳು ಅಧಿಕ ಸಂಖ್ಯೆಯಿಂದ ಬಂದು ಕಾಂಗ್ರೆಸ್ಸನ್ನು ಬಲಗೊಳಿಸುವದು ಆವಶ್ಯಕ ಹೊಸ ಪಕ್ಷಗಳಲ್ಲಿಯೂ ಮುಂದಕ್ಕೆ ಅಂತಹ ವ್ಯಕ್ತಿಗಳು ಪ್ರವೇಶಿಸಲಿಕ್ಕಿಲ್ಲವೆಂಬ ಭರವಸೆಯೆಲ್ಲಿದೆ? ಒಂದು ಸಂಸ್ಥೆಗೆ ಉತ್ತಮ ವ್ಯಕ್ತಿಗಳು ಮಾತ್ರ ಪ್ರವೇಶಿಸುವಂತೆ ನಿರ್ಬಂಧಿಸುವರೆ ಬರುತ್ತದೆಯೇ? ಕಾಂಗ್ರೆಸಿನ ಮೇಲೆ ಹೊರಿಸುವ ಯಾವುದೊಂದು ಟೀಕೆಯೂ ವಿಮರ್ಶಿಸಿ ನೋಡಿದರೆ ನ್ಯಾಯವಾದ ಟೀಕೆಯಲ್ಲ ಹಿ... ರುತ್ತಾ ಕಾಂಗ್ರೆಸ್ಸನ್ನು ಅಧಿಕಾರದ ಗದ್ದುಗೆಯಲ್ಲಿ ಮುಂದಕ್ಕೂ ಕುಳ್ಳಿರಿಸುವುದು ನಮ್ಮ ಆವಶ್ಯ ಕರ್ತವ್ಯವು.

WANTED

Agents for the sale of our new design fountain pens on Rs 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. D.)
Nagdevi BOMBAY 3.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 45/51.

1. ಲಕ್ಷ್ಮಿ. M. ಲಕ್ಷ್ಮಣನ ವಿಧವೆ, 2. ಜಲಜಾಕ್ಷಿ, 3. ರೇವತಿ, 4. ಶಿವರಾಮ.

5. ಸರಳಾ, 6. ಶಾಂತಾ, 7. ಸುನಂದಾ, 8. ಸೀತಾರಾಮಯಾನೆ ಸುರೇಶ, 9 ಭೂಷಣ. ಈ ಐದುಜನ ಮೈನರರು.

M. ಲಕ್ಷ್ಮಣನ ಮಕ್ಕಳು. ಮೈನರರ ಬಗ್ಗೆ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು.

1, 2, 4ರಿಂದ 9ನೇ ವರೇಗಿನವರು ಮ್ಯಾಂತಗ್ರಾಮದ ಪೋಲೀಸ್ ಸ್ಟೇಶನ್ ಬಳಿಯಲ್ಲಿಯೂ, 3ನೇಯವಳು Kandelvala Mansion, 2nd Floor, Room No. 221, Cotton Green, Bombay ಎಂಬಲ್ಲಿಯೂ ಇರುವವರು. ಅರ್ಜಿದಾರರ ಈ ಮೂಲಕ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ:—

ಮ್ಯಾಂತಗ್ರಾಮದಲ್ಲಿದ್ದು ಮೃತಪಟ್ಟ M. ಲಕ್ಷ್ಮಣ ಎಂಬವರಿಗೆ Post Office National Savings Certificate No. N. S. co 496422 ವ. N. S co 496423 ಕೂಡಾ 2 ಸರ್ಟಿಫಿಕೇಟು ಪ್ರಕಾರ ಬರತಕ್ಕ ರೂಪಾಯಿ 200-ನ್ನು ಸದ್ರಿ M. ಲಕ್ಷ್ಮಣನವರು ಬರೆದಿಟ್ಟ ವಿಲ್ಲು ಮೇರೆಗೆ ಪಡೆಯುವರೆ ಹಕ್ಕುದಾರನಾದ 4ನೇ ಅರ್ಜಿದಾರನ ಹೆಸರಿಗೆ ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 24-11-1951ಕ್ಕೆ ಇಟ್ಟಿರುವದರಿಂದ ಆ ಕುರಿತು ಯಾರದ್ದಾದರೂ ಆಕ್ಷೇಪಯಿರುವದಾದರೆ ಆ ದಿನ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಇಲ್ಲವೆ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸತಕ್ಕದ್ದು, ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

P. Ramachanda Rao.
Pleader for Petitioners.
Karkala, 26-10-1951.

TEL: 40592

WATSONS AERATED WATERS

14 Perel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇತರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 217/1951

A. S. ಮಂಜಪ್ಪಯ್ಯ ಹಾಜಿ. —ವಾದಿ.
ಅಲಿಕುಂಞಿ ಬ್ಯಾರಿ ಸಹಾ —ಪ್ರತಿವಾದಿಯು
ಪ್ರತಿವಾದಿ:—

2] ಚೆರಕರೆ ಎಡರ್ನಾಡು ಮುದಿಯ ಪೂರಿಯಿಲ್ ಕದಿಸುಮ್ಮ, ಅಲಿಕುಂಞಿ ಬ್ಯಾರಿ ಹೆಂಡ್ತಿ—

2] ಇಬ್ರಾಯಿಂ ಕುಟ್ಟಿ, 2ನೇ ಪ್ರತಿವಾದಿಳು ಕದಿಸುಮ್ಮರ ಮೈನರ ಮಗ, ಗಾರ್ಡಿಯನ್ 2ನೇ ಪ್ರತಿವಾದಿಳು ಕದಿಸುಮ್ಮ.

ಕಾಸರಗೋಡು ತಾಲೂಕು ಕಳನಾಡು ಗ್ರಾಮದ ಮೇಲ್‌ಪರಂಬಿನಲ್ಲಿರುವವ,

ವಾದಿಗೆ ದಾವಾ ಆಸ್ತಿ ಜವಾಬ್ದಾರಿಯಿಂದ ಬರಬೇಕಾದ ಅಸಲು ಅನ್ವೇಷಣ ಬಡ್ಡಿ ಬಾಬ್ತು ಬಗ್ಗೆ ದಾಖಲ್ಮಾಡಿದ ಸದ್ರಿ ವಾಜ್ಯವು ತಾರೀಕು 20-11-51ಕ್ಕೆ ತನಿಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

(Sd.) P. Ahmad,
Advocate for Plaintiff.
ಕಾಸರಗೋಡು, 25-10-51

In the Court of the Subordinate Judge of South Kanara.

R.E P. No. 236/1950.
in
O. S. No. 168/1948

Between:-

The Pangal Nayak Bank Ltd. Kinnigolli, Branch, by its Agent Sri H. Gopalkrishna Shenoy.
—Petitioner

And

N. Pundalika Ravalappa Kamath, son of Niddodi Ravalappa Kamath, Kallamundkur village Karkal Taluk.
—Respondent

NOTICE is hereby given that the Petitioner abovenamed has brought for sale the immoveable Properties more fully described in the sale papers file into court and situated in Padu Marnad and Kallamundkur villages respectively belonging to the J. D. (Respondent) and the sale now stands posted to 19-11-1951.

(By order of the court)

Sd. G. Someshekar Rao, B.A.B.L.
Vakil for Petitioner
Mangalore Dt. 20-10-1951

ಪ್ರವಾಸಿಯ ಪತ್ರಗಳು ೧೭

ಪೇರಿಸ್ ನಗರ

(ಮುಂದರಿದುದು)

ಪೇರಿಸಿನ ಇನ್ನೊಂದು ಕಡೆ ಪ್ರಖ್ಯಾತನಾ "ನೊಟ್ರೆಡೇಮ್" ಎಂಬ ಇಗರ್ಜಿಯನ್ನು ಕಂಡೆವು. ಅದು ಸೀನ್ ನದಿಯ ಮಧ್ಯದ ಒಂದು ದೋಣಿ ಆಕಾರದ ದ್ವೀಪದಲ್ಲಿ ಇರುತ್ತದೆ. ಇದರ ಹೆಸರಲ್ಲಿ ಫ್ರಾನ್ಸ್‌ದೇಶದ ಖ್ಯಾತ ಕಾದಂಬರಿಕಾರ 'ವಿಕ್ಟರ್ ಹ್ಯೂಗೋ' ಎಂಬವನು ಒಂದು ಚಲೋ ಕಾದಂಬರಿಯನ್ನೇ ಬರೆದಿರುವನು. ಇದು 1163ರಿಂದ 1351ರವರೇಗೆ ಕಟ್ಟಲ್ಪಟ್ಟದ್ದು, ಮಧ್ಯಯುಗದ ಗೋಥಿಕ್ (Gothic) ಕ್ರಮ ವಾಸ್ತುಶಾಸ್ತ್ರದಲ್ಲಿ ಪ್ರಖ್ಯಾತಪಟ್ಟ ಒಂದು ಕಲಸವಾಗಿದೆ. ಅದನ್ನು ನೋಡಲಿಕ್ಕೆ ಸಾವಿರಾರು ಜನರು ದಿನನಿತ್ಯವೂ ಬರುತ್ತಾರೆ. ಅದರ ಒಳಗೆ ಕ್ರಿಸ್ತಮತದ ಚಾರಿತ್ರಿಕವಾದ ಅನೇಕ ಶಿಲ್ಪ ಪ್ರತಿಮೆಗಳಿವೆ. ಈ ಇಗರ್ಜಿಯು 1845ರಿಂದ 1864ರವರೇಗೆ ದುರಸ್ತಿ ಪಡಿಸಲ್ಪಟ್ಟು ಫ್ರಾನ್ಸ್‌ದೇಶದ ಚರಿತ್ರೆಯಲ್ಲಿ ಜನರ ಹಿತ ವಿಚಾರಗಳಲ್ಲಿ ಪ್ರಾಮುಖ್ಯ ಸ್ಥಾನವನ್ನು ಹೊಂದಿರುತ್ತದೆ. ಈ ಇಗರ್ಜಿಯಲ್ಲಿ ಘಂಟೆ ಮತ್ತು ಈ ಕಾಲದಲ್ಲಿ ಕೂಡಾ ಅಲ್ಲಿನ ಬಿಷೋಪರು ಇತರ ದೇಶದ ಅರಸರು ಮತ್ತು ಅಧ್ಯಕ್ಷರುಗಳನ್ನು ಸ್ವಾಗತಿಸುವುದು. ಇದರ ಒಳಗಿನ ಸಭಾಂಗಣ ಎಷ್ಟು ದೊಡ್ಡದೆಂದರೆ 427 ಅಡಿ ಉದ್ದ, 157 ಫೀಟು ಅಗಲ, 115 ಅಡಿ ಎತ್ತರ. ಇದರೊಳಗೆ ಒಂಭತ್ತು ಸಾವಿರ ಜನ ಕೂಡಬಹುದು.

'ನೋಟ್ರೆ ಡೇಮ್' ಇಗರ್ಜಿಯನ್ನು ಕಂಡು ಸಮೀಪ ಹರಿಯುವ ಸೀನ್ ನದಿಯ ಮೇಲಿನ ಸಂಕವನ್ನು ದಾಟಿ ನಗರದ ದಕ್ಷಿಣ ಭಾಗಕ್ಕೆ ನಾನು ಕಾಲಿನಿಂದ ನಡೆದು ಬಂದೆವು. ಈ ಭಾಗದಲ್ಲಿ ಪ್ರಸಿದ್ಧವಾದ ಸೊರ್‌ಬೋನ್ (Sorbonne) ಎಂಬ ವಿಶ್ವವಿದ್ಯಾಲಯವಿದೆ. ಅದಕ್ಕೆ ಹೋಗುವ ದಾರಿಯಲ್ಲಿ ನಾವು ನಡೆಯುತ್ತಾ ಇರುವಾಗ ಒಬ್ಬ ನಮ್ಮ ದೇಶದವರು ನಮ್ಮನ್ನು ಕಂಡು ಮಾತನಾಡಿಸಿ ಅಲ್ಲಿಯೇ ಸಮೀಪವಿದ್ದ ಉಪಹಾರಗೃಹಕ್ಕೆ ಕರೆದುಕೊಂಡು ಹೋದರು. ರಸ್ತೆಬದಿ ಕಾಲುದಾರಿ ಮೇಲೆ ಹಾಕಿದ ಅನೇಕ ಕುರ್ಚಿಗಳ ಪೈಕಿ ಮೂರರಲ್ಲಿ ನಾವು ಕುಳಿತೆವು. ಅವರು ಸುಮಾರು 20 ವರ್ಷದಿಂದ ಪೇರಿಸ್‌ನಲ್ಲಿದ್ದು ಈಗ ಮೇಲೆ ಹೇಳಿದ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರರಾಗಿರುವುದಾಗಿ ನಮಗೆ ತಿಳಿಸಿದರು. ಆ ಉಪಹಾರಗೃಹವು ವಿಶ್ವವಿದ್ಯಾಲಯದ ಸಮೀಪವಿದ್ದು ಹೆಚ್ಚಾಗಿ ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಲ್ಲಿಗೆ ಬರುವರು. ನಾವು ಹೋದಾಗ ಕೂಡಾ ನೂರಾರು ಮಂದಿ ಅಲ್ಲಿದ್ದರು. ಅವರಿಂದ ಆ ವಿದ್ಯಾಲಯದಲ್ಲಿ ನಮ್ಮದೇಶದ ಅನೇಕ ವಿದ್ಯಾರ್ಥಿಗಳು ಕಲಿಯುವುದಾಗಿ ನಮಗೆ ತಿಳಿಯಿತು. ನಮ್ಮ ದೇಶದ ವಿಚಾರ ಮಾತನಾಡಿದೆವು. ನಮಗೆ ಅವರು ಕೊಡಿಸಿದ ಉಪಹಾರದ ಖರ್ಚು ಅವರೇ ವಹಿಸಿದರು. ಸಮಯ ಕತ್ತಲೆ ಆದ ಕಾರಣ ನಾವು ಬಸ್ಸು ಹತ್ತಿ ನಮ್ಮ ಹೊಟೇಲಿಗೆ ಬಂದೆವು.

ಹಗಲಿನ ಪೇರಿಸ್ ಇಲ್ಲಿ ಮುಗಿಸುವೆನು. ರಾತ್ರಿಕಾಲದ ಪೇರಿಸ್ ವಿಷಯ ತಿಳಿಯಲು ವಾಚಕರಿಗೆ ಕುತೂಹಲವಿರಬಹುದು. ರಾತ್ರಿ ಕಾಲದ ಪೇರಿಸ್‌ನ ಭಾಗಗಳಲ್ಲಿ ಹುಂಜಾ ವಿದ್ಯುದ್ದೀಪಗಳ ಬೆಳಕಿದ್ದು ರಾತ್ರಿಯು ಹಗಲಿನಂತೆ ಶೋಭಿಸಿ ಮಧ್ಯರಾತ್ರಿ 2-3 ಗಂಟೆ ತನಕ ಅಲ್ಲಿ ಜನರ ಸಂಚಾರವಿರುವುದು. ಇವನ್ನು ನೋಡಲಿಕ್ಕೆ ಬೇರೆ ಬೇರೆ ದೇಶದಿಂದ ಪೇರಿಸಿಗೆ ಬಂದ ನೂರಾರು ಪ್ರವಾಸಿಗಳು ನನ್ನಂತೆಯೇ ಬಸ್ಸು ಟಿಕೇಟು ಪಡೆದು ಕಂಪೆನಿಗಳು ಈ ಬಗ್ಗೆ ಇಟ್ಟ ಬಸ್ಸುಗಳ ಮೂಲಕ ತಿರುಗಾಡುವರು. ನಾನು ಪಡೆದ ಟಿಕೇಟಿಗೆ ರೂಪಾಯಿ 32 ಎಂತ ಮುಂಚೆಯೇ ಹೇಳಿದ್ದೆ. ಇದು ಜಾಸ್ತಿ ಎಂತ ಹೇಳಬೇಕು. ತಿರುಗಾಟವು ರಾತ್ರಿ 9 ಗಂಟೆಗೆ ಸುರು ಆಗಿ ಮಧ್ಯರಾತ್ರಿ ಗಂಟೆ 1-30ಕ್ಕೆ ಮುಗಿಯುತ್ತದೆ ಇಷ್ಟರಲ್ಲಿ 4 ಬೇರೆ ಬೇರೆ ಕಡೆಗಳಿಗೆ ಬಸ್ಸಿನಲ್ಲಿ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಪ್ರತಿ ಒಂದು ಕಡೆಯಲ್ಲೂ ಕುಡಿಯಲಿಕ್ಕೆ 'ವಿಸ್ಕಿ'ಯಿಂದ 'ಚೆಂಪೇನ್'ವರೇಗೆ ಕೊಡುತ್ತಾರೆ. ಅದರ ಬೆಲೆ ಟಿಕೇಟಿನಲ್ಲಿ ಸೇರಿದುದರಿಂದ ಇಷ್ಟು ಹೆಚ್ಚಾಗಲಿಕ್ಕೆ ಕಾರಣ. ಇದನ್ನು ತಿಳಿದು "ನಾನು ಕುಡಿಯುವವನಲ್ಲ. ಆದಕಾರಣ ಅ ಹಣದಿಂದ ಕುಡಿಯುವುದರ ಖರ್ಚು ಕಳೆದು ಬಾಕಿ ಮಾತ್ರ ನನ್ನಿಂದ ವಸೂಲು ಮಾಡಿ" ಎಂತ ಹೇಳಿದೆ. ಆದರೆ ಅವರು ಒಪ್ಪಲಿಲ್ಲ. ಪೂರ್ತಿ ಹಣವನ್ನು ಕೊಡಬೇಕು. ಕುಡಿಯಲಿ, ಕುಡಿಯದಿರಲಿ, ಅದರ ಮೌಲ್ಯ ಕೊಡಲೇ ಬೇಕು, ಎಂಬುದೇ ಅವರ ನ್ಯಾಯ. ಅದಕ್ಕೆ ನಾನು ಒಪ್ಪಬೇಕಾಯಿತು.

ಹೀಗೆ ಅವರು ಕರೆದುಕೊಂಡು ಹೋಗಿ ತೋರಿಸುವ ನಾಲ್ಕು ಸ್ಥಳಗಳು ಯಾವುವು? ಎಲ್ಲಾ ಕಡೆಗಳಲ್ಲೂ ಗಾಯನ, ನರ್ತನ, ತಮಾಷೆ ಸೇರಿದ ವಿಷಯಗಳು. ಆದರೆ ಅದರಲ್ಲಿ ಕೂಡಾ ಒಂದು ಕ್ರಮವಿದೆ. ಇಂಗ್ಲಿಷಿನಲ್ಲಿ "There is a method in the madness" ಎಂತ ಹೇಳುವಂತೆ ನರ್ತನದಲ್ಲಿ ಅತೀ ಕೆಳಗಿನ ತರಗತಿಯಿಂದ ಮೇಲು ಮೇಲಿನ ತರಗತಿಗೆ ಹೋಗುವುದು ಹಾಗೆ 1ನೇದು - ಪೇರಿಸಿನ ಒಂದು ಭಾಗಕ್ಕೆ ಹೋಗಿ ಅಲ್ಲಿ ನಮ್ಮ ಬಸ್ಸು ನಿಂತೊಡನೆಯೇ ಅದರಿಂದ ಇಳಿದು ಸಮೀಪಕ್ಕಿರುವ ಒಂದು ರಸ್ತೆಯಲ್ಲಿರುವ ಮನೆಗೆ ಹೋಗಿ ಅದರ ಕೆಳಮಾಳಿಗೆಗೆ ಇಳಿಯುವುದು. ನಮ್ಮ ಬಸ್ಸಿನಲ್ಲಿ ಸುಮಾರು 25 ಜನವಿದ್ದು ಕೆಲವರು ಗಂಡಸರು ಕೆಲವರು ಹೆಂಗಸರು. ಹೆಚ್ಚಿನವರು ಅಮೇರಿಕಾ, ಕೆನಡಾ ಮತ್ತು ಇನ್ನಿತರ ದೇಶದವರು, ನಮ್ಮಕ್ಷಿಂದ ನಾನು ಮತ್ತು ನನ್ನ ಜಾಕಬ್ ಮಾತ್ರ. ಕೆಳಕ್ಕೆ ಇಳಿದು ಬಹು ಸಪೂರ ಸುರಂಗದೊಳಗೆ ಸುಮಾರು 30-40 ಅಡಿ ದಸ್ತಿಯಿಂದ ಕೆಳಕ್ಕೆ ಹೋಗಿ ಅಲ್ಲಿ ಒಂದು ಗುಹೆಯಂತೆ ಮಾಡಿದ ಜಾಗದಲ್ಲಿ ಕುಳಿತೆವು- ಗುಹೆ ಸುಮಾರು 15 ಅಡಿ ಉದ್ದ 10 ಅಡಿ ಅಗಲ. ಅಲ್ಲಿ ಒಂದು ಸಣ್ಣ ವಿದ್ಯುದ್ದೀಪ-ಬದಿಯಲ್ಲಿ ಮಾನವ ಎಲುಬುಗಳು-ಇದನ್ನು ತೋರಿಸಿ ಇದು 12ನೇ ಶತಮಾನದಲ್ಲಿ ಕ್ರಾಂತಿಕಾರರು ಕೂಡುತ್ತಿದ್ದ ಭಾಗ, ಮತ್ತು ಆ ಎಲುಬುಗಳು ಅವರದ್ದು ಎಂತ ಹೇಳುವರು. ಇದರ ಸತ್ಯ ದೇವರೇ ಬಲ್ಲ-ನಂಬಲಿಕ್ಕೆ ಕಷ್ಟ. ಹ್ಯಾಗೂ ಇರಲಿ, ಇಲ್ಲಿ ಕುಳಿತ ಮೇಲೆ ನಮ್ಮ ಎದುರಿದ್ದ ಮೇಜಿನ ಮೇಲೆ ವಿಸ್ಕಿ ಗ್ಲಾಸುಗಳು ಬಂದವು. ಅವನ್ನು ಬೇಕಾದವರು ಕುಡಿದರು. ದುಡ್ಡು ಕೊಟ್ಟರೂ ಕುಡಿವ ಪುಣ್ಯವು ನನ್ನ ಪಾಲಿಗೆ ಇಲ್ಲ. ನಂತರ ಅಲ್ಲಿಯೇ ಸಮೀಪ ಇನ್ನೊಂದು ಸುರಂಗದ ಒಳಗೆ ನಡೆದು ಇನ್ನೂ ಕೆಳಗಿನ ಮಾಳಿಗೆಗೆ ಹೋದೆವು- ಅದೇ ನರ್ತನದ ಕೋಣೆ. ಸುಮಾರು 6, 8 ಅಡಿ ಅಗಲ, 15-20 ಅಡಿ ಉದ್ದ. ಇದರಲ್ಲಿ 10-15 ಯೌವನಸ್ಥ ಗಂಡಸರು ಮತ್ತು ಸ್ತ್ರೀಯರು ನರ್ತನ ನಡೆಸಲು- ಅವರ ಪ್ರಾಯ 16ರಿಂದ 25, 30 ವರ್ಷದ ವರೇಗೆ- ಅವರೆಲ್ಲರೂ ಕೀಳು ತರಗತಿಯವರಾಗಿಯೇ ಕಂಡಿತು. ನಾವು ಅಲ್ಲಿ ಹೋಗಿ ಕುಳಿತಮೇಲೆ ಸುಮಾರು ಅರ್ಧ ತಾಸು ಅವರ ಗಾಯನ ಯುಕ್ತವಾದ ನರ್ತನ ನಡೆಯಿತು- ಅದನ್ನು ನೋಡಿ ಮನಸ್ಸಿಗೆ ಸಂತೋಷವಾಯಿತೆಂತ ಹೇಳಲಿಕ್ಕೆ ಸಾಧ್ಯವಿಲ್ಲ.

ಅದರ ಮೇಲೆ ಅಲ್ಲಿಂದ ಹೊರಟು ಇನ್ನೊಂದು ಕಡೆ ನಮ್ಮ ಬಸ್ಸು ಚಲಿಸಿತು. ಅದು ಇದಕ್ಕಿಂತ ಸ್ವಲ್ಪ ಮೇಲುತರದ್ದು. ಹೋದಕೂಡಲೇ ಎಂಬಟನಂತೆಯೇ ಕುಡಿಯಲಿಕ್ಕೆ ಬಂತು. ಅಲ್ಲಿ ಬೇರೆ ಬೇರೆ ತರದ ನೃತ್ಯಗಳನ್ನು ಕಂಡೆವು. ನಮ್ಮ ಸಂಗಡದಲ್ಲಿದ್ದ ಒಬ್ಬ ಸ್ತ್ರೀ ಕೂಡಾ ಅವರೊಳಗೆ ಸೇರಿ ಕುಣಿಯಲಿಕ್ಕೆ ಸುರುಮಾಡಿದಳು. ಇಲ್ಲಿ ½ ತಾಸು ಕಳೆದು ಅಲ್ಲಿಂದ ನಗರದ ಇನ್ನೊಂದು ಕಡೆಗೆ ಹೊರಟೆವು. ಅಲ್ಲಿ ಒಂದು ಉಪ್ಪರಿಗೆಯಲ್ಲಿ ಇನ್ನೊಂದು ರೀತಿಯ ನರ್ತನ ನಡೆಯಿತು. ಹೋದ ಕೂಡಲೇ ಮುಂಚಿನಂತೆಯೇ ಕುಡಿಯಲಿಕ್ಕೆ ಬಂತು- ಆದರೆ ಸ್ಥಳಗಳೂ ನರ್ತನವೂ ಹೇಗೆ ಮೇಲುತರಗತಿಗೆ ಬಂದವೋ ಹಾಗೆಯೇ ಕುಡಿಯುವ ಪ್ರಾನಕವೂ ಒಳ್ಳೇ ಒಳ್ಳೇ ತರಗತಿಯಂತೆ ಕಂಡಿತು. ಇಲ್ಲಿ ಸಾಧಾರಣ ಗಂಡಸರು ಹೆಂಗಸರ ನರ್ತನವಲ್ಲದೆ ಅನೇಕ ಹಾಸ್ಯ ಕೂಡಾ ಇತ್ತು. ಇಂಗ್ಲಿಷ್ ಜನಾಂಗದವನು ಹೇಗೆ ನಡಕೊಳ್ಳುವುದು- ಫ್ರೆಂಚನು ಹೇಗೆ, ಜರ್ಮನನು ಹೇಗೆ ಎಂಬ ಬೇರೆ ಬೇರೆ ಜನಾಂಗದವರ ನಡತೆ ವಿಷಯ ತಮಾಷೆಗಳು- ಇಲ್ಲಿ ಸುಮಾರು ½ ತಾಸು ಕಳೆದು ಇನ್ನೊಂದು ಕಡೆಗೆ ಹೋದೆವು. ಅದರ ಹೆಸರು "ಟಬೇರಿನ್" (Tabarin) ಎಂದು. ಪೇರಿಸ್ ನಗರದಲ್ಲಿ ರಾತ್ರಿ ನರ್ತನಕ್ಕೆ ಇದು ಬಹಳ ಹೆಸರು ಪಡೆದುದಾಗಿ ತಿಳಿಯಿತು. ಇದು ಒಂದು ದೊಡ್ಡ ಸಿನೇಮ ಗೃಹದಂತೆ ನಾವು ಒಳಕ್ಕೆ ಹೋದಾಗ ಕನಿಷ್ಠ ಒಂದು ಸಾವಿರ ಗಂಡಸರು ಹೆಂಗಸರು ಅಲ್ಲಿ ಇದ್ದರು. ಮಧ್ಯದಲ್ಲಿ ನಾಟಕ ಶಾಲೆಯಂತೆ ಎತ್ತರವಾದ ಒಂದು ದೊಡ್ಡ ವೇದಿಕೆ (Plat form) ಇದ್ದು ಅದರ ಮೇಲೆ ಅನೇಕ ಸ್ತ್ರೀಯರು ನಾನಾ ತರದ ಗಾಯನ ಬೆರೆದು ಸಮ್ಮೋಹದ ಕುಸ್ತಿ ಕುಣಿತ ಮತ್ತು ನರ್ತನಗಳನ್ನು ಮಾಡಿ ತೋರಿಸಿದರು. ಹಾಗೆ ಅವರು ಕುಣಿಯುವಾಗ ಅವರ ಮೈಮೇಲೆ ಬೇರೆ ಬೇರೆ ಬಣ್ಣದ ಬೆಳಕು ಬಿಡುವರು. ಅವರ ದುಸ್ತುಗಳು ಕೂಡಾ ಅನೇಕ ತರದ್ದು. ಹೆಚ್ಚಿನವರು ಎಳೆಪ್ರಾಯದ ಹೆಂಗುಸರಾಗಿದ್ದು ಅವರ ದೇಹಗಳಲ್ಲಿ ಮೂಳೆಗಳೇ ಇಲ್ಲವೋ ಎಂಬಷ್ಟು ಬಗ್ಗುವವು. ನೋಡಲಿಕ್ಕೆ ಕೂಡಾ ಸುಂದರವಾದ ದೇಹಗಳು, ಅವುಗಳ ಮೇಲೆ ಬಟ್ಟೆ ಬಹಳ ಕಡಿಮೆ-ಕೆಲವರ ವಿಶೇಷ ನರ್ತನ ... ಅವರ ಮೇಲೆ ಬರೇ ಒಂದು ಗೇಣಗಿಂತಲೂ ಹೆಚ್ಚಾದ ಬಟ್ಟೆಯಿಲ್ಲವೆಂದರೆ ಅತಿಶಯವಾಗಲಾರದು. ಹಾಗೆ ಅಲ್ಲಿ ನರ್ತನವಾದಾಗ ಕುಳಿತಿದ್ದ ಪ್ರೇಕ್ಷಕರು ಬಹಳವಾದ ಆಸೆಯನ್ನು ವ್ಯಕ್ತಪಡಿಸಿ ಆಗಾಗ ಚಪ್ಪಾಳೆ ಹೊಡೆಯುತ್ತಿದ್ದರು. ನಾನು ಪೇರಿಸಿನಲ್ಲಿದ್ದ ಸಮಯ ಕೋರ್ಟಿನಲ್ಲಿ ಒಬ್ಬ ಗಂಡಹೆಂಡತಿಯರ ವಿವಾಹವಿಚ್ಛೇದದ ಸಂಬಂಧ ನಡೆಯಿತಾಗಿ ಪತ್ರಿಕೆಯಲ್ಲಿ ಓದಿದೆನು. ಅವರೊಳಗೆ ಹೆಚ್ಚಿನ ಅನ್ಯೋನ್ಯ ಪ್ರೀತಿಯಿದ್ದರೂ ಕೂಡ ತನ್ನ ಒಪ್ಪಿಗೆಯಿಲ್ಲದೆಯೇ ಹೆಂಡತಿಯು ಈ ರೀತಿಯ ನಗ್ನದ (nude) ಕುಣಿತಕ್ಕೆ ಹೋಗುವುದಾಗಿ ಗಂಡನ ವಾದ. ತಾನು ಹಾಗೆ ಹೋಗಲೇಬೇಕು, ಅದು ತನ್ನ ಸ್ವಾತಂತ್ರ್ಯವೆಂದು ಹೆಂಡತಿಯ ಪ್ರತಿವಾದ. ಕೋರ್ಟಿನವರು ವಿವಾಹವನ್ನು ವಿಚ್ಛೇದ ಮಾಡಿ ತೀರ್ಪಿತ್ತರು. ಈ ನರ್ತನ ಗೃಹದಲ್ಲಿ ಸುಮಾರು ಒಂದು ತಾಸು ಸಮಯ ಕಳೆದು ನಮ್ಮ ನಮ್ಮ ಹೊಟೇಲುಗಳಿಗೆ ತಿರುಗಿ ಬಂದು ಸೇರುವಾಗ ರಾತ್ರಿ 1-30 ಘಂಟೆ.

ಮುಂದಿನ ಪತ್ರದಲ್ಲಿ ವರ್ಸೈಲ್ ಮತ್ತು ಫೊಂಟೇನ್‌ಬ್ಲೊ ತಿರುಗಾಟಗಳ ವಿಷಯ.

(ಮುಂದುವರಿಯುವುದು)

—ಕೆ. ಆರ್. ಕಾರಂತ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 398/51

ರಾಮಣ್ಣ ಹೆಗ್ಡೆ —ವಾದಿ.

ಮತ್ತು

ಕೊರಗ ಹೆಗ್ಡೆ ಕೂಡಾ —ಪ್ರತಿವಾದಿಯು.

1ನೇ ಪ್ರತಿವಾದಿ, ಕೊರಗ ಹೆಗ್ಡೆ, ಪುಟ್ಟಮ್ಮ ಹೆಗ್ಗಡ್ತಿಯ ಮಗ, ಕಾರ್ಕಳ ತಾಲ್ಲೂಕು ಪಡುಮರ್ನಾಡು ಗ್ರಾಮದಲ್ಲಿರುವವ.

ಇವರಿಗೆ ಈ ನೋಟೀಸು ಮೂಲಕ ತಿಳಿಸುವದೇನೆಂದರೆ-

ವಾದಿಯು ವ ನಿಮ್ಮ ಕುಟುಂಬದ ತಾವಾರ್ಡ್ ಮೆಂಬರರೊಳಗೆ ತಾ. 11-4-1945ರಲ್ಲಿ ಆದ ರಿಜಿಸ್ಟ್ರು ಕರಾರು ಮೇರೆಗೆ ವಾದಿಗೆ ನಿಮ್ಮಿಂದ ಕೂಡಾ 1950 ವ 1951ನೇ ಇಸವಿಗಳ ಫಾಲ್ಗುಣ ಬ 30ರ ಮ್ಯಾದಗಳಿಗೆ ಬರತಕ್ಕ ಸಲುವಳಿಯನ್ನೂ ಬಡ್ಡಿಯನ್ನೂ ಕೇಳಿ ವಾದಿಯು ತಂದ ಸದ್ರಿ ದಾವೆಯು ನಿಮಗೆ ನೋಟೀಸಿನ ಬಗ್ಗೆ ತಾ. 12-11-1951ಕ್ಕೆ ಇಟ್ಟಿರುತ್ತದೆ. ಸದ್ರಿ ದಾವೆಗೆ ನಿಮ್ಮದೇನಾದರೂ ಆಕ್ಷೇಪವಿರುವದಾದರೆ ಸದ್ರಿ ತಾರೀಖಿನ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಸ್ವತಹಾ ಯಾ ವಕೀಲರ ಮುಖಾಂತ್ರ ಉತ್ತರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ,

P. Ramachandra Rao,
Pleader for Plaintiff.

Karkala, 24-10-51



"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ, ಉತ್ಕೃಷ್ಟ ತರಗತಿಯ ಯಂತ್ರ.

ಬೆಲೆ ರೂ 465

ನಿಮ್ಮ ಬಂದರ ಡಿಲೆವರಿ.

The Vijay Engineering Co. Ltd.,
BOMBAY-10.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

ವಾರದ ಭವಿಷ್ಯ

ತಾರೀಕು 8-11-51 ರಿಂದ — ತಾರೀಕು 14-11-51 ವರೆಗೆ

ಮೇಷ— ಕರ್ತವ್ಯರಂಗದ ನೀವು ಮೈಮುರಿದು ದುಡಿಯುವಿರಿ ಯಶಸ್ಸಿಗೆ ತಕ್ಕ ಫಲವೂ ಸಿಗುವುದು. ಮಾತ್ರವಲ್ಲ ಅಕಸ್ಮಾತ್ತಾಗಿ ಧನವೂ ಕೂಡ ಲಭಿಸುವದು. ಆದರೂ ನಿಮ್ಮ ಕೈಯು ಸದಾ ಬರಿದಾಗಿಯೇ ಇರುವದು, ಸಂಸಾರಿಕ ಚಿಂತೆಯು ಹೆಚ್ಚುವುದು. ವ್ಯಾಪಾರಾದಿಗಳಲ್ಲಿ ನಷ್ಟ ಸಂಭವಿಸೀತು. ದೇಹಕ್ಕೂ ಕೂಡ ಸುಖವಿರದು. ಆಪ್ತೇಷ್ಟರ ನೆರವು ಕೂಡ ಲಭಿಸಲೊಲ್ಲದು. ಮಕ್ಕಳ ದೆಸೆಯಿಂದಾಗಿ ಹೆಚ್ಚಿನ ಚಿಂತೆಗೀಡಾಗುವಿರಿ. ತಾ-8-12-13 ಈ ದಿನಗಳಲ್ಲಿ ಸ್ವಲ್ಪ ಸುಖನೆಮ್ಮದಿ ದೊರೆತೀತು.

ವೃಷಭ— ಹೊಸದಾದ ಕಾರ್ಯಗಳನ್ನು ಆರಂಭಿಸುವಿರಿ. ನಿಮ್ಮ ಬಯಕೆಯು ಸಫಲವಾಗುವದು. ಆಪ್ತೇಷ್ಟರು ಬಂಧು ಮಿತ್ರರುಗಳ ಸಹಾಯವು ಚೆನ್ನಾಗಿರುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಪಶು ಭೃತ್ಯಾದಿ ಗೃಹೋಪಕರಣಗಳಲ್ಲಿ ಯಾವೊಂದು ತರದ ನ್ಯೂನತೆಯೂ ಇಲ್ಲದಿರುವುದರಿಂದ ದಿನಯಾಪನೆಯು ಸುಗಮವಾದೀತು. ಕೆಲವೊಮ್ಮೆ ವಿನಾಕಾರಣ ಕಲಹವಾಗಲಿದೆ. ಶತ್ರು ಜನರ ಮಾಯಾಜಾಲಕ್ಕೆ ಸಿಲುಕುವ ಸಂಭವವಿರುವುದರಿಂದ ತಾ. 12, 13ರಲ್ಲಿ ಸ್ವಲ್ಪ ಜಾಗರೂಕರಾಗಿರಿ.

ಮಿಥುನ— ಸೇವಕವರ್ಗದವರಿಗೂ ಶ್ರಮಜೀವಿಗಳಿಗೂ ಈ ವಾರವು ಅಷ್ಟೊಂದು ಉತ್ತಮವಾಗಿರದು. ಇತರ ಜನವೃಂದಕ್ಕೆ ಕಾಲವು ಅನುಕೂಲವಾಗಿದೆ. ಯಾವ ಕಾರ್ಯದಲ್ಲೂ ಕೂಡ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ನೌಕರಿ ವರ್ಗದವರು ಉನ್ನತಸ್ಥಾನವನ್ನು ಹೊಂದುವರು. ಶತ್ರುಗಳು ಪರಾಭವ ಹೊಂದುವರು. ವಿಜಾತಿಯವರೊಡನೆ ಕಲಹವಾಗುವ ಸಂಭವವಿದೆ. ಹಿಂದುಮುಂದಿನ ವಿಮರ್ಶೆ ಮಾಡದೆ ದುಡುಕಿ ಕೆಲವೊಮ್ಮೆ ನಷ್ಟಹೊಂದಲಿರುವಿರಿ. ತಾ. 8, 14 ಒಳ್ಳೆಯದಲ್ಲ.

ಕರ್ಕಾಟ— ನಿಷ್ಠುರಭಾಷಿಗಳಾಗಿ ವರ್ತಿಸುವಿರಿ. ಆತಪ್ತ ಕೆಲವರೊಡನೆ ಕಲಹವಾಗುವದು. ಗುರುಹಿರಿಯರ ಅನುಗ್ರಹವು ನಿಮಗಿರುವುದರಿಂದ ಸಮಾಜದಲ್ಲಿ ಮಾನಮರ್ಯಾದೆಗಳು ಲಭಿಸುವವು. ಹಿಡಿದ ಕಾರ್ಯದಲ್ಲಿ ಫಲಪ್ರಾಪ್ತಿಯು ಉತ್ತಮವಾಗಿರುವದು. ಆದರೆ ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಸಿಲುಕಿ ಸ್ವಲ್ಪ ಕಷ್ಟಕ್ಕೆ ಗುರಿಯಾಗಲಿರುವಿರಿ. ಆರೋಗ್ಯ ವಿಚಾರದಲ್ಲಿ ಜಾಗರೂಕರಾಗಿರಿ. ವಾರಾಂತ್ಯದ 3 ದಿನಗಳು ಉತ್ತಮವಿವೆ.

ಸಿಂಹ— ಪ್ರವಾಸಕ್ಕೀವಾರವು ಹಿತಕಾರಿಯಾಗದು, ಕಷ್ಟನಷ್ಟಗಳು ಮೇಲಿಂದ ಮೇಲೆ ಪ್ರಾಪ್ತವಾಗುವವು ಮಾತ್ರವಲ್ಲ ದೇಹಕ್ಕೂ ಕೂಡ ಆಕಸ್ಮಿಕ ಅವಘಡ ಸಂಭವಿಸುವ ಯೋಗವಿದೆ. ಹಲವಾರು ತೆರದಿಂದ ದುಡಿದರೂ ನಿಮ್ಮ ಖರ್ಚಿನ ಭಾಗವನ್ನು ಪೂರೈಸಿಕೊಳ್ಳುವದು ಕಷ್ಟವಾಗುವದು. ಕಫ ಪಿತ್ಥ ದೋಷಗಳಿಂದಾಗಿ ಶರೀರದ ಆರೋಗ್ಯಕ್ಕೆ ಯಾವಾಗಲೂ ತೊಂದರೆ ಇದ್ದೇ ಇರುವದು, ವಾರದ ಆದ್ಯಂತ ದಿನಗಳಲ್ಲಿ ಕಿಂಚಿತ್ಸುಖ ಸಂತೋಷಗಳು ಕಾಣಿಸುವವು.

ಕನ್ಯಾ— ಬೇರೆಲ್ಲಾ ಗ್ರಹರೂ ವಿಮುಖರಿದ್ದರೂ ಸುರಾಸುರ ಗುರುಗಳ ಅನುಗ್ರಹವು ನಿಮಗೀವಾರದಲ್ಲಿ ಲಭಿಸಿದೆ. ಯುಕ್ತಿ ಸಾಧ್ಯವಾದ ಕಾರ್ಯಗಳಲ್ಲಿ ನೀವು ಪರಾಭವವನ್ನು ಹೊಂದಲಾರಿರಿ. ನಿಮ್ಮ ಮನೋಧೈರ್ಯಸ್ಥೈರ್ಯಗಳು ಕುಂದಿತವಾಗಿರುವುದರಿಂದ ಮಹತ್ಕಾರ್ಯನಾವುದನ್ನೂ ನಿರ್ವಹಿಸುವ ಶಕ್ತಿ ನಿಮಗಿಲ್ಲವು ಕುಟುಂಬದಲ್ಲಿ ಸೋದರರೊಳಗೆ ಜಗಳವಾದೀತು ಆಪ್ತೇಷ್ಟ ಜನರಲ್ಲಿಯ ನಿಮಗೆ ನಂಬಿಗೆಯು ತಪ್ಪುವದು. ಮಿತ್ರರ ವಿಯೋಗವುಂಟಾಗಲಿದೆ, ವಾರಾದಿಯ 3 ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ತುಲಾ— ಕಫ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲುವುದು. ಶತ್ರು ಜನರು ಪ್ರತೀಕಾರಾಸಕ್ತರಾಗುವರು. ಮಾನಸಿಕ ವೇದನೆಯು ದಿನೇದಿನೇ ಪ್ರಬಲವಾಗುತ್ತಾ ಬರುವದು. ಆಕಸ್ಮಿಕ ಪ್ರವಾಸ ಅನಿರೀಕ್ಷಿತ ಅನರ್ಥ ಇವುಗಳ ಸಲುವಾಗಿ ನಿಮ್ಮ ದುಡಿಮೆಯ ಬಹ್ವಂಶ ವ್ಯಯವಾಗುವದಾದರೂ ಈ ವಾರದಲ್ಲಿ ಹಣದ ಅಡಚಣೆಯುಂಟಾಗದು, ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವು ಲಭಿಸುವದು, ವಾರದ ಆದ್ಯಂತ ದಿನಗಳನ್ನು ಬಿಟ್ಟು ಮಿಕ್ಕ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಶೀಘ್ರವಾಗಿ ಸಿದ್ಧಿಸುವವು.

ವೃಶ್ಚಿಕ— ಧನಸುಖ ಪತಿಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುವಿರಿ, ಈ ವಾರದಲ್ಲಿ ನೀವು ಕೈಗೊಂಡ ಕಾರ್ಯಗಳು ಹೆಚ್ಚಿನಂಶ ನಿಮ್ಮಿಷ್ಟದಂತೆ ಕೊನೆಗೊಂಡದಿದ್ದರೂ ನೀವಾಭಾಗದಲ್ಲಿ ನಷ್ಟ ಹೊಂದಲಾರಿರಿ. ಹಲವಾರು ತೆರದಿಂದ ಧನವು ನಿಮ್ಮ ಕೈಸೇರಲಿದೆ. ಸೇವಕವರ್ಗದವರಿಗೆ ದಿನಯಾಪನೆಯು ಸುಖವಾಗುವದು. ಸಾಂಸಾರಿಕ ತಾಪತ್ರಯಗಳು ಮುಂಚಿಗಿಂತ ಬಹಳ ಕಡಿಮೆಯಾಗಲಿವೆ. ಸನ್ಮಿತ್ರರ ಸಹಕಾರವು ಉತ್ತಮವಾಗಿರುವುದರಿಂದ ವಾರಾಂತ್ಯದ 3 ದಿನಗಳ ವಿಜಯಲಾಭಗಳನ್ನು ಪಡೆವಿರಿ.

ಧನು— ಲಾಭಸ್ಥಾನಕ್ಕೆ ಬಂದ ರವಿಯೊಬ್ಬನೇ ನಿಮಗನುಕೂಲನಾಗಿದ್ದರೂ ಆತನು ಕ್ಷೀಣನಾದ ಪ್ರಯುಕ್ತ ಯಾವೊಂದು ಸಹಾಯವನ್ನು ಸಲ್ಲಿಸಲೂ ಅಶಕ್ತನಿರುವನು. ಆದಕಾರಣ ನೀವೀವಾರದಲ್ಲಿ ಬಹಳ ಕಷ್ಟನಷ್ಟಗಳನ್ನು ಎದುರಿಸಬೇಕಾಗುವುದು. ಹಿತೈಷಿಗಳವರೊಡನೆ ಜಗಳ ಅಧಿಕಾರಿ ಜನರ ಪೀಡೆ ಗುರುಹಿರಿಯರ ಆಗ್ರಹ ಬಂಧುಗಳ ಮನಸ್ತಾಪ ಗ್ರಹಕೃತ್ಯದ ಅವ್ಯವಸ್ಥೆ ಕಾರ್ಯಹಾನಿ ಇತ್ಯಾದಿ ಅನಿಷ್ಟಗಳು ಮೇಲಿಂದ ಮೇಲೆ ಬರಲಿವೆ. ಆದರೂ ತಾ. 8, 14 ಈ ಎರಡು ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಮಕರ— ಪ್ರಬಲರಾದ ಶತ್ರುಗಳ ಉಪಟಳದಿಂದ ನಿಮ್ಮ ಕಾರ್ಯಗಳು ಅರ್ಧದಲ್ಲೇ ನಿಲ್ಲಲಿವೆ. ಆದರೂ ನಿಮ್ಮ ಉದ್ಯಮವು ದಿನಯಾಪನೆಗೆ ತಕ್ಕಷ್ಟು ಧನವನ್ನೊದಗಿಸಲು ಸಮರ್ಥವಾಗಿರುವುದು. ಕುಟುಂಬದಲ್ಲಿ ಶಾಂತತೆಯು ನೆಲಸುವದು, ನಿಮ್ಮ ಸ್ವಂತ ಆರೋಗ್ಯಕ್ಕೆ ಕೊಂಚ ಹಾನಿಯಿದೆ. ಕತ್ತಿ ಚೂರಿ ಇತ್ಯಾದಿ ಶಸ್ತ್ರಗಳಿಂದ ಅಪಾಯವೊದಗೀತು. ಹೆಚ್ಚಿನ ಸಮಯವನ್ನು ಮಾರ್ಗಕ್ರಮಣದಲ್ಲಿ ಕಳೆವಿರಿ. ಗುರುಹಿರಿಯರ ಮನಸ್ತಾಪಕ್ಕೆ ಗುರಿಯಾಗಲಿರುವಿರಿ. ತಾ. 9, 10, 11, ಇದ್ದುದರಲ್ಲಿ ಉತ್ತಮವಾಗಿವೆ.

ಕುಂಭ— ವಿನಯಶೀಲರೂ ವಾಕ್ಪಟುಗಳೂ ಆದ ನೀವು ಈ ವಾರವನ್ನು ಸುಖದಿಂದ ಕಳೆವಿರಿ. ಹಲವಾರು ಸನ್ಮಿತ್ರರ ಪರಿಚಯವಾಗುವದು. ನಿಮ್ಮ ಆರ್ಥಿಕ ಬಿಕ್ಕಟ್ಟು ಈ ವಾರದಲ್ಲಿ ನಿವಾರಿಸಲ್ಪಡುವದು. ಹಿಡಿದ ಕಾರ್ಯದಲ್ಲಿ ಪ್ರಗತಿಯೂ ಫಲಪ್ರಾಪ್ತಿಯೂ ಉತ್ತಮವಾಗಿರುವದು. ಮಿತ್ರವರ್ಗದವರ ಸಂಪೂರ್ಣ ಸಹಕಾರ ನಿಮಗಿರುವುದರಿಂದ ಪ್ರತಿಯೊಂದು ಕಾರ್ಯದಲ್ಲೂ ವಿಜಯವು ನಿಮ್ಮ ಪಾಲಿನದಾಗುವುದು. ವಾತ ಕಫ ದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಮನೆ ಹೆಂಗಸರೊಡನೆ ನಿಷ್ಕಾರಣ ಜಗಳವಾದೀತು. ತಾ, 8, 12, 13 ಉತ್ತಮ.

ಮೀನ— ಎಂತಹ ಗಂಡಾಂತರವೇ ಪ್ರಾಪ್ತವಾಗಲಿ ಅನುಭವಿಸಿಯೇ ಸಿದ್ಧ ಎಂಬ ಹಠವಾದಿಗಳಾದ ನಿಮಗೆ ಈ ವಾರದಲ್ಲಿ ಅನೇಕ ಕಷ್ಟನಷ್ಟಗಳುಂಟಾಗಲಿವೆ. ನಿಮ್ಮ ಉತ್ಪತ್ತಿಯ ದ್ವಿಗುಣ ವ್ಯಯವು ಇರುವುದರಿಂದ ಸದಾ ಹಣದ ಚಿಂತೆಯು ಬಾಧಿಸುವದು, ಸ್ಥಾನ ಚಲನೆ ಪರ್ಯಟನ ಸ್ತ್ರೀಯರಿಂದ ಕಲಹ ತನ್ನಿಮಿತ್ತ ಕಷ್ಟನಷ್ಟ ಅಪವಾದ ಶತ್ರುಗಳ ಉಪಟಳ ಇತ್ಯಾದ್ಯನಿಷ್ಟಗಳು ಮೇಲಿಂದ ಮೇಲೆ ಬರಲಿವೆ, "ವಿಪದಿ ಧೈರ್ಯಂ" ಎಂಬ ಲೋಕೋಕ್ತಿಯಂತೆ ಕಷ್ಟ ಬಂದಾಗ ಧೈರ್ಯವನ್ನಾಶ್ರೈಸಿದರೇನೆ ವಿಪತ್ತುಗಳಿಂದ ಪಾರಾಗಬಹುದು. ತಾ. 8,12, 13 ಅತಿವ್ಯಯ, ಅನಾರೋಗ್ಯಕಾರಿಗಳಾಗಿವೆ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

"ಗೋಪಾಲ ಭೇಷಜಾಶ್ರಮ" ಮಂಗಳೂರು-

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಶಿವಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ [illegible]

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

31ನೆ ವರ್ಷ

15–11–1951

Founder: Sri A. B. Shetty,
Minister for Agriculture & Veterinary

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5–12–0
6 ತಿಂಗಳಿಗೆ
ರೂ. 3–0–0
ಬಿಡಿ ಪ್ರತಿಗೆ
0–2–0

ವರ್ಷ ೩೧ | NAVAYUGA WEEKLY | Post Box No. 22 | UDIPI. | Vol. 31
ವಾರ ೧೦ | | | | No. 10

ಮತದಾರರ ಹೊಣೆ

ಜಗತ್ತಿನಲ್ಲೇ ಅತಿ ದೊಡ್ಡದಾದ ಭಾರತ ಸಾರ್ವತ್ರಿಕ ಚುನಾವಣೆಯು ಪ್ರಥಮವಾಗಿ ಹಿಮಾಚಲ ಪ್ರದೇಶದಲ್ಲಿ ನಡೆಯಿತು. ಚುನಾವಣೆಯ ಫಲಿತಾಂಶ ಹೇಗಿದ್ದರೂ ಮತದಾನ ಮಾಡಿದವರ ಕುರಿತು ನಾವು ವಿಮರ್ಶಿಸುವದು ಅವಶ್ಯ. 13235 ಮತದಾರರುಳ್ಳ ಈ ಪ್ರದೇಶದಿಂದ 2,028 ಮತದಾರರು ಮತದಾನ ಮಾಡಿರುವರು. ಅಂದರೆ ಶೇಕಡಾ 16.8 ಜನರು ಮಾತ್ರ ಮತದಾನ ಮಾಡಿದಂತಾಯಿತು. ಬೆಟ್ಟಗಳನ್ನು ದಾಟಿಕೊಂಡು ಬರುವದು ಕಷ್ಟಸಾಧ್ಯವಾಯಿತೆಂದೂ, ಹಿಮ ಹೆಚ್ಚಾಗಿ ಬಿದ್ದುದರಿಂದ ತೊಂದರೆಯಾಯಿತೆಂದೂ ಹೇಳಲಾಗಿದೆ. ದೇಶದ ಹಿತದ ದೃಷ್ಟಿಯಿಂದಲೂ– ಯೋಗ್ಯ ಸರಕಾರದ ನಿರ್ಮಾಣದ ದೃಷ್ಟಿಯಿಂದಲೂ ನಮ್ಮ ಜನ ಎಷ್ಟು ಆಸಕ್ತಿಯುಳ್ಳವರಾಗಿದ್ದಾರೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ! ಈ ನಾಲ್ಕು ವರ್ಷಗಳಲ್ಲಿ ಸರಕಾರ ಎದುರಿಸಬೇಕಾಗಿದ್ದ ಗಂಭೀರ ಪರಿಸ್ಥಿತಿಯನ್ನು ಮರೆತು ಬರೇ ದೋಷಗಳನ್ನಷ್ಟೇ ಎತ್ತಿಕೊಂಡು ಟೀಕೆ ಮಾಡುತ್ತೇವೆ. ಇಂಥ ಆರೋಪಗಳು ವಿರೋಧಿ ಪಕ್ಷಗಳಿಂದ ಮಾತ್ರವಲ್ಲದೆ ಸರ್ವಸಾಮಾನ್ಯರಿಂದಲೂ ಬಂದಿದೆ. ನಾಲ್ಕು ವರ್ಷಗಳಲ್ಲಿ ಕಾಂಗ್ರೆಸು ಸಾಧಿಸಿದ್ದನ್ನು–ತ್ಯಾಗ ಮಾಡಿದ್ದನ್ನು ಕೃತಜ್ಞತಾಪೂರ್ವಕವಾಗಿ ಸ್ವಾಗತಿಸಬೇಕಾದ ನಾವು ಕರ್ತವ್ಯಭ್ರಷ್ಟರೆಂದು ದೂಷಿಸಿದ್ದೇವೆ. ಆದರೆ ನಾವು ದೇಶಕ್ಕಾಗಿ ರಾಷ್ಟ್ರಕ್ಕಾಗಿ ಯಾವ ಬಗೆಯ ತ್ಯಾಗವನ್ನು ಮಾಡಿದ್ದೇವೆಯೆಂಬುದರ ಕುರಿತು ನಮ್ಮನ್ನು ನಾವೇ ನೋಡಿಕೊಳ್ಳುವ, ವಿವೇಕ–ಜ್ಞಾನಗಳನ್ನು ಉಪಯೋಗಿಸಿ ನಮ್ಮ ಕರ್ತವ್ಯವೆಷ್ಟೆಂಬುದನ್ನು ಅರಿತುಕೊಳ್ಳುವದು ಹೆಚ್ಚಿನ ಅವಶ್ಯಕ. ಐದು ವರ್ಷಕ್ಕೊಮ್ಮೆ ಬರುವ ಈ ಮಹಾಚುನಾವಣೆಯ ಕಾಲದಲ್ಲಿ ಒಂದು ದಿನದ ಕಷ್ಟವನ್ನು ಸಹಿಸಿ ಮತದಾನ ಮಾಡುವಷ್ಟು ತ್ಯಾಗಬುದ್ಧಿ ನಮ್ಮಲ್ಲಿಲ್ಲವೆಂದಾಗದೆ? ನಾಲ್ಕು ವರ್ಷಗಳಲ್ಲಿ ಎಡೆಬಿಡದೆ ಸರಕಾರವನ್ನು ಟೀಕಿಸುವದರಲ್ಲೇ ಕಾಲಹರಣ ಮಾಡಿದರೂ–ಸರಕಾರದ ಸ್ಥಾನಮಾನವನ್ನು ವಿಮರ್ಶೆ ಮಾಡಿದರೂ ನಮಗಿರುವ ಮತದ ಬೆಲೆಯೆಷ್ಟು? ಅದನ್ನು ಹೇಗೆ ಉಪಯೋಗಿಸಬೇಕು? ಸತ್ಪಾತ್ರಕ್ಕೆ ದಾನಮಾಡುವದರಿಂದ ಮುಂದೆ ನಮಗೇನು ಲಾಭ? ಎನ್ನುವ ವಿಚಾರಗಳನ್ನು ಅರಿಯುವದಾಗಲಿಲ್ಲ! ಒಂದೇ ಬಾರಿ ತಿಳಿದೋ ತಿಳಿಯದೆಯೋ ನಾವು ಹಲವರನ್ನು ಆರಿಸಿದೆವು. ಅವರು ಕರ್ತವ್ಯಭ್ರಷ್ಟರಾದರೆನ್ನೋಣ–ಅದರಿಂದ ಕೆಟ್ಟದಾಯಿತೆನ್ನೋಣ–ಅದರೀಗ ಅದರ ತಪ್ಪನ್ನು ತಿದ್ದುವ ಅಧಿಕಾರವಿರುವದು ನಮ್ಮ ಕೈಯಲ್ಲಿ ತಾನೆ? ನಾಲ್ಕು ವರ್ಷಗಳ ರಾಜ್ಯಾಡಳಿತದಲ್ಲಿ ಯಾರು ಸರಿ ಯಾರು ತಪ್ಪು? ಕಾಂಗ್ರೆಸ್ಸಿನಲ್ಲಿಯ ಹಲವರು ಮಾಡಿದ ಪ್ರಮಾದದಿಂದ ಇಡಿಯ ಸಂಸ್ಥೆಯನ್ನೇ ಬಹಿಷ್ಕರಿಸುವದು ಯೋಗ್ಯವಾದೀತೇ? ಜನತೆಯ ನಿಜವಾದ ಪ್ರತಿನಿಧಿಗಳಾರು? ಮುಂತಾದ್ದನ್ನೆಲ್ಲಾ ವಿವೇಕಪೂರ್ಣವಾಗಿ ಚಿಂತಿಸುವದು ಜನತೆಯ ಆದ್ಯ ಕರ್ತವ್ಯವಲ್ಲವೆ? ಈಗ ಆಲಸಿಗರಾಗಿ ವರ್ತಿಸುವದರಿಂದ ತಿರುಗಿ ಇನ್ನೈದು ವರ್ಷ ಇದಕ್ಕಿಂತಲೂ ಕಠಿಣ ಸಮಸ್ಯೆಯನ್ನು ಎದುರಿಸಬೇಕಾದ ಪ್ರಸಂಗ ಬರಬಹುದು. ಪ್ರಜಾಪ್ರಭುತ್ವದಲ್ಲಿ ಜನತೆಯ ಪ್ರತಿನಿಧಿಯಾದ ಸರಕಾರವಷ್ಟೇ ಬಾಳೀತು! ಆದುದರಿಂದ ಈಗಿನ ಸಂದರ್ಭವನ್ನು ಬಹು ಜಾಗ್ರತೆಯಿಂದ–ಒಳ್ಳೆಯ ಮುತ್ಸದ್ದಿತನದಿಂದ ಉಪಯೋಗಿಸಿಕೊಳ್ಳಬೇಕು. ನಾವು ಕೊಡುವ ಪ್ರತಿಯೊಂದು ಮತವೂ ರಾಷ್ಟ್ರಸೌಧದ ಭದ್ರವಾದ ಕಳಹದಿಯಾಗಿರುತ್ತದೆ. ಅಷ್ಟನ್ನೂ ನಾವು ಮಾಡದೆ ಹೋದರೆ ನಮ್ಮ ದುರ್ದೈವಕ್ಕೆ ಪಾರವಿಲ್ಲವೆಂದೇ ಹೇಳಬೇಕು. ಮತ್ತೆ ಯಾರನ್ನು ದೂಷಿಸಿಯೂ ಪ್ರಯೋಜನವಿಲ್ಲ, ಆಕಾಶ ನೋಡಿ ಉಗುಳಿದರೆ ಬೀಳುವದು ಮುಖಕ್ಕೆ ತಾನೇ?

ಜಗತ್ತಿಗೇ ಹಿರಿದಾದ ಈ ಚುನಾವಣೆ ಇದಾದರೂ–ಭಾರತದ ಇತಿಹಾಸದಲ್ಲೇ ಇದು ಮೊದಲನೆಯದಾಗಿರುವದಾದರೂ–ಈ ಬಗ್ಗೆ ಸರಕಾರ ಯೋಗ್ಯ ಸುವ್ಯವಸ್ಥಿತ ರೀತಿಯ ಕ್ರಮವನ್ನು ಕೈಗೊಂಡಿದೆ. ಬಹು ಶ್ಲಾಘನೀಯ ವಿಚಾರ! ಮತವನ್ನು ಬಲಾತ್ಕಾರ ಇಲ್ಲವೆ ಮೇಲಾಟ ನಡೆಸಿ ಬೇರೆಯವರು ಕಸಿದುಕೊಳ್ಳಲು ಬರುವಂತಿಲ್ಲ. ಅಧಿಕಾರಿಗಳು ಅಂಥವರಿಗೇನೇ ಇಂಥವರಿಗೇನೇ ಕೊಡಿ ಎಂದು ನಿರ್ದೇಶಿಸುವಂತಿಲ್ಲ. ಸರಕಾರದ ಯಾವ ನೌಕರನೂ ಚುನಾವಣೆಯ ಪ್ರಚಾರ ಕಾರ್ಯವೇ ಮೊದಲಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಬರುವಂತಿಲ್ಲ. ಚುನಾವಣೆಗೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ಬಲವನ್ನು ಯಾವದಾದರೊಂದು ಪಕ್ಷಕ್ಕೆ ಉಪಯೋಗಿಸಿದರೂ, ವಂಚನೆ ಮಾಡಿದರೂ–ಶಿಸ್ತನ್ನು ಭಂಗಿಸಿದರೂ ದಂಡ ಮಾತ್ರವಲ್ಲದೆ ಕಠಿಣ ಶಿಕ್ಷೆಯೂ ಇದೆ. ಆದುದರಿಂದ ಸರಕಾರೀ ಜನದ ಹೆದರಿಕೆ–ಹಂಗು–ಮತದಾರರಿಗಿರಲು ಸಾಧ್ಯವಿಲ್ಲ! ಮತಪೆಟ್ಟಿಗೆಯೂ ಗುಪ್ತವಾಗಿದ್ದು ಜನ ಯಾವ ಪಕ್ಷದ ಪೆಟ್ಟಿಗೆಗೆ ತನ್ನ ಮತವನ್ನು ಹಾಕುವನೆಂಬುದು ಯಾರಿಗೂ ತಿಳಿಯುವಂತಿಲ್ಲ. ಹೊರಗೆ ಭರವಸೆ ಕೊಡುವದೊಂದು ಒಳಗೆ ಮತನೀಡುವದೊಂದಾಗಬಹುದು. ತಾನು ಹಾಕುವ ಮತವು ಅವರವರಿಗೆ ಗೊತ್ತು ವಿನಹ ಬೇರೆ ಯಾರಿಗೂ ತಿಳಿಯುವಂತಿಲ್ಲವಾದ ಕಾರಣ ಯಾರೂ ನಿಷ್ಠುರ ತಾಳುವಂತಿಲ್ಲ!

ಪರಿಸ್ಥಿತಿ ಇಷ್ಟು ಅನುಕೂಲವಿರುವದಾದರೂ ಮತದಾರರು ತಮ್ಮ ಹೊಣೆಯನ್ನು ಇನ್ನೂ ಅರಿತಂತಿಲ್ಲ. 120ಕ್ಕೂ ಮಿಕ್ಕಿ ಪಕ್ಷಗಳು ಜನರ ತಲೆತಿನ್ನುತ್ತಿರುವದೇನೋ ನಿಜ; ಇದು ಇಡಿಯ ರಾಷ್ಟ್ರದ ಪ್ರಶ್ನೆಯಾದುದರಿಂದ ದಾಕ್ಷಿಣ್ಯ–ಹಂಗನ್ನು ತೊರೆಯುವದು ಅವಶ್ಯಕವಿರುತ್ತದೆ. ಹಲವು ಹುರಿಯಾಳುಗಳು ಅಸಮರ್ಥರೆಂದು ನಮಗೆ ವಿದಿತ ವಿಚಾರವಾಗಿದ್ದರೂ ಜಾತಿ–ಬಂಧುತ್ವ–ಸ್ನೇಹಾಚಾರ–ಶ್ರೀಮಂತಿಕೆ ಮೊದಲಾದುವುಗಳ ದೃಷ್ಟಿಯಿಂದ ಅವರಿಗೆ ಮತವನ್ನೀಯುವ ದುಸ್ಸಾಹಸವನ್ನು ಮಾಡುತ್ತೇವೆ. ದೇಶದ ಕಲ್ಯಾಣವನ್ನು ಬಯಸುವ ಯಾವ ಪ್ರಜೆಯೂ ಇಂತಹ ಆತ್ಮಘಾತುಕ ಕಾರ್ಯವನ್ನು ಮಾಡಬಾರದು. ಅಮೂಲ್ಯವಾದ ಮತವನ್ನು ಪಾತ್ರಾಪಾತ್ರಯೋಚನೆ ಮಾಡದೆ ದಾನ ಮಾಡುವದಾದರೆ ಅದಕ್ಕಿಂತಲೂ ದೊಡ್ಡ ದೇಶದ್ರೋಹ ಬೇರಿಲ್ಲವೆಂದೇ ಹೇಳಬೇಕು. ಅನುನಿತ್ಯದ ಜೀವನದಲ್ಲಿ ಬೇರೆಯವರಿಗೆ ಸಹಾಯ ಮಾಡದ ಜನ ದೇಶಕ್ಕಾಗಿ ಇಷ್ಟರ ಮಟ್ಟಿನ ತ್ಯಾಗ ಮಾಡಲಾರರೇ? ಗುಪ್ತ ಮತದಾನ ಕ್ರಮದಿಂದ ದೇಶೋನ್ನತಿಯ ಮುಖವಾಡವ ಯಿಟ್ಟುಕೊಂಡು ಕಾರ್ಯ ಮಾಡಲು ಸಾಧ್ಯವಿದೆ. ಆದರೆ ನಮ್ಮ ಮತದ ಬೆಲೆ–ಅದರಿಂದಾಗುವ ಪ್ರಯೋಜನಗಳ ಅರಿವು ಮತದಾರರಿಗಿರಬೇಕು. ಆ ಅರಿವಿಲ್ಲದವರು ದೇಶಕ್ಕೆ ಕೇಡು ಬಗೆಯುವದು ಸ್ವಾಭಾವಿಕ! ಪ್ರತಿಯೊಬ್ಬರೂ ದೇಶದ ಕಲ್ಯಾಣದ ವಿಶಾಲ ದೃಷ್ಟಿಯನ್ನಿಟ್ಟುಕೊಂಡರೆ ಮಾತ್ರ ಯೋಗ್ಯ ಸರಕಾರವನ್ನು ನಿರ್ಮಿಸಬಹುದು!

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ಎ. ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ತಾರೀಕು 8-11-51 ರಿಂದ ವಾರದ ಭವಿಷ್ಯ ತಾರೀಕು 14-11-51 ವರೆಗೆ

ಮೇಷ—ಕರ್ಮಠರಾದ ನೀವು ಮೈಮುರಿದು ದುಡಿಯುವಿರಿ ಯಶಸ್ವಿ ತಕ್ಕ ಫಲವೂ ಸಿಗುವುದು. ಮಾತ್ರವಲ್ಲ ಆಕಸ್ಮಾತ್ತಾಗಿ ಧನವೂ ಕೂಡ ಲಭಿಸುವದು, ಆದರೂ ನಿಮ್ಮ ಕೈಯು ಸದಾ ಬರಿದಾಗಿಯೇ ಇರುವದು, ಸಂಸಾರಿಕ ಚಿಂತೆಯು ಹೆಚ್ಚುವುದು. ವ್ಯಾಪಾರಾದಿಗಳಲ್ಲಿ ನಷ್ಟ ಸಂಭವಿಸೀತು. ದೇಹಕ್ಕೂ ಕೂಡ ಸುಖವಿರದು, ಆಪ್ತೇಷ್ಟರ ನೆರವು ಕೂಡ ಲಭಿಸಲೊಲ್ಲದು, ಮಕ್ಕಳ ದೆಸೆಯಿಂದಾಗಿ ಹೆಚ್ಚು ನ ಚಿಂತೆಗೀಡಾಗುವಿರಿ, ತಾ-8-12-13 ಈ ದಿನಗಳಲ್ಲಿ ಸ್ವಲ್ಪ ಸುಖನೆಮ್ಮದಿ ದೊರೆತೀತು.

ವೃಷಭ—ಹೊಸದಾದ ಕಾರ್ಯಗಳನ್ನು ಆರಂಭಿಸುವಿರಿ, ನಿಮ್ಮ ಬಯಕೆಯು ಸಫಲವಾಗುವದು. ಆಪ್ತೇಷ್ಟರು ಬಂಧು ಮಿತ್ರರುಗಳ ಸಹಾಯವು ಚೆನ್ನಾಗಿರುವುದರಿಂದ ಹಿಡಿದ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಪಶು ಭೃತ್ಯಾದಿ ಗೃಹೋಪಕರಣಗಳಲ್ಲಿ ಯಾವೊಂದು ತರದ ನ್ಯೂನತೆಯೂ ಇಲ್ಲದಿರುವುದರಿಂದ ದಿನಯಾಪನೆಯು ಸುಗಮವಾದೀತು. ಕೆಲವೊಮ್ಮೆ ವಿನಾಕಾರಣ ಕಲಹವಾಗಲಿದೆ. ಶತ್ರು ಜನರ ಮಾಯಾಜಾಲಕ್ಕೆ ಸಿಲುಕುವ ಸಂಭವವಿರುವುದರಿಂದ ತಾ. 12, 13ರಲ್ಲಿ ಸ್ವಲ್ಪ ಜಾಗರೂಕರಾಗಿರಿ.

ಮಿಥುನ— ಸೇವಕವರ್ಗದವರಿಗೂ ಶ್ರಮಜೀವಿಗಳಿಗೂ ಈ ವಾರವು ಅಷ್ಟೊಂದು ಉತ್ತಮವಾಗಿರದು. ಇತರ ಜನವೃಂದಕ್ಕೆ ಕಾಲವು ಅನುಕೂಲವಾಗಿದೆ. ಯಾವ ಕಾರ್ಯದಲ್ಲೂ ಕೂಡ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ನೌಕರಿ ವರ್ಗದವರು ಉನ್ನತಸ್ಥಾನವನ್ನು ಹೊಂದುವರು. ಶತ್ರುಗಳು ಪರಾಭವ ಹೊಂದುವರು. ವಿಜಾತಿಯವರೊಡನೆ ಕಲಹವಾಗುವ ಸಂಭವವಿದೆ. ಹಿಂದುಮುಂದಿನ ವಿಮರ್ಶೆ ಮಾಡದೆ ದುಡುಕಿ ಕೆಲವೊಮ್ಮೆ ನಷ್ಟಹೊಂದಲಿರುವಿರಿ. ತಾ. 8, 14 ಒಳ್ಳೆಯದಲ್ಲ.

ಕರ್ಕಾಟಕ— ನಿಷ್ಠುರಭಾಷಿಗಳಾಗಿ ವರ್ತಿಸುವಿರಿ. ಅತಏವ ಕೆಲವರೊಡನೆ ಕಲಹವಾಗುವದು. ಗುರುಹಿರಿಯರ ಅನುಗ್ರಹವು ನಿಮಗಿರುವುದರಿಂದ ಸಮಾಜದಲ್ಲಿ ಮಾನಮರ್ಯಾದೆಗಳು ಲಭಿಸುವವು. ಹಿಡಿದ ಕಾರ್ಯದಲ್ಲಿ ಫಲಪ್ರಾಪ್ತಿಯು ಉತ್ತಮವಾಗಿರುವದು. ಆದರೆ ಅಧಿಕಾರಿ ವರ್ಗದವರ ವಕ್ರ ದೃಷ್ಟಿಗೆ ಸಿಲುಕಿ ಸ್ವಲ್ಪ ಕಷ್ಟಕ್ಕೆ ಗುರಿಯಾಗಲಿರುವಿರಿ. ಆರೋಗ್ಯ ವಿಚಾರದಲ್ಲಿ ಜಾಗರೂಕರಾಗಿರಿ. ವಾರಾಂತ್ಯದ 3 ದಿನಗಳು ಉತ್ತಮವಿವೆ.

ಸಿಂಹ— ಪ್ರವಾಸಕ್ಕೀವಾರವು ಹಿತಕಾರಿಯಾಗದು, ಕಷ್ಟನಷ್ಟಗಳು ಮೇಲಿಂದ ಮೇಲೆ ಪ್ರಾಪ್ತವಾಗುವವು ದಾತೃವಲ್ಲ ದೇಹಕ್ಕೂ ಕೂಡ ಆಕಸ್ಮಿಕ ಆಪತ್ತು ಸಂಭವಿಸುವ ಯೋಗವಿದೆ. ಹಲವಾರು ತೆರದಿಂದ ದುಡಿದರೂ ನಿಮ್ಮ ಅರ್ಜನ ಭಾಗವನ್ನು ಪೂರೈಸಿಕೊಳ್ಳುವದು ಕಷ್ಟವಾಗುವದು. ಕಫ ಪಿತ್ಥ ದೋಷಗಳಿಂದಾಗಿ ಶರೀರದ ಆರೋಗ್ಯಕ್ಕೆ ಯಾವಾಗಲೂ ತೊಂದರೆ ಇದ್ದೇ ಇರುವದು. ವಾರದ ಅಂತ್ಯದ ದಿನಗಳಲ್ಲಿ ಕಿಂಚಿಲ್ಲಾಭ ಸಂತೋಷಗಳು ಕಾಣಿಸುವವು.

ಕನ್ಯಾ— ಬೇರೆಲ್ಲ ಗ್ರಹರೂ ನಿಮ್ಮ ಪ್ರತಿಕೂಲರಾಗಿದ್ದರೂ ಸುರಾಸುರ ಗುರುಗಳ ಅನುಗ್ರಹವು ನಿಮಗೀವಾರದಲ್ಲಿ ಲಭಿಸಿದೆ. ಯುಕ್ತಿ ಸಾಧ್ಯವಾದ ಕಾರ್ಯಗಳಲ್ಲಿ ನೀವು ಪರಾಭವವನ್ನು ಹೊಂದಲಾರಿರಿ. ನಿಮ್ಮ ಮನೋಧೈರ್ಯಸ್ಥೈರ್ಯಗಳು ಕುಂಠಿತವಾಗಿರುವುದರಿಂದ ಮಹತ್ಕಾರ್ಯನಾವುದನ್ನೂ ನಿರ್ವಹಿಸುವ ಶಕ್ತಿ ನಿಮಗಿಲ್ಲವು ಕುಟುಂಬದಲ್ಲಿ ಸೋದರರೊಳಗೆ ಜಗಳವಾದೀತು. ಆಪ್ತೇಷ್ಟ ಜನರಲ್ಲೂ ನಿಮಗೆ ನಂಬಿಗೆಯು ತಪ್ಪುವದು. ಮಿತ್ರರ ವಿಯೋಗವುಂಟಾಗಲಿದೆ. ವಾರಾದಿಯ 3 ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ತುಲಾ— ಕಫ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲುವುದು. ಶತ್ರು ಜನರು ಪ್ರತೀಕಾರಾಸಕ್ತರಾಗುವರು. ಮಾನಸಿಕ ವೇದನೆಯು ದಿನೇದಿನೇ ಪ್ರಬಲವಾಗುತ್ತಾ ಬರುವದು. ಆಕಸ್ಮಿಕ ಪ್ರವಾಸ ಅನಿರೀಕ್ಷಿತ ಅನರ್ಥ ಇವುಗಳ ಸಲುವಾಗಿ ನಿಮ್ಮ ದುಡಿಮೆಯು ಬಹ್ವಂಶ ವ್ಯಯವಾಗುವದಾದರೂ ಈ ವಾರದಲ್ಲಿ ಹಣದ ಅಡಚಣೆಯುಂಟಾಗದು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವು ಲಭಿಸುವದು. ವಾರದ ಅಂತ್ಯದ ದಿನಗಳನ್ನು ಬಿಟ್ಟು ಮಿಕ್ಕ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಶೀಘ್ರದಿಂದ ಸಿದ್ಧಿಸುವವು.

ವೃಶ್ಚಿಕ—ಧನಸುಖ ಪತಿಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುವಿರಿ, ಈ ವಾರದಲ್ಲಿ ನೀವು ಕೈಗೊಂಡ ಕಾರ್ಯಗಳು ಹೆಚ್ಚಿನಂಶ ನಿಮ್ಮಿಷ್ಟದಂತೆ ಕೊನೆಹೊಂದದಿದ್ದರೂ ನೀವಾಳಾಗದಷ್ಟು ನಷ್ಟ ಹೊಂದಲಾರಿರಿ. ಹಲವಾರು ತೆರದಿಂದ ಧನವು ನಿಮ್ಮ ಕೈಸೇರಲಿದೆ. ಸೇವಕವರ್ಗದವರಿಗೆ ದಿನಯಾಪನೆಯು ಸುಖವಾಗುವದು. ಸಾಂಸಾರಿಕ ತಾಪತ್ರಯಗಳು ಮುಂಚಿಗಿಂತ ಬಹಳೇ ಕಡಿಮೆಯಾಗಲಿವೆ. ಸಜ್ಜನರ ಸಹಕಾರವು ಉತ್ತಮವಾಗಿರುವುದರಿಂದ ವಾರಾಂತ್ಯದ 3 ದಿನಗಳ ವಿಜಯಲಾಭಗಳನ್ನು ಪಡೆವಿರಿ.

ಧನು—ಲಾಭಸ್ಥಾನಕ್ಕೆ ಬಂದ ರವಿಯೊಬ್ಬನೇ ನಿಮಗನುಕೂಲನಾಗಿದ್ದರೂ ಇತನು ನೀಚನಾದ ಪ್ರಯುಕ್ತ ಯಾವೊಂದು ಸಹಾಯವನ್ನು ಸಲ್ಲಿಸಲೂ ಅಶಕ್ತನಿರುವನು. ಆದಕಾರಣ ನೀವೀವಾರದಲ್ಲಿ ಬಹಳ ಕಷ್ಟನಷ್ಟಗಳನ್ನು ಎದುರಿಸಬೇಕಾಗುವುದು. ನಿಕಟವರ್ತಿಗಳೊಡನೆ ಜಗಳ ಅಧಿಕಾರಿ ಜನರ ಪೀಡೆ ಗುರುಹಿರಿಯರ ಆಗ್ರಹ ಬಂಧುಗಳ ಮನಸ್ತಾಪ ಗ್ರಹಕೃತ್ಯದ ಅವ್ಯವಸ್ಥೆ ಕಾರ್ಯಹಾನಿ ಇತ್ಯಾದಿ ಅನಿಷ್ಟಗಳು ಮೇಲಿಂದ ಮೇಲೆ ಬರಲಿವೆ. ಆದರೂ ತಾ. 8, 14 ಈ ಎರಡು ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಮಕರ—ಪ್ರಬಲರಾದ ಶತ್ರುಗಳ ಉಪಟಳದಿಂದ ನಿಮ್ಮ ಕಾರ್ಯಗಳು ಅರ್ಧದಲ್ಲೇ ನಿಲ್ಲಲಿವೆ. ಆದರೂ ನಿಮ್ಮ ಉದ್ಯಮವು ದಿನಯಾಪನೆಗೆ ತಕ್ಕಷ್ಟು ಧನವನ್ನೊದಗಿಸಲು ಸಮರ್ಥವಾಗಿರುವುದು. ಕುಟುಂಬದಲ್ಲಿ ಶಾಂತತೆಯು ನೆಲಸುವದು. ನಿಮ್ಮ ಸ್ವಂತ ಆರೋಗ್ಯಕ್ಕೆ ಕೊಂಚ ಹಾನಿಯಿದೆ. ಶಸ್ತ್ರ ಚೋರ ಇತ್ಯಾದಿ ಶತ್ರುಗಳಿಂದ ಅಪಾಯವೊದಗೀತು. ಹೆಚ್ಚಿನ ಸಮಯವನ್ನು ಮಾನಸಿಕ ಶ್ರಮದಲ್ಲಿ ಕಳೆವಿರಿ. ಗುರುಹಿರಿಯರ ಮನಸ್ತಾಪಕ್ಕೆ ಗುರಿಯಾಗಲಿರುವಿರಿ. ತಾ. 9, 10, 11, ಇದ್ದುದರಲ್ಲಿ ಉತ್ತಮವಾಗಿವೆ.

ಕುಂಭ—ವಿನಯಶೀಲರೂ ವಾಕ್ಪಟುಗಳೂ ಆದ ನೀವು ಈ ವಾರವನ್ನು ಸುಖದಿಂದ ಕಳೆವಿರಿ. ಹಲವಾರು ಸನ್ಮಿತ್ರರ ಪರಿಚಯವಾಗುವದು. ನಿಮ್ಮ ಆರ್ಥಿಕ ದಿಕ್ಕಟ್ಟು ಈ ವಾರದಲ್ಲಿ ನಿವಾರಿಸಲ್ಪಡುವದು. ಹಿಡಿದ ಕಾರ್ಯದಲ್ಲಿ ಪ್ರಗತಿಯೂ ಫಲಪ್ರಾಪ್ತಿಯೂ ಉತ್ತಮವಾಗಿರುವದು. ಮಿತ್ರವರ್ಗದವರ ಸಂಪೂರ್ಣ ಸಹಕಾರ ನಿಮಗಿರುವುದರಿಂದ ಪ್ರತಿಯೊಂದು ಕಾರ್ಯದಲ್ಲೂ ವಿಜಯವು ನಿಮ್ಮ ಪಾಲಿನದಾಗುವುದು. ವಾತ ಕಫ ದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಮನೆ ಜನಗಳೊಡನೆ ಸ್ವಲ್ಪ ಜಗಳವಾದೀತು. ತಾ. 8, 12, 13 ಉತ್ತಮ.

ಮೀನ— ಎಂತಹ ಸಂದರ್ಭಾಂತರವೇ ಪ್ರಾಪ್ತವಾಗಲಿ ಅನುಭವಿಸಿಯೇ ತೀರ ಎಂಬ ಹಠವಾದಿಗಳಾದ ನಿಮಗೆ ಈ ವಾರದಲ್ಲಿ ಅನೇಕ ಕಷ್ಟನಷ್ಟಗಳುಂಟಾಗಲಿವೆ. ನಿಮ್ಮ ಉತ್ಪತ್ತಿಯ ದ್ವಿಗುಣ ವ್ಯಯವು ಇರುವುದರಿಂದ ಸದಾ ಹಣದ ಚಿಂತೆಯು ಬಾಧಿಸುವದು. ಸ್ಥಾನ ಚಲನೆ ಪರ್ಯಟನ ಸ್ತ್ರೀಯರಿಂದ ಕಲಹ ತಪ್ಪಿಮಿಕ್ಕ ಕಷ್ಟನಷ್ಟ ಆದ ವಾದ ಶತ್ರುಗಳ ಉಪಟಳ ಇತ್ಯಾದ್ಯನಿಷ್ಟಗಳು ಮೇಲಿಂದ ಮೇಲೆ ಬರಲಿವೆ. "ವಿಪದಿ ಧೈರ್ಯಂ" ಎಂಬ ಲೋಕೋಕ್ತಿಯಂತೆ ಕಷ್ಟ ಬಂದಾಗ ಧೈರ್ಯವನ್ನಾಶ್ರಯಿಸಿದರೆ ವಿಪತ್ತುಗಳಿಂದ ಪಾರಾಗಬಹುದು. ತಾ. 8,12, 13 ಅತಿವ್ಯಯ ಅನಾರೋಗ್ಯಕಾರಿಗಳಾಗಿವೆ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದಲ್ಲಿ.... ಚಟ್ಟಿ ಬದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕೆಂಪುಮೆಣಸು, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂದಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕಸ್ಥರು:—ಡಾ॥ ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಋತುಸ್ನಾನದಲ್ಲಿ ಸೇವಿಸಬೇಕು.

ಪಥ್ಯ:—ಹುಳಿಖಾರ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—
ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪಿತ
31ನೆ ವರ್ಷ

15-11-1951
Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.
ಕೃಷಿಮಂತ್ರಿ ಶ್ರೀ.ಎ.ಬಿ ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.
ವಾರ್ಷಿಕ ಚಂದಾ ರೂ 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧ ವಾರ ೧೦
NAVAYUGA WEEKLY Post Box No. 22 UDIPI.
Vol. 31 No. 10

ಮತದಾರರ ಹೊಣೆ

ಜಗತ್ತಿನಲ್ಲೇ ಅತಿ ದೊಡ್ಡದಾದ ಭಾರತ ಸಾರ್ವತ್ರಿಕ ಚುನಾವಣೆಯು ಪ್ರಥಮವಾಗಿ ಹಿಮಾಚಲ ಪ್ರದೇಶದಲ್ಲಿ ನಡೆಯಿತು. ಚುನಾವಣೆಯ ಫಲಿತಾಂಶ ಹೇಗಿದ್ದರೂ ಮತದಾನ ಮಾಡಿದವರ ಕುರಿತು ನಾವು ವಿಮರ್ಶಿಸುವದು ಅವಶ್ಯ. 13235 ಮತದಾರರುಳ್ಳ ಈ ಪ್ರದೇಶದಿಂದ 2,028 ಮತದಾರರು ಮತದಾನ ಮಾಡಿರುವರು. ಅಂದರೆ ಶೇಕಡಾ 16.8 ಜನರು ಮಾತ್ರ ಮತದಾನ ಮಾಡಿದಂತಾಯಿತು. ಬೆಟ್ಟಗಳನ್ನು ದಾಟಿಕೊಂಡು ಬರುವದು ಕಷ್ಟಸಾಧ್ಯವಾಯಿತೆಂದೂ, ಹಿಮ ಹೆಚ್ಚಾಗಿ ಬಿದ್ದುದರಿಂದ ತೊಂದರೆಯಾಯಿತೆಂದೂ ಹೇಳಲಾಗಿದೆ. ದೇಶದ ಹಿತದ ದೃಷ್ಟಿಯಿಂದಲೂ– ಯೋಗ್ಯ ಸರಕಾರದ ನಿರ್ಮಾಣದ ದೃಷ್ಟಿಯಿಂದಲೂ ನಮ್ಮ ಜನ ಎಷ್ಟು ಆಸ್ಥೆಯುಳ್ಳವರಾಗಿದ್ದಾರೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ! ಈ ನಾಲ್ಕು ವರ್ಷಗಳಲ್ಲಿ ಸರಕಾರ ಎದುರಿಸಬೇಕಾಗಿದ್ದ ಗಂಭೀರ ಪರಿಸ್ಥಿತಿಯನ್ನು ಮರೆಮಾಚಿ ಲೋಪದೋಷಗಳನ್ನಷ್ಟೇ ಎತ್ತಿಕೊಂಡು ಟೀಕೆ ಮಾಡುತ್ತೇವೆ. ಇಂತಹ ಆರೋಪಗಳು ವಿರೋಧಿ ಪಕ್ಷಗಳಿಂದ ಮಾತ್ರವಲ್ಲದೆ ಸರ್ವಸಾಮಾನ್ಯರಿಂದಲೂ ಬಂದಿದೆ. ನಾಲ್ಕು ವರ್ಷಗಳಲ್ಲಿ ಕಾಂಗ್ರೆಸು ಸಾಧಿಸಿದ್ದನ್ನು–ತ್ಯಾಗ ಮಾಡಿದ್ದನ್ನು ಕೃತಜ್ಞತಾಪೂರ್ವಕವಾಗಿ ಸ್ವಾಗತಿಸಬೇಕಾದ ನಾವು ಕರ್ತವ್ಯಭ್ರಷ್ಟರೆಂದು ದೂಷಿಸಿದ್ದೇವೆ. ಆದರೆ ನಾವು ದೇಶಕ್ಕಾಗಿ ರಾಷ್ಟ್ರಕ್ಕಾಗಿ ಯಾವ ಬಗೆಯ ತ್ಯಾಗವನ್ನು ಮಾಡಿದ್ದೇವೆಯೆಂಬುದರ ಕುರಿತು ನಮ್ಮನ್ನು ನಾವೇ ನೋಡಿಕೊಳ್ಳುವ. ವಿವೇಕ–ಜ್ಞಾನಗಳನ್ನುಪಯೋಗಿಸಿ ನಮ್ಮ ಕರ್ತವ್ಯವೆಷ್ಟೆಂಬುದನ್ನು ಅರಿತುಕೊಳ್ಳುವದು ಹೆಚ್ಚಿನ ಅವಶ್ಯಕ. ಐದು ವರ್ಷಗಳಿಗೊಮ್ಮೆ ಜರಗುವ ಈ ಮಹಾಚುನಾವಣೆಯ ಕಾಲದಲ್ಲಿ ಒಂದು ದಿನದ ಕಷ್ಟವನ್ನು ಸಹಿಸಿ ಮತದಾನ ಮಾಡುವಷ್ಟು ತ್ಯಾಗಬುದ್ಧಿ ನಮ್ಮಲ್ಲಿಲ್ಲವೆಂದಾಗದೆ? ನಾಲ್ಕು ವರ್ಷಗಳಲ್ಲಿ ಎಡೆಬಿಡದೆ ಸರಕಾರವನ್ನು ಟೀಕಿಸುವದರಲ್ಲೇ ಕಾಲಹರಣಮಾಡಿದರೂ–ಸರಕಾರದ ಸ್ಥಾನಮಾನವನ್ನು ವಿಮರ್ಶೆ ಮಾಡಿದರೂ ನಮಗಿರುವ ಮತದ ಬೆಲೆಯೆಷ್ಟು? ಅದನ್ನು ಹೇಗೆ ಉಪಯೋಗಿಸಬೇಕು? ಸತ್ಪಾತ್ರಕ್ಕೆ ದಾನಮಾಡುವದರಿಂದ ಮುಂದೆ ನಮಗೇನು ಲಾಭ? ಎನ್ನುವ ವಿಚಾರಗಳನ್ನು ಅರಿಯುವದಾಗಲಿಲ್ಲ! ಒಂದು ಬಾರಿ ತಿಳಿದೋ ತಿಳಿಯದೆಯೋ ನಾವು ಹಲವರನ್ನು ಆರಿಸಿದೆವು. ಅವರು ಕರ್ತವ್ಯಭ್ರಷ್ಟರಾದರೆನ್ನೋಣ--ಅದರಿಂದ ಕೆಟ್ಟದಾಯಿತೆನ್ನೋಣ--ಆದರೆ ಗಳಿಸಿದ್ದನ್ನು ತಿದ್ದುವ ಅಧಿಕಾರವಿರುವದು ನಮ್ಮ ಕೈಯಲ್ಲಿ ತಾನೆ? ನಾಲ್ಕು ವರ್ಷಗಳ ರಾಜ್ಯಾಡಳಿತದಲ್ಲಿ ಯಾರು ಸರಿ ಯಾರು ತಪ್ಪು? ಕಾಂಗ್ರೆಸ್ಸಿನಲ್ಲಿಯು ಹಲವರು ಮಾಡಿದ ಪ್ರಮಾದದಿಂದ ಇಡಿಯ ಸಂಸ್ಥೆಯನ್ನೇ ಬಹಿಷ್ಕರಿಸುವದು ಯೋಗ್ಯವಾದೀತೇ? ಜನತೆಯ ನಿಜವಾದ ಪ್ರತಿನಿಧಿಗಳಾರು? ಮುಂತಾದ್ದನ್ನೆಲ್ಲಾ ವಿವೇಕಪೂರ್ಣವಾಗಿ ಚಿಂತಿಸುವದು ಜನತೆಯ ಆದ್ಯ ಕರ್ತವ್ಯನಲ್ಲವೆ? ಈಗ ಆಲಸಿಗರಾಗಿ ವರ್ತಿಸುವದರಿಂದ ತಿರುಗಿ ಇನ್ನೈದು ವರ್ಷ ಇದಕ್ಕಿಂತಲೂ ಕಠಿಣ ಸಮಸ್ಯೆಯನ್ನು ಎದುರಿಸಬೇಕಾದ ಪ್ರಸಂಗ ಬರಬಹುದು. ಪ್ರಜಾಪ್ರಭುತ್ವದಲ್ಲಿ ಜನತೆಯ ಪ್ರತಿನಿಧಿಯಾದ ಸರಕಾರವಷ್ಟೇ ಬಾಳೀತು! ಆದುದರಿಂದ ಈಗಿನ ಸಂದರ್ಭವನ್ನು ಬಹು ಜಾಗ್ರತೆಯಿಂದ–ಒಳ್ಳೆಯ ಮುತ್ಸದ್ದಿತನದಿಂದ ಉಪಯೋಗಿಸಿಕೊಳ್ಳಬೇಕು. ನಾವು ಕೊಡುವ ಪ್ರತಿಯೊಂದು ಮತವೂ ರಾಷ್ಟ್ರಸೌಧದ ಭದ್ರವಾದ ತಳಹದಿಯಾಗಿರುತ್ತದೆ. ಅಷ್ಟನ್ನೂ ನಾವು ಮಾಡದೆ ಹೋದರೆ ನಮ್ಮ ದುರ್ದೈವಕ್ಕೆ ಪಾರವಿಲ್ಲವೆಂದೇ ಹೇಳಬೇಕು. ಮತ್ತೆ ಯಾರನ್ನು ದೂಷಿಸಿಯೂ ಪ್ರಯೋಜನವಿಲ್ಲ, ಆಕಾಶ ನೋಡಿ ಉಗುಳಿದರೆ ಬೀಳುವದು ಮುಖಕ್ಕೆ ತಾನೇ?

ಜಗತ್ತಿಗೇ ಹಿರಿದಾದ ಈ ಚುನಾವಣೆ ಇದಾದರೂ–ಭಾರತದ ಇತಿಹಾಸದಲ್ಲೇ ಇದು ಮೊದಲನೆಯದಾಗಿರುವದಾದರೂ–ಈ ಬಗ್ಗೆ ಸರಕಾರ ಯೋಗ್ಯ ಸ-ವ್ಯವಸ್ಥಿತ ರೀತಿಯ ಕ್ರಮವನ್ನು ಕೈಗೊಂಡಿದೆ. ಮತ ಶ್ಲಾಘನೀಯ ವಿಚಾರ! ಮತವನ್ನು ಬಲಾತ್ಕಾರ ಇಲ್ಲದೆ ಮೇಲಾಟ ನಡೆಸಿ ಬೇರೆಯವರು ಕಸಿದುಕೊಳ್ಳಲು ಬರುವಂತಿಲ್ಲ. ಅಧಿಕಾರಿಗಳು ಅಂಥವರಿಗೇನೇ ಇಂಥವರಿಗೇನೇ ಕೊಡಿ ಎಂದು ನಿರ್ದೇಶಿಸುವಂತಿಲ್ಲ. ಸರಕಾರದ ಯಾವ ನೌಕರನೂ ಚುನಾವಣೆಯ ಪ್ರಚಾರ ಕಾರ್ಯವೇ ಮೊದಲಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಬರುವಂತಿಲ್ಲ. ಚುನಾವಣೆಗೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ಬಲವನ್ನು ಯಾವದಾದರೊಂದು ಪಕ್ಷಕ್ಕೆ ಉಪಯೋಗಿಸಿದರೂ, ವಂಚನೆ ಮಾಡಿದರೂ–ಶಿಸ್ತನ್ನು ಭಂಗಿಸಿದರೂ ದಂಡ ಮಾತ್ರವಲ್ಲದೆ ಕಠಿಣ ಶಿಕ್ಷೆಯೂ ಕಾದಿದೆ. ಆದುದರಿಂದ ಸರಕಾರೀ ಜನರ ಬೆದರಿಕೆ–ಹಂಗು–ಮತದಾರರಿಗಿರಲು ಸಾಧ್ಯವಿಲ್ಲ! ಮತಪೆಟ್ಟಿಗೆಯೂ ಗುಪ್ತವಾಗಿದ್ದು ಜನ ಯಾವ ಪಕ್ಷದ ಪೆಟ್ಟಿಗೆಗೆ ತನ್ನ ಮತವನ್ನು ಹಾಕುವನೆಂಬುದು ಯಾರಿಗೂ ತಿಳಿಯುವಂತಿಲ್ಲ. ಹೊರಗೆ ಭರವಸೆ ಕೊಡುವದೊಂದು ಒಳಗೆ ಮತನೀಡುವದೊಂದಾಗಬಹುದು. ತಾನು ಹಾಕುವ ಮತವು ಅವರವರಿಗೆ ಗೊತ್ತು ವಿನಹ ಬೇರೆ ಯಾರಿಗೂ ತಿಳಿಯುವಂತಿಲ್ಲವಾದ ಕಾರಣ ಯಾರೂ ನಿಷ್ಠುರ ತಾಳುವಂತಿಲ್ಲ!

ಪರಿಸ್ಥಿತಿ ಇಷ್ಟು ಅನುಕೂಲವಿರುವದಾದರೂ ಮತದಾರರು ತಮ್ಮ ಹೊಣೆಯನ್ನು ಇನ್ನೂ ಅರಿತಂತಿಲ್ಲ. 120ಕ್ಕೂ ಮಿಕ್ಕಿ ಪಕ್ಷಗಳು ಜನರ ತಲೆತಿನ್ನುತ್ತಿರುವದೇನೋ ನಿಜ; ಇದು ಇಡಿಯ ರಾಷ್ಟ್ರದ ಪ್ರಶ್ನೆಯಾದುದರಿಂದ ದಾಕ್ಷಿಣ್ಯ–ಹಂಗನ್ನು ತೊರೆಯುವದು ಅವಶ್ಯಕವಿರುತ್ತದೆ. ಹಲವು ಹುರಿಯಾಳುಗಳು ಅಸಮರ್ಥರೆಂದು ನಮಗೆ ವಿದಿತ ವಿಚಾರವಾಗಿದ್ದರೂ ಜಾತಿ–ಬಂಧುತ್ವ–ಸ್ನೇಹಾಚಾರ–ಶ್ರೀಮಂತಿಕೆ ಮೊದಲಾದುವುಗಳ ದೃಷ್ಟಿಯಿಂದ ಅವರಿಗೆ ಮತವನ್ನೀಯುವ ದುಸ್ಸಾಹಸವನ್ನು ಮಾಡುತ್ತಾರೆ. ದೇಶದ ಕಲ್ಯಾಣವನ್ನು ಬಯಸುವ ಯಾವ ಪ್ರಜೆಯೂ ಇಂತಹ ಆತ್ಮಘಾತುಕ ಕಾರ್ಯವನ್ನು ಮಾಡಬಾರದು. ಅಮೂಲ್ಯವಾದ ಮತವನ್ನು ಪಾತ್ರಾಪಾತ್ರಯೋಚನೆ ಮಾಡದೆ ದಾನ ಮಾಡುವದಾದರೆ ಅದಕ್ಕಿಂತಲೂ ದೊಡ್ಡ ದೇಶದ್ರೋಹ ಬೇರಿಲ್ಲವೆಂದೇ ಹೇಳಬೇಕು. ಅನುದಿನದ ಜೀವನದಲ್ಲಿ ಬೇಡೆಯುವರಿಗೆ ಸಹಾಯ ಮಾಡದ ಜನ ದೇಶಕ್ಕಾಗಿ ಇಷ್ಟರ ಮಟ್ಟಿನ ತ್ಯಾಗ ಮಾಡಲಾರರೇ? ಗುಪ್ತ ಮತದಾನ ಕ್ರಮದಿಂದ ದೇಶೋನ್ನತಿಯ ಶುಭಕಾಮನೆಯಿಟ್ಟುಕೊಂಡು ಕಾರ್ಯ ಮಾಡಲು ಸಾಧ್ಯವಿದೆ. ಆದರೆ ನಮ್ಮ ಮತದ ಬೆಲೆ–ಅದರಿಂದಾಗುವ ಪ್ರಯೋಜನಗಳ ಅರಿವು ಮತದಾರರಿಗಿರಬೇಕು. ಆ ಅರಿವಿಲ್ಲದವರು ದೇಶಕ್ಕೆ ಕೇಡು ಬಗೆಯುವದು ಸ್ವಾಭಾವಿಕ! ಪ್ರತಿಯೊಬ್ಬರೂ ದೇಶದ ಕಲ್ಯಾಣದ ವಿಶಾಲ ದೃಷ್ಟಿಯನ್ನಿಟ್ಟುಕೊಂಡರೆ ಮಾತ್ರ ಯೋಗ್ಯ ಸರಕಾರವನ್ನು ನಿರ್ಮಿಸಬಹುದು!

“ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು.”
—ಶ್ರೀ ಕೆ. ಎ. ಪಂಡಿತ್, B. SC., F. I. A.
(ಸಲಹೆಗಾರ ವಿಮಾಗಣಕರು)

“ಕೆನರಾ ಮ್ಯೂಚುವಲ್” ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

WANTED
Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:
LAWRANCE BROTHERS (N. W. U.)
Nagdevi BOMBAY 3.

ಜನರ ಪ್ರತಿನಿಧಿ ಸಭೆಗೆ ಪೂರ್ಣ ಅಧಿಕಾರವಿರಬೇಕೆಂತಲೂ ಅದು ಜನಮತವನ್ನು ಕಳಕಳಿಸಿ ಪ್ರತಿಬಿಂಬಿಸಬೇಕೆಂತಲೂ ಈ ಹಿಂದೆ ಹೇಳಿದೆವು. ಈಗ ಅಂಥಾ ಸಭೆಯ ಅಧಿಕಾರಕ್ಕೆ ಒಂದು ಮಿತಿಯಿರುವದು ಒಳ್ಳೇದು ಮತ್ತು ಅವುಗಳು ಹದಗೆಡದೆ ಅಂಕೆಯೊಳಗಿರುವಂತೆ ಮಾಡುವದು ಹೇಗೆಂತ ನೋಡಬೇಕಾಗಿಯದೆ. ಯಾವ ಸರಕಾರವಾದರೂ ತಪ್ಪು ಮಾಡದೆ ಇರುವುದಿಲ್ಲ. ಮಾನವರಲ್ಲಿ ಸಂಕುಚಿತ ಭಾವನೆಯು ಬೇರೂರಿರುವದು. ಯಾವಾಗಲೂ ಅಲ್ಪಪಕ್ಷದವರು ತಾವು ಬಹುಮತದ ಪಕ್ಷವಾಗಬೇಕೆಂದು ಸಾಧಿಸುವರು. ಬಹುಮತದ ಪಕ್ಷದವರು ತಾವು ಯಾವಾಗಲೂ ಮೇಲಾಗಿರಬೇಕೆಂದು ಪ್ರಯತ್ನಿಸುವರು. ಇದೊಂದು ಒಳಗಿನವರಿಗೂ ಹೊರಗಿನವರಿಗೂ ಇರುವ ಗುದ್ದಾಟವಾಗಿರುವುದು (Struggle of the Ins and outs). ಪ್ರತಿಯೊಂದು ಕಡೆಯುವರೂ ತಮ್ಮ ಬೇಳೆ ಬೇಯಿಸಲಿಕ್ಕಾಗಿಯೇ ಹೀಗೆ ಸಾಧಿಸುವದಾಗಿದೆ. ಅಲ್ಪಪಕ್ಷದವರು ಬಹುಮತದ ಪಕ್ಷವಾದೊಡನೆಯೇ ಹಿಂದೆ ಅಧಿಕಾರದಲ್ಲಿದ್ದವರ ಮಾಡಿದ ಕೆಲವು ಕಾರ್ಯಗಳನ್ನು ನಿಲ್ಲಿಸಲೂ ಬಹುದು, ರದ್ದುಮಾಡಲೂ ಬಹುದು ಕೆಲವನ್ನು ತಿದ್ದಿ ದುರಸ್ತಿ ಮಾಡಲೂ ಬಹುದು. ಇದರಲ್ಲಿ ತಪ್ಪು ಮಾಡಿದವರು ಹಿಂದಿನವರೇ ಆಗಲೀ, ಇವರೇ ಆಗಲೀ ಒಂದು ಕಡೆಯುವರು ತಪ್ಪು ಮಾಡಿರುವರೆಂಬುದು ಖಚಿತ. ಸುಮಾರು ಇನ್ನೂರು ಮುನ್ನೂರು ಸದಸ್ಯರಿರುವ ಸಭೆಯಲ್ಲಿ ಬರೇ ಒಂದೆರಡು ಅಥವಾ ನಾಲ್ಕೈದು ಹೆಚ್ಚಿಗೆ ಸದಸ್ಯರ ಮಟ್ಟಿನ ಬೆಂಬಲ ಮಾತ್ರವಿರುವ ಬಹುಪಕ್ಷವಿದ್ದಿರಬಹುದು. ಆಗಾಗ ಹೊಸತಾಗಿ ತಲೆ ಎತ್ತುವ ಪ್ರಶ್ನೆಗಳ ಕುರಿತು ಇವರಿಗೆ ಏನೂ ಅನುಭವವಿಲ್ಲದಿರಬಹುದು, ಮುಂದಾಳುಗಳ ಮಾತಿಗೆ ಕಿವಿಗೊಟ್ಟು ಮೋಸಹೋಗಿರಬಹುದು. ಪ್ರಕೃತ ಎದುರು ಬಂದ ವಿಚಾರದಲ್ಲಿ ರಾಗಭಾವ ಮತ್ತು ಅರ್ಥವಿಲ್ಲದ ಉತ್ಸುಕತೆಯಿಂದ ತಪ್ಪು ಅಭಿಪ್ರಾಯ ಮಾಡಿರಬಹುದು. ಇದು ಸಾರ್ವಜನಿಕರಿಂದುಂಟಾಗಲೂ ಬಹುದು. ಪ್ರತಿನಿಧಿಸಭೆಯವರಿಂದುಂಟಾಗಲೂ ಬಹುದು. ಇದನ್ನು ಜನರು ಅನುಮೋದಿಸಿದ ಮರುದಿನವೇ ತಾವು ವಿವೇಚನಾ ಶಕ್ತಿ ಕಡಿಮೆಯಾಗಿ ಹೀಗೆ ಮಾಡಿದೆವೆಂದು ಪಶ್ಚಾತ್ತಾಪ ಸೂಚಿಸುವದಾದರೂ ತಮ್ಮನ್ನು ತಾವು ದೂರಿಕೊಳ್ಳುವದಾದರೂ ಅಪ್ಪಿರಿಯಲ್ಲಿ ಒಳ್ಳೆದಾಗಲೀ ಕೆಟ್ಟದ್ದಾಗಲೀ ಬಹುಮತಕ್ಕೆ ತಲೆಬಾಗಲೇ ಬೇಕು. ಇದು ಬಲಾತ್ಕಾರ ಮತ್ತು ಒತ್ತಾಯ ಹೊಂದಿರುವಲ್ಲಿ ನ್ಯಾಯಸಮ್ಮತವಾದ ಕಾಯಿದೆಶೀರ ಮಾರ್ಗದಿಂದ ಜನರ ಒಲುಮೆ ಮತ್ತು ಒಪ್ಪಿಗೆಯಿಂದುಂಟಾಗುವದಾದ್ದರಿಂದ ಇದಕ್ಕೆ ಮನ್ನಣೆಕೊಡಬೇಕಾಗುತ್ತದೆ. ಹಾಗೆ ನಾವು ಭಕ್ತಿ ತೋರಿಸುವದಾದರೂ ಜನರನ್ನು ಅವರ ಅಜ್ಞಾನ ಮತ್ತು ತಪ್ಪಿನಿಂದ ಮಾಡಿದ ಕಾರ್ಯಗಳ ದುಷ್ಪರಿಣಾಮದಿಂದ ರಕ್ಷಿಸುವರೆ ಯಾವ ಜಾಗರೂಕತೆ ವಹಿಸಬೇಕೆಂಬುದೇ ಒಂದು ಸಮಸ್ಯೆಯಾಗಿದೆ. ಜನರು ಮಾಡಿದ ಕೆಲವು ವಿಚಾರಗಳ ಕುರಿತು ತುಸು ಪರ್ಯಾಲೋಚಿಸಿದ್ದರೆ ಸ್ವಲ್ಪ ಪುನರ್ವಿಚಾರ ನಡೆಸಿದ್ದರೆ ಹಲವು

ಪ್ರಜಾಸತ್ತೆ

ತಡೆ ಮತ್ತು ನಿಲವು

[ಕಳೆದ ಸಂಚಿಕೆಯಿಂದ ಮುಂದರಿದುದು]

ದುರ್ಘಟನೆಗಳನ್ನು ತಪ್ಪಿಸಬಹುದಿತ್ತೆಂದು ನಾವು ಇತಿಹಾಸದಲ್ಲಿ ಓದಿ ತಿಳಿದಿರುವೆವು. ಇದಕ್ಕಾಗಿ ಪ್ರಜಾಮತ ಸರಕಾರ ವಿರುವಲ್ಲೆಲ್ಲಾ ಹಲವು ಉಪಯುಕ್ತ ಮಾರ್ಗಗಳನ್ನು ಕಂಡುಹಿಡಿದಿರುವರು.

ಪ್ರಜಾಮತ ಸರಕಾರವಿರುವ ರಾಷ್ಟ್ರಗಳಲ್ಲಿ ಸಾರ್ವಜನಿಕರ ಸಭೆಯು ಚಟುವಟಿಕೆಗಳಿಗಾಗಲೀ ಪ್ರತಿನಿಧಿ ಸಭೆಗಳ ಕಾರ್ಯಕಲಾಪಗಳಿಗಾಗಲೀ ಅವುಗಳ ತೀವ್ರತೆಯನ್ನು ತಡೆಗಟ್ಟುವರೆ ಮತ್ತು ಅಡ್ಡಬರುವರೆ ಕೆಲವು ಉಪಾಯವನ್ನು ಶಾಸನ ರೂಪದಲ್ಲಿ ತಂದಿರುವರು. ರಾಷ್ಟ್ರವು ಮುಂಜಾಗಬೇಕಾದರೆ ಕೆಲವು ಕ್ರಮನಿಯಮಗಳನ್ನನುಸರಿಸಬೇಕು. ಮುಖ್ಯ ವಿಚಾರಗಳು ಇಂಥಾ ರೀತಿಯಲ್ಲೇ ತೀರ್ಮಾನವಾಗಬೇಕು. ಯಾವ ತರದ ಬಹುಮತ ಬೇಕು, ಯಾರ ಸಹಿ ಮತ್ತು ಮಂಜೂರಾತಿ ಬೇಕು ಎಂದು ನಿರ್ದೇಶಿಸಿರುವರು, ಕೆಲವು ರಾಷ್ಟ್ರಗಳಲ್ಲಿ ಪ್ರತಿನಿಧಿ ಸಭೆಯ ಶ್ರೇಣಿಯಿಂದ ಕೆಲವು ಮುಖ್ಯ ವಿಚಾರಗಳನ್ನು ಅವರ ಅಧಿಕಾರಕ್ಕೆ ವಿನಾ ರಿದ್ದೆಂದು ಹೊರಪಡಿಸಿರುವರು. ಕೆಲವು ಕಡೆ ಜನರ ಅಧಿಕಾರವನ್ನು ಪಾಲು ಮಾಡಿ ಬೇರೆ ಬೇರೆ ಶಾಖೆಗೆ ಹಂಚಿಕೊಟ್ಟು ಒಂದಕ್ಕೊಂದು ಅಡ್ಡ ಬರುವಂತೆ ಮಾಡಿರುವರು. ಶಾಸನ ಸಭೆಯವರಿಗೆ ಕಾರ್ಯನಿರ್ವಾಹಕರ ಮೇಲೆ ಅಧಿಕಾರವಿಲ್ಲವೆಂದು ಮಾಡುವದೊಂದು ಕ್ರಮ. ಶಾಸನ ಸಭೆಯಲ್ಲಾದ ತೀರ್ಮಾನವು ಇನ್ನೊಂದು ಸಭೆಯವರ ಮೇಲ್ವಿಚಾರಣೆಗೆ ಒಳಪಡುವದು ಅಥವಾ ಕಾರ್ಯನಿರ್ವಾಹಕ ಮಂಡಳಿಯ ಮುಖ್ಯಸ್ಥನ ಸಹಿಯನ್ನು ಪಡೆಯಬೇಕೆಂದಿರುವದು. ಇನ್ನೊಂದು ಕ್ರಮ ಇವುಗಳಲ್ಲಿ ಮೊದಲನೆ ಕ್ರಮಕ್ಕೆ ತಡೆಗಟ್ಟುವದು (checks) ಎನ್ನುವರು. ಎರಡನೇ ಕ್ರಮಕ್ಕೆ ಸಮತೂಕ (balance) ಎನ್ನುವರು. ಪ್ರಾಚೀನಕಾಲದ ಗ್ರೀಕರ ಮತ್ತು ರೋಮಿನವರ ಪ್ರಜಾಪ್ರಭುತ್ವಗಳಲ್ಲಿ ಈ ಎರಡೂ ಕ್ರಮಗಳೂ ಜಾರಿಯಲ್ಲಿದ್ದವು. ಗ್ರೀಕರು ತಡೆಯನ್ನೇ ಉಪಯೋಗಿಸಿದ್ದರು ರೋಮಿನವರು ಸಮತೋಲವನ್ನು ಉಪಯೋಗಿಸಿದ್ದರು. ಸಾರ್ವಜನಿಕ ಅಧಿಕಾರಕ್ಕೆ ಮಿತಿಯಿಡಲು ಗ್ರೀಕರು ತಯಾರಿಲ್ಲದ ಕಾರಣ ಕೆಲವು ವಿಷಯಗಳನ್ನು ಪ್ರತ್ಯೇಕಿಸಿ ಅವುಗಳನ್ನು ಕುರಿತಂದಕೆ ಬದಲಾಯಿಸಬಾರದೆಂದೂ ಒಂದು ವೇಳೆ ಬದಲಾಯಿಸುವ ಪ್ರಸಂಗ ಬಂದರೆ ತಾವು ನಿರ್ದೇಶಿಸಿದ ವಿಶೇಷ ಕ್ರಮದಿಂದಲೇ ಆಗಬೇಕೆಂದಿರುವರು. ಇದು ನಮ್ಮ ಆಧುನಿಕ ಕಾಲದ ಕಠಿಣವಾದ (Rigid) ರಾಜ್ಯ ಶಾಸನವನ್ನು ಹೋಲುವುದು. ರಾಜಶಾಸನವನ್ನು ಬದಲಾಯಿಸದಂತೆ ಎರಡು ಪ್ರತಿಬಂಧಕಗಳನ್ನು ತಂದೊಡ್ಡಿರುವರು. ಘಟನೆಯನ್ನು ರದ್ದುಗೊಳಿಸುವ ಪ್ರಶ್ನೆ ಎತ್ತಿದವರಿಗೆ ಕಠಿಣ ಶಿಕ್ಷೆ ವಿಧಿಸಿದ್ದರು ಅದನ್ನು ಬದಲಾಯಿಸಲು ಜನರನ್ನು ಪ್ರೋತ್ಸಾಹಿಸಿದವನನ್ನು ರಾಜದ್ರೋಹದ ಅಪಾದನೆಗೆ ಗುರಿಪಡಿಸುವರು. ಅಥೀನಿಯಾ ಜನರನ್ನು ಉದ್ರೇಕಗೊಳಿಸುವ ಚಳುವಳಿಗಾರರ ಕುತಂತ್ರಕ್ಕೆ ಇದು ವಿಘ್ನಕಾರಿಯಾಗಿ ಪ್ರಯೋಜನವಾಗಿದೆ. ರೋಮಿನವರು ಸಹಾ ಜನರ ಅಧಿಕಾರಕ್ಕೆ ಮಿತಿಯಿಡಲು ಶಕ್ತಿಇಲ್ಲದೆ ಅಧಿಕಾರವನ್ನೆ ಪಾಲುಮಾಡಿ ಬೇರೆ ಬೇರೆ ಶಾಖೆಗೆ ಹಂಚಿ ಒಂದಕ್ಕೊಂದು ಅಡ್ಡಬರುವಂತೆ ಸರಕಾರ ನಿರ್ಮಿಸಿದ್ದರು. ಅಲ್ಲಿ ಸಿನೇಟರರ ತೀವ್ರತೆಗೆ ಇಬ್ಬರು ಕಾನ್ಸಲರು ಅಡ್ಡಬರುವರು. ಅವರಿಬ್ಬರೊಳಗೆ ಒಬ್ಬರಿಗೊಬ್ಬರು ಎದುರಾಗಬಹುದು. ಟ್ರಿಬ್ಯೂನರು ಮೇಜಿಸ್ಟ್ರೇಟರ ಅಧಿಕಾರಕ್ಕೆ ಅಡ್ಡಬಂದು ನಿಷೇಧಾಜ್ಞೆ (Veto) ಹೊರಡಿಸಬಹುದು. ಸಿನೇಟರರ ಕಾರ್ಯಕ್ಕೆ ಟ್ರಿಬ್ಯೂನರು ಮಾತ್ರವಲ್ಲ; ಇಬ್ಬರು ಕಾನ್ಸಲರ ಪೈಕಿ ಯಾವನಾದರೊಬ್ಬನು ಸಭೆಯವರ ನಿರ್ಣಯದ ಕುರಿತು ಹಕ್ಕಿಗಳ ಶುಭಾಶುಭ ಶಕುನ ಸೂಚನೆಯ ಬಗ್ಗೆ ಆಕಾರವನ್ನು ಪರೀಕ್ಷಿಸುತ್ತಿದ್ದೇನೆಂದರೆ ಶಾಸನ ಸಭೆಯ ಕೆಲಸವು ನಿಂತು ಹೋಯಿತು.

ಅಮೇರಿಕದ ಸಂಯುಕ್ತ ರಾಷ್ಟ್ರವು ಇದೇ ಮಾದರಿಯಲ್ಲಿ ಅಧಿಕಾರವನ್ನು ಪಾಲುಮಾಡಿ ಸರಕಾರದ ಶಾಖೆಗಳಿಗೆ ಹಂಚಿಕೊಡುವುದರಲ್ಲಿ ರೋಮಿನವರನ್ನು ಮೀರಿ ನಡೆದದೆ ಎಂದು ಜೇಮ್ಸ್ ಬ್ರೈಸ್ ಎಂಬವರು ಹೇಳಿರುವರು. ಅಮೇರಿಕದ ಸರಕಾರದವರು ಸರಕಾರದ ಕಾರ್ಯಭಾರವನ್ನು ಮೂರು ವಿಭಾಗಮಾಡಿರುವರು: ಶಾಸನ ಭಾಗ, ಕಾರ್ಯನಿರ್ವಾಹಕ ಭಾಗ, ಮತ್ತು ನ್ಯಾಯಭಾಗ (Legislative, Executive and Judicial departments) ಶಾಸನ ಸಭೆಯ ಎರಡು ಭಾಗಗಳು ಸಿನೇಟು (Senate) ಮತ್ತು ಪ್ರತಿನಿಧಿ ಸಭೆ (House of Representations) ಒಂದಕ್ಕೊಂದು ಅಡ್ಡ ಹಾಯುವವು. ಶಾಸನ ಸಭೆಯ ಅಧಿಕಾರ ಅಧ್ಯಕ್ಷನ ನಿಷೇಧಾಜ್ಞೆಗೆ (veto power) ಒಳಪಟ್ಟಿರುವದು. ಅಧ್ಯಕ್ಷನು ನೇಮಿಸುವ ಉಚ್ಚ ಅಧಿಕಾರಿಗಳನ್ನು ಮತ್ತು ಪರರಾಷ್ಟ್ರದೊಡನೆ ಆತನು ಮಾಡಿದ ಒಪ್ಪಂದ ಒಡಂಬಡಿಕೆಯನ್ನು ಸಿನೇಟು ಮಂಜೂರು ಮಾಡದೆ ನಿರಾಕರಿಸಬಹುದು. ನ್ಯಾಯಾಧೀಶರು ಕಾಯಿದೆಗಳ ಅರ್ಥ ಹೇಳುವವರಾದ್ದರಿಂದ ಇತರ ಎರಡು ಶಾಖೆಯವರ ಕಾರ್ಯಗಳ ಮೇಲೆ ಟೀಕಿಸುವ ಅಧಿಕಾರವಿದೆ ಮತ್ತು ಹೊಸತಾಗಿ ತಂದ ರಾಜ್ಯ ಮಸೂದೆಗಳು ರಾಜ್ಯಘಟನೆಗೆ ವಿರೋಧವಾಗಿದ್ದು ಕಾಯಿದೆಬಾಹಿರವೆಂದು ಸಾರಬಹುದು. ಫ್ರಾನ್ಸು ಮತ್ತು ಇಂಗ್ಲೆಂಡಿನಲ್ಲಿ ತಡೆಗಟ್ಟುವ ರೀತಿಯೇ ರೂಢಿಯಲ್ಲಿದೆ. ಪ್ರತಿನಿಧಿ ಸಭೆಯಲ್ಲಿ ತೀರ್ಮಾನವಾದ ಪ್ರತಿಯೊಂದು ವಿಷಯವೂ ಇನ್ನೊಂದು ಸಭೆಯಲ್ಲಿ ಪುನಹ ಪರಿಶೀಲಿಸಲ್ಪಡುವುದು. ಅವಸರದಿಂದಾಗುವ ಕಾರ್ಯ ಮತ್ತು ಪ್ರತಿನಿಧಿಗಳ ತೀವ್ರತೆಯ ಕುರಿತು ಜಾಗರೂಕತೆ ವಹಿಸುವ ಕ್ರಮವನ್ನೇ ಪ್ರಕೃತ ಹೇಳುವದಾದ್ದರಿಂದ ಎರಡನೇ ಸಭೆಯ ಕುರಿತು ಪೂರ್ಣ ವಿವರವನ್ನು ಮುಂದೆ ಹೇಳಲಾಗುವದು.

—ಸಿ. ಯಚ್. ಶೆಟ್ಟಿ, ಬಿ. ಎ.

[ಮುಂದರಿಯುವದು]

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಸ್ಥಿರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)

ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಅಕ್ಕಿಯ ಹೊರತು ಇತರ ಧಾನ್ಯಗಳನ್ನು ಸೇವಿಸಿರಿ

ಮದ್ರಾಸ ಪ್ರಾಂತಕ್ಕೆ ಆಹಾರಧಾನ್ಯದ ಭೀತಿ ಅದರಲ್ಲೂ ಅಕ್ಕಿಯ ಕೊರತೆಯು ವಿಶೇಷವಿರುವದರಿಂದ ಪರಿಸ್ಥಿತಿಯನ್ನೆದುರಿಸುವದಕ್ಕೆ ಕೇಂದ್ರ ಸರಕಾರವು ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಮದ್ರಾಸದ ಮುಖ್ಯಮಂತ್ರಿ ಕುಮಾರಸ್ವಾಮಿ ರಾಜಾರವರು ಪ್ರಧಾನ ಮಂತ್ರಿ ನೆಹ್ರೂರವರಿಗೆ ಬರೆದಿದ್ದರು. ಅದಕ್ಕುತ್ತರರೂಪವಾಗಿ ಶ್ರೀ ನೆಹ್ರೂರವರು "ಮದ್ರಾಸದಲ್ಲಿಯ ಅಕ್ಕಿಯ ಕೊರತೆಯಿಂದ ಜನ ಸಂಕಷ್ಟ ಅನುಭವಿಸುವದನ್ನು ನಾನು ಲಕ್ಷ್ಯಪೂರ್ವಕವಾಗಿ ಕಂಡುಕೊಂಡಿದ್ದೇನೆ. ಆದರೆ ಅಕ್ಕಿಯನ್ನು ಹೆಚ್ಚಾಗಿ ಕಳಿಸುವದು ಬಹಳ ಕಷ್ಟದ ಸಂಗತಿಯಾಗಿದೆ. ಒಪ್ಪಂದಕ್ಕಿಂತಲೂ ಹೆಚ್ಚಾಗಿ ಅಕ್ಕಿಯನ್ನು ಕೊಡಬೇಕೆಂದು ಬರ್ಮಾದ ಮಂತ್ರಿಗಳೊಡನೆ ಮಾತುಕತೆ ನಡೆಸಿರುವೆನಾದರೂ ಅಲ್ಲಿಯೂ ನಿರೀಕ್ಷಿಸಿದಷ್ಟು ಸುಗ್ಗಿ ಇರದ ಕಾರಣದಿಂದ ಕೊಡಮಾಡಿದ್ದರಲ್ಲಿ ಕಡಿತವನ್ನು ಮಾಡುವದಕ್ಕೆ ಒಪ್ಪಿಗೆ ಕೊಡಬೇಕೆಂದು ಅವರು ಕೇಳಿದರು. ಆದುದರಿಂದ ಪರಿಸ್ಥಿತಿಯನ್ನು ಎದುರಿಸುವದಕ್ಕೆ ನಿಮ್ಮ ಪ್ರಾಂತದ ಜನ ಅಕ್ಕಿಯ ಹೊರತು ಇತರ ಧಾನ್ಯವನ್ನೂ ಸೇವಿಸುವದು ಮುಖ್ಯವಾಗಿದೆ. ಕೇಂದ್ರ ಸರಕಾರವು ಶಕ್ಯವಿದ್ದಷ್ಟು ಸಹಾಯ ಮಾಡುವದು" ಎಂದು ಹೇಳಿರುವರು.

ವರ್ಷವರ್ಷಕ್ಕೆ ಆಹಾರ ಸಮಸ್ಯೆ ಬಿಗಿಯಾಗುತ್ತಿರುವದನ್ನು ಲಕ್ಷಿಸಿದರೆ ಉತ್ಪಾದನಾಕಾರ್ಯ ಮಂತ್ರಿಗಳ ಆಶ್ವಾಸನೆಗೊಪ್ಪಿದಷ್ಟು ನಡೆಯುತ್ತಿಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಒಳ್ಳೆಯ ಹಿತಸುಧಾರಣೆಯು ಶೀಘ್ರ ಆದಷ್ಟು-ಸಾಗುವಳಿದಾರನಿಗೆ ಸರಿಯಾದ ಉತ್ಪನ್ನ ಪ್ರತಿಫಲ ಶೀಘ್ರದೊರೆತಷ್ಟು-ಆಹಾರದ ಕೊರತೆ ಸುಲಭವಾಗಿ ನೀಗಬಹುದಾಗಿದೆ. ಅಕ್ಕಿಯ ಧಾರಣೆಯನ್ನು ಕೊಂಚ ಏರಿಸಿ ಉತ್ಪಾದನಾಕಾರ್ಯಕ್ಕೆ ತಕ್ಕ ಪ್ರೋತ್ಸಾಹವನ್ನು ನೀಡಬೇಕೆಂದು ಮದ್ರಾಸು ಸರಕಾರ ಕೇಂದ್ರವನ್ನು ಕೇಳಿಕೊಂಡದ್ದು ಗಮನಾರ್ಹವಾದ ಸಂಗತಿ. ಅಂತೂ ದೇಶದ ಆಹಾರ ಪರಿಸ್ಥಿತಿ ಇನ್ನಷ್ಟು ಕೆಡುವ ಲಕ್ಷಣಗಳೇ ಕಂಡು ಬರುತ್ತಲಿವೆಯೇ ವಿನಹ—ಸುಧಾರಿಸುವ ಲಕ್ಷಣ ಸದ್ಯ ಕಾಣುವದಿಲ್ಲ. ಅಮೇರಿಕೆಯ ಗೋದಿಯನ್ನು ತೊತ್ತು ತರುತ್ತಿದ್ದ ಪ್ರಥಮ ಹಡಗು ಅಪಘಾತಕ್ಕೆ ಗುರಿಯಾಗಿ ಹಲವು ಟನ್ ಆಹಾರಧಾನ್ಯ ಕಳೆದುಕೊಂಡದ್ದಾಯಿತು. ಏಳು ಸಾವಿರ ಟನ್ ಗೋದಿಯನ್ನು ತರುತ್ತಿದ್ದ ಇನ್ನೊಂದು ಹಡಗಿಗೆ ಬೆಂಕಿ ತಗಲಿ ಅಷ್ಟು ಗೋದಿಯೂ ಸುಟ್ಟು ಭಸ್ಮವಾಯಿತೆಂದು ತಿಳಿದು ಬರುತ್ತದೆ.

ಮೈಸೂರಿಗರ ಆತ್ಮಾಭಿಮಾನ

ಮೈಸೂರ ಮುಖ್ಯ ನ್ಯಾಯಾಧೀಶರಾದ ಮೇದಪ್ಪನವರ ವಿಶ್ವಪ್ರಯೋಗದ ಪ್ರಕರಣದಲ್ಲಿ ವಿಚಾರಣೆಗೆ ಗುರಿಯಾದ ಶ್ರೀ ಎಲ್. ಎಸ್. ರಾಜು ಪತ್ರಿಕರ ನಾಲ್ವರ ಮೇಲೆ ನಡೆದ ದಾವೆಯನ್ನು ಮದ್ರಾಸು ಅಥವಾ ಮುಂಬಯಿ ಮುಖ್ಯ ನ್ಯಾಯಾಲಯಗಳಿಗೆ ವರ್ಗಾಯಿಸಬೇಕೆಂದು ರಾಷ್ಟ್ರಾಧ್ಯಕ್ಷರು ಆದೇಶವನ್ನು ಕೊಟ್ಟಿದ್ದರು. ಈ ಆದೇಶದ ಕುರಿತು ಮೈಸೂರ ಶಾಸನ ಸಭೆಯು ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿ ನಿರಾಕರಿಸುವ ಗೊತ್ತುವಳಿಯನ್ನು ಸ್ವೀಕರಿಸಿತು. ಇಂತಹ ಸಂದರ್ಭದಲ್ಲಿ ಮುಖ್ಯ ಮಂತ್ರಿ ಕೆ. ಸಿ. ರೆಡ್ಡಿ ಹಾಗೂ ಕಾಯಿದೆ ಮಂತ್ರಿ ಭಾಷ್ಯಮರೂ ಕೂಡಾ ಗೊತ್ತುವಳಿಯ ಪರವಾಗಿ ಮಾತನ್ನಾಡಿ ಆದೇಶವನ್ನು ಖಂಡಿಸಿದ್ದು ಆಶ್ಚರ್ಯದ ಸಂಗತಿ! ಮುಖ್ಯ ನ್ಯಾಯಾಧೀಶರೇ ಮುಖ್ಯ ಸಾಕ್ಷಿಗಾರರಾಗುವದರಿಂದ ಈ ದಾವೆಯನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಆರೋಪಿಗಳು ಕೇಳಿಕೊಂಡಿದ್ದರು. ಈ ಕುರಿತು ಕೆ. ಸಿ ರೆಡ್ಡಿಯವರೊಡನೆ ಮುಂದಾಗಿ ಸಮಾಲೋಚನೆ ನಡೆಸಿದ್ದರ ಫಲವಾಗಿ ಅವರು ಅದನ್ನು ನಿರಾಕರಿಸಿದರು. ನಂತರ ರಾಷ್ಟ್ರಾಧ್ಯಕ್ಷರು ರಾಜ್ಯಘಟನೆಯ 371 ನೇ ಕಲಮಿನನ್ವಯ ಮುಂಬಯಿ ಅಥವಾ ಮದ್ರಾಸಿನ ನ್ಯಾಯಾಲಯಗಳಿಗೆ ವರ್ಗಾಯಿಸಬೇಕೆಂದು ಆಜ್ಞಾಪಿಸಿದ್ದಾಗಿರುತ್ತದೆ. ಇದನ್ನು ಮನ್ನಿಸುವದರಿಂದ ಮೈಸೂರ ನ್ಯಾಯಾಲಯಗಳಿಗೂ, ಸರಕಾರಕ್ಕೂ ಜನತೆಗೂ ಕುಂದೆಂದು ಮಂತ್ರಿಗಳೂ ಶಾಸನಸಭಾ ಸದಸ್ಯರು ಭಾವಿಸಿ ರಾಷ್ಟ್ರಾಧ್ಯಕ್ಷರ ಆದೇಶವನ್ನು ಖಂಡಿಸುವ ಸಾಹಸವಮಾಡಿದ್ದು ದೊಡ್ಡ ಪ್ರಮಾದವೇ ಸರಿ. ಈ ವಿಚಾರದಲ್ಲಿ ಕಾಯಿದೆತಜ್ಞರಾದ ಅಲ್ಲಾಡಿ ಕೃಷ್ಣಸ್ವಾಮಿ, ಡಿ. ವಿ. ಗುಂಡಪ್ಪನವರೇ ಮೊದಲಾದವರು ರಾಷ್ಟ್ರಾಧ್ಯಕ್ಷರ ಆದೇಶವು ನ್ಯಾಯಪಕ್ಷಪಾತಿಯಾಗಿದೆಂದೂ, ಇದನ್ನು ಮನ್ನಿಸುವದರಿಂದ ಆತ್ಮಗೌರವಕ್ಕೆ ಕುಂದಿಲ್ಲವೆಂದೂ ಹೇಳಿರುವರು. ಮುಖ್ಯಮಂತ್ರಿ ಕೆ. ಸಿ. ರೆಡ್ಡಿಯವರು ದಿಲ್ಲಿಗೆ ತೆರಳಿ ಶ್ರೀ ನೆಹ್ರೂ ಹಾಗೂ ಗೋಪಾಲಸ್ವಾಮಿ ಅಯ್ಯಂಗಾರರೊಡನೆ ಅಧ್ಯಕ್ಷರ ಆದೇಶದ ಕುರಿತು ದೀರ್ಘ ಚರ್ಚೆ ನಡೆಸಿದ್ದರ ಫಲವಾಗಿ ಬೇರೊಂದು ಕಡೆಯ ನ್ಯಾಯಾಧೀಶರನ್ನು ಬರಮಾಡಿ ಕೊಳ್ಳಬಹುದೆಂದು ನೆಹ್ರು ಹೇಳಿದರಾಗಿ ವರದಿಯಾಗಿರುತ್ತದೆ.

ನ್ಯಾಯಾಧಿಪತಿ ಕನಿಯಾರ ನಿಧನ

ಭಾರತದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧಿಪತಿಗಳಾದ ಹರಿಲಾಲ್ ಜೆ. ಕನಿಯಾರವರು ಹೃದ್ರೋಗದಿಂದ ನಿಧನಹೊಂದಿದರು. ಶ್ರೀ ಕನಿಯಾರವರು ಬಾಂಬೆ ಹಾಯ್‌ಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರಾಗಿ ಕೆಲಸ ಮಾಡಿದರು. 1950ರಲ್ಲಿ ವರಿಷ್ಠ ನ್ಯಾಯಾಲಯದ ಮುಖ್ಯ ಹಾಗೂ ಪ್ರಥಮ ನ್ಯಾಯಾಧಿಪತಿಗಳಾಗಿ ಆರಿಸಿಬಂದರು. ಇತ್ತೀಚೆಗೆ ಆಸ್ಟ್ರೇಲಿಯಾ ಮೊದಲಾದ ವಿದೇಶಗಳ ಪ್ರವಾಸ ಕೈಗೊಂಡಿದ್ದರು.

ಭಾರತದ ಮುಖ್ಯ ಕೋರ್ಟುಗಳೂ ನ್ಯಾಯಾಲಯಗಳೂ ನಿಧನದ ದುಃಖಸೂಚನೆಗಾಗಿ ಮುಚ್ಚಿದ್ದವು. ದೇಶದ ಧುರೀಣರು ಕನಿಯಾರವರ ನಿಧನದ ಬಗ್ಗೆ ದುಃಖ ಪ್ರದರ್ಶನವನ್ನು ಮಾಡಿದ್ದು, ಅತ್ಯಂತ ನ್ಯಾಯಪಕ್ಷಪಾತಿಯೊಬ್ಬನನ್ನು ಕಳೆದುಕೊಂಡಂತಾಯಿತೆಂದರು. ಶ್ರೀ ಕನಿಯಾರವರು ಕೊಕದ್ದಮೆಗಳನ್ನು ಸಾವಧಾನವಾಗಿ ಕೇಳಿಕೊಂಡು ವಿಚಾರವಿಮರ್ಶೆಮಾಡಿ ಅಸಾಧಾರಣ ನ್ಯಾಯದಾನ ಮಾಡುತ್ತಿದ್ದರು. ಆಳವಾದ ಅನುಭವ-ಜ್ಞಾನ ಅನುಭವಗಳಿಂದ ಅವರು ಕೊಡುತ್ತಿರುವ ತೀರ್ಮಾನ ಅತ್ಯಂತ ಸಮಂಜಸವಾಗಿತ್ತು! ದೇಶದ ಆಡಳಿತದಲ್ಲಿ ಎಷ್ಟೇ ಲೋಪದೋಷಗಳಿದ್ದರೂ ನಮ್ಮ ನ್ಯಾಯಾಲಯಗಳು ಯೋಗ್ಯ ಹಾಗೂ ನಿಷ್ಪಕ್ಷಪಾತವಾಗಿ ವರ್ತಿಸಿ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿವೆ. ಅದರಲ್ಲೂ ವರಿಷ್ಠ ನ್ಯಾಯಾಲಯದಲ್ಲಿ ಕನಿಯಾ ಶ್ರೀ ಪತಂಜಲಿ ಶಾಸ್ತ್ರಿ ಮುಂತಾದ ಹಿರಿಯರಾಯಿದೆ ತಜ್ಞರಿದ್ದುಕೊಂಡು ದೇಶದ ಹಲವು ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ಕನಿಯಾರವರು ತಮ್ಮ ಯೋಗ್ಯನ್ಯಾಯದಾನದ ಮೂಲಕ ಶ್ರೇಷ್ಠ ನ್ಯಾಯಾಧಿಪತಿಗಳೆಂದುಗೌರವವನ್ನು ಪಡೆದಿದ್ದರು. ಇಂತಹ ಮಹನೀಯರು ನಮ್ಮಲ್ಲಿರುವದು ಎಲ್ಲೋ ವಿರಳವೆಯಲ್ಲವೇ ಶ್ರೀ ಅಂತಲೇ ಇದನ್ನು ತುಂಬಿಬಾರದ ನಷ್ಟವೆನ್ನುತ್ತೇವೆ. ಸದ್ಯ ಕನಿಯಾರವರ ಸ್ಥಾನಕ್ಕೆ ಶ್ರೀ ಪತಂಜಲಿ ಶಾಸ್ತ್ರಿಗಳನ್ನು ಆರಿಸಲಾಗಿದೆಂದು ತಿಳಿಯುತ್ತದೆ.

ಪ್ರಕಟಣೆ

ಕಾರ್ಕಳ ತಾಲೂಕು ಅಂಡಾರು ಗ್ರಾಮದ ಕೆಂಜಿಗೆ ಮನೆಯಲ್ಲಿರುವ ದುಗ್ಗಾಬಲ ಸೇರ್ವೆಗಾರರ ಮಗ ನಾಗಪ್ಪ ಸೇರ್ವೆಗಾರನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ— ಉಡುಪಿ ತಾಲೂಕು ಬೈರಂಪಳ್ಳಿ ಗ್ರಾಮದ ಸಾಂತ್ಯಾರು ಚಿನ್ನಯ್ಯ ಸೇರೆಗಾರರ ಮಗ ಗೋವಿಂದಪ್ರಭುರು ನನಗೆ 1949ನೇ ಇಸವಿ ದಸಂಬರ ತಾರೀಖು 21 ರಲ್ಲು ರೂ. 300-0-0ಕ್ಕೆ ಬರಕೊಟ್ಟ ಡಿಮಾಂಡ್ ಪ್ರಾಮಿಸರಿ ನೋಟು ಗೈರುವಿಲೆಯಾಗಿರುತ್ತದೆ. ಸದ್ರಿ ಡಿ. ನೋಟು ಯಾರಿಗಾದರೂ ಸಿಕ್ಕಿದ ಸಂದರ್ಭದಲ್ಲಿ ದಯಮಾಡಿ ಅದನ್ನು ನನಗೆ ತಂದು ಒಪ್ಪಿಸಬೇಕೆಂತಲೂ ಅಲ್ಲದೆ ನನಗೆ ಮೋಸಮಾಡುವ ಇರಾದೆಯಿಂದ ಈ ನೋಟನ್ನು ಸದ್ರಿ ಗೋವಿಂದಪ್ರಭುಗೆ ತಂದು ಕೊಟ್ಟಲ್ಲಿ, ಅದು ಬಾಬತಿ ಬಗ್ಗೆ ನನ್ನ ಎದುರ್ಕೆ ಹೆಚ್ಚಿನ ಗುರುತು ದಸ್ತಕತ್ತು ನಿಶಿಸರಾ ವಿನಹ ಮಾಂಜೂರಾಗತಕ್ಕದ್ದಲ್ಲವೆಂತಲೂ ಈ ಮೂಲಕ ಸರ್ವಜನರಿಗೆ ತಿಳಿಸೋಣಾಗಿಯದೆ. ತಾ॥ 16-5-50 ರಲ್ಲು ಸದ್ರಿ ಗೋವಿಂದಪ್ರಭುರಿಗೆ ಸದ್ರಿ ಡಿ. ನೋಟಿನ ಹಣದ ಬಗ್ಗೆ ಅಲ್ಪಾದಾರಿ ನೋಟೀಸು ಸಹಾ ಕೊಟ್ಟಿರುತ್ತದೆ.

ಅಂಡಾರು ನಾಗಪ್ಪ ಸೇರ್ವೆಗಾರ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 41/51

1 ಜೆರೋಮ್ ಸಾವೇರ ಗೊನ್ಸಾಲ್ವಿಸ್
2 ಎಡ್ವಿ ಗೊನ್ಸಾಲ್ವಿಸ್—ಮ್ಯಾನೇಜರ್—ಗಾರ್ಡಿಯನ್ 3ನೇ ಅರ್ಜಿದಾರ.
3 ಜೋನ್ ಗೊನ್ಸಾಲ್ವಿಸ್

—ಅರ್ಜಿದಾರರು

ಮ್ಯಾನರ್ 1, 2ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ಗಂಡನೂ ಆದ ಮೃತ ಸಿಲ್ವೆಸ್ಟರ್ ಗೊನ್ಸಾಲ್ವಿಸರಿಗೆ The New Guardian of India Life Insurance Co., Ltd., Madras. ಈ ಕಂಪೆನಿಯ ನಂ. 21959ನೇ ಪೋಲಿಸಿ ಪ್ರಕಾರ ಬೋನಸ್ ಕೂಡಾ ರೂ. 1025-0-0ನ್ನು ಪಡೆಯುವ ಬಗ್ಗೆ ಮ್ಯಾನರ್ 1, 2ನೇ ಅರ್ಜಿದಾರರ ಗಾರ್ಡಿಯನಾಗಿ 3ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲುಮಾಡಿದ ಅರ್ಜಿಯು. ತಾರೀಖು 28-11-1951ಕ್ಕೆ ಇಡೋಣಾಗಿಯದೆ. ಆಕ್ಷೇಪಣೆಗಳು ಇಚ್ಛಿಸುವವರು ಸದ್ರಿ ದಿನ ಬೆಳಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸದ್ರಿ ಅರ್ಜಿಯಲ್ಲಿ ಹಾಜರಾಗಿ ಮನವಿಮಾಡಿಕೊಳ್ಳತಕ್ಕದ್ದು. ಎಂಬುವಾಗಿ ಕೋರ್ಟಿನ ಹುಕುಂ ಪ್ರಕಾರ ಪ್ರಸಿದ್ಧ ಪಡಿಸಲ್ಪಟ್ಟಿದೆ.

(Sd) Gratian C. Rego.
Vakil for Petitioners.

ತಾ. 31-10-51.

ಶಾಂತಿಸಾಧನೆಯ ಮೊದಲು ಹೃದಯ ಶುದ್ಧೀಕರಣವಾಗಲಿ!

ಜಾಗತಿಕ ಶಾಂತಿ ಸುರಕ್ಷಿತತೆಯ ಬಗ್ಗೆ ಪ್ಯಾರಿಸದ ಸಂಯುಕ್ತ ರಾಷ್ಟ್ರಸಭೆಯಲ್ಲಿ ಬಿಚ್ಚು ಮನಸ್ಸಿನ ಮಾತುಕತೆ ನಡೆದಿರುತ್ತದೆ. ಬ್ರಿಟನ್, ಅಮೇರಿಕಾ, ಫ್ರಾನ್ಸ್ ಈ ಮೂರು ರಾಷ್ಟ್ರಗಳು ಹೊಸ ಶಾಂತಿ ಯೋಜನೆಯೊಂದನ್ನು ಮುಂದೆ ಮಾಡಿವೆ. ತ್ರಿರಾಷ್ಟ್ರಗಳ ಯೋಜನೆಯಲ್ಲಿ "ಎಲ್ಲ ರಾಷ್ಟ್ರಗಳೂ ತಮ್ಮ ಸೈನ್ಯಬಲ ಹಾಗೂ ಯುದ್ಧೋಪಕರಣಗಳ ಅಂಕಿಸಂಖ್ಯೆಯನ್ನು ಸಂ. ರಾ. ಸಂಘಕ್ಕೆ ಒಪ್ಪಿಸಬೇಕು. ಶಸ್ತ್ರಾಸ್ತ್ರ ಸಂಗ್ರಹದ ಪರಿಶೀಲನೆ ನಡೆಸಲು ಸಹಕಾರ ನೀಡಬೇಕು. ಅಣುಶಕ್ತಿ ಹಾಗೂ ಇನ್ನಿತರ ಯುದ್ಧೋಪಕರಣಗಳನ್ನು ನಿಯಂತ್ರಿಸಬೇಕು." ಎಂದು ಹೇಳಲಾಗಿದೆ. ಮುಖ್ಯವಾಗಿ ಎಲ್ಲ ರಾಷ್ಟ್ರಗಳ ಸೈನ್ಯ-ಶಸ್ತ್ರಾಸ್ತ್ರಗಳ ನಿಯಂತ್ರಣಗಳಿಂದ ಜಾಗತಿಕ ಶಾಂತಿರಕ್ಷಣೆಯನ್ನು ಸಾಧಿಸಬಹುದೆಂಬುದೇ ಈ ರಾಷ್ಟ್ರಗಳ ಅಭಿಪ್ರಾಯವಿರುವದು. ಅಧ್ಯಕ್ಷ ಟ್ರುಮನ್ನರು "ಶಸ್ತ್ರಗಳ ಸಂಖ್ಯಾ ಪ್ರಮಾಣ ಇಳಿಸಬೇಕು" ಎನ್ನುವ ಆಕಾಶವಾಣೀ ಭಾಷಣದಲ್ಲಿ ಈ ತ್ರಿರಾಷ್ಟ್ರಗಳ ಯೋಜನೆಯನ್ನು ಇತರ ರಾಷ್ಟ್ರಗಳು ಮನ್ನಿಸಬೇಕೆಂದು ಬಿನ್ನವಿಸಿಕೊಂಡಿರುವರು.

ಆಂಗ್ಲೋ ಅಮೇರಿಕಾನರ ಕಡು ವಿರೋಧಿ ರಾಷ್ಟ್ರವಾದ ರಶಿಯವೂ ಒಂದು ಸೂಚನೆಯನ್ನು ಮುಂದೆ ಮಾಡಿದೆ. "ಪ್ರತಿಯೊಂದು ರಾಷ್ಟ್ರವೂ ಶಸ್ತ್ರೀಕರಣದಲ್ಲಿ ವಿಶೇಷ ಆಸ್ಥೆ ವಹಿಸಿರುವದರಿಂದ ಜನಜೀವನ ನಷ್ಟಕ್ಕೀಡಾಗಿದೆ. ಅಣುಬಾಂಬಿನ ಉತ್ಪಾದನಾ ಕಾರ್ಯದಲ್ಲಿ ನಿಯಂತ್ರಣಕ್ಕಿಂತ ಪ್ರತಿಬಂಧಿಸುವದೇ ಉತ್ತಮ ಪರಿಹಾರ ಮಾರ್ಗ. ಅಣುಶಕ್ತಿಯನ್ನು ಪ್ರತಿಬಂಧಿಸಿ ಶಾಂತಿಯನ್ನು ಬಲಪಡಿಸುವದು ರಶಿಯಕ್ಕೆ ಬೇಕಾಗಿದೆ. ಸ್ಟಾಲಿನ್ನರು ಅದಕ್ಕೆ ಸಿದ್ಧರಿರುವರು. ಜಾಗತಿಕ ನಿಃಶಸ್ತ್ರೀಕರಣದ ಬಗ್ಗೆ ಜಾಗತಿಕ ಪರಿಷತ್ತು ಕೂಡಿ ಅಮೇರಿಕ, ರಶಿಯ, ಫ್ರಾನ್ಸ್, ಬ್ರಿಟನ್ ಮತ್ತು ಚೀನಗಳು ಒಂದೆಡೆ ಸೇರಿ ಶಾಂತಿಸಾಧನೆಗಾಗಿ ಯತ್ನಿಸಬೇಕು."—ಎಂದು ರಶಿಯದ ಪ್ರತಿನಿಧಿ ವಿಸಿನಿಸ್ಕಿಯವರು ಹೇಳಿದರು. ತ್ರಿರಾಷ್ಟ್ರಗಳ ಹಾಗೂ ರಶಿಯದ ವಿದೇಶಾಂಗ ಮಂತ್ರಿಯ ಸೂಚನೆಗಳು ಶಾಂತಿಸಾಧನೆಗೆ ಹೆಚ್ಚು ಸಹಾಯಕವಾಗಿವೆಯೆಂದು ಹೇಳಬಹುದಾಗಿದೆ. ಅಟ್ಲಾಂಟಿಕ ಪ್ರಶ್ನೆಯ ಕುರಿತು ರಶಿಯವು ತಾಳಿದ ಧೋರಣೆಯಲ್ಲಿ ಕೊಂಚ ಮತಭೇದ ಉಂಟಾದರೂ ಉಳಿದ ಸೂಚನೆಗಳು ಗ್ರಾಹ್ಯವಾಗಿರುವವು. ಇತ್ತ ಕಾರ್ಯರೂಪದಲ್ಲಿ ಬರಬೇಕಾದರೆ ಉಭಯ ಪಕ್ಷಗಳಲ್ಲೂ ಪರಸ್ಪರ ಮೈತ್ರಿ ವಿಶ್ವಾಸಗಳು ತಲೆದೋರಿ ಹೃದಯಪೂರ್ವಕ ಶಾಂತಿರಕ್ಷಣೆಗಾಗಿ ಹೋರಾಡುವಂತಾಗಬೇಕು. ಯೋಜನೆಗಳು ಎಷ್ಟು ಯೋಗ್ಯವಿದ್ದರೂ ಹೃದಯಶುದ್ಧಿಯಿಲ್ಲವಿದ್ದರೇನ ಪ್ರಯೋಗ?

ಗ್ರಾಹ್ಯಮರಿಗೆ ಇನ್ನೊಂದು ಸಂಧಿ

ಕಾಶ್ಮೀರ ಸಮಸ್ಯೆಯ ಕುರಿತು ಸಂ. ರಾ. ಸಂಘಕ್ಕೆ ಹಿಂದಿಗಿಂತ ಹೆಚ್ಚು ಸಮಾಧಾನವಾಗಿದೆ. ಡಾ। ಗ್ರಾಹ್ಯಮರ ಕಾರ್ಯದಲ್ಲಿ ಭಾರತ ಪಾಕಿಸ್ತಾನಗಳೆರಡೂ ಸೌಹಾರ್ದಪೂರ್ಣ ಸಹಕಾರ ನೀಡಿರುವದನ್ನು ಸಂ.ರಾ.ಸಂಘ ಶ್ಲಾಘಿಸಿದೆ. ಈ ಪ್ರಶ್ನೆಯು ಶಾಂತಿಯುತವಾಗಿ ಬಗೆಹರಿಯುವದಕ್ಕೆ ಯುದ್ಧವಿರಾಮವನ್ನು ಒಪ್ಪಿ, ಸ್ವತಂತ್ರ ಮತಗಣನೆಯ ಮೂಲಕ ಕಾಶ್ಮೀರ ಸೇರ್ಪಡೆಯ ಪ್ರಶ್ನೆಯನ್ನು ತೀರ್ಮಾನಿಸುವ ನಿರ್ಧಾರಕ್ಕೆ ಉಭಯರಾಷ್ಟ್ರಗಳ ಸಮ್ಮತಿಯಿರುವದರಿಂದ ಈ ಪ್ರಶ್ನೆಯನ್ನು ಬಿಡಿಸುವದಕ್ಕೆ ಹೆಚ್ಚು ಕಷ್ಟವಾಗದೆಂದು ಸಂ.ರಾ.ಸಂಘದ ಅಭಿಪ್ರಾಯವಾಗಿದೆ. ನಿಃಶಸ್ತ್ರೀಕರಣದಲ್ಲಿ ಸ್ವಲ್ಪ ಮತಭೇದವಿದ್ದು ಆ ವಿಷಯಗಳ ಸಂಧಾನ ಮಾತುಕತೆಯನ್ನು ಗ್ರಾಹ್ಯಮರು ಮುಂದುವರಿಸಿ ಅದನ್ನು ಬಗೆಹರಿಸಬಹುದಾಗಿದೆಂದು, ಸಭೆಯು ಗ್ರಾಹ್ಯಮರಿಗೆ 6 ವಾರಗಳ ಅವಧಿಯನ್ನು ಕೊಟ್ಟಿತು. ಡಾ। ಗ್ರಾಹ್ಯಮರು ಪ್ರಕೃತ ಅಸ್ವಸ್ಥರಿದ್ದು ಗುಣವನ್ನು ಹೊಂದಿದ ಕೂಡಲೇ ಭಾರತ ಮತ್ತು ಪಾಕಿಸ್ತಾನ ಪ್ರತಿನಿಧಿಗಳೊಡನೆ ಚರ್ಚೆ ನಡೆಸುವರು. ಸಂ. ರಾ. ಸಂಘದಲ್ಲಿ ಮಾತನ್ನಾಡಿದ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳು ಕಾಶ್ಮೀರ ಪ್ರಶ್ನೆ ಸೌಹಾರ್ದಮಯ ವಾತಾವರಣದಿಂದ ತೀರ್ಮಾನಗೊಂಡ ಬೆಂದು ಅಭಿಪ್ರಾಯಪಟ್ಟಿವೆ. ಕಾಶ್ಮೀರ ಘಟನಾಸಮಿತಿಯಿಂದ ಗ್ರಾಹ್ಯಮರ ಕಾರ್ಯಕ್ಕೆ ತಡೆಯಾಗದೆಂದು ಹಲವು ಸದಸ್ಯರು ಹೇಳಿದ್ದರು. ಶೇಖ್ ಅಬ್ದುಲ್ಲಾರವರು ಯೋಗ್ಯ ರಾಜಕಾರಣಿ ಇದ್ದು ಕಾಶ್ಮೀರದ ಜನತೆಯ ಭವಿತವ್ಯದ ಕುರಿತು ಕೈಗೊಂಡ ಕಾರ್ಯವು ಅವರ ದ್ಯೋತಕವಾಗಿದೆಂದು ಡೀನ್ ಅಚೆಸನ್ನರು ಹೇಳಿದರು. ಕಾಶ್ಮೀರ ಘಟನಾಸಮಿತಿ ರಚನೆಯ ಬಗ್ಗೆ ಕಳವಳ ಮತ್ತು ಅಸಮಾಧಾನ ಪ್ರದರ್ಶನವಾಗಿದ್ದರೂ ನೆಹರೂರವರು ಕಾಶ್ಮೀರ ಬಗ್ಗೆ ತಳೆದಿರುವ ನಿಷ್ಪಕ್ಷಪಾತವಾದ ಧೋರಣೆ-ಆಶ್ವಾಸನೆಗಳಿಂದ ಈ ಸಮಸ್ಯೆಗೆ ವ್ಯತ್ಯಯ ಬರಲಾರದೆಂದು ಎಲ್ಲ ರಾಷ್ಟ್ರಗಳು ಸಮಾಧಾನವನ್ನು ವ್ಯಕ್ತಪಡಿಸಿವೆ. ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಹೀಗೆ ಬರೆದಿದೆ. "ಕಾಶ್ಮೀರ ಪ್ರಶ್ನೆಯು ಇನ್ನೂ ಜಟಿಲವಾಗಿಯೆ ಇರುವದಾದರೂ ಅಪರಿಹಾರ್ಯವೆಂದು ಹೇಳಲು ಸಾಧ್ಯವಿಲ್ಲ. ಡಾ। ಗ್ರಾಹ್ಯಮರ ಮಾರ್ಗದರ್ಶನವು ಅತ್ಯಂತ ಆಶಾದಾಯಕವಾಗಿದೆ. ಇದರಿಂದ ಉತ್ತಮ ಭವಿಷ್ಯವಿದೆಯೆಂದು ನಿರೀಕ್ಷಿಸಬಹುದಾಗಿದೆ. ಡಾ। ಗ್ರಾಹ್ಯಮರು ಕಾರ್ಯಪ್ರವೃತ್ತರಾಗಿರುವಾಗಿದ್ದ ತೀವ್ರಪ್ರಭಾವನೆ ಈಗ ದೂರಾಗಿವೆ. ಕಳೆದ ಕೆಲವು ವಾರಗಳಿಂದ ಭಾರತ-ಪಾಕಿಸ್ತಾನಗಳೊಳಗೆ ಒಂದು ರೀತಿಯ ಮೈತ್ರಿಯ ಭಾವನೆ ಬೆಳೆಯುತ್ತ ಬಂದಿದೆ.

ಪಂಜಾಬದ ಬಿಕ್ಕಟ್ಟು

ಪಂಜಾಬದಲ್ಲಿ ಡಾ। ಗೋಪೀಚಂದರ ಗುಂಪಿಗೂ ಕಾಂಗ್ರೆಸ್ಸಿಗೂ ಉಂಟಾಗಿರುವ ಮತಭೇದ ಇನ್ನೂ ಪರಿಹಾರವಾಗಿಲ್ಲ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿ ಹಾಗೂ ಗುಲ್ಜಾರಿಲಾಲ ನಂದಾರವರು ಈ ವರೆಗೆ ಅನೇಕ ಸಲ ಮಾತುಕತೆ ನಡೆಸಿರುವರು. ಡಾ। ಗೋಪೀಚಂದರು ಕಾಂಗ್ರೆಸ್ಸನ್ನು ಸಂಪೂರ್ಣ ತ್ಯಜಿಸದೆ ಸ್ವತಂತ್ರ ಹುರಿಯಾಳಾಗಿ ಕಾಂಗ್ರೆಸ್ಸಿನೆದುರಾಗಿ ಸ್ಪರ್ಧಿಸುವ ನಿರ್ಧಾರ ಮಾಡಿರುವರಂತೆ. ಕೇಂದ್ರ ಚುನಾವಣಾ ಸಮಿತಿಯ ಆದೇಶವನ್ನು ಪಾಲಿಸದವರ ಮೇಲೆ ಶಿಸ್ತು ಭಂಗಕ್ರಮ ಕೈಗೊಳ್ಳಲಾಗುವದೆಂದು ಶ್ರೀ ಶಾಸ್ತ್ರಿಗಳು ಹೇಳಿರುವರು. ಡಾ। ಗೋಪೀಚಂದ ಹಾಗೂ ಅವರ ಅನುಯಾಯಿಗಳನ್ನು ಕಾಂಗ್ರೆಸ್ಸಿನಿಂದ ಹೊರದೂಡಿದ್ದಲ್ಲಿ ಅವರು ಸ್ವತಂತ್ರ ಹುರಿಯಾಳಾಗಿ ನಿಂತು ಮಂತ್ರಿಮಂಡಳಗಳನ್ನು ಪುನಃ ವಶಪಡಿಸಿಕೊಂಡು ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಕೊನೆಗಾಣಿಸುವ ಸಾಹಸಕ್ಕೆ ಕೈ ಹಾಕುವ ನಿರೀಕ್ಷೆಯಿದೆ. ಸದ್ಯದ ಶಾಸನಸಭೆಯಲ್ಲಿ ಇನ್ನೂ ಬಹುಮತದ ಬೆಂಬಲವಿದೆಯೆಂದು ಅವರ ಅನುಯಾಯಿಗಳು ಹೇಳುತ್ತಿರುವರು. ಅಂತಾದರೆ ಶ್ರೀ ಗುಲ್ಜಾರಿಲಾಲನಂದ ಹಾಗೂ ಲಾಲ ಬಹದ್ದೂರ ಶಾಸ್ತ್ರಿಗಳ ಸಂಧಾನ ಪ್ರಯತ್ನ ನಿಷ್ಫಲವಾದಂತೆಯೆ!

ಮದ್ರಾಸದಲ್ಲಿ ಮಾರ್ಗಾಭಿವೃದ್ಧಿ ಯೋಜನೆ

ಕೇಂದ್ರ ಸರಕಾರದ ಮಾರ್ಗ ಸುಧಾರಣಾ ನಿಧಿಯಿಂದ ಮದ್ರಾಸಕ್ಕೆ 120 ಲಕ್ಷ ರೂಪಾಯಿ ಕೊಡಲಾಗಿದೆ. ರಸ್ತೆಗಳ ಸುಧಾರಣೆ--ಸೇತುವೆಗಳ ರಚನೆಗಾಗಿ ಈ ಹಣವನ್ನು ಪ್ರಯೋಗಿಸುವದಾಗಿರುತ್ತದೆ. ನಮ್ಮ ಪ್ರಾಂತದ ಅನಂತಪುರ, ಸೌತ್ ಆರ್ಕಾಟ್, ನೋರ್ತ್ ಆರ್ಕಾಟ್, ಗುಂಟೂರು, ವೆಸ್ಟ್ ಗೋದಾವರಿ, ದಕ್ಷಿಣ ಮಲಬಾರ್, ಉತ್ತರ ಮಲಬಾರ್, ರಾಮನಾಥಪುರಮ್, ಇವೇ ಮೊದಲಾದ ಜಿಲ್ಲೆಗಳ ಮಾರ್ಗ ಹಾಗೂ ಸೇತುವೆಗಳ ಅಭಿವೃದ್ಧಿಗಾಗಿ ಹಂಚಲಾಗಿದೆ. ಕೇಂದ್ರ ಸರಕಾರ ಮದ್ರಾಸಕ್ಕೆ ಕೊಡಮಾಡಿದ 120 ಲಕ್ಷ ರೂಪಾಯಿಯಲ್ಲಿ ಇಷ್ಟೆಲ್ಲ ಜಿಲ್ಲೆಗಳ ಮಾರ್ಗ ಸಂಕಗಳು ಸುಧಾರಣೆ ನಿರ್ಮಾಣಗೊಳ್ಳುವಾಗ ದ. ಕ. ಜಿಲ್ಲೆಯ ಪಾಲಿಗೆ ಏನನ್ನೂ ಕಾರ್ಯಕ್ರಮದಲ್ಲಿ ಕೊಡದಿದ್ದದ್ದು ವಿಷಾದದ ಸಂಗತಿ. ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳೆರಡೂ ದ. ಕ. ಜಿಲ್ಲೆಯನ್ನು ಹಲವಾರು ಯೋಜನೆಗಳಲ್ಲಿ ಅಲಕ್ಷಿಸುವಂತಿದೆ.

ಪ್ರಸಿದ್ಧ ಪಾತ್ರೆಗಳು



ನಾನಾ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಗಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಯಕೃತ್‌ಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿನಾಲ್ಕು ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-। ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ಪಿ. ಪಿ. ಖರ್ಚು ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಪ್ರತಿನಿಧಿಗಳು ಪಯಾಕಂಪನಿ, ಮಂಗಳೂರು

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲಕ್ಷ್ಮಣಗಡಿ	0-6-0
ಭರತೇಶ ದಿಗ್ವಿಜಯ	0-8-0

ಯಕ್ಷಗಾನ ಪ್ರಿಯರಿಗೆ 'ಅಂತಿಕೆರಂಗ'
ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕಭಂಡಾರ,
ಉಡುಪಿ.

ಲೋಕಾಂತ

ಕೊರಿಯದ ಮಾತುಕತೆಯಲ್ಲಿ ಪ್ರಗತಿ

"ಕೊರಿಯದ ಯುದ್ಧ ಮುಕ್ತಾಯವಾಗುವದಕ್ಕೆ ಮೂಲಭೂತವಾಗಿ ತಟಸ್ಥ ಪ್ರದೇಶವನ್ನು ಸ್ಥಾಪಿಸಬೇಕಾಗಿರುವದರಿಂದ ತಾತ್ಕಾಲಿಕ ಸಂಧಿಗೆ ಸಹಿಹಾಕುವ ದಿನ ಇರುವ ರಣರಂಗದ ಪ್ರದೇಶದ ತಳಹದಿಯ ಮೇಲೆ ಯುದ್ಧ ವಿರಾಮ ಗೆರೆಯನ್ನು ಎಳೆಯಬೇಕು" ಎನುವ ಸಂ. ರಾ. ಸಂಘದ ಸೂಚನೆಯು ಉಭಯತರೂ ಸಮ್ಮತವಾಗಿದೆಯೆಂದು ತಿಳಿಯುತ್ತದೆ.

ಸುಯೇಜ ಕಾಲುವೆಯ ಪರಿಸ್ಥಿತಿ

ಸುಯೇಜ ಕಾಲುವೆಯಲ್ಲಿ ವಾಸವಾಗಿರುವ ಬ್ರಿಟಿಶ ಸ್ತ್ರೀಯರ ಹಾಗೂ ಮಕ್ಕಳನ್ನು ಇಂಗ್ಲಂಡಿಗೆ ಸಾಗಿಸುವ ಕಾರ್ಯ ಭರದಿಂದ ಸಾಗಿದೆ. ವಕೀಲರೂ, ವಿದ್ಯಾರ್ಥಿಗಳೂ, ನಾಗರಿಕರೂ ಬ್ರಿಟಿಶರ ವಿರುದ್ಧ ಪ್ರತಿಭಟನೆಯನ್ನು ತೋರಿಸುತ್ತಿರುವರು. ಬ್ರಿಟಿಶ ವೈಮಾನಿಕ ಪಡೆಯು ಹಾಗೂ ಸೈನ್ಯಗಳ ಸಂಗ್ರಹ ಭರದಿಂದ ಸಾಗುತ್ತಲಿದೆ. ಇಜಿಪ್ತ ಸೈನಿಕರ ಹಾಗೂ ಬ್ರಿಟಿಶ ಸೈನಿಕರೊಳಗೆ ಚಿಕ್ಕದು ಘರ್ಷಣೆ ನಡೆದ ವರದಿಯಾಗಿದೆ. ಕಾಲುವೆಯ ಪ್ರದೇಶದಲ್ಲಿ ಬ್ರಿಟಿಶರ ಪರವಾಗಿ ಕೆಲಸಮಾಡುವ ಜನರ ವಿರುದ್ಧ ಚಳುವಳಿಯು ಜೋರಾಗಿ ನಡೆದಿದೆ.

ಪರ್ಶಿಯಾದ ವಿವಾದ

ಇರಾಣ ಎಣ್ಣೆ ಹಂಚುವ ವಿಚಾರದಲ್ಲಿ ಪರ್ಶಿಯವು ಮುಂದೆ ಮಾಡಿದ ಯೋಜನೆಯನ್ನು ಬ್ರಿಟನ್ ನಿರಾಕರಿಸಿವೆಂದು ತಿಳಿದುಬರುತ್ತದೆ.

ಬ್ರಿಟನು ಯಾವುದಕ್ಕೂ ಬೆದರದು.

ಬ್ರಿಟನದ ಮುಖ್ಯಮಂತ್ರಿ ಚರ್ಚಿಲ್ಲರು ಕಾನ್ಸರ್ವೇಟಿವ್ ಸರಕಾರ ಧೋರಣೆಯನ್ನು ವ್ಯಕ್ತಪಡಿಸುತ್ತಾ "ಎಂಥ ಕಠಿಣ ಪ್ರಸಂಗಬಂದರೂ ಬ್ರಿಟನು ಅಜೇಯವಿದೆಯೆಂಬುದನ್ನು ಸಿದ್ಧಮಾಡಿ ತೋರಿಸುವೆನೆಂದೂ ಅವರು ಘೋಷಿಸಿದರು.

ಸರಕಾರ ಮತ್ತು ರೇಲ್ವೆ ಮಹಾಮಂಡಳಗಳ ಬಿಕ್ಕಟ್ಟು ಪರಿಹಾರವಾಯಿತು.

ರೈಲ್ವೆ ಮಹಾಮಂಡಳ ಹಾಗೂ ಸರಕಾರದ ನಡುವೆ ಅನೇಕ ಸಲ ನಡೆದಿದ್ದ ಮಾತುಕತೆಯ ಫಲವಾಗಿ ಉಭಯತರಲ್ಲೂ ಸಮಾಧಾನಕರವಾದ ಒಪ್ಪಂದವಾಗಿರುತ್ತದೆ. ರೈಲ್ವೆ ಜಗಳ ಪರಿಹಾರಕ್ಕಾಗಿ ಶಾಶ್ವತ ಸಮಿತಿಯನ್ನು ರಚಿಸಲಾಗುವದು. ರೇಲ್ವೆ ನೌಕರರ ವಿರುದ್ಧ ಶಿಸ್ತುಭಂಗ ಕ್ರಮ ತೆಗೆದುಕೊಳ್ಳುವ ಪದ್ಧತಿಯ ವಿಚಾರದಲ್ಲೂ ಒಂದು ಬಗೆಯ ತೀರ್ಮಾನವಾಯಿತು. ತುಟ್ಟಿ ಭತ್ಯೆಯನ್ನು ಸಂಬಳದಲ್ಲಿಯೇ ಸೇರಿಸುವ ವಿಚಾರದಲ್ಲಿ ರೈಲ್ವೆ ಇಲಾಖೆಯು ತಕ್ಕ ವ್ಯವಸ್ಥೆಯನ್ನು ಕೈಗೊಂಡಿರುತ್ತದೆ. ಜಯಪ್ರಕಾಶ ನಾರಾಯಣ, ಗುರುಸ್ವಾಮಿ, ಪಿ. ಸಿ. ದಾಸಗುಪ್ತ ಮೊದಲಾದವರು ರೈ. ಮಹಾಮಂಡಳದ ಕಡೆಯಿಂದಲೂ ಮಂತ್ರಿ ಗೋಪಾಲ ಸ್ವಾಮಿ ಅಯ್ಯಂಗಾರ್, ಶ್ರೀ ಕೆ. ಸಂತಾನಂ ವಿ. ನೀಲಕಂಠನ್ ಈ ಮೂವರು ಸರಕಾರದ ಕಡೆಯಿಂದಲೂ ಮಾತುಕತೆ ನಡೆಸಿದರು.

ಭಾರತಕ್ಕೆ ದಿಗ್ದರ್ಶಕ ಅಲೆಕ್ಝಾಂಡ್ರಾ ಕೊರ್ಡಾರು

ಮುಂಬಯಿ, ದಿಲ್ಲಿ, ಕಲಕತ್ತ, ಮದ್ರಾಸ ಮುಂತಾದ ಕಡೆಗಳಲ್ಲಿ ಸುಮಾರು ಐದು ವಾರ ನಡೆಯಲಿರುವ ಅಂತರರಾಷ್ಟ್ರೀಯ ಚಲಚ್ಚಿತ್ರ ಪ್ರದರ್ಶನೋತ್ಸವಕ್ಕೆ ವಿಶ್ವವಿಖ್ಯಾತ ನಿರ್ದೇಶಕರಾಗಿರುವ ಅಲೆಕ್ಝಾಂಡ್ರಾ ಕೋರ್ಡಾ ಅವರು ಆಗಮಿಸಲಿರುವರೆಂದು ತಿಳಿಯುತ್ತದೆ.

ಕೋಸಿ ನದಿ ಯೋಜನೆಗೆ ಜೀವದಾನ

ಪಂಚವಾರ್ಷಿಕ ಯೋಜನೆಯಲ್ಲಿ 100 ಕೋಟಿ ರೂ. ವೆಚ್ಚ ಬರುವ ಕೋಸಿ ನದಿಯ ಯೋಜನೆಯನ್ನು ಯೋಜನಾ ಆಯೋಗವು ತನ್ನ ಪ್ರಾಥಮಿಕ ವರದಿಯಲ್ಲಿ ಬಿಟ್ಟುಕೊಟ್ಟಿರುವದು. ಪ್ರಧಾನ ಮಂತ್ರಿ ನೆಹರೂರವರು ಅದರಲ್ಲಿ ಆಸ್ಥೆ ವಹಿಸಿದ್ದರ ಫಲವಾಗಿ ತಜ್ಞ ಸಲಹಾ ಸಮಿತಿಯು ನಿರ್ಮಾಣಗೊಂಡು, ಹಾಕಿದ ಬಂಡವಲಕ್ಕೆ ಪ್ರತಿಫಲವನ್ನೀಯುವ ಮಟ್ಟಿಗೆ ಅದನ್ನು ಪರಿಷ್ಕೃತಿಗೊಳಿಸಬೇಕೆಂದು ಅದು ಸೂಚಿಸಿರುವದು.

ಮೌ. ಅಜಾದರಿಗೆ ಕರೆ

ಹೈದರಾಬಾದ ಸಂಸ್ಥಾನದಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಲು ನವಂಬರ ತಿಂಗಳ ಕೊನೆಯ ವಾರದಲ್ಲಿ ಬರಬೇಕೆಂದು ಹೈದರಾಬಾದ ಕಾಂಗ್ರೆಸ್ ಚುನಾವಣಾ ಸಮಿತಿಯು ಮೌಲಾನಾ ಅಬುದುಲ್ ಕಲಂ ಅಜಾದರಿಗೆ ಕರೆ ಕಳಿಸಿದೆಂದು ತಿಳಿಯುತ್ತದೆ.

ಭಾರತಕ್ಕೆ ಕಾನಡಾದ ಗೋಧಿ

ಕೊಲಂಬೋ ಯೋಜನೆಯಂತೆ ಕಾನಡಾವು ಕೊಡಲಿರುವ ತನ್ನ ಪಾಲಿನ 2½ ಕೋಟಿ ಡಾಲರುಗಳಲ್ಲಿ 1½ ಕೋಟಿ ಭಾರತಕ್ಕೂ ಇನ್ನೊಂದು ಕೋಟಿ ಪಾಕಿಸ್ತಾನಕ್ಕೂ ಕೊಡುವದು. 1 ಕೋಟಿ ಡಾಲರುಗಳ ಉತ್ತಮ ಗೋಧಿಯನ್ನು ಕೊಟ್ಟನಂತರ ಉಳಿದ 50 ಲಕ್ಷ ಡಾಲರುಗಳನ್ನು ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ವಿನಿಯೋಗಿಲ್ಪಡುವದು.

ಕಾಂಗ್ರೆಸು ವರಿಷ್ಠರ ಪಕ್ಷಪಾತ

ಪಂಜಾಬದ ಹಿಂದಿನ ಮುಖ್ಯ ಮಂತ್ರಿ ಡಾ. ಗೋಪಿಚಂದ ಭಾರ್ಗವರು ತಾನು ಸ್ವತಂತ್ರ ಹುರಿಯಾಳಾಗಿ ನಿಂತುದಕ್ಕೆ ಕಾರಣವನ್ನು ಕೊಡುತ್ತಾ "ಕಾಂಗ್ರೆಸ ವರಿಷ್ಠರು ನನ್ನ ರಾಜಿನಾಮೆಯ ನಂತರ ನನ್ನ ಹಾಗೂ ನನ್ನ ಸಹಕಾರಿಗಳ ವಿರುದ್ಧ ಅಪಪ್ರಚಾರ ನಡೆಯುವದಕ್ಕೆ ಆಸ್ಪದಕೊಟ್ಟರು. ಚುನಾವಣೆಗಾಗಿ ಕಾಂಗ್ರೆಸ ಹುರಿಯಾಳುಗಳನ್ನು ಆರಿಸುವಾಗ ಕಾಂಗ್ರೆಸ ವರಿಷ್ಠರು ಪಕ್ಷಪಾತತನವನ್ನು ತೋರಿಸಿದ್ದರಿಂದ ತಾನು ಸ್ವತಂತ್ರ ಹುರಿಯಾಳಾಗಿ ಸ್ಪರ್ಧಿಸದೆ ಗತ್ಯಂತರವಿಲ್ಲೆಂದು ಹೇಳಿದರು.

ಎಲ್ಲರೂ ನೆಹ್ರೂರವರಿಗೆ ಬೆಂಬಲಿಗರಾಗಿರಿ!

"ಸ್ವತಂತ್ರರಾಷ್ಟ್ರದಲ್ಲಿ ಯಾವದೇ ವ್ಯಕ್ತಿ ಅಥವಾ ಪಕ್ಷಪಂಗಡಗಳು ಮಹತ್ವವಲ್ಲ. ಜನತೆಯ ಅಂತರಿಕಶಕ್ತಿ ಮಹತ್ವದ್ದು. ನಮ್ಮ ರಾಷ್ಟ್ರದಲ್ಲಿರುವ 35 ಕೋಟಿ ಜನರ ಅಂತಃಶಕ್ತಿಯನ್ನು ಸಣ್ಣ ಸಣ್ಣ ಪಕ್ಷ ಪಂಗಡಗಳನ್ನು ಮರೆತು, ದೇಶದ ಉನ್ನತಿಗಾಗಿ ಉಪಯೋಗಿಸಬೇಕು. ನಮ್ಮ ಪೂರ್ವ ಜನ್ಮದ ಪುಣ್ಯದಿಂದ ನೆಹ್ರೂರಂತಹ ಯೋಗ್ಯ ಧುರೀಣರು ಇಂದು ನಮಗೆ ದೊರಕಿದ್ದಾರೆ. ಎಲ್ಲರೂ ಅವರ ಬೆಂಬಲಿಗರಾಗಿ ರಾಷ್ಟ್ರನಿರ್ಮಾಣ ಕಾರ್ಯವನ್ನು ಯಶಸ್ವಿಗೊಳಿಸಬೇಕು" ಎಂಬುದಾಗಿ ಶ್ರೀ ಕರಮರಕರರು ಧಾರವಾಡದ ಸಭೆಯೊಂದರಲ್ಲಿ ಹೇಳಿದರು.

ನೇಪಾಳ ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆ

ನೇಪಾಳದ ಕಾಂಗ್ರೆಸ ಮಂತ್ರಿಗಳು ಈಗಿನ ಸರಕಾರದೊಡನೆ ಕೆಲಸ ಮಾಡುವದು ತಮಗೆ ಅಶಕ್ಯವೆನಿಸಿದ್ದರಿಂದ ತಮ್ಮ ಮಂತ್ರಿಪದಗಳಿಗೆ ರಾಜಿನಾಮೆ ಕೊಟ್ಟಿದ್ದಾರೆ.

ಶ್ರೀ ನೆಹ್ರೂರವರ ಚುನಾವಣಾ ಸಂಚಾರ!

ಭಾರತದ ಪ್ರಧಾನ ಮಂತ್ರಿ ಜವಾಹರಲಾಲ ನೆಹ್ರೂರವರು ದೇಶದಾದ್ಯಂತ ಚುನಾವಣಾ ಪ್ರಚಾರಕ್ಕಾಗಿ ನವೆಂಬರ ತಿಂಗಳ 15ರಿಂದ ಸಂಚಾರವನ್ನು ಪ್ರಾರಂಭಿಸುವರು. ಎರಡು ದಿನಗಳ ಮಟ್ಟಿಗೆ ಹಿಮಾಚಲ ಪ್ರದೇಶಕ್ಕೆ ಸಂದರ್ಶನವನ್ನಿತ್ತು ಮತ್ತೆ ಆರೇಳು ವಾರಗಳ ತನಕ ಇಡೀ ದೇಶದಾದ್ಯಂತ ಸಂಚಾರ ಕೈಗೊಳ್ಳುವರಾಗಿ ತಿಳಿದುಬರುತ್ತದೆ.

ಹುಬ್ಬಳ್ಳಿ ಮಂಗಳೂರುಗಳಲ್ಲಿ ವಿಮಾನ ನಿಲ್ದಾಣ

ಹನ್ನೆರಡು ಲಕ್ಷ ವೆಚ್ಚಮಾಡಿ ವಿಮಾನ ನಿಲ್ದಾಣವೊಂದು ಹುಬ್ಬಳ್ಳಿಯಲ್ಲಿ ನಿರ್ಮಾಣಗೊಳ್ಳಲಿರುವದು. ಅಂತೆಯೆ ಮಂಗಳೂರ ವಿಮಾನ ನಿಲ್ದಾಣದ ಕಾರ್ಯವು ಬರುವ ತಿಂಗಳಲ್ಲಿ ಆರಂಭವಾಗಲಿದೆಯೆಂದು ತಿಳಿದುಬಂದಿದೆ.

ಭಾರತದಲ್ಲಿ ಎಣ್ಣೆ ಶುದ್ಧೀಕರಣ ಕಾರ್ಖಾನೆ

ಮುಂಬಯಿ ಮದ್ರಾಸಗಳಲ್ಲಿ ಎಣ್ಣೆ ಶುದ್ಧೀಕರಣ ಕಾರಖಾನೆಯನ್ನು ತೆರೆಯುವ ಪೂರ್ವಸಿದ್ಧತೆಗಳು ನಡೆಯುತ್ತಿವೆ. ವಿದೇಶೀಯ ಕಂಪನಿಗಳ ಪಾಲುಗಾರಿಕೆಯಿಂದ ಈ ಕಾರ್ಖಾನೆಗಳು ಪ್ರಾರಂಭಿಸಲ್ಪಡುತ್ತಿವೆಯಾಗಿ ತಿಳಿಯುತ್ತದೆ. ಈ ಬಗ್ಗೆ ಭಾರತ ಸರಕಾರವು ಇಷ್ಟರಲ್ಲೆ ಅಮೇರಿಕಾ ಹಾಗೂ ಬರ್ಮಾ ಶೆಲ್ ಕಂಪನಿಗಳೊಡನೆ ವ್ಯವಹಾರ ನಡೆಸುತ್ತಲಿದೆ.

ಟ್ರೂಮನ್ನರ ಸಂದೇಶ

ಶಾಶ್ವತ ಶಾಂತಿ ಸಾಧನೆಗಾಗಿ ಸ್ವತಂತ್ರ ಜಗತ್ತನ್ನು ನಿರ್ಮಿಸುವದಕ್ಕಾಗಿಯೆ ಅಮೇರಿಕೆಯು ತನ್ನ ಎಲ್ಲ ಸಂಪತ್ತನ್ನು ಮೀಸಲಾಗಿರಿಸುವದು ಎಂದು ಅಧ್ಯಕ್ಷ ಟ್ರೂಮನ್ನರು ಜಾಗತಿಕ ಮಹಾ ಯುದ್ಧದ ಮುಕ್ತಾಯ ದಿನದ 33ನೇ ವಾರ್ಷಿಕೋತ್ಸವದ ನಿಮಿತ್ತ ಆಕಾಶವಾಣಿಯ ಮೂಲಕ ಜಗತ್ತಿನ ಜನತೆಗೆ ಸಂದೇಶವನ್ನಿತ್ತರು.

ನೋಟೀಸು

ಉಡುಪಿ ತಾಲ್ಲೂಕ ಬೆಳ್ಳಂಪಳ್ಳಿ ಗ್ರಾಮದ ಹೊಸಮನೆಯಲ್ಲಿರುವ ದೇವಮ್ಮ ಸೆಟ್ಟೇರ ಮಗಳು ಅಕ್ಕಮ್ಮ ಸೆಟ್ಟಿಯು ಸರ್ವ ಜನರಿಗೆ ತಿಳಿಯಪಡಿಸುವದು–

ನನ್ನ ಕುಟುಂಬದ ಹಿಂದಿನ ಯಜಮಾನರಾಗಿದ್ದ ನನ್ನ ಅಜ್ಜಿ ಶೀನಪ್ಪ ಸೆಟ್ಟಿ ತಾರೀಕು 1-6-1950ನೇ ದಿವಸ ಮೃತಪಟ್ಟಂದಿನಿಂದ ನಾನು ನನ್ನ ಕುಟುಂಬದ ಯಜಮಾನ್ತಿಯಾಗಿದ್ದು ನನ್ನ ಮಗ ಕೃಷ್ಣಯ್ಯ ಸೆಟ್ಟಿಯವರಿಗೆ ಕುಟುಂಬದ ಮನೆಯಾಕ್ಷಿ ಜೀವಿಸಿ ಬರುತ್ತೇನೆ. ಏನಗೆ ಬರಹ ವಿಲ್ಲದ್ರಿಂದೂ ನನ್ನ ಕುಟುಂಬದ ಮೆಂಬರೊಳಗೆ ವಿವಾದ ಬರುವದರಿಂದಲೂ ನನ್ನಿಂದ ಕುಟುಂಬದ ಮೆಂಬರರು ಅಥವಾ ಒಕ್ಕಲುಗಳು ಮೋಸದಿಂದ ರಶೀದಿ ವಗೈರೆ ರೆಕಾರ್ಡುಗಳನ್ನು ಮಾಡಿಕೊಳ್ಳಲಿಕ್ಕೆ ಆಸ್ಪದವಾಗದಂತೆ ನನ್ನಿಂದ ರಶೀದಿ ಪಡೆಯುವವರು ವ ಬರಹ ಮೂಲಕ ಯಾವತ್ತೂ ಒಟ್ಟಿಗೆ ವ ರೆಕಾರ್ಡುಗಳನ್ನು ಮಾಡಿಕೊಳ್ಳುವವರು ನನ್ನ ಮಗ ಕೃಷ್ಣಯ್ಯ ಸೆಟ್ಟಿಯ ಬರಹ ಅಥವಾ ಸಾಕ್ಷಿಸಹಿತ ನನ್ನ ಹೆಬ್ಬೆಟ್ಟು ಗುರ್ತು ಹಾಕಿಕೊಂಡು ರಶೀದಿ ವಗೈರೆ ರೆಕಾರ್ಡುಗಳನ್ನು ಮಾಡಿಕೊಳ್ಳಬೇಕಲ್ಲದೆ ಇತರ ವಿಧದಿಂದ ಮಾಡಿಕೊಂಡ ಯಾವತ್ತೂ ರಶೀದಿ ವ ರೆಕಾರ್ಡುಗಳು ಸಿಂಧುವಾಗತಕ್ಕವುಗಳಲ್ಲ.

● ಮೇಲಕ್ಕೆ ಹೆಬ್ಬೆಟ್ಟಿನ ಗುರ್ತು ಅಕ್ಕಮ್ಮ ಸೆಟ್ಟಿಯದ್ದಾಗಿರುತ್ತದೆ

ಬೆಳ್ಳಂಪಳ್ಳಿ ತಾ. 12-11-51

Approved from by the Govt. of Mysore Certificated by the Agent of the Govt of Cylone. & Indian

ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—

ನವಭಾರತಪುಸ್ತಕಭಂಡಾರ ಉಡುಪಿ.

ಮತದಾರರಿಗೆ

"ಮುಂಬರುವ ಚುನಾವಣೆಗಳಲ್ಲಿ ಆದಷ್ಟು ಬೇಗ ಕರ್ನಾಟಕ ಪ್ರಾಂತ ತಲೆಯೆತ್ತುವದಕ್ಕೆ ನೆರವಾಗುವದಾಗಿ ಪ್ರತಿಜ್ಞೆಗೈಯುವ ಹುರಿಯಾಳುಗಳಿಗೆ ಮಾತ್ರ ಕನ್ನಡಿಗರು ಮತ ಕೊಡಬೇಕು."

—ಸ್ವಾಮಿ ಸೀತಾರಾಮರು.

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ ೧೫-೧೧-'೫೧

ಕಾಂಗ್ರೆಸ್ ಪ್ರಚಾರ ಕಾರ್ಯ

ಪ್ರಚಾರ ಕಾರ್ಯವೆಂಬುದು ಚುನಾವಣೆಯ ಒಂದು ಮುಖ್ಯ ಅಂಗ. ಪತ್ರಿಕೆಗಳ ಮೂಲಕವೂ ಭಾಷಣಗಳ ಮೂಲಕವೂ ಅದನ್ನು ಕೈಗೊಳ್ಳುವ ಕ್ರಮವೇನೋ ಇದೆ. ಈಚೆಗೆ ಕಾಂಗ್ರೆಸ್ ಕಾರ್ಯಕರ್ತರು ಭಾಷಣ ಮೂಲಕ ಕೈಗೊಂಡಿರುವ ಕುರಿತು ನಾಲ್ಕು ಮಾತನ್ನು ಇಲ್ಲಿ ಹೇಳುವದು ಸೂಕ್ತವೇ ಆಗಿದೆ.

ಪ್ರಚಾರಕಾರ್ಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕಾದ ಆವಶ್ಯಕತೆಯು ವಿರೋಧಿ ಪಕ್ಷಗಳಿಗೆಷ್ಟೋ ಅಷ್ಟೇ ಅವಶ್ಯಕತೆಯು ಕಾಂಗ್ರೆಸ್ಸಿಗೂ ಇದೆ. ಮಾತ್ರವಲ್ಲ ಹಲವು ಸಂದರ್ಭಗಳಲ್ಲಿ ಜನತೆಗೆ ಸರಿಯಾದ ಮಾರ್ಗದರ್ಶನಮಾಡುವ ಹೊಣೆಗಾರಿಕೆಯು ಕಾಂಗ್ರೆಸಿಗಿದ್ದೇ ಹೆಚ್ಚಾಗಿದೆಂದರೂ ತಪ್ಪಾಗದು. ವಿರೋಧಿ ಪಕ್ಷಗಳು ಕಾಂಗ್ರೆಸ್ ಆಳಿದ ನಾಲ್ಕು ವರ್ಷಗಳಲ್ಲಿ ತಪ್ಪಿರುವ-ಇಲ್ಲವೆ ಲೋಪದೋಷಗಳು ಕಂಡು ಬಂದಿರುವ ಅಂಶವನ್ನಷ್ಟೇ ಎತ್ತಿಕೊಂಡು ಟೀಕೆ ಮಾಡುತ್ತಲಿವೆ. ಹಲವು ಸಂದರ್ಭಗಳಲ್ಲಿ ಈ ದೋಷಾರೋಪಣೆಗಳು ಅತಿರಂಜಿತವಾಗಿಯೂ, ವಸ್ತುಸ್ಥಿತಿಗೆ ವಿರೋಧವಾಗಿಯೂ ಬಂದಿರಬಹುದು! ರಾಜಕೀಯ ಜ್ಞಾನವಿಲ್ಲದ ಜನ ಅಂತಹ ಟೀಕೆಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳುವದು ಸ್ವಾಭಾವಿಕ! ಏಕೆಂದರೆ ಸದ್ಯ ಅಧಿಕಾರಾರೂಢವಾಗಿರುವ ಪಕ್ಷ ಕಾಂಗ್ರೆಸ್ಸು. ತಿಳಿದೋ ತಿಳಿಯದೆಯೋ ಹಲವು ಪ್ರಮಾದಗಳಾಗಿರಬಹುದು. ಅದನ್ನು ಮಹತ್ತಾಗಿ ತಿಳಿದುಕೊಂಡು ಕಾಂಗ್ರೆಸು ಆಳಲು ಅಸಮರ್ಥವಾಗಿದೆ, ಅದುದರಿಂದ ಇನ್ನೊಂದು ಪಕ್ಷ ಅಧಿಕಾರ ವಹಿಸಿಕೊಳ್ಳಲಿ ಎಂದು ಆಶಿಸುವಲ್ಲಿ ಬರುವ ಪಕ್ಷಗಳು ಏನನ್ನು ಸಾಧಿಸಬಲ್ಲವು? ಅವುಗಳ ಕೈಯಿಂದ ಇಷ್ಟಾದರೂ ಆದೀತೇ? ದೇಶದ ಮುಂದಿರುವ ಗಂಡಾಂತರಗಳು ಪರಿಹಾರ್ಯವಾದಾವೇ? ಎನುವ ಭವಿಷ್ಯದ ಕಲ್ಪನೆ ಅವುಗಳಿಗಿರುವುದಿಲ್ಲ. ಅನುಭವವಿಲ್ಲದವರೂ-ಸಾಮಾನ್ಯ ವಿಚಾರಗಳಿಗೆ ಮಹತ್ವವನ್ನು ಕೊಟ್ಟು ದೇಶಹಿತದಂತಹ ವಿಶಾಲದೃಷ್ಟಿಯಿಲ್ಲದವರೂ ಬೇರಾದ ಕಡೆಗೆ ತಮ್ಮ ಬಲವನ್ನು ತೋರಿಸಬಹುದು. ಅದುದರಿಂದ ಕಾಂಗ್ರೆಸ್ಸಿಗೆ ಅತ್ಯತ ಸಮರ್ಥನೆ ಮಾಡಿಕೊಳ್ಳುವದು ಸ್ವಲ್ಪ ಕಷ್ಟ, ಮಾತ್ರವಲ್ಲ ಅವಶ್ಯ ಕೂಡಾ ಆಗಿರುತ್ತದೆ.

ಹೇಗಿದ್ದರೂ ಕಾಂಗ್ರೆಸ್ಸು ಘನಸ್ಥಿಕೆ ಹಾಗೂ ಸಚ್ಚಾರಿತ್ರ್ಯದ ಹಿನ್ನೆಲೆಯುಳ್ಳ ಮಹಾಸಂಸ್ಥೆ. "ನಮಗೆ ಸೋಲಾದರೂ ಚಿಂತಿಲ್ಲ; ಆದರ್ಶವನ್ನು ಬಿಡಲಾರೆವು" ಎಂದು ಶ್ರೀ ನೆಹ್ರೂರವರು ಹೇಳಿರುವದು ಕಾಂಗ್ರೆಸ್ಸಿನ ಶ್ರೇಷ್ಠ ಆದರ್ಶವನ್ನು ಉಳಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದಲೇ. ಅದುದರಿಂದ ವಿರೋಧ ಪಕ್ಷದವರು ಟೀಕೆ ಮಾಡಿದರೂ-ಮರ್ಯಾದೆಯನ್ನು ಬಿಟ್ಟು ವರ್ತಿಸಿದರೂ ಕಾಂಗ್ರೆಸು ತನ್ನ ಗಾಂಭೀರ್ಯವನ್ನು ಬಿಟ್ಟು ಕೆಳಗಿಳಿಯಬಾರದು. ವಸ್ತುಸ್ಥಿತಿಯನ್ನು ಮರೆಮಾಚಿ ಹಾರಿಕೆಯ ಮಾತನ್ನು ಆಡಕೂಡದು! ಆಡುವ ಭಾಷೆಯಲ್ಲಿ ಒಂದು ಬಗೆಯ ನಯ, ಯಥಾರ್ಥ ವಿಚಾರ ಪ್ರತಿಪಾದನೆಯೇ ಅದರ ಗುರಿಯಾಗಿರಬೇಕು. ಅನ್ಯಾಯಕರವಾಗಿ ನಡೆಯುತ್ತಿರುವ ಬೈಗಳ ಸುರಿಮಳೆಯಿಂದ ವಿವೇಕ ತಪ್ಪುವದು ಸ್ವಾಭಾವಿಕವಾದರೂ ಗಾಂಧೀಜಿ ನೀಡಿದ "ಅಹಿಂಸೆ"ಯ ಶಸ್ತ್ರದಿಂದ ಅದನ್ನು ನಿಗ್ರಹಿಸಬೇಕಾಗಿದೆ.

ನಾವು ಮೊದಲೇ ಹೇಳಿದ ಹಾಗೆ ತಪ್ಪು ನಮ್ಮಲ್ಲುಂಟು. ಜನತೆಯ ಕಣ್ಣಿನಲ್ಲಿ ಕಟ್ಟುವ ಪ್ರಮಾದಗಳನ್ನು ನಾವು ಅಲ್ಲಗಳೆಯುವ ಸಾಹಸ ಮಾಡಿದರೆ-ಹಾರಿಕೆಯ ಮಾತನ್ನಾಡಿದರೆ-ಅವರು ನಮ್ಮನ್ನು ಸಂಶಯ ದೃಷ್ಟಿಯಿಂದ ಕಾಣುವದು ಸ್ವಾಭಾವಿಕ! ಅದುದರಿಂದ ಬೇರೆಯವರ ಟೀಕೆಗಳನ್ನು ಇಷ್ಟವೆಂದಾಗಲೀ ಅನಿಷ್ಟವೆಂದಾಗಲೀ ಸಹಿಸುವದೇ ಸದ್ಯದ ವಾತಾವರಣಕ್ಕೆ ಹಿತವಾಗಿದೆ.

ಭಾಷಣವೆಂಬುದು ಒಂದು ಕಲೆ. ಆದರೆ ಅದನ್ನು ಸಂಪ್ರದಾಯ ಇಲ್ಲವೆ ಕರ್ತವ್ಯವೆಂದು ಹಲವರು ತಿಳಿದ ಹಾಗಿದೆ. ಏಕೆಂದರೆ ಈಚೆಗೆ ಕಾಂಗ್ರೆಸ್ ಪ್ರಚಾರ ಕಾರ್ಯ ಸಭೆಗಳಲ್ಲಿ ಹಲವು ಮಹನೀಯರು ಮಾಡಿದ ಭಾಷಣವನ್ನು ಲಕ್ಷಿಸುವಾಗ ಜನತೆಯನ್ನು ಆಕರ್ಷಿಸಿಕೊಳ್ಳುವ ವಾಕ್ಶಕ್ತಿ ಅವರಲ್ಲಿ ಸ್ವಲ್ಪ ಕಡಿಮೆಯೆ? ಎಂದು ಕಂಡದ್ದುಂಟು. ಉನ್ನತ ವಾದ ವಿಚಾರ-ಹಾಗೂ ಲೋಕಾನುಭವವುಳ್ಳವನು ಯೋಗ್ಯ ಭಾಷಣಗಾರನಾಗಲೇಬೇಕೆಂಬ ನಿಯಮವೇನಿಲ್ಲ! ಸಭೆಯ ಮುಂದೆ ಮಾತನಾಡುವ ಪ್ರತಿಭೆ ಬೇರೆಯೆ. "ಕಾಂಗ್ರೆಸ್ಸು ಮಹಾಸಂಸ್ಥೆ- ಅರ್ಧಶತಮಾನದಿಂದ ಸ್ವಾತಂತ್ರ್ಯಪ್ರಾಪ್ತಿಗಾಗಿ ಅದು ಹೋರಾಡಿದೆ-ಸಹಸ್ರಾರು ಜನರನ್ನು ಆತ್ಮಾಹುತಿಗೊಂಡ ಸಂಸ್ಥೆ-ಗಾಂಧಿ ಮಹಾಪುರುಷರ-ನೆಹ್ರೂ ನಮ್ಮ ಶ್ರೇಷ್ಠ ನಾಯಕ-ದೇಶಕ್ಕೆ ಹಿತವಾಗಬೇಕಾದರೆ ನಿಮ್ಮ ಓಟನ್ನು ಕಾಂಗ್ರೆಸ್ಸಿಗೇ ಕೊಡಬೇಕು" ಎಂಬಿಷ್ಟು ಅರ್ಥದ ಭಾಷಣಗಳು ಹೆಚ್ಚಾಗಿ ಕೇಳಿ ಬರುತ್ತಲಿವೆ. ನೆಹ್ರೂ ಗಾಂಧಿಯವರ ಹಿರಿಮೆಯ ಬಗ್ಗೆಯೂ-ಕಾಂಗ್ರೆಸ್ ಹಿರಿಯ ಸಂಸ್ಥೆಯೆನ್ನುವದರಲ್ಲೂ ನಮ್ಮ ಜನಕ್ಕೆ ಭಿನ್ನಾಭಿಪ್ರಾಯವಿಲ್ಲ. ಅದನ್ನು ಯಾರೂ ಅಪೇಕ್ಷಿಸುವದೂ ಇಲ್ಲ. ಜನತೆಗೆ ಬೇಕಾಗಿರುವದು ಆಗಿರುವ ತಪ್ಪುಗಳಿಗೆ ಕಾಂಗ್ರೆಸು ಕೊಡುವ ಸಮಾಧಾನ. ತಿರುಗಿ ಅದು ಅಧಿಕಾರಕ್ಕೆ ಬಂದರೆ ಅದು ದೇಶದ ಕಲ್ಯಾಣಕ್ಕಾಗಿ ಕೈಗೊಳ್ಳಲಿರುವ ವಿಧಾಯಕ ಕಾರ್ಯಕ್ರಮಗಳು! ಇವಿಷ್ಟನ್ನು ನಮ್ಮ ಪ್ರಚಾರಕರ್ತರು ಜನತೆಗೆ ಪ್ರತಿಬಿಂಬಿಸಬೇಕು. ಅನುಭವವಿಲ್ಲದ ಪೊಳ್ಳು ಆಶ್ವಾಸನೆಯೂ ಉಪಯೋಗವಿಲ್ಲ. ಕಾಶ್ಮೀರ ಸಮಸ್ಯೆ—ಮಹಾಪೂರ—ಅನ್ನಬಟ್ಟೆಯ ಬರ— ನಿರಾಶ್ರಿತರ ಸಮಸ್ಯೆ ಮುಂತಾದ ವಿಚಾರವನ್ನಷ್ಟೇ ಮತ್ತೆ ಮತ್ತೆ ಉದಾಹರಿಸಿ ಹೇಳುವದು ಸರಿಯಲ್ಲ!

ಪ್ರಚಾರಕರ್ತರು ಮುಖ್ಯವಾಗಿ ಇಷ್ಟನ್ನು ಗಮನಿಸಬೇಕು. (1) ನಾಲ್ಕು ವರ್ಷಗಳ ಆಡಳಿತದಲ್ಲಿ ಲೋಪದೋಷಗಳಿಗೆ ತಕ್ಕ ಸಮಾಧಾನ. (2) ಕಾಂಗ್ರೆಸ್ಸು ತಿರುಗಿ ಅಧಿಕಾರಕ್ಕೆ ಬಂದರೆ ಉತ್ಕರ್ಷವನ್ನು ಹೊಂದುವ ನಾನಾ ಬಗೆಯ ಯೋಜನಗಳು. ಈ ಯೋಜನೆಗಳು ಕೈಗೂಡಿದರೆ ದೇಶದಲ್ಲಿಯ ಆಹಾರ—ನಿರುದ್ಯೋಗಗಳ ಸಮಸ್ಯೆ ಪರಿಹಾರವಾಗಲು ಸಾಧ್ಯವಿದೆಯೆ? (3) ಬ್ಲ್ಯಾಕ್ ಮಾರ್ಕೆಟ್ ಲಂಚಗುಳಿತನದ ನಿರ್ಮೂಲನವನ್ನು ಹೇಗೆ ಕೈಗೊಳ್ಳಬಹುದು, (4) ಜನತೆಯು ಸರಕಾರಕ್ಕೆ ಯಾವ ಬಗೆಯ ಸಹಕಾರವನ್ನು ನೀಡಬೇಕು? ಎನುವ ಪ್ರಮುಖ್ಯ ವಿಷಯದ ಮೇಲೆ ಮಾತನಾಡಬೇಕು. ಭಾಷಣಕರ್ತನು ಕಾಂಗ್ರೆಸ್ ಈ ವರೆಗೆ ಸಾಧಿಸಿದ ಕಾರ್ಯಕ್ರಮಗಳನ್ನೂ—ಮುಂದಿನ ಯೋಜನೆಗಳನ್ನೂ ಅಂಕಿಸಂಖ್ಯೆಗಳ ಮೂಲಕ ಜನತೆಗೆ ತಿಳಿಸಿ ಅದರಿಂದ ಇಂತಿಷ್ಟು ವರ್ಷಗಳಲ್ಲಿ ನಾವು ಸ್ವಾವಲಂಭಿಗಳಾಗುತ್ತೇವೆ- ನಮ್ಮ ಗಂಭೀರ ಸ್ವರೂಪದ ಸಮಸ್ಯೆ ದೂರಾಗಲು ಶಕ್ಯವಿದೆ, ಎನ್ನುವದನ್ನು ಸ್ಪಷ್ಟೀಕರಿಸಬೇಕು. ಇಷ್ಟನ್ನು ನಾವು ಹೇಳುವಾಗ ವಿಷಯವನ್ನು ಪ್ರತಿಪಾದಿಸುವ ವ್ಯಕ್ತಿಯಲ್ಲಿ ಭಾಷಣಕಲೆಯ ಹುಟ್ಟು ಶಕ್ತಿ ಆವಶ್ಯವಾಗಿ ಇರಬೇಕೆಂಬುದನ್ನು ಮರೆಯಲಾಗದು. ಭಾಷಣಕರ್ತ ಅರಸಿಕನಾದರೆ ವಿಷಯ ಎಷ್ಟೇ ಮಹತ್ವದ್ದಾದರೂ ಜನತೆಯ ಮೇಲೆ ಅದು ಪರಿಣಾಮವನ್ನು ಮಾಡುವಂತಿಲ್ಲ! ಕೇವಲ ವರದಿ ವಾಚನವೇ ಆದೀತು! ಆದುದರಿಂದ ಅಂತಹ ಪ್ರತಿಭಾಸಂಪನ್ನ ವ್ಯಕ್ತಿಗಳನ್ನೇ ಕಾಂಗ್ರೆಸು ಪ್ರಚಾರ ಕಾರ್ಯಕ್ಕಾಗಿ ಆರಿಸಿಕೊಳ್ಳುವ ಆವಶ್ಯಕತೆಯನ್ನು ಒತ್ತಿ ಹೇಳುತ್ತೇವೆ. ಕಾಂಗ್ರೆಸ್ಸಿಗಿಂತಲೂ ಮಿಗಿಲಾಗಿ ವಿರೋಧಿ ಪಕ್ಷಗಳು ಜನತೆಯನ್ನು ಒಲಿಸಲು ಯತ್ನ ಮಾಡಿರುವಲ್ಲೆಲ್ಲ ಈ ಮಾತಿನ ಮಲ್ಲತನವೇ ಗಣ್ಯಸ್ಥಾನವನ್ನು ಪಡೆದದ್ದನ್ನು ಲಕ್ಷಿಸಿ ಕಾಂಗ್ರೆಸ್ಸಿಗರಿಗೆ ಈ ಮಾತನ್ನು ಹೇಳಬೇಕಾಗಿ ಬಂತು!

ಸಭ್ಯತೆ ಹಾಗೂ ನಿರ್ವಿಕಾರ ಮನಸ್ಸಿನಿಂದ ಕಾಂಗ್ರೆಸ್ಸಿನಲ್ಲಿ ದುಡಿಯಿರಿ

ನಮ್ಮ ಹುರಿಯಾಳುಗಳ ಪರಿಷ್ಕೃತ ಯಾದಿಗಳು ಈಗಾಗಲೇ ಪ್ರಕಟನೆಗೊಂಡಿರುತ್ತವೆ. ಹುರಿಯಾಳುಗಳ ಯಾದಿಯನ್ನು ಪರಿಶೀಲಿಸುವಲ್ಲಿ ಕಾಂಗ್ರೆಸು ಅನುಸರಿಸಿದ ಪದ್ಧತಿ ಸರಿಯಾಗಿಲ್ಲದಿದ್ದರೂ ಮುಂದಕ್ಕೆ ಅದರಿಂದ ಒಳ್ಳೆಯ ಅನುಭವವಾಗುವದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರಲಾಲರು ನುಡಿದಿರುವರು. ಜಿಲ್ಲಾ ಹಾಗೂ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಯಾದಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಕೇಂದ್ರ ಚುನಾವಣಾ ಸಮಿತಿಗೆ ವಿಶೇಷ ತಲೆಸಿಡಿತವುಂಟಾಗಿರಬೇಕೆಂಬುದಕ್ಕೆ ಶ್ರೀ ನೆಹ್ರೂರವರ ಹೇಳಿಕೆಯಿಂದ ಗೊತ್ತಾಗುತ್ತದೆ. ಒಂದು ಸ್ಥಾನಕ್ಕೆ ಐದೋ-ಹತ್ತೋ ಹುರಿಯಾಳುಗಳಿರುವಾಗ ಯಾರನ್ನು ಆರಿಸಬೇಕೆಂಬ ಬಿಕ್ಕಟ್ಟುಂಟಾಗುವದು ಸ್ವಾಭಾವಿಕ. ಒಬ್ಬನೇ ಬೇಕಾದಲ್ಲಿ ಬೇರೆಯವರನ್ನು ಸಂತೈಸುವ ಧೋರಣೆಯನ್ನು ವಹಿಸುವದು ಶಕ್ಯವಿಲ್ಲ. ಎಲ್ಲರೂ ಯೋಗ್ಯತೆಯುಳ್ಳವರಿರಬಹುದು— ಹಲವರು ಅರ್ಹತೆಯುಳ್ಳವರು ಇರಬಹುದು. ಒಬ್ಬನನ್ನಷ್ಟೇ ಆರಿಸಬೇಕಾದ ಈ ಸಂದರ್ಭದಲ್ಲಿ ಉಳಿದವರ ಯೋಗ್ಯತೆ ಕಡಿಮೆಯೆನ್ನಲಾಗದು! ಮಾತ್ರವಲ್ಲ ಹಲವರ ಅರ್ಹತೆಯನ್ನು ಇಲ್ಲಿಂದ ದಿಲ್ಲಿಗೆ ಹೋಗಿರುವ ಯೋಗ್ಯತಾಪತ್ರಗಳಿಂದಲೇ ನಿಷ್ಕರಿಸಬೇಕಾದ ಪ್ರಸಂಗವಿರುವದರಿಂದ ಸಹಜವಾಗಿ ಯೋಗ್ಯತೆಯುಳ್ಳವನಿಗೆ ಪ್ರಾಶಸ್ತ್ಯವಿಲ್ಲದೆ ಹೋಗಬಹುದು. ಆದುದರಿಂದ ಉಳಿದವರ ವಿಚಾರದಲ್ಲಿ ಪಕ್ಷಪಾತಮಾಡಲಾಗಿದೆಂದು ಆರೋಪ ಹೊರಿಸುವದು ತಪ್ಪಾಗುವದು. ಮೂರು ಸಾವಿರಕ್ಕಿಂತಲೂ ಮಿಗಿಲಾದ ದೂರುಗಳನ್ನು ಕೇಂದ್ರ ಚುನಾವಣಾ ಸಮಿತಿಯು ಪರಿಶೀಲಿಸಿದೆ. ಹಲವು ಸಂದರ್ಭಗಳಲ್ಲಿ ಹುರಿಯಾಳುಗಳನ್ನು ಅಲ್ಲಿಗೆ ಬರಮಾಡಿಕೊಂಡು ವಿಚಾರಣೆ ನಡೆಸಿದ್ದುಂಟು! ಶ್ರೀ ನೆಹ್ರೂರವರು ಹೇಳಿದಂತೆ ಈ ಯಾದಿ ಪರಿಪೂರ್ಣವೆಂತಲ್ಲ; ಆದರೂ ಅದರಿಂದ ಉಪಯೋಗವುಂಟೆಂಬ ಭಾವನೆ ತಪ್ಪಲ್ಲ!

ಪರಿಸ್ಥಿತಿ ಹೀಗಿರುವದಾದರೂ ಕಾಂಗ್ರೆಸ್ಸು ವರಿಷ್ಠರು ಪಕ್ಷಪಾತಮಾಡಿದರೆಂದೂ-ಜಾತೀಯತೆಯನ್ನು ತೋರಿಸಿದರೆಂದೂ-ದೂರು ಕೇಳುತ್ತಲಿದೆ. ಇಂತಹ ಆಪವಾದಗಳಿಗೆ ಒಂದುವೇಳೆ ಜಿಲ್ಲಾ ಹಾಗೂ ಪ್ರಾದೇಶಿಕ ಸಮಿತಿಗಳು ಹೊಣೆಗಾರರಾಗುವದಾದರೂ ಕೇಂದ್ರ ಚುನಾವಣಾ ಸಮಿತಿ ಎಷ್ಟು ಮಾತ್ರಕ್ಕೂ ಗುರಿಯಾಗದು! ಹೆಚ್ಚಾಗಿ ಇಲ್ಲಿನ ಆಧಾರ ಅನುಭವಗಳ ಮೇಲೆ ನಿಷ್ಕರ್ಷೆಗೆ ಬರುವ ಪ್ರಯುಕ್ತ ಇಲ್ಲಿಯ ಕಾರ್ಯ ಹೆಚ್ಚಿನ ಪ್ರಾಮಾಣಿಕತೆಯಿಂದ ಕೂಡಿರಬೇಕೆಂಬುದು ನಿರ್ವಿವಾದ. ಮೂಲವೇ ದೋಷಪೂರ್ಣವಾದುದಾದರೆ ಕೇಂದ್ರದಿಂದ ಸರಿಯಾದ ನ್ಯಾಯದಾನವಾಗಲು ಶಕ್ಯವಿಲ್ಲ. ಪ್ರಾದೇಶಿಕದ ವಾಸ್ತವಿಕ ವಿಚಾರದ ಮೇಲೆ ಕೇಂದ್ರದವರು ಕ್ಷಕಿರಣ ಒತ್ತಿಯುವ ಪದ್ಧತಿ ಅಷ್ಟೊಂದು ಸರಿಯಲ್ಲವೆಂಬುದು ಈಗ ಅನುಭವವಾಗಿದೆ.

ಹೇಗಿದ್ದರೂ ಜನ ದೇಶಹಿತದಂತಹ ವಿಶಾಲ ದೃಷ್ಟಿಯನ್ನಿಟ್ಟುಕೊಂಡು ಸಭ್ಯತೆಯಿಂದ—ಅತ್ಯಂತ ನಿಷ್ಠೆಯಿಂದ—ಕಾಂಗ್ರೆಸ್ಸಿನ ವಿಜಯದ ಸಲುವಾಗಿ ಹೋರಾಟ ನಡೆಸಬೇಕಾಗಿದೆ. ತಮಗೆ ಸ್ಥಾನ ಸಿಗಲಿಲ್ಲವೆಂಬ ಕಾರಣದ ಮೇಲೆ ಯಾರೂ ನಿರಾಶೆ—ನಿರುತ್ಸಾಹವನ್ನು ತಾಳುವದು ಯೋಗ್ಯ ಹುರಿಯಾಳುವಿನ ಲಕ್ಷಣವೂ ಅಲ್ಲ; ಧರ್ಮವೂ ಅಲ್ಲ! ನೊಂದುಕೊಂಡು ಬೇರೆ ಪಕ್ಷದಲ್ಲಿ ಆಸ್ಥೆ ತೋರುವದೂ—ಇಲ್ಲವೆ ಸ್ವತಂತ್ರವಾಗಿ ನಿಲ್ಲುವದು ತತ್ವಬಾಹಿರರ ಲಕ್ಷಣವೇ ಹೊರತು ವಿನಯಶೀಲರ ಲಕ್ಷಣವಾಗದು.

ಉಡುಪಿ

ಎಯಿಡೆಡ್ ಶಾಲಾ ಮೆನೇಜರರ ಸಭೆಯು—ತಾ. 11ರಲ್ಲಿ ಬೋರ್ಡ್ ಹೈ ಸ್ಕೂಲಿನಲ್ಲಿ ಶ್ರೀ. ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಭೆ ಕರೆದುದರ ಉದ್ದೇಶವನ್ನು ಶ್ರೀ ಕಂಕನಾಡಿ ಗಣಪಯ್ಯ ಸೆಟ್ಟರು ತಿಳಿಸಿದ ನಂತರ ಶ್ರೀ ಕೆ ಜಗನ್ನಾಥ ನಾಯ್ಕರು ಗತಸಭೆಯ ವರದಿಯನ್ನೋದಿದರು. ಶ್ರೀಗಳಾದ ಗೋವಿಂದ ಸೆಟ್ಟಿ, ಶ್ರೀನಿವಾಸ ಮಿತ್ತಂತಾಯ, ದಾಮೋದರ ಸೆಟ್ಟಿ, ಎಮ್ ಎಲ್. ಕಲ್ಕೂರ ಮೊದಲಾದವರು ಸರಕಾರದ ಈಗಿನ ರೂಪಾಯಿ ಮೂರು ಜಾಸ್ತಿ ಉಪಾಧ್ಯಾಯರಿಗೆ ಕೊಡಲೇಬೇಕೆನ್ನುವ ಧೋರಣೆಯ ಪರಿಣಾಮವನ್ನೂ ಮೆನೇಜರರ ಪಾಲಿನ ಹಾನಿಗಳನ್ನೂ ಎತ್ತಿ ಮಾತನಾಡಿದರು. ಶ್ರೀ ಪ ಜಿ. ಆಳ್ವರವರು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿ ಮುಂದಿನ ಚುನಾವಣೆಯಲ್ಲಿ ಉಡುಪಿ ಕ್ಷೇತ್ರದಿಂದ ಈ ದಿವಸದ ಅಧ್ಯಕ್ಷರೇ ಕಾಂಗ್ರೆಸ್ ಟಿಕೇಟಿನಿಂದ ಹುರಿಯಾಳಾಗಿ ನಿಲ್ಲಲಿದ್ದಾರೆ. ಅವರು ಆರಿಸಲ್ಪಟ್ಟರೆ ತಮ್ಮ ಕಷ್ಟಗಳನ್ನು ಪರಿಹರಿಸಲು ಅವರು ಮುಂದಾಗುವರು ಎಂದು ಹೇಳಿದರು; ಶ್ರೀ ಶ್ರೀಪತಿ ಆಚಾರ್ಯರು ಕೂಡ ಮಾತನಾಡುತ್ತಾ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಅಧ್ಯಕ್ಷರು ಸಮಯೋಚಿತ ಮಾತುಗಳನ್ನಾಡುತ್ತಾ ತಾನು ಆದಷ್ಟು ಮಟ್ಟಿಗೆ ಬಡ ಮೆನೇಜರರ ಸಂಕಷ್ಟಗಳನ್ನೂ ನೀಗಲು ಯತ್ನಿಸುವೆನೆಂದರು. ಕಳೆದ ಎಪ್ರಿಲ್ ತಿಂಗಳಿಂದ ಟ್ರೈನ್ಡ ಉಪಾಧ್ಯಾಯರಿಗೆ ತಿಂಗಳೊಂದರ ಮೂರು ರೂಪಾಯಿ ಜಾಸ್ತಿ ಸಂಬಳ ಮೆನೇಜರರು ಕೊಡಬೇಕೆನ್ನುವ ಸರಕಾರಿ ಹುಕುಮವನ್ನು ನಿಷೇಧಿಸುವ ಆ ಹುಕುಮನ್ನು ಹಿಂದೆ ತೆಗೆದುಕೊಳ್ಳಬೇಕೆನ್ನುವ, ಮೆನೇಜರರು ಸರಕಾರಿ ಹುಕುಮಿನಂತೆ ಜಾಸ್ತಿ ಸಂಬಳ ಕೊಡಲು ಅಸಮರ್ಥರಾಗಿರುವುದರಿಂದ ಸಂದರ್ಭಬಿದ್ದರೆ ತಮ್ಮ ಶಾಲೆಗಳನ್ನು ಸರಕಾರಕ್ಕೆ ಬಿಟ್ಟುಕೊಡಲು ಸಿದ್ಧರಿರುವರೆನ್ನುವ ಇತ್ಯಾದಿ ನಿರ್ಣಯಗಳಾದುವು. ಶ್ರೀ ಕೆ. ಗಣಪಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸುತ್ತಾ ಇಂದಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಮದ್ರಾಸು ಎಸೆಂಬ್ಲಿಗೆ ಆರಿಸಿಬರುವಂತೆಯೂ ಹಾಗೆಯೇ ಕಾಂಗ್ರೆಸ್ ಹುರಿಯಾಳುಗಳು ಜಯಶೀಲರಾಗುವಂತೆಯೂ ಶಾಲಾ ಮೆನೇಜರರು ಪ್ರಯತ್ನಿಸಬೇಕೆಂದರು. ಶ್ರೀ ಕೆ. ಜಗನ್ನಾಥ ನಾಯ್ಕರು ಕೂಡಾ ಅದನ್ನೇ ಪುಷ್ಟೀಕರಿಸಿ ಮಾತನಾಡಿದರು. ಮುಂದಿನ ಮಾರ್ಚ ತಿಂಗಳ ತನಕ ತಿಂಗಳೊಂದರ ರೂ. 25ರಂತೆ ಈ ಸಂಘಕ್ಕೆ ಸಹಾಯಧನ ಕೊಡುವೆನಾಗಿ ಶ್ರೀ ಶ್ರೀಪತಿ ಆಚಾರ್ಯರು ಹೇಳಿದರು.

ಕರ್ನಾಟಕ ಯುನಿವರ್ಸಿಟಿ ಕಮಿಶನ್—ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ, ಇದರ ಕಡೆಯಿಂದ ತೆರೆಯಲಾಗುವ ಕಸ್ತೂರಿಬಾ ಮೆಡಿಕಲ್ ಕಾಲೇಜನ್ನು ಕರ್ನಾಟಕ ಯೂನಿವರ್ಸಿಟಿಗೆ ಸೇರಿಸಿಕೊಳ್ಳುವ ಕುರಿತು ದಶಂಬರ ತಿಂಗಳೊಳಗಾಗಿ ವರದಿಮಾಡುವರೆ ಯುನಿವರ್ಸಿಟಿ ಕಡೆಯಿಂದ ಮೂವರು ಡಾಕ್ಟರರು ಒಬ್ಬ ವಕೀಲರಿರುವ ಕಮಿಶನ್ ಒಂದು ಸದ್ಯವೇ ಉಡುಪಿಗೆ ಬರಲಿದೆ ಎಂದು ಎಕೆಡೆಮಿ ರಿಜಿಸ್ಟ್ರಾರ್ ಡಾ| ಟಿ. ಎಮ್. ಎ. ಪೈಗಳು ಇದೇ ತಾ. 9ರಲ್ಲು ಪತ್ರಿಕೋದ್ಯೋಗಿಗಳ ಸಭೆಯಲ್ಲಿ ತಿಳಿಸಿದರು. ತಮ್ಮ ಯೋಜನೆಗೆ ಕರ್ನಾಟಕ ಹಲವೆಡೆಗಳಿಂದಲೂ ಯೋಗ್ಯ ಸನ್ಮಾನ ದೊರೆತಿರುವುದಾಗಿಯೂ ಹೇಳಿದರು.

ವಿವಾಹ—ಶ್ರೀ ಅಂಜಾರು ಸಂಜೀವ ಶುಕ್ಲ ಹೆಗ್ಗಡೆಯರ ಪುತ್ರ ಶ್ರೀ ಸದಾಶಿವ ಹೆಗ್ಗಡೆಯವರು ಶ್ರೀ ತೋನ್ಸೆ ಶ್ರೀನಿವಾಸ ಹೆಗ್ಗಡೆಯರ ಪುತ್ರಿ ಸೌ| ಸರಸ್ವತಿಯನ್ನು ತಾರೀಖು 11-11-51ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಕಲಾವೃಂದ—ಲಕ್ಷದೀಪೋತ್ಸವದ ನಿಮಿತ್ತ ಉಡುಪಿ ಕಲಾವೃಂದದವರು ಜರಗಿಸಿದ ಸಾಹಿತ್ಯೋತ್ಸವವು ತಾ. 11, 12, 13, ಈ ಮೂರು ದಿನಗಳಲ್ಲಿ ಸಾಂಗವಾಗಿ ನೆರವೇರಿತು. ಶ್ರೀ ಉಗ್ರಾಣ ಕೃಷ್ಣರಾವ್, ಬಿ. ಎ. ಎಲ್. ಟಿ., ಕಾಲೇಜು ಲೆಕ್ಚರರ್, ಎಂ. ಎ., ಕೆ. ಸುಬ್ರಾಯ ಪುರಾಣಿಕ, ವಿದ್ವಾನ್, ಕೆ. ಪ. ದೇವದಾಸ ಶಿರೋಮಣಿ, ಎಂ. ರಾಜಗೋಪಾಲಾಚಾರ್ಯ ಶಿರೋಮಣಿ ಮುಂತಾದವರು ಭಾಷಣಕರ್ತರಾಗಿದ್ದರು.

ಕುಂದಾಪುರ—ಇದೇ ತಾ. 4ರಲ್ಲು ರಿ ಫಾ| ಲುಸಾರಿಯೋರವರ ಅಧ್ಯಕ್ಷತೆಯಲ್ಲಿ ಮಾರ್ಗೋಳಿಯಲ್ಲಿ, ಶ್ರೀ ಅಲ್ಬರ್ಟ ಮಿನೇಜಸರ ಅಧ್ಯಕ್ಷತೆಯಲ್ಲಿ ಗೋಪಾಡಿಯಲ್ಲಿ ಅದೇ ದಿನ ರಾತ್ರಿ ಕಾಳಾವರದಲ್ಲಿ, ತಾ. 5ರಲ್ಲು ಶಂಕರನಾರಾಯಣದಲ್ಲಿ ಶ್ರೀ ಶ್ರೀನಿವಾಸ ಉಡುಪರ ಅಧ್ಯಕ್ಷತೆಯಲ್ಲಿ, ತಾ. 9ರಲ್ಲು, ಕಂಡ್ಲೂರಲ್ಲಿ ಕೂಡಾ ಕಾಂಗ್ರೆಸ್ ಪ್ರಚಾರ ಸಭೆಗಳು ಜರಗಿ ಕಾಂಗ್ರೆಸ್ಸಿನ ಉದ್ದೇಶ ಗುರಿ ಮತ್ತು ಅದು ಸಾಧಿಸಿದ ಕೆಲಸಗಳ ಕುರಿತು ಶ್ರೀಗಳಾದ ಕೆ.ಎ. ಕಾರಂತ, ಎಮ್ ಎಮ್. ಹೆಗ್ಡೆ, ಎಸ್. ಎಸ್. ಪರಮೇಶ್ವರಯ್ಯ, ಬಿ. ಶಿವರಾಮ ಸೆಟ್ಟಿ, ಬಿ. ಗೋವಿಂದ ಮತ್ತು ವೈ. ಮಂಜಯ್ಯ ಸೆಟ್ಟಿ ಮೊದಲಾದವರು ಮಾತನಾಡಿದರು ಎಲ್ಲಾ ಸಭೆಗಳಲ್ಲು ಜನರು ಕಿಕ್ಕಿರಿದು ನೆರೆದು ತೋರಿಸಿದ ಸಹಕಾರ ಕಾಂಗ್ರೆಸ್ಸಿನ ಮುಂದಿನ ಯಶಸ್ಸನ್ನು ವ್ಯಕ್ತಪಡಿಸುತ್ತದೆ,

ಮೂಲೂರು:—ತಾ 1-11-51ರಲ್ಲಿ ಗ್ರಾಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಮಿಶ್ಯನ್ ಶಾಲಾ ವಠಾರದಲ್ಲಿ ಉಡ್ಪಿ ತಹಸೀಲ್ದಾರ್ ಶ್ರೀ ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀ ಭೋಜ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಜಿ. ಸೋನ್ಸ್, ಕುಕ್ಕಾಲು ಗಣಪಯ್ಯ ಶೆಟ್ಟಿ ಉಚ್ಚಿಲ ಸರ್ವಪ್ಪಯ್ಯ, ಕೆ. ಬಿ ರಾಮಯ್ಯ, ಜನಾರ್ದನ ಆಳ್ವ ಮೊದಲಾದವರು ಭಾಷಣ ಮಾಡಿದ ತರುವಾಯ ಮೂಲೂರು ಗ್ರಾಮಸ್ಥರಿಗೆ ಮತ್ತಗೊಬ್ಬರ ತಯಾರಿಸುವ ಬಗ್ಗೆ ಸರಕಾರದವರು ಕೊಟ್ಟ ಶಾಲೂಕು ಪಾರಿತೋಷಕವನ್ನು ಎ| ಡಿ. ಶ್ರೀ ಬಿ. ಶ್ರೀನಿವಾಸ ರಾಯರು ವಿತರಣೆ ಮಾಡಿದರು. ಬಳಿಕ ಶ್ರೀ. ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ರೂ| ಡಿ| ಆ| ಶ್ರೀ. ಇ. ಕಣ್ಣನ್ ನಾಮಧರಿಂದ ಜನತಾ ವಾಚನಾಲಯದ ಉದ್ಘಾಟನೆ ನಡೆಯಿತು ವಾಚನಾಲಯದ ಕುರಿತು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸಿಗೆ ಬೆಂಬಲ ಕೊಡುವ ಕುರಿತೂ ನೋಡಿಕೊಳ್ಳಬೇಕೆಂದು ಶ್ರೀ ಶ್ರೀಪತಿ ಆಚಾರ್ಯರು ಕುಕ್ಕಾಲು ಗಣಪಯ್ಯ ಶೆಟ್ಟಿ ಮಾತನಾಡಿದ ಮೇಲೆ ಅಧ್ಯಕ್ಷ ಭಾಷಣ, ಶ್ರೀ ಯಂ. ಬೊಮ್ಮಯ್ಯ ಶೆಟ್ಟರಿಂದ ಧನ್ಯವಾದಗಳಾಗಿ ಸಭಾಂತ್ಯವಾಯಿತು.

(ತಾ. 25-10-51ರ ಸಂಚಿಕೆಯಲ್ಲಿ ಆರು ಪೋಸ್ಟು ಹೊಂಡಗಳನ್ನು ' ತೆಗೆಸಿದ ಮಲ್ಲಾರು ಗ್ರಾಮಕ್ಕೆ ಎಂಬುವದನ್ನು ಮೂಲೂರು ಎಂದು ತಿದ್ದಿಪಡಿಸಿಕೊಳ್ಳತಕ್ಕದ್ದು.)

ದ. ಕ. ಜಿಲ್ಲೆಯ ಕಾಂಗ್ರೆಸ್ ಹುರಿಯಾಳುಗಳು

ಮದ್ರಾಸ್ ಶಾಸನ ಸಭೆಗೆ ದಿಲ್ಲಿ ಕೇಂದ್ರ ಚುನಾವಣಾ ಸಮಿತಿಯು ಒಪ್ಪಿದ ಯಾದಿ

ಕುಂದಾಪುರ:—ಶ್ರೀ ವೈ ಮಂಜಯ್ಯ ಶೆಟ್ಟಿ ಎಡ್ವಕೇಟ್.
ಬ್ರಹ್ಮಾವರ:—ಶ್ರೀ ಬಿ. ಜಗಜ್ಜೀವನದಾಸ ಸೆಟ್ಟಿ, L. M. E.
ಉಡುಪಿ:—ಶ್ರೀ ಟಿ. ಎ. ಪೈ. B. Com.
ಕಾರ್ಕಳ:—ಶ್ರೀ ಎ. ಬಿ. ಶೆಟ್ಟಿ.
ಪುತ್ತೂರು:—ಶ್ರೀ ಕೆ. ವೆಂಕಟ್ರಮಣ ಗೌಡ ಎಡ್ವಕೇಟ್.
ಶ್ರೀ ಕೆ. ಈಶ್ವರ (ಶೆಡ್ಯೂಲ್ಡ ಕ್ಲಾಸ್.)
ಮೂಲ್ಕಿ: ಶ್ರೀ ಎನ್. ಎಸ್. ಸುವರ್ಣ. ಎಡ್ವಕೇಟ್.
ಮಂಗಳೂರು:—ಶ್ರೀ ಎಲ್. ಸಿ. ಪಾಯ್ಸ್, ವಕೀಲ್.
ಪಾಣೆಮಂಗಳೂರು:. ಶ್ರೀ ಬಿ. ವೈಕುಂಠ ಬಾಳಿಗಾ, ವಕೀಲ್.
ಕಾಸರಗೋಡು:—ಜನಾಬ್ ಎಂ. ಎಸ್. ಮೊಗ್ರಾಲ್.
ಹೊಸದುರ್ಗ:—ಶ್ರೀ ಎಂ. ಕೆ. ನಂಬಿಯಾರ್.

ಪರಿಷ್ಕಾರ ಹೊಂದಿದ ಈ ಯಾದಿಯಲ್ಲಿ ಮುಖ್ಯ ಬದಲಾವಣೆಯೆಂದರೆ ಡಾ| ನಾಗಪ್ಪ ಆಳ್ವರವರ ಪಾಣೆಮಂಗಳೂರಿನ ಮತದಾನ ಕ್ಷೇತ್ರದಸ್ಥಾನಕ್ಕೆ ಶ್ರೀ ಬಿ. ವೈಕುಂಠ ಬಾಳಿಗಾರನ್ನು ಆರಿಸಿದ್ದು, ಅವರಣವೊಳಗಿದ್ದ ಶ್ರೀ ಕೆ. ಕೃಷ್ಣ—ಶ್ರೀ ಕೆ. ಈಶ್ವರ ಇವರೀರ್ವರಲ್ಲಿ ಎಂ. ಎಲ್. ಎಗಳಾದ ಶ್ರೀ ಕೆ. ಈಶ್ವರರನ್ನೇ ಆರಿಸಲಾಗಿದೆ.

ಕೇಂದ್ರ ಪಾರ್ಲಿಮೆಂಟಿಗೆ:—ಕುಂದಾಪುರ, ಉಡ್ಪಿ, ಕಾರ್ಕಳ, ತಾಲೂಕುಗಳನ್ನೊಳಗೊಂಡ ಉತ್ತರ ವಿಭಾಗಕ್ಕೆ ಶ್ರೀ ಯು. ಶ್ರೀನಿವಾಸ ಮಲ್ಯ.

ಮಂಗಳೂರು, ಪುತ್ತೂರು, ಕಾಸರಗೋಡು ತಾಲೂಕುಗಳನ್ನೊಳಗೊಂಡ ದಕ್ಷಿಣ ವಿಭಾಗಕ್ಕೆ ಶ್ರೀ ಬೆನಗಲ್ ಶಿವರಾವ್.

ಬೇಕಾಗಿದ್ದಾರೆ

ಕಾರ್ಕಡ ನ್ಯೂ ಎಲಿಮೆಂಟರಿ ಶಾಲೆಗೆ ಮೂರು ಜನ ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರು ಯಾ ಉಪಾಧ್ಯಾಯನಿಯರು ಬೇಕಾಗಿದ್ದಾರೆ. ಬೆಸಿಕ್ ಟ್ರೈನ್ಡ ಆದರೂ ಆಗಬಹುದು. ಸಂಬಳವು ಕ್ರಮಾನುಸಾರ, ಸರಕಾರಿ ನಿಯಮದಂತೆ ಕೊಡಲಾಗುವುದು. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಮೆನೇಜರ್
ಕಾರ್ಕಡ ನ್ಯೂ ಎಲಿಮೆಂಟರಿ ಶಾಲೆ.
ಪೋಸ್ಟು ಸಾಲಿಗ್ರಾಮ.

ತಾ. 9-11-51

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

S C No 195/1951

ಅಡೋಲ್ಫ ಬ್ಯಾರಿ. —ವಾದಿ

ಮತ್ತು

T. A. ಅಬ್ದುಲ್ಲ ಕುಂಞ ಬ್ಯಾರಿ ಬಿನ್ ಬಳ್ಳರ್ ಹಾಜ್ಯಾರರ ಮಗ, ಕಾಸರಗೋಡು ತಾಲೂಕು ಕಾಸರಗೋಡು ಕಸಬಾ ಗ್ರಾಮದ ತುರ್ತಿಯಲ್ಲಿರುವವ. —ಪ್ರತಿವಾದಿ.

ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಸಹ ವಸೂಲಿ ಕುರಿತು ದಾಖಲು ಮಾಡಿದ ಸದರೀ ವಾಜ್ಯಕ್ಕೆ ಪ್ರತಿವಾದಿಯು ಹಾಜರಾತಿ ಬಗ್ಗೆ ತಾ. 28-11-1951ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತಪ್ಪಿಗೆ ಇಟ್ಟಿರುವದರಿಂದ ಆ ಕುರಿತು ಪ್ರತಿವಾದಿಯು ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನಲ್ಲಿ ಹ್ಯಾಜರು ಮಾಡಬಹುದೆಂಬ ಸಂಗತಿ ಆತನ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಿಸೋಣಾಗಿಯದೆ.

K. Ganesh Rao,
ವಾದಿ ಕಡೆ ವಕೀಲ್.

ಕಾಸರಗೋಡು, ತಾ. 12-11-51

ಬ್ರಹ್ಮಾವರ ಸರ್ಕಲಿನ ಮತದಾರರಲ್ಲಿ ವಿಜ್ಞಾಪನೆ

ಮಾನ್ಯರೆ,

ಮುಂಬರುವ ಸಾರ್ವತ್ರಿಕ ಚುನಾವಣೆಗೆ ನನ್ನನ್ನು ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯವರು, ಬ್ರಹ್ಮಾವರ ಮತದಾರ ಕ್ಷೇತ್ರದಿಂದ ಮದ್ರಾಸ್ ಶಾಸನಸಭೆಗೆ ಕಾಂಗ್ರೆಸ್ ಹುರಿಯಾಳನ್ನಾಗಿ ಆರಿಸಿರುವುದು ತಮಗೆಲ್ಲಾ ತಿಳಿದ ವಿಚಾರವು. ಈ ಮತದಾರ ಕ್ಷೇತ್ರದಲ್ಲಿ ಬರುವ ದಿನಾಂಕ ೩-೧-೧೯೫೨ರಂದು ಮತದಾನ ಕಾರ್ಯಾಚರಣೆ ನಡೆಯಲಿರುವುದು. ಈ ತನ್ಮಧ್ಯೆ ನಾನು ನನ್ನ ಮತದಾರ ಬಂಧುಗಳಾದ ತಮ್ಮನೆಲ್ಲಾ ಮುಖ್ತಾ ನೋಡಲಿರುವೆನಾದರೂ ವಿಶಾಲವಾದ ಮತದಾರ ಕ್ಷೇತ್ರದಲ್ಲಿ ಎಲ್ಲಾ ಮತದಾರರನ್ನು ಒಮ್ಮೆಗೆ ನೋಡಲಾಗದಿದ್ದ ಸಂದರ್ಭದಲ್ಲಿ ನನ್ನನು ಮನ್ನಿಸಿ ದೇಶಾಭಿಮಾನಿಗಳೂ ಕಾಂಗ್ರೆಸ್ ಅಭಿಮಾನಿಗಳೂ ಆದ ತಾವೆಲ್ಲಾ ಏಕ ಮನಸ್ಸಿನಿಂದ ತಮ್ಮ ಪವಿತ್ರವಾದ "ಮತ"ದಿಂದ ದೇಶ ಹಾಗೂ ಜನತೆಯ ಕಲ್ಯಾಣದ ಕಡೆಗೆ ಲಕ್ಷ್ಯವಿಟ್ಟು ನನ್ನನ್ನು ಚುನಾಯಿಸಿ ತಮ್ಮೆಲ್ಲರ ಸೇವೆಮಾಡಲು ನನಗೆ ಪ್ರೋತ್ಸಾಹ ನೀಡುವಂತೆ ತಮ್ಮೆಲ್ಲರಲ್ಲಿ ನನ್ನ ನಮ್ರ ವಿಜ್ಞಾಪನೆ.

ಬಿ. ಜಗಜ್ಜೀವನ್‌ದಾಸ ಸೆಟ್ಟಿ L. M. E.
ಬ್ರಹ್ಮಾವರ

ನಮ್ಮ ಚಂದಾದಾರರಲ್ಲಿ

'ನವಯುಗ'ದ ಚಂದಾಹಣ ಬಾಕಿಯಾದವರಿಗೆಲ್ಲಾ ಅವರವರ ಬಾಕಿಯನ್ನು ಕಾಣಿಸಿ ಪ್ರತ್ಯಪ್ರತ್ಯೇಕ ಕಾಗದಗಳನ್ನು ಬರೆಯಲಾಗಿದೆ. ಎಲ್ಲರೂ ದಯಮಾಡಿ ಬಾಕಿಯನ್ನು ಆದಷ್ಟು ತ್ವರಿತ ಮನಿಯಾರ್ಡರ ಮಾಡಿ ಕಳುಹಿಸಿ ಕೊಡುವಂತೆ ತಿರುಗೊಮ್ಮೆ ವಿನಂತಿಸುತ್ತೇವೆ.

ಮೆನೇಜರ್.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ.
ಕನ್ನಡ ಪ್ರತಿ ೧ಕ್ಕೆ 0-8-0
ಇಂಗ್ಲಿಷ್ ಪ್ರತಿ ೧ಕ್ಕೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ
0-9-0 ಕಳುಹಿಸಿದರೆ ಒ. ಪಿ. ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಮಂತ್ರಿಗಳ ಆಗಮನ—ಮದ್ರಾಸು ಸರಕಾರದ ಸಾರ್ವಜನಿಕ ಖಾತೆಯ ಮಂತ್ರಿ ಶ್ರೀ ಎಮ್. ಭಕ್ತವತ್ಸಲಂ ಅವರು ದಿನಾಂಕ 9ರಂದು ಅಪರಾಹ್ನ ಮಂಗಳೂರಿಗೆ ಆಗಮಿಸಿದರು. ಅವರನ್ನು ರೈಲ್ವೆಸ್ಟೇಶನಿನಲ್ಲಿ ಊರ ಪ್ರಮುಖರೂ ಅಧಿಕಾರಿಗಳೂ ಸ್ವಾಗತಿಸಿದರು.

ವಣಿಜ ಸಂಘದ ಮನವಿ—ಅಂದು ಸಾಯಂಕಾಲ 4ತಾಸಿಗೆ ಮಂಗಳೂರಿನ ವಣಿಜ ಸಂಘದವರು ಮಂತ್ರಿಗಳನ್ನು ಸ್ವಾಗತಿಸಿ ಒಂದು ಭಿನ್ನವತ್ತಳೆಯನ್ನಿತ್ತರು. ಅದರಲ್ಲಿ ಮಂಗಳೂರಿನ ಬಂದರದ ವಿಚಾರವಾಗಿ ಪೋರ್ಟು ಟ್ರಸ್ಟಿನ ರಚನೆ ಮಾಡಲು ಸರಕಾರವು ನಿರ್ಣಯಿಸಿದುದಕ್ಕೆ ಸರಕಾರವನ್ನೂ ಮಂತ್ರಿಗಳನ್ನೂ ಅಭಿನಂದಿಸಲಾಗಿತ್ತು. ಅಲ್ಲದೆ ಮಂಗಳೂರನ್ನು ಸರ್ವಋತು ಬಂದರವನ್ನಾಗಿಸುವ ಸರ್ ನಂಜುಂಡಯ್ಯ ವರದಿಯ ಸೂಚನೆಯನ್ನು ಕೈಕೊಳ್ಳಬೇಕೆನ್ನುವ, ಮಂಗಳೂರಲ್ಲಿ ಒಂದು ನೌಕಾ ವಿದ್ಯಾಲಯವನ್ನೂ ಒಂದು ಹಡಗುಕಟ್ಟುವ ಕರ್ಮಶಾಲೆಯನ್ನೂ ತೆರೆಯಬೇಕೆನ್ನುವ, ವಿದ್ಯುತ್ ಸರಬರಾಯಿ ಆದಷ್ಟು ಬೇಗನೆ ಆಗಬೇಕೆನ್ನುವ, ಮಂಗಳೂರು-ಹಾಸನರೈಲು, ಮರವೂರಿಗೊಂದು ಸಂಕ, ರಸ್ತೆಗಳ ದುರಸ್ತಿ ಇತ್ಯಾದಿ ಕೇಳಿಕೆಗಳೂ, ವಣಿಜ ಸಂಘಕ್ಕೆ ತಂತಿ ಮತ್ತು ಟಪಾಲು ಸಲಹಾ ಸಮಿತಿಯಲ್ಲೂ ದಕ್ಷಿಣಭಾರತದ ರೈಲು ಸಲಹಾ ಸಮಿತಿಯಲ್ಲೂ ಪ್ರಾತಿನಿಧ್ಯ ಸಿಗಬೇಕೆಂದೂ ಕೇಳಿಕೊಂಡು, ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಲೆಂದು ಆಶಿಸಲಾಗಿತ್ತು. ಅನಂತರ ಶ್ರೀ ಬೆನಗಲ್ ಶಿವರಾಯರೂ ಶ್ರೀ ಬಿ. ವೈಕುಂಠ ಬಾಳಿಗರೂ ಮಾತನಾಡಿದರು. ಮಂತ್ರಿಗಳು ಉತ್ತರವೀಯುತ್ತಾ ಸರಕಾರದ ಕೆಲಸಗಳಲ್ಲಿ ವಿಳಂಬವಾಗುವುದನ್ನೂ ಅಲ್ಲಲ್ಲಿ ತಪ್ಪು ತಿಳಿವಳಿಕೆ ಮಾಡುವುದನ್ನೂ ವಿವರಿಸಿ, ಬಿನ್ನವತ್ತಳೆಯ ಕೇಳಿಕೆಗಳನ್ನು ಪರ್ಯಾಲೋಚಿಸುವುದಾಗಿ ಆಶ್ವಾಸನೆಯಿತ್ತರು. ಶ್ರೀ ವಿ. ಎಸ್. ಕುಡ್ವರು ಧನ್ಯವಾದಗಳನ್ನರ್ಪಿಸಿದರು.

ಸರಕಾರಿ ಕಾಲೇಜಿನ ವರ್ಧಂತಿಯು:—ದಿನಾಂಕ 9ರಂದು ಸಂಜೆ ಮಾನ್ಯ ಮಂತ್ರಿ ಎಮ್. ಭಕ್ತವತ್ಸಲಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ಪ್ರಿನ್ಸಿಪಾಲ್ ಜನಾಬ್ ಹಕೀಮಿ ಅವರು ಕಾಲೇಜಿನ ಕಾರ್ಯಕಲಾಪಗಳ ವರದಿಯೊಪ್ಪಿಸಿದ ಬಳಿಕ ಬಹುಮಾನ ವಿತರಣೆಯೂಯಿತು. ಹಳೆವಿದ್ಯಾರ್ಥಿ ಕುಮಾರಿ ಎಮ್. ಮಾಯಾದೇವಿಯವರ ಸ್ವಸ್ತಿವಾಚನಕ್ಕೆ ಶ್ರೀ ಶ್ರೀನಿವಾಸ ಶರ್ಮರು ಉತ್ತರವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಲೇಜಿನವರನ್ನು ಅಭಿನಂದಿಸುತ್ತ ಕಲಿತ ಪಾಠದಿಂದ ತಕ್ಕ ಪ್ರಯೋಜನವು ಜೀವನದಲ್ಲಿ ಒದಗಿ ಬರುತ್ತದೆಂದು ತಿಳಿಸಿದರು. ಶ್ರೀ ಎಮ್. ಸತ್ಯಪಾಲರು ಅಭಿನಂದಿಸಿದರು.

ಅಂತರ್ ರಾಷ್ಟ್ರೀಯ ಸಹಕಾರೀ ದಿನಾಚರಣೆಯು:—ಇದೇ ತಾ 3ರಂದು ಸಂಜೆ ಸೆಂಟ್ರಲ್ ಬೇಂಕಿನ ಮಾಳಿಗೆಯಲ್ಲಿ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆರ್. ಕೆ. ಪ್ರಭುಗಳು ಸ್ವಾಗತ ಭಾಷಣಮಾಡಿದ ಮೇಲೆ ಶ್ರೀಮತಿ ಕೆ. ರಾಜಲಕ್ಷ್ಮಿ ಆಚಾರ್, ಶ್ರೀಮತಿ ಬೆನಗಲ್ ಶಿವರಾವ್, ಜನಾಬ್ ಬಿ. ಎಮ್. ಇದಿನಬ್ಬ ರೆವರೆಂಡ್ ಜೆ. ರಸ್ಸೆಲ್, ಶ್ರೀ ಬೆನಗಲ್ ಶಿವರಾವ್, ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಸಹಕಾರೀ ತತ್ವದ ವಿಚಾರವಾದ ಚಲಚ್ಚಿತ್ರ ತೋರಿಸಲಾಯಿತು.

'ಲೆವಿ'—ಪುತ್ತೂರು ಮತ್ತು ಕುಂದಾಪುರ ತಾಲೂಕುಗಳಲ್ಲಿ ಹಲವುಕಡೆ ಅಕಾಲ ಮಳೆಯ ದೆಸೆಯಿಂದಾಗಿ ತಡವಾಗಿ ಕಟಾವು ಆದುದರಿಂದ ಈ ತಾಲೂಕುಗಳಲ್ಲಿ ಭತ್ತದ ರೂಪದಲ್ಲಿ ಲೆವಿ ನೋಟಿಸಿನಂತೆ ಸ್ಟೋರಿಗೊಪ್ಪಿಸುವ ಕೊನೆಯ ತಾರೀಕನ್ನು ಒಕ್ಟೋಬರ್ 31ರಿಂದ ನವಂಬರ ತಾ 15ರ ತನಕ ಮುಂದುವರಿಸುವುದಾಗಿ ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ. ಅಕ್ಕಿಯನ್ನೊಪ್ಪಿಸುವ ಅವಧಿ ಮೊದಲಿನಂತೆ ನವಂಬರ ತಾ. 30ಕ್ಕೆ ಆಗತಕ್ಕದ್ದೆಂದೂ ತಿಳಿಸುತ್ತಾರೆ.

ಕಾಂಗ್ರೆಸ್ ಪಕ್ಷದ ಪ್ರಚಾರ ಸಭೆಯೊಂದು:—ಇದೇ ತಾ 3ರಂದು ಸಂಜೆ ಮಂಗಳೂರು ಕೇಂದ್ರ ಮೈದಾನಿನಲ್ಲಿ ಶ್ರೀ ಬಿ.ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೆನಗಲ್ ಶಿವರಾಯರು ತಮ್ಮ ಭಾಷಣದಲ್ಲಿ ಕಾಂಗ್ರೆಸು ಈ ನಾಲ್ಕು ವರ್ಷಗಳಲ್ಲಿ ಸ್ವರಾಜ್ಯದ ಭದ್ರವಾದ ಅಡಿಗಲ್ಲಿಟ್ಟಿರುವುದು, ಪ್ರಬಲವಾದ ಸರಕಾರವು ದೇಶಕ್ಕೆ ಬೇಕಾಗಿರುವುದರಿಂದ ಕಾಂಗ್ರೆಸ್ಸಿನ ಹುರಿಯಾಳನ್ನೇ ಆರಿಸಬೇಕೆಂದರು. ಶ್ರೀ ಎನ್. ಎಸ್. ಸುವರ್ಣರು ಅದನ್ನು ಸಮರ್ಥಿಸಿ ಮಾತನಾಡಿದರು. ಅನಂತರ ಬೆಂಗಳೂರಿನ ಶ್ರೀ ರುದ್ರಪ್ಪನವರು ಮಾತನಾಡುತ್ತಾ ಕಾಂಗ್ರೆಸ್ಸೇ ಭಾರತದಲ್ಲಿ ಬಲಿಷ್ಠವಾದ ಪಕ್ಷವೆಂದೂ ಆದರಿಂದ ಮಾತ್ರ ದೇಶದ ಕಲ್ಯಾಣವು ಸಾಧ್ಯವೆಂದೂ ತಿಳಿಸಿದರು. ಶ್ರೀ ಕೆ. ಆರ್. ಆಚಾರ್ ಅವರು ಆ ಮೇಲೆ ಮಾತನಾಡುತ್ತ, ಕಾಂಗ್ರೆಸ್ಸಿಗರ ಅಧಿಕಾರ ಲಾಲಸೆಯನ್ನು ವಿಮರ್ಶಿಸಿ ಮಾತನಾಡಿದರು, ಶ್ರೀ ಬಿ ಆರ್. ಕರ್ಕೇರರು ಅಭಿನಂದಿಸಿದರು.

ಧರ್ಮಸ್ಥಳ—ಇಲ್ಲಿಯ ದೀಪೋತ್ಸವವು ಇದೇ ತಾ 24ರಿಂದ ತಾ, 28ರವರೆಗೆ ಜರಗಲಿರುವುದು. ಎಂದಿನಂತೆ ಕೊನೆಯ ಎರಡು ದಿವಸಗಳಲ್ಲಿ ಸಾಹಿತ್ಯ ಮತ್ತು ಧರ್ಮ ಸಮ್ಮೇಳನಗಳು ನಡೆಯಲಿರುವುವು ಬೆಂಗಳೂರಿನ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ ವಹಿಸುವರು. ವ್ಯವಸಾಯ ವಸ್ತುಪ್ರದರ್ಶನವು ಕೊನೆಯ ಮೂರು ದಿನಗಳಲ್ಲಿ ಜರಗುವುದು.

ಕುಂಬಳೆ—ದ. ಕ. ಜಿಲ್ಲೆಯ ಪ್ರಥಮ ನೀರಾವರಿಯೋಜನೆಯಾದ ಸಿರಿಯಾ ಅಣೆಕಟ್ಟಿನ ಉದ್ಘಾಟನೆಯನ್ನು ಔಪಚಾರಿಕವಾಗಿ ಸಾರ್ವಜನಿಕ ಖಾತೆಯ ಮಾನ್ಯಮಂತ್ರಿ ಶ್ರೀ ಎಮ್. ಭಕ್ತವತ್ಸಲಂ, ಅವರು ಇದೇ ತಾ. 10ರಂದು ನೆರವೇರಿಸಿದರು. ಈ ಅಣೆಕಟ್ಟು ಮೂಲಕ ಸಿಕ್ಕುವ ನೀರಿನಿಂದ ಬಾಡೂರು, ಅಂಗಡಿಮೊಗರು ಮೊದಲಾದ ಗ್ರಾಮಗಳ ಸಾಧಾರಣ 550ಎಕ್ರೆ ಭೂಮಿಯಲ್ಲಿ ಎರಡನೆ ಬೆಳೆಬೆಳೆಸುವರೆ ಸಹಾಯ ದೊರೆತಂತಾಯಿತು.

ಹೆಂಗವಳ್ಳಿ—ಕುಂದಾಪುರ ತಾಲೂಕು ಹೆಂಗವಳ್ಳಿಯಲ್ಲಿ ಹೊಸ ಬೋರ್ಡು ಶಾಲೆಯನ್ನು ಇದೇ ತಾ 5ರಲ್ಲು ಶ್ರೀ ಬಿ. ಧರ್ಮಯ್ಯ ಹೆಗ್ಡೆರು ತೆರೆದರು. ಶ್ರೀ ಕೂರಾಡಿ ಸೀನಪ್ಪ ಸೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ಪೈವಳಿಕೆ: ಡಾ। ಕೆ. ಶಂಭಟ್, ಅವರು ಹೊಸತಾಗಿ ಪೈವಳಿಕೆಯಲ್ಲಿ ಸ್ಥಾಪಿಸಿದ ಆಸ್ಪತ್ರೆಯನ್ನು ಇದೇ ತಾ 5ರಲ್ಲು ಜಿಲ್ಲಾ ಬೋರ್ಡು ಮೆಂಬರ್ ಶ್ರೀ ಟಿ. ನಾರಾಯಣ ಭಟ್ಟರು ಉದ್ಘಾಟಿಸಿದರು.

ಬ್ರಹ್ಮಾವರ:—ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆಯು ಇದೇ ತಾ 7ರಲ್ಲು ಶ್ರೀ ಪಿ. ವೈ. ರಾಮನ್ ಗುರುಕಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳು ಆರಿಸಿ ಬರುವಂತೆ ಪ್ರಚಾರ ಕಾರ್ಯ ಕೈಕೊಳ್ಳಬೇಕೆಂದು ನಿರ್ಣಯವಾಯಿತು.

ಪುತ್ತೂರು— ದರ್ಬೆಯಿಂದ ಕಾಣಿಯೂರಿಗಾಗಿ ಸುಬ್ರಹ್ಮಣ್ಯಕ್ಕೆ ಹೋಗುವ ಮಾರ್ಗ ಸುಮಾರು ಹದಿನೆಂಟು ಮೈಲು ನಾದುರಸ್ತಿಯಾಗಿರುವುದರಿಂದ ಅದು ಶೀಘ್ರ ಜನವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಸಂಬಂಧಪಟ್ಟವರು ನಿಗಾ ಕೊಡಬೇಕಾಗಿ ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಬೈಲೂರು— ಅಧಿಕಾಹಾರ ಉತ್ಪಾದನೆ ಮತ್ತು ಪಾಪನಿರೋಧ ಸಲಹಾಸಮಿತಿಗಳ ಪ್ರಚಾರದ ಸಭೆಯು ಇದೇ ತಾ. 6ರಲ್ಲು ನೀರೆ ಬ್ರಾಂಚ್ ಬೋರ್ಡು ಶಾಲೆಯಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಎಚ್. ನರಸಿಂಹ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಎ. ಕೆ. ಲಕ್ಷ್ಮಿನಾರಾಯಣ ರಾಯರು ಚಿಕ್ಕ ನೀರಾವರಿ ಯೋಜನೆಗಳಲ್ಲಿ ಕೆಲವನ್ನು ಈ ಕೇಂದ್ರದಲ್ಲಿ ರೈತರ ಹಿತಕ್ಕಾಗಿ ಆರಂಭಿಸುವುದು ಉತ್ತಮವೆಂದರು. ಅಧ್ಯಕ್ಷರು ಲೆವಿ ಪದ್ಧತಿಯನ್ನು ವಿವರಿಸಿ ಜನರ ಮತ್ತು ಸರಕಾರಗಳೊಳಗೆ ಇರಬೇಕಾದ ಸಹಕಾರದ ಆವಶ್ಯಕತೆಯನ್ನು ಮಾತನಾಡಿದರು. ಹಲವರ ಭಾಷಣಗಳಾಗಿ ವಿವಿಧ ವಿನೋದಾವಳಿಗಳಾದುವು. ರಾತ್ರಿ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಸೀತಾನದಿ— ಕಾರ್ಕಳ ತಾಲೂಕು ಸೋಮೇಶ್ವರ ಬಳಿಯ ಸೀತಾನದಿ ಕೇಂದ್ರದಲ್ಲಿ ಜಾನುವಾರು ಸಂತೆಯು ತಾ. 9-12-51ರಿಂದ 20-12-51ರ ತನಕ ಜರಗಲಿರುವುದು. ಈ ಸಂತೆಗೆ ಬರತಕ್ಕವರಿಗೆ ಯೋಗ್ಯ ಅನುಕೂಲತೆಗಳನ್ನೂ ಒದಗಿಸುವ ಏರ್ಪಾಡಾಗುತ್ತಿದೆ.

ಬಳ್ಕುಂಜೆ— ಬಳ್ಕುಂಜೆ-ಕೊಲ್ಲೂರು ಗ್ರಾಮಸಂಘದವರು ಏರ್ಪಡಿಸಿದ ಸಭೆಯು ಇದೇ ತಾ. 30ರಲ್ಲು ಶ್ರೀ ಯು. ಪರಟುಮ ನಾಯಕ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸಾರ್ವಜನಿಕ ಕಟ್ಟಡದ ಶಂಕು ಸ್ಥಾಪನಾ ಕಾರ್ಯವೂ, ಹೊಸತಾಗಿ ಕಡಿಸಿದ ಸುಮಾರು ಅರ್ಧಮೈಲು ಉದ್ದದ ಮಾರ್ಗದ ಉದ್ಘಾಟನಾ ಕಾರ್ಯವೂ ಸಾಂಗವಾಗಿ ಜರಗಿತು, ಅತಿಥಿ ಅಭ್ಯಾಗತರಿಗೆ ಶ್ರೀ ಕವತ್ತಾರು ಎಲ್ಲಪ್ಪ ಅಜಿಲ, ಅವರು ಡಿನ್ನರ್ ಪಾರ್ಟಿಯಿತ್ತು ಸತ್ಕರಿಸಿದರು.

ಕಡೆಕಾರು—ಇದೇ ತಾ. 10ರಲ್ಲು ಇಲ್ಲಿಯ ಮಹಾಜನರ ಸಭೆಯೊಂದು ಮಹಾಗಣಪತಿ ಶಾಲೆಯಲ್ಲಿ ಶ್ರೀ ಎನ್. ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯಲ್ಲಿ ಕಸ್ತೂರಿಬಾ ಮೆಡಿಕಲ್ ಕಾಲೇಜನ್ನು ತೆರೆಯುವ ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್ ಮಣಿಪಾಲ-ಇವರ ಯೋಜನೆಯನ್ನು ಸರಕಾರವು ಮಂಜೂರು ಮಾಡುವಂತೆ ಕೇಳಿಕೊಳ್ಳುವ ನಿರ್ಣಯವಾಯಿತು.

ಮದ್ರಾಸು— ಉಡುಪಿಯ ಶ್ರೀ ಅದಮಾರು ಮಠದ ಮತ್ತು ಶ್ರೀ ಪೇಜಾವರ ಮಠದ ಸ್ವಾಮಿಗಳವರು ಇದೇ ತಿಂಗಳಾರಂಭದಿಂದ ಇಲ್ಲಿ ಮೊಕ್ಕಾಂ ಮಾಡಿರುವರು. ಸಮಾಜನ ಕಡೆಯಿಂದ ಉಭಯಶ್ರೀಗಳವರಿಗೂ ಸತ್ಕಾರನಡೆಯುತ್ತಿದೆ. ಸ್ವಾಮಿಗಳವರು ಧಾರ್ಮಿಕ ಉಪನ್ಯಾಸಗಳನ್ನೀಯುತ್ತಿರುವರು.

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 169/1951

ನಾರಾಯಣ ಬಳ್ಳುಳ್ಳಾಯ, ರಾಮ ಬಳ್ಳುಳ್ಳಾಯರ ಮಗ, ಕಾಸರಗೋಡು ತಾಲೂಕು ಮುಳಿಯಾರುಗ್ರಾಮದ ನರಿಕ್ಕೋಳು ಎಂಬಲ್ಲಿರುವವ,

—ವಾದಿ

ಮತ್ತು

ಅಂಬು ಮಣಿಯಾಣಿ, ಕಣ್ಣ ಮಣಿಯಾಣಿಗಳ ಅಳಿಯ ವ ಅಮ್ಮಾರು ಅಮ್ಮನ ಮಗ, ಕಾಸರಗೋಡು ತಾಲೂಕು ಮುಳಿಯಾರು ಗ್ರಾಮದ ನರಿಕ್ಕೋಳು ಎಂಬಲ್ಲಿರುವವ,

—ಪ್ರತಿವಾದಿ

ಮುದರಿಯೊಳಗೆ

ತಾರೀಕು 21-7-1948ರಲ್ಲು ಪ್ರತಿವಾದಿಯು ವಾದಿಗೆ ರೂ. 75-ಕ್ಕೆ ಬರೆಕೊಟ್ಟ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಸಹಿತ ವಸೂಲಿಗೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 28-11-1951ಕ್ಕೆ ತನ್ಖಿಗೆ ಇಟ್ಟಿರುವ ಸಂಗ್ತಿ ಈ ಮೂಲಕ ಪ್ರತಿವಾದಿಗೆ ತಿಳಿಸಲಾಗಿಯದೆ.

Sd/- **B S. Kakkilaya,**
Advocate for pltf.

Kasaragod, 12-11-1951

ಬರೀ ರೂ. 20ಕ್ಕೆ

'ಅಂತರಂಗ'ದ 70ಪ್ರಕಟಣೆಗಳು!

ಕಥೆ, ಕಾದಂಬರಿ, ಕವಿತೆ, ಚಿತ್ರ, ನಾಟಕ, ಪ್ರಬಂಧ ಮೊದಲಾದ ನಾನಾ ಬಗೆಯ ಕೃತಿಗಳು!

ಮೂರಾಣೆಯಿಂದ ಎರಡು ರೂಪಾಯಿ ವರೆಗಿನ, ವಾಚನಾಲಯಗಳಿಗೆ ಯೋಗ್ಯವಾದ 70 ಪುಸ್ತಕಗಳು.

ಪುಸ್ತಕದ ಒಟ್ಟು ಬೆಲೆ ರೂ. 23/-
ಒಮ್ಮೆಯೇ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಸಹಿತ
ರೂ. 20/- ಮಾತ್ರ!

1) ಅಂತರಂಗ ಕಾರ್ಯಾಲಯ ಉಡುಪಿ.
(2) ನವಭಾರತ ಪುಸ್ತಕಭಂಡಾರ ಉಡುಪಿ,

ಕಾಸ್ರಗೋಡು
ಡಿ ಮುಂ. ಕೋರ್ಟಿನಲ್ಲಿ.

S. C. No. 194/1951

ಅಹಮ್ಮದ್ ಕುನ್ಹಿ —ವಾದಿ.

ಬೊನಿಫಾಸ್ ಬೆರ್ನಾರ್ಡ್ ಲಾಯಸ್ ಮಾರ್ಕೆಲ್ ಸಲ್ವದೋರ್ ಲಾಯಸರ ಮಗ ಕಾಡ್ವಿತಾಲ್ಕು ಬಿಡಿಯೂರು ಗ್ರಾಮದಲ್ಲಿರುವನ

—ಪ್ರತಿವಾದಿ

ಸದ್ರಿ ಪ್ರತಿವಾದಿಗೆ

ನೀವು ಬರೆಕೊಟ್ಟ ಬಾಡಿಗೆ ಚೀಟು ಪ್ರಕಾರ ವಾದಿಗೆ ಬರತಕ್ಕ ಬಾಡಿಗೆಯನ್ನು ಮತ್ತು ಕೋರ್ಟು ಖರ್ಚನ್ನು ವಸೂಲು ಮಾಡುವರೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತದೆ. ಸದ್ರಿ ನಂಬ್ರವು ತಾರೀಕು 19-11-1951ರಲ್ಲು ತನ್ಖಗೆ ಇಟ್ಟಿರುವ ಸಂಗ್ತಿಯನ್ನು ಈ ಮೂಲಕ ತಿಳಿಸಲಾಗಿಯದೆ.

(Sd) **C. Abdulla**
Advocate for Plaintiffs

ಕಾಸ್ರಗೋಡು, 8-11-1951.

ತಾರೀಕು 14—11—1951ರಿಂದ—

ಅಖಿಲ ಭಾರತದಲ್ಲೇ ಉತ್ತಮ ಚಿತ್ರವೆಂದು ಪ್ರಥಮ ಬಹುಮಾನ ಪಡೆದ

ತಮಿಳುಚಿತ್ರ ರತ್ನ

ಲೈಫ್ ಅಥವಾ ಜೀವನ

ವೈಜಯಂತಿಮಾಲ; ಎಮ್. ಎಸ್. ದ್ರೌಪದಿ, ಸಹಸ್ರನಾಮಂ, ಕೆ. ಸಾರಂಗಪಾಣಿ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ನನ್ನ ಕೌನ್ಸಿಲ್ ಮೆಂಬರಿಕೆಯ ಸಂಕ್ಷಿಪ್ತ ವರದಿಯೂ ಇತರ ವಿಚಾರಗಳೂ.

ಶ್ರೀ ಡಿ. ಮಂಜಯ್ಯ ಹೆಗ್ಗಡೆ, ಧರ್ಮಸ್ಥಳ

ಕಳೆದ 1937ನೇ ಇಸ್ವಿಯಲ್ಲಿ ನಾನು ಮದ್ರಾಸಿನ ಕೌನ್ಸಿಲಿಗೆ ಚುನಾಯಿಸಲ್ಪಟ್ಟೆನು. ಆಗ ನಾನು ಯಾವ ಪಕ್ಷಕ್ಕೂ ಸೇರದೆ ಸ್ವತಂತ್ರ ಪಕ್ಷದ (Independent) ಮೆಂಬರನಾಗಿದ್ದಾಗ್ಯೂ, ಕಾಂಗ್ರೆಸ್ ಧೋರಣೆಯನ್ನು ಹೆಚ್ಚಾಗಿ ಒಪ್ಪುವವನಾದ್ದರಿಂದಲೂ, ಕಾಂಗ್ರೆಸ್ ಪಕ್ಷದ ತತ್ವಗಳನ್ನು ಸ್ವೀಕರಿಸುವವನಾದ್ದರಿಂದಲೂ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ನಾನು ಕೂಡ ಸಹಾಯವನ್ನು ಕೊಟ್ಟಿದ್ದೆನು; ಹಾಗೂ ಕಾಂಗ್ರೆಸ್ಸಿನವರು ಕೂಡಾ ನನಗೆ ಬೆಂಬಲವನ್ನು ಕೊಟ್ಟಿದ್ದರು.

ನಾನು ಆರಿಸಲ್ಪಟ್ಟು ಮೆಂಬರನಾದ ಬಳಿಕ ಕೌನ್ಸಿಲಿನಲ್ಲಿ ಜನರ ಹಿತಕ್ಕೆಂದು ಅಥವಾ ದೇಶದ ಅಭ್ಯುದಯಕ್ಕೆಂದು ಕಲ್ಪಿಸಲ್ಪಟ್ಟ ಕಾಯಿದೆಗಳಿಗೆಲ್ಲ (ನಾನು ಸ್ವತಂತ್ರ ಪಕ್ಷದ ಮೆಂಬರನಾದಾಗ್ಯೂ) ನನ್ನ ಸಹಾನುಭೂತಿಪೂರ್ವಕವಾದ ನೆರವನ್ನು ನೀಡಿದ್ದೆನು. x x x

ಪ್ರಥಮದಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾಂಗ್ರೆಸ್ ಸರಕಾರದ ಪ್ರಧಾನ ಮಂತ್ರಿಯವರಾದರು. ಅವರ ಕಾಲದಲ್ಲಿ ಮುಖ್ಯವಾಗಿ "ಸೇಲ್ಸ್ ಟೇಕ್ಸ್", ಸಾಲವಿಮೋಚನೆ ಕಾಯಿದೆ, ಪ್ರೊಹಿಬಿಷನ್ ಕಾಯಿದೆ ಇವುಗಳು ಉಂಟಾದವು. ಆಗ ನಾನು ಇವೆಲ್ಲಕ್ಕೂ ಸಮ್ಮತಿಸಿ ಒಪ್ಪಿಗೆ ಕೊಟ್ಟೆನು.

ಸ್ವಲ್ಪ ಸಮಯದಲ್ಲಿಯೇ 2ನೆಯ ಯುದ್ಧ ಆರಂಭವಾಯಿತು. ಅಂದಿನ ಬ್ರಿಟಿಷರ ಧೋರಣೆಯನ್ನು ಕಾಂಗ್ರೆಸ್ಸಿನವರು ಒಪ್ಪದೆ ಇದ್ದುದರಿಂದ ಕಾಂಗ್ರೆಸ್ ಪಕ್ಷದವರು, ರಾಜ್ಯಾಡಳಿತೆಯನ್ನು ತ್ಯಜಿಸಿ, ಅಸಹಕಾರವನ್ನು ಕೈಕೊಂಡರು. ಆಗ್ಯೆ ಸಾಮಾನ್ಯ ನಾಲ್ಕೈದು ವರ್ಷಗಳ ಕಾಲ, ನ್ಯಾಯಾಪಿಥಾಯಕ ಸಭೆಗಳೇ ಇಲ್ಲದಂತಾಗಿ ಗವರ್ನರರೇ ಸರಕಾರವನ್ನು ನಡೆಸಿದರು.

ಯುದ್ಧ ಮುಗಿದ ಬಳಿಕ ಇಲೆಕ್ಷನ್ ಅಥವಾ ಚುನಾವಣೆ ಮೂಲಕ, ಮೆಂಬರರು ಚುನಾಯಿಸಲ್ಪಟ್ಟು, ಎಸೆಂಬ್ಲಿ, ಕೌನ್ಸಿಲುಗಳ ಅಧಿವೇಶನಗಳು ಪುನಃ ಪ್ರಾರಂಭವಾದವು.

ಕೌನ್ಸಿಲ್ ಮೆಂಬರರ 3 ವರ್ಷಗಳ ಅವಧಿಯು ಮುಗಿದ ಬಳಿಕ ಕೆಲವರಿಗೆ ಪುನಃ 3 ವರ್ಷಗಳ ತನಕ ಗವರ್ನರರಿಂದ ಮುಂದುವರಿಸಲ್ಪಟ್ಟ ಕಾರಣ ಚುನಾವಣೆಯ ತೊಂದರೆ ಇಲ್ಲದೇನೆ ನಾನು ಪುನಃ ನನ್ನ ಕೌನ್ಸಿಲು ಮೆಂಬರಿಕೆಯ ಸ್ಥಾನದಲ್ಲಿಯೇ ಇರುವಂತಾಯಿತು

2ನೇ ಸಾರಿಯ ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರೇ ಹೆಚ್ಚಾಗಿ ಪ್ರತಿಸ್ಪರ್ಧೆ ಇಲ್ಲದೆ ಅಧಿಕ ಸಂಖ್ಯಾತರಾಗಿ ಆರಿಸಲ್ಪಟ್ಟು ಬಂದರು.

ನಂತರದ ಕಾಂಗ್ರೆಸ್ ಸರಕಾರವು ಶ್ರೀ ಟಿ. ಪ್ರಕಾಶಂ, ಇವರಿಂದ ರಚಿಸಲ್ಪಟ್ಟು ರಾಜ್ಯಾಡಳಿತೆಯನ್ನು ಕೈಕೊಂಡಿತು. ಆಹಾರ ವಸ್ತ್ರ ವಿತರಣೆ ಮೊದಲಾದ ಕಾರ್ಯದಲ್ಲಿ ಭಾಗವಹಿಸತಕ್ಕ ಗ್ರಾಮ ಸಮಿತಿಗಳ ರಚನೆ, ಫಿರ್ಕಾ ಅಭಿವೃದ್ಧಿಯ ಕಾರ್ಯರಚನಾ ಕಾಯಿದೆಗಳು ಆಗ ಉಂಟಾದವು. ಇವುಗಳಲ್ಲೆಲ್ಲಾ ನನ್ನ ಅಭಿಪ್ರಾಯವನ್ನು ಸೂಚಿಸಿ ಸಮ್ಮತಿಯನ್ನು ಕೊಟ್ಟಿದ್ದೆನು.

ಮೆಂಬರುಗಳೆಲ್ಲಾ, ತಮ್ಮ ತಮ್ಮ ಜಿಲ್ಲೆಗೆ ಬೇಕಾಗುವಂಥ ಅವಶ್ಯಕತೆಗಳ ಕುರಿತೂ ಆ ದಬಜೆಗಳ ಕುರಿತೂ ಅವರವರ ಅಭಿಪ್ರಾಯಗಳನ್ನು ತಿಳಿಸುವುದು ಬಡ್ಜೆಟ್ ಕಾಲದಲ್ಲಿ ರೂಢಿ; ಅದರಂತೆ ಕೆಲವರು ಅವನ್ನು ಹೇಳುವುದೂ ಹೇಳದಿರುವುದೂ ಎರಡೂ ಉಂಟು. ನನ್ನ ಮಟ್ಟಿಗೆ ನಾನು ಈ ಸಂದರ್ಭದಲ್ಲಿ ನಮ್ಮಲ್ಲಿಯ ಹಳ್ಳಿಗಳಿಗೆ ಬೇಕಾಗುವ ಪ್ರಾಥಮಿಕ ಶಾಲೆಗಳ ಅವಶ್ಯಕತೆ, ಮರ್ಗ ಸಂಕಗಳ ಅವಶ್ಯಕತೆ, ಮಲೇರಿಯಾ ನಿವಾರಣೆಯ ಕಾರ್ಯ, ಮಂಗಳೂರಿನಿಂದ ಉಡ್ಪಿಗೆ ಹೋಗುವ ದಾರಿಯಲ್ಲಿರುವ ಹೊಳೆಗಳಿಗೆ ಸೇತುವೆಗಳ ರಚನೆ, ಮಂಗಳೂರು [ಶಿರಾಡಿ] ನೀರಿನ ಸರಬರಾಯಿ, ಕನ್ನಡದ ಶಿಕ್ಷಣ ಪ್ರಚಾರ ಮುಂತಾದ ಈ ವಿಷಯಗಳಲ್ಲಿ ಮಾತನಾಡಿರುವುದುಂಟು.

ಕೌನ್ಸಿಲಿನಲ್ಲಿ ಮೆಂಬರರು ರಾಜ್ಯದ ಹಣಕಾಸಿನ ಲೆಕ್ಕವನ್ನು ಪರಿಶೀಲಿಸಿ ಮಂಜೂರು ಮಾಡಲು ಅರ್ಹರಲ್ಲದ ಕಾರಣ ಬಡ್ಜೆಟಿನ ಸಮಯ (ಕಡಿತ) ಸೂಚನೆಗಳ (Cut Motion) ಮೂಲಕ ಅವಶ್ಯಕತೆ ಮತ್ತು ಅಡಚಣೆಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂಥ ಸಂದರ್ಭ ನಮಗೆ ಇಲ್ಲ. ಇನ್ನು ಪ್ರಶ್ನೆಗಳ ಮೂಲಕವಾಗಲೀ, ಠರಾವುಗಳ ಮೂಲಕವಾಗಲೀ ನಮ್ಮ ನಮ್ಮ ಅಭಿಪ್ರಾಯಗಳನ್ನು ಸೂಚಿಸಲೂ ಬಹುದು. ಹಾಗೆ ಅಗತ್ಯವಿರುವ ವಿಷಯಗಳ ಕುರಿತು, ಕೆಲವು ಸಾರಿ, ಪ್ರಶ್ನೆಗಳ ಮೂಲಕ, ಸರಕಾರದವರಲ್ಲಿ ಸೂಚನೆ ಕೊಟ್ಟದ್ದೂ ಇದೆ.

"ಪ್ರಾಣಿಬಲಿ ನಿಷೇಧ"ದ ಕುರಿತು ನಡೆದಿರುವುದಿಷ್ಟು:-ಕಾಂಗ್ರೆಸ್ ಮೆಂಬರರು ಅಧಿಕ ಸಂಖ್ಯಾತರಿರುವ ಕಾರಣ ಅವರ ಮೂಲಕವೇ ಈ ಕಾರ್ಯಸಾಧನೆ ಆಗಬೇಕಾದುದರಿಂದ, ಕಾಂಗ್ರೆಸ್ ಮೆಂಬರರಾದ ಶ್ರೀ ಆದಿಕೇಶವಲು ಇವರಿಗೆ ಪ್ರೋತ್ಸಾಹ ಕೊಟ್ಟವರಲ್ಲಿ ನಾನೂ ಒಬ್ಬನಾಗಿ ಮುಂದೆ ಮಸೂದೆಯು ಚರ್ಚಿಸಲ್ಪಟ್ಟಾಗ ಅದನ್ನು ಸಮರ್ಥಿಸಿ ಅನುಮೋದಿಸಿದವರಲ್ಲಿ ಪ್ರಥಮದವನು ನಾನೇ ಆಗಿದ್ದೆನು

ಸರ್ಕಾರದವರು ತಾವಾಗಿಯೇ ಈ ಕಾಯಿದೆ ಮಾಡುವುದು ಅವರಿಗೆ ಸರಿಕಾಣದೆ, ಖಾಸಗಿ ಮೆಂಬರರು ಇಂಥ ಕಾಯ್ದೆಗೆ ಪ್ರಯತ್ನಿಸುವಲ್ಲಿ ವಿರೋಧ ಮಾಡದಿದ್ದುದು ಪ್ರಶಂಸನೀಯ.!

ಅನಂತರ ಹಿಂದೂ ಮತ ಮತ್ತು ಧಾರ್ಮಿಕ ಸಂಸ್ಥೆಗಳ ಕುರಿತಾದ ಕಾಯ್ದೆಯನ್ನು ಮಾರ್ಪಡಿಸುವಾಗ ನಾನು ಅದಕ್ಕೆ ನನ್ನ ವಿರೋಧವನ್ನು ಸೂಚಿಸಿದ್ದೆನು. ಆ ಮಸೂದೆಯನ್ನು ಪರಿಶೀಲಿಸಲು ರಚಿಸಿದ ಸೆಲೆಕ್ಟ್ ಕಮಿಟಿಯಲ್ಲಿ ನನ್ನನ್ನೂ ಸೇರಲು ಹೇಳಿದಾಗ, ಈ ವಿಷಯದಲ್ಲಿನ ಸರ್ಕಾರದ ಧೋರಣೆಯಲ್ಲಿ ವಿಶ್ವಾಸವಿಲ್ಲದಿದ್ದರೂ ಉದಾಸೀನಪಕ್ಷದಿಂದ ಒಪ್ಪಿಕೊಂಡೆನು. x x x

ಕಾಂಗ್ರೆಸ್ ಸರಕಾರದಲ್ಲಿ ಕಂಡುಬರುವ ಕೆಲವು ಲೋಪದೋಷಗಳು ಪ್ರಕೃತ ಸ್ಥಿತಿಯಲ್ಲಿ ನಿವಾರಿಸಲ್ಪಡದವುಗಳೆಂದೇ ಹೇಳಬಹುದು, ಕೇವಲ ತಮ್ಮ ಪಕ್ಷದ ಪ್ರತಿಷ್ಠೆಗಾಗಿಯೋ ಸ್ವಪ್ರಯೋಜನಕ್ಕಾಗಿಯೋ ಇರುವ ಆ ಕಾರಣದಿಂದ ಉಂಟಾದವುಗಳಾಗಿವೆ. ಇದರಿಂದೆಲ್ಲಾ ಜನರಲ್ಲಿ ಬೇಸರವೂ ಅಸಮಾಧಾನವೂ ಹುಟ್ಟುವುದು ಸ್ವಾಭಾವಿಕ, ಈ ಕಾರಣದಿಂದಲೇ ಕಾಂಗ್ರೆಸ್ಸಿಗೆ ವಿರೋಧವಾಗಿ, ಬೇರೆಬೇರೆ ಹಲವಾರು ರಾಜಕೀಯ ಪಕ್ಷಗಳು ಉದ್ಭವಿಸಲು ಕಾರಣವಾಯಿತೆನ್ನಬಹುದು. x x x

ಇನ್ನು ಭಾಷಾವಾರು ಪ್ರಾಂತ್ಯ ರಚನೆಗೆ ನಾನು ಮೊದಲಿನಿಂದಲೂ ಸಹಾನುಭೂತಿಯುಳ್ಳವನಾಗಿರುವೆನು. ನಮ್ಮ ಸ್ವಾಭಾವಿಕವಾಗಿ ಜನತೆಯೊಳಗೆ ಇರುವ ನಿಕಟ ಬಾಂಧವ್ಯವು ಬೇರೆ ಸಂಸ್ಥೆಗೆ ಇರಲಾರದು. ನಮ್ಮ ಊರು ಬಿಟ್ಟು ದೂರದೇಶಕ್ಕೆ ನಾವು ಹೋದಾಗ ಅಲ್ಲಿ ನಮ್ಮ ಭಾಷೆಯನ್ನಾಡತಕ್ಕ ಜನರು ಸಿಕ್ಕಿದರೆ, ಅವರೊಡನೆ ನಾವು ಬಹು ಪ್ರೇಮದಿಂದ ವರ್ತಿಸುತ್ತೇವೆ. ಆಗ ಜಾತಿ ಮತ್ತು ಮತವನ್ನು ಲೆಕ್ಕಿಸುವುದಿಲ್ಲ. ಸ್ವಷ್ಟವಾಗಿ ನಮ್ಮ ಅಭಿಪ್ರಾಯಗಳನ್ನು ಸುಲಭವಾಗಿ ವ್ಯಕ್ತಪಡಿಸತಕ್ಕ ನಮ್ಮ ಭಾಷೆಯ ಉಪಯೋಗದ ಮಹತ್ವ ನಮ್ಮ ಅರಿವಿಗೆ ಬರುವುದು ಆಗ ಯೋಚಿಸಿದರೆ ತಿಳಿಯಬಹುದು.

(ಸ್ಥಳಾಭಾವದಿಂದ ಸಂಕ್ಷೇಪಿಸಲಾಗಿದೆ).

NOTICE

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

S. C. I A. 56/51.

ಸಾಲ ನಂಬ್ರ 131/51

C. H. ಕುಂಞ ಕಲಂದು-ಅರ್ಜಿದಾರ -ವಾದಿ

1 ಆಕ್ಕಂಮ್ಮ, ಮೃತಪಟ್ಟ ಅಂದ್ರು ಯ್ಯಾನೆ ಅಬ್ದುಲ ರಹಿಮಾನ ಬ್ಯಾರಿಯ 1ನೇ ಹೆಂಡ್ತಿಯ ಮಗಳು ವ C. L. ಮೊಯಿದಿನ ಕುಂಞ ಹೆಂಡ್ತಿ.

2 ಮರಿಯುಂಮ್ಮ, ಸದ್ರಿ ಅಂದ್ರು ಯ್ಯಾನೆ ಅಬ್ದುಲ ರಹಿಮಾನ 2ನೇ ಹೆಂಡ್ತಿ.

3 ಶಾಫಿ, 4 ನಫೀಸ, 5 ಆಯಿಸಾಬಿ, 6 ಬೀಫಾತುಂಮ್ಮಾ, 2ನೇ ಪ್ರತಿವಾದಿಳ ಮಕ್ಕಳು ಗಾರ್ಡಿಯನ್ ತಾಯಿ ಸದ್ರಿ 2ನೇ ಪ್ರತಿವಾದಿಳು ಮರಿಯುಂಮ್ಮ ಕಾಸರಗೋಡು ತಾಲೂಕು ತೆಕ್ಕಿಲ ಗ್ರಾಮದ ಬಂಬ್ರಾಣ ಎಂಬಲ್ಲಿರುವವರು.- ಪ್ರತಿವಾದಿರು-ರೆಸ್ಪೊಂಡೆಂಟರು

ಸದ್ರಿ ಪ್ರತಿವಾದಿರೀಗೆ ಸದ್ರಿ ವ್ಯಾಜ್ಯದ ಪ್ರತಿವಾದಿರ ಪೈಕಿ 1 ವ 3 ಲಾಗಾಯ್ತು 6ನೇ ಪ್ರತಿವಾದಿಯರ ತಂದೆ ವ 2ನೇ ಪ್ರತಿವಾದಿಳ ಗಂಡಾ ಮೃತಪಟ್ಟ ಅಂದ್ರು ಯಾನೆ ಅಬ್ದುಲ ರಹಿಮಾನ ಬ್ಯಾರಿಯು ವಾದಿಗೆ ತಾರೀಕು 16-5-1948ರಲ್ಲು ರೂಪ್ಯಾ 200ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳತಕ್ಕ ಬಗ್ಗೆ ದಾಖಲ್ಲು ಮಾಡಿರುವ ಮೇಲಿನ ದಾವೆಯು ವ ಮ್ಯಾನರಿ ಗಾರ್ಡಿಯನ್ ನೇಮಕದ ಕುರಿತು ದಾಖಲು ಮಾಡಿರುವ ಅರ್ಜಿ ಕೂಡಾ ಇದೇ ತಿಂಗಳ ತಾ 19-11-1951ಕ್ಕೆ ತನ್ಕಿಗೆ ನಿಶ್ಚಯಿಸಲ್ಪಟ್ಟುದರಿಂದ ಸದ್ರಿ ತಾರೀಕಿಗೆ ಪ್ರತಿವಾದಿರು ಹಾಜರಾಗುವರೆ ತಪ್ಪಿದಲ್ಲಿ ಸದ್ರಿಯವರ ಗೈರಹಾಜರಿಯಲ್ಲಿ ಸದ್ರಿ ಪ್ರತಿವಾದಿರನ್ನು ಎಕ್ಸಪಾರ್ಟಿ ನಿಕ್ಷೇಪಮಾಡಿ ಸದ್ರಿ ವ್ಯಾಜ್ಯತೆ ತನ್ಕಿಗೆ ಮುಂದರಿಸೋದಾದೀತು.

M. K. Abdul Khader,

Advocate for Plaintiff.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವವಿಮೆ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ)

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ತಳವಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗವಾಯು ನರಸೋಯುವದು ಸ್ತ್ರೀಯರ ಬಿಳಿಯ ಸೆರಗು ಹೋಗುತ್ತಿದ್ದರೆ, ಕೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕೆಂಬುಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಸ್ಟೋರ್ಸ. ನಂಜುಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S K

ಕೊರಡ್ಕಲ್ ಶ್ರೀನಿವಾಸರಾವ್

ವಿರಚಿತ

ಸುಲಭದಲ್ಲಿ ಇಂಗ್ಲಿಷ

ಆಂಗ್ಲ ಸ್ವಯಂಬೋಧಿನಿ

ಬೆಲೆ ರೂ. 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ

ಮತಗಟ್ಟೆಗಳಲ್ಲಿ ಆಚರಣೆ

(ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಶಾಖೆಯಿಂದ)

ಪ್ರತಿಯೊಂದು ಮತಗಟ್ಟೆಯಲ್ಲಿ ಚುನಾವಣೆಗಳನ್ನು ಶಾಂತರೀತಿಯಿಂದ ಕಾನೂನಿನ ಮೇರೆಗೆ ಸರಿಯಾಗಿ ಸಾಗಿಸಲು ಕೆಲವು ಸರಕಾರದ ಅಧಿಕಾರಿಗಳಿರುತ್ತಾರೆ. ಒಂದೊಂದು ಜಿಲ್ಲೆಯನ್ನು ೩-೪ ಭಾಗಗಳಲ್ಲಿ (Zones) ವಿಂಗಡಿಸಿ ಒಂದೊಂದು ಭಾಗದ ಸಮಗ್ರ ಸಂಘಟನೆಯನ್ನು ಒಬ್ಬೊಬ್ಬ ಅಧಿಕಾರಿಗೆ ವಹಿಸಿದ್ದಾರೆಂದು ತಿಳಿದು ಬರುತ್ತದೆ. ಮತಗಟ್ಟೆಗೊಬ್ಬ ಅಧ್ಯಕ್ಷ (Presiding Officer) ಇರುತ್ತಾರೆ. ಅಲ್ಲದೆ ಅವರ ನೆರವಿಗೆ ಸಹಾಯಕ ಅಧ್ಯಕ್ಷ (Assistant Presiding Officer) ಮತ್ತು ಅಧ್ಯಕ್ಷರಿಗೆ ಅಸಾನುಕೂಲವಾದ ಪಕ್ಷಕ್ಕೆ ಅವರ ಬದಲು ಕೆಲಸಮಾಡುವ ಇನ್ನೊಬ್ಬ ಅಧ್ಯಕ್ಷರೂ ಇರುತ್ತಾರೆ. ಮತದಾನದ ಕಾರ್ಯಕ್ಕಾಗಿ ಪೋಲಿಂಗ ಅಧಿಕಾರಿಗಳು ಇರುತ್ತಾರೆ. ಅದಲ್ಲದೆ ಸ್ತ್ರೀಯರಿಗಾಗಿ ಪ್ರಾಂತಿಕ ಶಾಸನ ಸಭೆ ಮತ್ತು ಲೋಕ ಸಭೆಗಳಿಗಾಗಿ ಇಬ್ಬರು ಸ್ತ್ರೀ ಅಧಿಕಾರಿಗಳು ಇರುವರು.

ಮತದಾನ ಮಾಡುವ ಸ್ಥಳದ ಹೊರಗೆ ಮತಪೆಟ್ಟಿಗೆಗಳನ್ನು ರಕ್ಷಿಸಲು ಮತ್ತು ಒಂದೇ ಸಲಕ್ಕೆ ಒಬ್ಬನಿಗಿಂತ ಹೆಚ್ಚು ಮತದಾರರು ಆ ಸ್ಥಳದಲ್ಲಿ ನುಗ್ಗದಂತೆ ನೋಡಿಕೊಳ್ಳಲು ಹತ್ತಿರದಲ್ಲಿ ಒಬ್ಬ ಸಿಪಾಯಿ ಇರುತ್ತಾನೆ. ಮತಪೆಟ್ಟಿಗೆಯಲ್ಲಿ ಮತಪತ್ರಗಳನ್ನು ಹಾಕುವ ಎಡೆಯನ್ನು ಮತದಾರರು ಯಾವುದಾದರೂ ಉಪಾಯದಿಂದ ಮುಚ್ಚಿ ಬಂದುಮಾಡದಂತೆ ಅಥವಾ ಮುಂದಿನ ಮತದಾರರಿಗೆ ಮತಹಾಕಲು ಬಾರದಂತೆ ಮಾಡಲು ಯತ್ನ ಮಾಡುತ್ತಿದ್ದರೆ ಅವನು ಆಗಾಗ್ಗೆ ಕಂಡುಹಿಡಿದು ಕೂಡಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವನು. ಮತಪೆಟ್ಟಿಗೆಯ ಬಾಯಿಯನ್ನು ಎದುರಿಗೆ ಕಾಣದಂತೆ ಬದಿಗೆ ಸರಿಸುವ ಕಿಡಿಗೇಡಿಗಳನ್ನೂ ಬಯಲಿಗೆಳೆಯುವನು.

ಪಕ್ಷಾಭಿಮಾನ ಪ್ರೇರಿತರಾದ ಕೆಲವು ಜನರು ಅಜ್ಞ ಮತದಾರರಿಗೆ ಹಲವು ಹಂಚಿಕೆಗಳನ್ನು ಕಲಿಸಿ ಅವರ ಮತಪತ್ರಗಳು ತಮ್ಮ ಕೈಗೆ ಬರುವಂತೆ ಮಾಡುವ ಸಂಭವವುಂಟು. ಅಂತಹ ಒಂದು ಉಪಾಯವನ್ನು ಇಲ್ಲಿ ಹೇಳುವುದು ಎಚ್ಚರಿಕೆಯ ದೃಷ್ಟಿಯಿಂದ ಒಳ್ಳಿತು. ಒಬ್ಬ ಮತದಾರನು ತಾನು ಪಡೆದ ಮತಪತ್ರ (Voting Paper) ವನ್ನು ಮತಪೆಟ್ಟಿಗೆಯಲ್ಲಿ ಹಾಕದೆ ತಾನು ತೊಟ್ಟ ಬಟ್ಟೆಗಳಲ್ಲಿ ಅಥವಾ ಬೇರೆಡೆಗಳಲ್ಲಿ ಅಡಗಿಸಿಟ್ಟುಕೊಂಡು ಹೊರಗೆ ಬಂದು ಬೇಕಾದವರಿಗೆ ಮತವನ್ನು ಮಾರಬಹುದು. ಹೀಗೆ ಅದನ್ನು ಕೊಂಡು ಇನ್ನೊಬ್ಬ ಮತದಾರನು ತನ್ನ ಮತದೊಡನೆ ಅದನ್ನು ತನಗಿಷ್ಟವಿದ್ದ ಪೆಟ್ಟಿಗೆಯಲ್ಲಿ ಸೇರಿಸಿಬರಬಹುದು. ಇದು ದೊಡ್ಡ ಅಪರಾಧ, ಆದುದರಿಂದ ಇಂತಹ ಅನ್ಯಾಯಗಳು ಜರುಗದಂತೆ ಜನತಾ ಪ್ರಾತಿನಿಧ್ಯ ಶಾಸನದ ೧೩೫-೧೩೬ನೆಯ ನಿಯಮಗಳ ಪ್ರಕಾರ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವರು. ಸಂಶಯಬಂದರೆ ಮತದಾರನನ್ನು ಮತದಾನದ ಸ್ಥಳದಿಂದ ಹೊರಗೆ ಬರುವಾಗ ಹಿಡಿದು ಅವನಲ್ಲಿ ಮತಪತ್ರವು ಹಾಗೆಯೇ ಉಳಿದಿದೆಯೋ ಹೇಗೆ ಎಂಬುದನ್ನು ಶೋಧಿಸಲು ಪೋಲೀಸರನ್ನು ಇಟ್ಟಿದ್ದಾರೆ. ಸ್ತ್ರೀ ಮತದಾರರಿಗಾಗಿ ಸ್ತ್ರೀಯರನ್ನೇ ಶೋಧಿಸಲು ಹಚ್ಚುವರು. ಮತದಾರನ ಹತ್ತಿರ ಹೀಗೆ ಮತದಾರನು ಸಿಕ್ಕ ಪಕ್ಷಕ್ಕೆ ತಕ್ಷಣ ಅವನನ್ನು ಬಂಧಿಸಿ ಪೋಲೀಸರ ವಶಕ್ಕೆ ಒಪ್ಪಿಸುವರು. ಈ ಅಪರಾಧಕ್ಕೆ ಘೋರ ಶಿಕ್ಷೆಯನ್ನು ವಿಧಿಸಲಾದೀತು. ಯಾವುದೇ ಕಾರಣದಿಂದ ಮತದಾರನು ತಾನು ಪಡೆದ ಮತಪತ್ರವನ್ನು ಮತದಾನದ ಸ್ಥಳದಿಂದ ಹೊರಕ್ಕೆ ತರಲಾಗದು. ಅದನ್ನು ಹರಿದೊಗೆಯಬಾರದು; ಮತಪೆಟ್ಟಿಗೆಯ ಸುತ್ತುಮುತ್ತು ಇಡಲಾಗದು. ಹೀಗೆ ಪೆಟ್ಟಿಗೆಯ ಹೊರಗೆ ಬಿದ್ದ ಮತಪತ್ರಗಳನ್ನು ಎಣಿಕೆಯಲ್ಲಿ ಹಿಡಿಯುವುದಿಲ್ಲ. ತನಗೆ ಮತದಾನ ಮಾಡುವ ಇಚ್ಛೆಯಿಲ್ಲದಿದ್ದರೆ ಆ ಮತಪತ್ರವನ್ನು ಅಲ್ಲಿರುವ ಸರಕಾರದ ಅಧಿಕಾರಿಗಳಿಗೆ ಒಪ್ಪಿಸಬೇಕು. ಅವರು ಆ ಮತಪತ್ರವನ್ನು ಬೇರೆಯಾಗಿ ಎಣಿಕೆಗೆ ತೆಗೆದುಕೊಳ್ಳುವುದಿಲ್ಲ.

ಅಧಿಕಾರಿಗಳಿಗೆ ಮತದಾನ ಮಾಡುತ್ತಿರುವ ಯಾವ ಮನುಷ್ಯನ ಬಗ್ಗೆ ಸಂದೇಹ ಬಂದರೂ ಅವನನ್ನು ತಪಾಸು ಮಾಡಬಲ್ಲರು. ಮತಪೆಟ್ಟಿಗೆಯಲ್ಲಿ ಮತಪತ್ರವನ್ನುಳಿದು ಇತರ ಕಾಗದ ಅಥವಾ ವಸ್ತುಗಳನ್ನು ಚೆಲ್ಲುವ ವ್ಯಕ್ತಿಗೂ ಶಿಕ್ಷೆಯುಂಟು.

ದ್ವಿಸದಸ್ಯತ್ವವುಳ್ಳ ಮತದಾರ ಸಂಘಕ್ಕೆ ಸೇರಿದ ಮತಗಟ್ಟೆಯಲ್ಲಿ ಪ್ರತಿಯೊಬ್ಬ ಮತದಾರನಿಗೆ ಪ್ರಾಂತಿಕ ಶಾಸನ ಸಭೆಗಾಗಿ ಎರಡು ಮತಪತ್ರಗಳನ್ನು ಕೊಡುತ್ತಾರೆ. ಅದರಲ್ಲಿ ಒಂದನ್ನು ಸಾಮಾನ್ಯ ಸ್ಥಳದ ಹುರಿಯಾಳುಗಳಲ್ಲಿ ತನಗಿಷ್ಟವಿದ್ದ ಹುರಿಯಾಳಿನ ಚುನಾವಣೆಯ ಚಿನ್ಹವುಳ್ಳ ಮತಪೆಟ್ಟಿಗೆಯಲ್ಲಿ ಹಾಕಬೇಕು. ಇನ್ನೊಂದನ್ನು ಹಿಂದುಳಿದ ಅಥವಾ ಪರಿಶಿಷ್ಟ ವರ್ಗದ ಹುರಿಯಾಳಿನ ಪೆಟ್ಟಿಗೆಯಲ್ಲಿ ಹಾಕಬೇಕು. ಹೀಗೆ ಮಾಡದೆ ತನ್ನ ಎರಡೂ ಮತಪತ್ರಗಳನ್ನು ಯಾವನಾದರೊಬ್ಬ ಹುರಿಯಾಳನ ಪೆಟ್ಟಿಗೆಯಲ್ಲಿ ಹಾಕಿದರೆ ಅವುಗಳಲ್ಲಿ ಒಂದೇ ಒಂದು ಮತವನ್ನು ಮಾತ್ರ ಎಣಿಕೆಗೆ ತೆಗೆದುಕೊಂಡು ಇನ್ನೊಂದನ್ನು ಲೆಕ್ಕಕ್ಕೆ ಹಿಡಿಯುವುದಿಲ್ಲ. ಇದನ್ನು ಹುಬ್ಬಳ್ಳಿ ತಾಲೂಕಿನಂತಹ ಮತಗಟ್ಟೆಗಳ ಮತದಾರರೆಲ್ಲರೂ ಸರಿಯಾಗಿ ಲಕ್ಷದಲ್ಲಿಡಬೇಕು. ಕಾಂಗ್ರೆಸಿನ ಅಭಿಮಾನವುಳ್ಳ ಜನರು ಜನತೆಗೆ ಈ ಸಂಗತಿಯನ್ನು ಚೆನ್ನಾಗಿ ವಿವರಿಸಿ ಹೇಳಬೇಕು.

ತಾನು ಮತಪತ್ರವನ್ನು ಪಡೆದು ಉಪಯೋಗಿಸದೆ ಕಳ್ಳತನದಿಂದ ಹೊರಗೆ ತಂದು ಬೇರೆಯವರಿಗೆ ಅದನ್ನು ಕೊಡುವವನಿಗೆ ಶಿಕ್ಷೆ ದಂಡಗಳಾಗುವಂತೆ ಅಂತಹ ಮತಪತ್ರವನ್ನು ಸ್ವೀಕರಿಸುವವನಿಗೂ ಶಿಕ್ಷೆಯಾಗುವುದು. ಮತದಾರರೇ ಏಕೆ ಮತಗಟ್ಟೆಯಲ್ಲಿರುವ ಅಧಿಕಾರಿವರ್ಗದವರಲ್ಲಿ ಯಾರಾದರೂ ಇಂತಹ ಅಪರಾಧಕ್ಕೆ ಯಾವುದೇ ರೀತಿಯಿಂದ ಕಾರಣರಾದರೆ ಅವರನ್ನು ಬಂಧಿಸಿ ಶಿಕ್ಷೆಗೆ ಗುರಿಮಾಡಲಾಗುವುದು.

ಮತದಾನದ ಸ್ಥಳದಲ್ಲಿ ಸಾಮಾನ್ಯವಾಗಿ ಅವಶ್ಯವೆಂದು ತೋರುವ ವೇಳೆಗಿಂತ ಹೆಚ್ಚು ಕಾಲದ ವರೆಗೆ ಮತದಾರನು ಉಳಿಯಲಾಗದು. ಅದೂ ಒಂದು ಅಪರಾಧವೆಂದು ತಿಳಿಯಲಾಗುವುದು. ಏಕೆಂದರೆ ಹೆಚ್ಚು ಮತಗಳನ್ನು ಪಡೆಯುವುದಾದ ಪಕ್ಷಕ್ಕೆ ಅದನ್ನು ಕಡಿಮೆ ಮತಗಳು ದೊರೆಯಲೆಂದು ವ್ಯರ್ಥ ಕಾಲಹರಣ ಮಾಡುವ ಕುತಂತ್ರವನ್ನು ಕೆಲವು ಮತದಾರರು ಬಳಸಬಹುದಲ್ಲವೇ? ಒಬ್ಬೊಬ್ಬ ಏನುಮಾಡಬೇಕೆಂದು ತಿಳಿಯದೆ ಎಷ್ಟೋ ಹೊತ್ತು ನಿಲ್ಲುವ ಸಂಭವವೂ ಉಂಟು. ಆದುದರಿಂದ ಸಾಮಾನ್ಯವಾಗಿ ಒಂದು ಮಿನಿಟಿಗಿಂತ ಹೆಚ್ಚುಕಾಲ ಅಲ್ಲಿ ನಿಲ್ಲುವ ಮತದಾರನನ್ನು ಕೇಳಿ ಅವನು ಬೇಗ ಮತಪತ್ರವನ್ನು ಹಾಕುವಂತೆ ಹೇಳುವ ಅಧಿಕಾರವು ಅಲ್ಲಿಯ ಅಧಿಕಾರಿಗಳಿಗಿರುತ್ತದೆ.

ಮತದಾನದ ಒಟ್ಟು ಸಮಯವು ಇಂತಿಷ್ಟೇ ಗಂಟೆಗಳೆಂದು ನಿರ್ದಿಷ್ಟವಾಗಿರುವುದರಿಂದ ಮತದಾರನು ಲಗುಬಗೆಯಿಂದ ಮತದಾನ ಮಾಡಿ ಹೊರಗೆ ಬರಬೇಕು. ಮತದಾನ ಮಾಡುವವನು ಕುರುಡ ಕುಂಟ ಅಥವಾ ನಿರ್ಬಲನಾಗಿದ್ದರೆ ಅವನಿಗೆ ಅಲ್ಲಿರುವ ಅಧಿಕಾರಿಗಳು ತಕ್ಕ ಸಹಾಯವನ್ನು ಒದಗಿಸುವರು. ಅಂತಹ ಮತದಾರನು ಮೂಕನಿದ್ದರೆ ತನಗಿಷ್ಟವಿದ್ದ ಚುನಾವಣೆಯ ಚಿನ್ಹವನ್ನು ತೋರಿಸಿ ಅಧಿಕಾರಿಗೆ ಮತಪತ್ರ ಹಾಕಲು ಕೇಳಿಕೊಳ್ಳಬೇಕು. ಅಧಿಕಾರಿಯು ಅಂತಹ ಮತಪತ್ರವನ್ನು ಎಲ್ಲ ಹುರಿಯಾಳುಗಳ ಸಮಕ್ಷಮದಲ್ಲಿ ಪೆಟ್ಟಿಗೆಗೆ ಹಾಕಬೇಕೋ ಹೇಗೆಂಬುದನ್ನು ಮುಂಚೆಯೇ ನಿರ್ಧರಿಸಿಕೊಳ್ಳುವುದು ಒಳಿತು. ಏಕೆಂದರೆ ಅಧಿಕಾರಿಯು ಪಕ್ಷಪಾತವುಳ್ಳವನಾದರೆ ಅಂತಹ ಮತಪತ್ರಗಳನ್ನು ತನಗಿಷ್ಟವಿದ್ದ ಮತಪೆಟ್ಟಿಗೆಗಳಲ್ಲಿ ಹಾಕುವ ಸಂಭವವುಂಟು. ಈ ಬಗೆಗೆ ಕಾಂಗ್ರೆಸ ಹುರಿಯಾಳುಗಳು ಮತ್ತು ಅವರ ಏಜಂಟರು ತಕ್ಕ ಗಮನವನ್ನು ಕೊಡಬೇಕು. ಆದುದರಿಂದ ಮತಗಟ್ಟೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳ ಏಜಂಟರು ಮತದಾನದ ವಿಧಿ-ವಿಧಾನಗಳನ್ನು ಮತ್ತು ಅವರ ಚುನಾವಣೆಯ ನೇಮನಿರ್ಬಂಧಗಳನ್ನು ಚೆನ್ನಾಗಿ ಬಲ್ಲವರಿರಬೇಕು. ಇಲ್ಲವಾದರೆ ತುಂಬ ತೊಂದರೆಯಾಗಬಹುದು.

ಪ್ರಚಾರ ಕಾರ್ಯದರ್ಶಿ,

ಮುಳಿಯ ಗೋವರ್ಧನರಾವ್;

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ.

ಸ್ವೀಕಾರ-ವಿಮರ್ಶೆ

ದೀಪಾವಳೀ ವಿಶೇಷಾಂಕಗಳು

ಕಿರ್ಲೋಸ್ಕರ್-ದೀಪಾವಳಿ ಸಂಚಿಕೆ. ಬೆಲೆ 1-[illegible]-0.

ಪ್ರಸಿದ್ಧ ಮರಾಠಿ ಮಾಸಪತ್ರಿಕೆಯಾದ ಕಿರ್ಲೋಸ್ಕರ್ ದೀಪಾವಳಿ ಸಂಚಿಕೆ ನಿರಾಡಂಬರದ ರೀತಿಯಲ್ಲಿ ಹೊರಬಿದ್ದಿದೆ. ವಿಲಾಸಕ್ಕಿಂತ ವಿಚಾರಕ್ಕೆ ಹೆಚ್ಚು ಗಮನ ಕೊಡಲಾಗಿದೆ. "ದೀಪಾವಳಿಯ ಸಂದೇಶ" ಎಂಬ ಸಂಪಾದಕೀಯ ಲೇಖನದಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಬೆಳೆದು ಬರುತ್ತಿರುವ ಅಂತರಿಕ ಕಲಹ ಮತ್ತು ಜಾತೀಯತೆ ಇವನ್ನು ನಿರ್ಮೂಲ ಮಾಡುವಂತಹ ಧೋರಣೆ ಜನನಾಯಕರು ಸ್ವೀಕರಿಸದಿದ್ದರೆ ಅವರೂ ಅವುಗಳ ಆಹುತಿಯಾಗುವ ಸಂದರ್ಭ ಒದಗೀತೆಂದು ಎಚ್ಚರಿಕೆ ಕೊಟ್ಟಿರುವುದು ಸಮಯೋಚಿತವಾಗಿದೆ. ಮಹಾರಾಷ್ಟ್ರದ ವಿಖ್ಯಾತ ಕ್ರಿಕೆಟ್ ಪಟು ಶ್ರೀ ಚಂದೂ ಸರವಟೆಯವರ ವ್ಯಕ್ತಿಪರಿಚಯ ಮಾಡಿಕೊಡುತ್ತಾ ಕ್ರಿಕೆಟ್ ಪ್ರಪಂಚದಲ್ಲಿ ಸಿ. ಕೆ. ಯವರನ್ನು "ಕ್ರಿಕೆಟ್ ಕಿಂಗ್" ಎಂದು ಕರೆಯುವಂತೆ ಸಿ. ಟಿ. [ಸರವಟೆ]ಯವರನ್ನು "ಕ್ರಿಕೆಟ್ ಟ್ರಂಪ್" ಎಂದು ಕರೆಯಬೇಕೆಂದು ಶ್ರೀ ಅನಂತ ಅಠಲೆಯವರು ಸೂಚಿಸುತ್ತಾರೆ. 1793 ಕೋಟಿ ವೆಚ್ಚದಿಂದ ಕೂಡಿದ ಪಂಚವಾರ್ಷಿಕ ಯೋಜನೆಯ ಸ್ವರೂಪವನ್ನು ಶ್ರೀ ಡಿ. ಆರ್. ಗಾಡಗೀಳರು ತೋರಿಸಿಕೊಟ್ಟು ಆ ಯೋಜನೆಯ ಮೇಲೆ ಬಂದಿರುವ ಪ್ರಧಾನ ಆಕ್ಷೇಪಗಳನ್ನೂ ಹೇಳಿ, ಹಿಂದುಳಿದ ರಾಷ್ಟ್ರದಲ್ಲಿರುವ ಅಪಾರ ಮನುಷ್ಯ ಬಲ ಮತ್ತು ನಿಸರ್ಗ ಸಾಹಿತ್ಯ ಇವುಗಳನ್ನೂ ಒಟ್ಟುಗೂಡಿಸಿ ಶಾಂತಿಯಿಂದಲೂ ಸ್ವಾವಲಂಬನದಿಂದಲೂ ಆರ್ಥಿಕ ಮತ್ತು ಸಾಂಸ್ಕೃತಿಕ ಉತ್ಕರ್ಷವನ್ನು ಸಾಧಿಸುವ ಮಾರ್ಗ ಈ ಯೋಜನೆಯಲ್ಲಿದೆಯೆಂದು ತಿಳಿಸಿದ್ದಾರೆ.

"ಮರಳು ಕಾಡಿನ ಕಾವ್ಯ" ಎಂಬ ಶಿರೋನಾಮೆಯಲ್ಲಿ ಶ್ರೀ ಎನ್. ಎಲ್. ವೈದ್ಯ ಅವರು ಸೋವಿಯಲಿ ಜನರ ರೀತಿ ನೀತಿ, ಸಮಾಜ ಪದ್ಧತಿ, ಹಾಗೂ ಪ್ರೇಮ ಮತ್ತು ಅದರವನ್ನು ವ್ಯಕ್ತಪಡಿಸುವ ಭೀಷಣ ರೋಮಾಂಚಕಾರಿ ಪದ್ಧತಿಯನ್ನೂ ಅನುಭವಪೂರ್ಣವಾಗಿ ಕೊಟ್ಟಿದ್ದಾರೆ. 'ಮೂರನೆಯ ಮಹಾಯುದ್ಧದ ಛಾಯೆಯಲ್ಲಿ ಇಂದಿನ ಯುರೋಪ್' ಎಂಬ ಲೇಖನ ಮಾರ್ಮಿಕವೂ ವಿಚಾರಪೂರ್ಣವೂ ಆಗಿದೆ. ಜರ್ಮನಿಯ ಹ್ಯಾಂಬರ್ಗ ನಗರದಲ್ಲಿರುವ ಶ್ರೀ ವಿ. ಎಸ್. ಕುಲಕರ್ಣಿಯವರು ಯುರೋಪ್ ರಾಷ್ಟ್ರಗಳ ನಿಜವಾದ ವೇದನೆಯೇನೆಂಬುದನ್ನು ವಿಶದಪಡಿಸಿದ್ದಾರೆ. ಯುರೋಪಿನ ಜನತೆಗೆ ಯುದ್ಧ ಬೇಡವಾಗಿದೆ ಆದರೆ ಸರ್ಕಾರಗಳು ಮಾತ್ರ ಯುದ್ಧಕ್ಕೆ ಅಣಿಮಾಡಿಕೊಳ್ಳುತ್ತಿವೆಯೆಂದು ಹೇಳಿದ್ದಾರೆ. ಅಷ್ಟೇ ಅಲ್ಲ ಶ್ರೀ ಕುಲಕರ್ಣಿಯವರು ತಮ್ಮ ಲೇಖನದಲ್ಲಿ ಅಮೆರಿಕನ್ ವೃತ್ತಪತ್ರಿಕೆಯೊಂದರ ಪಂಕ್ತಿಗಳನ್ನು ಉದಾಹರಿಸುವುದು ನೋಡಿದರೆ ಅಮೆರಿಕನರ ಧೋರಣೆ ಎತ್ತ ಸಾಗಿದೆಯೆಂಬುದನ್ನೂ ಮತ್ತು ವಿನಾಶದಂಚಿಗೆ ಒದಗಬಹುದಾದ ಚಿತ್ರವನ್ನೂ ಊಹಿಸಬಹುದಾಗಿದೆ. "ಹೊಸ ಮಹಾಯುದ್ಧವನ್ನು ಏಷ್ಯಾದಲ್ಲೇ ಎದುರಿಸಬೇಕು. ಯುರೋಪಿನಲ್ಲಿ ಅದು ಬಂದರೆ ಅಮೆರಿಕೆಕ್ಕೆ ಬಹು ಹತ್ತಿರ ಬಂದೀತು. ಅಲ್ಲದೆ ಮಾನವೀ ಜೀವಿತ ಏಷ್ಯಾದಲ್ಲಿ ಬಹು ಅಗ್ಗವಾಗಿದೆ." ಪ್ರೊ|| ನಾ. ಸಿ. ಫಡ್ಕೆ ಮತ್ತು ಶ್ರೀ ವಿ. ಎಸ್. ಖಾಂಡೇಕರ್ ಅವರ ಕಥೆಗಳು, ಮಧ್ಯೆ ಮಧ್ಯೆ ವ್ಯಂಗ ಚಿತ್ರಗಳೂ, ರಾಜ ಕಾಳೆ ಮತ್ತು ಯಶವಂತ್ ಇವರ ಕವನಗಳೂ ಸಂಚಿಕೆಗೆ ಸೊಬಗನ್ನೂ ನೀಡಿವೆ. ಒಟ್ಟಿನಲ್ಲಿ ಕಿರ್ಲೋಸ್ಕರ್ ತನ್ನ ವೈಶಿಷ್ಟ್ಯವನ್ನೂ ವಿಚಾರ ರೀತಿಯಲ್ಲಿ ಕಾಪಾಡಿಕೊಂಡು ಬಂದಿರುವುದು ಸ್ತೋತ್ರಾರ್ಹವಾಗಿದೆ.

— ಕೌಲಗಿ ಶೇಷಾಚಾರ್ಯ

ಜಯಹಿಂದ (ದೀಪಾವಳಿ ವಿಶೇಷಾಂಕ)

ಸಂಸ್ಥಾಪಕರು: ಡಾ| ನಾ. ಸು. ಹರ್ಡೀಕರ; ಸಂಪಾದಕರು: ಶಂ. ಭಾ. ಮಸಗೋಡಿ; ಜಯಹಿಂದ ಕಾರ್ಯಾಲಯ, ಹುಬ್ಬಳ್ಳಿ. ಬೆ 0—12—0

ದೀಪಾವಳಿಯ ಈ ವಿಶೇಷಾಂಕದಲ್ಲಿ ... ವರ್ಗ ಸಾಮಾನ್ಯ ಎಲ್ಲ ಬರಹಗಳೂ ವಿಚಾರಪೂರ್ಣವಾದಂಥವುಗಳೇ ಎನ್ನಬಹುದು. ... ದಂಲ್ಲೂ ಶ್ರೀಗಳಾದ ದಿ. ಕೆ. ಭಾರದ್ವಾಜ, ಆರ್. ಬಿ. ಕುಲಕರ್ಣಿ, ಕೆ. ಎಸ್. ಸವಣೂರ; ಸಿಂಪಿ ಲಿಂಗಣ್ಣ, ಭಾರತ ಸಂಚಾರಿ ಕೃಷ್ಣ ಗೋಸಾವಿ ಮುಂತಾದವರ ಬರಹಗಳು ... ದ್ವತ್ಪೂರ್ಣವೂ-ವೈವಿಧ್ಯತೆಯಿಂದ ಕೂಡಿದ ... ಥವುಗಳೂ ಆಗಿರುತ್ತವೆ. ಇಂತಹ ಅಮೂಲ್ಯ ಕೃತಿಯನ್ನು ನೀಡಿದ್ದಕ್ಕೆ ಜಯಹಿಂದದ ಬ... ಯನ್ನು ಅಭಿನಂದಿಸುತ್ತೇವೆ

ಕರ್ಮವೀರ

ಸಂಪಾದಕರು: ಶ್ರೀ ಹ. ರಾ. ಪುರೋಹಿತರು, ಕರ್ಮವೀರ ಕಾರ್ಯಾಲಯ ಹುಬ್ಬಳ್ಳಿ. ಬೆಲೆ ರೂ. 1—4—0

ಕರ್ಮವೀರ ಕರ್ನಾಟಕದ ಆದರ್ಶ ವಾರಪತ್ರಿಕೆ. ದೀಪಾವಳೀ ವಿಶೇಷಾಂಕವೂ ಕನ್ನಡ ಅಂತಸ್ತು-ಸ್ಥಾನ ಮಾನಗಳಿಗುಚಿತವಾದ ಬರಹಗಳಿಂದ ಕೂಡಿದ್ದು ಅತ್ಯಂತ ಆಕರ್ಷಕ ಸಂಚಿಕೆಯಾಗಿರುತ್ತದೆ. 'ಸ್ವಾತಂತ್ರ್ಯದ ನಾಲ್ಕು ವರ್ಷಗಳು' ಇಡಿಯ ಸಂಚಿಕೆಯಲ್ಲೇ ಮಿಗಿಲಾದ ಬರಹವಾಗಿದೆ. ಸ್ವಾತಂತ್ರ್ಯಸಿಕ್ಕ ನಾಲ್ಕು ವರ್ಷದ ಮೇಲೆ ಕಾಂಗ್ರೆಸ್ ಸಾಧಿಸಿದ್ದೇನು? ಸಾಧಿಸಲಾಗದೆ ಉಳಿದಿರುವದೇನೆಂಬುದನ್ನು ಚೆನ್ನಾಗಿ ವಿಮರ್ಶೆ ಮಾಡಲಾಗಿದೆ. 'ಅಪ್ರಿಯ ಅಮೆರಿಕಾ' ಅಮೇರಿಕೆಯ ಜನರ ಸ್ವಾಭಿಮಾನ- ಅತ್ಯುತ್ಕರ್ಷತೆಯ ಮೇಲೆ ಅವರಿಗಿರುವ ಪ್ರಬಲವಾದ ಶ್ರದ್ಧೆಯನ್ನು ವ್ಯಕ್ತಪಡಿಸುತ್ತದೆ. 'ನಾನು ಬಂಡೆಯಲ್ಲ' ... ತಾನಿರೂಪಣೆ ಬಹಳ ಚೆನ್ನಾಗಿರುವದಾದರೂ ಮುಕ್ತಾಯ ಅಷ್ಟೊಂದು ಯಶಸ್ವಿಯಾಗಲಿಲ್ಲ. 'ನೀಲಗಿರಿಯ ತೋಡವರು' ಕುತೂಹಲಪೂರ್ಣ ಜೀವನವನ್ನು ಚಿತ್ರಿಸಿರುತ್ತದೆ. 'ಕವಿ... ಜ್ಞಾನಿಗೆ' ಸಂಚಿಕೆಯಲ್ಲಿಯ ಕವಿತೆಗಳಲ್ಲಿ ಅಗ್ರಸ್ಥಾನವನ್ನು ಪಡೆಯಬಲ್ಲುದು. 'ನೇ... ಯುವಂತಲೆಡನೆ' ಎನ್ನುವ ಲೇಖನವು ... ದರ್ಶನ ಸಂಭಾಷಣೆಯು ಕೇವಲ ವ್ಯಾಸಂಗ ರಸಿಕತೆಯ ಜೀವನ ನಿರೂಪಣೆಗಾಗಿಯಲ್ಲ- ಉದಾತ್ತ ವಿಚಾರವನ್ನೂ ಅದರಿಂದ ಪಡೆಯಬಹುದೆನ್ನುವದಕ್ಕೆ ಉತ್ತಮ ಉದಾಹರಣೆಯಾಗಿರುತ್ತದೆ. 'ವೈರಾಗ್ಯ, ... ' ... ಸ್ವಾರಸ್ಯವಾಗಿರುವುದಿಲ್ಲ. 'ಕರ್ನಾಟಕದ ಕನೂತಿಕಲೆ' ಉಪಯುಕ್ತವಾದ ಒಂದು ಲೇಖ. ''ಕನ್ನಡ ಕವಿಗಳು'' ಓದಿದಷ್ಟು ಸಾಲದೆನುವ ಉತ್ತಮ ಬಂಧ, ವಿಚಾರ, ವಿಮರ್ಶೆ ಮಾತ್ರವಲ್ಲದೆ ವಿನೋದಪೂರ್ಣವಾದ ಅವಲೋಕನವೂ ಇದೆ. ಅಚ್ಚುಕಟ್ಟಾದ ವರ್ತಿನಿಂದ ನಮ್ಮ ಹಿರಿಯ ಸಾಹಿತಿಗಳ ಸ್ವಭಾವ ಚಿತ್ರಗಳನ್ನು ಸ್ವಾರಸ್ಯವಾಗಿ ಬಣ್ಣಿಸಲಾಗಿದೆ. ಸಂಚಿಕೆ ಬಗ್ಗೆ ಹೇಳಬೇಕಾದುದು ಇಷ್ಟೆ. ಸಂಪಾದಕರು ತಮ್ಮ ನುಡಿಯಲ್ಲಿ ಹಿಂದಿನ ವಿಶೇಷ ಸಂಚಿಕೆಗಿಂತ ಇದು ಸ್ವಲ್ಪ ಕೆಟ್ಟಿಂದು ಹೇಳಿರುವುದನ್ನು ನಾವು ಪೂರ್ತಿ ಒಪ್ಪುವದಿಲ್ಲವಾದರೂ ಈ ಸಂಚಿಕೆಯೂ ದೀಪಾವಳಿಯ ಉತ್ತಮ ಉಡುಗೊರೆಯೆನ್ನಲಡ್ಡಿಯಿಲ್ಲ.

— ಎಸ್ಕೆಲ್.

ಪ್ರವಾಸಿಯ ಪತ್ರಗಳು ೧೭

ರಿಸಿನಿಂದ ಸುಮಾರು 12 ಮೈಲು ದೂರದಲ್ಲಿ ವರ್ಸೈಲ್ಸ್ ಎಂಬ ಪಟ್ಟಣವಿದೆ. ಅದರಲ್ಲಿ ಸುಮಾರು 75,000 ಜನ ವಾಸಿಸುವರು. ಕೆಲವು ದೂರ ಪ್ಯಾರಿಸ್ ನಲ್ಲೇ ಪ್ರಯಾಣ ಮಾಡಿ ಸೀನ್ ನದಿ ನಂತರ ನಗರದ ಹೊರಕ್ಕೆ ಹೋಗುವು ಹಾಗೆ ದಾಟುವಲ್ಲಿ ನದಿಯು ಸುಮಾರು 0 ಗಜ ಅಗಲವಿದೆ. ಹೋಗುವ ದಾರಿಯುದ್ದಕ್ಕೂ ಬದಿಗಳಲ್ಲಿ ರಮ್ಯವಾದ ಸಣ್ಣ ಸಣ್ಣ ನಗರಗಳಿರುತ್ತವೆ. ಅಲ್ಲಲ್ಲಿ ಕಾಡುಗಳೂ ಇವೆ. ಹೋಗುವ ಬಸ್ಸಿನಲ್ಲಿ ನಾವು ಎಂದಿ 20-25 ಜನರಿದ್ದೆವು. ಹೋಗುವಾಗ ರು ಕುಳಿತಿದ್ದ ಬಸ್ ಡ್ರೈವರನೂ ರ್ಗದರ್ಶಕನೂ ಕೂಡಾ ತಮ್ಮೊಳಗೆ ಗ ಯಾಗಿ ಮಾತನಾಡಿಕೊಂಡೇ ಹೋಗು ಗ ನಮ್ಮೊಟ್ಟಿಗಿದ್ದ ಒಬ್ಬ ಇಂಗ್ಲಿಷ್ ಮಹಿಳೆಯು ಅವರನ್ನು ನೋಡಿ ಮುಗುಳು ನಗಾತ್ತಿದ್ದಳು. ಇದರ ಅರ್ಥವೇನೆಂದರೆ, "ಇಂಗ್ಲೆಂಡಿನಲ್ಲಾದರೆ ಹಾಗೆ ಬೊಬ್ಬೆ ಹಾಕುತ್ತಿಲ್ಲ. ಇಲ್ಲಿಯ ಜನರಿಗೆ ಯಾವ ಕ್ರಮವಿಲ್ಲ" ದು. ಇದು ನಿಜ. ಹೀಗೆಯೇ ಕೆಲವು ಕಾ ಪ್ರಯಾಣವಾಡಿದ ನಂತರ ವರ್ಸೈಲ್ಸ್ ಪವು ಬಂತು.

ವರ್ಸೈಲ್ಸ್ ಎಂದರೆ ಮುಂಚಿನ ಕಾಲದಲ್ಲಿ ಫ್ರಾನ್ಸ್ ದೇಶದ ರಾಜರಾಣಿಯರು ಇದ್ದ ಅರಮನೆ ಇರುವ ಪ್ರಸಿದ್ಧ ಊರು. ಅಲ್ಲಿ ಕಟ್ಟಿದ ಅರಮನೆಯು ಬಹಳ ದೊಡ್ಡದು; ಮಾತ್ರವಲ್ಲ, ಅಲ್ಲಿ ಈಗಲೂ ಇರುವಷ್ಟು ಕಲಾಕೌಶಲ್ಯದ ಕೆಲಸಗಳು ಬೇರೆ ಎಲ್ಲಿಯೂ ಇರುವುದು ದುರ್ಲಭ. 1792-93ರಲ್ಲಿ ಪ್ಯಾರಿಸಿನಲ್ಲಿ ನಡೆದ ಕ್ರಾಂತಿಕಾಲದಲ್ಲಿ ಅಲ್ಲಿದ್ದ ರಾಜ XVIನೇ ಲೂಯಿ ಮತ್ತು ಅವನ ಹೆಂಡತಿ ರಾಣಿ ಮೇರಿ ಎಂಟೋನೆಟ್ ಎಂಬ ಪ್ರಸಿದ್ಧ ಹೆಂಗಸು. ಇವರಿಬ್ಬರನ್ನೂ ಆಕ್ರಾಂತಿಯು ಕೊಂದ ಪ್ರಜಾರಾಜ್ಯವನ್ನು(Republic) ಸ್ಥಾಪಿಸಿದ್ದು ಅವರನ್ನು ಈ ಅರಮನೆಯಲ್ಲಿದ್ದವರು ಮುತ್ತಿಗೆಹಾಕಿ ಪ್ಯಾರಿಸಿಗೆ ತಂದು ಅಲ್ಲಿ ಕೆಲವು ಕಾಲದ ನಂತರ ಕೊಲ್ಲಿಸಿದ್ದು. ಈ ಜಿಲ್ಲಾ ಚರಿತ್ರೆಯನ್ನು ಸ್ಟೀಫನ್ ಸ್ವೀಗ್ ಎಂಬ ಪ್ರಸಿದ್ಧ ಜರ್ಮನ್ ಬರಹಗಾರನು ಇವಳ ವಿಷಯವಾಗಿ ಬರೆದ ಪುಸ್ತಕದಿಂದ ವಾಚಕರು ತಿಳಿಯಬಹುದು. ಅನಂತರ ಫ್ರಾನ್ಸ್ ದೇಶದ ಅಧ್ಯಕ್ಷರಾಗಲೀ, ನಂತರ Iನೇ ನೆಪೋಲಿಯನನು ಸ್ಥಾಪಿಸಿದ ವಂಶದ ರಾಜರಾಗಲೀ ಈ ಅರಮನೆಯಲ್ಲಿ ವಾಸಿಸಲಿಲ್ಲ.

ಆದರೆ ಫ್ರಾನ್ಸ್ ದೇಶದಲ್ಲಿ ಅನಂತರ ನಡೆದ ಅನೇಕ ಮುಖ್ಯ ರಾಜಕೀಯ ವಿಷಯಗಳು ಈ ಅರಮನೆಯಲ್ಲಿ ಜರಗಿತ್ತು. ಹೊಸತಾಗಿ ಚುನಾಯಿಸುವ ದೇಶದ ಪಾರ್ಲಿಮೆಂಟುಗಳು ಅಲ್ಲಿ ಕೂಡುವವು. ಹಾಗೆಯೇ ಹೊಸತಾಗಿ ಆಗುವ ದೇಶದ ಅಧ್ಯಕ್ಷರ ಚುನಾವಣೆ ಅಲ್ಲಿ ನಡೆಯುವುದು. ಅರಮನೆಯ ಉಪ್ಪರಿಗೆಯ ಪಶ್ಚಿಮ ಭಾಗದಲ್ಲಿ ಒಂದು ಬಹು ದೊಡ್ಡ ಕನ್ನಡಿ ಸಂಭಾಂಗಣವಿದೆ. ಅದರ ಹೆಸರೇ ಹಾಗೆ (Hall of Mirrors). ಸಭಾಂಗಣದ ಎರಡೂ ಬದಿ ಗೋಡೆಯಲ್ಲಿ ಎಲ್ಲೆಲ್ಲಿ ನೋಡಿದರೂ ಕನ್ನಡಿಗಳೇ. ಇದನ್ನು 1678ರಿಂದ 1684ರ ವರೆಗೆ ಕಟ್ಟಿದ್ದು. 1870ರಲ್ಲಿ ಜರ್ಮನರಿಗೂ ಫ್ರೆಂಚರನ್ನು ಸೋಲಿಸಿ ಜರ್ಮನರು ಗೆದ್ದಿದ್ದರು. ಈ ಸಂಬಂಧ 1871ರಲ್ಲಿ ನಡೆದ ಅವರೊಳಗಿನ ಒಪ್ಪಂದದ ದಸ್ಕತ್ತು ಈ ಸಭಾಂಗಣದಲ್ಲಿ ಉಭಯ ಕಡೆಯವರೂ ಮಾಡಿದ್ದು. ಇದನ್ನು ಮರೆಯದೆ 1914-1918ರಲ್ಲಿ ಇವರೊಳಗೆ ನಡೆದ ಮಹಾಯುದ್ಧದ ಪರಿಣಾಮವಾಗಿ ಜರ್ಮನರು ಸೋತಾಗ 1919ರಲ್ಲಿ ನಡೆದ ವರ್ಸೈಲ್ಸ್ ಒಪ್ಪಂದಕ್ಕೆ ಇದೇ ಸಭಾಂಗಣದಲ್ಲಿ ಪುನಃ ದಸ್ಕತು. ಜರ್ಮನರಿಂದ ಮಾಡಿಸಿದರು. ಹಾಗೆ ದಸ್ಕತ್ತು ಹಾಕಿದ ಟು ಮೇಜನ್ನು ಈಗಲೂ ಇಲ್ಲಿ ಕಾಣಬಹುದು. ಈ ಒಪ್ಪಂದದಲ್ಲಿ ಜರ್ಮನರಿಗೆ ಹೆಚ್ಚಿನ ಅನ್ಯಾಯವಾಗಿ ಹಿಟ್ಲರನು ಅದಕ್ಕೆ ಎದುರಿಸಿ ಜರ್ಮನ್ ದೇಶವನ್ನು ಬಲಪಡಿಸಿ ಕಳೆದ ಮಹಾಯುದ್ಧಕ್ಕೆ ಕಾರಣವಾಯಿತು. ಆ ಯುದ್ಧದ ಪರಿಣಾಮದಿಂದ ಈ ಎರಡೂ ಜನಾಂಗದವರೂ ಈಗ ಸೋತು ಸುಣ್ಣವಾಗಿ ಯುದ್ಧಕಾಲದಲ್ಲಿ ಆದ ಗಾಯವನ್ನು ಈಗಲೂ ನೆಕ್ಕುತ್ತಿದ್ದಾರೆ. ಇದರಿಂದಲೇ ವರ್ಸೈಲಿನ ಮಹತ್ವವು ಎಷ್ಟೆಂದು ವಾಚಕರು ತಿಳಿಯಬಹುದು.

ಮೇಲೆ ಹೇಳಿದ ಸಭಾಂಗಣವು 80 ಗಜ ಉದ್ದ. ಇದು ಅರಮನೆಯ ಒಂದು ಭಾಗ, ಹಾಗೆಯೇ ಮತ್ತು ಅದಕ್ಕೂ ದೊಡ್ಡದಾಗಿ 8, 10 ಪಾಲಷ್ಟು ಎರಡೂ ಕಡೆಗಳಲ್ಲಿ ಅರಮನೆ ಇದೆ. ಇಡೀ ಅರಮನೆಯು ಬಹು ದೊಡ್ಡದು. ಊರಿನ ಎತ್ತರವಾದ ಸ್ಥಳದ ಮೇಲೆ ಇದೆ. ಒಂದು ಬದಿಯಲ್ಲಿ ದೂರಕ್ಕೆ ವರ್ಸೈಲ್ಸ್ ಪಟ್ಟಣ. ಅದರ ಎದುರು ಅನೇಕ ತರದ ಉದ್ಯಾನಗಳು ಮತ್ತು ಎರಡು ಬದಿಗಳಲ್ಲಿ ಮುಂಚಿನ ಅರಸರು ಬೇಟೆಯಾಡುತ್ತಿದ್ದ ದೊಡ್ಡ ಕಾಡುಗಳು. ಈ ಮಧ್ಯೆ ನೇರವಾಗಿ ಕಾಣುವಷ್ಟು ದೂರ ಸೀನ್ ನದಿಯಿಂದ ತೋಡಿದ ಒಂದು ದೊಡ್ಡ ಕಾಲುವೆ [Grand Canal]. ಹೀಗೆ ಈ ಅರಮನೆಯ ಎಲ್ಲ ಕಡೆಗಳಲ್ಲೂ ಸುಂದರವಾದ ದೃಶ್ಯ. ಅರಮನೆಯ ಎದುರು ಬಹಳ ವಿಸ್ತಾರವಾದ ಬಯಲು ಜಾಗ. ಅದರ ಮಧ್ಯೆ ಒಂದು ದೊಡ್ಡ ಕುದುರೆಯ ಪ್ರತಿಮೆ ಅದರ ಮೇಲೆ ಸವಾರಿಮಾಡುವ ಅರಸನಾದ XIVನೇ ಲೂಯಿಯ ಕಂಚಿನ ದೊಡ್ಡ ಪ್ರತಿಮೆ ಇದೆ. ಇವನ ಕಾಲದಲ್ಲೇ ಈ ಅರಮನೆಯನ್ನು ಪೂರಾ ಮಾಡಿ ಕಟ್ಟಿಸಿದ್ದು. ಮತ್ತು ಆಗಿನ ಫ್ರಾನ್ಸ್ ದೇಶದ ಅನೇಕ ಶಿಲ್ಪಿಗಳ ಮತ್ತು ಚಿತ್ರಕಾರರ ವಿಶೇಷವಾದ ಕೆಲಸಗಳನ್ನು ನಾವು ಇಲ್ಲಿ ಕಾಣಬಹುದು.

ಇಡೀ ಕಟ್ಟಡದಲ್ಲಿ ನೂರಾರು ದೊಡ್ಡ ಕೋಣೆಗಳು ಇರುವುದಾದರೂ ಅವುಗಳ ಮತ್ತು ಅಲ್ಲಿರುವ ಚಿತ್ರಗಳ ವಿಷಯ ಸರಿಯಾಗಿ ವಿವರಿಸಿ ಬರೆಯುವಷ್ಟು ಶಕ್ತಿ ನನ್ನಲ್ಲಿಲ್ಲ. ಆದರೂ ಕೆಲವೇ ವಿಷಯಗಳನ್ನು ಇಲ್ಲಿ ಬರೆಯುವೆನು. ಪ್ರಥಮತಃ ನಾವು ನೋಡಿದ್ದು ಅರಮನೆಯ ಪ್ರಾರ್ಥನಾಕೋಣೆ. ಇದು 1698ರಲ್ಲಿ ಕಟ್ಟಿದ್ದು. ಇದರಲ್ಲಿ ಒಂದು ವಿಚಿತ್ರವೇನೆಂದರೆ ಕೋಣೆಯ ಹಿಂದಿನಲ್ಲಿ ಮೇಲೆ ಒಂದು ಗ್ಯಾಲರಿ ಇದ್ದು ಅದರಲ್ಲಿ ರಾಜರಾಣಿಯರು ಕೂತುಕೊಳ್ಳುವ ಆಸನಗಳು ಇವೆ. ಅವುಗಳಿಗೆ ಸೇವಾ ಕೋಣೆಯ ಮುಂದಕ್ಕೆ ದೇವರು ಇರುವುದಾದರೂ ಮಧ್ಯದಲ್ಲಿ ಕೂತುಕೊಳ್ಳುವವರು ದೇವರಿಗೆ ಬೆನ್ನುಹಾಕಿ ಅಂದರೆ ರಾಜರಾಣಿಯರಿಗೆ ಮುಖಹಾಕಿ ಕೂತುಕೊಳ್ಳುವ ಕ್ರಮ. ಪಾಪ. ಅಂದರೆ ದೇವರಿಗಿಂತ ರಾಜರೇ ಮೇಲು! ಈ ಕೋಣೆಯಲ್ಲಿ ಅನೇಕ ಚಿತ್ರಗಳು ಬರೆದಿವೆ.

ಅದಕ್ಕೆ ತಾಗಿ ಒಂದು ದೊಡ್ಡ ಕೋಣೆ ಇದೆ. ಅದು ಸುಮಾರು 60 ಅಡಿ ಉದ್ದ 40 ಅಡಿ ಅಗಲ. ಅದು ರಾಜರು ಸಭೆಮಾಡುವ ಕೋಣೆ. ಅದರ ಹೆಸರು (Hall of Hercules) ಎಂತ. ಅಲ್ಲಿ ಮುಂಚಿನ ಕಾಲದ ರಾಜರ ದೇಹಸಂರಕ್ಷಣೆ ಮಾಡುವ ಬಗ್ಗೆ 300 ಸ್ವಿಸ್ ದೇಶದಿಂದ ಬರುತ್ತಿದ್ದ ಸೈನಿಕರು ಇದ್ದರಂತೆ. ಅಂದರೆ ದೇಶದ ಸೈನಿಕರಲ್ಲಿ ನಂಬಿಕೆ ಇಲ್ಲದೆ ಪರಕೀಯರನ್ನೇ ನೇಮಿಸುತ್ತಿದ್ದರು. ಇದಕ್ಕೆ ತಾಗಿ ಬೇರೆ ಬೇರೆ ಕೋಣೆಗಳು. ಒಂದು ಬಿಲಿಯರ್ಡ್ ಆಡುವ ಕೋಣೆ. ಪ್ರತಿಯೊಂದು ಕೋಣೆಯಲ್ಲಿಯೂ ಗೋಡೆಗೆ ತೂಗಿದ ಮತ್ತು ಗೋಡೆಯಷ್ಟೇ ದೊಡ್ಡದಾದ ಹಲವು ಬಣ್ಣದ ನೂಲಿನಿಂದಲೇ ಬಿಡಿಸಿದ ಚಿತ್ರಗಳಿರುವ ಬಟ್ಟೆಗಳು, (Tapestries) ಒಂದೊಂದಕ್ಕೆ ಸಾವಿರಾರು ಹವನು ಕ್ರಯ. ಅವುಗಳಲ್ಲಿ ವಿಶೇಷವಾದ ಕಸೂತಿ ಕೆಲಸವಿದೆ. ಅಂತಹಾ ಬಟ್ಟೆಗಳು ಈ ಅರಮನೆಯ ಅನೇಕ ಕೋಣೆಗಳಲ್ಲಿವೆ. ಈ ಕೆಲಸಕ್ಕೆ ಮುಂಚಿನ ಕಾಲದಷ್ಟು ಪ್ರೋತ್ಸಾಹ ಈಗ ಇಲ್ಲವಾದರೂ ಪ್ಯಾರಿಸ್ ನಗರದಲ್ಲಿ ಸರಕಾರದವರೇ ನಡೆಸುವ ಒಂದು ಕಾರ್ಖಾನೆ ಇದೆ. ಅರಮನೆಯಲ್ಲಿ ಹೀಗೆ ಮುಂದರಿಸಿ ಹೋಗುವಾಗ Hall of Mercury ಎಂಬ ಒಂದು ಕೋಣೆ ಬರುತ್ತದೆ. ಅಲ್ಲಿ ಮೇಲೆ ಹೇಳಿದ XIVನೇ ಲೂಯಿರಾಜನು 1715ರಲ್ಲಿ ಸತ್ತ ಮೇಲೆ ಅವನ ಶವವನ್ನು ಸಾಯುವ ಮುಂಚೆ ಒಂದು ವಾರ ಇಲ್ಲಿ ಇಟ್ಟಿದ್ದರಂತೆ.

[ಬರುವ ಸಂಚಿಕೆ ನೋಡಿರಿ]

ವಿಟ-ರಪಾಕ ಕೆ. ಆರ್. ಕಾರಂತ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 47/51

ಶಾಂತಾಬಾಯಿ, B. N. S ಶಂಕ್ರಿಯವರ ಶ್ರೀನಿವಾಸ ರಾಯರ ವಿಧವೆ, ಉಡುಪಿ ತಾಲ್ಲೂಕು ಉಳಿಯಾರಗೋಳಿ ಗ್ರಾಮದಲ್ಲಿರುವವಳು.

—ಅರ್ಜಿದಾರಳು.

ಮತ್ತು

1) ಮಹಾಲಕ್ಷ್ಮಿ
2) ಜನಾರ್ಧನ ಶಂಕ್ರಿ } ಎದ್ರಿರು

ಯವರೊಳಗೆ

ಕೋರ್ಟು ಹುಕುಂ ಪ್ರಕಾರ ಯಿ ಮೊಕದ್ದಮೆಯ ಎದ್ರಿರಿಗೆ ಮತ್ತು ಯಿತರ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ,

ಕಾರ್ಕಳ ತಾಲ್ಲೂಕು ಬೆಳ್ಮಣ್ಣು ಗ್ರಾಮದಲ್ಲಿರುವ ನಡಿಗುತ್ತು ಕೃಷ್ಣ ಶಂಕ್ರಿ ಮಗ B. N. S. ಶಂಕ್ರಿ ಯಾನೆ ಶ್ರೀನಿವಾಸ ರಾವ್ ಎಂಬವರು ತಾ. 11-5-49ರಲ್ಲು ಕೋಲಾರ ನಲ್ಲಿಂಕ ರಾಜಪುರ ಆಸ್ಪತ್ರೆಯಲ್ಲಿ ಮೃತಪಟ್ಟು, ಅವರ ಬಾಬ್ತು ಅರ್ಜಿಯಲ್ಲಿ ಕಾಣ್ಸಿದ ಸೊತ್ತುಗಳನ್ನು ವಸೂಲುಮಾಡುವರೆ ಅರ್ಜಿದಾರಳು ಹಕ್ಕುದಾರಳೆಂತಲೂ ಸದ್ರಿ ಸೊತ್ತುಗಳನ್ನು ವಸೂಲುಮಾಡುವ ಬಗ್ಗೆ ಸದ್ರಿ ಮೃತನ ವಿಧವೆಯಾದ ಅರ್ಜಿದಾರಳ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ ದಾಖಲುಮಾಡಿದ ಸದ್ರಿ ಅರ್ಜಿಯು ತಾ. 5-12-1951ಕ್ಕೆ ಇಟ್ಟಿದೆ. ಆದ್ದರಿಂದ ಆ ಕುರಿತು ಆಕ್ಷೇಪವುಳ್ಳವರು ಅವರವರ ಆಕ್ಷೇಪಗಳನ್ನು ಸದ್ರಿ ದಿವಸ ಬೆಳಗ್ಗೆ 10ಗಂಟೆಗೆ ಸದ್ರಿ ಕೋರ್ಟುಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

H. K Gopalkrishna Rau
ಅರ್ಜಿದಾರಳ ಕಡೆ ವಕೀಲ್,

Karkala 8-11-51

For energetic and active living, for your mental and physical vigour and strength,

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart.

Price per tin containing 80 tolas Rs. 10-0-0 Postage extra

Stockist for South & N. Kanara & Mysore state. { **M. Vinayaka Rao,** Bannanje Road, Udipi. S. K.

AYURVEDIC PHARMACY

Baba kali Kamali-Wala RISHIKESH.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕಲ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಿಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಶುಂಠಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು,ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ಮೊಡಿವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

KEGD

ಹಾಳು ಕಟ್ಟಿ

ಮದ್ದು

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲು ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಕಾ ಕಂಪೆನಿ, ಮಂಗಳೂರು.

ವಾರದ ಭವಿಷ್ಯ

ತಾರೀಕು 15-11-51 ರಿಂದ — ತಾರೀಕು 21-11-51 ವರೆಗೆ

ಮೇಷ—ಪ್ರಬಲರಾದ ಎದುರಾಳಿಗಳನ್ನು ಕೂಡ ಪರಾಭವಗೊಳಿಸುವ ಶಕ್ತಿಸಾಮರ್ಥ್ಯಗಳು ನಿಮಗೆ ಪ್ರಾಪ್ತವಾಗುವವು. ಹೆಚ್ಚಿನ ನಿಮ್ಮ ಬಯಕೆಗಳು ಕಾರ್ಯರೂಪಕ್ಕೆ ಬರುವವು. ಸಂಪದ್ಭಾಗವು ಉತ್ತಮವಾಗುವದು. ಕಾಯಕಷ್ಟಜೀವಿಗಳಿಗೂ ಸೇವಕವರ್ಗದವರಿಗೂ ಈ ವಾರವು ಹಿತಕರವೆನಿಸುವದು. ಆದರೂ ಗೃಹಕೃತ್ಯದಲ್ಲಿ ಸುಖ ಲಭಿಸದು. ಪ್ರಬಲವಾದ ಮಾನಸಿಕ ವ್ಯಾಧಿಯು ನಿಮ್ಮನ್ನು ಸದಾ ಪೀಡಿಸಲಿದೆ. ಅನಿರೀಕ್ಷಿತ ಧನಪ್ರಾಪ್ತಿಯ ಯೋಗವಿರುವದು. ತಾ. 16, 17, 18ರಲ್ಲಿ ಧನಪ್ರಾಪ್ತಿ ವಿಜಯ ಗೃಹಸುಖಗಳು ಲಭಿಸುವವು.

ವೃಷಭ—ದೈವವು ಸ್ವಲ್ಪ ವಿಮುಖವಾಗಿರುವುದರಿಂದ ನಿಮ್ಮ ಬಂಧುವರ್ಗದವರ ನೆರವೂ ಮಿತ್ರರ ಬೆಂಬಲವೂ ನಿಮಗಿಲ್ಲದಂತಾಗುವದು. ವಾತಕಫದೋಷದಿಂದಾಗಿ ಆರೋಗ್ಯ ಕೆಡುವದು. ನಿಮ್ಮಲ್ಲಿನ ಧೈರ್ಯಸಾಹಸಗಳು ದಿನೇದಿನೇ ಕ್ಷಯಿಸುತ್ತ ಬರಲಿವೆ. ವಿರೋಧಿಗಳ ಉಪಟಳದಿಂದಾಗಿ ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸಬೇಕಾದ ಪ್ರಸಕ್ತಿಯೊದಗುವದು. ಆರ್ಥಿಕ ದುರವಸ್ಥೆಯಿಂದ ಪೀಡಿತರಾಗುವಿರಿ. ಆದರೂ ಸಾರಗುರುಗಳ ಅನುಗ್ರಹವೊಂದು ಬಲವಾಗಿದ್ದ ಕಾರಣ ಹೆಚ್ಚಿನ ಅಪಾಯಗಳಿಗೆ ಸಿಲುಕಲಾರಿರಿ. ಸಾಮಾಜಿಕ ಕ್ಷೇತ್ರದಲ್ಲಿ ವಿಜಯಿಗಳಾಗುವಿರಿ. ತಾ. 15, 19, 20 ಈ ದಿನಗಳು ಸುಖದಾಯಕಗಳಾಗುವವು.

ಮಿಥುನ—ಈ ವಾರದಲ್ಲಿ ನಿಮ್ಮ ಆಯವ್ಯಯಗಳು ಸಮತೋಲದಲ್ಲಿ ನಿಲ್ಲಲಿವೆ. ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಲಭಿಸದಿದ್ದರೂ ದಿನಯಾಪನೆಯು ಕಠಿಣವಾಗಲಾರದು. ವಿಶ್ವಾಸಘಾತುಕರ ವಂಚನೆಗೆ ಸಿಲುಕಿ ಕಷ್ಟನಷ್ಟಗಳಿಗೆ ಗುರಿಯಾಗುವ ಸಂಭವವಿದೆ. ಆತ್ಮೀಯರ ವಿರಹ ಮಿತ್ರ ಜನರ ವಿಯೋಗದಿಂದ ದುಃಖಿತರಾದ ನಿಮಗೆ ಶತ್ರುಗಳ ಪೀಡೆಯೂ ಹೆಚ್ಚಲಿದೆ. ವಿದ್ಯೋಪಜೀವಿಗಳಿಗೆ ಈ ವಾರವು ಉತ್ತಮವೆಂದೇ ಹೇಳಬಹುದು. ನೌಕರಿರಂಗದಲ್ಲಿ ಉನ್ನತ ಸ್ಥಾನ ಲಭಿಸೀತು. ತಾ. 16, 17, 18, 21 ಈ ದಿನಗಳಲ್ಲಿ ಮನಸಂಕಲ್ಪಗಳು ಸಾಧಿಸುವವು.

ಕರ್ಕಟ—ಇಂದೀಗ ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮ ಸ್ಥಿತಿಗೆ ಬಂದಿರುವದು. ಪ್ರತಿಯೊಂದು ಕಾರ್ಯದಲ್ಲೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವುದು. ಎಂತಹ ಮಹತ್ಕಾರ್ಯವನ್ನೂ ಕೂಡ ಅನಾಯಾಸದಿಂದ ಕೊನೆಗೊಳಿಸುವಿರಿ. ಸಮಾಜದಲ್ಲಿ ಗಣ್ಯಸ್ಥಾನವು ಲಭಿಸಲಿದೆ. ಗೃಹೋಪಕರಣಗಳಲ್ಲಿ ಯಾವ ತರದ ಕುಂದುಕೊರತೆಗಳೂ ಉಂಟಾಗಲಾರವು. ಇಷ್ಟೆಲ್ಲ ಸುಖಸೌಭಾಗ್ಯಗಳಿದ್ದರೂ ತಂದೆ ಮಕ್ಕಳೊಳೂ ಗಂಡಹೆಂಡಿರೊಳೂ ಅನ್ಯೋನ್ಯ ಮನಸ್ತಾಪವುಂಟಾಗಿ ಹೆಚ್ಚಿನ ಮನೋರೋಗಕ್ಕೆ ಗುರಿಯಾದೀರಿ. ತಾ. 15, 19, 20 ಉತ್ತಮ ದಿನಗಳು.

ಸಿಂಹ—ದಿನೇ ದಿನೇ ನಿಮ್ಮ ಅದೃಷ್ಟವು ಹೀನಸ್ಥಿತಿಗೆ ಬರುತ್ತಿದೆ. ಸಾಂಸಾರಿಕ ತಾಪತ್ರಯಗಳು ಆರ್ಥಿಕ ಬಿಕ್ಕಟ್ಟು ದೇಹಾಲಸ್ಯ ಇತ್ಯಾದಿ ಕಷ್ಟಪರಂಪರೆಗಳು ಸಮುದ್ರದ ಅಲೆಗಳಂತೆ ಒಂದರ ಮೇಲೆ ಬರಲಿವೆ. ಮಾತ್ರವಲ್ಲ ವಿನಾಕಾರಣ ನಿಷ್ಠುರ ಕಲಹಗಳು ಹಲವರೊಡನಾಗುವದು. ನೌಕರಿ ಜನರಿಗಂತೂ ಮೇಲಾಧಿಕಾರಿಗಳಿಂದ ನಿತ್ಯ ಪೀಡೆ ತಪ್ಪದು. ಅನಿರೀಕ್ಷಿತ ಪ್ರವಾಸ ಪತ್ನಿಮಿತ್ರ ಕಷ್ಟನಷ್ಟಗಳೂ ಪ್ರಾಪ್ತವಾಗುವವು. ಅಂತೂ ಬಹಳ ಕಷ್ಟದಿಂದ ಕಾಲಕಳೆವ ನಿಮಗೆ ವಾರಾದಿಯ 4 ದಿನಗಳಲ್ಲಿ ಹೆಚ್ಚಿನ ವಿಪತ್ತುಗಳು ಕಾಣಿಸವು.

ಕನ್ಯಾ—ಈ ವಾರದಲ್ಲಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲಲಭಿಸುವದು. ಸಾಂಸಾರಿಕ ತಾಪತ್ರಯಗಳು ಬಹುತೇಕ ಕಡಿಮೆಯಾಗುವುದರಿಂದ ದಿನಯಾಪನೆಯು ಹೆಚ್ಚಿನ ಕಷ್ಟಕರವಾಗಲಾರದು. ದೂರ ದೇಶವಾಸಿಗಳಾದ ಮಿತ್ರರ ಸಮಾಗಮವಾಗಲಿದೆ. ಆಕಸ್ಮಿಕ ಅಪಘಾತಗಳು ಸಂಭವಿಸಬಹುದು. ವಿಷಾಗ್ನಿಗಳಿಂದ ಪೀಡೆಯುಂಟಾದೀತು, ಸ್ವದೇಹಾರೋಗ್ಯದ ಸಲುವಾಗಿ ಹೆಚ್ಚಿನ ಜಾಗರೂಕತೆ ವಹಿಸಿರಿ. ಪ್ರವಾಸದ ಯೋಗವಿದೆ. ವಾರದ ಆದ್ಯಂತ ದಿನಗಳನ್ನು ಬಿಟ್ಟು ಮಿಕ್ಕ ದಿನಗಳೆಲ್ಲವೂ ಹಿತಕರಗಳೇ.

ತುಲಾ—ಆದಾಯವು ಅತ್ಯಲ್ಪವಾಗಿದ್ದು ಖರ್ಚು ದ್ವಿಗುಣವಾಗಿ ಪರಿಣಮಿಸುವುದರಿಂದ ಪರರ ಕಡೆ ಸಾಲಕಡಗಳನ್ನು ಮಾಡುವ ಪ್ರಸಂಗ ಬರಲಿದೆ. ವಿಶೇಷತಃ ಶ್ರಮಜೀವಿಗಳಿಗೂ ಸೇವಕವರ್ಗದವರಿಗೂ ಲೇಖಕ ಜನರಿಗೂ ಈ ಕಾಲವು ಪ್ರತಿಕೂಲವಿರುವುದು. ನೇತ್ರೋದರ ರೋಗಗಳು ಕಾಣಿಸಿಕೊಳ್ಳುವವು. ಆಪ್ತೇಷ್ಟ ಜನರಲ್ಲೂ ಅವಿಶ್ವಾಸವುಂಟಾಗಲಿದೆ. ಸ್ತ್ರೀಜನರ ಕೋಪಕ್ಕೆ ಸಿಲುಕುವಿರಿ. ಶೋಕದಾಯಕಗಳಾದ ಅನರ್ಥಗಳು ಅನಿರೀಕ್ಷಿತವಾಗಿ ಸಂಭವಿಸಲಿವೆ. ಹೆಚ್ಚೇಕೆ ತನುಮನಗಳಿಗೆ ಸುಖಶಾಂತಿಯಿಲ್ಲವೆಂದರೆ ತಪ್ಪಾಗಲಾರದು. ವಾರಾಂತ್ಯದ 3 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ವೃಶ್ಚಿಕ—ಸುಖದಿನಗಳು ಸನ್ನಿಹಿತವಾಗಿವೆ. ನಿಮ್ಮ ಯಾವತ್ತೂ ಮನೋರಥಗಳು ಫಲಿಸಲು ಕಾಲವು ಅನುಕೂಲವಿರುವದು. ಆದಕಾರಣ ಆಲಸಿಗರಾಗದೆ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ನಿಮ್ಮ ಬಂಧುವರ್ಗದವರೂ ಮಿತ್ರವೃಂದವೂ ಸದಾ ನಿಮ್ಮ ಬೆಂಬಲಕ್ಕೆ ಸಿದ್ಧವಿರುವದು. ಹಲವಾರು ಮುಖದಿಂದ ಧನಾಗಮವಾಗಲಿದೆ. ಸಾಮಾಜಿಕ ರಾಜಕೀಯ ರಂಗಗಳಲ್ಲಿ ಮುಂದಾಳುಗಳಾಗಿ ದುಡಿದು ಸತ್ಕೀರ್ತಿಯನ್ನು ಪಡೆವಿರಿ. ವಾರದ ಆದ್ಯಂತ ದಿನಗಳಲ್ಲಿ ಇಷ್ಟಪ್ರಾಪ್ತಿ ವಿಜಯ ಸುಖಗಳಿವೆ.

ಧನು—ಸಕಲ ಗ್ರಹಮಂಡಲವೇ ನಿಮ್ಮ ಮೇಲೆ ಮುನಿದಿರುವದೆಂದರೆ ಈಗ ತಪ್ಪಾಗಲೊಲ್ಲದು. ಯಾವನೊಬ್ಬ ಗ್ರಹನ ಕೃಪೆಯೂ ಸದ್ಯ ನಿಮಗಿಲ್ಲದ್ದರಿಂದ ನಿಮ್ಮ ಪೌರುಷವೆಲ್ಲವೂ ನೀರಲ್ಲಿ ಗೈದ ಹೋಮದಂತೆ ವಿಫಲವಾಗುವದು. ಬಂಧುವರ್ಗದವರೊಡನೆ ಮನಸ್ತಾಪ, ಸೋದರರಲ್ಲಿ ಕಲಹ, ಗೃಹಕೃತ್ಯದಲ್ಲಿ ಅವ್ಯವಸ್ಥೆ ಇತ್ಯಾದಿಗಳಿಂದ ಸಂಸಾರದಲ್ಲೇ ಕೆಲವೊಮ್ಮೆ ವಿರಕ್ತಿಯುಂಟಾದೀತು. ಮಾತುಬಲ್ಲವನಿಗೆ ಜಗಳವಿಲ್ಲ ಎಂದು ಲೋಕೋಕ್ತಿಯಿದ್ದರೂ ನಿಮ್ಮ ಭಾಗಕ್ಕದು ಹುಸಿಯಾಗಿ ಕಾಣಿಸುವದು. ವಾರಾದಿಯ 4 ದಿನಗಳು ಇತರ ದಿನಗಳಿಗಿಂತ ಸ್ವಲ್ಪ ಉತ್ತಮವೆನಿಸೀತು.

ಮಕರ—ವಿಶೇಷ ಚಟುವಟಿಕೆಯಿಂದ ಕಾರ್ಯವನ್ನು ಮಾಡುವ ಧೈರ್ಯಸಾಹಸಗಳು ಸದ್ಯ ನಿಮ್ಮಲ್ಲಿ ಕಡಿಮೆಯಾಗಿದ್ದರೂ ನಿಮ್ಮ ಪರಿಶ್ರಮಕ್ಕಿಂತ ಅಧಿಕವಾದ ಫಲವನ್ನು ಹೊಂದುವಿರಿ. ನೀಚ ಜನರಿಂದ ಧನಲಾಭವಾಗುವ ಸಂಭವವಿದೆ. ವಿಶೇಷತಃ ದೇಹಾರೋಗ್ಯದ ಕಡೆಗೆ ಲಕ್ಷ್ಯಕೊಡಿರಿ. ನಿಶ್ಶಕ್ತಿ ದೇಹಕ್ಷೀಣತೆ ಹೃದ್ರೋಗಾದಿಗಳು ವಾತದೋಷದಿಂದ ಅವಯವಗಳಲ್ಲಿ ನೋವು ಕಾಣಿಸುವದು. ಸಮಾಜದಲ್ಲಿ ಮಾನಸಾದರಗಳನ್ನು ಪಡೆವಿರಿ. ವೈದ್ಯವ್ಯಾಪಾರಿಗಳಿಗೂ ನೌಕರಿ ಜನರಿಗೂ ಕಾಲವು ಅನುಕೂಲವೆಂದೇ ಹೇಳಬಹುದು. ತಾ. 16ರಿಂದ 20ರ ವರೆಗಿನ ದಿನಗಳು ಸುಖಲಾಭದಾಯಕಗಳು.

ಕುಂಭ—ಅಷ್ಟಮಸ್ಥ ಕುಜಶನಿಗಳು ಕುಟುಂಬ ವಿರಹ ಶತ್ರುಪೀಡೆ ಧನಮಾನಗಳ ಹಾನಿ ಕಜ್ಜಿ ಗಾಯ ವಗೈರೆಗಳಿಂದಾಗಿ ದೇಹಪೀಡೆಗಳನ್ನುಂಟುಮಾಡಲಿರುವರಾದರೂ ಇತರ ಎಲ್ಲಾ ಗ್ರಹರೂ ಅನುಕೂಲಸ್ಥಾನಪನ್ನರಾಗಿರುವುದರಿಂದ ಈ ಹಿಂದಿನ ದೋಷಗಳು ಬಹುಮಟ್ಟಿಗೆ ಕಡಿಮೆಯಾಗಲಿವೆ. ನಿಮ್ಮ ಆರ್ಥಿಕ ಸಂಪತ್ತು ವೃದ್ಧಿಹೊಂದುವದು. ಗೃಹಸುಖ ಮಿತ್ರಬೆಂಬಲ ಕಾರ್ಯವಿಜಯಾದಿಗಳಿಂದ ಸದಾ ಸಂತಸದಿಂದಿರುವಿರಿ. ನೀಚಸ್ತ್ರೀಯಿಂದಾಗಿ ಧನಾಗಮವಾಗುವ ಯೋಗವಿದೆ. ವಾರಾಂತ್ಯದ 3 ದಿನಗಳು ಸುಖಸಂಪತ್ಪ್ರದಗಳಾಗಿವೆ.

ಮೀನ—ಇಂದೀಗ ನಿಮ್ಮ ದುರ್ದೈವದ ಪರಮ ಕಷ್ಟವನ್ನು ಅನುಭವಿಸ ಕಾಲ ಸನ್ನಿಹಿತವಾಗಿದೆ. ಯುಕ್ತಾಯುಕ್ತ ಪರಿಜ್ಞಾನಹೀನರಾದ ನಿಮಗೆ ಯಾವ ಕಾರ್ಯವನ್ನೂ ಕೊನೆಗೊಳಿಸುವ ಧೈರ್ಯವಿಲ್ಲದ ಕಾರಣ ಆಲಸಿಗರಾಗಿಯೇ ಉಳಿವಿರಿ. ಸ್ತ್ರೀಯರಿಂದಾಗಿ ಅನಿಷ್ಟ ಶೋಕಗಳು ಪ್ರಾಪ್ತವಾದಾವು. ಗೃಹಚ್ಛಿದ್ರದ ದೆಸೆಯಿಂದಾಗಿ ಮನೆಯಲ್ಲಿ ನಿತ್ಯ ಜಗಳವಾದೀತು. ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆವಿರಿ. ಆರ್ಥಿಕ ದುರವಸ್ಥೆಯಿಂದ ಪೀಡಿತರಾದ ನಿಮಗೆ ತಾ. 15, 21 ಕೊಂಚ ಉತ್ತಮವೆನಿಸೀತು.


BALLBEARING
— THE LIFEBLOOD OF THE INDUSTRY'
Dealers in:
ROTARY OIL MILLS
FLOUR MILLS
BALL, ROLLER &
THRUST BEARINGS
TELEGRAMS — 'CHEAPTRADE'
A. RAMSON AND CO.
6 E. MISTRI BUILDING BALARAM ST. BOMBAY 7

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ತಿನಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವನೂರ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ...—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ... ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ... ಹಾವನೂರ ... ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ... ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲ ಪೋಸ್ಟ್, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment
ESTD. 1921 ಸ್ಥಾಪನೆ
31ನೆ ವರ್ಷ
22-11-1951
Founder: Sri A. B. Shetty, Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.
ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.
ವಾರ್ಷಿಕ ಚಂದಾ ರೂ 5-12-0
6 ತಿಂಗಳಿಗೆ ರೂ 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧ ವಾರ ೧೧ | NAVAYUGA WEEKLY | Post Box No. 22 | UDIPI. | Vol. 31 No. 11

ಮತದ ಮಹತ್ವ ಮತ್ತು ಮೀಮಾಂಸೆ

ಮತದಾರರು ರಾಜಕೀಯ ಪಕ್ಷ ವಿಪಕ್ಷಗಳ ಧ್ಯೇಯ ಧೋರಣೆಗಳನ್ನು, ಸೇವಾಬಲ ಸಂಘಟನ ಶಕ್ತಿಗಳನ್ನು ತಿಳಿದುಕೊಳ್ಳುವುದಲ್ಲದೆ ತಮ್ಮ ಮತದ ಮಹತ್ವವನ್ನೂ ಪರಿಷ್ಕಾರವಾಗಿ ಅರಿತುಕೊಳ್ಳಬೇಕು. ಅದರ ಅರ್ಥ ಪ್ರಭಾವ, ಪರಿಣಾಮಗಳನ್ನೂ ಮನದಟ್ಟು ಮಾಡಿಕೊಳ್ಳಬೇಕು. ಏಕೆಂದರೆ ಮತವೆಂಬುದು ಮಂಗನ ಕೈಯ ಮಾಣಿಕ್ಯವಾಗಬಾರದು. ವಸ್ತುವಿನ ಸದುಪಯೋಗವೇ ಯೋಗವೆಂಬುದನ್ನು ಮರೆಯಲಾಗದು. ಆದುದರಿಂದ ನಮಗೆ ತಿಳಿದ ಮಟ್ಟಿಗೆ ಮತದ (Vote) ಗುಟ್ಟು ಗುರಿ, ಹಿತ ಅಪಾಯ, ಗುಣ ಗೌರವ ಮುಂತಾದ ಅಂಶಗಳ ಆಲೋಚನೆ ಮಾಡಿ ಅದರ ಅರ್ಥ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

ಈ ಕಾಲದಲ್ಲಿ ಮತದಾನವು ಬಹು ದಾನಗಳಲ್ಲೊಂದು ಎಂಬ ಮನ್ನಣೆ ಪಡೆಯುತ್ತಿದೆ. ಅದಕ್ಕೆ ಭೂದಾನ, ಕನ್ಯಾದಾನ, ಗೋದಾನ, ಸುವರ್ಣದಾನಗಳಿಗಿಂತಲೂ ಹೆಚ್ಚಿನ ಹಿರಿಮೆಯೊದಗುತ್ತಿದೆ. ಏಕೆಂದರೆ ಇತ್ತೀಚೆಗೆ ಮತಕ್ಕೆ ಬಾಯ್ತೆರೆದು ಹಂಬಲಿಸುವವರು ಹೇರಳವಾಗಿದ್ದಾರೆ. ಕಾಡಿ ಬೇಡಿ ಬೆಂಬತ್ತಿದಂತೆ ಅದರ ಬೆಲೆ ಬೆಳೆಯುತ್ತಿದೆ. ಅದು ರಾಜಕೀಯ ಸಾಮಾಜಿಕ ಆರ್ಥಿಕ ಪಕ್ಷಪಂಗಡಗಳನ್ನು ಕಟ್ಟಬಲ್ಲದು, ಕುಟ್ಟಬಲ್ಲುದು. ರಾಜ್ಯಗಳನ್ನುರುಳಿಸಬಲ್ಲುದು, ಆಡಳಿತವನ್ನು ಬುಡಮೇಲು ಮಾಡಬಲ್ಲದು. ಸ್ವಾತಂತ್ರ್ಯ ಸೌಭಾಗ್ಯಗಳನ್ನು ತರಬಲ್ಲದು, ಗಂಡಾಂತರದ ಗಣಿಗೆ ನೂಕಬಲ್ಲದು. ಇಂತಹ ಪ್ರಭಾವವುಳ್ಳ ಮತವನ್ನು ಸಂತಯಿಸುವ, ಸಾಧಿಸುವ ತತ್ವ-ತಂತ್ರಗಳನ್ನು ಎಲ್ಲರೂ ಅಭ್ಯಸಿಸುತ್ತಿದ್ದರೆ ಅದೊಂದು ಆಶ್ಚರ್ಯವಲ್ಲ.

ಅದರ ವಿಶಾಲ ವ್ಯಾಪ್ತಿಯುಳ್ಳ ಅರ್ಥವನ್ನು ತಿಳಿಯಬಲ್ಲವರ ಕೈಯಲ್ಲಿರುವ ಮತವು ಸ್ವಾತಂತ್ರ್ಯರಕ್ಷಕಿಯಾಗಿ, ಪ್ರಜಾಪ್ರಭುತ್ವದ ಪತಾಕೆಯಾಗಿ ನಿಲ್ಲಬಲ್ಲುದು. ಅರಿತವರ ಕೈಯ ಮತವು ಸರಕಾರದ ಸಾರಥಿಯಾಗುವುದು. ಗತ್ತುಗಾರರಿಗೆ ಗಂಡಾಂತರವಾಗುವುದು. ಆಡಳಿತದ ಅಥವಾ ರಾಜ್ಯ ವ್ಯವಸ್ಥೆಯ ಸೂತ್ರಚಾಲಕವಾಗುವುದು. ಅಧಿಕ ಪ್ರಸಂಗಿಗಳ, ಅಧಿಕಾರ ಮದಾಂಧರ ಅಂಕುಶವಾಗುವುದು. ರಾಷ್ಟ್ರೀಯ ಜ್ಯೋತಿಯಾಗುವುದು. ಶಾಂತಿ-ಸಮತೆಗಳ ಸಾಧನವಾಗುವುದು. ಜನಹಿತದ ಧ್ವನಿಯಾಗುವುದು. ಆಡಳಿತ ವರ್ಗಕ್ಕೆ ಅಂಜನವಾಗುವುದು. ಶಾಂತಿ ಪುಷ್ಟಿ ತುಷ್ಟಿಗಳನ್ನೀಯುವ ಕಾಮಧೇನುವಾಗುವುದು.

ಆದರೆ ಅರಿಯದವರ ವಶದಲ್ಲಿರುವ, ಮತ್ತು ಬೇರೆಯವರ ಬುದ್ಧಿಗೆ ಕಿವಿ ಜೋಲುವವರ ಕೈಯಲ್ಲಿರುವ ಮತವು ಅನೇಕ ಸಲ ಅನರ್ಥಕಾರಿಯಾಗುವ ಸಂಭವವುಂಟು. ಆದುದರಿಂದ ಶಿಕ್ಷಣಾನುಭವಗಳಿಂದ ಸ್ವತಂತ್ರ ವಿಚಾರ ಶಕ್ತಿಯನ್ನು ಪಡೆಯದ ಪ್ರಜೆಗಳ ಸಂಖ್ಯೆಯು ಅತ್ಯಧಿಕವಾಗಿರುವಲ್ಲಿ ಪ್ರಜಾಪ್ರಭುತ್ವವು ಆದರ್ಶಕ್ಕೆ ಗೆಲವು ಗಟ್ಟಿ ನಡೆಯುವುದು ತುಂಬ ಕಷ್ಟವೆಂದು ಬಲ್ಲವರು ಹೇಳುತ್ತಾರೆ. ಅರಿಯದ ಮುಗ್ಧ ಮತದಾರರು ಜಾತಿಗಳ ಜಾಲಕ್ಕೆ ಸೋಲಬಹುದು. ಕುಹಕರ ಕೈಗೊಂಬೆಯಾಗಬಹುದು. ದಂಗೆಗತ್ತಿನವರ ಬಲೆಗೆ ಬೀಳಬಹುದು. ಒಂದಲ್ಲ ಎರಡಲ್ಲ ಹಲವು ಅನಾಹುತಗಳಿಗೆ ಆಹುತಿಯಾಗಬಹುದು.

ಇಂತಹ ಅನರ್ಥ ಪರಂಪರೆಯನ್ನು ತಡೆಯಲು ಜನಾನುರಾಗವುಳ್ಳ ಸುಶಿಕ್ಷಿತರು, ನಿರಕ್ಷರಿಗಳಿಗೆ ತಿಳಿಯದವರಿಗೆ ಮತದಲ್ಲಡಗಿರುವ ಮಹತ್ವವನ್ನು ಮಮತೆಯಿಂದ ತಿಳಿಸಬೇಕು. ಚುನಾವಣೆಗಳೆಂದರೆ ರಾಜ್ಯವ್ಯವಸ್ಥೆಯನ್ನು ಸಾಗಿಸಲು ಸಮರ್ಥರಾದ ಗುಣಶಾಲಿಗಳನ್ನು ಆಯ್ದು ಕಳಿಸುವ ಹಿರಿದಾದ ಹೊಣೆಯೆಂಬುದನ್ನು ಅವರ ಗಮನಕ್ಕೆ ತಂದು ಕೊಡಬೇಕು. ಚುನಾವಣೆಯೆಂದರೆ ಅದೊಂದು ಹಬ್ಬ ಹರಿದಿನಗಳ ಸಂಭ್ರಮವಲ್ಲ. ಜನತೆಯು ಸಾರಾಸಾರ ವಿಚಾರ ಮಾಡಿ ತಾನು ಇಷ್ಟಪಡುವ ಪ್ರತಿನಿಧಿಗಳನ್ನು ಸರಕಾರ ನಡೆಸಲು ಆರಿಸಿ ಕಳಿಸುವ ಮಹಾಕಾರ್ಯ. ಈ ಕೆಲಸವನ್ನು ಜನರು ಸೋಮಾರಿತನದಿಂದ, ತಿಳಿಗೇಡಿತನದಿಂದ ಸರಿಯಾದ ರೀತಿಯಲ್ಲಿ ನೆರವೇರಿಸದಿದ್ದರೆ, ತಮಗಿಷ್ಟವಿಲ್ಲದವರು ಅಧಿಕಾರ ಪದಗಳಿಗೇರಿ ತುಂಬ ತೊಂದರೆಪಡಬೇಕಾದೀತೆಂಬುದನ್ನು ನೆನಪಿನಲ್ಲಿಡಬೇಕು. ಈ ಬಗೆಗೆ ಪ್ರಭಾವಶಾಲಿಯಾದ ಪ್ರಚಾರ ನಡೆಸುವ ಹೊಣೆಯು ಓದುಬರಹ ಬಲ್ಲವರದು, ನಾಡಿನ ಸಮಸ್ಯೆಗಳನ್ನು ತಿಳಿದವರದು.

ಮುಂಬರುವ ಚುನಾವಣೆಗಳು ಜನತಾ ಶಿಕ್ಷಣಕ್ಕೊಂದು ಸುಸಂಧಿ. ಜನಸಾಮಾನ್ಯರಿಗೆ, ಹಳ್ಳಿಯವರಿಗೆ ರಾಜಕೀಯ ಆರ್ಥಿಕ ಸಾಮಾಜಿಕ ಪ್ರಶ್ನೆಗಳನ್ನು ತಿಳಿಯುವ ಭಾಷೆಯಲ್ಲಿ ಮನವರಿಕೆಯಾಗುವಂತೆ ಬಿಡಿಸಿ ಹೇಳುವ ಅನುಕೂಲ ಕಾಲ. ರಾಷ್ಟ್ರಜೀವನದ ಪುನರುಜ್ಜೀವನವಾಗಿ ರಾಜ್ಯಾಂಗದಲ್ಲಿ ಸಾಮರ್ಥ್ಯ ನಿರ್ಮಾಣವಾಗಬೇಕಾದರೆ, ಜನರು ಆಡಳಿತವನ್ನು ಅರ್ಥ ಮಾಡುವ ಅನುಭವ ಪಡೆಯಬೇಕಾದರೆ, ಈ ಸಂದರ್ಭವನ್ನು ಲೋಕಶಿಕ್ಷಣಕ್ಕಾಗಿ ಪೂರ್ಣ ಉಪಯೋಗಿಸಬೇಕು. ಆದುದರಿಂದ ನಮ್ಮ ಪ್ರದೇಶ ಕಾಂಗ್ರೆಸ್ ಸಮಿತಿಯು ಎಲ್ಲ ಘಟಕಗಳೂ (Units) ಇತ್ತ ಕಡೆಗೆ ಲಕ್ಷ್ಯ ಕೊಡಬೇಕು. ಸರ್ವಶಿಕ್ಷಣ ಸಾಧನಗಳನ್ನು ಬಳಸಿ ಜನತೆಯಲ್ಲಿ ಮತದಾನದ ಮಹತ್ವವೇನೆಂಬುದನ್ನು ಬಿಂಬಿಸಬೇಕು. ಉಪನ್ಯಾಸ, ಕೀರ್ತನ, ಪ್ರವಚನ ಸಂಭಾಷಣಗಳಿಂದ ಇದನ್ನು ಸಾಧಿಸಬೇಕು. ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಗಳ ಹತ್ತುಗಡೆಯನ್ನು ಬೆಳೆಸಿಕೊಂಡು ವಯಸ್ಕರಿಗೆಲ್ಲ ಸಾಧ್ಯವಾದಷ್ಟು ಹೆಚ್ಚಿನ ರಾಜಕೀಯ ಆರ್ಥಿಕ ಜ್ಞಾನವನ್ನು ಕೊಡಬೇಕು. ಶಾಸನ ಸಭೆಗಳೆಂದರೇನು, ಪಾರ್ಲಿಮೆಂಟು ಅಂದರೇನು, ದೇಶದ ಆಡಳಿತದಲ್ಲಿ ಅವುಗಳ ಪಾತ್ರವೇನು ಎಂಬುದನ್ನೆಲ್ಲ ಚೆನ್ನಾಗಿ ವಿವರಿಸಬೇಕು. ಸ್ತ್ರೀಯರಿಗೂ ಈ ಬಗೆಯ ಶಿಕ್ಷಣ ಸಿಕ್ಕಬೇಕು. ಹೀಗೆ ವಿಶಾಲ ಬುನಾದಿಯ ಮೇಲೆ ಲೋಕಶಿಕ್ಷಣವು ಒಂದೆರಡು ತಿಂಗಳಾದರೂ ನಡೆದರೆ ಜನರಿಗೆ ತಮ್ಮ ಹಕ್ಕು ಹಿತ ಹೊಣೆಗಳ ಅರಿವಾಗುವುದು. ತಮ್ಮ ಕೈಯಲ್ಲಿರುವ ಮತವೆಂಬ ಅಮೂಲ್ಯ ಅಸ್ತ್ರದ ಅರ್ಥವಾಗುವುದು. ಮತವು ನಾಡಿನ ನೆಮ್ಮದಿಯ ನಿಧಿಯೆಂಬುದು ಆಗ ಹೊಳೆಯುವುದು. ಅದರ ದುರುಪಯೋಗದಿಂದ ದುರಂತವಾದೀತೆಂದು ಅನಿಸುವುದು. ಸಮಗ್ರ ರಾಷ್ಟ್ರದ ಸುದೃಢವಾದ ಐಕ್ಯ, ಸರ್ವಜಾತಿಮತ ಪಂಥದವರಿಗೂ ಬೆಳವಣಿಗೆಗೆ ಸಮಾನಾವಕಾಶ, ಜೀವನಾವಶ್ಯಕ ವಸ್ತುಗಳ ಸಮೃದ್ಧಿ, ಶಿಕ್ಷಣಾಭಿವೃದ್ಧಿ, ರಾಷ್ಟ್ರರಕ್ಷಣ ಶಕ್ತಿ ಮುಂತಾದವುಗಳನ್ನು ಸಾಧಿಸಲು, ಶಾಸನ ಸಭೆಗೆ ಸರ್ವ ಹಿತದೃಷ್ಟಿಯ ಸಮರ್ಥರು ಹೋಗಬೇಕೆಂದು ಅವರಿಗೆ ತಂತಾನೆ ತಿಳಿಯುವುದು. ಸರಕಾರದ ರಚನೆಯ ಶಿಲ್ಪಿಗಳು ತಾವೇ, ತಮ್ಮ ಮತಗಳಲ್ಲಿಯೇ ಮಂತ್ರಿಗಳ ಮೂಲ ಎಂಬುದನ್ನು ಬಗೆದಂದು ಜಾಗರೂಕರಾಗುವರು. ರಾಯಭಾರಿಗಳ ರಾಯಸವು ತಮ್ಮ ಕೈಯಲ್ಲಿ ಎಷ್ಟು ಸಂತೋಷ ಪಡುವರು. ರಾಷ್ಟ್ರದ ಆಗುಹೋಗುಗಳನ್ನು ತೂಗುವ ತೊಟ್ಟಿಲವು ತಮ್ಮ ಮತದಲ್ಲಿರುವುದರಿಂದಲೇ, ಚುನಾವಣೆಯಲ್ಲಿ ಇಷ್ಟೊಂದು ಚಟುವಟಿಕೆ ಗುರುಕು ಎಂಬ ಹೋರಾಟಗಳು ನಡೆಯುವವೆಂಬುದನ್ನು ಸಂಗಡ ತಿಳಿಯುವರು. ದೇಶದ ಏಳಿಗೆ ತಮ್ಮ ಮತವನ್ನವಲಂಬಿಸಿವೆಯೆಂದ ಪಕ್ಕ, ತಮ್ಮ ಕೇಡುಕಲ್ಯಾಣಗಳಿಗೆ ತಾವೇ ಹೊಣೆಯೆಂಬುದನ್ನೂ ಅರಿಯುವರು. ಆದುದರಿಂದ ಪ್ರಮಾದವಿಲ್ಲದೆ ಸ್ವಾವಲಂಬಿಗಳಾಗದೆ ಸ್ವಾತಂತ್ರ್ಯದ ಮಧುರ ಫಲಗಳು ದುರ್ಲಭವೆಂಬುದನ್ನೂ ಗುರುತಿಸುವರು.

3ನೇ ಪುಟ ನೋಡಿ.

TEL. 40592
WATSONS AERATED WATERS
14 Parel Road. Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರಾಸ್ ಲೇನ್, ಬೊಂಬಾಯಿ 12.
ಟೆಲಿಫೋನ್: 40592

ರಾವುಗಳನ್ನು ಸರಿಯಾದ ವಿಮರ್ಶೆಗೊಳಪಡಿಸದೆ ತ್ವರಿತದಿಂದ ಮಂಜೂರಾಗದಂತೆ ಕೆಲವು ಪ್ರತಿಬಂಧಕ ಕಾನೂನುಗಳನ್ನುಂಟುಮಾಡಬಹುದು. ಯಾವ ನ್ಯಾಯ ಸಭೆ ಇವುಗಳನ್ನು ತಂದಿರುವರೋ ಅವರೇ ಪುನಃ ಅವುಗಳನ್ನು ರದ್ದುಗೊಳಿಸಬಹುದಾದ್ದರಿಂದ ಇವುಗಳಿಂದ ನಿಜವಾದ ರಕ್ಷಣೆಯಾಗುತ್ತದೆಂದು ಭಾವಿಸುವದು ಸಂದೇಹಾಸ್ಪದ. ಇವುಗಳಿಂದ ನಿಜವಾದ ಪರಿಣಾಮ ತೋರಬೇಕಾದರೆ ಅವುಗಳನ್ನು ತಿದ್ದಿ ಬದಲಾಯಿಸುವರೆ ಕೆಲವು ಕ್ರಮ ನಿಯಮಗಳನ್ನು ಶಾಸನದಲ್ಲಿ ಕಾಣಿಸಿ ಸೇರಿಸಬೇಕು. ಇನ್ನು ಕೆಲವು ಮುಖ್ಯ ವಿಷಯಗಳನ್ನು ಪ್ರತ್ಯೇಕಿಸಿ ಇವುಗಳು ಇತರ ಸಾಮಾನ್ಯ ಸಂಗತಿಗಳಿಗೆ ಮಿಕ್ಕಿದವುಗಳೆಂದು ನಿಶ್ಚೈಸಿ ಇವುಗಳ ತೀರ್ಮಾನವನ್ನು ಸಾರ್ವಜನಿಕರು ತಮ್ಮ ಪ್ರಜಾಮತ ಸಂಗ್ರಹ ಮತ್ತು ಉಪಕ್ರಮ (Referendum and Initative) ಗಳಿಂದ ತೀರ್ಮಾನಿಸತಕ್ಕದ್ದೆಂದು ನಿರ್ಣಯಮಾಡಿರುವದಾಗಿದೆ. ಅಮೇರಿಕದಲ್ಲಿ ಕೆಲವು ವಿಚಾರಗಳನ್ನು ರಾಜ್ಯ ಶಾಸನದ ತಿದ್ದುಪಡಿಯ ಕ್ರಮದಲ್ಲೇ ಮಾಡಬೇಕೆಂದು ನಿರ್ಣಯಿಸಿರುವರು. ಘಟನೆಯ ತಿದ್ದುಪಡಿ ಸುಲಭದಿಂದಾಗತಕ್ಕದಲ್ಲವಾದ್ದರಿಂದ ಜರೂರಿಂದ ಆಗಬೇಕಾದ ಕೆಲವು ಕಾರ್ಯಗಳಿಗೆ ಇದರಿಂದ ತೊಂದರೆಯುಂಟು. ಅಲ್ಲದೆ ಹೊಸತಾಗಿ ತಯಾರಾದ ಕಾನೂನು ಜ್ಯಾರಿಗೆ ಬರಬೇಕಾದರೆ ನ್ಯಾಯಾಧೀಶರು ಇದನ್ನು ಕಾಯಿದೆ ಶೀರವೆಂದು ತೀರ್ಮಾನಿಸಬೇಕಾದ್ದರಿಂದ ನ್ಯಾಯ ಸಭೆಯವರಿಗೆ ಕಾನೂನು ಮಾಡುವರೆ ತಮಗೆ ಎಷ್ಟರ ಮಟ್ಟಿನ ಅಧಿಕಾರವಿದೆಯೆಂದು ಊಹಿಸಲು ಗೊತ್ತಾಗುವರಿ ಇರುವುದಿಲ್ಲ. ಈ ವಿನಹಾ ನ್ಯಾಯ ಸಭೆಯಲ್ಲಿ ಮಂಜೂರಾದ ಮಸೂದೆಯು ನ್ಯಾಯಾಧೀಶರಿಂದ ಕಾಯಿದೆಶೀರವೆಂದು ದೃಢೀಕರಿಸಲ್ಪಡುವ ವರೇಗೆ ಜನರಿಗದನ್ನು ಮನ್ನಿಸಬಹುದೋ ಬೇಡವೋ ಎಂಬ ಸಂದೇಹ ಮೂಡುವದು. ಇಷ್ಟು ತೊಂದರೆಗಳಿರುವದಾದರೂ ಅಮೇರಿಕದವರು ಇದನ್ನು ಸ್ವೀಕರಿಸಿಕೊಂಡು ಆಚರಿಸುತ್ತಿರುವುದರಿಂದ ಹಲವು ದುಷ್ಪರಿಣಾಮದ ಮಸೂದೆಗಳು ಪ್ರತಿನಿಧಿ ಸಭೆಯಲ್ಲಿ ಮಂಜೂರಾಗದಂತೆ ಇವುಗಳು ಸಹಾಯಕವಾಗಿರುವವು. ಆಸ್ಟ್ರೇಲಿಯ ಕೆನಡಾ ಮತ್ತು ಸ್ವಿಟ್ಜರ್‌ಲೇಂಡಿನಲ್ಲಿ ಸಹಾ ಈ ಪದ್ಧತಿಯು ಸ್ವಲ್ಪ ಮಟ್ಟಿಗೆ ರೂಢಿಯಲ್ಲಿದೆ. ಇನ್ನು ಮೂರನೇಯದಾಗಿ ನ್ಯಾಯ ಸಭೆಯಲ್ಲಾದ ಮಸೂದೆಯನ್ನು ಕಾರ್ಯ ನಿರ್ವಾಹಕ ಮಂಡಳಿಯು ಮು

ಮಾರಾಟಕ್ಕಿದೆ

ಉಡುಪಿ ತಾಲೂಕು ಶಿರ್ವ ಗ್ರಾಮದ ಮಂಚಕಲ್ಲು ಪೇಟೆಯಲ್ಲಿ ಸಂ. ನಂ. 310-A13 ಮತ್ತು 310-A 12A ಜುಂಜ. ಒಟ್ಟು 13 ಸೆಂಟ್ಸ್ ಸ್ಥಳ ಕಟ್ಟೋಣ, ಬಾವಿ ಮರಮಟ್ಟು ವಗೈರೆ ಮಾರಾಟಕ್ಕಿದೆ. ಖರೀದಿಸುವವರು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಕೊಳ್ಳುವುದು ಅಥವಾ ಮೊಕ್ತಾ ಮಾತನಾಡುವುದು.

ಕೆ. ದೇವರಾಜಯ್ಯ
ಕಡಿಯಾಳಿ, ಹೆರ್ಗ (ಗ್ರಾಮ),
ಪರ್ಕಳ ಪೋಸ್ಟು. ದ. ಕ.

ಪ್ರಜಾಸತ್ತೆ

ತಡೆ ಮತ್ತು ನಿಲವು

[ಕಳೆದ ಸಂಚಿಕೆಯಿಂದ ಮುಂದರಿದುದು]

ಖ್ಯಸ್ಥನು ನಿಷೇಧಿಸಬಹುದು. ಎಲ್ಲ ಕಾರ್ಯಕಾರೀ ಮುಖ್ಯಸ್ಥನನ್ನು ಚುನಾಯಿಸಿ ಅಧಿಕಾರ ಸ್ಥಾನಕ್ಕೆ ಅರಿಸಿರುವರೋ ಅಲ್ಲಿ ಹೆಚ್ಚಾಗಿ ಈ ಹಕ್ಕನ್ನು ಆತನಿಗೆ ಕೊಟ್ಟಿರುವರು. ಪ್ರತಿನಿಧಿಗಳಂತೆಯೇ ಈತನು ಮತದಾರರಿಂದ ಚುನಾಯಿತನಾದವನಾದುದರಿಂದ ಜನರಿಗೆ ಜವಾಬ್ದಾರನಾಗಿರುವನು. ಅಮೇರಿಕದಲ್ಲಿ ಅಧ್ಯಕ್ಷ ಮತ್ತು ಪ್ರಾಂತಗಳ ಗವರ್ನರುಗಳಿಗೆ ಈ ಅಧಿಕಾರವಿದೆ. ಶಾಸನ ಸಭೆಯವರು ಚಳುವಳಿಯ ಬಗ್ಗೆಗಲೀ ವಾತ್ಸಲ್ಯದಿಂದಾಗಲೀ ಉದ್ದಿಮೆಗಾರರ ವ್ಯಾಪಾರದ ಸಂಘ ಸಂಸ್ಥೆಗಳ ಪರವಾಗಿ ತಂದ ನಿರ್ಣಯಗಳನ್ನು ಇವರು ನಿಷೇಧಿಸುವರು ಮಾತ್ರವಲ್ಲ ಹೊಸ ಚುನಾವಣೆಯ ಸಮಯ ತಾವು ಅಧಿಕಾರದಲ್ಲಿರುವಾಗ ಯಾವ ಯಾವ ಕೆಟ್ಟ ಮಸೂದೆಗಳನ್ನು ನಿಲ್ಲಿಸಿರುವೆವೆಂದು ಆತ್ಮಶ್ಲಾಘನೆ ಮಾಡಿಕೊಳ್ಳುವರು. ಇಂಥಾ ಮಸೂದೆಗಳು ಸಭೆಯ ಮುಂದೆ ಬಂದಾಗ ಇವು ಸ್ವಾರ್ಥಪರವಾದ್ದರಿಂದ ಅಧ್ಯಕ್ಷ ಅಥವಾ ಗವರ್ನರರ ಸಹಿ ಬಗ್ಗೆ ಹೋದೊಡನೆಯೇ ಅದು ಅಲ್ಲಿ ನಿಷೇಧಿಸಲ್ಪಟ್ಟು ಬಿದ್ದು ಹೋಗುವದೆಂತ ತಿಳಿದು ಕೆಲವು ಸದಸ್ಯರು ಜನರ ಮೆಚ್ಚುಗೆಯನ್ನು ಪಡೆಯುವುದಕ್ಕಾಗಿ ತಮ್ಮ ಮನಸ್ಸಾಕ್ಷಿಗೆ ಸರಿಯಲ್ಲವೆಂದು ಕಂಡರೂ ಅವುಗಳನ್ನು ಕಟುವಾಗಿ ಟೀಕಿಸಿ ವಿರೋಧಿಸದೆ ತಮ್ಮ ಒಪ್ಪಿಗೆ ಇದೆಯೆಂದು ನಟಿಸುವರು. ನಾಲ್ಕನೇಯದಾಗಿ ಶಾಸನ ಸಭೆಯವರು ಮಂಜೂರು ಮಾಡಿದ ಕೆಲವು ಮಸೂದೆಗಳು ಜನರು ಮತಗಣನೆಯ ಮೂಲಕ ಸ್ವೀಕರಿಸಬೇಕೆಂತಿರುವದಾಗಿದೆ. ಇದಕ್ಕೆ ಪ್ರಜಾಮತ ಸಂಗ್ರಹ (Referendum) ವೆಂದು ಹೇಳುವರು. ಕೆಲವು ಮಸೂದೆಗಳನ್ನು ಜನರೇ ತರಬಹುದು. ಇದಕ್ಕೆ ಮಿತಿಯಿಲ್ಲವಾದರೂ ಕೆಲವು ಕ್ರಮಗಳನ್ನನುಸರಿಸಬೇಕು. ಇದಕ್ಕೆ ಉಪಕ್ರಮ (Initiative) ಎನ್ನುವರು. ಐದನೆಯದಾಗಿ ಶಾಸನ ಸಭೆಯಲ್ಲಿ ಮಂಜೂರಾದ ಠರಾವುಗಳು ಇನ್ನೊಂದು ಸಭೆಯವರಿಂದ ಪರ್ಯಾಲೋಚಿಸಲ್ಪಟ್ಟು ತಿದ್ದುವದೋ ರದ್ದು ಮಾಡುವದೋ ಅವರ ಅಧಿಕಾರವಾಗಿರುವುದಾಗಿದೆ. ಚುನಾಯಿತನಾದ ಕಾರ್ಯಕರ್ತ ನಿಷೇಧಾಜ್ಞೆಗಿಂತ ಇದೇ ಉತ್ತಮವೆನಿಸಿರುವದು. ಇದರಲ್ಲಿ ಚರ್ಚೆ ಮತ್ತು ವಿಮರ್ಶೆಗೆ ಅಸ್ಪದವಿದ್ದ ಕಾರಣ ತಿದ್ದಿ ದುರಸ್ತಿ ಪಡಿಸಲಿಕ್ಕೆ ಎಡೆ ಇದೆ.

ಕೆಲವು ರಾಷ್ಟ್ರಗಳಲ್ಲಿ ಈ ರೀತಿ ತಡೆಗಟ್ಟುವ ಅಥವಾ ಸಮತೋಲನಮಾಡುವ ರಾಜಕೀಯ ಯಂತ್ರವು ಭದ್ರತೆಯುಳ್ಳದ್ದಾಗಿ ಬುದ್ಧಿಪೂರ್ವಕವಾಗಿ ಜನನಕ್ಕೆ ಬಂದವುಗಳಲ್ಲ. ಚಕ್ರಾಧಿಪತಿಗಳಿಂದ ಮತ್ತು ಶ್ರೀಮಂತರಿಂದ ರಾಜ್ಯಾಡಳಿತೆಯನ್ನು ಕಿತ್ತುಕೊಂಡಾಗ ಅದರೊಂದಿಗೆ ನೇರವಾಗಿ ಬಂದದ್ದಾಗಿದೆ. ಅವರ ಮನಸ್ತಾಪದ ಉಪಶಮನದ ಬಗ್ಗೆ ಬಲಹೀನವಾದ ಅಧಿಕಾರ ಹೊಂದಿ ಜೀವಾವಧಿ ಪಡೆದ್ದಾಗಿದೆ. ಇಂಗ್ಲಂಡಿನ ಲೋರ್ಡ್ಸ್ ಸಭೆಯು ಹೀಗೆಯೇ ಉಳಿದುದಾಗಿದೆ. ಅನೇಕ ರಾಷ್ಟ್ರಗಳು ಇದನ್ನ ಮಾ ದ ರಿ ಯಾ ಗ ಬೇಕೆಂತ ಕಲ್ಪಿಸಿರುವರು. ಸಾರ್ವಜನಿಕ ಸಭೆಯಲ್ಲಾಗಲೀ ಪ್ರತಿನಿಧಿ ಸಭೆಯಲ್ಲಾಗಲೀ ಜನರು ತೋರಿಸುವ ಅವಸರದ ಪ್ರಚೋದನೆ ಮತ್ತು ಉದ್ವೇಶವನ್ನು ಹೇಗೆ ತಡೆಗಟ್ಟುವದೆಂಬುದು ಒಂದು ಸಮಸ್ಯೆಯಾಗಿದೆ. ಮುಂದುವರಿಯದೆ ಧೃವಾಗಿ ನಿಂತಲ್ಲೇ ಇರುವದು ಮತ್ತು ಶೀಘ್ರದಿಂದ ಧುಮುಕುವದು. ಇವೆರಡನ್ನು ಸಮತುಲನೆ ಮಾಡುವದೇ ಕಷ್ಟದ ಕೆಲಸವಾಗಿದೆ. ತಡೆಗಟ್ಟುವ ಕ್ರಮದಿಂದ ಕೆಡಕುಂಟಾಗಲೂ ಬಹುದು. ಅಲ್ಪಸಂಖ್ಯಾಕರಿಗೆ ಸವಲತ್ತು ಕೊಟ್ಟಂತಾಗುತ್ತದೆ ಮತ್ತು ತ್ವರಿತದಲ್ಲಾಗುವ ಕೆಲಸಕ್ಕೆ ಮುಂದಗತಿ ತರುವದು. ಆ ಆಟಕಗಳು ಜನರನ್ನು ಕೆರಳಿಸುವವು, ಸಿಟ್ಟೆಬ್ಬಿಸುವವು ಕೊನೆಗೆ ಕ್ರಾಂತಿಯನ್ನುಂಟು ಮಾಡುವವು. ಅಮೇರಿಕದವರು ಹೆಚ್ಚಾಗಿ ಸಮತೂಕವನ್ನೇ ಆಧಾರವಾಗಿಟ್ಟುಕೊಂಡು ಒಂದೊಂದು ಶಾಖೆಗೆ ಒಂದೊಂದ ಅಧಿಕಾರಕೊಟ್ಟು ಒಂದಕ್ಕೊಂದು ಅಡ್ಡಹಾಯುವಂತೆ ಮಾಡಿರುವರು. ಇದರಿಂದ ಅವರಿಗೆಷ್ಟು ತೊಂದರೆಗಳಾದರೂ ಇದರ ಬಲದಿಂದ ಹಲವು ಅವಘಡಗಳಿಂದ ಪಾರಾಗಿರುವುದರಿಂದ ಸ್ವೀಕರಿಸಿಕೊಂಡಿರುವರು. ಇಂಗ್ಲಂಡು ಪ್ರಾನ್ಸ ಮತ್ತಿತರ ರಾಷ್ಟ್ರಗಳು ಬೇರೆದಾರಿಯನ್ನು ಹುಡುಕಿರುವರು. ಇವುಗಳು ಸ್ವಲ್ಪ ಮಟ್ಟಿನ ತಡೆಯನ್ನು ಮಾತ್ರ ಉಪಯೋಗಿಸುವವು. ಇಂಗ್ಲಂಡಿನ ಪ್ರತಿನಿಧಿಸಭೆಯಾದ ಕಾಮನ್ಸ್ ಸಭೆಯ ಅಧಿಕಾರಕ್ಕೆ ಯಾವ ಆತಂಕವೂ ಇಲ್ಲವಾದರೂ ಇದ್ದ ತಡೆಯನ್ನು ತೆಗೆದು ಹಾಕಲು ಯಾರೂ ಮನಸ್ಸು ಮಾಡಲಿಲ್ಲ. ಸಮುದ್ರದ ತೆರೆಯಂತೆ ಉಕ್ಕಿಬರುವ ಪ್ರಜಾಸತ್ತೆಯ ಮುಂದೆ ಯಾವ ಆತಂಕವೂ ತಡೆಯಲಾರದು. ಜನರನ್ನು ಅವರ ಉದ್ವೇಗದಿಂದ ರಕ್ಷಣೆ ಮಾಡಬೇಕಾದ್ದೇನೋ ನಿಶ್ಚಯ. ಆದರೆ ತಮ್ಮ ಅಧಿಕಾರಕ್ಕೆ ತಾವೇ ಮಿತಿಯಿಟ್ಟು ಪ್ರತಿಬಂಧಕಗಳನ್ನು ತಂದೊಡ್ಡಲು ಒಪ್ಪುವವರು ಬಹಳ ಕಡಮೆ. ನಾವು ಪ್ರಥಮತಃ ಜನರ ಶ್ರೇಷ್ಠತೆಯನ್ನು ನಿಲ್ಲಿಸುವುದಕ್ಕೆ ಪ್ರತಿಬಂಧಕಗಳನ್ನು ತಂದೊಡ್ಡುವೆವು. ಬಳಿಕ ಅಂಥಾ ಪ್ರತಿಬಂಧಕಗಳನ್ನು ಸಡಿಲಿಸಲು ಪ್ರಯತ್ನಿಸುವೆವು. ಇಂಗ್ಲಂಡಿನಲ್ಲಿ ಆಗಾಗ ಲೋರ್ಡ್ಸ್ ಸಭೆಯವರ ಮೇಲ್ವಿಚಾರಣೆಯ ಹಕ್ಕಿಗೆ ಕಡಿತ ತರುತ್ತಾ ಇರುವದೇ ಉದಾಹರಣೆಯಾಗಿದೆ.

ಸಿ. ಎಚ್. ಶೆಟ್ಟಿ, ಬಿ. ಎ.

(ಮುಂದರಿಯುವುದು)

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ಎ. ಪಂಡಿತ್, B SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು,	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಅರುವತ್ತಮೂರರ ಗಡಿಯಲ್ಲಿ ನೆಹ್ರೂ

ಭಾರತದ ಪ್ರಧಾನ ಮಂತ್ರಿ ನೆಹ್ರೂರವರ 63ನೇ ವರ್ಧಂತಿಯು ದೇಶದಾದ್ಯಂತ ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. 'ನೆಹ್ರೂ ಚಿರಾಯುವಾಗಲಿ' ಎನ್ನುವ ಘೋಷ ಎಲ್ಲೆಡೆಯಲ್ಲೂ ಕೇಳುತ್ತಲಿದೆ. ಜಗತ್ತಿಗೇ ಆದರ್ಶವಾದ ಕೀರ್ತಿ ಜವಾಹರರದು. ಅಂತರ ರಾಷ್ಟ್ರೀಯ ಗೊಂದಲಗಳ ವಿಚಾರದಲ್ಲಿ ಶ್ರೀ ನೆಹ್ರೂರವರು ನೀಡಿದ ಆದೇಶ ಸಲಹೆಗಳೇ ಅತ್ಯಂತ ಪರಿಣಾಮಕಾರಿ ಹಾಗೂ ಯುಕ್ತವಾದವುಗಳೆಂದು ಆ ರಾಷ್ಟ್ರಗಳ ಗಮನಕ್ಕೆ ಬಂದಿದೆ. ಭಾರತದ ಬಂಧ ವಿಮೋಚನೆಗೆ ಗಾಂಧೀಜಿಯ ಬಲಗೈಯ ಬಂಟನಾಗಿ ದುಡಿದ ಈ ವೀರ ಬಂದ ಸ್ವಾತಂತ್ರ್ಯವನ್ನು ಭಕ್ಕಿಸಿಕೊಳ್ಳುವದಕ್ಕೆ-ಇಲ್ಲವೆ ಉಳಿಸಿಕೊಳ್ಳುವದಕ್ಕೆ ಪಣತೊಟ್ಟಿದ್ದಾರೆ. ಭಾರತ ವಿದೇಶಾಂಗನೀತಿಗಳು ಜಾಗತಿಕರಂಗದಲ್ಲಿ ಭಾರತಕ್ಕೆ ಕೀರ್ತಿ ತರಲು ಶ್ರೀ ನೆಹ್ರೂರವರೇ ಕಾರಣರೆಂಬುದನ್ನು ಮರೆಯಲಾಗದು.

ನಮ್ಮ ದೇಶದ ರಾಜಕೀಯವೆಂದರೆ ಎಂತಹರ ಹುಮ್ಮಸ್ಸು ಎದೆಗಾರಿಕೆಯನ್ನೂ ಕುಂದಿಸುವಂತಹದು. ಇಂತಹ ಸನ್ನಿವೇಶದಲ್ಲಿ ನೆಹ್ರೂ ಮುಂದಾಳ್ತನವಲ್ಲದೆ ಹೋಗಿದ್ದರೆ ನಮ್ಮ ದೇಶದ ಸ್ವಾತಂತ್ರ್ಯ ಬದುಕುತ್ತಿರಲಿಲ್ಲ! ಸರಕಾರ ಎದುರಿಸಬೇಕಾದ ಸಮಸ್ಯೆಗಳನ್ನು ನೆಹ್ರೂ ಆಗಿಂದಾಗ್ಗೆ ಜನಕ್ಕೆ ತಿಳಿಹೇಳಿ ಎಲ್ಲರ ಸಹಕಾರವನ್ನೂ ಯಾಚಿಸಿದ್ದು ಅವರ ಜನಪ್ರಿಯತೆಯನ್ನು ವ್ಯಕ್ತಪಡಿಸುತ್ತದೆ.

ನೆಹ್ರೂ ಎಷ್ಟು ಆದರ್ಶವಾದಿಯೋ—ಅಷ್ಟೇ ಮಟ್ಟಿನ ಹಟವಾದಿಯೂ ಹೌದು. 'ಕಾಂಗ್ರೆಸ್ಸು ಸೋಲನ್ನಪ್ಪಿದರೂ ಚಿಂತಿಲ್ಲ--ಆದರ್ಶವನ್ನು ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲಾಗದು" ಎಂದು ಹೇಳಿದ ಮಾತನ್ನು ಕಾಂಗ್ರೆಸ್ಸಿನ ಮೇಲೆ ಅವರಿಗಿರುವ ನಿಷ್ಠೆ ಹಾಗೂ ಪ್ರೇಮಾದರವನ್ನು ವ್ಯಕ್ತಪಡಿಸುತ್ತದೆ. ಈಚೆಗೆ ಕಾಂಗ್ರೆಸ್ಸಿನಲ್ಲಿ ಎದ್ದಿರುವ ಜಾತೀಯತೆ ಸಂಕುಚಿತತೆಯನ್ನು ಕಂಡು ನೆಹ್ರೂ ಬಹಳವಾಗಿ ನೊಂದುಕೊಂಡಿದ್ದಾರೆ. ಭಾರತವನ್ನು ಜಾತ್ಯತೀತ ರಾಷ್ಟ್ರವನ್ನಾಗಿ ನಿರ್ಮಿಸಬೇಕೆಂಬ ಧೋರಣವನ್ನವರೆಂದೂ ಬಿಟ್ಟು ಕೊಡುತ್ತವರಲ್ಲ. ನೆಹ್ರೂ ಟಂಡನ ವಿವಾದದಲ್ಲಿ ಅವರು ಅನುಸರಿಸಿದ ಧೋರಣೆ ಸ್ಪಷ್ಟವಿರುತ್ತದೆ- ಟಂಡನರನ್ನುರುಳಿಸಿ ತಾನು ಅಧ್ಯಕ್ಷನಾದುದು ಅಧಿಕಾರಲಾಲಸೆಯಿಂದಲೂ ಅಲ್ಲ; ನಿರಂಕುಶ ಪ್ರಭುತ್ವದ ಇಚ್ಛೆಯಿಂದಲೂ ಇಲ್ಲ. ಕಾಂಗ್ರೆಸ್ಸಿನಲ್ಲಿ ಜಾತೀಯತೆಯು ತಲೆಯೆತ್ತಬಾರದೆಂಬ ಒಂದೇ ಧ್ಯೇಯವಾದ ಉದ್ದೇಶದಿಂದ!

ರಾಜ್ಯಾಡಳಿತದಲ್ಲಿ ಲೋಪದೋಷಗಳು ನಡೆದಿವೆಯೆಂಬುದು ಸರ್ವಶ್ರುತವಿದೆ. ಇಂತಹ ಸಂದರ್ಭದಲ್ಲಿ ತಪ್ಪನ್ನು ಹಾರಿಕೆಯ ಮಾತಿನಿಂದ ತಪ್ಪಿಸಲು ಯತ್ನಿಸಿದಾಗ ಬಯಲಿಗೆಳೆದು ಶಿಕ್ಷೆಗೆ ಗುರಿಪಡಿಸಿದವರು ಶ್ರೀ ನೆಹ್ರೂರವರೇ. ಆದ ತಪ್ಪಿಗಾಗಿ ಜನತೆಯೊಡನೆ ಕ್ಷಮೆಯನ್ನು ಯಾಚಿಸುವದೂ—ತಿರುಗಿ ತಪ್ಪಾಗದಂತೆ ಶುದ್ಧೀಕರಣವನ್ನು ಕೈಗೊಳ್ಳುವದೂ ಅವರ ಪ್ರವೃತ್ತಿ. ಎಂತಹ ಗಂಭೀರ ಪರಿಸ್ಥಿತಿ ಬಂದರೂ ನೆಹ್ರೂರವರು ಕಾಂಗ್ರೆಸ್ಸಿನ ಆದರ್ಶವನ್ನು ಬಿಟ್ಟು ಒಂದಿಂಚೂ ಕದಲುವಂತಿಲ್ಲ!

ಪಾಕಿಸ್ತಾನ, ಯುದ್ಧಕ್ಕೆ ಕಾಲುಕೆದರುವಾಗ ಶ್ರೀ ನೆಹ್ರೂರವರೂ ಪಾಕಿಸ್ತಾನಿಗಳಂತೆ ಯವಿವೇಕ ತಪ್ಪಿ ನಡೆಯುತ್ತಿದ್ದರೆ ಕುರುಕ್ಷೇತ್ರವೇ ಆಗುತ್ತಿತ್ತು! ಅರ್ಭಟ-ಆಕ್ರೋಶಗಳನ್ನು ಸಾವಧಾನದಿಂದ ಆಲಿಸಿ ತಾಳದಿಂದ ನಡೆದುಕೊಂಡಿದ್ದರಿಂದಲೇ ಭಾರತ ಪಾಕಿಸ್ತಾನಗಳೊಳಗೆ ಮೈತ್ರಿಯ ಶುಭಚಿಹ್ನೆ ಮೂಡುವಂತಾಗಿದೆ. ಪಾಕಿಸ್ತಾನದ ಬಗ್ಗೆ ನೆಹ್ರೂ ವಹಿಸಿದ ಸೌಮ್ಯ ಧೋರಣೆಯನ್ನು ಖಂಡಿಸಲಾಯಿತು. ಗಡಿಯಲ್ಲಿ ವೈರಿಪಕ್ಷದ ಸೈನ್ಯ ಕಲೆ ನಿಂತಾಗ—ಯುದ್ಧಪೂರ್ವದ ಸನ್ನಾಹ ಅವ್ಯಾಹತವಾಗಿ ನಡೆದಾಗ—"ಭಾರತ ಇನ್ನೂ ಸುಮ್ಮನಿರುವದು ಸರಿಯೇ?" ಎನ್ನುವ ಪ್ರಶ್ನೆ ಶ್ರೀಮಂತ ಕಾಂಗ್ರೆಸ್ಸಿಗರಲ್ಲೇ ಮೂಡಿದ್ದುಂಟು! ಆದಕ್ಕೆಲ್ಲ ಗಾಂಧೀಜೀಯ ಬಲಗೈ ಬಂಟ ನೀಡಿದ್ದು ಅಭಯ ವಚನವನ್ನು ಮಾತ್ರ! ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಿಯ ವ್ಯಕ್ತಿಯ ಅಮೂಲ್ಯ ಅನುಭವವು ಇಡಿಯ ದೇಶದ ಭವಿತವ್ಯವನ್ನು ನಿಸ್ಮರಿಸಬಲ್ಲುದೆಂಬುದಕ್ಕೆ ಇದು ಉತ್ತಮ ಉದಾಹರಣೆಯಲ್ಲವೇ?

ನಮ್ಮ ದೇಶದ ಮಟ್ಟಿಗೆ ಸದ್ಯ ಅನ್ನ ಪ್ರಶ್ನೆಯೇ ಅತಿ ದೊಡ್ಡದು. ಇಂತಹ ಸಂದರ್ಭದಲ್ಲಿ ಯಾವ ಸರಕಾರ ಇಲ್ಲವೆ ವ್ಯಕ್ತಿಗಳಿದ್ದರೂ ಇದನ್ನು ಎದುರಿಸಲು ಸಮರ್ಥವಾಗುತ್ತಿರಲಿಲ್ಲ! ಜಾಗತಿಕ ರಂಗದಲ್ಲಿ ನೆಹ್ರೂ ಗಳಿಸಿಕೊಂಡ ರಾಜಕೀಯ ಪ್ರೀತಿ ಗೌರವಗಳಿಂದ ಕಷ್ಟ ಬಂದಾಗ ಬೇರೆ ಬೇರೆ ರಾಷ್ಟ್ರಗಳು ರಾಜಕೀಯ ಮತಭೇದವನ್ನು ಬದಿಗೊತ್ತಿ ಆಹಾರವನ್ನು ನೀಡಿದವು.

ಚುನಾವಣೆಯು ಹತ್ತಿರ ಬರುತ್ತಿರುವಾಗ ಬೇರೆ ಬೇರೆ ಪಕ್ಷಗಳು ತಲೆಯೆತ್ತಿ ಜನತೆಯನ್ನು ತಪ್ಪು ಮಾರ್ಗಕ್ಕೆ ಹಚ್ಚುವದೂ-ಕಾಂಗ್ರೆಸ್ಸನ್ನು ಉರುಳಿಸುವದಕ್ಕೆ ಯತ್ನ ನಡೆಸುವದೂ ವಿದಿತವಿಚಾರವೇ. ಕಾಂಗ್ರೆಸ್ಸಿಗರಲ್ಲೇ ಹಲವರು ಸ್ವಾರ್ಥ ಜಾತೀಯತೆಗೆ ಹೆಣಗಾಡುವ ಸ್ಥಿತಿಯನ್ನು ನೆಹ್ರೂ ಅರಿಯದಿಲ್ಲ- ಕೆಲವು ವಾರಗಳ ಹಿಂದೆ ಈ ಕುರಿತು ಅವರು ಹಿತೋಕ್ತಿಯ ಮಾತನ್ನು ಹೇಳುತ್ತ ಬಂದಿರುವರು. ಕಾಂಗ್ರೆಸ್ಸಿನಿಂದ ಹೊರ ಹೋದವರಲ್ಲಿ ಪ್ರಾಮಾಣಿಕರೆಷ್ಟು—ಸ್ವಾರ್ಥಸಾಧಕರೆಷ್ಟು ಮಂದಿ ಎಂಬುದನ್ನು ಚೆನ್ನಾಗಿ ಅರಿತುಕೊಂಡ ವ್ಯಕ್ತಿಯೆಂದರೆ ನೆಹ್ರೂರವರೊಬ್ಬರೇ! ಅಂತಲೇ ವಿರೋಧಿ ಪಕ್ಷಗಳಿಂದ ಬರುವ ಟೀಕೆಯನ್ನು ಸ್ವಾಗತಿಸುತ್ತಾರೆ. ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಾರೆ.

ಕಾಂಗ್ರೆಸ್ಸು ತನ್ನ ಕೀರ್ತಿ ಅಂತಸ್ತನ್ನು ಈ ನಾಲ್ಕು ವರ್ಷಗಳಲ್ಲಿ ಕಳೆದುಕೊಂಡಿದೆಯೆಂಬುದು ನಿರ್ವಿವಾದ. ಆದರೆ ಅದನ್ನು ಇಷ್ಟಕ್ಕೆ ಬಿಟ್ಟುಕೊಟ್ಟು ಇನ್ನೊಂದು ಪಕ್ಷವನ್ನು ಆಹ್ವಾನಿಸುವದೆಂದರೆ ಆತ್ಮಹತ್ಯೆ ಮಾಡಿಕೊಂಡಂತೆಯೇ! ಅದರಲ್ಲಿದ್ದುಕೊಂಡೇ ಅದರ ಶುದ್ಧೀಕರಣಕ್ಕಾಗಿ ಯತ್ನಿಸುವದು ಮಹತ್ವದ ... ತಿ! ದೇಶಸೇವೆ—ಕರ್ತವ್ಯ ನಿಷ್ಠೆಯುಳ್ಳವರಿಗೆ ಕಾಂಗ್ರೆಸ್ಸಿಗಿಂತ ಮಿಗಿಲಾದ ಸಂಸ್ಥೆ ಬೇರಿರಲಾರದು! ಆದಕೆಂತಲೇ, ಶ್ರೀ ನೆಹ್ರೂರವರು ಕಾಂಗ್ರೆಸ್ಸಿನ ಭದ್ರತೆ—ಶುದ್ಧೀಕರಣಕ್ಕಾಗಿ ಈ 63ರ ಗಡಿಯಲ್ಲಿ ದುಡಿಯುತ್ತಿರುವದು! ದೇಶವೆಲ್ಲ ಸುತ್ತಾಡಿ ಜನತೆಯ ವಿಶ್ವಾಸವನ್ನು ಗಳಿಸಲೆತ್ನಿಸುವದು—ತನ್ನ ಸಂದೇಶವನ್ನು ನೀಡುತ್ತಿರುವದು.

ಕಾಂಗ್ರೆಸ್ಸು ತಿರುಗಿ ಆಡಳಿತಕ್ಕೆ ಬರುವದರಿಂದ ದೇಶಕ್ಕೆ ಎಷ್ಟರ ಮಟ್ಟಿನ ಹಿತವಿದೆಯೆನ್ನುವ ಕಲ್ಪನೆ ನಮ್ಮ ಜನಕ್ಕಿನ್ನೂ ಗೊತ್ತಾಗಿರುವುದಿಲ್ಲ! ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸು ಸಾಧಿಸಿದ್ದು ಫಲಿಸಬೇಕಾದರೆ ಮುಂದೆಯೂ ಅದೇ ಆಡಳಿತಕ್ಕೆ ಬರುವದು ಅನಿವಾರ್ಯ! ಶ್ರೀ ನೆಹ್ರೂರವರ ಮುಂದಾಳತನದಲ್ಲಿ ಹಾಗಾಗುತ್ತದೆನ್ನುವದರಲ್ಲಿ ನಮಗೆ ಸಂದೇಹವೇ ಇಲ್ಲ! ಅಂತಲೇ ನೆಹ್ರೂರವರು ಇನ್ನೂ ನೂರು ಕಾಲ ನಮ್ಮ ನಾಯಕನಾಗಿದ್ದುಕೊಂಡು ಮಾರ್ಗದರ್ಶನ ಮಾಡಲೆಂದು ಈ 63ರ ವರ್ಧಂತಿಯ ಸಮಯದಲ್ಲಿ ಹಾರೈಸುತ್ತೇವೆ.

[1ನೇ ಪುಟದಿಂದ ಮುಂದುವರಿದುದು]

ತಮ್ಮ ಈ ಹಿರಿ ಹೊಣೆಯನ್ನು ಕೊಗಸಾಗಿ ನೆರವೇರಿಸಲು ಅವಶ್ಯಕವಾದ ಆಡಳಿತದ ರೀತಿನೀತಿಗಳ, ಆರ್ಥಿಕದ ವಿಧಿವಿಧಾನಗಳ ವಿವರಗಳನ್ನೂ ತಿಳಿಯಲೆತ್ನಿಸುವರು. ಜನಸಾಮಾನ್ಯರ ರಾಜಕೀಯ ರಂಗದ ವ್ಯವಹಾರ ಜ್ಞಾನವು ಬೆಳೆದ ಬಳಿಕ ಚುನಾವಣೆಗಳಲ್ಲಿ ಲಂಚ ವಂಚನೆಗಳಿಗೆ ಪುರಸ್ಕಾರ ಸಿಕ್ಕುವುದೂ ಕಡಿಮೆಯಾಗುವದು! ಸಮತೆ ಸಮಾನಾವಕಾಶಗಳಿಂದ ಎಲ್ಲರ ಏಳ್ಗೆಯೆಂಬುದು ಆದರ್ಶವಾದಾಗ, ಹೊಟ್ಟೆ-ಬಟ್ಟೆ ಬಿಡಾರಗಳು ಎಲ್ಲರಿಗೂ ಸಾಕಷ್ಟು ದೊರೆಯಬೇಕೆಂಬುದು ಆಡಳಿತದ ದೃಷ್ಟಿಯಾಗುವಾಗ ಜಾತೀಯತೆಯ ಜ್ವಾಲಾಮುಖಿಯು ನಂದಿಹೋಗುವುದು. ಓಟಿನ (vote) ಬೇಟೆಯು ತುರುಸು ಹೊಸ ದಾರಿಯನ್ನು ಹಿಡಿಯುವದು. ಆಗ ಚುನಾವಣೆಗಳು ಚೈತನ್ಯದಾಯಿಯಾಗುವುವು.

ಇಂದು ಕಾಂಗ್ರೆಸ್ಸಿನ ಅನುಯಾಯಿಗಳು ಜನತೆಗೆ ಈ ವಿಧದ ಶಿಕ್ಷಣವನ್ನು ಕೊಡಬೇಕು. ಕಾಂಗ್ರೆಸಿನಲ್ಲಿ ಜನರಿಗೆ ವಿಶೇಷತಃ ಹಳ್ಳಿಯ ಒಕ್ಕಲಿಗರಿಗೆ ತುಂಬ ನಂಬಿಗೆಯುಂಟು. ಇದಕ್ಕೆ ಕಾರಣವಿಲ್ಲದಿಲ್ಲ. ಕಳೆದ ಐವತ್ತು ವರ್ಷಗಳಿಂದಲೂ ಕಾಂಗ್ರೆಸ್ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ, ರಾಷ್ಟ್ರನಿರ್ಮಾಣಕ್ಕಾಗಿ ಎಡೆಬಿಡದೆ ದುಡಿದಿದೆ. ದೇಶದ ವಿಭಜನೆಯೊಂದಿಗೆ ಬಂದ ಘೋರ ವಿಪ್ಲವವನ್ನೆದುರಿಸಿ ಗೆಲವು ಪಡೆದಿದೆ. ಸಿಕ್ಕ ಸ್ವಾತಂತ್ರ್ಯವನ್ನು ಸ್ಥಿರಗೊಳಿಸಿದೆ. ಸಂಸ್ಥಾನಗಳೆಂಬ ಪಿಂಗಡಿಸುವ ನಡುಗುಡ್ಡೆಗಳನ್ನು ತೊಡೆದು ಸಮಗ್ರ ರಾಷ್ಟ್ರವನ್ನು ಒಂದೇ ಆಡಳಿತದಲ್ಲಿ ತಂದಿರಿಸಿದೆ. ಕಳೆದ ನಾಲ್ಕುವರ್ಷಗಳಲ್ಲಿ ಕಾಂಗ್ರೆಸು ಸರಕಾರದ ಸೂತ್ರಗಳನ್ನು ವಹಿಸಿದಾಗಿನಿಂದ ವಿಷಮ ಪರಿಸ್ಥಿತಿಯಲ್ಲಿಯೂ ವಿಪುಲ ರಾಷ್ಟ್ರಹಿತ ಕಾರ್ಯಗಳನ್ನು ಮಾಡಿದೆ. ಆದರೆ ಜನಸಾಮಾನ್ಯರಿಗೆ ಇದರ ಬಗ್ಗೆ ಸಾಕಷ್ಟು ತಿಳುವಳಿಕೆಯಿಲ್ಲ. ಕಾಂಗ್ರೆಸ್ ಸರಕಾರವು ಮಾಡಿದ ಮಹಾಕಾರ್ಯವನ್ನು ಜನತೆ ಅವಗಾಹನೆಗೆ ತರುವುದು ಮುಖ್ಯವಾದ ಕೆಲಸ. ಹಾಗೆ ಮಾಡಿದರೆ ಮುಂಬೆಯೇ ಕಾಂಗ್ರೆಸ್ಸಿನಲ್ಲಿ ಪ್ರೀತಿ ವಿಶ್ವಾಸಗಳುಳ್ಳ ಪ್ರಜೆಗಳು ಇಮ್ಮಡಿ ಹುರುಪಿನಿಂದ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ಪ್ರಚಂಡ ಜಯದೊರೆಯುವಂತೆ ಬೆಂಬಲಕೊಡುವರೆಂದು ಖಂಡಿತವಾಗಿ ಹೇಳಬಹುದು.

ಕ. ಪ್ರಾ. ಕಾಂ. ಸಮಿತಿಯ ಪ್ರಚಾರ ಶಾಖೆಯಿಂದ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.

ಚುನಾವಣೆಯ ಕುರಿತು.....

ಚುನಾವಣೆಯ ಪ್ರಚಾರಾರ್ಥವಾಗಿ ನಮ್ಮ ಧುರೀಣರು ಮಾಡಿದ ಭಾಷಣಗಳ ಸಾರಾಂಶಗಳನ್ನು ಇಲ್ಲಿ ಕೊಡಲಾಗಿದೆ. ಹಿಮಾಚಲ ಪ್ರದೇಶದ ಮಂಡಿಯಲ್ಲಿ ನೆರೆದ ಸಭೆಯಲ್ಲಿ ಶ್ರೀ ಜವಾಹರಲಾಲರು ಹೀಗೆ ಹೇಳಿದರು:

"ಮುಂಬರುವ ಚುನಾವಣೆಯಲ್ಲಿ ಜಾತಿಪಂಥ, ಇಲ್ಲವೆ ಖಾಸಗೀ ತಳಹದಿಯ ಮೇಲೆ ಮತದಾನ ಮಾಡಬಾರದು. ಮತದಾನವೆಂದರೆ ಪ್ರತಿಯೊಬ್ಬ ಮತದಾರನು ತನ್ನ ಜಾತಿ ಪಂಗಡದವರಿಗೆ ಇಲ್ಲವೆ ಸಂಬಂಧಿಕರಿಗೆ ಇಲ್ಲವೆ ಸಮಾಜದ ಸ್ವತಂತ್ರ ಹುರಿಯಾಳಿಗೆ ಕೊಡಬೇಕೆಂದು ಅರ್ಥವಲ್ಲ. ಒಂದು ಪಕ್ಷದ ಪರವಾಗಿ, ನಿಂತ ಹುರಿಯಾಳುವಿಗೆ ಮತಕೊಡುವದರಿಂದ ಮಾತ್ರವೇ ನಿಮ್ಮ ಮತದ ಪ್ರಭಾವಿ ಉಪಯೋಗವಾಗುವದು.

ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಿಡಿಸುವದು ವ್ಯಕ್ತಿಗಳಿಂದ-ಅವರು ಎಷ್ಟೇ ಮೇಧಾವಿಗಳಿದ್ದರೂ-ಸಾಧ್ಯವಿಲ್ಲ. ದೇಶದ ಐಕ್ಯವನ್ನು ಕಾಪಾಡಬಲ್ಲ ಹಾಗೂ ಜನತೆಯನ್ನು ಮುಂದಕ್ಕೆ ಒಯ್ಯಬಲ್ಲ ಸಾಮರ್ಥ್ಯ ಯಾವ ಸಂಸ್ಥೆಗೆ ಇದೆಯೆಂಬುದನ್ನು ಜನತೆಯು ಕಂಡುಕೊಳ್ಳಬೇಕು- ಜನತೆಯ ಸಮಸ್ಯೆಗಳನ್ನು ಹಾಗು ದೊಡ್ಡ ಪ್ರಶ್ನೆಗಳನ್ನು ಯಾವ ಸಂಸ್ಥೆಯು ಬಿಡಿಸಬಲ್ಲದೆಂಬುದನ್ನು ಜನತೆಯು ಅರ್ಥಮಾಡಿಕೊಳ್ಳಬೇಕು.........ಇಂದು ಬಡತನ ಹಾಗೂ ನಿರುದ್ಯೋಗಗಳೇ ಮುಖ್ಯ ಸಮಸ್ಯೆಗಳಾಗಿವೆ. ಬಡತನದ ಹೊರೆಯನ್ನು ನಾವು ಸಾಮಾನ್ಯ ಜನತೆಯ ಹೆಗಲಿನಿಂದ ಇಳಿಸಬೇಕಾಗಿದೆ.......ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಜನರು ವಾಸಿಸುತ್ತಿದ್ದರೂ ಎಲ್ಲರಲ್ಲಿಯೂ ಮೂಲ ಐಕ್ಯವನ್ನು ನಾವು ಕಾಣುತ್ತೇವೆ. ನಾವು ಒಂದುಗೂಡಿ ಕೆಲಸಮಾಡಬೇಕಾಗಿದೆ. ಸಹಕಾರ ಪ್ರಯತ್ನದಿಂದ ಮಾತ್ರ ನಾವು ಮುಂದಡಿಯಿಡಬಲ್ಲೆವೆಂಬ ಮಹಾತ್ಮ ಗಾಂಧಿಯವರ ಸಂದೇಶವನ್ನು ಮರೆಯದಿರೋಣ. ಜಾತಿ ಪಂಗಡ ಇವುಗಳ ತಳಹದಿಯ ಮೇಲೆ ಒಬ್ಬೊಬ್ಬರನ್ನು ಬೇರ್ಪಡಿಸಲು ಯತ್ನಿಸುತ್ತಿರುವ ಸಂಸ್ಥೆಗಳು ನಮ್ಮ ಈ ಐಕ್ಯವನ್ನು ಮತ್ತು ದೇಶವನ್ನು ದುರ್ಬಲಗೊಳಿಸುವವು.

ಕಾಂಗ್ರೆಸಿನಲ್ಲಿರುವ ದೋಷಗಳನ್ನು ನಿವಾರಿಸಲು ನಾವು ಯತ್ನಿಸಬೇಕು. ದೇಶದ ಹಿತದ ದೃಷ್ಟಿಯಿಂದಲೋ ನೀವು ಕಾಂಗ್ರೆಸು ಹುರಿಯಾಳುಗಳಿಗೆ ಮತಕೊಡುವಿರೆಂದು ನಾನು ಆಶಿಸುತ್ತೇನೆ."

ಶ್ರೀ ಜವಾಹರಲಾಲ ನೆಹ್ರೂ.

ದೇಶದ ಕಲ್ಯಾಣ ಕಾಂಗ್ರೆಸ್ಸಿನಿಂದ ಮಾತ್ರ ಸಾಧ್ಯ

ಕೇಂದ್ರ ಸರಕಾರದ ವಾಣಿಜ್ಯ ಶಾಖೆಯ ಉಪ ಮಂತ್ರಿಗಳಾದ ದ. ಪ. ಕರಮರಕರರು ಹುಬ್ಬಳ್ಳಿಯಲ್ಲಿ ಕೂಡಿದ ಸಭೆಯಲ್ಲಿ ಮಾಡಿದ ಭಾಷಣ.

"ಸ್ವಂತ ವರ್ಚಸ್ಸಿನಿಂದ ಆಳುವ ಕಾಲವಿದಲ್ಲ. ಜನರ ಪ್ರೇಮ ಬಲದಿಂದ ಆಳುವ ಕಾಲ. ಪ್ರಧಾನಮಂತ್ರಿ ನೆಹ್ರೂರವರು ಜನರ ಪ್ರೇಮದ ಬಲದಿಂದ ಮಂತ್ರಿಯಾಗಿರುವೆವೆಂದು ಹೇಳಿರುವರು. ಜನರೆಲ್ಲರೂ ಪಾರ್ಲಿಮೆಂಟಿಗೆ ಹೋಗುವುದು ಶಕ್ಯವಿಲ್ಲ ಅವರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳಿಸುವರು. ಪ್ರತಿನಿಧಿಗಳು ತಮ್ಮ ಕಾರ್ಯ್ಯದ ವರದಿಯನ್ನು ಜನತೆಗೆ ಒಪ್ಪಿಸಬೇಕಾಗುವುದು.

ಭಾರತ ಸರಕಾರ ವಿದೇಶದಿಂದ ಬಂದ ಸರಕಾರವಲ್ಲ. ನಿಮ್ಮ ಪ್ರತಿನಿಧಿಗಳ ಸರಕಾರ. ಅವರು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದ್ದೇನು? ಇದನ್ನು ತಿಳಿಸಿಹೇಳುವೆನು. ಇಂದು ನಾನು ಮತಯಾಚನೆಗೆ ಬಂದಿಲ್ಲ. ಸರಕಾರದ ಧೋರಣ ತಿಳಿಸಲು ಬಂದಿರುವೆನು. ಸ್ವತಂತ್ರ ರಾಷ್ಟ್ರದಲ್ಲಿ ದೇವರು ಜನತೆಯ ಅಂತಃಕರಣದಲ್ಲಿರುವನೆಂದು ಹೇಳುವರು. ಸರಕಾರ ಜನತೆಯ ಪ್ರೇಮದ ಬಲದಮೇಲೆ ನಿಂತಿರುವದು. ಬ್ರಿಟಿಶ ಸರಕಾರದ ಭೀತಿಯು ಹೆದರಿಕೆ ಹರಿದು ಹೋದಮೇಲೆ ಅವರ ಪ್ರಭುತ್ವ ಉಳಿಯಲಿಲ್ಲ. ಸ್ವರಾಜ್ಯ ಬೇಕು ಎಂದು ಜನರ ಮನಸ್ಸಿನಲ್ಲಿ ಮೂಡಿದಾಗಲೇ ಬ್ರಿಟಿಶರ ಸಾಮ್ರಾಜ್ಯ ಹೋಯಿತು. ಪಂಡಿತ ನೆಹ್ರೂರವರು ನಮ್ಮ ಪುಣ್ಯವಿದ್ದರೆ ಇಲ್ಲಿಗೆ ಬರುವರು. ಅವರು ಜನರ ಪ್ರೀತ್ಯಾದರಗಳಿಗೆ ಪಾತ್ರರಾದವರಾಗಿರುವದರಿಂದ ಅವರು ಪುಣ್ಯ ಪುರುಷರಾಗಿರುವರು.

ನಮ್ಮ ಸರಕಾರೀ ಉತ್ಪನ್ನದ 16 ಪಟ್ಟು ಉತ್ಪನ್ನ ಬ್ರಿಟಿಶರಿಗಿದೆ. ಅದರೂ ಅವರಿಗೆ ಆಹಾರದ ಕೊರತೆ ಬೆನ್ನುಬಿಟ್ಟಿಲ್ಲ. ಹಿಂದೂಸ್ಥಾನದ 35 ಕೋಟಿಜನರಿಗೆ ಆಹಾರದ ಕೊರತೆಯಿದೆ. ನಮ್ಮ ದೇಶದಲ್ಲಿ 40ಕೋಟಿ ಟನ್ನು ಆಹಾರ ಬೆಳೆಯುತ್ತದೆ. ನಮಗಿನ್ನೂ 40ಲಕ್ಷ ಟನ್ನು ಕೊರತೆ ಬೀಳುವದು 10ಕ್ಕೆ 1ರಷ್ಟು ಹೆಚ್ಚು ಬೆಳೆದರೆ ನಮಗೆ ಸಾಕಷ್ಟು ಆಹಾರ ಸಿಗುವದು. ಇಗ್ಲಂಡದಲ್ಲಿ ನೂರಕ್ಕೆ 20ರಷ್ಟು ಮಾತ್ರ ಬೆಳೆಯುವದು. ಇನ್ನೂ 80ರಷ್ಟು ಅವರು ಹೊರಗಿನಿಂದ ತರಿಸಬೇಕಾಗಿದೆ. 1700 ಕೋಟಿ ರೂ ವೆಚ್ಚಮಾಡಿ ದೊಡ್ಡ ಅನೇಕಟ್ಟು ಮತ್ತು ಔದ್ಯೋಗಿಕ ಅಭಿವೃದ್ಧಿ ಯೋಜನೆ ಮಾಡಲಾಗಿದೆ. 5ವರ್ಷಗಳಲ್ಲಿ 70ಲಕ್ಷ ಟನ್ ಹೆಚ್ಚಿಗೆ ಆಹಾರ ಬೆಳೆಯುವ ಯೋಜನೆ ಮಾಡಿದ್ದಾರೆ. ಈ ಯೋಜನೆಯ ಯಶಾಪಶಯ ನಿಮ್ಮನ್ನೇ ಅವಲಂಬಿಸಿದೆ. ನೀವು ಪ್ರಯತ್ನಮಾಡಿ ದುಡಿದರೆ ಅದು ಯಶಸ್ವಿಯಾಗುವದು. ಹಿಂದೂಸ್ಥಾನದಲ್ಲಿ ಆಹಾರ ಹೆಚ್ಚು ಬೆಳೆಯುವದು ಮಳೆಯನ್ನವಲಂಬಿಸಿದೆ. ಆದರೆ ಜನಸಂಖ್ಯೆ ಹೆಚ್ಚುತ್ತಲೇ ಇದೆ. ನಾವು ನಾಲ್ಕು ವರ್ಷಗಳಲ್ಲಿ 13ಲಕ್ಷ ಟನ್ ಹೆಚ್ಚು ಆಹಾರ ಬೆಳೆಸಿದ್ದರೂ ಜನಸಂಖ್ಯೆ ವರ್ಷಕ್ಕೆ 50 ಲಕ್ಷ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಬೆಳೆದಂತೆ ಉದ್ಯೋಗಗಳ ಅಭಿವೃದ್ಧಿಯಾದರೆ ಮಾತ್ರ ರಾಷ್ಟ್ರದ ಸ್ಥಿತಿ ಉತ್ತಮಗೊಳ್ಳುವದು.

ನಾಲ್ಕು ವರ್ಷದ ನಂತರ ನಮಗೆ ಕಷ್ಟವಿದ್ದರೂ ಶಾಂತರೀತಿಯಿಂದ ಕುಳಿತು ವಿಚಾರಮಾಡುವ ಸ್ಥಿತಿಬಂದಿದೆ. ಒಬ್ಬ ಶ್ರೀಮಂತನಾಗಿ ಸಾವಿರ ಜನರು ಬಡವರಾಗಬೇಕೆಂಬ ವಿಚಾರ ಇಂದು ಸಲ್ಲದು!....... ಜನತೆಯೇ ಕಸುವಿನ ಮೇಲೆ ನಿಂತ ಸರಕಾರವೇ ಜನತಾ ಸರಕಾರ. ಇದನ್ನು ನಾಳಿನ ಚುನಾವಣೆಯ ಮೂಲಕ ಜನರು ಜನತಾ ಸರಕಾರ ರಚಿಸಬಲ್ಲರು. ಯಾವ ಸಂಸ್ಥೆಗೆ ಬೆಂಬಲಕೊಟ್ಟರೆ ದೇಶದ ಕಲ್ಯಾಣವಾಗಬಹುದೆಂಬುದನ್ನು ನೀವು ವಿಚಾರಿಸಿ, ಅಂಥ ಸಂಸ್ಥೆಗೇ ಬೆಂಬಲ ನೀಡಬೇಕು."

ದ. ಪ. ಕರಮರಕರ.

ನಿಮ್ಮ ಮತ ಸತ್ಪಾತ್ರಕ್ಕೆ ಸಲ್ಲಲಿ.

ಮುಂಬಯಿ ಗೃಹ ಮಂತ್ರಿಗಳಾದ ಮೊರಾರಜಿ ದೇಸಾಯಿಯವರು ಬಾಗಲಕೋಟೆಯಲ್ಲಿ ಮಾಡಿದ ಭಾಷಣದ ಸಾರಾಂಶ.

"ಕಾಂಗ್ರೆಸ್ಸು ದೇಶಕ್ಕೆ ಅಪಾರ ಸೇವೆ ಸಲ್ಲಿಸಿದೆ. ಶಾಂತ ಹಾಗೂ ಅಹಿಂಸಾತ್ಮಕ ರೀತಿಯಿಂದ ಇನ್ನೂ ದೇಶ ಹಿತವನ್ನು ಸಾಧಿಸಬೇಕೆಂದಿದೆ. ಕಾಂಗ್ರೆಸ್ಸಿನ ಧ್ಯೇಯವು ಕಮ್ಯೂನಿಜಮ್ಮಿಗಿಂತ ಕಡಿಮೆಯಾದದ್ದಲ್ಲ. ಆದರೆ ಕಾಂಗ್ರೆಸ್ಸು ಈ ಧ್ಯೇಯವನ್ನು ಶಾಂತರೀತಿಯಿಂದ ಸಾಧಿಸಬೇಕೆನ್ನುತ್ತದೆ. ಮಾರ್ಕ್ಸ್ ತತ್ವಕ್ಕೂ ಗಾಂಧೀಜಿಯ ತತ್ವಕ್ಕೂ ಇದೇ ಅಂತರ. ರಾಮರಾಜ್ಯವನ್ನು ಸ್ಥಾಪಿಸಿದ್ದೇವೆಂದೂ ನಾವೇನೂ ಹೇಳಿಕೊಳ್ಳುವುದಿಲ್ಲ. ಆದರೆ ರಾಮರಾಜ್ಯ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದೇವೆ. ಕಾಂಗ್ರೆಸ್ಸಿನಲ್ಲಿಯ ಜನರು ಶುದ್ಧರಿದ್ದಾರೆಂದೂ ಹೇಳಿಕೊಳ್ಳುವುದಿಲ್ಲ. ಅವರು ಇತರರಂತೆಯೆ ಇದ್ದಾರೆ. ಆದರೆ ಅವರ ಒಂದು ಗುಣವೆಂದರೆ ಅವರು ನ್ಯಾಯ ಮಾರ್ಗದಿಂದ ನಡೆಯಲು ಪ್ರಯತ್ನಿಸುತ್ತಾರೆ. ಅವರು ತಮ್ಮ ಚಾರಿತ್ರ್ಯದಿಂದ ಜನತೆಯಲ್ಲಿ ಸ್ಫೂರ್ತಿ ಬೀರಿ ನಿಜವಾದ ಮಾನವರನ್ನಾಗಿಸಲು ಪ್ರಯತ್ನಿಸುತ್ತಿದ್ದಾರೆ. ನಾನಿಲ್ಲಿ ಗೃಹಮಂತ್ರಿಯಾಗಿ ಮಾತಾಡುತ್ತಿರುವುದಿಲ್ಲ. ಆದರೆ ಕಾಂಗ್ರೆಸ್ಸಿನ ಸಾಮಾನ್ಯ ಸೇವಕನೆಂದು ಹೇಳುತ್ತಿದ್ದೇನೆ.

ನಿಮ್ಮ ಮತದ ದುರುಪಯೋಗವಾಗದಿರಲಿ. ದೇಶಕಲ್ಯಾಣ ಕಾರ್ಯಕ್ಕಾಗಿ ಅದರ ಉಪಯೋಗವಾಗಬೇಕು. ಮಾನವಿರೋಧ ಕಾರ್ಯಕ್ಕಾಗಿ ಜನರು ನಮ್ಮನ್ನು ದೂಷಿಸುತ್ತಾರೆ. ಆದರೆ ಅದರಿಂದ ಬಡಜನರ ಕಲ್ಯಾಣವಾಗುತ್ತಿದೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಈ ಕಾರ್ಯಕ್ರಮದಿಂದ ಸರಕಾರಕ್ಕೆ ಹಾನಿಯಾಗಿದ್ದರೂ ದೇಶಕ್ಕೆ ಲಾಭವಾಗಿದೆ. 1946ರ ಚುನಾವಣೆಯ ಕಾಲಕ್ಕೆ ಕಾಂಗ್ರೆಸ್ ತಾನು ಹೊರಡಿಸಿದ್ದ ಘೋಷಣಾ ಪತ್ರಿಕೆಯನ್ನು ಕಾರ್ಯಕಾರಿಯಾಗಿಸಲು ಪ್ರಯತ್ನಿಸುತ್ತಲೇ ಇದೆ. ಅದ್ದರಿಂದ ನೀವು ನಿಮ್ಮ ಮತವನ್ನು ಕೊಡುವಾಗ ವಿಚಾರ ಮಾಡಿ ಯೋಗ್ಯ ಪಕ್ಷಕ್ಕೇ ಕೊಡಿರಿ."

— ಶ್ರೀ ಮೊರಾರಜಿ ದೇಸಾಯಿ.

ಇಂದಿನ ಯಜ್ಞ ಸಂಕಲ್ಪ

"ಹಿಂದುಸ್ಥಾನದೊಳಗಣ 25 ಕೋಟಿ ಎಕ್ರೆ ಭೂಮಿಯಲ್ಲಿ 5 ಕೋಟಿ ಎಕ್ರೆ ಭೂಮಿಯನ್ನೂ ಭೂದಾನ ರೀತ್ಯಾ ದೊರಕಿಸಿಕೊಂಡು, ಅದನ್ನು ದರಿದ್ರ ನಾರಾಯಣರಿಗೂ ಭೂಮಿ ವಿಹೀನರಿಗೂ ಹಂಚಿಕೊಡಬೇಕೆಂದು ಆಚಾರ್ಯ ವಿನೋಬಾಜಿಯವರು ಈಗ್ಗೆ ಜಾಹೀರುಮಾಡಿರುತ್ತಾರೆ."

ಪಾದ ಸಂಚಾರಿಯಾಗಿಯೇ ಈ ಮಹಾಕಾರ್ಯವನ್ನು ಇದೇ ಕಳೆದ ಸಪ್ಟಂಬರ 12ಕ್ಕೆ ಉತ್ತರ ಹಿಂದುಸ್ಥಾನ ಯಾತ್ರೆಯಮೂಲಕ ತೊಡಗಿರುತ್ತಾರೆ; ಪದ್ರೀತಿಯಲ್ಲಿ ಐದುವರ್ಷಗಳ ಅವಧಿಯೊಳಗೆ ಸಮಗ್ರ ದೇಶವನ್ನು ಸಂಚಾರಮಾಡಿ ಸಂಕಲ್ಪ ಪೂರ್ತಿಗೊಳಿಸಲಿದ್ದಾರೆ. ಅಖಿಲ ಭಾರತ ಚರಖಾ ಸಂಘದವರು ಕತಾಯಿ (ನೂಲುವ) ಮಂಡಲಗಳನ್ನು ಕೇಳಿಕೊಂಡಂತೆ, ಸದರಿ ಪುಣ್ಯಕಾರ್ಯದಲ್ಲಿ ಯಥಾ ಮತಿ ಸೇವೆ ಸಲ್ಲಿಸಲು ನಿಶ್ಚಯಿಸಿರುತ್ತಾರೆ. ಆಂತೆಯೆ ಜಿಲ್ಲಾ ಬಾಂಧವರು ಹಾಗೂ ದೇಶ ಬಾಂಧವರು ಆತ್ಮಸಂತೋಷದಿಂದ ಸದರಿ ಭೂ-ದಾನ ಯಜ್ಞ ಸಂಕಲ್ಪವನ್ನು ಯಶಸ್ವೀ ಗೊಳಿಸುವರೆ, ಪೂಜ್ಯ ಬಾಪೂ ಮಹಾತ್ಮಾ ಗಾಂಧಿಯವರು ತ್ಯಾಗ ಸೇವೆಗಳಿಂದ ಸತ್ಯ-ಅಹಿಂಸೆಗಳ ಮೂಲಕ ನಮಗೆ ಸಂಪಾದಿಸಿ ಕೊಟ್ಟಿರುವ ಸ್ವರಾಜ್ಯವನ್ನು ಸುರಾಜ್ಯಗೊಳಿಸುವರೆ ಯಥಾಶಕ್ತಿ ಸಹಭಾಗಿಗಳಾಗಬೇಕೆಂದು ಈ ಮೂಲಕ ವಿನಮ್ರವಾಗಿ ಬೇಡಿಕೊಳ್ಳುತ್ತೇನೆ.

ಹೆಚ್ಚಿನ ಮಾಹಿತಿ ಬಗ್ಗೆ ನನ್ನೊಡನೆ ಸ್ವತಃ ಯಾ ಪತ್ರಮೂಲಕ ವಿಚಾರಿಸಬಹುದು.

ಕಾಡಬೆಟ್ಟು ಶ್ರೀನಿವಾಸ ಪೈ
ಕಾರ್ಯದರ್ಶಿ, ಕತಾಯಿ ಮಂಡಲ,
ಖಾದಿ ಕುಟೀರ,
ಸಾರಸ್ವತ ದೇವಸ್ಥಾನ ರಸ್ತೆ,
ಉಡುಪಿ, ದ. ಕ. 13-11-51

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಚರ್ಚಿಲ್ಲರು ಸಾಮ್ರಾಜ್ಯವಾದದ ಬೆನ್ನು ಹತ್ತಿದ್ದಾರೆ.

ಪರ್ಶಿಯಾದ ಎಣ್ಣೆ ತಂಟೆಯು ಚರ್ಚಿಲ್ಲರ ಆಳಿಕೆಯಲ್ಲಿ ಸುಲಭವಾಗಿ ಬಗೆಹರಿದೀತೆನ್ನುವ ವಿಚಾರದಲ್ಲಿ ನಮಗೆ ಭರವಸೆಯಿಲ್ಲ. ಅವರಿನ್ನೂ ಸಾಮ್ರಾಜ್ಯವಾದದ ಬೆನ್ನು ಹತ್ತಿರುವದರಿಂದ ಕೂಲಿಗಾರ ಸರಕಾರದ ಧೋರಣೆಗಿಂತಲೂ ಇದು ಕಠಿಣವಾಗಬಹುದೆಂದು ಪರ್ಶಿಯಾ ಉಪಮಂತ್ರಿ ಹುಸೇನ ಫಾತೀಮಿಯವರು ಹೇಳಿದರು.

ಟ್ರುಮನ್ನರ ಅಭಯ ವಚನ

ಪರ್ಶಿಯಾ ಎಣ್ಣೆ ತಂಟೆಯಿಂದಾಗಿ ಉಂಟಾದ ಆರ್ಥಿಕ ಮುಗ್ಗಟ್ಟಿನ ಪರಿಹಾರಕ್ಕಾಗಿ ಡಾ। ಮುಸಾದಿಕರು 120 ದಶಲಕ್ಷ ಡಾಲರು ಸಾಲ ನೀಡುವಂತೆ ಅಧ್ಯಕ್ಷ ಟ್ರುಮನ್ನರಿಗೆ ಪತ್ರ ಬರೆದಿರುವರು. ಆರ್ಥಿಕ ಸಹಾಯವನ್ನು ನೀಡಲು ಅಮೇರಿಕೆಯು ತನ್ನ ಕೈಯಿಂದಾದಷ್ಟು ಪ್ರಯತ್ನಿಸುವದೆಂದು ಅಧ್ಯಕ್ಷ ಟ್ರುಮನ್ನರು ಡಾ। ಮುಸಾದಿಕರಿಗೆ ಅಭಯ ನೀಡಿರುವರು.

ಬ್ರಿಟನಿನ ಆಕ್ಷೇಪ

ಬ್ರಿಟನದ ಅಮೇರಿಕಾ ರಾಯಭಾರಿಯು ಅಮೇರಿಕೆಯ ಈ ಆಶ್ವಾಸನಕ್ಕೆ ವಿರೋಧವನ್ನು ವ್ಯಕ್ತಪಡಿಸಿರುವನು.

ಡಾ। ಗ್ರಾಹ್ಯಾಮರ ಭಾರೀ ಮಾತುಕತೆ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರಾಹ್ಯಾಮರು ಪ್ಯಾರಿಸದಲ್ಲಿ ಭಾರತ ಪಾಕಿಸ್ತಾನಗಳೊಡನೆ ಭಾರೀ ಮಾತುಕತೆ ನಡೆಸುತ್ತಿರುವರು. ಜಾಫ್ರುಲ್ಲಾಖಾನ ಹಾಗೂ ಶ್ರೀ ಬಿ. ಎನ್. ರಾವ್‌ರೊಡನೆ ಬೇರೆ ಬೇರೆ ಸಂಭಾಷಣೆ ನಡೆಸಿರುವರು. ಭಾರತದ ಮಿಲಿಟರಿ ಸಲಹೆಗಾರರೊಡನೆಯೂ ಸಮಾಲೋಚನೆ ನಡೆದಿದೆ.

ಡೀನ ಅಚಿಸನ್ನರೊಡನೆ ಖಾನರ ಚರ್ಚೆ

ಅಮೇರಿಕೆಯ ವಿದೇಶಾಂಗ ಮಂತ್ರಿ ಡೀನ ಅಚಿಸನ್ನರು ಪಾಕಿಸ್ತಾನ ವಿದೇಶಾಂಗ ಮಂತ್ರಿ ಜಾಫ್ರುಲ್ಲಾ ಖಾನರೊಡನೆ ಖಾಸಗೀ ಮಾತುಕತೆ ನಡೆಸಿದ್ದು ಮಧ್ಯ ಪೂರ್ವ ರಾಷ್ಟ್ರಗಳಿಗೆ ಸಂಬಂಧಪಟ್ಟ ಸಮಸ್ಯೆಗಳೇ ಮುಖ್ಯ ವಿಷಯಗಳಾಗಿದ್ದವಂತೆ.

ಅಮೇರಿಕೆ ಬ್ರಿಟನದ ಬಾಲ ಹಿಡಿಯಿತು

ಇಜಿಪ್ತ ಬ್ರಿಟನ್ನುಗಳಲ್ಲುಂಟಾಗಿರುವ ತಂಟೆಯಲ್ಲಿ ಅಮೇರಿಕೆಯು ಬ್ರಿಟನದ ಧೋರಣೆಯನ್ನು ಅನುಮೋದಿಸುವದಂತೆ. ಇಜಿಪ್ತದ ಅರಸ ಫರೂಕರನ್ನು ಸುಡಾನದ ಅರಸರೆಂದು ತಾನು ಮನ್ನಿಸುವಂತಿಲ್ಲವೆಂದು ಅಮೇರಿಕೆಯ ವಿದೇಶ ಶಾಖೆಯಿಂದ ಪ್ರಕಟನೆ ಹೊರಟಿದೆ.

ಗ್ರೀಸದ ಧಿಕ್ಕಾರ

ಇಜಿಪ್ತದ ಅರಸರು ಸುಡಾನದ ಅರಸರೆಂದು ಮನ್ನಣೆ ಅರ್ಪಿಸಬೇಕೆಂದೂ ಅಲ್ಲಿಯ ಸರಕಾರವು ಒತ್ತಾಯ ಮಾಡಿದುದರಿಂದಲೂ—ಫರೂಕ ಅರಸರು ಸುಡಾನದ ಅರಸರೆಂದು ಗ್ರೀಕವು ಮನ್ನಿಸದೆ ಇರುವದರಿಂದಲೂ ಪ್ರತಿಭಟನಾರ್ಥವಾಗಿ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆದುಕೊಂಡಿತು.

ಬ್ರಿಟಿಶರೀರ್ವರು ಗುಂಡಿಗಾಹುತಿಯಾದರು!

ಸೌದಿ ಅರೇಬಿಯದ ಬ್ರಿಟಿಶ ಉಪಪ್ರತಿನಿಧಿಯಾಗಿದ್ದ ಸಿಂಗಲ್ ಅವ್ರಸನ್ನನ್ನು ತಮ್ಮ ಮನೆಯಲ್ಲಿ ಅಜ್ಞಾತನೋರ್ವನು ಕೊಲೆಗೈದನು. ಇಸ್ಮಾಯಿಯಾ ನಗರದಲ್ಲಿ ನಡೆದ ಬ್ರಿಟಿಶ ಹಾಗೂ ಇಜಿಪ್ತರೊಳಗೆ ನಡೆದ ಗುಂಡಿನ ದ್ವಂದ್ವ ಯುದ್ಧದಲ್ಲಿ ಓರ್ವ ಬ್ರಿಟಿಶ ಅಧಿಕಾರಿಯು ಮಡಿದು ಇಬ್ಬರು ಇಜಿಪ್ತ ಪೋಲಿಸ ಅಧಿಕಾರಿಗಳಿಗೆ ಗಾಯವಾಗಿದೆ.

ಸುಡಾನದಿಂದ ಬ್ರಿಟಿಶರು ಹೊರಬೀಳಲಿ!

ಬ್ರಿಟಿಶಸೈನಿಕರು ಸುಡಾನದ ಅನೇಕ ಹೆಣ್ಣು ಮಕ್ಕಳನ್ನೂ ಶಾಂತಿಪ್ರಿಯರನ್ನೂ ಗುಂಡು ಹೊಡೆದು ಕೊಂದಿರುವದು ಮಾತ್ರವಲ್ಲದೆ—ಇಜಿಪ್ತದಲ್ಲಿ ಮೋಸಗಾರಿಕೆಯ ಆಕ್ರಮಣ ಕೃತಿಯನ್ನು ನಡೆಸಿರುವರು. ಅವರ ಪೈಶಾಚಿಕ ವೃತ್ತಿಯ ಆಳಿಕೆಯಿಂದ ಮುಕ್ತವಾಗಲು ಇಜಿಪ್ತದ ಜನತೆ ಕೊನೆಯ ಉಸಿರಿನತನಕ ಹೋರಾಟ ನಡೆಸುವದು. ಬ್ರಿಟಿಶರು ಹೊರಬೀಳುವದೊಂದೇ ಅದಕ್ಕೆ ತಕ್ಕ ಪ್ರಾಯಶ್ಚಿತ್ತವೆಂದು ಇಜಿಪ್ತದ ವಿದೇಶ ಮಂತ್ರಿಯು ಸಂ. ರಾ. ಸಂಘದ ಸಭೆಯಲ್ಲಿ ಹೇಳಿದನು.

ಸಾರ್ವತ್ರಿಕ ಮತಗಣನೆಗೆ ಬ್ರಿಟನದ ಒಪ್ಪಿಗೆ

ಇಜಿಪ್ತ ಸರಕಾರವು ಸುಡಾನದ ಸಾರ್ವತ್ರಿಕ ಮತಗಣನೆಯ ಬಗ್ಗೆ ನಿಶ್ಚಿತ ಸೂಚನೆ ಮಾಡಿದರೆ ಬ್ರಿಟನು ಆ ಕುರಿತು ವಿಚಾರ ನಡೆಸುವದಾಗಿ ಬ್ರಿಟಿಶ ಅಧಿಕಾರಿಯು ಹೇಳಿದನು.

ರಶಿಯದ ಶಾಂತಿ ಯೋಜನೆ

ರಶಿಯದ ವಿದೇಶ ಮಂತ್ರಿಯು ಸಂ. ರಾ. ಸಂಘದ ಸಾಮಾನ್ಯ ಸಭೆಯ ಮುಂದೆ ಶಾಂತಿಯೋಜನೆಯೊಂದನ್ನು ಮಂಡಿಸಿರುವನು. (1) ಅಟಂ ಶಕ್ತಿಯನ್ನು ಮಾನವ ವಿನಾಶಕ್ಕೆ ಉಪಯೋಗಿಸದೆ ಮಾನವ ಕಲ್ಯಾಣಕ್ಕಾಗಿ ಉಪಯೋಗಿಸಬೇಕು. (2) ಬ್ರಿಟನ್, ಅಮೇರಿಕ, ಫ್ರಾನ್ಸ್, ರಶಿಯ ಮತ್ತು ಚೀನಗಳು ಸೈನ್ಯಹಾಗೂ ಶಸ್ತ್ರಗಳಲ್ಲಿ ಮೂರರಲ್ಲೊಂದು ಪಾಲು ಕಡಿಮೆ ಮಾಡಬೇಕು. (3) ಎಲ್ಲ ರಾಷ್ಟ್ರಗಳು ತಂತಮ್ಮ ಸೈನ್ಯ ಮತ್ತು ಸಲಕರಣೆಯ ವಿವರಣೆಗಳನ್ನು ಬರೆಹ ಮೂಲಕ ತಿಳಿಸಬೇಕು. (4) ಭದ್ರತಾ ಮಂಡಳದ ಮೇಲ್ವಿಚಾರಣೆಯಲ್ಲಿ ಅಂತರಾಷ್ಟ್ರೀಯ ನಿಯಂತ್ರಣ ಮಂಡಲ ನೇಮಿಸಬೇಕು. ಎಂಬುದಾಗಿ ಅದರಲ್ಲಿ ಸೂಚಿಸಲಾಗಿದೆ.

ನೂತನ ವಿಮಾನಮಾರ್ಗ

ಭಾರತ ಮತ್ತು ಅಫಗಾನಿಸ್ತಾನಗಳ ನಡುವೆ ಕರಾಚಿ ಮಾರ್ಗವಾಗಿ ವಾರಕ್ಕೊಂದಾವರ್ತಿ ವಿಮಾನ ಸರ್ವಿಸನ್ನು ನಡೆಸಲು ಭಾರತ ಸರಕಾರವು ನಿರ್ಧರಿಸಿದ್ದು, ಈ ಸರ್ವಿಸಿಗೆ ಬೇಕಾಗುವ ಸವಲತ್ತುಗಳನ್ನು ಒದಗಿಸಿ ಕೊಡಲು ಪಾಕಿಸ್ತಾನವನ್ನು ಕೇಳಿಕೊಂಡಿರುವದು.

ಪ್ರಕಾಶಮರ ವಿರುದ್ಧ ಡಾ। ಯು. ಕೃಷ್ಣರಾಯರು?

ಮದ್ರಾಸದ ಮಾಜೀ ಮುಖ್ಯ ಮಂತ್ರಿಗಳೂ, ಕಿ. ಮ. ಪ್ರಜಾಪಾರ್ಟಿಯ ಧುರೀಣರೂ ಆದ ಆಂಧ್ರಕೇಸರಿ ಟಿ. ಪ್ರಕಾಶಮರು ಮದ್ರಾಸ ನಗರದ ಹಾರ್ಬರ ಮತದಾರ ಸಂಘದಿಂದ ನಾಮಪತ್ರ ಸಲ್ಲಿಸಿರುವರು. ಮದ್ರಾಸದ ಜನಪ್ರಿಯ ಡಾ। ಯು ಕೃಷ್ಣರಾಯರು ಕಾಂಗ್ರೆಸ್ಸಿನ ಪಕ್ಷದಿಂದ ಪ್ರಕಾಶಮರ ವಿರುದ್ಧ ಸ್ಪರ್ಧಿಸಲಿರುವರು!

ಕಮ್ಯೂನಿಸ್ಟರ ಗೊತ್ತುವಳಿ

ಆಂಧ್ರಪ್ರಾಂತ ಶೀಘ್ರರಚನೆಗೊಳ್ಳಬೇಕೆಂದೂ ಅದಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆಂದೂ ಆಂಧ್ರಪ್ರಾಂತ್ಯ ಕಮ್ಯೂನಿಸ್ಟ ಪಂಗಡವು ಗೊತ್ತುವಳಿಯೊಂದನ್ನು ಸ್ವೀಕರಿಸಿದೆ.

ಪಾಕ್‌ಗವರ್ನರ ಜನರಲ್ಲರ ಹೇಳಿಕೆ

ಭಾರತೀಯರೊಡನೆ ಸುದೀರ್ಘಕಾಲ ನಿಕಟ ಸಂಬಂಧ ವಿರುವದರಿಂದ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಪರಸ್ಪರ ಸಮಸ್ಯೆಗಳನ್ನು ಸಹಕಾರದಿಂದ ಬಿಡಿಸಿಕೊಳ್ಳಬಹುದೆಂದು ಹಾರೈಸಿದ್ದೆವು. ಆದರೆ ಕಾಶ್ಮೀರಿಗಳ ಸ್ವತಂತ್ರ ಹಾಗೂ ಪಕ್ಷಾತೀತ ಸಾರ್ವತ್ರಿಕ ಮತಗಣನೆಯೊಂದರೇನೆಂಬ ಬಗ್ಗೆ ಭಿನ್ನಾಭಿಪ್ರಾಯ ಉಂಟಾಗಿ ಭಾರತ ಸಂಬಂಧ ವಿಮನಸ್ಕತೆಯೊಳಗಾಗಿದೆಂದನು.

ಕೆಲಸಗಾರರಿಗೆ ಪ್ರೊವಿಡೆಂಟ್ ಫಂಡ್

ಉದ್ದಿಮೆಗಳಲ್ಲಿ ತೊಡಗಿರುವ ಕೆಲಸಗಾರರಿಗೆ ಪ್ರೊವಿಡೆಂಟ್ ಫಂಡನ್ನು ಒತ್ತಾಯದಿಂದ ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರವು ಒಂದು ಆರ್ಡಿನನ್ಸ್ ಹೊರಡಿಸಿದೆ. ಪ್ರೊವಿಡೆಂಟ ಫಂಡಿಗೆ ಒಡೆಯರು ಕೆಲಸಗಾರನ ಸಂಬಳ ಮತ್ತು ತುಟ್ಟಿಭತ್ತೆಯ ನೂರಕ್ಕೆ ಆರೂಕಾಲರಷ್ಟು ಹಾಗೂ ಕೆಲಸಗಾರನು ಅಷ್ಟೇ ಪ್ರಮಾಣದಷ್ಟು ಹಣಕೊಡಬೇಕೆಂದು ಹೇಳಲಾಗಿದೆ.

ಆಂಧ್ರ ಪ್ರಾಂತರಚನೆಯ ಬಗ್ಗೆ ಸತ್ಯಾಗ್ರಹ?

ಆಂಧ್ರ ಪ್ರಾಂತರಚನೆಯ ಬಗ್ಗೆ ಡಿಸೆಂಬರ 11ರೊಳಗಾಗಿ ಕಾರ್ಯ ಕೈಗೊಳ್ಳದೆ ಹೋದರೆ ತಾವು ಸತ್ಯಾಗ್ರಹ ಹೂಡುವದಾಗಿ ರಾಷ್ಟ್ರಸ್ಥಾಪಕ ಸಂಘದ ಕಾರ್ಯದರ್ಶಿ ಡಾ। ಎ. ಎಸ್. ಚಲಪತಿರಾಯರು ಶ್ರೀ ರಾಜೇಂದ್ರ ಪ್ರಸಾದ್, ನೆಹ್ರೂ, ವಿನೋಬಾ ಭಾವೆಯವರಿಗೆ ತಂತಿ ಮೂಲಕ ತಿಳಿಸಿರುವರು.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

WANTED

Agents for the sale of ... new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೨-೧೧-'೫೧

ಕರ್ನಾಟಕದ ಬೇಡಿಕೆಗಳು

ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯವರು ಪ್ರಥಮ ಪಂಚವಾರ್ಷಿಕ ಯೋಜನಾ ಆಯೋಗದ ವರದಿಯನ್ನು ಪರಿಶೀಲಿಸಿ ಕರ್ನಾಟಕದ ಜಿಲ್ಲೆಗಳ ಬೇಡಿಕೆಗಳನ್ನು ಮುಂಬಯಿ ಮದ್ರಾಸ ಸರಕಾರಗಳ ಮೂಲಕ ಕೇಂದ್ರಸರಕಾರ ಮತ್ತು ಯೋಜನಾ ಆಯೋಗದವರ ಎದುರು ಮಂಡಿಸಲು ನೇಮಿಸಿದ ಸಮಿತಿಯವರು ಹಲವು ಸೂಚನೆಗಳನ್ನು ಮುಂದೆಮಾಡಿರುವರು.

ಮುಂಬಯಿ ಪ್ರಾಂತದ ಕರ್ನಾಟಕ ಪ್ರದೇಶವು ಸರ್ವವಿಧದಿಂದಲೂ ಕಡೆಗಣಿಸಲಾದ ಪ್ರದೇಶವಾಗಿದ್ದು ಬಿಜಾಪುರದಂತಹ ಹಲವು ಪ್ರದೇಶಗಳು ಸದಾ ಬರಗಾಲಕ್ಕೆ ತುತ್ತಾಗುತ್ತಿರುವದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗಿದೆ. ನೀರಾವರೀ ಯೋಜನೆ-ವಿದ್ಯುತ್ತು ಕೈಗಾರಿಕೆಗಳ ಅಭಿವೃದ್ಧಿ– ಮಲೇರಿಯಾ ಪ್ರದೇಶಗಳ ಸುಧಾರಣೆ—ನೂತನ ರೈಲ್ವೆ ಮಾರ್ಗ-ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜ್, ಕರ್ನಾಟಕ ಯುನಿವರ್ಸಿಟಿಗೆ ಹೆಚ್ಚಿನ ಗ್ರಾಂಟು—ಮುಂತಾದ ವಿಚಾರಗಳನ್ನು ನಿರೂಪಿಸಲಾಗಿದೆ.

ಮದ್ರಾಸ ಪ್ರಾಂತದ ದ. ಕನ್ನಡ ಹಾಗೂ ಬಳ್ಳಾರಿಯ ಅಭಿವೃದ್ಧಿಗಳ ಕುರಿತು ಮಾಡಿದ ಸೂಚನೆಗಳು:

ಮೈಸೂರು ಸ್ಟೇಟ್ ಮತ್ತು ಕರ್ನಾಟಕ ಪ್ರದೇಶಗಳಿಗೆ ಪಶ್ಚಿಮ ಕರಾವಳಿಯಲ್ಲೊಂದು ಪ್ರಬುದ್ಧ ಬಂದರದ ಕೊರತೆಯಿದ್ದು ಕರ್ನಾಟಕ ಉದ್ಯಮ ಬೆಳವಣಿಗೆಗಳಿಗೆ ದಕ್ಕೆ ತಗಲಿದೆ. ಕೇಂದ್ರ ಸರಕಾರವು ಈ ಕುರಿತು ತಜ್ಞರ ಸಮಿತಿಯನ್ನು ನೇಮಿಸಿ ವರದಿಯನ್ನು ತಯಾರಿಸಿದೆಯಾದರೂ ಈ ವಿಷಯವು ಪಂಚವಾರ್ಷಿಕ ಯೋಜನೆಯಲ್ಲಿ ಪ್ರೋಣಿಸಲೇ ಬೇಕಾಗಿದೆ. ಮಲ್ಪೆಯನ್ನು ಪ್ರಬುದ್ಧ ಬಂದರವನ್ನಾಗಿ ಮಾಡುವುದಾದರೆ ಮಂಗಳೂರು ಬಂದರವನ್ನು ಸರ್ವಋತು ಬಂದರವನ್ನಾಗಿ ಅಭಿವೃದ್ಧಿಗೊಳಿಸಬೇಕಾಗಿದೆ. ಪ್ರಬುದ್ಧ ಬಂದರ ಚುನಾವಣೆಯಲ್ಲಿ ಕರ್ನಾಟಕದ ಆಶಾ ಬೇಡಿಕೆಗಳಿಗೆ ಒಂದನೆನಂಬರು ಕೊಡಲೇಬೇಕು. ಮಂಗಳೂರ ವಿಮಾನ ನಿಲ್ದಾಣ ಮತ್ತು ಮಲಪ್ಪುರು ಸೇತುವೆ ಕಾರ್ಯಗಳು ಕಾಲವಿಳಂಬವಿಲ್ಲದೆ ಆಗಬೇಕು.

ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ರೈಲ್ವೆ ಸೌಕರ್ಯದ ಕೊರತೆ ತುಂಬಾ ಇದೆ. ಆದುದರಿಂದ ಹಾಸನ–ಮಂಗಳೂರು ಮತ್ತು ಉಡುಪಿ-ಶಿವಮೊಗ್ಗಾ ರೈಲ್ವೆ ಲೈನುಗಳನ್ನು ಹಾಕುವುದು ಅತೀವ ಜರೂರಿದೆ. ನೇಶನಲ್ ಹ್ಯಾವೇಸ್ ಯೋಜನೆಯಲ್ಲಿ ಕರಾವಳಿಯಿಂದ ಘಾಟಿ ಮೇಲಿಗೂ, ಮಲಬಾರ ಜಿಲ್ಲೆಗೂ ವಾಹನ ಸಂಚಾರದ ಬಗ್ಗೆ ಸೀದಾ ಹೆದ್ದಾರಿಯಾಗುವ ಪ್ರಶ್ನೆ ಅತ್ಯಾವಶ್ಯಕವಿದೆ. ಕಾರವಾರ—ಮಂಗಳೂರು ಕರಾವಳಿಯಲ್ಲಿಯ ನದಿಗಳಿಗೆ ಸೇತುವೆ ಸೌಕರ್ಯ ಅಗತ್ಯವಿದೆ. ಮೀನುಗಾರಿಕೆ ಉದ್ಯಮಕ್ಕೆ ವಿಶೇಷ ಸೌಕರ್ಯಗಳನ್ನು ಒದಗಿಸಿ ಈ ಉದ್ಯಮವು ಭದ್ರವಾದ ತಳಹದಿಯಲ್ಲಿ ಬೆಳೆದು ಬರುವಂತೆ ಮಾಡಬೇಕು. ಹಂಚಿನ ಕಾರ್ಖಾನೆ ಮೊದಲಾದವುಗಳ ಉಪಯೋಗಕ್ಕಾಗಿ ರಿಸರ್ವ್ ಲೆಬೋರೆಟರಿ ಸ್ಥಾಪಿಸಬೇಕಾಗಿದೆ.

ದ. ಕ. ಜಿಲ್ಲೆಯಲ್ಲಿ ಹಲವಾರು ನದಿಗಳಿವೆ. ಇವುಗಳಲ್ಲಿ ಮಳೆಗಾಲದಲ್ಲಿ ನೆರೆ ಬಂದು ಉತ್ಕೃಷ್ಟದ ಬೆಳೆಗಳು ನೀರುಪಾಲಾಗಿ ಹೋಗುತ್ತವೆ ಇದನ್ನು ತಡೆಗಟ್ಟುವರೆ ಅಲ್ಲಲ್ಲಿ ಭದ್ರವಾದ ಕಟ್ಟೆಗಳ ಅವಶ್ಯಕತೆಯಿದೆ. ಸಮುದ್ರ ಪಾಲಾಗುವ ನೀರನ್ನು ಬೆಳೆಗಾಗಿ ಉಪಯೋಗಿಸಲು ಕೆಲವೆಡೆ ಅಣೆಕಟ್ಟುಗಳನ್ನು ಕಟ್ಟುವ ಅವಶ್ಯಕತೆಯಿದೆ.

ಬಳ್ಳಾರಿ ಜಿಲ್ಲೆಯು ಕ್ಷಾಮ ಬರಗಾಲಕ್ಕೆ ಪದೇ ಪದೇ ಆಶ್ರಯಸ್ಥಾನವಾಗಿದ್ದು, ಇಲ್ಲಿ ಬೀಳತಕ್ಕ ಮಳೆಯು 23 ಇಂಚುಗಳಿಗೂ ಕಡಿಮೆಯಾಗಿದೆ. ಈ ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಸಲು ನೀರಾವರಿ ಯೋಜನೆಗಳು ಅತ್ಯಾವಶ್ಯಕ. ತುಂಗಭದ್ರ ಅಣೆಕಟ್ಟು ಇಡೀ ಜಿಲ್ಲೆಯ ಅವಶ್ಯಕತೆಯನ್ನು ಪೂರೈಸುವುದಿಲ್ಲವಾದುದರಿಂದ, ಸಾಧಾರಣ 8000 ಎಕ್ರೆ ಜಮೀನಿಗೆ ನೀರಿನ ಸೌಕರ್ಯವನ್ನೊದಗಿಸುವರೆ ರೂ. 93,48,000 ವೆಚ್ಚದಿಂದ ಭೈರವಾನಿ, ತಿಪ್ಪಾ ಅಣೆಕಟ್ಟು, ಅಂತೆಯೇ ಸಾಧಾರಣ ರೂ. 48,67,000 ಖರ್ಚಿನಿಂದ 7500 ಎಕ್ರೆ ಜಮೀನಿನಲ್ಲಿ ಆಹಾರ ಬೆಳೆಸುವರೆ ಹಗಾರಿಬೊಮ್ಮನಹಳ್ಳಿ ಅಣೆಕಟ್ಟು ಅತ್ಯಾವಶ್ಯಕ."

ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದ ಅಭಿವೃದ್ಧಿ ಹಾಗೂ ನೀರಾವರೀ ಯೋಜನೆಗಳನ್ನು ಕಡೆಗಣಿಸಿದ್ದು ವಿಷಾದದ ಸಂಗತಿ. ನಾವು ಈ ಮೊದಲೇ ಈ ಅಂಶವನ್ನು ಎತ್ತಿ ಬರೆದು ಇದರಿಂದ ಕರ್ನಾಟಕ ಜನತೆ ವಿವಂಚನೆಗೊಳಗಾಗಿದೆಂದು ಹೇಳಿದ್ದೆವು. ಸದ್ಯ ಸಮಿತಿಯು ಯೋಜನಾ ಆಯೋಗದವರ ಮುಂದೆ ಮಂಡಿಸಿದ ವರದಿಯು ಪರಿಪೂರ್ಣವಲ್ಲವಾದರೂ ಆಶಾದಾಯಕವಾಗಿರುತ್ತದೆ. ದ. ಕ. ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಇಲ್ಲಿ ಹಲವಾರು ಹೊಳೆಗಳಿದ್ದು ನೀರಾವರಿ ಯೋಜನೆ ಕೈಗೊಳ್ಳುವದಕ್ಕೆ ಅತ್ಯಂತ ಯೋಗ್ಯ ಸ್ಥಳವಾಗಿರುತ್ತದೆ. ಹವಾಮಾನವು ಬೆಳೆಗೆ ಅನುಕೂಲವಾಗಿ ಆಹಾರದ ಕೊರತೆಯನ್ನು ನೀಗಿಸುವದಕ್ಕೆ ಹೆಚ್ಚು ಸಹಕಾರಿಯಾದೀತು. ಇತರ ಭಾಷಾ ಪ್ರತಿನಿಧಿಗಳೇ ಹೆಚ್ಚಾಗುಳ್ಳ ಪ್ರಾಂತಿಕ ಸರಕಾರಗಳಲ್ಲಿ ಅಲ್ಪಸಂಖ್ಯಾತರಾಗಿರುವ ಕನ್ನಡಿಗರ ಕೂಗು ಸಾಕಷ್ಟು ಕೇಳಿಸುತ್ತಿಲ್ಲವೆನ್ನುವದಕ್ಕೆ ಕರ್ನಾಟಕವನ್ನು ಅಲಕ್ಷ್ಯ ಭಾವದಿಂದ ಕಂಡದ್ದೇ ಸಾಕ್ಷಿಯಾಗಿರುತ್ತದೆ. ದ. ಕ. ಜಿಲ್ಲೆಯ ಮಟ್ಟಿನ ಹಲವು ಯೋಜನೆಗಳು ನಾಲ್ಕು ವರ್ಷಗಳಲ್ಲಿ ಕಾರ್ಯರೂಪದಲ್ಲಿ ಬರದೆ ಕೇವಲ ಯೋಜನೆಯಲ್ಲೇ ಉಳಿದಂತಿದೆ. ಮಲ್ಪೆಯ ಬಂದರದಂತಹ ಮಹಾಪ್ರಶ್ನೆಯನ್ನು ಸದ್ಯಕ್ಕೆ ಬಿಟ್ಟುಕೊಟ್ಟಿರುವುದು ಇನ್ನೊಂದು ಖೇದಾವಹ ಸಂಗತಿ.

ಈ ಅನ್ಯಾಯವನ್ನು ಕರ್ನಾಟಕ ಪ್ರಾ

ಶೇಕ್ ಅಬ್ದುಲ್ಲಾರ ಅಪಹರಣದ ಯತ್ನ?

ಕಾಶ್ಮೀರದ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾರವರನ್ನು ಪಾಕಿಸ್ಥಾನಕ್ಕೆ ಹಾರಿಸಿಕೊಂಡು ಹೋಗುವ ಕಾರಸ್ಥಾನವೊಂದು ನಡೆದಿದ್ದು ವೈಮಾನಿಕನ ಅಚಾತುರ್ಯದಿಂದ ಕೊನೆಯ ಕ್ಷಣದಲ್ಲಿ ತಿಳಿಯಲ್ಪಟ್ಟಿತು.

ದಿಲ್ಲಿಗೆಂದು ಹೊರಟ ವಿಮಾನವನ್ನು ನೇರಾಗಿ ಲಾಹೋರಿಗೆ ಒಯ್ಯುವದೆಂದು ಪಿತೂರಿನಡೆದಿತ್ತು. ವೈಮಾನಿಕನಿಗೆ ಒಂದು ಲಕ್ಷ ರೂಪಾಯಿಯ ಕಾಣಿಕೆ ಕೊಡುವ ಭರವಸೆಯಿತ್ತಂತೆ. ಅವನು ಆಪ್ತರಲ್ಲಿ ಆ ಸುದ್ದಿಯನ್ನು ಮೊದಲಾಗಿ ತಿಳಿಸಿದ್ದರಿಂದ ಕೊನೆಯ ಕ್ಷಣದಲ್ಲಿ ಅದು ಬೆಳಕಿಗೆ ಬಂತು. ಈ ಒಳಸಂಚಿನಲ್ಲಿ ಉನ್ನತಾಧಿಕಾರಿಗಳ ಕೈಯಿದೆಂದು ಹೇಳಲಾಗಿದೆ. ಕಾಶ್ಮೀರೀ ಗುಪ್ತ ಪೋಲೀಸರು ತಪಾಸಣೆ ನಡೆಸುತ್ತಿರುವರು.

ವಿಷಪ್ರಾಶನ ಮೊಕದ್ದಮೆ

ಮೈಸೂರಿನ ರಾಜಕಾರಣದಲ್ಲಿ ಗೊಂದಲವನ್ನುಂಟುಮಾಡಿದ ಎಲ್- ಎಸ್- ರಾಜುರವರ ಖಟ್ಲೆಯನ್ನು ವಿಚಾರಣೆ ನಡೆಸಲು ಹೊರಗಿನ ನ್ಯಾಯಾಧೀಶರನ್ನು ಕರೆತರಲು ಮೈಸೂರ ಸರಕಾರ ಒಪ್ಪಿದ್ದರಿಂದ ಭಾರತ ಸರಕಾರ ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂಬ ಆದೇಶವನ್ನು ಹಿಂದೆ ತೆಗೆದುಕೊಂಡಿದೆ.

ರಾಜ್ಯಾಂಗ ಕನ್ನಡ ಭಾಷಾಂತರ

ಭಾರತ ರಾಜ್ಯಾಂಗವು ದೇಶದ ಬೇರೆ ಬೇರೆ ಭಾಷೆಯಲ್ಲಿ ಪ್ರಕಟವಾದಂತೆ ಕನ್ನಡದಲ್ಲಿಯೂ ಪ್ರಕಟಣೆಗೊಳ್ಳುವದು. ಭಾಷಾಂತರ ಕಾರ್ಯ ಸಾಗುತಿರುತ್ತದೆಂದು ತಿಳಿಯುತ್ತದೆ. ಭಾಷಾಂತರ ಕಾರ್ಯದ ನಿಮಿತ್ತ ರಚಿತವಾದ ಸಮಿತಿಯಲ್ಲಿ ಶ್ರೀಗಳಾದ ಸಿ. ಕೆ. ವೆಂಕಟರಾಮಯ್ಯ ಎ. ಎಸ್. ರಾಮರಾವ್, ಟಿ. ಎನ್. ಶ್ರೀ ಕಂಠಯ್ಯ ಮತ್ತು ಮೈಸೂರು ಸರಕಾರದ ನ್ಯಾಯಾಂಗ ಕಾರ್ಯದರ್ಶಿಗಳಾದ ಎನ್. ಆರ್. ಜಯರಾವ್, ಇರುವರು. ಕೇಂದ್ರ ಸರಕಾರದ ಶುದ್ಧಿಖಾತಾ ಮಂತ್ರಿ ಆರ್. ಆರ್. ದಿವಾಕರರು ಈ ಸಮಿತಿಯ ಅಧ್ಯಕ್ಷರಾಗಿರುವರು- ಡಿಸೆಂಬರ ತಿಂಗಳ ಕೊನೆಯೊಳಗಾಗಿ ಪ್ರಕಟನೆಗೊಳ್ಳಲಿದೆಂದು ತಿಳಿದುಬರುತ್ತದೆ.

(ದೇಶಿಕ ಸಮಿತಿಯ) ದೇಶಿಕ ಸಮಿತಿಯು ಲಕ್ಷಿಸಿ, ಸಮಿತಿಯನ್ನು ನೇಮಿಸಿದ್ದು ಶ್ಲಾಘನೀಯವಾದ ಅಂಶ. ಸಮಿತಿಯು ತನ್ನಿಂದ ಶಕ್ಯವಿದ್ದಷ್ಟು ಅಂಶವನ್ನು ವಿವರವಾಗಿಯೂ—ವಿನಯಪೂರ್ವಕವಾಗಿಯೂ ಯೋಜನಾ ಆಯೋಗದ ಮುಂದೆ ವರದಿ ಮಾಡಿರುವದು. ಈ ವರದಿಯಲ್ಲಿ ಕಾಣಿಸಿದ ಕರ್ನಾಟಕದ ಅವಶ್ಯಕತೆ ಅಥವಾ ಬೇಡಿಕೆಗಳನ್ನು ಮನ್ನಿಸಿ, ಕೊನೆಯದಾಗಿ ಪರಿಷ್ಕೃತವಾಗಿ ಸಿದ್ಧವಾಗಲಿರುವ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಕಾರ್ಯಗತವಾಗುವಂತೆ ಪ್ರತ್ಯಯಿಸಲಾಗಿದೆ. ಇದು ಇಡಿಯ ಕರ್ನಾಟಕದ ಜನತೆ ಜೀವಾಳದ ಪ್ರಶ್ನೆ. ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಮನ್ನಿಸಿದಂತಾದರೆ ಮಾತ್ರ ನಮ್ಮ ಇಂದಿನ ಸ್ಥಿತಿ ಬದಲಾಗಲು ಶಕ್ಯವಿದೆ. ಅಂತಲೇ ಕರ್ನಾಟಕ ಖಚಿತ್ರವು ಸ್ಥಿತಿಯನ್ನು ಹೊಂದಲಿರುವ ಒಂದೇ ಒಂದು ಮಾರ್ಗವೆಂದರೆ ಈ ವರದಿಯನ್ನು ಸ್ವೀಕರಿಸುವದೊಂದೇ ಆಗಿರುತ್ತದೆನ್ನುತ್ತೇವೆ. ಸರಕಾರದವರೂ ಇದನ್ನು ತಿರಸ್ಕರಿಸಲಾಗದೆಂದು ಅತ್ಯಂತ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇವೆ

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿ ೧ಕ್ಕೆ 0-8-0
ಇಂಗ್ಲಿಷ್ ಪ್ರತಿ ೧ಕ್ಕೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ.
0-9 0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.
ನವಯುಗ ಪ್ರೆಸ್, ಉಡುಪಿ.

ಅಮೃತ ಎಂಡ್ ಕೊ. ನಂಬ್ರ 417.

ರೂಪಾಯಿ ೬೦,೦೦೦ ಪಡೆಯಿರಿ.

ಪ್ರಥಮ ಇನಾಮು-ಸರ್ವಸಮ ರೂ 45,000
ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ. 11,000
ಮೂರನೆ ಇನಾಮು ಕುರುವಿನ ಸಂಖ್ಯೆ ಸರಿಯಾದುದಕ್ಕೆ ರೂ. 4,000

ಒಂದು ಪ್ರವೇಶಕ್ಕೆ 1ರೂಪಾಯಿ ಆರು ಪ್ರವೇಶಗಳಿಗೆ 5ರೂಪಾಯಿ
ಉತ್ತರ ಸ್ವೀಕರಿಸುವ ಕೊನೆಯದಿನ 7-12-51
ಅಪೇಕ್ಷಿಸಿದ್ದಲ್ಲಿ ನಿಬಂಧನೆಗಳು ದೊರಕುವುವು

			7	

ಚೌಕದಲ್ಲಿಯ ಕಣಗಳಲ್ಲಿಯ ಒಟ್ಟು ಮೊತ್ತವು 35 ಮೂವತ್ತೈದು ಬರುವಂತೆ 5 ರಿಂದ ೨೧ ವರೆಗಿನ ಅಂಕೆಗಳನ್ನು ಒಮ್ಮೆ ಮಾತ್ರ ಉಪಯೋಗಿಸಿರಿ. ಕಣದಲ್ಲಿ ತೋರಿಸಿದ 7 ಅಂಕೆಯನ್ನು ಬದಲಾಯಿಸಕೂಡದು. ನಿಯಮಗಳು ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಯಾರ್ಡರ್ ರಶೀದಿಯನ್ನಾಗಲೀ, ಕ್ರಾಸ್ ಮಾಡಿದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು.

The Manager, AMIRTA & CO.,(Govt. Regd.)
(417-A) MADURAI, S. India

ಅಮೃತ ಎಂಡ್ ಕೊ. ನಂಬ್ರ 406ರ ಉತ್ತರ:- 17-1?-16-18. ಈ ಸ್ಪರ್ಧೆಯಲ್ಲಿ ಸರ್ವಸಮ ಉತ್ತರ ಬಂದಿಲ್ಲ. ಮೊದಲ ಬಹುಮಾನ ರೂ. 4125/- (ಕುರುವಿನ ಸರ್ವಸಮ ಎರಡು ಸಂಖ್ಯೆಗಳಿಗೆ), ದ್ವಿತೀಯ ಬಹುಮಾನ ರೂ 2047- (ಕುರುವಿನ ಒಂದು ಸಂಖ್ಯೆ ಸರಿಯಾದುದಕ್ಕೆ) ಮೂರನೆ ಇನಾಮು ರೂ- 665-7-0 (ಕೊನೆಯ ಒಂದು ಅಂಕೆ ಸರಿಯಾದುದಕ್ಕೆ) ವಿತರಣ ಮಾಡಲಾಗಿತ್ತು.

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು ಇದೇ ತಾ. 17ರಲ್ಲು ಸಂಜೆ ಚೇರ್‌ಮೆನ್ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ನಡೆಗಿತು. ಉಡುಪಿಗೆ ಬರಲಿರುವ ಶ್ರೀ ಜಯಪ್ರಕಾಶ ನಾರಾಯಣ, ಅವರಿಗೆ ಮಾನಪತ್ರ ನೀಡುಬೇಕೆನ್ನುವ ಶ್ರೀ ಎ. ನಂಜುನಾಥರಾಯರ ನಿರ್ಣಯವು ಬಹುಮತದಿಂದ ಪಾಸಾಯಿತು. ಮುಂದಿನ ಪರ್ಯಾಯ ಮಹೋತ್ಸವದ ಕಾಲದಲ್ಲಿ ನಗರದ ಶುಚಿತ್ವದ ಬಗ್ಗೆ ರೂಪಾಯಿ 1900 ವೆಚ್ಚ ಮಂಜೂರು ಮಾಡಲಾಯಿತು. ವಸ್ತು ಪ್ರದರ್ಶನ ಸಮಿತಿಯವರಿಗೆ ಡಿಸೆಂಬರ ತಾ. 28ರಿಂದ ಜನವರಿ ತಾ. 28ರ ವರೆಗೆ ಒಂದು ತಿಂಗಳ ಮುಟ್ಟಿಗೆ ಮುನಿಸಿಪಲ್ ಟ್ರಾವಲರ್‍ಸ್ ಬಂಗ್ಲೆಯನ್ನು ಕೆಲವೊಂದು ಶರ್ತಗಳಿಗೊಳಪಟ್ಟು ಬಿಟ್ಟುಕೊಡಬಹುದಾಗಿ ಸೂಚಿಸಿದ ಜಿಲ್ಲಾ ಕಲೆಕ್ಟರರ ಪತ್ರವನ್ನೋದಲಾಯಿತು. ಪರ್ಯಾಯ ಜಾತ್ರೆ ಕಾಲಕ್ಕೆ ಬರುವ ಪ್ರಯಾಣಿಕರಿಗೆ ಉಳಕೊಳ್ಳಲು ಬಂಗ್ಲೆ ಕೊಠಡಿಗಳನ್ನು ವಸ್ತು ಪ್ರದರ್ಶನ ಕಮಿಟಿಯವರು ಮಾಡುತ್ತಾರಾಗಿ ಕಮೀಶನರು ಹೇಳಿದರು. ಬೇರೆ ಸ್ಥಳಗಳನ್ನು ಕಾದಿಟ್ಟ ಬಗ್ಗೆ ಸಂಬಂಧಪಟ್ಟ ಮೂಲಕರಿಂದ ಬರಹ ಮೂಲಕ ಒಪ್ಪಿಗೆ ಪಡೆದಿರುವುದೋ ಎಂದು ಶ್ರೀ ಎ ಶಂಭು ಶೆಟ್ಟರು ಪ್ರಶ್ನಿಸಿದರು. ಬಾಯ್ದೆರೆ ಒಪ್ಪಿಗೆ ಪ್ರಯೋಜನವಿಲ್ಲವೆಂದಾದುದರಿಂದ ಬರಹ ಮೂಲಕ ಒಪ್ಪಿಗೆ ಪಡೆಯುವರೆ ಮುಂದಿನ ಸಭೆಗೆ ಬಾಕಿಯಿಡಲಾಯಿತು. ಪ್ರೊಪರ್ಟಿ ಮತ್ತು ವೃತ್ತಿತೆರಿಗೆ ಬಿಲ್ಲು ಬರೆಯುವರೆ ಒಂದು ನೂರಕ್ಕೆ ಪತ್ತಾಣೆಯಂತೆ ಪ್ರತಿಫಲಕೊಡಬಹುದೆಂದಾಯಿತು. ವಯಸ್ಕರ ಶಿಕ್ಷಣ ಸಹಕಾರ್ಯಕ್ಕಾಗಿ ಈ ತಿಂಗಳಿಂದ ಒಂದು ವರ್ಷದ ವರೆಗೆ ತಿಂಗಳೊಂದರ ಹನ್ನೆರಡು ರೂಪಾಯಿಗಳಂತೆ ಖರ್ಚು ಮಾಡಬಹುದಾಗಿ ಕೌನ್ಸಿಲಿನ ಒಪ್ಪಿಗೆ ದೊರೆಯಿತು.

ಕಡಿಯಾಳಿ ಹಾಯರ್ ಎಲಿಮೆಂಟರಿ ಲೆಯಲ್ಲಿ ತಾ 16-11-51ರಂದು ಸಂಜೆ 6-30ಕ್ಕೆ 'ಮಕ್ಕಳ ಹಬ್ಬವು' ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀ ಕೆ. ಕಮಲಾಕ್ಷ ಪೈ, B. Com. ಅವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಮಕ್ಕಳಿಂದ ಅನೇಕ ಆಟೋಟಗಳೂ, ಹಾಸ್ಯಾಭಿನಯಗಳೂ, ಪ್ರದರ್ಶಿಸಲ್ಪಟ್ಟ ಮೇಲೆ, ಶ್ರೀ ಕು. ತಿ. ಹರಿದಾಸ ಭಟ್ಟರು, B.A. (ಆನರ್ಸ) ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂತಹ ಮಕ್ಕಳ ಹಬ್ಬಗಳನ್ನು ಜರಗಿಸುವುದರ ಅವಶ್ಯಕತೆಯನ್ನು ವಿವರಿಸಿ, ಶಾಲೆಯ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು. ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಸಮಾರಂಭವು ಕೊನೆಗೊಂಡಿತು.

ಸ್ಥಳಬದಲಾವಣೆ— ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿಯ ಉಡುಪಿ ಶಾಖಾ ಕಚೇರಿಯನ್ನು ಇದೇ ತಾ. 10ರಿಂದ ತೆಂಕಪೇಟೆ ಗಂಗಾ ಭವನದಿಂದ ಕೋರ್ಟುರಸ್ತೆಯ ಅವಿನಾಶ್ ಮೆನ್ಶನ್ಸ್ ಕಟ್ಟಡದ ಮೂಳಿಗೆಯ 5ನೇ ಕೋಣೆಗೆ ವರ್ಗಾಯಿಸಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಟೂರಿಂಗ್ ಸಿನೆಮಾ ಥಿಯೇಟರಿಗೆ ಬೆಂಕಿ—ಅಜ್ಜರಕಾಡಿನಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಅಶೋಕಾ ಟೂರಿಂಗ್ ಸಿನೇಮಾ ಥಿಯೇಟರಿಗೆ ಆದಿತ್ಯವಾರ ಮಧ್ಯರಾತ್ರಿಯ ನಂತರ ಬೆಂಕಿ ತಾಗಿ ಪೂರ್ಣ ಭಸ್ಮವಾಗಿರುವುದು ಬೆಂಕಿಯ ಕಾರಣವೇನೆಂದು ತಿಳಿದು ಬರುವುದಿಲ್ಲ. ಸಾಧಾರಣ 7-8 ಸಾವಿರ ರೂಪಾಯಿಗಳಷ್ಟು ನಷ್ಟ ಉಂಟಾಗಬಹುದೆಂದೂ ಫಯರ್ ಸರ್ವಿಸಿನವರ ಹಾಗೂ ಧಾವಿಸಿಬಂದ ಕೆಲ ಮಹನೀಯರ ಸಾಹಸದಿಂದ ಸುಮಾರು 25 ಸಾವಿರ ರೂಪಾಯಿಗಳ ಮೆಶಿನ್ ವಗೈರೆಯನ್ನು ರಕ್ಷಿಸಿಕೊಳ್ಳುವಂತಾಯಿತೆಂದೂ ತಿಳಿದುಬರುತ್ತದೆ.

ಶ್ರೀ ಶ್ರೀನಿವಾಸ ಮಲ್ಯರ ಆಗಮನ—ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಮಲ್ಯರು ಮಂಗಳೂರಿಗೆ ಬಂದವರು ತಾ 19ರಲ್ಲಿ ಉಡುಪಿಗೆ ಬಂದು ಮರುದಿನ ಕುಂದಾಪುರದತ್ತ ಪ್ರಯಾಣ ಬೆಳೆಸಿದರೆಂದು ತಿಳಿದುಬರುತ್ತದೆ

ಹಿರಿಯಡ್ಕ ಬೋರ್ಡು ಹ್ಯಾಸ್ಕೂಲು ಕಟ್ಟಡ ಪ್ರವೇಶೋತ್ಸವವು — ಇದೇ ತಾ. 19ರಲ್ಲು ಸಂಜೆ ಶ್ರೀ ಪುತ್ತಿಗೆ ಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟಿತು. ಮದ್ರಾಸು ಸರಕಾರದ ಕೃಷಿ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರು ರಾಷ್ಟ್ರಧ್ವಜಾರೋಹಣ ಮಾಡಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಗಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಹಿರಿಯಡಕ ಎಜ್ಯುಕೇಶನಲ್ ಸೊಸೈಟಿ ಅಧ್ಯಕ್ಷ ಡಾ। ಚಂದಯ್ಯ ಹೆಗ್ಗಡೆಯವರು ಸ್ವಾಗತ ಭಾಷಣವನ್ನೋದಿದರು. ಶಾಲಾ ಹೆಡ್ಮಾಸ್ತರ ಶ್ರೀ ಅನಂತಕೃಷ್ಣ ಸಾಮಗರು ಸಮಾರಂಭಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನು ಓದಿದರು. ಎಜ್ಯುಕೇಶನಲ್ ಸೊಸೈಟಿ ಕಾರ್ಯದರ್ಶಿ ಶ್ರೀ ನರಸಿಂಹ ಕಾನಂತರು ಕಟ್ಟಡ ನಿರ್ಮಾಣ ಕೆಲಸದ ವರದಿಯನ್ನೋದಿದರು. ಪಾಜಂದ್ಧ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರು ಸಂದರ್ಭೋಚಿತ ಮಾತುಗಳನ್ನಾಡುತ್ತಾ ಶಾಲೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು. ಬಳಿಕ ಶ್ರೀಗಳಾದ ಬಿ. ಎಸ್. ಭಾಸ್ಕರ ಪೈ, ಎಮ್. ಕೃಷ್ಣಯ್ಯ ಸೆಟ್ಟಿ, ಬಿ. ಶ್ಯಾಮರಾಯ ಶೆಟ್ಟಿ, ಮೊದಲಾದವರೂ ಮಾತನಾಡಿದರು. ಶ್ರೀ ಎ. ಬಿ. ಶೆಟ್ಟರು ಹಿರಿಯಡ್ಕ ಎಜ್ಯುಕೇಶನಲ್ ಸೊಸೈಟಿಯ ಔದಾರ್ಯವನ್ನು ಪ್ರಶಂಸಿಸಿ, ಇತ್ತೀಚೆಗೆ ಎಲ್ಲೆಲ್ಲೂ ಸೆಕೆಂಡರಿ ವಿದ್ಯಾಭ್ಯಾಸದ ಅವಶ್ಯಕತೆ ಕಂಡು ಬರುತ್ತಿರುವುದು ಸಂತೋಷಕರವೆಂದರು. ಮದ್ರಾಸು ಸರಕಾರವು ಕೂಡಾ ಈ ಭಾಗದಲ್ಲಿ ಹೆಚ್ಚಿನ ನಿಗಾ ಕೊಡುತ್ತದೆ ಎಂದರು. ಸಭಾಧ್ಯಕ್ಷರು ನೂತನ ಕಟ್ಟಡ ಮತ್ತಿತರ ಶಾಲಾ ಸಾಮಾಗ್ರಿಗಳನ್ನು ಬೋರ್ಡಿನ ಪರವಾಗಿ ಸ್ವೀಕರಿಸಿ, ಖಾಸಗಿ ಸಂಸ್ಥೆಗಳು ಅತ್ಯಂತ ಸಂತೋಷದಿಂದ ತಾವೇ ಮುಂದೆ ಬಂದು ಕಟ್ಟಡಗಳನ್ನು ಕಟ್ಟಿಸಿ ಬೋರ್ಡಿಗೆ ಸಹಾಯವಿತ್ತು ಸಹಕರಿಸಿದುದು ಇದೀಗ ಶ್ಲಾಘನೆಯ ಬಾರಿ ಎಂದರು. ಬೋರ್ಡಿನ ಆರ್ಥಿಕ ಪರಿಸ್ಥಿತಿ ಮತ್ತು ಕೊರತೆಯನ್ನು ಸೂಚಿಸಿ ಮಹಾಜನರೂ ಸಂಘಸಂಸ್ಥೆಗಳೂ ಇದೇ ಮಾದರಿಯಲ್ಲಿ ಮುಂದೆ ಬಾರದೆ ಗ್ರಾಮ ಕೇಂದ್ರಗಳಲ್ಲಿ ಸೆಕೆಂಡರಿ ವಿದ್ಯಾಭ್ಯಾಸ ಪ್ರಚಾರಕ್ಕೆ ತುಂಬಾ ಪ್ರೋತ್ಸಾಹಕೊಟ್ಟಂತಾಗುವುದೆಂದರು. ಫಲತಾಂಬೂಲ, ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ನಡಿಯುವ ಚಿತ್ರ

ನೋಡಿದಷ್ಟು ನೂತನವಾಗಿ ತೋರುವ ನಾಡಿನ ಹೆಮ್ಮೆಯ ಚಿತ್ರ

ಕನ್ನಡ ಹರಿಶ್ಚಂದ್ರ

ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ, ಮೊದಲಾದವರು.

ಬರುವ ಚಿತ್ರ:—ಹನುಮಾನ್ ಪಾತಾಳ ವಿಜಯ, ಗಣೇಶಜನ್ಮ ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಸರಕಾರಿ ರಿಜಿಸ್ಟರ್ಡ್ ನಂಬ್ರ 569

ರೂಪಾಯಿ 45,000

20 ಸರ್ವಸಮ ಉತ್ತರಗಳಿಗೆ ಹಂಚಲಾಗುವುದು

ಎಲ್ಲಾ ಬಹುಮಾನಗಳಿಗೂ ಗ್ಯಾರಂಟಿಯಿದೆ.

ಸರ್ವಸಮ ಉತ್ತರ ಪ್ರತಿಯೊಂದಕ್ಕೂ ರೂಪಾಯಿ 2235/- ಸುರುವಿನ ಎರಡು ಸಾಲುಗಳ ಸರಿಯಾದ ಉತ್ತರ ಪ್ರತಿಯೊಂದಕ್ಕೂ ರೂಪಾಯಿ 235/- ಸುರುವಿನ ಒಂದು ಸಾಲಿನ ಉತ್ತರ ಸರಿಯಾದುದಕ್ಕೆ ರೂಪಾಯಿ 35/- ಸುರುವಿನ ಎರಡು ಸಂಖ್ಯೆಗಳು ಸರಿಯಾದುದಕ್ಕೆ ರೂಪಾಯಿ 7-8-0ಯಂತೆ ಇನಾಮು ದೊರೆಯುವುದು.

ಜುಮಾ ಮೊತ್ತವು 74ಬರುವಂತೆ ಲಗ್ತಿಯ ಕಣಗಳಲ್ಲಿ 11ರಿಂದ 26ರ ವರೆಗಿನ ಸಂಖ್ಯೆಗಳನ್ನು ಒಮ್ಮೆ ಮಾತ್ರ ಉಪಯೋಗಿಸತಕ್ಕದ್ದು. ಈ ಸಂಖ್ಯೆಗಳನ್ನು ಉದ್ದಕ್ಕೂ ನೀಟಕ್ಕೂ ಅಡ್ಡಕ್ಕೂ ಕೂಡಿಸಿದರೆ ಮೊತ್ತವು 74ಬರುವಂತೆ ಸಂಖ್ಯೆಗಳನ್ನು ಪ್ರಯೋಗಿಸಬೇಕು ಉತ್ತರ ಸ್ವೀಕರಿಸುವ ಕೊನೆಯ ದಿನ ತಾ. 6-12-51. ಫಲಿತಾಂಶ ಪ್ರಕಟಣೆ 14-12-51.

ಪ್ರವೇಶಧನ:-ಒಂದು ಪ್ರವೇಶಕ್ಕೆ ರೂಪಾಯಿ 1/- 4 ಪ್ರವೇಶಗಳಿಗೆ ರೂ. 3/- 8 ಉತ್ತರಗಳ ಪ್ರತಿಯೊಂದು ಸೆಟ್ಟಿಗೂ ರೂ 5ರಂತೆ.

ಜುಮ್ಲಾ 70ರ ಫಲಿತಾಂಶ

23	18	13	15
25	11	20	14
12	24	15	19
10	17	22	21

ನಿಬಂಧನೆಗಳು:-ಮೇಲಿನ ಪ್ರವೇಶಧನದೊಂದಿಗೆ ಎಷ್ಟು ಉತ್ತರಗಳನ್ನೂ ಕಳುಹಿಸಬಹುದು. ಉತ್ತರದೊಂದಿಗೆ ಮನಿಯಾರ್ಡರ್ ರಶೀದಿಯನ್ನಾಗಲೀ ಪೋಸ್ಟಲ್ ಆರ್ಡರನ್ನಾಗಲೀ ಬೇಂಕ್ ಡ್ರಾಫ್ಟುಗಳನ್ನಾಗಲೀ ಲಗ್ತೀಕರಿಸತಕ್ಕದ್ದು. ಬುಲಂದ್ ಶಹರ್ ಬೇಂಕಿನಲ್ಲಿ ಮೊಹರು ಮಾಡಿಟ್ಟ ಉತ್ತರಕ್ಕೆ ಸರಿಹೋಗುವ ಉತ್ತರಗಳೇ ಬಹುಮಾನ ಪಡೆಯಲು ಅರ್ಹತೆಯುಳ್ಳವಾಗಿವೆ. ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಬೇಕು. ಮತ್ತು ಇಂಗ್ಲಿಷನಲ್ಲೇ ಪತ್ರವ್ಯವಹಾರ ನಡೆಸತಕ್ಕದ್ದು. ಬಹುಮಾನದ ನಿಜವು ಸರ್ವಸಮ ಉತ್ತರಗಳ ಸಂಖ್ಯೆಯನ್ನವಲಂಬಿಸಿರುವುದು. ಆದರೆ ಗ್ಯಾರಂಟಿ ಇನಾಮುಗಳಲ್ಲಿ ಬದಲಾವಣೆಯೇನೂ ಮಾಡಲಾಗುವುದಿಲ್ಲ. ಮೆನೇಜರರ ತೀರ್ಮಾನವೇ ಅಖೈರು ತೀರ್ಮಾನ. ಉತ್ತರವನ್ನಪೇಕ್ಷಿಸುವವರು ಟಪ್ಪಾಲು ಕವರಿನಲ್ಲಿ ತಮ್ಮ ವಿಳಾಸವನ್ನು ಬರೆದು ಕಳುಹಿಸತಕ್ಕದ್ದು.

REPUBLIC TRADERS REGD. (N. V.)
Bulandshahr, U. P.

ನಮ್ಮ ಚಂದಾದಾರರಲ್ಲಿ

'ನವಯುಗ'ದ ಚಂದಾಹಣ ಬಾಕಿಯಾದವರಿಗೆಲ್ಲಾ ಅವರವರ ಬಾಕಿಯನ್ನು ಕಾಣಿಸಿ ಪ್ರತ್ಯಪ್ರತ್ಯೇಕ ಕಾಗದ'ವನ್ನು ಬರೆಯಲಾಗಿದೆ. ಎಲ್ಲರೂ ದಯಮಾಡಿ ಬಾಕಿಯನ್ನು ಆದಷ್ಟು ತ್ವರಿತ ಮನಿಯಾರ್ಡರ ಮಾಡಿ ಕಳುಹಿಸಿ ಕೊಡುವಂತೆ ತಿರುಗೊಮ್ಮೆ ವಿನಂತಿಸುತ್ತೇವೆ.

ಮೆನೇಜರ್.

ಯಕ್ಷಗಾನ ಪ್ರಪಂಚದಲ್ಲಿ

ಕ್ರಾಂತಿಯನ್ನೆಬ್ಬಿಸಿದ

ಕವಿಭೂಷಣ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ

ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲಕ್ಷ್ಮಪಗಡೆ	0-6-0
ಭರತೇಶ ದಿಗ್ವಿಜಯ	0-8-0

ಅಭ್ಯಾಸಿಗಳಿಗೆ ತಕ್ಕ ಸೂಚನೆಗಳಿವೆ.

ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!

ನವಭಾರತ ಪುಸ್ತಕಭಂಡಾರ,

ಉಡುಪಿ.



Approred from by the Govt. of Mysore
Certificated by the Agent of the Govt of Cylone, & India:

ಪಂಚಾಯತ ಬೋರ್ಡು,

ಗ್ರಾಮ ಕಮಿಟಿ, ಶಾಲಾ ಕೋಲೇಜು

ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತಪುಸ್ತಕಭಂಡಾರಉಡುಪಿ.

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ

ಉಡುಪಿ.

ಸ್ಥಾಪಕರು:

ಶ್ರೀ ಉಳ್ಳಾಲ ಮಂಗೇಶರಾವ್,

ಬಿ. ಎ. ಎಲ್. ಟಿ

ಸಂಪಾದಕರು,

ಕೆ.ಆರ್ ಶೆಣೈ ಮತ್ತು ಕೆ.ಎಚ್.ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಮೆನೇಜರ್,

ಬಾಲಚಂದ್ರ, ಉಡುಪಿ

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ-ಇದೇ ತಾ. 12ರಲ್ಲು ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಸದಸ್ಯ ಶ್ರೀ ಟಿ. ನಾರಾಯಣ ಭಟ್ಟರು ಪ್ರತಿಜ್ಞೆ ಸ್ವೀಕಾರ ಮಾಡಿದ ಮೇಲೆ ಶ್ರೀ ಕೆ. ಕೃಷ್ಣಮೂರ್ತಿ ರಾಯರ ಪ್ರಶ್ನೆಗಳನ್ನು ಉತ್ತರಿಸಲಾಯಿತು. ಬೋರ್ಡಿನ ಹೈಸ್ಕೂಲುಗಳಲ್ಲಿ ಇರುವ 66 ಗ್ರ್ಯಾಜುವೇಟ್ ಉಪಾಧ್ಯಾಯರಲ್ಲಿ 51 ಮಂದಿ ತರಬೇತಾದವರು. ಬೋರ್ಡಿನಲ್ಲಿ ಸಾಕಷ್ಟು ಉಪಾಧ್ಯಾಯರು ಇಲ್ಲದಿರುವ ಕಾರಣ ಅವರಿಗೆ ಸರಕಾರೀ ಸ್ಕೇಲನ್ನು ಕೊಡುವ ಕುಂತು ಕೇಳಿದ ಪಕ್ಷಕ್ಕೆ ಬೋರ್ಡ್ ಆ ಬಗ್ಗೆ ನಿರ್ಣಯ ಮಾಡಿ ಪ್ರಯತ್ನಿಸುತ್ತದೆಂದಾಯಿತು. ಉಪಾಧ್ಯಾಯರ ನಿವೃತ್ತಿಯಾಗುವ ಪ್ರಾಯವನ್ನು 60ಕ್ಕೇರಿಸ ಬೇಕೆಂಬ ಸಲಹೆಯನ್ನು ಪರ್ಯಾಲೋಚಿಸುವುದೆಂದು ಉತ್ತರಿಸಲಾಯಿತು.

ಅನಂತರ ಶಿಬಂದಿಯವರಿಗೆ ಮರುಪಾವತಿಯ ಶರ್ತದ ಮೇಲೆ ನುಶಿಪರದೆಗಾಗಿ ಸಾಲಗಳನ್ನು ಮಂಜೂರುಮಾಡಲಾಯಿತು. ಬೋರ್ಡಿನಲ್ಲಿ ಈಗಿರುವ ವಿದ್ಯಾಧಿಕಾರಿಗಳ ಬದಲಿಗೆ ಒಬ್ಬ ಸಹಾಯಕ ಕಾರ್ಯದರ್ಶಿಗಳ ನೇಮಕ ಮಾಡಲು ಒಮ್ಮೆ ಕೇಳಿ ಕೊಂಡುದಕ್ಕೆ ಸರಕಾರವು ಒಪ್ಪಿಗೆ ಕೊಡದ್ದರಿಂದ ತಿರುಗಿ ಠರಾವುಮಾಡಿ ಕೇಳಿಕೊಳ್ಳಬೇಕೆಂದಾಯಿತು. ಜಿಲ್ಲಾ ಬೋರ್ಡ್ ಆಫೀಸು ರಿಪೇರಿಗೆ ರೂಪಾಯಿ 1500-0-0 ಕುಂದಾಪುರ ಓವರ್ಸೀಯರ ಆಫೀಸನ್ನು ಪ್ರಯಾಣಿಕರ ಬಂಗ್ಲೆಯಾಗಿ ಮಾರ್ಪಡಿಸಲು ರೂ 2770-0-0 ಚರ್ವತ್ತೂರ ಚಮುಲಿ ರಸ್ತೆಮಾಡಲು ರೂಪಾಯಿ 35,400-0-0 ಹರಿಜನ ವಿದ್ಯಾರ್ಥಿಗಳ ಮಧ್ಯಾಹ್ನದ ಊಟಕ್ಕಾಗಿ ಜಿಲ್ಲಾ ಹರಿಜನ ಸಂಘಕ್ಕೆ ರೂ 800-0-0 ಮಂಜೂರು ಗೊಳಿಸಲಾಯಿತು, ಶ್ರೀ ಕೆ. ವೆಂಕಟ್ರಮಣ ಗೌಡರ ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯಲ್ಲಿ ಕಂದಕ್ಕ ಹೊಳೆಗೆ ಸೇತುವೆ ಕಟ್ಟ ಬೇಕೆಂಬ ಸೂಚನೆಯನ್ನು ಸಾರ್ವಜನಿಕ ರಸ್ತೆಗಳ ಯೋಜನೆಯಲ್ಲಿ ಸೇರಿಸಲಾಯಿತು. ಕೆಲವು ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸುವ, ಪೆರ್ಡೂಲ ವಯಸ್ಕರ ಶಿಕ್ಷಣ ಶಾಲೆಯನ್ನು ಒಂದುಮಾಡ ಬೇಕೆನ್ನುವ ಠರಾವುಗಳಾದ ಮೇಲೆ ಶ್ರೀ ನೈ ಮಂಜಯ್ಯ ಸೆಟ್ಟರು ತಂದ 25ವರ್ಷ ಸರ್ವೀಸಾದ ಹ್ಯಾಲ್ಕಾಲಿನ ಸೆಕೆಂಡರೀ ಗ್ರೇಡ್ ಉಪಾಧ್ಯಾಯರಿಗೆ ಅವರ ಸ್ಕೇಲಿನ ಪರಮಾವಧಿ ಸಂಬಳ ಕೊಡುವಂತೆಯೂ ಬೋರ್ಡ್ ಶಾಲೆಗಳಿಗೆ ಗ್ರ್ಯಾಜುವೇಟು ಅಧ್ಯಾಪಕರ ಅಭಾವವಿರುವುದರಿಂದ ಅವರಿಗೆ ಸರಕಾರಿ ಸ್ಕೇಲನ್ನೇ ಕೊಡುವಂತೆಯೂ, ಬೋರ್ಡ್ ಉಪಾಧ್ಯಾಯರ ನಿವೃತ್ತರಾಗುವ ಪ್ರಾಯ 60 ಎಂದು ನಿರ್ಣಯಿಸುವಂತೆಯೂ, ತಾಲೂಕು ಕೇಂದ್ರಗಳಲ್ಲಿ ಮೇಜರ ಮತ್ತು ಮೈನರ ಪಂಚಾಯತಗಳಲ್ಲೂ ನಗರ ಸಭಾ ಕೇಂದ್ರಗಳಲ್ಲೂ ಸರಕಾರವು ಕೊಡುತ್ತಿರುವ ಮನೆಬಾಡಿಗೆ ಭತ್ತೆಯನ್ನು ಬೋರ್ಡ್ ಕೊಡುವಂತೆಯೂ ಒಪ್ಪಿಗೆಯನ್ನೀಯ ಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ನೆಹರು ಜಯಂತಿ:-ಯು ತಾ 14ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಕೆ. ಶಂಕರ ಆಳ್ವ, ಜಿ, ಸೋಮಶೇಖರ ರಾವ್, ಕೆ. ಆರ್ ಆಚಾರ್ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರ ಭಾಷಣಾನಂತರ ಶ್ರೀ ಬಿ. ಆರ್. ಕರ್ಕೇರರು ಧನ್ಯವಾದಗಳನ್ನರ್ಪಿಸಿದರು. ಇದೇ ರೀತಿ ನೆಹರು ಜಯಂತಿಯು ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಕೊಳಕೆ ಪರಮೇಶ್ವರ ಮಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಕೆ. ನಾರಾಯಣ, ಕುಮಾರಿ ವಿ ಶೀಲ ಇವರು ಭಾಷಣ ಮಾಡಿದ ಮೇಲೆ ಕುಮಾರಿ ಎಂ. ನಳಿನಿಯವರು ಅಭಾರ ಸೂಚಿಸಿದರು.

ಶ್ರೀ ಎ ಬಿ ಸೆಟ್ಟರ ಆಗಮನ-ಮದ್ರಾಸು ಸರಕಾರದ ಕೃಷಿ ಮಂತ್ರಿಗಳಾದ ಶ್ರೀ ಎ. ಬಿ ಸೆಟ್ಟರು ತಾ 16ನೇ ಸಂಜೆ ಮಂಗಳೂರಿಗೆ ಆಗಮಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಪೂರ ಪ್ರಮುಖರು ರೈಲು ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಿದರು. ಮಂತ್ರಿಗಳು ಕಾರ್ಕಳ, ಹಿರಿಯಡ್ಕ, ಪರ್ಕಳ, ಉಡುಪಿ, ಬ್ರಹ್ಮಾವರ, ಕುಂದಾಪುರ, ಮೊದಲಾದ ಕೇಂದ್ರಗಳಲ್ಲಿ ಸಂಚರಿಸುವರೆಂದು ತಿಳಿದುಬರುತ್ತದೆ.

ಪುತ್ತೂರು ಹೆಲ್ತ ಆಫೀಸಿನಲ್ಲಿ ಬೆಂಕಿ:— ಇದೇ ತಾ. 8ರಲ್ಲಿ ಮಧ್ಯಾಹ್ನ ಹೆಲ್ತಾಫೀಸಿನ ಮಾಳಿಗೆಯಲ್ಲಿ ಒಮ್ಮಿಂದೊಮ್ಮೆಗೆ ಬೆಂಕಿ ಎದ್ದು ಹೆಲ್ತಾಫೀಸರ್, ಲೈಸನ್ಸಿಂಗ್ ಇನ್ಸ್ಪೆಕ್ಟರ್, ವಕ್ಸಿನೇಟರು ಮೊದಲಾದ ಆರು ಮಂದಿಯ ಅಂಗಿಗೆ ಬೆಂಕಿ ಹಿಡಿದು ಮಾಳಿಗೆಯಿಂದ ಕೆಳಗೆ ಇಳಿಯಲಿಕ್ಕಾಗದೆ ಜಖಂ ಹೊಂದಿದ ವಿಷಾದ ವಾರ್ತೆ ಬಂದಿದೆ. ಲೈಸನ್ಸಿಂಗ್ ಇನ್ಸ್ಪೆಕ್ಟರ್ ಶ್ರೀ ಕಾಂತಪ್ಪ ಸೆಟ್ಟಿಯವರ ಎದೆ, ಕಣ್ಣು, ಪಾರ್ಶ್ವಗಳು ಸುಟ್ಟು ಹೋಗಿದ್ದು ವಿಶೇಷ ತರದ ಚಿಕಿತ್ಸೆಗಾಗಿ ಮಂಗಳೂರಿಗೆ ತರಲಾಗಿತ್ತಾದರೂ ಅವರು ಮರುದಿನ ಮೃತಪಟ್ಟರೆಂದು ಸುದ್ದಿ ಬಂದಿದೆ. ವಕ್ಸಿನೇಟರು ಶ್ರೀ ಕಾಂಚಿ ರಾಮನ್ ಎಂಬವರು ಪುತ್ತೂರು ಆಸ್ಪತ್ರೆಯಲ್ಲೇ ನಿಧನಹೊಂದಿದರೆಂದೂ ಹೆಲ್ತಾಫೀಸರ್ ಮತ್ತು ಇನ್ನೊಬ್ಬ ಕೆಲಸಗಾರರ ಪರಿಸ್ಥಿತಿ ಚಿಂತಾಜನಕವಾಗಿದೆಯೆಂದೂ ತಿಳಿದು ಬರುತ್ತಿದೆ. ಆಫೀಸಿನಲ್ಲಿದ್ದ ರಿಕಾರ್ಡುಗಳೂ ಸ್ವಲ್ಪ ಹಣವೂ ಭಸ್ಮವಾಗಿವೆಯೆಂದೂ ತಿಳಿದು ಬರುತ್ತಿದೆ.

ಸುಬ್ರಹ್ಮಣ್ಯದ ಕುಳಕುಂದ ಜಾತ್ರೆಯಲ್ಲಿ ಸ್ಪೆಶಲ್ ಡ್ಯೂಟಿಗೆ ಹೋಗುವ ಬಗ್ಗೆ ಕಳ ವ್ಯವಸ್ಥೆಯಾಗಿತ್ತೆಂದೂ ರಿಕಾರ್ಡು ಔಷಧಿ ಮೊದಲಾದುವುಗಳ ಸಂಗ್ರಹ ನಡೆಯುತ್ತಿರುವಾಗ ಸ್ಪಿರಿಟಿನ ಟಿನ್ನಿಗೆ ಅರಗಿನಿಂದ ಬೆಸಿಗೆ ಹಾಕಲು ಬೆಂಕಿ ಹಚ್ಚಿದಾಗ ಬೆಂಕಿಯು ಟಿನ್ನಿನೊಳಗೆ ಸೇರಿ ಟಿನ್ನು ಒಡೆದು ಅಗ್ನಿಜ್ವಾಲೆಯು ಮಾಳಿಗೆ ತುಂಬ ಹರಡಿ ಯಾರಿಗೂ ಹೊರಗೆ ಹೋಗಲು ಅನುವಾಗಲಿಲ್ಲವೆಂದೂ ಮೂರು ಮಂದಿ ಉರುಳಿಕೊಂಡೇ ಕೆಳಗೆ ಬಂದರೆಂದೂ ಬೇರೆಯವರನ್ನು ಹೊರಗಿನವರು ಇಳಿಸಿದರೆಂದು ಹೇಳಲಾಗಿದೆ.

ಚುನಾವಣಾ ಪ್ರಚಾರ:ಕಾಂಗ್ರೆಸ್ ಕಡೆಯಿಂದ ಚುನಾವಣಾ ಪ್ರಚಾರವು ನಡೆಯುತ್ತಿದ್ದು ಎಲ್ಲೆಡೆಯಲ್ಲಿಯೂ ಕಾಂಗ್ರೆಸ್ ಹುರಿಯಾಳುಗಳಿಗೆ ಹಾರ್ದಿಕ ಬೆಂಬಲವು ತೋರಿಬರುತ್ತದೆ. ಶ್ರೀಗಳಾದ ಕೆ. ವಿ. ಗೌಡ, ಕೃಷ್ಣ ಮಲ್ಯ, ವೈ. ಸಂಜೀವ ಶೆಟ್ಟಿ, ರಾಮಪ್ರಭುದೇವಾಳ ಮೊದಲಾದವರು ಕಡಬ, ಹೊಸಮಠ ಮಳ್ಯಾಡಿ, ಉಪ್ಪಿನಂಗಡಿ, ಮೊದಲಾದ ಕಡೆಗೆ ತೆರಳಿ ಪ್ರಚಾರಮಾಡಿದರು. ತಾ 8ರಲ್ಲು ಶ್ರೀ ಮೊಳಹಳ್ಳಿ ಶಿವರಾಯರು, ಕೆ. ವಿ. ಗೌಡ ಮೊದಲಾದವರು ಸುಳ್ಯ, ಅರಂತೋಡು, ಸಂಪಾಜೆ ಮೊದಲಾದ ಕಡೆಗಳಿಗೆ ಹೋಗಿ ಕಾಂಗ್ರೆಸ್ ಉಮೇದ್ವಾರರ ಪರವಾಗಿ ಕೆಲಸಗಾರರನ್ನು ಕಂಡು ಬೇಕಾದ ಸಲಹೆ ಸೂಚನೆಗಳನ್ನು ಕೊಟ್ಟಿರುವರು. ಕಾಂಗ್ರೆಸ್ ವಿರುದ್ಧವಾಗಿ ಪ್ರಜಾ ಪಾರ್ಟಿಯಿಂದ ಎಸೆಂಬ್ಲಿಗೆ ಕೆ. ಶಿವರಾಮ ಕಾರಂತರೂ ! ಪಾರ್ಲಿಮೆಂಟಿಗೆ ಶ್ರೀ ಕೆ. ಆರ್. ಕಾರಂತರೂ ಸ್ಪರ್ಧಿಸಲಿರುವರು.

ವೇಣೂರು — ಇಲ್ಲಿ ವರ್ಷಂಪ್ರತಿ ನಡೆಯುತಕ್ಕ ಕಂಬಳವು ತಾ. 8-12-51 ಶನಿವಾರ ದಿವ್ಸ ಜರಗಲಿರುತ್ತದು.


BALLBEARING
—THE LIFEBLOOD OF THE INDUSTRY'
Dealers in·
ROTARY OIL MILLS
FLOUR MILLS
BALL, ROLLER & THRUST BEARINGS
TELEGRAMS —'CHEAPTRADE'
A.RAMSON AND CO.
60 MISTRI BUILDING BALARAM ST., BOMBAY 7

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಅಸಲು ಐವೇಜು ವ ಬಡ್ಡಿ ಸಹಿತ ಬಹಳ ಕಾಲದಿಂದ ಬಾಕಿಮಾಡಿಕೊಂಡಿದ್ದು, ಸದ್ರಿಯವರಿಗೆ ಕ್ರಮದಂತೆ ನೋಟೀಸು ವ ರಜಿಸ್ತ್ರಿ ನೋಟೀಸು ಕೊಟ್ಟಾಗ್ಯೂ ಬೇಂಕಿಗೆ ಸಲ್ಲತಕ್ಕ ಅಸಲು ವ ಬಡ್ಡಿ ಐವೇಜನ್ನು ಇನ್ನೂ ಬಾಕಿಮಾಡಿಕೊಂಡಿರುವುದರಿಂದ ಹಾಗೂ ಕೆಲವರು ಮೃತಪಟ್ಟಿರುತ್ತಾರೆಂಬುದಾಗಿ ಸದ್ರಿಯವರಿಗೆ ಕೊಟ್ಟಿದ್ದ ರಜಿಸ್ತ್ರಿ ನೋಟೀಸುಗಳು ವಾಪಾಸು ಬಂದಿರುವುದರಿಂದಲೂ ಸದ್ರಿ ಲೋನುಗಳ ಬಾಬ್ತು ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ವ ಇತರ ಖರ್ಚನ್ನು ಕೂಡಾ ತಾ 30-11-1951ನೇ ಶುಕ್ರವಾರ ದಿವಸದೊಳಗೆ ಬೇಂಕಿಗೆ ಸಲಾಯಿಸಿ ಸದ್ರಿ ಲೋನುಗಳನ್ನು ಬಿಡಿಸುವರೇ ಸಮ್ಮಂಧಪಟ್ಟವರು ತಪ್ಪಿದ್ದಲ್ಲಿ ತಾರೀಕು 8-12-51ನೇ ಶನಿವಾರ ಅಪರಾಹ್ನ ಗಂಟೆ ಒಂದಕ್ಕೆ ಯಾ ಬೇಂಕಿಗೆ ಯುಕ್ತತೋರುವ ಮುಂದಿನ ಯಾವುದೇ ದಿನಗಳಲ್ಲಿ ಬೇಂಕಿನ ವಠಾರದಲ್ಲಿ ಲೋನುಗಳಲ್ಲಿ ಅಡವಿಟ್ಟ ಆಭರಣಗಳನ್ನು ಬಹಿರಂಗವಾಗಿ ಏಲಂ ಮಾಡುವುದಲ್ಲದೆ, ಏಲಮಿನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದ ಪಕ್ಷದಲ್ಲಿ ಸಮ್ಮಂಧಪಟ್ಟವರ ದೇಹಜವಾಬ್ದಾರಿಯಿಂದಲೂ ವಸೂಲುಮಾಡಿಕೊಳ್ಳಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬ್ಲಗು
		ರೂ- ಅ. ಪೈ.
643/47- 8	ಶ್ರೀ ಮಹಾಬಲ ಸೆಟ್ಟಿ ಮಂಜಯ್ಯ ಶೆಟ್ರ ಅಳಿಯ, ತಲ್ಲೂರುಗ್ರಾಮ. ಪೋಸ್ಟು ತಲ್ಲೂರು.	71—10—0
201/48-49	ಜೂಜೆ ಮೇರಿ ಸೋಜ ಸಾವಿರ್ ಸೋಜರ ಮಗ, ಆನೆಗಳ್ಳಿಗ್ರಾಮ. ಪೋಸ್ಟು ಆನೆಗಳ್ಳಿ.	162— 5—0
348/48-49	ನಾಗಯ್ಯ ಶೆಟ್ಟಿ. ವೆಂಕಯ್ಯ ಶೆಟ್ರ ಅಳಿಯ ಕೊಂಕನಾಡಿ ಹೆಬ್ಬಾಗಿಲು ಮನೆ. ದೇವಲ್ಕುಂದ ಗ್ರಾಮ ಪೋಸ್ಟ್ ಹಕ್ಲಾಡಿ.	47— 7—0
581/48-49	ವೀರಣ್ಣ ಶೆಟ್ಟಿ, ಲಿಂಗಯ್ಯ ಶೆಟ್ರ ಮೊಮ್ಮಗ ಕೆರಾಡಿಗ್ರಾಮ ಪೋಸ್ಟ್ ಕೊಲ್ಲೂರು	292— 6—0
594/48-49	ಕೂಕನಾಡು ವೆಂಕ್ಟಯ ಶೆಟ್ಟಿ ಸುಬ್ಬ ಶೆಟ್ರಿ ಮಗ ವಂಡ್ಸೆ ಗ್ರಾಮ, ಪೋಸ್ಟ್ ವಂಡ್ಸೆ.	120— 0—0
793/48-49	ವಂಡ್ಸೆ ಅನಂದ ಶೆಟ್ಟಿ, ವೆಂಕಪ್ಪ ಶೆಟ್ರ ಮಗ, ವಂಡ್ಸೆಗ್ರಾಮ, ಪೋಸ್ಟ್ ವಂಡ್ಸೆ.	112— 7—0
821/48-49	ವಂಡ್ಸೆ ಅನಂದ ಶೆಟ್ಟಿ. ಮುತ್ತಯ್ಯ ಶೆಟ್ರ ಅಳಿಯ ವಂಡ್ಸೆ ದೊಡ್ಡ ಮನೆ—ಪೋಸ್ಟ್ ವಂಡ್ಸೆ.	62— 4—0
877/48-49	ವೆಂಕಪ್ಪ ಶೆಟ್ಟಿ. ಮುತ್ತಯ ಶೆಟ್ರ ಅಳಿಯ ಬಸ್ರೂರುಗ್ರಾಮದ ಬಡಾಕೆರೆ. ಪೋಸ್ಟ್ ಬಸ್ರೂರು.	123— 1—0
92/49-50	ರಾಮಣ್ಣ ಶೆಟ್ಟಿ. ತುಂಗಮ್ಮ ಶೆಡ್ತಿ ಮಗ. ಹಕ್ಲಾಡಿ. ಹಲಸಾಡು ಗ್ರಾಮದಲ್ಲಿರುವವರು. ಪೋಸ್ಟ್ ಕುಂದಾಪ್ರ.	12— 9—0
143/50-	—ಡಿ—	14— 2—0
131/49-50	ಬಾಳಕೆರೆ ರಾಮಣ್ಣ ಶೆಟ್ಟಿ. ಮಾದಯ ಶೆಟ್ರ ಅಳಿಯ ದೇವಲ್ಕುಂದ ಗ್ರಾಮ, ಪೋಸ್ಟು ಕುಂದಾಪುರ.	36— 5—0
88/50	ಶ್ರೀ ಯು. ಗೋಪಾಲ ಶೇಟ್. ಸುಬ್ರಾಯ ಶೇಟರ ಮಗ ತೆಂಕಪೇಟೆ, ಉಡುಪಿ. [ಹಾಲಿ ಕುಂದಾಪುರದಲ್ಲಿರುವವರು]	116—11—0

ಕುಂದಾಪುರ, ತಾ. 16-11-1951 } **K. Bhoja Raja Hegde,** Agent, Coondapur.

ವಿವಿಧ ಪಾತ್ರೆಗಳು



ಯಾವತರ, ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

ಪ್ರವಾಸಿಯ ಪತ್ರಗಳು ೧೭

[ಕಳೆದ ಸಂಚಿಕೆಯಿಂದ ಮುಂದರಿದುದು]

ಇದಕ್ಕೆ ತಾಗಿ ಸಿಂಹಾಸನದ ಕೋಣೆ (Throne Room). ಅಲ್ಲಿ ಹಿಂದಿನ ಕಾಲದ ಸಿಂಹಾಸನಗಳನ್ನು ಇಟ್ಟಿರುವುದಲ್ಲದೆ ಗೋಡೆಯಲ್ಲಿ ಮುಂಚಿನ ಯುದ್ಧಗಳ ಚಿತ್ರಗಳಿವೆ. ಇವೆಲ್ಲಾ ಕೋಣೆಗಳು ಅರಮನೆಯ ಬಡಗಿನ ಪಾರ್ಶ್ವದಲ್ಲಿ (Wing) ಇರುವುವು. ಈಗ ಅದಕ್ಕೆ ತಾಗಿರುವ ಪಶ್ಚಿಮ ಭಾಗದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ನಾನು ಮೇಲೆ ಬರೆದ ಕನ್ನಡಿ ಸಭಾಂಗಣ. ಈ ಸಭಾಂಗಣದಲ್ಲಿ ಅನೇಕ ಕನ್ನಡಿಗಳಲ್ಲದೆ ಅನೇಕ ತೂಗಾಡುವ ಗಾಜಿನ ದೀಪಗಳು (Chandeliers). ಆ ಕಾಲದಲ್ಲಿ ವಿದ್ಯುದ್ದೀಪಗಳಿಲ್ಲವಾದ ಕಾರಣ ಮೇಣದ ಬತ್ತಿಯಿಂದ ದೀಪ ಉರಿಸುತ್ತಿದ್ದರು. ಒಂದೊಂದು ದೀಪದಲ್ಲಿ ಸಾವಿರಾರು ಬತ್ತಿ ಇಡುತ್ತಿದ್ದರು. ಈ ಕೋಣೆಯು 17 ಮತ್ತು 18ನೇ ಶತಮಾನದಲ್ಲಿ ಪೇರಿಸ್ ನಗರದಿಂದ ಬಂದ ದೊಡ್ಡವರು ನರ್ತನವನ್ನು ಮಾಡುವ ಸಭಾಂಗಣವಾಗಿತ್ತು (Dance Hall). ಈ ಕೊಠಡಿಗೆ ತಾಗಿ ಹಿಂದಿನ ಒಂದು ಕೋಣೆ ಅದೇ XIVನೇ ಲೂಯಿ ಮತ್ತು ಅನಂತರದ ಅರಸು ಮಲಗಿದ ಕೋಣೆ.—ತಾಗಿ ಇನ್ನೊಂದು ಕೋಣೆಯಲ್ಲಿ ಅವರ ಸ್ವಿಸ್ಸ್ ಅಂಗರಕ್ಷಕರು ಕಾಯುತ್ತಿದ್ದ ಕೋಣೆ. ಈ ಅರಸರ ಕೋಣೆಗೆ ತಾಗಿ ಇನ್ನೊಂದು ಕಡೆಯಲ್ಲಿ ಅರಮನೆಯ ದಕ್ಷಿಣ ಪಾರ್ಶ್ವದಲ್ಲಿ ರಾಣಿ ಮಲಗುವ ಕೋಣೆ. ರಾಜರ ಕೋಣೆಗೂ ಇದಕ್ಕೂ ಮಧ್ಯೆ ಒಂದು ಚಿಕ್ಕ ಬಾಗಿಲು ಕೂಡಾ ಇದೆ. ಇದೇ ಮೇಲೆ ಹೇಳಿದ XVIನೇ ಲೂಯಿಯ ರಾಣಿ ಮೇರಿ ಎಂಟೋಣೆಟ್ ಮಲಗಿದ ಕೋಣೆ. ಅವಳು ಉಪಯೋಗಿಸಿದ ಸುಂದರವಾದ ಒಂದು ಮರದ ಪೀಠ ಮತ್ತು ಒಂದು ಗಡಿಯಾಲು ಈಗಲೂ ಇಲ್ಲಿ ಕಾಣಬಹುದು, ಅದಕ್ಕೆ ತಾಗಿ ರಾಣಿಯು ಬೇರೆಯವರನ್ನು ಕಾಣುವ ಕೋಣೆ (Reception room). ಅಲ್ಲಿ ಮೇರಿ ತೆರೆಸಾ' ಎಂಬ ಮುಂಚಿನ ರಾಣಿಯ ಲಗ್ನವನ್ನು ಚಿತ್ರಿಸಿದ ಬಟ್ಟೆ ಇದೆ. ಇದಕ್ಕೆ ತಾಗಿ ರಾಣಿಯು ಊಟಮಾಡುವ ಕೋಣೆ. ಅದರ ಬದಿಯಲ್ಲಿ ರಾಣಿಯ ರಕ್ಷಣೆಯ ಬಗ್ಗೆ ಅವಳ ಅಂಗರಕ್ಷಕರು ಇರುತ್ತಿದ್ದ ಕೋಣೆ. ಇಲ್ಲಿ ನಂತರ ಬಂದ 1ನೇ ನೆಪೋಲಿಯನ್‌ನಿಗೂ ಅವನ ಹೆಂಡತಿ ಜೋಸೆಫಿನ್ ಎಂಬವಳಿಗೂ ಆದ ಲಗ್ನವನ್ನು ಚಿತ್ರಿಸಿದ ಒಂದು ಸುಂದರವಾದ ಬಟ್ಟೆ ಇಟ್ಟಿದೆ. ಇದಕ್ಕೆ ತಾಗಿದ ಒಂದು ಕೋಣೆಯಲ್ಲಿ 1789ರಿಂದ ನಡೆದ ಕ್ರಾಂತಿ ಕಾಲದ ಸೇನಾಧಿಪತಿಗಳ ತೈಲ ಚಿತ್ರಗಳಿವೆ. ಇಲ್ಲಿಗೆ ಅರಮನೆಯ ಬಡಗಿನ ಪಾರ್ಶ್ವವು ಮುಗಿದು, ತಾಗಿ ಬಲಕ್ಕೆ (Gallery of Victories ಎಂಬ ಬಹುದೊಡ್ಡ ಒಂದು ಸಭಾಂಗಣವಿದೆ. ಅದರಲ್ಲಿ ಸುಮಾರು 14 ಅಡಿ ಉದ್ದ, 14 ಅಡಿ ಅಗಲದ 30 ತೈಲಚಿತ್ರಗಳನ್ನು ಗೋಡೆಯಲ್ಲಿ ಬರೆದಿದೆ. ಅವೆಲ್ಲಾ ಕ್ರಿಸ್ತಶಕ 496ರಿಂದ 1809ರ ವರೆಗೆ ಫ್ರಾನ್ಸ್ ದೇಶವು ಗೆದ್ದ ಮುಖ್ಯ ಯುದ್ಧಗಳ ಚಿತ್ರಗಳು. ಇವನ್ನು IIIನೇ ನೆಪೋಲಿಯನನ ಕಾಲದಲ್ಲಿ ಚಿತ್ರಿಸಿದ್ದಾಗಿ ತಿಳಿಯಿತು. ಮೇಲೆ ಹೇಳಿದ ಇಂಗ್ಲೀಷಿನಿಂದ ವಿನಾ ನಾನು ಪ್ರಸ್ತಾವಿಸಿದ ಎಲ್ಲಾ ಕೋಣೆಗಳು ಉಪ್ಪರಿಗೆಯಲ್ಲಿರುವುವು. ಅವುಗಳಿಂದ ಹೊರಕ್ಕೆ ಊರಿನ ದೂರದ ಚಲೋ ದೃಶ್ಯಗಳನ್ನು ಬೇರೆಬೇರೆ ದಿಕ್ಕಿಗೆ ಕಾಣಬಹುದು.

ಹೀಗೆ ಸುಮಾರು 3 ಗಂಟೆ ಸಮಯ ಈ ಅರಮನೆಯನ್ನು ಕಂಡು ಅಲ್ಲಿಯೇ ಸಮೀಪ ವರ್ಸ್ಯಾಲ್ ಊರಲ್ಲಿ ಇದ್ದ ರೆಸ್ಟೋರೆಂಟಿನಲ್ಲಿ ನನ್ನೊಟ್ಟಿಗೆ ಸಂಚರಿಸಿದ ನ್ಯೂಯೋರ್ಕ್ ಪಟ್ಟಣದ ಇಬ್ಬ ವರ್ತಕರು ಮತ್ತು ಅವರ ಪತ್ನಿಯೊಡನೆ ಕಾಫಿ ಫಲಾಹಾರಮಾಡಿ ಅವರ ಮತ್ತು ನಮ್ಮ ದೇಶಗಳ ವರ್ತಮಾನಗಳನ್ನು ಸಂಭಾಷಿಸಿ ಪೇರಿಸ್ ನಗರಕ್ಕೆ ಕತ್ತಲೆ ಸಮಯ ನಾವು ಹೋದ ಬಸ್ಸಿನಲ್ಲೇ ಹಿಂತಿರುಗಿಬಂದೆವು. ಇದು ಒಂದು ಒಳ್ಳೇ ತ್ರಿಸ ತಿರುಗಾಟ.

ಮರುದಿನ ಪೇರಿಸಿನಿಂದ ಪೂರ್ವ ದಿಕ್ಕಿನಲ್ಲಿ 38 ಮೈಲು ದೂರವಿರುವ ಫೊಂಟೆನ್‌ಬ್ಲೂ ಎಂಬ ಊರಿಗೆ ಬಸ್ಸಿನಲ್ಲಿ ಹೊರಟೆವು. ಅದು ಇದೇ ದಿನದ ತಿರುಗಾಟ ಬೆಳಿಗ್ಗೆ 10 ಗಂಟೆಗೆ ಹೊರಟು ಹಿಂತಿರುಗಿ ಬರುವಾಗ ಸಾಯಂಕಾಲ 7 ಗಂಟೆ ಆಗಿತ್ತು.

(ವಿಚಾರವಾಡ) —ಕೆ. ಆರ್. ಕಾರಂತ.

ಸೋದಿದರೆ ಬಿಡದಿರುವ ಪುಸ್ತಕಗಳು

ರೂ. 30ರ ಪುಸ್ತಕಗಳನ್ನು ಕೇವಲ ರೂ. 25ಕ್ಕೆ ಕೊಡಲಾಗುವುದು.

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಟಕಕತೆಗಳು	0	4	0
ಶುಕಲವ	0	7	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ಸಂಧ್ಯಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ಸೇವಾಪಥ	0	8	0
ಪ್ರಭಾತ	2	8	0
ಮೂರು ಪ್ರಹಸನಗಳು	1	0	0
ಆನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಪ್ಲವಿನ ದರ್ಶಪರಿದಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಟಿಲಸ್ವಾರ	1	12	0

ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಳ್ಳುವ ಶಾಲಾ ಲೈಬ್ರೆರಿಗಳಿಗೆ ರೂ. 25ಕ್ಕೆ ಕೊಡಲಾಗುವುದು.

ಕೆಟಲಾಗಿಗೆ ಬರೆಯಿರಿ.

ವಿಳಾಸ:

(1) **ಕಿರಿಯರ ಪ್ರಪಂಚ, ಉಡುಪಿ.**

(2) **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಧರ್ಮಸ್ಥಳ—ಇಲ್ಲಿಯ ದೀಪೋತ್ಸವದ ಕಾಲದಲ್ಲಿ ಇದೇ ನವಂಬರ ತಾ 27ರ 28ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ಧರ್ಮ ಸಮ್ಮೇಳನವೂ ಜರಗಲಿಕ್ಕಿರುವದು. "ಕನ್ನಡಕ್ಕೆ ಕನ್ನಡಿಗರಿಂದ ಸಲಬೇಕಾದ ಸೇವೆ" ಮತ್ತು "ಜನಾಂಗಾಭಿವೃದ್ಧಿಗೆ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಯ ಆವಶ್ಯಕತೆ" ಈ ಎರಡು ವಿಷಯಗಳು ಮೊದಲನೇ ಮತ್ತು ಎರಡನೇ ದಿನಗಳಲ್ಲಿ ಸಭೆಯ ವಿಷಯಗಳಾಗಿರುವವು.

ಕುಂಬಳೆ—ಶ್ರೀ ಬಿ. ದೇವಪ್ಪ ಆಳ್ವರನ್ನು ಜಿಲ್ಲಾ ಪ್ರೊಹಿಬಿಶನ್ ಕೌನ್ಸಿಲಿಗೆ ಅನುದ್ಯೋಗಸ್ಥ ಸದಸ್ಯರನ್ನಾಗಿ ಸರಕಾರದವರು ಆರಿಸಿರುವರು.

ಇಲ್ಲಿನ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ನಾರಾಯಣ ಹವಿಲ್ದಾರರು ವರ್ಗವಾಗಿ ಹೋಗುವುದರಿಂದ ಅವರನ್ನು ಬೀಳ್ಕೊಡುವ ಸಭೆಯೂ ಸತ್ಕಾರವೂ ಸಬ್ ಪೋಸ್ಟ್ ಮಾಸ್ತರ್ ಶ್ರೀ ಕೇಶವ ಪೈಯರ ಅಧ್ಯಕ್ಷತೆಯಲ್ಲಿ ತಾ. ೧೧ರಂದು ನಡೆಯಿತು.

ಸ್ಥಳೀಯ ಉಪಾಧ್ಯಾಯರ ಕೇಂದ್ರ ಸಭೆಯು ತಾ. ೧೬ರಂದು, ಕಾಸರಗೋಡು ಶಾಲಾ ರೇಂಜಿನ ಡಿಪ್ಟಿ ಇನ್‌ಸ್ಪೆಕ್ಟರರಾದ ಶ್ರೀ ಪಿ. ಚಂದ್ರಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕೊಡವೂರು—ತಾ 15-11-51ರಲ್ಲಿ ಹಯರ್ ಎಲಿಮೆಂಟರಿ ಶಾಲಾ ಬಾಲಚರ ಶಿಬಿರದ, ದಳಗಳ ಶಿಬಿರಾಗ್ನಿಯು ಶ್ರೀ. ಸಂಜೀವರಾವ್ B. A. L. T; ಇವರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜವಂದನೆಯಾದ ಬಳಿಕ ಶ್ರೀಮತಿ ಪ್ರೇಮಾ ಎ. ಪೈಯವರು ಶಿಬಿರಾಗ್ನಿ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಮಕ್ಕಳ ವಿವಿಧ ವಿನೋದಾವಳಿಯಾದ ಬಳಿಕ ಸಭಿಕರಲ್ಲಿ ಶ್ರೀ ಬಾಬುರಾವ್; ಶ್ರೀ. ಎಚ್. ಎ. ಪಿ ಕೆದ್ಲಾಯ; ಶ್ರೀ. ಟಿ. ರಾಮಚಂದ್ರ ಭಾದ್ಯ; ಗ್ರಿಗೋರಿ ಡಿ'ಸೋಜ;ರವರೂ ಭಾಷಣವಿತ್ತರು. ಕೊನೆಗೆ ಎಸೋಸಿಯೇಶನಿನ ಪತಿಯಿಂದ ಶ್ರೀ ಆನಂದ ಸೆಟ್ಟಿ ಕಿದಿಯೂರರವರು ಸ್ಕೌಟು ಇತ್ಯಾದಿಗಳನ್ನೂ ಜನರ ಸಹಕಾರ ಎಸೋಸಿಯೇಶನಿಗೂ ದಳಗಳಿಗೂ ಇರಬೇಕಾದ ಸಂಬಂಧ ಉದ್ದಿ ಎಸೋಸಿಯೇಶನು ಸುಮಾರು 5, 6 ವರ್ಷಗಳಿಂದ ಶ್ರೀ ಟಿ ಅನಂತಪೈ ಹಾಗೂ ಶ್ರೀ ಟಿ.ರಮೇಶ ಯು ಪೈಗಳವರು ನೀಡುತ್ತಿರುವ ಸೇವೆಯಿಂದಾಗಿ ಮಾದರಿ ಸಂಸ್ಥೆಯಾಗಿದೆ ಎಂದೂ ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ಜನಗಣದೊಂದಿಗೆ ಸಭೆಯು ಮುಕ್ತಾಯ ಗೊಂಡಿತು.

ಪ್ರಚಾರ ಸಭೆಗಳು—ತಾ 11ರಂದು ಹೊಸಂಗಡಿ ಶ್ರೀ ಚಿಕ್ಕಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ, 12-11-51ರಂದು ಶಂಕರನಾರಾಯಣದಲ್ಲಿ ಶ್ರೀ K. S. ಕಾರಂತರ ಅಧ್ಯಕ್ಷತೆಯಲ್ಲಿ, 13-11-51ರಂದು ಜಾಂಡ್ಮದಲ್ಲಿ ಕೊಡ್ಲಾಡಿಯ ಪಟೇಲರ ಅಧ್ಯಕ್ಷತೆಯಲ್ಲಿ, 14-11-51ರಂದು ಸಿದ್ಧಾಪುರದಲ್ಲಿ ಜನಸಾಲಿ ಕೃಷ್ಣರಾಯರವರ ಅಧ್ಯಕ್ಷತೆಯಲ್ಲಿ, ಸೋಶಲಿಸ್ಟ್ ಪಾರ್ಟಿಯ ಸಭೆಗಳು ಜರಗಿದವು. ಕುಂದಾಪುರ ಮತದಾರ ಕ್ಷೇತ್ರದಿಂದ ಸೋಶಲಿಸ್ಟ್ ಪಾರ್ಟಿಯ ಪರವಾಗಿ ಸ್ಪರ್ಧಿಸಲಿರುವ ಕಾಮ್ರೇಡ್ ಎ. ಶ್ರೀನಿವಾಸ ಶೆಟ್ಟಿರು ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದ ಮೇಲೆ ಕಾಮ್ರೇಡ್ ಎ. ರಘುರಾಮ ಶೆಟ್ಟಿ ಮತ್ತು ಕೆ. ಸದಾಶಿವ ಕಾರಂತರು ಮಾತನಾಡಿದರು.

ಕುಂದಾಪುರ:—ತಾ. 13-11-51 ರಲ್ಲಿ ಉಪ್ಪುಂದ ದೇವಸ್ಥಾನದ ಬಳಿಯಲ್ಲಿ ಮತ್ತು ಉಪ್ಪುಂದ ಹೊಳೆ ಕಿನಾರೆಯಲ್ಲಿ ಶ್ರೀಗಳಾದ ಕಂಬದ ಕೋಣೆ ಸಂಜೀವ ರಾವ್ ಮತ್ತು ನಾರಾಯಣ ಕಾಮತ್‌ರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು ಜರಗಿದುವು. ಶ್ರೀಗಳಾದ ಬಿ ಸುಬ್ಬಣ್ಣ ಶೆಟ್ಟಿ, ಯಡ್ತರೆ ಮಂಜಯ್ಯ ಶೆಟ್ಟಿ, ಕೆ. ಸಂಜೀವ ರಾವ್, ಎಚ್. ಎಮ್. ಹೆಗ್ಡೆ, ಬಿ. ಗೋವಿಂದ, ನಾರಾಯಣ ಕಾಮತ್, ಮೊದಲಾದವರು ಕಾಂಗ್ರೆಸ್ ಸರಕಾರ 5 ವರ್ಷಗಳ ಆಡಳಿತದಲ್ಲಿ ರಾಷ್ಟ್ರಕ್ಕೊದಗಿದ ಸಂಕಷ್ಟಗಳ ಹಿನ್ನೆಲೆಯಲ್ಲಿ ಮಾನವನಿಗೆ ಅತೀ ಅಗತ್ಯವಾದ ಆಹಾರ, ಬಟ್ಟೆ, ಆಶ್ರಯ, ವಿದ್ಯೆ ಮತ್ತು ಆರೋಗ್ಯ ವಿಚಾರಗಳಲ್ಲಿ ಏನೇನನ್ನು ಸಾಧಿಸಿದೆ ಎಂಬುದನ್ನು ವಿಶದವಾಗಿ ವಿವರಿಸಿದರು.

ತಾ. 15-11-51ರಲ್ಲಿ ಶ್ರೀಧರ ಪ್ರಭುಗಳ ಅಧ್ಯಕ್ಷತೆಯಲ್ಲಿ ಶಿರೂರಿನಲ್ಲಿಯೂ ತಾ. 16-11-51ರಲ್ಲಿ ರೆವೆರೆಂಡ್ ಫಾದರ್ ಫ್ರುಟಾಡೋರವರ ಅಧ್ಯಕ್ಷತೆಯಲ್ಲಿ ಬೈಂದೂರಲ್ಲಿಯೂ ಕಾಂಗ್ರೆಸ್ಸಿನ ಪ್ರಚಾರ ಸಭೆಗಳು ಜರಗಿದವು. ಸಭೆಯಲ್ಲಿ ಕಾಂಗ್ರೆಸಿನ ಉದ್ದೇಶ, ಗುರಿ, ಮತ್ತು ಅದು ಸಾಧಿಸಿದ ಕೆಲಸಗಳ ಕುರಿತು ವಿಚಾರವತ್ತಾಗಿ ಶ್ರೀಗಳಾದ ಕೆ. ಎ. ಕಾರಂತ, ಎಮ್. ಎಮ್. ಹೆಗ್ಡೆ, ಎನ್. ಎಸ್. ಪರಮೇಶ್ವರಯ್ಯ, ಬಿ. ಸುಬ್ಬಣ್ಣ ಶೆಟ್ಟಿ, ಸೌಕೂರು ನಾರಾಯಣ ಶೆಟ್ಟಿ, ಬಿ. ಗೋವಿಂದ ಮತ್ತು ವೈ. ಮಂಜಯ್ಯ ಶೆಟ್ಟಿ ಮಾತನಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಬಿ ಆರ್. ಕುಂಬಳೆಯವರ ಧನ್ಯವಾದವಾಗಿ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯ್ತು. ಈ ಎರಡು ಸಭೆಗಳಲ್ಲಿ ಜನರು ಕಿಕ್ಕಿರಿದು ನೆರೆದು ತೋರಿಸಿದ ಸಹಕಾರ ಕಾಂಗ್ರೆಸ್ಸಿನ ಮುಂದಿನ ಯಶಸ್ಸನ್ನು ವ್ಯಕ್ತಪಡಿಸುತ್ತದೆ.

ಮೂಲ್ಕಿ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ—ಕಾರ್ಯವು ಭರದಿಂದ ಸಾಗುತ್ತಿದೆ. ಈ ಮತದಾರ ಕ್ಷೇತ್ರದ ಕಾಂಗ್ರೆಸ್ ಹುರಿಯಾಳು ಶ್ರೀ ಎಸ್. ಎಸ್. ಸುವರ್ಣರು ಇದೇ ತಾ. 11ರಲ್ಲಿ [illegible] ಟ್ಟ ಸಭೆಯಲ್ಲಿ ಕಾಂಗ್ರೆಸಿಗೆ ಮತಕೊಟ್ಟು ದೇಶ ಕಲ್ಯಾಣಗೊಳಿಸಬೇಕೆಂದು ವಿನಂತಿಸಿದರು. ಆ ಕೇಂದ್ರದಲ್ಲಿಯ ಬೈಕಂಪಾಡಿಯಲ್ಲಿಯೂ ತಕ್ಕ ವ್ಯವಸ್ಥೆ ಮಾಡಲು ಅಧ್ಯಮಹನೀಯರ ಬೇರೆ ಬೇರೆ ಕಮಿಟಿಗಳನ್ನು ರಚಿಸಲಾಯಿತು. ತರುವಾಯ ಹಳೆಯಂಗಡಿಯಲ್ಲಿ ಸಾಹುಕಾರ ವೆಂಕಟ್ರಮಣ ಶೆಣೈಯವರ ಅಧ್ಯಕ್ಷತೆಯಲ್ಲಿ ಕಿಕ್ಕಿರಿದು ನೆರೆದಿರುವ ಸಭೆಯಲ್ಲಿ ಶ್ರೀಗಳಾದ ಶಂಭುಮಲ್ಲಿ, ಎ. ಟಿ. ಸುವರ್ಣ, ಅನಂತಪ್ಪ ಸ್ರಿ. ಎಸ್. ಎಸ್. ಸುವರ್ಣರು ಕಾಂಗ್ರೆಸ್ ಸರಕಾರದ ಜನಹಿತ ಕಾರ್ಯಗಳನ್ನು ವಿವರಿಸಿದರು. ಕಾಂಗ್ರೆಸ್ಸೊಂದೇ ಜನರ ಹಿತಕ್ಕಾಗಿ ಹೋರಾಡುವ ಸಂಸ್ಥೆಯಾದುದರಿಂದ ಸರ್ವರೂ ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಂಡರು.

ದೇವಾಡಿಗ ಸುಧಾರಕ ಸಂಘ

ಮುಂಬಯಿ- ಇದರ 26ನೇ ವಾರ್ಷಿಕೋತ್ಸವವು ಇದೇ ತಿಂಗಳ ತಾ 25ನೇ ರವಿವಾರ ಅಪರಾಹ್ನ ಘಂಟೆ 2, 30ಕ್ಕೆ ಸರ್ ಕಾವಾಸಜಿ ಜಹಾಂಗೀರ ಸಾರ್ವಜನಿಕ ಸಭಾ ಸದನದಲ್ಲಿ ಶ್ರೀ. ರತಿಲಾಲ್ ಎಮ್. ನಾನಾವತಿ (ಉಪಾಧ್ಯಕ್ಷ)-ಇಂಡಿಯನ್ ಮರ್ಚಂಟ್ಸ್ ಚೇಂಬರ್) ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ

ಕಾಳಿಕಮಾಲಿ
ಚವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ.

ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—
ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.

ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10—0—0 (ಅಂಚೆವೆಚ್ಚ ಪ್ರತ್ಯೇಕ)

AYURVEDIC PHARMACY
Baba kali Kamali-Wala RISHIKESH

ಸ್ವೀಕಾರ ವಿಮರ್ಶೆ

ಸಾಕ್ಷರತಾ ಸಾಫಲ್ಯ:

ಲೇಖಕರು: ಶ್ರೀ ಸಂಗವೇಶ ಗೋಲಪ್ಪನವರು. ಪ್ರಕಾಶಕರು: ಅಜಿತಪ್ರಕಾಶನ, ಟಿಳಕ ಚೌಕ, ಬೆಳಗಾಂವಿ. ಬೆಲೆ 0-5-0

ನಮ್ಮ ದೇಶದ ಬಹು ಸಂಖ್ಯಾಕ ಜನರು ನಿರಕ್ಷರ ಕುಕ್ಷಿಗಳಾಗಿರುವರು. ದೇಶದ ಜನ ಸುಶಿಕ್ಷಿತರಾಗುವದರಿಂದ ನಮ್ಮ ನೂರಾರು ಸಮಸ್ಯೆಗಳು ಪರಿಹಾರ ಗೊಳ್ಳಬಹುದಾಗಿದೆ. ಅದರಲ್ಲೂ ಚುನಾವಣಾ ಕಾಲದಲ್ಲಿ ಅದರ ಮಹತ್ವವೆಷ್ಟೆಂಬುದು ಚೆನ್ನಾಗಿ ಮನವರಿಕೆಯಾಗುತ್ತಲಿದೆ. ಶ್ರೀ ಸಂಗವೇಶ ಗೋಲಪ್ಪನವರು ಆ ಆವಶ್ಯಕತೆಯನ್ನು 'ಸಾಕ್ಷರತಾ ಸಾಫಲ್ಯ'ದಲ್ಲಿ ತೋರಿಸಿಕೊಟ್ಟಿದ್ದಾರೆ. 'ಸಾಕ್ಷರತಾ ಸಾಫಲ್ಯ' ವೆಂಬ ಈ ಚಿಕ್ಕ ಪ್ರಹಸನದಲ್ಲಿ ಅವರ ಮೂಲೋದ್ದೇಶ ಸಾಧಿಸಿರುವದಾದರೂ ನಾಟಕ ಕೇವಲ ವರದಿ ವಾಚನ ಕ್ರಿಯೆಯನ್ನಷ್ಟೇ ಮಾಡುವಂತಿದೆ. ನಾಟಕ ಘಾಢ್ಧಿಕ ಸನ್ನಿವೇಶಗಳಿಂದ ಕೂಡಿರುವುದಿಲ್ಲ. ಯಾವುದೇ ಉದ್ದೇಶವನ್ನಿಟ್ಟುಕೊಂಡು ನಾಟಕ ರಚಿಸುವದಾದರೂ ಆ ಉದ್ದೇಶ ಸೂಚ್ಯವಾಗಿ ಬರಬೇಕೇ ಹೊರತು ನೇರಾಗಿ ಪ್ರೇಕ್ಷಕರಿಗೆ ಅದು ತಿಳಿಯುವಂತಿರಬಾರದು. "ಸಾಕ್ಷರತಾ ಸಾಫಲ್ಯ" ಒಮ್ಮೆ ಓದಬಹುದಾದ ಸಾಮಾನ್ಯ ನಾಟಕ.

೨ ಗಾಂಧೀರೀತಿ

ಲೇಖಕರ: ಶ್ರೀ ಪುಟ್ಟಪ್ಪಯ್ಯ ಕಾರಂತ, ಪ್ರಕಾಶಕರು: ಅಜಂತ ಮುದ್ರಣ ಮತ್ತು ಪ್ರಕಾಶನ ಲಿಮಿಟೆಡ್, ಕುಂದಾಪುರ ಬೆಲೆ 0-6-0

ಕಾಂಗ್ರೆಸ್ಸಿನ ಗತವೈಭವ ಹಾಗೂ ಗಾಂಧೀಜಿಯ ಸತ್ಯಾಹಿಂಸೆಗಳೇ ಮೊದಲಾದ ಸ್ವಾತಂತ್ರ್ಯ ಹೋರಾಟದ ಹಲವು ಸನ್ನಿವೇಶಗಳನ್ನು ಶ್ರೀ ಕಾರಂತರು ಚಿತ್ರಿಸಿರುತ್ತಾರೆ. 'ಬರೆಯುದ ಕೈ ನನ್ನದು' ಎಂದು ಅವರೇ ಹೇಳಿದಬ್ಬಿರುವದರಿಂದ ವಿಷಯ ನಿರೂಪಣೆ-ಭಾಷಾ ಶೈಲಿಗಳ ಕುರಿತು ನಾವೇನೂ ಹೇಳಬೇಕಾದ್ದಿಲ್ಲ. ಕಿರಿಯರ ಮನೋಮಟ್ಟಕ್ಕೆ ತಕ್ಕುದಾದ ಲಘುಸಾಹಿತ್ಯವನ್ನೊದಗಿಸಿ ಕೊಡುವದೇ ಈ ಮಾಲೆಯ ಉದ್ದೇಶವೆಂದಮೇಲೆ ಶ್ರೀಮಾನ್ ಕಾರಂತರು ಕುತೂಹಲ ಪೂರ್ಣವಾದ ಸನ್ನಿವೇಶಗಳನ್ನಷ್ಟೆ ಎತ್ತಿಕೊಂಡು ಮಕ್ಕಳ ಮನಸ್ಸು ಪ್ರಫುಲ್ಲಿತವಾಗುವಂತೆ ಯತ್ನಿಸಿದ್ದು ಸ್ವಾಭಾವಿಕವೇ! ಕಿರಿಯರು ಓದಿ ತಿಳಿಯಬೇಕಾದ ವಿಚಾರಗಳು ಇದರಲ್ಲಿವೆ. ಹೊತ್ತಿಗೆ ನುಣುಪಾದ ಕಾಗದ, ಅಂದವಾದ ಮುದ್ರಣದಿಂದ ಕೂಡಿರುವದಾದರೂ ಕಿರಿಯರ ಮಟ್ಟಿಗೆ ಬೆಲೆ ಕೊಂಚ ಹೆಚ್ಚಾಯಿತೇನೋ ಎನಿಸುತ್ತದೆ.

ಚಿತ್ರಗುಪ್ತ ಬೆಂಗಳೂರು

ಚಿತ್ರಗುಪ್ತ ದೀಪಾವಳಿ ವಿಶೇಷಾಂಕದಲ್ಲಿ 'ಬಾದಾಮಿ ಗುಹೆ ಮತ್ತು ಪಾತಾಳಿ ಮರದ ಕೃತಿಗಳು' 'ಗಾರ್ಕೆತಾಯಿ' 'ಭಾರತೀಯ ನೃತ್ಯಕಲೆ' ಮುಂತಾದ ಮನನೀಯ ಬರಹಗಳು ಇರುತ್ತವೆ.

ವೀಣಾ (ಮಾಸಿಕ) ಶಿರ್ಸಿ.

ಸಂಪಾದಕರು:-ಶ್ರೀ ಶಂಕರ ನಾರಾಯಣ ರಾಯರು ಬೆಲೆ 0-8-0

ಹುಟ್ಟಿದ ಎರಡೇ ವರ್ಷಗಳಲ್ಲಿ ವೀಣಾ ಪ್ರಗತಿ ಪಥದಲ್ಲಿ ಮುನ್ನಡೆಯುತ್ತ ಬಂದಿರುವದಕ್ಕೆ ಈ ದೀಪಾವಳಿ ವಿಶೇಷಾಂಕ ಸಾಕ್ಷಿಯಾಗಿದೆ. ಹಳ್ಳಿಯ ಜೀವನ ಚುನಾವಣಾ ಚೌ ಚೌ ಸಾಹಿತಿ 'ಲೀಪಾಕ್ಷಿ ದೇವಲಾಯದ ಕಲಾವೈಶಿಷ್ಟ್ಯ' ಮೊದಲಾದ ಬರಹಗಳು ಸಂಚಿಕೆಗೆ ಕಳೆಯನ್ನಿತ್ತಿವೆ. ವೀಣಾದ ಸಂಚಾಲಕರ ಸಾಹಸಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಶುಭವನ್ನು ಕೋರುತ್ತೇವೆ.

ಕನ್ನಡಿಗ ಸ. ೧ ಸಂಚಿಕೆ ೧

ಸಂಪಾದಕರು:-ಮೋದಿ ಮುಟ್ಟೇಶ್ವರ. ವಿಶ್ವ ಭಾರತೀ ಪ್ರಕಟಣಾಲಯ ಹುಬ್ಬಳ್ಳಿ. ವಾ. ಚಂದಾ ರೂ. 3—12—0 ಬಿಡಿಸಂಚಿಕೆ 0—1—0

ಕನ್ನಡಿಗನ ಪಕ್ಷಾತೀತ ಧೋರಣೆ-ಆಧ್ಯಾತ್ಮಿಕ ತಳಹದಿಯ ಬರಹವೈಶಿಷ್ಟ್ಯ-ವಿಧಾಯಕ ವಿಚಾರಗಳ ವಿಮರ್ಶೆಯನ್ನು ನೋಡುವಾಗ ಮುಂದೆಕ್ಕೆ ಕನ್ನಡಿಗನಿಗೆ ಉಜ್ವಲ ಭವಿಷ್ಯವಿದೆಯೆಂದು ನಾವು ಊಹಿಸಲು ಶಕ್ಯವಿದೆ. ಹಾಗೆಯೇ ಆಗಲೆಂದು ಹಾರೈಸಿ ನೂತನ ಬಂಧುವಿಗೆ ಸ್ವಾಗತವನ್ನು ಬಯಸುತ್ತೇವೆ.

೧ ನವಯುಗ

ಸಂಪಾದಕರು ಶ್ರೀ ತಿ. ರು. ನೇಸ್ವಿ ಎಂ. ಎ ಲ್. ಎ. ನವಯುಗ ಕಾರ್ಯಾಲಯ ಹುಬ್ಬಳ್ಳಿ. ಬೆಲೆ 0-8-0

ನವಯುಗ ದಿನ ಪತ್ರಿಕೆಯ ದೀಪಾವಳಿ ವಿಶೇಷಾಂಕದಲ್ಲಿ ತಪ್ಪಿಸಿಕೊಂಡ ಮಗು' 'ಸತ್ಯಾನ್ವೇಷಣ' 'ಪತ್ರಿಕೋದ್ಯಮ ಮತ್ತು ಸಾಹಿತಿ' 'ಹಿಂದಿ ಶಿಕ್ಷಣ ಮಾಧ್ಯಮ ವಾಗಬೇಕೆ?" ಅನಂತ ಆಕಾಶ' ಮುಂತಾದ ಬರಹಗಳು ಅಕ್ಕಮೂಲ್ಯವಾಗಿವೆ. ಹೆಚ್ಚಾದ ಬರಹಗಳು ಹಲವಾರು ಬೇರೆ ಬೇರೆ ಪುಟಗಳಲ್ಲಿ ಹಂಚಹೋಗಿರುವದರಿಂದ ಓದುವದಕ್ಕೆ ಕೊಂಚ ತೊಡಕಾಗುವದು ಸ್ವಾಭಾವಿಕ. ಸಂಚಿಕೆ ಸಂಗ್ರಾಹ್ಯವಾಗಿದೆ.

೨ ಸಂಗೀತ (ವಾರಪತ್ರಿಕೆ)

ಸಂಪಾದಕರು ಶ್ರೀ ಎಸ್. ಕೃಷ್ಣಯ್ಯಂಗಾರ್ ಸಂಗೀತ ಕಾರ್ಯಾಲಯ 494/A ಮುಕ್ಕಟ್ಟೆ ಅಮ್ಮನಗುಡಿ ಬೀದಿ, ಮೈಸೂರು ವಾ. ಚಂ 5—8—0

ಸಂಗೀತ ಶಾಸ್ತ್ರಕ್ಕಾಗಿಯೇ ಮೀಸಲಾಗಿರುವ ವಾರಪತ್ರಿಕೆ ಕನ್ನಡದಲ್ಲಿ ಇದುವರೆಗಿಲ್ಲ. 'ಸಂಗೀತ' ಮೊದಲ ಸಂಚಿಕೆಯಲ್ಲಿ ಸಂಗೀತ ಶಾಸ್ತ್ರದ ಕುರಿತು ವಿದ್ವತ್ಪೂರ್ಣ ಬರಹಗಳಿದ್ದು ಸಂಗೀತಾಭ್ಯಾಸಿಗಳಿಗೆ ಇದರಿಂದ ಹೆಚ್ಚಿನ ಉಪಯೋಗವಾಗಬಹುದಾಗಿದೆ. ಕೊನೆಯ ಪುಟಗಳಲ್ಲಿ ಸಂಗೀತ ಶಿಕ್ಷಣ ಮಾಲಿಕೆಯನ್ನು ಕೊಟ್ಟಿರುವದರಿಂದ ಸಂಚಿಕೆ ಇನ್ನಷ್ಟು ಉಪಯುಕ್ತವಾಗಿದೆಂದೇ ಹೇಳಬೇಕು. "ಸಂಗೀತ" ಕನ್ನಡದೇಶದ ಸಂಗೀತ ಶಾಸ್ತ್ರದ ಕುರಿತು ಸರಿಯಾದ ಮಾರ್ಗದರ್ಶನ ಮಾಡಿ ಸಂಗೀತಾಭಿಮಾನಿಗಳ ಅಭಿರುಚಿಯನ್ನ ಹೆಚ್ಚಿಸುವಂತಾಗಲಿ.

ಕಾರ್ಕಳ ದಿ. ಮು. ಕೋರ್ಟಿನಲ್ಲಿ
O. P. No. 50/1951

1 ಪದ್ಮಾವತಿ, ದರ್ಣಪ್ಪ ಶೆಟ್ಟಿ ಸೊಸೆ ವ, ಶಿದ್ದಪ್ಪ ಪೂವಣಿಯರ ವಿಧವೆ

2 ಸುನಂದಾದೇವಿ 3 ನಮಿರಾಜಾ

4 ಧರ್ಮರಾಜಾ 5 ವತ್ಸಲಾ 6 ರಾಜಕುಮಾರ [ಮ್ಯಾನರರು] 1ನೇಯವಳ ಮಕ್ಕಳು ಕ್ಷೇಮಬಂತಕಳು ತಾಯಿ 1ನೇಯವಳು-ಕಾರ್ಕಳ ತಾಲೂಕು ನಲ್ಲೂರು ಗ್ರಾಮದಲ್ಲಿರುವವರು

—ಅರ್ಜಿದಾರರು.

ಮತ್ತು

1] ಕಿಂನಿ ಯಾನೆ ಜ್ವಾಲಿನಿ ಅಮ್ಮ 2] ಮಂಜಪ್ಪ ಪೂವಣಿ 3] ಕಾಂತು ಪೂವಣಿ ಜಾತಮ್ಮನ ಮಕ್ಕಳು,

1-3ನೇಯವರು ಕಾರ್ಕಳ ತಾಲ್ಲೂ ಹೊಸಂಗಡಿ ಗ್ರಾಮದ ಬಾಲಣ್ಣರಗುತ್ತುಯಲ್ಲಿಯೂ, 2ನೇಯವನು ಪ್ರಾಂತ್ಯ ಗ್ರಾಮದ ಬ್ಯಾಸುಭಾಗನಾಗಿಯೂ ಯಿರುತ್ತಾನೆ

ಸದ್ರಿ ಬುದ್ರಿಗೆ ವ ಯಾತರ ಸಮಸ್ತರನರೀಗೆ 1ನೇ ಅರ್ಜಿದಾರಳ ಗಂಡ ವ ಮಿಕ್ಕ ಅರ್ಜಿದಾರರ ತಂದೆ ಯಿತ್ತಲಾಗಿ ಮೃತಪಟ್ಟ ಶಿದ್ದಪ್ಪ ಪೂವಣಿಯು ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ ಸಿಂಡಿಕೇಟ್ ಲಿಮಿಟೆಡ್, ಬ್ರೇಂಚ್ ಮೂಡಬಿದ್ರಿಯಲ್ಲಿ fixed deposit receipt S. T. D. No. 11/51ಕ್ಕೆ ಡಿಪೊಜಿಟು ಯಿಟ್ಟ ರೂಪಾಯಿ 700/-ಮತ್ತು ಸೇವಿಂಗ್ಸ್ ಬೇಂಕ್ ಎಕೌಂಟಿನಲ್ಲಿ ಯಿಟ್ಟ ರೂ 17-8-0 ಕೂಡಾ ಪಡೆಯುವರೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ನೋಟೀಸು ಬಗ್ಗೆಯಂತಾ ತಾರೀಕು 17-12-1951ಕ್ಕೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಉಳ್ಳವರು ಸದ್ರಿದಿವ್ಸ ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಆಕ್ಷೇಪಿಸುವರಾಡತಕ್ಕದ್ದು. ತಪ್ಪಿದ್ರೆ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. V. Kamath,
Advocate for Petitioners
Karkala-Date 12-11-1951,

ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ಶಾಲಾ ಲೈಬ್ರೆರಿಗಳಿಗೆ ಯೋಗ್ಯವಾದ ನಾನಾಬಗೆಯ ಕೃತಿಗಳು!

ಬಿರುದಾವಳಿ	0	3	0	ಕಾಲವೇ ಬದಲಾಗಿದೆ	0	4	0
ಹೈದರಾಬಾದ್ ವಿಜಯ	0	4	0	ಭಾರತದ ಸಾಹಿತ್ಯ ಕಲೆಗಳು	0	4	0
ಗಾದೆಯ ಗಾಂಧಿ	0	3	0	ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಶಾಂತಿಯ ಮಡಿಲಿನಲ್ಲಿ	0	3	0	ಹಂಬಲ	0	4	0
ಬಲಿಪೀಠದಲ್ಲಿ	0	5	0	ಭಾರತಚಿತ್ರದ ಅಂಚೆಟಿಕೇಟುಗಳು	0	3	0
ಅಗಲಿದ ಆಕ್ಕ ಸರೋಜಿನಿ	0	3	0	ತ್ರಿದಳ	0	5	0
ನನ್ನ ಹೆಂಡತಿ	0	3	0	ಪುಸ್ತಕಪುರಾಣ	0	4	0
ಪುಣ್ಯಫಲ	0	4	0	ಹಳ್ಳಿಯಲ್ಲಿ ನಡೆದ ನಾಟಕ	0	3	0
ಸುಖದದಾರಿ	0	3	0	ನೆರೆಯ ಗಾಂಧಾರ	0	3	0
ಸುಕಾಂತ	0	3	0	ಮಾತಿನಯುಗದ ಮಹಾಪ್ರಭಾವ	0	3	0
ಶಂಖಮುಖಿ	0	4	0	ವಿಜ್ಞಾನದ ಬೆಳವಣಿಗೆ	0	4	0
ಜಾತೀಭೂತಕ್ಕೆ ಬಲಿ	0	3	0	ಡಾ। ಹರ್ಡೀಕರ್	0	5	0
ಜನಸೇವೆಯ ಸೋಗಿನಲ್ಲಿ	0	3	0	ತೆಂಗಿನ ತವರು	0	6	0
ನಾ ಕಂಡ ಅವಳು	0	3	0	ಪ್ರಾಯಶ್ಚಿತ್ತ	0	3	0
ತ್ರಿವೇಣಿ	0	3	0	ಪ್ರಭಾ	0	3	0
ನಿಲುವಂಗಿ	0	4	0	ಕವಿಗಳ ಸಾಗಾಟ	0	12	0
ಬಾಡಿಗೆಯ ಮನೆ	0	3	0	ಸ್ವಪ್ನಲೋಕ	0	6	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0	ಮನೆಹೊರಗಿನ ಮಹಾಜೀವಿಗಳು	0	5	0
ದೇವರ ನಾಮ ಮತ್ತು ಸಾಧನೆ	0	3	0	ಘಂಟಮಾರಾ ೪ಭಾಗಗಳು	2	0	0
ಎರಡು ಕತೆಗಳು	0	3	0	ಮಾರ್ಪಾಟು	0	4	0
ಸರಸ-ವಿರಸ	0	3	0	ಭಾರತದ ರಾಷ್ಟ್ರಗೀತ	0	3	0
ಹೃದಯೇಶ್ವರಿ	0	4	0	ನಮ್ಮ ಬಹು ದೊಡ್ಡ ಶತ್ರು	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0	ಕೈಲಾಸ	0	3	0
ನುಡಿಮುತ್ತುಗಳು ೧, ೨, ೩	0	12	0	ಜ್ಯೋತಿ	0	4	0
ಕುಲವಿಲ್ಲದ ಹೆಣ್ಣು	1	8	0	ಕತ್ತು ಕೊಯ್ದವರಾರು?	0	5	0
ತವರು ಮನೆಯಿಂದ	0	4	0	ಸಮಾಜದ ಅಗಿಳಿಂದ	0	4	0
ಭಾಗ್ಯಲಕ್ಷ್ಮಿ	1	4	0	ಬೆಳ್ಳಿಹಬ್ಬ	0	4	0
ಯುಗವಾಣಿ	0	8	0	ಉಷಾ	0	4	0
ಸ್ತ್ರೀ ಹೃದಯ	0	4	0	ವಿಧಿಲೀಲೆ	0	4	0
ದ್ವೇಷ	0	3	0	ಪರಮಾಣು ಪ್ರಪಂಚ	0	4	0
ಎರಡು ಏಕಾಂಕ ನಾಟಕಗಳು	0	4	0	ನೀತಿ ವಿನೋದ ಕತೆಗಳು	0	12	0
ಪ್ರಜಾಪ್ರಭುತ್ವವನ್ನು ಕುರಿತು	0	8	0	ಸಾಹಸ ಭೀಮ ವಿಜಯ	0	8	0
ಕಲಾವಿದನ ದಿನಚರಿ	0	3	0	ಭಾರತದ ಗುರುಕುಲ	0	6	0
ಆಧುನಿಕ ಭಾರತ	0	4	0	ಅಕ್ಕಪಕ್ಕ	0	6	0
				ಭರತೇಶ ದಿಗ್ವಿಜಯ	0	8	0

ರೂ ೨ಳರ ಪುಸ್ತಕಗಳನ್ನು ರೂ ೨೦/ಕ್ಕೆ ಕೊಡಲಾಗುವುದು

ಪ್ಯಾಪಾರಿಗಳಿಗೆ ಧಾರಾಳ ಕಮಿಶನ್. ವಿವರವಾದ ಕೇಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಫಿರ್ಕಾಭಿವೃದ್ಧಿ ಕಾರ್ಯ:-

ಅಕ್ಟೋಬರ ತಿಂಗಳಲ್ಲಿ ಫಿರ್ಕಾಭಿವೃದ್ಧಿ ಕೇಂದ್ರದಲ್ಲಿ ಜರಗಿದ ಕೆಲಸಗಳ ಸಂಕ್ಷಿಪ್ತ ವರದಿ:-

1 ಕುಂಬಳೆ ಫಿರ್ಕಾ:-ಬೇಳದ ಕೊರಗರ ವಸತಿಗೆ ಹೋಗುವ ಮಾರ್ಗದ ಕೆಲಸವು ಸಂಪೂರ್ಣವಾಯಿತು. ಇದರ ಖರ್ಚಿನ ⅓ ಅಂಶವನ್ನು ಊರವರೇ ವಹಿಸಿದ್ದಾರೆ. ಒಂದು ಬಾವಿಯ ಕೆಲಸವು ಸಂಪೂರ್ಣವಾಯಿತು. ಉತ್ತಮ ಜಾತಿಯ 3 ಹುಂಜಗಳನ್ನು ಅರ್ಧ ಬೆಲೆಗೆ ಒದಗಿಸಿ ಕೊಟ್ಟಿದೆ. ಉಬ್ರಂಗಳದಲ್ಲಿ ಒಂದು ಕೃಷಿ ಪ್ರದರ್ಶನವು ಜರಗಿಸಲ್ಪಟ್ಟಿತು. ಯಂತ್ರದ ಸಹಾಯದಿಂದ ಒಂದು ಎಕ್ರೆ ಜಾಗೆಯು ಸಮತಟ್ಟು ಮಾಡಲ್ಪಟ್ಟಿದೆ.

2 ಮಂಜೇಶ್ವರ:-ಸರಕಾರದ ಸಹಾಯದಿಂದ ಒಂದು ಶಾಲಾ ಕಟ್ಟಡವು ಕಟ್ಟಲ್ಪಟ್ಟಿತು. (2) 5½ ಫರ್ಲಾಂಗು ಮಾರ್ಗದ ಕೆಲಸವು ಮಾಡಲ್ಪಟ್ಟಿತು. (3) ಉತ್ತಮ ಜಾತಿಯ ಮೂರು ಹುಂಜಗಳನ್ನು 20 ಮೊಟ್ಟೆಗಳನ್ನು ರೈತರಿಗೆ ಒದಗಿಸಿ ಕೊಡಲಾಯಿತು.

3 ಮೂಲ್ಕಿ:-ಒಂದು ಪ್ರಯಸ್ಕರ ಶಿಕ್ಷಣ ಶಾಲೆಯು ಪ್ರಾರಂಭಿಸಲ್ಪಟ್ಟಿತು. ಒಂದು ಸಂಕ ಮತ್ತು ಮಾರ್ಗದ ಕೆಲಸವು ಮುಗಿಸಲ್ಪಟ್ಟಿತು. ಇವುಗಳ ಖರ್ಚಿನಲ್ಲಿ ⅓ ಅಂಶವನ್ನು ಗ್ರಾಮಸ್ಥರೇ ವಹಿಸಿದ್ದಾರೆ. (3) ಉತ್ತಮ ಜಾತಿಯ 22 ಕೋಳಿಮರಿಗಳನ್ನು ಒದಗಿಸಿ ಕೊಡಲಾಗಿದೆ.

ಮೂರು ಫಿರ್ಕಾಗಳಲ್ಲಿಯೂ ಖಾದಿ ಮತ್ತು ಮಿಶ್ರಗೊಬ್ಬರದ ಸಪ್ತಾಹವು ಆಚರಿಸಲ್ಪಟ್ಟಿತು. 289 ಮಿಶ್ರಗೊಬ್ಬರದ ಹೊಂಡಗಳು ತಯಾರಿಸಲ್ಪಟ್ಟಿವೆ.

ಉಡ್ಪಿ ದಿ ಮು ಕೋರ್ಟಿನಲ್ಲಿ
O S. No 278/51

T. ರಾಮಚಂದ್ರ ರಾವ್, —ವಾದಿ.

ಮತ್ತು

1) ಬಸ್ತ್ಯಾನ ಪಿಂಟೋ ಬ್ಯಾ
2) ರ್ಯಾಮಂಡ್ ಪಿಂಟೋ } ಪ್ರತಿವಾದಿರುಯಿವರೊಳಗೆ

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ:-

ಉಡ್ಪಿ ತಾಲೂಕು ಶಂಕರನಾರಾಯಣ ಗ್ರಾಮದಲ್ಲಿರುವ ದಮಿಯಾಂ ಪಿಂಟೋರವ 1ನೇ ಪ್ರತಿವಾದಿಳ ಮಗ-ರ್ಯಾಮಂಡ್ ಪಿಂಟೋ ಕ್ರೀಗೆ ಈ ಮೂಲಕ ತಿಳಿಸುವುದೇನೆಂದ್ರೆ:-

ವಾದಿಗೆ ಪ್ರತಿವಾದಿರು ತಾ. 28-7-49ರಲ್ಲು ಬರಕೊಟ್ಟ ಚಾಲಗೇಣ ಎದುರ್ನಡಿಯಲ್ಲಿ ಕಾಣುವ ಆಸ್ತಿಸ್ವಾಧೀನತೆಗೂ-ಹುಟ್ಟುವಳಿಗೂ ಕೂಡ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 10-12-1951ಕ್ಕೆ 2ನೇ ಪ್ರತಿವಾದಿಯ ನೋಟೀಸು ಬಗ್ಗೆ ಯಿಟ್ಟಿದೆ. ಅದ್ರಿಂದ 2ನೇ ಪ್ರತಿವಾದಿಗೆ ಸದ್ರಿವ್ಯಾಜ್ಯದಲ್ಲಿ ಉತ್ತರ ಕೊಟ್ಟು ವ್ಯವಹರಿಸುವದಿದ್ದಲ್ಲಿ ಸದ್ರಿ ತಾ. 10-12-1951ನೇ ದಿವ್ಸ ಬೆಳಿಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟುಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ತಿವ್ಸಾಮಾಡಿ ಸದ್ರಿವ್ಯಾಜ್ಯವು ಮುಂದರಿಸಲ್ಪಡುವುದು.

P. V. Acharya,
Vakil for Plaintiff
ಮೊಕ್ಕಾಂ ಉಡ್ಪಿ, ತಾರೀಕು 15-11-51

ಮತದ ಮಹತ್ವ ಮತ್ತು ಮತದಾನದ ರೀತಿ ಇವುಗಳನ್ನು ತಿಳಿದ ಬಳಿಕ ತಮ್ಮ ಮತವನ್ನು ಯಾವ ಪಕ್ಷದ ಹುರಿಯಾಳಿಗೆ ಸಲ್ಲಿಸಬೇಕೆಂಬುದನ್ನು ನಿರ್ಧರಿಸಬೇಕಾಗುತ್ತದೆ ಮತದಾರರ ಕರ್ತವ್ಯ ಎಂಬ ಲೇಖದಲ್ಲಿ ಮತದಾರರಿಗೆ ಸಾಕಷ್ಟು ಮಾರ್ಗದರ್ಶನವನ್ನು ಮಾಡಲಾಗಿದ್ದರೂ ಇನ್ನೂ ಅನೇಕ ಅಂಶಗಳ ಆಲೋಚನೆಯಾಗುವ ಅವಶ್ಯಕತೆಯಿದೆ ಆಯಾ ರಾಜಕೀಯ ಪಕ್ಷಗಳ ವಿಚಾರ ಪ್ರಣಾಳಿ, ಕಾರ್ಯ ಸಂಪತ್ತುಗಳನ್ನು ತಿಳಿಯಬೇಕು ಚುನಾವಣೆಗಳಿಗಾಗಿ ಹೋರಾಡಲು ಅವುಗಳು ಆಯ್ದ ಹುರಿಯಾಳುಗಳ ನಿರೀಕ್ಷಣೆಯನ್ನು ಲಕ್ಷ್ಯಪೂರ್ವಕವಾಗಿ ಮಾಡಬೇಕು. ಪೂರ್ವಗ್ರಹದೂಷಿತರಾಗದೆ ಮತದಾರರು ಈ ನಿರೀಕ್ಷಣವನ್ನೀರಿಸಬೇಕು.

ವಿವಿಧ ಪಕ್ಷಗಳನ್ನು ಹೀಗೆ ತೂಕಕ್ಕೆ ನಿಲ್ಲಿಸಿದರೆ ಕಾಂಗ್ರೆಸ್ ಪಕ್ಷವು ತನ್ನ ಕ್ರಿಯಾ ಸಂಪತ್ತಿನಿಂದ, ಅಧಿಕಾನುಭವದಿಂದ ಸೇವಾಶಕ್ತಿಯಿಂದ ಮತ್ತು ಸಮರ್ಪಕ ಹುರಿಯಾಳುಗಳ ಸಂಖ್ಯಾಬಲದಿಂದ ಸರ್ವಪಕ್ಷಗಳಲ್ಲಿ ಮಿಗಿಲಾದುದೆಂಬ ಮನ್ನಣೆಯನ್ನು ಸಹಜವಾಗಿ ಪಡೆಯುವಂತಿದೆ. ಈ ಸತ್ಯ ಸಂಗತಿಯನ್ನು ಅಂಜಿಕೆ ಅಳುಕುಗಳಿಲ್ಲದೆ ಸಾರಿಹೇಳಬಹುದು.

ಕೆಲವು ಪಕ್ಷಗಳು ಕೇವಲ ಇತ್ತೀಚೆಗೆ ಹುಟ್ಟಿದವುಗಳಾದುದರಿಂದ ಅವುಗಳಿಗೆ ಹಿಂದಿನ ಚರಿತ್ರೆಯೇ ಇಲ್ಲವೆನ್ನಬಹುದು. ಮುಂಚಿನ ಅನುಭವವಿಲ್ಲೆಂದ ಬಳಿಕ, ಮುಂದಕ್ಕೆ ಹೇಗೆ ಕೆಲಸ ಮಾಡುವವೆಂಬುದನ್ನು ಗಟ್ಟಿಯಾಗಿ ಹೇಳುವುದು ಕಷ್ಟ. "ವಚನೇ ಕಿಂದರಿದ್ರತಾ" ಎಂದು ಮತದಾರರಿಗೆ ಆಶೆ- ಆಮಿಷಗಳನ್ನು ಹುಟ್ಟಿಸುವ ವಚನಗಳ ಸುರಿಮಳೆ ಮಾಡಬಹುದು. ಆದರೆ ಮಣದಷ್ಟು ಮಾತಿಗಿಂತ ಕಣದಷ್ಟು ಕೃತಿ ಲೇಸು ಎಂಬುದನ್ನು ಮತದಾರರು ಮರೆಯಬಾರದು. ಮಾತುಗಳು ಮೈದಾಳಿ ಕಾರ್ಯರೂಪದಲ್ಲಿ ಇಳಿದಾಗಲೆ ಅವುಗಳ ಸಾಫಲ್ಯ.

ಮತದಾರರ ಮುಂದಿರುವ ಸಮಸ್ಯೆಗಳು

ಕೆಲವು ಪಕ್ಷಗಳಿಗೆ ಸಂಘಟನಾ ಬಲವಿಲ್ಲ. ಆದರಿಂದಾಗಿ ವಿಶಾಲ ವ್ಯಾಪ್ತಿಯಿಲ್ಲ. ಅವುಗಳ ಕಾರ್ಯಕ್ಷೇತ್ರವು ಒಂದೊಂದು ಪ್ರಾಂತಕ್ಕೆ ಇಲ್ಲವೇ ಒಂದೆರಡು ಜಿಲ್ಲೆಗಳಿಗೆ ಪರಿಮಿತವಾಗಿದೆ, ಕೆಲವರಂತೂ ಸ್ವತಂತ್ರ ಹುರಿಯಾಳುಗಳು, ಅವರ ಪಕ್ಷವೆಂದರೆ ವಾಪಕ್ಷವೇ ಅವರು ಎಲ್ಲರಿಂದಲೂ ಸ್ವತಂತ್ರರು. ಅವರ ಮೇಲೆ ಯಾವ ಪಕ್ಷದ ಹಿಡಿತವೂ ಇಲ್ಲ ಹೊಣೆಯೂ ಇರಲಾರದು, ಅವರು ಮಾಡಿದ್ದೇ ಧೋರಣ ಕಟ್ಟಿದ್ದೇ ತೋರಣ, ಆದುದರಿಂದ ಸ್ವತಂತ್ರರು ನಿರಂಕುಶರು. ಕೆಲವು ಪಕ್ಷಗಳ ವಿಚಾರ ಪ್ರಣಾಲಿ ಜನತೆಗೆ ಹಿಡಿಯುವುದಿಲ್ಲ. ಆಚಾರ ಸರಣಿ ಸೇರುವುದಿಲ್ಲ ಶಾಸನ ಸಭೆಗಳ ಹಾಗೂ ಪಾರ್ಲಿಮೆಂಟಿನ ಕಾರ್ಯ ಪದ್ಧತಿಯನ್ನು ತಿಳಿದವರು ಇಂತಹ ಪಕ್ಷಗಳಿಗೆ ವಿಶೇಷ ಪ್ರೋತ್ಸಾಹ ಕೊಡಲು ಹಿಂಜರಿಯುವರು. ಏಕೆಂದರೆ ಇವರಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಅಪ್ಪಿತಪ್ಪಿ ಆರಿಸಿ ಬಂದರೂ ಸರಕಾರದ ಸೂತ್ರವನ್ನು ವಹಿಸುವಷ್ಟು ಬಲಾಢ್ಯರಾಗರೆಂಬುದು ದಿಟವಾದುದು. ಪ್ರಬಲವಾದ ವಿರೋಧಿ ಪಕ್ಷವೊಂದು ಇಲ್ಲದಿದ್ದರೆ ಪ್ರಜಾಸತ್ತೆಯ ಹೆಸರಿಗೆ ಮಾತ್ರ ಉಳಿದು, ಅಧಿಕಾರಾರೂಢ ಪಕ್ಷವು ನಿರಂಕುಶ ನಡತೆಗೆ ಮನ ಸೋಲುವುದೆಂದು ಹೇಳುವುದು ನಿಜವಿರಬಹುದು. ಆದರೆ ಸಾಕಷ್ಟು ಸಂಖ್ಯೆಯುಳ್ಳ ಒಂದೆರಡು ಪಕ್ಷಗಳಾದರೂ ಇಲ್ಲದಿದ್ದರೆ ಪ್ರಯೋಜನವೇನು? ಹೀಗೆಂದ ಮಾತ್ರಕ್ಕೆ ವಿರೋಧಿ ಪಕ್ಷಗಳು ಅಯೋಗ್ಯವೆಂಬನೆವದಿಂದ ಮತದಾರರು ಆಂಡಕಂಡ ಹಿಂದುಗಳ ಮಾತಿಗೆಬಳಗಾಗಿ ರಾಷ್ಟ್ರದ ಪ್ರತಿಗಾಮಿ ಶಕ್ತಿಗಳಿಗೆ ಅವಕಾಶ ಕೊಡಲಾಗದು ಜಾತ್ಯತೀತ ರಾಷ್ಟ್ರದ ಧ್ಯೇಯಕ್ಕೆ ಚುತಿ ತರುವ ಯಾವ ಪಕ್ಷಕ್ಕೂ ಪುರಸ್ಕಾರ ಸಿಕ್ಕಲಾಗದು. ಧರ್ಮಾಂಧರೇ ದೇಶದ ದುರಂತಕ್ಕೆ ಕಾರಣರಾಗುವರು. ಸರ್ವ ಧರ್ಮಗಳಿಗೂ ಸಮಾನ ದೃಷ್ಟಿಯಿಂದ ಸಹಿಷ್ಣುತೆಯಿಂದ ನೋಡಲು ಭಾರತಿಯರು ಕಲಿಯಬೇಕು ಈಗ ಹಿಂದುಗಳು ಅಧಿಕ ಸಂಖ್ಯಾಕರಾಗಿದ್ದ ಮಾತ್ರಕ್ಕೆ ಪರಮತಗಳನ್ನು ದ್ವೇಷಿಸುವದು ದೊಡ್ಡಸ್ತಿಕೆಯ ಲಕ್ಷಣವಲ್ಲ. ಅದಲ್ಲದೆ ಇಂತಹ ದ್ವೇಷ ವೈಷಮ್ಯಗಳಿಂದ ಹಿಂದುಗಳಲ್ಲಿಯೂ ಒಡಕುಗಳುಂಟಾಗಿ ಜಾತಿ ಜಗಳಕ್ಕೆಳೆಯುವ ಸಂಭವವುಂಟು. ಆದುದರಿಂದ ಸದ್ಯಕ್ಕೆ ಸುಖವೆಂದು ತೋರಿದರೂ ಮುಂದಕ್ಕೆ ಈ ಧರ್ಮ ದ್ವೇಷವುದಳ್ಳುರಿಯಾಗಿ ಹಬ್ಬಿ ಅನೇಕ ಬಣಗಳುಳ್ಳ ಹಿಂದೂ ಧರ್ಮಾನುಯಾಯಿಗಳನ್ನೂ ಮುಕ್ಕುವುದು, ಸುಕ್ಕುವುದು, ಆದುದರಿಂದ ಜಾತೀಯತೆಯು ಜ್ವಾಲೆಯಾಗಿ ಏಳುವ ಮುನ್ನವೇ ಅದನ್ನು ಅದುಮಿ ಹತ್ತಿಕ್ಕಬೇಕು. ಜಾತೀಯ ಭಾವವು ವಿಂಗಡಿಸುವ ವಿಷ. ಅದನ್ನು ತಿರಸ್ಕರಿಸಲೇ ಬೇಕು. ಶ್ರೀ ಜವಾಹರಲಾಲ ನೆಹರುರಂತಹ ಮೇಧಾವಿ ಮುಂದಾಳುಗಳು ಈ ಜಾತೀಯತೆಯನ್ನು ತೊಲಗಿಸಲು ಕಟಿ ಬದ್ಧರಾಗಿದ್ದಾರೆ. ನಮಗೀಗ ಬೇಕಾದುದು ಸ್ನೇಹದ ಶಕ್ತಿ. ರಾಷ್ಟ್ರಕ್ಕೆ ಅಭಯ- ಅಹಿಂಸೆಗಳನ್ನು ಕಲಿಸಿದ ಗಾಂಧೀಜಿಯವರನ್ನು ಸ್ಮರಿಸುವ ಪ್ರತಿಯೊಬ್ಬ ಭಾರತೀಯನೂ ಜಾತಿವೈರ್ತಿಗಾಗಿ ಶ್ರಮಿಸಬೇಕು ಹಿಂದೂ ಮುಸ್ಲಿಮ ಪಾರ್ಸಿ ಸೀಖರ ಅನ್ಯೋನ್ಯ ಬಾಂಧವ್ಯವು ಹೇಗೆ ಅವಶ್ಯವೋ ಹಾಗೆಯೇ ಹಿಂದೂ ಜಾತಿಗಳೊಳಗೆ ಉಚ್ಚ ನೀಚ ಭಾವವಳಿದು ತ್ವೇಷ ದ್ವೇಷಗಳು ನಿರ್ನಾಮವಾಗುವ ಆವಶ್ಯಕತೆಯಿದೆ. ನಾವೆಲ್ಲರೂ ಭಾರತೀಯರೆಂಬ ಭಾವವು ಬೆಳೆಯಬೇಕು. ಆದುದರಿಂದ ಹಿಂದೂ ಮಹಾಸಭೆ, ಭಾರತೀಯ ಜನಸಂಘ ಇಂತಹ ಪಕ್ಷಗಳ ಜಾತಿಧೋರಣವೆಂತಹ ದೆಂಬದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅವು ರಾಜಕಾರಣದಲ್ಲಿ ರಂಪವನ್ನುಂಟು ಮಾಡುವ ಜಾತೀಯ ಸಂಸ್ಥೆಗಳೆಂದು ಈಗಾಗಲೆ ಎಲ್ಲೆಲ್ಲಿಯೂ ಅಭಿಪ್ರಾಯವು ಹರಡಿದೆ. ಇದು ಸರಿಯಾದ ಮಾರ್ಗವಲ್ಲೆಂದು ತಿಳಿದ ಮತದಾರರು ಇತರರಿಗೂ ತಿಳಿಹೇಳಿ ಇಂತಹ ಜಾತೀಯ ಸಂಸ್ಥೆಗಳಿಂದ ದೂರ ಉಳಿಯಲು ಬಿನ್ನವಿಸಬೇಕು.

ಕಮ್ಯೂನಿಸ್ಟ ಪಕ್ಷವು ಬಡತನದ ಭೂತವನ್ನೆದುರಿಸುವುದು, ಸಮತೆಯನ್ನು ಸಾಧಿಸುವುದು, ಅದು ಶ್ರಮಜೀವಿಗಳ- ಕೂಲಿಯಾಳುಗಳ ಕೈವಾರಿ, ಎಂಬ ಬಿರುದು ಬಾವಲಿಗಳನ್ನು ಹೊತ್ತು ನಿಂತಿದ್ದರೂ ರೈತರ ರಕ್ಷಕನೆಂದು ಹೊಗಳಿಸಿ ಕೊಳ್ಳುತ್ತಿದ್ದರೂ ಅದು ಜನಪ್ರಿಯವಾಗಲೊಲ್ಲದು. ಇದಕ್ಕೆ ತಕ್ಕ ಕಾರಣಗಳುಂಟು. ಅದರ ವಿರುದ್ಧ ಜನತೆಯು ಸಾಮಾನ್ಯವಾಗಿ ಹೊರಿಸುವ ಆಕ್ಷೇಪವೆಂದರೆ ಅದು ರಶಿಯದ ಸೆರಗು ಹಿಡಿದ ಶಿಶುವೆಂಬುದು, ಮಾಸ್ಕೋದ ಮರ್ಜಿಯಂತೆ ಮಣಿಯುವ- ಕುಣಿಯುವ ಪಕ್ಷವೆಂಬುದು ಒಂದು ವಿದೇಶದ ಆದೇಶದಂತೆ ನಡೆಯುವ ಪಕ್ಷವು ಇದೀಗ ಸ್ವತಂತ್ರವಾದ ಭಾರತಕ್ಕೆ ಹಿತಕಾರಿಯಾಗಲಾರದು. ಕಮ್ಯೂನಿಸ್ಟ ಮುಂದಾಳುಗಳು ಈ ಆರೋಪವನ್ನು ಅಲ್ಲಗಳೆಯುತ್ತಾರೆಂಬುದನ್ನೂ ಮರೆಯಲಾಗದು. ಹೀಗಿರುತ್ತ ಮತದಾರರು ಈ ಪಕ್ಷದ ಗೊತ್ತು ಗುರಿಗಳ ಬಗೆಗೆ ಕೂಲಂಕುಷ ವಿವರಗಳನ್ನು ಅರಿತುಕೊಳ್ಳಬೇಕು. ಮೇಲಿನ ಆರೋಪಕ್ಕೆ ಸಾಕಷ್ಟು ಆಧಾರ ಇರುವುದೆಂದು ಮನವರಿಕೆಯಾದರೆ ಅಂತಹ ಪಕ್ಷದ ಸಹವಾಸವನ್ನೇ ತೊರೆಯಬೇಕು ಅದಲ್ಲದೆ ಕಮ್ಯೂನಿಸ್ಟರು ಕ್ರಾಂತಿಕಾರರು, ಕೊಲೆ ಸುಲಿಗೆಗಳನ್ನೆಸಗುವ ಹಿಂಸಾ ಮಾರ್ಗಿಗಳು ಎಂಬ ಕೂಗು ಎಲ್ಲೆಲ್ಲಿಯೂ ಕೇಳಬರುತ್ತಿದೆ. ಈ ಮಾತಿನ ತಥ್ಯಮಿಥ್ಯಗಳನ್ನು ತಿಳಿದುಕೊಳ್ಳಬೇಕು ಸಾಮಾನ್ಯವಾಗಿ ಮತದಾರರು ಹಿಂಸಾ ಮಾರ್ಗವನ್ನೆಂದಿಗೂ ಒಪ್ಪಲಾರರು. ನಮ್ಮ ಭಾರತೀಯ ಸಮಾಜ ವರ್ಗಗಳಲ್ಲಿ ಅದೆಷ್ಟು ಆರ್ಥಿಕ ಅಸಮತೆಯಿದ್ದರೂ ಅದನ್ನು ಕಡಿಮೆಯಾಗಿಸಿ ತಿದ್ದಲು ಹಿಂಸಾಚಾರವು ಸಲ್ಲದ ದಾರಿ ಯೆಂಬುದನ್ನು ಯಾರೂ ಅಲ್ಲಗಳೆಯರು, ನ್ಯಾಯಬದ್ಧವಾದ ಶಾಸನ ಕ್ರಮಗಳಿಂದ ಸುಧಾರಣೆಯು ಸಾಧ್ಯವಿರುವಾಗ ಹಿಂಸೆಯ ಹಾದಿಯು ಸರಿಯಲ್ಲ.

ಇನ್ನು ಕಾಂಗ್ರೆಸು ಜನತಾಪಕ್ಷ. ಅನೇಕ ಆದು ಪಕ್ಷಕ್ಕಿಂತಲೂ ದೊಡ್ಡದಾಗಿ ವಿಶಾಲವಾದ ಆಳವಾದ ಸಂಬಂಧಗಳುಳ್ಳ ಸಂಸ್ಥೆ. ಅದು ರಾಷ್ಟ್ರೀಯ ಸಂಸ್ಥೆ- ಅದರಲ್ಲಿ ನಿಷ್ಠ ನಾಡಿಗರನ್ನಿಟ್ಟವರು ಲೆಕ್ಕಕ್ಕೆ ಸಿಕ್ಕದಷ್ಟು ಅಸ್ಥಿಕರಾಗಿದ್ದಾರೆ. ಅದರ ಕಾರ್ಯಶಕ್ತಿ ಎಲ್ಲರಿಗೂ ತಿಳಿದ ವಿಷಯ ಅದು ತನ್ನ ಸೇವಾಬಲದ ಪ್ರಭಾವದಿಂದಲೆ ಪ್ರಸಿದ್ಧವಾಗಿದೆ ಕಾಂಗ್ರೆಸಿಗೆ ಜನರು ಸ್ವಯಂಸ್ಫೂರ್ತಿಯಿಂದ ಉತ್ಸಾಹ ಉಲ್ಲಾಸಗಳಿಂದ ನೆರವನ್ನು ನೀಡುವರು.

ಆದರೆ ೧೯೪೭ರಲ್ಲಿ ಕಾಂಗ್ರೆಸು ಸರಕಾರದಲ್ಲಿ ಅಧಿಕಾರ ವಹಿಸಿದಂದಿನಿಂದ, ಕಾಂಗ್ರೆಸು ಸಾಧಿಸಿದ ಕಾರ್ಯದ ಕಲ್ಪನೆ ಸಾಮಾನ್ಯ ಜನರಿಗೆ ಬಾರದುದರಿಂದ ಅಲ್ಲಲ್ಲಿ ಈ ಮಹಾ ಸಂಸ್ಥೆಯ ಬಗೆಗೆ ಅಲ್ಲದ ಸಲ್ಲದ ಟೀಕೆಗಳು ನಡೆಯುತ್ತಿವೆ. ಇದೊಂದು ಅಸಮಾಧಾನದ ಸಂಗತಿ ಆದುದರಿಂದ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸಿನ ಚುನಾವಣಾ ಘೋಷಣೆಯ ಅಂಶಗಳನ್ನೆಲ್ಲ ವಿಸ್ತರಿಸಿ ಅಂಕ ಸಂಖ್ಯೆಗಳ ಆಧಾರದಿಂದ ಜನತೆಗೆ ತಿಳಿಸಬೇಕಲ್ಲದೆ ಕಳೆದ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸು ಗೈದ ಕಾರ್ಯ ವಿಶೇಷವನ್ನು ಸ್ಪಷ್ಟವಾಗಿ ಅರುಹಬೇಕು. ಚುನಾವಣೆಯ ಪ್ರಚಾರದಲ್ಲಿ ಕಾಂಗ್ರೆಸಿನ ಬಗೆಗಿರುವ ಸಂದೇಹವನ್ನು ಹೋಗಲಾಡಿಸಬೇಕು, ನಿರಾಶೆಯನ್ನು ನಿರ್ಮೂಲಿಸಬೇಕು. ಕಾಂಗ್ರೆಸು ಈ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಬಂದು, ಎಂದಿನಂತೆ ಬಲಾಢ್ಯವಾಗಿ ಬೆಳಗುವದೆಂದು ನಂಬಲು ಅಡ್ಡಿಯಿಲ್ಲ.

(ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ,

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಹಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇಯು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸಿಖಾರ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂದಕ್ಕೆ ೫ ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್, ಶಂಭುಲಿಂಗೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ವಿಳಾಸ

ರೇವಣಸಿದ್ಧಪ್ಪ ಶ್ರೀಶೈಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಿಡಿದಿಟ್ಟ ಋತುಸ್ರಾವವು ಪುನಃ ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-1 ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹಸ್ನೆರಡಾಣೆ ಪ್ರತ್ಯೇಕ.]

MRS- P. DEVEE, F D3 (N. .)
Tollygunge CALCUTTA

ಸ್ತ್ರೀಯರು ಪತ್ರ ಬರೆಯಬಹುದು, ನಮ್ಮಲ್ಲಿ ಸಿಗುತ್ತದೆ ಬರೆಯಿರಿ

ಕೊರಡ್ಯಲ್ ಪ್ರೀಮಿಯರ್ ಸ್ಕೀಮ್
ಪರಿಚಿತ

ಸುಲಭದಲ್ಲಿ ಇಂಗ್ಲಿಷ್

ಅಂಗ್ಲ ಸ್ವಯಂಬೋಧಿನಿ

ಬೆಲೆ ರೂ 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಾರದ ಭವಿಷ್ಯ

ತಾರೀಕು 22-11-51 ರಿಂದ — ತಾರೀಕು 28-11-51 ವರೆಗೆ

ಮೇಷ—ಒಳ್ಳೆ ಸಾಹಸಿಗಳೂ ಶಕ್ತರೂ ಆದ ನಿಮಗೆ ಈ ವಾರದಲ್ಲಿ ದೈವವು ಹೆಚ್ಚಿನ ಅನುಕೂಲವಿಲ್ಲದ್ದರಿಂದ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲ ಲಭಿಸದು. ಶತ್ರುಜನರು ಪರಾಭವ ಹೊಂದುವರಾದರೂ ಆಪ್ತೇಷ್ಟರು ನಿಮ್ಮಿಂದ ದೂರವಾಗಲಿರುವರು. ನೌಕರಿ ವ್ಯವಹಾರಾದಿ ಉದ್ಯಮಗಳಲ್ಲಿ ನಷ್ಟಕಷ್ಟಗಳೇ ಅಧಿಕವಾಗುವವು. ಗೃಹತಾಪತ್ರಯಗಳು ಹೆಚ್ಚುವವು. ತನುಮನಗಳಿಗೆ ಸುಖಶಾಂತಿಗಳಿರವು. ಮಾರ್ಗಾತಿಕ್ರಮಣದಲ್ಲಿ ದುಃಖ ನಷ್ಟಗಳು ಹೆಚ್ಚುವವು. ವಾರಾಂತ್ಯದ 5ದಿನಗಳು ಕಿಂಚಿದಿಷ್ಟಪ್ರದಗಳಿವೆ.

ವೃಷಭ—ನೈಸರ್ಗಿಕ ಶುಭರಾದ ಬುಧ ಗುರು ಶುಕ್ರರು ಈ ವಾರದಲ್ಲಿ ನಿಮ್ಮ ಮೇಲೆ ಅನುಗ್ರಹ ದೃಷ್ಟಿಯನ್ನಿಟ್ಟಿರುವುದರಿಂದ ಬಹುಕಾಲ ನೀವೀವಾರದಲ್ಲಿ ತತ್ರಾಪಿ ಸದುದ್ಯಮಗಳಲ್ಲಿ ವಿಜಯಿಗಳಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಯಶಸ್ಸಿಲ್ಲದಿದ್ದರೂ ಇತರ ಸಾಮಾಜಿಕ ಕಾರ್ಯಗಳಲ್ಲೂ ಅಧ್ಯಯನ ಭಾಗದಲ್ಲೂ ವಿಜಯಿಗಳಾಗುವಿರಿ. ವಿದ್ಯೋಪಜೀವಿಗಳಿಗೆ ಕಾಲವು ಸುಖಮಯವಾಗಿರುವದು. ಕಫ ವಾತದೋಷದಿಂದ ದೇಹಾರೋಗ್ಯ ಕೆಡಲಿದೆ. ತಾ. 22, 27, 28 ಇದ್ದುದರಲ್ಲಿ ಉತ್ತಮವಿದೆ.

ಮಿಥುನ—ನಿಮ್ಮ ಭಾಗ್ಯಲಾಭ ಪತಿಗಳಾದ ಶನಿ ಕುಜರು ಇಂದೀಗ ಸುಖಸ್ಥಾನದಲ್ಲಿ ಸೇರಿರುವರು. ಇಂದಿನ ನಿಮ್ಮ ಆದಾಯವು ಅಷ್ಟೊಂದು ತೃಪ್ತಿಕರವಲ್ಲದಿದ್ದರೂ ನಿಮ್ಮ ಸುಖಭೋಗಗಳಿಗೆ ಯಾವತರದ ನ್ಯೂನತೆಯೂ ಬರಲಾರದು. ನಿಮ್ಮ ಮನಸ್ಸು ಸದಾ ಹೆದರಿದ ಹುಲ್ಲೆಯಂತೆ ಚಂಚಲವಾಗಿದ್ದು ಯಾವ ಕೆಲಸಕ್ಕೂ ಮುಂದಾಗಿ ಹೋಗಲು ಹಿಂಜರಿವಿರಿ. ಶತ್ರುಜನರು ಮಿತ್ರರ ಸೋಗು ಹಾಕಿಕೊಂಡು ನಿಮ್ಮನ್ನು ವಂಚಿಸಲಿರುವರು. ಜಾಗ್ರತೆ. ತಾ. 22, 23, 28 ಈ ದಿನಗಳು ಇಷ್ಟಸಿದ್ಧಿಕರಗಳು.

ಕರ್ಕಟ—ಸದ್ಯ ನಿಮಗಾವ ಚಿಂತೆಯೂ ಇಲ್ಲವೆಂದರೆ ತಪ್ಪಾಗದು. ನೀವಾವ ಕಾರ್ಯಕ್ಕೆ ಕೈಯಿಕ್ಕಿದರೂ ಅಚಿರದಲ್ಲೇ ಅದು ಅನಾಯಾಸದಿಂದ ಮಹತ್ಫಲವೀಯಲು ಸಮರ್ಥವಾಗುವುದು, ಜನತೆಯ ಆದರಾತಿಥ್ಯಗಳಿಗೆ ಪಾತ್ರರಾಗುವಿರಿ. ಬಂಧುಮಿತ್ರರ ನೆರವು ಅವಿಚ್ಛಿನ್ನವಾಗಿ ಲಭಿಸಲಿದೆ. ಉದ್ಯೋಗದಲ್ಲಿ ದಿನೇ ದಿನೇ ಪ್ರಗತಿಯು ಕಾಣಿಸುವದು. ಪ್ರತಿಯೊಂದು ಕಾರ್ಯದಲ್ಲೂ ವಿಜಯಶ್ರೀಯು ನಿಮ್ಮನ್ನೇ ವರಿಸಲಿರುವಳೆಂದ ಮೇಲೆ ಯಾವ ತೆರನಾದ ಚಿಂತೆಯೂ ನಿಮಗೀವಾರದಲ್ಲಿ ಬರಲಾರದು. ತಾ. 24, 25ಇದೇ ವಾರದಲ್ಲಿ ಅತ್ಯುತ್ತಮ ದಿನಗಳು.

ಸಿಂಹ—ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವು ಹ್ರಾಸವನ್ನೈದುತ್ತಾ ಬರುತ್ತಲಿದೆ. ನಿಷ್ಕಾರ ಬಾಹಿಗಳಾಗಿ ಹಲವರೊಡನೆ ಜಗಳವಾಡುವಿರಿ. ಯಾವ ಕಾರ್ಯದಲ್ಲೂ ನಷ್ಟವೇ ವಿನಾ ಹೆಚ್ಚಿಗೆ ಫಲಕಾಣಿಸದು. ಮನೆಯಲ್ಲಿಂತೂ ತಂದೆ ಮಕ್ಕಳೊಳೂ ಗಂಡಹೆಂಡಿರೊಳೂ ನಿತ್ಯ ಕಲಹವಾಗುವದು. ಇದ್ದ ಅಲ್ಪಸ್ವಲ್ಪ ಭಾಗ್ಯವನ್ನೂ ಅನುಭವಿಸುವ ಯೋಗ್ಯತೆಯೂ ನಿಮಗಿಲ್ಲವು. ಸರ್ವತ್ರ ನಿರಾಶೆಯು ಅಂಧಕಾರವೇ ಕವಿದಿದ್ದ ಮುಂದಿನ ದಾರಿಗಾಣದಂತಾಗುವುದು, ತಾ. 22, 23, 26, 27 ಈ ದಿನಗಳು ಇತರ ದಿನಗಳಿಗಿಂತ ವಾಸಿಯೆನ್ನಬಹುದು.

ಕನ್ಯಾ—ಇಂದಿನ ನಿಮ್ಮ ಅದೃಷ್ಟವು ಬಹುಮಟ್ಟಿಗೆ ಉತ್ತಮಸ್ಥಿತಿಗೆ ಬಂದಿದೆ. ನಿಮ್ಮ ಆರ್ಥಿಕ ಭಾಗವು ವಿಶೇಷತಃ ನಿಮ್ಮ ಪರಿಶ್ರಮದಿಂದಲೇ ತತ್ರಾಪಿ ನೀಚಕರ್ಮ (ವೃತ್ತಿ)ಗಳಿಂದಲೇ ಅಭಿವೃದ್ಧಿ ಹೊಂದುವದು. ಒಳ್ಳೇ ವಾಚಾಲರಾದ ನಿಮ್ಮ ಮಾತಿಗೆ ಜನತೆಯು ತಲೆಬಾಗುವದು ಸಮಾಜದಲ್ಲಿ ಒಳ್ಳೇ ಹೆಸರನ್ನು ಪಡೆವಿರಿ. ಮಿತ್ರರ ನೆರವು ಬಂಧುಗಳ ಸಹಕಾರ ಗುರುಹಿರಿಯರ ಅನುಗ್ರಹ ಇವುಗಳು ಉತ್ತಮವಿರುವುದರಿಂದ ನೀವೀವಾರವನ್ನು ನಿಶ್ಚಿಂತೆಯಿಂದ ಕಳೆವಿರಿ ತಾ 24, 25, 28 ಅನುಕೂಲ ದಿನಗಳು.

ತುಲಾ—ಮೇಲಿಂದ ಮೇಲೆ ಬರತಕ್ಕ ಕಷ್ಟಾನಿಷ್ಟ ಪರಂಪರೆಗಳಿಂದ ನೀವು ತಲೆಯೆತ್ತಿ ನಡೆಯಲಾರಿರಿ. ಮನೋರೋಗವಂತೂ ದಿನ ದಿನಕ್ಕೆ ಅಧಿಕವಾಗುತ್ತಾ ಹೋಗುವದು. ಆದಾಯವೇ ಅತ್ಯಲ್ಪ. ಅದಕ್ಕಿಂತ ದ್ವಿಗುಣ ವ್ಯಯವು ವ್ಯರ್ಥವಾಗಿ ಪ್ರಾಪ್ತವಾಗಿ ನಿಮ್ಮನ್ನು ಸಾಲಶೂಲಗಳಿಗೆ ಗುರಿಮಾಡುವದು. ಆಪ್ತೇಷ್ಟರಲ್ಲಿ ಅಪನಂಬಿಕೆ ಹುಟ್ಟುವದಂತಿರಲಿ ನಿಮ್ಮಲ್ಲೇ ನಿಮಗೆ ನಂಬಿಕೆಯಿಲ್ಲದಂತಾಗುವುದು. ಉದ್ಯೋಗದಲ್ಲಿ ಅಧಿಕಾರಿಗಳ ಪೀಡೆ ಹೆಚ್ಚಲಿದೆ. ಪ್ರವಾಸಕ್ಕೀಕಾಲವು ಉಚಿತವಲ್ಲ. ತಾ. 24, 25 ಅತೀವ ಕಷ್ಟಪ್ರದಾಯಿಯಾಗಿ ಪರಿಣಮಿಸೀತು.

ವೃಶ್ಚಿಕ—ಲಾಭಪತಿಯು ಧನದಲ್ಲೂ ಲಾಭದಲ್ಲಿ ಗ್ರಹತ್ರಯರೂ ಸೇರಿರುವುದರಿಂದ ನಿಮಗೀವಾರವು ಅತ್ಯಂತ ಧನದಾಯಿಯಾಗುವದು. ನೀವು ಕೈಬಿಟ್ಟ ಸಾಲಾದಿಗಳೂ ಇಂದೀಗ ವಸೂಲಾಗುವವು. ಆರ್ಥಿಕ ಭಾಗವು ಉನ್ನತಿಯುತುಂಗ ತುದಿಗೇರಲಿದೆ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲೂ ನಿಮ್ಮ ಪಂಥವೇ ಮೇಲಾಗುವದು. ಇದಿರಾಳಿಗಳು ಮೃಗರಾಜನಂ ಕಂಡ ಹುಲ್ಲೆಮಂಗಳಂತೆ ಅಲ್ಲಲ್ಲೆ ಮಾಯವಾಗುವರು. ಯಾವ ಭಾಗದಲ್ಲೂ ಕುಂದುಕೊರತೆಗಳಿಲ್ಲದೆ ಸುಖದಿಂದ ಕಾಲಕಳೆದ ನಿಮಗೆ ತಾ. 22, 23, 24 25, 28 ಅತ್ಯುತ್ತಮ ದಿನಗಳಾಗಿವೆ.

ಧನು—ಕನಸು ಮನಸಿನಲ್ಲೂ ನೆನೆಸದ ವಿಪತ್ತುಗಳು ನಿಮಗೀವಾರದಲ್ಲಿ ಪ್ರಾಪ್ತವಾಗಲಿವೆ. ನಿಷ್ಕಾರಣವಾಗಿ ಜನರೊಡನೆ ಕಲಹವಾಗುವದು. ಮಧುವಿಲ್ಲದ ಸುಮಗಳನ್ನು ಮಧುಕರಗಳೂ ದೂರೀಕರಿಸುವಂತೆ ರಿಕ್ತಹಸ್ತರಾದ ನಿಮ್ಮನ್ನು ಆಪ್ತಬಂಧುಗಳೂ ತ್ಯಜಿಸುವರು. ಸಾಂಸಾರಿಕ ತಾಪತ್ರಯಗಳಿಂದಾಗಿ ಮರ್ಯಾದೆಯಿಂದ ದಿನಗಳೆವುದೇ ಕಠಿಣವೆನಿಸುವದು. ವಿದ್ಯೋಪಜೀವಿಗಳಿಗೂ ವ್ಯಾಪಾರಿಜನರಿಗೂ ವಿಶೇಷತಃ ಸೇವಕ ವರ್ಗದವರಿಗೂ ಈ ವಾರವು ದುಃಖದಾಯಿಯಾಗಿ ಪರಿಣಮಿಸಲಿದೆ ತತ್ರಾಪಿ ದೇಹಾಲಸ್ಯದಿಂದ ವಿಶೇಷವಾಗಿ ಬಳಲುವಿರಿ. ತಾ. 24, 25, 26, 27 ಈ ದಿನಗಳಲ್ಲಿ ಮೇಲಿನಷ್ಟು ಅನಿಷ್ಟಗಳು ಕಾಣಿಸವು.

ಮಕರ—ಉತ್ಪತ್ತಿಗಿಂತ ಇಮ್ಮಡಿ ವ್ಯಯವಾದೀತು. ಹೆಚ್ಚಿನ ನಿಮ್ಮ ಕಾರ್ಯಗಳಿಗೆ ವಿಘ್ನಗಳು ಮಧ್ಯದಲ್ಲಿ ನಿಲ್ಲಿಸುವ ಪ್ರಸಂಗ ಬರಲಿದೆ. ಪಿತ್ತದೋಷಾಧಿಕ್ಯದಿಂದ ನಿದ್ರಾಭಾವ ದುಃಸ್ವಪ್ನ ಮೊದಲಾದವುಗಳು ಕಾಣಿಸುವವು. ದೇಹದಲ್ಲಿ ದಿನೇ ದಿನೇ ನಿಶ್ಶಕ್ತಿ ಹೆಚ್ಚುವದು. ಜನತೆಯ ಅವಿಶ್ವಾಸ ಅನಾದರಗಳಿಗೆ ಪಾತ್ರರಾದ ನಿಮಗೆ ದಿನಯಾಪನೆಯು ಬಹಳ ಕಠಿಣವಾಗುವದು. ಆತ್ಮೀಯರ ವಿಯೋಗ ಸ್ತ್ರೀಪುತ್ರರ ವಿರಹದಿಂದ ನಿತ್ಯ ದುಃಖಿಗಳಾಗುವಿರಿ. ವಾರಾಂತ್ಯದ 3ದಿನಗಳು ಇತರ ದಿನಗಳಿಗಿಂತ ಲೇಸೆನಿಸುವವು.

ಕುಂಭ—"ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ" ಎಂಬ ಲೋಕೋಕ್ತಿಯಂತೆ ದುಃಖಾನುಭವದ ನಂತರದಲ್ಲಿ ನಿಮಗೆ ಪ್ರಾಪ್ತವಾಗಿರತಕ್ಕ ಈ ಸುಖವು ಹೆಚ್ಚಿನ ಸಂಶಯವನ್ನೀಯಲಿದೆ. ನಿಮ್ಮ ಉದ್ಯಮಗಳು ನಿರಾತಂಕವಾಗಿ ಸಾಗುವದಲ್ಲದೆ ಹೆಚ್ಚಿನ ಲಾಭವನ್ನೂ ಪಡೆವಿರಿ. ಗೃಹತಾಪತ್ರಯಗಳೆಲ್ಲವೂ ನಿವಾರಿಸಲ್ಪಡುವವು. ಮಹತ್ತರ ಮೈತ್ರಿಯು ಲಭಿಸುವದು. ಕೆಲವೊಮ್ಮೆ ದೇಹದಲ್ಲಿ ಕಜ್ಜಿ ಹುಣ್ಣು ಮೊದಲಾದ ಚರ್ಮರೋಗದ ಉಪದ್ರವ ಕಾಣಿಸಬಹುದು. ಶತ್ರುಜನರೂ ಶಕ್ತಿಮೀರಿ ಉಪದ್ರವಿಸಲಿರುವರು. ತಾ. 22, 23, 28ಲಾಭವಿಜಯ ಸುಖಕಾರಿಗಳಾಗಿವೆ.

ಮೀನ—ಕಳೆದ ವಾರಕ್ಕಿಂತ ಈ ವಾರವು ಉತ್ತಮವಾಗಿರುವುದಾದರೂ ನಿಮ್ಮ ಪರಿಸ್ಥಿತಿಯಲ್ಲಿ ಏನೂ ಹೆಚ್ಚಿನ ಬದಲಾವಣೆಗಳಾಗಲಾರವು. ದಿನಯಾಪನೆಯು ಸಲುವಾಗಿ ಸಾಲಮಾಡುವಿರಿ. ಸ್ತ್ರೀವರ್ಗದವರಿಂದ ಹೆಚ್ಚಿನ ಅನಿಷ್ಟಗಳೊದಗುವವು. ತತ್ರಾಪಿ ಕೈಹಿಡಿದಾಕೆಯಿಂದ ನಿಮಗೆ ಸುಖವಿಲ್ಲದಂತಾಗುವದು. ಸಂಸಾರದಲ್ಲಿನ ಅನಾರೋಗ್ಯ ಬೇವಾದೇವಿ ನಿಮಿತ್ತ ಉಂಟಾದ ಕಲಹ ಇವುಗಳಿಂದ ನಿತ್ಯ ಚಿಂತೆಗೆ ಗುರಿಯಾಗುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟವುಂಟಾಗಲಿದೆ. ವಾರಾದಿಯ 4ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಿ ಗೃಹಸ್ಥ ಹಿಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1ಗುಳಿಗೆ ಮಧ್ಯಾಹ್ನಕ್ಕೆ 1ಗುಳಿಗೆ, ಸಂಜೆಗೆ 1ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲಿ ಇರಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಖರ್ಚು 1 ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ [illegible]— [illegible] ಸಿದ್ಧಲಿಂಗಪ್ಪ [illegible] ಸಂಗಮೇಶ್ವರ [illegible] ದಾವಣಗೇರಿ:— ದಾವಣಗೇರಿ [illegible]

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

31ನೆ ವರ್ಷ

29-11-1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.



ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೧೨

NAVAYUGA WEEKLY Post Box No. 22 UDIPI.

Vol. 31
No. 12

ಇದು ತತ್ವನಿಷ್ಠೆಯೆ?

ದಿಲ್ಲಿಯ ಪರಿಷ್ಕೃತ ಕಾಂಗ್ರೆಸ್ ಯಾದಿಯ ಪ್ರತಿಕ್ರಿಯೆಯನ್ನು ಲಕ್ಷಿಸುವಾಗ ಪಶ್ಚಾತ್ತಾಪವಾಗುತ್ತದೆ. ಮೊದಲು ಸಹಸ್ರಕ್ಕೂ ಮಿಕ್ಕಿ ಉಮೇದುವಾರಿಯ ಅರ್ಜಿಗಳು ಬಂದಿದ್ದು ಅದರಲ್ಲಿ ಯೋಗ್ಯತಾವಂತರಾರು—ನಿಜವಾದ ದೇಶಸೇವಕರಾರು ಕಾಂಗ್ರೆಸ್ ತತ್ವಾನುಯಾಯಿಗಳಾರು ಎಂಬ ತೀರ್ಮಾನ ಕೊಡುವದು ಸಾಮಾನ್ಯದ ಕೆಲಸವೇನಲ್ಲ. ಇನ್ನು ಜನವೂ ಕಾಂಗ್ರೆಸ್ಸಿನ ಉದಾತ್ತ ಹಾಗೂ ವಿಶಾಲ ತತ್ವಧಾರಿಗಳಾಗಿದ್ದಾರೆಯೇ— ಹೇಗೆಂಬುದು ಸಂಶಯಾಸ್ಪದ ವಿಚಾರ. ಆದರೂ ಕೇಂದ್ರ ಚುನಾವಣಾ ಸಮಿತಿ ತನ್ನ ಬುದ್ಧಿಮತ್ತೆ— ಮುತ್ಸದ್ದಿತನವನ್ನು ಉಪಯೋಗಿಸಿ ಒಂದು ತೀರ್ಮಾನಕ್ಕೆ ಬಂದಿದೆ. ಈ ತೀರ್ಮಾನದ ಕುರಿತು ಪ್ರಧಾನ ಮಂತ್ರಿ ನೆಹ್ರೂರವರು “ಇದು ಪರಿಪೂರ್ಣವೆನ್ನಲು ಸಾಧ್ಯವಿಲ್ಲ— ನಾವು ಅನುಸರಿಸಿದ ಪದ್ಧತಿಯಿಂದ ಲೋಪದೋಷಗಳು ಉಳಿಯುವದು ಅನಿವಾರ್ಯ. ದೇಶಹಿತದದೃಷ್ಟಿಯಿಂದ ನಾವು ಇದನ್ನು ಮನ್ನಿಸುವ— ಇಲ್ಲವೆ ಸಹಿಸುವ ಧೋರಣೆಯನ್ನು ವಹಿಸಬೇಕು. ಮುಂದಕ್ಕೆ ಇದರಿಂದ ಒಳ್ಳೆಯ ಅನುಭವ ಪಡೆದಂತಾಯಿತು” ಎಂದಿರುವರು. ಇಲ್ಲಿ ತಪ್ಪು-ದೋಷಗಳು ಹಲವು ಸಂದರ್ಭಗಳಲ್ಲಿ ಉಳಿದುಕೊಂಡಿದ್ದರೆ ಅದು ಸ್ವಾಭಾವಿಕ. ಅದನ್ನು ಶ್ರೀ ನೆಹ್ರೂರವರು ಒಪ್ಪಿಕೊಂಡುದು ಅವರಲ್ಲಿರುವ ಸೌಜನ್ಯ—ನ್ಯಾಯ ಪಕ್ಷಪಾತನವನ್ನು ವ್ಯಕ್ತಪಡಿಸುತ್ತದೆ.

ಕಾಂಗ್ರೆಸ್ ಟಿಕೇಟನ್ನು ಪಡೆಯುವದರ ಸಲುವಾಗಿ ತಮ್ಮ ತಮ್ಮ ‘ಭಕ್ತಿ’ ‘ಯೋಗ್ಯತೆ’—ರಾಜಕೀಯ ಕಾರುಭಾರಗಳ ವರದಿಯನ್ನೊಪ್ಪಿಸಿ ವ್ಯಕ್ತಿತ್ವವನ್ನು ಹೆಚ್ಚಿಸಿಕೊಳ್ಳಲೆತ್ನ ಮಾಡಿದವರು—ಇಂದು ಟಿಕೇಟು ದೊರೆಯದಾಗ ಹಿಂದಿನದನ್ನೆಲ್ಲ ಮರೆತು ವಿರುದ್ಧ ವರ್ತಿಸುವ ದಾಖಲೆಗಳು ಕಂಡು ಬರುತ್ತಿವೆ. ಕಾಂಗ್ರೆಸ್ಸಿನ ಆದರ್ಶ ಪರಿಪಾಲನೆಯಲ್ಲಿ ಬಹು ಕಾಲದಿಂದ ಆರಕ್ತಿಯಿಟ್ಟುಕೊಂಡವರು:— ದೇಶಸೇವೆಗಾಗಿ ಬದ್ಧಕಂಕಣರಾದವರು ಟಿಕೇಟಿಗಾಗಿ ದಿಲ್ಲಿಗೋಡಿದವರು ಟಿಕೇಟು ದೊರೆಯಲಿಲ್ಲವೆಂಬ ಕಾರಣದ ಮೇಲೆ ಕಾಂಗ್ರೆಸನ್ನು ಹೇಗೆ ತ್ಯಜಿಸಿರುವರೋ? ತತ್ವ ಆದರ್ಶಗಳು ಹೇಗೆ ಅವರಿಂದ ಕಳಚಿ ಬೀಳುತ್ತವೋ—ಕಾಂಗ್ರೆಸ್ಸಿನಂತಹ ಉಚ್ಚಾದರ್ಶಗಳು ಹೇಗೆ ದೇಡಾಗುತ್ತವೋ ಇವೆಲ್ಲ ಅಚ್ಚರಿಯ ಸಂಗತಿ! ಮಾತ್ರವಲ್ಲ, ನಾಲ್ಕು ವರ್ಷದಲ್ಲಿ ಕಾಂಗ್ರೆಸು ತಪ್ಪುಮಾಡಿತೆನ್ನುವ ಸನ್ನಿವೇಶಗಳನ್ನು ಪುಂಖಾನುಪುಂಖವಾಗಿ ಊದುತ ಈ ಮಹಾಶಯರಿಗೆ ತಾವು ಉಮೇದುವಾರಿಕೆಯ ಪತ್ರಿಕೆಯನ್ನು ಸಲ್ಲಿಸುವ ಮೊದಲು ಗೊತ್ತಾಗದೆ ಈಗ ಹಿಂದಿನ ನಾಲ್ಕುವರ್ಷದ ಆಡಳಿತದ ಮೇಲೆ ಟೀಕೆ ಮಾಡುವ ಜ್ಞಾನ ಹೇಗೆ ಬರುತ್ತದೋ—ಇದೂ ಒಂದು ಸ್ವಾರಸ್ಯದ ಸಂಗತಿಯೆ!

ನಿರಾಕೃತರಾದ ಜನ ಕಾಂಗ್ರೆಸ್ಸನ್ನು ಭದ್ರಗೊಳಿಸುವ ಇಲ್ಲವೆ ನಿಷ್ಠೆಯನ್ನು ತೋರಿಸುವ ಧೋರಣೆಯ ಬದಲಾಗಿ ಟೀಕೆ— ವಿರುದ್ಧ ಒಳಸಂಚು— ಕಾಂಗ್ರೆಸು ಸೋಲುವದರಲ್ಲೇ ಹೆಚ್ಚು ಇಷ್ಟವುಳ್ಳವರಾಗದೇ ಇದ್ದರೆ ಅವರ ಕಾಂಗ್ರೆಸ್ ನಿಷ್ಠೆಯ ಕುರಿತು ಸಂಶಯ ಮೂಡುತ್ತದೆ. “ಸ್ವಾರ್ಥ ಹಾಗೂ ಅಧಿಕಾರ ಲಾಲಸೆಯಿಂದ ಹಲವರು ಕಾಂಗ್ರೆಸ್ಸು ಸೇರಿಕೊಂಡು ಆ ಸಂಸ್ಥೆಯ ಸತ್ಕೀರ್ತಿಗೆ ಕಳಂಕ ತರುತ್ತಲಿದ್ದಾರೆ” ಎನುವ ಜನತೆಯ ಮಾತಿಗೆ ಈ ಮಹನೀಯರು ಸಾಕ್ಷಿಯಾಗಿದ್ದಾರೆ.

ಇದನ್ನು ಲಕ್ಷಿಸುವಾಗ ಕೇಂದ್ರ ಚುನಾವಣಾ ಸಮಿತಿಯೂ ಒಳ್ಳೆಯ ಕಾರ್ಯವನ್ನೇ ಮಾಡಿತೆಂದು ಹೇಳಬೇಕು. ಅಲ್ಪಸ್ವಲ್ಪ ತಪ್ಪು ಒಪ್ಪುಗಳು ಕಂಡುಬಂದರೂ ಬಹ್ವಂಶ ಆಯಿಕೆಗಳು ಅತ್ಯಂತ ಯೋಗ್ಯವಾದವುಗಳೆನ್ನಬಹುದು. ಕಾಂಗ್ರೆಸ್ ಟಿಕೇಟನ್ನು ಯಾಚಿಸಿ ದೇಶಕ್ಕೆ ಕೇಡು ಬಗೆಯುವ ಜನ ಯಾರೆಂಬುದನ್ನು ನಾವೀಗ ಅನಾಯಾಸವಾಗಿ ತಿಳಿದುಕೊಳ್ಳಬಹುದು. ಒಳ್ಳೆಯವರು ಹಲವರು ದೂರ ಸರಿದರಲ್ಲಾ—ಕೊಂಚ ಅನ್ಯಾಯವಾಯಿತಲ್ಲಾ ಎಂದು ತುಸು ಕನಿಕರಪಡುವದಾದರೂ ಕಾಂಗ್ರೆಸ್ ವಿರೋಧಿಗಳು ಹೊರಗೆ ಬಿದ್ದುದರಿಂದ ದೊಡ್ಡ ಗಂಡಾಂತರ ಪರಿಹಾರವಾದಂತಾಯಿತಲ್ಲಾ! ಸಂಸ್ಥೆಯ ಮೇಲಣ ಪೂಜ್ಯಭಾವನೆಯನ್ನು ತೊರೆದು ಆ ಸಂಸ್ಥೆಯನ್ನುರುಳಿಸುವ ವಿಘಾತಕ ಕಾರ್ಯಕ್ಕೈಗೊಂಡವರ ಕುರಿತು ನಾವು ಇನ್ನಷ್ಟು ... ದವಕ್ಕೆ, ದಿಲ್ಲಿಯ ವರೆಗೆ ಧಾವಿಸಿ ಟೀಕು ಮೇಲೆ ಬೀಳುವಂತೆ ಮಾಡಿದುದು ಕೇವಲ ಸ್ವಾರ್ಥ ಸಾಧನೆಯ ಮೇಲೆ ಎಂಬುದು ನಮಗೆ ಖಚಿತವಾದ ಮೇಲೆ ಅಂತಹ ವ್ಯಕ್ತಿಗಳ ನಡೆನುಡಿಗಳ ಬಗ್ಗೆ ಕಾಂಗ್ರೆಸ್ಸಿಗರು ಕಿವಿಗೊಡದೆ ಬಹಿಷ್ಕರಿಸುವದೇ ಕ್ಷೇಮ. ಅಂತಲೇ ಕೇಂದ್ರ ಚುನಾವಣಾ ಸಮಿತಿ ದೇಶಹಿತ ಕಾರ್ಯದಲ್ಲಿ ಒಳ್ಳೆಯ ಜಾಗ್ರತೆಯನ್ನು ವಹಿಸಿತೆಂದೇ ಹೇಳಬೇಕು.

TEL: 40592

WATSONS AERATED WATERS
14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)



ಹೊಸಕೆರೆ ಚಿದಂಬರಯ್ಯನವರಿಂದ
ಅನುವಾದಿಸಲ್ಪಟ್ಟ ಗೀತೆಯ
ಸಮೂಲ ಭಾಷಾಂತರ.



ಪ್ರತಿಯೊಬ್ಬನೂ ಓದತಕ್ಕ ಪವಿತ್ರಗ್ರಂಥ.
ಬೆಲೆ. 0—12—0

ಪ್ರಜಾಸತ್ತೆ

ನ್ಯಾಯಸಭೆ

[ಕಳೆದ ಸಂಚಿಕೆಯಿಂದ ಮುಂದರಿದುದು]

ಪ್ರಜಾಸತ್ತೆಯು ಬೇಡುವಂತೆ ಪ್ರತಿನಿಧಿಗಳನ್ನು ಪರೀಕ್ಷಿಸಿ ಆರಿಸಿ ನ್ಯಾಯಸಭೆಯನ್ನು ವ್ಯವಸ್ಥೆಗೊಳಿಸಬೇಕೆಂದು ಈ ಹಿಂದೆ ಹೇಳಿರುವೆವು. ನಮ್ಮದು ಪ್ರಜಾಮತ ಸರಕಾರವೆಂದೊಡನೆ ಅದರ ಕಾರ್ಯಗಳೆಲ್ಲಾ ತನ್ನಿಂದ ತಾನೇ ಆದೀತೆಂಬ ಮೂಢತನವು ನಮ್ಮಲ್ಲಿದ್ದರಾಗದು. ನಾವು ನಿಜವಾದ ಬಹುಮತಪಡೆದ ಯೋಗ್ಯರಾದ ಸದಸ್ಯರನ್ನು ಆರಿಸಿದರೂ ಅವರ ನ್ಯಾಯಸಭೆಗೆ ಹೋದಮೇಲೆ ನಮ್ಮ ಮತಾನುಸಾರವಾಗಿ ನಡೆಯುತ್ತಾರೋ ಇಲ್ಲವೋ ಎಂದು ನೋಡಿಕೊಳ್ಳಬೇಕು. ಯಾವದಾದರೊಂದು ಕಾರಣದಿಂದ ನಾವು ಅವರನ್ನು ಚುನಾಯಿಸಿರಬಹುದು. ಅವರದನ್ನು ಸಭೆಗೆ ಹೋದೊಡನೆಯೇ ಮರೆತು ಬಿಡಬಹುದು; ಹಾಗಲ್ಲದಿದ್ದರೆ ನಾವು ಎಣಿಸದ ಕಾರ್ಯವನ್ನು ಮಾಡದೆ ಲೋಪದೋಷ ಮಾಡಬಹುದು, ಇಲ್ಲವಾದರೆ ನಮಗೆ ಹಿತವಾದ ಕಾರ್ಯವೆಸಗಿ ಅಧಿಕಪ್ರಸಂಗದ ತಪ್ಪುಮಾಡಬಹುದು. ಇನ್ನು ಸ್ವಾರ್ಥ ದೃಷ್ಟಿಯಿಂದ ಕೆಲವು ಕೆಲಸಮಾಡಬಹುದು ಇದರಿಂದ ಜನಹಿತಕ್ಕೆ ಕೆಡುಕುಬಂದೀತು. ಸೇವಕರನ್ನು ನೇಮಿಸುವದೊಂದು ಕೆಲಸ ಅವರು ನಮ್ಮ ಹೇಳಿಕೆಯಂತೆ ನಡೆಕೊಳ್ಳುತ್ತಾರೋ ಇಲ್ಲವೋ ಎಂದು ನೋಡುವದು ಮತ್ತೊಂದು ಕೆಲಸ ಜನರು ತಮ್ಮ ಅಧಿಕಾರವನ್ನು ಸಾಧಿಸುವುದೇ ಪ್ರಜಾಸತ್ತೆಯಸಾರ. ಪ್ರಜಾಮತ ಸರಕಾರವಿರುವಲ್ಲೆಲ್ಲಾ ಇದೊಂದು ಕಷ್ಟ ಇದ್ದೇ ಇದೆ. ಹಾಲು ಕುಡಿಯಬೇಕೆಂದು ಪಾತ್ರವನ್ನು ತುಟಿಯ ಸಮೀಪಕೊಂಡು ಹೋದೊಡನೆಯೇ ಪಾತ್ರವು ಕೈತಪ್ಪಿಬಿದ್ದರೆ ಹೇಗೆ ಕೈಗೆಬಂದದ್ದು ಬಾಯಿಗೆ ಬಾರದೆ ಹೋಗುವುದೋ ಹಾಗೆಯೇ ಪ್ರತಿನಿಧಿಗಳನ್ನು ಆರಿಸಿ ಅವರು ಮಾಡುವ ಕಾರ್ಯವನ್ನು ನೋಡದಿರುವುದರಿಂದಾಗುವದು. ಆದ್ದರಿಂದ ನಾವು ಎರಡು ತರದ ಪರಿಶ್ರಮ ಪಡಬೇಕು. ನ್ಯಾಯಸಭೆಯವರ ಕಾರ್ಯ ಪರಿಶೀಲಿಸಿ ಸದಸ್ಯರು ಜನಮತವನ್ನು ಹೊಂದಿ ನಡೆಯುತ್ತಾರೋ ಎಂದು ನೋಡುವದೊಂದು ಕೆಲಸ; ಕಾರ್ಯಕಾರೀ ಮಂಡಳಿಯವರನ್ನು ಅಂಕೆಯೊಳಗಿರಿಸಿ ಕೊಳ್ಳುವದು ಇನ್ನೊಂದು ಕೆಲಸ. ಸಭೆಯ ಮೆಂಬರರು ಬಹಿರಂಗವಾಗಿ ಚರ್ಚೆ ಮತ್ತು ತರ್ಕನಡೆಸುವದ್ದಾದರಿಂದ ಅವರ ಮೇಲ್ವಿಚಾರ ಅಷ್ಟೊಂದು ಕಷ್ಟದ ಕೆಲಸವಲ್ಲ. ಕಾರ್ಯನಿರ್ವಾಹಕ ಸಮಿತಿಯವರು ಮಾತನಾಡದೆ ಮೌನದಿಂದ ಕಾರ್ಯವೆಸಗುವರಾದ್ದರಿಂದ ಅವರ ಕುಂದುಕೊರತೆಗಳನ್ನು ಮುಂಚಿತವಾಗಿ ಕಂಡುಹಿಡಿದು ಅವರ ಮೇಲೆ ಅಧಿಕಾರ ನಡೆಸುವದು ಕಷ್ಟ. ಆದಾಗ್ಯೂ ಅವರ ಮೇಲೆ ಹಿಡಿತ ತಪ್ಪಿದರೆ ಪ್ರಜಾಸತ್ತೆಗೆ ಧಕ್ಕೆಬರುವದ ನಿಶ್ಚಯ.

ನ್ಯಾಯಸಭೆಯ ಕುರಿತು ಪ್ರಥಮ ವಿಚಾರಿಸೋಣ. ಇದರಲ್ಲಿ ಪ್ರಾತಿನಿಧ್ಯವೆಂದರೇನೆಂಬುದನ್ನು ಮೊದಲಾಗಿ ತಿಳಿಯಬೇಕಾಗಿದೆ. ಮತದಾರರು ಒಂದು ಅಥವಾ ಎರಡು ವಿಷಯಗಳ ಕುರಿತು ಸದಸ್ಯನನ್ನು ಆರಿಸಿರಬಹುದು ಆದರೆ ನ್ಯಾಯಸಭೆಯಲ್ಲಿ ಹಲವು ವಿಷಯಗಳು ಚರ್ಚಿಸಲಿಕ್ಕೆ ಬರುವವು ಅಲ್ಲಿ ಇದ್ದುದರಿಂದ ಪ್ರತಿಯೊಂದು ಪ್ರಶ್ನೆಗೂ ಫಿರ್ಕಾದವರನ್ನು ಕೇಳಲು ಸಾಧ್ಯವಿಲ್ಲ. ಸದಸ್ಯನು ಪಕ್ಷದ ಪರವಾಗಿ ಚುನಾಯಿತನಾದರೆ ಪಕ್ಷದೊಡನೆ ಸಹಕರಿಸಿ ನಡೆಯಬಹುದು. ಆದರೆ ಎಲ್ಲಾ ವಿಷಯಗಳು ಹೀಗೆ ಆಗತಕ್ಕವುಗಳಲ್ಲ. ಕೆಲವು ವಿಚಾರಗಳು ಪಕ್ಷಗಳಿಗೆ ಸಂಬಂಧ ಪಟ್ಟಿರುವದಿಲ್ಲ. ಇಂಥಾ ವಿಷಯಗಳಲ್ಲಿ ಪ್ರಾಮಾಣಿಕನಾದ ಸದಸ್ಯನು ಅನುಭವದ ಬಗ್ಗೆ ನ್ಯಾಯಸಭೆಗೂ ತನ್ನ ಫಿರ್ಕಾಕ್ಕೂ ಓಡ್ಯಾಡುವದರಲ್ಲಿ ಲೇಶವಿಲ್ಲ. ಪ್ರತಿಯೊಂದಕ್ಕೂ ಫಿರ್ಕಾದವರಿಂದ ಅಧಿಕಾರ ಪತ್ರ ಪಡೆಯುವದಲ್ಲ (Post-card bollot) ಆತನು ನೀರು ಸರಬರಾಯಿ ಮಾಡುವ ನಳಿಗೆಯಂತೆ ವರ್ತಿಸಿದರೆ ತನ್ನ ವ್ಯಕ್ತಿತ್ವವನ್ನು ಕಳಕೊಂಡಂತೆಯೇ ಸರಿ. ಪ್ರತಿನಿಧಿಯು ಆಗಾಗ ಫಿರ್ಕಾದ ಜನರನ್ನು ಕಂಡು ಅವರೊಡನೆ ಸಾರ್ವಜನಿಕ ಸಂಗತಿಗಳ ಕುರಿತು ಮಾತನಾಡಿ ಅವರೊಡನೆ ಸಂಬಂಧವಿಟ್ಟುಕೊಳ್ಳಬೇಕು. ಇದಕ್ಕಿಂತ ಮಿಕ್ಕಿ ನಡೆಯಲು ಆತನಿಗೆ ಸಾಧ್ಯವಿಲ್ಲ. ಆತನು ತನ್ನ ವಿವೇಚನಾಶಕ್ತಿಯನ್ನು ಉಪಯೋಗಿಸಿ ಯುಕ್ತಾಯುಕ್ತತೆಯನ್ನು ಕಂಡು ನಡಕೊಳ್ಳಬೇಕು. ಇದೇ ಪ್ರಾತಿನಿಧ್ಯದ ಮೂಲತತ್ವ. ಆದರೆ ಪ್ರಜಾಸತ್ತೆಯು ಮುಂದುವರಿದ ಹಾಗೆ ಜನರಲ್ಲಿ ಪ್ರಾತಿನಿಧ್ಯದ ಕುರಿತು ಅಭಿಪ್ರಾಯ ಸ್ವಲ್ಪಮಟ್ಟಿಗೆ ಬದಲಾದಂತೆ ತೋರುತ್ತದೆ. ಈಗಿನ ಕಾಲದಲ್ಲಿ ಕೆಲವು ರಾಷ್ಟ್ರಗಳಲ್ಲಿ ಪ್ರತಿನಿಧಿಯ ವ್ಯಕ್ತಿತ್ವಕ್ಕೆ ಅಗ್ರಸ್ಥಾನವನ್ನು ಕೊಡಕೂಡದೆಂಬ ಭಾವನೆಯು ತಲೆದೋರಿ ಆತನನ್ನು ಒಬ್ಬ ಡೆಲಿಗೇಟಿನ ಸ್ಥಾನಕ್ಕೆದೂಡುವುದರಲ್ಲಿದ್ದಾರೆ. ಡೆಲಿಗೇಟ್ ಎಂದರೆ ಯಾವದಾದರೊಂದು ಸಂಗತಿಯಲ್ಲಿ ನಮ್ಮ ಬಗ್ಗೆ ಮಾತನಾಡುವರೆ ನಮ್ಮಿಂದ ಅನುಮತಿ ಪಡೆದು ನಾವು ಉಚಿತವಾಗಿ ಸೂಚಿಸಿದಂತೆ ನಡಕೊಳ್ಳುವ ಪ್ರತಿನಿಧಿಯಾಗಿರುವರು ಈತನಿಗೂ ಹಿಂದೆ ಹೇಳಿದ ಪ್ರತಿನಿಧಿಗೂ ವ್ಯತ್ಯಾಸವಿದೆಯೆಂಬುದನ್ನು ಎಡ್ಮಂಡ್ ಬರ್ಕ (Edmund Barke) ಎಂಬವರು ತಮ್ಮ ಬ್ರಿಸ್ಟಲ್ ಫಿರ್ಕಾದವರಿಗೆ ಮಾಡಿದ ಭಾಷಣದಲ್ಲಿ ಮತ್ತು ಬ್ರಿಸ್ಟಲ್ ಶರೀಫರಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿ ಪ್ರತಿನಿಧಿಯು ಡೆಲಗೇಟಲ್ಲವೆಂದು ವ್ಯಕ್ತಪಡಿಸಿದುವರು. ಎಡ್ಮಂಡ್ ಬರ್ಕರು ಹೇಳಿದ ಮಾತು ಬಹಳ ಸಾರಸ್ಯವಾದುದರಿಂದ ಅದನ್ನಿಲ್ಲಿ ಎತ್ತಿ ಹೇಳುವದು ಅಗತ್ಯ. "ಪ್ರತಿನಿಧಿಯು ತನ್ನ ಫಿರ್ಕಾದವರೊಡನೆ ಏಕಮತದಿಂದಿರಬೇಕು ಅವರೊಡನೆ ಪತ್ರವ್ಯವಹಾರ ನಡೆಸುತ್ತಾ ಇದ್ದು ತನ್ನ ಮನಬಿಚ್ಚಿ ತಿಳಿಸಬೇಕು ಅವರ ಮನೋಗತವನ್ನು ಅರಿತುಕೊಳ್ಳಬೇಕು ಅವರ ಅಪೇಕ್ಷೆಗೆ ಮನ್ನಣೆ ಕೊಡಬೇಕು ಅವರ ಅಭಿಪ್ರಾಯಕ್ಕೆ ಭಕ್ತಿತೋರಿಸಬೇಕು ಅವರ ಪರವಾದ ಕಾರ್ಯಗಳಲ್ಲಿ ಸದಾ ಜಾಗರೂಕತೆ ವಹಿಸಬೇಕು ತನ್ನ ತನುಮನವನ್ನು ಅವರಿಗೋಸ್ಕರ ಉಪಯೋಗಿಸಬೇಕು. ತನ್ನ ಸ್ವಾರ್ಥತೆಯನ್ನು ಮುಂದೊತ್ತಬಾರದು ಆದರೆ ತನ್ನ ನಿಷ್ಪಕ್ಷಪಾತದ ಮತವನ್ನು ತನ್ನ ಬೆಳಗಿದ ತಿಳುವಳಿಕೆಯನ್ನು ತನ್ನ ಸ್ವತಂತ್ರ ಬುದ್ಧಿ ಶಕ್ತಿ ಮತ್ತು ಮನಸ್ಸಾಕ್ಷಿಯನ್ನು ಫಿರ್ಕಾದವರಿಗಾಗಲೀ ಎಂದೆಂದೂ ಅರ್ಪಿಸಿ ಕಳಕೊಳ್ಳಬಾರದು. ಪ್ರತಿನಿಧಿಯು ಫಿರ್ಕಾದವರ ಬಗ್ಗೆ ಶ್ರಮಪಟ್ಟು ದುಡಿಯುವುದಲ್ಲದೆ ಆತನ ಬುದ್ಧಿ ಶಕ್ತಿಯನ್ನು ಅವರ ಬಗ್ಗೆ ಉಪಯೋಗಿಸಬೇಕು ಯಾವಾತನು ಅವುಗಳನ್ನು ಕಳಕೊಳ್ಳುವನೋ ಆತನು ಕರ್ತವ್ಯ ಹೀನನೆಂದೇ ಭಾವಿಸಬೇಕು. ನನ್ನ ಎದುರಾಳಿಯು ತನ್ನದಕ್ಕಿಂ ನಿಮ್ಮ ಇಚ್ಛೆಯೇ ಮೇಲೆಂದು ಹೇಳಿರುವರು ಅಷ್ಟೇ ಮಾತ್ರವೇ ಆದರೆ ಅವರು ಹೇಳುವುದರಲ್ಲಿ ತಪ್ಪಿಲ್ಲ. ಅಪೇಕ್ಷೆ ಮತ್ತು ಇಚ್ಛೆಯನ್ನೇ ಹೊಂದಿ ಸರಕಾರವು ನಡೆಯುವದಂತಾದರೆ ನಿಮ್ಮ ಇಚ್ಛೆಯೇ ಮೇಲೆಂಬುದು ನಿಸ್ಸಂದೇಹ. ಆದರೆ ಸರಕಾರವೆಂಬುದು ಜ್ಞಾನಶಕ್ತಿ ಮತ್ತು ತಿಳುವಳಿಕೆಯನ್ನು ಹೊಂದಿದೆಯಲ್ಲದೆ ಅಪೇಕ್ಷೆ ಮತ್ತು ಮನೋಭೀಷ್ಟವನ್ನಲ್ಲ. ಹೀಗಿರುವಲ್ಲಿ ಯಾವ ಬಾಬಿನಲ್ಲಾದರೂ ಫಿರ್ಕಾದವರು ಮುಂಚಿತವಾಗಿ ತೀರ್ಪು ಕೊಡುವುದರಲ್ಲೇನು ಅರ್ಥವಿದೆ? ತೀರ್ಮಾನವು ಮೊದಲೇ ಫಿರ್ಕಾದಲ್ಲಿ ಆಗಿ ವಾದ, ತರ್ಕ ಮತ್ತು ಚರ್ಚೆಗಳು ನ್ಯಾಯಸಭೆಯಲ್ಲಿ ಆಗುವದಕ್ಕೇನು ಬೆಲೆ? ಚರ್ಚಿಸುವದು ನ್ಯಾಯಸಭೆಯಾಗಿರುವಾಗ ಆಶ್ಯೆರು ತೀರ್ಮಾನವನ್ನು ಮುನ್ನೂರು ನಾಲ್ಕುನೂರು ಮೈಲಿಗಳ ದೂರವಿರುವ ಫಿರ್ಕಾದವರು ಈ ಸಭೆಯಲ್ಲಿ ನಡೆದ ಚರ್ಚೆಗಳನ್ನು ಕೇಳದೆ ಹೇಳುವುದೆಂದರೇನ? ಪ್ರತಿನಿಧಿಯು ತನ್ನ ಸ್ವಂತಅನುಭವ ಮತ್ತು ಮನಸ್ಸಾಕ್ಷಿಗೆ ವಂಚನೆಮಾಡಿ ಕಣ್ಣು ಮುಚ್ಚಿ ಕೆಲವು ಸಲ ಸಹಿಹಾಕಬೇಕೆಂಬುದು ನಮ್ಮ ದೇಶದ ಕಾನೂನು ಮತ್ತು ವಿಧಿನಿಯಮಗಳಿಗಳು ಸಾರವಾದುದಲ್ಲವೆಂದೇ ಹೇಳಬೇಕು. ಈ ತರಹದ ಮನೋಭಾವನೆಯು ಒಂದುತರ ವಿಶೇಷವಾದ ಹಾನಿಕೆಯ ಮಾತಾಗಿ ನಮಗೆ ಕಾಣುವದು. ಇವರ ಮಾತಿನಲ್ಲಿ ಹುರುಳಿರುವದಾದರೂ ಅವಿವೇಕಿಯಾದನು, ಉದಾಸೀನನಾದವನು ಮತ್ತು ಹಟಮಾರಿತನ ತೋರುವ ಅಧಿಕಪ್ರಸಂಗದ ಪ್ರತಿನಿಧಿಯು ಇದನ್ನು ದುರುಪಯೋಗ ಮಾಡದೆ ಇರಲಾರನ - ಈ ಕಾರಣದಿಂದ ಕೆಲವರು ಪ್ರಾತಿನಿಧ್ಯಕ್ಕಿಂತ ಡೆಲಿಗೇಟನ್ ಎಂಬದೇ ಶ್ರೇಷ್ಠವೆಂದು ವಾದಿಸುವರು.

ಸಿ. ಎಚ್. ಸೆಟ್ಟಿ ಬಿ. ಎ

[ಮುಂದುವರಿಯುವುದು.]

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ. ಎ. ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಲುಪ್ತವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಸಮರ್ಥ ರಾಜಕಾರಣಿ ದೇಶಬಂಧು ಗುಪ್ತರ ಮರಣ

ಶನಿವಾರ ಕಲಕತ್ತೆಯ ಸಮೀಪ ಅತ್ಯಂತ ಭೀಕರ ಸ್ವರೂಪದ ವಿಮಾನಪಘಾತವೊಂದು ಸಂಭವಿಸಿ 16 ಜನರು ಅದರಿಂದ ಮಡಿದರು. ಡಂ-ಡಂ ವಿಮಾನ ನಿಲ್ದಾಣದಲ್ಲಿಳಿಯಬೇಕಾದ ವಿಮಾನವು ವಿಪರೀತ ಮಂಜು ತುಂಬಿದ್ದರಿಂದ ಸ್ವಲ್ಪ ಹೊತ್ತು ಆಕಾಶದಲ್ಲೇ ಸುತ್ತಾಡಬೇಕಾಗಿತ್ತು. ತಿರುಗಿ ಮುಂಬರುವಾಗ ವಿಮಾನದ ರೆಕ್ಕೆಯು ತೆಂಗಿನ ಮರದ ತುದಿಗೆ ಬಡಿದು ಕೂಡಲೇ ಪೆಟ್ರೋಲ್ ಟಾಂಕಿಗೆ ಬೆಂಕಿ ತಗಲಿ ಉರಿಯುತ್ತ ನೆಲಕ್ಕುರುಳಿತು. ವಿಮಾನವು ನೆಲಕ್ಕುರುಳಿ, ಅತ್ಯಂತ ಭೀಕರ ಸ್ವರೂಪದ ಬೆಂಕಿಯ ಜ್ವಾಲೆಗಳು ಇಡಿಯ ವಿಮಾನವನ್ನೇ ಸುಡುತ್ತಿದ್ದವು. ವಿಮಾನದೊಳಗಿನ ಪ್ರಯಾಣಿಕರು ಆತ್ಮರಕ್ಷಣೆಗಾಗಿ ಕೂಗಿಕೊಳ್ಳುವದನ್ನು ಕಂಡು ಸುತ್ತುಮುತ್ತಲಿನ ಹಳ್ಳಿಗರು ಹತ್ತಿರ ಬಂದರೂ ಬೆಂಕಿಯ ಜ್ವಾಲೆಯಿಂದ ಅವರನ್ನು ರಕ್ಷಿಸಲಾಗಲಿಲ್ಲ. ಅರ್ಧ ತಾಸಿನೊಳಗೆ ಅಗ್ನಿಶಾಮಕ ಯಂತ್ರದಿಂದ ಬೆಂಕಿಯನ್ನು ನೊಂದಿಸಲಾಯಿತಾದರೂ ಮುಂಬಯಿಯ ಶ್ರೀ ಕೆ. ಎನ್. ಮೋಘಾರವರೊಬ್ಬರನ್ನು ಬಿಟ್ಟು ಉಳಿದ ಹದಿನಾರೂ ಜನರೂ ಅಗ್ನಿನಾರಾಯಣನಿಗಾಹುತಿಯಾದರು. ದುರ್ದೈವೀ ಪ್ರಯಾಣಿಕರ ಆರ್ತನಾದವು--ಕೊನೆಯ ಕನಕವೂ ಕೇಳುತ್ತಿದ್ದು; ಮನುಷ್ಯಮಾತ್ರನಿಂದ ಅವರ ಜೀವದಾನಮಾಡಲು ಸಾಧ್ಯವಾಗದ ಈ ಸನ್ನಿವೇಶ ಅತ್ಯಂತ ಹೃದ್ರಾವಕವಾದ ಒಂದು ದುಃಘಟನೆಯೆಂದೇ ಹೇಳಬೇಕು.

ಮಡಿದವರಲ್ಲಿ ಅ. ಭಾ. ಪತ್ರಿಕಾ ಸಂಪಾದಕ ಪರಿಷತ್ತಿನ ಅಧ್ಯಕ್ಷ ಲಾಲಾ ದೇಶಬಂಧು ಗುಪ್ತ, ಮದ್ರಾಸದ ನಿಯಂತ್ರಿತ ವಸ್ತುಗಳ ಡೈರೆಕ್ಟರ ಶ್ರೀ ಪಿ. ಎಸ್. ವಿಶ್ವನಾಥನ್, ಅ. ಭಾ. ಸಂ. ಪರಿಷತ್ತಿನ ಸಹಾಯಕ ಕಾರ್ಯದರ್ಶಿ ಶ್ರೀ ಲಜಪತ ರಾಯ್, ಮೊದಲಾದವರು ಮುಖ್ಯರಾಗಿದ್ದರು.

ಲಾಲಾ ದೇಶಬಂಧುಗುಪ್ತರು ಆರ್ಯಸಮಾಜ ತತ್ವದಲ್ಲಿ ನಿಷ್ಠೆಯುಳ್ಳವರಾಗಿದ್ದರು. ಕಾಲೇಜಿನಲ್ಲಿ ಓದುತ್ತಿದ್ದಾಗ-ಜಾಲಿಯನ್‌ವಾಲಾ ಬಾಗಿನ ದುರಂತ ಹಾಗೂ ಬ್ರಿಟಿಷರ ರಾಜಕೀಯ ದಬ್ಬಾಳಿಕೆ ದೇಶದಲ್ಲಿ ನಡೆದಿತ್ತು. ತರುಣ ವಯಸ್ಸಿನ ಗುಪ್ತರಿಗೆ ರಾಜಕೀಯದಲ್ಲಿ ಧುಮುಕುವ ಮನಸ್ಸಾಗಿ ಕಾಲೇಜನ್ನು ತ್ಯಜಿಸಿಬಿಟ್ಟರು. ಲಾಲಾಲಜಪತರಾಯರ ಶಿಷ್ಯರಾಗಿ ರಾಜಕೀಯ ಪರಿಪೂರ್ಣ ಜ್ಞಾನವನ್ನು ಪಡೆದುಕೊಂಡರು. ಪತ್ರಿಕೋದ್ಯಮಕ್ಕೆ ಕಾಲಿಟ್ಟಿದ್ದೂ ಅದೇ ಕಾಲದಲ್ಲಿ. 'ವಂದೇ ಮಾತರಂ' ಪತ್ರಿಕೆಯ ಮೂಲಕ ಗುಪ್ತರ ವಿಚಾರ ಪೂರ್ಣ ಲೇಖಗಳ ಪರಿಚಯ ಜನತೆಗಾಯಿತು. ಬಳಿಕ ಗಾಂಧೀಜಿಯ ಅಹಿಂಸಾ ತತ್ವಾನುಯಾಯಿಗಳಾಗಿದ್ದು ದೇಶ ಸೇವೆಯಲ್ಲಿ ನಿರತರಾದರು. ಸ್ವಾಮಿ ಶ್ರದ್ಧಾನಂದರ ಹಾಗೂ ಗಾಂಧೀಜಿಯವರ ಪ್ರಭಾವಗಳು ಗುಪ್ತರಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿದ್ದವು. ನಿರ್ಭೀತವಾದ ಟೀಕಟಿಪ್ಪಣಿಗಳನ್ನು ಬರೆದು ಜನಪ್ರಿಯರಾದರೂ ತತ್ಫಲವಾಗಿ ಹಲವುಕಾಲ ಕಾರಾಗೃಹವಾಸವನ್ನೂ ಅನುಭವಿಸಬೇಕಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಅಪ್ರತಿಮ ಸಾಹಸವನ್ನು ಬೀರಿದವರಲ್ಲಿ ಗುಪ್ತರೂ ಒಬ್ಬರೆಂದರೆ ತಪ್ಪಾಗದು.

1950ರಲ್ಲಿ ಅ. ಭಾ. ಪ. ಸಂ. ಪರಿಷತ್ತಿನ ಅಧ್ಯಕ್ಷರಾಗಿ ಆರಿಸಿ ಅವರನ್ನು ಗೌರವಿಸಲಾಯಿತು. ಘಟನಾ ಸಮಿತಿಯ ಒಬ್ಬ ಸದಸ್ಯರಾಗಿದ್ದುಕೊಂಡು ಅಸಾಧಾರಣವಾದ ತನ್ನ ಪ್ರತಿಭೆಯನ್ನು ಅವರು ವ್ಯಕ್ತಪಡಿಸುತ್ತಿದ್ದರು. ಪತ್ರಿಕಾ ಮಸೂದೆಯ ವಿಚಾರವಾಗಿ ಅವರು ಆಡಿದ ಮಾತುಗಳು ಅತ್ಯಂತ ಮಹತ್ವದ್ದಾಗಿದ್ದವು. ಅವರು ನೀಡಿದ ಸೂಕ್ತ ಸಲಹೆಗಳಿಂದ ಪತ್ರಿಕಾ ಮಸೂದೆಯು ಹಲವು ತಿದ್ದುಪಡಿಯ ನಂತರ ಬದಲಾವಣೆ ಹೊಂದಿತೆಂದು ತಿಳಿಯುತ್ತದೆ. ರಾಜಕೀಯ ಹಾಗೂ ಪತ್ರಿಕೋದ್ಯಮದ ಮೂಲಕ ಅವರು ದೇಶಕ್ಕೆ ಅಮೂಲ್ಯವಾದ ಸೇವೆ ಸಲ್ಲಿಸಿದ್ದಾರೆ. ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶಬಂಧು ಗುಪ್ತರಂತಹ ಸಮರ್ಥ ರಾಜಕಾರಣಿಯೊಬ್ಬನನ್ನು ದೇಶ ಕಳೆದುಕೊಂಡಿತು. ಪತ್ರಿಕೋದ್ಯಮಕ್ಕೇ ಇದೊಂದು ದೊಡ್ಡ ಹಾನಿ. ಒಟ್ಟಿಗೆ ಹೇಳುವದಾದರೆ ರಾಜಕೀಯ ಹಾಗೂ ಪತ್ರಿಕೋದ್ಯಮ ಪ್ರಪಂಚಕ್ಕೇನೆ ತುಂಬಬಾರದ ಮಹಾಘಾತವೆಂದು ಹೇಳುತ್ತೇವೆ.

ಆಚಾರ್ಯ ಭಾವೆ ಮತ್ತು ಕಮ್ಯೂನಿಸ್ಟರು

ಮಹಾತ್ಮಾಗಾಂಧೀಜಿಯ ಪಟ್ಟಶಿಷ್ಯರಾದ ಶ್ರೀ ಆಚಾರ್ಯ ವಿನೋಬಾ ಭಾವೆಯವರು ದೇಶದ ಒಂದು ಗಂಭೀರ ಪರಿಸ್ಥಿತಿಯನ್ನು ಸತ್ಯ ಅಹಿಂಸೆಗಳಿಂದ ಹತೋಟಿಗೆ ತರಲು ಯತ್ನಮಾಡುತ್ತಿರುವುದು ಅತ್ಯಂತ ಮಹತ್ವದ ಸಂಗತಿ. ಸ್ವಾತಂತ್ರ್ಯ ಸಿಕ್ಕ ಈ ನಾಲ್ಕು ವರ್ಷಗಳಲ್ಲಿ ಗುಂಡು-ಮದ್ದಿನಿಂದ ಸ್ಥಿಮಿತಕ್ಕೆ ತರಲಾಗದ ತೆಲಂಗಾಣದಂತಹ ಅರಾಜಕತೆಗಳನ್ನು ಪಾದಸಂಚಾರಿಗಳಾಗಿ ತಿರುಗಿ ಬಗೆಹರಿಸಿದ್ದಾರೆ. ಕಮ್ಯೂನಿಸಮ್ ನಮ್ಮಲ್ಲಿ ವ್ಯಾಪಕತೆ ಹೊಂದಲಿಕ್ಕೆ ಮುಖ್ಯ ಕಾರಣ ಬಡತನ-ದಾರಿದ್ರ್ಯಗಳೇ ಆಗಿದ್ದು ಅದಕ್ಕೆ ತಕ್ಕ ಪರಿಹಾರ ಸರಕಾರ ಇಲ್ಲವೆ ಶ್ರೀಮಂತರಿಗೆ ಆಗದಿರುವದೇ. ಭೂಮಿಯಿಲ್ಲದವರಿಂದ ಭೂಮಿಯನ್ನೊದಗಿಸಿ ಕೊಡುವದರಿಂದ ಉದ್ಯೋಗ-ಆಹಾರ ಸಮಸ್ಯೆ-ಎಲ್ಲವೂ ಬಗೆಹರಿಯಬಹುದು. ಭಾರತ ಸರಕಾರವು 10 ಕೋಟಿ ಎಕ್ರೆ ಭೂಮಿಯು ಸಾಗುವಳಿಗೆ ಉಪಯುಕ್ತವಾಗಬಹುದೆಂದು ಊಹಿಸಿ ಕೇಂದ್ರ ಟ್ರಾಕ್ಟರ ಸಂಸ್ಥೆಯನ್ನು ರಚಿಸಿಯದೆ. ಈ ಸಂಸ್ಥೆಯು ಈ ನಾಲ್ಕು ವರ್ಷಗಳಲ್ಲಿ ನಾಲ್ಕು ಲಕ್ಷ ಭೂಮಿಗಳನ್ನು ಸಾಗುವಳಿಗೆ ಸಿದ್ಧಗೊಳಿಸಿದೆಯೆಂದು ಹೇಳಲಾಗಿದೆ. ದಶವಾರ್ಷಿಕ ಯೋಜನೆಯಲ್ಲಿ ವರ್ಷಕ್ಕೆ ಮೂರು ಲಕ್ಷ ಎಕ್ರೆ ಭೂಮಿಯನ್ನು ಸಾಗುವಳಿಗೆ ಸಿದ್ಧಗೊಳಿಸುವ ಕಾರ್ಯ ಭರದಿಂದ ಸಾಗಿದೆ. ಈ ಅಂಶದಿಂದಲೇ ನಮ್ಮ ಆಹಾರ ಪರಿಸ್ಥಿತಿ ಸುಧಾರಿಸೀತೆಂದು ಊಹಿಸುವದು ತಪ್ಪಾಗಿರುತ್ತದೆ. ಏಕೆಂದರೆ ಜೊತೆಯಲ್ಲೇ ಅಷ್ಟೇ ಪರಿಮಿತಿಯಿಂದ ಅದನ್ನುಣ್ಣುವ ಜನಸಂಖ್ಯೆ ಹೆಚ್ಚುತ್ತಿದೆಯೆಂಬುದನ್ನು ನಾವು ಮರೆಯಲಾಗದು. ಆದರೂ ಕೊಂಚ ಮಟ್ಟಿಗೆ ಸುಧಾರಿಸಬಹುದು. ಯುದ್ಧಪೂರ್ವದಲ್ಲಿ ಸಾಗುವಳಿಗಾಗಿ ಉಪಯೋಗಿಸುತ್ತಿದ್ದ ಭೂಮಿಗಳು ಸಾಗುವಳಿಯಾಗದೆ ಪಡುಬೀಳುತ್ತಿರುವ ದಾಖಲೆಗಳೂ ಒಂದು ಕಡೆ ಹೆಚ್ಚುತ್ತಲಿವೆ. ಇಂಥಹ ಪಡುಭೂಮಿಗಳು ಸುಮಾರು 107 ಲಕ್ಷ ಎಕ್ರೆ ಎಂದು ಹೇಳಲಾಗಿದೆ. ಇವಕ್ಕೆ ಮೂಲ ಕಾರಣಗಳು ಉತ್ತು-ಬಿತ್ತು-ಬೇಸಾಯ ಮಾಡುವ ಜನ ನಗರದಲ್ಲಿ ನೌಕರಿಯನ್ನು ಹುಡುಕಿಕೊಂಡು ಹೋದದ್ದು. (2) ಭೂಮಾಲಿಕರು ರೈತನಿಗೆ ನ್ಯಾಯವಾದ ಸಹಾಯ ಸಲಕರಣೆಗಳನ್ನೊದಗಿಸದೆಯೂ-ಅಲಕ್ಷ್ಯಭಾವನಿಂದಲೂ ಅವನ್ನು ಬಿಟ್ಟಿರುವದೇ ಆಗಿರುವದು. ಈ ಬಗೆಯ ಅವ್ಯವಸ್ಥೆ ತೆಲಂಗಣದಲ್ಲಿ ಮಾತ್ರವಲ್ಲ ದೇಶದ ಎಲ್ಲೆಡೆಯಲ್ಲೂ ಉಂಟು! ಭೂಮಾಲಿಕರು ತಮಗೆ ಬೇಕಾದ್ದಷ್ಟನ್ನೇ ಉಪಯೋಗಿಸಿ ಉಳಿದುದನ್ನು ಹಾಳು ಬಿಡುತ್ತಿದ್ದರೂ ಬೇರೆಯವರಿಗೆ ದುಡಿಯುವದಕ್ಕೆ ನ್ಯಾಯವಾದ ರೀತಿಯಲ್ಲಿ ಒಪ್ಪಿಸಲು ಸಿದ್ಧರಿಲ್ಲ. ಇಂಥ ಧೋರಣೆಯಿಂದ ಹಲವೆಡೆಯಲ್ಲಿ ಕ್ಷುಬ್ಧ ವಾತಾವರಣವುಂಟಾಗಿದೆ. ಆಚಾರ್ಯ ವಿನೋಬಾ ಭಾವೆಯವರು "ಭೂಧಾರಣ ಸಮಸ್ಯೆಯು ತೃಪ್ತಿಕರವಾಗಿ ಬಿಡಿಸಲ್ಪಡದೆ ಇದ್ದರೆ ದೇಶದಲ್ಲಿ ಹಿಂಸಾತ್ಮಕ ಕ್ರಾಂತಿ ಸಂಭವಿಸುವ ಭೀತಿ ಇದೆ" ಎಂದು ಹೇಳಿದ್ದು ಇದನ್ನು ಲಕ್ಷಿಸಿಯೇ. ಅಂತಲೇ ಅವರು ಪಾದಚಾರಿಗಳಾಗಿ ಭೂದಾನ ಯಜ್ಞ ಕೈಗೊಂಡಿದ್ದಾರೆ. ಭೂಧಾರಣ ಸಮಸ್ಯೆ ಬಿಡಿಸಲು ಭಾರತದಲ್ಲಿ ಒಟ್ಟು 5 ಕೋಟಿ ಎಕರೆ ಭೂಮಿಯನ್ನು ದಾನವಾಗಿ ಪಡೆದು ಸ್ವಂತ ಭೂಮಿ ಇಲ್ಲದ 1 ಕೋಟಿ ಕುಟುಂಬಗಳಲ್ಲಿ ಹಂಚಿ ಕೊಡುವದು ಆಚಾರ್ಯ ಭಾವೆಯವರಿಟ್ಟುಕೊಂಡ ಗುರಿಯಾಗಿದೆ. ತೆಲಂಗಾಣದಲ್ಲಿ ಶ್ರೀ ಭಾವೆಯವರಿಗೆ ಸುಮಾರು 16000 ಎಕ್ರೆ ಭೂಮಿ ದೊರಕಿದೆ. ಮಧ್ಯಪ್ರದೇಶ, ವಿಂಧ್ಯ, ರಾಜಸ್ಥಾನ, ಉತ್ತರ ಪ್ರದೇಶ ಮುಂತಾದ ಕಡೆಗಳಲ್ಲಿ ಸುಮಾರು 20000 ಎಕ್ರೆ ಭೂಮಿಯನ್ನು ದಾನವಾಗಿ ಒಪ್ಪಿಸಿರುವರು. ದಿಲ್ಲಿಯಲ್ಲಿ ದಿನ್ನಗಳೇ 1283 ಎಕ್ರೆ ಭೂಮಿಗಳು ದಾನವಾಗಿ ಲಭಿಸಿವೆ. ದೇಶದಲ್ಲಿ ಈ ವಿಧಾಯಕ ಕಾರ್ಯಕ್ರಮದಿಂದ ಭೂಮಿಯ ಒಡೆಯರ ಹಾಗೂ ರೈತರೊಳಗೆ ಭ್ರಾತೃತ್ವ ಬೆಳೆಯಬಹುದಾಗಿದೆ. ತೆಲಂಗಾಣದ ವಿಧ್ವಂಸಕ ಕೃತಿಗಳು ಕಡಿಮೆಯಾಗಿದ್ದು ಕಮ್ಯೂನಿಸ್ಟ ಧುರೀಣರು ಆಚಾರ್ಯ ವಿನೋಬಾಭಾವೆಯವರೊಡನೆ ತಮ್ಮ ಬೇಡಿಕೆಗಳನ್ನು ಮುಂದಿಮಾಡಿ ಸರಕಾರ ಕಮ್ಯುನಿಸ್ಟರ ಮೇಲಿನ ನಿರ್ಬಂಧವನ್ನು ತೆಗೆದುಹಾಕಬೇಕು, ಪೋಲೀಸರ ಹಿಂಸಾಕೃತಿ ನಿಲ್ಲಬೇಕು-ಭೂಸ್ವಾಧಾರಣ ಸಮಸ್ಯೆಯು ತೃಪ್ತಿಕರವಾಗಿ ಬಿಡಿಸಿದ [illegible]ಬಾದದಲ್ಲಿ ಶಾಂತಿ ನೆಲಸುವದು ಕಠಿಣವೆಂದು ತಮ್ಮಭಿಪ್ರಾಯವನ್ನೂ ವ್ಯಕ್ತಪಡಿಸಿರುವರು. ಆಚಾರ್ಯಭಾವೆಯವರು ಕಮ್ಯುನಿಸ್ಟರ ಹಾಗೂ ಸರಕಾರದ ನಡುವೆ ಮಧ್ಯವರ್ತಿಗಳಾಗಿ ಸಮಸ್ಯೆಯನ್ನು ಬಿಡಿಸುವದು ಮಾತ್ರವಲ್ಲದೆ ಉಭಯತಂಡಗಳೂ ಪರಸ್ಪರ ಮಧುರ ಸ್ನೇಹ ಬೆಳೆಸುವ ಸನ್ನಿವೇಶವನ್ನು ಸೃಷ್ಟಿಸಿರುತ್ತಾರೆ. ಇದರಿಂದಾಗಿ ತಪ್ಪುಕಲ್ಪನೆಗಳು ದೂರವಾಗಿವೆ. ಕಮ್ಯುನಿಸ್ಟರೂ ಈಚೆಗೆ ಸರಕಾರಕ್ಕೆ ತಮ್ಮ ದೂರನ್ನು ಒಯ್ಯದೆ ಇದ್ದಿದ್ದರೆ ಕ್ರಾಂತಿಕಾರಕ ಕಾರ್ಯಗಳಿಂದ ಪ್ರತಿಭಟಿಸದೆ ನೇರಾಗಿ ಆಚಾರ್ಯರೊಡನೆ ಸಂಧಾನ ನಡೆಸುವದು ಸಂಪ್ರದಾಯವೇ ಆಗಿದೆ. ಶಾಂತಿ ಸೌಹಾರ್ದಗಳಿಗೆ ಮೂಲ ಹೇತುವಾದ ಅಂಶಗಳಲ್ಲಿ ಆಚಾರ್ಯರು ಒಳ್ಳೆಯ ಮುತ್ಸದ್ದಿತನದಲ್ಲಿ ಏರ್ಪಿಸಿ ಗಾಂಧೀಜೀ ಆದರ್ಶವನ್ನು ಎತ್ತಿ ಹಿಡಿದಿದ್ದಾರೆ. ಇದರಿಂದಾಗಿ ದೇಶದಲ್ಲಿ ಚಿರಶಾಂತಿಯುಂಟಾಗುವದೆನ್ನುವದರಲ್ಲಿ ಸಂದೇಹವೇ ಇಲ್ಲ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

ESTD: 1925. H. O: UDIPI.

ಆಹಾರ ಕೊರತೆ ಮತ್ತು ಸರಕಾರ

ಇಂದು ಕಾಂಗ್ರೆಸಿನ ಮತ್ತು ಕಾಂಗ್ರೆಸಿಗರ ವಿರುದ್ಧ ಎಬ್ಬಿಸಿದ ಹುಯಿಲಿನಲ್ಲಿ ತಥ್ಯವಿದೆಯೋ ಸತ್ಯಾಂಶವಿದೆಯೋ ಎಂಬುದನ್ನು ಆಲೋಚಿಸದೆ ಕಾಂಗ್ರೆಸಿನ ಮೇಲೆ ವ್ಯರ್ಥ ವಿಷ ಕಾರುವುದರಲ್ಲಿ ಅರ್ಥವಿಲ್ಲ. ಹೊಣೆಗಾರ ಮತದಾರರು ಸಾಧಕ ಬಾಧಕ ವಿಚಾರ ಮಾಡದೆ ಈ ಆಕ್ಷೇಪಗಳನ್ನು ನಂಬುವುದಿಲ್ಲ. ಏಕೆಂದರೆ ಚುನಾವಣೆಯ ಸಂದರ್ಭದಲ್ಲಿ ಸ್ವಾರ್ಥಸಾಧನೆಗಾಗಿ, ತಂತಮ್ಮ ಬೇಳೆ ಬೇಯಿಸಿಕೊಳ್ಳಲು ಇತರ ಪಕ್ಷಗಳು ಅಲ್ಲದಸಲ್ಲದ ಬುಡಬೇರುಗಳಿಲ್ಲದ ಆರೋಪಗಳನ್ನು ಮಾಡಲು ಹಿಂಜರಿಯುವುದಿಲ್ಲ. ಕಳೆದ ನಾಲ್ಕು ವರ್ಷಗಳ ಆಡಳಿತದ ಅನುಭವದಿಂದ ಗಟ್ಟಿಮುಟ್ಟಾಗಿ ಯಾವುದಾದರೂ ಅಂಶವನ್ನೆತ್ತಿ ಆರೋಪ ಮಾಡಬೇಕಲ್ಲದೆ, ವಸ್ತುಸ್ಥಿತಿಯ ವಿಪರ್ಯಾಸ ಮಾಡಿ ಆಡುವ ನುಡಿಗಳಿಗೆ ಬೆಲೆ ಕೊಡಲಾಗದು.

ಕಾಂಗ್ರೆಸಿನ ಆಳಿಕೆಯ ವಿರುದ್ಧ ಆಡುವ ಮಾತುಗಳಲ್ಲಿ ಮೇಲಿಂದ ಮೇಲೆ ಕೇಳಿ ಬರುವ ಟೀಕೆಯೆಂದರೆ ಅನ್ನ ವಸ್ತ್ರ ಆಶ್ರಯಗಳ ಅಭಾವವೆಂಬುದು. ಸ್ವಾತಂತ್ರ್ಯದ ನಂತರ ಜೀವನಾವಶ್ಯಕ ವಸ್ತುಗಳ ವಿಪರೀತ ಕೊರತೆಯಾಗಿ, ಸರಕುಗಳ ಬೆಲೆಗಳು ವಿಪರೀತ ಏರಿ ಜನತೆಯು ಗೋಳಿಗೀಡಾಯಿತೆಂಬುದು, ಪ್ರಜೆಗಳ ಈ ಕಷ್ಟ ಕಾರ್ಪಣ್ಯಗಳಿಗೆ ಕಾಂಗ್ರೆಸ್ ಸರಕಾರದ ಆಡಳಿತವೇ ಕಾರಣವೆಂದು ಅಲ್ಲಲ್ಲಿ ಅನೇಕರು ಆಡುತ್ತಾರೆ. ಈ ಟೀಕೆ [illegible] ಟೊಳ್ಳು, ಇಂತಹ ಪ್ರಚಾರವು ತೀರ ಟೊಳ್ಳು ಎಂಬುದನ್ನು ಮತದಾರರಿಗೆ ಮನವರಿಕೆಯಾಗುವಂತೆ ತಿಳಿಸುವುದು ಬಹಳ ಸುಲಭ. ಈ ಆರೋಪವನ್ನು ಅಲ್ಲಗಳೆಯುವುದು ಅಷ್ಟೊಂದು ಕಷ್ಟವಲ್ಲ.

ಆದರೆ ಎಲ್ಲ ಆರೋಪಣೆಗಳನ್ನು ಏಕಕಾಲಕ್ಕೆ ಎದುರಿಸಿ ನಿರಾಕರಿಸುವುದಕ್ಕಿಂತ ಒಂದೊಂದನ್ನೇ ಎತ್ತಿ ಸತ್ಯ ಸಂಗತಿಗಳನ್ನು ಜನತೆಗೆ ವಿವರಿಸುವುದು ಲೇಸು. ಈಗ ಆಹಾರ ಧಾನ್ಯಗಳ ಕೊರತೆಯಾಗಲು ಕಾರಣವೇನು, ಅದನ್ನು ದುರಿಸಲು ಸರಕಾರವು ಯಾವ ವ್ಯವಸ್ಥೆಯನ್ನು ಮಾಡಿತು, ಎಂಬ ಎರಡು ಅಂಶಗಳನ್ನು ಮುಂಚೆ ಆಲೋಚಿಸಬೇಕು.

ಆಹಾರ ಧಾನ್ಯಗಳ ಕೊರತೆಗೆ ಕೆಳಗಿನ ಕಾರಣಗಳನ್ನು ಹೇಳುವುದು ಸರಿಯಲ್ಲವೆ?

೧ ಬ್ರಿಟಿಷ ಆಡಳಿತದಲ್ಲಿ ಸಹ ಭಾರತವು ಆಹಾರದ ಬಗೆಗೆ ಸ್ವಾವಲಂಬಿಯಾಗಿದ್ದಿಲ್ಲ. ಆಗ ಬ್ರಹ್ಮದೇಶವೂ ಬ್ರಿಟಿಶರ ವಶದಲ್ಲಿದ್ದುದರಿಂದ ಆವಶ್ಯಕವಾದ ಅಕ್ಕಿಯನ್ನು ಅಲ್ಲಿಂದ ತರಿಸುತ್ತಿದ್ದರು. ಬ್ರಹ್ಮದೇಶವು ಸ್ವತಂತ್ರವಾದೊಡನೆ ಆ ಸೌಕರ್ಯವು ನಷ್ಟವಾಯಿತು.

೨ ಭಾರತ ವಿಭಜನೆಯಿಂದ ಆಹಾರದ ಕಣಜಗಳೆನಿಸಿರುವ ಸಿಂಧ, ಪಂಜಾಬ, ಪೂರ್ವ ಬಂಗಾಲಗಳು ಪಾಕಿಸ್ತಾನಕ್ಕೆ ಹೋದವು. ಅದಲ್ಲದೆ ಅಲ್ಲಿಯ ಜನಸಂಖ್ಯೆಗೆ ಆವಶ್ಯವಿದ್ದುದಕ್ಕಿಂತ ಅಧಿಕ ಆಹಾರ ಬೆಳೆಯುವ ಪ್ರದೇಶಗಳವು. ಆ ಪ್ರಮಾಣದಲ್ಲಿ ಪಾಕಿಸ್ತಾನಕ್ಕಿಂತ ಭಾರತದಲ್ಲಿಯೇ ಅಧಿಕ ಜನಸಂಖ್ಯೆಯು ಉಳಿಯಿತು. ನೂರಕ್ಕೆ ೮೨ರಷ್ಟು ಜನಬಲವು ಭಾರತದಲ್ಲಿ ಉಳಿದು ಅಖಂಡ ಭಾರತದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ೧೮ರಷ್ಟು ಮಾತ್ರ ಪಾಕಿಸ್ತಾನದಲ್ಲಿ ಉಳಿಯಿತು. ಆದರೆ ಆಹಾರ ಧಾನ್ಯಗಳ ಕ್ಷೇತ್ರದೃಷ್ಟಿಯಿಂದ ನೀರಾವರಿಯ ಸೌಕರ್ಯಗಳಿದ್ದ ಭೂಮಿಯಲ್ಲಿ ನೂರಕ್ಕೆ ಕೇವಲ ೬೫ರಷ್ಟು ಭಾರತದ ಪಾಲಿಗೆ ಸಿಕ್ಕಿತು. ನೂರಕ್ಕೆ ೬೫ರಷ್ಟು ಗೋದಿ ಬೆಳೆಯುವ ಕ್ಷೇತ್ರವೂ ನೂರಕ್ಕೆ ೬೮ರಷ್ಟು ಅಕ್ಕಿ ಬೆಳೆಯುವ ಭಾಗವೂ ಭಾರತಕ್ಕೆ ದೊರೆಯಿತು. ಒಟ್ಟು ಹಿಂದುಸ್ತಾನದ ಜನ ಬಲದಲ್ಲಿ ನೂರಕ್ಕೆ ೮೨ರಷ್ಟು ಜನರು ಭಾರತದಲ್ಲಿ ಉಳಿದರೂ ಆಹಾರ ಧಾನ್ಯಗಳು ಬೆಳೆಯುವ ಭೂಮಿಯ ಅಂಶವು ಮೇಲ್ಕಾಣಿಸಿದಂತೆ ತೀರ ಕಡಿಮೆಯಾದುದರಿಂದ ಭಾರತಕ್ಕೆ ಸುಮಾರು ೪೦ ಟನ್ನುಗಳಷ್ಟು ಆಹಾರ ಧಾನ್ಯದ ಕೊರತೆಯು ಸಹಜವಾಗಿ ಪ್ರಾಪ್ತವಾಯಿತು. ಸಿಂಧ, ಪಂಜಾಬ, ಸಿಲ್ಹೇಟಗಳಂತಹ ಪ್ರದೇಶಗಳು ತಮಗೆ ಸಾಕಾಗಿ ಮಿಗುತ ಧಾನ್ಯವನ್ನು ಅಖಂಡ ಭಾರತದ ಇತರ ಪ್ರಾಂತಗಳಿಗೆ ಒದಗಿಸುತ್ತಿದ್ದವು.

೩ ಪ್ರತಿ ವರ್ಷ ಭಾರತದ ಜನಸಂಖ್ಯೆಯು ಅಧಿಕವಾಗುತ್ತಿದ್ದ ಅಂಶವನ್ನು ಮರೆಯಲಾಗದು. ಹೆಚ್ಚು ಜನಬಲದ ಪ್ರಮಾಣದಲ್ಲಿ ಆಹಾರೋತ್ಪಾದನೆಯು ಬೆಳೆಯಲಿಲ್ಲ.

೪ ಅದಲ್ಲದೆ ವಿಭಜನೆಯಿಂದುಂಟಾದ ಧರ್ಮದ್ವೇಷದ ಕಲಹಗಳಿಂದ ಕೋಲಾಹಲವುಂಟಾಗಿ ಭಾರತಕ್ಕೆ ಒಟ್ಟಿನಲ್ಲಿ ಸುಮಾರು ೫೦ಲಕ್ಷ ನಿರಾಶ್ರಿತರು ಬಂದರು. ಅವರ ಹೊಣೆಯನ್ನು ಭಾರತವು ಹೊರಬೇಕಾಯಿತು.

೫ ಸಾಲದುದಕ್ಕೆ ನಿಸರ್ಗದ ಪ್ರಚಂಡ ಕೋಪವೂ ಭಾರತದ ದುಃಖಕ್ಕೆ ಕಾರಣವಾಯಿತು. ಅಸ್ಸಾಮದಲ್ಲಿ ಭಯಂಕರ ಭೂಕಂಪವಾಗಿ ಬೆಳೆಗೆ ಹೆಚ್ಚಿನ ಹಾನಿಯಾಯಿತು. ಆ ಪ್ರಾಂತವು ತನಗೆ ಸಾಕಾಗಿ ಸುಮಾರು ೧೫ ಲಕ್ಷ ಟನ್ನುಗಳಷ್ಟು (೧೫-೧೮ ಲಕ್ಷ ಚೀಲ) ಅಕ್ಕಿಯನ್ನು ಉಳಿದ ಪ್ರಾಂತಗಳಿಗೆ ಪೂರೈಸುತ್ತಿದ್ದಿತು. ಭೂಕಂಪದ ಭಟ್ಟಣೆಯಿಂದಾಗಿ ಅದಕ್ಕೇ ಸುಮಾರು ೩-೪ ಲಕ್ಷ ಟನ್ನುಗಳ ಆಹಾರವನ್ನು ಒದಗಿಸುವ ಪ್ರಸಂಗ ಬಂದಿತು. ಬಿಹಾರದ ನೆರೆ ಹಾವಳಿಯಿಂದ ವಿಪುಲ ಧಾನ್ಯ ಧ್ವಂಸವಾಗಿ ಅದರ ಪರಿಪಾಲನೆಯನ್ನು ನೋಡಿಕೊಳ್ಳಬೇಕಾಯಿತು. ಉತ್ತರ ಪ್ರದೇಶದ ಅವಸ್ಥೆಯೂ ಹೀಗೇ ಆಯಿತು. ಮಧ್ಯಪ್ರದೇಶವು ಮಂಡಿಕೆಯಾಗಿ ತನಗೆ ಸಾಕಾಗಿ ಹೊರಗಿನ ಪ್ರಾಂತಗಳಿಗೆ ಆಹಾರ ಒದಗಿಸುವುದು. ಆದರೆ ಮಳೆಯಿಲ್ಲದೆ ಅಲ್ಲಿಯೂ ಬೆಳೆ ಬರಲಿಲ್ಲ. ಮದ್ರಾಸದ ಕಥೆಯು ಕರುಣಾಜನಕವಾಯಿತು. ಕೆಲವು ಕಡೆ ಅನಾವೃಷ್ಟಿ, ಹಲವು ಕಡೆ ಅತಿವೃಷ್ಟಿ ಹೀಗಾಗಿ ಆಹಾರದ ದುರವಸ್ಥೆಯುಂಟಾಯಿತು. ಅಲ್ಲಿ ಸುಮಾರು ೯ ಕೋಟಿ ಚೀಲಗಳಷ್ಟು ಧಾನ್ಯವು ನಷ್ಟವಾಯಿತು. ಯುದ್ಧದ ಪರಿಣಾಮದಿಂದ, ಒಳಬಂಡಾಯಗಳಿಂದ ಬ್ರಹ್ಮದೇಶಕ್ಕೂ ನಮಗೆ ನೆರವು ನೀಡದ ಪರಿಸ್ಥಿತಿಯುಂಟಾಯಿತು.

ಆದರೆ ಇದನ್ನೆಲ್ಲ ನೋಡಿ ಸರಕಾರವು ಕೈ ಕಟ್ಟಿಕೊಂಡು ಕೂಡಲಿಲ್ಲ. ಬ್ರಿಟಿಶ ಆಡಳಿತದಲ್ಲಿ ಬಂಗಾಲದಲ್ಲಿ ಉಂಟಾದ ಅನಾಹುತವು ಯಾರಿಗೆ ಗೊತ್ತಿಲ್ಲ? ಅಂತಹ ಪರಿಸ್ಥಿತಿಯು ಎಲ್ಲಿಯೂ ಉದ್ಭವಿಸದಂತೆ ಮುಂಜಾಗ್ರತೆಯನ್ನು ವಹಿಸಿದ್ದು ಕಾಂಗ್ರೆಸ್ ಸರಕಾರದ ದಕ್ಷತೆಯ ನಿದರ್ಶನವಾಗಿದೆ. ೧೯೫೦ರಲ್ಲಿ ಕೇವಲ ೧೫ಲಕ್ಷ ಟನ್ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಬೇಕೆಂದು ನಿರ್ಧರಿಸಿದ್ದರೂ ೨೦ಲಕ್ಷ ಟನ್ ಆಯಾತ ಮಾಡಬೇಕಾಯಿತು. ತರಿಸುವ ಕಾಳುಕಡ್ಡಿಗೆ ಹಣ ಒದಗಿಸುವ ತೊಂದರೆಯನ್ನು ವರ್ಣಿಸುವುದಕ್ಕಿಂತ ಆಲೋಚಿಸುವುದು ಲೇಸು. ಯುದ್ಧಕಾಲದಲ್ಲಿ ಭಾರತವು ಗಳಿಸಿದ (ಬ್ರಿಟಿಶ ಸರಕಾರದಿಂದ ಸಲತಕ್ಕ) ಸ್ಟರ್ಲಿಂಗ ಶಿಲ್ಕು ಇದ್ದು ಎಷ್ಟೋ ಸಹಾಯವಾಯಿತು. ಹೀಗೆ ಕೋಟಿಗಟ್ಟಲೆ ಹಣವನ್ನು ಆಹಾರಕ್ಕಾಗಿ ವಿದೇಶಗಳಿಗೆ ತೆತ್ತು ಹಿಂದಿನ ಗಳಿಕೆಯನ್ನು ಕಳೆದುಕೊಳ್ಳಲು ಸರಕಾರಕ್ಕೆ ತೀರ ವ್ಯಸನವಾಯಿತು. ಉದ್ಯಮ ಪ್ರಗತಿಯುಳ್ಳ ರಾಷ್ಟ್ರಗಳು ಇತರ ಸರಕುಗಳನ್ನು ಉತ್ಪಾದಿಸಿ ನಿರ್ಯಾತಮಾಡಿ ಹಣಗಳಿಸಿ ತಮ್ಮ ಆಹಾರ ವಸ್ತುಗಳನ್ನು ಪಡೆದವು. ಭಾರತವು ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿದ ದೇಶವಾದುದರಿಂದ ಅದಕ್ಕೆ ಈ ಅನುಕೂಲವಿಲ್ಲ.

ಆದುದರಿಂದ ಕೊರತೆಯ ಕಾಲದಲ್ಲಿ ನಿಯಂತ್ರಣವನ್ನು ಜಾರಿಗೆ ತರಬೇಕಾಯಿತು. ಇದ್ದ ಮತ್ತು ಉಪಲಬ್ಧವಾದ ಆಹಾರವನ್ನು ಎಲ್ಲ ಪ್ರದೇಶಗಳಿಗೂ ಹಂಚಿ ೧೨ ಔನ್ಸುಗಳ ಸೀದಾ ಪದ್ಧತಿಯನ್ನು ಪ್ರಾರಂಭಿಸಬೇಕಾಯಿತು. ಕಷ್ಟ ಕಾಲದಲ್ಲಿ ಹೀಗೆ ಮಾಡುವುದು ಸರಕಾರದ ಕರ್ತವ್ಯವೆಂಬುದನ್ನು ಯಾರೂ ಅಲ್ಲಗಳೆಯರು. ಆಗ ಕೊರತೆಯ ಕಷ್ಟವನ್ನು ಪ್ರತಿಯೊಬ್ಬ ವ್ಯಕ್ತಿಯೂ ಹಂಚಿಕೊಳ್ಳುವುದು ರಾಷ್ಟ್ರ ಧರ್ಮವಾಗುತ್ತದೆ.

ಆದರೆ ಜನತೆಯಲ್ಲಿ ತನ್ನಂತೆ ಪರರನ್ನು ಬಗೆಯುವ ಉದಾರ ಭಾವವು ಇರದಿದ್ದರೆ ಎಲ್ಲರಿಗೂ ತೊಂದರೆಯಾಗುವದು ತಪ್ಪಿದ್ದಲ್ಲ. ಅಧಿಕ ಆಹಾರ ಬೆಳೆಯುವ ಪ್ರದೇಶಗಳು ಧಾನ್ಯದ ಎತ್ತುವಳಿಯಲ್ಲಿ ಸರಿಯಾಗಿ ಸಹಕರಿಸದಿದ್ದುದರಿಂದ ಸರಕಾರವು ವಿವಂಚನೆಗೊಳಗಾಯಿತು. ಕಳ್ಳಪೇಟೆಗಳು ಬೆಳೆದವು. ಅಧಿಕಾರಿಗಳ ಲಂಚ ವಂಚನೆಗಳ ದುರ್ಬುದ್ಧಿ ಅಧಿಕವಾಯಿತು. ಇದರಿಂದ ನೀತಿಯು ನೆಲೆ ತಪ್ಪಿತು. ರಾಷ್ಟ್ರಪಿತ ಬಾಪೂಜಿಯವರ ಹಿತೋಕ್ತಿಯಂತೆ ಸರಕಾರವು ನಿಯಂತ್ರಣಗಳನ್ನು ಕಿತ್ತುಹಾಕಿತು. ಆದರೆ ವರ್ತಕರ ಮತ್ತು ಕಾರಖಾನೆದಾರರ ಲಾಭದ ಲಾಲಸೆಯಿಂದ ಸರಕುಗಳ ಬೆಲೆ ಮುಂಚೆಗಿಂತ ವಿಪರೀತವಾಗಿ ಏರಿ ಜನರು ಕಂಗಾಲಾದರು. ಬಡಬಗ್ಗರಿಗೆ, ಮಧ್ಯಮ ವರ್ಗದವರಿಗೆ ಆಹಾರ ಧಾನ್ಯಗಳು ಸಿಕ್ಕುವದೇ ಕಷ್ಟವಾಯಿತು. ಪರಿಸ್ಥಿತಿಯ ಪ್ರಭಾವದಿಂದ ಮುಂದು ಕಾಣದೆ ಪುನಃ ನಿಯಂತ್ರಣವನ್ನು ಹೇರಬೇಕಾಯಿತು.

ಕಳ್ಳಪೇಟೆ, ಲಾಭಲಾಲಸೆ, ಎತ್ತುವಳಿಯಲ್ಲಿ ತೋರಿದ ಅಸಹಕಾರ, ಬಡವರ ಗೋಳು ಇವುಗಳಿಗೆಲ್ಲ ಜನತೆಯ ಕೆಲವು ವಿಶಿಷ್ಟ ವರ್ಗಗಳು ಕಾರಣರಲ್ಲದೆ ಸರಕಾರವಲ್ಲ. ನಾಗರಿಕ ಬುದ್ಧಿಯಿಲ್ಲದ ಜನತೆಗೆ ಆಡಳಿತದವರು ಎಷ್ಟು ಹೇಳಿದರೂ ಅಷ್ಟೇ. ದುರ್ನೀತಿ, ದುರ್ವ್ಯಾಪಾರಗಳಿಗೆ ತಕ್ಕ ದಂಡನೆಯನ್ನು ಮಾಡದಿದ್ದುದು ಸರಕಾರದ ದೋಷ ಅಥವಾ ಹೇಡಿತನವೆಂದು ಆಡಿಕೊಳ್ಳುವವರೂ ಇದ್ದಾರೆ. ಕಳ್ಳಪೇಟೆಯವರನ್ನು ಹಿಡಿದುಕೊಡುವ ಕೆಲಸವನ್ನು ನಾಗರಿಕರು ಮಾಡದಿದ್ದರೆ ಸರಕಾರವಾದರೂ ಏನು ಮಾಡೀತು. ಕೈಗೆ ಸಿಕ್ಕವರಿಗಿಂತ ಪಾರಾಗುವವರೇ ಅಧಿಕರಾದರೆ ಯಾರನ್ನು ದೂರಬೇಕು? ಜನತೆ ಜಾಗ್ರತವಾಗದಿದ್ದರೆ ಅಧಿಕಾರಿಗಳು ನಿರಂಕುಶರಾಗುವುದು ಕ್ರಮಪ್ರಾಪ್ತ, ಈ ವಿಷವರ್ತುಲದಿಂದಾಗಿ ನಿಯಂತ್ರಣಗಳಿಂದ ಜನತೆಗೆ ಸುಖವಿಲ್ಲೆಂಬುದು ನಿಜವಾದರೂ ಅವುಗಳನ್ನು ತೆಗೆದುಹಾಕುವುದು ಇನ್ನೂ ಅಧಿಕ-ಆಪತ್ತುಗಳನ್ನುಂಟುಮಾಡುವುದೆಂಬ ಭಯವು ತಪ್ಪಿಲ್ಲ.

ಆದುದರಿಂದ ಪರದೇಶಗಳಿಂದ ಆಹಾರ ತರಿಸಿ, ಕೇಂದ್ರ ಮತ್ತು ಪ್ರಾಂತಗಳಲ್ಲಿಯ ಸರಕಾರದ ಆಹಾರ ಸಂಗ್ರಹವನ್ನು ಹೆಚ್ಚಿಸಿ, ಆಹಾರೋತ್ಪತ್ತಿಯನ್ನು ವಿವಿಧೋಪಾಯಗಳಿಂದ ಅಧಿಕವಾಗಿ ಕ್ರಮೇಣ ನಿಯಂತ್ರಣಗಳನ್ನು ಕಿತ್ತುಹಾಕಬೇಕೆಂಬ ವಿವೇಕ ಯುತವಾದ ಧೋರಣೆಯನ್ನು ಸರಕಾರವು ವಹಿಸಿದ್ದು ಯಥೋಚಿತವಾಗಿದೆ.

[ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ]

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವನನೀತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ, ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ)

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ಲೋಕಾಂತ

ಅದಲಿತ ಹಾಗೂ ಆಕ್ರಮಣ

ಸುಯೇಜ ಕಾಲುವೆ ಪ್ರದೇಶದಲ್ಲಿ ಬುದ್ಧಿಪೂರ್ವಕವಾಗಿ ಬ್ರಿಟಿಶರು ಆಕ್ರಮಣ ನಡೆಸಿದ್ದಾರೆಂದು ಇಜಿಪ್ತ ಸರಕಾರವು ಪ್ರತಿಭಟಿಸಿ ಬ್ರಿಟನಕ್ಕೆ ಪತ್ರ ಬರೆದಿದೆ. 1936ರ ಒಪ್ಪಂದದನ್ವಯ ಸುಯೇಜ ಕಾಲುವೆ ಆ ಪಳಿತದ ಸುರಕ್ಷಿತತದ ಬಗ್ಗೆ ಸೈನಿಕರು ಸಂರಕ್ಷಣಾ ಕಾರ್ಯ ಕೈಗೊಂಡದ್ದು ಆಕ್ರಮಣವಾದೀತೇ? ಎಂದು ಬ್ರಿಟನು ಇಜಿಪ್ತಯನ್ನು ಪ್ರಶ್ನಿಸಿದೆ.

ಕೊರಿಯಾ ಮಾತುಕತೆ

ಕೊರಿಯಾದಲ್ಲಿಯ ಯುದ್ಧ ವಿರಾಮ ರೇಖೆಯ ಬಗ್ಗೆ ಯುಕ್ತ ರಾಷ್ಟ್ರ ಸಂಘ ಹಾಗೂ ಕಮ್ಯೂನಿಸ್ಟ ಪ್ರತಿನಿಧಿಗಳಲ್ಲಿ ಕೊನೆಯ ಒಡಂಬಡಿಕೆಯಲ್ಲಿ ಮತಭೇದ ಉಂಟಾಯಿತು. ಯುದ್ಧರಂಗದ ವಿವಾದಾಸ್ಪದ ಪ್ರದೇಶಗಳನ್ನು ವಿಮಾನದಲ್ಲಿ ಹೋಗಿ ನೋಡಿಕೊಂಡು ಬರಬೇಕೆಂದು ಯು. ರಾ. ಸಂಘದ ಪ್ರತಿನಿಧಿಗಳು ಕೇಳಿದ ಕಾರಣಗಳನ್ನು ಕಮ್ಯೂನಿಸ್ಟರು ಲಕ್ಷಿಸಿದಂತಿಲ್ಲ.

ಹಂಗೇರಿಯ ಮೇಲೆ ಅಮೇರಿಕದ ಕಣ್ಣು

ಅಮೇರಿಕವು ಹಂಗೇರಿಯ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದು ಹಂಗೇರಿಯಲ್ಲಿ ಗುಪ್ತಚಾರರನ್ನು ಇಟ್ಟು ವಿಧ್ವಂಸಕ ಕಾರ್ಯ ನಡೆಸಲು ಒಳಸಂಚು ಹೂಡಿಸಿದೆಯೆಂದು, ಹಂಗೇರಿ ಸರಕಾರವು ಅಮೇರಿಕೆಯ ಮೇಲೆ ಆರೋಪವನ್ನು ಹೊರಿಸಿದೆ

ಜಾಪಾನಿಗಳ ಮೇಲೆ ಅವಲಂಬಿಸುವಿಕೆಯೇ?

ಕೊರಿಯ ಯುದ್ಧರಂಗದಲ್ಲಿ ಕಮ್ಯೂನಿಸ್ಟರ ವಿ[ರು]ದ್ಧ ಹೋರಾಡಲು ಜಾಪಾನಿ ಸೈನಿಕರನ್ನು ಕರೆಸಿಕೊಳ್ಳಬೇಕೆಂಬ ಜಪಾನದ ಬೇಡಿಕೆಯನ್ನು ದ. ಕೊರಿಯದ ವಿದೇಶಾಂಗ ಮಂತ್ರಿ ನಿರಾಕರಿಸಿದ್ದಾರೆ. ಜಪಾನ ಹಾಗೂ ಕೊರಿಯ ಆಂತರಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿದ್ದು ಒಡಂಬಡಿಕೆಯಾಗುವ ವರೆಗೆ ಜಾಪಾನೀ ಸೈನಿಕರನ್ನು ಕರೆಸಿಕೊಳ್ಳಲು ಶಕ್ಯವಿಲ್ಲವೆಂದು ಹೇಳಿರುವರು.

ಮುಸಾದಿಕರ ಕಣ್ಣೀರು

ಪರ್ಸಿಯದ ಮುಖ್ಯ ಮಂತ್ರಿ ಡಾ| ಮುಸಾದಿಕರು ಅಮೇರಿಕಾ ಹಾಗೂ ಇಜಿಪ್ತ ಸಂದರ್ಶನದ ಬಗ್ಗೆ ಸುಮಾರು ೮೦ ಪುಟಗಳ ವರದಿಯನ್ನು ಇರಾಣದ ಶಾಸನ ಸಭೆಯ ಮುಂದೆ ಓದಿ ಹೇಳಿದರು. ಕೊನೆಯಲ್ಲಿ ನನ್ನ ಮೇಲೆ ಸಭೆಯವರಿಗೆ ವಿಶ್ವಾಸವಿದೆಯೆಂಬುದನ್ನು ವ್ಯಕ್ತಪಡಿಸಬೇಕೆಂದು ಕಣ್ಣೀರು ಸುರಿಸುತ್ತ ಹೇಳಿದರು. ಸದಸ್ಯರೆಲ್ಲ ಕೈಚಪ್ಪಾಳೆ ಹೊಡೆದು ಸ್ವಾಗತಿಸಿದರು. ಡಾ| ಮುಸಾದಿಕರಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುವ ಗೊತ್ತುವಳಿಯೊಂದನ್ನು ಸಭೆಯು ಸ್ವೀಕರಿಸಿತು.

ನಿಃಶಸ್ತ್ರೀಕರಣಕ್ಕೆ ರಶಿಯದ ವಿರೋಧ

ಪ್ಯಾರಿಸದಲ್ಲಿ ಕೂಡಿದ ಸಂ. ರಾ. ಸಂಘದ ರಾಜಕೀಯ ಸಮಿತಿಯ ಮುಂದೆ ರಶಿಯದ ವಿದೇಶಾಂಗ ಮಂತ್ರಿ ವಿಶಿನ್ಸ್ಕಿಯವರು ಮಾತನಾಡುತ್ತಾ "ಅಮೇರಿಕೆಯು ಶಸ್ತ್ರಾಸ್ತ್ರಗಳಲ್ಲಿ ತನಗೆ ಪ್ರಾಮುಖ್ಯ ಬೇಕೆಂದು ಅದು ಹುಚ್ಚು ಸ್ಪರ್ಧೆಯನ್ನು ನಡೆಸಿರುವದು, ವಿಮಾನ ಬಲದಲ್ಲಿ ಅಣು ಬಾಂಬುಗಳಲ್ಲಿ ನಮ್ಮದೇ ಮೇಲುಗೈಯೆಂದು ಅವರು ಹೇಳಿಕೊಳ್ಳುತ್ತಿದ್ದಾರೆ. ರಶಿಯದೊಡನೆ ಗಂಭೀರವಾದ ಘೋರಣೆಯನ್ನಿಟ್ಟುಕೊಳ್ಳಬೇಕೆಂದು ಡೀನ್ ಆಚಿಸನ್ನರು ಹೇಳಿದ್ದರಲ್ಲಿ ಅವರ ಮುತ್ಸದ್ದಿತನದ ದಿವಾಳಿತನವಿದೆ. ರಶಿಯದ ತಿದ್ದುಪಡಿಗಳನ್ನು ಒಪ್ಪಿಕೊಂಡರೆ ಮಾತ್ರ ನಾವು ಈ ಜಾಗತಿಕ ನಿಃಶಸ್ತ್ರೀಕರಣ ಯೋಜನೆಯಲ್ಲಿ ಭಾಗವಹಿಸಬಹುದು ಎಂದು ಹೇಳಿದರು.

ಚೀನೀ ಸಾಂಸ್ಕೃತಿಕ ಶಿಷ್ಟಮಂಡಳ

ಭಾರತಕ್ಕೆ ಆಗಮಿಸಿದ ಚೀನೀ ಸಾಂಸ್ಕೃತಿಕ ಶಿಷ್ಟಮಂಡಳವು ಮೈಸೂರು ಮಧುರಾ ಮೀನಾಕ್ಷಿ ದೇವಾಲಯವೇ ಮೊದಲಾದ ಕಲಾಪೂರ್ಣ ಸಾಂಸ್ಕೃತಿಕ ಪ್ರದೇಶಗಳನ್ನು ಸಂದರ್ಶಿಸಿತು.

ಭಾರತ ಆಹಾರ ಪರಿಸ್ಥಿತಿಯ ವಿಮರ್ಶೆ

ಭಾರತದ ಆಹಾರ ಪರಿಸ್ಥಿತಿಯನ್ನು ವಿಮರ್ಶಿಸುವದಕ್ಕಾಗಿ ಭಾರತದ ಬೇರೆ ಬೇರೆ ಪ್ರಾಂತದ 40 ಆಹಾರ ಅಧಿಕಾರಿಗಳ ಪರಿಷತ್ತೊಂದು ದಿಲ್ಲಿಯಲ್ಲಿ ಕೂಡಿತು. 1952ರಲ್ಲಿ ಭಾರತದ ಆಹಾರ ಪರಿಸ್ಥಿತಿಯ ಸ್ವರೂಪವನ್ನು ನಿರ್ಧರಿಸಲು ಈ ಸಭೆಯು ಸೇರಿತ್ತಾದರೂ ಮುಂದಿನ ವರ್ಷದ ಆಹಾರ ಪರಿಸ್ಥಿತಿಯ ಬಗ್ಗೆ ನಿಶ್ಚಿತವಾಗಿ ಏನನ್ನೂ ಹೇಳಲಿಕ್ಕೆ ಬರುವದಿಲ್ಲವೆಂದು ಅಭಿಪ್ರಾಯಪಟ್ಟಿತು.

ಮೈಸೂರಿಗೆ ಮುಂಬಯಿಯ ನ್ಯಾಯಾಧೀಶರು

ಮೈಸೂರ ಮುಖ್ಯ ನ್ಯಾಯಾಧೀಶರ ವಿಶಪ್ರಾಶನ ಮೊಕದ್ದಮೆ ವಿಚಾರಣೆಗಾಗಿ ಮುಂಬಯಿ ರಾಜ್ಯದ ಜಡ್ಜರನ್ನು ಕರೆಸಿಕೊಳ್ಳಲು ಮೈಸೂರು ಸರಕಾರ ನಿರ್ಧರಿಸಿದೆಂದು ತಿಳಿಯುತ್ತದೆ.

ಹೈದರಾಬಾದದ ವಿಭಜನೆಯ ಪ್ರಶ್ನೆ

ಹೈದರಾಬಾದ ಸಂಸ್ಥಾನವನ್ನು ಭಾಷಾನುಗುಣವಾಗಿ ವಿಭಜಿಸಿ ಭಾಷಾವಾರು ಪ್ರಾಂತರಚನೆಯಾದಾಗ ಆಯಾ ಭಾಷಾವಾರು ಪ್ರಾಂತಗಳಲ್ಲಿ ಹೈದರಾಬಾದದ, ಕನ್ನಡ, ಮರಾಠಿ, ಆಂಧ್ರ ಪ್ರದೇಶಗಳು ಲೀನಗೊಂಡತಕ್ಕದ್ದೆಂದು ಹೈದರಾಬಾದು ಕಾಂಗ್ರೆಸು ಘೋಷಣಾ ಪತ್ರದಲ್ಲಿ ಸಾರಿದೆ.

500 ಕಮ್ಯೂನಿಸ್ಟ ಹುರಿಯಾಳುಗಳು

ಇಡೀ ಭಾರತದಲ್ಲಿ ಒಟ್ಟು 500 ಹುರಿಯಾಳುಗಳನ್ನು ಕಮ್ಯೂನಿಸ್ಟ ಪಕ್ಷದ ಪರವಾಗಿ ನಿಲ್ಲಿಸಲು ಕಮ್ಯೂನಿಸ್ಟ ಪಕ್ಷ ಯೋಜನೆ ಮಾಡಿದ್ದು ಇತ್ತರಲ್ಲೆ 400 ಜನರು ನಾಮಪತ್ರವನ್ನು ಸಲಿಸಿರುವದಾಗಿ ವರದಿಯಾಗಿದೆ.

ಬಿಹಾರ ಹುರಿಯಾಳುಗಳು

ಬಿಹಾರದಿಂದ ಲೋಕ ಸಭೆಗೆ 55 ಮತ್ತು ಪ್ರಾಂತಿಕ ಶಾಸನ ಸಭೆಗೆ 330 ಸದಸ್ಯರನ್ನು ಆರಿಸಬೇಕಿದ್ದು ಈ ಎಲ್ಲ ಸ್ಥಳಗಳಿಗೆ ಒಟ್ಟು 3000 ಜನರು ನಾಮಪತ್ರ ಸಲ್ಲಿಸಿರುವದಾಗಿ ತಿಳಿಯುತ್ತದೆ. ಈ ಚುನಾವಣಾ ರಂಗದಲ್ಲಿ ಒಟ್ಟು 17 ಪಕ್ಷಗಳು ಭಾಗವಹಿಸಿರುತ್ತವೆ.

ಹೈದರಾಬಾದಲ್ಲಿ

ಹೈದರಾಬಾದ ಪ್ರಾಂತಿಕ ಶಾಸನ ಸಭೆಯ 175 ಸ್ಥಳಗಳಿಗೆ 11 ಪಕ್ಷಗಳ 515 ಸದಸ್ಯರು ನಾಮಪತ್ರ ಸಲ್ಲಿಸಿರುವರು. ಇದರಲ್ಲಿ ಕಾಂಗ್ರೆಸ್ಸಿನ 4 ಜನ ಹುರಿಯಾಳುಗಳು ಅವಿರೋಧವಾಗಿ ಆರಿಸಿ ಬಂದಿರುವರು. ಲೋಕ ಸಭೆಗೆ ನಿಂತ ಕಾಂಗ್ರೆಸ್ಸಿನವರಲ್ಲಿಬ್ಬರು ಅವಿರೋಧವಾಗಿ ಆರಿಸಿ ಬಂದಿರುವರು.

ಮದ್ರಾಸದಲ್ಲಿ

ಮದ್ರಾಸ ಪ್ರಾಂತದಲ್ಲಿಯ ಲೋಕ ಸಭೆಯ 71 ಸ್ಥಳಗಳಿಗೆ ಹಾಗೂ ಮದ್ರಾಸ ಶಾಸನ ಸಭೆಯ 367 ಸ್ಥಳಗಳಿಗೆ ಕೂಡಾ 19 ಪಕ್ಷಗಳಿಗೆ ಸೇರಿದ 2900 ಹುರಿಯಾಳುಗಳು ನಾಮಪತ್ರವನ್ನು ಸಲ್ಲಿಸಿರುವರು. ನಾಮಪತ್ರ ಸಲ್ಲಿಸಿದವರಲ್ಲಿ ಸ್ವತಂತ್ರ ಹುರಿಯಾಳುಗಳ ಸಂಖ್ಯೆಯು ಹೆಚ್ಚಿನದಾಗಿದೆಂದು ತಿಳಿಯುತ್ತದೆ.

ಮುಂಬಯಿಯಲ್ಲಿ

ಮುಂಬಯಿ ಪ್ರಾಂತದಿಂದ ಲೋಕಸಭೆಗೆ ಇರುವ 45 ಸ್ಥಾನಗಳಿಗೂ ಹಾಗೂ ಪ್ರಾಂತಿಕ ಶಾಸನ ಸಭೆಯ 315 ಸ್ಥಾನಗಳಿಗೂ ಒಟ್ಟಿಗೆ 1600 ನಾಮಪತ್ರಗಳು ಬಂದಿವೆ. ನವಂಬರ 30 ದಿನಾಂಕವು ಹಿಂತೆಗೆದುಕೊಳ್ಳುವ ದಿನವಾಗಿದ್ದು ತದನಂತರ ಸಾಮಾನ್ಯ 1200 ಜನ ಹುರಿಯಾಳುಗಳು ಚುನಾವಣೆಯಲ್ಲಿ ಸ್ಪರ್ಧಿಸಲಿರುವರು. ಕಾಂಗ್ರೆಸ್ ಎಲ್ಲ ಸ್ಥಾನಗಳಿಗೂ ತನ್ನ ಹುರಿಯಾಳುಗಳನ್ನು ನಿಲ್ಲಿಸಿದ್ದು ಅವರಲ್ಲಿ ಶ್ರೀಯುತರಾದ ಜಿ. ವಿ. ಮಾಳವಣಕರ್, ಎನ್. ವಿ. ಗಾಡಗೀಳ್, ಸಿ. ಡಿ. ದೇಶಮುಖ್, ಸ್ವರೂಪರಾಣಿ ಲಾಲಿಭಂಗಾ, ಡಿ. ಪಿ. ಕರಮರಕರ, ಮೊದಲಾದ ಧುರೀಣರಿರುವರು.

ಉತ್ತರಪ್ರದೇಶ

ಉತ್ತರ ಪ್ರದೇಶದ ಒಟ್ಟು 516 ಸ್ಥಳಗಳಿಗೆ 17 ರಾಜಕೀಯ ಪಕ್ಷಗಳು ಸ್ಪರ್ಧಿ[ಸ]ಲಿವೆ. ಎಲ್ಲ ಸ್ಥಳಗಳಿಗೆ ಕಾಂಗ್ರೆಸ್ ತನ್ನ ಹುರಿಯಾಳನ್ನು ನಿಲ್ಲಿಸುವದಾದರೂ ಆಚಾರ್ಯ ಕೃಪಲಾನಿ ಹಾಗೂ ನರೇಂದ್ರದೇವರ ವಿರುದ್ಧ ನಿಲ್ಲಿಸುವದಿಲ್ಲವೆಂದು ತಿಳಿಯುತ್ತದೆ. ಕಿ. ಮ. ಪ್ರಜಾಪಕ್ಷ ಹಾಗೂ ಸಮಾಜವಾದಿ ಪಕ್ಷಗಳವರು ಶ್ರೀ ನೆಹರೂ ಹಾಗೂ ಮೌಲಾನಾ ಆಜಾದರ ವಿರುದ್ಧ ಹುರಿಯಾಳುಗಳನ್ನು ನಿಲ್ಲಿಸಬಾರದೆಂದು ನಿಶ್ಚಯಮಾಡಿದ್ದರೂ ಹಿಂದೂ ಮಹಾಸಭೆಯ ಎಲ್. ಜಿ. ಥತ್ತೆಯವರು ನೆಹರೂರವರ ವಿರುದ್ಧ ಸ್ಪರ್ಧಿಸಲಿರುವರಂತೆ.

ಶ್ರೀ ನೆಹರೂ ನಾಮಪತ್ರದ ಬಗ್ಗೆ ತಕರಾರು

ಶ್ರೀ ನೆಹರೂರವರ ನಾಮಪತ್ರವು ಸಮಯ ಮೀರಿ ಬಂದದ್ದರಿಂದ ಕಚೇರಿಯ ಗಡಿಯಾರವನ್ನು ತಿದ್ದಿದರೆಂದು ರಿಟರ್ನಿಂಗ್ ಆಫೀಸರರ ಮೇಲೆ ಹಿಂದೂ ಮಹಾಸಭಾ ಧುರೀಣ ಎಲ್. ಜಿ. ಥತ್ತೆ ಹಾಗೂ ಇನ್ನಿತರ ಧುರೀಣರು ಆರೋಪ ಹೊರಿಸಿರುವರು. ಜಿಲ್ಹಾ ಮ್ಯಾಜಿಸ್ಟ್ರೇಟರ ಕೈಗಡಿಯಾರಕ್ಕಿಂತ 5 ನಿಮಿಷ ಕಚೇರಿಯ ಗಡಿಯಾರ ಮುಂದಿತ್ತು. ಇದನ್ನು ಲಕ್ಷ್ಮಿ ಟೆಲಿಗ್ರಾಫ್ ಕಚೇರಿಗೆ ಫೋನ್ ಮಾಡಿ ಸರಿಯಾದ ಸಮಯವನ್ನು ಕೇಳಿದಾಗ ಕಚೇರಿಯ ಗಡಿಯಾರ ತಪ್ಪಿದೆಯೆಂದು ತಿಳಿದು ಬಂದದ್ದರಿಂದ ಸರಿಪಡಿಸಿದ್ದು ನಿಜವೆಂದು ಅವರು ಹೇಳಿದರು.

ಕಾಂಗ್ರೆಸ್ಸನ್ನು ಎದುರಿಸಲು ಐಕ್ಯ ರಂಗ

ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಕಾಂಗ್ರೆಸ್ಸೇತರ ಪಕ್ಷಗಳ ಹುರಿಯಾಳುಗಳ ಸಂಯುಕ್ತರಂಗ ನಿರ್ಮಾಣದ ಸಭೆಯೊಂದು ಮದ್ರಾಸದಲ್ಲಿ ಜರುಗಿ ರಾಜಕೀಯ ವಿಚಾರಗಳಲ್ಲಿ ನಾಗರಿಕ ಮೂಲಭೂತ ಹಕ್ಕುಗಳನ್ನು ದೊರಕಿಸಿಕೊಡಲು ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸುವದಕ್ಕಾಗಿ ಕಾಂಗ್ರೆಸ ಹುರಿಯಾಳುವಿನ ವಿರುದ್ಧ ಒಬ್ಬನೇ ಹುರಿಯಾಳು ನಿಲ್ಲುವಂತೆ ಒಪ್ಪಿಕೊಳ್ಳಬೇಕು. ಇಲ್ಲವಾದರೆ ಓಟುಗಳು ಹಂಚಿಹೋಗಿ ಕಾಂಗ್ರೆಸ್ಸು ಗೆಲ್ಲುವ ಸಂಭವವೇ ಹೆಚ್ಚು ಎಂಬಾತರಿದ ಗೊತ್ತುವಳಿಯನ್ನು ಸ್ವೀಕರಿಸಿದೆ.

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಕವಿಭೂಷಣ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲಕ್ಷ್ಮಿಪಗಡೆ	0-6-0
ಭರತೇಶ ದಿಗ್ವಿಜಯ	0-8-0

ಅಭ್ಯಾಸಿಗಳಿಗೆ ತಕ್ಕ ಸೂಚನೆಗಳಿವೆ.
ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕಭಂಡಾರ,
ಉಡುಪಿ.

ಋತುಸ್ರಾವ ನಿಂತಿತು

'ಋತುಕಾಂ' ಪಿಲ್ಲಗಳನು ಉಪಯೋಗಿಸಿದರೆ ಹಠಾತ್ತಿ, ಋತುಸ್ರಾವವಾಗುವದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಕುಂದಿಗೆ ಶಾಸ್ತ್ರಿ ಗುಣವಾಗಿದೆ- ಬೆಲೆ: ರೂ. 3-, ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಪ್ರಾತಿನಿಧ್ಯರು ಕರ್ನಾಟಕ ಪತ್ರಿಕೆ, ಮಂಗಳೂರು

Approved from by the Govt. of Mysore Certificated by the Agent of the Govt of Cylone, & Indian

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೯-೧೧-'೫೧

ಸಂ. ರಾ: ಸಂಘದಲ್ಲಿ ಬಿ. ಎನ್. ರಾಯರ ಸೂಚನೆ.

ಜಗತ್ತಿನ ಮುಂದಿರುವ ಯುದ್ಧ ಭೀತಿಗೆ ಸುಸಂಪನ್ನ ರಾಷ್ಟ್ರಗಳ ನಿರಂಕುಶ ಪ್ರಭುತ್ವದ ಧೋರಣೆಯೇ ಕಾರಣವಾಗಿದೆ ಎನ್ನುವದನ್ನು ಈಗಿನ ದೃಶ್ಯಮಾನ ಸ್ಥಿತಿಗಳಿಂದ [illegible]ಕೊಳ್ಳಬಹುದು. ತೃತೀಯ ಮಹಾಯುದ್ಧವು ಅನಿವಾರ್ಯವೇ? ಎನ್ನುವ ಸಂದಿಗ್ಧ ಪರಿಸ್ಥಿತಿಗಳು ನಮ್ಮ ಮುಂದೆ ಇನ್ನೂ ಜೀವಂತವಾಗಿ ಉಳಿದಿವೆ. ಶಾಂತಿ ಸಾಧನೆಯನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡಿರುವ ಸಂ. ರಾ. ಸಂಘವು ಈ ದಿಶೆಯಲ್ಲಿ ತನ್ನ ಪ್ರಭಾವವನ್ನು ಬೀರಲು ಶಕ್ತವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಚರ್ಚೆಯೊಳಗೆ ಭಾಗವಹಿಸಿರುವ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳು ಅಮೂಲ್ಯವಾದ ಸಲಹೆಗಳನ್ನು ನೀಡುತ್ತಿರುವದಾದರೂ ಆ ಸಲಹೆಗಳು ಏಕಪಕ್ಷೀಯವಾಗಿ ವರ್ತಿಸುವ ಪ್ರಮುಖ ರಾಷ್ಟ್ರಗಳ ವರ್ಚಸ್ಸಿನೆದಿರು ಬೆಲೆ ಬಾಳದೆ ಹೋಗುತ್ತಿರುವ ನಿದರ್ಶನಗಳು ನಮಗೆ ಕಂಡು ಬರುತ್ತಿವೆ. ಏಕಪಕ್ಷೀಯವಾದ ಅಭಿಪ್ರಾಯದಿಂದ ನ್ಯಾಯ-ಶಾಂತಿ-ಸಮಾಧಾನಗಳು ಹೇಗೆ ತಲೆಯೆತ್ತಲು ಸಾಧ್ಯವಿದೆಯೆಂಬುದು ಸಮಸ್ಯಾತ್ಮಕ ವಿಚಾರವೆ.

ಸಂ. ರಾ. ಸಂಘದಲ್ಲಿ ನಡೆಯುವ ರಾಜಕೀಯ ವಿಷಯ ಮಂಥನ ಕಾಲದಲ್ಲಿ ನಮಗೆ ಕಾಣುವದು ಅಮೇರಿಕೆಯು ಕಮ್ಯೂನಿಸ್ಟ ರಾಷ್ಟ್ರಗಳನ್ನು ತನ್ನ ಭದ್ರ ಮುಷ್ಟಿಯಲ್ಲಿಟ್ಟುಕೊಂಡು ಜಗತ್ತಿನಲ್ಲಿ ತನ್ನದೇ ಕೈಮೇಲಾಗಬೇಕೆಂಬ ಒಂದೇ ಉದ್ದೇಶದ ಹೊರತು ಬೇರೇನೂ ಇಲ್ಲ. ಕಮ್ಯೂನಿಸಮ್ಮದ ವಿರುದ್ಧ ಬೆಂಬಲವನ್ನೀಯುವ ರಾಷ್ಟ್ರಗಳಿಗೆ ಅಲ್ಲಿ ಪ್ರಾಶಸ್ತ್ಯ ದೊರೆಯುವ ಲಕ್ಷಣಗಳು ಕಂಡುಬರುತ್ತಿವೆ. ಅಮೇರಿಕೆಯು ಇತರ ರಾಷ್ಟ್ರಗಳ ಅಭಿವೃದ್ಧಿ-ಯೋಜನೆಗಳಿಗೆ ನೀಡುತ್ತಿರುವ ಸಹಾಯವೆಲ್ಲ ಈ ಧೋರಣೆಯನ್ನವಲಂಬಿಸಿಯೇ ಇರುತ್ತವೆ. ಯುದ್ಧ ಬೇಡವೆಂದು ಹೇಳುವದೂ—ಅದರ ಪೂರ್ವಭಾವಿಯಾಗಿ ನಿಃಶಸ್ತ್ರೀಕರಣವನ್ನು ಕೈಗೊಳ್ಳಬೇಕೆಂದು ಒತ್ತಾಯಿಸುವದೂ ಯುದ್ಧ ನಿವಾರಣೆಯ ಸದುದ್ದೇಶದಿಂದಲೋ— ಅಥವಾ ಬೇರೆಯವರ ಶಕ್ತಿ ಕುಂದಿ ತಮ್ಮ ಕೈಮೇಲಾಗಬೇಕೆಂಬದರ ದೃಷ್ಟಿಯಿಂದಲೋ ಎಂಬುದು ಒಂದು ಕುತೂಹಲಪೂರ್ಣ ವಿಚಾರವೇ. ಯುದ್ಧದ ಭೀತಿ—[illegible]—ನಡೆದಿರುವದು ಅಮೇರಿಕಾ ಮತ್ತು ರಶಿಯಾಗಳೊಳಗೆ. ಪರ್ಶಿಯಾ-ಈಜಿಪ್ತಗಳಲ್ಲಿ ಅನಿರೀಕ್ಷಿತವಾಗಿ ತಲೆದೋರಿದ ಕ್ಷೋಭಮಯ ವಾತಾವರಣಕ್ಕೆ ಉಭಯ ರಾಷ್ಟ್ರಗಳೊಳಗಣ ಮತಭೇದವೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಅಣು ಶಕ್ತಿಯ ಮೂಲಕ ತಮ್ಮ ಬಲಾಬಲವನ್ನು ಪರೀಕ್ಷಿಸುವ ಈ ದ್ಯೂತದಲ್ಲಿ ಹಲವು ರಾಷ್ಟ್ರಗಳು ಎರಡೂ ಕಡೆ ನಿಂತು ಒಬ್ಬರನ್ನೊಬ್ಬರು ದ್ವೇಷಿಸುವದೂ—ಪೂಜಿಸುವದೂ—ಏಕಕಾಲದಲ್ಲೇ ನಡೆದಿದೆ. ಪರ್ಶಿಯ—ಹಾಗೂ ಈಜಿಪ್ತಗಳು ಬ್ರಿಟನದೊಡನೆ ಮಾಡಿಕೊಂಡಿರುವ ದೀರ್ಘಾವಧಿಯ ಕರಾರನ್ನು ಮುರಿದುಕೊಂಡು ವಿರುದ್ಧ ವರ್ತಿಸುವಲ್ಲಿ "ಆತ್ಮಧೈರ್ಯಕ್ಕಿಂತ ಪರಕೀಯ ಪ್ರೇರಣೆ ಹೆಚ್ಚೆಂಬುದನ್ನು ನಾವು ಮರೆಯಲಾಗದು. ಯಾವ ಕ್ಷಣದಲ್ಲಿ ಯುದ್ಧದ ಕಿಡಿ ಹಾರೀತೆಂದು ಹೇಳಲು ಬರುವಂತಿಲ್ಲ. ಪರ್ಶಿಯ ಈಜಿಪ್ತಗಳನ್ನು ಬಲಪ್ರಯೋಗದಿಂದ ಹತೋಟಿಗೆ ತರುವದಕ್ಕೆ ಬ್ರಿಟನಕ್ಕೆ ಸಾಧ್ಯವಿಲ್ಲವೆಂತಲ್ಲ. ಅವುಗಳ ಬೆನ್ನಲ್ಲಿ ರಶಿಯ ಪ್ರತ್ಯಕ್ಷವಾಗಬಹುದೆಂಬುದು ಸ್ಪಷ್ಟವಿದೆ. ಅಂತಲೇ ಅನಿವಾರ್ಯವಾಗಿ ಸಾವಧಾನ ಧೋರಣೆಯನ್ನು ವಹಿಸಿರುತ್ತದೆ.

ಸದ್ಯ ಸಂ. ರಾ. ಸಂಘದ ರಾಜಕೀಯ ಸಮಿತಿಯ ಮುಂದೆ ನಿಃಶಸ್ತ್ರೀಕರಣದ ಪ್ರಶ್ನೆ ಬಂದಿರುತ್ತದೆ. ನಿಃಶಸ್ತ್ರೀಕರಣದ ಮೂಲತತ್ವವನ್ನು ಹೊಂದಿಕೊಂಡು ಶಸ್ತ್ರ ರಚನೆ ಕಾರ್ಯಗಳನ್ನು ಕಮ್ಮಿಯಾಗಿಸಬೇಕು—ಪ್ರತಿಯೊಂದು ರಾಷ್ಟ್ರಗಳು ತಾವು ತಗ್ಗಿಸಿದ ಸೈನ್ಯ—ಮತ್ತು ಶಸ್ತ್ರಗಳ ಕುರಿತು ಲೆಕ್ಕವನ್ನು ಸಲ್ಲಿಸಬೇಕು— ಎಂದು ಹೇಳಲಾಗಿದೆ. ಇದಕ್ಕೆ ರಶಿಯವು ಒಂದು ತಿದ್ದುಪಡಿಯನ್ನು ಮುಂದೆ ಮಾಡಿ ಇದು ಕಾರ್ಯರೂಪದಲ್ಲಿ ಬರುವದಾದರೆ ಮಾತ್ರ ತಾನು ಭಾಗವಹಿಸಲು ಸಾಧ್ಯವೆಂದು ತಿಳಿಸಿದೆ. 1) ಅಣು ಅಸ್ತ್ರಗಳ ನಿರ್ಬಂಧ. 2) ಸಂ. ರಾ. ಸಂಘದ ನಿಃಶಸ್ತ್ರೀಕರಣ ಸಮಿತಿಯು ಎಲ್ಲ ಅಣು ಅಸ್ತ್ರಗಳ ನಿರ್ಬಂಧಕ್ಕೆ ಒಂದು ಸಂಪ್ರದಾಯ ಹಾಕಿಕೊಡಬೇಕು. 3) ಸಂ. ರಾ. ಸಂಘವು ಪರಿಶೀಲನೆ ಪದ್ಧತಿಯನ್ನು ಹಾಕಿಕೊಡುವುದು. 4) ಅಣು ಅಸ್ತ್ರಗಳ ಮೇಲಿನ ನಿರ್ಬಂಧದ ನಿಯಂತ್ರಣಗಳನ್ನು ಕಡಿಮೆ ಮಾಡಲು ಜಾಗತಿಕ ಸಂಸ್ಥೆಯ ನಿರ್ಮಾಣ ಮುಂತಾದ ಅಂಶಗಳು ತಿದ್ದುಪಡಿಯಲ್ಲಿವೆ. ರಶಿಯದ ತಿದ್ದುಪಡಿಯನ್ನು ಸಂಶಯಗ್ರಸ್ಥರಾಗಿ ಆಂಗ್ಲೋ ಅಮೇರಿಕನರು ನೋಡುತ್ತಿದ್ದು ಅದನ್ನು ಸ್ವೀಕರಿಸುವ ಸಂಭವ ಕಡಿಮೆಯೆಂದು ಕಾಣುತ್ತದೆ. ಡೀನ್ ಅಚಿಸನ್ನರು ರಶಿಯದ ಬಗ್ಗೆ ನಾವು ಗಂಭೀರ ಧೋರಣೆಯನ್ನು ವಹಿಸುವದು ಅವಶ್ಯವೆಂದು ಹೇಳಿದ್ದು ಸಂದರ್ಭಕ್ಕುಚಿತವಾದ ಮಾತಲ್ಲ! ಈ ಸಂದರ್ಭದಲ್ಲಿ ಭಾರತ ಪ್ರತಿನಿಧಿಯು ಮಂಡಿಸಿರುವ ಹಲವು ಸೂಚನೆಗಳು ಅತ್ಯಂತ ಮಹತ್ವದ್ದಾಗಿದ್ದು ಸಮಸ್ಯೆಯನ್ನು ಬಿಡಿಸುವಲ್ಲಿ ಅದು ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ. "ಶಸ್ತ್ರಾಸ್ತ್ರಗಳಿಗಾಗಿ ವೆಚ್ಚವಾಗುತ್ತಿದ್ದ ಹೇರಳ ಹಣವನ್ನು ಜಗತ್ತಿನ ಹಿಂದುಳಿದ ಭಾಗಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದರೆ ಮಾನವ ಕೋಟಿಯ ಕಲ್ಯಾಣವಾಗುವದು." ಎಂದು ಹೇಳಿರುವರು. ಜಗತ್ತಿನ ಶಾಂತಿ-ಸೌಹಾರ್ದಕ್ಕೆ ಈ ಸೂಚನೆ ಅತ್ಯಂತ ಯೋಗ್ಯವಾದುದು: ಶಾಂತಿ ಯಾರಿಗೆ ಬೇಕಾಗಿದೆ?—ಸೌಹಾರ್ದ ಯಾರಿಗೆ ಅವಶ್ಯವೆಂಬುದು ಈ ಸೂಚನೆಯನ್ನು ಆಂಗ್ಲೋ ಅಮೇರಿಕನರು ಸ್ವೀಕರಿಸುವ ಇಲ್ಲವೆ ತಿರಸ್ಕರಿಸುವ ಧೋರಣೆಯಿಂದ ನಾವು ಕಂಡುಕೊಳ್ಳಬಹುದು. ಶ್ರೀ ಬಿ.ಎನ್. ರಾಯರ ಈ ಯುಕ್ತಿ ಫಲಿಸುವಂತಾದರೆ ಸಂ. ರಾ. ಸಂಘದ ಮೂಲೋದ್ದೇಶ ಸಾಧಿಸಿದಂತಾಗುವದು.

ಪ್ರಜಾಪ್ರಭುತ್ವದಲ್ಲಿ ಮತದಾನದ ಸದುಪಯೋಗವಾಗಲಿ!

ಎರ್ನಾಕುಲದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹ್ರೂರವರ ಭಾಷಣ:

'ನೀವು ಯಾವದೆ ಸಂಸ್ಥಾನ ಅಥವಾ ಪ್ರಾಂತದಲ್ಲಿರುವವರಾಗಿದ್ದರೂ ನೀವೆಲ್ಲರೂ ಇಂದು ಭಾರತ ಪ್ರಜಾರಾಜ್ಯದ ನಾಗರಿಕರಾಗಿರುವವರೆಂಬುದನ್ನು ಮರೆಯಲಾಗದು. ಭಾರತವು ಅಭ್ಯುದಯಹೊಂದಿದರೆ ಅದರಲ್ಲಿ ವಾಸಿಸುವ ಕೋಟ್ಯಾಂತರ ಜನರು ಸುಖಿಗಳಾಗುವರು, ಭಾರತ ಅಧೋಗತಿಗಿಳಿದರೆ ನಿಮ್ಮ ಪ್ರಾಂತ ನಮ್ಮ ಪ್ರಾಂತ ಬೇರೆ ಯಾವ ಪ್ರಾಂತದಲ್ಲಿ ಅದರ ಪರಿಣಾಮವಾಗುವದು. ಮತ್ತು ಅಲ್ಲಿ ವಾಸಿಸುವ ಜನರ ಮೇಲೂ ಅದರ ಪರಿಣಾಮವಾಗದೆ ಹೋಗದು. ಆದುದರಿಂದ ಇಡೀ ಭಾರತವು ಅಭ್ಯುದಯಹೊಂದುವಂತೆ ನೋಡಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಭಾರತದ ಒಂದು ಭಾಗದ ಮಟ್ಟಿಗೆ ಲಕ್ಷ್ಯವನ್ನಿಡುವ ಸಂಕುಚಿತ ದೃಷ್ಟಿ ಸರಿಯಲ್ಲ.

ಭಾರತದಲ್ಲಿ ಅನೇಕ ಧರ್ಮಗಳ ಜನರು ವಾಸಿಸುವರು. ಭಾರತದ ಪ್ರತಿಯೊಬ್ಬ ನಾಗರಿಕನು ತನ್ನ ದೇಶಬಾಂಧವರ ಧರ್ಮದ ಬಗ್ಗೆ ಗೌರವ ಭಾವನೆ ತಾಳಬೇಕು. ಅಂತೆಯೇ ಭಾರತವು ಧರ್ಮ ನಿರಪೇಕ್ಷ ರಾಷ್ಟ್ರವೆಂದು ಸಾರಲಾಗಿದೆ.

ಇಂದು ಭಾರತಕ್ಕೆ ಜಾತೀಯ ಭಾವನೆಯಿಂದದೊಡ್ಡ ಗಂಡಾಂತರವಿದೆ. ಜಾತೀಯ ಭಾವನೆಯಿಂದ ಒಡಕು ಹುಟ್ಟುವದು ಜನರು ಅಧೋಗತಿಗಿಳಿಯುವರು. ದೇಶವನ್ನು ಅಧೋಗತಿಗೆ ಎಳೆಯುವರು.

"ಪ್ರಜಾಪ್ರಭುತ್ವದಲ್ಲಿ ವಿರೋಧಿಪಕ್ಷಕ್ಕೆ ಒಂದು ಸ್ಥಾನವಿದೆ. ನಾನು ವಿರೋಧಿ ಪಕ್ಷವನ್ನು ಪ್ರಜಾಪ್ರಭುತ್ವ ಸಮ್ಮತ, ಘಟನಾತ್ಮಕ ರೀತಿಯಲ್ಲಿ ಶಾಂತಮಾರ್ಗದಿಂದ ವಿಧಾಯಕವಾಗಿ ಕಾರ್ಯಮಾಡುವದು ಇಷ್ಟ."

"ಮಹಾತ್ಮಾ ಗಾಂಧಿಯವರು ನಮಗೆ ಒಕ್ಕಟ್ಟಿನ ದಾರಿ ತೋರಿಸಿ ಕೊಟ್ಟಿರುವರು. ಒಕ್ಕಟ್ಟು ಮತ್ತು ಸಹಕಾರವಿಲ್ಲದೆ ರಾಜಕೀಯ ಸಾಮಾಜಿಕ, ಆರ್ಥಿಕ ಯಾವ ಕ್ಷೇತ್ರದಲ್ಲಿಯೂ ಪ್ರಗತಿ ಸಾಧ್ಯವಿಲ್ಲ"

—ಶ್ರೀ ಜವಾಹರಲಾಲ ನೆಹ್ರೂ

ಯಾವುದೇ ಸ್ವತಂತ್ರ ವ್ಯಕ್ತಿಗೆ ಮತ ನೀಡಿದರೆ ಅದರಿಂದ ಏನೂ ಕೆಲಸವಾಗುವುದಿಲ್ಲ-

ಕೇಂದ್ರ ಸರಕಾರದ ವಾಣಿಜ್ಯ ಖಾತೆಯ ಉಪಮಂತ್ರಿ ದ. ಪ. ಕರಮಕರರ ಚುನಾವಣಾ ಭಾಷಣ:

೬೦ ವರುಷ ಸ್ವಾತಂತ್ರ್ಯದ ಸಲುವಾಗಿ ಕಾಂಗ್ರೆಸ್ಸು ಹೋರಾಡಿ ದೇಶವನ್ನು ಬಂಧಮುಕ್ತ ಮಾಡಿದ್ದು ನಮಗೆಲ್ಲ ಕೇವಲ ಅಧಿಕಾರ ಸಿಗಬೇಕೆಂದಲ್ಲ. ರಾಷ್ಟ್ರದ ಪ್ರತಿಯೊಬ್ಬರಿಗೂ ಆಹಾರ ಬಟ್ಟೆ ದೊರೆತು ಸುಖ ಸಮೃದ್ಧ ರಾಷ್ಟ್ರವಾಗಬೇಕೆಂಬದೇ ಆಗಿದೆ. ನಾನು ಕೇವಲ ಮತಯಾಚನೆಗಾಗಿ ಇಲ್ಲಿಗೆ ಬಂದಿಲ್ಲ. ಹಳ್ಳಿಗರನ್ನು ಭೆಟ್ಟಿಯಾಗಿ ಅವರ ಕಷ್ಟನಷ್ಟಗಳನ್ನು ತಿಳಿದುಕೊಳ್ಳಬೇಕೆಂಬುದು ನಮ್ಮ ಕರ್ತವ್ಯಗಳಲ್ಲೊಂದಾಗಿದೆ. ಕಾರ್ಯ ಬಾಹುಲ್ಯದ ಮೂಲಕ ನಿಮ್ಮನ್ನು ಇಲ್ಲಿಯ ವರೆಗೆ ಭೆಟ್ಟಿಯಾಗುವದಾಗಲಿಲ್ಲ. ಇಂದು ಆ ಪ್ರಸಂಗ ಬಂದದ್ದಕ್ಕಾಗಿ ನನಗೆ ಆನಂದವಾಗಿದೆ.

ಹುಟ್ಟಿದ್ದಕ್ಕೊಂದು ತಾಯಿಗೆ ವಿಪತ್ತು. ತಂದೊಡ್ಡುವಂತೆ ಸ್ವಾತಂತ್ರ್ಯ ಬಂದ ಮೇಲೆ ದೇಶವು ನಾನಾ ವಿಪತ್ತಿಗೆ ಈಡಾಯಿತು. ನೆಹರೂರಂಥ ಧುರೀಣರು ಹಡಗದ ಚುಕ್ಕಾಣಿ ಹಿಡಿದಿದ್ದಾರೆ. ಇಲ್ಲವಾದರೆ ಅದು ಬಂಡೆಗಲ್ಲಿಗೆ ಅಪ್ಪಳಿಸಿ ಬಿಡಬಹುದಾಗಿತ್ತು. ೪ ವರುಷಗಳಲ್ಲಿ ಪರಿಸ್ಥಿತಿ ಸ್ವಲ್ಪ ಶಾಂತಮಟ್ಟಕ್ಕೆ ಬಂದಿದೆ. ಇಂಥ ವೇಳೆಯಲ್ಲಿ ದೇಶದ ೧೭ ಕೋಟಿ ಮತದಾರರು ಮತದಾನ ಮಾಡುವ ದೊಡ್ಡ ಹಬ್ಬವು ಇಂದು ಬಂದಿದೆ. ನೆಹರೂರವರು ೨೧ ವರುಷ ತುಂಬಿದ ದೇಶದಲ್ಲಿಯ ಹೆಣ್ಣು ಗಂಡು ಬಡವ ಶ್ರೀಮಂತ ಎಲ್ಲರಿಗೂ ಮತದಾನ ಅಧಿಕಾರ ನೀಡಿದ್ದಾರೆ. ಆದರೆ ಸದುಪಯೋಗ ನೀವು ಮಾಡುವ ದೊಡ್ಡ ಹೊಣೆ ನಿಮ್ಮದಿದೆ. ೬೧ ವರುಷದವರಾಗಿದ್ದರೂ ಇನ್ನೂ ತಾರುಣ್ಯದವರಂತೆ ಹಗಲಿರುಳು ರಾಷ್ಟ್ರದ ಅಂದರೆ ನಿಮ್ಮೆಲ್ಲರ ಕಷ್ಟನಷ್ಟಕ್ಕಾಗಿ ದುಡಿಯುವವರ ಬೆಂಬಲಿಗರಾಗುವಿರೋ ಅಥವಾ ನಿನ್ನೆಮೊನ್ನೆ ಜನ್ಮಿಸಿದ ಪಕ್ಷಗಳ ಬೆಂಬಲಿಗರಾಗುವಿರೋ? ನೀವೆ ತಿಳಿದು ನೋಡಿರಿ. ನೆಹರೂ ಅವರೇ ನಿಂತರೆ ನಾವು ಮತಕೊಡುವೆವು. ಉಳಿದ ಕಾಂಗ್ರೆಸ್ಸಿಗರಿಗೆ ಮತಕೊಡುವುದಿಲ್ಲ. ಎಂದು ನೀವು ಹೇಳಿದರೆ ಅವನ್ನು ಅಂಗಹೀನ ಮಾಡಿದಂತೆ. ಕಾಂಗ್ರೆಸ್ಸೆಂದು ಬಂದಿದ್ದೇವೆ. ನೀವು ಮತದ ಚೀಟಿ ಹಾಕುವಾಗ ನಿಮ್ಮ ಮನಸ್ಸನ್ನು ನಮ್ಮೆಡೆಗೆ ಕೊಡುತ್ತಿದ್ದೀರಿ. ಎಂಬುದನ್ನು ಲಕ್ಷ್ಯದಲ್ಲಿಡಬೇಕು

ನಿಮಗೆ ಆಹಾರ, ಬಟ್ಟೆ, ನೂಲು, ಕಬ್ಬಿಣ, ಸಿಮೆಂಟು, ಸಾಕಷ್ಟು ಸಿಗುವದಿಲ್ಲ, ಎಂಬುದು ನನಗೆ ಗೊತ್ತಿದೆ. ನೀವೆಲ್ಲರು ೧೦ ಚೀಲ ಬೆಳೆಯುವಲ್ಲಿ ೧೧ ಚೀಲ ಬೆಳೆದರೆ ಆಹಾರದ ಪ್ರಶ್ನೆ ಮುಗಿಯುತ್ತದೆ. ಪಾಕಿಸ್ತಾನವಾದ ನಂತರ ಹತ್ತಿ ಬೆಳೆಯುವ ಬಹು ಭಾಗವು ಪಾಕಿಸ್ತಾನಕ್ಕೆ ಹೋದದ್ದರಿಂದ ನಮ್ಮಲ್ಲಿ ನಮಗೆ ಸಾಲುವಷ್ಟು ಹತ್ತಿ ಬೆಳೆಯುವದಿಲ್ಲ. ಪರದೇಶದಿಂದ ತರಿಸಿದರೆ ದುಪ್ಪಟ್ಟ ಧಾರಣಿ ಬೀಳುವದರಿಂದ ಆ ನೂಲು ನಿಮಗೆ ಪೂರೈಸುವುದಿಲ್ಲ. ಇನ್ನು ಕೆಲವು ದಿನಗಳಲ್ಲಿ ಪರಿಸ್ಥಿತಿ ಸುಧಾರಿಸುವದು. ಸಿಮೆಂಟು, ಕಬ್ಬಿಣ, ಎಲ್ಲವನ್ನು ಪೂರೈಸಲು ಪ್ರಯತ್ನ ನಡೆಸಿದೆ. ಇನ್ನೂ ೫ ವರುಷಗಳಲ್ಲಿ ೧೭೦೦ ಕೋಟಿ ರೂ ಖರ್ಚುಮಾಡಿ ಜನತೆಗೆ ಆಹಾರ ಬಟ್ಟೆ ಸಿಗುವ ಯೋಜನೆ ಸಿದ್ಧಪಡಿಸಲಾಗಿದೆ. ನಿಮ್ಮೆಲ್ಲರ ಸಹಕಾರ ಅದಕ್ಕೆ ಅವಶ್ಯ.

ಯಾವದೇ ಸ್ವತಂತ್ರ ವ್ಯಕ್ತಿಗೆ ಮತನೀಡಿದರೆ ಅದರಿಂದ ಏನೂ ಕೆಲಸವಾಗುವದಿಲ್ಲ. ಸಾಂಘಿಕ ಶಕ್ತಿ ಮಹತ್ವದ್ದು ಹಳ್ಳಿಗರಾದ ನೀವು ಶಾಂತ ರೀತಿಯಿಂದ ವಿಚಾರಿಸಿ ನಿಮ್ಮ ಕಲ್ಯಾಣಮಾಡುವ ಕಾಂಗ್ರೆಸ್ಸ ಪಕ್ಷಕ್ಕೆ ಮತ ನೀಡಬೇಕು."

—ಶ್ರೀ ದ. ಪ. ಕರಮಕರ

ಪಂಚವಾರ್ಷಿಕ ಯೋಜನೆಯ ಫಲಸಿದ್ಧಿ ಕಾಂಗ್ರೆಸ್ಸಿನಿಂದ ಮಾತ್ರ ಸಾಧ್ಯವಿದೆ

ತಾ. 27-11-51ರಲ್ಲಿ ಉಡುಪಿಯ ಗಾಂಧೀ ಮೈದಾನದಲ್ಲಿ ಜರಗಿದ ಪ್ರಚಂಡ ಸಭೆಯ ಮುಂದೆ ಶ್ರೀ ರಂಗನಾಥ ದಿವಾಕರರು ಮಾಡಿದ ಭಾಷಣ. ಶ್ರೀ ದಿವಾಕರರು ನಿರ್ದಿಷ್ಟ ಕಾಲಕ್ಕೆ ಬರುವದು ಶಕ್ಯವಾಗದ್ದರಿಂದ ತತ್ಕಾಲದ ಉಪಶಮನಕ್ಕಾಗಿ ಕಾಂಗ್ರೆಸ್ ಧ್ಯೇಯಧೋರಣೆಗಳ ಕುರಿತು ಶ್ರೀ ಸಂಜೀವ ಪೈಗಳು ಮಾತನಾಡಿದರು. ಬಳಿಕ ರಂಗನಾಥ ದಿವಾಕರರು ಸಭೆಯನ್ನುದ್ದೇಶಿಸಿ ಹೀಗೆಂದರು:

ಚುನಾವಣೆಯು ಹತ್ತಿರ ಬರುತ್ತಿರುವಾಗ ಎಲ್ಲರೂ ಒಂದೊಂದು ಪಕ್ಷವನ್ನು ಕಟ್ಟಿಕೊಂಡು ಮತವನ್ನು ಕೇಳಲು ನಿಮ್ಮ ಮುಂದೆ ಬರುತ್ತಿರುವರು. ಜಗತ್ತಿಗೇ ಹಿರಿದಾದ ಈ ಚುನಾವಣೆಯ ಫಲಿತಾಂಶವನ್ನು ವಿದೇಶೀಯರು ಕುತೂಹಲಪೂರ್ಣವಾಗಿ ನೋಡುತ್ತಿರುವರು. ಈ ಸಂದರ್ಭದಲ್ಲಿ ಯೋಗ್ಯ ಮತದಾನದ ಜವಾಬುದಾರಿಕೆಯು ನಿಮ್ಮ ಮೇಲಿದೆಯೆಂಬುದನ್ನು ತಾವು ಮರೆಯಬಾರದು. ನಿಮ್ಮ ಪ್ರತಿಯೊಂದು ಮತವೂ ಯೋಗ್ಯ ಸರಕಾರ ನಿರ್ಮಿಸುವಲ್ಲಿ ಅತ್ಯಂತ ಮಹತ್ವವನ್ನು ಪಡೆಯುತ್ತದೆಂಬುದನ್ನು ನಾನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಹಲವರು ಕಾಂಗ್ರೆಸ್ ಸರಕಾರದ ಆಹಾರ ಧೋರಣೆಯ ಮೇಲೆ ಬಲವಾದ ಟೀಕೆ ಮಾಡುತ್ತಾರೆ. ಇತರ ಪಕ್ಷಗಳವರೂ ಈ ಅಂಶವನ್ನೇ ಎತ್ತಿ ಹಿಡಿದು ನಮ್ಮ ಮೇಲೆ ವಾಗ್ಬಾಣವನ್ನೆಸೆಯುತ್ತಿರುವರು. ವಸ್ತುಸ್ಥಿತಿಯ ಕುರಿತು ನಾಲ್ಕು ಮಾತು ಹೇಳುವದು ಸೂಕ್ತವೇ ಆಗಿದೆ. ಆಹಾರದ ಕೊರತೆಗೆ ಕಾಂಗ್ರೆಸ್ ಸರಕಾರದ ಆಡಳಿತ ದೋಷ ಕಾರಣವಲ್ಲ. ಬ್ರಿಟಿಷರ ಕಾಲದಲ್ಲೂ ಈ ಅಭಾವ ಇತ್ತೆಂಬುದನ್ನು ನಾನು ನಿಮಗೆ ತಿಳಿಹೇಳುವವನಿದ್ದೇನೆ. ಬರ್ಮಾಕ್ಕೆ ಸ್ವಾತಂತ್ರ್ಯ ಸಿಕ್ಕದ ಕಾರಣ ಅಲ್ಲಿಂದ ಆಹಾರವನ್ನು ತರಿಸಿಕೊಳ್ಳುತ್ತಿದ್ದರು. ಇಂದು ಬರ್ಮಾ ಬೇರಾಗಿದೆ. ದೇಶ ವಿಭಜನೆಯಾದಾಗ ವಿಪುಲವಾಗಿ ಆಹಾರ ಬೆಳೆಯುವ ಪ್ರದೇಶವು ಪಾಕಿಸ್ತಾನಕ್ಕೆ ಹೊರಟುಹೋಯಿತು. ಪ್ರಕೃತಿಯ ಪ್ರಕೋಪದಿಂದ [illegible] ಎಣಿಸಿದಷ್ಟು ಫಲವು ಬರಲಿಲ್ಲ ಮಾತ್ರವಲ್ಲ ಲಕ್ಷೋಪಲಕ್ಷ ಜನ ನಿರಾಶ್ರಿತರು ಇಲ್ಲಿ ಬಂದು ನೆಲೆನಿಂತರು. ಅವರ ಅಶನವಸನದ ಭಾರವೇನು ಸಣ್ಣದಾಗಿತೇ? ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಜನಸಂಖ್ಯೆಗೆ ಸರಿಯಾಗಿ ಉತ್ಪಾದನೆ ನಡೆಯುತ್ತಿಲ್ಲ. ಆದುದರಿಂದ ಆಹಾರದ ಕೊರತೆ ಅನಿವಾರ್ಯವೆಂಬುದು ತಮಗೂ ಮನಸ್ಸಿಗೆ ಬರದೆ ಹೋಗದು. ಭಾರತ ಸರಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯು ಕಾರ್ಯರೂಪದಲ್ಲಿ ಬರುವಾಗ ಈ ಕೊರತೆಯನ್ನು ನೀಗಲು ಸಾಧ್ಯ ಉಂಟು!

ಮುಂಬರುವ ಚುನಾವಣೆಯಲ್ಲಿ 126 ಬೇರೆ ಬೇರೆ ಪಕ್ಷಗಳು ಹುರಿಯಾಳುಗಳನ್ನು ನಿಲ್ಲಿಸಿವೆ. ಅವುಗಳು ತಮಗೆ ಕೊಡುವ ಆಶ್ವಾಸನಗಳು ಕಾರ್ಯರೂಪದಲ್ಲಿ ಬರಲು ಸಾಧ್ಯವುಂಟೇ? ಸುವ್ಯವಸ್ಥಿತವಾದ ಸರಕಾರವನ್ನು ನಿರ್ಮಿಸುವ ಬಲ ಅವುಗಳಿಗುಂಟೇ? ಎಂಬುದನ್ನು ನಾಗರಿಕರಾದ ನೀವೆಲ್ಲ ಮತದಾನ ಮಾಡುವ ಮುನ್ನ ತುಸು ಆಲೋಚಿಸಬೇಕೆನ್ನುತ್ತೇನೆ. ಸ್ವತಂತ್ರರಾಗಿ ನಿಂತ ಹುರಿಯಾಳುಗಳ ಬಗ್ಗೆ ಹೇಳುವದಾದರೆ ಅಲ್ಲಿಗೆ ಹೋಗಿ ಅವರು ಏನನ್ನೂ ಸಾಧಿಸಲು ಬರುವಂತಿಲ್ಲವೆಂಬುದು ಸ್ಪಷ್ಟವಿದೆ. ಲೋಕಸಭೆ-ಇಲ್ಲವೆ ಶಾಸನ ಸಭೆಗಳಲ್ಲಿ ಹೆಚ್ಚು ಸಂಖ್ಯಾತರಿರುವ ಪಕ್ಷಗಳ ಆಧಿಪತ್ಯದ ನಡುವೆ ಸ್ವತಂತ್ರರಾಗಿ ಬಂದವರು ಹೇಗೆ ತಮ್ಮ ವರ್ಚಸ್ಸನ್ನು ಬೀರಬಲ್ಲರು? 'ನನ್ನನ್ನು ಆರಿಸಿದರೆ ಆಹಾರ ಕೊಡುತ್ತೇನೆ ಇತರ ಸಂಕಷ್ಟಗಳನ್ನು ಪರಿಹರಿಸುತ್ತೇನೆ'-ಎಂದು ಅವರು ಕೊಡುವ ಆಶ್ವಾಸನಗಳನ್ನು ನಂಬಿ ತಮ್ಮ ಅಮೂಲ್ಯ ಮತದಾನ ಮಾಡಿದರೆ ವಿಶಿಷ್ಟವಾದ ಮತದಾನ ಪದ್ಧತಿಯನ್ನೇ ತಾವು ಅಲಕ್ಷಿಸಿದಂತಾಗುತ್ತದೆ.

ಪ್ರಜಾಪಾರ್ಟಿಯವರು ಕಾಂಗ್ರೆಸ್ಸಿನ ವಿರುದ್ಧ ಟೀಕೆಯನ್ನು ಕೈಗೊಂಡಿದ್ದಾರೆ. ಕಳ್ಳಸಂತೆ ಲಂಚಗುಳಿತನ-ಹಾಗೂ ಆಹಾರ ಧೋರಣೆಯ ಮೇಲೆ ಟೀಕೆ ಮಾಡಲಾಗಿದೆ. ಹುಟ್ಟಿದ ಎಂಟು ತಿಂಗಳೊಳಗಾಗಿ ತಾವು ಹೊರಬಂದು ಸರಕಾರವನ್ನು ಸ್ಥಾಪಿಸುವೆವೆಂದು ಹೇಳುವ ಈ ಪ್ರಜಾಪಾರ್ಟಿಯವರು ಹೆಚ್ಚಾಗಿ ಕಾಂಗ್ರೆಸ್ಸಿನಲ್ಲಿದ್ದುಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮೊಡನೆ ಭುಜಕ್ಕೆ ಭುಜಕೊಟ್ಟು ಉಚ್ಚ ಕಾಂಗ್ರೆಸ್ಸಿಗರೇ ಆಗಿರುವರು. ಪಕ್ಷದ ಧುರೀಣರಾದ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ ಅಧ್ಯಕ್ಷರೂ ಕೂಡಾ ಆಗಿದ್ದರು. ಅವರ ತತ್ವ ಧ್ಯೇಯಧೋರಣೆಗಳೆಲ್ಲ ಹೆಚ್ಚು ಕಡಿಮೆ ಕಾಂಗ್ರೆಸ್ಸಿನಂತೆಯೇ. ಗಾಂಧೀ ತತ್ವದಂತೆ ನಡೆಯುವದೇ ನಮ್ಮ ಮುಖ್ಯ ಗುರಿಯಾಗಿದೆಂದು ಅವರು ಹೇಳುತ್ತಿರುವರು. ಆದರೆ ಈಚೆಗೆ ಅವರು ಅನುಸರಿಸುತ್ತಿರುವ ಧೋರಣೆಯನ್ನು ನೋಡಿದರೆ ಕಾಂಗ್ರೆಸ್ಸನ್ನು ಸೋಲಿಸುವದೊಂದೇ ಘನವಾದ ಉದ್ದೇಶವಾಗಿರುವಂತೆ ತೋರುತ್ತದೆ. ಯಾರು ಗಾಂಧಿ ತತ್ವಕ್ಕೆ ಕಡು ವಿರೋಧಿಗಳೋ—ಯಾರು ಗಾಂಧಿಯವರು ಪೂರ್ವವೆಂದರೆ ಪಶ್ಚಿಮವನ್ನು ವರೆಯೋ—ಯಾರು ಅಹಿಂಸೆಯಿಂದಲೇ ಲೋಕಕಲ್ಯಾಣ ಸಾಧ್ಯವೆಂಬ ಗಾಂಧೀ ವಾದಕ್ಕೆ ವಿರುದ್ಧವಾಗಿ ರಕ್ತ ಕ್ರಾಂತಿಯಿಂದ ಮಾತ್ರ ಸಾಧ್ಯವೆಂದು ಹೇಳುವರೋ— ಅಂಥವರೊಡನೆ ಪ್ರಜಾಪಾರ್ಟಿಯವರು ಸಂಧಾನ ನಡೆಸುತ್ತಿದ್ದಾರೆ. ಅಂಥವರೊಡನೆ ಸ್ನೇಹ ಬೆಳೆಸುವದೆಂದರೆ ಆತ್ಮಘಾತ ಮಾಡಿಕೊಂಡಂತೆಯೆ. ಇದರಿಂದ ಗಾಂಧೀ ತತ್ವದ ಕೊಲೆ ಮಾಡಿದಂತಾಗದೇ? ಎಂದು ನಾನು ಕೇಳುತ್ತೇನೆ. ಏನಕೇನ ಪ್ರಕಾರೇಣ ಕಾಂಗ್ರೆಸನ್ನು ಸೋಲಿಸಬೇಕೆಂಬ ಉದ್ದೇಶದಿಂದ ತಮ್ಮ ನಿಸ್ಪೃಹ ವ್ಯಕ್ತಿತ್ವವನ್ನು ಬೆಳೆಸುವ ಪ್ರಜಾಪಾರ್ಟಿಯವರನ್ನು ಗಾಂಧೀ ತತ್ವಾನುಯಾಯಿಗಳೆಂದು ಹೇಗೆ ಕರೆಯೋಣ? ಅಳಿದ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಅನ್ಯಾಯ ಮಾಡಿದೆ ಅತ್ಯಾಚಾರ ನಡೆಸಿದೆ -ಎಂದು ಹೇಳುವಾಗ ಈ ಮಹನೀಯರು ಇದ್ದುಕೊಂಡೇ ಆ ಕಾರ್ಯ ನಡೆಯಿತೇ? ಎಂದು ನಾನು ಕೇಳಿದರೆ ತಪ್ಪಾಗದು ತಾನೆ? ಇಂತಹ ಅತ್ಯಾಚಾರ ಅವರಿಗೆ ತಿಳಿದಿದ್ದರೆ-ಇವರಿಗೆ ಅಸಹನೀಯವೆಂದು ಕಂಡುಬಂದಿದ್ದರೆ ಆಗಲೇ ಹೊರಬಂದು ಬೇರೆ ಪಕ್ಷ ಕಟ್ಟಬಹುದಾಗಿತ್ತು. ಈಗ ಚುನಾವಣೆ ಹತ್ತಿರ ಬರುವಾಗ ಮಾತ್ರ ಹೊರಬಂದು ಬೇರೆ ಪಕ್ಷದ ನಿರ್ಮಾಣದ ಆವಶ್ಯಕತೆಯನ್ನು ಕಂಡ ಪ್ರಜಾಪಕ್ಷದ ಧುರೀಣರ ತತ್ವನಿಷ್ಠೆಯಲ್ಲಿ ಅಧಿಕಾರ್ಯಾಲಾಲಸೆಯಿಲ್ಲವೆಂದು ಹೇಗೆ ಹೇಳೋಣ? ಕೇವಲ ಆರೇಳು ತಿಂಗಳ ವಯೋಮಾನದ ಈ ಶಿಶು ಕೂಸು ಮುಂದೆ ಎಷ್ಟು ಪ್ರಾಬಲ್ಯ ಪಡೆದೀತು? ಎಂತಹ ಸರಕಾರವನ್ನು ಸ್ಥಾಪಿಸೀತು? ಎಂಬುದನ್ನು ನಿಷ್ಕರ್ಷಿಸುವದಕ್ಕೆ ಮೇಲಿನ ಉದಾಹರಣೆಗಳು ಸಾಕಲ್ಲವೇ?

ಈ ಜಿಲ್ಲೆಯ ದಕ್ಷಿಣ ಭಾಗದಿಂದ ಲೋಕಸಭೆಗೆ ಹುರಿಯಾಳಾಗಿ ನಿಂತ ಶ್ರೀ ಬೆನಗಲ್ ಶಿವರಾಯರಿಗೆ ಸ್ಥಳೀಯ ಭಾಷೆಯಾದ ತುಳು, ಕನ್ನಡ, ಬರುವದಿಲ್ಲವೆಂದು ಟೀಕೆ ಮಾಡಲಾಗುತ್ತದೆಂದು ಕೇಳಿದ್ದೇನೆ. ತುಳು ಇಲ್ಲವೆ ಕನ್ನಡ ಮಾತನಾಡಲು ಬಂದರೆ ಅಲ್ಲಿ ಕಾರ್ಯ ಸಾಧಿಸಲು ಬರುತ್ತದೆಂದು ಯಾರು ಶೋಧಿಸಿದವರೋ? ನಾನೂ ಕನ್ನಡ ಮಾತನಾಡುವವ. ಕನ್ನಡದಲ್ಲಿ ಹತ್ತಾರು ಪುಸ್ತಕಗಳನ್ನು ಬರೆದಿದ್ದೇನೆ. ಆದರೆ ಒಮ್ಮೆಯಾದರೂ ಕನ್ನಡದಲ್ಲಿ ಅಲ್ಲಿ ಮಾತನಾಡುವ ಸಂದರ್ಭ ಒದಗಿದ್ದಿಲ್ಲ. ಅಲ್ಲಿ ನಡೆಸುವ ಕಾರ್ಯಭಾರಕ್ಕೆ ಸ್ಥಳೀಯ ಭಾಷೆಗಳು ಮುಖ್ಯವಲ್ಲ. ವಿಶೇಷ ಬುದ್ಧಿಮತ್ತೆ - ಲೋಕಾನುಭವವೇ ಹೆಚ್ಚೆಂದು ನಾನು ಹೇಳುತ್ತೇನೆ. ಬೆನಗಲ್ ಶಿವರಾಯರು ಈ ಹಿಂದೆ ನಾಲ್ಕು ವರ್ಷಗಳಲ್ಲಿ ಪಾರ್ಲಿಮೆಂಟಿನಲ್ಲಿದ್ದು ಒಳ್ಳೆ ಕಾರಭಾರವನ್ನು ನಡೆಸಿದವರಾಗಿದ್ದಾರೆ. ಸಂ. ರಾ. ಸಂಘದಲ್ಲಿಯು ದೂತರಾಗಿ ಕೆಲಸ ಮಾಡಿದ್ದಾರೆ. ಇದರಿಂದ ನಿಮ್ಮ ಜಿಲ್ಲೆಗೆ ಬೇಕಾದ ಸಹಾಯ ಕಾರ್ಯ ನಡೆಸಲು ಸಾಧ್ಯವುಂಟು.

ಉತ್ತರ ಭಾಗದ ಪರವಾಗಿ ಲೋಕಸಭೆಗೆ ನಿಂತಿರುವ ಶ್ರೀ ಮಲ್ಯರಿಗೆ ಮಾತನಾಡಲು ಬರುವುದಿಲ್ಲವೆಂದು ಇನ್ನೊಂದು ಕಡೆ ದೂರಿದ್ದನ್ನು ಕೇಳಿದೆ. ಬೆನಗಲ್ ಶಿವರಾಯರಿಗೆ ಕನ್ನಡ ತುಳು ಬರುವದಿಲ್ಲವೆಂದಾಯ್ತು. ಮಲ್ಯರಿಗೆ ತುಳು ಕನ್ನಡ ಬರುತ್ತದೆ ಆದರೆ ಅವರಿಗೆ ಅಲ್ಲಿ ಮಾತನಾಡಲು ಬರುವದಿಲ್ಲವೆಂದು ನೀವು ದೂರುವ ವೈಚಿತ್ರ್ಯವೆಂತಹದೋ ನನಗರ್ಥವಾಗುವುದಿಲ್ಲ. ಬಹಳವಾಗಿ ಮಾತನಾಡಿದ ತಕ್ಷಣ ಕಾರ್ಯ ಸಾಗುತ್ತದೆಂದು ತಾವು ಭಾವಿಸಿದಂತಿದೆ. ಚರ್ಚಾಸ್ಪದ ವಿಷಯದ ಮೇಲೆ ಚುಟುಕಾಗಿಯೂ ಸಮರ್ಪಕವಾಗಿಯೂ ಮಾತನಾಡುವುದೇ ಮುಖ್ಯವಾಗಿರುತ್ತದೆ. ಬಹಳವಾಗಿ ಮಾತನಾಡುವದಕ್ಕೆ ಅಲ್ಲಿ ಎಡೆಗೊಡುವುದಿಲ್ಲವೆಂಬುದನ್ನು ತಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಶ್ರೀಯುತ ಮಲ್ಯರು ಮಾತಿಲ್ಲದೆಯೆ ಮಹತ್ವದ ಕಾರ್ಯವನ್ನು ಸಾಧಿಸಬಲ್ಲ ಚಾಣಾಕ್ಷರಾಗಿದ್ದಾರೆ. ಪಾರ್ಲಿಮೆಂಟಿನ ಮುಖ್ಯ ಮುಖ್ಯ ಭಾಗಗಳಲ್ಲಿ ಒಳ್ಳೆಯ ದಕ್ಷತೆಯಿಂದ ಕಾರ್ಯಭಾರ ನಡೆಸಿ ಒಂದು ವಿಶಿಷ್ಟ ಸ್ಥಾನಮಾನವನ್ನವರು ಗಳಿಸಿಕೊಂಡಿರುವರು. ಇವರ ಬಹುಮುಖ ಕಾರ್ಯದಕ್ಷತೆಯನ್ನು ಲಕ್ಷಿಸಿಕೊಂಡೇ ಶ್ರೀ ಜವಾಹರಲಾಲ ನೆಹರೂರವರು ಅವರನ್ನು ಅ. ಭಾ. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯನ್ನಾಗಿ ಆರಿಸಿಕೊಂಡಿದ್ದಾರೆ. ಕರ್ನಾಟಕಸ್ಥರಾದ ನಾವು ಇದಕ್ಕೆ ಹೆಮ್ಮೆಪಡಬೇಕಾಗಿದೆ. ನಮ್ಮ ಪ್ರತಿನಿಧಿಗಳು ಜಿಲ್ಲೆಯವರೇ ಆಗಬೇಕು- ಇಲ್ಲಿಯ ಭಾಷೆಯನ್ನು ಬಲ್ಲವರೇ ಆಗಬೇಕು-ಎನ್ನುವ ವಾದ ಸರಿಯಲ್ಲ. ನಮ್ಮ ದೃಷ್ಟಿ ಯೋಗ್ಯ ಹುರಿಯಾಳುವಿನ ಕಡೆಗೇ ಇರಬೇಕೇ ಹೊರತು ಜಿಲ್ಲೆ-ತಾಲೂಕುಗಳೆಂಬ ಸಂಕುಚಿತತೆಯಿಂದ ಕೂಡಿರಬಾರದು.

ಕಾಂಗ್ರೆಸ್ಸು ನಮ್ಮ ನಾಡಿನ ಪ್ರಬಲವಾದವೊಂದು ಸಂಸ್ಥೆ. ಶ್ರೀ ಜವಾಹರಲಾಲ ನೆಹರೂರಂತಹ ಶ್ರೇಷ್ಠ ನಾಯಕರ ಮುಂದಾಳ್ತನದಲ್ಲಿ ಭಾರತದ ನಿಲುವೆಯು ಜಾಗತಿಕ ರಂಗದಲ್ಲಿ ವಿಶಿಷ್ಟ ಸ್ಥಾನಮಾನ ಗಳಿಸಿಕೊಂಡದ್ದನ್ನು ನೀವರಿತಿದ್ದೀರಿ. ಕಾಂಗ್ರೆಸು ಆರಿಸಿ ಬರುವದರಿಂದ ದೇಶದ ನಾನಾ ಬಗೆಯ ಅಭಿವೃದ್ಧಿ- ಯೋಜನೆಗಳು ಕೈಗೂಡಲು ಶಕ್ಯವಾಗಬಹುದು. ಪಂಚವಾರ್ಷಿಕ ಯೋಜನೆಯಂತಹ ಮಹತ್ವದ ಕಾರ್ಯವನ್ನು ಕಾಂಗ್ರೆಸ್ಸು ಈಗಲೇ ಕೈಗೊಂಡಿದೆ ಈ ಗಿಂದೀಗಲೇ ಅದು ಪರಿಪೂರ್ಣಗೊಳ್ಳುವಂತಿಲ್ಲ. ಇನ್ನೂ ನಾಲ್ಕೈದು ವರ್ಷಗಳನ್ನು ಅದು ತೆಗೆದುಕೊಳ್ಳಬಹುದು. ಅದಕ್ಕೊಂದು ಮೂರ್ತ ಸ್ವರೂಪ ಕೊಟ್ಟು ಅದರ ಸಂಪೂರ್ಣ ಫಲವನ್ನುಣ್ಣಬೇಕಾದರೆ ಕಾಂಗ್ರೆಸ್ಸಿನ ಕೈಯಲ್ಲಿ ತಿರುಗಿ ಅಧಿಕಾರ ಬರುವದರಿಂದ ಮಾತ್ರ ಶಕ್ಯವಾದೀತೆನ್ನುತ್ತೇನೆ. ಈ ಮಹತ್ವದ ಸಂಗತಿಗಳನ್ನು ತಾವು ಲಕ್ಷ್ಯದಲ್ಲಿಟ್ಟುಕೊಂಡು ತಾವು ತಮ್ಮ ಮತದಾನವನ್ನು ಮಾಡಬೇಕೆಂದು ತಮ್ಮನ್ನು ಪ್ರಾರ್ಥನಾಪೂರ್ವಕ ಕೇಳಿಕೊಳ್ಳುವವನಿದ್ದೇನೆ."

ಸಭಾಧ್ಯಕ್ಷತೆ ವಹಿಸಿದ್ದ ವಕೀಲ್ ಬಿ. ಶೀನಪ್ಪ ಹೆಗ್ಡೆಯರು ಪಂಡಿತ ನೆಹರೂರವರಂತೆ ಮಹಾ ಚುನಾವಣೆಯಲ್ಲಿ ಯಾರೂ ನ್ಯಾಯ, ನೀತಿ, ರೀತಿ ತಪ್ಪದಂತೆ ಪ್ರಯತ್ನಿಸಿ ದೇಶದ ಗೌರವ ಕಾಪಾಡುವುದು ನಮ್ಮ ಕರ್ತವ್ಯವೆಂದೂ, ಬೇರೆ ಬೇರೆ ಪಕ್ಷದಂಗಡಗಳ ಅವ್ಯವಹಾರಿಕ, ಅಸಾಧ್ಯಕರ ಸುಳ್ಳು ಆಶ್ವಾಸನೆಗಳನ್ನು ನಂಬಿ ಮತದಾರರು ಮೋಸ ಹೋಗಬಾರದೆಂದೂ ಅಂತರರಾಷ್ಟ್ರೀಯ ಕೀರ್ತಿವೆತ್ತ ನೆಹರೂರವರ ಮುಂದಾಳುತ್ವದಲ್ಲಿ ದೇಶೋನ್ನತಿಗಾಗಿ ಶ್ರಮಿಸುತ್ತಿರುವ ಕಾಂಗ್ರೆಸಿಗೆ ಸರ್ವರೂ ಬೆಂಬಲಕೊಡಬೇಕೆಂದೂ ಸ್ಫೂರ್ತಿದಾಯಕವಾಗಿ ಮಾತನಾಡಿದರು. ಶ್ರೀ ಟಿ. ಸಂಜೀವ ಪೈಗಳ ಧನ್ಯವಾದ ಸಮರ್ಪಣೆಯಾಗಿ ಸಭಾಂತ್ಯವಾಯಿತು.

ಉಡುಪಿ

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು ತಾ. 24ರಲ್ಲಿ ಶ್ರೀ ಕೆ. ವೆಂಕಪ್ಪ, ತಹಶಿಲ್ದಾರ್, ಉಡುಪಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜ ದಿನವನ್ನು ಮುಂದಿನ ತಿಂಗಳಲ್ಲಿ ಆಚರಿಸಬೇಕೆಂದು ನಿರ್ಣಯವಾಯಿತು.

ಕೋಪರೇಟಿವ್ ಸೇವಿಂಗ್ಸ್ ಯೋಜನೆಯನ್ನು ಫಲಕಾರಿಯಾಗಿ ಮಾಡುವರೆ ಇದೇ ತಾ. 25ರಲ್ಲು ಸಹಕಾರಿ ಸಂಘಗಳ ಡಿಪ್ಯುಟಿ ರಜಿಸ್ಟ್ರಾರ್ ಶ್ರೀ. ಕೆ. ಕೇಶವ ರಾವ್ ಮತ್ತು ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ ಪ್ರೆಸಿಡೆಂಟ್ ಶ್ರೀ ಕೆ. ಜೆ. ಬಲ್ಲಾಳರು ಕಟಪಾಡಿ, ಶಿರ್ವ, ಕಾಪು, ಉಚ್ಚಿಲ, ಪಡುಬಿದ್ರಿ ಮೊದಲಾದ ಸಹಕಾರಿ ಸಂಘ ಕೇಂದ್ರಗಳನ್ನು ಸಂದರ್ಶಿಸಿದರು. ಸಾಧಾರಣ ರೂ. 30,000 ಜಮೆಯಾಗುವ ಆಶ್ವಾಸನೆಗಳು ದೊರೆತಿವೆ.

ವರ್ಗ:- ಇಲ್ಲಿ ಜನಪ್ರಿಯತೆ ಪಡೆದಿದ್ದ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿದ್ದ ರಜೆ ಮೇಲಿದ್ದ ಶ್ರೀ ಎಚ್. ನಾಗಪ್ಪ, ಬಿ. ಎ. ಅವರಿಗೆ ಪುತ್ತೂರು ಕಾಸರಗೋಡು ಡಿಪ್ಟಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿ ವರ್ಗವಾಗಿದೆ ಎಂದು ತಿಳಿದುಬರುತ್ತದೆ.

ರಾಜಿನಾಮೆ—ಶ್ರೀ [illegible]ಬಾದ ಎಂ. ಡಿ. ಅಧಿಕಾರಿಗಳೂ ಒಡಗಬೆಟ್ಟು ಸದಾಶಿವ ಹೆಗ್ಡೆಯರೂ ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟಿರುವುದಾಗಿ ತಿಳಿಸುತ್ತಾರೆ.

ಹಿರಿಯಡ್ಕ— ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು ತಾ. 26ರಲ್ಲು ಹಿರಿಯಡ್ಕದಲ್ಲಿ ಶ್ರೀ ಬಿ. ಶೀನಪ್ಪ ಹೆಗ್ಡೆ, ವಕೀಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಡಿ. ಹೆಗ್ಡೆ, ಪಂಡಿತ ಕೇಶವ ಸಂಪಿಯಾರ್, ಆರೂರು ಲಕ್ಷ್ಮಿನಾರಾಯಣ ರಾವ್, ಟಿ. ಎ. ಪೈ, ವಿಶ್ವನಾಥ ಹೆಗ್ಡೆಯವರು ಮುಂಬರುವ ಮಹಾ ಚುನಾವಣೆಯ ಕುರಿತು ಕಾಲೋಚಿತ ಮಾತುಗಳನ್ನಾಡುತ್ತಾ, ಕಾಂಗ್ರೆಸ್ಸು ಹುರಿಯಾಳುಗಳು ಜಯಶೀಲರಾಗಿ ಆರಿಸಿ ಬರುವಂತೆ ಮತದಾರರು ಸಹಕರಿಸಬೇಕಾಗಿ ವಿನಂತಿ ಮಾಡಿಕೊಂಡರು. ಅಧ್ಯಕ್ಷರು ಕಾಂಗ್ರೆಸ್ಸೊಂದೇ ದೇಶ ಕಲ್ಯಾಣಕ್ಕಾಗಿ [illegible]ರತವಾಗಿ ದುಡಿಯುವ ಪ್ರಭಾವೀಸಂಸ್ಥೆಯೆಂದೂ ಚುನಾವಣೆಗಾಗಿ ಸುಳ್ಳುಪೊಳ್ಳು ಭರವಸೆಗಳನ್ನಿತ್ತು ಪ್ರಚಾರಿಸುವವರ ಬಲೆಗೆ ಬೀಳದೆ, ಯಾರ ಹಂಗು ದಾಕ್ಷಿಣ್ಯಗಳಿಗೂ ಒಳಗಾಗದೆ ಸಾಂಗವಾದ ವಿಚಾರ ಮಾಡಿ ಮತದಾನ ಮಾಡಬೇಕೆಂದು ರಸಭರಿತವಾಗಿ ಮಾತನಾಡಿದರು. ಧನ್ಯವಾದಗಳಾಗಿ ಸಭಾಂತ್ಯವಾಯಿತು.

ತಿದ್ದುಪಡಿ:-ಕಳೆದ ಸಂಚಿಕೆಯ 7ನೇ ಪುಟದಲ್ಲಿ ಪ್ರಕಟವಾದ ಹಿರಿಯಡಕ ಬೋರ್ಡ್ ಹೈಸ್ಕೂಲ್ ಕಟ್ಟಡದ ಪ್ರವೇಶೋತ್ಸವ ವಾರ್ತೆಯಲ್ಲಿ ಹಿರಿಯಡಕ ಎಜ್ಯುಕೇಶನಲ್ ಸೊಸೈಟಿ ಅಧ್ಯಕ್ಷ ಡಾ। ಚಂದಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದುದಾಗಿ ಪ್ರಕಟವಾಗಿದೆ. ಇಲ್ಲಿ 'ಅಧ್ಯಕ್ಷ' ಎಂಬುದರ ಬದಲಿಗೆ 'ಕಾರ್ಯದರ್ಶಿ' ಎಂದಾಗಬೇಕು.-[ಸಂ।ನ.]

ಮದ್ರಾಸ್ ಲಾ ಕಾಲೇಜ್:-ಕರ್ನಾಟಕ ಸಂಘದ ಆಶ್ರಯದಲ್ಲಿ ಕನ್ನಡಿಗರ ಸಭೆಯು ತಾ. 23-11-51ರಲ್ಲು ಶ್ರೀ ಎಸ್. ಎಸ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಕೃಷ್ಣರಾವ್; ಕೆ. ನರಸಿಂಹ ರಾವ್; ಎಸ್. ಬಾಳಪ್ಪ; ವಿ. [illegible] ಅವರು "ಕರ್ನಾಟಕ ಪ್ರಾಂತರಚನೆಯ ಆವ[illegible] [illegible] ಭಾಷಣ[illegible]

ಪಡುಬಿದ್ರೆಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು–ಇದೇ ತಾ. 23ರಲ್ಲು ಸಂಜೆ ಡಾ। ಟಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದಂದಿನಿಂದ ಏನೆಲ್ಲಾ ಜನಹಿತ ಕಾರ್ಯಗಳನ್ನು ಮಾಡಿದೆ, ಮುಂದೇನು ಮಾಡಲಿರುವುದು ಎಂಬೀ ವಿಷಯಗಳಲ್ಲಿ ಡಾ। ಕೆ. ಎಲ್. ಕಾರಂತ್, ಪಂಡಿತ ಕೇಶವನಂಬಿಯಾರ್, ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಡೆ, ಎಮ್. ವಿ. ಹೆಗ್ಡೆ, ಟಿ. ಸಂಜೀವಶೆಟ್ಟಿ ಮೊದಲಾದವರು ಮಾತನಾಡಿದರು. ಮುಂಬರುವ ಮಹಾ ಚುನಾವಣೆಯಲ್ಲಿ ಈ ಮತದಾರ ಕ್ಷೇತ್ರದಿಂದ ಶಾಸನ ಸಭೆಗಳಿಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಟಿ. ಎ. ಪೈ ಮತ್ತು ಲೋಕ ಸಭೆಯ ಕಾಂಗ್ರೆಸ್ ಉಮೇದುವಾರರಾದ ಶ್ರೀ ಶ್ರೀನಿವಾಸ ಮಲ್ಯರೂ ಜಯಶೀಲರಾಗಿ ಆರಿಸಿ ಬರುವಂತೆ ಮಾಡುವುದು ಅಗತ್ಯವೆಂದರು. ಶ್ರೀ ಟಿ. ಎ. ಪೈಗಳು ತನ್ನ ಚುನಾವಣಾ ಘೋಷಣೆಯನ್ನು ವಿವರಿಸಿ ತಾನು ಚುನಾಯಿಸಲ್ಪಟ್ಟಲ್ಲಿ ನಿಸ್ವಾರ್ಥದಿಂದ ಜನತೆಯ ಕಲ್ಯಾಣಕ್ಕಾಗಿ ದುಡಿಯಲು ಸಿದ್ಧನಿರುವೆನೆಂದು ಆಶ್ವಾಸನೆ ಕೊಟ್ಟರು. ಶ್ರೀ ಆನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ ತಾಲೂಕಿನಲ್ಲಿ ಕಾಂಗ್ರೆಸ್ ಪ್ರಚಾರ ಸಭೆಗಳು

ಇದೇ ತಾ. 19ರಲ್ಲು ಕೋಟೇಶ್ವರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು ಶ್ರೀ ಯು. ಕೆ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೆನಗಲ್ ಶಿವರಾಯರು ಕಾಂಗ್ರೆಸಿನ ಉದ್ದೇಶ ಮತ್ತು ಗುರಿ ಏನೆಂಬುದನ್ನು ವಿವರಿಸಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಂದಿನಿಂದ ಜನಹಿತ ಸಾಧನಾ ಕಾರ್ಯಗಳೇನು ಮಾಡಿದೆ, ಇನ್ನೇನು ಮಾಡಲಿದೆ ಎಂಬುದನ್ನು ಜನತೆಗೆ ಮನದಟ್ಟಾಗುವಂತೆ ಹೇಳಿದರು. ಶ್ರೀ ಸೀತಾರಾಮ ಐತಾಳರು ಧನ್ಯವಾದಗಳನ್ನರ್ಪಿಸಿದರು. ಅಂದೇ ರಾತ್ರಿ 6-31ಕ್ಕೆ ಬಸ್ರೂರಲ್ಲಿ ಶ್ರೀ ಯು. ಕೆ. ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಶಿವರಾಯರು ಕಾಂಗ್ರೆಸ್ ಸರಕಾರವು ಆಹಾರದ ಅಭಾವವನ್ನು ಹೋಗಲಾಡಿಸಲು ಎಷ್ಟೊಂದು ಭಗೀರಥ ಯತ್ನ ನಡೆಸುವುದೆಂಬುದನ್ನು ವಿವರಿಸಿದರು.

ತಾ. 20ರಲ್ಲು ಬೆಳ್ವೆ ಗಂಗೊಳ್ಳಿಯಲ್ಲಿ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರ ಅಧ್ಯಕ್ಷತೆಯಲ್ಲಿ ಸಂಜೆ ಕುಂದಾಪುರದಲ್ಲಿ ಶ್ರೀ ಕೆ. ಎಲ್. ಭಂಡಾರಿಗಳ ಅಧ್ಯಕ್ಷತೆಯಲ್ಲಿಯೂ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು ಜರಗಿದವು. ಗಂಗೊಳ್ಳಿಯಲ್ಲಿ ಶ್ರೀಗಳಾದ ಬೆನಗಲ್ ಶಿವರಾವ್ ಮತ್ತು ವೈ. ಮಂಜಯ್ಯ ಸೆಟ್ಟರೂ ಕುಂದಾಪುರದಲ್ಲಿ ಕೂಡಾ ಇವರಿಬ್ಬರಲ್ಲದೆ ಶ್ರೀಗಳಾದ ಎ. ಬಿ. ಸೆಟ್ಟಿ ಮತ್ತು ಕೆ. ಸದಾನಂದ ಹೆಗ್ಡೆಯವರೂ ಕಾಂಗ್ರೆಸ್ ರಾಜ್ಯಭಾರದಿಂದಾದ ಪ್ರಯೋಜನಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಎಮ್. ಎಮ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ತಾ. 22ರಲ್ಲು ಮರವಂತೆಯಲ್ಲಿ ಶ್ರೀ ಎಚ್. ಎಲ್. ಕಾಮತರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಚುನಾವಣಾ ಸಭೆ ಜರಗಿ ಶ್ರೀಗಳಾದ ಎಮ್. ಎಮ್. ಹೆಗ್ಡೆ, ವೈ. ಮಂಜಯ್ಯ ಸೆಟ್ಟಿ, ಎಮ್. ವಿಶ್ವೇಶ್ವರಯ್ಯ ಮತ್ತು ಡಿ. ಆರ್. ಕುಂಬಳೆಯವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದಂದಿನಿಂದ ಎಂತೆಂತಹ ಗಂಡಾಂತರಗಳು ಬಂದಾಗ್ಯೂ ಅದು ಜನಹಿತ ಕಾರ್ಯವನ್ನು ಹೇಗೆ ಸಾಧಿಸಿತು ಎಂಬುದನ್ನು ಸವಿವರವಾಗಿ ಹೇಳಿದರು. ಶ್ರೀ ರಾಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಅಂತೂ ಕಾಂಗ್ರೆಸಿಗೆ ಬೆಂಬಲವಿದೆ ಎಂಬುದು ಆಯಾಯ ಸ್ಥಳಗಳಲ್ಲಿ ಸೇರಿದ ಸಭೆಗಳಿಗೆ ಹಾಜರಾದ ಮಹಾಜನರ ಸಂಖ್ಯೆಯೇ ನಿದರ್ಶನವಾಗಿದೆ.

ಹಕ್ಲಾಡಿಯಲ್ಲಿ ಇದೇ ತಾ. 23ರಲ್ಲೂ 24ರಂದೂ ಶ್ರೀ ಬಾಲಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಆರಿಹೊಳೆಯಲ್ಲಿಯೂ ಅದೇ ದಿವಸ ಬಡಾಕೆರೆಯಲ್ಲಿ ಜನಾಬ್ ಶೇಖ್ ಅಬ್ಬಾ ಸಾಹೇಬರ ಅಧ್ಯಕ್ಷತೆಯಲ್ಲೂ ತಾ. 25ರಲ್ಲು ಕೊಡೇರಿಯಲ್ಲಿಯೂ, ಕಂಬದಕೋಣೆಯಲ್ಲಿಯಲ್ಲಿ ಶ್ರೀ ಚಂದ್ರಸೆಟ್ಟರ ಅಧ್ಯಕ್ಷತೆಯಲ್ಲಿಯೂ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು ಜರಗಿದವು. ಕಾಂಗ್ರೆಸ್ಸು ಅಧಿಕಾರಕ್ಕೆ ಬಂದಂದಿನಿಂದ ಅದು ಸಾಧಿಸಿದ ಮಹಾಕಾರ್ಯಗಳು ಇತ್ಯಾದಿ ವಿಷಯಗಳಲ್ಲಿ ಶ್ರೀಗಳಾದ ದತ್ತಾತ್ರಾಮರಾವ್, ವಿಶ್ವೇಶ್ವರಯ್ಯ, ರೆ। ಪಾ। ಫೆರ್ನಾಂಡಿಸ್, ವೈ. ಮಂಜಯ್ಯ ಸೆಟ್ಟಿ, ಎಮ್ ಎಮ್. ಹೆಗ್ಡೆ, ಬಿ. ಸುಬ್ಬಣ್ಣ ಸೆಟ್ಟಿ, ಸಂಜೀವರಾವ್ ಮೊದಲಾದವರು ಭಾಷಣವಿತ್ತರು. ಈ ಸಭೆಗಳಿಗೆ ಜನರು ಬಹುಸಂಖ್ಯೆಯಿಂದ ಬಂದುದು ಕಾಂಗ್ರೆಸ್ ಉಮೇದುವಾರರ ವಿಜಯಕ್ಕೆ ಮಾರ್ಗದರ್ಶನವಾಗಿತ್ತು.

ಬಾರ್ಕೂರಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು:–ಇದೇ ತಾ 22ರಂದು ಬ್ರಹ್ಮಾವರ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಸಿಂಹಾಸನ ಗುಡ್ಡೆ ಮೈದಾನಿನಲ್ಲಿ ಡಾ। ಬಿ. ಕೃಷ್ಣ ಬ್ಯಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಬಿ. ಸೆಟ್ಟಿ, ಕೆ. ಎಸ್. ಹೆಗ್ಡೆ, ಕೆ. ಸೂರಪ್ಪ ಸೆಟ್ಟಿ, ಬಿ. ವೆಂಕಟೇಶ ಕಾಮತ್, ಡಾ। ಎ. ಆನಂದ ಹೆಗ್ಡೆ ಮೊದಲಾದವರು ಮಾತನಾಡುತ್ತಾ ಕಾಂಗ್ರೆಸ್ ಸರಕಾರವು ದೇಶದ ಅಭಿವೃದ್ಧಿಗಾಗಿ ಸಾಧಿಸಿದ ಕಾರ್ಯಗಳೆಷ್ಟೆಂತ ತೋರಿಸಿದರು. ಮಹಾ ಚುನಾವಣೆಯ ಕುರಿತು ಪ್ರಸ್ತಾಪಿಸುತ್ತಾ ಈ ಮತದಾರ ಕ್ಷೇತ್ರದಿಂದ ಮದ್ರಾಸ್ ಎಸೆಂಬ್ಲಿಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಬಿ ಜಗಜ್ಜೀವನದಾಸ ಸೆಟ್ಟರೂ, ಅಂತೆಯೇ ಲೋಕಸಭೆಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಶ್ರೀನಿವಾಸ ಮಲ್ಯರಿಗೂ ಮತದಾರರೆಲ್ಲರೂ ತಮ್ಮ ಓಟುಗಳನ್ನು ಕೊಟ್ಟು ಅವರು ಜಯಶೀಲರಾಗಿ ಆರಿಸಿ ಬರುವಂತೆ ಯತ್ನಿಸಬೇಕಾಗಿ ವಿನಂತಿಸಿದರು. ಸಂಜೆ ಬ್ರಹ್ಮಾವರ ಸ್ವರಾಜ್ಯ ಮೈದಾನಿನಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಇಲ್ಲಿಯೂ ಶ್ರೀಗಳಾದ ಎ. ಬಿ ಸೆಟ್ಟಿ, ಕೆ. ಎಸ್. ಹೆಗ್ಡೆ ಮೊದಲಾದವರು ಕಾಂಗ್ರೆಸ್ ಆದರ್ಶದ ಕುರಿತು ಮಾತನಾಡಿ ಕಾಂಗ್ರೆಸ್ ಉಮೇದುವಾರರಿಗೆನೇ ಮತನೀಡಬೇಕಾಗಿ ವಿನಂತಿಸಿದರು.

ಮೂಡುಬಿದ್ರೆಯಲ್ಲಿ ಧರ್ಮಾರ್ಥ ಕಣ್ಣಿನ ಶಸ್ತ್ರ ಚಿಕಿತ್ಸೆಯು:–ತಾರೀಖು 22-12-51 ಮತ್ತು 23-12-51ರಲ್ಲು ಡಾ। ಎಮ್. ಸಿ. ಮೋದಿಯವರಿಂದ ನಡೆಸಲ್ಪಡುವುದು. ಶಸ್ತ್ರ ಚಿಕಿತ್ಸೆಯಾದ ತರುವಾಯ ನೇತ್ರರೋಗಿಗಳು 10-20 ದಿನಗಳ ತನಕ ಶಿಬಿರದಲ್ಲಿಯೇ ಇರಬೇಕಾದುದರಿಂದ ತಕ್ಕ ಸಾಹಿತ್ಯ ಸಾಮಗ್ರಿಗಳೊಂದಿಗೆ ಬರತಕ್ಕದು ಎಲ್ಲಾ ನೇತ್ರರೋಗಿಗಳು ತಮ್ಮ ಹೆಸರನ್ನು ತಾರೀಖು 20-12-51 ರೊಳಗೆ ಪತ್ರವ್ಯವಹಾರ ನಡೆಸಿ ರಿಜಿಸ್ಟ್ರಿ ಮಾಡಿಕೊಳ್ಳಬೇಕೆಂದು ಏನೂ ಬೆಳಕು ಕಾಣದೆ ಇರುವವರು ಕಣ್ಣು ಇಂಗಿದವರೂ ಕನ್ನಡಕದ ಅಗತ್ಯವುಳ್ಳವರೂ ಬರುವುದು ಅಸಗತ್ಯವೆಂದೂ ಕಾರ್ಯದರ್ಶಿ, ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿ ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರ, ಮೂಡುಬಿದ್ರಿ, ಇದರ ಅಧಿಕಾರಿಗಳು ತಿಳಿಸುತ್ತಾರೆ.

ಸುರತ್ಕಲ್:–ಇಲ್ಲಿಯ ಗಂಗಯ್ಯ ಸ್ವಾರಕ ಶಾಂತಿ ಶಾಲೆಯವರು ಇದೇ ತಾ 23ರಲ್ಲು ಅಗ್ಗಿದಳರಿ ಡಾ। ಎ। ಶಾಲೆಯಲ್ಲಿ ನಿರಕ್ಷರತಾ ನಿವಾರಣೆಯ ಕುರಿತಾದ ಪ್ರಚಾರ ಕಾರ್ಯವನ್ನು ದಿವೀಂದ್ರ ಸ್ಕೌಟು ದಳದವರ ವಿನೋದಾವಳಿ ಗಳೊಂದಿಗೆ ಯಶಸ್ವಿಯಾಗಿ ಜರಗಿಸಿದರು.

ಹಿಂದೀ ಪರೀಕ್ಷೆ:-1952ನೇ ಫೆಬ್ರವರಿಯಲ್ಲಿ ನಡೆಯಲಿರುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಶಿರ್ವವನ್ನು ಒಂದು ಕೇಂದ್ರವಾಗಿ ಮಾಡಲಾಗಿದೆ. ಆಸುಪಾಸಿನ ಗ್ರಾಮಾಂತರಗಳಲ್ಲಿರುವ ಭಾಷಾ ಪ್ರೇಮಿಗಳು ಅರ್ಜಿಗಳೆಸಬೇಕಾಗಿ ಇವರು ಕೋರುತ್ತಾರೆ.—ಕೆ. ಎಲ್. ಶರ್ಮ ಹಿಂದೀ ಪಂಡಿತ್ ಹಿಂದೂ ಹಾಯಸ್ಕೂಲ್

ಅಂತರ್ ಕಾಲೇಜ್ ಕನ್ನಡ ಭಾಷಣ ಸ್ಪರ್ಧೆ—ಮದ್ರಾಸು ವಿಶ್ವವಿದ್ಯಾಲಯದವರು ಏರ್ಪಡಿಸಿದ ಮದ್ರಾಸಿನ ಎಲ್ಲಾ ಕಾಲೇಜುಗಳ ಪ್ರತಿನಿಧಿಗಳಿಂದೊಡಗೂಡಿದ ಅಂತರ್ ಕಾಲೇಜು ಕನ್ನಡ ಭಾಷಣ ಸ್ಪರ್ಧೆಯಲ್ಲಿ ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿ ಶ್ರೀ ಎಮ್. ಜೆ. ಹೆಗ್ಡೆ ಹಾಗೂ ಮಂಗಳೂರು ಸರಕಾರಿ ಕಾಲೇಜಿನ ವಿದ್ಯಾರ್ಥಿನಿ ಸುನೀತಿ ಬಿ. ಶೆಟ್ಟಿಯವರು ಪ್ರಥಮ ಬಹುಮಾನವನ್ನು ಮಂಗಳೂರಿನ ಸರಕಾರಿ ಕಾಲೇಜಿನ ವಿದ್ಯಾರ್ಥಿ ಕೆ. ಕರುಣಾಕರ ರಾಯರು ದ್ವಿತೀಯ ಬಹುಮಾನವನ್ನೂ ಪಡೆದಿರುವರು. ಈ ಸ್ಪರ್ಧೆಯಲ್ಲಿ ಮದ್ರಾಸು ಸಂಸ್ಥಾನದ ಸಾಧಾರಣ 17 ಕಾಲೇಜುಗಳು ಭಾಗವಹಿಸಿರುವುದಾಗಿ ತಿಳಿದುಬರುತ್ತದೆ.

ನೋಡಿದರೆ ಬಿಡದಿರುವ ಪುಸ್ತಕಗಳು

ರೂ. 30ರ ಪುಸ್ತಕಗಳನ್ನು ಕೇವಲ ರೂ. 25ಕ್ಕೆ ಕೊಡಲಾಗುವುದು.

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ಕಾವ್ಯಕತೆಗಳು	0	4	0
ಕುಕಳಿಕ	0	7	0
ನಾಟಕಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಮರುಳ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ಸೇವಾಪಥ	0	8	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜವಿನಾಸ್ತ್ರ	1	12	0

ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಳ್ಳುವ ಶಾಲಾ ಲೈಬ್ರೆರಿಗಳಿಗೆ ರೂ. 25ಕ್ಕೆ ಕೊಡಲಾಗುವುದು.

ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:

(1) ಕಿರಿಯರ ಪ್ರಪಂಚ, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

.......ಗಣ ಮತಭೇದವ

ನಡಿಯುವ ಚಿತ್ರ

ನೋಡಿದಷ್ಟು ಹೊಸದಾಗಿ ತೋರುವ ನಾಡಿನ ಹೆಮ್ಮೆಯ ಚಿತ್ರ

ಕನ್ನಡ ಹರಿಶ್ಚಂದ್ರ

ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ, ಮೊದಲಾದವರು.

ಬರುವ ಚಿತ್ರ:—ಹನುಮಾನ್ ಪಾತಾಳ ವಿಜಯ, ಗಣೇಶಜನ್ಮ ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

NOTICE

In the Court of the District Munsiff, Kasaragod.

O. S. No. 445/1950.

Between

Gangamma — —Plaintiff.

and

Narayana Bhatta & others— Defendants'

To

The 4th Supplemental defendant Laxmi Amma, widow of Valakunja Krishna Bhatta, residing in Pathanadka of Mulliyar village, Kasaragod Taluk.

Whereas the plaintiff has filed a suit for maintenance on the charge of the properties described in the plaint, and the suit is posted for your appearance on 3-12-'51, please take notice that in default of your appearance on that day, you will be declared Ex-parte and the suit will be proceeded in your absence.

N. Venkatramana Bhat,

Advocate for Plaintiff.

Kasaragod, 24-11-51.

ದಕ್ಷಿಣ ಕನ್ನಡ ಮಂಗಳೂರು ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

As 246 of 1951

ಬಾಬು ಶೆಟ್ಟಿ —ಅಪಿಲಾಂಟ

ಮತ್ತು

ಕುಡ್ಪು ಶೆಟ್ಟಿ ಕೂಡಾ ....ರೆಸ್ಪಾಂಡೆಂಟರು.

ಉಡುಪಿ ತಾಲ್ಲೂಕು ನದಿಸಾಲ ಗ್ರಾಮದಲ್ಲಿರುವ ನರ್ಸಿ ಸೆಡ್ತಿ ಮಕ್ಕಳು ರಾಜು ಶೆಟ್ಟಿ 1, ರಾಮ ಶೆಟ್ಟಿ 1, ದುಗ್ಗು ಶೆಡ್ತಿ, ಮಕ್ಕಳು ಸುಗುಣ ಶೆಟ್ಟಿ 1, ರಾಮ ಸೆಟ್ಟಿ 1, ಸದ್ರಿ ತಾಲ್ಲೂಕು ಸದ್ರಿ ಗ್ರಾಮದಲ್ಲಿರುವ ಪದ್ದು ಶೆಡ್ತಿ ಮಕ್ಕಳು ನರ್ಸಿ 1, ಶಿವ 1, ಕೂಡಾ. 6 ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ,

ಸದ್ರಿ ಅಪಿಲಾಂಟರು ಕಾರ್ಕಳ ಡಿ. ಮುನ್ಸಿಫ್ ಕೋರ್ಟಿನ O. S. ನಂಬ್ರ 142/49 ನೇ ವ್ಯಾಜ್ಯದಲ್ಲಿ ತಾರೀಖು 6-2-1951ರಲ್ಲಾದ ಡಿಕ್ರಿ ಜಡ್ಜಮೆಂಟಿನ ವಿರುದ್ಧ, ಸದ್ರಿ ಸಭ ಜಡ್ಜರ ಕೋರ್ಟಿನಲ್ಲಿ ಅಪೀಲು ದಾಖಲು ಮಾಡಿರುತ್ತಾರೆ. ಸದ್ರಿ ಅಪೀಲು ವಿಚಾರಣೆಗೆ ತಾರೀಖು 21-12-51ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಖುದ್ದಾಗಿಯಾಗಲೀ ಯಾ ವಕೀಲರ ಮುಖಾಂತರವಾಗಲೀ ಬಂದು ನಿಮ್ಮ ಆಕ್ಷೇಪಗಳನ್ನು ಕೊಡದಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದು ತಿಳಿದಿರಲಿ.

ಬಿ. ವಿ. ಕೃಷ್ಣಯ್ಯ

ಅಸಿಸ್ಟಂಟ್ ಶಿರಸ್ತೇದಾರ್.

ಮಂಗಳೂರು. 24-11-51

ಮಂಗಳೂರು

ದ. ಕ. ವಾಣಿಜ್ಯನೌಕರರ ಸಂಘದಲ್ಲಿ ಭಾಷಣ—ದಿನಾಂಕ 18ರಂದು ದ. ಕ. ವಾಣಿಜ್ಯ ನೌಕರರ ಸಂಘದಲ್ಲಿ ಶ್ರೀ ಬೆನಗಲ್ ಶಿವರಾಯರು ಪಂಚವಾರ್ಷಿಕ ಯೋಜನೆಯ ಕುರಿತು ಭಾಷಣವಿತ್ತರು. ಸಂಘದ ವೈಸ್ ಪ್ರೆಸಿಡೆಂಟ್ ಶ್ರೀ ಎ. ಎಲ್. ಎಮ್. ಮಸ್ಕರೇಂಞಾಸ್ ಅವರು ಸಭಾಧ್ಯಕ್ಷತೆ ವಹಿಸಿದ್ದರು. ಸಂಘದ ಖಜಾಂಚಿ ಶ್ರೀ ಎಮ್. ಸುಬ್ರಾಯ ಪೈಗಳು ಜಿಲ್ಲೆಯ ವಾಣಿಜ್ಯ ನೌಕರರ ಸ್ಥಿತಿಗತಿಗಳನ್ನು ವಿವರಿಸಿದರು. ಶ್ರೀ ಶಿವರಾಯರು ದೇಶದಲ್ಲಿ ಮಜೂರರ ಸಂಘಟನೆ ಯಾವ ರೀತಿಯಲ್ಲಿ ನಡೆದಿದೆ, ಅದನ್ನು ಲಕ್ಷಿಸಿ ವಾಣಿಜ್ಯ ನೌಕರರು ಯಾವ ರೀತಿಯಲ್ಲಿ ಸಂಘಟಿಸಿಕೊಂಡು ತಮಗೆ ನ್ಯಾಯ ಸಿಗುವಂತೆ ಪ್ರಯತ್ನಿಸಬಹುದೆಂಬುದನ್ನು ವಿವರಿಸಿದರು, ಸಂಘದವರು ಮದ್ರಾಸು ಪ್ರಾಂತದ ವಾಣಿಜ್ಯ ನೌಕರರ ಫೆಡರೇಶನ್ ಏರ್ಪಡಿಸತಕ್ಕದ್ದೆಂದೂ ಸಂಘವನ್ನು ಬಲಪಡಿಸಬೇಕೆಂದೂ ಉಪದೇಶವಿತ್ತರು. ಪಂಚವಾರ್ಷಿಕ ಯೋಜನೆಯ ಕುರಿತು ಮಾತನಾಡುತ್ತಾ, ಭಾರತ ಸರಕಾರವು ಈಗ ತಯಾರಿಸಿದ ಯೋಜನೆಯು ದೇಶದ ಪ್ರಥಮ ಯೋಜನೆಯಲ್ಲ. ಆ ಯೋಜನೆ ಯಶಸ್ವಿಯಾಗುವುದಿಲ್ಲವೆಂದು ಟೀಕಿಸಿ ಪ್ರಯೋಜನವಿಲ್ಲ. ಹಳ್ಳಿಹಳ್ಳಿಗಳಿಂದಲೂ ಯೋಜನೆಗೆ ಸಹಕಾರ ದೊರೆತರೆ ಯೋಜನೆಯು ಯಶಸ್ವಿಯಾಗುವುದು ಮಾತ್ರವಲ್ಲ, ಹಣ ಕೂಡಾ ಉಳಿಯುವುದು. ಆದುದರಿಂದ ಯೋಜನೆಯು ಸಫಲವಾಗುವುದು ಜನತೆಯ ಮೇಲೆ ಹೊಂದಿಕೊಂಡಿದೆ ಎಂದರು, ಸಂಘದ ಕಾರ್ಯದರ್ಶಿ ಶ್ರೀ ಎನ್. ಎಮ್. ಕಾಮತರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರು ಪತ್ರಿಕೋದ್ಯೋಗಿ ಸಂಘದಲ್ಲಿ—ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನ ಅಧ್ಯಕ್ಷ ದೇಶಬಂಧು ಗುಪ್ತ ಮತ್ತು ಇದೇ ಪರಿಷತ್ತಿನ ಜತೆ ಕಾರ್ಯದರ್ಶಿ ಲಜಪತ ರ್ರಾ, ಅವರು ಕಲ್ಕತ್ತೆಯ ವಿಮಾನ ಅಪಘಾತಕ್ಕೆ ಗುರಿಯಾಗಿ ಮರಣಪಟ್ಟುದರ ಬಗ್ಗೆ ದುಃಖಸೂಚಕ ಗೊತ್ತುವಳಿಯಾಯಿತು.

ಕಮ್ಯೂನಿಸ್ಟರ ನೇತೃತ್ವದಲ್ಲಿ—ತಾ. 18ರಲ್ಲು ಶ್ರೀ ಯು. ಎಸ್. ಶ್ರೀನಿವಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಎ. ಶಾಂತಾರಾಂ ಪೈ, ಎ. ಕೃಷ್ಣ ಶೆಟ್ಟಿ ಮೊದಲಾದವರು ಭಾಷಣವಿತ್ತರು. ಚುನಾವಣೆಯಲ್ಲಿ ನ್ಯಾಯ ವಾತಾವರಣ ಉಂಟುಮಾಡಬೇಕೆನ್ನುವ, ದಿಗ್ಬಂಧನದಲ್ಲಿರುವವರನ್ನೆಲ್ಲ ಬಿಡಬೇಕೆನ್ನುವ, ನಿರ್ಣಯಗಳಾದುವು.

ಪ್ರಚಾರ ಸಭೆ—ಇದೇ ತಾ. 15ರಲ್ಲು ಚುನಾವಣೆ ಪ್ರಚಾರ ಸಭೆಯೊಂದು ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ಶ್ರೀ ಡಿ. ಮೋಹನರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜವಾದಿ ಪಕ್ಷದ ಘೋಷಣೆ ಮತ್ತು ಮತದಾನದ ಮಹತ್ವಗಳ ಕುರಿತು ಭಾಷಣಗಳಾದುವು.

ಉದ್ಘಾಟನಾ ಸಮಾರಂಭ—ಇದೆ ತಾ. 18ರಂದು ಸಂಜೆ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಸ್ ಯು. ಪರಶುರಾಮ ನಾಯಕರು ಡಾನ್‌ಬಾಸ್ಕೊ ಹಾಲನಲ್ಲಿ ಗ್ರಂಡ್ ಫನ್‌ಫೇರಿನ ಉದ್ಘಾಟನೆ ಮಾಡಿದರು. ಫಾದರ್ ಫಿಲಿಪ್ ನೇರಿಯವರು ಡಾನ್ ಬಾಸ್ಕೊ ಮಂದಿರದ ಕುರಿತು ಈ ವರೆಗೆ ನಡೆದ ಕಾರ್ಯವನ್ನು ವಿವರಿಸಿದರು. ಶ್ರೀ ಎಲ್. ಸಿ. ಪಾಯಿಸ್, ಅವರು ಆಲೋಚಿತ ಮಾತುಗಳನ್ನಾಡಿದರು.

ಮದ್ರಾಸು ಕ್ರಿಕೆಟ್ ಎಸೋಸಿಯೇಶನ್ ಕಡೆಯ ಒಂದು ಟೀಮು ಪಶ್ಚಿಮ ಕರಾವಳಿಯ ಸಂಚಾರ ಕೈಗೊಂಡು ಇದೇ ದಶಂಬರ್ ತಾ. 1ಕ್ಕೆ ಮಂಗಳೂರಿಗೆ ಬರಲಿದೆ. ಎರಡು ದಿನಗಳಲ್ಲಿ ಕೆನರಾ ಕ್ರಿಕೆಟ್ ಟೀಮಿನವರೊಡನೆ ಮೊದಲನೆ ಮೇಚು ನಡೆಯುವುದು, ತಾ. 4ರಲ್ಲು ಶ್ರೀ ಉಗ್ಗಪ್ಪ ಶೆಟ್ಟರ ಏಕಾದಶ ದಳದೊಂದಿಗೆ ಪಂದ್ಯಾಟ ನಡೆಯುವುದು. ಮಂಗಳೂರು ಟೀಮಿನವರು ದಶಂಬರ ತಿಂಗಳ ಕೊನೆಯಲ್ಲಿ ಮದ್ರಾಸಿಗೆ ಹೋಗಿ ಅಲ್ಲಿ ಕ್ರಿಕೆಟ್ ಪಂದ್ಯಾಟದಲ್ಲಿ ಭಾಗವಹಿಸಲಿರುವರು.

ಕೆನರಾ ಹಾಯಸ್ಕೂಲ್ ಸ್ಥಾಪಕರ ದಿನಾಚರಣೆಯು ಇದೇ ತಾ. 19ರಲ್ಲು ಸಂಜೆ ಕೆನರಾ ಹಾಯಸ್ಕೂಲ್ [ಮೈನ್] ನಲ್ಲಿ ನಿವೃತ್ತ ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ರಾ| ಬ| ಎಮ್. ರಾಮಚಂದರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ಥಾಪಕರ ದಿನಾಚರಣೆಯ ಸ್ಪರ್ಧೆಗಳ ಬಹುಮಾನ ವಿತರಣೆ, ಶ್ರೀ ಎಮ್. ಮಾಧವ ರಾಯರಿಂದ ಸ್ಮಾರಕ ಭಾಷಣ, ಮುಖ್ಯೋಪಾಧ್ಯಾಯ ಶ್ರೀ ಜೆ. ಅನಂತ ಪ್ರಭುಗಳಿಂದ ಸ್ವಾಗತ ಭಾಷಣ, ಅದಕ್ಕೆ ಶ್ರೀ ಕೆ. ಚಂದ್ರಕಾಂತ ತಿಂಗಳಾಯರಿಂದ ಉತ್ತರ, ಅಧ್ಯಕ್ಷರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು.

ವಿಮಾನ ನಿಲ್ದಾಣ—ಬಜ್ಪೆಯ ಬಳಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣದ ಕೆಲಸವು ರಭಸದಿಂದ ಸಾಗುತ್ತಿದೆಯೆಂದೂ ದಶಂಬರ ಮಧ್ಯದಲ್ಲಿ ಪಂಡಿತ ಜವಾಹರಲಾಲ ನೆಹರುಗಳು ಚುನಾವಣಾ ಸಂಚಾರಕ್ಕಾಗಿ ವಿಮಾನದಲ್ಲೇ ಬಂದು ಈ ಹೊಸ ನಿಲ್ದಾಣದಲ್ಲಿ ಇಳಿಯುವರೆಂದೂ ತಿಳಿದುಬರುತ್ತದೆ.

ಎಸೆಂಬ್ಲಿ ಮತ್ತು ಪಾರ್ಲಿಮೆಂಟಿನ ಚುನಾವಣೆಗಳು ದ.ಕ. ಜಿಲ್ಲೆಯಿಂದ ನಾಮಪತ್ರ ಒಪ್ಪಿಸಿದವರು.

ನಾಮಪತ್ರವನ್ನು ಸ್ವೀಕರಿಸುವ ಕೊನೆಯ ದಿನ ಇದೇ ತಾ. 21 ಆಗಿದ್ದು ಅಂದಿನವರೆಗೆ ಒಪ್ಪಿಸಲಾದ ನಾಮಪತ್ರಗಳಿವು.

ಪಾರ್ಲಿಮೆಂಟಿಗೆ I. ಉತ್ತರ ವಿಭಾಗದಿಂದ: ಯು. ಶ್ರೀನಿವಾಸ ಮಲ್ಯ, (ಕಾಂಗ್ರೆಸ್), ಕೆ. ಬಿ. ಜಿನರಾಜ ಹೆಗ್ಗೆ(ಪ್ರಜಾಪಕ್ಷ) ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್(ಸ್ವತಂತ್ರ), ಯು. ರಘುನಾಥ ಮಲ್ಯ (ಸ್ವ), ಬಿ. ಜೆ. ಭಂಡಾರಿ (ಸೋಶಿಯಲಿಸ್ಟ್),

II ದಕ್ಷಿಣವಿಭಾಗದಿಂದ:- ಬೆನಗಲ್ ಶಿವರಾವ್[ಕಾಂ] ಕೆ. ಆರ್. ಕಾರಂತ[ಪ್ರ], ಬಿ. ವಿಷ್ಣು ಕಕ್ಕಿಲ್ಲಾಯ (ಕಮ್ಯುನಿಸ್ಟ್), ಡಾ| ಎಮ್. ಎಸ್. ಅಚ್ಯುತ ಶರ್ಮ[ಸ್ವ]

ಮದ್ರಾಸು ಎಸೆಂಬ್ಲಿ, ಕುಂದಾಪುರ: ಯಡ್ತರೆ ಮಂಜಯ್ಯ ಶೆಟ್ಟಿ [ಕಾಂ], ಪಿ. ಶ್ರೀನಿವಾಸ ಶೆಟ್ಟಿ [ಸೊ], ಬ್ರಹ್ಮಾವರ: ಜಗಜ್ಜೀವನದಾಸ್ ಶೆಟ್ಟಿ [ಕಾಂ], ಎಸ್. ಎಸ್. ಕೊಳ್ಕೆಬೈಲ್ [ಪ್ರ], ಬಿ. ಕರುಣಾಕರ ಹೆಗ್ಡೆ [ಪ್ರ].

ಉಡುಪಿ: ಟಿ. ಎ ಪೈ, (ಕಾಂ) ಕಲ್ಯಾಡಿ ರಾಮರಾವ್ [ಪ್ರ], ಡಾ| ಪಿ. ಜಿ. ಆಚಾರ್ [ಪ್ರ], ಎಸ್. ವಿಠಲದಾಸ್ [ಸೊ], ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ (ಸ್ವ).

ಕಾರ್ಕಳ: ಎ. ಬಿ. ಶೆಟ್ಟಿ (ಕಾಂ), ಧರ್ಮ ಸಾಮ್ರಾಜ್ಯ [ಪ್ರ], ದೇವರಾಜ ಶೆಟ್ಟಿ [ಸ್ವ]

ಮೂಲ್ಕಿ: ಎಸ್. ಎನ್. ಸುವರ್ಣ [ಕಾಂ], ಸಂಜೀವನಾಥ[ಸೊ] ಯು. ಅನಂತ ಮಲ್ಯ [ಜನಸಂಘ], ಕಾರ್ಕಳ ಸದಾಶಿವ ರಾವ್, [ಜ. ಸ.] ಜೆ. ಬಿ. ಡಿ'ಸೋಜ[ಸ್ವ].

ಮಂಗಳೂರು: ಎಲ್. ಸಿ. ಪಾಯಿಸ್ [ಕಾಂ], ಡಿ. ಮೋಹನ ರಾವ್, [ಸೊ], ಶಾಂತಾರಾಂ ಪೈ [ಕ], ಬಿ. ವಿಷ್ಣು ಕಕ್ಕಿಲ್ಲಾಯ [ಕ], ಕಾರ್ಕಳ ಸದಾಶಿವ ರಾವ್ [ಜ. ಸ], ಯು. ಅನಂತ ಮಲ್ಯ (ಜ. ಸ), ಸಿ. ಎಲ್. ಲೋಬೊ (ಸ್ವ), ಪೈ ಕೃಷ್ಣರಾವ್(ಸ್ವ).

ಪಾಣೆ ಮಂಗಳೂರು: ಬಿ. ವೈಕುಂಠ ಬಾಳಿಗ [ಕಾಂ], ಡಾ| ನೇಮಿರಾಜ ಆಳ್ವ [ಸ್ವ], ಬಿ. ವಿಷ್ಣು ಕಕ್ಕಿಲ್ಲಾಯ [ಕ], ಎ. ಕೃಷ್ಣ ಶೆಟ್ಟಿ (ಕ).

ಪುತ್ತೂರು (ಜನರಲ್) ಕೆ. ವಿ. ಗೌಡ [ಕಾಂ], ಕೆ. ಶಿವರಾಮ ಕಾರಂತ[ಪ್ರ], ಬಿ. ರಾಮಚಂದ್ರ ರಾವ್, [ಪ್ರ], ಸಂಜೀವ ಶೆಟ್ಟಿ [ಕಾಂ] ಡಾ| ಶೀನಪ್ಪ ಭಂಡಾರಿ [ಕಾಂ], ಕೆ. ವಿ ಶೆಟ್ಟಿ [ಕಾಂ] ಎಮ್. ಎಸ್. ಭಟ್ [ಜ. ಸ.], ಕೆ. ಮಂಜಯ್ಯ [ಸ್ವ]. ಪುತ್ತೂರು ನಿಮ್ನ ವರ್ಗ): ಕೆ. ಈಶ್ವರ [ಕಾಂ], ರಾಮಣ್ಣ ನಾಯಕ್ [ಪ್ರ], ಈಶ್ವರ ಬರ್ಮ [ಸೊ], ಎಸ್. ಗೋಪಾಲ ಸಾಲೆನ್ಸ [ನಿಮ್ನ ವರ್ಗದ ಫೆಡರೇಶನ್]

ಕಾಸರಗೋಡು: ಎಮ್ ಎಸ್. ಮೊಗ್ರಾಲ್ [ಕಾಂ], ಅಪಮ್ಮಾವಾಲಿ ರಿದೋಲ್ [ಕಾಂ], ಬಿ, ಶ್ರೀಧರ ಕಕ್ಕಿಲ್ಲಾಯ (ಸ್ವ), ಡಾ| ಚಿಕ್ಕಪ್ಪ ಆಳ್ವ, (ಪ್ರ), ಬಿ, ವಿಷ್ಣು ಕಕ್ಕಿಲ್ಲಾಯ, [ಕ] ಮಾಹಿಮ ಚಮ್ನಾಡ್ [ಲೀಗ್], ಅಬ್ದುಲ್ ಖಾದಿರ್ [ಲೀಗ್], ಕೆ, ಶಂಕರ್ (ಸೊ) ವಿ, ಕೃಷ್ಣಭಟ್ [ಸ್ವ]

ಹೊಸದುರ್ಗ— ಮಾವಿಲ ಕುಂಞಿಕಣ್ಣನ್ ನಂಬಿಯಾರ್ [ಕಾಂ]; ನೆಲ್ಲಿಕಾತ್ ನಾರಾಯಣ ನಂಬಿಯಾರ್ [ಪ್ರ]; ಕೆ. ಮಾಧವನ್ [ಕ]; ಎನ್. ಜಿ. ಕಾಮತ್ [ಕ]; ಎಚ್. ಎಚ್. ಚಮ್ನಾಡ್ [ಸ್ವ]; ಬಾಲಕೃಷ್ಣನ್ [ಸೊ]; ಸಿ. ಕೆ. ರಾಘವನ್ ನಂಬಿಯಾರ್ [ಸ್ವ]; ಕಣ್ಣನ್ ನಾಯರ್ [ಕಾಂ] ಪದ್ಮನಾಭನ್ ನಾಯರ್ [ಸ].

ನಮ್ಮ ಜಿಲ್ಲೆಯಿಂದ ಒಟ್ಟು 69 ನಾಮಪತ್ರಗಳು ಬಿದ್ದಿವೆ. ಇವುಗಳಲ್ಲಿ ಪಾರ್ಲಿಮೆಂಟಿನ ಎರಡು ಸ್ಥಾನಗಳಿಗೆ 9 ಮತ್ತು ಮದ್ರಾಸ್ ಎಸೆಂಬ್ಲಿಯ 11 ಸ್ಥಾನಗಳಿಗೆ 60 ಅಂತು ಕಾಂಗ್ರೆಸ್, ಪ್ರಜಾಪಕ್ಷ, ಸೋಶಲಿಸ್ಟ್, ಕಮ್ಯೂನಿಸ್ಟ್, ಭಾರತೀಯ ಜನಸಂಘ, ಮುಸ್ಲಿಂ ಲೀಗ್ ಮತ್ತು ... ... ದ್ಯರರ ಪಕ್ಷಗಳೆಂಬ ಏಳು ಪಕ್ಷಗಳಿಂದ ಉಮೇದ್ವಾರರು ಚುನಾವಣಾ ರಂಗಕ್ಕಿಳಿದಿದ್ದಾರೆ. ಹಲವರು ಸ್ವತಂತ್ರ ಉಮೇದ್ವಾರರೂ ಇರುವರು. ಕಾಂಗ್ರೆಸ್ಸು ಕೇಂದ್ರ, ಹಾಗೂ ಪ್ರಾಂತೀಯ ಸಭೆಯ ಎಲ್ಲ ಸ್ಥಾನಗಳಿಗೂ ಉಮೇದ್ವಾರರನ್ನು ನಿಲ್ಲಿಸಿದೆ. ಪ್ರಜಾಪಕ್ಷವು ಕುಂದಾಪುರ, ಮಂಗಳೂರು ಮತ್ತು ಮೂಲ್ಕಿಗಳ ಹೊರತು ಉಳಿದ ಎಲ್ಲ ಸ್ಥಾನಗಳಿಗೆ ಉಮೇದ್ವಾರರನ್ನು ನಿಲ್ಲಿಸಿದೆ, ಸೋಶಲಿಸ್ಟ್ 7 ಸ್ಥಾನಗಳಿಗೆ, ಕಮ್ಯುನಿಸ್ಟರು 5 ಸ್ಥಾನಗಳಿಗೆ, ಜನಸಂಘವು 3 ಸ್ಥಾನಗಳಿಗೆ, ಮುಸ್ಲಿಂ ಲೀಗ್ 1 ಸ್ಥಾನಕ್ಕೆ ಹಾಗೂ ನಿಮ್ನ ವರ್ಗದ ಫೆಡರೇಶನಿನ 1 ಸ್ಥಾನಕ್ಕೂ ಉಮೇದ್ವಾರರನ್ನು ನಿಲ್ಲಿಸಿದೆ. ಸ್ವತಂತ್ರರ ಸಂಖ್ಯೆ ಸುಮಾರು 12 ನಾಮಪತ್ರಗಳ ಪರಿಶೀಲನೆ ಇದೇ ತಾ 28ರಲ್ಲು ಜರಗುವುದು. ದಶಂಬರ ತಾ 1 ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಅಖೈರು ದಿನ.

ಪ್ರಕಟಣೆ

ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದಲ್ಲಿರುವ ದಾಸ ಮಿತ್ತಂತಾಯರ ಮಗ ಶ್ರೀನಿವಾಸ ಮಿತ್ತಂತಾಯನು ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದ ಮಡಂಬು ಅಣ್ಣಯ್ಯಭಟ್ಟರ ಮಗ ವಿಷ್ಣುಮೂರ್ತಿ ಭಟ್ಟರಿಗೆ ಕೊಡುವ ನೋಟೀಸು- ನೀವು ನನಗೆ ತಾ. 6-2-48 ರಲ್ಲು ರಿ. ಸಿ ಬರೆಕೊಟ್ಟ ಪವರ ಆಫ್ ಎಟೋರ್ನಿಗೆ ಕಾರಣವಾದ ಆಸ್ತಿಗಳು ಉಡುಪಿ ಡಿ. ಮು. ಕೋರ್ಟು R-E.P. 104/51ರಲ್ಲಿ ನೀನು ಸದ್ರಿಯ ನಿಮ್ಮಮೇಲೆ ಪಡೆದಿರುವ ಡಿಕ್ರಿಯ ಮೇಲೆ ನಡೆಸಿರುವ ಅಮಲ್ದಾರಿಯಲ್ಲಿ ತಾ 7-11-51ರಲ್ಲಿ ಸದ್ರಿ ಕೋರ್ಟಿನಲ್ಲಿ ರೂ. 4500/-ಕ್ಕೆ ಏಲಂ ಆದಲ್ಲಿ ನಾನು ನನ್ನ ಸ್ವಂತ ಬಗ್ಗೆ ವೈಸಿಕೊಂಡಿದ್ದೇನೆ. ಸದ್ರಿ ಆಸ್ತಿಯನ್ನು ಇತರರು ಹೀನ ಕ್ರಯಕ್ಕೆ ವೈಸಿಕೊಳ್ಳುವ ಸಂದರ್ಭದಲ್ಲಿದ್ದುದರಿಂದ ಅತ್ಯಧಿಕ ಮೌಲ್ಯಕ್ಕೆ ನಾನೇ ವೈಸಿಕೊಂಡದ್ದಾಗಿರುತ್ತದೆ. ಆದ್ದರಿಂದ ಇನ್ನು ಮುಂದೆ ಸದ್ರಿ ಪವರ ಆಫ್ ಎಟೋರ್ನಿ ಶರ್ತ ಪ್ರಕಾರ ನಾನು ಯಾವ ಕೆಲಸಗಳನ್ನೂ ನಿರ್ವಹಿಸುವ ಅಗತ್ಯವಿರುವುದಿಲ್ಲ, ವ, ಹಾಗೆ ನಿರ್ವಹಿಸುವುದೂ ಇಲ್ಲಾ. ಸದ್ರಿ ಆಸ್ತಿಯು ಏಲಂ ಆದುದರಿಂದ ಸದ್ರಿ ಪವರ ಆಫ್ ಎಟೋರ್ನಿ ರದ್ದಾಗಿರುತ್ತದೆ. ವ, ಈ ಮೂಲಕ ರದ್ದುಪಡಿಸಿರುತ್ತೇನೆ ಎಂಬ ಸಂಗ್ತಿ ನಿಮಗೆ ತಿಳಿಸಿರುತ್ತೇನೆ. ಸದ್ರಿ ಪವರ ಆಫ್ ಎಟೋರ್ನಿ ಪ್ರಕಾರ ನಾನು ಕ್ರಮವಾದ ಲೆಕ್ಕಪತ್ರ ಇಟ್ಟಿರುತ್ತೇನೆ. ನನ್ನ ಹತ್ರ ರೂ. 19-7-7 ಮಾತ್ರ ಸಿಲ್ಕು ಇರುತ್ತದೆ. ನೀವು ತಾ. 1-11-47ರಲ್ಲು ಸಿ. ಕುಡೆರಾಮಕೃಷ್ಣ ಭಟ್ಟರಿಗೆ ರೂ. 800/-ಕ್ಕೆ ಬರೆಕೊಟ್ಟಿರುವ ಡಿ ಮೋಟನ್ನು ನಾನು ಟ್ರಾನ್ಸ್ಫರ ಪಡೆದದ್ದು ಅದರ ಮಾಯುದೆಯು ಹೋಗುವ ಸಂಬಂಧ ನಾನು ಸದ್ರಿ ನೋಟಿನ ಮೇಲೆ ಅನಿವಾರ್ಯ ಪಟ್ಟು ನಿಮ್ಮ ಮೇಲೆ ಉಡುಪಿ ಡಿ. ಮು. ಕೋರ್ಟಿನಲ್ಲಿ ಕ್ರಮನಂಬ್ರ 411/51ನೆಗೆ ದಾವಾ ಮಾಡಿ ಡಿಕ್ರಿ ಪಡೆದಿರುತ್ತೇನೆ. ಸದ್ರಿ ಡಿಕ್ರಿ ಹಣ ಸದ್ರಿ ಏಲಮಿನಿಂದ ಹುಟ್ಟಿಬಂದ ಐವೇಜಿನಿಂದ ರೇ ವಸೂಲಾಗುತ್ತದೆ. ಈ ಕುರಿತು ನಾನು ನಂಬ್ರ 1539ಕ್ಕೆ ರಿಜಿಸ್ಟ್ರಿ ನಿಕಿ ನೋಟೀಸು ಕೊಟ್ಟದ್ದು-ವಿಳಾಸದಾರರು ಎಲ್ಲಿದ್ದಾರೆಂದು ತಿಳಿಯದ್ದರಿಂದ ನೋಟೀಸು ಹಿಂದೆ ಬಂದಿದೆ. ಆದ್ದರಿಂದ ಈ ಮೂಲಕ ಪ್ರಕಟಣೆ ಪಡಿಸಿಯದೆ.

ಶ್ರೀನಿವಾಸ ಮಿತ್ತಂತಾಯ.
ಇನ್ನಂಜೆ ತಾ. 26-11-51

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾಕಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3-8-0
ಸಣ್ಣ ಬಾಟ್ಲಿಗೆ ರೂ 2-0-0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್, ಉಡುಪಿ

ಪ್ರವಾಸಿಯ ಪತ್ರಗಳು ೧೬

ಫ್ಲೊಂಟೆನ್ ಬ್ಲೂ ಎಂಬುದರ ಅರ್ಥ ಅತ್ತಿ ಕೇಳಿದಾಗ ಒಬ್ಬೊಬ್ಬರು ಒಂದೊಂದು ಹೇಳಿದರು. ಆದರೆ ನಾನು ತಿಳಿದ ಮಟ್ಟಿಗೆ ಅದು "ನೀಲವಾದ ಒರತೆ" ಎನ್ನಬಹುದು. ವರ್ಸೈಲಿನಂತೆಯೇ ಇದೂ ಒಂದು ಚಿಕ್ಕ ಪಟ್ಟಣ. ವರ್ಸೈಲಿಗಿಂತ ಮುಂಚಿನಿಂದಲೂ ಇಲ್ಲಿರುವ ಅರಮನೆಯು ಫ್ರಾನ್ಸಿನ ರಾಜರು ವಾಸಿಸುತ್ತಿದ್ದರು. ಅದರ ಸುತ್ತುಮುತ್ತ ಅನೇಕ ಮೈಲುಗಳ ವರೆಗೆ ದೊಡ್ಡದಾದ ಕಾಡು ಇದೆ. ಅದರ ವಿಸ್ತೀರ್ಣ 62,500 ಎಕ್ರೆ. ಇಲ್ಲಿ ಮುಂಚಿನಿಂದಲೂ ಅರಸರು ಮತ್ತು ಪೇರಿಸಿನ ದೊಡ್ಡವರು ಬೇಟೆಯಾಡುತ್ತಿದ್ದರು. ಮಧ್ಯದಲ್ಲಿ ಅಲ್ಲಲ್ಲಿ ಬಂಗೆಲ್ಲೋಗಳಿವೆ. ಹೆಚ್ಚಾಗಿ ಆ ಕಾಡಲ್ಲಿ ಓಕ್, ಬರ್ಚ್, ಪೈನ್ ಮೊದಲಾದ ಮರಗಳಿವೆ.

ಪೇರಿಸ್ ಬಿಟ್ಟು ಅಲ್ಲಿಗೆ ಹೋಗುವಾಗ 3, 4 ಮೈಲು ದೂರ ಸೀನ್ ನದಿಯ ಎಡಬದಿಯಲ್ಲೇ ನಮ್ಮ ಬಸ್ಸು ಹೋಗುವುದು. ಸುಮಾರು 100 ಅಡಿ ಅಗಲವಾದ ರಸ್ತೆ. ಇದರ ಬದಿಗೆ ಹೊಳೆಗೆ ತಾಗಿ ಸುಂದರವಾದ ಸಾಲುಮರಗಳಿರುವ ಕಾಲುದಾರಿ. ಅದರ ಬದಿ ಅನೇಕ ಹಳೇ ಪುಸ್ತಕ ಮಾರಾಟದ ಸಣ್ಣಪುಟ್ಟ ಅಂಗಡಿಗಳು. ಎಡಕ್ಕೆ ಹೂವಿನ ಅಂಗಡಿಗಳು, ನಂತರ ಕುದುರೆ ಜೂಜಿನ ಜಾಡು, (Race Course) ದಾಸಿಲಿನಲ್ಲಿ ಆಡುತ್ತಿರುವ ಹೆಂಗಸರ ಟೆನ್ನಿಸ್ ಕೋರ್ಟುಗಳು, ಆಟವನ್ನು ನೋಡಲಿಕ್ಕೆ ಸುತ್ತಲೂ ವೇದಿಕೆಗಳು (Galleries), ಹೊಳೆಬದಿಯಲ್ಲಿ 3, 4 ಮೈಲು ವರೆಗೆ ಬಂದರಿನ ಧಕ್ಕೆಗಳು, ನದಿಯಲ್ಲಿ ಸಣ್ಣ ಹಡಗುಗಳು, ಅಲ್ಲಲ್ಲಿ [illegible] ಗಸಾದ ಸಣ್ಣ ಸಣ್ಣ ಮನೆಗಳು, ಹೀಗೆಯೇ ಕೆಲವು ದೂರ ಹೋದ ಮೇಲೆ ನಗರವನ್ನು ಬಿಟ್ಟು ನಾವು ಹಳ್ಳಿ ನಾಡಿಗೆ ಸೇರುವೆವು. ಎಲ್ಲೆಲ್ಲಿಯೂ ಕಣ್ಣಿಗೆ ಹಸುರಾದ ದೃಶ್ಯ. ರಸ್ತೆಯ ಎರಡೂ ಪಾರ್ಶ್ವಗಳಲ್ಲಿ ಸುಮಾರು 2 ತಿಂಗಳಷ್ಟು ಬೆಳೆದ ಹಸುರಾದ ಗೋಧಿ ಪೈರು. ಊರು ಬೂಡು ಸ್ವಲ್ಪವಾತ್ರ ಎತ್ತರಕ್ಕಿದ್ದು ಬಹು ದೂರದ ತನಕ ಎಲ್ಲಿ ನೋಡಿದರೂ ಪೈರಿನ ಗದ್ದೆಗಳು ಕಾಣುತ್ತವೆ. ಅಲ್ಲಲ್ಲಿ ಕುದುರೆಗಳಿಂದ ಉಳುವುದನ್ನೂ ಕಾಣಬಹುದು. ಅವರೂಪದಲ್ಲಿ ಟ್ರಕ್ಟರು ಕೂಡಾ ಇದೆ. ಮಧ್ಯೆ ಅಲ್ಲಲ್ಲಿ ಫಾರಾಕನದ ದೊಡ್ಡದೊಡ್ಡ ಮನೆಗಳು. ಅಲ್ಲಲ್ಲಿ ರೈತರ ಸಣ್ಣ ಮನೆಗಳೂ ಕಾಣಿಸುವುವು.

ಸುಮಾರು 15-20 ಮೈಲು ಹೋದ ನಂತರ ರಸ್ತೆಗೆ ಕಾಣುವಂತೆ ಒಂದು ಅರಮನೆ ಸಿಕ್ಕುತ್ತದೆ. ಅದರ ಹೆಸರು Chateau De Gros ಎಂತ. ಅಂದಾಜು 2000 ಎಕ್ರೆಯ ಕಾಡು ಅದರ ಹಿಂಬದಿಯಲ್ಲಿ. ಇಲ್ಲಿ 1ನೇ ನೆಪೋಲಿಯನನು ಜೋಸೆಫಿನಳನ್ನು ಲಗ್ನವಾದಾಗ ಪೇರಿಸಿನ ಶ್ರೀಮಂತರಿಗೆ ಟೀಪಾರ್ಟಿಯನ್ನು ಕೊಟ್ಟನಂತೆ. ಮುಂದೆ ಪ್ರಯಾಣಮಾಡಿ ಕೆಲವುದೂರದ ಕಾಡಿನ ಮಧ್ಯೆ ಹೋಗಿ ಅನಂತರ ಮಧ್ಯಾಹ್ನಕ್ಕೆ ಫ್ಲೊಂಟೆನ್ ಬ್ಲೂ ಪಟ್ಟಣಕ್ಕೆ ಸೇರಿದೆವು. ಈ ದಿನದ ಪ್ರಯಾಣದಲ್ಲಿ ಕೂಡಾ ಮುಂಚಿನ ದಿನ ನನ್ನೊಟ್ಟಿಗೆ ವರ್ಸೈಲಿಗೆ ಹೋದ ನ್ಯೂಯಾರ್ಕಿನ ದಂಪತಿಗಳು ಇದ್ದರು. ಇನ್ನಿರುವವರಲ್ಲಿ ಇಬ್ಬರು ಫ್ರೆಂಚ್ ಕಾಲೇಜು ವಿದ್ಯಾರ್ಥಿಗಳಿದ್ದರು. ಅವರಿಗೆ ಕೆಲವು ಮಟ್ಟಿನ ಇಂಗ್ಲಿಷ್ ಭಾಷೆ ಬರುತ್ತದೆ ಕಾರಣ ಫ್ರಾನ್ಸ್ ದೇಶದ ಸ್ಥಿತಿಗತಿ, ಕಳೆದ ಯುದ್ಧ ಸಮಯದ ಅವರ ಸಂಕಷ್ಟ ತಿಳಿಯಲಾಯಿತು. ಮಧ್ಯಾಹ್ನ ಪಟ್ಟಣ ಸೇರಿದೊಡನೆಯೇ ನಾವೆಲ್ಲರೂ ಒಂದು ಹೊಟೇಲಿಗೆ ಹೋಗಿ ಊಟಮಾಡಿದೆವು. ಅದಕ್ಕೆ ತಗಲಿದ ಖರ್ಚು 650 ಫ್ರೇಂಕ್ಸು, ಅಂದರೆ [illegible] ಎರಡು ಪಾಲಷ್ಟು ಎನ್ನಬಹುದು.

ಊಟದ ನಂತರ ವಿಶ್ರಾಂತಿಮಾಡಿ ಅಲ್ಲಿಂದ ಸುಮಾರು 1 ಮೈಲು ದೂರವಿರುವ ಅರಮನೆಗೆ ಬಂದೆವು. ಅದರ ಎದುರು ನಮ್ಮೆಲ್ಲರ ಫೋಟೋ ಅಲ್ಲಿಯ ಒಬ್ಬನು ತೆಗೆದು, ಹೊರಡುವ ಮೊದಲೇ ನಮಗೆ ವಿಕ್ರಯಿಸಿದ ಕಾರಣ ಆ ಊರಿಗೆ ನಾವು ಹೋದ ರಿಕಾರ್ಡ ನಮ್ಮಲ್ಲಿ ಸೇರಿತು. ಈ ಫೋಟೋ ತೆಗೆದ ಅಂಗಳವು ಮೂರೂ ಕಡೆಗಳಲ್ಲಿ ಅರಮನೆ ಕಟ್ಟಡಗಳಿದ್ದು ಮಧ್ಯೆ ಸುಮಾರು 2 ಎಕ್ರೆ ವಿಸ್ತೀರ್ಣದ ಖಾಲಿ ಜಾಗ. ಅಲ್ಲಿಯೇ 1814 ನೇ ಇಸವಿಯಲ್ಲಿ 1ನೇ ನೆಪೋಲಿಯನನು ಯುದ್ಧದಲ್ಲಿ ಅಪಜಯ ಹೊಂದಿ ತನ್ನ ಅರಸುತನಕ್ಕೆ ರಾಜಿಕೊಟ್ಟು ಅಲ್ಲಿ ಕೂಡಿದ್ದ ಸೈನಿಕರಿಗೆ ಆ ಬಗೆಯಲ್ಲಿ ಭಾಷಣ ಮಾಡಿದ್ದಾಗಿ ತಿಳಿಯಿತು. ಈ ಅರಮನೆಯಲ್ಲಿ ಕೂಡಾ ಮುಂಚೆ ಅನೇಕ ರಾಜರು ವಾಸಿಸುತ್ತಿದ್ದರು. ನೆಪೋಲಿಯನ್ ಕೂಡಾ ಅಲ್ಲಿ ಆಲುವಾಗ ಹೆಚ್ಚಾಗಿ ವಾಸಿಸುತಿದ್ದ. ಆದುದರಿಂದ ಲೇಸವಾಗಿ ನೋಡುವವರಿಗೆ ಅದರ ಪ್ರಾಮುಖ್ಯತೆ ಅವಸಿದ್ಧ ಕೆಲವು ಕೋಣೆಗಳ ವಿಷಯ ನಾನು ಈ ಕೆಳಗೆ ಬರೆಯುವಾಗ ಅದು ಸ್ಪಷ್ಟವಾಗುವುದು. ಈ ಅರಮನೆಯನ್ನು 12ನೇ ಶತಮಾನದಲ್ಲಿ ಕಟ್ಟಲಿಕ್ಕೆ ಸುರುಮಾಡಿ 19 ನೇ ಶತಮಾನದ ವರೆಗೂ ಅಲ್ಲಲ್ಲಿ ಕಟ್ಟುವುದು, ದುರಸ್ತಿ ಮಾಡುವುದಿತ್ತು. ಇದು ವರ್ಸೈಲಿಗೆ ಎರಡನೇದು. ಇಲ್ಲಿ ಕೂಡಾ ಪ್ರತಿ ಒಂದು ಕೋಣೆಯಲ್ಲಿ ಅನೇಕ ಚಿತ್ರಕಾರರ ತೈಲಚಿತ್ರಗಳು, [illegible] ಪಟಗಳು [tapestries] ಇವೆ. ಹೆಚ್ಚಿನಭಾಗ ಸುಮಾರು 1528ರಲ್ಲಿ ಆಳುತ್ತಿದ್ದ 1ನೇ ಫ್ರಾನ್ಸಿಸ್‌ನ ಕಾಲದಲ್ಲಿ ಕಟ್ಟಲಿಕ್ಕೆ ಸುರುಮಾಡಿ Renaissance styleನಲ್ಲಿ ಕಟ್ಟಿಸಿದ್ದು. ಅದಕ್ಕೆ ಇಟಲಿಯಿಂದ ಅನೇಕ ಪ್ರಸಿದ್ಧರನ್ನು ಕರೆತಂದಿದ್ದರು.

ನಂತರ 1594ರಿಂದ 1610ರ ವರೆಗೆ IV ನೇ ಹೆನ್ರಿ ಅರಸನ ಕಾಲದಲ್ಲಿ ಅನೇಕ ಕಲಾಶಿಲ್ಪಗಳು ನಡೆದು ಅವಕ್ಕೆ ಫ್ರೆಂಚ್ ಮತ್ತು ಫ್ಲೆಮಿಶ್ ಕಲಾಗಾರರು ಕೆಲಸಮಾಡಿದರು. 16 ನೇ ಲೂಯಿ ಅರಸನ ಕಾಲದಲ್ಲಿ ಮೇಲೆ ಹೇಳಿದ ಅವನ ಹೆಂಡತಿಗೋಸ್ಕರ ಕೆಲವು ಕೋಣೆಗಳನ್ನು ದುರಸ್ತುಪಡಿಸಿದನು, ಅದಕ್ಕೆ ಈಗಲೂ Marie Autoinettes boudoir ಎನ್ನುತ್ತಾರೆ. 1ನೇ ನೆಪೋಲಿಯನ್ ಕಾಲದಲ್ಲಿ ಇಡಿ ಅರಮನೆ ದುರಸ್ತಿಪಡಿಸಿ ಹೊಸತಾದ ಮೇಜು ಕುರ್ಚಿ ಸಮಾನು ವಗೈರೆ ಸಾಮಾನುಗಳನ್ನು ತಂದಿರಿಸಿದ್ದರು.

ನಾವು ಅಂಗಣದಿಂದ ಒಳಕ್ಕೆ ಹೋಗುವಾಗ ಬಲಕ್ಕಿರುವ ದೊಡ್ಡ ಭಾಗವನ್ನು XIV ನೇ ಲೂಯಿ ಕಾಲದಿಂದಲೂ ಗಾಯನ ಕಲಿಸುವ ಶಾಲೆ ಮಾಡಿರುತ್ತಾರೆ. ಅವನು ಮರಣ ಪಟ್ಟನಂತರ ಅವನ ಹೆಂಡತಿ ತಾನೇ ಗಾಯನ ತಿಳಿದವಳಾಗಿ ಆ ಶಾಲೆಯನ್ನು ತೆರೆದು ಅದರ ಮುಖ್ಯ ಉಪಾಧ್ಯಾಯಿನಿಯಾಗಿ ಕಲಿಸುತ್ತಿದ್ದಳಂತೆ ನಮಗೆ ತಿಳಿಯಬಂತು.

ಲೂಯಿ ಫಿಲಿಪ್, ಅನಂತರ 3ನೇ ನೆಪೋಲಿಯನ್ ಇವರ ಕಾಲದ ಕಟ್ಟಡಗಳು ಮತ್ತು ಕಲಾ ಕೆಲಸಗಳು ಕೂಡಾ ಇಲ್ಲಿ ಕಾಣಬಹುದು. ಹೀಗೆ ಫ್ರಾನ್ಸ್ ದೇಶದ ಅನೇಕ ಶತಮಾನಗಳ ಕಲೆಯ ವಿಷಯವಾಗಿ ಈ ಅರಮನೆಯಲ್ಲಿ ತಿಳಿಯುವಷ್ಟು ವಿಚಾರವಿದೆ.

ಮೊದಲು ಕಟ್ಟೋಣದ ಹಿಂದಿನ ಅಂಶಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿಂದ ಮುಂದಕ್ಕೆ ನಮಗೆ ತೋರಿಸಿದ್ದು. ಹಿಂದಿನ ಅಂಶದ ಬಲಭಾಗದಲ್ಲಿ ದೊಡ್ಡ ಒಂದು ಇಂಗ್ಲಿಷ್ ಕ್ರಮದ ಹೂವಿನ ತೋಟ. ಅದರ ಎದುರು ಅನೇಕ ಮೀನಿರುವ ದೊಡ್ಡ ಒಂದು ಕೆರೆ, ಈ ಮೀನುಗಳು ಹೊಸತಾಗಿ ಹಾಕಿದವು. ಯುದ್ಧಕಾಲದಲ್ಲಿ ಅನೇಕವರ್ಷ ಈ ಅರಮನೆಯಲ್ಲಿ ಜರ್ಮನ್ ಸೈನಿಕರಿದ್ದು ಅಲ್ಲಿದ್ದ ಮೀನು ತಿಂದು ನಾಶಮಾಡಿದರಂತೆ. ಈ ಕೆರೆಯ ಎದುರಿರುವ ಚಿನ್ನದ ಬಾಗಿಲೆಂಬ [Golden gate] ಬಾಗಿಲಿನಿಂದ ಅರಮನೆಯ ಒಳಕ್ಕೆ ಪ್ರವೇಶಿಸಿ ಒಂದೊಂದೇ ಕೋಣೆಯನ್ನು ನೋಡಿದೆವು.

ಮೊದಲಿನ ಕೋಣೆಯಲ್ಲಿ 1ನೇ ಫ್ರಾನ್ಸಿಸ್ ಅರಸನ ದೊಡ್ಡ ಪ್ರತಿಮೆ [Statue]. ಇನ್ನೊಂದರಲ್ಲಿ 1ನೇ ನೆಪೋಲಿಯನನ ಟೋಪಿ [Hat]. ಅವನಿಗೆ ಪಟ್ಟಾಭಿಷೇಕವಾದ ದೊಡ್ಡ ತೈಲಚಿತ್ರ. ಅವನ ಎರಡನೇ ಹೆಂಡತಿ ಮೇರಿಲೂಯಿಯ ಚಿತ್ರ. ಇನ್ನೊಂದು ಕೋಣೆ ಪೋಪ್ ಎಂಟೊಯ್ನೆಟಲು ಮಲಗುತ್ತಿದ್ದ ಕೋಣೆ, ಮಲಗಿದ ಮಂಚ ಮತ್ತು ಹಾಸಿಗೆ. ಅದರ ಸಮೀಪದಲ್ಲಿ ಅವಳಿಗೆ ಮೊದಲು ಮಗು ಹುಟ್ಟಿದಾಗ ಪೇರಿಸ ನಗರವು ಕೊಟ್ಟ ತೊಟ್ಟಿಲು, ಹೀಗೆ 4 ಕೋಣೆಗಳು ಒಂದು ಭಾಗದಲ್ಲಿ.

[ವಿಚಾರವಾಣಿ] ಕೆ. ಆರ್. ಕಾರಂತ

[ಮುಂದರಿಯುವುದು.]

NOTICE

In the Court of the District Munsif of Kasaragod

O. S. No. 347/1951

Shankernarayana Kadambalithaya — — Plaintiff

vs.

1 Balakrishna Hebbara son of Venkatramana Hebbara, 2 Devappa Naika son of Boleya Naika, 3 Malingu Naika son of Kukka Naika— the defendants 1 and 3 reside at Kallade and the 2nd defendant at Mooduvathmoole in Adoor II village of Kasaragod Taluk —Defendants.

The Defendants take notice that the above suit for redemption of the arwar deed for Rs. 500/- dated 5-4-1897 and deed of further charge for Rs. 100- dated 1-7-1908, for damages and for partition of the plaint properties stands posted to 4-12-1951. If the defendants fail to appear at 11 A. M. before the above Court on that day the suit will be decreed exparte.

Sd. M. A. Krishna Rao,
Advocate for Plaintiff.

Kasaragod, 23-11-1951.

ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ಶಾಲಾ ಲೈಬ್ರರಿಗಳಿಗೆ ಯೋಗ್ಯವಾದ ನಾನಾ ಬಗೆಯ ಕೃತಿಗಳು!

ಭಿರುಬಾವಳಿ	0	3	0	ಕಾಲವೇ ಬದಲಾಗಿದೆ	0	4	0
ಹೈದರಾಬಾದ್ ವಿಜಯ	0	4	0	ಭಾರತದ ಸಾಹಿತ್ಯ ಕಲೆಗಳು	0	4	0
ಗಾದೆಯ ಗಾಂಧಿ	0	3	0	ಸ್ವಾತಂತ್ರ್ಯ ಬೇಕೆ?	0	4	0
ಶಾಂತಿಯ ಮಡಿಲಿನಲ್ಲಿ	0	3	0	ಹಂಬಲ	0	4	0
ಬಲಿಪೀಠದಲ್ಲಿ	0	5	0	ಭಾರತಚಿತ್ರದ ಅಂಚೆಚೀಟುಗಳು	0	3	0
ಅಗಲಿದ ಆತ್ಮ ಸರೋಜಿನಿ	0	3	0	ತ್ರಿಶೂಲ	0	5	0
ನನ್ನ ಹೆಂಡತಿ	0	3	0	ಪುಸ್ತಕಪುರಾಣ	0	4	0
ಪುಣ್ಯಫಲ	0	4	0	ಹಳ್ಳಿಯಲ್ಲಿ ನಡೆದ ನಾಟಕ	0	3	0
ಸುಖದಾರಿ	0	3	0	ನೆರೆಯ ಗಾಂಧಾರ	0	3	0
ಸುಕನ್ಯಾ	0	3	0	ಪೂರ್ತಿನಯುಗದ ಮಹಾಪ್ರಭಾವ	0	3	0
ಪಂಚಮುಖಿ	0	4	0	ವಿಜ್ಞಾನದ ಬೆಳವಣಿಗೆ	0	4	0
ಜಾತೀಭೂತಕ್ಕೆ ಬಲಿ	0	3	0	ಡಾ. ಹರ್ಡೀಕರ್	0	5	0
ಜನಸೇವೆಯ ಸೋಗಿನಲ್ಲಿ	0	3	0	ತಂಗಿನ ಕವರು	0	6	0
ನಾ ಕಂಡ ಅವಳು	0	3	0	ಪ್ರಾಯಶ್ಚಿತ್ತ	0	3	0
ತ್ರಿವೇಣಿ	0	3	0	ಪ್ರಭಾ	0	3	0
ನಿಲುವಂಗಿ	0	4	0	ತವಗಳ ಸಾಗಾಟ	0	12	0
ಬಾಡಿಗೆಯ ಮನೆ	0	3	0	ಪುಷ್ಪಲೋಕ	0	6	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0	ಮನೆಹೊರಗಿನ ಮಹಾಜೀವಿಗಳು	0	5	0
ದೇವರ ನಾಮ ಮತ್ತು ಸಾಧನೆ	0	3	0	ಘಂಟಮಾರಾ ಆಭಾಗಗಳು	2	0	0
ಎರಡು ಕತೆಗಳು	0	3	0	ದೂಪಾರ್ಟ	0	4	0
ಸರಸ-ವಿರಸ	0	3	0	ಭಾರತದ ರಾಷ್ಟ್ರಗೀತ	0	3	0
ಹೃದಯೇಶ್ವರಿ	0	4	0	ನಮ್ಮ ಬಹು ದೊಡ್ಡ ಶತ್ರು	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0	ಕೈಲಾಸ	0	3	0
ನುಡಿಮುತ್ತುಗಳು ೧, ೨, ೩	0	12	0	ಚೌತಿ	0	4	0
ಕುಲವಿಲ್ಲದ ಹೆಣ್ಣು	1	8	0	ಕತ್ತು ಕೊಯ್ದು ವರಾರು?	0	5	0
ಕವರು ಮನೆಯಿಂದ	0	4	0	ಸಮಾಜದ ಅಗಿಕಂಡ	0	4	0
ಭಾಗ್ಯಲಕ್ಷ್ಮಿ	1	4	0	ಬೆಳ್ಳಿಹಬ್ಬ	0	4	0
ಯುಗವಾಣಿ	0	8	0	ಉಷಾ	0	4	0
ಸ್ತ್ರೀ ಹೃದಯ	0	4	0	ವಿಧಿಲೀಲೆ	0	4	0
ದ್ವೇಷ	0	3	0	ಪರಮಾಣು ಪ್ರಪಂಚ	0	4	0
ಎರಡು ಏಕಾಂಕ ನಾಟಕಗಳು	0	4	0	ನೀತಿ ವಿನೋದ ಕತೆಗಳು	0	12	0
ಪ್ರಜಾಪ್ರಭುತ್ವವನ್ನು ಕುರಿತು	0	8	0	ಸಾಹಸ ಭೀಮ ವಿಜಯ	0	8	0
ಕಲಾವಿದನ ದಿನಚರಿ	0	3	0	ಭಾರತದ ಗುರುಕುಲ	0	6	0
ಆಧುನಿಕ ಭಾರತ	0	4	0	ಲಕ್ಷ್ಮಿಪತಿ	0	6	0
				ಭರತೇಶ ದಿಗ್ವಿಜಯ	0	8	0

ರೂ. ೩೪ರ ಪುಸ್ತಕಗಳನ್ನು ರೂ ೨೦/ಕ್ಕೆ ಕೊಡಲಾಗುವುದು

ವ್ಯಾಪಾರಿಗಳಿಗೆ ಧಾರಾಳ ಕಮಿಶನ್. ವಿವರವಾದ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.
Moolky, S K

ಮತಗಟ್ಟೆಗಳ ವ್ಯವಸ್ಥೆ

ಈ ಸಲದ ಚುನಾವಣೆಗಳು ಹಿಂದಿನಂತೆ ಅಲ್ಲ ವಯಸ್ಕರಿಗೆಲ್ಲ ಮತಾಧಿಕಾರವಿರುವುದರಿಂದ ಚುನಾವಣೆಯಲ್ಲಿ ಅನ್ಯಾಯ, ಪಕ್ಷಪಾತಗಳು ಆಗದಂತೆ ಶಕ್ಯ ಏರ್ಪಾಡುಗಳನ್ನು ಮಾಡಿದೆ. ಮತಗಟ್ಟೆಗಳ ಸುತ್ತುಮುತ್ತು ಶಾಂತತೆಯನ್ನು ಕಾಯ್ದುಕೊಳ್ಳಲು ಮುಂಜಾಗ್ರತೆಯನ್ನು ವಹಿಸಲಾಗುವುದು ಚುನಾವಣೆಗೆ ಸಂಬಂಧಿಸಿದ ಅಪರಾಧಗಳು ಸಂಭವಿಸದಂತೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿರುತ್ತದೆ.

ಸಾಮಾನ್ಯವಾಗಿ ಒಂದು ಮತದಾರ ಸಂಘದಲ್ಲಿ ಸುಮಾರು ಒಂದು ಸಾವಿರ ಮತದಾರರಿಗೋಸ್ಕರ ಒಂದೊಂದು ಮತಗಟ್ಟೆಯಂತೆ ಅವಶ್ಯಕವಾದ ಮತಗಟ್ಟೆಗಳನ್ನು ರಚಿಸಿದ್ದಾರೆ. ಹೀಗಿರುತ್ತ ಒಂದು ಮತದಾರ ಸಂಘಕ್ಕೆ ಸುಮಾರು ೮೦-೯೦ರಷ್ಟು ಮತಗಟ್ಟೆಗಳಿರುತ್ತವೆ. ಪ್ರತಿಯೊಂದು ಜಿಲ್ಲೆಯ ಮತದಾರ ಸಂಘಗಳನ್ನು ಕುರಿತು ಒಂದೊಂದಕ್ಕೆ ಎಷ್ಟೆಷ್ಟು ಮತಗಟ್ಟೆಗಳಿರುವವು. ಹಾಗೂ ಅವು ಯಾವ ಯಾವ ಊರಲ್ಲಿ ಎಲ್ಲಿರುವವು ಎಂಬುದನ್ನು ಪ್ರತಿಯೊಬ್ಬ ಹುರಿಯಾಳು ಅಥವಾ ಆತನ ಪ್ರತಿನಿಧಿ(ಏಜಂಟ)ಗಳು ಬೇಗ ತಿಳಿದುಕೊಳ್ಳಬೇಕು. ಕಲೆಕ್ಟರ ಕಚೇರಿಯಲ್ಲಿ ಪ್ರಚಾರಾಧಿಕಾರಿಗಳಿಂದ (Publicity officer) ಅಥವಾ ಮಾಮಲೇದಾರ ಕಚೇರಿಯಿಂದ ಈ ವಿವರವನ್ನು ತಿಳಿಯಬಹುದು ಕೆ. ಪಿ. ಸಿ. ಸಿ. ಆಫೀಸಿನ ಪ್ರಚಾರ ಶಾಖೆಯಲ್ಲಿಯೂ ಕಾಂಗ್ರೆಸಿನ ಹುರಿಯಾಳುಗಳಿಗೆ ಈ ಮಾಹಿತಿಯನ್ನು ಕೊಡಲಾಗುವುದು

ಪ್ರತಿಯೊಬ್ಬ ಹುರಿಯಾಳಿಗೆ ಒಂದು ಮತಗಟ್ಟೆಯಲ್ಲಿ ತನ್ನ ಬಗ್ಗೆ ವ್ಯವಸ್ಥಿತವಾಗಿ ಕೆಲಸ ನಡೆಸಲು ೮-೧೦ ಜನರು ಬೇಕೆಂದು ಲೆಕ್ಕ ಹಾಕಿದರೆ ಆತನ ಇಡಿಯ ಮತದಾರ ಸಂಘದಲ್ಲಿ ಆತನಿಗಾಗಿ ದುಡಿಯುವವರು ಸುಮಾರು ೬೦೦ ಜನರಾದರೂ ಬೇಕೆಂಬುದನ್ನು ಮರೆಯಲಾಗದು. ಕಾಂಗ್ರೆಸ್ ಹುರಿಯಾಳುಗಳು ಈ ಮಹತ್ವದ ಮಾತನ್ನು ಚೆನ್ನಾಗಿ ಲಕ್ಷಿಸಬೇಕು. ಈ ಕೆಲಸಗಾರರಿಗೆಲ್ಲ ಚುನಾವಣೆಯ ನಿಯಮ ನಿರ್ಬಂಧಗಳನ್ನು ತಿಳಿಸುವ ಅಗತ್ಯವಿದೆ.

ಮತಗಟ್ಟೆಯ ಕೇಂದ್ರದಿಂದ ಒಂದು ನೂರು ಯಾರ್ಡುಗಳ ಹದ್ದಿನಲ್ಲಿ ಯಾರು ಯಾವ ವಿವಿಧ ಮತಯಾಚನೆಯ ಕಾರ್ಯವನ್ನು ಮಾಡಲಾಗದು. ಇಂತಹ ಹುರಿಯಾಳಿಗೆ ಮತ ಕೊಡಿರಿ, ಇಂತಹರಿಗೆ ಬೇಡ ಎಂಬ ಅರ್ಥದ ಮಾತುಗಳನ್ನು ಆ ಹದ್ದಿನಲ್ಲಿ ಆಡಲಾಗದು. ಯಾವ ಮತದಾರನಿಗೂ ಮತದಾನ ಮಾಡುವದೇ ಬೇಡೆಂದು ಸಹ ಹೇಳಬಾರದು ಹುರಿಯಾಳುಗಳ ಚುನಾವಣೆಯ ಪ್ರಚಾರಕ್ಕೆ ಸಂಬಂಧಿಸಿದ ನೋಟೀಸು ಅಥವಾ ಇತರ ಚಿನ್ಹಗಳನ್ನು ಸಹ ಆ ಹದ್ದಿನೊಳಗೆ ಮತದಾರರಿಗೆ ತೋರಿಸಿ ಅವರ ಮನವೊಲಿಸಲು ಪ್ರಯತ್ನಿಸಕೂಡದು. ಹೀಗೆ ಮಾಡುವ ವ್ಯಕ್ತಿಯು ಜನತಾ ಪ್ರಾತಿನಿಧ್ಯ ಶಾಸನದ ೧೩೦ನೆಯ ನಿಯಮದಲ್ಲಿ ಉಲ್ಲೇಖಿಸಿದ ಅಪರಾಧದ ಶಿಕ್ಷೆಗೆ ಗುರಿಯಾಗ ಬೇಕಾಗುವುದು.

ಮತದಾರರು ಮತಗಟ್ಟೆಗೆ ಹೋಗುವ ಪೂರ್ವದಲ್ಲಿ ಮತದಾರರ ಪಟ್ಟಿಯಲ್ಲಿ ಅಥವಾ ಪುಸ್ತಕದಲ್ಲಿ ತಮ್ಮ ಹೆಸರು ಸರಿಯಾಗಿ ಬಂದಿದೆಯೋ ಎಂಬುದನ್ನು ನೋಡಿಕೊಳ್ಳಬೇಕು. ತಮ್ಮ ಅನುಕ್ರಮ ನಂಬರನ್ನು ನೆನಪಿಟ್ಟು ಅಥವಾ ಒಂದು ಚೀಟಿನಲ್ಲಿ ಹಚ್ಚಿಕೊಂಡು ಮತಗಟ್ಟೆಗೆ ಹೋಗುವುದು ಒಳಿತು. ಮತಗಟ್ಟೆಯ ಅಧಿಕಾರಿಗಳು ಮತದಾರರ ಹೆಸರು ಕೇಳಿಕೊಂಡು ಆತನ ನಂಬರನ್ನು ಬರೆದು ಚೀಟಿಯನ್ನು ಕೊಡುವರು ಅದನ್ನು ಪಡೆದ ಬಳಿಕ ಇನ್ನೊಬ್ಬ ಅಧಿಕಾರಿಗಳು ತೋರ್ಬೆರಳಿಗೆ ಅಥವಾ ಹೆಬ್ಬೆರಳಿಗೆ ಮಾಯ್ದು ಅಥವಾ ಅಳಿಸಿ ಹೋಗದ ಬಣ್ಣವನ್ನು ತಾಗಿಸಿ ಮತದಾರನಿಗೆ ಮತಪತ್ರ (Voting Paper)ವನ್ನು ಕೊಡುವರು.

ಪ್ರತಿಯೊಂದು ಮತಗಟ್ಟೆಯಲ್ಲಿ ಮತದಾನದ ಎರಡು ಸ್ಥಳಗಳಿರುತ್ತವೆ. ಮತದಾನವು ಗುಪ್ತವಾಗಿ ನಡೆಯಲಿರುವುದರಿಂದ ಈ ಎರಡೂ ಸ್ಥಳಗಳನ್ನು ದಪ್ಪವಾದ ತೆರೆ (Screen) ಅಥವಾ ಪರದೆಯ ಮರೆಯಲ್ಲಿರಿಸುತ್ತಾರೆ. ಮತದಾರನು ಯಾವ ಮತ ಪೆಟ್ಟಿಗೆಯಲ್ಲಿ ಮತಪತ್ರವನ್ನು ಹಾಕುವನೆಂಬುದನ್ನು ಯಾರೂ ನೋಡದಂತೆ ಗಟ್ಟಿಮುಟ್ಟಾದ ವ್ಯವಸ್ಥೆಯಿದೆ. ಈ ತೆರೆಯ ಮರೆಯ ಮತದಾನದ ಅಂಕಣದಲ್ಲಿ ಅಥವಾ ಸ್ಥಳದಲ್ಲಿ ಮತ ಪೆಟ್ಟಿಗೆಗಳನ್ನು ಇಡುವರು. ಒಟ್ಟಿಗೆ ಆ ಮತದಾರ ಸಂಘದಲ್ಲಿ ಎಷ್ಟು ಹುರಿಯಾಳುಗಳಿರುವರೋ ಅಷ್ಟು ಮತ ಪೆಟ್ಟಿಗೆಗಳನ್ನು ಅಲ್ಲಿ ಕಾಣಬಹುದು. ಈ ಪೆಟ್ಟಿಗೆಗಳು ಒಂದೇ ತರಹದ್ದಿರುತ್ತವೆ. ಬೇರೆ ಬೇರೆ ಬಣ್ಣವು ಇರುವುದಿಲ್ಲ. ಪ್ರತಿಯೊಂದು ಮತಪೆಟ್ಟಿಗೆಯ ಹೊರಗಿನ ಮಗ್ಗುಲು ಮತದಾರನಿಗೆ ಕಾಣುವಂತೆ ಹುರಿಯಾಳಿನ ಚುನಾವಣೆಯ ಚಿನ್ಹವಿದ್ದ ಕಾಗದವನ್ನು ಅಂಟಿಸುತ್ತಾರೆ ಪ್ರತಿಯೊಬ್ಬ ಹುರಿಯಾಳಿನ ಚುನಾವಣೆ ಚಿನ್ಹವಿದ್ದ ಕಾಗದವನ್ನು ಆಯಾ ಹುರಿಯಾಳಿಗೆ ಸಂಬಂಧಿಸಿದ ಮತ ಪೆಟ್ಟಿಗೆಯ ಒಳಮಗ್ಗುಲಲ್ಲಿಯೂ ಅಂಟಿಸಿದ್ದಾರೆ. ಅದಲ್ಲದೆ ಎಲ್ಲ ಹುರಿಯಾಳುಗಳ ಸಮಕ್ಷಮದಲ್ಲಿ ಮತಗಟ್ಟೆಯ ಅಧ್ಯಕ್ಷರು (Presiding Officer) ತಾವು ಸಹಿ ಮಾಡುವುದಲ್ಲದೆ ಎಲ್ಲ ಹುರಿಯಾಳುಗಳ ಅಥವಾ ಅವರ ಪ್ರತಿನಿಧಿ (ಏಜಂಟ)ಗಳ ಸಹಿ ಮಾಡಿಸಿ ಒಂದು ಕಾಗದವನ್ನು ಪೆಟ್ಟಿಗೆಯ ಒಂದು ದುಂಡಗಿನ ತೂತಿನ ಒಳಮಗ್ಗುಲಿಗೆ ಅಂಟಿಸಿ ಅತನನ್ನು ಮುಚ್ಚಿ ಬಂದುಮಾಡುವರು. ಆ ಮೇಲೆ ಮತ ಪೆಟ್ಟಿಗೆಯನ್ನು ಅವರೆಲ್ಲರ ಸಮಕ್ಷಮದಲ್ಲಿ ಮುಚ್ಚಿ ಮುದ್ರಾಬದ್ಧ (ಸೀಲು) ಮಾಡುವರು. ಹೀಗೆ ಸೀಲು(ಮುದ್ರೆ) ಮಾಡಿ ಮುಚ್ಚಿಟ್ಟ ಪೆಟ್ಟಿಗೆಗಳನ್ನು ಒಂದಕ್ಕೊಂದನ್ನು ಹತ್ತಿಸಿ ಸಾಲಾಗಿ ಇಡುವರು. ಅವುಗಳನ್ನೆಲ್ಲ ಭದ್ರವಾಗಿ ಹಗ್ಗದಿಂದ ಸುತ್ತಿ ಬಿಗಿದು ಕಟ್ಟುವರು. ಮತ ಪೆಟ್ಟಿಗೆಗಳನ್ನು ಬಾಗಿಸಲು ಅಥವಾ ಬುಡಮೇಲು ಮಾಡಲು ಎಷ್ಟುಮಾತ್ರಕ್ಕೂ ಸಾಧ್ಯವಾಗ ಬಾರದೆಂದು ಈ ಮುಂಜಾಗ್ರತೆಯನ್ನು ತೆಗೆದುಕೊಳ್ಳುವರು

ಮತಪತ್ರವನ್ನು ಪಡೆದ ಮತದಾರನು ಮತದಾನಸ್ಥಳಕ್ಕೆ ಹೋಗಿ ಅಲ್ಲಿ ಸಾಲಾಗಿರುವ ಮತ ಪೆಟ್ಟಿಗೆಗಳಲ್ಲಿ ತಾನು ಆರಿಸುವ ಹುರಿಯಾಳಿನ ಪೆಟ್ಟಿಗೆ ಯಾವುದೆಂಬುದನ್ನು ಆ ಹುರಿಯಾಳಿನ ಚಿನ್ಹದ ಮೇಲಿನಿಂದ ಸುಲಭವಾಗಿ ಗುರುತಿಸಬಹುದು

ಈ ಸಂಗತಿಯನ್ನು ಮುಂದಾಗಿಯೇ ತಿಳಿದುಕೊಂಡು ಹೋಗುವುದು ಒಳಿತು, ಹುರಿಯಾಳಿನ ಚಿನ್ಹವನ್ನು ನೆನಪಿಡದಿದ್ದರೆ ಮತವು ಬೇರೊಬ್ಬ ಹುರಿಯಾಳಿನ ಪಾಲಿಗೆ ಬೀಳುವ ಸಂಭವವುಂಟು. ಒಂದು ವೇಳೆ ತಮಗೆ ಒಳಗೆ ಹೋದಮೇಲೆ ಸಂದೇಹ ಬಂದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಿ ತಿಳಿದುಕೊಂಡು ಮತದಾನ ಮಾಡಲು ಬರುತ್ತದೆ. ಹುರಿಯಾಳುಗಳು ತಮ್ಮ ಪಕ್ಷದ ಚುನಾವಣೆಯ ಚಿನ್ಹದ ಗುರುತನ್ನು ಮತದಾರರಿಗೆ ಮನದಟ್ಟಾಗುವಂತೆ, ಮರೆಯದಂತೆ ತಿಳಿಸಿ ಸಕ್ಕ ಪ್ರಚಾರ ಮಾಡಬೇಕು. ಹಾಗೆ ಮಾಡಿದ್ದರೆ ನಂತರ ಮರುಗುವ ಪ್ರಸಂಗವು ಬಾರದು.

ಮತದಾನದ ಎರಡು ಸ್ಥಳಗಳಲ್ಲಿ ಒಂದು ಪ್ರಾಂತಿಕ ಶಾಸನ ಸಭೆಯ ಆಯ್ಕೆಗೆ ಸಂಬಂಧಿಸಿದ್ದು ಇನ್ನೊಂದು ಲೋಕಸಭೆ(ಪಾರ್ಲಿಮೆಂಟು)ಗೆ ಸಂಬಂಧಿಸಿದ್ದು ಮತದಾರರಿಗೆ ಮುಂಚೆ ಪ್ರಾಂತಿಕ ಶಾಸನ ಸಭೆಯ ಆಯ್ಕೆಗಾಗಿ ಮತಪತ್ರವನ್ನು ಕೊಡುತ್ತಾರೆ, ಅದನ್ನು ಪಡೆದು ಒಳಗೆ ಹೋಗಿ ತಾವು ಆರಿಸಿದ ಚಿನ್ಹ(ಚಿತ್ರ)ವುಳ್ಳ ಮತಪೆಟ್ಟಿಗೆಯಲ್ಲಿ ಹಾಕಬೇಕು. ಮತಪತ್ರವು ಸಣ್ಣದಾಗಿರುವುದರಿಂದ ಅದನ್ನು ಸುಲಭವಾಗಿ ಪೆಟ್ಟಿಗೆಯಲ್ಲಿ ಸೇರಿಸಬಹುದು.

ಹೀಗೆ ಶಾಸನಸಭೆಯ ಹುರಿಯಾಳಿಗೆ ಮತದಾನ ಮಾಡಿದ ಮತದಾರನು ಇನ್ನೊಂದು ಬಾಗಿಲಿನಿಂದ (ಮತದಾನ ಸ್ಥಳಕ್ಕೆ ಎರಡು ದ್ವಾರಗಳು) ಹೊರಗೆ ಬಂದು ಅಲ್ಲಿರುವ ಅಧಿಕಾರಿಗಳಿಂದ ಲೋಕ ಸಭೆಯ ಆಯ್ಕೆಗಾಗಿ ಮತ ಪತ್ರವನ್ನು ಪಡೆಯಬೇಕು. ಆ ಮೇಲೆ ಲೋಕ ಸಭೆಯ ಮತದಾನ ಸ್ಥಳದೊಳಗೆ ಹೋಗಿ ತಾನು ಆರಿಸಿದ ಚುನಾವಣೆಯ ಚಿನ್ಹ(ಚಿತ್ರ)ವುಳ್ಳ ಪೆಟ್ಟಿಗೆಯಲ್ಲಿ ಮತಪತ್ರವನ್ನು ಹಾಕಿ ಬರಬೇಕು.

[ಕರ್ನಾಟಕ ಪ್ರದೇಶ ಕಾಂಗ್ರೆಸ್ ಚುನಾವಣಾ ಪ್ರಚಾರ ಶಾಖೆಯಿಂದ]

ಹುಬ್ಬಳ್ಳಿ ದಿನಾಂಕ ೨೬—೧೧—೫೧.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾಕುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡಿತ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

For energetic and active living, for your mental and physical vigour and strength,

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart.

Price per tin containing 80 tolas Rs. 10-0-0 Postage extra

Stockist for South & N. Kanara & Mysore state: **M. Vinayaka Rao,** Bannanje Road, Udipi. S. K

AYURVEDIC PHARMACY

Baba kali Kamali-Wala RISHIKESH

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಪಟ್ಟಿ ಬದ್ದಿದ್ದರೆ, ಉಷ್ಣದಿಂದ ಜೇಯು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಔಂಸ್ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲೀಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, [illegible] ಮುಂದಾಗಿ ಬಿಳುಪು. ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲು ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳು ಸಾಮಾನ್ಯ [illegible] ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಪಾರಾಲಯ,

ರಥಬೀದಿ, ಉಡುಪಿ

ವಾರದ ಭವಿಷ್ಯ

ತಾರೀಕು 29-11-51 ರಿಂದ — ತಾರೀಕು 5-12-51 ವರೆಗೆ

ಮೇಷ—ಶುಕ್ರವಾರ ಶನಿದಿಂದ ನಿಮಗೆ ಖರ್ಚುಗಳು ಸಂಭವಿಸುವವಾದರೂ ನಿಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಯೇ ಇರುವದು. ಶತ್ರುಜನರನ್ನು ಪರಾಭವಗೊಳಿಸುವಿರಿ. ಸ್ನೇಹಿತರ ಬೆಂಬಲವು ಉತ್ತಮವಾಗಿರುವುದರಿಂದ ಸಾಮಾಜಿಕ ಕ್ಷೇತ್ರದಲ್ಲೂ ರಾಜಕೀಯ ರಂಗದಲ್ಲೂ ಕೀರ್ತಿಭಾಗಿಗಳಾಗುವಿರಿ. ಆದರೆ ಗೃಹಕೃತ್ಯ ವಿಚಾರದಲ್ಲಿ ಮಾತ್ರ ನೆಮ್ಮದಿಯಿರದು. ಸ್ತ್ರೀಯರಿಂದ ಅನಿಷ್ಟ ಸಂಭವಿಸುವ ಯೋಗವಿದೆ ಪ್ರಯಾಣದಲ್ಲಿ ಅನೇಕತರದ ವಿಘ್ನವಿಡ್ಡರಗಳು ಅನಿರೀಕ್ಷಿತ ಖರ್ಚುಗಳು ಸಂಭವಿಸುವವು ವಾರಾಂತ್ಯದ 4 ದಿನಗಳು ಸುಖನೆಮ್ಮದಿಯನ್ನು ಕೊಡಲಿವೆ.

ವೃಷಭ—ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟವುಂಟಾಗುವದು ಆದರೆ ನೌಕರಿ ಜನರಿಗೂ ವಿದ್ಯಾರ್ಥಿಗಳಿಗೂ ಈ ವಾರವು ತುಂಬಾ ಅನುಕೂಲವಿರುವದು. ಪ್ರಯತ್ನಕ್ಕಿಂತ ಅಧಿಕವಾದ ಫಲ ಲಭಿಸುವದು. ಸಮಾಜದಲ್ಲಿ ಸನ್ಮಾನಗಳು ಲಭಿಸುವವು. ದೂರಮಿತ್ರರ ಸಮಾಗಮವಾಗಲಿದೆ ವಾತಕಫಗಳ ದೋಷದಿಂದ ಆರೋಗ್ಯವು ಕೆಡುವುದು. ಸಂಸಾರದಲ್ಲಿ ಕಾಹಿಲೆಗಳು ತಲೆದೋರುವವು. ತಂದೆ ಮಕ್ಕಳೊಳಗೂ ಸ್ವಾಮಿ ಭೃತ್ಯರಲ್ಲೂ ಪರಸ್ಪರ ಕಲಹವಾದೀತು. ವಾರಾದಿಯ ಅನ್ತ್ಯಂತ ದಿನಗಳಲ್ಲಿ ಸ್ತ್ರೀಧನಾಪ್ತಿ ಇಷ್ಟಪ್ರಾಪ್ತಿ ಸುಖವಿಜಯಗಳು ಲಭಿಸಲಿವೆ.

ಮಿಥುನ—ಆಪ್ತೇಷ್ಟರ ವರ್ಗದವರಿಂದ ವಿಯೋಗ ಹೊಂದುವ ನಿಮಗೆ ಮೇಲಿಂದ ಮೇಲೆ ಶತ್ರುಜನರ ಪೀಡೆಯೂ ಪ್ರಾಪ್ತವಾಗಲಿದೆ. ದುರ್ಜನರ ಸಹವಾಸದಿಂದ ಅಪಕೀರ್ತಿ ನಷ್ಟಕಷ್ಟಗಳೂ ಉಂಟಾಗಲಿವೆ. ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವದರಿಂದ ದಿನಗಳೆವುದು ಅತೀವ ದುಸ್ತರವಾಗುವದು. ಸದಾ ಮನಶ್ಚಾಂಚಲ್ಯದಿಂದಾಗಿ ಆದಾವ ಕಾರ್ಯವೂ ನಿಮ್ಮಿಂದ ಸಾಧಿಸಲಾಗದು. ವೈದ್ಯ ಮತ್ತು ವ್ಯಾಪಾರೀ ವರ್ಗದವರಿಗೆ ಪ್ರಯತ್ನಕ್ಕೆ ತಕ್ಕುದಾದ ಫಲ ಲಭಿಸೀತು. ನೌಕರಿ ಜನರಿಗೂ ವಿದ್ಯಾರ್ಥಿಗಳಿಗೂ ತುಂಬಾ ಎಡರುತೊಡರುಗಳು ಹೆಚ್ಚಲಿವೆ. ವಾರಾದಿಯ 3 ದಿನಗಳು ಹೆಚ್ಚಿನ ಅನಿಷ್ಟದಾಯಿಗಳಾಗಲಾರವು.

ಕರ್ಕಟ—ಗ್ರಹಗೋಚರದ ರವಿ ಯೋರ್ವನು ನಿಮಗೀವಾರದಲ್ಲಿ ಪ್ರತಿಕೂಲನಾಗಿ ನಿಂತಿರುವನಾದರೂ ಇತರ ಎಲ್ಲಾ ಗ್ರಹರ ಪೂರ್ಣಾನುಗ್ರಹವು ನಿಮಗಿರುವುದರಿಂದ ಸಮಯವು ಸುಖಮಯವಾಗಲಿದೆ. ನಿಮ್ಮ ಸರ್ವಾಭೀಷ್ಟಗಳೂ ನಿರ್ವಿಘ್ನದಿಂದ ನೆರವೇರುವವು. ಸಕಲರಿಂದಲೂ ಮನ್ನಣೆಯನ್ನು ಪಡೆವಿರಿ. ರವಿಯಂ ಕಂಡ ಗೂಬೆಗಳಂತೆ ಶತ್ರುಜನರು ಅವಿತುಕೊಳ್ಳುವರು. ಸಂತಾನಭಾಗವು ಪರಿಪೂರ್ಣತೆಯಿಂದ ತುಂಬಿತುಳುಕಲಿದೆ.

ಯಾವೊಂದು ಭಾಗದಲ್ಲೂ ನ್ಯೂನತೆಯಿಲ್ಲದ ನಿಮಗೆ ತಾ 29 ಮತ್ತು 5ರಲ್ಲಿ ಪ್ರವಾಸ ಅತಿವ್ಯಯದ ಯೋಗಗಳಿವೆ.

ಸಿಂಹ-ಕಷ್ಟಪಟ್ಟು ದುಡಿದ ಹಣವು ನಿಮ್ಮ ಉಪಯೋಗಕ್ಕೆ ಲಭಿಸಲೊಲ್ಲದು ದೇಹದಲ್ಲಿ ದೌರ್ಬಲ್ಯ ವಾತದೋಷದಿಂದ ಅಲಸ್ಯಗಳು ಕಾಣಿಸಲಿವೆ. ಅನಿರೀಕ್ಷಿತವಾದ ಅನರ್ಥಕಳಗಳು ಪ್ರಾಪ್ತವಾಗಲಿವೆ. ಏತನ್ಮಧ್ಯೆ ಸಿಕ್ಕ ಶಿಕ್ಷವರೊಡನೆ ಸಾಲಕರಗಳನ್ನು ಮಾಡುವಿರಿ. ಮನೆಯವರೊಳಗೆ ಪರಸ್ಪರ ಕಲಹ ಕಚ್ಚಾಟಗಳುಂಟಾಗುವವು. ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ವಿಶೇಷ ಧಕ್ಕೆ ತಗಲಿದೆ, ಸ್ವಜನ ವಿರಹ ಆರ್ಥಿಕ ಬಿಕ್ಕಟ್ಟು ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾದ ನಿಮಗೆ ವಾರಾಂತ್ಯದ 4 ದಿನಗಳು ಹೆಚ್ಚು ಕಷ್ಟದಾಯಿಗಳಾಗವು.

ಕನ್ಯಾ-ಪಿತ್ತವಾತ ಪ್ರಕೋಪದಿಂದಾಗಿ ನಿಮ್ಮ ದೇಹದಲ್ಲಿ ಒಂದಿಲ್ಲೊಂದು ಕಾಹಿಲೆಯು ತಪ್ಪಲೊಲ್ಲದು. ಮತ್ತು ಆಕಸ್ಮಿಕ ಅವಘಡಾದಿಗಳೂ ಸಂಭವಿಸುವ ಯೋಗವಿದೆ. ಆದರೆ ಇತರ ಭಾಗದಲ್ಲಿ ನಿಮಗೀಗೂ ಕೊರತೆ ಕಾಣಿಸದು. ಸದುದ್ಯಮ, ಉದ್ಯಮಕ್ಕೆ ತಕ್ಕುದಾದ ಫಲ ಮಹಾಜನರ ನೆರವು ಸಮಾಜದಲ್ಲಿ ಗೌರವಾದರ ಇತ್ಯಾದಿಗಳು ನಿಷ್ಫಲವಾಗಿ ಲಭಿಸುವವು ಸಾಂಸಾರಿಕ ತಾಪತ್ರಯಗಳೆಲ್ಲವೂ ತಾನಾಗಿ ಶಾಂತವಾಗುವವು. ವಿದ್ಯೋಪಜೀವಿಗಳು ವೈದ್ಯ ವ್ಯಾಪಾರಿಗಳು ಇವರಿಗೆ ನಿರೀಕ್ಷೆಗಿಂತ ಅಧಿಕವಾದ ಫಲಲಾಭವಿದೆ ತಾ 29-5ರಲ್ಲಿ ನಿಮ್ಮ ಸಂಕಲ್ಪಗಳು ಕೊನೆಗೊಂದುವವು.

ತುಲಾ:-ಸ್ವಂತ ನಿಮ್ಮ ದೈವವು ಸಂಪೂರ್ಣ ವಿಮುಖವಾಗಿರುವುದು ಕನಸಿನಲ್ಲೂ ನೆನೆಸದ ಶೋಕತಾಪಗಳು ಆಕಸ್ಮಿಕವಾಗಿ ಪ್ರಾಪ್ತವಾಗುವವು ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆಯುಳಿಸಿ ಕೊಳ್ಳುವದು ದುಸ್ತರವಾದೀತು. ನಿಷ್ಕಾರಣವಾಗಿ ಜನರೊಡನೆ ನಿಷ್ಠುರ ಕಲಹಗಳಾಗಲಿವೆ. ತನುಮನಗಳಿಗೆ ಈಪತ್ತು ಸುಖಶಾಂತಿ ಯಿದೆಂದರೆ ತಪ್ಪಾಗದು. ಉದ್ಯೋಗಿಗಳು ಅಧಿಕಾರಿ ವರ್ಗದವರ ಕೋಪಕ್ಕೆ ಸಿಲುಕಲಿರುವರು, ಕಾಯಕಷ್ಟ ಜೀವಿಗಳಿಗೂ ಕಾಲಕಳೆವುದು ಅತೀವ ದುಸ್ಸಹವೆನಿಸೀತು. ತಾ 30-1 ಹೆಚ್ಚಿನ ಕಷ್ಟದಾಯಿಯಾಗದು.

ವೃಶ್ಚಿಕ:-ನಿಮ್ಮ ಅದೃಷ್ಟವು ಅತೀವ ಉತ್ತಮಸ್ಥಿತಿಗೆ ಬಂದಿರುತ್ತದೆ. ಈ ವಾರದಲ್ಲಿ ಕೋಮಲಿಖದಿಂದ ಅಭಿವೃದ್ಧಿಯನ್ನೈದುವಿರಿ. ಮಹತ್ಕಾರ್ಯಗಳನ್ನು ಅನಾಯಾಸದಿಂದ ಸಾಧಿಸಿ ಜನತೆಯಲ್ಲಿ ಹೆಚ್ಚಿನ ಕೀರ್ತಿ ಸಂಪಾದಿಸುವಿರಿ. ಆರೋಗ್ಯವು ಚೆನ್ನಾಗಿರುವದು. ಆರ್ಥಿಕದ ಪರಿಸ್ಥಿತಿಯಲ್ಲಿ ತುಂಬಾ ಸುಧಾರಣೆ ಹೊಂದುವಿರಿ. ಆಪ್ತೇಷ್ಟರಿಂದಲೂ ಬಂಧು ಬಾಂಧವರಿಂದಲೂ ಕೋಪಾದ ನಿಮಗೆ ತಾ 29-2 3-4 ಈ ದಿನಗಳಲ್ಲಿ ವಿಜಯ ಲಾಭ ಗೌರವಾದಿಗಳು ಲಭಿಸುವವು.

ಧನು:-ಕಷ್ಟ ಪರಂಪರೆಗಳಲ್ಲಿ ಸಿಲುಕಿ ಪೇಚಾಡುತ್ತಿದ್ದ ನಿಮಗೆ ಯಾವ ಭಾಗದಲ್ಲಿ ನೋಡಿದರೂ ಶ್ರೇಯಸ್ಸು ಕಾಣದು. ಸಂಸಾರದಲ್ಲಿನ ತಾಪತ್ರಯಗಳು ದಿನೇ ದಿನೇ ಹೆಚ್ಚುವವು. ದೇಹದಲ್ಲಿನ ಆರೋಗ್ಯವು ಸರಿಯಿರಲಾರದು. ವಿಪಕ್ಷೀಯರು ಶಕ್ತಿಮೀರಿ ಪ್ರತೀಕಾರ ಮಾಡುವರು. ಇಷ್ಟಕಲ್ಲದ ಹಲವಾರು ಖರ್ಚುಗಳನ್ನು ಪೂರೈಸಲು ನಿಮ್ಮ ಅಲ್ಪಾದಾಯವು ಸಾಕಾಗಲೊಲ್ಲದು. ಆಪ್ತೇಷ್ಟರ ವಿರಹದಿಂದ ಚಿಂತೆಗೀಡಾಗುವಿರಿ. ದುಃಖದಾಯಿಯಾದ ಈ ವಾರದಲ್ಲಿ ತಾ 30 \[5 ಕೊಂಚ ಆಶಾದಾಯಕಗಳಾಗಿವೆ

ಮಕರ:-ನಿನ್ನ ಕಾರಣದಿಂದ ಹಿತೈಷಿಕರೊಡನೆ ಜಗಳವಾಗುವುದು. ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವ ಕಾರಣ ದಿನಗಳೆಯಲು ಹಿರಿಯರ ಕೂಡೆ ಸಾಲಮಾಡಬೇಕಾಗುವದು. ಹೆಚ್ಚಿನ ನಿಮ್ಮ ಕಾರ್ಯಗಳು ಶತ್ರುಜನರ ಪೀಡೆಯಿಂದಾಗಿ ಅರ್ಧದಲ್ಲೇ ನಿಲ್ಲುವವು. ವ್ಯಾಪಾರ ವ್ಯವಹಾರ ಉದ್ಯೋಗಾದಿಗಳಲ್ಲಿ ಹೆಚ್ಚಿನ ನಷ್ಟವುಂಟಾಗಲಿದೆ. ದಿನದಿಂದ ದಿನಕ್ಕೆ ದೇಹದಲ್ಲಿ ದೌರ್ಬಲ್ಯ ಹೆಚ್ಚುವದು. ಗುರುಹಿರಿಯರಲ್ಲಿ ತಿರಸ್ಕಾರ ಧರ್ಮಕರ್ಮಗಳಲ್ಲಿ ಅನಾದರ ಬುದ್ಧಿಯು ಹೆಚ್ಚಲಿದೆ. ತಾ 29-23-4 ಹೆಚ್ಚಿನ ಕಷ್ಟಕಾರಿಯಾಗಿ ಪರಿಣಮಿಸದು.

ಕುಂಭ-ಅನ್ಯಮಗಳಿರಾದ ಶನ್ಯಂಗಾರಕನುನಾನಾ ತರದ ಪೀಡೆಯನ್ನು ಕೊಡಲಿರುವರು. ಹೆಂಡತಿ ಮಕ್ಕಳ ವಿರಹ ದೇಹಾಲಸ್ಯ ವಿಪಕ್ಷೀಯರಿಂದ ಕೋಪಗಳು ಸಂಭವಿಸುವ ಯೋಗವಿದ್ದರೂ ಧನಭಾಗ್ಯ ಲಾಭಪ್ರದರಾದ ಗುರುಶುಕ್ರರ ಬೆಂಬಲವುಳ್ಳ ನಿಮಗೆ ಯಾವ ತರದ ಅಪಾಯವು ಸಂಭವಿಸದ ನಿಮ್ಮ ಆರ್ಥಿಕ ಭಾಗವು ಹೆಚ್ಚಿನ ಸುಧಾರಣೆ ಹೊಂದುವದು. ಸಾಮಾಜಿಕ ಕಾರ್ಯಗಳಲ್ಲಿ ಮುಂದಾಳಾಗಿ ಕೀರ್ತಿ ಭಾಗಿಗಳಾಗುವಿರಿ. ವಾರದ ಅಂತ್ಯದ ದಿನಗಳು ಪ್ರಶಸ್ತವಿರವು

ಮೀನ:-ಸಂದುಹೋದ ದಿನಗಳಿಗಿಂತ ಇಂದಿನ ವಾರವು ನಿಮಗೆ ಉತ್ತಮವಿರುವದು. ಗೃಹ ತಾಪತ್ರಯಗಳು ಹೆಚ್ಚನಂತ ಕಡಿಮೆಯಾಗುವವು. ಆದರೂ ಆರ್ಥಿಕ ಪರಿಸ್ಥಿತಿಯು ಸುಧಾರಿಸದ ಕಾರಣ ಹಣದ ಅಡಚಣೆಯಿಂದ ಸದಾ ಪೀಡಿತರಾಗುವಿರಿ. ಯಾವ ಉದ್ಯಮವೇ ಇರಲಿ ಹೆರವರ ಸಹಾಯವಿಲ್ಲದೆ ಸ್ವಯಂ ಮಾಡಲು ನಿಮ್ಮವು ತಕ್ಕ ಶಕ್ತಿ ಧೈರ್ಯಗಳಿಲ್ಲವು ಹೆಚ್ಚಿನ ಸಮಯವನ್ನು ಸಂಚಾರದಲ್ಲಿ ಕಳೆಯಬೇಕಾಗುವದು. ವಾರಾಂತ್ಯದ 4ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ ರೂ 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಋತುಸ್ನಾನದಲ್ಲಿ ಸೇವಿಸಬೇಕು.

ಪಥ್ಯ:—ಹೆರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ು ಅಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಮುಲ್ಕಿ ಶ್ಯಾಮರಾವ,—ಮುಲ್ಕಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹುಸನಪ್ಪ ಸಿದ್ಧಲಿಂಗಪ್ಪ ಭಾರಮಸಾಗರ ವಿಜಾಪುರ ಸಂಗಮೇಶ್ವರ ಮೆಡಿಕಲ್ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕಡಿಯಾ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಮೋಸ್ಟು, (ಮಂಗಳೂರು)
ಸ್ವಾಕಿಸ್ಟರು:—ಡಾ। ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31ನೆ ವರ್ಷ

6-12-1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ

ವಾರ್ಷಿಕ ಚಂದಾ
ರೂ 5 12 0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2 0

ವರ್ಷ ೩೧
ವಾರ ೧೩

NAVAYUGA WEEKLY Post Box No. 22 UDIPI.

Vol 31
No. 13

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಕ್ಕಲತನ ಸುಧಾರಣೆ

ಜನತಾ ಸರಕಾರವು ಅಧಿಕಾರಕ್ಕೆ ಬಂದು ಈಗ್ಗೆ ಐದು ವರ್ಷಗಳಾದವು. ಈ ಅವಧಿಯಲ್ಲಿ ಸರಕಾರವು ಎದುರಿಸಿದ ಕಷ್ಟಗಳು ಅಷ್ಟಿಷ್ಟಲ್ಲ. ಎಂಥ ವಿಪತ್ತುಗಳು ಒದಗಿಬಂದರೂ ಲಕ್ಷಿಸದೆ ಅಭಿವೃದ್ಧಿಯೋಜನೆಗಳನ್ನು ಮುಂದುವರಿಸಲಾಗಿದೆ. ಈ ಯೋಜನೆಗಳಿಂದ ಆಹಾರ ತಾಪತ್ರಯವು ದೂರಾಗಿ ಆರ್ಥಿಕ ಪರಿಸ್ಥಿತಿಯು ಸ್ಥಿರವಾಗಿ ಅಭಿವೃದ್ಧಿಕಾರ್ಯವು ಮುಂದುವರಿಯಲು ಸಹಾಯವಾಗಿದೆ.

ಆಹಾರ ಉತ್ಪಾದನೆಯನ್ನು ಅಧಿಕಗೊಳಿಸಲು ಸರಕಾರವು ಅನೇಕ ಯೋಜನೆಗಳನ್ನು ಹಾಕಿಕೊಂಡಿರುವುದು, ೧೯೪೫-೪೬ರಲ್ಲಿ ನೀರಾವರಿ ಯೋಜನೆಗಾಗಿ ಸರಕಾರವು ಒಂದು ಕೋಟಿ ರೂ.ಗಳಿಗಿಂತ ಕಡಿಮೆ ವೆಚ್ಚಮಾಡುತ್ತಿತ್ತು. ೧೯೫೧-೫೨ರ ಆಯವ್ಯಯ ಪಟ್ಟಿಯ ಪ್ರಕಾರ ನೀರಾವರಿ ಯೋಜನೆಗಾಗಿ ಸರಕಾರವು ೧೦ಕೋಟಿ ರೂ.ಗಳಿಗಿಂತ ಅಧಿಕವೆಚ್ಚವನ್ನು ವಹಿಸಲಿದೆ. ಈ ನೀರಾವರಿ ಯೋಜನೆಗಳಿಂದ ೧೦೧ಲಕ್ಷ ಎಕರೆಗಳಿಗೆ ನೀರು ದೊರೆಯುತ್ತದೆ.

ಯಾಂತ್ರಿಕ ಸೌಕರ್ಯಗಳು

ರೈತರಿಗೆ ಬಾಡಿಗೆ ಹಾಗೂ ಕಂತಿನಲ್ಲಿ ಕ್ರಯಕೊಡುವಂತೆ ಪಂಪುಗಳನ್ನೂ ಇಂಜನುಗಳನ್ನೂ ಒದಗಿಸಲಾಗುತ್ತದೆ. ಈ ನಾಲ್ಕು ವರುಷಗಳಲ್ಲಿ ೧೪ಪೆಟ್ರೋಲು ಪಂಪು ಸೆಟ್ಟುಗಳನ್ನು ಮಾರಲಾಗಿದೆ. ೨ ಪೆಟ್ರೋಲ ಸೆಟ್ಟು ಹಾಗೂ ೫೬ ಎಂಜಿನುಗಳನ್ನು ಬಾಡಿಗೆ ಕೊಡಲಾಗಿದೆ. ಇವುಗಳಿಂದ ೩೫೧ ಎಕರೆ ಭೂಮಿಯಲ್ಲಿ ನೀರು ಹಾಯಿಸಲಾಗಿದೆ. ೨೫ಪಂಪುಸೆಟ್ಟುಗಳನ್ನು ಕಂತಿನ ಮೂಲಕ ಬಾಡಿಗೆ ಸಹಿತ ಕ್ರಯ ತೆಗೆದುಕೊಳ್ಳುವ ಪದ್ಧತಿಯಂತೆ ಕೊಡಲಾಗಿದೆ. ಇವುಗಳಿಂದ ೧೫೦ ಎಕರೆಗಳು ನೀರುಣ್ಣುತ್ತವೆ. ಹೀಗೆ ಕೊಟ್ಟ ೯೩ ಆಯಿಲ ಇಂಜನುಗಳಿಂದ ೬೭೫ ಎಕರ ನೀರುಣ್ಣುತ್ತವೆ. ಪಡಭೂಮಿಯು ಸಾಗುವಳಿಗಾಗಿ ೬ಟ್ರಾಕ್ಟರುಗಳನ್ನು ಒದಗಿಸಲಾಗಿದೆ. ಇವುಗಳಿಂದ ೨೫೦೩.೫೭ ಎಕರೆ ಭೂಮಿಯನ್ನು ಉತ್ತಲಾಗಿದೆ. ೭೬.೩ ೮೭ ಎಕರೆಗಳನ್ನು ಕೀಳಲಾಗಿದೆ. ಇದಲ್ಲದೆ ಮೂರು ಬುಲ್‌ಡೋಜರುಗಳು ಕೆಲಸಮಾಡುತ್ತಿವೆ. ಇವುಗಳನ್ನು ಕಡಿಮೆಬಾಡಿಗೆಯಿಂದೆ ರೈತರಿಗೆ ಒದಗಿಸಲಾಗುತ್ತಿದೆ. ಹಾಳು ಭೂಮಿಯ ಸಾಗುವಳಿಗಾಗಿ ಈಗಾಗಲೇ ಪುತ್ತೂರು ತಾಲೂಕಿನ ಮಲೆನಾಡು ಪ್ರದೇಶದಲ್ಲಿ ಒಂದು "ಬುಲ್‌ಗ್ರೇಡರ್" ಯಂತ್ರವನ್ನು ಭೂಮಿಯನ್ನು ಸಮಗೊಳಿಸಲು ಉಪಯೋಗಿಸಲಾಗುತ್ತಿದೆ. ಹೊಸಬಗೆಯ ನೇಗಿಲುಗಳನ್ನು ಉಳಲಿಕ್ಕೆ ಉಪಯೋಗಿಸುವಂತೆ ರೈತರನ್ನು ಪ್ರೋತ್ಸಾಹಿಸಲಾಗಿರುತ್ತದೆ. ಇಂಥ ಹೊಸ ತರದ ೨೫ ನೇಗಿಲುಗಳನ್ನು ರೈತರಿಗೆ ಕ್ರಯಕ್ಕೆ ಒದಗಿಸಲಾಗಿರುತ್ತದೆ.

ಕುಪ್ಪೆ ಗೊಬ್ಬರ ಹಾಗೂ ಎಲಿಗೊಬ್ಬರ

ರೈತರಿಗೆ ಹಾಗೂ ತರಕಾರಿ ಬೆಳೆಯುವವರಿಗೆ ಗೊಬ್ಬರದ ಸೌಕರ್ಯ ಒದಗಿಸಲು ಕಸಕಡ್ಡಿಗಳನ್ನು ಸಂಗ್ರಹಿಸಿ ಗೊಬ್ಬರ ಮಾಡುವ ಯೋಜನೆಯನ್ನು ಸಿದ್ಧಗೊಳಿಸಲಾಯಿತು. ೧೯೫೦-೫೧ರಲ್ಲಿ ಈ ಜಿಲ್ಲೆಗಾಗಿ 3 ಸಾವಿರ ರೂ ಸಹಾಯ ಧನವನ್ನು ಮಂಜೂರು ಮಾಡಲಾಯಿತು. ಒಂದು ಟನ್ ಕುಪ್ಪೆ ಗೊಬ್ಬರಕ್ಕೆ ೧ ರೂ ಯಂತೆ ಸಹಾಯ ಧನ ಹಂಚಲಾಯಿತು. ಗೊಬ್ಬರ ಸಪ್ತಾಹಗಳನ್ನು ಆಚರಿಸಲಾಯಿತು. ಸುಮಾರು ೮೨೩೧ ಮಿಶ್ರ ಗೊಬ್ಬರದ ಹೊಂಡಗಳನ್ನು ಈ ವರ್ಷದಲ್ಲಿ ಅಗೆಯಲಾಗಿರುವುದು. ಇವುಗಳಲ್ಲಿ ಸುಮಾರು ೧೬೫೬, ಟನ್ ಗೊಬ್ಬರ ತಯಾರಾಗಿವೆ. ಪಟ್ಟಣದ ಹೊಲಸು, ಕಸಕಡ್ಡಿ, ಮಲ ಮೂತ್ರಗಳಿಂದ ತಯಾರಾದ ಗೊಬ್ಬರವನ್ನು ಟನ್ನಿಗೆ ರೂ. ೧-೫-೮ರಂತೆ ಮುನಿಸಿಪಾಲಿಟಿಗಳಲ್ಲೂ ಮುಖ್ಯ ಪಂಚಾಯಿತಿ ಪ್ರದೇಶಗಳಲ್ಲೂ ಮಾರಲಾಯಿತು. ನಾಲ್ಕು ವರ್ಷಗಳಲ್ಲಿ ಒಟ್ಟು ೧೩,೯೦೦ ಟನ್ ಕುಪ್ಪೆ ಗೊಬ್ಬರವನ್ನು ತಯಾರಿಸಲಾಗಿದೆ. ೧೯೪೬-೪೭ರಲ್ಲಿ ಸರಕಾರವು ಉಚಿತವಾಗಿ ಗೊಬ್ಬರ ಹಂಚುವ ಯೋಜನೆಯನ್ನು ಮಂಜೂರು ಮಾಡಿತು

ಬೀಜಗಳ ಪೂರೈಕೆ

ಈ ನಾಲ್ಕು ವರುಷಗಳಲ್ಲಿ ಒಟ್ಟು ೩೫೭ ಟನ್ ಸುಧಾರಿಸಿದ ಭತ್ತದ ಬೀಜಗಳನ್ನು ಪೂರೈಸಲಾಗಿದೆ. ಜಿಲ್ಲೆಯಲ್ಲಿ ಎಸ್.ಆರ್. ಬಿ. ಎಂಬ ವಿಶೇಷಜಾತಿಯ ಭತ್ತವನ್ನು ಬೆಳೆಸಲು ಪ್ರಯತ್ನಿಸಲಾಗಿದೆ. ೩೪೫ ರತ್ತಲ ಬೀಜಗಳನ್ನು ರೈತರಿಗೆ ಉಚಿತವಾಗಿ ಹಂಚಲಾಗಿದೆ. ಉತ್ತಮಜಾತಿಯ ಮಾವು, ಸಪೋಟಾ, ಅನಾನಸ್, ಬಾಳೆ ಇತ್ಯಾದಿಗಳ ಸಸಿಗಳನ್ನು ಪ್ರತಿವರ್ಷವೂ ಒದಗಿಸಲಾಗುತ್ತಿದೆ. ಗೆಣಸು, ಮರಗೆಣಸು, ನೇಂದ್ರಬಾಳೆ, ಇತ್ಯಾದಿಗಳನ್ನು ಬೆಳೆಸಲೂ ಸಹಾಯಮಾಡಲಾಗಿದೆ. ೯೫೦ ರೂ. ಬೆಲೆಬಾಳುವ ೯೦೫೦೦ ಗೆಣಸಿನ ಬಳ್ಳಿಗಳ ತುಂಡುಗಳನ್ನು ರೈತರಿಗೆ ಉಚಿತವಾಗಿ ಹಂಚಲಾಗಿದೆ. ೪೦೦ ಎಕರೆ ಭೂಮಿಯಲ್ಲಿ ೧೬೦೦ ಟನ್ ಗೆಣಸು ಬೆಳೆಸುತ್ತಾರೆ.

ಮಾದರಿ ಕೃಷಿಕ್ಷೇತ್ರ

ರೈತರು ಪ್ರತಿ ತಾಲೂಕಿಗೆ ಒಂದರಂತೆ ಮಾದರಿ ಗದ್ದೆಗಳನ್ನು ಏರ್ಪಡಿಸುವಂತೆ ಯೋಜನೆ ಮಾಡಲಾಗಿದೆ. ಒಳ್ಳೇ ಕಬ್ಬುಬೆಳೆಸಿ ಹೆಚ್ಚಿಗೆ ಬೆಲ್ಲ ಉತ್ಪಾದಿಸಲಾಗುತ್ತಿದೆ

ಬೆಳೆಗಳ ಸಂರಕ್ಷಣೆ

ಬೆಳೆಗಳಿಗೆ ಬರುವ ಅನೇಕ ಜಾತಿಯ ರೋಗಗಳ ಹಾವಳಿಯನ್ನು ಬಗೆಬಗೆಯ ಔಷಧ ಪ್ರಯೋಗಗಳಿಂದ ತಡೆಯಲಾಗುತ್ತದೆ. ೧೯೪೯ರಲ್ಲಿ ಸಸ್ಯಸಂರಕ್ಷಣಾ ಯೋಜನೆಯೊಂದನ್ನು ತಯಾರಿಸಲಾಯಿತು ಈ ಯೋಜನೆಯ ಪ್ರಕಾರ ಎಲ್ಲ ಕೃಷಿ ಇಲಾಖೆಯ ಡಿಪೋಗಳಲ್ಲಿಯೂ ಕ್ರಿಮಿನಾಶಕ ಔಷಧಗಳನ್ನು ಪ್ರಯೋಗಿಸುವ ಸಾಧನಗಳು ಸಹಿತ ಸಂಗ್ರಹಿಸಿಡಲಾಗಿದೆ. ಈ ಔಷಧಗಳನ್ನು ರೈತರಿಗೆ ಅರ್ಧ ಬೆಲೆಗೆ ಒದಗಿಸಲಾಗುತ್ತಿದೆ. ಈ ವರೆಗೆ ೨೦ಟನ್ನು ೧೧೭೦ ರತ್ತಲುಗಳಷ್ಟು ಔಷಧಿಯನ್ನು ಮಾರಲಾಗಿದೆ. ೮ ಸಾವಿರ ಎಕ್ರೆಗಳಿಗಿಂತಲೂ ಹೆಚ್ಚಿಗೆ ಆಹಾರ ಧಾನ್ಯಗಳ ಬೆಳೆಗೆ ಈ ಔಷಧವನ್ನು ಪ್ರಯೋಗಿಸಿ ೬೫ ಸಾವಿರ ರೂ. ಬೆಲೆಯ ೨೦೦ ಟನ್ ಧಾನ್ಯ ಉಳಿಸಲಾಗಿದೆ.

ಸಾಲ ಸೌಕರ್ಯ

ಬಡ ರೈತರಿಗೆ ಸುಲಭ ರೀತಿಯಲ್ಲಿ ಸಾಲ ಕೊಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ನಾಲ್ಕು ವರುಷಗಳಲ್ಲಿ ೧೯೨೬೫ ರೂ. ಗಳನ್ನು ಬಡ್ಡಿಯಿಲ್ಲದೆ ಸಾಲವಾಗಿ ರೈತರಿಗೆ ಕೊಡಲಾಗಿರುತ್ತದೆ. ಸಾಗುವಳಿಗೆ ಬೇಕಾದ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಪ್ರತಿಯೊಬ್ಬನಿಗೆ ೧೦೦ರೂ. ವರೆಗೆ ಕೊಡಲಾಗುತ್ತದೆ.

ಉಪಕಸಬುಗಳು

ರೈತರಿಗೆ ಉಪಕಸುಬುಗಳನ್ನು ಒದಗಿಸಿಕೊಡಲು ಜೇನು ಸಾಕುವ ಕೆಲಸವನ್ನು ಕಲಿಸುವ ಏರ್ಪಾಡು ಮಾಡಲಾಗಿರುತ್ತದೆ. ಈ ವರೆಗೆ ಈ ಕೆಲಸ ೭೦೦ ಹಿಡುವಳಿಯಲ್ಲಿ ನಡೆಯುತ್ತದೆ. ಇಲ್ಲಿ ೧೪೦೦೦ ಜೇನು ಹುಟ್ಟುಗಳನ್ನು ಇಡಲಾಗಿದೆ. ಇದರಿಂದ ೫೦ ಸಾವಿರ ರೂ. ಬೆಲೆಬಾಳುವ ೪೦ ಸಾವಿರ ರತ್ತಲು ಜೇನು ತುಪ್ಪ ಈ ನಾಲ್ಕು ವರುಷಗಳಲ್ಲಿ ದೊರೆತಿದೆ

ಕಬ್ಬಿಣ ಸಲಕರಣೆಗಳು

ಕಬ್ಬಿಣ ಹಾಗೂ ಕಬ್ಬಿಣದ ಸರಕುಗಳನ್ನು ರೈತರಿಗೆ ನಿಯಂತ್ರಿತ ಬೆಲೆಗೆ ಒದಗಿಸಲಾಗಿದೆ ಈ ವರೆಗೆ ೩೬೯ ಟನ್ನು ಗಾಡಿ ಪಟ್ಟಿಮನ್ನು ೨೪ ಟನ್ನು ಬಿ ಪಿ ತಗಡುಗಳನ್ನೂ ನಿಯಂತ್ರಿತ ಬೆಲೆಗೆ ಮಾರಲಾಗಿರುತ್ತದೆ. ೫೪ಟನ್ನು ನೇಗಿಲು ಗುಳ ಹಾಗೂ ಸರಳುಗಳೆಂದು ಒದಗಿಸಲಾಗಿದೆ. ಒಟ್ಟು ೧೯,೯೬೮ ರೂ. ಬೆಲೆ ಬಾಳುವ ಕಬ್ಬಿಣವನ್ನು ಮಾರಲಾಗಿದೆ. ಇದಲ್ಲದೆ ೫೪೨೧೫ ರೂ. ಬೆಲೆ ಬಾಳುವ ೨೯೫೧೦ ಹಾರೆ ಇತ್ಯಾದಿ ಸಲಕರಣೆಗಳನ್ನು ನಿಯಂತ್ರಿತ ಬೆಲೆಗೆ ಒದಗಿಸಲಾಗಿರುತ್ತದೆ.

ಸಂಶೋಧನಾ ಕ್ಷೇತ್ರ

ಮಂಗಳೂರಿನ ಸಮೀಪ ಹಣ್ಣುಮತ್ತು ಗೇರು ಬೀಜ ವ್ಯವಸಾಯ ಹಾಗೂ ಪ್ರಯೋಗ ಕ್ಷೇತ್ರವನ್ನು ಸ್ಥಾಪಿಸಲು ನಿಶ್ಚಯಿಸಲಾಗಿದೆ. ಅಧಿಕ ಸಂಶೋಧನಾ ಕ್ಷೇತ್ರವನ್ನು ಪ್ರಾರಂಭಿಸುವ ಯೋಜನೆಯನ್ನು ಮಂಜೂರು ಮಾಡಲಾಗಿದೆ ಮಂಗಳೂರು ಸಮೀಪದಲ್ಲಿ ಭತ್ತದ ಬೆಳೆ ಸುಧಾರಣೆ ಬಗ್ಗೆ ಸಂಶೋಧನೆಯಲ್ಲಿದ್ದ ಸಂಶೋಧನಾ ಕ್ಷೇತ್ರವನ್ನು ವಿಸ್ತರಿಸಲಾಗಿದ್ದು ಕಳೆದ ೫ ವರುಷಗಳಲ್ಲಿ ೫೫,೭೩೫ ರೂ ಗಳಷ್ಟು ಕಂದಾಯವನ್ನು ರಿಯಾಯತಿ ಮಾಡಲಾಗಿದೆ.

(ಕ. ಪ್ರ. ಶಾ.. ...)



ಪ್ರತಿಯೊಬ್ಬನೂ ಓದಬೇಕಾದ ಪವಿತ್ರ ಗ್ರಂಥ
ಬೆಲೆ 0-12-0
ನವಯುಗ ಪುಸ್ತಕ ಭಂಡಾರ
ಉಡುಪಿ

ಪ್ರಜಾಸತ್ತೆ

ಡೆಲಗೇಟ್ ಎಂಬವನಿಗೂ ಪ್ರತಿನಿಧಿಗೂ ಭೇದಗಳಿವೆ. ಯಾವದಾದರೊಂದು ಸಂಘ ಸಂಸ್ಥೆ ಬ್ಯಾಂಕು ಅಥವಾ ಕಂಪೆನಿಯು ಪರವಾಗಿ ಏರ್ಪಡಿಸಲ್ಪಟ್ಟ ಸಭೆಗೆ ಮುಂಚಿತವಾಗಿ ಸೂಚನೆ ಕೊಟ್ಟು ಅಲ್ಲಿ ನಡೆಯತಕ್ಕ ಚರ್ಚೆಯಲ್ಲಿ ಭಾಗವಹಿಸಲು ಅವರ ಪರವಾಗಿ ಒಂದು ಆದರ್ಶ ಮೂರ್ತಿಯನ್ನು ಕಳುಹಿಸಬಹುದು. ಮಜೂರರ ಸಂಘದವರು ಸಂಪುಹೂಡಬೇಕೋ ಬೇಡವೋ ಎಂಬುದರ ತೀರ್ಮಾನಕ್ಕೆ ಡೆಲಗೇಟುಗಳನ್ನು ಅಧಿಕಾರಪತ್ರ (Post card ballot) ಕೊಟ್ಟು ಕಳುಹಿಸುವದುಂಟು ಈ ಕ್ರಮವು ಕೆಲವು ಸಮಯ ಪ್ರಯೋಜನವಾದದ್ದಾದರೂ ಎಲ್ಲಾ ವಿಷಯಗಳಿಗೂ ಆಗದು ಪಾರ್ಲಿಮೆಂಟಿನ ರೀತಿಗಳಿಗೆ ಇದು ಹೇಳಿಸಿದ ಕ್ರಮವಲ್ಲ. ಹಲವು ಹೊಸವಿಚಾರಗಳು ಬರುವದಾದ್ದರಿಂದ ಇದು ಫಲವಿಲ್ಲ. ಮತದಾರರು ಯಾವದಾದರೊಂದೆರಡು ವಿಷಯಗಳ ಕುರಿತು ನಿಶ್ಚಿತ ಅನುಭವ ಕೊಡಬಲ್ಲರೇ ಹೊರ್ತು ಇತರ ವಿಚಾರಗಳಲ್ಲಿ ಸಾಧಾರಣ ಅಂದಾಜಿನ ಅನುಭವ ಮಾತ್ರ ಕೊಟ್ಟಾರು. ಒಳ್ಳೇದಕ್ಕಾಗಲೀ ಕೆಟ್ಟದಕ್ಕಾಗಲೀ ನಾವು ನಮ್ಮ ಪ್ರತಿನಿಧಿಯನ್ನೇ ನಂಬಬೇಕು. ಆ ಕಾರಣದಿಂದ ಮತದಾರರು ಪ್ರತಿನಿಧಿಯನ್ನು ಆರಿಸುವಾಗ ಆತನ ವೈಯಕ್ತಿಕ ಯೋಗ್ಯತೆ ಗುಣನಡತೆಗಳನ್ನು ಚೆನ್ನಾಗಿ ಪರಿಶೀಲಿಸಬೇಕು. ಒಬ್ಬ ಹುರಿಯಾಳು ಯಾವ ಪಕ್ಷಕ್ಕೆ ಸೇರಿರುವನು ಮತ್ತು ಆತನಿಗೆ ಯಾವ ತತ್ವ ಧೋರಣೆ ಅಥವಾ ಒಬ್ಬನಲ್ಲಿ ವಿಶ್ವಾಸವಿರುವುದೆಂಬುದನ್ನು ತಿಳಿಯುವುದಕ್ಕಿಂತ ಆತನ ಗುಣನಡತೆಯನ್ನು ನೋಡುವದು ಉತ್ತಮ. ಪಕ್ಷಗಳನ್ನು ಹೊಂದಿ ಜನರು ಹೆಚ್ಚಾಗಿ ನಡೆಯುವದಾದರೂ ದೊಡ್ಡ ವಿಚಾರಗಳ ಚರ್ಚೆಯ ಸಮಯ ಒಳ್ಳೆ ಮೇಧಾವಿಯೂ ವಿಮರ್ಶನಾಶಕ್ತಿಯುಳ್ಳವನೂ ಮತ್ತು ಧೈರ್ಯ ಸ್ವತಂತ್ರನಾದವನು ವಿಪಕ್ಷದವರನ್ನು ತನ್ನಕಡೆಗೆ ಒಲಿಸುವನು. ಪ್ರತಿನಿಧಿಗಳನ್ನು ಚುನಾಯಿಸುವಾಗ ಏನೂ ತಪ್ಪಿಲ್ಲದೆ ನಮ್ಮನ್ನು ಪ್ರತಿಬಿಂಬಿಸುವವನನ್ನು ಆರಿಸುವೆವೆಂದು ಹೇಳಲು ಭರವಸೆ ಇಲ್ಲವಾದರೂ ಸಾಧಾರಣ ಮಟ್ಟಿಗೆ ನಮ್ಮ ಅನುಭವವನ್ನು ಸ್ಪಷ್ಟೀಕರಿಸುವ ಒಂದು ಮಾದರಿಯ ಕರಡು ಪ್ರತಿನಿಧಿಯನ್ನು ಆರಿಸುವೆವು. ಒಬ್ಬ ಪ್ರತಿನಿಧಿಯು ನಮ್ಮ ಅಭಿಪ್ರಾಯವನ್ನಲ್ಲದಿದ್ದರೂ ಇತರ ಮತಾನುಸಾರವಾಗಿ ಕೆಲವೊಮ್ಮೆ ನಡೆಯಬಹುದು. ಪ್ರತಿನಿಧಿಗಳು ಅಡ್ಡದಾರಿ ಹಿಡಿದುಹೋಗುವ ಸಂಭವವಿದ್ದರೂ ನಿಜವಾದ ಪ್ರಾಮಾಣಿಕನೂ, ನಿಸ್ವಾರ್ಥಿಯೂ ಮತ್ತು ಧೈರ್ಯವಂತನೂ ಆಗಬೇಕು. ಮಿಲಿಯಗಟ್ಲೆ ಜನರ ಬಾಬಿನಲ್ಲಿ ಸರ್ವದೃಷ್ಟಿಯಿಂದಲೂ ಸರಿಪಡಿಸುವೆವು ಎಂಬುದು ಕಷ್ಟ. ಪ್ರತಿನಿಧಿಗಳಲ್ಲಿ ಕ್ರಮ ನಿಯಮಗಳಿರಬೇಕು. ಮತದಾರರಲ್ಲಿ ಜಾಗರೂಕತೆ ಬೇಕು. ಪಾರ್ಲಿಮೆಂಟಿನ ಕ್ರಮಕ್ಕೆ ಡೆಲಗೇಷನ್ನಿಗಿಂತ (Delegation) ರಿಪ್ರೆಸೆಂಟೇಶನ್ (Representation) ಒಳ್ಳೆದೆಂತ ಹಲವರು ಹೇಳಿರುವರು.

ಡೆಲಗೇಟು ಹೆಚ್ಚಾಗಿ ಫ್ರಾಂಶ, ಫರ್ಮ ಮತ್ತು ಡಿವಿಜನುಗಳ ಪರವಾಗಿ ರಾಯ

ನ್ಯಾಯ ಸಭೆ

ಚುನಾವಣೆಗಾಗಿ ಬೇಕಾದಂತೆ ಭರವಸೆ ಕೊಡಬಹುದೆ?

ಉಮೇದ್ವಾರರ ಮತ್ತು ಮತದಾರರ ಹೊಣೆ

ನ ಪಡದು ಹೋಗುವದಾದ್ದರಿಂದ ಪ್ರಾಂತೀಯ ಭಾವನೆಯನ್ನೇ ತಾಳುವನು. ತಾನೇ ಅಲ್ಲಿಯ ನಿವಾಸಿಯಾದುದರಿಂದಲೆ ತನ್ನನ್ನು ಆರಿಸಿದರು ಎಂಬ ಕಲ್ಪನೆಯಿಂದ ಅವರ ಸೂಚನೆಯಂತೆ ನಡೆಯಬೇಕೆಂದೆಣಿಸುವನು. ತನ್ನ ಸ್ವಂತ ಅಭಿಪ್ರಾಯ ಬದಿಗೊತ್ತಿ ಅವರ ಅನುಭವದಂತೆ ನಡೆಯುವದು ತನ್ನ ಕರ್ತವ್ಯವೆಂದು ಭಾವಿಸುವನು. ಈತನು ಕೊಡುವ ಅಭಿಪ್ರಾಯಕ್ಕೆ ಅಮೇರಿಕದವರು ಮೂಲೆಯ ಸಂಗ್ರಹ (Opinion of the Corner Stock) ಎನ್ನುವರು. ಅಂದ್ರೆ ಕಸಕಡ್ಡಿಗಳಿಗೆ ಸರಿಯೆಂಬ ಭಾವನೆ. ಪ್ರತಿನಿಧಿ ಎಂಬವನು ರಾಯಸವನ್ನು ಕೊಂಡು ಹೋಗುವ ದೂತ ಸಂಚಯನಲ್ಲ. ನಿಜವಾದ ತಿಳುವಳಿಕೆಯುಳ್ಳ ಪ್ರತಿಪಾದಿಸುವ ಸ್ವಾತಂತ್ರ್ಯದ ವ್ಯಕ್ತಿಯಾಗಿರುವನು. ಪ್ರತಿನಿಧಿಗಳನ್ನು ಆರಿಸುವಾಗ ಈ ಮೂರು ಕಾರಣಗಳ ಪೈಕಿ ಯಾವದಾದರೊಂದನ್ನು ಗುರಿಯಿಟ್ಟು ಚುನಾಯಿಸುವರು 1. ಸ್ಥಳೀಯ ಸ್ವಾರ್ಥ ದೃಷ್ಟಿಯಿಂದ ಇದರಲ್ಲಿ ಸದಸ್ಯನು ತನ್ನ ಫಿರ್ಕದ ಬಗ್ಗಾಗಿ ಸಾಧಿಸಬೇಕು ನಮ್ಮ ಕರ್ನಾಟಕ ಏಕೀಕರಣ ಪಕ್ಷವು ಹೀಗೆಯೇ ಆಗಿದೆ. 2. ಇತರ ಸದಸ್ಯರೊಡನೆ ರಾಷ್ಟ್ರದ ವಿಚಾರದಲ್ಲಿ ಸಹಕರಿಸಿ ನಡದು ತನ್ನ ಪ್ರಾಂತದ ಅಭಿಮತ ಮತ್ತು ಬೇಡಿಕೆಯನ್ನು ಮುಂದೊತ್ತುವದು. ಇದು ಅಸಾಧ್ಯವಾದ ಕೆಲಸ- ಎರಡು ದೋಣಿಯಲ್ಲಿ ಕಾಲಿಡುವದು ಸರಿಯಲ್ಲ. ಎರಡು ಯಜಮಾನರಿಗೆ ಒಬ್ಬ ಸೇವಕನು ಸರಿಯಾಗಿ ನಡೆಯಲಾರನು. ಪ್ರಾಂತದ ಸ್ವಾರ್ಥಕ್ಕೂ ಪಕ್ಷಗಳ ಕಚ್ಚಾಟಕ್ಕೂ ಮಧ್ಯೆ ರಾಷ್ಟ್ರದ ಹಿತಕ್ಕೂ ಒಂದಲ್ಲ ಒಂದು ಸಮಯ ಎಡರು ಬಂದೇ ಬರುವದು. ಏಕೀಕರಣ ಪಕ್ಷದವರು ಇದನ್ನು ತರಬೇಕೆಂತ ಈಗ ಆಲೋಚಿಸುವರು- ಪ್ರಾಮಾಣಿಕನಾದ ಪ್ರತಿನಿಧಿಯು ಇವರಲ್ಲಿ ಯಾವದಾದರೊಂದೇ ಮಾರ್ಗವನ್ನು ಹಿಡಿಯುವನು. 3. ಮೂರನೇ ಕ್ರಮದಂತೆ ಪಕ್ಷಗಳ ಪರವಾಗಿ ಚುನಾಯಿತನಾದ ಕಾರಣ ಪಕ್ಷಗಳು ಹೇಳಿದಂತೆ ನಡಕೊಳ್ಳಬೇಕು. ಸದಸ್ಯನು ಪಕ್ಷಗಳ ಬಗ್ಗೆ ಒಂದು ಟೆಲಿಫೋನ್ ತಂತಿಯ ಹಾಗಾಗುವನು ಈತನು ಪಕ್ಷಗಳ ಆಜ್ಞಾಬದ್ಧನಾಗಿರುವನು. ಇದಕ್ಕೆ "ಡಾಕ್ಟ್ರಿನ್ ಓಫ್ ಮೆಂಡೇಟ ಇಂಪರೇಟಿವ್" (Doctrine of Mandat Imferatif) ಎನ್ನುವರು. ಇದರ ಅರ್ಥವೇನೆಂದರೆ ಜನರಲ್ಲಿ ಸರ್ವ ವಿಷಯದಲ್ಲಿ ಸಾಕಷ್ಟು ಅನುಭವವಿದೆ ಬೇಕಾದಾಗ ಅವುಗಳನ್ನು ಹೊರಪಡಿಸುವರು- ಅಧ್ಯಕ್ಷ ತಂಡನ್ನರಿಗೂ ಮುಖ್ಯಮಂತ್ರಿ ನೆಹರೂರವರಿಗೂ ಬಂದ ಭೇದವು ಡೆಲಗೇಟನ್ನು ಮತ್ತು ಪ್ರಾತಿನಿಧ್ಯಕ್ಕಿರುವ ಭೇದಗಳಾಗಿವೆ ಎಂದು ಸೂಕ್ಷ್ಮದಲ್ಲಿ ಹೇಳಬಹುದು.

ಪ್ರಜಾಸತ್ತೆಯ ಕ್ರಮವು ಜಾರಿಯಲ್ಲಿರುವಲ್ಲಿ ಪ್ರತಿನಿಧಿಯು ತನ್ನ ಮನಸ್ಸಾಕ್ಷಿ ಮತ್ತು ಅನುಭವಸಿದ್ಧ ಅಭಿಪ್ರಾಯಕ್ಕೆ ವಿರೋಧವಾಗಿ ಹೋಗುವದು ಸರಿಯಲ್ಲ. ತಪ್ಪು ಅಭಿಪ್ರಾಯವೆಂತ ಕಂಡಲ್ಲಿ ವಿರೋಧಿಸಲೇ ಬೇಕು. ಒಬ್ಬ ಸದಸ್ಯನನ್ನು ಕೆಲವು ಸಮಯದ ಹಿಂದೆ ಚುನಾಯಿಸಿರಬಹುದು. ಈಗ ಆ ಸಂದರ್ಭವು ಬದಲಾಗಿರಬಹುದು. ಮಂತ್ರಿಗಳು ರಾಷ್ಟ್ರದ ಅಪನಂಬಿಕೆಗೆ ಕಾರಣರಾಗಿರಬಹುದು. ಪ್ರತ್ಯಕ್ಷ ಎದುರು ಬಂದ ಪ್ರಶ್ನೆಯು ಚುನಾವಣೆ ಸಮಯ ತಲೆ ಎತ್ತಲಿಲ್ಲದಿರಬಹುದು. ಚುನಾವಣೆಯಾದ ನಂತ್ರ ನ್ಯಾಯ ಸಭೆಯಲ್ಲಿ ನಡದ ಚರ್ಚೆಯಿಂದ ಬಂದ ಅನುಭವದ ಪ್ರಯೋಜನವನ್ನು ಪಡೆಯಬಾರದೆಂತ ಮತದಾರರ ಮನಸ್ಸಿನಲ್ಲಿರಲಿಕ್ಕಿಲ್ಲ. ಹಾಗಿರುವದಾದ್ರೆ ಸಭೆಯಲ್ಲಿ ಚರ್ಚೆಗಳೇಕೆ? ಪ್ರತಿನಿಧಿಯು ಸರಿಯಾಗಿ ನಡೆಯಬೇಕಾದರೆ ಫಿರ್ಕದಲ್ಲಿ ಒಂದು ಸಮಿತಿ ಇದ್ದು ಆಗಾಗ ಸದಸ್ಯನಿಗೆ ತಮ್ಮ ಅಭಿಪ್ರಾಯ ಸೂಚಿಸಬೇಕು. ಅಗತ್ಯವಿದ್ದರೆ ಮತದಾರರ ಸಭೆಸೇರಿಸಿ ಅವರ ಅನುಭವಪಡೆಯಬೇಕು. ಸದಸ್ಯನು ಜನರ ವಿಶ್ವಾಸವನ್ನಿಟ್ಟುಕೊಳ್ಳಬೇಕಾದರೆ ಚುನಾವಣೆಯ ಸಮಯ ತಾನು ಭರವಸೆಕೊಟ್ಟ ವಿಷಯಗಳ ಹೊರತು ಇತರ ವಿಷಯಗಳಲ್ಲಿ ತನ್ನ ಮತದಂತೆ ವರ್ತಿಸುವೆನೆಂದು ಕಂಠೋಕ್ತವಾಗಿ ಹೇಳಬೇಕು. ಚುನಾವಣೆಗೋಸ್ಕರವಾಗಿ ಬೇಕಾದುದನ್ನೆಲ್ಲಾ ಭರವಸೆಕೊಡುವದಲ್ಲ ತನ್ನ ಪಕ್ಷದ ಧೋರಣೆಯಲ್ಲಿ ಏನೂ ನಂಬಿಕೆಯಿಲ್ಲದವನು ಇನ್ನೊಂದು ಕಡೆ ಸೇರುವದಾದರೆ ರಾಜಿ ಕೊಡಬೇಕು. ಚುನಾವಣೆ ಮುಗಿದ ನಂತ್ರ ತಾನು ಕೊಟ್ಟ ಭರವಸೆ ಪ್ರಕಾರ ನ್ಯಾಯಸಭೆಯಲ್ಲಿ ನಡಕೊಳ್ಳಲಿಕ್ಕೆ ಅನಾನುಕೂಲವಾದವನು ತನ್ನ ಸ್ಥಾನಕ್ಕೆ ರಾಜಿಕೊಡಬೇಕ - ಇಂಗ್ಲೆಂಡಿನಲ್ಲಿ ಇದನ್ನು ಸರಿಯಾಗಿ ಪಾಲಿಸುವರು ಫ್ರಾನ್ಸು ಮತ್ತು ಇಟಲಿಯಲ್ಲಿ ಇದಕ್ಕೆ ಹೆಚ್ಚಿನ ಮಾನ್ಯತೆಯಿಲ್ಲ ಕೆಲವು ಸಲ ಅಂಗಿಬದಲಾಯಿಸಿದಂತೆ ಬದಲಾಯಿಸುವರು. ಅಮೇರಿಕದಲ್ಲಿ ಮುಖ್ಯ ವಿಷಯಗಳಲ್ಲಿ ಜನರು ಸೀದಾ ಮತಕೊಡುವದಾದ್ದರಿಂದ ಇಂಥಾ ಸಂಭವ ಕಡಮೆ. ಇಂಗ್ಲಾಂಡದಲ್ಲಿ ಪ್ರತಿನಿಧಿಯು ಡೆಲಗೇಟು ಎಂಬ ಭಾವನೆಯು ಇತ್ತೀಚೆಗೆ ಬೇರೂರಿದೆ. ಸ್ವಿಟ್ಸರ್ ಲ್ಯಾಂಡಿನಲ್ಲಿ ಪ್ರತಿನಿಧಿಯು ಡೆಲಗೇಟಲ್ಲವೆಂದು ಶಾಸನದಲ್ಲೇ ಇದೆ. ಡೆಲಗೇಟ ಎಂಬ ಭಾವನೆಯನ್ನು ಮುಂದೊತ್ತಿದರೆ ಈ ಕೆಳಗಣ ದೋಷಗಳುಂಟಾಗುವವು 1. ಸ್ವತಂತ್ರಾಭಿಪ್ರಾಯದವರು ನ್ಯಾಯಸಭೆಗೆ ಬರಲು ಪ್ರತಿಬಂಧಕವಾಗುವದು. 2. ನ್ಯಾಯ ಸಭೆಯ ಚರ್ಚೆ ಮತ್ತು ತರ್ಕಗಳ ಬೆಲೆ ಕಡಮೆಯಾಗುವದು. 3. ಪಕ್ಷಗಳ ಸ್ಥಳೀಯ ಶಾಖೆಗಳ ಅಧಿಕಾರವು ಜಾಸ್ತಿಯಾಗುವದು. 4 ಮಂತ್ರಿ ಮಂಡಲದವರು ನ್ಯಾಯ ಸಭೆಯಲ್ಲಿರುವ ತಮ್ಮ ಹಿಂಬಾಲಕರ ಮೇಲೆ ಹೆಚ್ಚು ಅಧಿಕಾರ ನಡೆಸುವರು.

— ಸಿ. ಎಚ್. ಶೆಟ್ಟಿ ಬಿ. ಎ.

[ಮುಂದುವರಿಯುವುದು]

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ. ಎ. ಪಂಡಿತ್, B. SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಸ್ಥಿರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವೆಂಕಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಐದು ವರ್ಷಗಳ ಮೇಲೆಯೆ-ಆಹಾರ ಸ್ವಾವಲಂಬನ

ಎಂಟು ವರ್ಷಗಳಿಂದ ನಮ್ಮ ದೇಶದ ಆಹಾರಸ್ಥಿತಿಯು ಸುಧಾರಿಸಬಹುದೆಂದು ನಿರೀಕ್ಷಿಸಿದ್ದು ನಿರೀಕ್ಷಿಸಿದ್ದೇ. ಆದರೆ ವರ್ಷ ವರ್ಷಕ್ಕೆ ಆಹಾರಕೊರತೆ ಹೆಚ್ಚಾಗುತ್ತದೆಯೆ ವಿನಹ ಉತ್ತಮಸ್ಥಿತಿಗೆ ಮುಟ್ಟುವ ಲಕ್ಷಣ ಕಂಡುಬರುವುದಿಲ್ಲ. ಕೆಲವು ದಿನಗಳ ಹಿಂದೆ ಕೇಂದ್ರ ಮತ್ತು ಪ್ರಾಂತಿಕ ಸರಕಾರದ ಪ್ರತಿನಿಧಿಗಳು ದಿಲ್ಲಿಯಲ್ಲಿ ಆಹಾರ ಸಮಸ್ಯೆಯ ಕುರಿತು ಚರ್ಚೆ ನಡೆಸಿದರು. ಪರಂತು ಈ ಬಿಕ್ಕಟ್ಟಿನ ಕುರಿತು ಯಾವ ರೀತಿಯ ಪರಿಹಾರವನ್ನು ಕಂಡು ಹುಡುಕುವದಕ್ಕೂ ಸಮರ್ಥವಾಗಲಿಲ್ಲ. 1952ರ ಸುಮಾರಿಗೆ ಭಾರತ ಆಹಾರದಲ್ಲಿ ಸ್ವಾವಲಂಬಿಯಾಗಬೇಕೆಂದು ಶ್ರೀ ನೆಹರೂ ಪಣ ತೊಟ್ಟಿದ್ದುಂಟು. ಆದರೆ ಸದ್ಯದ ಪರಿಸ್ಥಿತಿಯನ್ನವಲೋಕಿಸಿದರೆ ಶ್ರೀ ನೆಹರೂರವರ ಕನಸು ನನಸಾಗುವದಕ್ಕೆ ಕಡಿಮೆ ಪಕ್ಷ ಇನ್ನೈದು ವರ್ಷವಾದರೂ ಬೇಕು. ಈ ವರ್ಷ ಸುಮಾರು 3 ಮಿಲಿಯ ಟನ್ ಆಹಾರವನ್ನು ವಿದೇಶದಿಂದ ತರಿಸಿಕೊಳ್ಳಲಾಗಿದೆ. ಮುಂದಿನ ವರ್ಷಕ್ಕೆ 7 ಮಿಲಿಯ ಟನ್ ಆಮದು ಮಾಡಿಕೊಳ್ಳದೆ ಗತ್ಯಂತರವಿಲ್ಲ.

ಕೃಷಿಸುಧಾರಣೆಯ ಅಂಗವಾಗಿ ಸರಕಾರ ಕೈಗೊಂಡಿರುವ ಹಲವಾರು ಯೋಜನೆಗಳು ಸಾಕಷ್ಟು ತ್ವರಿತಗತಿಯಿಂದ ಇಲ್ಲವೆ ಕ್ರಮಬದ್ಧವಾಗಿ ಸಾಗುತ್ತಿಲ್ಲವೆನ್ನುವದೂ ಒಂದು ಗಮನಾರ್ಹ ಸಂಗತಿ. ಹೆಚ್ಚು ಆಹಾರ ಬೆಳೆಸಿರಿ ಪ್ರಚಾರಕಾರ್ಯ, ಬಾವಿ ಅಗೆಯುವಿಕೆ ಹಾಗೂ ಇತರ ಸುಧಾರಣೆ- ಗೊಬ್ಬರ ಸಹಾಯಗಳಿಂದ ರೈತರು ಪಡಬೇಕಾದ ಲಾಭವನ್ನು ಪೂರ್ತ ಪಡೆದಿರುವದಿಲ್ಲ. ಸರಕಾರವು ನೂತನ ಕೃಷಿಭೂಮಿಯನ್ನು ರಚಿಸುವಲ್ಲಿ ಆಸ್ಥೆವಹಿಸಿರುವದಾದರೂ ಸಾಗುವಳಿಯಾಗುತ್ತಿದ್ದ ಭೂಮಿಗಳು ಪಡುಬೀಳುತ್ತಿರುವ ದಾಖಲೆಗಳು ಹೆಚ್ಚುತ್ತಿರುವದನ್ನು ಲಕ್ಷಿಸಿದರೆ ಜನತೆ ಸರಕಾರ ಒದವಿಸಿಕೊಟ್ಟಿರುವ ಸೌಲಭ್ಯಗಳನ್ನು ಚೆನ್ನಾಗಿ ಪಡೆಯುತ್ತಿಲ್ಲವೆಂಬುದು ಖಚಿತವಾಗುತ್ತದೆ. ಆಹಾರಧಾನ್ಯಗಳಿಗಿಂತಲೂ ಇತರ ಧವಸಧಾನ್ಯಗಳ ಬೆಲೆ ಮಿತಿಮೀರಿದ್ದರಿಂದ ಕೃಷಿಕರು ಲಾಭದಾಯಕವಾದಂತಹ ಬೆಳೆಗಳನ್ನು ಹೆಚ್ಚಾಗಿ ಬೆಳೆಸುತ್ತಿರುವದು ಸ್ವಾಭಾವಿಕ. ದೇಶದ ಮುಂದಿನ ಆಹಾರ ಬಿಕ್ಕಟ್ಟಿನ ಕುರಿತು ಸರಕಾರದ ಹಾಗೆ ಜನತೆಯೂ ಗಂಭೀರವಾಗಿ ಪರ್ಯಾಲೋಚಿಸಬೇಕಾದ ವಿಚಾರವಿದೆನ್ನುವದರಲ್ಲಿ ಸಂದೇಹವೇ ಇಲ್ಲ. ಬರ್ಮದಿಂದ ಬರಬೇಕಾಗಿದ್ದ ಅಕ್ಕಿಯೂ ಎಣಿಸಿದಷ್ಟು ಈ ಬಾರಿ ಸಿಗುವ ಸಂಭವವಿಲ್ಲವೆಂದು ತಿಳಿಯುತ್ತದೆ. ಕಾರಣ ಅಲ್ಲಿಯೂ ಸಹ ಬೆಳೆಯು ಸಾಕಷ್ಟು ಬರಲಿಲ್ಲ. ಇಡಿಯ ಜಗತ್ತಿನ ಆಹಾರಸ್ಥಿತಿಯು ಚಿಂತಾಜನಕವಾಗಿದೆಂದು ತಿಳಿಯುತ್ತದೆ.

ಈ ಸಂದರ್ಭದಲ್ಲಿ ಇನ್ನೈದು ವರ್ಷಗಳೊಳಗಾಗಿ ನಮ್ಮ ಆಹಾರಸ್ಥಿತಿ ಸುಧಾರಣೆ ಹೊಂದೀತೆಂದು ಭಾವಿಸುವದು ಶಕ್ಯವಿಲ್ಲ. ಭಾರತ ಸರಕಾರವು ಕೈಗೊಂಡಿರುವ ಚಿಕ್ಕ ಹಾಗೂ ದೊಡ್ಡ ನೀರಾವರಿ ಯೋಜನೆ ಹಾಗೂ ಪಂಚವಾರ್ಷಿಕ ಯೋಜನೆಗಳು ಕಾರ್ಯಗತವಾದ ಬಳಿಕವೇ ಭಾರತವು ಆಹಾರಸ್ವಾವಲಂಬನ ಧೋರಣವನ್ನು ವಹಿಸಬಹುದು. ಪಂಚವಾರ್ಷಿಕ ಯೋಜನೆಯೊಂದೇ ಅದಕ್ಕೆ ಮುಖ್ಯಮಾರ್ಗ. ಅವರಿಗೆ ಜನತೆ ಹಾಗೂ ಸರಕಾರ ಕಷ್ಟಸಹಿಷ್ಣುಗಳಾಗುವದಕ್ಕಿಂತ ಅನ್ಯಮಾರ್ಗವಿಲ್ಲ!

ಭಾರತದಲ್ಲಿ ಎಣ್ಣೆ ಶುದ್ಧೀಕರಣ ಕಾರಖಾನೆ

ಅಮೆರಿಕಾದ ಸ್ಟೇಂಡರ್ಡ ವ್ಯಾಕೂಮ ಆಯಿಲ್ ಕಂಪೆನಿಯೊಡನೆ ಮುಂಬಯಿಯ ಹತ್ತಿರದ ಟ್ರೋಂಬೆಯಲ್ಲಿ ಎಣ್ಣೆ ಶುದ್ಧೀಕರಣದ ಕಾರಖಾನೆಯನ್ನು ಸ್ಥಾಪಿಸುವ ಕುರಿತು ಉಭಯತರಿಗೂ ಸಮ್ಮತವಾದ ಒಪ್ಪಂದವಾಗಿರುತ್ತದೆ. ಸ್ಟೇಂಡರ್ಡ ವ್ಯಾಕೂಮ ಎಣ್ಣೆ ಕಂಪೆನಿಯು ಸುಮಾರು 35 ಮಿಲಿಯ ಡಾಲರುಗಳನ್ನು ವಿನಿಯೋಗಿಸುವ ನಿರ್ಧಾರ ಮಾಡಿದೆ. ಕಾರಖಾನೆಯು ಸಂಪೂರ್ಣಗೊಳ್ಳಲು 3½ ವರ್ಷ ತಗಲಬಹುದು. ಮುಂಬಯಿಯಲ್ಲಿ ತೆರೆಯಲಾಗುವ ಈ ಎಣ್ಣೆ ಕಂಪೆನಿಯು ಅತ್ಯಂತ ಸುಧಾರಿತ ರೀತಿಯದ್ದಾಗಿದೆಂದು ತಿಳಿಯುತ್ತದೆ. ಭಾರತೀಯರನ್ನು ತರಬೇತಿಗೊಳಿಸುವದು ಮಾತ್ರವಲ್ಲದೆ ಈಗಾಗಲೆ ಇರಾನ್ ಮುಂತಾದ ಕಡೆಗಳಲ್ಲಿ ಅನುಭವವನ್ನು ಪಡೆದ ತಜ್ಞರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವದೆಂದು ತಿಳಿಯುತ್ತದೆ. ಕಂಪೆನಿಯ ಮೂಲಧನದಲ್ಲಿ ಶೇಕಡಾ 25 ಅಂಶ ಭಾರತದಿಂದಲೇ ಸ್ವೀಕರಿಸಲಾಗುವದಂತೆ. ಮತ್ತೊಂದು ಎಣ್ಣೆ ಶುದ್ಧೀಕರಣ ಕಾರಖಾನೆಯ ಬಗ್ಗೆ ಬರ್ಮಾ ಆಯಿಲ್ ಕಂಪೆನಿಯೊಡನೆ ಭಾರತ ಸರಕಾರವು ಮಾತುಕತೆ ನಡೆಸುತ್ತಲಿದೆ.

ಮದ್ರಾಸದಲ್ಲಿ ಸಕ್ಕರೆಯ ಉತ್ಪಾದನೆ

ಮದ್ರಾಸ ಸರಕಾರವು ಸಕ್ಕರೆಯನ್ನು ಹೆಚ್ಚು ಉತ್ಪಾದಿಸುತ್ತಿದ್ದು ಬೆಲೆಯಲ್ಲೂ ಸ್ವಲ್ಪ ಕಡಿತವನ್ನುಂಟುಮಾಡುವದಕ್ಕೆ ನಿರ್ಧರಿಸಿರುತ್ತದೆ. ಸರ್ವಸಾಮಾನ್ಯ ಮದ್ರಾಸ ಸಂಸ್ಥಾನವು ವರ್ಷಕ್ಕೆ 50,000 ಟನ್ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತದೆ. ಇಲ್ಲಿಯ ಉತ್ಪಾದನೆಯೂ ಅಷ್ಟೇ ಆಗುವದು. ಸದ್ಯ ವಿದೇಶದಿಂದ ಬಂದ ಸಕ್ಕರೆಯು ಉಳಿಕೆಯು ಇಲ್ಲದೆ ಇರುವದರಿಂದ ದೇಶೀಯ ಸಕ್ಕರೆಯನ್ನು ಸುಲಭ ಬೆಲೆಯಲ್ಲಿ ವಿಕ್ರಯಿಸುವ ನಿರ್ಧಾರ ಮಾಡಿದೆ. ಮುಂದಿನ ವರ್ಷ ಹೊರಗಿನಿಂದ ತರಿಸಿಕೊಳ್ಳುವದನ್ನು ಬಹಳಷ್ಟು ಕಡಿಮೆ ಮಾಡಿ ಪ್ರಾಂತದೊಳಗಿನ ಕಾರಖಾನೆಗಳಿಂದಲೇ ಹೆಚ್ಚಿನಂಶವನ್ನು ಉತ್ಪಾದನೆಗೊಳಿಸಲಾಗುವದು. ಪ್ರಾಂತಕ್ಕೆ ಬೇಕಾಗುವ 1,95000 ಟನ್ ಸಕ್ಕರೆಯಲ್ಲಿ 80,000 ಟನ್ ಸಕ್ಕರೆಯನ್ನು ಮದ್ರಾಸ ಪ್ರಾಂತದೊಳಗಿನ ಕಾರಖಾನೆಗಳೇ ಉತ್ಪಾದನಗೊಳಿಸುವವು

ಬಿನ್ನಿ ಕಂಪೆನಿಯ ಕೆಲಸಗಾರರ ಮುಷ್ಕರ

ಮದ್ರಾಸು ಬಿನ್ನಿ ಮತ್ತು ಕಂಪೆನಿಯು ಈಚೆಗೆ ಕೆಲವು ದಿನಗಳಿಂದ ಮುಚ್ಚಲ್ಪಟ್ಟಿದೆ. ಓರ್ವ ಕೆಲಸಗಾರನನ್ನು ದುರ್ವರ್ತನೆಯ ಕಾರಣದ ಮೇಲೆ ಕೆಲಸದಿಂದ ತೆಗೆದು ಹಾಕಿದ್ದರ ಪ್ರತಿ ಕ್ರಿಯೆಯಾಗಿ ಉಳಿದ ಕೆಲಸಗಾರರು ಮುಷ್ಕರ ಹೂಡಿದರು. ಮಾತ್ರವಲ್ಲ ಕೆಲಸದ ನಿಮಿತ್ತ ಬಂದವರು ಯಂತ್ರಗಳನ್ನು ಕೆಡಿಸುವ ಹಾಗೂ ಹತ್ತಿಗೆ ಬೆಂಕಿಯನ್ನಿಕ್ಕುವ ಕಾರಸ್ಥಾನ ನಡೆಸಿದ್ದು ವ್ಯವಸ್ಥಾಪಕರ ಯೋಗ್ಯ ಕ್ರಮದಿಂದ ಅದನ್ನು ತಡೆಹಿಡಿದರೆಂದು ತಿಳಿಯುತ್ತದೆ. ಈ ಸಂದರ್ಭದಲ್ಲುಂಟಾದ ಗೊಂದಲದಿಂದ ಹಲವರಿಗೆ ಜಖಂ ಆಗಿ ಆಸ್ಪತ್ರೆ ಸೇರಿಸಲಾಗಿದೆ. ಬಿನ್ನಿ ಬಟ್ಟೆಯು ಜನಪ್ರೀಯವಾದುದಿದ್ದು ಈ ಕಂಪೆನಿಯಲ್ಲಿ 15,000 ಕೆಲಸಗಾರರು ದುಡಿಯುತ್ತಿರುವರು. ಪರಿಸ್ಥಿತಿಯು ಹತೋಟಿಗೆ ಬಾರದ ಹೊರತು ಗಿರಣಿಯನ್ನು ಪುನಃ ಪ್ರಾರಂಭಿಸುವದು ಶಕ್ಯವಿಲ್ಲೆಂದು ವ್ಯವಸ್ಥಾಪಕರು ಸಾರಿರುವರು. ಫಲವಾಗಿ ಹದಿನೈದು ಸಾವಿರ ಗಿರಣಿ ಕೆಲಸಗಾರರು ನಿರುದ್ಯೋಗಿಗಳಾಗಿರುವರು.

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ
ಕಾಳಿಕಮಾಲಿ
ಚವನ ಪ್ರಾಶವನ್ನೇ
ಸದಾ ಸರ್ವದಾ ಉಪಯೋಗಿಸಿರಿ.
ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ. ಅಶಕ್ತ ನರಗಳಿಗೂ ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.
ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಪ್ರತಿನಿಧಿಗಳು:--
ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.
ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10—0—0 (ಅಂಚೆವೆಚ್ಚ ಪ್ರತ್ಯೇಕ)
AYURVEDIC PHARMACY
Baba kali Kamali-Wala RISHIKESH.



ಬಹುಕಾಲ ಬಾಳುವ ಶಕ್ತಿಯುಳ್ಳದ್ದಾಗಿದೆ

'ಎಸ್ಟ್ರೆಲಾ' ಬ್ಯಾಟರಿಗಳು ನಿಮಗೆ ಬೇಕಾದ ಪ್ರಕಾಶಮಾನವಾದ ಬೆಳಕನ್ನು ಕೊಡುವುದಲ್ಲದೆ ಇವು ತುಕ್ಕು ಹಿಡಿಯದೆ ಹೊಸದಾಗಿಯೇ ಇದ್ದು ಬಹುಕಾಲ ಬಾಳಿಕೆ ಬರುತ್ತವೆ.

ಎಸ್ಟ್ರೆಲಾ ಬ್ಯಾಟರಿಗಳು

ESTRELA

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಎಸ್ಟ್ರೆಲಾ ಬ್ಯಾಟರಿಸ್ ಲಿಮಿಟೆಡ್,
ಬೊಂಬಾಯಿ ೧೯.

ಶಾಖೆಗಳು:
ಕಲ್ಕತ್ತಾ, ಡೆಲ್ಲಿ, ಮದ್ರಾಸು, ಕಾನ್‌ಪೂರ್, ನಾಗಪೂರ್.

ಶ್ರೀ ನೆಹ್ರೂರವರ ಚುನಾವಣಾ ಸಂಚಾರ

ಅ. ಭಾ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರಲಾಲ ನೆಹ್ರೂರವರು ಚುನಾವಣಾ ಪ್ರಚಾರ ಕೈಗೊಂಡಿದ್ದು ಮದ್ರಾಸ ಹಾಗೂ ಇಂದೂರಗಳಲ್ಲಿ ಅವರಿಗೆ ದೊರೆಕಿದ ಅಭೂತ ಪೂರ್ವ ಸ್ವಾಗತವನ್ನು ನೆನೆಸಿದರೆ ಜನತೆಯ ಒಲವು ಕಾಂಗ್ರೆಸ್ಸಿನ ಕಡೆಗೇನೆ ಇದೆಎನ್ನುವದಕ್ಕೆ ಉತ್ತಮ ಉದಾಹರಣೆ. ಚುನಾವಣೆಯಲ್ಲಿಸ್ಪರ್ಧಿಸುವ ಬೇರೆ ಬೇರೆ ಪಕ್ಷಗಳ ಧ್ಯೇಯ ಧೋರಣೆಗಳ ಕುರಿತು ಶ್ರೀ ನೆಹ್ರೂರವರು ಸಕಾಲಿಕವೂ ಅತ್ಯಂತ ಸಮರ್ಪಕವೂ ಆದ ಉತ್ತರವನ್ನಿತ್ತು ಜನತೆಗೆ ಸರಿಯಾದ ಮಾರ್ಗದರ್ಶನ ಮಾಡಿದರೆಂದೇ ಹೇಳಬೇಕು. ಮದ್ರಾಸದಲ್ಲಿ ಶ್ರೀ ನೆಹ್ರೂರವರು "ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅನೇಕ ಸಮಸ್ಯೆಗಳನ್ನು ನಾವು ಬಗೆಹರಿಸಬೇಕಾಗಿದೆ. ಎಲ್ಲರೂ ಒಂದೆಡೆ ಸೇರಿ ಕೆಲಸ ಮಾಡಿದರೆ ಮಾತ್ರ ಈ ಸಮಸ್ಯೆಗಳು ಬಗೆಹರಿಯಬಲ್ಲವು. ಒಬ್ಬರನ್ನೊಬ್ಬರು ತುಳಿಯುವದರಿಂದ ಯಾವ ಕೆಲಸವೂ ಆಗಲಾರದು. ಕಾಂಗ್ರೆಸ್ಸಿಗೆ ಇಡಿ ಸಂಸ್ಥೆಯು, ಒಕ್ಕಲಿಗರ ಹಾಗೂ ಸಾಮಾನ್ಯರ ಬೆಂಬಲವಿರುವದರಿಂದ ರಾಷ್ಟ್ರೀಯ ಐಕ್ಯವನ್ನು ಅದೊಂದೇ ಕಾಪಾಡಬಲ್ಲದು. ಚುನಾವಣೆಗಳೇ ಕೊನೆಯವಾಗಲಾರದ ವರೂ ಇನ್ನೂ ದೊಡ್ಡ ಕಾರ್ಯಗಳ ಸಾಧನೆಗಾಗಿ ಕಾಂಗ್ರೆಸ್ಸಿನ ಬೆಂಬಲಕ್ಕೆ ಜನತೆಯು ಬರುವದು ಅವಶ್ಯವಿದೆ.

ನಾನು ಯಾವದೇ ವ್ಯಕ್ತಿಯ ಬಗ್ಗೆ ಅಗೌರವದ ಶಬ್ದಗಳನ್ನು ಉಪಯೋಗಿಸುವದಿಲ್ಲ, ಸಮಾಜವಾದಿ ಪಕ್ಷ, ಕೃಷಿಕ ಮಜದೂರ ಪ್ರಜಾಪಕ್ಷ, ಇಲ್ಲವೆ ಕಮ್ಯೂನಿಸ್ಟ ಪಕ್ಷವೇ ಮೊದಲಾದ ಪಕ್ಷಗಳಲ್ಲಿ ನನ್ನ ನಿಕಟ ಮಿತ್ರರಿರುವರು. ಅವರ ಬಗ್ಗೆ ನನಗೆ ಗೌರವವಿದೆ. ನಾನು ಅವರಿಂದಾಗಲೀ, ಅವರ ಪಕ್ಷದಿಂದಾಗಲೀ, ನಿಮ್ಮಲ್ಲನೇಕರಂತೆ ದೂರ ಸರಿದಿಲ್ಲ.

ನನ್ನ ನಿಕಟ ಮಿತ್ರರೂ ಸಹೋದ್ಯೋಗಿಗಳೂ ಆಗಿರುವ ಆಚಾರ್ಯ ಕೃಪಲಾನಿಯವರು ಆಡಿದ ಕೆಲಮಾತುಗಳು ನನ್ನನ್ನು ಸೋಜಿಗಗೊಳಿಸಿವೆ. ಶ್ರೀ ಕೃಪಲಾನಿಯವರ ಭಾವನೆಗಳನ್ನು ನಾನು ಗೌರವಿಸುವೆ. ಆದರೆ ಜನತೆಯು ಕಾಂಗ್ರೆಸ್ಸಿಗೆ ಮತ ಕೊಡುವುದಕ್ಕಿಂತ ಸಮುದ್ರದಲ್ಲಿ ಮತಗಳನ್ನು ಒಗೆಯಬೇಕೆಂದು ಅವರು ಹೇಳಿರುವದನ್ನು ಲಕ್ಷಿಸಿದರೆ ಅವರ ವಿಚಾರ ಸರಣಿಯಲ್ಲಿ ದೋಷವಿದೆ ಇಲ್ಲವೆ ಅವರು ಅತೀವ ಕೋಪಗೊಂಡಿರುವರೆಂದು ವ್ಯಕ್ತವಾಗದಿರದು." ಎಂದು ಹೇಳಿರುವರು. ಸೋಲು ಗೆಲುವಿನ ಪ್ರಶ್ನೆ ಮುಖ್ಯವಲ್ಲ– ಆದರ್ಶವನ್ನು ಕಾಪಾಡಿಕೊಳ್ಳುವುದೇ ಮಹತ್ವದ ಸಂಗತಿಯೆಂಬುದನ್ನು ಅವರು ಒತ್ತಿ ಹೇಳಿದರು. ಕಾಂಗ್ರೆಸ್ ಗುಣ ದೋಷಗಳನ್ನು ನಿಷ್ಪಕ್ಷಪಾತದಿಂದ ವಿಮರ್ಶೆ ಮಾಡಿ ಕಾಂಗ್ರೆಸ್ ಈ ವರೆಗೆ ಸಾಧಿಸಿದ ಮತ್ತು ಮುಂದಕ್ಕೆ ಸಾಧಿಸಲಿರುವ ಮಹತ್ವದ ಸಂಗತಿಗಳನ್ನು ಜ್ಞಾಪಿಸಿಕೊಂಡರೆ ಕಾಂಗ್ರೆಸ್ಸಿಗೆ ಮತದಾನ ಮಾಡುವ ಅವಶ್ಯಕತೆಯನ್ನು ಜನತೆ ಕಂಡುಕೊಳ್ಳಬಹುದೆಂದೂ ಅವರು ಹೇಳಿದರು.

ವಿಶ್ವವಿದ್ಯಾಲಯಗಳು ಒಕ್ಕಲುತನ ಶಿಕ್ಷಣಕ್ಕೆ ಮಹತ್ವ ಕೊಡಬೇಕು.

ದಿಲ್ಲಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಭಾರತದ ಸುಪ್ರಸಿದ್ಧ ಕಾಯದೆ ತಜ್ಞರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿಯವರು ವಿಚಾರ ಪರಿಪ್ಲುತ ಹಾಗೂ ಅತ್ಯಂತ ವಿಧಾಯಕ ರೀತಿಯ ಮಾತುಗಳನ್ನಾಡಿದ್ದಾರೆ. ಪ್ರೌಢ ಮತದಾನ ಪದ್ಧತಿಯು ಪ್ರಜಾಪ್ರಭುತ್ವದ ಪ್ರಬಲವಾದ ಒಂದು ವಿಚಾರವಾಗಿದ್ದು ಹೆಚ್ಚುಜನರು ನಿರಕ್ಷರ ಕುಕ್ಷಿಗಳಾಗಿರುವದು ಇನ್ನೊಂದು ವಿಚಾರವಾಗಿದೆ. ಈ ಸಂದರ್ಭದಲ್ಲಿ ಅಶಿಕ್ಷಿತರು ಹಾಗೂ ಅನಕ್ಷರಸ್ಥರಿಗೆ ವಿಶ್ವವಿದ್ಯಾಲಯಗಳ ಸುಶಿಕ್ಷಿತರು ತಮ್ಮ ಕರ್ತವ್ಯದ ಸ್ಮರಣೆ ಮಾಡಿಕೊಡುವದಕ್ಕವೆಂದು ಹೇಳಿರುವರು. ಪ್ರಜಾಪ್ರಭುತ್ವದ ಯಶಸ್ಸು ನಿಜವಾದ ರಾಜಕೀಯ ಆದರ್ಶಗಳಿದ್ದ ಪಕ್ಷಗಳ ಅಸ್ತಿತ್ವವನ್ನವಲಂಬಿಸಿರುವದು ಆದರಂತೆ ಪ್ರಸಂಗಬಂದಾಗ ರಾಷ್ಟ್ರದ ಆಡಳಿತವನ್ನು ಹೊತ್ತುಕೊಳ್ಳಬಲ್ಲ ಸುಸಂಘಟಿತ ವಿರೋಧಿ ಪಕ್ಷದ ಅವಶ್ಯಕತೆಯೂ ಇದೆ. ಅಸ್ತಿತ್ವದಲ್ಲಿರುವ ಸರಕಾರವನ್ನು ಕೇವಲ ದ್ವೇಷಿಸುವದರಿಂದ ಯಾವ ಪುರುಷಾರ್ಥವೂ ಸಾಧಿಸಲಾರದು. ಭಾರತವು ಒಕ್ಕಲತನದ ನಾಡಾಗಿರುವದರಿಂದ ವಿಶ್ವವಿದ್ಯಾಲಯಗಳು ಒಕ್ಕಲತನ ಶಿಕ್ಷಣಕ್ಕೆ ಮಹತ್ವ ಕೊಟ್ಟು ಅಧಿಕ ಬೆಳೆಯಲು ಸಹಾಯ ಮಾಡಬೇಕು. ಇಂದು ವಿಜ್ಞಾನ ಯುಗವಾದುದರಿಂದ ಅದರ ಅಭ್ಯಾಸಕ್ಕೆ ಪ್ರಥಮ ಪ್ರಾಶಸ್ತ್ಯವಿರಬೇಕು. ಹೊಸವಿದ್ಯೆಯ ಮೆರುಗಿನಲ್ಲಿ ನೂರಾರು ವರುಷಗಳಿಂದ ನಡೆದು ಬಂದ ನಮ್ಮ ಸಂಸ್ಕೃತಿಯನ್ನು ಮರೆಯಲಾಗದು' ಎಂಬುದಾಗಿ ಶ್ರೀ ಅಲ್ಲಾಡಿಯವರು ಹೇಳಿದರು. ಸದ್ಯ ನಮ್ಮ ದೇಶಕ್ಕೆ ಶ್ರೀ ಅಲ್ಲಾಡಿಯವರು ಸೂಚನೆಗೊಟ್ಟ ಅಂಶಗಳು ಅವಶ್ಯವಾಗಿ ಕೈಗೊಳ್ಳಬೇಕಾದಂಥವುಗಳು. ಅಜ್ಞರಿಗೆ ತಿಳಿ ಹೇಳುವುದು ರಾಜಕೀಯ ಸುಧಾರಣೆಯಾದರೆ— ವಿಶ್ವವಿದ್ಯಾಲಯಗಳು ಒಕ್ಕಲುತನ ಶಿಕ್ಷಣಕ್ಕೆ ಮಹತ್ವಕೊಡುವದು ಆಹಾರದ ಸುಧಾರಣೆಯಾಗಿದೆ.

ಚತುರಾಷ್ಟ್ರಗಳ ನಿಶ್ಶಸ್ತ್ರೀಕರಣ ಮಾತುಕತೆ

ಅಣು ಶಸ್ತ್ರಗಳ ಉತ್ಪಾದನೆಯ ಪ್ರಯೋಗಗಳನ್ನೆಲ್ಲ ಮೇಲ್ವಿಚಾರಣೆಗೊಳಪಡಿಸಬೇಕು. ಮತ್ತು ಈ ಬಗ್ಗೆ ಒಂದು ನಿಯಮವು ಸಿದ್ಧವಾದ ಕೂಡಲೇ ಮೇಲ್ವಿಚಾರಣೆ ಪ್ರಾರಂಭಿಸಬೇಕು. ಅಣುಶಕ್ತಿಯ ನಿಯಂತ್ರಣವು ಭದ್ರತಾ ಮಂಡಳದ ನೇತೃತ್ವದಲ್ಲಿ ಸಾಗಬೇಕೆಂದು ರಶಿಯವು ಸಾರಿದ್ದರಿಂದ ನಿಶಸ್ತ್ರೀಕರಣದ ಸಮಸ್ಯೆಯು ಸೌಹಾರ್ದ ರೀತಿಯಲ್ಲಿ ಮುಕ್ತಾಯಗೊಳ್ಳಬಹುದೆಂಬ ಆಶೆ ಬ್ರಿಟನ್ ಅಮೇರಿಕಾ, ಫ್ರಾನ್ಸ್ ರಾಷ್ಟ್ರಗಳಲ್ಲಿ ಕಂಡುಬಂದಿದೆ. ನಿಶ್ಶಸ್ತ್ರೀಕರಣ ಉಪಸಮಿತಿಯು ಪ್ಯಾರಿಸದಲ್ಲಿ ಸೇರಿ ಮುಂದಿನ ಸಭೆಗಳ ಕಾರ್ಯಪದ್ಧತಿಯ ಬಗ್ಗೆ ಸರ್ವಸಮ್ಮತವಾದ ಯೋಜನೆಯನ್ನು ತಯಾರಿಸಿತು. ಈ ಸಭೆಗೆ ಬ್ರಿಟನ್, ಅಮೇರಿಕಾ, ರಶಿಯ ಮತ್ತು ಫ್ರಾನ್ಸಿನ ಪ್ರತಿನಿಧಿಗಳು ಉಪಸ್ಥಿತರಿದ್ದರು. ನಿಶ್ಶಸ್ತ್ರೀಕರಣದ ಬಗ್ಗೆ ಪಾಶ್ಚಾತ್ಯ ಹಾಗು ರಶಿಯನ್ ಯೋಜನೆಗಳಲ್ಲಿಯ ಭಿನ್ನಾಭಿಪ್ರಾಯವನ್ನು ನಿವಾರಿಸುವ ನೂತನ ಮಾರ್ಗವನ್ನು ಈ ಸಮಿತಿ ಕಂಡುಹುಡುಕುವದಿದ್ದು ದಶಂಬರ ತಿಂಗಳ 10ರ ತನಕ ದಿನಕ್ಕೆ ಎರಡುಬಾರಿ ಕೂಡಲಿದೆಯೆಂದು ತಿಳಿಯುತ್ತದೆ. ಪಾಶ್ಚಾತ್ಯ ರಾಷ್ಟ್ರಗಳ ಯೋಜನೆ ಹಾಗೂ ರಶಿಯದ 12 ತಿದ್ದುಪಡಿಗಳ ಕುರಿತು ಸಮಿತಿಯು ಸಮಾಲೋಚನೆ ನಡೆಸುವದು. ರಶಿಯವು ಈ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಶಸ್ತ್ರ–ಸಮಸ್ಯೆ ಬಿಡಿಸುವಲ್ಲಿ ವಿಶೇಷ ಆಸ್ಥೆಯನ್ನು ತೋರಿಸಿರುವದರಿಂದ, ಈ ಚತುರಾಷ್ಟ್ರಗಳ ಯೋಜನೆ ಕೈಗೂಡಬಹುದೆಂಬ ನಿರೀಕ್ಷೆಯಿದೆ.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No 385/1951

ಅಹಮ್ಮದ ಬ್ಯಾರಿ, —ವಾದಿ.

ಮೊಯ್ದಿನ್ ಬ್ಯಾರಿ ಸಹಾ —ಪ್ರತಿವಾದಿಗಳು.

Iನೇ ಪ್ರತಿವಾದಿ ಮೊಯ್ದಿನ್ ಬ್ಯಾರಿ, ಪಾದಿಯವಳಪ್ಪಿಲ್ ಹಸಿನಾರ ಅಬ್ದುಲ್ಲಾ ಬ್ಯಾರಿಗಳ ಮಗ, ಕಾಸರಗೋಡು ತಾಲೂಕು ತಳಂಗರೆ ಗ್ರಾಮದಲ್ಲಿರುವವ.

ವಾದಿಯು ದಾವಾ ಅರ್ಜಿಯ ಅಸಲು ಬಡ್ಡಿ ಖರ್ಚಿಗೆ ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿ ಸದ್ರಿ ವ್ಯಾಜ್ಯವು ತಾರೀಖು 21-12-51ಕ್ಕೆ ತನಿಖೆಗೆ ಇಟ್ಟಿರುವ ಸಂಗತಿ Iನೇ ಪ್ರತಿವಾದಿಗೆ ತಿಳಿಸಲಾಗಿರುವುದು. ಆಕ್ಷೇಪವಿದ್ದರೆ ಆ ದಿವಸ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದ್ದರೆ ಎಕ್ಸಪಾರ್ಟಿಯಿಂದ ತೀರ್ಮಾನಿಸಲಾದೀತು.

(Sd.) P. Ahmad,
Advocate for Plff

ಕಾಸರಗೋಡು, 30-11-51

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪುಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು

ನಾನಾ ವಿಧದ ದೀಪ, ತಾಮ್ರ ಪಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ.
ರಥಬೀದಿ, ಉಡುಪಿ

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

For Protection and Provision

Consult

The New Guardian of India Life Insurance Co., Ltd.

Estd] Head office: MADRAS [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಗೆಟ್ಟ ಋತುಸ್ರಾವವಾಗುವದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ಪಿ. ಟಿ ಖರ್ಚು ಪ್ರತ್ಯೇಕ.]

MIS. P. DEVEE, F. DS. (N. J.)
Tollygunge CALCUTTA.

ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೬-೧೨-'೫೧

ನೆಹ್ರೂ ಆದೇಶ

ಚುನಾವಣಾ ಪ್ರಚಾರವನ್ನು ಕೈಗೊಂಡು ದೇಶದ ನಾನಾ ಕಡೆಗಳಲ್ಲಿ ಶ್ರೀ ನೆಹ್ರೂರವರು ಮನನೀಯವೂ ವಿಚಾರ ಪರಿಪ್ಲುತವೂ ಆಗಿರುವ ಆದೇಶವನ್ನೀಯುತ್ತಿರುವುದನ್ನು ನಾವು ಗಂಭೀರವಾಗಿ ಪರ್ಯಾಲೋಚಿಸುವುದು ಅವಶ್ಯವಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸುವದೊಂದನ್ನೇ ಪ್ರಬಲೋದ್ದೇಶವಾಗಿಟ್ಟುಕೊಂಡ ಇತರ ಪಕ್ಷಗಳ ಕುರಿತು ಶ್ರೀ ನೆಹ್ರೂರವರು ಮದ್ರಾಸಿನಲ್ಲಿ ಆಡಿದ ಮಾತುಗಳು ಅತ್ಯಂತ ಮಹತ್ವದ್ದಾಗಿವೆ. ಕಾಂಗ್ರೆಸ್ಸೇತರ ಪಕ್ಷಗಳ ಧುರೀಣರು ಚುನಾವಣೆಯಲ್ಲಿ ಗೆಲ್ಲುವದರ ಸಲುವಾಗಿ ತಮ್ಮ ಧ್ಯೇಯ ಧೋರಣೆಗಳಿಗೆ ಹೊಂದಿಕೆಯಾಗದ ಇತರಪಕ್ಷಗಳೊಡನೆಸಂಧಾನ ನಡೆಸುವದು ಅತ್ಯಂತ ಸೋಜಿಗ ಮಾತ್ರವಲ್ಲ; ನಾಚಿಕೆಗೇಡಿತನದ್ದೂ ಆಗಿರುತ್ತದೆ. ಕಾಂಗ್ರೆಸ್ಸಿಗರೇ ಆಗಿದ್ದು ಸದ್ಯ ಪ್ರಜಾಪಕ್ಷದ ಧುರೀಣರಾಗಿರುವ ಶ್ರೀ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ಸಿನಂತಹ ಲೋಕಪ್ರಿಯ ಸಂಸ್ಥೆಯ ಮೇಲೆ ಘನತೆಗೆ ಭಿನ್ನ ಯ ರೀತಿಗಳನ್ನು ಬಿಟ್ಟು ಟೀಕೆ ಮಾಡುವುದು ವಿಷಾದದ ಸಂಗತಿ! ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ ವಿರೋಧಿ ಪಕ್ಷಗಳಿಗೂ ಸಕಲ ಸೌಲಭ್ಯವನ್ನೊದಗಿಸಿ ಕೊಟ್ಟ ಔದಾರ್ಯವನ್ನು ಈ ರೀತಿ ದುರುಪಯೋಗಗೊಳಿಸುವುದು ಭೂಷಣವಲ್ಲ. ಕಾಂಗ್ರೆಸ್ ದಾರಿ ತಪ್ಪುತ್ತಲಿದೆ- ಜಾತೀಯತೆಯು ಅದರಲ್ಲಿದೆಯೆನ್ನುವ ಶ್ರೀ ಆಚಾರ್ಯರು ತನ್ನ ಪಕ್ಷವು ತನ್ನ ಧ್ಯೇಯ ಧೋರಣೆಯನ್ನು ಮರೆತು ತನ್ನ ಮನೋಧರ್ಮಕ್ಕೆ ಒಗ್ಗದ ರಾಜಕೀಯ ಪಕ್ಷಗಳೊಡನೆ ಸಂಧಾನವನ್ನು ಯಾಚಿಸುವದು ಯಾವ ಧರ್ಮ? ಆದರ್ಶ-ತತ್ವಗಳು ಬೀದಿಯವರ ಪಾಟ್ಟಿಗೆ ಮಾತ್ರವಲ್ಲ; ತಮ್ಮ ಪಾಟ್ಟಿಗೂ ಅವಶ್ಯವೆಂಬುದನ್ನು ಶ್ರೀ ಆಚಾರ್ಯರು ತಿಳಿಯದೆ ಹೋದುದುಆಶ್ಚರ್ಯದ ಸಂಗತಿ ಸ್ವಪಕ್ಷದುರೀತಿಯಆತ್ಮಘಾತುಕರಾರ್ಯವನ್ನುಮಾಡಿಕೊಳ್ಳುತ್ತಿರುವವೇಳೆ ಕಾಂಗ್ರೆಸ್ಸು ಮಾತ್ರ ದಾರಿ ತಪ್ಪುತ್ತಿದೆಯೆಂದು ದೂರುವ ಈ ಔಚಿತ್ಯವೇನೆಂದು ನಮಗರ್ಥವೇ ಆಗುವದಿಲ್ಲ.

ಸದ್ಯ ಕಾಂಗ್ರೆಸಿನ ಬಗ್ಗೆ ಆಗುತ್ತಿರುವ ಈ ಬಗೆಯ ಟೀಕೆಗಳು ಎಲ್ಲ ಪಕ್ಷ ಪಂಗಡಗಳ ಚುನಾವಣಾಸ್ತ್ರವೇ ಆಗಿದೆಂದರೆ ತಪ್ಪಾಗದು. ಪಕ್ಷ ಪಂಗಡಗಳು ತಮ್ಮ ಕೈ ಮೇಲಾಗುವದಕ್ಕೆ ಎಂಥಹ ವಾಮ ಮಾರ್ಗವನ್ನು ಅನುಸರಿಸಲು ಹಿಂಜರಿಯಲಾರವೆಂಬುದಕ್ಕೆ ಸಾಕಷ್ಟು ನಿದರ್ಶನಗಳು ಕಂಡುಬರುತ್ತವೆ. ಅಸತ್ಯ ಪ್ರತಿಪಾದನೆ ಲೋಪದೋಷಗಳ ಅತಿರಂಜಿತವಾದ ವರ್ಣನೆಗಳಿಂದ ಜನತೆಯಿಂದು ಮೋಸ ಹೋಗುವಂತಿಲ್ಲ. ಕಾಂಗ್ರೆಸ್ಸು ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದ ಜಾತೀಯತೆ- ಶ್ರೀಮಂತಿಕೆಗಳ ವರ್ಚಸ್ಸಿಗೇನೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದೆಯೆಂದು ದೂರಿಡುವಮಹನೀಯರು ಇತರಪಕ್ಷಗಳು ಈ ದೋಷದಿಂದ ಬೇರಾಗಿವೆಯೆ? ಎಂದು ಯೋಚಿಸಲಿ. ಜನತೆ ಎಷ್ಟೇ ಅಸಂತೋಷಗೊಂಡಿರುವುದಾದರೂ- ವಸ್ತುಸ್ಥಿತಿಯನ್ನು ವಿಮರ್ಶಿಸಿಕೊಂಡು ಯಾರುಸರಿ-ಯಾರು ತಪ್ಪು ಎಂದು ತೂಗಿನೋಡಬಲ್ಲರು. ನಾಲ್ಕು ವರ್ಷದ ಆಡಳಿತ ಲೋಪದೋಷಗಳೇ ಕಾಂಗ್ರೆಸ್ಸಿನ ಯೋಗ್ಯತೆ ಇಲ್ಲವೆ ದಕ್ಷತೆಯ ಮಾನದಂಡವಾಗಲಿಕ್ಕೆ ಸಾಧ್ಯವಿಲ್ಲ ಕಾಂಗ್ರೆಸ್ ಎದುರಿಸಬೇಕಾಗಿ ಬಂದ ಮಹಾ ಸಮಸ್ಯೆಗಳನ್ನು ಜನತೆಯೂ ವಿಚಾರವಿಲ್ಲದ ಮನಸ್ಸಿನಿಂದ ಎಣಿಸಬಹುದು. ನೆಹ್ರೂರಂತಹ ಅಂತರಾಷ್ಟ್ರೀಯ ಖ್ಯಾತಿವೆತ್ತ ವ್ಯಕ್ತಿಗಳಿರುವವರೆಗೆ ಕಾಂಗ್ರೆಸ್ಸಿಗೆ ಯಾವದೇ ರೀತಿಯ ಧಕ್ಕೆ ಬರಲಾರದು. ಮುಂಬರುವ ಚುನಾವಣೆಯಲ್ಲಿಕಾಂಗ್ರೆಸ್ಸುವಿರೋಧಿಗಳನ್ನುಎದುರಿಸಿ ಸ್ವಸಾಮರ್ಥ್ಯದಿಂದ್ಲೇ ತಿರುಗಿ ಅಧಿಕಾರಕ್ಕೆಬರುವದರಲ್ಲಿಸಂದೇಹವೇ ಇಲ್ಲ; ಕಾಂಗ್ರೆಸ್ಸಿನಿಂದಲೇ ದೇಶದ ಹಿತಸಾಧಿಸಬಲ್ಲುದೆಂಬುವನ್ನು ನಾವು ಮರೆಯತಕ್ಕದ್ದಲ್ಲ. ಆದುದರಿಂದ ಜನತೆ ಪ್ರವಾಹದೊಂದಿಗೆ ತೇಲಾಡುವ ವ್ಯಕ್ತಿಗಳಾಗದೆ-ಶ್ರೀ ನೆಹ್ರೂರವರು ನೀಡುತ್ತಿರುವ ಅಮೂಲ್ಯ ಸಲಹೆ ಆದರ್ಶಗಳನ್ನುಅಂತಃಕರಣ ಪೂರ್ವಕವಾಗಿ ಸ್ವಾಗತಿಸುವ ಯೋಗ್ಯ ಪ್ರಜೆಗಳಾಗಬೇಕು, ದೇಶದ ರಾಜಕೀಯ ಸಾಮಾಜಿಕ-ಆರ್ಥಿಕ ಅನುಭವಗಳನ್ನು ಪಡೆದು ಯಾವುದೇ ನಾಗರಿಕನು ಇದಕ್ಕೆ ವಿರುದ್ಧ ವರ್ತಿಸಲಾರನೆಂಬ ದೃಢವಿಶ್ವಾಸ ನಮಗಿದೆ.

ಲೋಕಾಂತ

ಕೋರಿಯಾದ ಮಾತುಕತೆ

ಕೊರಿಯದ ಯುದ್ಧ ಮುಕ್ತಾಯದ ಮಾತು ಕತೆಗಳಲ್ಲಿ ಸಂ. ರಾ. ಸಂಘದ ಹಾಗೂ ಕಮ್ಯೂನಿಸ್ಟ ಪ್ರತಿನಿಧಿಗಳೊಳಗೆ ಸಮಾಧಾನಕರವಾದ ಒಪ್ಪಂದವಿನ್ನೂ ಆಗಲಿಲ್ಲವೆಂದು ತಿಳಿದು ಬರುತ್ತದೆ.

ಭಾರತ ಶುಶ್ರೂಷಾ ಪಡೆಯ ಪ್ರಶಂಸೆ

ಕೊರಿಯ ಯುದ್ಧದಲ್ಲಿ ಗಾಯಗೊಂಡವರಿಗೆ ಸಹಾಯ ಮಾಡಲು 330 ಜನರುಳ್ಳ ಶುಶ್ರೂಷಾ ಪಡೆಯು ಸ್ತುತ್ಯವಾದ ಕೆಲಸ ಮಾಡಿ ಭಾರತಕ್ಕೆ ಹೆಸರು ತಂದಿರುವದಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಲಾಗಿದೆ.

ಸುಯೇಜ ಕಾಲುವೆಯಲ್ಲಿ ಶಾಂತ ಪರಿಸ್ಥಿತಿ.

ಸುಯೇಜ ಕಾಲುವೆ ಪ್ರದೇಶದಲ್ಲಿ ಕಳೆದ ಒಂದು ವಾರದಿಂದ ಪರಿಸ್ಥಿತಿ ಸುಧಾರಿಸಿದೆಯೆಂದು ಇಜಿಪ್ತದ ಗೃಹಮಂತ್ರಿಯವರು ಸುದ್ದಿಗಾರರಿಗೆ ತಿಳಿಸಿದರು.

ಇಸ್ಮಾಲಿಯದಲ್ಲಿ ಗಲಭೆ

ಇಸ್ಮಾಲಿಯಾದಲ್ಲಿ ಕೆಲದಿನಗಳಿಂದ ಶಾಂತಿ ನೆಲೆಸಿತ್ತಾದರೂ ಈಗ ಮತ್ತೆ ಬ್ರಿಟಿಷರ ಮೇಲೆ ತ್ವೇಷಕಾರರ ಘರ್ಷಣೆ ಆರಂಭವಾಗಿದೆಯೆಂದು ತಿಳಿದು ಬರುತ್ತದೆ. ಬ್ರಿಟಿಶ ಸೈನ್ಯ ಶಿಬಿರದ ಮೇಲೆ ಧಾಳಿ ನಡೆದು ಓರ್ವ ಬ್ರಿಟಿಶ ಅಧಿಕಾರಿಗೆ ಗುಂಡಿನೇಟಿನ ಗಾಯವಾಗಿದೆಯೆಂದೂ ತಿಳಿಯುತ್ತದೆ.

ನೆಹ್ರೂರಿಂದ 75 ಸಾವಿರ ರೂ ದಾನ

ಶ್ರೀ ನೆಹರೂರವರಿಗೆ ಇತ್ತೀಚೆಗೆ ತಿರುವಾಂಕೂರು ಕೊಚ್ಚಿನದಿಂದ ಚುನಾವಣಾ ಪ್ರಚಾರಕ್ಕೆ ಬಂದಾಗ ಅರ್ಪಿಸಲ್ಪಟ್ಟ ರೂ 72, 582ಕ್ಕೆ ಶ್ರೀ ನೆಹ್ರೂರವರು 2500 ಸೇರಿಸಿ ಒಟ್ಟಿಗೆ 75 ಸಾವಿರ ರೂಪಾಯಿಯನ್ನು ತಿರುವಾಂಕೂರ ಕೊಚ್ಚಿನ ರಾಜ್ಯಗಳ ಚುನಾವಣಾ ಪ್ರಚಾರಕ್ಕಾಗಿ ಕೊಟ್ಟಿರುವರು.

ಥಾಯಿಲಾಂಡದ ರಾಜಕೀಯ ಕ್ರಾಂತಿ

ಥಾಯಿಲಾಂಡ ಸೈನಿಕರು ಅಧಿಕಾರವನ್ನು ಕಿತ್ತುಕೊಂಡು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವರು. ನೂತನ ಸರಕಾರವನ್ನು ಸ್ಥಾಪಿಸುವ ನಿರ್ಧಾರವನ್ನು ಮಾಡಿದ್ದು ಪದಚ್ಯುತರನ್ನಾಗಿ ಮಾಡಲ್ಪಟ್ಟ ಹಿಂದಿನ ಮುಖ್ಯ ಮಂತ್ರಿ ಮಾರ್ಶಲ್ ಸೋಗ್ರಾಮರನ್ನೇ ತಿರುಗಿ ಮುಖ್ಯ ಮಂತ್ರಿಗಳನ್ನಾಗಿ ಸೈನಿಕ ಅಧಿಕಾರಿಗಳು ನೇಮಿಸಿರುವರೆಂದು ತಿಳಿದು ಬರುತ್ತದೆ.

ಭಾರತ ಜಪಾನ ರಾಯಭಾರಿ ಸಂಬಂಧ

ಏಪ್ರಿಲ ತಿಂಗಳಿಂದ ಭಾರತ ಜಪಾನು ರಾಯಭಾರ ಸಂಬಂಧ ಪ್ರಾರಂಭವಾಗುವದು. ಜಪಾನದೊಡನೆ ಮಾಡಿಕೊಳ್ಳುವ ಪ್ರತ್ಯೇಕ ಶಾಂತಿ ಒಡಂಬಡಿಕೆಯ ಕರಡನ್ನು ಭಾರತವು ಸಿದ್ಧಗೊಳಿಸಿದೆ.

ಚರ್ಚಿಲ್ಲರ ಸ್ವೀಕರಣ

ಮಹಾತ್ಮಾಗಾಂಧಿಯವರು 1943ರಲ್ಲಿ ಆಗಖಾನ್ ಮನೆಯಲ್ಲಿ ಉಪವಾಸ ಕೈಗೊಂಡಾಗ ಅವರಿಗೆ ಗ್ಲುಕೋಜ ಇಂಜಕ್ಷನ್ ಕೊಡಲಾಗಿತ್ತೆಂದು ಚರ್ಚಿಲ್ಲರು ತಮ್ಮ ಯುದ್ಧಸ್ಥಿತಿಯ ಗ್ರಂಥದಲ್ಲಿ ಉಲ್ಲೇಖಿಸಿದ್ದನ್ನು ಡಾ. ಬಿ. ಸಿ. ರಾಯ್, ಪ್ಯಾರೆಲಾಲ್, ಡಾ, ಸುಶೀಲ ನಾಯರ್ ಪ್ರತಿಭಟಿಸಿ ಅದನ್ನು ತಿದ್ದುಪಡಿ ಮಾಡಬೇಕೆಂದು ಕೇಳಿಕೊಂಡಿರುವರು. ತತ್ಫಲವಾಗಿ ಚರ್ಚಿಲ್ಲರಿಂದ ಡಾ. ಬಿ. ಸಿ. ರಾಯರಿಗೆ ಮುಂದಿನ ಖಂಡಗಳಲ್ಲಿ ಅದನ್ನು ವಿಚಾರಕ್ಕೆ ತೆಗೆದುಕೊಳ್ಳಲಾಗುವದೆಂದು ತಂತಿ ಬಂದಿರುವದಾಗಿ ತಿಳಿಯುತ್ತದೆ

ಅಸ್ಸಾಮು ಗುಡ್ಡಗಾಡ ಜನರ ಚುನಾವಣಾ ಬಹಿಷ್ಕಾರ

ಅಸ್ಸಾಮು ರಾಜ್ಯದಲ್ಲಿಯ ಎಂಟು ಜನರು ಶಾಸನ ಸಭೆ ಹಾಗೂ ನಾಗಾಹಿಲ್ಸ ಜಿಲ್ಲಾ ಮಂಡಳಗಳ ಚುನಾವಣೆಯನ್ನು ಬಹಿಷ್ಕರಿಸಿರುವರು. ನಾಮಪತ್ರಗಳನ್ನು ಸಲ್ಲಿಸುವ ನಿರ್ದಿಷ್ಟ ಸಮಯದ ವರೆಗೆ ಯಾವ ನಾಮ ಪತ್ರವನ್ನು ಸಲ್ಲಿಸಿದ್ದಿಲ್ಲ; ನಾಗಾಪರಿಷತ್ತು ಬಹಳ ಕಾಲದಿಂದ ಸ್ವತಂತ್ರ ನಾಗಾ ಪ್ರದೇಶವನ್ನು ನಿರ್ಮಿಸುವ ಬಗ್ಗೆ ಆಂದೋಲನ ನಡೆಸಿದ್ದು ಅಧಿಕಾರಿಗಳು ಲಕ್ಷ್ಯ ಕೊಡದ್ದರಿಂದ ಚುನಾವಣೆಯನ್ನು ಬಹಿಷ್ಕರಿಸುವ ನಿರ್ಧಾರಕ್ಕೆ ಬಂದಿರುವದಂತೆ.

ಶ್ರೀ ನೆಹ್ರೂರವರಿಗೆ 8 ಲಕ್ಷ ರೂ ಹಮ್ಮಿಣಿ

ಚುನಾವಣಾ ಪ್ರಚಾರದ ನಿಮಿತ್ತ ಶ್ರೀ ನೆಹ್ರೂರವರು ಇಂದಿನವರೆಗೆ ಆಗಮಿಸಿದಾಗ 8, 13, 501 ರೂಪಾಯಿಯ ಹಮ್ಮಿಣಿಯೊಂದನ್ನು ಅವರಿಗೆ ಸಮರ್ಪಿಸಲಾಯಿತು.

ಬೇಕಾಗಿದ್ದಾರೆ.

18ct. ರೋಲ್ಡ್‌ಗೋಲ್ಡಿನ ಆಭರಣ ಮತ್ತು ಪೆನ್ನುಗಳ ಮಾರಾಟವನ್ನು ವ್ಯವಸ್ಥಾಪಿಸಲಿಕ್ಕೆ ರೂ. 150/- ಮತ್ತು ಪ್ರತ್ಯೇಕ T.A.ಯ ಮೇಲೆ ಡಿಪೋ ಮೆನೇಜರು ಬೇಕಾಗಿದ್ದಾರೆ. 1 ಕಂಠಹಾರ ಒಂದು ಜೊತೆ ಬೆಂಡೋಲೆ, 3ಜೊತೆ ಬಳೆಗಳು, ಎರಡು ಮೂಗುತಿ ಮತ್ತು ಎರಡು ಉಂಗುರಗಳ ಸ್ಯಾಂಪಲಿಗೆ ಬರೇ ರೂ. 10-0-0 ಪೆನ್ನುಗಳಿಗೆ ರೂ. 10-0-0

Doaulva Traders.
West Vadampakki Street
MADURAI

ಉತ್ತರಗಳನ್ನು ರಿಜಿಸ್ಟರ್ಡ್ ಪೋಸ್ಟಿನ ಮೂಲಕವೇ ಕಳುಹಿಸತಕ್ಕದ್ದು

ಮೆಟ್ರೋ 255-S

ಬಹುಮಾನ ರೂ. 60,000

ಪ್ರಥಮ ಬಹುಮಾನ (ಎಲ್ಲಾ ಸರಿಯಾದುದಕ್ಕೆ) ರೂ. 40,000

ದ್ವಿತೀಯ ಬಹುಮಾನ (ಮೊದಲಿನ ಎರಡುಸಂಖ್ಯೆ ಸರಿಯಾದುದಕ್ಕೆ) ರೂ 20,000

ಒಂದು ಉತ್ತರಕ್ಕೆ ರೂ. 1. ರೂ. 8ಕ್ಕೆ 24 ಉತ್ತರಗಳನ್ನು ಕಳುಹಿಸಬಹುದು.
ನಿಬಂಧನೆಗಳನ್ನು ಅಪೇಕ್ಷಿಸಿದಲ್ಲಿ ಕಳುಹಿಸಲಾಗುವುದು.
ಉತ್ತರ ಕಳುಹಿಸಲು ಕೊನೆಯ ತಾರೀಖು 20-12-51

22ರಿಂದ 25ರ ವರೆಗಿನ ಅಂಕಗಳನ್ನು ಮೊತ್ತವು 94 ಬರುವಂತೆ ಈ ಚೌಕದಲ್ಲಿ ಅಳವಡಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಉಪಯೋಗಿಸತಕ್ಕದ್ದು. ಉತ್ತರಗಳನ್ನು ಖಾಲಿ ಕಾಗದದ ಮೇಲೆ ಇಂಗ್ಲಿಷಿನಲ್ಲೇ ಬರೆಯಬಹುದು. ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಿ ಬರೆಯತಕ್ಕದ್ದು. ಮನಿಯಾರ್ಡರಿನಲ್ಲಿಯೂ ಉತ್ತರಕಳಿಸುವ ಕೂಪನಿನಲ್ಲಿಯೂ ಇಂಗ್ಲಿಷಿನಲ್ಲೇ ಈ ರೀತಿ ವಿಳಾಸ ಬರೆಯಿರಿ:-

Metro 255-S (N. Y. U) Madurai

ನಿಮ್ಮ ಸಂಪೂರ್ಣ ವಿಳಾಸವನ್ನೂ ಸ್ಪರ್ಧೆಯ ಸಂಖ್ಯೆಯನ್ನೂ ಉತ್ತರದ ಕಾಗದದಲ್ಲಿಯೂ ಮನಿಯಾರ್ಡರ ಕೂಪನಿನಲ್ಲಿಯೂ ಇಂಗ್ಲಿಷಿನಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆಯತಕ್ಕದ್ದು.

ಉತ್ತರ ಬೇಕಾದಲ್ಲಿ ನಿಮ್ಮ ವಿಳಾಸ ಬರೆದ ಪೋಸ್ಟು ಕವರನ್ನು ಉತ್ತರದೊಂದಿಗೆ ಕಳುಹಿಸಬೇಕು. ಮೆಟ್ರೋ 251-S ಉತ್ತರ 65 62-63 64 ಪ್ರಥಮ ಬಹುಮಾನ (ಎಲ್ಲಾ ಸರಿಯಾದ ಉತ್ತರಕ್ಕೆ) ರೂ. 6342-1-0 ಪ್ರತಿಯೊಂದಕ್ಕೆ ದ್ವಿತೀಯ ಬಹುಮಾನ (ಪ್ರಥಮ ಎರಡು ಸಂಖ್ಯೆ ಸರಿಯಾದ್ದಕ್ಕೆ) ರೂ. 2179-14-0, ಪ್ರತಿಯೊಂದಕ್ಕೆ.

ಕುಂಬಳೆ:— ಮಾನ್ಯ ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರು ತಾ. ೧೮ರಂದು ಇಲ್ಲಿಗೆ ಆಗಮಿಸಿ ಚುನಾವಣಾ ಪ್ರಚಾರ ಕಾರ್ಯಾರ್ಥ ಹಲವರೊಡನೆ ಮಾತುಕತೆ ನಡೆಸಿರುವರು.

ಕಾಂಗ್ರೆಸ್, ಪ್ರಜಾಪಕ್ಷ, ಮುಸ್ಲಿಂಲೀಗ್ ಎಲ್ಲಾ ಪಾರ್ಟಿಯವರ ಚುನಾವಣಾ ಪ್ರಚಾರ ನಡೆಯುತ್ತಿದೆ.

ಎಣ್ಮಕಜೆ:— ಈ ಸೀಮೆಯ ಕಂಬಳವು ತಾ. 9-12-51ನೇ ಆದಿತ್ಯವಾರ ಜರಗುವುದು.

ಮೂಡುಬೆಳ್ಳೆ:-ತಾ. 3-12-51ರಲ್ಲು ಡಾ। ಶ್ಯಾಮ ಶೆಟ್ಟರ "ಮರ್ಸಿ ಕ್ಲಿನಿಕ್" ಎಂಬ ದವಾಖಾನೆಯು Rev Fr. ಚಾರ್ಲ್ಸ್ ಸಲ್ಡಾನರ ದಿವ್ಯ ಹಸ್ತದಿಂದ ತೆರೆಯಲ್ಪಟ್ಟಿತು, ಪಂಚಾಯತು ಬೋರ್ಡ್ ಪ್ರೆಸಿಡೆಂಟ್ ಕೆ. ಗೋಪಾಲ್ ಕೃಷ್ಣ ಬಳ್ಳಾಲರು ಅಧ್ಯಕ್ಷತೆ ವಹಿಸಿದ್ದು, ಊರ, ಪರಊರ ಗ್ರಾಮಸ್ಥರು ಹಾಜರಿದ್ದು, ಕಾಲೋಚಿತ ಮಾತುಗಳನ್ನಾಡಿ ಲಘುಪಹಾರದೊಂದಿಗೆ ಸಭೆಯು ಮುಕ್ತಾಯವಾಯ್ತು.

ಮಣಿಪಾಲ:-ಇದೇ ತಾ. 1ರಲ್ಲಿ ಇಲ್ಲಿಯ ಹೈಸ್ಕೂಲಿನ ವಿಜ್ಞಾನ ಸಂಘದ ಉದ್ಘಾಟನಾ ಸಮಾರಂಭವು ಡಾ। ಟಿ. ಮಾಧವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಯು. ಪುಂಡಲೀಕ ಶೆಣೈ ಅವರು ಸಂಘದ ಆವಶ್ಯಕತೆಯ ಕುರಿತು ಮಾತನಾಡಿದರು. ಅನಂತರ ವಿಜ್ಞಾನದ ಶಿಕ್ಷಕರಾದ ಶ್ರೀ ಭಾಸ್ಕರ ಭಟ್ಟರು ಸಂಘದ ಅಂಗರಚನೆಯನ್ನು ವಿವರಿಸಿದ ನಂತರ ಅಧ್ಯಕ್ಷರು ಮಾನವನ ನಿತ್ಯ ಜೀವನದಲ್ಲಿ ವಿಜ್ಞಾನದ ಮಹತ್ವವನ್ನೂ, ನೈಸರ್ಗಿಕ ವಿಜ್ಞಾನದ ಘನಸ್ಥಿತೆಯನ್ನೂ ಸುಂದರವಾಗಿ ವಿವರಿಸಿದರು.

ಎಲ್ಲೆಲ್ಲೂ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು

ಉಪ್ಪೂರಲ್ಲಿ ಕಳೆದ ತಾ. 26ರಂದು ರಾತ್ರಿ ಗಣಪತಿ ದೇವಸ್ಥಾನದ ಬಳಿಯಲ್ಲಿ ಶ್ರೀ ಯು. ಶಿವರಾಮ ಭಟ್ಟರ ಅಧ್ಯಕ್ಷತೆಯಲ್ಲೂ ತಾ. 27ರಲ್ಲು ಕುಂಜಾಲಿನಲ್ಲಿ ಶ್ರೀ ಕುಶಲ ಶೆಟ್ಟರ ಅಧ್ಯಕ್ಷತೆಯಲ್ಲೂ ಅಂದೇ ರಾತ್ರಿ ಆರೂರಲ್ಲಿ ಶ್ರೀ ಎ. ನರಸಪ್ಪಯ್ಯನವರ ಅಧ್ಯಕ್ಷತೆಯಲ್ಲೂ, ತಾ 28ರಲ್ಲು ಪೂರ್ವಾಹ್ನ ಕಲ್ಯಾಣಪುರದಲ್ಲಿ ಶ್ರೀ ಜೆ ಪಿ. ರೇಗೋರವರ ಅಧ್ಯಕ್ಷತೆಯಲ್ಲೂ ಮಧ್ಯಾಹ್ನ ಬ್ರಹ್ಮಾವರದಲ್ಲಿ ಶ್ರೀಮತಿ ಟಿ ಸಂಜೀವಿ ಬಾಯಿಯವರ ಅಧ್ಯಕ್ಷತೆಯಲ್ಲೂ, ಅಪರಾಹ್ನ ಸಾಸ್ತಾನ ಮೈದಾನದಲ್ಲಿ ಡಾ. ಎ. ಹಿರಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲೂ, ಬಳಿಕ ಸಾಲಿಗ್ರಾಮದಲ್ಲಿ ಡಾ। ಯು. ಎಸ್. ಕಲ್ಕೂರರ ಅಧ್ಯಕ್ಷತೆಯಲ್ಲೂ, ಸಂಜೆ ಕೋಟದಲ್ಲಿ ಶ್ರೀ ಕಕ್ಕುಂಜೆ ರಾಮಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲೂ, ಕಕ್ಕುಂಜೆಯಲ್ಲಿ ಶ್ರೀ. ಚಂದ್ರಶೇಖರ ಅಡಿಗರ ಅಧ್ಯಕ್ಷತೆಯಲ್ಲೂ, ಕೋಟೇಶ್ವರದಲ್ಲಿ ಡಾ. ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲೂ, ಕುಂದಾಪುರದಲ್ಲಿ ರಾತ್ರಿ 8 ಗಂಟೆಗೆ ಜನಾಬ್ ಕೆ. ಹಸನ್ ಸಾಹೇಬರ ಅಧ್ಯಕ್ಷತೆಯಲ್ಲೂ ತಾ, 29ರಲ್ಲು ಸಂಜೆ ಕಮ್ಮಣ್ಣನಲ್ಲಿ ಜನಾಬ್ ಟಿ. ಇಬ್ರಾಹಿಮ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲೂ, ಪೇತ್ರಿಯಲ್ಲಿ ತಾ. 1ರಲ್ಲು ಶ್ರೀ ಕೆ. ವಿ. ಕುಡುವರ ಅಧ್ಯಕ್ಷತೆಯಲ್ಲೂ, ಇದೇ ತಾ, 2ರಲ್ಲು ಮೊಳಹಳ್ಳಿಯಲ್ಲಿ ಶ್ರೀ. ಕೆ. ರಾಮಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲೂ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು ಜರಗಿದವು. ಕಲ್ಯಾಣಪುರದಿಂದ ಕುಂದಾಪುರದ ತನಕ ಜರಗಿದ ಸಭೆಗಳಲ್ಲಿ ಮಾನ್ಯ ಮಂತ್ರಿ, ದಿವಾಕರರು ವಿಶೇಷತಃ ಹಾಜರಿದ್ದು ಭಾಷಣಗಳನ್ನು ಮಾಡಿದರು. ಇತರ ಕಡೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳಾದ ಶ್ರೀಗಳಾದ ಶ್ರೀ ಜಗಜ್ಜೀವನದಾಸ ಶೆಟ್ಟಿ, ಶ್ರೀ ವೈ. ಮಂಜಯ್ಯ ಶೆಟ್ಟಿ, ಹಾಗೂ ಶ್ರೀಗಳಾದ ಡಿ. ಬಿ. ಅಂತಯ್ಯ ಶೆಟ್ಟಿ, ಡಾ। ಎ. ಹಿರಿಯಣ್ಣ ಶೆಟ್ಟಿ, ಶ್ರೀನಿವಾಸ ರಾವ್. ಎಮ್. ಡಿ. ಹೆಗ್ಡೆ, ದಿ. ರಘುರಾಮ ಶೆಟ್ಟಿ, ನರಸಿಂಹ ಕಲ್ಕೂರ, ಡಾ। ಯು. ಕೃಷ್ಣ, ಸುಂದರ ಶೆಟ್ಟಿ, ಕೆ. ಶಿವರಾಮ ಶೆಟ್ಟಿ, ರಾಮನ್ ಗುರುಕಳ್ ಕೆ. ರಾಮ ನಾಯಕ್, ಮೊದಲಾದವರು ವಿವಿಧ ಕೇಂದ್ರಗಳಲ್ಲಿ ಭಾಷಣವಿತ್ತರು. ನಾಗೂರಲ್ಲಿ ಶ್ರೀ ಎಚ್. ಭಾಸ್ಕರ ಶಂಭಿಯವರ ಅಧ್ಯಕ್ಷತೆಯಲ್ಲಿಯೂ ಹೇರಂಜಾಲಿನಲ್ಲಿಯೂ, ತ್ರಾಸಿಯಲ್ಲಿಯೂ ಮಾರಣಕಟ್ಟೆಯಲ್ಲಿ ಶ್ರೀ ಶೀನಪ್ಪ ಶೆಟ್ರ ಅಧ್ಯಕ್ಷತೆಯಲ್ಲೂ ಕಳೆದ ವಾರ ಪ್ರಚಾರ ಸಭೆಗಳು ಜರಗಿದವು.

ಪುತ್ತೂರಲ್ಲಿ ಕಾಂಗ್ರೆಸ್ ಪ್ರಚಾರ ಸಭೆ— ಕಳೆದ ತಾ. 26ರಲ್ಲಿ ಸಂಜೆ ಸ್ಥಳೀಯ ಕೋರ್ಟ್ ಮೈದಾನದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು ಮಾನ್ಯ ಮದ್ರಾಸು ಮಂತ್ರಿ ಶ್ರೀ ಎ. ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವಕೀಲ್ ಶ್ರೀ ಕೆ. ಕೃಷ್ಣ ಮಲ್ಯರು ಪ್ರಮುಖ ಅತಿಥಿಗಳ ಪರಿಚಯ ಮಾಡಿದ ಬಳಿಕ ಕೇಂದ್ರ ಸರಕಾರದ ಸುದ್ದಿ ವಾರ್ತಾ ಬಾನುಲಿ ಶಾಖಾ ಮಾನ್ಯಮಂತ್ರಿ ಶ್ರೀ ಆರ್. ಆರ್. ದಿವಾಕರರು ಕಾಂಗ್ರೆಸಿನ ತ್ಯಾಗ, ಸಮರ್ಥ ಸೇವೆ ಮೊದಲಾದುವುಗಳನ್ನು ವಿವರಿಸಿ, ಸಂದಿಗ್ಧ ಚುನಾವಣೆಯ ಮಹತ್ವವನ್ನು ಸ್ಪಷ್ಟಪಡಿಸಿದರು. ಈ ಚುನಾವಣೆ ರಂಗಕ್ಕೆ ವಿವಿಧಪಕ್ಷಗಳ ಹುರಿಯಾಳುಗಳು ಮುಂದೆಬಂದರೂ ಸ್ವತಂತ್ರ ಭಾರತವನ್ನು ನಡೆಸಿಕೊಂಡು ಹೋಗುವ ಹೊಣೆಗಾರಿಕೆಯನ್ನು ಪ್ರಬಲಪಕ್ಷ ಕಾಂಗ್ರೆಸ್ ವಿನಹ ಇತರ ಪಕ್ಷಗಳಿಂದ ಹೊರಲು ಅಸಾಧ್ಯವೆಂದರು. ಆದುದರಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳಿಗೆ ಮತದಾನವಿತ್ತು ಪ್ರೋತ್ಸಾಹಿಸಬೇಕೆಂದರು. ಶ್ರೀ ಬೆನಗಲ್ ಶಿವರಾಯರೂ ಕಾಂಗ್ರೆಸ್ ವಿರೋಧಿ ಪಕ್ಷಗಳು ಏನೇನು ಅಪಪ್ರಚಾರ ಮಾಡುತ್ತಿವೆ ಎಂಬುದನ್ನು ತಿಳಿಸಿದರು. ಸಭಾಧ್ಯಕ್ಷರು ತನ್ನ ಭಾಷಣದಲ್ಲಿ ಕಾಂಗ್ರೆಸ್ ಸಂಸ್ಥೆಯು ಸ್ವತಂತ್ರ ಭಾರತದ ಜನತೆಯನ್ನು ಉದ್ಧರಿಸಲು ಬದ್ಧಕಂಕಣವಾಗಿದೆ ಎಂದು ಹೇಳಿ ಮದ್ರಾಸು ಸರಕಾರವು ಜನಹಿತ ದೃಷ್ಟಿಯಿಂದ ಮಾಡಿದ ಸಾಹಸಕಾರ್ಯಗಳ ವಿವರಣೆಯಿತ್ತರು. ಶ್ರೀ ನರಸಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಕಾರ್ಯವು—ಭರದಿಂದ ಸಾಗುತ್ತಿದೆ. ಎಲ್ಲೆಲ್ಲಿಯೂ ಕಾಂಗ್ರೆಸಿಗೆ ಬೆಂಬಲವು ವ್ಯಕ್ತವಾಗುತ್ತಿದೆ. ಅಲೆವೂರು ಬೆಳ್ಳೆ, ಕುರ್ಕಾಲು, ಮಂಚಕಲ್, ಕಟಪಾಡಿ, ಹಿರಿಯಡ್ಕ, ಪರ್ಕಳ, ಪಾದೂರು, ಮುದ್ರಂಗಡಿ, ಕಡೆಕಾರು ಕಾಪು, ಮೊದಲಾದ ಕಡೆಗಳಲ್ಲಿ ಸಭೆ ಭಾಷಣಗಳಾದುವು ಕಟಪಾಡಿಯಲ್ಲಿ ತಾ. 3ನೇ ರಾತ್ರಿ ಯಕ್ಷಗಾನ ಆಟದ ಸಲುವಾಗಿ ಸೇರಿದ 7-8 ಸಾವಿರ ಜನರ ಪ್ರಚಂಡ ಸಭೆಯಲ್ಲಿ ಶ್ರೀಗಳಾದ ಶ್ರೀಪತಿ ಆಚಾರ್, ಕೆ. ಮುದ್ದು ಸುವರ್ಣ, ಡಾ. ಪಿ. ಆರ್. ನಾಯಕ್, ನಾರಾಯಣ ಕಿಲ್ಲೆ ಮೊದಲಾದವರು ಸ್ಫೂರ್ತಿದಾಯಕ ಭಾಷಣ ಮಾಡಿ ಕಾಂಗ್ರೆಸ್ಸಿಗೇ ಬೆಂಬಲಕೊಡಬೇಕೆಂದರು. ಎಸೆಂಬ್ಲಿ ಉಮೇದ್ವಾರ ಶ್ರೀ ಟಿ. ಅನಂತ ಪೈಗಳು ತನ್ನನ್ನು ಆರಿಸಿದಲ್ಲಿ ತನ್ನಿಂದಾದ ಸೇವೆ ಸಲ್ಲಿಸುವುದಾಗಿ ಹೇಳಿದರು.

ಮಂಗಳೂರು

ಜಿಲ್ಲಾ ಆಹಾರಾಭಿವೃದ್ಧಿ ಇಂಜಿನಿಯರಿಂಗ್ ಸಬ್ ಡಿವಿಜನ್ ಶಾಖೆಯೊಂದು ತೆರೆಯಲ್ಪಟ್ಟಿರುತ್ತದೆ. ಅದಕ್ಕೆ ಒಬ್ಬ ಇಂಜಿನಿಯರನನ್ನೂ ಆರು ಸುಪರ್‌ವೈಸರರನ್ನೂ ನೇಮಿಸಿದ್ದಾರೆ. ಇರಿಗೇಶನ್ ಅಸಿಸ್ಟಂಟ್ ಇಂಜಿನಿಯರು ಬಿ. ಕೆ. ಮಂಜುನಾಥಯ್ಯನವರು ಅದರ ಚಾರ್ಜಿನಲ್ಲಿರುತ್ತಾರೆ. ಈ ಸಬ್ ಡಿವಿಜನು ನಾದುರುಸ್ತಿಯಲ್ಲಿರುವ ಎಲ್ಲಾ ಕೆರೆ, ತೋಡು, ಒರತೆ ಕಟ್ಟಗಳನ್ನು ವೃದ್ಧಿಗೆ ತರುವುದು.

ಜಿಲ್ಲಾ ಆಹಾರೋತ್ಪತ್ತಿ ಸಮಿತಿಯು ಕಳೆದ ತಾ. 24ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು ನೇತ್ರಾವತಿ ನೀರಾವರಿ ಸಹಕಾರಿ ಸಂಘದ ವಿಚಾರವಾಗಿ ಚರ್ಚಿಸಲ್ಪಟ್ಟಾಗ ಜಿಲ್ಲೆಯ ಮೊತ್ತಮೊದಲಿನ ಸಂಘವೇ ಸಾಯುವಂತಾಗಿದೆ ಎಂದೂ ಅದರ ವಿಚಾರದಲ್ಲಿ ಅಧಿಕಾರಿಗಳೆಂದು ತನಿಖೆ ನಡೆಸಿ ಏನಾಗಿದೆ ಎಂಬುದನ್ನಾದರೂ ತಿಳಿಯಬೇಕೆಂದೂ ಶ್ರೀ, ಎಮ್. ಶಿವರಾಯರು ಸೂಚಿಸಿದರು ಕೃಷಿ ಜಿಲ್ಲಾಧಿಕಾರಿಗಳು ಅಲ್ಲಿನ ಕಾರ್ಯದ ವಿಚಾರವಾಗಿ ತಮಗೆ ಯಾವ ರೀತಿಯ ವರದಿಯಾಗಲೀ ದೂರಾಗಲೀ ಬಾರದಿರುವುದರಿಂದ ಎಲ್ಲವೂ ಸರಿಯಾಗಿಯೇ ನಡೆದಿದೆ ಎಂದು ಸಮರ್ಥಿಸಿಕೊಂಡರು. ಕೊನೆಗೆ ಆ ಸಂಘಕ್ಕೆ ಕೊಟ್ಟ ಪಂಪಿನ ಬಾಡಿಗೆಯನ್ನು ಕಡಿಮೆ ಮಾಡುವ ಮತ್ತು ಪುತ್ತೂರು ಆರ್. ಡಿ. ಒ. ರವರು ಸಂಘವನ್ನು ಸಂದರ್ಶಿಸಬೇಕೆಂದೂ ನಿರ್ಣಯವಾಯಿತು.

ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಕಳೆದ ತಾ. 29ರಂದು ಕೇಂದ್ರ ಮೈದಾನಿನಲ್ಲಿ ಶ್ರೀಮತಿ ಎಲಿಸ್ ಆಲ್ವಾರಿಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಕೇರಳದ ಶ್ರೀ ಶ್ರೀಧರನ್ ಅವರು ಈ ಬಾರಿ ಚುನಾವಣೆ ರಂಗಕ್ಕಿಳಿದ ಪ್ರಮುಖ ಪಕ್ಷಗಳ ಘೋಷಣೆಗಳನ್ನು ಪರಿಶೀಲಿಸಿದರು, ಕಮ್ಯೂನಿಸ್ಟರ ಟೊಳ್ಳು ಪ್ರಚಾರವು ದೇಶದ್ರೋಹಕರವಾಗಿದೆ ಎಂದೂ ಹೇಳಿದರು, ಕಳೆದ ನಾಲ್ಕೂವರೆ ವರ್ಷದಲ್ಲಿ ಕಾಂಗ್ರೆಸ್ ಮಹಾ ಕಾರ್ಯವನ್ನೇನೂ ಸಾಧಿಸಿಲ್ಲವೆಂದು ಅಧ್ಯಕ್ಷೆಯರು ತಿಳಿಸಿದರು.

ನಾಮಪತ್ರಗಳ ಸ್ವೀಕಾರ—ಕೇಂದ್ರ ಪಾರ್ಲಿಮೆಂಟಿನ ಹಾಗೂ ಮದ್ರಾಸು ಎಸೆಂಬ್ಲಿಯ ಸದಸ್ಯತನಕ್ಕೆ ಉಮೇದ್ವಾರರಾಗಿ ಸಲ್ಲಿಸಿದ ಎಲ್ಲಾ ನಾಮಪತ್ರಗಳು ಆಯಾಯ ರಿಟರ್ನಿಂಗ್ ಆಫೀಸರರುಗಳಿಂದ ಪರಿಶೀಲಿಸಲ್ಪಟ್ಟು ಕಳೆದ ತಾ. 29ರಲ್ಲಿ ಸ್ವೀಕರಿಸಲ್ಪಟ್ಟಿವೆ ಎಂದು ತಿಳಿದು ಬರುತ್ತದೆ. ಕೆಲವರು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡಿರುವರು. ಆದರೆ ಎಲ್ಲಾಸ್ಥಾನಗಳಿಗೂ ಸ್ಪರ್ಧೆ ಇದೆ.

ಅಲಂಗಾರು ಕೃಷ್ಣ ಹೆಗ್ಡೆಯವರ ನಿಧನ

ದ. ಕ. ಕಾಂಗ್ರೆಸ್ ಕಾರ್ಯಸಮಿತಿ ಹಾಗೂ ಸರ್ಕಲ್ ಕಾಂಗ್ರೆಸ್ ಸಮಿತಿಗಳ ಸದಸ್ಯರೂ ಪೆರ್ಡೂರು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರೂ ಆದ ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಡೆಯವರ ಆಕಾಲಿಕ ನಿಧನ ವಾರ್ತೆಯನ್ನು ಕೇಳಿ ಅತ್ಯಂತ ವಿಷಾದವಾಗಿದೆ. ಶ್ರೀ ಹೆಗ್ಡೆಯವರು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಾಗಿದ್ದು ಪೆರ್ಡೂರು, ಆಸುಪಾಸಿನ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿದ್ದರು. ಸೌಜನ್ಯ-ಸಹಕಾರ ಮನೋವೃತ್ತಿಯಿಂದ ಅತ್ಯಂತ ಜನಪ್ರಿಯ ವ್ಯಕ್ತಿಗಳೂ ಆಗಿದ್ದರು. ಈಚೆಗೆ ಪೆರ್ಡೂರು ದೇವಸ್ಥಾನ ಎಕ್ಸಿಕ್ಯೂಟಿವ್ ಆಫೀಸರರಾಗಿದ್ದು ನಾನಾ ಬಗೆಯ ಸುಧಾರಣೆಯನ್ನು ಕೈಗೊಂಡಿದ್ದರು. ಮುಂಬರುವ ಚುನಾವಣೆಯ ಬಗ್ಗೆ ತನ್ನ ಶಕ್ತಿಮೀರಿ ದುಡಿದು ತನ್ನ ಕಾರ್ಯಕ್ಷೇತ್ರದಲಿ ಕಾಂಗ್ರೆಸ್ಸಿಗೆ ಸಂಪೂರ್ಣ ಜಯಸಿಕ್ಕುವಂತೆ ಅವರು ಶ್ರಮವಹಿಸಿದ್ದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀ ಹೆಗ್ಡೆಯವರ ನೆರವು ಅತ್ಯಾವಶ್ಯಕವಾಗಿರುವಾಗಲೇ ಅವರು ನಮ್ಮನ್ನಗಲಿ ಹೋದರು. ದೀರ್ಘಕಾಲದ ನಿಃಸ್ವಾರ್ಥ ಸೇವೆ ಹಾಗೂ ಜನಾನುರಾಗದ ಫಲವಾಗಿ ಶ್ರೀ ಹೆಗ್ಡೆಯವರ ಅಕಾಲಿಕವಾದ ನಿಧನದಿಂದ ಆಸುಪಾಸಿನ ಜನಕ್ಕೂ- ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಸರ್ಕಲ್ ಕಾಂಗ್ರೆಸ್ ಸಮಿತಿಗೂ ಅತೀವ ವಿಷಾದವುಂಟಾಗಿದೆ. ಈ ಸಂದರ್ಭದಲ್ಲಿ ಶ್ರೀ ಹೆಗ್ಡೆಯವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಧರ್ಮ ಪತ್ನಿ- ಬಂಧುಬಾಂಧವರ ದುಃಖದಲ್ಲಿ ನಾವುಸಹ ಭಾಗಿಗಳಾಗಿದ್ದೇವೆಂದು ಅವರೆಲ್ಲರ ಪರವಾಗಿ ತಿಳಿಸುವದು ನನ್ನ ಕರ್ತವ್ಯವಾಗಿದೆ.

ಬಕ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೆ
ಕರ್ನಾಟಕ ಪ್ರಾಂ. ಕಾಂ. ಸಮಿತಿ ಸದಸ್ಯ
ಮತ್ತು ಸರ್ಕಲ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ
ಉಡುಪಿ

ಸುಲಭದಲ್ಲಿ ಮಿತಸಂತತಿ
ನಮ್ಮ ತೊಡಕಿಲ್ಲದ ರಬ್ಬರು ಉಪಕರಣಗಳನ್ನು ಉಪಯೋಗಿಸಿರಿ. ಗಂಡಸರಿಗೆ ರೂ- 3-8-0 ಹೆಂಗಸರಿಗೆ ರೂ. 5-8-0
Perumal Traders,
Near Y.M.C A, MADURAI

ಮಹಾತ್ಮರ ಉಪದೇಶ! ಖಾತರಿ ಗುಣ!!!
92ವರ್ಷದ ಚಾಲ್ತಿ!!
ಮೈಸೂರು ಶ್ರೀಮನ್ಮಹಾರಾಜರ ಖಾಸ್ ವೈದ್ಯ ನರಸಿಂಹ ಪಂಡಿತರ ಮನೆತನ
ಅಂಬಳೆ ರಾಮಸ್ವಾಮಿ ಅಯ್ಯಾರ್‌ರವರ
✻ಸಂತಾನ ಸಿಂಧೂರ✻
ಮಹಿಳೆಯರ ಬಹಿಷ್ಠೆ (ಮುಟ್ಟಿನ) ಸಂಬಂಧದ ಹೊಟ್ಟೆನೋವು, ಇದರ ಜೊತೆಗೆ ಮೈಕೈ ನೋವು, ಬೆನ್ನುನೋವು ನಡುಸೆಳತ ಅಶ್ರಮ, ಸೂತಿಕ, ಗರ್ಭಸ್ರಾವ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ.
ಕ್ರಯ:-1ಸೆಟ್ 5ರೂ. ಪೋಸ್ಟೇಜ್ ಮತ್ತು ಪ್ಯಾಕಿಂಗ್ 1ರೂ. 6ರೂ. ಮನಿಯಾರ್ಡರ್ ಮಾಡಿರಿ, ಕೂಡಲೆ ಔಷಧಿ ಪಾರ್ಸಲ್ ರವಾನೆ. ವಿ. ಪಿ. ಇಲ್ಲ. ಪತ್ರವ್ಯವಹಾರ ಗುಪ್ತ. ಕೆಟಲಾಗ್ ಉಚಿತ. ಚಟ್ಟಿನ ಮಾಹಿತಿಗೆ 2ಅಣೆ ಸ್ಟಾಂಪ ಕಳಿಸಿ.
ವಿಳಾಸ:-A. ರಾಮಸ್ವಾಮಿ ಅಯ್ಯಾರ್ ಸನ್; ಪ್ರೊಪ್ರೈಟರ್, "ಸಂತಾನ ಸಿಂಧೂರ" 1} 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.
ಶಾಖೆ:- 2) ಅಂಬಳೆ ಪೋಸ್ಟ್, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್, ವೈಯ, ಕೊಳ್ಳೇಗಾಲ.



Approved from by the Govt. of Mysore Certificated by the Agent of the Govt of Cylone. & Indian

ವಿವಾಹಿತ ಸ್ತ್ರೀಪುರುಷರ ಸುಖಭೋಗಕ್ಕೆ ಟೆಂಪ್ಲೋ ಮಾತ್ರೆಗಳನ್ನು ಉಪಯೋಗಿಸಿರಿ- 10 ಸ್ಯಾಂಪಲ್ ಮಾತ್ರೆಗಳಿಗೆ ರೂ 3-0-0 ಮೂವತ್ತು ದಿನಗಳ 60ಮಾತ್ರೆಗಳಿಗೆ ರೂ- 15-0-0
Mani & mani
23 Muthaiah Pillc Street, MADURAI S.I.

ಬಾಲಚಂದ್ರ
ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ
ಉಡುಪಿ.
ಸ್ಥಾಪಕರು:
ಶ್ರೀ ಉಳ್ಳಾಲ ಮಂಗೇಶರಾವ್,
ಬಿ. ಎ, ಎಲ್. ಟಿ.
ಸಂಪಾದಕರು:
ಕೆ.ಆರ್ ಶೆಣೈ ಮತ್ತು ಕೆ ಎಚ್.ಶೆಟ್ಟಿ
ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ
ವಾರ್ಷಿಕ ಚಂದಾ ರೂ 3-0-0
ಮೆನೇಜರ್,
ಬಾಲಚಂದ್ರ, ಉಡುಪಿ,

ಮಂಗಳೂರಲ್ಲಿ ಮಾನ್ಯ ದಿವಾಕರರು ಕೇಂದ್ರ ಸರಕಾರದ ಸುದ್ದಿ ಮತ್ತು ಬಾನುಲಿ ಖಾತೆಯ ಉಪಮಂತ್ರಿಗಳಾದ ಮಾನ್ಯ ದಿವಾಕರರು ತಾ. 29ರಲ್ಲಿ ಸಾಯಂಕಾಲ ಜಿಲ್ಲೆಯ ಉತ್ತರ ಭಾಗದ ಸಂಚಾರವನ್ನು ಮುಗಿಸಿಕೊಂಡು ಮಂಗಳೂರಿಗೆ ಆಗಮಿಸಿದರು. ಅವರ ಕೂಡೆ ಡಾ. ಯು. ಪಿ. ಮಲ್ಯರೂ ಇದ್ದರು.

ಸಂಜೆ 5 ತಾಸಿಗೆ ಮಾನ್ಯ ಮಂತ್ರಿಗಳು ಪತ್ರಿಕೋದ್ಯೋಗಿಗಳನ್ನು ಕಂಡು, ಅವರ ಖಾತೆಗೆ ಸಂಬಂಧಪಟ್ಟ ವಿಷಯಗಳ ಕುರಿತು ಪತ್ರಿಕೋದ್ಯೋಗಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ದಕ್ಷಿಣ ಕನ್ನಡಕ್ಕೆ ಎ. ಐ. ಆರ್. ಸ್ಟೇಶನೊಂದು ಕೊಡಲು ಅಸಾಧ್ಯವಾದರೂ, ಬೆಂಗಳೂರಿನ ಕೇಂದ್ರವನ್ನು ಮತ್ತಷ್ಟು ಶಕ್ತಿಯುತ ಮಾಡಿ ಅದರಿಂದ ನಮ್ಮ ಜಿಲ್ಲೆಗೆ ಬೇಕಾದ ಸೌಲಭ್ಯಗಳನ್ನು ಕೊಡಿಸಬಹುದೆಂದರು. ಆಂಧ್ರ ಪ್ರಾಂತರಚನೆಯ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರ ಕೊಡುತ್ತಾ- ಭಾರತ ಹೊಸ ಘಟನೆಯು ಜ್ಯಾರಿಗೆ ಬರುವ ಮೊದಲು ಆಂಧ್ರ ಪ್ರಾಂತವು ಅವರ ಜೊತೆಗೆ ಕರ್ನಾಟಕವೂ- ರಚನೆಯಾಗಿದ್ದರೆ ಉತ್ತಮವಿತ್ತು. ಕೆಲವು ಅಡಚಣೆಗಳಿಂದಾಗಿ ಹಾಗಾಗಲಿಲ್ಲ. ಈಗ ಘಟನೆಯ ಮೂರನೆಯ ವಿಧಿಯನುಸಾರ ಎಲ್ಲವೂ ಪ್ರಜಾಪ್ರಭುತ್ವವಾಗಬೇಕಾದ್ದರಿಂದ - ಅದು ಚುನಾವಣೆಯ ನಂತರ ಅಧಿಕಾರಕ್ಕೆ ಬರುವ ಸರಕಾರದ ಪಾಲಿಗೆ ಬೀಳುವುದೆಂದರು. ಗೊಬ್ಬರದ ಕುರಿತು ಅವರು ಮಾತನಾಡುತ್ತಾ- ನಮ್ಮ ದೇಶದಲ್ಲಿ ಸಿಂದ್ರಿ ಕಾರ್ಖಾನೆಯು ಗೊಬ್ಬರದ ತಯಾರಿಯನ್ನು ಪ್ರಾರಂಭಿಸಿದೆ. ಒಂದೆರಡು ವರ್ಷಗಳೊಳಗೆ ದಿನಕ್ಕೆ ಒಂದು ಸಾವಿರ ಟನ್ನಿನಷ್ಟು ಗೊಬ್ಬರವನ್ನು ತಯಾರಿಸಲಾಗುವುದು ಆ ಮೇಲೆ ಗೊಬ್ಬರಗಳಿಗಾಗಿ ದೇಶದಿಂದ ಹೊರಹೋಗುವ ಹೆಚ್ಚಿನ ಹಣವು ನಮ್ಮದೇಶದಲ್ಲೇ ಉಳಿಯುವುದೆಂದು ಹೇಳಿದರು.

ಕೇಂದ್ರ ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ ಮಂಗಳೂರಿನಂತಹ ನಗರದಲ್ಲಿ ಭಾಷಣಮಾಡಲು ತನಗೆ ಸಂದಾ ಉತ್ಸಾಹವಾಗುತ್ತಿದೆ. ಕಾರಣ ಇಂದು ಮಂಗಳೂರ ಮಿದುಳೇ ಭೂಲೋಕವನ್ನು ಬೆಟ್ಟುಕಟ್ಟುವಂತೆ ಮಾಡಿದೆ ಎಂದರು.

ನಂತರ ಮಾನ್ಯ ಮಂತ್ರಿಗಳು ಮುಂದಿನ 5 ವರ್ಷಗಳು ಏಕೆ ಬಹಳ ಮಹತ್ವವಾದುವು ಎಂಬುದನ್ನು ವಿವರಿಸಿದರು. ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧವಾಗಿ ಸ್ಪರ್ಧಿಸಲಿರುವ ಪ್ರಜಾಪಕ್ಷ, ಕಮ್ಯುನಿಸ್ಟ್ ಪಕ್ಷ ಭಾರತೀಯ ಜನಸಂಘ, ಸೋಶಲಿಸ್ಟ್ ಪಕ್ಷ, ಸ್ವತಂತ್ರಪಕ್ಷಗಳ ಧ್ಯೇಯಧೋರಣೆಗಳನ್ನು ಕೆಲವೇ ಮಾತುಗಳಿಂದ ತಿಳಿಸಿದರು. ಪಂಚವಾರ್ಷಿಕ ಯೋಜನೆ, ಪರರಾಷ್ಟ್ರನೀತಿ ಕಾಶ್ಮೀರ ಸಮಸ್ಯೆ ಮೊದಲಾದುವನ್ನು ಸಭೆಯಲ್ಲಿವಿವರಿಸಿ ಜನತೆಯು ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ತಿಳಿದು ಯೋಗ್ಯ ಹುರಿಯಾಳುಗಳನ್ನೇ ಆರಿಸಿ ಕಳುಹಿಸುವಂತೆ ಕೇಳಿಕೊಂಡರು.

ಅನಂತರ [illegible] ಲೋಕ ಸಭೆಯ ದಕ್ಷಿಣ ಭಾಗದ ಕಾಂಗ್ರೆಸ್ ಹುರಿಯಾಳು ಶ್ರೀ ಬೆನಗಲ್ ಶಿವರಾಯರು ತನ್ನ ವಿರುದ್ಧ ಪಕ್ಷಗಳು ತನ್ನ ಮೇಲೆ ಹೊರಿಸಿದ ಆರೋಪಗಳಿಗೆ ಕನ್ನಡದಲ್ಲಿಯೇ ಉತ್ತರಕೊಟ್ಟು ಭಾರತ ಪಾರ್ಲಿಮೆಂಟಿನಲ್ಲಿ ಕನ್ನಡ ಇಲ್ಲವೇ ತುಳು ಭಾಷೆಯಲ್ಲಿ ಮಾತನಾಡಲಿಕ್ಕಿಲ್ಲ ಮಾತ್ರವಾಗಿ ಘಟನಾನುಸಾರವಾಗಿ ಕೂಡದು ಎಂದು ಹೇಳಿದರು.

ಸಭಾಧ್ಯಕ್ಷತೆ ವಹಿಸಿದ್ದ ಒಕ್ಕಲಿಗನ ಮಂ ಶ್ರಿ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ಎರಡುಪಕ್ಷಗಳು ಅಗತ್ಯ. ನಮ್ಮಂತೆ 18 ಪಕ್ಷಗಳ ಅಗತ್ಯವಿಲ್ಲ. ಇಷ್ಟು ಪಕ್ಷಗಳು ತಲೆಯೆತ್ತಿರುವುದರಿಂದ ಇವುಗಳಿಂದ ಯಾವ ಕಾರ್ಯವೂ ಆಗಲಿಕ್ಕಿಲ್ಲವೆಂದರು. ಅವರು ಇನ್ನೂ ಭಾಷಣಮಾಡುತ್ತಾ- ಜಿಲ್ಲೆಯ ನೀರಾವರಿ ಸುಧಾರಣೆಗಾಗಿ ಮದ್ರಾಸು ಸರಕಾರವು ಮಾಡಿದ ಕಾರ್ಯವನ್ನು ವಿವರಿಸಿದರು. ದೇಶದ ಏಕಮಾತ್ರ ದೊಡ್ಡ ಸಂಸ್ಥೆಯಾದ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ಕಳುಹಿಸಿ ದೇಶವನ್ನು ವಿಪತ್ತಿನಿಂದ ಕಾಪಾಡುವಂತೆಯೂ ಕೇಳಿಕೊಂಡರು.

ಶ್ರೀ ಕರ್ಕೇರರ ವಂದನಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು.

ದಿವಾಕರರ ಸಂದೇಶ — ಕೇರಳದ ಪ್ರವಾಸ ಮುಗಿಸಿ, ನಮ್ಮ ಜಿಲ್ಲೆಯಲ್ಲಿ ಸಂಚರಿಸಿದ ಶ್ರೀ ಆರ್. ಆರ್. ದಿವಾಕರರು ಪತ್ರಿಕಾಕರ್ತರ ಮೂಲಕ ನಾಡಿಗಿತ್ತ ಸಂದೇಶದಲ್ಲಿ ಈ ವಿಚಾರಗಳನ್ನು ತಿಳಿಸಿದ್ದಾರೆ. "ನಾನು ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ 30 ಸಭೆಗಳಲ್ಲಿ ಮಾತಾಡಿದ್ದೇನೆ. ಈ ಮಹಾ ಚುನಾವಣೆಯ ಕುರಿತು ತಿಳಿದುಕೊಳ್ಳಲು ಜನರು ಉತ್ಸುಕರಾಗಿದ್ದಾರೆ, ಈ ವಿಚಾರದಲ್ಲಿ ದಿನ ಪತ್ರಿಕೆಗಳಾದಿವಾರಪತ್ರಿಕೆಗಳೂ ಚುನಾವಣೆಯ ಹೊಣೆಗಾರಿಕೆಯ ಕುರಿತು ಜನತೆಗೆ ಸರಿದಾರಿ ತೋರಿಸಬೇಕು. ನನ್ನ ಭಾಷಣಗಳ ಪಲ್ಲವಿ ಒಂದೇ ಆಗಿತ್ತು. ನಮ್ಮ ಸರಕಾರವನ್ನು ಆರಿಸುವ ಈ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೆಂದೇ ನಾನು ಎಲ್ಲೆಲ್ಲೂ ಹೇಳಿದ್ದೇನೆ. ನಮ್ಮಲ್ಲಾಗುವ ಈ ಚುನಾವಣೆಯು ಪ್ರಜಾಪ್ರಭುತ್ವ ರಾಜ್ಯಗಳಲ್ಲೆಲ್ಲ ಅತಿ ದೊಡ್ಡದಾಗಿದೆ. ಇಂದು ಚುನಾವಣೆಯ ರಂಗದಲ್ಲಿ ಹಲವು ಪಕ್ಷಗಳಿವೆ. ಆದುದರಿಂದಲೇ ಸಾಮಾನ್ಯ ಜನತೆಗೆ ಸರಿದಾರಿ ತೋರುವವರು ಬೇಕು, ಅಲ್ಲದೆ ಮುಂದಿನ ಐದು ವರುಷಗಳು ಅತ್ಯಂತ ಮಹತ್ವದ್ದಿವೆ ಎಂಬುದನ್ನು ಮರೆಯಬಾರದು" ಎಂದು ಹೇಳುತ್ತ ಕಾಂಗ್ರೆಸ್ ಮಾಡಿದ ಸೇವೆ, ತ್ಯಾಗ, ಇತ್ಯಾದಿಗಳನ್ನು ವಿವರಿಸಿ ಜನತೆಯು ಕಾಂಗ್ರೆಸ್ಸಿಗೆ ಅಧಿಕಾರ ಬರುವಂತೆ ಮತವೀಯಬೇಕೆಂದು ಕೇಳಿಕೊಂಡಿದ್ದಾರೆ.

ಪ್ರಕಟಣೆ
ಪಡುಬಿದ್ರೆ ಕಂಬಳ

ವರ್ಷಂಪ್ರತಿ ಜರಗುತ್ತಿದ್ದ ಉಡುಪಿ ತಾಲೂಕು ಪಡುಬಿದ್ರೆ ಕಂಬಳವನ್ನು ಈ ವರ್ಷ ಇದೇ ಬರುವ ತಾರೀಕು 19-12-51ನೇ ಬುಧವಾರ ದಿನ ಜರಗಿಸಬೇಕಾಗಿಯೂ ಹೆಚ್ಚಿನ ಜತೆ ಓಟದ ಕೋಣಗಳನ್ನು ಬರಮಾಡಿಸಬೇಕಾಗಿಯೂ ನಿಶ್ಚಯಿಸಿದ್ದೇವೆ. ಮಹಾಜನರ ಉತ್ತೇಜನದ ಸಲುವಾಗಿ ಏಳು ಕೋಲು ನಿಶಾನಿಗೆ ನೀರು ಹಾರಿಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ ಹಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಬಹುಮಾನ ಕೊಡುವುದಾಗಿಯೂ ಆಲೋಚಿಸಿದ್ದೇವೆ. ಆದ ಪ್ರಯುಕ್ತ ಮಹಾಜನರೆಲ್ಲರೂ ತಮ್ಮ ಯಾ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮೀ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುವ; ತಮ್ಮ ಆಗಮನಾಭಿಲಾಷಿ,

ಬೋಳ ಮಂಜಯ್ಯ ಸೆಟ್ಟಿ.

Notice
ಕಾರ್ಕಳ ಡಿ. ಮುಂ. ಕೋರ್ಟಿನಲ್ಲಿ

O. S. No. 464/1951

ಧರ್ಮರಾಜ ಹೆಗ್ಡೆ —ವಾದಿ

ಮತ್ತು

1 ಪುಟ್ಟಮ್ಮ, ಬಿಮ್ಮು ಹೆಂಗ್ಸಿನ ಮಗಳು. 2 ಅದಿರಾಜ ಅಮ್ಮ, 1ನೆ ಪ್ರತಿವಾದಿಯ ಮಗ, ಕಾರ್ಕಳ ತಾಲ್ಲೂಕು ಅಂಡಾರು ಗ್ರಾಮದ ದೊಡ್ಡಮನೆ. ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ-

ವಾದಿಯ ತಂದೆ ಮೃತ ಸೇಸು ಅಮ್ಮ ಪ್ರತಿವಾದಿತ ಕುಟುಂಬಾರ್ಜಿತ ಸ್ಥಿರಾಸ್ತಿಯಲ್ಲಿ ಸದ್ರಿ ಸೇಸು ಅಮ್ಮರು ಅವರಿಗಿರುತ್ತಿದ್ದ 5/12ನೇ ಅವಿಭಕ್ತ ಅಂಶದ ಕುರಿತು ವಾದಿ ಹೆಸರಲ್ಲಿ ವ್ಯವಸ್ಥಾ ಪತ್ರ ಮೂಲಕ ಹಕ್ಕು ಸ್ಥಾಪಿಸಿರುವದ್ರಿಂದ ಸದ್ರಿ ಅಂಶದ ಆಸ್ತಿಯನ್ನು ಗಡಿ ಹುಟ್ಟುವಳಿ ಸಮೇತ ಪ್ರತ್ಯೇಕಿಸಿ ಸ್ವಾಧೀನ ಹೊಂದುವ ವಗೈರೆ ಬಗ್ಗೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 15-12-1951ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಏಕ್ಸಾ ಮಾಡಿ ಸದ್ರಿ ದಾವೆ ತೀರ್ಮಾನಿಸಲಾಗುವದು. ಎಂಬ ಸಂಗ್ರಿ ತಿಳಿಯಪಡಿಸಿರುತ್ತದೆ.

[ಕೋರ್ಟು ಹುಕುಂ ಪ್ರಕಾರ]

H P. A. Jain,
ವಾದಿ ಪರ ವಕೀಲ್.

ಕಾರ್ಕಳ, 30-11-51

ಅಮೃತ ಎಂಡ್ ಕೊ. ನಂಬ್ರ 418.

ರೂಪಾಯಿ 60,000 ಪಡೆಯಿರಿ.

ಪ್ರಥಮ ಇನಾಮು-ಸರ್ವಸಮ ರೂ **50,000**

ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ.**10,000**

ಅತ್ಯಧಿಕ ಪ್ರವೇಶಗಳನ್ನು ಕಳುಹಿಸುವವರಿಗೆ ವಿಶೇಷ ಪಾರಿತೋಷ ರೂ. **1,000**

ಒಂದು ಪ್ರವೇಶಕ್ಕೆ 1ರೂಪಾಯಿ. ಉತ್ತರ ಸ್ವೀಕರಿಸುವ ಕೊನೆಯದಿನ 22-12-51

ಅಪೇಕ್ಷಿಸಿದ್ದಲ್ಲಿ ನಿಬಂಧನೆಗಳು ದೊರಕುವುವು

			8	

ಚೌಕದಲ್ಲಿಯ ಕಣಗಳಲ್ಲಿಯ ಒಟ್ಟು ಮೊತ್ತವು 40 ನಾಲ್ವತ್ತು ಬರುವಂತೆ 6ರಿಂದ 10ರ ವರೆಗಿನ ಅಂಕೆಗಳನ್ನು ಒಮ್ಮೆ ಮಾತ್ರ ಉಪಯೋಗಿಸಿರಿ ಕಣದಲ್ಲಿ ತೋರಿಸಿದ 8ಅಂಕೆಯನ್ನು ಬದಲಾಯಿಸಕೂಡದು.

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಯಾರ್ಡರ್ ರಶೀದಿಯನ್ನಾಗಲೀ, ಕ್ರಾಸ್ ಮಾಡದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು ಫಲಿತಾಂಶ 4-1-1952.

The Manager, **AMIRTA & CO ,(Govt. Regd)**
(418-A) MADURAI, S. India.

ಅಮೃತ ಎಂಡ್ ಕೊ. ನಂಬ್ರ 407ನೆ ಸ್ಪರ್ಧೆಯ ಉತ್ತರ: 20-18-19-17- ಎಲ್ಲಾ ಸರಿಯಾದ ಉತ್ತರಕ್ಕೆ ಪ್ರಥಮ ಬಹುಮಾನ ರೂ. 3290; ಪ್ರಥಮ ಎರಡು ಅಂಕೆಗಳು ಸರಿಯಾದ ಉತ್ತರಕ್ಕೆ ರೂ. 1945-4-0 ಬಹುಮಾನ ಕೊಡಲಾಗಿದೆ. ಅತ್ಯಧಿಕ ಪ್ರವೇಶ (31)ಗಳನ್ನು ಕಳುಹಿಸಿದವರು ರೂ. 215 ಬಹುಮಾನ ಪಡೆದಿರುತ್ತಾರೆ

THE CANARA INDUSTRIAL & BANKING SYNDICATE LIMITED, BYNDOOR.

ದಿ. ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಬೈಂದೂರ.

ಜಾಹೀರು ನೋಟೀಸು

ಈ ಕೆಳಗೆ ಹೆಸರುಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವದ್ರಿಂದಲೂ, ಈ ಮೂಲಕ ತಿಳಿಯಪಡಿಸುವದೇನೆಂದರೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ಬರುವ ತಿಂಗಳು 8-12-51ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಸದ್ರಿ ಏಲಂ ವಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಬೇಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇವೆ.

J L ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
847/50	ಯು. ಮಂಜುನಾಥ ಶೇಟ್, ನಾರಾಯಣ ಶೇಟರ ಮಗ, ಅಂಬಾಗಿಲು ಉಪ್ಪುಂದ	115-0-0
858/50	ಬುಡಾನ ಭಾಷಾ ಸಾಹೇಬ, ಮಹಮ್ಮದ್ ಇಸೂಬ ಸಾಹೇಬರ ಮಗ, ಬೈಂದೂರು	45-0-0
1050/50	ಕೆ. ವೆಂಕಟ್ರಮಣ ಆಚಾರಿ, ಬೊಮ್ಮಯ್ಯ ಆಚಾರಿ ಮಗ, ನಾಗೂರು, ಕಿರಿಮಂಜೇಶ್ವರ	12-0-0
466/50	ಕವೇರಿ ದೇವಮ್ಮ, ನಾಗಿಹೆಂಗ್ಸಿನ ಮಗಳು, ಗೋಳಿಹೊಳೆ ಗ್ರಾಮ ಬೈಂದೂರು	50-0-0
1226/50	ಚಿಕ್ಕ, ಹೂಗೌಡನ ಅಳಿಯ ಹೆರಿಹಕ್ಲು ಆನೆಕೇರೂರು ಗೋಳಿಹೊಳೆಗ್ರಾಮದಲ್ಲಿರುವವನು	15-0-0
1346/49	ಮೊಗೇರ ಬುಂಜು, ದೆಂಕ್ಣನ ಅಳಿಯ, ಮೂನಿಷ್ಕಾರು ಚಂದಕಳಿ ಹಿತ್ಲು, ಪಡುವರಿಗ್ರಾಮ.	25-0 0

Office: BYNDOOR, Date 27—11—1951

B. Narasimhaya. Agent.

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಕವಿಭೂಷಣ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ 0-8-0
ಭಾರತದ ಗುರುಕುಲ 0-6-0
ಅಕ್ಷಪಗಡೆ 0-6-0
ಭರತೇಶ ದಿಗ್ವಿಜಯ 0-8-0

ಅಭ್ಯಾಸಿಗಳಿಗೆ ತಕ್ಕ ಸೂಚನೆಗಳಿವೆ
ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ
ಅಮೂಲ್ಯ ಕಾಣಿಕೆ!

ನವಭಾರತ ಪುಸ್ತಕಭಂಡಾರ,
ಉಡುಪಿ.

ಮುಂಬರುವ ಚುನಾವಣೆಗಳು

ಆಹಾರದ ಆಡಳಿತ

ತಿನ್ನುವವರು ಬಹಳ; ಬೆಳೆಯುವುದು ಕಡಿಮೆ,

ಆಹಾರ ಧಾನ್ಯಗಳ ಕೊರತೆಯಾದುದರಿಂದ ಭಾರತಕ್ಕೆ ಬೇಕಾದ ಕಾಳುಕಡ್ಡಿಗಳನ್ನು ವಿದೇಶಗಳಿಂದ ತರಿಸಲೇ ಬೇಕಾಯಿತಷ್ಟೇ! ಆದರೆ ಹೊರನಾಡುಗಳಲ್ಲಿ ಕೊಂಡ ಕಾಳನ್ನು ಸಾಗಿಸಲು ತುಂಬ ತೊಂದರೆಯಾಯಿತು. ಕಾಳು ಹೇರಿಕೊಂಡು ಬರುವ ಹಡಗುಗಳು ಸಾಕಷ್ಟು ಸಿಕ್ಕುವುದು ದುರ್ಲಭವಾಯಿತು. ಸಕಾಲಕ್ಕೆ ಸಾಗಾಟ ಮಾಡುವ ಸಾರಿಗೆಯ ಸೌಕರ್ಯವಿಲ್ಲದುದರಿಂದ ಆಹಾರ ಬರಲು ಹಲವು ಸಲ ವಿಳಂಬವಾಯಿತು. ಆದರಿಂದ ಸೀದಾ ಪದ್ಧತಿಗೆ ಪೆಟ್ಟು ಬಿದ್ದು ತುಂಬ ಕಷ್ಟಗಳಾಗುತ್ತಿದ್ದವು. ಆದರಿಂದ ೧೨ ಔನ್ಸಿನಿಂದ ಸೀದಾವನ್ನು ೯ ಔನ್ಸಿಗೆ ಇಳಿಸಲೇ ಬೇಕಾಯಿತು.

ಮಳೆಬೆಳೆಗಳು ವಾಡಿಕೆಯಂತೆ ಸರಿಯಾಗಿದ್ದರೂ ಭಾರತಕ್ಕೆ ಸುಮಾರು ೪೫ ಲಕ್ಷ ಟನ್ನುಗಳ ಆಹಾರದ ಕೊರತೆಯಾಗುವುದು ಅನುಭವದಿಂದ ತಿಳಿದಿದೆ. ಈ ಕಡಿಮೆಯಾಗುವ ಆಹಾರವನ್ನು ಬೆಳೆಸಲು ಸರಕಾರವು ವಿಶೇಷ ಪ್ರಯತ್ನಗಳನ್ನು ನಡೆಸಿರುವುದು ೧೯೪೩ರಲ್ಲಿ ಪ್ರಾರಂಭವಾದ ನಿಯಂತ್ರಣವನ್ನು ತಪ್ಪಿಸಲು ಇದೊಂದೇ ಉಪಾಯವೆಂದು ನಿರ್ಧರಿಸಿತು. ಅದಕ್ಕೆ ಧೋರಣವನ್ನು ಗೊತ್ತು ಮಾಡಿತು.

೧೯೪೩ರಲ್ಲಿ ಭಾರತದಲ್ಲಿ ೧೯೪೦ ಲಕ್ಷ ಎಕರೆಗಳಷ್ಟು ಭೂಮಿಯು ಸಾಗುವಳಿಯಲ್ಲಿತ್ತು. ಆದರೆ ಜನಸಂಖ್ಯೆಯು ೩೨ ಕೋಟಿಗಿಂತ ಅಧಿಕವಾಗಿತ್ತು. ಜನಬಲದ ಪ್ರಮಾಣದಿಂದ ನೋಡಿದರೆ ಇನ್ನೂ ನೂರಕ್ಕೆ ೨೦ರಷ್ಟು ಭೂಮಿ ಸಾಗುವಳಿಯಾಗಬೇಕು. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಭಾರತದಲ್ಲಿ ಎಕರೆಗೆ ೬೬೦ ಪೌಂಡು ಗೋಧಿ ಬೆಳೆದರೆ ಇಜಿಪ್ತದಂತಹ ದೇಶದಲ್ಲಿ ೧೯೧೮ ಪೌಂಡು ಹುಟ್ಟುತ್ತದೆ. ಇದರಂತೆ ಇತರ ಧಾನ್ಯಗಳ ಹುಟ್ಟುವಳಿ. ಹುಟ್ಟುವಳಿಯು ಹೀಗೆ ತೀರ ಕಡಿಮೆಯಾಗಬೇಕಾದರೆ ಸಾಗುವಳಿಯ ಕ್ರಮಗಳಲ್ಲಿ ಲೋಪದೋಷಗಳುಂಟೆಂದು ಹೇಳಬಹುದಲ್ಲವೇ? ಸಾಗುವಳಿಯಲ್ಲಿದ್ದ ಭೂಮಿ ಸಾಲದು. ಒಕ್ಕಲುತನವನ್ನು ಸುಧಾರಿಸಿ ಹುಟ್ಟುವಳಿ ಹೆಚ್ಚಿಸಬೇಕು ಎಂಬ ಎರಡು ಪ್ರಶ್ನೆಗಳತ್ತ ಸರಕಾರದ ಲಕ್ಷ್ಯವು ಕೇಂದ್ರೀಕೃತವಾಯಿತು.

ಆದುದರಿಂದ ಸರಕಾರದವರು ಅಧಿಕ ಆಹಾರೋತ್ಪತ್ತಿಗಾಗಿ ಐದು ವರ್ಷಗಳ ಒಂದು ಕಾರ್ಯಕ್ರಮವನ್ನಿಟ್ಟು ಕೆಲ ಏರ್ಪಾಡುಗಳನ್ನು ಮಾಡಿದರು. ತಿನ್ನುವವರು ಬಹಳ, ಬೆಳೆಯುವ ಆಹಾರ ಕಡಿಮೆ. ಕಾಲದುದ್ದಕ್ಕೆ ಆಹಾರದ ಹುಟ್ಟುವಳಿ ಹೆಚ್ಚಿದಂತೆ ಅದಕ್ಕಿಂತ ವಿಪರೀತ ಅಧಿಕವಾಗಿ ಪ್ರಜೆಗಳ ಜನನ ಸಂಖ್ಯೆಯೂ ಬೆಳೆದರೆ ಈ ಸಮಸ್ಯೆಯ ಪರಿಹಾರವಾಗುವದೇ ಕಷ್ಟವೆಂಬುದನ್ನೂ ಸರಕಾರದವರು ತಿಳಿದಿದ್ದಾರೆ.

ಸರಕಾರದವರು ಅಧಿಕ ಬೆಳೆಯಲು ಈ ಕೆಳಗಿನ ಕ್ರಮಗಳನ್ನು ಕೈಕೊಂಡರು. ಇವುಗಳಲ್ಲಿ ಕೆಲವು ಸ್ಥಿರವಾದ ಉಪಾಯಗಳೂ ಕೆಲವು ಪುನರಾವರ್ತಕ [Recurring] ಉಪಾಯಗಳೂ ಇರುವವು.

೧] ಸ್ಥಿರ ಉಪಾಯಗಳಲ್ಲಿ ಸಣ್ಣ ಸಣ್ಣ ಯೋಜನೆಗಳು ಮುಖ್ಯವಾಗಿವೆ. ಯಾತದ ಅಥವಾ ಕಪ್ಪಲಿ ಹೊಡೆಯುವ ಬಾವಿಗಳು, ಕೃಷಿಗೆ ನೀರುಣಿಸುವ ಕೆರೆಗಳು ಕಾಲುವೆಗಳು ಸಣ್ಣ ಒಡ್ಡು ಅಥವಾ ಅಣೆಕಟ್ಟುಗಳು ಎಲ್ಲ ಪ್ರಾಂತಗಳಲ್ಲಿಯೂ ಕಟ್ಟಲ್ಪಟ್ಟವೆ. ಕೇವಲ ೧೯೫೦ನೆಯ ಜುಲೈ ತಿಂಗಳಿಂದ ೧೯೫೧ರ ಜೂನಿನೊಳಗಾಗಿ ಇಡಿಯ ಭಾರತದಲ್ಲಿ ಸುಮಾರು ೯೮೦೧ ಬಾವಿಗಳನ್ನು ಸಾಗುವಳಿಯ ಸಹಾಯಕ್ಕಾಗಿ ತೋಡಿದರು. ೨೯೦೦೦ ಸಣ್ಣ ನೀರಾವರಿ ಯೋಜನೆಗಳನ್ನು ನೆರವೇರಿಸಿದರು, ೨೨೦೦೦ ಯಂತ್ರಪಂಪುಗಳಿಂದ ಹೊಲಗದ್ದೆಗಳಿಗೆ ನೀರುಣಿಸುವ ಏರ್ಪಾಡುಗಳನ್ನು ಪೂರೈಸಿದರು. ಮತ್ತು ೧೦೦೦೦ ಕೆರೆಗಳನ್ನು ದುರಸ್ತಿ ಪಡಿಸಿದರು. ಈ ಪ್ರಯತ್ನವು ಕಳೆದ ೨-೩ ವರ್ಷಗಳಿಂದ ಸಾಗಿದ್ದರೂ ೧೯೫೦ರ ವರೆಗೆ ವಿವರವನ್ನು ಇಲ್ಲಿ ಕೊಡಲಾಗಿದೆ.

೨) ಕೇಂದ್ರದ ಟ್ರ್ಯಾಕ್ಟರ್ ಸಂಘಟನೆ ಮತ್ತು ಪ್ರಾಂತೀಯ ಸರಕಾರ ಇವುಗಳು ಸೇರಿ ೬,೮೧೦೦೦ ಎಕರೆ ಬೀಳುಭೂಮಿ ಅಥವಾ ಕಾಡಿನ ನೆಲವನ್ನು ಸಾಗುವಳಿಗೆ ಸಿದ್ಧಗೊಳಿಸಿದರು. ಅದಲ್ಲದೆ ಪ್ರಾಂತೀಯ ಸರಕಾರಗಳು ಇದೇ ಕಾಲಾವಧಿಯಲ್ಲಿ ೧,೬೮೦೦೦ ಎಕರೆ ಸ್ಥಳವನ್ನು ಯಾಂತ್ರಿಕ ಪದ್ಧತಿಯ ಕೃಷಿಗೆ ಒಳಪಡಿಸಿದವು. ಸುಮಾರು ೬೦೬೦೦೦ ಎಕರೆ ಹೊಲಗಳಲ್ಲಿ ಭೂಸುಧಾರಣೆಯ ಕಾರ್ಯವೆಸಗಲಾಯಿತು.

೩) ಪುನರಾವರ್ತಕ ಕ್ರಮಗಳಲ್ಲಿ ಉತ್ತಮ ಧಾನ್ಯಬೀಜಗಳನ್ನು ಬೆಳೆಸಿ ಒದಗಿಸುವುದು, ಬಗೆಬಗೆಯ ಗೊಬ್ಬರಗಳನ್ನು ಸಿದ್ಧಗೊಳಿಸಿ ಪೂರೈಸುವುದು, ಕಳಿತಗೊಬ್ಬರ ಕಾಣಿ ಗೊಬ್ಬರಗಳನ್ನು ತಯಾರಿಸುವುದು ಮತ್ತು ವನಮಹೋತ್ಸವದ ಕಾರ್ಯ ಮುಂತಾದುವುಗಳು ಒಳಗೊಳ್ಳುತ್ತವೆ. ಈ ವಿಧಾನಗಳಿಂದ ಹೊಲಗದ್ದೆಗಳ ಹುಟ್ಟುವಳಿಯನ್ನು ಹೆಚ್ಚಿಸಲು ಪ್ರಯತ್ನಗಳು ನಡೆದವು. ಪ್ರಾರಂಭದಲ್ಲಿ ಸರಕಾರದವರು ಈ ಆವರ್ತಕ ಯೋಜನೆಗಳಿಗೆ ಗಮನಕೊಟ್ಟರು. ಬಳಿಕ ಹೆಚ್ಚಿನ ಸ್ಥಿರಕ್ರಮಗಳನ್ನು ಕೈಕೊಂಡರು. ಕಳೆದ ವರ್ಷದಲ್ಲಿ ೨,೫೬೦೦೦ ಟನ್ನು ಗೊಬ್ಬರ, ೧,೪೩೦೦೦ ಟನ್ನು ಎಣ್ಣೆ ಹಿಂಡಿ ಮತ್ತು ಹೇರಳವಾದ ತಿಪ್ಪೆಗೊಬ್ಬರ ಮತ್ತು ಇತರ ಗೊಬ್ಬರಗಳನ್ನು ಸರಕಾರವು ಒಕ್ಕಲುತನಕ್ಕಾಗಿ ಒದಗಿಸಿದೆ. ಬಿತ್ತಿಗೆ ಶ್ರೇಷ್ಠ ಧಾನ್ಯ ಬೀಜಗಳನ್ನು ೯೬೨೦೦೦ ಟನ್ನುಗಳಷ್ಟು ಪೂರೈಸಿದೆ ಹಸುರು ಗೊಬ್ಬರ ಹುಟ್ಟಿಸುವ ಬೀಜಗಳನ್ನು ೬೦೦೦ ಟನ್ನು ಕೊಡಲಾಗಿದೆ. ಅಧಿಕ ಆಹಾರೋತ್ಪತ್ತಿಯ ಪ್ರಯತ್ನಗಳಿಗಾಗಿ ಸರಕಾರವು ೧೯೪೯-೫೦ರಲ್ಲಿ ೧೧ ಕೋಟಿ ರೂಪಾಯಿಗಳಷ್ಟು ಮತ್ತು ೧೯೫೦-೫೧ರಲ್ಲಿ ೨೩ ಕೋಟಿಗೆ ಮೇಲ್ಪಟ್ಟು ಸಾಲವನ್ನು ಕೊಟ್ಟಿರುತ್ತದೆ. ಇದಲ್ಲದೆ ಇತರ ಗ್ರ್ಯಾಂಟುಗಳನ್ನೂ ಕೊಟ್ಟಿದೆ ಹಾಗೂ ಇದೇ ಉದ್ದೇಶಕ್ಕಾಗಿ ಬೇರೆ ೧೩-೧೪ ಕೋಟಿ ರೂಪಾಯಿಗಳನ್ನೂ ಪ್ರಾಂತಗಳಿಗೆ ಸಲ್ಲಿಸಿದೆ.

ಭಾರತದಲ್ಲಿ ಬೀಳುಭೂಮಿಯು ಸುಮಾರು ೧೩೦ ದಶಲಕ್ಷ ಎಕರೆಗಳಷ್ಟಿರುವುದೆಂದು ಅಂದಾಜು ಮಾಡಲಾಗಿದೆ. ಅದನ್ನೆಲ್ಲ ಹತ್ತು ವರ್ಷಗಳೊಳಗೆ ಸಾಗುವಳಿಗೆ ಸಿದ್ಧಗೊಳಿಸಿ ಆಹಾರ ವೃದ್ಧಿ ಮಾಡುವ ಜೋರಾದ ಪ್ರಯತ್ನಗಳನ್ನು ಸರಕಾರವು ಕೈಕೊಂಡಿದೆ. ಉಪಲಬ್ಧವಿರುವ ಬಂಡವಾಳ ಮತ್ತು ತಾಂತ್ರಿಕ ಸೌಕರ್ಯಗಳನ್ನು ಉಪಯೋಗಿಸಿ ಪ್ರತಿವರ್ಷ ಕನಿಷ್ಠ ೬೮ ಲಕ್ಷ ಎಕರೆಗಳ ಕ್ಷೇತ್ರವನ್ನಾದರೂ ಆತಿಶಯವಾದ ಕೃಷಿಗೆ ಒಳಗಾಗಿಸುವ ಕಾರ್ಯವನ್ನಿಟ್ಟುಕೊಂಡಿದೆ.

೧) ಇದಕ್ಕಾಗಿ ಭಾರತದ ೫ ಲಕ್ಷ ಹಳ್ಳಿಗಳಲ್ಲಿ ಕೊನೆಗೆ ೧ ಲಕ್ಷ ಹಳ್ಳಿಗಳಲ್ಲಾದರೂ ಭೂಮಿ ಸೇನೆಯನ್ನು ಸಂಘಟಿಸಿ ಅಂದರೆ ಕೃಷಿಕ ಸ್ವಯಂ ಸೇವಕರನ್ನು ತಂಡೇಳುಗೊಳಿಸಿ ಸಾಗುವಳಿಯ ಕೆಲಸಕ್ಕೆ ತೊಡಗಿಸುವ ಉದ್ದೇಶವಿದೆ.

೨) ಈ ಭೂಸೇನೆಯ ಬಲದಿಂದ ಪ್ರತಿವರ್ಷ ೧೦೦ ಲಕ್ಷ ಎಕರೆಗಳಷ್ಟು ಹೊಸಕ್ಷೇತ್ರವನ್ನು ಕೃಷಿಯೋಗ್ಯ ಮಾಡಬೇಕೆಂಬ ಗುರಿಯಿದೆ.

೩) ಕೆಲವು ಗ್ರಾಮಗಳಲ್ಲಿ ಮಾದರಿಯ ಗೋಸಂವರ್ಧನ ಕೇಂದ್ರಗಳನ್ನು ರಚಿಸಿ ಭಾರತಕ್ಕೆ ಪ್ರತಿವರ್ಷ ೬೦ ಸಾವಿರ ಬೀಜದ ಎತ್ತುಗಳನ್ನು ಒದಗಿಸುವ ಯತ್ನ ಮಾಡಲಾಗುವದು. ಭಾರತಕ್ಕೆ ೧,೮೦,೦೦೦ ಬೀಜದ ಹೋರಿಗಳ ಅವಶ್ಯಕತೆಯಿದೆಯೆಂದು ತಿಳಿಯಲಾಗಿದೆ. ಅದಲ್ಲದೆ ಈ ಗೋಸಂವರ್ಧನದ ಕಾರ್ಯಕ್ರಮದಲ್ಲಿ ದನಕರುಗಳಿಗೆ ಪೂರಕವಾದ ಕೆಲವು ರೋಗಗಳ ನಿವಾರಣೆಯ ಪರಿಶ್ರಮವನ್ನೂ ಮಾಡಲಾಗುವುದು.

೪) ವನಮಹೋತ್ಸವದ ಯೋಜನೆಯನ್ನು ಇನ್ನಷ್ಟು ಜೋರಿನಿಂದ ನಡೆಸಿ ಕನಿಷ್ಠ ೩೦ ಕೋಟಿ ಗಿಡಗಳನ್ನಾದರೂ ಭದ್ರವಾಗಿ ಬೆಳೆಸಬೇಕೆಂಬ ನಿರ್ಧಾರವಿದೆ. ಅಲ್ಲದೆ ಅರಣ್ಯಗಳನ್ನು ಬೆಳೆಸಿ ಕಾಪಾಡುವ ಪ್ರಯತ್ನಗಳನ್ನೂ ಮಾಡಲಾಗುವುದು. ಇದರಿಂದ ಮಳೆಗೆ ಅನುಕೂಲವಾಗುವುದಲ್ಲದೆ ನೆರೆಹಾವಳಿಯನ್ನು ತಡೆಯಲು ಹೆಚ್ಚಿನ ಸಹಾಯವಾಗುವುದು. ಕಳೆದವರ್ಷ ನೆಟ್ಟ ೩ ಕೋಟಿ ಸಸಿಗಳಲ್ಲಿ ೧ ಕೋಟಿ ಸಸಿಗಳು ಬದುಕಿ ಬೆಳೆಯುತ್ತಿರುವುದು ಸಂತೋಷದ ಸಂಗತಿಯಲ್ಲವೇ? ಈ ಕಾರ್ಯದಲ್ಲಿ ಸಾರ್ವಜನಿಕರ ಉತ್ಸಾಹವು ತುಂಬ ಸಹಾಯಕಾರಿಯಾಯಿತು. ಅರಣ್ಯಗಳ ಹತ್ತಿರದಲ್ಲಿಯೇ ಇಷ್ಟು ಗಿಡಗಳನ್ನು ನಡುವುದಾದರೆ ಇವುಗಳಿಗೆ ಸುಮಾರು ೫೦ಸಾವಿರ ಎಕರೆಗಳಷ್ಟು ಕ್ಷೇತ್ರವು ಬೇಕಾಗುತ್ತಿದ್ದಿತು. ಹಾಗೂ ಸರಕಾರಕ್ಕೆ ಕನಿಷ್ಠ ೫೦ ಲಕ್ಷ ರೂಪಾಯಿಗಳ ವೆಚ್ಚವಾಗುತ್ತಿತ್ತು. ಪ್ರಜೆಗಳ ಪರಿಶ್ರಮದಿಂದ ಈ ಮಹಾಕಾರ್ಯವು ಸುಲಭವಾಗಿ ಜರುಗಿದೆ.

(ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ)
ಹುಬ್ಬಳ್ಳಿ ದಿನಾಂಕ ೨-೧೧-೧೯೫೧

ನೋಟೀಸು

ಉಡುಪಿ, ಡಿ. ಮು. ಕೋರ್ಟಿನಲ್ಲಿ
ದಾವೆ ನಂಬ್ರ 495/1951

T ಅನಂತ ಪದ್ಮನಾಭ ಶಿಣೈ-ತೋನ್ಸೆ ನಾಗಪ್ಪ ಶಿಣೈಯರ ಮಗ-ಮೂಡುತೋನ್ಸೆ ಗ್ರಾಮದಲ್ಲಿರುವವರು. —ವಾದಿ

ಮತ್ತು

ಸಾಲೋಮನ ಡಿ'ಸೋಜ. ಪಿಯಾದ ಸೋಜರ ಮಗ ಉಡುಪಿ ತಾಲ್ಲೂಕು ಪಡುತೋನ್ಸೆ ಗ್ರಾಮ ಕಾಳಿಬೆಟ್ಟುವಿನಲ್ಲಿರುವವರು —ಪ್ರತಿ ವಾದಿ

ಸದ್ರಿ ಪ್ರತಿವಾದಿಗೆ

ನೀವು ವಾದಿಗೆ ತಾ 1-10-50ರಲ್ಲಿ ರೂ 300-0-0ಕ್ಕೆ ಬರಕೊಟ್ಟ, ಡಿ. ಪ್ರೊ. ನೋಟು ಪ್ರಕಾರ ನಿಮ್ಮಿಂದ ಬರಬೇಕಾದ ಪೂರಾ ಅಸಲು ಬಡ್ಡಿ ವ. ೦. ನೋಟೀಸು ಒಟ್ಟು ಕೂಡ ರೂ 317-0-0ನ್ನು ಕೇಳಿ ನಿಮ್ಮ ಮೇಲೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 18-12-51ಕ್ಕೆ ಇತ್ಯರ್ಥಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆ ಇದ್ದರೆ, ಸದ್ರಿ ತಾರೀಕು ಹಗಲು ಘಂಟೆ 10-45ಕ್ಕೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಹ್ಯಾಜರು ಮಾಡಿಕೊಳ್ಳಬಹುದಾಗಿಯೂ, ಇಲ್ಲವಾದ್ರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲಾಗುವದೆಂಬುದಾಗಿಯೂ ಈ ಮೂಲಕ ತಿಳಿಸಲಾಗುತ್ತದೆ.

(Boy order of Court)

K. Vittal Nayak
Vakil for Plff

Udipi 28-11-51

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.



BALLBEARING
—THE LIFEBLOOD OF THE INDUSTRY'

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS:—'CHEAPTRADE'

A. RAMSON & CO.
MISTRI BUILDING BALARAM ST. BOMBAY

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ
ಬೆಲೆ ರೂ 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

[ಕಳೆದ ಸಂಚಿಕೆಯಿಂದ]

ಅದಕ್ಕೆ ತಾಗಿ ಇನ್ನೊಂದು ಪಾರ್ಶ್ವದಲ್ಲಿ ಅನೇಕ ಕೋಣೆಗಳು. ಒಂದರಲ್ಲಿ ವಸ್ತ್ರ ಉಡುವ ಕೋಣೆ [dressing room]. ಇನ್ನೊಂದರಲ್ಲಿ Iನೇ ನೆಪೋಲಿಯನನು ತನ್ನ ಅರಸುತನಕ್ಕೆ ರಾಜಿಕೊಟ್ಟು ಪತ್ರಕ್ಕೆ ದಸ್ಕತು ಹಾಕಿದ್ದು. ಅದಕ್ಕೆ Salone of Abdication ಎನ್ನುವರು. ಅದಕ್ಕೆ ತಾಗಿ ಅವನು ಓದುವ ಕೋಣೆ [Study]. ಅವನು ಉಪಯೋಗಿಸಿದ ಉದ್ದ ಮೇಜು ಮತ್ತು ಇತರ ಪೀಠೋಪಕರಣಗಳು [furniture] ಮತ್ತು ಜಮಖಾನ ಕೂಡಾ ಈಗಲೂ ಹಾಗೆಯೇ ಇಟ್ಟಿವೆ. ಇದಕ್ಕೆ ತಾಗಿರುವುದು ಅರಸನು ಮಲಗುವ ದೊಡ್ಡ ಕೋಣೆ [State Bed Chamber] ಇನ್ನೊಂದು ಕೋಣೆ ಅದೇ ರೀತಿ ಎಂಟ್ರೊಸಿಟಿಲು ಕೂಡಾ ಇತರರನ್ನು ಸ್ವಾಗತಿಸುವ ಕೋಣೆ. ಅವಳ ಸುಂದರವಾದ ಪ್ರತಿಮೆ [bust] ಇಲ್ಲಿ ಇದೆ. ಮಧ್ಯದಲ್ಲಿ ಉರುಟು ಮೇಜು, ಸುತ್ತಲೂ ಕುರ್ಚಿಗಳು. ಇದಕ್ಕೆ ತಾಗಿ ರಾಣಿಯು ಮಲಗುವ ಕೋಣೆ. ಇದಕ್ಕೆ ತಾಗಿ ರಾಜ ರಾಣಿಯರು ಕೂಡಿ ಮಲಗುವ ಕೋಣೆ. ಕಲಾ ಕೆಲಸಗಳುಳ್ಳ ಅಗಲವಾದ ಮಂಚ ಹಾಸಿಗೆ ಎಲ್ಲಾ ಮುಂಚಿನ ಕಾಲದಲ್ಲಿ ಇದ್ದಂತೆಯೇ ಈಗಲೂ ಇವೆ. ಇದಕ್ಕೆ ತಾಗಿದ ಕೋಣೆಯಲ್ಲಿ ನೆಪೋಲಿಯನನ ಮೊದಲಿನ ಹೆಂಡತಿ ಜೋಸೆಫಿನಳು ಗಾಯನ ಮಾಡುತ್ತಿದ್ದುದು. ಈಗಲೂ ಅಲ್ಲಿ ಅವಳು ಬಾರಿಸುತ್ತಿದ್ದ ಅನೇಕ ತಂತಿಗಳಿರುವ ಒಂದು ತಂತಿ ವಾದ್ಯ ಇದೆ ಅದು ಒಂದು ದೊಡ್ಡ ಬಿಲ್ಲಿನ ಆಕಾರದಲ್ಲಿದ್ದು ಅನೇಕ ತಂತಿಗಳನ್ನು ಕಟ್ಟಿದ್ದು ಗಾಯನ ಬಾರಿಸುವ ಉಪಕರಣ.

ಪ್ರವಾಸಿಯ ಪತ್ರಗಳು ೧೯

ಈ ಕೋಣೆಯಲ್ಲಿ ಒಂದು ಚಂದವಾದ ಉರುಟು ಮೇಜು ಕೂಡಾ ಇದೆ. ಇನ್ನೊಂದು ಕೋಣೆ ಭೇಟಿ ಕೊಟಡಿ [Drawingroom].

ಈ ಪಾರ್ಶ್ವಕ್ಕೆ ತಾಗಿ ಇನ್ನೊಂದು ದಿಕ್ಕಿಗೆ ದೊಡ್ಡ ಒಂದು ಸಭಾಂಗಣವಿದೆ. ಅದು ಸುಮಾರು 250 ಅಡಿ ಉದ್ದ 20 ಅಡಿ ಅಗಲವಿದ್ದು ಸುರುವಿನಲ್ಲಿ ಊಟದ ಕೋಣೆ [Dining Hall] ಯಾಗಿದ್ದು ನಂತರ IIIನೇ ನೆಪೋಲಿಯನನು ಅದನ್ನು ಪುಸ್ತಕ ಭಂಡಾರವನ್ನಾಗಿ ಮಾಡಿದನು. ಈಗ ಅದರಲ್ಲಿ ಸಾವಿರಾರು ಪುಸ್ತಕಗಳಿವೆ. ಇದಕ್ಕೆ ಎದುರಾಗಿ ಇರುವ ಕೋಣೆಯಲ್ಲಿ 18ನೇ ಶತಮಾನದಲ್ಲಿ ಮಾಡಿದ ಚಿತ್ರಗಳಿರುವ ಬಟ್ಟೆಗಳಿವೆ [tapestries]. ಇದಕ್ಕೂ ತಾಗಿದ ಕೋಣೆಯಲ್ಲಿ 17ನೇ ಶತಮಾನದಲ್ಲಿ ಮಾಡಿದ ಅಂಥಾ ಬಟ್ಟೆಗಳು. Iನೇ ನೆಪೋಲಿಯನನು ಇರಿಸಿದ ಪಿಂಗಾಣಿ ಉಪಕರಣಗಳು. ಇನ್ನೊಂದರ 16ನೇ ಶತಮಾನದ ಚಿತ್ರ ಬಟ್ಟೆಗಳ ಮತ್ತು XIVನೇ ಲೂಯಿ ಇರಿಸಿದ ಜಮಖಾನು. ಇದಕ್ಕೆ ತಾಗಿದ ಕೋಣೆಯು ಮೇರಿ ಡಿ ಮೆಡಿಸಿ ಎಂಬ ರಾಣಿಯು ಮಲಗುವ ಕೋಣೆಯಾಗಿದ್ದು, 1600ರಲ್ಲಿ ವೆನಿಸಿನಿಂದ ಫ್ರಾನ್ಸ್ ದೇಶ ಆಗ ಸುರುವಿನಲ್ಲಿ ಮಾಡಿಸಿ ತಂದ ಗಾಜಿನ ಕನ್ನಡಿ ಇದೆ. ಇದಕ್ಕೆ ತಾಗಿದ ಕೋಣೆಯ ಹೆಸರು ನೆಲಮಾಳಿಗೆಯ ಬಂದಿಖಾನೆ [Dungeon room]. ಇಲ್ಲಿ IVನೇ ಹೆನ್ರಿ ಮತ್ತು Iನೇ ಫ್ರಾನ್ಸಿಸ್ ಇವರ ತೈಲಚಿತ್ರಗಳಿವೆ ಇದಕ್ಕೆ ತಾಗಿರುವ ದೊಡ್ಡ ಕೋಣೆಯು ಬಹಳ ವಿಶೇಷವು. ಇದರ ಮುಚ್ಚಿಗೆಯು ಮರದಿಂದ ಮಾಡಲ್ಪಟ್ಟಿದ್ದು ಕೆಳಗೆ ನೆಲಕ್ಕೆ ಕೂಡಾ 15 ತರದ ಮರದಿಂದ ಮಾಡಿ, ಮೇಲೆ ಮುಚ್ಚಿಗೆ ಯಾವ ರೀತಿ ಚಿತ್ರರೂಪವಿದೆಯೋ ಅದೇ ರೀತಿ ಕೆಳಗೆ ನೆಲ ಕೂಡಾ ಅದೇ ಆಕಾರದ ಚಿತ್ರಗಳಂತೆ ಮಾಡಿದ್ದಾಗಿರುವದು. ಇದಕ್ಕೆ ತಾಗಿದ ಇನ್ನೊಂದು ಕೋಣೆಯ ಮುಚ್ಚಿಗೆಯಲ್ಲಿ ಗ್ರೀಕ್ ಪುರಾಣವನ್ನು ಅನೇಕ ಚಿತ್ರಗಳಲ್ಲಿ ಬಿಡಿಸಿದೆ.

ಇದಕ್ಕೆ ತಾಗಿ ಅರಮನೆಯ ಇನ್ನೊಂದು ಭಾಗದಲ್ಲಿ XIVನೇ ಲೂಯಿಯ 2ನೇ ಹೆಂಡತಿ ಮೆಡೆಮ್ ಡಿ ಮೈಂಟೆನನ್ ಎಂಬವಳು ಮಲಗುವ ಕೋಣೆ. ಗಂಡನು 1715ರಲ್ಲಿ ಮೃತಪಟ್ಟ ನಂತರ ಅವಳೇ ಸಮೀಪ ಇರುವ ಗಾಯನ ಶಾಲೆಯನ್ನು ಸುರುಮಾಡಿ ಅದರ ಮುಖ್ಯ ಉಪಾಧ್ಯಾಯಿನಿಯಾದದ್ದು. ಇದಕ್ಕೆ ಒತ್ತಿನ ದೊಡ್ಡ ಒಂದು ಸಭಾಂಗಣದಲ್ಲಿ 16ನೇ ಶತಮಾನದಲ್ಲಿ ಆಳುತ್ತಿದ್ದ Iನೇ ಫ್ರಾನ್ಸಿಸನು ಇಟೇಲಿಯಿಂದ ತೈಲ ಚಿತ್ರಗಳನ್ನು ಬಿಡಿಸುವ ಪ್ರಸಿದ್ಧ ಚಿತ್ರಕಾರರನ್ನು ತಂದು ಅವರು ಅಲ್ಲಿ ಗ್ರೀಕ್ ದೇಶದ ಪುರಾಣವನ್ನು ಬಿಡಿಸಿರುವರು. ಅದಕ್ಕೆ Gallery of Francis I ಎನ್ನುತ್ತಾರೆ. ಆ ಪೈಕಿ ಒಂದು ಚಿತ್ರದಲ್ಲಿ "ಫೊಂಟೆನ್ ಬ್ಲೂ" ಎಂಬುದನ್ನು ಚಿತ್ರರೂಪವಾಗಿ ಬಿಡಿಸಿರುವರು. ಅದರಲ್ಲಿ ಒಬ್ಬ ಸುಂದರಿಯು ನಿಂತಿದ್ದು ಅವಳ ಬದಿಯಲ್ಲಿ ನೀರ ಒರತೆಯು ಹರಿಯುವುದು.

ಇನ್ನೊಂದು ಭಾಗದಲ್ಲಿ ಅತಿಥಿಗಳಿರುತ್ತಿದ್ದ ಕೋಣೆಗಳು—ರಷ್ಯ ದೇಶದ ಶ್ರೇಷ್ಠ ಪುರುಷ ಪೀಟರ್ [Peter the Great] ಎಂಬವನು ಇಲ್ಲಿ ಇದ್ದುದರ ತೈಲ ಚಿತ್ರವಿದೆ. ಒಂದರಲ್ಲಿ 1812—1813ರಲ್ಲಿ Iನೇ ನೆಪೋಲಿಯನನ ಕಾಲದಲ್ಲಿ ರೋಮಿನಿಂದ ಬಂದ ಪೋಪ್ ಸಾಹೇಬರು ಇಲ್ಲಿ ಬಂಧನದಲ್ಲಿದ್ದರಂತೆ. ಅವರು ಅವನ ಬಲತ್ಕಾರದಿಂದ ಒಂದು ಒಪ್ಪಂದಕ್ಕೆ ದಸ್ಕತು ಅಲ್ಲಿ ಹಾಕಿದರು. ಅವರು ಓದಿದ ಪುಸ್ತಕ ಭಂಡಾರ ಮತ್ತು ಅವರ ತೈಲ ಚಿತ್ರಕೂಡಾ ಅಲ್ಲಿ ಇದೆ. ಅವರು ಧರಿಸುತ್ತಿದ್ದ ಒಂದು ದೊಡ್ಡ ಟೊಪ್ಪಿ ಕೂಡಾ ಒಂದು ಗಾಜಿನ ಕವಳಿಗೆಯೊಳಗೆ ಇಟ್ಟಿದ್ದಾರೆ. ಇನ್ನೊಂದು ಕೋಣೆ ಅವರಿಗೋಸ್ಕರವಾಗಿ ಉಪಯೋಗಿಸುತ್ತಿದ್ದ ಪ್ರಾರ್ಥನಾ ಕೋಣೆ (Chapel) ಇನ್ನು ಕೂಡ ಕೆಲವು ಕೋಣೆಗಳು, ಅವುಗಳಲ್ಲಿ ಹಿಂದಿನ ಚಿತ್ರದ ಬಟ್ಟೆಗಳು. ಕೊನೆಗೆ ಅರಮನೆಯ ಇಗರ್ಜಿ (Trinity Church). ಇದು ಬಹು ದೊಡ್ಡದಾಗಿದ್ದು ಅಲ್ಲಿ ನೂರಾರು ತೈಲ ಚಿತ್ರಗಳನ್ನು ಬಿಡಿಸಿವೆ. ಇದು 1550ರಲ್ಲಿ IVನೇ ಹೆನ್ರಿ ಅರಸನ ಕಾಲದಲ್ಲಿ ಕಟ್ಟಿದ್ದು.

ಹೀಗೆ ಅರಮನೆಯನ್ನು ಸುಮಾರು 4 ತಾಸು ಸಂದರ್ಶಿಸಿ ಅಲ್ಲಿ ಸಮೀಪದಲ್ಲಿದ್ದ ಹೂದಿನ ತೋಟ ಮತ್ತು 16ನೇ ಶತಮಾನದಲ್ಲಿ ಮಾಡಿದ ಕೃತಕ ಗುಹೆಗಳಲ್ಲಿ ತಿರುಗಾಡಿ ಬಸ್ಸಿನಲ್ಲಿ ಹಿಂತಿರುಗಿದೆವು. ಬರುವಾಗ ಇನ್ನೊಂದು ದಾರಿ ಹಿಡಿದು 5-6 ಮೈಲು ದೂರ ಬಂದ ಮೇಲೆ ಬಾರ್ಡಿಸೋನ್ [Bordizon] ಎಂಬ ಒಂದು ಚಿಕ್ಕ ಹಳ್ಳಿಗೆ ಬಂದೆವು. ಅದು ರಂಜನ ಪದ್ಧತಿಯ ಚಿತ್ರ ಬಿಡಿಸುವ [Romantic School] ಶಾಲೆಗೆ ಸೇರಿದ ಚಿತ್ರಕಾರರ ಊರು. ಅಲ್ಲಿ ಮುಂಚಿನ ಕಾಲದಲ್ಲಿ ಈಗಲೂ ಇರುವ 3 ಕೋಣೆಯ ಒಂದು ಚಿಕ್ಕ ಹೊಟೇಲಿನಲ್ಲಿ [Inn] ಆರ್. ಎಲ್. ಸ್ಟೀವೆನ್‌ಸನ್, ಜೋರ್ಜ್ ಸೇಂಡ್ ಮೊದಲಾದ ಅನೇಕ ಪ್ರಸಿದ್ಧ ಚಿತ್ರಕಾರರು ಕೆಲಸ ಮಾಡಿರುವರು. ಈಗಲೂ ಅಲ್ಲಿ ಈ ಶಾಲೆಗೆ ಸೇರಿದ ಹೆಂಗಸರು ಮತ್ತು ಗಂಡಸರು ಇರುವರು. ಚಲೋ ಇಂಗ್ಲಿಷ್ ಭಾಷೆಯಲ್ಲಿ ಒಬ್ಬ ಫ್ರೆಂಚ್ ಮಹಿಳೆಯು ಅಲ್ಲಿಯ ಚಿತ್ರಗಳನ್ನು ವಿವರಿಸಿದ್ದಲ್ಲದೆ ಈಗ ಅವರು ತಯಾರಿಸಿದ ಚಿತ್ರಗಳನ್ನ ಮಾರಾಟಕ್ಕೆ ಇಟ್ಟಿರುವರು. ಸುಮಾರು 15 ರೂಪಾಯಿಗೆ ಒಂದು ಚಿತ್ರ ಸಿಕ್ಕುವುದು. ಇವನ್ನೆಲ್ಲ ನೋಡಿ ಅಲ್ಲಿಂದ ಹೊರಟು ಪೇರಿಸ್ ಕಡೆಗೆ ಬಂದೆವು. ಬರುವಾಗ ಎರಡೂ ಕಡೆಯಲ್ಲಿ ಗೋಧಿಯ ಹಸುರು ಬೆಳೆ ಇರುವ ವಿಶಾಲ ಭೂಮಿಗಳು. ನಂತರ ದೊಡ್ಡ air port. ಅನಂತರ ಪೇರಿಸ್ ಪಟ್ಟಣಕ್ಕೆ ಬಂದು ಸೇರುವಾಗ 7 ಗಂಟೆ. ಚಲೋ ಪ್ರಯಾಣ. ಎಲ್ಲೆಲ್ಲಿಯೂ ರಮ್ಯವಾದ ದೃಶ್ಯ.

[ವಿಚಾರವಾಣಿ] ಕೆ. ಆರ್. ಕಾರಂತ

ಪ್ರಕಟಣೆ

ಕುಂದಾಪುರ ತಾಲೂಕು ಗಂಗೊಳ್ಳಿ ಗ್ರಾಮದ ಮೌಲಾನ ಮಹಮ್ಮದ್ ಸಾಹೇಬರ ಮಗ ಹಸನ್ ಸಾಹೇಬರು ಈ ಮೂಲಕ ತಿಳಿಯಪಡಿಸುವುದೇನೆಂದರೆ ನಾನು ತಾ 28ನೇ ಸಾಯಂಕಾಲ ಕುಂದಾಪುರದಿಂದ ಉಡ್ಪಿಗೆ ಬಂದು ಮರುದಿನ ಬೆಳಗ್ಗೆ 4-45 ಗಂಟೆಯ ಬಸ್ಸಿನಲ್ಲಿ ಮಂಗಳೂರಿಗೆ ಹೋದೆ. ಅಲ್ಲಿ ಬಸ್ಸಿನಿಂದ ಇಳಿಯುವಾಗ ನನ್ನೊಡನಿದ್ದ ಕೆಂಪು ಬಣ್ಣದ ಕೈಚೀಲ ಕಾಣೆಯಾದ್ದು ತಿಳಿದುಬಂತು. ಇದರಲ್ಲಿ ಕೊಲಂಬೊ ಮತ್ತು ವ್ಯಾಪಾರದ ನೋಟುಗಳು ಮತ್ತು ವರ್ಗ ಊರಿಗ ಪುಸ್ತಕಗಳು ಒಂದು ಶರ್ಟು ಮತ್ತು ಒಂದು ಲುಂಗಿ ಸಹಾ ಇತ್ತು. ಇದು ಯಾರಿಗಾದರೂ ಸಿಕ್ಕಿದಲ್ಲಿ ದಯಮಾಡಿ ಈ ಕೆಳಗಿನ ವಿಳಾಸ ದಾರರಿಗೆ ತಲುಪಿಸಿದರೆ ರೂ. 10-0-0 ಇನಾಂ ಕೊಡಲಾಗುವುದು.

ಮೌಲಾನಾ ಹಸನ್ ಸಾಹೇಬ್,
C/o P. V. Kamath,
C-P.C. Goods Office
Santhekatte, Udipi, S. K.
ತಾ. 30-11-1951

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾಚುಕೊಳ್ಳುವುದು, ಚೇಳವಿಷದುಂಟಾದವು, ಪಕ್ಷವಾತ, ನೋವಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಪುಳು ಕಟ್ಟಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ—ಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಮೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಚಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಬಿ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಚಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ವಾರದ ಭವಿಷ್ಯ

ತಾರೀಕು 6-12-51 ರಿಂದ — ತಾರೀಕು 12-12-51 ವರೆಗೆ

ಮೇಷ:–ನಿಮ್ಮ ಶಕ್ತಿಸಾಹಸಗಳು ಅದ್ವಿತೀಯವಿವೆ. ಅದರ ದೈವಬಲವು ಸಾಕಷ್ಟಿಲ್ಲವು. ಎಂತಹ ಮಹತ್ಕಾರ್ಯಗಳೇ ಇರಲಿ. ಬೇರವರ ಹಂಗನ್ನು ಬಯಸದೆ ಸ್ವಯಂ ಸಾಧಿಸುವಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕಫಲ ಮಾತ್ರ ಕಾಣಿಸದು. ಮತ್ತು ಗೃಹಕೃತ್ಯದಲ್ಲಿ ವ್ಯವಸ್ಥೆ ಸರಿಯಿರದ ಕಾರಣ ಅನುದಿನ ಕಲಹ ಕಚ್ಚಾಟಗಳು ಕಾಣಿಸುವವು. ಗಂಡ ಹೆಂಡಿರಲ್ಲೂ ಮನಸ್ತಾಪ ವುಂಟಾಗುವ ಸಂಭವವಿದೆ. ಪ್ರವಾಸದಲ್ಲಿ ಹೆಚ್ಚಿನ ಕಾಲ ಹಣಗಳನ್ನು ವ್ಯಯಿಸುವಿರಿ. ತಾ. 6 11. 12. ನಿಮಗೆ ಸುಕಾಲವಾಗಿದೆ.

ವೃಷಭ:–ಕಾಲವು ಕೊಂಚ ಪ್ರತಿಕೂಲ ಸ್ಥಿತಿಯಲ್ಲಿದೆ ಯಾವ ಕಾರ್ಯವನ್ನು ಮಾಡಲೂ ತಕ್ಕ ಶಕ್ತಿಯುಕ್ತಿಗಳು ನಿಮ್ಮಲ್ಲಿಲ್ಲವು. ಉದ್ಯೋಗದಲ್ಲಿ ಪರಿಶ್ರಮಕ್ಕೆ ತಕ್ಕಫಲ ಪ್ರಾಪ್ತಿಯಿದೆಯಾದರೂ ಇತರ ಹಲವಾರು ಕಿರಿದಾದ ಖರ್ಚುಗಳು ನಿಮಗೆ ಪ್ರಾಪ್ತವಾಗುವುದರಿಂದ ಹಣದ ಅಡಚಣೆಗೆ ಸಿಲುಕುವಿರಿ. ಶ್ರಮಜೀವಿಗಳಿಗೂ ಸೇವಕ ವರ್ಗಕ್ಕೂ ವ್ಯಾಪಾರೀ ಜನರಿಗೂ ಈ ವಾರವು ಹೆಚ್ಚಿನ ಕಷ್ಟದಾಯಿಯಾಗಿ ಪರಿಣಮಿಸಲಿದೆ. ತಾ. 6. 7. 8. 11. 22. ರಲ್ಲಿ ಮಿತ್ರರಭೆಟ್ಟಿ, ಕಾರ್ಯದಲ್ಲಿ ವಿಜಯ ಲಾಭ ಮನಶ್ಶಾಂತಿಗಳು ಲಭಿಸುವವು.

ಮಿಥುನ:–ಪಿತ್ಥದೋಷದಿಂದಾಗಿ ದೇಹದಲ್ಲಿ ಜ್ವರಾದಿಗಳು ಕಾಣಿಸಬಹುದು. ನಿಮ್ಮ ಉದ್ಯೋಗ ವ್ಯಾಪಾರ ಮೊದಲಾದುವುಗಳಲ್ಲಿ ನಿರೀಕ್ಷಿಸಿದಷ್ಟು ಫಲಸಿಗಲೊಲ್ಲದ ಕಾರಣ ಸ್ವಲ್ಪ ಮಟ್ಟಿನ ಹಣದ ಅಡಚಣೆಗೆ ಸಿಲುಕುವಿರಿ. ಚಂಚಲವಾದ ಮನಸ್ಸು ವಿಷಯಾದಿಗಳ ಕಡೆಗೆಳೆದು ವೃಥಾ ನಷ್ಟಕಷ್ಟಗಳನ್ನು ತಂದೊಡ್ಡಲಿದೆ. ಮಿತ್ರರ ಸೋಗು ಹಾಕಿಕೊಂಡ ಕೆಲವು ಶತ್ರುಗಳು ನಿಮ್ಮನ್ನು ಮೋಸದಲ್ಲಿ ಕೆಡಹಿ ನಷ್ಟಕಷ್ಟ ಅಪವಾದಗಳಿಗೆ ಗುರಿಮಾಡಲಿರುವರು. ಆದಕಾರಣ ಹೊಸಬರ ಮೈತ್ರಿ ಬೆಳೆಸುವಾಗ ವಿಶೇಷ ಜಾಗ್ರತೆ ವಹಿಸಿರಿ. ತಾ. 7. 8. 9. 10. ಇಷ್ಟಪ್ರದಗಳಿವೆ.

ಕರ್ಕಟ:–ನೀವು ಒಳ್ಳೆಯ ಅದೃಷ್ಟಶಾಲಿಗಳಿರುವಿರಿ. ನೀವ್ಯಾವ ಕಾರ್ಯಕ್ಕೆ ಕೈಹಾಕಿದರೂ ಅದು ನಿಶ್ಚಯವಾಗಿ ಫಲಿಸಿಯೇ ತೀರುವದು. ಮಾತ್ರವಲ್ಲ ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನದಾಗ ಫಲವನ್ನು ಕೊಡಲಿದೆ. ನಿಮ್ಮ ಕಾರ್ಯಪಟುತ್ವವನ್ನು ಕಂಡ ಶತ್ರುಜನರೂ ಕೂಡಾ ಮೂಗಿನ ಮೇಲೆ ಬೆರಳಿಡುವರು. ಯಾವೊಂದು ತೆರನಾದ ತಾಪತ್ರಯವೂ ನಿಮಗುಂಟಾಗಲಾರದು. ಅಪ್ತೇಷ್ಟರು ಬಂಧುಗಳು ಮೊದಲಾದವರು ಸದಾ ನಿಮ್ಮ ಬೆಂಬಲವನ್ನೇ ಹಾರೈಸುತ್ತಿರುವರು. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಕೀರ್ತಿ ಲಾಭಗಳನ್ನು ಪಡೆವಿರಿ.

ಸಿಂಹ:–ದೈವವು ತೀರಾ ದುರ್ಬಲವಿರುವ ಕಾರಣ ನಿಮ್ಮ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲಗಳಾಗಲಿವೆ. ಪಿತ್ಥೋಷ್ಣವಿಕಾರಗಳಿಂದ ಆರೋಗ್ಯವು ಕೆಡುವುದು. ರಾಜಕೀಯ ಅಧಿಕಾರಿ ಜನರಿಂದ ಉಪದ್ರವ ವುಂಟಾದೀತು. ಖರ್ಚಿನ ಸಲುವಾಗಿ ಇತರರ ಕೂಡಿ ಸಾಲಕಡಗಳನ್ನು ಮಾಡಬೇಕಾಗುವದು. ಮನೆಯಲ್ಲಿ ಅವ್ಯವಸ್ಥೆಯು ಹೆಚ್ಚಿ ತಂದೆ ಮಕ್ಕಳೊಳಗೂ ಗಂಡಹೆಂಡಿರೊಳಗೂ ಜಗಳವಾದೀತು ವ್ಯಾಪಾರೀ ಜನತೆಗೆ ಈ ವಾರವು ಹೆಚ್ಚಿನ ಕಷ್ಟದಾಯಿಯಾಗಲಾರದು. ತಾ. 6 11. 12. ಉಳಿದ ದಿನಗಳಿಗಿಂತ ಲೇಸಿಹುವು.

ಕನ್ಯಾ:–ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಮುಂಚಿಗಿಂತ ಬಹು ಮಟ್ಟಿಗೆ ಸುಧಾರಿಸಬಹುದು. ಧನಭಾಗ್ಯಪತಿಯಾದ ಶುಕ್ರಾಚಾರ್ಯನು ಸ್ವಸ್ಥಾನಕ್ಕೆ ಬಂದಿರುವ ಕಾರಣ ನಿಮ್ಮ ಆರ್ಥಿಕ ಭಾಗವು ಅತ್ಯುತ್ತಮವಾಗುವುದು. ವಾಕ್ಚತುರತೆಯ ದೆಸೆಯಿಂದಾಗಿ ಜನತೆಯ ಸ್ನೇಹವನ್ನು ಸಂಪಾದಿಸುವಿರಿ. ಸರ್ವತ್ರ ಗೌರವಾದರಗಳು ಲಭಿಸುವವು. ನೀವು ಕೈಗೊಂಡ ಕಾರ್ಯಗಳೆಲ್ಲವೂ ನಿಮ್ಮ ಬಯಕೆಯಂತೆ ಸಫಲಗಳಾಗಲಿವೆ. ವಾರಾದಿಯ 3 ದಿನಗಳಲ್ಲಿ ವಿಜಯಲಾಭ ಕೀರ್ತಿಗಳನ್ನು ಗಳಿಸುವಿರಿ.

ತುಲಾ:–ಆರ್ಥಿಕ ಬಿಕ್ಕಟ್ಟಿನಿಂದಲೂ ದೇಹಾಲಸ್ಯದಿಂದಲೂ ನಿಮ್ಮ ಮನಸ್ಸು ಅತೀವ ಚಂಚಲವಾಗಲಿದೆ. ಆಪ್ತೇಷ್ಟ ಜನರಲ್ಲೂ ಅವಿಶ್ವಾಸ ವುಂಟಾಗಲಿದೆ. ಪಿತ್ಥಪ್ರಕೋಪದಿಂದ ದುಃಸ್ವಪ್ನ ನಿದ್ರಾಭಾವವುಂಟಾದೀತು ಅನಿರೀಕ್ಷಿತ ಶೋಕಾನರ್ಥ ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ ಶತ್ರುಗಳ ಕಾಟದಿಂದಾಗಿ ನಿಮ್ಮ ಹಲವಾರು ಕಾರ್ಯಕ್ರಮಗಳು ಅರ್ಧದಲ್ಲೇ ನಿಲ್ಲುವವು. ಅಂತೂ ನಿಮ್ಮ ದೇಹಮನಸ್ಸುಗಳಿಗೆ ಕೊಂಚವೂ ಸುಖ ಶಾಂತಿಯಿರದೆಂದು ತಪ್ಪಾಗದು. ತಾ. 7. 8. 9. 10. ಹೆಚ್ಚಿನ ಅನಿಷ್ಟ ಕಾರಿಯಾಗದು.

ವೃಶ್ಚಿಕ:–ಅದೃಷ್ಟವಿಂದೀಗ ಅತ್ಯುತ್ತಮ ಸ್ಥಿತಿಗೆ ಬಂದಿರುವುದು. ಉದ್ಯೋಗದಲ್ಲಿ ಹೆಚ್ಚಿನ ಧನಲಾಭವಾಗುವದು. ಎತಂಹ ಮಹತ್ಕಾರ್ಯವಿರಲಿ ನಿಮ್ಮ ಭಾಗಕ್ಕದು ಕ್ಷಣಸಮಾನವಾದೀತು. ಹಲವಾರು ಮುಖದಿಂದ ಧನವು ನಿಮ್ಮ ಕೈಸೇರಲಿದೆ. ಕೆಲವೊಮ್ಮೆ ಮುಂಗೋಪ ದೆಸೆಯಿಂದಾಗಿ ವ್ಯರ್ಥ ನಿಷ್ಠುರಗಳಾದೀರಿ. ಪಿತ್ಥ ಪ್ರಕೋಪದಿಂದ ಆರೋಗ್ಯಕ್ಕೂ ಕಿಂಚಿತ್ ಹಾನಿಯಿದೆ. ಬೇರಾವ ಭಾಗದಲ್ಲೂ ಕೊರತೆಗಳಿಲ್ಲದ ನಿಮಗೆ ಗೃಹ ಸುಖವು ಅತ್ಯುತ್ತಮವಾಗಿರುವದು. ವಾರಾಂತ್ಯದ 4 ದಿನಗಳು ಅತೀವ ಪ್ರಶಸ್ತಗಳಿವೆ.

ಧನು:–ಅನೇಕ ವಾರಗಳಿಂದಲೂ ಕಷ್ಟವನ್ನನುಭವಿಸುತ್ತಿದ್ದ ನಿಮಗೆ ಇಂದೂ ಕೂಡಾ ಸುಧಾರಣೆಯಾಗಿಲ್ಲವು ವಿಶೇಷತಃ ದೇಹ ಮನಸ್ಸುಗಳಿಗೇ ಸುಖನೆಮ್ಮದಿಗಳಿಲ್ಲವು. ಅಪ್ತೇಷ್ಟರು ಬಂಧುಗಳು ಇವರೊಳು ಅಲ್ಪ ಕಾರಣದಿಂದಾಗಿ ಕಲಹವಾಗುವುದಲ್ಲದೆ ದೀರ್ಘದ್ವೇಷಕ್ಕೂ ಪಾತ್ರರಾದೀರಿ ಎಷ್ಟೇ ದುಡಿದರೂ ಪಾಸಾಲಕರದರೂ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ. ತ್ರಿದೋಷ ಜನಿತವಾದ ರೋಗಗಳು ಕೆಲವೊಮ್ಮೆ ಕಾಣಿಸಬಹುದು. ಆರ್ಥಿಕ ಬಿಕ್ಕಟ್ಟು ವಿಶೇಷವಾಗಿರುವುದರಿಂದ ತಾ. 7. 8. 9. 10 ಈ ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾಗುವದು.

ಮಕರ:–ಈ ವಾರದಲ್ಲಿ ನಿಮ್ಮ ಪ್ರಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದಾದರೂ ಆದಾಯದ ದ್ವಿಗುಣ ವ್ಯಯವಿರುವುದರಿಂದ ಹಣದ ಅಡಚಣೆಯು ಇದೀವಾರದಲ್ಲೇ ತಪ್ಪಲೊಲ್ಲದು. ವಾತ ಪ್ರಕೋಪದಿಂದ ಸಂದುಗೊಂಡುಗಳಲ್ಲಿ ನೋವೂ ವಿರೋಧಿಗಳ ಪೀಡೆಯಿಂದ ಕಾರ್ಯಕ್ಕೆ ವಿಘ್ನಗಳೂ ಉಪಸ್ಥಿತವಾಗುವವು. ಉದ್ಯೋಗಗಳಿಗೆ ಸ್ಥಾನಚಲನೆಯ ಯೋಗವಿದೆ. ಮಿತಭಾಷಿಗಳಾಗಿದ್ದಷ್ಟು ಒಳ್ಳೆತು. ಆಕಸ್ಮಿಕ ವಾತಪ್ರವಾಸವು ಗಂಟುಬೀಳಲಿದೆ. ತಾ 7-8 ರಲ್ಲಿ ಧನಾಪ್ತಿ ವಿಜಯಸ್ತ್ರೀ ಸುಖಭೋಗಗಳು ಲಭಿಸುವವು.

ಕುಂಭ:–ಸನ್ಮಿತ್ರರ ಮತ್ತು ಬಂಧುಜನತೆಯ ಸಹಕಾರದಿಂದಾಗಿ ಈ ವಾರವನ್ನು ಸುಖದಿಂದ ಕಳೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಮುಂಚಿಗಿಂತ ಎಷ್ಟೋ ಉತ್ತಮಸ್ಥಿತಿಗೆ ಬರಲಿದೆ. ಸಾಮಾಜಿಕ ರಾಜಕೀಯ ರಂಗಗಳಲ್ಲಿ ಕೀರ್ತಿಭಾಗಿಗಳಾಗಲಿರುವಿರಿ. ನಿಮ್ಮ ಸಂಕಲ್ಪಗಳು ಅನಾಯಾಸದಿಂದ ಅಲ್ಪಾವಕಾಶದಲ್ಲೇ ಸಿದ್ಧಿಸಲಿರುವವು. ಆದರೂ ಶನ್ಯಂಗಾರ ಕದೋಷದಿಂದಾಗಿ ಕೆಲವೊಮ್ಮೆ ಆಕಸ್ಮಿಕ ಧನಮಾನಗಳಿಗೆ ಹಾನಿ ಸಂಭವಿಸೀತು. ತಾ 6.9–10. ಈ ದಿನಗಳಲ್ಲಿ ಸುಖಭೋಗ ಲಾಭಗಳು ವಿಪುಲವಾಗಿ ಲಭಿಸುವವು.

ಮೀನ:–ನಿಮ್ಮ ಜನ್ಮಸ್ಥಾನದಲ್ಲಿ ಬೃಹಸ್ಪತಿಯಿದ್ದು ಸಪ್ತಮಸ್ಥ ಶನ್ಯಂಗಾರ ಕರದೃಷ್ಟಿಯುಳ್ಳನಾದ ಕಾರಣ ನೆತ್ತರೇದರ ಪೀಡೆ ಪರ್ಯಟನ ಸ್ಥಾನಚಲನೆ ಗಂಡಹೆಂಡಿರೊಳು ಜಗಳ ದೇಹಾಲಸ್ಯ ವ್ಯರ್ಥಕಲಹ ಭಯಾದ್ಯನಿಷ್ಟಗಳು ದಿನೇದಿನೇ ಹೆಚ್ಚುವವು. ನಿಮ್ಮ ಶ್ರಮವು ಸಂಪೂರ್ಣ ವ್ಯರ್ಥವಾಗದಿದ್ದರೂ ಪರಿಶ್ರಮಕ್ಕೆ ತಕ್ಕಫಲ ದೊರೆಯದು. ವ್ಯವಹಾರ ಲೇವಾದೇವಿ ಇವುಗಳ ದೆಸೆಯಿಂದಾಗಿ ಕೋರ್ಟುಮನೆಗೆ ತಿರುಗುವ ಪ್ರಸಂಗ ಬರಲಿದೆ. ಆದರೂ ತಾ 7-8-11-12 ಈ ದಿನಗಳಲ್ಲಿ ನಿಮ್ಮ ಕೆಲವೊಂದು ಬಯಕೆಗಳು ಫಲಿಸುವವು.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿದ್ದು ಸ್ನಾನ, ಊಟ, ಉಪಹಾರ, ಬೈರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara

ಅಂದವಾದ ಮತ್ತು ಅಚ್ಚುಕಟ್ಟಾದ ಮುದ್ರಣಕ್ಕೆ

ನವಯುಗ ಪ್ರೆಸ್, ಉಡುಪಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3–8–0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪಿತ

31ನೆ ವರ್ಷ

13—12—1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ .೧೪

NAVAYUGA WEEKLY Post Box No. 22 UDIPI.

Vol 31
No. 14

ಮುಂಬರುವ ಚುನಾವಣೆಯಲ್ಲಿ ಯಶ ಗಳಿಸುವದಕ್ಕಾಗಿ ಪ್ರತಿಯೊಬ್ಬ ಹುರಿಯಾಳುವೂ ಶಕ್ತಿಮೀರಿ ದುಡಿಯಬೇಕಾದ ಪ್ರಸಂಗವಿದು. 126 ಪಕ್ಷಗಳು ಚುನಾವಣಾ ರಂಗದಲ್ಲಿ ಬಲಾಬಲ-ಮೇಲಾಟಗಳನ್ನು ನಡೆಸುವಲ್ಲಿ ಯೋಗ್ಯತಾವಂತರೇ ಆರಿಸಿ ಬಂದಾರೆಂದೂಹಿಸುವದು ಕಷ್ಟಸಾಧ್ಯವಾದ ಮಾತು. ಈ ಪ್ರೌಢ ಮತದಾನ ಪದ್ಧತಿಯಿಂದಲೂ ಅಶಿಕ್ಷಿತರೂ-ಅಕ್ಷರಸ್ಥರೂ ಇದರಲ್ಲಿ ಭಾಗವಹಿಸುವದರಿಂದಲೂ-ಮತದಾನದ ಮಹತ್ವತೆಯು ನಮ್ಮೆಣಿಕೆಯಂತೆ ಸತ್ಪಾತ್ರಕ್ಕೇನೇ ಸಂದೀತೆಂದೂಹಿಸಲು ಬರುವಂತಿಲ್ಲ.

ಇಂಗ್ಲಾಂಡದ ಪಾರ್ಲಿಮೆಂಟರೀ ಪ್ರಮುಖ ಜಗತ್ತಿಗೆ ಆದರ್ಶವಾದಂತಹುದು. ಈಚೆಗೆ ಅಲ್ಲಿನಡೆದ ಚುನಾವಣೆ ಅಲ್ಲಿನ ಜನತೆಯ ರಾಜಕೀಯ ಮುನ್ನೋಟ ಹಾಗೂ ದೇಶಾಭಿಮಾನದ ದ್ಯೋತಕವಾಗಿದೆ. ಅಲ್ಪಬಹುಮತದಿಂದ ಆಡಳಿತವನ್ನು ನಡೆಸುವದು ಕಷ್ಟಸಾಧ್ಯವೆಂದು ತಿಳಿದು ಕ್ಲೆಮೆಂಟ್ ಅಟ್ಲಿಯವರು ಒಂದು ವರ್ಷದೊಳಗಾಗಿ ಚುನಾವಣೆ ನಡೆಸಿದರು. ಚುನಾವಣೆಯಲ್ಲಿ ಕೂಲಿಗಾರ ಪಕ್ಷವು ಬಹುಮತಗಳಿಂದ ಆರಿಸಿ ಬಂದೀತೆಂದು ಭರವಸೆ ಅವರಲ್ಲಿ ಪರಿಪೂರ್ಣವಿತ್ತು. ಆದರೆ ಅಲ್ಲಿನ ಜನ ಒಳ್ಳೆಯ ಸುಶಿಕ್ಷಿತರು. ವಿಚಾರಿಗಳು. ಆದ್ದರಿಂದ ಸಾರಾಸಾರ ವಿಚಾರ ಮಾಡಿಕೊಂಡೇ ಅವರು ಮತದಾನಮಾಡಿದರು.

ಇದೇ ಹೋಲಿಕೆ – ಮಾನದಂಡದಿಂದ ನಮ್ಮದೇಶದ ರಾಜಕೀಯ ಪಕ್ಷಗಳನ್ನು ಅಳೆಯಬಹುದೆ? ಪ್ರಜಾಪ್ರಭುತ್ವವಿರುವಲ್ಲಿ ಪ್ರಜೆಗಳು ಬುದ್ಧಿಶಾಲಿಗಳಾದರೆಮಾತ್ರ ದೇಶ ನಾನಾಬಗೆಯ ಪ್ರಗತಿಯನ್ನು ಸಾಧಿಸುವದು- ಆದರೆ ನಮ್ಮಲ್ಲಿ ಜನ ದೇಶದ ಮುಂ

ಜನ ಕಾಂಗ್ರೆಸ್ಸನ್ನೇ ಸ್ವಾಗತಿಸಬೇಕು-

ದಿನ ಸಮಸ್ಯೆಗಳನ್ನರಿತುಕೊಂಡು ನಮಗೆ ಯಾವ ಪಕ್ಷಗೆದ್ದರಾದೀತು– ಯಾವಪಕ್ಷ ಗೆದ್ದರೆ ಈ ಗಂಭೀರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾದೀತು? ಎಂದು ವಿಚಾರವಿಮರ್ಶೆಮಾಡುವಷ್ಟು ಮುಂದುವರಿದಿಲ್ಲ. ಬಾಯಿಬಲ-ಅರ್ಧಮರ್ಧ ರಾಜಕೀಯ ಅನುಭವಗಳಿಂದ ಕೂಡಿದ ದುರ್ಬಲ ಪಕ್ಷಗಳ ಮೋಹಜಾಲಕ್ಕೆ ಬಲಿಬಿದ್ದು ಬೇಡಾದಕಡೆಗೆ ತಮ್ಮ ಒಲವನ್ನು ಪ್ರಯೋಗಿಸುವದು ಸ್ವಾಭಾವಿಕ! ರೈತರು-ಇಲ್ಲವೆ ಕೂಲಿಗಾರರುಳ್ಳ ಪ್ರದೇಶಗಳಲ್ಲಿ ಕಮ್ಯೂನಿಸ್ಟರ ಹಾಗೂ ಸಮಾಜವಾದಿಗಳ ಬಲವು ಹೆಚ್ಚಾಗಬಹುದು. ಇಂತಹ ಅಲ್ಪ ಸಂಖ್ಯಾಕ ಹಾಗು ಅನನುಭವಿಕ ಪಕ್ಷಗಳ ಆಶ್ವಾಸನಗಳಿಂದ ತಮ್ಮ ಇಷ್ಟಾರ್ಥ ಕೈಗೂಡೀತೆಂದು ಅವರು ಭಾವಿಸಬಹುದು. ವಸ್ತುತಃ ಆ ಪಕ್ಷಗಳು ರೈತರ ಇಲ್ಲವೆ ಕಾಮಗಾರರ ಹಿತರಕ್ಷಣೆಯನ್ನು ಮಾಡುವಂತಿಲ್ಲ ಏಕೆಂದರೆ ಅಲ್ಪ ಸಂಖ್ಯಾಕರಾದ ಒಬ್ಬಿಬ್ಬರನ್ನು ಕಳಿಸಿ ಅವರಿಂದ ಸಾಧಿಸುವದಾದರೂ ಏನನ್ನು? ಬಹುಮತ ಹಾಗೂ ಹೆಚ್ಚು ಜನ ಬೆಂಬಲವುಳ್ಳ ಸಂಸ್ಥೆಯ ಪ್ರತಿನಿಧಿಯೊಡನೆ ತಮಗೆ ಬೇಕಾದ ಆಶ್ವಾಸನೆಗಳನ್ನು ತೆಗೆದುಕೊಂಡು ಅಂತಹರಿಗೆ ಮತದಾನ ಮಾಡುವದರಿಂದ ಉತ್ತಮ ಕಾರ್ಯವನ್ನು ಸಾಧಿಸಿದಂತಾಗುವದು ಮಾತ್ರವಲ್ಲದೆ ದೇಶದ ಆಡಳಿತದ ಸು[illegible]ತೆ ಹಾಗೂ ಏಕಮುಖತೆಗೆ ಎಡೆಮಾಡಿಕೊಟ್ಟಂತಾಗುವದು.

ಯಾವುದಾದರೂ ಒಂದು ಮತಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಹುರಿಯಾಳು ನಿಂತನೆನ್ನೋಣ. ಅವನಲ್ಲಿ "ದಕ್ಷತೆ" "ಯೋಗ್ಯತೆ"ಗಳೆರಡೂ ಇದ್ದು ಸ್ಥಳೀಯ ಜನರ ಒಲವು ಅವನ ಕಡೆಗೇ ಇದ್ದು ಅವನು ಗೆದ್ದು ಬಂದಾನೆನುವ ಭರವಸೆಯಿರುವಾಗಲೂ ಹಲವು ಪಕ್ಷದವರು ಕೇವಲ ಸ್ಪರ್ಧಾದೃಷ್ಟಿಯಿಂದ ಓರ್ವನನ್ನು ನಿಲ್ಲಿಸಿ, ಅವನ ಬಗ್ಗಾಗಿ ಮತಗಳನ್ನು ಯಾಚಿಸಿದರೆ– ಕಾಂಗ್ರೆಸ್ಸನ್ನು ವಿರೋಧಿಸಬೇಕೆಂಬ ಒಂದೇ ದೃಷ್ಟಿಯಿಂದ ತಮ್ಮ ಮತವನ್ನು ಇಂತಹ ಸ್ಪರ್ಧಾಳುಗಳಿಗೆ ಕೊಡುವದು ಸರಿಯಾದೀತೇ?

ಹಲವರು ಕಾಂಗ್ರೆಸ್ ಶುದ್ಧೀಕರಣವಾಗಬೇಕೆಂದು ಹೇಳುವರು- ಒಪ್ಪತಕ್ಕಾದಂಶವೇ ಇದು. ಅದಕ್ಕೆ ಹೆಚ್ಚಾಗಿ ಜನತೆಯ ಹೃದಯ ಶುದ್ಧೀಕರಣವಾಗುವದು ಇನ್ನೂ ಅವಶ್ಯವೆಂದು ಇಲ್ಲಿ ಹೇಳಬೇಕಾಗಿದೆ. ಕಾಂಗ್ರೆಸ್ಸಿನಬಗ್ಗೆ ಜನತೆಯಲ್ಲಿರುವ ಭಾವನೆ ಏನೇ ಇರಲಿ— ದೇಶದ ಮುಂದಿರುವ ಗಂಭೀರಸಮಸ್ಯೆಗಳ ನಿವಾರಣೆಗೂ —ಪಂಚವಾರ್ಷಿಕಯೋಜನೆಗಳ ಸಂಪೂರ್ಣ ಲಾಭಪಡೆದು ಭಾರತ ಸ್ವಾವಲಂಬನಮಾರ್ಗವನ್ನನುಸರಿಸ ಬೇಕಲ್ಲ —ಕಾಂಗ್ರೆಸ್ಸು ತಿರುಗಿ ಅಧಿಕಾರಕ್ಕೆ ಬರುವದು ಮುಖ್ಯವಾಗಿದೆ ಯೆಂಬುದನ್ನು ವಿಚಾರವಂತರಾರೂ ಅಲ್ಲಗಳೆಯುವಂತಿಲ್ಲ. ಇಷ್ಟರಲ್ಲೇ ಕಾಂಗ್ರೆಸ್ ಗಳಿಸಿಕೊಂಡಿರುವ ಅವಿರೋಧ ಸ್ಥಾನ ಹಾಗೂ ಜನತೆಯ ಬೆಂಬಲಗಳಿಂದ ಕಾಂಗ್ರೆಸ್ಸೇ ಆರಿಸಿ ಬರುವದೆನ್ನುವದರಲ್ಲಿ ಸಂದೇಹವಿಲ್ಲ. ಆದರೆ ಕಾಂಗ್ರೆಸ್ ಇನ್ನೂ ಬಹುಸಂಖ್ಯೆಯಲ್ಲಿ ಆರಿಸಿಬರಬೇಕಾಗಿದೆ. ಇಂಗ್ಲಂಡದ ಜನ ಸದ್ಯದ ವಾತಾವರಣದ ಮೇಲೆ ಪ್ರ[illegible] ಕನ್ಸರ್ವೇಟಿವ್ ಸರಕಾರವನ್ನು ಆರಿಸಿದಂತೆ- ಭಾರತ ದೇಶದ ಜನ ದೇಶದ ಸ್ಥಿತಿಗತಿಯನ್ನರಿತುಕೊಂಡು ಕಾಂಗ್ರೆಸ್ಸನ್ನೇ ಆರಿಸುವದು ಅತ್ಯಂತಾವಶ್ಯಕವೂ ಕಾಲೋಚಿತವೂ ಆಗಿದೆ. ಜನತೆಯಾದರೂ ಅಷ್ಟನ್ನೇ ಮಾಡೀತು.



ಹೊಸಕೆರೆ ಚಿದಂಬರಯ್ಯನವರಿಂದ
ಗೀತೆಯ ಸಮೂಲ ಭಾಷಾಂತರ.

ಪ್ರತಿಯೊಬ್ಬನೂ ಓದತಕ್ಕ ಪವಿತ್ರಗ್ರಂಥ
ಬೆಲೆ. 0—12—0.
ನವಭಾರತ ಪುಸ್ತಕ ಭಂಡಾರ
ಉಡುಪಿ.

TEL. 40592

WATSONS AERATED WATERS
14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)



ಕ್ರೆಲಿಯಾ
ಹಿತ್ತು ವರ್ಗದವರ,
ಎಸ್ಟ್ರೆಲಾ ಬ್ಯಾಟರಿಗಳು.

ನ್ಯಾಯ ಸಭೆ

ಚುನಾವಣೆಗಾಗಿ ಬೇಕಾದಂತೆ ಭರವಸೆ ಕೊಡಬಹುದೇ?

ಉಮೇದ್ವಾರರ ಮತ್ತು ಮತದಾರರ ಹೊಣೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಇಷ್ಟರ ವರೆಗೆ ನಾವು ನ್ಯಾಯಸಭೆಯ ಸದಸ್ಯರ ಕುರಿತು ವಿಚಾರಿಸಿದೆವು. ಇನ್ನು ನ್ಯಾಯಸಭೆಯ ವಿಷಯವೇ ಸ್ವಲ್ಪ ತಿಳಿಯಬೇಕಾಗಿದೆ. ನ್ಯಾಯಸಭೆಯು ಅನಧಿಕಾರದ ಕಾರ್ಯವೆಸಗದಂತೆ ನೋಡಿಕೊಳ್ಳುವದು ಪ್ರಜಾಸತ್ತೆಯ ಬೆಳವಣಿಗೆಗೆ ಒಳ್ಳೇದು. ನ್ಯಾಯಸಭೆಯು ಸ್ವೇಚ್ಛೆಯಿಂದ ವರ್ತಿಸಿದರೆ ಬೇಲಿಯು ಗದ್ದೆಯ ಪೈರನ್ನು ತಿಂದಂತೆಯೇ ಸರಿ. ನ್ಯಾಯಸಭೆಯ ಜೀವಮಾನಕ್ಕೆ ಒಂದು ಮಿತಿ ಇರುವದು ಅಗತ್ಯ. ಒಂದು ಸಲ ಚುನಾವಣೆಯಾದ ಸಭೆಯು ಹದಿನೈದು ಇಪ್ಪತ್ತು ವರ್ಷಗಳ ವರೆಗೆ ಅಧಿಕಾರದಲ್ಲಿರುವದಾದರೆ ಜನರಿಗೂ ಸಭೆಗೂ ಯಾವ ಸಂಬಂಧವಿರುವುದಿಲ್ಲ. ಸಮಯ ಹೋದಂತೆ ಜನರ ಅಭಿಪ್ರಾಯವು ಬದಲಾಗುವದು ಮತ್ತು ದೇಶದ ರಾಜಕೀಯ ಆರ್ಥಿಕ ಸ್ಥಿತಿಯು ಸಹ ಬದಲಾಗುವದು. ಆಗಾಗ ಜನರ ಅಭಿಪ್ರಾಯವೇನೆಂದು ಹೇಳುವ ದಾರಿಯೇ ಬಂದಾದಂತಾಗುತ್ತದೆ. ಸಭೆಯ ಅವಧಿಯು ಕಡಿಮೆ ಸಮಯ ಇದ್ದಷ್ಟು ಒಳ್ಳೇದೆಂಬ ಭಾವನೆ ಕೆಲವರಲ್ಲಿದೆ. ಪ್ರಜಾಸತ್ತೆಯ ವೃದ್ಧಿಗೆ ಅದು ಒಳ್ಳೇದೆಂಬ ತಪ್ಪು ಅನುಭವವು ಅವರಲ್ಲಿದೆ. ಇದೇ ಕಾರಣದಿಂದ ಇಂಗ್ಲಂಡಿನಲ್ಲಿ ಬಹುಕಾಲದ ವರೆಗೆ ವರ್ಷಂಪ್ರತಿ ಪಾರ್ಲಿಮೆಂಟು ಚುನಾವಣೆಯಾಗಬೇಕೆಂತ ಕೂಗೆಬ್ಬಿಸುತ್ತಿದ್ದರು. ಆದರೆ ದೇಶದ ವ್ಯವಹಾರವು ಹೆಚ್ಚು ಸ್ವಲ್ಪ ಸಮಯದಲ್ಲಿ ಪೂರ್ಣ ಕೆಲಸವನ್ನು ಸಾಂಗವಾಗಿ ಪೂರೈಸುವದು ಕಷ್ಟ. ಒಂದು ಕಡೆಯವರು ಆರಂಭಿಸಿದ ಕಾರ್ಯವನ್ನು ಇನ್ನೊಂದು ಕಡೆಯವರು ನಿಲ್ಲಿಸಿ ಬಿಡಬಹುದು ಒಂದು ಕಡೆ ಅರೆವಾಸಿ ಮಾಡಿ ಬಿಟ್ಟ ಕೆಲಸವನ್ನು ಇನ್ನೊಂದು ಕಡೆಯವರು ರದ್ದುಗೊಳಿಸಬಹುದು ಇದರಿಂದ ಯಾವ ದೊಡ್ಡ ಕೆಲಸವೂ ಸಾಗದು. ತಮ್ಮ ಅವಧಿಯೊಳಗೆ ಹಿಡಿದ ಕೆಲಸವನ್ನು ಮುಗಿಸಿಬಿಡಬೇಕೆಂದು ಅವಸರದಿಂದ ಕಾರ್ಯವನ್ನೂ ಕಾನೂನುಗಳನ್ನು ಶೋಧಿಸದೆ ಮಾಡಿ ನಾನಾತರದ ಲೋಪದೋಷಗಳುಂಟಾಗುವವು. ಮಂತ್ರಿಮಂಡಲದವರು ತಮಗೆ ಹಿತವಿರುವದಕ್ಕೇ ಪ್ರಾಮುಖ್ಯತೆ ಕೊಟ್ಟು ಅದನ್ನೇ ಮೊದಲಾಗಿ ಪೂರೈಸುವ ಪ್ರಯತ್ನ ಮಾಡುವದು ಪ್ರಜಾಸತ್ತೆಯ ತತ್ವಕ್ಕೆ ಹೆಚ್ಚಾಗಿ ಅಂಟಿಕೊಂಡರೆ ಕಾರ್ಯಗಳಿಗೆ ಭಂಗ ಬಂದ. ಜನರಿಗೆ ಕೆಟ್ಟದ್ದಾದೀತು. ಮಾನವರ ಒಳ್ಳಿತಿಗಾಗಿ ಕಟ್ಟಳೆಗಳುಂಟಾದುದು ಕಟ್ಟಳೆಗಳ ಒಳ್ಳಿತಿಗೆ ಮಾನವರು ಹುಟ್ಟಿದುದಲ್ಲ. The Sabbath is made for man not man for the Sabbath ಎಂಬ ಗಾದೆಯಂತೆ ಒಳ್ಳೇ ಸರಕಾರದ ಬಗ್ಗೆ ಪ್ರಜಾಸತ್ತೆಯನ್ನು ಸ್ಥಾಪಿಸಿದ್ದೇ ಹೊರತು ಪ್ರಜಾಸತ್ತೆಯ ಬಗ್ಗಾಗಿ ಒಳ್ಳೇ ಸರಕಾರ ರಚಿಸಿದುದಲ್ಲ. ಒಳ್ಳೇ ಸರಕಾರವೆಂಬುದು ಜನರ ಶ್ರೇಯೋಭಿವೃದ್ಧಿಗಾಗಿ ಬೇಕಾಗಿದೆ. ಕೂಡ್ಲೇ ಕೂಡ್ಲೇ ಚುನಾವಣೆಯಾದರೆ ಸರಕಾರಕ್ಕೆ ತುಂಬಾ ಖರ್ಚಾಗುತ್ತದೆ. ಜನರ ವ್ಯವಹಾರಕ್ಕೆ ಕಡೆಬರುತ್ತದೆ ಉದರಪೋಷಣೆಗಾಗಿ ದಿನನಿತ್ಯವೂ ದುಡಿಯುವವರಿಗೆ ಮತ್ತಷ್ಟು ಕಷ್ಟ. ಆದ್ದರಿಂದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮತ್ತು ಸರಕಾರ ಕಾರ್ಯಕ್ರಮಕ್ಕೆ ತಕ್ಕಂತೆ ನ್ಯಾಯಸಭೆಗೆ ಒಂದು ಅವಧಿಯನ್ನಿಡುವದು ಉತ್ತಮ.

ನ್ಯಾಯ ಸಭೆಗೆ ಒಂದೊಂದು ರಾಷ್ಟ್ರದಲ್ಲಿ ಅವರಿಗನುಕೂಲವಾದಂತೆ ನ್ಯಾಯಸಭೆಯ ಜೀವಾವಧಿಯನ್ನು ನಿಶ್ಚೈಸಿರುವರು. ಕೆಲವು ರಾಷ್ಟ್ರಗಳಲ್ಲಿ ನ್ಯಾಯ ಸಭೆಯು ಮೂರೇ ವರ್ಷಗಳಲ್ಲಿ ಮುಕ್ತಾಯವಾಗುವದು. ಕೆಲವು ಕಡೆ ನಾಲ್ಕು ವರುಷ ಇನ್ನು ಕೆಲವು ಕಡೆ ಐದು ವರ್ಷದ ಮಿತಿ ಇದೆ.

ನ್ಯಾಯ ಸಭೆಯಲ್ಲಿ ತಮ್ಮ ಬೆಂಬಲಕ್ಕಿರುವ ಸದಸ್ಯರು ಕಡಮೆಯಾದರೆಂತಾದರೆ ಮಂತ್ರಿಮಂಡಲದವರು ಈ ಅವಧಿ ಮುಗಿಯುವುದರೊಳಗೆ ಮಧ್ಯ ಕಾಲದಲ್ಲಿ ಸಭೆಯನ್ನು ಅಂತ್ಯಗೊಳಿಸಿ ಹೊಸ ಚುನಾವಣೆಯನ್ನು ಮಾಡಿಸಬಹುದು. ಯಾವ ಸರಕಾರವಾದರೂ ಮುಖ್ಯವಾಗಿ ಎರಡು ಮೂರು ದೊಡ್ಡ ಯೋಜನೆಯ ಗುರಿಯಿಟ್ಟು ಅಧಿಕಾರಕ್ಕೆ ಬರುವವು. ಇವುಗಳು ಜಾರಿಗೆ ಬರಬೇಕಾದರೆ ಕನಿಷ್ಠಕ್ಕೆ ಮೂರು ವರ್ಷಗಳಾದರೂ ಬೇಕಾಗುತ್ತವೆ. ಮತದಾರರು ಉಚಿತವಾಗಿ ಹೇಳಿದ ಬಾಬಿನಲ್ಲಿ ಸರಕಾರವು ತಪ್ಪಿ ನಡೆಯುವುದಿಲ್ಲ, ಒಂದು ವೇಳೆ ತಪ್ಪಿದರೂ ಹೊಸ ಚುನಾವಣೆಯು ಬರುವದರೊಳಗೆ ಸರಿಪಡಿಸಿಕೊಂಡು ಮತದಾರರ ಮನವೊಲಿಸುವರು. ಮುಂಬರುವ ಚುನಾವಣೆಯ ದೃಷ್ಟಿಯಿಂದ ಜನರಿಗೆ ಹಿತವಲ್ಲದ ಕಾರ್ಯ ನಡೆಸುವದಿಲ್ಲ. ಒಂದೇ ಒಂದು ವಿಷಯದ ಗುರಿಯಿಂದ ಚುನಾಯಿತವಾದ ಸಭೆಯು ಅಪಾಯಕರವಾದ್ದು. ಅವರು ಹೆಚ್ಚಾಗಿ ಅನಧಿಕಾರದ ಕಾರ್ಯ ಮಾಡುವರು. ಈ ದೃಷ್ಟಾಂತ ಕಳೆದ ಎರಡು ಮಹಾಯುದ್ಧದ ಸಮಯ ಸ್ಥಾಪಿತವಾದ ಸರಕಾರಗಳಲ್ಲಿ ಸ್ಪಷ್ಟವಾಗಿವೆ. ಆಕಾಲದಲ್ಲಾಗುವ ಬದಿ ಚುನಾವಣೆಯು (Bye-election) ಮಂತ್ರಿಗಳಿಗೆ ಜನಮತದ ಬೆಂಬಲವಿರುವುದೋ ಇಲ್ಲವೋ ಎಂಬುವದರಳನ್ನು ತೋರ ದೇರಳಿನಿಂದ ತೋರಿಸಿಕೊಡುವವು. ಮಂತ್ರಿ ಮಂಡಲವು ಇದನ್ನು ಹೆಚ್ಚಾಗಿ ಲಕ್ಷ್ಯಕ್ಕೆ ತಂದು ಕೊಳ್ಳುವುದಿಲ್ಲವಾದರೂ ಇದರ ನೈತಿಕ ಬಲ ಇದ್ದೇ ಇದೆ. ಇದರಿಂದ ಅಲ್ಪ ಪಕ್ಷವನ್ನು ಬಹುಪಕ್ಷವನ್ನಾಗಿ ಮಾಡುವ ಯೋಗವು ಸಂಭವಿಸುವದು. ಆದ್ದರಿಂದ ನ್ಯಾಯ ಸಭೆಯವರು ಜನಮತವನ್ನನುಸರಿಸಿ ನಡೆಯುವುದಕ್ಕನುಕೂಲವಾಗಿ ಸಭೆಯ ಯಂತ್ರವನ್ನು ರಚಿಸಬೇಕು ಪ್ರತಿನಿಧಿಗಳ ಸಾವಕಾಶದಿಂದ ತಮ್ಮ ಮಸೂದೆಗಳನ್ನು ತಯಾರಿಸುವರೆ ಅನುಕೂಲವಾಗುವಂತೆ ಸಭೆಗೆ ನ್ಯಾಯವಾದ ಜೀವಾವಧಿಯನ್ನು ಕೊಡಬೇಕು.

— ಸಿ. ಎಚ್. ಶೆಟ್ಟಿ, ಬಿ.ಎ.

(ಮುಂದುವರಿಯುವದು)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಸ್ಥಿರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ $4\frac{1}{2}$ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ**

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ಪ್ರಗತಿ

ಭಾರತದ ರಾಜ್ಯಾಂಗ ಶಾಸನವು ಜಾರಿಯಲ್ಲಿ ಬಂದು ಹತ್ತು ವರ್ಷಗಳೊಳಗಾಗಿ ೧೪ ವರ್ಷ ದಾಟದ ಮಕ್ಕಳಿಗೆಲ್ಲಾ ಉಚಿತವಾಗಿ ಕಡ್ಡಾಯ ಶಿಕ್ಷಣ ಕೊಡಲು ಸರಕಾರವು ಪ್ರಯತ್ನಿಸುತ್ತಿದೆಯೆಂದು ರಾಜ್ಯ ಘಟನೆಯಲ್ಲಿ ನಿರೂಪಿಸಲಾಗಿದೆ.

ಆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಶಿಕ್ಷಣದ ಪ್ರಸಾರವು ಪ್ರಭಾವಪೂರ್ಣವಾಗಿ ನಡೆದಿದೆ ನಿರಕ್ಷರತೆಯನ್ನು ನಿರ್ಮೂಲನಗೊಳಿಸಲು ಸರ್ವತೋಮುಖ್ಯವಾದ ಪ್ರಯತ್ನ ನಡೆದಿದೆ. ಐನೂರು ಅಥವ ಅದಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ಪ್ರತಿ ಹಳ್ಳಿಗೂ ಒಂದು ಪ್ರಾಥಮಿಕ ಶಾಲೆ ಇರಬೇಕೆಂಬುದೇ ಸರಕಾರದ ಘೋಷಣೆಯಾಗಿರುತ್ತದೆ.

ಕಾಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದ ವೇಳೆ ಮಂಗಳೂರಿನ ಸರಕಾರ ಸೆಕೆಂಡರಿ ಗ್ರೇಡ ಕಾಲೇಜನ್ನು ಫಸ್ಟ ಗ್ರೇಡ ಕಾಲೇಜನ್ನಾಗಿ ಮಾಡಲಾಗಿದೆ. ಅಲ್ಲದೆ ಗಣಿತ, ಅರ್ಥಶಾಸ್ತ್ರ, ವಾಣಿಜ್ಯ ಹಾಗೂ ವಿಜ್ಞಾನಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಬಿ. ಟಿ. ಕಾಲೇಜ ಹಾಗೂ ಟ್ರೇನಿಂಗ ಶಾಲೆಗಳನ್ನು ಸ್ಥಾಪಿಸಲಾಗಿರುತ್ತದೆ. ಸರಕಾರದ ಧನಸಹಾಯದಿಂದ ಗಾಂಧೀ ಸ್ಮಾರಕ ಕಾಲೇಜೊಂದನ್ನು ತೆರೆಯಲಾಗಿದೆ. ೧೯೪೮ರಲ್ಲಿ ಕೈಗಾರಿಕಾಶಾಲೆಯನ್ನು ತೆರೆಯಲಾಗಿದೆ. ಇದಕ್ಕಾಗಿ ೧.೨ ಲಕ್ಷ ರೂಪಾಯಿಗಳ ವೆಚ್ಚದ ಕಟ್ಟಡಗಳನ್ನು ಕಟ್ಟಿಸಲಾಗುತ್ತಿದೆ. ರಾಷ್ಟ್ರಭಾಷೆಯಾದ ಹಿಂದಿಯನ್ನು ಅನೇಕ ಶಾಲೆ ಕಾಲೇಜುಗಳಲ್ಲಿ ಕಲಿಸಲಾಗುತ್ತಿವೆ. ಅನೇಕ ಕಡೆಗೆ ಹೊಸ ಸೆಕೆಂಡರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿಗಳಿಗೆ ಆದಷ್ಟು ಬೇಗ ಜೀವನೋಪಯೋಗಿಯಾಗುವ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಹುಡುಗಿಯರಿಗೆ ಗೃಹವಿಜ್ಞಾನವನ್ನು ಕಲಿಸಲಾಗುತ್ತಿದೆ. ಮೂಲಶಿಕ್ಷಣದಲ್ಲಿಯೂ ಜಿಲ್ಲೆಯು ಮುಂದುವರಿಯುತ್ತಿದೆ.

ಸರಕಾರದ ಧನಸಹಾಯದಿಂದ ಮಂಗಳೂರಲ್ಲಿ ಅನಾಥಾಲಯವನ್ನು ಸ್ಥಾಪಿಸಲಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿಯೂ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಕಾಂಗ್ರೆಸ್ ಸರಕಾರವು ಅಧಿಕಾರ ವಹಿಸುವಾಗ ಜಿಲ್ಲೆಯಲ್ಲಿ ೧,೪೧,೦೦೦ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದರು. ಈಗ ೧,೬೧,೦೦೦ ಮಕ್ಕಳು ಓದುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಯೋಜನೆಯಂತೆ ಈಗ ೮೧ ಹಳ್ಳಿಗಳಲ್ಲಿ ಮಕ್ಕಳು ಕಡ್ಡಾಯ ಶಿಕ್ಷಣ ಪಡೆಯುತ್ತಿದ್ದಾರೆ ಮತ್ತು 35 ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ವಯಸ್ಕರು ಶಿಕ್ಷಣ ಪಡೆಯುತ್ತಿದ್ದಾರೆ. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಸೈನಿಕ ಶಿಕ್ಷಣ ಕೊಡಲಾಗುತ್ತಿದೆ. ಕಾಸರಗೋಡಿನಲ್ಲಿ ಕುರುಡರಿಗಾಗಿ ಒಂದು ಶಾಲೆಯನ್ನು ತೆರೆಯಲಾಗಿರುತ್ತದೆ.

ಎಲ್ಲ ಶಾಲೆ ಕಾಲೇಜುಗಳಲ್ಲಿ ನಮ್ಮ ಪ್ರಾದೇಶಿಕ ಭಾಷೆಯಾದ ಕನ್ನಡಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಲಾಗಿದೆ. ಕನ್ನಡ ಸಾಹಿತಿಗಳಿಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಪುಸ್ತಕ ಭಂಡಾರಗಳನ್ನು ತೆರೆಯಲಾಗಿರುತ್ತದೆ ಜಿಲ್ಲೆಯ ಅನೇಕ ಕಡೆಗಳಲ್ಲಿ ರೇಡಿಯೋ ಸೌಕರ್ಯವನ್ನು ಒದಗಿಸಲಾಗಿರುತ್ತದೆ.

ಹೀಗೆ ಜನತೆಯ ಅಜ್ಞಾನವನ್ನು ದೂರ ಮಾಡಲು ಸರಕಾರವು ಶಿಕ್ಷಣ ಸೌಕರ್ಯಗಳನ್ನು ಒದಗಿಸುತ್ತಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಜಯ ದೊರೆತು ಮತ್ತೊಮ್ಮೆ ಅಧಿಕಾರ ಸೂತ್ರ ವಹಿಸುವಂತಾದರೆ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಅದು ಆಶ್ವಾಸನ ಕೊಡಬಲ್ಲುದು.

(ಕ. ಪ್ರ. ಕಾ. ಜು. ಪ್ರಚಾರ ಶಾಖೆ)

ನಿಃಶಸ್ತ್ರೀಕರಣದ ಮಾತುಕತೆ ಮುರಿದು ಬಿತ್ತು!

ಜಾಗತಿಕ ರಂಗದಲ್ಲಿ ಯುದ್ಧ ವಿರೋಧ ಹಾಗೂ ಶಾಂತಿಸಂಧಾನಗಳ ಮಾತುಕತೆ ನಡೆಸುವುದೆಂದರೆ ಕೇವಲ ಕಾಲಹರಣಮಾಡುವದೆಂದು ಎಲ್ಲರಿಗೂ ಮನವರಿಕೆಯಾಗಿದೆ. ಸಂ. ರಾ. ಸಂಘವು ಈ ದಿಶೆಯಲ್ಲಿ ಸಂಪೂರ್ಣ ಪರಾಜಯ ಹೊಂದಿರುತ್ತದೆ. ಕೊರಿಯಾ ಯುದ್ಧ ಸಂಧಾನ ಮಾತುಕತೆಗಳೂ ವಿಫಲಗೊಳ್ಳುತ್ತಲಿವೆ. ಪರ್ಶಿಯಾ ಈಜಿಪ್ತದ ಪರಿಸ್ಥಿತಿಯು ಭೀಕರವಾಗುತ್ತಲಿದೆ. ಚರ್ಚಿಲ್ಲರು ವಿಧಾಯಕವಾದ ಕಾರ್ಯಕ್ರಮದಿಂದ ಅದನ್ನು ಬಗೆಹರಿಸುವ ಸದಿಚ್ಛೆಯುಳ್ಳವರಾಗಿಲ್ಲವೆಂಬುದು ಅವರು ಮೊನ್ನೆ ಕಾಮನ್ಸ ಸಭೆಯಲ್ಲಿ ಆಡಿದ ಮಾತುಗಳಿಂದ ಸ್ಪಷ್ಟವಾಗುತ್ತದೆ. ಒಂದುಕಡೆ ನಿಃಶಸ್ತ್ರೀಕರಣದ ಮಾತುಕತೆ ನಡೆಯುತ್ತಿರುವ ವೇಳೆ ಇನ್ನೊಂದುಕಡೆ ಚರ್ಚಿಲ್ಲರು ಶಸ್ತ್ರೀಕರಣದ ಬಗ್ಗೆ ಉತ್ಸುಕತೆಯನ್ನು ವ್ಯಕ್ತಪಡಿಸುತ್ತಲಿದ್ದಾರೆ. ಅಣುಬಾಂಬು ಹಾಗೂ ಶಸ್ತ್ರಾಸ್ತ್ರಗಳನ್ನು ಉತ್ಪಾದನೆಯಲ್ಲಿ ಪ್ರಗತಿ ಸಾವಧಾನವಾಗುತ್ತಿರುವದಕ್ಕೆ ಆರ್ಥಿಕ ಮುಗ್ಗಟ್ಟೇ ಕಾರಣವಾಯಿತಲ್ಲಾ ಎಂದು ಕಣ್ಣೀರು ಸುರಿಸುತ್ತಿದ್ದಾರೆ. ಈಜಿಪ್ತದಲ್ಲುಂಟಾಗಿರುವ ಬ್ರಿಟಿಶ-ವಿರೋಧಿ ಬಿಡಿದಾಟವನ್ನು ಸದೆಬಡಿಯಲು ಸಾಕಷ್ಟು ಸೈನ್ಯ ಕಳಿಸಲಾಗಿದೆ. ಮಲಯಾದಲ್ಲಿಯ ಕಮ್ಯೂನಿಸ್ಟರ ಹಾವಳಿಯನ್ನು ಬಲಪ್ರಯೋಗದಿಂದ ಕೊನೆಗಾಣಿಸುವ ಸಲುವಾಗಿ ವಸಾಹತು ಮಂತ್ರಿ ಆಲಿವರ ಲಿಟಲ್ಟನರನ್ನು ಕಳಿಸಲಾಗಿದೆ.

ಪ್ಯಾರಿಸದಲ್ಲಿ ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ರಶಿಯದ ವಿದೇಶ ಮಂತ್ರಿಗಳಲ್ಲಿ ಶಸ್ತ್ರಸನ್ನ್ಯಾಸ ಹಾಗೂ ಆಯುಧ ನಿಯಂತ್ರಣ ಇವೇ ಮೊದಲಾದ ವಿಷಯಗಳ ಕುರಿತು ನಡೆದ ಮಾತುಕತೆಗಳು ಸಂಪೂರ್ಣ ಅಯಶಸ್ವಿಯಾದವೆಂದು ತಿಳಿದು ಬರುತ್ತದೆ. ಪರಸ್ಪರ ವಿಶ್ವಾಸ ನಂಬುಗೆಗಳಿಲ್ಲದ ಈ ಮಾತುಕತೆಗಳು ಗುರಿಮುಟ್ಟಲಾರವೆಂದು ನಾವು ಈ ಮೊದಲೇ ಹೇಳಿದ್ದುಂಟು. ಬ್ರಿಟನ್, ಅಮೇರಿಕಾ, ಫ್ರಾನ್ಸ್, ಒಂದು ಕಡೆ ರಶಿಯ ಇನ್ನೊಂದು ಕಡೆ ಸಂಶಯಗ್ರಸ್ತವಾಗಿ ನೋಡುತ್ತಿದ್ದು ತಮ್ಮ ಛಲವನ್ನೇ ಸಾಧಿಸುವ ಲಕ್ಷಣ ಕಾಣುತ್ತಲಿದೆ. ಆಂಗ್ಲೋ ಅಮೇರಿಕನರು ನಿಃಶಸ್ತ್ರೀಕರಣದಲ್ಲಿ ತಮ್ಮ ಉತ್ಸುಕತೆಯನ್ನು ವ್ಯಕ್ತಪಡಿಸಿದ್ದು—ರಶಿಯ ಕೂಡಾ ತನ್ನ ಅನುಮತಿಯನ್ನು ಕೊಟ್ಟಿತ್ತು. ಆದರೆ ಕೊನೆಯಕ್ಷಣದಲ್ಲಿ ನಿಃಶಸ್ತ್ರೀಕರಣ ಇಲ್ಲವೆ ಅಣುಶಸ್ತ್ರಾಸ್ತ್ರಗಳ ಮೇಲೆ ಉತ್ಪಾದನೆಯ ಮೇಲೆ ನಿಯಂತ್ರಣ ಹಾಕುವ ಮುನ್ನ ಅಣುಬಾಂಬುಗಳ ಉತ್ಪಾದನೆಯನ್ನು ಬಹಿಷ್ಕಾರ ಹಾಕಬೇಕೆಂದು ರಶಿಯವು ವಾದಿಸಿತು. ಪಶ್ಚಿಮ ರಾಷ್ಟ್ರಗಳು ಇದನ್ನು ಒಪ್ಪಲು ನಿರಾಕರಿಸಿದವು. ಎಲ್ಲ ದೇಶಗಳಲ್ಲಿಯ ಶಸ್ತ್ರಾಸ್ತ್ರ ಹಾಗೂ ಅಣು ಬಾಂಬುಗಳ ಕಾರಖಾನೆಗಳನ್ನು ಸಂದರ್ಶಿಸಿ ಅವುಗಳ ಸಂಗ್ರಹದ ಲೆಕ್ಕವನ್ನು ನೋಡುವ ಅಧಿಕಾರ ಮತ್ತು ಸಂಚಾರದ ಸ್ವಾತಂತ್ರ್ಯ ಶಸ್ತ್ರಾಸ್ತ್ರ ನಿಯಂತ್ರಣ ಮಂಡಲಕ್ಕಿರಬೇಕೆಂದು ಪಶ್ಚಿಮ ರಾಷ್ಟ್ರವಾದಿಸಿದರೆ ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಶಸ್ತ್ರಾಸ್ತ್ರ ಸಂಗ್ರಹದ ವಿವರಗಳು ತಿಳಿಸುವವೆಂಬ ವಿಶ್ವಾಸದಿಂದ ನಡೆಯತಕ್ಕದ್ದೆಂದು ರಶಿಯವು ವಾದಿಸುತ್ತದೆ. ಈ ವಾದ ಪ್ರತಿವಾದಗಳಿಂದ ನಿಃಶಸ್ತ್ರೀಕರಣ ಮಾತುಕತೆಗಳಲ್ಲಿ ತೊಡಗಿದ ಪಕ್ಷರಾಷ್ಟ್ರಗಳ ದೃಷ್ಟಿಕೋನವು ಬೇರೆ ಬೇರೆಯಾಗಿವೆಯೆಂಬುದಕ್ಕೆ ಇದಕ್ಕಿಂತ ಮಿಗಿಲಾದ ಉದಾಹರಣೆ ಬೇರೇನು ಬೇಕು? ಮಾತ್ರವಲ್ಲ ಉಭಯ ಪಕ್ಷಗಳು ಶಸ್ತ್ರಗಳ ಉತ್ಪಾದನೆಯನ್ನು ನಿಯಂತ್ರಣದಲ್ಲಿ ಆಸಕ್ತವಾಗಿಲ್ಲವೆಂಬುದು ಸ್ಪಷ್ಟವೇ ಆಯಿತು. ತತ್ವಕ್ಕೆ ವಿರೋಧವಾದ ಧೋರಣೆಯನ್ನಿಟ್ಟುಕೊಂಡೇ ಸಾಗಿದ ಈ ಮಾತುಕತೆಗಳು ಅರ್ಧದಲ್ಲೇ ಮುರಿದುಬಿದ್ದುದರಲ್ಲಿ ಆಶ್ಚರ್ಯಪಡುವಂತಹ ಅಂಶವೇನೂ ಇಲ್ಲ!

ಶ್ರೀ. ಬಿ. ಎನ್. ರಾಯರಿಗೆ ಅಂ. ರಾ. ನ್ಯಾಯಾಧೀಶ ಪದ

ಸಂ. ರಾ. ಸಂಘದಲ್ಲಿ ಭಾರತದ ಪ್ರತಿನಿಧಿಯಾಗಿ ಜಾಗತಿಕ ರಂಗದಲ್ಲಿ ಅಪೂರ್ವ ಖ್ಯಾತಿಯನ್ನು ಪಡೆದ ಶ್ರೀ ಬೆನಗಲ್ ಶಿವರಾಯರು ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ನ್ಯಾಯಾಧೀಶರಾಗಿ ಆರಿಸಿರುವ ವಿಚಾರ ಭಾರತಕ್ಕೆ ಗೌರವಾಸ್ಪದವಾದುದೆನ್ನುವದರಲ್ಲಿ ಸಂದೇಹವಿಲ್ಲ. ಶ್ರೀ ಬೆನಗಲ್ ಶಿವರಾಯರು ಸಂ. ರಾ. ಸಂಘದ ಮುಂದಿರುವ ಕೊರಿಯಾ–ಕಾಶ್ಮೀರ–ಕಮ್ಯೂನಿಸ್ಟ ಚೀನಾ–ಪರ್ಶಿಯಾ, ಮೊದಲಾದ ಸಂದಿಗ್ಧ ವಿಚಾರಗಳಲ್ಲಿ ತನ್ನ ಅಮೂಲ್ಯ ಸಲಹೆಯನ್ನಿತ್ತು, ಇತರ ರಾಷ್ಟ್ರಗಳ ದೃಷ್ಟಿಯನ್ನು ಸೆಳೆದಿದ್ದಾರೆ. ಅವರ ಕಾರ್ಯದಕ್ಷತೆ ಬಹುಮುಖ ಪ್ರತಿಭೆಗಳನ್ನು ಕಂಡೇ ಅತ್ಯಂತ ಗೌರವಾಸ್ಪದವಾದಂತಹ ಈ ಸ್ಥಾನವನ್ನು ಅವರಿಗೆ ಕೊಡಲಾಗಿದೆ. ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ಆರಿಸಿಬಂದ ಭಾರತೀಯ ನ್ಯಾಯಾಧೀಶರಲ್ಲಿ ಇವರೇ ಮೊದಲನೆಯವರಾಗಿರುವರು.

ಬೆನಗಲ್ ಸಹೋದರರೆಂದರೆ ಜಗದ್ವಿಖ್ಯಾತ ವ್ಯಕ್ತಿಗಳು. ಈ ಮೂರು ಜನ ದ. ಕನ್ನಡದವರು. ದಕ್ಷಿಣ ಕನ್ನಡದ ದಕ್ಷಿಣ ಭಾಗದಿಂದ ಲೋಕ ಸಭೆಗೆ ಕಾಂಗ್ರೆಸ್ಸಿನಿಂದ ನಿಂತಿರುವ ಶ್ರೀ ಬೆನಗಲ್ ಶಿವರಾಯರೂ ಇವರ ಸಹೋದರರು. ಬೆನಗಲ್ ರಾಮರಾಯರೂ ರಿಸರ್ವ ಬ್ಯಾಂಕಿನ ಗವರ್ನರರಾಗಿದ್ದಾರೆ.

ಸದ್ಯ ಅಂ. ರಾ. ನ್ಯಾಯಾಧೀಶರಾಗಿ ನೇಮಕಗೊಂಡ ಶ್ರೀ ಬೆನಗಲ್ ಶಿವರಾಯರು 1939ರಲ್ಲಿ ಕಲ್ಕತ್ತಾ ಹೈಕೋರ್ಟ ಜಡ್ಜರಾಗಿದ್ದರು. ಯುದ್ಧಕಾಲದಲ್ಲಿ ಹಿಂದೂ ಕಾಯಿದೆ ಪರಿಶೀಲನ ಸಮಿತಿಯ ಧುರೀಣರಾಗಿ ಕೆಲಸಮಾಡಿದರು. 1943ರಲ್ಲಿ ಸುಮಾರು 18 ತಿಂಗಳಕಾಲ ಕಾಶ್ಮೀರದ ಮುಖ್ಯ ಮಂತ್ರಿಯಾಗಿದ್ದರು. ಭಾರತ ಸರಕಾರದ ಘಟನಾ ಸಮಿತಿಯ ಮುಖ್ಯ ಸಲಹೆಗಾರರಾಗಿ ಅತ್ಯಂತ-ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದರು.

ಶ್ರೀ ನೆಹರೂ ಹಾಗೂ ಬೆನಗಲ್ ನರಸಿಂಗರಾಯರೂ ಭಾರತದ ವಿದೇಶಾಂಗ ನೀತಿಯಲ್ಲಿ ಒಂದು ಹೊಸ ಮನ್ವಂತರವನ್ನುಂಟುಮಾಡಿದ್ದಾರೆ. ನಿಜವಾಗಿಯೂ ಇದು ಹೆಮ್ಮೆಪಡುವಂತಹ ವಿಚಾರ, ಅದರಲ್ಲೂ ದಕ್ಷಿಣ ಕನ್ನಡಿಗರಾದ ನಾವು ನಮ್ಮ ಜಿಲ್ಲೆಯವರೇ ಆದ ಶ್ರೀ ರಾಯರು ಗಳಿಸಿದ ಅಂತರಾಷ್ಟ್ರೀಯ ಸ್ಥಾನಮಾನಕ್ಕೆ ವಿಶೇಷ ಅಭಿಮಾನ ಪಡಬೇಕಾಗಿದೆ.

ಡಾ। ಗ್ರಾಹ್ಯಾಮರ ಮಾತುಕತೆ

ಆರು ವಾರಗಳಲ್ಲಿ ಕಾಶ್ಮೀರ ಸಮಸ್ಯೆಯ ಕುರಿತು ಉಭಯ ಪಕ್ಷಗಳೊಡನೆ ವಿಚಾರ ವಿನಿಮಯ ಮಾಡಿ ಸಂಧಿಯೋ–ಸಮರವೋ ಎಂಬುದನ್ನು ವರದಿಮಾಡಬೇಕೆಂದು ಸಂ. ರಾ. ಸಂಘವು ತನ್ನ ಮಧ್ಯಸ್ಥ ಡಾ। ಗ್ರಾಹ್ಯಾಮರಿಗೆ ಆದೇಶವನ್ನಿತ್ತಿದ್ದು ಈಗ ಗ್ರಾಹ್ಯಾಮರು ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳೊಡನೆ ಭಾರೀ ಮಾತುಕತೆ ನಡೆಸುತ್ತಿರುವರು. ಅವರು ಸಂ. ರಾ. ಸಂಘಕ್ಕೆ ವರದಿಯೊಪ್ಪಿಸಲು ಇನ್ನುಳಿದಿರುವದು ಕೇವಲ 15 ದಿನಗಳು ಮಾತ್ರ! ದಶಂಬರ 22ಕ್ಕೆ ಜರಗುವ ಸಂ. ರಾ. ಸಭೆಯ ಮುಂದೆ ಗ್ರಾಹ್ಯಾಮರ ಮಾತುಕತೆಗಳ ಯಶಾಪಜಯದ ವರದಿಬರಬೇಕಾಗಿದೆ. ಅಂತಲೇ ಭಾರತ ಹಾಗೂ ಸಂ. ರಾ. ಸಂಘದ ಹಿರಿಯ ಅಧಿಕಾರಿಗಳೂ ಗ್ರಾಹ್ಯಾಮರಿಗೆ ಸೂಕ್ತ ಸಲಹೆಯನ್ನೀಯುತ್ತಲಿದ್ದಾರೆ. ಮಾತುಕತೆಗಳ ಮುಖ್ಯಾಂಶಗಳನ್ನು ಹೊರಗೆಡಹತಕ್ಕದ್ದಲ್ಲವೆಂಬ ಕರಾರು ಇರುವದರಿಂದ ಹೆಚ್ಚಿನಂಶ ಪ್ರಕಟವಾಗುವಂತಿಲ್ಲವಾದರೂ–ನಿಃಸೈನ್ಯೀಕರಣ ಅಂಶದಲ್ಲಿ ಉಭಯ ಪಕ್ಷಗಳಿಗೂ ಸಮ್ಮತವಾಗುವ ಒಂದು ಮಾರ್ಗವನ್ನು ಸೂಚಿಸಲು ಗ್ರಾಹ್ಯಾಮರು ಇನ್ನೂ ಸಮರ್ಥರಾಗಲಿಲ್ಲವೆಂದು ತಿಳಿದುಬರುತ್ತದೆ. ಪಾಕಿಸ್ತಾನದ ಪ್ರತಿನಿಧಿಯು ಈ ಪ್ರಯತ್ನ ಯಶಗೊಳ್ಳುವದು ಸಂಶಯಾಸ್ಪದ ವಿಚಾರವೆಂದಿದ್ದಾನೆ. ಆದರೂ ಉಳಿದಿರುವ ದಿನಗಳಲ್ಲಿ ಭಾರತ ಪಾಕಿಸ್ತಾನ ಪ್ರತಿನಿಧಿಗಳ ಸಂಯುಕ್ತ ಸಭೆಜರಗಿಸಿ ಡಾ। ಗ್ರಾಹ್ಯಾಮರು ಒಂದು ನಿರ್ಣಯಕ್ಕೆ ಬರಲೇ ಬೇಕಾಗಿದೆ.

ಪಾಕಿಸ್ತಾನಿಗಳ ದುರಾಚಾರ

ಕಳೆದ 15 ದಿನಗಳಲ್ಲಿ ಜಮ್ಮುಕಾಶ್ಮೀರ ಗಡಿಪ್ರದೇಶಗಳಲ್ಲಿ ನುಗ್ಗಿ ಈ ವರೆಗೆ ಎಷ್ಟೋ ಜನರನ್ನು ಪಾಕಿಸ್ತಾನದ ಸಶಸ್ತ್ರ ದರೋಡೆಗಾರರು ಕೊಲೆ ಮಾಡಿರುವರೆಂದು ತಿಳಿಯುತ್ತದೆ. ದಶಂಬರ ತಿಂಗಳ 5–6ರ ಮಧ್ಯರಾತ್ರಿಯಲ್ಲಿ ಸುಮಾರು 30–40 ಸಶಸ್ತ್ರ ಪಾಕ್ ದರೋಡೆಗಾರರು ಜಮ್ಮು ಜಿಲ್ಲೆಯ ರಾಜಪುರ ತಾಲೂಕಿನ ಹಳ್ಳಿಗೆ ನುಗ್ಗಿ ಇಬ್ಬರು ಹುಡುಗರನ್ನು ಕೊಂದರು. ಮತ್ತಿಬ್ಬರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಸಿದರು. ಇವರು ಹೆಂಗಸರ ಪೈಕಿ ಒಬ್ಬಳನ್ನು ಆಸ್ಪತ್ರೆಗೆ ಸೇರಿಸಲಾಗಿ ಅವಳ ಸ್ಥಿತಿಯು ಚಿಂತಾಜನಕವಾಗಿದೆಯೆಂದು ತಿಳಿಯುತ್ತದೆ. 3000 ಬೆಲೆಬಾಳುವ ವಸ್ತುಗಳನ್ನೂ ದನ ಕರುಗಳನ್ನೂ ಜೊತೆಯಲ್ಲಿ ಒಯ್ದಿರುವರು.

ಅದೇ ದಿನ ರಾತ್ರಿ ಕುಲ್ಬಾನಾ, ಓಸಿನಗರ ಮುಂತಾದ ಹಳ್ಳಿಗಳಲ್ಲಿ ಕದನ ನಡೆದು ಅಲ್ಲಿಯೂ ಜೀವಹಾನಿ–ಧನಹಾನಿ ಕಾರ್ಯನಡೆದಿದೆ. ಜೊತೆಗೆ ಎರಡು ವಾರಗಳಿಂದ ಒಟ್ಟಿಗೆ 10 ಸಲ ಪಾಕಿಸ್ತಾನಿ ಪುಂಡರು ಗಡಿಪ್ರದೇಶಕ್ಕೆ ನುಗ್ಗಿ 7 ಜನರ ಜೀವಾಪಹರಣ ಮಾಡಿರುವದು ಮಾತ್ರವಲ್ಲದೆ ಅತ್ಯಂತ ಬೆಲೆಬಾಳುವ ವಸ್ತುಗಳನ್ನು ಒಯ್ದಿರುತ್ತಾರೆ. ಈ ಗೂಂಡಾ ಮನೋವೃತ್ತಿಯ ದರೋಡೆಗಾರರಿಗೆ ಪಾಕ್ ಪೋಲೀಸರ ಸಂಪೂರ್ಣ ಸಹಕಾರದ ಹಿನ್ನೆಲೆಯಿದೆಯೆಂದೂ ಗೊತ್ತಾಗಿದೆ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧]   [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಲ್ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

For energetic and active living, for your mental and physical vigour and strength.

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart. Price per tin containing 80 tolas Rs. 10-0-0 Postage extra.

Stockist for South & N. Kanara & Mysore state: M. Vinayaka Rao, Bannanje Road, Udipi. S. K.

AYURVEDIC PHARMACY

Baba kali Kamali-Wala RISHIKESH.

ಕಾಂಗ್ರೆಸ್ಸಿನ ವಿಜಯ: ವಿರೋಧಿಗಳ ಚುನಾವಣಾ ಮೈತ್ರಿ

ಚುನಾವಣಾ ರಂಗದ ಪ್ರತಿಯೊಂದು ಫಲಿತಾಂಶವನ್ನು ಜನತೆ ಕುತೂಹಲದಿಂದ ನಿರೀಕ್ಷಿಸುತ್ತಲಿದೆ. ಕಾಂಗ್ರೆಸ್ ವಿರೋಧಿ ಪಕ್ಷಗಳು ಐಕ್ಯರಂಗವನ್ನು ರಚಿಸಿಯೂ, ಒಂದು ಗುಂಪಾಗಿಯೂ ಕಾಂಗ್ರೆಸ್ಸನ್ನು ಸೋಲಿಸುವ ಹಂಚಿಕೆಯನ್ನು ಹೂಡಿರುವವಾದರೂ ಕಾಂಗ್ರೆಸ್ಸು ಅವಿರೋಧವಾಗಿಯೂ–ಚುನಾವಣಾ ಫಲಿತಾಂಶದಲ್ಲಿ ಬಹುಮತ ಉಳ್ಳದ್ದಾಗಿಯೂ ಆರಿಸಿಬಂದ ದಾಖಲೆಗಳು ಕಂಡುಬರುತ್ತಿವೆ. ಹಿಮಾಚಲ ಪ್ರದೇಶದ ಒಟ್ಟು 36ನ ದಸ್ಯರು ಶಾಸನ ಸಭೆಯಲ್ಲಿ ಕಾಂಗ್ರೆಸ್ 21ಕ್ಕೂ ಮಿಕ್ಕಿ ಸ್ಥಾನವನ್ನು ಗಳಿಸಿಕೊಂಡಿದೆ. ಉಳಿದ ಸ್ಥಾನಗಳಲ್ಲಿ 7 ಜನ ಸ್ವತಂತ್ರರು, ಕೆ. ಎಂ. ಪಿ. 1, ಪರಿಶಿಷ್ಟ ವರ್ಗ 1, ಹೀಗೆ ಸ್ಥಳಗಳು ದೊರಕಿರುವವು. ಇನ್ನುಳಿದ ಆರು ಸ್ಥಳಗಳ ಪರಿಣಾಮವು ಸದ್ಯವೇ ಪ್ರಕಟಗೊಳ್ಳಲಿದೆ. ಹಿಂದೂ ಮಹಾಸಭೆ ಉಮೇದುವಾರಿಯಾಗಿ ನಿಂತ ಮೂರು ಸ್ಥಳದಲ್ಲೂ ಮೂರೂ ನಾಮಾವೇ ಆಯಿತು. ರಾಮರಾಜ್ಯ ಪರಿಷತ್ತಿನ ಏಕಮಾತ್ರ ಪ್ರತಿನಿಧಿಯೂ ಪರಾಜಿತನಾದನು.

ರಾಜಸ್ಥಾನ, ಅಜಮೀರ, ಬಿಹಾರ, ಮುಂಬಯಿ, ಮದ್ರಾಸ ಮುಂತಾದ ಕಡೆಗಳಲ್ಲಿ ಅವಿರೋಧವಾಗಿ ಅನೇಕ ಹುರಿಯಾಳುಗಳು ಆರಿಸಿಬಂದಿರುವರು. ಉತ್ತರ ಪ್ರದೇಶದಲ್ಲಿ ಮಿತ್ರರಗುಂಪು ಪ್ರಜಾಪಾರ್ಟಿಯೊಡನೆ ಸೇರಿಕೊಂಡಿರುವದಾದರೂ ಕಾಂಗ್ರೆಸ್ಸಿನಿದಿರು ಮಿತ್ರ ಹಾಗೂ ಅವರ ಸಂಗಡಿಗರ ಸ್ಪರ್ಧೆಯು ವಿಶೇಷ ಬೀರುವಂತಿಲ್ಲವೆಂದು ತಿಳಿಯುತ್ತದೆ.

ತಿರುವಾಂಕೂರು ಕೊಚ್ಚಿಯಲ್ಲಿ

ತಿರುವಾಂಕೂರು ಕೊಚ್ಚಿನಗಳಲ್ಲಿ ಕಾಂಗ್ರೆಸ್, ಸಮಾಜವಾದೀ ಪಕ್ಷ ಮತ್ತು ಸ್ವತಂತ್ರ ಹುರಿಯಾಳುಗಳೊಡನೆ ಒಳ್ಳೆ ತುರುಸಿನ ಸ್ಪರ್ಧೆನಡೆಯಲಿದೆ. ಶಾಸನಸಭೆಯ 108 ಸ್ಥಾನಗಳಿಗೂ ಹಾಗೂ ಲೋಕಸಭೆಯ 12 ಸ್ಥಾನಗಳಿಗೂ ಸ್ಪರ್ಧೆನಡೆಯಲಿದೆ. ಈಗಾಗಲೇ ಸಮಾಜವಾದೀ ಪಕ್ಷದವರು ಸುಮಾರು 400ಕ್ಕೂ ಮಿಕ್ಕಿ ಚುನಾವಣಾ ಸಭೆಗಳನ್ನು ನಡೆಸಿ 69ಕ್ಕೂ ಮಿಕ್ಕಿ ತಮ್ಮ ಹುರಿಯಾಳುಗಳನ್ನು ನಿಲ್ಲಿಸಿರುವರು. ಮಾಜೀ ಮುಖ್ಯ ಮಂತ್ರಿ ಪಾತಯಿನ್ ತನುವಿಲ್ಲೆ ಮೊದಲಾದವರ್ಚ್ಚಸ್ಸೀ ವ್ಯಕ್ತಿಗಳು ಸಮಾಜವಾದೀ ಪಕ್ಷದ ಮುಂದಾಳುಗಳಾಗಿರುವರು. ಇನ್ನು ಹಲವು ಹಳೆಯ ಕಾಂಗ್ರೆಸ್ಸಿಗರೂ ಇದರಲ್ಲಿ ಸೇರಿಕೊಂಡಿದ್ದಾರೆ. ಕಾಂಗ್ರೆಸ್ಸಿಗೆ ಪ್ರಬಲ ವಿರೋಧಿ ಪಕ್ಷವೆಂದರೆ ಇದೊಂದೆಯಾದರೂ ಸ್ವತಂತ್ರ ಹುರಿಯಾಳುಗಳ ಸಂಖ್ಯೆ ಅಪರಿಮಿತವಾಗಿದೆ. 200ಕ್ಕೂ ಮಿಕ್ಕಿ ಸ್ವತಂತ್ರ ಹುರಿಯಾಳುಗಳು ನಿಂತಿರುವರು. ಸ್ವತಂತ್ರವಾಗಿ ನಿಂತವರೂ ಸುಪ್ರಖ್ಯಾತರಾದವರೇ. ಕಾಂಗ್ರೆಸ್ಸಿನಿಂದ ಹೊರಬಂದವರೂ ಇರುವರು. ಜೊತೆಗೆ ಹಲವು ಹೊಸ ಹೆಸರುಗಳೂ ಕಾಣುತ್ತವೆ. ಬಹು ಸಂಖ್ಯಾಕರಾದ ಈ ಸ್ವತಂತ್ರಹುರಿಯಾಳುಗಳ ರಾಜಕೀಯ ಧೋರಣೆ–ಪಾರ್ಲಿಮೆಂಟರೀ ಪದ್ಧತಿಗೆ ಹೇಗೆ ಹೊಂದಿಕೆಯಾಗಬಹುದೆಂದು ಮುಂದೆ ನೋಡಬೇಕಾಗಿದೆ.

44 ಲಕ್ಷ ಮತದಾರರುಳ್ಳ ತಿರುವಾಂಕೂರ-ಕೊಚ್ಚಿನ ಪ್ರದೇಶದ ಚುನಾವಣೆಯಲ್ಲಿ ಕಾಂಗ್ರೆಸ್ ಬಹು ದಕ್ಷತೆಯಿಂದ ಸ್ಪರ್ಧಿಸಬೇಕಾಗಿದೆ. ನವಂಬರ ತಿಂಗಳಲ್ಲಿ ಶ್ರೀ ನೆಹ್ರೂರವರು ಭೇಟಿಯನ್ನಿತ್ತುದರಿಂದ ಆಶಾದಾಯಕ ವಾತಾವರಣ ಕಂಡುಬಂದಿದ್ದು,ಈಗ ಇಬ್ಬರು ಕಾಂಗ್ರೆಸ್ಸಿಗರ ಅವಿರೋಧವಾಗಿ ಆರಿಸಿಬಂದಿರುವರು.

ಮದ್ರಾಸದಲ್ಲಿ ಪಕ್ಷಮೈತ್ರಿ

ಮದ್ರಾಸ ಶಾಸನ ಸಭೆಯ 373 ಸ್ಥಳಗಳಿಗೆ 1700 ಹುರಿಯಾಳುಗಳೂ ಲೋಕಸಭೆಯ 73ಸ್ಥಾನಗಳಿಗೆ 300 ಹುರಿಯಾಳುಗಳೂ ಸ್ಪರ್ಧಿಸಲಿದ್ದು ಅದರಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿವೆ.

ಆತ್ಮಬಲ ಮ ನೋಸ್ಥೈರ್ಯವಿಲ್ಲದವರು ಬೇರೆಯವರ ಸಹಾಯವನ್ನು ಯಾಚಿಸುವದು ಸ್ವಾಭಾವಿಕ. ಕಿಸಾನ ಮಜದೂರ ಪ್ರಜಾಪಾರ್ಟಿ ಹಾಗೂ ಕಮ್ಯೂನಿಸ್ಟ ಪಾರ್ಟಿಗಳ ಈ ಸಂಬಂಧ ಇದೇ ನೀತಿಯನ್ನು ಸಾರುತ್ತದೆ. ಪ್ರಜಾಪಕ್ಷ ಹಾಗೂ ಕಮ್ಯೂನಿಸ್ಟ ಪಕ್ಷಗಳು ಆಂಧ್ರ ಮತ್ತು ಮಲಬಾರ ಪ್ರದೇಶದಲ್ಲಿ ಏನಕೇನ ಪ್ರಕಾರೇಣ ಕಾಂಗ್ರೆಸ್ಸನ್ನು ಸೋಲಿಸುವದರ ಸಲುವಾಗಿ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿರುವವು. ವೈಯುಕ್ತಿಕವಾಗಿ ಕಾಂಗ್ರೆಸ್ಸನ್ನು ವಿರೋಧಿಸುವ ಸಾಮರ್ಥ್ಯ ಇವುಗಳಲ್ಲಿಲ್ಲ. ಅದಕೆಂತಲೇ ಈ ಮೈತ್ರಿ. ಕೆ. ಎಂ. ಪಿ ಹಾಗೂ ಕಮ್ಯೂನಿಸ್ಟ ಪಕ್ಷಗಳ ಸಂಯುಕ್ತ ಚುನಾವಣಾ ಘೋಷಣೆ ಸದ್ಯವೇ ಹೊರಡಲಿದೆಯಂತೆ! ಮದ್ರಾಸ ಪ್ರಾಂತದಲ್ಲಿ ಹೆಚ್ಚಿನ ಸ್ಥಾನಗಳನ್ನು ಕಾಂಗ್ರೆಸ್ಸು ಪಡೆಯುವದರಲ್ಲಿ ಸಂದೇಹವಿಲ್ಲ, ವಸ್ತುಸ್ಥಿತಿಯೇನೆಂಬುದು ವಿರೋಧಿ ಪಕ್ಷಗಳಿಗೂ ಚೆನ್ನಾಗಿ ಗೊತ್ತು. ಅಂತಲೆ ಪರಸ್ಪರ ಸಹಕಾರದಿಂದಲಾದರೂ ಸೋಲಿಸುವ ಯತ್ನ ಹೇಗೆ ಫಲಿಸೀತೆಂಬುದನ್ನು ಮುಂದೆ ನೋಡಬೇಕಾಗಿದೆ.

ದಕ್ಷಿಣ ಕನ್ನಡದಲ್ಲಿ……

ದಕ್ಷಿಣ ಕನ್ನಡದ ಎಲ್ಲಾ ಸ್ಥಾನಗಳಿಗೂ ಸ್ಪರ್ಧೆ ಇದೆ. ಮಂಗಳೂರಲ್ಲಿ ಕಾಂಗ್ರೆಸ್ಸಿನ ವಿರೋಧವಾಗಿ ಸಮಾಜವಾದಿ ಪಕ್ಷ ಹಾಗೂ ಕಮ್ಯೂನಿಸ್ಟ ಪಕ್ಷಗಳು ಸ್ಪರ್ಧಿಸಲಿವೆ. ಈ ಎರಡು ವಿರೋಧಿ ಪಕ್ಷಗಳೂ ಒಹಳ ತುರುಸಿನಿಂದ ಹೋರಾಟ ನಡೆಸುತ್ತಲಿವೆ. ಕಾಸರಗೋಡಿನಲ್ಲಿ ಕಮ್ಯೂನಿಸ್ಟ ಪ್ರತಿನಿಧಿ ತನ್ನ ಹುರಿಯಾಳ್ತನವನ್ನು ಹಿಂತೆಗೆದುಗೊಂಡದ್ದರಿಂದ ಸದ್ಯ ಕಾಂಗ್ರೆಸ್ಸಿಗೆ ಮುಸ್ಲಿಂ ಲೀಗ್ ಹಾಗೂ ಪ್ರಜಾ ಪಕ್ಷವೇ ಎದುರಾಳಿ ಪಕ್ಷಗಳು. ಅದರಲ್ಲೂ ಪ್ರಜಾಪಕ್ಷದ ಬಲವೇ ಸ್ವಲ್ಪ ಹೆಚ್ಚೆಂದು ತೋರುವದು. ಪುತ್ತೂರಿನಲ್ಲಿ ಕಾಂಗ್ರೆಸ್ ಮತ್ತು ಪ್ರಜಾಪಕ್ಷಗಳೊಳಗೆ ಸರಿಸಮಾನವೆಂಬಂತೆ ಮೇಲಾಟ ನಡೆದಿದೆ. ಕಾರ್ಕಳ–ಬ್ರಹ್ಮಾವರ ಮತ್ತು ಉಡುಪಿ ಈ ಮೂರು ಕಡೆಗಳಲ್ಲಿ ಕಾಂಗ್ರೆಸ್ಸಿಗೆ ಎದುರಿಸಬೇಕಾದ ಪಕ್ಷವೆಂದರೆ ಪ್ರಜಾಪಕ್ಷ. ಉಡುಪಿಯಲ್ಲಿ ಓರ್ವ ಸಮಾಜವಾದೀ ಹುರಿಯಾಳುವೂ ಇದ್ದಾರೆ. ಬ್ರಹ್ಮಾವರದಲ್ಲಿ ಕಾಂಗ್ರೆಸ್ ಪ್ರಜ ಪಕ್ಷಗಳೆರಡೂ ಪ್ರಚಂಡ ಪ್ರಚಾರ ಕಾರ್ಯದಲ್ಲಿ ತೊಡಗಿವೆ-ಕುಂದಾಪುರದಲ್ಲಿ ಕಾಂಗ್ರೆಸ್ಸು ಸಮಾಜವಾದವೂ ತಮ್ಮ ತಮ್ಮ ಪಕ್ಷಗಳ ಪ್ರಚಾರವನ್ನು ಮಾಡುತ್ತಿವೆ. ಮೂಲ್ಕಿಯಲ್ಲಿ ಕಾಂಗ್ರೆಸ್ಸನ್ನು ಜನಸಂಘ, ಸಮಾಜವಾದೀ ಪಕ್ಷಗಳು ವಿರೋಧಿಸುತ್ತಿವೆ. ಪಾಣೆಮಂಗಳೂರಲ್ಲಿ ಕಮ್ಯೂನಿಸ್ಟ್ ಹುರಿಯಾಳುವನ್ನು ಎದುರಿಸ ಮದಕ್ಕಿಂತಲೂ ಸ್ವತಂತ್ರ ಹುರಿಯಾಳುವಿನ ವಿರೋಧವೇ ಕಾಂಗ್ರೆಸ್ಸಿಗೆ ಮುಖ್ಯವಾದೆ ಎಂದು ತಿಳಿದುಬರುತ್ತದೆ.

ಒಟ್ಟಿಗೆ ಕಾಂಗ್ರೆಸ್ಸೇ ಬಹುಮತದಿಂದ ಗೆದ್ದುಬಂದೀತೆಂದು ಊಹಿಸಬಹುದು.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವಿತಾ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ,

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸಗಳನು ಉಪಯೋಗಿಸಿದರೆ ಪದೆಪದೆ ಋತುಸ್ರಾವವಾಗುವದು. ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ದರ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಪಟ್ಟೆರಡಾಣೆ ಪ್ರತ್ಯೇಕ.]

MIS. D. DEVEE, F. D8. (N. J.)
Tollygunge CALCUTTA.
ಸ್ಥಾನಿಕ ಸ್ಟಾಕಿಸ್ಟರು ಪಟಾಕಂಪೆನಿ, ಮಂಗಳೂರು

ಮೈಸೂರು ಶ್ರೀಮನ್ಮಹಾರಾಜರ ಖಾಸ್ ವೈದ್ಯ ನರಸಿಂಹ ಪಂಡಿತರ ಮನೆತನ
ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಮಹಿಳೆಯರ ಬಹಿಷ್ಟೆ (ಮುಟ್ಟಿನ) ಸಂಬಂಧದ ಹೊಟ್ಟೆನೋವು, ಇದರ ಜೊತೆಗೆ ಮೈ ಕೈ ನೋವು, ಬೆನ್ನುನೋವು ನಡುಕಳತ ಅಕ್ರಮ ಸೂತಿಕ, ಗರ್ಭಸ್ರಾವ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ.

ಕ್ರಯ:–1ಸೆಟ್ 5ರೂ. ಪೋಸ್ಟೇಜ್ ಮತ್ತು ಪ್ಯಾಕಿಂಗ್ 1ರೂ. 6ರೂ. ಮನಿಯಾರ್ಡರ್ ಮಾಡಿರಿ. ಕೂಡಲೆ ಔಷಧಿ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಪತ್ರವ್ಯವಹಾರ ಗುಪ್ತ. ಕೆಟಲಾಗ್ ಉಚಿತ. ಹೆಚ್ಚಿನ ಮಾಹಿತಿಗೆ 2ಅಣೆ ಸ್ಟಾಂಪು ಕಳಿಸಿ.

ವಿಳಾಸ:- A. ರಾಮಸ್ವಾಮಿ ಅಯ್ಯರ್ ಸನ್; ಪ್ರೊಪ್ರೈಟರ್, "ಸಂತಾನ ಸಿಂಧೂರ"

1] 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು,

ಅಥವಾ:– 2) ಅಂಬಳೆ ಪೋಸ್ಟ್, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್, ವಯಾ, ಕೊಳ್ಳೇಗಾಲ.

ಲೋಕಾಂತ

ಕಮ್ಯೂನಿಸ್ಟರ ನಿರಾಕರಣೆ

ಕೊರಿಯಾ ಯುದ್ಧ ವಿರಾಮ ಮಾತು ಕತೆಗಳಲ್ಲಿಯ ಬಿಕ್ಕಟ್ಟನ್ನು ಪರಿಹರಿಸಲೋಸುಗ ಹೊಸ ಸೂಚನೆಗಳನ್ನು ಮಾಡದೇ ಕೇಂದಿರುವ ಸಂ. ರಾ. ಸಂಘದ ಕರೆಯನ್ನು ಕಮ್ಯೂನಿಸ್ಟರು ನಿರಾಕರಿಸಿರುವರೆಂದು ತಿಳಿಯುತ್ತದೆ.

ಇಜಿಪ್ತ್ ಬ್ರಿಟಿಶ ಹೋರಾಟ

ಶಸ್ತ್ರಾಸ್ತ್ರ ಬಲಗಳಿಂದ ಇಜಿಪ್ತದ ಪ್ರತಿ ವಿರೋಧವನ್ನು ನಿಗ್ರಹಿಸಲು ಬ್ರಿಟಿಶ ಸೈನಿಕರು ಸಜ್ಜಾಗಿರುವರು. ಸುಯೇಜ ಜಲಶುದ್ಧೀಕರಣ ಯಂತ್ರಾಗಾರಕ್ಕೆ ಇಜಿಪ್ತ ಸರಕಾರದ ವಿರೋಧವನ್ನು ಲೆಕ್ಕಿಸದೆ ನೆಡುವಿನ ಮನೆಗಳನ್ನು ನೆಲಸಮ ಮಾಡಿ ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಿಸಿದ್ದರಿಂದ ಇಜಿಪ್ತವು ಬ್ರಿಟನ್ನ ಜೊಡನೆ ರಾಜಕೀಯ ಸಂಬಂಧವನ್ನು ಕಡಿದುಕೊಳ್ಳುವ ನಿರ್ಧಾರಕ್ಕೆ ಬಂದಿರುವುದು.

ತೆಹರಾನದಲ್ಲಿಯ ಸ್ಥಿತಿ

ತೆಹರಾನದ ಪರಿಸ್ಥಿತಿಯು ಅಂತರಿಕ ಕ್ಷೋಭೆ, ಒಳಜಗಳಗಳ ಮೂಲಕ ಕೆಡುತ್ತ ಬಂದಿದೆ. ಪೋಲೀಸ ವಿದ್ಯಾರ್ಥಿಗಳೊಡನೆ ಗಂಭೀರ ಸ್ವರೂಪದ ಕಾಳಗ ನಡೆದು 21 ಪತ್ರಿಕಾ ಸಂಪಾದಕರು ಪಾರ್ಲಿಮೆಂಟಿನಲ್ಲಿ ಆಶ್ರಯ ಬೇಡಿರುವರು. ಕಳೆದ ಗಲಭೆಯಲ್ಲಿ ಸರಕಾರದ ವಿರೋಧಿ ಪತ್ರಿಕೆಗಳ ಕಚೇರಿ, ಅಂಗಡಿಗಳನ್ನು ನಾಶಗೊಳಿಸಿದ್ದು ಮಾತ್ರವಲ್ಲದೆ 40 ವ್ಯಕ್ತಿಗಳನ್ನು ಅಪಹರಿಸಲಾಗಿದೆಂದು ತಿಳಿಯುತ್ತದೆ.

ದ. ಆಫ್ರಿಕೆಯಲ್ಲಿ ಹಿಂದೀಯರ ಮೇಲೆ ದಬ್ಬಾಳಿಕೆ

ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರು ಹಾಗು ಈ ದೇಶದ ಹೊರಗಿನ ಹಿಂದೀಯರ ವಿವಾಹಗಳು ನಡೆಯಬಾರದೆಂಬ ನಿರ್ಬಂಧವನ್ನು ದ. ಆಫ್ರಿಕದ ಸರಕಾರವು ಹಿಂದೀಯರಮೇಲೆ ಹೇರಲಿದೆಯೆಂದು ತಿಳಿಯುತ್ತದೆ.

ಫ್ರೆಂಚಭಾರತ ಚುನಾವಣಾ ಬಹಿಷ್ಕಾರ

ಫ್ರೆಂಚ ಭಾರತದ ಚುನಾವಣೆಗಳಲ್ಲಿ ಹಿಂಸಾಚಾರ, ಅರಾಜಕತೆ, ಮೊದಲಾದ ದುಷ್ಕೃತ್ಯಗಳು ನಡೆಯುವುದು ಪರಂಪರೆಯಾಗಿದೆ. ಅದನ್ನು ಹೋಗಲಾಡಿಸಲು ಸರಕಾರವು ಯಾವ ಪ್ರಯತ್ನಗಳನ್ನು ಕೈಕೊಂಡಿಲ್ಲ. ಕಾರಣ ನಮ್ಮ ಕಾಂಗ್ರೆಸು ಈ ಚುನಾವಣೆಗಳನ್ನು ಬಹಿಷ್ಕರಿಸುವದೆಂದು ಕಾರ್ಲಿಕಲ್ ರಾಷ್ಟ್ರೀಯ ಕಾಂಗ್ರೆಸ್ಸೊಂದು ಗೊತ್ತುವಳಿಯನ್ನು ಸ್ವೀಕರಿಸಿರುವದು.

ಭಾರತ ಪಾಕ್ ವಾಣಿಜ್ಯ ಒಪ್ಪಂದ

ಪಾಕಿಸ್ತಾನ ಸರಕಾರದ ಅಧಿಕಾರಿಗಳು ಭಾರತ ಪಾಕಿಸ್ತಾನ ವಾಣಿಜ್ಯ ಒಪ್ಪಂದದ ಸಂಬಂಧದಲ್ಲಿ ಭಾರತ ಸರಕಾರದ ಅಧಿಕಾರಿಗಳೊಡನೆ ಚರ್ಚಿಸಲು ಹೊಸದಿಲ್ಲಿಗೆ ಶೀಘ್ರದಲ್ಲಿ ಹೊರಡಲಿರುವರೆಂದು ತಿಳಿಯುತ್ತದೆ.

ಮುದ್ರಾಸ ಹಳ್ಳಿಗರಿಗೆ 234 ಕೋಟಿ ರೂ. ಸಾಲ

ರಿಝರ್ವ ಬ್ಯಾಂಕಿನ ಸಾಲದ ಕಚ್ಚಡು ಮುದ್ರಾಸ ಪ್ರಾಂತದ ಹಳ್ಳಿಗರ ಹಾಗೂ ರೈತರ ಪರಿಸ್ಥಿತಿಯನ್ನು ಅನುಲಕ್ಷಿಸಿ ಅವರಿಗಿರುವ ಸಾಲದ ಲೆಕ್ಕಾಚಾರದ ಮೇಲೆ ಒಟ್ಟು 324 ಕೋಟಿ ರೂ. ಸಾಲ ಕೊಡುವ ನಿರ್ಧಾರ ಮಾಡಿರುವರು.

ನಿಮ್ಮನ್ನು ನೀವು ನೋಡಿಕೊಳ್ಳಿ

ಎರಡನೆಯವರ ತಪ್ಪುಗಳನ್ನು ಹುಡುಕುವದಕ್ಕಿಂತ ನಿಮ್ಮ ತಪ್ಪುಗಳನ್ನು ಸುಧಾರಿಸಿಕೊಂಡು ನಿಮ್ಮ ಅಂತಃಕರಣವು ಶುದ್ಧವಾಗಿರುವಂತೆ ನೋಡಿಕೊಳ್ಳಿರೆಂದು ಅಲಿಗಡದಲ್ಲಿ ರಾಷ್ಟ್ರಾಧ್ಯಕ್ಷರು ಉಪದೇಶ ಮಾಡಿದರು.

ಘಟಪ್ರಭಾ ನದಿ ಯೋಜನೆ

ಮುಂಬಯಿ ಪ್ರಾಂತದ ಘಟಪ್ರಭಾ ಹಾಗೂ ಗಂಗಾಪೂರ ನದೀ ಯೋಜನೆಗೆ ಒಟ್ಟು 5½ ಕೋಟಿ ರೂ. ವೆಚ್ಚವಾಗಲಿದ್ದು ಈಗಾಗಲೇ ಒಂದು ಕೋಟಿ ರೂ. ವೆಚ್ಚಮಾಡಲಾಗಿದೆ. ಭಾರತ ಸರಕಾರವು ಮುಂಬಯಿ ಸರಕಾರಕ್ಕೆ 80 ಲಕ್ಷ ರೂ. ಸಾಲ ಕೊಟ್ಟದ್ದು ಈ ಯೋಜನೆಗೆ ವರ್ಷಕ್ಕೆ 50 ಲಕ್ಷ ರೂ. ಯಂತೆ ವಿನಿಯೋಗಿಸಲಾಗುತ್ತಿದೆ. 1954ರೊಳಗೆ ಈ ಯೋಜನೆ ಪೂರ್ತಿಯಾಗಿ ಕೊನೆಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ನೆಹ್ರೂರವರ ಕರ್ನಾಟಕ ಸಂಚಾರ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರಲಾಲ ನೆಹ್ರೂರವರು ಇದೇ ತಿಂಗಳ ತಾ. 25ನೇ ಮಂಗಳವಾರ ಮುಂಜಾನೆ 8-30 ಕ್ಕೆ ವಿಮಾನದಲ್ಲಿ ಬೆಳಗಾವಿಗೆ ಆಗಮಿಸುವರು ಅವರು ಕೂಡಲೇ ಮೋಟಾರಿನಲ್ಲಿ ಹುಕ್ಕೇರಿಗೆ ತೆರಳಿ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಲಿರುವರು ಅನಂತರ ಬೆಳಗಾವಿಗೆ ಹಿಂತಿರುಗಿ ಮಧ್ಯಾಹ್ನ 3ಗಂಟೆಗೆ ಮಂಗಳೂರಿಗೆ ವಿಮಾನದಲ್ಲಿ ತೆರಳುವರು. ಅಂದೇ ಸಂಜೆ ಅವರು ಮಂಗಳೂರಲ್ಲಿ ಭಾಷಣಮಾಡುವರು. ರಾತ್ರಿಯನ್ನು ಅಲ್ಲಿಯೇ ಕಳೆದು ಮರುದಿನ ಮುಂಜಾನೆ ವಿಮಾನದಲ್ಲಿ ಆಂಧ್ರದ ಸಂಚಾರಕ್ಕೆ ತೆರಳುವರು.

ನ್ಯೂ ಸ್ಟೇಟ್ಸಮನದ ಅಭಿಪ್ರಾಯ

ಭಾರತದ ಅನೇಕ ಭಾಗಗಳಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ಕಂಡು ಬರುತ್ತಿರುವ ಜಮೀನದಾರಿಯನ್ನು ನಿರ್ಮೂಲಮಾಡಬೇಕೆಂದು ಭಾರತದ ಮತದಾರರು ಬಯಸುತ್ತಿರುವದರಿಂದಲೂ— ಕಾಂಗ್ರೆಸ್ಸು ಅದನ್ನೇ ಧ್ಯೇಯವನ್ನಾಗಿಟ್ಟುಕೊಂಡಿರುವದರಿಂದಲೂ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷವೇ ಅಧಿಕಾರಾರೂಢವಾಗುವದರಲ್ಲಿ ಸಂದೇಹವಿಲ್ಲೆಂದು ಇಂಗ್ಲಂಡದ ನ್ಯೂ ಸ್ಟೇಟ್ಸಮನ ಪತ್ರಿಕೆಯು ಬರೆದಿದೆ.

ಭಾರತಕ್ಕೆ ಅಮೆರಿಕೆಯ ಆಹಾರ

ನಾಲ್ಕು ತಿಂಗಳಿಂದ ಅಮೆರಿಕೆಯಿಂದ ಭಾರತಕ್ಕೆ ಒಟ್ಟು 939000ಟನ್ನು ಗೋದಿ ಬಂದಿದೆ. ಜರ್ಮನಿಯು ಹೊರತು ಇನ್ನಾವ ದೇಶಕ್ಕೂ ಅಮೆರಿಕಾ ಇಷ್ಟು ಗೋದಿಯನ್ನು ಕಳಿಸಿದ್ದಿಲ್ಲ.

ಮೈಸೂರಿನ ಕುರಿತು ರಾಷ್ಟ್ರಾಧ್ಯಕ್ಷರ ಆಜ್ಞೆ

ಮೈಸೂರು ಸಂಸ್ಥಾನವನ್ನು ರಾಜ್ಯಘಟನೆಯ 371ನೆಯ ಕಲಮಿನಿಂದ ಮುಕ್ತಗೊಳಿಸುವ ಕುರಿತು ರಾಷ್ಟ್ರಾಧ್ಯಕ್ಷರು ಆಜ್ಞೆಯನ್ನು ಹೊರಡಿಸಿರುವರು.

ಜಾತೀಯ ವಾದಿಗಳ ಅರ್ಥಶೂನ್ಯ ವಾದ

ಈಗ ಕಾಂಗ್ರೆಸ್ ಎದುರಾಳಿಗಳು ಹಿಂದೂ ಧರ್ಮರಕ್ಷಣೆಗಾಗಿ ಹೋರಾಡುತ್ತಿರುವದಾಗಿ ಹೇಳುತ್ತಾರೆ. ಆದರೆ ಅವರು ಯಾರ ಭಯದಿಂದ ಧರ್ಮವನ್ನು ಸಂರಕ್ಷಿಸಬೇಕೆಂದಿದ್ದಾರೆ ಇದೇ ತಿಳಿಯದೆಂದು ಶ್ರೀ ಜವಾಹರಲಾಲರು ರಾಜಸ್ಥಾನದಲ್ಲಿ ಜಾತೀಯ ಮನೋವೃತ್ತಿಯವರ ಬಗ್ಗೆ ಮಾತನಾಡಿದರು.

ದಕ್ಷಿಣ ಕನ್ನಡ ಉತ್ತರ ವಿಭಾಗದ ಮತದಾರರಲ್ಲಿ ವಿನಂತಿ

ಜಿಲ್ಲೆಯ ಉತ್ತರ ವಿಭಾಗದ ಪಾರ್ಲಿಮೆಂಟು ಸ್ಥಾನಕ್ಕೆ ಕಾಂಗ್ರೆಸ್ ಸಂಸ್ಥೆಯು ಪರವಾಗಿ ನನ್ನನ್ನು ಉಮೇದ್ವಾರನನ್ನಾಗಿ ನೇಮಿಸಿರುತ್ತಾರೆಂದು ಈಗ ತಮ್ಮಲ್ಲಿ ಹೆಚ್ಚಿನವರಿಗೆ ಗೊತ್ತಿರಬಹುದು. ಚುನಾವಣೆಯಲ್ಲಿ ಉಮೇದ್ವಾರರು ಯಾವರೀತಿ ಸ್ವತಹಾ ಕೆಲಸಮಾಡಬೇಕೋ ಆ ರೀತಿ ಕೆಲಸಮಾಡಲು ಅದೇ ಕಾಂಗ್ರೆಸ್ ಸಂಸ್ಥೆಯ ಹೆಚ್ಚಿನ ಕೆಲಸದ ನಿಮಿತ್ತದಿಂದ ನನಗೆ ಅಸಾಧ್ಯವಾಗಿದೆಯೆಂಬುದನ್ನು ನಾನು ಮತದಾರರ ಗಮನಕ್ಕೆ ತರಬೇಕಾಗಿಯದೆ. ಚುನಾವಣೆಯ ಬಗ್ಗೆ ದುಡಿಯಬೇಕಾದ ಈ ಸಮಯದಲ್ಲಿ ನಾನು ಕಾಂಗ್ರೆಸ್ ಕೆಲಸಕ್ಕಾಗಿ ಅನಿವಾರ್ಯವಾಗಿ ದಿಲ್ಲಿಯಲ್ಲಿಯೋ ಅನ್ಯಲ್ಲಿಯೋ ಇರಬೇಕಾಗಿಯದೆ. ಈ ಪರಿಸ್ಥಿತಿಯನ್ನರಿತು ನಾನು ರಾಷ್ಟ್ರದ ಕಾರ್ಯದಲ್ಲಿಯೇ ನಿರತನಿರುವೆನೆಂಬುದನ್ನು ಮನಸ್ಸಿಗೆ ತೆಗೆದುಕೊಂಡು ನಾನು ಸ್ವತಹಾ ಚುನಾವಣೆಯ ಬಗ್ಗೆ ವಿನಂತಿಮಾಡಿಕೊಳ್ಳಲು ಆಯಾ ಸ್ಥಳಗಳಿಗೆ ಬರಲಿಲ್ಲವೆಂದು ಅನ್ಯಥಾ ಭಾವಿಸದೆ ಮತದಾರರೆಲ್ಲರೂ ನನಗೆ ಬೆಂಬಲ ನೀಡಬೇಕೆಂದು ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ನನ್ನ ಮತದಾರಕ್ಷೇತ್ರದಲ್ಲಿ ನಾನು ಕೈಕೊಂಡ ಈ ಕೆಲವೇ ದಿನಗಳ ಪ್ರವಾಸದಲ್ಲಿ ನನಗೆ ಸಹಾಯ ಮಾಡಿದ, ಮಾಡುವುದಾಗಿ ಭರವಸೆ ಇತ್ತ ಎಲ್ಲರಿಗೂ ನಾನು ತುಂಬಾ ಕೃತಜ್ಞನಿದ್ದೇನೆ. ಈ ಪ್ರವಾಸದಲ್ಲಿ ನಾನು ಕೇಳಿದ ನನ್ನ ಮೇಲಿನ ದೂರಿಂತೆಂದರೆ ನಾನು ಮಲ್ಪೆಯಲ್ಲಿ ಸುಬುದ್ಧ ಬಂದರವಾಗಬೇಕೆಂಬ ಸೂಚನೆಗೆ ಅಡ್ಡಬಂದೆನೆಂಬುದು. ಈ ಬಗ್ಗೆ ನನ್ನೊಡನೆ ಮಾತನಾಡಿದವರೆಲ್ಲರಿಗೆ ನಾನು ನಿಜಸ್ಥಿತಿ ವಿವರಿಸಿ ಪೂರ್ಣ ಸಮಾಧಾನಗೊಳಿಸಿದ್ದೇನೆ. ತಜ್ಞರ ಸಮಿತಿಯವರು ಮಲ್ಪೆಯನ್ನು ಶಿಫಾರಸುಮಾಡಿ ವರದಿಕೊಟ್ಟಾಗ ಕೇಂದ್ರ ಸರಕಾರದ ಹಣದ ಅಡಚಣೆಯಿಂದ ಈ ಯೋಜನೆಯನ್ನೇ ಕೈಬಿಡತಕ್ಕಂತಿದ್ದಾಗ ಹಾಗಾಗಗೊಡದೆ ಇದನ್ನು ತಾತ್ಕಾಲಿಕ ಮಾತ್ರ ಬಾಕಿ ಇರಿಸಿ ಇದನ್ನು ಊರ್ಜಿತದಲ್ಲಿಡುವಂತೆ ಪ್ರಯತ್ನಮಾಡಿ ಸಾಧಿಸಿದ್ದೇನೆ. ಮಲ್ಪೆ ಮತ್ತು ಮಂಗಳೂರು ಎಂಬ ಈ ವಿವಾದದಲ್ಲಿ ನಾನು ಯಾವ ಭಾಗವಹಿಸಿದ್ದಿಲ್ಲ. ನಮ್ಮ ಜಿಲ್ಲೆಗೆ ಒಂದು ಸುಬುದ್ಧ ಬಂದರ ಸಿಕ್ಕಬೇಕೆಂಬುದೇ ನನ್ನ ಆತುರವಿದೆಯಲ್ಲದೆ ಇಂತಲ್ಲಿಯೇ ಆಗಬೇಕೆಂಬ ಸಂಕುಚಿತ ದೃಷ್ಟಿಯು ಆಗ್ರಹ ನನ್ನಲ್ಲೇನೂ ಇರುವುದಿಲ್ಲ. ಈ ಪ್ರಶ್ನೆಯ ಕುರಿತು ಪೂರ್ಣ ಮಾಹಿತಿಯುಳ್ಳ ತಜ್ಞರು ತೀರ್ಮಾನಿಸುವಂತೆ ಇದನ್ನು ತೀರ್ಮಾನಿಸಬೇಕೆಂಬುದೇ ನನ್ನ ಅಭಿಪ್ರಾಯ ವಿರುತ್ತದೆ. ಆದುದರಿಂದ ಈ ಪ್ರಶ್ನೆಯ ಕುರಿತು ನನ್ನ ಮೇಲೆ ಯಾರೂ ಅಪಪ್ರಚಾರಕ್ಕೆ ಕಿವಿಗೊಡಬಾರದಾಗಿ ಪ್ರತ್ಯೇಕವಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಇದೇ ರೀತಿಯ ಬೇರೆ ಅಪವಾದಗಳನ್ನು ನನ್ನ ಮೇಲೆ ಹೊರಿಸಬಹುದು. ಅವಕ್ಕೆಲ್ಲ ಉತ್ತರಕೊಡಲೂ ನಾನು ಸ್ವತಹ ಇಲ್ಲಿಲ್ಲವೆಂಬುದನ್ನು ಮತದಾರರು ಮರೆಯದೆ ನನ್ನ ಮೇಲೆ ವಿಶ್ವಾಸದಿಂದ ನಡೆಯಬೇಕಾಗಿ ಕೇಳಿಕೊಳ್ಳುತ್ತೇನೆ.

ನಾನು ಪ್ರತ್ಯೇಕವಾದೊಂದು ಚುನಾವಣಾ ಘೋಷಣೆಯನ್ನು ಪ್ರಕಟಿಸುವ ಅವಶ್ಯಕತೆ ಇರುವುದಿಲ್ಲ. ಕಾಂಗ್ರೆಸ್ ಸಂಸ್ಥೆಯವರು ಪ್ರಕಟಿಸಿರುವ ಚುನಾವಣಾ ಘೋಷಣೆಯೇ ನನ್ನ ಘೋಷಣೆಯಾಗಿರುತ್ತದೆಂದು ಹೇಳಿದರೆ ಸಾಕು.

ಈ ಚುನಾವಣೆಯಲ್ಲಿ ಮತದಾರರೆಲ್ಲರೂ ಕಾಂಗ್ರೆಸ್ ಸಂಸ್ಥೆಯ ಮೇಲಿನ ಅಭಿಮಾನದಿಂದಲೂ, ಈ ಸಂಸ್ಥೆಯವರು ದೇಶದ ಮುಂದಿರಿಸಿರುವ ಕಾರ್ಯಕ್ರಮವೊಂದೇ ಈಗಿನ ಪರಿಸ್ಥಿತಿಯಲ್ಲಿ ದೇಶದ ಅಭ್ಯುದಯ ಸಾಧಿಸುವಂತಹದೆಂಬ ನಿರ್ಧಾರದಿಂದಲೂ, ನನಗೆ ಮತಕೊಡಬೇಕೆಂದು ಕೇಳಿಕೊಳ್ಳುವುದಲ್ಲದೆ ಮುಂದೆ ಕಾಂಗ್ರೆಸಿನವರು ಈ ಕಾರ್ಯಕ್ರಮದಂತೆ ಕಾರ್ಯಸಾಧಿಸುವಾಗ ತಮ್ಮ ಪೂರ್ಣ ಬೆಂಬಲ ನೀಡಬೇಕಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಮಂಗಳೂರು, ತಾ. 4—12—1951

ಯು. ಶ್ರೀನಿವಾಸ ಮಲ್ಯ.



Approved from by the Govt. of Mysore
Certificated by the Agent of the Govt of

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ|ಉಡುಪಿ, ೧೩-೧೨-'೫೧

ಮತದಾನ ಮಾಡುವ ಮುನ್ನ

ಮುಂಬಿನ ಎರಡು ಮೂರು ವಾರಗಳಲ್ಲಿ ಪ್ರಜಾಪ್ರಭುತ್ವತತ್ವಕ್ಕೊಪ್ಪುವ ಯೋಗ್ಯ ಸರಕಾರದ ಭದ್ರ ತಳಹದಿಯೊಂದನ್ನು ಹಾಕುವ ಭಾರ ಜನತೆಯ ಮೇಲಿದೆ. ಚುನಾವಣೆಯಲ್ಲಿ ಅಂತಹ ಸರಕಾರವನ್ನು ನಿರ್ಮಿಸುವ ವಿಚಾರದಲ್ಲಿ ಜನತೆಗೆ ಸಕಲ ವಿಧದ ಸೌಕರ್ಯ ಸೌಲಭ್ಯಗಳನ್ನು ಕಾಂಗ್ರೆಸ್ಸು ಸರಕಾರ ಒದಗಿಸಿಕೊಟ್ಟಿದೆ. ಚುನಾವಣಾ ಕ್ಷೇತ್ರದ ವಿಂಗಡಣೆಯಲ್ಲಿಯ ಲೋಪದೋಷ ಹಾಗೂ ನಿರಾಕರಣೆಯ ಅಂಶ ಹೈಕೋರ್ಟಿನ ವರೆಗೆ ಧಾವಿಸಿದ್ದು ಹೈಕೋರ್ಟಿನ ಅಧಿಕಾರಕ್ಕೆ ಅದು ಒಳಪಟ್ಟಿಲ್ಲವೆಂದು ಈಗ ತೀರ್ಮಾನವಾಗಿರುವದು. ಚುನಾವಣಾ ಸಂಬಂಧದಲ್ಲಿ ಯಾವುದೇ ರೀತಿಯ ತಡೆ-ತೊಂದರೆಗಳುಂಟಾಗಬಾರದೆಂಬುದೇ ಇದರ ಉದ್ದೇಶ.

ಈ ಸಂದರ್ಭದಲ್ಲಿ ವಿಶೇಷ ಜಾಗ್ರತೆ ವಹಿಸಿ ಚುನಾವಣೆಯ ಮೂಲಉದ್ದೇಶವನ್ನು ಸಫಲಗೊಳಿಸುವ ಮಹತ್ವದ ಹೊಣೆಗಾರಿಕೆ ಜನತೆಯ ಮೇಲಿದೆ. 126 ಪಕ್ಷಗಳು ಸಹಸ್ರಾರು ಆಶ್ವಾಸನೆಗಳನ್ನು ನೀಡುತ್ತಾ ಮತವನ್ನು ಯಾಚಿಸುವ ಕಾಲದಲ್ಲಿ ಜನವಿವಂಚಿತರಾಗುವದು ಸ್ವಾಭಾವಿಕ! ಪಕ್ಷ ಮತ್ತು ತತ್ವಗಳ ಕುರಿತು ವಿಚಾರವಿಮರ್ಶೆ ಮಾಡಿ ಮತವನ್ನೀಯಬೇಕೆಂದೇ ನಮ್ಮ ಸೂಚನೆಯಾಗಿದೆ.

ನೂರಿಪ್ಪತ್ತಾರು ಪಕ್ಷಗಳಲ್ಲಿ ಪ್ರಮುಖವಾದ ಪಕ್ಷವೆಂದರೆ ಕಾಂಗ್ರೆಸ್, ಕಿಸಾನ ಮ. ಪ್ರಜಾ ಪಕ್ಷ, ಸೋಶಲಿಸ್ಟ್ ಪಕ್ಷ, ಕಮ್ಯೂನಿಸ್ಟ್ ಪಕ್ಷ, ಹಿಂದೂ ಮಹಾಸಭೆ ಈ ಐದು ಪಕ್ಷಗಳ ಧ್ಯೇಯಧೋರಣೆಗಳ ಕುರಿತು ವಿಮರ್ಶಿಸಬಹುದು. ಕಿಸಾನ ಮಜದೂರ ಪ್ರಜಾಪಕ್ಷದ ಧ್ಯೇಯಧೋರಣೆಗಳು ಹೆಚ್ಚಾಗಿ ಕಾಂಗ್ರೆಸಿನಂತೆಯೇ. ನಾವು ಗಾಂಧಿ ತತ್ವಾನುಯಾಯಿಗಳೆಂದು ಅವರು ಹೇಳುತ್ತಿರುವರು. ವಿದೇಶಾಂಗ ನೀತಿಯ ಕುರಿತು ಪ್ರಜಾಪಕ್ಷದ ನಿಲುವು ಸ್ಪಷ್ಟವಿಲ್ಲ. ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳೇ ಪ್ರಜಾಪಕ್ಷದ್ದಾದರೆ ಬಹುಕಾಲ ಕಾಂಗ್ರೆಸ್ಸಿಗರೇ ಆದ ಇವರಿಗೆ ಕಾಂಗ್ರೆಸ್ಸೇ ಏಕಾಗಬಾರದಿತ್ತು? ಎನುವ ಪ್ರಶ್ನೆ ಮೂಡುವದು ಸ್ವಾಭಾವಿಕ. ಇದಕ್ಕೆ ಪಕ್ಷದ ಧುರೀಣರು "ಕಾಂಗ್ರೆಸ್ಸಿನ ಶುದ್ಧೀಕರಣ ಅಶಕ್ಯ" ವೆಂದು ಉದಾಹರಿಸುವದಕ್ಕಿಂತ ಬೇರೇನೂ ಹೇಳುತ್ತಿಲ್ಲ. ಕಾಂಗ್ರೆಸಿಗರ ಮೇಲೆ ಆರೋಪಿಸಲಾದ ದುರ್ನಡತೆಗಳೂ—ಅವ್ಯವಹಾರ ಆದರಿಂದಲೇ ಹೊರಬಂದ ಪ್ರಜಾಪಾರ್ಟಿಯಲ್ಲಿಲ್ಲವೆಂದೂಹಿಸಲು ಸಾಧ್ಯವೇ? ಕಾಂಗ್ರೆಸ್ಸಿನಲ್ಲಿ ಕೊಳೆಯಿದೆ ಯನ್ನುವಾಗ ತಮ್ಮ ಪಾರ್ಟಿಯೊಳಗೆ ಉದ್ಭಲಾಗದಂತಹ ಕೊಳೆಗೆ ಪ್ರಜಾಪಕ್ಷದವರು ಏನನ್ನುವರೋ? ಗಾಜಿನ ಮನೆಯಲ್ಲಿರುವವರು ಬೇರೆಯವರ ಮೇಲೆ ಕಲ್ಲೆಸೆಯಬಾರದು. ಎಲ್ಲವೂ ಕಾಂಗ್ರೆಸಿನಂತೆಯೆ ಅಂದಮೇಲೆ ಹೇಳಿಕೊಳ್ಳುವಂತಹ ಬೇರೇನೂ ಉಳಿದಿಲ್ಲ. ಗಾಂಧೀತತ್ವಾನುಯಾಯಿಗಳೆಂದು ಹೇಳುತ್ತ ಎಲಬೀರ ಮದ್ರಾಸ ಮುಂತಾದ ಕಡೆ ಆಜ್ಞ ಗಾಂಧಿ ತತ್ವದ ಕಡುವಿರೋಧಿಗಳಾದ ಕಮ್ಯೂನಿಸ್ಟರೊಡನೆ ಚುನಾವಣಾ ಸಂಬಂಧವನ್ನು ಬೆಳೆಸುತ್ತಿರುವದನ್ನು ಲಕ್ಷಿಸಿದರೆ ಈ ಪಕ್ಷದ ಗಂಭೀರ ಧ್ಯೇಯ ಧೋರಣೆಯ ಬಗ್ಗೆ ಸಂಶಯ ಮೂಡುತ್ತದೆ.

ಸಮಾಜವಾದಿ ಪಕ್ಷ ತನ್ನ ಧ್ಯೇಯ ಧೋರಣೆಗಳನ್ನು ಜನತೆಯ ಮುಂದಿಟ್ಟಿದೆ. ಘೋಷಣೆಯೇನೋ ಆಕರ್ಷಕವಾಗಿದೆ. ಕಾಂಗ್ರೆಸ್ಸಿಗಿಂತಲೂ ನಾವೇ ಬುದ್ಧಿಶಾಲಿಗಳೆಂದು ಪಕ್ಷದ ಧುರೀಣರು ಹೇಳುತ್ತ ಬಂದಿದ್ದಾರೆ. ಎಲ್ಲ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ- ಕಾಮನವೆಲ್ತಿನೊಡನೆ ಸಂಬಂಧವನ್ನು ಕಡಿದುಕೊಳ್ಳುತ್ತೇವೆ—ಎನುವ ಅಂಶ ಇದರಲ್ಲುಂಟು. ಮಧ್ಯವಿನ ನಿರೋಧವನ್ನು ಕೂಡಲೇ ತೆಗೆದುಹಾಕುತ್ತೇವೆಯೆಂದೂ ಪಕ್ಷದ ಧುರೀಣರು ಆಶ್ವಾಸನೆ ಕೊಡುತ್ತ ಬಂದಿದ್ದಾರೆ. ಭೂಮಿಯ ಒಡೆಯನು ರೈತನೇ ಆಗಬೇಕಲ್ಲದೆ ಭೂಮಾಲಿಕನಿಗೆ ಪ್ರತಿಫಲವನ್ನು ಸಹ ಕೊಡಬಾರದೆನ್ನುತ್ತಾರೆ-ಸಮಾಜವಾದಿಗಳ ಧೋರಣೆಗೂ—ಕಾಂಗ್ರೆಸ್ ಧೋರಣೆಗೂ ಕೆಲ ಮಟ್ಟಿಗೆ ಭಿನ್ನಾಭಿಪ್ರಾಯವಿದೆ- ಹಲವಂಶಗಳಲ್ಲಿ ಸಮಾಜವಾದಿಗಳು ಶೀಘ್ರಗಾಮಿ ಮನೋವೃತ್ತಿಯವರಾಗಿದ್ದಾರೆ- ಅಧಿಕಾರಕ್ಕೆ ಬಂದರೆ ಎಲ್ಲ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎನ್ನುವ ಅಂಶ ಆಡಿದಂತೆ ಮಾಡಿತೋರಿಸಲು ಒರೆಹಚ್ಚಿ ಬಲ್ಲ- ಇಂಗ್ಲಂಡದ ಕೂಲಿಕಾರಪಕ್ಷವು ಅಧಿಕಾರಕ್ಕೆ ಬಂದಾಗ ರಾಷ್ಟ್ರೀಕರಣ ಮಾಡುವ ಭರವಸೆಯನ್ನಿತ್ತಿದ್ದರೂ ತನ್ನ ಅಧಿಕಾರ ಕಾಲಾವಕಾಶದಲ್ಲಿ ಉಕ್ಕಿನ ರಾಷ್ಟ್ರೀಕರಣಮಾಡುವದು ಆದರಿಂದಲೂ ಆಗಲಿಲ್ಲ! ಮದ್ಯಪಾನ ನಿರೋಧದಿಂದ ಸಾಮಾನ್ಯ ಜನತೆಯ ಉದ್ಧಾರವೋ—ಅವನತಿಯೋ— ಎಂಬುದನ್ನು ಜನತೆ ವಿಚಾರ ಮಾಡಬೇಕು- ಚುನಾವಣೆಯಲ್ಲಿ ಗೆಲುವ ಸಂಭವಾಗಿ ಸಮಾಜವಾದಿಗಳು ತತ್ವಬಿಟ್ಟು ಬೇರೆಯವರೊಡನೆ ಸ್ನೇಹ ಬೆಳೆಸಿದ್ದು ವಿದಿತ ವಿಚಾರವೇ. ಸುವ್ಯವಸ್ಥಿತವಾದ ರಾಜಕೀಯ ಕ್ರಮಗಳಿಂದ ರೂಪಿತವಾದ ಪಕ್ಷವಿದೆಂದು ಹೇಳಬಂಗಿದ್ದರೂ ರಾಷ್ಟ್ರದ ಆಡಳಿತವನ್ನು ವಹಿಸಿಕೊಳ್ಳುವ ಸಾಮರ್ಥ್ಯ- ಪ್ರಾಪಂಚಿಕ ಜ್ಞಾನದ ಅವಶ್ಯಕತೆ ತುಂಬ ಇದೆ ಎನ್ನುವದನ್ನು ವಸ್ತುಸ್ಥಿತಿಯನ್ನರಿತವರಾರೂ ಅಲ್ಲಗಳೆಯಲಾರರು.

ಹಿಂದೂ ಮಹಾಸಭೆಯ ಘೋಷಣೆಯಿಂದ ನಮ್ಮ ದೇಶದ ಹಿತಸಾಧಿಸಲು ಬರುವಂತಿಲ್ಲ- ಇದರಲ್ಲಿ ರಾಜಕೀಯ ಉನ್ನತಿಯ ಅಂಶವೇ ಇಲ್ಲ. ಅಖಂಡ ಹಿಂದೂಸ್ಥಾನ—ಪಾಕಿಸ್ಥಾನದೊಡನೆ ಯುದ್ಧ ಹಿಂದೂ ಧರ್ಮದ ಮೇಲೆ ಧಾಳಿ ಮಾಡುವವರ ವಿರುದ್ಧ ಹೋರಾಟ—ಹಿಂದೂ ಧರ್ಮ ಸಂಸ್ಕೃತಿಯ ಪುನರುತ್ಥಾನವೆಂದು ಹೇಳುವ ಈ ಪಕ್ಷದ ಧ್ಯೇಯಧೋರಣೆಯಿಂದ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವತತ್ವದಂತಹ ಭಾರತಕ್ಕೆ ಗಂಡಾಂತರವೇ ಸರಿ. ಭಾರತ ಜಾತ್ಯತೀತ ರಾಷ್ಟ್ರವೆಂದು ಜಗದ್ವಿಖ್ಯಾತವಾಗಿರುವದನ್ನು ಮಣ್ಣುಗೂಡಿಸುವದಕ್ಕೆ ಈ ಧರ್ಮಾಂಧತೆಯೊಂದೇ ಸಾಕು. ಧರ್ಮಸಂಸ್ಕೃತಿಗಳ ಪುನರುತ್ಥಾನ ಒಬ್ಬರನ್ನೊಬ್ಬರು ತಿಳಿದು ಬದುಕುವದರಿಂದ ಮಾತ್ರ ಸಾಧ್ಯವೇ ಹೊರತು ತುಳಿದು ಬಾಳುವದರಿಂದಲ್ಲ!

ಕಮ್ಯೂನಿಸ್ಟರು ಬೇರೆಯವರನ್ನು ಎಷ್ಟಕ್ಕೂ ನಂಬುವವರಲ್ಲವೋ—ಜನದ ವಿಶ್ವಾಸವೂ ಅವರಬಗ್ಗೆ ಅಷ್ಟೇ ಸಂಶಯಗ್ರಸ್ಥವಾಗಿದೆ. ಅವರ ತತ್ವ- ಧ್ಯೇಯಧೋರಣೆ ಕೆಲ್ಲ ರಶಿಯದ ಅಂಧಾನುಕರಣೆಯೇ ಹೊರತು ಭಾರತ ದೇಶದ ಜನಜಾಗೃತಿಗೆ ಒಪ್ಪುವಂತಹದಲ್ಲ! ಮೊನ್ನೆ ಇಂಗ್ಲಾಂಡದಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಮ್ಯೂನಿಸ್ಟರು ಪರಾಭವಗೊಂಡು ಇದ್ದುದನ್ನು ಕಳೆದುಕೊಂಡ ನಿದರ್ಶನವೊಂದೇ ಸಾಕು.—ಕಮ್ಯೂನಿಸ್ಟ ರಾಜಕೀಯ, ಜನಪ್ರಿಯ ಹಾಗೂ ಗ್ರಾಹ್ಯವಲ್ಲವೆನ್ನುವದಕ್ಕೆ-

ವ್ಯಕ್ತಿವೈಶಿಷ್ಟ್ಯ—ಅನುಭವದ ಸದುಪಯೋಗದ ಒಂದು ಕಾರಣವನ್ನು ಬಿಟ್ಟರೆ ಉಳಿದ ಯಾವ ಪುರುಷಾರ್ಥವು ಇತರ ಚಿಕ್ಕ ಪುಟ್ಟ ಪಕ್ಷ ಹಾಗೂ ಸ್ವತಂತ್ರರಿಂದಾಗುವಂತಿಲ್ಲ. ಅಲ್ಪಸಂಖ್ಯಾತರು ಪ್ರಬಲ ಪಕ್ಷದೊಡನೆ ಐಕ್ಯಗೊಂಡು ಕಾರ್ಯಸಾಧಿಸುವದಕ್ಕಿಂತ ವೈಯಕ್ತಿಕವಾಗಿ ಯಾವ ಕಾರ್ಯವನ್ನೂ ಸಾಧಿಸಲಾರರು-ಇಂತಹ ಹುರಿಯಾಳುಗಳು ಪಾರ್ಲಿಮೆಂಟು ಹಾಗೂ ಶಾಸನಸಭೆಗಳಲ್ಲಿ ಕೇವಲ ಕೈ ಮೇಲೆತ್ತುವ ಹಾಗೂ ಇಳಿಸುವ ಮುಖ್ಯ ಸಾಧನಗಳಾದರೇ ಹೊರತು ಇನ್ನೇನಾಗಲು ಶಕ್ಯವಿಲ್ಲ.

ಕಾಂಗ್ರೆಸ್ಸು ಅಧಿಕಾರ ಸಿಕ್ಕ ಈ ನಾಲ್ಕು ವರ್ಷಗಳಲ್ಲಿ ಜನರೊಡನೆ ಬೆರೆತು ತನ್ನ ಸುಖ ದುಃಖವನ್ನು ತಿಳಿಹೇಳುವದನ್ನು ಮರೆತಿತ್ತು. ! ಈ ವಿಯೋಗದ ದುರ್ಲಾಭವನ್ನು ಉಳಿದ ಪಕ್ಷಗಳು ಪಡೆದವು. ಅಂತಲೇ ಇಂದು ಕಾಂಗ್ರೆಸ್ಸಿನ ಬಗ್ಗೆ ಒಂದುಬಗೆಯ ಅಸಮಾಧಾನ ಬೆಳೆದಿದೆಯೆನ್ನಬಹುದ - ಆದರೆ ಇದು ಮನಸ್ಸಿನಲ್ಲಿಟ್ಟುಕೊಂಡು ಮುಯ್ಯಿತೀರಿಸಬೇಕಾದ ತಪ್ಪಲ್ಲ; ಕಿವಿಹಿಡಿದು ಬುದ್ಧಿ ಹೇಳುವಂತಹ ಸಾಮಾನ್ಯದು. ನಾಲ್ಕುವರ್ಷದ ಆಡಳಿತದಲ್ಲಿ ಮಾಡಬೇಕಾದ್ದು ಪೂರ್ತ ಆಗಲಿಲ್ಲವೆನ್ನುವಲ್ಲಿ ಸಾಧಿಸಿದಂಶವನ್ನು ನಾವು ಮರೆಯುವಂತಿಲ್ಲ- ಮಾತ್ರವಲ್ಲ ಬೇರೆ ಪಕ್ಷಗಳಿಂದ ಅದು ಶಕ್ಯವೂ ಇರಲಿಲ್ಲ. ಕಾಂಗ್ರೆಸ್ಸಿನಲ್ಲಿಯೂ ಲೋಪದೋಷವಿದೆಯೆಂಬುದನ್ನು ನೆಹ್ರೂರವರೇ ಒಪ್ಪಿರುವರು- ದೇಹದ ಒಂದು ಅಂಶಕ್ಕೆ ಅಂಟಿದ ವ್ಯಾಧಿಯಿಂದ ಆ ಅಂಶವನ್ನಷ್ಟೇ ಕತ್ತರಿಸಿ ಬಿಸಾಡಬೇಕಲ್ಲದೆ ಇಡಿಯ ದೇಹವನ್ನೇ ಅಲ್ಲ- ರಾಜಕೀಯ.—ಆರ್ಥಿಕ- ಸಾಮಾಜಿಕ—ಔದ್ಯೋಗಿಕ ರಂಗಗಳಲ್ಲಿ ಪರಿಪೂರ್ಣ ಅನುಭವವನ್ನು ಪಡೆದು ನಾಲ್ಕು ವರ್ಷ ರಾಜ್ಯಾಡಳಿತವನ್ನು ನಡೆಸಿದ ಮಹಾಸಂಸ್ಥೆ ಕಾಂಗ್ರೆಸ್. ಜಗತ್ತಿಗೇ ಆದರ್ಶರಾದ ಶ್ರೀ ನೆಹ್ರೂರಂತಹ ಶ್ರೇಷ್ಠನಾಯಕರು ನಮಗೆ ದೊರಕಿರುವದು ದೊಡ್ಡಭಾಗ್ಯವೆನ್ನಬೇಕು- ಈಗಾಗಲೇ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳು ಸುಸೂತ್ರವಾಗಿ ಕೈಗೂಡಬೇಕಾದರೆ ಕಾಂಗ್ರೆಸ್ಸು ಅಧಿಕಾರಕ್ಕೆ ಬರುವದು ಅತ್ಯಾವಶ್ಯಕ- ಇಷ್ಟರಲ್ಲೇ ಗೊತ್ತಾದ ಕಾಂಗ್ರೆಸಿನ ವಿಜಯ ದಖಲೆಗಳಿಂದ ಅದಕ್ಕೆ ಜನಬೆಂಬಲ ಸಹಕಾರವಿಷ್ಟಿದೆಯೆಂಬುದು ಮನವರಿಕೆಯಾಗದಿರಲಾರದು.

ಪ್ರಜಾಪ್ರಭುತ್ವದಲ್ಲಿ ವಿರೋಧಿ ಪಕ್ಷಕ್ಕೂ ಪ್ರಾಧಾನ್ಯವಿದೆಯೆನ್ನುವದನ್ನು ಒಪ್ಪುತ್ತೇವೆ- ಆದರೆ ಕಾಂಗ್ರೆಸ್ಸನ್ನು ಸೋಲಿಸಬೇಕೆಂಬ ಒಂದೇಉದ್ದೇಶಕ್ಕಾಗಿ ತತ್ವದರ್ಶಗಳನ್ನು ಬಿಟ್ಟು ವರ್ತಿಸುವದನ್ನು ನಾವು ಖಂಡಿಸದಿರಲಾರೆವು- ಮತದಾನ ಮಾಡುವ ಮುನ್ನ ಜನ ಈ ಅಂಶವನ್ನು ವಿಮರ್ಶಿಸಲಿ!

ಉಡುಪಿ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು

ಇದೇ ತಾ 4ರಲ್ಲು ಕಡೆಕಾರಿನಲ್ಲಿ ಡಾ। ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲೂ ತಾ 5ರಲ್ಲು ಪಾದೂರಿನಲ್ಲಿ ಶ್ರೀ ಶ್ರೀನಿವಾಸ ಮುಕ್ತಂತಾಯರ ಅಧ್ಯಕ್ಷತೆಯಲ್ಲೂ ತಾ 6ರಲ್ಲು ಶಿರ್ವದಲ್ಲಿ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲೂ ತಾ 7ರಲ್ಲು ಕಾಪಿನಲ್ಲಿ ಶ್ರೀ ಕರ್ನಾಡು ಕೃಷ್ಣರಾಯರ ಅಧ್ಯಕ್ಷತೆಯಲ್ಲೂ ತಾ. 8ರಲ್ಲು ಮುದರಂಗಡಿಯಲ್ಲಿ ಡಾ। ಮೋಹನದಾಸ ಅದ್ಯಂತಾಯರ ಅಧ್ಯಕ್ಷತೆಯಲ್ಲೂ ತಾ. 9ರಲ್ಲು ಪೆರಂಪಳ್ಳಿಯಲ್ಲಿ ಎಡ್ವಕೇಟ್ ಶ್ರೀ ಪಿ. ಎಸ್. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲೂ ಜರಗಿದವು. ಶ್ರೀಗಳಾದ ಪಂಡಿತ್ ಕೇಳುನಂದಯಾರ್, ಡಾ। ಮಾಧವ ಪೈ, ಡಾ। ಕೆ.ಎಲ್. ಐತಾಳ್, ಡಾ। ಎಸ್. ಆರ್. ಪೈ, ಶ್ರೀಪತಿ ಆಚಾರ್ಯ, ಕುಮಾರಯ್ಯ ನರಸಿಂಹ ತಂತ್ರಿ, ಎನ್. ಎಸ್. ಕುತ್ಯಾರ್, ಡಾ। ಶೇಷರಾವ್, ಜೆ.ಸಿ. ರೇಗೊ, ಅನಂದ ಹೆಗ್ಡೆ; ಕುರ್ಕಾಲು ಗಣೇಯ್ಯ ಸೆಟ್ಟಿ ಮುದ್ದಣ್ಣ ಸೆಟ್ಟಿ, ಆರೂರು ಲಕ್ಷ್ಮೀನಾರಾಯಣ ರಾವ್, ಭೋಜರಾಜ ಸೆಟ್ಟಿ, ಅಂಗರ ಪೂಜಾರಿ, ಸದಾಶಿವ ಸೆಟ್ಟಿ ಮೊದಲಾದವರು ಎಲ್ಲಕಡೆ ಜರಗಿದ ಸಭೆಗಳಲ್ಲಿ ಭಾಷಣಮಾಡಿ ಕಾಂಗ್ರೆಸಿಗೆ ಜಯಸಿಕ್ಕುವಂತೆ ಜನಜಾಗ್ರತಿಯನ್ನುಂಟು ಮಾಡಿದರು,

ತಾ. 10ರಲ್ಲಿ ಮಟ್ಟಿಯಲ್ಲಿ ಡಾ। ಕೆ. ಜೆ. ... ಯವರ ಅಧ್ಯಕ್ಷತೆಯಲ್ಲಿಯೂ, ತಾ। 11ರಲ್ಲಿ ಕೋಡಿಬೆಟ್ಟಿನಲ್ಲಿ ಡಾ। ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿಯೂ, ಪ್ರಚಾರ ಸಭೆಗಳಾಗಿ ಶ್ರೀಗಳಾದ ಅನಂತ ಪೈ, ಶ್ರೀಪತಿ ಆಚಾರ್, ಎಂ ವಿ. ಹೆಗ್ಡೆ, ನಿಂಜೂರು ಸಂಜೀವ ಸೆಟ್ಟಿ, ಡಾ। ಟಿ. ಮಾಧವ ಪೈ, ಗೋವಿಂದರಾಜ ಹೆಗ್ಡೆ ಮೊದಲಾದವರ ಕಾಂಗ್ರೆಸಿಗೆ ಬೆಂಬಲ ಕೊಡುವ ಕುರಿತು ಉಪನ್ಯಾಸಗಳಾದವು. ತಾ. 11ನೇ ರಾತ್ರಿ ಪರ್ಕಳದಲ್ಲಿ ಯಕ್ಷಗಾನ ಬಯಲಾಟದ ವೇಳೆ ಸೇರಿದ ಜನಸಮುದಾಯದ ಮುಂದೆ ಶ್ರೀಗಳಾದ ಅನಂದ ಹೆಗ್ಡೆ, ಎಂ. ವಿ. ಹೆಗ್ಡೆ, ಟಿ. ಎ. ಪೈ ಯವರು, ಭಾಷಣಮಾಡಿದರು. ಎಲ್ಲೆಲ್ಲಿಯೂ ಜನರ ಒಲವು ಕಾಂಗ್ರೆಸಿನ ಕಡೆಗಿರುವಂತೆ ತೋರಿ ಬರುತ್ತದೆ.

ಪ್ರಜಾಪಕ್ಷ ಪ್ರಚಾರ ಸಭೆಯು

ಇದೇ ತಾ 10ರಲ್ಲು ಉಡುಪಿ ರಥಬೀದಿಯಲ್ಲಿ ಶ್ರೀ ಬಿ. ಲೂವೀಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಪಿ. ಜಿ. ಆಚಾರ್ಯರು ಪ್ರಾರಂಭಿಕ ಭಾಷಣ ಮಾಡಿದ ಬಳಿಕ ಕಾರ್ಕಳ ವಕೀಲ್ ಶ್ರೀ ಕೆ. ಮಹಾಬಲ ಹೆಗ್ಡೆ, ಪ್ರಜಾ ಪಾರ್ಟಿಯ ಹುರಿಯಾಳು ಕಲ್ಯಾಡಿ ರಾಮರಾಯರ ಭಾಷಣದ ನಂತರ ಶ್ರೀ ಕೆ ಬಿ. ಜಿನರಾಜ ಹೆಗ್ಡೆಯವರು ಕಾಂಗ್ರೆಸ್ ಸರಕಾರದ ಗುಣದೋಷಗಳನ್ನು ವಿವರಿಸಿ ಕರ್ನಾಟಕ ಪ್ರಾಂತರಚನೆಯ ಅನಶ್ಯಕತೆಯನ್ನು ಸ್ಪಷ್ಟ ಮಾಡಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಪಕ್ಷದಿಂದ ಆರಿಸಿ ಬರು ಅದಕ್ಕೆ ಎದುರು ಪಕ್ಷವೊಂದು ಆವಶ್ಯಕವಿದೆ. ಎಂದರು. ಕೊನೆಯದಾಗಿ ಪ್ರಜಾಪಾರ್ಟಿಯವರ ಹುರಿಯಾಳುಗಳಿಗೆ ಬೆಂಬಲವೀಯಬೇಕೆಂದು ವಿನಂತಿ ಮಾಡಿದರು.

ಮತದಾರರ ಹೊಣೆ-ವಿವೇಚನೆಯಿಂದ ವರ್ತಿಸುವ ಆವಶ್ಯಕತೆ.

ಇತರ ಪತ್ರಿಕೆಗಳ ಅಭಿಪ್ರಾಯ

೧

ಮಹಾ ಚುನಾವಣೆಗಳು ಸಮೀಪಿಸಿದಂತೆ ಲ್ಲಾ ನಾನಾ ರಾಜಕೀಯ ಪಕ್ಷಗಳ ಪ್ರಚಾರ ಸಿದ್ಧತೆಗಳು ಬಿರುಸಾಗುತ್ತಿವೆ. ಆರೋಪ, ಪ್ರತ್ಯಾರೋಪಗಳು ಪ್ರಚಾರದ ಮುಖ್ಯಾಂಶಗಳಾಗಿವೆ. ಪ್ರತಿಪಕ್ಷ ನಿಂದನೆ, ಸ್ವಯಂಪ್ರಶಂಸೆ ಪ್ರಚಾರ ಕಾರ್ಯಕ್ರಮಗಳ ಪ್ರಧಾನ ವಿಷಯಗಳಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಭವಿಷ್ಯ ಭರವಸೆಗಳನ್ನಂತೂ ಆಕರ್ಷಕ ರೀತಿಯಲ್ಲಿ ನೀಡಲಾಗುತ್ತಿದೆ. ಇನ್ನೂ ಚುನಾವಣಾ ದಿನ ಸಮೀಪಿಸಿದಂತೆಲ್ಲಾ ಇವು ಹೆಚ್ಚು ಹೆಚ್ಚು ಉದ್ವೇಗಪೂರಿತವಾಗುವುದರಲ್ಲಿ ಸಂಶಯವಿಲ್ಲ. ಈ ಸಮಯದಲ್ಲಿ ಮತದಾರರದ್ದು ಹೆಚ್ಚಿನ ಜವಾಬ್ದಾರಿಯಿದೆ. ಸುಮ್ಮನೆ ಒಂದು ಕ್ಷಣಿಕ ಉದ್ರೇಕದಲ್ಲಿ ತಮ್ಮ ಓಟನ್ನು ವ್ಯರ್ಥ ಮಾಡಿಕೊಳ್ಳಬಾರದು. ಭಾರತದಲ್ಲಿ ಮೊಟ್ಟಮೊದಲನೆಯದಾದ ಈ ಚುನಾವಣೆಯು ಮಹತ್ವ ಬಹಳವಾದುದು. ಇಂತಹ ಬೃಹತ್ಕ್ರಿಯಕ್ಕೆ ಭಾರತೀಯರು ಹೊಸಬರು. ಭಾರತದಂತಹ ಪ್ರಜಾಸತ್ತಾತ್ಮಕ ಪ್ರಭುತ್ವ ರಾಷ್ಟ್ರದಲ್ಲಿ ಈ ಚುನಾವಣೆಗಳಿಂದ ಆಡಳಿತ ಯಂತ್ರವನ್ನು ನಿರ್ಮಿಸುವ ಬಗ್ಗೆ ಪ್ರತಿಯೊಬ್ಬರೂ ಬಹು ಆಳವಾಗಿ ಆಲೋಚನೆಮಾಡಬೇಕು. ಚುನಾವಣೆಗಳಲ್ಲಿ ಸ್ಪರ್ಧಿಸಿರುವ ನಾನಾ ಪಕ್ಷಗಳ ಸಾಮರ್ಥ್ಯ, ಶಕ್ತಿ ಸಾಧನೆಗಳನ್ನು ನಿಷ್ಪಕ್ಷಪಾತವಾಗಿ ವಿವೇಚನೆಯಿಂದ ತುಲನೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕು. ಈ ಎಲ್ಲ ದೃಷ್ಟಿಗಳಿಂದಲೂ ಪರಿಶೀಲಿಸಿದರೂ, ಈಗ ಸ್ಪರ್ಧಿಸಿರುವ ಪಕ್ಷಗಳಲ್ಲಿ ಭಾರತದ ಸ್ವಾತಂತ್ರ್ಯ ಸಾಧನೆಗೆ ಕಾರಣವಾದ ಕಾಂಗ್ರೆಸಿಗೆ ಅಗ್ರಸ್ಥಾನ ದೊರಕಬೇಕೆಂಬುದು ನಿಸ್ಸಂಶಯವಾದ ವಿಷಯ ರಾಜಕೀಯ ಸ್ವಾತಂತ್ರ್ಯ ಸಾಧಿಸಿಕೊಟ್ಟ ಕಾಂಗ್ರೆಸ್, ನಮ್ಮ ದೇಶಕ್ಕೆ ಆರ್ಥಿಕ ಸ್ವಾತಂತ್ರ್ಯವನ್ನೂ ಸಾಧಿಸಿಕೊಡಲು ಅದಕ್ಕೇ ಅವಕಾಶ ಒದಗಿಸಿಕೊಡಬೇಕಾಗಿದೆ.

ಜನರು ಈ ವಿಚಾರಗಳನ್ನೆಲ್ಲ ಗಮನಿಸಿ ತಮ್ಮ ಓಟನ್ನು ಸದ್ವಿನಿಯೋಗಿಸುವರೆಂದು ನಂಬಿದ್ದೇವೆ.

—"ಚೇತನ"9-12-51 ಬೆಂಗಳೂರು.

೦೦ ೨ ೦೦

ಈಗಿನ ಚುನಾವಣೆಯ ಕಾಲದಲ್ಲಿ ಅನೇಕ ಪಕ್ಷಸಂಘಗಳು ಬುದ್ಬುದವಾಗಿ ಏಳುತ್ತಿದ್ದು ಆಶ್ಚರ್ಯವಲ್ಲ ನಮ್ಮ ರಾಷ್ಟ್ರವು ಈಗ ರಾಜಕೀಯ ಶಿಕ್ಷಣವನ್ನು ಹೊಂದುತ್ತಲಿದೆ. ಆದರೆ ರಾಜ್ಯ ಶಾಸ್ತ್ರದಲ್ಲಿಯಾಗಲಿ ಅಥವಾ ರಾಜಕಾರಣದಲ್ಲಿಯಾಗಲಿ ನಮ್ಮ ದೇಶವು ಎಂದೂ ಪಾರಂಗತವಿದ್ದಿಲ್ಲವೆಂದು ಹೇಳುವದು ತಪ್ಪು. ನಮ್ಮ ದೇಶವು ಅನೇಕ ತರದಲ್ಲಿ ಅನೇಕ ಪ್ರಯೋಗಗಳನ್ನು ಕೈಕೊಂಡು ಜಯಶಸ್ವಿಯಾಗಿತ್ತು. ಆದರೆ ಪರಕೀಯರ ಆಳಿಕೆಗೆ ಒಳಗಾದ ನಂತರ ನಮ್ಮ ದೇಶದ ರಾಜಕೀಯ ಪರಂಪರೆಯು ಕಡಿದುಹೋಯಿತು. ಬ್ರಿಟಿಶ ಸರಕಾರವು ಇಲ್ಲಿಂದ ಕಾಲ್ತೆಗೆದ ಮೇಲೆ ನಮ್ಮ ದೇಶವು ಆಧುನಿಕ ಪ್ರಜಾಪ್ರಭುತ್ವದ ಪ್ರಯೋಗವನ್ನ ಕೈಕೊಂಡಿರುತ್ತದೆ. ಆ ಪ್ರಯೋಗದ ಮೊದಲನೇ ಪಾಠದ ಭಾರವನ್ನು ಕಾಂಗ್ರೆಸ್ಸು ಹೊರಬೇಕಾಯಿತು. ಭಿನ್ನ ಭಿನ್ನ ತತ್ವಗಳನ್ನವಲಂಬಿಸಿ ರಾಜಕೀಯ ಪಂಗಡಗಳನ್ನು ಕಟ್ಟಿಕೊಂಡು ಆಯಾ ತತ್ವಗಳ ಸಾಧನೆಗಾಗಿ ಚುನಾವಣೆಗಳನ್ನು ಹೋರಾಡಿ ಅಧಿಕಾರ ಸಂಪಾದನೆ ಮಾಡುವದು ಯೋಗ್ಯವೂ ಇಷ್ಟವೂ ಆಗಿದೆ ಸದ್ಯಕ್ಕೆ ಚುನಾವಣೆಯ ಕಣಕ್ಕಿಳಿದ ಸಂಗಡಗಳನ್ನು ಒಟ್ಟಿಗಲ್ಲಿಗೆ ಹಚ್ಚಿನೋಡಿದರೆ ಅವುಗಳು ಪ್ರಾಮುಖ್ಯವಾಗಿ ಕಾಂಗ್ರೆಸ್ಸಿನ ಮೇಲಿನ ಸಿಟ್ಟಿನಿಂದಲೇ ಈ ಜನ್ಮ ತಾಳಿವೆಯೆಂದು ಹೇಳಿದರೆ ವಿಶೇಷ ತಪ್ಪಾಗದು. ಚುನಾವಣೆಯು ಸಮೀಪಿಸಿದಂತೆ ಈ ಪಂಗಡಗಳಿಗೆ ಬಲ ಬಂದಂತೆ ತೋರಹತ್ತಿದೆ ಮತ್ತು ಅವುಗಳಾದರೂ ಸಂಘಟನೆಯ ಕಾರ್ಯವನ್ನು ಕೈಕೊಳ್ಳುವಂತೆ ಕಂಡು ಬಂದಿದೆ ರಾಷ್ಟ್ರದ ಭವಿತವ್ಯದ ದೃಷ್ಟಿಯಿಂದಲೂ ಹೊಸ ಸಂಗಡಗಳ ಚಟುವಟಿಕೆಗಳಿಂದಾಗಬಹುದಾದ ಅಪಾಯ ದೃಷ್ಟಿಯಿಂದಲೂ ನಾವು ಈ ಚುನಾವಣೆಯನ್ನು ನೋಡಬೇಕಾಗಿದೆ.

ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸು ರಾಜ್ಯ ಶಕಟವನ್ನು ನಡೆಸುತ್ತ ಬಂದಿರುತ್ತದೆಂಬುದು ಹೊಸದಲ್ಲ, ಇದಿಯ ಹಿಂದಿನ ಜನಾಂಗಕ್ಕೆ ಕಲ್ಯಾಣವಾಗಬೇಕೆಂಬ ಸದುದ್ದೇಶದಿಂದಲೇ ಮುಂದಾಳುಗಳು ರಾಜನೀತಿಯನ್ನು ಗೊತ್ತುಪಡಿಸಿಕೊಂಡರು. ಯಾವ ಪಂಗಡದವರೂ ಅವರ ಉದ್ದೇಶದ ಬಗ್ಗೆ ಭಿನ್ನಾಭಿಪ್ರಾಯವನ್ನು ತಾಳುವುದು ಸಾಧ್ಯವಿಲ್ಲ.

ಕಾಂಗ್ರೆಸ್ಸೇತರ ಪಂಗಡಗಳಲ್ಲಿಯ ಪರಿಸ್ಥಿತಿಯು ಚನ್ನಾಗಿದೆಂದು ಹೇಳಲಿಕ್ಕಾಗದು. ಅವುಗಳಲ್ಲಿ ಕೂಡ ಕೊಳೆಯು ತಕ್ಕ ಮಟ್ಟಿಗಿದೆ. ಕಾಂಗ್ರೆಸ್ಸದಲ್ಲಿಯ ಕೊಳೆಯನ್ನು ಅವರು ಹಂಚಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗದು ಹೊಸಸಂಗಡದ ಮುಂದಾಳುಗಳು ಈ ಸಂಗತಿಯನ್ನು ಮರೆಯಲಿಕ್ಕಾಗದು. ಕಾಂಗ್ರೆಸ್ ಸಂಸ್ಥೆಯಲ್ಲಿ ಮೊದಲಿದ್ದಂತಹ ಜನರೇ ಹೊರಗೆ ಬಂದು ಹೋರಾಡಲು ಸಿದ್ಧರಾದರೂ ಆ ಸಂಸ್ಥೆಯು ಇನ್ನೂ ಬಲವುಳ್ಳದ್ದಾಗಿದೆ. ಹೊಸ ಸಂಗಡಗಳಿಗೆ ಸೇರಿದ ಜನರೇ ಅನೇಕರು ಆ ಸಂಗಡಗಳ ವಿರುದ್ಧ ಗುಲ್ಲೆಬ್ಬಿಸುವದು ಹಗುರಾದ ಮಾತು. ನಮ್ಮ ರಾಷ್ಟ್ರದಂತಹ ವಿಸ್ತಾರವಾದ ರಾಷ್ಟ್ರಕ್ಕೆ ಬೇಕಾಗುವ ರಾಜ್ಯ ಚೌಕಟ್ಟನ್ನು ನಿರ್ಮಿಸುವುದು ಸಹಜ ಮಾತಲ್ಲ. ಕಾಂಗ್ರೆಸ್ಸು ಈ ಹೊತ್ತು ಎಷ್ಟೇ ದುರ್ಬಲವಾಗಿದೆಂದು ತಿಳಿದುಕೊಂಡರೂ ಇನ್ನೂ ಸಮರ್ಥವಿದೆಂದು ಹೇಳುವುದರಲ್ಲಿ ತಪ್ಪಾಗಲಿಕ್ಕಿಲ್ಲ. ಈ ಮಾತನ್ನು ಸಕಲರೂ ಲಕ್ಷದಲ್ಲಿಡಬೇಕಾಗಿದೆ ಶ್ರೀ ಜವಾಹರಲಾಲರೂ ಈ ಸಂಗತಿಯನ್ನು ಪದೇ ಪದೇ ಒತ್ತಿ ಹೇಳುತ್ತಿದ್ದಾರೆ. ಹೊಸ ಸಂಗಡಗಳಲ್ಲಿ ಯಾವ ಸಾಮರ್ಥ್ಯವೂ ಕಂಡುಬರುವದಿಲ್ಲ, ಇದಲ್ಲದೆ ಕೆಲವು ಪಂಗಡಗಳು ಪ್ರತಿಗಾಮಿ ಶಕ್ತಿಗಳಿಂದ ಕೂಡಿದ್ದು ಪ್ರಗತಿಯ ಗತಿ ಯೋಜನೆ ಹಿಂಪಕ್ಕೆ ಕೊಂಡೊಯ್ಯುವ ಕಾಂಗ್ರೆಸ್ಸು ಕಳೆದ ಮೂವತ್ತು ವರುಷಗಳಲ್ಲಿ ಐಕ್ಯತೆಯನ್ನು ಸಂಪಾದಿಸಿದ ಸಾಧನೆ ದಿಟ್ಟವಾದ ಸಾಕಷ್ಟು ಕಡೆಹಾಕಿದೆಂದು ಹೇಳಬಹುದು ನಮ್ಮ ಕರ್ನಾಟಕದಲ್ಲಿ ಜಾತಿಯ ತತ್ವಗಳು ತಲೆಯೆತ್ತುತ್ತವೆಂಬ ಭಯವುಂಟಾಗಿದೆ. ಆದ್ದರಿಂದ ಇಂತಹ ಆಯಕಟ್ಟಿನ ಪ್ರಸಂಗದಲ್ಲಿ ಕಾಂಗ್ರೆಸ್ಸ ಸಂಸ್ಥೆಯನ್ನು ದುರ್ಬಲಗೊಳಿಸುವದು ಇದಿಯ ರಾಷ್ಟ್ರಹಿತದೃಷ್ಟಿಯಿಂದ ಅಪಾಯಕರವೆಂದು ಖಂಡಿತವಾಗಿ ಹೇಳಬಹುದು.

ಸಂಯುಕ್ತ ಕರ್ನಾಟಕ (28-11-51) ಹುಬ್ಬಳ್ಳಿ

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ ಪಂಡಿತ್, B SC, F. I. A. (ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಜಿಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರ ಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ. ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ನನ್ನ ಪ್ರತಿಜ್ಞೆ.

ನನ್ನ ಹಿತಸಾಧಕರು ಯಾರು? ಪ್ರಜಾಪಕ್ಷದವರು.

ಪ್ರಜಾಪಕ್ಷದವರ ಕಡೆಯಿಂದ

ಮದರಾಸು ಎಸೆಂಬ್ಲಿಗೆ

ಶ್ರೀ ಕಲ್ಮಾಡಿ ರಾಮ ರಾವ್

ಮತ್ತು

- ಪಾರ್ಲಿಮೆಂಟಿಗೆ

ಶ್ರೀ ಕೆ. ಬಿ. ಜಿನರಾಜ ಹೆಗ್ಡೆ



ಇವರು ಸ್ಪರ್ಧಿಸಲಿರುವರು.

ಮನೆಗುರುತು ಇರುವ

ಈ ಪೆಟ್ಟಿಗೆಗೇ

ನನ್ನ ಓಟುಗಳನ್ನು ಕೊಟ್ಟು ಅವರನ್ನು ಜಯಶೀಲರನ್ನಾಗಿ ಮಾಡುವೆನು.

The Canara Banking Corporation Limited, MALPE-

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದ ಅವರಿಗೆ ಬರೆದ ರಿಜಿಸ್ಟ್ರೀ ನೋಟೀಸು ಸದ್ರಿಯವರು ವ್ಯಾಪಕಪಟ್ಟಿರುವರು ಎಂದು ವಾಪಾಸು ಬಂದುದರಿಂದ ಈ ಮೂಲಕ ಅವರಿಗೆ ಯಾ ಅವರ ವಾರಿಸ್ದಾರರಿಗೆ ತಿಳಿಸುವುದೇನೆಂದರೆ ಸದ್ರಿ ನಗಗಳ ಬಾಬ್ತು ಅಸಲು, ಬಡ್ಡಿ, ಬಡ್ಡಿಯ ಬಡ್ಡಿ, ಇತರ ಮತ್ತು ಈ ನೋಟೀಸಿನ ಖರ್ಚು ಅಲ್ಲದೆ ಮುಂದಿನ ವಸೂಲಿವರೆಗಿನ ಬಡ್ಡಿ ಸಮೇತ ತಾ. 5-1-1952ರ ಒಳಗೆ ಬ್ಯಾಂಕಿಗೆ ತಂದುಕೊಟ್ಟು ಬಿಡಿಸಿಕೊಂಡು ಹೋಗಬೇಕು. ಹಾಗೆ ಕೊಂಡುಹೋಗಲಿಕ್ಕೆ ತಪ್ಪಿದರೆ ಸದ್ರಿ ನಗಗಳನ್ನು ತಾ. 12-1-52 ಶನಿವಾರ ಮಧ್ಯಾಹ್ನ 12ಗಂಟೆಗೆ ಯಾ ಬೇಕಾಗಿ ಯುಕ್ತತೋರುವ ಇತರ ದಿನಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದ್ರಿ ಏಲಂನಿಂದ ಹುಟ್ಟಿಬಂದ ಐವೇಜಿನಲ್ಲಿ ಏಲಂ ಖರ್ಚುಕಳೆದು ಬಾಕಿ ಉಳಿಯುವ ಐವೇಜನ್ನು ಸದ್ರಿಯವರ ಲೆಕ್ಕಕ್ಕೆ ಜಮಾಮಾಡಿ ನಂತರ ಸದ್ರಿಯವರ ಮೇಲೆ ಇನ್ನೂ ಬಾಕಿಯಾಗಬಹುದಾ ಐವೇಜಿಗೆ ಅಗತ್ಯವುಳ್ಳ ವ್ಯವಹಾರ ನಡಿಸಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ಪ ನಷ್ಟಗಳಿಗೆ ಕೂಡಾ ಸದ್ರಿಯವರು ಜವಾಬ್ದಾರರಾಗಿರುತ್ತಾರೆ.

ಜಂಟ್ರಾ ನಂಬ್ರ 1. ಸಾಲದ ನಂಬ್ರ 897/49 ಹೆಸರು-ಗುಂಡ ಮರಕಾಲನ ಅಳಿಯ ಕೃಷ್ಣ ಮರಕಾಲ ಪಡುಕರೆ, ಮಲ್ಪೆ. ಅಸಲು ರೂಪಾಯಿ 16/-

ಜಂಟ್ರಾ ನಂಬ್ರ 2. ಸಾಲದ ನಂಬ್ರ 435/50. ಹೆಸರು-ಶಾಬುದ್ದೀನ್ ಸಾಹೇಬರ ಮಗ ಬಡೇ ಬಾಯಿ ಮೈದಿನ್ ಸಾಹೇಬ್ ಕೆಳಗಿನ, ಮಲ್ಪೆ. ಅಸಲು ರೂಪಾಯಿ 50/-

ಜಂಟ್ರಾ ನಂಬ್ರ 3. ಸಾಲದ ನಂಬ್ರ 1348/50. ಹೆಸರು-ಶಾಬುದ್ದೀನ್ ಸಾಹೇಬರ ಮಗ ಬಡೇ ಬಾಯಿ ಮೈದಿನ್ ಸಾಹೇಬ ಕೆಳಗಿನ, ಮಲ್ಪೆ. ಅಸಲು ರೂಪಾಯಿ 30/-

ಬಿ. ಅನಂತರಾಮ ಕಲ್ಕೂರ, ಏಜಂಟ್ ಬ್ಯಾಂಕಿನ ಆಫೀಸು, ಮಲ್ಪೆ. ತಾ. 8-12-51

ಬ್ರಹ್ಮಾವರ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು:-

ಇದೇ ತಾ 7ರಲ್ಲಿ ಬೆಳ್ಳಂಪಳ್ಳಿ ವರ ಪಂಚಾಯಿತಿ ಬೈಲಲ್ಲಿ ಶ್ರೀ ವೆಂಕಟಕೃಷ್ಣ ಆಚಾರ್ಯರ ಅಧ್ಯಕ್ಷತೆಯಲ್ಲೂ, ಸಂತೆಕಟ್ಟೆ ಪೇಟೆ ಮೈದಾನದಲ್ಲಿ ಶ್ರೀ ಕೆ. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲೂ ರಾತ್ರಿ ಮಂದಾರ್ತಿಯಲ್ಲಿ ಶ್ರೀ ಎಚ್. ಶೇಷ ಹೆಗ್ಡೆರ ಅಧ್ಯಕ್ಷತೆಯಲ್ಲೂ, ತಾ 9ರಲ್ಲು ಮಧ್ಯಾಹ್ನ ಶಿರೂರು ಪಾಲಾವಟಾರದಲ್ಲಿ ಶ್ರೀ ಎಸ್. ಮಹಾಬಲ ಶೆಟ್ಟರ ಅಧ್ಯಕ್ಷತೆಯಲ್ಲೂ, ಅದೇ ರಾತ್ರಿ ಕಾವಡಿ ಗರಡಿ ಮೈದಾನದಲ್ಲಿ ಶ್ರೀ ಕೆ. ವೆಂಕಟರಮಣ ಹೊಳ್ಳರ ಅಧ್ಯಕ್ಷತೆಯಲ್ಲೂ ಸಂಜೆ ಹಿಲಿಯಾಣದಲ್ಲಿ ಶ್ರೀ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲೂ ತಾ 4ರಲ್ಲೂ ಮಧ್ಯಾಹ್ನ ಹಾಲಾಡಿಯಲ್ಲಿ ಶ್ರೀ ಕೆ. ರಾಮಕೃಷ್ಣ ಉಡುಪರ ಅಧ್ಯಕ್ಷತೆಯಲ್ಲೂ ಸೇಡಿಮನೆ ಎಸ್ಟೇಟಿನಲ್ಲಿ ಶ್ರೀ ವೆಂಕಪ್ಪ ಹೆಗ್ಡೇರ ಅಧ್ಯಕ್ಷತೆಯು ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು ಜರಗಿದವು. ಶ್ರೀಗಳಾದ ಎಸ್. ಎ. ಹೆಗ್ಡೆ, ಬಿ. ಅಂತಯ್ಯ ಶೆಟ್ಟಿ, ಎಸ್. ಸಂಜೀವ ಶೆಟ್ಟಿ, ವಿಠಲಶೆಟ್ಟಿ, ಕೆ. ಆರ್ ಆಚಾರ, ಬಿ. ವೆಂಕಪ್ಪ ಹೆಗ್ಡೆ, ಬಿ. ನಾರಾಯಣ ಹೆಗ್ಡೆ, ಮೊದಲಾದವರು ಅಲ್ಲಲ್ಲಿ ಭಾಷಣಮಾಡಿ ಕಾಂಗ್ರೆಸ್ ಹುರಿಯಾಳುಗಳಿಗೆ ವೋಟುಕೊಟ್ಟು ಪ್ರೋತ್ಸಾಹಿಸಬೇಕೆಂದರು.

Notification

Udipi Municipality

Application are invited by the undersigned upto 3 p. m. on or before 22-12-51 for the post of lorry driver under the municipality on a pay of Rs 35/- per mensom in the scale of pay of Rs 35-1-45 with the usual dearness allowance of Rs. 19- p m.

A S D'Souza,
Commissioner,

Municipal office,
UDIPI Dated 12-12 1951

ಮಂಗಳೂರು

ದಕ್ಷಿಣ ಭಾರತ ಉತ್ತಮ ಕೃಷಿಕರ ಸಂಘದ ಉದ್ಘಾಟನೆಯನ್ನು:—ಇದೇ ತಾ. ೯ರಲ್ಲು ಸಂಜೆ ಮಂಗಳೂರಿನ ಸೆಂಟ್ರಲ್ ಬೇಂಕಿನ ಉಪ್ಪರಿಗೆಯಲ್ಲಿ ಜರಗಿದ ಸಭೆಯಲ್ಲಿ, ಮದ್ರಾಸು ಕೃಷಿ ಖಾತೆಯ ಡ್ಯಕ್ರೆಕ್ಟರ್ ಶ್ರೀ ಎಮ್. ಎಸ್. ಶಿವರಾಮನ್, ಅವರು ನೆರವೇರಿಸಿದರು. ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಆರ್. ಎಮ್. ಸಪೂರರು ಸ್ವಾಗತ ಭಾಷಣವಮಾಡಿದರು. ಬಳಿಕ ಅಖಿಲ ಭಾರತ ಸರ್ವ ಸೇವಾಸಂಘದ ಕೃಷಿ ಮತ್ತು ಗೋಸೇವಾ ವಿಭಾಗದ ಜತೆ ಕಾರ್ಯದರ್ಶಿ ಶ್ರೀ ಬಲವಂತ ರಾವ್ ದೇಶಪಾಂಡೆಯವರೂ, ಅದೇ ವಿಭಾಗದ ಕರ್ನಾಟಕದ ಸಂಘಟಕರಾದ ಶ್ರೀ ದತ್ತಾತ್ರೇಯ ಬುರ್ದೆಯವರೂ ಉತ್ತಮ ರೀತಿಯಲ್ಲಿ ಬೇಸಾಯ ಮಾಡುವುದರ ವಿಚಾರವಾಗಿ ತಮ್ಮ ಅಭಿಪ್ರಾಯಗಳನ್ನೂ ಅನುಭವಗಳನ್ನು ಸಭೆಯ ಮುಂದಿಟ್ಟರು. ಉದ್ಘಾಟಕರು ಭಾಷಣ ಮಾಡುತ್ತಾ ಸರಕಾರವು ಈ ವರೆಗೆ ಮಾಡಿರುವ ಪರಿಶೋಧನೆಗಳ ಫಲವನ್ನು ತಿಳಿಸಿ, ನವೀನವಾದ ರೀತಿಯಿಂದ ಕೃಷಿಮಾಡಿ ಆ ಮೂಲಕ ಆಹಾರ ಕೊರತೆಯನ್ನು ನೀಗಿಸಿ ಕೊಳ್ಳಬೇಕೆಂದರು. ಆ ಮೇಲೆ ಸಭಾಧ್ಯಕ್ಷತೆ ವಹಿಸಿದ ಶ್ರೀ ಮಂಕಿ ಚಿಟ್ಟಿ ಬೆನಗಲ್ ಶಿವರಾಯರು ಮಾತನಾಡುತ್ತಾ ಛಿಂದವಾಡಾದಿಸಲ್ಲಿ ಶಿಂಕ್ರಿಕಾ ಮಾಡಿದ ಸಹಕಾರಿ ಕೃಷಿಕ್ಷೇತ್ರ ಯಾವ ರೀತಿಯಲ್ಲಿ ಫಲದಾಯಕವಾಯಿತೆಂದು ತಿಳಿಸಿದರು. ಶ್ರೀ ಪಿ ಎಲ್. ಬೋಟೊ, ಅವರು ಧನ್ಯವಾದಗಳನ್ನು ಅರ್ಪಿಸಿದರು.

ವಾರ್ಷಿಕ ಮಹಾಸಭೆ:—ಪಾವೂರು ಹರೇಕಳ ಗ್ರಾಮಾಭಿವೃದ್ಧಿ ಸಂಘದ ಪ್ರಥಮ ವಾರ್ಷಿಕ ಮಹಾಸಭೆಯು ಇದೇ ತಾ 2ರಲ್ಲು ಮಂಗಳೂರು ಆರ್. ಡಿ. ಓ. ರವರಾದ ಶ್ರೀ ಎಸ್. ಯು. ಪರಶುರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸೈಂಟ್ ಎಲೋಸಿಯಸ್ ಕಾಲೇಜಿನ ಸೇವಾಸದನದ ಅಧ್ಯಕ್ಷ ಶ್ರೀ ಎ. ಸಿ. ಮಾಥಾಯಸ್‌ರವರು ಸ್ವಾಗತ ಭಾಷಣಮಾಡಿದರು, ಶ್ರೀ ತಿಮ್ಮಪ್ಪ ರೈಗಳು ವರದಿಯನೊಪ್ಪಿಸಿದರು. ಶ್ರೀ ಕೋಟಿಯಪ್ಪ ಆಳ್ವರು ಪಂಚೋಧಿಕ ಲೆಖ್ಖಪತ್ರಗಳನ್ನು ತಿಳಿಸಿದರು, ಡಾ। ಕೆ. ನಾಗಪ್ಪ ಆಳ್ವ, ಶ್ರೀ ಎಮ್. ವೆಂಕಟೇಶ ಶೈ ಮೊದಲಾದವರು ಮಾತಾಡಿದರು,

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

O. P. 45/1951.

ಕಮಲಯಾನೆ ಗಂಗಾಬಾಯಿ-ಕಮಲಾತ ನರಸಿಂಹ ಕಮ್ತಿರ ಹೆಂಡತಿ-ಉಡ್ಪಿತಾಲೂಕು ಮೂಡನಿಡಂಬೂರು ಗ್ರಾಮದ ಉಡ್ಪಿ ಕ್ಸಬಾ ಅಜ್ಜರಕಾಡು

—ಅರ್ಜಿದಾರಳು,

ಸದರಿ ಅರ್ಜಿದಾರಳ ಮಗ – ತಾರೀಕು 5-4-1950ರಲ್ಲಿ ಮೃತಪಟ್ಟ, ಕೆ. ಶ್ರೀನಿವಾಸ ಕಾಮ್ತಿರು, ದಿ. ಬೊಂಬಾಯ್ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪಡೆದ ನಂಬ್ರ-11718, 128372ನೇ ಪೋಲಿಸಿಗಳ ಬಾಬ್ತು ಬರತಕ್ಕ ಒಟ್ಟು ರುಪಾಯಿ 1000-0-0 ಪಡೆಯುವರೆ ತಾನು ಹಕ್ಕುದಾರಳೆಂತಲೂ, ಆ ಬಗ್ಗೆ ತನ್ನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಬೇಕೆಂತಲೂ ಅರ್ಜಿದಾರಳು ಬರೆಕೊಂಡ ಸದರಿ ಅರ್ಜಿಯು ತಾರೀಕು 9-1-1952ಕ್ಕೆ ತನಿಖೆಗೆ ಯಾಜನೆಯಾಗಿಯದೆ. ಯಾ ವಿಷಯದಲ್ಲಿ ಯಾರದ್ದಾದ್ರೂ ಆಕ್ಷೇಪಣೆಪದರು ಯಾವ ತರ್ಕ್ಸ್ಯಾರೆ ಅವರು ಸದರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹಾಜರುಪಡಿಸಿಕೊಳ್ಳತಕ್ಕದ್ದೆಂದು ಯಾ ಮೂಲಕ ಸಮಸ್ತರಿಗೆ ತಿಳಿಯಪಡಿಸಲಾಗಿಯದೆ.

M. Damodhar Kamath,
Advocate for Petitioner
ಉಡುಪಿ, ದ. ಕ. ತಾ. 11-12-1951

ನಿಧನ.—ಬಂದರದ ಮುಖ್ಯ ಅಡಿಕೆ ವ್ಯಾಪಾರಿಗಳಲ್ಲೊಬ್ಬರಾದ ಶ್ರೀ ಥಿಕ್ಸಾ ಬ್ರ್ಯ ಪ್ರಭುದಾಸ್ ಪರೇಕ್, ಅವರು ಇದೇ ತಾ. 9ರಲ್ಲು ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಲೆವಿ ಅಕ್ಕಿ ಕೊಡುವ ಅವಧಿ ಮುಂದುವರಿಯಿತು:—ಲೆವಿ ಅಕ್ಕಿಕೊಡುವ ಅವಧಿಯನ್ನು ದ ಕ. ಜಿಲ್ಲಾ ಕಲೆಕ್ಟರರು ಇದೇ ದಿಶಂಬರ ತಿಂಗಳ ಅಂತ್ಯದ ವರೆಗೆ ಮುಂದುವರಿಸಿರುವರು. ಮಾತ್ರವಲ್ಲದೆ ಲೆವಿ ಹೇರಲ್ಪಟ್ಟ ವಿಷಯದಲ್ಲಿ ಅನ್ಯಾಯವಾಗಿದ್ದರೆ ಅದನ್ನು ಪುನಹ ವಿಮರ್ಶಿಸಿ ರೈತರಿಗೆ ಅನ್ಯಾಯವಾಗದಂತೆ ನೋಡಬೇಕೆಂದು ಜಿಲ್ಲಾ ಕಲೆಕ್ಟರರ ಉದ್ದೇಶ ವಿರುತ್ತದೆ.

ಆದರೆ ಕಾರ್ಕಳ ತಾಲೂಕು ಮೊದಲಾದ ಕೆಲವು ಕಡೆಗಳಲ್ಲಿ ಸ್ಥಳೀಯ ಲೆವಿ ಸಂಗ್ರಹ ಅಧಿಕಾರಿಗಳು, ಲೆವಿಯ ಅನ್ಯಾಯದ ಕುರಿತು ಅಪೀಲುಗಳನ್ನು ಸ್ವೀಕರಿಸಿಇಲ್ಲವೆ ಬಂದ ಅಪೀಲುಗಳನ್ನು ಮೂಲೆಗೊತ್ತಿ ಮನಬಂದಂತೆ ನಡೆಯುತ್ತಿರುವ ಸಂಗತಿಗಳು ತಿಳಿದು ಬಂದಿವೆ. ನವಂಬರ ತಿಂಗಳ ಅಂತ್ಯದೊಳಗೆ ಲೆವಿ ಅಕ್ಕಿ ಪೂರಾ ಕೊಡದಿದ್ದಲ್ಲಿ ಮುಡಿ 1ಕ್ಕೆ ರೂಪಾಯಿ 42ರಂತೆ ದಂಡಕೊಡಬೇಕಾಗುವುದೆಂದು ಟಿಮ್ಕನಿತಿ ಪಾಯಿಸ ಮಾಡಿ ರೈತರನ್ನು ದಿಗಿಲುಗೊಳಿಸಿದ ಅಧಿಕಾರರೂ ಇದ್ದಾರೆ. ಇದು ಕೇವಲ ಅಕ್ರಮ ಮತ್ತು ಅನ್ಯಾಯ ಹೀಗೆ ಯಾವ ಗ್ರಾಮಾಧಿಕಾರಿಯಾಗಲಿ ಇತರ ಮೇಲಧಿಕಾರಿಯಾಗಲಿ ಅಕ್ರಮವಾಗಿ ನಡೆದಲ್ಲಿ ರೈತರು ಅದನ್ನು ಜಿಲ್ಲಾ ಕಲೆಕ್ಟರರ ಗಮನಕ್ಕೆ ತರಲು ಧೈರ್ಯದಿಂದ ಮುಂದೆ ಬರತಕ್ಕದ್ದು. ಅಂತಹ ಸಂದರ್ಭಗಳಲ್ಲಿ ಕಲೆಕ್ಟರರು ಸರಿಯಾದ ವಿಚಾರಣೆ ನಡಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ದಾರಿಗೆ ಹಚ್ಚಲು ಸಿದ್ಧರಿರುತ್ತಾರೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆಯು:—ಇದೇ ತಾ 1ರಲ್ಲು ಸಂಜೆ ಡಾ। ಕೆ. ಎನ್. ಆಳ್ವರ ಅಧ್ಯಕ್ಷತೆಯ ಜರಗಿತಾಗ ಈ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುವು. 1 ಚಾಲ್ತಿ ವರುಷದ ಕಾಂಗ್ರೆಸ್ ಸದಸ್ಯರನ್ನೂ ಡಿಸಂಬರ ತಿಂಗಳ ಅಖೈರಿಯೊಳಗೆ ಸೇರಿಸಲು ಕಾರ್ಯಕ್ರಮವನ್ನು ಕೈಕೊಳ್ಳುವುದರ ತಾತ್ಕಾಲಿಕ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ಶ್ರೀ ಕೆ. ಕೆ. ಶೆಟ್ಟರಿಗೂ ಬಂಟ್ವಾಳ ಮತ್ತು ಪಾಣೆಮಂಗಳೂರುಗಳಲ್ಲಿ ತಾತ್ಕಾಲಿಕ ಸರ್ಕಲ್ ಕಾಂಗ್ರೆಸ್ ಕಮಿಟಿಗಳನ್ನು ನೇಮಿಸುವ ಅಧಿಕಾರವನ್ನು ಶ್ರೀ ದಿ. ವೈಕುಂಠ ಬಾಳಿಗರಿಗೂ ಒಪ್ಪಿಸಲಾಯಿತು 3 ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಖಾಲಿಬಿದ್ದಿರುವ ಸ್ಥಾನಗಳನ್ನು ಉಪಚುನಾವಣೆ ನಡೆಸಿ ತುಂಬಿಸಬೇಕೆಂದು ನಿರ್ಧರಿಸಲಾಯಿತು. 4 ಚುನಾವಣೆ ಮತ್ತು ಕಾಂಗ್ರೆಸ್ ಕೆಲಸದ ಬಗ್ಗೆ ಹಣ ಸಂಗ್ರಹಿಸಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಕಳುಹಿಸಿರುವ ಟೋಕನು'ಗಳನ್ನು ಇಡೀ ಜಿಲ್ಲೆಯಲ್ಲೆಲ್ಲ ವಿಕ್ರಯಿಸಿ ಹಣಸಂಗ್ರಹಿಸಿ, ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂಗಳವರು ಜಿಲ್ಲೆಯನ್ನು ಸಂದರ್ಶಿಸುವ ಸಂದರ್ಭದಲ್ಲಿ 'ನೆಹರುನಿಧಿ'ಯಾಗಿ ಅದನ್ನು ವಹಿಸಿ ಒಪ್ಪಿಸುವ ವ್ಯವಸ್ಥೆ ಮಾಡಲಿಕ್ಕಾಗಿ ನಿಶ್ಚಯಿಸಲಾಯಿತು. 5 ಜಿಲ್ಲೆಯಿಂದ ಚುನಾವಣಾ ಠೇವಣಾತಿಯಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರೊಡನೆ ಸಂಗ್ರಹವಾಗಿರುವ ಹಣದಿಂದ ಸೇಕಡಾ 75ರಷ್ಟನ್ನಾದರೂ ಕೂಡಲೇ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಚುನಾವಣಾ ಕಾರ್ಯಕ್ಕಾಗಿ ಕಳುಹಿಸುವಂತೆ ಪ್ರಧಾನ ಕಾರ್ಯದರ್ಶಿಗಳು ಬರೆಯಬೇಕಾಗಿ ನಿರ್ಣಯವಾಯಿತು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪ ಚುನಾವಣೆ

ಕಾಸರಗೋಡು ಸರ್ಕಲಿನಲ್ಲಿ 2, ಹೊಸದುರ್ಗದಲ್ಲಿ 1. ಮಂಜೇಶ್ವರದಲ್ಲಿ 2, ಪುತ್ತೂರಿನಲ್ಲಿ 1, ಮೂಲ್ಕಿಯಲ್ಲಿ 1, ಕಟಪಾಡಿಯಲ್ಲಿ 1, ಉಡುಪಿಯಲ್ಲಿ 2, ಹೀಗೆ ಒಟ್ಟು 10 ಸ್ಥಾನಗಳು ಖಾಲಿ ಬಿದ್ದಿರುತ್ತವೆ. ಈ ಸ್ಥಾನಗಳನ್ನು ತುಂಬಿಸಲು ಈ ಕೆಳಗಿನ ಕಾರ್ಯಕ್ರಮದಂತೆ ಉಪ ಚುನಾವಣೆ ನಡೆಯಲಿದೆ.

ಈ ಸ್ಥಾನಗಳಿಗೆ ಹುರಿಯಾಳುಗಳಾಗಿ ನಾಮಪತ್ರ ಹಾಕುವವರು ಸಕ್ರಿಯಾ ಸದಸ್ಯರಾಗಿದ್ದು ರೂಪಾಯಿ 3 ಚುನಾವಣಾ ಫೀಸು ಮತ್ತು ರೂಪಾಯಿ 3 ವಾರ್ಷಿಕ ವಂತಿಗೆಯನ್ನು ನಾಮ ಪತ್ರದೊಂದಿಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಮುಟ್ಟಿಸತಕ್ಕದ್ದು. ನಾಮಪತ್ರದ ಫಾರ್ಮುಗಳನ್ನು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಛೇರಿಯಿಂದ ಪಡಕೊಳ್ಳತಕ್ಕದ್ದು. ತಾ. 15-11-51ರಲ್ಲು ಮುಂಜಾನೆ 9ರಿಂದ ಅಪರಾಹ್ನ 3 ಗಂಟೆವರೆಗೆ ಇಲೆಕ್ಷನ್ ಆಫೀಸರರು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ನಾಮ ಪತ್ರಗಳನ್ನು ಸ್ವೀಕರಿಸುವುದು. ಮಧ್ಯಾಹ್ನ 3 ಗಂಟೆಯಿಂದ 4 ಗಂಟೆಯೊಳಗೆ ನಾಮ ಪತ್ರ ಪರಿಶೀಲಿಸಿ ಅಂಗೀಕೃತ ಪ್ರಸಿದ್ಧಿಸುವುದು ತಾ. 18-12-51ರಲ್ಲು ಸಂಜೆ ಗಂಟೆ 6 ವರೆಗೆ, ಹುರಿಯಾಳುಗಳದ್ದಲ್ಲಿ ಜಿಲ್ಲಾ ಚುನಾವಣಾ ಪಂಚಮಂಡಲಕ್ಕೆ ರೂಪಾಯಿ 5 ಫೀಸು ಸಮೇತ ಅಪೀಲು ದಾಖಲುಮಾಡುವುದು, ತಾ. 19-12-51ನೇ ಸಂಜೆ ಗಂಟೆ 6 ರೊಳಗೆ ಉಮೇದ್ವಾರಿಕೆ ಹಿಂತೆಗೆದುಕೊಳ್ಳುವುದು. ತಾ 20-12-51ರಲ್ಲು ಪಂಚಮಂಡಲದವರು ಅಪೀಲು ನಿರ್ಣಯ ಮಾಡುವುದು.

ತಾ 21-12 51ರಲ್ಲು ಮಧ್ಯಾಹ್ನ ಗಂಟೆ 12ರಿಂದ ಸಂಜೆ 5 ಗಂಟೆವರೆಗೆ ಮತದಾನವು ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಫೀಸುಗಳಲ್ಲಿ ನಡೆಯಲಿರುವುದು. ಎಂದು ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ತಿಳಿಸುತ್ತಾರೆ.

ಕುಂದಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು—ತಾ 2ರಲ್ಲು ಗಂಗೊಳ್ಳಿಯಲ್ಲಿ ಶ್ರೀ ಎಮ್. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲೂ ಅದೇ ದಿನ ರಾತ್ರಿ ಆಸೆಗುಡ್ಡೆಯಲ್ಲಿಯೂ ತಾ. 30ರಲ್ಲು ಶಿದ್ದಾಪುರದಲ್ಲಿ ಶ್ರೀ ಸೂರಪ್ಪ ನಾಯ್ಕರ ಅಧ್ಯಕ್ಷತೆಯಲ್ಲೂ ಅದೇ ದಿನ ಬಸ್ರೂರಲ್ಲಿ ಶ್ರೀ ಕೆ. ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲೂ ಕುಂದಾಪುರದಲ್ಲಿ ಶ್ರೀ ಬಿ. ಶಿವರಾಮ ಶೆಟ್ಟರ ಅಧ್ಯಕ್ಷತೆಯಲ್ಲೂ, ತಾ. 4ರಲ್ಲು ಕಾಳಾವರದಲ್ಲೂ, ತಾ. 6ರಲ್ಲು ಉಪ್ಪುಂದ, ನಾವುಂದ, ತ್ರಾಸಿಯಲ್ಲೂ, ತಾ.7ರಲ್ಲು ನೆಲ್ಲಿಕಟ್ಟೆ, ಕಂಡ್ಲೂರು, ಹುಣ್ಸೆಮಕ್ಕಿ, ಕೋಟೇಶ್ವರ, ಕೊರ್ಗಿಯಲ್ಲೂ ಜರಗಿದವು. ಶ್ರೀಗಳಾದ ಎಸ್. ಎಸ್. ಕೊಳ್ಕೆ, ಎಮ್. ಎಮ್. ಹೆಗ್ಡೆ, ಎಸ್. ಎಲ್. ಪರಮೇಶ್ವರಯ್ಯ, ಕೆ. ರಾಮಣ್ಣ ಶೆಟ್ಟಿ, ಚರ್ಡಪ್ಪಯ್ಯ, ಜನಾಬ್ ಖಾಜಿ ಮುಹಮ್ಮದ್ ಸಾಹೇಬ್, ಜನಾಬ್ ಶೇಖ ಹಸನ್ ಸಾಹೇಬ್, ಜನಾಬ್ ಎಮ್. ಎಚ್. ಹಸನ್ ಸಾಹೇಬ್, ನಾರಾಯಣ ಕಾಮತ್, ಕೆ. ಸಂಜೀವರಾವ್, ಕೆ ಎ. ಕಾರಂತ, ಎಚ್.-ಭಾಸ್ಕರ ಕಾಮ್ತಿ ವೈ. ಮಂಜಯ್ಯ ಶೆಟ್ಟಿ ಮೊದಲಾದವರು ಕಾಂಗ್ರೆಸ್ ಧ್ಯೇಯಧೋರಣೆಗಳನ್ನು ವಿವರಿಸಿ ಕಾಂಗ್ರೆಸ್ ಹುರಿಯಾಳುಗಳಿಗೆ ವೋಟುಗಳನ್ನು ಕೊಟ್ಟು ಅವರು ಜಯಶೀಲರಾಗುವಂತೆ ಪ್ರಯತ್ನಿಸಬೇಕೆಂದು ಅಲ್ಲಲ್ಲಿಯ ಸಭೆಗಳಲ್ಲಿ ವಿನಂತಿಸಿದರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 464/1951.

ಪಡ್ಡೆಕ್ಕ ಕೆಡ್ತಿ: —ವಾದಿಳು.

ಮತ್ತು

ಟಿ. ಬಿ. ದುಗ್ಗಪ್ಪ ಶೆಟ್ಟಿ ಕೂಡಾ: —ಪ್ರತಿವಾದಿರು.

ಇವರೊಳಗೆ

ಮೇಲಿನ ದಾವೆಯ 3ನೇ ಪ್ರತಿವಾದಿಳಾದ ಉಡ್ಪಿತಾಲ್ಲೂಕು ನಾಲಕ್ಕೂರು ಗ್ರಾಮದ ಮರಾಳಿಯಲ್ಲಿರುವ ಕೃಷ್ಣಮ್ಮ ಶೆಡ್ತೀರ ಮಗಳು ವಿಮಲಾ ಶೆಡ್ತೀಗೆ,

ನೀವು ವಗೈರೆರು ನಾಗಮ್ಮ ಶೆಡ್ತಿಗೆ ಬರಿ ತಾರೀಕು 27-1-1938ರಲ್ಲಿ ರೂ. 700/-ಕ್ಕೆ ಬರೆಕೊಟ್ಟ ಸ್ತಿರಾಸ್ತಿ ಅಡವು ದಸ್ತಾವೇಜಿನ ಬಾಬ್ತು ಬಾಕಿಮಾಡಿಕೊಂಡ ಅಸಲು ಬಡ್ಡಿ ಹಣಗಳ ವಸೂಲಿಬಗ್ಗೆ ವಾದಿಳು ದಾಖಲುಮಾಡಿದ ಮೇಲಿನ ದಾವೆ ತಾ. 20-12-1951ಕ್ಕೆ ತನ್ನಿಗೆ ಇಟ್ಟದೆ ಆ ಕುರಿತು ಆಕ್ಷೇಪವಿದ್ರೆ ಸದ್ರಿ ದಿವಸ 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ವ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

B. S. Hegde.
ವಾದಿಳಿಗೆ ವಕೀಲ್

ತಾ. 8-12-1951.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ.. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು..
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

ಮುಂಬರುವ ಚುನಾವಣೆ

ದಕ್ಷಿಣಕನ್ನಡದಲ್ಲಿ ಚುನಾವಣೆಯ ಕೆಲ ಮಾಹಿತಿ.

ನಮ್ಮ ಜಿಲ್ಲೆಯ ವೋಟರರ ಸಂಖ್ಯೆ

ಮತದಾರ ಕ್ಷೇತ್ರ	ಸ್ಥಾನ	ಪುರುಷರು	ಸ್ತ್ರೀಯರು	ಜುಮ್ಲಾ
ಕುಂದಾಪುರ	1	31,982	39,548	71,530
ಬ್ರಹ್ಮಾವರ	1	29,237	35,689	64,926
ಉಡುಪಿ	1	31,829	40,854	72,683
ಕಾರ್ಕಳ	1	30,756	35,808	66,564
ಮೂಲ್ಕಿ	1	30,245	38,365	68,610
ದ ಕ. ಉತ್ತರ	1	1,54,049	1,90,274	3,44,323
ಮಂಗಳೂರು	1	36,874	44,756	81,630
ಪಾಣೆ ಮಂಗಳೂರು	1	33,055	35,185	68,240
ಪುತ್ತೂರು	2	61,459	60,493	1,21,952
ಕಾಸರಗೋಡು	1	33,642	35,684	69,326
ದ ಕ. ದಕ್ಷಿಣ	1	1,65,030	1,76,068	3,41,098
ಹೊಸದುರ್ಗ	1	37,966	41,819	79,785

ನಡಿಯುವ ದಿನಗಳು

ಉತ್ತರ ವಿಭಾಗ:— ಕುಂದಾಪುರ, ಬ್ರಹ್ಮಾವರ, ಉಡುಪಿ, ಮೂಲ್ಕಿ, ಕಾರ್ಕಳ, ತಾ. 2–1–1952.

ದಕ್ಷಿಣ ವಿಭಾಗ:— ಮಂಗಳೂರು, ಪಾಣೆಮಂಗಳೂರು, ಕಾಸರಗೋಡು, ಪುತ್ತೂರು, ಹೊಸದುರ್ಗ, ತಾ.8 1-52

ವೋಟು ಕೊಡುವ ಸಮಯ

ಬೆಳಿಗ್ಗೆ-7ಗಂಟೆಯಿಂದ 12ಗಂಟೆಯವರೆಗೆ
ಮಧ್ಯಾಹ್ನ 1ಗಂಟೆಯಿಂದ 5ಗಂಟೆಯವರೆಗೆ

ಇಡೀ ಜಿಲ್ಲೆಯ ಒಟ್ಟು ಓಟರರ ಸಂಖ್ಯೆ 7,65,206 [3,57,045 ಪುರುಷರು]; 4,08,161 [ಸ್ತ್ರೀಯರು] ಮತದಾರರಲ್ಲಿ ಸ್ತ್ರೀಯರ ಸಂಖ್ಯೆಯು ಪುರುಷರಿಗಿಂತಲೂ ಹೆಚ್ಚಿದ್ದರೂ ಸ್ತ್ರೀ ಉಮೇದ್ವಾರರಿಲ್ಲವಾಗಿದೆ.

ಪಾರ್ಲಿಮೆಂಟಿನ ಮತದಾನ ಕ್ಷೇತ್ರ ವಿಭಜನಾ ಕಾಲದಲ್ಲಿ ಹೊಸದುರ್ಗ ಮತ್ತು ಸೀರೇಶ್ವರ ಫರ್ಕವು ಕಣ್ಣನೂರು ಕ್ಷೇತ್ರದೊಂದಿಗೆ ಸೇರಿಸಲ್ಪಟ್ಟಿದೆ. ಕಾರ್ಕಳ ತಾಲೂಕಿನ ವೇಣೂರು ಫರ್ಕವು ಪುತ್ತೂರು ಮತದಾರ ಕ್ಷೇತ್ರಕ್ಕೂ, ಕಾಸರಗೋಡಿನ ಮಂಜೇಶ್ವರವು ಪಾಣೆಮಂಗಳೂರು ಸರ್ಕಲಿನೊಂದಿಗೂ ಜೋಡಿಸಲ್ಪಟ್ಟಿದೆ.

ಸಾಮಾನ್ಯವಾಗಿ 850 ಮತದಾರರಿಗಾಗಿ ಒಂದು ಮತದಾನ ಕಟ್ಟೆಯನ್ನು ರಚಿಸಲಾಗುವುದು. ಜನಸಂಖ್ಯೆ ಕಡಿಮೆ ಇರುವಲ್ಲಿ ಮತದಾರರು ಮೂರು ಮೈಲಿಗಿಂತ ಹೆಚ್ಚು ನಡೆಯದ ರೀತಿಯಲ್ಲಿ ಕಟ್ಟೆಗಳನ್ನು ರಚಿಸಲಾಗುವುದು. ಮತದಾರರ ಸಂಖ್ಯೆಯು 825 ಕ್ಕೆ ಮಿಕ್ಕಿಇದ್ದಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಮತದಾನ ವ್ಯವಸ್ಥೆ ಮಾಡಲಾಗುವುದು. ಘೋಷಾ ಸ್ತ್ರೀಯರುಳ್ಳಲ್ಲಿ ಸ್ತ್ರೀ ಅಧಿಕಾರಿಗಳಿರುವ 'ಘೋಷಾ' ಮತದಾರ ಕಟ್ಟೆಗಳನ್ನು ರಚಿಸಲಾಗುವುದು ಜಿಲ್ಲೆಯ ಬೇರೆ ಬೇರೆ ಮತದಾರ ಕ್ಷೇತ್ರಗಳ ಮತಕಟ್ಟೆಗಳ ಅಂಕೆ ಸಂಖ್ಯೆ ಈ ಕೆಳಗಿನಂತಿದೆ.

ಕುಂದಾಪುರ-59 ಮತಕಟ್ಟೆ ಕಚೇರಿಗಳು. 52 ಗಂಡಸರ ಮತದಾನ ಗೃಹಗಳು 52 ಹೆಂಗಸರ ಮತದಾನ ಗೃಹಗಳು. 13 ಘೋಷಾ ಸ್ತ್ರೀಯರ ಮತದಾನ ಗೃಹಗಳು; 21 ಮಿಶ್ರದಾನ ಗೃಹಗಳು

ಕಾಂಗ್ರೆಸ್ ಚುನಾವಣಾ ಚಿಹ್ನೆ



ಬ್ರಹ್ಮಾವರ-34 ಮತಕಟ್ಟೆ ಕಚೇರಿಗಳು; 51 ಗಂಡಸರ ಮತದಾನ ಗೃಹಗಳು 51 ಹೆಂಗಸರ ಮತದಾನ ಗೃಹಗಳು; 5 ಮಿಶ್ರ ಮತದಾನಗಳು.

ಉಡುಪಿ-28 ಮತಕಟ್ಟೆ ಕಚೇರಿಗಳು; 60 ಗಂಡಸರ 60 ಹೆಂಗಸರ ಮತದಾನ ಗೃಹಗಳು;

ಕಾರ್ಕಳ-42 ಮತಕಟ್ಟೆ ಕಚೇರಿಗಳು; 58 ಗಂಡಸರ 58 ಹೆಂಗಸರ ಮತದಾನ ಗೃಹಗಳು; 1 ಮಿಶ್ರ ಮತದಾನ ಗೃಹ.

ಮೂಲ್ಕಿ-50 ಮತಕಟ್ಟೆ ಕಚೇರಿಗಳು 52 ಗಂಡಸರ 52 ಹೆಂಗಸರ ಮತದಾನ ಗೃಹಗಳು; 2 ಘೋಷಾ ಸ್ತ್ರೀಯರ ಮತದಾನ ಗೃಹಗಳು; 10 ಮಿಶ್ರ ಮತದಾನ ಗೃಹಗಳು

ಮಂಗಳೂರು-46 ಮತಕಟ್ಟೆ ಕಚೇರಿಗಳು; 66 ಹೆಂಗಸರ 66 ಗಂಡಸರ ಮತದಾನ ಕಚೇರಿಗಳು; 9 ಘೋಷಾ ಸ್ತ್ರೀಯರ ಮತದಾನ ಕಚೇರಿಗಳು; 3 ಮಿಶ್ರ ಮತದಾರ ಕಚೇರಿಗಳು.

ಪಾಣೆಮಂಗಳೂರು-54 ಮತಕಟ್ಟೆ ಕಚೇರಿಗಳ ; 51 ಹೆಂಗಸರ 51 ಗಂಡಸರ ಮತದಾನ ಗೃಹಗಳ ; 6 ಘೋಷಾ ಸ್ತ್ರೀಯರ ಮತದಾನ ಗೃಹಗಳು; 11 ಮಿಶ್ರ ಮತದಾನ ಗೃಹಗಳು.

ಪುತ್ತೂರು (2ಸ್ಥಳ):109 ಮತಕಟ್ಟೆ ಕಚೇರಿಗಳು., 89 ಹೆಂಗಸರ 89 ಗಂಡಸರ ಮತದಾನ ಸ್ಥಳಗಳು, 8 ಘೋಷಾ ಸ್ತ್ರೀಯರ ಮತದಾನ ಗೃಹಗಳು; 23 ಮಿಶ್ರ ಮತದಾನ ಗೃಹಗಳು.

ಕಾಸರಗೋಡು-40 ಮತಕಟ್ಟೆ ಕಚೇರಿಗಳು; 60 ಹೆಂಗಸರ 60 ಗಂಡಸರ ಮತದಾನ ಕಚೇರಿಗಳು; 23 ಘೋಷಾ ಸ್ತ್ರೀಯರ ಮತದಾನ ಗೃಹಗಳು, 1 ಮಿಶ್ರ ಮತದಾನ ಗೃಹ.

ಕೇಂದ್ರಲೋಕ ಸಭೆಗೆ ಉತ್ತರ ಭಾಗಕ್ಕೆ-213 ಮತಕಟ್ಟೆ ಕಚೇರಿಗಳು; 273 ಹೆಂಗಸರ ಮತ್ತು 273 ಗಂಡಸರ ಮತದಾನ ಗೃಹಗಳು; 15 ಘೋಷಾ ಸ್ತ್ರೀಯರ ಮತದಾನ ಗೃಹಗಳು; 37 ಮಿಶ್ರ ಮತದಾನ ಗೃಹಗಳು.

ಕೇಂದ್ರಲೋಕ ಸಭೆಗೆ ದಕ್ಷಿಣ ಭಾಗಕ್ಕೆ-249 ಮತಕಟ್ಟೆ ಕಚೇರಿಗಳು; 266 ಗಂಡಸರ ಮತದಾನ ಗೃಹಗಳು; 46 ಘೋಷಾ ಸ್ತ್ರೀಯರ ಮತದಾನ ಗೃಹಗಳು; 38 ಮಿಶ್ರ ಮತದಾನ ಗೃಹಗಳು

ದ ಕ. ಜಿಲ್ಲಾ ಹರಿಜನರಲ್ಲಿ ವಿಜ್ಞಾಪನೆ— ಬರುವ ಚುನಾವಣೆಯ ಎಲ್ಲಾ ಕ್ಷೇತ್ರಗಳಲ್ಲಿ ಹರಿಜನರು ತಮಗೆ ಇರುವ ಓಟುಗಳನ್ನು ಕಾಂಗ್ರೆಸಿಗೆ ಕೊಟ್ಟು ಕಾಂಗ್ರೆಸ್ ಪಕ್ಷದ ಹುರಿಯಾಳುಗಳು ಬಹುಮತದಿಂದ ಆರಿಸಿಬರುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕಾಂಗ್ರೆಸ್ಸನ್ನು ಎದುರಿಸಲು ಅನೇಕ ಚಿಕ್ಕಪುಟ್ಟ ಪಂಗಡಗಳು ಮುಂದೆಬಂದಿರುತ್ತವೆ. ಈ ತನಕ ಕಾಂಗ್ರೆಸ್ ಸರಕಾರ ಹರಿಜನರ ಏಳಿಗೆಗೆ ಮಾಡಿದ ಕೆಲಸಗಳನ್ನು ನಾವು ಎಂದಿಗೂ ಮರೆಯಲಾಗದು. ದೇಶದ ಎಲ್ಲಾ ಜಾತಿಮತಕ್ಕಿಂತಲೂ ಹರಿಜನರ ಉನ್ನತಿಗಾಗಿ ಮಾಡಿದ ಕಾರ್ಯಕಲಾಪಗಳನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ನಮ್ಮ ಕರ್ತವ್ಯ. ಮುಂದಕ್ಕೂ ಕಾಂಗ್ರೆಸ್ಸೇ ಹರಿಜನರ ಏಳಿಗೆಗಾಗಿ ದುಡಿಯುವ ಸಂಸ್ಥೆಯಾಗಿದೆ. ಈ ಚುನಾವಣೆಯಲ್ಲಿ ಕಲೆಯುತ್ತಿದ ಚಿಕ್ಕಪುಟ್ಟ ಪಂಗಡದವರ ಮಾತಿಗೆ ಮರುಳಾಗದೆ ಗಾಂಧಿಜೆಯವರು ಹರಿಜನರಿಗೆ ಬೇಕಾಗಿ ದುಡಿದು ಕಷ್ಟನಷ್ಟಗಳಿಗೆ ಗುರಿಯಾದ ಸಂಗ್ತಿ ಪ್ರತಿಯೊಬ್ಬ ಹರಿಜನ ವ್ಯಕ್ತಿಗೆ ತಿಳಿದ ಸಂಗ್ತಿಯಾಗಿರುತ್ತದೆ, ಅವರು ಮಾಡಿದ ಕಾರ್ಯಸಾಧನೆಯು ನೆನಪು ಮಾಡಿದರೆ ನಮಗೆಲ್ಲರಿಗೆ ಮನಸಿಟ್ಟವಾಗುವದು. ಆದುದರಿಂದ ಬರೇ ಕಿವಿಮಾತಿಗೆ ಮರುಳಾಗದೆ ಒಂದೇ ಮನಸ್ಸಿನಿಂದ ಪ್ರತಿಯೊಬ್ಬ ಹರಿಜನ "ಜೋಡಿ ಎತ್ತಿನ" ಗುರುತು ಇರುವ ಪೆಟ್ಟಿಗೆಗೆ ತಮ್ಮ ಓಟಿನ್ನು ಹಾಕಿ ಕಾಂಗ್ರೆಸ್ ಹುರಿಯಾಳುಗಳು ಬಹುಮತದಿಂದ ಆರಿಸಿಬರುವಂತೆ ಮಾಡಬೇಕೆಂದು ನನ್ನ ವಿಜ್ಞಾಪನೆ,

ಕೆ. ಈಶ್ವರ ಎಂ ಎಲ್. ಎ, ಮಂಗಳೂರು.

ದಿ ಮೂಲ್ಕಿ ಬೇಂಕ್ ಲಿಮಿಟೆಡ್, ಮೂಲ್ಕಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಹಾಶಯರುಗಳು ಈ ಮೇಲಿನ ನಮ್ಮ ಬೇಂಕಿನಿಂದ ಚಿನ್ನಾಭರಣದ ಆಧಾರದಲ್ಲಿ ಸಾಲ ಪಡಕೊಂಡು, ದೀರ್ಘ ಕಾಲದಿಂದ ಅಸಲು-ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ಸದ್ರಿಯವರಲ್ಲಿ ಕೆಲವರು ಮೃತಪಟ್ಟು ಹೋಗಿ ಅವರ ವಾರಿಸುದಾರರು ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ, ಮಿಕ್ಕವರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅವಧಿಯಲ್ಲಿ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ, ಸದ್ರಿಯವರ ನಗಗಳನ್ನು ತಾ 26 12-1951ನೇ ಬುಧವಾರ ಅಪರಾಹ್ನ ಗಂಟೆ 12ಕ್ಕೆ ಯಾ ತದನಂತರ ಯುಕ್ತ ಕಂಡವರ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಿ!

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು ರೂ.
8/46	ಯಂ. ಕೆ. ಬಸಪ್ಪ, N/O ಕೃಷ್ಣ ಗುರಿಕಾರ. ಕೊಳಚಿಕಂಬ್ಳ, ಮೂಲ್ಕಿ.	750/–
225/49	—do—	870/–
31/48	ರಾಮಣ್ಣ ಪೂಜಾರಿ, S/O ಲಿಂಗಪ್ಪ ಹೆಂಗ್ಸು. ಕಾರ್ನಾಡು, ಮೂಲ್ಕಿ.	10/–
69/48	ಯಂ. ಸೋಮಪ್ಪ, S/O ನಾರ್ಣ ಪೂಜಾರಿ ಮೂಲ್ಕಿ.	83/-
18/49	ಫಿಲಿಕ್ಸ್ ಮಿನೇಜಸ್, S/O ರುಜಾರಿ ಮಿನೇಜಸ್. ಕಾರ್ನಾಡು, ಮೂಲ್ಕಿ	5/–
148/49	ಸಂಕಪ್ಪ ಸುವರ್ಣ, ಫಲಿಮಾರು.	20/–
163/49	ವೆಂಕಟಾಚಲ ಭಟ್, S/O ರಾಮಕೃಷ್ಣ ಭಟ್. ಬಪ್ಪನಾಡು, ಮೂಲ್ಕಿ	70/–
191/49	ಯಂ. ಜಿ, ಇಸ್ಮಾಯಿಲ್, S/O ಅಬ್ದುಲ್ ಗಜನಿ. ಕೊಳಚಿ ಕಂಬ್ಳ, ಮೂಲ್ಕಿ.	125/-
197/49	ಯಂ. ಯಸ್. ಅಬ್ದುಬಕರ್, S/O ಅಹಮ್ಮದ್ ಬ್ಯಾರಿ. ಕೊಳಚಿ ಕಂಬ್ಳ, ಮೂಲ್ಕಿ.	20/–
251/49	ಸುಂದರ ಶೆಟ್ಟಿ, S/O ಮೈಂದ ಶೆಟ್ಟಿ. ಅತ್ತೂರು ಪಡುಮನೆ, ಕಿನ್ನಿಗೋಳಿ.	80/–
256/49	ಇಸೊಕ್ ಡಿ' ಸೋಜ, ಪೋಲೀಸ್ ಲೈನ್, ಮೂಲ್ಕಿ.	220/–
17/50	ವಿಠಲ್ ನಾಯ್ಕ್, S/O ರಾಮಕೃಷ್ಣ ನಾಯ್ಕ್. ಮೂಲ್ಕಿ.	60/–
229/50	ಎ ಯಲ್. ಅರಾಂಘ. ಟೀಚರು, ಮೂಲ್ಕಿ.	300/-
304/51	ಅಪ್ಪಯದಾಸ ನರಸಿಂಹ ಕಾಮತ್, S/O ನಾರಾಯಣ ಕಾಮತ್, ಆತಿಕಾರಿ ಬೆಟ್ಟು, ಮೂಲ್ಕಿ.	400/–

ಮೂಲ್ಕಿ.
ತಾ. 4-12-1951.

ಯಂ. ಆರ್. ರಾಮ್. ಪೂಂಜ.
ಸೆಕ್ರೆಟರಿ

ಯಕ್ಷಗಾನ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಕವಿಭೂಷಣ

ಶ್ರೀ ಕೆ. ಪಿ ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0-8-0
ಭಾರತದ ಗುರುಕುಲ	0-6-0
ಲಕ್ಷ್ಮಿಪಗಡೆ	0-6-0
ಧರಕೇಶ ದಿಗ್ವಿಜಯ	0-8-0

ಅಭ್ಯಾಸಿಗಳಿಗೆ ತಕ್ಕ ಸೂಚನೆಗಳವೆ
ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ ಅಮೂಲ್ಯ ಕಾಣಿಕೆ!

ನವಭಾರತ ಪುಸ್ತಕಭಂಡಾರ, ಉಡುಪಿ.

WANTED

Agents for the sale of our new design fountain pens on Rs 300/- To Rs. 400/ P M salary or commission basis. For samples and free terms apply:

LAWRANCE BROTHERS (S. W. 1
Naedevi BOMBAY 3

ಶ್ರೀ। ಶ್ರೀನಿವಾಸ ಮಲ್ಯರು

(ಬರೆದು ಬಂದುದು)

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ವಿಭಾಗದ ಪಾರ್ಲಿಮೆಂಟಿನ ಸ್ಥಾನಕ್ಕೆ ಉಮೇದ್ವಾರರಾಗಿ ಕಾಂಗ್ರೆಸ್ಸಿನಿಂದ ನಿಲ್ಲಿಸಲ್ಪಟ್ಟಿರುವ ಶ್ರೀ ಶ್ರೀನಿವಾಸ ಮಲ್ಯರ ವಿಷಯ ಕೇಳಿ ತಿಳಿಯದವರು ಈ ಜಿಲ್ಲೆಯಲ್ಲಿ ಅಪರೂಪವೆನ್ನಬಹುದು. ಆದರೂ ಇವರು ತನ್ನ ಕಾರ್ಯದಲ್ಲಿ ಮಗ್ನರಾಗಿರುವವರೆಂಬುದರಿಂದಲೂ ಇವರನ್ನು ಸರಿಯಾಗಿ ತಿಳಿಯುವುದು ಸುಲಭವಲ್ಲವೆಂಬುದರಿಂದಲೂ ಇವರ ಕುರಿತು ಸರಿಯಾದ ಮಾಹಿತಿ ಅನೇಕರಿಗಿಲ್ಲದಿರಬಹುದು. ಈಗ ಇವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಬ್ಬರಲ್ಲಿ ಒಬ್ಬರಾಗಿ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲರಿಂದ ನೇಮಿಸಲ್ಪಟ್ಟಿರುತ್ತಾರೆಂಬುದನ್ನು ಎಲ್ಲರೂ ಕೇಳಿರಬೇಕು.

ಶ್ರೀ। ಶ್ರೀನಿವಾಸ ಮಲ್ಯರು 1921ರಲ್ಲಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಹೋರಾಟ ಆರಂಭವಾದಾಗ ಕಾಂಗ್ರೆಸ್ ಚಳವಳಿಂದ ಆಕರ್ಷಿಸಲ್ಪಟ್ಟು ವಿದ್ಯಾಭ್ಯಾಸ ಬಿಟ್ಟು ಹೊರಬಂದರು. ಬಳಿಕ ವ್ಯಾಪಾರ ವಹಿವಾಟುಗಳಲ್ಲಿ ಸೇರಿ ಸ್ವತಂತ್ರ ವೃತ್ತಿಯಾದರು. ಆಗ ಇಲ್ಲಿ ಕಾಂಗ್ರೆಸ್ ಮುಂದಾಳಾದ ದಿವಂಗತ ಸದಾಶಿವ ರಾಯರಿಗೆ ಹಣ ಸಂಗ್ರಹ ಇತ್ಯಾದಿ ಕಾರ್ಯಗಳಲ್ಲಿ ತುಂಬಾ ನೆರವಾಗುತ್ತಿದ್ದರು. ದಿವಂಗತ ಸದಾಶಿವರಾಯರ ಬಳಿಕ ಜಿಲ್ಲೆಯ ಕಾಂಗ್ರೆಸ್ ಸಂಸ್ಥೆಯ ಜವಾಬ್ದಾರಿಯನ್ನು ತಾನೇ ಹೊತ್ತು ಅಲ್ಲಿಂದೀಚೆ ಇಂದಿನ ತನಕ ಜಿಲ್ಲೆಯ ಕಾಂಗ್ರೆಸ್ ಕಾರ್ಯದ ಮುಖ್ಯಭಾರ ಹೊತ್ತವರಿರುತ್ತಾರೆ. ಮುಂದೆ ಇವರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಂಸ್ಥೆಯಲ್ಲಿಯೂ ಅತ್ಯಂತ ಪ್ರಮುಖ ಭಾಗ ವಹಿಸಿದ್ದಲ್ಲದೆ ಈಗ ಆರಂಭದಲ್ಲಿ ಹೇಳಿದಂತೆ ಅಖಿಲ ಭಾರತ ಕಾಂಗ್ರೆಸಿನ ದೊಡ್ಡ ಜವಾಬ್ದಾರಿಯ ಭಾರವನ್ನು ಹೆಗಲೊಡ್ಡಿದ್ದಾರೆ.

ಶ್ರೀನಿವಾಸ ಮಲ್ಯರು ರಾಜಕೀಯ ಕ್ಷೇತ್ರದಲ್ಲಿ ದುಡಿಯುವಾಗಲೇ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಕ್ಕೂ ಲಕ್ಷ್ಯಕೊಡುತ್ತಾ ಬಂದವರೆಂಬುದು ಗಮನಾರ್ಹ ವಿಷಯ. ಈ ಜಿಲ್ಲೆಯಲ್ಲಿ ಇದು ತನಕ ಖಾದಿ ಕಾರ್ಯ ಬೆಳೆಯುವಂತೆ ಮಾಡಿರುವ ಜಿಲ್ಲಾ ಗ್ರಾಮ ಉದ್ಯೋಗ ಸಂಘದ ವ್ಯವಸ್ಥಾಪಕರೇ ಇವರು. ಇಂದಿಗೂ ಈ ಸಂಸ್ಥೆಯ ಪ್ರಗತಿಯ ಕೂಲಂಕುಷ ವಿವರಗಳನ್ನು ಇವರು ಪರಿಶೀಲಿಸುತ್ತಿದ್ದಾರೆ. ಮೂಡಬಿದ್ರೆಯಲ್ಲಿ ಶ್ರೀ ಎಚ್. ನಾರಾಯಣ ರಾಯರು ವ್ಯವಸ್ಥೆಗೊಳಿಸಲು ಹೆಣಗುತ್ತಿರುವ ಗಾಂಧಿಸೇವಾ ಕೇಂದ್ರಕ್ಕೆ ಇವರೇ ಮುಖ್ಯ ಬೆಂಬಲವೆನ್ನಬಹುದು. ಇದೇ ರೀತಿ ಜಿಲ್ಲೆಯಲ್ಲಿ ಗಾಂಧೀಜಿಯವರ ಕಾರ್ಯಕ್ರಮ ಮುಂದೊತ್ತುವುದಕ್ಕಾಗಿಯೇ ವ್ಯವಸ್ಥೆಗೊಂಡಿರುವ ಲೋಕಸೇವಾ ಸಂಘಕ್ಕೆ ಇವರು ಪೂರ್ಣ ಬೆಂಬಲ ಕೊಡುತ್ತಿದ್ದಾರೆ. ಗ್ರಾಮ ಉದ್ಯೋಗ ಶಿಕ್ಷಣ ಕೇಂದ್ರವೊಂದನ್ನು ಇಲ್ಲಿಯ ಹರಿಪದವಿನಲ್ಲಿ ವ್ಯವಸ್ಥೆಗೊಳಿಸಲು ಇದಕ್ಕೆ ಬೇಕಾದ ಸ್ಥಳವನ್ನು ಸರಕಾರದಿಂದ ಈಗ ತಾನೆ ಮಂಜೂರು ಮಾಡಿಸಿಕೊಂಡಿದ್ದಾರೆ. ನಮ್ಮ ಜಿಲ್ಲೆಯ ಹರಿಜನ ಸೇವಾ ಸಂಘ ಹಾಗೂ ಹಿಂದೀ ಪ್ರಚಾರ ಸಮಿತಿಗಳು ಇವರ ಸಹೋದರರ ಅಧ್ಯಕ್ಷತೆಯಲ್ಲಿಯೇ ನಡೆಯುತ್ತಿವೆ.

ಭಾರತದ ಮೊದಲ ಪಾರ್ಲಿಮೆಂಟು ಸದಸ್ಯರಾಗಿ ಶ್ರೀ। ಮಲ್ಯರು ತೋರಿಸಿದ ಕರ್ತೃತ್ವ ಶಕ್ತಿ ಮತ್ತು ಪ್ರತಿಭೆ ಅಪ್ರತಿಮವಾದುದು. ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷಕ್ಕೆ ಇವರು ವ್ಹಿಪ್ ಆಗಿ ಈ ನಾಲ್ಕು ವರ್ಷಗಳಲ್ಲಿ ದುಡಿದಿದ್ದಾರೆ. ಇದು ಪ್ರತಿ ವರ್ಷ ಚುನಾಯಿಸಲ್ಪಡುವ ಸ್ಥಾನ ಎಂಬುದನ್ನು ಮರೆಯಲಾಗದು. ಆ ಪಕ್ಷದ ಕಾರ್ಯಕಾರಿ ಸಮಿತಿಗೂ ಶ್ರೀ। ಮಲ್ಯರು ಸದಸ್ಯರಿದ್ದಾರೆ. ಇದಲ್ಲದೆ ಪಾರ್ಲಿಮೆಂಟಿನಿಂದ ನೇಮಕವಾದ ದೇಶದ ಹಣಕಾಸಿನ ಸ್ಥಾಯಿಸಮಿತಿಗೂ ಇವರು ಸದಸ್ಯರು. ಇವರು ಈ ಸ್ಥಾನಗಳಲ್ಲಿದ್ದು ಮಾಡಿದ ಕೆಲಸ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿರುವುದು. ಕೇಂದ್ರ ಸರಕಾರದ ಕಡೆಯಿಂದ ಮಂಗಳೂರಿಗೆ ಆಗಮಿಸಿದ ಶ್ರೀ। ಸಂತಾನಂ, ಶ್ರೀ ಖುರ್ಶಿದಲಾಲ್, ಶ್ರೀ। ತಿರುಮಲರಾವ್, ಮೊದಲಾದವರು ಶ್ರೀ। ಮಲ್ಯರ ಕರ್ತೃತ್ವ ಶಕ್ತಿಯನ್ನು ಇಲ್ಲಿ ಕೊಂಡಾಡಿದುದನ್ನು ಕೇಳಿದವರೆಲ್ಲ ಅಭಿಮಾನ ಪಡುವಂತಿತ್ತು. ಪ್ರಾಂತಿಕ ಕಾಂಗ್ರೆಸ್ ಶಾಸನಸಭಾ ಪಕ್ಷಗಳಲ್ಲಿ ಅಲ್ಲಲ್ಲಿ ಎಷ್ಟೋ ಒಡಕುಗಳನ್ನು ಕಂಡಿದ್ದೇವೆ. ಆದರೆ ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷ ನಾಲ್ಕುವರೆ ವರ್ಷಗಳ ತನಕವೂ ಅತ್ಯಂತ ಸುಸಂಘಟಿತವಾಗಿ ನಡೆಯುತ್ತಿತ್ತು. ಇದಕ್ಕೆ ಶ್ರೀ। ಮಲ್ಯರ ಕಾರ್ಯ ಕುಶಲತೆಯೂ ಒಂದು ಪ್ರಮುಖ ಕಾರಣವಿತ್ತು. ಇವರ ಈ ಶಕ್ತಿಯನ್ನು ಕಂಡೇ ಪಂಡಿತ ಜವಾಹರಲಾಲರು ಇವರನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿಕೊಂಡರೆಂಬ ಬಗ್ಗೆ ಸಂಶಯವಿಲ್ಲ.

ಶ್ರೀ। ಮಲ್ಯರು ಪಾರ್ಲಿಮೆಂಟಿನಲ್ಲಿ ಭಾಷಣ ಕೊಡುವುದಿಲ್ಲವೆನ್ನುವವರು ಕೆಲವರಿದ್ದಾರೆ. ಪಾರ್ಲಿಮೆಂಟಿನ ಮುಂದೆ ಬರುತ್ತಿದ್ದ ವಿಚಾರಗಳೆಲ್ಲವೂ ಪಕ್ಷದ ಕಾರ್ಯಕಾರಿ ಅಥವಾ ಮಹಾಸಭೆಯ ಮುಂದೆ ಮೊದಲಾಗಿ ಬಂದು ಅಲ್ಲಿ ಆದ ತೀರ್ಮಾನಗಳನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವುದೇ ಈ ಭಾಷಣಗಳ ಉದ್ದೇಶವೆಂಬುದನ್ನು ತಿಳಿಯದೆ ಇವರ ಮೇಲೆ ಈ ರೀತಿ ಟೀಕಿಸಲು ಕಾರಣವಾಗಿದೆಯೆನ್ನಬಹುದು. ಆ ತೀರ್ಮಾನಗಳು ಹೇಗಾಗಬೇಕೆಂಬ ಚರ್ಚೆಗಳಲ್ಲಿ ಶ್ರೀ। ಮಲ್ಯರು ಪರಿಣಾಮಕಾರಿಯಾಗಿ ಭಾಗವಹಿಸುತ್ತಿದ್ದರು, ಮಾತ್ರವಲ್ಲ ಪಾರ್ಲಿಮೆಂಟಿನಲ್ಲಿ ಯಾರು ಭಾಷಣಮಾಡಿ ಇದನ್ನು ಮಂಡಿಸಬೇಕೆಂಬ ನಿರ್ಧಾರ ಮಾಡುವುದೇ ಪಕ್ಷದ "ವ್ಹಿಪ್" ಆದ ಶ್ರೀ ಮಲ್ಯರ ಕೆಲಸವಿತ್ತು.

ದಿಲ್ಲಿಯ ಚಟುವಟಿಕೆಗಳ ನಡುವೆ ಶ್ರೀ। ಮಲ್ಯರಿಗೆ ಈ ಜಿಲ್ಲೆಯ ಹಿತ ಸದಾ ಮನಸ್ಸಿನಲ್ಲಿದೆಯೆಂಬ ಬಗ್ಗೆ ಅವರು ಈಗಾಗಲೇ ಸಾಧಿಸಿರುವ ಕಾರ್ಯಗಳೇ ಸಾಕ್ಷಿ. ಮಂಗಳೂರಿಗೆ ಇಂದು ಒಂದು ವಿಮಾನ ನಿಲ್ದಾಣ ಸಿದ್ಧವಾಗುತ್ತಿದೆಯಾದರೆ ಇದಕ್ಕೆ ಶ್ರೀ। ಮಲ್ಯರೊಬ್ಬರೇ ಕಾರಣರೆಂದು ಇಲ್ಲಿ ಬಂದಾಗ ಶ್ರೀ। ಖುರ್ಶಿದ್‌ಲಾಲರೇ ಸ್ಪಷ್ಟವಾಗಿ ಹೇಳಿದ್ದರು. ಬೇರೆಲ್ಲಾ ವಿಮಾನನಿಲ್ದಾಣಗಳನ್ನು ತಯಾರಿಸುವ ಯೋಜನೆ ಹಣದ ಅಡಚಣೆಯಿಂದಾಗಿ ತ್ಯಜಿಸುವಂತಾದರೂ ಮಂಗಳೂರ ನಿಲ್ದಾಣ ಮುಂದರಿಸುವಂತೆ ಶ್ರೀ ಮಲ್ಯರಲ್ಲದಿದ್ದರೆ ಇನ್ನಾರಿಂದಲೂ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ.

ದಕ್ಷಿಣ ಕನ್ನಡಕ್ಕೊಂದು ಪ್ರಬುದ್ಧ ಬಂದರ ಬೇಕೆಂಬ ಬಗ್ಗೆ ಇವರು ತುಂಬಾ ಯತ್ನಿಸಿದರು. ಅದು ಮಲ್ಪೆಯಲ್ಲಿ ಆಗಕೂಡದೆಂದು ಶ್ರೀ। ಮಲ್ಯರು ತಂತ್ರ ಹೂಡಿದ್ದರೆಂದು ಇವರ ಮಾಹಿತಿ ಇಲ್ಲದವರು ಹೇಳುವುದುಂಟು. ಹಿಂದೆ ಕಾರ್ಕಳ ದಾರಿ, ಕರಾವಳಿ ದಾರಿ ಎಂಬ ವಿವಾದ ಹೂಡಿ ಉಡುಪಿಗೆ ರೈಲುದಾರಿ ಕಳೆದುಕೊಂಡಂತೆ ಮಲ್ಪೆ ಮಂಗಳೂರೆಂಬ ವಿವಾದದಿಂದ ಜಿಲ್ಲೆಗೆ ಸಿಕ್ಕುವ ಪ್ರಬುದ್ಧ ಬಂದರ ಕಳೆದುಕೊಳ್ಳುವವರು ಶ್ರೀ ಮಲ್ಯರಲ್ಲ. ತಜ್ಞರ ಸಮಿತಿಯು ಮಲ್ಪೆಯ ಪರವಾಗಿ ಶಿಫಾರಸು ಮಾಡಿ ವರದಿ ಕೊಟ್ಟಾಗ ಹಣದ ಅಡಚಣೆಯಿಂದ ಆ ಪ್ರಶ್ನೆಯನ್ನೇ ತ್ಯಜಿಸುವ ಸಂದರ್ಭ ಬಂದರೂ ಹಾಗಾಗಬಿಡದೆ ಅದನ್ನು ತತ್ಕಾಲ ಮಾತ್ರಕ್ಕೆ ಬಾಕಿ ಇಡಬೇಕೆಂದು ಈ ಯೋಜನೆಯನ್ನು ಇನ್ನೂ ಊರ್ಜಿತದಲ್ಲಿರಿಸಿದವರೇ ಶ್ರೀ ಮಲ್ಯರೆಂಬುದರಲ್ಲಿ ಅನುಮಾನ ಬೇಡ. ಶ್ರೀ ಮಲ್ಯರು ಮಲ್ಪೆ ಮಂಗಳೂರೆಂಬ ಭೇದಮಾಡುವಷ್ಟು ಸಂಕುಚಿತ ದೃಷ್ಟಿಯುಳ್ಳವರಲ್ಲ. ಈ ಕುರಿತು ತೀರ್ಮಾನಿಸುವ ಅರ್ಹತೆಯುಳ್ಳ ತಜ್ಞರಿಗೆ ಈ ಪ್ರಶ್ನೆಯನ್ನು ಒಪ್ಪಿಸಿ ಅವರ ತೀರ್ಮಾನದಂತೆ ನಡೆಸಬೇಕೆನ್ನುವುದೇ ಶ್ರೀ ಮಲ್ಯರ ದಾರಿಯೆನ್ನಲು ಅಡ್ಡಿಯಿಲ್ಲ.

ಜೋಗಿನಿಂದ ಈ ಜಿಲ್ಲೆಗೆ ವಿದ್ಯುಚ್ಛಕ್ತಿ ಪೂರೈಸುವ ವಿಚಾರದಲ್ಲಿ ಮದ್ರಾಸಿನ ಸಂಸ್ಥಾನಕ್ಕೂ ಮೈಸೂರು ಸರಕಾರಕ್ಕೂ ಸಂಧಿ ಅಸಾಧ್ಯವಾಗಿ ಯೋಜನೆಯೇ ಬಿದ್ದುಹೋಗುವಂತಾದಾಗ ಶ್ರೀ ಮಲ್ಯರು ಇದರಲ್ಲಿ ಕೈಹಾಕಿ ಮೈಸೂರು ಸರಕಾರವನ್ನು ಒಪ್ಪಿಸಿ ಈ ಯೋಜನೆ ಕೈಗೂಡುವಂತೆ ಸಾಧಿಸಿರುತ್ತಾರೆ. ನಮ್ಮ ಜಿಲ್ಲೆಯೊಳಗಿನಿಂದ ಹಾದು ಹೋಗುವ ನ್ಯಾಶನಲ್ ಹ್ಯಾವೇ ಎಂಬ ರಾಜಮಾರ್ಗವು ಒಂದು ಬಾರಿ ಬೇಡವೆಂದು ತೆಗೆದುಹಾಕಲ್ಪಟ್ಟದ್ದು ಪುನಃ ನಕಾಶೆಯಲ್ಲಿ ಹಾಕಿಸಿ ಮದ್ರಾಸು ಸರಕಾರದಿಂದ ಅರ್ಧಾರ್ಧ ಹಣ ಕೊಡಲೊಪ್ಪಿಸಿ ಈ ರಾಜಮಾರ್ಗ ನಮ್ಮಲ್ಲಾಗುವಂತೆ ಮಾಡಿದರು.

ಶ್ರೀ ಮಲ್ಯರ ನವದಿಲ್ಲಿಯ ದಿವ್ಯಭವನವು ದೊಡ್ಡವರು ಬಡವರು, ಜಾತಿ ಪರಜಾತಿಯರೆಂಬ ಭೇದವಿಲ್ಲದೆ ನಮ್ಮ ಜಿಲ್ಲೆಯವರಿಗೆ ಸದಾ ಆತಿಥ್ಯದ ಕೇಂದ್ರವಾಗಿದೆ. ರಾಜಕೀಯ ಸಂಕಷ್ಟಗಳಿಂದ ರಕ್ಷಣೆಹೊಂದಲು ಯತ್ನಿಸುವವರಿಗೆ ಇದು ಪ್ರಧಾನ ಯಾತ್ರಾಸ್ಥಳವೇ ಆಗಿದೆ. ನಮ್ಮ ಜಿಲ್ಲೆಯವರೆಷ್ಟೋ ಮಂದಿ ಅಲ್ಲಿ ಹೋಗಿ ತಮ್ಮ ಕಾರ್ಯಸಾಧಿಸಿ ಕೃತಜ್ಞತೆಸೂಚಿಸಿ ಹಿಂದಿರುಗಿದ್ದಾರೆ. ನವದಿಲ್ಲಿಯಲ್ಲಿರುವ ನಮ್ಮ ಜಿಲ್ಲೆಯವರು ಕೂಡುವ ಸ್ಥಳವಾಗಿ ಅದು ಪರಿಣಮಿಸಿದೆ. ಇಷ್ಟು ಅವಿರತ ಚಟುವಟಿಕೆಯ ನಡುವೆ ಕೂಡಾ ಯಾವುದೇ ಬಗೆಯ ಕಷ್ಟದಲ್ಲಿ ಸಿಲುಕಿದವರಿಗೆ ಸಮಾಧಾನಮಾಡದೆ ಕಳುಹಿಸುವ ಅಭ್ಯಾಸವೇ ಇವರಿಗಿಲ್ಲ.

ಜಿಲ್ಲೆಯ ಉತ್ತರ ವಿಭಾಗದ ಮತದಾರ ಕ್ಷೇತ್ರಕ್ಕೆ ಇವರು ಪ್ರತಿನಿಧಿಯಾಗಲು ಒಪ್ಪಿಕೊಂಡುದೆಂದರೆ ಆ ವಿಭಾಗದ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿ ತಾನು ಹೊರಲು ಒಪ್ಪಿಕೊಂಡಂತೆಯೇ ಸರಿ. ಇಂಥ ಕರ್ತೃತ್ವ ಶಕ್ತಿಯುಳ್ಳ ಪ್ರತಿಭಾವಂತ ಕೆಲಸಗಾರರು ತಮ್ಮ ಪ್ರತಿನಿಧಿಯಾಗಲು ಒಪ್ಪಿಕೊಂಡುದು ಈ ಮತದಾರ ಕ್ಷೇತ್ರಕ್ಕೆ ಎಷ್ಟು ಪ್ರಯೋಜನಕಾರಿಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ದಕ್ಷಿಣ ಕನ್ನಡ ಉತ್ತರ ವಿಭಾಗದ ಪಾರ್ಲಿಮೆಂಟು ಸ್ಥಾನದ ಮತದಾರರು ಶ್ರೀ ಮಲ್ಯರು ಕಾರ್ಯಭಾರುಳ್ಳದಿಂದಾಗಿ ಸ್ವತಃ ಚುನಾವಣೆಗಳಲ್ಲಿ ಹೆಚ್ಚು ಕೆಲಸಮಾಡಲಾರದ ಪರಿಸ್ಥಿತಿಯಲ್ಲಿರುವರೆಂಬುದನ್ನು ಮನಗಂಡು ತಾವಾಗಿ ಈ ಬಗ್ಗೆ ದುಡಿದು ಇವರು ಅಪಾರ ಬಹುಮತದಿಂದ ಚುನಾಯಿಸಲ್ಪಡುವಂತೆ ಮಾಡುವರೆಂದು ನಿರೀಕ್ಷಿಸಬೇಕಾಗಿದೆ.

TENDER NOTICE

Sealed tenders are invited by 20-12-1951 for the supply of the following articles of furniture, required for the Board Secondary schools in the district. The articles should be strictly according to the specifications and the timber to be used shall be of classified wood such as jack, wild-jack, or teak wood. The articles are to be delivered at the school premises by 15-2-1952

Description of Articles

1. Tables with drawers ... 4' x 2' 6" x 2' 6"
2. Plain tables .. 3' x 2'3" x 2'6" [with 2" square legs] and 4' x 3' x 3' [with sq. legs]
3. Almirahs with glass shutters .. 6'6" x 3' x 15"
4. Dual desks – standard pattern without detached benches... 32" x 2¼" x 3"
5. Office chairs . . Bata pattern strong
6. Laboratory table with half cabinet below- two shutters with locking arrangements ... 7' x 3½' x 3'
7. Laboratory tables– plain ... -do-
8. Blackboards with stands & easel ... 4' x 3'
9. Teachers cup boards with penelled shutters...4' x 2'6" x 1'1"
10. Long benches without backs ... 6' x 1' x 1'4"
11. Reading room table for pupils ... 6' x 3' x 2'6"

S. K. Dt. Board Office, Mangalore, 5-12-1951. (Sd.) **B. Manjaya Hegde**, President.

ವಿವಿಧ ಪಾತ್ರೆಗಳು



ನಾನಾವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಪೇರಿಸಿನಿಂದ ಎಮ್‌ಸ್ಟರ್ ಡೇಮಿಗೆ ಪ್ರಯಾಣ

ಮೇ 27ರಿಂದ ಜೂನ್ 1ರ ವರೆಗೆ 5ದಿನಗಳಲ್ಲಿ ಮೇಲೆ ಬರೆದಂತೆ ಪೇರಿಸ್ ವರ್ಸೈಲ್ಸ್ ಮತ್ತು ಫೊಂಟೆನ್‌ಬ್ಲೂ ಊರುಗಳನ್ನು ಸಂದರ್ಶಿಸಿ ಜೂನ್ 1ನೇ ಶುಕ್ರವಾರ ದಿನ ಮಧ್ಯಾಹ್ನ 2-20ರ ರೈಲಿಲ್ಲಿ ಉತ್ತರಕ್ಕೆ ಇರುವ ಹೊಲೆಂಡ್ ದೇಶದ ರಾಜಧಾನಿಯಾದ ಎಮ್‌ಸ್ಟರ್‌ಡೇಮ್ ಎಂಬ ನಗರಕ್ಕೆ ಹೊರಟೆನು. ಈ ದಿನದ ಇದಿ ಪ್ರಯಾಣ ದಕ್ಷಿಣದಿಂದ ಉತ್ತರಕ್ಕೆ.

ರೈಲು ಹೊರಡುವಾಗ ಮಳೆಬರುತ್ತಿತ್ತು. ರೈಲು ಗಂಟೆಗೆ ಸುಮಾರು 50 ಮೈಲು ವೇಗದಲ್ಲಿ ಚಲಿಸುತ್ತಿತ್ತು. ಪೇರಿಸ್ ನಗರವು ಬೇಗನೇ ದಾಟಿ ಹಳ್ಳಿ ಪ್ರದೇಶವು ಬಂತು. ಹೆಚ್ಚಿನ ಮನೆಗಳು ಹಳತಾಗಿದ್ದವು. ಪೇರಿಸ್‌ಗೆ ಮತ್ತು ಸಮೀಪ ಇದ್ದಂತೆ ಸುಂದರವಾಗಿರಲಿಲ್ಲ. ಭೂಮಿ ಏರುತಗ್ಗು. ಎಲ್ಲೆಲ್ಲೂ ಹಸುರು. ಅಲ್ಲಲ್ಲಿ ಕಾಡುಗಳು. ಗಂಟೆ 3-30ಕ್ಕೆ ಚೆಂಟಿಲೀ (Chentilly) ಎಂಬ ಊರು ಬಂತು. ಇದರ ಮತ್ತು ಇನ್ನೂ ನಮಗೆ ಸಿಕ್ಕುವ ಅನೇಕ ಊರುಗಳ ಹೆಸರುಗಳನ್ನು ಎರಡೂ ಮಹಾಯುದ್ಧಗಳ ಸಮಯ ನಾವು ಆಗಾಗ ವರ್ತಮಾನ ಪತ್ರಗಳಲ್ಲಿ ಕೇಳಿದ್ದೆವು. ಗರಗಸವು ಹಿಂದೆ ಮುಂದೆ ಕತ್ತರಿಸುವಂತೆ ಆ ಯುದ್ಧಗಳಲ್ಲಿ ಉಭಯ ಸೈನ್ಯಗಳು ಈ ಊರುಗಳಲ್ಲಿ ಹಿಂದೆ ಮುಂದೆ ಹೋಗಿ ಊರುಗಳು ಮತ್ತು ಜನರು ಪುಡಿಪುಡಿಯಾಗಿ ಬಿದ್ದರು.

ಹೀಗೆ ಚೆಂಟಿಲೀ ಬಂದಾಗ ಒಂದು 100 ಅಡಿ ಅಗಲದ ನೀರು ಕಾಲುವೆಯು ನಮ್ಮ ರೈಲಿನ ಬದಿಯಲ್ಲೇ ಅನೇಕ ಮೈಲುಗಳ ದೂರ ಬಂತು. ಅದರ ಮೇಲೆ ಅಲ್ಲಲ್ಲಿ ಸಾಮಾನು ಒಯ್ಯುವ ಮೋಟರ್ ದೋಣಿಗಳು. ಅದರಲ್ಲಿ ಕೆಲವು ಸಮಯ ಗಂಡಹೆಂಡಿರ ಕುಟುಂಬವಾಸ. ಬದಿಯಲ್ಲಿ ಅಲ್ಲಲ್ಲಿ ಬಂಡೆಕಲ್ಲು. ಆಪರೂಪಕ್ಕೆ ಹಳ್ಳಿಯಲ್ಲಿ ಐಶ್ವರ್ಯವಂತರ ದೊಡ್ಡ ಮನೆಗಳು. ನಂತರ ಕ್ರೀಲ್ (Creil) ಎಂಬ ಪಟ್ಟಣ. ಮಂಗಳೂರಿನಂಥವು ಕೆಂಪು ಹಂಚಿನ ಮಾಡುಗಳು. ಕುದುರೆಗಳ ಮೂಲಕ ಗದ್ದೆಗಳನ್ನು ಉಳುವುದು, ಒಂದು ಕುದುರೆಯ ಹಿಂದೆ ಇನ್ನೊಂದರಂತೆ 3 ಕುದುರೆಗಳು ಎಳೆಯುವ ಭಾರದ ಗಾಡಿಗಳು. ಭೂಮಿಯಲ್ಲಿ ನೀರು ಜಾಸ್ತಿ ನಿಂತ ಮೊಗರು ಭೂಮಿ. ಕೆಂಪು ಬಿಳಿ ವರ್ಣದ ಪುಷ್ಟಿಯಾದ ದನಗಳು. 8-10 ಮೈಲಿಗೊಮ್ಮೆ ಕಾರ್ಖಾನೆಗಳು ಇರುವ ಸಣ್ಣ ಪಟ್ಟಣಗಳು ಕೆಲವು ದೂರದ ಮೇಲೆ ಲಿಲ್ (Lille) ಮತ್ತು ಕಾಂಪಿಯನ್ (Compiegne) ಎಂಬ ಪಟ್ಟಣ. ಇಲ್ಲಿ ಮೇಲೆ ಹೇಳಿದ ಕಾಲುವೆ ಎರಡು ಭಾಗವಾಗಿ ಬೇರೆ ಬೇರೆ ಕಡೆಗೆ ಹೋಗುತ್ತದೆ. 4 ಘಂಟೆಗೆ ಸಂಯಾಗಿ- (St- Quentin) "ಸಾಂ ಕೆಂಟಿಂ" (ಹಾಗೆ ಅದರ ಉಚ್ಚಾರ) ಎಂಬ ಪಟ್ಟಣ. ಅನಂತರ ಲೀಲ್ (Lille)

ಪ್ರವಾಸಿಯ ಪತ್ರಗಳು ೨೦

ಎಂಬ ಪಟ್ಟಣವನ್ನು ದಾಟಿ 5 ಘಂಟೆಗೆ ಫ್ರಾನ್ಸ್ ದೇಶಕ್ಕೂ ಅದರ ಉತ್ತರಕ್ಕಿರುವ ಬೆಲ್ಜಿಯಮ್ ದೇಶಕ್ಕೂ ಗಡಿ ಸಮೀಪಿಸಿ ಫ್ರಾನ್ಸಿನ ಆಮೈರಿ ರೈಲ್ವೆ ಸ್ಟೇಶನಿನಲ್ಲಿ ನಮ್ಮ ಪಾಸ್‌ಪೋರ್ಟ್ ನಮ್ಮ ಹತ್ತಿರ ಇದ್ದ ಹಣ ಕಾಸು ಜಡ್ತಿಯಾಯಿತು, ಯಾಕಾದರೆ ನಿಶ್ಚಿತವಾದ ಮೊಬಲಗಿಗೆ ಮಿಕ್ಕಿ ಆ ಊರಿನಿಂದ ಪರಊರಿಗೆ ಹಣತೆಕ್ಕೊಂಡು ಹೋಗಬಾರದು, ಇನ್ನೂ ದಿನ ದಿನ ಬದಲಾಗುವ ಪ್ರತಿ ದೇಶದಲ್ಲೂ ಇದೇ ರೀತಿಯ ಕಾನೂನು. ಜಡ್ತಿ ಮುಗಿದನಂತರ ಬೆಲ್ಜಿಯಮ್ ದೇಶದ ಮೊದಲನೇ ಸ್ಟೇಶನ್. ಅಲ್ಲಿ ಕೂಡಾ ಇದೇ ರೀತಿ ಪುನಃ ಜಡ್ತಿ. ಇಷ್ಟರ ಒಳಗೆ ನಾನು ಪೇರಿಸಿನಿಂದ ಪ್ರಯಾಣ ಮಾಡಿದ ದೂರ ಸುಮಾರು 120 ಮೈಲು ಆಗಬಹುದು.

ಬೆಲ್ಜಿಯಮ್ ಸಣ್ಣ ದೇಶ 12,000 ಚದರ ಮೈಲು, ಜನಸಂಖ್ಯೆ 9ಮಿಲಿಯ. ಅಲ್ಲಿಗೆ ಪ್ರತ್ಯೇಕ ಒಂದು ಭಾಷೆಯೆಂದಿಲ್ಲ. ದಕ್ಷಿಣ ಭಾಗದಲ್ಲಿ ಹೆಚ್ಚಾಗಿ ಫ್ರೆಂಚ್ ಭಾಷೆ, ಹೀಗೆ ಆ ದೇಶಕ್ಕೆ ಪ್ರವೇಶಿಸಿದ ಮೇಲೆ ಮೊದಲನೇ ಸ್ಟೇಶನ್ ಘಂಟೆ 5-30ಕ್ಕೆ ಮೋನ್ಸ್ [Mons] ಎಂಬುದು. ಇದು ದೊಡ್ಡ ಕಲ್ಲಿದ್ದಲಿನ ಗಣಿಗಳಿರುವ ಊರು, ರೈಲು ದಾರಿಯಿಂದ ಗಣಿಗಳನ್ನು ಕಾಣಬಹುದು. ಇಲ್ಲಿ ಬಂದ ಮೇಲೆ ಮನೆಗಳ ಮಾದರಿ ಸ್ವಲ್ಪ ಬದಲಾಯಿಸುತ್ತದೆ. ನೆಲವು ಏರುತಗ್ಗಿದ್ದು ಸಾಲುಸಾಲಾಗಿ ಮನೆಗಳು. ಆದರೆ ಒಂದೊಂದು ಮನೆ ಅಗಲ 8-10 ಅಡಿ ಮಾತ್ರ ಉಪ್ಪರಿಗೆ ಮನೆಗಳು ಪ್ರತಿ ಒಂದರ ಮುಡು ನೆಲದ ಪ್ರಮಾಣದಂತೆ ಏರುತಗ್ಗು. ಫ್ರಾನ್ಸಿನಂತೆ ಹಳೆ ಮನೆಗಳಲ್ಲ. ಅನೇಕ ಹೊಸತು. ಹೊರಗಿನಿಂದ ಗಾರೆಯಿಲ್ಲ. ಇಟ್ಟಿಗೆಯಿಂದ ಕಟ್ಟಿರುತಿದ್ದು ಹೊರಗೆ ಕೆಂಪು ಬಣ್ಣ ಹಾಕಿದ್ದು. ಗಡಿಯಿಂದ ಸುಮಾರು 40 ಮೈಲಿನ ಒಳಗೆ ಬೆಲ್ಜಿಯಮಿನ ರಾಜಧಾನಿ ಬ್ರಸ್ಸೆಲ್ಸ್ [Brussels] ಎಂಬ ನಗರವು ಘಂಟೆ 6½ಕ್ಕೆ ಬಂತು. ನಾನು ಲಂಡನಿನಿಂದ ಹೊರಡುವಾಗ ಇಲ್ಲಿ ಒಂದು ದಿನ ನಿಲ್ಲಬೇಕೆಂತ ಹೋಟೆಲ್ ಕೂಡಾ ಕಾದಿಟ್ಟರೂ ಪೇರಿಸಿನಲ್ಲಿ 1ದಿನ ಹೆಚ್ಚಿಗೆ ನಿಂತ ಕಾರಣ ಇಲ್ಲಿ ಇಳಿಯದೇ ಸೀದಾ ಅದೇ ರೈಲಲ್ಲಿ ಮುಂದೆ ಪ್ರಯಾಣಮಾಡಿದೆನು ಬ್ರಸ್ಸೆಲ್ಸಿನಲ್ಲಿ ನೂರಾರು ಪ್ರಯಾಣಿಕರು ಇಳಿದರು. ಹಾಗೆಯೇ ಅನೇಕರು ಹತ್ತಿದರು. ರೈಲು 6-30ಕ್ಕೆ ಹೊರಟು ಪುನಹ ಉತ್ತರಕ್ಕೆ ಪ್ರಯಾಣಮಾಡಿತು. ಬ್ರಸ್ಸೆಲ್ಸ್ ದೊಡ್ಡ ನಗರ; ಜನಸಂಖ್ಯೆ 1 ಮಿಲಿಯ. ಸಾಲುಸಾಲಾಗಿ 4-5 ಉಪ್ಪರಿಗೆಯ ಅನೇಕ ಮನೆಗಳು, ಹಳದಿ ಬಣ್ಣದ ಟ್ರಾಮುಗಳು. ಅನೇಕ ಕಾರ್ಖಾನೆಗಳು

ಸುಮಾರು 20 ಮೈಲು ದೂರ ಹೋದ ನಂತರ ಮೆಕೆಲನ್ [Machelen] ಎಂಬ ಪಟ್ಟಣ. ಸಣ್ಣ ದೇಶವಾಗಿ ಹೆಚ್ಚಿನ ಜನಸಂಖ್ಯೆ ಇದ್ದ ಕಾರಣ ಎಲ್ಲೆಲ್ಲೂ ಜಾಗ ಖಾಲಿ ಬಿಡದೆ ಕೃಷಿ, ಬದಿಯಲ್ಲಿ ಒಂದು. ಪಾಟಲ ಮತ್ತು ನೇರಳೆ ಬಣ್ಣದ ಗಿಡಗಳಿದ್ದ ಸುಂದರವಾದ ಕಾಡು. ರೈಲು ನಂತರ ಬೇಗನೇ ಬೆಲ್ಜಿಯಮಿನ ದೊಡ್ಡ ಬಂದರವಾದ ಎಂಟ್‌ವರ್ಪ್ [Antwerp] ನಗರಕ್ಕೆ ಬಂತು. ಹೊಸತಾಗಿ ಕಟ್ಟಿದ ಸಾಲಿನಿಂದ ಕೆಲಸಗಾರರ ಮನೆಗಳು. ಹೊಸ ಕಾರ್ಖಾನೆಗಳು. ನಗರ ದಾಟಿದ ನಂತರ ರ್‍ಯ [Rye] ಬೆಳೆಯುವ ಭೂಮಿಗಳು, ಬೆಳೆ 2ಅಡಿ ಎತ್ತರವಿದ್ದು ಕೊಯ್ಯಲಿಕ್ಕೆ ತಯಾರಾಗಿತ್ತು ಅಪರೂಪದಲ್ಲಿ ಮುಳಿಹಾಕಿದ ಒಂದು ಹಳ್ಳಿಮನೆ ಕೂಡ ಕಾಣಲು ಸಿಕ್ಕಿತು ಆಗ ಘಂಟೆ 7½ ಆದರೂ ಸೂರ್ಯನ ಕಿರಣವು ಚೆನ್ನಾಗಿ ಬೀಳುತಿತ್ತು. ಆಗಲೂ ಗದ್ದೆಯಲ್ಲಿ ರೈತರು ಕೆಲಸ ಮಾಡುತಿದ್ದರು. ಹುಲ್ಲುಗಾವಲುಗಳಲ್ಲಿ ಬೂದಿ ಬಣ್ಣದ ಕುದುರೆಗಳು ಮತ್ತು ಕಪ್ಪು ಬಿಳಿ ವರ್ಣದ ದನಗಳು ಮೇಯುತಿದ್ದವು ಆ ಮೇಲೆ ಈ ಊರಿನಲ್ಲಿ ಮೊದಲಾಗಿ ನಾನು ಕಂಡ ಗಾಳಿ ಯಂತ್ರ [Wind-mill].

ರೈಲು ಘಂಟೆ 8ಕ್ಕೆ ಬೆಲ್ಜಿಯಮ್ ಬಿಟ್ಟು ಹೊಲೆಂಡ್ ದೇಶವನ್ನು ಪ್ರವೇಶಿಸಿತು. ಗಡಿಯಲ್ಲಿ ಎರಡೂ ಕಡೆಗಳಲ್ಲಿ ಪುನಃ ಮೇಲಿನಂತೆಯೇ ಜಡ್ತಿ, ಹೀಗೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪ್ರವೇಶಿಸುವಾಗ ಬಟ್ಟೆಗೆ ನಮ್ಮ ಕೈಯಲ್ಲಿದ್ದ ಪ್ರಯಾಣಿಕರ ಚೆಕ್ಕುಗಳನ್ನು ವಟಾಯಿಸುವ ಬೇಂಕರರು ಗಡಿಯಲ್ಲಿ ಸಿಕ್ಕಿ ನಮಗೆ ಆಯಾಯ ದೇಶದ ಹಣವನ್ನು ಕೊಡುವರು, ಆದರೆ ಊರಿನ ಬೇಂಕುಗಳಲ್ಲಿ ಸಿಕ್ಕುವಷ್ಟು ಹೆಚ್ಚು ಸಿಕ್ಕುವುದಿಲ್ಲ. ಇವರ ಕಮಿಶನ್ ಜಾಸ್ತಿ. ಕೆಲವು ಕಾಲ ನಮ್ಮ ರೈಲು ಹೋದ ನಂತರ ಸುಮಾರು 1000 ಗಜದ ಅಗಲದ ಮೋಎರ್ ಡ್ಯಾಕ್ [Moer Dyk] ಎಂಬ ಕಪ್ಪಿಣದ ದೊಡ್ಡ ಸಂಕವು ಸಿಕ್ಕುತ್ತದೆ. ಈ ಡ್ಯಾಕು ರ್‍ಹೈನ್ [Rhine] ಎಂಬ ಜರ್ಮನಿಯಿಂದ ಬಂದು ಇಲ್ಲಿ ಹರಿಯುವ ಪ್ರಸಿದ್ಧ ನದಿಯ ಒಂದು ಕೈ ಹೊಲೆಂಡ್ ದೇಶದಲ್ಲಿ ಎಲ್ಲಿ ನೋಡಿದರೂ ಇಂಥಾ ನದಿ ಮತ್ತು ಸಮುದ್ರದ ಕೈಗಳೇ, ಅಂದರೆ ಅಲ್ಲಲ್ಲಿ ನೀರು ಅಲ್ಲಲ್ಲಿ ಭೂಮಿ. ಹೊಲೆಂಡಿನ ವಿಸ್ತೀರ್ಣ ಸುಮಾರು 13,000 ಚದರ ಮೈಲುಗಳು. ಜನಸಂಖ್ಯೆ ಬಹಳ ನಿಬಿಡ-ಸುಮಾರು 10ಮಿಲಿಯ. ಆದರೆ ದೇಶದ ಹೆಚ್ಚು ಭಾಗ ನೀರಿನ ಕಾರಣ ಜನಸಂಖ್ಯೆ ಬಹು ನಿಬಿಡ. ಭೂಮಿಯಲ್ಲಿ ಗೋಧಿ, ಸುಮಾರು ಒಂದು ಇಂಚ್ ದೊಡ್ಡದಾದ ಬಿಳೀ ಬಣ್ಣದ ಅವರೆಯ ಕಾಯಿ [beans], ಬೀಟ್ ಸಕ್ಕರೆ ಮತ್ತು ನಾಗರಸೆಯ ಬೀಜದ [linseed] ಬೆಳೆ ಬೆಳೆಯುತ್ತದೆ. ಹೊಲೆಂಡ್ ಗಡಿ ಪ್ರವೇಶಿಸಿ ಸುಮಾರು 25 ಮೈಲು ದೂರ ಹೋದಾಗ ರಾಟರ್‌ಡೇಮ್ ಎಂಬ ನಗರವು ಬಂತು. ಆಗ ಘಂಟೆ 8-30ಕ್ಕೆ ಮಿಕ್ಕಿದರೂ ಕತ್ತಲೆಯಾಗದೇ ಬೆಳಕೇ ಇತ್ತು. ಈ ಪಟ್ಟಣದಲ್ಲಿ ಕಳೆದ ಯುದ್ಧ ಸುರುವಾದ ಕೂಡಲೇ ಒಂದೇ ರಾತ್ರಿ ಹಿಟ್ಲರನ ಸುಮಾರು 1000 ವಿಮಾನಗಳು ಎಡೆಬಿಡದೆ ಬೊಂಬ್ ಹಾಕಿ ಸುಮಾರು 6-7 ಸಾವಿರ ಮನೆಗಳನ್ನು ಧೂಳಿ ಪುಡಿ ಮಾಡಿದ್ದಾಗಿ ನನ್ನೊಟ್ಟಿಗೆ ಪ್ರಯಾಣ ಮಾಡುತ್ತಿದ್ದ ಆ ಊರಿನವರಿಂದ ತಿಳಿಯಿತು. ಒಂದು ಕಟ್ಟೋಣದಲ್ಲಿ 3 ಬಿಡಾರದಂತೆ ಸುಮಾರು 20,000 ಬಿಡಾರಗಳು ಒಂದೇ ರಾತ್ರಿ ನಾಶವಾದುವು. ಇವುಗಳಲ್ಲಿ ಅನೇಕ ಹೊಸತಾಗಿ ಕಟ್ಟಿದ್ದಾರೆಂತ ಹೇಳುವಾಗ ಡಚ್ ಜನರು ಎಷ್ಟು ಹುರುಪಿನ ಜನ ಎಂತ ನಾವು ತಿಳಿಯಬಹುದು. ಎಲ್ಲಿ ನೋಡಿದರೂ ಕೆಲಸ, ಕಾರ್ಖಾನೆ, ವ್ಯಾಪಾರ. ನಮ್ಮ ರೈಲು ಹೋಗುವಾಗ ಅಲ್ಲಲ್ಲಿ ಕಾಲುವೆಗಳು, ಅವುಗಳ ಬದಿ ಮನೆಗಳು, ಒಂದುಕಡೆ ನಗರದ ಬೇಂಡ್ ಆಗುತಿತ್ತು. ಸುತ್ತುಮುತ್ತಲೂ ನಿವಾಸಿಗರ ಗುಂಪು. ಅಲ್ಲಲ್ಲಿ ಗಾಳಿಯಂತ್ರಗಳು. ಸುಮಾರು 9 ಗಂಟೆಗೆ ಸೂರ್ಯ ಅಸ್ತಮಾನವಾಗಿ ಗಂಟೆ 9¾ಗೆ ಕತ್ತಲೆಯಾಗಿ ಹಾರ್ಲೆಮ್ ಎಂಬ ದೊಡ್ಡ ಕೈಗಾರಿಕೆಯ ನಗರವು ಬಂತು. ನಂತರ ಸರಿ ಗಂಟೆ 10ಕ್ಕೆ ಎಮ್‌ಸ್ಟರ್‌ಡೇಮ್ ಬಂತು, ಫ್ರಾನ್ಸ್ ಗಡಿ ಬಿಟ್ಟಮೇಲೆ ರೈಲಲ್ಲಿ ಆಹಾರ ಸಿಕ್ಕದ ಕಾರಣ ನನಗೆ ಚೆನ್ನಾಗಿ ಹಸಿವೆಯಾಗಿದ್ದು ರೈಲ್ವೆ ಸ್ಟೇಶನಿನಲ್ಲಿ ಸ್ವಲ್ಪ ತಿಂಡಿ ತೆಗೆದುಕೊಂಡೆ. ಬ್ರಿಟಿಷ್ ರೈಲ್ವೆ ಸ್ಟೇಶನಿನ ರೆಸ್ಟೋರೆಂಟಿಗೂ ಇಲ್ಲಿಗೂ ಅಜಗಜ. ಮೇಜಿನ ಮೇಲೆ ಬಟ್ಟೆ (table cloth) ಇಲ್ಲ. ಹಾಗೆ ಖಾಲಿ. ಒಂದು ಗ್ಲಾಸ್ ಹಾಲು ಮತ್ತು ಒಂದು ಬ್ರೆಡ್ಡಿಗೆ 60 ಸೆಂಟ್ಸ್. ಅಂದಾಜು 11 ಅಣೆ, ಅಲ್ಲಿಂದ ಒಂದು ಟೇಕ್ಸಿ ಮಾಡಿ ನನ್ನ ಹೋಟೆಲಿಗೆ ಬಂದೆ. 2 ಮೈಲು ದೂರ. ಅದಕ್ಕೆ ಸುಮಾರು 2½ ಗಿಲ್ಡರ್ಸ್ (guilders) ಅಂದರೆ 13ರೂಪಾಯಿ. 1 ಇಂಗ್ಲಿಷ್ ಪೌಂಡಿಗೆ ಸುಮಾರು 11 ಗಿಲ್ಡರ್ ಒಂದು ಗಿಲ್ಡರಿಗೆ 100 ಸೆಂಟ್ಸ್. ನಾನು ಬಂದ ಹೊಟೇಲಿನ ಹೆಸರು ಹೊಟೆಲ್ ಸೆಂಟ್ರಲ್. ಅದರಲ್ಲಿ 300ಕ್ಕಿಂತ ಮಿಕ್ಕಿ ಕೋಣೆಗಳು ನನ್ನ ಪೇರಿಸಿನ ಹೊಟೇಲಿಗಿಂತಲೂ ಚಲೋ ಹೊಟೇಲು. ನನ್ನ ಕೋಣೆಯ ಮೇಜಿನ ಮೇಲೆ ಒಂದು ಬೈಬಲಿನ ಪುಸ್ತಕ ಕೂಡಾ ಇಟ್ಟಿತ್ತು ಇದು ಒಂದ ನಿವಾಸಿಕರು ಓದಿ ಪ್ರಾರ್ಥನೆಮಾಡಲಿಕ್ಕೆ. ಪೇರಿಸಿಗಿಂತಲೂ ಇಲ್ಲಿ ಚಳಿ ಜಾಸ್ತಿ. ರಾತ್ರೆ ಗಂಟೆ 12 ಸಮೀಪಿಸಿದ ಕಾರಣ ಮಲಗಿದ ಮೇಲೆ ಸ್ವಸ್ಥವಾದ ನಿದ್ರೆ ಮರುದಿನದ ತಿರುಗಾಟ ಮುಂದಿನ ಪತ್ರದಲ್ಲಿ.

(ವಿಚಾರವಾಣಿ) ಕೆ. ಆರ್ ರಾ...

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಉರಿ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಾಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮಾರ್ಕೆಟ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಚಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹುಳು ಕಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಕೊರಡ್ಕಲ್ ಶ್ರೀನಿವಾಸರಾವ್

ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ 1 8 0

ನವಭಾರತ ಪುಸ್ತಕ ಭಂಡಾರ, ಉ.ದ.ಕ.

ವಾರದ ಭವಿಷ್ಯ

ತಾರೀಕು 13-12-51 ರಿಂದ — ತಾರೀಕು 19-12-51 ವರೆಗೆ

ಮೇಷ:-ನಿಮ್ಮ ಉದ್ಯಮಕ್ಕೆ ಹಲವು ವಿಧದ ವಿಘ್ನಗಳುಪಸ್ಥಿತವಾದರೂ ಹಿಡಿದ ಕಾರ್ಯವನ್ನು ಬಿಡಲೊಲ್ಲೆನೆಂಬ ನಿಮ್ಮ ಪರಿಸಾಧನೆಯೇ ಗೆಲುವದು. ನಿಯಮಕ್ಕಿಂತ ಸ್ವಲ್ಪ ಅಧಿಕ ವ್ಯಯವಾಗಬಹುದಾದರೂ ಫಲಪ್ರಾಪ್ತಿಯು ನಿರೀಕ್ಷೆಗಿಂತ ಅಧಿಕವಾಗಿ ಲಭಿಸುವುದರಲ್ಲಿ ಸಂದೇಹವಿಲ್ಲ. ಶತ್ರುಜನರನ್ನು ಅನಾಯಾಸದಿಂದ ನಿಗ್ರಹಿಸುವಿರಿ. ಹಣದ ಲೇವಾದೇವಿ ನಿಮಿತ್ತ ಜಗಳಗಳುಂಟಾಗುವವು. ಸಾಂಸಾರಿಕ ತಾಪತ್ರಯಗಳು ಪರಿಹಾರವಾಗುವವು. ಆದರೂ ಸ್ತ್ರೀಯರಿಂದಾಗಿ ಕೆಟ್ಟಮಾತುಗಳನ್ನು ಕೇಳುವಯೋಗವಿದೆ. ಈ ವಾರದಲ್ಲಿ 14- 15- 19- ಮಾತ್ರ ಅನುಕೂಲ ದಿನಗಳು.

ವೃಷಭ:-ದೈವವು ದಿನ ಹೋದಂತೆ ದುರ್ಬಲವಾಗುತ್ತಾ ಬರುತ್ತಿದೆ. ಕಫವಾತ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ಮಕ್ಕಳ ಅನಾರೋಗ್ಯದಿಂದಲೂ ಗೃಹಕೃತ್ಯದ ಅವ್ಯವಸ್ಥೆಯಿಂದಲೂ ನಿಮ್ಮ ಮನಸ್ಸಿಗೆ ನೆಮ್ಮದಿಯಿರದು. ಉತ್ಪತ್ತಿಗಿಂತ ಅತ್ಯಧಿಕವಾಗಿ ವ್ಯಯವಾಗುದರಿಂದ ಸಾಲಮಾಡದೆ ದಿನ ಕಳೆಯಲಾಗದು. ವ್ಯಾಪಾರವು ಪರಿಹಾರಗಳಲ್ಲಿ ಅನಿರೀಕ್ಷಿತ ನಷ್ಟ ಕಷ್ಟಗಳಯೋಗವಿದೆ ಅದರೊಂದು ತೃಪ್ತಿಯೇನೆಂದರೆ, ಲಾಭಸ್ಥಾನದಲ್ಲಿದ್ದ ಶುಭಗುರುಗಳ ಅನುಗ್ರಹವು ಬಲೀಯವಾಗಿರುವುದರಿಂದ ಕಷ್ಟಗಳನ್ನು ಸುಖದಿಂದ ಪಾರುಗಾಣಿಸುವಿರಿ. ತಾ. 13, 16, 17, 18, ಉತ್ತಮವಿದೆ.

ಮಿಥುನ:-ಗಾಳಿಗಿದಿರಾಗಿಟ್ಟ ದೀಪದಂತೆ ನಿಮ್ಮ ಮನಸ್ಸು ಅತೀವ ಚಂಚಲವಾಗಲಿದೆ. ಯಾವ ಉದ್ಯಮವನ್ನು ಮಾಡಲು ನಿಮ್ಮಲ್ಲಿ ಸಾಕಷ್ಟು ಧೈರ್ಯವಿರದು. ಕುಜನರ ಸಹವಾಸಕ್ಕೆ ಸಿಲುಕಿ ಕಷ್ಟ ನಷ್ಟ ಅಪವಾದಗಳನ್ನು ಅನುಭವಿಸುವಿರಿ. ವಿದ್ಯೋದ್ಯೋಗ ಜೀವಿಗಳಿಗೆ ಈ ವಾರದಲ್ಲಿ ಪರಿಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯಿದೆ. ಆತ್ಮೀಯರ ವಿಯೋಗದಿಂದ ದುಃಖಭಾಗಿಗಳಾಗುವಿರಿ. ಹಣದ ಅಡಚಣೆಯೂ ಕೆಲವುಬಾರಿಗೆ ಬಾಧಿಸಲಿದೆ ಆರೋಗ್ಯವು ತೃಪ್ತಿಕರವಿರುವದು. ಮಿತ್ರ ಜನರ ಬೆಂಬಲವು ಉತ್ತಮವಾಗಿರುವದು ತಾ. 14, 15, 19ರಲ್ಲಿ ಬಯಕೆಯು ಫಲಿಸುವುದು

ಕರ್ಕಟ:-ಸಂಸಾರದಲ್ಲಿ ಆಗಾಗ ಸಂಭವಿಸತಕ್ಕ ಚಿಕ್ಕ ಪುಟ್ಟ ಕಲಹ ತಂದೆ ಮಕ್ಕಳೊಳು ಗಂಡಹೆಂಡಿರೊಳು ಮತಭೇದ ಇವನ್ನು ಹೊರತಾಗಿ ನಿಮಗೀವಾರದಲ್ಲಿ ಬೇರೆ ಯಾವ ತರದ ದೋಷಲೇಶವೂ ಕಾಣಿಸದು, ನಿಮ್ಮ ಪ್ರತಿಯೊಂದು ಸಂಕಲ್ಪವೂ ಅನಾಯಾಸದಿಂದ ಅಚಿರದಲ್ಲಿ ಫಲವನ್ನೀಯಲಿದೆ ಸಂಪತ್ತಾಗವು ಅತ್ಯುಚ್ಛಸ್ಥಿತಿಗೆ ಬರಲಿದೆ ಬಂಧು ಮಿತ್ರರೂ ಸೇವಕ ವರ್ಗದವರೂ ಸದಾ ನಿಮ್ಮ ಸಹಾಯವನ್ನೇ ಯಾಚಿಸುತ್ತಿರುವರು. ಜನತೆಯಲ್ಲಿ ಸ್ಥಾನಮಾನ ಗೌರವಾದರಗಳನ್ನು ಪಡೆವಿರಿ. ತಾ. 13. 16 17 18. ರಲ್ಲಿ ಕಾರ್ಯ ಲಾಭವಿಜಯಗಳನ್ನು ಹೊಂದುವಿರಿ.

ಸಿಂಹ—ಕಳೆದ ದಿನಗಳಷ್ಟು ದುಃಖದಾಯಿಯಾಗದೀವಾರವು ಪರಿಶ್ರಮಕ್ಕೆ ತಕ್ಕುದಲ್ಲವಾದರೂ ಫಲಪ್ರಾಪ್ತಿಯು ಸಾಕಷ್ಟು ತೃಪ್ತಿಕರವಿರುವದು. ಮನೆಯಲ್ಲಿ ಆಗತಕ್ಕ ಆಗುಹೋಗುಗಳ ಸಲುವಾಗಿ ಹೆರವರ ಸಹಾಯವನ್ನು ಯಾಚಿಸುವ ಸಂದರ್ಭವೊದಗದು, ಆದರೂ ಮಹಾತ್ಮರ ವಿರೋಧಕ್ಕೆ ಸಿಲುಕುವಿರಿ. ಆಕಸ್ಮಿಕ ಪ್ರವಾಸ ಪ್ರಾಪ್ತವಾಗಲಿದೆ. ಆರೋಗ್ಯಕ್ಕೆ ಕಫದೋಷದ ಬಾಧೆಯಿದೆ. ಪೆಟ್ಟಿಗೆ ಬರಿಗೈಯಲ್ಲಿರಬೇಕಾದ ಘಟನೆಗಳೇ ಸಂಭವಿಸುವವು. ತಾ. 13, 14, 15,ರಲ್ಲಿ ಮನಸ್ಸಿಗೆ ನೆಮ್ಮದಿ, ಕಾರ್ಯದಲ್ಲಿ ವಿಜಯಗಳು ಲಭಿಸುವವು.

ಕನ್ಯಾ—ಧನಸುಖಭಾಗ್ಯಕರು ನಿಮಗನುಕೂಲರಾಗಿರುವರು. ಆದಕಾರಣ ನಿಮಗೀವಾರದಲ್ಲಿ ಹಣದ ತಾಪತ್ರಯವೊದಗದು. ಆತ್ಮಸುಖಕ್ಕೆ ಯಾವ ಕೊರತೆಯೂ ಉಂಟಾಗದು. ಆದರೆ ನಿಮ್ಮವರೇ ನಿಮಗೆ ಶತ್ರುಗಳಾಗಿ ಪರಿಣಮಿಸುವರು. ನಿಮ್ಮಲ್ಲೇ ಇದ್ದು ನಿಮ್ಮಿಂದಲೇ ಉಪಜೀವಿಸಿಕೊಂಡಿರತಕ್ಕವರಿಂದು ನಿಮಗೆ ಪ್ರತಿಕೂಲರಾಗಿ ನಿಲ್ಲುವವರಿರುವರು, ಜಾಗ್ರತೆ, ಉದ್ಯೋಗ ವ್ಯಾಪಾರಾದಿಗಳಲ್ಲಿ ಫಲಪ್ರಾಪ್ತಿಯು ಚೆನ್ನಾಗಿರುವದು. ಗೃಹಕೃತ್ಯದ ಖರ್ಚುಗಳು ದಿನದಿಂದ ದಿನಕ್ಕೆ ಬೆಳೆಯಲಿವೆ. ಅಧಿಕಾರಿ ಜನರ ವಕ್ರದೃಷ್ಟಿಯು ನಿಮ್ಮಮೇಲೆ ಬೀಳಲಿದೆ ವಾರದ ಅಧ್ಯಂತ ದಿನಗಳ ಶ್ರೇಯಸ್ಕರವಿಲ್ಲವು.

ತುಲಾ—ನಿಮ್ಮ ದುಡಿಮೆಯು ಹೆಚ್ಚಿದಂತೆ ಖರ್ಚುಗಳೂ ಹೆಚ್ಚುತ್ತಿರುವವು, ವೈದ್ಯ ವ್ಯಾಪಾರ ನೌಕರಿ ಮೊದಲಾದ ಭಾಗಗಳಲ್ಲಿ ನಿರೀಕ್ಷೆಗಿಂತ ಹೆಚ್ಚಾದ ಫಲ ಲಭಿಸುವದು. ಆದರೆ ವ್ಯಯಸ್ಥಾನಗತರಾದ ಶನ್ಯಂಗಾರಕರು. ಯಾವಾಗ ಅನರ್ಥಗಳನ್ನು ತಂದೊಡ್ಡಲಿರುವರೆಂದೂ ಹೇಳಬಂದಿರುವದಿಲ್ಲ ಹೆಂಡತಿಯು ಮತ್ತು ಮಕ್ಕಳ ಆರೋಗ್ಯದ ಸಲುವಾಗಿ ಹೆಚ್ಚಿನ ವ್ಯಯವಾದೀತು ವಿನಾಕಾರಣ ಜನರೊಡನೆ ಜಗಳವಾಗುವದು. ಪಿತ್ತದೋಷದಿಂದಾಗಿ ನಿದ್ರಾಭಾವ ದುಃಸ್ವಪ್ನಗಳು ಕಾಣಿಸಲಿವೆ. ವಾರಾಂತ್ಯದ 4ದಿನಗಳು ಮನಸ್ಸಿಗೆ ನೆಮ್ಮದಿ ಸುಖವನ್ನೀಯಲಿವೆ.

ವೃಶ್ಚಿಕ—ಹಣ್ಣು ಹಿಡಿದರೂ ಹೊನ್ನಾದೀತೆಂಬಂತೆ ನೀವಾವ ಕಾರ್ಯಕ್ಕೆ ಕೈಯಿಕ್ಕಿದರೂ ಆ ಕಾರ್ಯವು ಯಶಸ್ವಿಯಾಗಿ ಆಯಿತೆಂದೇ ಅರ್ಥವು. ಪರಿಜನ ಪುರಜನರ ಬೆಂಬಲವು ಅತ್ಯುತ್ತಮವಾಗಿರುವದು. ಈ ಕಾಲದಲ್ಲಿ ಮಧುವನ್ನು ಹೀರಲು ತುಂಬಿಗಳು ಹೂಗೊಂಚಲವನ್ನು ಮುತ್ತುವಂತೆ ಸಕಲರೂ ನಿಮ್ಮ ಹಿಂಬಾಲಿಸುವರು. ಎಂತಹ ಪ್ರಬಲ ಶತ್ರುವೂ ಕೂಡ ನಿಮ್ಮ ಕಾರ್ಯ, ಶಕ್ತಿ ಧೈರ್ಯ ಸಾಹಸಗಳನ್ನು ನೋಡಿ ಮೂಗಿನ ಮೇಲೆ ಬೆರಳಿಡುವನು, ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಗಣ್ಯಸ್ಥಾನವನ್ನು ಪಡೆವಿರಿ. ಪಿತ್ತದೋಷವು ಕೆಲವೊಮ್ಮೆ ಬಾಧಿಸಲಿದೆ. ತಾ. 13, 19 ಇವೇ ವಾರದಲ್ಲಿ ಅತ್ಯುತ್ತಮದಿನಗಳು.

ಧನು—ನಿಮ್ಮ ಗ್ರಹಚಾರವಿನ್ನೂ ಮುಗಿದಂತಿಲ್ಲವು. ದಿನಹೋದಂತೆ ತಾಪತ್ರಯಗಳ ಹೊರೆಗಳೇ ಮೇಲೆಬಿದ್ದು ಬೀಳುತ್ತಿವೆ. ದೇಹಾರೋಗ್ಯವಂತೂ ಸರಿಯಿದ್ದಷ್ಟೇ ಆರ್ಥಿಕ ಮುಗ್ಗಟ್ಟು ಅಧಿಕವಾಗಿ ಮುಯ್ಯಾದುದರಿಂದ ದಿನಗಳೆಯಲು ಕಷ್ಟವಾಗುವದು. ಬಂಧುಜನರಲ್ಲಿ ವಿರೋಧ ಗುರುಹಿರಿಯರೊಡನೆ ಮನಸ್ತಾಪ ಸಾಂಸಾರಿಕ ಚಿದ್ರಗಳ ಚಿಂತೆಯಿಂದಾಗಿ ನಿಮ್ಮ ತನುಮನಗಳಿಗೆ ಯಾವಾಗಲೂ ಸುಖಶಾಂತಿಯಿಲ್ಲವೆಂದರೆ ತಪ್ಪಾಗದು. ನೌಕರಿ ಜನರಿಗೂ ಶ್ರಮಜೀವಿಗಳಿಗೂ ದಿನಯಾಪನೆಯು ಕಷ್ಟವಾಗಲಿದೆ. ಆದರೆ ವ್ಯಾಪಾರಿಗಳಿಗೆ ಪ್ರಯತ್ನಕ್ಕೆ ತಕ್ಕ ಫಲ ಲಭಿಸುವದು, ವಾರಾದಿಯ ೩ ದಿನಗಳು ಇತರ ದಿನಗಳಿಗಿಂತ ವಾಸಿ.

ಮಕರ:-ಹಿತೈಷಿಯರ ವಿರೋಧ ವಿಘ್ನಗಳಿಂದಾಗಿ ನೀವಾವ ಕಾರ್ಯದಲ್ಲೂ ವಿಜಯಗಳಿಸಲಾರಿರಿ, ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಲ್ಲುವವು. ಮತ್ತು ಕೆಲವುಗಳು ವಿಶೇಷ ನಷ್ಟಕ್ಕೆ ಮೂಲವಾಗಲಿವೆ. ಮಾತನಾಡಿದವರೊಡನೆ ಜಗಳವಾಗುವದು. ಸ್ಥಾನಚಲನೆ ಪ್ರವಾಸ ಬಂಧುಜನ ವಿರೋಧ ಸಾಂಸಾರಿಕ ತಾಪತ್ರಯ ಇವುಗಳಿಂದ ಸಂಕಟಪಡಬೇಕಾದ ನಿಮಗೆ ಆರ್ಥಿಕ ಬಿಕ್ಕಟ್ಟು ಮತ್ತಷ್ಟು ಕ್ಲೇಶದಾಯಕವಾಗಲಿದೆ, ದೇಹದಲ್ಲಿ ಸೆಕೆ ಹೆಚ್ಚುವದು. ಉತ್ಸಾಹಶಕ್ತಿ ಮಾಯವಾಗುವದು. ಆದರಲ್ಲೂ ವಾರದ ಅಧ್ಯಂತ ದಿನಗಳು ಅತೀವದುಃಖದಾಯಿಗಳಾಗಿ ಪರಿಣಮಿಸಲಿವೆ.

ಕುಂಭ:-ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ, ಎಂಬ ಹಿರಿಯರ ವಚನದಂತೆ ನಿಮಗೀಕಾಲದಲ್ಲಿ ಪ್ರಬಲ ದೇವತಾನುಗ್ರಹವಿರುವುದರಿಂದ ಅನಿಷ್ಟದಾಯಿಯಾದ ಅಷ್ಟಮಸ್ಥಾನದಲ್ಲಿ ಅರಿಷ್ಟಕಾರಿಗಳಾದ ಶನ್ಯಂಗಾರಕರು ಕುಳಿತಿದ್ದರೂ ಏನೂ ಬಾಧಿಸುವಂತಿಲ್ಲವು. ನಿಮ್ಮ ಧನಭಾಗ್ಯಪತಿಗಳು ಉತ್ತಮರಿರುವುದರಿಂದಲೂ ನಿಮ್ಮ ಕಾರ್ಯವು ಎಂದೂ ವಿಫಲವಾಗದಿದ್ದರಿಂದಲೂ ಸರ್ವತ್ರ ಲಾಭ ವಿಜಯಗಳನ್ನು ಪಡೆವಿರಿ. ಧನಬಲದಿಂದಾಗಿ ನಾವೆಂತಹ ಸಂಕಟವನ್ನಾದರೂ ತೃಣವಾಗಿ ಗಣಿಸುವಿರಿ. ವಾರಾಂತ್ಯದ 4 ದಿನಗಳು ನಿಮ್ಮ ಕೀರ್ತಿಗೆ ಕಾರಣಗಳಾಗಲಿವೆ.

ಮೀನ:-ಆಳಾಗಿ ದುಡಿದರೆ ಅರಸನಾಗಿ ಉಣಬಹುದೆಂಬಂತೆ ಕಷ್ಟಪಟ್ಟು ದುಡಿದರೆ ನಿಮ್ಮ ಸ್ವಾರ್ಥವು ನೆರವೇರಲಿದ್ದೆಯಿಲ್ಲ. ಆದರೂ ದಿನಾಂತ್ಯದಲ್ಲಿ ಬರಿಗೈಯಿಂದಿರಬೇಕಾದೀತು. ವಿದ್ಯಾರ್ಥಿಗಳಿಗೂ ವಿದ್ಯೋದ್ಯೋಗ ಜೀವಿಗಳಿಗೂ ಈ ವಾರವು ಸುಖಕರವಲ್ಲವು. ಹೆಂಡತಿಯ ಆರೋಗ್ಯಕ್ಕೆ ವಾತಪಿತ್ತ ದೋಷದಿಂದ ಹಾನಿ ಸಂಭವಿಸಲಿರುವುದು ವಿನಾಕಾರಣ ವಿಜಾತೀಯ ಜನರೊಡನೆ ಕಲಹವಾದೀತು. ಹಿಂದುಮುಂದಿನ ಯೋಚನೆಯಿಲ್ಲದೆ. ದುಡುಕಿ ಕೆಲವೊಮ್ಮೆ ವ್ಯರ್ಥ ನಷ್ಟಕ್ಕೆ ಗುರಿಯಾಗಲಿರುವಿರಿ ಮಿತ್ರಜನರ ಬೆಂಬಲಯುತರಾದ ನಿ ತಾ 13 19 ಈ ಎರಡು ದಿನಗಳು ಸುಖವನ್ನೀಯಲಿವೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಸ್ವೀಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—
ಹಾವಪ್ಪ ಸಿದ್ಧಲಿಂಗಪ್ಪ ಭಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಕ್ರಸ್ಸ್ ಆರ್ ಎಲ್ ಕಮಲಾಪೂರ, ಕಿರಿಸ್ತ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

೩೧ನೆ ವರ್ಷ

20—12—1951

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ಕೃಷಿಮಂತ್ರಿ ಶ್ರೀ.ಎ.ಬಿ ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ.ಕ.

ವಾರ್ಷಿಕ ಚಂದಾ ರೂ 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧
ವಾರ ೧೫

NAVAYUGA WEEKLY Post Box No. 22 **UDIPI.**

Vol 31
No. 15

ಸ್ವಾತಂತ್ರ್ಯವೆಂದರೆ ಸರ್ವ ವಸ್ತುಗಳ ಸುಗ್ಗಿಯೆ?

‡ ಶ್ರಮವಿಲ್ಲದೆ ಸುಖ ಪ್ರಾಪ್ತಿಯಾದೀತೆ?
‡ ಆಹಾರ ಕೊರತೆಯ ನಿಜಸ್ಥಿತಿಯೇನು?

ಆಹಾರೋತ್ಪತ್ತಿಯ ಬಗೆಗೆ ಹಿಂದಿನ ಬರೆಹದಲ್ಲಿ ಕಾಂಗ್ರೆಸ್ ಸರಕಾರವು ಕೈಕೊಂಡು ನೆರವೇರಿಸುತ್ತಿರುವ ಮಹಾಕಾರ್ಯದ ಪರಿಚಯವನ್ನು ಮಾಡಲಾಯಿತು. ಈ ಕಾರ್ಯಕ್ರಮಗಳಿಂದ ೧೯೪೮-೪೯ರಲ್ಲಿ ಸರಕಾರಕ್ಕೆ ೫೮ ಕೋಟಿ ರುಪಾಯಿಗಳ ವೆಚ್ಚ ತಗಲಿದ್ದರಿಂದ ದೇಶದ ಅನ್ನಧಾನ್ಯಗಳ ಹುಟ್ಟುವಳಿಗೆ ಒಟ್ಟು ೩೦ ಲಕ್ಷ ೪೪ ಸಾವಿರ ಟನ್ನುಗಳು ದೊರೆತವು. ಇದೇನೂ ಸಾಮಾನ್ಯವಾದ ಗಳಿಕೆಯಲ್ಲ. ಅತ್ಯಂತ ವಿಷಮ ಪರಿಸ್ಥಿತಿಯಲ್ಲಿಯೂ ಇಷ್ಟು ಹೆಚ್ಚು ಧಾನ್ಯವನ್ನು ಬೆಳೆಸಿ ಒದಗಿಸಿದ್ದು ನಿಜವಾಗಿಯೂ ಅಭಿನಂದನೀಯವಾಗಿದೆ. ಜನತೆಯ ಸಹಕಾರವು ಇದಕ್ಕೆ ಅಧಿಕವಾಗಿ ಲಭಿಸಿದ್ದರೆ ಇನ್ನೂ ವಿಶೇಷ ಉತ್ಪತ್ತಿಯಾಗಬಹುದಿತ್ತು. ಸರಕಾರದವರು ಸಾಗಿಸಿದ ಕೃಷಿ ಪ್ರಯತ್ನಗಳು ಇನ್ನಷ್ಟು ಉತ್ಸಾಹದಿಂದ ನಡೆಯುವುದರಲ್ಲಿ ಸಂದೇಹವಿಲ್ಲ. ಧಾನ್ಯ ಬೀಜ, ರಸಾಯನಿಕ ಗೊಬ್ಬರ, ಟ್ರಾಕ್ಟರುಗಳ ಉಪಯೋಗ, ನೀರಾವರಿಯ ಸಹಾಯ ಕೃಷಿಗಾಗಿ ಸಾಲ ಮುಂತಾದ ಹಲವು ಬಗೆಯ ಅನುಕೂಲಗಳನ್ನು ಒದಗಿಸಿದ್ದಲ್ಲದೆ ತಂತವನ್ನು ಹೊಲಗದ್ದೆಗಳಲ್ಲಿ ಅತಿಶಯವಾದ ಶ್ರೇಷ್ಠ ಕೃಷಿಯಿಂದ ಎಕರೆಯ ಪ್ರಮಾಣದಲ್ಲಿ ಹೆಚ್ಚು ಧಾನ್ಯ ಬೆಳೆಸಿದ ಒಕ್ಕಲಿಗರಿಗೆ ಪ್ರಶಸ್ತಿ, ಬಹುಮಾನ ಧನಗಳನ್ನು ಕೊಟ್ಟು ತುಂಬ ಪ್ರೋತ್ಸಾಹಿಸಿದೆ.

ಮತದಾರರು ಸತ್ಯಾಸತ್ಯತೆಯನ್ನು ಕಂಡುಹಿಡಿಯಬೇಕು. ಅನ್ನಧಾನ್ಯಗಳ ಸಮಸ್ಯೆಯನ್ನು ಕಾಂಗ್ರೆಸ್ ಸರಕಾರಗಳು ನಿರ್ಲಕ್ಷಿಸಿ ದೇಶವನ್ನು ಆಪತ್ತಿಗೆ ಗುರಿಮಾಡಿದ್ದಾರೆಂದು ಆಡುವ ಟೀಕೆಯು ಬರೀ ಟೊಳ್ಳು. ವಸ್ತುಸ್ಥಿತಿಯ ವಿವೇಚನವನ್ನು ತಿಳಿದವರು ಇಂಥ ಪೊಳ್ಳು ಪ್ರಚಾರವನ್ನು ಮಾಡಲಾರರು. ಆಹಾರದ ವಿಷಯದಲ್ಲಿ ಕಾಂಗ್ರೆಸ್ ಸರಕಾರದವರು ನಾಚಿಕೆಯಿಂದ ತಲೆತಗ್ಗಿಸುವ ಯಾವ ಕೆಲಸವನ್ನೂ ಮಾಡಿಲ್ಲ. ಯಾವ ಪಕ್ಷದವರು ಅಧಿಕಾರಾರೂಢರಾಗಿದ್ದರೂ ಇದಕ್ಕಿಂತ ಹೆಚ್ಚಿನ ಗೆಲವನ್ನು ಪಡೆಯುತ್ತಿರಲಿಲ್ಲ.

ಸರಕಾರವು ಇಷ್ಟೊಂದು ಶ್ಲಾಘನೀಯವಾದ ಕಾರ್ಯವನ್ನು ಮಾಡಿದ್ದರೂ ಇನ್ನೂ ಆಹಾರ ಸಮಸ್ಯೆಯು ಪೂರ್ಣ ಬಗೆಹರಿದಿಲ್ಲ. ಮಾಡತಕ್ಕ ಕಾರ್ಯವು ವಿಪುಲವಾಗಿದೆ. ಇದಕ್ಕಾಗಿ ಕಾಂಗ್ರೆಸ್ಸಿಗೆ ಜನತೆಯ ಬೆಂಬಲದ ಅಗತ್ಯವಿದೆ. ಆದರೆ ಸರಕಾರವು ಆಹಾರದ ಆಡಳಿತದಲ್ಲಿ ಹುಡುಗಾಟ ನಡೆಸಿದೆಯೆಂದಾಗಲಿ, ಕೊನೆಯಿಲ್ಲದ ಹರ್ಷಿಸುತ್ತಿದೆಯೆಂದಾಗಲಿ ಯಾರೂ ಭಾವಿಸಬಾರದು. ಇದ್ದ ಪರಿಸ್ಥಿತಿಯಲ್ಲಿ ಆದಷ್ಟು ಹೆಚ್ಚು ಪ್ರಯತ್ನಗಳಿಂದ ಸಾಧ್ಯವಾದ ಅನುಕೂಲಗಳನ್ನೊದಗಿಸಿ ತೃಪ್ತಿಕರವಾಗಿ ಈ ಸಮಸ್ಯೆಯನ್ನು ಬಿಡಿಸಲು ತಕ್ಕ ಯೋಜನೆಗಳನ್ನೂ ಮಾಡಿದೆ.

ಬ್ರಿಟಿಶ ಆಡಳಿತದ ಕಾಲದಲ್ಲಿಯೇ ಸುಮಾರು ೧೫ ಲಕ್ಷ ಟನ್ನುಗಳ ಆಹಾರ ಕೊರತೆಯಿದ್ದ ಭಾರತಕ್ಕೆ ವಿಭಜನೆಯ ನಂತರ ಇನ್ನಷ್ಟು ಕೊರತೆ ಅಧಿಕವಾಗಿದ್ದನ್ನು ಈ ಮುಂಚೆಯೇ ಹೇಳಲಾಗಿದೆ. ಸಾಲದುದಕ್ಕೆ ಬರುಗಾಳಿ, ನೆರೆ ಹಾವಳಿ, ಅತಿವೃಷ್ಟಿ, ಅನಾವೃಷ್ಟಿ, ಭೂಕಂಪಗಳ ಪೀಡಾ ಪರಂಪರೆ, ಅದಲ್ಲದೆ ಪ್ರತಿ ವರ್ಷವೂ ೪೦-೫೦ ಲಕ್ಷದಷ್ಟು ಬೆಳೆಯುವ ಜನಸಂಖ್ಯೆ. ಆದರೆ ಆಹಾರ ಧಾನ್ಯಗಳ ಹುಟ್ಟುವಳಿ ಮಾತ್ರ ಅದೇ ಪ್ರಮಾಣದಲ್ಲಿ ಹೆಚ್ಚಾಗಲಿಲ್ಲ. ಆದುದರಿಂದ ಕೊರತೆಯ ಕ್ರೂರ ಹಿಂಸೆಯನ್ನು ಅನುಭವಿಸಲೇಬೇಕಾಯಿತು.

ಮುಖ್ಯವಾದ ಮಾತೆಂದರೆ ನಮ್ಮ ಜನರಿಗೆ ಸ್ವಾತಂತ್ರ್ಯದ ಅರ್ಥವೇ ಆಗಲಿಲ್ಲ. ಸ್ವಾತಂತ್ರ್ಯವೆಂದರೆ ಸರ್ವ ವಸ್ತುಗಳ ಸುಗ್ಗಿ ಎಂದು ಜನತೆ ಭಾವಿಸಿದ್ದಂತೆ ತೋರುತ್ತದೆ. ಸ್ವಾತಂತ್ರ್ಯದ ಸಿದ್ಧಿಯಾದ ಮೇಲೆ ಶ್ರಮದ ಅಗತ್ಯವಿಲ್ಲೆಂದು ತಿಳಿದಂತೆ ಕಾಣುತ್ತದೆ. ದೇಶಕ್ಕೆ ಸ್ವಾತಂತ್ರ್ಯವಿರಲಿ ಇಲ್ಲದಿರಲಿ ಶ್ರಮವಿಲ್ಲದೆ ಸುಖಪ್ರಾಪ್ತಿ ಹೇಗಾದೀತು? ದುಡಿಮೆ ಇಲ್ಲದೆ ಧನಧಾನ್ಯ ಸಮೃದ್ಧಿ ಹೇಗೆ ಲಭಿಸೀತು? ಒಂದು ಕಡೆ ಜನತೆಯ ಸಹಜವಾದ ಸೋಮಾರಿತನ ಇನ್ನೊಂದು ಕಡೆ ಬುದ್ಧಿ ಹೇಳಿ ಎಚ್ಚರಿಸುವ ಕೆಲಸಗಾರರ ಅಲಕ್ಷದಿಂದಾಗಿ ಹುಟ್ಟುವಳಿಯು ಹಿಮ್ಮೆಟ್ಟಿತು. ಕೊರತೆ

(೧೧ನೇ ಪುಟ ನೋಡಿರಿ.)

ಎತ್ತುಗಳು ಮಾಡುವುವು ನಿಸ್ವಾರ್ಥ ಸೇವೆ-
ಕಾಂಗ್ರೆಸ್ ಹೂಡಿರುವ ತತ್ವ ಜನತಾ ಸೇವೆ

ದೇಶದ ಹಿತಸಮೃದ್ಧಿಗೆ
ಜನತೆಯ ಮತ ಕಾಂಗ್ರೆಸ್ಸಿಗೆ.

ಉಡುಪಿಯ ಮತದಾರರ ನಿರ್ಣಯ-
ತಮಗಿರುವ ಎರಡು ಓಟುಗಳನ್ನು
ಕೊಡಬೇಕು ಈ ಕೆಳಗಿನವರಿಗೆ—

ಪಾರ್ಲಿಮೆಂಟ್ ಸಭೆಗೆ:
ಯು. ಶ್ರೀನಿವಾಸ ಮಲ್ಯ.

ಮದ್ರಾಸ್ ಎಸೆಂಬ್ಲಿಗೆ:
ಟಿ. ಅನಂತ ಪೈ

ಕಾಂಗ್ರೆಸ್ ಚುನಾವಣಾ ಚಿಹ್ನೆ—



ಈ ನೊಗ ಕಟ್ಟಿದ ಜೋಡೆತ್ತುಗಳು.

ಹೆಗ್ಗಣವಿದೆ ಎಂದು ಮನೆ ಸುಡುವ ಹವ್ಯಾಸ ಬೇಡ.

ಮತದಾರರು ಇಲೆಕ್ಷನ್ 'ಸ್ಟಂಟ'ಗೆ ಮರುಳಾಗದಿರಲಿ!

ಕಾಂಗ್ರೆಸಿಗೆ ಜಯ:- ಪತ್ರಿಕೆಗಳ ಅಭಿಪ್ರಾಯ.

೧

ಚುನಾವಣೆಯ ಕಾಲಕ್ಕೆ ಯಾವ ಯಾವ ಪಕ್ಷಗಳಲ್ಲಿ ಮೈತ್ರಿಯಾಗುವದೋ ನಿಯಮವಿಲ್ಲದಂತಾಗಿದೆ. ಅದರಲ್ಲಿಯೂ ನಾಗರಿಕತ್ವ ಭಾವನೆ ಆಳವಾಗಿ ಬೇರೂರದ ಭಾರತದಲ್ಲಿ ಪಕ್ಷನಿಷ್ಠೆ ತತ್ವನಿಷ್ಠೆ ಧ್ಯೇಯನಿಷ್ಠೆ ಮೊದಲಾದವುಗಳಿಗೆ ಹೆಚ್ಚಿನ ಮನ್ನಣೆ ಕೊಡಲಾಗುತ್ತಿರುವದಿಲ್ಲವಾದ್ದರಿಂದ ಪರಸ್ಪರ ತೀರ ವಿರುದ್ಧ ಧ್ಯೇಯ ಧೋರಣೆಗಳನ್ನಿಟ್ಟುಕೊಂಡ ಪಕ್ಷಗಳಲ್ಲಿಯೂ ಮೈತ್ರಿಯಾಗಹತ್ತಿರುವದು. ಚುನಾವಣೆಯ ಕಾಲಕ್ಕೆ ಹೊಸ ಹೊಸ ಪಕ್ಷಗಳೂ ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವದು ಕಂಡುಬಂದಿದೆ. ಚುನಾವಣೆಯಲ್ಲಿ ವಿಜಯ ಸಂಪಾದಿಸಬೇಕೆಂಬ ಒಂದೇ ಒಂದು ಸ್ವಾರ್ಥದೃಷ್ಟಿ ಈ ಪಕ್ಷಗಳಿಗಿರುವದಲ್ಲದೆ, ರಾಷ್ಟ್ರಹಿತದೃಷ್ಟಿ ಸ್ವಲ್ಪವೂ ಇರುವದಿಲ್ಲೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ರಾಷ್ಟ್ರ ಹಿತಸಾಧಿಸುವ ಉದಾತ್ತ ವಿಚಾರ ಇವರಲ್ಲಿ ಇದ್ದುದಾದರೆ ಚುನಾವಣೆಗಿಂತ ಮೊದಲು ಪಕ್ಷ ಕಟ್ಟಿಕೊಂಡು ರಾಷ್ಟ್ರಹಿತಕಾರ್ಯದಲ್ಲಿ ನಿರತರಾಗುತ್ತಿದ್ದರು. ಹಲವಾರು ವರ್ಷಗಳಿಂದ ಇದ್ದ ಸಮಾಜವಾದಿ, ಪುರೋಗಾಮಿ, ದಲಿತ ವರ್ಗ ಮೊದಲಾದ ಪಕ್ಷಗಳೂ ಈ ವರೆಗೆ ಸಾಧಿಸಿದ ರಾಷ್ಟ್ರಹಿತವು ಜನತೆಯ ಮುಂದೆ ಇದೆ. ಕೇವಲ ಶಾಬ್ದಿಕ ದಂಭಾಚಾರದ ಮಾತುಗಳನ್ನಲ್ಲದೆ ಕೃತಿಯಲ್ಲಿ ಈ ಪಕ್ಷಗಳು ಏನನ್ನೂ ಸಾಧಿಸಿಲ್ಲೆಂದು ನಿರ್ವಿವಾದವಾಗಿ ಹೇಳಬಹುದು. ಸಮಾಜವಾದಿ ಪಕ್ಷವಾದರೂ ಗುಡ್ಡದಂಥ ಮಾತುಗಳನ್ನಾಡುತ್ತಿದೆ; ಆದರೆ ಕೃತಿಯಲ್ಲಿ ಮಾತ್ರ ಯಾವ ಪುರುಷಾರ್ಥವನ್ನೂ ಸಾಧಿಸಿಲ್ಲ. ಕಾಂಗ್ರೆಸ್ಸನ್ನು ಬಲವಾಗಿ ಟೀಕಿಸುವ ಶ್ರೇಯಸ್ಸನ್ನು ಮಾತ್ರ ಪಡೆದಿದೆ. ಅಂಬೇಡಕರ ಪಕ್ಷವಾದರೂ ದಲಿತ ವರ್ಗದವರ ಉದ್ಧಾರಕ್ಕೆಂದು ಟೊಂಕ ಕಟ್ಟಿದೆ. ಆದರೆ ಆ ಬಗೆಯ ಹಿತಸಾಧನೆಯ ಅವಕಾಶ ಅದಕ್ಕೆ ಬೇಕಾದಷ್ಟು ಸಿಕ್ಕಿದ್ದರೂ ಅದರಲ್ಲಿ ಯಶಸ್ಸನ್ನು ಸಾಧಿಸದೆ ಡಾ. ಅಂಬೇಡಕರರು ಈಗ ಸರಕಾರದಿಂದ ಹೊರಗೆ ಬಂದು ಸರಕಾರವನ್ನೂ ಕಾಂಗ್ರೆಸ್ ಪಕ್ಷವನ್ನೂ ಮನಸಾರೆ ಟೀಕಿಸಹತ್ತಿರುವರು.

ಡಾ. ಅಂಬೇಡಕರರು ಕಳೆದ ನಾಲ್ಕು ವರುಷಗಳಿಂದ ಭಾರತ ಸರಕಾರದಲ್ಲಿ ಮಹತ್ವದ ಸ್ಥಾನದಲ್ಲಿ ಇದ್ದರು. ಸರಕಾರಿ ಅಧಿಕಾರಿಗಳಲ್ಲಿ ಇದ್ದ ಲಂಚಗುಳಿತನ ಮುಂತಾದ್ದನ್ನು ಹೋಗಲಾಡಿಸಲು ಪ್ರಯತ್ನಿಸುವ ಅವಕಾಶ ಅವರಿಗೆ ಬೇಕಾದಷ್ಟು ಇದ್ದಿತು. ಈ ಸದವಕಾಶದ ಲಾಭವನ್ನು ಆಗ ಮಾಡಿಕೊಳ್ಳದೆ ಈಗ ಕಾಂಗ್ರೆಸ್ಸನ್ನೂ ಸರಕಾರವನ್ನೂ ಟೀಕಿಸಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರನ್ನು ಆರಿಸಿ ತರಬೇಡಿರಿ ಎಂದು ಹೇಳುವದರಲ್ಲಿ ಪುರುಷಾರ್ಥವೇನಿದೆ? ಕಾಂಗ್ರೆಸ್ಸಿನ ಧೋರಣೆ ಮೊದಲಿನಿಂದಲೂ ಸುಸ್ಪಷ್ಟವಿದೆ. ಕಾಂಗ್ರೆಸ್ಸು ಬಂಡವಲುದಾರರ ಪಕ್ಷಪಾತಿಯೆಂಬ ಆರೋಪವೆಂದಿನಿಂದಲೂ ಇದೆ. ಇದೆಲ್ಲ ಗೊತ್ತಿದ್ದ ಡಾ. ಅಂಬೇಡಕರರು ನಾಲ್ಕು ವರ್ಷ ಕೇಂದ್ರ ಮಂತ್ರಿಮಂಡಲದಲ್ಲಿ ಅದೆಂತು ಅಧಿಕಾರ ಸ್ಥಾನದಲ್ಲಿ ಉಳಿದರು? ಇದೆಲ್ಲ ಕೇವಲ ಸ್ವಾರ್ಥವಲ್ಲದೆ ಮತ್ತೇನು? ಚುನಾವಣೆಯಲ್ಲಿ ದುರ್ಮೈತ್ರಿಯನ್ನು ಮಾಡಿಕೊಂಡು ಆರಿಸಿ ಬಂದು ಮತ್ತೆ ಕೇವಲ ಸ್ವಾರ್ಥಸಾಧನೆಗಾಗಿ ಅಧಿಕಾರ ವಹಿಸಬೇಕೆಂಬ ಮನೀಷೆ ಅವರಿಗಿದ್ದಂತಿದೆ. ಆದರೆ ಸುಜ್ಞ ಮತದಾರರಿಗೆ ಯಾರಿಂದ ತಮ್ಮ ಹಿತ ಸಾಧಿಸುವದೆಂಬುದು ಚೆನ್ನಾಗಿ ಗೊತ್ತು. ಸ್ವರಾಜ್ಯಪ್ರಾಪ್ತಿಯ ನಂತರ ಕಾಂಗ್ರೆಸ್ ಸರಕಾರವು ಎಂತೆಂಥ ಎಡರುತೊಡರುಗಳನ್ನು ಎದುರಿಸಬೇಕಾಯಿತೆಂಬುದನ್ನು ನೋಡಿದರೆ ಬೇರೆ ಯಾವದಾದರೂ ಸರಕಾರವಿದ್ದರೆ ಆಗಲೆ ರಾಜೀನಾಮೆಕೊಟ್ಟು ತಮ್ಮಿಂದ ಆಡಳಿತೆಯನ್ನು ಸಾಗಿಸುವದಾಗುವದಿಲ್ಲ ಎಂದು ಹೇಳಬಹುದಾಗಿತ್ತು. ಆದರೆ ಕಾಂಗ್ರೆಸ್ಸಿನ ಧುರೀಣರು ಒಳ್ಳೆ ಧೈರ್ಯದಿಂದ ಆಡಳಿತೆಯನ್ನು ಸಾಗಿಸುತ್ತ ಸಮಸ್ಯೆಗಳನ್ನೆಲ್ಲ ಪರಿಹರಿಸುತ್ತ ಬಂದಿರುವರು. ಈಗ ತಲೆಯೆತ್ತಿರುವ ಮತ್ತು ಮೊದಲಿನಿಂದಲೂ ಇದ್ದ ಪಕ್ಷಗಳು ಆಡಳಿತೆಯ ನಿರ್ವಹಣದಲ್ಲಿ ಕಾಂಗ್ರೆಸ್ಸಿಗೆ ಯಾವದೇ ಬಗೆಯ ಸಹಾಯ ಮಾಡಲಿಲ್ಲ. ಇಷ್ಟೇ ಅಲ್ಲ; ಕಾಲಾಕಾಲದ ಪರಿವೆಯಿಲ್ಲದೆ ಅದನ್ನು ಟೀಕಿಸಿದ್ದುಂಟು. ಇಂಥ ಪಕ್ಷಗಳೀಗ ರಾಷ್ಟ್ರಹಿತ ಸಾಧಿಸುವ ನೆವದಿಂದ ಕಾಂಗ್ರೆಸ್ಸನ್ನು ಸೋಲಿಸಲು ಚುನಾವಣೆ ಕಣಕ್ಕಿಳಿದಿವೆ. ದುರುದ್ದೇಶದಿಂದ ಮಾಡಿಕೊಂಡ ಈ ದುರ್ಮೈತ್ರಿಯ ಅರ್ಥಹೀನತೆಯನ್ನು ಚೆನ್ನಾಗಿ ತಿಳಿದುಕೊಂಡು ಮತದಾರರು ಅದಕ್ಕೆ ಬೆಂಬಲಕೊಡದೆ ಎಂದಿನಂತೆ ಕಾಂಗ್ರೆಸ್ಸಿಗೆ ಬೆಂಬಲ ಕೊಡುವರೆಂದು ನಂಬುತ್ತೇವೆ.

(ಕರ್ಮವೀರ, ಹುಬ್ಳಿ 3-12-51)

೦೦೦ ೦೦೦

೨

ಒಟ್ಟಿನಲ್ಲಿ ಹೇಳುವುದಾದರೆ ನಮಗೆ ಬೇಕಾಗಿರುವುದು ಕಾಂಗ್ರೆಸ್ ಸಂಸ್ಥೆಯ ಅಧ್ಯಾಯವನ್ನು ಮುಕ್ತಾಯಗೊಳಿಸಬೇಕೆನ್ನುವುದಲ್ಲ, ಕಾಂಗ್ರೆಸ್ ಸಂಸ್ಥೆಯನ್ನು ಶುದ್ಧಗೊಳಿಸಬೇಕೆನ್ನುವುದೇ ಆಗಿದೆ. ಕಾಂಗ್ರೆಸ್ಸನ್ನು ಕಿತ್ತೊಗೆದು ಬೇರೊಂದು ಸಂಸ್ಥೆಯನ್ನು ಅಧಿಕಾರಕ್ಕೆ ತರೋಣವೆಂದರೆ ಅಂತಹ ವಿಶೇಷ ಯೋಗ್ಯತೆಯುಳ್ಳ ಒಂದು ಸಂಸ್ಥೆಯೂ ನಮ್ಮ ಮುಂದೆ ಇಲ್ಲದಿರುವುದು ಕಾಂಗ್ರೆಸ್ಸನ್ನೇ ಶುದ್ಧಗೊಳಿಸಬೇಕೆಂಬ ವಾದಕ್ಕೆ ಪುಷ್ಟಿಕೊಡುವಂತಾಗಿದೆ.

ಮತದಾರರು ಅರಿಯತೊಡಗಿರುವ ಒಂದು ದೊಡ್ಡ ವಿಷಯವೂ ಸಹ ಇದೇ ಆಗಿದೆ. ಇದು ಅವರು ಚುನಾವಣೆಗಳಲ್ಲಿ ಆಸಕ್ತಿ ವಹಿಸಿದ ಕಾರಣದಿಂದಾಗಿ ಆಗುತ್ತಿರುವ "ಜ್ಞಾನೋದಯ"ವಿದ್ದರೂ ಇರಬೇಕು. ಕೃಪಲಾನಿಯವರು ಶುದ್ಧ ಕಾಂಗ್ರೆಸ್ ಪಕ್ಷ ಕಟ್ಟಲು ಹೋದರು. ಅನೇಕ ಕಡೆ ಅದು ಪ್ರತಿಗಾಮಿಗಳು ತಲೆಯೆತ್ತಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವ ಸಂಸ್ಥೆಯಾಗಿದೆ. ಸೋಶಲಿಸ್ಟ ಪಕ್ಷವೋ ಬರೀ ಪಾತಳಗಾರ ಮಲ್ಲರ ಸಂಸ್ಥೆ. ಜನಸಂಘದಲ್ಲಿ ಕೋಮುವಾರುವಾದಿಗಳು ತಲೆಯೆತ್ತಿಕೊಳ್ಳುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಒಂದೇ ಒಂದು ವ್ಯವಸ್ಥಿತ ಸಂಸ್ಥೆ. ಏನಿದ್ದರೂ ಇದರ ಶುದ್ಧೀಕರಣ ಮಾತ್ರ ನಡೆಯಬೇಕು. ಹೊಸ ರಕ್ತ ಸೇರಬೇಕು. ಆಗ ಹಿಂದೆ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಂಸ್ಥೆ ಮುಂದೆಯೂ ನೆಹರೂರವರ ನಾಯಕತ್ವದಲ್ಲಿ ಹಿರಿಯ ಸೇವೆ ಸಲ್ಲಿಸೀತು ಎಂಬ ತೀರ್ಮಾನಕ್ಕೆ ಬರುವಂತಿದೆ ಮತದಾರರ ಸಂಖ್ಯೆ. ನೆಹರೂರವರ ಪ್ರಚಾರ ಭಾಷಣಗಳನ್ನು ಈ ವಿಷಯದಲ್ಲಿ ವಿಶೇಷ ಪರಿಣಾಮಕಾರಿಯಾಗುತ್ತಿವೆಯೆನ್ನಬಹುದು. ನೆಹರೂರವರು ತಮ್ಮ ಭಾಷಣಗಳಲ್ಲಿ ತಮ್ಮ ಸರಕಾರದ ಹಾಗು ಸಂಸ್ಥೆಯ ತಪ್ಪುಗಳನ್ನು ಮುಚ್ಚಿಕೊಳ್ಳದೆ ಬಿಚ್ಚು ಮನಸ್ಸಿನಿಂದ ಉನ್ನತ ಧ್ಯೇಯಗಳ ಆಧಾರದ ಮೇಲೆ ತಮ್ಮ ಪ್ರಚಾರ ಭಾಷಣಗಳನ್ನು ಮಾಡುತ್ತಿರುವದರಿಂದ ಕಾಂಗ್ರೆಸ್ಸಿನ ಮಟ್ಟಿಗೆ ಜನ ತೋರುವ ಒಂದು ಅಭಿಮಾನಕ್ಕೆ ಮತ್ತೆ ಜೀವ ತುಂಬುವಂತಾಗಿದೆ. ಕಾಂಗ್ರೆಸ್ಸು ಎಂದರೆ ಸಾಕು, ವಿಷ ಕಾರುತ್ತಿದ್ದ ಜನರೂ ಈಗ ದೂರದೃಷ್ಟಿಯಿಂದ ಯೋಚಿಸತೊಡಗಿದ್ದಾರೆ. ಉಮೇದುವಾರರ ಆಯ್ಕೆ ಸಂಬಂಧದಲ್ಲಿ ನಡೆದಿರಬಹುದಾದ ತಪ್ಪುಗಳ ಕಾರಣದಿಂದಾಗಿ ಅನೇಕ ಜನ ಹಳಬರು ಕಾಂಗ್ರೆಸ್ ಸಂಸ್ಥೆಯ ಸದಸ್ಯತ್ವಕ್ಕೆ ರಾಜೀನಾಮೆ ಇತ್ತು ಹೊರಬಂದಿರುವುದಾದರೂ ನೆಹರೂರವರ ವ್ಯಕ್ತಿತ್ವವೊಂದೇ ಸಾಕು ಅವುಗಳೆಲ್ಲವನ್ನೂ ಮರೆಸಿ ಕಾಂಗ್ರೆಸ್ಸಿನ ಬಗ್ಗೆ ಜನತೆಯ ವಿಶ್ವಾಸವನ್ನು ಭದ್ರಗೊಳಿಸುತ್ತಿದೆ. ಪರಿಣಾಮವನ್ನು ಇನ್ನೂ ಕಾದು ನೋಡಬೇಕು.

ಚಿತ್ರಗುಪ್ತ (9-12-51)
ಬೆಂಗಳೂರು

೦೦೦ . ೦೦೦

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸ್ಥಿರಮು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಯದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

WANTED

Agents for the sale of our new design fountain pens on Rs 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. P.)
Nagdevi BOMBAY 3.

ಖಾಸಗಿದೋಷವಿದ್ದರೆ ಸಂಸ್ಥೆಯು ಮೇಲೆಗದೆಯೆ?

ಅಲ್ಪ ಟೀಕೆ, ಆರೋಪ, ಅಪಪ್ರಚಾರಗಳಿಂದ ಮತದಾರರು ಮೋಸ ಹೋದಾರೆ?

ಈಗಿನ ಚುನಾವಣೆಗಳಲ್ಲಿ ಮುಂದೆ ಬಂದಿರುವ ಇನ್ನೊಂದು ಪಕ್ಷವಾದ ಕಿಸಾನ ಮಜ್ದೂರ ಪ್ರಜಾಪಕ್ಷದ ಯೋಗ್ಯತೆಯನ್ನು ಪರಿಶೀಲಿಸೋಣ. ಆಚಾರ್ಯ ಕೃಪಲಾನಿಯವರು ಪ್ರಜಾರಾಜ್ಯದಲ್ಲಿ ವಿರುದ್ಧ ಪಕ್ಷದ ಅವಶ್ಯಕತೆಯನ್ನು ಸಾರಿ ಹೊಸ ಪಕ್ಷ ಕಟ್ಟಲು ಹೊರಟಾಗ ಇವರ ಪಕ್ಷವು ಯೋಗ್ಯವಾದ ವಿರುದ್ಧ ಪಕ್ಷವಾಗಬಹುದೆಂಬ ನಿರೀಕ್ಷೆ ಹಲವರಲ್ಲಿತ್ತು. ಆದರೆ ಈ ಪಕ್ಷದ ಈಗಿನ ಪರಿಸ್ಥಿತಿ ಹಾಗೂ ವರ್ತನವನ್ನು ಕಾಣುವಾಗ ಇದನ್ನು ಒಂದು ರಾಜಕೀಯ ಪಕ್ಷವೆಂದು ಕರೆಯಬಹುದಾದ ಯೋಗ್ಯತೆ ಕೂಡಾ ಈ ಪಕ್ಷದಲ್ಲಿ ಕಂಡುಬರುತ್ತಿಲ್ಲವೆಂಬುದು ಶೋಚನೀಯವಿರುತ್ತದೆ. ಕಾಂಗ್ರೆಸ್ ತತ್ವಗಳಿಂದ ಭಿನ್ನಾಭಿಪ್ರಾಯವುಳ್ಳ ರಾಜಕೀಯ ತತ್ವಗಳೇನೂ ಈ ಪಕ್ಷಕ್ಕೆ ಇರುವುದಿಲ್ಲ. ಕಾಂಗ್ರೆಸ್ ಸರಕಾರ ಗಾಂಧೀಜಿಯವರ ಮಾರ್ಗ ಬಿಟ್ಟಿರುತ್ತದೆ. ನಾವು ಆ ಸರ್ವೋದಯ ಧ್ಯೇಯದ ಮಾರ್ಗ ತಮ್ಮ ಧೋರಣೆಯಾಗಿಟ್ಟು ಕೊಳ್ಳುತ್ತೇವೆಂದು ಆಚಾರ್ಯ ಕೃಪಲಾನಿ ಸಾರಿದರು. ಹಾಗಾಗಿದ್ದರೆ ಈ ಪಕ್ಷಕ್ಕೆ ಒಂದು ಅರ್ಥ ಬರುತ್ತಿತ್ತು. ಆದರೆ ಸರ್ವೋದಯ ಧ್ಯೇಯಗಳು ಆಚಾರ್ಯ ಕೃಪಲಾನಿಯವರ ತಲೆಯಲ್ಲಿ ಮಾತ್ರ ಉಳಿದಿವೆಯಲ್ಲದೆ ಈ ಪಕ್ಷದಲ್ಲಿ ಎಲ್ಲಿಯೂ ತಿಲ ಮಾತ್ರವೂ ಕಂಡು ಬರುವುದಿಲ್ಲವೆಂದರೆ ಇಂದು ಆಚಾರ್ಯರೂ ಅಲ್ಲಗಳೆಯುವ ಪರಿಸ್ಥಿತಿ ಇಲ್ಲ. ಮಾತ್ರವಲ್ಲ ಈ ಪಕ್ಷದವರಿಂದ ರಾಜಕೀಯ ಕಾರ್ಯಕ್ಷೇತ್ರದಲ್ಲಿ ತೋರುತ್ತಿರುವ ಶುದ್ಧ ಬೇಜವಾಬ್ದಾರೀ ವರ್ತನವನ್ನು ಕಂಡರೆ ನಿಜವಾಗಿಯೂ ಆಶ್ಚರ್ಯವೆನಿಸುತ್ತದೆ. ನಮ್ಮ ಜಿಲ್ಲೆಯ ಉದಾಹರಣೆಯಿಂದಲೇ ಪರಿಶೀಲಿಸೋಣ. ಒಂದೆಡೆ ಮುಸ್ಲಿಂ ಲೀಗನ್ನು ಪ್ರೋತ್ಸಾಹಿಸಿದರು. ಇನ್ನೊಂದೆಡೆಯಲ್ಲಿ ಜನಸಂಘದ ಉಮೇದ್ವಾರರಿಗೆ ಇವರು ಸಹಾಯ ಮಾಡಿ ಅವರೊಂದಿಗೆ ತಿರುಗುತ್ತಿದ್ದಾರೆ. ಒಂದೆಡೆ ಸೋಶಿಯಲಿಸ್ಟರನ್ನು ಕಟ್ಟಿಕೊಳ್ಳಲು ಯತ್ನಿಸಿದರು. ಈಗ ಕಮ್ಯೂನಿಸ್ಟರೊಡನೆ ಒಪ್ಪಂದ ಮಾಡಿ ದುಡಿಯುತ್ತಿದ್ದಾರೆ. ಇಡೀ ಮಲಬಾರಿನಲ್ಲಿ ಪ್ರಜಾಪಕ್ಷ ಮತ್ತು ಕಮ್ಯೂನಿಸ್ಟರು ಸಂಧಿ ಮಾಡಿಕೊಂಡು ವರ್ತಿಸುತ್ತಿದ್ದಾರೆ. ರಾಜಕೀಯ ಪಂಗಡವೇ ಇಲ್ಲದ ಸ್ವತಂತ್ರ ಎನ್ನುವ ಉಮೇದ್ವಾರರ ಸಹಾಯಕ್ಕಾಗಿ ಇವರು ಅಂಥವರ ಜೊತೆ ಕಟ್ಟಿಕೊಳ್ಳುವುದನ್ನು ಕಾಣಬಹುದು. ಇಷ್ಟು ಬೇಜವಾಬ್ದಾರಿಯಿಂದ ಯಾವ ರಾಜಕೀಯ ಧೋರಣೆಯೂ ಇಲ್ಲದೆ ಚುನಾವಣೆಗಳಲ್ಲಿ ವರ್ತಿಸುವ ರಾಜಕೀಯ ಪಂಗಡ ಯಾವ ರಾಜ್ಯದಲ್ಲಿಯೂ ಕಾಣುವಂತಿಲ್ಲ. ಮುಸ್ಲಿಂ ಲೀಗ್ ಮತ್ತು ಜನಸಂಘಗಳಂತಹ ಜಾತೀಯತೆಯ ಅಪ್ರಗತಿಪರ ಪಕ್ಷಗಳಿಗೆ ಪ್ರೋತ್ಸಾಹ ಕೊಡುವುದು ರಾಷ್ಟ್ರದ ಘಾತವೆಂದು ಇವರಿಗೆ ಅರ್ಥವಾಗುತ್ತ ಇಲ್ಲ. ಕಮ್ಯೂನಿಸ್ಟರ ಜೊತೆ ಕಟ್ಟಿಕೊಳ್ಳುವುದರಿಂದ ಈ ದೇಶವನ್ನು ಅವರ ಕೈಗೆ ಒಪ್ಪಿಸಲು ಸಹಾಯ ಮಾಡಿದಂತಾಗುತ್ತದೆಂದು ಇವರಿಗೆ ಅರ್ಥವಾಗುತ್ತ ಇಲ್ಲ. ರಾಜಕೀಯದ ಗಂಧಗಾಳಿ ಇಲ್ಲದ ಸ್ವತಂತ್ರ ಉಮೇದ್ವಾರರಿಗೆ ಬೆಂಬಲ ಕೊಡುವುದರಲ್ಲಿ ಏನಾದರೂ ಅರ್ಥವಿದೆಯೆ? ವಸ್ತುತಃ ನಮ್ಮ ಪ್ರಜಾಪಕ್ಷವು ಒಂದು ರಾಜಕೀಯ ಪಕ್ಷವೇ ಅಲ್ಲವೆಂದರೆ ಇದರಲ್ಲಿ ಅತಿಶಯೋಕ್ತಿ ಏನೂ ಇಲ್ಲದೆ ಅಕ್ಷರಶಃ ಇದು ಸತ್ಯವಿರುತ್ತದೆ. ಕಾಂಗ್ರೆಸಿನಲ್ಲಿದ್ದು ತಮ್ಮ ಅಧಿಕಾರ ಸ್ಥಾನಗಳ ಲಾಲಸೆ ತೀರಿಸಿಕೊಳ್ಳಲಾಗದೆ ಅತೃಪ್ತರಾಗಿ ಕಾಂಗ್ರೆಸಿನ ಮೇಲಿನ ಸೇಡು ತೀರಿಸಿ ಆ ದಾರಿಯಲ್ಲಾದರೂ ತಮ್ಮ ಸ್ವಾರ್ಥಸಾಧನೆಗಾಗಿ ಹೊರಟ ಹಲವು ಮಂದಿಯ ಕೂಟ ಇದೆಂದು ಮಾತ್ರ ದುಃಖದಿಂದ ಹೇಳಬೇಕಾಗುತ್ತದೆ. ಈ ಪಕ್ಷದ ನಿಜಸ್ವರೂಪ ತಿಳಿದೇ ಸೋಶಿಯಲಿಸ್ಟ್ ಪಂಗಡದವರು ಆರಂಭದಲ್ಲಿ ಇವರೊಡನೆ ಮಾಡಿಕೊಂಡ ಒಪ್ಪಂದ ಈಗ ಮುಕ್ತಾಯಗೊಳಿಸಿದ್ದಾರೆ. ಸೋಶಿಯಲಿಸ್ಟ್ ಮುಂದಾಳು ಜಯಪ್ರಕಾಶರು ಆಚಾರ್ಯ ಕೃಪಲಾನಿಯವರು ಪ್ರಗತಿಪರ ಧೋರಣೆಯುಳ್ಳದ್ದಾರೆಂದು ಭಾವಿಸಿ ಇವರೊಡನೆ ಚುನಾವಣಾ ಒಪ್ಪಂದ ಮಾಡಿದ್ದರು. ಈಗ ಪ್ರಜಾಪಕ್ಷದವರು ಕಮ್ಯೂನಿಸ್ಟರನ್ನು ಕಟ್ಟಿಕೊಳ್ಳಲು ಹಿಂದೆಮುಂದೆ ನೋಡುವುದಿಲ್ಲವೆಂದ ಬಳಿಕ ಇವರೊಡನೆ ಸೇರುವುದು ಯುಕ್ತವಲ್ಲವೆಂದು ಅವರು ನಿರ್ಧಾರ ಮಾಡುವಂತಾಗಿರುತ್ತದೆ.

(R. M. Hರವರ ಲೇಖನದಿಂದ)
ರಾಷ್ಟ್ರಬಂಧು, ಮಂಗಳೂರು.

ಕೊಳೆತ ಹಣ್ಣಿದ್ದರೆ ಮರ ಕಡಿವವರುಂಟೆ?

ನಮ್ಮ ದೇಶದಲ್ಲಿ ಚುನಾವಣೆಗಳು ಸಮಾಪಿಸಿದಂತೆ ಎಂತಹ ಅಭಾವಗಳಿದ್ದರೂ ಹೊಸ ಹೊಸ ರಾಜಕೀಯ ಪಕ್ಷಗಳ ಸ್ಥಾಪನೆಗೆ ಅಭಾವವಿಲ್ಲದಾಗಿದೆ. ಈ ಹೊಸ ರಾಜಕೀಯ ಪಕ್ಷಗಳನ್ನೂ ಅವುಗಳ ಮುಖಂಡರನ್ನೂ ಪರಿಶೀಲಿಸುವಾಗ ಈ ಮುಖಂಡರು ಮತ್ತು ಪಕ್ಷಗಳ ತಮ್ಮ ತಮ್ಮ ಸ್ವಲಾಭಕ್ಕಾಗಿಯೇ ಜನ್ಮ ಪಡೆದಿರುವವು ಎಂತಲೇ ತಿಳಿಯಲೇಬೇಕಾಗುತ್ತದೆ.

ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಎಲ್ಲಾ ಪಕ್ಷಗಳು ಸಂದೇಹಾಸ್ಪದವಾಗಿ ಕೂಡಿಕೊಂಡಿವೆಯಲ್ಲದೇ ಕಾಂಗ್ರೆಸಿಗೆ ಚುನಾವಣೆಗಳಲ್ಲಿ ವಿರೋಧ ಹೂಡುವುದನ್ನು ಬಿಟ್ಟರೆ ಬೇರಾವ ನಿಶ್ಚಿತ ಯೋಜನೆಯೂ ಕಾಣುವುದಿಲ್ಲ. ಇಂದಿನ ಆಹಾರ ಪರಿಸ್ಥಿತಿಯಲ್ಲಿ ಸುಧಾರಣೆ, ಸಾಮಾನ್ಯ ಜನರ ಆರ್ಥಿಕ ಸಂಪಾದನೆಯ ಸುಧಾರಣೆ ಮತ್ತು ಜೀವನದ ವೆಚ್ಚವನ್ನು ತಗ್ಗಿಸುವ ಯಾವುದೊಂದು ಕಾರ್ಯಕ್ರಮವನ್ನು ಭಾರತದ ಯಾವುದೊಂದು ರಾಜಕೀಯ ಪಕ್ಷಗಳು ಕೈಕೊಂಡಿರುವುದಿಲ್ಲ ಮಾತ್ರವಲ್ಲದೆ ಬದಲಾಗಿ ಅಧಿಕಾರವನ್ನು ತಮಗೆ ಕೊಡಿ ನಾವು ಸ್ವರ್ಗವನ್ನ ಭೂಮಿಗಿಳಿಸುತ್ತೇವೆ ಎಂದು ಹೇಳುತ್ತಿವೆ.

ಭಾರತದಲ್ಲಿನ ಪರಿಸ್ಥಿತಿಯು ಸ್ವಲ್ಪ ಕಠಿಣವೇ ಇದ್ದು ಸುಧಾರಣೆ ಕ್ಷಿಪ್ರವಾಗಿ ಮಾಡುವುದು ಅಸಾಧ್ಯವಿದೆ. ಆಹಾರ ಉತ್ಪಾದನೆ-ಯಂತ್ರೋದ್ಯಮ ಕೈಗಾರಿಕೆಗಳು ಬೆಳೆದು ಜೀವನದ ವೆಚ್ಚ ತಗ್ಗದೇ ಕಾಲದಲ್ಲಿ ಅದನ್ನು ಕೆಲವೇ ದಿವಸಗಳಲ್ಲಿ ಮಾಡುವುದು ಅಸಾಧ್ಯವಿದೆ. ಎಷ್ಟೋ ವರ್ಷಗಳ ಆಂದೋಲನದಿಂದ ಪಡೆದ ನಮ್ಮ ಸ್ವಾತಂತ್ರ್ಯವನ್ನು ನಾವು ಅನುಭವಿಸಬೇಕಾದಲ್ಲಿ ದೇಶದ ಕಷ್ಟಗಳಲ್ಲಿ ಭಾಗಿಗಳಾಗಿ ದುಡಿಯಬೇಕಾಗುವುದು.

೦೦೦೦

ಕಾಂಗ್ರೆಸು ಅಧಿಕಾರಕ್ಕೆ ಬಂದಾಗ ದೇಶವು ಹಲವಾರು ಸಮಸ್ಯೆಗಳಿಂದ ಘೋರ ಅವ್ಯವಸ್ಥೆಗಳಿಗೆ ಒಳಗಾಗಿತ್ತು. ವಿಭಜನೆಯು ಘೋರ ಸಂಕಷ್ಟಗಳನ್ನು ತಂದೊಡ್ಡಿತ್ತು. ಅರಾಜಕತೆಯು ತಲೆದೋರುವ ಸಂಭವ ಇತ್ತು. ನಿರಂಕುಶಾಧಿಕಾರದಿಂದ ತನ್ನ ಜೇಬು ತುಂಬಿಸಿಕೊಳ್ಳಬೇಕೆಂಬ ಹಂಚಿಕೆಯಲ್ಲಿದ್ದ ಹಲವು ಸಂಸ್ಥಾನಗಳ ಅರಸರು ಪರಕೀಯರ ಬೆಂಬಲವನ್ನು ಪಡೆಯುವವರೂ ನೀಚವೃತ್ತಿಗಿಳಿದಿದ್ದರು. ದೇಶದಲ್ಲಿ ಸಾರ್ವತ್ರಿಕವಾಗಿ ಬರಗಾಲ, ಅವಶ್ಯಕ ವಸ್ತುಗಳ ಅಭಾವ ತಾಂಡವಾಡುತ್ತಿತ್ತು. ಕಾಂಗ್ರೆಸು ಅವನ್ನೆಲ್ಲ ಎದುರಿಸುವುದರೊಡನೆ ದೊರೆತ ಸ್ವಾತಂತ್ರ್ಯವನ್ನು ಬಲಗೊಳಿಸುವ ದ್ವಿಮುಖ ಹೊಣೆಯನ್ನು ಹೊತ್ತು ಕಾರ್ಯೋನ್ಮುಖವಾಯಿತು. ಕೆಲವೇ ವಾಕ್ಯಗಳಲ್ಲಿ ಹೇಳಬಹುದಾದಷ್ಟು ಸುಲಭ ಕೆಲಸವಲ್ಲವದು. ಆದರೂ ಕಾಂಗ್ರೆಸಿನ ಜನಪ್ರಿಯ ನಾಯಕ ಮುಂದಾಳುಗಳು ಸಮಸ್ಯೆಗಳನ್ನು ಕ್ರಮವಾಗಿ ಬಗೆಹರಿಸಿದರು. ಅವರ ಸಾಹಸವು ಸಂಪೂರ್ಣ ಫಲಕಾರಿಯಾಗದಿದ್ದರೂ ಭಾರತವು ಪ್ರಗತಿ ಹೆಜ್ಜೆಯನ್ನಿಟ್ಟದ್ದು ಕಂಡಿದ್ದೂ ಕರ್ತವ್ಯ ಪರಿಪೂರ್ಣವಾಗಿಲ್ಲ. ಇಷ್ಟರಲ್ಲೇ ಎಲ್ಲಾ ಸಂಕಷ್ಟಗಳ ಪರಿಹಾರವಾಗುವದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

೦೦೦೦

ಭಾರತದ ಏಕಮಾತ್ರ ರಾಜಕೀಯ ಶಕ್ತಿಯಾಗಿ ಬೆಳೆದು ಬಂದ ಕಾಂಗ್ರೆಸ್ ಸಂಸ್ಥೆಯನ್ನು ವೈಯಕ್ತಿಕ ಘಟನೆ ತಪ್ಪುಗಳಿಗಾಗಿ ದೂಷಿಕೊಂಡು ಪ್ರಯೋಜನವಿಲ್ಲ. ಕಾಂಗ್ರೆಸಿನಲ್ಲಿ ಹೆಚ್ಚಿನ ಶಕ್ತಿ ವಹಿಸಿ ಸಾರ್ವಜನಿಕರು ಪ್ರತಿಗಾಮಿಗಳನ್ನು ಹೊರಡಿಸಿ ಪ್ರಯೋಜನ ಪಡೆಯಬೇಕಾಗುವುದು. ಮನೆಯಲ್ಲಿ ಹೆಗ್ಗಣ ಕಾಟವಿದೆಯೆಂದು ಯಾರೂ ಮನೆಯನ್ನು ಸುಡಲಾರರಷ್ಟೆ.

೧೦ನೇ ಪುಟ ನೋಡಿರಿ.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ಕಾಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ವಿ. ಪಂಡಿತ್, B. SC., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಜಾತೀಯುವಾದಿಗಳ ಪ್ರಚಂಡ ಸೋಲು.

ಜಾತೀಯತೆಯು ಆಶ್ವಾಸನದ ಹಾಗೂ ಧಾರ್ಮಿಕ ತಳಹದಿಯ ಮೇಲೆ ಚುನಾವಣೆಗೆ ನಿಂತವರ ಬಗ್ಗೆ ಜನತೆಯು ವಿಶ್ವಾಸ ಹೇಗಿದೆಂಬುದಕ್ಕೆ ಹಿಮಾಚಲದ ಫಲಿತಾಂಶವು ಯೋಗ್ಯ ಉದಾಹರಣೆಯನ್ನಬೇಕು. ಹಿಮಾಚಲದ 36 ಸ್ಥಳಗಳಲ್ಲಿ 24 ಕಾಂಗ್ರೆಸ್, 3 ಕಿಸಾನ ಮಜದೂರ ಪ್ರಜಾಪಕ್ಷ, 1 ದಲಿತವರ್ಗ ಮಹಾಮಂಡಳ 8 ಸ್ವತಂತ್ರರು ಆರಿಸಿ ಬಂದಿರುವರು. ಹುರಿಯಾಳಾಗಿ ನಿಂತ 135 ಜನರಲ್ಲಿ 62 ಹುರಿಯಾಳುಗಳು ತಮ್ಮ ಇಡುಗಂಟನ್ನು ಕಳೆದುಕೊಂಡಿದ್ದಾರೆ. ಜಾತೀಯುವಾದಿಗಳಾದ ಹಿಂದೂ ಮಹಾಸಭೆ, ರಾಮರಾಜ್ಯ ಪರಿಷತ್, ಭಾರತೀಯ ಜನಸಂಘದವರು ಸ್ಪರ್ಧಿಸಿದ್ದು ಇವರಲ್ಲಿ ಯಾರೂ ಒಂದು ಸ್ಥಾನವನ್ನು ಗಳಿಸುವದಕ್ಕೆ ಸಮರ್ಥರಾಗಲಿಲ್ಲ. ಮಾತ್ರವಲ್ಲ ಹಲವು ಕಡೆಗಳಲ್ಲಿ ಇಡುಗಂಟನ್ನು ಕಳೆದುಕೊಂಡಿರುವರು. 22 ಸ್ಥಳಗಳಿಗೆ ಸ್ಪರ್ಧಿಸಿದ ಪ್ರಜಾಪಕ್ಷ ಕೇವಲ ಮೂರು ಸ್ಥಾನಗಳಿಸಿದೆ. ಉದಾತ್ತಧ್ಯೇಯವಾದಿಗಳೆಂದು ಜಂಭ ಕೊಚ್ಚಿಕೊಳ್ಳುತ್ತಿರುವ ಸಮಾಜವಾದಿಗಳಿಗೂ ಒಂದೇ ಒಂದು ಸ್ಥಾನವನ್ನು ಗಳಿಸಲಾಗಲಿಲ್ಲ. ಜಾತೀಯತೆ-ಧಾರ್ಮಿಕ ಮನೋವೃತ್ತಿಯವರು ಚುನಾವಣಾ ರಂಗದಲ್ಲಿ ತಾವು ಯಶಗಳಿಸಬಹುದೆಂದು ನಂಬಿದ್ದರೆ ಹಿಮಾಚಲದಲ್ಲಾದ ಪರಾಭವವು ತಮಗೂ ಎಂಬುದನ್ನು ಅವರು ಅರಿತುಕೊಳ್ಳುವದು ಉಚಿತವಾಗಿದೆ. 36ರಲ್ಲಿ 24 ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿಕೊಳ್ಳಬೇಕಾದರೆ ಕಾಂಗ್ರೆಸ್ಸಿನ ಬಗ್ಗೆ ಜನಕ್ಕೆ ಶ್ರದ್ಧೆ-ವಿಶ್ವಾಸ ವಿರೋಧಿಗಳು ಹೇಳುವಂತಿಲ್ಲವೆಂಬುದು ಸ್ಪಷ್ಟವಾಗಿದೆ? ಲೋಕಸಭೆಗೆ ಇರುವ ಎರಡು ಸ್ಥಾನಗಳೂ ಕಾಂಗ್ರೆಸ್ಸಿಗೇನೆ ದೊರಕಿದ್ದು ಇನ್ನೊಂದು ವಿಜಯ!

ತಿರುವಾಂಕೂರ ಕೊಚ್ಚಿನಗಳಲ್ಲಿ

ಹೆಚ್ಚಿನವರು ವಿದ್ಯಾವಂತರಾಗಿದ್ದು ಚುನಾವಣೆಯ ಮಹತ್ವಿಕೆಯನ್ನು ಇಲ್ಲಿಯ ಜನ ತಮ್ಮ ಮತದಾನದ ಮೂಲಕ ತೋರಿಸಿ ಕೊಡುವವರಾಗಿದ್ದಾರೆ. ಇಲ್ಲಿಯ ಹಲವು ಮತದಾರ ಕ್ಷೇತ್ರಗಳಲ್ಲಿ ನೂರಕ್ಕೆ ನೂರು ಜನವೂ ಮತದಾನ ಮಾಡಿರುವದೇ ಇದಕ್ಕೆ ನಿದರ್ಶನ. ತಿರುವಾಂಕೂರ ಕೊಚ್ಚಿನದಲ್ಲಿ ಸಮಾಜವಾದಿ ಹಾಗೂ ಕಮ್ಯೂನಿಸ್ಟರ ಪ್ರಭಾವವೇ ಹೆಚ್ಚೆಂದು ಹಲವಾರ ಎಣಿಕೆ. ನೆಹ್ರೂರವರ ಸಂದರ್ಶನದ ಮೇಲೆ ವಿರೋಧಿ ಪಕ್ಷಗಳ ಬಲಾಬಲದ ಪ್ರಶ್ನೆಯನ್ನು ಇಲ್ಲಿನ ಜನತೆ ಚೆನ್ನಾಗಿ ವಿವರಿಸಿ ಮತದಾನ ಮಾಡಿದಂತಿದೆ. ಇಷ್ಟರಲ್ಲಿ ಗೊತ್ತಾದ ಫಲಿತಾಂಶದಲ್ಲಿ ಕಾಂಗ್ರೆಸು 13 ಸ್ಥಾನವನ್ನೂ, ಸಮಾಜವಾದಿ, ಹಾಗೂ ಸಂಯುಕ್ತ ಎಡಪಕ್ಷಗಳು ಒಂದೊಂದು ಸ್ಥಾನವನ್ನೂ ಗಳಿಸಿವೆ. ಇತರ ಪಕ್ಷಗಳ ವರ್ಚಸ್ಸು ಬಹಳವಾಗಿರುವ ಈ ಪ್ರದೇಶದಲ್ಲಿ ಕೂಡಾ ಕಾಂಗ್ರೆಸು ಬಹುಮತವನ್ನು ಗಳಿಸುವ ಪೂರ್ವ ಸೂಚನೆಯಿದಾಗಿರುತ್ತದೆ.

ಆಂಧ್ರದಲ್ಲಿ ವಿರೋಧಿಗಳ ಗುಂಪು

ತಿರುವಾಂಕೂರು ಕೊಚ್ಚಿನದಲ್ಲಿ ಸಮಾಜವಾದೀ ಹಾಗೂ ಕಮ್ಯೂನಿಸ್ಟರು ಕಾಂಗ್ರೆಸ್ ವಿರೋಧಿಗಳಾದರೆ ಆಂಧ್ರದಲ್ಲಿ ಕಮ್ಯೂನಿಸ್ಟ ಹಾಗೂ ಪ್ರಜಾಪಕ್ಷಗಳು ಕಾಂಗ್ರೆಸ್ಸಿನ ವಿರುದ್ಧ ಬಣ ಕಟ್ಟಿವೆ. ಆಂಧ್ರ ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಎನ್ ಸಂಜೀವ ರೆಡ್ಡಿಯವರನ್ನು ಕಮ್ಯುನಿಸ್ಟ ಪ್ರತಿನಿಧಿಯಾಗಿ ಅವರ ಭಾವನೇ ಸ್ಪರ್ಧಿಸಲಿದ್ದಾನೆ. ಮದ್ರಾಸ ಶಾಸನ ಸಭೆಯ ಹಿಂದಿನ ಅಧ್ಯಕ್ಷರೂ ಸುಪ್ರಖ್ಯಾತ ಕಾಂಗ್ರೆಸ್ಸಿಗರೂ ಆಗಿದ್ದ ಶ್ರೀ ಸಾಂಭಮೂರ್ತಿಯವರ ಸದ್ಯ ಪ್ರಜಾಪಕ್ಷದ ಪರವಾಗಿ ಲೋಕಸಭೆಗೆ ನಿಂತಿರುವರು. ಮೂವತ್ತು ವರ್ಷ ಅವರ ರಾಜಕೀಯ ಶಿಷ್ಯರಾಗಿದ್ದ ಸದ್ಯ ಕೇಂದ್ರದಲ್ಲಿ ಉಪಮಂತ್ರಿಗಳಾಗಿರುವ ಶ್ರೀ ಎಂ. ತಿರುಮಲರಾಯರು ಅವರನ್ನ ಸ್ಪರ್ಧಿಸುವರು.

ಶ್ರೀ ಗೋಪಾಲ ರೆಡ್ಡಿ, ಶ್ರೀ ಕೆ. ಚಂದ್ರಮೌಳಿ, ಹಾಗೂ ಕಲಾ ವೆಂಕಟರಾವ್ ಈ ಮೂರು ಆಂಧ್ರ ಮಂತ್ರಿಗಳಿಗೂ ಪ್ರಬಲ ವಿರೋಧಿಗಳಿರುವರು. ಶ್ರೀ ಸೀತಾರಾಮ ರೆಡ್ಡಿ, ವಿ. ವಿ. ಗಿರಿ, ಪಾರ್ಲಿಮೆಂಟಿನ ಡೆಪ್ಯುಟಿ ಸ್ಪೀಕರರಾದ ಶ್ರೀ ಅನಂತಶಯನಂ ಅಯ್ಯಂಗಾರ ಇವರು ಲೋಕ ಸಭೆಗೆ ನಿಂತಿರುವರು. ಪ್ರಜಾಪಕ್ಷದ ಮುಖ್ಯ ಧುರೀಣರಾದ ಶ್ರೀ ಟಿ. ಪ್ರಕಾಶಮರ ವಿರುದ್ಧ ಉಡುಪಿಯವರೇ ಆದ ಡಾ. ಯು. ಕೃಷ್ಣರಾಯರು ಕಾಂಗ್ರೆಸ್ಸಿನ ಪರವಾಗಿ ಮದ್ರಾಸದಿಂದ ಸ್ಪರ್ಧಿಸಲಿರುವರು. ಶ್ರೀ ನೆಹ್ರೂರವರು ಈ ತಿಂಗಳಾಂತ್ಯಕ್ಕೆ ಆಂಧ್ರವನ್ನು ಭೆಟ್ಟಿಯನ್ನೀಯುವದರಿಂದ ವಿರೋಧಿ ಪಕ್ಷಗಳ ಹೋರಾಟಕ್ಕೆ ಹೆಚ್ಚಿನ ಬೆಲೆ ಒದಗುವಂತಿಲ್ಲ!

ದಿಲ್ಲಿಯಲ್ಲಿ

ದಿಲ್ಲಿಯ ಶಾಸನ ಸಭೆಗೆ 186 ಹಾಗೂ ಲೋಕ ಸಭೆಗೆ 19 ಜನರ ಹುರಿಯಾಳುಗಳು ಸ್ಪರ್ಧಿಸುವರು. ಶಾಸನ ಸಭೆಯ ಪ್ರತಿಯೊಂದು ಸ್ಥಾನಕ್ಕೂ ಕಾಂಗ್ರೆಸ್ಸು ಹುರಿಯಾಳುಗಳನ್ನು ನಿಲ್ಲಿಸಿದೆ. ಸ್ವತಂತ್ರರ ಸಂಖ್ಯೆ 82 ಇದೆ. ಕಾಂಗ್ರೆಸ್ಸಿನ ನಂತರ ಹೆಚ್ಚಿನ ಸ್ಥಳಕ್ಕೆ ಸ್ಪರ್ಧಿಸುವವರೆಂದರೆ ಜನಸಂಘದ ಹುರಿಯಾಳುಗಳು. ಹುರಿಯಾಳುಗಳಲ್ಲಿ ಒಟ್ಟು 9 ಜನ ಸ್ತ್ರೀಯರೂ ಇರುವರು. ಶ್ರೀಮತಿ ಸುಚೇತಾ ಕೃಪಲಾನಿಯವರು (ಪ್ರಜಾಪಕ್ಷ) ಪತ್ರಿಕೋದ್ಯೋಗಿ ದೇಶಾಯದಾಸರನ್ನು ಸ್ಪರ್ಧಿಸಲಿರುವರು.

ಅಂಚೆ ಮೂಲಕ ಮತದಾನ

40,000 ಪಂಜಾಬಿಗಳಿಗೂ ದಿಲ್ಲಿಪ್ರಾಂತದಲ್ಲಿಯ 20,000 ಮತದಾರರಿಗೂ ಅಂಚೆ ಮೂಲಕ ಮತದಾನ ಮಾಡುವ ಸೌಕರ್ಯವನ್ನು ಭಾರತ ಸರಕಾರ ಒದಗಿಸಿಕೊಟ್ಟಿದೆ. ಇದರಲ್ಲಿ ಹೆಚ್ಚು ಜನರು ಸೈನಿಕರೂ, ಕೆಲವರು ಭಾರತವಿದೇಶ ರಾಯಭಾರಿ ಕಚೇರಿಯಲ್ಲಿ ಕೆಲಸಮಾಡುವವರೂ ಇನ್ನು ಹಲವರು ಸ್ಥಾನಬದ್ಧರೂ ಆಗಿರುವರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 48/1951

ಕೆ. ರಾಜೀವಿ ಬಾ – ಕೆ. ನಾಗೇಶ ಕಾಮತರ ಪತ್ನಿ ಉಡುಪಿ ಕಸಬಾ ಕಾರ್ಪೊರೇಶನ್ ಬ್ಯಾಂಕ್ ರೋಡ್, —ಅರ್ಜಿದಾರಳು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ–

ಅರ್ಜಿದಾರಳ ಅವಿವಾಹಿತ ಮಗ, ತಾ. 3-5-51ರಲ್ಲಿ ಸ್ವರ್ಗಸ್ಥನಾದ, ಕೆ. ಗೋಪಾಲಕೃಷ್ಣ ಕಾಮತನು–ದಿ. ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ ಬೊಂಬಾಯಿಯಲ್ಲಿ ಮಾಡಿದ ಯಿನ್ಶೂರೆನ್ಸ ಹಣ ಪಡಿಯುವದೆ, ಹಿಂದೂ ಲೋ ಪ್ರಕಾರ ಹಕ್ಕುದಾರಳು ವ ವಾರೀಸುದಾರಳೆಂದ ತನಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ, ಅರ್ಜಿದಾರಳು ದಾಖಲು ಮಾಡಿದ ಅರ್ಜಿಯು ತಾ. 9-1-1952ಕ್ಕೆ ಇಟ್ಟಿದೆ. ಆಕ್ಷೇಪ ಹೇಳತಕ್ಕವರು ಆ ದಿವಸ 11 ಗಂಟೆಗೆ ಮೊದಲೇ ಈ ಕೋರ್ಟಿನ ಮುಂದೆ ಹಾಜರಾಗಿ ತಕರಾರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಲಾಗಿಯದೆ.

N. V. Kamath,
Advocate for Petitioners

ಉಡುಪಿ, 17-12-1951

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

ESTD: 1925. H. O: UDIPI.

For Protection and Provision

Consult

The New Guardian of India Life Insurance Co., Ltd.

Estd] Head office: MADRAS [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವುದು. ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾಧಾರಣ ಮಾದಿಗೆ ಜಾಸ್ತಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶಲ್ ರೂ. 5– ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಖರ್ಚಿಲಾಡಾಜ ಪ್ರತ್ಯೇಕ.]

MIS. D. DEVEE, F. DS. (N. J.)
Tollygunge CALCUTTA

ಪ್ರತಿನಿಧಿಯು ಶಹಾ ಕಂಪೆನಿ, ಮಂಗಳೂರು

ಲೋಕಾಂತ

ಪರ್ಶಿಯದಲ್ಲಿ ಪಾನನಿರೋಧ

ಪೂರ್ಣ ಪಾನನಿರೋಧವನ್ನು ಜ್ಯಾರಿಯಲ್ಲಿ ತರುವ ಬಗ್ಗೆ ಒಂದು ತಿಂಗಳೊಳಗಾಗಿ ಪಾರ್ಲಿಮೆಂಟು ಮಸೂದೆಯೊಂದನ್ನು ಸ್ವೀಕರಿಸಲಿದೆ. ಸದ್ಯ ಗಡಂಗ, ಕ್ಲಬ್ಬು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ಪೇಯಗಳನ್ನು ಕುಡಿಯುತಕ್ಕದ್ದಲ್ಲವೆಂದು ಆಜ್ಞೆ ಹೊರಡಿಸಲಾಗಿದೆ. ಆದರೆ ತಮ್ಮ ಮನೆಗಳಲ್ಲಿ ಕುಡಿಯುವದಕ್ಕೆ ಈ ಕಾಯಿದೆಯಿಂದ ತೊಂದರೆಯಾಗದು.

ಎರಡನೆ ಎಣ್ಣೆ ಕಾರಖಾನೆ

ಮುಂಬಯಿಯಲ್ಲಿ ಇನ್ನೊಂದು ಎಣ್ಣೆ ಶುದ್ಧೀಕರಣ ಕಾರಖಾನೆಯನ್ನು ಸ್ಥಾಪಿಸುವ ಬಗ್ಗೆ ಬರ್ಮಾಶೆಲ್ ಕಂಪೆನಿಯು ಭಾರತ ಸರಕಾರದೊಡನೆ ಕರಾರು ಒಪ್ಪಂದ ಮಾಡಿಕೊಂಡಿತು. ಬರ್ಮಾಶೆಲ್ ಕಂಪೆನಿಯು 20 ಕೋಟಿ ರೂಪಾಯಿಯ ಬಂಡವಲದಿಂದ ಪ್ರತಿ ವರ್ಷ 150000 ಟನ್ ಎಣ್ಣೆ ಶುದ್ಧಗೊಳಿಸುವಂಥ ಕಾರಖಾನೆ ಸ್ಥಾಪಿಸುವದು.

ಅರಬರ ನಕಾರ

ಮಧ್ಯ ಪೂರ್ವ ಸೈನ್ಯ ಠಾಣೆ ಸ್ಥಾಪನೆಗಾಗಿ ಪಾಶ್ಚಾತ್ಯ ರಾಷ್ಟ್ರಗಳು ಮಾಡಿರುವ ಸೂಚನೆಯನ್ನು ಅರಬ ರಾಜಕಾರಣಿಗಳು ಸದ್ಯ ಒಪ್ಪಿಕೊಳ್ಳುವ ನಿರ್ಧಾರವನ್ನು ಬಿಟ್ಟುಕೊಟ್ಟಿರುವರು. ಪಾಶ್ಚಾತ್ಯ ರಾಷ್ಟ್ರಗಳು ಅರಬ ರಾಷ್ಟ್ರಗಳ ಕುರಿತು ತಳೆದ ಧೋರಣೆಯಲ್ಲಿ ಬದಲಾವಣೆಯಾಗದ ಹೊರತು ಈ ಯೋಜನೆಯನ್ನು ಚರ್ಚಿಸಲು ತಾವು ಸಿದ್ಧವಿಲ್ಲವೆಂದು ತಿಳಿಸಿವೆ.

ಬಂಡಾಯಗಾರ ಕಾಂಗ್ರೆಸಿಗೆ ಅರ್ಧ ಚಂದ್ರ?

ಬಿಹಾರ ಹಾಗೂ ಉತ್ತರ ಪ್ರದೇಶದ ಹಲವು ಕಾಂಗ್ರೆಸ್ಸಿಗರು ಕಾಂಗ್ರೆಸ್ಸ ಹುರಿಯಾಳುಗಳ ವಿರುದ್ಧ ನಿಂತಿರುವರು. ಬಿಹಾರ್ ಅಧಿಕೃತ ಕಾಂಗ್ರೆಸ್ ಹುರಿಯಾಳುಗಳ ವಿರುದ್ಧ ಸ್ಪರ್ಧಿಸುತ್ತಿರುವ ನಾಲ್ವರು ಕಾಂಗ್ರೆಸ್ಸಿಗರನ್ನು ಪ್ರಾಂತೀಯ ಕಾಂಗ್ರೆಸ್ಸು ಹೊರದೂಡಿದೆ. ಒಟ್ಟಿಗೆ 92 ಮಂದಿಗೆ ಇದೇ ರೀತಿಯ ಅರ್ಧ ಚಂದ್ರ ಪ್ರಯೋಗ ಮಾಡಲಾಗಿತ್ತು.

ಉತ್ತರ ಪ್ರದೇಶದಲ್ಲಿ ಅಧಿಕೃತ ಕಾಂಗ್ರೆಸ್ಸಿಗರ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದ 49 ಕಾಂಗ್ರೆಸ್ಸಿಗರನ್ನು 6 ವರ್ಷಗಳ ತನಕ ಕಾಂಗ್ರೆಸಿನಲ್ಲಿರತಕ್ಕದಲ್ಲವೆಂದು ಹೊರತಳ್ಳಲಾಗಿದೆ.

ಕಾಶ್ಮೀರ ಪ್ರಶ್ನೆ ಹಿಂದೆ ಬಿತ್ತು

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ! ಗ್ರಾಹ್ಯಾಮರು ಕಾಶ್ಮೀರ ಸಮಸ್ಯೆಯ ಬಗ್ಗೆ ಪ್ಯಾರಿಸದಲ್ಲಿ ಭಾರತ ಹಾಗೂ ಪಾಕ್ ರಾಯಭಾರಿಗಳೊಡನೆ ನಡೆಸಿದ ಮಾತುಕತೆಗಳು ಇನ್ನೂ ಒಂದು ನಿರ್ಧಾರಕ್ಕೆ ಬರಲು ಸಹಾಯಕವಾಗಿಲ್ಲವೆಂದು ತಿಳಿಯುತ್ತದೆ. ಗ್ರಾಹ್ಯಾಮರಿಗೆ ಕೊಟ್ಟಿರುವ ಎರಡು ವಾರಗಳ ಅವಧಿಯು ದಶಂಬರ 22ಕ್ಕೆ ಮುಕ್ತಾಯಗೊಳ್ಳಲಿದ್ದು ಶ್ರೀ ನೆಹ್ರೂರವರು ಭಾರತದ ಸಾರ್ವತ್ರಿಕ ಚುನಾವಣೆಯ ನಂತರದ ಬರುವಿನ ಕಾಲದ ವರೆಗೆ ಈ ಪ್ರಶ್ನೆಯನ್ನು ಮುಂದೂಡಬಹುದೆಂದು ತಿಳಿಯುತ್ತದೆ.

ಕಾಂಗ್ರೆಸ ತ್ಯಜಿಸಿದ ಮೈಸೂರ ಕಾಂಗ್ರೆಸಿಗರು

ಮೈಸೂರ ರಾಜ್ಯದಲ್ಲಿ ಒಟ್ಟು 322 ಜನ ಕಾಂಗ್ರೆಸನ್ನು ತ್ಯಜಿಸಿದ್ದು ಅವರಲ್ಲಿ 33 ಜನರು ಸ್ವತಂತ್ರ ಹುರಿಯಾಳುಗಳಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿರುವರು.

ಬೆಂಗಳೂರಲ್ಲಿ ಯಂತ್ರೋಪಕರಣ ಕಾರಖಾನೆ.

ಸಂರಕ್ಷಣೆ, ರೇಲ್ವೆ, ಮತ್ತು ಕಬ್ಬಿಣ ಕೈಗಾರಿಕೆಗೆ ಆವಶ್ಯವಾದ ಯಂತ್ರ ಭಾಗಗಳನ್ನು ಯಾವ ಕೊರತೆಯೂ ಇಲ್ಲದೆ ತಯಾರಿಸಲು ಯಂತ್ರೋಪಕರಣದ ಶಾಖೆಯೊಂದನ್ನು 10 ಕೋಟಿ ರೂ. ವೆಚ್ಚಗಳ ಮೂಲಕ ಬೆಂಗಳೂರಲ್ಲಿ ತೆರೆಯುವ ನಿರ್ಧಾರವನ್ನು ಭಾರತ ಸರಕಾರ ಮಾಡಿದೆ. ಇದು ಭಾರತದ ಪ್ರಥಮ ಯಂತ್ರೋಪಕರಣ ಕಾರಖಾನೆಯಾಗುವದು.

ಮದ್ರಾಸದಲ್ಲಿ ಪಾನನಿರೋಧ ಪ್ರಗತಿ.

ಮದ್ರಾಸ ಪ್ರಾಂತದಲ್ಲಿ ಕೈಗೊಂಡಿರುವ ಪಾನನಿರೋಧ ಕ್ರಮದಿಂದ ಕುಡಿತದ ಚಟವಿದ್ದವರ ಆರ್ಥಿಕ, ಸಾಮಾಜಿಕ, ಸ್ಥಿತಿಯಲ್ಲಿ ಸುಧಾರಣೆಯಾಗಿದೆಂದು ಮದ್ರಾಸ ಸರಕಾರವು ಯೋಜನಾ ಆಯೋಗದವರಿಗೆ ತಿಳಿಸಿದೆ.

ನೆಹ್ರೂರವರ ಸಂಬಳವೆಷ್ಟು?

ಪಂ ನೆಹ್ರೂರವರು ಹೈದರಾಬಾದದಲ್ಲಿ ಮಾತನಾಡುತ್ತ, ಸರಕಾರದ ನೌಕರರಿಗೆ ಕೈತುಂಬ ಸಂಬಳ ದೊರೆಯುವದೆಂಬ ವಿಧಾನವನ್ನು ನಿರಾಕರಿಸಿ ಮುಖ್ಯ ಮಂತ್ರಿಗಳಿಂದ ತಮಗೆ ಎಲ್ಲ ಕರ ಕೊಟ್ಟ ನಂತರ ತಿಂಗಳಿಗೆ ಕೇವಲ 1950 ರೂ. ಮಾತ್ರ ಸಿಗುವದೆಂದು ಹೇಳಿದರು.

ರಶಿಯಾದ ಅಣುಶಕ್ತಿಯೆಷ್ಟು?

ರಶಿಯವು ವರ್ಷಕ್ಕೆ 120ರಿಂದ 150ರ ವರೆಗೆ ಅಣು ಬಾಂಬುಗಳನ್ನು ಸಿದ್ಧಪಡಿಸಲು ಶಕ್ಯವಾಗಿದ್ದು ಒಂದು ನಗರವನ್ನು ಧ್ವಂಸ ಮಾಡಲು ಮೂರು ಅಣು ಬಾಂಬಿದ್ದರೆ ಸಾಕಾಗುವದು. ಅಂತೆಯೇ ಅಮೆರಿಕೆಯಲ್ಲಿ 69 ದೊಡ್ಡ ನಗರಗಳನ್ನು ಧ್ವಂಸ ಮಾಡಲು ರಶಿಯಾ ಬಳಿ 307 ಅಣು ಬಾಂಬುಗಳ ಸಂಗ್ರಹವಾದರೆ ತೀರಿತು. ಇನ್ನು ಒಂದು ವರ್ಷದೊಳಗಾಗಿ ರಶಿಯವು ಅಮೇರಿಕೆಯ 69 ನಗರಗಳ ಮೇಲೆ ಏಕಕಾಲಕ್ಕೆ ಅಣು ಬಾಂಬುಗಳನ್ನು ಒಗೆಯಲು ಸಮರ್ಥವಾಗುವದೆಂದು ಅಮೇರಿಕ ಚೇಂಬರ್ಸದಲ್ಲಿ ನಾಗರಿಕ ಸಂರಕ್ಷಣ ಖಾತೆಯ ಆಡಳಿತಗಾರರಾದ ಜೆ. ಎಸ್. ಚೇಂಬರ್ಸರು ಹೇಳಿದರು.

ಕೊರಿಯಾ ಯುದ್ಧ ಮುಕ್ತಾಯದಲ್ಲಿ ಟ್ರುಮನ್ನರ ಆತುರ.

ಕೊರಿಯ ಯುದ್ಧ ವಿರಾಮ ಒಪ್ಪಂದವನ್ನು ಡಿಸೆಂಬರ 27ರ ಒಳಗಾಗಿ ಸಾಧಿಸತಕ್ಕದ್ದೆಂಬು ಆವೇದಲು ಹಾಕಿದ ಕಾಲ ಮರ್ಯಾದೆಗಳನ್ನು ಹೆಚ್ಚಿಸುವ ವಿಚಾರದಲ್ಲಿ ಹೆಚ್ಚಿನ ಬೆಂಬಲ ಸಿಕ್ಕಿರುವುದು. ಅಧ್ಯಕ್ಷ ಟ್ರೂಮನ್ನರು ಸೇನಾಪತಿಗಳೊಡನೆ ಮಂತ್ರಾಲೋಚನೆ ನಡೆಸಿದ್ದು ಕೊರಿಯ ಯುದ್ಧ ವಿರಾಮ ಒಪ್ಪಂದ ಸಾಧಿಸುವ ವಿಷಯದಲ್ಲಿ ಹೆಚ್ಚಿನ ಆಶಾವಾದಕ್ಕೆ ಎಡೆ ದೊರಕಿದೆ.

ಬ್ರಿಟಿಷರ ಯಾಚನೆ

ಇಜಿಪ್ತದಲ್ಲಿ ಬ್ರಿಟಿಶ ಸೈನಿಕರು ನೆಲಸಿವು ಮಾಡಿರುವ ಮನೆಗಳ ಪರಿಹಾರವನ್ನೇರ್ಪಡಿಸಲು ತಮಗೆ ನೆರವಾಗಬೇಕೆಂದು ಇಜಿಪ್ತನರೊಡನೆ ವಿನಂತಿ ಮಾಡಿಕೊಂಡಿರುವರು.

ಇಜಿಪ್ತ ಬ್ರಿಟನ ಸಂಬಂಧ

ಇಜಿಪ್ತದ 13 ಮಂತ್ರಿಗಳು ದೀರ್ಘ ಚರ್ಚೆನಡೆಸಿದ ನಂತರ ಲಂಡನದಲ್ಲಿ ಇಜಿಪ್ತದ ರಾಯಭಾರಿಯನ್ನು ಹಿಂದೆಕರೆದುಕೊಳ್ಳಬೇಕೆನ್ನುವ ನಿರ್ಧಾರಕ್ಕೆಬಂದಿತು. ಬ್ರಿಟನ ಇಜಿಪ್ತದ ಸಂಬಂಧವು ತೀರ ವಿಕೋಪಕ್ಕೆ ಹೋಗಿರುವದೇ ಇದಕ್ಕೆ ಮುಖ್ಯ ಕಾರಣ



ಅಮೃತ ಎಂಡ್ ಕೊ. ನಂಬ್ರ 419.

ರೂಪಾಯಿ 60,000 ಪಡೆಯಿರಿ.

ಪ್ರಥಮ ಇನಾಮು-ಸರ್ವಸಮ ರೂ 50,000
ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ. 10,000
ಅತ್ಯಧಿಕ ಪ್ರವೇಶಗಳನ್ನು ಕಳುಹಿಸುವವರಿಗೆ ವಿಶೇಷ ಪಾರಿತೋಷ ರೂ 1,000

ಒಂದು ಪ್ರವೇಶಕ್ಕೆ 1 ರೂಪಾಯಿ. 16 ರೂಪಾಯಿಗಳಿಗೆ 24 ಉತ್ತರಗಳನ್ನು ಕಳುಹಿಸಬಹುದು. ಉತ್ತರ ಸ್ವೀಕರಿಸುವ ಕೊನೆಯದಿನ 5-1-52. ಅಪೇಕ್ಷಿಸಿದ್ದಲ್ಲಿ ನಿಬಂಧನೆ ದೊರಕುವುವು

			9	

ಚೌಕದಲ್ಲಿಯ ಕಣಗಳಲ್ಲಿಯ ಒಟ್ಟು ಮೊತ್ತವು 45 ನಾಲ್ವತ್ತೈದು. ಬರುವಂತೆ 7 ರಿಂದ 11ರ ವರೆಗಿನ ಅಂಕಗಳನ್ನು ಒಮ್ಮೆ ಮಾತ್ರ ಉಪಯೋಗಿಸಿರಿ. ಕಣದಲ್ಲಿ ತೋರಿಸಿದ 9 ಅಂಕೆಯನ್ನು ಬದಲಾಯಿಸಕೂಡದು.

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು. ಮನಿಯಾರ್ಡರ್ ರಶೀದಿಯನ್ನಾಗಲೀ, ಕ್ರಾಸ್ ಮಾಡಿದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ. ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು. ಉತ್ತರ ಕಳುಹಿಸತಕ್ಕ ವಿಳಾಸ

The Manager, AMIRTA & CO (Govt Regd)
(419 A) MADURAI, S. India.

ಅಮೃತ ಎಂಡ್ ಕೊ ನಂಬ್ರ 405ನೆ ಸ್ಪರ್ಧೆಯ ಉತ್ತರ: 21 18 20 19 ಎಲ್ಲಾ ಸರಿಯಾದ ಉತ್ತರಕ್ಕೆ ಪ್ರಥಮ ಬಹುಮಾನ ರೂ. 3150, ಪ್ರಥಮ ಎರಡು ಅಂಕೆಗಳು ಸರಿಯಾದ ಉತ್ತರಕ್ಕೆ ರೂ 1975 4 0 ಬಹುಮಾನ ಕೊಡಲಾಗಿದೆ. ಅತ್ಯಧಿಕ ಪ್ರವೇಶ (29)ಗಳನ್ನು ಕಳುಹಿಸಿದವರು ರೂ 97 ಬಹುಮಾನ ಪಡೆದಿರುತ್ತಾರೆ



ವಿವಿಧ ಪಾತ್ರೆಗಳು

ದೇವತಾರ್ಚನೆಗೆ ಬೇಕಾಗುವ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಸೊರದಬಾದ ನ್ಯ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಶಿಲ್ಪಂಚಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೦-೧೨-'೫೧

ನೆಹ್ರೂರವರ ಜಿಲ್ಲಾ ಸಂದರ್ಶನ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರಲಾಲ ನೆಹ್ರೂರವರು ಬರುವ ವಾರ ನಮ್ಮ ಜಿಲ್ಲೆಯನ್ನು ಸಂದರ್ಶಿಸುವರೆಂದು ಗೊತ್ತಾಗಿದೆ. ರಾಜಕೀಯ ಕಾರಭಾರ ಹಾಗೂ ಚುನಾವಣಾ ವಿಚಾರಗಳ ವಿಶೇಷ ಭಾರವನ್ನು ಹೊತ್ತಿರುವ ಈ ಸಂಧಿಗ್ಧ ಪರಿಸ್ಥಿತಿಯಲ್ಲೂ ಶ್ರೀ ನೆಹ್ರೂರವರು ಜನತೆಯ ಮುಂದೆ ಯಥಾರ್ಥ ವಿಚಾರವನ್ನು ಇಡುವದಕ್ಕೆ ದಿವಾರಾತ್ರಿಯೆಂಬಂತೆ ಚುನಾವಣಾ ಪ್ರಚಾರ ಕೈಗೊಂಡಿರುವರು. ಕಾಂಗ್ರೆಸ್ಸಿನ ನಾಲ್ಕು ವರ್ಷದ ಆಡಳಿತದಲ್ಲಿಯ ಪ್ರಗತಿ-ಇಲ್ಲವೆ ಬಿಕ್ಕಟ್ಟು-ಲೋಪದೋಷಗಳ ಪರಿಪೂರ್ಣ ಜ್ಞಾನವಿಲ್ಲದೆಯೂ, ವಿರೋಧಿಗಳ ಅಸತ್ಯ ಆರೋಪಗಳನ್ನು ಖಂಡಿಸುವವರಿಲ್ಲದೆಯೂ, ಕಾಂಗ್ರೆಸ್ಸಿನ ಬಗ್ಗೆ ಜನತೆಯ ವಿಶ್ವಾಸ ಆದರ ಕೊಂಚ ಮಟ್ಟಿಗೆ ಕಡಿಮೆಯಾಗಬಹುದು. ಇದನ್ನು ತಿಳಿಸೀ ಸರಿಯಾದ ಮಾರ್ಗದರ್ಶನ ಮಾಡಲು ಶ್ರೀ ನೆಹ್ರೂರವರೇ ಸಮರ್ಥರಾಗಿದ್ದಾರೆ. ಪ್ರಾಯಃ ನಮ್ಮಲ್ಲಿಯ ಎಲ್ಲ ಪಕ್ಷಗಳ ಧುರೀಣರಿಗೂ ನೆಹ್ರೂ ವ್ಯಕ್ತಿತ್ವದ ಮೇಲೆ ಅವರ ನಿಸ್ವಾರ್ಥಸೇವೆಯ ಮೇಲೆ - ಮುಚ್ಚುಮರೆಯಿಲ್ಲದ ಸ್ಪಷ್ಟ ಪ್ರಕೃತಿಯ ಮೇಲೆ ಬಹುಮಟ್ಟಿಗೆ ಗೌರವವಿದೆ. ಇಂದು ವಿರೋಧಿ ಪಕ್ಷಗಳವರಿಗೆ ನೆಹ್ರೂರವರು ಟೀಕೆಪಾತ್ರರಾಗಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ವಿರೋಧಿ ಪಕ್ಷಕ್ಕೂ ಸ್ಥಾನವಿದೆ. ಸಮಾಜವಾದಿಗಳಲ್ಲಿಯೂ, ಪ್ರಜಾಪಾರ್ಟಿಯಲ್ಲಿಯೂ ನನ್ನ ಆತ್ಮೀಯರಿದ್ದಾರೆ- ಅವರ ವಿಚಾರ ಸರಣಿಯ ಮೇಲೆ ನನಗೆ ಆದರವಿದೆಯೆನ್ನುತ್ತಾರೆ. ಕಮ್ಯೂನಿಸ್ಟರ ತತ್ವವನ್ನು ಪೂರ್ತಿಯಲ್ಲವಾದರೂ ಬಹುಮಟ್ಟಿಗೆ ಒಪ್ಪುವ- ನಿಮ್ಮನ್ನೇಕೆ ರಂತೆ ಜ್ಞಾನವರಿಂದ ದೂರಸರಿದಿಲ್ಲವೆಂದು ಅವರು ಹೇಳಿರುವರು. ಈ ಅಂಶವನ್ನು ವಿರೋಧಿ ಪಕ್ಷಗಳವರು ಶ್ಲಾಘಿಸಬಹುದು. ಆದರೆ ಮರ್ಯಾದೆ - ಗಾಂಭೀರ್ಯ ಬಿಟ್ಟು ವರ್ತಿಸುತ್ತಿರುವುದನ್ನು ಖಂಡಿಸಿದರೆ- ಅಸತ್ಯ ಪ್ರತಿಪಾದನೆಯನ್ನು ಬಯಲಿಗೆಳೆದು ಅವರ ಬಾಯಿಗೆ ಬೀಗಹಾಕಿದಾಗ ಸಹಜವಾಗಿಯೂ ವಿರೋಧಿ ಪಕ್ಷದವರಿಗೆ ನೆಹ್ರೂ ಪಥ್ಯವಾಗುವದಿಲ್ಲ. ಅಪ್ರಿಯರಾಗುತ್ತಾರೆ. ವಿರೋಧಿಗಳು "ನೆಹ್ರೂರವರೊಬ್ಬರು ಒಳ್ಳೆಯವರಾದರೇನ?" ಎಂದು ಹೇಳುವದು ಜನತೆಯ ಒಲವು- ವಿಶ್ವಾಸಾದರಗಳು ನೆಹ್ರೂರವರ ಕಡೆಗೆ ಇರುವದರಿಂದಲೇ.

ಸಧ್ಯದ ಕಲುಷಿತ ರಾಜ್ಯದ ವಾತಾವರಣದಿಂದ ಜನತೆ ಒಂದು ಬಗೆಯ ಗೊಂದಲ-ಗೋಜಲಕ್ಕೆ ಒಳಗಾಗಿದ್ದಾರೆ. ದೇಶದ ಮೂಲೆ ಮೂಲೆಗಳಲ್ಲಿ- ದೇಶಕಾಲ ಪರಿಸ್ಥಿತಿಗಳನ್ನು ಹೊಂದಿಕೊಂಡು ಕ್ಷಣಕ್ಷಣಕ್ಕೊಂದು ತತ್ವ ಆದರ್ಶಗಳನ್ನು ಹೇಳುತ್ತ, ಮಾತಿನ ಮಲ್ಲತನದಿಂದ ಪಂಥಯಾಚಿಸುತ್ತಿರುವ ವಿರೋಧಿಪಕ್ಷಗಳ ಕಾಟ ಅತಿಯಾಗಿದೆ. ಮಾತ್ರವಲ್ಲ, ರಾಜಕೀಯರಂಗವನ್ನೇ ಹಾಳುಗೆಡಹಿ ರಾಜಕೀಯವೆಂಬುದು ಮೋಸ-ವಂಚನೆ ಏನೋ ಒಂದು ಬಗೆಯ ಸ್ವಾರ್ಥಸಾಧನೆಯ ಮೇಲಾಟವೆನ್ನುವ ಭಾವನೆ ಜನತೆಯಲ್ಲಿ ಮೂಡಿಯದೆ. ಸ್ವೈರಿಯಲ್ಲಿ ತಿವಿಯಾಗಿ ತಲೆಯಾಗಿ ಕೇಳಿದರೂ ಲೇಶಮಾತ್ರವೂ ನಂಬಿಗೆ ಹುಟ್ಟದಂತಹ ಪರಿಸ್ಥಿತಿ ಉಂಟಾಗಿದೆ. ಧಾರ್ಮಿಕರೀತಿಯ ಬೆದರಿಕೆಯೊಂದೆಡೆ ಜನರನ್ನು ದಂಗುಬಡಿಸಿದರೆ ಅತಿಸ್ಪಷ್ಟಿಯ, ದುರುಪಯೋಗ ವಂಚನೆ ಇನ್ನೊಂದು ಕಡೆ ತಪ್ಪುದಾರಿಗೆ ಹಚ್ಚಿದೆ. ಇದನ್ನೆಲ್ಲಾ ದುರಸ್ತಿಪಡಿಸಿ ಸರಿಮಾರ್ಗಕ್ಕೆ ಹಚ್ಚುವ ಒಂದು ವ್ಯಕ್ತಿಯಿರುವದಾದರೆ ಅದು ಶ್ರೀ ನೆಹ್ರೂರವರು. ಜನತೆ ಕೊನೆಗಾದರೂ ಒಂದು ವ್ಯಕ್ತಿಯ ಆದೇಶವಂತೆ ಭಕ್ತಿಯಿಂದ ನಡೆದುಕೊಳ್ಳುವದಾದರೆ ಅದು ಶ್ರೀ ನೆಹ್ರೂರವರನ್ನೇ. ಏಕೆಂದರೆ ಅವರ ರಾಜಕೀಯ ಧೋರಣೆ- ಲೋಪದೋಷಗಳ ಸ್ಪಷ್ಟೋಕ್ತಿ- ನಿರ್ದಿಷ್ಟವಾದ ಪಕ್ಷ ಸಮರ್ಥನೆಗಳ ಮೇಲೆ ಜನತೆ ನಂಬುಗೆಯನ್ನಿಟ್ಟುಕೊಂಡು ಬಂದಿದೆ.

ನೆಹ್ರೂ ಪ್ರವಾಹದೊಂದಿಗೆ ತೇಲಾಡುವ ವ್ಯಕ್ತಿಯಲ್ಲ. ಭ್ರಾಂತೀಯ ಮನೋಭಾವನೆಯಂತೆ ತಮ್ಮ ಪ್ರೀತ್ಯರ್ಥವಾಗಿ ಎಂದೂ ಅವರು ಸುಳ್ಳು ಭರವಸೆಯನ್ನು ನೀಡಿದವರಲ್ಲ. ಹೈದರಾಬಾದಿಗೆ ಬಂದಾಗ ಅಲ್ಲಿ ಕಮ್ಯೂನಿಸ್ಟ ಪಕ್ಷದವರು ಹೆಚ್ಚಿಂದ ಅವರನ್ನು ಒಲಿಸುವ ಒಂದೇ ಒಂದು ನುಡಿಯನ್ನು ಅವರು ಆಡಿದ್ದಿಲ್ಲ. ಕಮ್ಯೂನಿಸ್ಟರ ವಿಧ್ವಂಸಕ ಕೃತಿಯ ಮೇಲೆ ನೇರ ಹಾಗೂ ಸ್ಪಷ್ಟವಾದ ಮಾತನ್ನೇ ಆಡಿದ್ದಾರೆ. ಮಾತಿನ ಮಾಟಕಸ್ಟು ಸಂಬಂಧವನ್ನು ಕಲ್ಪಿಸಿಕೊಂಡು ನುಡಿಯುವ ಸಾಹಸವನ್ನೆಂದೂ ಅವರು ಮಾಡಿದ್ದಿಲ್ಲ. ಕಾಂಗ್ರೆಸ್ಸಿನ ತಪ್ಪನ್ನು ಬಿಚ್ಚು ಮನಸ್ಸಿನಿಂದ ಒಪ್ಪಿಕೊಂಡದ್ದು ಒಂದಲ್ಲ; ಹಲವು ಸಲ. ಅಂತಲೇ ನೆಹ್ರೂರವರ ನಿಲುಮೆಯ ಬಗ್ಗೆ ಜನತೆಯು ಸಂಪೂರ್ಣ ಸಹಕಾರ ಹಾಗೂ ವಿಶ್ವಾಸ ಪ್ರದರ್ಶನ ವ್ಯಕ್ತಪಡಿಸಿದೆ.

ನಮ್ಮ ಜಿಲ್ಲೆಯೊಳಗೆ ಚುನಾವಣಾ ದ್ವಂದ್ವದಲ್ಲಿ ಭಾಗವಹಿಸಿರುವ ಬೇರೆ ಬೇರೆ ಪಕ್ಷಗಳ ಹಾವಳಿ ಅತಿಯಾಗಿದೆ. ಇಂತಹ ಸಮಯದಲ್ಲಿ ಶ್ರೀ ನೆಹ್ರೂರವರು ನಮ್ಮ ಜಿಲ್ಲೆಗೆ ಭೆಟ್ಟಿಯನ್ನಿತ್ತು ಜನತೆಗೆ ಸರಿಯಾದ ಮಾರ್ಗದರ್ಶನ ಮಾಡುವದು ಉಚಿತವೇ ಆಗಿದೆ. ನಮ್ಮ ಒಲವು-ಆತ್ಮವಿಶ್ವಾಸ ನೆಹ್ರೂರವರ ಕಡೆಗೇನೆ ಎಂಬುದನ್ನು ನಮ್ಮ ಜನ ಆಗ ತೋರಿಸಿಕೊಟ್ಟಾರೆಂಬುದರಲ್ಲಿ ಸಂದೇಹವೇ ಇಲ್ಲ. ತನಗಿರುವ ಅತ್ಯಲ್ಪ ಕಾಲಾವಕಾಶದಲ್ಲಿ ಈ ಜಿಲ್ಲೆಗೆ ಭೆಟ್ಟಿನೀಯುವ ಔದಾರ್ಯವನ್ನು ತೋರಿದ ಶ್ರೀ ನೆಹ್ರೂರವರನ್ನು ಅತ್ಯಂತ ಅಭಿಮಾನದಿಂದ ಸ್ವಾಗತಿಸುತ್ತೇವೆ.

ಜಾನುವಾರು ಪೋಷಣೆಯ ಆವಶ್ಯಕತೆ.

ಇದೇ ತಾ. 18ರಲ್ಲಿ ಸೀತಾನದಿ ಜಾನುವಾರು ಸಂತೆಯ ಪಾರಿತೋಷಕ ವಿತರಣ ಕಾಲದಲ್ಲಿ ಮಾನ್ಯ ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರ ಭಾಷಣ.

'ಈ ಜಿಲ್ಲೆಯ ಉತ್ತರ ಭಾಗದ ಜನರ ಸೌಕರ್ಯಕ್ಕಾಗಿ ವರ್ಷಂಪ್ರತಿಯೂ ಈ ಸ್ಥಳದಲ್ಲಿ ಜಾನುವಾರು ಸಂತೆಯನ್ನು ಸತತ ಏರ್ಪಡಿಸುತ್ತಿರುವ ಶ್ರೀ ಹೆಬ್ರಿ ಭುಜಂಗ ಬಲ್ಲಾಳರಿಗೆ ಈ ಭಾಗದ ಜನರು ಚಿರಋಣಿಗಳಾಗಿರುತ್ತಾರೆ. ನಮ್ಮ ಜಿಲ್ಲೆಯ ಜಾನುವಾರು ಸಾಕಣೆಯು ಗಣನೀಯ ಮಟ್ಟವನ್ನೇರಿಲ್ಲ. ಇಲ್ಲಿಯ ಜಾನುವಾರುಗಳು ಗಾತ್ರದಲ್ಲಾಗಲೀ ಹಾಲು ಕೊಡುವುದರಲ್ಲಾಗಲೀ ಕೆಳಮಟ್ಟದಲ್ಲಿವೆ. ನಮ್ಮ ಜಿಲ್ಲೆಯ ಕೊಳಕಂದ ಮತ್ತು ಸೀತಾನದಿ ಈ ಎರಡು ಸ್ಥಳಗಳಲ್ಲಿ ಮಾತ್ರ ಜಾನುವಾರು ಸಂತೆಗಳು ನಡೆಯುತ್ತಿದ್ದು ಅವು ಮಾತ್ರವೇ ಈ ಜಿಲ್ಲೆಯವರಿಗೆ ಮಾರ್ಗದರ್ಶನ ಮಾಡುತ್ತಲಿವೆ. ಆದರೆ ಈ ಸಂತೆಗಳಿಗೆ ಮೈಸೂರೇ ಜೀವಾಳವಾಗಿದೆ. ಆಕಾರದ ಸರ್ವಸಾಧಾರಣ ಹೆಚ್ಚಿನ ಜಾನುವಾರುಗಳು ಆ ಪ್ರಾಂತದಿಂದಲೇ ಬರುತ್ತವೆ. ಹೀಗೆ ಬರುವ ಜಾನುವಾರುಗಳಿಗೆ ಸಾಂಕ್ರಾಮಿಕ ರೋಗವು ತಲೆದೋರಿ ಅವು ಸಾಯದಂತೆ ಬಳ್ಳಲಾತನ ಇಲಾಖೆಯಿಂದ ತಕ್ಕ ನಿಗಾ ತೆಗೆದುಕೊಳ್ಳಲಾಗುತ್ತಿದೆ.

ಜಾನುವಾರು ಕಾಯಿಲೆಯ ನಿರ್ಮೂಲನ

ಸರ್ವಸಾಧಾರಣ ಜಾನುವಾರುಗಳಿಗೆ ತಗಲುವ ಕಾಯಿಲೆಗಳಲ್ಲಿ 'ರಿಂಡರ್ ಪೆಸ್ಟ್' ಎನ್ನುವಂತಾದ್ದು ಹೆಚ್ಚಿನ ಜಾನುವಾರುಗಳ ಪ್ರಾಣವನ್ನೇ ಹೀರುವಂತಹದಾಗಿದೆ. ಈ ಕಾಯಿಲೆಯ ದೆಸೆಯಿಂದಾಗಿ ಕೃಷಿಕರ ಜಾನುವಾರು ಸಂಖ್ಯೆಯು ಕ್ಷೀಣಾಂಶವನ್ನು ಹೊಂದುವುದು. ಈ ಕಾಯಿಲೆಯನ್ನು ತಡೆಗಟ್ಟುವುದಕ್ಕಾಗಿ ಸರಕಾರವು ಒಂದು ಹೊಸ ಯೋಜನೆಯನ್ನು ಆಲೋಚಿಸುತ್ತಲಿರುವುದು. ಈ ಯೋಜನೆಯಂತೆ ಸುಲಭರೀತಿಯ ದಾರವನ್ನು ಕಾಯಿಲೆ ಸೋಂಕದ ಜಾನುವಾರುಗಳಿಗೆ ಹಾಕುವಂಥಾದ್ದು. ಅದೃಷ್ಟವಶಾತ್ ನಮ್ಮ ಮುದ್ರಾಸು ಪ್ರಾಂತ್ಯದಲ್ಲಿ ಈ ಕಾರ್ಯವು ಈಗಾಗಲೇ ಪ್ರಾರಂಭಿಸಲ್ಪಟ್ಟಿದೆ. ಕಳೆದ ಮೂರು ವರುಷಗಳ ಅವಧಿಯಲ್ಲಿ ನಮ್ಮ ಪ್ರಾಂತದ ಹದಿನೈದು ಜಿಲ್ಲೆಗಳಲ್ಲಿ ಮೇಲೆಹೇಳಿದ 'ರಿಂಡರ್ ಪೆಸ್ಟ್' ರೋಗದ ಸೋಂಕದೆ ಇದ್ದಿಲ್ಲ. ಇದು ನಿಜವಾಗಿಯೂ ನಮ್ಮ ಪ್ರಾಂತದ ಬಳ್ಳಲತನ ಶಾಖೆಯ ಸಾಹಸದ ಕಾರ್ಯ. ಮುದ್ರಾಸು ಚೆಂಗಲ್ಪಟ್ಟು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಈ ಸೋಂಕೆಯು ಪ್ರಾರಂಭವಾಗುವಷ್ಟರಲ್ಲೇ ತಕ್ಕ ನಿಗಾ ತೆಗೆದುಕೊಂಡು ಅವು ಹರಡದಂತೆ ಕಾರ್ಯಕ್ರಮ ಕೈಗೊಂಡಿತ್ತು. ಈ ಕಾಯಿಲೆಯ ನಿರ್ಮೂಲನಕ್ಕಾಗಿ ಇಂತಹ ಜಾನುವಾರು ಸಂತೆಗಳಿಗೆ ಪರಜಿಲ್ಲೆಗಳಿಂದ ಬರುವಂತವುಗಳಿಗೆ ಸಾಮುದಾಯಿಕವಾಗಿ ಇನಾಕ್ಯುಲೇಶನ್ ಮಾಡುವುದೊಂದೇ ಪ್ರಬಲ ಸಾಧನವಾಗಿದೆ. ಈ ಪ್ರಾಂತದಲ್ಲಿ ವರ್ಷಪೂರ್ತಿ ಸರಾಸರಿ ಎಂಟೂವರೆ ಲಕ್ಷ ಜಾನುವಾರುಗಳನ್ನು ಇನಾಕ್ಯುಲೇಶನ್ ಕ್ರಮದಿಂದಲೇ ಬದುಕಿಸಲಾಗುತ್ತಿದೆ. ಈ ವರುಷದಲ್ಲಿ ಸಾಧಾರಣ ಮೂರೂವರೆ ಲಕ್ಷ ಜಾನುವಾರುಗಳಿಗೆ ಇನಾಕ್ಯುಲೇಶನ್ ಮಾಡಲಾಗುವುದು' ಮುಂದಿನ 1952-53ರಲ್ಲಿ ಹತ್ತು ಲಕ್ಷ ಜಾನುವಾರುಗಳಿಗೆ ಈ ಪ್ರಯೋಗ ನಡೆಸುವ ಯೋಜನೆ ನಡೆದಿದೆ.

ಜಾನುವಾರು ಪೋಷಣೆಯ ಆವಶ್ಯಕತೆ

ನಮ್ಮ ಜಾನುವಾರುಗಳು ಪುಷ್ಟಿಯಾಗಿ ಬೆಳೆದು ಸಮೃದ್ಧಿ ಹಾಲು ಕೊಡುವಂತಾಗಬೇಕಾದರೆ ಅವುಗಳಿಗೆ ಸಾಕಷ್ಟು ಉತ್ತಮ ಆಹಾರವನ್ನೀಯಬೇಕು. ಅಲ್ಲದೆ ಯೋಗ್ಯ ತಳಿಗಾಗಿ ಉತ್ತಮ ಬಸವ, ಕೋಣಗಳು ಬೇಕು. ನಮ್ಮ ಹಳ್ಳಿ ಜಾನುವಾರುಗಳು ಒಣ ಹುಲ್ಲು ತಿಂದು, ಹುಲ್ಲುಗಾವಲಲ್ಲಿ ಮೇದು ಜೀವಿಸುತ್ತವೆ. ಬೇಸಿಗೆ ಕಾಲದಲ್ಲಂತೂ ಹಸಿ ಹುಲ್ಲಿನ ಅಭಾವ ಇದ್ದೇ ಇದೆ. ಮಳೆಗಾಲದಲ್ಲಿ ಸಮೃದ್ಧಿಯಾಗಿ ದೊರೆಯುವ ಹುಲ್ಲನ್ನು ಬೇಸಿಗೆ ಕಾಲಕ್ಕಾಗಿ ಕೂಡಿಸಿಡುವುದು ಅತೀ ಅಗತ್ಯವಿದೆ. ಈ ವಿಧಾನವನ್ನು ನಮ್ಮ ಜಿಲ್ಲೆಯ ಕೊಯಿಲಾ ಕ್ಷೇತ್ರದಲ್ಲಿ ಪ್ರದರ್ಶಿಸಲಾಗುತ್ತಿದೆ. ಪೌಷ್ಟಿಕ ಬೆಳೆಯುಳ್ಳ ನೇಪಿಯರ್ ಮತ್ತು ಗಿನಿಯ ಹುಲ್ಲು ಕೂಡಾ ಈ ಕ್ಷೇತ್ರದಲ್ಲಿ ಬೆಳೆಸಲಾಗುತ್ತಿದೆ. ಇಂತಹ ಆಹಾರವನ್ನು ಅಕ್ಕಿಯ ತೌಡು, ಹುರುಳಿ, ಹತ್ತಿಬೀಜವನ್ನು ಸಮೃದ್ಧಿಯಾಗಿ ಜಾನುವಾರುಗಳ ಪೋಷಣೆಗಾಗಿ ಉಪಯೋಗಿಸಬೇಕು. ಪ್ರತಿಯೊಂದು ಗ್ರಾಮದಲ್ಲೂ ಉತ್ತಮ ಜಾತಿಯ ಹೋರಿ ಕೋಣಗಳನ್ನು ಇಡಬೇಕಾಗಿದೆ. ಇಂತಹವುಗಳಿಂದಲೇ ಮುಂದಿನ ಪೀಳಿಗೆಯು ಅಪೇಕ್ಷಿತ ರೀತಿಯಲ್ಲಾಗಿ ಜಾನುವಾರುಗಳ ಬೆಳವಣಿಗೆ ತೃಪ್ತಿಕರವಾಗಿ ಆಗಲು ಸಾಧ್ಯವಿದೆ. ಇದಕ್ಕಾಗಿ ಈ ಪ್ರಾಂತದಲ್ಲಿ ಮುಂದಿನ ನಾಲ್ಕು ವರುಷಗಳಲ್ಲಿ 96 ಗ್ರಾಮ ಕೇಂದ್ರಗಳನ್ನೂ ಆರಿಸಿದ್ದು ಈಗಾಗಲೇ ನಮ್ಮ ಪ್ರಾಂತದಲ್ಲಿ ಏಳು ಸರಕಾರಿ ಜಾನುವಾರು ಕ್ಷೇತ್ರಗಳಲ್ಲಿ ಒಂದೊಂದು 'ಸ್ಟಡ್ ಬುಲ್' ಇಡಲಾಗಿದೆ. ಪ್ರತಿಯೊಂದು ಕ್ಷೇತ್ರದ 'ಬುಲ್' ಹದಿಮೂರು ಗ್ರಾಮಗಳ ಆವಶ್ಯಕತೆಯನ್ನು ಪ್ರತ್ಯಕ್ಷ ವ ಅಪ್ರತ್ಯಕ್ಷ ರೂಪದಲ್ಲಿ ಪೂರೈಸುವುದಾಗಿದೆ. ಕೇಂದ್ರ ಸರಕಾರವು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ಕಾಗಿ ಮೂರು ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿದೆ. ಮುದ್ರಾಸು ಪ್ರಾಂತದಲ್ಲಿ ವೆಟರ್ನರಿ ಮತ್ತು ಹಾಲು ವಿತರಣ ಯೋಜನೆಗಳಿಗಾಗಿ ಒಂದೂವರೆ ಕೋಟಿ ರೂಪಾಯಿಯನ್ನು ಈ ಪ್ರಾಂತದ ಪಂಚವಾರ್ಷಿಕ ಯೋಜನೆಯಲ್ಲಿ ಮೀಸಲಾಗಿಟ್ಟಿದೆ.

ಜಾನುವಾರುಗಳಿಗೆ ತಗಲುವ ಕಾಯಿಲೆಗಳನ್ನು ನೀಗುವುದಕ್ಕಾಗಿ ಮಂಗಳೂರಲ್ಲೊಂದು ವೆಟರ್ನರಿ ಆಸ್ಪತ್ರೆಯೂ ಪುತ್ತೂರಲ್ಲಿ ವೆಟರ್ನರಿ ಡಿಸ್ಪೆನ್ಸರಿಯೂ ಕುಂದಾಪುರ, ಉಡುಪಿ, ಕಾರ್ಕಳ, ಕಾಸರಗೋಡುಗಳಲ್ಲಿ ಚಿಕ್ಕ ಪುಟ್ಟ ಡಿಸ್ಪೆನ್ಸರಿಗಳೂ ತೆರೆಯಲ್ಪಟ್ಟಿವೆ. ಮಲನಾಡು ಪ್ರಾಂತದಲ್ಲೂ ವೆಟರ್ನರಿ ಡಿಸ್ಪೆನ್ಸರಿಯೊಂದನ್ನು ತೆರೆಯುವ ಯೋಜನೆಯಿದೆ.

ಕೊಯಿಲಾ ಸರಕಾರಿ ಪಶುಕ್ಷೇತ್ರ

ಪುತ್ತೂರು ತಾಲೂಕಿನ ಉಪ್ಪಿನಂಗಡಿಯ ಸಮೀಪದ ಕೊಯಿಲಾ ಗ್ರಾಮದಲ್ಲಿ ಸರಕಾರೀ ಪಶುಕ್ಷೇತ್ರವೊಂದು ಈ ವರ್ಷ ತೆರೆಯಲಾಗಿದೆ. ಈ ಕ್ಷೇತ್ರವು 760 ಎಕ್ರೆ ವಿಸ್ತೀರ್ಣವುಳ್ಳದಾಗಿದ್ದು 24 ಸಿಂಧಿ 11 ಗಿರ್ ಕೆಟಲ್ ಮತ್ತು 66 ಮುದ್ರಕೋಣಗಳು ಪಶು ಸಂವರ್ಧನೆಗಾಗಿ ಇಡಲ್ಪಟ್ಟಿವೆ. ಧಾರವಾಡ ಕೋಣಗಳನ್ನು ತರಿಸುವ ಯೋಜನೆಯೂ ಬೇಗನೆ ಕಾರ್ಯರೂಪದಲ್ಲಿ ಬರಲಿರುವುದು. ಈ ಕ್ಷೇತ್ರದಲ್ಲಿ ಉತ್ತಮ ಕೋಳಿಗಳ ಸಾಕಣೆಯ ವ್ಯವಸ್ಥೆ ಇರುವುದು ಮಾತ್ರವಲ್ಲದೆ ಮೊಟ್ಟೆ ಮತ್ತು ಕೋಳಿಮರಿಗಳ ಮಾರಾಟದ ಏರ್ಪಾಡೂ ಇದೆ. ಜಾನುವಾರು ಸಂವರ್ಧನಾ ಕಾರ್ಯದಲ್ಲಿ ನಿರತರಾದವರು ಆಸಕ್ತಿಯುಳ್ಳವರೆಲ್ಲರೂ ಪ್ರತ್ಯೇಕ ರೈತರೆಲ್ಲರೂ ಈ ಕ್ಷೇತ್ರವನ್ನು ಬೇಗನೆ ಸಂದರ್ಶಿಸಿ ಅಲ್ಲಿ ದೊರೆಯಬಹುದಾದ ಅನುಭವವನ್ನು ಪಡೆಯಬಹುದಾಗಿದೆ. ಈ ಕ್ಷೇತ್ರವು ಹಲವಾರು ಕಟ್ಟಡಗಳಿಂದ 3.55 ಲಕ್ಷ ರೂಪಾಯಿಗಳಿಗೂ ಮಿಕ್ಕಿದ ವೆಚ್ಚದಿಂದ ಒಂದು ವರುಷದೊಳಗಾಗಿ ಸ್ಥಾಪಿಸಲ್ಪಟ್ಟಿದ್ದು ಈಗಿನ ಕಾಂಗ್ರೆಸ್ ಮಂತ್ರಿಮಂಡಲದ ಆಡಳಿತದಲ್ಲಿ ನಮ್ಮ ಜಿಲ್ಲೆಯ ಏಳಿಗೆಗಾಗಿ ಮಾಡಲ್ಪಟ್ಟ ಹಲವು ಮಹತ್ಕಾರ್ಯಗಳಲ್ಲಿ ಇದೊಂದಾಗಿದೆ.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಹೇಳಿಕೆ?

[ಬರೆದು ಬಂದುದು]

ಚುನಾವಣೆಯಲ್ಲಿ ಬೇರಾವ ರೀತಿಯಲ್ಲೂ ಗೆಲವು ಪಡೆಯುವ ಜನತೆಯ ಆಶಾದಾಯಕ ಒಲವು ಕಾಣದೆ ತತ್ತರಿಸುತಲಿದ್ದ ಈ ಜಿಲ್ಲೆಯ ಪ್ರಜಾಪಕ್ಷವು ಧಾರ್ಮಿಕ ಮತ ಸಂಸ್ಥೆಗಳ ಕಡೆಗೆ ಕಣ್ಣು ತಿರುಗಿಸಿ ಧರ್ಮಾಧಿಕಾರಿಗಳ ಶಿಫಾರಸುಗಳ ಮೂಲಕ ಮತದಾರರಿಗೆ ವಸ್ತ್ರಾಯ ಪಡಿಸುವ ಕುಯುಕ್ತಿಯನ್ನು ನಡಿಸಿರುವುದು ಶೋಚನೀಯವೆನ್ನಬೇಕು. ಪ್ರಜಾಪಕ್ಷದ ಧುರೀಣರಾದ ಕೃಪಲಾನಿಯವರು 'ಈ ಸಲದ ಮಹಾಚುನಾವಣೆಯು ನ್ಯಾಯವಾದ ರೀತಿಯಲ್ಲಿ ನಡೆಯದು, ಜನತೆಯು ಸ್ವತಂತ್ರರಾಗಿ ವರ್ತಿಸುವಂತಿಲ್ಲ" ಎಂದು ಕಾಂಗ್ರೆಸ್ಸನ್ನು ಸರಕಾರವನ್ನೂ ದೂಷಿಸುತ್ತಿದ್ದರು. ಆದರೆ ಧರ್ಮಗುರುಗಳ ಮೂಲಕ ಹೇಳಿಕೆ ಕೊಡಿಸುತ್ತ ಜನರಿಗೆ ಧರ್ಮಸಂಕಟಕ್ಕೆ ಹಾಕುತ್ತ ಅವರು ಸ್ವಬುದ್ಧಿಯಿಂದ, ಸ್ವಂತ ತಿಳುವಳಿಕೆಯಿಂದ, ಪೂರ್ಣ ಸ್ವಾತಂತ್ರ್ಯದಿಂದ ತಮ್ಮ ಮತಗಳನ್ನು ಉಪಯೋಗಿಸದಂತೆ ಹಂಚಿಕೆ ಹೂಡುತ್ತಿರುವುದೂ ಈ ಕೃಪಲಾನಿಯವರ ಪ್ರಜಾಪಕ್ಷವೇ ಎಂಬುದನ್ನು ಒಪ್ಪಿಕೊಳ್ಳಬೇಕು.

ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರ ಹೇಳಿಕೆ ಎಂಬ ತಾ. 7-12-51ರ ಕರಪತ್ರವೊಂದು ಇದೀಗ ಪ್ರಕಟವಾಗಿಯದೆ. ಶ್ರೀ ಹೆಗ್ಗಡೆಯವರ ಅಚ್ಚಾದ ಹೆಸರಿನೊಂದಿಗೆ 'ಸಹಿ' ಎಂಬ ಎರಡಕ್ಷರಗಳೂ ಇವೆ. ಶ್ರೀ ಹೆಗ್ಗಡೆಯವರು ಹೊರಡಿಸಿದ್ದೆಂಬ ಅವರ ಕೌನ್ಸಿಲ್ ಮೆಂಬರಿಕೆಯ ಸಂಕ್ಷಿಪ್ತ ವರದಿಯೂ ಇತರ ವಿಚಾರಗಳೂ ಎಂಬ ಇನ್ನೊಂದು ಸುದೀರ್ಘ ಕರಪತ್ರವು ಸ್ವಲ್ಪ ಸಮಯದ ಹಿಂದೆ ಹಂಚಲ್ಪಟ್ಟಿತ್ತು. ಅದರ ಅದರಲ್ಲಿ ಅವರ ಹೆಸರಿನೊಂದಿಗೆ 'ಸಹಿ' ಎಂಬ ಶಬ್ದವಿರಲಿಲ್ಲ. ಅಷ್ಟರಿಂದ ಈ ಎರಡು ಕರಪತ್ರಗಳಲ್ಲಿ ಅವರು ಮೊದಲಿನದಕ್ಕೆ ಸಹಿಹಾಕಿರಲಿಲ್ಲವೇ! ಆ ಭಾಷಾ ಎರಡನೆಯದಕ್ಕೆ ಅವರು ದಸ್ತಕತ್ತು ಹಾಕಿದ್ದಾರೆಂದು ಜನರ ಕಣ್ಣಿಗೆ ಮಣ್ಣೆರಚಲು 'ಸಹಿ' ಎಂಬ ಪದವನ್ನು ಕೂಡಿಸಿದರೆ ಎಂಬ ಸಂಶಯವಾಗುವುದು. ಈ ಸಂಶಯಕ್ಕೆ ಕಾರಣವಿದೆ. ಶ್ರೀ ಹೆಗ್ಗಡೆಯವರು ಕೆಲವು ಕಾಲದಿಂದ ಕಾಯಿಲೆಯಲ್ಲಿರುವರು ಎಂಬುದು ಜನಜನಿತವಿದೆ. ಇಂತಹ ಅನಾರೋಗ್ಯದ ಸಮಯ ರಾಜಕೀಯ ಕ್ಷೇತ್ರದಲ್ಲಿ ದಿನದಿನ ಆಗುತ್ತಿರುವ ಪಕ್ಷಾಂತರಗಳ ಧ್ಯೇಯಧೋರಣೆಗಳ ಬದಲಾವಣೆ, ಅವನತಿ, ಉನ್ನತಿಗಳನ್ನು ನ್ಯಾಯವಾದ ನಿಷ್ಪಕ್ಷಪಾತ ರೀತಿಯಲ್ಲಿ ತುಲನೆ ಮಾಡಿ ಒಂದು ನಿರ್ಣಯಕ್ಕೆ ಬರುವ ಪರಿಸ್ಥಿತಿಯಲ್ಲಿ ಅವರು ಇದ್ದಿರುವಾಗ ಇಂತಹ ಒಂದು ಹೇಳಿಕೆಯನ್ನು ಸ್ವಬುದ್ಧಿಯಿಂದ ಸ್ವಂತ ತಯಾರಿಸಿ ಅದಕ್ಕೆ ಸಹಿ ಹಾಕಿರಲಿಕ್ಕಿಲ್ಲ; ಅಥವಾ ಆ ಕರಪತ್ರದಲ್ಲಿ ಹೇಳಿದ ಮಾತುಗಳನ್ನು ಅವರು ಅನ್ಯರಿಂದ ಒಪ್ಪಿಕೊಳ್ಳಲಿಕ್ಕಿಲ್ಲ ಎಂದು ಜನರಲ್ಲಿ ಅನುಮಾನ ಉಂಟಾದುದು ಸಹಜವೆ.

ಶ್ರೀ ಹೆಗ್ಗಡೆಯವರು ಧರ್ಮಸಂಸ್ಥೆಯ ಪೀಠಾಧಿಪತಿಗಳು. ಧರ್ಮಾಧಿಪತಿಗಳು. ವಿವೇಕಿಗಳು. ತಿಳುವಳಿಕೆಯುಳ್ಳವರು. ಜನರಿಗೆ ಇವರಲ್ಲಿ ಅಚಲವಾದ ಶ್ರದ್ಧೆ, ಭಕ್ತಿ, ವಿಶ್ವಾಸವಿದೆ. ಇವರೇ ಪ್ರತ್ಯಕ್ಷ ಧರ್ಮಸ್ಥಳದ ದೇವರೆಂಬ ನಂಬುಗೆಯೂ ಇದೆ. ಇಂತಹ ಉಚ್ಚಮ ಸ್ಥಾನದಲ್ಲಿರುವ ಉಚ್ಚ ಮಹನೀಯರು ರಾಜಕೀಯ ವಿಚಾರದ ಒಂದು ಹೇಳಿಕೆಯನ್ನು ಕೊಡುವುದು ಬಹಳ ಜವಾಬ್ದಾರಿಯ ಕೆಲಸ. ಶ್ರೀ ಹೆಗ್ಗಡೆಯವರು ಆ ಹೇಳಿಕೆಯನ್ನು ಸ್ವಂತ ಪರಿಶೀಲನೆಯಿಂದ ದಸ್ತಕತು ಹಾಕಿಕೊಟ್ಟಿರುವರೆಂದಾದರೆ, ಅವರು ತಮ್ಮ ಸ್ಥಾನಮಾನವನ್ನು ಬಹುಮಟ್ಟಿಗೆ ದುರುಪಯೋಗಿಸಿಕೊಂಡಂತಾಗಲಿಲ್ಲವೆ? ಪಕ್ಷಪಾತವನ್ನು ಪ್ರದರ್ಶಿಸಿದಂತಾಗಲಿಲ್ಲವೆ? ಇಂತಹ ಒಂದು ಹೇಳಿಕೆಯನ್ನು ಕಾಂಗ್ರೆಸಿನ ಪರವಾಗಿ ಕೊಟ್ಟಿದ್ದರೆ ಪ್ರಜಾಪಕ್ಷದವರು ಇವರ ಮೇಲೆ ಏನೇನೂ ಆರೋಪ ಹೊರಿಸುತ್ತಿರಲಿಲ್ಲ! ಕೆಲವು ಪುಣ್ಯಕ್ಷೇತ್ರಗಳಲ್ಲಿ ಪ್ರಜಾಪಕ್ಷದ ಹುರಿಯಾಳುಗಳು ಧರ್ಮಸ್ಥಳದ ಪ್ರಸಾದವೆಂದು ಬೂದಿಯನ್ನು ಮನೆಮನೆಗೆ ಹಂಚುತ್ತ ದೇವರು ರೀಯುಸಕೊಟ್ಟಿದ್ದಾರೆಂದು ಕರಪತ್ರಗಳ ವಿತರಣೆಯಾಗುತ್ತಿದೆ. ಅದರಿಂದ ಜನತೆಯನ್ನು ದೈವಿಕ ಒತ್ತಾಯಪೂರ್ವಕ ಪ್ರಜಾಪಕ್ಷದ ಹುರಿಯಾಳುಗಳಿಗೆ ಬೆಂಬಲ ದೊರಕಿಸಿ ಕೊಟ್ಟಂತಾಗುತ್ತದೆ ಎಂಬುದನ್ನು ಶ್ರೀ ಹೆಗ್ಗಡೆಯವರು ತಿಳಿದರೆ ತಮ್ಮ ಪ್ರವನದಕ್ಕಾಗಿ ಪಶ್ಚಾತ್ತಾಪ ಪಡಬಹುದು. ಈ ಕೃತಿಯು ಚುನಾವಣಾ ಕಾನೂನಿಗೆ ವಿರೋಧವೆ ಎಂಬುದೂ ಕೂಡ ಪರಿಶೀಲಿಸತಕ್ಕ ವಿಷಯ.

ಶ್ರೀ ಹೆಗ್ಗಡೆಯವರು ಇತರ ಹೆಟ್ಟಿನ ಮಠ ದೇವಸ್ಥಾನಗಳಲ್ಲಿ ಆಗುತ್ತಿರುವ ದುರಾಚಾರ, ದುರ್ವ್ಯಯ ಮತ್ತು ನಿರಂಕುಶ ಪ್ರಭುತ್ವದ ಕಡೆಗೆ ಗಮನ ಕೊಟ್ಟಂತಿಲ್ಲ. ಇದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟುವುದಕ್ಕಾಗಿ ಸರಕಾರವು ಕೆಲವು ಕಾನೂನುಗಳನ್ನು ಮಾಡಿದೆ. ಆಡಳಿತೆಯನ್ನು ನ್ಯಾಯ ಮಾರ್ಗದಲ್ಲಿ ನಡೆಸುವವರಿಗೆ ಇದರಿಂದ ಯಾವ ತೊಂದರೆಯೂ ಇರಲಾರದು. ಎಂಡೋಮೆಂಟ್ ಕಾನೂನು ಆಗತ್ಯವೆಂದು ಮ. ಗಾಂಧಿಗಳೂ ಒಪ್ಪಿದ್ದರು.

ಹಿಂದೂ ಸಮಾಜ ಸುಧಾರಣೆಯ ಅವಶ್ಯಕತೆಯನ್ನು ಕಂಡುಕೊಂಡು ಹಿಂದೂ ಕೋಡು ಮೊದಲಾದ ಸಾಮಾಜಿಕ ಮಸೂದೆಗಳನ್ನು ಸರಕಾರ ಮಂಡಿಸಿತು. ಅದನ್ನು ಶ್ರೀ ಹೆಗ್ಗಡೆಯವರು ವಿರೋಧಿಸುವವರಾದರೆ ಇವರ ಪುರೋಗಾಮಿ ಧ್ಯೇಯದಲ್ಲಿ ಶ್ರದ್ಧೆಯಿರುವ ಅನೇಕರು ಜಿಗುಪ್ಸೆಗೊಳ್ಳದಿರಲಾರರು. ಕಾಂಗ್ರೆಸ್ ಪಕ್ಷದಲ್ಲಿ ಸ್ವಾರ್ಥಿಗಳಿರುವರು, ಅವಿಶ್ವಾಸಿಗಳಿರುವರೆಂದು ಹೇಳಲಾಗಿದೆ. ಆದರೆ ಇಂಗಲ್ಲಿ ಅನೇಕರು ಈಗಾಗಲೇ ಕಾಂಗ್ರೆಸ್ ಬಿಟ್ಟು ಹೊಸಪಕ್ಷ ಮಾಡಿದ್ದಾರೆ. ಕಳೆದ ಎರಡು ಮೂರು ತಿಂಗಳುಗಳಿಂದ ಈ ಪ್ರಜಾಪಕ್ಷದ ಧ್ಯೇಯಧೋರಣೆಗಳ ತಿರುಗುಮುರುಗು ಬದಲಾವಣೆ ಶಿಥಿಲತೆ, ಚುನಾವಣಾ ತಂತ್ರ, ಪ್ರಚಾರ ವಿಧಾನ, ಜನರಿಗೆ ಕೊಡುವ ಪೊಳ್ಳು ಆಶ್ವಾಸನೆಗಳನ್ನು ನೋಡುವಾಗ ಈ ಮಾತು ಸತ್ಯವೆಂದು ತಿಳಿಯಬಲ್ಲರು. ತಮ್ಮ ಸರ್ವೋದಯ ಧ್ಯೇಯವನ್ನು ಗಾಳಿಗೆಸೆದು ಸ್ವಾರ್ಥ ಸಾಧಿಸಿಕೊಳ್ಳುತ್ತಿರುವುದನ್ನು ನೋಡಿದರೆ ಸಾಕು. ಆದುದರಿಂದ ಯೋಗ್ಯ ಕಾರ್ಯಸಾಧಕರಾಗಿದ್ದಾರೆಂದು ತಿಳಿಯುತ್ತೇನೆ ಎನ್ನುವ ಇವರ ಮಾತು ಸಂಪೂರ್ಣ ಪಂಚಾಯತ ಶಿಫಾರಸು. ಭಿಜನಾದ ಕಾರ್ಯಸಾಧಕರೂ ಕರ್ತವ್ಯಶೀಲರೂ ಸೇವಾನಿಷ್ಠರೂ ಕಾಂಗ್ರೆಸ್ಸಿನಲ್ಲಿರುವುದರಿಂದಲೇ ಅದು ಇನ್ನೂ ಬಲಿಷ್ಠಸಂಸ್ಥೆಯಾಗಿದೆ ಎಂಬುದು ಶ್ರೀ ಹೆಗ್ಗಡೆಯವರು ತಿಳಿಯಲಾರರೆ? 'ಜನರಿಗೆ ಪ್ರಜಾಪಕ್ಷದಿಂದ ಅನ್ಯಾಯವಾಗಲಿಕ್ಕಿಲ್ಲ' ಎನ್ನಲಾಗಿದೆ. ಕಾಂಗ್ರೆಸಿನ ಧ್ಯೇಯ ಮಧ್ಯಮ ಮಾರ್ಗವೆಂಬುದರಿಂದ ಬಡವರಿಗೂ, ಶ್ರೀಮಂತರಿಗೂ ಜನರಿಗೂ ಯಾವ ರೀತಿಯಲ್ಲೂ ಅನ್ಯಾಯವಾಗದು. ಕಾಂಗ್ರೆಸ್ ಘೋಷಣೆಯನ್ನು ಶ್ರೀ ಹೆಗ್ಗಡೆಯವರು ಓದಿಲ್ಲವೆ? ಜನರಿಗೆ ನಿಶ್ಚಯವಾಗಿ ತಾವೇನು ಮಾಡಲಿರುವೆವೆಂಬುದನ್ನು ತಿಳಿಯದ ಪ್ರಜಾಪಕ್ಷದವರು ಜನರಿಗೆ ಯಾವ ರೀತಿಯ ನ್ಯಾಯ ಮಾಡಿಯಾರು? ಸಂದರ್ಭಸಾಧಕರಂತೆ ವರ್ತಿಸುವ ಇವರ ಕೈಗೆ ಅಧಿಕಾರ ಬಂದರೆ ದೇಶಕ್ಕೂ ಜನರಿಗೂ ಅನೇಕಾನೇಕ ಅನ್ಯಾಯಗಳು ಆದಾವು ಎಂದು ಮತದಾರರು ತಿಳಿದಿರುವುದು ತಪ್ಪಲ್ಲ.

ಅಂತೂ ಕಾಂಗ್ರೆಸ್ ಸರಕಾರ ಸ್ಥಾಪಿಸಲ್ಪಟ್ಟಾಗ ಜನರು ಇಲ್ಲದ ತೊಂದರೆಗಳಿಗೆ ಈಡಾಗುವವರಲ್ಲಿ ಸಂದೇಹವಿಲ್ಲ ಎಂಬ ಇವರ ಹೇಳಿಕೆ ನಗೆಗೀಡಾಗಿಯದೆ. ಕಾಂಗ್ರೆಸ್ ಆಡಳಿತೆಯ ದಾಖಲೆ ಜನರ ಮುಂದಿದೆ. ಇದನ್ನು ಮುಚ್ಚಿಡುವ ಅಗತ್ಯವಿಲ್ಲ. ನ್ಯಾಯವಾದ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕೈಕೊಂಡರೆ ಅದು ಕಂಟಕಪ್ರಾಯವಾಯಿತೆಂದು ಶ್ರೀ ಹೆಗ್ಗಡೆಯವರು ತಿಳಿದರುವಲ್ಲಿ ಯೋಗ್ಯ ರೀತಿಯಲ್ಲಿ ಇನ್ನು ಮುಂದೆ ಸರಕಾರ ನಡಿಸಬೇಕೆಂದು ಕಾಂಗ್ರೆಸ್ ಉತ್ಸಾಹದಿಂದಿರುವಾಗ ಅದೊಂದು ತೊಂದರೆಯಾಗಬಹುದು. ಎಂದು ಇವರು ನಿರೀಕ್ಷಿಸಿದರೆ ಆಶ್ಚರ್ಯವಿಲ್ಲ. ಅಂತೂ ಶ್ರೀ ಹೆಗ್ಗಡೆಯವರು ಇಂತಹ ಅವಸರದ ಹೇಳಿಕೆಯನ್ನು ಕೊಟ್ಟು (ಇದು ಪ್ರಜಾಪಕ್ಷದ ಕೈವಾಡವಲ್ಲವಾದರೆ) ಜನರು ಅವರ ಮೇಲಿಟ್ಟ ಪ್ರೀತಿ ವಿಶ್ವಾಸವನ್ನು ಕಳಕೊಳ್ಳಬಾರದಾಗಿ ಹೃತ್ಪೂರ್ವಕ ವಿನಂತಿ.

ಉಡುಪಿ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು.— ಕೊಕ್ಕರ್ಣೆಯಲ್ಲಿ ಶ್ರೀ ಬಿ. ಶೀನಪ್ಪ ಹೆಗ್ಡೆ, ಗುಡ್ಡೆಯಂಗಡಿಯಲ್ಲಿ ಶ್ರೀ ಬಾಳ್ಕಟ್ಟು ಬೀಡು ಕೃಷ್ಣಯ್ಯ ಹೆಗ್ಡೆ, ಮಲ್ಪೆಯಲ್ಲಿ ಡಾ। ಎಸ್. ಆರ್. ಪೈಗಳ, ಕನರ್ಪಾಡಿಯಲ್ಲಿ ಶ್ರೀ ಪಿ. ಕೊರಗ ಸೆಟ್ಟರ, ಕಾಪುಕಟ್ಟೆಯಲ್ಲಿ ಶ್ರೀ ಬಿ. ಕಾಳಪ್ಪ ಸೆಟ್ಟರ, ಬಡಾನಿಡಿಯೂರಲ್ಲಿ ಶ್ರೀ ಕೇದಾರ್‌ರಾಯರ, ಮಣೂರಿನಲ್ಲಿ ಶ್ರೀ ಸದಾಶಿವ ಹೆಗ್ಡೆಯ ಅಧ್ಯಕ್ಷತೆಗಳಲ್ಲಿ ಜರಗಿದುವು. ಶ್ರೀಗಳಾದ ಶಿವರ ಮುದ್ದು ಸೆಟ್ಟಿ, ಎಸ್. ಎಸ್. ಕುಡ್ವಾರ್, ಟಿ. ಎನ್. ಶೀಲು ಪಾಂಡಿಯಾರ್, ರಮೇಶ ಪೈ, ಗೋಪಾಲ ಸೆಟ್ಟಿ, ಡಾ। ಪಿ. ರಾಘವೇಂದ್ರ ನಾಯಕ್, ಎ. ಜೆ. ಅಳ್ವ, ಡಾ। ಟಿ. ಮಾಧವ ಪೈ, ಟಿ ಎ. ಪೈ, ಎಮ್. ಪಿ ಹೆಗ್ಡೆ, ಜೆ ಸಿ ರೇಗೊ, ರೋಕಿ ಫೆರ್ನಾಂಡಿಸ್, ಮುದ್ದು ಸುವರ್ಣ, ಡಾ। ಕೆ. ಎಲ್. ಪಡಾಲ್, ಶೀನ ಮಾಸ್ತರ್, ಕುಂಜಾಲು ಗಣಪಯ್ಯ ಸೆಟ್ಟಿ, ಬಿ ಆನಂದ ಹೆಗ್ಡೆ, ದಾಮೋದರ ನಾಯಕ್ ಮೊದಲಾದವರು ಅಲ್ಲಲ್ಲಿ ಭಾಷಣವಿತ್ತರು. ಜನಜಾಗೃತಿಯುಂಟು ಮಾಡಿ ಕಾಂಗ್ರೆಸ್ ಉಮೇದ್ವಾರರಿಗೆ ಓಟಿನ್ನೀಯುವ ಅವಶ್ಯಕತೆಯನ್ನು ಸೂಚಿಸಿದರು. ಶಿವರ ಉದಿಯಾವರ ಇಗರ್ಜಿಗಳ ಬಳಿಯಲ್ಲೂ ಶ್ರೀ ಉದಿಯಾವರ ನದಿಯ ಸಾಹುಕಾರರಲ್ಲಿ ಜರಗಿದ ಬಿಲ್ಲವ ಸಮಾಜದ ಸಭೆಯಲ್ಲೂ ವಿಚಾರ ಪ್ರಚೋದಕ ಭಾಷಣಗಳಾದುವು.

ಹೈಕೋರ್ಟ್ ತೀರ್ಪುಗಳು:—ಶ್ರೀ ಮು ಎಂ ಜಿ ಯು. ಕಾಲೇಜಿಗೆ ಹುಡುಗಿಯರನ್ನು ದಾಖಲು ಮಾಡಿಕೊಳ್ಳಲು ನಿರಾಕರಿಸಿದ್ದರಿಂದ ಕೋ। ಪಾಂಡುರಂಗಾಚಾರ್ಯ ಎಂಬವರು ಘಟನೆಯಂತೆ ಸ್ವಯಂ ಹೈಕೋರ್ಟಿಗೆ ಅಪೀಲು ಮಾಡಿದ್ದು ಇದೀಗ ಹುಡುಗಿಯರಿಗೆ ಪ್ರವೇಶ ಕೊಡಬಹುದೆಂದಾಗಿದೆ

ಅಂತೆಯೇ ಮಠಗಳನ್ನು ಎಂಡೋಮೆಂಟಿಗೆ ಸೇರಿಸುವ ಕುರಿತು ಶ್ರೀ ಶೀರೂರು ಸ್ವಾಮಿಯವರು ನೂತನ ಘಟನೆಯನ್ನೂ ಅಪೀಲು ಮಾಡಿದ್ದು ಇದೀಗ ಮಠಗಳನ್ನು ಎಂಡೋಮೆಂಟಿಗೆ ಅನ್ವಯಿಸತಕ್ಕದೆಂದಾಗಿದೆ. ಇದರ ವಿರುದ್ಧ ಸುಪ್ರೀಮು ಕೋರ್ಟಿಗೆ ಅಪೀಲು ಮಾಡಲಿಕ್ಕೂ ಹೈಕೋರ್ಟು ಸಮ್ಮತಿಸಿದೆ.



Approved from by the Govt of Mysore
Certificated by the Agent of the Govt of Cylone & Indian

ಕ್ರಿಸ್‌ಮಸ್ ಕಾಣಿಕೆ. ಸರಕಾರಿ ರಿಜಿಸ್ಟರ್ಡ ನಂಬ್ರ 569

ರೂಪಾಯಿ 50,750

21 ಸರ್ವಸಮ ಉತ್ತರಗಳಿಗೆ ಹಂಚಲಾಗುತ್ತದೆ

ಎಲ್ಲಾ ಬಹುಮಾನಗಳಿಗೂ ಗ್ಯಾರಂಟಿಯಿದೆ.

ಸರ್ವಸಮ ಉತ್ತರ ಪ್ರತಿಯೊಂದಕ್ಕೂ ರೂಪಾಯಿ 2235- ಸುರುವಿನ ಎರಡು ಸಾಲುಗಳ ಸರಿಯಾದ ಉತ್ತರ ಪ್ರತಿಯೊಂದಕ್ಕೂ ರೂಪಾಯಿ 375- ಸುರುವಿನ ಒಂದು ಸಾಲಿನ ಉತ್ತರ ಸರಿಯಾದುದಕ್ಕೆ ರೂಪಾಯಿ 45- ಸುರುವಿನ ಎರಡು ಸಂಖ್ಯೆಗಳು ಸರಿಯಾದುದಕ್ಕೆ ರೂಪಾಯಿ 7-8-0ಯಂತೆ ಇನಾಮು ದೊರೆಯುವುದು.



ಖಾನೆ ಮೊತ್ತವು 78 ಬರುವಂತೆ ಉಳಿದ ಖಾನೆಗಳಲ್ಲಿ 12ರಿಂದ 27ರ ವರೆಗಿನ ಸಂಖ್ಯೆಗಳನ್ನು ಒಮ್ಮೆ ಮಾತ್ರ ಉಪಯೋಗಿಸತಕ್ಕದ್ದು. ಈ ಸಂಖ್ಯೆಗಳನ್ನು ಉದ್ದಕ್ಕೂ ನೀಟಕ್ಕೂ ಅಡ್ಡಕ್ಕೂ ಕೂಡಿಸಿದರೆ ಮೊತ್ತವು 78 ಬರುವಂತೆ ಸಂಖ್ಯೆಗಳನ್ನು ಪ್ರಯೋಗಿಸಬೇಕು. ಉತ್ತರ ಸ್ವೀಕರಿಸುವ ಕೊನೆಯ ದಿನ ತಾ. 3-1-52 ಫಲಿತಾಂಶ ಪ್ರಕಟನೆ 11-1-52.

ಪ್ರವೇಶಧನ:- ಒಂದು ಪ್ರವೇಶಕ್ಕೆ ರೂಪಾಯಿ 1/- 4 ಪ್ರವೇಶಗಳಿಗೆ ರೂ. 3/- 8 ಉತ್ತರಗಳ ಪ್ರತಿಯೊಂದು ಸೆಟ್ಟಿಗೂ ರೂ. 5ರಂತೆ

ಖುದ್ದಾ 74ರ ಫಲಿತಾಂಶ

19	12	16	17
18	15	21	[illegible]
13	12	26	23
24	25	11	14

ನಿಬಂಧನೆಗಳು:- ಮೇಲಿನ ಪ್ರವೇಶಧನದೊಂದಿಗೆ ಎಷ್ಟು ಉತ್ತರಗಳನ್ನೂ ಕಳುಹಿಸಬಹುದು. ಉತ್ತರದೊಂದಿಗೆ ಮನಿಯಾರ್ಡರ್ ರಶೀದಿಯನ್ನಾಗಲೀ ಪೋಸ್ಟಲ್ ಆರ್ಡರನ್ನಾಗಲೀ ಬೇರೆ ಡ್ರಾಫ್ಟುಗಳನ್ನಾಗಲೀ ಲಗೀಕರಿಸತಕ್ಕದ್ದು. ಬ್ಯಾಲೆನ್ಸ್ ಶೀಟ್ ಬೇರೆ ಸೆಟ್ಟೆ ಮೊಹರು ಮಾಡಿಟ್ಟ ಉತ್ತರಕ್ಕೆ ಸರಿಹೋಗುವ ಉತ್ತರಗಳೇ ಬಹುಮಾನ ಪಡೆಯಲು ಅರ್ಹತೆಯುಳ್ಳವಾಗಿವೆ. ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಬೇಕು. ಮತ್ತು ಇಂಗ್ಲಿಷಿನಲ್ಲೇ ಪತ್ರವ್ಯವಹಾರ ನಡೆಸತಕ್ಕದ್ದು. ಬಹುಮಾನದ ಐವೇಜು ಸರ್ವಸಮ ಉತ್ತರಗಳ ಸಂಖ್ಯೆಯನ್ನವಲಂಬಿಸಿರುವುದು. ಆದರೆ ಗ್ಯಾರಂಟಿ ಇನಾಮುಗಳಲ್ಲಿ ಬದಲಾವಣೆಯೇನೂ ಮಾಡಲಾಗುವುದಿಲ್ಲ. ಮ್ಯಾನೇಜರರ ತೀರ್ಮಾನವೇ ಅಂತಿಮ ತೀರ್ಮಾನ. ಉತ್ತರವನ್ನಪೇಕ್ಷಿಸುವವರು ಟಿಕ್ಕೆಟು ಕವರಿನಲ್ಲಿ ತಮ್ಮ ವಿಳಾಸವನ್ನು ಬರೆದು ಕಳುಹಿಸತಕ್ಕದ್ದು.

REPUBLIC TRADERS REGD. (N. V.)
Bulandshahr, U. P.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮವಾದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ಸಗಟಾಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ

ನವಯುಗ ಪ್ರೆಸ್, ಉಡುಪಿ

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ, ಬಾಕಿ ಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರಿ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲಕಕ್ಕ ಸಂಪೂರ್ಣ ಏವೇಜುಗಳನ್ನು ಇದೇ ತಾರೀಖು 26-12-51ನೇ ಬುಧವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಆಭರಣಗಳನ್ನು ಇದೇ ತಾರೀಖು 3-1-1952ನೇ ಗುರುವಾರ ಪೂರ್ವಾಹ್ನ ಘಂಟೆ 11ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು, ತಿಳಿದಿರಿ.

ತಾರೀಖು	ಲೋನ್ ನಂ	ಈಡಿಟ್ಟವರ ಹೆಸರು ಮತ್ತು ವಿಲಾಸ	ಸಾಲದ ಮೊಬಲಗು ರೂ. ಆ.
18-11-49	218/49-50	ಭೋಜ ಶೆಟ್ಟಿ, ರಾಮಯ್ಯ ಶೆಟ್ಟಿ ಅಳಿಯ, ಬಡಿಬೆಟ್ಟುಗುತ್ತು, ಎಲ್ಲೂರು ಪೋಸ್ಟು	129–12
15-7-50	1068/50	ಎಕ್ಕು ಹೆಂಗ್ಸು, ಕೊರಪಳು ಹೆಂಗಸಿನ ಮಗಳು, ಮೂಳೂರು ಗ್ರಾಮ, ಉಚ್ಚಿಲ ಪೋಸ್ಟು.	11– 8
17-3-50	345/50	ಲಕ್ಷ್ಮಣ ಆಚಾರಿ, ಬಾಬ್ರಾಯ ಆಚಾರಿಯ ಮಗ, ಉಳಿಯಾರಗೋಳಿ ಗ್ರಾಮ, ಕಾಪು ಪೋಸ್ಟು.	17– 9
11-2-48	320/47-8	ಮಂಜಿಕ್ಕ ಶೆಟ್ಟಿ, ಹೂವಯ್ಯ ಶೆಟ್ಟಿ ಸಹೋದರ, ಬಿಕ್ರಿಗುತ್ತು, ಮೂಳೂರು ಗ್ರಾಮ, ಉಚ್ಚಿಲ ಪೋಸ್ಟು.	32– 8
12-6-48	742/47-8	ಮಂಜಿಕ್ಕ ಶೆಟ್ಟಿ, ಹೂವಯ್ಯ ಶೆಟ್ಟಿ ಸಹೋದರ, ಬಿಕ್ರಿಗುತ್ತು, ಮೂಳೂರು ಗ್ರಾಮ, ಉಚ್ಚಿಲ ಪೋಸ್ಟು.	119– 6
6-1-49	298/48-9	ಶೇಕ್ ಬುಡಾನ್ ಸಾಹೇಬ್, ಮೊಯಿದಿನ್ ಸಾಹೇಬರ ಮಗ, ಮಲ್ಪಾರು ಪೋಸ್ಟು,	12–13
29-7-48	985/47-8	ತಿಮ್ಮಣ್ಣ ಶೆಟ್ಟಿ, ಪಡಿಯೂರು ಬಡಗರ ಗುತ್ತು, ಪೋಸ್ಟು ಮೂಲೂರು.	105– 0
31-8-49	1339/48-9	ಬೇಂಕ ಶೆಟ್ಟಿ, ದೇವಪ್ಪ ಶೆಟ್ಟಿ ಅಳಿಯ, ಬೆಳಪು ಗುತ್ತು, ಬೆಳಪು ಗ್ರಾಮ, ಎಲ್ಲೂರು ಪೋಸ್ಟು	238–12
3.9-48	1196/47-8	ಮಂಜಿಕ್ಕ ಶೆಟ್ಟಿ, ಬೂವಯ್ಯ ಶೆಟ್ಟಿ ಅಳಿಯ, ಬಿಕ್ರಿಗುತ್ತು, ಮೂಳೂರು ಗ್ರಾಮ, ಪೋಸ್ಟು ಉಚ್ಚಿಲ.	21–12
8-9-48	1216/47-8	ಅಣ್ಣಪ್ಪ ಪೂಜಾರಿ, ಚೆನ್ನು ಪೂಜಾರಿಯ ಅಳಿಯ, ಮಲ್ಪಾರು ಮನೆ ತೋಟ, ಮಲ್ಪಾರು ಗ್ರಾಮ, ಮಲ್ಪಾರು ಪೋಸ್ಟು	5–12
12-4-50	467/50	ಮಂಜುನಾಥಯ್ಯ, ಸುಬ್ಬಣ್ಣಯ್ಯನವರ ಮಗ, ಮಜೂರು, ಕುಂದಾಪುರ, ಇನ್ನಂಜೆ ಪೋಸ್ಟು.	23– 4
8-12-48	237/48-9	ಮಂಜಿಕ್ಕ ಶೆಟ್ಟಿ, ಹೂವಯ್ಯ ಶೆಟ್ಟಿ ಸಹೋದರ, ಬಿಕ್ರಿಗುತ್ತು, ಮೂಳೂರು ಗ್ರಾಮ, ಉಚ್ಚಿಲ ಪೋಸ್ಟು.	57– 0
16-8-49	1261/48-9	ಮಂಜಿಕ್ಕ ಶೆಟ್ಟಿ, ಬೂವಯ್ಯ ಶೆಟ್ಟಿ ಅಳಿಯ, ಬಿಕ್ರಿಗುತ್ತು, ಮೂಳೂರು ಗ್ರಾಮ, ಉಚ್ಚಿಲ ಪೋಸ್ಟು.	214– 8
27-7-49	1166/48-9	ಮೊಯಿದಿನ್ ಸಾಹೇಬ್, ಅದಾಮ್ ಸಾಹೇಬರ ಮಗ, ಕನ್ನರ ಬೆಟ್ಟು, ಕಳತ್ತೂರು ಗ್ರಾಮ, ಪಾದೂರು ಪೋಸ್ಟು.	20– 4
27-12-49	347/49-50	ದೊಡ್ಡಣ್ಣ ಶೆಟ್ಟಿ, ಶೀನ ಶೆಟ್ಟಿ ಅಳಿಯ, ಮೂಳೂರು ಗ್ರಾಮದ ಮುಕ್ಕಲಿ ಮನೆ ಉಚ್ಚಿಲ ಪೋಸ್ಟು.	74 -15

Office of the Bank,
KAUP. S. Kanara.
15-12-1951.

K Seetharama Shetty.
Agent.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ

ಕಾಳಿಕಮಾಲಿ

ಚವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ

ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—
ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.

ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10–0–0 (ಅಂಚೆವೆಚ್ಚ ಪ್ರತ್ಯೇಕ)

AYURVEDIC PHARMACY
Baba kali Kamali-Wala RISHIKESH.

ಕುಂದಾಪುರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು—ತಾ. 11ರಲ್ಲು ಉಪ್ಪಿನ ಕುದ್ರುವಿನಲ್ಲಿ ಶ್ರೀ ಅಣ್ಣಪ್ಪ ಉಡುಪರ ಅಧ್ಯಕ್ಷತೆಯಲ್ಲೂ, ಅದೇ ದಿನ ಸಾಯಂಕಾಲ ಗಂಗೊಳ್ಳಿಯಲ್ಲಿ ಶ್ರೀ ನಗರಗೋವಿಂದ ನಾಯ್ಕರ ಅಧ್ಯಕ್ಷತೆಯಲ್ಲೂ ಆಂಕೆಯ ಪಡುಕೋಣೆಯಲ್ಲೂ, ತುಂಬಡ ಕೋಣೆಯಲ್ಲೂ ಜರಗಿದವು. ಶ್ರೀಗಳಾದ ಎಮ್. ಎಮ್. ಹೆಗ್ಡೆ, ಎನ್ ಎಸ್. ಪರಮೇಶ್ವರಯ್ಯ, ಕೆ. ಸಂಜೀವರಾವ್, ಮೊದಲಾದವರು ಕಾಂಗ್ರೆಸ್ ಈ ತನಕ ಮಾಡಿದ ಸಾರ್ವಜನಿಕ ಸೇವೆ, ಮುಂದೆ ಮಾಡಲಿರುವ ಕಾರ್ಯಗಳ ಕುರಿತು ಮಾತನಾಡಿ ಕಾಂಗ್ರೆಸ್ ಹುರಿಯಾಳುಗಳಿಗೆ ವೋಟು ಕೊಡುವಂತೆ ಜನಜಾಗೃತಿಯನ್ನುಂಟು ಮಾಡಿದರು.

ಬ್ರಹ್ಮಾವರ ಸರ್ಕಲಿನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು—ಇದೇ ತಾ 8ರಲ್ಲು ಬೆಳಗ್ಗೆ ವಡ್ಡರ್ಸೆಯಲ್ಲಿ ಶ್ರೀ ಎನ್. ನಾರಾಯಣ ಸೆಟ್ಟಿ, ವಕೀಲ್, ಕುಂದಾಪುರ ಅವರ ಅಧ್ಯಕ್ಷತೆಯಲ್ಲೂ, ದಂಡಾರು ಕಂಬಳ ಕಾಲದಲ್ಲಿ ಶ್ರೀ ಎಡ್ವರ್ಡ ಮಂಜಯ್ಯ ಸೆಟ್ಟಿ, ಎಡ್ವೋಕೇಟ್, ಅವರ ಅಧ್ಯಕ್ಷತೆಯಲ್ಲೂ, ಬಾರಕೂರಲ್ಲಿ ವಕೀಲ್ ಶ್ರೀ ಕೆ. ಎಲ್. ಭಂಡಾರಿಗಳ ಅಧ್ಯಕ್ಷತೆಯಲ್ಲೂ, ತಾ. 9ರಲ್ಲು ಬೆಳಗ್ಗೆ ಮೈರ್ ಕೂಮಿಹ ಭಾಡಿ ಶಾಲಾ ಮೈದಾನಿನಲ್ಲಿ ವಕೀಲ್ ಶ್ರೀ ಕೆ. ಸೂರಪ್ಪ ಸೆಟ್ಟರ ಅಧ್ಯಕ್ಷತೆಯಲ್ಲೂ ಮಧ್ಯಾಹ್ನ ಗೋಳಿಅಂಗಡಿಯಲ್ಲಿ ವಕೀಲ್ ಶ್ರೀ ಕೆ. ರಾಮಭಟ್ಟರ ಅಧ್ಯಕ್ಷತೆಯಲ್ಲೂ ಸಂಜೆ ಆಲಬಾಡಿಯಲ್ಲಿ ಶ್ರೀ ಬಿ. ಶಿವರಾಮ ಸೆಟ್ಟರ ಅಧ್ಯಕ್ಷತೆಯಲ್ಲೂ, ಕಳ್ತೂರು ಸಂತೆಕಟ್ಟೆಯಲ್ಲಿ ಶ್ರೀ ಮಂಜುನಾಥ ಕಂಪ್ತಿಯವರ ಅಧ್ಯಕ್ಷತೆಯಲ್ಲೂ ತಾ. 10ರಲ್ಲು ಬೆಳಗ್ಗೆ ಪೇತ್ರಿಯಲ್ಲಿ ಉಡುಪಿ ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲೂ, ಮಧ್ಯಾಹ್ನ ಬ್ರಹ್ಮಾವರದಲ್ಲಿ ಡಾ| ಕೆ. ನಾರಾಯಣ ಪೈಗಳ ಅಧ್ಯಕ್ಷತೆಯಲ್ಲೂ, ಸಂಜೆ ಕೋಟ ಗಾಳಿ ಮೈದಾನಿನಲ್ಲಿ ಶ್ರೀ ಕೆ. ರಾಮಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲೂ ನಂತರ ಹಂಗಾರಕಟ್ಟೆ ಬಂದರದಲ್ಲಿ ಶ್ರೀ ಕೆ. ಗೋವಿಂದ ಕಲ್ಕೂರರ ಅಧ್ಯಕ್ಷತೆಯಲ್ಲೂ ಸಾಂಗವಾಗಿ ಜರಗಿದವು. ಶ್ರೀಗಳಾದ ಎಸ್. ಎಸ್. ಕೊಳ್ಳೆ, ಡಿ. ಬಿ. ಅಂತಯ್ಯ ಸೆಟ್ಟಿ ಮೊದಲಾದವರು ಭಾಷಣ ಮಾಡುತ್ತಾ ಕಾಂಗ್ರೆಸು ಜನಹಿತ ಸಾಧಿಸಬಲ್ಲ ಸಂಸ್ಥೆಯಾದುದರಿಂದ ಕಾಂಗ್ರೆಸಿಗೇನೇ ಮತದಾನವೀಯಬೇಕಾಗಿ ಕೇಳಿಕೊಂಡರು.

ಕೋಟ—ಇಲ್ಲಿಯ ಪೋಲೀಸು ಕೋಸು ಮೂಲಕ ಆಸುಪಾಸಿನ ಹಳ್ಳಿಗಳಿಗೆ ಬಟವಾಡೆಯಾಗತಕ್ಕ ಕಾಗದ ಪತ್ರಗಳು ಸಕಾಲದಲ್ಲಿ ಟಪ್ಪಾಲು ಪೇದೆ ಮೂಲಕ ಬಟವಾಡೆಯಾಗದೆ ಯಾರ‍್ಯಾರ ಕೈಯಲ್ಲಿ ಕೊಟ್ಟು ಆಕಾಲದಲ್ಲಿ ವಿಳಾಸದಾರರಿಗೆ ದೊರಕುತ್ತಿದೆಯೆಂದೂ ಆ ಭಾಗದಲ್ಲಿ ಇಲಾಖಾ ಮೇಲಧಿಕಾರಿಗಳು ತನಿಖೆ ನಡೆಸಿದ್ದರೆ ಹಳ್ಳಿಗಳ ಕಷ್ಟನಷ್ಟಗಳು ಇನ್ನೂ ಜಾಸ್ತಿಯಾಗುವ ಸಂಭವವಿದೆಯೆಂದೂ ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಉಚ್ಚಿಲ—ಸರಸ್ವತೀ ಮಂದಿರದಲ್ಲಿ ಪಡಿಯಾಳ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವವು ತಾ. 28-12-51ಕ್ಕೆ ಜರಗಲಿದೆ.

ಬೈಂದೂರು—ಶ್ರೀ ಬಿ ಸುಬ್ಬಣ್ಣ ಸೆಟ್ಟರು ಮದ್ರಾಸಿಗೆ ಹೋಗಿ ಅಲ್ಲಿಯ ಪ್ರಧಾನ ಮಂತ್ರಿ ಮಾನ್ಯ ಕುಮಾರಸ್ವಾಮಿ ರಾಜರನ್ನೂ ಪಬ್ಲಿಕ್ ವರ್ಕ್ಸ್ ಖಾತೆಯ ಮಾನ್ಯ ಮಂತ್ರಿ ಶ್ರೀ ಭಕ್ತವತ್ಸಲಂ, ಅವರನ್ನೂ ಇದೇ ತಾ. 7ರಲ್ಲು ಭೇಟಿಯಾಗಿ ಉಪ್ಪುಂದ ಹೊಳೆಗೆ ಸೇತುವೆ ಬೈಂದೂರಿಂದ ಕುಂದಾಪುರಕ್ಕೆ ವಿದ್ಯುತ್ ಪ್ರಸಾರ, ದ. ಕ. ಜಿಲ್ಲೆಯಲ್ಲಿ ಸಿಹಿ ಹೆಂಡದಂಗಡಿಗಳ ಕರೆಯುವಿಕೆ, ಮೊಗೇರರಿಗೆ ಸೇಲ್ಸ್ ಮತ್ತು ಇನ್‌ಕಮ್ ಟೇಕ್ಸ್ ವಿನಾಯತಿ ವಿಚಾರಗಳನ್ನು ನಿವೇದಿಸಿದರು. ಮಂತ್ರಿಗಳು ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು.

ಉಡುಪಿ

ನಗರ ಸಭೆಯು—ಇದೇ ತಾ 15ರ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ಹುಕುಂಗಳನ್ನು ಪರ್ಯಾಯ ವಸ್ತು ಪ್ರದರ್ಶನವನ್ನು ಫೆಬ್ರವರಿ ತಿಂಗಳಿಗೆ ಮುಂದುವರಿಸಿರುವುದಾಗಿ ಬಂದ ಪ್ರದರ್ಶನ ಕಮಿಟಿಯ ಪತ್ರವನ್ನು ರಿಕಾರ್ಡು ಮಾಡಲಾಯಿತು. ಜನವರಿ ತಾ. 2ರಂದು ಮಹಾ ಚುನಾವಣೆ ನಡೆಯಲಿರುವುದರಿಂದ ಆ ದಿನದ ಬುಧವಾರ ಸಭೆಯನ್ನು ಇನ್ನೊಂದು ದಿನಕ್ಕೆ ಮುಂದರಿಸಬೇಕಾಗಿ ಉಡುಪಿ ಕಾಂಗ್ರೆಸ್ ಚುನಾವಣಾ ಕಚೇರಿಯಿಂದ ಬಂದ ಪತ್ರವನ್ನು ಪರಾಮರ್ಶಿಸಿ ಸಭೆಯನ್ನು ಮರುದಿನ ಮಾಡುವದೆಂದು ನಿರ್ಣಯವಾಯಿತು.

ಉಪಾಹಾರ ಸತ್ಕಾರ ಕೂಟ—ಶ್ರೀ ಅಲೂರು ಲಕ್ಷ್ಮೀನಾರಾಯಣರಾಯರು ತಮ್ಮ ಮಗಳು ಶ್ರೀಮತಿ ಶಾರದೆಯನ್ನು ಚಿರಂಜೀವಿ ರಾಮಚಂದ್ರ ಭಟ್ಟರಿಗೆ ಇದೇ ತಾ. 13ರಲ್ಲು ಕೊಟ್ಟು ವಿವಾಹ ಸಮಾರಂಭವನ್ನು ಜರಗಿಸಿದರು. ಈ ಸಂಬಂಧ ಮರುದಿವಸ ಅವರ ಬೃಹದ್ಗಿರಿ ನಿವಾಸದಲ್ಲಿ ಉಪಾಹಾರ ಸತ್ಕಾರಕೂಟವಿತ್ತು.

ಮೈಸೂರಲ್ಲಿ ಪೇಜಾವರ ಸ್ವಾಮಿಗಳು—ಉಡುಪಿಯ ಶ್ರೀ ಪೇಜಾವರ ಮಠದ ಸ್ವಾಮಿಗಳವರನ್ನು ಇದೇ ತಾ. 12ರಲ್ಲು ಸಂಜೆ ಮೈಸೂರಿನ ಶ್ರೀ ಕೆ. ಸೀತಾರಾಮರಾಯರ ದಾಸ ಪ್ರಕಾಶಕ್ಕೆ ಬಿರುದಾವಳಿಗಳಿಂದ ಸ್ವಾಗತೀಕರಿಸಲಾಯಿತು. ದಾಸ ಪ್ರಕಾಶದಲ್ಲಿ ನೂತನವಾಗಿ ಕಟ್ಟಿಸಿರುವ ಸಭಾ ಮಂಟಪಕ್ಕೆ 'ಶ್ರೀ ರಾಮ ಮಂದಿರ'ವೆಂದು ಶ್ರೀಗಳವರು ನಾಮಕರಣ ಮಾಡಿದರು, ಅಲ್ಲದೆ ಇದೇ ಸ್ಥಳದಲ್ಲಿ ಮಾಡಿದ ಮಹಾಜನ ಸಭೆಯಲ್ಲಿ 'ವರ್ಣಾಶ್ರಮಧರ್ಮ' ಎಂಬೀ ವಿಷಯದಲ್ಲಿ ಮನನೀಯ ಉಪನ್ಯಾಸವಿತ್ತರು. ಮೈಸೂರು ರಾಜಧಾನಿಯ ದರ್ಬಾರು ಬಕ್ಷಿಯವರಾದ ಶ್ರೀ ಎಚ್. ಎಲ್. ದೇವರಾಜ ಅರಸಿಯವರು, ಅರಮನೆಯ ಧರ್ಮಾಧಿಕಾರಿ ಶ್ರೀ ಎಚ್. ಎನ್. ರಾಘವೇಂದ್ರಾಚಾರ್ಯರು ಮದ್ರಾಸಿನ ಶ್ರೀ ಕೆ. ಎಲ್. ವ್ಯಾಸರಾಯ ಮೊದಲಾದವರು ಶ್ರೀಗಳವರ ಕುರಿತು ಮಾತನಾಡಿದರು ಶ್ರೀ ಕೆ. ಸೀತಾರಾಮರಾಯರೂ ಅವರ ಆಪ್ತಿಷವರ್ಗದವರೂ ಶ್ರೀಗಳವರಿಗೆ ಮಾನಪತ್ರವನ್ನೊಪ್ಪಿಸಿ ರೂ 601/–ರ ನಿಧಿಯನ್ನರ್ಪಿಸಿದರು. ಮೈಸೂರಲ್ಲಿರುವ ಉಡುಪಿಯ ಹೊಟೇಲ್ ಮಾಲಕರು ಕೂಡಾ ರೂ. 375–0 ಕಾಣಿಕೆಯನ್ನರ್ಪಿಸಿದರು. ತಾ. 13ರಲ್ಲು ಪೂರ್ವಾಹ್ನ ಮೈಸೂರು ಅರಮನೆಯಲ್ಲಿ ಶ್ರೀಗಳವರು ರಾಜ ಪ್ರಮುಖರ ಭೇಟಿಯಾಗಿ ಅವರಿಗೆ ಫಲಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿದಲ್ಲದೆ ತಮ್ಮ ಪರ್ಯಾಯ ಮಹೋತ್ಸವದ ಆಮಂತ್ರಣವಿತ್ತರು. ರಾಜಪ್ರಮುಖರು ಶ್ರೀಗಳವರನ್ನು ಯಥೋಚಿತ ಸಂಭಾವನಾದಿಗಳಿಂದ ಸತ್ಕರಿಸಿ, ಶ್ರೀಗಳವರ ಪರ್ಯಾಯ ಕಾಲದಲ್ಲಿ ಉಡುಪಿಗೆ ಬಂದು ಶ್ರೀ ಕೃಷ್ಣನ ದರ್ಶನ ಮಾಡುವುದಾಗಿಯೂ ಹೇಳಿದರು. ಸಂಜೆ ಶ್ರೀಗಳವರು ಉತ್ತರಾದಿ ಮಠದಲ್ಲಿ 'ಸುಧಾಗಾಂಭೀರ್ಯ' ಎಂಬ ವಿಷಯದಲ್ಲಿ ಉಪನ್ಯಾಸವಿತ್ತರು. ತಾ. 10ರಲ್ಲಿ ನಂಜನಗೂಡಿನಲ್ಲಿ ಸೇರಿದ ನಾಲ್ಕನೆಯ ಆಗಮತತ್ತ್ವಯ ಮಹಾ ಸಮ್ಮೇಳನದ ಅಧ್ಯಕ್ಷರಾಗಿ ಸಭಾಕಾರ್ಯವನ್ನು ಯಶಸ್ವಿಗೊಳಿಸಿದರು.

ಕಾರವಾರ—'ಜನಶಕ್ತಿ'ಯ ಸಂಪಾದಕರಾಗಿದ್ದ ಶ್ರೀ ಕುಳಕುಂದ ಶಿವರಾಯರ ಮೇಲಿನ ಮೂರು ಮಾನನಷ್ಟದ ಮೊಕದ್ದಮೆಗಳ ವಿಚಾರಣೆಯು ಇದೇ ತಾ. 10 ಮತ್ತು 11ರಲ್ಲು ರೆಸಿಡೆಂಟ್ ನ್ಯಾಯಾಧೀಶರಾದ ಶ್ರೀ ಎಸ್. ವಿ. ಹಬ್ಬು ಅವರ ಸಮ್ಮುಖದಲ್ಲಿ ಜರಗಿತು. ಪ್ರಾಸಿಕ್ಯೂಶನ್ ಪರವಾಗಿ ಶ್ರೀ ಎನ್. ಬಿ. ಕಲಘಟಗಿಯವರೂ ಶ್ರೀ ಶಿವರಾಯರ ಕಡೆಯಿಂದ ಶ್ರೀ ಕಲಚೀರು ರಂಗರಾಯರೂ ವಕಾಲತ್ತು ನಡೆಸಿದರು. ಹೆಚ್ಚಿನ ವಿಚಾರಣೆಯು ಜನವರಿ ತಾ. 28ಕ್ಕೆ ಮುಂದುವರಿಸಲಾಗಿದೆ.

ಮಂಗಳೂರಿಗೆ ಪಂಡಿತ್ ನೆಹರುಗಳ ಸಂದರ್ಶನ

ತಾ. ೨೫ನೇ ಮಂಗಳವಾರ ಸಂಜೆ ಗಂಟೆ ೭ಕ್ಕೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆ.

ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ನೆಹರುಗಳು ಇದೇ ಬರುವ ತಾ. ೨೫ನೇ ಮಂಗಳವಾರ ಅಪರಾಹ್ನ ಗಂಟೆ ೫.೩ ಸುಮಾರಿಗೆ ಬಜ್ಪೆ ವಿಮಾನ ನಿಲ್ದಾಣದಲ್ಲಿ ಇಳಿಯುವರು. ಅಲ್ಲಿಂದ ಮಂಗಳೂರಿಗೆ ಬಂದು ಸುಮಾರು ಸಂಜೆ ಗಂಟೆ ೭ಕ್ಕೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಭಾಷಣಮಾಡಲಿರುವರು. ಈ ಸಂದರ್ಭದಲ್ಲಿ ಇಡೀ ಜಿಲ್ಲೆಯ ಪರವಾಗಿ ಅವರಿಗೆ ನಿಧಿಯೊಂದನ್ನು ಅರ್ಪಿಸುವ ಆಲೋಚನೆ ಮಾಡಲಾಗಿದೆ. ಬಹುಶೀಘ್ರವಾಗಿ ಈ ನಿಧಿಯನ್ನವರು ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ಸು ಚುನಾವಣಾ ಕೆಲಸದ ವೆಚ್ಚದ ಬಗ್ಗೆ ನಮಗೆನೇ ಹಿಂತಿರುಗಿ ಕೊಡಬಹುದು.

ಕಾಂಗ್ರೆಸಿನ ಚುನಾವಣೆಯೇ ಮೊದಲಾದ ಕೆಲಸದ ಬಗ್ಗಿನ ಹಣವನ್ನು ಜನಸಾಮಾನ್ಯರಿಂದ ಸಂಗ್ರಹಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರು ಮೊದಲೇ ವಿನಂತಿಮಾಡಿಕೊಂಡಿರುತ್ತಾರೆ, ಮಾತ್ರವಲ್ಲದೆ ಅವರ ಸಹಿಯುಳ್ಳ ಬಹು ಸುಂದರವಾಗಿ ಚಿತ್ರಿತವಾದ ರಶೀದಿಗಳನ್ನು ಕಾಂಗ್ರೆಸ್ ಕಮಿಟಿಗಳಿಗೆಲ್ಲ ಕಳುಹಿಸಿರುತ್ತಾರೆ. ಈ ರಶೀದಿಗಳನ್ನು ನಾವು ಜಿಲ್ಲೆಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆಲ್ಲ ಕಳುಹಿಸುತ್ತೇವೆ. ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕ್ಷೇತ್ರದಲ್ಲಿ ಸಂಗ್ರಹವಾದ ಹಣವನ್ನು ಅಲ್ಲಲ್ಲಿಯೇ ನಿಯೋಜಿಸಲಾಗುವುದು. ಆದುದರಿಂದ ಕಾಂಗ್ರೆಸ್ ಕೆಲಸಗಾರರೂ ಹುರಿಯಾಳುಗಳೂ ಈ ರಶೀದಿಗಳನ್ನುಪಯೋಗಿಸಿ ಪಂಡಿತ್ ನೆಹರುಗಳಿಗೊಪ್ಪಿಸಲ್ಪಡುವ ನಿಧಿಗೆ ಹಣಸಂಗ್ರಹ ಮಾಡುವುದು ಮಾತ್ರವಲ್ಲದೆ ಆ ಮೂಲಕ ಜನಸಂಪರ್ಕ ಬೆಳೆಸಿ ಪ್ರಚಾರ ಮಾಡುತ್ತಾರೆಂದು ಕಾಂಗ್ರೆಸ್ ಅಧ್ಯಕ್ಷರ ಅಪೇಕ್ಷೆಯಿದೆ. ಆದುದರಿಂದ ಕಾಂಗ್ರೆಸಿಗರೆಲ್ಲರೂ ಈ ನಿಧಿ ಸಂಗ್ರಹದ ವಿಷಯದಲ್ಲಿ ವಿಶೇಷ ಶ್ರದ್ಧೆ ಮತ್ತು ಉತ್ಸಾಹ ತೋರಿಸಬೇಕಾಗಿ ವಿನಂತಿ.

ಸ್ವಯಂಸೇವಕ-ಸೇವಿಕೆಯರು

ಪಂಡಿತ್ ನೆಹರುಗಳು ಭಾಷಣ ಕೊಡಲಿರುವ ಸಾರ್ವಜನಿಕ ಸಭೆಯಲ್ಲಿ ಸಭಾ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಯೋಗ್ಯ ಸ್ವಯಂಸೇವಕ ಮತ್ತು ಸೇವಿಕೆಯರು ಬೇಕಾಗಿರುತ್ತಾರೆ. ಈ ಕೆಲಸವನ್ನು ಮಾಡಲಿಚ್ಛಿಸುವವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿಗೆ ಇದೇ ತಾ. ೨೩ನೇ ಆದಿತ್ಯವಾರ ಸಂಜೆ ೬ ಗಂಟೆಯೊಳಗೆ ದಯವಿಟ್ಟು ತಮ್ಮ ಹೆಸರುಗಳನ್ನು ಕೊಡಬೇಕಾಗಿ ವಿನಂತಿ.

ಕೆ. ಕೆ ಶೆಟ್ಟಿ,
ಪ್ರಧಾನ ಕಾರ್ಯದರ್ಶಿ,
ದ. ಕ ಜಿಲ್ಲಾ ಕಾಂಗ್ರೆಸ್ ಸಮಿತಿ.

ಮದ್ರಾಸು ಚುನಾವಣೆಯಲ್ಲಿ ಮುಸ್ಲಿಮರು ವಹಿಸತಕ್ಕ ಧೋರಣೆ

ಇದೇ ತಾ 12ರಲ್ಲು ಮಂಗಲಪಾಡಿಯಲ್ಲಿ ನಡೆದ ಮುಸ್ಲಿಮರ ಸಭೆಯಲ್ಲಿ ಜನಾಬ್ ಮಹಮದ್ ಬಚ್ಚಾ, ಅವರು ಮುಂಬರುವ ಚುನಾವಣೆಯಲ್ಲಿ ಮುಸ್ಲಿಮರು ಜವಾಬ್ದಾರಿ ವಹಿಸಿದೆ ಎಂಬುದನ್ನು ಸ್ಪಷ್ಟ ಪಡಿಸಿದರು. ಭಾಷಣಕಾರರು ಮುಸ್ಲಿಮರ ರಕ್ಷಣೆಗಾಗಿ ತನ್ನ ದೇಹವನ್ನ ಅರ್ಪಿಸಿದರು. ಇಂದಿನ ದಿನದಲ್ಲಿ ಪಂಡಿತ ನೆಹರು ಮತ್ತು ಕಾಂಗ್ರೆಸ್ ಮುಸ್ಲಿಮರ ಆಪ್ತಬಂಧು. ಮುಂದಿನ ಚುನಾವಣೆಯಲ್ಲಿ ಮುಸ್ಲಿಮರು ಪಂಡಿತ ನೆಹರು ಮತ್ತು ಕಾಂಗ್ರೆಸಿನೊಡನೆ ಸಹಕರಿಸದಿದ್ದರೆ ಮುಸ್ಲಿಮರ ಭಾವೀ ಜೀವನವು ಗಂಡಾಂತರಕ್ಕೊಳಗಾಗುವುದು. ಮುಸ್ಲಿಂಲೀಗು ಪಾಕಿಸ್ತಾನ ಪಡೆಯುವುದರಲ್ಲಿ ಜಯಶೀಲವಾಯಿತು ಆದರೆ ದ. ಕ. ಜಿಲ್ಲೆಯ ಮುಸ್ಲಿಮರು ಹಿಂದೂಗಳೊಡನೆ ಮೈತ್ರಿಯಿಂದಿದ್ದು ಸುಖಜೀವನವನ್ನು ನಡೆಸುತ್ತಿದ್ದಾರೆ. ಅಂದ ಬಳಿಕ ಇತರ ಪಕ್ಷ ಸಂಗಡಗಳ ಕಡೆಗೆ ಪರಣಾ ಹೋಗುವುದು ಅವಶ್ಯವಿಲ್ಲ. ಆದುದರಿಂದ ಈ ಜಿಲ್ಲೆಯ ಮುಸ್ಲಿಮರ ಭಾವೀ ಜೀವನವು ಸುಖಮಯವಾಗಿ ಸಾಗಬೇಕಾದರೆ ಕಾಂಗ್ರೆಸು ಮುಂದಿನ ಚುನಾವಣೆಯಲ್ಲಿ ಜಯಪ್ರದವಾಗಿ ಬರುವಂತೆ ಸಹಕರಿಸುವುದು ಮುಸ್ಲಿಮರ ಆದ್ಯ ಕರ್ತವ್ಯವೆಂದು ಉಪದೇಶಮಾಡಿದರು.

ಮಂಗಳೂರಲ್ಲಿ ಅಶೋಕ ಮೇಹ್ತಾರವರ ಭಾಷಣ

ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಅಶೋಕ ಮೇಹ್ತಾರವರು ಇದೇ ತಾ. 14ರಲ್ಲು ಸಂಜೆ ಮೈಲ್ ಗಾಡಿಯಿಂದ ಮಂಗಳೂರಿಗೆ ಆಗಮಿಸಿದರು. ಪಕ್ಷದ ಮುಂದಾಳುಗಳೂ ಚುನಾವಣೆಯ ಹುರಿಯಾಳುಗಳೂ, ಮಜೂರರೂ ಅವರಿಗೆ ರೈಲ್ವೆ ನಿಲ್ದಾಣದಲ್ಲಿ ಸುಸ್ವಾಗತವನ್ನಿತ್ತರು. ಮೆರವಣಿಗೆಯಿಂದ ಅವರನ್ನು ಕೇಂದ್ರ ಮೈದಾನಿಗೆ ಕರೆತರಲಾಯಿತು. ಮೈದಾನಿನಲ್ಲಿ ಕೂಡಿದ ಜನಸ್ತೋಮದ ಮಹಾಸಭೆಗೆ ಬಂದೊಡನೆ ಶ್ರೀ ಡಿ. ಮೋಹನರಾಯರು ಸ್ವಾಗತವಿತ್ತು ಮಂಗಳೂರ ಮಜೂರಜನರ ಪರವಾಗಿ ಪುಷ್ಪಹಾರಗಳನ್ನರ್ಪಿಸಿದರು. ನಂತರ ಶ್ರೀ ಮೇಹ್ತಾರವರು ಪರಿಚಯಾತ್ಮಕ ಮಾತುಗಳನ್ನಾಡಿದರು.

ಶ್ರೀ ಮೇಹ್ತಾರವರು ತಮ್ಮ ಭಾಷಣದಲ್ಲಿ ಮಂಗಳೂರಿನ ನಾಗರಿಕರನ್ನು ಅಭಿನಂದಿಸುತ್ತ 15 ವರುಷಗಳ ಹಿಂದಿನ ಮಂಗಳೂರನ್ನು ನೆನಪಿಗೆ ತಂದುಕೊಂಡು, ಮಂಗಳೂರು ಬೊಂಬಾಯಿಗೂ ಭೇದವಿಲ್ಲವೆಂದರು, ಕಳೆದ 15 ವರುಷಗಳಲ್ಲಿ ಅತೀ ಮಹತ್ವದ ಬದಲಾವಣೆಗಳಾಗಿವೆ ಎಂದು ಹೇಳಿ ಐದು ವರುಷಗಳ ಹಿಂದೆ ನಮ್ಮೆಲ್ಲರ ಕನಸಾದ ಸ್ವಾತಂತ್ರ್ಯವು ನೆನಸಾಯಿತೆಂದರು. ಆದರೆ ಈಗ ಜನರಲ್ಲಿ ನಿರಾಶೆ ತಲೆದೋರಿದೆ, ಹೀಗೆ ಏಕೆ ಆಯಿತೆಂದು ನಾವು ಯೋಚಿಸಬೇಕಾಗಿದೆ.

"1930ರ ಲಾಗಾಯ್ತು ಸ್ವರಾಜ್ಯವೆಂಬ ಶಬ್ದ ಕೇಳಿದಾಗಲೆಲ್ಲ, ನಮ್ಮ ಸಮಾಜದಲ್ಲಿರುವ ಅನ್ಯಾಯಗಳ ನಿವಾರಣೆಯಾಗುವುದು, ಬಡತನ ಹೋದೀತು, ಸುಖಮಯ ಸಾಮಾಜಿಕ ವಾತಾವರಣ ಉಂಟಾದೀತೆಂದು ನಾವು ಕನಸು ಕಂಡೆವು ಆದರೆ ಈಗ ಹಾಗಾಗಲಿಲ್ಲ. ಸ್ವಾತಂತ್ರ್ಯದೊಡನೆ ನಮ್ಮ ಮುಂದೆ ಹಲವಾರು ಸಮಸ್ಯೆಗಳು ಬಂದುವು ಅವುಗಳ ಪರಿಹಾರದ ವಿಚಾರದಲ್ಲಿ ಸಮಾಜವಾದಿ ಪಕ್ಷದ ಮತ್ತು ಕಾಂಗ್ರೆಸ್ ಪಕ್ಷದ ಅಭಿಪ್ರಾಯವು ಒಂದೇ ಆದರೂ ವಿಮೋಚನೆಯ ದಾರಿಯಲ್ಲಿ ಭೇದವಿದೆ" ಎಂದು ಸಮಾಜವಾದಿ ಪಕ್ಷದ ಧೋರಣೆ ಮತ್ತು ಕಾರ್ಯಕ್ರಮವನ್ನು ವಿವರಿಸಿದರು.

"ಈಗ ದೇಶದ ಜನಸಂಖ್ಯೆ ಹೆಚ್ಚಾಗಿದೆ. ಉತ್ಪಾದನೆ ಕಡಿಮೆಯಾಗಿದೆ. ಮೊದಲು ಮೂವತ್ತು ಲಕ್ಷ ದುಡಿಯುತ್ತಿದ್ದ ಕಾರ್ಮಿಕರು ಇಂದು ಬರೇ ಇಪ್ಪತ್ತೈದು ಲಕ್ಷ ಮಾತ್ರ ಕೆಲಸ ಮಾಡುತ್ತಿದ್ದಾರೆ ಹಿಂದೆ ಬ್ರಿಟಿಶರು ಇಲ್ಲಿ ಆಡಳಿತೆ ಮಾಡಿ ನಮ್ಮ ಸಂಪತ್ತನ್ನು ಸೂರೆ ಮಾಡುತ್ತಿದ್ದರು, ಇಂದು ಕೆಲವೇ ಮಂದಿ ಟಾಟಾ, ಬಿರ್ಲಾ, ದಾಲ್ಮಿಯಾ ಮೊದಲಾದವರು ನಮ್ಮ ಶೋಷಣ ಮಾಡುತ್ತಿದ್ದಾರೆ, ಎಂದು ಹೇಳುತ್ತ ದೊಡ್ಡ ಉದ್ದಿಮೆಗಳನ್ನೂ, ದೊಡ್ಡ ತೋಟಗಾರಿಕೆ, ಬ್ಯಾಂಕು, ಇನ್ಶೂರೆನ್ಸ್ ಇತ್ಯಾದಿಗಳನ್ನೂ ರಾಷ್ಟ್ರೀಕರಣ ಮಾಡಿ, ಅದರಿಂದ ದೊರೆಯುವ ಹಣದಿಂದ ಎಲ್ಲಾ ಯೋಜನೆಗಳನ್ನೂ ಮಾಡಬಹುದೆಂದರು. ಬಳಿಕ ದೇಶದ ಉತ್ಪನ್ನದಲ್ಲೂ ಸಮತೆಯಾಗಬೇಕೆಂದು ಹೇಳುತ್ತ ಕನಿಷ್ಠ ವೇತನವು ರೂ. 100 ಮತ್ತು ಅತ್ಯಧಿಕ ವೇತನವು ರೂ. 1000 ಇರುವಂತಾಗಬೇಕೆಂದು ತಿಳಿಸಿದರು. ಕೊನೆಯಲ್ಲಿ ಸಮಾಜವಾದಿ ಸಮಾಜರಚನೆಗಾಗಿ, ದೇಶದ ಬಡತನವನ್ನು ನೀಗಿಸುವುದಕ್ಕಾಗಿ ತಮ್ಮ ಪಕ್ಷಕ್ಕೆ ಮತವೀಯಬೇಕೆಂದರು. ಅವರ ಭಾಷಣದ ಸಾರವನ್ನು ಶ್ರೀ ಮೋಹನರಾಯರು ತಿಳಿಸಿದರು.

ರಾತ್ರಿ 9½ ಗಂಟೆಗೆ ಸಮಾಜವಾದಿ ಪಕ್ಷದ ಕಚೇರಿಯಲ್ಲಿ ಪತ್ರಿಕಾ ಪ್ರತಿನಿಧಿ ಕೂಟದಲ್ಲಿ ಅವರು ಆಹಾರ, ಲಂಚಗುಳಿತನ, ಪಾನನಿರೋಧ, ಭಾಷಾವಾರು ಪ್ರಾಂತರಚನೆ ಇತ್ಯಾದಿಗಳ ಕುರಿತು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರು. ಮಂಗಳೂರಿಗೆ ಬರುವಾಗ ಅವರು ಕಾಞಂಗಾಡಿನಲ್ಲೂ, ಕಾಸರಗೋಡಿನಲ್ಲೂ ರೈಲಿನಿಂದಿಳಿದು ಅಲ್ಲಿ ನೆರೆದಿದ್ದ ಸಭೆಗಳಲ್ಲಿ ಭಾಷಣವಿತ್ತರು.

ಕೆನರಾ ಹ್ಯಾಸ್ಕೂಲಿನ ವಜ್ರೋತ್ಸವ ವಸ್ತುಪ್ರದರ್ಶನ—ಇದೇ ತಾ.21ರಿಂದ ಜನವರಿ ತಾ. 2ರವರೆಗೆ ಸ್ಥಳೀಯ ಕೆನರಾ ಹ್ಯಾಸ್ಕೂಲಲ್ಲಿ ಕೃಷಿಕಲೆ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವೊಂದನ್ನು ದೊಡ್ಡ ಪ್ರಮಾಣದಲ್ಲಿ ಜರಗಿಸಲಾಗುವುದು. ಈ ಕಾಲದಲ್ಲೇ ಸದ್ರಿ ಶಾಲೆಯ ವಜ್ರೋತ್ಸವವೂ ನೆರವೇರುವುದು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ಪರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು, ಘಾಯವಾಗಿದ್ದರೆ,....ಹಟ್ಟಿ ಬದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಾಟು ಗರ್ಭಿಣಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಸಾಂಬಳಕಾಯಿ, ಒಳ್ಳೆಯ್ದು ಬಿಡಬೇಕು.

ದಾಮ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಸಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ಶಿವಬಸಪ್ಪ ಹಾಲಪ್ಪ ದಾನಪಾಗೀರಿ,
ಆಯುರ್ವೇದ ಔಷಧಾಲಯ, ಗದಗ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No. 223/1951

ಕಸ್ಸತ್ತ ಅಬ್ದುಲ್ಲಕಾದರ ಹಾಜಿ —ವಾದಿ
ಮತ್ತು
ಚೆರಿಯ ಅಬ್ದುಲ್ಲಾ —ಪ್ರತಿವಾದಿ
ಇವರೊಳಗೆ

ಪ್ರತಿವಾದಿ ಚೆರಿಯ ಅಬ್ದುಲ್ಲ-ಚೂರ ತೊಟ್ಟಿಲ್ ಕುಂಞ ಮೈದಿನ್ ಕುಟ್ಟಿಯವರ ಮಗ ಚರ್ಕಳ ಗ್ರಾಮದ ತುರ್ತಿಬೇಕಾರ ಆತ್ತ ಎಂಬಲ್ಲಿರುವವ

ಪ್ರತಿವಾದಿಯು ವಾದಿಗೆ ತಾ. 29-9 48 ರಲ್ಲು ರೂಪಾಯಿ 170-0-0ಕ್ಕೆ ಬರಕೊಟ್ಟ ಡಿಮಾಂಡ್ ಪ್ರೋಮಿಸರಿ ನೋಟು ಪ್ರಕಾರದ ಅಸಲು ಬಡ್ಡಿ ಖರ್ಚನ್ನು ವಸೂಲು ಮಾಡುವ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 4-1-1952ಕ್ಕೆ ಪ್ರತಿವಾದಿಗೆ ನೋಟೀಸು ಜಾರಿ ಬಗ್ಗೆ ಇಟ್ಟಿರುವದರಿಂದ ಆ ದಿವಸ ಪ್ರತಿವಾದಿಯು ಖುದ್ದು ಯಾ ವಕೀಲರ ದ್ವಾರ ಕೋರ್ಟಿಗೆ ಹಾಜರಾಗುವರೆ ತಪ್ಪಿದರೆ, ಸದ್ರಿ ವ್ಯಾಜ್ಯವು ಪ್ರತಿವಾದಿಯನ್ನು ಎಕ್ಸಪಾರ್ಟಿ ಮಾಡಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸಲಾಗಿರುವುದೆ

K. P. Ananth Rao
Advocate for Pltf.
Kasaragod 14-12-1951

ಉಡುಪಿ ಡಿ ಮು ಕೋರ್ಟಿನಲ್ಲಿ

S. C. No 581, 1951

ಅದಿರಾಜ ಎಂಡ್ ಕೊ-ಯಿಂದ ಮೆನೇಜಿಂಗ್ ಪಾರ್ಟ್ನರ್ T. A ರಾಜ— ವಾದಿ
ಮತ್ತು
ಸುಬ್ಬ ಮಡಿವಾಳ ಕೂಡಾ —ಪ್ರತಿವಾದಿಗಳು
ಇವರೊಳಗೆ

1ನೇ ಪ್ರತಿವಾದಿ- ಸುಬ್ಬ ಮಡಿವಾಳ-ರಾಮ ಮಡಿವಾಳನ ಮಗ-ಉದ್ಯಾವರ ಗ್ರಾಮ ಕಡೆ ಕೊಡ್ಲ-ಯವರಿಗೆ ತಿಳಿಸುವದೇನೆಂದರೆ—

ವಾದಿಯು ವಿವರಿಸಿದ ನೋಟಿನ ಅಸಲು ಬಡ್ಡಿಗೆ ಮಾಡಿದ ದಾವೆಯಲ್ಲಿ 1ನೆ ಪ್ರತಿವಾದಿಯು ನೋಟೀಸು ಬಗ್ಗೆ ತಾ 11-1-1952ಕ್ಕೆ ಮುಂದೂಡಲಾಗಿರುವ 1ನೇ ಪ್ರತಿವಾದಿಗೆ ಸಮ್ಮನ್ಸ ಪ್ರಕಾರ ಆದಿವಸ ಬೆಳಿಗ್ಗೆ ಕೋರ್ಟುಮುಂದೆ 11 ಗಂಟೆಗೆ ಖುದ್ದಾಗಿ ಹಾಜರಾಗತಕ್ಕದ್ದು-ಎಂತ ಈ ಮೂಲಕ ತಿಳಿಸಲಾಗಿರುವದೆ.

N V Kamath
Advocate for Pltf.
ಉಡುಪಿ, 14-12-1951

ದೋಷ ನಿವಾರಣೆಯ ವಿಧಾಯಕ ಕಾರ್ಯಕ್ರಮವಿರಲಿ
ದ್ವೇಷಸಾಧನೆಯ ವಿಧ್ವಂಸಕ ಕೃತಿಬೇಡ.

[೩ನೇ ಪುಟದಿಂದ ಮುಂದರಿಸಿದ್ದು]

ಹಿಂದೆ ಬಂಗಾಳದಲ್ಲಿ ಮಿಲಿಯಾಂತರ ಜನರು ಆಹಾರವಿಲ್ಲದೆ ಸತ್ತರು. ಆ ಬರಗಾಲದಲ್ಲಿ ಬಂಗಾಲಕ್ಕೆ ಆಹಾರ ಸಾಮಗ್ರಿಗಳನ್ನು ಸಾಗಿಸಲಾರದೆ ಆದುದಲ್ಲದೆ ಆಹಾರ ಅಭಾವದಿಂದಲ್ಲ. ಯುದ್ಧ ಕಾಲವಾದ ಅಂದು ರೈಲುಗಳು ಸೈನ್ಯೋಪಕರಣಗಳನ್ನು ಮಾತ್ರ ಸಾಗಿಸಿ ಆಹಾರವಿಲ್ಲದೆ ಕೈಗೆ ಬಂದ ತುತ್ತು ಬಾಯಿಗಿಲ್ಲವೆಂಬಂತೆ ಮಿಲಿಯಾಂತರ ಜನರು ಸತ್ತಿದ್ದರು. ಆಗ ನಮ್ಮ ಭಾಷಾವಾರು ಧುರೀಣರಾದರೂ ಹೊಟ್ಟೆ ತುಂಬಾ ತಿಂದು ತೇಗಿ ಸುಮ್ಮನಿದ್ದರು. ಇಂದಿನ ಹಾಗೆ ಬಂಗಾಲದ ಮೇಲೆ ಉದ್ದುದ್ದ ಭಾಷಣ ಬಿಟ್ಟು ಪಿಟ್ಟೆಂದು ಮಾತನಾಡಲು ಕೂಡಾ ಹಿಂಜರಿದಿದ್ದರು. ಇಂದು ಮಾತ್ರ ತಮಗೆ ಬೇಕಾದ ಹುದ್ದೆ ಮತ್ತು ಅಧಿಕಾರ ಚಾಲನೆಗಾಗಿ ಮಾತ್ರ ಆಹಾರ ಅಭಾವದ ದೊಡ್ಡ ಉಪನ್ಯಾಸಗಳನ್ನ ಮಾಡುತ್ತಿರುವರಲ್ಲದೆ ಆಹಾರ ಅಭಾವವನ್ನು ನೀಗಿಸುವ ಸಾಮರ್ಥ್ಯ ಇವರಲ್ಲಿದೆ ಎಂದು ಹೇಗೆ ಹೇಳುವುದು?

ಭಾರತದಲ್ಲಿ ಆಹಾರ ಉತ್ಪಾದನೆ ಹೆಚ್ಚಾಗಿ ಸ್ವಾವಲಂಬನೆ ಹೊಂದಬೇಕಾದಲ್ಲಿ ಇನ್ನೂ ಕೆಲವು ವರ್ಷಗಳಷ್ಟು ಸಮಯ ಬೇಕಿದೆ. ನೀರಾವರಿ ಯೋಜನೆಗಳಿಂದ ಮತ್ತು ಹೊಸ ತಂದ ಯಂತ್ರೋಪಕರಣಗಳಿಂದ ಆಹಾರ ಉತ್ಪಾದನೆಯನ್ನು ಹೆಚ್ಚಿಸಬಹುದಲ್ಲದೆ ರಾಜಕೀಯ ಧುರೀಣರ ಭಾಷಣಗಳಿಂದಲ್ಲ.

ಆಹಾರ ಉತ್ಪಾದನೆಯನ್ನು ರಾಜಕೀಯ ಆಕಾಂಕ್ಷೆಗಳ ಸಾಧನೆಯಿಂದ ಹೆಚ್ಚಿಸುವದೆಂದು ಸಾರುವುದು ಎಷ್ಟು ಮಾತ್ರಕ್ಕೂ ಉಚಿತ ಕಾಣುವುದಿಲ್ಲ. ನಮ್ಮ ದೇಶವು ಬರಗಾಲದ ಸಂಕಷ್ಟಗಳಲ್ಲಿ ತೊಳಲಾಡುತ್ತಿರುವಾಗ ನಮ್ಮ ಸ್ವಾರ್ಥ ಸಾಧಿಸಿ ಜನರನ್ನು ತಮ್ಮೆಡೆಗೆ ಆಕರ್ಷಿಸಿ ಶೋಷಣೆ ಮಾಡುವುದು ವಿಘಾತುಕ ಕಾರ್ಯವಾಗುವುದಲ್ಲದೆ ಬೇರೇನೂ ಅಲ್ಲ

ನವಭಾರತ, ಮಂಗಳೂರು.

೦೦೦ ೦೦೦

೩

ಆದರೆ ನಮ್ಮ ಹಳ್ಳಿಗಳ ಮತದಾರ ಬಂಧುಗಳಿಗೆ ಒಂದು ಮಾತನ್ನು ಸೂಚಿಸಬಯಸುತ್ತೇವೆ. ನಿನ್ನೆಯ ವರೆಗೆ ಕಾಂಗ್ರೆಸಿನಲ್ಲಿದ್ದುಕೊಂಡು, ಅದರ ಅಧಿಕಾರ ಸ್ಥಾನಗಳನ್ನು ಅಲಂಕರಿಸಿ, ಅದಕ್ಕೆ ಬೆಂಬಲ ನೀಡಿರೆಂದು ಬೇಡುತ್ತಿದ್ದ ಈ ಮಹಾ ವ್ಯಕ್ತಿಗಳು ಇಂದು ಅಂತರ್ಲಾಗ ಹೂಡಿ, ಕಾಂಗ್ರೆಸನ್ನು ಹಳಿಯುತ್ತಿರುವುದಕ್ಕೆ ಕಾರಣವೇನೆಂಬುದನ್ನು ಮತದಾರ ಬಂಧುಗಳು ಮೊದಲಾಗಿ ತಿಳಿಯಲೆತ್ನಿಸಬೇಕು. ಇದನ್ನು ತಿಳಿದರೆಂದಾಗಲಿ, ಅಥವಾ ಕಾಂಗ್ರೆಸನ್ನು ತ್ಯಜಿಸಿ ಅದರ ಮೇಲೆ ಅಪ್ರಚಾರ ಮಾಡುವವರನ್ನೇ ಆಗಲಿ ಪ್ರಶ್ನಿಸಿ ತಿಳಿದುಕೊಳ್ಳಬೇಕು. ಈ ಟೀಕಾಕಾರರು ತಾವು ಕಾಂಗ್ರೆಸಿನಲ್ಲಿದ್ದಾಗ ಮಾಡಿದ್ದೇನೆಂಬುದನ್ನು ಮತದಾರರಿಗೆ ತಿಳಿಸಲಿ. ತಾವು ಕಾಂಗ್ರೆಸ್ ಸಂಸ್ಥೆಯಲ್ಲಿ ದೊಡ್ಡ ದೊಡ್ಡ ಸ್ಥಾನಗಳಿಗೆ ಏರಲು ಯತ್ನಿಸಿದ್ದುಂಟೇ? ಅಥವಾ ಇನ್ನೇನಾದರೂ ಉದ್ಯೋಗವನ್ನು ಪಡೆಯಲೆತ್ನಿಸಿದುದುಂಟೇ? ಎಂಬ ಪ್ರಶ್ನೆಗಳಿಗೆ ಉತ್ತರ ಹೇಳಲಿ. ಹಾಗೆ ಸ್ಥಾನಮಾನಗಳನ್ನು ಪಡೆಯಲೆತ್ನಿಸಿ ಅದು ಸಿಕ್ಕದೆ ಹೋದುದಕ್ಕಾಗಿ ಇಂದು ಕಾಂಗ್ರೆಸನ್ನು ದೂರುವುದು ಸರಿಯೇ ಎಂಬ ಪ್ರಶ್ನೆಯನ್ನೂ ಮತದಾರರು ಕಾಂಗ್ರೆಸಿನ ಟೀಕಾಕಾರರಿಗೆ ಕೇಳಲಿ, ಆಗ ಎಂತಹ ಉತ್ತರ ಬರುವುದೆಂಬುದನ್ನು ಮತದಾರರೇ ತಿಳಿದುಕೊಂಡು ಕಾಂಗ್ರೆಸಿನ ಪ್ರತಿಪಕ್ಷದವರ ಟೀಕೆ, ಆರೋಪಣೆಗಳೆಲ್ಲವೂ ಸ್ವಾರ್ಥದಿಂದ ಪ್ರೇರಿತವಾದವುಗಳೆಂಬುದನ್ನು ದೃಢಪಡಿಸಿಕೊಳ್ಳಲಿ. ಆಗ ಯಾರಿಗೆ ಮತ ಕೊಡಬೇಕೆಂದು ತಿಳಿಯುವದು.

ಮತದಾರರು ಯಾರು ಹೇಳಿದ್ದನ್ನು ಸತ್ಯವೆಂದು ನಂಬದೆ ಸತ್ಯ ಸಂಗತಿಯನ್ನು ಶೋಧಿಸಿ ತಿಳಿದು ಆ ಮೇಲೆ ತಮ್ಮ ಸ್ವಂತ ನಿರ್ಧಾರಕ್ಕೆ ಬರಲಿ. ಹಾಗೆ ಮಾಡದೆ ಕೆಲಸ್ವಾರ್ಥಿಗಳ ಮಾತಿಗೆ ಮನ್ನಣೆಯಿತ್ತು ಕಣ್ಣುಮುಚ್ಚಿ ಅವರಿಗೆ ಮತ ಕೊಟ್ಟುಬಿಟ್ಟರೆ ಮುಂದಿನ ಐದು ವರ್ಷಗಳಲ್ಲಾಗಬಹುದಾದ ಎಲ್ಲ ಸಂಕಟಗಳಿಗೂ ಮತದಾರರೂ ಹೊಣೆಗಾರರಾಗಬೇಕಾಗಬಹುದಾದ್ದರಿಂದ ಮೊದಲೇ ಜಾಗರೂಕತೆಯಿಂದ ವರ್ತಿಸುವುದು ಅಗತ್ಯ. ಪೆಟ್ಟು ಮೇಲೆ ಬುದ್ಧಿ ಬರುವುದಕ್ಕಿಂತ ಮೊದಲೇ ಇದ್ದ ಬುದ್ಧಿಯನ್ನು ನಮ್ಮ ಮತ್ತು ದೇಶದ ಹಿತವನ್ನು ಸಾಧಿಸುವುದಕ್ಕೆ ಉಪಯೋಗಿಸುವುದು ಉತ್ತಮವಲ್ಲವೆ?

ಸರ್ವೋದಯ (1-12-51)
ಮಂಗಳೂರು

ಮತದಾರರ ಗಮನಕ್ಕೆ

ನಿಷೇಧ ಕೃತ್ಯಗಳು ಮತ್ತು ದಂಡನಾರ್ಹ ಅಪರಾಧಗಳು.

ಮತದಾರರಿಗೆ ಸಾಮಾಜಿಕ ಬಹಿಷ್ಕಾರ, ದೇವರ ಕೋಪ ಅಥವಾ ಇನ್ನಿತರ ಹೆದರಿಕೆ ಹಾಕುವುದು ತಪ್ಪು.

ನಿಷಿದ್ಧವಾದ ಕೃತ್ಯಗಳು

ಮತದಾರನು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಸೇರಿಸಿಕೊಳ್ಳಬಾರದು.

ಮತದಾರನು ಯಾವನಾದರೊಬ್ಬ ಹುರಿಯಾಳಿನ ಬೆಂಬಲಿಗನಾಗಿದ್ದರೆ ಅವನು ಆ ಹುರಿಯಾಳಿನ ಪರವಾಗಿ ಸೇರಿಸುವ ರಾಜಕೀಯ ಸಭೆಗಳಿಗೆ ಹೋಗಬಹುದು, ಆದರೆ ಬೇರೆ ಹುರಿಯಾಳುಗಳ ಬೆಂಬಲಿಗರು ಕೂಡಿಸಿದ ಸಭೆಗಳಲ್ಲಿ ಹೋಗಿ ಗೊಂದಲವನ್ನೆಬ್ಬಿಸತಕ್ಕದ್ದಲ್ಲ. ಚುನಾವಣೆಯ ಪ್ರಚಾರದ ಅವಧಿಯಲ್ಲಿ ರಾಜಕೀಯ ಸಭೆಯಲ್ಲಿ ಗೊಂದಲವನ್ನೆಬ್ಬಿಸುವವರನ್ನು ಕೂಡಲೇ ಕೈದು ಮಾಡಲು ಪೋಲೀಸರಿಗೆ ಅಧಿಕಾರ ಕೊಡಲಾಗಿದೆ, ಮತ್ತು ಸಭೆಗಳಲ್ಲಿ ಗಲಟೆ ಎಬ್ಬಿಸುವವರಿಗೆ ಕಠಿಣ ಶಿಕ್ಷೆ ವಿಧಿಸಲು ಕಾಯಿದೆಯಲ್ಲಿ ವ್ಯವಸ್ಥೆಯಿದೆ.

ಹುರಿಯಾಳು ಬರೆಹ ಮೂಲಕ ತಿಳಿಸದೆ ಮತದಾರನು ತನ್ನ ನೆಚ್ಚಿನ ಹುರಿಯಾಳಿನ ಸಲುವಾಗಿ ತನ್ನ ಕೈಯಿಂದ ಏನೂ ಹಣ ವೆಚ್ಚ ಮಾಡಕೂಡದು. ಎಂಥ ಪ್ರಸಂಗದಲ್ಲಿಯೂ ಮತದಾರನು ತನ್ನ ಮತವನ್ನು ಕೆಲವೊಂದು ಪರಿಹಾರ ಪಡೆದು ಮಾರಿಕೊಳ್ಳಲಾಗದು. ಇದು ಅನೀತಿಕ ವಾಗಿರುವದಲ್ಲದೆ ಕಾಯಿದೆ ದೃಷ್ಟಿಯಲ್ಲಿಯೂ ಅಪರಾಧವೆನಿಸಿ ಶಿಕ್ಷಾರ್ಹವಾಗಿದೆ. ಅದರಂತೆಯೇ ಮತದಾರರಿಗೆ ಇಂಥವರಿಗೇ ಮತಕೊಡಿರೆಂದು ಒತ್ತಾಯಪಡಿಸುವದೂ ಮತ ಕೊಡದಿದ್ದರೆ ಸಾಮಾಜಿಕ ಬಹಿಷ್ಕಾರ, ದೇವರ ಕೋಪ, ಅಥವಾ ಇನ್ನಿತರ ಬೆದರಿಕೆ ಹಾಕುವದೂ ಶಿಕ್ಷಾರ್ಹವಾದ ಅಪರಾಧವೆನಿಸುವದು.

ಮತದಾನದ ದಿನ ಸಾರ್ವಜನಿಕ ಸಭೆ, ಮತಯಾಚನೆ ಇವುಗಳನ್ನು ನಡೆಸುವದು ಅಕ್ರಮವೆನಿಸುವದು. ಅದುದರಿಂದ ಮತದಾನದ ದಿನ ಯಾರೂ ಮತಯಾಚನೆ ಮಾಡುವದಾಗಲೀ ಇಂಥವರಿಗೆ ಮತ ಕೊಡಕೂಡದೆಂದು ಹೇಳುವದಾಗಲೀ, ಇಲ್ಲವೆ ಮತದಾನಕ್ಕೆ ಬರಕೂಡದೆಂದು ತಿಳಿಸುವದಾಗಲೀ ಮತಕಟ್ಟೆಯ ನೂರು ಗಜ ದೂರದೊಳಗೆ, ಖಾಸಗಿ ಮನೆಯಲ್ಲಿ ಕೂಡ ಸಭೆ ಸೇರಿಸುವದಾಗಲೀ ಅಕ್ರಮವೆನಿಸುವದು. ಮತಕಟ್ಟೆಯ ಸಮೀಪದಲ್ಲಿ ಯಾರೂ ಚುನಾವಣೆಗೆ ಸಂಬಂಧಿಸಿದ ಯಾವದೇ ಬೋರ್ಡು, ನೋಟೀಸು ಹಚ್ಚುವದೂ ಅಕ್ರಮವೆನಿಸುವದು. ಈ ನಿರ್ಬಂಧಗಳನ್ನು ಉಲ್ಲಂಘಿಸುವವರನ್ನು ವಾರಂಟು ಇಲ್ಲದೆ ಕೈದು ಮಾಡಲಾಗುವದು ಮತ್ತು ರೂ. 250 ವರೆಗೆ ಜುಲ್ಮಾನೆ ವಿಧಿಸಬಹುದು

ವಾಹನಗಳ ಮೇಲೆ ನಿರ್ಬಂಧ

ಹುರಿಯಾಳು ಅಥವಾ ಅವನ ಪಕ್ಷದವರು ಅಥವಾ ಬೇರೆ ಯಾರಾದರೂ ಒದಗಿಸಿದ ವಾಹನದಲ್ಲಿ ಮತದಾರನು ಮತಕಟ್ಟೆಗೆ ಹೋಗುವುದೂ, ಎರಡು ಕುಟುಂಬದವರು ಸಹ ಒಂದೇ ವಾಹನದಲ್ಲಿ ಹೋಗುವದೂ ಅಪರಾಧವೆನಿಸುವದು. ಆದರೆ ಎರಡು ಕುಟುಂಬದವರು ಕೂಡಿ ತಮ್ಮ ಕೈಯಿಂದ ಬಾಡಿಗೆ ಕೊಟ್ಟು ಒಂದೇ ವಾಹನ ಹಿಡಿದು ಹೋಗಲಡ್ಡಿಯಿಲ್ಲ. ಮತದಾರನು ತಾನು ಬಾಡಿಗೆಗೆ ಮಾಡಿಕೊಂಡು ಹೋಗುವ ವಾಹನದಲ್ಲಿ ದಾರಿಯಲ್ಲಿ ಬೇರೆ ಮತದಾರರು ಬಂದರೆ ಅವರನ್ನು ಕೂಡಿಸಿಕೊಳ್ಳಲಾಗದು.

ಮತಕಟ್ಟೆಯಲ್ಲಿ ಎರಡನೆಯವರ ಹೆಸರು ಹೇಳಿ ತಾನೇ ಆ ಮನುಷ್ಯನೆಂದು ಮತದಾನ ಮಾಡುವದು ಅಪರಾಧವೆನಿಸುವದು. ಇದಕ್ಕೆ ಉಗ್ರವಾದ ಶಿಕ್ಷೆ ವಿಧಿಸಲಾಗುವುದು.

ಮತದಾನದ ಗೌಪ್ಯ ಕಾದಿಡುವದು

ಯಾರೂ ಮತದಾನದ ಗೌಪ್ಯವನ್ನು ಭಂಗಪಡಿಸಕೂಡದು; ಬಹಿರಂಗ ಪಡಿಸಲಾಗದು. ಮತದಾನದ ಗೌಪ್ಯವನ್ನು ಭಂಗಪಡಿಸುವದು ಒಂದು ಅಪರಾಧವೆನಿಸುವದು. ಈ ಅಪರಾಧಕ್ಕೆ ಮೂರು ತಿಂಗಳ ಶಿಕ್ಷೆ ಹಾಗೂ ದಂಡ ವಿಧಿಸಲು ಕಾಯಿದೆ ಇದೆ.

ಮತಕಟ್ಟೆಯಲ್ಲಿ ಮತಪೆಟ್ಟಿಗೆಗಳನ್ನು ಇಟ್ಟಿರುವ ಪರದೆಯ ಒಳಗೆ ಮತದಾರನು ಬಹಳ ಹೊತ್ತು ನಿಲ್ಲತಕ್ಕದ್ದಲ್ಲ. ಮತದಾರನ ವರ್ತನೆಯ ಬಗ್ಗೆ ಸಂಶಯ ಬಂದರೆ ಮಾತ್ರ ಪೋಲಿಂಗ್ ಆಫೀಸರರು ಪರದೆಯ ಒಳಗೆ ಇಣಿಕಿ ನೋಡಲು ಅಧಿಕಾರವಿದೆ. ಮತದಾರನು ಮತ ಪೆಟ್ಟಿಗೆಗಳಿಗೆ ಅಂಟಿಸಿದ ಹುರಿಯಾಳುಗಳ ಚಿಹ್ನೆಗಳನ್ನು ಹರಿಯತಕ್ಕದ್ದಲ್ಲ. ಅಥವಾ ಪೆಟ್ಟಿಗೆಗಳನ್ನು ಸರಿಸತಕ್ಕದ್ದಲ್ಲ. ಪೆಟ್ಟಿಗೆಗಳನ್ನು ಇಟ್ಟ ಕ್ರಮವನ್ನು ಬದಲಿಸತಕ್ಕದ್ದಲ್ಲ. ಮತ್ತು ಮತದಾನ ಕಾಗದವನ್ನು ಹರಿಯತಕ್ಕದ್ದಲ್ಲ. ಮುಚಿ ಮುದ್ದೆ ಮಾಡತಕ್ಕದ್ದಲ್ಲ. ಮತದಾರನು ಮಾಡತಕ್ಕದ್ದಲ್ಲವೆಂದು ಹೇಳಿದ ಈ ಯಾವದೇ ಕೃತಿಯನ್ನು ಮಾಡಿದರೆ ಅದೊಂದು ಅಪರಾಧವಾಗುವದು. ಈ ಅಪರಾಧಕ್ಕೆ 1 ವರ್ಷ ಶಿಕ್ಷೆ ಹಾಗೂ 500 ರೂಪಾಯಿಗಳ ವರೆಗೆ ಜುಲ್ಮಾನೆ ವಿಧಿಸಲಾಗುವದು. ಮತ ಪತ್ರವನ್ನು ಪೆಟ್ಟಿಗೆಯಲ್ಲಿ ಹಾಕದೆ ಹೊರಗೆ ಒಯ್ಯುವದಕ್ಕೆ ಪ್ರಚೋದನೆ ಕೊಡುವದೂ ಸಹಾಯ ಮಾಡುವದೂ ಅಪರಾಧವೆನಿಸುವದು

ಮೇಲೆ ಹೇಳಿದ ಯಾವದೇ ಅಪರಾಧವೂ ಮಾಡಿದ ಮತದಾರನಿಗೆ ಅಥವಾ ಮತದಾರರಿಗೆ ಅಂಥ ಅಪರಾಧ ಮಾಡಲು ಪ್ರಚೋದನೆ ಅಥವಾ ಸಹಾಯ ಮಾಡಿದವರು ಆಯಾ ಅಪರಾಧಕ್ಕೆ ವಿಧಿಸಬೇಕಾದ ಜುಲ್ಮಾನೆ ಮತ್ತು ಶಿಕ್ಷೆಗಳನ್ನು ಅನುಭವಿಸಬೇಕಾಗುವದಲ್ಲದೆ ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗುವದು. ಮುಂದಿನ ಚುನಾವಣೆಗಳಲ್ಲಿ ಅವರಿಗೆ ಮತದಾನದ ಹಕ್ಕು ನಷ್ಟವಾಗಿ ಹೋಗುವದು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುಳಿ ತಿನ್ನಬಾರದು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜೆಂಟರು:—ಹುಬ್ಬಳ್ಳಿ ಭಾವಸಾರ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಸಂಗಮೇಶ್ವರ ಮೆಡಿಕಲ್ ಹಾವಣಗೇರಿ ದಾವಣಗೇರಿ:—ಹಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ, ಹಾವೇರಿ ಬ್ಯಾಡಗಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಬಿಸ್ನು ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟಕೃಷ್ಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

ಆಹಾರ ಅಭಾವದೊಡನೆ ಹೋರಾಡುವ ಕಾಂಗ್ರೆಸಿನೊಡನೆ ನೂರಾರು ಪಕ್ಷಗಳ ಚುನಾವಣಾ ಯುದ್ಧ

(೧ನೇ ಪುಟದಿಂದ ಮುಂದರಿಸಿದ್ದು)

ಕಷ್ಟಗಳು ಮಿತಿಮೀರಿದವು. ಆದಕ್ಕಾಗಿ ನಿಯಂತ್ರಣಗಳು ಅನಿವಾರ್ಯವಾದವು. ಆಹಾರ ಧಾನ್ಯಗಳಂತೆ ಇತರ ಹಲವು ಸಾಮಾನುಗಳ ಉತ್ಪತ್ತಿಯೂ ತಗ್ಗಿತು. ಆರಳೆ ಸಣಬುಗಳ ಕೊರತೆಯೂ ವಿಭಜನೆಯಿಂದ ವಿಶೇಷವಾಯಿತು. ಅವುಗಳ ಹುಟ್ಟುವಳಿಯನ್ನು ಹೆಚ್ಚಿಸಲು ಆಹಾರ ಧಾನ್ಯಗಳನ್ನು ಬೆಳೆಯುವ ಕೆಲವು ಹೊಲಗಳನ್ನು ಹತ್ತಿ ಸಣಬುಗಳಿಗಾಗಿ ಉಪಯೋಗಿಸಿದರು. ಈ ಕೃತಿಯಿಂದಲೂ ಆಹಾರದ ಹುಟ್ಟುವಳಿಗೆ ಬಾಧೆಯಾಯಿತು.

ಇದನ್ನೆಲ್ಲ ಎದುರಿಸಲು ಕಾಂಗ್ರೆಸ್ ಸರಕಾರವು ತಕ್ಕ ಕ್ರಮಗಳನ್ನು ಕೈಕೊಂಡಿತು. ಸೀದಾ ಪದ್ಧತಿಯು ಸೊಗಸಾಗಿ ಸಾಗುವಂತೆ ಧಾನ್ಯಗಳ ಎತ್ತುವಳಿಯನ್ನು ಜೋರಾಗಿ ನಡೆಸಿತು. ಇತ್ತ ಆಹಾರ ಧಾನ್ಯಗಳ ಹುಟ್ಟುವಳಿಯನ್ನು ಹೆಚ್ಚಿಸಲು ಈ ಮುಂಚೆ ಹೇಳಿದ ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡಿತು. ಆಹಾರಕ್ಕಾಗಿ ರಾಷ್ಟ್ರವು ಆದಷ್ಟು ಮಟ್ಟಿಗೆ ಪರಾವಲಂಬಿಯಾಗಬಾರದೆಂದು ನಿಯಂತ್ರಣಕ್ಕೊಳಪಡದ ಇತರ ಆಹಾರ ವಸ್ತುಗಳನ್ನು ಪ್ರಯೋಗಿಸಲು ಜನತೆಗೆ ಬಿನ್ನವಿಸಿತು. ಈ ಪ್ರಚಾರದಿಂದ ಪ್ರಜೆಗಳು ಪೂರಕ ಆಹಾರಗಳನ್ನು ಹೆಚ್ಚಾಗಿ ಬಳಸತೊಡಗಿದರು. ಪೂರಕ ಆಹಾರಗಳ ಪ್ರಚಾರಕ್ಕಾಗಿ ಪ್ರದರ್ಶನಗಳನ್ನೇರ್ಪಡಿಸಲಾಯಿತು.

ಪರದೇಶಗಳಿಗೆ ಅನ್ನಧಾನ್ಯಗಳಿಗಾಗಿ ಭಾರತದಿಂದ ಹೊಳೆಯಾಗಿ ಹರಿಯುತ್ತಿರುವ ಕೋಟಿಗಟ್ಟಲೆ ಹಣವನ್ನು ಉಳಿಸಿ ಇನ್ನೂ ಅನೇಕ ಉಪಾಯಗಳನ್ನು ಸರಕಾರದವರು ನಡೆಸಿದರು. ಮಾಂಸಾಹಾರಿಗಳಿಗೆ ಸಹಾಯಕವಾಗುವಂತೆ ಮೀನುಗಳ ಹುಟ್ಟುವಳಿಯು ಹೆಚ್ಚುವಂತೆ ಹಲವು ಪ್ರಾಂತ್ಯಗಳಿಗೆ ತಕ್ಕ ಸಲಹೆಗಳನ್ನಿತ್ತು ಆವಶ್ಯಕ ಸಾಮಗ್ರಿಗಳನ್ನೊದಗಿಸಿದರು. ಇದಕ್ಕಾಗಿ ಅಗತ್ಯವುಳ್ಳ ಧನಸಹಾಯವನ್ನು ಕೊಟ್ಟಿದ್ದಾರೆ. ಮೀನ ಸಂಶೋಧನೆಯ ಕೇಂದ್ರಗಳನ್ನು ಹಲವು ಕಡೆ ತೆರೆದರು. ಒಕ್ಕಲತನದ ಅಭಿವೃದ್ಧಿಗಾಗಿ ಕೆಲವು ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದರು. ಹಾಲಿನ ಹುಟ್ಟುವಳಿ ಬೆಳೆಸಲು ಕ್ಷೀರೋತ್ಪತ್ತಿ ಕೇಂದ್ರ (Dairy institute)ಗಳನ್ನು ಹೊರಡಿಸಿದರು. ಹೊಸಜಾತಿಯ ಭತ್ತ ಮುಂತಾದ ಆಹಾರ ಧಾನ್ಯಗಳ ನಿರ್ಮಾಣಕ್ಕಾಗಿ ಸಂಶೋಧನ ಸಂಸ್ಥೆಗಳನ್ನು ರಚಿಸಿ ವಿಜ್ಞಾನಿಗಳನ್ನು ಈ ಕೆಲಸಕ್ಕಾಗಿ ನೇಮಿಸಿದರು. ಕೇಂದ್ರದ ಅಕ್ಕಿ ಸಂಶೋಧನ ಸಂಸ್ಥೆ (Central Rice Research institute)ಯು ಜಪಾನ, ಇಂಡೊನೇಶಿಯಾ ಮುಂತಾದ ರಾಷ್ಟ್ರಗಳಲ್ಲಿ ಬೆಳೆಯುವ ಬಗೆಯ ಭತ್ತವನ್ನು ಇಲ್ಲಿಯೂ ಬೆಳೆಸಲು ತಕ್ಕ ಯೋಜನೆಯನ್ನು ಮಾಡುತ್ತಿದೆ. ಈ ಕಾರ್ಯಗಳಿಗಾಗಿ ಸರಕಾರದವರು ಹಲವು ಸ್ಥಳಗಳಲ್ಲಿ ಸರಕಾರೀ ಹೊಲಗಳನ್ನು (Government farms) ಹೊಸದಾಗಿ ಅಧಿಕ ಸೌಕರ್ಯಗಳೊಂದಿಗೆ ಹೊರಡಿಸಿದ್ದಾರೆ.

ಈ ವರೆಗೆ ಸಂಕ್ಷೇಪದಲ್ಲಿ ಹೇಳಿದ ಅಂಶಗಳಿಂದ ತಂತಮ್ಮ ಜಿಲ್ಲೆಗಳಲ್ಲಿ ಒಕ್ಕಲತನದ ಅಭಿವೃದ್ಧಿಗಾಗಿ ಮತ್ತು ಒಕ್ಕಲಿಗರ ಕಲ್ಯಾಣಕ್ಕಾಗಿ ಸರಕಾರದವರು ನಡೆಸಿದ ಕಾರ್ಯಗಳ ಸಮಗ್ರ ಪರಿಚಯವನ್ನು ಜನತೆಯು ಮಾಡಿಕೊಳ್ಳಲೆತ್ನಿಸಿದರೆ ತಿಂಬ ಲೇಸು. ಆಗ ಕಾಂಗ್ರೆಸ್ ಸರಕಾರದವರು ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಕೈಮೀರಿ ಪರಿಶ್ರಮಪಟ್ಟಿದ್ದಾರೆನ್ನುವದು ತಾನೇ ಸ್ಪಷ್ಟವಾಗುವದ. ಕೆಲವು ಕಾಂಗ್ರೆಸಿಗರ ಅಪ್ರಿಯ ಆಕ್ಷೇಪಾರ್ಹ ನಡತೆಯನ್ನು ಕಂಡು, ಸರಕಾರವೂ ದಾರಿತಪ್ಪಿ ನಡೆಯಿತೆಂದು ವಾದಿಸಿ ಟೀಕಿಸುವುದು ಸಮಂಜಸವಲ್ಲ ಎಂಬುದು ತಾನೇ ತಿಳಿಯುವದು.

ನಾಡಿನ ಬಿಡುಗಡೆಗಾಗಿ ದುಡಿದ ಕಾಂಗ್ರೆಸು ಜನತೆಯ ಸುಖಕ್ಕಾಗಿ ಶ್ರಮಿಸುತ್ತಿದೆ ಯೆಂಬಲ್ಲಿ ಸಂದೇಹವೇಕೆ? ಆಹಾರ ಸ್ವಾವಲಂಬನಕ್ಕಾಗಿ ಕಾಂಗ್ರೆಸು ಎಡೆಬಿಡದೆ ದುಡಿಯುತ್ತಿದೆ. ಶಕ್ತಿಮೀರಿ ಸಾಹಸ ಮಾಡಲಿದೆ. ಆದುದರಿಂದ ವಸ್ತುಸ್ಥಿತಿಯನ್ನರಿಯದೆ ವ್ಯರ್ಥ ಟೀಕೆಮಾಡುವವರನ್ನು ನಂಬಲಾಗದು. ಆಹಾರದ ಆಡಳಿತದಲ್ಲಿ ಇಷ್ಟೊಂದು ಶ್ರಮಪಟ್ಟು ಅನುಭವ ಪಡೆದ ಕಾಂಗ್ರೆಸ್ಸೇ ತಮ್ಮ ಕೈವಾರಿಯೆಂದು ಪ್ರಜೆಗಳು ತಿಳಿಯುತ್ತಾರೆ. ಬೇರೆ ಯಾವ ರಾಜಕೀಯ ಪಕ್ಷವು ಅಧಿಕಾರದಲ್ಲಿದ್ದರೂ ಆಹಾರದ ಆಡಳಿತವನ್ನು ಇಷ್ಟರ ಮಟ್ಟಿಗಾದರೂ ತೃಪ್ತಿಕರವಾಗಿ ಸಾಗಿಸಲು ಸಾಧ್ಯವಾಗುತ್ತಿರಲಿಲ್ಲೆಂದು ಧಾರಾಳವಾಗಿ ಹೇಳಬಹುದು.

ಆದುದರಿಂದ ಆಹಾರದ ಆಡಳಿತದ ವಿಷಯದಲ್ಲಿ ಕೇಳಬರುತ್ತಿರುವ ಟೀಕೆಯನ್ನು ಜನರು ಸಾರಾಸಾರ ವಿಚಾರಮಾಡದೆ ನಂಬಕೂಡದು. ಅಸ್ಥೆಯಿಂದ, ಪರಿಶ್ರಮದಿಂದ ಆಹಾರದ ಕಷ್ಟಗಳನ್ನು ಬಗೆಹರಿಸಲು ಸತತವಾಗಿ ದುಡಿದ ಕಾಂಗ್ರೆಸು ಪಕ್ಷವು ಇನ್ನೊಮ್ಮೆ ಸರಕಾರದ ಅಧಿಕಾರ ಸೂತ್ರ ವಹಿಸುವಂತೆ ಮಾಡುವುದು ನಾಡಿನ ಹಿತದೃಷ್ಟಿಯಿಂದ ಯೋಗ್ಯವಾಗಿದೆ.

ಮೈಸೂರು ಶ್ರೀಮನ್ಮಹಾರಾಜರ ಬಾಸ್ ವೈದ್ಯ ನರಸಿಂಹ ಪಂಡಿತರ ಮನೆತನ
ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

✻ಸಂತಾನ ಸಿಂಧೂರ✻

ಮಹಿಳೆಯರ ಬಹಿಷ್ಟ (ಮುಟ್ಟಿನ) ಸಂಬಂಧದ ಹೊಟ್ಟೆನೋವು, ಇದರ ಜೊತೆಗೆ ನೈಕ್ಕನೋವು, ಬೆನ್ನುನೋವು ನಡುಕೆಳತ ಅತ್ಯಮ ಸೂತಿಕ, ಗರ್ಭಸ್ರಾವ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ.

ಕ್ರಯ:–1ಸೆಟ್ 5ರೂ. ಪೋಸ್ಟೇಜ್ ಮತ್ತು ಪ್ಯಾಕಿಂಗ್ 1ರೂ 6ರೂ. ಮನಿಯಾರ್ಡರ್ ಮಾಡಿದ ಕೂಡಲೆ ಔಷಧಿ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಪತ್ರವ್ಯವಹಾರ ಗುಪ್ತ. ಕೆಟಲಾಗ್ ಉಚಿತ, ಹೆಚ್ಚಿನ ಮಾಹಿತಿಗೆ 2ಆಣೆ ಸ್ಟಾಂಪು ಕಳಿಸಿ.

ವಿಳಾಸ:–A. ರಾಮಸ್ವಾಮಿ ಅಯ್ಯರ್ ಸನ್; ಪ್ರೊಪ್ರೈಟರ್, "ಸಂತಾನ ಸಿಂಧೂರ" 1] 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು,

ಅಥವಾ:– 2) ಅಂಬಳೆ ಪೋಸ್ಟ್, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್, ವೈಯ, ಕೊಳ್ಳೇಗಾಲ

THE CATHOLIC BANK LIMITED, COONDAPUR.

ದಿ ಕಥೋಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಯೋಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ಚಿನ್ನಾಭರಣಗಳ ಮೇಲೆ ಪಡಕೊಂಡ ಸಾಲಗಳನ್ನು ಕ್ಲಪ್ತವಾದಿಗೆ ಸಲ್ಲಿಸಿಯಿಕದೆ ಯಿದ್ದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವರಿಗೆ ಜ್ಯಾರಿ ಆಗದೆ ವಾಪಾಸು ಬಂದುದರಿಂದಲೂ, ಇನ್ನು ಕೆಲವರಿಗೆ ಜ್ಯಾರಿ ಆದರೂ, ಬ್ಯಾಲೆನ್ಸು ಪಾವತಿಮಾಡದೆ ಇದ್ದುದರಿಂದಲೂ, ಸದರಿ ಸಾಲಗಳಲ್ಲಿ ಅಡವಿಟ್ಟ ಚಿನ್ನದ ನಗಗಳನ್ನು ಇದೇ ಬರುವ ತಾರೀಕು 27-12-51ನೇ ಗುರುವಾರ ಮಧ್ಯಾಹ್ನ 2ಗಂಟೆ ಸಮಯಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೋಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಯೋಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೇ ಮುಂದರಿಸಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಸಾಲ ಪಡಕೊಂಡವರ ಹೆಸರು	ಸಾಲದ ಅಸಲು ಬ್ಯಾಲೆನ್ಸು
25/152	ನತಲ್ ಡೊಮಿಲ್ಡ-ದೆನಿಸ್ ಬಾರೆತರ ಹೆಂಡ್ತಿ ಅಂಕದಕಟ್ಟೆ, ಕುಂದಾಪುರ	60-0-0
25/217	ಡಿ. ಜಿ. ಕಿಣಿ-ಗೋವಿಂದರಾಯ ಕಿಣಿಯ ಮಗ ಕುಂದಾಪುರ ಕ್ಲಬ್	50-0-0
25/355	ಕಾಸ್ಮಿರ್ ಡಿ'ಸೋಜ-ಪಿಯಾದ ಸೋಜರ ಮಗ, ಜಪ್ತಿಕೆರೆ, ಕುಂದಾಪುರ	70-0-0
25/565	ಕುಪ್ಪಯ್ಯ ಅಡಿಗ-ಚನ್ನಕೇಶವ ಅಡಿಗರ ಮಗ, ನ್ಯಾಜಾಡಿ	500-0-0
25/589	ಕೆ. ಇಬ್ರಾಹಿಮ್ ಸಾಹೇಬ-ಮೊಹಿದ್ದಿನ್ ಸಾಹೇಬರ ಮಗ, ಕೋಡಿ	150-0-0
25/609	ಸಯ್ಯದ ಇಸ್ಮಾಯಿಲ್, ಉಮ್ಮರ ಸಾಹೇಬರ ಮಗ, ಹುಣ್ಸೆಮಕ್ಕಿ	80-0-0
25/760	ಸಗರ ಅಮೃತ ನಾಯ್ಕ ವೆಂಕ್ಟ ನಾಯ್ಕರ ಮಗ, ಗಂಗೊಳ್ಳಿ	110-0-0
25/768	ಕಾದೀರ್ ಸಾಹೇಬ-ಹೈಮನ್ ಸಾಹೇಬರ ಮಗ, ಹಾಲಾಡಿ	10-0-0
26/ 58	B H ಶ್ರೀನಿವಾಸ ಅಯ್ಯಂಗರ್-ನರಸಿಂಹ ಅಯ್ಯಂಗರ ಮಗ, ಕುಂದಾಪುರ	10-0-0
26/796	K ರಾಮಚಂದ್ರ ಶೇಟ್-ಅನಂತ ಸೇಟ್ರ ಮಗ, ಕುಂದಾಪುರ	15-0-0
26/576	ಜಿ ಕನೆಕ್ಸ್ ಜಿ ತಾಂಡೆಲ, ಗೋವಿಂದ ತಾಂಡೆಲರ ಮಗ, ಗಂಗೊಳ್ಳಿ	1572-0-0
27/ 5	ಜಿ ಕನೆಕ್ಸ್ ಜಿ ತಾಂಡೆಲ, ಗೋವಿಂದ ತಾಂಡೆಲರ ಮಗ, ಗಂಗೊಳ್ಳಿ	2500-0-0

The Catholic Bank Ltd., COONDAPUR. 11 12 1951 — **F Menages** Agent.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ಸೌಕರ್ಯ

ಈ ಜಿಲ್ಲೆಯಲ್ಲಿ ೧,೪೪೦ ಮೈಲುಗಳಷ್ಟು ಮಾರ್ಗಗಳಿರುತ್ತವೆ. ಇವುಗಳಲ್ಲಿ ೬೪೮ ಮೈಲುಗಳಷ್ಟು ಹೈವೇ ಡಿಪಾರ್ಟ್‌ಮೆಂಟಿನ ವಶದಲ್ಲಿವೆ.

ಕಳೆದ ಯುದ್ಧಾಂತ್ಯದ ವರೆಗೆ ಈ ಜಿಲ್ಲೆಯ ರಸ್ತೆಗಳೆಲ್ಲಾ ಜಿಲ್ಲಾಬೋರ್ಡಿನ ವಶದಲ್ಲಿದ್ದವು. ಯುದ್ಧಾನಂತರದಲ್ಲಿ ಮಾರ್ಗಾಭಿವೃದ್ಧಿಗಾಗಿ ರಚಿಸಿದ ಯೋಜನೆಯಂತೆ ಮಾರ್ಗಗಳನ್ನು ಉನ್ನತಾವಸ್ಥೆಗೆ ತರುವುದು ಜಿಲ್ಲಾಬೋರ್ಡಿಗೆ ಅಸಾಧ್ಯವೆಂದು ಕಂಡುಬಂದಿತು, ಆದ್ದರಿಂದ ಸರಕಾರವೆ ಮುಖ್ಯ ಮುಖ್ಯಮಾರ್ಗಗಳನ್ನು ತನ್ನ ವಶದಲ್ಲಿಟ್ಟುಕೊಂಡು ಅಭಿವೃದ್ಧಿಗೊಳಿಸಲು ನಿಶ್ಚಯ ಮಾಡಿತು. ಇದಕ್ಕಾಗಿ ೧೯೪೬ನೇ ಎಪ್ರಿಲ್‌ನಲ್ಲಿ ಮಹಾ ಮಾರ್ಗಾಭಿವೃದ್ಧಿ ಶಾಖೆ (High way department) ರಚಿಸಲ್ಪಟ್ಟಿತು.

ಸೇತುವೆಗಳು

ವಾಹನಗಳ ಓಡಾಟಕ್ಕೆ ರಸ್ತೆಗಳು ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯವಾದವು ಸೇತುವೆಗಳು. ಹೊಸ ಸೇತುವೆಗಳನ್ನು ಕಟ್ಟುವುದು, ಹಳೆ ಸೇತುವೆಗಳನ್ನು ದುರಸ್ತಿಗೊಳಿಸುವದು ಮುಂತಾದ ಕಾರ್ಯಗಳನ್ನು ಸರಕಾರವು ಕೈಕೊಂಡಿರುತ್ತದೆ. ೧೯೪೭ರಲ್ಲಿ ಮಾರ್ಗಾಭಿವೃದ್ಧಿಗಾಗಿ ಪಂಚವಾರ್ಷಿಕಯೋಜನೆಯನ್ನು ಮಾಡಲಾಯಿತು.

ಜಿಲ್ಲೆಯಲ್ಲಿರುವ ೧೩ಹೊಳೆಗಳಿಗೂ ಸೇತುವೆಯನ್ನು ಕಟ್ಟುವಂತೆ ನಿಶ್ಚಯಿಸಲಾಗಿದೆ. ಮುಲ್ಕಿಯ ಸೇತುವೆಯ ಕೆಲಸವೂ ಈಗಾಗಲೆ ಪ್ರಾರಂಭವಾಗಿದೆ ಕಲ್ಯಾಡಿ ಹೊಳೆಯ ಸೇತುವೆಯನ್ನು ಪುನಃಕಟ್ಟಲು ನಿರ್ಣಯಿಸಲಾಗಿದೆ. ಕೂಳೂರು ಸೇತುವೆಯ ಕೆಲಸವೂ ಆರಂಭವಾಗಿದ್ದು ಸದ್ಯದಲ್ಲಿಯೇ ಪೂರ್ತಿಗೊಳ್ಳಬಹುದು ಹತ್ತು ವರ್ಷಗಳಿಂದ ಬಿದ್ದುಹೋದ ಎಕ್ಕಾರುಹೊಳೆಯ ಸೇತುವೆಯನ್ನು ಕಟ್ಟಿಸಲಾಗುವದು. ಮಂಗಳೂರು ಮಡಿಕೇರಿ ರಸ್ತೆಯಲ್ಲಿ ಬ್ರಹ್ಮರಕೂಟ್ಲು, ತುಂಬೆ ಸೇತುವೆಗಳನ್ನೂ ಕಟ್ಟಿಸಲಾಗುವದು. ೧೯೪೮ರಲ್ಲಿ ಸಾರಡ್ಕ, ಕಂಬ್ಳಬೆಟ್ಟು, ತಾಳ್ತಿಬಾಲು ಸೇತುವೆಗಳ ಕೆಲಸವೂ ಪ್ರಾರಂಭವಾಗಿದೆ. ೧೯೪೯ರಲ್ಲಿ ಶೀರೂರು, ವಾಯುಸ್ಥಾನಿಕ ಮತ್ತು ಕಲ್ಲಕಟ್ಟೆ ಸೇತುವೆಗಳ ಕೆಲಸವು ಆರಂಭವಾಗಿವೆ. ೧೯೫೦ರಲ್ಲಿ ಕೂಳೂರ ಮತ್ತು ಎಕ್ಕಾರು ಸೇತುವೆಗಳ ಕೆಲಸವು ಆರಂಭವಾಗಿದೆ.

ಗ್ರಾಮಗಳ ರೈತರು ಪಟ್ಟಣಗಳಿಗೆ ತಮ್ಮ ಸರಕುಗಳನ್ನು ಸಾಗಿಸಲು ಅನುಕೂಲವಾಗಲೆಂದು ಗ್ರಾಮರಸ್ತೆಗಳನ್ನು ತಯಾರಿಸಲು ನಿಶ್ಚಯಿಸಲಾಗಿದೆ ಈಗ ಒಟ್ಟು ೩೩೯ ಮೈಲು ಗ್ರಾಮರಸ್ತೆ ತಯಾರಿಸಲು ತೀರ್ಮಾನವಾಗಿರುತ್ತವೆ ೧೫೨ ಮೈಲು ರಸ್ತೆಗೆ ಜಲ್ಲಿಹಾಕಿ ಸರಿಗೊಳಿಸಲು ನಿರ್ಧರಿಸಲಾಗಿದೆ ಅನೇಕ ರಸ್ತೆಗಳಿಗೆ ಡಾಮರುಹಾಕಿಸಲಾಗುತ್ತಿದೆ

ಈ ವರೆಗೆ ಒಟ್ಟು ೩೩೩ ಮೈಲು ಹೊಸರಸ್ತೆಗಳನ್ನು ತಯಾರಿಸಲಾಗುತ್ತಿದೆ. ಮತ್ತು ಮಾರ್ಗಗಳ ಸುಧಾರಣೆ ಕೆಲಸವೂ ನಡೆದಿರುತ್ತದೆ ಈ ಎಲ್ಲಾ ಕೆಲಸಕ್ಕೆ ಒಟ್ಟು ೯,೭೩,೦೦೦ ರೂಪಾಯಿ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ ಮತ್ತು ಈವರೆಗೆ ೩೩,೮೬೭ ರೂಪಾಯಿ ವೆಚ್ಚಮಾಡಲಾಗಿದೆ. ಅಂತೂ ೮ ೧೦ ವರ್ಷಗಳಲ್ಲಿ ಮುಖ್ಯವಾದ ರಸ್ತೆಗಳೆಲ್ಲಾ ಡಾಮರುಹಾಕಿ ಜಿಲ್ಲೆಯ ಉಪ್ಪಿನಂಗಡಿ ತಂಗವಾಗಿ ವಾಹನಗಳು ಓಡಾಡುವಂತೆ ಮಾಡಬೇಕೆಂಬುದೇ ಸರಕಾರದ ಮುಖ್ಯ ಗುರಿಯಾಗಿದೆ.

(ಪ್ರದೇಶ ಕಾಂಗ್ರೆಸ್ ಪ್ರಚಾರ ಶಾಖೆಯಿಂದ)

ವಾರದ ಭವಿಷ್ಯ

ತಾರೀಕು 20-12-51 ರಿಂದ — ತಾರೀಕು 26-12-51 ವರೆಗೆ

ಮೇಷ—ಕೈಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಸಾಂಸಾರಿಕದಲ್ಲಿ ಉದಾಸೀನರಾಗದೆ ಕಾರ್ಯರಂಗದಲ್ಲಿ ಧುಮುಕಿರಿ ನಿಮ್ಮ ಬಯಕೆಗಿಂತ ಅಧಿಕವಾದ ಫಲವು ಖಂಡಿತವಾಗಿ ಕೈಸೇರಲಿದೆ. ಬಂಧು ಜನರ ಸಹವಾಸದಿಂದ ಕೂಡಿ ಸುಖದಿಂದ ಕಾಲ ಕಳೆವಿರಿ ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗಕ್ಕಾಗಿ ವ್ಯಯಿಸಿ ಕೀರ್ತಿಭಾಗಿಗಳಾಗುವಿರಿ. ಮುಂದಿಟ್ಟ ಹೆಜ್ಜೆಯನ್ನೆಂದೂ ಹಿಂದಿಡುವ ಪ್ರಸಂಗಪ್ರಾದಗಳಾರದು ನಿಮಗೆ ವಿಪಕ್ಷೀಯರು ಸೂರ್ಯನು ಕಂಡ ಗೂಬೆಗಳಂತೆ ಅಡಗಿಕೊಳ್ಳುವರು ಆದರೆ ಸ್ತ್ರೀಜನತೆಯಿಂದ ಆಗಾಗ ಕಲಹ ಅನಿಷ್ಟಗಳು ಸಂಭವಿಸುವ ಯೋಗವಿದೆ ತಾ. 21ರಿಂದ 25ರ ವರೆಗಿನ ದಿನಗಳು ಅತ್ಯುತ್ತಮವಿವೆ.

ವೃಷಭ—ನಿಮ್ಮ ಅದೃಷ್ಟವೀವಾರದಲ್ಲಿ ಅತೀವ ಕನಿಷ್ಟಸ್ಥಿತಿಗೆ ಬಂದಿರುವದು. ಮಾತ್ರವಲ್ಲ ನಿಮ್ಮ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗುವವು ಖರ್ಚಿನ ಮಾರ್ಗಗಳಾದರೋ ದಿನದಿಂದ ದಿನಕ್ಕೆ ಏರುತ್ತಬರಲಿವೆ ಸಾಂಸಾರಿಕ ತಾಪತ್ರಯಗಳು ಮತ್ತಷ್ಟು ಹೆಚ್ಚುವವು. ಆರೋಗ್ಯವು ಕೆಡುವುದು ನಿಮ್ಮವರೇ ನಿಮಗೆ ವಿರೋಧಿಗಳಾಗಿ ಪರಿವರ್ತಿಸುವರು. ಶ್ರಮಜೀವಿಗಳಿಗಂತೂ ದಿನಯಾಪನೆಯು ಅತೀವ ಕಷ್ಟವಾಗುವದು. ಆದರೆ ಗುರುಗುರುಗಳೂ ಬ್ಬರ ಅನುಗ್ರಹವು ನಿಮಗಿದ್ದುದರಿಂದ ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಸವು. ಸಾಕಷ್ಟು ವಿಜಯಲಾಭವನ್ನು ಪಡೆವಿರಿ,

ಮಿಥುನ—ಸದುದ್ಯಮದಲ್ಲಿ ಕಾಲಕಳೆವಿರಿ. ಆದರೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವಿರದು. ಆಪ್ತೇಷ್ಟರು ಬಂಧುಗಳು ನಿಮ್ಮನ್ನು ದೂರಮಾಡುವರು ರಾಜಕೀಯ ಕೆಲಸಗಳಲ್ಲಿ ಕೋರ್ಟುಕಚೇರಿಗಳ ವ್ಯವಹಾರಗಳಲ್ಲಿ ಸದ್ಯಕ್ಕೆ ಉತ್ತಮ ಫಲಲಭಿಸದು ಮನೆಯ ಜನರೊಳು ಪರಸ್ಪರ ಬಿಕ್ಕಟ್ಟು ಮನಸ್ತಾಪಗಳು ಹೆಚ್ಚಲಿವೆ ವ್ಯಾಪಾರ ನೌಕರಿಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲವಿದ್ದರೂ ಅತಿವ್ಯಯದಿಂದ ಪೀಡಿತರಾದ ನಿಮಗೆ ಹಣದ ಅಡಚಣೆ ತಪ್ಪದು. ದುರ್ಜನರ ಸಹವಾಸದಿಂದಾಗಿ ಕಷ್ಟನಷ್ಟಗಳೂ ಜನಾಪವಾದವೂ ಸಂಭವಿಸಲಿದೆ ತಾ. 20, 26 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಕರ್ಕಟ—ಸದ್ಯಕ್ಕೆ ಅದೃಷ್ಟಶಾಲಿಗಳೆಂದರೆ ನೀವೇ ಸರಿ. ಯಾವ ಭಾಗದಲ್ಲಿ ನೋಡಿದರೂ ಏನೊಂದೂ ತರಬೆ ತೊಂದರೆಗಳು ಕಾಣಸಲಾರವು ವಿಶೇಷತಃ ಜನಮನ್ನಣೆ ಗೌರವಾದಿಗಳನ್ನು ಪಡೆವಿರಿ. ಸಾಮಾಜಿಕ ಕಾರ್ಯಗಳಲ್ಲೂ ರಾಜಕೀಯ ಕ್ಷೇತ್ರಗಳಲ್ಲೂ ದುಡಿದು ಕೀರ್ತಿಗಳಿಸುವಿರಿ. ಜನಹಿತಕಾರ್ಯದ ಸಲುವಾಗಿ ಹೆಚ್ಚಾಗಿ ಶ್ರಮಿಸುವಿರಿ ಎಂತಹ ಮಹತ್ಕಾರ್ಯಗಳೇ ಇರಲಿ ನಿಮ್ಮ ಪಾಲಿಗದು ಸುಲಭಸಾಧ್ಯವೆನಿಸುವದು. ಗೃಹಕೃತ್ಯದಲ್ಲಾಗಲಿ ಆರ್ಥಿಕ ಭಾಗದಲ್ಲಾಗಲೀ ವ ಇನ್ನಿತರ ಉದ್ಯೋಗಗಳಲ್ಲಾಗಲಿ ಅತ್ಯುಚ್ಚ ಸ್ಥಾನವನ್ನೆ ಹೊಂದುವಿರಿ. ತಾ 21, 22 ಅತ್ಯುತ್ತಮ.

ಸಿಂಹ—ನಿಮ್ಮ ಪರಿಸ್ಥಿತಿಯು ಮುಂಚಿಗಿಂತ ಸ್ವಲ್ಪ ಸುಧಾರಿಸಲಿದೆ, ಆದರೂ ಹಣದ ಬಿಕ್ಕಟ್ಟು ಕಡಿಮೆಯಾಗದು. ಹೆಚ್ಚಿನ ಸಮಯವನ್ನು ದೂರಯಾತ್ರಾ ಪ್ರಯಾಣದಲ್ಲಿ ಕಳೆಯಬೇಕಾಗುವದು. ಪಿತೃ ಸಂಬಂಧವಾದ ಕಾಲಿಕೆಯು ತಲೆದೋರೀತು. ಸರಕಾರಿ ಜನರಿಂದ ಪೀಡೆ ಸಂಭವಿಸುವ ಯೋಗವಿದೆ, ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗಲಾರವು. ವ್ಯಾಪಾರೀ ಜನರಿಗೂ ಮತ್ತು ನೌಕರಿ ವರ್ಗದವರಿಗೂ ಈ ವಾರವು ಹೆಚ್ಚಿನ ದೋಷದಾಯಿಯಾಗಲಾರದು, ತಾ. 20, 23, 24, 25 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಸವು.

ಕನ್ಯಾ—ಪಿತ್ತದೋಷದಿಂದಾಗಿ ಸದಾ ಒಂದಲ್ಲೊಂದು ಅಂಗದಲ್ಲಿ ನೋವು ಕಾಣಿಸುತ್ತಿರುವದು, ಮತ್ತು ದೇಹದಲ್ಲಿ ಕಜ್ಜಿ ಹುಣ್ಣು ಇತ್ಯಾದುಪದ್ರವಗಳು ಆಗಾಗ ಕಾಣಿಸುವವು. ಈ ಕಾಲದಲ್ಲಿ ಮುಖ್ಯವಾಗಿ ವಾಹನ ಸಂಚಾರ, ಕತ್ತಿಕೊಡಲಿಗಳ ಕೆಲಸ ಇತ್ಯಾದಿಗಳಿಗೆ ಕೈಹಾಕಬೇಡಿರಿ. ಅಪಾಯದ ಸಂಭವವಿದೆ ವಸ್ತುಬಟ್ಟೆ ಇತ್ಯಾದಿ ಗೃಹೋಪಕರಣಗಳಲ್ಲಿ ನ್ಯೂನತೆಯಿರದು, ಮಿತ್ರರ ಬೆಂಬಲವು ಉತ್ತಮವಿದ್ದರೂ ಬಂಧುಗಳ ನೆರವು ಇರದು. ಶತ್ರುಜನ ಪೀಡೆ ವಿಶೇಷವಾಗಲಿದೆ. ಹಣದ ಬಿಕ್ಕಟ್ಟು ಬೇರೆ ತಪ್ಪಿದ್ದಲ್ಲವು ತಾ. 21, 23, 26ರಲ್ಲಿ ಭೋಗ ಲಾಭ ಸುಖಗಳು ಪ್ರಾಪ್ತವಾಗಲಿವೆ.

ತುಲಾ—ಶಕ್ತಿಮೀರಿ ದುಡಿಯುವಿರಿ. ಆದರೆ ಅದರಲ್ಲಿನ ಹೆಚ್ಚಿನಂಶವು ವ್ಯರ್ಥವಾಗುವದು. ನಿಮಗದರಿಂದ ಎಳ್ಳಷ್ಟು ಫಲ ಲಭಿಸದು. ವ್ಯಯಗತ ಶನಿಯಿಂದಾಗಿ ಅನಿರೀಕ್ಷಿತ ಕೋಳತಾಪಗಳೂ ನೋವರ ಭೃತ್ಯವರ್ಗದವರೊಡನೆ ಕಲಹವೂ ಸಂಭವಿಸಲಿರುವದು. ನಿರುದ್ಯೋಗಿಗಳೂ ಕೂಡ ಈ ಕಾಲದಲ್ಲಿ ಸದುದ್ಯಮ ಪ್ರವೃತ್ತರಾಗುವರು ಆಶ್ರೋಪಭೋಗಗಳಿಗೆ ಯಾವ ತರದ ನ್ಯೂನತೆಯೂ ಉಂಟಾಗದು. ಬಂಧುಮಿತ್ರರ ನೆರವಳ್ಳಿ ನಿಮಗೆ ತಾ. 20, 23, 24, 25ರಲ್ಲಿ ನಾನಾ ಲಾಭ ಸುಖಭೋಗಗಳಿವೆ.

ವೃಶ್ಚಿಕ—ನಿಮ್ಮ ಭಾಗ್ಯ ಚಕ್ರವು ಅತ್ಯುತ್ತಮ ಮಟ್ಟಕ್ಕೆ ಬಂದಿರುವದು. ಈ ಕಾಲದಲ್ಲಿ ನೀವು ನಿಮ್ಮ ಪೌರುಷವನ್ನು ವ್ಯಕ್ತಪಡಿಸಿ ಕೃತಕೃತ್ಯರಾಗಿರಿ. ಸದ್ಯ ನೀವಾವ ಕಾರ್ಯವನ್ನೆಸಗಿದರೂ ಅದು ನಿಮ್ಮ ನಿರೀಕ್ಷೆಗಿಂತ ಹೆಚ್ಚಿನ ಫಲವೀಯಲಿದೆ ಹಿಂದಿನ ಸಾಲಾದಿಗಳಿಂದ ಮುಕ್ತರಾಗಿ ತುಂಬಾ ಹಣವನ್ನು ಗಳಿಸುವಿರಿ ಶತ್ರು ಜನರು ದೂರವಾಗುವರು, ಪತ್ನೀಪುತ್ರ ಬಂಧುಮಿತ್ರರಿಂದ ಕೂಡಿಕೊಂಡು ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ತಾ. 21ರಿಂದ 22ರ ವರೆಗಿನ ದಿನಗಳು ಅತೀವ ಸುಖಕಾರಿಗಳಾಗಿವೆ.

ಧನು—ಈ ವಾರದಲ್ಲಿ ನಿಮ್ಮ ಆರ್ಥಿಕ ಭಾಗವು ಮುಂಚಿಗಿಂತ ಸುಧಾರಿಸುವದಾದರೂ ಖರ್ಚಿನ ಭಾಗಗಳು ಹೆಚ್ಚಿಗಿರುವುದರಿಂದ ಕೈಯ್ಯಲ್ಲಿ ಹಣ ಸಂಗ್ರಹಿಸಲಾರಿರಿ. ಉಷ್ಣದೋಷದಿಂದಾಗಿ ಆರೋಗ್ಯಕ್ಕೆ ಹಾನಿಯುಂಟಾದೀತು. ಚಂಚಲವಾದ ಮನಸ್ಸು ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯಲಿದೆ. ವಿದ್ಯೋಪಜೀವಿಗಳಿಗೂ ಸೇವಕವರ್ಗದವರಿಗೂ ಕಾಲಯಾಪನೆಯು ದುಸ್ತರವಾದೀತು. ಮನೋರೋಗವು ಹಿಂದಿಗಿಂತ ಪ್ರಬಲವಾಗಲಿದೆ. ಆದರೂ ಸಿನ್ನತ್ರರ ಸಹಕಾರದಿಂದ ತಾ. 21ರಿಂದ 25ರ ವರೆಗಿನ ದಿನಗಳು ಸುಖದಾಯಿಯಾಗಲಿವೆ.

ಮಕರ—ಸದಾಚಾರ ಸಂಪನ್ನರಾದ ಸಜ್ಜನರಿಗೆ ಈ ವಾರವು ಹೆಚ್ಚಿನ ಸುಖದಾಯಿಯಾಗದು. ಶ್ರಮಕ್ಕೆ ಉಚಿತವಾದ ಫಲವಿದೆ, ಆದರೆ ಜನತೆಯಲ್ಲಿ ನಿಷ್ಕಾರಣ ಕಲಹಗಳು ದಿನೇದಿನೇ ಹೆಚ್ಚುವವು. ಅಪಘಾತವು ಕೂಡ ಸಿದ್ಧ ಬಟವಾಗಿ ಹೋಗುವದು, ಶತ್ರುಜನರ ಪೀಡೆಯಿಂದಾಗಿ ನಿಮ್ಮ ಧನಮಾನಗಳಿಗೆ ಹೆಚ್ಚಿನ ಧಕ್ಕೆ ತಗಲುವದು. ಹೆಂಡತಿ ಮಕ್ಕಳ ಆರೈಕೆಯ ಸಲುವಾಗಿ ಹೆಚ್ಚಿನ ಹಣ ವ್ಯಯಿಸಬೇಕಾಗುವದು. ಹೆಚ್ಚಿನ ಕಾರ್ಯಗಳು ವಿಘ್ನಗಳಿಂದಾಗಿ ಅರ್ಧದಲ್ಲೇ ನಿಲ್ಲುವವು ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಕುಂಭ—ಸದ್ಯ ನಿಮಗಾವ ಭೀತಿಯೂ ಇರಲಾರದು, ನಿಮ್ಮ ಸಂಪದ್ಭಾಗವು ಅತ್ಯುತ್ತಮ ಮಟ್ಟಕ್ಕೇರಲಿವೆ. ಕೈಹಿಡಿದ ಪ್ರತಿಯೊಂದು ಕಾರ್ಯದಲ್ಲೂ ವಿಜಯಲಾಭಗಳನ್ನು ಪಡೆವಿರಿ. ಸಮಾಜದಲ್ಲಿ ಮಾನಮನ್ನಣೆಗಳನ್ನು ಕೀರ್ತಿಗಳನ್ನು ಪಡೆವಿರಿ. ವಾತದೋಷವು ಬಲವತ್ತರವಾಗಿ ತೋರಿಸಲಿರುವದು. ಮತ್ತು ಕಜ್ಜಿ ಹುಣ್ಣು ಇತ್ಯಾದಿ ಚರ್ಮರೋಗಗಳೂ ಕಾಣಿಸಬಹುದು. ಶತ್ರುಗಳು ಪ್ರತೀಕಾರಾಸಕ್ತರಾಗುವರಾದರೂ ಅವರಿಂದ ಯಾವತರದ ದೋಷವೂ ನಿಮಗುಂಟಾಗದು. ತಾ 20-26ರಲ್ಲಿ ಲಾಭವಿಜಯ ಭೋಗಗಳಿವೆ.

ಮೀನ—ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವದು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಅನುದಿನವೂ ಮನೆಯಲ್ಲಿ ಚಿಕ್ಕಪುಟ್ಟ ಕಲಹಗಳಾಗಲಿವೆ. ಕೈಹಿಡಿದ ಅರ್ಧಾಂಗಿಯೂ ಕೂಡ ವಿರೋಧವಾಗಿ ವರ್ತಿಸುವಳು, ಆಪ್ತೇಷ್ಟರ ವಿರಹವಾದೀತು. ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ಈ ವಾರವು ಪ್ರತಿಕೂಲವಿದೆ. ಆಕಸ್ಮಿಕ ಪ್ರವಾಸದ ಯೋಗವಿರುವದು. ವಾರಾದಿಯ 3 ದಿನಗಳಲ್ಲಿ ಯಾವ ಭೋಗ ವಸನಾದಿಗಳ ಲಾಭವೂ ನಿಮ್ಮ ಬಯಕೆಯೂ ಕೂಡ ಈಡೇರಲಿದೆ.

ಬೆಂಗಳೂರಿನ ಜ್ಯೋತಿಷ ಪತ್ರಿಕೆಯ ಭವಿಷ್ಯ:

ಕಾಂಗ್ರೆಸ್ಸಿಗೆ ಚುನಾವಣೆಯಲ್ಲಿ ಜಯ

ಕಾಂಗ್ರೆಸ್ಸು ನಾಳಿನ ಚುನಾವಣೆಗಳಲ್ಲಿ ಹೆಚ್ಚು ಕಡಿಮೆ ಎಲ್ಲ ರಾಜ್ಯಗಳಲ್ಲಿ ಬಹುಮತ ಪಕ್ಷವಾಗಿ ಆರಿಸಿ ಬರುವುದೆಂದು ಬೆಂಗಳೂರಿನ "Astro wgleae magarine" (ಜೋತಿಷ ಪತ್ರಿಕೆ) ಬರೆದಿದೆ.

ಕಾಂಗ್ರೆಸ್ಸಿಗೆ ಈಗ ಶನಿದಶೆಯಲ್ಲಿ ರಾಹುಭುಕ್ತಿ ನಡೆಯುತ್ತಿದೆ. ಬುಧದಶೆ 1954ರಲ್ಲಿ ಪ್ರಾರಂಭವಾಗುವುದು. ಬುಧನು ಸಪ್ತಮ (ಮಾರಕ) ಸ್ಥಾನಾಧಿಪತಿಯಾಗಿದ್ದು ಆಗ ಚಂದ್ರಲಗ್ನದಿಂದ ತೃತೀಯದಲ್ಲಿರುವುದರಿಂದ ಆ ಸಮಯದಲ್ಲಿ ಕಾಂಗ್ರೆಸ್ಸಿಗೆ ಗಂಡಾಂತರ ಬರಬಹುದು. ಪಕ್ಷದಲ್ಲಿ ಗುಂಪುಗಳು ಹೆಚ್ಚಾಗಿ ರಾಜಕೀಯ ಗಾಳಿ ಬೀಸಿದಂತೆ ತಮ್ಮ ಧ್ಯೇಯಗಳ ದೆಸೆಯನ್ನೂ ಬದಲಿಸಬಹುದು ದೇಶದಲ್ಲಿ ಆರ್ಥಿಕ ಸ್ಥಿತಿ ಇನ್ನಷ್ಟು ಕೆಡುವುದು. ಕೆಲ ನಿಸ್ವಾರ್ಥಿಗಳನ್ನು ಬಿಟ್ಟರೆ ಉಳಿದ ಕಾಂಗ್ರೆಸಿಗರು ಎಷ್ಟು ಇದ್ದಾಗ ಸಬ್ಬವಾದು ವುದರಲ್ಲಿ ನಿರತರಾಗುವರು.

ನಾಲ್ಕು ವರ್ಷದ ಕಾಂಗ್ರೆಸ್ ಆಳಿಕೆಯಿಂದ ಏನೂ ಒಳಿತಾಗದ್ದನ್ನು ನೋಡಿ ಜನರು ಬಹಳ ಅಸಂತೋಷಗೊಂಡಿದ್ದಾರೆ. ಆದರೂ ಕಾಂಗ್ರೆಸ್ ಜಾತಕ ಬಲಿಷ್ಠವಾಗಿಯೇ ಇದೆ. ಆದ್ದರಿಂದ ಬಹುಸಂಖ್ಯ ರಾಜ್ಯಗಳಲ್ಲಿ ಅದೇ ಚುನಾವಣೆಯಲ್ಲಿ ಯಶಸ್ವಿಯಾಗುವುದು ಕಾಂಗ್ರೆಸ್ ಅಧ್ಯಕ್ಷ ನೆಹರು ಅವರ ಜಾತಕವೂ ಅವರ ಪಕ್ಷದ ವಿಜಯಕ್ಕೆ ಸಹಾಯಕವಾಗಿದೆ. ಜುಲೈ 1952ರ ವರೆಗೆ ಪಂ ನೆಹರು ಅವರಿಗೆ ಕುಜದಶಾ ಶುಕ್ರಭುಕ್ತಿ ಇರುವುದು ಶುಕ್ರನು ಯೋಗಕಾರಕನಾಗಿ ಕೇಂದ್ರದಲ್ಲಿ ಇದ್ದಾನೆ. ಆದರೆ ಶನಿ ದೃಷ್ಟಿ ಮತ್ತು ಬುಧ ಸಂಯುಕ್ತತೆಯಿಂದ ಅವನು ಪಾಪಕರ್ತರಿ ಯೋಗಯುಕ್ತನಾಗುವನು ಆದರೆ ಕುಜನು ಹೆಚ್ಚು ಅನುಕೂಲವಾಗಿದ್ದಾನೆ. ಆದರೂ ಅವರು ದ್ವಿತೀಯದಲ್ಲಿರುವುದರಿಂದ ವಿಶ್ರಾಂತಿ ದೊರೆಯುವುದು ಕುಜದಶೆ 1954ರ ವರೆಗೆ ಇದ್ದು ಆ ವರೆಗೆ ಅವರ ರಾಜಕೀಯ ಪ್ರಭಾವ ಉಳಿಯುವುದೆಂದು ಹೇಳಬಹುದು.

ಸಾಮ್ಯವಾದಿ ಪಕ್ಷದ ಮಟ್ಟಿಗೆ ಹೇಳಬೇಕಾದರೆ, ಮುಂಬಯಿ, ಅಜಮೀರಬಾದ ಮತ್ತು ತಿರುವಾಂಕೂರು-ಕೊಚ್ಚಿಯಲ್ಲಿ ಅದು ಕೆಲಮಟ್ಟಿಗೆ ಲಾಭ ಹೊಂದುವುದೆಂದು ಹೇಳಲಾಗಿದೆ.

ಹೊಸ ಜನಸಂಘ ಪಕ್ಷಕ್ಕೆ ಪಂಜಾಬ, ಉತ್ತರ ಪ್ರದೇಶ, ಮಧ್ಯಪ್ರದೇಶ, ಬಂಗಾಲಗಳಲ್ಲಿ ಅನೇಕ ಸ್ಥಾನಗಳು ದೊರೆಯುವ ಸಂಭವವಿದೆಯೆಂದು ಆ ಪತ್ರಿಕೆಯ ಭವಿಷ್ಯ. ಚಂದ್ರನಿಂದ ಗುರು ಬುಧರು ಸಾಧಾರಣ ಸಮದೂರದಲ್ಲಿರುವ ಕಾರಣ ಪಂಜಾಬ, ಮಧ್ಯಪ್ರದೇಶಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಅಸ್ತಿತ್ವದಲ್ಲಿ ಬಂದರೂ ಬರಬಹುದು.

ಚುನಾವಣೆಯನಂತರ ಕಾಂಗ್ರೆಸ್ಸಿಗೆ ಹಲವಾರು ತಾತ್ವಿಕ ಮತ್ತು ರಾಜಕೀಯ ಸಮಸ್ಯೆಗಳು ಎದುರಾಗುವವು. ಒಟ್ಟಿನ ಮೇಲೆ ಹೇಳುವುದಾದರೆ ಬಹುಸಂಖ್ಯ ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬರುವುದು ಜನಸಂಘ ಪಕ್ಷವು ರಾಜಕೀಯ ವಿರುದ್ಧ ಪಕ್ಷವಾಗಿ ತಲೆಯೆತ್ತುವುದು. [ಕರ್ಮವೀರ]

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪುಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಮಾತ್ರೆಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟರು—

ಶಾ ಕಂಪೆನಿ, ಮಂಗಳೂರು,

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಎಲ್ಲ ಕಡೆ ದೊರೆಯುವದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618 ESTD. 1921 ಸ್ಥಾಪಿತ 27—12—1951

LICENCE No. 31
Licensed to Post without Prepayment

31ನೆ ವರ್ಷ

Founder: Sri A. B. Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನ ವ ಯು ಗ
ಉಡುಪಿ, ದ. ಕ

ವಾರ್ಷಿಕ ಚಂದಾ:
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೧೬

NAVAYUGA WEEKLY Post Box No. 22 UDIPI.

Vol. 31
No. 16



ಪಂಡಿತ ಜವಾಹರ ಲಾಲರ ಕರೆ

● ಭಾರತದ ಐಕ್ಯವನ್ನು ಭದ್ರಗೊಳಿಸುವುದೇ ನಮ್ಮ ಗುರಿ. ಜಾತೀಯತೆ ನಮಗೆ ಬೇಡ. ಧರ್ಮ ಸಂಸ್ಕೃತಿಗಳ ಸೋಗಿನಿಂದ ನಾವು ವಂಚಿತರಾಗಬಾರದು.

● ಜಗತ್ತೇ ಇಂದು ಗಂಡಾಂತರಕ್ಕೀಡಾಗಿದೆ. ಆತ್ಮ ಸಂತೃಪ್ತಿಯಲ್ಲಿ ನಾವು ಮೈಮರೆತರೆ ನಮ್ಮ ಸ್ವಾತಂತ್ರ್ಯವನ್ನೆ ಕಳೆದುಕೊಳ್ಳಬೇಕಾದೀತು. ನಮ್ಮ ಸಮಸ್ಯೆಗಳನ್ನು ಬಗೆಹರಿಸಿ ನಮ್ಮ ದಾರಿಯನ್ನು ನಾವು ಕಂಡುಕೊಳ್ಳಬೇಕಾಗಿರುವುದರಿಂದಲೇ ನೀವು ಕಾಂಗ್ರೆಸಿಗೆ ಮತದಾನ ಮಾಡಬೇಕು. ನೀವು ಕಣ್ಣುಮುಚ್ಚಿ ಕಾಂಗ್ರೆಸಿಗೆ ವೋಟುಕೊಡಿರೆಂದು ನಾನು ಹೇಳುವುದಿಲ್ಲ. ನನ್ನ ವರ್ಚಸ್ಸಿಗೋಸ್ಕರವಾಗಿಯೂ ನೀವು ಕಾಂಗ್ರೆಸ್ಸಿಗೆ ವೋಟುಕೊಡಬಾರದು. ಜನತೆಯ ಅಂಧ ವಿಶ್ವಾಸ ನನಗೆ ಬೇಕಾಗಿಲ್ಲ. ಯಾವುದೇ ಹೆದರಿಕೆ, ದಾಕ್ಷಿಣ್ಯಗಳಿಗೆ ಒಳಗಾಗಿ ವೋಟು ಕೊಡಕೂಡದು. ಕಾಂಗ್ರೆಸಿನ ಇದುವರೆಗಿನ ಕಾರ್ಯವನ್ನು ನೋಡಿ ಅದಕ್ಕೆ ಮತಹಾಕಿರಿ. ಒಲ್ಲದಿದ್ದರೆ ಬೇರೆಯಾರಿಗಾದರೂ ಮತದಾನ ಮಾಡುವ ಸ್ವಾತಂತ್ರ್ಯ ನಿಮಗಿದೆ.

● ಸೈನ್ಯದ ಬಲವು ಅದರ ಸಂಘಟನೆಯಲ್ಲಿಯೇ ಇದೆ. ಪ್ರತಿಯೋರ್ವ ಸೈನಿಕ ತನ್ನ ಮನಸ್ಸೇಚ್ಛೆ ನಡೆದರೆ ಸೈನ್ಯವು ಕಾಲಪ್ಪೋಕರ ತಂಡವಾದೀತು. ಅದ್ದರಿಂದಲೇ ಜನರು ಐಕ್ಯಮತಿಯಲ್ಲಿ ವರ್ತಿಸುವದು ಶಕ್ಯವಾಗುವಂತಹ ವಾತಾವರಣವನ್ನು ನಿರ್ಮಿಸುವದು ಅಗತ್ಯ. ಈ ತರದ ವಾತಾವರಣವನ್ನು ನಿರ್ಮಿಸಬೇಕಾದರೆ ನಾವು ಭ್ರಾಂತಿಯ ಭಾವನೆಯನ್ನು ಪ್ರಚೋದಿಸುವವರ ಹಾಗೂ ಜಾತೀಯತಾ ಪ್ರಚಾರದಿಂದ ಮಾನವ ಮಾನವರೊಳಗೆ ಒಡಕನ್ನು ಹುಟ್ಟಿಸುವವರ ವಿರುದ್ಧ ಹೋರಾಡಬೇಕಾಗುವುದು.

● ಕಳೆದ 60 ವರ್ಷಗಳಿಂದ ನಾವು ಕಾಂಗ್ರೆಸನ್ನು ಪೋಷಿಸಿ ಬೆಳೆಸುತ್ತ ಬಂದಿದ್ದೇವೆ. ಈ ಸಂಸ್ಥೆಯನ್ನು ಇನ್ನು ಕೆಲವು ವರ್ಷ ಸಾಧನವನ್ನಾಗಿ ಉಪಯೋಗಿಸಬೇಕೆಂದಿದ್ದೇವೆ. ಆದರೆ ಈ ಶಸ್ತ್ರಕ್ಕೆ ಇತ್ತೀಚೆಗೆ ಸ್ವಲ್ಪ ತುಕ್ಕು ಹಿಡಿದಿರಬಹುದು. ಅಷ್ಟಕ್ಕೆ ಅದನ್ನು ಪರಿತ್ಯಜಿಸುವದು ಯೋಗ್ಯವಲ್ಲ. ತುಕ್ಕನ್ನು ತಿಕ್ಕಿ ತೆಗೆದು ಶಸ್ತ್ರವನ್ನು ಪುನಃ ಹದಗೊಳಿಸಿ ಆರ್ಥಿಕ ಹೋರಾಟಕ್ಕೆ ಅದನ್ನು ಉಪಯೋಗಿಸಬೇಕು.

● ಕಾಂಗ್ರೆಸು ಸತ್ತಿದೆಯೆಂದು ಕೆಲವರು ಟೀಕಿಸುತ್ತಾರೆ. ಆದರೆ ಅದು ಜೀವಿಸಿದೆಯೆಂಬುದನ್ನು ಅವರಿಂದು ಕಂಡುಕೊಳ್ಳಲಿ. ಕಾಂಗ್ರೆಸು ಇತ್ತೀಚೆಗೆ ಸ್ವಲ್ಪ ತೂಕಡಿಸುತ್ತಿತ್ತು. ಆದರೆ ಈಗ ಅದು ಕಣ್ತೆರೆದಿರುತ್ತದೆ. ಅದರಲ್ಲಿ ಪ್ರಚಂಡ ಶಕ್ತಿ ಇದೆ.

● ಇಂದು ಕಾಂಗ್ರೆಸನ್ನು ಹಾಗೂ ಸರಕಾರವನ್ನು ಟೀಕಿಸುತ್ತಿರುವರು. ಆದರೆ ಟೀಕಾಕಾರರು ಕೇವಲ ವಿರೋಧಿಸಬೇಕೆಂದೇ ವಿರೋಧಿಸುತ್ತಿರುವರು. ಕಾಂಗ್ರೆಸಿನ ಧೋರಣದ ಪ್ರತಿಯಾಗಿ ಅವರಲ್ಲಿ ಯಾವುದೇ ತರದ ವಿಧಾಯಕ ಧೋರಣವಿಲ್ಲ. ಇಂದು ನಿಶ್ಚಿತವಾದ ಕೃತಿ ಬೇಕಾಗಿದೆ.

ಎತ್ತುಗಳು ಮಾಡುವುವು ನಿಸ್ವಾರ್ಥ ಸೇವೆ-
ಕಾಂಗ್ರೆಸ್ ಹೂಡಿರುವ ತತ್ವ ಜನತಾ ಸೇವೆ.

ದೇಶದ ಹಿತ ಸಮೃದ್ಧಿಗೆ
ಜನತೆಯ ಮತ ಕಾಂಗ್ರೆಸ್ಸಿಗೆ.

ಉಡುಪಿಯ ಮತದಾರರ ನಿರ್ಣಯ-

ತಮಗಿರುವ ಎರಡು ಓಟುಗಳನ್ನು
ಕೊಡಬೇಕು ಈ ಕೆಳಗಿನವರಿಗೆ—

ಪಾರ್ಲಿಮೆಂಟ್ ಸಭೆಗೆ:

ಯು. ಶ್ರೀನಿವಾಸ ಮಲ್ಯ

ಮದ್ರಾಸ್ ಎಸೆಂಬ್ಲಿಗೆ:

ಟಿ. ಅನಂತ ಪೈ

ಕಾಂಗ್ರೆಸ್ ಪೆಟ್ಟಿಗೆಯ ಚಿಹ್ನೆ:
ಈ ಜೋಡು ಎತ್ತುಗಳು



ನಿಮ್ಮೆರಡು ವೋಟುಗಳನ್ನು ಕಾಂಗ್ರೆಸ್ಸಿಗೇ ಕೊಡಿರಿ.

ಸೊಲ್ಲಿನ ಇಟ್ಟಿಗೆಗಳಿಂದ ಕಲ್ಲಿನ ಕಟ್ಟಡ ನಿರ್ಮಾಣ!

ಮದ್ರಾಸು ಗಾಡಿ ಹತ್ತಿ ಮುಂಬಾಯಿಗೆ ಪ್ರಯಾಣ!

ಚುನಾವಣಾ ಜಾದುಗಾರರಿಗೊಂದು ಅಂಜನ!

ಸಾಧ್ಯ ಮತ್ತು ಸಾಧನ

ಈ ಮಹಾಚುನಾವಣೆಯ ಕಾಲದಲ್ಲಿ ವೇದಿಕೆಯ ಮೇಲೆ ನಿಂತ ನಮ್ಮ ರಾಜಕೀಯ ಮುಂದಾಳುಗಳ ಬಾಯಿಯಿಂದ ಜನರನ್ನು ಮರುಳುಮಾಡಲು ಬಣ್ಣಬಣ್ಣದ ಮಾತುಗಳ ಸರಮಾಲೆ ಹೊರಬೀಳುತ್ತಿವೆ. ಬಗೆಬಗೆಯ ಆಶ್ವಾಸನೆಗಳು ಕೊಡಲ್ಪಡುತ್ತಿವೆ. "ನಾವು ಜಾತ್ಯತೀತ ಭಾವನೆಯವರು, ಆರ್ಥಿಕ ಸಮವಿಭಜನೆಯನ್ನು ಪ್ರತಿಪಾದಿಸುವವರು—ಉಳುವವನಿಗೆ ಹೊಲ, ಕಾರ್ಮಿಕನಿಗೇ ಕಾರ್ಖಾನೆ—" ಎಂಬ ಘೋಷಣೆಗಳು ಕೇಳಿಬರುತ್ತಿವೆ. ಆದರೆ ಈ ಮಂದಿಯ ಅಂತರಂಗ ಅವರು ಒಳಗಿಂದೊಳಗೆ ಮಾಡುವ ಮಾಟ, ಹೂಡುವ ಹೂಟ, ಆಡುವ ಮಾತುಗಳಿಂದ ವ್ಯಕ್ತವಾಗುತ್ತದೆ. ಈ ಮುಂದಾಳುಗಳು ಜಾತೀಯ ಭಾವನೆಯನ್ನು ಕೆರಳಿಸಿಯೇ ಓಟಿನ ಭಿಕ್ಷೆ ಬೇಡುತ್ತಾರೆ. ಹಣವಂತರೊಡನೆ, ವರ್ಗದಾರರೊಡನೆ ಅವರ ಹಿತಕ್ಕೆ ಧಕ್ಕೆಬಾರದಂತೆ ಮಾಡುವೆವೆಂಬ ಆಶ್ವಾಸನೆ ಕೊಟ್ಟು ಬೆಂಬಲ ಕೋರುತ್ತಿದ್ದಾರೆ. ಕೆಲವೊಂದೆಡೆ ಹಣವನ್ನು ಕೂಡಾ ಬೇಡುತ್ತಿದ್ದಾರೆ! ಬಡಮಂದಿಯೊಡನೆ ಅವರ ಉನ್ನತಿಗಾಗಿ ಹೋರಾಡುವುದೇ ತಮ್ಮ ಮತ್ತು ತಮ್ಮ ಸಂಸ್ಥೆಯ ಉದ್ದೇಶವೆಂದು ಹೇಳಿಯೇ ಮತಯಾಚನೆ ಮಾಡುತ್ತಿದ್ದಾರೆ. ಕೆಲವೊಂದು ಸಂಸ್ಥೆಗಳು ಹುರಿಯಾಳುಗಳನ್ನು ಆರಿಸುವಾಗಲೂ ಸಾಮರ್ಥ್ಯ, ಸದ್ಗುಣಗಳ ಬದಲು ಅರ್ಥ, ಅಬ್ಬರಗಳ ಕಡೆಗೇ ಹೆಚ್ಚು ವಾಲಿವೆ. ಆದರೆ ಈ ಸಂಸ್ಥೆಗಳು ಮತ್ತು ಮುಂದಾಳುಗಳು ನಮ್ಮ ಕೈಗೆ ಅಧಿಕಾರ ಬಂದರೆ ನಾಡನ್ನೇ ನಂದನವಾಗಿಸುತ್ತೇವೆ ಎಂದು ಬಾಯಿಯಿಂದ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ; ವೇದಿಕೆಯ ಮೇಲಿಂದ ಬೊಬ್ಬಿರಿಯುತ್ತಿದ್ದಾರೆ. ಹೀಗೆ ಈ ಮುಂದಾಳುಗಳು ಮತ್ತು ಸಂಸ್ಥೆಗಳು ಅಪವಿತ್ರ ಸಾಧನದ ಮೂಲಕ ಪವಿತ್ರ ಸಾಧ್ಯವನ್ನು ಸಾಧಿಸಹೊರಟಿದ್ದಾರೆ! ಮದ್ರಾಸಿನ ರೈಲುಹತ್ತಿ "ನಾವು ಬೊಂಬಾಯಿ ಸೇರುವವರಿದ್ದೇವೆ" ಎಂದು ಜನರನ್ನು ಮರುಳು ಮಾಡುತ್ತಿದ್ದಾರೆ! ಬೇವು ಬಿತ್ತಿ ಮಾವು ಬೆಳೆಯುವ ಜಾದೂಮಾಡಿ ತೋರಿಸಹೊರಟಿದ್ದಾರೆ ನಮಗೆ!

ಸಾಧ್ಯವೇ ಪ್ರಮುಖ್ಯ ಸಾಧನಕ್ಕೆ ಬೆಲೆಯಿಲ್ಲ, ಅದರಲ್ಲೂ ರಾಜಕೀಯ ಕ್ಷೇತ್ರದಲ್ಲಂತೂ ಸಾಧನಕ್ಕೆ ಏನೇನೂ ಬೆಲೆಯಿಲ್ಲ ಎನ್ನುವ ಅರ್ಥವಿಲ್ಲದ ಅನರ್ಥಕಾರೀ ವಾದವೊಂದು ತಲೆಯೆತ್ತಿ ಜನಮನದಲ್ಲೂ ಈ ದುರ್ಭಾವನೆಯ ಕಳೆಯು ಮೊಳೆತು ಬೆಳೆದು ಸಾಮಾಜಿಕ ಕ್ಷೇತ್ರಗಳಲ್ಲಿ ಮಹಾತ್ಮಾ ಗಾಂಧಿಯವರ ಪ್ರವೇಶವೆಂದರೆ ಸುಜ್ಞಾನದ ಅರುಣೋದಯವೇ ಸರಿ. ಅವರು ಜನಮನಸನ್ನು ಕವಿದಿದ್ದ ಅಜ್ಞಾನದ ತೆರೆಯನ್ನು ಹರಿದು "ಸಾಧ್ಯವು ಗೌಣ. ಸಾಧನವೇ ಗಣ್ಯ. ಸಾಧನದ ಪಾವಿತ್ರ್ಯದಿಂದ ನಾವು ಪವಿತ್ರ ಸಾಧ್ಯವನ್ನು ಎಂದೆಂದೂ ಸಾಧಿಸಲಾರೆವು. ಆದುದರಿಂದಲೇ ನಾವು ಅರಿಸುವ ಮಾರ್ಗವು ಸತ್ಯನ್ಯಾಯಗಳದಾಗಿರಬೇಕು" ಎಂಬ ಸತ್ಯದ ದರ್ಶನವನ್ನು ಮಾಡಿಸಿದರು. ಸತ್ಯ, ನ್ಯಾಯಗಳಿಲ್ಲದ ನಮ್ಮ ಬಾಳು—ಅದು ವೈಯುಕ್ತಿಕವಾಗಿರಲಿ ಸಾಮಾಜಿಕವಾಗಿರಲಿ ಅಥವಾ ರಾಜಕೀಯವಾಗಿರಲಿ—ಘಾತಕವಾದೀತು. ವಿಷ ಬೀಜವನ್ನು ಬಿತ್ತೀತು. ಇದೇ ಬಾಪುವಿನ ಸಂದೇಶ. ಇದನ್ನು ಅವರು ತಾವು ಬಾಳಿದ ಬಾಳಿನಿಂದಲೇ ತೋರಿಸಿದರು. ಸಾಧನದ ಪಾವಿತ್ರ್ಯವನ್ನು ಅವರು ಎಷ್ಟರ ತನಕ ಪ್ರತಿಪಾದಿಸುತ್ತಿದ್ದರೆಂದರೆ ಒಮ್ಮೆ "ನಾನು ಸತ್ಯಕ್ಕಾಗಿ ಸ್ವರಾಜ್ಯವನ್ನೂ ಬಿಡಲು ಸಿದ್ಧ" ಎಂದರು. ಈ ಮಾತನ್ನು ವಿವರಿಸಿ ಹೇಳುತ್ತಾ ಆಚಾರ್ಯ ವಿನೋಬಾ ಭಾವೆಯವರು ದಿಲ್ಲಿಯ ರಾಜಘಾಟಿನಲ್ಲಿ ಮಹಾತ್ಮರ ಮೊದಲ ಪುಣ್ಯತಿಥಿಯೆಂದು ಹೀಗೆ ಹೇಳಿದರು: "ಈ ಮಾತಿನ ಅರ್ಥ ಗಾಂಧೀಜಿಗೆ ಸ್ವರಾಜ್ಯ ಬೇಕಿರಲಿಲ್ಲವೆಂದಲ್ಲ ಅಥವಾ ಅವರು ಅದಕ್ಕೆ ಕಡಿಮೆ ಬೆಲೆಕೊಡುತ್ತಿದ್ದರೆಂದಾಗಲೀ ಅಲ್ಲ. ಸಾಧನದ ಶುದ್ಧಿಯ ಮಹತ್ವ ಅವರ ಮಾತಿನ ಅರ್ಥ. ಸ್ವರಾಜ್ಯಕ್ಕಾಗಿ ಅವರು ಆ ಜೀವವೂ ಹೋರಾಡಿದರು. ಆದರೆ ಸತ್ಯಮಯ ಸಾಧನಗಳಿಂದಲೇ ಸ್ವರಾಜ್ಯ ಸಿಗುತ್ತದೆ ಎನ್ನುತ್ತಿದ್ದರು. ಶುದ್ಧ ಸಾಧನಗಳಿಂದ ಸಂಪಾದಿಸಿದ ಸ್ವರಾಜ್ಯವೇ ನಿಜವಾದುದು. ಸಾಧ್ಯಕ್ಕಿಂತ ಸಾಧನಗಳ ವಿಚಾರ ಹೆಚ್ಚು ಮಾಡಬೇಕು ಸಾಧಕ. ಸಾಧನದ ಪರಾಕಾಷ್ಠೆ ಎಲ್ಲಿದೆಯೋ ಅಲ್ಲಿ ಸಾಧ್ಯದ ದರ್ಶನ. ಎಂದೇ ಸಾಧ್ಯ ಸಾಧನಗಳ ಭೇದವೇ ಕಾಲ್ಪನಿಕ. ಸಾಧನಗಳಿಂದಲೇ ಸಾಧ್ಯ ಸಿಗುತ್ತದೆ. ಅಷ್ಟೇ ಅಲ್ಲದೆ ಸಾಧ್ಯದ ರೂಪವೂ ಸಾಧನವನ್ನವಲಂಬಿಸಿರುತ್ತದೆ." ಹೀಗೆ ಬಾಪುವಿನ ಸತ್ಯನ್ಯಾಯಗಳ ನಡೆನುಡಿಯಿಂದಾಗಿ ಭಾರತದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಒಂದು ನೂತನ ಕ್ರಾಂತಿಯಾಯಿತು. ಅನ್ಯಾಯ ಅಜ್ಞಾನಗಳ ಕತ್ತಲು ಕರಗಿ ಸತ್ಯ ನ್ಯಾಯಗಳ ಸರ್ವೋದಯವಾಯಿತು. ಜನಗಳು ಎಚ್ಚತ್ತು ಹೊಸ ಹುರುಪಿನಿಂದ ಈ ಹಾದಿ ತುಳಿದರು. ಪರಿಣಾಮವಾಗಿ ಭಾರತವು ಜಗತ್ತಿಗೇ ಅತ್ಯಭೂತಪೂರ್ವ ರೀತಿಯಲ್ಲಿ ಸ್ವಾತಂತ್ರ್ಯವನ್ನು ಸಂಪಾದಿಸಿತು. ನಮ್ಮ ನಾಡಿನ ಈ ಗತಿಗಮ್ಯಗಳು ಜಗತ್ತನ್ನೇ ದಿಗ್ಭ್ರಮೆಗೊಳಿಸಿದವು. ಜಡ ಜನ ಜಗತ್ತನ್ನು ಆವರಿಸಿರುವ ಈ ಕತ್ತಲೆಯಲ್ಲೂ ಭಾರತದಲ್ಲಿ ಬೆಳಗುತ್ತಿರುವ ಈ ಬೆಳಗನ್ನು ಕಂಡು ತಮ್ಮ ದೇಶಕ್ಕೆ ಒಯ್ಯಬಯಸಿದರು. ಹೀಗೆ ನಾಡಿನ ನಡೆ ಒಂದು ಗಡಿಗೆ ಮುಟ್ಟಿ ಇಲ್ಲಿಂದ ತನ್ನ ತತ್ತ್ವ ಜೀವನಕ್ಕೆ ಶಾಂತಿಯ ಸುಧೆಯನ್ನು ಸಾಗಿಸಲು ಜಗತ್ತಿಗೆ ಜಗತ್ತೇ ಕಾತರವಾಗಿದ್ದ ಪರ್ವಕಾಲದಲ್ಲೇ ಆ ಮಹಾಪುರುಷ ನಿರ್ವೇಶನ ಕೊನೆಯಾಯಿತು.

ಆ ನಂತರದ ಕತೆ ಬಹಳ ದುಃಖದಾಯಕ. ಇಂದು ನಾವು ಯಾವ ಮಹಾಪುರುಷರ ಮುಂದಾಳುತನದಲ್ಲಿ ಯಾವ ಮಹಾಪಥವನ್ನು ತುಳಿದಿರುವೆವೋ ಇಂದು ಆ ಪಥವನ್ನು ತೊರೆದು ಸ್ವಾರ್ಥದಿಂದ ಹಿಂದಿನಂತೆ ಅಡ್ಡದಾರಿ ಹಿಡಿದಿರುವೆವು. ಯಾವ ಮಹಾಸತ್ಯವನ್ನು ನಮ್ಮಿಂದ ಪಡೆಯಲು ಜಗತ್ತಿಗೆ ಜಗತ್ತೇ ಕಾತರವಾಗಿದೆಯೋ ಆ ಸತ್ಯವನ್ನು ನಮ್ಮ ಸ್ವಾರ್ಥದ ಅಗ್ನಿಕುಂಡದಲ್ಲಿ ಹೋಮಮಾಡಿ ಅಧಿಕಾರ ಸಂಪತ್ತುಗಳ ಬೆನ್ನು ಹಿಡಿದಿರುವೆವು ಮಾತ್ರವಲ್ಲ ನಮ್ಮ ಸ್ವಾರ್ಥಕ ಕ್ರಿಯೆಗಳನ್ನೆಲ್ಲ ಆ ಮಹಾಪುರುಷನ ಹೆಸರು ಹೇಳಿಯೇ ಸಾಧಿಸುತ್ತಿದ್ದೇವೆ! ನಮ್ಮ ಬುದ್ಧಿ ನಾಯಿ ಬಾಲ. ಆದುದರಿಂದಲೇ ಇಂದು ಪುನಹ ಹೇಳಹತ್ತಿದ್ದೇವೆ "ಸಾಧ್ಯ ಮುಖ್ಯ; ಸಾಧನವಲ್ಲ" ಎಂದು. ಆದರೆ ಯಾರೂ ಮದ್ರಾಸು ಗಾಡಿಹತ್ತಿ ಮುಂಬಯಿ ಸೇರಿಲ್ಲ; ದುರಿತವನ್ನು ಬಿತ್ತಿ ಸತ್ಫಲವನ್ನು ಬೆಳೆದಿಲ್ಲ; ಅಸತ್ಯ ಅನ್ಯಾಯದ ಹಾದಿ ತುಳಿದು ಸತ್ಯ ನ್ಯಾಯಗಳನ್ನು ಸಾಧಿಸಿಲ್ಲ. ಈ ಅತಿಸಾಮಾನ್ಯ ನಿಯಮ ಸ್ವಾರ್ಥದ ತೆರೆಯಿಂದಾಗಿ ನಮ್ಮ ಕಣ್ಣಿನಿಂದ ಮರೆಯಾಗಿದೆ. ಕೆಲವೊಮ್ಮೆ ಅಸತ್ಯ ಅನ್ಯಾಯಗಳಿಂದ ಸತ್ಯನ್ಯಾಯಗಳು ನೆಲೆಗೊಂಡಂತೆ ಕಂಡರೂ ಮರುಕ್ಷಣದಲ್ಲೇ ಅವು ಕನಸಿನಂತೆ ಒಡೆದು ಹಿಂದಿಗಿಂತ ಹೆಚ್ಚಾಗಿ ಅಸತ್ಯ ಅನ್ಯಾಯಗಳ ತಾಂಡವ ನಡೆದಿದೆ. ಸಾಧನದ ಪಾವಿತ್ರ್ಯದಿಂದಲ್ಲದೆ ಯಾವ ಪವಿತ್ರ ಉದ್ದೇಶವೂ ಸಾಧಿಸಲಾರದು ಎಂಬುದು ಕಲ್ಲ ಮೇಲಣ ಬರಹ. ಬೀಜದಂತೆ ಫಲ ಎಂಬ ನ್ಯಾಯ ಭೌತ ಸೃಷ್ಟಿಯಲ್ಲಿ ಮಾತ್ರವಲ್ಲ ಎಲ್ಲಾ ಸೃಷ್ಟಿಯಲ್ಲೂ ಸತ್ಯ.

ಆದರೆ ಇಂದು ಈ ಮಹಾಚುನಾವಣೆಯಲ್ಲಿ ಏನು ನಡೆದಿದೆ? ಅಸತ್ಯ, ಅನ್ಯಾಯ, ಅಪಪ್ರಚಾರ, ಅಶ್ಲೀಲತೆಗಳ ತಾಂಡವ! ನಮ್ಮ ರಾಜಕೀಯ ಮುಂದಾಳುಗಳು ತಮ್ಮ ಬಣ್ಣ ಬಣ್ಣದ ಬೆಡಗು ನುಡಿಗಳಿಂದ ಅವಿದ್ಯಾವಂತ ಮಂದಿಯನ್ನು ಮರುಳು ಮಾಡಿ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳಲು ಹೆಣಗುತ್ತಿದ್ದಾರೆ. ಸಾಧನದ ಪಾವಿತ್ರ್ಯ ಎಲ್ಲೋ ಗಾಳಿಗೆ ತೂರಲ್ಪಟ್ಟು ಅವರು ಸಾಧಿಸಲಿರುವ ಸಾಧ್ಯದ ಹಿರಿಮೆ ಮಾತ್ರ ಅವರ ಬಾಯಿಯಿಂದ ಹೊರಹೊರಟು ಗಾಳಿಯಲ್ಲಿ ಪ್ರತಿಧ್ವನಿಸುತ್ತಿದೆ! ಈ ಮಂದಿ ಸೊಲ್ಲಿನ ಇಟ್ಟಿಗೆಗಳಿಂದ ಕಲ್ಲಿನ ಕಟ್ಟಡ ಕಟ್ಟಹೊರಟಿದ್ದಾರೆ.

ಆದರೆ ಈ ರಾಜಕೀಯ ಮುಂದಾಳುಗಳು ಅರಿತುಕೊಳ್ಳಬೇಕು—ಜನ ಅವಿದ್ಯಾವಂತರೇನೋ ನಿಜ ಆದರೆ ಅಜ್ಞರಲ್ಲ; ಜನರಿಗೆ ತಮ್ಮ ಅಂತರಂಗದ ವಿಚಾರವನ್ನು ಹೊರಗೆಡಹಲು ಬಾಯಿಯಿಲ್ಲವೇನೋ ನಿಜ, ಆದರೆ ಹಿರಿಯರನ್ನು ಅವರ ಕೃತಿಯಿಂದ ಅಳೆಯದೆ ಮಾತಿನಿಂದ ಅಳೆಯುವಷ್ಟು ಪೆದ್ದರಲ್ಲ. ಯಾವ ಮಹಾಕಾರ್ಯವನ್ನೂ ಸಾಧನದ ಪಾವಿತ್ರ್ಯದಿಂದಲ್ಲದೆ ಸಾಧಿಸಲಸಾಧ್ಯ ಎಂಬುದನ್ನು ನೀವು ಮರೆತಿರಬಹುದು ಆದರೆ ಜನ ಮರೆತಿಲ್ಲ. ನೀವು ಏನೇ ಹೇಳಿ, ಎಷ್ಟೇ ಆಶ್ವಾಸನೆಗಳನ್ನು ಕೊಡಿ ಆದರೆ ಇವುಗಳಿಂದಲೇ ಜನ ನಿಮ್ಮನ್ನು ನಂಬಿ ಮೋಸಹೋಗುವ ಕಾಲ ಕಳೆದಿದೆ. ಇಂದೂ ಕೆಲ ಮಂದಿ ಅಜ್ಞರಿದ್ದಾರೆ, ಅವರನ್ನು ನೀವು ಮರುಳು ಮಾಡಿ ಮತ ಪಡೆದು ಅಧಿಕಾರ ಸ್ಥಾನವನ್ನು ಏರಿಯೇವು ಎಂದು ಭಾವಿಸಿ ನೀವು ಈ ಅಡ್ಡ ದಾರಿಯಲ್ಲೇ ಸಾಗಿದರೆ ನಿಮ್ಮ ಭವಿಷ್ಯವನ್ನು ಕತ್ತಲು ಕವಿದೀತು. ಏಕೆಂದರೆ ಆ ಕೆಲಮಂದಿ ಇಂದೂ ನಿಮ್ಮಿಂದ ಮೋಸಗೊಂಡರೂ ನಾಳೆ ಎಚ್ಚರಗೊಂಡು ನೀವು ಇಂದು ಅವರನ್ನು ವಂಚಿಸಿದುದಕ್ಕಾಗಿ ನಿಮ್ಮನ್ನು ಎದುರಿಸದಿರರು. ಆದುದರಿಂದ ವೇದಿಕೆಯ ಮೇಲೆ ನಿಂತು ವ್ಯರ್ಥವಾಗಿ ಬಾಯಿ ಬಡಾಯಿ ಕೊಚ್ಚಿಕೊಳ್ಳುವ ಬದಲು ಉತ್ತಮ ಕೃತಿಗಳನ್ನು ಮಾಡಿ ತೋರಿಸಿ ಪವಿತ್ರ ಸಾಧನದ ಸಹಾಯದಿಂದ ಗುರಿಯೆಡೆಗೆ ಮುನ್ನಡೆಯಿರಿ. ಅಂತಾದರೆ ಮಾತ್ರ ಜನ ನಿಮ್ಮನ್ನು ಇಂದಲ್ಲ ನಾಳೆ ಎತ್ತಿಕೊಂಡಾರು; ಹೊತ್ತುಕೊಂಡಾರು.

—ಪಿರ್ಯ ಲಕ್ಷ್ಮೀನಾರಾಯಣ ಆಳ್ವ.



ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬರುವುದೆ? ಇಲ್ಲವೆ?

ಕಾಂಗ್ರೆಸಿನ ಲೋಪದೋಷಗಳು ಮತ್ತು ಅದಕ್ಕಿರುವ ಅನುಕೂಲ

ಇದು ಇಂದು ಪ್ರತಿ ಭಾರತೀಯನ ಮುಂದಿರುವ ದೊಡ್ಡ ಪ್ರಶ್ನೆ. ಈ ಸಮಸ್ಯೆಯನ್ನು ಮುಂದಿನ ಮಹಾ ಚುನಾವಣೆ ಪರಿಹರಿಸಲಿದೆ. ಇನ್ನೆರಡು ತಿಂಗಳಲ್ಲಿ ಅದರ ನಿರ್ಧಾರವಾಗಲಿದೆ. ಅದರಲ್ಲೇನೂ ಅನುಮಾನವಿಲ್ಲ.

ಹೌದು, ಇದು ಇಂದಿನ ಪ್ರತಿ ವಯಸ್ಕನೂ ಆಲೋಚಿಸಲೇ ಬೇಕಾದ ವಿಷಯ. ಇದಕ್ಕೆ ಕಾರಣವಾದರೂ ಇಷ್ಟೆ!

ಭಾರತದ ಬಂಧನದ ಬಿಡುಗಡೆಗಾಗಿ ೬೦ ವರ್ಷಗಳ ಕಾಲ ಸತತ ಹೋರಾಡಿದ ಒಂದೇ ಒಂದು ಸಂಸ್ಥೆ ಎಂದರೆ ಕಾಂಗ್ರೆಸ್ ಅಷ್ಟೆ ಏಕೆ? ಭಾರತ ಜನತೆಯ ಪ್ರತಿಬಿಂಬವಾಗಿತ್ತು ಕಾಂಗ್ರೆಸ್. ಇದೂ ಅಲ್ಲದೆ ಇಂದು ಅವತಾರವೆತ್ತಿರುವ ಪ್ರತಿಯೊಂದು ವಿರೋಧ ಪಕ್ಷಕ್ಕೂ ಕಾಂಗ್ರೆಸ್ ಮಹಾ ಸಂಸ್ಥೆಯೇ ಮಾತೃ ಸಂಸ್ಥೆ ಎಂದು ಹೇಳಬಹುದು. ಈ ವಿರೋಧಪಕ್ಷಗಳಲ್ಲಿರುವವರೆಲ್ಲಾ ಈ ಮುಂಚೆ ಕಾಂಗ್ರೆಸ್ಸಿನಲ್ಲಿದ್ದವರೇ ಆಗಿದ್ದಾರೆ.

ಪರಕೀಯರ ದಬ್ಬಾಳಿಕೆಯನ್ನು ಪ್ರತಿಭಟಿಸಲು ಸರ್ವರೂ ಒಗ್ಗಟ್ಟಾಗಿದ್ದರು. ಆದರೆ ಸ್ವಾತಂತ್ರ್ಯ ಗಳಿಸಿದನಂತರ ಹೀಗೆ ಕಾಂಗ್ರೆಸ್ ಒಡೆದು ಹತ್ತಾರು ಪಕ್ಷಗಳ ಉದಯಕ್ಕೆ ಕಾರಣವಾಯಿತು ನಿಜ. ಈ ಒಡಕಿನ ಮೂಲವಾದರೂ ಏನು?

ಸ್ವತಂತ್ರ ಬಂದು ನಾಲ್ಕು ವರ್ಷಗಳಾಯಿತು. ಜನತೆ ಕಾಂಗ್ರೆಸ್ ರಾಜ್ಯದಲ್ಲಿ ಸರ್ವಸುಖವನ್ನೂ ಕಾಣುವದಾಗಿ ಭಾವಿಸಿದರು. ಆದರೆ ಜನರ ಲೆಖ್ಖಾಚಾರ ತಲೆಕೆಳಗಾಯಿತು ದಿಟ. ಇದಕ್ಕೂ ಕಾರಣಗಳಿಲ್ಲವೆ? ಸ್ವತಂತ್ರದೊಡನೆ ಸಮಸ್ಯೆಗಳೂ ಸಹ ತಲೆಹಾಕಿದುವು. ಒಂದನ್ನು ಸರಿಪಡಿಸುವ ಹೊತ್ತಿಗೆ ಮತ್ತೊಂದು ಉಲ್ಬಣವಾಗಿತ್ತು ಹೀಗೆ ಕಾಂಗ್ರೆಸ್ ನಾಯಕರ ಗಮನವೆಲ್ಲ ಅತ್ತಕಡೆಗೆ ತಿರುಗಿತು.

ಜನಸಾಮಾನ್ಯರ ಅಗತ್ಯ ಬೇಡಿಕೆಗಳ ಕಡೆಗೆ ಗಮನ ಕೊಡಲಾಗಲಿಲ್ಲ. ಹೀಗಾಗಿ ಜನ ನಿರೀಕ್ಷಿಸಿದ ಆಶಾಗೋಪುರ ಗಾಳಿಗೋಪುರವಾಯಿತ. ಇಲ್ಲವೆಂದವರಾರು? ಇದೆಲ್ಲ ಒತ್ತಟ್ಟಿಗಿರಲಿ.

ಪ್ರಕೃತದ ಪ್ರಶ್ನೆ ಅದಲ್ಲ. ಮುಂದೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸು ಗೆಲ್ಲುವುದೇ. ಇಲ್ಲ ಸೋಲುವುದೇ? ಇದೇ ಪ್ರಶ್ನೆ. ಹಾಗೆ ಕಾಂಗ್ರೆಸ್ ಸೋತ ಪಕ್ಷದಲ್ಲಿ ಇನ್ನಾವುದಾದರೂ ವಿರೋಧಪಕ್ಷ ಭಾರತದಲ್ಲಿ ಅಧಿಕಾರಕ್ಕೆ ಬರುವುದೇ ನೋಡೋಣ?

ಚುನಾವಣೆ ಸಮೀಪಿಸಿದ ಹಾಗೂ ದಿನಕ್ಕೊಂದೊಂದು ಪಕ್ಷ ಹುಟ್ಟುತ್ತಿದೆ. ಆದರೆ ಚುನಾವಣೆಯನಂತರ ಇವುಗಳಲ್ಲಿ ಬಾಳುವವೆಷ್ಟೋ, ಸಾಯುವವೆಷ್ಟೋ, ಆ ಮಾತು ಬೇರೆ. ಅಂತೂ ಈ ವಿರೋಧಿಗಳಲ್ಲಿ ಅತಿಮುಖ್ಯವಾದವುಗಳೆಂದರೆ, ಸೋಷಲಿಸ್ಟ್ ಪಕ್ಷ, ಪ್ರಜಾಪಕ್ಷ, ಕಮ್ಯುನಿಸ್ಟರು ಮತ್ತು ಹಿಂದು ಮಹಾಸಭೆ, ಜನಸಂಘ, ರಾಮರಾಜ್ಯ ಪರಿಷತ್ತು ಮುಂತಾದ ಕೋಮುವಾರು ಸಂಸ್ಥೆಗಳು.

ಈ ಎಲ್ಲ ಪಕ್ಷಗಳಲ್ಲಿ ಒಂದಕ್ಕಾದರೂ ಅಧಿಕಾರಕ್ಕೆ ಬರುವ ಉದ್ದೇಶ್ಯವೇನಿಲ್ಲ. ಅಥವ ಹಾಗೆ ಬರಲು ಸಾಧ್ಯವೂ ಇಲ್ಲ ಅನ್ನಿ. ಇವುಗಳ ಒಂದೇ ಒಂದು ಗುರಿ ಎಂದರೆ–

ಕಾಂಗ್ರೆಸ್ಸನ್ನು ಈ ಚುನಾವಣೆಯಲ್ಲಿ ಸೋಲಿಸಲೇಬೇಕು. ಮತ್ತು ಅದು ಅಧಿಕಾರಕ್ಕೆ ಪುನಃ ಬರಕೂಡದು. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯ?

ಕಾಂಗ್ರೆಸ್ ಮೊದಲಿನಹಾಗೆ ಚುನಾವಣೆಯಲ್ಲಿ ತಾವು ಆಡಿದುದೇ ಆಟವೆಂದು ಜಂಭಕೊಚ್ಚಿಕೊಳ್ಳುವಹಾಗಿಲ್ಲ. ನಿಜ. ನಾಲ್ಕಾರು ಪಕ್ಷಗಳಂತೆ ಚುನಾವಣೆಯಲ್ಲಿ ಪ್ರಚಾರ ನಡೆಸಬೇಕು. ಪೈಪೋಟಿ ಹೂಡಬೇಕು. ಗೆಲ್ಲಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ. ಇದು ವಾಸ್ತವಾಂಶ.

ಇಂದು ಕಾಂಗ್ರೆಸ್ ಜನಾದರಣೆಯನ್ನು ಕಳೆದುಕೊಂಡಿದೆ ಎಂದು ವಾದಕ್ಕಾಗಿ ಒಪ್ಪೋಣ. ಏಕೆ? ಇಷ್ಟೆಲ್ಲ ವಿರೋಧಪಕ್ಷಗಳು ಹುಟ್ಟಿರುವುದೇ ಜನರ ಮನಸ್ಸು ಎತ್ತಕಡೆಗಿದೆಎಂಬುದುತಿಳಿಸುಬರುತ್ತದೆ.

ಪ್ರತಿ ಹತ್ತು ಓಟುಗಳಲ್ಲಿ ಸುಮಾರು ೬-೮ ಓಟುಗಳು ಕಾಂಗ್ರೆಸ್ಸಿಗೆ ವಿರೋಧವಾಗಿಯೇ ಇದೆ ಎಂದು ಭಾವಿಸೋಣ. ಇಷ್ಟುಮಾತ್ರದಿಂದ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವೇ?

ಈ ಲೆಖ್ಖಾಚಾರದ ಪ್ರಕಾರ ಅಂದರೆ ಶೇಕಡ ೭೫ರಷ್ಟು ಮತಗಳು ಕಾಂಗ್ರೆಸ್ಸಿಗೆ ವಿರೋಧವಾಗಿ ಬಿದ್ದಂತಾಯಿತು. ಅಲ್ಲಿಗೆ ಕಾಂಗ್ರೆಸ್ ಕೇವಲ ಶೇಕಡ ೫ರಷ್ಟನ್ನು ಮಾತ್ರ ದೋಚಿಕೊಂಡಂತಾಯಿತ, ಇಲ್ಲಿಗೆ ಕಾಂಗ್ರೆಸ್ ಸೋತಂತಾಯಿತೆ?

ಈಗ ಎಲ್ಲರೂ ಕಾಂಗ್ರೆಸ್ ಸೋಲಿಸುವವರು ತಾನೇ? ಪ್ರತಿಪಕ್ಷವೂ ಕಾಂಗ್ರೆಸ್ಸಿನೊಡನೆ ಕುಸ್ತಿಗೆ ನಿಂತಿದೆ ತಾನೆ. ಈಗ ನೋಡಿದರೆ ಪ್ರತಿಯೊಬ್ಬ ಕಾಂಗ್ರೆಸ್ಸಿಗನಿಗೂ ಏಳೆಂಟು ಮಂದಿ ವಿರೋಧಿಗಳು ನಿಂತಂತಾಯಿತು. ಅಲ್ಲಿಗೆ ಹತ್ತರಲ್ಲಿ ಕಾಂಗ್ರೆಸ್ ವಿರೋಧಿಗಳಿಗೆ ಹಾಕಿದ ಆ ೬-೮ ಓಟುಗಳೂ ಸಹ ಹಂಚಿಹೋದಂತಾಯಿತು. ಇದರಿಂದ ಒಟ್ಟಿನಲ್ಲಿ ಹೆಚ್ಚುಮತ ಗಳಿಸುವವನು ಕಾಂಗ್ರೆಸ್ ಅಭ್ಯರ್ಥಿಯೇ ಹೊರತು ಇತರರಲ್ಲ.

ಕಾಂಗ್ರೆಸ್ ಕೇವಲ ನಾಲ್ಕುವರ್ಷಗಳಲ್ಲಿ ಇಷ್ಟು ಜನಾದರಣೆ ಕಳೆದುಕೊಂಡಿತು ನಿಜ. ಇಲ್ಲವೆಂದವರಾರು? ಆದರೆ ಇನ್ನಾವುದಾದರೂ ಪಕ್ಷ ಇದರ ಸದುಪಯೋಗ ಪಡಿಸಿಕೊಂಡಿತೆ? ಈ ಅವಕಾಶವನ್ನು ಪಯೋಗಿಸಿಕೊಂಡು ಜನತೆಯ ಸಂಪರ್ಕ ಬೆಳಸಿತೆ? ಇದಕ್ಕಾಗಿ ಮತ್ತೊಂದು ಪಕ್ಷ ಉದ್ಭವಿಸಿತೆಂದು ಮುಂದಟ್ಟು ಮಾಡಿಕೊಟ್ಟರೆ? ಇಲ್ಲ. ಈ ವಿರೋಧಪಕ್ಷಗಳಲ್ಲಿ ಪಂಡಿತ ನೆಹರೂವಿನಂತಹ ಒಬ್ಬ ಪ್ರತಿಭಾವಂತ ನಾಯಕನಿದ್ದಾನೆಯೇ? ಇಲ್ಲ.

ಅಂತಹುದರಲ್ಲಿ ಕಾಂಗ್ರೆಸ್ಸನ್ನು ಚುನಾವಣೆಯಲ್ಲಿ ಸೋಲಿಸುವುದೆಂದರೆ ಅರ್ಥವಿಲ್ಲದ ಮಾತು.

ಆದ್ದರಿಂದ ಪುನಃ ಕಾಂಗ್ರೆಸ್ಸಿಗೆ ಅಧಿಕಾರ ಮುಂದುವರಿಸು ಕಟ್ಟಿಟ್ಟ ಹಾಗೆ. ಭಾರತದಲ್ಲಿ ಮತ್ತೆ ಕಾಂಗ್ರೆಸ್ ಆಡಳಿತ ನಡೆಯುವುದು ಸೂರ್ಯನು ಪೂರ್ವದಲ್ಲಿ ಉದಯಿಸುವಷ್ಟೇ ನಿಜ. ಇದರಲ್ಲೇನೇನೂ ಅನುಮಾನವಿಲ್ಲ.

ವಿರೋಧ ಪಕ್ಷಗಳಲ್ಲಿ

§ ಐಕ್ಯಮತ್ಯವಿಲ್ಲ

§ ಪ್ರತಿಭಾವಂತ ನಾಯಕರಿಲ್ಲ

§ ಜನಪ್ರಿಯವಾದ ಸುಸಂಘಟಿತ ಸಂಸ್ಥೆ ಇಲ್ಲ

§ ಬರೀ ಕಾಂಗ್ರೆಸ್ಸಿನ ದ್ವೇಷ

ಆದ್ದರಿಂದ ಕಾಂಗ್ರೆಸ್ಸನ್ನು ಸೋಲಿಸುವುದು ಸಾಧ್ಯವೇ ಇಲ್ಲ.

[ಪ್ರಜಾವಾಣಿ] —ಎಸ್. ಡಿ. ಕೃಷ್ಣರಾವ್,

ಕ್ಷಯರೋಗ ನಿರೋಧ

ಹೋರಾಟದಲ್ಲಿ ಭಾಗ ವಹಿಸಿರಿ!

ಒಂದಾನೆಯ ಟಿ. ಬಿ. ಮೊಹರುಗಳನ್ನು ಕೊಂಡುಕೊಳ್ಳಿರಿ.

ಕ್ರಿಸ್‌ಮಸ್ ಮತ್ತೊಮ್ಮೆ ಬಂದಿದೆ!

ಈ ಸಂತೋಷ ಕಾಲದಲ್ಲಿ ಕ್ಷಯರೋಗಕ್ಕೆ ಬಲಿಯಾದವರನ್ನು ಸ್ಮರಿಸಿ ಅವರ ಸೇವೆಗಾಗಿ ನವಸ್ಫೂರ್ತಿಯಿಂದ ಮುಂದಾಗುವಾ!! ದಯಾಳು ದೇವರು ಅವರ ಹೃದಯದಲ್ಲೂ ಸಂತೋಷದ ಬೆಳಕನ್ನು ದೀರಲಿ!!!

ನಾವು ನೆನಪಿನಲ್ಲಿಡತಕ್ಕ ಮುಖ್ಯ ವಿಷಯಗಳಿವು:

1 ಹಿಂದೂಸ್ಥಾನದಲ್ಲಿ ಕ್ಷಯರೋಗದಿಂದ ಸರ್ವಸಾಧಾರಣ ಮಿನಿಟಿಗೊಬ್ಬರಂತೆ ಸಾಯುತ್ತಲಿದ್ದಾರೆ.

2 ಹಿಂದೂಸ್ಥಾನದಲ್ಲಿಯ ಕ್ಷಯರೋಗದ ಗಣನೆಯನ್ನು ಯಾವ ಕಾಲದಲ್ಲಿಯೂ ನೋಡಿದರೆ ಸಾಧಾರಣ 25ಲಕ್ಷ ಜನರಲ್ಲಿ ಈ ರೋಗವು ತನ್ನ ನಿಜರೂಪವನ್ನು ತೋರಿಸುತ್ತದೆ.

3 ಭಾರತದಲ್ಲೀಗ 119 ಕ್ಷಯರೋಗ ನಿವಾರಣಾ ಚಿಕಿತ್ಸಾಲಯಗಳೂ ಸುಮಾರು 10,000 ಸೇವಾ ಹಾಸಿಗೆಗಳೂ ಇದ್ದಾಗ್ಯೂ ಇನ್ನು ಕನಿಷ್ಠ 4,000 ಕ್ಲಿನಿಕ್ಕುಗಳೂ 5 ಲಕ್ಷ ಶುಶ್ರೂಷಾ ಹಾಸಿಗೆಗಳೂ ಅತ್ಯಗತ್ಯಬೇಕಾಗಿವೆ.

4 ಟಿ. ಬಿ. ರೋಗದಿಂದ ಪಾರಾದವರು ಜೀವನ ನಡೆಸಲು ಅನೇಕ ಕೂಲಿಗಳು ಬೇಕಾಗಿವೆ.

5 ಟಿ. ಬಿ. ರೋಗದ ಹಾವಳಿಯನ್ನು ಪ್ರತಿಭಟಿಸಲು ಈಗಾಗಲೇ ಪ್ರಾರಂಭಿಸಲ್ಪಟ್ಟ ಟಿ. ಬಿ. ಮೊಹರುಗಳ ಮಾರಾಟ ಕೆಲಸವು ಭರದಿಂದ ಮುಂದೆ ಸಾಗುತ್ತಿದೆ.

6 ಈ ಮೊಹರುಗಳನ್ನು ಕೊಂಡುಕೊಂಡು ನೀವು ನಿಮ್ಮ ಇಷ್ಟಮಿತ್ರರಿಗೆಲ್ಲಾ ಕಳುಹಿಸುವ ಕ್ರಿಸ್‌ಮಸ್‌ಹಾಗೂ ಹೊಸ ವರ್ಷದ ಶುಭಾಶಯ ಕಾರ್ಡುಗಳಿಗೆ ಅಂಟಿಸಿದರೆ ರಕ್ಷೆಗೆ ಚಿನ್ನ ಕಟ್ಟಿದಂತಾಗುವುದು.

7 ಟಪ್ಪಾಲುದ್ವಾರಾ ಹೋಗುವಂತಹ ಯಾವುದೇ ಪತ್ರಗಳಿಗಾಗಲೀ ಪಾರ್ಸೆಲ್ ಮೊದಲಾದುವುಗಳಿಗಾಗಲೀ ಈ ಮೊಹರುಗಳನ್ನು ಅಂಟಿಸುವುದರಿಂದ ನಾವು ಈ ಚಳವಳಿಕ್ಕೆ ಕಿಂಚಿತ್ ರೂಪದಲ್ಲಾದರೂ ಸೇವೆ ಸಲ್ಲಿಸಿದಂತಾಗುವುದು.

8 ತಾ. 26-1-1952ರಲ್ಲು ಟಿ. ಬಿ. ಮೊಹರು ಮಾರಾಟ ಚಳವಳಿಯು ಕೊನೆಗೊಳ್ಳುವುದು.

9 ಈ ಮಹಾಕಾರ್ಯಕ್ಕೆ ನಿಮ್ಮ ಯಥಾನುಶಕ್ತಿ ಸಹಾಯ ಮಾಡಲು ಇನ್ನು ಸ್ವಲ್ಪ ಸಮಯ ಮಾತ್ರ ಉಳಿದಿದೆ.

ಈ ವರೆಗೆ ನೀವು ಕ್ಷಯರೋಗ ನಿವಾರಣಾ ಸಹಾಯಾರ್ಥ ಮೊಹರುಗಳನ್ನು ಕೊಂಡುಕೊಳ್ಳದಿದ್ದರೆ ಇಂದೇ ಅವನ್ನು ಪಡೆದುಕೊಂಡು ನಿಮ್ಮ ಪಾಲಿನ ಸೇವೆಯನ್ನು ಕೂಡಲೇ ಸಲ್ಲಿಸಿರಿ. ಮೊಹರುಗಳು ಈ ಕೆಳಗಿನ ವಿಳಾಸಕ್ಕೆ ಬರೆದರೆ ಒಡನೆಯೇ ಸಿಕ್ಕುವವು:

ಗೌ|| ಕಾರ್ಯದರ್ಶಿ, ಮದ್ರಾಸ್ ಸ್ಟೇಟ್ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಹೆಲ್ತ್ ಆಫೀಸರರ ಕಚೇರಿ, ರಿಪನ್ ಬಿಲ್ಡಿಂಗ್ಸ್, ಮದ್ರಾಸು 3. ಶ್ರೀ ಬಿ ಮೋಹನ್ ರಾವ್, ಗೌರವ ಕಾರ್ಯದರ್ಶಿ, ದ. ಕ. ಜಿಲ್ಲಾ ಟಿ. ಬಿ. ಮೊಹರು ಮಾರಾಟ ಕಮಿಟಿ, ಜಿ. ಕೆ. ಟೆಂಪಲ್ ರಸ್ತೆ ಮಂಗಳೂರು ಮತ್ತು ಮದ್ರಾಸು ಪ್ರಾಂತದ ಇತರ ಪಟ್ಟಣಗಳು.

ಹಿಂದೂಸ್ಥಾನದಲ್ಲಿಯ ಟಿ. ಬಿ. ಮೊಹರು ಮಾರಾಟದ ದ್ವಿತೀಯ ಚಳುವಳಿ ನವದಿಲ್ಲಿಯ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಒಫ್ ಇಂಡಿಯಾ ಇವರಿಂದ ಪ್ರಾರಂಭಿಸಲ್ಪಟ್ಟಿದ್ದು.

ಜಾಹಿರಾತು ದಾನಮಾಡಿದವರು: **ಮೆಸರ್ಸ್ ಮಫತ್‌ಲಾಲ್ ಗಾಗಲ್‌ಭಾಯಿ ಎಂಡ್ ಕೊ. ಲಿಮಿಟೆಡ್, ಬೊಂಬಾಯಿ.**

ಕಾಂಗ್ರೆಸ್ ಯೋಜನೆಗಳನ್ನು ಟೀಕಿಸುವವರು ಲಕ್ಷಿಸುವರೆ?

ಕಾಂಗ್ರೆಸ್ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯು ಯಥಾರ್ಥ ಜ್ಞಾನವಿಲ್ಲದೆಯೋ-ಅಥವಾ ಉದ್ದೇಶಪೂರ್ವಕವಾಗಿಯೋ- ಕಾಂಗ್ರೆಸ್ ವಿರೋಧಿಗಳು ಅದನ್ನು ಟೀಕಿಸುತ್ತಿರುವದು ವಿಷಾದದ ಸಂಗತಿ. ಭಾರತ ಯೋಜನೆಗಳಿಗೆ ಜಾಗತಿಕ ಬ್ಯಾಂಕು ಸಾಲವನ್ನು ನೀಡಬೇಕೋ -ರಚನಾತ್ಮಕವಾಗಿ ಬರಲು ಶಕ್ಯವೆಂಟೇ? ಎಷ್ಟು ಸಹಾಯವನ್ನು ಮಾಡಬಹುದು? ಎನ್ನುವ ವಿಚಾರವನ್ನು ಪರಿಶೀಲಿಸಿ ವರದಿ ಮಾಡಲೋಸುಗ ಜಾಗತಿಕ ಪತಿಯಿಂದ ಒಂದು ನಿಯೋಗವನ್ನು ಭಾರತಕ್ಕೆ ಕಳುಹಿಸಲಾಗಿದೆ. ಆ ನಿಯೋಗದವರು ಭಾರತದ ಯೋಜನಾ ಆಯೋಗದ ಪಂಚವಾರ್ಷಿಕ ಯೋಜನೆಯು ಬರೀ ಕಾಲ್ಪನಿಕ ಚಿತ್ರವಾಗಿರದೆ ಅತ್ಯಂತ ಪ್ರಗತಿದಾಯಕವಾಗಿರುತ್ತದೆಂದು ಪ್ರಶಂಸೆ ಮಾಡಿರುವರು. ಮಾತ್ರವಲ್ಲ ಭಾರತವು ಜಾಗತಿಕ ಬ್ಯಾಂಕಿನಿಂದ ಬೇಡಿದ ಸಾಲವು ಸಕಾರಣವಾಗಿದ್ದು ಕೊಡುವದಕ್ಕೆ ಈ ನಿಯೋಗವು ಶಿಫಾರಸು ಮಾಡಬಹುದು. ಈ ವರೆಗೆ ಜಾಗತಿಕ ಬ್ಯಾಂಕಿನಿಂದ ಭಾರತವು ಒಟ್ಟು 28 ಕೋಟಿ ಪಡೆದಿದೆ. ಈ ಹಣದಲ್ಲಿ ರೈಲ್ವೆ ಪುನರ್ಘಟನೆಗಾಗಿ 14 ಕೋಟಿ, ಒಕ್ಕಲತನದ ಬೆಳವಣಿಗೆಗಾಗಿ 4 ಕೋಟಿ ಮತ್ತು ಜಲವಿದ್ಯುಚ್ಛಕ್ತಿಯ ಅಭಿವೃದ್ಧಿಗಾಗಿ 10 ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ಜಾಗತಿಕ ಬ್ಯಾಂಕಿನಿಂದ ಪಡೆದ ಮೇಲಿನ ಸಾಲವನ್ನು ಸದ್ವಿನಿಯೋಗವಾಗಿದೆಂದು ನಿಯೋಗದ ಮುಖ್ಯ ಧುರೀಣರಾದ ಮಿ. ಕೋಸ್ಟರ ಹಾಗೂ ಡಾ। ಬಾಸ್ಟರು ಮೊನ್ನೆ ದಿಲ್ಲಿಯಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಮುಕ್ತಕಂಠದಿಂದ ಹೊಗಳಿದರು. ಈ ನಾಲ್ಕು ವರ್ಷಗಳಲ್ಲಿ ಭಾರತವು ಎದುರಿಸಬೇಕಾದ ಸಮಸ್ಯೆ ನಾನಾವಿಧವಾದ್ದರೂ ಭಾರತವು ಸಾಧಿಸಿದ ಕಾರ್ಯದಕ್ಷತೆಯನ್ನು ಎಂದೂ ಮರೆಯಲಿಕ್ಕಾಗುವದಿಲ್ಲವೆಂದು ಅವರು ಹೇಳಿರುವರು. ವಸ್ತುಸ್ಥಿತಿಯನ್ನು ಮರೆಮಾಚಿ ಕಾಂಗ್ರೆಸ್ಸಿನ ಈ ವರೆಗಿನ ಪ್ರಗತಿಪರ ಧೋರಣೆಯನ್ನೂ ಮುಂದಿನ ಪಂಚವಾರ್ಷಿಕ ಯೋಜನೆಯನ್ನೂ ಕಾಡಿಯೇ ಟೀಕಿಸುವ ವಿರೋಧಿ ಪಕ್ಷದವರು ವಿದೇಶೀಯರು ಭಾರತದ ಬಗ್ಗೆ ಕೊಟ್ಟ ಪ್ರಶಸ್ತಿಯನ್ನು ಲಕ್ಷ್ಯಪೂರ್ವಕವಾಗಿ ನೋಡಬೇಕು ಮಿ. ಕೋಸ್ಟರರು ಯ

ಆಂಧ್ರ ಪ್ರಾಂತ್ಯಕ್ಕಾಗಿ ಸತ್ಯಾಗ್ರಹವೇ?

ಥಾರ್ಥ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ನೋಡಿಯಾದರೂ ತಮ್ಮ ಅಜ್ಞಾನವನ್ನು ತಿದ್ದಿಕೊಳ್ಳುವಂತಾಗಲಿ

ಇದು ಅಪ್ರಾಸಂಗಿಕವಲ್ಲವೇ?

ಆಂಧ್ರಪ್ರಾಂತ ರಚನೆಯ ಬಗ್ಗೆ ಶ್ರೀ ನೆಹರೂರವರು ಸೂಕ್ತ ಕಾರ್ಯ ಕೈಗೊಳ್ಳದೆ ಅದಕ್ಕೆ ಪ್ರತಿಕೂಲವಾಗಿ ಅವರು ವರ್ತಿಸುತ್ತಿದ್ದಾರೆಂದು ಸ್ವಾಮಿ ಶ್ರೀ ಸೀತಾರಾಮರು ನೆಹರೂರವರ ಮೇಲೆ ಆರೋಪ ಹೊರಿಸಿದ್ದಾರೆ. ಕೆಲವು ತಿಂಗಳ ಹಿಂದೆ ಆಂಧ್ರ ಪ್ರಾಂತ ರಚನೆಯ ಬಗ್ಗೆ ಸ್ವಾಮಿ ಸೀತಾರಾಮರು ಉಪವಾಸ ಕೈಗೊಂಡದ್ದೂ—ಆಚಾರ್ಯ ವಿನೋಬಾ ಭಾವೆಯವರ ಮಧ್ಯಸ್ಥಿಕೆ ವಹಿಸಿ ಶೀಘ್ರ ಪ್ರಾಂತರಚನೆಯ ಆಶ್ವಾಸನ ಕೊಟ್ಟಿದ್ದೂ ವಿದಿತ ವಿಚಾರವೇ. ಆಂಧ್ರದ ರಚನೆಗಾಗಿರುವ ಯಾವುದೇ ರೀತಿಯ ಅಡ್ಡಿ ಆತಂಕಗಳಿರಬಾರದೆಂದು ನೆಹರೂ ಹೇಳುತ್ತಿರುವರು ನಮ್ಮ ವಿಚಾರದಲ್ಲಿ ಯಾವುದೂ ತಕರಾರಿಲ್ಲವೆಂದು ಶ್ರೀ ಸೀತಾರಾಮರು ಹೇಳುತ್ತಿರುವರು. ಆದರೆ ಮದ್ರಾಸದ ಪ್ರಶ್ನೆ—ಕರ್ನಾಟಕ ಪ್ರದೇಶದ ಗಡಿಯ ಪ್ರಶ್ನೆ—ಹೈದರಾಬಾದವನ್ನು ಭಾಷಾವಾರು ತತ್ವದಂತೆ ವಿಭಜಿಸುವ ಪ್ರಶ್ನೆ ಇನ್ನೂ ಹಾಗೆ ಉಳಿದಿವೆ. ಇವೆಲ್ಲ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಮರೆಯುವಂತಹದಲ್ಲ. ಈ ತೊಡಕುಗಳನ್ನು ಸುಲಭವಾಗಿಯೂ ಶೀಘ್ರವಾಗಿಯೂ ಬಿಡಿಸುವದು ಶಕ್ಯವಿಲ್ಲ! ಶ್ರೀ ನೆಹರೂರವರು ಕಾಂಗ್ರೆಸ್ಸು ಒಪ್ಪಿಕೊಂಡಿರುವ ಭಾಷಾನುಗುಣ ಪ್ರಾಂತರಚನೆಗೆ ಎಂದೂ ವಿರೋಧವಾಡಿಲ್ಲ. ಆದರೆ ಸದ್ಯ ಅಂತಹ ಯೋಗ್ಯ ಪರಿಸ್ಥಿತಿ ನಿರ್ಮಾಣವಾಗಿಲ್ಲವೆಂಬುದೇ ಅವರ ವಾದವಿದೆ. ಈ ಅಂಶವನ್ನು ಆಚಾರ್ಯ ವಿನೋಬಾ ಭಾವೆಯವರೂ ಮನಗಂಡಿದ್ದಾರೆ. ಅಂತಲೇ ಕೆಲವು ದಿನಗಳ ಹಿಂದೆ ಅವರು ತ್ವರಿತ ಗತಿಯಿಂದ- ಪ್ರಾಂತ ರಚನೆಯಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಬಗೆಹರಿಸದೆ- ಆಂಧ್ರ ಪ್ರಾಂತ ರಚನೆ ಕೈಗೊಳ್ಳುವುದು ಯೋಗ್ಯವಾಗದೆಂದು ಅವರು ಹೇಳಿಕೆಯೊಂದನ್ನು ಕೊಟ್ಟಿದ್ದಾಗಿರುತ್ತದೆ.

ಈ ತಿಂಗಳ ಕೊನೆಯಲ್ಲಿ ಶ್ರೀ ನೆಹರೂರವರು ಆಂಧ್ರ ಪ್ರದೇಶವನ್ನು ಸಂದರ್ಶಿಸಿ ಚುನಾವಣಾ ಪ್ರಚಾರ ಕೈಗೊಳ್ಳುವವರಿದ್ದಾರೆ ಈ ಸಂದರ್ಭವನ್ನು ಸಾಧಿಸಿಯೆ ಅವರ ಮುಂದೆ ನಾನಾ ರೀತಿಯ ವಿಷಾದ ಪ್ರದರ್ಶನ-ನಾನಾ ರೀತಿಯ ಘೋಷಣೆಗಳನ್ನು ಅವರ ಸಭೆಗಳಲ್ಲೆಲ್ಲ ಮಾಡಬೇಕೆಂದು ಸ್ವಾಮಿ ಸೀತಾರಾಮರೊಂದು ಪ್ರಕಟಣೆ ಹೊರಡಿಸಿದ್ದಾರೆ. "ನನ್ನ ಚಳುವಳಿಯು ಪಾಕಿಸ್ತಾನ ಚಳುವಳಿಯನ್ನು ಹೋಲಿಸುತ್ತದೆಂದು ಶ್ರೀ ನೆಹರೂರವರು ಹೇಳುತ್ತಲಿದ್ದಾರೆ. ಇದಕ್ಕೆ ಅವರ ಅಲ್ಪ ಸ್ಮರಣ ಶಕ್ತಿಯಾಗಲೀ-ಸಂಗತಿಯ ಯಥಾರ್ಥ ಸ್ವರೂಪದ ಅಜ್ಞಾನವಾಗಲೀ-ಕಾರಣವಾಗಿರಬೇಕೆಂದು ನನಗನಿಸುತ್ತದೆ. ಬೇಗನೆ ಆಂಧ್ರಪ್ರಾಂತದ ರಚನೆಯಾಗಬೇಕು" ಎಂಬ ನ್ಯಾಯದ ಬೇಡಿಕೆಯನ್ನು ಅವರು ವಿಚಾರಿಸುವದಿಲ್ಲವೆಂದು ತೋರುತ್ತದೆ, ಆದ್ದರಿಂದ ನಮಗೆ ನಮ್ಮ ಪ್ರಾಂತ ಬೇಕಿದ್ದರೆ ದೀರ್ಘವಾದ ಸತ್ಯಾಗ್ರಹ ಮಾಡಬೇಕಾಗುವದು. ಆದ್ದರಿಂದ ತಮ್ಮವರೆಲ್ಲ ಈ ಸತ್ಯಾಗ್ರಹಕ್ಕೆ ಸಿದ್ಧರಾಗಬೇಕೆಂದು ಕೇಳಿಕೊಳ್ಳುವೆ" ಈ ಅಂಶವನ್ನು ಪ್ರಕಟಣೆಯಲ್ಲಿ ಹೇಳಲಾಗಿದೆ.

ಸ್ವಾಮಿ ಸೀತಾರಾಮರು ಶ್ರೇಷ್ಠ ಕಾಂಗ್ರೆಸ್ಸಿಗರು. ಎಲ್ಲ ಭಾಷಾ ಪ್ರಾಂತದವರಿಗೂ-ರಾಜಕೀಯ ಪಕ್ಷದವರಿಗೂ ಅವರ ಬಗ್ಗೆ ವಿಶೇಷಾದರವಿದೆ. ಆದರೆ ಸದ್ಯದ ಈ ಸಂದರ್ಭದಲ್ಲಿ ಅವರು ಕೈಕೊಳ್ಳಬಹುದಾದ ಸತ್ಯಾಗ್ರಹ ನೀತಿಯು ಎಷ್ಟಕ್ಕೂ ಶೋಭಿಸುವದಿಲ್ಲ. ಸಮಯ ಸಾಧಿಸಿ ಕಾಂಗ್ರೆಸ್ಸಿನಿಂದ ಅಲ್ಲವೆ ಶ್ರೀ ನೆಹರೂರವರಿಂದ ಆ ಕಾರ್ಯವನ್ನು ಮಾಡಿಸಿಕೊಳ್ಳಬಹುದಾಗಿತ್ತು. ಪ್ರಾಯಃ ಅದೊಂದೇ ಮುಕ್ತ ಮಾರ್ಗ. ಈ ಬಗೆಯ ಅನುಚಿತವಾರ್ಗವನ್ನನುಸರಿಸುವದರಿಂದ ಆಗಬೇಕಾದ ಕಾರ್ಯ ಅಷ್ಟು ಸುಲಭವಾಗಿ ಕೈಗೂಡದು. ಈ ಬಗೆಯ ವಿರೋಧ ನೆಹರೂ ಸಂಚರಿಸಿದ ಯಾವ ಕಡೆಯಲ್ಲೂ ಕಂಡು ಬಂದಿಲ್ಲ. ಸ್ವಾಮಿ ಸೀತಾರಾಮರಂತಹ ಉಚ್ಚ ಕಾಂಗ್ರೆಸ್ಸಿಗರ ನೇತೃತ್ವದಲ್ಲಿ ಆಂಧ್ರರು ಅಷ್ಟುಮಟ್ಟಿನ ಪ್ರಾಂತೀಯ ಸಂಕುಚಿತಭಾವನೆಗೆ ಕಟ್ಟುಬೀಳಬಾರದು.

ಸರಕಾರದೊಂದಿಗೆ ಜನತೆಯೂ ಸಹಕರಿಸಬೇಕು

ನಮ್ಮ ದೇಶದಲ್ಲಿ ನಿಮಿಷಕ್ಕೊಂದು ಜನ ಕ್ಷಯರೋಗದಿಂದ ಮೃತ್ಯುವಿನ ಪಾಲಾಗುತ್ತಿದ್ದಾರೆಂದು ಹೇಳಲಾಗಿದೆ. ಬಡವ ಬಲ್ಲಿದರೆನ್ನುವ ಭೇದಭಾವವಿಲ್ಲದೆ ಸರ್ವಸಾಮಾನ್ಯ ಎಲ್ಲರಲ್ಲೂ ವ್ಯಾಧಿಯು ಅಂಟುರೋಗ ಪ್ರಸಾರವಾಗುತ್ತಲಿದೆ ಒಮ್ಮೆ ಕ್ಷಯವು ಅಂಟಿಕೊಂಡರೆ ಮತ್ತೆ ಸುಲಭವಾಗಿ ಅದರಿಂದ ಪಾರಾಗುವಂತಿಲ್ಲ. ಒಂದುವೇಳೆ ಗುಣಮುಖ ಹೊಂದಿದರೂ ಜೀವನದುದ್ದಕ್ಕೂ ಆ ವ್ಯಕ್ತಿಯು ಬಹುಜಾಗ್ರತೆಯಿಂದ ವರ್ತಿಸಬೇಕಾಗುತ್ತದೆ. ಜೀವನ ನಿರ್ವಹಣವೇ ಕಷ್ಟಸಾಧ್ಯವಾದ ಬಡವರಿಗೆ ಇಂತಹ ಕಾಯಿಲೆಗಳು ಬಂದರೆ ಅದಕ್ಕೆ ತಕ್ಕ ಶುಶ್ರೂಷೆಯನ್ನು ಕೈಗೊಳ್ಳುವ ದಕ್ಷತೆಗಲೀ-ವಿಶ್ರಾಂತಿಯನ್ನು ಪಡೆಯುವ ದಕ್ಷತೆಗಲೀ – ಅವರು ಸಮರ್ಥರಾಗಿರುವುದಿಲ್ಲ- ಮಾತ್ರವಲ್ಲ ಎಷ್ಟೋ ಜನರು ಒಮ್ಮೆ ಹಾಸಿಗೆ ಹಿಡಿದವರು ಮತ್ತೆ ಏಳಲೇ ಇಲ್ಲದ ನಿದರ್ಶನವೇ ಜಾಸ್ತಿ.

[ಮುಂದಿನ ಪುಟ ನೋಡಿರಿ.]

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಸ್ಥಿರವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರಾಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಲೋಕಾಂತ

ಕಾಂಗ್ರೆಸ್ಸಿಗೇ ಮತವನ್ನೇಕೆ ಕೊಡಬೇಕು?

ಹನ್ನೆರಡು ವರುಷ ಅಮೇರಿಕೆಯಲ್ಲಿ ಇದ್ದ ನಂತರ ಹಿಂದೀ ಕ್ರಿಶ್ಚನ್ ಮುಂದಾಳುಗಳಾದ ಶ್ರೀ ಆರ್. ಎಸ್. ಮೋದಕರು ಈಗ ಭಾರತ ಸಂಚಾರಕ್ಕೆ ಹೊರಟಿದ್ದಾರೆ. ಅಖಿಲ ಹಿಂದೀ ಕ್ರಿಶ್ಚನ್‌ರು ತಮ್ಮ ಅಂಕಿತದಿಂದ ಹೊರಡಿಸಿದ ಮನವಿಯೇ ಈ ಸಂಚಾರಕ್ಕೆ ಕಾರಣವಾಯಿತೆಂದು ಅವರು ಹೇಳಿರುವರು. ಕಾಂಗ್ರೆಸ್ಸಿಗೇ ಏಕೆ ಬೆಂಬಲ ಕೊಡಬೇಕೆಂಬ ಬಗ್ಗೆ ಅವರು ಈ ಕಾರಣಗಳನ್ನು ಕೊಟ್ಟರು. ೧) ಕಾಂಗ್ರೆಸ್ಸು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದೆ. ೨) ಕಾಂಗ್ರೆಸ್ಸು ಅತ್ಯಂತ ಸುಸಂಘಟಿತ ಪಕ್ಷವಾಗಿದ್ದು ಕಾರ್ಯಕ್ಷಮತೆಯಿಂದ ಕೆಲಸ ಮಾಡಬಲ್ಲದು. ೩) ಭಾರತವು ಜಾತಿ ಧರ್ಮನಿರಪೇಕ್ಷ ರಾಷ್ಟ್ರವೆಂದು ಸಾರಿ ಕಾಂಗ್ರೆಸ್ಸು ಎಲ್ಲ ಅಲ್ಪಸಂಖ್ಯಾತರಿಗೂ ಸಮಾನಾವಕಾಶವನ್ನು ಕೊಟ್ಟಿರುತ್ತದೆ. ೪) ಕಾಂಗ್ರೆಸ್ಸಿನಲ್ಲಿ ಶ್ರೇಷ್ಠ ಮುಂದಾಳುಗಳಿದ್ದಾರೆ. ಹಾಗು ಅದಕ್ಕೆ ಎಲ್ಲ ಪಕ್ಷಗಳಿಗಿಂತ ಆಡಳಿತೆಯ ಅನುಭವ ಹೆಚ್ಚಾಗಿದೆ. ೫) ಪಂಡಿತ ಜವಾಹರಲಾಲ ನೆಹರು ಮೊದಲಾದ ಕಾಂಗ್ರೆಸ್ ಮುಂದಾಳುಗಳು ಭಾರತಕ್ಕೆ ಪ್ರಾರಂಭದಲ್ಲಿಯೇ ಅಂತರ್ರಾಷ್ಟ್ರೀಯ ದೃಷ್ಟಿಕೋನವನ್ನು ಒದಗಿಸಿರುತ್ತಾರೆ. ಶ್ರೀ ಮೋದಕರು ಬಿನ್ನವಿಸಿಕೊಂಡಂತೆ ಹಿಂದೀ ಕ್ರಿಶ್ಚನರಷ್ಟೇ ಅಲ್ಲದೆ ಉಳಿದ ಮತದಾರರೆಲ್ಲರೂ ಕಾಂಗ್ರೆಸ್ ಹುರಿಯಾಳುಗಳಿಗೆ ಮತಗಳನ್ನು ಕೊಟ್ಟು ಪ್ರಚಂಡ ಬಹುಮತದಿಂದ ಅವರನ್ನು ಆರಿಸತಕ್ಕದು ಕರ್ತವ್ಯವಾಗಿದೆ.

ಹಿಮಾಚಲದಲ್ಲಿ ಮಂತ್ರಿಗಳ ವೇತನ

ಹಿಮಾಚಲ ಪ್ರದೇಶ ಕಾಂಗ್ರೆಸ್ ಕಮಿಟಿಯು ಒಂದು ನಿರ್ಣಯವನ್ನು ಸ್ವೀಕರಿಸುತ್ತ ಹಿಮಾಚಲ ಪ್ರದೇಶ ಮಂತ್ರಿಯ ಸಂಬಳವು ರೂಪಾಯಿ ಐದುನೂರು ಮತ್ತು ಶಾಸನ ಸಭಾಸದರಿಗೆ ತಿಂಗಳೊಂದರ ಒಂದು ನೂರ ಐವತ್ತು ಭತ್ತೆ ಕೊಡಬೇಕೆಂಬುದಾಗಿ ನಿರ್ಧರಿಸಿಯದೆ.

ಬ್ರಿಟನ್ನಿನ ಮುಖ್ಯ ಮಂತ್ರಿ ಚರ್ಚಿಲ್ಲರು

ತಮ್ಮ ಹಳ್ಳಿಯ ಮನೆಯಿಂದ ಜನತೆಯನ್ನುದ್ದೇಶಿಸಿ ಮಾಡಿದ ಆಕಾಶವಾಣಿಯಲ್ಲಿ ಯುದ್ಧ ಮೊದಲಾದ ಭಯಾನಕ ಪ್ರಸಂಗಗಳಲ್ಲಿ ಎಂತಹ ಕಷ್ಟಗಳು ಬಂದರೂ ಎದೆಗುಂದದೆ ಅವನ್ನು ಎದುರಿಸಲು ಜನತೆಯು ಸಮರ್ಥವಾಗಬೇಕೆಂದರು. ಅಮೆರಿಕನ್ನರ ಕರಾರು ಪ್ರಸ್ತಾಪಿಸುತ್ತಾ ಅವರಿಂದ ನಮ್ಮ ಆಂತರಿಕ ತೊಂದರೆಗಳು ನಿವಾರಣೆಯಾಗಲು ಶಕ್ಯವಿಲ್ಲವೆಂದೂ ಬ್ರಿಟಿಷ್ ಜನತೆಯು ಕಷ್ಟದ ದಿನಗಳನ್ನು ಎದುರಿಸಲು ಸಿದ್ಧರಾಗಿರಬೇಕೆಂದು ಮುಂಜಾಗ್ರತೆಯನ್ನಿತ್ತರು.

ಸುಯೇಜ ಪ್ರದೇಶದಲ್ಲಿ ದಂಡಿನ ಕಾಯದೆ

ಸುಯೇಜ ಕಾಲುವೆ ಪ್ರದೇಶದಲ್ಲಿಯ ಪರಿಸ್ಥಿತಿಯು ಹದ ಮೀರಿರುವುದರಿಂದ ಅಲ್ಲಿ ದಂಡಿನ ಕಾಯದೆ ಜಾರಿಯಹುದಾಗಿ ಈಜಿಪ್ತ ಸರಕಾರದವರ ಪತ್ರಿಕೆ 'ಅಲ್ ಮಿಶ್ರಿ'ಯು ಸೂಚಿಸಿದೆ. ಜನರಲ್ ಎರ್ಸ್ಕಿನರು ಇಸ್ಮಾಲಿಯಾದಲ್ಲಿ ಕರ್ಫ್ಯೂ ಆಜ್ಞೆಯನ್ನು ಅಮಲಿನಲ್ಲಿ ತಂದುದರಿಂದ ಬ್ರಿಟಿಷರು ಇನ್ನೂ ಉಗ್ರವಾದ ಉಪಾಯಗಳನ್ನು ಅವಲಂಬಿಸಬಹುದೆಂದು ಕೂಡ ಅದೇ ಪತ್ರವು ಸೂಚಿಸಿದೆ

ಎಣ್ಣೆ ಮಾರುವ ಹಕ್ಕು ಪರ್ಶಿಯಾಕ್ಕೆ ಇಲ್ಲ.

ಆಂಗ್ಲೋ-ಇರಾಣಿಯನ್ ಎಣ್ಣೆಯ ತಂಟೆ ಈಗ ಅಂತರರಾಷ್ಟ್ರೀಯ ನ್ಯಾಯಾಲಯದ ಮುಂದಿರುವುದರಿಂದ ಆ ಎಣ್ಣೆಯನ್ನು ಮಾರುವ ಅಧಿಕಾರ ಪರ್ಶಿಯಾ ಸರಕಾರಕ್ಕಿರುವುದಿಲ್ಲವೆಂದು ಬ್ರಿಟನ್ ಸಾರಿದೆ.

ಭದ್ರತಾ ಮಂಡಲಕ್ಕೆ ಗ್ರಹಾಮರ ವರದಿ

ಕಾಶ್ಮೀರದ ಭವಿತವ್ಯ ನಿರ್ಧರಿಸಲು ಸಂಯುಕ್ತ ರಾಷ್ಟ್ರಸಂಘದ ನೇತೃತ್ವದಲ್ಲಿ ಜನ ಮತಗಣನೆ ನಡೆಸುವ ಮೊದಲು ಕಾಶ್ಮೀರದಲ್ಲಿರುವ ಭಾರತ-ಪಾಕಿಸ್ತಾನ ಸೈನ್ಯವನ್ನು ಹಿಂತೆಗೆದುಕೊಳ್ಳುವ ಸಂಬಂಧದಲ್ಲಿ ಭಾರತ-ಪಾಕಿಸ್ತಾನಗಳಲ್ಲಿ ಒಮ್ಮತವಾಗಲಿಲ್ಲವೆಂದು ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿ ಡಾ। ಗ್ರಹ್ಯಾಮರು ಭದ್ರತಾ ಮಂಡಲಕ್ಕೆ ಸಾದರ ಪಡಿಸಿದ ವರದಿಯಲ್ಲಿ ಹೇಳಿರುವರು.

ಭಾರತದ ಆಹಾರ ಕೊರತೆ

ದೇಶದ ಆಹಾರ ಬೇಡಿಕೆಯ ಬಗ್ಗೆ ಈ ತನಕ ನಡೆಸಿದ ಪ್ರಾಥಮಿಕ ವಿಚಾರಣೆಗಳಿಂದ 1952 ರಲ್ಲಿ 50 ಲಕ್ಷ ಟನ್ ಆಹಾರಧಾನ್ಯಗಳನ್ನು ತರಿಸಬೇಕಾಗುವುದೆಂದು ಹೊಸ ದಿಲ್ಲಿಯಿಂದ ಅಧಿಕೃತವಾಗಿ ಹೇಳಲಾಗಿದೆ. ಆದರೆ ಮುಂದಿನ ಫೆಬ್ರವರಿ ತಿಂಗಳಲ್ಲಿ ರಾಜ್ಯಗಳ ಆಹಾರಮಂತ್ರಿಗಳ ಪರಿಷತ್ತು ಸೇರಿ ಈ ಅಂದಾಜಿನ ಪರಿಶೀಲನೆಯಾಗಿ ಆನಂತರವೇ ದೇಶಕ್ಕೆ ಎಷ್ಟು ಆಹಾರ ಧಾನ್ಯ ತರಿಸಬೇಕಾಗುವುದೆಂಬುದನ್ನು ನಿಶ್ಚಯಿಸಲಾಗುವುದು.

ಕಾರವಾರ ಬಂದರ ವಿಸ್ತರಣ

ಕಾರವಾರ ಬಂದರದ ಭಕ್ಕೆಯ ಅಸುರಕ್ಷಿತವಾಗಿರುವುದರಿಂದ ಅದನ್ನು ಬಲಪಡಿಸಲು ಹಾಗೂ ವಿಸ್ತರಿಸಲು ಸುಮಾರು ಒಂದೂವರೆ ಲಕ್ಷ ಖರ್ಚಿನ ಯೋಜನೆಯೊಂದನ್ನು ಕೈಕೊಳ್ಳಲಾಗುವುದೆಂದು ಹೇಳಲಾಗಿದೆ.

ಜಮೀನದಾರಿ ಕಾಯಿದೆಗೆ ತಿದ್ದುಪಡಿ

ಮದ್ರಾಸು ಸರಕಾರವು ಜಮೀನದಾರಿ ನಿರ್ಮೂಲನ ಕಾಯಿದೆ ಮೇರೆಗೆ ಜಮೀನದಾರರಿಗೆ ಮುಂಗಡವಾಗಿ ಕೊಡಬೇಕಾದ ಪರಿಹಾರ ಧನವನ್ನು ಆರು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮರ್ಯಾದಿತಗೊಳಿಸುವ ಬಗ್ಗೆ ಹಾಗೂ ಅದರಲ್ಲಿ ಅರ್ಧ ನಗದು ಮತ್ತು ಅರ್ಧ ಸರಕಾರಿ ಪತ್ರಗಳ ರೂಪದಲ್ಲಿ ಕೊಡಲು ಅನುಕೂಲವಾಗುವಂತೆ ಮದ್ರಾಸ್ ಜಮೀನದಾರಿ ನಿರ್ಮೂಲನಾ ಕಾಯಿದೆಗೆ ತಿದ್ದುಪಡಿ ಮಾಡಲು ನಿರ್ಧರಿಸಿರುವುದು. ಈ ರೀತಿಯ ತಿದ್ದುಪಡಿ ಕಾಯಿದೆ ಮಾಡಲು ಮದ್ರಾಸು ಸರಕಾರವು ಭಾರತ ಸರಕಾರದ ಅನುಮತಿ ಕೇಳಿದೆ ಎಂದು ಮದ್ರಾಸು ಸರಕಾರದ ಕಂದಾಯ ಮಂತ್ರಿ ಶ್ರೀ ಸೀತಾರಾಮ ರೆಡ್ಡಿಯವರು ಹೇಳಿರುವರು. ಈ ತಿದ್ದುಪಡಿ ಮಸೂದೆಯು ಮುಂದಿನ ಮಾರ್ಚ್ ತಿಂಗಳಲ್ಲಿ ಸೇರುವ ಮದ್ರಾಸ್ ಶಾಸನ ಸಭೆಯಲ್ಲಿ ಮಂಡಿಸಲಾಗುವುದೆಂದು ತಿಳಿಸಿರುವರು.

ಭಾರತವು ಸಂಪನ್ನ ದೇಶವಾಗಬೇಕು

ಪಂಡಿತ ನೆಹರೂರವರು ಜಲಂಧರದಲ್ಲಿ ಮಾತನಾಡುತ್ತಾ ಸ್ವತಂತ್ರ ಭಾರತದ ತನ್ನ ಕನಸು ನನಸಾಗಿದೆ ಎಂದರು, ಮುಂದುವರಿಯುತ್ತಾ, ಬಲಿಷ್ಠ ಹಾಗೂ ಸಂಪನ್ನ ಭಾರತದ ಕನಸು ಇನ್ನೂ ಕನಸಾಗಿಯೇ ಉಳಿದಿದೆ ಎಂದರು.

ವಿನಂತಿ

ಇದೇ ಬರುವ ಜನವರಿ 2ನೇ ತಾರೀಕಿನ ದಿನ ಮಹಾ ಚುನಾವಣೆ ನಡೆಯಲಿದೆ. ಉಡುಪಿ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಪರವಾಗಿ ನಾನು ಮದ್ರಾಸು ಎಸೆಂಬ್ಲಿಗೆ ಉಮೇದ್ವಾರನಾಗಿರುವೆನು ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ವಿಭಾಗದಿಂದ ಶ್ರೀಯುತ ಶ್ರೀನಿವಾಸ ಮಲ್ಯರು ಕಾಂಗ್ರೆಸು ಪರವಾಗಿ ಡಿಲ್ಲಿ ಪಾರ್ಲಿಮೆಂಟಿಗೆ ಉಮೇದ್ವಾರರಾಗಿರುವರು.

ಉಡುಪಿ ಮತದಾರ ಕ್ಷೇತ್ರದಲ್ಲಿ ಸುಮಾರು 74000 ಜನ ಮತದಾರರಿರುವರು. ಇದೇ ಉತ್ತರ ವಿಭಾಗದಲ್ಲಿ ಸುಮಾರು 3,‚0,000 ಮತದಾರರಿರುವರು. ಶ್ರೀಯುತ ಶ್ರೀನಿವಾಸ ಮಲ್ಯರು ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳಾಗಿರುವುದರಿಂದ ಅವರ ಜವಾಬ್ದಾರಿಯು ಗುರುತರವಾದುದು, ಅಲ್ಲದೆ ಇಲ್ಲಿ ಪ್ರತಿಯೊಂದು ಕಡೆಯಲ್ಲೂ ಸಾಕಷ್ಟು ಪ್ರವಾಸ ಮಾಡುವ ಅವಕಾಶ ಅವರಿಗೆ ಸಿಗಲಿಲ್ಲ, ಸಿಗುವಹಾಗಿಲ್ಲ.

ಶ್ರದ್ಧೆಯಿಂದ ಶಕ್ತಿಮೀರಿ ಈ ಮತದಾರ ಕ್ಷೇತ್ರದಲ್ಲಿ ಎಲ್ಲಾ ಕಡೆಗಳಿಗೂ ಹೋಗಿ ಮತದಾರರನ್ನು ಕಂಡು ಮಾತನಾಡುವ ಸಾಹಸ ನಾನು ಮಾಡಿರುವುದಾದರೂ, ಹಾಗೆ ಪ್ರತಿಯೊಂದು ಕಡೆಗೆ, ಪ್ರತಿಯೊಂದು ಮನೆಗೆ ಹೋಗಿ, ಪ್ರತಿಯೊಬ್ಬ ಮತದಾರರನ್ನು ಕಾಣುವುದು ಅಸಾಧ್ಯವೆಂದು ತಿಳಿಯುತ್ತೇನೆ

ಆದುದರಿಂದ ಮಹಾಜನರೆಲ್ಲರೂ, ದೇಶದ ಹಿರಿಯ ಸಂಸ್ಥೆಯಾದ ಕಾಂಗ್ರೆಸ್ಸಿನ ಮೇಲಣ ವಿಶ್ವಾಸದಿಂದ, ಅದರ ಪರವಾಗಿ ಹುರಿಯಾಳಾಗಿ ನಿಂತಿರುವ ನಮ್ಮಿಬ್ಬರ ಮೇಲಣ ಮಮತೆಯಿಂದ, ಈ ಚುನಾವಣೆಯಲ್ಲಿ ನಿಮಗಿರುವ ಎರಡೂ ಓಟುಗಳನ್ನು ನೊಗಕಟ್ಟಿದ ಎರಡೆತ್ತಿನ ಚಿಹ್ನೆ ಇರುವ ಕಾಂಗ್ರೆಸ್ ಪೆಟ್ಟಿಗೆಗೆ ಹಾಕಿ ಪ್ರೋತ್ಸಾಹಿಸಬೇಕಾಗಿ ಸಾದರದಿಂದ ವಿನಂತಿಸಿಕೊಳ್ಳುತ್ತೇವೆ

ಯು. ಶ್ರೀನಿವಾಸ ಮಲ್ಯ
ಕಾಂಗ್ರೆಸು ಹುರಿಯಾಳು
ಡಿಲ್ಲಿ ಪಾರ್ಲಿಮೆಂಟಿಗೆ

ಟಿ. ಎ. ಪೈ,
ಕಾಂಗ್ರೆಸು ಹುರಿಯಾಳು
ಮದ್ರಾಸು ಎಸೆಂಬ್ಲಿಗೆ

ಕಾಂಗ್ರೆಸ್ ಚುನಾವಣಾ ಚಿಹ್ನೆ-



(೪ನೇ ಪುಟದಿಂದ ಮುಂದರಿಸಿದ್ದು)

ಭೀಕರ ಸ್ವರೂಪದ ಈ ಕ್ಷಯರೋಗದ ಹಾವಳಿಯನ್ನು ತಡೆಗಟ್ಟುವದಕ್ಕಾಗಿ ಭಾರತ ಸರಕಾರವು ಪ್ರತಿಯೊಂದು ಪ್ರಾಂತದಲ್ಲೂ ಕ್ಷಯರೋಗ ನಿರೋಧ ಕಾರ್ಯಗಳನ್ನು ಕೈಗೊಂಡಿದ್ದು ಹಲವಾರು ಊರುಗಳಲ್ಲಿ ಕ್ಷಯರೋಗ ಚಿಕಿತ್ಸೆಯ ಸಲುವಾಗಿ ದೊಡ್ಡದೊಡ್ಡ ಆಸ್ಪತ್ರೆಗಳನ್ನು ತೆರೆದಿದೆ- ಭಾರತದಲ್ಲೀಗ 119 ಕ್ಷಯರೋಗ ನಿವಾರಣಾ ಚಿಕಿತ್ಸಾಲಯಗಳೂ ಸುಮಾರು 10,000 ಸೇವಾ ಹಾಸಿಗೆಗಳೂ ಇರುತ್ತವೆ. ಆದರೆ ಕಡಿಮೆಯೆಂದರೆ 4000 ಕ್ಲಿನಿಕ್ಕುಗಳೂ ೨ಲಕ್ಷ ಆಸ್ಪತ್ರಾ ಹಾಸಿಗೆಗಳೂ ಆತ್ಯಾವಶ್ಯಕವಾಗಿರುತ್ತವೆ- ಹಿಂದಿನ ವರ್ಷದಿಂದ ಕ್ಷಯರೋಗ ನಿರೋಧ ಬಗ್ಗೆ ಹಣಸಂಗ್ರಹಿಸಲು ಕ್ಷಯರೋಗದ ಮೊಹರುಗಳನ್ನು ಮಾರಾಟ ಮಾಡುವ ಚಳವಳವನ್ನು ಪ್ರಾರಂಭಿಸಿದೆ- ಈಗ ಮಾರಾಟದ ದ್ವಿತೀಯ ಚಳವಳ ನಡೆಯುತ್ತಲಿದೆ- ಒಂದಾಣೆ ಬೆಲೆಯ ಮೊಹರನ್ನು ಪಡೆಯುವದರ ಮೂಲಕ ಸಹಾಯವನ್ನು ನೀಡುವ ಈ ಮಹಾಕಾರ್ಯದಲ್ಲಿ ಬಡವ ಬಲ್ಲಿದರೆನ್ನದೆ ಎಲ್ಲರೂ ಪಾಲ್ಗೊಳ್ಳಬಹುದು- ಮಾತ್ರವಲ್ಲ ಇದು ಮಹಾ ಪುಣ್ಯಕಾರ್ಯವೂ ಹೌದ - ನಾವು ಕೊಡುವ ಅಲ್ಪ ಸಹಾಯವು ಸದ್ವಿನಿಯೋಗವಾಗುವದು ಮಾತ್ರವಲ್ಲದೆ ನಮ್ಮ ದೇಶದ ಬಂಧು ಬಾಂಧವರ ಜೀವರಕ್ಷಣೆಯ ಮಹತ್ಕಾರ್ಯಕ್ಕೆ ಹೃತ್ಪೂರ್ವಕ ಸಹಾಯ ಮಾಡಿದಂತಾಗುತ್ತದೆ- ಮೊಹರು ಮಾರಾಟದ ಚಳವಳವನ್ನು ಯಶಸ್ವಿಗೊಳಿಸುವರೆ ಕ್ಷಯರೋಗ ನಿವಾರಣೆಯ ಬಗ್ಗೆ ಮುಕ್ತಹಸ್ತದಿಂದ ಸಹಾಯ ನೀಡುವದು-ಎಲ್ಲರ ಕರ್ತವ್ಯವಾಗಿರುತ್ತದೆ. ಸರಕಾರ ಕೈಗೊಂಡಿರುವ ಈ ಯೋಜನೆಯು ಫಲಪ್ರದವಾಗುವದಕ್ಕೆ ಜನತೆಯ ಸಹಕಾರ ಅತ್ಯಾವಶ್ಯಕವೆಂಬುದನ್ನು ಮರೆಯತಕ್ಕದ್ದಲ್ಲ.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
೬ ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೭-೧೨-'೫೧

ಕೊಂಗ್ರೆಸ್ಸೊಂದೇ ಪ್ರಬಲ ಸಂಸ್ಥೆ

ನಮ್ಮ ಜಿಲ್ಲೆಯ ಚುನಾವಣೆಯು ಬರುವ ವಾರದಿಂದ ಆರಂಭವಾಗಲಿದ್ದು ಚುನಾವಣಾರಂಗದಲ್ಲಿ ಭಾಗವಹಿಸಿರುವ ಬೇರೆ ಬೇರೆ ಪಕ್ಷಗಳು ಒಳ್ಳೆ ರಭಸದಿಂದ ಪ್ರಚಾರ-ಸಂಚಾರ ಕಾರ್ಯಕೈಕೊಂಡಿರುತ್ತವೆ. ಪಕ್ಷಪ್ರತಿಪಾದನೆ-ವಿಧಾಯಕವಾದ ಟೀಕೆಟಿಪ್ಪಣಿಗಳು- ಈಸಮಯದಲ್ಲಿ ಬರುವುದು ಸ್ವಾಭಾವಿಕವಾದರೂ ಪಕ್ಷದ ಧುರೀಣರು ಇಲ್ಲವೆ ಅನುಯಾಯಿಗಳು ನಾಗರೀಕತೆಯನ್ನು ಮರೆತು ವಾಮ ಮಾರ್ಗಗಳೇ ಗೆಲುವಿನ ಮುಖ್ಯ ಸಾಧನವೆಂದು ತಿಳಿದುಕೊಂಡದ್ದು ವಿಷಾದದ ಸಂಗತಿ ಧಾರ್ಮಿಕ ಭೀತಿ-ಜಾತೀಯತೆಯ ಮನೋವೃತ್ತಿಗಳಿಂದ ಜನತೆಯನ್ನು ವಂಚಿಸಲಾಗುತ್ತಿವೆ ಪೊಳ್ಳು ಆಶ್ವಾಸನೆಗಳನ್ನು ನೀಡಿ ಅಜ್ಞ ಜನರನ್ನು ತಪ್ಪು ದಾರಿಗೆ ಹಚ್ಚುವ ಹೀನ ವೃತ್ತಿಯನ್ನು ಕೈಗೊಂಡು ಮತದಾನದ ಮುಖ್ಯ ತತ್ವವನ್ನೇ ಕೆಡಿಸುವ ಹಂಚಿಕೆಯನ್ನೂ ಮಾಡಿರುವರು. ಚುನಾವಣೆಯಲ್ಲಿ ಎಲ್ಲ ಪಕ್ಷಗಳಿಗೂ ಸರಿಸಮಾನ ಹಕ್ಕು-ಸೌಲಭ್ಯಗಳನ್ನು ಒದಗಿಸಿಕೊಟ್ಟು ಮತದಾರರ ಹಕ್ಕಿಗೆ ಯಾವ ರೀತಿಯ ಒತ್ತಾಯ-ಹಂಗು ಭೀತಿಗಳು ತಡೆಯಾಗಕೂಡದೆಂದು ಸರಕಾರ ವಿಶಿಷ್ಟವಾದ ಕ್ರಮವನ್ನೇರ್ಪಡಿಸಿದರೂ ಹಲವರ ಮತದಾರರನ್ನು ವಿವಂಚನೆಗೆ ಗುರಿಪಡಿಸಿದ್ದನ್ನು ನೋಡುವಾಗ ಅತೀವ ವಿಷಾದವೆನಿಸುತ್ತದೆ. ನಾವಿನ್ನೂ ಪ್ರಜಾಪ್ರಭುತ್ವಕ್ಕೆ ಯೋಗ್ಯರಲ್ಲವೆನ್ನಿಸುತ್ತದೆ.

ವೈಯಕ್ತಿಕ ದ್ವೇಷಸಾಧನೆಗೂ ಹಿಂದಿನ ಮುಯ್ಯಿತೀರಿಸಿಕೊಳ್ಳುವುದಕ್ಕೂ ಇದು ಒಳ್ಳೆಯ ರಂಗವೆಂದು ಹಲವರು ತಿಳಿದ ಹಾಗಿದೆ ಪಕ್ಷದ ಧುರೀಣರ ಅಭಿಪ್ರಾಯವೇನಿದ್ದರೂ ಅದಕ್ಕೆಹೊಂದಿದ ಜನತಾಳ್ಮೆಗೆಟ್ಟು-ನೀತಿಬಾಹಿರರಾಗಿ ವರ್ತಿಸಿ ಪಕ್ಷದ ಧುರೀಣರಿಗೂ ಕೂಡಿಯೆಜನರಿಗೂ ಅನ್ಯಾಯ ಮಾಡಿದ್ದಾರೆ ವೈಯಕ್ತಿಕ ವಿಚಾರಗಳ ಪ್ರಕಟಣೆ-ಅಶ್ಲೀಲವಾದ ಕರಪತ್ರಗಳ ವಿತರಣೆ— ನಾನಾ ತರದ ಸುಳ್ಳು ಸುದ್ದಿಗಳನ್ನು ಹಬ್ಬಿಸುವುದು, ಒಳಸಂಚು ಸೂತ್ರಚಾಲನವೇ ಮೊದಲಾದ ಇನ್ನಿತರ ಅನುಚಿತ ಕ್ರಮಗಳಿಂದ ಜನತೆಯಲ್ಲಿ ವಿಷ ವಾತಾವರಣವನ್ನು ನಿರ್ಮಿಸಲಾಗಿದೆ. ಸಭ್ಯತೆ-ನಾಗರೀಕತೆಯನ್ನು ಬಿಟ್ಟ ಈ ವರ್ತನೆಯಿಂದ ಯಾರಿಗೂ ಶುಭವಿಲ್ಲ; ಕ್ಷೇಮವಿಲ್ಲ.

ಈ ಚುನಾವಣೆಯೆಂಬುದು ತಾತ್ಕಾಲಿ ಪಕ್ಷ ಪಕ್ಷಗಳೊಳಗೆ ನಡೆದಿರುವ ಹೋರಾಟದಲ್ಲಿ ತುಸುಬಿಸಿಯುಂಟಾಗಿರುವದೇನೋ ಸಹಜ ಆದರಿದು ಒಂದು ವಾರದಲ್ಲೇ ನಂದಿಹೋಗತಕ್ಕದ್ದೆಂಬುದನ್ನು ನಾವು ಮರೆಯತಕ್ಕದ್ದಲ್ಲ. ಮುಂದೆಯೂ ಅದು ಹತ್ತಿ ಉರಿಯುವಂತೆ ಗಾಳಿಹಾಕುತ್ತಿರುವುದನ್ನು ಜನವೆಂದೂ ಸಹಿಸಕೂಡದು: ಅದನ್ನು ಸಂಪೂರ್ಣ ಅಲ್ಲಿಯೇ ನಿಗ್ರಹಿಸಬೇಕು ಜನರನ್ನು ಭ್ರಾಂತರನ್ನಾಗಿ ಮಾಡುವ- ಇಲ್ಲವೆ ಉದ್ರೇಕಗೊಳಿಸುವ ಚುನಾವಣಾ ಪ್ರಚಾರವನ್ನು ಜನತೆ ಎಷ್ಟುಬೇಕೋ ಅಷ್ಟನ್ನೇ ಸ್ವೀಕರಿಸಲಿ ಮಿಥ್ಯಾರೋಪ, ನಾನಾತರದ ವಂಚನೆಗಳ ಮೂಲಕ ವಿವೇಕ ತಪ್ಪುವಂತೆ ತಿಳಿಗೇಡಿಗಳು ಮಾಡಿದರೂ ನಾವು ನಾಳಿನ ದಿನವನ್ನು ಕೊಂಚ ಆಲೋಚಿಸುವದನ್ನು ಮರೆಯಬಾರದು, ಧೃತಿಗೆಡಕೂಡದು.

ಸೋಲುಗೆಲುವಿನ ಭೀತಿಯಿಂದ ತತ್ವವನ್ನು ಮಾರಿಕೊಳ್ಳತಕ್ಕದ್ದಲ್ಲ. 'ನಮಗೆ ಸೋಲಾದರೂ ಚಿಂತಿಲ್ಲ, ತತ್ವವನ್ನೆಂದೂ ಬಿಡಲಾರೆವು' ಎಂದು ಶ್ರೀ ನೆಹ್ರೂರವರು ಹೇಳಿದ್ದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ನಮ್ಮ ಜಿಲ್ಲೆಯೊಳಗೆ ಚುನಾವಣೆಯಲ್ಲಿ ತೊಡಗಿರುವ ಪಕ್ಷಗಳು ತತ್ವದ ಆಧಾರದಿಂದ ಮತವನ್ನು ಯಾಚಿಸುತ್ತವೆಯೇ? ಸ್ವಸಾಮರ್ಥ್ಯದಿಂದ ಅವುಗಳೇಕೆ ಸ್ಪರ್ಧಿಸಲು ಶಕ್ಯವಾಗಲಿಲ್ಲ? ಒಂದುವೇಳೆ ಪರಾಶ್ರಯದಿಂದ ಅಲ್ಪ ಬಹುಮತದಿಂದ ಗೆಲುವನ್ನು ಸಂಪಾದಿಸಿ ತಾವು ಏನನ್ನು ಮಾಡಿಯಾವು? ಪಕ್ಷದ ಹೆಚ್ಚಿನ ಒಲವಿರದ ಈ ಧುರೀಣರು ಏನು ಸಾಧಿಸಲು ಶಕ್ಯವುಂಟೆಂಬುದನ್ನು ಜನ ಇನ್ನೊಮ್ಮೆ ವಿಚಾರವಿಮರ್ಶೆ ಮಾಡಬೇಕು. ಜಾತೀಯ ನೆವ, ಧರ್ಮಸಂಸ್ಕೃತಿಯ ಹೆಸರಲ್ಲಿ ನಮ್ಮಲ್ಲನೇಕರು ಜನತೆಯನ್ನುಮೋಸಕ್ಕೆ ಗುರಿಮಾಡಿರುವರು.'ಜಾತಿಜಾತಿ' ಎನುವ ಸದ್ದನ್ನಡಗಿಸಿ ಮಾನವ ಜಾತಿಗೆ ಸೇರಿದ ನಮ್ಮ ನಾಗರಿಕ ತತ್ವವನ್ನು ಅನುಸರಿಸೋಣ. ಶ್ರೀ ನೆಹ್ರೂರವರು ಈ ಅಂಶವನ್ನು ಮಂಗಳೂರಿನಲ್ಲಿ ಅತ್ಯಂತ ಕಳಕಳಿಯಲ್ಲಿ ಬಿನ್ನವಿಸಿಕೊಂಡಿದ್ದಾರೆ ಯೋಗ್ಯ ವ್ಯಕ್ತಿಗಳಿರುವುದಾದರೆ ಅವರನ್ನಾರಿಸುವ ಭಾರ ನಿಮ್ಮ ಮೇಲೆಯೆ ಇದೆ ಎಂದು ಅವರು ಹೇಳಿರುವರು ಸದ್ಯ ಕಾಂಗ್ರೆಸ್ಸನ್ನು ವಿರೋಧಿಸುವ ವ್ಯಕ್ತಿಗಳಲ್ಲಿ ಅಂತಹ ಯೋಗ್ಯತೆಯಿದ್ದರೆ ಜನ ಆರಿಸಲಿ ಆದರೆ ಆ ಯೋಗ್ಯತೆಯನ್ನಳೆಯುವ ಮಾನದಂಡ ಯಾವುದು? ಕಾಂಗ್ರೆಸ್ಸನ್ನು ಹೀನಾಯವಾಗಿ ಜರೆದೂ ನೆಹ್ರೂರಂತಹ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಟೀಕಿಸಿಯೂ ಕಾಂಗ್ರೆಸ್ಸಿನ ಮೇಲೆ ಸುಳ್ಳು ಆರೋಪವನ್ನು ಹೊರಿಸಿಯೂ ತಾವು ಯೋಗ್ಯರೆಂದು ಹೇಳುವದೆ'ನಾವು ಅಂಥವರು ಪ್ರಾಮಾಣಿಕರೆಂದು ನಂಬಲು ಸಾಧ್ಯವೇ? ಕಾಂಗ್ರೆಸ್ಸನ್ನು ವಿರೋಧಿಸುವ ಪಕ್ಷಗಳಲ್ಲಿ ವ್ಯಕ್ತಿ ವೈಶಿಷ್ಟ್ಯವಾಗಲೀ-ದಕ್ಷತೆ ಯೋಗ್ಯತೆಯಾಗಲೀ ಹೆಚ್ಚೆಂದು ಹೇಳುವದು ಯಾವ ಆಧಾರದಿಂದ?

ಬರುವ ವಾರದಲ್ಲಿ ನಡೆಯಲಿರುವ ಚುನಾವಣೆಯ ಮುನ್ನ ಜನ ಇನ್ನೊಮ್ಮೆ ವಿಚಾರಮಂಥನ ಮಾಡಬೇಕೆಂದೂ ಸೂಚಿಸುತ್ತೇವೆ. ಕಾಂಗ್ರೆಸು ತಪ್ಪುಮಾಡಿರಬಹುದು ಅದರಲ್ಲಿ ಸೇರಿಕೊಂಡ ಹಲವರಿಂದ ಲೋಪದೋಷಗಳಾಗಿರಬಹುದು-ಆದರೆ ಉಳಿದ ಪಕ್ಷಗಳ ವರ್ಚಸ್ಸು ಅದಕ್ಕಿಂತ ಉತ್ತಮವಾಗಿದೆಂದು ಹೇಳುವದು ಯಾವ ಆಧಾರದಿಂದ? ಈ ಸಂದರ್ಭವನ್ನು ಭಾವನಾಪರವಶರಾಗಿಯೋ ವ್ಯಕ್ತಿಗತ ದ್ವೇಷವನ್ನು ಮುಖ್ಯ ಸಾಧನವನ್ನಾಗಿಯೋ- ಜಾತೀಯತೆಯ ಸಂಕುಚಿತತೆಯಿಂದಾಗಿಯೋ — ಧಾರ್ಮಿಕ ಭೀತಿಯಿಂದಾಗಿಯೋ- ಹಾಳುಗೆಡಹಬಾರದು ಪ್ರತಿಯೊಬ್ಬರೂ ತಮ್ಮ ಮತದ ಅಮೂಲ್ಯವಾದ ಬೆಲೆಯನ್ನರಿತುಕೊಂಡರೆ ಕಾಂಗ್ರೆಸ್ಸಿಗೆ ಅದನ್ನು ಕೊಡುವದರ ಹೊರತು ಇನ್ನಾವ ಮಾರ್ಗವೂ ಅವರಿಗೆ ಉಚಿತವೆನಿಸಲಾರದು ಪ್ರಾಯಃ ಸದ್ಯಕ್ಕೆಅದು ಉಚಿತವೂ ಅಲ್ಲ! ಶ್ರೀ ನೆಹರೂರವರಂದಂತೆ ಜಾತ್ಯತೀತ ಹಾಗೂ ಉತ್ಕೃಷ್ಟವಾದ ರಾಷ್ಟ್ರವನ್ನುನಾವುಕಟ್ಟಬೇಕೆಂಬಸದಿಚ್ಛೆಯುಳ್ಳವರಾಗಿದ್ದರೆ ಕಾಂಗ್ರೆಸ್ಸಿನ ಹೊರತು ನಮಗೆ ಬೇರೆ ದಾರಿಯಿಲ್ಲ ಉಳಿದದ್ದು ಕಂಟಕಪ್ರಾಯ. ಚಾರಿತ್ರಿಕ ರಾಜಕೀಯ-ಸಾಂಸ್ಕೃತಿಕ ಹಿನ್ನೆಲೆಯುಳ್ಳ ಮಹಾ ಸಂಸ್ಥೆಯೆಂದರೆ ಕಾಂಗ್ರೆಸ್ಸು. ಉಳಿದ ಪಕ್ಷಗಳ ರಾಜಕೀಯ ಹಿನ್ನೋಟ-ಮುನ್ನೋಟಗಳನ್ನು ಲಕ್ಷಿಸಿದರೆ ಅವುಗಳು ಸದ್ಯ ಆಕ್ಷೇಪವೆತ್ತುವುದಕ್ಕೆ ಮಾತ್ರವಲ್ಲದೆ ಆಳುವದಕ್ಕಲ್ಲವೆಂದು ಸ್ಪಷ್ಟವಾಗುವುದು

ಕಾಂಗ್ರೆಸ್ಸನ್ನು ಯಾರು ಹಳಿದರೂ ಟೀಕಿಸಿದರೂ ಮೇಲಿನಂಶವನ್ನರಿತ ಜನ ತಮ್ಮ ಮತವನ್ನು ಯಾರಿಗೆ ಕೊಡುವುದರಿಂದ ದೇಶಕ್ಕೆ ಹಿತ ಸಾಧಿಸಬಲ್ಲುದೆಂಬುದನ್ನು ವಿಚಾರ ತಕ್ಕಡಿಯಲ್ಲಿ ತೂಗಿ ಮತದಾನ ಮಾಡಬಲ್ಲರು. ವಸ್ತುತಃ ಕಾಂಗ್ರೆಸ್ಸಿಗರು ಮತ ಬೇಡಬೇಕಾದ ಕಾಲವಿದಲ್ಲ;ನಾವಾಗಿ ಅವರಿಗೆಕೊಡಲಿಕ್ಕೆಅದನ್ನು ಉಳಿಸಿಕೊಳ್ಳಬೇಕಾದ ಕಾಲ. ವಸ್ತುಸ್ಥಿತಿಯಕಲ್ಪನೆಯಿಲ್ಲದೆ ಜನ ಯಥಾರ್ಥವನ್ನರಿತ ಮೇಲೆ ಕಾಂಗ್ರೆಸ್ಸಿನ ನಿಲುವೆಯನ್ನು ಪುಷ್ಟೀಕರಿಸಲು ಹಿಂಜರಿಯಬಾರದು ಸಂದರ್ಭಸಾಧಕರ ಸೋಗು, ಸ್ವಾರ್ಥದ ಮಾತಿಗೆ ಮರುಳಾಗಬಾರದು

ಮೊದಲಿನಿಂದಲೂ ನಮ್ಮದು ಕಾಂಗ್ರೆಸ್ ಜಿಲ್ಲೆಯೆಂದು ಹೆಸರಾಗಿದೆ. ಇದಕ್ಕೆ ಕಳಂಕ ಬಾರದಂತೆ ಮತದಾರರು ವರ್ತಿಸಿ, ಸ್ಥಿರವಾದ, ಪ್ರಬಲವಾದ, ಜಾತ್ಯಾತೀತ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ನೆರವಾಗಬೇಕಾಗಿ ಹೃತ್ಪೂರ್ವಕವಾಗಿ ವಿನಂತಿಸುತ್ತೇವೆ.

ಉಡುಪಿಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರಸಭೆಗಳು

ತಾ 20ರಲ್ಲು ,ಹಿರೇಬೆಟ್ಟುನಲ್ಲಿ ಶ್ರೀ ಎಚ್. ಸದಾಶಿವಹೆಗ್ಡೆಯವರ ಅಧ್ಯಕ್ಷತೆಯಲ್ಲಿಜರಗಿ ಶ್ರೀಗಳಾದ ಎಮ್. ವಿ, ಹೆಗ್ಡೆ, ಕೇಳುನಂದಯರ್, ಎ. ಜಿ. ಆಳ್ವ, ಉಪೇಂದ್ರ ಪೈ, ಆನಂದ ಹೆಗ್ಡೆ, ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಕಾಂಗ್ರೆಸಿನ ಗುರಿಗಳ ಕುರಿತು ಮಾತಾಡಿ ಕಾಂಗ್ರೆಸ್ ಹುರಿಯಾಳುಗಳಿಗೆ ವೋಟುಕೊಡಬೇಕೆಂದು ವಿನಂತಿಸಿದರು. ತಾ. 21ರಲ್ಲು ಮಂಚಿಬೆಟ್ಟುನಲ್ಲಿ ಶ್ರೀಮಂಜಪ್ಪಹೆಗ್ಡೆಯ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎ. ಜಿ. ಆಳ್ವ ಉಪೇಂದ್ರ ಪೈ ಮತ್ತು ಕೇಳುನಂದಯರ ಭಾಷಣಗಳಾದುವು. ತಾ. 21ರಲ್ಲು ಕಟಪ್ಪಾಡಿಯಲ್ಲಿ ಶ್ರೀ ಎಮ್. ಲೋಕಯಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಕುರ್ಕಾಲು ಗಣಪಯ್ಯ ಸೆಟ್ಟಿ, ಟಿ. ಅನಂತ ಪೈ, ಕೆ. ಕಾಳುಸೆಟ್ಟರು ಮಾತನಾಡಿದರು. ತಾ. 23ರಲ್ಲು ನಂದಿಕೂರಲ್ಲಿ ಶ್ರೀ ಜೆ. ಸಿ. ರೇಗೋ ಮತ್ತು ಟಿ.ಎ.ಪೈಗಳೂ ಬೆಳ್ಳೆ ಇಗರ್ಜಿಯ ಬಳಿಯಲ್ಲಿ ಕೂಡಿದ ಸಭೆಯಲ್ಲಿ ಶ್ರೀ ರೋಲ್ಫ ನಾರ್ಂಡೀಸರೂ ಕಾಲೋಚಿತ ಮಾತುಗಳನ್ನಾಡಿದರು. ಇಂತಹ ಸಭೆಗಳು ಇನ್ನಿತರ ಸ್ಥಳಗಳಲ್ಲಿ ಜರಗಿ ಭಾಷಣಗಳಾದುವು. ಎಲ್ಲೆಲ್ಲಿಯೂ ಕಾಂಗ್ರೆಸ್ಸಿಗೆ ಬೆಂಬಲ ತೋರಿ ಬರುತ್ತಿದೆಯೆಂದು ತಿಳಿದುಬರುತ್ತಿದೆ.

ಶ್ರೀ ಪಾದಂಗಳವರ ಸಂದೇಶ:- ಇದೇ ಬರುವ ಜನವರಿಯಲ್ಲಿ ಪರ್ಯಾಯ ಪೀಠವನ್ನೇರಲಿರುವ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಚುನಾವಣೆಯಲ್ಲಿ ಹುರಿಯಾಳುವಿನ ವ್ಯಕ್ತಿತ್ವ ದಕ್ಷತೆ, ಕಾರ್ಯ ದಕ್ಷತೆ ಪ್ರಾಮಾಣಿಕತೆ ಮೊದಲಾದ ಗುಣಗಳನ್ನು ಗಮನಿಸಿ ಆರಿಸಬೇಕೆಂದು ಸಂದೇಶ ಕಳಿಸಿದ್ದಾರೆ. ಸ್ಥಳಾಭಾವದಿಂದ ಪೂರ್ಣ ಪ್ರಕಟಿಸಲಾಗಲಿಲ್ಲ(ಸಂ.

ನಮ್ಮ ಪ್ರೋತ್ಸಾಹಕರೆಲ್ಲರಿಗೂ ಹೊಸ ವರುಷದ ಶುಭಾಶಯಗಳು

ಮಿನೆರ್ವಾ ನಂಬ್ರ 429.

ರೂಪಾಯಿ 60,000 ಪಡೆಯಿರಿ.

ಪ್ರಥಮ ಇನಾಮು-ಸರ್ವಸಮ ರೂ 50,000
ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ 10,000
ಅತ್ಯಧಿಕ ಪ್ರವೇಶಗಳನ್ನು ಕಳುಹಿಸುವವರಿಗೆ ವಿಶೇಷ ಪಾರಿತೋಷ ರೂ. 1,000

ಒಂದು ಪ್ರವೇಶಕ್ಕೆ 1ರೂಪಾಯಿ. 16 ರೂಪಾಯಿಗಳಿಗೆ 24ಉತ್ತರಗಳನ್ನು ಕಳುಹಿಸಬಹುದು. ಉತ್ತರ ಸ್ವೀಕರಿಸುವ ಕೊನೆಯದಿನ 12-1-52. ಅಪೇಕ್ಷಿಸಿದ್ದಲ್ಲಿ ನಿಬಂಧನೆ ದೊರಕುವುವು

ಚೌಕದಲ್ಲಿಯ ಕಣಗಳಲ್ಲಿಯ ಒಟ್ಟು ಮೊತ್ತವು 22 ಇಪ್ಪತ್ತೆರಡು ಬರುವಂತೆ 4ರಿಂದ 7ರ ವರೆಗಿನ ಅಂಕೆಗಳನ್ನು ಒನ್ನು ಮಾತ್ರ ಉಪಯೋಗಿಸಿರಿ

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಯಾರ್ಡರ್ ರಶೀದಿಯನ್ನಾಗಲೀ, ಕ್ರಾಸ್ ಮಾಡದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು. ಉತ್ತರ ಕಳುಹಿಸತಕ್ಕ ವಿಳಾಸ

The Manager, **MINERVA PUZZLES(Govt. Regd.)**
MADURAI, S. India.(429-K)

ಮಿನೆರ್ವಾ ನಂಬ್ರ 425-ರ ಸ್ಪರ್ಧೆಯ ಉತ್ತರ: 11—9—12—10—8 ಎಲ್ಲಾ ಸರಿಯಾದ ಉತ್ತರಕ್ಕೆ ಪ್ರಥಮ ಬಹುಮಾನ ರೂ. 3047 6-0 ಪ್ರಥಮ ಎರಡು ಅಂಕೆಗಳು ಸರಿಯಾದ ಉತ್ತರಕ್ಕೆ ರೂ 1540-0-0 ಬಹುಮಾನ ಕೊಡಲಾಗಿದೆ ಅತ್ಯಧಿಕ ಪ್ರವೇಶ(29)ಗಳನ್ನು ಕಳುಹಿಸಿದವರು ರೂ. 105 ಬಹುಮಾನ ಪಡೆದಿರುತ್ತಾರೆ

ಮಂಗಳೂರಲ್ಲಿ ನೆಹ್ರೂರವರಿಗೆ ಅಭೂತಪೂರ್ವ ಸ್ವಾಗತ

ಒಂದು ಲಕ್ಷಕ್ಕೂ ಮಿಕ್ಕಿದ ಜನಸಮುದಾಯದ ಮುಂದೆ ಜನನಾಯಕನ ಉಜ್ವಲ ಭಾಷಣ-

ಶ್ರೀ ನೆಹ್ರೂರವರು 4-40ಕ್ಕೆ ಸರಿಯಾಗಿ ಬಜಪೆ ವಿಮಾನನಿಲ್ದಾಣದಲ್ಲಿ ಬಂದಿಳಿದರು. ಹಸನ್ಮುಖಿಯಾಗಿ ವಿಮಾನ ಬಂದಿಳಿದ ಶ್ರೀ ನೆಹ್ರೂರವರನ್ನು ಶ್ರೀಗಳಾದ ಶ್ರೀನಿವಾಸ ಮಲ್ಯ, ನಾಗಪ್ಪ ಆಳ್ವ, ಎಲ್. ಸಿ. ಪಾಯಸ್ ಮೊದಲಾದವರು ಸ್ವಾಗತಿಸಿದರು. ನೆರೆದ ಮಹಾಜನರು ಶ್ರೀ ನೆಹ್ರೂರವರಿಗೆ ಜಯ ಜಯಕಾರ ಮಾಡಿ ಕೊಂಡಾಡಿದರು. ಮದ್ರಾಸದ ಮಂತ್ರಿ ಎ. ಬಿ. ಶೆಟ್ಟರೂ, ಡಿ. ಬೋರ್ಡ್ ಅಧ್ಯಕ್ಷರೇ ಮೊದಲಾದವರು ಆಗಮಿಸಿದ್ದರು. ಸುಮಾರು 4-5 ಸಾವಿರ ಜನರು ನೆಹ್ರೂರವರನ್ನು ನೋಡಲು ಬಜಪೆಯಲ್ಲಿ ನೆರೆದಿದ್ದರು. ಹತ್ತು ನಿಮಿಷದ ಭಾಷಣದ ವ್ಯವಸ್ಥೆ ಮಾಡಲಾಗಿದ್ದರೂ ಧ್ವನಿಯಂತ್ರ ಕೆಟ್ಟುಹೋದ್ದರಿಂದ ನೆಹ್ರೂರವರು ಬಜಪೆಯಲ್ಲಿ ಮಾತಾಡಲಿಲ್ಲ. ಕೂಡಲೇ ಕಾರಿನಲ್ಲಿ ಮಂಗಳೂರಿಗೆ ಪಯಣ ಬೆಳಸಿದರು. ತಳಿರು ತೋರಣಗಳಿಂದ ನೆಹ್ರೂರವರ ಮಾರ್ಗವು ಅಲಂಕೃತವಾಗಿತ್ತು. ಮಾರ್ಗದ ಇಕ್ಕೆಡೆಯಲ್ಲೂ ನೆಹ್ರೂರವರ ಸಂದರ್ಶನಾರ್ಥವಾಗಿ ದೂರದಿಂದ ಹಳ್ಳಿಗರೂ- ನಾಗರಿಕರೂ ಕಾದಿದ್ದರು.

ನೆಹ್ರೂರವರ ಸಾರ್ವಜನಿಕ ಭಾಷಣಕ್ಕೆಂದು ಗೊತ್ತಾದ ಸೆಂಟ್ರಲ್ ಮೈದಾನದಲ್ಲಿ ಮೂರು ತಾಸಿನಲ್ಲೇ ಜನಬಂದು ಕಾದಿದ್ದರು. ಸುಮಾರು 5ಕ್ಕೆ ಸೆಂಟ್ರಲ್ ಮೈದಾನವು ತುಂಬಿಹೋಗಿತ್ತು. ಮೈದಾನದ ಸುತ್ತಲಿನ 4 ಮೂಲೆಯಲ್ಲಿಯೂ ಮಾರ್ಗಗಳಲ್ಲಿಯೂ ಜನ ನೆರೆದಿದ್ದರು. ಹೊಸತಾಗಿ ಕಟ್ಟಲ್ಪಟ್ಟ ಮುನ್ಸಿಪಲ್ ಪೆವಲಿನ ಮೇಲೆ ಭಾಷಣ ವೇದಿಕೆಯನ್ನು ನಿರ್ಮಿಸಲಾಗಿತ್ತು. 6-30ಕ್ಕೆ ಸರಿಯಾಗಿ ಶ್ರೀ ನೆಹ್ರೂರವರು ಮೋಟಾರು ಕಾರಿನಿಂದ ಬಂದಿಳಿದರು. ಪೆವಲಿನಿನ ಮುಂಭಾಗದಲ್ಲಿ 10-12 ಜನ ಕೆಮರಾ ಹಿಡಿದು ನೆಹ್ರೂರವರು ಬರುವರೆಂದು ನಿರೀಕ್ಷಿಸುತ್ತಿದ್ದಾಗಲೇ ನೆಹ್ರೂ ಹಿಂದುಗಡೆಯಿಂದ ಪೆವಲಿನಿನಮೇಲೆ ಹತ್ತಿ ಜನತೆಯನ್ನು ಹಸನ್ಮುಖಿಯಾಗಿ ವಂದಿಸಿದರು. ಭಾಷಣವೇದಿಕೆಯ ಮುಂದೆ ಒಂದೆರಡು ನಿಮಿಷ, ಕೂಡಿದ ಜನಸ್ತೋಮವನ್ನು ನೋಡಿ ಮಂದಹಾಸ ಬೀರಿದರು. ಒಂದು ಲಕ್ಷಕ್ಕೂ ಮಿಕ್ಕಿದ ಜನ ಜಯಘೋಷ ಹಾಕಿದರು. ಹಾರತುರಾಯಿಗಳನ್ನು ಸಮರ್ಪಿಸಿದ ನಂತರ ಕೇವಲ ಒಂದೆರಡು ನಿಮಿಷಗಳಲ್ಲೇ ನೆಹ್ರೂರವರು ಭಾಷಣಕ್ಕಾರಂಭಿಸಿದರು.

ನೆಹ್ರೂರವರ ಆದೇಶ

ಪ್ರತಿಯೊಂದು ನಿಮಿಷವೂ ಅತ್ಯಂತ ಬೆಲೆಯುಳ್ಳದ್ದೆಂಬುದನ್ನು ಅವರು ತನ್ನ ಚಟುವಟಿಕೆ — ಮಾತುಗಾರಿಕೆಗಳಲ್ಲಿ ತೋರಿಸಿಕೊಟ್ಟರು. ಆವೇಶಪೂರಿತವೂ ಉಜ್ವಲವೂ ಆದ 35ನಿಮಿಷದ ಭಾಷಣದಲ್ಲಿ ಕಾಂಗ್ರೆಸ್ಸಿನ ಹಿರಿಮೆ—ಬೇರೆಬೇರೆ ಪಕ್ಷಗಳು ಚುನಾವಣಾ ರಂಗದಲ್ಲಿ ಗಳಿಸಿಕೊಂಡ ದುರ್ಮೈತ್ರಿ ಜಾತೀಯತೆಯ ಸಂಕುಚಿತ ಮನೋವೃತ್ತಿ—ಮುಂತಾದ ವಿಚಾರಗಳು ಮುಖ್ಯವಾಗಿದ್ದುವು.

"ಈಚೆಗೆ ಹಲವು ದಿನಗಳಿಂದ ದೇಶವೆಲ್ಲ ಸುತ್ತಾಡಿ ಜನರ ಸಂಪರ್ಕವನ್ನು ಬೆಳೆಸುವ ಸುಯೋಗ ನನಗೆ ದೊರಕಿದೆ. 120 ಲಕ್ಷಕ್ಕೂ ಮಿಕ್ಕಿದ ಜನರನ್ನು ಕಂಡು ಅವರ ಅಭಿಪ್ರಾಯವೇನೆಂಬುದನ್ನು ನಾನು ತಿಳಿದಿದ್ದೇನೆ. ಕಾಂಗ್ರೆಸ್ಸು ಸತ್ತಿದೆ—ಕಾಂಗ್ರೆಸ್ಸಿನಲ್ಲಿ ಅರಾಜಕತೆ ತುಂಬಿದೆ—ಜನತೆಗೆ ಅದರಮೇಲೆ ವಿಶ್ವಾಸವಿಲ್ಲವೆನ್ನುವ ಅಪವಾದವನ್ನು ಅವರು ಅಲ್ಲಗಳೆದಿದ್ದಾರೆ. ಮಾತ್ರವಲ್ಲ ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ಸು ನಡೆಸಿದ ಹೋರಾಟವನ್ನೂ-ನಾಲ್ಕುವರ್ಷದಲ್ಲಿ ಕಾಂಗ್ರೆಸ್ಸು ಎದುರಿಸಬೇಕಾದಂತಹ ಗಂಭೀರ ಸಮಸ್ಯೆಗಳನ್ನೂ—ಸಾಧಿಸಿದ ಪ್ರಗತಿಯನ್ನೂ ಅವರು ಚೆನ್ನಾಗಿ ಅರಿತುಕೊಂಡಿದ್ದಾರೆ- ಆದರೂ ಹಲವು ಕಡೆಗಳಲ್ಲಿ ನನ್ನ ನಿಲುಮೆಯನ್ನು ಟೀಕಿಸಲಾಗುತ್ತಿದೆ. ಹಲವು ವಿಚಾರಗಳಲ್ಲಿ ನಾವು ಅಪ್ರಗತಿಕರಾಗಿರಬಹುದು.— ತಪ್ಪುದೋಷಗಳಿರಬಹುದು ಆದರೆ ಅವಷ್ಟೇ ಒಳ್ಳಿತು ಕೆಡುಕಿನ ಮಾನದಂಡವಾಗದು. ಕಾನೆ? ನನ್ನನ್ನು ವೈಯುಕ್ತಿಕವಾಗಿಯೂ— ರಾಜಕೀಯಧೋರಣೆಯ ಮೇಲೂ ಟೀಕೆ ಮಾಡುತ್ತಲಿದ್ದಾರೆ. ವಿ ಯಕವಾದ ಟೀಕೆಗಳನ್ನು ನಾನು ಸದಾ ಸ್ವಾಗತಿಸುವವನೇ. ಆದಕ್ಕೆ ವಿರುದ್ಧವಾದ ಅರ್ಥ—ಅರ್ಥ ವಿಚಾರವಿಲ್ಲದವುಗಳನ್ನು ವಿನೋದ ಪೂರ್ಣವಾಗಿ ಸ್ವೀಕರಿಸುತ್ತೇನೆ.

ಚುನಾವಣಾ ರಂಗದಲ್ಲಿ ಬೇರೆಬೇರೆ ಪಕ್ಷಗಳು ಮೇಲಾಟ ನಡೆಸುತ್ತಿರುವದು ನಿಮಗೆ ತಿಳಿದೇ ಇದೆ. ಇದು ಪ್ರಜಾಪ್ರಭುತ್ವದ ಲಕ್ಷಣವೇ ಆಗಿರಬಹುದು. ಆದರೂ ಇಂತಹ ಕಾಲದಲ್ಲೂ ಜಯಾಪಜಯಕ್ಕಿಂತಲೂ ತತ್ವವನ್ನೇ ಮುಖ್ಯವಾಗಿಟ್ಟುಕೊಳ್ಳಬೇಕಾದುದನ್ನು ನಾವು ಮರೆಯಬಾರದು ಕಾಂಗ್ರೆಸ್ಸಿಗೆ ವಿರೋಧ ಪಕ್ಷ ಬೇಕು. ಪ್ರಜಾ ಪ್ರಭುತ್ವದಲ್ಲಿ ಅವುಗಳಿಗೂ ಸ್ಥಾನವುಂಟು- ಏಕಪಕ್ಷೀಯವಾಗಿ ಇಲ್ಲವೆ ಸ್ವೇಚ್ಛಾನುಸಾರವಾಗಿ ಆಳಬೇಕೆಂದು ಹೇಳುವವ ನಾನಲ್ಲ- ಆದರೆ ಆ ಪಕ್ಷಗಳು ಕಾಂಗ್ರೆಸ್ಸನ್ನು ವಿರೋಧಿಸುವದು ಮಾತ್ರವಲ್ಲದೇ ಸೋಲಿಸಬೇಕೆಂಬ ಮನೋದ್ದೇಶವನ್ನಿಟ್ಟುಕೊಂಡು ಆ ಪಕ್ಷದೊಡನೆ- ಈ ಪಕ್ಷ-ಉಪಪಕ್ಷದೊಡನೆ ಇನ್ನೊಂದು ಪಕ್ಷ- ಹೀಗೆ ತತ್ವ-ಧ್ಯೇಯ ಗೋಜುಗಳನ್ನು ಬಿಟ್ಟುಕೊಟ್ಟು ಚುನಾವಣಾ ಐಕ್ಯವನ್ನು ಮಾಡಿಕೊಂಡದ್ದನ್ನು ನಾನು ಖಂಡಿಸದಿರಲಾರೆ. ಆತ್ಮ ಸಾಮರ್ಥ್ಯವಿಲ್ಲದವರು ಬೇರೆಯವರ ಸಹಾಯವನ್ನು ಯಾಚಿಸುವದು ರೂಢಿಯಾದರೂ, ಇದು ಧರ್ಮವಲ್ಲ—ನೀತಿಯಲ್ಲ—ಶಾಶ್ವತವಾದ ರೀತಿಯಲ್ಲವೆನ್ನುತ್ತೇನೆ.

ಕೆ. ಎಂ. ಪಿ, ಸೋಶಾಲಿಸ್ಟ್, ಕಮ್ಯೂನಿಸ್ಟ್, ಜನಸಂಘ, ಸ್ವತಂತ್ರರು ಮುಂತಾದವರು ಸ್ಪರ್ಧಿಸುತ್ತಲಿದ್ದಾರೆ. ಕೆ. ಎಂ. ಪಿ. ಪಕ್ಷವು ತನ್ನ ಧ್ಯೇಯಧೋರಣೆಗಳನ್ನೂ ಸಂಪೂರ್ಣ ಮರೆತು ಬೇರೆ ಬೇರೆ ಪಕ್ಷಗಳೊಡನೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಚುನಾವಣಾ ಮೈತ್ರಿಯನ್ನು ಬೆಳೆಸುತ್ತಿದೆ. ನಮ್ಮದು ಗಾಂಧೀಜಿ ತತ್ವವೆಂದು ಅವರು ಹೇಳುತ್ತಿರುವರಾದರೂ ಸದ್ಯದ ಮಟ್ಟಿಗೆ ಚುನಾವಣೆಯಲ್ಲಿ ಗೆಲ್ಲುವ ಹಂಚಿಕೆಯೊಂದನ್ನೇ ಅವರು ಮುಖ್ಯವಾಗಿಟ್ಟುಕೊಂಡಂತೆ ಭಾಸವಾಗುತ್ತಲಿದೆ. ನಮ್ಮ ಗುರಿ ಉದ್ದೇಶಗಳು ಸುಸ್ಪಷ್ಟವಾಗಿದ್ದರೆ ಬೇರೆಯವರ ದಾಸ್ಯತ್ವ ನಮಗೆ ಬೇಕೇ?

ಜನಸಂಘ, ರಾಮರಾಜ್ಯ ಪರಿಷತ್, ಹಿಂದೂ ಮಹಾಸಭೆ ಇವು ಜಾತೀಯ ಸ್ವರೂಪದವುಗಳೆಂದು ನೀವರಿತಿದ್ದೀರಿ. ಹಿಂದೂ ಧರ್ಮದ ಪುನರುತ್ಥಾನ— ಸಂಸ್ಕೃತಿಯ ಉದ್ಧಾರವೆಂದು ಜನತೆಯನ್ನು ತಪ್ಪುಮಾರ್ಗಕ್ಕೆ ಹಚ್ಚುತ್ತಿರುವರು. ಇಂತಹ ತಿಳಿಗೇಡಿವರ್ತನಗಳಿಂದ ಯಾವ ಧರ್ಮ ಸಂಸ್ಕೃತಿಗಳ ಉದ್ಧಾರವಾಗದೆಂದು ನಾನು ಸ್ಪಷ್ಟವಾಗಿ ತಿಳಿಹೇಳುವವನಿದ್ದೇನೆ 'ನಾವೆಲ್ಲ ಒಂದು' ಎನುವ ತತ್ವಕ್ಕೆ—ಐಕ್ಯಕ್ಕೆ ಇದು ಗಂಡಾಂತರ ಪ್ರಾಯವಾಗಿದೆ. ರಾಜಕೀಯವನ್ನು ಒಂದು ಪಂಥದ ಒಂದು ಸಮಾಜದ ಧರ್ಮ ಸಂಸ್ಕೃತಿಗಳ ಮೇಲೆ ನಿರ್ಮಿಸತಕ್ಕದ್ದಲ್ಲ. ಒಟ್ಟು ಜನಾಂಗದ ಹಿತರಕ್ಷಣೆಯೇ ರಾಜಕೀಯದ ಮುಖ್ಯಗುರಿಯಾಗಿದೆಂಬುದನ್ನ ಈ ಜಾತೀಯ ವಾದಿಗಳು ಮರೆತಿದ್ದಾರೆ ಇಷ್ಟುಹೇಳಿದ ಮಾತ್ರಕ್ಕೆ ನಾನು ಧರ್ಮಸಂಸ್ಕೃತಿಗಳ ವಿರೋಧಿಯೆಂದು ಯಾರೂ ಭಾವಿಸಬಾರದು. ಧಾರ್ಮಿಕ ಭಾವನೆಗಳ ಮೂಲಕ ನಮ್ಮ ರಾಜಕೀಯ ಆಕಲಂಕವಾಗಿರಲೆಂಬುದೇ ನನ್ನ ಮನೀಷೆ. ಜಾತೀಯ ಭಾವನೆಯಿಂದ ಸಮಾಜಸಮಾಜಗಳೊಳಗಣ ಪರಸ್ಪರ ವಿಶ್ವಾಸ ವಿಚಾರ ವಿನಿಮಯಗಳಲ್ಲಿ ಮತಭೇದವುಂಟಾಗಿ ಇದರಿಂದ ನಮ್ಮ ಮಟ್ಟಿಗೆ ಮಾತ್ರವಲ್ಲ, ಇಡಿಯ ದೇಶದ ಶಾಂತಿ ಐಕ್ಯತೆಗಳಿಗೇ ಅಪಾಯ ಎಡೆಯೆಂಬುದನ್ನು ನನ್ನ ಹಾಗೆಯೇ ನೀವು ಚೆನ್ನಾಗಿ ಅರಿತಿರಬೇಕು.

ಎಲ್ಲ ಪಕ್ಷಗಳೂ ಭಾರೀ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತವೆ, ಅಂತಹ ಪ್ರಾಮುಖ್ಯತೆಗಳೆಂದರೆ ಕಾಂಗ್ರೆಸ್ಸನ್ನು ಕಪಿಸುವಂತಹವೇ, ಕಳೆದ 60 ವರ್ಷಗಳ ದೇಶದ ಸ್ವಾತಂತ್ರ್ಯಕ್ಕಾಗಿ—ಹೋರಾಟ ನಡೆಸಿ ಮಹಾತ್ಮಾಜಿಯವರ ಮಾರ್ಗದರ್ಶನದಂತೆ ಜನತೆಯ ಪ್ರೀತಿವಿಶ್ವಾಸಗಳಿಗೆ ಪಾತ್ರವಾದ ಪ್ರಬಲ ಸಂಸ್ಥೆಯೆಂದರೆ ಕಾಂಗ್ರೆಸ್ಸು. ದೇಶದ ಹಿತಕ್ಕಾಗಿಯೇ ಕಾಂಗ್ರೆಸ್ ದುಡಿದು ತನ್ನ ಅಮೂಲ್ಯ ಸೇವೆಯನ್ನು ಸಲ್ಲಿಸಿದೆ. ಕಾಂಗ್ರೆಸ್ ಸತ್ತಿದೆಯೆಂದರೂ—ನಿರ್ಜೀವವಾಗಿದೆಂದರೂ ಅದು ಮಹಾತ್ಮಾಗಜನತೆಯ ಹೃದಯದಲ್ಲಿದೆ. ಮುಂದಕ್ಕಾದರೂ ಸುಧೃಢ ಸಂಸ್ಥೆಯಾಗಿಯೇ ಉಳಿದು ದೇಶ ಹಿತ ಕಾರ್ಯದಲ್ಲಿ ನಿರತವಾಗುವದೆನ್ನುವದರಲ್ಲಿ ಸಂದೇಹ ಬೇಡ-"

35 ನಿಮಿಷಗಳ ಕಾಲಾವಧಿಯಲ್ಲಿ ಸಭೆ ನೀರವವಾಗಿತ್ತು ಶಾಂತಚಿತ್ತದಿಂದ ನೆಹ್ರೂರವರ ಆದೇಶವನ್ನು ಕೇಳುತ್ತ ನಡುನಡುವೆ ಹರ್ಷೋದ್ಗಾರವನ್ನು ವ್ಯಕ್ತಪಡಿಸುತ್ತಿದ್ದರು. "ತನಗೆ ಇನ್ನೊಂದು ಕಡೆ ಜನತೆಯ ಮುಂದೆ ಮಾತನಾಡಬೇಕಾದುದರಿಂದ ತಾವು ನನ್ನನ್ನು ಬಿಟ್ಟುಕೊಡಬೇಕೆಂದು" ನೆಹ್ರೂರವರು ಭಾಷಣ ಮುಕ್ತಾಯಗೊಳಿಸುವ ಮುನ್ನ ಕೇಳಿದರು. ನೆಹ್ರೂಕೀ ಜೈ' ಎಂದು ಜಯಕಾರ ಹಾಕಲು ನೆಹ್ರೂರವರು ಧ್ವನಿವರ್ಧಕ ಯಂತ್ರದ ಮುಂದೆ ಬಂದು 'ಜಯಹಿಂದ' ಎಂದು ಮೂರು ಬಾರಿ ಜನರೊಂದಿಗೆ ಜಯಕಾರಮಾಡಿದರು. ಹಾಗೆ ವೇದಿಕೆಯಿಂದ ಕೆಳಗಿಳಿದು ನೇರಾಗಿ ಕಾರಿನಕಡೆಗೆ ಧಾವಿಸಿದರು ಶ್ರೀ ನೆಹ್ರೂರವರ ಭಾಷಣದ ಸಾರಾಂಶವನ್ನು ಶ್ರೀ ಶೆಟ್ಟಿಯವರು ಹೇಳಲಾರಂಭಿಸಿದಾಗಲೇ ನೆಹ್ರೂರವರು ಕಾರಿನಲ್ಲಿ ಕೂತು ರೈಲ್ವೆನಿಲ್ದಾಣದೆಡೆಗೆ ಜನಸಮುದಾಯವನ್ನು ತಪ್ಪಿಸಿಕೊಂಡು ಹೋಗಿಬಿಟ್ಟರು.

ದಿನರಾತ್ರಿಯೆನ್ನದೆ ದುಡಿಯುತ್ತಿರುವ ಅವರ ಜೀವನದಲ್ಲಿ ಪ್ರತಿಯೊಂದು ನಿಮಿಷವೂ ಎಷ್ಟು ಮಹತ್ವದ್ದೆಂಬುದನ್ನು ಅವರ ಕಾರ್ಯೋತ್ಸಾಹ ಚಟುವಟಿಕೆಗಳಿಂದ ನಾವು ಕಲಿಯಬೇಕಾಗಿದೆ

ರಾತ್ರಿ ಕಣ್ಣಾನೂರಿನಲ್ಲಿ ನೆಹ್ರೂರವರ ಭಾಷಣದ ಏರ್ಪಾಟಾಗಿದ್ದುದರಿಂದ ರಾತ್ರಿ ರೈಲ್ವೆಯಲ್ಲಿ ಕಣ್ಣಾನೂರಿಗೆ ಹೋಗಿ ರಾತ್ರಿ 1ಕ್ಕೆ ಮಂಗಳೂರಿಗೆ ಹಿಂತಿರುಗಿ 26ನೇ ಬೆಳಿಗ್ಗೆ ಬಜಪೆಯಲ್ಲಿ ವಿಮಾನ ಹತ್ತಿ ಬೆಂಗಳೂರಿಗೆ ತೆರಳಿದರು .

ಮಂಗಳೂರು

ಕಾಂಗ್ರೆಸಿಗೆ ಬೆಂಬಲ:—ನೀಡಬೇಕೆಂದು ತಾ 16ರಲ್ಲು ಶ್ರೀ ಕೆ. ದೇಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ದ. ಕ. ರಜಕ ಕುಲೋದ್ಧಾರಕ ಸಂಘದ ಕಾರ್ಯ ಸಮಿತಿಯ ಸಭೆಯಲ್ಲಿ ನಿರ್ಣಯವಾಯಿತು. ಅಂತೆಯೇ ಶ್ರೀ ಕೆ. ಐತಪ್ಪ ಮೇಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸೇರಿದ ದ. ಕ. ಜಿಲ್ಲಾ ದೇವಾಡಿಗರ ಶುಭೋದಯ ಸಂಘದ ವಿಶೇಷ ಸಭೆಯಲ್ಲೂ ಕರಾವಾಯಿತು.

ಮುನ್ಸಿಪಲ್ ಕೌನ್ಸಿಲು ಸಭೆಯು—ತಾ 15ರಂದು ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಲ್ಪ ಸಮಯದ ನಂತರ ಶ್ರೀ ಪಾಯಸರು ಹೊರಹೋದ ಮೇಲೆ ಉಪಾಧ್ಯಕ್ಷ ಶ್ರೀ ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಬಿಕರ್ನ ಕಟ್ಟೆಯಲ್ಲಿ ಒಂದು ಮಾರ್ಕೆಟ್ ತೆರೆಯುವ ನಿರ್ಣಯ ಮಾಡಿ ಸ್ಥಳವನ್ನು ಕೇಳುವ ನಿರ್ಣಯವಾಯಿತು, ಕದ್ರಿಯಲ್ಲಿ ಒಂದು ಬಾಣಂತಿ ಮತ್ತು ಶಿಶು ಸಂಗೋಪನಾ ಗೃಹ ತೆರೆಯುವ ನಿರ್ಣಯವಾಯಿತು, ಅಲ್ಲದೆ ಬೊಕ್ಕಪಟ್ಣ ಮತ್ತು ಬೋಳಾರಗಳಲ್ಲಿ ಎರಡು ವಯಸ್ಕರ ಶಾಲೆಗಳನ್ನು ತೆರೆಯುವುದೆಂದಾಯಿತು. ಮೋಟಾರ್ ನಿಲ್ದಾಣಗಳ ಒಳಗೆ ಬರಲು ಖಾಸಗಿ ಕಟ್ಟಡಗಳಿಂದಲೂ, ಕಂಪೌಂಡುಗಳಿಂದಲೂ ದಾರಿಗಳನ್ನು ಯಾರೂ ಮಾಡಬಾರದಾಗಿಯೂ ಈ ನಿರ್ಣಯವನ್ನು ಪೌರ ಸಭೆಯವರು ಕೂಡಲೇ ಜಾರಿಗೆ ತಂಬೇಕೆನ್ನುವ ಶ್ರೀ ಎಸ್. ನರ್ಸಪ್ಪಯ್ಯನವರ ನಿರ್ಣಯವು ಅವಿರೋಧ ಪಾಸಾಯಿತು.

ಶ್ರೀ ಕೆ. ಆರ್ ಕಾರಂತರ ಭಾಷಣ

ಪ್ರಜಾಪಕ್ಷದ ಚುನಾವಣಾ ಸಭೆಯೊಂದು ಇದೇ ತಾ. 16ರಲ್ಲು ಕೇಂದ್ರಮೈದಾನಿನಲ್ಲಿ ಶ್ರೀ ಎಮ್.ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ ಅಧಿಕಾರಿಗಳು ಮಾತನಾಡುತ್ತಾ ಇಂದು ಕಾಂಗ್ರೆಸ್ಸಿನಲ್ಲಿರುವವರು ತಾವು ಸ್ವರಾಜ್ಯ ತಂದವರೆಂದು ಹೇಳುವುದು ಸರಿಯಲ್ಲವೆಂದು ತಿಳಿಸಿ, ಗಾಂಧೀಜೀಯವರ ಮರಣದ ನಂತರ ಅವರ ತತ್ವಗಳೆಲ್ಲ ಮಾಯವಾಗುತ್ತಿವೆ ಎಂದು ಹೇಳಿದರಲ್ಲದೆ, ಕಾಂಗ್ರೆಸ್ ಉಮೇದ್ವಾರರ ಚುನಾವಣೆಯು ನ್ಯಾಯವಾಗಿಲ್ಲವೆಂದು ಹೇಳಿದರು. ಪ್ರಜಾಪ್ರಭುತ್ವದ ಅಭಿವೃದ್ಧಿಗೆ ವಿರೋಧಪಕ್ಷವೊಂದು ಬೇಕೆಂದೂ ಜಿಲ್ಲೆಯಲ್ಲಿ ಕಾಂಗ್ರೆಸನ್ನು ವಿರೋಧಿಸುವ ಪಕ್ಷಗಳಲ್ಲಿ ಪ್ರಜಾಪಕ್ಷವು ಅತಿಮುಖ್ಯವಾಗಿದೆ ಎಂದು ಹೇಳಿ, ಎಲ್ಲರ ಸಹಕಾರವನ್ನು ಕೋರಿದರು.

ಶ್ರೀ ಕೆ. ಆರ್. ಕಾರಂತರು ಮಾತನಾಡುತ್ತಾ ಈ ನಾಲ್ಕೂವರೆ ವರುಷಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಬಡವರ ಕಷ್ಟ ಹೆಚ್ಚಾಗಿದೆ. ಭತ್ತ ಬೆಳೆಸುವ ರೈತನಿಗೆ ಸಾಗುವಳಿ ಮಾಡುವುದೇ ಬೇಡವಾಗಿದೆ. ಕೇಂದ್ರ ಸರಕಾರದ ಐದುವರ್ಷಗಳ ಯೋಜನೆಯಲ್ಲಾಗಲೀ ಮದ್ರಾಸು ಸರಕಾರದ ಹದಿನೈದು ವರ್ಷಗಳ ಯೋಜನೆಯಲ್ಲಾಗಲೀ ಜಿಲ್ಲೆಯ ಅಭಿವೃದ್ಧಿಯ ಸುದ್ದಿಯಿಲ್ಲವೆಂದರು. ಭೂಸುಧಾರಣೆ, ಒಕ್ಕಲು ಹಿತಮುಸೂದೆ ಈ ವಿಚಾರದಲ್ಲೂ ಅಧಿಕಾರದಲ್ಲಿರುವವರಿಂದು ಸುಧಾರಣೆ ಮಾಡುವಂತಿಲ್ಲವೆಂದರು, ಕೊನೆಯಲ್ಲಿ ಕನ್ನಡ ಏಕೀಕರಣವು ಜಿಲ್ಲೆಯ ಜನರಿಗೆ ಎಷ್ಟು ಪ್ರಾಮುಖ್ಯವಾಗಿದೆ ಎಂಬುದನ್ನು ವಿವರಿಸಿದರು

ಕೆನರಾ ಹ್ಯಾಸ್ಕೂಲ್ ವಜ್ರೋತ್ಸವ ಸಮಾರಂಭ

ಕೆನರಾ ಹೈಸ್ಕೂಲಿನ ವಜ್ರೋತ್ಸವ ಸಮಾರಂಭಗಳು ಇದೇ ತಾ 20ನೇ ಪ್ರಾತಃಕಾಲ ಆರಂಭವಾದುವು. ರಾಷ್ಟ್ರ ಧ್ವಜಾರೋಹಣ ನಂತರ, ಭುವನೇಂದ್ರ ಸಭಾಸದನದಲ್ಲಿ ಏರ್ಪಡಿಸಿದ ವಿವಿಧ ಚಿತ್ರಗಳ ಶ್ರೀ ಆರ್. ಕೆ. ಪ್ರಭುಗಳ ಸಂಗ್ರಹ ಪ್ರದರ್ಶನಗಳನ್ನು ಸ್ಥಳೀಯ ಶ್ರೀ ರಾಮಕೃಷ್ಣ ಮಠದ ಸ್ವಾಮಿಗಳವರು ಉದ್ಘಾಟಿಸಿದರು. ಸಾಯಂಕಾಲ ಡಾ| ಸಿ. ರಾಮ ಕಾಮತರು ಶ್ರೀ ಕುಡ್ಪಿ ವಾಸುದೇವ ಶೆಣೈಯವರು ಪೂರ್ಣ ಗೊಳಿಸಿಕೊಟ್ಟ ಸುಕೃತೀಂದ್ರ ತೀರ್ಥ ಸ್ಮಾರಕ ಕಲಾಮಂದಿರ (ಶಾಲೆಯ ರಂಗಭೂಮಿ)ದ ಕುರಿತು ಮಾತನಾಡುತ್ತಾ ಶ್ರೀ ಶೆಣೈಯವರ ಔದಾರ್ಯತೆಯನ್ನು ಆದೇ ರಂಗಮಂಟಪಕ್ಕೆ ಆವಶ್ಯವಿರುವ ಫಂಡೆಗಳ ಬಗ್ಗೆ ಶ್ರೀ ಯು. ರಾಮನಾಯ್ಕರು ಕೊಟ್ಟ ರೂ. 2005|-ಸಹಾಯಧನ ಮತ್ತು ಶ್ರೀ ಕಸ್ತೂರಿ ಲಕ್ಷ್ಮಣ ಪೈ ಬಂಧುಗಳು ಧ್ವನಿವರ್ಧಕಗಳನ್ನೊದಗಿಸಿದ ಸಹಾಯವನ್ನು ಕೃತಜ್ಞತೆಯಿಂದ ಸಾರಿ, ಶ್ರೀಮತ್ ಸುಧೀಂದ್ರ ತೀರ್ಥರವರಿಂದ ಈ ರಂಗಮಂಟಪದ ಉದ್ಘಾಟನೆಯು ಯೋಗ್ಯರೀತಿಯಲ್ಲಿ ಬರುವ ಫೆಬ್ರವರಿ ತಿಂಗಳಲ್ಲಿ ನಡೆಯಲಿದೆ ಎಂಬುದನ್ನು ತಿಳಿಸಿದರು. ತಾ. 21ರಲ್ಲು ಶಾಲಾ ದಿನಾಚರಣೆಯು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ಮಿ: ಚೆಕ್ರವರ ಅಧ್ಯಕ್ಷತೆಯಲ್ಲಿ ಜರಗಿತು. ತಾ. 22ರಲ್ಲು ಕೆನರಾ ಗರ್ಲ್ಸ್ ಹೈಸ್ಕೂಲು ಮತ್ತು ಕೆನರಾ ಎಲಿಮೆಂಟರಿ ಶಾಲಾ ದಿನಾಚರಣೆ ನಡೆಯಿತು. ಈ ಎಲ್ಲಾ ದಿವಸಗಳಲ್ಲಿ ವಿವಿಧ ವಿನೋದಾವಳಿಗಳಿದ್ದುವು.

ಆಚಾರ್ಯ ಕೃಪಲಾನಿಯವರು ಸದ್ಯವೇ ಮಂಗಳೂರಿಗೆ ಬರುವರೆಂದು ವದಂತಿಯಿದೆ.

ಮಹಮ್ಮದ್ ಪೈಗಂಬರರ ದಿನಾಚರಣೆಯು—ತಾ. 11ರಲ್ಲು ಮೈಸೂರು ವಿಶ್ವವಿದ್ಯಾಲಯದ ಉರ್ದು, ಅರೇಬಿಕ್, ಪಾರ್ಸಿ ಪಂಡಿತರಾದ ಜ| ಅಲ್ಲಮಾ ಖಿಜರ್ ಅಲಿಖಾನರ ಅಧ್ಯಕ್ಷತೆಯಲ್ಲಿ ನಡೆಯಿತು, ಜ| ಎಮ್. ಅಹಮ್ಮದ್ ಬಾಲ್ಕಿ, ಕುಂಞ ಅಹಮ್ಮದ್, ಜ| ಬಿ. ಎಮ್. ಇದಿನಬ್ಬ ಮತ್ತು ಮೈಸೂರು ವಿಜಾರ್ ಅಹಮ್ಮದ್ ಸಾಹೇಬರು ಪೈಗಂಬರರ ವಿಚಾರವಾಗಿ ಮಾತನಾಡಿದರು, ಸೀರತ್ ಕಮಿಟಿಯ ಕಾರ್ಯದರ್ಶಿ ಜ| ಮುಹಮ್ಮದ್ ಕಮಾಲ ಸಾಹೇಬರು ಅಭಿನಂದಿಸಿದರು. ಬಾವಟಗುಡ್ಡೆಯ ಇದ್ಗಾ ಪ್ರಾರ್ಥನಾಮಂದಿರದ ಈ ಸಭೆಯಲ್ಲಿ ಸಾಧಾರಣ 2000/ ಮುಸ್ಲಿಮರು ಭಾಗವಹಿಸಿದ್ದರು.

ಪ್ರಕಟಣೆ

ಹಾಲಿ ಕಾರ್ಕಳ ತಾಲೂಕು ಸೂಡಗ್ರಾಮದ ಪಟ್ಟಾರ್ಸ್ತಿನಲ್ಲಿರುವ ರಾಮಪ್ಪಾಚಾರಿಯ ವಿಧವೆ ರಾಧಾಚಾರ್ತಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ-

ನನ್ನ ಗಂಡ ರಾಮಪ್ಪಾಚಾರಿಯವರು ಮೃತಪಟ್ಟ ನಂತರ ನನ್ನ ಹಿರೇ ಮಗ ಜನಾರ್ಧನಾಚಾರಿಯು ಕುಟುಂಬದ ಯಜಮಾನನಾಗಿ ಕುಟುಂಬದ ಆಡಳಿತೆಯನ್ನು ನಡಿಸುತ್ತಾ ನನ್ನ, ನ, ಆತನ ತಮ್ಮಂದಿಯರ ಕೊಡುವಿಕೆಯಿಂದ ಒಟ್ಟಾಗಿ ಜೀವಿಸಿ ಬರುತ್ತಿರುವಾಗ್ಗೆ ಸದ್ರಿ ಜನಾರ್ಧನಾಚಾರಿಯು ಕುಟುಂಬದ ಫಂಡಿನ ಹಣದಿಂದ ಉಡ್ಪಿ ತಾಲೂಕು ಶಿರ್ವ ಗ್ರಾಮದ ಸ. ನಂಬ್ರ 302-1ಎ ಪುಂಜ ಪೈಕಿ ತೆಂಕು ಮಧ್ಯ ಸೆಂಟ್ಸು 15ರ ಸ್ಥಳವನ್ನು ಕ್ರಯಕ್ಕೆ ಪಡೆದು ಕುಟುಂಬದ ಸ್ಥಿರಾಸ್ತಿಯಲ್ಲಿದ್ದ ಮರಗಳನ್ನು ಉಪಯೋಗಿಸಿ ಕುಟುಂಬದ ಹಣಗಳಿಂದ ಸದ್ರಿ ಸ್ಥಳದಲ್ಲಿ ಮನೆವಗೈರೆ ಕಟ್ಟೋಣಗಳನ್ನು ಕಟ್ಟಿಸಿ, ಬಾವಿತೋಡಿಸಿ ಮರಗಳನ್ನು ನಟ್ಟು ಬೆಳ್ಸವಗೈರೆ ಕೃತಗಳನ್ನು ಮಾಡ್ಸಿರುತ್ತೇವೆ. ಸದ್ರಿ ಜನಾರ್ಧನಾಚಾರಿಯು ಮೃತಪಟ್ಟನಂತ್ರ ಸದ್ರಿ ಕುಟುಂಬದ ಮನೆಯಲ್ಲಿದ್ದ ಕುಟುಂಬಾರ್ಥದ ಚರಸೊತ್ತುಗಳು ವ ಚಿನ್ನಬೆಳ್ಳಿ ವಗೈರೆ ಸುಮಾರು ರೂ. 1500/ ಕ್ರಯಬಾಳುವ ಯಾವತ್ತೂ ಚರಸೊತ್ತುಗಳನ್ನು ನಾನು ವ ನನ್ನ ಮಗ ಭುಜಂಗಾಚಾರಿಯು ಮನೆಯಲ್ಲಿಲ್ಲದ ಸಮಯ ಸದ್ರಿ ಜನಾರ್ಧನಾಚಾರಿ ವಿಧವೆ ಭವಾನಿ ಅಚಾರ್ತಿಯು ಅಕ್ರಮ ರೀತಿಯಿಂದ ಸಾಗ್ಸಿಕೊಂಡು ಹೋಗಿ ಉಡ್ಪಿಯಲ್ಲಿರುವ ತನ್ನ ತಂದೆ ಮನೆಯಲ್ಲಿ ವಾಸವಾಗಿರುತ್ತಾಳೆ. ಈಗ ನನ್ನ ಮಗ ಮೃತ ಗಣಪತಿ ಆಚಾರಿಯ ಮೈನರು ಮಗ ವಸಂತನಿಗೂ ನನ್ನ ಮಗ ಭುಜಂಗ ಆಚಾರಿಗೂ ನನಗೂ ಮೋಸಪಡಿಸಿ ಅಕ್ರಮ ಲಾಭಹೊಂದುವ ಇರಾದೆಯಿಂದ ಪಟ್ಟು ಕುಟುಂಬದ ಹಕ್ಕಿನ ಸದ್ರಿ ಸ್ಥಿರಸೊತ್ತನ್ನು ಮಾರಾಟಮಾಡುವ ಪ್ರಯತ್ನದಲ್ಲಿರುತ್ತಾಳಾಗಿ ನಾನು ತಿಳಿಯುತ್ತೇನೆ. ಸದ್ರಿ ಸ್ಥಿರ ಸೊತ್ತಿನಲ್ಲಿ ಆ ಭವಾನಿ ಅಚಾರ್ತಿಗೆ ಏನೂ ಹಕ್ಕಿರುವದಿಲ್ಲ. ನಮ್ಮ ಕುಟುಂಬದ ಮೇಲ್ಕಾಣ್ಸಿದ ಸ್ಥಿರಸೊತ್ತನ್ನು ಸದ್ರಿ ಭವಾನಿ ಅಚಾರ್ತಿಯಿಂದ ಯಾರಾದರೂ ಕ್ರಯಕ್ಕೆ ಪಡಕೊಂಡಲ್ಲಿ ಅಂಥಾ ಕ್ರಯಚೀಟು ಸಿಂಧುವಲ್ಲ. ವ ಅವರಿಗೆ ಆ ಸ್ಥಿರಸೊತ್ತಿನಲ್ಲಿ ಯೇನೂ ಹಕ್ಕುಂಟಾಗುವದಿಲ್ಲ. ಅಲ್ಲದೆ ಹಾಗೆ ಯಾರಾದರೂ ಸದ್ರಿಯವಳಿಂದ ಆ ಸ್ಥಿರ ಸೊತ್ತನ್ನು ಕ್ರಯಕ್ಕೆ ಪಡಕೊಂಡು ನಮಗೇನಾದ್ರೂ ನಷ್ಟವುಂಟಾದ ಸಂದರ್ಭದಲ್ಲಿ ಅಂಥಾ ನಷ್ಟವನ್ನು ನಮಗೆ ತೆರಲಿಕ್ಕೂ ಅಂಥಾ ಕ್ರಯದಾರರು ಬದ್ಧರಾಗಿರುತ್ತಾರೆ. ಎಂಬ ಸಂಗ್ತಿ ಈ ಮೂಲಕ ಸರ್ವಜನರ ತಿಳುವಳಿಕೆಗೆ ತಂದಿರುತ್ತೇನೆ.

111 ಈ ಮೂರು ಗೆರೆಗಳು ವ ಎಡ ಹೆಬ್ಬೆಟ್ಟಿನ ಗುರ್ತ ಸಹ ರಾಧಾಚಾರ್ತಿಯ ರುಜು.

ಮೊಕ್ಕಾಂ ಕಾರ್ಕಳ, ತಾ. 25-12-1951

ಉಡುಪಿ

ಚುನಾವಣಾ ಪ್ರಚಾರ ಸಭೆಗಳು-ಇದೇ ತಾ 23ರಲ್ಲು ಗಾಂಧಿ ಮೈದಾನದಲ್ಲಿ ಸೋಶಲಿಸ್ಟ್ ಪಕ್ಷದ ಚುನಾವಣಾ ಪ್ರಚಾರ ಸಭೆಯು ಶ್ರೀ ಎನ್. ವಿ. ಕಾಮತ್. ಎಡ್ವೋಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪಾರ್ಲಿಮೆಂಟಿಗೆ ದ. ಕ. ಜಿಲ್ಲೆಯ ಉತ್ತರ ಭಾಗದ ಸೋಶಲಿಸ್ಟ್ ಹುರಿಯಾಳು ಶ್ರೀ ಬಿ. ಜಿ. ಭಂಡಾರಿಗಳು ಮಾತನಾಡುತ್ತಾ ತಮ್ಮ ಪಕ್ಷವನ್ನು ಬಲಪಡಿಸುವ ಸದುದ್ದೇಶದಿಂದಲೇ ತಾನು ಹುರಿಯಾಳಾಗಿ ನಿಂತಿರುವುದಾಗಿ ಸೂಚಿಸಿದರಲ್ಲದೆ ಚುನಾವಣೆಯಲ್ಲಿ ಗೆಲ್ಲುವ ಅಥವಾ ಸೋಲುವುದಕ್ಕೆ ಹೆಚ್ಚಿನ ಮಹತ್ವ ಕೊಟ್ಟಿಲ್ಲವೆಂದರು. ಮದ್ರಾಸು ಎಸೆಂಬ್ಲಿ ಉಮೇದ್ವಾರ ಶ್ರೀ ಎನ್ ವಿಠಲದಾಸರೂ ಮಾತನಾಡಿದರು.

ಪ್ರಜಾಪಕ್ಷದ ಕಡೆಯಿಂದಲೂ ರಥಬೀದಿಯಲ್ಲಿ ಎಡ್ವೋಕೇಟ್ ಶ್ರೀ ಬಿ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಚುನಾವಣಾ ಪ್ರಚಾರ ಸಭೆಜರಗಿತು. ಪಾರ್ಲಿಮೆಂಟ್ ಹುರಿಯಾಳು ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮಾತನಾಡುತ್ತಾ ಯಾವ ಪಕ್ಷದವರೇ ಇರಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಸಭ್ಯ ರೀತಿಯಿಂದ ವರ್ತಿಸಬೇಕೆಂದು ಮೊದಲಾಗಿ ಹೇಳಿದರು. ಆಹಾರ ಉತ್ಪಾದನೆ ವಿಚಾರದಲ್ಲಿ ಮಾತನಾಡುತ್ತಾ ಅವಂಗಾಗಿ ದೊರೆಯುವ ಕ್ರಯವು ಕಡಿಮೆಯಾಗಿದೆಯೆಂದು ಸೂಚಿಸಿದರು. ಮದ್ರಾಸು ಸರಕಾರದ ಪಂಚವಾರ್ಷಿಕ ಪ್ರಗತಿ ಪುಸ್ತಕದ ಕೆಲವು ಅಂಶಗಳನ್ನೂ ಸಭೆಗೆ ವಿವರಿಸಿ ಆ ಪುಸ್ತಕವನ್ನು ಸರ್ವರೂ ಓದಬೇಕೆಂದರು. ಬಳಿಕ ಕಾಂಗ್ರೆಸಿಗೆ ಮತ ಕೊಡಬೇಕೋ ಬೇಡವೋ ಎಂಬ ನಿರ್ಧಾರಕ್ಕೆ ಬರುವುದು ಒಳ್ಳೆಯದೆಂದರು, ಸಭಾಧ್ಯಕ್ಷರು ಪ್ರಜಾಪಕ್ಷದ ಹುರಿಯಾಳುಗಳಿಗೆ ಮತಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸಿದರು. ಡಾ| ಟಿ. ಜಿ. ಆಚಾರ್ಯರು ಧನ್ಯವಾದ ಗಳನ್ನರ್ಪಿಸಿದರು

ನೇಕಾರ ಸಂಘಗಳ ಪ್ರತಿನಿಧಿಗಳ ಸಭೆಯು-ಇದೇ ತಾ 23ರಲ್ಲು ಉಡುಪಿ ಸಹಕಾರಿ ನೇಕಾರ ಸಂಘದ ಆಫೀಸಿನಲ್ಲಿ ಶ್ರೀ ಮೊಳಹಳ್ಳಿ ಶಿವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನೇಕಾರರ ಸಂಘಗಳಲ್ಲಾದ ಕಾರ್ಯಗಳ ಪರಿಶೀಲನೆಗಳಾಗಿ ಸಂಘಗಳ ಪ್ರಗತಿಗಾಗಿ ಬೇಕಾಗುವ ಸಲಹೆಗಳ ವಿಚಾರ ವಿನಿಮಯಾದಿ ನಡೆಯಿತು, ಮಂಗಳೂರು ಮತ್ತು ಕಾಸರಗೋಡು ಸರ್ಕಲುಗಳ ಡಿಪ್ಯುಟಿ ರಿಜಿಸ್ಟ್ರಾರರು ಹಾಜರಿದ್ದರು.

“ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು.”

—ಶ್ರೀ ಕೆ ಎ. ಪಂಡಿತ್, B SC, F. I. A.
(ಸಲಹೆಗಾರ ವಿಮಾಗಣಕರು)

“ಕೆನರಾ ಮ್ಯೂಚುವಲ್” ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವವಿಮೆ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಪಂಪನಕಟ್ಟೆ, ಮಂಗಳೂರು, (ದ. ಕ.)

ನಡಿಯುವ ಚಿತ್ರ

ಜೀತ್
ಸುರೈಯ್ಯಾ, ದೇವಆನಂದ

ಬರುವ ಚಿತ್ರ

ರಾಮ ದರ್ಶನ

ಅನಂತರ ಆರಾಮ್

ಶ್ರೀ ರಾಮಕೃಷ್ಣ ಥಿಯೇಟರ್ ಲಿ,
ಉಡುಪಿ.

ಕುಂಬಳೆ—ತಾ.15ರಂದು ಆರಿಕ್ಕಾಡಿ ಕಡಪರ್ ಮೊದಲಾದ ಸ್ಥಳಗಳಲ್ಲಿ ಕಾಂಗ್ರೆಸ್ ಮುಖಂಡರು ಶ್ರೀ ಎಮ್. ಎಚ್. ಮೊಗ್ರಾಲರೂ ಇತರರೂ ಹೋಗಿ ಚುನಾವಣಾ ಪ್ರಚಾರಕಾರ್ಯ ಕೈಗೊಂಡರು. ತಾ. 19ರಲ್ಲು ಕಮ್ಯೂನಿಸ್ಟ್ ಪಕ್ಷದ ಮತ್ತು ತಾ. 20ರಲ್ಲು ಮುಸ್ಲಿಂಲೀಗ್ ಪಕ್ಷದ ಕಡೆಯಿಂದಲೂ ಚುನಾವಣಾ ಪ್ರಚಾರ ಸಭೆಗಳು ಜರಗಿದವು.

ಕಟಪಾಡಿ—ಇದೇ ತಾ.9ರಲ್ಲಿ S.V.S. ಹ್ಯಾಸ್ಕೂಲಿನಲ್ಲಿ ಗೀತಾ ಜಯಂತಿಯು S. K. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಗೀತಾ ಪಠನ, ಗಾಯನ, ಭಜನೆ, ಶ್ರೀಗಳಾದ ಪಿ. ಬಾಲಕೃಷ್ಣ ನಾಯಕ್, ರಾಮಚಂದ್ರ ಭಟ್, K. R. ಅನಂತ ಪುರಾಣಿಕರ ಭಾಷಣಗಳಾದುವು.

ಕುಂದಾಪುರ ಸರ್ಕಲಿನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು—ತಾ. 12ರಲ್ಲು ಗುಡ್ಡೆ ಅಂಗಡಿಯಲ್ಲಿ ಶ್ರೀ ರಾಜೀವ ಆಚಾರ್ಯರ, ಕಂಡ್ಲೂರು— ಬೇಳೂರಲ್ಲಿ ಶ್ರೀ ಪೂವಯ್ಯ ಸೆಟ್ಟರ ಅಧ್ಯಕ್ಷತೆಯಲ್ಲೂ ತಾ. 13ರಲ್ಲು ಕೋಟೇಶ್ವರದಲ್ಲಿ, ತಾ. 14ರಲ್ಲು ಉಪ್ಪುಂದದಲ್ಲಿ, ತಾ. 18ರಲ್ಲು ಆನಗಳ್ಳಿಯಲ್ಲಿ ಶ್ರೀ ರಾಮಕೃಷ್ಣ ಹೆಬ್ಬಾರರ, ಅಂದೇ ರಾತ್ರಿ ವಡೇರಹೋಬಳಿ ಭಂಡಾರ್ಕರ್ ಹರಿಜನ ಕಾಲನಿಯಲ್ಲಿ ಶ್ರೀಗಳಾದ ಎಮ್. ಎಮ್. ಹೆಗ್ಡೆ, ದತ್ತಾತ್ರಯರಾವ್, ಕೆ. ಸಂಜೀವ ರಾವ್, ವಿಶ್ವೇಶ್ವರಯ್ಯ, ಎಮ್. ಶಂಕರನಾರಾಯಣರಾವ್, ಎಸ್. ಎಸ್. ಪರಮೇಶ್ವರಯ್ಯ, ವೆಂಕಟ ಮೊಗವೀರ, ಪಿ. ಶಿವರಾಮ ಶೆಟ್ಟಿ, ಬಿ. ಸುಬ್ಬಣ್ಣ ಸೆಟ್ಟಿ, ವೈ ಮಂಜಯ್ಯ ಸೆಟ್ಟಿ, ಎನ್. ಎಸ್. ಕಿಲ್ಲೆ, ಕೆ. ಸದಾನಂದ ಹೆಗ್ಡೆ ಮೊದಲಾದವರು ಭಾಷಣಮಾಡಿ ಮತದಾರರೆಲ್ಲರೂ ಕಾಂಗ್ರೆಸ್ ಉಮೇದುವಾರರಿಗೆ ವೋಟುಕೊಡಬೇಕಾಗಿ ಕೇಳಿಕೊಂಡರು

ಮೂಲ್ಕಿ— ಇದೇ ತಾ. 13ರಲ್ಲು ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಪ್ರಾಕಾರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯು ಶ್ರೀ ಕೆ. ರಾಮಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರತಿಷ್ಠೆ ಹುಣ್ಣಿಮೆ ಜಾತ್ರೆ ನಿಮಿತ್ತ ಜನಸಂದಣಿಯು ವಿಶೇಷವಿತ್ತು. ಶ್ರೀಗಳಾದ ಟಿ. ಎ. ಪೈ, ಎಚ್. ನಾರಾಯಣರಾವ್, ಕಾರ್ನಾಡು ಗಣಪಯ್ಯ ಸೆಟ್ಟಿ, ಶೀನ ಪೂಜಾರಿ ಮೊದಲಾದವರು ಕಾಂಗ್ರೆಸಿನ ಗೊತ್ತುಗುರಿಗಳೇನೆಂಬುದನ್ನು ವಿವರಿಸಿ ಕಾಂಗ್ರೆಸ್ ಉಮೇದ್ವಾರರಿಗೇ ಮತಕೊಡಬೇಕಾಗಿ ಕೇಳಿಕೊಂಡರು. ತಾ. 16ರಲ್ಲು ಸಂಜೆ ಹೆಜಮಾಡಿಯಲ್ಲಿ ಶ್ರೀ ಟಿ. ರಾಮಚಂದ್ರ ಆಚಾರ್ಯರ ಅಧ್ಯಕ್ಷತೆಯಲ್ಲೂ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಸುಬ್ಬಚೆಂಪ ಎಚ್. ನಾರಾಯಣರಾವ್, ಬಿ. ಎಮ್. ಇದಿನಬ್ಬ, ಗಂಗಾಧರದಾಸ್, ಎಸ್.ಎಸ್. ಸುವರ್ಣ, ಮೊದಲಾದವರು ಕಾಂಗ್ರೆಸಿಗೆ ಏಕೆ ವೋಟುಕೊಡಬೇಕೆಂಬ ವಿಚಾರದಲ್ಲಿ ಮಾತನಾಡಿ ಕಾಂಗ್ರೆಸಿಗೆ ಬೆಂಬಲವೀಯಬೇಕೆಂದರು.

ಬ್ರಹ್ಮಾವರ ಸರ್ಕಲಿನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಗಳು—ತಾ. 16ರಲ್ಲು ಮಧ್ಯಾಹ್ನ ಕೋಣ್ಣಿ ಗುಜ್ಜರಬೆಟ್ಟಿನಲ್ಲಿ ಶ್ರೀ ಮುಕ್ತಪ್ಪನವರ, ಅದೇ ದಿನ ಸಂಜೆ ಬೆಂಗ್ರೆ, ಸಂಗಾರಕಟ್ಟೆ, ಬಾಳ್ಕುದ್ರು, ಹಡುಕಾದ್ರುಗಳಲ್ಲಿ ಧ್ವನಿವಾಹಕ ಯಂತ್ರದ ಮೂಲಕ ತಾ. 19ರಲ್ಲು ಮಧ್ಯಾಹ್ನ ಚೆಕ್ಕೆಕು ದ್ರುವಿನಲ್ಲಿ ಡಾ। ಬಿ. ಕೃಷ್ಣಬ್ರಾಹ್ಮಣವರ, ಸಂಜೆ ಸಾಸ್ತಾನದ ಕಟ್ಟೆಯಲ್ಲಿ ಶ್ರೀ ಕೋಡಿ ರಾಮಣ್ಣ ಸೆಟ್ಟರ, ರಾತ್ರಿ ಮುದರಂಗಡಿ ದೇವಸ್ಥಾನದ ಬಯಲಲ್ಲಿ ಶ್ರೀ ಅಂತಯ್ಯ ಸೆಟ್ಟರ, ತಾ. 18ರಲ್ಲು ಬೆಳಗ್ಗೆ ಕೊಕ್ಕರಣೆಯಲ್ಲಿ ಡಾ। ರಾಜು ಬೋಂಟ್ರರ, ರಾತ್ರಿ ಪೆರ್ಡೂರಲ್ಲಿ ಶ್ರೀ ಬಿ. ಶೀನಪ್ಪ ಹೆಗ್ಡೆರ, ತಾ. 19ರಲ್ಲು ಬೆಳಗ್ಗೆ ಕುಕ್ಕೆಹಳ್ಳಿಯಲ್ಲಿ ಶ್ರೀ ಎನ್. ಕೆ. ಕಾಮತರ, ಕುಕ್ಕಿಕಟ್ಟೆಯಲ್ಲಿ ಶ್ರೀ ನಾರಾಯಣ ಉಡುಪರ, ಮಧ್ಯಾಹ್ನ ಉಪ್ಪೂರಲ್ಲಿ ಶ್ರೀ ಮಂಜುನಾಥ ಕಲ್ಕೂರರ, ರಾತ್ರಿ ಕಲ್ಯಾಣಪುರದಲ್ಲಿ ಶ್ರೀ ಲಕ್ಷ್ಮೀನಾರಾಯಣರಾಯರ, ತಾ. 20ರಲ್ಲು ಕೆಮ್ಮಣ್ಣಿನಲ್ಲಿ ಶ್ರೀ ಪಿ. ವೆಂಕಟಕೃಷ್ಣರಾಯರ, ರಾತ್ರಿ ಬೆಂಗ್ರೆಯಲ್ಲಿ ಶ್ರೀ ಬಿ. ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದವು. ಜನಾಬ್ ಇಬ್ರಾಹಿಮ್ ಸಾಹೇಬ್, ಶ್ರೀಗಳಾದ ಎನ್. ಎಸ್. ಕಿಲ್ಲೆ, ಡಿ. ಬಿ. ಅಂತಯ್ಯ ಸೆಟ್ಟಿ, ಯು.ಆರ್.ರಾವ್, ಡಾ।ಎ. ಹಿರಿಯಣ್ಣ ಸೆಟ್ಟಿ, ಬಿ. ಜಗಜ್ಜೀವನದಾಸ್ ಸೆಟ್ಟಿ, ಆನಂದ ಹೆಗ್ಡೆ, ಶೀನಿವಾಸ ರಾವ್, ಬಿ. ವೆಂಕಪ್ಪ ಹೆಗ್ಡೆ, ಶ್ರೀನಿವಾಸ ಮಲ್ಯ, ಅಲ್ಲಾದಿ ಮಾಸ್ಟರ್, ಮಹಾಬಲ ಸೆಟ್ಟಿ, ಜಯರಾಮ ಪಡಿಯಾರ್ ಮೊದಲಾದವರು ಅಲ್ಲಲ್ಲಿ ಭಾಷಣವಿತ್ತು ಜನಜಾಗ್ರತಿಯನ್ನುಂಟುಮಾಡಿ ಮೊಗಕಟ್ಟಿದ ಜೋಡುಎತ್ತಿನ ಪಟ್ಟಿಗೆಗೆ ವೋಟುಗಳನ್ನು ಹಾಕಬೇಕಾಗಿ ವಿನಂತಿಸಿದರು.

ತಾ. 21ರಲ್ಲು ಬೆಳಗ್ಗೆ ಸಾಲಿಗ್ರಾಮದಲ್ಲಿ ಶ್ರೀ ಎಚ್. ನಾರಾಯಣರಾಯರ ಮಧ್ಯಾಹ್ನ ಉಪ್ಪಿನಕೋಟೆಯಲ್ಲಿಯೂ ಸಾಯಂಕಾಲ ಬಾರಕೂರಲ್ಲಿ ಡಾ। ಪಿ. ಆನಂದ ಸೆಟ್ಟರ ಸಂಜೆ ಕಲ್ಯಾಣಪುರದಲ್ಲಿ ಶ್ರೀ ಕೆ. ಶೇಷಗಿರಿ ಮಲ್ಯರ ಅಧ್ಯಕ್ಷತೆಯಲ್ಲೂ ಜರಗಿದವು. ಶ್ರೀಗಳಾದ ಬಿ. ಗಂಗಾಧರ ದಾಸ್, ಡಿ. ಬಿ. ಅಂತಯ್ಯ ಸೆಟ್ಟಿ, ಜಯರಾಮ ಪಡಿಯಾರ್ ಮೊದಲಾದವರು ಭಾಷಣಮಾಡಿ ಕಾಂಗ್ರೆಸಿಗೆ ಮತವೀಯುವಂತೆ ಬಿನ್ನವಿಸಿಕೊಂಡರು.

ಅಜೆಕಾರು—ಈ ಕೇಂದ್ರದ ಮಕ್ಕಳ ಆಟದ ಹಬ್ಬವು ಇದೇ ತಾ. 15ರಲ್ಲು ಡಾ। ಯು. ಕೃಷ್ಣನವರ ಅಧ್ಯಕ್ಷತೆಯಲಿ ಜರಗಿತು. ಶ್ರೀ ಎಮ್. ಕೃಷ್ಣಯ್ಯ ಸೆಟ್ಟರು ಆಲೋಚಕ ಮಾತುಗಳನ್ನಾಡಿದರು. ಶ್ರೀ ಪಾಂಡುರಂಗ ಶೆಣೈಯರು ಧನ್ಯವಾದಗಳನ್ನರ್ಪಿಸಿದರು.

ರಾಮಕುಂಜ—ಮೈಸೂರು ಮದರಾಸು ಮೊದಲಾದ ಕಡೆಗಳಲ್ಲಿ ದಿಗ್ವಿಜಯವನ್ನು ಮಾಡಿದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ರಾಮಕುಂಜ ಎಡ್ವಾನ್ಸ್‌ಡ್ ಸಂಸ್ಕೃತ ಮಹಾಪಾಠಶಾಲೆಯ ವರ್ಧಂತ್ಯುತ್ಸವವು ಇದೇ ತಾ. 15ರಲ್ಲು ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು.

ಬೆಳ್ಮಣ್ಣು— ಇದೇ ತಾ. 15ರಿಂದ ಪ್ರತ್ಯೂರಿನಿಂದ ಬೆಳ್ಮಣ್ಣುವರೆಗೆ ಬಿಜ್ಜಾಲು, ಬಸ್ಸಿನಲ್ಲಿ ಹೋಗಲು ಪ್ರಾರಂಭವಾದುದರ ಪರಿಣಾಮವಾಗಿ ಜನರಿಗೆ ತುಂಬಾ ಅನುಕೂಲವಾಗಿದೆ.

ಮದ್ರಾಸ್ ಎಸೆಂಬ್ಲಿಗೆ ಕಾಂಗ್ರೆಸ್ ಪಕ್ಷದ ಹರಿಜನ ಉಮೇದುವಾರರು

ಶ್ರೀ ಕೆ. ಈಶ್ವರ, ಎಂ. ಎಲ್. ಎ.,

ಇವರು ಅನೇಕ ಸಾರ್ವಜನಿಕ ಸಂಸ್ಥೆಗಳ ಸದಸ್ಯರಾಗಿ ಜಿಲ್ಲೆಗೆ ಸೇವೆಯನ್ನು ಸಲ್ಲಿಸಿರುವರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿಯೂ, ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿರುವರು.

ವೈಯಕ್ತಿಕ ಸತ್ಯಾಗ್ರಹ ಹೂಡಿದ್ದಕ್ಕಾಗಿ ಇವರಿಗೆ 6 ತಿಂಗಳ ಕಾರಾಗೃಹವಾಸ ದೊರೆತಿತು. 1942ರ "ಕ್ವಿಟ್ ಇಂಡಿಯಾ" ಚಳವಳದಲ್ಲಿ ಇವರನ್ನು 2 ವರ್ಷಗಳ ತನಕ ಸ್ಥಾನಬದ್ಧ ಕೈದಿಯನ್ನಾಗಿ ಇರಿಸಿದರು. ಇವರು ಕುಂದಾಪುರ ಜನರಲ್ ಮತದಾರ ಕ್ಷೇತ್ರದಿಂದ ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಆರಿಸಲ್ಪಟ್ಟರು. ಮದ್ರಾಸ್ ವಿಶ್ವವಿದ್ಯಾಲಯದ ಸೆನೆಟ್ ಸಭೆಗೆ ಆರಿಸಲ್ಪಟ್ಟ ಇವರು 8 ವರ್ಷಗಳ ಕಾಲ ಆ ಸಭೆಯಲ್ಲಿ ಕೆಲಸಮಾಡಿದರು. 1936ರಲ್ಲಿ ಹರಿಜನ ಲೇಬರ್‌ಲೀಗ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಆದರ ಮೂಲಕ ಹರಿಜನರ ಏಳಿಗೆಯನ್ನು ಸಾಧಿಸಲೆತ್ನಿಸಿದರು; ಮಾತ್ರವಲ್ಲದೆ ಈಶ್ವರಾನಂದ ಎಂಬ ಹೆಸರಿನ ಕೈಗಾರಿಕೆ ಶಾಲೆಯನ್ನು ಹರಿಜನರ ಕರಬೇತಿ, ಅಭಿವೃದ್ಧಿಗಳಿಗಾಗಿ ತೆರೆದಿರುತ್ತಾರೆ. ಈ ಶಾಲೆಯು ಸರಕಾರದ ಮಂಜೂರಾತಿ ಪಡೆದು ಉತ್ತಮ ಕೆಲಸಮಾಡುತ್ತಿದೆ. ಹರಿಜನ ಲೇಬರ್ ಲೀಗಿನ ಆಶ್ರಯದಲ್ಲಿ ಮುದ್ರಣಯಂತ್ರವನ್ನು ಸ್ಥಾಪಿಸಿ ಅದರಿಂದ ಬಡ ಹರಿಜನರಿಗೆ ಸಹಾಯ ನೀಡುತ್ತಿದ್ದಾರೆ.

ಶ್ರೀ। ಈಶ್ವರನವರು 1932ರಲ್ಲಿ ಕಾಂಗ್ರೆಸಿಗೆ ಸೇರಿದರು. ಅಂದಿನಿಂದ ಇಂದಿನ ತನಕವೂ ನಿಷ್ಠೆಯಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿಯುತ್ತಿರುವರು. ಕಾಂಗ್ರೆಸಿನ ಶಿಸ್ತನ್ನು ಸದಾ ಪಾಲಿಸುತ್ತ ಬಂದಿರುವರು. ಪ್ರಕೃತ ಇವರನ್ನು ಕಾಂಗ್ರೆಸ್ ಕಡೆಯಿಂದ ಪುತ್ತೂರು ಮತದಾರ ಕ್ಷೇತ್ರದಿಂದ ಹರಿಜನರಿಗೆ ಕಾದಿರಿಸಲ್ಪಟ್ಟ ಸ್ಥಾನಕ್ಕೆ ಉಮೇದುವಾರರಾಗಿ ಆರಿಸಿದ್ದಾರೆ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

ESTD: 1925. H. O: UDIPI.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಹೊಸಕೆರೆ ಚಿದಂಬರಯ್ಯನವರಿಂದ ಗೀತೆಯ ಸಮೂಲ ಭಾಷಾಂತರ.



ಪ್ರತಿಯೊಬ್ಬನೂ ಓದಲೇಬೇಕಾದ ಪವಿತ್ರಗ್ರಂಥ

ಬೆಲೆ. 0—12—0.

ನವಭಾರತ ಪುಸ್ತಕ ಭಂಡಾರ, ಉಡುಪಿ.



Approved from by the Govt. of Mysore Certificated by the Agent of the Govt of Cochin & Jodiar.

ಚುನಾವಣೆಗಳಿಂದಲೇ ಸರಕಾರಕ್ಕೆ ಆಡಳಿತಾಧಿಕಾರ

ಮತದಾನ ಮಾಡುವ ರೀತಿ

ಸಾರ್ವತ್ರಿಕ ವಯಸ್ಕರ ಮತಾಧಿಕಾರ ಪದ್ಧತಿಯಲ್ಲಿ ಇದೇ ಮೊಟ್ಟಮೊದಲಾಗಿ ನಮ್ಮ ದೇಶದಲ್ಲಿ ನಡೆಯುವ ಈ ಚುನಾವಣೆಯಲ್ಲಿ ಸ್ತ್ರೀಪುರುಷರೆನ್ನದೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಕೆಯನ್ನು ವಹಿಸಬೇಕು. ಪ್ರತಿಯೊಂದು ಪಕ್ಷದ ಅಭ್ಯರ್ಥಿಗಳ ಯೋಗ್ಯತಾನುಸಾರಗಳನ್ನು ಚೆನ್ನಾಗಿ ವಿಮರ್ಶಿಸಿ ತಿಳಿದುಕೊಳ್ಳಬೇಕು. ದೇಶೋದ್ಧಾರವೇ ಮುಖ್ಯವೆಂದು ತಮ್ಮ ತಮ್ಮ ಓಟುಗಳನ್ನು ಸರಿಯಾದ ರೀತಿಯಲ್ಲಿ ಕೊಡಬೇಕು. ನಮ್ಮ ಓಟರ ಪಟ್ಟಿಯಲ್ಲಿ [ಅದಕ್ಕೆ ಮತದಾರರ ಪಟ್ಟಿಯೆಂತಲೂ ಹೇಳುವರು] ನಮ್ಮ ಸಂಸ್ಥಾನದ 2ಕೋಟಿ 70ಲಕ್ಷ ವೋಟರರಲ್ಲಿ ಸ್ತ್ರೀಯರ ಸಂಖ್ಯೆ ಸುಮಾರು ಅರ್ಧಕ್ಕೆ ಸರಿಯುಂಟು. ಅದುದರಿಂದ ಸ್ತ್ರೀಯರು ಚುನಾವಣೆಯಲ್ಲಿ ಭಾಗವಹಿಸದೆಯಿದ್ದರೆ ಅರ್ಧಕ್ಕರ್ಧ ಓಟುಗಳು ವ್ಯರ್ಥವಾಗುವುದಲ್ಲದೆ ಅದರಿಂದ ದೇಶಕ್ಕೆ ಯಾವ ವಿಧವಾದ ಹಿತವೂ ಉಂಟಾಗಲಿಕ್ಕಿಲ್ಲ.

ಈ ಚುನಾವಣೆಯು 1952ನೇ ಇಸವಿ ಜನವರಿ ತಿಂಗಳ ಎರಡನೇಯ ತಾರೀಕಿಗೆ ಪ್ರಾರಂಭವಾಗಿ ಇಪ್ಪತ್ತೈದನೆಯ ತಾರೀಕಿಗೆ ಪೂರ್ತಿಯಾಗುವುದು. ಆದರೆ ಮತಕೊಡುವ ಸ್ಥಳಗಳಲ್ಲಿ ಒಂದು ದಿವಸ ಮಾತ್ರ ಮತದಾನವು ನಡೆಯುವುದು. ನಮಗೆ ಬೇಕಾದಷ್ಟು ಅಧಿಕಾರರು, ಬಂದೋಬಸ್ತು ಮಾಡಲು ಬೇಕಾದ ಸಿಬ್ಬಂದಿಗಳು ಇಲ್ಲದ ಕಾರಣ, ಇಂಗ್ಲಾಂಡು ದೇಶದಲ್ಲಿ ನಡೆವ ಹಾಗೆ ಒಂದೇ ದಿವಸದಲ್ಲಿ ಈ ಚುನಾವಣೆಯನ್ನು ಇಡೀ ದೇಶದಲ್ಲಿ ಪೂರೈಸುವುದು ನಮ್ಮಿಂದ ಸಾಧ್ಯವಾಗುವ ಕಾರ್ಯವಲ್ಲ. ಆದುದರಿಂದ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಚುನಾವಣೆ ನಡೆಸಬೇಕಾಗಿದೆ.

ಎರಡು ಸಭೆಗಳು

ಮದರಾಸು ಸಂಸ್ಥಾನದ ಶಾಸನ ಮಂಡಲದಲ್ಲಿ ಎರಡು ಸಭೆಗಳಿವೆ. ಒಂದು ಲೆಜಿಸ್ಲೇಟಿವ್ ಎಸೆಂಬ್ಲಿ, ಇನ್ನೊಂದು ಲೆಜಿಸ್ಲೇಟಿವ್ ಕೌನ್ಸಿಲ್. ಕೇಂದ್ರ ಪಾರ್ಲಿಮೆಂಟಿನಲ್ಲಿಯೂ ಎರಡು ಸಭೆಗಳಿವೆ—ಒಂದು ಪ್ರಜಾಸಭೆ ಅಥವಾ ಲೋಕಸಭೆ (House of the People), ಇನ್ನೊಂದು ರಾಜ್ಯ ಸಭೆ (Council of States) ಪ್ರತ್ಯಕ್ಷ ಚುನಾವಣೆಯು (Direct Elections) ಲೆಜಿಸ್ಲೇಟಿವ್ ಎಸೆಂಬ್ಲಿಗೂ ಲೋಕ ಸಭೆಗೂ ನಡೆಯುವುದು.

ಎಸೆಂಬ್ಲಿಯಲ್ಲಿ 375 ಸ್ಥಾನಗಳು

ಚುನಾವಣೆಯಲ್ಲಿ ಸ್ಥಾಪಿತವಾಗುವ ನಮ್ಮ ಎಸೆಂಬ್ಲಿಯಲ್ಲಿ 375 ಸ್ಥಾನಗಳಿವೆ, ಅವುಗಳಲ್ಲಿ 62 ಶೆಡ್ಯೂಲ್ಡ್ ಜಾತಿಗಳಿಗೂ (Scheduled Castes), 4 ಶೆಡ್ಯೂಲ್ಡ್ ವರ್ಗದವರಿಗೂ (Scheduled Tribes) ಪ್ರತ್ಯೇಕವಾಗಿ ಕಾದಿರಿಸಲಾಗಿದೆ. ಲೋಕಸಭೆಯಲ್ಲಿ ನಮ್ಮ ಪಾಲಿಗೆ ಬಂದ 75 ಸ್ಥಾನಗಳಲ್ಲಿ, 12 ಸ್ಥಾನಗಳು ಶೆಡ್ಯೂಲ್ಡ್ ಜಾತಿಯವರಿಗೂ, ಒಂದು ಸ್ಥಾನ ಶೆಡ್ಯೂಲ್ಡ್ ವರ್ಗದವರಿಗೂ ಕಾದಿರಿಸಲಾಗಿದೆ. ಮಿಕ್ಕ ಸ್ಥಾನಗಳಿಗೆ ಯಾವ ಜಾತಿ-ವರ್ಗ-ಮತದವರಾದರೂ ಅಭ್ಯರ್ಥಿಗಳಾಗಿ ನಿಲ್ಲಬಹುದು. ಕಾದಿಟ್ಟ ಸ್ಥಾನಗಳಿಗೆ ಆಯಾ ಜಾತಿ ಅಥವಾ ವರ್ಗದವರೇ ನಿಲ್ಲಬೇಕು. ಆದರೆ ಮತದಾನ (ಅಂದರೆ ಓಟು) ಮಾಡುವಾಗ ಆ ಅಭ್ಯರ್ಥಿಗಳಿಗೂ ಆ ಕ್ಷೇತ್ರದ ಮತದಾರರು ಸರ್ವರೂ (ಅಂದರೆ ಓಟರರು ಸರ್ವರೂ) ಓಟು ಕೊಡಬಹುದು. ಆಯಾ ಜಾತಿ ಅಥವಾ ವರ್ಗದವರು ಮಾತ್ರ ಓಟು ಕೊಡಬೇಕೆಂಬ ನಿರ್ಬಂಧವೊಂದೂ ಇಲ್ಲ ಇದಕ್ಕನುಕೂಲವಾಗಿ ಹೀಗೆ ಕಾದಿಟ್ಟ ಸ್ಥಾನಗಳಿರುವ ಪ್ರದೇಶಗಳು ಇಬ್ಬರು ಸದಸ್ಯರ ಚುನಾವಣಾ ಕ್ಷೇತ್ರಗಳಾಗಿರುವುವು. ಬಾಕಿ ಕ್ಷೇತ್ರಗಳು ಏಕಸದಸ್ಯ ಚುನಾವಣಾ ಕ್ಷೇತ್ರಗಳು. ಆದುದರಿಂದ ಮುಂದೆ ಸ್ಥಾಪಿತವಾಗುವ ನಮ್ಮ ಎಸೆಂಬ್ಲಿಗೆ 243 ಏಕಸದಸ್ಯ ಕ್ಷೇತ್ರಗಳೂ, 66 ದ್ವಿಸದಸ್ಯ ಕ್ಷೇತ್ರಗಳೂ ಇವೆ. ಲೋಕ ಸಭೆಗೆ 49 ಏಕಸದಸ್ಯ ಕ್ಷೇತ್ರಗಳೂ, 13 ದ್ವಿಸದಸ್ಯ ಕ್ಷೇತ್ರಗಳೂ ಇವೆ.

ನಮ್ಮ ಎಸೆಂಬ್ಲಿಯ ಪ್ರತಿನಿಧಿ ವರ್ಗದ ಸಂಖ್ಯೆ ನಮ್ಮ ಪಾಲಿಗೆ ಬಂದ ಲೋಕ ಸಭೆಯ ಪ್ರತಿನಿಧಿ ವರ್ಗದ ಸಂಖ್ಯೆಗೆ ಸರಿಯಾಗಿ ಐದರಷ್ಟುಂಟು. ಇದು ಬೇಕೆಂತಲೆ ಏರ್ಪಡಿಸಿದ ಕಾರ್ಯಕ್ರಮ. ಪಕ್ಕಪಕ್ಕದಲ್ಲಿರುವ ಐದು ಎಸೆಂಬ್ಲಿಯ ಏಕಸದಸ್ಯ ಕ್ಷೇತ್ರಗಳು ಸೇರಿದರೆ ಲೋಕಸಭೆಗೆ ಒಂದು ಏಕಸದಸ್ಯ ಕ್ಷೇತ್ರವಾಗುತ್ತದೆ, ಹತ್ತು ಎಸೆಂಬ್ಲಿಯ ಕ್ಷೇತ್ರಗಳು ಸೇರಿದರೆ ಲೋಕಸಭೆಯ ಒಂದು ದ್ವಿಸದಸ್ಯ ಕ್ಷೇತ್ರವಾಗುತ್ತದೆ. ಹೀಗೆಯೇ ಕ್ಷೇತ್ರಗಳನ್ನು ನಿರ್ಣಯಿಸಿದ್ದಾರೆ. ನಮ್ಮ ಸಂಸ್ಥಾನದಿಂದ ಪಾರ್ಲಿಮೆಂಟಿಗೆ 75 ಸದಸ್ಯರನ್ನು ಆರಿಸಬೇಕಾಗಿದೆ.

ಮತದಾನ ಮಾಡುವ ರೀತಿ

ಮತದಾನ ನಡೆಯುವ ದಿನ ಸಾರ್ವಜನಿಕ ರಜಾದಿನವಾಗಿರುವದು. ಮತದಾರನಿಗೆ ತನ್ನ ಮತಾಧಿಕಾರವನ್ನು ಉಪಯೋಗಿಸಲು ಇಡೀ ದಿನದ ವೇಳೆಯು ದೊರೆಯುವದು ಆದರೂ ಮತದಾರನು ತನ್ನ ಸ್ವಂತ ವಾಹನದಲ್ಲಿ ಅಥವಾ ನಡೆಯುತ್ತ ಮತಕಟ್ಟೆಗೆ ಬೇಗನೇ ಹೋಗುವದು ಒಳ್ಳೇದು. ಮತ ಕಟ್ಟೆಯಲ್ಲಿ ಮತದಾರನಿಗೆ ಗುರ್ತಿನ ಕಾರ್ಡು ಕೊಡಲಾಗುವದು. ಅದರಲ್ಲಿ ಮತದಾರನ ಹೆಸರಿನ ಹಿಂದೆ ಇರುವ ನಂಬರು ಮತ್ತು ಆ ನಂಬರು ಇರುವ ಪುಟ ಇವುಗಳನ್ನು ಕಾಣಿಸಿರುವದು. ಮತಕಟ್ಟೆಯ ಹೊರಗಡೆಯಲ್ಲಿಯೇ ತಾನು ಯಾವ ಹುರಿಯಾಳಿಗೆ ಮತಕೊಡಲು ಇಷ್ಟಪಡುವನೋ ಅವನ ಪೆಟ್ಟಿಗೆಯ ಮೇಲಿರುವ ಗುರ್ತನ್ನು ನೋಡಬಹುದು. ಮತಕಟ್ಟೆಯಲ್ಲಿ ಪ್ರವೇಶಿಸಲು ಉಳಿದ ಮತದಾರರೊಂದಿಗೆ ತನ್ನ ಸರತಿ ಬರುವವರೆಗೆ ಕಾಯುತ್ತಿರಬೇಕು ಮತಕಟ್ಟೆಯಲ್ಲಿ ಪ್ರವೇಶಿಸಿದ ಕೂಡಲೇ ಅಲ್ಲಿ ಮತದಾನದ ಪತ್ರ ಕೊಡುವ ಅಧಿಕಾರಿಯು ಮತದಾರನ ಗುರ್ತಿನ ಕಾರ್ಡನ್ನು ನೋಡಿ ಅದರಲ್ಲಿ ಕಾಣಿಸಿದಂತೆ ಮತದಾರನ ನಂಬರು ವಗೈರೆ ಇದ್ದುದನ್ನು ಖಾತ್ರಿ ಮಾಡಿಕೊಂಡ ನಂತರ ಮತದಾರನ ಎಡಗೈ ಬೆರಳಿಗೆ ಮಸಿಯನ್ನು ಹಚ್ಚಿ ಗುರ್ತುಮಾಡಿ ಪ್ರಾಂತಿಕ ಶಾಸನ ಸಭೆಯ ಮತಪತ್ರ (Voting Paper) ಅಥವಾ ಪತ್ರಗಳನ್ನು ಕೊಡುವನು. ಮತಪತ್ರ ಕೈಗೆ ಬಂದ ನಂತರ ಮತಹಾಕುವ ಪೆಟ್ಟಿಗೆಗಳನ್ನಿಟ್ಟ ಪರದೆಯ ಬಳಿಗೆ ಹೋಗುವಾಗ ಅಲ್ಲಿ ನಿಂತ ಪೇದೆಯ ಕೈಯಲ್ಲಿ ತನ್ನ ಗುರ್ತಿನ ಕಾರ್ಡು ಕೊಟ್ಟು ಪರದೆಯ ಒಳಗೆ ಹೋಗಬೇಕು. ಚುನಾವಣೆಗೆ ನಿಂತ ಪ್ರತಿಯೊಬ್ಬ ಹುರಿಯಾಳುಗಳಲ್ಲಿ ಒಂದರಂತೆ ಮತ ಪೆಟ್ಟಿಗೆಗಳನ್ನು ಅಲ್ಲಿ ಸಾಲಾಗಿ ಇಟ್ಟಿರುವದು ಕಾಣುವನು. ಆ ಪೆಟ್ಟಿಗೆಯ ಹೊರಬದಿಗೆ ಹುರಿಯಾಳಿನ ಚಿಹ್ನೆಯನ್ನೂ ಅಂಟಿಸಿರುವದು. ಮತದಾರನು ತನ್ನ ಇಷ್ಟದ ಹುರಿಯಾಳಿನ ಚಿಹ್ನೆ ಇರುವ ಪೆಟ್ಟಿಗೆಯನ್ನು ನೋಡಿ ಅದರ ಮೇಲಿರುವ ಕಿಂಡಿಯಿಂದ ಮತಪತ್ರವನ್ನು ಪೆಟ್ಟಿಗೆಯಲ್ಲಿ ಬೀಳುವಂತೆ ಹಾಕಬೇಕು. ಮತಪತ್ರವನ್ನು ಮಡಚಿ ಹಾಕಲಾಗದು. ಇದ್ದ ಸ್ಥಿತಿಯಲ್ಲೇ ಅದನ್ನು ಮತಪೆಟ್ಟಿಗೆಯಲ್ಲಿ ಹಾಕತಕ್ಕದ್ದು.

ಪ್ರಾಂತಿಕ ಶಾಸನ ಸಭೆಗೆ ನಿಂತ ಹುರಿಯಾಳುಗಳ ಪೆಟ್ಟಿಗೆಗಳನ್ನು ಇಟ್ಟ ಪರದೆಯೊಳಗಿಂದ ಹೊರಗೆ ಬಂದ ಕೂಡಲೇ ಪಾರ್ಲಿಮೆಂಟಿನ ಹುರಿಯಾಳುಗಳಿಗೆ ಮತ ಹಾಕಲು ಮತಪತ್ರವನ್ನು ಮತದಾರನಿಗೆ ಕೊಡಲಾಗುವುದು. ಅದನ್ನು ತಕ್ಕೊಂಡು ಪಾರ್ಲಿಮೆಂಟಿನ ಹುರಿಯಾಳುಗಳ ಮತಪೆಟ್ಟಿಗೆಗಳನ್ನಿಟ್ಟ ಪರದೆಯಲ್ಲಿ ಹೋಗಿ ತನಗಿಷ್ಟವಾದ ಹುರಿಯಾಳಿನ ಚಿಹ್ನೆ ಇರುವ ಪೆಟ್ಟಿಗೆಯಲ್ಲಿ ಹಾಕಿ ಹೊರಗೆಬರತಕ್ಕದ್ದು.

ಸ್ತ್ರೀಯರಿಗೆ ಪ್ರತ್ಯೇಕ ಏರ್ಪಾಡು

ಪ್ರತಿಯೊಂದು ಪೋಲಿಂಗ್ ಸ್ಟೇಷನಿನಲ್ಲಿ ಸ್ತ್ರೀಯರಿಗೂ ಪುರುಷರಿಗೂ ಪ್ರತ್ಯೇಕ ಪ್ರತ್ಯೇಕ ಮತದಾನ ಕ್ಷೇತ್ರಗಳು [Polling Booths] ಏರ್ಪಡಿಸಲಾಗಿದೆ. ಆದರೆ ಎಲ್ಲಿಯಾದರೂ ಸ್ತ್ರೀಯರ ಸಂಖ್ಯೆ ಕಮ್ಮಿಯಾಗಿದ್ದರೆ ಒಂದೇ ಕ್ಷೇತ್ರವಿರುತ್ತದೆ. ಅಂತಹ ಕಡೆಯಲ್ಲಿ ಸ್ತ್ರೀಯರನ್ನೂ ಪುರುಷರನ್ನೂ ಪ್ರತ್ಯೇಕ ಪ್ರತ್ಯೇಕ ತಂಡಗಳಾಗಿ ಒಳಗೆ ಬಿಡುತ್ತಾರೆ. ಗೋಷಾ ಸ್ತ್ರೀಯರ ಸಂಖ್ಯೆ ಹೆಚ್ಚಾಗಿರುವ ಸ್ಥಳಗಳಲ್ಲಿ ಇವರಿಗೆ ಪ್ರತ್ಯೇಕವಾಗಿ ಒಳಗೆ ಹೋಗುವದಕ್ಕೂ ಓಟು ಕೊಟ್ಟಮೇಲೆ ಹೊರಗೆ ಬರುವದಕ್ಕೂ ಪ್ರತ್ಯೇಕವಾಗಿ ಏರ್ಪಾಡುಗಳಿವೆ. ಇಂತಹ ಸ್ಥಳಗಳಲ್ಲಿ ಪೋಲಿಂಗ್ ಅಧಿಕಾರಿಗಳೆಲ್ಲರೂ ಸ್ತ್ರೀಯರೇ ಆಗಿರುತ್ತಾರೆ.

ಚುನಾವಣೆ ಕಾರ್ಯಕ್ರಮವನ್ನು ಸರಿಯಾಗಿ ನಡಿಸುವದಕ್ಕೆ ಪ್ರಿಸೈಡಿಂಗ್ ಆಫೀಸರರಿಗೆ ಬೇಕಾದಷ್ಟು ಅಧಿಕಾರವುಂಟು. ಗಲಿಬಿಲಿಮಾಡುವ ಮತದಾರರನ್ನು ಹೊರಗೆ ಕಳುಹಿಸಲಿಕ್ಕೂ, ಅಲ್ಲಿರುವ ಪೋಲೀಸಿಗೆ ಅವರನ್ನು ಅರೆಸ್ಟು ಮಾಡಲಿಕ್ಕೂ ಅಧಿಕಾರವುಂಟು.

ಬಹು ಪ್ರತಿನಿಧಿಯ ಚುನಾವಣಾ ಕ್ಷೇತ್ರಗಳು

ಪ್ರಾಂತಿಕ ಶಾಸನ ಸಭೆಗೆ ಅಥವಾ ಪಾರ್ಲಿಮೆಂಟಿಗೆ ಒಬ್ಬರಿಗಿಂತ ಹೆಚ್ಚು ಪ್ರತಿನಿಧಿಗಳನ್ನು ಆರಿಸಬೇಕಾದಂಥ ಚುನಾವಣಾ ಕ್ಷೇತ್ರದಲ್ಲಿ ಮತದಾರನು ವಾಸಿಸುತ್ತಿದ್ದರೆ ಅವನು ಮತದಾನದ ಬಗ್ಗೆ ಇರುವ ವಿಶೇಷ ಸೂಚನೆಯನ್ನು ಗಮನಿಸುವದು ಅವಶ್ಯ. ಕೆಲವೊಂದು ಚುನಾವಣಾ ಕ್ಷೇತ್ರಗಳಲ್ಲಿ ದಲಿತ ವರ್ಗದವರಿಗಾಗಿ ಅಥವಾ ಗುಡ್ಡಗಾಡು ಜನರಿಗಾಗಿ ಸ್ಥಾನ ಕಾದಿಡಲಾಗಿದ್ದು ಅಂಥ ಕಾದಿಟ್ಟ ಸ್ಥಾನವಿದ್ದ ಚುನಾವಣಾ ಕ್ಷೇತ್ರಗಳಲ್ಲಿ ಪ್ರಾಂತಿಕ ಶಾಸನ ಸಭೆಯ ಸ್ಥಾನವು ಕಾದಿಡಲ್ಪಟ್ಟಿದ್ದರೆ ಪ್ರಾಂತಿಕ ಶಾಸನ ಸಭೆಯ ಎರಡು ಮತ ಪತ್ರಗಳನ್ನೂ ಮತದಾರನಿಗೆ ಕೊಡಲಾಗುವುದು. ಅವನು ತನ್ನ ಕೈಗೆ ಬಂದ ಎರಡು ಮತ ಪತ್ರಗಳನ್ನು ಒಂದೇ ಪೆಟ್ಟಿಗೆಯಲ್ಲಿ ಹಾಕಕೂಡದು. ತನಗಿಷ್ಟವಾದ ಹುರಿಯಾಳಿನ ಪೆಟ್ಟಿಗೆಯಲ್ಲಿ ಒಂದು ಮತ್ತು ತನಗಿಷ್ಟವಾದ ಇನ್ನೊಬ್ಬ ಹುರಿಯಾಳಿನ ಪೆಟ್ಟಿಗೆಯಲ್ಲಿ ಒಂದು, ಹೀಗೆ ತನಗೆ ಬೇಕಾದ ಎರಡು ಪೆಟ್ಟಿಗೆಗಳಲ್ಲಿ ಒಂದೊಂದರಂತೆ ಹಾಕಬೇಕು. ಎರಡೂ ಮತ ಪತ್ರಗಳನ್ನು ಒಂದೇ ಪೆಟ್ಟಿಗೆಯಲ್ಲಿ ಹಾಕಿದರೆ ಒಂದು ಮತಪತ್ರವನ್ನು ರದ್ದುಗೊಳಿಸಲಾಗುವದು.

WANTED

Agents for the sale of our new design fountain pens on Rs. 300/- To Rs. 400/ P. M. salary or commission basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ವಿವಿಧ ಪಾತ್ರೆಗಳು



ನಮ್ಮಲ್ಲಿ ವಿಧ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಮಾಟಲ್ಲಿಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೈಸೂರು ಶ್ರೀಮನ್ಮಹಾರಾಜರ ಖಾಸ್ ವೈದ್ಯ ನರಸಿಂಹ ಪಂಡಿತರ ಮನೆತನ
ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

✳ ಸಂತಾನ ಸಿಂಧೂರ ✳

ಮಹಿಳೆಯರ ಬಹಿಷ್ಠೆ (ಮುಟ್ಟಿನ) ಸಂಬಂಧದ ಹೊಟ್ಟೆನೋವು, ಇದರ ಜೊತೆಗೆ ಮೈ ಕೈ ನೋವು, ಬೆನ್ನುನೋವು ನಡುಸೆಳತ ಅಕ್ರಮ ಸೂತಿಕ, ಗರ್ಭಸ್ರಾವ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ.

ಕ್ರಯ:–1ಸೆಟ್ 6ರೂ. ಪೋಸ್ಟೇಜ್ ಮತ್ತು ಪ್ಯಾಕಿಂಗ್ 1ರೂ 6ರೂ. ಮನಿಯಾರ್ಡರ್ ಮಾಡಿರಿ ಕೂಡಲೆ ಔಷಧಿ ಪಾರ್ಸಲ್ ರವಾನೆ, ವಿ. ಪಿ. ಇಲ್ಲ. ಪತ್ರವ್ಯವಹಾರ ಗುಪ್ತ. ಕೆಟಲಾಗ್ ಉಚಿತ, ಹೆಚ್ಚಿನ ಮಾಹಿತಿಗೆ 2ಆಣೆ ಸ್ಟಾಂಪು ಕಳಿಸಿ.

ವಿಳಾಸ:–A. ರಾಮಸ್ವಾಮಿ ಅಯ್ಯರ್ ಸನ್; ಪ್ರೊಪ್ರೈಟರ್, "ಸಂತಾನ ಸಿಂಧೂರ"
1] 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡ್, ಮೈಸೂರು,

ಅಥವಾ:– 2) ಅಂಬಳೆ ಪೋಸ್ಟ್, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್, ವಯಾ, ಕೊಳ್ಳೇಗಾಲ

ಆಡುವುದು ಸುಲಭ ಮಾಡುವುದು ಮಾತ್ರ ಕಷ್ಟ.

ನಮಗೆ ಇಂದು ಸ್ವಾತಂತ್ರ್ಯ ಸಿಕ್ಕಿದೆ ನಾವು ಸ್ವತಂತ್ರರಾಗಿದ್ದೇವೆ. ಆದರೆ ಸ್ವತಂತ್ರ್ಯ ಸಿಕ್ಕಿದೆಯೆಂದು ತಿಳಿದು ರೈಲುಮಾರ್ಗದಲ್ಲಿ ರೈಲು ಬರುವಾಗ ಎದೆಯೊಡ್ಡಿ ನಿಂತರೆ ಹೇಗಾಗಬಹುದು? ಅಂತೆಯೇ ಇಂದು ಕೆಲ ಮಹಾನಿಯರು ಸ್ವಾತಂತ್ರ್ಯದ ಅರ್ಥವನ್ನು ಅನರ್ಥ ಮಾಡಿಕೊಂಡಿರುವರು. ಒಬ್ಬನನ್ನು ದೂರುವುದು ಅಥವಾ ತನ್ನ ಸ್ವಾರ್ಥಕ್ಕಾಗಿ ಯಾವ ಕಾರ್ಯವನ್ನು ಮಾಡಲೂ ಸಿದ್ಧರು. ದೇವರು ಕೊಟ್ಟ ನಾಲಗೆ ಇದೆಯೆಂದು ಯಾವ ರೀತಿಯಲ್ಲೂ ಮಾತಾಡಬಲ್ಲರು. ಒಂದು ಸಲ ಕಷ್ಟ ಅದಿ ಪುನಃ ಅದು ಸರಿ ಹಾಗಲ್ಲ ಹೀಗೆ ಎಂದು ಹೇಳುವರು. ಆದರೆ ಇದು ಯೋಗ್ಯತೆ ಲಕ್ಷಣವಲ್ಲ.

ಇಂದು ಕೆಲ ಮಹನಿಯರು ಕಾಂಗ್ರೆಸಿನಿಂದ ಹೊರಬಂದು ಹಲವು ಪಾರ್ಟಿಗಳನ್ನು ಕಟ್ಟಿಕೊಂಡು ಅಧಿಕಾರಕ್ಕಾಗಿ ಹೋರಾಡುತ್ತಿರುವುದನ್ನು ನಾವು ಇಂದು ಕಾಣುತ್ತೇವೆ. ಈ ವ್ಯಕ್ತಿ ಕೆಲವರಿಗೆ ಕಾಂಗ್ರೆಸಿನಲ್ಲಿ ಸೀಟ್ ಸಿಗದೆ ಇದ್ದುದರಿಂದ ಈ ಪಾರ್ಟಿಯನ್ನು ಹುಟ್ಟಿಸಿಯಾದರೂ ಬಂದು ಸ್ಥಾನ ಸಿಗಬಹುದೆಂದು ಆಶೆ. ಇದು ಎಲ್ಲರಲ್ಲೂ ಇದ್ದುದೆ. ಆದರೆ ಯಾವುದೇ ಒಂದು ಸಂಸ್ಥೆಯು ನ್ಯಾಯ ರೀತಿಯಲ್ಲಿ ಕೆಲಸ ಮಾಡುವುದನ್ನು ಅನಾವಶ್ಯಕವಾಗಿ ದೂರುವುದು ಉಚಿತವಲ್ಲ. ತಾನು ಆ ಸ್ಥಾನಕ್ಕೆ ಬಂದರೆ ಆ ಕೆಲಸವನ್ನು ನಿರ್ವಹಿಸಲು ಶಕ್ತನೇ? ಕೆಲಸವು ಎಷ್ಟು ಕಷ್ಟವಿದೆಯೆಂಬುದನ್ನು ತಿಳಿಯುವುದು ಅವಶ್ಯ.

ಇಂದು ಕಾಂಗ್ರೆಸ್ ಸರಕಾರವನ್ನು ಕೆಲ ಮಹನೀಯರು ಇಲ್ಲದ ಸಲ್ಲದ ಕಾರಣ ಕೊಟ್ಟು ದೂರುವುದನ್ನು ನಾವು ಕೇಳುತ್ತಾ ಇದ್ದೇವೆ. ಕಾಂಗ್ರೇಸ್ ಈ ನಾಲ್ಕು ವರ್ಷಗಳಲ್ಲಿ ಏನು ಮಾಡಿತು? ಎಂಬ ಪ್ರಶ್ನೆ.

ಕಾಂಗ್ರೆಸ್ ಏನು ಮಾಡಬೇಕಿತ್ತು? ಬ್ರಿಟಿಷರ ಕೈಯಿಂದ ಸ್ವಾತಂತ್ರ್ಯ ಗಳಿಸಿದ್ದಾಗಲಿಲ್ಲವೆ? ಇನ್ನೂ ಬ್ರಿಟಿಷರೇ ನಮ್ಮನ್ನು ಆಳಿ ನಮ್ಮನ್ನು ಇನ್ನೂ ಅಧೋಗತಿಗೆ ಇಳಿಸಬೇಕಿತ್ತೆ? ಇನ್ನೂ ಒಂದು ವಿಷಯ ಈಗ 21 ವರ್ಷ ಮೇಲ್ಪಟ್ಟ ಪ್ರತಿಯೊಬ್ಬನಿಗೂ ಹೆಂಗಸು, ಗಂಡಸು, ಬಿಲ್ಲವ, ಬ್ರಾಹ್ಮಣ, ಹರಿಜನ ಎಂಬ ಭೇದವಿಲ್ಲದೆ ಮತ(Vote)ಕೊಡುವ ಅಧಿಕಾರ ಕೊಟ್ಟಿದೆ ಇದು ಆಗಬಾರದಿತ್ತೆ? ಇದೇ ರೀತಿಯಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿದ್ದುದನ್ನು ನಾವು ಇಂದು ಕಣ್ಣಾರೆ ಕಾಣುತ್ತಾ ಇದ್ದೇವೆ.

ಇನ್ನು ಆಹಾರದ ವಿಷಯ—ಅದಷ್ಟು ಸ್ವಾವಲಂಬಿ ದೇಶವಾಗಬೇಕೆಂದು ಇಂದು ನಮ್ಮ ಮಂತ್ರಿಗಳು ಭಗೀರಥ ಪ್ರಯತ್ನ ಮಾಡುತ್ತಿರುವರು. ಆಹಾರ ಅಲ್ಲದೆ ಎಲ್ಲೆಲ್ಲಿ ಸಿಗುತ್ತದೋ ಅಲ್ಲಿಂದ ಅದನ್ನು ತರಿಸುತ್ತಿದ್ದಾರೆ. ಇನ್ನೇನು ಮಾಡಬೇಕು?

ಇಂದು ಬೇರೆ ಸರಕಾರ ಬಂದಿದ್ದರೆ ಎಲ್ಲಾ ವಿಷಯಗಳನ್ನು ಪರಿಶೀಲಿಸಿ ನೋಡಿದಲ್ಲಿ ಸರಕಾರವನ್ನು ದೂರಿ ಪ್ರಯೋಜನವಿಲ್ಲ. ನಾವೆಲ್ಲರೂ ಒಗ್ಗಟ್ಟಿನಿಂದ ಕೂಡಿಕೊಂಡು ಕಷ್ಟಗಳನ್ನು ಪರಿಹರಿಸಲು ಯತ್ನಿಸುವುದೊಂದೇ ದಾರಿ. ಯಾವ ಸರಕಾರ ಬಂದರೂ ಯಾವ ಪ್ರಯತ್ನ ಮಾಡಿದರೂ ನಾವು ಸರಿಯಾಗಿ ಕೆಲಸ ಮಾಡದೆ ಹೋದರೆ ದೂರುವುದೊಂದೇ ನಮ್ಮ ಬಾಳಿನ ಕೆಲಸವಾಗುವುದು.

"ಕೈ ಕೆಸರಾದರೆ ಬಾಯಿ ಮೊಸರು" ಎಂಬ ನಾಣ್ಣುಡಿಯಂತೆ ನಾವೆಲ್ಲರೂ ಸರಿಯಾಗಿ ಕೆಲಸಮಾಡಿ ನಮಗೆ ಸಿಕ್ಕಿದ ಸ್ವಾತಂತ್ರ್ಯವನ್ನು ನಾವು ಶಾಶ್ವತವಾಗಿರಿಸೋಣ.

ಟಿ. ಎಲ್. ಶೆಟ್ಟಿ
ಬೋಳೂರು

ಚುನಾವಣಾ ಗುರುತು

ಮನೆಮನೆ ಎಂದು ಬೊಬ್ಬಿಡುವವರಿಗೆ ಕೊನೆಗೂ ಮನೆಯೇ ಗತಿ

ನಮ್ಮೂರ ಮತದಾರ ಕ್ಷೇತ್ರಕ್ಕೆ ನಿಂತ ಉಮೇದ್ವಾರರಲ್ಲಿ ಮುಖ್ಯವಾದುದು ಒಂದು ಸಮ್ಮ ವಾಸಕ್ಕೆ ತಕ್ಕುದಾದ ಮನೆ;ಮತ್ತೊಂದು ಯಜಮಾನನಿಗಾಗಿ ಗಾಳಿ ಬಿಸಿಲೆನ್ನದೆ ಬಿಟ್ಟು ಕಾದೆನ್ನದೆ ಗಾಡಿಯನ್ನು ಎಳೆಯಲು ಅಣಿಯಾಗಿ ನಿಂತ ಜೋಡಿ ಎತ್ತುಗಳು. ಅಂದರೆ ಸುಖಲೋಲುಪರಾಗಿ ತಮ್ಮ ಮನೆ ಉಳಿಯುವ ಬಗ್ಗಾಗಿ ಯಾರ ಕಷ್ಟನಷ್ಟಗಳನ್ನೂ ಗ್ರಹಿಸದೆ, ಹಿಂದೂ ಮನೆಯಲ್ಲಿಯೇ ಇದ್ದು ಮುಂದೂ ಮನೆಯಲ್ಲಿಯೇ ನಿಲ್ಲತಕ್ಕವರೊಬ್ಬರಾದರೆ ಮತ್ತೊಬ್ಬರು ರಾಜ್ಯಾಂಗವೆಂಬ ಗಾಡಿಯನ್ನು ಅನ್ನವಿಲ್ಲದ ಬರಗಾಲದಲ್ಲಿ ಸಿಂರಾತ್ರಿಕರ ಕಾಟದಲ್ಲಿ ಭೂಕಂಪ ಮಹಾಪೂರಗಳ ಪೇಚಾಟಗಳಲ್ಲಿ ಹಿಂದೂ ಮುಸ್ಲಿಮರ ದೊಂಬಿಗಳಲ್ಲಿ ಸ್ವಲ್ಪವೂ ಧೈರ್ಯಗುಂದದೆ ಒಂದೇ ಸಮನೆ ಎಳೆದುಕೊಂಡು ಇನ್ನು ಮುಂದೆಯೂ ಎಳೆಯಲು ಸಿದ್ಧವಾಗಿರುವವರು. ಮುಖ್ಯವಾಗಿ ನಾವಿಲ್ಲಿ ಗ್ರಹಿಸ ತಕ್ಕುದೇನೆಂದರೆ ನಮ್ಮ ಶಾಸನಸಭೆ ಲೋಕ ಸಭೆಗಳಿಗೆ ಹೋಗತಕ್ಕವರು ಅಲ್ಲಿ ಬಂತಕ್ಕ ಚರ್ಚಾ ಕೂಟದಲ್ಲಿ ಭಾಗವಹಿಸಿ ನಮ್ಮ ಬಗ್ಗಾಗಿ ಸದಾ ದುಡಿದು ಸರಕಾರವನ್ನು ಸುಸೂತ್ರವಾಗಿ ಸಾಗಿಸತಕ್ಕ ಪುರಿಯರುಗಳಲ್ಲದೆ ರಾಜ್ಯಾಂಗದಲ್ಲಿ ಜೀವ ಕಳ್ಳರಾಗಿ ಓಡಿಬಂದು ಮನೆಯಲ್ಲಿ ಕುಳಿತು ಜಂಬ ಕೊಚ್ಚಿಕೊಳ್ಳತಕ್ಕವರಲ್ಲ.

ಆದರೆ ಇವರಿಗೆ ಮನೆಬೇಕೊ ಎತ್ತುಬೇಕೋ ಎಂತ ಕೇಳುವವರಿದ್ದಾರೆ, ಮನೆ ದೇಶವೆಂದಲ್ಲ. ಆದರೆ ನಾವು ಮತದಾನ ಮಾಡುವುದು ಅವರ ಮನೆ ಉಳಿಸುವದಕ್ಕಲ್ಲ. ಸರಕಾರವನ್ನು ಧೈರ್ಯವಾಗಿ ನಡೆಸಿ,ದೇಶದಲ್ಲಿ ಶಾಂತತೆಯನ್ನು ನೆಲೆಸಿ, ಅಂತರ್‍ರಾಷ್ಟ್ರದಲ್ಲಿ ಕೀರ್ತಿಯನ್ನು ಗಳಿಸಿ ದೇಶವನ್ನು ಉಳಿಸಿದ ಇನ್ನು ಮುಂದೆಯೂ ಕಾಪಾಡಲು ಶಕ್ತಿ ಇರುವವರನ್ನು ಬಿಟ್ಟು ಬರಿಯ ಸ್ವಾರ್ಥತೆಯನ್ನು ನೋಡಲಾಗುವದೇ?

ಅಲ್ಲದೆ ಗೀತೆಯಲ್ಲಿ ಕೃಷ್ಣನೆಂದಂತೆ ಅಂತ್ಯದಲ್ಲಿ ಯಾರು ಯಾವುದನ್ನು ನೆನೆಸುತ್ತಾರೋ ಅದನ್ನೇ ಪಡೆಯುತ್ತಾರೆಂದಂತೆ ಈಗ ಮನೆ ಮನೆಯೆಂದು ಬೊಬ್ಬಿಡುವವರಿಗೆ ಕೊನೆಗೂ ಮನೆಯೇಗತಿ. ರಾಜ್ಯಾಂಗ ಗಾಡಿಯನ್ನು ಎಳೆಯಲು ಅಣಿಯಾಗಿ ನಿಂತ ಎತ್ತುಗಳಿಗೆ ಸರಕಾರ ಗಾಡಿಯನ್ನು ಎಳೆಯಲು ಸಿಕ್ಕುವಲ್ಲಿ ಸಂದೇಹವೇ ಇಲ್ಲ

ಆದ್ದರಿಂದ ನಮ್ಮ ಅಮೂಲ್ಯವಾದ ಮತವನ್ನು ಎತ್ತುಗಳ ಪೆಟ್ಟಿಗೆಗೆ ಹಾಕಿ ಆ ಎತ್ತುಗಳಿಂದ ರಾಜ್ಯಾಂಗ ಶಾಸನ ಮತ್ತು ಲೋಕಸಭೆಗಳೆಂಬ ಗಾಡಿಯನ್ನು ಎಳೆಸಿ ಸುಸೂತ್ರವಾಗಿ ನಡೆಸಲು ಸಹಾಯ ಮಾಡೋಣ...

—ಶ್ರೀ. ಎಚ್. ಶ್ರೀನಿವಾಸ ಅಡಿಗ,
ಹೇರೂರು

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಶೈಕರ್, ಶಯನ ಇವೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

For energetic and active living, for your mental and physical vigour and strength,

Always Use

KALI KAMALI
Chyavanprash.

A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart.
Price per tin containing 80 tolas Rs. 10-0-0 Postage extra.

Stockist for South & N. Kanara & Mysore state: **M. Vinayaka Rao,** Bannanje Road, Udipi. S. K

AYURVEDIC PHARMACY
Baba kali Kamali-Wala RISHIKESH.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿನಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಮಸಿನಿಂನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾವಪ್ಪ ಸಿದ್ಧಲಿಂಗಪ್ಪ ಧಾರವಾಡಕರ ಬಿಜಾಪುರ ನಂಜುಂಡೇಶ್ವರ ಮೆಡಿಕಲ್ ಹಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಎಲ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ ಬ್ಯಾಡಗಿ

ವಾರದ ಭವಿಷ್ಯ

ತಾರೀಕು 27-12-1 ರಿಂದ ತಾರೀಕು 2-1-52 ವರೆಗೆ

ಮೇಷ – ನಿಮ್ಮ ಪ್ರಯತ್ನಕ್ಕೆ ತಕ್ಕ ಪಾದ ಫಲ ಲಭಿಸದಿದ್ದರೂ ಈ ವಾರದಲ್ಲಿ ನಿಮಗಾದ ಕರದ ಆರ್ಥಿಕ ಅಡಚಣೆಗಳು ಒದಗಲಾರವು ಗೃಹೋಪಕರಣಗಳು ಪರಿಪೂರ್ಣವಿರುವುದರಿಂದ ಸಾಂಸಾರಿಕ ತಾಪತ್ರಯಗಳೂ ಕಾಣಿಸಲಾರವು. ಸತ್ಕಾರ್ಯಗಳ ಸಲುವಾಗಿ ಖರ್ಚು ಅಧಿಕವಾಗುವದು. ವ್ಯಾಪಾರಿಗಳಿಗೂ ನೌಕರರಿಗೂ ಅನಿರೀಕ್ಷಿತ ನಷ್ಟವುಂಟಾಗಲಿದೆ. ವ್ಯವಹಾರದಲ್ಲಿ ವಿನಾಕಾರಣ ಕಲಹ ಮನಸ್ತಾಪಗಳೂ ಕಾಣಿಸಲಿವೆ, ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರುವವು. ಸತ್ಪುರುಷರ ಬೆಂಬಲ ದೊರೆವುದು.

ವೃಷಭ—ನಿಮ್ಮ ದುರ್ದೈವದ ಅವಧಿ ಇನ್ನೂ ಮುಗಿದಿಲ್ಲವು. ಆದಕಾರಣ ಶತ್ರುಜನರ ಪ್ರತೀಕಾರಕ್ಕೆ ಸಿಲುಕುವಿರಿ, ಮಕ್ಕಳ ಸಲುವಾಗಿ ಚಿಂತೆಯು ಅಧಿಕವಾಗುವದು. ಸೇವಕ ವರ್ಗದವರೂ ನಿಮ್ಮೊಡನೆ ಸಹಕರಿಸಲಾರರು. ಯಾವ ಉದ್ಯೋಗದಲ್ಲೂ ಖರ್ಚೇ ಅಧಿಕವಾಗಿ ನಿಲ್ಲುವುದರಿಂದ ಹಣದ ಅಡಚಣೆಗೆ ಸಿಲುಕುವಿರಿ. ವಾತ ಕಫ ಪ್ರಕೋಪದಿಂದಾಗಿ ಆರೋಗ್ಯವು ಕೆಡಲಿದೆ, ಅಂತು ಸದಾಕಾಲ ತನುಮನಗಳಿಗೆ ನೆಮ್ಮದಿಯಿಲ್ಲವಾದರೂ ಗುರ್ವನುಗ್ರಹವುಂಟಾದುದರಿಂದಾಗಿ ಮಹದಾಪತ್ತನ್ನು ಸುಲಭದಿಂದ ಪಾರುಗಾಣುವಿರಿ. ತಾ. 27, 1, 2 ಇಷ್ಟಪ್ರದಗಳಿವೆ.

ಮಿಥುನ—ಕಾಲ ಕಳೆದಂತೆ ಕಿರಿಯನೆಂಬ ಲೋಕೋಕ್ತಿಗನುಸಾರವಾಗಿ ನಿಮ್ಮ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತಾ ಬರುತ್ತಿದೆ. ಆಪ್ತರೇ ನಿಮ್ಮನ್ನು ವಂಚನೆಗೊಳಿಸುವುದರಿಂದ ನಿಮಗಾರಲ್ಲೂ ವಿಶ್ವಾಸವಿಲ್ಲದಂತಾಗುವುದು. ಪಿತ್ತದೋಷ ಆರೋಗ್ಯ ಕರಿಯಿಲದು, ಶತ್ರುವರ್ಗದವರು ಹೆಚ್ಚುತ್ತಾ ಬರುವರು. ಆಪ್ತರ ವಿರಹದಿಂದ ಮನಸ್ಸು ಅತೀವ ಕಳವಳಗೊಳ್ಳುವದು. ಬಹುಪಾಲಿನ ನಿಮ್ಮ ಸಮಯವು ಪರ್ಯಟನದಲ್ಲೇ ಕಳೆವುದು. ಆರ್ಥಿಕ ದುರವಸ್ಥೆಯಿಂದ ಪೀಡಿಸಲ್ಪಟ್ಟ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಪುತ್ರಸಂಪಲೂ ಸ್ತ್ರೀಜನರ ಮುಖಾಂತರವೂ ಧನಲಭಿಸಲಿದೆ

ಕರ್ಕಾಟಕ—ಷಡ್ವರ್ಗ ಪುಷ್ಟಿಗಳೆಂದರೆ ನೀವೇ ಸರಿ. ಯಾವೊಂದು ತರದ ತಾಪತ್ರಯವೂ ನಿಮ್ಮ ಕಣ್ಣಿಗೆ ಕಾಣಿಸದು ಮನಸ್ಸಿಗೂ ಹೊಳೆಯದು. ಪಶುಭೃತ್ಯಾದಿ ಸೇವಕವರ್ಗಗಳೂ ಬಂಧುಮಿತ್ರಾದಿ ಜನರೂ ಇವರಿಂದ ಕೂಡಿಕೊಂಡು ಸಂತೋಷದಿಂದ ಕಾಲಯಾಪನೆ ಮಾಡುವಿರಿ. ಮಾತ್ರವಲ್ಲ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಮುಂದಾಳಾಗಿ ದುಡಿದು ಕೀರ್ತಿಲಾಭಗಳನ್ನು ಪಡೆವಿರಿ. ವಾದವಿವಾದಗಳಲ್ಲೂ ಸ್ಪರ್ಧೆಗಳಲ್ಲೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಂತಿರುವುದು. ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ಪರಮಾವಧಿಯನ್ನೇರಲಿದೆ. ತಾ. 27ರಿಂದ 31ರ ವರೆಗಿನ ದಿನಗಳು ಹೆಚ್ಚಿನ ಅನುಕೂಲಗಳಾಗಿವೆ.

ಸಿಂಹ—ಶಕ್ತಿಮೀರಿ ದುಡಿಯುವಿರಿ. ಆದರೂ ಕೈಯಲ್ಲಿ ಕಾಸೊಂದು ಉಳಿಯದು ಮಾತ್ರವಲ್ಲ ಖರ್ಚಿನ ಸಲುವಾಗಿ ಪರರ ಕೂಡೆ ಸಾಲಮಾಡುವಿರಿ. ಶೋಕಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ. ಪ್ರಯಾಣದಲ್ಲಿ ನಾನಾತರದ ತುರ್ತು ಕಷ್ಟಗಳು ಒದಗುವವು. ಪಿತ್ತೋಷ್ಣವಿಕಾರದಿಂದ ಅನಾರೋಗ್ಯವೂ ಸರ್ಪದಿಂದ ಪೀಡೆಯೂ ಸಂಭವಿಸಲಿದೆ. ಕೋರ್ಟು ಕಚೇರಿಗಳಲ್ಲಿನ ಕಾರ್ಯಗಳಲ್ಲಿ ಪರಾಭವವುಂಟಾದೀತು. ಇಂತಹ ಕಷ್ಟಕಾಲದಲ್ಲಿ ಆಪ್ತರಾರೂ ನಿಮಗೆ ಒದಗಲಾರರು. ಆದರೂ ವಾರಾಂತ್ಯದ 3 ದಿನಗಳು ಆಶಾದಾಯಕಗಳಾಗಿವೆ.

ಕನ್ಯಾ—ನಿಮ್ಮ ಜನ್ಮರಾಶಿಯ ದ್ವಿತೀಯ ಸ್ಥಾನಂಗಾರಕರು ವಾತ ಪಿತ್ತದೋಷಗಳನ್ನು ಹೆಚ್ಚಿಸಿ ನಿಮ್ಮ ಆರೋಗ್ಯವನ್ನು ಸದಾ ಕೆಡಿಸುತ್ತಿರುವರು. ಆದರೂ ಧನಪತಿಯಾದ ಶುಕ್ರಾಚಾರ್ಯರು ಸ್ವಸ್ಥಾನವನ್ನು ಸೇರುವುದರಿಂದಲೂ ಸುಖಪತಿಯಾದ ಗುರುಗಳು ಸಕ್ಷೇತ್ರಗತರಾಗಿರುವುದರಿಂದಲೂ ನಿಮ್ಮ ಆದಾಯವು ಮುಂಚಿಗಿಂತ ಅಧಿಕವಾಗಿ ಸಂಪನ್ನವಾಗುವುದು. ಮನೋರೋಗಗಳಿಂದ ಮುಕ್ತರಾಗಿ ಉತ್ತಮವಾದ ಗೃಹಸುಖವನ್ನು ಹೊಂದುವಿರಿ. ಶ್ರಮಜೀವಿಗಳಿಗೀವಾರವು ಸುಖಕರವಾಗಿ ಪರಿಣಮಿಸದು. ತಾ. 27, 1, 2 ಇತರ ದಿನಗಳಿಗಿಂತ ವಾಸಿ.

ತುಲಾ:- ಈ ವಾರದಲ್ಲಿ ನಿಮ್ಮ ಆರ್ಥಿಕ ಬಿಕ್ಕಟ್ಟು ದೂರವಾಗುವದು. ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ಬಂಧುಜನರ ಮತ್ತು ಸೋದರ ವರ್ಗದವರ ಬೆಂಬಲದಿಂದ ಹಲವಾರು ಕಾರ್ಯಗಳಲ್ಲಿ ವಿಜಯಿಗಳಾಗುವಿರಿ, ಹೆಂಡತಿಯ ಅಲಸ್ಯದ ನಿಮಿತ್ತ ಮತ್ತು ಪಿತ್ತ ಪ್ರಕೋಪದಿಂದುಂಟಾದ ಸ್ವದೇಹಾಲಸ್ಯದ ನಿಮಿತ್ತ ವೃಥಾ ಖರ್ಚು ಮಾಡಬೇಕಾಗಿ ಬರುವದು. ಮನಸ್ಸಿಗೆ ನೆಮ್ಮದಿಯು ದುರ್ಲಭವೆನಿಸುವದು ಗುರುಹಿರಿಯರ ಅಗ್ರಹಕ್ಕೊಳಗಾದ ನಿಮಗೆ ತಾ 28-29 ಕೊಂಚ ಉತ್ತಮವೆನಿಸುವದು.

ವೃಶ್ಚಿಕ: ನಿರೋಗಿಗಳಿಂದ ನಿಮಗೀ ವಾರವು ತನುಮನಗಳಿಗೆ ವಿಶೇಷ ಸುಖನೆಮ್ಮದಿಗಳನ್ನು ಕೊಡಲಿದೆ. ಪ್ರತಿಯೊಂದು ಉದ್ಯಮದಲ್ಲೂ ನಿರೀಕ್ಷಿಸುದಕ್ಕಿಂತ ಅಧಿಕವಾದ ಫಲವೂ ಹಾಯಾಗಿ ಅನಾಯಾಸದಿಂದ ಲಭಿಸುವದು. ಸಾಂಸಾರಿಕ ತಾಪತ್ರಯಗಳಿಂದಲೂ ಆರ್ಥಿಕ ಮುಗ್ಗಟ್ಟಿನಿಂದಲೂ ಪಾರಾದ ನಿಮಗೆ ಪಂಚಿತ ಭೋಜನದ ಹೆಚ್ಚಿನ ಗೌರವಗಳು ಲಭಿಸುವವು. ರಾಜಕೀಯ ರಂಗದಲ್ಲೂ ಸಾಮಾಜಿಕ ಕ್ಷೇತ್ರದಲ್ಲೂ ನಿಮ್ಮ ಕೈಯೇ ಮೇಲಾಗಲಿದೆ. ತಾ 27-30-31 ಈ 3 ದಿನಗಳು ಧನವಿಜಯ ಸುಖಭೋಗದಾಯಿಗಳಾಗಿರುತ್ತವೆ.

ಧನು:—ಅತೀವ ಕಲುಷಿತವಾದ ನಿಮ್ಮ ಜೀವನದಲ್ಲಿ ಹಲವಾರು ತಾಪತ್ರಯಗಳು ಕಾಣಿಸಿಕೊಳ್ಳಲಿವೆ. ಆಕಸ್ಮಿಕ ಪ್ರವಾಸ ವಿನಾಕಾರಣ ಕಲಹ ಬಂಧು ಜನರೊಡನೆ ಮನಸ್ತಾಪ ಗೃಹಕೃತ್ಯದಲ್ಲಿ ಅವ್ಯವಸ್ಥೆ ಇತ್ಯಾದಿಗಳು ತಲೆದೋರುವವು, ಆಪ್ತೇಷ್ಟರ ಬೆಂಬಲವು ಎಳ್ಳಷ್ಟೂ ದೊರೆಯದು. ಆದಾಯವು ಅಲ್ಪವಾಗಿ ಖರ್ಚು ದಿನದಿಂದ ದಿನಕ್ಕೆ ಏರುತ್ತಿರುವುದರಿಂದ ದಮ್ಮಂದೆ ಹೇಗೆ ಮಾಡಬೇಕೆಂದು ತಿಳಿಯದೆ ಮೂಢರಂತಾಗುವಿರಿ. ತಾ-28-29-1-2 ಈ ದಿನಗಳಲ್ಲಿ ಕೊಂಚ ಮನಸ್ಸಿಗೆ ನೆಮ್ಮದಿ ದೊರೆತೀತು.

ಮಕರ: ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯಿದ್ದರೂ ಈ ವಾರದಲ್ಲಿ ನೀವು ಎಷ್ಟೇ ವಾಚಾಲರಾದರೂ ಮಿತಭಾಷಿಯಾಗಿ ವರ್ತಿಸಲಿ ಪರರೊಡನೆ ಕಲಹವಾಗದಿರದು ಹಿಂದೆ ಸಂಗ್ರಹಿಸಿದ್ದ ಆಪದ್ಧನಗಳೆಲ್ಲವೂ ಇಂದು ಮಾಯವಾಗುವವು. ಹಿಡಿದ ಕಾರ್ಯಗಳು ವಿಘ್ನಗಳಿಂದಾಗಿ ನಿಲ್ಲುವವು. ದೇಹದಲ್ಲಿ ಪಿತ್ತದೋಷದಿಂದ ನಿಶ್ಶಕ್ತಿ ಅಲಸ್ಯಗಳೂ ಹೆಚ್ಚಲಿವೆ. ಯಾವ ಭಾಗದಲ್ಲಿ ನೋಡಿದರೂ ನಿರಾಶೆಯ ಚಿಹ್ನೆಗಳೇ ಕಾಣುವವು. ತಾ-27-30-31 ಈ ದಿನಗಳು ಉಳಿದ ದಿನಗಳಿಗಿಂತ ಸ್ವಲ್ಪ ಉತ್ತಮವೆನಿಸುವವು.

ಕುಂಭ:–ಧನಭಾಗ್ಯ ಲಾಭಪತಿಗಳು ಸ್ವಸ್ಥಾನದಲ್ಲಿ ಅನುಕೂಲರಾಗಿ ನಿಂತಿರುವ ಕಾರಣ ನೀವೀವಾರದಲ್ಲಿ ನಿಮ್ಮ ಶಕ್ತಿಗಿಂತಲೂ ಅಧಿಕವಾದ ದುಡಿಮೆಯನ್ನು ಪಡೆವಿರಿ, ಹಿಂದಿನ ಹಣದ ಅಡಚಣೆಯು ಇಂದು ನಿವಾರಿತವಾಗಿ ಕೈಯಲ್ಲಿ ಸಹ ಹಣಕಾಸು ಓಡಾಡುತ್ತಿರುವುದು ಗೃಹ ತಾಪತ್ರಯಗಳು ಕಾಣಿಸವು. ಆದರೂ ಶತ್ರುಗಳ ಕಿರುಕುಳ ಮೇರೆತಪ್ಪದು ಆಪ್ತಜನರ ವಿಯೋಗವುಂಟಾದೀತು. ಉದ್ಯೋಗ ಜೀವಿಗಳಿಗೂ ವಿದ್ಯಾರ್ಥಿಗಳಿಗೂ ಕಾಲವು ಅತ್ಯಂತ ಅನುಕೂಲವಿದೆ. ತಾ 30-31 ಒಳ್ಳೆಯದಲ್ಲವು,

ಮೀನ:-ದಿನಗಳೆದಂತೆ ನಿಮ್ಮ ಪರಿಸ್ಥಿತಿಯಲ್ಲಿ ಸ್ವಲ್ಪಸ್ವಲ್ಪ ಸುಧಾರಣೆಯೂ ಸುಖ ಬರುತ್ತಿದೆ. ನಿಮ್ಮ ಪರಿಶ್ರಮಕ್ಕೆ ತಕ್ಕದಲ್ಲವಾದರೂ ಖರ್ಚಿಗೆ ಸಾಕಷ್ಟು ಧನ ಲಭಿಸುವದು ಕಫ ಪ್ರಕೋಪದಿಂದ ಮೈ ಚೆನ್ನಾಗಿರದು. ಸಂಸಾರದಲ್ಲಿನ ಚಿಕ್ಕಪುಟ್ಟ ಕಲಹಗಳು ದೊಡ್ಡದಾಗಿ ಪರಿಣಮಿಸಲಿವೆ. ಸ್ಥಾನಚ್ಯುತಿ ಪರ್ಯಟನ ಮೊದಲಾದವುಗಳ ಯೋಗವಿರುವದು ತಾ 27-1-2 ಪ್ರತಿಕೂಲದ ದಿನಗಳು.

ಋತುಸ್ರಾವ ನಿಂತಿತು

'ಕುಮಾರಿ' ಟಿಕ್ಕಿಗಳನು ಉಪಯೋಗಿಸಿದರೆ ಹದಿನೈದು ಋತುಸ್ರಾವವಾಗದಿದ್ದರೂ ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಚಿಲ್ಲರೆ: ರೂ. 3-; ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಖರ್ಚು ಪ್ರತ್ಯೇಕ.]

Mrs. P. DEVEE, P. B8. (N. J.)
Tollygunge CALCUTTA
ಸ್ಪಾಕಿಸ್ಟರು ಶಹಾ ಕಂಪನಿ, ಮಂಗಳೂರು

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷದುಂಟಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD
ಹುಳು ಕಡಿ
ಮುಪ್ಪು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ಕೊಗಲು ಹಿಂಡಕ್ಕೆ ಸರಿಯುದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಹಿಟ್ಟಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು. ಸ್ತ್ರೀಯರ ಬಿಳಿಕೆಂಪು ನೆರಗು ಹೋಗುತ್ತಿದ್ದರೆ, ಸೋಲಿಕೆಟ್ಟು ಗರ್ಮಿಯಿಂದ ಗರ್ಭಕೋಶ ನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಆರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:–ಬಾಗಲಕೋಟಿ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮಾರ್ಕೆಟ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಹರಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—
ಶಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.